"KODAGU" OFFICE MERCARA

ಕೊಡಗು.

[illegible]

ಪ್ರತಿ ಬುಧವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಹಂಡ್ಯಾಂಡ ಬಿ. ಬೆಳ್ಯಪ್ಪ

2] ಮಡಿಕೇರಿ, ಸನ ೧೯೨೮ನೇ ಇಸವಿ ಜನವರಿ ತಾರೀಖು ೪ ನೇ ಬುಧವಾರ [ಸಂಚಿಕೆ ೩೦

MESSERS SPENCER & CO. LTD.

WISH THEIR NUMROUS CONSTITUENTS

A BRIGHT AND PROSPEROUS NEW YEAR.

SPENCER & CO., LTD., General Merchants MERCARA.

2—49

V. SUBRAMANIA IYER

Manufacturing,

JEWELLER

GOLDSMITH SILVERSMITH & DEALER IN ALL PRECIOUS STONES

Post Box 423
TRIPLICANE, MADRAS

Catalogue Free
to Bonafide Enquirers





Nose-screws Clave Drops Thodu

Brooch

Manufacture of
HIGH CLASS
GEMSET JEWELS
a speciality

The special features
of my productions are —
1 Best QUALITY
2 Latest novel designs
3 Prompt execution
4 Neat & artistic finish
5 Most moderate prices

GOLD
or
SILVERWARE
of all descriptions
neatly executed

Chased Silver Mirror

52—17

Before buying any Arms & Ammunition please refer our Reduced NETT PRICED current Catalogue of GUNS RIFLES, REVOLVERS AUTOMATIC PISTOLS AMMUNITION, & Shooting Requisites, just out

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

17

ರಿಂಗರ್

ಏಗ್ಯೂ ಮಿಕ್ಸ್ಚರ್

ಮಲೇರಿಯಾ ಇನ್ಫ್ಲುಯೆಂಝಾ ನ ವಕಜ್ವರ ಚಳಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ

ಸಾರಸಾಪರಿಲಾ.

ಕಟ್ಟುಹೋದ ರಕ್ತವನ್ನು ಶುದ್ಧಮಾಡುವದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ ೧—೦—೦ ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್,
ಗುಲಾಬ್ ಲೇನ್,
ಗಿರಗಾಂವ, ಮುಂಬಯಿ.

12—12

ಕೊಡಗು

ಸ. ೧೯೨೮ನೇ ಇಸವಿ ಜನವರಿ
ತಾ. ೬ ನೇ ಶುಕ್ರವಾರ

ಇಂಡಿಯನ್ ನೇಶನಲ್ ಕಾಂಗ್ರೆಸ್.

೪೩ನೇ ಇಂಡಿಯನ್ ನೇಶನಲ್ ಕಾಂಗ್ರೆಸಿನಲ್ಲಿ ಮಂಜೂರಾದ ಠರಾವುಗಳು ಬಹು ಮಹತ್ವದವುಗಳಾಗಿವೆ. ಹಿಂದುಸ್ಥಾನದ ಸ್ವತಂತ್ರಸ್ಥಾಪನೆಯ ಹೋರಾಟದಲ್ಲಿ ಈ ಸಾರಿ ಒಂದು ಮೆಟ್ಟಲು ಮೇಲೆ ಏರಿದಂತೆ ತೋರುತ್ತದೆ.

ಹಿಂದುಸ್ಥಾನವನ್ನು ಬ್ರಿಟಿಷರು ಅಧೀನಪಡಿಸಿಕೊಂಡಂದಿನಿಂದಲೂ ಹಿಂದುಸ್ಥಾನವು ಬ್ರಿಟಿಷ್ ಸಾಮ್ರಾಜ್ಯದೊಳಗೆ ಇರಬೇಕೆಂತ ದೇವರ ಇಚ್ಛೆ ಇರಬಹುದೆಂತಲೂ, ಹಿಂದುಸ್ಥಾನವು ಬ್ರಿಟಿಷ್ ಸಾಮ್ರಾಜ್ಯದೊಳಗೆ ಸ್ವತಂತ್ರ ರಾಜ್ಯವಾಗಿರುವದೇ ಹಿಂದುಸ್ಥಾನದ ಅಂತಿಮ ಧ್ಯೇಯವಾಗಿರಬೇಕೆಂತಲೂ ಜನರು ನಂಬಿಕೊಂಡಿದ್ದರು. ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರ ರಾಜ್ಯವಾಗಿರಬೇಕೆಂತ ಯೋಚಿಸುವ ಧೈರ್ಯ ಸಹ ಮೊದಲು ಯಾರಿಗೂ ಇರಲಿಲ್ಲ. ಆದರೆ ಈಗ ಕೆಲವು ವರ್ಷಗಳಿಂದ ಬಹು ಸ್ವಲ್ಪ ಮಂದಿ ಈ ಅಭಿಪ್ರಾಯವನ್ನು ಬಹಿರಂಗಪಡಿಸಲಾರಂಭಿಸಿದರು. ಈ ವರ್ಷದ ಅಖಿಲ ಭಾರತ ಕಾಂಗ್ರೆಸ್ಸಿನ ಮಹಾ ಸಭೆಯಲ್ಲಿ ಈ ವಿಷಯವನ್ನು ಕುರಿತ ಠರಾವು ಒಮ್ಮತದಿಂದ ಮಂಜೂರಾಯಿತು. ಇಂಥಾ ಠರಾವನ್ನು ಒಣ ಕಾಗದದಲ್ಲಿ ಮಾಡಿಟ್ಟದ್ದರಿಂದ ಪ್ರಯೋಜನವೇನು, ಹಿಂದುಸ್ಥಾನವನ್ನು ಪರ ರಾಜರ ದಂಡಿನ ಪ್ರಾಬಲ್ಯದಂತೆ ಮಾಡಿಕೊಳ್ಳುವ ಶಕ್ತಿಯು ಹಿಂದೀಯರಲ್ಲಿ ಇಲ್ಲದೆ ಇರುವಾಗ ಹಿಂದುಸ್ಥಾನವು ಸ್ವತಂತ್ರ ರಾಜ್ಯವಾಗಿರಲು ಯೋಚಿಸಿದ್ದರಿಂದ ಪ್ರಯೋಜನವೇನು ಎಂಬವರಾಗಿ ಕೇಳುವವರಿದ್ದಾರೆ. ಇದು ಒಣ ಕಾಗದದ ಮೇಲೆ ಇರುವ ಠರಾವಲ್ಲವೆಂತಲೂ, ಇದರಿಂದ ಪ್ರಯೋಜನವಿದೆಯೆಂತಲೂ ನಮ್ಮ ಅಭಿಪ್ರಾಯವಾಗಿದೆ. ಈ ವರೆಗೆ ಹಿಂದೂಸ್ಥಾನದವರೆಲ್ಲರೂ ಹುಟ್ಟಿದಂದಿನಿಂದಲೂ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅಧೀನವಾಗಿರುವದೇ ತಮ್ಮ ಹಣೆಬರಹವೆಂತ ಯೋಚಿಸುತ್ತಿದ್ದದ್ದು ಬಿಟ್ಟು ಇನ್ನು ಮುಂದೆ ಸ್ವತಂತ್ರ ಸಾಮ್ರಾಜ್ಯವಾಗಿರುವದೂ ಸಾಧ್ಯವಿದೆಯೆಂತ ಯೋಚಿಸಿದರೆ ಎಷ್ಟೋ ಪ್ರಯೋಜನವಿದೆ. ಹಿಂದೀಯರ ಈ ಅಭಿಲಾಷೆಯನ್ನು ಬ್ರಿಟಿಷ್ ಜನಾಂಗಕ್ಕೆ ತಿಳಿಸದೆ ಹೋದರೆ ಅವರ ಪ್ರತಿನಿಧಿಗಳಾದ ಪಾರ್ಲಿಮೆಂಟಿನವರು ಹೇಗೆ ತಾನೇ ಹಿಂದುಸ್ಥಾನವನ್ನು ತಮ್ಮ ಮುಷ್ಟಿಯೊಳಗಿನಿಂದ ಬಿಟ್ಟು ಕೊಟ್ಟಾರು?

ಈ ಠರಾವಿನ ಚರ್ಚೆಯಲ್ಲಿ ಶ್ರೀಮಾನ್ ಶ್ರೀನಿವಾಸಯ್ಯಂಗಾರರು ಹೇಳಿದ ಒಂದು ಮಾತು ನಮಗೆ ನ್ಯಾಯವಾಗಿ ತೋರುತ್ತದೆ. 'ಹಿಂದೀಯರು ತುಂಬಾ ನಮ್ರತೆ ಇರುವವರು. ತಮಗೆ 100 ರೂ. ಬೇಕಾಗಿದ್ದರೂ 50 ರೂ. ಯೂ 75 ರೂ. ಯಾದರೂ ಕೊಟ್ಟರೆ ಸಾಕೆಂತ ಹೇಳುವದು ಅವರ ಪದ್ಧತಿಯಾಗಿದೆ. ಆದರೆ ಇವರು ಕೇಳಿದ್ದು ಅವರ ಅಧಿಕ ಅಪೇಕ್ಷೆಯೆಂತ ಬ್ರಿಟಿಷರು ತಿಳಿದುಕೊಂಡು ಅವರು ಕೇಳಿದ್ದರಲ್ಲಿ ಅರ್ಧವೋ ಕಾಲುಭಾಗವೋ ಕೊಟ್ಟರೆ ಸಾಕೆಂತ ಯೋಚಿಸುತ್ತಾರೆ. ಆದ್ದರಿಂದ ನಮ್ಮ ಅಂತಿಮ ಧ್ಯೇಯವನ್ನು ಸ್ಪಷ್ಟವಾದ ಮಾತುಗಳಿಂದ ಬ್ರಿಟಿಷರಿಗೆ ತಿಳಿಸಿದರೆ ಹಿಂದುಸ್ಥಾನವನ್ನು ಬ್ರಿಟಿಷ್ ಸಾಮ್ರಾಜ್ಯದೊಳಗೇನೇ ಸ್ವತಂತ್ರ ರಾಜ್ಯವನ್ನಾಗಿ ಬ್ರಿಟಿಷರಂತೆಯೇ ಸಮಸಮಾನ ಹಕ್ಕುಳ್ಳವರನ್ನಾಗಿ ಇಟ್ಟುಕೊಳ್ಳಲಿಕ್ಕಾದರೂ ಬ್ರಿಟಿಷರು ಯೋಚಿಸಬಹುದು' ಎಂತ ಶ್ರೀ ಶ್ರೀನಿವಾಸಯ್ಯಂಗಾರರು ಹೇಳಿದರು. ಬ್ರಿಟಿಷ್ ಸಾಮ್ರಾಜ್ಯದೊಳಗೆ ಸ್ವತಂತ್ರ ರಾಜ್ಯವಾಗಿದ್ದರೆ ಬ್ರಿಟಿಷ್ ಸಂಬಂಧವನ್ನು ಯಾವಾಗ ಬೇಕಾದರೂ ಬಿಡುವ ಹಕ್ಕು ಇರುವದರಿಂದ ಬ್ರಿಟಿಷ್ ಸಾಮ್ರಾಜ್ಯದೊಳಗೆ ತತ್ಕಾಲ ಸೇರಿ ಇರಲು ಹಿಂದೀಯರು ಇಚ್ಛೆಸಿರಬಹುದು.

ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವ ವಿಷಯದಲ್ಲಿ ಜಾತಿ ಬಗೆಗಳನ್ನೇ ಮುಂದಾಗಿ ಒಡ್ಡುವದು ಬ್ರಿಟಿಷ್ ಅಧಿಕಾರಿಗಳ ಪದ್ಧತಿಯಾಗಿದೆ. ಈ ಬಿಕ್ಕಟ್ಟನ್ನು ಹೋಗಲಾಡಿಸಲು, ಹಿಂದು ಮುಸಲ್ಮಾನರ ಬಗೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸಾಧ್ಯವಿರುವ ಠರಾವನ್ನು ಕಾಂಗ್ರೆಸಿನವರು ಅಂಗೀಕರಿಸಿಕೊಂಡಿರುತ್ತಾರೆ. ಈ ಒಗ್ಗಟ್ಟೆಂಬ ಉಪಾಯದ ನೀಲೆಯೇ ಸ್ವರಾಜ್ಯ ಕಟ್ಟಡವು ನಿಲ್ಲಬೇಕಾಗಿದೆ. ಈ ಒಗ್ಗಟ್ಟಿನ ಠರಾವನ್ನು ಮುಸಲ್ಮಾನರ ಸಂಸ್ಥೆಯಾದ ಮುಸ್ಲಿಮ್ ಲೀಗಿನವರು ಕಲ್ಕತ್ತಾದಲ್ಲಿ ಒಪ್ಪಿಕೊಂಡಿರುತ್ತಾರೆ. ಹಿಂದು ಜನರ ಮುಖಂಡರಾದ ಪಂಡಿತ ಮದನಮೋಹನ ಮಾಳವೀಯರೇ ಕಾಂಗ್ರೆಸ್ಸಿನಲ್ಲಿ ಠರಾವನ್ನು ಪುಷ್ಟೀಕರಿಸಿ ದೇಶಭಕ್ತಿ ತುಂಬಿ ತುಳುಕುವ ಭಾಷಣ ಮಾಡಿರುತ್ತಾರೆ. ಆದ್ದರಿಂದ ಈ ಒಗ್ಗಟ್ಟಿನ ಠರಾವು ಜಾರಿಗೆ ಬಂದೀತೆಂಬ ನಂಬಿಗೆ ಕಾರಣವಿದೆ. ಹಿಂದುಸ್ಥಾನವು ಸ್ವತಂತ್ರ ರಾಜ್ಯವಾಗಬೇಕಾದರೆ ಎರಡು ಜಾತಿಯವರೂ ಕೆಲವುಮಟ್ಟಿಗಾದರೂ ಅನ್ಯೋನ್ಯ ಮನೋಭಾವಗಳನ್ನು ಗೌರವಿಸಬೇಕೆಂಬವನ್ನು ಒಪ್ಪಿಕೊಂಡದ್ದು ಮಹತ್ವದ ವಿಷಯವಾಗಿದೆ. ಈ ಠರಾವನ್ನು ಜನರಿಗೆ ಬೋಧಿಸಿ ಅದರಂತೆ ನಡಕೊಳ್ಳಲು ಮಾಡುವದು ಎಲ್ಲಾ ದೇಶಹಿತೈಷಿಗಳ ಕರ್ತವ್ಯವಾಗಿದೆ.

ಪಾರ್ಲಿಮೆಂಟಿನಲ್ಲಿ ನೇಮಕವಾದ ಸೈಮನ್ ಕಮಿಶನನ್ನು ಬಹಿಷ್ಕರಿಸಬೇಕೆಂಬ ಇನ್ನೊಂದು ಠರಾವು ಮಂಜೂರಾಯಿತು. ಈ ಮೊದಲು ಪತ್ರಿಕೆಗಳ ಮೂಲಕ ಮುಖಂಡರ ಅಭಿಪ್ರಾಯ ತಿಳಿಯುತ್ತಿದ್ದವರಿಗೆ ಕಾಂಗ್ರೆಸ್ಸಿನಲ್ಲಿ ಈ ಠರಾವು ಮಂಜೂರಾದದ್ದು ವಿಶೇಷವಾಗಿ ತೋರಲಾರದು. ಈ ಬಹಿಷ್ಕಾರವನ್ನು ಹೇಗೆ ಜಾರಿ ಮಾಡಬೇಕೆಂಬದು ತಪಶೀಲಾಗಿ ಇನ್ನೂ ತಿಳಿಸಿರುವುದಿಲ್ಲ. ಕಮಿಶನವರು ಹಿಂದುಸ್ಥಾನದಲ್ಲಿ ಕಾಲಿಡುವ ದಿನ ದೇಶದಲ್ಲೆಲ್ಲಾ ಹರತಾಳ ಮಾಡಬೇಕಾದದ್ದು ಒಂದು ಕ್ರಮ. ಕೌನ್ಸಿಲು ಮೆಂಬರುಗಳೆಲ್ಲಾ ಕೌನ್ಸಿಲುಗಳಿಗೆ ಹೋಗದೆ ಇರುವದು ಇನ್ನೊಂದು ಕ್ರಮ. ಇವೆರಡು ವಿಷಯಗಳನ್ನು ಕಾಂಗ್ರೆಸ್ಸಿನಲ್ಲಿ ಈಗಾಗಲೇ ತೀರ್ಮಾನಿಸಿರುತ್ತಾರೆ. ಈ ತರದ ಕಾರ್ಯಗಳನ್ನು ಮಾಡುವದರಿಂದ ಬ್ರಿಟಿಷ್ ಜನಾಂಗಕ್ಕಾಗಲೀ ಕಮಿಶನಿನ ಮೆಂಬರುಗಳಿಗಾಗಲೀ ಅಗೌರವ ತೋರಿ ಬಂತಾಗುವದಿಲ್ಲ. ಹಿಂದುಸ್ಥಾನದ ರಾಜಪದ್ಧತಿಯನ್ನು ನಿರ್ಣಯಿಸುವ ಹಕ್ಕು ಹಿಂದೀಯರಿಗೆ ಇಲ್ಲವೆಂಬ ತತ್ವವನ್ನು ಹಿಂದೀಯರು ಒಪ್ಪುವದಿಲ್ಲವೆಂತ ಪ್ರಪಂಚಕ್ಕೆ ತೋರಿಸಲಿಕ್ಕಾಗಿಯೆ ಈ ಬಹಿಷ್ಕಾರವನ್ನು ತೀರ್ಮಾನಿಸುವದಾಗಿದೆ. ಕಾಂಗ್ರೆಸ್ಸಿನವರು ಮಾತ್ರವಲ್ಲ, ಲಿಬರಲ್ ಪಕ್ಷದವರೂ, ಮುಸ್ಲಿಮ್ ಲೀಗಿನವರೂ, ಹಿಂದೂ ಮಹಾಸಭೆಯವರೂ ಸಹ ಕಮಿಶನನ್ನು ಬಹಿಷ್ಕರಿಸಲು ತೀರ್ಮಾನಿಸಿರುತ್ತಾರೆ. ಇದರಿಂದ ದೇಶದ ಎಲ್ಲಾ ಪಂಗಡಗಳೂ ಹಿಂದುಸ್ಥಾನದ ಗೌರವವನ್ನೇ ಮುಂದಾಗಿಟ್ಟುಕೊಂಡಿದ್ದಾರೆಂತ ಗೊತ್ತಾಗುತ್ತದೆ. ಹಿಂದುಸ್ಥಾನದ ಗೌರವವನ್ನು ಕಾಪಾಡಲು ಹಿಂದೀಯರೆಲ್ಲರೂ ಪಂಗಡ ಭೇದವಿಲ್ಲದೆ ಒಗ್ಗೂಡಿದರೆ ಸ್ವರಾಜ್ಯ ಸ್ಥಾಪನೆಯು ದೀರ್ಘ ಕಾಲದ ಮಾತಾಗುವದಿಲ್ಲ.

ಹಿಂದೂ ದೇಶಕ್ಕೆ ಬೇಕಾಗಿರುವ ಸರಕಾರದ ರಚನೆಯನ್ನು ತಯಾರಿಸುವ ಕೆಲಸವು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ವಹಿಸಲಾಗಿದೆ. ಇದೂ ಒಂದು ಮುಖ್ಯ ತೀರ್ಮಾನವೆಂದೇ ಹೇಳಬೇಕು. ಬ್ರಿಟಿಷ್ ಸರಕಾರದವರು ರಾಯಲ್ ಕಮಿಶನಿನ ಮೂಲಕ ಹಿಂದೂ ದೇಶಕ್ಕೆ ಯಾವ ತರಹದ ರಾಜಕೀಯ ಸುಧಾರಣೆಯನ್ನು ಕೊಡಬಹುದೆಂದು ಯೋಚಿಸುತ್ತಿರುವಾಗ ಹಿಂದೀಯರು ಆ ಕಮಿಶನಿನೊಂದಿಗೆ ಸಹಕರಿಸದೆ ಹೋದರೂ ತಮ್ಮ ಮುಂದಿನ ಸರಕಾರದ ರಚನೆಯನ್ನು ತಾವಾಗಿಯೇ ತಯಾರಿಸಿಕೊಳ್ಳಬೇಕಾದದ್ದು ಅವಶ್ಯ. ಆದರೆ ಈ ರಚನೆಯು ಹಿಂದೂ ದೇಶದ ಎಲ್ಲಾ ಪಾರ್ಟಿ ಪಂಗಡಗಳಿಗೆ ಒಪ್ಪಂತಾದ್ದಾಗಿರಬೇಕು. ಆದುದರಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಬೇರೆ ಪಂಗಡಗಳ ಪ್ರತಿನಿಧಿಗಳೊಂದಿಗೆ ಸೇರಿ ಆಲೋಚಿಸಿ ರಚನೆಯನ್ನು ತಯಾರಿಸಬೇಕೆಂದು ತೀರ್ಮಾನಿಸಿದ್ದು ಯೋಗ್ಯವಾಗಿದೆ.

ಮದ್ರಾಸು ಕಾಂಗ್ರೆಸ್ಸಿನ ತೀರ್ಮಾನಗಳಿಂದ ಭಾರತೀಯರಲ್ಲಿ ನವಜೀವನವು ಹುಟ್ಟುವಂತೆ ತೋರುತ್ತದೆ. ಈ ನವಜೀವ ಶಕ್ತಿ, ಉತ್ಸಾಹಕ್ಕೆ ಸೈಮನ್ ಕಮಿಶನೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಹಿಂದೂ ದೇಶದ ರಾಜಕೀಯ ಬಿಕ್ಕಟ್ಟಿನ ಈ ಸಮಯದಲ್ಲಿ ಹಿಂದೂ ದೇಶದವರೆಲ್ಲರೂ ಜಾತಿ, ಮತ, ಪಂಗಡ ಭೇದಗಳನ್ನೆಣಿಸದೆ ಒಗ್ಗಟ್ಟಾಗಿ ಕಾರ್ಯವರಾಗಿ ಹಾರೈಸುತ್ತೇವೆ.

ಕಾಂಗ್ರೆಸ್ ಸಮಾಚಾರ.

ಕಾಂಗ್ರೆಸ್ ನಗರ

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ೪೩ನೇ ಅಧಿವೇಶನವು ಕಳೆದ ತಾ. 26 ರಿಂದ 28ರ ವರೆಗೆ ಮದ್ರಾಸಿನಲ್ಲಿ ನಡೆಯಿತು. ಡಿಲ್ಲಿಯ ಡಾಕ್ಟರ್ ಅನ್ಸಾರಿಯವರು ಅಧ್ಯಕ್ಷರಾಗಿದ್ದರು. ಮದ್ರಾಸಿನ ಸ್ಪರ್ ಟ್ಯಾಂಕ್ ಎಂಬಲ್ಲಿ ಕಾಂಗ್ರೆಸ್ ನಗರವು ಬಹು ಅಂದವಾಗಿ ಕಟ್ಟಲ್ಪಟ್ಟಿತ್ತು. ... ಸಭೆ ಸೇರಲು 20 ಸಾವಿರ ಜನರು ಹಿಡಿಯುವ ... 280 ಅಡಿ ಉದ್ದ ಮತ್ತು ಅಷ್ಟೇ ಅಗಲದ ಮಂಟಪವು ... ಗರಿಗಳಿಂದ ಹೊದಿಸಿದ ಮಾಡಿನಿಂದ ಕಟ್ಟಲ್ಪಟ್ಟಿತ್ತು. ... ದಿಂದ ನೋಡಿದವರಿಗೆ ಇದು ಒಂದು ಚಿಕ್ಕ ಬೆಟ್ಟದಂತೆ ಕಾಣುತ್ತಿತ್ತು. ಇದರ ಸಮೀಪ ಸಬ್ಜೆಕ್ಟ್ ಕಮಿಟಿ ಮೀಟಿಂಗಿಗೂ, ಸಂಗೀತ ಕಾನ್‌ಫರೆನ್ಸಿಗೂ ಪ್ರತ್ಯೇಕ ... ಗಳು ಇದ್ದವು. ಇದಕ್ಕೆ ಸ್ವಲ್ಪ ದೂರದಲ್ಲಿ ಯುವಕ ... ಗ್ರೆಸ್ಸಿನ ಚಪ್ಪರವಿತ್ತು. ಇವಲ್ಲದೆ ಪ್ರತಿನಿಧಿಗಳಿಗೂ, ... ಕಮಿಟಿ ಮೆಂಬರುಗಳಿಗೂ ಉಳಕೊಳ್ಳಲು ತೆಂಗಿನ ಗರಿ ಹೊದಿಸಿ ಬಿದುರು ತಟ್ಟಿಗಳಿಂದ ತಯಾರಿಸಿದ ಗುಡಿಸಲು ಅನೇಕ ಇದ್ದವು. ಅಲ್ಲಿಯೇ ಮಾಡಿದ್ದ ಊಟದ ಏರ್ಪಾಡು ತೃಪ್ತಿಕರವಾಗಿತ್ತು. ಸ್ನಾನಕ್ಕೂ, ಪಾಯಖಾನೆಗೂ ... ಏರ್ಪಾಡುಗಳು ಮಾಡಲ್ಪಟ್ಟಿದ್ದವು. ಆದರೆ ಅವು ಅಷ್ಟೊಂದು ತೃಪ್ತಿಕರವಾಗಿರಲಿಲ್ಲ. ಎಲ್ಲವನ್ನೂ ಕ್ರಮವಾಗಿ ನಡಿಸಲು ಸುಮಾರು 800 ಗಂಡಸು ಸ್ವಯಂಸೇವಕರು ... ಅಲ್ಲದೆ ಸ್ತ್ರೀ ವಾಲಂಟಿಯರುಗಳೂ ಇದ್ದರು. ಆದರೆ ... ಸೇವಕರು ಸಾಕಷ್ಟು ತರಬೇತು ಆಗಿರಲಿಲ್ಲವೆಂದು ಕಾಣುತ್ತಿತ್ತು. ಮೂರು ವರ್ಷಗಳ ಹಿಂದೆ ಬೆಳಗಾವಿಯಲ್ಲಿ ... ಕಾಂಗ್ರೆಸ್ಸಿನಲ್ಲಿ ಡಾಕ್ಟರ್ ಹರ್ಡಿಕರವರ ಸೇವಾದಳವು ಮಾಡಿದಷ್ಟು ಉತ್ತಮ ಕೆಲಸವು ಮದ್ರಾಸು ವಾಲಂಟಿಯರಿಂದ ಸಾಧ್ಯವಾಗಲಿಲ್ಲ. ಆದರೆ ಮದ್ರಾಸಿನಲ್ಲಿ ಜನ ಸಂದಣಿಯು ಬಹಳ ದೊಡ್ಡದಾಗಿತ್ತು. ಲಕ್ಷಗಟ್ಟಲೆ ಜನರು ಸೇರಿದ್ದರು. ಅಂಥಾದರಲ್ಲಿ ಪೋಲೀಸಿನವರ ಸಹಾಯವಿಲ್ಲದೆ ... ವನ್ನೂ ಏನೊಂದೂ ಗಲಾಟೆಯಿಲ್ಲದೆ ನಡಿಸಿದ್ದು ... ಯ ಸ್ವಯಂ ಸೇವಕ ಮತ್ತು ಸೇವಕಿಯರಿಗೆ ಪ್ರಶಂಸಾರ್ಹವಾಗಿದೆ.

ಪ್ರದರ್ಶನಗಳು.

ಕಾಂಗ್ರೆಸ್ ನಗರದ ಇನ್ನೊಂದು ಭಾಗದಲ್ಲಿ ... ಭಾರತ ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನವೂ ... ದರ ಪಕ್ಕದಲ್ಲಿಯೇ ಖಾದೀ ಪ್ರದರ್ಶನವೂ ಇದ್ದವು. ... ರಡು ಪ್ರದರ್ಶನಗಳೂ ವಿಶೇಷ ತರದ್ದಾಗಿದ್ದವು. ಇವುಗಳಲ್ಲಿ ನೋಡತಕ್ಕ ವಸ್ತುಗಳು ಹಲವು ಇದ್ದವು. ... ಪ್ರದರ್ಶನವನ್ನು ಶ್ರೀ ಮುತ್ತಯ್ಯ ಚೆಟ್ಟಿಯರು ತಾ 1 ... ಲಲ್ಲಿ ಖಾದೀ ಪ್ರದರ್ಶನವನ್ನು ಮಹಾತ್ಮ ಗಾಂಧಿಯವರು ತಾ 24 ರಲ್ಲಿ ತೆರೆದರು. ಅಲ್ಲಿ ಪ್ರದರ್ಶಿಸಲ್ಪಟ್ಟಿದ್ದ ... ಖಾದಿ ಬಟ್ಟೆಗಳು ಅವು ಕೈಯಿಂದ ನೂಡಲ್ಪಟ್ಟವೋ ... ವೋ ಎಂಬ ಸಂಶಯವನ್ನುಂಟುಮಾಡುವಷ್ಟು ಅಂದವಾಗಿಯೂ, ನಯವಾಗಿಯೂ, ತೆಳುವಾಗಿಯೂ ಇದ್ದವು. ... ಲ್ಲಿ ತಾ 2 ರ ವರೆಗೆ 64 ಸಾವಿರ ರೂಪಾಯಿಯ ಖಾದಿ ಮಾರಾಟವಾಯಿತಂತೆ.

ಕಾಂಗ್ರೆಸ್ ಅಧ್ಯಕ್ಷರ ಆಗಮನ.

ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ ಅನ್ಸಾರಿಯವರು ... 23ರ ಬೆಳಿಗ್ಗೆ ಮದ್ರಾಸಿಗೆ ಬಂದಾಗ ಅವರಿಗೆ ಹಲವು ... ಡಾಕ್ಟರುಗಳು ಸೆಂಟ್ರಲ್ ಸ್ಟೇಶನ್ನಿನಲ್ಲಿ ಸ್ವಾಗತವಿತ್ತ... ಇವರಲ್ಲಿ ಒಂದು ದೊಡ್ಡ ಮೆರವಣಿಗೆಯನ್ನು ನಡೆಯ... ದೇ ದಿನ ಅನ್ಸಾರಿಯವರಿಗೆ ಮದ್ರಾಸು ಮುನ್ಸಿಪಲ್ ಕಾರ್ಪೊರೇಶನ್ನಿನವರು ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು. ... ದಿನ ಬೆಳಿಗ್ಗೆ ಅಲ್ಲಿಗೆ ತಲುಪಿದ ಮಹಾತ್ಮ ಗಾಂಧಿಯವರು ... ರೋಗ್ಯದ ದೆಸೆಯಿಂದ ಗದ್ದಲವನ್ನು ನಿವಾರಿಸಲು ... ನ ಚಿಕ್ಕ ಸ್ಟೇಶನಿನಲ್ಲಿ ಇಳಿದು ಮೋಟಾರಿನಲ್ಲಿ ಏನೊಂದೂ ... ಭ್ರಮವಿಲ್ಲದೆ ತಮ್ಮ ಬಿಡಾರಕ್ಕೆ ಹೋದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು ತಾ ... ಮತ್ತು 24 ರಲ್ಲಿ ಡಾ ಅನ್ಸಾರಿಯವರ ಬಿಡಾರದಲ್ಲಿ ನಡೆ... ಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಒಪ್ಪಿಸಬೇಕಾದ ... ಠರಾವುಗಳು ಚರ್ಚಿಸಲ್ಪಟ್ಟವು.

ವಿಷಯನಿಯಾಮಕ ಕಮಿಟಿ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ತಾ 24ರ ... ಧ್ಯಾಹ್ನ ಸಬ್ಜೆಕ್ಟ್ ಕಮಿಟಿ ಮಂಟಪದಲ್ಲಿ ಸೇರಿ ಕಳೆದ ವರ್ಷದ ಕೆಲಸದ ವರದಿಯನ್ನು ಓದಿದನಂತರ ಕಳೆದ ವರ್ಷ ... ಪ್ರೆಸಿಡೆಂಟರಾದ ಶ್ರೀ. ಶ್ರೀನಿವಾಸಯ್ಯಂಗಾರರು ಅಧ್ಯಕ್ಷ ಪದವಿಯನ್ನು ಡಾ. ಅನ್ಸಾರಿಯವರಿಗೆ ಬಿಟ್ಟುಕೊಟ್ಟರು. ... ಕಮಿಟಿಯು ಸಬ್ಜೆಕ್ಟ್ ಕಮಿಟಿಯಾಗಿ ಕಾರ್ಯಕ್ರಮವನ್ನು ... ಡಿಸಲಾರಂಭಿಸಿತು. ಈ ವಿಷಯ ನಿಯಾಮಕ ಮೀಟಿಂಗು ತಾ 24, 25, 27 ಮತ್ತು 28 ರಲ್ಲಿಯೂ ನಡೆದು ಕಾಂಗ್ರೆಸ್ ಮಹಾಸಭೆಯ ಮುಂದಿಡಬೇಕಾದ ಠರಾವುಗಳನ್ನು ಚರ್ಚಿಸಿ ತೀರ್ಮಾನಿಸಲ್ಪಟ್ಟವು. ಈ ಮಂಡಲದಲ್ಲಿ ಪಾಸಾದ ಠರಾವುಗಳು ಮಾತ್ರವೇ ಮಹಾಸಭೆಯಲ್ಲಿ ಚರ್ಚಿಸಲ್ಪಟ್ಟವು.

(೪ನೇ ಪುಟದಲ್ಲಿ ಮುಂದುವರಿದಿದೆ)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೧೬ನೇ ಪ್ರಕರಣ.

ಮಹಾವ್ಯಾಧಿ—೨

ಖಾಲೀ ಮನೆಯನ್ನು ವಶಕ್ಕೆ ತೆಗೆದುಕೊಂಡು ರೋಗಿಗಳನ್ನು ನೋಡಿಕೊಂಡುದಕ್ಕಾಗಿ ನನಗೆ ಪೌರಸಭೆಯು ಗೌರವವನ್ನೂ ಕೃತಜ್ಞತೆಯನ್ನು ವ್ಯಕ್ತಪಡಿಸಿ ಇದ್ದಕ್ಕಿದ್ದ ಹಾಗೆ ಒದಗಿರುವ ಇಂಥಾ ಸಂದರ್ಭವನ್ನು ಒಡನೆಯೇ ಇಟ್ಟುಕೊಳ್ಳಲು ಪೌರಸಭೆಯ ಕೈಯಲ್ಲಿ ಯಾವ ಸಾಧನವೂ ಇರಲಿಲ್ಲವೆಂದೂ ಆದರೆ ತಮ್ಮ ಕೈಯಲ್ಲಾದ ಸಹಾಯವನ್ನೆಲ್ಲಾ ಮಾಡುವರೆಂದೂ ನಿಷ್ಕಪಟವಾಗಿ ಒಪ್ಪಿಕೊಂಡರು. ತನ್ನ ಕರ್ತವ್ಯವೇನೆಂದು ತಿಳಿದೊಡನೆಯೇ ಪೌರಸಭೆಯು ಕೆಲಸಕ್ಕೇನೂ ತಡಮಾಡಲಿಲ್ಲ.

ಮರುದಿನ ಒಂದು ಗುದಾಮನ್ನು ನನ್ನ ವಶಕ್ಕೆ ಕೊಟ್ಟು ರೋಗಿಗಳನ್ನು ಅಲ್ಲಿಗೆ ಸಾಗಿಸಬೇಕೆಂದು ಸೂಚಿಸಿದರು. ಆ ಸ್ಥಳವನ್ನು ಶುಚಿಮಾಡುವ ಭಾರವನ್ನು ಪೌರಸಭೆಯು ವಹಿಸಿಕೊಳ್ಳಲಿಲ್ಲ. ಆ ಕಟ್ಟಡವು ಒಪ್ಪವಿಲ್ಲದೆಯೂ, ಕೊಳೆಯಾಗಿಯೂ ಇದ್ದಿತು. ನಾವೇ ಅದನ್ನು ಶುಚಿಮಾಡಿದೆವು. ಉದಾರ ಹೃದಯರಾದ ಭಾರತೀಯರ ಸಹಾಯದಿಂದ ಕೆಲವು ಮಂಚಗಳನ್ನೂ, ಇತರ ಅವಶ್ಯಕವಾದ ಪದಾರ್ಥಗಳನ್ನೂ ಒಟ್ಟುಗೂಡಿಸಿ ತಾತ್ಕಾಲಿಕ ಕೆಲಸಕ್ಕೆ ಒಂದು ವೈದ್ಯಶಾಲೆಯನ್ನು ಮಾಡಿದೆವು. ಪೌರಸಭೆಯವರು ಒಬ್ಬ ದಾದಿ (ನರ್ಸ್) ಯನ್ನು ಕಳುಹಿಸಿದರು. ಆಕೆಯು ಬ್ರಾಂಡಿ ಮತ್ತು ಇತರ ರೋಗಿಗಳಿಗೆ ಅವಶ್ಯಕವಾದ ವಸ್ತುಗಳನ್ನು ತೆಗೆದುಕೊಂಡು ಬಂದಳು. ಡಾ|| ಗಾಡ್‌ಫ್ರೆಯವರೇ ಇನ್ನೂ ಉಸ್ತುವಾರಿಯಲ್ಲಿದ್ದರು.

ದಾದಿಯು ದಯಾಹೃದಯಳು. ಆಕೆಯು ಸಂತೋಷದಿಂದ ರೋಗಿಗಳ ಬಳಿಗೆ ಹೋಗಲು ಸಿದ್ಧಳಾಗಿದ್ದರೂ ಆಕೆಗೆ ಸೋಂಕು ತಗಲೀತೆಂಬ ಭಯದಿಂದ ನಾವು ಆಕೆಯನ್ನು ಸಾಧ್ಯವಾಗಿ ಅವರ ಬಳಿಗೆ ಹೋಗಿ ಶುಶ್ರೂಷೆ ಮಾಡಲು ಬಿಡುತ್ತಿರಲಿಲ್ಲ.

ರೋಗಿಗಳಿಗೆ ಆಗಾಗ ಬ್ರಾಂಡಿಯನ್ನು ಕೊಡಬೇಕೆಂದು ನಮಗೆ ಹೇಳಿದ್ದರು. ಸೋಂಕು ನಮಗೆ ತಗಲದಿರುವುದಕ್ಕೆ ದಾದಿಯು ತೆಗೆದುಕೊಳ್ಳುವಂತೆಯೇ ನಾವು ಕೂಡ ಬ್ರಾಂಡಿಯನ್ನು ತೆಗೆದುಕೊಳ್ಳಬೇಕೆಂದು ದಾದಿಯು ಹೇಳುತ್ತಿದ್ದಳು. ಆದರೆ ನಾವ್ಯಾರೂ ಅದನ್ನು ಮುಟ್ಟುತ್ತಿರಲಿಲ್ಲ. ರೋಗಿಗಳಿಗೆ ಅದರಿಂದ ಪ್ರಯೋಜನವಾಗುವುದರಲ್ಲಿ ಕೂಡ ನನಗೆ ನಂಬಿಕೆಯಿರಲಿಲ್ಲ. ಬ್ರಾಂಡಿ ಇಲ್ಲದೆ ಇರಲು ಸಿದ್ಧರಾಗಿದ್ದ ಮೂರು ಜನ ರೋಗಿಗಳನ್ನು ಡಾ|| ಗಾಡ್‌ಫ್ರೆಯವರ ಅಪ್ಪಣೆ ಪಡೆದು ಮಣ್ಣಿನ ಚಿಕಿತ್ಸೆಯಲ್ಲಿಟ್ಟು ಅವರ ಎದೆಗೆ, ತಲೆಗೆ ಮಣ್ಣಿನ ಪಟ್ಟಿಯನ್ನು ಹಾಕಿದೆನು. ಇವರಲ್ಲಿ ಇಬ್ಬರು ಉಳಿದುಕೊಂಡರು. ಇಪ್ಪತ್ತು ಜನ ಗುದಾಮಿನಲ್ಲಿರುವಾಗಲೇ ಸತ್ತುಹೋದರು.

ಈ ಮಧ್ಯೆ ಪೌರಸಭೆಯವರು ಇನ್ನೂ ಇತರ ಏರ್ಪಾಡುಗಳನ್ನು ನಡೆಸುತ್ತಿದ್ದರು. ಜೋಹಾನ್ಸ್‌ಬರ್ಗಿಗೆ ಏಳು ಮೈಲಿ ದೂರದಲ್ಲಿ ಸೋಂಕು ಜಾಡ್ಯದ ಆಸ್ಪತ್ರೆ ಭವನವೊಂದಿದ್ದಿತು. ಮರಣಕ್ಕೆ ತುತ್ತಾಗದೆ ಆ ಮೂವರು ಜನ ರೋಗಿಗಳನ್ನು ಈ ಭವನದ ಹತ್ತಿರ ಡೇರೆಗಳಿಗೆ ಸಾಗಿಸಿದರು. ಹೊಸದಾಗಿ ಸೋಂಕು ತಗಲಿದವರನ್ನೂ ಅಲ್ಲಿಗೆ ಕಳುಹಿಸುವುದಕ್ಕೆ ಏರ್ಪಾಡಾಯಿತು. ಹೀಗೆ ನಾವು ಈ ಕೆಲಸದಿಂದ ಬಿಡುಗಡೆಯಾದೆವು. ಕೆಲವು ದಿವಸಗಳಲ್ಲಿಯೇ ಆ ಗುಣಶೀಲಳಾದ ದಾದಿಗೆ ಜಾಡ್ಯವು ತಗಲಿ ಆಕೆಯು ಒಡನೆಯೇ ಸತ್ತುಹೋದಳೆಂದು ನಮಗೆ ತಿಳಿದುಬಂದಿತು. ಆ ಇಬ್ಬರು ರೋಗಿಗಳು ಹೇಗೆ ಉಳಿದರೂ ನಮಗೆ ಸೋಂಕು ತಗಲದೆ ಇದ್ದುದೂ ಹೇಗೆ ಎಂದು ಹೇಳುವುದು ಅಸಾಧ್ಯ. ಆದರೆ ಈ ಅನುಭವದಿಂದ ಮಣ್ಣಿನ ಚಿಕಿತ್ಸೆಯಲ್ಲಿ ನನ್ನ ನಂಬಿಕೆಯು ಹೆಚ್ಚಿ ಬ್ರಾಂಡಿಯು ಔಷಧರೂಪದಲ್ಲಿ ಕೂಡ ಪ್ರಯೋಜನಕಾರಿಯಲ್ಲವೆಂಬ ಅಭಿಪ್ರಾಯವು ಸ್ಥಿರಪಟ್ಟಿತು. ಈ ನಂಬಿಕೆಗಾಗಲಿ ಅಥವಾ ಈ ಅಪನಂಬಿಕೆಗಾಗಲಿ ಸಾಕಾದಷ್ಟು ಆಧಾರವಿಲ್ಲವೆಂದು ನನಗೆ ಗೊತ್ತು. ಆದರೆ ಆ ಸಮಯದಲ್ಲಿ ನನ್ನ ಮನಸ್ಸಿನ ಮೇಲೆ ಉಂಟಾದ ಪರಿಣಾಮವನ್ನು ಹೋಗಲಾಡಿಸಲಾರೆನು. ಆ ಅಭಿಪ್ರಾಯವು ನನ್ನಲ್ಲಿ ಇಂದಿನವರೆಗೂ ಇದೆ. ಆದ್ದರಿಂದ ಈ ಪ್ರಸಂಗವನ್ನು ಇಲ್ಲಿ ತಿಳಿಸುವುದು ಅವಶ್ಯಕವೆಂದೆಣಿಸಿದ್ದೇನೆ.

ಲೊಕೇಷನು ಪೌರಸಭೆಯ ವಶಕ್ಕೆ ಬಂದ ಮೇಲೆ ಅದರ ಅಲಕ್ಷ್ಯಕ್ಕೂ ಮತ್ತು ಪ್ಲೇಗು ಹರಡುವುದಕ್ಕೂ ಪೌರಸಭೆಯ ಮೇಲೆಯೇ ಜವಾಬ್ದಾರಿಯನ್ನು ಹೊರಿಸಿ ಪ್ಲೇಗು ಪ್ರಾರಂಭವಾದೊಡನೆಯೇ ನಾನು ವೃತ್ತಪತ್ರಿಕೆಗಳಿಗೆ ಒಂದು ಕಾಗದವನ್ನು ಬರೆದೆನು. ಈ ಪತ್ರವು ನನಗೆ ಮಿ|| ಹೆನ್ರಿ ಪೋಲಕರನ್ನು ಸಂಪಾದಿಸಿತು. ದಿವಂ|| ರೆವರೆಂಡ್ ಜೋಸೆಫ್ ಡೋಕರೊಡನೆ ನನ್ನ ಮೈತ್ರಿಗೆ ಇದೂ ಒಂದು ಕಾರಣವಾಗಿದ್ದಿತು.

ನಾನು ಊಟಕ್ಕೆ ಒಂದು ಶಾಕಾಹಾರ ಭೋಜನಾಲಯಕ್ಕೆ ಹೋಗುತ್ತಿದ್ದೆನೆಂದು ಹಿಂದಿನ ಒಂದು ಅಧ್ಯಾಯದಲ್ಲಿ ಹೇಳಿದ್ದೇನೆ. ಅಲ್ಲಿ ನನಗೆ ಮಿ|| ಆಲ್ಬರ್ಟ್ ವೆಸ್ಟರ ಪರಿಚಯವಾಯಿತು. ಅಲ್ಲಿ ಪ್ರತಿನಿತ್ಯವೂ ಸಂಜೆ ಒಟ್ಟುಗೂಡುತ್ತಿದ್ದೆವು. ಊಟವಾದ ಮೇಲೆ ನಾವು ತಿರುಗಾಟಕ್ಕೆ ಹೊರಡುತ್ತಿದ್ದೆವು. ಮಿ|| ವೆಸ್ಟರು ಒಂದು ಸಣ್ಣ ಛಾಪಖಾನೆಯ ಪಾಲುಗಾರರಾಗಿದ್ದರು. ಪ್ಲೇಗ್ ಪ್ರಾರಂಭವಾದ ವಿಚಾರವಾಗಿ ನು ವೃತ್ತಪತ್ರಿಕೆಗಳಿಗೆ ಬರೆದ ಕಾಗದವನ್ನು ಅವರು ಓದಿ ನನ್ನನ್ನು ಭೋಜನಾಲಯದಲ್ಲಿ ಕಾಣದಿರಲು ಅವರು ಗಾಬರಿಪಟ್ಟರು.

ಪ್ಲೇಗು ಪ್ರಾರಂಭವಾದಂದಿನಿಂದ ನಾನೂ ನನ್ನ ಜೊತೆಗಾರರೂ ನಮ್ಮ ಆಹಾರವನ್ನು ಕಡಿಮೆ ಮಾಡಿದ್ದೆವು. ಏಕೆಂದರೆ—ನನಗಂತೂ ಬಾಲ್ಯದಿಂದ ಅಭ್ಯಾಸವಾಗಿದ್ದ ನಿಯಮವನ್ನು ನಾನು ಎಷ್ಟೋ ದಿನದಿಂದ ಅನುಸರಿಸುತ್ತಿದ್ದೆನು. ಆದ್ದರಿಂದ ಈ ಸಮಯದಲ್ಲಿ ನಾನು ಸಂಜೆಯ ಊಟವನ್ನು ಬಿಟ್ಟುಬಿಟ್ಟೆನು. ಮಧ್ಯಾಹ್ನದ ಆಹಾರವನ್ನು ಕೂಡ ಇತರರು ಬರುವುದಕ್ಕಿಂತ ಮುಂಚೆಯೇ ಮುಗಿಸಿಬಿಡುತ್ತಿದ್ದೆನು. ಭೋಜನಾಲಯದ ಯಜಮಾನನೊಡನೆ ನನಗೆ ಹೆಚ್ಚಾದ ಪರಿಚಯವಿದ್ದಿತು. ನಾನು ಪ್ಲೇಗಿನಿಂದ ನರಳುವ ರೋಗಿಗಳನ್ನು ಉಪಚರಿಸುತ್ತಿರುವೆನೆಂದೂ, ಆದ್ದರಿಂದ ಸಾಧ್ಯವಾದ ಮಟ್ಟಿಗೆ ನನ್ನ ಮಿತ್ರರೊಡನೆ ಸಂಪರ್ಕವನ್ನು ಬಿಟ್ಟುಬಿಡಬೇಕೆನ್ನುವೆನೆಂದೂ ಅವರಿಗೆ ಹೇಳಿದ್ದೆನು.

ಭೋಜನಾಲಯದಲ್ಲಿ ನಾನು ಒಂದೆರಡು ದಿನ ಕಾಣದೆ ಇರಲು ಒಂದು ದಿನ ಬೆಳಗ್ಗೆ ಅಷ್ಟು ಹೊತ್ತಿಗೇ ಮಿ|| ವೆಸ್ಟರು ನಾನು ತಿರುಗಾಡುವುದಕ್ಕೆ ಹೊರಡಲು ಅನುವಾಗುತ್ತಿರುವಷ್ಟರಲ್ಲಿಯೇ ಬಾಗಿಲನ್ನು ತಟ್ಟಿದರು. ನಾನು ಬಾಗಿಲನ್ನು ತೆರೆಯಲು ಮಿ|| ವೆಸ್ಟರು,

"ನೀವು ನನಗೆ ಭೋಜನಾಲಯದಲ್ಲಿ ಕಾಣಬರಲಿಲ್ಲ, ನಿಮಗೇನಾಗಿ ಬಿಟ್ಟಿದೆಯೋ ಏನೋ ಎಂದು ನನಗೆ ಹೆದರಿಕೆಯಾಯಿತು. ಆದ್ದರಿಂದ ನೀವು ಬೆಳಗ್ಗೆ ಮನೆಯಲ್ಲಿರುವಾಗಲೇ ಒಂದು ನೋಡಿಕೊಂಡು ಹೋಗಬೇಕೆಂದು ನಿಶ್ಚಯಿಸಿದೆನು. ಇಗೋ ನೋಡಿ, ನೀವು ಹೇಳಿದಂತೆ ಮಾಡಲು ನಾನು ಇಲ್ಲಿದ್ದೇನೆ. ರೋಗಿಗಳಿಗೆ ಶುಶ್ರೂಷೆ ಮಾಡುವುದರಲ್ಲಿ ನಿಮಗೆ ಸಹಾಯ ಮಾಡಲು ನಾನು ಸಿದ್ಧನಾಗಿದ್ದೇನೆ. ನನ್ನನ್ನೇ ಆಶ್ರಯಿಸಿದವರಾರೂ ಇಲ್ಲವೆಂದು ನಿಮಗೆ ಗೊತ್ತಿದೆ," ಎಂದು ಹೇಳಿದರು.

ನಾನು ಇದಕ್ಕಾಗಿ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿ ಒಂದು ಕ್ಷಣವೂ ಯೋಚನೆ ಮಾಡದ ಆತನಿಗೆ, "ನಾನು ನಿಮ್ಮನ್ನು ರೋಗಿಗಳ ಉಪಚಾರಕ್ಕೆ ತೆಗೆದುಕೊಳ್ಳುವುದಿಲ್ಲ. ಇನ್ನಾರಿಗೂ ಸೋಂಕು ತಗಲದಿದ್ದರೆ ನಮ್ಮ ಕೆಲಸವು ಒಂದೆರಡು ದಿವಸದಲ್ಲಿಯೇ ಮುಗಿಯುತ್ತದೆ. ಆದರೆ ಒಂದು ವಿಷಯವಿದೆ," ಎಂದು ಹೇಳಿದೆನು.

'ಏನದು?'

'ನೀವು ಡರ್ಬನಿಗೆ ಹೋಗಿ 'ಇಂಡಿಯನ್ ಒಪಿನಿಯನ್' ಮುದ್ರಣಾಲಯವನ್ನು ನಡೆಸ ಬಲ್ಲಿರಾ? [illegible] ಅಲ್ಲಿಗೆ ಯಾರಾದರೂ ಹೋಗ [illegible] ವಾಗಿ ನನ್ನ ಚಿಂತೆಯು ತಪ್ಪೀತು.

[illegible]

ನನಗೆ ಸಂತೋಷವಾಯಿತು. [illegible]

[illegible]

ಕಿವಿಗಳ ವಿಷಯದಲ್ಲಿ ಕೆಲವು ಎಚ್ಚರಿಕೆಗಳು.

[illegible]

[illegible]

ದಲ್ಲಿಯಾಗಲಿ, ಒಳ್ಳೆ ಶೈತ್ಯದಿಂದಾಗಲಿ ಇದು ಉಂಟಾಗುವುದು. ಸಾಧಾರಣವಾಗಿ ನಡು ಕಿವಿಯಲ್ಲಿ ಹೊರಗಿನ ಪದಾರ್ಥಗಳು ಹೊಗಿ ನಿಂತು, ಒಳಗಿನ ಪರೆ ಅಥವಾ ಪಟಲವನ್ನು ಹರಿದು, ಆ ಮೇಲೆ ಹೊರಗಿನ ಕರ್ಣದ್ವಾರದಿಂದ ಬಾಧಿಸುವುದು. ಈ ಕೆಳಗಿನವು ಅದಕ್ಕೆ ಮುಖ್ಯ ಚಿಹ್ನೆಗಳು. ಕಿವಿಯು ಬಾತುಕೊಳ್ಳುವುದು. ಕಿವಿಯು ಸರಿಯಾಗಿ ಕೇಳಿಸುವುದಿಲ್ಲ. ಆ ಕಿವಿಯಿಂದ ಕಾಲಕ್ರಮದಲ್ಲಿ ಕೀವೂ ಸುರಿಯಲಾರಂಭಿಸುವುದು. ತಿಳಿದೂ ತಿಳಿಯದ ಸಾಧಾರಣ ವೈದ್ಯರನ್ನು ಕರೆದು ಇದಕ್ಕೆ ಚಿಕಿತ್ಸೆ ಮಾಡಿಸಬಾರದು. ಕೆಲವು ಸಮಯಗಳಲ್ಲಿ ನಿಪುಣರಾದ ಕರ್ಣಚಿಕಿತ್ಸಕರು ಇದಕ್ಕೆ ಶಸ್ತ್ರ ಚಿಕಿತ್ಸೆ ಮಾಡುವರು. ಅವರು ಒಳಗಿನ ತೆಳುವಾದ ಪರೆಗೆ ಸ್ವಲ್ಪವೂ ಅಪಾಯವಿಲ್ಲದಂತೆ ನೋಡಿಕೊಳ್ಳಬಲ್ಲರು. ಶಸ್ತ್ರ ಚಿಕಿತ್ಸೆಯಿಂದುಂಟಾದ ವ್ರಣವು ಬೇಗನೆ ಆರಿಹೋಗುವುದು.

ಮಿದುಳಿನಲ್ಲಿ ನ್ಯೂನತೆ.

ನಡುಕಿವಿಯ ವ್ಯಾಧಿಯಿಂದ ಮಿದುಳಿಗೂ ಅಪಾಯವುಂಟು. ಬಹಳ ತೀವ್ರವಾದ ಶಬ್ದವೂ ಕೇಳಬಹುದು. ವಾಂತಿಯೂ, ವಾಯುಕಷ್ಟವೂ ಇದರ ಚಿಹ್ನೆಗಳು. ಒಳಗಿನ ಪರೆಯು ಕಿತ್ತುಹೋಗಿ ಅದರ ಬೇನೆಯು ನಿಂತ ಮೇಲೆ ಕಿವಿಗಳಿಂದ ಎಡೆಬಿಡದೆ ಕೀವು ಸುರಿಯುತ್ತಿರುವುದು. ಇಂತಹ ಸಂದರ್ಭಗಳಲ್ಲಿ ಸಮರ್ಥರಾದ ಕಿವಿ ವೈದ್ಯರಿಂದಲೇ ಚಿಕಿತ್ಸೆ ಮಾಡಿಸಬೇಕು. ಅನುಭವವಿಲ್ಲದ ವೈದ್ಯರುಗಳಿಂದ ಚಿಕಿತ್ಸೆ ಮಾಡಿಸಿದರೆ ಮಿದುಳಿನಲ್ಲಿ ಏನಾದರೂ ನ್ಯೂನತೆಯು ಏರ್ಪಡಬಹುದು.

ಸ್ನಾನಮಾಡುವುದರಲ್ಲಿ ಎಚ್ಚರಿಕೆ.

ಕಿವಿಯಲ್ಲಿ ಕೀವು ಸುರಿಯುತ್ತಿದ್ದರೆ ಅಥವಾ ಇದಕ್ಕೆ ಮೊದಲೇ ಹಿಂದೆ ಎಂದಾದರೂ ಕಿವಿಗಳಲ್ಲಿ ಕೀವು ಸುರಿದಿದ್ದರೆ, ಒಳಪರೆ ಕಿತ್ತುಹೋಗಿದ್ದರೆ ಅಂಥವರು ಶಿರಸ್ನಾನ ಮಾಡುವುದು ಅಪಾಯಕಾರಣವು. ತಕ್ಕ ವೈದ್ಯರಿಗೆ ತೋರಿಸಿ ಕೀವು ಸುರಿಯುವುದನ್ನು ನಿಲ್ಲಿಸಿಕೊಳ್ಳಬೇಕು. ವೈದ್ಯರು ಅದನ್ನು ಸುಲಭವಾಗಿ ನಿವೃತ್ತಿಮಾಡಬಲ್ಲರು. ಇಂತಹ ಸ್ಥಿತಿಯಲ್ಲಿ ಕಿವಿ ಕೇಳಿಸುವ ಇಂದ್ರಿಯ ಶಕ್ತಿಯು ಅಲ್ಪಸ್ವಲ್ಪ ತಗ್ಗಬಹುದೇ ಹೊರತು ಸಂಪೂರ್ಣವಾಗಿ ಕಿವಿಗೇನೂ ಹಾನಿಯಿಲ್ಲ.

ತಲೆಯಲ್ಲಿ ಒಂದು ವಿಧವಾದ ಶಬ್ದವು ಕೇಳಿಸುತ್ತಿರುವುದೂ ಕರ್ಣರೋಗದ ಚಿಹ್ನೆಗಳಲ್ಲಿ ಒಂದಾಗಿದೆ. ಬೇರೊಂದು ಚಿಹ್ನೆಯನ್ನು ಇದಕ್ಕೆ ಮೊದಲೇ ತಿಳಿಸಿದೆ. ಕಿವಿಯಲ್ಲಿ ಕೊಳೆ ಮುಚ್ಚಿಕೊಳ್ಳುವುದರಿಂದ ಕಿವಿಯಲ್ಲಿ ಗುರುಗುರು ಶಬ್ದವು ಏರ್ಪಡುವುದು. ಇದು ಹೊರತು ಬೇರೊಂದು ಸೂಚನೆಯೂ ಉಂಟು. ಯಾವಾಗಲೂ ಸಿಳ್ಳು ಧ್ವನಿಯೊಂದು ಕಿವಿಯಲ್ಲಿ ತೋರುವುದು. ಇದಿದ್ದರೆ ತೀವ್ರವಾದ ಜಲದೋಷ ವಿದೆಯೆಂದಾಗಲಿ, ನರಗಳ ವ್ಯಾಧಿಯಿಂದಾಗಲಿ ನಿರ್ಧರಿಸಬಹುದು. ತೀವ್ರವಾದ ಜಲದೋಷ [illegible]

[illegible]

ಶಸ್ತ್ರ ಚಿಕಿತ್ಸೆ [illegible] ಸಂದರ್ಭಗಳು.

[illegible]

[illegible]

ಕಾಂಗ್ರೆಸ್ ಸಮಾಚಾರ.

(೩ನೇ ಪುಟದಿಂದ ಮುಂದುವರಿದದ್ದು.)

ರಾಷ್ಟ್ರೀಯ ಪತಾಕೆ.

ಬಂಗಾಳದ ಪ್ರಸಿದ್ಧ ಮುಂದಾಳಾದ ಶ್ರೀಯುತ ಸೇನ ಗುಪ್ತರವರು ತಾ. 26 ರ ಬೆಳಿಗ್ಗೆ ರಾಷ್ಟ್ರೀಯ ಪತಾಕೆಯನ್ನು ಕಾಂಗ್ರೆಸ್ ಮಂಟಪದ ಸಮೀಪವಿದ್ದ ಎತ್ತರವಾದ ಕಂಬದ ಮೇಲೆ ಏರಿಸಿದರು. ಸಾವಿರಗಟ್ಟಲೆಯಲ್ಲಿ ಜನರು ನೆರೆದಿದ್ದರು. ಈ ವೇಳೆಯಲ್ಲಿ ಶ್ರೀ. ಸೇನ ಗುಪ್ತರವರು ಉತ್ಸಾಹಜನಕವಾದ ಮತ್ತು ಜನರಲ್ಲಿ ಹುರಿದುಂಬಿಸುವ ಒಂದು ಚಿಕ್ಕ ಭಾಷಣವನ್ನು ಮಾಡಿ ರಾಷ್ಟ್ರೀಯ ಧ್ವಜದ ಪ್ರಾಮುಖ್ಯತೆಯನ್ನು ವಿವರಿಸಿದರು.

ಮಹಾ ಸಭೆ.

ರಾಷ್ಟ್ರೀಯ ಮಹಾಸಭೆಯು ತಾ. 26 ರ ಮಧ್ಯಾಹ್ನ 2 ಗಂಟೆಗೆ ತಿಲಕ ಮಂಟಪದಲ್ಲಿ ಪ್ರಾರಂಭವಾಯಿತು. ಸುಮಾರು 20 ಸಾವಿರ ಜನರು ನೆರೆದಿದ್ದರು. ಬಡವರೂ, ಐಶ್ವರ್ಯವಂತರೂ, ಉದ್ಯೋಗಸ್ಥರೂ, ರಾಜರುಗಳೂ, ಮಂತ್ರಿಗಳೂ, ಎಲ್ಲಾ ಜಾತಿ, ಮತ, ಪಂಗಡಗಳವರೂ ಸೇರಿದ್ದರು. ಸುಮಾರು 3 ಸಾವಿರಕ್ಕಿಂತ ಹೆಚ್ಚು ಪ್ರತಿನಿಧಿಗಳಿದ್ದರು. ಸಾವಿರಕ್ಕಿಂತ ಹೆಚ್ಚು ಮಹಿಳೆಯರೂ ಬಂದಿದ್ದರು. 2 ಗಂಟೆಗೆ ಸರಿಯಾಗಿ ಅಧ್ಯಕ್ಷರು, ಮಹಾತ್ಮ ಗಾಂಧಿಯವರು, ಡಾ. ಬೆಸೆಂಟರು, ಪಂಡಿತ ಮಾಲವೀಯರು, ಶ್ರೀನಿವಾಸಯ್ಯಂಗಾರರು, ಸರೋಜಿನಿ ದೇವಿಯವರು, ಅಲಿ ಸಹೋದರರು, ಪಂಡಿತ ಜವಾಹರಲಾಲರು ಅಬ್ದುಲ್ ಕಲಾಂ ಆಜಾದ್‌ರವರು ಮೊದಲಾದವರ ಸಮೇತ ರಾಷ್ಟ್ರವೀರರ ಪಟಗಳಿಂದಲೂ, ವಿದ್ಯುಚ್ಛಕ್ತಿ ದೀಪಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಮಂಟಪವನ್ನು ಪ್ರವೇಶಿಸಿದರು. ಮಂಟಪದಲ್ಲಿದ್ದವರು ಅವರಿಗೆ ಜಯಜಯಕಾರದಿಂದ ಸ್ವಾಗತವನ್ನೀಡಿದರು. ಸ್ವಯಂಸೇವಕ ಸೇವಕಿಯರು ರಾಷ್ಟ್ರೀಯ ಗೀತವನ್ನು ಹಾಡಿದನಂತರ ಅಧ್ಯಕ್ಷರು ಪೀಠವನ್ನಲಂಕರಿಸಿದರು. ತರುವಾಯ ಪಂಡಿತ ಮೋತಿಲಾಲ್ ನೆಹರು, ಲಾಲಾ ಲಜಪತರಾಯ, ಜಿನ್ನಾ, ಹಕೀಮ್ ಅಜ್ಮಲ್ಖಾನ್, ಸುಭಾಷ್ ಚಂದ್ರಬೋಸ್ ಮುಂತಾದವರು ಕಳುಹಿಸಿದ ಸಂದೇಶಗಳು ಓದಲಾದವು. ಆ ಮೇಲೆ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಸಿ. ಯನ್. ಮುತ್ತುರಂಗ ಮೊದಲಿಯಾರರು ತಮ್ಮ ಭಾಷಣವನ್ನು ಓದಿದರು. ನಂತರ ಅಧ್ಯಕ್ಷರಾದ ಅನ್ಸಾರಿಯವರು ಗಂಭೀರವಾಗಿ ತಮ್ಮ ಭಾಷಣವನ್ನು ಮಾಡಿದರು. ಇವರ ಭಾಷಣ ಮುಗಿಯಲು ಒಂದು ಗಂಟೆ ಸಮಯ ಹಿಡಿಯಿತು. ಭಾಷಣವು ಎಲ್ಲರಿಗೂ ಕೇಳಿಸುವಂತೆ ಧ್ವನಿವಾಹಕ (ಲೌಡ್ ಸ್ಪೀಕರ್ಸ್) ಯಂತ್ರಗಳು ಆರು ಇಡಲ್ಪಟ್ಟಿದ್ದವು. ತರುವಾಯ ಕೆಳಗಿನ ಠರಾವುಗಳು ಮಂಜೂರಾದವು.

ಠರಾವುಗಳು.

ಕಾಂಗ್ರೆಸ್ ಸೆಕ್ರೆಟರಿಯಾಗಿದ್ದ ಮ. ಪಿ. ಸಿ. ರೇಯವರ ಮರಣಕ್ಕೆ ವ್ಯಸನ ಸೂಚಿಸುವ, ಕಾಕೋರಿ ಲೂಟಿಯ ತಕ್ಸೀರುಗಾರರ ಮೇಲೆ ಸರ್ಕಾರದ ಕ್ರೂರ ಪ್ರತಿಕಾರ ನಿಷೇಧದ ಮತ್ತು ಸಾಮ್ರಾಜ್ಯವಾದವನ್ನು ವಿರೋಧಿಸುವ ಸಂಘದೊಡನೆ ಕಾಂಗ್ರೆಸು ಸೇರಿ ಕೆಲಸಮಾಡುವ ಠರಾವುಗಳು ಪಾಸಾದ ಮೇಲೆ ಚೈನಾದ ಸ್ವಾತಂತ್ರ್ಯ ಯುದ್ಧದಲ್ಲಿ ಸಹಾನುಭೂತಿ ತೋರಿ, ಚೈನಕ್ಕೆ ಹಿಂದೀ ಸೈನ್ಯ ಕಳುಹಿಸಿದ ಮತ್ತು ಚೈನಕ್ಕೆ ಹಿಂದೀ ಮೆಡಿಕಲ್ ಮಿಷನ್ ಹೋಗಲು ಪಾಸ್‌ಪೋರ್ಟ್ ಕೊಡದ ಸರ್ಕಾರದ ಕಾರ್ಯವನ್ನು ನಿಷೇಧಿಸುವ, ಕೆಲವು ಹಿಂದೀಯರಿಗೆ ಪರದೇಶಗಳಿಗೆ ಹೋಗಲು ಪಾಸ್‌ಪೋರ್ಟ್ ನಿರಾಕರಿಸುವ ಮತ್ತು ಸತ್ಕಾಂತ್ರಾಲಯವರನ್ನು ಹಿಂದೂದೇಶಕ್ಕೆ ಬರಲು ಬಿಡದ ಸರ್ಕಾರದ ವರ್ತನೆಯನ್ನು ತೀವ್ರವಾಗಿ ಖಂಡಿಸುವ ಠರಾವುಗಳು ಮಂಜೂರಾದವು.

ಯುದ್ಧ ಸಂಘಾಸದ ನಿಷೇಧ.

'ಹಿಂದೂಸ್ಥಾನದಲ್ಲಿಯೂ, ಪೂರ್ವ ಸಮುದ್ರಗಳಲ್ಲಿಯೂ ವಿಶೇಷವಾಗಿ ಹಿಂದೂಸ್ಥಾನದ ವಾಯವ್ಯ ಸರಹದ್ದಿನಲ್ಲಿಯೂ ಬ್ರಿಟಿಷ್ ಸರ್ಕಾರದವರು ನಡಿಸುತ್ತಿರುವ ಭಯಂಕರವಾದ ಯುದ್ಧ ಸಿದ್ಧತೆಯನ್ನು ಕಂಡು ಮಹಾಸಭೆಗೆ ಬಹಳ ಚಿಂತೆಯುಂಟಾಗಿದೆ. ಈ ಸಿದ್ಧತೆಯಿಂದ ಬ್ರಿಟಿಷ್ ಸಾಮ್ರಾಜ್ಯದ ಬಲವು ಹೆಚ್ಚಾಗಿ ಹಿಂದೀ ಸ್ವಾತಂತ್ರ್ಯದ ಹೋರಾಟವನ್ನು ಮುರಿಯಲು ಅವರಿಗೆ ಅನುಕೂಲವಾಗುವದು. ಅಲ್ಲದೆ ಅದರಿಂದಾಗುವ ಇನ್ನೊಂದು ಯುದ್ಧದಲ್ಲಿ ಹಿಂದುಸ್ಥಾನವು ಪುನಃ ಮಹತ್ವಾಕಾಂಕ್ಷಿಗಳ ಕೈಯಲ್ಲಿ ಗೊಂಬೆಯಾಗಬೇಕಾಗುವದು. ಹಿಂದುಸ್ಥಾನವು ತನ್ನ ನೆರೆಯ ರಾಷ್ಟ್ರಗಳೊಂದಿಗೆ ಸ್ನೇಹದಿಂದಿರಲು ಬಯಸುವದಲ್ಲದೆ, ಯುದ್ಧದಲ್ಲಿ ಭಾಗವಹಿಸುವ ಅಧಿಕಾರವು ತನ್ನದೇ ಎಂದು ಹೇಳುತ್ತದೆ. ಆದ್ದರಿಂದ ಬ್ರಿಟಿಷ್ ಸರ್ಕಾರವು ಈ ಸಿದ್ಧತೆಯನ್ನು ನಿಲ್ಲಿಸಬೇಕೆಂದೂ, ಒಂದು ವೇಳೆ ಆ ಯುದ್ಧವನ್ನು ಪ್ರಾರಂಭಿಸಿದರೆ ಅದರಲ್ಲಿ ಯಾವ ರೀತಿಯಲ್ಲಿಯೂ ಭಾಗ ತೆಗೆದುಕೊಳ್ಳದೆ ಇರುವದೂ, ಅದಕ್ಕೆ ಸಹಾಯಮಾಡದೆ ಇರುವದೂ ಹಿಂದೀಯರ ಕರ್ತವ್ಯವೆಂದೂ ಈ ಮಹಾಸಭೆಯ ಅಭಿಪ್ರಾಯ.' ಈ ಠರಾವನ್ನು ಪಂಡಿತ ಜವಾಹಿರ್‌ಲಾಲ್ ನೆಹರುರವರು ಸೂಚಿಸಿ, ಮಿ. ಸಿಂಗ್ಕರರು ಅನುಮೋದಿಸಿದಬಳಿಕ ಅದು ಸರ್ವಸಮ್ಮತದಿಂದ ಪಾಸಾಯಿತು.

ಎರಡನೇ ದಿನದ ಠರಾವುಗಳು.

ನಾಗಪುರದಲ್ಲಿ ಆರ್ಮ್ಸ್ ಆಕ್ಟಿನ ವಿರೋಧವಾಗಿ ಸತ್ಯಾಗ್ರಹ ಮಾಡಿ ಶಿಕ್ಷೆ ಹೊಂದಿದ ಜನರಲ್ ಅವಾರಿಯವರು ಈಗ ಉಪವಾಸ ಪ್ರಾರಂಭಿಸಿ 83 ದಿವಸಗಳಾದುದರಿಂದ ಅವರಲ್ಲಿ ಸಹಾನುಭೂತಿ ತೋರಿಸುವ ಠರಾವು ಅಧ್ಯಕ್ಷರಿಂದ ಸೂಚಿಸಲ್ಪಟ್ಟು ಮಂಜೂರಾಯಿತು.

ಬರ್ಮ ದೇಶವನ್ನು ಹಿಂದೂದೇಶದಿಂದ ಪ್ರತ್ಯೇಕಿಸುವ ಮತ್ತು ಈಶಾನ್ಯ ಸರಹದ್ದಿನಲ್ಲಿ ಸೇನಾಪ್ರಾಂತ್ಯವನ್ನಾಗಿ ಮಾಡುವ ಸರ್ಕಾರದ ಯತ್ನವನ್ನು ನಿಷೇಧಿಸಿ ಬರ್ಮ ಮತ್ತು ಹಿಂದೂದೇಶಗಳೊಳಗೆ ಸಂಪರ್ಕ ಸಮ್ಮೇಲನವನ್ನು ಏರ್ಪಡಿಸಬೇಕೆಂಬ ಸೂಚನೆಯನ್ನು ಬರ್ಮಾದ ಮೋಂಗ್ ಮೋಂಗ್ ಜಿಯವರು ತಂದರು. ರೆವೆರೆಂಡ್ ಒತ್ತಮ ಮತ್ತು ಶ್ರೀ. ಟಿ. ಪ್ರಕಾಶಮ್‌ರವರಿಂದ ಅನುಮೋದಿಸಲಾಗಿ ಪಾಸಾಯಿತು.

ಸಂಪೂರ್ಣ ಸ್ವಾತಂತ್ರ್ಯ.

ಪಂಡಿತ ಜವಾಹಿರಲಾಲ ನೆಹರುರವರು ಕಾಂಗ್ರೆಸ್ಸಿನ ಧ್ಯೇಯವು ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯವಿರಬೇಕೆಂಬ ಠರಾವನ್ನು ಕಾಂಗ್ರೆಸಿನ ಮುಂದಿಟ್ಟು ಇದರಿಂದ ಕಾಂಗ್ರೆಸಿನ ಧೋರಣೆಯೇನೂ ವ್ಯತ್ಯಾಸವಾಗದೆಂದೂ, ಹಿಂದೀಯರಿಗೆ ತಮ್ಮ ದೇಶದ ಆರ್ಥಿಕ, ರಾಜಕೀಯ, ಸೇನಾ ಮತ್ತು ಪರದೇಶಗಳ ಸಂಬಂಧ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದರು. ಇದನ್ನು ಶ್ರೀಗಳಾದ ಸಾಂಬಮೂರ್ತಿ ಮತ್ತು ಮೌಲಾನ ಸೌಕತ ಅಲಿಯವರು ಸಮರ್ಥಿಸಿದರು. ಶ್ರೀ. ಪಿ. ಯಲ್. ಶಾಸ್ತ್ರಿಯವರು ವಿರೋಧಿಸಿದರು. ಕೊನೆಗೆ ಸರ್ವ ಸಮ್ಮತದಿಂದ ಮಂಜೂರಾಯಿತು.

ಬಂಗಾಳ ಓರ್ಡಿನೆನ್ಸ್ ಕೈದಿಗಳ ಕುರಿತು ಶ್ರೀ. ಜೆ. ಎಮ್. ದಾಸಗುಪ್ತರವರು ತಂದ ಠರಾವನ್ನು ಶ್ರೀಗಳಾದ ಎ. ರಂಗಸ್ವಾಮಿ ಐಯ್ಯಂಗಾರ್ ಮತ್ತು ಹರಿ ಸರ್ವೋತ್ತಮರಾಯರು ಅನುಮೋದಿಸಿದರು.

ಸೈಮನ್ ಕಮಿಶನ್ನಿನ ಬಹಿಷ್ಕಾರ.

"ಹಿಂದೂಸ್ಥಾನದ ಸ್ವಯಂ ನಿರ್ಣಯದ ಹಕ್ಕನ್ನು ಧಿಕ್ಕರಿಸಿ ಬ್ರಿಟಿಷ್ ಸರಕಾರದವರು ಸ್ಟೇಟ್ಯೂಟರಿ ಕಮಿಶನನ್ನು ನೇಮಿಸಿದ್ದರಿಂದ, ಸ್ವಾಭಿಮಾನವುಳ್ಳ ಹಿಂದೀಯರು ಅದನ್ನು ಎಲ್ಲಾ ರೀತಿಯಿಂದಲೂ ಯಾವ ಸಮಯದಲ್ಲೂ ಬಹಿಷ್ಕರಿಸಿದ ವಿನಹ ಬೇರೆ ಮಾರ್ಗವಿಲ್ಲೆಂದು ಈ ಮಹಾಸಭೆಯು ಅಭಿಪ್ರಾಯಪಡುತ್ತದೆ. ಆದ್ದರಿಂದ ಎಲ್ಲ ಹಿಂದೀಯರಿಗೂ ಕಾಂಗ್ರೆಸ್ ಸಂಸ್ಥೆಗಳಿಗೂ ಈ ಮಹಾ ಸಭೆಯು ಹೇಳುವದೇನೆಂದರೆ—ಕಮಿಶನು ಈ ದೇಶದಲ್ಲಿ ಬಂದಿಳಿಯುವ ದಿನ ಮತ್ತು ಬೇರೆ ಬೇರೆ ಪಟ್ಟಣಗಳನ್ನು ಸಂದರ್ಶಿಸುವಾಗ ಬಹಿರಂಗ ನಿಷೇಧಗಳನ್ನು ಮಾಡಬೇಕು. ಈ ದೇಶದ ಎಲ್ಲ ರಾಜಕೀಯ ಮತ ಪಂಗಡಗಳ ಜನರು ಅದನ್ನು ಪರಿಣಾಮಕರವಾಗಿ ಬಹಿಷ್ಕರಿಸುವಂತೆ ಬಲವಾದ ಪ್ರಚಾರ ಕಾರ್ಯವನ್ನು ಮಾಡಬೇಕು. ಹಿಂದುಸ್ಥಾನದ ಕೌನ್ಸಿಲು ಅಸೆಂಬ್ಲಿ ಮುಂತಾದವುಗಳ ಎಲ್ಲ ನಾನ್ ಅಫೀಶ್ಯಲ್ ಸಭಾಸದರು ಮತ್ತು ಎಲ್ಲ ಪಕ್ಷ ಪಂಗಡಗಳ ಮುಂದಾಳುಗಳು ಮತ್ತು ಇತರರು ಕಮಿಶನಿನವರಿಗೆ ಸಾಕ್ಷಿಗಳನ್ನು ಕೊಡಬಾರದೆಂದೂ, ಖಾಸಗಿ ಇಲ್ಲವೇ ಸಾರ್ವಜನಿಕ ರೀತಿಯಿಂದ ಯಾವ ಪ್ರಕಾರದಿಂದಲೂ ಅದರ ಕೂಡ ಸಹಕಾರ ಮಾಡಬಾರದೆಂದೂ, ಕಮಿಶನ್ನಿನವರಿಗೆ ಅದರ ಆದರಸತ್ಕಾರಗಳಲ್ಲಿ ಭಾಗ ತೆಗೆದುಕೊಳ್ಳಬಾರದೆಂದೂ ಈ ಮಹಾಸಭೆಯು ಬೇಡಿಕೊಳ್ಳುತ್ತದೆ. ಶಾಸನ ಮಂಡಲಗಳ ಎಲ್ಲ ನಾನ್ ಅಫೀಶ್ಯಲ್ ಸಭಾಸದರು ಈ ಕಮಿಶನ್ನಿನ ಸಂದರ್ಭದಲ್ಲಿ ಏರ್ಪಡುವ ಕಮಿಟಿಗಳಿಗೆ ಮತ ಕೊಡಬಾರದು ಅಥವಾ ಅವುಗಳಲ್ಲಿ ಭಾಗ ತೆಗೆದುಕೊಳ್ಳಬಾರದು. ಕಮಿಶನ್ನಿನ ಸಲುವಾಗಿ ಬಂದ ಠರಾವನ್ನಾದರೂ ಸೋಲಿಸಬೇಕೆಂದು ಈ ಮಹಾ ಸಭೆಯು ಅವರನ್ನು ಬೇಡಿಕೊಳ್ಳುತ್ತದೆ. ಶಾಸನ ಮಂಡಲಗಳಲ್ಲಿಯ ನಾನ್ ಅಫೀಶ್ಯಲ್ ಸಭಾಸದರು ಶಾಸನ ಮಂಡಲಗಳ ಸಭೆಗೆ ಹೋಗಬಾರದು. ಆದರೆ ತಮ್ಮ ಸಭಾಸದತ್ವವನ್ನು ಉಳಿಸಿಕೊಳ್ಳಲಿಕ್ಕೂ, ಮಂತ್ರಿಮಂಡಲವನ್ನು ಸೋಲಿಸಲಿಕ್ಕೂ ಕಾಂಗ್ರೆಸ್ ಕಾರ್ಯಕಾರೀ ಮಂಡಲದವರು ದೇಶಕ್ಕೆ ಘಾತಕವೆಂದು ನಿರ್ಣಯಿಸಿದ ಶಾಸನವನ್ನು ವಿರೋಧಿಸಲಿಕ್ಕೂ ಇಲ್ಲವೇ ಕಮಿಶನಿನ ಬಹಿಷ್ಕಾರವನ್ನು ಬಲಪಡಿಸಲಿಕ್ಕೂ ಮಾತ್ರ ಆ ಸಭೆಗಳಿಗೆ ಹೋಗಬಹುದೆಂದು ಮಹಾಸಭೆಯ ಅಪೇಕ್ಷೆಯುಂಟು. ಕಾಂಗ್ರೆಸ್ ಕಾರ್ಯಕಾರೀ ಮಂಡಲವು ಈ ಬಹಿಷ್ಕಾರವನ್ನು ಸಕ್ರಿಯವೂ, ಸಂಪೂರ್ಣವೂ ಮಾಡುವದಕ್ಕಾಗಿ ಸಾಧ್ಯವಿದ್ದ ಕಡೆಗೆಲ್ಲ ಎಲ್ಲ ಪಕ್ಷ ಮತ್ತು ಸಂಸ್ಥೆಗಳ ಸಹಕಾರವನ್ನು ದೊರಕಿಸಲು ಮಹಾಸಭೆಯು ಅದಕ್ಕೆ ಅಧಿಕಾರವನ್ನು ಕೊಡುತ್ತದೆ" ಎಂಬ ಠರಾವನ್ನು ಶ್ರೀಮಾನ್ ಶ್ರೀನಿವಾಸ ಐಯ್ಯಂಗಾರರು ತಂದು, ಈ ಕುರಿತು ಭಾಷಣವಿತ್ತನಂತರ ಡಾಕ್ಟರ್ ಆನಿಬೆಸೆಂಟ್ ಮತ್ತು ಪಂಡಿತ ಮದನ ಮೋಹನ ಮಾಲವೀಯರು ಇದನ್ನು ಅನುಮೋದಿಸಿ ದೀರ್ಘ ಮತ್ತು ವಿಚಾರಪರ ಭಾಷಣವಿತ್ತರು. ಶ್ರೀ ಶ್ಯಾಮ ಸುಂದರ ಚಕ್ರವರ್ತಿಯವರು ಕೌನ್ಸಿಲ್ ಮೆಂಬರರು ರಾಜೀನಾಮೆ ಕೊಟ್ಟು ವಿಧಾಯಕ ಕಾರ್ಯ ಕೈಕೊಳ್ಳಬೇಕೆಂಬ, ಶ್ರೀಯುತ ಪ್ರಕಾಶಮ್‌ರವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ದೇಶಘಾತುಕವೆಂದು ನಿರ್ಣಯಿಸುವ ವಿಷಯಗಳನ್ನು ವಿರೋಧಿಸಲಿಕ್ಕಾಗಿ ಎಂಬುವಷ್ಟು ತೆಗೆದು ಹಾಕಬೇಕೆಂಬ, ಶ್ರೀ. ಕೆ. ಆರ್. ಕಾರಂತರು ಕೌನ್ಸಿಲನ್ನು ಬಿಟ್ಟು ಬಿಡಬೇಕೆಂಬ ಭಾಗವನ್ನೆಲ್ಲಾ ತೆಗೆದು ಹಾಕಬೇಕೆಂಬ, ಜೋಸೆಫ್ ಜೋಸೆಫರು ಸಾಮಾಜಿಕ ವೈಷಮ್ಯಗಳನ್ನೆಲ್ಲಾ ಬಿಟ್ಟು ಸಾಮಾನ್ಯ ಧ್ಯೇಯಕ್ಕಾಗಿ ಹೋರಾಡುವಂತೆ ಎಲ್ಲರನ್ನೂ ಸಂಘಟಿಸಬೇಕೆಂಬ ಉಪಸೂಚನೆಗಳನ್ನು ತಂದರು. ಶ್ರೀಗಳಾದ ಅಭ್ಯಂಕರ್ ಮತ್ತು ರಾಮದಾಸ ಪಂತುಲುರವರು ಉಪಸೂಚನೆಗಳ ಕುರಿತು ಮಾತಾಡಿದರು. ಮಹಮ್ಮದಾಲಿಯವರು ಮೂಲ ಠರಾವನ್ನು ಸಮರ್ಥಿಸಿದರು. ಶ್ರೀನಿವಾಸ ಐಯ್ಯಂಗಾರರು ಇವರಿಗೆಲ್ಲಾ ಉತ್ತರವಿತ್ತ ಮೇಲೆ ಎಲ್ಲಾ ಉಪಸೂಚನೆಗಳೂ ಬಿದ್ದುಹೋಗಿ ಪ್ರಥಮ ಠರಾವು ಮಂಜೂರಾಯಿತು.

3ನೇ ದಿನದ ಠರಾವುಗಳು.

ದಕ್ಷಿಣ ಆಫ್ರಿಕ ಮತ್ತು ಪೂರ್ವ ಆಫ್ರಿಕ ದೇಶಗಳ ಹಿಂದೀಯರ ಹೋರಾಟಕ್ಕೆ ಸಹಾನುಭೂತಿಯನ್ನು ಸೂಚಿಸಿ, ಈ ಬಾರಿನಲ್ಲಿ ಕೆಲಸ ಮಾಡಿದ ದೀನ ಬಂಧು ಆಂಡ್ರ್ಯೂಸ್‌ರಿಗೆ ಅಭಿನಂದನೆಯನ್ನು ಒಪ್ಪಿಸುವ ಠರಾವು ಪಾಸಾಯಿತು.

ಹಿಂದೂ ಮುಸಲ್ಮಾನರ ಐಕ್ಯ.

"ಇನ್ನು ಮುಂದೆ ರಾಜ್ಯ ವ್ಯವಸ್ಥೆಯ ಯಾವದೇ ಹೊಸದು ಯೋಜನೆಯಲ್ಲಿ—ಶಾಸನ ಮಂಡಲಗಳಲ್ಲಿ—ಜಾತಿವಾರು ಮತ ಕೊಡುವದರ ಬದಲು ಎಲ್ಲಾ ಕಡೆಗಳಲ್ಲಿ ಮಿಶ್ರ ಮತ ಕೊಡತಕ್ಕದ್ದು. ಹಿಂದೂ ಮುಸಲ್ಮಾನರ ನ್ಯಾಯದ ಹಕ್ಕುಗಳನ್ನು ಕಾಯುವುದಕ್ಕಾಗಿ ಅವರಿಗೆ ಇಷ್ಟವಿದ್ದ ಸಪ್ರಾಂತಿಕ ಮಧ್ಯವರ್ತಿ ಮತ್ತು ಪ್ರಾಂತಿಕ ಕೌನ್ಸಿಲುಗಳಲ್ಲಿ ಜನಸಂಖ್ಯೆಯ ಪ್ರಮಾಣದಿಂದ ಸ್ಥಳಗಳನ್ನು ಕಾಯ್ದಿಡಬೇಕು. ಆದರೆ ಒಂದುವೇಳೆ ಎರಡೂ ಜಾತಿಗಳಲ್ಲಿಯ ಯಾವದೇ ಒಂದು ಪ್ರಾಂತದೊಳಗಿನ ಅಲ್ಪ ಸಂಖ್ಯಾಕರಿಗೆ ಮತ್ತು ಪಂಜಾಬಿನ ಸಿಖ್ಖರಿಗೆ ಸಹ ಜನಸಂಖ್ಯೆಯ ಪ್ರಮಾಣಕ್ಕಿಂತ ಹೆಚ್ಚು ಪ್ರತಿನಿಧಿಗಳು ಬೇಕಿದ್ದರೆ ಅದನ್ನು ಪರಸ್ಪರ ಒಡಂಬಡಿಕೆಯಿಂದ ಅವರು ನಿರ್ಧರಿಸಿಕೊಳ್ಳಬೇಕು. ಮತ್ತು ಇದೇ ಪ್ರಮಾಣವನ್ನು ವರಿಷ್ಠ ಶಾಸನ ಮಂಡಲಿಗೂ ಹಚ್ಚಬೇಕು. ವಾಯವ್ಯ ಸರಹದ್ದಿನ ಪ್ರಾಂತ್ಯ ಮತ್ತು ಬಲುಚಿಸ್ಥಾನ ಇವುಗಳಿಗೂ ಸುಧಾರಣೆಯ ಆಡಳಿತ ಪದ್ಧತಿಯನ್ನು ಏರ್ಪಡಿಸಬೇಕು ಎಂಬ ಮುಸಲ್ಮಾನರ ಕೋರಿಕೆಯು ನ್ಯಾಯವಾದದ್ದಾಗಿ ಅದನ್ನು ಕೂಡಲೆ ಪ್ರಾರಂಭಿಸಬೇಕು. ಸಂಗಡಲೇ ಸ್ವಾತಂತ್ರ್ಯದ ಶಾಸನ ಸಂಸ್ಥೆಗಳು ಏರ್ಪಡಿಸಲ್ಪಡಬೇಕು. ಸಿಂಧ್ ಪ್ರಾಂತ್ಯವನ್ನು ಬೇರ್ಪಡಿಸಬೇಕೆಂಬ ಸಂಬಂಧವಾಗಿ ಭಾಷಾವಾರು ಪ್ರಾಂತರಚನೆಯಾಗಬೇಕಾದ ಕಾಲ ಬಂದಿದೆಯೆಂತ ಈ ಸಭೆಯ ಅಭಿಪ್ರಾಯವಾಗಿದೆ. ಆಂಧ್ರ, ಉತ್ಕಲ, ಸಿಂಧ್, ಕರ್ನಾಟಕ ಏರ್ಪಡಿಸುವ ಏರ್ಪಾಡು ಕೂಡಲೇ ಮಾಡಬಹುದು. ಮುಂದಿನ ರಾಜ್ಯ ಘಟನೆಯಲ್ಲಿ ಯಾರ ಧಾರ್ಮಿಕ ಸ್ವಾತಂತ್ರ್ಯದಲ್ಲಿಯೂ ತಡೆಯಾಗದಂತೆ ನೋಡಿಕೊಳ್ಳಬೇಕು. ಯಾವ ಶಾಸನಗಳು ಈ ಸ್ವಾತಂತ್ರ್ಯದ ವಿರುದ್ಧ ಕಾಯಿದೆ ಮಾಡಲು ಅಧಿಕಾರವಿರಬಾರದು. ಧಾರ್ಮಿಕ ಸ್ವಾತಂತ್ರ್ಯವೆಂಬ ಶಬ್ದದಲ್ಲಿ ಧಾರ್ಮಿಕ ಶ್ರದ್ಧೆ, ಪೂಜೆ, ಅರ್ಚನವಿಧಿ, ಆಚಾರವಿಚಾರವು, ಧಾರ್ಮಿಕ ಸಂಘ ಸ್ವಾತಂತ್ರ್ಯ, ಧಾರ್ಮಿಕ ಶಿಕ್ಷಣ ಸ್ವಾತಂತ್ರ್ಯ ಮತ್ತು ಪ್ರಚಾರ ಇವುಗಳನ್ನು ಪರರ ಮನಸ್ಸನ್ನು ನೋಯಿಸದಂತೆ ಪರರ ಹಕ್ಕುಗಳಿಗೆ ಅಡ್ಡಿಯಾಗದಂತೆ ನಡಿಸಬೇಕು. ಯಾರೇ ಆಗಲಿ ಯಾವ ಅಂತರ್ಜಾತೀಯ ಮಾತಿನ ಬಗ್ಗೆ ಕೌನ್ಸಿಲಿನಲ್ಲಿ ಬಿಲ್ಲು, ಠರಾವು ಅಥವ ಸೂಚನೆಗಳನ್ನು ತಂದರೆ ಅವುಗಳ ವಿಷಯದಲ್ಲಿ ಸಂಬಂಧಿಸಿದ ಜಾತಿಯ ¾ ಮೆಂಬರುಗಳು ಅಡ್ಡಿ ಮಾಡಿದರೆ ಆ ಬಗ್ಗೆ ಕೌನ್ಸಿಲಿನವರು ಚರ್ಚಿಸಬಾರದು. ಅಂತರ್ಜಾತಿಯ ವಿಷಯ ಯಾವದು ಎಂಬದನ್ನು ನಿಶ್ಚಯಿಸುವ ಅಧಿಕಾರವು ಪ್ರತಿಯೊಂದು ಕೌನ್ಸಿಲಿನಲ್ಲಿ ಸಂಬಂಧವಾಗಿ ನೇಮಕವಾಗುವ ಸಂಯುಕ್ತ ಮಂಡಳಿಗಿದೆ. ಹಿಂದುಗಳ ವಾದ್ಯ ಬಾರಿಸುವದು ಮತ್ತು ಮುಸಲ್ಮಾನರ ಗೋವಧೆಯ ವಿಷಯವಾಗಿ ಅವರವರ ಅಧಿಕಾರಗಳನ್ನು ನಿಬಂಧಿಸದೆ ಈ ಸಭೆಯು ನಿರ್ಣಯಿಸುವದೇನೆಂದರೆ—ವಾದ್ಯದ ವಿಷಯದಲ್ಲಿ ಹಿಂದುಗಳು ಹಿಂದುಗಳಿಗೂ, ಗೋಹತ್ಯೆಯ ವಿಷಯದಲ್ಲಿ ಮುಸಲ್ಮಾನರು ಮುಸಲ್ಮಾನರಿಗೂ ಅನುಕೂಲವಾಗಿ ಹಿಂದು ಮತ್ತು ಮಹಮ್ಮದೀಯರ ಭಾವನೆಗಳನ್ನು ಆದಷ್ಟು ಮಟ್ಟಿಗೆ ಮನ್ನಿಸಬೇಕು ಎಂದು ಬೇಡಿಕೊಳ್ಳುತ್ತದೆ. ಮತ್ತು ಈ ವಿಷಯದಲ್ಲಿ ಇತರ ಜನಾಂಗದವರೂ ಪರರ ಅಧಿಕಾರ ಪೂರ್ಣ ವರ್ತನೆಗೆ ಕಾಯಿದೆಯಿಂದಾಗಲೀ, ಬಲದಿಂದಾಗಲೀ ಅಡ್ಡಿಯನ್ನು ತಂದೊಡ್ಡ ಕೂಡದು. ಪ್ರತಿಯೊಬ್ಬ ಮತದವರಾದರೂ ಇನ್ನೊಂದು ಮತದವರನ್ನು ಬೇರೆಯಿಂದ ತಮ್ಮ ಮತಕ್ಕೆ ಸೇರಿಸಿಕೊಳ್ಳಬಹುದು. ಆದರೆ ಬಲಾತ್ಕಾರ, ಮೋಸ, ಪ್ರಯೋಜನ ತೋರಿಸುವಿಕೆ ಮುಂತಾದ ಕ್ರಮ ರೀತಿಗಳಿಂದ ಮತಾಂತರಗೊಳಿಸಬಾರದು. 18 ವರ್ಷದೊಳಗಿನವರನ್ನು ತಂದೆತಾಯಿಗಳ ಅನುಮತಿ ಇಲ್ಲದೆ ಮತಾಂತರಗೊಳಿಸಬಾರದು. ನಿರ್ಗತಿಕರಾದವರು 18 ವರ್ಷಕ್ಕಿಂತ ಕಡಿಮೆಯುಳ್ಳವರಾದರೆ ಅಂಥವರನ್ನು ಅವರ ಮತದವರಿಗೇ ಬಿಟ್ಟುಕೊಡಬೇಕು. ಮತಾಂತರಗೊಳಿಸುವ ಸಂದರ್ಭದಲ್ಲಿ ಸ್ಥಳ, ಕಾಲ ಮತ್ತು ರೀತಿಯ ವಿಷಯದಲ್ಲಿ ಗುಟ್ಟು ಇರಬಾರದು. ಮತಾಂತರಗೊಳಿಸಿದಕ್ಕಾಗಿ ಉತ್ಸವಗಳನ್ನೂ ತೋರ್ಪಡಿಸಲ್ಪಡಬಾರದು. ಮತಾಂತರಗೊಳಿಸುವದರಲ್ಲಿ ತಕರಾರು ಒದಗಿದಾಗ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ತೀರ್ಮಾನಿಸತಕ್ಕದ್ದು." ಎಂಬ ಠರಾವನ್ನು ಮೌಲಾನ ಮಹಮ್ಮದಾಲಿಯವರು ಸೂಚಿಸಿ ಮನಕರಗುವ ಭಾಷಣ ಮಾಡಿದರು.

ಮೌ. ಅಬ್ದುಲ್‌ಕಲಾಂ ಆಜಾದರು ಉರ್ದು ಭಾಷೆಯ ಭಾಷಣದಲ್ಲಿ ಅನುಮೋದಿಸಿದರು. ಪಂಡಿತ ಗೌರಿಶಂಕರ ಮಿಶ್ರ, ಪಂಡಿತ ಜಗತ್ ನಾರಾಯಣ, ಪಂಡಿತ ಗೋವಿಂದ ವಲ್ಲಭ ಪಂತ್, ಪಾಂಡೆಯ ಮತ್ತು ಜೋಶಿ ಇವರಾದಿಯಾಗಿ ಸಹ ಠರಾವಿನ ಕೆಲವು ಕಲಮುಗಳಿಗೆ ವಿರೋಧಿಸಿದರು. ಸರ್ದಾರ್ ಸರ್ದೂಲ್‌ಸಿಂಗ್, ಸೇನಗುಪ್ತ, ಸತ್ಯಮೂರ್ತಿ, ಸಿಧ್ವ, ಪಂಡಿತ ಮದನಮೋಹನ ಮಾಳವೀಯ, ಶ್ರೀನಿವಾಸೈಯ್ಯಂಗಾರ್ ಮತ್ತು ಮಹಮ್ಮದಾಲಿಯವರು ಇದಕ್ಕೆ ಬೆಂಬಲವಾಗಿ ಮಾತಾಡಿದರು. ಠರಾವು ಮಂಜೂರಾಯಿತು.

(ಮುಂದುವರಿಯುವುದು)

ನೋಟೀಸ್.

1928ನೇ ಇಸವಿ ಜನವರಿ ತಾರೀಖು 14ನೇ ಶನಿವಾರ ದಿನ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆಯಲ್ಲಿ ಗಣಪತಿ ವಾಚನಾಲಯದಲ್ಲಿ ಶೇರುದಾರರ ಮಹಾಸಭೆಯು (ಜನರಲ್ ಮೀಟಿಂಗು) ಸೇರುವುದೆಂದು ಈ ಮೂಲಕ ತಿಳಿಸಲಾಗಿದೆ. ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ

1. 1926—1927ನೇ ವರ್ಷದ ಆಡಳಿತ ವರದಿಯನ್ನೂ, ಅದೇ ವರ್ಷದ ಮತ್ತು ಅನಂತರ ಆರು ತಿಂಗಳ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್ ಮತ್ತು ಲಾಭ ನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರವರ ಸರ್ಟಿಫಿಕೇಟನ್ನೂ ಸಹ ಸಭೆಯ ಮುಂದ ಇರಿಸುವುದು.

2 ಆಡಿಟರನ್ನು ನೇಮಿಸುವಿಕೆ.

3. 1926—1927ನೇ ವರ್ಷಕ್ಕೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ

4 1922—1923, 1923—1924 ಮತ್ತು 1924—1925 ಈ ಮೂರು ವರ್ಷಗಳ ವಸೂಲಾಗದ ಬಾಕಿಯಿದ್ದ ಚಂದಾ ಮೊಬಲಗಿನ ವಿಷಯ.

5. ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

'ಕೊಡಗು' ಲಿಮಿಟೆಡ್, ಮಡಿಕೇರಿ, 3—12—1927. — ಪಿ. ಐ. ಬೆಳ್ಯಪ್ಪ. ಮೇನೇಜರ್

ವರ್ತಮಾನ ಸಂಗ್ರಹ.

ಒಳದೇಶ

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗು ಈ ತಾ. 8ರಲ್ಲಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಒಮೋನ್ನಾರರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಮೀಟಿಂಗು ಈ ತಾ 14ರಲ್ಲಿ ಬೆಳಗ್ಗೆ 10½ ಗಂಟೆಗೆ ವೀರಾಜಪೇಟೆ ಖಾದಿ ಭಂಡಾರದಲ್ಲಿ ನಡೆಯುವದು.

ಕಳೆದ ವಾರ ಸುಂಟಿಕೊಪ್ಪಲಿನ ಅಜುಬಾಜಿನ ಕೊಡವರು ಸೇರಿ ಉರೊರ್ಮೆಯನ್ನು ಚೆನ್ನಾಗಿ ನಡೆಸಿದರು. ಇಂಥಾ ಕೂಟವು ಅಲ್ಲಿ ಸೇರಿದ್ದು ಇದೇ ಮೊದಲು.

ಈ ವಾರ ಮಡಿಕೇರಿಯಲ್ಲಿ ಕಾಫಿಕ್ರಯವು ಪಾರ್ಚ್‌ಮೆಂಟ್ ಹಂಡ್ರೆಡ್ ವೆಯಿಟಿಗೆ 73 ರೂ. ನೇಟಿವ್ ಖಂಡಿಗೆ 310 ರೂ. ಮತ್ತು ಯಾಲಕ್ಕಿ ಮಣಕ್ಕೆ 62 ರೂ ಇತ್ತು.

ರಿಜಿಸ್ಟ್ರೇಶನ್ ಟೆಸ್ಟು ಪರೀಕ್ಷೆಯಲ್ಲಿ ಪಿ. ಮೂಣೆರಿ ತಿಮ್ಮಯ್ಯನವರು, ಮಿ. ಕೆ. ಬಿ. ಸುಬ್ಬಯ್ಯನವರು ಮತ್ತು ಪಿ. ಯಂ. ಕೃಷ್ಣಯ್ಯನವರು ಸೆಕೆಂಡ್ ಕ್ಲಾಸಿನಲ್ಲಿ ತೇರ್ಗಡೆ ಹೊಂದಿರುವರು.

ವಯನಾಡಿನಲ್ಲಿ ಫಾರೆಸ್ಟರಾಗಿರುವ ಪಿ. ಮುರುವಂಡ ಮುದ್ದಪ್ಪನವರು ಕಳೆದ ತಾ 30 ರಲ್ಲಿ ಒಂದು ದೊಡ್ಡ ಹೆಬ್ಬುಲಿಗೆ ಗುಂಡುಹೊಡೆದು ಕೊಂದು ಹುಲಿ ಮದುವೆ ಮಾಡಿದರೆಂದು ತಿಳಿಯುತ್ತೇವೆ.

"ಕೊಡಗು" ಲಿಮಿಟೆಡ್ ಕಂಪೆನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ಈ ತಾ. 14 ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆಯಲ್ಲಿರುವ ಗಣಪತಿ ವಾಚನಾಲಯದ ಹಾಲ್‌ನಲ್ಲಿ ಜರಗುವದು.

ವೀರಾಜಪೇಟೆ ಗಣಪತಿ ವಾಚನಾಲಯವನ್ನು ಮಡಿಕೇರಿ ಜಮೀನ್ದಾರರ ಸಂಘದ ಕಟ್ಟಡಕ್ಕೆ ವರ್ಗಮಾಡುವ ವಿಷಯ ಆಲೋಚಿಸಿ ತೀರ್ಮಾನ ಮಾಡಲು ಈ ತಾ. 14 ರಲ್ಲಿ ಪೂರ್ವಾಹ್ನ 11½ ಗಂಟೆಗೆ ಸದರಿ ವಾಚನಾಲಯದಲ್ಲಿ ವಾಚನಾಲಯದ ಪ್ರೋತ್ಸಾಹಕರ ಮೀಟಿಂಗು ನಡೆಯುವದೆಂದೂ ಎಲ್ಲರೂ ದಯಮಾಡಿಸಬೇಕೆಂದೂ ಆರ್ಗನೈಜರ್ ಮ. ಕೆ. ಪಿ. ಚಿಣ್ಣಪ್ಪನವರು ತಿಳಿಸಿರುತ್ತಾರೆ.

ಮಡಿಕೇರಿ—ಮೂರ್ನಾಡು ರಸ್ತೆಯಲ್ಲಿ ಚಿಕ್ಕ ಹಾಲೇರಿ ತೋಟದ ಬಳಿ ಕಳೆದ ತಾ· 31ರಲ್ಲಿ ರಾತ್ರೆ [illegible] ಯಂ. ಬಿಯ್ಯಪ್ಪನವರ ಮೋಟಾರು ಕಾರು ಮತ್ತು ಮಡಿಕೇರಿ ಪಿ. ಎಸ್. ಮೂಕಪ್ಪನವರ ಕಾರು ಒಂದಕ್ಕೊಂದು ಡಿಕ್ಕಿ ಹೊಡೆದು ಮೂಕಪ್ಪನವರ ಕಾರು ಮುರಿದು ಅಲ್ಲೇ ನಿಂತುಹೋಯಿತೆಂದೂ, ಈ ವಿಷಯ ಪೋಲೀಸು ವಿಚಾರದಲ್ಲಿದೆಯೆಂದೂ ವರ್ತಮಾನ.

ಹಿಂದೂದೇಶ.

ಮೈಸೂರಿನ ಆರೋಗ್ಯವು ನೆಟ್ಟಗಿಲ್ಲದ್ದರಿಂದ ಅವರ ಕಲ್ಕತ್ತಾ ಪ್ರವಾಸವು ವಜಾಮಾಡಲಾಗಿದೆ

4ನೇ ಅಖಿಲ ಭಾರತ ವಾಲಂಟೀಯರ ಕಾನ್‌ಫರೆನ್ಸು ಡಿಸೆಂಬರು 27ರಲ್ಲಿ ಪಂಡಿತ ಜವಾಹಿರ್ ಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿ ನಡೆಯಿತ.

ಮದ್ರಾಸಿನ ಕಾಂಗ್ರೆಸು ಮಂಟಪದಲ್ಲಿ ನಡೆದ ಮಿತ್ರಾರ್ ಕಾನ್‌ಫರೆನ್ಸಿನಲ್ಲಿ ಸೈಮನ್ ಕಮಿಷನಿನ ಬಹಿಷ್ಕಾರದ ಮತ್ತು ಹಿಂದೂ ಮುಸಲ್ಮಾನ ಐಕ್ಯದ ಠರಾವುಗಳು ಪಾಸಾದವು.

ಇಂಡಿಯನ್ ನಶನಲ್ ಕಾಂಗ್ರೆಸು ಈ ತಾ. 2 ರಲ್ಲಿ ಕಲ್ಕತ್ತಾದಲ್ಲಿ ಬಂಗಾಳದ ಗವರ್ನರವರಿಂದ ತೆರೆಯಲ್ಪಟ್ಟಿತು. ಡಾಕ್ಟರ್ ಸ್ಪೆನ್ಸರ್‌ರವರ ಅಧ್ಯಕ್ಷತೆಯಲ್ಲಿ ಕಾನ್‌ಫರೆನ್ಸು ನಡೆಯುತ್ತಿದೆ

ಅಖಿಲಭಾರತ ಸಂಸ್ಥಾನಗಳ ಪ್ರಜೆಗಳ ಮಹಾ ಸಭೆಯು ಮದ್ರಾಸಿನ ಗೋಖಲೆ ಹಾಲಿನಲ್ಲಿ ತಾ. 26—12—27ರಲ್ಲಿ ನಡೆಯಿತು. ಶ್ರೀಯುತ ಎಸ್. ಶ್ರೀನಿವಾಸಯ್ಯಂಗಾರ್‌ರವರು ಪ್ರೆಸಿಡೆಂಟರಾಗಿದ್ದರು.

ಅಖಿಲಭಾರತ ವಿದ್ಯಾರ್ಥಿಗಳ ಕಾನ್‌ಫರೆನ್ಸು ತಾ. 28 ರಲ್ಲಿ ಮದ್ರಾಸು ಕಾಂಗ್ರೆಸ್ ನಗರದಲ್ಲಿ ಡಾಕ್ಟರ್ ಬಿ. ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಡಾ. ಜಿ. ಹೆಚ್. ಕಸಿನ್ಸ್‌ರವರು ಸ್ವಾಗತಾಧ್ಯಕ್ಷರಾಗಿದ್ದರು.

ಅಖಿಲಭಾರತ ಆರ್ಯವೈಶ್ಯರ ಪ್ರಥಮ ಕಾನ್‌ಫರೆನ್ಸು ಶ್ರೀ. ಸೇಟ್ ಜಮನಾಲಾಲ್ ಬಜಾಜ್‌ರವರ ಅಧ್ಯಕ್ಷತೆಯಲ್ಲಿ ಮದ್ರಾಸಿನ ಗೋಖಲೆ ಹಾಲಿನಲ್ಲಿ ತಾ 29—12—27ರಲ್ಲಿ ನಡೆಯಿತು. ನಾಮಿ ವೆಂಕಟಾಚಲಂ ಚೆಟ್ಟಿಯವರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದರು.

ತಿರುವಾಂಕೂರು ಮಹಾರಾಜರು ತಮ್ಮ ತಾಯಿ ಸಮೇತ ತಾ 29ರಲ್ಲಿ ಮದ್ರಾಸಿಗೆ ಬಂದು ಅಲ್ಲಿ 31ರ ವರೆಗೆ ಇದ್ದರು. ಆಗ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಅವರಿಗೊಂದು ಟೀ ಪಾರ್ಟಿ ಕೊಟ್ಟರು. ಮಹಾರಾಜರು ಅಲ್ಲಿಂದ ಕಲ್ಕತ್ತಾಕ್ಕಾಗಿ ಡೆಲ್ಲಿಗೆ ಹೋದರು.

ಕಲ್ಕತ್ತಾ ಕಾರ್ಪೋರೇಶನ್ನಿನ ಅಧ್ಯಕ್ಷರಾದ ಶ್ರೀ. ಸೇನಗುಪ್ತರವರಿಗೆ ಕಳೆದ ತಾ. 27ರ ಸಾಯಂಕಾಲ ಮದ್ರಾಸು ಮುನ್ಸಿಪಲ್ ಕಾರ್ಪೋರೇಶನಿನವರು ಅಭಿನಂದನ ಪತ್ರವನ್ನು ಅರ್ಪಿಸಿದರು. ಚಾದಿಯ ಮೇಲೆ ಮುದ್ರಿಸಲ್ಪಟ್ಟಿದ್ದ ಬಿನ್ನಹ ಪತ್ರವನ್ನು ಗಂಧದ ಮರದ ಕರಡಿಗೆಯಲ್ಲಿ ಹಾಕಿ ಅವರಿಗೆ ಒಪ್ಪಿಸಿದರು.

ಡಿಸೆಂಬರು ತಾ. 19ರಲ್ಲಿ ಮದ್ರಾಸ್ ಕಾಂಗ್ರೆಸ್ ಚಪ್ಪರದಲ್ಲಿ ನಡೆದ ರಿಪಬ್ಲಿಕನ್ ಕಾನ್‌ಫರೆನ್ಸಿಗೆ ಸಾವಿರಗಟ್ಟಲೆ ಜನರು ನೆರೆದಿದ್ದರು. ಪಿ. ಜಿ. ಸ್ವಾಮಿಮೂರ್ತಿಯವರು ಸಭೆಯನ್ನು ತೆರೆದರು. ಪಂಡಿತ ಜವಾಹಿರಲಾಲ್ ನೆಹರುರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿ ಕಾನ್‌ಫರೆನ್ಸನ್ನು ನಡಿಸಿದರು. ನೆರೆದ್ದ ಜನರು ತುಂಬಾ ಉತ್ಸಾಹವುಳ್ಳವರಾಗಿದ್ದರು.

ಹಿಂದೂ ಮಹಾಸಭಾದ ವಿಶೇಷ ಅಧಿವೇಶನವು ಡಿಸಂಬರು 29ರಲ್ಲಿ ಮದ್ರಾಸಿನ ಕಾಂಗ್ರೆಸ್ ಮಂಟಪದಲ್ಲಿ ನಡೆಯಿತು. ಬಹಳ ಪ್ರಮುಖರು ಬಂದಿದ್ದರು. ಪಂಡಿತ ಮದನಮೋಹನ ಮಾಳವೀಯರು ಅಧ್ಯಕ್ಷರಾಗಿದ್ದರು. ಮಿ. ಸಿ. ವಿಜಯರಾಘವ ಚಾರ್ಯರು ಸೂಚಿಸಿದ ಸೈಮನ್ ಕಮಿಷನ್ನಿನ ಬಹಿಷ್ಕಾರ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

ಕಳೆದ ತಾ. 29ರಲ್ಲಿ ಕಲ್ಕತ್ತಾದಲ್ಲಿ ನಡೆದ ಆಲ್ ಇಂಡಿಯಾ ಟೀಚರ್ಸ್ ಫೆಡರೇಶನ್ನಿನ ಕಾನ್ಫರೆನ್ಸಿನಲ್ಲಿ ಅಧ್ಯಕ್ಷರಾದ ಡಾಕ್ಟರ್ [illegible] ರಾಮನ್‌ರವರು [illegible]

ಇಂಡಿಯನ್ [illegible] ಕಾಂಗ್ರೆಸ್ಸಿನ [illegible] ಅಧಿವೇಶನವು ಕಳೆದ ತಾ. [illegible] ರಲ್ಲಿ ಮದ್ರಾಸಿನ ಪಚ್ಚೆಯಪ್ಪ ಕಾಲೇಜಿನಲ್ಲಿ ಪ್ರಾರಂಭವಾಯಿತು. ಸರ್ ಎಂ. ಮುತ್ತಯ್ಯ ಚೆಟ್ಟಿಯವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ [illegible] ಡಾ [illegible] ಅವರ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಇಂಡಿಯನ್ ನ್ಯಾಷನಲ್ ಕಾನ್‌ಫರೆನ್ಸಿನ [illegible] ಕಳೆದ ತಾ. 27ರಲ್ಲಿ ಮದ್ರಾಸಿನಲ್ಲಿ [illegible] ಸ್ವಾಗತಾಧ್ಯಕ್ಷರಾದ ಡಾಕ್ಟರ್ [illegible] ಲಕ್ಷ್ಮಿ ರೆಡ್ಡಿಯವರು [illegible] ಸ್ವಾಗತವನ್ನೀಯುವ ಭಾಷಣ ಮಾಡಿದರು. [illegible] ಶ್ರೀ. [illegible] ರವರು ಪ್ರೆಸಿಡೆಂಟರನ್ನು [illegible] ಸಮ್ಮೇಳನ [illegible]

ಅಖಿಲ ಭಾರತ [illegible]

[illegible]

ಅಖಿಲ ಭಾರತ [illegible]

[illegible] ಯನ್ನು ಅನುಸರಿಸಿದ ಹಿಂದೂ ಕಮಿಟಿಯ ನೇಮಿಸಲಾಗಿದೆ.

ದಿವಂಗತ ಹಕೀಮ್ ಅಜಮಲಖಾನರು.

ಹಿಂದೂ ದೇಶದ ಪ್ರಾಮುಖ್ಯ ಮುಂದಾಳುಗಳಲ್ಲಿ ಒಬ್ಬರಾಗಿದ್ದ ಹಕೀಮ್ ಅಜಮಲಖಾನರವರು ಹೃದಯರೋಗದಿಂದ ಥಟ್ಟನೆ ಕಳೆದ ತಾ. 29ರಲ್ಲಿ ರಾಮಪುರದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಹಿಂದೂ ಮುಸಲ್ಮಾನ್ ಇವೆರಡು ಮತಸ್ಥರಿಗೂ ಪ್ರಿಯರಾಗಿದ್ದರು. ಹಿಂದೂ ಮುಸಲ್ಮಾನರ ಐಕ್ಯತೆಗೆ ಇವರು ಬಹಳ ಕೆಲಸ ಮಾಡಿದವರು. ಇವರು ಒಮ್ಮೆ ಇಂಡಿಯನ್ ನೇಶನಲ್ ಕಾಂಗ್ರೆಸಿನ ಮತ್ತು ಮುಸ್ಲಿಮ್ ಲೀಗಿನ ಅಧ್ಯಕ್ಷರಾಗಿದ್ದರು. ಮುಸ್ಲಿಮ್ ರಾಷ್ಟ್ರೀಯ ಕಾಲೇಜಿನ ಮತ್ತು ಯುನಾನಿ ಕಾಲೇಜಿನ ಮೂಲ ಸ್ಥಾಪಕರಾಗಿದ್ದರು. ಇಂಥಾ ದೇಶಭಕ್ತರು ಈ ಬಿಕ್ಕಟ್ಟಿನ ಸಮಯದಲ್ಲಿ ಮೃತರಾದನ್ನು ಹಿಂದೂದೇಶಕ್ಕೆ ದೊಡ್ಡ ನಷ್ಟವಾಗಿದೆ.

ವಿದೇಶ.

ಅಫ್ಘಾನಿಸ್ಥಾನದ ಅರಸರಾದ ಅಮಾನುಲ್ಲಾರವರು ಈಗ ಈಜಿಪ್ಟ್ ದೇಶದಲ್ಲಿ ಪ್ರವಾಸ ಮಾಡುತ್ತಿರುವರು. ಅವರಿಗೆ ಅಲ್ಲಿಯ ಅರಸರಾದ ಫೌಡರವರೂ, ಜನಸಮುದಾಯವೂ ಬಹು ಉತ್ಸಾಹದಿಂದ ಸ್ವಾಗತವನ್ನೀಡಿದರು

ಸೈಮನ್ ಕಮಿಷನಿನವರು ಎಸೆಂಬ್ಲಿಯ ಅಧಿವೇಶನಕ್ಕೆ ಸರಿಯಾಗಿ ಫೆಬ್ರವರಿ 3ರಲ್ಲಿ ಡೆಲ್ಲಿಗೆ ಬಂದು ಎಸೆಂಬ್ಲಿ ಮೆಂಬರುಗಳೊಂದಿಗೆ ಮಾತಾಡಿ ನಂತರ ಪ್ರಾಂತ್ಯಗಳಲ್ಲಿ ಸಂಚರಿಸುವರು. ಏಪ್ರಿಲ್ ತಿಂಗಳಲ್ಲಿ ವಾಪಸು ಇಂಗ್ಲೆಂಡಿಗೆ ಹೋಗುವರು.

ಯೂರೋಪಿನಲ್ಲಿರುವ ಪಂಡಿತ ಮೋತಿಲಾಲ್ ನೇಹರುರವರಿಗೆ ತಮ್ಮ ದೀರ್ಘಕಾಲದ ಎಡೆಬಿಡದ ಕೆಲಸದ ದೆಸೆಯಿಂದ ಕಣ್ಣಿನ ನೋವು ಪ್ರಾರಂಭಿಸಿ ಡಾಕ್ಟರುಗಳ ಹೇಳಿಕೆ ಮೇರೆ ತಮ್ಮ ತುರ್ಕಿಸ್ಥಾನ, ಸಿರಿಯಾ ಮತ್ತು ಪೇಲೆಸ್ಟೈನ್ ಪ್ರವಾಸವನ್ನು ವಜಾಮಾಡಿ ಈಗ ಬರ್ಲಿನಿನಲ್ಲಿ ಚಿಕಿತ್ಸೆಹೊಂದುತ್ತಿರುವರು. ಅವರು ಫೆಬ್ರವರಿ 6ರಲ್ಲಿ ಬೊಂಬಾಯಿಗೆ ವಾಪಸು ಬರಲಿಕ್ಕಿರುವರು.

ಜಮೀನ ಬೇಕಾಗಿದೆ.

ದಕ್ಷಿಣ ಕೊಡಗಿನಲ್ಲಿ 30 ಎಕ್ರೆ ಭತ್ತದ ವ್ಯವಸಾಯ, 30 ಎಕ್ರೆ ಕಾಫಿ, ಕಿತ್ತಳೆ, ಮೆಣಸು ಇರುವ ಜಮೀನನ್ನು ಸ್ವಂತ ಜಮೀನುದಾರರಿಂದ ಖರೀದಿಸಲು ತಕ್ಕವನಾದ ಒಬ್ಬ ಗೃಹಸ್ಥ ಕಾದಿರುವನು. ಅವನಿಗೆ ತಕ್ಕ ಬೆಲೆಗೆ ಕೊಡಲ್ಪಡುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನವರಿಗೆ ಬರೆಯಿರಿ.

'X'
C/o Post master,
Katikolam,
Malabar.

4—1

WANTED.

Reliable and capable Writer for Field and Office Work. New Writers quarters [illegible]

Send references with application in own handwriting by post to THE SUPERINTENDENT, [illegible] ESTATE, [illegible], N. COORG.

ಹಿಂದೂಸ್ಥಾನಿ ಸೇವಾದಳ ಕರ್ನಾಟಕ ಶಾಖಾ ಪ್ರಕಟನೆ ೫.

ಕರ್ನಾಟಕ ದಳದವರು [illegible] ರಲ್ಲಿ ಕರ್ನಾಟಕದಲ್ಲಿ ಸೈನಿಕರ ಕಾರ್ಯದ [illegible] ಮಾಡಿಯು.

[illegible]

ಕರ್ನಾಟಕದಲ್ಲಿಯ ೫ ಜಿಲ್ಲೆಯವರು ತಮ್ಮ ಜಿಲ್ಲೆಯ [illegible] ೨೦೦ [illegible] ಕಾಂಗ್ರೆಸ್ [illegible] ಜಿಲ್ಲೆಗೆ [illegible] ಶ್ರೀ [illegible] (quota) [illegible]

[illegible] ಕರ್ನಾಟಕದ [illegible] ಜಿಲ್ಲೆಗಳ ಪ್ರಕಾರ [illegible] ಕಗಳನ್ನು ಕೊಟ್ಟಿದೆ.

ಜಿಲ್ಲೆಯ ಪ್ರಕಾರ ಅಂಕೆಗಳು.

ಜಿಲ್ಲೆ	[illegible]	[illegible]	[illegible]
[illegible]	[illegible]	೧೦	[illegible]
ಬೆಳಗಾವಿ	[illegible]	೬೯	[illegible]
ಧಾರವಾಡ	[illegible]	೬೮	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
ಕಾರವಾರ	[illegible]	—	[illegible]
	[illegible]	[illegible]	[illegible]

ಕೆಲಸಗಾರರ ಪ್ರಕಾರ ಅಂಕೆಗಳು

ಕಾ. ಸಭಾಸದರು.

೧ ಹೊಸಕೊಪ್ಪ ಕೃಷ್ಣರಾಯರು
ದಕ್ಷಿಣಕನ್ನಡ ಜಿಲ್ಲೆಯಲ್ಲಿ ೧೫೬೩ }
ಮೈಸೂರು ಸಂಸ್ಥಾನದಲ್ಲಿ ೯೪೨ } ೨೫೦೫

೨ ಡಿ. ಯಂ. ತಿಂಗಣಿ. ಬೆಳಗಾವಿ ಜಿಲ್ಲೆಯಲ್ಲಿ
(ಅಥಣಿ ತಾಲೋಕಿನ ಹೊರತು) ೧೧೬೮

೩ ಆರ್. ಆರ್ ನಾಯಿಕ ಮತ್ತು (೪) ಎಲ್.
ಆರ್ ಎಸ್ ಶರ್ಮ (ಇಬ್ಬರೂ ಕೂಡಿ ಬ
ಳ್ಳಾರಿ ಜಿಲ್ಲೆಯಲ್ಲಿ) ೫೦೧

೫ ಎಸ್. ಪಿ. ಕುಲಕರ್ಣಿ ವಿಜಾಪುರ ಜಿಲ್ಲೆಯಲ್ಲಿ ೪೬೮

೬ ಆರ್. ವ್ಹಿ. ಕಣಗುದಲಿ ಧಾರವಾಡ
ಜಿಲ್ಲೆಯಲ್ಲಿ, ೩೪೯ }
ಶಿರ್ಸಿ ಊರಿನಲ್ಲಿ ೮೬ } ೪೩೫

೭ ಎಸ್. ಆರ್. ವೈದ್ಯ ಮತ್ತು (೮) ಎಸ್. ಆರ್.
ದೇಶಪಾಂಡ ಗದಗ, ನವಲಗುಂದ, ರೋಣತಾಲೂಕು
ಗಳಲ್ಲಿ (ಧಾರವಾಡ ಜಿಲ್ಲೆ) ೪೨೫

೯ ಸಿ. ಎಸ್. ವೆಂಕಪ್ಪಯ್ಯ ಮತ್ತು (೧೦) ಪಿ. ಟಿ.
ಕುಶಾಲಪ್ಪ, ಇಬ್ಬರೂ ಕೂಡಿ ಕೊಡಗು ಸೀಮೆ
ಯಲ್ಲಿ ೩೬೭

೧೧ ಹುಬ್ಬಳ್ಳಿ ಭಗಿನಿಮಂಡಲ ಹುಬ್ಬಳ್ಳಿ ೩೩೪ }
ಧಾರವಾಡ ೬೯ } ೪೦೩

೧೨ ಜಿ. ಜಿ ಜೋಶಿ ಅಥಣಿ ತಾಲೂಕಿನಲ್ಲಿ ೧೪೦

೧೩ ಎಸ್. ಎ. ಜೋಗ ಧಾರವಾಡ ಊರಿನಲ್ಲಿ ೧೧೩

೧೪ ಎ. ಎಸ್ ಕುಂದಾಪುರ ಹಾನಗಲ್ಲಿ ತಾಲೂಕಿನಲ್ಲಿ ೧೦೦

೬೪೯೫

ಇದಲ್ಲದೆ,

ಮಂಗಳೂರು ತಾಲೋಕು ಕಾಂ
ಗ್ರೆಸ್ ಕಮಿಟಿ ೬೦ }
ಸಿದ್ದಾಪುರ „ „ ೫೦ } ೧೫೮
ಬಳ್ಳಾರಿ „ „ ೪೮ }

೬೬೫೩

ಹುಬ್ಬಳ್ಳಿ
೨೨—೧೨—೨೭.

ನಾ. ಸು. ಹರ್ಡಿಕರ,
ಕಾರ್ಯದರ್ಶಿ,
ಹಿಂದುಸ್ಥಾನೀ ಸೇವಾದಲ.

ಓಂ ಭಗವತೇ ಶ್ರೀ ರಾಮಕೃಷ್ಣಾಯ ನಮಃ.

ಪೊನ್ನಂಪೇಟೆ ಶ್ರೀರಾಮಕೃಷ್ಣ ವೇದಾಂತ ಸಂಘದವರು ದೇಶದ ಉದಾರೋತ್ತಮರಿಂದ ದ್ರವ್ಯ ಸಹಾಯ ಪಡೆದು ಕಟ್ಟೋಣ ಕಾರ್ಯವನ್ನು ಪೂರೈಸಿ, ಬೆಂಗಳೂರು ಮಠದ ಅಧ್ಯಕ್ಷರು ಶ್ರೀ ಸ್ವಾಮಿ ನಿರ್ಮಲಾನಂದಜೀಯವರಿಂದ ಈ ಆಶ್ರಮ ಪ್ರತಿಷ್ಠಾಪನೆಯನ್ನು ಮಾಡಿಸಿ, ೨೦ವರೆ ತಿಂಗಳುಗಳು ಪೂರೈಸಿದವು. ಈ ಅವಧಿಯೊಳಗೆ ಈ ಆಶ್ರಮದಲ್ಲಿ ಇಬ್ಬರು ಸನ್ಯಾಸಿಗಳು ವಸತಿ ಮಾಡಿಕೊಂಡು ಶಾಸ್ತ್ರೋಕ್ತವಾಗಿ ಒಂದು ಆಶ್ರಮವು ನಡಿಸಬೇಕಾದ ದೇವತಾ ಕಾರ್ಯಗಳನ್ನೆಲ್ಲಾ ದೈವಾನುಗ್ರಹದಿಂದ ಸಾಂಗವಾಗಿ ನಡಿಸುತ್ತಾ ಬರುತ್ತಲಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ಆಶ್ರಮವನ್ನು ನಾವು ಕೈಕೊಂಡ ಕಾಲವು ಒಹಳ ಅನಾನುಕೂಲದ ಕಾಲವಾದುದ್ದರ ದೆಸೆಯಿಂದ ಜನ ಸಮುದಾಯಕ್ಕೆ ಹೆಚ್ಚಿನ ಉಪಯೋಗಾರ್ಥವಾದ ಕೆಲಸಗಳೇನೂ ಮಾಡಲು ಸಾಧ್ಯವಿದ್ದರೂ ಪ್ರತಿ ಸಾಯಂಕಾಲದ ವೇಳೆಯಲ್ಲಿ ಆಶ್ರಮಕ್ಕೆ ಬರುತ್ತಿರುವ ಶಿಷ್ಯಮಂಡಳಿಯವರಿಗೆ ಧರ್ಮೋಪದೇಶ ಮಾಡುತ್ತಿರುವುದಲ್ಲದೆ ಈ ವರೆಗೆ ಗ್ರಾಮಾಂತರಂಗಳಿಗೂ ಸಹ 3—4 ಕಡೆ ಹೋಗಿ ಈ ಸಂಸ್ಥೆಯ ತತ್ವೋಪದೇಶಗಳನ್ನು ಮಾಡಲಾಯಿತು.

ಸಾಮಾನ್ಯವಾಗಿ ಜನ ಸಮುದಾಯಕ್ಕೆ ಮಾಡಬೇಕಾದ ನಮ್ಮ ಸಂಸ್ಥೆಯ ಮೂಲ ತತ್ವಗಳು ಅದೆಷ್ಟೋ ಇವೆ. ಆದರೆ ಮಾಡುವುದೇನು? ನಮಗಿರತಕ್ಕ ಅಡಚಣೆಗಳು ಅಗಾಧವಾಗಿ ನಮ್ಮನು ಮುಂದುವರಿಯದಂತೆ ಮಾಡುತ್ತಲಿವೆ. ನಮ್ಮ ಕಟ್ಟೋಣದಲ್ಲಿ ಹಲ ಕೆಲವು ಕೆಲಸಗಳು ಬಾಕಿ ಉಳಿದವೆ. ಸುತ್ತುಮುತ್ತು ವರಾಂಡಗಳ ಭದ್ರತೆಯಾಗಲಿಕ್ಕಿದೆ. ಅಡಿಗೆ ಮನೆಯೂ ಇಲ್ಲ. ಆಶ್ರಮದಲ್ಲಿ ನಿತ್ಯಗಟ್ಟಿ ನಡೆಯಬೇಕಾದ ಖರ್ಚು ವೆಚ್ಚಗಳಿಗೆ ನಿಲವಾಗಿಯೂಗಿರುವದಿಲ್ಲ. ಇವುಗಳನ್ನೆಲ್ಲಾ ಸುಧಾರಿಸಲು ದ್ರವ್ಯಸಹಾಯವೇ ಮುಖ್ಯವೆಂದು ನಾವು ಪ್ರತ್ಯೇಕ ಹೇಳಬೇಕಾದ್ದಿಲ್ಲ. ಹಿಂದೆ ಕಟ್ಟೋಣಕ್ಕೆ ದ್ರವ್ಯಸಹಾಯ ಮಾಡಿದ ಉದಾರೋತ್ತಮರ ಹೆಸರಿನಲ್ಲಿ ಶಿಲಾಶಾಸನವನ್ನು ಕೆತ್ತಿಸಿಟ್ಟಿರುವುದರಿಂದ ಮುಂದೆ ಸಹಾಯ ಮಾಡತಕ್ಕವರೂ ಸಹ ಈ ತೆರವಾದ ಪ್ರತಿಫಲವನ್ನೇ ಅಪೇಕ್ಷಿಸಲು ಸಾಧ್ಯವಿದೆ. ಮತ್ತು ಯುಕ್ತವೂ ಆಗಿದೆ. ಶಾಸನವೆಂದರೆ ಮುಂದೆ ಚರಿತ್ರಾಸ್ಪದವಾದ ವಿಷಯವೂ ಆಗಿದೆ ಆದುದರಿಂದ ಇಂಥಾ ಹೊಸ ಸಂಸ್ಥೆಯೊಂದು ದೇಶದಲ್ಲಿ ಸ್ಥಾಪಿತವಾದ ಕಾಲದ, ದೇಶೀಯ ಮುಖ್ಯ ಮುದ್ದೇದಾರರೂ, ಶ್ರೀಮಂತರೂ ಮೊದಲಾದವರ ಹೆಸರಿನ ಶಾಸನವೊಂದನ್ನು ಇಡುವುದು ಹಿತವೆಂದು ನಾವು ಅಭಿಪ್ರಾಯ ಪಡುತ್ತೇವಲ್ಲದೆ ನಮ್ಮ ಹಲಕೆಲವು ಸ್ನೇಹಿತರೂ ಸಹ ಇದನ್ನೇ ಸಮರ್ಥಿಸುತ್ತಾರೆ. ಮಾತ್ರವಲ್ಲ,—ಕಳೆದ ವರ್ಷ ಕಾರಣಾಂತರದಿಂದ ದ್ರವ್ಯ-ಸಹಾಯ ಮಾಡಲು ಅನುಕೂಲಿಸದ ಕೆಲವು ಉದಾರೋತ್ತಮರು ಸಹ ಈ ವರ್ಷ ಸಹಾಯ ಮಾಡಲು ಸಿದ್ಧರಿದ್ದಾರೆಂದು ತಿಳಿಯುತ್ತೇವೆ.

ಈ ವಿಚಾರದಲ್ಲಿ ನಾವು ದೀರ್ಘಾಲೋಚನೆ ಮಾಡಿ ಈ ಸಂದೇಶದ ಮೂಲಕ ಕೃತಪಡಿಸಿಕೊಳ್ಳುವದೇನೆಂದರೆ.— ಯಾರು ಮುನ್ನೂರು ಯಾ ಹೆಚ್ಚಿನ ರೂಪಾಯಿಗಳ ದ್ರವ್ಯ ಸಹಾಯ ಮಾಡುತ್ತಾರೋ ಅಂಥಾ ಮಹನೀಯರ ಹೆಸರನ್ನು ಶ್ರೀಮಂತರ ಶಾಸನದಲ್ಲಿಯೂ, ಒಂದು ನೂರರ ಮೇಲ್ಪಟ್ಟು ಎರಡು ನೂರು ರೂಪಾಯಿಗಳ ಒಳಗೆ ಸಹಾಯ ಮಾಡಿದ ಉದಾರೋತ್ತಮರೆಂಬ ಮತ್ತೊಂದು ಶಾಸನದಲ್ಲಿಯೂ ಕೆತ್ತಿಸಿ, ಮಂದಿರದಗೋಡೆಯಲ್ಲಿ ಇಡುವುದೆಂದು ಆಲೋಚಿಸಿರುತ್ತೇವೆ

ಕ್ಷಣಂ ಚಿತ್ತಂ ಕ್ಷಣಂ ವಿತ್ತಂ ಕ್ಷಣಂ ಜೀವನ ಮಾನವಃ|
ಯಮಸ್ಯ ಕರುಣಂ ನಾಸ್ತಿ ಧರ್ಮಸ್ಯ ತ್ವರಿತಾಗತಿಃ||

ಎಂಬ ಪಂಡಿತೋತ್ತಮರ ನೀತಿ ವಚನವನ್ನು ಸ್ಮರಿಸಿ ಈ ಧರ್ಮಸ್ಥಾಪನಾ ಕಾರ್ಯದಲ್ಲಿ ಭಾಗಿಗಳಾಗಿ ಸುಖ ಸಾಮ್ರಾಜ್ಯವನ್ನು ಪಡೆಯುವವರಾಗಿರೆಂದು ಆಶಿಸುತ್ತೇವೆ.

ಶಾರದಾಶ್ರಮ, ಪೊನ್ನಂಪೇಟೆ
10—12—1927

ಇತಿ ಲೋಕ ಹಿತೈಷಿ,
ಶಾಂಭವಾನಂದ.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಅಯ್ಯಾ,

ನಾಡುತಕ್ಕರಾದ ಮ. ಅಜ್ಜಿಕುಟ್ಟಿರ ಬೆಳ್ಯಪ್ಪನವರು ಕೊಡಗು ಸಭೆ ಬೇಕು ಯಾ ಬೇಡವೆಂಬ ವಿಷಯ ಚರ್ಚಿಸಲಿಕ್ಕೆ ಹತ್ತು ಗ್ರಾಮಸ್ಥರಿಗೆ ಕಾಗದ ಕಳುಹಿಸಿದ ಮೇರೆ ತುದಿಕೇರಿ ಹಳೇ ನಾಡು ಕಚೇರಿ ಒಳಿ ತಾ. 10—12—27ರಲ್ಲು ಮ. ಇಟ್ಟಿರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲು ಸುಮಾರು 100 ಜನರು ಸೇರಿದ ಒಂದು ಸಭೆಯು ಕೂಡಿ ಕೊಡಗುಸಭೆ ಬೇಕು ಯಾ ಬೇಡವೆಂಬ ವಿಷಯ ಚರ್ಚೆ ನಡದು ಓಟಿಗೆ ಹಾಕಲಾಗಿ 6 ಜನರು ಸಭೆ ಬೇಕೆಂಬದರ ಪರವಾಗಿಯೂ, ಬಾಕಿರುವವರೆಲ್ಲಾ ಬೇಡವೆಂಬದಾಗಿಯೂ ಓಟು ಕೊಟ್ಟ ಮೇರೆ ಬಹುಪಕ್ಷದವರ ಸಮ್ಮತದಂತೆ ಸಭೆಯು ಬೇಡವೆಂಬದಾಗಿ ತೀರ್ಮಾನವಾಗಿ ಸಭೆಯು ಬರಕಾಸ್ತಾಯಿತು

ಹಾಜರಿದ್ದವ.

ಕೊಡಗಿನ ಬೋರ್ಡು ಶಾಲೆಗಳ ಪಂಚಾಯಿತರ ಮಾತುವರ್ಜಿ.

ಕೊಡಗಿನ ಬೋರ್ಡುಶಾಲೆಗಳ ಅಭಿವೃದ್ಧಿ ಬಗ್ಗೆ ಆಯಾಯ ಶಾಲೆಗಳ ನೆರೆಕರೆಯವರನ್ನು ಆಯಾಯ ಶಾಲೆಯ ಪಂಚಾಯಿತರನ್ನಾಗಿ ಘನ ಸರಕಾರದವರು ನೇಮಿಸಿರುವರಷ್ಟೆ. ಸದರಿ ಪಂಚಾಯಿತರು ಪೂರ್ತಿ ಹಳೇ ಪದ್ಧತಿಯಲ್ಲಿರುವದರಿಂದ ಅವರು ತಮ್ಮ ತಮ್ಮ ಶಾಲೆಯ ಅಭಿವೃದ್ಧಿ ವಿಷಯ ಮಾಡಿದ ಏರ್ಪಾಡು ಏನೇನೆಂಬುವುದು ತಾಲೂಕು ಸರ್ವ ಗೋಚರಕ್ಕೆ ತಿಳಿದು ಬಂದಿರುವದಿಲ್ಲ. ಮತ್ತು ಅಂಥಾ ಪಂಚಾಯಿತರು ಆಯಾಯ ಶಾಲೆಯನ್ನು ಈ ವರೆಗೆ ಕ್ರಮವಾಗಿ ಸಂದರ್ಶಿಸಿರುವುದಿಲ್ಲವಾಗಿ ಕಂಡುಬರುತ್ತೆ. ಈ ಪಂಚಾಯಿತರು ಅವರ ಹುದ್ದೆಯು ಅವರವರ ವಂಶ ಪಾರಂಪರ್ಯದ ವರೆಗೆ ಸ್ವತ್ತಾಗಿದೆಯೆಂದು ತಿಳಿದುಕೊಂಡಿರುವುದರಿಂದ ಅವರ ಪುರಾತನ ಪದ್ಧತಿಯು ಈಗಿನ ನವೀನತರದ ಅಭಿವೃದ್ಧಿಗೆ ಎಡೆಕೊಡುವದಿಲ್ಲವೆಂದೇ ಖಾತ್ರಿತವಾಗಿ ಹೇಳಬಹುದು. ಆದ್ದರಿಂದ ಇನ್ನು ಮುಂದಕ್ಕೆ ಈ ಹಳೇ ಪದ್ಧತಿಯನ್ನು ಸರಕಾರದವರು ಮನ್ನಾ ಮಾಡಿಸಿ ಕೂಡಲೆ ಹೊಸ ಮೆಂಬರನ್ನು ಚುನಾಯಿಸಿ ಪಂಚಾಯಿತರು ಯಾವ್ಯಾವ ರೀತಿಗಳಲ್ಲ ಶಾಲೆಯ ಅಭಿವೃದ್ಧಿ ವಿಷಯ ಕೆಲಸ ಒದಗಿಸಬೇಕೆಂಬದನ್ನು ಸಂಕ್ಷೇಪವಾಗಿ ತಿಳಿಸಿ, ಇನ್ನು ಮುಂದಾದರೂ ಬೋರ್ಡು ಶಾಲೆಗಳು ತಕ್ಕದಾದ ಅಭಿವೃದ್ಧಿ ಹೊಂದುವಂತೆ ಸರಕಾರದವರು ತಕ್ಕ ಏರ್ಪಾಡು ಮಾಡುವರೆಂದೇ ನಂಬುತ್ತೇನೆ.

ನಾಡಿನವ

ಟಿ. ಎಸ್. ಟಪ್ಪಾಲು ಸರ್ವೀಸು.

ಇದು ಇಡೀ ಕರ್ನಾಟಕದಲ್ಲಿದ್ದ ಮೋಟಾರು ಸರ್ವೀಸುಗಳಲ್ಲಿ ದೊಡ್ಡದೂ, ಅನುಭವವುಳ್ಳದ್ದೂ ಆಗಿದೆ. ಮತ್ತು ಜನರ ಸುಖದ ಕಡೆಗೆ ಲಕ್ಷ್ಯಗೊಟ್ಟು ಕೆಲಸಮಾಡುವದರಲ್ಲಿಯೂ ವಿಶೇಷ ಕೀರ್ತಿಯನ್ನು ಸಂಪಾದಿಸಿದೆ. ಈ ಕಂಪನಿಯು ಮೈಸೂರುಸೀಮೆ ಮತ್ತು ಮದ್ರಾಸ್ ಇಲಾಖೆಯಲ್ಲಿ ಅನೇಕ ಕಡೆಗೆ ಟಪ್ಪಾಲು ಒಯ್ಯುವ ಕೆಲಸವನ್ನು ಹಿಡಿದುಕೊಂಡಿದೆ. ಅದೇ ಪ್ರಕಾರ ಹುಬ್ಬಳ್ಳಿಯಿಂದ ಅಂಕೋಲೆಯ ವರೆಗೆ ಟಪ್ಪಾಲು ಒಯ್ಯುವ ಕೆಲಸವನ್ನಾದರೂ ಈಗ 3½ವರ್ಷಗಳಿಂದ ಮಾಡುತಲಿ ಬಂದಿದೆ. ಈ ಕೆಲಸವು ಏನೂ ಹೆಚ್ಚು ಕಡಿಮೆಯಾಗದಂತೆ ಮಾಡಿರುವದೆಂಬದು ಅಭಿನಂದನೀಯವು. ಅದರಲ್ಲಿಯೂ, ಕಾರವಾರ ಜಿಲ್ಲೆಯಲ್ಲಿರುವ ಘೋರವಾದ ಅರಣ್ಯಗಳಿಂದ ಮುಚ್ಚಲ್ಪಟ್ಟ ಘಟ್ಟಗಳ ಮಾರ್ಗವಾಗಿ ವಿಶೇಷತಃ ರಾತ್ರಿಯ ವೇಳೆಯಲ್ಲಿ ಟಪ್ಪಾಲು ಒಯ್ಯುವ ಕೆಲಸದಲ್ಲಿ ಶಿಫಾರಸು ಪತ್ರವನ್ನು ದೊರಕಿಸಿದ ಈ ಕಂಪನಿಯು ಯಾವ ತರದ ಮುತುವರ್ಜಿಯನ್ನು ತೆಗೆದುಕೊಂಡು ಕೆಲಸಮಾಡುತ್ತಿರುವದು ಬಹು ವ್ಯಕ್ತವಾಗದಿರದು. ಹುಬ್ಬಳ್ಳಿ—ಅಂಕೋಲೆಗಳ ಟಪ್ಪಾಲಿನ ಕಲಸದ ಅವಧಿಯು ಈಗ ಮುಗಿಯುತ್ತಾ ಬಂದಿದೆ. ಇನ್ನು ಮೇಲಾದರೂ ಇದೇ ಕಂಪನಿಗೇ ಈ ಕೆಲಸವನ್ನು ಒಪ್ಪಿಸುವದು ಉಚಿತವೆಂದು ಪೋಸ್ಟು ಖಾತೆಯವರಿಗೆ ಸೂಚನೆ ಇದೆ.

"ತಿಳಿದವ"

ಅದ್ವೈತ ಮಹಾಸಭೆ.

ತಾರೀಕು 21—12—27ರಲ್ಲು ಪುತ್ತೂರಲ್ಲಿ ಅದ್ವೈತ ಮಹಾಸಭೆಯು ಮಹೋಪಾಧ್ಯಾಯ ವಿದ್ಯಾವಾಚಸ್ಪತಿ ಬ್ರಹ್ಮಶ್ರೀ ಕುಪ್ಪುಸ್ವಾಮಿ ಶಾಸ್ತ್ರಿ ಯಂ. ಎ, ಐ ಇ. ಯಸ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ ಜಿಲ್ಲೆಯ ಎಲ್ಲಾ ಕಡೆಯಿಂದಲೂ ಮಹನೀಯರು ಬಂದದಲ್ಲದೆ ಇತರ ಕರಾಡ, ಕೋಟ, ಅಯ್ಯರ್ ವರ್ಗಕ್ಕೆ ಸೇರಿದ ಕೆಲವು ಬ್ರಾಹ್ಮಣ ಮಹನೀಯರೂ ದಯಮಾಡಿಸಿದ್ದರು. ಸಭೆಯು ಸುಮಾರು ಐದುನೂರು ಜನರಿಗಿಂತ ಮಿಕ್ಕಿತ್ತು. ಮದ್ರಾಸು ಸಂಸ್ಕೃತ ಕಾಲೇಜಿನ ಉಪಾಧ್ಯಾಯರಾದ ಶಿರೋಮಣಿ ವೇದಾಂತ ವಿಶಾರದ ರಾಮಚಂದ್ರ ದೀಕ್ಷಿತರು ಅದ್ವೈತವೆಂದರೆ ಐಕಮತ್ಯಸಾಧನೆಯ ಸಭೆಯೆಂದು ಅರ್ಥವಾಗುತ್ತದೆಂಬ ಮುಂತಾದ ಭಾಷಣಕೊಟ್ಟರಲ್ಲದೆ ಸಭೆಯ ಅಧ್ಯಕ್ಷರು ಸಭಿಕರನ್ನು ಕುರಿತು, ನಿಮ್ಮನ್ನು ನಿಷ್ಕಾರಣತ್ವೇನ ಕೆಲವು ಇತರ ವರ್ಗದ ಬ್ರಾಹ್ಮಣರು ಹಿಂದಕ್ಕೆ ತಳ್ಳುವದು ಅನ್ಯಾಯಕರವೆಂದೂ, ಆ ಸಂಗತಿಯು ತನಗೆ ಬಹು ವಿಷಾದಕರವಾಗಿ ಕಾಣುತ್ತದೆಂದೂ, ನಿಜವಾಗಿ ಯಾವ ವರ್ಗದವರು ಬ್ರಾಹ್ಮಣ ಪಂಗಡದವರೆನಿಸಿಕೊಳ್ಳುವರೋ ಅವರು ನಿಮ್ಮ ಅಭ್ಯುದಯಕ್ಕೆ ಸಹಕಾರಿಗಳಾಗುವದು ಅವರ ಸ್ವಾಭಾವಿಕ ಕರ್ತವ್ಯತೆಯೆಂದೂ, ನಿಮ್ಮನ್ನು ದೂಷೀಕರಿಸುವ ಯಾವ ಬ್ರಾಹ್ಮಣ ಪಂಗಡವುಂಟೋ ಅದು ಬರೇ ಮಾತ್ಸರ್ಯ ದ್ವೇಷಾಗಳನ್ನೊಳಗೊಂಡ ಪಂಗಡವೆಂದೂ, ಅದು ನಿಜವಾದ ಬ್ರಾಹ್ಮಣವರ್ಗವೆಂದು ಹೇಳುವದಕ್ಕೆ ಆ ಕಾರಣಗಳಿಂದ ಸ್ವಲ್ಪ ಅನುಮಾನ ಹುಟ್ಟುವದೆಂದೂ, ಜನಾಂಗದ ಅಭಿವೃದ್ಧಿಗೆ ಐಕ್ಯಮತ್ಯ, ವಿದ್ಯಾರ್ಜನೆಯೇ ಮುಖ್ಯಕಾರಣವೆಂದೂ, ಅದಕ್ಕೆ ಉತ್ಸಾಹವೇ ಪ್ರಬಲ ಕಾರಣವೆಂದೂ, ಆ ಉತ್ಸಾಹ ಕಾರಣವನ್ನು ಪ್ರತಿಯೊಬ್ಬ ಮೇಲುಬರನೂ ಕೈಕೊಳ್ಳಬೇಕೆಂದೂ, ಹಾಗೆ ಕೈಕೊಂಡಲ್ಲಿ ನಿಮಗೆ ಮುಂದಕ್ಕೆ ಒದವಿರೆ ಕೈಕೊಟ್ಟ ಶ್ರೀಮದ್ಭಗವತ್ಪಾದಾಚಾರ್ಯರಾದ ಶ್ರೀ ಶ್ರೀ ಶಂಕರ ಜಗದ್ಗುರುಗಳವರ ಪ್ರಸಾದದಿಂದ ಸ್ವಾಭಾವಿಕವಾಗಿ ಸದ್ಯದಲ್ಲೇ ನೀವು ಎಲ್ಲಾ ಪಂಗಡದ ಬ್ರಾಹ್ಮಣ ವರ್ಗಕ್ಕಿಂತ ಮುಂದೆ ಬರುವಿರೆಂದೂ ಮುಂತಾಗಿ ಸ್ವಾರಸ್ಯವಾದ ಭಾಷಣವನ್ನಿತ್ತರು. ಸಭೆಯು ಭೋಜನಾದಿ ಉಪಚಾರಗಳಿಂದ 3 ದಿನ ನಿರ್ವಿಘ್ನತೆಯಿಂದಲೂ, ಸಾಂಗದಿಂದಲೂ ಜರಗಿತು. ಈ ಸಭೆಯನ್ನು ವಿಜೃಂಭಣೆಯಿಂದ ನಡೆಸಲು ಅತ್ಯಧಿಕ ಉತ್ತೇಜನ ಕೊಟ್ಟು ನಡೆಸಿದ ಉಪಚಾರ ಸಮಿತಿಗೂ, ಸ್ವಯಂಸೇವಕರಿಗೂ ಉಪಚಾರ ಸಮಿತಿಯ ಅಧ್ಯಕ್ಷರಾದ ಶ್ರೀ ರಸಟಿಕ್ಕಿನ ಅಪ್ಪಾಜಿರಾಯರಿಗೂ ಪ್ರಧಾನಕಾರ್ಯದರ್ಶಿ ನಟಿಕ್ಕಿ ವೆಂಕಟರಾಯರಿಗೂ ಧನ್ಯವಂದನೆಗಳನ್ನಿತ್ತು ಸಭೆ ಮುಕ್ತಾಯಗೊಂಡಿತು.

ಬಿ. ವಿಷ್ಣುಮೂರ್ತಿ

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickapet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ. 52—31

National Swords and Silver Belts (Thodanga) For "Scotland of India,"

ಸಂಪ್ರದಾಯಕವಾಗಿ ಧರಿಸಲ್ಪಟ್ಟ ಒಟ ಕತ್ತಿ ಯೂನಿಫಾರಂ 'ರೀತಿ ಉಡುಗರ್ಗಳು, ಒಬಗೆ ತ್ತಿ ಆರಿಸಲ್ಪಟ್ಟ "ಒಬ್ಬ ಲೆಕ್ಟ್ ಒಟ ಯೂನಿಫಾರಂ ಕಡೆ ಯಾತ ವಿಸ್ಮಯಗೊಳ್ಳುತ್ತೀರಿ? ನಮ್ಮ ಗಂ ಯಿಂದ ಶೃಂಗರಿಸಲ್ಪಟ್ಟ ಕಲಗ ನಮ್ಮಲಾಗುವದೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ಮತ್ತು ಅದರ ಕತ್ತಿ ಸೊಂಟದ ಒದಿಯಲ್ಲಿ ಚಿನ್ನದ ಹಿಡಿಯ ಪೀಚೆಕತ್ತಿ. ಇವುಗಳಿಗೆ ತಕ್ಕ ಬೆಳ್ಳಿಯ ಸರಪಣಿ (ಉಮ್ಮತ) ಲೇಸ್ಲ ಮತ್ತು ವಲಾವಟ್ಟು ಪಟ್ಟಿ ಇದಲ್ಲವೇ ನಿಮ್ಮ ಗೌರವ? ಕಾನಾರ್, ರಿಕ್ಕರ್, ಬ್ರಾನ್ ಮೊದಲಾದವರೇ ಸದರಿ ವಿಷಯ ವಿನನ್ನು ವರು ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿಮ್ಮ ಹಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರಿವೆ. ಹೆಚ್ಚಿನ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದುಕೊಳ್ಳಿ.

Commercial Store,
Murnad, Coorg

12–1

Arms, Ammunition and Shooting Requisites !!!



1928 Illustrated Catalogue Just Issued Free on Application!

D B B L Rifles	Rs	120	to	Rs	2750
S B B L	,	35	to	"	950.
D B B L Guns	"	50	to	,	1350
S B B L. "	,	35	to		275.
D B M L "	"	45	to		135
S B M L "	"	30	to	"	80
B L Revolvers	"	35	to	"	350
Automatic Pistols	"	30	to	"	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

24–12 210 Abdul Rehman Street, BOMBAY.

ಕಾಪಿನಾದ

ಬ್ಲಾಂಕೆಟ್ಟುಗಳು.

ಛಳಿ ಮತ್ತು ಶೀತ
ಕಾಲಗಳಲ್ಲಿ ಆರೋಗ್ಯವನ್ನು
ಕಾಪಾಡುವುದಕ್ಕೆ ಕಾಪಿನಾದ
ಬ್ಲಾಂಕೆಟ್ಟು ಪರಮಾವಶ್ಯಕವಾದದ್ದು.

ಕಾಕಿ ಬಣ್ಣದ ಕಾಪಿನಾದ
ನಮ್ಮ ಬ್ಲಾಂಕೆಟ್ಟನ್ನು ತರಿಸಿಕೊಳ್ಳಿರಿ.
ವರ್ಷಾನಂತರ ಬಾಳಿಕೆ ಬರುತ್ತದೆ.

ರೂ. ೧೨—೮—೦ ಮಾತ್ರ.

(ಪೋಸ್ಟು ಚಾರ್ಜು ಬೇರೆ)

ಬಿ. ಅದೆಪ್ಪ, ಸನ್ಸ್ ಅಂಡ್ ಕೋ., ಲಿಮಿಟೆಡ್,
ಬೆಂಗಳೂರು ಸಿಟಿ

12—11

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು **1897.**

1927ನೇ ಇಸವಿ ಡಿಸೆಂಬರ್ 26ಕ್ಕೆ ಆಖೈರಾದ 5 ವರ್ಷಗಳ ಕೆಲಸದ

ಬೆಲೆಕಟ್ಟಿದಲ್ಲಿ
ರೂ. 37,06,689.
ಹೆಚ್ಚು ಕಂಡುಬಂದಿದೆ

ಒಟ್ಟು ಜೀವವಿಮೆಯ 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಗಳಂತೆಯೂ	ಮತ್ತು	ಪ್ರಾಯ ನಿರವಿನ ವಿಮೆಯ 1000 ರೂಪಾಯಿಗಳಿಗೆ 12 ರೂಪಾಯಿಗಳಂತೆಯೂ

ರಿವರ್ಶನರಿ ಬೋನಸ್ ಹಂಚ ಬಹುದೆಂತ ತೀರ್ಮಾನವಾಗಿದೆ.

ಹೆಡ್ ಆಫೀಸ್
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್ಸ್, ಬೊಂಬಾಯಿ.

24–21

ಬ್ರಾಂಚ್ ಆಫೀಸು.
ಇಂಪೀರಿಯಲ್ ಬೀದಿ
ಬೆಂಗಳೂರು.

ಡಿ. ಬಿ. ಬಿ. ಯಲ್. ಕೋವಿಗಳು ರೂ. 75 ರಿಂದ ರೂ. 150
ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. 250
ಯಸ್. ಬಿ. ಯಮ್. ಯಲ್. ಕೋವಿಗಳು ರೂ. 35 ರಿಂದ ...
ರಿವಾಲ್ವರ್‌ಗಳು. ರೂ. 40 ರಿಂದ ರೂ. 125 ರ ವರೆಗೆ

ಡಬ್ಬಲ್ ಮತ್ತು ಸಿಂಗಲ್ ಕೋವಿಗಳು ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—4 12. ಬ್ರಾಡ್ವೇ, ಮದ್ರಾಸ್.

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

ಛಟಿಕಷಾಯ ಮಾತ್ರೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನ ಬಿಟ್ಟು ದಿನ ಬರುವ 2–4 ದಿವಸಕ್ಕೊಂದು ಸಾರಿ ಬರುವ ಜ್ವರ ... ಬರುವ ಜ್ವರ, ವಿಷ ಜ್ವರಗಳಿಗೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತವೆ ... ರೂ. 1—... 3ಕ್ಕೆ ರೂ. 4—0—0 6ಕ್ಕೆ ರೂ. 7—8—0, 12ಕ್ಕೆ ರೂ. 14

ಕೇಂದನ-ಸೆವ್—ಇದು ಪ್ರಮೇಹ ಮತ್ತು ಕಚ್ಚಿ ಮೂತ್ರ ... ಮೂತ್ರಕೋಶದ ... ಮೂತ್ರನಾಳದಲ್ಲಿ ಹುಣ್ಣು, ... ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ... ಹೋಗುವದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ... ಉರಿ ... ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ... ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1—...—0, 3—...—0, 6—12—0

ಬೋಳಮಾಂನಾಶಿನಿ:—ಈ ... ಬಹು ... ರೋಮವು ... ಡಪ್ಪಿ 1ಕ್ಕೆ 6 ಆಣೆ 3 ಡಪ್ಪಿಗಳಿಗೆ ರೂ. 1 1 ದಜನಿಗೆ 3—8—0

ಮನೋಲ್ಲಾಸಿನಿ ತೈಲ:—... ತಲೆನೋವು, ... ತಲೆ ತಿರುಗುವುದು, ... ಕಣ್ಣು ... ಅಪಸ್ಮಾರ ... ನಿದ್ದೆ ಬಾರದಿರುವುದು ... ಈವುಗಳೆಲ್ಲ ... ಕೂದಲನ್ನು ... ಕೂದಲನ್ನು ... ಹೊಸ ಕೂದಲನ್ನು ಹುಟ್ಟಿಸುತ್ತದೆ ... ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—6—0,

ನಮ್ಮ ಕೆಟಲಾಗು ತರಿಸಿ ನೋಡಿರಿ.

52—13

ಏಜಂಟ್—ಮನೋಲ್ಲಾಸಿನಿ ಕಂಪೆನಿ
9. ಮಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮೂಬಂದ ಠೇವಣಾತಿ	—	1,01 914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಕಡಿಮೆ ಬಡ್ಡಿಗೆ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟೀರ ತಿಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1926.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮೆ. ಪೇರಿಯಂಡ ಪೂವಯ್ಯನವರನ್ನೂ ಮತ್ತು ಮೆ. ಕಾಳೇಂಗಳ ಚಿಣ್ಣಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ, ಮೆ. ಪಾರುವಂಗಡ ಅಚ್ಚಯ್ಯನವರು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,

ಅಮ್ಮತ್ತಿ ಸಿದ್ದಾಪುರ—ಮೆ. ಐಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ ಮುದ್ದಪ್ಪಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ ಮಾದಪ್ಪಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
'ಕೊಡಗು' ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3

Telegraphic Address:—"SHOOTER" Bombay.

[32—17] 'Please write for Reduced net prices list for 1927—1928

ಆಲ್ ಇಂಡಿಯಾ ಮ್ಯೂಚ್ಯುಯಲ್ ಏಡ್ ಅಂಡ್ ಪ್ರೂವರ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು (ದ. ಇಂಡಿಯಾ.)

ಚೀಫ್ ಏಜನ್ಸಿ—ಮಡಿಕೇರಿ (ಕೊಡಗು.)

ನೋಟೀಸು.

ಮೇಲ್ಕಂಡ ಸಂಘವು ಕಳೆದ ತಿಂಗಳು 13ನೇ ತಾರೀಖಿನ ದಿವಸ 1913ನೇ ಇಸವಿ ಇಂಡಿಯನ್ ಕಂಪನೀಸ್ ಏಕ್ಟ್ 277ನೇ ಸೆಕ್ಷನ್ ಪ್ರಕಾರ ಕೊಡಗು ಗವರ್ನಮೆಂಟಿನಲ್ಲಿ ರಿಜಸ್ಟರಾಗಿದೆ. ಈ ಕೊಡಗು ದೇಶದಲ್ಲಿ ಈ ಸಂಘಕೋಸ್ಕರ ವಸೂಲಾಗತಕ್ಕ ಫಂಡಿನ ಮತ್ತು ಸಂಘದ ಕಾರ್ಯಗಳ ಮೇಲ್ವಿಚಾರಣೆ ಬಗ್ಗೆ ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳು ಕೊಡಗು ದೇಶದ ಡೈರೆಕ್ಟರುಗಳಾಗಿ ನೇಮಿಸಲ್ಪಟ್ಟಿದ್ದಾರೆ.

ಕೊಡಗು ದೇಶದ ಡೈರೆಕ್ಟರುಗಳು.

1 ರಾವ್‌ಸಾಹೇಬ್ ಪಿ. ಡಿ. ದೇವಯ್ಯನವರು.— ರಿಟಯರ್ಡ್ ಪೋಲೀಸ್ ಡಿಪ್ಟಿ ಸುಪರಿನ್‌ಟೆಂಡೆಂಟರು, ಮತು ಚೇರ್‌ಮ್ಯಾನ್ ಆಫ್ ಬೆಂಚ್ ಮೇಜಿಸ್ಟ್ರೇಟ್ ಕೋರ್ಟ್, ಮಡಿಕೇರಿ, (ಕೊಡಗು.)

2 ರಾವ್‌ಸಾಹೇಬ್ ಕೆ. ಸುಬ್ಬಯ್ಯನವರು, ಪ್ಲೀಡರ್, ಮಡಿಕೇರಿ, (ಕೊಡಗು.)

3 ಮೆ|| ಪಿ. ಬಿ. ಮೇದಪ್ಪನವರು, ಬಿ. ಎ. ಬಿ. ಎಲ್., ಹೈಕೋರ್ಟ್ ವಕೀಲ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರು, ಮಡಿಕೇರಿ. (ಕೊಡಗು.)

4 ಮೆ|| ಯಂ. ಅಪ್ಪಯ್ಯನವರು, ಕಾಫಿಪ್ಲಾಂಟರ್ ಮತ್ತು ಗೌರವ ಮೇಜಿಸ್ಟ್ರೇಟ್, ಸೋಮವಾರಪೇಟೆ.

5 ಮೆ|| ಪಿ. ಯಂ. ಚಿಣ್ಣಪ್ಪನವರು, ಮೇನೇಜರ್, ಮೆಜರ್ಸ್ ಸ್ಪೆನ್ಸರ್ ಕಂಪೆನಿ ಲಿಮಿಟೆಡ್, ಮಡಿಕೇರಿ.

6 ಮೆ|| ಯಂ. ಸಿ. ಬಿದ್ದಯ್ಯನವರು, ಕಾಫಿಪ್ಲಾಂಟರ್, ಚೌಡಿರೇಂಜ್, ಸಿದ್ದಾಪುರ, (ಕೊಡಗು.)

7. ಮೆ|| ಪಿ. ಎ. ಮಂದಪ್ಪನವರು, ಮೇನೇಜರ್, ಮೆಜರ್ಸ್ ಮೆಕ್ಡೋನೆಲ್ ಕಂಪೆನಿ ಲಿಮಿಟೆಡ್, ಮಡಿಕೇರಿ.

ಇದೇ ಪತ್ರಿಕೆಯ 5—8—1927ನೆ ತಾರೀಖಿನ ಸಂಚಿಕೆಯಲ್ಲಿ ಕಂಡ ಮೇರೆ ಶೇರುಗಳು ತೆಗೆದುಕೊಳ್ಳಲ್ಪಟ್ಟಿರುವುದು. ಅಲ್ಲದೆ ಈಚೆಗೆ ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳು ಅವರವರ ಹೆಸರಿನ ಮುಂದುಗಡೆ ಕಾಣಿಸಿರುವಂತೆ ಶೇರುಗಳನ್ನು ಮತ್ತು ಬಾಂಡುಗಳನ್ನು ತೆಗೆದುಕೊಂಡಿರುತ್ತಾರೆ.

ಹಿಂದೆಯೇ ಪ್ರಸಿದ್ಧಪಡಿಸಿರುವಂತೆ ಸಂಘದ ರೂಲ್ಸ್ ಪ್ರಕಾರ ಈ ಕೊಡಗು ದೇಶದಲ್ಲಿ ವಸೂಲಾಗುವ ಫಂಡು ಕೊಡಗು ಸರ್ಕಾರದಲ್ಲಿ ಇಡಲ್ಪಡುವ ವರೆಗೆ ಮಡಿಕೇರಿಯಲ್ಲಿರುವ ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನಲ್ಲಿ ಖಾಯಂ ಡಿಪಾಜಿಟ್ಟಾಗಿ ಇಡಲ್ಪಡುತ್ತಾ ಇದೆ.

ಬೇಕಾಗಿದೆ.

ಕೊಡಗು ದೇಶದ ಪ್ರತಿ ಒಂದು ಮುಖ್ಯ ಪಟ್ಟಣದಲ್ಲಿಯೂ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರುಗಳು ಕಮಿಷನ್ ಮೇಲೆ ಬೇಕಾಗಿವೆ. ಇಷ್ಟವುಳ್ಳವರು ಪ್ರಸಿದ್ಧ ಪತ್ರಿಕೆಗೂ ಮತ್ತು ಇತರ ವಿಷಯಗಳಿಗೂ ಈ ಕೆಳಗೆ ಕಂಡ ವಿಳಾಸಕ್ಕೆ ಬರೆಯುವುದು.

ಮಡಿಕೇರಿ. ತಾ. 6—10—27 52—48

ಟಿ. ಎ. ಕುಪ್ಪಸಾಮಿಪಿಳ್ಳೆ.
ಕೊಡಗು ದೇಶದ ಚೀಫ್ ಏಜಂಟರು.

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,03,000.
	1925	ರೂ.	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000.

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ. 7,38,80,000ಗೆ ಹೆಚ್ಚಿರುತ್ತದೆ.

ಪ್ರೀಮಿಯಂ ವರಮಾನವು ವರ್ಷಕ್ಕೆ ರೂ. 1,05,30,000ಗೆ ಏರಿರುತ್ತದೆ.

"ಓರಿಯಂಟಲಿನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್. ಎಫ್. ಎಫ್. ಎ., ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶವಿಲ್ಲದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.   52—38

ಎಲ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರೆಟರಿ.

ನೈಟ್ರೇಟ್ ಆಫ್ ಸೋಡಾ.

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ.

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು 15—16% ಅಂದರೆ ಏನು ವಾ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ 3 ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದುವುಗಳೂ ಕಾಫಿ, ಚಾ, ರಬ್ಬರು, ಯಾಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಏನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವುದು ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿಕೊಡುತ್ತದೆ. ಈ ಗೊಬ್ಬರವು ನೋಡಲಿಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100—200 ರಾತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿ ಸುಧಾರಣೆ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

ನೈಟ್ರೇಟ್ ಆಫ್ ಸೋಡವು 80 ಪೌಂಡುಗಳ ಪ್ಯಾಕೆಟಿನಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ದೊರೆಯುವವು.

ಮೆಜರ್ಸ್ ಪ್ಯಾರಿ ಅಂಡ್ ಕೊ., ಮಡಿಕೇರಿ.

ಮೆಜರ್ಸ್ ಪ್ಯಾರಿ ಅಂಡ್ ಕೊ., ವೀರಾಜಪೇಟೆ

or A. S Rao Esq, Near Post office, Mangalore.

Chilean Nitrate Committee, Post Box 469, Calcutta

24—20

Printed & published by P. I. Belliappa, at "Kodagu" Press, Mercara for "Kodagu" Ltd

Reg. No. M. 1650. Pay

If not delivered please return to

"KODAGU" OFFICE. MERCARA

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಗುಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೭] ಮಡಿಕೇರಿ, ಸಾ॥ ೧೯೨೮ನೇ ಇಸವಿ ಜನವರಿ ತಾರೀಕು ೧೩ ನೇ ಶುಕ್ರವಾರ [ಸಂಚಿಕೆ ೩೦

MESSERS SPENCER & CO. LTD.

WISH THEIR NUMROUS CONSTITUENTS

A BRIGHT AND PROSPEROUS NEW YEAR.

52—50 SPENCER & CO., LTD., General Merchants. MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423
TRIPLICANE, MADRAS

Catalogue Free
to Bonafide Enquirers

Rose Water Sprinkler.


Nose screws Claver Drops. Thodu. Brooch

Chased Silver Mirror.

Manufacturer of
HIGH CLASS
GEMSET JEWELS
a speciality.

The special features
of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices.

GOLD
or
SILVERWARE
of all descriptions
neatly executed

52—18

Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,
Bombay, 3.

24—18

ಮಲೇರಿಯಾ ಇನ್‌ಫ್ಲುಯೆಂಝಾ ನಾನಾಕಜ್ವರ ಅಡಪಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿ ಇದರಿಂದ ಮಲಶುದ್ಧಿಯಾಗಿ ಬೇಗನೆ ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ. ೧—೦—೦ ಟಪ್ಪಾಲು ವೆಚ್ಚ ಬೇರೆ.

12—1

ಕರ್ನಾಟಕ ಫಾರ್ಮಸಿ,
ದುಬಾಷ್ ಲೇನ್,
ಗಿರಗಾಂವ, ಮುಂಬಾಯಿ.

ಕೊಡಗು

ಸ. ೧೯೨೭ನೇ ಇಸವಿ ಜನವರಿ
ತಾ. ೧೪ನೇ ಶುಕ್ರವಾರ

ಇಂಡಸ್ಟ್ರಿಯಲ್ ಕಾಂಗ್ರೆಸ್.

ಹಿಂದುಸ್ಥಾನದ ರಾಜಕೀಯ ಪಕ್ಷಗಳ ವಿಷಯ ಚರ್ಚಿಸಲು ನೇಶನಲ್ ಕಾಂಗ್ರೆಸ್ ಮದ್ರಾಸಿನಲ್ಲಿ ಸೇರಿದ ವಾರವೇ ಹಿಂದುಸ್ಥಾನದ ಆರ್ಥಿಕ ಸ್ಥಿತಿಗೆ ಕಾರಣವಾದ ಕೈಗಾರಿಕೆ ಮತ್ತು ವ್ಯಾಪಾರ ಸಂಬಂಧದ ವಿಷಯಗಳನ್ನು ಚರ್ಚಿಸಲು ಒಂದು ಸಭೆಯು ಮದ್ರಾಸಿನಲ್ಲಿ ಸೇರಿತ್ತು. ಇದು ಇಂಡಸ್ಟ್ರಿಯಲ್ ಕಾಂಗ್ರೆಸಿನ 5ನೇ ಕಾನ್ಫರೆನ್ಸ್ ಆಗಿದೆ. ಈ ಸಭೆಯ ಅಧ್ಯಕ್ಷರಾಗಿದ್ದ ಬೊಂಬಾಯಿಯ ಸರ್ ಇಬ್ರಾಹಿಂ ರಹೀಮ್‌ತುಲ್ಲಾರವರು ಬ್ರಿಟಿಷ್ ಆಡಳಿತದ ವಿಷಯ ಹೇಳುವ ಮಾತುಗಳನ್ನು ಕೇಳಿಯಾದರೂ, ಸಂಶಯಗ್ರಹಸ್ಥರು ಯಾರಾದರೂ ಇದ್ದರೆ ಅವರೂ ಸಹ ಹಿಂದುಸ್ಥಾನದ ಸ್ವತಂತ್ರಕ್ಕೆ ಹೋರಾಡಲು ನಿಶ್ಚಯಿಸಬಹುದೆಂತ ತೋರುತ್ತದೆ. ಇವರು ಅಸಹಕಾರಿಗಳಲ್ಲ. ಇವರಿಗೆ ಬ್ರಿಟಿಷ್ ಸರಕಾರವು ಕೊಟ್ಟಿರುವ 'ಸರ್' ಟೈಟಲನ್ನು ಇಟ್ಟುಕೊಂಡಿದ್ದಾರೆ. ಒಮ್ಮೆ ಬೊಂಬಾಯಿ ಸರಕಾರದ ಎಗ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾಗಿದ್ದರು.

"ಹಿಂದುಸ್ಥಾನದಲ್ಲಿ ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ನಿರತರಾಗಿದ್ದವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತಿದ್ದರೆ ದೇಶಕ್ಕೆ ಸಹಾಯ ಮಾಡಿದಂತಾಯಿತೆಂತ ತಿಳಿದಿದ್ದ ಸಮಯವಿತ್ತು. ಆದರೆ ಈಗ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಈ ಕಸಬುಗಳಲ್ಲಿ ಇರುವವರು ಒಗ್ಗಟ್ಟಾಗಿ ತಮ್ಮ ಸಮಯದ ಸ್ವಲ್ಪ ಭಾಗದಲ್ಲಾದರೂ ದೇಶದ ಹಿತಕ್ಕಾಗಿ ಕೆಲಸ ಮಾಡಬೇಕೆಂತ ತಿಳಿದಿದ್ದಾರೆ. ಹಿಂದುಸ್ಥಾನವನ್ನು ಬೇರೆ ಬೇರೆ ಪ್ರಾಂತ್ಯಗಳಾಗಿ ವಿಂಗಡಿಸಿರುವದು ಒಳ್ಳೇ ರಾಜ್ಯಾಡಳಿತೆಗೆ ಮಾತ್ರ. ಆರ್ಥಿಕ ಬೆಳವಣಿಗೆಯಲ್ಲಿ ಪ್ರಾಂತ್ಯಗಳೊಳಗೆ ಹೋರಾಟ ಇರಲು ಕಾರಣವಿಲ್ಲ. ಆರ್ಥಿಕ ವಿಷಯದಲ್ಲಾದರೂ ಒಟ್ಟು ಹಿಂದುಸ್ಥಾನದ ಶ್ರೇಯಸ್ಸೇ ನಮ್ಮ ಧ್ಯೇಯವಾಗಿರಬೇಕು,' ಎಂಬ ಮಾತುಗಳಿಂದ [illegible] ಸಾರ್ವಜನಿಕ ಕಾರ್ಯದಲ್ಲಿ ಕೈಹಾಕಬೇಕೆಂತಲೂ, ಪ್ರಾಂತ್ಯಗಳು ತ[illegible] ಅಧ್ಯಕ್ಷರು ಹೇಳಿದ್ದಾರೆ.

ಬ್ರಿಟನ್ನಿನವರು ಹಿಂದುಸ್ಥಾನವನ್ನು ತಮ್ಮ ಸ್ವಾಧೀನಪಡಿಸಿಕೊಂಡಿರುವದು ಹಿಂದುಸ್ಥಾನದ ಉದ್ಧಾರಕ್ಕಾಗಿ ಅಲ್ಲ. ತಮ್ಮ ಕೈಗಾರಿಕೆಯಿಂದ ತಯಾರಾದ ಸಾಮಾನುಗಳನ್ನು ಮಾರಾಟಮಾಡಲಿಕ್ಕಾಗಿಯೇ ಇಟ್ಟುಕೊಂಡಿದ್ದಾರೆಂದು ಚರಿತ್ರೆಯ ಮತ್ತು ಈಗಿನ ನಡವಳಿಕೆಯ ಆಧಾರದಿಂದ ನಿದರ್ಶಿಸಿದ್ದಾರೆ. 'ಇಂಗ್ಲೆಂಡಿನಲ್ಲಿ ಯಂತ್ರಗಳ ಉಪಯೋಗದಿಂದ ಕೈಗಾರಿಕೆ ಬೆಳೆದಾಗ ಅದರಿಂದ ಇಂಗ್ಲೆಂಡಿಗೆ ಪ್ರಯೋಜನವಾಗುವ ಒಗ್ಗೆ ತನ್ನ ಸಾಮ್ರಾಜ್ಯವನ್ನು ಬೆಳೆಸಿತು. ಇಂಗ್ಲೆಂಡಿನಂತೆಯೇ ಜರ್ಮನಿಯೂ ತನ್ನ ಕೈಗಾರಿಕೆ ವಸ್ತುಗಳಿಗೆ ಮಾರ್ಕೆಟ್ ಹುಡುಕಲು ಹತ್ತಿದ್ದರಿಂದಲೇ ಕಳೆದ ಘೋರ ಯುದ್ಧ ನಡೆಯಿತು. ಯುದ್ಧದ ಪೆಟ್ಟಿನಿಂದ ಪ್ರಪಂಚದ ಸಂಪತ್ತು ಕಡಿಮೆಯಾದ್ದರಿಂದ ಬ್ರಿಟನಿನಲ್ಲಿ ತಯಾರಾಗುವ ಹೆಚ್ಚು ಬೆಲೆಯ ಉತ್ತಮ ತರದ ಸಾಮಾನುಗಳಿಗೆ ಮಾರ್ಕೆಟ್ ಇಲ್ಲದಂತಾಗಿ ಇಂಗ್ಲೆಂಡಿನಲ್ಲಿ ಕೆಲಸವಿಲ್ಲದ ಜನರು ಹೆಚ್ಚಾದರು. ಈ ಮೊದಲೇ ಹಿಂದುಸ್ಥಾನದ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡಿದ್ದರೆ ಇಂಗ್ಲೆಂಡಿಗೆ ಈಗ ಕಷ್ಟ ಬರುತ್ತಿರಲಿಲ್ಲವೆಂತ ವಿವರಿಸಿ ಬ್ರಿಟನ್ನಿನವರು ತಮ್ಮ ಸ್ವಾರ್ಥತೆಯಿಂದಲಾದರೂ ಹಿಂದುಸ್ಥಾನದವರನ್ನು ಬಡವರಾಗಿ ಮಾಡುವದರ ಬದಲು ಐಶ್ವರ್ಯವಂತರನ್ನಾಗಿ ಮಾಡಬೇಕಿತ್ತು. ಐಶ್ವರ್ಯವಂತರಾಗಿದ್ದಿದ್ದರೆ ಇಂಗ್ಲೆಂಡಿನ ಉತ್ತಮ ವಸ್ತುಗಳನ್ನು ಹಿಂದೀಯರು ಕೊಂಡುಕೊಳ್ಳಲು ಶಕ್ತಿಯುಳ್ಳವರಾಗಿರುತ್ತಿದ್ದರು,' ಎಂತ ಹೇಳಿದ್ದಾರೆ.

'ಬ್ರಿಟಿಷರು ಹಿಂದುಸ್ಥಾನಕ್ಕೆ ವ್ಯಾಪಾರಿಗಳಾಗಿಯೇ ಬಂದರು. 1857ರಲ್ಲಿ ವ್ಯಾಪಾರಿಗಳ ಕೈಯಿಂದ ರಾಣಿಯವರ ಕೈಗೆ ಆಡಳಿತ ಹೋಯಿತೆಂತ ತೋರಿಕೆಗಾದರೂ ಆಡಳಿತವು ಕಂಪೆನಿಯ ಡೈರೆಕ್ಟರ್‌ನಿಂದ ತಪ್ಪಿ ಕೌನ್ಸಿಲಿನಿಂದ ಯುಕ್ತರಾದ ಸೆಕ್ರೆಟರಿಯವರ ವಶಕ್ಕೆ ಹೋಯಿತು. ಈ ಸಂಸ್ಥೆಯು ಬ್ರಿಟನ್ನಿನ ವ್ಯಾಪಾರದ ಮತ್ತು ಕೈಗಾರಿಕೆಯ ಧನಿಕರ ಅಧೀನವಾಗಿದೆ. ಆದ್ದರಿಂದ ಹಿಂದುಸ್ಥಾನವು ಇವರ ಪ್ರಯೋಜನಕ್ಕಾಗಿ ಆಳಲ್ಪಡುತ್ತಿದೆಯೇ ಹೊರತು ಹಿಂದುಸ್ಥಾನದ ಜನರ ಉದ್ಧಾರಕ್ಕಾಗಿ ಆಳಲ್ಪಡುತ್ತಿದೆಯೆಂದು ಆಗಿಂದಾಗ್ಗೆ ಹೇಳಿಕೊಳ್ಳುತ್ತಿರುವದು ಒಳ್ಳೇ ಕಣ್ಣುಕಟ್ಟಿನ ಮಾತೆಂತ' ಸ್ಪಷ್ಟವಾಗಿ ಹೇಳಿದ್ದಾರೆ. ಈ 'ಜನರ ಉದ್ಧಾರಕರ' ಉದ್ದೇಶವು ಹಿಂದುಸ್ಥಾನದಿಂದ ಸಾಧ್ಯವಿದ್ದಷ್ಟು ತೆರಿಗೆಗಳನ್ನು ವಸೂಲ್ ಮಾಡುವದೂ, ತಮ್ಮ ವ್ಯಾಪಾರ ವಸ್ತುಗಳನ್ನು ಇಲ್ಲಿ ಮಾರುವದೂ ಮಾತ್ರವಾಗಿರುವಂತೆ ಕಾಣುತ್ತದೆ. ದೇಶದ ಜನರ ಆರ್ಥಿಕ ಬೆಳವಣಿಗೆಗೆ ಸರಕಾರವು ಎಳ್ಳಷ್ಟು ಗಮನ ಕೊಟ್ಟಿರುವದಿಲ್ಲ. 'ಈಗಲಾದರೂ ಹಿಂದುಸ್ಥಾನದ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡಿದರೆ ಬ್ರಿಟನ್ನಿನ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡಿದಂತಾದೀತೆಂತ' ಸರ್ ಇಬ್ರಾಹಿಮರು ಕೇಳಿಕೊಂಡಿದ್ದಾರೆ. ಇವರ ಮಾತುಗಳೇ ಸ್ಪಷ್ಟವಾಗಿರುವದರಿಂದಲೂ, ಎಲ್ಲರೂ ಒಪ್ಪತಕ್ಕವುಗಳಾಗಿರುವದರಿಂದಲೂ ನಾವು ಹೆಚ್ಚಿಗೆ ಏನೂ ಸೇರಿಸಬೇಕಾಗಿಲ್ಲ.

ಹಿಂದುಸ್ಥಾನದ ಆರ್ಥಿಕ ಸ್ಥಿತಿಯು ಬೆಳೆಯುತ್ತಿಲ್ಲವೆಂಬದಕ್ಕೆ ಜಪಾನಿನ ವ್ಯಾಪಾರದ ಬೆಳವಣಿಗೆಗೆ ಹೋಲಿಸಿರುತ್ತಾರೆ. 1915–16ರಲ್ಲಿ ಹಿಂದುಸ್ಥಾನಕ್ಕೆ ಪರದೇಶಗಳಿಂದ 150 ಕೋಟಿ ರೂಪಾಯಿಯ ವಸ್ತುಗಳು ಬಂದಾಗ ಜಪಾನಿಗೆ 66 ಕೋಟಿ ರೂಪಾಯಿಯ ಸಾಮಾನು ಬಂದಿತ್ತು. 1924-25ರಲ್ಲಿ ಹಿಂದುಸ್ಥಾನಕ್ಕೆ ಬಂದ ವಸ್ತುಗಳ ಕ್ರಯ ರೂ. 352 ಕೋಟಿಗೆ ಮಾತ್ರ ಏರುವಾಗ ಜಪಾನಿಗೆ ಬಂದ ವಸ್ತುಗಳ ಕ್ರಯ ರೂ. 321 ಕೋಟಿಗೆ ಏರಿದೆ. 1915ರಲ್ಲಿ ಹಿಂದುಸ್ಥಾನದಿಂದ ರಫ್ತು ಆದ (ಹೊರಗೆ ಹೋದ) ವಸ್ತುಗಳ ಕ್ರಯ ರೂ. 199 ಕೋಟಿ ಇದ್ದದ್ದು 1924–25ರಲ್ಲಿ 400 ಕೋಟಿಗೆ ಏರುವಾಗ ಜಪಾನಿನ ರಫ್ತು 1915ರಲ್ಲಿ 88 ಕೋಟಿ ರೂಪಾಯಿ ಇದ್ದದ್ದು 1925ರಲ್ಲಿ 288 ಕೋಟಿ ರೂಪಾಯಿಗೆ ಏರಿದೆ. ಇಂಡಿಯಾದ ಆಮದು ವ್ಯಾಪಾರವು ಶೇಕಡ 133ರಷ್ಟು ಏರುವಾಗ ಜಪಾನಿನ ಅದೇ ವ್ಯಾಪಾರವು ಶೇಕಡ 500ರಷ್ಟು ಏರಿದೆ. ರಫ್ತು ವ್ಯಾಪಾರವು ಇಂಡಿಯಾದಲ್ಲಿ ಶೇಕಡ 100 ರಷ್ಟು ಮಾತ್ರ ಏರುವಾಗ ಜಪಾನಿನಲ್ಲಿ ಶೇಕಡ 300 ರಷ್ಟು ಏರಿದೆ. ಜಪಾನಿನಲ್ಲಿ ಹಿಂದುಸ್ಥಾನದ 5ನೇ ಒಂದು ಭಾಗದಷ್ಟು ಮಾತ್ರ ಜನಸಂಖ್ಯೆ ಇದೆಯೆಂಬದನ್ನು ನೆನಪಿನಲ್ಲಿಡಬೇಕು. ಹಿಂದುಸ್ಥಾನದಲ್ಲಿ ಪ್ರಯತ್ನ ಮಾಡಿದರೆ ಸಂಪತ್ತಿನ ಸಾಧನಗಳು ಜಪಾನಿಗಿಂತ ಎಷ್ಟೋ ಹೆಚ್ಚು ಇವೆ. ಆದರೆ ಅವುಗಳನ್ನು ಉಪಯೋಗಿಸಿಕೊಳ್ಳದೆ ಇರುವದೇ ಹಿಂದುಸ್ಥಾನ[illegible] ಇರಲು ಕಾರಣವಾಗಿದೆಯೆಂತ ಸರ್ ಇಬ್ರಾಹಿಮರು [illegible] ಸೂಚಿಸಿರುತ್ತಾರೆ.

ಹಿಂದುಸ್ಥಾನದ ಸರಕಾರವು ಕೈಗಾರಿಕೆ, ರಸ್ತೆ, ನಾಣ್ಯ, [illegible], ಕೃಷಿ ಮುಂತಾದ ವಿಷಯಗಳನ್ನು ಕುರಿತು ತನಿಖೆ ಮಾಡಲಿಕ್ಕೆ ಆಗಿಂದಾಗ್ಗೆ ಕಮಿಶನ್‌ಗಳನ್ನು ನೇಮಿಸುತ್ತದೆ. ಆದರೆ ಅವುಗಳಿಂದ ಪ್ರಯೋಜನವಾಗುವುದಿಲ್ಲವೆಂತಲೂ, ಎಲ್ಲಾ ವಿಷಯಗಳನ್ನು ಒಂದೇ ಸಾರಿ ವಿಚಾರಿಸಬೇಕೆಂತಲೂ, ಅಂಥಾ ಕಮಿಶನ್‌ಗಳಲ್ಲಿ ಬ್ರಿಟಿಷ್ ಮೆಂಬರುಗಳ ಸಂಖ್ಯೆ ಹೆಚ್ಚಿರಬಾರದೆಂತಲೂ, ಕಮಿಶನ್‌ಗಳ ಅಧ್ಯಕ್ಷರು ಹಿಂದೀಯರೇ ಆಗಿರಬೇಕೆಂತಲೂ, ಕಮಿಶನ್‌ಗಳ ಶಿಫಾರಸ್ಸುಗಳನ್ನು ಸರಕಾರವು ಜಾರಿ ಮಾಡಬೇಕೆಂತಲೂ, ಈ ವರೆಗೆ ಹೀಗೆ ನಡೆಯುತ್ತಿಲ್ಲವೆಂತಲೂ ಅಧ್ಯಕ್ಷರು ಅಂದಿದ್ದಾರೆ. ಈಗಿನ ವೈಸ್‌ರಾಯರು ಬರೆದ ಪುಸ್ತಕದಲ್ಲಿರುವ ಪಟ್ಟಿಗಳನ್ನೇ ಆಧಾರವಾಗಿ ತೋರಿಸಿರುತ್ತಾರೆ. ಒಂದು ದೇಶದ ಕೈಗಾರಿಕೆಯು ಬೆಳೆಯಬೇಕಾದರೆ ಆ ದೇಶಕ್ಕೆ ಹೊರಗಿನಿಂದ ಬರುವ ವಸ್ತುಗಳಿಗೆ ಸುಂಕ ಹಾಕುವ ಸ್ವತಂತ್ರವು ಆ ದೇಶಕ್ಕೆ ಇರಬೇಕು. ಹಿಂದುಸ್ಥಾನದ ಸುಂಕ ಹಾಕುವ ಶಕ್ತಿಯು ಬ್ರಿಟನ್ನಿನ ಕ್ಷೇಮವನ್ನೇ ಅವಲಂಬಿಸಿರುತ್ತದೆ. ಕಳೆದ ಯುದ್ಧದ ಸಮಯದಲ್ಲಿ ಪ್ರಪಂಚದ ಎಲ್ಲಾ ರಾಜ್ಯಗಳಲ್ಲೂ ಜನರ ಮೇಲೆ ತೆರಿಗೆ ಹೆಚ್ಚಿಸಿಕೊಂಡರೆಂತಲೂ, ಈಚೆಗೆ ಬ್ರಿಟನ್ನಿನಲ್ಲಿ ಸಹ ಈ ತೆರಿಗೆಯನ್ನು ಕಡಿಮೆ ಮಾಡಿಕೊಂಡಿದ್ದರೂ ಹಿಂದುಸ್ಥಾನದಲ್ಲಿ ಮಾತ್ರ ಕಡಿಮೆ ಮಾಡಿರುವದಿಲ್ಲವೆಂತಲೂ ಹೇಳಿದ್ದಾರೆ. ಹಿಂದುಸ್ಥಾನದಲ್ಲಿ ಜನರಿಗೆ ಏನೂ ಉಳಿಸಿಕೊಳ್ಳಲು ಸಾಧ್ಯವಿಲ್ಲದಷ್ಟು ತೆರಿಗೆಯು ಹೊರಿಸಲಾಗಿದೆ. ಬ್ರಿಟಿಷರ ಕೈವಶವಾದಂದಿನಿಂದ ಹಿಂದುಸ್ಥಾನದಲ್ಲಿ ಹೆಚ್ಚು ಹಣವಿದೆಯೆಂತ ಹೇಳುವ ಮಾತನ್ನು ಒಪ್ಪಿಕೊಂಡರೂ ಜೀವನದ ಖರ್ಚು ಹೆಚ್ಚಾದ್ದರಿಂದ ಜನರ ಬಡತನವು ಏರುತ್ತಲೇ ಇದೆಯೆಂತ ಹೇಳಿ ಇದನ್ನು ನಿದರ್ಶಿಸಲಿಕ್ಕೆ ಯುದ್ಧಕ್ಕೆ ಮೊದಲು ಹಿಂದುಸ್ಥಾನದ ಜನರು ತಲೆ ಒಂದರ 18 ಗಜ ಬಟ್ಟೆ ತೆಗೆದುಕೊಳ್ಳುತ್ತಿದ್ದವರು ಈಗ ಒಳ್ಳೇ ಏಳೇ ಗಜಕ್ಕೆ ಇಳಿದಿದೆ ಎಂತ ಸೂಚಿಸಿದರು. ಹಿಂದುಸ್ಥಾನದ ಜನರಿಗೆ ತಡೆಯಲಾರದಷ್ಟು ದೊಡ್ಡ ಸಂಬಳದ ಅಧಿಕಾರಿಗಳನ್ನು ಇಟ್ಟುಕೊಂಡದ್ದರಿಂದ ಜನರ ತೆರಿಗೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲವೆಂತ ಅಂದಿರುವರು. ಹಿಂದುಸ್ಥಾನದ ಮಿಲಿಟರಿ ಇಲಾಖೆಗೆ ಅಪರಿಮಿತವಾಗಿ ಖರ್ಚಾಗುವದನ್ನು ಸರ್ ಇಬ್ರಾಹಿಮರು ಯಾಕೆ ಮರೆತರೋ ಗೊತ್ತಿಲ್ಲ.

ಹಿಂದುಸ್ಥಾನದ ಆರ್ಥಿಕ ಅವನತಿಯನ್ನು ಇನ್ನೊಂದು ಹೋಲಿಕೆಯಿಂದ ತೋರಿಸಿರುತ್ತಾರೆ. 1887—88 ರಿಂದ 1925—26 ವರೆಗೆ ಹಿಂದುಸ್ಥಾನದ ಸರಕಾರದ ಉತ್ಪತ್ತಿಯು ಮೂರರಷ್ಟು ಹೆಚ್ಚಿರುವಾಗ ಜಪಾನಿನ ಸರಕಾರದ ಉತ್ಪತ್ತಿಯು 20 ರಷ್ಟು ಹೆಚ್ಚಿದೆ. ಜಪಾನಿನಲ್ಲಿ "1887—88 ರಲ್ಲಿ ತಲೆಒಂದರ ರೂ. 3 ತೆರಿಗೆ ಇದ್ದದ್ದು 1926—27 ರಲ್ಲಿ ರೂ 35ಕ್ಕೆ ಏರಿದೆ. ಆದರೆ ಇಂಡಿಯಾದಲ್ಲಿ ರೂ. 2—8—0 ಇದ್ದದ್ದು ರೂ 7 ಕ್ಕೆ ಮಾತ್ರ ಏರಿದೆ. ಇದರಿಂದ ವಾಚಕರಿಗೆ ಸಂಶಯಬರಬಹುದು. ಈ ಹೋಲಿಕೆಯಿಂದ ಹಿಂದುಸ್ಥಾನದಲ್ಲಿ ಕಂದಾಯ ಕಡಿಮೆ ಇದೆ ಎಂತ ತಿಳಿಯುತ್ತದೆಯೋ ಹೊರತು ಹಿಂದುಸ್ಥಾನದ ಆರ್ಥಿಕ ಸ್ಥಿತಿಯು ಮುಂದುವರಿಯಲಿಲ್ಲವೆಂತ ಗೊತ್ತಾಗುವದು ತಾನೆ ಹೇಗೆ? ಜಪಾನು ಸ್ವತಂತ್ರ ರಾಜ್ಯ. ಅಲ್ಲಿ ಜನರ ಒಪ್ಪಿಗೆಯಿಲ್ಲದೆ ಕಂದಾಯ ಹಾಕಲು ಸಾಧ್ಯವಿಲ್ಲ. ಜನರ ಆರ್ಥಿಕ ಸ್ಥಿತಿಯು ಬೆಳೆಯುತ್ತಲೇ ಹೋಗುವದರಿಂದ ಹೆಚ್ಚಿನ ತೆರಿಗೆ ಹಾಕಿಕೊಳ್ಳುತ್ತಿದ್ದಾರೆ. ಹಿಂದುಸ್ಥಾನದಲ್ಲಿ ಜನರಿಗೆ ಜವಾಬ್ದಾರಿಯಿಲ್ಲದ ಪರದೇಶೀ ಸರಕಾರವಿದ್ದರೂ ಕಂದಾಯವನ್ನು ಜಪಾನಿನವರಷ್ಟು ಹೆಚ್ಚಿಸದೆ ಇರಲು ಜನರ ಬಡತನವೇ ಕಾರಣವಾಗಿದೆ. ಇಂಡಿಯಾದ ಜನರಲ್ಲಿ ಹೆಚ್ಚಿನ ಭಾಗದವರಿಗೆ ಹೊಟ್ಟೆ ತುಂಬಾ ಅನ್ನವೇ ಇಲ್ಲ. ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಜನರ ಉತ್ಪತ್ತಿ ಒಬ್ಬನಿಗೆ ಸರಾಸರಿ ವರ್ಷ ಒಂದಕ್ಕೆ 2000 ರೂ. ಇದೆ. ಇಂಗ್ಲೆಂಡಿನಲ್ಲಿ 1000 ರೂ. ಯ.ಉ. ಬ್ರಿಟಿಷ್ ವಸಾಹತುಗಳಲ್ಲಿ ರೂ. 550 ಇದೆ. ಇಂಡಿಯಾದವನಾದರೋ ಕೆಲವು ಕಾಲದ ಕೆಳಗೆ ರೂ. 30 ಮಾತ್ರವಿತ್ತೆಂತ ಲೆಕ್ಕ ಹಾಕಲಾಗಿದೆ. ಈಚೆಗೆ ಹೆಚ್ಚಾಗಿದೆಯೆಂತ [illegible]ದರೂ ವರ್ಷಕ್ಕೆ ರೂ 100ಕ್ಕೆ ಏರಲಿಲ್ಲ. ಇದರಿಂದ ಸರಕಾರದ ತೆರಿಗೆ ರೂ. 10 ವಜಾ ಮಾಡಿದರೆ ತಿಂಗಳಿಗೆ ಒರೇ ರೂ. 7—8—0 ಒಬ್ಬನ ಜೀವನಕ್ಕೆ ಉಳಿಯುತ್ತದೆ. ಇದು ಸರಾಸರಿ ಲೆಕ್ಕದಲ್ಲಿ ಸಿಕ್ಕಿರುವದಾಗಿದೆ. ದೇಶದ ಐಶ್ವರ್ಯವಂತರ ಉತ್ಪತ್ತಿಯನ್ನು ಬಿಟ್ಟರೆ ತಿಂಗಳಿಗೆ ರೂ. 7—8—0 ಯಷ್ಟು ಸಹ ಇಲ್ಲದ ಜನರೇ ಹೆಚ್ಚೆಂಬದು ಸ್ಪಷ್ಟವಾಗಿದೆ. ಇಂಥಾ ಜನರಿಗೆ ಬ್ರಿಟಿಷ್ ಸಾಮಾನುಗಳನ್ನು ಕೊಳ್ಳಲಿಕ್ಕೆ ಶಕ್ತಿ ಎಲ್ಲಿಂದ ಬಂದೀತು? ಆದ್ದರಿಂದ ಬ್ರಿಟಿಷರ ಸಾಮಾನುಗಳಿಗೆ ಗಿರಾಕಿಯಾಗಲಿಕ್ಕಾದರೂ ಹಿಂದೀಯ ಸಂಪತ್ತನ್ನು ಹೆಚ್ಚಿಸಿ ಎಂತ ಅಧ್ಯಕ್ಷರು ಕೋರಿಕೊಳ್ಳುತ್ತಾರೆ. ಬ್ರಿಟಿಷ್ ರಾಜ್ಯದೊಳಗೆ ಇರುವ ಆಸ್ಟ್ರೇಲಿಯಾ, ಕೆನಡಾ ಮುಂತಾದ ಪ್ರಾಂತ್ಯಗಳಲ್ಲಿ ಬ್ರಿಟಿಷ್ ಜನರೇ ಇದ್ದರೂ ತಮ್ಮ ತಮ್ಮ ರಾಜ್ಯದ ಸಂಪತ್ತಿನ ಬೆಳವಣಿಗೆಗೆ ಬೇಕಾದಷ್ಟು ಉಳಿಸಿಕೊಂಡು ಮಿಕ್ಕಿದ್ದನ್ನು ತಾಯ್ನಾಡಿಗೆ ಅಂದರೆ ಬ್ರಿಟನ್ನಿನ ಸಹಾಯಕ್ಕೆ ಕೊಡುತ್ತಾರೆ. ಅದರಂತೆಯೇ ಹಿಂದುಸ್ಥಾನದ ಆರ್ಥಿಕ ಧ್ಯೇಯವಿರಬೇಕೆಂತ ಸರ್ ಇಬ್ರಾಹಿಮರ ಸೂಚನೆಯಾಗಿದೆ. ಹಿಂದುಸ್ಥಾನದ ಆಳ್ವಿಕೆಯು ಹಿಂದೀಯರ ಕೈವಶವಾಗುವ ವರೆಗೆ ಇಂಥಾ ಕೋರಿಕೆಗಳು ಅರಣ್ಯರೋದನವೇ ಸರಿ.

ಹಿಂದುಸ್ಥಾನದ ಬ್ಯಾಂಕುಗಳ ಬೆಳವಣಿಗೆಗೆ ಸಲಹೆ ಕೊಡಲು ಹಿಂದೀಯರ ಹೆಚ್ಚು ಸಂಖ್ಯೆ ಇರುವ ಕಮಿಟಿಯೊಂದು ನೇಮಕವಾಗಬೇಕೆಂತಲೂ, ಕೈನೂಲು, ಕೈಮಗ್ಗದಂತ ಮನೆ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂತಲೂ, ಸಮುದ್ರ ತೀರದ ವ್ಯಾಪಾರವು ಹಿಂದೀ ಹಡಗುಗಳಿಗೇನೇ ಉಳಿಸಿಕೊಡಬೇಕೆಂತಲೂ, [illegible] ಆಡಳಿತದ ಉದ್ಯೋಗಗಳಲ್ಲಿ ಹೆಚ್ಚಾಗಿ ಹಿಂದೀಯರನ್ನೇ ನೇಮಿಸಿಕೊಳ್ಳಬೇಕೆಂತಲೂ, ರಬ್ಬರ್, ಟೀ, ಕಾಫಿ ಮುಂತಾದ ವ್ಯವಸಾಯಗಳಿಗೆ ಲಾಯಖ್ಖಾದ ಜಾಗಗಳನ್ನು ಹರಾಜು ಮೂಲಕವೇ ಮತ್ತು ಹಿಂದೀಯರಿಗೆ ಮಾತ್ರವೇ ಕೊಡಬೇಕೆಂತಲೂ ಮುಂತಾದ ಠರಾವುಗಳು ಈ ಕಾಂಗ್ರೆಸ್ಸಿನಲ್ಲಿ ಮಂಜೂರಾಗಿವೆ.

ಅಧ್ಯಕ್ಷರ ಉಪಸಂಹಾರದ ಭಾಷಣದಲ್ಲಿ ಹಿಂದೀಯರೆಲ್ಲರೂ ಒಗ್ಗಟ್ಟಾಗಿರಬೇಕೆಂತಲೂ, ಬುದ್ಧಿಯಲ್ಲಿ ಹಿಂದೀಯರು ಪ್ರಪಂಚದ ಯಾವ ಜನಾಂಗಕ್ಕೂ ಹಿಂದಿಲ್ಲದ್ದರಿಂದ ಹಿಂದೀಯರು ಒಗ್ಗಟ್ಟಾದರೆ ಯಾವ ಜನಾಂಗಕ್ಕೂ ಹಿಂದುಸ್ಥಾನವನ್ನು ಅಧೀನದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲವೆಂತಲೂ, ಮಾತೃಭೂಮಿಗಾಗಿ ಒಗ್ಗಟ್ಟಾಗುವದು ಹಿಂದೀಯರ ಕರ್ತವ್ಯವೆಂತಲೂ ಮುಸಲ್ಮಾನರಾದ ಅಧ್ಯಕ್ಷರು ಕೋರಿಕೊಂಡರು. ಇವರ ಪ್ರಾರ್ಥನೆಯು ಜನರ ಹೃದಯವನ್ನು ನಾಟಲಿ ಎಂತ ಹಾರೈಸುತ್ತೇವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಆನೇ ಭಾಗದಲ್ಲಿ ೧೭ನೇ ಪ್ರಕರಣ.

ಲೊಕೇಶನ್ನಿನ ದಹನ

ನನಗೂ ನನ್ನ ಜೊತೆಗಾರರಿಗೂ ರೋಗಿಗಳ ಸೇವೆ ತಪ್ಪಿ ಹೋ ಪ್ಲೇಗಿನಿಂದ ಉಂಟಾದ ಇನ್ನೂ ಎಷ್ಟೋ ಕೆಲಸಗಳು ನಮ್ಮ ಮೈಮೇಲೆಯೇ ಇದ್ದುವು.

ಲೊಕೇಷನಿನ ವಿಚಾರವಾಗಿ ಪೌರಸಭೆಯು ತಾತ್ಸಾರ ವನ್ನು ತಳಿಸಿದ್ದೇನೆ. ಆದರೆ ಬಿಳಿಯ ಜನರ ಆರೋಗ್ಯ ರಕ್ಷಣೆ ವಿಚಾರವಾಗಿ ಮಾತ್ರ ಅದು ಬಹು ಎಚ್ಚರಿಕೆಯಿಂದಿದ್ದಿತು. ಈ ಉದ್ದೇಶಕ್ಕಾಗಿ ಅದು ಬೇಕಾದಷ್ಟು ಹಣವನ್ನು ವ್ಯಯ ಮಾಡಿದ್ದಿತು. ಈಗ ಪ್ಲೇಗನ್ನು ನಿರ್ಮೂಲ ಮಾಡುವುದಕ್ಕಾಗಿ ಹಣವನ್ನು ನೀರಿನ ಹಾಗೆ ಚೆಲ್ಲಿತು. ಪೂರ ಚಾರದ ಕ್ರಮ ಮಾಡಿಯೂ, ಮಾಡಬೇಕಾದ ಕಡೆ ಮಾಡದೆಯೂ ಪೌರಸಭೆಯು ಭಾರತೀಯರ ವಿಷಯದಲ್ಲಿ ಅನೇಕ ಕಷ್ಟಗಳನ್ನು ಒಡ್ಡಿತೆಂದು ನಾನು ತಿಳಿದಿದ್ದರೂ ಬಿಳಿಯ ಜನರ ಕ್ಷೇಮಚಿಂತನೆಯ ವಿಷಯದಲ್ಲಿ ಅದು ವಹಿಸಿದ ಶ್ರದ್ಧೆಗಾಗಿ ನಾನು ಅದನ್ನು ಹೊಗಳದೆ ಇರಲಾಗಲಿಲ್ಲ. ಮತ್ತು ಅದು ನಡೆಸುತ್ತಿದ್ದ ಕೃತ್ಯವಾದ ಪ್ರಯತ್ನಗಳಲ್ಲಿ ನಾನು ನನ್ನ ಕೈಯ್ಯಲ್ಲಾದಷ್ಟು ಸಹಾಯವನ್ನು ಮಾಡಿದೆನು. ನಾನು ಹೀಗೆ ಸಹಾಯ ಮಾಡದಿದ್ದರೆ ಇದು ಪೌರಸಭೆಗೆ ಕಷ್ಟ ಸಾಧ್ಯವಾಗುತ್ತಿದ್ದಿತು. ಅದು ಬಂದೂಕದ ಬಲಾತ್ಕಾರದ ಮೂಲಕ ಅದನ್ನು ನಡೆಸುವುದಕ್ಕೆ ಹೇಸುತ್ತಿರಲಿಲ್ಲವೆಂದು ನನಗೆ ತೋರುತ್ತದೆ.

ಆದರೆ ಇದೊಂದೂ ನಡೆಯಲು ಅವಕಾಶವೇ ಇಲ್ಲದಂತಾಯಿತು. ಭಾರತೀಯರ ನಡತೆಯನ್ನು ನೋಡಿ ಪೌರಸಭೆಯವರಿಗೆ ಸಂತೋಷವಾಯಿತು. ಮತ್ತು ಇದರಿಂದ ಪ್ಲೇಗಿನ ಸಂಬಂಧವಾದ ಮುಂದಿನ ಕೆಲಸಗಳು ಸರಳವಾದುವು. ನನಗೆ ಭಾರತೀಯರಲ್ಲಿದ್ದ ಪ್ರತಿಷ್ಠೆಯನ್ನೆಲ್ಲಾ ಅವರು ಪೌರಸಭೆಯು ಹೇಳಿದಂತೆ ನಡೆಯುವ ಹಾಗೆ ಮಾಡಲು ಉಪಯೋಗಿಸಿದೆನು. ಇದೆಲ್ಲವನ್ನೂ ಮಾಡುವುದು ಭಾರತೀಯರಿಗೆ ಸುಲಭವಾಗಿರಲಿಲ್ಲ. ಆದರೆ ನನ್ನ ಸಲಹೆಯನ್ನು ಯಾರೂ ನಿರಾಕರಿಸಿದುದು ನನಗೆ ನೆನಪಿಲ್ಲ.

ಲೊಕೇಷನನ್ನು ಬಲವಾದ ಕಾವಲಿನಲ್ಲಿ ಇಟ್ಟು ಅಪ್ಪಣೆ ಇಲ್ಲದೆ ಒಳಕ್ಕೆ ಹೋಗುವುದನ್ನೂ, ಹೊರಕ್ಕೆ ಬರುವುದನ್ನೂ ನಿಷೇಧ್ಯ ಮಾಡಿದರು. ನನಗೂ, ನನ್ನ ಜೊತೆಯವರಿಗೂ ಇಷ್ಟ ಬಂದಾಗ ಹೋಗಿ ಬರುವುದಕ್ಕೆ ಅಪ್ಪಣೆ ಚೀಟಿಗಳನ್ನು ಕೊಟ್ಟರು. ಈ ಏರ್ಪಾಡಿನ ಉದ್ದೇಶವೇನೆಂದರೆ—ಲೊಕೇಷನ್ನಿನ ವಾಸಿಗಳೆಲ್ಲರೂ ಅದನ್ನು ಬಿಟ್ಟು ಜೋಹಾನ್ಸ್‌ಬರ್ಗಿಗೆ ೧೩ ಮೈಲಿ ದೂರದಲ್ಲಿದ್ದ ಮೈದಾನದಲ್ಲಿ ಡೇರೆಗಳನ್ನು ಹಾಕಿಕೊಂಡು ಇರುವಂತೆ ಮಾಡಿ ಆ ಮೇಲೆ ಲೊಕೇಷನಿಗೆ ಬೆಂಕಿ ಹಚ್ಚಬೇಕೆಂದು. ಆಹಾರದ ಜಿನಸು ಮತ್ತು ಇತರ ಅವಶ್ಯಕವಾದ ಪದಾರ್ಥಗಳನ್ನು ಸಾಗಿಸಿಕೊಂಡು ಡೇರೆಗಳಲ್ಲಿ ನೆಲಸುವುದಕ್ಕೆ ಕೆಲವುಕಾಲ ಹಿಡಿಯುತ್ತಿದ್ದುದರಿಂದ ಈ ಮಧ್ಯೆ ಕಾವಲುಗಾರರನ್ನು ಇಡಬೇಕಾಗಿ ಬಂದಿತು.

ಜನರು ಬಹಳ ಗಾಬರಿಯಲ್ಲಿದ್ದರು. ಆದರೆ ನಾನು ಸದಾ ಅಲ್ಲಿಯೇ ಇರುತ್ತಿದ್ದುದರಿಂದ ಅವರಿಗೆ ಸ್ವಲ್ಪ ಧೈರ್ಯವುಂಟಾಯಿತು. ಅನೇಕ ಬಡಜನರು ತಾವು ಉಳಿಸಿದ್ದ ಅಸ್ವಲ್ಪ ಹಣವನ್ನು ಭೂಮಿಯೊಳಗೆ ಹೂತಿಡುತ್ತಿದ್ದರು. ಇದನ್ನೆಲ್ಲಾ ಅಗೆದು ತೆಗೆಯಬೇಕಾಯಿತು. ಅವರಿಗೆ ಯಾವ ಬ್ಯಾಂಕೂ ಇರಲಿಲ್ಲ. ಬ್ಯಾಂಕೆಂದರೇನೋ ಅವರಿಗೆ ತಿಳಿದಿರಲಿಲ್ಲ. ನಾನೇ ಅವರ ಬ್ಯಾಂಕು ಆದೆನು. ಹಣದ ಪ್ರವಾಹವು ನನ್ನ ಆಫೀಸಿಗೆ ಸುರಿಯಿತು. ಈ ಸಂದರ್ಭದಲ್ಲಿ ನಾನು ಪಟ್ಟ ಶ್ರಮಕ್ಕಾಗಿ ಇಂಥಾ ಕಷ್ಟಕಾಲದಲ್ಲಿ ಅದರಿಂದ ಯಾವ ರುಸುಮನ್ನೂ ತೆಗೆದುಕೊಳ್ಳುವ ಮಾತೇ ಇರಲಿಲ್ಲ. ಹಾಗೂ ಹೀಗೂ ಈ ಕೆಲಸವನ್ನು ಕೈಗೊಂಡು ಮುಗಿಸಿದೆನು. ನನಗೆ ಅಲ್ಲಿನ ಬ್ಯಾಂಕಿನ ಮೇನೇಜರೊಡನೆ ಗಾಢವಾದ ಪರಿಚಯವಿದ್ದಿತು. ನಾನು ಈ ಹಣವನ್ನೆಲ್ಲಾ ಅವರಲ್ಲಿ ಇಡಬೇಕಾಗಿ ಬರುವುದೆಂದು ಅವರಿಗೆ ತಿಳಿಸಿದೆನು. ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳ ರಾಶಿಗಳನ್ನು ತೆಗೆದುಕೊಳ್ಳಲು ಬ್ಯಾಂಕುಗಳಿಗೆ ಇಷ್ಟವೇ ಇರಲಿಲ್ಲ. ಪ್ಲೇಗಿನ ಜಾಗಗಳಿಂದ ಬಂದ ಹಣವನ್ನು ಬ್ಯಾಂಕಿನ ಗುಮಾಸ್ತರು ಮುಟ್ಟುವುದಿಲ್ಲವೆಂದು ಎಲ್ಲಿ ಹೇಳುವರೋ ಎಂಬ ಹೆದರಿಕೆ ಬೇರೆ. ಆದರೆ ಬ್ಯಾಂಕಿನ ಮೇನೇಜರು ನನಗೆ ಎಲ್ಲಾ ವಿಷಯದಲ್ಲಿಯೂ ಅನುಕೂಲ ಮಾಡಿಕೊಟ್ಟರು. ಬ್ಯಾಂಕಿಗೆ ಕಳುಹಿಸುವುದಕ್ಕೆ ಮುಂಚೆ ಹಣವನ್ನೆಲ್ಲಾ ಕ್ರಿಮಿನಾಶಕ ದ್ರಾವಕದಲ್ಲಿ ತೊಳೆಯಬೇಕೆಂದು ನಿಶ್ಚಯವಾಯಿತು ನನಗೆ ನೆನಪಿರುವ ಮಟ್ಟಿಗೆ ಈ ರೀತಿಯಾಗಿ ಸುಮಾರು ೬೦,೦೦೦ ಪೌಂಡು (ಸುಮಾರು ೯ ಲಕ್ಷ ರೂ.) ಬ್ಯಾಂಕಿನಲ್ಲಿ ಡಿಪಾಜಿಟ್ಟಿತು. ಹೆಚ್ಚು ಹಣವಿದ್ದವರನ್ನು ತಮ್ಮ ಹಣವನ್ನು ಗಟ್ಟಿಲೆಕ್ಕದಲ್ಲಿ (ನಿಯಮಿತವಾದ ಕಾಲಕ್ಕೆ ಮುಂಚೆ ಆ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳದಂತೆ) ಇಡಬೇಕೆಂದು ಹೇಳಿದೆನು. ಅವರು ಈ ಸಲಹೆಗೆ ಒಪ್ಪಿದರು. ಇದರ ಫಲವಾಗಿ ಕೆಲವರಿಗೆ ತಮ್ಮ ಹಣವನ್ನು ಹೀಗೆ ಬ್ಯಾಂಕಿನಲ್ಲಿ ಇಡುವುದು ಅಭ್ಯಾಸವಾಯಿತು.

ಲೊಕೇಷನ್ನಿನ ನಿವಾಸಿಗಳು ಒಂದು ಪ್ರತ್ಯೇಕವಾದ ರೈಲುಗಾಡಿಯಲ್ಲಿ ಜೋಹಾನ್ಸ್‌ಬರ್ಗಿನ ಬಳಿ ಇರುವ ಕ್ಲಿಪ್‌ಸ್ಪ್ರೂಟ್‌ಫಾರ್ಮ್ ಎಂಬ ಮೈದಾನಕ್ಕೆ ಒಯ್ಯಲ್ಪಟ್ಟರು. ಆಲ್ಲಿ ಪೌರಸಭೆಯು ಅವರಿಗೆ ತನ್ನ ಸ್ವಂತ ವೆಚ್ಚದಿಂದ ಆಹಾರದ ದಿನಸಿಯನ್ನು ಒದಗಿಸಿ ಕೊಟ್ಟಿತು. ಈ ಡೇರೆಗಳ ಊರು ಸಿಪಾಯಿಗಳ ಶಿಬಿರದಂತೆ ಕಾಣುತ್ತಿದ್ದಿತು. ಹೀಗೆ ಮೈದಾನದಲ್ಲಿ ವಾಸಿಸಿ ಅಭ್ಯಾಸವಿಲ್ಲದವರಿಗೆ ಅಲ್ಲಿಯ ಏರ್ಪಾಡನ್ನು ನೋಡಿ ಆಶ್ಚರ್ಯವೂ, ದುಃಖವೂ ಉಂಟಾಯಿತು. ಆದರೆ ಅವರು ಯಾವ ಅನಾನುಕೂಲತೆಯನ್ನೂ ಸಹಿಸಬೇಕಾಗಿರಲಿಲ್ಲ. ನಾನು ದಿನಕ್ಕೊಂದು ಬಾರಿ ಸೈಕಲ್ಲಿನ ಮೇಲೆ ಅವರ ಬಳಿಗೆ ಹೋಗುತ್ತಿದ್ದೆನು. ಇಪ್ಪತ್ತನಾಲ್ಕು ಗಂಟೆಗಳ ಒಳಗಾಗಿ ಅವರು ತಮ್ಮ ಕಷ್ಟವನ್ನೆಲ್ಲಾ ಮರೆತು ಆನಂದದಿಂದ ಜೀವಿಸತೊಡಗಿದರು. ನಾನು ಅವರ ಬಳಿಗೆ ಹೋದಾಗಲೆಲ್ಲಾ ಅವರು ಸಂಗೀತ ವಿನೋದಗಳಲ್ಲಿ ಖುಷಿಯಿಂದ ಕಾಲ ಕಳೆಯುತ್ತಿದ್ದುದನ್ನು ನೋಡುತ್ತಿದ್ದೆನು.

ನನಗೆ ನೆನಪಿರುವ ಮಟ್ಟಿಗೆ ಲೊಕೇಷನನ್ನು ಬಿಟ್ಟ ಮಾರನೆಯ ದಿನವೇ ಅದಕ್ಕೆ ಬೆಂಕಿ ಹಚ್ಚಿದರು ಆ ದಹ್ಯದಿಂದ ಯಾವ ಪದಾರ್ಥವನ್ನು ಉಳಿಸಲೂ ಪೌರಸಭೆಯು ಎಳ್ಳಷ್ಟು ಇಚ್ಛೆಯನ್ನು ತೋರಿಸಲಿಲ್ಲ. ಸುಮಾರು ಇದೇ ಕಾರಣಕ್ಕಾಗಿ ಪೌರಸಭೆಯು ಪೇಟೆಯಲ್ಲಿದ್ದ ತನ್ನ ಮರದ ಮಳಿಗೆಗಳನ್ನೆಲ್ಲಾ ಸುಟ್ಟುಹಾಕಿ ಹತ್ತುಸಾವಿರ ಪೌಂಡಿನಷ್ಟು (ಸುಮಾರು ೧ ಲಕ್ಷ ರೂ.) ನಷ್ಟವನ್ನು ಹೊಂದಿತು. ಪೇಟೆಯಲ್ಲಿ ಕೆಲವು ಸತ್ತ ಇಲಿಗಳು ಸಿಕ್ಕಿದುದೇ ಇಂಥಾ ನಷ್ಟಕರವಾದ ಕೆಲಸಕ್ಕೆ ಕಾರಣ.

ಪೌರಸಭೆಯೇನೋ ಹೆಚ್ಚಾದ ವೆಚ್ಚವನ್ನು ಹಾಕಬೇಕಾಯಿತು. ಆದರೆ ಅದು ಪ್ಲೇಗಿನ ಹಾವಳಿಯನ್ನು ಪೂರ್ತಿಯಾಗಿ ತಡೆಯಿತು. ಪಟ್ಟಣವು ಪುನಃ ತಡೆಯಿಲ್ಲದೆ ಉಸಿರಾಡತೊಡಗಿತು.

ಕಾಂಗ್ರೆಸ್ ಸಮಾಚಾರ.

ಮೂರನೇ ದಿನದ ಠರಾವುಗಳು.

(ಕಳೆದವಾರದಿಂದ ಮುಂದುವರಿದದ್ದು)

ಸಂಸ್ಥಾನಗಳಲ್ಲಿ ಸುಧಾರಣೆ.

" ಸಂಸ್ಥಾನಾಧಿಪತಿಗಳ ಮತ್ತು ಅವರ ಪ್ರಜೆಗಳ ಕಲ್ಯಾಣಕ್ಕಾಗಿ ಸಂಸ್ಥಾನಗಳಲ್ಲಿ ಪ್ರಜಾಪ್ರತಿನಿಧಿ ಮಂಡಲಿಗಳು ಏರ್ಪಡಾಗಬೇಕೆಂತಲೂ, ಜವಾಬ್ದಾರಿ ಸರಕಾರವು ಪ್ರಬಂಧವಾಗಬೇಕೆಂತಲೂ ಈ ಮಹಾ ಸಭೆಯು ಅಭಿಪ್ರಾಯ ಪಡುತ್ತದೆ.' ಎಂಬ ಠರಾವನ್ನು ಶ್ರೀ. ಮಣಿಲಾಲ್ ಕೊಠಾರಿಯವರು ಸೂಚಿಸಿದರು. ಶ್ರೀ ಸತ್ಯಮೂರ್ತಿಯವರು ಅನುಮೋದಿಸಿ ಭಾಷಣ ಮಾಡಿದನಂತರ ಸರ್ವಸಮ್ಮತಿಯಿಂದ ಮಂಜೂರಾಯಿತು.

ಬ್ರಿಟಿಷ ಸರಕುಗಳ ಬಹಿಷ್ಕಾರ.

'ಬ್ರಿಟಿಷ್ ಸಾಮಾನುಗಳ ವಿಷಯ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಈ ಮಹಾ ಸಭೆಯು ಅಂಗೀಕರಿಸುತ್ತದೆ. ಮತ್ತು ಎಲ್ಲಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ತಮ್ಮ ಪರಿಸ್ಥಿತಿಗನುಸಾರವಾಗಿ ಕೆಲವು ಬ್ರಿಟಿಷ್ ಸರಕುಗಳನ್ನು ಬಹಿಷ್ಕರಿಸಲು ಏರ್ಪಡು ಮಾಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ.' ಬಂಗಾಳದ ಶ್ರೀ. ರಾಜೇಂದ್ರನಾಥ ಚಕ್ರವರ್ತಿ ಯವರು ಸೂಚಿಸಿದ ಈ ಠರಾವಿಗೆ ಶ್ರೀ. ಅಬ್ದುಲ್ ಹಮೀದ್ ಖಾನ್, ಶ್ರೀಮತಿ ಯೂಸೀ ಪೂರಣ ತಿಲಕಮ್ಮಾಳ್, ಮಿಸ್ ಚಟ್ಟೋಪಾಧ್ಯಾಯ ಮತ್ತು ಶ್ರೀ. ಪುರುಷೋತ್ತಮ ರಾಯ್ ಮುಂತಾದವರು ಬೆಂಬಲವಾದ ಭಾಷಣಗಳಿಂದ ಬೆಂಬಲ ಕೊಟ್ಟರು. ಇದೂ ಒಮ್ಮತದಿಂದ ಪಾಸಾಯಿತು.

ಮುಂದಾಳುಗಳ ಸಂದೇಶ.

ನಂತರ ಜನರಲ್ ಸೆಕ್ರಟರಿಯವರು, ಲಾಲಾ ಹರಕಿಸನ್ ಲಾಲ್, ಡೊರಾವಜಾದಿನ ಮಹಾರಾಜ, ಮಹಮ್ಮದ್ ಅಮ್ಮಕಿಲ್ಲ ಫೋರ್ಸ್, ಜಾರ್ಜ ಲಾನ್ಸ್‌ಬರಿ, ಸಕ್ಲಾತ್ವಾಲ, ಬಿರ್ಕನ್‌ಹೆಡ್ ಮತ್ತು ಮಹಮ್ಮದ್ ಯೂಸಫ್ ಇವರಿಂದ ಸಹಾನುಭೂತಿಯ ಪತ್ರಗಳೂ, ಸಂದೇಶಗಳೂ ಬಂದಿವೆಯೆಂದು ಹೇಳಿದರು. ಸಂದಿಗ್ಧವರ ಕೋರಿಕ ಮೇರೆ ಸಕಲಾತ್ವಾಲಾರವರ ಸಂದೇಶವು ಓದಿ ಹೇಳಲ್ಪಟ್ಟಿತು

ಸ್ವರಾಜ್ಯ ಘಟನೆ.

'ದೇಶದ ಎಲ್ಲಾ ರಾಜಕೀಯ ಪಾರ್ಟಿಗಳು ಒಂದಾಗಿ ಸೇರಿ ಸ್ವರಾಜ್ಯ ಶಾಸನವನ್ನು ನಿರ್ಣಯಿಸಬೇಕೆಂಬ ಅಭಿಪ್ರಾಯವನ್ನು ತಿಳಿದು ಮತ್ತು ವರ್ಕಿಂಗ್ ಕಮಿಟಿಯವರ ಕೋರಿಕೆ ಮೇರೆ ಬಂದ ಬೇರೆ ಬೇರೆ ಬಿಜಿನಗಳನ್ನೂ, ಸೂಚನೆಗಳನ್ನೂ ನೋಡಿ ಈ ಸಭೆಯು ನಿಶ್ಚಯಿಸುವದೇನೆಂದರೆ—ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿ ದೇಶದಲ್ಲಿ ಉಳಿದ ರಾಜಕೀಯ, ಕೂಲೀಕಾರರ, ವ್ಯಾಪಾರ ಮತ್ತು ಕೋಮುವಾರು ಸಂಘಗಳ ಜೊತೆ ಸೇರಿ ಎಲ್ಲರ ಹಕ್ಕುಗಳನ್ನು ಸೂಚಿಸುವ ಒಂದು ರಾಜಶಾಸನವನ್ನು ತಯಾರಿಸಬೇಕು ಮತ್ತು ಒಂದು ಮಾರ್ಚಿ ತಿಂಗಳೊಳಗೆ ಡೆಲ್ಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೆಂಬರುಗಳು, ಬೇರೆ ಸಂಘಗಳ ಮುಖಂಡರುಗಳು ಮತ್ತು ಪ್ರತಿನಿಧಿಗಳು, ಎಸೆಂಬ್ಲಿ ಮತ್ತು ಪ್ರಾಂತೀಯ ಕೌನ್ಸಿಲುಗಳ ಚುನಾಯಿತ ಮೆಂಬರುಗಳು, ಇವರ ಒಂದು ಸಭೆ ಸೇರಿಸಿ ಅದರ ಮುಂದೆ ಈ ಘಟನೆಯನ್ನು ಚರ್ಚೆ ಮತ್ತು ಒಪ್ಪಿಗೆಗೆ ಇಡತಕ್ಕದ್ದು.' ಶ್ರೀ. ಜಮ್ನಾದಾಸ್ ಎಂ. ಮೆಹ್ತಾರವರು ಸೂಚಿಸಿದ ಈ ಠರಾವನ್ನು ಶ್ರೀ. ವರ್ಧರಾಜುಲು ನಾಯಿಡು ಮತ್ತು ಶ್ರೀ. ಹರಿ ಸರ್ವೋತ್ತಮ ರಾವ್‌ರವರು ಅನುಮೋದಿಸಿದರು. ಶ್ರೀ. ಸಿಂಘ್ವರ್ ಮತ್ತು ಶ್ರೀ. ತಿರುವೆಂಗಡಚಾರಿಯವರು ವಿರೋಧಿಸಿದರು. ಠರಾವು ಬಹುಮತದಿಂದ ಪಾಸಾಯಿತು.

ಡೆಲಿಗೇಟರುಗಳ ಫೀಸನ್ನು ಒಂದು ರೂಪಾಯಿಯಿಂದ ಐದು ರೂಪಾಯಿಗೆ ಏರಿಸಬೇಕೆಂಬ ಠರಾವು ಪಾಸಾಗಲಿಲ್ಲ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೆಂಬರ ಫೀಸು ವರ್ಷಕ್ಕೆ 10 ರೂ. ಯಾಗಬೇಕೆಂಬುದು ಮಂಜೂರಾಯಿತು

ಕಳೆದ ವರ್ಷದ ಸೆಕ್ರೆಟರಿಗಳಾದ ಶ್ರೀ. ಎ ರಂಗಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ. ವಿ. ಜೆ. ಪಟೇಲರವರಿಗೆ ವಂದನೆಗಳ ಠರಾವು ಪಾಸಾಯಿತು.

ಬರುವ ವರ್ಷಕ್ಕೆ ಶ್ರೀ ಶೈಕ್ ಕ್ವರೇಶಿ, ಶ್ರೀ. ಜವಾಹರಲಾಲ್ ನೆಹರು (ವರ್ಕಿಂಗ್ ಸೆಕ್ರೆಟರಿ) ಮತ್ತು ಶ್ರೀ. ಸುಭಾಷ್ ಚಂದ್ರಬೋಸ್‌ರವರು ಸೆಕ್ರೆಟರಿಗಳಾಗಿಯೂ, ಉಮ್ಮರಲಾಲ್ ಬಜಾಜ್ ಮತ್ತು ಶಿವ ಶಂಕರ್ ಜಗಜೀವನ ಬಾರಿಯವರು ಟ್ರಜರಿಗಳಾಗಿಯೂ ಚುನಾಯಿಸಲಾಯಿತು.

ಬರುವ ವರ್ಷದ ಕಾಂಗ್ರೆಸು ಮಹಾ ಸಭೆಯು ಕಲ್ಕತ್ತಾದಲ್ಲಿ ನಡಿಸಲ್ಪಡಬೇಕೆಂಬ ಠರಾವು ಸರ್ವಸಮ್ಮತದಿಂದ ಪಾಸಾಯಿತು.

ಅಧ್ಯಕ್ಷರ ಮುಕ್ತಾಯದ ಭಾಷಣ.

'ಕಾಂಗ್ರೆಸ್ಸು ಹಿಂದೂಮುಸಲ್ಮಾನ ಐಕ್ಯ, ಸೈಮನ್ ಕಮಿಶನ್ನಿನ ಮೇಲ ಸಂಪೂರ್ಣ ಬಹಿಷ್ಕಾರ ಮತ್ತು ಸ್ವರಾಜ್ಯ ಘಟನೆ ಇವುಗಳ ವಿಷಯದಲ್ಲಿ ಠರಾವು ಪಾಸುಮಾಡಿ, ಕರ್ತವ್ಯವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದುದಕ್ಕಾಗಿ ನನಗೆ ಅತ್ಯಂತ ಸಮಾಧಾನವಾಗುತ್ತಿರುವದು. ಆದರೆ ಕೇವಲ ಠರಾವು ಪಾಸುಮಾಡಿ, ಕಾಗದದಲ್ಲಿ ಇಡುವುದರಲ್ಲೇನೂ ಅರ್ಥವಿಲ್ಲ. ಅದರಂತೆ ಏಕನಿಷ್ಠತೆಯಿಂದಲೂ, ಅಚಲ ಧಾರಕತನದಿಂದಲೂ ನಡೆಯಬೇಕು' ಎಂದು ನುಡಿದು ಅಧ್ಯಕ್ಷರು ಸ್ವಾಗತಾಧ್ಯಕ್ಷರನ್ನೂ, ಸ್ವಯಂಸೇವಕರನ್ನೂ, ಮದ್ರಾಸಿನಲ್ಲಿ ರಾಜಕೀಯ ಜಾಗೃತಿಗೆ ಆಧಾರಸ್ತಂಭದಂತಿದ್ದ ಶ್ರೀ|| ಶ್ರೀನಿವಾಸ ಅಯ್ಯಂಗಾರರವರನ್ನೂ ಅಭಿನಂದಿಸಿದರು. ಬಳಿಕ ಬಂಗಾಲದ ರಾಜಕೀಯ ಕೈದಿಗಳ ಬಗ್ಗೆ ಪ್ರಾರಂಭಿಸಿದ ಸಹಾಯಕ ನಿಧಿಗೆ ಸಹಾಯ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಂಡರು. ಆ ಮೇಲೆ ಸ್ವಾಗತಾಧ್ಯಕ್ಷರು ಡಾ. ಅನ್ಸಾರಿಯವರನ್ನು ಅಭಿನಂದಿಸಿದ ಬಳಿಕ ಕಾಂಗ್ರೆಸ್ ಅಧಿವೇಶನವು ಸಮಾಪ್ತಿಯಾಯಿತು.

ಹಿಂದೂ ಮುಸಲ್ಮಾನರ ಒಗ್ಗಟ್ಟು.

ಹಿಂದೂ ಮುಸ್ಲಿಮ್ ಒಗ್ಗಟ್ಟಿನ ಠರಾವಿನ ಮೇಲೆ ಕಾಂಗ್ರೆಸಿನಲ್ಲಿ ಆದ ಕೆಲವು ಭಾಷಣಗಳು.

ಶ್ರೀಮತಿ ಸರೋಜಿನಿದೇವಿಯವರ ಭಾಷಣ.

ಈ ಠರಾವಿನ ಮೇಲೆ ಓಟ್ ಕೊಡುವಾಗ ನಿಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು. ಈ ಠರಾವು ಅನ್ಯೋನ್ಯ ನಂಬಿಕೆಯ ನಿದರ್ಶನವಾಗಿದೆ. ಈ 20ನೇ ಶತಮಾನದಲ್ಲಿ ನಾವು ಸ್ವತಂತ್ರರಾಗಬೇಕೆಂತ ನಿಶ್ಚಯಿಸಿರ ಪಾರ್ಟಿ ಈ ಠರಾವನ್ನು ತರಬೇಕಾದದ್ದಕ್ಕೆ ನನಗೆ ನಾಚಿಕೆಯಾಗುತ್ತದೆ, ವ್ಯಸನವಾಗುತ್ತದೆ ನನ್ನ ತಲೆ ಬಗ್ಗಿಸಬೇಕಾಗಿದೆ ಆದರೂ ನಾವು ಸ್ವತಂತ್ರದ ದಾರಿಯಲ್ಲಿ ಒಗ್ಗಟ್ಟಾಗಿ ಮುಂದುವರಿಯಲು ನಿಶ್ಚೈಸಿರುತ್ತೇವೆಂಬುದನ್ನು ಪ್ರಪಂಚಕ್ಕೆ ತಿಳಿಸುವುದಕ್ಕೆ ಈ ಠರಾವನ್ನು ಮಂಜೂರ್ ಮಾಡಿಕೊಳ್ಳಬೇಕಾಗಿದೆ

ಠರಾವಿನಲ್ಲಿ ಏನಿದೆ? ಆಶ್ಚರ್ಯ ತೀರ್ಮಾನವೇನೂ ಇಲ್ಲ. ಹಿಂದೂ ಮುಸಲ್ಮಾನ್ ಜನರಾದ ನೀವು ನಾಚಿಕೆಗೇಡಿನ ಹೋರಾಟದಲ್ಲಿ ಇರುವ ನೀವು, ಭಯಾನಕವಾದ ಜಗಳದಲ್ಲಿರುವ ನೀವು ವಿಷದ ಮೇಲೆ ವಿಷಹಾಕುತ್ತಾ, ಜಗಳದ ಮೇಲೆ ಜಗಳ ನಡಿಸುತ್ತಾ, ನಾಚಿಕೆ ಮೇಲೆ ನಾಚಿಕೆ ಹೆಚ್ಚಿಸುತ್ತಾ, ವ್ಯಸನದ ಮೇಲೆ ವ್ಯಸನ ತುಂಬಿಸುತ್ತಾ ಇರುವ ನೀವು ತಡೆದು ನಿಮ್ಮ ಸ್ಥಿತಿ ಏನು ಎಂಬದನ್ನು ಯೋಚಿಸಿ ನೋಡಬೇಕೆಂತ ಠರಾವು ಕೇಳಿಕೊಳ್ಳುತ್ತದೆ. ಪ್ರಪಂಚದಲ್ಲಿ ಜೀವಿಸುವ ಜನಾಂಗಗಳಲ್ಲಿ ಜೀವಿಸುವ ಜನಾಂಗವಾಗಿರುವಿರೋ ಅಥವಾ ಸತ್ತ ಹೆಣಗಳಿಂದ ತುಂಬಿದ ಮಸಣದಂತೆ ನಿಮ್ಮ ದೇಶ ಇರಬೇಕಂತ ಅಪೇಕ್ಷಿಸುವಿರೋ? ಈ ವಿಷಯವನ್ನು ಚರ್ಚಿಸುವಾಗ ಇದೊಂದೇ ವಿಷಯವನ್ನು ನೆನಪಿನಲ್ಲಿಡಬೇಕು. ಕೋಮುವಾರು ಅಭಿಪ್ರಾಯದ ಸಂಶಯವೂ ನನ್ನ ನನ್ನ ಸನಿಹದಲ್ಲೇ ಇಲ್ಲ. ನಾನು ಹಿಂದೂವಲ್ಲದೆ ಬೇರೆ ಏನಾದರೂ ಆಗಿದ್ದೇನೆಯೋ ಎಂಬುದು ನನಗೆ ಗೊತ್ತೇ ಇಲ್ಲವೆಂದು ಹೆಮ್ಮೆಯಿಂದ ಹೇಳುತ್ತೇನೆ. ನನ್ನ ಧರ್ಮವು ಎಲ್ಲಾ ಜಾತಿಮತಗಳನ್ನು ದಾಟಿ ಇದೆ. ಹಿಂದುಸ್ಥಾನದ ಮತವು ಹಿಂದುಸ್ಥಾನವನ್ನು ಬಂಧನದಿಂದ ಬಿಡಿಸಬೇಕಾದ ಮತ ಒಂದೇ ಆಗಿರಬೇಕು. ನಮ್ಮ ಗೌರವಾರ್ಹವಾದ ಪ್ರಾಚೀನರು ಏರ್ಪಡಿಸಿದ ಹಿಂದೂಧರ್ಮ ಅಥವ ಮುಸಲ್ಮಾನ ಧರ್ಮದ ಗಂಭೀರ ಉದ್ದೇಶಕ್ಕೆ ನಾವು ಅಪರಾಧಿಗಳಾಗಿದ್ದೇವೆ. ಯೋ? ನಾವು ಹಿಂದೂಗಳು. ಮುಸಲ್ಮಾನರು ಎಂಬ ಬುದ್ಧಿಯಿಂದ ಅನ್ಯೋನ್ಯ ಜಾತಿಗಳ ನಾಶಕ್ಕಾಗಿಯೂ, ಕೇಡಿಗಾಗಿಯೂ ಕೆಲಸಮಾಡುತ್ತಿರುವ ವರೆಗೆ ನಾವು ಇನ್ನೂ ದಾಸ್ಯಗುಲಾಮರಾಗಲಿಕ್ಕೇನೇ ಪ್ರಯತ್ನಿಸುತ್ತಲಿದ್ದೇವೆ.

ಮತಸಂಬಂಧದ ಜಗಳಗಳಿಗೆ ಗೋವಧೆಯೂ ಮತ್ತು ಮಶೀದಿ ಮುಂದೆ ವಾದ್ಯವೂ ಕಾರಣಗಳಾಗಿವೆ. ನಮ್ಮ ಚರಿತ್ರೆಯನ್ನು ತೆಗೆದು ನೋಡಿದರೆ ಹಿಂದೂ ಮುಸಲ್ಮಾನರು ಪ್ರಪಂಚದ ಇತರ ಎಲ್ಲಾ ಬಂಧುಗಳು ಜೀವಿಸುವಂತೆ ಅನ್ಯೋನ್ಯವಾಗಿ ಜೀವಿಸುತ್ತಿದ್ದವು ಎಂತ ತಿಳಿಯುತ್ತದೆ. ನಾವು ಚರಿತ್ರೆಯನ್ನು ಸರಿಯಾಗಿ ಓದದೆ ಇರುವದರಿಂದ ಈ ಕಷ್ಟವಿಲ್ಲಾ ಒದಗಿದೆ. ದೇಶಭಕ್ತಿ ಎಂಬುದು ನಮ್ಮ ವಿದ್ಯಾಭ್ಯಾಸದಲ್ಲಿ ಸೇರುವದೇ ಇಲ್ಲ. ನಾವು ಹೇಡಿಗಳಾದ್ದರಿಂದ ಪ್ರಸಂಗಕ್ಕೆ ನಾವು ಧೈರ್ಯಶಾಲಿಗಳೆಂತ ತೋರಿಸಲಿಕ್ಕೆ ಹೇಡಿಗಳ ದಾರಿಯನ್ನು ಹಿಡಿಯುತ್ತೇವೆ. ಅವಶ್ಯಾಗಿಯೇ ಹಿಂದೂ ವ ಮುಸಲ್ಮಾನರು ಅನ್ಯೋನ್ಯ ಐಕಮತ್ಯವುಳ್ಳವರಾಗಿದ ದ್ದೈರ್ಯವಾಗಿ ಇದ್ದವಲ್ಲ. ಸ್ವಂತಿಕೆ ಕ್ಷೀಣವಾದಂದಿನಿಂದ ಈ ಜಗಳಗಳು ಹುಟ್ಟಿದವು. ಹೀಗಾಗಿ ಅನ್ಯೋನ್ಯ ಅವಿಶ್ವಾಸದಿಂದ ಸ್ವಾತಂತ್ರ್ಯ ದೂರವಾಗಿದೆ. ಆದ್ದರಿಂದ ಒಂದೇ ವಸ್ತುವಿಗಾಗಿ ಎರಡು ಜಾತಿ ನಡುವಲ್ಲಿಯೂ ತಿಕ್ಕಾಟ ಬರುವದು ... ಎರಡು ಜಾತಿಯವರಿಗೂ ತೌರುಮನೆಯಾಗಿರುವ ಈ ಹಿಂದುಸ್ಥಾನ ಈ ಹೋರಾಟವನ್ನು ನಿಲ್ಲಿಸಲು ಈ ರಾಷ್ಟ್ರದ ಪ್ರಜೆಗಳು ... ಈ ರಾಷ್ಟ್ರದಿಂದ ಅನ್ಯೋನ್ಯ ಸಂಬಂಧ ಪ್ರೀತಿಯೇ ಪರಿಹರಿಸಿಕೊಳ್ಳಲು ಅನುಕೂಲ. ಇವರಲ್ಲಿ ಜುಲುಂ ಇಲ್ಲವೆಂಬುದಿಲ್ಲ. ಆದರ ಸಹೋದರರಾಗಿ ಸ್ವಾತಂತ್ರ್ಯವನ್ನು ಸಲ್ಲಿಸಿ ಜಗಳ ತೀರಿಸಿಕೊಳ್ಳುವ ರೀತಿಯಲ್ಲಿ ... ಹಿಂದುಗಳು ತಮ್ಮ ದೇವರನ್ನು ಯಾವ ರೀತಿಯಲ್ಲಿ ಪೂಜಿಸಬೇಕೆಂದು ... ಮಶೀದಿ ಮುಂದೆ ಸಾರ್ವಜನಿಕ ರಸ್ತೆಯಲ್ಲಿ ವಾದ್ಯ ದೊಡನೆ ಪೂಜೆಗೊಳ್ಳಲಿ ಎಂತ ಇದೆ. ಆದರ ಓ ಹಿಂದುಗಳೇ, ನಿಮ್ಮ ಮತವು ಪುರಾತನ ಕಾಲದಿಂದಲೂ ಸಹನಾಮತವಾಗಿದೆ, ಬಲದಿಂದ ಅಲ್ಲ, ನಿಮ್ಮ ದಯಾಳುತನದಿಂದ, ಶಕ್ತಿಯ ಧೈರ್ಯದಿಂದ ನಿಮ್ಮ ಏನ್ರಿತ್ತೆಗಳಾದ ಹಿಂದುಸ್ಥಾನವೇ ತಮ್ಮ ಮನೆಯಾದ ಹಿಂದುಸ್ಥಾನವೇ ತಮ್ಮ ತಾಯಿಯಾದ ಮುಸಲ್ಮಾನ ಮನೋಭಾವನೆಯನ್ನು ಸ್ವಲ್ಪ ತಿಳಿದು ನಿಮ್ಮ ದೇವಸ್ಥಾನದಂತೆಯೇ ಅವರ ಮಶೀದಿಯೂ ದೇವರ ಮನೆಯಾಗಿದೆ. ವಾದ್ಯದೊಡನೆ ನಿಮ್ಮ ದೇವರನ್ನು ತೆಗೆದುಕೊಂಡು ಹೋಗುವ ನಿಮಗೆ ಹಕ್ಕನ್ನು ಉಪಯೋಗಿಸುವಾಗ ಸ್ವಲ್ಪ ದಯ ತೋರಿಸಿರಿ ಎಂತ ರಾಷ್ಟ್ರವು ಕೇಳಿಕೊಳ್ಳುತ್ತದೆ. ಮುಸಲ್ಮಾನರು ಒಡವರ ಒಡತನದ ಕಾರಣದಿಂದಲೂ, ಮತದ ಕಾರಣದಿಂದಲೂ ಹಿಂದೂಗಳಿಗೆ ಪೂಜಾರ್ಹವಾದ ಗೋವನ್ನು ಮುಸಲ್ಮಾನರು ವಧೆ ಮಾಡುತ್ತಾರೆ. ಮುಸಲ್ಮಾನರಿಗೆ ಹಿಂದುಗಳು ಏನು ಹೇಳುತ್ತೇವೆ ನಿಮ್ಮ ಹಕ್ಕನ್ನು ನಾವು ಒಪ್ಪಿಕೊಳ್ಳುತ್ತೇವೆ, ಆದರೆ ನಿಮ್ಮ ದಯ ಬೇಕಂತ ಕೇಳುತ್ತೇವೆ. ನೀವು ನಮ್ಮ ಸಹೋದರರ ಜೊತೆಗಾರರು, ನಮ್ಮ ಮತದ ನಂಬಿಕೆಯನ್ನು ಗೌರವಿಸಿರಿ, ನಿಮ್ಮ ಹಕ್ಕಿಗೆ ಚ್ಯುತಿ ಬರುವದಿಲ್ಲ ಎಂತ ರಾಷ್ಟ್ರವು ಕೇಳಿಕೊಳ್ಳುತ್ತದೆ. ನಿಮ್ಮ ಹಕ್ಕುಗಳಿಗಾಗಿ ಕೋರ್ಟಿಗೆ ಹೋಗಿಯೇ ... ಎಂತಲೂ ಕೇಳಿ ಕೊಳ್ಳುತ್ತದೆ. ದೊಡ್ಡ ಮನಸ್ಸು ಮಾಡಿ ಅನ್ಯೋನ್ಯ ಪ್ರೀತಿ ವಿಶ್ವಾಸದ ಬೆಳವಣಿಗೆಗೆ ಪ್ರೇರಿಪಡಿಸಿದಂತೆ, ಹಿಂದಿನಿಂದ ಬಂದ ... ಸಾಧ್ಯವಿಲ್ಲದ್ದನ್ನು ಪ್ರೀತಿಯಿಂದ ಗೆಲ್ಲಬಹುದು. ಈ ತತ್ವಪ್ರಚಾರವು ಹಿಂದೂ ಮುಸಲ್ಮಾನರಿಗೆ, ಸಮ್ಮಿಲನಕ್ಕೆ ... ದೇವಸ್ಥಾನ ಮಶೀದಿ ಸಂಬಂಧ ಮುಂದಾಳುಗಳೂ ಮತ್ತು ಮುಸಲ್ಮಾನ ಮುಂದಾಳುಗಳೂ ಸಹ ಒಪ್ಪಿ ಈ ರಾಷ್ಟ್ರವನ್ನು ತಯಾರಿಸಿ ದವರಾಗಿದೆ.

ರಾಜಕೀಯ ಸಂಬಂಧದ ಜಗಳವನ್ನು ವಿವರಿಸುತ್ತೇನೆ. ಮುಸಲ್ಮಾನರು ಅನೇಕ ವರ್ಷಗಳಿಂದ ಕೋಮುವಾರು ಚುನಾವಣೆ ಇಲ್ಲದ ಇದ್ದರೆ ಕಡಮೆ ಸಂಖ್ಯೆಯಲ್ಲಿರುವ ತಾವು ಬಲದಲ್ಲಿಯೂ, ತಿಳುವಳಿಕೆಯಲ್ಲಿಯೂ, ವಿದ್ಯೆಯಲ್ಲಿಯೂ, ಧನದಲ್ಲಿಯೂ, ಸಮಾಜದಲ್ಲಿಯೂ ಹಿಂದುಳಿಯುವದೇ ಸರಿ ಎಂತ ಯೋಚಿಸುತ್ತಿದ್ದರು. ನಾವು ವರ್ಷದಿಂದ ವರ್ಷಕ್ಕೆ ಕೇಳುತ್ತಾ ಬಂದರೂ ಕೋಮುವಾರು ಚುನಾವಣೆ ಬಿಡಲಾಗುವದಿಲ್ಲವೆಂತಲೇ ಹೇಳಿದರು. ಆದರೆ ಈ ದಿನ ಅವರ ಮುಂದಾಳುಗಳು ಬಂದು ಕೋಮುವಾರು ಚುನಾವಣೆ ಬೇಡವೆಂತ ಹೇಳಿದರು. ನೀವು ನಮ್ಮ ಹಕ್ಕುಗಳಿಗೆ ಕೇಡನ್ನು ಮಾಡುವದಿಲ್ಲವೆಂತ ದಯತೋರಿಸಲು ತಯಾರಾಗಿರುವದರಿಂದ ಸ್ವಾತಂತ್ರ್ಯ ಸಂಪಾದನೆಗೆ ನಿಮ್ಮ ಸಂಗಡಲೇ ನಾವು ಮುಂದರಿಸಲು ತಯಾರಾಗಿದ್ದೇವೆಂತ ಹೇಳಿದರು. ಆದರೂ ಸ್ವಲ್ಪ ಕಾಲಕ್ಕೆ ಮಾತ್ರ ನಮಗೆ ನಮ್ಮ ಸಂಖ್ಯೆಗೆ ಸರಿಯಾದಷ್ಟು ಕೌನ್ಸಿಲ್ ಮೆಂಬರುತನವನ್ನು ಕಾದಿಡಬೇಕೆಂತ ಕೇಳಿಕೊಳ್ಳುತ್ತಾರೆ. ಸಿಂಧ್ ಪ್ರಾಂತ್ಯವನ್ನು ಪ್ರತ್ಯೇಕ ಪ್ರಾಂತವಾಗಿ ಮಾಡಬೇಕೆಂತಲೂ, ವಾಯವ್ಯ ಸರಹದ್ದಿಗೆ ಸುಧಾರಿಸಿದ ಸರಕಾರ ಪದ್ಧತಿ ಬೇಕೆಂತಲೂ ಕೇಳುತ್ತಾರೆ. ಸ್ವತಂತ್ರ ಹೋರಾಟದಲ್ಲಿ ನಾವು ಎಷ್ಟೋ ತ್ಯಾಗ ಮಾಡಬೇಕಾಗುತ್ತದೆ. ಈ ರಾಷ್ಟ್ರವಿನ್ನಲ್ಲಿ ಹೇಳುವ ಎಲ್ಲಾ ತ್ಯಾಗಗಳನ್ನೂ ನಾವು ಮಾಡಿ ಒಗ್ಗಟ್ಟಾಗಬೇಕು. ಜಗಳೇ ಲಾರ್ಡ್ ಇರ್ವಿನ್ ಪದ್ಧತಿಗೂ, ಮಿಸ್ ಮೇಯೋಳಿಗೂ ಸರಿಯಾದ ಜವಾಬು ಕೊಟ್ಟಂತಾಗುತ್ತದೆ. ಸಾಯತ್ತಿರುವ ಹಿಂದೀ ಜನಾಂಗವು, ಈ ಒಗ್ಗಟ್ಟಿನಿಂದ ಸ್ವತಂತ್ರರಾಗಲು ಸಾಧ್ಯವಿದೆ.

ಅ. ಎಲ್ ಕಲಾಂ ಆಜಾದರು.

ಈ ರಾಷ್ಟ್ರವನ್ನು ಮಂಜೂರ್ ಮಾಡಿಕೊಳ್ಳಬೇಕಾದದ್ದು ಹಿಂದುಸ್ಥಾನದ ಅಭಿವೃದ್ಧಿಗೆ ಅವಶ್ಯವೆಂತ ಎಲ್ಲರಿಗೂ ಗೊತ್ತಾಗಿದೆ. ಒಗ್ಗಟ್ಟಿಗಾಗಿ 10 ವರ್ಷಗಳಿಂದ ಪ್ರಯತ್ನಿಸುತ್ತಿದ್ದೇವೆ. ಪ್ರಯೋಜನಕಾರಿಯಾಗಲಿಲ್ಲ. 1916ರಲ್ಲಿ ಪ್ರತ್ಯೇಕ ಕೋಮುವಾರು ಚುನಾವಣೆಯಾಗಬೇಕೆಂತ ಕೇಳಿದೆವು. ಈಗ ಸಮ್ಮಿಳಿತ ಚುನಾವಣೆಗೆ ಒಪ್ಪಿರುತ್ತೇವೆ. ಇದರಿಂದ ಒಗ್ಗಟ್ಟು ಬೆಳೆಯುವದರಲ್ಲಿ ಸಂಶಯವಿಲ್ಲ. ಭಾಷಾವಾರು ಪ್ರಾಂತ್ಯರಚನೆಯಾಗಬೇಕಾದದ್ದು ಅವಶ್ಯ. ಈ ತತ್ವವನ್ನು ಅನುಸರಿಸಿ ಸಿಂದನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಲು ಒಪ್ಪಬೇಕಾಗಿದೆ. ಒಗ್ಗಟ್ಟಿಗೆ ಅಡಚಣೆಯಾಗಿರುವ ಕೋಮುವಾರು ಚುನಾವಣೆ ಬಿಡಬೇಕಾದದ್ದು ಅವಶ್ಯವೆಂತ ಮುಸಲ್ಮಾನರಿಗೆ ಗೊತ್ತಾಗಿದೆ. ಜಾತಿ ಸಂಬಂಧವಾಗಿ ನಮ್ಮೊಳಗೆ ಇರುವ ವ್ಯತ್ಯಾಸಗಳನ್ನು ಜುಲುಮಿನಿಂದಾಗಲೀ, ಕೋರ್ಟು ಮೂಲಕವಾಗಲೀ ತೀರಿಸಲು ಸಾಧ್ಯವಿಲ್ಲ. ಆದರೆ ಆಯಾ ಜಾತಿಗಳ ಹಕ್ಕನ್ನು ಇತರ ಜಾತಿಗಳು ಒಪ್ಪಿಕೊಳ್ಳುವದರಿಂದಲೇ ಈ ತಕರಾರುಗಳು ತೀರಬೇಕಷ್ಟೆ. ರಾಷ್ಟ್ರವಿನ್ನಲ್ಲಿ ಹೇಳುವದು ಸಾಧ್ಯವಾಗಬೇಕಾದರೆ ಜಾತಿಗಳು ಹೊಡೆದಾಟವನ್ನು ಬಿಟ್ಟು ಅನ್ಯೋನ್ಯ ಮನೋಭಾವನೆಗಳಿಗೆ ಗೌರವ ಕೊಡಬೇಕಾಗಿದೆ.

ಶ್ರೀನಿವಾಸ ಗಾಂಧೀಶಂಕರ ಮಿಶ್ರ—ಇವರು ಕೋಮುವಾರು ಮೆಂಬರುಗಳ ಸಂಖ್ಯೆಯನ್ನು ಕಾದಿಡಲು ಸಹ ವಿರೋಧಿಸಿದರು. ಪಂಡಿತ ಜಗತ್ ನಾರಾಯಣರವರು ಸಹ ಮುಸಲ್ಮಾನರು ಈ ರಾಷ್ಟ್ರವಿನ ಬಲದಿಂದ ಎಲ್ಲೆಲ್ಲಿಯೂ ಗೋವಧ ನಿಲ್ಲಿಸಬೇಕೆಂತ ಹೇಳಿ ರಾಷ್ಟ್ರವಿನ ಕೆಲವು ಭಾಗಗಳಿಗೆ ವಿರೋಧಿಸಿದರು.

ಶ್ರೀಯುತ ಸೇನ್‌ಗುಪ್ತರು.

ರಾಷ್ಟ್ರವು ಸಂಪೂರ್ಣ ತೃಪ್ತಿಕರವಾದದೆಂತ ಯಾರೂ ಹೇಳುವದಿಲ್ಲ. ಆದರೆ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಈ ರಾಷ್ಟ್ರವಿಗಿಂತ ಉತ್ತಮವಾದ ಉಪಾಯ ಕಾಣುವದಿಲ್ಲ. ರಾಜಕೀಯ ಹೋರಾಟದಲ್ಲಿ ಮುಂದುವರಿಯಬೇಕಾಗಿದೆ. ಆ ಎಲ್ಲ ಈ ಕೋಮುವಾರು ಜಗಳವನ್ನು ಹೇಗಾದರೂ ತೀರಿಸಿಕೊಳ್ಳಬೇಕಾಗಿದೆ. ಎಷ್ಟು ಕಾಲ ಕಾಯಬಹುದು? ನಮ್ಮನ್ನು ಪೂರ್ತಿಯಾಗಿ ಕೊಂದು ತಿನ್ನುವ ವರೆಗೆ ಕಾಯಬೇಕೋ? ಅಥವಾ ಜಾತಿ ಜಗಳ ಇನ್ನೂ ಹೆಚ್ಚಾಗುವ ವರೆಗೆ ಕಾಯಬೇಕೋ? ಈ ರಾಷ್ಟ್ರವಿನ್ನಲ್ಲಿ ಗೋಹತ್ಯದ ಹಕ್ಕನ್ನೂ, ಮಶೀದಿ ಮುಂದೆ ವಾದ್ಯಮಾಡುವ ಹಕ್ಕನ್ನೂ ಒಪ್ಪಲಿಲ್ಲ. ಒಬ್ಬ ನಮಗೆ ಹಕ್ಕನ್ನು ಮಾತ್ರ ರಾಷ್ಟ್ರವಿನ್ನಲ್ಲಿ ಸದ್ಯಕ್ಕೆ ಹಿಂದುಗಳು ಹಿಂದೂಗಳಿಗೂ, ಮುಸಲ್ಮಾನರು ಮುಸಲ್ಮಾನರಿಗೂ ತಮ್ಮ ಗೌರವಕ್ಕಾಗಿಯಾದರೂ ಸಹೋದರ ಜಾತಿಯವರ ಮನಸ್ಸನ್ನು ನೋಯಿಸಬೇಡಿ ಎಂತ ಕೇಳಿಕೊಳ್ಳುತ್ತದೆಯಷ್ಟೆ. ಈ ಎರಡು ವಿಷಯಗಳಲ್ಲಿ ಎರಡು ಜಾತಿಯವರಿಗೂ ಸಂಪೂರ್ಣ ಸ್ವತಂತ್ರಕೊಟ್ಟು ಹಿಂಸವಾಗ ವದಿಲ್ಲವೆಂತಲೂ, ಕೋರ್ಟುಗಳಿಗೆ ಹೋಗುವದಿಲ್ಲವೆಂತಲೂ ಭರವಸೆಕೊಟ್ಟು ಅನ್ಯೋನ್ಯ ಮನಸ್ಸು ನೋಯಿಸದಂತೆ ನೋಡಿಕೊಳ್ಳುವದು ಅವರವರಿಗೇ ಕೊಡಿದೆಯೆಂತ ಒಡಬಡಿಗೆ. 1926 ರಲ್ಲಿ ಕಲ್ಕತ್ತಾದಲ್ಲಿ ಹಿಂದೂ ಮುಸಲ್ಮಾನ್ ದಂಗೆಗಳಾದಾಗ ಹಿಂದುಗಳು ಪೊಲೀಸ್ ಸಹಾಯದಿಂದ ಮಶೀದಿ ಮುಂದೆ ವಾದ್ಯದೊಡನೆ ಮೆರವಣಿಗೆ ತೆಗೆದುಕೊಂಡು ಹೋಗಿ ಜಯವಾಯಿತೆಂತ ಹಿಂದುಗಳು ಹೇಳಿದರು. ನಾನು ನಾಚಿಕೆಯಿಂದ ತಲೆ ಬಗ್ಗಿಸಬೇಕಾಯಿತು. ಅದು ಜಯವಲ್ಲ ಅಪಜಯ. ಈ ರಾಷ್ಟ್ರವಿನಿಂದ ಜಾತಿ ಜಗಳಗಳಲ್ಲಿ ಸರಕಾರಿ ಸಹಾಯ ಕೇಳುವದನ್ನು ನಿಲ್ಲಿಸಬೇಕಾಗಿದೆ. ಕಲ್ಕತ್ತಾದ ರಾಜರಾಜೇಶ್ವರ ಹಬ್ಬದಲ್ಲಿ ಸರಕಾರವು ಒಂದು ದಿನ ಹಿಂದೂಗಳ ಬೆನ್ನುತಟ್ಟಿ ಮಶೀದಿ ಮುಂದೆ ವಾದ್ಯದೊಡನೆ ಹೋಗಿ ಎಂತ ಹೇಳಿತು. ಮಾರನೇ ದಿನ ಮುಸಲ್ಮಾನರ ಬೆನ್ನುತಟ್ಟಿ ಕಡೇ ಹೊತ್ತಿನಲ್ಲಿ ಹಿಂದೂಗಳಿಗೆ ಮೆರವಣಿಗೆಗೆ ಒಪ್ಪ ಕೊಟ್ಟಿದ್ದ ಲೈಸೆನ್ಸನ್ನು ರದ್ದುಪಡಿಸಿತು. ಹಿಂಸೆಯನ್ನು ವಲಂಬಿಸಿದರೂ, ಕೋರ್ಟಿಗೆ ಹೋದರೂ ಆಳರಸರು ಮಾಡುವ ರೀತಿ ಇದೇ. ರಾಷ್ಟ್ರವಿನ್ನಲ್ಲಿ ಎರಡು ಜಾತಿಯ ಹಕ್ಕನ್ನೂ ಒಪ್ಪಿಕೊಂಡು ಅನ್ಯೋನ್ಯ ಮನಸು ನೋಯಿಸಬಾರದೆಂತ ಕೇಳಿಕೊಳ್ಳಲಾಗಿದೆ. ಲಾರ್ಡ್ ಬರ್ಕನ್ ಹೆಡ್ಡರಿಗೆ ಸರಿಯಾದ ಜವಾಬು ಕೊಡಬೇಕಾದರೆ ಈ ರಾಷ್ಟ್ರವನ್ನು ಒಗ್ಗಟ್ಟಾಗಿ ಮಂಜೂರು ಮಾಡಬೇಕು.

ಪಂಡಿತ ಮದನ ಮೋಹನ ಮಾಳವೀಯರು

ಈ ರಾಷ್ಟ್ರವಿನ ಮೇಲೆ ಎರಡು ಮಾತು ಮಾತ್ರ ಆಡಬೇಕಂತ ಇದ್ದೇನೆ. ಇದರಿಂದ ಜಗಳಗಳನ್ನು ನಿಲ್ಲಿಸಿ ಸ್ವರಾಜ್ಯದ ದಾರಿಯಲ್ಲಿ ಮುಂದರಿಯಬೇಕಾಗಿದೆ. ಕೋಮುವಾರು ಚುನಾವಣೆಯನ್ನು ಬಿಟ್ಟು ಬಿಡಲಾಗಿದೆ. ಪ್ರತ್ಯೇಕ ಮೆಂಬರುತನ ಕಾದಿಡಲಿಕ್ಕೆ ಸಹ ನಾನು ವಿರೋಧ ಇದ್ದೇನೆ. ಆದರೆ ಸಾಧ್ಯವಾದದನ್ನು ಮುಂದರಿಸಿ ಹೋಗಿ ಪುನಃ ತಕರಾರು ಬಂದಾಗ ತೀರಿಸಿಕೊಳ್ಳಬಹುದು. ನ್ಯಾಯ ವಿಧಾಯಕ ಸಭೆಗಳಿಗೆ ಹಿಂದು ಮುಸಲ್ಮಾನರಲ್ಲಿ ಯಾರೇ ಬಂದು ಪ್ರತಿನಿಧಿಯನ್ನು ಆರಿಸಲು ಒಪ್ಪಬೇಕು ಯಾವ ಜಾತಿಯವನೇ ಆಗಲಿ ಶಾಸನ ಹಿಂದುಸ್ಥಾನದವನೆಂದನ್ನು ನೆನಪಿನಲ್ಲಿಡಲಿಕ್ಕೂ, ದೇಶಕ್ಕಾಗಿ ಕೆಲಸ ಮಾಡಲಿಕ್ಕೂ ಕಲಿಯಬೇಕು. ಮಶೀದಿ ಮುಂದೆ ಹಿಂದುಗಳು ಸಂಗೀತ, ವಾದ್ಯ ನಿಲ್ಲಿಸಬೇಕೆಂತಲೂ, ಮುಸಲ್ಮಾನರು ಗೋಹತ್ಯ ನಿಲ್ಲಿಸಬೇಕೆಂತಲೂ ಗಾಂಧಿಜಿಯವರು ಕೇಳಿಕೊಂಡಿದ್ದಾರೆ. ಮುಸಲ್ಮಾನರು ಗೋಹತ್ಯ ಮಾಡುವ ಹಕ್ಕು ತಮಗೆ ಇದೆಯೆಂತ ಹೇಳುತ್ತಾರೆ. ಸಾವಿರಾರು ವರ್ಷಗಳ ಚರಿತ್ರೆಯನ್ನು ನೋಡಿದರೂ ಗೋಹತ್ಯೆಯಿಂದ ಹಿಂದುಗಳಿಗೆ ನೋವಾಗುತ್ತದೆಯೆಂತ ತಿಳಿಯುತ್ತದೆ. ಕಾಶ್ಮೀರದ ಮಹಾರಾಜರು ಗೋಹತ್ಯ ಮಾಡಿದವರಿಗೆ ಶಿಕ್ಷೆ ವಿಧಿಸುವ ಕಾನೂನು ಮಾಡಿದ್ದಾರೆ. ಬಾಬರನು ತನ್ನ ವಿಲ್ಲಿನಲ್ಲಿಯೇ ಗೋಹತ್ಯ ಮಾಡಲು ಬಿಡಬಾರದೆಂತ ಬರೆದಿದ್ದನು. ಅಕ್ಬರನ ವರೆಗೂ ಹಾಗೆಯೇ ನಡೆಯಿತು. ಬ್ರಿಟಿಷರು ಇಲ್ಲಿಗೆ ಬಂದಂದಿನಿಂದ ಗೋಹತ್ಯ ತುಂಬಾ ಹೆಚ್ಚಿತು. ಗೋಹತ್ಯದ ವಿಷಯದಲ್ಲಿ ಮುಸಲ್ಮಾನರು ಹಿಂದುಗಳ ಮನೋಭಾವವನ್ನು ಗೌರವಿಸಬೇಕು. ಹಿಂದುಗಳು ಸಂಗೀತ, ವಾದ್ಯ ಮಾಡುವದರಲ್ಲಿ ಮುಸಲ್ಮಾನರ ಮನೋಭಾವವನ್ನು ಗೌರವಿಸಬೇಕು. ಹೀಗೆ ಮಾಡಿದರೆ ಹಿಂದು ಮುಸ್ಲಿಮರು ಜಗಳ ನಿಲ್ಲುವದರಲ್ಲಿ ಗೋಹತ್ಯ ಸಹ ನಿಲ್ಲುತ್ತದೆ. ಮುಸಲ್ಮಾನರು ಒಟ್ಟು ಸ್ವಾರ್ಥಿಗಳಾಗಿ ಅವರಿಗೆ ತೊಂದರೆ ಕೊಡಬಾರದೆಂತ ಕೇಳುತ್ತಾರೆ. ಆ ಅಪೇಕ್ಷೆಯನ್ನು ನೆರವೇರಿಸುವದು ಹಿಂದುಗಳ ಕರ್ತವ್ಯವಾಗಿದೆ. ಗೋಹತ್ಯದ ವಿಷಯದಲ್ಲಾಗಲೀ, ಸಂಗೀತದಲ್ಲಾಗಲೀ, ಹಿಂಸೆ ಮಾಡಬಾರದೆಂತಲೂ, ಕೋರ್ಟಿಗೆ ಹೋಗಬಾರದೆಂತಲೂ ಕೇಳಿಕೊಳ್ಳಲಾಗಿದೆ. ಇವುಗಳಾಗಿಲ್ಲದಿದ್ದರೆ ಜಗಳ ನಿಲ್ಲುವದು ಖಂಡಿತ. ಕೋರ್ಟುಗಳು ನಮಗೆ ಸಹಾಯವಾಗುವದಿಲ್ಲ. ಒಂದೊಂದಾಗಿ ಒಂದೊಂದು ಜಾತಿಗೆ ಸಹಾಯಕೊಟ್ಟು ಮನಸ್ತಾಪ ಹಚ್ಚಲು ಸಹಾಯ ಮಾಡುತ್ತವೆ. ಸುಧಾರಿಸಿದ ಕೌನ್ಸಿಲುಗಳು ದೊರೆತನಂತರ ಈ ಜಗಳಗಳನ್ನು ದೊಡ್ಡದು ಮಾಡಿ ಕೇಳಿ, ನಾವು ಸ್ವರಾಜ್ಯಕ್ಕೆ ಅರ್ಹರಲ್ಲವೆಂತ ಹೇಳಲು ಅನುಕೂಲ ಮಾಡಿಕೊಳ್ಳುತ್ತಾರೆ. ನಮ್ಮ ಬಾಬುಗಳನ್ನು ಪರಿಸಿದ ನಮ್ಮದೇ ಸ್ವೀಮರುಗಳು ನಮ್ಮ ಇಂಡಿಯನ್ ಸವುದ್ರದಲ್ಲಿ ಓಡ್ಯಾಡುವ ದಿನವನ್ನು ಎದುರು ನೋಡುತ್ತಿರಬೇಕು. ನಮ್ಮ ಸೈನ್ಯಗಳನ್ನು ನಮ್ಮ ಕಪ್ತಾನರುಗಳೇ, ನಮ್ಮ ಜನರಲ್‌ಗಳೇ ನಡಿಸುವದನ್ನು ನೋಡಬೇಕು. ತುಂಬಾ ಸಂಬಳ ಪಡೆಯುವ ಸಿವಿಲ್ ಸರ್ವೀಸ್ ಉದ್ಯೋಗಗಳಿಗೆ ದೂರ ಪ್ರಾಂತ್ಯದ ಜನರು ಬರದಂತಾಗಬೇಕು. ವ್ಯಾಪಾರದಲ್ಲೂ, ರಾಷ್ಟ್ರದಳಿತದಲ್ಲೂ, ನಾಕಾಸೈನ್ಯದಲ್ಲೂ, ಸೈನ್ಯದಲ್ಲೂ, ವಿದ್ಯದಲ್ಲೂ ಹಿಂದಿಯರು ಮುಂದಾಗಿರಬೇಕಂತ ನಮ್ಮ ಆಶೆಯಾಗಿದೆ. ಇದನ್ನು ಸಾಧಿಸಲು ಒಂದೇ ಜಾತಿಗೆ ಸಾಧ್ಯವಿಲ್ಲ. ಎಲ್ಲಾ ಜಾತಿಗಳೂ ಒಗ್ಗಟ್ಟಾಗಿ ಸೇರಿದರೆ ಸಾಧ್ಯವಿದೆಯಷ್ಟೆ. ಡಾಕ್ಟರ ಅನ್ಸಾರಿಯವರು ಕಮಾಂಡರ್ ಇನ್ ಚೀಫ್ ಆಗುವುದು, ಮದನ ಮೋಹನ ಮಾಳವೀಯರು ವಿದ್ಯ ಇಲಾಖೆಯ ಮಂತ್ರಿಯಾಗುವುದು. ಆಗ ದೇಶದಲ್ಲಿ ಪ್ರೀತಿಯೂ, ಶಾಂತಿಯೂ ತುಂಬುತ್ತದೆ. ಹಿಂದುಗಳಿಗೂ, ಮುಸಲ್ಮಾನರಿಗೂ ಒಬ್ಬರೇ ದೇವರು. ಹಿಂದುಸ್ಥಾನವು ಒಂದೇ ತಾಯಿ. 6000 ಮೈಲು ದೂರದಿಂದ ಬಂದ ಅಲ್ಪ ಸ್ವಲ್ಪ ಸಂಖ್ಯೆ ಇಂಗ್ಲೀಷ್ ಜನರು ನಮ್ಮನ್ನು ಆಳುವ ನಾಚಿಕೆಯನ್ನು ಹೋಗಲಾಡಿಸಿಕೊಳ್ಳಬೇಕು. ಹಿಂದು, ಮುಸಲ್ಮಾನ, ಆಂಗ್ಲೋ ಇಂಡಿಯನ ಸುಮಂತಾದ ಸರ್ವರೂ ಒಟ್ಟಿನ ಸೇವರೆಂತಲೂ, ಒಂದೇ ತಾಯಿ ಹಿಂದುಸ್ಥಾನದ ಮಕ್ಕಳೆಂತಲೂ ಭಾವಿಸಿದರೆ ಇಂಗ್ಲೀಷ್ ಸರಕಾರವು ಹಿಂದುಸ್ಥಾನವನ್ನು ಒಂದು ತಿಂಗಳು ಸಹ ಆಳಲು ಸಾಧ್ಯವಿಲ್ಲ.

ಕೊಡಗು ವಿದ್ಯಾಭಿವೃದ್ಧಿ ಸಂಘ.

(ಸ್ವಂತ ಬಾತ್ಮಿದಾರರಿಂದ)

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಜನರಲ್ ಮೀಟಿಂಗ ಈಗ ಎರಡು ಮೂರು ವರ್ಷಗಳಿಂದ ನಡೆಸದೆ ಇದ್ದ ಕಾರಣ ಬಂದು ಜನರಲ್ ಮೀಟಿಂಗನ್ನು ನಡೆಸಬೇಕೆಂದ ಫಂಡಿನ ಕೆಲವು ಮೆಂಬರುಗಳು ಬರಹಸಿಂದ ಮೇಲೆ ಸೆಕ್ರೆಟರಿ ಮೇ. ಚೆಯಂಡ ಥಿಮ್ಮಯ್ಯನವರು ಕೊಟ್ಟ ನೋಟೀಸಿನನುಸಾರವಾಗಿ ಸದರಿ ಫಂಡಿನ ಜನರಲ್ ಮೀಟಿಂಗು ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ಈ ತಾ 8ನೇ ಆದಿತ್ಯವಾರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆ ವರೆಗೆ ನಡೆಯಿತು. ಮೀಯಂ ಅಧ್ಯಕ್ಷರಾದ ರಾ ಬಾ ಕೆ ಚಂಗಪ್ಪನವರು ಗೈರ್ ಹಾಜರಾದುದರಿಂದ ರಾ ಬಾ. ಕೆ ಅಪ್ಪಯ್ಯನವರು ಚೇರ್ ಮ್ಯಾನರಾಗಿ ಆರಿಸಲ್ಪಟ್ಟರು.

1925 ರಿಂದ ಫಂಡಿನ ಜನರಲ್ ಮೀಟಿಂಗನ್ನು ನಡಿಸದೆ ಇದ್ದುದರ ವಿಷಯ ದೀರ್ಘ ಚರ್ಚೆ ನಡೆದು, ಹೀಗೆ ಮಾಡಿದ್ದು ಬಹು ಆಕ್ಷೇಪಕರವೆಂತಲೂ, ಇನ್ನು ಮುಂದೆ ಹೀಗೆ ಮಾಡಬಾರದೆಂತಲೂ ತೀರ್ಮಾನವಾಯಿತು.

1925ರಲ್ಲಿ ನೇಮಿಸಿದ ಆಡಿಟರುಗಳು ತಮ್ಮ ಆಡಿಟ್ ರಿಪೋರ್ಟನ್ನು ಇನ್ನೂ ತನಗೆ ಕೊಟ್ಟಿರುವುದಿಲ್ಲವಾಗಿ ಸೆಕ್ರೆಟರಿಯವರು ತಿಳಿಸಿದರು.

ಸೆಕ್ರೆಟರಿಯವರ ರಿಪೋರ್ಟು ಓದಲಾಯಿತು.

ಮೆ ಐ ಸಿ ಸುಬ್ಬಯ್ಯನವರು ಫಂಡಿನ ರೂಲ್ಸುಗಳನ್ನು ತಿದ್ದುವ ಅವಶ್ಯಕತೆಯನ್ನು ಸೂಚಿಸಿದ ಮೇಲೆ ಸದರ ರೂಲ್ಸನ್ನು ತಿದ್ದುಪಡಿ ಮಾಡಲು ಈ ಕೆಳಗಿನ ಮೆಂಬರುಗಳುಳ್ಳ ಕಮಿಟಿಯು ನೇಮಿಸಲಾಯಿತು. 1 ಮೆ ಐ ಸಿ ಸುಬ್ಬಯ್ಯನವರು, (ಕನ್‌ವೀನರ) 2. ಮೆ ಕರವಂಡ ಚಂಗಪ್ಪನವರು 3. ಮೆ. ಕೇತಿಯಂಡ ಕಾಳಪ್ಪನವರು, 4 ಮೆ. ಬಿಟ್ಟಿಯಂಡ ಕುಟ್ಟಪ್ಪನವರು ಮತ್ತು 5 ಮೆ. ಪಾಲೇಕಂಡ ಮೆದಪ್ಪನವರು.

ಈ ಕಮಿಟಿಯವರು ತಿದ್ದುಪಡಿ ಮಾಡಿದ ರೂಲ್ಸುಗಳನ್ನು ಫೆಬ್ರವರಿ 15 ರೊಳಗೆ ಸೆಕ್ರೆಟರಿಗೆ ತಲಪಿಸಬೇಕೆಂತಲೂ ಸೆಕ್ರೆಟರಿಯವರು ಅದನ್ನು ಕನ್ನಡದಲ್ಲಿ ಛಾಪಿಸಿ ಆಮೇಲೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂತಲೂ, ಈ ರೂಲ್ಸುಗಳನ್ನು ಮಂಜೂರು ಮಾಡಲು ಮಾರ್ಚಿ ತಾ 18ನೇ ಆದಿತ್ಯವಾರ ಜನರಲ್ ಮೀಟಿಂಗು ನಡಿಸಬೇಕೆಂತಲೂ ತೀರ್ಮಾನವಾಯಿತು.

ನಂತರ ಈ ಕೆಳಗಿನ ಸೆಂಟ್ರಲ್ ಕಮಿಟಿಯು ಚುನಾಯಿಸ ಲ್ಪಟ್ಟಿತು. (1) ರಾ. ಬಾ. ಕೆ. ಚಂಗಪ್ಪನವರು (ಅಧ್ಯಕ್ಷ), (2) ಮಿ. ಬಟ್ಟಿಯಂಡ ಕುಟ್ಟಪ್ಪನವರು (ಸೆಕ್ರೆಟರಿಯು) (3) ಮಿ. ಕೇತಿಯಂಡ ಬೆಳ್ಯಪ್ಪನವರು (ಖಜಾಂಚಿಯು) (4) ಮಿ. ಗಳಾಡ ಚನ್ನಿರ ಕುಶಾಲಪ್ಪನವರು, (5) ... ಸಿ. ಉತ್ತಯ್ಯನವರು, (6) ಕರವಂಡ ಚಂಗಪ್ಪನವ ರು, (7) ನಡಿಕೇರಿಯಂಡ ಕಾಳಪ್ಪನವರು, (8) ರಾ. ಸಾ. ...ಮೂಡ ದೇವಯ್ಯನವರು, (9) ಕೋದಂಡ ದೇವಯ್ಯನವರು, (10) ಪಡೆಟ್ಟಿರ ಸಿ. ಸುಬ್ಬಯ್ಯನವರು, (11) ಮನೆ ಯಂಡ ಯಂ. ಬೆಳ್ಯಪ್ಪನವರು, (12) ಪಾಂಡಂಡ ಚಂಗಪ್ಪ ನವರು, (13) ರಾ. ಬಾ. ಕೋದಂಡ ಅಪ್ಪಯ್ಯನವರು, (14) ...ಕಂಡ ಮೇದಪ್ಪನವರು ಮತ್ತು (15) ಕೇತಿಯಂಡ ...ಪ್ಪನವರು.

ಆ ಮೇಲೆ ನಾಡುವಾರು ಸಬ್ ಕಮಿಟಿಗಳು ಚುನಾಯಿಸಲ್ಪಟ್ಟು ಮೀಟಿಂಗು ಬರಖಾಸ್ತು ಮಾಡಲಾಯಿತು.

ವರ್ತಮಾನ ಸಂಗ್ರಹ.

ಒಳದೇಶ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಫೈನಾನ್ಸ್ ಕಮಿಟಿ ಮೀಟಿಂಗು ಈ ತಾ. 19ರಲ್ಲಿ ಪ್ರಾರಂಭವಾಗುತ್ತದೆ.

ಈ ತಾ. 7ನೇ ಶನಿವಾರ ದೇಶದ ಹಲವು ಕಡೆಗಳಲ್ಲಿ ಮ ಳೆ ಬಿದ್ದು ಭತ್ತದ ಬೆಳೆಗೆ ನಷ್ಟವುಂಟಾಗಿದೆಯೆಂದು ತಿಳಿಯು ಬಂದಿದೆ.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಜನರಲ್ ಮೀಟಿಂಗು ಈ ತಾ. 8ರಲ್ಲಿ ರಾ. ಬಾ. ಕೆ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ದೇವಸ್ಥಾನದ ಹಾಲಿನಲ್ಲಿ ನಡೆಯಿತು.

ಈ ವಾರ ಮಡಿಕೇರಿಯಲ್ಲಿ ನೇಟಿವ್ ಕಾಫಿ ಮಂಡಿಗೆ ರೂ. ... ಮತ್ತು ಯೂಲಕ್ಕಿ ಮಣಕ್ಕೆ ರೂ. 62 ಕ್ರಯವಿತ್ತು.

ಮಿ. ನೆಲ್ಲಮಕ್ಕಳ ಸುಬ್ಬಯ್ಯನವರನ್ನು ವೀರಾಜಪೇಟೆ ...ತ್ಯಗಾರರಾಗಿಯೂ, ಮಿ. ಕೋದಂಡ ಕಾಳಪ್ಪನವರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೋರ್ಟು ಶಿರಸ್ತೆದಾರರಾಗಿ ವರ್ಗಾಯಿಸಿರುತ್ತಾರೆ.

ಮಡಿಕೇರಿ ಡಿ. ಪಿ. ಡಬ್ಲ್ಯು. ಆಫೀಸಿನಲ್ಲಿದ್ದ ಮಿ. ಜೀ ... ಕಾರ್ಯಪ್ಪನವರು ಸರ್ಕಾರ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು ಮದ್ರಾಸು ರಾಮಕೃಷ್ಣ ಮಠಕ್ಕೆ ಹೋಗಿ ಸೇರಿ ದರೆಂದು ಕೇಳಿ ಸಂತೋಷ ಪಡುತ್ತೇವೆ.

ಚೀಫ್ ಕಮಿಷನರವರು ಮಾರ್ಚ ತಾ. 14ರಲ್ಲಿ ರಜೆಯ ಲ್ಲಿ ಇಂಗ್ಲೆಂಡಿಗೆ ಹೊರಟು ಹೋಗುವರೆಂದೂ, ಆ ಕಾರಣ ದಿಂದ ಈ ಸಾರಿ ಕೊಡಗು ಕೌನ್ಸಿಲಿನ ಬಡ್ಜೆಟ್ ಮೀಟಿಂಗು ಸ್ವಲ್ಪ ಮುಂಚಿತವಾಗಿ ಅಂದರೆ ಫೆಬ್ರವರಿ ಮೂರನೇ ವಾರದಲ್ಲಿ ನಡೆ ಯುವುದೆಂದೂ ಸುದ್ದಿ.

ತಲಚೇರಿಯ ಭಗವತಿಯಮ್ಮನವರಿಗೆ ವೀರಾಜಪೇಟೆಯಿಂ ದ ... (ಅಂದರೆ ತಲಚೇರಿಗೆ), ವೀರಾಜಪೇಟೆಯ ... ಜಿ. ನಾರಾಯಣಸ್ವಾಮಿಯವರಿಗೆ ಗೋಣಿಕೊಪ್ಪಲಿಂದ ...ಕಕ್ಕೆ ಬಸ್ಸ್ ಸರ್ವಿಸ್ ಇಡಲು ಲೈಸೆನ್ಸ್ ಕೊಡಲಾಗಿದೆ. ...ಕೇರಿಯಿಂದ ಪುತ್ತೂರಿಗೆ ಹಂಗಾಮಿಯಾಗಿ ನಡೆಯುತ್ತಿ ...ಮಿ. ಪಾವಾಢಾರ್‌ರವರ ಮೋಟರ್ ಸರ್ವಿಸಿಗೆ ಖಾ... ಲೈಸೆನ್ಸ್ ಕೊಡಲಾಗಿದೆ.

ಈ ತಾ. 15ರಿಂದ ಕೋಆಪರೇಟಿವ್ ಸುಪರ್‌ವೈಜರುಗಳಾ... ಮಿ. ಕಲಿಯಂಡ ಸೋಮಯ್ಯನವರನ್ನು ವೀರಾಜಪೇಟೆ ಯಿಂದ ನಾಪೋಕ್ಲಿಗೂ, 2. ಮ. ಪೊನ್ನಚಂಡ ಮುದ್ದಪ್ಪನ ವರನ್ನು ನಾಪೋಕ್ಲಿನಿಂದ ಭಾಗಮಂಡಲಕ್ಕೂ, 3. ಮಿ. ಬಳ್ಳ ...ರ ಚಂಗಪ್ಪನವರನ್ನು ಭಾಗಮಂಡಲದಿಂದ ವೀರಾಜಪೇಟೆ ಗೂ, 4. ಮಿ. ಕುಕ್ಕೆಂಗಳ ಪೊನ್ನಪ್ಪನವರನ್ನು ಪೊನ್ನಂಪೇಟೆ ಯಿಂದ ಅಮ್ಮತ್ತಿಗೂ, 5. ಮಿ. ನೆಲ್ಲಮಕ್ಕಳ ಗಣಪತಿಯವರ ನ್ನು ಅಮ್ಮತ್ತಿಯಿಂದ ಮಡಿಕೇರಿಗೂ ಮತ್ತು 6. ಮಿ. ಅಮ್ಮ ...ಂಡ ಪೊನ್ನಪ್ಪನವರನ್ನು ಮಡಿಕೇರಿಯಿಂದ ಪೊನ್ನಂಪೇಟೆ ಗೆ ವರ್ಗಾಯಿಸಿರುತ್ತಾರೆ.

ಶನಿವಾರಸಂತೆ ಹೋಬಳಿಯ ನಿಡ್ತದ ಗುಂಡಪ್ಪನವರು ಕ... ತಾ. 24ರಲ್ಲಿ ತನ್ನ ಮನೆಗೆ ಬೀಗ ಹಾಕಿ ಕುಟುಂಬ ಸಮೇತ ...ಳೆನರಸೀಪುರಕ್ಕೆ ಹೋಗಿದ್ದಾಗ ಆ ರಾತ್ರಿ ಅವರ ಮನೆಗೆ ...ರು ನುಗ್ಗಿ ಸುಮಾರು 200 ರೂಪಾಯಿ ಬೆಲೆಯ ಚಿನ್ನದ ...ವೆಗಳನ್ನು ಕಳವು ಮಾಡಿದರೆಂದೂ, ಪೋಲೀಸಿನವರು ಬೆರಕೆ ... ಮಹನೀಯರ ಸಹಾಯದಿಂದ ಗುಮಾನಿ ಮೇಲೆ ಅರಕ ...ೕಡು ತಾಲೋಕು ಅತ್ತಿ ಗ್ರಾಮದ ಬ್ರಾ. ವೆಂಕಟಕೃಷ್ಣ ...ನೆಂಬವನನ್ನು ಮುತ್ತಿಗೆ ಗ್ರಾಮದಲ್ಲಿ ದಸ್ತಗಿರಿ ಮಾಡಿದಾ ...ವನು ಮಲ್ಲಿ ಪಟ್ಣ ಹತ್ತಿರದ ಕಾಡಿನಲ್ಲಿ ಹೂಳಿಟ್ಟಿದ್ದ ಆ ...ಣಗಳನ್ನು ತೋರಿಸಿಕೊಟ್ಟನೆಂದೂ, ಕೇಸು ಮುಂದರಿಯು ...ಯೆಂದೂ ತಿಳಿಯ ಬರುತ್ತದೆ.

ದಕ್ಷಿಣ ಕೊಡಗಿನ ಶ್ರೀಮಂಗಲ ನಾಡು ಕುರ್ಚಿ ಗ್ರಾ ಮದಲ್ಲಿ ಬರುವ ಮಹಾ ಶಿವರಾತ್ರಿ ಸಮಯದಲ್ಲಿ ನಡೆಯುವ ...ತ್ರೆ ಜಾತ್ರೆಗೆ ಪ್ಲೇಗ್ ಯಾ ಸಾಂಕ್ರಾಮಿಕ ರೋಗ ತಗಲಿ ...ಮೈಸೂರು ಯಾ ಇತರ ಪ್ರದೇಶಗಳಿಂದ ಬರುವ ಜನರನ್ನು ... ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ಯಾ ಸಾಂಕ್ರಾಮಿಕ ...ಗವು ವ್ಯಾಪಿಸುವ ಅಪಾಯ ಉಂಟೆಂದು ಹಜಂತ್ ಚೀ ...ಮೀಷನರ್ ಸಾಹೇಬರು ತಿಳಿಯುವುದರಿಂದ, 1897ನೇ ಇ... ನವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊ ಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ 1928ನೇ ಫೆಬ್ರವರಿ 20 ಮತ್ತು 21ನೇ ತಾರೀಖುಗಳಲ್ಲಿ ನಡೆವ ಜಾತ್ರೆಗೆ ಪ್ಲೇಗ್ ಯಾ ಸಾಂಕ್ರಾಮಿಕ ತಗಲಿದ ಪ್ರದೇಶಗಳಿಂದ ಜನರು ಬರುವ ದನ್ನು ನಿರೋಧ ಮಾಡಿರುವೆಂದೂ ಇದಕ್ಕೆ ವಿರೋಧವಾಗಿ ನದರಿ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥವರನ್ನೆಲ್ಲ ದಸ್ತು ಹಿಂದಕ್ಕೆ ಕಳುಹಿಸಲಾಗುವದೆಂ ದೂ ಚೀಫ್ ಕಮಿಷನರು ಇಷ್ಟರಲ್ಲಿ ನೋಟೀಸು ಪ್ರಕಟಿಸಿರುವರು.

ಹಿಂದೂದೇಶ.

ವೈಸರಾಯರೂ ಈಗ ದೇಶ ಸಂಸ್ಥಾನದಲ್ಲಿ ಪ್ರವಾಸ ಮಾ ಡುತ್ತಿರುವರು.

ಬೊಂಬಾಯಿಯ 9 ಗಿರಣಿಗಳ ಸುಮಾರು 20 ಸಾವಿರ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು. ಇದರಿಂದ ಆ 9 ಗಿರಣಿಗಳೂ ಈಗ ಮುಚ್ಚಲ್ಪಟ್ಟಿವೆ.

ಪ್ರಾಂತೀಯ ಸರ್ಕಾರಗಳ ಮಂತ್ರಿಗಳ ಕಾನ್ಫರೆನ್ಸ್ ಡೆ ಲ್ಲಿಯಲ್ಲಿ ಈ ತಾ. 9ರಲ್ಲಿ ಸರ ಮಹ್ಮದ್ ಶಫಿಯವರ ಅಧ್ಯಕ್ಷತೆಯಲ್ಲಿ ಸೇರಿತು. ವಿದ್ಯಾ ಮತ್ತು ಸ್ಥಳೀಯ ಸರ್ಕಾರದ ಸಂಸ್ಥೆಗಳ ಅನುಭವದ ಜ್ಞಾನವನ್ನು ತಿಳಕೊಳ್ಳುವದೇ ಈ ಸ ಭೆಯ ಉದ್ದೇಶ.

ಬೊಂಬಾಯಿ ಕ್ರಾನಿಕಲ್, ನೇಶನಲ್ ಸ್ವರಾಜ್, ಪ್ರ ತಾಪ ಮತ್ತು ಹಿಂದುಸ್ತಾನ ಪತ್ರಿಕೆಗಳನ್ನು ತಮ್ಮ ದೇಶದಲ್ಲಿ ಕ ಳಿಸುವಂಥವರ ಗತಿಯಾರು ಅಥವಾ ಐದು ವರ್ಷ ಸಜೆ, ಯಾ ಸಾವಿರ ರೂಪಾಯಿ ಜುಲ್ಮಾನೆ ವಿಧಿಸಲಾಗುವದೆಂದು ಆಳ್ವಾರ ಸಂಸ್ಥಾನದ ಮಹಾರಾಜರು ಜಾಹೀರ್‌ನಾಮೆ ಪ್ರಕ ಟಿಸಿರುವರು.

ಮುಸಲ್ಮಾನ ಹೆಂಗಸ್ಸಿನ ... ಸಂಬಂಧ ರಾಜ್ಯವ ನ್ನು ಬಿಟ್ಟು ... ಮಹಾರಾಜರು ಅಮೇರಿಕ ದ ಮಿಸ್ ನೇನ್ಸಿ ಆನ್ ಮಿಲ್ಲರ್ ಎಂಬ ಹುಡುಗಿಯನ್ನು ಮದು ವೆಯಾಗುವರೆಂದೂ, ಅವಳು ಈ ಬೊಂಬಾಯಿಯಲ್ಲಿ ರುವಳೆಂ ದೂ, ಬರುವ ವಾರ ಇಂದೋರಿನಲ್ಲಿ ಮದುವೆಯು ನಡೆಯು ವದೆಂದೂ ವರ್ತಮಾನ.

ಸಿಂಹಳ ದ್ವೀಪದ ಕೊಲೊಂಬದಲ್ಲಿ ತಿಂಗಳಿಗೆ ರೂ. 50 ಸಂಪಾದಿಸುವ ಸುಮಾರು 10 ಸಾವಿರ ಮಲೆಯಾಳಿಗಳು ಇರು ವುದರಿಂದ ಮಲೆಯಾಳ ಜಾತಿಯವರಿಗೂ ಚುನಾವಣೆಯ ಲ್ಲಿ ಓಟಿನ ಹಕ್ಕು ಕೊಡಬೇಕೆಂದು ಅವರದೊಂದು ಪಬ್ಲಿಕ್ ಮೀಟಿಂಗ್ ಮಾಡಿ ಠರಾವು ಪಾಸುಮಾಡಿರುವರು. ಈ ವಿಷ ಯ ಲಾರ್ಡ್ ... ಬರೆದಿರುವರು.

ಕಾಂಗ್ರೆಸ್ಸಿನ ಠರಾವಿನಂತೆ ಅನುಸಾರವಾಗಿ ಮದ್ರಾಸು ಕೌನ್ಸಿಲಿನ ಮೆಂಬರುಗಳಾದ ಮಿ. ಸತ್ಯಮೂರ್ತಿ, ಮಿ. ಆರ್. ಶ್ರೀನಿವಾಸಯ್ಯಂಗಾರ್, ಮಿ. ಕೋಟರೆಡ್ಡಿ, ಮಿ. ವಿಶ್ವನಾ ಥ ದಾಸರವರು, ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರಾದ ದಾ ಕ್ಟರ್ ಯು. ರಾಮರಾಯರೂ ಸಿಲೆಕ್ಟ್ ಕಮಿಟಿಗಳ ಮೆಂಬರು ತನಕ್ಕೆ ರಾಜೀನಾಮೆ ಕೊಟ್ಟಿರುವರು.

ಪಂಡಿತ ಮೋತಿಲಾಲ್ ನೆಹರೂರವರ ಮರಣದಿಂದ ಹಿಂ ದೂ ದೇಶಕ್ಕೆ ಉಂಟಾಗಿರುವ ಅಪಾರ ದುಃಖವನ್ನೂ, ನಷ್ಟವ ನ್ನೂ ಸೂಚಿಸುವುದಕ್ಕಾಗಿ ಹಲವು ಮುಖ್ಯ ಪಟ್ಟಣಗಳಲ್ಲಿ ಪಬ್ಲಿಕ್ ಸಭೆಗಳು ನಡೆದು ಠರಾವುಗಳು ಪಾಸು ಮಾಡಲಾಗಿವೆ. ಈ ತಾ 9ರಲ್ಲಿ ಬೊಂಬಾಯಿ ಕಾರ್ಪೊರೇಶನವರು ವ್ಯಸನ ಸೂ ಚಕ ಠರಾವು ಮಾಡಿ ಆ ದಿನದ ಕೆಲಸವನ್ನು ಬಾಕಿಮಾಡಿ ಮೀ ಟಿಂಗನ್ನು ಮುಂದಕ್ಕೆ ಇಟ್ಟರು.

ರಂಗಿಲ ರಸೂಲ್ ಪುಸ್ತಕದ ಪ್ರಕಾಶಕರಾದ ರಾಜಪಾಲ ರನ್ನು ತಿವಿದು ಘಾಯಪಡಿಸಿದ ಮುಸಲ್ಮಾನ ಖುದ ಬಕ್ಷ ಎಂ ಬಾತನಿಗೆ ಡಿ. ಮೇಜಿಸ್ಟ್ರೇಟರು ವಿವಿಧ ಏಳು ವರ್ಷ ಕಠಿಣ ಸಜೆಯು ಲಾಹೋರ್ ಹೈಕೋರ್ಟಿನಲ್ಲಿ ಖಾಯಂ ಮಾಡಲ್ಪ ಟ್ಟಿದೆ. ಇದಲ್ಲದೆ ಅವನ ಸಜೆ ತೀರಿದ ಮೇಲೆ ಮೂರು ವರ್ಷಗ ಳ ವರೆಗೆ 5000 ರೂಪಾಯಿಯ ಜಾಮೀನು ಕೊಡಬೇಕು ಎಂಬುದನ್ನು ವಜಾ ಮಾಡಿರುವರು.

ಮದ್ರಾಸು ಕಾಂಗ್ರೆಸಿನಲ್ಲಿ ಪಾಸಾದ ಸಂಪೂರ್ಣ ಸ್ವಾ ತಂತ್ರ್ಯದ ಮತ, ಬ್ರಿಟಿಷ್ ಸಾಮಾನುಗಳ ಬಹಿಷ್ಕಾರದ ವಿಷ ಯ ಠರಾವುಗಳನ್ನು ಕುರಿತು ಮಹಾತ್ಮ ಗಾಂಧಿಯವರು—ವರ್ಷ ವರ್ಷವೂ ... ಸಾಧ್ಯವಿಲ್ಲದ ಠರಾವುಗಳನ್ನು ಪಾಸುಮಾ ಡುವದರಿಂದಲೂ, ವರ್ಷ ವರ್ಷ ಪಾಸುಮಾಡಿದ ಠರಾವುಗಳ ನ್ನೂ ... ತಾವರೆ ಇರ ವದರಿಂದಲೂ ಕಾಂಗ್ರೆಸ್ ಮ ಹಾಸಭೆಯ ಗೌರವವು ಕಡಿಮೆಯಾಗುವುದೆಂದೂ, ಇವೆರ ಡು ಠರಾವುಗಳನ್ನು ಚರ್ಚಿಸಿ ಪಾಸುಮಾಡುವಾಗ ಮುಂದಾ ಳುಗಳು ಜವಾಬ್ದಾರಿಯನ್ನು ಚೆನ್ನಾಗಿ ಮನಸ್ಸಿನಲ್ಲಿ ತಿಳಿಲ್ಲವೆಂ ತಲೂ ಹೇಳಿ, ಹಿಂದೂ ಮುಸಲ್ಮಾನ ಒಗ್ಗಟ್ಟಿನ ಠರಾವು ಬಹು ಮುಖ್ಯವಾದದೆಂತಲೂ, ಅದನ್ನು ಭಾರಿಗೆ ತರಲು ಏನ ಸನ್ನು ದ್ದಾಯಕ್ಕೆ ಶೋಧನೆ ಕೊಡಲು ಜನರು ಕೊಂಡಬೇಕೆಂತಲೂ ಸೂಚಿಸಿರುವರು.

ಅಖಿಲಭಾರತ ಪೋಸ್ಟ್ ಮೆನ್ಸರ ಕಾನ್ಫರೆನ್ಸು ಈ ತಾ. 7ರಲ್ಲಿ ಬೊಂಬಾಯಿಯಲ್ಲಿ ಮಿ. ಯಮ್. ಎ. ಜಿನ್ನಾರವರ ಅಧ್ಯ ಕ್ಷತೆಯಲ್ಲಿ ನಡೆಯಿತು. ಸಾರ್ಟಿಂಗ್, ಡೆಲಿವರಿ ಮತ್ತು ಡಿಸ್‌ಪ್ಯಾಚ್ ಇಲಾಖೆಗಳಲ್ಲಿ 75% ಉದ್ಯೋಗಗಳನ್ನು ಯೋ ಗ್ಯ ಪೋಸ್ಟ್‌ಮನ್ನುಗಳಿಗೆ ಕೊಡಬೇಕು, ಬ್ರಾಂಚ್ ಪೋ ಸ್ಟ್‌ಮಾಸ್ಟರುಗಳ ಕ್ಲಾರ್ಕರಾಗಿಯೂ ಅಥವಾ ಸಬ್ ಪೋಸ್ಟ್ ಮಾಸ್ಟರುಗಳಾಗಿಯೂ ಎಡೆಬಿಡದೆ 2 ವರ್ಷ ಯಾ ಹೆಚ್ಚು ಕೆ ಲಸಮಾಡಿದವರನ್ನು ಟೆಸ್ಟ್ ಇಲ್ಲದೆ ಆ ಉದ್ಯೋಗದಲ್ಲಿ ಖಾ ಯಂ ಮಾಡಬೇಕು; 5 ವರ್ಷ ಕೆಲಸ ಮಾಡಿ ಮೃತರಾಗುವ ಪೋಸ್ಟ್‌ಮೆನ್ನರ ಹೆಂಡತಿ ಯಾ ಮಕ್ಕಳಿಗೆ ಅವರ ತಿಂಗಳ ಸಂಬಳವನ್ನು ಪೋಸ್ಟ್‌ಮೆನ್ನರ ಮತ್ತು ಕೆಳಗಿನ ... ಕೊಳ್ಳಲು ತಕ್ಕ ಕಟ್ಟಡಗಳನ್ನು ... ಮತ ವರೆಗೆ ಅವರ ಸಂಬಳದ ಶೇಕಡ 25 ರಷ್ಟು ಮನೆಬಾಡಿಗೆ ಕೊಡಬೇಕು ಎಂಬ ಮುಂತಾದ ಠರಾವುಗಳು ಪಾಸುಮಾಡ ಲಾದವು.

ವಿದೇಶ.

ಬ್ರಿಟನ್ನಿನ ಪಾರ್ಲಿಮೆಂಟಿನ ಜನರಲ್ ಚುನಾವಣೆಯು ಇನ್ನು ಬರುವ ವರ್ಷದೊಳಗೆ ಆಗಬಹುದೆಂಬ ಸೂಚನೆಯು ಹೊರಬಿದ್ದಿದೆ.

ಇಂಗ್ಲೆಂಡಿನ ಥೇಮ್ಸ್ ನದಿಯಲ್ಲಿ ವಿಶೇಷವಾದ ಪ್ರವಾ ಹವುಂಟಾಗಿ ಲಂಡನಿನಲ್ಲಿ ವಿಪರೀತ ನಷ್ಟವುಂಟಾಗಿದೆ. ನಾ ನಾ ಮನೆಮಾರುಗಳಿಗೆ ನಷ್ಟ ಸಂಭವಿಸಿರುವದಲ್ಲದೆ ಕೆಲ ವರು ಮೃತಪಟ್ಟಿರುವರು.

ಈ ತಾ. 8ರಲ್ಲಿ ಅಫ್ಘಾನಿಸ್ಥಾನದ ಅಮೀರರು ಇಟಲಿಯ ಮುಖ್ಯ ಪಟ್ಟಣವಾದ ರೋಮಿಗೆ ತಲಪಿದಾಗ ಅಲ್ಲಿಯ ರಾಜರಾ ಣಿಯರು ಮಂತ್ರಿ ಮಂಡಲ ಸಮೇತ ಅಮೀರರಿಗೆ ಸ್ವಾಗತವನ್ನೀ ಯಿದರು. ಅಲ್ಲಿಯ ಜನರೂ ಸ್ವಾಗತವನ್ನೀಯುವದರಲ್ಲಿ ತುಂ ಬಾ ಕುತೂಹಲವನ್ನು ತೋರಿಸಿದರು. ಅಲ್ಲಿ ಅಮೀರರು ರಾಜರ ಅತಿಥಿಗಳಾಗಿದ್ದರು.

ಅಮೇರಿಕದ ಜನರು ಮುಖ್ಯವಾಗಿ ಸ್ತ್ರೀಯರು ಮಿಸ್ ಮೇಯೋಳ ಚಳವಳದ ವಿರೋಧವಾಗಿ ವ್ಯಾಖ್ಯಾನ ಮಾಡಲು ಶ್ರೀಮತಿ ಸರೋಜಿನಿ ದೇವಿಯವರನ್ನು ಅಮೇರಿಕಕ್ಕೆ ಆಮಂತ್ರಿ ಸಿರುವರು. ಈ ಆಮಂತ್ರಣವನ್ನು ಸರೋಜಿನಿಯವರು ಸ್ವೀಕರಿಸುವದು ಉತ್ತಮವೆಂದು ಮಹಾತ್ಮ ಗಾಂಧಿಯವರು ಅಭಿಪ್ರಾಯ ಕೊಟ್ಟಿರುವರು.

ಅಫ್ಘಾನಿಸ್ಥಾನದ ಅಮೀರರು ಈಜಿಪ್ಟಿನಲ್ಲಿದ್ದಾಗ, ಆ ದ್ದೇಶದ ಸ್ವತಂತ್ರಕ್ಕಾಗಿ ಇಂಗ್ಲೀಷರೊಡನೆ ... ಯು ದ್ಧಮಾಡಿ ಹೇಗೆ ಜಯಶೀಲರಾದರೆಂದು ಹೇಳಿದರು. ಇದು ಅಲ್ಲಿಯ ಬ್ರಿಟಿಷ್ ಉದ್ಯೋಗಸ್ಥರಲ್ಲಿ ಗಲಿಬಿಲಿ ಹುಟ್ಟಿಸಿತು. ಇದು ಬ್ರಿಟಿಷರ ದೃಷ್ಟಿಯಿಂದ ರಾಜದ್ರೋಹವಾದರೂ ಅ ಮೀರರಿಗೆ ಅವರಿಂದೇನೂ ಮಾಡಲು ಸಾಗಲಿಲ್ಲ.

ರಷ್ಯಾದ ಸೋವಿಯೆಟ್ ಸರ್ಕಾರದಲ್ಲಿ ವಿರೋಧಪಕ್ಷದ ಬಾಷ್‌ಲೀನಾ ಎಂಬಲ್ಲಿ ಮೃತಪಟ್ಟ ಒಬ್ಬ ಗಂಡನ ಹೆಣ ವನ್ನು ಶವಪೆಟ್ಟಿಗೆಯಲ್ಲಿ ಹಾಕಿ ಮಣ್ಣು ಹೊಡೆಯುವದ ರಲ್ಲಿ ಅವನಿಗೆ ಧರಿಸಿದ್ದ ಕೋಟಿನ ಜೇಬಿನಲ್ಲಿ ಕಂಡ ಒಂದು ಕಾಗದ ಚೂರನ್ನು ತೆಗೆದು ನೋಡ ... ಅನೇಕ ... ಸ್ಟಿಮಿಸ್ ಲಾಟರಿಯಲ್ಲಿ ಗೆದ್ದ ಒಂದು ... ಇನಾಮಿನ ಟಿಕೇಟಾಗಿತ್ತು. ಬಡತನದಲ್ಲಿ ... ರಾಗಿದ್ದ ಅವಳಿಗೆ ದೇವರ ಇದೊಂದು ದೊಡ್ಡ ಸಹಾಯವಾಯಿತು.

ಮನೆ ಬೇಕಾಗಿದೆ.

ದಕ್ಷಿಣ ಕೊಡಗಿನಲ್ಲಿ 30 ಎಕ್ರೆ ಭತ್ತದ ವ್ಯವಸಾಯ, ... ಎಕ್ರೆ ಕಾಫಿ, ಕಿತ್ತಳೆ, ಏಲಕ್ಕಿ ಇರುವ ಜಮೀನನ್ನು ಸ್ವಂತ ಜವಾಬ್ದಾರಿಯಲ್ಲಿ ನಡೆಸಲು ಶಕ್ತನಾದ ಒಬ್ಬ ರೈಟ ರು ಬೇಕಾಗಿದೆ. ಅನುಭವಕ್ಕೆ ತಕ್ಕ ಸಂಬಳವು ಕೊಡಲ್ಪಡು ತ್ತದೆ. ಅಪೇಕ್ಷೆಯುಳ್ಳವರು ಕೆಳಗಿನವರಿಗೆ ಬರೆಯಿರಿ.

'X'
C/o Post master
Kunkolam
Malabar.

4—2

ಬೇಕಾಗಿದೆ.

ಶ್ರೀಕಾವೇರಿ ಧರ್ಮದಾಯ ಪುಸ್ತಕಗಳಿಗೆ ಏಜೆಂಟರು ಗಳು ಬೇಕಾಗಿದೆ. ಪುಸ್ತಕ ಮಾರುವ ಪೊಬಲಗಿನ ಮೇ ಲೆ ರೂಪಾಯಿಗೆ ನಾಲ್ಕಾಣೆಯಂತೆ ಕಮಿಶನ್ ಕೊಡಲಾಗು ತ್ತದೆ. ಕೆಲಸ ಮಾಡಲು ಅಪೇಕ್ಷಿಸುವವರು ಜನವರಿ ತಿಂಗಳ ಅಖೈರೊಳಗೆ ಮಡಿಕೇರಿ ಮುದ್ರಾಲಯ ಇಲಾಖೆಯ ಆಫೀಸಿನ ಲ್ಲಿ ಹಾಜರಾಗಬೇಕು. ಏಜೆಂಟರುಗಳು 200 ರೂಪಾಯಿಗೆ ಜಾಮೀನು ಕೊಡಬೇಕು.

ಕೆ. ಚೆಂಗಪ್ಪ,
ಪ್ರೆಸಿಡೆಂಟ್.

2—2

ಪತ್ರವ್ಯವಹಾರ

[ಪತ್ರದಾತರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕ ರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ಮತ್ತು ಮೈಸೂರು.

ಕೊಡಗು ದೇಶವು ಶ್ರೀಮೂಲ ಕಾವೇರಮ್ಮೆ (ಲೋ ಪಾಮುದ್ರೆ) ಯು ಉದ್ಭವವಾದ ಮತ್ತು ಅನೇಕ ಋಷಿಗಳು ತಪಸ್ಸು ಮಾಡಿದ ತಾಣಕಾಗಿರುವನ್ನು ಸುಂದರ ವಾದಿವುಂ ಧ ಪುಣ್ಯಗಳಿಸಿದ ಮತ್ತು ಕ್ಷತ್ರಿಯತ್ವವನ್ನು ಉಳಿಸಿಕೊಂಡಿರುವ ದೇಶವಾಗಿಯೂ, ಈ ದೇಶೀಯರಾದ ಕೊಡವರು ಬಲ್ಲ ಧೀರರಾ ಯಾಗಿಯೂ ಇರುತ್ತಿ. ಈ ದೇಶವು ಯಾವ ಪೇಟೆಯೊಂದಿಗೆ ಕಡಿದೆ ಬರುತ್ತಿರುವ ಇರುವ ದೇಶವಾಗಿದ್ದು ರಾಜರುಗಳಿಂದ ಆಳಿಕೊಂಡಿದ್ದ ದೇಶವು. ರಾಜರ ಆಳಿಕೆಯಲ್ಲಿ ನ್ಯಾಯ ಶಾಸ್ತ್ರದಿಂದ ಕೊಡವರು ಅವರ ಬುದ್ಧಿಯನ್ನು ಕಾಪಿನ ನ್ನ

...ಕಾರದ ಜನರಿಗೆ ಕೊಟ್ಟು ಅವರನ್ನು ಕರೆಕೊಂಡು ಬಂದು ಈ ದೇಶದಲ್ಲಿ ನೆಲೆಗೊಳಿಸಿದಾಗಿರುತ್ತೆ. ಇತ್ತಲಾಗಿ ಇಂಡಿಯಾ ದೇಶಸ್ಥರಿಗೂ, ಕುಂಪನಿ ಸರಕಾರದವರಿಗೂ ಸ್ವರಾಜ್ಯದ ಚಳವಳಿ ಹೊರಟ ಈ ಸಮಯದಲ್ಲಿ ಕರ್ಣಾಟಕದವರು ಈ ಕೊಡವ ದೇಶೀಯರೊಂದಿಗೆ ಏಕೀಕರ್ಣಕ್ಕೆ ಸೇರಬೇಕೆಂದು ಕೇಳ ತೊಡಗಿರುತ್ತಾರೆ. ನಮ್ಮ ಈ ದೇಶದ ಕೆಲವು ಮುಂದಾಳುಗಳು ಈ ದೇಶಕ್ಕೆ ಬೇರೆ ದೇಶೀಯರಿಗೆ ಇರುವಂತೆ ತಮಗೂ ಒಂದು ಕೌನ್ಸಿಲ್ ಕೊಡಬೇಕು, ಕೂಡದಿದ್ದಲ್ಲಿ ತಮ್ಮ ಈ ದೇಶವನ್ನು ಮದ್ರಾಸ್ ಸಂಸ್ಥಾನಕ್ಕೆ ಸೇರಿಸಬೇಕಾಗಿ ಒಂದು ಚಳವಳಿಯನ್ನು ಹೊರಡಿಸಿದಾಗ್ಯೂ ಒಂದು ಸಿವಾರನ್ ಕೌನ್ಸಿಲ್ ಕೊಟ್ಟು ಮಜಕೂರ್ ಚೀಫ್ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರಬೇಕೆಂದು ಮಾಡಿರುವದರಿಂದ ನಮ್ಮ ಈ ದೇಶೀಯರಿಗೆ ಯಾವ ಪ್ರಯೋಜನವೂ ಇಲ್ಲದಂತೆ ಆಗಿರುವದಿಲ್ಲ. ನಮಗೆ ಸ್ವರಾಜ್ಯ ಕೊಡುವದೆಂ [illegible] ದ. ಒಕ್ಕಣಿಸುವದಿಲ್ಲವೆ?

ಇತ್ತೀಚಿನ ನಮ್ಮ [illegible] ಕ್ಕೆ ಸವಧಾನ್ಯಗಳನ್ನು ಒದಗಿಸಿಕೊಡುತ್ತಿರುವ, ಜನನ್ಮಾಗಿ [illegible] ರುವ ಮತ್ತು ನೋಡಿರುವ ನಮ್ಮ ಶ್ರೀಮೂಲ ಕಾವೇರ್ಯಮ್ಮನ ಆಶ್ರಯದಿಂದ ಫಲಭರಿತವಾಗಿರುವ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದು ಒಂದು ಠರಾವು ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ ಕಳುಹಿಸಿರುವರಾಗಿ ತಿಳಿಯುತ್ತೇನೆ.

ಸದರಿ ಠರಾವಿಗೆ ನಮ್ಮ ಕೊಡಗು ಸರಕಾರದವರು ಮತ್ತು ಮೈಸೂರು ಮಹರಾಜರು ಸಹ ಪೂರ ಮತ್ಯಾಸ ಕೊಡುವರಾಗಿಯೂ ಈ ಬಾಬಿನಲ್ಲಿ ಕೊಡಗು ದೇಶೀಯರ ಯಾವದೊಂದು ತಕರಾರು ಇರುಲಿಕ್ಕಿಲ್ಲವೆಂದೂ ಈ ಲೇಖಕನ ಮನೋಭಾವವಾಗಿರುತ್ತೆ. ಈ ಬಾಬಿನಲ್ಲಿ ನಾಡು ನಾಡುಗಳಲ್ಲಿ ಒಡನೆ ಮೀಟಿಂಗುಗಳನ್ನು ಮಾಡಿ ದೇಶೀಯರ ಇರಾದೆಯನ್ನು ತೆಗೆಯುವಂತೆ ಠರಾವು ಕಳುಹಿಸಿದ ಮ. ರಾ. ರಾ. ಉತ್ತೈಯ್ಯನವರು ತೊಂದರೆ ತೆಗದುಕೊಂಡು ಈ ಕೆಲಸವನ್ನು ಕೊನಗಾಣಿಸುವರಾಗಿಯೂ, ಈ ಠರಾವಿಗೆ ಬೇರ ಕೌನ್ಸಿಲ್ ಮೆಂಬರುಗಳು ಪೂರ ಮತ್ಯಾಸ ಕೊಡುವರಾಗಿಯೂ ನನ್ನ ವಿನಂತಿ.

ಉ ಮೊಣ್ಣೈಯ್ಯ.

ಪಾಡಿ ಸುಬ್ರಾಯ ದೇವರ ವೃದ್ಧ ಸಂಘ.

ಅಯ್ಯಾ,

ತಾರೀಕು 31—12—27ರಲ್ಲಿ ಪಾಡಿ ಸುಬ್ರಾಯ (ಇಗ್ಗುತಪ್ಪ) ದೇವರ ವೃದ್ಧ ಸಂಘದ ಕಮಿಟಿ ಮೀಟಿಂಗ್ ಒಂದು ನಡೆದುದರಿಂದ ಸದರಿ ಸಂಘದ 10ನೇ ವಾರ್ಷಿಕ ಆರಾಧನೆಯು ಈ ಜನವರಿ ತಾರೀಕು 28ನೇ ಶನಿವಾರ ದಿನ ನಡೆಯಬೇಕಾಗಿಯೂ, (ಸದರಿ ದಿನದ ಅಧ್ಯಕ್ಷತೆಗೆ ರಾವ್ ಸಾಹೇಬ್ ಬೋಡಿಮಣಿಯಂಡ ಸ ಬ್ಬಯ್ಯನವರನ್ನು ಕೇಳಿಕೊಂಡಿದೆ. ಸದರಿಯವರು ಗೈರುಹಾಜರಿದಲ್ಲಿ ಆ ದಿನ ಹಾಜರಿದ್ದವರ ಪೈಕಿ ಒಬ್ಬರನ್ನು ಆರಿಸಿಕೊಳ್ಳಲಾಗುವದು.) ಕೊಡಗಿನ ಎಲ್ಲಾ ಭಾಗದ ಪಕ್ಕದ ಈ ಸಂಘದ ಮೆಂಬರರಾಗಿರುವದರಿಂದ ಅವರು ಮತ್ತು ಅವರ ಬಂಧು ಬಾಂಧವರಿಂದೊಡಗೂಡಿ ಆ ದಿನ 11 ಗಂಟೆಗೆ ಸರಿಯಾಗಿ ದಯಮಾಡಿಸಬೇಕಾಗಿಯೂ, ಮೆಂಬರುಗಳಲ್ಲದ ದೇಶೀಯರು ಸಹ ಹಾಜರಾಗ ಬಹುದಿವೆಯೆಂದೂ, ಆ ದಿನ ದೇವರ ಬಲಿ ಹೊರಡುವದೆಂದೂ ಎಲ್ಲಾ ಬಾಬಿನ ಹರಕೆ ಕಾಣಿಕೆ ಒಪ್ಪಿಸಬಹುದೆಂದೂ ಸದರಿ ಸಂಘದ ಪ್ರೆಸಿಡೆಂಟರು ದೇಶೀಯರಿಗೆ ತಿಳಿಸಬಹುದಾಗಿ ತೀರ್ಮಾನವಾಗಿರುತ್ತೆ.

" ಹಾಜರಿದ್ದವ."

ಕಂದಾಯ ಮಾಫಿ.

ಅಯ್ಯಾ,

ನಾಪೋಕ್ಲು ನಾಡಿನ ಪೈಕಿ ಹೆಚ್ಚಾಗಿ ಹಳೇ ಬಾಡಿನಾಡಿನ ಮೂಸಿಗದ್ದೆಗಳಲ್ಲೂ ಚೆನ್ನಾಗಿ ಇದ್ದಾಗ್ಯೂ ಕದರು ಹೊರಡುವ ಕಾಲದಲ್ಲಿ ಮಳೆ ಇಲ್ಲದ ಬೇಸಿಗೆಯಿಂದ ಕಷ್ಟದಲ್ಲಿ ಹೊರಟ ಕದರು ಬಗ್ಗಲಿಲ್ಲವೆಂದೂ ಪೂರ ಬೆಳೆಯಿಂದೂ ಅನೇಕ ಅರ್ಜಿಗಳ ಪೈಕಿ ಕೆಲವಕ್ಕೆ ಕಂದಾಯ ಮಾಫು ಈ ವರ್ಷದ ಜಮಾಬಂದಿ ಆಫೀಸರಿಂದ ದೊರಕಿದಕ್ಕೆ ರೈತರು ಧನ್ಯರಾಗುತ್ತಾರೆ. ಆದರೆ ಜಮಾಬಂದಿ ಕಳೆದು ಬರುವ ಅರ್ಜಿ ತನಿಖೆ ಮಾಡಲಾದೀತಾಗಿ ಜಮಾಬಂದಿ ದಿನವೇ ಆಫೀಸರು ಹೇಳಿದ ಬಾಬನಲ್ಲಿ ರೈತರು ವ್ಯಸನಪಡಬೇಕಾಗಿದೆ. ಯಾಕೆಂದರೆ—ಅನೇಕ ರೈತರಿಗೆ ಜಮಾಬಂದಿಸಂಗತಿಯೇ ತಿಳಿಯದು. ಆದದರಿಂದ ಇನ್ನು ಬರುವ ಅರ್ಜಿಗಳಿಗೂ ನ್ಯಾಯ ಕಂಡಲ್ಲಿ ಕಂದಾಯ ಮಾಫು ಕೊಡಬೇಕಾದುದು ಧರ್ಮ.

ರೈತ.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಡ್ ಅಂಡ್ ಪೂವರ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್.
ಹೆಡ್ ಆಫೀಸು—ಮೈಸೂರು (ದ. ಇಂಡಿಯಾ.) ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ಇದೇ ಪತ್ರಿಕೆಯ ಹಿಂದಿನ ಎರಡು ಸಂಚಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುವ ಶೇರು ಮತ್ತು ಬಾಂಡು ಹೋಲ್ಡರುಗಳ ಅಲ್ಲದೆ ಅದರಿಂದೀಚೆಗೆ ನೂರಾರು ಜನ ದೊಡ್ಡ ಮನುಷ್ಯರುಗಳು ಕೊಡಗು ದೇಶದಲ್ಲಿ ಸಂಘದ ಬಾಂಡುಗಳನ್ನು ಮತ್ತು ಶೇರುಗಳನ್ನು ತೆಗೆದುಕೊಂಡ ಕಾರಣ ಸ್ಥಳ ಸಂಕೋಚದಿಂದ ಅವರುಗಳ ಪೈಕಿ ಕೆಲವರ ಹೆಸರುಗಳು ಮಾತ್ರ ಈ ಕೆಳಗೆ ಪ್ರಕಟಿಸಲ್ಪಟ್ಟಿರುತ್ತೆ. ಬಾಕಿರುವವರ ಹೆಸರುಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವದು. ಇದುವರೆಗೆ ಕೊಡಗು ದೇಶದಲ್ಲಿ ಸೇರತಕ್ಕ ಶೇರು ಮತ್ತು ಬಾಂಡು ಹೋಲ್ಡರುಗಳು ತಾವು ಕೊಡಬೇಕಾದ ಶೇರು ಧನ ಬಾಂಡು ಒಂದಕ್ಕೆ ತಿಂಗಳು ಒಂದಕ್ಕೆ 1 ಆಣೆ ಪ್ರಕಾರ ಆಗುವ ಹೋದ ವರ್ಷದ ಬಡ್ತಿ 3 ರೂ ಗಳನ್ನು ಪಾವತಿ ಮಾಡಿ ಸಾಲಗಳನ್ನು ಪಡೆಯುವುದಕ್ಕೆ ಡ್ರಾಯಿಂಗ್‌ನಲ್ಲಿ ಅರ್ಹರಾಗ ತಕ್ಕದಲ್ಲಾಗಿ ಕೇಳಿಕೊಳ್ಳೋಣಾಗಿದೆ.

ನಂ.	ಹೆಸರು ಮತ್ತು ವಿಳಾಸ	ತೆಗದುಕೊಂಡಿರುವ ಶೇರು ಅಥವ ಬಾಂಡುಗಳ ಸಂಖ್ಯೆ.	ಶೇರು ಅದವಾ ಬಾಂಡುಗಳ ಮೊಬಲಗು
1	ಮೆ|| ಬಿ ಎಸ್. ಐಯ್ಯಪ್ಪನವರು, ಟೆಂಪಲ್ ಮೇನೇಜರು, ಮಡಿಕೇರಿ	1	50
2.	,, ಯಂ ಎಸ್ ವೆಂಕಟೇಶ್ವರ ಅಯ್ಯರು, ಕೌನ್ಸಿಲ್ ಅಫೀಶ್ಯಲ್ ರಿಪೋರ್ಟರು, ಮಡಿಕೇರಿ.	1	50
3.	,, ಯಂ. ಎಂ ಐಯ್ಯಪ್ಪನವರು, 14/3ನೇ ಮದ್ರಾಸ್ ರೆಜಿಮೆಂಟು, ಮಡಿಕೇರಿ.	1	50
4	,, ಬಿ ಯಸ್ ಸುಬ್ಬೈಯ್ಯನವರು, ಪ್ರೋಸೆಸ್ ಸರ್ವರು, ಸಬ್‌ಜಡ್ಜರ ಕೋರ್ಟು, ಮಡಿಕೇರಿ.	1	50
5.	,, ಪಿ ಮಂದಣ್ಣನವರು, ಹೆಡ್ ಕಾನ್‌ಸ್ಟೇಬಲರು ಮಡಿಕೇರಿ.	2	100
6	,, ಯಂ ಜಿ ಮಾಚೈಯ್ಯನವರು, ಡ್ರಾಯಿಂಗ್ ಮಾಸ್ಟರು, ಸಂಟ್ರಲ್ ಹೈಸ್ಕೂಲ್, ಮಡಿಕೇರಿ.	1	50
7.	,, ಪಿ ಸಿ. ಸುಂದಪ್ಪನವರ , ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸು ಕ್ಲಾರ್ಕರು, ಮಡಿಕೇರಿ	1	50
8	,, ಕ ಯಂ ಬೆಳ್ಯಪ್ಪನವರು, ಸಬ್‌ಜಡ್ಜರ ಕೋರ್ಟು ಶಿರಸ್ತೇದಾರರು ಮಡಿಕೇರಿ	1	50
9	,, ಯಂ ಯಸ್ ಮಾದಪ್ಪನವರು, ಸಬ್‌ಮೇಜಿಸ್ಟ್ರೇಟರ ಕೋರ್ಟು ಕ್ಲಾರ್ಕರು, ಮಡಿಕೇರಿ	1	50
10	,, ಬಿ. ಯಂ ಚಂಗಪ್ಪನವರು, ಕ್ರಿ ಕ್ಲಾರ್ಕರು, ಸಬ್‌ಮೇಜಿಸ್ಟ್ರೇಟರ ಕೋರ್ಟು ಮಡಿಕೇರಿ	1	50
11	,, ಯಂ ಯಂ ಪೂವೈಯ್ಯನವರು, ಮುನಿಸೀಪಲ್ ಓವರ್ಸಿಯರು, ಮಡಿಕೇರಿ	2	100
12	,, ಎ ಎಸ್ ಮಾದಪ್ಪನವರು, ಮುನಿಸೀಪಲ್ ಕ್ಲಾರ್ಕರು, ಮಡಿಕೇರಿ	1	50
13	,, ಪಿ ಡಿ. ಅಪ್ಪಣ್ಣನವರು, ಮೇನೇಜರು, ಕಡಗುಕಲ್ಲು ಎಸ್ಟೇಟು, ಮಡಿಕೇರಿ	1	50
14	,, ಬಿ. ಯಂ ಕುಶಾಲಪ್ಪನವರು, ಹೆಡ್‌ಕ್ಲಾರ್ಕರು, ಪೋಲೀಸ್ ಆಫೀಸು ಮಡಿಕೇರಿ.	1	50
15.	,, ಯಂ ಜಿ. ಚಿಣ್ಣಪ್ಪನವರು, ಕ್ಲಾರ್ಕರು, ಪೋಲೀಸು ಆಫೀಸು, ಮಡಿಕೇರಿ.	1	50
16.	,, ಯಸ್ ಜಿ. ಅಪ್ಪಚ್ಚನವರು, ಮರ್ಚೆಂಟರು, ಮಡಿಕೇರಿ	2	100
17.	,, ಡಿ. ಕ ರಾಮಚಂದ್ರೈಯ್ಯನವರು, ಕ್ಲಾರ್ಕರು, ಪೋಸ್ಟಾಫೀಸು, ಮಡಿಕೇರಿ.	1	50
18.	,, ಯಂ ಯಸ್. ಮೇದಪ್ಪನವರು ರೈಟರು, ಬಿಳಿಗೇರಿ ಗ್ರಾಮ, ಮಡಿಕೇರಿ.	1	50
19.	,, ಯಂ. ಯಂ ಮಾದಪ್ಪನವರು, ಅಬ್ಯಾಲ್ ಎಸ್ಟೇಟ್ ಮೇನೇಜರು, ಮಡಿಕೇರಿ.	1	50
20	,, ಸಿ ಕೆ ಅಪ್ಪಚ್ಚನವರು, ಸ್ಕೂಲ್ ರೋಡ್, ಮಡಿಕೇರಿ	1	50
21	,, ಯಂ ಡಿ ಜಂದದ ಶಿ..., ಸಬ್‌ಜಡ್ಜರ ಕೋರ್ಟು ಪ್ರೋಸೆಸ್ ಸರ್ವರ , ಮಡಿಕೇರಿ	1	50
22	,, ವೈ ಡಿ ಪೂವ್ವಯ್ಯನವರು, ಪಿ ಡಬ್ಲ್ಯು. ಡಿ ಆಫೀಸು ಓವರ್ಸಿಯರು, ಮಡಿಕೇರಿ	1	50
23.	,, ಹಚ್ ಸಿ ರಾಜರವರು, ವಿಕ್ಟೋರಿಯ ಗ್ಯಾರೇಜ್ ಮೇನೇಜರ್, ಮಡಿಕೇರಿ.	2	100
24	,, ಕ. ವೆಂಕಟರಾಮೈಯ್ಯರು, ಕಮಿಶನರ್ಸ್ ರೆವಿನ್ಯೂ ಆಫೀಸು ಹೆಡ್ ಕ್ಲಾರ್ಕರು, ಮಡಿಕೇರಿ.	1	50
25.	,, ಯು ಪಿ. ನಂಜುನಾಥೈಯ್ಯನವರು, ರಿಟಯರ್ಡ್ ಜುಡಿಶ್ಯಯಲ್ ಶಿರಸ್ತೇದಾರರು, ,,	1	50
26	,, ಯು ಯಂ ಕೃಷ್ಣರಾಯರು, ಸೆಂಟ್ರಲ್ ಹೈಸ್ಕೂಲ್ ಮಾಸ್ಟರು, ಮಡಿಕೇರಿ.	1	50
27.	,, ಕೆ ಎ ಶೇಷಗಿರಿರಾಯರು ಎಸ್ಟೇಟು ಮೇನೇಜರು, ಶ್ರೀಮತಿ ಡಿ ಸಾಕಮ್ಮನವರ ಕುಸುಬೂರು ಎಸ್ಟೇಟು, ಸೋಮವಾರಪೇಟೆ.	1	50
28	,, ಬಿ. ಜಿ. ಮಂದೈಯ್ಯನವರು, ಬಿಳಿಗೇರಿ ಗ್ರಾಮ, ಮಡಿಕೇರಿ	1	0
29.	,, ಯನ್. ಕೆ ಪೂವೈಯ್ಯನವರು, ಟೆಂಪಲ್ ಶ್ಯಾನುಭೋಗರು, ಮಡಿಕೇರಿ.	1	50
30	,, ಕ. ಯಂ. ಅಪ್ಪಣ್ಣನವರು, ಟೈಲರು, ಮಡಿಕೇರಿ	1	50
31	,, ಬಿ ಐ ಕುಟ್ಟಪ್ಪನವರು, ಪೋಲೀಸ್ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರವರು, ಮಡಿಕೇರಿ.	1	50
32	,, ಜಿ. ಗಣಪತ್ಯಯ್ಯವರು, ಓವರ್ಸಿಯರು, ಪೊನ್ನಂಪೇಟೆ.	2	100
33.	,, ಜಿ. ಕೆ. ಐಯ್ಯಪ್ಪನವರು, ಓವರ್ಸಿಯರು, ಗಟ್ಟದಳ್ಳ ಎಸ್ಟೇಟು, ಶಿದ್ದಾಪುರ	2	100
34	,, ಕೆ ಯಂ. ಕರುಂಬೈಯ್ಯನವರ , ಹೆಟ್ಟಳ್ಳಿ	1	50
35.	,, ಯಂ. ಜಿ. ವೆಂಕೋಬಾಚಾರ್ಯರು ಟೈಲರು, ಮಡಿಕೇರಿ	1	50
36.	,, ಬಿ. ಜಿ. ದೇವೈಯ್ಯನವರ , ಪೋಲೀಸ್ ಕಾನ್‌ಸ್ಟೇಬಲರು, ಮಡಿಕೇರಿ.	1	50
37.	,, ಯಂ. ಯಸ್. ಪೂವಪ್ಪನವರ , ಪೋಲೀಸ್ ಹೆಡ್‌ಕಾನ್‌ಸ್ಟೇಬಲರು, ಮಡಿಕೇರಿ.	1	50
38.	,, ಯಂ. ಯಸ್ ಗಣಪತ್ಯಯ್ಯರು, ಪೋಲೀಸ್ ಸಬ್‌ಇನ್‌ಸ್ಪೆಕ್ಟರು, ಮಡಿಕೇರಿ	2	100
39.	,, ಎ ಬಿ ಅಪ್ಪಚ್ಚನವರು, ಮರಗೋಡು ಎಸ್ಟೇಟ್ ರೈಟರು, ಸುಂಟಿಕೊಪ್ಪ	1	50
40.	,, ಕ. ಡಬ್ಲ್ಯು. ಜೋಯ್ಯೈಯ್ಯನವರು, ಹೆಡ್‌ಕಾನ್‌ಸ್ಟೇಬಲರು, ಟವುನ್ ಸ್ಟೇಷನ್, ಮಡಿಕೇರಿ.	1	50
41.	,, ಜಿ ಎ ಮುದ್ದಪ್ಪನವರು, ಟೈಲರು, ಸುಂಟಿಕೊಪ್ಪ.	1	50
42.	,, ಎ. ಯಸ್. ಮಾಚೈಯ್ಯನವರು, ಟೈಲರು, ಸುಂಟಿಕೊಪ್ಪ.	1	50
43.	,, ಕೆ ಚಂಗಪ್ಪನವರು. ನಾಡ ಕ್ಲಾರ್ಕರು, ಸುಂಟಿಕೊಪ್ಪ	1	50
44.	ಶ್ರೀ. ಕಮಲಾಕ್ಷಮ್ಮನವರು, ವೆ. ಎ. ರಾಘವೈಯ್ಯಾಚಾರರ ಪತ್ನಿ, ದೇಚೂರು, ಮಡಿಕೇರಿ	1	50
45.	ಮ|| ಎ. ರಾಮಪ್ಪೈಯ್ಯಾಚಾರ್ಯರು, ಗೋಲ್ಡ್‌ಸ್ಮಿತ್, ದೇಚೂರು, ಮಡಿಕೇರಿ.	1	50
46.	,, ಸಿ. ಕೆ. ಮಂದಪ್ಪನವರು, ವಿಲೇಜ್ ಪೋಸ್ಟ್‌ಮ್ಯಾನರು, ಮಡಿಕೇರಿ ಪೋಸ್ಟು ಆಫೀಸು	1	50
47.	,, ಬಿ ಎ. ರಾಘವೇಂದ್ರರಾಯರು, ಅಸಿಸ್ಟೆಂಟು ಕಮಿಷನರ್ಸ್ ಆಫೀಸು ಕ್ಲಾರ್ಕರು, ಮಡಿಕೇರಿ	1	50
48	,, ಎ. ವೀರಾಸಾಮಿ ಪೆರುಮಾಳ್‌ರವರ , ಬಟ್ಲರು, ಸ್ಕೂಲ್ ರೋಡು, ಮಡಿಕೇರಿ.	1	50
49	,, ಥಾಮಸ್ ಡಿಸೋಜರವರು, ಪಿ. ಡಬ್ಲ್ಯು. ಡಿ ಕ್ಲಾರ್ಕರು, ಮಡಿಕೇರಿ	1	50
50.	,, ... ನಾರಾಯಣರಾಯರು, ಪಿ ಡಬ್ಲ್ಯು. ಡಿ ಎಕೌಂಟೆನ್ಸಿ ಕ್ಲಾರ್ಕರು, ಮಡಿಕೇರಿ.	1	50
51	,, ಕ ಬಿ ಕಾಳೈಯ್ಯನವರು, ಸಬ್‌ಜಡ್ಜರ ಕೋರ್ಟು ಕ್ಲಾರ್ಕರು, ಮಡಿಕೇರಿ.	1	50
52	,, ಯಂ. ಯಂ ಚಂಗಪ್ಪನವರು, ಇಂಗ್ಲಿಷ್ ಆಫೀಸ್ ಪ್ಯೂನ್, ಮಡಿಕೇರಿ.	1	50
53.	,, ಯಂ. ಯಂ ಮಂದಣ್ಣನವರು, ರಿಟಯರ್ಡ್ ಪಾರ್‌ಪತ್ಯಗಾರರು, ಯವಕಪಾಡಿ, ಕಕ್ಕಬೆ	2	100
54.	,, ಯಂ ಯಸ್. ಅಣ್ಣೈಯ್ಯನವರು, ಪಿ. ಡಬ್ಲ್ಯು ಡಿ ಕ್ಲಾರ್ಕರು, ಮಡಿಕೇರಿ	1	50
55.	,, ಬಿ. ಯಸ್. ಉಂಪ್ಪನವರು, ವ್ಯಾಕ್ಸಿನೇಟರು, ಮಡಿಕೇರಿ.	1	50
56.	,, ಟಿ. ಯಂ ಕಾಳಪ್ಪನವರು, ನಾಡು ಕ್ಲಾರ್ಕರು, ಮಡಿಕೇರಿ.	1	50
57	,, ಪಿ. ಓ. ಅಪ್ಪಚ್ಚನವರ , ಫಾರೆಸ್ಟ್ ಆಫೀಸ್ ಕ್ಲಾರ್ಕರು, ಮಡಿಕೇರಿ.	1	50
58.	,, ಟಿ ಎ. ಸುಬ್ಬೈಯ್ಯನವರ , ಪಿ ಡಬ್ಲ್ಯು ಡಿ. ಸಬ್ ಓವರ್ಸಿಯರು, ಮಡಿಕೇರಿ.	1	50
59.	,, ಯಸ್ ನಾಗಪ್ಪಶೆಟ್ಟರ , ಜನರಲ್ ಮರ್ಚೆಂಟು, ಮಡಿಕೇರಿ.	2	100

ಟಿ ಎ. ಕುಪ್ಪಸಾಮಿಪಿಳ್ಳೆ ಅಂಡ್ ಸನ್ಸ್.
ಚೀಫ್ ಏಜೆಂಟರು.

(ಮುಂದುವರಿಯುವುದು.)

ational Swords and
ver Belts (Thodanga)
"Scotland of India,"

...ಪ್ರದಾಯಕವ ಗಿ ಧರಿಸಲ್ಪಟ್ಟ ...
...ಸಿದ್ಧರಂ ... ಲೀತಿ ಉಡಿಗೆಗ... ...
...ಲ್ಪಟ್ಟ ... ... ಯು ... ಎಂ
...ಕ ವಿಸ್ಮಯಗೊಳ್ಳಲಿಲ್ಲವೇ? ... ... ಗಲ
... ಕೃಂಗಲಿಸಲ್ಪಟ್ಟ ಕಂಗ ... ...?
...ಂಟದಲ್ಲು ಒಂದು ಬೆಳ್ಳಿಯ ತೊಡಂಗ ಮ
...ದರ ಕತ್ತಿ ನೂಂಟದ ಒದಿಯಲ್ಲು ಚಿನ್ನದ
... ... ಇವುಗಳಿಗ ತಕ್ಕ ಬೆಳ್ಳಿಯ
... (ಉಮ್ಮತ) ... ಮತು ಪಟ್ಟೆ ... ಪ
...ದಲ್ಲವೇ ನಿಮ್ಮ ಗೌರವ? ... ...
... ... ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ...
...ಕ್ಕೇ ಸ್ವದೇಶಾಭಿಮಾನ!
... ...
... ಮನಸ್ಸಿಗೆ ... ... ತಿಳಿದುಕೊಳ್ಳಿ
Commercial Store,
Murnad, Coorg
12-2

Arms, Ammunition and Shooting Requisites !!!

1928 Illustrated Catalogue Just Issued Free on Application!

D B B L Rifles	Rs 120	to	Rs 2750
S B B L	35	to	950
D B B L Guns	50	to	1000
S B B L „	35	to	275
D B M L „	45	to	135
S B M L „	30	to „	80
B L Revolvers	35	to „	350
Automatic Pistols	30	to „	150

Brilliant Search Light Lamp For Shooting, Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,

Largest importers of Firearms and Ammunition

Cheapest priced firm in India,

21-13 210 Abdul Rehman Street, BOMBAY

ರಾಷ್ಟ್ರೀಯ ಸಾವಾದ

ಬ್ಲಾಂಕೆಟ್ಟುಗಳು.

ಚಳಿ ಮತ್ತು ಶೀತ
ಕಾಲಗಳಲ್ಲಿ ಆರೋಗ್ಯ ಮತ್ತು
ಕಾಪಾಡುವುದಕ್ಕೆ ... ...
...ಂಕೆಟ್ಟು ಪರಮಾವಶ್ಯಕವಾದದ್ದು
ಶಾಕಿ ಬಣ್ಣದ ... ...
...ಬ್ಲಾಂಕೆಟ್ಟನ್ನು ... ...
... ...
ರೂ- ೧೨—೮—೦ ಮಾತ್ರ.
(ಸಿ ... ...)
...ಡೆಪ್ಸ್, ಸನ್ಸ್ ಅಂಡ್ ... ಲಿಮಿಟೆಡ,
ಬೆಂಗಳೂರು ಸಿಟಿ
—12

EMPIRE OF INDIA

Life ASSURANCE COMPANY, LIMITED.

ESTD 1897

VALUATION RESULTS

... ... ENDING 28TH FEBRUARY 1927

SURPLUS—RS. 37,66,689

... BONUS DISTRIBUTION OF

RS 15 PER ANNUM PER RS 1,000 ASSURED ON WHOLE LIFE ASSURANCES AND RS 12 PER ANNUM PER RS 1,000 ASSURED ON ENDOWMENT ASSURANCES

HAS BEEN DECLARED

HEAD OFFICE	BRANCH OFFICE
... Building	Commercial Street
...	BANGALORE

24—1



...ಯಲ್ ಶೋಲಿಗಳು ರೂ 75 ರಿಂದ ರೂ 450
... ಯಲ್ ಶೋಲಿಗಳು ರೂ 35 ರಿಂದ ರೂ 20
... ಯಮ್ ಯಲ್ ಕೋವಿಗಳು ರೂ 35 ರಿಂದ ...
... ರೂ 40 ರಿಂದ ರೂ 125 ರ ವರೆಗೆ
...ರ್ ಮತ್ತು ಸಿಂಗಲ್ ... ...
... ... ಒಪ್ಪಿಗೆ ... ...
... ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ...
...ದೊರೆಯುವದು.
...ವರ್ಷಗಳಿಂದ ನಮಗೆ ಒಂದ ... ದಕ್ಷಿಣ
...ದಲ್ಲಿ ... ...
...ರಿಂದ ಬೇರೆ ಕಡೆಗಳಲ್ಲಿ ... ...
...ಟ್ಟು ನಮ್ಮನ್ನು ... ...
...ನ್. ವಿ. ರಾಮಾನಂಜಂ ಚೆಟ್ಟಿ
ಅಂಡ್ ಕಂಪನಿ.
...ದೂಸ್ತಾನದ ಬಹು ಕಡಿಮೆ ಬೆಲೆಯ ಕಂಪೆನಿ
5 12. ಚಿನ್ನಾಡಿ, ಮದ್ರಾಸ್.
...ಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಆಲ ಇಂಡಿಯಾ ... ... ಅಂಡ ... ... ಅಸೋಸಿಯೇಷನ್ ಲಿಮಿಟೆಡ್
ಹೆಡ ಆಫೀಸ —ಮೈಸೂರು (ದ. ಇಂಡಿಯ)
... ... —ಮಡಿಕೇರಿ (ಕೊಡಗು)

ನೋಟೀಸು.

ಮೇಲ್ಕಂಡ ಸಂಸದ ... ... (Provincial) ಪ್ರಾಂತೀಯ ಡೈರೆಕ್ಟರುಗಳು. ... ... (Business) ... ... 29ನೇ ... ... 3 ಗಂ ... ...

ಪಿ. ... .
ಪ್ರೋವಿನ್ಶಿಯಲ್ ಬೋರ್ಡ ... ...

52—49

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಷೇರ್ ಬಂಡವಾಳ	—	50,000
ವಸೂಲಾದ ಷೇರ್ ಮೊಬಲಗು	—	15,510
ಜಮೆಯಾದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೊರ್ತಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5–0 0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 1ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೋದಂಡ ಅಪ್ಪಯ್ಯನವರು,	ಕೊಂಗೆಟ್ಟಿರ ಅಪ್ಪಯ್ಯನವರು.
ರಾವ್ ಬಹದ್ದೂರ್.	

ಸೆಕ್ರೆಟರಿ.
ಸಿ ಯಸ್. ವೆಂಕಪ್ಪಯ್ಯನವರು, ಬಿ.ಎ, ಬಿ ಎಲ್.
ತಾರೀಖು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮೆ ಪೇರಿಯಂಡ ಪೂವಯ್ಯನವರನ್ನೂ ಮತ್ತು ಮೆ. ಕಾಳೇಂಗಡ ಚಿಣ್ಣಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ, ಮೆ. ಪಾರುವಂಗಡ ಅಚ್ಚಯ್ಯನವರು.
ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,
ಅಮ್ಮತ್ತಿ, ಸಿದ್ದಾಪುರ—ಮೆ. ಏಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಜಿ ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು, ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
'ಕೊಡಗು' ಮಡಿಕೇರಿ.

ARMS & AMMUNITION MART.
Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.
[52–18] 'Please write for Reduced net prices list for 1927–1928

ಕಟುಕಷಾಯ ಮಲೇರಿಯಜ್ವರಕ್ಕೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ... ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0, 3ಕ್ಕೆ ರೂ. 4–0–0, 6ಕ್ಕೆ ರೂ 7–8–0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ... ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಲಿಂಗಗಳ ಉರಿ, ಮೂತ್ರನಾಳ ... ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು ... ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ... ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮುಂತಾದ ... ಬರುವ ರೋಗಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3. 6ಕ್ಕೆ ರೂ 1, 3–8–0, 6–12–0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3ಕ್ಕೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆ ... ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ರೆ ... ವು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವುದನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2–10–0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ ...

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ.—ಮನೋಲ್ಲಾಸಿನಿ ಕಂಪೆನಿ
52–14 9. ಮಂಗಳೂರು

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickapet, BANGALORE CITY.

ಅಪೂರ್ವ ಸಮಯ ! **ಅಲಭ್ಯ ಲಾಭ !**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ. 52–3

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,08,000.
	1925	ರೂ	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000.

ಮೂಲಧನವು ಜಾಸ್ತಿ ಬಂದ 42 ಲಕ್ಷ ರೂಪಾಯಿಗಳಿಂದ ರೂ 7,38 80,000ಗೆ ಹೆಚ್ಚಿರುತ್ತದೆ.
ಪ್ರೀಮಿಯಂ ವರಮಾನವು ವರ್ಷಕ್ಕೆ ರೂ. 1,05,30,000ಗೆ ಏರಿರುತ್ತದೆ

"ಓರಿಯಂಟಲಿನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್, ಎಫ್. ಎಫ್ ಎ, ಎ. ಐ. ಎ ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶ ಮಾಡದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. — 52–39 — ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

ನೈಟ್ರೇಟ್ ಆಫ್ ಸೋಡಾ.

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ.

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು 15–16% ಅಂದರೆ ... ವಾ ಒಳ್ಳೆಯ ತಿಪ್ಪೆ ಗೊಬ್ಬರದಲ್ಲಿರುವುದಕ್ಕಿಂತಲೂ 3 ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವ ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ... ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ ಭತ್ತ, ... ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದುವುಗಳಿಗೂ ಕಾಫಿ, ಚಾ, ರಬ್ಬರು, ಯಾಲಕ್ಕಿ ... ದವಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಊರ ಗೊಬ್ಬರಗಳ ... ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವುದು ನೈಟ್ರೇಟ್ ಆಫ್ ಸೋಡಾ ... ಕ್ಕ ಸೋಡವು ಮಣ್ಣಿನಲ್ಲಿರುವ ಪೊಟ್ಯಾಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸುತ್ತದೆ. ಈ ಗೊಬ್ಬರವು ನೋಟಕ್ಕೆ ಬರೀ ಉಪ್ಪಿನ ಹಾಗಿದ್ದು ಆವಶ್ಯಕರವಾದ ಎಕರೆ ಒಂದಕ್ಕೆ 100–200 ... ಕಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿ ಸುಧಾರಣೆ" ಎಂಬ ಪುಸ್ತಕವನ್ನು ಈ ಕೆಳಗಿನ ... ದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

ನೈಟ್ರೇಟ್ ಆಫ್ ಸೋಡವು 80 ಪೌಂಡುಗಳ ಪ್ಯಾಕೆಟಿನಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ದೊರೆಯುವವು

ಮೆಸರ್ಸ್ ಸ್ವಾರಿ ಅಂಡ್ ಕೊ., ಮಡಿಕೇರಿ.
ಮೆಸರ್ಸ್ ಸ್ವಾರಿ ಅಂಡ್ ಕೊ., ವೀರಾಜಪೇಟೆ

or A. S Rao Esq, Near Post office, Mangalore. — Chilean Nitrate Committee, Post Box 469, Calcutta.

24–21

Printed & published by P. I. Belliappa, at "Kodagu" Press, Me[rcara] for "Kodagu" Ltd.

ಸಂಪಾದಕ—ಸಂಡ್ಯಂಡ ಐ. ಬೆಳ್ಯಪ್ಪ.

ಶ್ರೀ ನಿತ್ಯಾನಂದ ಪ್ರೆಸ್ಸಿನಲ್ಲಿ ಪ್ರಕಟಿಸಲ್ಪಡುವದು.

ಸಂಪು ೬] ... ಜನವರಿ ೨೦ ನೇ ಶುಕ್ರವಾರ [ಸಂಚಿಕೆ ೩೨

MESSERS SPENCER & CO. LTD.

WISH THEIR NUMROUS CONSTITUENTS

A BRIGHT AND PROSPEROUS NEW YEAR.

52–51 SPENCER & CO., LTD., General Merchants MERCARA.

V. SUBRAMANIA IYER

Manufacturing,

JEWELLER

GOLDSMITH SILVERSMITH & DEALER IN ALL PRECIOUS STONES

Post Box 3
TRIPLICANE MADRAS

Catalogue Free
to Bonafide Enquirers

Rose Water Sprinkler

Nose screws — Claver — Drops — Inodu — Brooch

Chased Silver Mirror

Manufacturer of HIGH CLASS GEMSET JEWELS a speciality

The special features of our work:—
1 ...
2 ...
3 ... execution
4 Neat and artistic finish
5 Most moderate prices

GOLD or SILVERWARE of all descriptions neatly executed

52–19



Before buying any Arms & Ammunition, please refer for our Reduced NETT PRICED current Catalogue of GUNS RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927–28 on application.

The Bombay Armoury.

331, Abdul Rehman Street,

Bombay, 3.

24–19

ಎ ಗ್ರ್ಯಾ ಮಿ ಕ್ಸ್ಚರ್
ಮಲೇರಿಯಾ ಇನ್ಫ್ಲುಯೆಂಝಾ ಸಂಕ್ರಮ ... ಇದನ್ನು ಉಪಯೋಗಿಸಿ ... ಇದರಿಂದ ಮಲ ಶುದ್ಧಿಯಾಗಿ ಬೆವರು ... ಬೆಲೆ ೧ ಬಾಟ್ಲಿಗೆ ... ಟಪ್ಪಾಲು ವೆಚ್ಚ ಬೇರೆ

ಸಾ ರ ಸಾ ಪ ರಿ ಲಾ.
ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ ೧–೦–೦ ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್,
12–2 ಮುಬಾಪಾ ಲೇನ್
ಗಿರಗಾಂವ, ಮುಂಬಾಯಿ

ಕೊ. ಸ. ೨

೧೯೨೮ನೇ ಇಸವಿ ಜನವರಿ
ತಾ. ೨೦ ನೇ ಶುಕ್ರವಾರ

ಎಲ್ಲಾ ಪಾರ್ಟಿಗಳ ಕಾನ್‌ಫರೆನ್ಸ್.

ಹಿಂದೂಸ್ಥಾನದ ರಾಜಕೀಯ ಸುಧಾರಣೆಯನ್ನು ಕುರಿತು ವಿಚಾರಿಸಲು ನೇಮಿಸಲ್ಪಟ್ಟಿರುವ ಸೈಮನ್ ಕಮಿಷನನ್ನು ಬಹಿಷ್ಕರಿಸುವ ವಿಷಯ ಕಳೆದ ಮದ್ರಾಸು ಕಾಂಗ್ರೆಸಿನಲ್ಲಿ ಪಾಸಾದ ಠರಾವನ್ನು ಜಾರಿಗೆ ತರಲು ತಕ್ಕ ಪ್ರಯತ್ನಗಳು ನಡೆಯುತ್ತಿರುವದು ತೃಪ್ತಿಕರವಾದ ಸಂಗತಿಯಾಗಿದೆ. ಕಾಂಗ್ರೆಸ್ಸಿನ ತೀರ್ಮಾನದಂತೆ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರು ಹಿಂದೂ ದೇಶದ ಎಲ್ಲಾ ರಾಜಕೀಯ ಸಂಘಗಳಿಗೆ ಆಹ್ವಾನವಿತ್ತು ಈ ತಾ. 15ರಲ್ಲಿ ಕಾಶೀ ಪಟ್ಟಣದಲ್ಲಿ ಒಂದು ಕಾನ್‌ಫರೆನ್ಸನ್ನು ನಡೆಸಿದರು. ಅಲ್ಲಿಗೆ ಕಾಂಗ್ರೆಸ್ಸಿನ ಮುಂದಾಳುಗಳು ಮಾತ್ರವಲ್ಲ, ಶಾಂತಪಕ್ಷದ, ಸ್ವತಂತ್ರ ಪಂಗಡದ, ಮುಸ್ಲೀಮ್ ಲೀಗಿನ ಮತ್ತು ಬೇರೆ ಹಲವು ಪಾರ್ಟಿಗಳ ಮುಖಂಡರು ಸೇರಿದ್ದರು. ಡಿಸೆಂಬರಿನ ಆಖೈರು ವಾರದಲ್ಲಿ ಮದ್ರಾಸಿನಲ್ಲಿ ನಡೆದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನಲ್ಲೂ, ಬೊಂಬಾಯಿಯಲ್ಲಿ ನೆರೆದ ಲಿಬರಲ್ ಫಡರೇಶನ್ನಿನ ಕಾನ್‌ಫರೆನ್ಸಿನಲ್ಲೂ, ಕಲ್ಕತ್ತಾದಲ್ಲಿ ನೆರೆದ ಮುಸ್ಲಿಮ್ ಲೀಗಿನ ಮಹಾ ಸಭೆಯಲ್ಲೂ ಸಂಭಾದ ರಾಯಲ್ ಕಮಿಷನ್ ಬಹಿಷ್ಕಾರದ ಠರಾವೇ ಈ ಸಭೆಯಲ್ಲೂ ಸರ್ವಸಮ್ಮತದಿಂದ ಮಂಜೂರಾದದ್ದು ದೇಶದ ಒಗ್ಗಟ್ಟಿಗೆ ಶುಭ ಸೂಚನೆಯಾಗಿದೆ. ಇದರಿಂದ ವಿದ್ವಾಂಸರೂ, ಬುದ್ಧಿವಂತರೂ ಆದ ಭಾರತೀಯರೆಲ್ಲರೂ ಸೈಮನ್ ಕಮಿಷನ್ನಿನೊಂದಿಗೆ ಸಹಕರಿಸಲು ಒಪ್ಪುವದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇನ್ನಾದರೂ ಸರ್ಕಾರದವರು, ಈ ವಿಷಯ ಸಂಶಯ ಪಡುತ್ತಿದ್ದವರೂ ಇಡೀ ಹಿಂದೂದೇಶದ ಅಭಿಪ್ರಾಯವು ಹೇಗಿದೆ ಎಂಬುದನ್ನು ಚೆನ್ನಾಗಿ ಅರಿತುಕೊಂಡು ಎಚ್ಚರಿತರಾಗುವರೆಂದು ನಂಬುತ್ತೇವೆ.

ಈ ಕಾನ್‌ಫರೆನ್ಸಿನಲ್ಲಿ ಎರಡು ಠರಾವುಗಳು ಪಾಸಾದವು. ರಾಯಲ್ ಕಮಿಷನ ಬಹಿಷ್ಕಾರದ ಠರಾವಿನ ಮೇರೆ ಸದರಿ ಕಮಿಷನು ಫೆಬ್ರವರಿ ತಾ. 3ರಲ್ಲಿ ಬೊಂಬಾಯಿಯಲ್ಲಿ ಇಳಿಯುವಾಗ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಹರತಾಳವನ್ನು ಆಚರಿಸತಕ್ಕದ್ದು, ಮತ್ತು ಅದೇ ದಿನ ಸಾಯಂಕಾಲ 4½ ಗಂಟೆಗೆ ಪಬ್ಲಿಕ್ ಮೀಟಿಂಗುಗಳನ್ನು ನಡಿಸಿ ಕಮಿಷನ್ನಿನ ನೇಮಿಸುವಿಕೆಯನ್ನು ಖಂಡಿಸಿ ಠರಾವು ಪಾಸು ಮಾಡತಕ್ಕದ್ದು. ಇದರಿಂದ ಜನಸಾಮಾನ್ಯಕ್ಕೆ ಈ ಕಮಿಷನ್ನಿನ ಮೆಂಬರುಗಳು ಆದರ ಉದ್ದೇಶ ಮೊದಲಾದವುಗಳನ್ನು ಕುರಿತು ಬೋಧಿಸಿ, ಅದರಿಂದ ಭಾರತ ಭೂಮಿಗೆ ಅತ್ಯ ಗೌರವಕ್ಕೆ ಹೇಗೆ ಹಾನಿಯುಂಟಾಗಿದೆಯೆಂದು ತೋರಿಸಲು ಅನುಕೂಲವಾಗುವದು. ಹರತಾಳ ಮಾಡುವದರಿಂದ ತಮ್ಮ ಮಾತೃಭೂಮಿಯ ಅಭಿವೃದ್ಧಿಗೆ ಏನೇ ವಿಪತ್ತು ಸಂಭವಿಸಿದೆ ಎಂಬುದನ್ನು ಜನಸಮೂಹಕ್ಕೆ ತಿಳಿಸಿದಂತಾಗುವದು. ಜನಸಾಮಾನ್ಯರ ಬೆಂಬಲವಿಲ್ಲದ ಚಳವು ಪ್ರಯೋಜನಕಾರಿಯೂ, ಸಫಲವೂ ಆಗಲಾರದು. ಆದುದರಿಂದ ಸಮುದಾಯದ ಜನರನ್ನು ನಿದ್ದೆಯಿಂದ ಎಬ್ಬಿಸಿ ಅವರ ಸಹಕಾರವನ್ನು ಪಡೆಯಬೇಕಾದದ್ದು ಅಗತ್ಯವಾಗಿದೆ.

ಈ ವಿಷಯದಲ್ಲಿ ನಮ್ಮ ದೇಶೀಯರೂ ಹಿಮ್ಮೆಟ್ಟಬಾರದು. ಕೊಡಗು ದೇಶವು ಹಿಂದೂದೇಶದ ಒಂದು ಭಾಗವೆಂಬುದನ್ನೂ, ಹಿಂದೂದೇಶದ ಏಳು ಬೀಳುವಿಕೆಯೊಂದಿಗೆ ನಮ್ಮ ದೇಶದ ಏಳು ಬೀಳುವಿಕೆಯೂ ಕೂಡಿದೆಯೆಂಬುದನ್ನೂ ಕೊಡಗಿನವರು ಮರೆಯಬಾರದು. ಬೇರೆಯವರ ಪ್ರಯತ್ನದಿಂದ ದೊರೆಯುವ ಫಲಗಳನ್ನು ಮಾತ್ರ ಅನುಭವಿಸಲು ಕಾಯುತ್ತಿರುವದು ಯಾರಿಗೂ ಯೋಗ್ಯವಲ್ಲ. ಆದುದರಿಂದ ನಮ್ಮ ದೇಶದಲ್ಲೂ ಬಾಕಿ ಹಿಂದೀಯರೊಡನೆ ಈ ಬಹಿಷ್ಕಾರ ಚಳವಳಿಯಲ್ಲಿ ಸೇರಬೇಕಾದದ್ದು ಯುಕ್ತವಾಗಿದೆ ಮತ್ತು ನಮ್ಮ ಕರ್ತವ್ಯವಾಗಿದೆ. ಮೊನ್ನೆ ತಾನೇ ವೀರರಾಜಪೇಟೆಯಲ್ಲಿ ನಡೆದ ಜಿಲ್ಲಾ ಸ್ಥಾನಿಕ ಸಂಘದ ಕಾರ್ಯನಿರ್ವಾಹಕ ಮಂಡಳಿಯ ಮೀಟಿಂಗಿನಲ್ಲಿ ಈ ವಿಷಯವು ಪ್ರಸ್ತಾಪಿಸಲ್ಪಟ್ಟಿತು. ಅಲ್ಲಿ ನೆರೆದಿದ್ದ ಮೆಂಬರುಗಳೆಲ್ಲರೂ ಬಹಿಷ್ಕಾರಕ್ಕೆ ಉತ್ಸಾಹಿಗಳಾಗಿದ್ದರೆಂದು ಕೇಳಿ ಸಂತೋಷಪಡುತ್ತೇವೆ. ಆದರೆ ಈ ಸಂಗತಿಯನ್ನು ಕುರಿತು ಕಮಿಟಿ ಮೀಟಿಂಗಿನಲ್ಲಿ ಏನೊಂದೂ ಠರಾವು ಪಾಸು ಮಾಡದೆ ಸಂಘದ ವಿಶೇಷ ಮಹಾಸಭೆಯನ್ನು ಬೇಗನೆ ನಡಿಸಿ ಅಲ್ಲಿ ನಿರ್ಧರಿಸುವಂತೆ ತೀರ್ಮಾನಿಸಿರುವರು. ಸದರಿ ಮಹಾಸಭೆಯು ಕಮಿಷನು ಬೊಂಬಾಯಿಗೆ ಬಂದಿಳಿಯುವ ಒಂದು ದಿನಕ್ಕೆ ಮುಂಚಿತವಾಗಿ ನಡಿಸಲ್ಪಡುವದು ಮತ್ತಷ್ಟು ಅನುಕೂಲವಾಗಿದೆ. ಕಮಿಟಿ ಮೆಂಬರುಗಳ ಅಭಿಪ್ರಾಯವನ್ನು ನೋಡಿದರೆ ಸಂಘದ ಮಹಾಸಭೆಯವರೂ ಬಹಿಷ್ಕಾರದ ಠರಾವನ್ನು ಪಾಸು ಮಾಡ್ಯಾರೆಂದೇ ಹೇಳಬಹುದು. ಹಿಂದೂದೇಶದ ಎಲ್ಲಾ ಪಾರ್ಟಿಗಳ ಕಾನ್‌ಫರೆನ್ಸಿನ ಠರಾವನ್ನೇ ಸಂಘದ ಮಹಾಸಭೆಯೂ ಮಂಜೂರು ಮಾಡಿ ಮರುದಿನ ಅದನ್ನು ಜಾರಿಗೆ ತರಲು ಪ್ರಯತ್ನಿಸಿಯಾರೆಂದಾಗಿ ಆಶಿಸುತ್ತೇವೆ.

ಸ್ವರಾಜ್ಯ ಘಟನೆಯನ್ನು ತಯಾರು ಮಾಡಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮತ್ತು ಹಿಂದೂದೇಶದ ಬಾಕಿ ಎಲ್ಲಾ ರಾಜಕೀಯ ಪಾರ್ಟಿಗಳ ಪ್ರತಿನಿಧಿಗಳ ಮೀಟಿಂಗೊಂದನ್ನು ಫೆಬ್ರವರಿ ತಾ. 12ರಲ್ಲಿ ಡೆಲ್ಲಿಯಲ್ಲಿ ನಡಿಸುವಂತೆಯೂ, ಅನಂತರ ಆ ಘಟನೆಯನ್ನು ಎಲ್ಲಾ ಪಾರ್ಟಿ ಮುಂದಾಳುಗಳ ಕಾನ್‌ಫರೆನ್ಸನ್ನು ನಡಿಸಿ ಅದರ ಮಂಜೂರಾತಿಗೆ ಇಡತಕ್ಕದೆಂತಲೂ ಮಾಡಿದ ತೀರ್ಮಾನವೇ ಕಾಶೀ ಕಾನ್‌ಫರೆನ್ಸಿನ ಎರಡನೇ ಠರಾವಾಗಿದೆ. ಇದು ಬಹು ಮುಖ್ಯವಾದ ಕೆಲಸವೆಂದು ಯಾರು ತಾನೇ ಒಪ್ಪದಿರುವರು. ಆದರೆ ಇದು ಸುಲಭವಾದ ಕೆಲಸವೇನೂ ಅಲ್ಲ. ವಿವಿಧ ಪಾರ್ಟಿಗಳೂ, ಜಾತಿಗಳೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಒತ್ತಾಯ ಪಡಿಸವವು. ಹಲವು ತರಹದ ಅಭಿಪ್ರಾಯಗಳು ಮುಂದಿಡಲ್ಪಟ್ಟರೂ ಎಲ್ಲರೂ ಇಡೀ ಹಿಂದೂದೇಶದ ಏಳಿಗೆಯನ್ನೇ ಮುಂದಿಟ್ಟುಕೊಂಡು ಸಹನೆ ಶಕ್ತಿಯನ್ನು ತೋರಿ, ಒಗ್ಗಟ್ಟಾಗಿ ಹಿಂದೂದೇಶಕ್ಕೆ ಬೇಕಾದ ಸ್ವರಾಜ್ಯ ಘಟನೆಯನ್ನು ತಯಾರಿಸಬೇಕಾಗಿದೆ. ಹಿಂದೂ ಮುಸಲ್ಮಾನರು ಕಾಂಗ್ರೆಸ್ಸಿನಲ್ಲಿ ಪಾಸಾದ ಹಿಂದೂ ಮುಸ್ಲಿಮ್ ಒಗ್ಗಟ್ಟಿನ ಠರಾವಿನಲ್ಲಿ ಹೇಗೆ ವರ್ತಿಸಿದರೋ ಹಾಗೆಯೇ ಈ ವಿಷಯದಲ್ಲಿಯೂ ಸಹೋದರ ಭಾವದಿಂದ ಒಪ್ಪಿ ಸ್ವರಾಜ್ಯ ರಚನೆಯನ್ನು ತಯಾರಿಸುವರೆಂದಾಗಿ ನಂಬುತ್ತೇವೆ.

ಅಖಿಲ ಭಾರತ ವೀರಶೈವ ಮಹಾ ಸಭೆ.

ಈ ಮಹಾ ಸಭೆಯು ಡಿಸೆಂಬರ್ ತಾ. 28ನೇ ಬುಧವಾರ ದಿನ ಬೆಂಗಳೂರಿನ ಲಾಲ್ ಬಾಗಿನಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತೆಂದೂ ಸಭೆಗೆ 1600 ಪ್ರತಿನಿಧಿಗಳೂ, ಸುಮಾರು 5000 ಪ್ರೇಕ್ಷಕರೂ ಮತ್ತು ಮೈಸೂರಿನ ದಿವಾನರೂ, ಕೆಲವು ಕೌನ್ಸಿಲರುಗಳೂ, ಪ್ರಜಾಪ್ರಮುಖರೂ ದಯಮಾಡಿಸಿದ್ದರೆಂದೂ ತಿಳಿಯುತ್ತೇವೆ. ಈ ಸಭೆಯ ಪ್ರಥಮ ಅಧಿವೇಶನವು 26 ವರುಷಗಳಿಗೆ ಹಿಂದೆ 1904 ರಲ್ಲಿ ಧಾರವಾಡ ಪಟ್ಟಣದಲ್ಲಿ ಕೂಡಿತ್ತು. ಅನಂತರ ಮಧ್ಯ ಮಧ್ಯ ಒಂದೋ, ಎರಡೋ ವರುಷಗಳು ಬಿಟ್ಟು ಸಭೆಯು ಜರುಗುತ್ತಿದ್ದು, 1919ರಲ್ಲಿ ಬೀಜಾಪುರದಲ್ಲಿ ಕೂಡಿ ಸಭೆ ನೆರೆದಾಗ ಕಲಹ ಉಂಟಾದನಂತರ ಕಳೆದ ವರುಷದ ವರೆಗೂ ಸಭೆಯ ಅಧಿವೇಶನವೇ ಜರುಗಲಿಲ್ಲ. ಬೆಂಗಳೂರು ನಿವಾಸಿಗಳ ಸಾಹಸದಿಂದ ಈ ವರ್ಷ ಸಭೆಯು ಜರುಗಿತು. ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಡೆಪ್ಯುಟಿ ಪ್ರೆಸಿಡೆಂಟರೂ, ಹುಬ್ಬಳ್ಳಿ ಮುನಿಸಿಪಾಲಿಟಿಯ ಪ್ರೆಸಿಡೆಂಟರೂ ಆದ ಎಸ್. ಟಿ ಕಂಬಳಿ ರಾವ್ ಬಹದ್ದೂರು ಇವರು ಅಧ್ಯಕ್ಷರಾಗಿದ್ದರು.

ಸ್ವಾಗತ ಮಂಡಳಿಯ ಅಧ್ಯಕ್ಷರಾದ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ನೇತೃತ್ವದಲ್ಲಿ ಸಭಾಕಾರ್ಯಗಳೆಲ್ಲವೂ ನಿರಾತಂಕವಾಗಿಯೇ ನಡೆದುವು. ಇವರು ತಮ್ಮ ಭಾಷಣದಲ್ಲಿ ಈ ಮೊದಲು ಕಲಹ ಮಾಡಿಕೊಳ್ಳಬಾರದೆಂಬ ಸಂಗತಿಯನ್ನು ಒತ್ತಿ ಹೇಳಿರುವರು. ಆಗಾಗ ಕಲಹಗಳುಂಟಾಗುವ ಸಂಭವವನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದಲೇ ಒಂದು ನಿಯಮ ನಿಬಂಧನೆಯನ್ನು (ಕಾನ್‌ಸ್ಟಿಟ್ಯೂಶನ್) ಮಾಡುವುದು ಅವಶ್ಯವೆಂದು ಸೂಚಿಸಿದರು. ಹಳೆ ಮತ್ತು ಹೊಸ ವೀರಶೈವ ಧರ್ಮಗ್ರಂಥಗಳನ್ನು ಶೇಖರಿಸಲಿಕ್ಕಾಗಿ ಒಂದು ಪುಸ್ತಕ ಭಂಡಾರವನ್ನು ತೆರೆಯುವುದಗತ್ಯವೆಂದೂ ಕೆಲವು ಭಾಷ್ಯಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕೆಂದೂ ಸಹ ಸಲಹೆ ಕೊಟ್ಟಿರುವರು.

ಅನಂತರ ಸಭಾಧ್ಯಕ್ಷರಾದ ಶ್ರೀಮಾನ್ ಕಂಬಳಿಯವರು ಕೊಟ್ಟ ಭಾಷಣವು ಸ್ವಾರಸ್ಯದಾಯಕವಾಗಿಯೂ, ಬೋಧಪ್ರದವಾಗಿಯೂ ಇದ್ದಿತೆಂದು ನಮಗೆ ತೋರುತ್ತದೆ. ಮಹಾಸಭೆಯ ಆವಶ್ಯಕತೆ, ಸುನಿಚಾರ ಪ್ರಗತಿಯ ಶ್ರೇಷ್ಠತೆ, ಸಮಾಜ ಘಟನೆ, ಸಮಾಜದ ಶಿಥಿಲತೆಯ ಕಾರಣಗಳು, ... ವ್ಯವಸಾಯಗಳು, ಒಂದರಾಗೆಲ್ಲಿ ಇವರು ವಸಾಹತು ... ವ ಅವಶ್ಯಕತೆ, ನೂಲುವ ಮತ್ತು ನೇಯುವ ಗಿರಣಿ... ಸ್ಯಕತೆ, ಸಂಗತಿ ಸಂಗ್ರಾಹಕ ಸಂಸ್ಥೆಗಳು, ಶೋಧನ... ಳು ದಾನ ಪದ್ಧತಿ, ಕೃಷಿಕರ್ಮ ಸುಧಾರಣೆ, ಸಹಕಾರ ಮತ್ತು ಬ್ಯಾಂಕು, ನೇಕಾರಿಕೆ ಮತ್ತು ಸ್ವದೇಶಿ ಪ್ರಸಾರ, ಕನ್ನಡ ಸಾಹಿತ್ಯ, ಕರ್ನಾಟಕದ ಏಕೀಕರಣ, ... ದ್ಯಾ ಪ್ರಸಾರ ಮುಂತಾದ ಹಲವು ಘನವಾದ ವಿಷಯಗಳು ಅಧ್ಯಕ್ಷರ ಭಾಷಣದಲ್ಲಿ ಅಡಗಿರುತ್ತವೆ. ಸಮಾಜ ... ಕೆಯನ್ನು ಕುರಿತು ಅಧ್ಯಕ್ಷರು ಹೇಳುವುದೇನೆಂದರೆ—"... ದ ಮುಖ್ಯ ತತ್ವಗಳನ್ನೂ, ಅವುಗಳ ಅರ್ಥಗಳನ್ನೂ ತಿಳುವಳಿಕೆ ಹೊಂದಿಕೊಂಡು ಮೊದಲಿನಂತೆ ಸಾಧನವನ್ನು ಪಡೆ ಇದ್ದುದರಿಂದ ನಮ್ಮ ಆರ್ಥಿಕ ಬೆಳವಣಿಗೆಯು ... ಯಾಗಲಿಕ್ಕೆ ಹತ್ತಿದೆ. ಎತ್ತ ನೋಡಿದರೂ ಪಕ್ಷ ... ವಾದಗಳೂ, ಮನಸ್ತಾಪವೂ, ನಿಷ್ಫಲವಾದ ... ಳೂ ತಲೆದೋರ ಹತ್ತಿರುತ್ತವೆ." ವೀರಶೈವ ಸಮಾಜದ ... ರುವ ಒಡಕುಗಳು ಬೇಗನೆ ಅಳಿದು ಹೋಗಲೆಂದು ... ತ್ತೇವೆ. ರಾಷ್ಟ್ರೋನ್ನತಿಯಾಗಬೇಕಾದರೆ ಎಲ್ಲಾ ... ವರೂ ಐಕ್ಯದಿಂದಿರಬೇಕು. ಈ ವಿಚಾರವಾಗಿ ಅಧ್ಯಕ್ಷರ ಅಭಿಪ್ರಾಯವನ್ನೇ ಎತ್ತಿ ಬರೆಯುವೆವು—"ಹಿಂದೂಸ್ಥಾನದ ... ಯು ಯಾವದೊಂದು ಸಮಾಜವು (ಜಾತಿಯು) ಹಿಂದುಳಿದರೆ ಅಥವ ನಿರ್ಬಲವಾದರೆ ಹಿಂದುಸ್ಥಾನದ ಪ್ರಗತಿಗೆ ... ಮಟ್ಟಿಗೆ ಒಂದು ತರದ ವಿಘ್ನವು ಬರುತ್ತದೆ. ಇಡೀ ಹಿಂದೂ... ಸ್ಥಾನವು ಸ್ವರಾಜ್ಯ ಸಂಪಾದಿಸಬೇಕೆಂತಲೂ, ಅದರಂತೆ ... ಜ್ಯಕ್ಕೆ ಹಿಂದುಸ್ಥಾನದ ಜನರೆಲ್ಲರೂ ಅರ್ಹರಿರುತ್ತಾರೆ... ಮತ್ತು ಇದಕ್ಕೂ ಹೆಚ್ಚಿಗೆ ಅಹರ್ರಾಗಲಿಕ್ಕೆ ಹತ್ತಿ... ಲೂ ಹಿಂದುಸ್ಥಾನದ ಮುಖಂಡರು ಘಂಟಾನಾದದಿಂದ ... ರುತ್ತಿರುವರು. ಆದ್ದರಿಂದ ನಮ್ಮ ಸಮಾಜದಲ್ಲಿ ... ಕಾರಣದಿಂದಲೂ ಹಿಂದುಸ್ಥಾನದ ಈ ಪ್ರಯತ್ನಕ್ಕೆ ... ದಂತೆ ಅಥವಾ ಅಡ್ಡಿಯಾಗದಂತೆ ಪ್ರಯತ್ನ ಮಾಡ... ತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರುತ್ತದೆ." ಈ ... ಮಾತುಗಳನ್ನು ಪ್ರತಿ ಜಾತಿಯವರು ಅನುಸರಿಸಬೇಕಾಗ... ಗ್ಯವಿದೆ. ಇವುಗಳನ್ನು ನಮ್ಮ ಕೊಡಗಿನ ಎಲ್ಲಾ ಜಾತಿಯವರ ಅವಗಾಹನೆಗೆ ತರಲಿಚ್ಛಿಸುತ್ತೇವೆ.

ಕಾರವಾರ ಜಿಲ್ಲೆಯು ಇದ್ದ ವರೆಗೆ ವೀರಶೈವ ಸ... ವು ಬೆಳೆಯಾಗುತ್ತಿಂದೂ, ಅದು ಮುರಿದು ಹೋಗಿ ... ಬಂದರವಾದ ಮೇಲೆ ವ್ಯಾಪಾರವೇ ವೀರಶೈವರ ಕೈ ... ದೂ, ಈಗ ಕರಾಚಿ, ಮುಂಬಾಯಿ, ಕಲ್ಕತ್ತ, ರಂಗೂನ... ದರಾಸು ಮುಂತಾದ ಊರುಗಳಲ್ಲಿ ವೀರಶೈವರು ವ್ಯಾಪಾರ ಮಾಡಬೇಕೆಂದು ಅಧ್ಯಕ್ಷರ ಅಪೇಕ್ಷೆ. ನೆಶೋಧನ ಶಾಲೆ... ಉದ್ಯೋಗ ವ್ಯಾಪಾರಾದಿಗಳ ವೃದ್ಧಿಯಿಂದ ಅವನತಿ ... ಅಧ್ಯಕ್ಷರ ಅಭಿಪ್ರಾಯ. ಸರ್ಕಾರ್ ಆರ್ಕಟ್ಟಿನ ದೇಸ... ಲಿಂಗಾಯತರಿಗೆ ಬಹು ಪ್ರಯೋಜನ ಉಂಟಾಗಬಹುದೆ... ವ ಕೇಳಿ, ತಮ್ಮ ಜನರು ಸಿಂಧಪ್ರಾಂತಕ್ಕೆ ಹೋಗಿ ... ಅವರಲ್ಲಿ ಹುರಿದುಂಬಿಸಿರುತ್ತಾರೆ. ಅಧ್ಯಕ್ಷರ ಈ ಸಲಹೆ ... ಲ್ಲಾ ಎಷ್ಟರ ಮಟ್ಟಿಗೆ ಮತ್ತು ಎಷ್ಟು ಬೇಗನೆ ಜಾರಿಗೆ ... ತ್ತವೆಂದು ಈಗ ಹೇಳಲಾರೆವು.

ಸ್ವದೇಶಿ ವಸ್ತ್ರಪ್ರಸಾರದ ವಿಷಯದಲ್ಲಿ ಅವರು ... ದೇನೆಂದರೆ— ನಮ್ಮ ದೇಶದಲ್ಲಿ ನಾವು ಉಪಯೋಗಿಸ... ಡುವತಕ್ಕ ವಸ್ತ್ರಗಳನ್ನು ನಾವು ಅಧಿಕಾರ ಪೂರ್ವ... ತಯಾರುಮಾಡಬೇಕಲ್ಲದೆ, ಅವುಗಳನ್ನೇ ಉಪಯೋಗಿಸ... ಈ ಒಗ್ಗೆ ಸ್ವಲ್ಪ ಅನಾನುಕೂಲತೆಯನ್ನು ನಾವು ಸಹಿಸ... ಕೇವಲ ವಸ್ತ್ರದ ಸೌಂದರ್ಯಕ್ಕಾಗಿ ಮೋಹಿಸದೆ, ಒಂಟಾ... ನಮ್ಮ ದೇಶೀಯ ವಸ್ತ್ರಗಳನ್ನೇ ನಾವು ಉಪಯೋಗಿಸ... ಕ್ಕೆ ಹತ್ತಿದರೆ, ನೂಲುವ ಮತು ನೇಯುವ ಉದ್ಯೋಗ... ಉತ್ತೇಜನವು ಚೆನ್ನಾಗಿ ಅನೇಕರಿಗೆ ಇದರಿಂದ ... ಲಾಭವನ್ನು ಮಾಡಿಕೊಟ್ಟಂತಾಗುವುದಲ್ಲದೆ ದೇಶದ ಸಾಂಪತ್ತಿಕ ಸ್ಥಿತಿಯನ್ನು ಪುಷ್ಟೀಕರಿಸಿದಂತಾಗುವುದು' ... ಮಾತುಗಳು ಮಹಾತ್ಮಾ ಗಾಂಧಿಯವರ ಹೇಳಿಕೆಯಂತೆ ... ರಶಃ ಸಹ ನಿಜವಿರುತ್ತವೆ. ಬಟ್ಟೆ ವ್ಯಾಪಾರದಿಂದ ಪರದೇಶಕ್ಕೆ ಹೋಗುವ ಅರವತ್ತು ಕೋಟಿ ರೂಪಾಯಿಗಳ ನಷ್ಟವನ್ನು ... ಗ್ಗಿಸಲು ಕೊಡಗಿನ ಹಿಂಭತ್ತು ಸಾವಿರ ವೀರಶೈವರೂ ... ೂ ಪ್ರಯತ್ನಿಸಬೇಕಾದದ್ದು ಅತ್ಯವಶ್ಯವಾಗಿದೆ. ಸಭೆ... ನಾಲ್ಕು ಮಂದಿ ಸ್ತ್ರೀಯರು ಬಾಲ್ಯವಿವಾಹ, ವಿಧವಾವಿವಾಹ, ಸ್ತ್ರೀವಿದ್ಯಾಭ್ಯಾಸ, ಕೈಗಾರಿಕೆ ಇತ್ಯಾದಿ ವಿಷಯಗಳನ್ನು ಕುರಿತು ಸ್ವಾರಸ್ಯವಾಗಿ ಮಾತಾಡಿದ್ದು ಅಭಿಮಾನಕರ ಸಂಗತಿಯಾಗಿದೆ.

ಖಾದಿಪ್ರಸಾರ, ಕರ್ನಾಟಕ ಏಕೀಕರಣ, ವಾಚನಾಲಯಗಳ ಪ್ರಸಾರ ಡಾ. ಗೌಡರ ವಿವಾಹ ಮಸೂದೆ, ... ರ್ಜನೆಗಾಗಿ ಪರದೇಶ ಗಮನ, ಕಡ್ಡಾಯದ ಪ್ರಾಥಮಿಕ ಶಿಕ್ಷಣ ಇವುಗಳ ಕುರಿತು ಠರಾವುಗಳು ಮಹಾಸಭೆಯಲ್ಲಿ ಪಾಸಾದುವು. ಕರ್ನಾಟಕದ ಏಕೀಕರಣದ ಸಂಬಂಧವಾಗಿ ಪಾಸಾದ ಠರಾವು ಶೀಘ್ರದಲ್ಲಿಯೇ ಫಲಕಾರಿಯಾಗುವಂತೆ ಮಾಡುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ. ಕರ್ನಾಟಕ ಪ್ರಾಂತವು ಸಂಸ್ಥಾಪಿತವಾದ ದಿನ ವೀರಶೈವ ಸಮಾಜದ ... ತಿಗೆ ಕಳೆಯೇರುವುದು.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೧೮ನೇ ಪ್ರಕರಣ.

ಒಂದು ಪುಸ್ತಕದ ಮಾಯಾಜಾಲ

ಪ್ಲೇಗಿನಿಂದ ಬಡ ಜನರಿಗೆ ನನ್ನಲ್ಲಿದ್ದ ಗೌರವವು ಅಭಿವೃದ್ಧಿಹೊಂದಿ ನನ್ನ ಕೆಲಸವೂ, ವ್ಯಾಪಾರವೂ ಹೆಚ್ಚಾದವು. ಹೊಸದಾಗಿ ಯುರೋಪಿಯನ್ನರೊಡನೆ ಉಂಟಾದ ಕೆಲವು ಸಂಬಂಧಗಳು ಎಷ್ಟು ಗಾಢವಾಗುತ್ತ ಬಂದುವೆಂದರೆ ಅವುಗಳಿಂದ ನನ್ನ ನೈತಿಕ ಬಾಧ್ಯತೆಯು ವಿಶೇಷವಾಗಿ ಬೆಳೆಯಿತು. ಮಿ. ಪೋಲಕರೊಡನೆ ಪರಿಚಯವಾದಂತೆಯೇ ಮಿ. ವೆಸ್ಟರ ಪರಿಚಯವು ನನಗೆ ಶಾಕಾಹಾರದ ಭೋಜನಶಾಲೆಯಲ್ಲಿಯೇ ಉಂಟಾಯಿತು. ಒಂದು ದಿನ ಸಂಜೆ ನನ್ನಿಂದ ಸ್ವಲ್ಪ ದೂರದಲ್ಲಿದ್ದ ಮೇಜಿನ ಮೇಲೆ ಆಹಾರವನ್ನು ತೆಗೆದುಕೊಳ್ಳುತ್ತಿದ್ದ ಒಬ್ಬ ಯುವಕನು ನನ್ನನ್ನು ನೋಡ ಬಯಸುವನೆಂದು ತಿಳಿಸಿ ತನ್ನ ಹೆಸರಿನ ಒಂದು ಚೀಟಿಯನ್ನು ನನಗೆ ಕಳುಹಿಸಿದನು. ನಾನು ಆತನಿಗೆ ನನ್ನ ಮೇಜಿನ ಬಳಿ ಬರಬೇಕೆಂದು ಹೇಳಲು ಅವನು ಬಂದನು.

ಆತನು "ನಾನು 'ಕ್ರಿಟಿಕ್' ಪತ್ರಿಕೆಯ ಉಪಸಂಪಾದಕನಾಗಿದ್ದೇನೆ. ಪ್ಲೇಗಿನ ವಿಷಯವಾಗಿ ನೀವು ಪತ್ರಿಕೆಗಳಿಗೆ ಬರೆದ ಪತ್ರವನ್ನು ಓದಲು ನನಗೆ ನಿಮ್ಮನ್ನು ನೋಡಬೇಕೆಂಬ ತೀವ್ರವಾದ ಇಚ್ಛೆಯುಂಟಾಯಿತು. ನನಗೆ ಈ ಅವಕಾಶವು ಸಿಕ್ಕಿದುದು ಬಹಳ ಸಂತೋಷ" ಎಂದು ಹೇಳಿದನು.

ಮಿ. ಪೋಲಕರ ಸರಳಭಾವವು ನನ್ನನ್ನು ಆಕರ್ಷಿಸಿತು. ರಾತ್ರಿಯೇ ನಮಗೆ ಒಬ್ಬರಿಗೊಬ್ಬರ ಪರಿಚಯವುಂಟಾಯಿತು. ಜೀವನದ ಮುಖ್ಯ ವಿಚಾರಗಳ ವಿಚಾರವಾಗಿ ನಮ್ಮಿಬ್ಬರ ಅಭಿಪ್ರಾಯಗಳಿಗೂ ಬಹು ಸಾಮ್ಯವಿದ್ದಂತೆ ತೋರಿತು. ಅವರಿಗೆ ಸರಳ ಜೀವನವನ್ನು ಕಂಡರೆ ಇಷ್ಟ. ಅವರ ಬುದ್ಧಿಗೆ ಒಪ್ಪಿದುದನ್ನು ಕಾರ್ಯತಃ ನಡೆಸುವ ಒಂದು ವಿಶೇಷವಾದ ಶಕ್ತಿಯು ಅವರಲ್ಲಿ ಇದ್ದಿತು. ತಮ್ಮ ಜೀವನದಲ್ಲಿ ಅವರು ನಡೆಸಿದ ಕೆಲವು ಪರಿವರ್ತನೆಗಳು ಎಷ್ಟು ಸಂಪೂರ್ಣವಾಗಿದ್ದುವೋ ಅಷ್ಟೇ ಸತ್ವರವಾಗಿದ್ದುವು.

"ಇಂಡಿಯನ್ ಒಪಿನಿಯನ್" ನ ವೆಚ್ಚವು ದಿನ ದಿನವೂ ಹೆಚ್ಚುತ್ತಿತ್ತು. ಮಿ. ವೆಸ್ಟರಿಂದ ಬಂದ ಮೊಟ್ಟಮೊದಲಿನ ವರದಿಯೇ ಗಾಬರಿ ಪಡಿಸತಕ್ಕದ್ದಾಗಿದ್ದಿತು.

ಅವರು "ನೀವು ಹೇಳಿದ ಹಾಗೆ ಈ ಕಾರ್ಯದಿಂದ ಲಾಭವೇನೂ ಬರುವ ಹಾಗಿಲ್ಲ. ನಷ್ಟವಾದರೂ ಆಗಬಹುದೆಂದು ಶಂಕಿಸುವುದಕ್ಕೆ ಕೂಡ ಅವಕಾಶವಿದೆ. ಲೆಕ್ಕದ ಪುಸ್ತಕಗಳು ಕ್ರಮವಾಗಿಲ್ಲ. ವಸೂಲು ಮಾಡಬೇಕಾದ ಬಾಕಿ ಬೇಕಾದ ಹಾಗೆ ಇದೆ. ಆದರೆ ಇದರ ತಲೆ ಬುಡವನ್ನೇ ಕಂಡು ಹಿಡಿಯುವ ಹಾಗಿಲ್ಲ. ಎಷ್ಟೋ ಬದಲಾವಣೆಗಳನ್ನು ಮಾಡಬೇಕಾಗಿ ಬರುತ್ತದೆ. ಆದರೆ ಇದರಿಂದ ನೀವು ಧೈರ್ಯಗೆಡಬೇಕಾದುದಿಲ್ಲ. ನನಗೆ ಸಾಧ್ಯವಾದಷ್ಟು ಮಟ್ಟಿಗೆ ನಾನು ಸರಿಪಡಿಸಲು ಪ್ರಯತ್ನಿಸುತ್ತೇನೆ. ಲಾಭ ಬರಲಿ, ಬಾರದಿರಲಿ, ನಾನಂತೂ ಇಲ್ಲೇ ಇರುತ್ತೇನೆ" ಎಂದು ಬರೆದರು.

ಲಾಭವಿಲ್ಲವೆಂದು ತಿಳಿದೊಡನೆಯೇ ಮಿ. ವೆಸ್ಟರು ಬಿಟ್ಟು ಹೊರಡಬಹುದಾಗಿದ್ದಿತು. ಹಾಗೆ ಮಾಡಿದರೆ ನಾನು ಅವರನ್ನು ದೂಷಿಸುವ ಹಾಗೂ ಇರಲಿಲ್ಲ. ಅಷ್ಟೇ ಅಲ್ಲ, ಸರಿಯಾಗಿ ವಿಚಾರ ಮಾಡದೆ ಈ ಕಾರ್ಯದಿಂದ ಲಾಭ ಬರುವುದೆಂದು ಅವರಿಗೆ ತಿಳಿಯಗೊಟ್ಟುದುದಕ್ಕಾಗಿ ಅವರು ನನ್ನ ಮೇಲೆ ತಪ್ಪು ಹೊರಿಸಬಹುದಾಗಿದ್ದಿತು. ಆದರೆ ಅವರು ಒಂದು ಸಲವೂ ನನ್ನ ಮೇಲೆ ದೋಷಾರೋಪಣ ಮಾಡಲಿಲ್ಲ. ಆದರೆ ಅಲ್ಲಿನ ಪರಿಸ್ಥಿತಿಯನ್ನು ತಿಳಿದ ಮೇಲೆ ಮಿ. ವೆಸ್ಟರು ನಾನು ಆಧಾರವಿಲ್ಲದ ವಿಷಯಗಳನ್ನು ನಂಬತಕ್ಕವನೆಂದು ತಿಳಿದುಕೊಂಡಿರಬಹುದೆಂದು ನನಗೆ ತೋರುತ್ತದೆ. ಶ್ರೀ. ಮದನಜಿತರ ಅಂದಾಜಿಗೆ ಒಪ್ಪಿ ಅದನ್ನು ಸರಿಯಾಗಿ ವಿಮರ್ಶಿಸದೆ ಮಿ. ವೆಸ್ಟರಿಗೆ ಅದರಿಂದ ಲಾಭ ಬರಬಹುದೆಂದು ಹೇಳಿದ್ದೆನು. ಸಾರ್ವಜನಿಕ ಕಾರ್ಯವನ್ನು ನಡೆಸುವವರು ಸುಮ್ಮನೆ ಭರವಸೆಯಿಂದ ವಿಷಯಗಳನ್ನು ನಂಬಬಾರದೆಂದೂ, ತಾವೇ ವಿಮರ್ಶಿಸಿ ನಿಜವಾದುದೆಂದು ತಿಳಿಯದ ಸಂಗತಿಗಳನ್ನು ಹೇಳಬಾರದೆಂದೂ ನನಗೆ ತೋರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸತ್ಯೋಪಾಸಕರು ಬಹು ಎಚ್ಚರಿಕೆಯಿಂದಿರಬೇಕು. [illegible] ವು ಆಧಾರವುಳ್ಳದೆಂದು ನಿರ್ಧರಿಸದೆ ಇರುವ ವಿಷಯವನ್ನು ಇನ್ನೊಬ್ಬರಿಗೆ ನಂಬುವಂತೆ ಹೇಳಿದರೆ ಸತ್ಯಕ್ಕೆ ಭಂಗವುಂಟಾಗುತ್ತದೆ. ಇದು ನನಗೆ ತಿಳಿದಿದ್ದರೂ ನಾನು ವಿಚಾರವಿಲ್ಲದೆ ನಂಬುವ ಅಭ್ಯಾಸವನ್ನು ಸಂಪೂರ್ಣವಾಗಿ ಬಿಟ್ಟಿಲ್ಲವೆಂದು ಹೇಳಲು ನನಗೆ ದುಃಖವಾಗುತ್ತದೆ. ನನ್ನ ಶಕ್ತಿಯಿಲ್ಲದಾಗುವುದಕ್ಕಿಂತ ಹೆಚ್ಚಾದ ಕೆಲಸಗಳನ್ನು ಮಾಡಬೇಕೆಂಬ ಲೋಭವೇ ಈ ದೋಷಕ್ಕೆ ಕಾರಣ. ಈ ಲೋಭದಿಂದ ನನಗೆ ಉಂಟಾಗಿರುವುದಕ್ಕಿಂತ ಹೆಚ್ಚಾಗಿ ನನ್ನ ಜೊತೆಯಲ್ಲಿ ಕೆಲಸ ಮಾಡುವವರಿಗೆ ಕ್ಲೇಶವುಂಟಾಗಿದೆ.

ಮಿ. ವೆಸ್ಟರ ಪತ್ರವು ತಲುಪಿದ ಮೇಲೆ ನಾನು ನೆಟಾಲಿಗೆ ಹೊರಟೆನು. ಪೋಲಕರಿಗೆ ನನಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ತಿಳಿಸಿದ್ದೆನು. ಅವರು ನನ್ನನ್ನು ಬೀಳ್ಕೊಡುವುದಕ್ಕೆ ಸ್ಟೇಷನ್ನಿಗೆ ಬಂದಿದ್ದರು. ಪ್ರಯಾಣ ಮಾಡುವಾಗ ಓದುವುದಕ್ಕೆಂದು ನನಗೆ ಒಂದು ಪುಸ್ತಕವನ್ನು ಕೊಟ್ಟು ಅದು ನಿಶ್ಚಿತವಾಗಿ ನನ್ನ ಒಪ್ಪಿಗೆಗೆ ಬರುವದೆಂದು ಹೇಳಿದರು. ರಸ್ಕಿನ "ಅಂಟು ದಿಸ್ ಲಾಸ್ಟ್" ಎಂಬುದೇ ಆ ಪುಸ್ತಕ.

ಒಂದು ಸಲ ಓದ ತೊಡಗಿದ ಮೇಲೆ ಆ ಪುಸ್ತಕವನ್ನು ಕೆಳಗಿಡುವುದಕ್ಕೇ ಆಗಲಿಲ್ಲ. ಅದು ನನ್ನ ಮನಸ್ಸನ್ನು ಹಿಡಿಯಿತು. ಜೋಹಾನ್ಸ್‌ಬರ್ಗಿನಿಂದ ಡರ್ಬನಿಗೆ ಪ್ರಯಾಣವು ಇಪ್ಪತ್ತನಾಲ್ಕು ಘಂಟೆ ಹಿಡಿಯುತ್ತಿದ್ದಿತು. ರೈಲು ಗಾಡಿಯು ಡರ್ಬನನ್ನು ಸಂಜೆ ಸೇರಿತು. ಆ ರಾತ್ರಿ ನನಗೆ ನಿದ್ದೆ ಬರಲೇ ಇಲ್ಲ. ಆ ಪುಸ್ತಕದ ತತ್ವಗಳಿಗನುಸಾರವಾಗಿ ನನ್ನ ಜೀವನವನ್ನು ಮಾರ್ಪಡಿಸಬೇಕೆಂದು ನಿಶ್ಚಯಿಸಿದೆನು.

ರಸ್ಕಿನ್ ಬರೆದ ಒಂದು ಗ್ರಂಥವನ್ನು ನಾನು ಇದಕ್ಕೆ ಮುಂಚೆ ಓದಿರಲಿಲ್ಲ. ನನ್ನ ವಿದ್ಯಾಭ್ಯಾಸದ ಕಾಲದಲ್ಲಿ ನಾನು ಪಠ್ಯಪುಸ್ತಕಗಳನ್ನು ಬಿಟ್ಟು ಬೇರೆ ಪುಸ್ತಕಗಳನ್ನು ಓದಿದ್ದು ಬಹಳ ಕಡಿಮೆ. ಜೀವನ ಸಂಗ್ರಾಮದಲ್ಲಿ ತೊಡಗಿದ ಮೇಲಂತೂ ನನಗೆ ಓದಲು ಹೊತ್ತೇ ದೊರಕುತ್ತಿರಲಿಲ್ಲ. ಅದ್ದರಿಂದ ನನ್ನ ಪುಸ್ತಕ ಜ್ಞಾನವು ಹೆಚ್ಚಾಗಿಯೇನೂ ಇಲ್ಲವೆಂದು ಹೇಳಬಹುದು. ಈ ಬಲವಂತದ ವಿರಾಮದಿಂದ ನನಗೇನೂ ಹೆಚ್ಚು ನಷ್ಟವಾಯಿತೆಂದು ತೋರುವುದಿಲ್ಲ. ಹಾಗೆ ನೋಡಿದರೆ ಮಿತವಾಗಿ ಓದಿದುದರಿಂದ ನಾನು ಓದಿದುದನ್ನು ಚೆನ್ನಾಗಿ ಜೀರ್ಣಿಸಿಕೊಳ್ಳಲು ಸಾಧ್ಯವಾಗಿದೆಯೆಂದು ಹೇಳಬಹುದು. ಆ ಪುಸ್ತಕಗಳಲ್ಲೆಲ್ಲಾ ನನ್ನ ಜೀವನದಲ್ಲಿ ಒಡನೆಯೇ ಕಾರ್ಯತಃ ಬದಲಾವಣೆಗೆ ಕಾರಣವಾದುದು ಈ 'ಅಂಟು ದಿಸ್ ಲಾಸ್ಟ್' ಎಂಬುದೊಂದೇ. ಆಮೇಲೆ ನಾನು ಇದನ್ನು 'ಸರ್ವೋದಯ' (ಎಲ್ಲರ ಕ್ಷೇಮ) ಎಂದು ಹೆಸರು ಕೊಟ್ಟು ಗುಜರಾತಿ ಭಾಷೆಗೆ ಭಾಷಾಂತರಿಸಿದೆನು.

ರಸ್ಕಿನನ ಈ ಗ್ರಂಥರತ್ನವು ನನ್ನ ಅಂತಃಕರಣದಲ್ಲಿ ಹುದುಗಿದ್ದ ಅನೇಕ ಭಾವಗಳನ್ನು ಪ್ರತಿಬಿಂಬಿಸಿದಂತೆ ನನಗೆ ಕಂಡು ಬಂದಿತೆಂದೂ, ಅದರಿಂದಲೇ ಆ ಪುಸ್ತಕವು ನನ್ನ ಮನಸ್ಸಿನಲ್ಲಿ ನೆಲೆಗೊಂಡು ನನ್ನ ಜೀವನದ ಪರಿವರ್ತನಕ್ಕೆ ಕಾರಣವಾಯಿತೆಂದೂ ನನ್ನ ನಂಬಿಕೆ. ಮಾನವಾಂತಃಕರಣದಲ್ಲಿ [illegible] ಸದ್ಭಾವಗಳನ್ನು ಎಚ್ಚರಿಸುವವನೇ ಕವಿಯೆನ್ನಿಸಿಕೊಳ್ಳುವನು. ಎಲ್ಲರ ಮನಸ್ಸಿನ ಮೇಲೂ ಕವಿಗಳ ಪ್ರಭಾವವು ಒಂದೇ ತೆರನಾಗಿರುವದಿಲ್ಲ. ಏಕೆಂದರೆ—ಎಲ್ಲರೂ ಒಂದೇ ಪರಿಮಾಣದ ಕರ್ಮ ಸಂಸ್ಕಾರಕ್ಕೆ ಒಳಗಾಗಿರುವುದಿಲ್ಲ.

'ಸರ್ವೋದಯ'ದ ಸಿದ್ಧಾಂತಗಳನ್ನು ನಾನು ಹೀಗೆಂದು ತಿಳಿದುಕೊಂಡೆನು—

(೧) ಎಲ್ಲರ ಒಳಿತೇ ತನ್ನ ಒಳಿತು.

(೨) ವಕೀಲನ ಕೆಲಸಕ್ಕೂ, ನಾವಿಂದನ ಕೆಲಸಕ್ಕೂ ಇರುವ ಬೆಲೆ ಒಂದೇ. ಏಕೆಂದರೆ—ಸ್ವಕಸಬಿನಿಂದ ಜೀವನವನ್ನು ಸಂಪಾದಿಸಲು ಎಲ್ಲರಿಗೂ ಸಮನಾದ ಅಧಿಕಾರವಿದೆ.

(೩) ಶ್ರಮದ ಜೀವನವೇ ಅಂದರೆ ನೇಗಿಲು ಉಳುವವರ, ಕೈ ಕಸಬುಗಾರರ ಜೀವನವೇ ಯೋಗ್ಯವಾದ ಜೀವನ.

ಇವುಗಳಲ್ಲಿ ಮೊದಲನೆಯದು—ನನಗೆ ಗೊತ್ತಿದ್ದಿತು. ಎರಡನೆಯದನ್ನು ನಾನು ಮಸುಕು ಮಸುಕಾಗಿ ಅರಿತಿದ್ದೆನು [illegible] ಇರಲಿಲ್ಲ. ಎರಡ [illegible] ಯೆಂದು 'ಸರ್ವೋದಯ'ವು ಹಗಲು ಬೆಳಕಿನಂತೆ ಸ್ಪಷ್ಟಪಡಿಸಿತು. ಬೆಳಗು ಹರಿಯುತ್ತಲೇ ಎದ್ದು ಈ ತತ್ವಗಳನ್ನು ಆಚರಣೆಗೆ ತರಲು ಅನುವಾದೆನು.

ಜಮಾಬಂದ್ಸಾದ ಸಂಘದ ಕಮಿಟಿ ಮೀಟಿಂಗು.

ಜಮಾಬಂದ್ಸಾದ ಸಂಘದ ಎಕ್ಸಿಕ್ಯೂಟಿವ್ ಕಮಿಟಿಯ ಮೀಟಿಂಗು ತಾ. 14 ರಲ್ಲಿ [illegible] ಮಡಿಕೇರಿ[illegible] ನಡೆಯಿತು. ವೈಸ್‌ಪ್ರೆಸಿಡೆಂಟರಾದ ಮಿ. ಪಿ. ಟಿ. ಕುಶಾಲಪ್ಪನವರು ಅಧ್ಯಕ್ಷರಾಗಿದ್ದರು. ಕಮಿಟಿ ಮೆಂಬರುಗಳು ಮಿ. ಗಳಾದ 1 ಮಿಸ್. ಬಿ. ಸುಬ್ಬಯ್ಯನವರು (ವೈಸ್‌ಪ್ರೆಸಿಡೆಂಟ್) 2 ಸಿ ಯಸ್ ಉತ್ತಯ್ಯನವರು 3. ಸಿ. ಯಸ್. ವೆಂಕಟಯ್ಯನವರು, 4. ಯಂ ಯಂ. ಚಿಣ್ಣಪ್ಪನವರು, 5. ಯಸ್ [illegible] ದ್ದಪ್ಪನವರು, 6 ಕೊಳ್ಳಿಮಾಡ ತಿಮ್ಮಯ್ಯನವರು, 7. ಮಂಡೇಟಿರ ಕರುಂಬಯ್ಯನವರು, 8. ಗುಡ್ಡಂಡ ಧರ್ಮಯ್ಯನವರು, 9 ಅಟ್ಟಮಾಡ ಮಾದಪ್ಪನವರು, 10. ಐಂಗಂಡ ಕುಟ್ಟಪ್ಪನವರ, 11. ಕೆ. ಪಿ ಚಿಣ್ಣಪ್ಪನವರ, 12 ಚಾರಿರ ಅಪ್ಪಯ್ಯನವರು, 13. ಅಜ್ಜಿಗುಟ್ಟಿರ ಪೊನ್ನಪ್ಪನವರು, 14 ಪುಲ್ಲಂಗಡ ಮುದ್ದಯ್ಯನವರು, 15. ಬಿದಿಯಂಡ ಸುಬ್ಬಯ್ಯನವರು, 16. ಯಸ್. ಯಸ್. ರಾಮಚಂದ್ರಯ್ಯರು 17. ಯಂ ಯಂ. ಚೆಟ್ಟಪ್ಪನವರು, 18. ಐಮ್ಮಡ ಮಾದಪ್ಪನವರು, 19 ಕೊಂಗಂಡ ಸಂಬಪ್ಪನವರು, 20 ಕೋಡಿರ [illegible] ಯ್ಯನವರು 21 ನಾಮೇರ ಚಂಗಪ್ಪನವರು, 22. ಕೆ ಯಂ. [illegible] ನವರು, 23. [illegible] ರವರು, 24. ಪಿ ಐ. ಬೆಳ್ಳಪ್ಪನವರು (ಜ. ಸೆಕ್ರೆಟರಿ) ಇವರು ಹಾಜರಿದ್ದರು.

1. ಮಿ. ಗೌಡಂಡ ಸುಬ್ಬಯ್ಯ [illegible] ನವರು, ಕಾವೇರಿ ತಿಮ್ಮಣ್ಣನವರ, ಮಿ. ಟಿ. ಸುಬ್ಬಣ್ಣನವರು, ಮತ್ತು ಕರ್ಕಳ್ಳಿ ಪೂವಯ್ಯನವರು ಮೀಟಿಂಗಿಗೆ ಬರಲು ತಮ್ಮ ಅನಾನುಕೂಲತೆಯನ್ನು ಸೂಚಿಸಿ ಬರೆದ ಪತ್ರಗಳು ಓದಲಾದವು.

2. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

3 ರಾ ಬಾ. ಕೇಳಪಂಡ ಅಪ್ಪಯ್ಯನವರು ಸಂಘದ ಅಧ್ಯಕ್ಷಪದವಿಗೆ ಕೊಟ್ಟ ರಾಜಿನಾಮೆ ಪತ್ರವು ಮೀಟಿಂಗಿನ ಮುಂದೆ ಇಡಲಾಯಿತು.

'ರಾ ಬಾ. ಕೆ. ಅಪ್ಪಯ್ಯನವರ ರಾಜಿನಾಮೆಯನ್ನು ಒಪ್ಪಿಕೊಂಡ, ಅವರು ಸಂಘಕ್ಕೆ ನಡಿಸಿದ ಕೆಲಸಕ್ಕೆ ಅವರಿಗೆ ವಂದನೆಗಳನ್ನು ಅರ್ಪಿಸತಕ್ಕದ್ದು' ಎಂಬ ಠರಾವನ್ನು ಮಿ. ಐಂಗಂಡ ಕುಟ್ಟಪ್ಪನವರು ಸೂಚಿಸಿದರು, ಮಿ. ಮಂಡೇಟಿರ ಕರುಂಬಯ್ಯನವರು ಅನುಮೋದಿಸಿದರು. ಸರ್ವಸಮ್ಮತದಿಂದ ಪಾಸಾಯಿತು.

4. ಮಿ. ಸಿ ಯಸ್. ವೆಂಕಟಯ್ಯನವರ ಅಧ್ಯಕ್ಷಪದವಿಗೆ ಮಿ. ನಾ[illegible] ಕುಶಾಲಪ್ಪನವರ ಹೆಸರನ್ನು ಸೂಚಿಸಿದರು, ಮಿ. ಚಾರಿರ ಅಪ್ಪಯ್ಯನವರು ಅನುಮೋದಿಸಿದರು. ಮಿ. ಕುಶಾಲಪ್ಪನವರು ಸರ್ವಸಮ್ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

5. ವೈಸ್‌ಪ್ರೆಸಿಡೆಂಟರಾಗಿದ್ದ ಮಿ. ಪಿ. ಟಿ. ಕುಶಾಲಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟ ಕಾರಣ ಖಾಲಿಯಾದ ವೈಸ್ ಪ್ರೆಸಿಡೆಂಟಸ್ಥಾನಕ್ಕೆ ಮಿ. ಸಿ. ಯಸ್. ವೆಂಕಟಯ್ಯನವರ ಹೆಸರನ್ನು ಮಿ. ಅಟ್ಟಮಾಡ ಮಾದಪ್ಪನವರು ಸೂಚಿಸಿದರು. ಮಿ. ಚಾರಿರ ಅಪ್ಪಯ್ಯನವರು ಅನುಮೋದಿಸಿದರು. ಒಮ್ಮತದಿಂದ ಮಂಜೂರಾಯಿತು.

6. 'ಅಧ್ಯಕ್ಷರಾದ ಮಿ. ಪಿ. ಟಿ ಕುಶಾಲಪ್ಪನವರು ಮಡಿಕೇರಿಯಲ್ಲಿ ವಾಸ ಇಲ್ಲದ ಕಾರಣ ಮಡಿಕೇರಿಯಲ್ಲಿ ವಾಸವಿರುವ ವೈಸ್‌ಪ್ರೆಸಿಡೆಂಟರಾದ ಮಿ. ಸಿ. ಯಸ್. ವೆಂಕಟಯ್ಯನವರಿಗೆ ತಿಂಗಳುವಾರು ಲೆಕ್ಕ ಚೆಕ್ಕುಮಾಡುವ, ಬಿಲ್ ಪಾಸುಮಾಡುವ ಮತ್ತು ಸಾಧಾರಣ ಕೆಲಸ ನಡಿಸುವ ಅಧಿಕಾರ ಕೊಡಬೇಕು' ಎಂದು ಮಿ. ಯಂ. ಯಂ. ಚೆಟ್ಟಪ್ಪನವರು ಸೂಚಿಸಿದ ಠರಾವನ್ನು ಮಿ. ಕೊಳ್ಳಿಮಾಡ ಕರುಂಬಯ್ಯನವರು ಅನುಮೋದಿಸಿದರು. ಠರಾವು ಮಂಜೂರಾಯಿತು.

7 ರಾಯಲ್ (ಪ್ರಿನ್ಸ್) ಕಮಿಷನ್ನಿನ ಬಹಿಷ್ಕಾರವನ್ನು ಜನರಲ್ ಸೆಕ್ರೆಟರಿಯವರ ವಿವರಿಸಿದರು. ಈ ಕಮಿಷನನ್ನು ಬಹಿಷ್ಕರಿಸುವದು ಎಲ್ಲರ ಕರ್ತವ್ಯವೆಂದು ಮುಂತಾಗಿ ಮಿ. ಸಿ ಎಸ ಉತ್ತಯ್ಯನವರು ಸ್ವಲ್ಪ ಮಾತಾಡಿ, 'ಈ ವಿಷಯ ತೀರ್ಮಾನಿಸಲು ಸಂಘದ ಒಂದು ವಿಶೇಷ ಸಭೆಯನ್ನು ಫೆಬ್ರುವರಿ ತಾ. 2ನೇ ಗುರುವಾರ ಮಧ್ಯಾಹ್ನ 2 ಗಂಟೆಗೆ ಎಂ ರಾಜಪೇಟೆ ರೀಡಿಂಗ್ ರೂಮು ಬಳಿ ನಡಿಸಬೇಕು.' ಎಂಬ ಠರಾವನ್ನು ಸೂಚಿಸಿದರು. ಮಿ. ಐಮ್ಮಡ ಮಾದಪ್ಪನವರು ಅನುಮೋದಿಸಲಾಗಿ ಸರ್ವಸಮ್ಮತದಿಂದ ಪಾಸಾಯಿತು.

8 ಸ್ವಯಂಸೇವಕರ ತರಬೇತಿನ ವಿಷಯ ಡಾಕ್ಟರ್ ಹರ್ಡೀಕರರು ತನಗೆ ಬರೆದಿದ್ದ ಕಾಗದವನ್ನು ಮಿ. ಪಿ. ಟಿ. ಕುಶಾಲಪ್ಪನವರು ವಿವರಿಸಿ ಹೇಳಿದರು. ಈ ವಿಷಯ ದೀರ್ಘ ಚರ್ಚೆ ನಡೆದನಂತರ ಮಿ. ಸಿ. ಎಸ್. ಉತ್ತಯ್ಯನವರು ಈ ಕೆಳಗಿನ ಠರಾವನ್ನು ಸೂಚಿಸಿದರು. [illegible] ಬಂದ್ಸಾದ ಸಂಘದ ಆಶ್ರಯದಲ್ಲಿ 250 ರೂ [illegible] ಒಂದು [illegible] ವಾಲಂಟಿಯರ್ ಗಳನ್ನು ಇಡಬೇಕು. ಮತ್ತು [illegible] ಸನ್ನು ಒಡನೆ ಪ್ರಾರಂಭಿಸಲು ಒಂದು ಉಪಕಮಿಟಿಯನ್ನು ನೇಮಿಸಬೇಕು." ಮಿ. ಕೆ. ಪಿ. ಚಿಣ್ಣಪ್ಪನವರು ಅನುಮೋದಿಸಿದರು. ಠರಾವು ಪಾಸಾಯಿತು.

ಸೇವಾದಳ ತರಬೇತಿನ ಬಗ್ಗೆ ಈ ಕೆಳಗಿನ ಮೆಂಬರುಗಳ ಉಪಕಮಿಟಿಯು ನೇಮಿಸಲಾಯಿತು. ಮಿ. ಗಳಾದ 1. ಪಿ. ಟಿ ಕುಶಾಲಪ್ಪನವರು 2. ಸಿ. ಎಸ ಉತ್ತಯ್ಯನವರು, 3. ಎಸ್ ಮುದ್ದಪ್ಪನವರು 4. ಐಮ್ಮಡ ಮಾದಪ್ಪನವರು ಮತ್ತು ಪಿ. ಐ ಬೆಳ್ಳಪ್ಪನವರು.

9 'ಕೂರ್ಗನ್ನು ಮೈಸೂರಿಗೆ ಸೇರಿಸುವ ವಿಷಯದ ಠರಾವನ್ನು ತಾನು ಸಂಘದ ಬರುವ ವಿಶೇಷ ಮಹಾಸಭೆಯಲ್ಲಿ ಸೂಚಿಸುವೆನೆಂದು ಹೇಳಿ ಮಿ. ಸಿ. ಎಸ್. ಉತ್ತಯ್ಯನವರು ಸದರಿ ಠರಾವನ್ನು ವಾಪಸು ತೆಗೆದುಕೊಂಡರು.

ಪಿ. ಟಿ. ಕುಶಾಲಪ್ಪ.
(ಅಧ್ಯಕ್ಷರು.)

ವಿನಂತಿ.

ಜಮಾಬಂದ್ಸಾದ ಸಂಘಕ್ಕೆ 12 ಜನ ಸ್ವಯಂಸೇವಕರು (ವಾಲಂಟೀಯರು) ಬೇಕಾಗಿದ್ದಾರೆ. ಈ ವರ್ಷ ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಅಮ್ಮತ್ತಿಯಲ್ಲಿ ಶ್ರೀಯುತ ಹರ್ಡೀಕರರವರ ಕೈಕೆಳಗೆ ಸಂಘದ ಖರ್ಚಿನಿಂದ ಸ್ವಯಂಸೇವಕರಾಗಿ ತರಬೇತು ಹೊಂದಲು 12 ಯುವಕರು ಬೇಕಾಗಿದ್ದಾರೆ. ಪ್ರೈಮರಿ ವಿದ್ಯಾಭ್ಯಾಸ ಹೊಂದಿರುವ ಮತ್ತು 18 ರಿಂದ 25 ವರ್ಷದೊಳಗಿನ ಪ್ರಾಯದ ಯುವಕರು ಮಾತ್ರ ಬರಕೊಳ್ಳತಕ್ಕದ್ದು.

ಅಪ್ಲಿಕೇಶನುಗಳು ಜನರಲ್ ಸೆಕ್ರೆಟರಿಯವರಿಗೆ ಫೆಬ್ರುವರಿ 1ರೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಉಮೇದುವಾರರು ಫೆಬ್ರುವರಿ ತಾ 2ನೇ ಗುರುವಾರ ಬೆಳಿಗ್ಯ 10 ಗಂಟೆಗೆ ವೀರಾಜಪೇಟೆ ಪಿನ್ಟಾರ ಸ್ಟೋರ್ ನ ಹಜಾರದಲ್ಲಿ ಜನರಲ್ ಸೆಕ್ರೆಟರಿಯವರ ಮುಂದೆ ಹಾಜರಾಗತಕ್ಕದ್ದು. ದೇಶಸೇವೆ ಮಾಡಬೇಕೆಂಬ ಇಚ್ಛೆಯುಳ್ಳ ಯುವಕರು ಈ ಸದವಕಾಶವನ್ನು ಕಳಕೊಳ್ಳಬಾರದಾಗಿ ಕೋರಲಾಗಿದೆ.

ಜಮಾಬಂದ್ಸಾದ ಸಂಘ, ಪಿ. ಐ. ಬೆಳ್ಳಪ್ಪ,
ಮಡಿಕೇರಿ 19—1—'28. ಜನರಲ್ ಸೆಕ್ರೆಟರಿ.

ಬ್ರಿಟಿಷರು ಅಥವಾ ಬೇರೆ ಯೂರೋಪಿಯನ್ ಪರದೇಶಸ್ಥರು ಹಿಂದೂದೇಶವನ್ನು ಆಳಲು ಯೋಗ್ಯರೇ?

(ಮೋಡರ್ನ್ ರಿವ್ಯೂವಿನಲ್ಲಿ [illegible] ಲ್ಯಾಂಗ್‌ಡನರ ಲೇಖನದ ಸಾರಾಂಶ)

ಮೊದಲನೇ [illegible] [illegible]

ಹಿಂದೂದೇಶವನ್ನು ಆಳುವದಕ್ಕಾಗಿ ಅಲ್ಲಿಗೆ ಹೋಗುವ ಬ್ರಿಟಿಷ್ ಜನರು ನಿಮಿಷ ಮಾತ್ರವಾದರೂ ಆ ದೇಶವು ತಮ್ಮ ಖಾಯಂ ವಾಸಸ್ಥಳವೆಂದು ಭಾವಿಸುವುದಿಲ್ಲ. ಆ ದೇಶವು ಒಂದು ಛತ್ರವೆಂದೋ ಅಥವಾ ತಮ್ಮ ಸ್ವಂತ ದೇಶದಿಂದ [illegible] ದೂರವಾದದ್ದು [illegible] ವ ಸ್ಥಳವೆಂದೋ ಎಣಿಸುತ್ತಿರುವರು. ಬಾಹಾಳಾದಲ್ಲಿ [illegible] ಇಂಥಾ ಜನರನ್ನು [illegible] ಕಾಲ ದಣಿವಾರಿಸಿ ಹಾರಿ ಹೋಗತಕ್ಕ ಹಕ್ಕಿಗಳೆಂದು ಕರೆದಿರುವನು.

ಬ್ರಿಟಿಷರು ಹಿಂದೂಗಳ ಒಂದು ಭಾಗವಲ್ಲ. ಅವರು ಅಲ್ಲಿ ಖಾಯಂ ವಾಸಮಾಡಬೇಕೆಂದು ಹೋಗತಕ್ಕವರಲ್ಲ. ಅವರು ಆ ದೇಶಕ್ಕೆ ಸಂಬಂಧಪಟ್ಟವರೇ ಅಲ್ಲ. ಅವರು ಸರಕಾರಿ ಉದ್ಯೋಗಸ್ಥರಾಗಿಯೇ ಅಥವಾ ವ್ಯಾಪಾರಿಗಳಾಗಿಯೇ ಆ ದೇಶಕ್ಕೆ ಬರುವರು. ಸ್ವಲ್ಪ ಕಾಲದನಂತರ ಗಂಟುಮೂಟೆ ಕಟ್ಟಿಕೊಂಡು ಹಿಂತಿರುಗುವರು. ಸರಕಾರಿ ನೌಕರಿಯಲ್ಲಿದ್ದವರು ಸಾಯುವ ತನಕ ದೊಡ್ಡ ಪಿಂಚಿನಿಯನ್ನು ಹಿಂದೂದೇಶದಿಂದ ತಮ್ಮ ದೇಶಕ್ಕೆ ತರಿಸಿಕೊಳ್ಳುವರು. ಹಿಂದೂದೇಶದಲ್ಲಿರುವಾಗ ತಮ್ಮ ಸಂಬಳದ ಬಹು ಸ್ವಲ್ಪ ಹಣವನ್ನು ಮಾತ್ರ ಕೊಟ್ಟು ಹೋಗತಕ್ಕ ಮತ್ತು ಹೆಚ್ಚು ಸಮಯ ಉಳಿಯದಿರತಕ್ಕ ತರಕಾರಿ, ಹಾಲು ಮತ್ತು ಗೋಧಿ ರೊಟ್ಟಿಗಳಿಗೆ ಖರ್ಚು ಮಾಡುವರು. ಬಾಕಿ ತಮಗೆ ಬೇಕಾದ ಸಕಲ ಸಾಮಾನುಗಳನ್ನು ತಾವು ಹುಟ್ಟಿದ ದೇಶವಾದ ಇಂಗ್ಲೆಂಡಿನಿಂದಲೇ ತರಿಸಿಕೊಳ್ಳುವರು. ತಮಗೂ ತಮ್ಮ ಹೆಂಡತಿ ಮಕ್ಕಳಿಗೂ ಬೇಕಾದ ಉಡುಪುಗಳನ್ನು ತಮ್ಮ ದೇಶದಿಂದ ಹೊಲಿಸಿಯೇ ತರಿಸಿಕೊಳ್ಳುವರು. ಕುರ್ಚಿ, ಮೇಜು ಮೊದಲಾದವುಗಳು ಕೂಡ ಇಂಗ್ಲೀಷಿನವರಿಂದ ತಯಾರಾದದ್ದೇ ಆಗಬೇಕು. ಹಿಂದೂದೇಶದಲ್ಲಿ ಎಷ್ಟು ಒಳ್ಳೆಯ ರೀತಿಯಲ್ಲಿ ತಯಾರಾದ ಸಾಮಾನುಗಳಿದ್ದರೂ ಅವುಗಳನ್ನು ಎಂದಿಗೂ ಕೊಂಡುಕೊಳ್ಳುವದಿಲ್ಲ. ಹಿಂದೂದೇಶದಲ್ಲಿದ್ದಷ್ಟು ಕಾಲ ತಾವು ದೇಶಾಂತರದಲ್ಲಿದ್ದೇವೆಂದು ಭಾವಿಸಿ ಸ್ವದೇಶಕ್ಕೆ ತಾವು ಯಾವಾಗ ಹಿಂತಿರುಗಿ ಹೋಗುವ ದಿನವು ಬರುವುದೋ, ಯಾವಾಗ ತಮ್ಮ ಸ್ವಂತ ದೇಶಕ್ಕೆ ಮರಳಿಹೋಗುವ ದಿನವು ಬರುವುದೋ ಎಂದು ಎಣಿಕೆ ಮಾಡುತ್ತಿರುವರು. ಅವರಂತೂ ತಾವು ಪರದೇಶಸ್ಥರೆಂದು ಭಾವಿಸುವುದಲ್ಲದೆ ಹಿಂದೂದೇಶದಲ್ಲಿ ಹುಟ್ಟಿದ ತಮ್ಮ ಮಕ್ಕಳೂ ಕೂಡ ಪರದೇಶಿಗಳೆಂದು ಭಾವಿಸುವರು.

ಹಿಂದೂ ಮಕ್ಕಳು ಆ ದೇಶದಲ್ಲಿ ಹುಟ್ಟುವದಲ್ಲದೆ ತಮ್ಮ ವಿದ್ಯಾಬುದ್ಧಿಗಳೆಲ್ಲವನ್ನೂ ಅಲ್ಲಿಯೇ [illegible] ಆದರೆ ಹಿಂದೂದೇಶದಲ್ಲಿ ಹುಟ್ಟಿದ ಇಂಗ್ಲೀಷ್ ಮಕ್ಕಳು ತಮ್ಮ ಬಾಲ್ಯವನ್ನೆಲ್ಲಾ ಇಂಗ್ಲೆಂಡಿನಲ್ಲಿಯೇ ಕಳೆದು ತಮಗೆ ಬೇಕಾದ ವಿದ್ಯಾರ್ಜನೆಯನ್ನು ಅಲ್ಲಿಯೇ ಮಾಡಿಕೊಳ್ಳುವರು. ಹಾಗಾದ್ದರಿಂದ ಇಂಥಾ ಇಂಗ್ಲೀಷ್ ಯುವಕರಲ್ಲಿಯೂ ಕೂಡ ಹಿಂದೂದೇಶವು ಪರದೇಶವೆಂಬ ಭಾವನೆಯು ಬಲವಾಗಿ ಬೇರೂರಿಕೊಳ್ಳುವುದು. ಆದ್ದರಿಂದ ಹಿಂದೂದೇಶದಲ್ಲಿರತಕ್ಕ ಇಂಗ್ಲೀಷ್ ಜನರಿಗೂ ಹಿಂದೂಗಳಿಗೂ ಯಾವಾಗಲೂ [illegible] ವೂ ಒಂದೇಯಾಗಿರುವದಿಲ್ಲ. ಇಂಗ್ಲೀಷರು ಹಿಂದೂಗಳ [illegible] ದ ನಿಜವಾದ ಸ್ಥಿತಿಯನ್ನು ತಿಳಿಯಲಾರರು. [illegible] ಅವರ ಮನಸ್ಸಿನಲ್ಲಿ ಇಂಗ್ಲೆಂಡೇ ತಮ್ಮ ಮನೆಯೆಂಬ ಭಾವನೆಯು ಬಲವಾಗಿದೆ. ಇದು ತಪ್ಪೆಂದು ಇವರನ್ನು ನಾವು ದೂಷಿಸುವುದಿಲ್ಲ. ಆದರೆ ಅಂಥಾ ಪರದೇಶೀಯರ [illegible] ಕ್ಕಾಗಿಯೋ ಅಥವಾ ದಣಿವಾರಿಸಿಕೊಳ್ಳಲೋ ಬಂದ ಹಕ್ಕಿಗಳಂತಿರುವ ಜನರು ಹಿಂದೂದೇಶವನ್ನು ಆಳಲು ಯೋಗ್ಯರೇ?

ಇಂಗ್ಲೀಷ್ ಜನರಿಗೆ ಹೆಚ್ಚಾದ ಅನುಭವವಿರುವದರಿಂದ ಕೆಲವು ವಿಧದಲ್ಲಿ ಅವರು ಬೇರೆ ಎಲ್ಲರಿಗಿಂತಲೂ ರಾಜ್ಯವನ್ನಾಳಲು ಯೋಗ್ಯರಾಗಿರುವರು. ಅದರ ಜತೆಯಲ್ಲಿ ಕೆಲವು ಮುಖ್ಯವಾದ ಗುಣಗಳಲ್ಲಿ ಅವರು ಬೇರೆ ಜನಾಂಗಗಳಿಗಿಂತ ಕೀಳಾಗಿರುವರು. ಬ್ರಿಟಿಷರಿಗೆ ದಯೆ ಮತ್ತು ಊಹನಾಶಕ್ತಿಯು ಕಡಿಮೆ. ಅವರು ಒಂದು ತರಹದ ಗರ್ವಿಷ್ಠರು. ಅಲ್ಲದೆ ಕಿಂಚಿತ್ತಾದ ದೃಷ್ಟಿಯುಳ್ಳವರು. ಈ ಗುಣಗಳಿಂದ ಆತ್ಮಾಭಿಮಾನವೂ, ಮನೋದೃಢತೆಯೂ ಅವರಲ್ಲಿ ಹೆಚ್ಚುವುದೇನೋ ನಿಜ. ಆದರೆ ದಯೆ ಮಾತ್ರ ಇಲ್ಲದಷ್ಟು ಕಡಿಮೆ. ಅವರ ತಾವು ಶ್ರೇಷ್ಠವಂಶದವರೆಂಬ ಭಾವನೆಯಿಂದ ತಮ್ಮ ಕೈಕೆಳಗಿನವ[illegible]

[illegible] ದೇಶಕ್ಕೆ [illegible]

ಯಾವ ಜನಾಂಗ [illegible] ತಿಳಿಯಲು [illegible]

ಇಂಗ್ಲೀಷರು ತಮ್ಮ ಗುಣ [illegible] ಬಲವಾಗಿ ಅಪ್ಪಿಕೊಂಡ ತಮ್ಮ ದ್ವೀಪದ ಕಾನೂನು ರೀತಿಗಳನ್ನೇ ದೊಡ್ಡ ದೇಶಗಳಾದ ಇಂಡಿಯಾ ಮತ್ತು ಈಜಿಪ್ಟ್ ನಾಡಲ್ಲಿ ಸಿಬಂದಿಸುವರು.

ಬ್ರಿಟಿಷ್ ನ [illegible] ನಾಗರೀಕತೆಗೂ [illegible] ದಿನನಿತ್ಯವೂ ಕಾಣಿಸುತ್ತಿದೆ. [illegible] ದ್ರವ್ಯವೆಲ್ಲವೂ ಕ್ಷಣಿಕವಾದುದು [illegible] ಹುಟ್ಟಿನ ಅಧೀನವೆಂಬ ಸ್ಪಿರಿಟ್ ಆತ್ಮಶಕ್ತಿಯೇ ಶ್ರೇಷ್ಠವೆಂದು ಆತ್ಮಜ್ಞಾನ ಸಂಪಾದನೆಯಲ್ಲಿಯೇ ಮಗ್ನವಾಗಿದೆ. ಅದ್ದರಿಂದ ಹಣ ಸಂಪಾದನೆಯು [illegible] ಬ್ರಿಟಿಷ್ ಜನರು ಆತ್ಮವಿದ್ಯಾನಿರತರಾದ ಹಿಂದೂಗಳನ್ನು ತಿರಸ್ಕರಿಸಿ ಅವರ ಪ್ರಯತ್ನಗಳೆಲ್ಲವೂ ಹುಚ್ಚು ಪ್ರಯತ್ನಗಳೆಂದು ಭಾವಿಸುತ್ತಿರುವರು. ಅಮೇರಿಕದ ಪ್ರೆಸಿಡೆಂಟ್ ವಿಲ್ಸನ್ ಅವರು ಹೇಳಿದಂತೆ [illegible] ಮಾಡದೆ [illegible] ಆಳಲು ಶಕ್ತರಾಗಲಿಲ್ಲ. ಹಾಗಿರುವಾಗ ಬ್ರಿಟಿಷರು ಇತರ ಪರದೇಶವನ್ನು ಆಳಲು ಶಕ್ತರೇ? ಇವರು ತಮ್ಮ ಸ್ವಂತ ಸಹೋದರರಾದ ಐರ್ಲೆಂಡಿನವರನ್ನು ಚೆನ್ನಾಗಿ ನಡೆಸುತ್ತಿರುವರೇ? ಹಾಗಾದರೆ ಅವರ ಸರ್ಕಾರದಲ್ಲಿ ಈಗ ನಡೆಯುತ್ತಿರುವ ಮಂತ್ರಿಗಳ ಬದಲಾವಣೆ [illegible] ತಾವು ಮಾಡಿದ ಕಾನೂನು ತಪ್ಪಾಯಿತು [illegible] ಹೀಗೆ ತಮ್ಮ ದೇಶಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿಯೇ ಜ್ಞಾನ ಕಡಿಮೆಯಾಗಿ [illegible] ಬೇರೆ ಜನಾಂಗದ ರೀತಿ ನೀತಿಗಳು [illegible] ವಿಷಯ ಏನೆಂದು ತಿಳುವಳಿಕೆ ಇಲ್ಲದೆ ಹ್ಯಾಗೆ ಚೆನ್ನಾಗಿ ರಾಜ್ಯಭಾರ ಮಾಡಾರು?

(ಮುಂದುವರಿಯುವುದು)

ಗಣಪತಿ ವಾಚನಾಲಯ.

ವೀರಾಜಪೇಟೆ ಗಣಪತಿ ವಾಚನಾಲಯದ ಜನರಲ್ [illegible] ತಾ 1[illegible] ರಲ್ಲಿ ಸದರಿ ವಾಚನಾಲಯದಲ್ಲಿ ನಡೆಯಿತು. [illegible] ಉತ್ತಯ್ಯನವರು ಅಧ್ಯಕ್ಷರಾಗಿದ್ದರು.

[illegible] ಗಣಪತಿ ಲೈಬ್ರರಿ ಯನ್ನು [illegible] ಸಹಾಯಕ್ಕೆ ವರ್ಗಾಯಿಸಬೇಕೆಂದು [illegible] ಠರಾವನ್ನು [illegible] ಸೂಚಿಸಿದರು. ಸರ್ವಾನುಮತದಿಂದ ಮಂಜೂರಾಯಿತು.

[illegible] ಪುಸ್ತಕಗಳನ್ನು [illegible] ಆರ್ಗನೈಸಿಂಗ್ [illegible] ಅಧಿಕಾರ [illegible]

ಆರ್ಗನೈಸರ್, [illegible] ಸಂಘಕ್ಕೆ ತಿಳಿಸಿ, ಅವರ ಒಪ್ಪಿಗೆ ಪಡೆದುಕೊಳ್ಳತಕ್ಕದ್ದು.

ಸಿ. ಯಸ್. ಉತ್ತಯ್ಯ.

'ಕೊಡಗು' ಲಿಮಿಟೆಡ್ ಕಂಪೆನಿಯ ಜನರಲ್ ಮೀಟಿಂಗು

ಕೊಡಗು ಲಿಮಿಟೆಡ್ ಕಂಪನಿಯ ಶೇರುದಾರ [illegible] ಜನರಲ್ ಮೀಟಿಂಗು ಈ ತಾ 11ನೇ [illegible] 2 ಗಂಟೆಗೆ [illegible] ಕಂಪೆನಿಯ ಡೈರೆಕ್ಟರುಗಳ [illegible] ಅಧ್ಯಕ್ಷ [illegible] ಸ್ಥಾನವನ್ನು [illegible]

1 ಕಂಪನಿಯ 1926–27ನೇ ವರ್ಷದ [illegible] ಲೆಕ್ಕಗಳನ್ನು (ಅವುಗಳ ಪ್ರತಿಯನ್ನು [illegible]) ಮೀಟಿಂಗಿನ [illegible]

ಇದರ ವಿಷಯ [illegible] 1926–7ನೇ ವರ್ಷದ [illegible] ಲೆಕ್ಕಗಳ [illegible] ಸೂಚಿಸಿದರು. [illegible] ಅನುಮೋದಿಸಿದರು. ಸರ್ವಾನುಮತದಿಂದ ಅಂಗೀಕಾರವಾಯಿತು.

2 [illegible] 1927–28 [illegible] ಅನುಮೋದಿಸಿದರು. ಇದು ಪಾಸಾಯಿತು.

3 [illegible] 1 [illegible] ಅನುಮೋದಿಸಿದರು. ಏಕಮತದಿಂದ ಮಂಜೂರಾ[illegible]

4 1925–3 1926–2 ಮತ್ತು 1927–[illegible] [illegible] ಬಾಕಿ ಇರುವ [illegible] ಅನುಮೋದಿಸಿದರು [illegible] ವಿಚಾರದಿಂದ [illegible] ಮಂಜೂರಾಯಿತು.

[illegible]

[illegible] ಉತ್ತಯ್ಯನವರು, [illegible] ಲೀಗಲ್ ಅಡ್ವೈಸರುಗಳಾಗಿ ಆರಿಸಲ್ಪಟ್ಟರು.

ಅಧ್ಯಕ್ಷರಿಗೆ ವಂದನೆಗಳಾದ ಮೇಲೆ 4½ ಗಂಟೆಗೆ ಮೀಟಿಂಗು ಮುಕ್ತಾಯವಾಯಿತು.

ಸಿ. ಬಿ. [illegible]
(ಅಧ್ಯಕ್ಷರು)

ನೋಟೀಸು.

ಕೊಡಗು [illegible] ಇನ್ಸ್‌ಪೆಕ್ಟರವರ ಆಫೀಸಿನಿಂದ.

ಈ ಆಫೀಸಿಗೆ [illegible] ಈ ಕೆಳಗೆ ಕಂಡ ಮರದ ಸಾಮಾನುಗಳನ್ನು ಮಾಡಿಸಬೇಕಾಗಿದೆ. [illegible] ಈ ಆಫೀಸಿಗೆ ಬಂದು ನೋಡಿಕೊಂಡು, [illegible] ಇಷ್ಟಪಡುವವರು ಪ್ರತಿ [illegible] ದರವನ್ನು [illegible] ಈ ಆಫೀಸಿಗೆ ಒಪ್ಪಿಸತಕ್ಕದ್ದು. ಸದರಿ [illegible] ಈ ಆಫೀಸಿಗೆ [illegible] ಜನವರಿ 31ರ ಒಳಗೆ ತಲುಪತಕ್ಕದ್ದು. [illegible] ಕಾರಣ [illegible] ತಿರಸ್ಕರಿಸುವ ಹಕ್ಕು [illegible] ಸ್ಪೆಕ್ಟರ್ [illegible] ಯೋಗಿಸುವ ಮರದ ಜಾತಿಯನ್ನು ಅರ್ಜಿಯಲ್ಲಿ ಕಾಣಿಸತಕ್ಕದ್ದು.

1 ಕಿಂಡರ್‌ಗಾರ್ಟನ್ ಮೇಜುಗಳು
2 ಒರಗುವ ಬೆಂಚುಗಳು
3 ಡೆಸ್ಕುಗಳು,
4 ಕಾಲುಗಳಿಲ್ಲದ [illegible] ಹಲಗೆಗಳು
5 [illegible]
6 ಮೇಜುಗಳು

ಪಿ. ಸಿ. ಉತ್ತಯ್ಯ,
ಶಾಲೆ ಇ. ಇನ್ಸ್‌ಪೆಕ್ಟರ್

ವರ್ತಮಾನ ಸಂಗ್ರಹ.

ಒಳದೇಶ

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 28ನೇ ಶನಿವಾರ ಮಡಿಕೇರಿ ಒಕ್ಕಲಿಗರ ಸಂಘದ ಹಾಲ್‌ನಲ್ಲಿ ನಡೆಯಲಿಕ್ಕಿದೆ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಫೈನಾನ್ಸ ಕಮಿಟಿಯ ಮೀಟಿಂಗು ನಿನ್ನೆ ದಿನ ಪ್ರಾರಂಭವಾಗಿ ಈ ದಿನ ನಡೆಯುವದು

ಕೊಡಗು ಪಾಲಿಸ್ಸು ಸ್ಪೋರ್ಟ್ಸ ... ಟೂರ್ನಮೆಂಟ್ ಈ ತಾ. 28ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ಪೊಲೀಸ್‌ಪೇಟೆಯಲ್ಲಿ ನಡೆಯುವದು

ಕಾಸರಗೋಡು ... ಗಳಿಂದ ... ಪ್ರೆಸಿಡೆಂಟರು ಮಂಜೂರು ಮಾಡಿರುವುದಾಗಿ ತಿಳಿದಿದ್ದೇವೆ

ಬೆಂಗಳೂರು ಗ್ರಾಮದ ೬೦ ವರ್ಷ ಪ್ರಾಯದ ... ಕಾರ್ಯಪ್ಪನವರು ಕಳೆದ ... ರಾತ್ರಿ ... ದಲ್ಲಿ ಮಲಗಿದವರು ರಾತ್ರಿ ... ಒಂದು ... ಜಾವದಲ್ಲಿ ಮೃತರಾದರೆಂದು ತಿಳಿಯುತ್ತೇವೆ

ಮಡಿಕೇರಿಯಲ್ಲಿ ಕೊರಗಂಡ ... ಅಪ್ಪಣ್ಣನವರ ಮನೆಯಲ್ಲಿ ಒಂದು ಮಗುವಿಗೂ ... ಗಳಿಗೂ ... ಅಂಟಿದೆ ಮಗುವಿಗೆ ... ಗಳನ್ನು ಸ್ಸೆಗ್ರೆಗೇಶನ್ ವಾರ್ಡಿನಲ್ಲಿಟ್ಟಿರುತ್ತಾರೆ

ಬರುವ ಫೆಬ್ರವರಿ ತಿಂಗಳಲ್ಲಿ ನಡಯುತ್ತಿರುವ ... ಜೋರ್ನನಿ ... ಬಗ್ಗೆ ... ಜನರಲ್ ಮೀಟಿಂಗು ಈ ತಾ 29ನೇ ಆದಿತವಾರ ... ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ನಡೆಯುವದು

ಆಲ್ ಇಂಡಿಯಾ ಮ್ಯೂಜಿಯಂ ... ಪೂರ್ವರ್ ಹೌಸಿಸ್ ... ಸರಿಂದ ... ಒಂದು ಸರಳ ಮೀಟಿಂಗು ಈ ತಾ 29ನೇ ಆದಿತವಾರ ಮಡಿಕೇರಿಯಲ್ಲಿ ಆದರ ಚೀಫ್ ಏಜೆಂಟರವರ ... ನಡೆಯುತ್ತದೆ

ಅಂಪಟ್ಟು ಗ್ರಾಮದ ... ಗೆ ... ಕಳೆದ ... ವಾರ ... ಜಾರಿದ ... ಪ್ರಯತ್ನಿಸಿದಾಗ ... ಗಳಿ ಅಲ್ಲಿಯೇ ಮೃತರಾದರೆಂದು ವರ್ತಮಾನ

ವೀರರಾಜಪೇಟೆಯಲ್ಲಿ ... ರೋಗವು ... ಎರಡು ತಿಂಗಳುಗಳಿಂದವು ... 70 ಜನರಿಗೆ ಅಂಟಿತ್ತು ... ಎರಡು ಮಕ್ಕಳೂ ... ಮೃತರಾದರು ... ಈಗ ... ಸಾರ್ವಜನಿಕ ... ಗಳಲ್ಲಿಯೂ ... ವರ್ತಮಾನವಿದೆ

ಈ ತಾ. 17ರಲ್ಲಿ ಸಂಪಾಜೆಯ ... ದಲ್ಲಿ ... ಮೃತ ... ವ್ಯಕ್ತಿಯ ... ಆಸ್ಪತ್ರೆಗೆ ... ತಾ. 19ರಲ್ಲಿ ... ಪೊಲೀಸು ತನಿಖೆಯಲ್ಲಿದೆ

ಒಕ್ಕಲಿಗರ ಸಂಘದ ... ಕೊಡಗಿನಲ್ಲಿ ... ವನ್ನು ... ಬೆಂಗಳೂರಿನ ... ಮೆಂಬರುಗಳ ಪೈಕಿ ... ವೆಂಕಟ್ಟಯ್ಯನವರು ತಾ 15—1—28ರಲ್ಲಿ ... ಗ್ರಾಮಗಳನ್ನು ಸಂದರ್ಶಿಸಿದರು ... ಗ್ರಾಮಗಳಲ್ಲಿ ... ಕೇಂದ್ರದಿಂದ ... ಶ್ರೀಯುತ ... ಗಂಗಾಧರರಾಯರವರಿಗೆ ... ರಕೊಂಡಿದ್ದಾರೆಂದು ತಿಳಿಸಿರುತ್ತಾರೆ

ಹಿಂದೂದೇಶ.

ಮೆ ಸಿ ಯಫ್ ಎಂಡ್ರ್ಯೂಸರವರ 'ಯೂತ್ ವೀಕ್' ಎಂಬ ಯುವಕರ ವಾರವನ್ನು ... ಸಭೆಯು ಮುಂದೆ ತಾ. 17 ರಲ್ಲಿ ... ದರು

ಪೂನಾದ 'ಸ್ವರಾಜ್ಯ' ... ಸಂಪಾದಕರು ... ಸ್ಪಿಂಟಿಗೆ ... ಪೇಲೆ ಎರಡೆರಡು ವರ್ಷ ... ಸಜೆಯು ವಿಧಿಸಲಾಗಿದೆ

ಮುಸ್ಸೂರಿ ... ದ ... ಪೈಕಿ 500 ಜನ ಕೆಲಸಕ್ಕೆ ... ಗೆ ... ಕಲ್ಲು ... ಎಸದು ...

ಲಾಹೋರಿನ 'ಮಿಲಾಪ್,' 'ಗುರು ಘಂಟಾಲ,' 'ಪ್ರಕಾಶ' ... ಎಂಬ ದೇಶೀಯ ಪತ್ರಿಕೆಗಳನ್ನು ... ಸಂಸ್ಥಾನ

ದೊಳಗೆ ... ದೆಂದ ... ಮಹಾರಾಜರು ಹುಕುಂ ಮಾಡಿರುವರಂತೆ

... ಲೆಜಿಸ್ಲೇಟಿವ್ ... ಒಂದು ಲಕ್ಷ ರೂ ... ಬಂದು ...

... ರಾತ್ರಿ ... ಹೊತ್ತು ... ದಕ್ಕೆ ...

... ಲೆಜಿಸ್ಲೇಟಿವ್ ... ವನ್ನು ...

... ಕಾನ್ಫರೆನ್ಸಿನ ... ಆಂಡ್ರ್ಯೂಸರವರು ...

... ಒಂದು ... ವ್ಯವಸ ...

ಮದ್ರಾಸಿನಲ್ಲಿ ... 20,000 ರೂಪಾಯಿ ... ಒಟ್ಟು ಸುಮಾರು ರೂ 1,8,000 ... ರೂ 27,000 ... ಕಂಡುಹಿಡಿಯಲಾಗಿದೆ

ಜನವರಿ ತಾ 1 ರಲ್ಲಿ ... ಅಸ್ತ್ರಾರಿಯವರಿಗೆ ... ಕಾರಾಗೃಹದಲ್ಲಿ ... ಅನ್ನಾಹಾರವನ್ನು ... ಉತ್ತರ ...

ಈ ತಾ 10ರಲ್ಲಿ ... ನಡೆದ ಎಲ್ಲಾ ಪಾರ್ಟಿಗಳ ಪ್ರತಿನಿಧಿ ... ರಾಯಲ್ ಕಮಿಷನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದೂ, ... ತಾ 3ರಲ್ಲಿ ... ಹರತಾಳ ... 41 ಜನರು ... ಸ್ವರಾಜ್ಯ ... ತಾ 12ರಲ್ಲಿ ... ನಿರ್ಣಯವಾಯಿತು

ಇಂಡಿಯನ್ ... ಒಬ್ಬರು ... ಕ್ಕೆ ... ಆಮೇರಿಕದ ... ಇದ್ದ ... ಈ ರಾಜರು ... ಇಲ್ಲ ... ಹಣ ... ಈ ರಾಜರು ... ಸುತ್ತಿಕೊಂಡ ... ವರ್ಷಕ್ಕೆ 8 ಲಕ್ಷ ರೂ ... ಸಕಾರ ... ರಾಜರು ... ತರುವ ... ಇದ್ದ ...

ವಿದೇಶ.

ರಾಯಲ್ ಕಮಿಷನಿನ ... ಜಾನ್ ಸೈಮನ್‌ರವರು ... ಪ್ರಸಿದ್ಧ ಲಾಯರ ... ಗಿರುವರು ... ಅಗಿರುವರು

ಅಮೇರಿಕ ದ 21 ... ಪ್ರತಿನಿಧಿಗಳು ... ಕಾನ್ಫರೆನ್ಸ್ ... ತಾ 10ರಲ್ಲಿ ... ಪ್ರಾರಂಭವಾಯಿತು ... ಪ್ರೆಸಿಡೆಂಟರಾದ ಮಿ. ಕೂಲಿಡ್ಜರವರು ಕಾನ್ಫರೆನ್ಸನ್ನು ತೆರೆದರು

ದಕ್ಷಿಣ ಆಫ್ರಿಕ ಯೂನಿಯನ್ ಸರ್ಕಾರದ ಗವರ್ನರ್ ಜನರಲ್, ಕಮಾಂಡರ್ ಇನ್ ಚೀಫ್ ಮತ್ತು ಹೈ ಕಮಿಷನರಾದ ಅರ್ಲ ಅಥ್ಲೋನ್‌ರವರ ಉದ್ಯೋಗದ ಅವಧಿಯು ... ವರಿ 2 ಕ್ಕೆ ತೀರಿದರೂ ಅವರ ಅವಧಿಯನ್ನು ಇಂಗ್ಲೆಂಡಿನ ರಾಜರು ಇನ್ನು ಎರಡು ವರ್ಷ ಮುಂದರಿಸಿರುವರು

ಇಂಗ್ಲೆಂಡಿನ ... ಸರಕಾರವು ... ಟೆಲಿಫೋನು ... ಈಗಲೇ 1000 ... ಅಲ್ಲಿ ಕೆಲಸ ... ಹಿಂದೆ ... 10 ... ಗಿದ್ದವು ... ಅದನ್ನು ... ಇಳಿಸ ... ತ್ತಾರಂತೆ

ಈಗ ... ಚೀನಾಕ್ಕೆ ... ಆರೋಗ್ಯವು ಚೆನ್ನಾಗಿಲ್ಲ ... ವನ್ನು ... ಆದ ... ರಾಯಲ್ ಕಮಿಷನ್ನಿನ ... ಜಾನ್ ಸೈಮನ್ನರವರು ... ಎಂದೂ ಸುದ್ದಿ ಇದೆ

ನೋಟೀಸ್.

ತಾ 11—1—1928 ರಲ್ಲಿ ನಡೆದ ... ಕ್ಯೂಟಿವ್ ಕಮಿಟಿಯ ಮೀಟಿಂಗಿನಲ್ಲಿ ತೀರ್ಮಾನಿಸಿದ ಮೇರೆ ... ತಾ ... ನೇ ಗುರುವಾರ ... ಗಂಟೆಗೆ ... ಪೇಟೆ ... ರವರ ... ಬಳಿ ನಡೆಯುವದು

ಚರ್ಚೆಗೆ ವಿಷಯಗಳು

1 ರಾಯಲ್ (ಸೈಮನ್) ಕಮಿಷನಿನಿಂದಿಗೆ ಸಹಕರಿಸಬೇಕೋ ... ಬೇಡವೋ ಎಂಬುದನ್ನು ನಿರ್ಧರಿಸುವುದು

2 ... ರಾಜಕೀಯ ...

4 ಕೊಡಗನ್ನು ಮೈಸೂರಿಗೆ ಸೇರಿಸಲು ... ಉತ್ತೇ ...

ಒಕ್ಕಲಿಗರ ಸಂಘ, ಸಿ. ಐ ಚಿಟ್ಟಿಯಪ್ಪ,
ಮಡಿಕೇರಿ 16—1—28 ಜನರಲ್ ಸೆಕ್ರೆಟರಿ.

ಕೆಲಸಗಾರರು ಬೇಕೇ?

... ಕಟ್ಟಡ ... ಗುತ್ತಿಗೆ ... ಪೊನ್ನಂಪೇಟೆ ಬೋರ್ಡಿಂಗಿಗೆ ...

... ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ —

ಯಂ. ಮುದ್ದಪ್ಪ,
(ಮೈಸೂರ್ ಕಂಟ್ರಾಕ್ಟರ್)
4-1 C/o ಬೋರ್ಡಿಂಗ್,
ಪೊನ್ನಂಪೇಟೆ.

ಪತ್ರವ್ಯವಹಾರ

[ಪತ್ರಿಕೆಯವರು ಪ್ರಕಟಿಸುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ]

ಮೈಸೂರು ಮತ್ತು ಕೊಡಗು.

ಮಹನೀಯರೆ,

ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂದಾಗಿ ಕೆಲವು ಮಹನೀಯರು ಪ್ರಯತ್ನ ... ಈ ಗಾಗಲೇ ಕೌನ್ಸಿಲಿನ ... ಕೊಡಗನ್ನು ... ಸೇರಿಸಬೇಕೆಂದು ... ಜನಗಳಲ್ಲಿ ಭಿನ್ನಾಭಿಪ್ರಾಯಗಳು ... ಕೊಡಗಿಗೆ ಪ್ರತ್ಯೇಕ ಕೌನ್ಸಿಲನ್ನು ... ಕೌನ್ಸಿಲಿನಿಂದ ... ಅಭಿಪ್ರಾಯ ... ನ್ನು ಮುಂದೆ ... ಮೈಸೂರಿಗೆ ಸೇರಿಸಿ ... ಸ್ಥಿತಿಯನ್ನು ...

ಪ್ರಾಯವಾಗಿದೆ ಹೀಗಿರ ಬೇಕಾದರೆ ಶ್ರೀ ಸೋಮಣ್ಣ ನವರಾಗಿ ನಾವು ಹುಟ್ಟಿಸಿ ಬೆಳಸಿ ಪದು ಯಾವ ಸ್ವಾರ್ಥ ದಿಂದ ಎಂದು ನನಗೆ ಗೊತ್ತಾಗಲಿಕ್ಕಿಲ್ಲ ಆದ್ದರಿಂದ ಮಹಾರಾಜರ ದು ಅಭಿಪ್ರಾಯದಿಂದ ಜನರ ಮನಸ್ಸನ್ನು ಕಲಕಿಸಿ ಕೊಡಗು ದೇಶವನ್ನು ಮೈಸೂರಿಗೆ ಒಂದೇ ಸಲ ಸೇರಿಸಬೇಕೆಂಬುದು ಅವರ ವು ಪಕ್ಷಪಾತ ಪದು ಬುದ್ಧಿವಂತಿಕೆಯು ಅಲ್ಲವಲ್ಲ ಈ ವಿಷಯದಲ್ಲಿ ಜನರು ಬಹಳ ಯೋಚಿಸಬೇಕಾಗಿದೆ ಜಾತಿ ವಿಶ್ವಾಸದಿಂದ ಸ್ವಸಂತೋಷದ ಹಾನಿ ಆಗುವ ಪರ ನ್ನು ತಿಳಿದು ತಮ್ಮ ಆಲೋಚನೆ ಯನ್ನು ಅಭಿಪ್ರಾಯವನ್ನು ತಿಳಿಸಬೇಕು ಹೊರತು ಸ್ವಸ್ಥ ಮೈಸೂರು ಎಂಬ ಧರ್ಮಶಾಲಿಗಳು ದೀವಾನರು ಮೈಸೂರು ಸ್ವ ಪ್ರ ಪೇಂದ್ರ ಪಟ್ಟಣದ ವಿಟಿಯು ಮೈಸೂರಿನ ಊರು ಜನಗಳನ್ನು ನೋಡದೆ ಒಂದೇ ಸಲ ಮೈಸೂರಿಗೆ ಸೇರಿಸಬೇಕೆಂದು ಅಭಿಪ್ರಾಯ ಕೊಡಬಾರದಾಗಿ ನನ್ನ ವಿನಂತಿ

ಸದ್ಯಕ್ಕೆ ಮೈಸೂರಿಗೆ ಸೇರಿಸುವದರ ಬದಲು ಮದ್ರಾಸಿಗೆ ಯಾ ಕರ್ಣಾಟಕಕ್ಕೆ ಯಾಕೆ ಸೇರಿಸಬಾರದು ಈಗತಾನೇ ಇಂಗ್ಲಂಡಿನಿಂದ ಹೊಸದಾಗಿ ಏರ್ಪಡಿಸಿರುವ ಸೈಮನ್ ಕಮಿಷನ್ ಇಂಡಿಯಾ ದೇಶದ ಸುಧಾರಣೆ ವಿಷಯ ತನ್ನ ಅಭಿಪ್ರಾಯಗಳನ್ನು ಕೊಡುವ ಮೊದಲು ಇಂಡಿಯಾ ದೇಶದ ಜನರು ಎಷ್ಟರ ಮಟ್ಟಿಗೆ ಅರ್ಹರಾಗಿದ್ದಾರೆಂದು ಪರೀಕ್ಷಿಸಲು ಪ್ರಯತ್ನದಲ್ಲಿ ತೊಡಗಿ ಇರುವದು ಇವರು ಇಂಡಿಯಾ ದೇಶದಲ್ಲಿ ಹಿಂದೂ ರಾಜರ ಕೈಕೆಳಗಿರುವ ರಾಜ್ಯಗಳು ವಿನ ಹ ಬ್ರಿಟಿಷರಿಂದ ಆಳಲ್ಪಡುತ್ತಿರುವ ಪ್ರಾಂತ್ಯಗಳಿಗೆ ಸುಧಾರಣೆಗಳನ್ನು ಕೊಡಲು ಮಾತ್ರ ಹೊರಟಿದ್ದಾರೆ ಹಿಂದೂ ರಾಜರ ಕೈಕೆಳಗಿನ ಸಂಸ್ಥಾನಗಳ ವಿಲೇವಾರಿಗೆ ಪ್ರತ್ಯೇಕ ಕಮಿಷನ ಏರ್ಪಡಿಸಿದ ಇಂತಹ ಸಂದರ್ಭದಲ್ಲಿ ನಾವು ದೊಡ್ಡ ರಾಜ್ಯಗಳ ಜೊತೆಸೇರಿ ಹೋರಾಡಿ ಸ್ವರಾಜ್ಯವನ್ನು ಪಡೆಯಬೇಕೇ ಯಾ ಹಿಂದೂ ರಾಜರುಗಳ ಸಂಸ್ಥಾನಗಳಿಗೆ ಸೇರಿ ಅವರಿಂದ ಸ್ವರಾಜ್ಯ ಪಡೆಯಬೇಕೇ ಎಂಬುದನ್ನು ಆಲೋಚಿಸದೆ ಒಂದೇ ಸಲ ಮೈಸೂರಿಗೆ ಸೇರಿಸುವದು ಎಂದೂ ತಿಳುವಳಿಕೆಯ ಕಾರ್ಯವಾಗಿ ಕಾಣುವದಿಲ್ಲ ಈ ವಿಷಯದಲ್ಲಿ ಪತ್ರಿಕೆಗಳಲ್ಲಿ ಬರೆದು ಹೊರಗಿನ ದೇಶದ ಹೆಚ್ಚು ತಿಳುವಳಿಕೆಯುಳ್ಳ ಮತ್ತು ಸ್ವರಾಜ್ಯ ಸ್ಥಾಪನೆಯಲ್ಲಿ ಮಗ್ನರಾಗಿರುವ ಮಹನೀಯರ ಅಭಿಪ್ರಾಯವನ್ನು ಕೇಳಿ ಮುಂದಿನ ಕೆಲಸಕ್ಕೆ ಪ್ರಾರಂಭಿಸುವದು ಉತ್ತಮ ಈ ವಿಷಯದಲ್ಲಿ ಕಳೆದ ಸಂಚಿಕೆಯಲ್ಲಿ ಪ ರಾ ಶ್ರೀ ಬಿ ಪೊನ್ನಪ್ಪಯ್ಯನವರು ಕೊಡಗನ್ನು ಮೈಸೂರಿಗೆ ಸೇರಿಸುವದಕ್ಕೆ ಎಲ್ಲರೂ ಪ್ರೋತ್ಸಾಹ ಕೊಡಬೇಕೆಂದು ಬರೆದಿದ್ದಾರೆ ಇದು ಬರೆಯುವಷ್ಟು ಪೇಪರು ಅವರು ಇತರರಿಂದ ಮೈಸೂರಿಗೆ ಸೇರಿಸುವದರ ಗುಣ ಅವಗುಣಗಳನ್ನು ತಿಳಿಯದೆ ಒಂದೇ ಸಲ ಪತ್ರಿಕೆಯಲ್ಲಿ ಬಿಡಲು ಅಭಿಪ್ರಾಯವನ್ನು ಬರೆದಿದ್ದಾರೆಂದು ತೋರುತ್ತದೆ ಈ ವಿಷಯದಲ್ಲಿ ಒಂದು ಕೇಳಬೇಕಾದದ್ದು ಸ್ವಲ್ಪ ದಿವಸ ಕೆಳಗೆ ಪತ್ರಿಕೆಯಲ್ಲಿ ಅವರು ಮೈಸೂರಿಗೆ ಸೇರಿಸುವ ರೀತಿಯಲ್ಲಿ ಕೊಡಗನ್ನು ಸೇರಿಸಬೇಕು ಮತ್ತು ಅವರಿಂದ ಕೊಡಗಿನ ಜನರಿಗೆ ಯಾವ ಯಾವ ಪ್ರಯೋಜನಗಳು ಉಂಟಾಗುತ್ತವೆಂದೂ, ಮದ್ರಾಸಿಗೆ ಯಾಕೆ ಸೇರಿಸಬಾರದೆಂದೂ ದಯವಿಟ್ಟು ಪತ್ರಿಕೆಯ ಮೂಲಕ ತಿಳಿಸಬೇಕಾಗಿ ನಾನು ಬೇಡುತ್ತೇನೆ ಈ ವಿಷಯವನ್ನು ನಾನು ಎರಡು ವರ್ಷಗಳ ಹಿಂದೆ ಆಲೋಚಿಸಿದ್ದೆನು ಆದರೆ ಇತ್ತಲಾಗಿ ಮೈಸೂರಿನ ಮತ್ತು ಪ್ರಪಂಚದ ನಾನಾ ವ್ಯವಸ್ಥೆಗಳನ್ನು ತಿಳಿಯುತ್ತ ಆ ಅಭಿಪ್ರಾಯವನ್ನು ಹಾಗೆಯೇ ಮೂಲೆಗಿಡಬೇಕಾಯಿತು ಮೈಸೂರಿಗೆ ಸೇರಿಸುವದರ ಬದಲು ಮದ್ರಾಸಿಗೆ ಯಾಕೆ ಸೇರಿಸಬಾರದ ? ಈ ವಿಷಯದಲ್ಲಿ ದೇಶದ ಮುಂದಾಳುಗಳು ಆಲೋಚಿಸಿ ತಕ್ಕ ತಮ್ಮ ಅಭಿಪ್ರಾಯಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ನನ್ನ ವಿನಂತಿ

ಮೈಸೂರು ಕೊಡಗ"

ಅಯ್ಯಾ

ತಾರೀಖು 3—1—28ರ ಲೋಕಮಾನ್ಯದ ಸ್ಥಳೀಕ ವರ್ತಮಾನ ಸಂಗ್ರಹದಲ್ಲಿ ಒಂದು ವಿಶೇಷ ವರ್ತಮಾನವನ್ನು ನೋಡಿದೆನು ತಾರೀಕು 18—12—27ರಲ್ಲು ಕಿಗ್ಗಟ್ಟ ನಾಡಿಗೆ ದಯಮಾಡಿಸಿದ ಮ ಪಾಂಡಂಡ ಚಂಗಪ್ಪನವರು, ಡಿ ಬೋರ್ಡಿನ ವೈಸ್‌ಪ್ರೆಸಿಡೆಂಟರು (ಯಾ ಈಗ ಏನಾದರೂ ಪ್ರೆಸಿಡೆಂಟರಾದರೋ) ಇವರು ಬಂದಾಗ ಆ ತಾಲೂಕಿನ ಮೆಂಬರುಗಳು ಅಲ್ಲಿಯ ಗ್ರಾಮರಸ್ತೆ, ಲೋಕಲ್ ಫಂಡ್ ಶಾಲೆ ಮತ್ತು ಆಸ್ಪತ್ರೆಗಳನ್ನು ತೋರಿಸಿದರೋ ಇಲ್ಲವೋ ಎಂಬುದನ್ನು ತಿಳಿಯುವದಕ್ಕೆ ಕಷ್ಟವಾಗಿ ಹೋಯಿತು ಯಾವ ಕಾರಣಕ್ಕಾಗಿ ತಿಳಿಯಲಿಲ್ಲ? ಮ ವೈಸ್‌ಪ್ರೆಸಿಡೆಂಟರಾದ ಚಂಗಪ್ಪನವರು ದಯಮಾಡಿಸಿ ಹಿಂದೂ ಶಾಲೆ ಮತ್ತು ರಸ್ತೆಗಳನ್ನು ನೋಡಿ ಸಂತೋಷಪಟ್ಟ ವರ್ತಮಾನ ಪತ್ರಿಕಾಕರ್ತರಿಗೆ ತಿಳಿಸಿದಾಗ ಅವರ ಜೊತೆಯಲ್ಲಿಯೇ ಎರಡು ದಿವಸಗಳ ವರೆಗೆ ಇದೇ ತಾಲೂಕಿನ ಸತ್ಯವಾಗ ಇದ್ದ ಅಲ್ಲಿಯ ಡಿ ಬೋರ್ಡ್ ಮೆಂಬರುಗಳನ್ನು ಇವರು ನೋಡಲಿಲ್ಲವೇನೋ? ಪಾಪ ಡಿ ಮೆಂಬರುಗಳು ಅವರಿಗೆ ಕಂಡಾರೋ? ಇವರಾದರೂ ವೈಸ್ ಪ್ರೆಸಿಡೆಂಟರನ್ನು ಕಂಡೇ ಕುಡಿಯುವದು ಇನ್ನಾದರೂ ಇಂತಾ ವ್ಯಂಗ್ಯಾರ್ಥ ವಿರುವ ಹೇಳಿಕೆಗಳನ್ನು ಪ್ರಕಟಿಸುವ ಮುಂದೆ ನಿಜ ಸಂಗತಿಯನ್ನು ಅರಿಯದೆ ಹೀಗೆ ಬರೆಯಬಾರದಾಗಿ ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ

ಡಿ. ಬಿ. ಮೆಂಬರು

ಆಲ್ ಇಂಡಿಯಾ ಮ್ಯೂಚ್ಯುವಲ್ ಏಡ್ ಅಂಡ್ ಪ್ರೂವಂ ಹೌಸಸ್ ಅಸೋಸಿಯೇಷನ್ ಲಿಮಿಟೆಡ್
ಹೆಡ್ ಆಫೀಸ — ಮೈಸೂರು (ದ ಇಂಡಿಯ) ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು)

ಈ ಪತ್ರಿಕೆಯ ಹಿಂದಿನ ಮೂರು ಸಂಚಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುವ ಶೇರು ಮತ್ತು ಬಾಂಡು ಹೋಲ್ಡರುಗಳಲ್ಲದೆ ಅಸೋಸಿಯೇಷನ್ನಿನ ಸದಸ್ಯರು ಬಹಳ ಜನ ಮನುಷ್ಯರುಗಳು ಕೊಡಗು ದೇಶದಲ್ಲಿ ಸಂಘದ ಬಾಂಡುಗಳನ್ನು ತೆಗೆದುಕೊಂಡಿರುತ್ತಾರೆ ಸ್ಥಳ ಸಂಕೋಚದಿಂದ ಅವರುಗಳ ಪೈಕಿ ಕೆಲವರ ಹೆಸರುಗಳು ಮಾತ್ರ ಈ ಸಲ ಪ್ರಕಟಿಸಲ್ಪಟ್ಟಿರುತ್ತವೆ ಉಳಿದಿರುವವರ ಹೆಸರುಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು ಇದ ಲ್ಲದೆ ಕೊಡಗು ದೇಶದಲ್ಲಿ ಇರತಕ್ಕ ಶೇರು ಮತ್ತು ಬಾಂಡು ಹೋಲ್ಡರುಗಳು ತಾವು ಕೊಡಬೇಕಾದ ಶೇರು ಮತ್ತು ಬಾಂಡು ಒಂದರ ಹಣ ತಿಂಗಳಿಗೆ 1 ಆಣೆ ಪ್ರಕಾರ ಆಗುವ ಹೊಂದ ವರ್ಷದ ಬಡ್ಡಿ 3 ರೂ ಗಳನ್ನು ಪಾವತಿ ಮಾಡಿ ರಸೀದಿಗಳನ್ನು ಚೀಫ್ ಏಜನ್ಸಿ ಆಫೀಸಿನಲ್ಲಿ ಅವರಾಗ ತಕ್ಕದ್ದಾಗಿ ಕೇಳಿಕೊಳ್ಳೋಣಾಗಿದೆ

ನಂ	ಹೆಸರು ಮತ್ತು ವಿಳಾಸ	ತೆಗೆದುಕೊಂಡಿರುವ ಶೇರು ಅಥವ ಬಾಂಡುಗಳ ಸಂಖ್ಯೆ	ಶೇರು ಅಥವಾ ಬಾಂಡುಗ ಮೊಬಲಗ
60	ಮ ಕರವಂಡ ಚಂಗಪ್ಪನವರು ಸಬ್‌ಮ್ಯಾಜಿಸ್ಟ್ರೇಟರು, ಮಡಿಕೇರಿ	2	100
61	,, ಎನ್ ರಾಮಲಿಂಗರು ಪಿ ಡಬ್ಲ್ಯು ಡಿ ಹೆಡ್‌ಕ್ಲಾರ್ಕರು, ಮಡಿಕೇರಿ	1	50
62	ಶ್ರೀ ಕೆ ಸೀತವ್ವನವರ ಮ ರಾ ಕುಶಾಲಪ್ಪನವರ ಪತ್ನಿ, ಮಡಿಕೇರಿ	1	50
63	ಮ ಎನ್ ಅಚ್ಯುತರಾಯರು ಸ ಆ ಇನ್ಸ್‌ಪೆಕ್ಟರ ಆಫ್ ಸ್ಕೂಲ್ಸ್ ಕ್ಲಾರ್ಕರು ಮಡಿಕೇರಿ	1	50
64	,, ಕೆ ಕೆ ಸುಬ್ರಾಯರು ಸೆಂಟ್ರಲ್ ಹೈಸ್ಕೂಲ್ ಟೀಚರ್, ಮಡಿಕೇರಿ	1	50
65	,, ಜಿ ಆರ್ ರುದ್ರಪ್ಪನವರು, ಮಡಿಕೇರಿ	1	50
66	,, ಜಿ ಜಿ ಸಂಜಪ್ಪನವರು ಪೂಜಾರಿ, ರಾಜಾಸ ಸೀಟ್, ಮಡಿಕೇರಿ	1	50
67	,, ಪಿ ಕುಂಞಪ್ಪನವರು ಜಮೇದಾರರು, ರಾಜಾಸ ಸೀಟ್, ಮಡಿಕೇರಿ	1	50
68	,, ಜಿ ಸೋಮಪ್ಪನವರು, ಟೆಂಪಲ್ ಪಾರುಪತ್ತೇಗಾರರ ಮಡಿಕೇರಿ	1	50
69	,, ಬಿ ಐ ಕರ್ಯಪ್ಪನವರು ಬದಲಿ ಶ್ಯಾನುಭೋಗರು, ಶುಂಟಿಕೊಪ್ಪ	1	50
70	,, ಪಿ ಐ ಅಯ್ಯಯ್ಯನವರು ಪ್ರೊ ಟ್ರೈನಿಂಗ್ ಸ್ಕ್ವಾಡ್ ಹೆ ಕಾನ್‌ಸ್ಟೇಬಲರು, ಮಡಿಕೇರಿ	1	50
71	,, ಯಂ ರಾಮರಾಯರು ಸಬ್ ಓವರ್ಸಿಯರು ಮಡಿಕೇರಿ	1	50
72	,, ಪಿ ಟಿ ಪೂವಯ್ಯನವರು, ಊರುಪರಂಬು ಎಸ್ಟೇಟು ರೈಟರು, ಶಂಟಿಕೊಪ್ಪ,	2	100
73	,, ಕ ಎ ಐಯ್ಯಣ್ಣನವರು, ಕಮಿಷನರ್ಸ್ ರೆವಿನ್ಯೂ ಆಫೀಸ್ ಕ್ಲಾರ್ಕರು ಮಡಿಕೇರಿ	1	50
74	ಶ್ರೀ ಲಕ್ಷ್ಮೀಬಾಯಮ್ಮನವರು ಮ ಎಸ್ ಸಿದ್ದೋಜಿರಾಯರ ಪತ್ನಿ, ಮಡಿಕೇರಿ	1	50
75	ಮ ಯಸ್ ಸಿದ್ದೋಜಿರಾಯರು ಟೈಲರ ಮಡಿಕೇರಿ	1	50
76	,, ಡಿ ಪುಟ್ಟಯ್ಯರಾಜುರವರು ಪ್ರೈಮರಿ ಮಾಡಲ್ ಸ್ಕೂಲ್ ಟೀಚರು, ಮಡಿಕೇರಿ,	1	50
77	,, ಸಿ ಯಂ ಪಟ್ಟಂಗಪ್ಪನವರ, ಸಬ್‌ಜಡ್ಜರ ಕೋರ್ಟ ಕ್ಲಾರ್ಕರು, ಮಡಿಕೇರಿ	1	50
78	,, ಯಂ ತಿಮ್ಮಯ್ಯನವರು ರಿಜಿಸ್ಟ್ರೇಷನ್ ಕ್ಲಾರ್ಕರು ಮಡಿಕೇರಿ	1	50
79	ಶ್ರೀ ಬಿ ಲೀಲಪ್ಪನವರ ಮ ಎ ಅಪ್ಪಯ್ಯನವರ ಪತ್ನಿ ರಾಜಾಸೀಟ್, ಮಡಿಕೇರಿ	1	50
80	ಮ ಯಸ್ ಕೃಷ್ಣರಾಯರ ಪೋಲೀಸ್ ಆಫೀಸ್ ಕ್ಲಾರ್ಕರ ಮಡಿಕೇರಿ	1	50
81	,, ಕ ಅಚ್ಚಪ್ಪನವರು ಓಯಿಲ್ ಮತ್ತು ವ್ಯಾಪಾರಿ ಮಡಿಕೇರಿ	1	50
82	,, ಕ ಪೊನ್ನಪ್ಪನವರು ಟೈಲರ್, ಮಡಿಕೇರಿ	1	50
83	,, ಕ ತಮ್ಮಣ್ಣನವರು ಸಬ್‌ಜಡ್ಜರ ಕೋರ್ಟು ಅಮೀನರ ಮಡಿಕೇರಿ	1	50
84	,, ಅಂಬಾರ ಐ ಸುಬ್ಬಪ್ಪನವರ, ಸಬ್‌ಜಡ್ಜರ ಕೋರ್ಟು ಅಮೀನರು ಮಡಿಕೇರಿ	1	50
85	,, ಯಂ ಶ್ರೀನಿವಾಸರಾಯರು, ಕಮಿಷನರ್ಸ್ ಆಫೀಸ್ ಕ್ಲಾರ್ಕರು, ಮಡಿಕೇರಿ	1	50
86	,, ಬಿ ಡಿ ಸಂಜೀವಯ್ಯನವರು ಹೆರವನಾಡು ಗ್ರಾಮ, ಬೆಟ್ಟಗೇರಿ ಪೋಸ್ಟು ಕೊಡಗು.	1	50
87	ಶ್ರೀ ಉಮ್ಮವ್ವ ಮಂದಪ್ಪನವರು C/o ಯಂ ಯಂ ಮಾದಪ್ಪನವರು, ಅಬ್ಯಾಲ್ ಎಸ್ಟೇಟು ಮೇನೇಜರು ಮಡಿಕೇರಿ	1	50
88	ಮ ಕ ಯಂ ಮಂದಣ್ಣನವರು, ವಿಲೇಜ್ ಪಟೇಲ್, ಕಡಗದಾಳು ಗ್ರಾಮ ಮಡಿಕೇರಿ	1	50
89	ಶ್ರೀ ಕೆ ಮಾಚಮ್ಮ ಮಂದಣ್ಣನವರು C/o ಮ ಕೆ ಯಂ ಮಂದಣ್ಣನವರು ಪಟೇಲರ ಕಡಗದಾಳು ಗ್ರಾಮ, ಮಡಿಕೇರಿ	1	50
90	ಮ ಯಂ ಯಂ ನಂಜುಂಡಯ್ಯನವರು ಲಾಯರ ಗುಮಾಸ್ತರು ಮಡಿಕೇರಿ	1	50
91	,, ಯಂ ಎ ಚಂಗಪ್ಪನವರು ಫ್ರೋಟರ್‌ಗಾರ್ಡ ಜಮೇದಾರರು ಮಡಿಕೇರಿ	1	50
92	,, ಪಿ ಯಂ ಪೊನ್ನಪ್ಪನವರ, ಕೋಆಪರೇಟಿವ್ ಸೊಸೈಟೀಸ ಇನಸ್ಪೆಕ್ಟರು ಮಡಿಕೇರಿ	1	[illegible]
93	,, ಪಿ ಪೂಣಚ್ಚನವರು ಟೈಲರು ಮಡಿಕೇರಿ	1	[illegible]
94	,, ಎಚ್ ಮಂಜಯ್ಯಾಚಾರು, ಗೋಲ್ಡ್‌ಸ್ಮಿತ್ ಶಂಟಿಕೊಪ್ಪ	2	100
95	,, ಟಿ ಪೊನ್ನಯ್ಯನವರು ಪ್ರೊಟೆಕ್ಟರ್‌ಗಾರ್ಡ, ಮಡಿಕೇರಿ	1	50
96	,, ಸಿ ಮಾದಯ್ಯ ಕಾರ್ಯಪ್ಪನವರು ಶ್ಯಾನುಭೋಗರು ರಾಜಾಸೀಟ್ ಮಡಿಕೇರಿ	1	50
97	,, ಸಿ ಡಿ ಮಹಮುದ್ ಹುಸೇನರವರು, ಹೆಡ ಕಾನ್‌ಸ್ಟೇಬಲರು, ಮಡಿಕೇರಿ.	1	50
98	,, ಕೆ ದೇವಯ್ಯನವರು ಹೆಡ್‌ಕಾನ್‌ಸ್ಟೇಬಲರ ಮಡಿಕೇರಿ	1	50
99	,, ಯಂ ಕ ಐಯ್ಯಪ್ಪನವರು ಲ್ಯಾಂಡ್‌ಲಾರ್ಡ ಮಡಿಕೇರಿ	1	50
100	,, ಕ ಕೆ ಉತ್ತಪ್ಪನವರ ಸೆಂಟ್ರಲ್ ಹೈಸ್ಕೂಲ ಸ್ಟೂಡಂಟ್, ಮಡಿಕೇರಿ	1	50
101	,, ಯಂ ಕ ಐಯ್ಯಪ್ಪನವರು ಶಿರಸ್ತೇದಾರರ ವೀರರಾಜಪೇಟೆ	1	50
102	,, ಡಿ ಅಪ್ಪಯ್ಯನವರು ಸೆಂಟ್ರಲ್ ಹೈಸ್ಕೂಲ್ ಮಾಸ್ಟರ, ಮಡಿಕೇರಿ	1	50
103	,, ಯಂ ಕೆ ಮಾದಪ್ಪನವರು ನಾಡ ಕ್ಲಾರ್ಕರ, ಮಡಿಕೇರಿ	1	50
104	,, ಪಿ ಕ ತಿಮ್ಮಯ್ಯನವರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆಫೀಸು ಕ್ಲಾರ್ಕರ ಮಡಿಕೇರಿ	1	50
105	,, ಕೆ ಯಂ ಸುಬ್ಬಯ್ಯನವರ, ಲ್ಯಾಂಡ್ ಲಾರ್ಡ & ಟೈಲರ್ ಮಹಾದೇವಪೇಟೆ	1	50
106	,, ಬಿ ಸಿ ಕರುಂಬಯ್ಯನವರು, ಕಾಫಿ ಪ್ಲಾಂಟರು, ಕಂಡಂಗಾಲ ಗ್ರಾಮ, ವೀರರಾಜಪೇಟೆ	2	100
107	,, ಕೆ ಎ ಬೋಪ್ಪಯ್ಯನವರು ನೆಲಜಿ ಸ್ಕೂಲ ಟೀಚರ ಕಕ್ಕಬೆ	1	50
108	,, ಯಂ ಯಂ ಪೊಚ್ಚಯ್ಯನವರ, ರಿಟೈರ್ಡ್ ಸಬ್ ರಿಜಿಸ್ಟ್ರಾರರು, ಕಕ್ಕಬೆ	1	50
109	,, ಯಂ ಕೆ ಪುಟ್ಟರಾಯರು ಡಿ ಎಫ್ ಓ ಆಫೀಸು ಹೆಡ ಕ್ಲಾರ್ಕರು, ಮಡಿಕೇರಿ	1	50
110	,, ಯಂ ಎ ಸುಬ್ಬಯ್ಯನವರ, ಪ್ಲಾಂಟರು, ಮೈನಾಡು ಎಸ್ಟೇಟು, ನೀಲಗಿರಿ	1	50
111	,, ಯಂ ಬಿ ಸುಬ್ಬಯ್ಯನವರು ಫಾರೆಸ್ಟ್ ಸುಪರಿಂಟೆಂಡೆಂಟರು, ಪ್ರತಾಪಿ ಫಾರೆಸ್ಟು, ಸುಲ್ತಾನ್ಸ್ ಬ್ಯಾಟರಿ, ವೈನಾಡ.	1	50
112	,, ಪಿ ಎ ಚಂಗಪ್ಪನವರು ಪ್ಲಾಂಟರು ಮತ್ತು ಡಿಸ್ಟ್ರಿಕ್ಟ್ ಬೋರ್ಡು ವೈಸ್ ಪ್ರೆಸಿಡೆಂಟು ಮತ್ತು ಮೋರ್‌ಬರು ನಾಂತರ ಎಸ್ಟೇಟು, ಸುಂಟಿಕೊಪ್ಪ	3	150
113	ಮೆಸರ್ಸ್ ಪಿ ರಾಮಸ್ವಾಮಿ ನಾಯಿಡು & ಸನ್ಸ್ ರವರು ಒಟ್ಟು ವ್ಯಾಪಾರಿಗಳು ಶಂಟಿಕೊಪ್ಪ	5	250
114	ಮ ಕ ಯಂ ಚಂಗಣ್ಣನವರು, ಸರ್ವೇಯರು, ಲ್ಯಾಂಡ್ ರೆಕಾರ್ಡು ಆಫೀಸು, ಮಡಿಕೇರಿ	1	50

ಟಿ ಎ ಕುಪ್ಪಸ್ವಾಮಿಪಿಳ್ಳೆ ಅಂಡ್ ಸನ್ಸ್.
ಚೀಫ್ ಏಜೆಂಟರು

(ಮುಂದುವರಿಯುವುದು.)

ಕೊಡಗಿನಲ್ಲಿ ಬಸ್ಸು ಸರ್ವಿಸಗಳು

ಮಡಿಕೇರಿ—ಮೂರ್ನಾಡ—ವೀರಾಜಪೇಟೆ ಮತ್ತು ಮಡಿಕೇರಿ—ಸಿದ್ದಾಪುರ—ವಿರಾಜಪೇಟೆ ಲೈನುಗಳಲ್ಲಿ ಹೊಸ ಸರ್ವಿಸುಗಳನ್ನು ಬಿಡಲು ಅರ್ಜಿ ಬರಕೊಂಡದ್ದಕ್ಕೆ ಹೊಸ ಮೋಟಾರುಗಳ ಲಾಯಿಸನ್ಸು ಒಳಗೆ ಬಂದ ಕೂಡಲೆ ಆಲೋಚಿಸಲಾಗುವುದೆಂದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಉತ್ತರ ಕೊಟ್ಟದ್ದರಿಂ ಈಗ ಹೊಸ ಲೈಸೆನ್ಸು ಬಾರಂಗೆ ಒಂದು ಎರಡು ವಾರಂಗಳಾಯಿತೆಂದು ನಾವು ತಿಳಿಯುತ್ತೇವೆ. ಆದರೂ ವಿರಾಜಪೇಟೆ—ತಲಚೇರಿ ಲೈನಿನಲ್ಲಿ ಬಂದರೆ ಗೆಜೆಟಿನ ಕಿರ್ಕ್ಕಿಂದ—ಕುಟ್ಟಕ್ಕೆ ಬಂದೂ ಹೊಸ ಲೈಸನ್ಸು ಕೊಟ್ಟಿರುವುದಿಲ್ಲವೆಂದ ಎಲ್ಲಿಯೂ ಕೇಳಿಟ್ಟಿರುವಂತೆ ಕ ಣ ವದಿಲ್ಲ. ಮಡಿಕೇರಿ—ಮೂರ್ನಾಡು ಲೈನಿನಲ್ಲಿ ಒಂದೇ ಸರ್ವಿಸ್ಸು ಓಡಿ ಪ್ರಯಾಣಿಕರಿಗೂ ಪೈಪೋಟಿಗ ಬಿಡದೆ ಇಡುವ್ರದರಿಂದ ... ಕಷ್ಟ ನಷ್ಟಗಳ ವಿಷಯ ಈ ವೊದಲು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಲ್ಲದೆ ಈ ವಿಷಯದಲ್ಲಿ ಕೌನ್ಸಿಲಿನಲ್ಲಿಯೂ ಪ್ರಸ್ತಾಪ ನಡೆದಿದೆ. ಆದರೂ ಇನ್ನೂ ಸರಕಾರದವರಿಗೆ ದೇಶದ ಜನರ ಮೇಲೆ ದಯೆ ಹುಟ್ಟಿದ ಹಾಗೆ ಕಾಣುವುದೇ ಇಲ್ಲ. ಮೂರ್ನಾಡು ಲೈನಿನಲ್ಲಿ ಇನ್ನೊಂದು ಸರ್ವಿಸಿಗೆ ಲೈಸನ್ಸು ಕೊಟ್ಟರೆ ಈಗ ಇರುವ ಸರ್ವಿಸಿನವರಿಗೆ ಏನೊಂದೂ ನಷ್ಟವಾಗಲಾರದು. ಎರಡು ಸರ್ವಿಸ್ಸಿಗೆ ಬೇಕಾದಷ್ಟು ಜನರು ಈ ಲೈನಿನಲ್ಲಿ ಖಂಡಿತವಾಗಿಯೂ ಸಿಕ್ಕುತ್ತಾರೆ. ... ಅದ್ದರಿಂದ ಹೊಸ ಸರಕಾರದವರು ಬಡ ಪ್ರಯಾಣಿಕರ ಮೇಲೆ ದಯೆ ಇಟ್ಟು ಹೊಸ ಲೈಸನ್ಸು ಕೊಡಲು ಅರ್ಜಿ ಬರಕೊಂಡವರ ಪೈಕಿ ಒಂದೆರಡು ... ಲೈಸನ್ಸು ಕೊಡುವರೆಂದು ನಾವು ನಂಬುತ್ತೇವೆ. ಹೀಗೆ ಮಾಡಿದರೆ ಬಸ್ಸುಗಳನ್ನಿಡುವ ಜನಗಳ ಸಹಾಯ ಮಾಡಿದಂತಾಗುವುದಲ್ಲದೆ ಬಡ ಪ್ರಯಾಣಿಕರಿಗೆ ಎಷ್ಟೋ ದೊಡ್ಡ ಅನುಕೂಲತೆಗಳನ್ನು ಒದಗಿಸಿಕೊಟ್ಟ ಹಾಗಾಗುತ್ತದೆ.

'ಮೂರ್ನಾಡ ಜನ'

Arms, Ammunition and Shooting Requisites !!!



1928 Illustrated Catalogue Just Issued Free on Application !

D B B L Rifles	Rs 120	to	Rs	2750
S B B L	35	to		950
D B B L Guns	50	to		1350
S B B L „	35	to		275
D B M L „	45	to		135
S B M L „	30	to		80
B L Revolvers „	35	to		350
Automatic Pistols „	30	to		150

Brilliant Search Light Lamp For Shooting, Camping, Fishing and All such other Night Sports and work Rs 30 Free delivery.

Also Knives, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,

Largest Importers of Firearms and Ammunition Cheapest priced firm in India,

21—14 210 Abdul Rehman Street, BOMBAY.

National Swords and Silver Belts (Thodanga) For "Scotland of India,"

ಸಂಪ್ರದಾಯವಾಗಿ ಧರಿಸಲ್ಪಟ್ಟ ... ಯೋಧರ ... ಕತ್ತಿಗಳು ... ಅರಿಸಲ್ಪಟ್ಟ "ಒಡ್ಡಿಕತ್ತಿ" ... ಕಡೆ ಯಾಕೆ ವಿಸ್ಮಯಗೊಳ್ಳುವಿರಿ? ... ಯಿಂದ ಶೃಂಗರಿಸಲ್ಪಟ್ಟ ಈಗ ಸಿಗುತ್ತಾವೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ... ಆದರ ಕತ್ತಿ ... ಸೊಂಟದ ... ಹಿಡಿಯ ಪೀಚೆಕತ್ತಿ ... ಸಂಪ್ರದಾಯ (ಉಮ್ಮತ್) ... ಇದಲ್ಲವೇ ನಿಮ್ಮ ಗೌರವ? ... ಮೊದಲಾದವರೇ ... ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿಮ್ಮ ಹಕ್ಕೇ ಸ್ವದೇಶೀಯತೆ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ... ಹಳ್ಳಿನ ವಿದ್ಯಮಾನಕ್ಕೆ ... ಬೇಕು ...

Commercial Store
Murnad, Coorg

12—3

EMPIRE OF INDIA LIFE ASSURANCE COMPANY, LIMITED.

ESTD 1897.

VALUATION RESULTS

FOR THE FIVE YEARS ENDING 28TH FEBRUARY 1927

SURPLUS—RS. 37,66,689

A REVERSIONARY BONUS DISTRIBUTION OF

RS 15 PER ANNUM PER RS 1,000 ASSURED ON WHOLE LIFE ASSURANCES AND RS. 12 PER ANNUM PER RS 1,000 ASSURED ON ENDOWMENT ASSURANCES

HAS BEEN DECLARED

HEAD OFFICE
Empire of India Life Building,
BOMBAY

BRANCH OFFICE
Commercial Street
BANGALORE

21—

ಡಿ ಬಿ ಯಲ್ ಕೋವಿಗಳು ರೂ 75 ರಿಂದ ರೂ 400
ಎಸ್ ಬಿ ಬಿ ಯಲ್ ಕೋವಿಗಳು ರೂ 35 ರಿಂದ ರೂ 250
ಎಸ್ ಬಿ ಯಮ್ ಯಲ್ ಕೋವಿಗಳು ರೂ 35 ರಿಂದ 65
ರಿವಾಲ್ವರ್‌ಗಳು ರೂ 16/ರಿಂದ ರೂ 175/ರ ವರೆಗೆ

ಡಬ್ಬಲ್ ಮತ್ತು ಸಿಂಗಲ್ ಕೋವಿಗಳು ಮತ್ತು ... ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಬಿ... ಕೊಡಲಾಗುವದು.

60 ವರ್ಷಗಳಿಂದ ನಮಗೆ ಇರುವ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಅದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿ.

ಮೆಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ಹಿಂದೂಸ್ಥಾನದ ಬಹು ಹಳೇ ಬಂದೂಕು ಕಂಪೆನಿ

24—6 12. ಬ್ರಾಡೆ. ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

ನೈಟ್ರೇಟ್ ಆಫ್ ಸೋಡಾ.

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ.

ಈ ... ಗೊಬ್ಬರದಲ್ಲಿ ... ನೈಟ್ರೋಜನ್ ಸಾರವು 15—16% ಇರುವುದರಿಂದ ... 3 ಪಾಲಷ್ಟು ... ಇದನ್ನು ... ನೈಟ್ರೇಟ್ ... ಗೊಬ್ಬರಗಳಿಂದಲೂ ... ಅದ್ದರಿಂದಲೇ ... ಉಪಯೋಗಿಸುತ್ತಾರೆ ... ಕಬ್ಬು, ತೆಂಗು ... ತರಕಾರಿ ಬೆಳೆಯುವುದಕ್ಕೂ ಕಾಫಿ, ಟೀ, ರಬ್ಬರು ... ದನದ ಗೊಬ್ಬರ ... ಅಥವಾ ಬೇರೆ ಗೊಬ್ಬರ ... ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ... ಉಪಯೋಗಿಸುವುದರಿಂದ ಬೆಳೆಯು ಸಮೃದ್ಧಿಯಾಗುವುದು. ನೈಟ್ರೇಟ್ ಆಫ್ ಸೋಡಾದಲ್ಲಿರುವ ... ಸಾರವನ್ನು ಗಿಡಗಳಿಗೆ ... 100—200 ರಾ... ಕೃಷಿ ಸುಧಾರಣೆ ' ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

ನೈಟ್ರೇಟ್ ಆಫ್ ಸೋಡವು 80 ಪೌಂಡುಗಳ ಪ್ಯಾಕೆಟ್‌ಗಳಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ದೊರೆಯುವುದು

ನೆ ಪರ್ಸ್ ಸ್ಪ್ರಿ ಅಂಡ್ ಕೊ., ಮಡಿಕೇರಿ.

ನೆ ಪರ್ಸ್ ಸ್ಪ್ರಿ ಅಂಡ್ ಕೊ., ವೀರಾಜಪೇಟೆ

or A S Rao Esq, Near Post office Mangalore

Chilean Nitrate Committee, Post Box 469, Calcutta

24—22

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಷೇರ್ ಬಂಡವಾಳ	—	50,000
ವಸೂಲಾದ ಷೇರ್ ಮೊಬಲಗು	—	15,510
ಜನರಿಂದ ಡೇಪಾಜಿಟ್	—	1,02,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ಮುಂದೆ ಆದವ ಜಿನ್ನಿನ ವಾಯಿದೆಯ ಡೇಪಾಜಿಟುಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಡೇಪಾಜಿಟುಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಕೊಂಗಟ್ಟಿರ ಅಪ್ಪಯ್ಯನವರು

ಸೆಕ್ರೆಟರಿ
ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾದ ಬಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮ. ಪೇರಿಯಂಡ ಪೂವಯ್ಯನವರನ್ನೂ ಮತ್ತು ಮ. ಕಾಳೇಂಗಡ ಚಿಣ್ಣಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ, ಮ. ಪಾರುವಂಗಡ ಅಚ್ಚಯ್ಯನವರು
ನಾಪೋಕ್ಲು—ಮ. ಅರೆಯಡ ಸುಬ್ಬಯ್ಯನವರು,
ಸೋಮವಾರಪೇಟೆ—ಮ. ಒಮ್ಮಡ ಮಾದಪ್ಪನವರು,
ಅಮ್ಮತ್ತಿ ಸಿದ್ದಾಪುರ—ಮ. ಐರಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮ. ಪಿ ಜಿ ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮ. ಜಿ ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮ. ಪಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಿಗೆಯೂ ಆರಲೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಿನ ಬರದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿ ಎಂದು ಪಾವತಿ ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರಿಜಿಸ್ಟ್ರಾರವರಿಂದ ಅಂಗೀಕರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ ಭಂಡಾರದಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
'ಕೊಡಗು' ಮಡಿಕೇರಿ



ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY. 3
Telegraphic Address.-"SHOOTER" Bombay.

[52—19] **'Please write for Reduced net prices list for 1927-1928.'**

ಕಟುಕಷಾಯ ಮುಲಿಜ ರಕ್ತ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ [illegible] ಜ್ವರ ಮತ್ತು [illegible] ದೋಷದಿಂದ ಬರುವ ಜ್ವರ [illegible] ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, ಎರಡಕ್ಕೆ ರೂ 4—0—0, [illegible] ರೂ [illegible]—8—0, 12ಕ್ಕೆ ರೂ 14

ಚಂದನ ಸಾರ—ಇದು [illegible] [illegible] ಹೋಗುವುದು [illegible] ಮೂತ್ರ [illegible] ಇರುವುದು [illegible] [illegible] 1 3 6ಕ್ಕೆ 3—8—0 6—1—0

[illegible] 2 ನೆ:— [illegible] ದಪ್ಪ 1ಕ್ಕೆ 6 [illegible] 1, 1 ಡಜನಿಗೆ 3—8—0

[illegible] ಆದ್ರಾಕ್ಷ [illegible] ಹೊಸ ಕೂದಲನ್ನು ಹುಟ್ಟಿಸುತ್ತದೆ [illegible] 1, [illegible] 2—10—0 ಒಂದು ಡಜನ್ನಿಗೆ ರೂ 7, 3 [illegible]

ನಮ್ಮ ಕಟಲಾಗು ತರಿಸಿ ನೋಡಿರಿ | ವಿಳಾಸ—ಮ [illegible]

52—15 9. [illegible]

Kapurchand & Co.

The OLDEST and MOST RELIABLE House in Bangalore

[Cawnpore Woollen Mills Agency]

Dealers in high class Cotton, Woollen and Silk Piece Goods, Caps, Hosiery, Stationary, etc., etc., Chickapet, BANGALORE CITY

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಒಂದಾಗ ಕಪ್ಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ ನಮ್ಮ [illegible] ಬೇಕಾದ ಉಡುಗೆಗಳು ಸದಾ ಕಾಲದಲ್ಲಿ [illegible] ಅಲ್ಲದೆ ಮದುವೆ ಮಹೋತ್ಸವ[illegible]ಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹು ರಮ್ಯ ಬೆಲೆಗೆ ಸಿಕ್ಕುತ್ತವೆ

ಸರಕಾರದ [illegible]

ಓರಿಯಂಟಲ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದ 1874.

1926ನೇ ವರ್ಷದ [illegible]

ಹೊಸ ವಿಮೆಗಳು	1924	ರೂ	2,37,[illegible]	ಜಾಸ್ತಿ ರೂ 59,0[illegible],000
	1925	ರೂ	2,96,42,000	
	1926	ರೂ	3,91,39,000	ಜಾಸ್ತಿ ರೂ 94,97,000

ಮೂಲಧನವು ಜಾಸ್ತಿ [illegible] 42 ಲಕ್ಷ [illegible] 7,38,8[illegible]
[illegible]

"ಓರಿಯಂಟಲ್‌ನ ಸುಪ್ರವೃದ್ಧಿ [illegible] ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ [illegible]"

ಪಾಲಿಸಿದಾರರಾಗತಕ್ಕವರು [illegible] ಬಿಲ್ಡಿಂಗ್ಸ್‌ನಲ್ಲಿರುವ [illegible] ಎಸ್ [illegible] ಜನರಲ್ ಏಜೆಂಟ್ ಎಮ್ ಎಮ್ [illegible] ರವರುಗಳಿಗೆ ಅಥವ ಕಂಪನಿಯ [illegible] ಆಫೀಸುಗಳಿಗಾಗಲೀ ಸಾವಕಾಶವಿಲ್ಲದೆ ಬರೆಯಬೇಕಾಗಿ ಕೋರುತ್ತೇನೆ

ಓರಿಯಂಟಲ್ ಬಿಲ್ಡಿಂಗ್ಸ್, [illegible] ರೋಡ್, ಬೆಂಗಳೂರು | ಎಲ್ ಆರ್. ಕೃಷ್ಣಸ್ವಾಮಿ [illegible] ಬ್ರಾಂಚ್ 52—49

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪ್ರಾವಿಡೆಂಟ್ ಅಸೋಸಿಯೇಷನ್ [illegible]
ಹೆಡ್ ಆಫೀಸ—ಮೈಸೂರು (ದ. ಇಂಡಿಯಾ.)
ಚೀಫ್ ಬ್ರಾಂಚ್ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಸೋಸೈಟಿ ಸಂಘದ ಕೊಡಗು ದೇಶದ (Provincial) ಪ್ರಾಂತೀಯ ಡೈರೆಕ್ಟರುಗಳು ಕೊಡಗು ದೇಶದಲ್ಲಿರತಕ್ಕ ಸಂಘದ ಶೇರು ಮತ್ತು ಬಾಂಡು ಹೋಲ್ಡರುಗಳ [illegible] ವಾದ ಅಭಿಪ್ರಾಯವು ಬಾರದಂತೆ ಮಾಡುವುದಕ್ಕೂ, ಕೊಡಗು ದೇಶದಲ್ಲಿ ಸಂಘದ ಕಾರ್ಯಗಳು (Business) [illegible] ದಿಂದ ನಡೆಸತಕ್ಕ ಗಳಿಯು [illegible] ಶೇರು ಮತ್ತು ಬಾಂಡು ಹೋಲ್ಡರುಗಳು ಅನುಭವಿಸುವಂತೆ [illegible] ಸಹ ಸಂಘದ [illegible] (ಅಂದರೆ ಕೊಡಗು ದೇಶದ ಪ್ರತಿನಿಧಿಗಳು) [illegible] ಪಟ್ಟಣವಾಗಿರುವ ಮಡಿಕೇರಿಯಲ್ಲಿ ಸ್ಥಾಪಿಸಬೇಕೆಂದು [illegible] ಲ್ಲಿ ಕೊಡಗು ದೇಶದಲ್ಲಿ ಹಾಲಿ ಇರತಕ್ಕ ಶೇರು ಮತ್ತು ಬಾಂಡು ಹೋಲ್ಡರುಗಳು [illegible] ಬೇಕಾಗಿರುವುದರಿಂದ ಇದೇ ಸನ್ 1928ನೇ ಇಸವಿ ಜನವರಿ ತಾರೀಕು 29ನೇ ಆದಿತ್ಯವಾರ ಸಾಯಂ [illegible] ಟೆಗೆ ಸರಿಯಾಗಿ ಶ್ರೀ ಕಾವೇರಿ ಬಸ್ ಸರ್ವಿಸ್ ಆಫೀಸು ಪಕ್ಕದಲ್ಲಿರುವ ಈ ಸಂಘದ [illegible] ಲ್ಲಿ ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಮೀಟಿಂಗು ಇಟ್ಟಿರುತ್ತೆ. ಆದ್ದರಿಂದ [illegible] ಸರಿಯಾಗಿ ಎಲ್ಲರೂ ತಪ್ಪದೆ ದಯಮಾಡಿಸತಕ್ಕದ್ದು. ಈ ಮೀಟಿಂಗಿನಲ್ಲಿ ಕೊಡಗಿನಲ್ಲಿ ಸುರುವಿಸ [illegible] ನಿರ್ಧರಿಸುವ ವಿಷಯ ಚರ್ಚೆ ನಡೆಯುವುದು

ಪಿ. ದೇವಯ್ಯ.
ಪ್ರೋವಿನ್ಸಿಯಲ್ ಬೋರ್ಡ್ ಚೇರ್ಮೆನ್

52—50

Printed & published by P. I. Belliappa, at 'Kodagu' Press for 'Kodagu' Ltd.

ಕೊಡಗು

—

ಸನ್ ೧೯೩೩ನೇ ಇಸವಿ ಜನವರಿ
ತಾ. ೨೭ ನೇ ಶುಕ್ರವಾರ

ಗಂಧ ಕೀಳುವ ತಪ್ಪು.

ಕೊಡಗು ದೇಶದ ೧೯೩೧—೩೨ನೇ ವರ್ಷದ ಆಡಳಿತ ವರದಿಯು ಎಂದಿನಂತೆ ಸರ್ಕಾರದವರಿಂದ ಪ್ರಕಟಿಸಲ್ಪಟ್ಟಿದೆ. ಬಜೆಟ್ಟಿನ ವಾಚಕರ ಗಮನವನ್ನು ಸೆಳೆಯುವಂಥ ವಿಶೇಷದ ಯಾವ ಮುಖ್ಯ ಸಂಗತಿಯೇನೂ ವರದಿಯಲ್ಲಿ ಕಂಡು ಬರುವದಿಲ್ಲ. ಆದರೂ ಸರ್ಕಾರದ ಆದಾಯವೆಷ್ಟು, ಹಲವು ಇಲಾಖೆಗಳ ಆಡಳಿತದ ಸಾರಾಂಶ ಮೊದಲಾದವುಗಳನ್ನು ತಿಳಿದುಕೊಳ್ಳಲು ಈ ವರದಿಯು ಉಪಯೋಗಕರವಾಗಿದೆ.

ಈ ದೇಶದ ಸರ್ಕಾರದ ಉತ್ಪತ್ತಿಯ ಬಾಬುಗಳಲ್ಲಿ ಫಾರೆಸ್ಟು ಉತ್ಪತ್ತಿಯೇ ಎಲ್ಲಾದಕ್ಕಿಂತಲೂ ಮುಖ್ಯವಾದುದರಿಂದ ಅದರ ವಿಷಯವೇ ಮೊದಲು ಚರ್ಚಿಸಲು ಇಚ್ಛೈಸುತ್ತೇವೆ. ಈ ಇಲಾಖೆಯನ್ನು ಕುರಿತು ಒಂದಾಗ ಹೀಗೆಂದು ಸೂಚಿಸಲಾಗಿದೆ. ಉತ್ತರಕೊಡಗು ತಾಲೋಕಿನಲ್ಲಿ ಗಂಧದ ಮರಗಳ ಎಣಿಕೆಯು ೧೯೨೮ನೇ ಜುಲೈ ಆಖೈರಿನಲ್ಲಿ ಮುಗಿಯಿತು. ಸರ್ವೆಮಾಡಿದ ವಿಸ್ತೀರ್ಣ ೧೯೧೧೪೮ ಎಕ್ರೆಗಳು. ಮತ್ತು ಎಣಿಸಿದ ಹಸಿಮರಗಳ ಸಂಖ್ಯೆ ೩೯೧೪೦ ಮತ್ತು ಒಣಗಿದ ಮರಗಳು ೩೧೦೧೭. ಪ್ರತಿ ವರ್ಷವೂ ೧೦೦ ಟನ್ನು ಗಂಧದ ಮರಗಳು ಒಣಗುವವೆಂದು ಅಂದಾಜು ಮಾಡಲಾಗಿದೆ. ಗಂಧದ ಮರಗಳ ಬೆಳವಣಿಗೆಗೆ ಸರಿಹೋಲುವಂತೆ ಅವುಗಳ ಕೀಳುವಿಕೆಯನ್ನು ಸಕಾಲದಲ್ಲಿ ಕಡಿಮೆಮಾಡಿದ್ದರಿಂದ ಮೊದಲೇ ಯೋಚಿಸಿದಂತೆ ಫಾರೆಸ್ಟು ಉತ್ಪತ್ತಿಯು ಕಡಿಮೆಯಾಯಿತು.' ಈ ಎಣಿಕೆಯ ಲೆಕ್ಕದಲ್ಲಿ ಹಸಿ ಮರಗಳ ಸಂಖ್ಯೆಗೂ ಒಣಗಿದ ಮರಗಳ ಸಂಖ್ಯೆಗೂ ಇರುವ ಹೋಲಿಕೆಯ ಪ್ರಕಾರ ಈಗಿರುವ ಹಸಿ ಮರಗಳು ಇನ್ನು ಹತ್ತು ವರ್ಷಗಳಲ್ಲಿಯೇ ಸಂಪೂರ್ಣ ಒಣಗಿ ಹೋಗುವವೆಂದು ತೋರುತ್ತದೆ. ಒಣಗಿದ ಮರಗಳನ್ನೇ ಕೀಳುತ್ತಾ ಬಂದರೂ ಈಗ ಇರುವ ಹಸಿಮರಗಳು ಇನ್ನು ಹತ್ತು ವರ್ಷಗಳಲ್ಲೇ ಮುಗಿದು ಹೋಗುವವು. ವರ್ಷಕ್ಕೆ ೧೦೦ ಟನ್ನು ಮರಗಳು ಒಣಗುವವೆಂದು ಅಂದಾಜು ಮಾಡಿದ್ದಾರಂತೆ. ಆದರೆ ವರ್ಷಕ್ಕೆ ಎಷ್ಟು ಟನ್ನು ಹೊಸ ಮರಗಳು ಬೆಳೆಯುತ್ತಿವೆ ಎಂಬುದು ಕಂಡುಹಿಡಿಯಲ್ಪಡುತ್ತಿದೆಯೆಂಬುದನ್ನು ಸೂಚಿಸಿರುವದಿಲ್ಲ. ಆದರಲ್ಲಿ ಈಗ ವರ್ಷಕ್ಕೆ ೨೦೦ ಟನ್ ಮರವನ್ನು ಕೀಳಲು ಏರ್ಪಾಡು ಮಾಡುತ್ತಾರೆ. ಹಾಗಾದರೆ ೧೦೦ ಟನ್ ಒಣಗಿದ ಮರವಲ್ಲದೆ ೧೦೦ ಟನ್ ಹಸಿಮರವನ್ನು ಕೀಳಬೇಕಾಗುತ್ತದೆ. ಹೀಗೆ ಕೀಳುತ್ತಾ ಬಂದರೆ ಕೊಡಗಿನ ಗಂಧದ ಉತ್ಪತ್ತಿಯು ಎಷ್ಟು ವರ್ಷಗಳ ವರೆಗೆ ಉಳಿದಿರುವದೆಂಬುದನ್ನು ಅಂದಾಜು ಮಾಡದೆ ಯಾ ಅಂದಾಜು ಮಾಡಿದ್ದರೆ ಅದನ್ನು ವರದಿಯಲ್ಲಾಗಲೀ, ಕೌನ್ಸಿಲಿನಲ್ಲಾಗಲೀ ಸರ್ಕಾರ ತಿಳಿಸಲಿಕ್ಕೆ ಒಪ್ಪಲಿಲ್ಲ. ಪ್ರಕಟಿಸಿದ ವರ್ಷ ವರ್ಷವೂ ನೂರು ಟನ್ ಹಸಿ ಗಂಧದ ಮರಗಳನ್ನು ಕೀಳುವದರಲ್ಲಿ ಯಾವ ನ್ಯಾಯವೂ ಇಲ್ಲ. ಗಂಧದ ಎಣಿಕೆಯ (ಎನ್ಯುಮರೇಶನ್) ಕಲಸವನ್ನು ಸ್ವೀಕರಿಸದ್ದೇ ಈ ಅಂದಾಜು ಮಾಡಲಿಕ್ಕಾಗಿಯಾಗಿದೆ. ಹೀಗಿರುವಲ್ಲಿ ಎಣಿಕೆಯು ಮುಗಿದಿದ್ದರೂ ಅದರ ಉದ್ದೇಶದ ಫಲಿತಾಂಶವನ್ನು ತಿಳಿಸದೆ ಇರುವದರ ಅರ್ಥವೇನೆಂದು ಗೊತ್ತಾಗುವದಿಲ್ಲ. ಈ ಫಲಿತಾಂಶವು ಆಶಾಭಂಗವಾಗಿದ್ದು ಅದನ್ನು ಪ್ರಕಟಿಸಿದರೆ ಈಗ ಬಜೆಟ್ ಮಾಡುತ್ತಿರುವ ದರದಲ್ಲಿ ಗಂಧವನ್ನು ಕೀಳುವದು ನ್ಯಾಯವಲ್ಲವೆಂದು ಕಂಡು ಬಂದೀತೆಂಬ ಕಾರಣದಿಂದ ಇದನ್ನು ಮುಚ್ಚುಮರೆ ಮಾಡುತ್ತಿರುವರೋ ಎಂಬ ಸಂಶಯ ಹುಟ್ಟುತ್ತದೆ. ಇದನ್ನು ಸರ್ಕಾರದವರು ಇನ್ನಾದರೂ ಬಹಿರಂಗ ಪಡಿಸುವದು ಅವಶ್ಯವಾಗಿದೆ.

ಮೊದ ಮೊದಲು ಫಾರೆಸ್ಟು ಇಲಾಖೆಯವರು ಒಣಗಿದ ಗಂಧದ ಮರಗಳನ್ನು ಮಾತ್ರ ಕೀಳುತ್ತಿದ್ದರು. ಆದರೆ ಯುದ್ಧದ ಸಮಯದಲ್ಲಿ ನೂರುಕೋಟಿ ರೂಪಾಯಿಯ ಖರ್ಚಿಗೆ ಹಣ ಬೇಕಾಗಿದ್ದರಿಂದ ಹಸಿ ಮರಗಳನ್ನು ಕೀಳಲು ಪ್ರಾರಂಭಿಸಿ, ಮುಂದಿನ ಜನಾಂಗದ ಸ್ವಾಭಾವಿಕ ಗಂಧದ ಉತ್ಪತ್ತಿಯನ್ನು ಆ ಸಮಯಕ್ಕೆ ಮೂರುಕೋಟಿ ಹೋಳೆಯಲ್ಲಿ ತೇಲಬಿಟ್ಟರು. ನೂರು ಕೋಟಿನ ಟ್ರಾಮ್ವೆ ಕಾಮಗಾರಿಯು ನಿಲ್ಲಿಸಲ್ಪಟ್ಟಿದ್ದರೂ ಹಸಿ ಮರಗಳನ್ನು ಕೀಳುವದನ್ನು ಬಾಕಿ ಮಾಡಿರುವುದಿಲ್ಲ. ಒಣಗಿದ ಮರಗಳನ್ನೇ ಕೀಳುವದು ನ್ಯಾಯವಾದ ರೀತಿ. ಒಣಗಿದ ಮರಗಳನ್ನು ಮಾತ್ರ ಕಿತ್ತರೆ ಸರ್ಕಾರದ ಈಗಿನ ಖರ್ಚಿಗೆ ಹಣಸಾಲುವದಿಲ್ಲವೆಂದು ಹೇಳಬಹುದು. ಉತ್ಪತ್ತಿಗೆ ಸರಿಯಾಗಿ ಖರ್ಚುಮಾಡಬೇಕಾದದ್ದು ರಾಜನೀತಿ. ಫಾರೆಸ್ಟು ಇಲಾಖೆಯಲ್ಲಿಯೇ ಸಿಬ್ಬಂದಿಯೇಶಿಮಾಡಿ ಖರ್ಚು ಕಡಿಮೆ ಮಾಡಲು ತುಂಬಾ ಅವಕಾಶವಿದೆ. ಇದಲ್ಲದೆ ಬೇರೆ ಇಲಾಖೆಗಳ ತಲೆಭಾರ ಸಿಬ್ಬಂದಿಯನ್ನು ಕಡಿಮೆಮಾಡಬೇಕಾದದ್ದು ಅವಶ್ಯ.

ಇಷ್ಟು ಮಾತ್ರವಲ್ಲ, ಪ್ರತಿ ವರ್ಷವೂ ಕೀಳುತ್ತಿರುವ ಗಂಧಕ್ಕೆ ಸರಿಯಾಗಿ ಮರವನ್ನು ಬೆಳೆಸಬೇಕು. ಫಾರೆಸ್ಟು ಇಲಾಖೆಯವರು ಬೆಳಸುವದು ಮಾತ್ರವಲ್ಲದೆ ರೈತರು ತಮ್ಮ ಸ್ವಂತ ಜಾಗಗಳಲ್ಲಿ ಬೆಳಸಲು ಉತ್ತೇಜನ ಕೊಡಬೇಕು. ಈಗಿನ ಕಾನೂನು ಪ್ರಕಾರ ರೈತನ ಜಾಗದಲ್ಲಿರುವ ಗಂಧವೆಲ್ಲವು ಸರ್ಕಾರದೆಂದೂ, ಅದು ಬೆಂದು ಹೋದರೆ ರೈತನು ಜವಾಬ್ದಾರನೆಂದೂ ಇರುವದರಿಂದ ರೈತನಿಗೆ ಗಂಧದ ಗಿಡವು ಮುಳ್ಳಿನಂತಿದೆ. ಅದನ್ನು ನಾಶಮಾಡಬೇಕೆಂಬುದೇ ಅವನ ಕಾಂಕ್ಷೆಯಾಗಿರುತ್ತೆ. ರೈತನಿಗೆ ಗಂಧದ ಬೆಳವಣಿಗೆಯಲ್ಲಿ ಉತ್ಸಾಹ ಹುಟ್ಟುವಂತೆ ಮಾಡಬೇಕೆಂದರೆ ಅವನ ಸ್ವಂತ ಜಾಗದ ಮರಗಳ ಉತ್ಪತ್ತಿಯಲ್ಲಿ ಒಂದು ಅಂಶವನ್ನು ಅವನಿಗೆ ಕೊಡಬೇಕೆಂದು ಜನರು ಹೋರಾಡುವದಾಗಿದೆ. ಈ ವಿಷಯ ಕೌನ್ಸಿಲಿನಲ್ಲಿಯೂ ಠರಾವು ಪಾಸಾಗಿ ಕೆಲವು ವರ್ಷಗಳಾದವು. ಆದರೂ ಸರ್ಕಾರದವರು ಇದನ್ನು ಜಾರಿಗೆ ತರಲು ಸ್ವಲ್ಪವೂ ಸಿಗವಿಟ್ಟಂತೆ ಕಾಣುವದಿಲ್ಲ. ಹೀಗೆ ಉತ್ಪತ್ತಿಯನ್ನು ಹೆಚ್ಚಿಸುವಂಥ ಸೂಚನೆಗಳನ್ನು ಸರ್ಕಾರದವರು ಮೂಲೆಗೊತ್ತಿ ಹಸಿ ಗಂಧದ ಮರಗಳನ್ನು ಕೀಳುತ್ತಾ ಬರುವದು ರಾಜಧರ್ಮವಲ್ಲವೆಂದು ಎಷ್ಟು ಹೇಳಿದರೂ ಸಾಲದು.

ಗಂಧದ ಮರಗಳ ಬೆಳವಣಿಗೆಗೆ ಸರಿಹೋಲುವಂತೆ ಕೀಳುವಿಕೆಯನ್ನು ಸಕಾಲದಲ್ಲಿ ಕಡಿಮೆಮಾಡಲಾಯಿತೆಂದು' ಸೂಚಿಸಿರುವರು. ಇದು ನಿಜವಲ್ಲವೆಂದೇ ನಮ್ಮ ಅಭಿಪ್ರಾಯ. ಒಣಗಿದ ಮರಗಳನ್ನೇ ಕೀಳುತ್ತಿದ್ದದ್ದು ಬಿಟ್ಟು, ಚೆನ್ನಾಗಿ ಬೆಳೆದ ಮರಗಳನ್ನು ಕಡಿಯಲುಪಕ್ರಮಿಸಿ, ಅದರಿಂದ ತೃಪ್ತರಾಗದೆ ಬೆಳೆಯದೆ ಇನ್ನೂ ಕೀಳಲು ಯೋಗ್ಯವಲ್ಲದ ಗಿಡಗಳನ್ನೂ ಸಹ ಕಡಿಯುತ್ತಾ ಬಂದು ಕೆಲವು ವರ್ಷಗಳಲ್ಲೇ ಗಂಧದ ಕಾಡುಗಳು ಬರಿದಾಗುವಂತಿರುವಾಗ್ಯೆ 'ಸಕಾಲದಲ್ಲಿ ಕೀಳುವಿಕೆಯನ್ನು ಕಡಿಮೆಮಾಡಲಾಯಿತೆಂದು' ಹೇಳುವದು ಎಷ್ಟು ಹಾಸ್ಯಾಸ್ಪದದ ವಿಷಯವಾಗಿದೆ ಎಂಬುದನ್ನು ವಾಚಕರೇ ಊಹಿಸಿಕೊಳ್ಳಬಹುದು. ಸರ್ಕಾರದವರು ಈ ತತ್ವವನ್ನು ಯಾಕೆ ಅನುಸರಿಸುತ್ತಿರುವರೋ ಎಂಬುದು ಜನರು ತಿಳಿಯಲಾರದ ಗುಟ್ಟಿನ ವಿಷಯದಂತಿದೆ.

ಹರತಾಳ.

ಹರತಾಳದ ಧ್ವನಿಯು ಈಗ ಹಿಂದೂ ದೇಶದ ಎಲ್ಲಾ ಕಡೆಗಳಲ್ಲೂ ಕೇಳಿಬರುತ್ತಿದೆ. ಹಿಂದೂ ದೇಶದ ಆತ್ಮಗೌರವಕ್ಕೆ ಹಾನಿಯನ್ನುಂಟು ಮಾಡಿರುವ ರಾಯಲ್ ಕಮಿಶನನ್ನು ಬಹಿಷ್ಕರಿಸಲು ಇಡೀ ಹಿಂದೂ ದೇಶವು ಒಗ್ಗಟ್ಟಾಗಿ ಸೇರುತ್ತಿದೆ. ಈ ಬಹಿಷ್ಕಾರ ಚಳವಳದ ಒಂದು ರೂಪವು ಹರತಾಳವಾಗಿದೆ. ಸೈಮನ್ ಕಮಿಶನು ಹಿಂದೂ ದೇಶಕ್ಕೆ ಕಾಲಿಡುವ ಫೆಬ್ರುವರಿ ತಾ. ೩ನೇ ದಿನ ಭಾರತ ಭೂಮಿಯ ಎಲ್ಲಾ ಕಡೆಗಳಲ್ಲೂ ಹರತಾಳವನ್ನು ಆಚರಿಸಬೇಕೆಂದು ಮುಖಂಡರು ತೀರ್ಮಾನಿಸಿರುವರು. ಇದನ್ನು ಜಾರಿಗೆ ತರುವ ಒಗ್ಗೆ ಎಲ್ಲಾ ಮುಖ್ಯ ಪಟ್ಟಣಗಳಲ್ಲಿ ಮಾತ್ರವಲ್ಲ, ಹಳ್ಳಿಹಳ್ಳಿಗಳಲ್ಲಿಯೂ ಸಭೆ ಸೇರಿಸಿ ಜನ ಸಮುದಾಯಕ್ಕೆ ಹರತಾಳದ ಮಹತ್ವವನ್ನು ಮುಂದಾಳುಗಳು ಬೋಧಿಸುತ್ತಿರುವರು. ಈ ವಾರದ ಇಂಗ್ಲಿಷ್ ಹಿಂದೂ ದೈನಿಕ ಪತ್ರಿಕೆಗಳಲ್ಲಿ ಇಂಥಾ ಮೀಟಿಂಗುಗಳ ವಿವರವೇ ತುಂಬಿ ಹೋಗಿರುತ್ತದೆ. ಇಡೀ ಹಿಂದೂಸ್ಥಾನವು ಈ ಚಳವಳವನ್ನು ನಡಿಸುತ್ತಿರುವಾಗ್ಯೆ ನಮ್ಮ ದೇಶಸ್ಥರು ಸುಮ್ಮನಿರುವದು ಯೋಗ್ಯವಲ್ಲ. ನಮ್ಮ ಹಿಂದೀ ಸಹೋದರರೊಂದಿಗೆ ನಾವು ಸೇರುವುದು ಉತ್ತಮವಲ್ಲವೇ? ಈ ವಿಷಯ ಇನ್ನಾದರೂ ನಮ್ಮ ಮುಂದಾಳುಗಳು ಎಚ್ಚತ್ತು ಹರತಾಳದ ಕೆಲಸಕ್ಕೆ ಕೈ ಹಚ್ಚುವರೇ?

ಬ್ರಿಟಿಷರು ಅಥವಾ ಬೇರೆ ಯಾರಾದರೂ ಹಿಂದೂ ದೇಶವನ್ನು ಆಳಲು ಯೋಗ್ಯರೇ?

(ಮೋಡರ್ನ್ ರೆವ್ಯೂವಿನಲ್ಲಿದ್ದ ಡಾಕ್ಟರ್ ಸಂಡರ್ ಲ್ಯಾಂಡ್‌ರ ಲೇಖನದ ಸಾರಾಂಶ)

ಒಂದು ವೇಳೆ ಇಂಡಿಯಾ ದೇಶವನ್ನು ಆಳಲಿಕ್ಕೆ ಇಂಗ್ಲೆಂಡಿನಿಂದ ಕಳುಹಿಸಲ್ಪಡತಕ್ಕ ಜನರು ಹಿಂದೂ ದೇಶದವರಿಗಿಂತ ಬಹಳ ಹೆಚ್ಚು ಬುದ್ಧಿವಂತರಾಗಿದ್ದರೆ ಅವರು ಮಾಡುತ್ತಿರುವ ಕೆಲಸವು ನ್ಯಾಯವಾದದ್ದಾಗಿತ್ತು. ಆದರೆ ಹಾಗಿಲ್ಲ. ಅಲ್ಲಿಗೆ ಹೋಗುವವರ ಪೈಕಿ ಒಬ್ಬನಾದರೂ ಹಿಂದೂ ದೇಶದವರಿಗಿಂತ ಹೆಚ್ಚು ಬುದ್ಧಿವಂತನಾಗಿಲ್ಲ ಮಾತ್ರವಲ್ಲ, ಅವರಲ್ಲಿ ಬಹು ಸ್ವಲ್ಪ ಮಂದಿ ಮಾತ್ರ ಹಿಂದೂದೇಶದ ಜನರಷ್ಟು ಮೊದಲು ದರ್ಜೆಯವರಾಗಿರುವರು. ಬಾಕಿ ಎಲ್ಲರೂ ಬುದ್ಧಿವಂತಿಕೆಯಲ್ಲಿ ಇಂಡಿಯಾದವರಿಗಿಂತ ಬಹಳ ಕೀಳಾಗಿರುವರು. ಹಿಂದೂ ದೇಶದಲ್ಲಿ ಉದ್ಯೋಗಕ್ಕೆ ಹೆಚ್ಚಾದ ಗೌರವವಿರುವುದು ಎಂಬ ಭಾವನೆಯಿಂದಲೂ ಮತ್ತು ಹಣ ಸಂಪಾದನೆಗೆ ಸುಲಭವಾದ ಮಾರ್ಗವಿರುವುದರಿಂದಲೂ ಹಿಂದೂದೇಶವನ್ನಾಳತಕ್ಕ ಒರತಕ್ಕ ಬ್ರಿಟಿಷರಲ್ಲಿ ಮುಕ್ಕಾಲು ಪಾಲು ಜನರು ಧನವಂತರ ಮಕ್ಕಳಾಗಿರುವರು. ಇಂಡಿಯಾಕ್ಕೆ ಹೋಗುವ ಬ್ರಿಟಿಷ್ ಉದ್ಯೋಗಸ್ಥರೆಲ್ಲರೂ ಕಾಲೇಜು ವಿದ್ಯಾಭ್ಯಾಸ ತೀರಿದ ಕೂಡಲೇ ಬಹಳ ಸಣ್ಣ ಪ್ರಾಯದಲ್ಲೇ ಅಲ್ಲಿಗೆ ಹೋಗತಕ್ಕವರು. ಇಂಥವರು ಅಲ್ಲಿಗೆ ಹೋದ ಕೂಡಲೇ ಅವರಿಗೆ ಅಲ್ಲಿ ದೊಡ್ಡ ಜವಾಬ್ದಾರಿಕೆಯ ಕೆಲಸಗಳು ಕೊಡಲ್ಪಡುವವು. ಅಲ್ಲಿ ಅವರ ಕೈಕೆಳಗಿದ್ದ ಹಿಂದೂ ಗುಮಾಸ್ತರು ಇವರ ತಪ್ಪುಗಳನ್ನು ತಿದ್ದಿ ಅನಾಹುತಗಳು ಸಂಭವಿಸದಂತೆ ಅವರನ್ನು ಕಾಪಾಡಿಕೊಂಡು ಬರುವರು. ಸಾಧಾರಣವಾಗಿ ಹಿಂದೂ ಸರ್ಕಾರದಲ್ಲಿ ಎಲ್ಲಿ ನೋಡಿದರೂ, ತುಂಬಾ ಓದಿ ಬಹಳ ಅನುಭವವಿದ್ದ ಹಿಂದೂ ಜನರು ಏನೂ ತಿಳಿಯದಿದ್ದ ಮತ್ತು ಇಂಗ್ಲೆಂಡಿನಲ್ಲಿ ಎರಡನೇ ಯಾ ಮೂರನೇ ತರಗತಿಯಲ್ಲಿರತಕ್ಕ ಬ್ರಿಟಿಷ್ ಯುವಕರ ಕೈಕೆಳಗೆ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಹೀಗೆ ದೊಡ್ಡ ದೊಡ್ಡ ಕಾರಬಾರುಗಳನ್ನು ಏನೂ ತಿಳಿಯದ ಬ್ರಿಟಿಷ್ ಯುವಕರು ಮಾಡುತ್ತಿರುವ ಅತ್ಯಂತ ವ್ಯಸನಕರವಾದ ವಿಷಯವನ್ನು ಹಿಂದೂ ದೇಶದವರಿಗಲ್ಲದೆ ಲೋಕದ ಇತರ ಜನರಿಗೆ ತಿಳಿದುಕೊಳ್ಳಲು ಅನುಕೂಲವಿಲ್ಲ. ಈ ವಿಷಯದಲ್ಲಿ ಇಂಡಿಯಾದಲ್ಲಿ ದೊಡ್ಡ ಹುದ್ದೆಯಲ್ಲಿ ಬಹುಕಾಲವಿದ್ದ ಸರ್ ಬೇಮ್‌ಫೀಲ್ಡ್ ಫುಲ್ಲರ್ ಎಂಬ ಇಂಗ್ಲಿಷನವನು ಹೀಗೆಂದು ಹೇಳುವನು.

ಏನೊಂದೂ ತಿಳಿವಳಿಕೆಯಿಲ್ಲದ ಬ್ರಿಟಿಷ್ ಯುವಕರು ದೊಡ್ಡ ಜವಾಬ್ದಾರಿಕೆ ವಹಿಸಲು ಹಿಂದೂ ದೇಶಕ್ಕೆ ಹೋಗುವರು. ಅವರಿಗೆ ನ್ಯಾಯವಾದ ಕಾನೂನಾಗಲಿ, ರಾಜಕೀಯ ವಿದ್ಯೆಯಾಗಲಿ, ಅಥವಾ ಜಂತ್ರಿಯ ಜ್ಞಾನವಾಗಲಿ ಇರುವುದಿಲ್ಲ. ಪೋಲೀಸ್ ಆಫೀಸರುಗಳಿಗೆ ಏನೊಂದೂ ತರಬೇತೂ ಇರುವದಿಲ್ಲ. ಹಿಂದೂದೇಶದ ಭಾಷೆಗಳಂತೂ ಅವರಿಗೆ ಏನೂ ಗೊತ್ತಿರುವದಿಲ್ಲ. ಫಾರೆಸ್ಟು ಉದ್ಯೋಗಸ್ಥರು, ವೈದ್ಯ ಇಲಾಖೆಯ ಅಧಿಕಾರಿಗಳು, ಇಂಜಿನೀಯರುಗಳು, ಕಡಗೆ ವಿದ್ಯಾ ಇಲಾಖೆಯ ಅಧಿಕಾರಿಗಳೂ ಕೂಡ ಇದೇ ರೀತಿಯಲ್ಲಿ ಅನನುಭವಿಗಳಾಗಿರುವರು. ಇದು ಇಂಗ್ಲೆಂಡ್ ದೇಶಕ್ಕೆ ಒಂದು ಕೊರತೆಯೆಂದರೂ ಹೆಚ್ಚಾಗಲಾರದು.'

ಹಿಂದೂ ದೇಶದಲ್ಲಿರುವ ಸಿವಿಲ್ ಆಫೀಸರುಗಳ ಪೈಕಿ ಬಹು ಸ್ವಲ್ಪ ಮಂದಿಗೆ ಮಾತ್ರ ಹಿಂದೂ ದೇಶದ ಭಾಷೆಗಳು ಬರುತ್ತಿವೆಯೆಂದು ಅಲಹಾಬಾದಿನ 'ದಿ ಪೈನೀರ್' ಎಂಬ ಇಂಗ್ಲಿಷ್ ಪತ್ರಿಕೆಯು ಹೇಳುತ್ತದೆ. ಇಂಥಾ ಜನರು ವಿದ್ಯಾವಂತ ಹಿಂದೂಗಳಿಗಿಂತ ಹಿಂದೂದೇಶವನ್ನು ಆಳಲು ಹೆಚ್ಚು ಯೋಗ್ಯರಂತೆ! ಮಿ ಹೆಚ್. ಯಂ. ಹಿಂಡ್‌ಮನ್ನರು ಹೀಗೆ ಹೇಳುತ್ತಾರೆ

'ಹಿಂದೂದೇಶವನ್ನು ಆಳುವುದಕ್ಕೆ ಹೋಗತಕ್ಕ ಬ್ರಿಟಿಷರ ವಿದ್ಯಾಬುದ್ಧಿ ಮತ್ತು ಆಚಾರ ಪದ್ಧತಿಗಳು ಹಿಂದೂಗಳ ವಿದ್ಯಾಬುದ್ಧಿ ಮತ್ತು ಆಚಾರ ಪದ್ಧತಿಗಳಿಗೆ ಶುದ್ಧ ವಿರುದ್ಧವಾಗಿವೆ. ಹೀಗಿರುವುದಲ್ಲದೆ ಪ್ರತಿ ಒಬ್ಬ ಉದ್ಯೋಗಸ್ಥನೇ ಒಂದು ಕೆಲಸದಲ್ಲಿ ಐದು ವರ್ಷ ಮಾತ್ರ ಇರುವುದರಿಂದ ಅವನಿಗೆ ಸ್ವಲ್ಪ ಅನುಭವ ಬಂದ ಕೂಡಲೇ ಅವನು ವರ್ಗವಾಗಿ ಹೋಗಬೇಕಾಗುವುದು. ಬ್ರಿಟಿಷರಲ್ಲಿ ತಾವು ಶ್ರೇಷ್ಠ ಮನುಷ್ಯರೆಂಬ ಭಾವನೆಯು ದಿನೇ ದಿನೇ ಹೆಚ್ಚುತ್ತಿದೆ.'

ಇಂಗ್ಲೆಂಡಿನ ಮುಖ್ಯ ಮಂತ್ರಿಯಾಗಿದ್ದ ಜೇಮ್ಸ್ ರಾಮ್ಸೆ ಮೆಕ್ ಡೊನಾಲ್ಡರವರು ಹೇಳುವುದೇನೆಂದರೆ—

'ಹಿಂದೂದೇಶದಲ್ಲಿ ಸಾಧಾರಣ ಇಪ್ಪತ್ತು ವರ್ಷಗಳವರೆಗೆ ಸಿವಿಲ್ ಸರ್ವಿಸಿನಲ್ಲಿ ಕೆಲಸ ಮಾಡುತ್ತಿದ್ದ ಇಂಗ್ಲಿಷ್ ಜನರೊಡನೆ ನಾನು ಮಾತಾಡಿದ್ದೇನೆ. ಆದರೆ ಅವರೆಲ್ಲರಿಗೂ ಬಹು ಸ್ವಲ್ಪ ಹಿಂದೂಗಳನ್ನು ಮಾತ್ರ ನೋಡಿ ಗೊತ್ತಿತ್ತು. ಅವರ್‍ಯಾರೂ, ಹಿಂದೂಗಳೊಡನೆ ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಮಾತನಾಡಿದವರೇ ಅಲ್ಲ. ಹಿಂದೂಗಳ ಜೀವನ ಕ್ರಮವೇನೂ ಅವರಿಗೆ ಗೊತ್ತಿರಲಿಲ್ಲ. ಏನಾದರೂ ಗೊತ್ತಿದ್ದರೆ ಅದು ಯೂರೋಪಿಯನ್ ಕ್ಲಬ್ಬಿನಲ್ಲಿ ಇನ್ನೊಬ್ಬ ಯೂರೋಪಿಯನನಿಂದ ತಿಳಿದ ಸಾಮಾನ್ಯವಾದ ವಿಷಯವಾಗಿತ್ತು. ಅವರು ಇಂಡಿಯಾದಿಂದ ನಾನು ಇಂಗ್ಲೆಂಡಿನಲ್ಲಿದ್ದಷ್ಟೇ ದೂರವಾಗಿದ್ದರು. ಅಲ್ಲದೆ ಅವರು ಇಂಡಿಯಾದ ವಿಷಯ ಇಂಗ್ಲೆಂಡಿನಲ್ಲಿರುವ ನನ್ನಷ್ಟು ಬೇಗನೆ ಸಹ ತಿಳಿದುಕೊಳ್ಳುತ್ತಿರಲಿಲ್ಲ.'

(ನಾಲ್ಕನೆ ಪುಟದಲ್ಲಿ ಮುಂದುವರಿದಿದೆ)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೧೯ನೇ ಪ್ರಕರಣ.

ಫೀನಿಕ್ಸಿನ ಆಶ್ರಮ

ಮಿ. ವೆಸ್ಟರೊಡನೆ ಈ ವಿಷಯವಾಗಿ ಮಾತನಾಡಿ 'ಸರ್ವೋದಯ'ದಿಂದ ನನ್ನ ಮನಸ್ಸಿನ ಮೇಲೆ ಉಂಟಾದ ಪ್ರಭಾವವನ್ನು ವರ್ಣಿಸಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ಊರಿನಿಂದ ದೂರವಾಗಿರುವ ಒಂದು ಹೊಲಕ್ಕೆ ಸಾಗಿಸಬೇಕೆಂದೂ, ಅಲ್ಲಿ ಎಲ್ಲರೂ ತಮ್ಮ ಜೀವನಕ್ಕಾಗುವಷ್ಟು ಸಂಬಳವನ್ನು ಮಾತ್ರ ತೆಗೆದುಕೊಂಡು, ಹೊಲದ ಕೆಲಸವನ್ನು ಮಾಡಿ ಉಳಿದ ಹೊತ್ತಿನಲ್ಲಿ ಮುದ್ರಣಾಲಯದ ಕೆಲಸವನ್ನು ನೋಡಿಕೊಳ್ಳಬೇಕೆಂದೂ ಸೂಚಿಸಿದೆನು. ಮಿ. ವೆಸ್ಟರು ಈ ಸಲಹೆಗೆ ಒಪ್ಪಿದರು. ಪ್ರತಿಯೊಬ್ಬರಿಗೂ ವರ್ಣಭೇದ ದೇಶಭೇದವಿಲ್ಲದೆ ತಿಂಗಳಿಗೆ ೩ ಪೌಂಡು (೪೫ ರೂ.) ಸಂಬಳ ಕೊಡಬೇಕೆಂದು ನಿಶ್ಚಯವಾಯಿತು.

ಮುದ್ರಣಾಲಯದಲ್ಲಿದ್ದ ಹತ್ತು ಹನ್ನೆರಡು ಕೆಲಸಗಾರರೂ ಊರಿಗೆ ದೂರವಾಗಿರುವ ಹೊಲದಲ್ಲಿ ಹೋಗಿ ನೆಲಸಿ ಜೀವನಕ್ಕಾಗುವಷ್ಟು ಮಾತ್ರ ಸಂಬಳದ ಮೇಲೆ ಇರಲು ಒಪ್ಪುವರೋ ಎನ್ನುವದು ಸಂದೇಹಾಸ್ಪದವಾದ ಮಾತಾಗಿದ್ದಿತು. ಆದ್ದರಿಂದ ಈ ಏರ್ಪಾಡಿಗೆ ಒಪ್ಪಿಗೆಯಿಲ್ಲದಿದ್ದವರು ತಮಗೆ ಈಗ ಬರುತ್ತಿದ್ದ ಸಂಬಳವನ್ನೇ ತೆಗೆದುಕೊಳ್ಳಬಹುದೆಂದೂ ಮತ್ತು ಆಶ್ರಮಕ್ಕೆ ಬಂದು ಸೇರುವುದನ್ನು ಧ್ಯೇಯವನ್ನಾಗಿಟ್ಟುಕೊಂಡು ಅದಕ್ಕೆ ಪ್ರಯತ್ನಪಡಬೇಕೆಂದೂ ನಾವು ಸೂಚಿಸಿದೆವು.

ಅಲ್ಲಿ ಕೆಲಸಮಾಡುತ್ತಿದ್ದವರೊಡನೆ ನಾನು ಈ ಏರ್ಪಾಡಿನ ವಿಷಯವಾಗಿ ಮಾತನಾಡಿದೆನು. ಶ್ರೀ ಮದನಜಿತರ ಒಪ್ಪಿಗೆಗೆ ಇದು ಬರಲಿಲ್ಲ. ಅವರು ನನ್ನ ಸಲಹೆಯನ್ನು ಅವಿವೇಕವಾದುದೆಂದೂ, ತಾವು ತಮ್ಮ ಸರ್ವಸ್ವವನ್ನೇ ಕೊಟ್ಟು ನಡೆಸುತ್ತಿದ್ದ ಕಾರ್ಯವು ಇದರಿಂದ ಮಣ್ಣುಪಾಲಾಗುವುದೆಂದೂ, ಕೆಲಸಗಾರರು ಓಡಿಹೋಗುವರೆಂದೂ, 'ಇಂಡಿಯನ್ ಒಪಿನಿಯನ್' ನಿಂತುಹೋಗಿ ಛಾಪಖಾನೆಯನ್ನು ಮುಚ್ಚಬೇಕಾಗುವುದೆಂದೂ ಅಭಿಪ್ರಾಯಪಟ್ಟರು.

ಮುದ್ರಣಾಲಯದಲ್ಲಿ ಕೆಲಸಮಾಡುತ್ತಿದ್ದವರಲ್ಲಿ ನನ್ನ ದಾಯಾದರಾದ ಛಗನಲಾಲ್ ಗಾಂಧಿಯವರೂ ಒಬ್ಬರಾಗಿದ್ದರು. ನಾನು ವೆಸ್ಟರೊಡನೆ ಈ ವಿಷಯವನ್ನು ಪ್ರಸ್ತಾಪಮಾಡಿದಾಗಲೇ ಇವರೊಡನೆಯೂ ಮಾಡಿದ್ದೆನು. ಅವರಿಗೆ ಹೆಂಡತಿ ಮಕ್ಕಳಿದ್ದರು. ಆದರೆ ಅವರು ಬಾಲ್ಯದಿಂದ ನನ್ನ ಕೈಯಲ್ಲಿ ಶಿಕ್ಷಣವನ್ನು ಹೊಂದಿ ನನ್ನ ಬಳಿ ಕೆಲಸಮಾಡಲು ತಾವೇ ಒಪ್ಪಿಕೊಂಡಿದ್ದರು. ನನ್ನಲ್ಲಿ ಅವರಿಗೆ ಸಂಪೂರ್ಣವಾದ ನಂಬಿಕೆಯಿದ್ದಿತು. ಆದ್ದರಿಂದ ಯಾವ ಚರ್ಚೆಯೂ ಇಲ್ಲದೆ ಅವರು ನನ್ನ ಸಲಹೆಗೆ ಒಪ್ಪಿದರು. ಅಂದಿನಿಂದ ಅವರು ನನ್ನ ಜೊತೆಯಲ್ಲಿಯೇ ಇದ್ದಾರೆ. ಯಂತ್ರವನ್ನು ನಡೆಸುತ್ತಿದ್ದ ಗೋವಿಂದಸ್ವಾಮಿ ಎಂಬಾತನೂ ನನ್ನ ಸಲಹೆಗೆ ಒಪ್ಪಿದನು. ಉಳಿದವರು ಈ ಏರ್ಪಾಡಿಗೆ ಒಪ್ಪಲಿಲ್ಲ. ಆದರೆ ನಾನು ಮುದ್ರಣಾಲಯವನ್ನು ಎಲ್ಲಿಗೆ ಸಾಗಿಸಿದರೆ ಅಲ್ಲಿಗೆ ಹೋಗುವುದಕ್ಕೆ ಒಪ್ಪಿದರು.

ಕೆಲಸಗಾರರೊಂದಿಗೆ ಈ ವ್ಯವಸ್ಥೆಯನ್ನು ಮಾಡಲು ನನಗೆ ಎರಡು ದಿನಕ್ಕಿಂತ ಹೆಚ್ಚಾಗಿ ಹಿಡಿದಂತೆ ತೋರಲಿಲ್ಲ. ಇದಾದೊಡನೆಯೇ ನಾನು ಡರ್ಬನ್ನಿನ ಸುತ್ತಮುತ್ತಲಿರುವ ಯಾವದಾದರೂ ರೈಲ್ವೇ ಸ್ಟೇಷನ್ನಿನ ಸಮೀಪದಲ್ಲಿರುವ ಒಂದು ಜಮೀನು ಬೇಕೆಂದು ಪತ್ರಿಕೆಗಳಲ್ಲಿ ಜಾಹಿರಾತನ್ನು ಪ್ರಕಟಿಸಿದೆನು. 'ಫೀನಿಕ್ಸ್' ಎಂಬ ಜಮೀನನ್ನು ಮಾರುವದಾಗಿ ತಿಳಿಯಬರಲು ಮಿ. ವೆಸ್ಟರೂ, ನಾನೂ ಅದನ್ನು ನೋಡಿಕೊಂಡು ಬರುವದಕ್ಕೆ ಹೋದೆವು. ಒಂದು ವಾರದೊಳಗಾಗಿ ೨೦ ಎಕರೆಯನ್ನು ಕೊಂಡುಕೊಂಡೆವು. ಅಲ್ಲಿ ಒಂದು ಪುಟ್ಟ ಸುಂದರವಾದ ಊಟೆಯೂ, ಕೆಲವು ಕಿತ್ತಳೆಯ ಮತ್ತು ಮಾವಿನ ಗಿಡಗಳೂ ಇದ್ದುವು. ಇದರ ಪಕ್ಕದಲ್ಲಿ ೮೦ ಎಕರೆಯ ಜಮೀನೊಂದಿದ್ದಿತು. ಅದರಲ್ಲಿ ಇನ್ನೂ ಹೆಚ್ಚು ಹಣ್ಣಿನ ಮರಗಳೂ, ಒಂದು ಜೀರ್ಣವಾದ ಗುಡಿಸಲೂ ಇದ್ದುವು. ಇದನ್ನೂ ನಾವು ಕೊಂಡುಕೊಂಡೆವು. ಎರಡರಿಂದ ಒಟ್ಟು ನಮಗೆ ಒಂದುಸಾವಿರ ಪೌಂಡು (೧೫,೦೦೦ ರೂ.) ತಗಲಿತು.

ನನ್ನ ಇಂಥಾ ಸಾಹಸಗಳಲ್ಲಿ ದಿ. ಮಿ. ರುಸ್ತುಂಜಿಯವರೇ ನನ್ನ ಬೆಂಬಲವಾಗಿರುತ್ತಿದ್ದರು. ಈ ಏರ್ಪಾಡು ಅವರಿಗೆ ರುಚಿಸಿತು. ಒಂದು ದೊಡ್ಡ ಗೋದಾಮಿನ ಉಪಯೋಗಿಸಿದ ಉಬ್ಬುತಗಡಿನ ತಗಡುಗಳನ್ನೂ, ಕಟ್ಟಡಕ್ಕೆ ಬೇಕಾದ ಇತರ ಸಾಮಾನುಗಳನ್ನೂ ಅವರು ನಮಗೆ ಕೊಡಲು ನಾವು ಕೆಲಸವನ್ನು ಆರಂಭಿಸಿದೆವು. ಬೋಯರ್ ಯುದ್ಧದಲ್ಲಿ ನನ್ನ ಜೊತೆಯಲ್ಲಿ ಕೆಲಸ ಮಾಡಿದ್ದ ಕೆಲವು ಭಾರತೀಯ ಬಡಗಿಗಳೂ, ಕಲ್ಲು ಕೆಲಸದವರೂ ಛಾಪಖಾನೆಗೆ ಒಂದು ಗುಡಿಸಲನ್ನು ಕಟ್ಟಲು ನನಗೆ ಸಹಾಯ ಮಾಡಿದರು. ೭೫ ಅಡಿ ಉದ್ದ, ೫೦ ಅಡಿ ಅಗಲದ ಈ ಕಟ್ಟಡವು ಸುಮಾರು ಒಂದು ತಿಂಗಳಲ್ಲಿಯೇ ಸಿದ್ಧವಾಯಿತು. ಮಿ. ವೆಸ್ಟರೂ, ಇತರರೂ ತಮ್ಮ ಶರೀರಕ್ಕೆ ಉಂಟಾಗಬಹುದಾದ ಅಪಾಯವನ್ನು ಲಕ್ಷಿಸದೆ ಬಡಗಿ ಮತ್ತು ಕಲ್ಲು ಕೆಲಸದವರೊಂದಿಗೆ ನಿಂತರು. ಆ ಜಾಗದಲ್ಲಿ ಮುಂಚೆ ಯಾರೂ ವಾಸಮಾಡುತ್ತಿರಲಿಲ್ಲ. ಆದ ಕಾರಣ ಹುಲ್ಲು ಬೆಳೆದು ಬೇಕಾದಷ್ಟು ಹಾವುಗಳು ಸೇರಿಕೊಂಡಿದ್ದುದರಿಂದ ಅಲ್ಲಿ ವಾಸಿಸುವುದು ಅಪಾಯಕರವೆನ್ನುವದು ಸ್ಪಷ್ಟವಾಗಿದ್ದಿತು. ಮೊಟ್ಟಮೊದಲು ಎಲ್ಲರೂ ಡೇರೆ ಹಾಕಿಕೊಂಡು ವಾಸಮಾಡುತ್ತಿದ್ದರು. ಮುಖ್ಯವಾದ ಕಟ್ಟಡವು ಒಂದು ತಿಂಗಳಲ್ಲಿ ತಯಾರಾಯಿತು. ನಮ್ಮ ಸಾಮಾನಿನಲ್ಲಿ ಹೆಚ್ಚು ಭಾಗವನ್ನು ನಾವು ಸುಮಾರು ಒಂದು ವಾರದೊಳಗಾಗಿ ಸಾಗಿಸಿದೆವು. ಆ ಜಾಗವು ಡರ್ಬನ್ನಿನಿಂದ ೧೪ ಮೈಲಿ ಮತ್ತು ಫೀನಿಕ್ಸ್ ಸ್ಟೇಷನ್ನಿನಿಂದ ೨ ಮೈಲಿ ದೂರ ಇದ್ದಿತು.

'ಇಂಡಿಯನ್ ಒಪಿನಿಯನ್'ನ ಒಂದು ಸಂಚಿಕೆಯನ್ನು ಮಾತ್ರ ಹೊರಗೆ 'ಮರ್ಕ್ಯುರಿ' ಮುದ್ರಣಾಲಯದಲ್ಲಿ ಅಚ್ಚು ಹಾಕಿಸಬೇಕಾಯಿತು.

ಹಿಂದೆ ನನ್ನೊಡನೆ ಇಲ್ಲಿ ತಮ್ಮ ಅದೃಷ್ಟ ಪರೀಕ್ಷೆಯನ್ನು ಮಾಡಲು ನನ್ನೊಡನೆ ಬಂದು ಯಾವದಾದರೊಂದು ಕಸುಬಿನಲ್ಲಿದ್ದ ನನ್ನ ಬಂಧುಗಳನ್ನೂ, ಸ್ನೇಹಿತರನ್ನೂ ಈಗ ಒಪ್ಪಿಸಿ ಫೀನಿಕ್ಸ್ ಆಶ್ರಮಕ್ಕೆ ಸೇರಿಸಲು ಪ್ರಯತ್ನಪಟ್ಟೆನು. ಅವರು ಧನವನ್ನು ಗಳಿಸುವುದಕ್ಕಾಗಿ ಬಂದಿದ್ದುದರಿಂದ ಅವರನ್ನು ಒಪ್ಪಿಸುವುದು ಕಷ್ಟದ ಕೆಲಸವಾಗಿದ್ದಿತು. ಆದರೂ ಕೆಲವರು ಒಪ್ಪಿದರು. ಇವರಲ್ಲಿ ಮಗನಲಾಲ್ ಗಾಂಧಿಯ ಹೆಸರೊಂದನ್ನು ಮಾತ್ರ ಆರಿಸಿ ಹೇಳುತ್ತೇನೆ. ಉಳಿದವರು ಪುನಃ ತಮ್ಮ ತಮ್ಮ ಕಸುಬಿಗೆ ಹೊರಟುಹೋದರು. ಮಗನಲಾಲ್ ಗಾಂಧಿಯು ತನ್ನ ಕಸುಬನ್ನು ಒಟ್ಟಿಗೇ ಬಿಟ್ಟು, ನನ್ನ ಜೊತೆಯಲ್ಲಿ ವಾಸಮಾಡಲು ಬಂದನು. ತನ್ನ ಬುದ್ಧಿಬಲ, ತ್ಯಾಗ ಮತ್ತು ಭಕ್ತಿ ಇವುಗಳ ಪ್ರಭಾವದಿಂದ ಆತನು ನನ್ನ ನೈತಿಕ ಪ್ರಯೋಗಗಳಲ್ಲಿ ಮೊಟ್ಟಮೊದಲು ಬಂದವರಲ್ಲಿ ಜನರಲ್ಲಿ ಪ್ರಧಾನನಾಗಿದ್ದಾನೆ ಮತ್ತು ಸ್ವಯಂ ಶಿಕ್ಷಿತ ಕೈಕಸುಬುಗಾರನಾಗಿ ಇವರಲ್ಲಿ ಆತನ ಸ್ಥಾನವು ಅದ್ವಿತೀಯವಾಗಿದೆ.

ಹೀಗೆ ಫೀನಿಕ್ಸ್ ಆಶ್ರಮವು ೧೯೦೪ ರಲ್ಲಿ ಸ್ಥಾಪಿತವಾಯಿತು. ಅನೇಕ ಅಡಚಣೆಗಳುಂಟಾದರೂ 'ಇಂಡಿಯನ್ ಒಪಿನಿಯನ್' ಪತ್ರಿಕೆಯು ಇಂದಿನ ವರೆಗೂ ಅಲ್ಲಿಂದಲೇ ಪ್ರಕಟಿಸಲ್ಪಡುತ್ತಿದೆ.

ಆದರೆ ಮೊಟ್ಟಮೊದಲು ನಡೆಸಿದ ತೊಡಕುಗಳು, ಮಾಡಿದ ಪ್ರಯತ್ನಗಳು, ಹುಟ್ಟಿದ ಆಸೆಗಳು, ಉಂಟಾದ ಆಶಾಭಂಗಗಳು, ಇವೆಲ್ಲಕ್ಕೂ ಬೇರೊಂದು ಅಧ್ಯಾಯ ಬೇಕು.

ನಮ್ಮ ದೇಶವನ್ನು ನಾವೇ ಏತಕ್ಕಾಗಿ ಆಳಬಾರದು.

(ಕೆ ಪಿ. ಚಿಣ್ಣಪ್ಪನವರಿಂದ).

ಯಾವ ದೇಶದಲ್ಲೇ ಆಗಲಿ, ಯಾವ ವರೆಗೆ ದೈಶಿಕ ಆವಶ್ಯಕತೆಗಳನ್ನರಿತು ಪ್ರತಿ ಒಂದು ಕಾರ್ಯವನ್ನು ನಿರ್ವಹಿಸುವ ಹಕ್ಕು ದೊರೆಯುವುದಿಲ್ಲವೋ ಆ ವರೆಗೆ ಎಂಥ ರಾಜರಿಂದಾಗಲಿ, ರಾಜ್ಯಭಾರದಿಂದಾಗಲಿ ಪ್ರಜೆಗಳಿಗೆ ಪ್ರಯೋಜನವು ದೊರೆಯುವುದು ದುರ್ಲಭ. ಪ್ರತಿ ಒಬ್ಬನಲ್ಲಿಯೂ ಉಜ್ವಲವಾದ ದೇಶಾಭಿಮಾನವನ್ನು ಬೆಳೆಯಿಸಲಿಕ್ಕೂ, ಆತ್ಮ ಗೌರವವನ್ನು ಉಳಿಸಿಕೊಳ್ಳಲಿಕ್ಕೂ, ನಾಗರಿಕ, ನೈತಿಕ, ಮತ್ತು ಸಾಮಾಜಿಕ ಅಭಿವೃದ್ಧಿಯನ್ನುಂಟುಮಾಡಲಿಕ್ಕೂ ನಮ್ಮ ದೇಶದ ಆಡಳಿತ ಹಕ್ಕನ್ನೂ ನಾವೇ ಸಂಪಾದಿಸಿ, ನಾವೇ ಆಡಳಿತ ನಡೆಸಬೇಕಾದದ್ದು ಸಹಜವಾಗಿದೆ. ನಮ್ಮ ಸರ್ವ ಅಭಿವೃದ್ಧಿಗೂ ಸ್ವರಾಜ್ಯವೇ ಮೂಲ. ಸ್ವರಾಜ್ಯದಿಂದ ಸ್ವತಂತ್ರವೂ, ಸ್ವತಂತ್ರದಿಂದ ರಾಷ್ಟ್ರೀಯತ್ವವೂ ತನ್ನಷ್ಟಕ್ಕೆ ಉದ್ಭವವಾಗುತ್ತದೆ.

ಈ ಕಾರಣದಿಂದ ಕೊಡಗಿನ ಪ್ರತಿ ಒಬ್ಬ ಮನುಷ್ಯನ ಅಪೇಕ್ಷೆಯೂ ತಮ್ಮನ್ನು ತಾವೇ ಆಳಿಕೊಳ್ಳುವುದೇ ಆಗಿರಬೇಕಲ್ಲವೇ?

ಈಗಾಗಲೇ ನಮ್ಮ ಅರ್ಹತೆಯನ್ನು ಪರೀಕ್ಷಿಸಲು ಸೈಮನ್ ಕಮಿಶನ್ ಬರುವುದರಲ್ಲಿದೆ. ಈಗ ನಾವು ಎಚ್ಚತ್ತು ನಮ್ಮ ಅರ್ಹತೆಯನ್ನು ತೋರ್ಪಡಿಸದಿದ್ದರೆ ಈ ವರೆಗೆ ಇದ್ದಂತೆ ನಾವು ಬಹಳ ಹಿಂದೆ ಬೀಳುವುದರಲ್ಲಿ ಸಂದೇಹವಿಲ್ಲ.

ಈ ಫೆಬ್ರುವರಿ ತಾರೀಕು ೭ನೇ ಗುರುವಾರ ವೀರರಾಜಪೇಟೆಯಲ್ಲಿ ಆಗುವ ಕೊಡಗು ಜಮೀನ್ದಾರರ ಸಂಘದ ವಿಶೇಷ ಅಧಿವೇಶನದಲ್ಲಿ ನಮ್ಮ ಮುಂದಿನ ರಾಜಕೀಯ ರಚನಾಕ್ರಮವನ್ನು ಕುರಿತು ಚರ್ಚೆ ಮಾಡುವ ಸಮಯದಲ್ಲಿ ಈ ಕೆಳಗಿನ ವಿಚಾರವನ್ನು ತಿಳುಕ್ಕೊಳ್ಳಿರಿ

(1) 'ಕೊಡಗು ದೇಶದ ರಾಜ್ಯಾಡಳಿತವನ್ನು ಪ್ರಜಾಪ್ರತಿನಿಧಿಗಳೇ ನಡೆಸಲು ಸಂಪೂರ್ಣ ಅರ್ಹರಾದ್ದರಿಂದ ಅವರಿಗೇನೇ ಅದನ್ನು ನಡೆಸುವ ಪೂರ್ಣ ಹಕ್ಕನ್ನು ಬಿಟ್ಟುಬಿಡುವಂತೆ ಬ್ರಿಟಿಷ್ ಸರಕಾರವನ್ನು ಈ ಸಂಘವು ಕೋರುತ್ತದೆ.

(2) ಕೊಡಗು ದೇಶದ ಮುಂದಿನ ರಾಜ್ಯಾಡಳಿತ ಕ್ರಮವು ಯಾವ ರೀತಿಯಲ್ಲಿರಬೇಕೆಂಬ ಮಸೂದೆಯನ್ನು ತಯಾರಿಸಲು ಈ ಸಂಘವು ಒಂದು ಕಮಿಟಿಯನ್ನು ಆರಿಸಬೇಕು.

ನಮ್ಮ ಅಸ್ಥಿರ ಸ್ಥಿತಿ ಪರ್ಯವಸಾನವು, ನಮ್ಮ ದೇಶವನ್ನು ನಾವೇ ಆಳಬೇಕೆಂಬುದೇ ಆಗಿರುವಾಗ, ಕರ್ನಾಟಕ ಏಕೀಕರಣವಾದರೂ ಯಾ ಮದ್ರಾಸಿಗೆ ಸೇರಿದರೂ ಅಥವಾ ಮೈಸೂರಿಗೆ ಸೇರಿಸಿದರೂ ಎಂದಾದರೂ ಒಂದು ದಿನ ನಾವು ನಮ್ಮನ್ನೇ ಆಳಿಕೊಳ್ಳಬೇಕಲ್ಲವೇ. ಈ ಕಾರಣದಿಂದ ಈ ಕರಾವು ರಾಜಕೀಯ ಸ್ವತಂತ್ರದ ಮೂಲ ಮಂತ್ರವಾಗಿದೆ ಮತ್ತು ದೂರದ ಪಾರಂಬರಿಯಿಂದ ಒಳಿತಾಗುವ ತನ್ನ ಆತ್ಮಾವಲಂಬನೆಯನ್ನು ಕಳೆದುಕೊಂಡು ಕರ್ನಾಟಕ, ಮೈಸೂರು, ಮದ್ರಾಸಿನವರ ಸಹಾಯ ತೆಗೆದುಕೊಂಡು ಸ್ವರಾಜ್ಯಕ್ಕೆ ಪ್ರಯತ್ನಿಸುವುದರ ಬದಲಾಗಿ ನಮ್ಮಲ್ಲಿ ನಾವು ಧರಣೆಸಿಯೂ, ಈಗಲೇ ಸೇರವಾದ ದಾರಿಯಿಂದ ನಾವಾಗಿ ಬಿಟ್ಟು ಕೊಟ್ಟ ರಾಜ್ಯಭಾರವನ್ನು ಮರಳಿ ಕೇಳುವದೇ ಚಾಣಾಕ್ಷತನದ ಸಂಗತಿಯಾಗಿದೆ

ಬ್ರಿಟಿಷಿನವರ ಒಂಬತ್ತು ಶತಮಾನದ ಆಳ್ವಿಕೆಯ ಫಲ.

ಬ್ರಿಟಿಷರು ಕಳೆದ ಒಂಬತ್ತು ಶತಮಾನದಿಂದ ನಮ್ಮ ರಾಜ್ಯವನ್ನಾಳುತ್ತಾ ಬಂದರೂ ದೇಶಕ್ಕೆ ಹೆಚ್ಚಿನ ಪ್ರಯೋಜನವೇನೂ ಆಗಿರುವುದಿಲ್ಲ. ಪ್ರಯೋಜನದ ಬದಲು ನಮಗುಂಟಾದ ಹಾನಿಯನ್ನು ಕೊಂಚ ಮಟ್ಟಿಗೆ ವಿವರಿಸಬೇಕಾಗಿದೆ. ಮೊದಲು ಸೂರ್ಯಚಂದ್ರ ಸಾಕ್ಷಿಯಾಗಿ ನಮ್ಮ ಪದ್ಧತಿಗೂ, ನಿಬಂಧನೆಗೂ, ಕಟ್ಟು ಕಟ್ಟಳೆಗಳಿಗೂ ವಿರೋಧ ಮಾಡುವುದಿಲ್ಲವೆಂದು ಜನರ ಕೋರಿಕೆ ಮೇರೆ ರಾಜ್ಯವಹಿಸಿಕೊಂಡು ಬಂದವರಾಗಿ ಕೊಟ್ಟ ಭರವಸೆ ಬಹಳ ಮಟ್ಟಿಗೆ ಬದಲಾಯಿತು.

(1) ಜಮ್ಮದ ನಕ್ಷೆಯನ್ನು ಬದಲಾಯಿಸಿ ವಿಪರೀತ ಅರ್ಥ ಕಲ್ಪಿಸಿ ಕಂದಾಯ ಹಾಕಿದ್ದಾಯಿತು. (2) ಕತ್ತಿ, ಕೋವಿ ಹಿಡಿಯುವ ಶಕ್ತಿಗೆ ಅಡಚಣೆ ಬಂತು (3) ದೇಶದಲ್ಲಿ ಬಡತನ ಹೆಚ್ಚಿ ಜನಸಂಖ್ಯೆ ಕಡಿಮೆಯಾಗಿ ಮರಣ ಹೆಚ್ಚುತ್ತಾ, ಉಂಬರ ತುಂಬಿ ದನಕರುಗಳ ಅಭಾವವೂ ಹೆಚ್ಚಿತು. (4) ದೇಶಾಭಿಮಾನಕ್ಕೆ ಅಪ್ಪಟ ಕೊಡದೆ, ಮತ್ತು ವಿದ್ಯೆ ಬಿಟ್ಟನಂತರ ತಮ್ಮ ಜೀವನೋಪಾಯವನ್ನು ಸುಲಭದಲ್ಲಿ ಸಾಧಿಸಲು ಬಿಡದೆ, ಆತ್ಮಗೌರವವನ್ನು ಕಳಕೊಳ್ಳುವ ವಿದ್ಯೆಯನ್ನು ಕೊಟ್ಟರು. (5) ವರ್ಷ ವರ್ಷವೂ ಆದಾಯದಲ್ಲಿ ಉಳಿದ ನಿಲುಕನ್ನು ಇಂಡಿಯಾ ಸರಕಾರಕ್ಕೆ ಒಯ್ದು ಅದು ಈ ವರೆಗೆ ಒಂದು ಕೋಟಿ ರೂಪಾಯಿಗಿಂತ ಹೆಚ್ಚಾದರೂ ದೇಶದಲ್ಲಿ ರೈಲು ರಸ್ತೆಯಾಗಲೀ, ಕಾಲೇಜುಗಳಾಗಲೀ ಮಾಡಲಿಲ್ಲ. (6) ದೇಶದ ಅಮೂಲ್ಯ ಉತ್ಪತ್ತಿಯಾದ ಗಂಧವನ್ನು ಮುಂದಾಲೋಚನೆ ಇಲ್ಲದೆ ಕಡಿದು ಬೇರೆ ಅದರಿಂದ ಯಾವ ಪ್ರಯೋಜನಕ್ಕೂ ಬಾರದ ಮರವ್ಯಾಪಾರ ಬ್ರಾಹ್ಮಣರಿಗೆ ಖರ್ಚು ಮಾಡಿ ದೇಶದ ಮುಂದಿನ ರಾಜ್ಯಾಡಳಿತಕ್ಕೆ ತೊಂದರೆ ತಂದರು. (7) 1909 ರಲ್ಲಿ ಮಾರ್ಲೆಮಿಂಟೋ ಸುಧಾರಣೆಯ ಸಮಯದಲ್ಲಿಯೂ, 1919 ರಲ್ಲಿ ಮಾಂಟೆಗೋ ಚೆಮ್ಸ್‌ಫರ್ಡ್ ಸುಧಾರಣೆಯಲ್ಲಿಯೂ ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. (8) ಈಚೆಗೆ ಚೀಫ್ ಕಮಿಷನರವರ ಅಧಿಕಾರವನ್ನು ಮತ್ತಷ್ಟು ಹೆಚ್ಚಿಸುವ ಮಕ್ಕಳಾಟದಂತಿರುವ ಒಂದು ಕೌನ್ಸಿಲನ್ನು ಕೊಟ್ಟು ಅಲ್ಲಿಗೆ ನಾವಾಗಿ ಚುನಾಯಿಸಿ ಕಳುಹಿಸಿದ ಪ್ರತಿನಿಧಿಗಳ ಮಾತನ್ನು ಗಣನೆಗೆ ತೆಗೆದುಕೊಳ್ಳದೆ ತಮ್ಮ ನಿರಂಕುಶ ಪ್ರವರ್ತನವನ್ನೇ ಚಲಾವಣೆ ಮಾಡುತ್ತಾರೆ (9) ಈ ಕಲಾ ಕ್ರಮಕ್ಕೆ ಜಾರಿಯ ನಿತ್ಯಾಂತ್ಯವಾಗಿದೆ. (10) ಎಷ್ಟೋ ಮಂದಿ ಮತದವರನ್ನು ಇನ್ನೂ ಕೊಟ್ಟಿರುವುದಿಲ್ಲ. (11) ದೇಶದ ಮೂಲ ವ್ಯವಸಾಯವಾದ ಭತ್ತದ ವ್ಯವಸಾಯಾಭಿವೃದ್ಧಿಗೆ ಯಾವ ವಿಧದಲ್ಲಿಯೂ ಉತ್ತೇಜನಕೊಡದೆ ಕಂದಾಯ ಹೆಚ್ಚು ಹಾಕಿದರು. (12) ನಿರುದ್ಯೋಗಿಗೆ ಬದಲ ಉತ್ತೇಜನಕೊಟ್ಟು ದೇಶವನ್ನೇ ನೀತಿ ತಪ್ಪುವಂತೆ ಮಾಡಿದರು. (13) ವಿದೇಶ ತಲೆಭಾರದ ಸಿಬ್ಬಂದಿಯನ್ನಿಟ್ಟು ಆದಾಯದ ಮುಕ್ಕಾಲು ಪಾಲು ಹಣವನ್ನೆಲ್ಲಾ ಸಂಬಳಕ್ಕೇನೇ ಖರ್ಚುಮಾಡುತ್ತಾ ಇದ್ದಾರೆ.

ಈ ಕಾರಣದಿಂದ ನಮ್ಮ ರಾಜ್ಯವನ್ನು ನಾವೇ ಆಳಬೇಕಾಗಿದೆ.

ರಾಜ್ಯಭಾರದ ಒಟ್ಟು ಉತ್ಪತ್ತಿಯಲ್ಲಿ ಆದಾಯ ತೆರಿಗೆ 25,000 ವಿನಹ ಮಿಕ್ಕ ಹಣವೆಲ್ಲಾ ದೇಶದಲ್ಲಿಯೇ ಖರ್ಚಾಗುತ್ತೆ. ತಲೆಭಾರದ ಸರಕಾರವು ಹೆಚ್ಚಾದ್ದರಿಂದಲೂ, ರೈತನ ಕ್ಷೇಮದ ಮೇಲೆ ನಿಗವಿಡದ್ದರಿಂದಲೂ, ಗಂಧವನ್ನು ಹುಚ್ಚಾಗಿ ಕಡಿದು ನಷ್ಟಮಾಡಿ, ಪೂರ್ವಕಾಲಕ್ಕೆ ಖರ್ಚುಮಾಡಿದ್ದರಿಂದಲೂ, ಆದಾಯಕ್ಕಿಂತ ವೆಚ್ಚವು ಏರುತ್ತಾ ಇದೆ. ದೇಶದ ಈಗಿನ ಸ್ಥಿತಿಯಲ್ಲಿ ಇನ್ನು ಅನೇಕ ವರ್ಷಗಳ ವರೆಗೆ ಅಂದರೆ—ರಾಜ್ಯಭಾರವನ್ನು ನಾವಾಗಿ ನಡೆಸುವ ವರೆಗೆ, ಯಾವ ಅಭಿವೃದ್ಧಿಯ ಕೆಲಸಕ್ಕೂ ಖರ್ಚುಮಾಡಲು ಹಣವಿರುವುದಿಲ್ಲ. ಇದರ ದೆಸೆಯಿಂದ ಶೀಘ್ರದಲ್ಲೇ ನಮ್ಮ ಸರಕಾರವು ನಮ್ಮ ದೇಶವನ್ನು ಬಡನೇ ಮದರಾಸು ಸರಕಾರಕ್ಕೆ ಕೂಡಿಸಬೇಕೆಂತ ಹೇಳುವುದರಲ್ಲಿ ಸಂದೇಹವಿಲ್ಲ. ಇದನ್ನು ಕಣ್ಣಾರೆ ಕಂಡರೂ ನಾವು ಕಣ್ಣುಮುಚ್ಚಿಕೊಂಡಿರುವುದು ಸರಿಯಲ್ಲ. ಮದರಾಸಿಗೇ ಆಗಲಿ, ಕರ್ನಾಟಕಕ್ಕೇನೇ ಆಗಲಿ ಯಾ ಮೈಸೂರಿಗೇ ಆಗಲಿ ಒಂದು ಸಲ ಸೇರಿದನಂತರ ಹಿಂದಕ್ಕೆ ಬರುವುದು ದುರ್ಲಭ. ಆದ್ದರಿಂದ ನಾವು ಈಗಲೇ ನಮ್ಮ ದೇಶವನ್ನು ನಮಗೇನೇ ಬಿಟ್ಟುಕೊಡಬೇಕೆಂದೂ, ನಮ್ಮ ಮನೆ ಯಜಮಾನಿಕೆಯನ್ನು ನಾವೇ ತೃಪ್ತಿಯಾಗಿ ನಡೆಸುತ್ತೇವೆಂದು ಹೇಳುವುದು ಒಳ್ಳೆಯದಲ್ಲವೇ? ನಮ್ಮ ಮನೆಯಲ್ಲಿ ಪರ ಯಜಮಾನನು ಕಠಿಣವಾಗಿ ಮೊದಲು ಅವನಿಂದ ಯಜಮಾನಿಕೆಯನ್ನು ತೆಗೆದುಕೊಳ್ಳುವ. ಬಳಿಕ ಮನೆ ಯಾವ ರೀತಿಯಲ್ಲಿ ನಡೆಸಲ್ಪಡಬೇಕು, ಅಸ್ತಿಯು ಯಾವ ರೀತಿಯಲ್ಲಿ ಪಾಲಾಗಬೇಕೆಂಬದನ್ನು ನಿರ್ಧರಿಸುವ. ಇದು ಬಿಟ್ಟು ಸ್ವರಾಜ್ಯ ಮತ್ತು ಸ್ವತಂತ್ರವನ್ನು ಪಡೆಯದೆ ಸ್ವತಂತ್ರ ಸಿಕ್ಕಿದರೆ ನಾವು ಹೇಗೆ ಇರಬೇಕು ಎಂಬುದನ್ನು ಚರ್ಚಿಸಲಿಕ್ಕೆ ನಾವು

ರಂಬಿಸಿದರೆ ಕುದುರೆಯ ಮುಂದೆ ಗಾಡಿಯನ್ನು ನಿಲ್ಲಿಸಿದಂತಾಗುವುದಿಲ್ಲವೇ?

ಸ್ವರಾಜ್ಯಕ್ಕೆ ನಮ್ಮ ಅರ್ಹತೆ.

(1) ನಮ್ಮ ದೇಶವನ್ನು ನಾವಾಗಿ ನಮ್ಮ ಕೈಯಿಂದ ಮೇರೆ ಬ್ರಿಟಿಷ್ ಸರಕಾರಕ್ಕೆ ಬಿಟ್ಟು ಕೊಟ್ಟದ್ದಾಗಿದೆ. (2) ಅವರು ನಮ್ಮ ದೇಶಕ್ಕೆ ಬರುವದಕ್ಕಿಂತ ಮೊದಲೇ ನಾವು ಮಿತ್ರರಾಗಿದ್ದೆವು ಮತ್ತು ಇದನ್ನು ವೈಸ್‌ರಾಯರಾದ ಲಾರ್ಡ್ ರೀಡಿಂಗ್‌ರವರು ದೃಢೀಕರಿಸಿದ್ದಾರೆ. (3) ನಮ್ಮ ದೇಶದ ಭೂವಿವರಣೆಯು ಮತ್ತು ಸ್ಥಿತಿಯು ವಿಚಿತ್ರವಾಗಿದೆ. (4) ಅನೇಕ ಶತಮಾನಗಳಿಂದ ಪ್ರತ್ಯೇಕವಾಗಿ ರಾಜ್ಯವಾಳಲ್ಪಟ್ಟದ್ದಾಗಿದೆ. (5) ಜನರ ಹಕ್ಕು ಬಾಧ್ಯತೆ, ಸಿಬಂದಿ, ಕಟ್ಟು ಕಟ್ಟಳೆ ಇರಬಹುದಾಗಿದೆ. (6) ಇದುವರೆಗೆ ಸರಕಾರಕ್ಕೆ ಎಲ್ಲಾ ವಿಷಯಗಳಲ್ಲಿಯೂ ಮಿತ್ರರಾಗಿದ್ದು, ಕಷ್ಟ ಕಾಲಗಳಲ್ಲಿ ಸಹಾಯ ಮಾಡುತ್ತಾ ಬಂದಿದ್ದೇವೆ. (7) ನಮ್ಮಲ್ಲಿ ಜಾತಿ ಜಾತಿಗಳಿಗೂ, ಹಿಂದೂ ಮುಸಲ್ಮಾನರುಗಳಿಗೂ ಕಲಹಗಳಿಲ್ಲ. (8) ಕಳೆದ ಎರಡು ಚುನಾವಣೆಯಲ್ಲಿ ಶೇಕಡ 71 ರಿಂದ 80 ಜನರ ವರೆಗೆ ಓಟುಗಳು ನಮ್ಮ ಓಟಿನ ಹಕ್ಕನ್ನು ಉಪಯೋಗಿಸಿದ್ದರಿಂದ ಹಿಂದೂಸ್ಥಾನದಲ್ಲಿ ನಾವು ಎಲ್ಲರಿಗಿಂತಲೂ ಸ್ವರಾಜ್ಯ ಪಡೆಯಲು ಅರ್ಹರು ಎಂಬುದನ್ನು ಸ್ಥಾಪಿಸಿದ್ದೇವೆ. (9) ಪ್ರೈಮರಿ ವಿದ್ಯಾಭ್ಯಾಸವು ನಮ್ಮಲ್ಲಿ ಇತರ ಪ್ರಾಂತ್ಯಗಳಿಗಿಂತ ಹೆಚ್ಚಿದೆ.

ಸ್ವಾರ್ಥತೆಯನ್ನು ದೂರ ಮಾಡಿದರೆ ಖಂಡಿತವಾಗಿಯೂ ಬ್ರಿಟಿಷರು ನಮ್ಮ ಅರ್ಹತೆಯನ್ನು ಒಪ್ಪಬೇಕು. ಅವರು ನ್ಯಾಯಶೀಲರೂ, ನಿಷ್ಪಕ್ಷಪಾತಿಗಳೂ, ನಾವು ಮಾಡಿದ ಸಹಾಯವನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳುವವರೂ ಆದರೆ ಖಂಡಿತವಾಗಿಯೂ ನಾವಾಗಿ ಬಿಟ್ಟುಕೊಟ್ಟ ದೇಶದ ಆಡಳಿತವನ್ನು ನಮಗೆ ಬಿಡಲು ಅಭ್ಯಂತರವೇನು?

ಇಂಥಾ ಇಕ್ಕಟ್ಟಿನಲ್ಲಿ ನಾವೆಲ್ಲರೂ ಮಾತೃಭೂಮಿಯ ಕಡೆಗೆ ದೃಷ್ಟಿ ಇಡುವ. ಈತ್ತಾಲಕ್ಕೆ ಕರ್ನಾಟಕ ಪತ್ರಿಕೆ ಣಯೂ ವೈಸರಾಯರುಸಂಪರ್ಕ ಎಂಬ ಚಳವಳಿಗಳನ್ನು ಬಾಕಿಡುವ. ಸ್ವರಾಜ್ಯ ಮತ್ತು ಸ್ವತಂತ್ರವು ನಮ್ಮ ಮೂಲ ಹಕ್ಕು. ಇದನ್ನು ಮೊದಲು ಗಳಿಸಿ ಅನಂತರ ನಮ್ಮ ಯಾವ ಕೆಲಸಗಳನ್ನಾದರೂ ಮಾಡುವ. ಸ್ವತಂತ್ರವನ್ನು ಸಂಪಾದಿಸಿದನಂತರ ನಮ್ಮ ಯಾವ ಕೋರಿಕೆಯನ್ನೂ ಈಡೇರಿಸಬಹುದು. ನಮ್ಮ ಅಭಿವೃದ್ಧಿಗೆ ನಾವೇ ಅಡ್ಡಿಯಾಗಿದ್ದೇವೆಯಲ್ಲದೆ ನಮ್ಮನ್ನು ಬೇರೆ ಯಾವುದೂ ಅಡ್ಡಿ ಮಾಡುವುದಿಲ್ಲ. ದೇಶವನ್ನೆಲ್ಲಾ ಸ್ವರಾಜ್ಯ ಮತ್ತು ಸ್ವತಂತ್ರ ಧ್ವನಿಯಿಂದ ತುಂಬಿಸಿ ನಾವು ಮೊದಲು ನಮಗೆ ಸಹಾಯ ಮಾಡಿಕೊಳ್ಳುವ. ದೇವರು ನಮಗೆ ಸಹಾಯ ಮಾಡುವನು.

ವಂದೇ ಮಾತರಂ.

COORG DISTRICT MAGISTRATE OFFICE

NOTIFICATION.

Mercara, dated 25th January 1928.

Tenders are invited for the supply of five new dugout boats of hebbalsu of the dimensions given below :—

Bethri	32 ft. by 2 ft. 9 inches.	
Sirangala	28 ft. 8 inches by 2 ft. 6 inches.	
Bellumadu	do.	do.
Kakkabbe	do.	do.
Kodampala	do.	do.

The boats must be well balanced and executed properly and should be ready for delivery by 30—4—28. They will not be accepted unless they are passed by the undersigned or any officer authorised by him in that behalf.

The boats should be delivered at the ferries for which they are intended.

The tender should specify the price at which the boat would be delivered at the ferry and be addressed to the District Magistrate of Coorg, the cover being sealed and registered, and superscribed with the words, "Tender for the supply of boat for the........ferry." Tenders should reach this office on or before the 15th March 1928 accompanied by a remittance of Rs. 25/-.

The right of accepting or rejecting any tender without assigning any reason what-so-ever is reserved.

(Sd.) K. CHENGAPPA,
District Magistrate.

ಚೀಫ್ ಫಾರೆಸ್ಟ್ ಆಫೀಸ್,
ತಾ. 25ನೇ ಜನವರಿ 1928.

ನೋಟೀಸು.

ಮಡಿಕೇರಿ ಪ್ಲಾಂಟೇಶನಿನ ಡಿಪೋ ಬ್ಲಾಕಿನಲ್ಲಿ ಕಡಿದು ತಯಾರಿಸಿರುವ 73 ಸಿವುದೆ ಲಾಟುಗಳನ್ನು 1928ನೇ ಇಸವಿ ಫೆಬ್ರವರಿ ತಾರೀಖು 12ನೇ ಭಾನುವಾರ ಬೆಳಗ್ಗೆ 9 ಗಂಟೆಗೆ ಸದರಿ ಜಾಗದಲ್ಲಿ ಹರಾಜು ಮಾಡಲಾಗುವುದು. ಖರೀದಿದಾರರು ಸದರಿ ದಿನ ಹರಾಜು ಸ್ಥಳಕ್ಕೆ ಬಂದು ಸವುದೆಯನ್ನು ಜಡ ದರಕಾಸ್ತು ಮೂಲಕ ಪಡೆದುಕೊಳ್ಳಬಹುದು. ಮಿಕ್ಕಿನ ಸಂಗತಿಗಳನ್ನು ಹೆಡ್ಡಾಫೀಸಿನಿಂದ ತಿಳಿದುಕೊಳ್ಳಬಹುದು.

ಸಿ. ಎಂ. ಕುಶಾಲಪ್ಪ,
(ಚೀಫ್ ಫಾರೆಸ್ಟ್ ಆಫೀಸರಿಗಾಗಿ.)

ಬ್ರಿಟಿಷರು ಅಥವಾ ಬೇರೆ ಯೂರೋಪರೂ ಹಿಂದೂ ದೇಶವನ್ನು ಆಳಲು ಯೋಗ್ಯರೇ?

(ಎನೇ ಪುಟದಿಂದ ಮುಂದುವರಿದುದ್ದು.)

ಆಲ್ಫನ್ಸ್ ಹಕ್ಸ್ಲೀ ಎಂಬವರು ಹೇಳುವುದೇನೆಂದರೆ—"ಬ್ರಿಟಿಷ್ ಯುವಕನೊಬ್ಬನು ಹಿಂದೂದೇಶಕ್ಕೆ ಹೋದ ಕೂಡಲೇ ಅವರ ಜಾತಿಯ ಒಂದು ಗುಂಪಿಗೆ ಮೆಂಬರನಾಗುವನು. ಅವನ ಕೈಕೆಳಗೆ ಕೆಲವು ಹಿಂದೂ ಆಳುಗಳು ಸಿಕ್ಕುವರು. ಅವರನ್ನು ಬಹಳ ಕೀಳಾಗಿ ಕಂಡು ಯಾವಾಗಲೂ ಗದರಿಸುವನು. ಹಿಂದೂದೇಶದಲ್ಲಿರತಕ್ಕ ಮುಸ್ಲಿಂರ ಇಪ್ಪತ್ತು ವಿ.ಲಿಯ ಜನರೂ ಕೂಡ ತನಗಿಂತ ಕೀಳೆಂತ ಭಾವಿಸಿಕೊಳ್ಳುವನು. ಅವರಲ್ಲಿ ಮಹಾರಾಜನಿರಲಿ, ದೊಡ್ಡ ವಿದ್ವಾಂಸನಾಗಿರಲಿ, ಬ್ರಿಟಿಷ್ ಡಿಗ್ರಿಗಳನ್ನು ಪಡೆದವನಿರಲಿ, ಅವರೆಲ್ಲರಿಗಿಂತಲೂ ತಾನೇ ಮೇಲೆಂಬ ಭಾವನೆಯು ಅವನಲ್ಲಿರುತ್ತದೆ. ಯಾತಕ್ಕೆಂದರೆ—ಅವನ ಚರ್ಮಮಾತ್ರ ಬೆಳ್ಳಗಿದೆ. ಇನ್ನೇನೂ ವಿಶೇಷವಿಲ್ಲ. ಇಂಡಿಯಾದಲ್ಲಿ ಶ್ರೇಷ್ಠತ್ವಕ್ಕೆ ಚರ್ಮವೇ ಕಾರಣ."

ಬ್ರಿಟಿಷ್ ಪಾರ್ಲಿಮೆಂಟಿನ ಲೇಬರ್ ಮೆಂಬರರಾದ ಜಾರ್ಜ್ ಲ್ಯಾನ್ಸ್‌ಬರಿಯವರು ಈ ರೀತಿಯಲ್ಲಿ ತಮ್ಮ ವ್ಯಸನವನ್ನು ಸೂಚಿಸುವರು.

"ಇಂಡಿಯಾ ದೇಶದಲ್ಲಿ ಮುನ್ನೂರು ವಿ.ಲಿಯಕ್ಕಿಂತಲೂ ಹೆಚ್ಚು ಜನರಿದ್ದಾರೆ. ನಮ್ಮ ಬ್ರಿಟಿಷ್ ದ್ವೀಪದಲ್ಲಿ ನಲ್ವತ್ತು ವಿ.ಲಿಯ ಜನರಿದ್ದಾರೆ. ಹಿಂದೂ ದೇಶದವರಿಗೆ ಅವರ ದೇಶದ ವಿಷಯ ಗೊತ್ತಿರುವುದಕ್ಕಿಂತ ಹೆಚ್ಚಾಗಿ ನಮಗೆ ಗೊತ್ತಿದೆಯೆಂದು ನಾವು ಭಾವಿಸುತ್ತೇವೆ. ಇದಕ್ಕಿಂತ ದೊಡ್ಡ ಗರ್ವ ಇನ್ನೇನಿದೆ? ನಮಗೆ ಬಿಳಿ ಚರ್ಮವಿರುವುದರಿಂದ ನಾವು ಸೂರ್ಯನ ಶಾಖದಿಂದ ಕಪ್ಪಾದ ಚರ್ಮವುಳ್ಳ ಹಿಂದೂದೇಶದವರಿಗಿಂತ ಹೆಚ್ಚು ಮೆದುಳು ಶಕ್ತಿಯುಳ್ಳವರೆಂದು ಭಾವಿಸುತ್ತೇವೆ. ಹಿಂದೂಗಳನ್ನು ನೋಡಿದ ಕೂಡಲೇ ನನಗೆ ನಾಚಿಕೆಯುಂಟಾಗುತ್ತದೆ. ಅವರಿಗಿಂತಲೂ ಹೆಚ್ಚಾಗಿ ಇಂಡಿಯಾದ ವಿಷಯ ತಿಳಿದುಕೊಳ್ಳಲು ನನಗೆ ಸಾಧ್ಯವಿದೆಯೇ?"

ಹಿಂದೂ ದೇಶದಲ್ಲಿರುವ ಬ್ರಿಟಿಷ್ ಆಫೀಸರುಗಳ ಪೈಕಿ ಬಹು ಸ್ವಲ್ಪ ಜನರು ಮಾತ್ರ ಇಂಡಿಯಾ ದೇಶದ ಭಾಷೆಗಳನ್ನು ಬಲ್ಲವರಾಗಿರುವರು. ಇಂಗ್ಲೆಂಡಿನ ಜೋನ್‌ಬ್ರೈಟ್ ಎಂಬ ಭಾಷಣಕಾರರು ಪಾರ್ಲಿಮೆಂಟಿನಲ್ಲಿ ಹೇಳಿರುವುದೇನೆಂದರೆ—

"ಇಂಡಿಯಾ ದೇಶದ ವೈಸರಾಯನಿಗೆ ಆ ದೇಶದ ವಿಷಯ ಏನೊಂದೂ ಗೊತ್ತಿರುವುದಿಲ್ಲ. ಆ ದೇಶದ ಭಾಷೆಗಳಲ್ಲವೂ ಅವನಿಗೆ ಪರದೇಶದ ಭಾಷೆಗಳೇ. ಅವನು ಯಾವಾಗಲೂ ಬ್ರಿಟಿಷ್ ಆಫೀಸರುಗಳ ಸಂಗಡಲೇ ಇದ್ದುಕೊಂಡು ಹಿಂದೂ ದೇಶದ ವಿಷಯ ಹೆಚ್ಚೇನೂ ತಿಳಕೊಳ್ಳುವುದಿಲ್ಲ. ಅವನಿಂದ ನಡೆಯಲ್ಪಡತಕ್ಕ ಕಾರುಬಾರುಗಳು ಮನುಷ್ಯ ಮಾತ್ರದವನಿಂದ ಸಾಧ್ಯವಾಗಲಾರದಷ್ಟು ದೊಡ್ಡವಾಗಿವೆ. ನನ್ನ ಮನಸ್ಸಿನಲ್ಲಿ ಯಾವನಾದರೂ ಒಬ್ಬನೇ ಮನುಷ್ಯನಿಂದ ಆ ದೇಶದ ಸರಕಾರವನ್ನು ನಡೆಸಲು ಎಂದಿಗೂ ಸಾಧ್ಯವಿಲ್ಲವೆಂದು ಖಂಡಿತವಾಗಿ ಕಂಡುಬರುತ್ತಿದೆ."

ಈಗ ವೈಸರಾಯರಾಗಿರುವ ಲಾರ್ಡ್ ಅರ್ವಿನರು ಇಂಡಿಯಕ್ಕೆ ಹೋದಾಗ ಇಂಗ್ಲೆಂಡಿನ ಪಾರ್ಲಿಮೆಂಟಿನ ಮೆಂಬರರಾದ ಕರ್ನಲ್ ವೆಡ್ಜ್‌ವುಡ್‌ರವರು ಅವರಿಗೆ ಲೇವಡಿ ಮಾಡಿ ಹೀಗೆಂದು ಬರೆದಿದ್ದರು.

"ಅವನಿಂದ (ಲಾರ್ಡ್ ಅರ್ವಿನರಿಂದ) ಹಿಂದೂ ದೇಶದಲ್ಲಿ ಬಹಳ ಅನುಕೂಲವಾದೀತು. ಅವರು ಬಹಳ ಕರ್ತವ್ಯನಿರತರು. ಆದರೆ ಹಿಂದೂ ದೇಶದ ವಿಷಯ ಅವರಿಗೆ ಏನೊಂದೂ ಗೊತ್ತಿಲ್ಲ. ಅದ್ದರಿಂದ ಬ್ರಿಟಿಷ್ ಉದ್ಯೋಗಸ್ಥರ ಸೂಚನಾನುಸಾರವೇ ನಡೆದುಕೊಂಡಾರು. ಅವರು ಯಾವಾಗಲಾದರೂ ಇಂಡಿಯಾದ ವಿಷಯ ಚರ್ಚೆಗಳು ನಡೆಯುವ ಮೀಟಿಂಗುಗಳಿಗೆ ಹೋದವರೇ ಅಲ್ಲ."

ಈ ರೀತಿಯಾಗಿ ವರ್ಣಿಸಲ್ಪಟ್ಟ ಒಬ್ಬನು ಒಂದು ದೊಡ್ಡ ದೇಶವನ್ನು ಆಳಲು ಕಳುಹಿಸಲ್ಪಟ್ಟಿರುವನು!

ಈ ವಿಷಯದಲ್ಲಿ ಗೋಖಲೆಯವರು ಹೇಳಿದ್ದುದೇನೆಂದರೆ—

"ಇಂಡಿಯಾ ಸರಕಾರವು ಬರೀ ಗವರ್ನರ್ ಜನರಲ್ ಮತ್ತು ಗವರ್ನರುಗಳಿಂದಲೇ ನಡೆಯುತ್ತಿದೆ. ಇಂಥಾ ಗವರ್ನರುಗಳು ಐದು ವರ್ಷಗಳಿಗೊಂದಾವೃತ್ತಿ ಬದಲಾವಣೆಯಾಗುವುದರಿಂದ ಅವರಿಗೆ ಏನೂ ಅನುಭವವಿಲ್ಲದೆ ಸರಕಾರವು ಬಹಳ ಹೀನಸ್ಥಿತಿಯಲ್ಲಿ ನಡೆಯುತ್ತಿದೆ."

ಡಾಕ್ಟರ್ ರೂತರ್‌ಫರ್ಡ್‌ರವರು ಇಂಡಿಯಾ ಸರಕಾರವು ಬರೀ ಬ್ರಿಟಿಷರನ್ನು ಸಾಕಲಿಕ್ಕಾಗಿದೆಯೆಂದೂ ಹಿಂದೂ ದೇಶದವರ ಅಭಿವೃದ್ಧಿಗೆ ಏನೂ ಸಹಾಯಕರವಾಗಿಲ್ಲವೆಂದೂ ಹೇಳಿ ಈ ಕೆಳಗಿನ ಕಾರಣಗಳನ್ನು ಕೊಡುವರು.

"ಬಡ ಜನರ ವಿದ್ಯೆಯ ವಿಷಯದಲ್ಲಿ ನಿಗ ಕೊಡುವುದಿಲ್ಲ. ಗ್ರಾಮಗಳಲ್ಲಿ ವೈದ್ಯಕೀಯ ಸಹಾಯವಿಲ್ಲ. ದೇಶದಲ್ಲಿ ಶೇಕಡ 3 ಇಲ್ಲ. ಬಡ ಜನರಿಗೆ ಉಳುಕೊಳ್ಳಲು ಮನೆಯಿಲ್ಲ. ರೈತರನ್ನು ಹಣಗಾರರ ಬಾಧೆಯಿಂದ ತಪ್ಪಿಸುವುದಿಲ್ಲ. ವ್ಯವಸಾಯಗಾರರಿಗೆ ಅನುಕೂಲವಾದ ಬೇಂಕುಗಳಿಲ್ಲ. ವ್ಯವಸಾಯವು ಅಭಿವೃದ್ಧಿಯನ್ನು ಹೊಂದುವುದೇ ಇಲ್ಲ. ಇಂಡಿಯಾ ದೇಶದ ಕೈಗಾರಿಗೆಗಳಿಗೆ ಏನೂ ಉತ್ತೇಜನವಿಲ್ಲ. ದೇಶದ ರೈಲ್ವೆ, ಟ್ರೇಮ್‌ವೆ ಮೊದಲಾದ ಇಲಾಖೆಗಳು ದೇಶಸ್ಥರದಲ್ಲ. ಇಂಡಿಯಾ ದೇಶದ ನಾಣ್ಯದ ಚಲಾವಣೆಯು ಯಾವಾಗಲೂ ಬ್ರಿಟಿಷರಿಗೆ ಲಾಭವಾಗುವಂತೆಯೇ ನಡೆಯುತ್ತಿದೆ.

ಇಂಥಾ ಸ್ಥಿತಿಯಲ್ಲಿ ಅವರು ಕೆಳಗೆ ಹೇಳುವ ಮಾತಿಗೆ ನಾವೇನೂ ಆಶ್ಚರ್ಯ ಪಡಬೇಕಾದ್ದಿಲ್ಲ.

"ಬ್ರಿಟಿಷ್ ಸರಕಾರವು ಈಗ ಇಂಡಿಯಾ ದೇಶದಲ್ಲಿ ನಡೆಯುತ್ತಿರುವಂತೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಆಳಿ ಪ್ರಯೋಜನ ಹೊಂದುವುದು, ಭೂಲೋಕದಲ್ಲೆಲ್ಲಾ ಅತ್ಯಂತ ನೀಚ ಮತ್ತು ಕೀಳು ತರದ ಸರಕಾರದ ಪ್ರಕ್ರಿಯಾಗಿದೆ."

ಲಾರ್ಡ್ ಮೆಕಾಲೆಯವರು ಹೇಳಿದಂತೆ, ಒಂದು ಜನಾಂಗವು ಇನ್ನೊಂದನ್ನು ಆಳುತ್ತಿರುವುದೇ ಭೂಲೋಕದಲ್ಲಿ ಅತ್ಯಂತ ದೊಡ್ಡ ಕ್ರೂರ ಕೆಲಸವಾಗಿದೆ.

ವಿಲ್‌ಫ್ರೆಡ್ ಸ್ಕೇವೆನ್ ಬ್ಲಂಟ್ ಎಂಬ ಬ್ರಿಟಿಷ್ ಕನ್ಸರ್‌ವೇಟಿವ್ ಪಾರ್ಟಿಯ ಮೆಂಬರನೊಬ್ಬನು ಇಂಡಿಯಾ ದೇಶಕ್ಕೆ ಹೋಗಿ, ಅಲ್ಲಿಯ ಸರಕಾರವನ್ನು ಪರೀಕ್ಷಿಸಿ, ಬ್ರಿಟಿಷರು ಇಂಡಿಯಾ ದೇಶವನ್ನು ಸೂರೆಗೊಳ್ಳುತ್ತಿರುವರೆಂದೂ, ಕೆಲವು ಕಾಲದನಂತರ ಬಡತನವು ಹೆಚ್ಚಿ ದೇಶದಲ್ಲಿ ತಿನ್ನಲಿಕ್ಕೆ ಏನೂ ಆಹಾರವಿಲ್ಲದೆ, ಜನರು ಒಬ್ಬರನ್ನೊಬ್ಬರು ತಿನ್ನುವಕಾಲವು ಬಂದೀತೆಂದು ಬರೆದಿಟ್ಟು ಹೋಗಿದ್ದಾನೆ.

ಇಂಡಿಯಾ ದೇಶದಲ್ಲಿ ಬಹಳ ಗಲಾಟೆಗಳಿರುವುದರಿಂದಲೂ, ಇಂಡಿಯಾ ದೇಶವನ್ನಾಳುವುದು ಬಹಳ ಕಷ್ಟವಾದುದರಿಂದಲೂ ತಾವು ಅದನ್ನು ಆಳುತ್ತಿದ್ದೇವೆಂದು ಬ್ರಿಟಿಷರು ವಾದಿಸುತ್ತಿರುವರು. ಇದು ಎಂಥಾ ತರ್ಕ! ಒಂದು ಕೆಲಸವು ಕಷ್ಟವಾಗಿದೆಯೆಂದು ಅದನ್ನು ಏನೂ ತಿಳಿಯದ ಪರದೇಶದವರ ಕೈಗೆ ಕೊಡುವುದೇ? ಒಳ್ಳೇ ನ್ಯಾಯ! ಹಾಗಾದರೆ ಬ್ರಿಟಿಷರು ಯಾಕೆ ತಮ್ಮ ಸರಕಾರವನ್ನು ಬೇರೆ ಜನಾಂಗದವರಿಗೆ ಒಪ್ಪಿಸುವುದಿಲ್ಲ?

ಆಯಾಯ ದೇಶವನ್ನು ಆಳಲು ಆಯಾಯ ದೇಶದವರೇ ಹುಟ್ಟಿನ ಹಕ್ಕುದಾರರು. ಯಾತಕ್ಕೆಂದರೆ—ಅವರಿಗೇನೆ ಅವರ ದೇಶದ ಚರಿತ್ರೆ, ಆಚಾರ ಪದ್ಧತಿ, ನಡೆನುಡಿ, ಭಾಷೆಗಳು ಚೆನ್ನಾಗಿ ಗೊತ್ತಿರುವುವು. ಅವರ ದೇಶಕ್ಕೆ ಯಾವುದು ಹಿತ, ಯಾವುದು ಅಹಿತವೆಂಬ ವಿಷಯವನ್ನು ಆ ದೇಶದವನೇ ಚೆನ್ನಾಗಿ ಬಲ್ಲನೇ ಹೊರತು ಬೇರೆಯವರಿಂದ ಕಲಿತುಕೊಳ್ಳಲೂ ಕೂಡ ಸಾಧ್ಯವಿಲ್ಲ. ಇದೇ ಕಾರಣದಿಂದ ಇಂಗ್ಲಿಷ್ ಜನರು ತಮ್ಮ ದೇಶವಾದ ಇಂಗ್ಲೆಂಡನ್ನು ಬೇರೆ ಎಲ್ಲರಿಗಿಂತಲೂ ಚೆನ್ನಾಗಿ ಆಳಲು ಶಕ್ತರಾಗಿರುವರು. ಇದೇ ಕಾರಣದಿಂದಲೇ ಜರ್ಮನರು, ಜಪಾನರು ಅಥವಾ ಚೈನಾ ದೇಶದವರು ತಮ್ಮ ತಮ್ಮ ದೇಶಗಳನ್ನಾಳಲು ಅತ್ಯಂತ ಯೋಗ್ಯರಾಗಿರುವರು. ಇದೇ ಕಾರಣದಿಂದಲೇ ಇಂಡಿಯಾ ದೇಶದವರು ತಮ್ಮ ದೇಶವನ್ನಾಳಲು ಬ್ರಿಟಿಷರಿಗಿಂತಲೂ ಮತ್ತು ಬೇರೆ ಜನಾಂಗದವರಿಗಿಂತಲೂ ಹೆಚ್ಚು ಯೋಗ್ಯರಾಗಿರುವರು.

ನೋಟೀಸು.

ಕೊಡಗು ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರ ಆಫೀಸಿನಿಂದ.

ಈ ಆಫೀಸಿಗೆ ಇದೇ ಫೆಬ್ರವರಿ ಅಖೈರು ಒಳಗೆ ಈ ಕೆಳಗೆ ಕಂಡ ಮರದ ಸಾಮಾನುಗಳನ್ನು ಮಾಡಿ ಒಪ್ಪಿಸುವವರು ಬೇಕಾಗಿದ್ದಾರೆ. ಮರದ ಸಾಮಾನುಗಳ ಸಮೂನೆಗಳನ್ನು ಈ ಆಫೀಸಿಗೆ ಬಂದು ನೋಡಿಕೊಂಡು ಹೋಗಬಹುದು. ಹಾಗೆ ಒದಗಿಸಲು ಇಷ್ಟಪಡುವವರು ಪ್ರತಿ ಒಂದು ಸಾಮಾನಿನ ದರವನ್ನು ನಮೂದಿಸಿ ಈ ಆಫೀಸಿಗೆ ಅರ್ಜಿ ಬರೆದುಕೊಳ್ಳತಕ್ಕದ್ದು. ಸದರಿ ಅರ್ಜಿಗಳು ಈ ಆಫೀಸಿಗೆ ಇದೇ ಜನವರಿ 31ರ ವಳಗೆ ತಲಪತಕ್ಕದ್ದು. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾದೀತು. ಅರ್ಜಿದಾರರ ಅರ್ಜಿಯನ್ನು ಕಾರಣ ನಮೂದಿಸದೇ ತಿರಸ್ಕರಿಸುವ ಹಕ್ಕು ಸಬ್ ಅಸಿಸ್ಟಾಂಟರೇ ಇಟ್ಟುಕೊಂಡಿರುತ್ತಾರೆ. ಸದರಿ ಕೆಲಸಕ್ಕೆ ಉಪಯೋಗಿಸುವ ಮರದ ಜಾತಿಯನ್ನು ಅರ್ಜಿಯಲ್ಲಿ ಕಾಣಿಸತಕ್ಕದ್ದು.

1. ಕಿಂಡರ್‌ಗಾರ್ಟನ್ ಬೆಂಚುಗಳು
2. ಒರಗುವ ಬೆಂಚುಗಳು
3. ಡೆಸ್ಕುಗಳು
4. ಕಾಲುಗಳಿಂದ ಕೂಡಿದ ಕಪ್ಪು ಹಲಗೆಗಳು
5. ಮರದ ಕುರ್ಚಿಗಳು
6. ಮೇಜುಗಳು

ಪಿ. ಸಿ. ಉತ್ತಯ್ಯ,
ಸ. ಅ. ಇನ್‌ಸ್ಪೆಕ್ಟರ್.

ವರ್ತಮಾನ ಸಂಗ್ರಹ.

ಒಳದೇಶ

"ಕೊಡಗು" ಲಿಮಿಟೆಡ್ ಕಂಪೆನಿಯ ಡೈರೆಕ್ಟರುಗಳ ಮೀ[illegible]ಗು ಬರುವ ತಿಂಗಳು 2 ರಲ್ಲಿ ವೀರರಾಜಪೇಟೆ ಬಾಡಭಂಡಾರ ಹಾಲ್‌ನಲ್ಲಿ ನಡೆಯಲಿಕ್ಕಿದೆ.

ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಮಂಡಳಿ ಮೀಟಿಂಗು ತಾ. 2—2—28ರಲ್ಲಿ ಬೆಳಿಗ್ಯೆ 11½ ಗಂಟೆಗೆ [illegible]ರಾಜಪೇಟೆ ಪಿದ್ದರ್ ಸ್ಟೋರ್ ಮಹಡಿಯಲ್ಲಿ ನಡೆಯು[illegible]ವು.

ವೀರರಾಜಪೇಟೆ ಹೈಸ್ಕೂಲಿನ 'ಸ್ಕೂಲ್ ಡೇ' ಉತ್ಸವವು ತಾ. 28ನೇ ಶನಿವಾರ ದಿನ ಮುನ್ಸೀಫರಾದ ಮ. ಗಿ. [illegible]ನ್. ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಮೋಹನ್ ಸ್ಕೂಲ ಹಾಲಿನಲ್ಲಿ ಜರಗುವದು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ 51 ವಿದ್ಯಾರ್ಥಿಗಳ[illegible] 35 ಹುಡುಗರನ್ನು, ಕಾನ್ವೆಂಟ್ ಹೈಸ್ಕೂಲಿನಿಂದ [illegible]ವಿದ್ಯಾರ್ಥಿನಿಯರಲ್ಲಿ ಎಲ್ಲರನ್ನೂ ಬರುವ ಸ್ಕೂಲ್ ಫೈನಲ್ [illegible]ಕ್ಷೆಗೆ ಕೂಡಲು ಆರಿಸಿರುವರು.

ಮಡಿಕೇರಿ ಕೂಡವರ ಅಸೋಸಿಯೇಷನ್ ಊಟ ಒಂದು ಈ [illegible] 21ನೇ ರಾತ್ರಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆ[illegible]ತು. ಅಮಲು ಪದಾರ್ಥವೇನೂ ಇರಲಿಲ್ಲ. ಸುಮಾರು 50 ಕ್ಕಿಂತ ಹೆಚ್ಚು ಜನರು ನೆರೆದಿದ್ದರು.

ಸೈಮನ್ ಕಮಿಷನನ್ನು ಬಹಿಷ್ಕರಿಸುವ ವಿಷಯ [illegible]ರ್ಣಯಿಸಲು ಜಮೀನ್ದಾರರ ಸಂಘದ ವಿಶೇಷ ಮಹಾಸಭೆಯು [illegible]ವರಿ ತಾ. 2ನೇ ಗುರುವಾರ ಮಧ್ಯಾಹ್ನ 2 ಗಂಟೆಗೆ ವೀ[illegible]ಪೇಟೆ ಬಿಲ್ಡಿಂಗ್ ರೂಮಿನ ಒಳಿ ಮೈದಾನದಲ್ಲಿ ನೆರವೇ[illegible].

ಕೊಡಗಿನ ಎಗ್ಸಿಕ್ಯೂಟಿವ್ ಇಂಜಿನಿಯರಾದ ಮ[illegible]ಫ್. ಬ್ಯಾರೆಟ್‌ರವರು ಮೂರು ತಿಂಗಳು ರಜೆಯಲ್ಲಿ ಹೋ[illegible]ವದರಿಂದ ಉತ್ತರ ಕೊಡಗಿನ ಸಬ್ ಡಿವಿಜನ್ ಆಫೀಸರಾ[illegible]ಮ್. ಸಿ. ರಾಜಗೋಪಾಲ ಅಯ್ಯಂಗಾರರು ಇಂಜಿನೀಯ[illegible]ಕೆಲಸವನ್ನು ನೋಡುತ್ತಿರುವರು.

ಸೆಯಿಂಟ್ ಜಾನ್ ಎಂಬ್ಯುಲೆನ್ಸ್ ಎಸೋಸಿಯೇಷನ [illegible]ತ್ತು ಇಂಡಿಯನ್ ರೆಡ್ ಕ್ರಾಸ್ ಸಂಘದ ಸ್ಥಳೀಯ ಶಾ[illegible]ಯ ವಾರ್ಷಿಕ ಜನರಲ್ ಮೀಟಿಂಗು ಈ ತಾ 27ರಲ್ಲಿ ಬೆ[illegible] 10 ಗಂಟೆಗೆ ಮಡಿಕೇರಿ ಸೆಕ್ರೆಟೇರಿಯೆಟ್ ಒಡ್ಡಿಯರ ಕಾ[illegible] ರೂಮಿನಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬಜೆಟ್ ಮೀಟಿಂ[illegible] ಫೆಬ್ರವರಿ ತಾ. 25ನೇ ಶನಿವಾರ ಪ್ರಾರಂಭವಾಗುವದು[illegible]. 25 ರಲ್ಲಿ ಒಡ್ಡೆಟ್ಟಿನ ಮೇಲೆ ಸಾಮಾನ್ಯ ಚರ್ಚೆಯೂ ತಾ. [illegible]ರಲ್ಲಿ ಐಟೆಂವಾರು ಚರ್ಚೆಯೂ ನಡೆಯುವದು. ಮೆಂಬ[illegible]ಗಳು ಒಡ್ಡೆಟ್ಟನ್ನು ಕುರಿತ ರಿಸಾಲ್ಯುಶನುಗಳನ್ನು ಫೆಬ್ರವರಿ 18 ರೊ[illegible] ಕಳುಹಿಸತಕ್ಕದ್ದು.

ಕಳೆದ ವಾರ ಪ್ರಕಟಿಸಿದ ಸಂಪಾಜೆಯ ಮಿಷನ್ [illegible] [illegible]ಯಲ್ಲಿ ಅಪರಾಧಿಯೆಂದು ಊಹಿಸಲ್ಪಟ್ಟಿರುವ, ಪರಾ[illegible]ಗಿದ್ದ ಬೆಳ್ಳಿಯಂಡ [illegible] ಪೊಲೀಸಿನವರು [illegible] [illegible]ದ ಕೆಲವು ಮಹನೀಯರ ಸಹಾಯದಿಂದ [illegible]ಯ ಸಮೀಪ ಮಲೆಯಾಳ ಜಿಲ್ಲೆಯಲ್ಲಿ ಹಿಡಿದು ಕೈದು [illegible] ತಂದಿರುವರೆಂದು ತಿಳಿದು ಬರುತ್ತದೆ.

ಈ ತಾ. 9 ರಲ್ಲಿ ಕಂಡಂಗಾಲ ಗ್ರಾಮದವರು ಬೇಟೆ [illegible]ಡುತ್ತಿದ್ದಾಗ ವಿಶೇಷವಾದ ಒಂದು ದೊಡ್ಡ ಕಾಡು ಹಂ[illegible] ಗುಂಡು ಹೊಡೆದಲ್ಲಿ ಅದು ಬಟ್ಟಗಾರಿರ ಸೈತೆ ಮಗನ [illegible]ಡ ಚಂಗಪ್ಪನವರಿಗೂ ಮತ್ತು ಒಲ್ಲಿಚೆಂಡ ಕರುಂಬಯ್ಯ[illegible] [illegible]ರಿಗೂ ತಿವಿದು ಗಾಯ ಮಾಡಿದ್ದರಿಂದ ಅವರು ಆಸ್ಪತ್ರೆಯಲ್ಲಿ [illegible] ಹೊಂದುತ್ತಿರುವರೆಂದು ಒಂದು ವಾರ್ತೆ.

ಇಂದಿನಿಂದ ಮಡಿಕೇರಿಯಿಂದ ವೀರಾಜಪೇಟೆಗೆ ಬಸ್ಸ[illegible] [illegible] ಇದೇ ಮಂತೆ ಮಡಿಕೇರಿಯ ವಿಕ್ಟೋರಿಯ ಮೋಟಾರ [illegible] ಗ್ಯಾರೇಜಿನ ಮೆ[illegible] ಮಾಲೀಕರವರ ಲೈಸನ್ಸ್ [illegible] [illegible]. ಈ ಬಸ್ಸು ಮಧ್ಯಾಹ್ನ 2 ಗಂಟೆಗೆ ಮಡಿಕೇ[illegible]ಯಿಂದ ಹೊರಟು ಸಾಯಂಕಾಲ 7 ಗಂಟೆಗೆ [illegible] [illegible], ಅಲ್ಲಿಂದ ಮರುದಿನ ಬೆಳಿಗ್ಯೆ 6 ಗಂಟೆಗೆ ಹೊರಟು [illegible] ಬೆಳಿಗ್ಯೆ 10—30 ಗಂಟೆಗೆ ಮಡಿಕೇರಿಗೆ ಬರುವದಂತೆ

ಸೇಂಡ್ಹರ್ಸ್ಟ್ ರಾಯಲ್ ಮಿಲಿಟರಿ ಕಾಲೇಜಿಗೆ ಸೇರ[illegible] [illegible]ಕ್ಷಿಸುವವರಿಗೆ ಸಿಮ್ಲಾದಲ್ಲಿ ಏಪ್ರಿಲ್ 30ರಿಂದ ಮೇ 11ರ[illegible]ಗೆ ಪ್ರವೇಶ ಪರೀಕ್ಷೆ ನಡೆಯುವುದೆಂದೂ, ಉಮೇದ್ವಾರ[illegible] 1928ನೇ ಜುಲೈ 1ಕ್ಕೆ 18ರಿಂದ 20 ವರ್ಷದೊಳಗಿನ ಪ್ರಾ[illegible]ಯದವರಾಗಿರಬೇಕೆಂದೂ, ಉಮೇದುವಾರರು ಮಾರ್ಚ 10[illegible] ಮಡಿಕೇರಿಯಲ್ಲಿ ಕಮಿಷನರ ಮುಂದೆ ಹಾಜರಾಗತಕ್ಕದೆಂ[illegible], ಹೆಚ್ಚಿನ ಮಾಹಿತಿಯು ಕಮಿಷನರ ಆಫೀಸಿನಿಂದ ದೊರೆ[illegible]ವದೆಂದೂ ನೋಟೀಸು ಪ್ರಕಟವಾಗಿದೆ

ಈ. ತಾ 17 ರಲ್ಲಿ ವೀರರಾಜಪೇಟೆಯ ಬಸ್ಸು ಒಬ್ಬ ವ್ಯಾ[illegible]ರಿಯು ರೂ. 800 ರ ಕರೆನ್ಸಿ ನೋಟುಗಳನ್ನು ಲಕೋಟೆಯಲ್ಲಿ[illegible]ಟ್ಟು ಮುದ್ರೆ ಹಾಕಿ ಇನ್ಸೂರ್ ಮಾಡಲು ತನ್ನ ಒಬ್ಬ ಆಳಿ[illegible] ಹಸ್ತ ಪೋಸ್ಟ್ ಆಫೀಸಿಗೆ ಕಳುಹಿಸಿದಲ್ಲಿ, ಅವನು [illegible] [illegible]ಟನ್ನು ಅಡಗಿಸಿಟ್ಟು, ಬೇರೊಂದು ಲಕೋಟೆಯಲ್ಲಿ [illegible] ಒಂದು ಸಾಲಿ ಕಾರ್ಡನ್ನು ಟೀರಿ ಮುದ್ರೆ ಹಾಕಿ ಇನ್ಸ್ಯೂರ್ [illegible] ರಾತ್ರಿ [illegible] ದೂರದ ಪೋಸ್ಟ್ ಮಾಸ್ತರ

ಗೆ ಸಂಶಯ ಹುಟ್ಟಿ ಪೊಲೀಸಿನವರ ಮುಂದೆ ಅದನ್ನು ಒಡೆದು ನೋಡಿ ಈ. ನೋಟುಗಳಿಲ್ಲದ್ದನ್ನು ಕಂಡ, ಆ ಆಳನ್ನು ದಸ್ತಗಿರಿ ಮಾಡಿ ಹುಡುಕಿ ನೋಡಿದಲ್ಲಿ ಆ ವ್ಯಾಪಾರಿಯ ಅಂಗಡಿಯ ಲ್ಲಿಯೇ ಅವನು ಅಡಗಿಸಿಟ್ಟಿದ್ದ ನೋಟುಗಳು ದೊರಕಿವೆಂದೂ, ಕೇಸು ಪೊಲೀಸಿನ ವಿಚಾರದಲ್ಲಿದೆಯೆಂದೂ ವರ್ತಮಾನ.

(1) ಕಾವೇರಿ ನದಿ ಮತ್ತು ಅದರ ಉಪನದಿಗಳಾದ [illegible] [illegible] [illegible], [illegible], [illegible] ಹೊಳೆ, [illegible] [illegible], [illegible]. (2) [illegible] ನದಿ ಮತ್ತು ಅದರ ಉಪನದಿಗಳಾದ ಪಟ್ಟಿ ಹೊಳೆ, [illegible] ಹೊಳೆ, [illegible] ಹೊಳೆ, [illegible] ಹೊಳೆ, (3) ಸಂಪಾಜೆ ನದಿ ಮತ್ತು ಅದರ ಉಪನದಿಗಳಾದ [illegible] ಹೊಳೆ, [illegible] ಹೊಳೆ, [illegible] ಹೊಳೆ, [illegible] ಹೊಳೆ (4) ಬರಪೊಳೆ ನದಿ, ([illegible] ಹೊಳೆ, [illegible] ಹೊಳೆ) ಮತ್ತು [illegible] ಉಪನದಿಗಳಾದ [illegible] ಹೊಳೆ, [illegible] ಹೊಳೆ, [illegible] ಹೊಳೆ, [illegible] ಹೊಳೆ—ಈ ನದಿಗಳಲ್ಲಿ 1928ನೇ ಜನವರಿ ತಾ 16 ರಿಂದ ಜೂನ್ 30ರ ವರೆಗೆ ಬಲೆಯಿಂದ ಮೀನು ಹಿಡಿಯಕೂಡದೆಂದು ಚೀಫ್ ಕಮಿಷನರು ಎಂದಿನಂತೆ ಗಜೆಟ್ಟಿನಲ್ಲಿ ನೋಟೀಸು ಪ್ರಕಟಿಸಿರುವರು.

ಹಿಂದೂದೇಶ.

[illegible] [illegible] [illegible] [illegible] ಬಹುಮತದಿಂದ [illegible] ಸಬ್ಜೆಕ್ಟ್ಸ್ ಕಮಿಟಿಯಲ್ಲಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಠರಾವು ಮಂಜೂರಾಗಿದೆ.

[illegible] [illegible] [illegible] [illegible] ಹಿಂದೀಯರಿಗೆ ತುಂಬಾ ಅತೃಪ್ತಿಕರವಾಗಿದ್ದು, [illegible] [illegible] [illegible] [illegible] ಮಧ್ಯಪ್ರಾಂತ್ಯದ [illegible] ಕೌನ್ಸಿಲಿನಲ್ಲಿಯೂ ಮದ್ರಾಸು ಕೌನ್ಸಿಲಿನಲ್ಲಿಯೂ ಠರಾವುಗಳು [illegible].

ಇಂದಿನ [illegible] ಮಹಾರಾಜರ ಸಹೋದರಿಯು ಈ ತಾ 14 ರಲ್ಲಿ [illegible] [illegible] [illegible] [illegible] [illegible] ಮಹಾರಾಜರವರ ಮದುವೆಯು [illegible] [illegible] [illegible] ಎಲ್ಲಿ [illegible] ಸುದ್ದಿ.

ಮದ್ರಾಸಿನ [illegible] [illegible] ಸೈಮನ್ ಕಮಿಷನನ್ನು ಬಹಿಷ್ಕರಿಸುವ [illegible] ಒಪ್ಪಿರುವರು. ಅಲ್ಲಿಯ ಮಂತ್ರಿಗಳು [illegible] [illegible] ಅವರ ಮೆಂಬರುಗಳು [illegible] [illegible] [illegible] [illegible] [illegible] [illegible].

[illegible] [illegible] [illegible] [illegible] [illegible] [illegible] ಮತ್ತು [illegible] [illegible]. [illegible] [illegible]. [illegible] [illegible] ತಾ. [illegible] ರಲ್ಲಿ ಮುಷ್ಕರ ಪ್ರಾರಂಭಿಸಿದ್ದರು. ಅವರ [illegible] [illegible] [illegible] ಒಪ್ಪಂದಕ್ಕೆ ಬಂದು [illegible] [illegible] [illegible].

[illegible] ಕಾಂಗ್ರೆಸ್ ಮತ್ತು ಕಾಲೇಜು [illegible] [illegible] [illegible] [illegible] [illegible] [illegible] [illegible] [illegible] ಫೆಬ್ರವರಿ ತಾ 3ರಲ್ಲಿ [illegible] [illegible] [illegible] [illegible], [illegible], [illegible], [illegible], [illegible], [illegible], ಪೂನಾ, [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಹಲವು [illegible] [illegible] [illegible] [illegible] [illegible].

[illegible] [illegible] [illegible]!

[illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] 40 ವರ್ಷಗಳಿಂದಲೂ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]. [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]. ಇದರಿಂದ [illegible] ಪತ್ರಿಕೆಗೆ [illegible] [illegible].

[illegible]. [illegible].

ವಿದೇಶ.

[illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible].

ಅಫ್ಘಾನಿಸ್ಥಾನದ [illegible] [illegible] [illegible] [illegible] [illegible] [illegible] [illegible] [illegible] ಸ್ವಾಗತವಿತ್ತರು. ಅವರ ಇಂಗ್ಲೆಂಡು ಪ್ರವಾಸದ ವಿ[illegible] ಗಳು [illegible] [illegible] ಮಾಡಲ್ಪಡುತ್ತಿವೆ.

ನ್ಯೂಯಾರ್ಕ್ ಪಟ್ಟಣದ ಹಾಲ್‌ನಲ್ಲಿ ಮಿಸ್ ಮೇಯೋಳು ಭಾಷಣಮಾಡುತ್ತಿದ್ದಾಗ ಅದರ ಎದುರುಗಡೆಯಲ್ಲಿ ಅವಳ 'ಮದರ್ ಇಂಡಿಯಾ' ಪುಸ್ತಕವು ಸುಡಲ್ಪಟ್ಟಿತು ಎಂದು ಅದರಲ್ಲಿ ಬರೆದಿರುವ ಸಂಗತಿಗಳನ್ನು ರುಜುವಾತುಮಾಡಬೇಕೆಂದು ಕೇಳಿದ ಸಂದರ್ಭಕ್ಕೆ ಅವಳು ಒಪ್ಪಲಿಲ್ಲವೆಂದೂ ವರ್ತಮಾನ.

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ವ್ಯಾಪಾರದಲ್ಲಿ ಸ್ಪರ್ಧಿಸಿ ಬೇರೆ ಜನಾಂಗಗಳನ್ನು ಹಿಂದಕ್ಕೆ ಹಾಕಲು ಪ್ರಯತ್ನಿಸುತ್ತಿರುವದರಿಂದ ಅದು ಎಂದಿಗಾದರೂ ಈಗ ಯುದ್ಧದ ಸೂಚನೆಯಾಗಿದೆಯೆಂದು ನ್ಯೂಯಾರ್ಕ್ [illegible] [illegible] [illegible] ಸೂಚಿಸಿರುವದೆಂದು ಕೆಲವರು ಹೇಳುತ್ತಿರುವದು ಪೂರಾ ಸುಳ್ಳೆಂತಲೂ, ಅದು ತಂಟೆಯ ಮಾತೆಂತಲೂ ಅಲ್ಲಿಯ ಸೆನೇಟರ್ ಬೋರ್‍ರಾರವರು ಅಲ್ಲಗಳೆದಿರುವರು.

ಇಂಡಿಯಾವನ್ನು ಬ್ರಿಟಿಷ್ ಪಾರ್ಲಿಮೆಂಟೀ ಆಳಬೇಕು, ಇಲ್ಲವೆ ಹಿಂದೀಯರಿಗೆ 'ಹೋಮ್ ರೂಲ್' ಕೊಡಬೇಕಲ್ಲದೆ ಇವೆರಡಕ್ಕೂ ಮಧ್ಯದ ದಾರಿ ಇಲ್ಲವೆಂತಲೂ, ಹೋಮ್ ರೂಲ್ ಕೊಡುವದಾದರೆ ದೇಶದ ಭದ್ರತೆ, ಆಶ್ರಿತ ಸಂಸ್ಥಾನಗಳಿಗೂ, [illegible] ಸರ್ಕಾರಕ್ಕೂ ಇರುವ ಸಂಬಂಧಗಳು, ಮತ್ತು ಅಲ್ಪಸಂಖ್ಯೆಯ ಕೋಮುಗಳ ಹಿತ—ಇವುಗಳನ್ನು ಕುರಿತು ನಿಬಂಧನೆಗಳನ್ನು ರಾಯಲ್ ಕಮಿಷನು ಸೂಚಿಸತಕ್ಕದ್ದೆಂದು ಲಾರ್ಡ ಮೆಸ್ಟನ್‌ರವರು ಅಭಿಪ್ರಾಯಪಟ್ಟಿರುವರು.

ವಿನಂತಿ.

ಜಮೀನ್ದಾರರ ಸಂಘಕ್ಕೆ 12 ಜನ ಸ್ವಯಂಸೇವಕರು (ವಾಲಂಟೀಯರು) ಬೇಕಾಗಿದ್ದಾರೆ. ಈ ವರ್ಷ ಮಾರ್ಚ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಅಮ್ಮತ್ತಿಯಲ್ಲಿ ಶ್ರೀಯುತ ಮೊಣ್ಣಪ್ಪನವರ ಕೈಕೆಳಗೆ ಸಂಘದ ಖರ್ಚಿನಿಂದ ಸ್ವಯಂಸೇವಕರಾಗಿ ತರಬೇತು ಹೊಂದಲು 12 ಯುವಕರು ಬೇಕಾಗಿದ್ದಾರೆ. ಸ್ವಲ್ಪ ವಿದ್ಯಾಭ್ಯಾಸ ಹೊಂದಿರುವ ಮತ್ತು 18 ರಿಂದ 25 ವರ್ಷದೊಳಗಿನ ಪ್ರಾಯದ ಯುವಕರು ಮಾತ್ರ ಬರಕೊಳ್ಳತಕ್ಕದ್ದು.

ಅಪ್ಲಿಕೇಶನುಗಳು ಜನರಲ್ ಸೆಕ್ರೆಟರಿಯವರಿಗೆ ಫೆಬ್ರವರಿ 1ರೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಉಮೇದುವಾರರು ಫೆಬ್ರವರಿ ತಾ 2ನೇ ಗುರುವಾರ ಬೆಳಿಗ್ಯೆ 10 ಗಂಟೆಗೆ ವೀರರಾಜಪೇಟೆ ಪಿದ್ದರ್ ಸ್ಟೋರ್ ಮಹಡಿಯಲ್ಲಿ ಜನರಲ್ ಸೆಕ್ರೆಟರಿಯವರ ಮುಂದೆ ಹಾಜರಾಗತಕ್ಕದ್ದು. ದೇಶಸೇವೆ ಮಾಡಲು ಇಚ್ಛಿಸುವ ಯುವಕ ಮಹನೀಯರು ಈ ಸಮಯವನ್ನು ಕಳಕೊಳ್ಳಬಾರದಾಗಿ ಕೋರಲಾಗಿದೆ.

ಜಮೀನ್ದಾರರ ಸಂಘ, ಪಿ. ಐ. ಬೆಳ್ಯಪ್ಪ,
ಮಡಿಕೇರಿ 16—1—'28. ಜನರಲ್ ಸೆಕ್ರೆಟರಿ.

COORG FOREST DEPARTMENT, SOUTH DIVISION.

TIMBER SALE NOTICE.

Mercara, the 19th January 1928.

It is hereby notified that about 90,0 c. ft. teak, 50[illegible] c. ft. Lonne, 5000 c. ft. bili, lying in the Coorg Timber Depot at Hunsur and about [illegible]7,000 c. ft. of matti lying in Depots at Tithimathi, Kallialla and Nagerhole of the Eastern Forests of Coorg will be sold by public auction in convenient lots at Hunsur on 16—2—1928 commencing at 10 A. M. All the timber is open to inspection. For further particulars apply to the DIVISIONAL FOREST OFFICER, SOUTH COORG, M E R C A R A.

ಕೊಡಗಿನಲ್ಲಿ ಕೈನೂಲಿನ ರಾಟೆ.

ಜಮೀನ್ದಾರರ ಸಂಘದ ಕಳೆದ ಅಧಿವೇಶನದಲ್ಲಿ ಕೊಡಗಿನಲ್ಲಿ ಕೈನೂಲು ತಯಾರಿಸಿ ಬಟ್ಟೆ ಮಾಡಿ ಜನರಿಗೆ ಒದಗಿಸಿಕೊಡುವ ಪ್ರಯತ್ನ ಮಾಡುವ ಬಗ್ಗೆ ನೇಮಕವಾದ ಕಮಿಟಿಯ ಮೆಂಬರಗಳು ತಾರೀಕು 15—1—28 ನೇ ಆದಿತ್ಯವಾರ ದಿನ ತೊರೆನೂರು ಮತ್ತು ಶಿರಂಗಾಲ ಗ್ರಾಮಗಳನ್ನು ಸಂದರ್ಶಿಸಿದರು. ಏಪ್ರಿಲ್ ತಿಂಗಳಲ್ಲಿ ಮಹಾ ಸಭೆ ನಡೆದನಂತರ ಮಳೆಗಾಲ ಪ್ರಾರಂಭವಾಗಲು ಹೆಚ್ಚು ಸಮಯವಿರಲಿಲ್ಲ. ಮಳೆಗಾಲ ಕಳೆದನಂತರ ವಿಚಾರಿಸುವಲ್ಲಿ ಹೊಲದ ಕೈರಂಗಳು ಗುಡ್ಡೆಯಾದರೆ ಆಗುವ ಮುಂಚೆ ಜನರು ಈ ಕೆಲಸಕ್ಕೆ ಮನಸ್ಸು ಕೊಡಲಾರರೆಂತ ಆ ಸ್ಥಳದವರು ತಿಳಿಸಿದರು. ಈಗ ಹೋಗಿ ವಿಚಾರಿಸಿದಾಗ ಸಹ ಯುಗಾದಿಗೆ ಮುಂಚೆ ಈ ಕೆಲಸಕ್ಕೆ ಜನರು ಮನಸು ಕೊಡಲಾರರವರಿಲ್ಲವೆಂತ ಹೇಳಿದರು. ಈ ಕೆಲಸಗಾರರು ತಾವಾಗಿಯೇ ಕೆಲಸ ಮಾಡುವವರಾದರೆ ಯುಗಾದಿ ಕಳೆದ ಮೇಲಿನಲ್ಲಿ ಏನೂ ಕೆಲಸವಿಲ್ಲದೆ ಇರುವಾಗ ಮಾತ್ರ ಮಾಡುತ್ತಾರೆಂತ ಈ ಮಾತುಗಳಿಂದ ತಿಳಿಯಿತು. ಅವರಿಗೆ ಮನಸ್ಸು ಬಂದಾಗ ಕೆಲಸ ಮಾಡುವವರ ಸಂಖ್ಯೆ ಸಹ ಬಹಳ ಕಡಿಮೆಯಿದೆ. ಆದರೆ ಕೈನೂಲಿನ ರಾಟೆಯನ್ನೋ ಎಲ್ಲರ ಮನೆಯಲ್ಲಿಯೂ ಇಡಿಸಿ ಕೊಂಡು ಕಮಿಟಿ ಮೆಂಬರುಗಳಿಗೆ [illegible] ಹೇಳಿದರು. ಫ್ರೇಜರ್‌ಪೇಟೆಗೆ ಸಮೀಪವಿರುವ ಮುಳ್ಳುಸೋಗೆ ಎಂಬ ಗ್ರಾಮದ ಶಿರಂಗಾಲದವರಿಗೆ [illegible] ಎಲ್ಲ [illegible] ನೆಯಲ್ಲಿಯೂ ಇದೆ. (ಆದರೆ [illegible] [illegible] [illegible]) ಕೆಲವು ಗಿರಣಿನೂಲನ್ನು ತರಿಸಿ ನೂಲನ್ನು [illegible] ಪಯೋಗಿಸುತ್ತಾರೆ. ಬಹಳ [illegible] [illegible] ವ[illegible]

ತ್ರ ನೂಲು ತೆಗೆಯಲು ಉಪಯೋಗಿಸಲ್ಪಡುತ್ತಿದೆಯೆಂದು ಈ ಉಪಯೋಗವೂ ಸ್ವಲ್ಪಕಾಲ ಮಾತ್ರ ಜಗಲ್ಲಿದೆ [illegible] ನೂಲುವ ಮನೆಯವರೂ ಸಹ ತಮ್ಮ [illegible] ಟ್ಟೆಯನ್ನೆಲ್ಲಾ ತಮ್ಮ ನೂಲಿನಿಂದಲೇ ಮಾಡಿಸಿಕೊಳ್ಳುತ್ತಾ ದಿಲ್ಲ.

ನೂನೂರು ಹತ್ತು ಹದಿನೈದು ವರ್ಷಗಳ [illegible] ನೂಲಿನ ದುಪ್ಪಟಿಗಳು ಕಣ್ಣಿಗೆ ತೋರುತ್ತಿದ್ದವು [illegible] ಮೈಯಲ್ಲಿಯೂ ನೋಡಬಹುದಿತ್ತು. [illegible] ಒಬ್ಬನ ಮೈಯಲ್ಲಿ ನೋಡಬಹುದಷ್ಟೆ. [illegible] ಯವರ ಚಳವಳಿಯಿಂದ ದೇಶದಲ್ಲೆಲ್ಲಾ ಕೈನೂಲಿನ ಬಟ್ಟೆ [illegible] ವರನ್ನು ನೋಡಬಹುದಾದರೂ ಕೈನೂಲು ಬಟ್ಟೆ [illegible] ಮನೆಯಂತಿರುವ ಕಣವೆ ತೋರುತ್ತದೆ [illegible] ರೆನೂರು, ಬಿರುನಾಣಿ ಗ್ರಾಮಗಳಲ್ಲಿ [illegible] ಕೇ ಇಲ್ಲದಿರುವನು ಬಹಳ ವ್ಯಸನಕರ. [illegible] ಮರೆತರೂ ಮರೆಯದೆ ಇಟ್ಟುಕೊಂಡಿರುವ [illegible] ವರು ಮಾತ್ರ ಕೈನೂಲು ಮಾಡಿ ತಮ್ಮ ದುಪ್ಪಟಿಗಳನ್ನು ಮಾಡಿಕೊಂಡಿರುತ್ತಾರೆ. ಕೊಡಗಿಗೆ ದೇಶಪಾಂಡೆ [illegible] ಲ್ಲಾ ಕೈನೂಲಿನಿಂದಲೇ ಈ ದುಪ್ಪಟಿಗಳಲ್ಲಿ [illegible] ಅವಕಾಶವಿರುವಾಗ ಈ ಪದ್ಧತಿ ಹೋದ ಮೇಲಾದರೂ ಈ ನೋಡುವವರಿಗೆ ಬುದ್ಧಿ ಬರದೆ ಇದ್ದುದು ವ್ಯಸನವನ್ನೂ, ಆಶ್ಚರ್ಯವನ್ನೂ ಉಂಟುಮಾಡುತ್ತದೆ. ಕೈನೂಲು ಮಾಡುವವನ್ನು ಬಿಡಲು ಕಾರಣವೇನೆಂದು ಕೇಳುವರೆ ಸುಲಭವಾದ ದರದಲ್ಲಿ ಪೇಟೆಯಲ್ಲಿ ಬಟ್ಟೆ ಸಿಕ್ಕುವದೇ ಕಾರಣವೆಂತ ಹೇಳುತ್ತಾರೆ. ಇವು ಎಲ್ಲರಿಗೂ ತಿಳಿದ ಸಂಗತಿಯಾಗಿವೆ. ಕೈನೂಲು ಕಸಬನ್ನು ಪುನಃ ಪ್ರಾರಂಭಿಸಿ ಎಂತ ಹೇಳಿದಾಗಲೆಲ್ಲಾ ತೊರೆನೂರು ರೈತರು ಜಾತ್ರೆ ನಾಲೆ ಮಾಡಿಸಿಕೊಡಿ, ಹೊಟ್ಟೆಗೆ ಅನ್ನ ದೊರಕಲು ಅನುಕೂಲ ಮಾಡಿಕೊಡಿ, ಆಮೇಲೆ ಬಟ್ಟೆಯ ಯೋಚನೆ ಮಾಡಬಹುದೆಂತ ಹೇಳಿದರು. ನಾಲೆಗೆ ಹತ್ತುಲಕ್ಷ ರೂಪಾಯಿಗಿಂತ ಹೆಚ್ಚಾಗಿಯೇ ಹಣ ಬೇಕಾಗ ಬಹುದಾದ್ದರಿಂದ ದೇಶಕ್ಕೆ ಸ್ವರಾಜ್ಯ ದೊರಕುವವರೆಗೆ ಈ ನಾಲೆಯು ಆಗುವುದಿಲ್ಲವೆಂತ ಕೈನೂಲು ಕಮಿಟಿಯವರು ಎಷ್ಟು ಹೇಳಿದರೂ ರೈತರಿಗೆ ಒಪ್ಪಿಗೆಯಾಗಲಿಲ್ಲ. ನೂಲು ಮಾಡಲು ಪ್ರಾರಂಭಿಸಲು ನಾಲೆಯನ್ನು ಎದುರು ನೋಡಬಾರದೆಂತ ಇವರಿಗೆ ಮನವರಿಕೆಯಾಗಬೇಕಾದರೆ ಇನ್ನೂ ತುಂಬಾ ಬೋಧನೆಯಾಗಬೇಕು.

ಒಬ್ಬ ಮುದುಕಮ್ಮನವರು ಕಮಿಟಿಯವರಿಗೆ ತನ್ನ ಕೈನೂಲು ಕಸಬನ್ನು ತುಂಬಾ ಹೆಮ್ಮೆಯಿಂದ ತೋರಿಸಿಕೊಟ್ಟರು. ತನ್ನ ರಾಟೆಯನ್ನು ಈತನಕ ಉಪಯೋಗಿಸುತ್ತಿದ್ದಿಲ್ಲವಾದ್ದರಿಂದ ಅದನ್ನು ಸಜ್ಜುಮಾಡಿ ಕದರನ್ನು ಹುಡುಕಿ ತಂದು ಹೂಡಿ ಒಂದು ಹಂಜಿಯನ್ನು ನೂತು ತೋರಿಸಿದರು. ಕಮಿಟಿಯವರಲ್ಲೊಬ್ಬರು ತಿಳಿದಂತೆ ನೂಲು ತೆಗೆಯಲು ಪ್ರಯತ್ನಿಸಿದರು. ಅವರ ಕೆಲಸದಲ್ಲಿ ಲೋಪಗಳನ್ನು ಹೇಳಿಕೊಟ್ಟರು. ಈಗಿನ ಕಾಲದ ಬಾಲೆಯರು "ಹನ್ನೆರಡು ದಿನದ ಹಂಜಿ ಒಂದು ದಿನದ ಗಂಜಿ!" ಎಂತ ಹೇಳಿ ಈ ಕೆಲಸವನ್ನು ತುಚ್ಛೀಕರಿಸುತ್ತಾರೆಂದರು. ಈ ಗಾದೆಗೆ ಹನ್ನೆರಡು ದಿನ ನೂತರೂ ಸಹ ಒಂದೇ ದಿನದ ಅನ್ನವನ್ನು ಒದಗಿಸಿಕೊಳ್ಳುವಷ್ಟು ಸಂಪಾದನೆಯಾಗುತ್ತದೆಂದು ಮಾತ್ರ ಎಂಬ ಅರ್ಥವಿದೆ. ಒಂದು ದಿನದ ಗಂಜಿಯಾಗಬೇಕಾದರೆ ಹನ್ನೆರಡು ದಿನ ನೂಲುವ ಆವಶ್ಯಕವಿಲ್ಲವೆಂತಲೂ, ಹನ್ನೆರಡು ದಿನ ನೂತರೂ ಇನ್ನೊಬ್ಬರ ಹಂಗಿಲ್ಲದೆ ತನ್ನ ಗಂಜಿ ತಾನೇ ದುಡಿಸಿಕೊಂಡೆನೆಂಬ ತೃಪ್ತಿ ಹುಟ್ಟುತ್ತದೆಂಬುದನ್ನೂ ಬೋಧಿಸಬೇಕಾಗಿದೆ.

ಈ ಕಾರ್ಯದ ಅಭಿಪ್ರಾಯವು ಭದ್ರವಾಗಿ ಹಾಕಲ್ಪಡಲು ಶ್ರೀಯುತ ದೇಶಪಾಂಡೆ ಗಂಗಾಧರರಾಯರಾಗಲೀ, ಶ್ರೀಯುತ ಸಿ. ರಾಜಗೋಪಾಲಚಾರ್ಯರಾಗಲೀ ಬರಬೇಕೆಂತ ಬಯಕೊಳ್ಳಲಾಗಿದೆ.

ಮಡಿಕೇರಿ, ಸಿ. ಎಸ್. ವೆಂಕಪ್ಪಯ್ಯ.

ತಾ. 16—1—28.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೋತೂರು ಗ್ರಾಮಸ್ಥರ ಬಡ ಹವಾಲು

ಆಯ್ಯಾ,

ಈಗಿನ ಕಾಲದಲ್ಲು ಗ್ರಾಮದ ಎಲ್ಲಾ ಕಡೆಗಳಲ್ಲು ಬಂಡಿ ತಿರುಗಾಡಲು ರಸ್ತೆ ಆವಶ್ಯವೆಂದು ಹೇಳಬೇಕಾಗಿಲ್ಲ. ಪೊನ್ನಂಪೇಟೆ ಲೋಕಲ್‌ಫಂಡು ರೋಡಿಗೂ ಮತ್ತು ಕುಟ್ಟ ತೋಲ್‌ಪಟ್ಟಿ ರಸ್ತೆಗೂ ಸೇರಿಸಿ ನಮ್ಮ ಗ್ರಾಮದ ಮಧ್ಯಕ್ಕಾಗಿ ಒಂದು ರಸ್ತೆಯನ್ನು ಗ್ರಾಮಸ್ಥರೇ ಚಂದಾ ಜಮಾಯಿಸಿ 2 ವರ್ಷದಿಂದ ರಸ್ತೆ ತಯಾರು ಮಾಡುತ್ತೇವೆ. ಈ ರಸ್ತೆಯನ್ನು ಲೋಕಲ್‌ಫಂಡು ರಸ್ತೆಯಾಗಿ ಮಾಡಿಕೊಂಡು ವರ್ಷಂಪ್ರತಿ ರಿಪೇರಿ ಚಾರ್ಜು ಕೊಡಿಸಿಕೊಡಬೇಕಾಗಿ ಈ ವರ್ಷ ಜಮಾಬಂದಿಯಲ್ಲು ಅರ್ಜಿ ಕೊಟ್ಟೆವು. ಸದರಿ ಅರ್ಜಿಗೆ ನಮ್ಮ ದಯಾಳು ಕಮಿಶನರ್ ದೊರೆಗಳು ಈಗ ಹಣವಿಲ್ಲವೆಂದು ಹುಕುಂ ಕೊಟ್ಟದ್ದು ತುಂಬಾ ಶೋಚನೀಯ. ರಸ್ತೆಯಿಂದ ಪ್ರಯೋಜನವುಂಟು, ಯಾ ಇಲ್ಲವೆಂಬುದು ಆಗ ಪರಾಂಬರಿಸಿದಲ್ಲಿ ವೇದ್ಯವಾಗ ಬಹುದು. ಈ ಬಾಬಿನಲ್ಲು ಡಿ. ಬೋ. ಮೆಂಬರುಗಳು ಮತ್ತು ದಯಾಳು ಕಮಿಶನರ್ ದೊರೆಗಳು ಘನ ಚಿತ್ತ

ಕ್ಕೆ [illegible] ಮಾಡಬೇಕೆಂದು [illegible]

"[illegible]"

[illegible]

[illegible] ಬಹಳ ವಿಶೇಷ [illegible] ಸಿಕ್ಕಿತೆಂದರೆ [illegible] ಬಲು [illegible] ಮದ್ರಾಸ್ [illegible] ಎದು ವ [illegible] ಮುಕುಂ ಇ [illegible] ಕೆಲಸಕ್ಕೆ [illegible] ಬರುವ [illegible] ಗೆಜೆಟ [illegible] ನೆಂದವರ್ತ ವ [illegible] ತಂದದ್ದಾ [illegible] ಪ್ರತಿನಿಧಿಗ [illegible] ಮುಂದಾದ [illegible] ವಿಷಯದಲ್ಲಿ [illegible] ಆದರೂ ಈ ವಿಷಯದಲ್ಲಿ ನಮ್ಮ [illegible] ಕೊಡಲಿಲ್ಲ [illegible] ಕೆಲಸದಲ್ಲಿ [illegible] ವರ್ಷಗಳಾಗುವುದೆಂದರೆ ಇದು ಎಂಥಾ ನ್ಯಾಯ!

ಅನು ಮಗಿಸಿರಿ. ಇದಕ್ಕಿಂತಲೂ ಪೆಚ್ಚವಾದ. ಇನ್ನೊಂದು ಅಪಾಯಕರವು ನಮ್ಮ ಸರಕಾರದಲ್ಲಿ ನಡೆಯುತ್ತಿದೆ. ಉದ್ಯೋಗಸ್ಥರಲ್ಲಿ (ಗಜೆಟೆಡ್ ಮತ್ತು ಚಿಕ್ಕ ಉದ್ಯೋಗಸ್ಥರು) ಕೆಲವರು ಪಿಂಚಿನ್ ತೆಗೆದುಕೊಳ್ಳುವಷ್ಟು ಸರ್ವಿಸ್ ಆದರೂ ಕೆಲಸದಿಂದ ನಿವೃತ್ತರಾಗುವುದೇ ಇಲ್ಲ. ತಮ್ಮ ಸರ್ವಿಸನ್ನು ಒಂದೋ, ಎರಡೋ ವರ್ಷ ಇನ್ನೂ ದೂರಮಾಡುವಂತೆ (Extension) ಹುಕುಂ ಪಡೆಯುವರು. ತಮ್ಮ ಸರ್ವಿಸ್ ಪೂರ್ತಿ ಆದರೂ ಕೂಡ ತಾವು ದೃಢಕಾಯರಾಗಿ ಕೆಲಸ ಮಾಡಲು ಶಕ್ತರಾಗಿದ್ದೇವೆಂದು ಸರ್ವಿಸನ್ನು ಒಂದೆರಡು ವರ್ಷ ಮುಂದರಿಸಿಕೊಳ್ಳುವರು. ಇದರಿಂದ ಎರಡು ವಿಧದಲ್ಲಿ ದೇಶಕ್ಕೆ ಕಷ್ಟಕರವಾಗುವುದು. ಉದ್ಯೋಗಸ್ಥರ ಬಹಳ ಕಾಲದವರೆಗೆ ಒಂದೇ ಸ್ಥಳದಲ್ಲಿ ಒಂದೇ ಕೆಲಸದಲ್ಲಿರುವುದೊಂದು. ಅಲ್ಲದೆ ದೇಶದಲ್ಲಿ ಹೊಸದಾಗಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಬಂದ ಯುವಕರಿಗೆ ಉದ್ಯೋಗವು ಸಿಕ್ಕದೆ ಇರುವುದು ಇನ್ನೊಂದು.

ಈಗಾಗಲೇ ಕೆಲವು ಉದ್ಯೋಗಸ್ಥರು ತಮ್ಮ ಸರ್ವಿಸನ್ನು ಉದ್ದ ಮಾಡಲು (Extension) ಪ್ರಯತ್ನ ಪಡುತ್ತಿರುವರೆಂಬ ವರ್ತಮಾನವಿದೆ. ಈ ವಿಷಯದಲ್ಲಿ ಸರಕಾರದವರು ಏನೂ ಒತ್ತಾಸೆ ಕೊಡದೆ ಪ್ರತಿ ಒಬ್ಬ ಉದ್ಯೋಗಸ್ಥನನ್ನೂ ಅವನ ಸರ್ವಿಸ್ ಪೂರ್ತಿ ಆದಕೂಡಲೇ ಅವನ ಕೆಲಸದಿಂದ ನಿವೃತ್ತಿ ಮಾಡಿ ಪಿಂಚಿನ್ ಕೊಟ್ಟು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ. ಅಲ್ಲದೆ ಈ ವಿಷಯದಲ್ಲಿ ಸರಕಾರದವರು ತಮ್ಮ ರೂಲನ್ನು ಅಕ್ಷರಶಃ ಅನುಸರಿಸುವರಾಗಿ ಕೋರುತ್ತೇನೆ. ಪ್ರತಿ ಒಬ್ಬ ಉದ್ಯೋಗಸ್ಥನೂ ತನ್ನ ಐವತ್ತೈದು ವರ್ಷ ಪ್ರಾಯದ ನಂತರ ಕೆಲಸ ಮಾಡಲು ಅಶಕ್ತನೆಂಬದ್ದರಿಂದಲೇ ಅಷ್ಟು ಪ್ರಾಯವಾದ ಕೂಡಲೇ ಪಿಂಚಿನ್ ತೆಗೆದುಕೊಳ್ಳಬೇಕೆಂಬ ಕಾನೂನು ಸರಕಾರದವರು ಮಾಡಿರುವುದು. ಈಗ ಮೇಲೆ ಹೇಳಿದಂತೆ ಸರ್ವಿಸನ್ನು ಉದ್ದ ಮಾಡಲು ಅನುಮತಿಯನ್ನು ಕೊಟ್ಟರೆ ಸರಕಾರದವರೇ ಅವರ ಕಾನೂನಿಗೆ ವಿರೋಧವಾಗಿ ನಡೆದಂತಾಗುವುದು. ಅಲ್ಲದೆ ನಮ್ಮ ದೇಶದ ಉದ್ಯೋಗಸ್ಥರು ಸಹ ಈ ವಿಷಯದಲ್ಲಿ ಸ್ವಲ್ಪ ಎಚ್ಚರ ತೆಗೆದುಕೊಳ್ಳುವ ಆವಶ್ಯಕತೆ ಇದೆ. ಈಗ ಕೆಲವು ಕಾಲದ ಹಿಂದೆ ಇದ್ದ ಉದ್ಯೋಗಸ್ಥರೆಲ್ಲರೂ ತಮ್ಮ ಸರ್ವಿಸ್ ಪೂರ್ತಿ ಆದಕೂಡಲೇ ಪಿಂಚಿನ್ ತೆಗೆದುಕೊಳ್ಳುತ್ತಿದ್ದುದರಿಂದ ಅವರಲ್ಲನೇಕರು ಕೆಲಸ ಬಿಟ್ಟನಂತರ ಬಹಳ ವರ್ಷಗಳವರೆಗೆ ಪಿಂಚಿನ್ ತೆಗೆದುಕೊಳ್ಳಲು ಶಕ್ತರಾಗುತ್ತಿದ್ದರು. ಆದರೆ ಈಗಿನ ಉದ್ಯೋಗಸ್ಥರು ತಮ್ಮ ಸರ್ವಿಸ್ ಪೂರೈಸಿದ ನಂತರ ಕೆಲವು ವರ್ಷ ಹೆಚ್ಚಿಗೆ ಕೆಲಸ ಮಾಡುವುದರಿಂದ ತಮ್ಮ ಜೀವಮಾನವನ್ನೇ ಸಣ್ಣದು ಮಾಡಿಕೊಂಡು ಬೇಗನೆ ಮರಣಕ್ಕೆ ತುತ್ತಾಗುವರು. ಇದರಿಂದ ಸರಕಾರ ಕೆಲಸವೂ ಕೂಡ ಬಹಳ ಸುಲಭವಾದದ್ದೆಂದು ಸಹ ಇವರು ತೋರಿಸಿದಂತಾಗುತ್ತದೆ. ಆದುದರಿಂದ ಉದ್ಯೋಗಸ್ಥರೆಲ್ಲರೂ ದಯವಿಟ್ಟು ತಮ್ಮ ಸರ್ವಿಸ್ ಪೂರ್ತಿ ಆದಕೂಡಲೇ ಪಿಂಚಿನ್ ತೆಗೆದುಕೊಂಡು ಕೆಲವು ವರ್ಷಗಳಾದರೂ ಸುಖಜೀವನವನ್ನು ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

"ನ್ಯಾಯಾಪೇಕ್ಷಿ"

ಮಡಿಕೇರಿಯಲ್ಲಿ ಸಾದೆಯ ತಾಪತ್ರಿ.

ಆಯ್ಯಾ,

ಇದು ಯಾವ ನ್ಯಾಯ? ಮಡಿಕೇರಿ ಮತ್ತು ಮುತ್ತಲಿನ ಪಟ್ಟಣಕ್ಕೆ ಮಾರಾಟಕ್ಕೆ ಬರುತ್ತಿರುವ ಸಾದೆಗೆ ಈ ವರ್ಷ ಒಂದು ಹೊಸ ಅಡಚಣೆಯ ಹುಕುಮನ್ನು ಸರ್ಕಾರದವರು ಮಾಡಿರುವರಂತೆ. ರಿಸರ್ವ್ ಫಾರೆಸ್ಟು ಮತ್ತು ಸ್ವಕಾರಾಗಳಿಂದ ಸಾದೆ ಕಡಿಯಲು ಲೈಸೆನ್ಸ್ ಕೊಡುವಾಗ ಒಣಗಿದ [illegible] ಮಾತ್ರ ಕಡಿಯಬೇಕೆಂದೂ, ಹಸಿಮರವನ್ನು ಕಡಿಯಕೂಡದೆಂದೂ ಲೈಸೆನ್ಸ್‌ದಾರರಿಗೆ ಹುಕುಂ ಕೊಡಲಾಗುತ್ತಿದೆಯಲ್ಲದೆ ಹಸಿ ಸಾದೆಯನ್ನು ತಂದು ಮಾರಿದವರನ್ನು ಕಂಡುಹಿಡಿದವರ ಲೈಸೆನ್ಸು ವಜಮಾಡುವದೋ ಯಾ ಅವರಿಗೆ ಜುಲ್ಮಾನೆ ಮಾಡುವದೋ ಆಗುತ್ತದೆಯಂತೆ.

ಇದರಿಂದ ಈಗ ಮಡಿಕೇರಿಗೆ ಮಾರಾಟಕ್ಕೆ ಬರುವ ಸಾದೆಗಾಡಿಗಳೇ ಬಹಳ ಕಡಿಮೆಯಾಗಿವೆ. ಹಾಗೆ ಬರುವ [illegible] ಗಳು ಸಾದೆ ಗಾಡಿಗಳಿಗೆ ಕ್ರಯವಂತೂ ತಡೆಯಕೂಡ [illegible] ಇದರ ದೆಸೆಯಿಂದ ಸಾದೆ ಮಾರುತ್ತಿದ್ದ ಬಡ ಬಗ್ಗರ [illegible] ಯೂ ಕಡಿಮೆಯಾಯಿತು; ಬಡ ಪಟ್ಟಣವಾಸಿಗಳಿಗೆ ಸಾದೆಯ [illegible] ಯವು ಏರುತ್ತಾ ಬಂತು. ಎಲ್ಲಿ ನೋಡಿದರೂ ಬಡವರ [illegible] ಟ್ಟೆಗೇ ಪೆಟ್ಟುಬೀಳುವದಾಗಿದೆ.

ಇಷ್ಟು ವರ್ಷಗಳ ವರೆಗೆ ಇಲ್ಲದ ಇದೊಂದು [illegible] ಹುಕುಂ ಹೊರಡಬೇಕಲು ಕಾರಣವೇನೆಂದು ಗೊತ್ತಾಗ [illegible] ಲ್ಲ. ಒಂದು ವೇಳೆ ಹಸಿಮರ ಕಡಿದರೆ ಕಾಡುಗಳಲ್ಲಿ [illegible] ವು ಕಡಿಮೆಯಾಗಿ ಕಾಲಕ್ರಮೇಣ ಮರಕಾಡುಗಳೇ [illegible] ಆಗಬಹುದೆಂದು ಇಂಥಾ ಹುಕುಂ ಹೊರಟಿರಬಹುದೆ [illegible] ಇದ್ದರೂ ಇರಬಹುದು. ಆದರೆ ಇದು ಎಷ್ಟರಮಟ್ಟಿಗೆ [illegible] ಜನೆಂಬನ್ನು ನಾವು ಇಲ್ಲಿ ಚರ್ಚಿಸುವ ಅವಶ್ಯವಿಲ್ಲ. [illegible] ಕಾರ್ರದವರೇ ಬಹು ಬೆಲೆಯುಳ್ಳ ಗಂಧದ ಮರಗಳನ್ನು [illegible] ಯುವ ವಿಷಯದಲ್ಲಿ ಒಣಗಿದ ಮರಗಳನ್ನೇ ಕಡಿಯ [illegible] ವನ್ನು ಅನುಸರಿಸದೆ ಹಸಿ ಮರಗಳನ್ನು ಕಡಿಯುತ್ತಿರುವ [illegible] ಮಲ ಕೆಲವು ರೈತರು ಸಾದೆಗೆ ಕೆಲವು, ಬೇರೆ ಕೆಲಸಕ್ಕೆ [illegible] ಹಸಿ ಕಾಡುಮರಗಳನ್ನು ಕಡಿಯಕೂಡದೆಂದು ಹೇಳುವದು ಏನು ನ್ಯಾಯವಿದೆ? ಅದಲ್ಲದೆ ಈ ಹುಕುಮನ್ನು ಮಡಿಕೇರಿಯಲ್ಲಿ ಮಾತ್ರ ಜಾರಿಗೆ ತರಲು ಕಾರಣವೇನು? ಯೋಚಿಸಿ ನೋಡಿದರೆ—ಮಡಿಕೇರಿಯಲ್ಲಿ ಫಾರೆಸ್ಟು ಇಲಾಖೆಯವರು ಮಾರಾಟಮಾಡುತ್ತಿರುವ ಆನೆಕಾಡಿನ ಲಾರಿ ಸಾದೆಗೂ, [illegible] ಡಿಕೇರಿ ಡಿಪೋದ ಲಾಟು ಸಾದೆಗೂ ಸಾಕಷ್ಟು ಗಿರಾಕಿಗಳು ದೊರೆಯದ್ದರಿಂದ ಈ ಹೊಸ ಆರ್ಡರು ಹೊರಟಿರಬಹುದೆ ಎಂಬ ಸಂಶಯವು ಹುಟ್ಟುತ್ತದೆ. ಇದು ನಿಜವಾದರೆ, [illegible] ರೆಸ್ಟು ಇಲಾಖೆಯವರ ಅಲ್ಪ ಉತ್ಪತ್ತಿಗಾಗಿ ಸಾದೆ ಮಾರುವ ಬಡ ರೈತರಿಗೂ, ಕೊಂಡುಕೊಳ್ಳುವ ಪುರವಾಸಿಗಳಿಗೂ [illegible] ಷ್ಟ ನಷ್ಟವನ್ನೂ, ಕಷ್ಟವನ್ನೂ ಉಂಟುಮಾಡುವದು [illegible] ನ್ಯಾಯವಲ್ಲ. ಇನ್ನಾದರೂ ಅಧಿಕಾರಿಗಳು ಈ ವಿಷಯ [illegible] ಗಮನಕೊಟ್ಟು ಮೊದಲಿನಂತೆ ಹಸಿ ಸಾದೆ ಮಾರಾಟಕ್ಕೂ [illegible] ಮಾಕೊಡುವಂತೆ ಹುಕುಂಮಾಡುವರಾಗಿ ಹಾರೈಸುವ.

"ಪಟ್ಟಣಿಗ"

ಕೊಡಗೂ, ದಾಸ್ಯಾಪೇಕ್ಷೆಯೂ.

1928 ನೇ ಇಸ್ವಿ ಫೆಬ್ರವರಿ 2ನೇ ತಾರೀಕಿನಲ್ಲಿ [illegible] ಜೇಂದ್ರಪೇಟೆಯಲ್ಲಿ ನಡೆಯಲಿಕ್ಕಿರುವ ಜಮಾಬಂದಿ ಸಭೆ [illegible] ವಿಶೇಷ ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಲ್ಲಿ [illegible] ಗನ್ನು ಮೈಸೂರಿಗೆ ಸೇರಿಸಲು ಏರ್ಪಾಡುಮಾಡಬೇಕೆಂ [illegible] ಷಯವನ್ನು ಈ ಪತ್ರಿಕೆಯು ಕಳೆದ ಸಂಚಿಕೆಯಲ್ಲಿ ಓದಿ [illegible] ಆ ಬಾಬಿಗೆ "ಮೈಸೂರು ಮತ್ತು ಕೊಡಗು" ಎಂಬ ಅಗ್ರ [illegible] ಖದಲ್ಲಿ "ಮೈಸೂರು ಕೊಡಗು" ಎಂಬ ರೂಪದ [illegible] ಸೂಚಿಸಿದ ಅಭಿಪ್ರಾಯವು ಒಪ್ಪತಕ್ಕದ್ದಾಗಿದೆ. [illegible] ದು ಬದುಕಿದವರೆಯ ಇಂಥಾ ಮಹೋದ ತರುವ ಮ [illegible] ಆಲೋಚನಾಶಕ್ತಿಗೆ ಆಶ್ಚರ್ಯದಿಂದ ತಲೆದೂಗಬೇಕಾಗಿ [illegible] ಇಡೀ ಕೊಡಗನ್ನು ಮದರಾಸಿಗೆ ಸೇರಿಸಬೇಕೆಂಬ [illegible] ದೇಶದ ಪ್ರಜೆಗಳ ಪ್ರಚಂಡ ಹಿಂಬಲವೂ, ಕಾನಡೆ: [illegible] ಮಹನೀಯರ ನಿಶೇಧದ ಹಾರಾಟವೂ ಈ ಕೊಡಗಿನ [illegible] ಗರ ಉಸಿರು ಕಟ್ಟಿಸಿ ಬಿಟ್ಟಿದ್ದಿತು. ತನ್ಮಧ್ಯ ಹಿಂದಿನ [illegible] ಎಲ್ಲಾ ಪ್ರಾಂತ್ಯಗಳನ್ನೂ ಭಾಷೆಗೆ ಸರಿಯಾಗಿ ಪ್ರಾಂತ್ಯ [illegible] ಸಬೇಕೆಂದು ಹೆಣಗಾಡುತ್ತಿರುವ ಈ ಭರತಖಂಡದ [illegible] ಪ್ರಮುಖ್ಯ ದೇಶಭಕ್ತ ಧುರೀಣರ ಸೂಚನೆಗೆ ನಮ್ಮ [illegible] ಗಿನ ಮುಂದಾಳುಗಳೂ ಒಪ್ಪಿ, ಕೊಡಗನ್ನು ಭಾಷೆಗನು [illegible] ವಾಗಿ "ಕರ್ನಾಟಕ ಏಕೀಕರಣ' ದಲ್ಲಿ ಸೇರಿಸಬೇಕೆಂ [illegible] ಪ್ಪಿಕೊಂಡರು. ಈಗಾಗಲೇ ಕೊಡಗಿಗೆ ಸಿಕ್ಕಿರುವ [illegible] ಲಿನಿಂದ ಪ್ರಯೋಜನವಿಲ್ಲವೆಂದು ಕೊಡಗನ್ನು ಮೈಸೂ [illegible] ಮಾಡಲು ಅಣಿಮಾಡತೊಡಗಿರುವರು. ಆದರೆ—ದಾ [illegible] ಹಲವೆಲ್ಲಾ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ [illegible] ಮಯದಲ್ಲಿ, ಕೊಡಗು ಎಂದೆಂದಿಗೂ ತಲೆ ಎತ್ತದ [illegible] ತ್ರ್ಯದ ಅಡಿಗಲ್ಲಾಗಿರಲು ಹಾತೊರೆಯ ತೊಡಗಿದೆ [illegible] ಹಿಂದೂದೇಶದ ಬ್ರಿಟಿಷ್ ಆಳ್ವಿಕೆಯಲ್ಲಿರುವ ಎಲ್ಲಾ [illegible] ಪ್ರಜೆಗಳೂ ಸ್ವರಾಜ್ಯ ಮತ್ತು ಸ್ವಾತಂತ್ರ್ಯಕ್ಕಾಗಿ [illegible] ಯದ ಯಾತನೆಗಳನ್ನೆಲ್ಲಾ ಸಹಿಸಿ ಎಡೆಬಿಡದೆ ಹೋರಾಡ [illegible] ವಾಗ್ಯೂ, ಕೊಡಗಿನವರು ತಮಗೆ ಈಗ ಇರುವ ದೊಡ್ಡ [illegible] ಮಾನನೊಬ್ಬನೇ ಸಾಲದೆಂದು ತಮ್ಮ ಮೇಲುಸ್ತು [illegible] (Supervision) ಗಾಗಿ ಇನ್ನೊಬ್ಬ ಚಿಕ್ಕ ಯಜಮಾನ [illegible] ತಂದುಕೊಳ್ಳಲು ಬೇಡತೊಡಗಿದ್ದಾರೆ. ಬ್ರಿಟಿಷ್ ರಾಜ್ಯ [illegible] ಕತದಲ್ಲಿರುವ ಭರತಖಂಡದ ಪ್ರಜೆಗಳೆಲ್ಲಾ ಸ್ವರಾಜ್ಯ [illegible] ತಂತ್ರ್ಯವೂ ಸಿಕ್ಕಿ ಸುಖಪಡುತ್ತಿರುವ ಆ ಕಾಲದಲ್ಲಿ [illegible] ನ ಪ್ರಜೆಗಳು ನಿರಂತರವೂ ದಾಸ್ಯ ಪಂಜರದಲ್ಲಿ [illegible] ಬೇಕೇ?

ಬ್ರಿಟಿಷ್ ಆಳ್ವಿಕೆಯಲ್ಲಿರುವ ಒಬ್ಬ ದೃಶ್ಯನಾಗಲೀ, ಯೂ[illegible]ನಾಗಲೀ ಅಥವಾ ಮಹಾರಾಜನೇ ಆಗಲಿ ಬ್ರಿಟಿಷ್ ಸಾ[illegible]ಮರ ಸರಕಾರಕ್ಕೆ ತೆರಿಗೆ ಕಟ್ಟತಕ್ಕವರೇ ಆಗಿದ್ದಾರೆ. [illegible]ಗೆ ಅವನ ಸ್ವಲ್ಪ ಬಾಗದ ಸಿಸ್ಟೀಣಕ್ಕೆ ಕೊಡಬೇಕಾದ [illegible]ಗೆ ಕಂದಾಯವೆಂದೂ, ರಾಜ, ಮಹಾರಾಜರುಗಿರುವ [illegible] [illegible]ಂಜಾ ಬಾಗದ ವಿಸ್ತೀರ್ಣಕ್ಕೆ ಕೊಡಬೇಕಾಗುವ [illegible] [illegible]ಕಪ್ಪವೆಂದೂ ಇಟ್ಟಿರುವ ಹೆಸರಿನ ಪೆತ್ಯಾಸ ಮಾತ್ರವಲ್ಲ [illegible]ಕ್ರವರ್ತಿ ಸಾರ್ವಭೌಮ ರಿಗ ತಪ್ಪ ಅಧೀನಕ್ಕೊಳಪಟ್ಟವರೆ [illegible] ಪ್ರಜಗಳೇ ಆಗಿದ್ದಾರೆ. ಇದರಲ್ಲಿ ಯಾವ [illegible]ದಪ್ಪ [illegible]ಕ್ಕಿಲ್ಲವಾಗಿದೆ. ಅಂದಾ ಸಾಮಂತರುಗಳ ಅಧೀನಕ್ಕೆ [illegible] [illegible]ಗನ್ನು ಸೇರಿಸಿದರೆ ಕೊಡಗಿನ ಪ್ರಜಗಳಿಗೆ ಯಾವ [illegible] [illegible] ಸ್ವಾತಂತ್ರ್ಯ ದೊರೆಯುವುದು? [illegible] ದರ[illegible]ಗೆ [illegible] [illegible] ಒಪ್ಪದೆ ದೂರ ನಿಂತಿಪ್ಪ ಆದರೆ ಇನ್ನಾದರೂ [illegible]- ಏಕೀಕರಣಕ್ಕೆ ಪ್ರಯತ್ನಿಸಿದರ ಒಂದಕವೇನೂ [illegible] [illegible]ಕವಿದ್ದಲ್ಲ, ನಾವು ನಮ್ಮ ಕೊಡಗನ್ನು ಪ್ರೀತಿಯಿಂದ [illegible]ಪರ ಆಡಳಿತಕ್ಕೆ ಒಪ್ಪಿಸಿದವರಲ್ಲವೆ? ಈಗ [illegible] ನಮ್ಮ [illegible]ವನ್ನು ನಮ್ಮ ಆಳ್ವಿಕೆಗೇ ಬಿಟ್ಟುಕೊಡಬೇಕೆಂದು [illegible] [illegible]ದಾರರ ಸಂಘದಲ್ಲಿಯೂ, ಲೆಜಿಸ್ಲೇಟಿವ್ ಕೌನ್ಸಿಲಿ[illegible] [illegible] ದರಾವು ತರಲು ತೊಂದರ ಏನಿರುವುದು? ಈ ಪರಿಗೆ [illegible]ಧೀನದಲ್ಲಿದ್ದದ್ದು ಸಾಲದೆ, ಏಜ್ಸಿರು ಯ ಒಸೂಸರ ಆದ [illegible] ಕೊಡಗನ್ನು ಸೇರಿಸಿ ನಮ್ಮ ಮಕ್ಕಳು, ಮೊಮ್ಮಕ್ಕಳನ್ನ [illegible]ದಾಸ್ಯವೃತ್ತಿಯಲ್ಲೇ ಕೊಳೆಯುವರು. ಈಗಿನ ಮುಂ[illegible]ಗಳು ಆಲೋಚನೆಮಾಡುವುದು ಕೊಡಗಿನ ಒಪಾಂಗದ [illegible]ದಿನ ಅಭಿವೃದ್ಧಿಗೆ ಉಚಿತವಾದ ಕಬ್ಬಿಣದ ಒಲೆಯಾಗಿ [illegible] ಆದ ದರಿಂದ ವಿದ್ಯಾ ವಿಶಾರದರಾದ [illegible] ರಾ ಶ್ರೀ. [illegible] [illegible] ಉಕ್ತೈಯ್ಯನವರು ದೀರ್ಘಾಲೋಚನೆಯಿಂದ ಸದರಿ [illegible]ವನ್ನು ಹಿಂದೆಗೆಯಲು ಹಿಂಜರಿಯಕೂಡದಾಗಿ ನಂಬು[illegible]

'ದೇಶೀಯ'

National Swords and Silvr Belts (Thodanga) For "Scotland of India."

ಸಂಪ್ರದಾಯಕವಾಗಿ ಧರಿಸಲ್ಪಟ್ಟ 'ಒಬ್ಬ ಕತ್ತಿ [illegible] ಯೋಷಾಕರು' ರೀತಿ ಉಡಿಗೆಗಳನ್ನು ಬಿಡಿಗೊ[illegible] [illegible] ಧರಿಸಲ್ಪಟ್ಟ "ಒಬ್ಬ ಲೆಪ್ಟಿನಂಟ್" ಯ ಪೋಷಾಕದಂ ಕಡೆ ಯಾಕೆ ವಿಸ್ಮಯಗೊಳ್ಳುತ್ತೀರಿ? ನವಿಲು ಗರಿಯಿಂದ ಶೃಂಗರಿಸಲ್ಪಟ್ಟ ಕಾಗ ನವಿಲಾಗುವದೇ?

[illegible] ಒಂದು ಬೆಳ್ಳಿಯ ತೊಡಂಗ ಮತ್ತು ಅದರ ಕತ್ತಿ [illegible] ಒಡಿಯಲ್ಲ ಒಸ್ವದ [illegible]ಡಿಯ ಪೀಚಕತ್ತಿ. ಇವುಗಳಿಗ ತಕ್ಕ ಬೆಳ್ಳಿಯ [illegible] (ಉಮ್ಮತ) ದೀಕ್ಷೆ ಮತು ವಲ್ವಟ್ ವ[illegible]. ಇದಲ್ಲವೇ ನಿಮ್ಮ ಗೌರವ? ಕಾಪಾಡ್, ರಿಕ್ವರ್, [illegible]ನ್ಸ್ ಮೊದಲಾದವರೇ ಸದರಿ [illegible] [illegible]. ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು' [illegible] [illegible] ಹಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನ ಗಳನ್ನೆಲ್ಲ ತಯಾರಿಸೆ [illegible] ವಿದ್ವಾಂಸರ ಸಮಗ ಬರೆದು ತಿಳಿದ ಕೊಳ್ಳಿ

Commercial Store.
Murnad, Coorg

12—4

ಬಿ ಯಲ್. ಕೋವಿಗಳು ರೂ 75 ರಿಂದ ರೂ. 150/
ಡಿ ಬಿ. ಯಲ್. ಕೋವಿಗಳು ರೂ. 30 ರಿಂದ ರೂ 250 .
ಬಿ. ಯಮ್ ಯಲ್. ಕೋವಿಗಳು ರೂ 35 ರಿಂದ 60 .
[illegible]ರ್‌ಗಳು. ರೂ 40/ರಿಂದ ರೂ. 175/ರ ವರೆಗೆ

[illegible]ಬ್ಬಲ್ ಮತ್ತು ಸಿಂಗಲ್ ತೋಟೆಗ ಮತ್ತು ಕೇಪು ಕೋ[illegible] ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ [illegible]ಗರಿ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ [illegible] ಕೊಡಲಾಗುವದು.

60 ವರ್ಷಗಳಿಂದ ನಮಗೆ ಒಂದ ಅನುಭವದಿಂದ ದಕ್ಷಿಣ [illegible]ಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇ[illegible] ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂ[illegible]ದುವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಮೆಸ್. ವಿ. ರಾಮಾನುಜಂ ಚೆಟ್ಟಿ
ಅಂಡ್ ಕಂಪನಿ.
ಹಿಂದೂಸ್ಥಾನದ ಬಹು ಕಡಿಮೆ ಗೆಲೆಯ ಕಂಪನಿ.
[illegible]—7 12. ಬ್ರಾಡ್. ಮದ್ರಾಸ್.
[illegible]ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

Arms, Ammunition and Shooting Requisites !!!



19-8 Illustrated Catalogue Just Issued Free on Application !

D B B L Rifles	Rs	120	to Rs	2750
S B B L	,,	35	to ,,	950.
D B B L Guns	,,	50	to ,,	1350
S B B L ,,	,,	35	to ,,	275.
D B M L ,,	,,	45	to ,,	135
S B M L ,,	,,	30	to ,,	80
B L Revolvers	,,	35	to ,,	350
Automatic Pistols	,,	30	to ,,	150

Brilliant Search Light Lamp For Shooting Camping, Fishing and All such Other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,

21—15 210 Abdul Rehman Street, BOMBAY.

ನೈಟ್ರೇಟ್ ಆಫ್ ಸೋಡಾ.

ಎಲ್ಲಾ ಬೆಳೆಗಳಿಗೂ ಉತ್ತಮವಾದ ಗೊಬ್ಬರ.

[illegible] ನೈಟ್ರೋಜನ್ ಸತ್ವಾಹಾರವು 15—16% ಇರುವ [illegible] ಇದು ಬೇಗನೆ [illegible] ಗೊಬ್ಬರಗಳಿಂದ ಗಿಡಗಳಿಗೆ ದೊರಕುತ್ತದೆ. ಆದ್ದರಿಂದಲೇ [illegible] ಉಪಯೋಗಿಸುತ್ತಾರೆ. ಬತ್ತ, ಕಬ್ಬು, [illegible] ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರ, ಯಾಲಕ್ಕಿ ಮೊ[illegible] [illegible] ಗೊಬ್ಬರ ಪಸ್ಥಿತ ಊರ ಗೊಬ್ಬರಗಳ ಜೊತೆಯಲ್ಲಿ [illegible] ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ [illegible] ಸತ್ವಾಹಾರವನ್ನು ಗಿಡಗಳಿಗೆ ಒದಗಿಸಿಕೊ[illegible] [illegible] ಆವಶ್ಯಕವಲ್ಲ. ಎಕರೆ ಒಂದಕ್ಕೆ 100—200 ರಾ[illegible] [illegible] "ಕೃಷಿ ಸಂಪತ್ತಿ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸ[illegible] [illegible]

ನೈಟ್ರೇಟ್ ಆಫ್ ಸೋಡವು ಈ ಕೆಳಗಿನ ಸ್ಥಳಗಳಲ್ಲಿ ದೊರೆಯುವುವು.

ಕೆ. ಪಾರ್ಸ್ ಪ್ಯಾರಿ ಅಂಡ ಕೊ., ಮಡಿಕೇರಿ.
ಪೆ. ಪಾರ್ಸ್ ಪ್ಯಾರಿ ಅಂಡ್ ಕೊ., ವೀರರಾಜಪೇಟೆ

or A S Rao Esq, Near Post office Mangalore.

Chilean Nitrate Committee, Post Box 469, Calcutta

24—23

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರವರಿ 28ಕ್ಕೆ ಅಖೈರದ 5 ವರ್ಷಗಳ ಕೆಲಸದ

ಬೆಲೆ ಕಟ್ಟುವಲ್ಲಿ
ರೂ. 37,66,689.
ಉಳುವರಿ ಕಂಡುಬಂದಿದೆ.

ಒಟ್ಟು ಜೀವವಿಮೆಯ 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಗಳಂತೆಯೂ	ಮತ್ತು	ಸ್ವಾಯ ನಿರವಿನ ವಿಮೆಯ 1000 ರೂಪಾಯಿಗಳಿಗೆ 12 ರೂಪಾಯಿಗಳಂತೆಯೂ

[illegible] ಬೋನಸ್ ಹುದ [illegible] ನಿರ್ಧಾರವಾಗಿದೆ

ಹೆಡ್ ಆಫೀಸ್.
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

24—3

ಬ್ರಾಂಚ್ ಆಫೀಸ್.
ಕಮರ್ಶಿಯಲ್ ಬೀದಿ
ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮೂಬಂದ ಠೇವಣಾತಿ	—	1,02,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಯಾನ ರೂ. 5—0—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋಳೇಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ,
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮೆ. ಪೇರಿಯಂಡ ಪೂವಯ್ಯನವರನ್ನೂ ಮತ್ತು ಮೆ ಕಾಳೇಂಗಡ ಚಿಣ್ಣಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ವಿಜಾದಿಲ್ಲ ಡಾರದಲ್ಲಿ, ಮೆ. ಪಾರುವಂಗಡ ಅಚ್ಚಯ್ಯನವರು
ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಬಮ್ಮಡ ಮಾದಪ್ಪನವರು,
ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಸಿ ಜಿ ಮುದ್ದಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ ಮಾದಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ನಾವು ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
ಕೊಡಗು' ಮಡಿಕೇರಿ

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.

[52—20]. 'Please write for our Catalogue 1928—1929

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಪ್ಲೀಹದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0; 6ಕ್ಕೆ ರೂ 7—8—0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದ ಹುಣ್ಣು ಮೊದಲಾದ ರೋಗಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1 3 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಚರ್ಮದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಉರಿ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಚಿತ್ತಚಾಂಚಲ್ಯ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9. ಮಂಗಳೂರು.

52—16

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickpet, BANGALORE CITY.

ಅಪೂರ್ವ ಸಮಯ ! **ಅಲಭ್ಯ ಲಾಭ !**

ತಾವು ಬೆಂಗಳೂರಿಗೆ ಒಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—34

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,08,000.
	1925	ರೂ.	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ 7,38,80,000ಗೆ ಹೆಚ್ಚಿರುತ್ತದೆ.
ಪ್ರೀಮಿಯಂ ವರಮಾನವು ವರ್ಷಕ್ಕೆ ರೂ. 1,05,30,000ಗೆ ಏರಿರುತ್ತದೆ.

"ಓರಿಯಂಟಲ್‌ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹಚ್. ಎಡ್ವಿನ್ ಜೋನ್ಸ್. ಎಫ್ ಎಫ್ ಎ, ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶಮಾಡದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರೆಟರಿ.

52—41

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪ್ರಾವಿಡೆನ್ಸ್ ಅಸೋಸಿಯೇಷನ್ ಲಿಮಿಟೆಡ್
ಹೆಡ್ ಆಫೀಸ್—ಮೈಸೂರು (ದ. ಇಂಡಿಯಾ.)
ಚೀಫ್ ಏಜನ್ಸೀ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಮೇಲ್ಕಂಡ ಸಂಘದ ಕೊಡಗು ದೇಶದ (Provincial) ಪ್ರಾಂತೀಯ ಡೈರೆಕ್ಟರುಗಳು.

ಕೊಡಗು ದೇಶದಲ್ಲಿರತಕ್ಕ ಸಂಘದ ಶೇರು ಮತ್ತು ಬಾಂಡು ಹೋಲ್ಡರುಗಳ ಮೂಲಧನಕ್ಕೆ ಯಾವ ವಿಧವಾದ ಅಪಾಯವು ಬಾರದಂತೆ ಮಾಡುವುದಕ್ಕೂ, ಕೊಡಗು ದೇಶದಲ್ಲಿ ಸಂಘದ ಕಾರ್ಯಗಳ (Business) ನ್ನು ನಡೆಸುವುದರಿಂದ ಬರತಕ್ಕ ನಫೆಯು ಹೊರಗಿನವರಿಗೆ ಹೋಗದೆ ಕೊಡಗು ದೇಶದಲ್ಲಿರತಕ್ಕ ಸಂಘದ ಶೇರು ಮತ್ತು ಬಾಂಡು ಹೋಲ್ಡರುಗಳೇ ಅನುಭವಿಸುವಂತೆ ಮಾಡುವುದಕ್ಕೂ ಸದರಿ ಸಂಘದ ಹೆಡ್ಡಾಫೀಸಿನವರ ಅನುಮತಿಯಿಂದ ತಮ್ಮ (ಅಂದರೆ ಕೊಡಗು ದೇಶದ ಡೈರೆಕ್ಟರುಗಳ) ಮೇನೇಜಮೆಂಟಿನಲ್ಲಿ ಸಂಘದ ಒಂದು ಬ್ರಾಂಚನ್ನು ಕೊಡಗು ದೇಶಕ್ಕೆ ಮುಖ್ಯ ಪಟ್ಟಣವಾಗಿರುವ ಮಡಿಕೇರಿಯಲ್ಲಿ ಸ್ಥಾಪಿಸುವುದಕ್ಕೆ ಏರ್ಪಾಡು ಮಾಡಿದ್ದಾರೆ. ಈ ವಿಷಯದಲ್ಲಿ ಕೊಡಗು ದೇಶದಲ್ಲಿ ಹಾಲಿ ಇರತಕ್ಕ ಶೇರು ಮತ್ತು ಬಾಂಡು ಹೋಲ್ಡರುಗಳ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಇದೇ ಸನ್ 1928ನೇ ಇಸವಿ ಜನವರಿ ತಾರೀಖು 29ನೇ ಆದಿತ್ಯವಾರ ಸಾಯಂಕಾಲ 3 ಗಂಟೆಗೆ ಸರಿಯಾಗಿ ಶ್ರೀ ಕಾವೇರಿ ಬಸ್ ಸರ್ವಿಸ್ ಆಫೀಸ್ ಪಕ್ಕದಲ್ಲಿರುವ ಈ ಸಂಘದ ಚೀಫ್ ಏಜೆನ್ಸಿ ಆಫೀಸಿನಲ್ಲಿ ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಮೀಟಿಂಗು ಇಟ್ಟಿರುತ್ತೆ. ಆದ್ದರಿಂದ ಆ ಕಾಲಕ್ಕೆ ಸರಿಯಾಗಿ ಎಲ್ಲರೂ ತಪ್ಪದೆ ದಯಮಾಡತಕ್ಕದ್ದು. ಈ ಮೀಟಿಂಗಿನಲ್ಲಿ ಕೊಡಗಿನಲ್ಲಿ ನಡೆಯುವ ಬ್ರಾಂಚ್ ನಿರ್ಧರಿಸುವ ವಿಷಯ ಚರ್ಚೆ ನಡೆಯುವುದು

ಪಿ. ದೇವಯ್ಯ.
ಪ್ರೋವಿನ್ಸಿಯಲ್ ಬೋರ್ಡು ಚೇರ್ಮೇನ್.

52—51

Printed & published by P. I. Belliappa, at Kodagu Press, Mercara for "Kodagu" Ltd.

"KODAGU" OFFICE MERCARA

ಕೊಡಗು.

ಪ್ರತಿ ವಾರ ಪ್ರಕಟಿಸಲ್ಪಡುವದು.

[ಸಂಚಿಕೆ ೩೪

Wanted

HONEST AND WILLING YOUNGMEN AS CLERK AND SALESMAN.

PAY ACCORDING TO QUALIFICATIONS.

APPLY PERSONALLY TO

SPENCER & CO LTD, POLLIBETTA.

52–1

V. SUBRAMANIA IYER

Manufacturing,

JEWELER

GOLDSMITH, SILVERSMITH & DEALER IN ALL PRECIOUS STONES

Post Box 423
TRIPLICANE, MADRAS

Catalogue Free
to Bonafide Enquirer.

Rose Water Sprinkler





Nosescrews · Claver · Drop · Broocn

Chased Silver Mirror

Manufacture of HIGH CLASS GEMSET JEWELS a speciality

The specialities of my products are
1 Best Quality
2 Latest designs
3 Prompt execution
4 Neat & artistic finish
5 Most moderate prices

GOLD or SILVERWARE of all descriptions neatly executed

52–21

Before buying any Arms, Ammunition, please order our Reduced NEW PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,
Bombay.

24–21

ರಜೋರ

ಸಾರಸಾ ಪರಿಲಾ.

ಕರ್ನಾಟಕ ಬ್ರದರ್ಸ್,

12–4

ಗಿರಗಾಂವ, ಮುಂಬಾಯಿ.

ಕೊಡಗು

ಸ. ೧೯೨೮ನೇ ಇಸವಿ ಫೆಬ್ರವರಿ
ತಾ. ೩ ನೇ ಶುಕ್ರವಾರ

೧೯೨೬-೨೭ನೇ ವರ್ಷದ ಕೊಡಗು ದೇಶದ ಆಡಳಿತ ವರದಿ—

ಆಡಳಿತದ ಮೇಲೆ ಸರಕಾರದ ಅಧಿಕಾರಿಗಳ ಸ್ವಂತ ಅಭಿಪ್ರಾಯವನ್ನು ಕೊಡುವ ಸಾಧಾರಣ ಪದ್ಧತಿಯು ಈ ವರದಿಯಲ್ಲಿ ಕಂಡು ಬರುವದಿಲ್ಲ. ವರದಿಯ ವರ್ಷದಲ್ಲಿ ಮೂವರು ಕಮಿಶನರುಗಳು ಆಗಿ ಹೋದರು. ವರದಿಯನ್ನು ಬರೆಯುವಾಗ ಅವರು ಯಾರೂ ಇರಲಿಲ್ಲ. ಆದ್ದರಿಂದಲೇ ವರದಿಯಲ್ಲಿ ವಿಶೇಷ ಅಭಿಪ್ರಾಯಗಳಿಲ್ಲದೆ ಇರಲು ಕಾರಣವಿರಬಹುದು. ನಮ್ಮ ದೇಶದ ಆಡಳಿತ ನಡಿಸಲು ಆರುಸಾವಿರ ಮೈಲು ಆಚೆ ಇರುವ ಜನರ ಅನುಕೂಲಗಳನ್ನು ಹೊಂದಿ ಇರುವದರಿಂದ ಗಡಿ ಗಡಿ ನಮ್ಮ ಕಮಿಶನರುಗಳು ಬದಲಾಗಿ ಅವರ ಅನುಭವಗಳೆಲ್ಲವೂ ನಮಗೆ ಉಪಯೋಗವಿಲ್ಲದೆ ಹೋಗುವದಾಗಿದೆ.

ಈ ದೇಶದ ಸರಕಾರದ ಆದಾಯ-ವೆಚ್ಚದ ವಿವರವು ಸರಿಯಾಗಿ ವರದಿಯಲ್ಲಿ ಇಲ್ಲದಿರುವದು ಬಹಳ ವಿಷಾದಕರವಾಗಿದೆ. ಈಗ ಕೊಡಗಿನ ಸರ್ಕಾರವು ಏರ್ಪಡಿಸಲ್ಪಟ್ಟಂದಿನಿಂದ ಇಲ್ಲಿನ ಆದಾಯ ವೆಚ್ಚವನ್ನು ಎಲ್ಲರಿಗೂ ತಿಳಿಯುವಂತೆ ಕೊಡುವದು ಬಹಳ ಅವಶ್ಯ. ಈಗಿನ ರೀತಿಯು ಬಹಳ ಪುರಾತನ ಕಾಲದಿಂದ ನಡೆದು ಬಂದದ್ದೇ ಹೊರತು ಯಾರಿಗೂ ತಿಳಿಯುವಂತಿಲ್ಲ. ಬಜೆಟ್ಟಿನಲ್ಲಿ ಪ್ರತಿಯೊಂದು ಬಾಬನ್ನೂ ಕೊಡುತ್ತಾರೆ. ಆದರ ಘೋಷ್ವಾರೆಯನ್ನು ವರದಿಯಲ್ಲಿ ಕೊಡುವದು ಬಹಳ ಅವಶ್ಯವಾಗಿದೆ.

ಕೌನ್ಸಿಲಿನ ಕೆಲಸವನ್ನು ವಿವರಿಸಿದ್ದರಲ್ಲಿ ಜನರಾಗಲೀ, ಮೇಲಿನ ಸರ್ಕಾರವಾಗಲೀ ತಿಳಿದುಕೊಳ್ಳಬೇಕಾದ ವಿಶೇಷ ಸಂಗತಿಗಳೇನೂ ಇಲ್ಲ. ರೂಲ್ಸುಗಳಲ್ಲಿ ಹೇಳುವ ಮೇರೆ ಫೈನಾನ್ಸ್ ಕಮಿಟಿಯ ಚುನಾವಣೆಯಾಯಿತು ಆದರ ರಿಪೋರ್ಟು ಫಲಾನೆ ತಾರೀಕಿನಲ್ಲಿ ಒಪ್ಪಿಸಲಾಯಿತು ಎಂತ ಬರದದ್ದರಿಂದ ಯಾರಿಗೆ ಹೆಚ್ಚಿಗೆ ತಿಳುವಳಿಕೆಯಾಯಿತೋ ತಿಳಿಯಲಿಲ್ಲ. ಆದರ ಬದಲಿಗೆ ಕೌನ್ಸಿಲಿನಲ್ಲಿ ನಡೆದ ಬಜೆಟ್ ಚರ್ಚೆಯಿಂದಾಗಲೀ, ಇತರ ಠರಾವುಗಳ ಚರ್ಚೆಯಿಂದಾಗಲೀ ಸರಕಾರದ ಆಡಳಿತವು ಜನರ ಅಭಿಮತಕ್ಕನುಗುಣವಾಗಿ ಎಷ್ಟರಮಟ್ಟಿಗೆ ಆಯಿತೆಂತ ವಿವರಿಸಿದ್ದರೆ ಎಷ್ಟೋ ಪ್ರಯೋಜನವಾಗುತ್ತಿತ್ತು.

ದೇಶದ ಜನನ ಮರಣಗಳ ಸಂಖ್ಯೆಯನ್ನು ನೋಡಿದರೆ ರಾಜ್ಯಭಾರವು ಆಗಬೇಕಾದಂತೆ ಆಗುತ್ತಿಲ್ಲವೆಂಬದು ಕೆಲವು ಮಟ್ಟಿಗಾದರೂ ಗೊತ್ತಾಗುತ್ತದೆ. ಮರಣ ಸಂಖ್ಯೆಯು ಹಿಂದಿನ ವರ್ಷದಲ್ಲಿ 5049 ಆದದ್ದು ಈ ವರ್ಷದಲ್ಲಿ 5539 ಕ್ಕೆ ಏರಿದೆ. ಜನನ ಸಂಖ್ಯೆಯು ಹಿಂದಿನ ವರ್ಷದಲ್ಲಿ 3093 ಆದದ್ದು ಈ ವರ್ಷದಲ್ಲಿ 3728 ಆಯಿತು. ಜನನಕ್ಕಿಂತ ಮರಣವು 2506 ಹೆಚ್ಚಾಗಿರುವಾಗ ದೇಶದ ಜನರಲ್ಲಿ ಬಾಯಿಲೆಯನ್ನು ತಡೆಯುವ ಶಕ್ತಿಯೇ ಇಲ್ಲವೆಂಬದು ಸ್ಪಷ್ಟವಾಯಿತು. ದೇಶದ ಕೆಲವು ಸ್ಥಳಗಳಲ್ಲಂತೂ ಜನನಕ್ಕಿಂತ ಮರಣವು ಮೂರು ಪಾಲು ಹೆಚ್ಚಾಗುತ್ತಲಿದೆಯೆಂತ ತಿಳಿಯಬರುತ್ತದೆ. ಮಲೇರಿಯಾ, ನ್ಯುಮೋನಿಯಾ ಮುಂತಾದ ಬಾಯಿಲೆಗಳ ಪ್ರತಿಬಂಧನೆ ಸರ್ಕಾರವು ಮಾಡುವದೇನಂತ ಸಂಶಯ ಬರುವ ಕಾಲ ಬಂದದ್ದೇ ಹೋಯಿತೆಂತ ತಿಳಿಯುತ್ತೇವೆ. ಜನರ ಶರೀರಶಕ್ತಿಗೆ ಬೇಕಾದ ಆಹಾರವು ಹೊಟ್ಟೆ ತುಂಬಾ ಇದ್ದರೆ ಬಾಯಿಲೆ ಬಂದ ಮಾತ್ರದಿಂದಲೇ ಮರಣದಲ್ಲಿ ಅಂತ್ಯವಾಗುವದಿಲ್ಲ. ಹೊಟ್ಟೆ ಬಟ್ಟೆಗೆ ಇಲ್ಲದವರಲ್ಲಿ ಮರಣಸಂಖ್ಯೆ ಹೆಚ್ಚು ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹೊಟ್ಟೆಗೆ ಇಲ್ಲದೆ ಸಿಕ್ಕಿದ್ದು ತಿಂದು ಜೀವಿಸುವವರೇ ಹೆಚ್ಚು ಬಾಯಿಲೆಯಿಂದಲೇ ಮರಣಪಡುತ್ತಾರೆ. ಮಲೇರಿಯಾ ಕಮಿಟಿ ರಿಪೋರ್ಟಿನಲ್ಲಿಯೂ ಸಹ ಹೊಟ್ಟೆ ತುಂಬಾ ಅನ್ನವಿದ್ದರೆ ಮಲೇರಿಯಾಕ್ಕೆ ಜನರು ಈಗಿನಷ್ಟು ತುತ್ತಾಗಲಾರರೆಂಬ ಅಭಿಪ್ರಾಯ ಕೊಟ್ಟಿದೆ. ಉದ್ಯೋಗವಿಲ್ಲದ ಜನರಿಗೆ ಉದ್ಯೋಗ ದೊರಕಿಸುವದು ಸರ್ಕಾರದ ಕರ್ತವ್ಯವೆಂತ ಪಾಶ್ಚಿಮಾತ್ಯ ದೇಶಗಳಲ್ಲಿ ಒಪ್ಪಲ್ಪಟ್ಟ ವಿಷಯವಾಗಿದೆ. ಪ್ರಜೆಗಳು ಬೆಳೆಸಿದ ಬೆಳೆಯ ಶೇಕಡ 50 ರಷ್ಟು ಸರ್ಕಾರವು ತೆಗೆದುಕೊಳ್ಳುತ್ತಿರುವದಲ್ಲದೆ ಜನರಿಗೆ ಕಡಕು ಮಾಡುವ ನಿಷವನ್ನು ಕೊಟ್ಟು ಇನ್ನಷ್ಟು ಹಣ ಸಂಪಾದಿಸುತ್ತಾರೆ ಇದಕ್ಕೆ ಪ್ರತಿಯಾಗಿ ಜನರಿಗೆ ಸಿಕ್ಕುವ ಪ್ರತಿಫಲವು ಬಹಳ ಕಡಿಮೆ. ಜನರ ಉತ್ಪತ್ತಿಯನ್ನು ಹೆಚ್ಚಿಸುವ ದಾರಿಯನ್ನು ಜನರಿಗೆ ಸರಕಾರವು ತೋರಿಸಿಕೊಡಬೇಕು. ಅಥವಾ ಸರ್ಕಾರವು ಜನರಿಂದ ತೆಗೆದುಕೊಳ್ಳುವ ತೆರಿಗೆಯನ್ನಾದರೂ ಕಡಿಮೆಮಾಡಬೇಕು.

ಸಿವಿಲ್ ಕೋರ್ಟುಗಳ ಕೆಲಸವನ್ನು ವಿವರಿಸುವಾಗ ಚೀಫ್ ಕಮಿಶನರ ಕೋರ್ಟಿನಲ್ಲಿ 8 ಕೇಸುಗಳು ಬಾಕಿಯಾಗಿದ್ದವು, ಮತ್ತು ವಜಾಬಾದವುಗಳಲ್ಲಿ ಒಂದೇ ಒಂದು ಮಾತ್ರ ತೀರ್ಮಾನವಾಯಿತಂತೆ. ದೇಶದ ಹೈಕೋರ್ಟಾಗಿರುವ ಈ ಕೋರ್ಟಿನಲ್ಲಿ ತೀರ್ಮಾನವು ಬಹಳ ನಾವಕಾಶವಾಗುತ್ತಿದೆಯೆಂತ ಕೂಗು ಒಹುವಾಗಿ ಕೇಳುತ್ತದೆ. ಬೊಡಸು ಠಕ್ಕೆ ಸಂಬಂಧಪಟ್ಟ ಒಂದು ಕೇಸು ಸುಮಾರು ಒಂದು ವರ್ಷಕ್ಕಿಂತ ಮೊದಲೇ ಆಗಿರುವದು ಇನ್ನೂ ತೀರ್ಮಾನವಾಗಿಲ್ಲವಂತೆ! ಈ ಕೇಸಿನ ತೀರ್ಪನ್ನು ಎದುರು ನೋಡುತ್ತಿದ್ದ ಕೆಳ ಕೋರ್ಟಿನವರು ಅರ್ಥಾಮೊಕದ್ದಮೆಗಳನ್ನು ಮುಂದರಿಸಲು ಯೋಚಿಸಿದ್ದಾರೆ. ದೇಶದ ಆಡಳಿತದ ಮುಖ್ಯ ಅಧಿಕಾರಕ್ಕೂ ಮತ್ತು ಮೈಸೂರು ರಾಜ್ಯದಲ್ಲಿ ಪೊಲಿಟಿಕಲ್ ಏಜೆಂಟರ ಕೆಲಸಕ್ಕೂ ಸಮಯವನ್ನೆಲ್ಲಾ ಕೊಡಬೇಕಾಗುವ ಈ ಅಧಿಕಾರಿಗಳಿಂದ ಕಕ್ಷಿಗಾರರಿಗೆ ತುರಿತದಲ್ಲಿ ನ್ಯಾಯತೀರ್ಪು ಈ ಕೋರ್ಟಿನಲ್ಲಿ ಸಿಕ್ಕದೆ ಇರುವದರಲ್ಲಿ ಆಶ್ಚರ್ಯವಿಲ್ಲ. ತನ್ನ ತಾಬೆಯ ನ್ಯಾಯತೀರ್ಪಿನ ಅಧಿಕಾರಿಗಳ ಕೆಲಸ ಮೇಲ್ವಿಚಾರ ಮಾಡುತ್ತಿರುವ ಚೀಫ್ ಕಮಿಶನರು ನ್ಯಾಯತೀರ್ಪಿನಲ್ಲಿ ತಡಮಾಡದೆ ಇರಬೇಕಾದದ್ದು ಅವಶ್ಯ.

ರಿಜಿಸ್ಟ್ರೇಷನ್ ಇಲಾಖೆಯ ಕೆಲಸವು ಆಗಬೇಕಾದಷ್ಟು ತ್ವರಿತದಲ್ಲಿ ಕಲಸವಾಗುತ್ತಿಲ್ಲವೆಂತ ಅನೇಕರ ಕೂಗು ಕೇಳಿದ್ದೇವೆ. ಈ ಇಲಾಖೆಯ ರೂ. 6,161 ನಿವ್ವಳ ಉಳಿವರಿ ಇರುವಾಗ ಕೆಲಸ ಪ್ರಜೆಗಳಿಗೆ ತೃಪ್ತಿಯಾಗುವಷ್ಟು ಬೇಗನೆ ನಡೆಸುವ ಬಗ್ಗೆ ಹೆಚ್ಚಿಗೆ ಗುಮಾಸ್ತರುಗಳನ್ನು ಇಟ್ಟುಕೊಳ್ಳಬೇಕಾದದ್ದು ಯುಕ್ತವಾಗಿದೆ.

ವರದಿಯ ವರ್ಷದಲ್ಲಿ ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತದಲ್ಲಿ ದೊಡ್ಡ ಗಂಡು ಬಂದು ನಮಗೆ ತೋರಿಬರುತ್ತದೆ ಈ ಸಂಸ್ಥೆಯ ಇಂಜಿನೀಯರಿಂಗ್ ಶಾಖೆಗೆ 46,000 ರೂ. ಖರ್ಚು ಇಟ್ಟಿದ್ದದ್ದರಲ್ಲಿ ಒಂದೇ 21,39ರೂ. ಮಾತ್ರ ಖರ್ಚಾಯಿತಂತೆ. ಬಜೆಟ್ಟಿಗೆ ಚೀಫ್ ಕಮಿಶನರ ಮಂಜೂರಾತಿ ಸಿಕ್ಕುವದು ತಪ್ಪಿ ಅಲಕ್ಷ್ಯವಾದ ಕಾರಣಗಳಿಂದ ತಡವಾದದ್ದಂತೆ. ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತದಿಂದ ಪ್ರಜೆಗಳಿಗೆ ತಾವು ಕೊಟ್ಟ ಕಂದಾಯವು ಸ್ವಲ್ಪವಾದರೂ ವಾಪಸು ಸಿಕ್ಕುವದು. ಗ್ರಾಮಾಂತರಗಳಲ್ಲಿ ವಾಸಿಸುವ ಜನರ ಉಪಯೋಗಕ್ಕಾಗಿ ಮಾಡಬೇಕಾದ ಕೆಲಸಗಳನ್ನೆಲ್ಲಾ ಬಾಕಿ ಮಾಡಿದ್ದು, ಯಾರ ಜವಾಬ್ದಾರಿ ಆಗಲಿ ಬಹಳ ದೊಡ್ಡ ತಪ್ಪು. ಶಾಲೆಗಳು ಬೇಕೆಂತ ಬಂದನೇಕ ಅರ್ಜಿಗಳನ್ನು ಹಣವಿಲ್ಲದೆ ತಿರಸ್ಕರಿಸಲಾಯಿತೆಂತಲೂ ಹಣವಿಲ್ಲದೆ ಕುಡಿಯುವ ನೀರಿನ ಬಾವಿಗಳನ್ನು ಮಾಡಿಸಲು ಇಲ್ಲವಂತಲೂ ಹೇಳುವಾಗ ಇಂಜಿನೀಯರಿಂಗ್ ಖರ್ಚಿಗೆ ಅನಾವಶ್ಯವಾಗಿ ಸುಮಾರು 25,000 ರೂ. ಖರ್ಚು ನಡೆದ ಕಟ್ಟಿಟ್ಟದ್ದು ಎಂಥಾ ತಪ್ಪೆಂತ ವಾಚಕರಿಗೆ ಗೊತ್ತಾಗದೆ ಇರಲಾರದು

ವೀರಾಜಪೇಟೆ ಮುನಿಸಿಪಾಲಿಟಿಯಲ್ಲಿ ತೆರಿಗೆಯು ಸರಾಸರಿ ತಲೆ ಒಂದರ ರೂ. 5—0 ಯಂತೆ. ಇಷ್ಟು ಹೆಚ್ಚಿನ ದರದಲ್ಲಿ ತೆರಿಗೆ ಹಾಕಿದ್ದರಿಂದ ಮುನಿಸಿಪಾಲಿಟಿಗೆ ಹಣದ ಅವಶ್ಯಕತೆಯಿದೆಯೆಂತಾಯಿತು. ಅವಶ್ಯವಿಲ್ಲದೆ ಪ್ರಜೆಗಳಿಂದ ಒಂದು ಕಾಸಾದರೂ ಹೆಚ್ಚಿಗೆ ತೆರಿಗೆ ತೆಗೆದುಕೊಳ್ಳಬಾರದೆಂಬ ತತ್ವವನ್ನು ಸರಕಾರ, ಮುನಿಸಿಪಲ್ ಅಧಿಕಾರಿಗಳೂ ಒಪ್ಪದಿರಲಾರರು. ವರ್ಷ ಪ್ರಾರಂಭದಲ್ಲಿ ರೂ. 13,428 ಬಾಕಿ ಇತ್ತೆಂತಲೂ, ವರ್ಷದ ಅಖೈರಿನ ಸಿಲ್ಕು ರೂ. 17,668 ಕ್ಕೆ ಏರಿತೆಂತಲೂ ಬರೆ! ಇದರಿಂದ ಹಿಂದಿನ ವರ್ಷಗಳಲ್ಲೂ ಮತ್ತು ವರದಿಯ ವರ್ಷದಲ್ಲೂ ಅವಶ್ಯಕ್ಕಿಂತ ಹೆಚ್ಚಿಗೆ ತೆರಿಗೆ ವಸೂಲಾಗಿದೆಯೆ ಅಥವ ಅವಶ್ಯವಿರುವ ಖರ್ಚುಗಳನ್ನು ಮಾಡುತ್ತಿಲ್ಲವೆಂದರ್ಥವಾಗುತ್ತದೆ. ಪ್ರಜಾಪ್ರತಿನಿಧಿಗಳ ಒಹುಮತವಿರುವ ಸಂಸ್ಥೆಗಳಲ್ಲಿ ಇಂಥಾ ಆಕ್ಷೇಪಣೆಗಳಿಗೆ ಎಡೆ ಕೊಡಬಾರದು.

ಡಿ. ಪಿ. ಡಬ್ಲ್ಯು ಇಲಾಖೆಯಲ್ಲಿ ವೀರಾಜಪೇಟೆಯಲ್ಲಿ ತೆಗೆದು ಹಾಕಿದ್ದ ಸಬ್‌ಡಿವಿಜನನ್ನು ಪುನಃ ಪ್ರಾರಂಭಿಸಿದರಂತೆ. ಈ ಡಿವಿಜನನ್ನು ಎಗ್ಸಿಕ್ಯೂಟಿವ್ ಇಂಜಿನೀಯರೇ ನೋಡಿಕೊಳ್ಳಬೇಕೆಂತ ಕಬಿಲ್ ಸ್ಕೀಮಿನ ಮೇರೆ ತೀರ್ಮಾನವಾದದ್ದು. ಎಗ್ಸಿಕ್ಯೂಟಿವ್ ಇಂಜಿನೀಯರಿಗೆ ಈ ಕೆಲಸವನ್ನು ನೋಡಿಕೊಳ್ಳುವಮಯ ನಾಲಲಿಲ್ಲವಂತೆ. ನಮ್ಮ ಅಭಿಪ್ರಾಯದಲ್ಲಿ ಪರ್ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದ ಈ ಇಲಾಖೆಯನ್ನವೆಲ್ಲಾ ಒಬ್ಬ ಅಸಿಸ್ಟಂಟ್ ಇಂಜಿನೀಯರಿಂದ ನಡೆಯಬಹುದು. ಹೀಗಿರುವಲ್ಲಿ ಎಗ್ಸಿಕ್ಯೂಟಿವ್ ಇಂಜಿನೀಯರಿಂದು ಸಬ್ ಡಿವಿಜನ್ ಕೆಲಸವನ್ನು ಸ್ವತಃ ನೋಡಿಕೊಳ್ಳ ಸಮಯವಿರಲಿಲ್ಲವೆನ್ನುವದನ್ನು ಒಪ್ಪಲು ಸಾಧ್ಯವಿಲ್ಲ. ಈ ಅನಾವಶ್ಯ ಖರ್ಚನ್ನು ಪುನಃ ಪ್ರಾರಂಭಿಸಿದಕ್ಕೆ ವಿರೋಧಲೇ ಬೇಕು.

ಅರವನೆ ರಿ. ಕೆಲಸಕ್ಕೆ ಇಟ್ಟ ಹಣವು ಖರ್ಚಾಗಲಿಲ್ಲವೆಂತಲೂ, ವರ್ಷದಲ್ಲಿ (1927—28) ಮಾಡಬಾಗುವದೆಂತಲೂ ಇದೆ. ವರ್ಷದಲ್ಲಿ ಇನ್ನೂ ಮಾಡಿರುವದಿಲ್ಲ. ಈ ವರೆಗೆ ಬೇಕಾದ ಎಸ್ಟಿಮೇಟುಗಳು ಆಗಿದ್ದರೂ ಈ ವರ್ಷವೂ ಯಾರೊಬ್ಬ ಇಂಜಿನೀಯರು ಒಂದು ನೋಡಿ ಹೋದರಂತೆ. ಏದಲಿನ ಅಂದಾಜಿಗಿಂತ ಅರವನೆಯ ಪೂರ್ವಭಾಗವನ್ನಾರ್ತಿ ಎಚ್ಚರ ಕಟ್ಟುವ ಬದಲು ಬರೇ ತೇಪೆಹಾಕುವ ಯೋಚನೆಯಂತೆ. ತೇಪೆಹಾಕುವ ಕೆಲಸಕ್ಕಿಂತ ಅರವನ್ನ ಇದ್ದಂತೆ ಬಿಡುವದೇ ಲೇಸೆಂತ ತೋರುತ್ತದೆ. ಹಿಂದೆ ಪ್ರಾರಂಭಿಸಿ ಮಾಡಿದ ಕೆಲಸವೆಲ್ಲಾ ನಿಷ್ಪ್ರಯೋಜಕ ಪೂರ್ತಿ ಬಚ್ಚಿಯೇ ಕಟ್ಟಬೇಕಿತ್ತೆಂತ ಇನ್ನೊಬ್ಬ [illegible]ಯರು ಹೇಳಲಾರರೆಂಬ ಭರವಸೆ ಇಲ್ಲ ಆಗ ತೇಪೆ ಕೆಲಸಕ್ಕೆ ಖರ್ಚಾದ ಅರ್ಧಲಕ್ಷ ಅಥವಾ ಹೆಚ್ಚಿನ ಹಣವೆಲ್ಲಾ ನಿಷ್ಪ್ರಯೋಜನವಾಗಿ ಬಿಡುತ್ತದೆ.

ಆರು ಕೆರೆ ರಿಪೇರಿಗೆ 1850 ರೂ. ಖರ್ಚು ಅಂದಾಜು ಮಾಡಲಾಗಿದೆ. ಈ ಕೆಲಸವನ್ನು ಕೈಕೊಂಡರೋ, ಇಲ್ಲವೋ ತಿಳಿಯಲಿಲ್ಲ. ಜನರಿಗೆ ಅತಿ ಅವಶ್ಯವಾದ ಕೆರೆ ರಿಪೇರಿ ಕೆಲಸ ಮುಂತಾದ್ದಕ್ಕೆ ಖರ್ಚುಮಾಡಲು ಸ್ವಲ್ಪವೂ ತಡಮಾಡಬಾರದು. ಇಂಥಾ ಕೆಲಸಕ್ಕೆ ಹಣವಿಲ್ಲದಿರುವಾಗ ಸಿಬ್ಬಂದಿ ಹೆಚ್ಚಿಸಿಕೊಳ್ಳಲು ಹಣದ ಕಷ್ಟವೇ ಇಲ್ಲ

ಪ್ರೈಮರಿ ವಿದ್ಯಾಭ್ಯಾಸವು ನಮ್ಮ ದೇಶದಲ್ಲಿ ತಕ್ಕಷ್ಟು ಮುಂದುವರಿದಿದೆ ಎಂತ ಕೆಲವು ಸಾರಿ ಕೆಲವರು ಅನ್ನುವದುಂಟು. ಜನ ಸಂಖ್ಯೆಯ ಶೇಕಡ 5.33 ರಷ್ಟು ಮಾತ್ರ ಎಲ್ಲಾ ಶಾಲೆಗೂ ಹೋಗುವ ವಿದ್ಯಾರ್ಥಿಗಳ ಲೆಖ್ಖವಂತೆ ಅಮೇರಿಕಾ ಮತ್ತು ಇಂಗ್ಲೆಂಡಿನಲ್ಲಿ ಪ್ರೈಮರಿ ಶಾಲೆಗಳಿಗೇನೇ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ಜನ ಸಂಖ್ಯೆಯ ಶೇಕಡ 20 ರಷ್ಟು ಇದೆ. ಆದ್ದರಿಂದ ಪ್ರೈಮರಿ ವಿದ್ಯೆಯು ಸಿಕ್ಕಬೇಕಾದವರಿಗೆಲ್ಲಾ ಸಿಕ್ಕುತ್ತಿಲ್ಲವೆಂಬದು ಗೊತ್ತಾಗುವದು. ಮುಂದುವರಿದ ಪಂಗಡಗಳಲ್ಲಿ ಪ್ರೈಮರಿ ವಿದ್ಯೆಯ ಪ್ರಯೋಜನವು ಹೆಚ್ಚಾಗಿ ದೊರಕುತ್ತಿದ್ದರೂ ಎಲ್ಲಾ ಜನರಿಗೂ ಪ್ರೈಮರಿ ವಿದ್ಯೆಯನ್ನು ಕೊಡುವ ಸರಕಾರದ ಮೂಲ ಕರ್ತವ್ಯವು ನಡೆಯುವದಿಲ್ಲವೆಂಬದು ವರದಿಯಲ್ಲಿ ಕೊಟ್ಟ ಲೆಖ್ಖದಿಂದ ತಿಳಿಯುತ್ತದೆ.

ಒಟ್ಟಿನ ಮೇಲೆ ವರದಿಯಿಂದ ಸರ್ಕಾರವು ನಡೆಯುತ್ತದೆಯೆಂಬದು ತಿಳಿಯುತ್ತದೆಯೇ ಹೊರತು ಯಾವ ಬಾಬಿನಲ್ಲೂ ಜನರ ಸ್ಥಿತಿಯೂ, ಅನುಕೂಲಗಳೂ ಅಭಿವೃದ್ಧಿಯು ಆಗುತ್ತಿಲ್ಲವೆಂತ ತೋರಿ ಬರುತ್ತದೆ.

ಮದ್ರಾಸ್ ಕೌನ್ಸಿಲಿನಲ್ಲಿ ಸೈಮನ್ ಕಮಿಷನ್ನಿನ ಬಹಿಷ್ಕಾರದ ಠರಾವಿನ ಮೇಲೆ ಆದ ಎರಡು ಭಾಷಣಗಳ ಸಾರಾಂಶ.

ಮದ್ರಾಸ್ ಸರಕಾರದ ಫೈನಾನ್ಸ್ ಮೆಂಬರ್ ನಾಮದಾರ ಟಿ. ಇ. ಮೂಯಿರ್ ಇವರು ಹೇಳಿದ್ದೇನೆಂದರೆ—

ಅಸ್ಪೃಶ್ಯರ ಹೀನಸ್ಥಿತಿಗೆ ಜಾತಿ ಹಿಂದುಗಳೇ ಕಾರಣವಲ್ಲವೇ? ಉತ್ತಮ ಜಾತಿಯ ಕೆಲವರು ಅಸ್ಪೃಶ್ಯರ ಮೇಲ್ಮೆಗೆ ಕೆಲಸ ಮಾಡುತ್ತಿದ್ದರೂ ಅವರಿಗೆ ಒಟ್ಟು ಜಾತಿಯ ಪ್ರೋತ್ಸಾಹ ಸಿಕ್ಕುತ್ತಿರುವದಿಲ್ಲ. ಆದ್ದರಿಂದ ಈ ಹಿಂದುಳಿದವರ ಭವಿಷ್ಯತ್ತನ್ನು ಯೋಚಿಸಿ ಈ ಜನರ ಪ್ರತಿನಿಧಿಗಳು ಠರಾವಿಗೆ ಓಟು ಕೊಡಬಾರದು. ಯಾವ ಪಾರ್ಲಿಮೆಂಟಿನ ಆಕ್ಟು ಮೇರೆ ಈ ಕೌನ್ಸಿಲ್ ಏರ್ಪಾಡಾಗಿದೆಯೋ ಈ ಠರಾವನ್ನು ಚರ್ಚೆ ಮಾಡಲು ಅನುಕೂಲ ಕೊಟ್ಟಿರುವದೋ ಅಂಥಾ ಆಕ್ಟ್ ಮೇರೆಯೇ ನೇಮಕವಾದ ಕಮಿಶನನ್ನು ಬಹಿಷ್ಕರಿಸುವದು ಯುಕ್ತವಲ್ಲ. ಈ ಕಮಿಶನ್ನಿಗೆ ಬಹಿಷ್ಕಾರ ಹಾಕಿ ಹಿಂದುಸ್ಥಾನದ ಸರಕಾರದ ರಚನೆಯು ಹಿಂದೀಯರು ನಿಶ್ಚೈಸಬೇಕೆಂತಾದರೆ ಈ ಠರಾವನ್ನು ಇಲ್ಲಿ ಚರ್ಚಿಸಲು ತಂದದ್ದು ಯಾತಕ್ಕೆ? ಹಿಂದುಸ್ಥಾನದ ಭವಿಷ್ಯತ್ತನ್ನು ನಿರ್ಣೈಸಲು ರೌಂಡ್ ಟೇಬಲ್ ಕಾನ್ಫರೆನ್ಸ್ ಏರ್ಪಡಿಸಿಕೊಡಬೇಕೆಂತ ಪಾರ್ಲಿಮೆಂಟನ್ನು ಯಾಕೆ ಕೇಳಬಾರದು? ಈ ವಿಷಯವನ್ನು ಚೆನ್ನಾಗಿ ಅರಿತಿರುವ ಲಾರ್ಡ್ ಬರ್ಕನ್‌ಹೆಡ್ಡರು ಮಾಡಿರುವ ಏರ್ಪಾಡಿಗೆ ಪಾರ್ಲಿಮೆಂಟಿನ ಒಪ್ಪಿಗೆಯಾಗಿರುವಾಗ ಅದಕ್ಕೆ ವಿರೋಧಿಸಿದರೆ ದೇಶಕ್ಕೆ ಒಳ್ಳೆದಾಗಲಾರದು ದೇಶಕ್ಕೆ ಪ್ರಯೋಜನವಾಗಬೇಕಾದರೆ ಪಾರ್ಲಿಮೆಂಟಿನ ದಯೆ ಬೇಕು ಈ ಠರಾವನ್ನು ಪಾಸ್ ಮಾಡಿದರೆ ಆ ದಯೆ ದೊರಕಲಾರದು.

ಮ. ಸತ್ಯಮೂರ್ತಿಯವರ ಭಾಷಣ—ದುರ್ಭಾಗ್ಯ ಹಿಂದುಳಿದ ಪಂಗಡದವರನ್ನೇ ಈ ಠರಾವಿಗೆ ವಿರೋಧವಾದ ವಾದವಾಗಿ ತೆಗೆದುಕೊಳ್ಳಬೇಕಾಗಿ ಫೈನಾನ್ಸ್ ಮೆಂಬರಿಗೆ ಬಂದದ್ದರಿಂದ ಠರಾವನ್ನು ವಿರೋಧಿಸಲು ನ್ಯಾಯವಾದ ಕಾರಣವಿಲ್ಲವೆಂಬದು ಸ್ಪಷ್ಟವಾಯಿತು. ಈ ಹಿಂದುಳಿದ ಪಂಗಡದವರಿಗೆ ನೋವಾಗುವ ಮಾತೇನೂ ಆಡಲು ಇಷ್ಟ ಪಡುವದಿಲ್ಲ; ಆದರೆ ಧೈರ್ಯದಿಂದಲೂ, ಮನಃ ಪೂರ್ತಿಯಾಗಿಯೂ ಇವರನ್ನು ನಾನು ಕೇಳಿಕೊಳ್ಳುವದೇನಂದರೆ—60 ಕೋಟಿ ಜನಸಂಖ್ಯೆ ಇರುವ ಇವರ ಅಭ್ಯುದಯವು ಇವರಿಂದಲೇ ಮತ್ತು ಉಳಿದ ಹಿಂದೀಯರ ಸಹಕಾರದಿಂದಲೇ ಆಗಬೇಕೇ ಹೊರತು ಸರಕಾರದಿಂದ ಆಗುವದಿಲ್ಲ. ಇವರನ್ನು ಬೇರೆಯಾಗಿಯೇ ಇಟ್ಟು ಈ ವ್ಯತ್ಯಾಸದಿಂದ ಪ್ರಯೋಜನ ಹೊಂದಿಕೊಳ್ಳಬೇಕಾದದ್ದೇ ಈ ಸರಕಾರದ ಉದ್ದೇಶವಾಗಿದೆ. ಇಲ್ಲವಾದರೆ ಕಳೆದ 175 ವರ್ಷಗಳ ನಿರಂಕುಶ ಅಥವ ಆಳರಸರ ಪ್ರಭುತ್ವದಲ್ಲಿ ಈ ಹಿಂದುಳಿದ ಪಂಗಡಗಳ ಮೇಲ್ಮೆಗೆ ಏನೂ ಮಾಡದಿರಲು ಕಾರಣವೇನು? 2000 ರೂಪಾಯಿ ಸಂಬಳ ಪಡೆಯುವ ಲೇಬರ್ ಕಮಿಶನರು ದೊಡ್ಡ ದರ್ಮಿಷ್ಟರಂತೆ ಹಿಂದುಳಿದ ಪಂಗಡದವರು ಕಮಿಶನನ್ನು ಬಹಿಷ್ಕರಿಸಬಾರದೆಂತ ಹೇಳಬಹುದು. ಇನ್ನೊಂದು ಸರಕಾರಪ್ಯಾವದಾದರೂ ತಿಂಗಳಿಗೆ 2000 ರೂ. ಸಂಬಳ ಕೊಟ್ಟರೆ ಹಿಂದುಳಿದ ಪಂಗಡಗಳಿಗೆ ವಿರೋಧವಾಗಿಯೂ ಇಷ್ಟೇ ರಭಸದಿಂದ ಮಾತಾಡುತ್ತಿದ್ದರು. ಇವರು ತರಬೇತಾದ ಸಿವಿಲ್ ಸರ್ವಿಸಿಗೆ ಸೇರಿದವರಾಗಿದ್ದಾರೆ ಹಿಂದುಳಿದ ಪಂಗಡದ ಮೆಂಬರು ಇವರಿಗೆ "ನಮ್ಮ ಹಿಂದೆ ಬನ್ನಿ" ಎಂತ ಹೇಳಬೇಕೆಂತ ಕೇಳಿಕೊಳ್ಳುತ್ತೇನೆ. ಇವರ ಸ್ಥಿತಿಯು ಅಭಿವೃದ್ಧಿಯಾಗಬೇಕಾದರೆ ಸ್ವರಾಜ್ಯ ಸರಕಾರದಲ್ಲಿ

(ನಾಲ್ಕನೆ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೨೦ನೇ ಪ್ರಕರಣ

ಮೊದಲನೆಯ ರಾತ್ರಿ

ಫೀನಿಕ್ಸಿನಿಂದ 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಮೊದಲನೆಯ ಅಂಕವನ್ನು ಹೊರಡಿಸುವುದು ಸುಲಭದ ಕೆಲಸವಾಗಲಿಲ್ಲ. ನಾನು ಎರಡು ವಿಷಯಗಳ ವಿಚಾರವಾಗಿ ಮುಂದಾಲೋಚನೆ ಮಾಡದಿದ್ದರೆ ಮೊದಲನೆಯ ಅಂಕವನ್ನು ನಿಲ್ಲಿಸಬೇಕಾಗುತ್ತಿದ್ದಿತು. ಅಥವಾ ಅದರ ಪ್ರಕಟಣೆಯು ತಡವಾಗುತ್ತಿದ್ದಿತು. ಮುದ್ರಣಾಲಯವನ್ನು ನಡೆಸಲು ಯಂತ್ರವನ್ನಿಟ್ಟುಕೊಳ್ಳಲು ನನಗೇನೂ ಇಷ್ಟವಿರಲಿಲ್ಲ. ...

ರೆಲ್ಲಾ ನರದಿಯ ಮೇಲೆ ... ಗ್ಗೆ 7 ಗಂಟೆಯ ವರೆಗೆ ... ಇಂಜಿನೀಯರನ್ನು ... ಇಂಜಿನನ್ನು ...

"ಇದು ಹೇಗೆ? ... ನಾವು ..."

...

ಸ್ವಾತಂತ್ರ್ಯ ನಿರ್ಣಯ.

(ಅಖಿಲಭಾರತ ಕಾಂಗ್ರೆಸ್ ...)

...

5 ಸಂಪೂರ್ಣ ಸ್ವಾತಂತ್ರ್ಯವಿಲ್ಲದೆ ...

...

7 ...

8 ಇಂಗ್ಲೆಂಡಿನ ...

9. ...

10 ಹಿಂದೂ ದೇಶವು ...

ದ ದ್ರವ್ಯ ಬಲದಿಂದಲೂ ತಾನು ಆ ರಾಜ್ಯಗಳೆಲ್ಲರಲ್ಲಿ ಪ್ರಾಮುಖ್ಯತೆಯನ್ನು ಪಡೆದೀತು. ಲಂಡನ್ ಪಟ್ಟಣವು ಬ್ರಿಟಿಷ್ ರಾಜ್ಯದ ಮುಖ್ಯ ಪಟ್ಟಣವಾಗುವ ಬದಲು ಡೆಲ್ಲಿಯು ಮುಖ್ಯಪಟ್ಟಣವಾದೀತು. ಇಂಥಾ ಸ್ಥಿತಿ ಉಂಟಾಗಲು ಇಂಗ್ಲೆಂಡು ಅಥವಾ ಅವರ ಅಧೀನತೆಯಲ್ಲಿರುವ ಬೇರೆ ರಾಜ್ಯಗಳು ಬಿಡುವುವೆಂದು ಯಾರೂ ಯೋಚಿಸುವುದೇ ಬೇಡ. ಹಾಗೆ ಹಿಂದೂ ದೇಶವು ಬ್ರಿಟಿಷ್ ರಾಜ್ಯಗಳಲ್ಲಿ ಧನಿಯಾಗಿರುವುದಕ್ಕಿಂತ ಅದು ಸ್ವತಂತ್ರವಾಗಿರುವುದೇ ಲೇಸೆಂದು ನಾವು ಭಾವಿಸಿದೆವು.

11. ಆದ್ದರಿಂದ ಬ್ರಿಟಿಷ್ ಪ್ರಜಾಪ್ರಭುತ್ವ ರಾಜ್ಯಗಳಲ್ಲಿ ಸ್ವಾತಂತ್ರ್ಯವನ್ನು ಹೊಂದಿದ ಹಿಂದೂ ದೇಶವು ಒಂದಾಗಿರಲು ಸಾಧ್ಯವಿಲ್ಲ. ಇರಬಹುದು, ಆದರೆ ಅದಕ್ಕೆ ಯಾವ ಅಧಿಕಾರವೂ ಇಲ್ಲದೆ ಹೆಸರಿಗೆ ಮಾತ್ರ ಒಂದು ಭಾಗವಾಗಿದ್ದು ಯಾವಾಗಲೂ ಇಂಗ್ಲೆಂಡಿನ ಲಾಭಕ್ಕಾಗಿ ಸಹಾಯಮಾಡುತ್ತಿರಬೇಕಾಗುವದು. ಇದು ಸ್ವರಾಜ್ಯವಲ್ಲ. ಸಿಂಹವೂ ಕುರಿಮರಿಯೂ ಒಟ್ಟುಗೂಡಿದರೆ ಸ್ವಲ್ಪ ಕಾಲದಲ್ಲಿಯೇ ಕುರಿಮರಿಯು ಸಿಂಹದ ಶರೀರದ ಒಳಗೆ ಅಡಗಬೇಕಾಗುವುದು. ಹಿಂದೂ ದೇಶವು ಈಗಿರುವ ಸ್ಥಿತಿಯಲ್ಲಿಯೇ ಬ್ರಿಟಿಷರ ಅಧೀನತ್ವವು ಸ್ವಲ್ಪ ರೂಪಾಂತರವಾಗಲಿಕ್ಕೂ ಸಾಕು. ಆದ್ದರಿಂದ ನಮಗೆ ಬ್ರಿಟಿಷರ ಅಧೀನದಲ್ಲಿರುವುದೇ ಅಥವಾ ಸಂಪೂರ್ಣ ಸ್ವತಂತ್ರರಾಗಿರುವುದೋ ಎಂಬ ಎರಡರಲ್ಲಿ ಒಂದು ಮಾರ್ಗ ಮಾತ್ರವಿದೆ.

12. ಸ್ವಾತಂತ್ರ್ಯದ ರಠಾವಿನ ಒಂದು ಮುಖ್ಯ ಗುಣವೇನೆಂದರೆ—ಅದು ಹಿಂದೂ ದೇಶದಲ್ಲಿಯೂ ಮತ್ತು ಬೇರೆ ದೇಶಗಳಲ್ಲಿಯೂ ಸ್ವಾತಂತ್ರ್ಯದ ಭಾವನೆಯನ್ನು ಬಲವಾಗಿ ಕಲ್ಪಿಸುತ್ತದೆ. ಬೇರೆ ದೇಶಗಳಲ್ಲಿ ಪಾರ್ಲಿಮೆಂಟಿನ ಅಧೀನದ ಸ್ವರಾಜ್ಯದಲ್ಲಿ (Dominion Status) ನಾವು ಇರುವುದೆಂದರೆ, ಹಿಂದೂ ದೇಶವು ಬ್ರಿಟಿಷರ ಇಚ್ಛೆಯಲ್ಲಿ ಇನ್ನೂ ಆತ್ಮಸ್ಥರಾಗಲಿಲ್ಲವೆಂಬ ಮತ್ತು ಅವರು ಇನ್ನೂ ಇಂಗ್ಲೆಂಡಿನ ಅಧೀನದಲ್ಲಿಯೇ ಇರಲು ಇಚ್ಛಿಸುವರೆಂಬ ಭಾವನೆಯು ಉಂಟಾಗುತ್ತದೆ.

13. ಹಿಂದೂ ದೇಶವು ಭೂಲೋಕದ ಇತರ ದೇಶಗಳಿಗೆ ಏನಾದರೂ ಮಾರ್ಗವನ್ನು ತೋರಿಸಬೇಕೆಂದಿದ್ದರೆ, ಅದನ್ನು ಬ್ರಿಟಿಷರ ಅಧೀನಕ್ಕೆ ಒಳಪಡದೆ ಸ್ವತಂತ್ರವಾಗಿದ್ದು ತೋರಿಸುವುದೇ ಬಹಳ ಉತ್ತಮವಾಗಿದೆ. ಇಂಗ್ಲೆಂಡೂ ಕೂಡ ಸ್ವಾತಂತ್ರ್ಯವನ್ನು ಹೊಂದಿದ ಹಿಂದೂ ದೇಶದ ಜೊತೆಗೆ ಹೆಚ್ಚಿಗೆ ಗೌರವ ಕೊಟ್ಟು ಅದನ್ನು ಅಂಗೀಕರಿಸೀತು.

14 ಪರದೇಶೀಯ ಸೈನ್ಯವನ್ನು ನಮ್ಮ ದೇಶದಿಂದ ಕೂಡಲೆ ಹಿಂತಿರುಗಿ ಕಳುಹಿಸಬೇಕೆಂಬ ಮಾತನ್ನು ಬಹಳ ಒತ್ತಿ ಹೇಳಬೇಕಾಗಿದೆ. ನಮ್ಮನ್ನು ಕಾಪಾಡಲು ಪರದೇಶೀಯರು ಬೇಕೆಂಬ ಆಲೋಚನೆಯನ್ನು ಕೂಡಲೇ ಬಿಟ್ಟುಬಿಡಬೇಕು. ನಮ್ಮನ್ನು ಅಡಗಿಸುವುದಕ್ಕಾಗಿಯೇ ನಮ್ಮ ದೇಶದಲ್ಲಿ ಪರದೇಶದ ಸೈನ್ಯವನ್ನು ಇಟ್ಟುಕೊಂಡಿರುವುದು. ಈ ಪರದೇಶೀಯ ಸೈನ್ಯದ ವಿಷಯ ಇನ್ನೊಂದು ಲೇಖನದಲ್ಲಿ ವಿಸ್ತಾರವಾಗಿ ಬರೆಯುವೆನು.

ಮದ್ರಾಸ್ ಕೌನ್ಸಿಲಿನಲ್ಲಿ ಸೈಮನ್ ಕಮಿಷನ್ನಿನ ಬಹಿಷ್ಕಾರದ ಠರಾವಿನ ಮೇಲೆ ಆದ ಎರಡು ಭಾಷಣಗಳ ಸಾರಾಂಶ.

(2ನೇ ಪುಟದಿಂದ ಮುಂದುವರಿದದ್ದು.)

ಆಗಬೇಕೇ ಹೊರತು ಪರಕೀಯರ ಆಳುವಿಕೆಯಲ್ಲಿ ಆಗುವುದಿಲ್ಲ. ತಮ್ಮ ಜನಾಂಗದಿಂದ ಗೆಲ್ಲಲ್ಪಟ್ಟ ಈ ಅಧೀನ ಜನಾಂಗದ ಮೆಂಬರನೊಬ್ಬನು ನಮ್ಮ ರಾಜಕೀಯ ರಚನೆಯನ್ನು ಪಾರ್ಲಿಮೆಂಟು ಒಪ್ಪಿಕೊಳ್ಳಬೇಕೆಂತ ಹೇಳಿದ್ದು ಸೈಮನ್ನ್‌ವೆಂಬರಿಗೆ ಆಶ್ಚರ್ಯವನ್ನುಂಟು ಮಾಡಿದೆ. ಇವರಿಗಿಂತಲೂ, ನನಗಿಂತಲೂ ದೊಡ್ಡವರಾದ ಆಗಿನ ಬ್ರಿಟಿಷ್ ಮಂತ್ರಿ ಆಸ್ಟಿನ್ ಚೇಂಬರ್‌ಲೇನರು ಪಾರ್ಲಿಮೆಂಟ್ ಮುಂದೆ ದಕ್ಷಿಣ ಆಫ್ರಿಕದ ಯೂನಿಯನ್ ಬಿಲ್ ಚರ್ಚೆಯಲ್ಲಿದ್ದಾಗ ಬಿಲ್ಲಿನಲ್ಲಿ ಅನೇಕ ಮಾರ್ಪಾಡುಗಳನ್ನು ಮೆಂಬರುಗಳು ಸೂಚಿಸುವದರಲ್ಲಿದ್ದರು. ಆದರೆ ಮಂತ್ರಿಯವರು "ಈ ಬಿಲ್ಲು ದಕ್ಷಿಣ ಆಫ್ರಿಕದಿಂದ ಬಂದಿದೆ. ಇದರಲ್ಲಿ ಒಂದು ಸಮಿಕೋಲನಾಗಲೀ, ಕಾಮವಾಗಲೀ ಬದಲಾಯಿಸಲು ನಾನು ಒಪ್ಪುವದಿಲ್ಲ"ವೆಂತ ಹೇಳಿದರು. ಆದರೆ ಬೋಯರರ ಹಕ್ಕುಗಳನ್ನು ಬ್ರಿಟಿಷರು ಒಪ್ಪಬೇಕಾದರೆ ಬ್ರಿಟಿಷರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಬೇಕಾಗಿ ಬಂತೆಂತ ನನಗೆ ಗೊತ್ತಿದೆ. ನಾವು ಸಹ ಹಾಗೆಯೇ ಮಾಡಬೇಕಾಗ ಬಹುದು. ಯಾವ ಜನಾಂಗಕ್ಕೇ ಆಗಲಿ ಸ್ವರಾಜ್ಯವನ್ನು ಖಡ್ಗದ ಬೆದರಿಕೆಯಿಂದಲ್ಲದೆ ಸಮಾಧಾನದಿಂದ ಬ್ರಿಟಿಷರು ಕೊಡಲಿಲ್ಲವೆಂತ ನಮಗೆ ಗೊತ್ತಿದೆ ಇದಕ್ಕೆ ಕನಡ, ದಕ್ಷಿಣಆಫ್ರಿಕಾ, ನ್ಯೂಜೀಲೇಂಡ್, ಯುನೈಟೆಡ್ ಸ್ಟೇಟ್ಸ್ ಸಹ ಸಾಕ್ಷಿಗಳಾಗಿವೆ.

"ಸ್ವಭಾಗ್ಯ ನಿರ್ಣಯವೇ ನಿಮ್ಮ ಧ್ಯೇಯವಾಗಿ ಬ್ರಿಟಿಷ್ ಪಾರ್ಲಿಮೆಂಟಿನಿಂದ ನಿಮಗೆ ಏನೂ ಆಗಬೇಕಾದ್ದಿಲ್ಲವೆನ್ನುವಾಗ ಈ ಠರಾವಿನಿಂದ ಫಲವೇನು" ಎಂತ ಕೇಳಿದರು ದೇಶೀಯರ ಉದ್ದೇಶವನ್ನು ಮುರಿಯಲು ಯಾವ ಉಪಾಯವನ್ನಾದರು ಸರಕಾರವು ಅವಲಂಬಿಸಲು ತಯಾರಿರುವದನ್ನು ನೋಡಿ ನಾನು ಕಳಕಳಿಸಿದೆನು. ಅವರು ತಮ್ಮ ಮನೆಗೆ ಹೊಂಟು ಹೋಗುವವರೆಗೆ ಅವರನ್ನು ಸೋಲಿಸುತ್ತಿರುವದೇ ನಮ್ಮ ಉದ್ದೇಶವಾಗಿದೆ ಮಿ. ಜಿ. ಹರಿಸರ್ವೋತ್ತಮರಾಯರು ರಕ್ತದ ಚೆಲ್ಲಾಟ ಮಾಡ ಬೇಕೆಂತ ಹೇಳಲ್ಪಟ್ಟಿತು. ಜಲಿಯನ್ ವಾಲಾ ಬಾಗಿನಲ್ಲಿಯೂ, ಮೋಪ್ಲೆಯರ ಅನ್ಯಾಯದ ಪ್ರಾಣಹಾನಿಯಲ್ಲಿಯೂ ರಕ್ತದ ಚೆಲ್ಲಾಟ ಮಾಡಿದ ಜನಾಂಗಕ್ಕೆ ಈ ಮಾತು ಅನ್ವಯಿಸಬಹುದು. ಆ ಜನಾಂಗಕ್ಕೆ ಸೈಮನ್ನು ಮೆಂಬರು ಸೇರಿದವರಾಗಿದ್ದಾರೆ. ಆದ್ದರಿಂದ ರಕ್ತದಿಂದ ನೆನೆದ ಕೈ ಅವರದೇ ಹೊರತು ನಮ್ಮದಲ್ಲ.

ರೌಂಡ್‌ಟೇಬಲ್ ಕಾನ್‌ಫರನ್ಸ್ ಮಾಡಲು ಯಾರ ಅಪ್ಪಣೆ ಎಂತ ಕೇಳಿದರು. ಯಾರದ್ದಿಯೂ ಇಲ್ಲ. ಫೆಬ್ರವರಿ 1 ನೇ ತಾರೀಕಿನಲ್ಲಿ ಮಾಡಿಯೇ ಮಾಡುತ್ತೇವೆ ಸೈಮನ್ನ್ ಮೆಂಬರು ಅಲ್ಲಿಗೆ ಬಂದರೆ ಸ್ವಾಗತ ದೊರೆಯುತ್ತದೆ. ಆದರೆ ನಿಜವಾದ ಅಡ್ಡಿ ಯಾರದೆಂದರೆ ಬ್ರಿಟಿಷರ ಕೋವಿಗಳು ಆ ಕೋವಿಗಳ ಪ್ರತಿನಿಧಿಯಾಗಿಯೇ ಈ ಸಾಮುವಾರ್ ಮೆಂಬರು ಇಲ್ಲಿ ಇದ್ದಾರೆ. ಅವರನ್ಯಾಯದ, ವಾದದ, ತರ್ಕದ, ಮಾನಸಿಕ ಭಾವದ ಪ್ರತಿನಿಧಿಯಲ್ಲ ಬ್ರಿಟಿಷ್ ಪಕ್ಷದ ಫಾಳೆಯ ಬ್ರಿಟಿಷ್ ಕೋವಿಗಳ ಪ್ರತಿಧಿಯಾಗಿದ್ದಾರೆ. ಇವುಗಳ ಬಲದಿಂದಲೇ ಅವರು ನಗುತ್ತಿರುವದಾಗಿದೆ ಈಗ ನಾವು ಬರೇ ಮಾತಾಡ ಬಲ್ಲೆವಷ್ಟೆಂತ ಅವರಿಗೆ ಗೊತ್ತಿದೆ. ಆದರೆ ಅವ್ಯೈರಿನಲ್ಲಿ ನಗುವವನೇ ಚೆನ್ನಾಗಿ ನಗುವವನೆಂತ ಅವರು ನೆನಪಿನಲ್ಲಿಡಲಿ. ಒಂದು ಜನಾಂಗದ ಸಮಾಧಾನವನ್ನು ಎಷ್ಟು ದಿವಸ ಕಡೆಗಣಿಸುವದೂ ಇದೆಯೆಂತ ಇವು ತಿಳಿಯಲಿ. ಹಿಂದೂಸ್ಥಾನದ ಸಮಾಧಾನ ಸ್ವಭಾವವು ಅಂತ್ಯವಾಗುತಲ್ಲಿ ಬಂದಿದೆಯೆಂತ ಈ ಮೆಂಬರನ್ ದೇಶೀಯರು ಅರಿತುಕೊಳ್ಳಲಿ

ನಮ್ಮ ಪಾರ್ಟಿ ವಿಷಯದಿಂದ "ನಿಮ್ಮನ್ನು ಕೇಳಿಕೊಳ್ಳುವ ಇರಾದೆ ನನಗೆ ಇಲ್ಲ" ಎಂತ ಹೇಳಿದರು ನಮಗೆ ಕೊಟ್ಟ ಈ ಬಹುಮಾನಕ್ಕೆ ನಾನು ಸಂತೋಷಪಡುತ್ತೇನೆ. ಇವರ ಮಾತಿನ ಮೋಹನದಿಂದ ನಮ್ಮ ಪಾರ್ಟಿಯವರು ಮರುಳಾಗುವದಿಲ್ಲವಂತಲೂ ಬಡಿಯಿಂದ ಕ್ಷೀರ ದೊರಕೀತೆಂಬ ಆಶೆ ಇಡುವ ಜನರು ಬೇರೆ ಯಾರಾದರೂ ಇದ್ದಾರೋ ಎಂತ ಹುಡುಕುತ್ತಾರೆಂತಲೂ ತಿಳಿಯಿತು ಆದರೆ ಇವರ ಮಾತು ಯಾರ ಕಿವಿಗೂ ಹೋಗಲ್ಲವೆಂತ ನನಗೆ ನಂಬಿಕೆಯಿದೆ.

ಲಾರ್ಡ್ ಬರ್ಕನ್‌ಹೆಡ್ಡರ ಹೆಮ್ಮೆಯ ಮಾತುಗಳು, ಬೇರೆ ಜನಾಂಗಗಳ ಕಷ್ಟಸುಖಗಳಿಗೆ ಮನಸ್ಸು ಕೊಡದ ತನ್ನ ಶಕ್ತಿಯ ಗರ್ವದಲ್ಲೇ ಮೆಚ್ಚುವ ಜನಾಂಗದ ಪ್ರತಿನಿಧಿಯಾಗಿ ಇವರು ಆಡಿದ ಮಾತುಗಳು ನಮ್ಮನ್ನು ತಂಬಾ ನೋಯಿಸಿದೆ. ಬ್ರಿಟಿಷ್ ಸೈನ್ಯವನ್ನೂ ನೌಕಾ ಸೈನ್ಯವನ್ನೂ ತೆಗೆದುಬಿಡಬಹುದೋ ಎಂತ ಕೇಳಿದರೆ ಆಗಲೀ ಎಂತ ಉತ್ತರ ಕೊಡುತ್ತೇವೆ ನಮಗೆ ಪ್ರಪಂಚದಲ್ಲಿ ಯಾರೂ ಶತ್ರುಗಳಿಲ್ಲ. ಇಂಗ್ಲೆಂಡಿಗೆ ಸ್ನೇಹಿತರು ಯಾರೂ ಇಲ್ಲ. ಫ್ರಾನ್ಸ್, ಜರ್ಮನಿ, ಅಫ್ಘಾನಿಸ್ಥಾನ್, ಚೈನಾ ಅಥವ ಬೇರೆ ಯಾವ ದೇಶಕ್ಕೆ ಹೋಗಿ ನಿಮ್ಮ ದೇಶದ ಹೆಸರ ವಾಸನೆಯೇ ಅಸಹ್ಯವಾಗಿದೆ. ಇಂಥಾ ಜನರು ನಮ್ಮ ಮೇಲೆ ಯುದ್ಧ ಮಾಡುವದಾಗಿದೆ.

(ಪ್ರೇಕ್ಷಕರು ಚಪ್ಪಾಳೆ ಹೊಡದದ್ದರಿಂದ ಅಧ್ಯಕ್ಷರು ಪ್ರೇಕ್ಷಕರನ್ನೆಲ್ಲಾ ಹೊರಕ್ಕೆ ಕಳುಹಿಸಿಬಿಟ್ಟರು.)

ಈ ಕಮಿಶನನ್ನು ಒಪ್ಪಿಕೊಂಡರೆ ಹಿಂದೀಯರು ಬೇರೆ ಜನಾಂಗಕ್ಕೆ ಅಧೀನರಾಗಿರಲು ಒಪ್ಪಿಕೊಂಡಂತಾಯಿತು. ಈಗ ನಾವು ಯುದ್ಧ ಮಾಡಲು ತಯಾರಿಲ್ಲವೆಂತ ಒಪ್ಪುತ್ತೇನೆ. ನಾಳೆ ತಯಾರಾಗಬಹುದು ಆದರೂ ಸೈಮನ್ ಕಂಪೆನಿಯು ಎಲೆಯಿಂದ ಹೆಕ್ಕಿ ಹಾಕಿದ ಚೂರುಗಳನ್ನು ಮಾತ್ರ ಸ್ವೀಕರಿಸುವ ಗುಲಾಮರನ್ನಾಗಿ ನಮ್ಮನ್ನು ಮಾಡಿಬಿಟ್ಟಿದ್ದಾರೆ. ಈ ವಿಷಯದಲ್ಲಿ ದೇವ ದಯೆಯಿಂದ ನಾವು ಪೂರ್ತಿಯಾಗಿ ಒಗ್ಗಟ್ಟಾಗಿದ್ದೇವೆ. ಈ ಠರಾವು ಮೂಲಕ ಸೈಮನ್ ಮತ್ತು ಕಂಪನಿಯು ಈ ದೇಶದಲ್ಲಿ ಬೇಕಾಗಿಲ್ಲವೆಂತ ತಿಳಿಸುತ್ತೇವೆ,

---

Wanted

Two writers one for Pannya Estate and the other for Bothankad Estate in Coorg with 200 or more coolies each. Good pay and prospects. Preference will be given only to those who have got established gangs. For further particulars apply to SRIMATI D. SAKAMMA, COFFEE PLANTER, SOMWARPET, (N. COORG).

ಬೇಕಾಗಿದೆ

ಪನ್ಯ ತೋಟಕ್ಕೆ ಒಬ್ಬ ಮತ್ತು ಭೂತನಕಾಡು ತೋಟಕ್ಕೆ ಒಬ್ಬ 20 ಅಥವಾ ಹೆಚ್ಚು ಆಳುಗಳು ಸಮೇತ ಇರುವ ಇಬ್ಬರು ರೈಟರುಗಳು ಬೇಕಾಗಿವೆ. ಖಾಯಂ ಆಳುಗಳ ಗ್ಯಾಂಗ್ ಉಳ್ಳವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಒಳ್ಳೆ ಸಂಬಳ ಮತ್ತು ಉತ್ತೇಜನವಿದೆ. ಹೆಚ್ಚಿಗೆ ವಿಷಯ ತಿಳಿಯಲಿಕ್ಕೆ ಶ್ರೀಮತಿ ಡಿ. ಸಾಕಮ್ಮನವರು, ಕಾಫಿ ಪ್ಲಾಂಟರು ಸೋಮವಾರಪೇಟೆ, ಈ ವಿಳಾಸಕ್ಕೆ ಬರಕೊಳ್ಳತಕ್ಕದ್ದು. 5—1

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿ ಕೊಡಗರ ಇನ್ನೊಂದು ಊರೊರ್ಮೆಯು, ತಾ. 5ನೇ ಆದಿತ್ಯವಾರ ಮಧ್ಯಾಹ್ನ ಪೆರೇಡ್ ಗ್ರೌಂಡ್‌ನಲ್ಲಿ ನಡೆಯುತ್ತದೆ.

ಕೊಡಗಿನ ಗೌಡ ಜನಾಂಗದಲ್ಲಿ ಹಳಬರಾಗಿಯೂ ಮುಖ್ಯಸ್ಥರಲ್ಲೊಬ್ಬರಾಗಿಯೂ ಇದ್ದ ಮಿ. ಕೆದಂಬಾಡಿ ನೇಮೈಯ್ಯನವರು ನಿನ್ನೆ ದಿನ ಮೃತರಾದರೆಂತ ತಿಳಿಸಲು ವ್ಯಸನಪಡುತ್ತೇವೆ.

ನಾಪೋಕ್ಲುನಾಡಿನ ನಾಪೋಕ್ಲು ಕೊಳಕೇರಿ ಮತ್ತು ಕುಂಜಿಲ ಗ್ರಾಮಗಳಲ್ಲಿ ಸಿಡುಬಿನ ಕಾಯಿಲವು ಈಗ ತಲೆದೋರಿದೆ. ಹಲವು ಸ್ಥಳಗಳಲ್ಲಿ ಈ ಕಾಯಿಲವು ಪ್ರಬಲಿಸುತ್ತಾ ಬರುತ್ತಲಿದೆ.

ಮಡಿಕೇರಿನಾಡು ಸಹಕಾರ ಸಂಘಗಳ ಸುಪರ್‌ವೈಸರು ಮಿ. ನೆಲ್ಲಮಕ್ಕಡ ಗಣಪತಿಯವರು ತಾ. 20ರಿಂದ ಒಂದು ತಿಂಗಳು ರಜೆಯಲ್ಲಿ ಹೋಗಿರುವುದರಿಂದ ಅವರ ಬದಲಿಗೆ ಮಿ. ಕೆ. ಶಾಂತಮಲ್ಲಪ್ಪನವರನ್ನು ನೇಮಿಸಲಾಗಿದೆ.

ಕಳೆದ ಎಂಟು ಹತ್ತು ತಿಂಗಳುಗಳಿಂದ ಮಾಹೆಯಾ 40—50 ರೂಪಾಯಿ ಸಂಬಳ ಪಡೆ ಯುತ್ತಿದ್ದ ಮೆಡಿಕಲ್ ಡಿಪಾರ್ಟ್‌ಮೆಂಟಿನ ಕಂಪೌಂಡರುಗಳಿಗೆ ಈ ತಿಂಗಳಿಂದ ಮಾಹೆಯಾನ 35ರೂ ಸಂಬಳಕ್ಕೆ ಇಳಿಸಿದ್ದಾರೆಂತ ವರ್ತಮಾನ.

ತಾ 27 ಮತ್ತು 28ರಲ್ಲು ದೇಶದ ಹಲವು ಕಡೆಗಳಲ್ಲಿ ಮಳೆ ಬಿದ್ದು ಬಹಳ ನಷ್ಟವನ್ನುಂಟುಮಾಡಿದೆ. ಈ ತಾರೀಖು 2 ಮತ್ತು 3 ರಲ್ಲು ಅನೇಕ ಕಡೆಗಳಿಗೆ ಬಲವಾದ ಮಳೆ ಬಿದ್ದಿದೆ 3ನೇ ತಾರೀಕು ಬೆಳಗ್ಗೆ ಮಳೆ ಲೆಕ್ಕವು ಮಡಿಕೇರಿಯಲ್ಲಿ 1 14 ಇಂಚು ಆಗಿತ್ತು.

ತಾ. 28—1—28ರಲ್ಲು ಪಾಡಿ ಸುಬ್ರಾಯ (ಇಗ್ಗುತಪ್ಪ) ದೇವರ ಭಕ್ತ ಜನ ಸಂಘದ 10ನೇ ವಾರ್ಷಿಕೋತ್ಸವವು ರಾವ್ ಸಾಹೇಬ್ ಕೋಡಿಮಣಿಯಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತೆಂತಲೂ, ಸುಮಾರು 297 ಜನರು ಸೇರಿದ್ದರೆಂತಲೂ ತಿಳಿಯುತ್ತೇವೆ.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗೊಂದು ವಿರಾಜಪೇಟೆಯಲ್ಲಿ ತಾ. 2—2—28ರಲ್ಲಿ ನಡೆದು ಕೆಲವು ಪ್ರಾಮುಖ್ಯಗಳಿಗೆ ಅರ್ಗನೈಜರುಗಳನ್ನು ನೇಮಿಸಲಾಯಿತು. ವೀರಾಜಪೇಟೆ ಗಣಪತಿ ವಾಚನಾಲಯವನ್ನು ಮಡಿಕೇರಿಗೆ ಸಂಘದ ಹಾಲಿಗೆ ತರಿಸಿಕೊಂಡು ನಡಿಸಲು ಒಪ್ಪಲಾಯಿತು.

ಸಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ. 28ರಲ್ಲು ನಡೆದು ಟೀಚರ್ಸ್ ಕೋಆಪರೇಟಿವ್ ಸಪ್ಲೈರ್ ಸೊಸೈಟಿಗೆ ರೂ. 1500 ಸಾಲ ಮಂಜೂರು ಮಾಡಿದಲ್ಲದೆ, ಬ್ಯಾಂಕಿಗೆ ಸೇರಿದ ಗ್ರೇನ್ ಬ್ಯಾಂಕುಗಳಿಂದ ಮಾರಾಟಬಿಟ್ಟು ಒಂದಲ್ಲು ಹೊಂದಿಕೊಳ್ಳಬಹುದಾಗಿಯೂ ತೀರ್ಮಾನವಾಗಿದೆ

ಮದ್ರಾಸ್ ಸಿವಿಲ್ ಜುಡಿಶಿಯಲ್ ಟೆಸ್ಟಿನಲ್ಲಿ ನೆಲ್ಲಮಕ್ಕಡ ಸುಬ್ಬಯ್ಯ ಬಿ. ಎ ಇವರೂ ಮತ್ತು ಮಿ. ಪ[illegible]ರ ತಿಮ್ಮಯ್ಯನವರೂ 2ನೇ ಕ್ಲಾಸಿನಲ್ಲಿ ಪಾಸಾಗಿರುತ್ತಾರೆ ಮದ್ರಾಸ್ ಎಕೌಂಟ್ ಟೆಸ್ಟಿನಲ್ಲಿ ಮಿ. ಗಳಾದ ಕೋಡಿ ಉತ್ತಪ್ಪ ಬಿ ಎ. ಯಮ್ ಶ್ರೀನಿವಾಸರಾವ್, ಮತ್ತು ಕಟ್ರಂಡ ಗಣಪತಿಯವರೂ ಪಾಸಾಗಿರುತ್ತಾರೆ.

ಮಿ. ಐಚೆಟ್ಟಿರ ತಮ್ಮಯ್ಯನವರು ಕಳೆದ ತಾ. 29ರಲ್ಲು ವೀರಾಜಪೇಟೆ ಆಸ್ಪತ್ರೆಯಲ್ಲಿಯೂ, ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಓದುತ್ತಿದ್ದ ಮಿ. ಪಾದ್ಯಂಡ ಐಯ್ಯಪ್ಪನವರು ತಾ. 30 ರಲ್ಲೂ, ಮಡಿಕೇರಿಯಲ್ಲಿ ದರ್ಜಿಯಾಗಿದ್ದ ಕ್ರಿಶ್ಚಿಯನ್ ಇ. ಎ. ಬಾಗೇರನವರು ಈ ತಾ. 1 ರಲ್ಲೂ ಕೋವೆಸ ಕಾಯಿಲದಿಂದ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಹಿಂದುಸ್ಥಾನದ ಸ್ಟೇಟ್ ರೈಲ್ವೆಗಳಲ್ಲಿ ಮೇಲಿನ ದರ್ಜೆ ಮೆಕೇನಿಕಲ್ ಮತ್ತು ಇಲೆಕ್ಟ್ರಿಕಲ್ ಇಂಜಿನೀಯರಿಂಗ್ ಕೆಲಸಗಳಿಗೆ ಚುನಾವಣೆಯಾಗಲು ನಡಿಸುವ ಪರೀಕ್ಷೆಗಳಿಗೆ ಸಂಬಂಧಪಡುವ ರೂಲ್ಸುಗಳನ್ನೂ, ಅಪ್ಲಿಕೇಶನ್ ಫಾರಮನ್ನೂ ನಮ್ಮ ಆಫೀಸಿಗೆ ಕಮಿಷನರು ಕಳುಹಿಸಿರುತ್ತಾರೆ ಈ ಪರೀಕ್ಷೆಗೆ ಹೋಗಲು ಇಚ್ಛಿಸುವವರು ನಮ್ಮ ಆಫೀಸಿನಲ್ಲಿ ಕಾಗದಗಳನ್ನು ನೋಡಬಹುದು

"ಕೊಡಗು" ಲಿಮಿಟೆಡ್ ಕಂಪೆನಿಯ ಡೈರಕ್ಟರುಗಳ ಮೀಟಿಂಗೊಂದು ವೀರಾಜಪೇಟೆಯಲ್ಲಿ ತಾ 2—2—28ರಲ್ಲಿ ನಡೆದು ಡೈರೆಕ್ಟರುಗಳು ವರ್ಷಕ್ಕೊಂದಾವರ್ತಿ ಜನರಲ್ ಮೀಟಿಂಗ್ ನಡೆದನಂತರ ನಡೆಯುವ ಡೈರೆಕ್ಟರುಗಳ ಮೀಟಿಂಗಿನಲ್ಲಿ ತಮ್ಮ ಚೇರ್‌ಮನ್ನನ್ನು ಆರಿಸಿಕೊಳ್ಳಬೇಕೆಂತ ತೀರ್ಮಾನಿಸಿ ಕಡು ಮುಂದಿನ ವರ್ಷಕ್ಕೆ ಮಿ ಸಿ. ಯನ್. ವೆಂಕಪ್ಪಯ್ಯ ಬಿ ಎ. ಬಿ, ಯಲ್., ಮತ್ತು ಯಂ. ಯಲ್. ಸಿ ಯವರು ಚೇರ್‌ಮ್ಯಾನರಾಗಿ ಆರಿಸಲಾಯಿತು.

ಗೌಡ ವಿದ್ಯಾಭಿವರ್ಧನಿ ಸಂಘದ ತಿಂಗಳುವಾರು ಚಂದಾ ವಸೂಲಿಯ ಮೀಟಿಂಗೊಂದು ಚೇರಳ ಶ್ರೀಮಂಗಲ ಗ್ರಾಮದ ಮಡಿಕೇರಿ ಸಿದ್ದಾಪುರ ರಸ್ತೆಯ 10ನೇ ಮೈಲು ಸಂಘದ ಅಧ್ಯಕ್ಷರಾದ ಮಿ. ಸಿದ್ದಮಲೆ ಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ಇಪ್ಪತ್ತು ಮೆಂಬರುಗಳು ಹಾಜರಿದ್ದರು. ಒಟ್ಟು 33 ರೂ. ಚಂದಾ ವಸೂಲಾಯಿತು.

ಸಂಘದ ಮೆಂಬರುಗಳ ಸಂಖ್ಯೆಯು ಕಡಿಮೆಯಾಗಿದ್ದರೂ ಒಂದಿವರ ಪೈಕಿ ಎಲ್ಲರೂ ಉದಾರ ಭಾವದಿಂದ ಚಂದಾ ಪಾವತಿ ಮಾಡಿದರು. ಇನ್ನು ಇದೇ ರೀತಿಯಲ್ಲಿ ಬೇರೆ ಗ್ರಾಮಗಳಲ್ಲಿಯೂ ಪಕ್ಷೋಲಾತಿಯ ಮೀಟಿಂಗುಗಳು ನಡೆಯಲಿಕ್ಕಿವೆಯೆಂತ ಸಂಘದ ಸಕ್ರೆಟರಿಯವರು ತಿಳಿಸಿರುತ್ತಾರೆ.

ತಾ. 26ರಲ್ಲು ಮೈಸೂರು ದೇಶದ ರಾಮನಾಥಪುರದ ಸಮೀಪವಿರುವ ಕೆರೆಗಳಲ್ಲಿ ಅಂದರೆ ಮಡಿಕೇರಿಯಿಂದ 50 ಮೈಲು ದೂರವಿರುವ ಸ್ಥಳಕ್ಕೆ ಕೊಡಗಿನ ಡಿಸ್ಟ್ರಿಕ್ಟು ಮೇಜಿಸ್ಟ್ರೇಟರು, ಪೋಲೀಸ್ ಡಿಪ್ಯುಟಿ ಸುಪರಿನ್‌ಟೆಂಡೆಂಟರು, ಉತ್ತರ ಕೊಡಗು ತಾಲೋಕು ಸುಭೇದಾರರು, ಸೋಮವಾರಪೇಟೆ ನಾಡು ಪಾರುಪತ್ಯಗಾರರು, ಸಬ್ ಇನ್ಸ್‌ಪೆಕ್ಟರು ಮತ್ತು ಇವರುಗಳ ಸಂಬಧಿಕರೊಡನೆ ನೀರು ಬಾತುಗಳನ್ನು ಗುಂಡು ಹೊಡಿಯಲಿಕ್ಕೆ ಹೋಗಿ ಸಾಧಾರಣ 800 ಗುಂಡು ಹೊಡೆದು 100 ಬಾತುಗಳನ್ನು ಕೊಂದರೆಂಬದಾಗಿಯೂ, ಇವುಗಳಲ್ಲಿ 8—9 ತರಹದ ಬಾತುಗಳು ಇದ್ದವೆಂಬದಾಗಿಯೂ, ಹೀಗಯೇ ಕಳೆದ 1 ತಿಂಗಳ ಹಿಂದೆ ಪೋಲೀಸಿನ ಉದ್ಯೋಗಸ್ಥರು ತಮ್ಮ ಶಾಬೇದಾರರೊಡನೆ ಹೋಗಿದ್ದರೆಂಬದಾಗಿಯೂ, ಬೇಟೆಯಾಡಲಿಕ್ಕೆ ಆಸೇಕ್ಷೆ ಇರುವವರಿಗ ಇದು ಒಳ್ಳೆಯ ಬಾಗವೆಂತಲೂ ಒಂದು ಬಾತ್ಮಿ.

ವೀರರಾಜಪೇಟೆಯಲ್ಲಿ ಜಮೀನ್ದಾರರ ಸಂಘದ ವಿಶೇಷ ಮಹಾ ಸಭೆಯು ತಾ. 2ರಲ್ಲಿ ನಡೆಯಿತು. ಆಯಿಂಭಾರತ ನ್ಯಾಯವಿಧಾಯಕ ಸಭೆಗಳಿಂದ ಚುನಾಯಿಸಲ್ಪಡುವ ಕಮಿಟಿಗೆ ಸ್ಟ್ಯಾಟ್ಯುಟರಿ ಕಮಿಶನಿನಷ್ಟೇ ಹಕ್ಕುಗಳು ಸಿಕ್ಕುವ ವರೆಗೆ ಕಮಿಶನನ್ನು ಈ ಸಂಘವು ಬಹಿಷ್ಕರಿಸುತ್ತದೆ" ಎಂಬ ರರಾವನ್ನು ಮ. ಉತ್ತಯ್ಯನವರು ಮಂಡಿಸಿ ರರಾವಾಗಿ ಸೂಚಿಸಿ ಚರ್ಚೆ ನಡೆದು ಬಹುಮತದಿಂದ ಪಾಸಾಯಿತು. "ಹಿಂದೂಸ್ಥಾನದ ಜನರ ಅಭಿಪ್ರಾಯವನ್ನು ಅಲ್ಲಗಳೆದು ನೇಮಿಸಿದ ಸ್ಟ್ಯಾಚ್ಯುಟರಿ ಕಮಿಶನನ್ನು ಈ ಸಂಘವು ವಿರೋಧಿಸುತ್ತದೆ, ಮತ್ತು ಆ ಕಮಿಶನಿನೊಂದಿಗೆ ಈ ಸಂಘವು ಯಾವಾಗಲೂ ಯಾವ ರೀತಿಯಿಂದಲೂ ಸಹಕರಿಸುವದಿಲ್ಲವೆಂಬ ರರಾವು ಅನಂತರ ಚರ್ಚೆ ನಡೆದು ಒಮ್ಮತದಿಂದ ಮಂಜೂರಾಯಿತು. ಸೈಮನ್ ಕಮಿಶನು ಹಿಂದುಸ್ಥಾನಕ್ಕೆ ಕಾಲಿಡುವ ದಿನವಾದ ಫೆಬ್ರವರಿ 3ನೇ ತಾರೀಕು ಶುಕ್ರವಾರ ದಿವಸ ಕೊಡಗಿನ ಎಲ್ಲಾ ಪಟ್ಟಣಗಳಲ್ಲೂ ಹರತಾಳ ಮಾಡಬೇಕೆಂತ ಸಂಘವು ಕೇಳಿಕೊಳ್ಳುತ್ತದೆ ಎಂಬ ರರಾವು ಬಹುಮತದಿಂದ ಪಾಸಾಯಿತು. ಕೊಡಗಿನ ಮುಂದಿನ ರಾಜಕೀಯ ರಚನೆಯನ್ನು ಏರ್ಪಡಿಸಿ ಸಂಘದ ಬರುವ ಮಹಾಸಭೆಯ ಮುಂದೆ ಇಡಲು 15 ಜನರ ಕಮಿಟಿಯೊಂದು ನೇಮಕವಾಯಿತು. ಈ ಕಮಿಟಿಯವರಿಗೆ ಸಂಘದ ಮೆಂಬರುಗಳಾಗಲೀ ಅಥವ ಅಲ್ಲದವರಾಗಲೀ ಇನ್ನೂ 10 ಜನರನ್ನು ಸೇರಿಸಿಕೊಳ್ಳಲು ಹಕ್ಕು ಕೊಟ್ಟಿದೆ.

ಹಿಂದೂದೇಶ.

ಸೈಮನ್ ಕಮಿಶನ್ ಹಿಂದುಸ್ಥಾನಕ್ಕೆ ಬಂದಿಳಿಯುವ ಆ ದಿನ ಕಲ್ಕತ್ತಾ ಕಾರ್ಪೊರೇಶನ್ ಸಹ ಹರತಾಳಮಾಡಲು ತೀರ್ಮಾನಿಸಿರುತ್ತದೆ.

ಇಂಡೋರಿನ ಮಹಾರಾಜರು ಪದಚ್ಯುತ ಮಹಾರಾಜರಾದ ತಮ್ಮ ತಂದೆಯವರು ಮಿಸ್ ಮಿಲ್ಲರ್‌ರನ್ನು ಲಗ್ನ ಮಾಡಕೂಡದೆಂದು ಆಜ್ಞೆ ಮಾಡಿರುವರು.

ಮಂಗಳೂರಲ್ಲಿ ಅಸ್ಪೃಶ್ಯರ ಉದ್ಧಾರಕ್ಕಾಗಿ ತುಂಬಾ ಕೆಲಸಮಾಡಿದ ಈಚೆಗೆ ಸನ್ಯಾಸವನ್ನು ಕೈಕೊಂಡಿದ್ದ ಕ. ರಂಗರಾಯರು ಈ ವಾರ ಸ್ವರ್ಗಸ್ಥರಾದರು.

ಸೇಲಮಿನಲ್ಲಿ ಕೆಲವು ದಿವಸಗಳಿಂದ ನಡೆಯುತ್ತಿದ್ದ ಹಿಂದೂಮುಸಲ್ಮಾನರ ಜಗಳವು ಈಗ ಶಾಂತವಾಗಿ ಎಲ್ಲವನ್ನೂ ರಾಜಿಯಿಂದ ತೀರ್ಮಾನಿಸಿಕೊಂಡಿದ್ದಾರೆ.

ಫ್ರಾನ್ಸಿನಲ್ಲಿ ಮಾರ್ಚಿಯಲ್ಲಿಯೂ ಹಂಗೇರಿಯದಲ್ಲಿ ಏಪ್ರಿಲ್‌ನಲ್ಲಿಯೂ ನಡೆಯುವ ಪ್ರದರ್ಶನಗಳಿಗೆ ಹಿಂದುಸ್ಥಾನದ ವಸ್ತುಗಳನ್ನು ಕಳುಹಿಸಲು ಇಂಡಿಯಾ ಸರ್ಕಾರವು ತೀರ್ಮಾನಿಸಿರುತ್ತದೆ.

ಮದ್ರಾಸಿನ ಹರತಾಳದಲ್ಲಿ ಸಾಚಿಯಪ್ಪ ಕಾಲೇಜ್, ವೆಸ್ಲಿ ಕಾಲೇಜ್ ಮತ್ತು ಲಾ ಕಾಲೇಜ್ ವಿದ್ಯಾರ್ಥಿಗಳು ಸಹ ಭಾಗಿಗಳಾಗಿ ಆ ದಿನ ಕಾಲೇಜ್‌ಗಳಿಗೆ ಹೋಗುವದಿಲ್ಲವೆಂತ ತೀರ್ಮಾನಿಸಿರುತ್ತಾರೆ.

ಇಂಗ್ಲೆಂಡಿನಲ್ಲಿದ್ದ ಇಂಡಿಯಾ ಕೌನ್ಸಿಲಿನಲ್ಲಿ ಮೆಂಬರರಾಗಿದ್ದ ಡಾಕ್ಟರ್ ಪರಂಜಪ್ಯೆಯವರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರೆಂಬ ವರ್ತಮಾನವು ಸುಳ್ಳೆಂದು ಅವರೇ ಬರೆದು ಕಳುಹಿಸಿರುವರು.

ಮದ್ರಾಸಿನಲ್ಲಿರತಕ್ಕ ಎಲ್ಲಾ ಸೀಮೆ ಎಣ್ಣೆ ಕಂಪೆನಿಯ ಕೆಲಸಗಾರರು ಮತ್ತು ಅನೇಕ ಸಾಹುಕಾರರೂ ಸಹ ಫೆಬ್ರವರಿ ಮೂರನೇ ತಾರೀಕಿನಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸುವಂತೆ ತೀರ್ಮಾನಿಸಿದ್ದಾರೆ.

ಬಂಗಾಳ ಪ್ರಾಂತದಲ್ಲಿ 1926ನೇ ಇಸವಿಯಲ್ಲಿ ಐದು ವರ್ಷಕ್ಕಿಂತ ಕಡಿಮೆ ಪ್ರಾಯದ 490,000 ಮಕ್ಕಳು ಮೃತಪಟ್ಟರಂತೆ. ಇವರ ಪೈಕಿ ಒಂದು ತಿಂಗಳಗಿಂತ ಕಡಿಮೆ ಪ್ರಾಯದಲ್ಲಿ ಮೃತಪಟ್ಟವರ ಸಂಖ್ಯೆ 191,000.

ಬರ್ಮಾದ ಮೂಂಡಲೆ ರಂಗೂನ್ ಲೈನಿನಲ್ಲಿ ತಿರುಗುವ ಒಂದು ಮೈಲ್ ಬಂಡಿಯು ಹಳ್ಳಿಗಳ ಮೇಲಿನಿಂದ ಉರುಳಿಬಿದ್ದು ಇಪ್ಪತ್ತು ಪ್ರಯಾಣಿಕರು ಮೃತಪಟ್ಟರು. ಬಾಕಿ 28 ಜನರಿಗೆ ದೊಡ್ಡ ದೊಡ್ಡ ಘಾಯಗಳಾಗಿವೆ.

ದ್ವಿಮುಖ ಸರ್ಕಾರವು ಬಹಳ ಚೆನ್ನಾಗಿ ನಡೆಯುತ್ತಿದೆಯೆಂದು ಹೇಳಿಸಿಕೊಳ್ಳುತ್ತಿದ್ದ ಮದ್ರಾಸ್ ಮತ್ತು ಮಧ್ಯಪ್ರಾಂತ್ಯದ ಲೆಜಿಸ್ಲೇಟಿವ್ ಕೌನ್ಸಿಲುಗಳಲ್ಲಿ ಸೈಮನ್ ಕಮಿಷನಿಗೆ ಸಂಪೂರ್ಣ ಬಹಿಷ್ಕಾರ ಹಾಕಬೇಕೆಂಬ ರರಾವು ಮಂಜೂರಾಗಿದೆ.

ಹಾರ್ನಿಮನ್ ಬ್ರೈಬಿರ್ ಕೇಸಿನಲ್ಲಿ ನಾರಿಮನ್‌ರವರಿಗೆ ಕುಲಾಸ್ ಆಯಿತು. ಜಸ್ಟ್ ಮೊಟ್ಟ 170 ಪುಟಗಳದ್ದು ಓದಲಿಕ್ಕೆ ಎರಡು ಘಂಟೆ ಹಿಡಿಯಿತಂತೆ, ನಾರಿಮನರ ಪತ್ರಗಳೊಂದಾದರೂ ಯಾರನ್ನಿಗೆ ವಿರೋಧವಿಲ್ಲವೆಂಬುವೇ ಜಡ್ಜಿಮೆಂಟಿನ ಸಾರಾಂಶ.

ಸಿ ಬಾನ್ ಚಂದ್ರಬೋಸರ ಮೇಲೆ ವರ್ತಮಾನ ಮೂಲಗಳನ್ನು "ಸ್ಟೇಟ್ಸ್‌ಮ್ಯಾನ್" ಪತ್ರಿಕೆಯು ಬರೆದದ್ದಕ್ಕೆ ಆ ಪತ್ರಿಕೆಯ ಮೇಲೆ ನಷ್ಟಕ್ಕೆ ದಾವೆ ಹೂಡಿದ್ದರು. ಈಗ ಕೋರ್ಟಿನಲ್ಲಿ ರಿಜಾಯಿನ್ ಆದರೂ ಅಪ್ಪೀಲ್ ಕೋರ್ಟಿನಲ್ಲಿ 1000 ರೂಪಾಯಿಗೆ ಡಿಕ್ರಿಯಾಗಿದೆ.

ಮಹಾತ್ಮಾ ಗಾಂಧಿಯವರ ಮೂರನೆ ಮಗನಾದ ರಾಮದಾಸ ಗಾಂಧಿಯವರು ಅಹಮದಾಬಾದಿನ ಸತ್ಯಾಗ್ರಹ ಆಶ್ರಮದಲ್ಲಿ ನಿರ್ಮಲದೇವಿ ಎಂಬ ಯುವತಿಯನ್ನು ಲಗ್ನವಾದರು. ನಿರ್ಮಲದೇವಿಯವರೂ ಆ ಆಶ್ರಮದಲ್ಲಿಯೇ ವಿದ್ಯಾಭ್ಯಾಸ ಹೊಂದಿದವರಾಗಿರುವರು.

ಬ್ರಿಟಿಷ್ ಸರಕುಗಳಿಗೆ ಬಹಿಷ್ಕಾರ ಹಾಕುವ ವಿಷಯದಲ್ಲಿ ಹೆಚ್ಚಿನ ಗಮನಕೊಡುವುದಕ್ಕಿಂತ ಕೈನೂಲು ಬಟ್ಟೆಯನ್ನು ತಯಾರುಮಾಡಲು ಹೆಚ್ಚಿನ ಉತ್ತೇಜನಕೊಟ್ಟು ಅದಕ್ಕೇನೇ ಹೆಚ್ಚಿನ ಗಮನಕೊಡುವುದೇ ಉತ್ತಮವೆಂದು ಮಹಾತ್ಮಾ ಗಾಂಧಿಯವರು ಅಭಿಪ್ರಾಯ ಪಡುತ್ತಾರೆ.

ಮತಪ್ರಶ್ನೆಗಳನ್ನು ತೆಗೆಯುವುದರಲ್ಲಿ ಇಂಡಿಯಾ ಸರಕಾರವು ಹಸ್ತ ಪ್ರಯತ್ನಪಡುತ್ತದೆಯೆಂಬ ವಿಷಯವು ದೇಶದವರೆಲ್ಲರಿಗೂ ಗೊತ್ತಿದೆಯೆಂದು ಸೈಸರಾಯರು ತಿಳಿಯತಕ್ಕದ್ದು ಎಂಬ ಪಂಡಿತ ದ್ವಾರಕಾ ಪ್ರಸಾದ್ ಮಿಶ್ರರ ರರಾವು ಕಾನೂನಿಗೆ ವಿರೋಧವಾದದ್ದೆಂದು ಅಸೆಂಬ್ಲಿಯಲ್ಲಿ ಚರ್ಚೆಗೆ ಬರಲಿಲ್ಲ.

ಪ್ರಪಂಚದಲ್ಲೆಲ್ಲಾ ಪ್ರಖ್ಯಾತನಾಗಿದ್ದ ಪೋಲೆಂಡಿನ ಪೈಲ್ವಾನ್ ಜಿಬಿಸ್ಕೋನ ಇವನನ್ನು ತಾ. 29ನೇ ಜನವರಿಯಲ್ಲಿ ಪಟಿಯಾಲಾ ಸಂಸ್ಥಾನದ ಹಿಂದುಸ್ಥಾನದ ಪ್ರಖ್ಯಾತಿ ಪೈಲ್ವಾನ್ ಗಾಮ ಎಂಬವನು ಸೋಲಿಸಿದ್ದಾನೆ. ಅದರಿಂದ ಈಗ ಜಗತ್ತಿನ 1ನೇ ಪೈಲ್ವಾನ್ ಗಾಮಾ ಇವನೇ ಆಗಿರುತ್ತಾನೆ.

ಮದ್ರಾಸ್ ಸರಕಾರದ ಕಾಯಿದೆಯ ಮಂತ್ರಿ (Law Member) ಆಗಿದ್ದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಅವರ ಸರ್ವೀಸು ಪೂರ್ತಿ ಆಗುವುದರಿಂದ ಸೈಮನ್ ಕಮಿಷನ್ ಮದ್ರಾಸಿಗೆ ಬಂದು ಹೋದ ಕೂಡಲೆ ತಮ್ಮ ಕೆಲಸದಿಂದ ನಿವೃತ್ತರಾಗುವರಂತೆ. ಅನಂತರ ತಿರುಗಿ ತನ್ನ ವಕೀಲ ಕೆಲಸವನ್ನು ಕೈಕೊಳ್ಳುವರಾಗಿ ವರ್ತಮಾನ.

ಕಳೆದ ಆದಿತ್ಯವಾರ ಮದ್ರಾಸಿನ ತಿಲಕ ಘಟ್ಟದಲ್ಲಿ ಸೈಮನ್ ಕಮಿಷನಿಗೆ ಬಹಿಷ್ಕಾರ ಹಾಕಿ ಫೆಬ್ರುವರಿ ಮೂರನೇ ದಿನ ಹರತಾಳವನ್ನು ಆಚರಿಸುವಂತೆ ತೀರ್ಮಾನಿಸಲು ಒಂದು ದೊಡ್ಡ ಸಭೆ ಸೇರಿತ್ತು. ಸಾವಿರಾರು ಜನರು ನೆರೆದಿದ್ದರಂತೆ. ಮಹಾರಾಜ ಯಾಕೂಬ ಹಸನು ಅಧ್ಯಕ್ಷರಾಗಿದ್ದರು. ಈ ಮೀಟಿಂಗು ನಡೆಯುವ ಸಮಯಕ್ಕೆ ಸರಿಯಾಗಿ ಸಮೀಪದಲ್ಲಿಯೇ ಎಸೆಂಬ್ಲಿ ಮೆಂಬರಾದ ಅಬ್ದುಲ್ ಅಜೀಜ್ ಭಯಾಕರವರ ಅಧ್ಯಕ್ಷತೆಯಲ್ಲಿ ಬಹಿಷ್ಕಾರಕ್ಕೆ ವಿರೋಧವಾಗಿ ಒಂದು ಸಭೆಯು ನಡೆದಿತ್ತು. ಈ ಸಭೆಗೆ ಸಾಧಾರಣ ಆರುನೂರು ಜನರು, ಮುಸ್ಲಿಂ ಪಾಲು ಮಹಮ್ಮದೀಯರು ಮತ್ತು ಬಾಕಿ ಕೆಲವು ಹಿಂದೂಗಳು ಸೇರಿದ್ದರು. ಬಹಿಷ್ಕಾರದ ಮೀಟಿಂಗಿನಲ್ಲಿ ಸತ್ಯಮೂರ್ತಿ ವರದರಾಜುಲು ನಾಯುಡುರವರಿಗೆ ಆರೋಗ್ಯವಾದ್ದರಿಂದ ಶ್ರೀಯುತ ಸತ್ಯಮೂರ್ತಿಯವರು ಭಾಷಣಮಾಡಬೇಕಾಗಿ ಬಂತು. ಅವರು ಭಾಷಣಕ್ಕೆ ಪ್ರಾರಂಭಮಾಡಿ ಸ್ವಲ್ಪ ಹೊತ್ತಿನಲ್ಲೇ ಅನಾರೋಗ್ಯ ಸಮಯವಾದ್ದರಿಂದ ಯಾಕೂಬ ಹಸನು ಸಮುದ್ರದ ದಡಕ್ಕೆ ದಯಮಾಡಿದರು. ಅವರ ಬದಲು ಡಾಕ್ಟರ್ ವರದರಾಜುಲು ನಾಯುಡುರವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಅಷ್ಟರಲ್ಲಿ ಬಹಿಷ್ಕಾರಕ್ಕೆ ವಿರೋಧದ ಮೀಟಿಂಗಿನ ಕಡೆಯಿಂದ ಕೆಲವು ತುಂಟಪೋಕರು ದೊಣ್ಣೆಗಳನ್ನು, ಕಲ್ಲುಗಳನ್ನು ಮತ್ತು ಪಿಟಾಕಿಗಳನ್ನು ಹಿಡುಕೊಂಡು ಬಂದು ದೊಡ್ಡ ಗಲಭೆಮಾಡಿ ಅನೇಕರಿಗೆ ಹೊಡೆಪ್ಪು ಪೆಟ್ಟು ಬಡಿದರು. ಸತ್ಯಮೂರ್ತಿಯವರು ತಮ್ಮ ಭಾಷಣವನ್ನು ಮುಗಿಸಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಮೀಟಿಂಗು ಬರಖಾಸ್ತು ಆಯಿತು. ಹೊಡೆದಾಟದಲ್ಲಿ ಆರು ಜನರಿಗೆ ಬಲವಾಗಿಯೂ ಇನ್ನು ಇಪ್ಪತ್ತು ಜನರಿಗೆ ಸಾಧಾರಣ ಗಾಯಗಳೂ ಆಗಿವೆಯಂತೆ.

ವಿದೇಶ.

ನಾರ್ವೆಯಲ್ಲಿ ಸರ್ಕಾರವು ಲೇಬರ್ ಪಾರ್ಟಿಯವರದಾಯಿತು.

ಕಳೆದ ಘೋರ ಯುದ್ಧದಲ್ಲಿ ಇಂಗ್ಲಿಷ್ ಸೈನ್ಯದ ಸೈನ್ಯಾಧಿಪತಿಯಾಗಿದ್ದ ಅರ್ಲ್ ಹೇಗ್ ಇವರು ಈ ವಾರ ಮೃತರಾದರು.

ಅಮೇರಿಕದಲ್ಲಿ ಇನ್ನು ಐದು ವರ್ಷಗಳ ಉಪಯೋಗಕ್ಕಾಗಿ 1759 ವಿಮಾನಗಳು ಬೇಕೆಂದು ಅಲ್ಲಿಯ ನೌಕಾಸೈನ್ಯಾಧಿಪತಿಯು ಅಭಿಪ್ರಾಯಪಟ್ಟಿರುತ್ತಾನೆ.

ಜರ್ಮನಿ ಸರಕಾರದವರು ನಾರ್ವೆ ಸರಕಾರದವರಿಗೆ ಕಳೆದ ಯುದ್ಧದಲ್ಲಿ ಮಾಡಿದ ಕೆಲವು ನಷ್ಟಗಳಿಗಾಗಿ 330,000 ಪೌಂಡುಗಳನ್ನು ಕೊಡುವಂತೆ ಒಪ್ಪಿರುವರು.

ದಕ್ಷಿಣ ಆಫ್ರಿಕದಲ್ಲಿ ಸರಕಾರದವರು ಹಿಂದೂಗಳ ವಿದ್ಯದ ವಿಚಾರದಲ್ಲಿ ಬಹಳ ನಿರ್ದಯವುಳ್ಳವರಾಗಿರುವರೆಂದು ಶ್ರೀನಿವಾಸಶಾಸ್ತ್ರಿಗಳು ನೆಟಾಲಿನಲ್ಲಿ ಒಂದು ಕಠಿಣವಾದ ಭಾಷಣವನ್ನು ಮಾಡಿದರು.

ಲಂಡನ್ ಪಟ್ಟಣದಲ್ಲಿ ಒಂದು ಹಿಂದೂದೇವಸ್ಥಾನವನ್ನು ಮತ್ತು ಹಿಂದೂ ದೊಡ್ಡ ಮನುಷ್ಯರು ಉಳುಕೊಳ್ಳುವ ಒಂದು ಮನೆಯನ್ನು ಕಟ್ಟಿಸುವದಕ್ಕಾಗಿ ಅಲ್ಲಿ ಒಂದು ಹಿಂದೂಗಳ ಕಮಿಟಿಯು ಏರ್ಪಾಡಾಗಿದೆ.

ಹಿಂದೂದೇಶದಲ್ಲಿ ಮುಖ್ಯವಾದ ಇಂಡಿಯನ್ ನೇಷನಲ್ ಕಾಂಗ್ರೆಸ್ ಮತ್ತು ಇಂಡಿಯನ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಇವೆರಡೂ ಸೈಮನ್ ಕಮಿಷನಿಗೆ ಬಹಿಷ್ಕಾರ ಹಾಕಲು ತೀರ್ಮಾನಿಸಿರುವುದರಿಂದ ಆ ಕಮಿಷನಿನಲ್ಲಿ ಲೇಬರ್ ಮೆಂಬರು ಮೇಜರ್ ಅಟ್ಲೀಯವರು ಮೆಂಬರಾಗಿರುವುದಕ್ಕೆ ತಮ್ಮ ಸಂಪೂರ್ಣ ಅತೃಪ್ತಿ ಸೂಚಿಸಿ ಅವರನ್ನು ಚುನಾಯಿಸಿದವರು ಒಂದು ರರಾವನ್ನು ಪಾಸುಮಾಡಿರುವರು.

ಕೆಲಸಗಾರರು ಬೇಕೇ?

ಚಪ್ಪಡಿ ಸೀಳಿಸುವ, ಕಲ್ಲುಗಳನ್ನು ಕೆತ್ತುವ, ಬಾವಿ ಕಟ್ಟುವ ಒಡ್ಡರೂ, ನಾಜೂಕು ಕೆಲಸಮಾಡುವ ಮರಗೆಲಸದವರೂ ನನ್ನ ಕೈಕೆಳಗೆ ಇದ್ದಾರೆ. ಕಟ್ಟೋಣ, ಬಾವಿ, ನೇತುವೆ ಫರ್ನಿಚರ್ ಇವೇ ಮೊದಲಾದುವುಗಳನ್ನು ಗುತ್ತಿಗೆ ಒಪ್ಪಿಕೊಳ್ಳುತ್ತೇನೆ. ಶೀಘ್ರದಲ್ಲಿಯೂ, ಭದ್ರವಾಗಿಯೂ, ಚೆನ್ನಾಗಿಯೂ ಪೂರೈಸಿ ಕೊಡುತ್ತೇನೆ. ಈಗ ಪೊನ್ನಂಪೇಟೆ ಬೋರ್ಡಿಂಗಿಗೆ ಫರ್ನಿಚರ್ ಒಪ್ಪಿಕೊಂಡಿದ್ದೇನೆ.

ಕೆಲಸ ಕಂಟ್ರಾಕ್ಟ್ ಕೊಡಲಿಚ್ಛೆಯುಳ್ಳವರು ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ:—

ಯು. ಮುದ್ದಪ್ಪ,
(ಮೈಸೂರ್ ಕಂಟ್ರಾಕ್ಟರ್)
4—2 C/o. ಬೋರ್ಡಿಂಗ್,
ಪೊನ್ನಂಪೇಟೆ.

ಸನ್ನಿಪಾತಜ್ವರ ಮತ್ತು ರಕ್ತಭೇದಿ.

(ಇವುಗಳನ್ನು ನಿವಾರಿಸುವ ಉಪಾಯಗಳು.)

ಸನ್ನಿಪಾತಜ್ವರವೂ, ರಕ್ತಭೇದಿಯೂ ವಾಂತಿಭೇದಿಯ ಹಾಗೆಯೇ ಸಾಂಕ್ರಾಮಿಕ ರೋಗಗಳು; ಎಂದರೆ—ಒಬ್ಬ ರೋಗಿಯಿಂದ ಮತ್ತೊಬ್ಬನಿಗೆ ಈ ರೋಗಗಳು ಹರಡುವವು. ಹಿಂದೂ ದೇಶದಲ್ಲಿ ಜನಗಳು ಈ ರೋಗಗಳಿಂದ ಬಹಳವಾಗಿ ಸಾಯುವರು, ಈ ರೋಗ ಹಿಡಿದವರು ಗುಣಹೊಂದಿದನಂತರವೂ, ಬಹು ಕಾಲದ ವರೆಗೆ ಆರೋಗ್ಯಕ್ಕೆ ಸ್ಥಿರ ಬರುವದು ಮಾತ್ರವಲ್ಲದೆ, ಕೆಲವು ವೇಳೆ ಪ್ರಾಣಾಂತ್ಯದ ವರೆಗೆ ಇದರ ಪರಿಣಾಮಗಳು ಇದ್ದೇ ಇರುವುವು. ಈ ರೋಗಗಳು ಸೂಕ್ಷ್ಮವಾದ ರೋಗಬೀಜಗಳಿಂದ ಉಂಟಾಗುವುವು. ರೋಗಗಳಿಂದ ನರಳುವ ಜನರ ಮಲಮೂತ್ರಗಳಲ್ಲಿ ಈ ಅಂಟುರೋಗಗಳ ಬೀಜಗಳು ಲೆಕ್ಕವಿಲ್ಲದಷ್ಟು ಸಿಗುವುವು. ಕೆಲವರು ಆರೋಗ್ಯವಾಗಿದ್ದು ರೋಗ ಹಿಡಿಯದಿದ್ದರೂ, ರೋಗಬೀಜಗಳಿಗೆ ಆಶ್ರಯ ಸ್ಥಾನವಾಗಿರುವುದುಂಟು. ಇಂಥವರು ಇಡೀ ಸಮಾಜಕ್ಕೆ ಅಥವಾ ಕೂಟಕ್ಕೇ ಒಂದು ನಿರಂತರವಾದ ಗಂಡಾಂತರವಾಗಿರುವರು, ಏಕೆಂದರೆ—ತಮ್ಮ ಮಲಮೂತ್ರಗಳ ದ್ವಾರಾ ಇವರು ಈ ಅಂಟುರೋಗಗಳ ಬೀಜಗಳನ್ನು ಜನಸಮುದಾಯದಲ್ಲಿ ಹರಡಿಸುವರು. ಇಂಥ ಸಂದರ್ಭಗಳಿಗೆ ಅನುಸಾರವಾಗಿ, ಇವರನ್ನು ಸನ್ನಿಪಾತಜ್ವರಕ್ಕೆ ಅಥವಾ ಉಷ್ಣಭೇದಿ ರೋಗಕ್ಕೆ "ವಾಹಕರು" ಎಂದೆನ್ನಬಹುದು.

ವಾಂತಿಭೇದಿಯು ರೋಗವು ಯಾವ ರೀತಿಯಲ್ಲಿ ರೋಗಿಗಳಿಗೆ ಅಂಟುವವೋ, ಅದೇ ರೀತಿಯಲ್ಲಿ ಇವೆರಡೂ ಅಂಟುವವು. ಆದುದರಿಂದ ವಾಂತಿಭೇದಿಯ ಸೋಂಕು ತಪ್ಪದ ಹಾಗೆ ಏನೇನು ಮಾಡಬೇಕೆಂದು ಹೇಳಿದೆಯೋ, (ಹಿಂದೆ ಪ್ರಕಟಿಸಿದ ಪತ್ರಗಳನ್ನು ನೋಡಿರಿ) ಆ ಉಪಾಯಗಳ ಮೂಲಕ ಇವೆರಡು ರೋಗಗಳ ಸೋಂಕನ್ನೂ ಹೋಗಲಾಡಿಸಿಕೊಳ್ಳಬಹುದಾಗಿದೆ.

ರೋಗಬೀಜಗಳಿಂದ ದೂಷಿತವಾದ ವಸ್ತುಗಳು ನೀರಲ್ಲಿ ಸೇರುವುದರಿಂದ ನೀರನ್ನು ಕೆಡಿಸಿ, ತನ್ಮೂಲಕವಾಗಿ ಅಂಟುರೋಗಗಳು ಹರಡುವಂತೆ ಮಾಡುವವು. ಇಂಥ ಕಶ್ಮಲಗೊಂಡ ನೀರನ್ನು ಕುಡಿಯುವುದು, ಅದನ್ನು ಹಾಲಿಗೆ ಬೆರಸುವುದು, ಅಂಥ ನೀರನ್ನು ಭೋಜನೋಪಕರಣಗಳನ್ನು ತೊಳೆವುದಕ್ಕೆ ಉಪಯೋಗಿಸುವುದು, ಹಣ್ಣುಗಳನ್ನಾಗಲಿ, ಕಾಯಿಪಲ್ಯವನ್ನಾಗಲಿ ಶುಚಿಮಾಡುವದೆಂದು ಈ ನೀರಿನಲ್ಲೇ ತೊಳೆವುದು, ಇವೆಲ್ಲ ಈ ರೋಗಬೀಜಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಡಿಕೊಳ್ಳಲು ಕಾರಣವಾಗಿದೆ. ಚರಂಡಿಗಳ ನೀರೆಲ್ಲವೂ ಸಮುದ್ರಕ್ಕೆ ಹರಿದು ಹೋಗುವುದಾದರೆ ಮತ್ತು ಅಂಥ ಸ್ಥಳಗಳಲ್ಲಿ ಚಿಪ್ಪುಮೀನುಗಳು ಬೆಳೆಯುತ್ತಿವೆಯಾದರೆ, ಅಂಥ ಚಿಪ್ಪುಮೀನುಗಳೂ ಈ ರೋಗಗಳ ಸೋಂಕ

ನ್ನು ಸುಲಭವಾಗಿ ಹರಡಿಸುವುವು. ರೋಗಿಗಳನ್ನು ಹರಡುವುದರಲ್ಲಿ ನೊಣಗಳೂ, ಕೊಂಚ ಕಡಿಮೆಯಾಗಿ ಧೂಳೂ ಕಾರಣಗಳು. ಮನುಷ್ಯರ ಮಲಮೂತ್ರಗಳಲ್ಲಿ ಜೀವಿಸುವುದೇ ನೊಣಗಳ ಅಭ್ಯಾಸವು. ಅವು ತಮ್ಮ ಕಾಲುಗಳ ಮತ್ತು ತಮ್ಮ ಶರೀರಗಳ ಮೂಲಕ ರೋಗಬೀಜಗಳನ್ನು ಕೊಂಡೊಯ್ಯುವುವು. ಈ ನೊಣಗಳೇ ಅಲ್ಲಿಂದ ಬಂದು ನಮ್ಮ ಆಹಾರದ ಪಾತ್ರೆಗಳ ಮೇಲೆ, ಆಹಾರದ ಮೇಲೆ ಕುಳ್ಳಿರುವುವು. ನಮ್ಮ ಹಾಲಿನಲ್ಲಿ ಬೀಳುವುವು. ಇವು ರೋಗಬೀಜಗಳನ್ನು ಮಡಗುತ್ತಾ ಸಂಚರಿಸುವುವು. ಈ ರೋಗಬೀಜಗಳಿಗೂ ಅನುಕೂಲವಾದ ಆಹಾರವು ದೊರೆತ ಕೂಡಲೇ ಅವು ಅಸಂಖ್ಯಾತವಾಗಿ ಬೆಳೆಯುತ್ತವೆ, ಅವು ಬೆಳೆಯುವ ಮತ್ತು ವೃದ್ಧಿಹೊಂದುವ ಕ್ರಮವು ಅದ್ಭುತವಾಗಿದೆ. ಒಂದೇ ಒಂದು ರೋಗಬೀಜವು ಕೆಲವು ತಾಸುಗಳೊಳಗಾಗಿ ಹತ್ತು ಲಕ್ಷ ಬೀಜಗಳಷ್ಟು ವೃದ್ಧಿ ಹೊಂದುವುದು! ಈ ರೋಗಬೀಜಗಳು ಹೀಗೆ ವೃದ್ಧಿಹೊಂದುವ ಹಾಗೆ ವಿಶೇಷ ಸಹಾಯವನ್ನು ಮಾಡುವ ದ್ರವ್ಯಗಳಲ್ಲಿ ಹಾಲು ಬಹಳ ಮುಖ್ಯವಾದುದು.

ಹೀಗಿರುವುದರಿಂದ, ರೋಗಿಯಿಂದ ಈ ಅಂಟುರೋಗಗಳು ಸೋಂಕು ಹರಡದ ಹಾಗೆ ಮಾಡಬೇಕಾದರೆ ಈ ಕೆಳಗಣ ನಿಯಮಗಳನ್ನು ಇಟ್ಟುಕೊಳ್ಳಬೇಕು.

1. ರೋಗಿಗಳ ಮಲಮೂತ್ರಾದಿಗಳನ್ನು ಸುಟ್ಟು ಹಾಕುವುದುಚಿತ. ಅಥವಾ ಅವುಗಳ ಪರಿಮಾಣಕ್ಕೆ ಇಮ್ಮಡಿಯಷ್ಟು ಫಿನೈಲ್ ದ್ರಾವಕವನ್ನು ಬೆರಸಿ (20 ಪಾಲು ನೀರಿಗೆ ಒಂದಂಶ ಫಿನೈಲ್ ಬೆರಸಿದರೆ ಈ ಬಗ್ಗೆ ಬೇಕಾದ ದ್ರಾವಕವನ್ನು ಸಿದ್ಧಪಡಿಸಬಹುದು) ಎರಡು ತಾಸುಗಳವರೆಗೆ ಹಾಗೆಯೇ ಇರಿಸತಕ್ಕದ್ದು.

2. ರೋಗಿಯು ಮಲಗಿದ ಹಾಸಿಗೆ, ವಸ್ತ್ರಗಳು, ಆಹಾರ ಪಾತ್ರೆ ಮೊದಲಾದುವೆಲ್ಲವೂ ಫಿನೈಲ್‌ನಲ್ಲಿ ಅದ್ದಬೇಕು ಅಥವಾ ಚೆನ್ನಾಗಿ ಕುದಿಸಬೇಕು. ತಲೆದಿಂಬುಗಳನ್ನೂ, ದಪ್ಪನಾದ ಹಾಸುಗೆಗಳನ್ನೂ ಕುದಿಸಲಾಗದಂಥ ಇತರ ಎಲ್ಲ ಪದಾರ್ಥಗಳನ್ನೂ, ಬಿಸಿಲಿನಲ್ಲಿ ಒಂದು ದಿನದ ವರೆಗೆ ಮಡಗತಕ್ಕದ್ದು.

3. ರೋಗಿಗಳ ಉಪಚಾರವನ್ನು ಮಾಡುವವರು ರೋಗಿಯ ಕೋಣೆಯಿಂದ ಹೊರಕ್ಕೆ ಬರುವ ಮೊದಲೇ ತಮ್ಮ ಕೈಕಾಲುಗಳನ್ನು ಚೆನ್ನಾಗಿ ಸ್ವಚ್ಛವಾಗಿ ತೊಳೆಯತಕ್ಕದ್ದು.

4. ರೋಗಿಯನ್ನು ನೊಣಗಳು ಮುತ್ತದಂತೆ ಜಾಗ್ರತೆ ಇಡತಕ್ಕದ್ದು. ಎಲ್ಲ ಕಾಲಗಳಲ್ಲೂ ಎಲ್ಲ ಗೃಹಸ್ಥರೂ (ಕುಟುಂಬಗಳು) ಈ ನಿಯಮಗಳನ್ನು ಅನುಸರಿಸುವುದರಲ್ಲಿ ಜಾಗರೂಕರಾಗಿರತಕ್ಕದ್ದು.

5. ಕುಡಿಯುವ ನೀರನ್ನೂ, ಹಾಲನ್ನೂ ಚೆನ್ನಾಗಿ ಕುದಿಸದೆ ಉಪಯೋಗಿಸಕೂಡದು, ನೊಣಗಳಿಂದ ಇವನ್ನು ಕಾಪಾಡತಕ್ಕದ್ದು.

6. ಆಹಾರಗಳನ್ನು ಸಿದ್ಧಪಡಿಸುವವರೂ, ಬಡಿಸುವವರೂ, ಆಹಾರವನ್ನುಣ್ಣುವವರೂ ಸಹ ತಮ್ಮ ಕೈಗಳನ್ನು ತೊಳೆದುಕೊಳ್ಳದೆ ಆಹಾರವನ್ನು ಮುಟ್ಟಕೂಡದು. ಆಹಾರವು ಸಿದ್ಧವಾದನಂತರ ಬಟ್ಟಲಲ್ಲಿ ಇರುವಷ್ಟು ಕಾಲ ನೊಣಗಳ ಹಾವಳಿಯಿಂದ ಕಾಪಾಡತಕ್ಕದ್ದು.

7. ಸಾಮಾನ್ಯವಾದ ಕಾಯಿಪಲ್ಯಗಳನ್ನೆಲ್ಲಾ ಬೇಯಿಸಿಯೇ ತಿನ್ನುವುದು ಹಿತಕರ. ಬೇಯಿಸದೆ ತಿನ್ನುವುದಾದರೆ, ಕುದಿದ ನೀರಲ್ಲಿ ಅವನ್ನು ತೊಳೆದು ಸ್ವಚ್ಛಗೊಳಿಸಬೇಕು. ತಿನ್ನುವ ಮೊದಲು ಸಿಪ್ಪೆಗಳನ್ನು ಕಿತ್ತುಬಿಡಬಹುದಾದ ಹಣ್ಣುಗಳನ್ನು ತಿನ್ನುವುದರಲ್ಲಿ ಅಪಾಯವು ಕಡಿಮೆ.

8. ಎಲ್ಲ ಉಪಕರಣಗಳನ್ನೂ ಕುದಿಯುವ ನೀರಲ್ಲಿ ತೊಳೆದು ನೊಣಗಳಿಂದ ಕಾಪಾಡಬೇಕು. ಪಾತ್ರೆಗಳನ್ನು ಮುಚ್ಚುವ ವಸ್ತ್ರಗಳು ಮುಂತಾದವನ್ನೂ ಇದರಂತೆ ಶುಚಿಗೊಳಿಸಬೇಕು.

ರ. ಜ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸೆಂಟ್ರಲ್ ಹೈಸ್ಕೂಲಿನಲ್ಲಿ ಒಬ್ಬ ಗೌಡ ಉಪಾಧ್ಯಾಯನ ಆವಶ್ಯಕತೆ.

ಸಣ್ಣ ಸಣ್ಣ ತರಗತಿಗಳಲ್ಲಿ ಓದತಕ್ಕ ವಿದ್ಯಾರ್ಥಿಗಳ ಮೇಲೆ ಶಾಲೆಯಲ್ಲಿ ಮಾತ್ರ ಜಾಗ್ರತೆ ತೆಗೆದುಕೊಂಡರೆ ಸಾಲದು. ಅದಕ್ಕಿಂತಲೂ ಮುಖ್ಯವಾಗಿ ಶಾಲೆಯ ಹೊರಗೂ ಮತ್ತು ಅವರವರ ಮನೆಗಳಲ್ಲೂ ಅಥವಾ ಬೋರ್ಡಿಂಗಿನಲ್ಲೂ ಜಾಗ್ರತೆ ತೆಗೆದುಕೊಳ್ಳುವುದು ಅತ್ಯಂತ ಆವಶ್ಯಕರ. ಸೆಂಟ್ರಲ್ ಹೈಸ್ಕೂಲಿನಲ್ಲಿ ಸಣ್ಣ ತರಗತಿಗಳಲ್ಲಿ ಓದಿಕೊಂಡು ಗೌಡರ ಬೋರ್ಡಿಂಗಿನಲ್ಲಿ ಉಳಿದುಕೊಳ್ಳುವ ಗೌಡ ಹುಡುಗರು ಸಾಧಾರಣ ಮೂವತ್ತೈದು ಮಂದಿಗಿಂತ ಮಿಕ್ಕಿ ಇದ್ದಾರೆ. ಈ ಹುಡುಗರ ಜಾಗ್ರತೆ ತೆಗೆದುಕೊಳ್ಳಲು ಈಗ ಯಾರೂ ಇಲ್ಲ. ಬೋರ್ಡಿಂಗ್ ಮೇನೇಜರ್ ಆಗಿರತಕ್ಕವನು ಹೆಚ್ಚಿನ ವಿದ್ಯಾವಂತನಲ್ಲದೆ ಲೆಕ್ಕಪತ್ರಗಳನ್ನು ಇಟ್ಟುಕೊಳ್ಳಲು ಮಾತ್ರ ಒಳ್ಳೆವನಾಗಿರುವದಾದ್ದರಿಂದ ಅಂಥಾ ಮೇಲ್ವಿಚಾರದ ಹುಡುಗರಿಗೆ ಓದುಗಾರಿಕೆ ಪಟ್ಟಿಗೆ ಏನೊಂದೂ ಪ್ರಯೋಜನವು ಸಿಕ್ಕುವುದೇ ಇಲ್ಲ. ಇಷ್ಟಿಗೆ ಓದಿದರೂ ಬಹಳ ಕಡಿಮೆ ನಂಬರು ಸಿಕ್ಕಿ ಮೇಲಿನ ಕ್ಲಾಸಕ್ಕೆ ಬರುವುದೇ ಇಲ್ಲ. ಹೀಗಾಗಿ ಮಾಡುಗಾರು ಸೋಮಾರಿಗಳಾಗಿ ಅನೇಕ ಹುಡುಗರು ತಮ್ಮ ಕ್ಲಾಸುಗಳಲ್ಲಿ ತೇರ್ಗಡೆ ಹೊಂದುವುದೇ ಇಲ್ಲ. ಈ ಹುಡುಗರ ಜಾಗ್ರತೆ ತೆಗೆದುಕೊಳ್ಳಲು ಬೇರೆ ಗೌಡರ ಅಂದರೆ ಒಬ್ಬ ಗ್ರಾಜ್ಯುಏಟ್ ಅಥವಾ ಕೂಡಗ ಉಪಾಧ್ಯಾಯರಿಗೆ ಅನುಕೂಲವಿಲ್ಲ. ಯಾಕೆಂದರೆ— ಜಾಗ್ರತೆ ತೆಗೆದುಕೊಳ್ಳತಕ್ಕ ಉಪಾಧ್ಯಾಯನು ಸದಾ ಮನೆಯಲ್ಲಿ ಓದುವಾಗಲೂ, ಆಡುವಾಗಲೂ ಒಟ್ಟಿಗೇನೇ ಇರತಕ್ಕದ್ದು ಬಹಳ ಆವಶ್ಯಕರ. ಈ ರೀತಿಯಲ್ಲಿ ಜಾಗ್ರತೆ ತೆಗೆದುಕೊಳ್ಳಲು ಒಬ್ಬ ಗೌಡ ಉಪಾಧ್ಯಾಯನೇ ಅಗತ್ಯವಾಗಿಯು ಇರಬೇಕು.

ಈ ವಿಷಯದಲ್ಲಿ ನಮ್ಮ ವಿದ್ಯಾ ಇಲಾಖೆಯ ಅಧಿಕಾರಿಗಳು ಏನೂ ಗಮನ ಕೊಡುವುದೇ ಇಲ್ಲ. ಗೌಡರು ವಿದ್ಯೆಯಲ್ಲಿ ಬಹಳ ಹಿಂದೆ ಬಿದ್ದಿರುವರು. ಅವರಿಗೆ ಸರಕಾರದವರು ಇದಷ್ಟು ಉತ್ತೇಜನ ಕೊಡಬೇಕೆಂಬ ಉದಾರ ಭಾವದಿಂದ ಮೊದಮೊದಲು ಸರಕಾರದವರು ಸ್ವಲ್ಪ ಸಹಾಯ ಮಾಡಿದರು. ಆದರೆ ಈಗ ಆ ವಿಚಾರವೆಲ್ಲವೂ ಒರೇ ಛಾಯಾಮಾತ್ರವಾಗಿದೆ. ಸುಮಾರು ಐವತ್ತು ಮಂದಿ ಗೌಡ ವಿದ್ಯಾರ್ಥಿಗಳು ಹೈಸ್ಕೂಲಿನಲ್ಲಿ ಓದುತ್ತಿರುವಾಗ ಅಲ್ಲಿ ಒಬ್ಬ ಗೌಡ ಉಪಾಧ್ಯಾಯನು ಇರಬೇಕಾದದ್ದು ಅತ್ಯಂತ ಆವಶ್ಯಕ. ಇಷ್ಟರ ವರೆಗೆ ಗೌಡರಲ್ಲಿ ಉಪಾಧ್ಯಾಯರ ಕೆಲಸಕ್ಕೆ ತಕ್ಕಷ್ಟು ಪಾಸಾಗಿ ಬಂದವರು ಯಾರೂ ಇರಲ್ಲವೆಂಬ ಒಂದು ನೆಪವಿತ್ತು. ಆದರೆ ಈ ವರ್ಷ ಎರಡು ಜನರು ಗೌಡರು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬಂದಿದ್ದಾರೆ. ಸರಕಾರದವರಿಗೆ ನಿಜವಾಗಿಯೂ ಗೌಡರು ಬೇರೆ ಮತದವರಂತೆ ಮುಂದಕ್ಕೆ ಬರಬೇಕು, ವಿದ್ಯೆಕಲಿಯಬೇಕು, ಸರಕಾರದ ಅಧಿಕಾರಗಳಲ್ಲಿ ಭಾಗಿಗಳಾಗಬೇಕು ಎಂಬ ಭಾವನೆ ಇದ್ದರೆ ಈಗ ಆ ಭಾವನೆಯನ್ನು ತೋರಪಡಿಸಿ ಒಬ್ಬ ಗೌಡ ಯುವಕನನ್ನು ಸೆಂಟ್ರಲ್ ಹೈಸ್ಕೂಲಿನಲ್ಲಿ ಉಪಾಧ್ಯಾಯನನ್ನಾಗಿ ನೇಮಿಸಬೇಕೆಂದು ನಮ್ಮ ಜಾತಿಯವರೆಲ್ಲರ ಪರವಾಗಿ ನಾನು ಸರಕಾರವನ್ನು ಕೇಳಿಕೊಳ್ಳುತ್ತೇನೆ.

"ಗೌಡ"

ಪೆರಾಜೆ ಗ್ರಾಮಸ್ಥ ರೈತರ ಗೋಳು.

ಅಯ್ಯಾ,

ನಮ್ಮ ಗ್ರಾಮವು ಒಳ್ಳೆ ಕಾಡು ಪ್ರದೇಶವಾಗಿದೆ. ಸಾಲದ್ದಕ್ಕೆ ಗ್ರಾಮವೆಲ್ಲವೂ ದೊಡ್ಡ ದೊಡ್ಡ ಬೆಟ್ಟಗಳ ನಡುವೆ ಸಿಕ್ಕಿಕೊಂಡಿದೆ. ಗ್ರಾಮದೊಳಗೆ ತಿರುಗಾಡಲು ಸರಿಯಾದ ಕಾಲು ರಸ್ತೆಗಳಿಲ್ಲ, ಸಣ್ಣ ಸಣ್ಣ ದಾರಿಗಳಿವೆ. ಆ ದಾರಿಗಳೆಲ್ಲವೂ ಕಾಡು ತುಂಬಿಕೊಂಡು ಪ್ರಯಾಣಕ್ಕೆ ಬಹಳ ಅನಾನುಕೂಲವಾಗಿದೆ. ಕಳೆದ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯ ಸಮಯದಲ್ಲಿ ಒಬ್ಬ ಮಹನೀಯರು ಬಂದು ತನಗೆ ಓಟು ಕೊಟ್ಟರೆ ಬೆಟ್ಟಗಳನ್ನೇ ಕಿತ್ತು ಹಾಕಿಸಿಬಿಡುತ್ತೇನೆ, ಹೊಳೆಗಳ ದಾರಿಗಳನ್ನೇ ತಪ್ಪಿಸಿಬಿಡುತ್ತೇನೆ, ದೊಡ್ಡ ಕಾಡುಗಳನ್ನು ನಿರ್ಮೂಲವಾಗಿ ನಾಶಮಾಡಿಸಿ ಬಿಡುತ್ತೇನೆಂಬ ದೊಡ್ಡ ಭರವಸೆಯನ್ನು ಕೊಟ್ಟರು. ಬಡ ರೈತರ ಕಷ್ಟ ಸ್ವಲ್ಪವಾದರೂ ನಿವಾರಣೆಯಾದೀತೆಂದು ಅವರಿಗೆ ನಮ್ಮ ಓಟುಗಳನ್ನು ಕೊಟ್ಟೆವು. ಅವರು ಮೆಂಬರಾಗಿ ಚುನಾಯಿತರಾದರು. ಆದರೆ ನಮ್ಮ ಕಷ್ಟವು ಮೊದಲಿಗಿಂತಲೂ ಇನ್ನಧಿಕವಾಯಿತೇ ಹೊರತು ಡಿಸ್ಟ್ರಿಕ್ಟ್ ಬೋರ್ಡಿನಿಂದ ನಮಗೆಳ್ಳಷ್ಟೂ ಪ್ರಯೋಜನ ದೊರೆಯಲಿಲ್ಲ. ಯಾವದೋ ಒಂದು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗಿನಲ್ಲಿ ಪೆರಾಜೆ, ಚೆಂಬು ಗ್ರಾಮಗಳ ರಸ್ತೆಗಳ ರಿಪೇರಿಗಾಗಿ 500 ರೂಪಾಯಿ ಮಂಜೂರಾಯಿತೆಂದು ವರ್ತಮಾನ ಕೇಳಿದೆನು. ಆದರೆ ಆ ವರ್ತಮಾನವು ನನಗೆ ಸಿಕ್ಕಿ ಈಗ ಎಷ್ಟೋ ತಿಂಗಳಾದುವು. ಇನ್ನೂ ನಮ್ಮ ಗ್ರಾಮಕ್ಕೆ ಆ ಮಂಜೂರಾತಿಯ ಫಲವು ತಲಪಲಿಲ್ಲ. ಆದ್ದರಿಂದ ನಮ್ಮ ಗ್ರಾಮಗಳಿಂದ ಚುನಾಯಿತರಾದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರು ಇನ್ನಾದರೂ ನಿದ್ರೆಯಿಂದ ಎಚ್ಚತ್ತು ಆ ಮಂಜೂರಾದ ಹಣವು ಯಾರ ಸ್ವಾಧೀನದಲ್ಲಿದೆ, ಅಥವಾ ನಿಜವಾಗಿಯೂ ಮಂಜೂರಾಗಲೇ ಇಲ್ಲವೋ ಎಂಬ ವಿಷಯದನ್ನು ತಿಳಿದು, ಮಂಜೂರಾಗಿದ್ದರೆ ಅದನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಿಸುವಂತೆ ಮಾಡಿ ಅದಷ್ಟು ಬೇಗನೆ ಬಡ ರೈತರಾದ ನಮ್ಮ ಸಂಕಟವನ್ನು ಹೋಗಲಾಡಿಸುವವರಾಗಿ ಕೋರುತ್ತೇನೆ.

"ಬಡರೈತ"

ಖಾದಿ.

"ಖಾದಿಯ ಅರ್ಥಶಾಸ್ತ್ರ" ಎಂಬ ಒಂದು ಪುಸ್ತಕವನ್ನು ಓದಿದರೆ ಖಾದಿಗೆ ಪ್ರೋತ್ಸಾಹ ಕೊಡಬೇಕೆಂತಲೂ ಖಾದಿಯ ಉತ್ಪನ್ನಕ್ಕೆ ಸಹಾಯಕರಾಗಬೇಕೆಂತಲೂ ಎಂಥಾ ಸಂದೇಹ ಇರುವವನಿಗೂ ತೃಪ್ತಿಗೆಯಾಗದೆ ಇರಲಾರದು. ಈ ಪುಸ್ತಕವನ್ನು ಬಿಹಾರದ ಪ್ರಖ್ಯಾತ ದೇಶಸೇವಕರಾದ ಬಾಬು ರಾಜೇಂದ್ರ ಪ್ರಸಾದ್ ಎಂಬವರು ಬರೆದವರಾಗಿದೆ. ಅದನ್ನು ಕನ್ನಡಿಸಿ ಪ್ರಕಟಿಸಿದವರಿಗೆ ಕನ್ನಡಿಗರು ಋಣಿಯಾಗಿದ್ದಾರೆ.

ಈ ಪುಸ್ತಕದ ಕೆಲವು ಪ್ರತಿಗಳನ್ನು ಜಮೀನ್‌ದಾರರ ಖದ್ದರ್ ಕಮಿಟಿಯವರು ತರಿಸಿ ಖಾದಿ ಪ್ರೇಮಿಗಳಿಗೆ ದೊರಕುವಂತೆ ಮಾಡಿಟ್ಟಿದ್ದಾರೆ. ಹಿಂದುಸ್ಥಾನದ ಜನರಲ್ಲಿ ಬಹಳ ದೊಡ್ಡ ಭಾಗ ಬೇಸಾಯಗಾರರಾಗಿರುವುದರಿಂದಲೂ, ಬೇಸಾಯಗಾರರಿಗೆ ತಮ್ಮ ಕೆಲಸಕ್ಕೆ ವರ್ಷದಲ್ಲಿ 150 ದಿವಸಗಳು ಸಾಕಾಗಿವೆಯೆಂತಲೂ ಉಳಿದ 200 ದಿವಸಗಳಲ್ಲಿ ಕೆಲಸವಿಲ್ಲದಿರುವಾಗ ಕೈನೂಲು ಮಾಡಿದರೆ ಹಿಂದುಸ್ಥಾನಕ್ಕೆ ಬೇಕಾದಷ್ಟು ಬಟ್ಟೆಯನ್ನು ಒದಗಿಸಿಕೊಳ್ಳಬಹುದೆಂತಲೂ ಹಿಂದುಸ್ಥಾನದ ಜನರಲ್ಲಿ ಸರಾಸರಿ ಒಬ್ಬನಿಗೆ ದಿವಸಕ್ಕೆ 0—1—7 ಮಾತ್ರ ಉತ್ಪತ್ತಿಯಾಗಿರುವಾಗ ಇದನ್ನು ಸ್ವಲ್ಪ ನೂಲಿಗಾದರೂ ಹೆಚ್ಚಿಸಿಕೊಂಡರೆ ಅಷ್ಟೇ ಹೆಚ್ಚು ಅನ್ನ ಹೊಟ್ಟೆಗೆ ದೊರೆಯಬಹುದೆಂತಲೂ, ಇದಕ್ಕಿಂತ ಹೆಚ್ಚಿಗೆ ಉತ್ಪತ್ತಿ ಮಾಡಿಕೊಳ್ಳಲು ಶಕ್ತಿ ಇರುವವರು ಹಾಗೆ ಮಾಡಲು ಅಡ್ಡಿ ಇಲ್ಲವೆಂತಲೂ ಹಿಂದುಸ್ಥಾನಕ್ಕೆ ಬೇಕಾದಷ್ಟು ಬಟ್ಟೆಯನ್ನು ಒದಗಿಸಿಕೊಡಲು ಹಿಂದುಸ್ಥಾನದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲು ಧಂಡವಾಳವಿಲ್ಲವೆಂತಲೂ, ಇದ್ದರೂ ಅದರಲ್ಲಿ ಹೆಚ್ಚಿಗೆ ಮಿಶನುಗಳಿಗಾಗಿ ಪರದೇಶಕ್ಕೆ ಹೋಗಬೇಕೆಂತಲೂ, ಹೋದರೂ ಬೇಕಾದಷ್ಟು ಮಿಶನುಗಳನ್ನು ಕಾಲಕ್ಕೆ ಸರಿಯಾಗಿ ತಯಾರಿಸಲು ಪರದೇಶಗಳಿಗೆ ಸಾಧ್ಯವಿಲ್ಲವೆಂತಲೂ, ಕಾರ್ಖಾನೆಗಳಲ್ಲಿ ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಲು ಸಾಧ್ಯವಿಲ್ಲವೆಂತಲೂ, ಕಾರ್ಖಾನೆಗಳಿಂದ ಹಲ ಕೆಲವರು ಐಶ್ವರ್ಯವಂತರಾಗುತ್ತಾರೆಯೇ ಹೊರತು ಬಹು ಜನರಿಗೆ ಅನ್ನ ದೊರಕುವದಿಲ್ಲವೆಂತಲೂ ಮುಂತಾಗಿ ವಾದಿಸಿ ದೇಶೋದ್ಧಾರದ ಈ ಕಾರ್ಯಕ್ಕೆ ಸ್ವಲ್ಪ ಹೆಚ್ಚು ಕ್ರಯಕೊಡುವ ರೂಪದ ತ್ಯಾಗದಿಂದ ಸಹಾಯಮಾಡಬೇಕೆಂತಲೂ ಬಹಳ ಸಕಾರಣವಾಗಿ ಬರೆದಿದೆ. ಈ ಪುಸ್ತಕಕ್ಕೆ ಕ್ರಯ ಬರೇ 0—3—0 ಡಜನ್ ಲೆಖ್ಖದಲ್ಲಿ ತರಿಸಿದರೆ ತರಿಸುವ ಚಾರ್ಜು ಒಂದು ಪುಸ್ತಕಕ್ಕೆ 0—0—9 ಗಿಂತ ಹೆಚ್ಚಿಗೆ ಬೀಳುವದಿಲ್ಲ. ಪುಸ್ತಕ ದೊರಕುವ ಸ್ಥಳ ಸತ್ಯಾಗ್ರಹೀ ಪ್ರೆಸ್, ಲಿಮಿಟೆಡ್, ಉಡುಪಿ

"ಖಾದಿ ಪ್ರೇಮಿ"

ಕೊಡಗು ಮತ್ತು ಮೈಸೂರು.

ಕೊಡಗು ಮಹಾಶಯರೇ—ಜನವರಿ ತಾರೀಕು 20ರ ಇದೇ ಪತ್ರಿಕೆಯಲ್ಲು ಮೈಸೂರು ಕೂಡಗನೆಂಬವರ ಬಾತ್ಮಿಯನ್ನು ನೋಡಿದೆನು. ಸದರಿ ಬಾತ್ಮಿಯ ಒಂದನೇ ಪ್ಯಾರದ ಅಂತ್ಯಭಾಗದಲ್ಲು ಮೈಸೂರಿನ ಊರುಕೇರಿಗಳನ್ನು ನೋಡದೆ ಒಂದೇ ಸಲ ಕೊಡಗನ್ನು ಮೈಸೂರಿಗೆ ಸೇರಿಸಲು ಅಭಿಪ್ರಾಯ ಕೊಡಬಾರದೆಂದೂ, ಎರಡನೆ ಪ್ಯಾರದಲ್ಲು ಹಿಂದೂ ರಾಜರ ಕೈಕೆಳಗಿರುವ ರಾಜ್ಯಗಳು ವಿನಹ ಬಾಕಿ ಬ್ರಿಟಿಷರಿಂದ ಆಳಲ್ಪಡುತ್ತಿರುವ ಪ್ರಾಂತ್ಯಗಳಿಗೆ ಸುಧಾರಣೆಗಳನ್ನು ಕೊಡಲು ಮಾತ್ರ ಸೈಮನ್ ಕಮಿಶನ್ ಹೊರಟಿದೆ. ಹಿಂದೂ ರಾಜರ ಕೈಕೆಳಗೆ ಇರುವ ಸಂಸ್ಥಾನಗಳ ವಿಲೆವಾರಿಗೆ ಪ್ರತ್ಯೇಕ ಕಮಿಶನ್ ಏರ್ಪಡಿಸಿದೆ. ಆದ್ದರಿಂದ ನಾವು ಬೇರೆ ದೊಡ್ಡ ರಾಜ್ಯಗಳ ಜೊತೆ ಸೇರಿ ಹೋರಾಡಿ ಸ್ವರಾಜ್ಯವನ್ನು ಪಡೆಯಬೇಕೇ ಯಾ ಹಿಂದೂ ರಾಜರ ಜೊತೆಸೇರಿ ಸ್ವರಾಜ್ಯ ಪಡೆಯಬೇಕೇ ಎಂತಲೂ ಈ ಬಾಬಿನಲ್ಲು ಈ ಲೇಖಕನಾದ ನಾನು ಗುಣ ಅವಗುಣಗಳನ್ನು ತಿಳಿಯದೆ ಈ ಮೊದಲಿನ ನನ್ನ ಲೇಖನವನ್ನು ಹೊರಡಿಸಿದ್ದು ತಿಳುವಳಿಕೆಯ ಕಾರ್ಯವಾಗಲಿಲ್ಲವೆಂದು ಉದಹರಿಸುತ್ತಾರೆ.

ಅಯ್ಯಾ ಮೈಸೂರು ಕೊಡಗರೇ, ನಾನು ಈ ನನ್ನ 58 ವರ್ಷ ಪ್ರಾಯದಲ್ಲು 33 ವರ್ಷ ಸರಕಾರಿ ಉದ್ಯೋಗವನ್ನು ಮಾಡಿ ಕೊಡಗು ದೇಶದ ಪ್ರತಿ ಊರು, ಬೆಟ್ಟ, ಮೂಲೆಗಳನ್ನೆಲ್ಲಾ ಅಂದರೆ ಸಂದುಗೊಂದುಗಳ ನೋಡಿ ಗುಣ ಅವಗುಣಗಳನ್ನು ಬಲ್ಲವನಾಗಿದ್ದೇನಲ್ಲದೆ ನನ್ನ ನೆರೆರಾಜ್ಯವಾದ ಮರೆಯಾಳ, ಕನ್ನಡಜಿಲ್ಲೆ ಮತ್ತು ಮೈಸೂರು ಸೀಮೆಗಳನ್ನು ನೋಡಿದ್ದೇನೆ. ಅದರಲ್ಲೂ ಮೈಸೂರು ಸೀಮೆಯ ಅನೇಕ ಪ್ರಾಂತ್ಯದ ಊರುಕೇರಿಗಳನ್ನು ನೋಡಿದ್ದೇನೆ. ಅವರ ಭಾರಿ ತಾಯಿತಿ ಲೆಕ್ಕ ಮತ್ತು ನಮ್ಮ ಕೊಡಂದರೆ ಗ್ರಾಮಗಳ ಮಣ್ಣಿನ ಕ್ಲಾಸಿಫಿಕೇಶನ್ ಸಹ ನೋಡಿರುತ್ತೇನೆ.

ಅಯ್ಯಾ ನೀವು 'ಲೋಕಪಾವನ'ದ 20ನೇ ಸಂಚಿಕೆಯ ಬಾತ್ಮಿ 5—6 ಮತ್ತು 7ನೆ ಪ್ಯಾರ ಚೆನ್ನಾಗಿ ಓದಲಿಲ್ಲವೇನು?

ನಾವು ದೂರದ ದೊಡ್ಡ ರಾಜ್ಯದವರೊಂದಿಗೆ ಸೇರಿಕೊಂಡು ಸ್ವರಾಜ್ಯ ಕೇಳುವದಕ್ಕಿಂತ ಹತ್ತರದ ರಾಜರ ಸಂಸ್ಥಾನಕ್ಕೆ ಸೇರಿಕೊಂಡು ಸ್ವರಾಜ್ಯ ಕೇಳಬಾರದೇನು? ಅವರು ಸಹ ಕಂಪನಿ ಸರಕಾರದ ತಾಬೆ ಅಲ್ಲವೇನು? ದೊಡ್ಡ ರಾಜ್ಯದವರಿಗೆ ಕೊಡುವ ಸುಧಾರಣೆಗಿಂತ ಹೆಚ್ಚಿನ ಸುಧಾರಣೆ ಇವರಿಗೆ ಸಿಕ್ಕದ್ದೇನು?

ನಿಮ್ಮ ಬಾತ್ಮಿಯ ಅಂತ್ಯಭಾಗದಲ್ಲು ನಾನು ಸಹ ಎರಡ ವರ್ಷಗಳ ಹಿಂದೆ ಈ ವಿಷಯವನ್ನು ಆಲೋಚಿಸಿದ್ದೆನು ಅಂದರೆ—ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂದಲ್ಲವೋ? ಆದರೆ ಇತ್ತಲಾಗಿ ಮೂಲೆಗಿಡಲು ಕಾರಣವೇನು?

ದಯಮಾಡಿ ನಿಮ್ಮ ಪೂರ ಇರಾದೆಯನ್ನು ಪರಿಷ್ಕಾರವಾಗಿ ತೋರಿಸಿ, ನಿಮ್ಮ ನಾಮಕರಣದಿಂದ ಪ್ರಕಟಿಸಿದರೆ ನನ್ನ ಸಂಗತಿ ನ್ಯಾಯ ರೂಢಲ್ಲ ನಾನು ಮತ್ತು ದೇಶೀಯರು ಯಾಕೆ ಒಪ್ಪಲಾರರೆಂದು ಗೊತ್ತಾಗುವದಿಲ್ಲ. ನಾಮಕರಣ ಇಲ್ಲದೆ ಬರೆದು ದೇಶೀಯರ ಮನಸನ್ನು ಕಳವಳಪಡಿಸಬಾರದಾಗಿ ನನ್ನ ವಿನಂತಿ.

ದೇಶೀಯರ ಜಾತಿಯಿಂದ ಒಗ್ಗಟ್ಟಾಗಿ ಒಮ್ಮತನ್ನನಾಡಿಯಾವ ಬಾಧಕಗಾರರೂ ಹಿಂದಕೆಯಾಗಿ ನಿಲ್ಲಬೇಕೆಂದೇ ನನ್ನ ಮನೋಭಿಲಾಷೆಗಾಗಿ ಪ್ರಕಟನೆ ಮಾಡಿದ್ದಾಗಿದೆ.

ಉದಯಾಲಣ ಮೊಣ್ಣಯ್ಯ

ಕೋಣೂರು ಸಹಕಾರಿ ಸಂಘದ ವಾರ್ಷಿಕ ಜನರಲ್ ಮೀಟಿಂಗು

ತಾರೀಕು 18—1—28ರಲ್ಲು ಕೋಣೂರು ಸಹಕಾರಿ ಸಂಘದ ವಾರ್ಷಿಕ ಜನರಲ್ ಮೀಟಿಂಗು ಕೋಣೂರು ಗ್ರಾಮದ ಅಧಿದೇವತೆ ಐಯ್ಯಪ್ಪ ದೇವರ ಗುಡಿಯಲ್ಲಿ ಗ್ರಾಮದವರೆಲ್ಲಾ ಸೇರಿ ಸದರಿ ದೇವರಿಗೆ ಪೈಯೂಡು ಮುಡಿಗೆ ಹೂವು ಕಾಯಿ ಫಲಗಳನ್ನು ಸಮರ್ಪಿಸಿ ಪೂಜೆಯಾದನಂತರ ತೀರ್ಥ ಪ್ರಸಾದಗಳನ್ನು ಕೈಕೊಂಡು ಎಲ್ಲರೂ ಭೋಜನ ಮಾಡಿದನಂತರ ಕೋಣೂರು ಸಹಕಾರಿ ಸಂಘದವರು ಸಭೆ ಸೇರಿದರು ಸವಿತ ಕೇರಿಕೆ ಮೇರಿ ಮ ಕೊ ಪೇದಪ್ಪನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದಾಯಿತು ಅಧ್ಯಕ್ಷರ ಕೋರಿಕೆಯಂತೆ ಸಂಘದ ಸೆಕ್ರೆಟರಿಯವರು ವಾರ್ಷಿಕ ಜಮಾ ಖರ್ಚು ಓದಿದರು ಆ ವೇಳೆ ಸಂಘದ ಮುಂದಿನ ಅಭಿವೃದ್ಧಿಗೆ ಕೆಲವು ಸೂಚನೆಗಳನ್ನು ಕೊಟ್ಟು ಅಲ್ಲಿ ನೆರೆದಿದ್ದ [illegible] ಯರು ಉಪನ್ಯಾಸ ಮಾಡಿದರು [illegible] ಕೆಲವರು ಆ ವಿಷಯಗಳನ್ನು ಪುಷ್ಟೀಕರಿಸಿದರು ಸಭಿಕರ ಬಹುಮಾನ [illegible] ಸಭಾಧ್ಯಕ್ಷರು ಸಂಘದ ಮುಂದಿನ ಅಭಿವೃದ್ಧಿಯ ವಿಷಯವಾಗಿ ಅಲ್ಲಿ ನೆರೆದಿದ್ದ ಸಭಿಕರ ಮನಸಿಗೆ ಉತ್ಸಾಹವೂ, ಆನಂದವೂ ಉಂಟಾಗುವಂತೆ ಸರಳ ಭಾವದಿಂದ ಉಪನ್ಯಾಸವಿತ್ತಲ್ಲದೆ ಸ್ವರ್ಗಸ್ಥರಾದ ತನ್ನ ಕಡೇ ಪುತ್ರಿ ದೇವಕಿಯ ಜ್ಞಾಪಕಾರ್ಥವಾಗಿ ಈ ಸಂಘಕ್ಕೆ 200—0—0 ರುಪಾಯಿ ಬೆಲೆಬಾಳುವ ಪುಸ್ತಕಗಳು ಕೊಟ್ಟು ಆ ಪುಸ್ತಕಗಳ ವಾರ್ಷಿಕ ಪತ್ರಿಯ ಮೂಲಗನ್ನು ಈ ಸಂಘವಿರುವ ವರೆಗೆ ಶಾಶ್ವತ [illegible] ಒಂದು ಲೈಬ್ರೆರಿ ಇಟ್ಟುಕೊಳ್ಳುವಂತೆ ತಮ್ಮ ಉದಾರ ಮನಸ್ಸಿನಿಂದ ದಾನಪ್ರದಾನ ಮಾಡಿದರು. ಇದು ತುಂಬಾ ಸ್ತೋತ್ರಾರ್ಹವೇ ಸರಿ ಇಂಥಾ ಉದಾರ ಮನಸ್ಸಿನ ಮಹನೀಯರು ಚಿರಕಾಲ ಬಾಳುವಂತೆ ಭಗವಂತನು ಅನುಗ್ರಹಿಸಲಿ ಇಂಥಾ ಉದಾರಿಗಳಿಂದಲ್ಲದೇ ಗ್ರಾಮಾಭಿವೃದ್ಧಿಯಾಗುವುದು ಇವರ ಉದಾಹರಣೆಯನ್ನು ಇನ್ನೂ [illegible] ಅನುಸರಿಸಲೆಂದು ಪ್ರಾರ್ಥಿಸುತ್ತೇನೆ ಗ್ರಾಮಸ್ಥ

National Swords and Silvr Belts (Thodanga) For "Scotland of India,"

ಸಂಪ್ರದಾಯಿಕವಾಗಿ ಧರಿಸಲ್ಪಟ್ಟ ಬಿಳಿ ಕರ್ನಲ್ ಯೂನಿಫಾರಂ ರೀತಿ ಉಡಿಗೆಗಳನ್ನು ಒದಿಗೆ ಕತ್ತಿ ಅರಿಸಲ್ಪಟ್ಟ "ಒಬ್ಬ ಲೆಫ್ಟನೆಂಟ್ ಯೂನಿಫಾರಂ ಕಡೆ ಯಾಕೆ ವಿಸ್ಮಯಗೊಳ್ಳುವಿರಿ? ನವಿಲು ಗರಿಯಿಂದ ಶೃಂಗರಿಸಲ್ಪಟ್ಟ ಕಾಗೆ ನವಿಲಾಗುವದೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ಮತ್ತು ಅದರ ಕತ್ತಿ ಸೊಂಟದ ಬಳಿಯಲ್ಲಿ ಚಿನ್ನದ ಹಿಡಿಯ ಪೀಚೆಕತ್ತಿ ಇವುಗಳಿಗ ತಕ್ಕ ಬಿಳಿಯ ಸಂಪಣಿ (ಜಮ್ಮಾ) ರೇಶ್ಮ ಮತು ವಲಿಪಟ್ಟಿ ಪಟ್ಟಿ ಇದಲ್ಲವೇ ನಿಮ್ಮ ಗೌರವ? ಕಾಸಾರ್, ಓಕ್ಸರ್, ಜೌನ್ ಮೊದಲಾದವರೇ ಸದರಿ ವಿಷಯ ಏನ್ನ ವರು ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿಮ್ಮ ಹಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರಿವೆ ಹೆಚ್ಚಿನ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದ ಕೊಳ್ಳಿ

Commercial Store,
Murnad, Coorg

12—5



ಡಿ ಬಿ ಬಿ ಯಲ್. ರೈಫಲುಗಳು ರೂ 75 ರಿಂದ ರೂ 450/
ಯಸ್ ಬಿ. ಬಿ. ಯಲ್ ಕೋವಿಗಳು ರೂ 35 ರಿಂದ ರೂ 250/
ಯಸ್ ಬಿ. ಯಮ್ ಯಲ್ ಕೋವಿಗಳು ರೂ 35 ರಿಂದ 65/-
ರಿವಾಲ್ವರ್‌ಗಳು ರೂ 45/-ರಿಂದ ರೂ. 125/ರ ವರೆಗೆ

ಡಬ್ಬಲ್ ಮತ್ತು ಸಿಂಗಲ್ ಬೋರ್ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ವಿಶೇಷ [illegible] ದವರಿಗೂ) ಅನುಕೂಲವಾಗುವಂತೆ ಎಲ್ಲ ವಿಧದ ಕ್ರಯದಲ್ಲಿ ಬದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ ಅಧ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ಕಂಪೆನಿ

2—8 12. ಆರ್ಮರೀ, ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯಬೇಕು)

Arms, Ammunition and Shooting Requisites !!!



1928 Illustrated Catalogue Just Issued Free on Application !

D B B L Rifles	Rs	120	to	Rs	2750
S B B L		35	to	,	950.
D B B L Guns		50	to	,	1350
S B B L ,,		35	to		275
D B M L ,	,	45	to		135
S B M L ,,	,	30	to	,,	80
B L Revolvers	,,	35	to	,,	350
Automatic Pistols	,	30	to	,,	150

Brilliant Search Light Lamp For Shooting Camping, Fishing and All such Other Night Sports and work Rs 30 Free delivery

Also Swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

21—16 210 Abdul Rehman Street BOMBAY.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ.

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸತ್ವಾಹಾರವು 15—16% ಇರುತ್ತದೆ [illegible] ಈ ಗೊಬ್ಬರವನ್ನು [illegible] ನೈಟ್ರೇಟ್ ಆಫ್ ಸೋಡಾದಲ್ಲಿರ [illegible] 100—200 [illegible] "ಕೃಷಿ ಸಂಗ್ರಹಣೆ" ಎಂಬ ಪುಸ್ತಕವನ್ನು [illegible] ದಾರದಿಂದ ಧರ್ಮಾರ್ಥವಾಗಿ ಪಡೆಯಬಹುದು.

ನೈಟ್ರೇಟ್ ಆಫ್ ಸೋಡವು 50 ಪೌಂಡುಗಳ ಪ್ಯಾಕೆಟಿನಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ದೊರೆಯುವದು

ಸೊಮನ್ಸ್ ಸ್ಟೋರ್ ಅಂಡ್ ಕೊ, ಮಡಿಕೇರಿ

ಸೋಮಸ್ಸ ಸ್ಟೋರ್ ಅಂಡ್ ಕೊ., ವಿರಾಜಪೇಟೆ

A S Rao Esq
Near Post office
Mangalore

or

Chilean Nitrate Committee,
Post Box 469, Calcutta

24—24

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರುವರಿ ತಿಂಗಳ ಕೊನೆಗೆ ಅಂತ್ಯವಾದ 5 ವರ್ಷಗಳ ಕೆಲಸದ

ಬೆಲೆಕಟ್ಟಿದದಲ್ಲಿ

ರೂ. 37,66,659.

ಉಳಿತಾಯ ಕಂಡುಬಂದಿದೆ.

ಜೀವವಿಮೆಯು 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಯಂತೆಯೂ	ಮತ್ತು	ನಿಶ್ಚಯ ಅವಧಿಯ ವಿಮೆಯು 1000 ರೂಪಾಯಿಗಳಿಗೆ 12 ರೂಪಾಯಿಯಂತೆಯೂ

ಬೋನಸ್ ಕೊಡುವುದೆಂದು ತೀರ್ಮಾನವಾಗಿದೆ

ವಿಳಾಸ:
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ

21—4

ಬ್ರಾಂಚ್ ಆಫೀಸು:
ಕಮರ್ಷಿಯಲ್ ಬೀದಿ
ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಹಣ	—	15,510
ಬಡ್ಡಿ ...	—	1,62,011

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್. ಟ್ರೆಜರರ್, ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರಿಟರಿ
ಸಿ. ಎಸ್. ವೆಂಕಟಸುಬ್ಬಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮೆ. ಪೇರಿಯಂಡ ಪೂವಯ್ಯನವರನ್ನೂ ಮತ್ತು ಮೆ. ಕಾಳೇಂಗಡ ಚಿಣ್ಣಪ್ಪನವರನ್ನೂ ನಮ್ಮ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸಂಚರಿಸುವ ಅವರಿಗೆ ಸಹ ಪಾವತಿ ಮಾಡಬಹುದೆಂದು ತಿಳಿಸಲಾಗಿದೆ.

ಏಜಂಟರುಗಳು.

ವಿರಾಜಪೇಟೆ—ಚಾಲಿ ... ಪಾರುವಂಗಡ ಅಚ್ಚಯ್ಯನವರು
ಶ್ರೀಮಂಗಲ—ಮೆ. ಅಳ್ಳ ... ಪುಟ್ಟಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮದ ಮಾದಪ್ಪನವರು,
ಅಮ್ಮತ್ತಿ, ಸಿದ್ದಾಪುರ—ಮೆ. ... ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ವ್ಯವಹಾರ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನ ಪ್ರಕಾರ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
'ಕೊಡಗು' ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY, 3
Telegraphic Address.- "SHOOTER" Bombay.

[52-21] 'Please write for our Catalogue 1928-1929

ಕಟಿಂಕತಷಾಯ ಮಾಲೀಶ ದೆಸ್ಸಿ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ... ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗೆಡ್ಡೆ ದೊಡ್ಡದರಿಂದ ಬರುವ ಜ್ವರಗಳಿಗೆ ... ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ದೋಷ ... ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂಡಿಗಳ ಉರಿ, ಮೂತ್ರನಾಳದಲ್ಲಿ ... ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ... ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ... ಸ್ವಾಧೀನವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರ ... ಚುರುಕಾದ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—... 3—1—0, 6—12—0.

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ... ರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿ ... 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆ ಕೂದಲು ಉದುರುವುದು, ಬಿಳಿದು ... ತಲೆಯಿಂದ ಕೀವು ಸೋರುವುದು ಕಣ್ಣುರಿತ, ಕಣ್ಣು ನೋವು ಅಂಧಕಾರ ... ದು, ನಿದ್ರೆ ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಒಂದೇ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ನಿಜವಾಗಿರುವ ... ಕೂದಲಿಗೆ ... ಯನ್ನು ಕೊಟ್ಟು ... ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ಡಜನ್ ಸೀಸೆಗೆ ರೂ 3, 3 ಸೀಸೆಗೆ ...

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ
52—17 ೯. ಮಂಗಳೂರು.

Kapurchand & Co.

The OLDEST and MOST RELIABLE House in Bangalore.
[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc, etc., Chickapet, BANGALORE CITY.

ಅಪೂರ್ವ ಸಮಯ ! **ಲಭ್ಯ ಲಾಭ !**

ತಾವು ಬೆಂಗಳೂರಿಗೆ ಒಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ. 52—35

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸಂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,44,000	ಜಾಸ್ತಿ ರೂ 59,0...,0...
	1925	ರೂ	2,96,42,000	
	1926	ರೂ	3,91,39,000	ಜಾಸ್ತಿ ರೂ. 94,97,000

ಮೂಲಧನವು ಜಾಸ್ತಿ ಒಂದ 42 ಲಕ್ಷ ... 7,58,80,000 ... ಪ್ರೀಮಿಯಂ ವರಮಾನವು ವರ್ಷಕ್ಕೆ ರೂ 1,05,33,000ಗೆ ಏರಿರುತ್ತದೆ.

"ಓರಿಯಂಟಲ್‌ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸ್ಥಾನವನ್ನು ಕೊಡುತ್ತದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಹೆಡ್ ಆಫೀಸಿಗೆ ... ಎಡ್ವಿನ್ ಜೋನ್ಸ್, ಎಫ್. ಐ. ಎ. ... ಅಥವಾ ಕೆಳಗೆ ... ಇತರ ಆಫೀಸುಗಳಿಗಾಗಲೀ ... ಬರೆಯಬೇಕಾಗಿ ಕೋರಿಕೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52—42 ಎಲ್. ಆರ್. ಕೃಷ್ಣಸ್ವಾಮಯ್ಯರ್, ಬ್ರಾಂಚ್ ಸೆಕ್ರೆಟರಿ.

ಆಲ್ ಇಂಡಿಯಾ ಮ್ಯೂಚ್ಯುವಲ್ ಎಯಿಡ್ ಅಂಡ್ ಪ್ರೊವಿಡೆಂಟ್ ಫಂಡ್ಸ್ ಅಸೋಸಿಯೇಷನ್ ಲಿಮಿಟೆಡ್
ಹೆಡ್ ಆಫೀಸ್.—ಮೈಸೂರು (ದ. ಇಂಡಿಯ.)
ಚೀಫ್ ಏಜನ್ಸೀ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಮೇಲ್ಕಂಡ ಸಂಘದ ಕೊಡಗು ದೇಶದ (Provincial) ಪ್ರಾಂತೀಯ ಡೈರೆಕ್ಟರುಗಳು.

ಕೊಡಗು ದೇಶದಲ್ಲಿರತಕ್ಕ ಸಂಘದ ಶೇರು ಮತ್ತು ಬಾಂಡು ಹೋಲ್ಡರುಗಳ ಮುಖಾಂತರವಾಗಿ ಈ ಸಂಘಕ್ಕೆ ಉಂಟಾದ ಅಭಿವೃದ್ಧಿಯನ್ನು ಜಾಗರೂಕತೆಯಿಂದ ನೋಡುವುದಕ್ಕೂ, ಕೊಡಗು ದೇಶದಲ್ಲಿ ಸಂಘದ ಕಾರ್ಯಗಳ (Business) ನ್ನು ನಡೆಸುವುದರಿಂದ ಏರತಕ್ಕ ಸಮಯ ಹೊರಗೆ ಹೋಗಬೇಕಾದವರಿಗೆ ಕೊಡಗು ದೇಶದಲ್ಲಿ ರತಕ್ಕ ಸಂಘದ ಶೇರು ಮತ್ತು ಬಾಂಡು ಹೋಲ್ಡರುಗಳಿಗೆ ಅನುಭವಿಸುವಂತೆ ಮಾಡುವುದಕ್ಕೂ ಸದರಿ ಸಂಘದ ಹೆಡ್ಡಾಫೀಸಿನವರು ಅನುಮತಿಯಿಂದ ನಮ್ಮ (ಅಂದರೆ ಕೊಡಗು ದೇಶದ ಡೈರೆಕ್ಟರುಗಳ) ಮೇನೇಜ್‌ಮೆಂಟಿನಲ್ಲಿ ಸಂಘದ ಒಂದು ಬ್ರಾಂಚನ್ನು ಕೊಡಗು ದೇಶಕ್ಕೆ ಮುಖ್ಯ ಪಟ್ಟಣವಾಗಿರುವ ಮಡಿಕೇರಿಯಲ್ಲಿ ಸ್ಥಾಪಿಸುವುದಕ್ಕೆ ಏರ್ಪಾಡು ಮಾಡಿದ್ದಾರೆ. ಈ ವಿಷಯದಲ್ಲಿ ಕೊಡಗು ದೇಶದಲ್ಲಿ ಹಾಲಿ ಇರತಕ್ಕ ಶೇರು ಮತ್ತು ಬಾಂಡು ಹೋಲ್ಡರುಗಳ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಇದೇ ಸನ್ 1928ನೇ ಇಸವಿ ಜನವರಿ ತಾರೀಖು 29ನೇ ಆದಿತ್ಯವಾರ ಸಾಯಂಕಾಲ 3 ಗಂಟೆಗೆ ಸರಿಯಾಗಿ ಶ್ರೀ ಕಾವೇರಿ ಬಸ್ ಸರ್ವಿಸ್ ಆಫೀಸ್ ಪಕ್ಕದಲ್ಲಿರುವ ಈ ಸಂಘದ ಚೀಫ್ ಏಜನ್ಸಿ ಆಫೀಸಿನಲ್ಲಿ ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಮೀಟಿಂಗು ಇಟ್ಟಿರುತ್ತೆ. ಅದ್ದರಿಂದ ಆ ಕಾಲಕ್ಕೆ ಸರಿಯಾಗಿ ಎಲ್ಲರೂ ತಪ್ಪದೆ ದಯಮಾಡಿಸತಕ್ಕದ್ದು. ಈ ಮೀಟಿಂಗಿನಲ್ಲಿ ಕೊಡಗಿನಲ್ಲಿ ಸುರುವಿನ ಬ್ರಾಂಚಿಂಗ್ ನಿರ್ಧರಿಸುವ ವಿಷಯ ಚರ್ಚೆ ನಡೆಯುವುದು

ಪಿ. ದೇವಯ್ಯ.
52—52 ಪ್ರೊವಿನ್ಷಿಯಲ್ ಬೋರ್ಡು ಡೈರೆಕ್ಟರ್.

Printed & published by P. I. Bellappa at 'Kodagu' Press, Mercara for "Kodagu" Ltd

"KODAGU" OFFICE. MERCARA

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪು ೬] ಮಡಿಕೇರಿ, ಸ೯ ೧೯೨೮ನೇ ಇಸವಿ ಫೆಬ್ರವರಿ ತಾರೀಕು ೧೦ ನೇ ಶುಕ್ರವಾರ [ಸಂಚಿಕೆ ೩೨

Wanted

HONEST AND WILLING YOUNGMEN AS CLERK AND SALESMAN.

PAY ACCORDING TO QUALIFICATIONS.

APPLY PERSONALLY TO

SPENCER & CO LTD. POLLIBETTA.

52—2

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS

Catalogue Free
to Bonafide Enquirers

Rose Water Sprinkler.

Nose-screws. Claver. Drops. Brooch.

Chased Silver Mirror.

Manufacture of
HIGH CLASS
GEMSET JEWELS.
a speciality.

The special features of my productions are:—
1. Best QUALITY.
2. Latest designs
3. Promptest execution
4. Neat & artistic finish.
5. Most moderate prices

GOLD
or
SILVERWARE
of all descriptions
neatly executed

52—22

Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, Just out.

CATALOGUE of 1927-28 on application.

The Bombay Armoury.

331, Abdul Rehman Street,

Bombay. 3.

24—22

[illegible]

ಕೊಡಗು

ಸ್ವ ೧೯೨೮ನೇ ಇಸವಿ ಫೆಬ್ರವರಿ
ತಾ ೧೦ನೇ ಶುಕ್ರವಾರ

ಹಿಂದುಸ್ಥಾನದ ರಾಷ್ಟ್ರೀಯ ಜಾಗ್ರತಿ.

ಸೈಮನ್ ಕಮಿಷನ್ ಹಿಂದುಸ್ಥಾನಕ್ಕೆ ಕಾಲಿಟ್ಟ ದಿವಸವಾದ ಕಳೆದ ಶುಕ್ರವಾರ ಒಟ್ಟು ಹಿಂದುಸ್ಥಾನದಲ್ಲಿ ಹರತಾಳವು ಯಶಸ್ವಿಯಾದದ್ದನ್ನು ನೋಡಿದರೆ ಹಿಂದುಸ್ಥಾನಕ್ಕೆ ಒಳ್ಳೇ ದಿನಗಳು ಶೀಘ್ರದಲ್ಲೇ ಬರುವದಂತೆ ತೋರುತ್ತದೆ. ಹಿಂದುಸ್ಥಾನದ ಎಲ್ಲಾ ಭಾಗದ ಮುಖಂಡರೂ, ಪ್ರತಿನಿಧಿಗಳೂ ಸೇರಿ ಮದ್ರಾಸ್ ಕಾಂಗ್ರೆಸ್ಸಿನಲ್ಲಿ ಫೆಬ್ರವರಿ ೩ನೇ ತಾರೀಕನ್ನು ವ್ಯಸನದಿನವಾಗಿ ಆಚರಿಸಬೇಕೆಂತ ಮಾಡಿದ ತೀರ್ಮಾನವು ಜನಸಮೂಹಕ್ಕೆ ತಲುಪಿ ಪರಿಪಾಲಿಸಲ್ಪಟ್ಟದ್ದು ಬಹಳ ಸ್ತೋತ್ರಾರ್ಹವೇ ಸರಿ. ಮದ್ರಾಸಿನಲ್ಲಿ ಕೆಲವು ಮಟ್ಟಿಗೆ ಗಲಭೆ ನಡೆದು ಪೋಲೀಸ ಅಧಿಕಾರಿಗಳು ಗುಂಡು ಹಾರಿಸಿ ಇಬ್ಬರು ಸತ್ತು ಇನ್ನು ಕೆಲವರಿಗೆ ಗಾಯವಾಯಿತು. ಗುಂಪು ಕೂಡಿ ಪುಂಡು ನಡೆಸುವದಕ್ಕೆ ಕಾಂಗ್ರೆಸ್ಸಿನ ಸಹಾಯವಿದ್ದಿಲ್ಲ. ಕಾಂಗ್ರೆಸ್ ಸಂಪೂರ್ಣವಾಗಿ ಶಾಂತತೆಯನ್ನೇ ಅವಲಂಬಿಸಿಯದೆ. ಮದ್ರಾಸಿನಲ್ಲಿ ರೀತಿ ಮೀರಿದ ಕೆಲ ಸ್ವಲ್ಪ ಜನರು ಪುಂಡು ಮಾಡಲು ತಲೆಹಾಕಿದರೆಂದು ಹಿಂದಿನ ಆದಿತ್ಯವಾರ ನಡೆದ ಮೀಟಿಂಗಿನಲ್ಲಿ ನಡೆದ ಕೃತ್ಯದಿಂದ ಚೆನ್ನಾಗಿ ತಿಳಿಯಿತು. ಶುಕ್ರವಾರ ನಡೆದ ಪುಂಡಿಗೂ ಹರತಾಳ ನಿರ್ವಾಹಕರೇ ಕಾರಣರೆಂತ ಅನೇಕರು ಅನ್ಯಾಯವಾಗಿ ಟೀಕಿಸ್ತಾರೆ. ಹಿಂಸಾ ಮಾರ್ಗವನ್ನು ನಾವು ಸಂಪೂರ್ಣವಾಗಿ ನಿಷೇಧಿಸುತ್ತೇವೆ. ಇಂಥಾ ಹರತಾಳದ ದಿನಗಳಲ್ಲಿ ಪುಂಡಾಗದಂತೆ ನೋಡಿಕೊಳ್ಳಬೇಕಾದದ್ದು ಮುಂದಾಳುಗಳ ಮತ್ತು ಪೋಲೀಸರ ಕರ್ತವ್ಯವಾಗಿದೆ. ಒಟ್ಟು ಹಿಂದುಸ್ಥಾನದಲ್ಲೆಲ್ಲಾ ಬರೇ ಮದ್ರಾಸ್ ಪಟ್ಟಣದಲ್ಲಿ ಮಾತ್ರ ಸ್ವಲ್ಪ ದೊಂಬಿಯುಂಟಾಯಿತೆಂಬುವದರಿಂದ ಅತಿ ಯಶಸ್ವಿಯಾದ ಹರತಾಳಕ್ಕೆ ಅಪಜಯವೇನೂ ಆಗಲಿಲ್ಲ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕನ್ ಹೆಡ್‌ರವರು ಹಿಂದೂಸ್ಥಾನದ ಜನರ ಗೌರವಕ್ಕೆ ಹಾನಿ ತಟ್ಟುವಂತೆ ಭಾಷಣ ಮಾಡಿ ಹಿಂದೀಯರ ಅಭಿಮತಕ್ಕೆ ವಿರೋಧವಾಗಿ ಬರೇ ಬಿಳಿ ಜನರುಳ್ಳ ಕಮಿಶನನ್ನು ನೇಮಿಸಿದಂದಿನಿಂದಲೂ ಭಾರತೀಯರು ತಮ್ಮ ಅತೃಪ್ತಿಯನ್ನು ಪತ್ರಿಕೆಗಳಲ್ಲಿಯೂ, ಮೀಟಿಂಗ್‌ಗಳ ಮೂಲಕವೂ ತಿಳಿಸುತ್ತಿದ್ದರು. ಆದರೆ ಕಮಿಶನು ಹಿಂದೂಸ್ಥಾನಕ್ಕೆ ಕಾಲಿಟ್ಟ ದಿನ ಹಿಂದುಸ್ಥಾನದಲ್ಲೆಲ್ಲಾ ಪಟ್ಟಣವಾಸಿಗಳು ತಮ್ಮ ಕೆಲಸ ಕಾರ್ಯ ನಿಲ್ಲಿಸಿದರೆಂದರೆ ಮುಂದಾಳುಗಳ ನೋವು ಸಾಧಾರಣ ಜನತೆಗೂ ತಲುಪಿತೆಂತ ಗೊತ್ತಾಗುತ್ತದೆ. ಪಟ್ಟಣವಾಸಿಗಳು ತಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಿ ಹರತಾಳವನ್ನು ಆಚರಿಸಿದ್ದರಿಂದ ಮುಂದಾಳುಗಳ ತೀರ್ಮಾನವು ಎಲ್ಲಾ ಗ್ರಾಮವಾಸಿಗಳಿಗೂ ಸಹ ಏಕಕಾಲದಲ್ಲಿ ಮಿಂಚಿನಂತೆ ಹೊಕ್ಕದ್ದು ತೋರಿತು.

ನಮ್ಮ ದೇಶದ ರಾಜಕೀಯ ಸಂಸ್ಥೆಯಾದ ಜಮೀನ್ದಾರರ ಸಂಘವೂ ಸಹ ಸೈಮನ್ ಕಮಿಶನಿಗೆ ಬಹಿಷ್ಕಾರ ಹಾಕಲು ತೀರ್ಮಾನಿಸಿ ೩ನೇ ತಾರೀಕಿನಲ್ಲಿ ಹರತಾಳ ಮಾಡಬೇಕೆಂತ ಮಾಡಿಕೊಂಡ ಕೋರಿಕೆಯು ವೀರರಾಜಪೇಟೆಯಲ್ಲೂ ಪೊನ್ನಂಪೇಟೆಯಲ್ಲೂ ಸಫಲವಾಯಿತೆಂತ ಕೇಳಿಯೂ ಸಂತೋಷಪಡುತ್ತೇವೆ. ಮಡಿಕೇರಿಯಲ್ಲಿ ಹರತಾಳಕ್ಕೆ ಏನೂ ಪ್ರಯತ್ನ ನಡೆಯದಿದ್ದದ್ದು ಆಶ್ಚರ್ಯಕರವಾಗಿದೆ. ಸಂಘದ ತೀರ್ಮಾನವು ಒಂದು ದಿನಕ್ಕೆ ಮುಂಚೆ ಮಾತ್ರ ಆದದ್ದರಿಂದ ಮಡಿಕೇರಿಯಲ್ಲಿಯೂ ಮತ್ತು ಇತರ ಕಡೆಗಳಲ್ಲಿಯೂ ಹರತಾಳದ ಪ್ರಯತ್ನ ನಡೆಸಲು ಸಾಧ್ಯವಾಗಲಿಲ್ಲವೆಂತ ತಿಳಿಯುತ್ತೇವೆ. ಹೇಗೂ ಸಂಘದ ಕೋರಿಕೆಯು ದೇಶದ ಮುಖ್ಯಸ್ಥಾನವಾದ ವೀರರಾಜಪೇಟೆಯಲ್ಲಿ ನೆರವೇರಿದ್ದರಿಂದ ಈ ದೇಶವೂ ಹಿಂದುಸ್ಥಾನದ ಹರತಾಳದಲ್ಲಿ ಭಾಗಿಯಾಯಿತೆಂತ ಹೆಮ್ಮೆಯಿಂದ ಹೇಳಿಕೊಳ್ಳಬಹುದು.

ಒಟ್ಟು ಹಿಂದುಸ್ಥಾನದಲ್ಲಿ ಹರತಾಳವು ಯಶಸ್ವಿಯಾದದ್ದರಿಂದ ಹಿಂದೀ ಜನಾಂಗವು ಈ ಕಮಿಶನಿಗೆ ಸಹಕರಿಸಿ ಇರುವದಿಲ್ಲವೆಂತ ತೀರ್ಮಾನಿಸಿದಂತೆ ಕಾಣುತ್ತದೆ. ಮದ್ರಾಸ್ ಕಾಂಗ್ರೆಸ್ಸಿನ ಸ್ವತಂತ್ರತೆಯ ಠರಾವು ಜನರಿಗೆ ಹೊಸ ಶಕ್ತಿಯನ್ನು ಕೊಡುತ್ತಲಿದೆ. ಹಿಂದೀಯರಿಗೆ ಅವಮಾನ ಮಾಡುತ್ತಿರುವರೆಂಬುದು ಜನಸಮುದಾಯಕ್ಕೆ ಗೊತ್ತಾದರೆ ಕಳಕೊಂಡ ಸ್ವಾತಂತ್ರ್ಯವನ್ನು ಪುನಃ ಸಂಪಾದಿಸಲು ಜನಸಮುದಾಯವು ಸಹಾಯ ಮಾಡುವದರಲ್ಲಿ ಏನೂ ಸಂಶಯವಿಲ್ಲ.

ಬೊಂಬಾಯಿ ಹೈಕೋರ್ಟ ಜಡ್ಜಿಯಾಗಿದ್ದ ಮ. ಜೀ. ಷಹ ಎಂಬವರು ಹೇಳಿರುವದೇನೆಂದರೆ—"ಹಿಂದುಸ್ಥಾನದ ಜನರು ಶತಮಾನಗಳಿಂದಲೂ ಪರರ ಅಧೀನರಾಗಿದ್ದರೂ ಸ್ವಾತಂತ್ರ್ಯವನ್ನು ಪಡೆಯಲು ಏನೂ ಪ್ರಯತ್ನಿಸದೆ ಇರುವದನ್ನು ನೋಡಿದರೆ ಹಿಂದುಸ್ಥಾನದ ಸಮುದಾಯದ ಜನರಿಗೆ ಆಲೋಚನಾಶಕ್ತಿಯೇ ಇಲ್ಲವೆಂತ ತೋರುತ್ತದೆ. ಹಿಂದುಸ್ಥಾನದ ಜನರು ಪರಾಧೀನರಾಗಿರುವದನ್ನು ಯೋಚಿಸದೆ ಇರಲು ಕಾರಣಗಳು ಯಾವದೇ ಇರಲಿ ಈಗಲಾದರೂ ದಾಸ್ಯತ್ವದಿಂದ ಬಿಡುಗಡೆಯಾಗಲು ಜನಸಮುದಾಯದವರು ನಿಶ್ಚಯಿಸಬೇಕು. "ಯಾವ ರಾಜರು ಬಂದರೇನು, ರಾಗಿ ಬೀಸುವದು ತಪ್ಪುವದಿಲ್ಲ" ಎಂಬ ಗಾದೆಯನ್ನು ಗ್ರಾಮವಾಸಿಗಳು ಹೇಳಿ ಸುಮ್ಮನೆ ಕೂತಿರುವದು ಸ್ವಭಾವಿಕವಾಗಿದೆ. ಪ್ರಜೆಯರ ಹಿತ ಚಿಂತನೆ ಮಾಡದ ರಾಜರಾದರೆ ಬೇಸಲು ರಾಗಿಯೇ ಇಲ್ಲದೆ ಹೋಗಬಹುದೆಂಬುದನ್ನು, ಪ್ರಜೆಯರ ಕೈಕೆಳಗೆಯಲ್ಲೇ ಇರುವ ರಾಜರನ್ನು ಮಾಡಿಕೊಳ್ಳುವದು ಈಗಿನ ಕಾಲದಲ್ಲಿ ಸಾಧ್ಯವಿದೆಯೆಂಬುದನ್ನು ಪ್ರಜೆಗಳಿಗೆ ಮುಂದಾಳುಗಳು ತಿಳಿಸಿಕೊಟ್ಟರೆ ಮುಂದಾಳುಗಳ ಕಾರ್ಯಕ್ಕೆ ಪ್ರಜೆಯರು ನೆರವಾಗಿ ಹರತಾಳದ ದಿನ ಆದಂತೆ ಬೆಂಬಲವಾಗುವದರಲ್ಲಿ ಸಂಶಯವಿಲ್ಲ.

ಹಿಂದುಸ್ಥಾನವು ಪರಕೀಯರ ಅಧೀನದಲ್ಲಿರುವದು ಪ್ರಪಂಚದ ಇತಿಹಾಸದಲ್ಲಿ ಬಹಳ ನಾಚಿಕೆಯ ಸಂಗತಿಯಾಗಿರುತ್ತದೆ. 'ಹಿಂದೀಯರು ತಮ್ಮ ಗೌರವದ ವಿಷಯದಲ್ಲಿ ಜಾಗರೂಕರಾಗಿರಬೇಕಾದದ್ದು ಸ್ವಾಭಾವಿಕವಾಗಿದೆ. ಪ್ರತ್ಯೇಕ ವ್ಯಕ್ತಿಗಳೇ ಆಗಲೀ, ಜನಾಂಗಗಳೇ ಆಗಲೀ ಆತ್ಮಗೌರವಕ್ಕೆ ಗಮನಕೊಡದೆ ಇರಲು ಸಾಧ್ಯವೇ ಇಲ್ಲ. ಸ್ವಾಭಿಮಾನವೂ, ಆತ್ಮಗೌರವವೂ ಸಾಮಾಜಿಕ ಜೀವನದ ಪಾಯವಾಗಿದೆ' ಎಂತ ವೈಸ್‌ರಾಯರು ಕಳೆದ ವಾರ ಎಸೆಂಬ್ಲಿಯಲ್ಲಿ ಸೈಮನ್ ಕಮಿಶನ ವಿಷಯದಲ್ಲಿ ಭಾಷಣ ಮಾಡುವಾಗ ಹೇಳಿದರು. ಬ್ರಿಟಿಷ್ ಚಕ್ರವರ್ತಿಯವರ ಪ್ರತಿನಿಧಿಯವರ ಬಾಯಿಯಿಂದ ಬಿದ್ದ ಈ ಮಾತುಗಳನ್ನಾದರೂ ಮನಸ್ಸಿಗೆ ತೆಗೆದುಕೊಂಡು ಹಿಂದುಸ್ಥಾನದ ಕಳಕೊಂಡ ಆತ್ಮಗೌರವವನ್ನು ಪುನಃ ಸಂಪಾದಿಸಲು ಸರ್ವರೂ ಪ್ರಯತ್ನಿಸಬೇಕಾಗಿದೆ.

ಮಳೆಯ ಅನಾಹುತ.

ಕೊಡಗಿಗೆ ಸಂಪೂರ್ಣ ಬೇಸಿಗೆ ಕಾಲವಾದ ಫೆಬ್ರವರಿ ತಿಂಗಳಲ್ಲಿ ಒಂದು ವಾರ ಎಡೆಬಿಡದೆ ಜೋರಾಗಿ ಮಳೆ ಹೊಡೆದುದು ಬಹಳ ಹೊಸ ತರದ ಸಂಗತಿಯಾಗಿದೆ. ಈ ತಾ ೨ನೇ ಗುರುವಾರದಿಂದ ಮೊನ್ನೆ ಭಾನುವಾರದ ವರೆಗೆ ಪ್ರತಿನಿತ್ಯವೂ ದೇಶದ ಎಲ್ಲಾ ಕಡೆಗಳಿಗೆ ಮಳೆಯು ಹೊಡೆದದ್ದು ಆಶ್ಚರ್ಯಕರವೂ, ವ್ಯಸನಕರವೂ ಆಗಿದೆ. ಒಂದೊಂದು ದಿನ ಕೆಲವು ಕಡೆಗಳಿಗೆ ಬಹಳ ಜೋರಾಗಿಯೂ, ಕೆಲವು ಕಡೆಗಳಿಗೆ ಕಡಿಮೆಯಾಗಿಯೂ ಮಳೆ ಹೊಡೆದಿರುವದಾದರೂ ದೇಶದ ಎಲ್ಲಾ ಭಾಗಗಳಿಗೂ ಈ ಅಕಾಲ ಮಳೆಯಿಂದ ನಷ್ಟ ಸಂಭವಿಸಿದೆಯೆಂಬುದರಲ್ಲಿ ಸಂಶಯವಿಲ್ಲ. ಈಗಿನ ಕಾಲವಾದರೋ ಒಳ್ಳೇ ಬೇಸಿಗೆ ಕಾಲವಾದಲ್ಲ, ವ್ಯವಸಾಯಗಾರರ ಒಕ್ಕಲು ಕೆಲಸದ ಗಲಾಟೆಯ ಸಮಯವಾಗಿದೆ. ಇಂಥಾ ಸಮಯದಲ್ಲಿ ರೈತರಿಗೆ ಯಾವಾಗಲೂ ಚಿಂತೆಯು ತೋರದ ಬಿದ್ದು ಈ ವಿಷಮ ಮಳೆಯಿಂದ ಒಕ್ಕಲು ಕೆಲಸ ಮಾಡುತ್ತಾ ಇನ್ನೂ ಮುಗಿಯದಿರುವವರ ಪಾಡನ್ನಂತೂ ವರ್ಣಿಸಲು ಸಾಧ್ಯವಿಲ್ಲ. ಮೆದೆ ಕೂಡಿಸಿ ಹುಲ್ಲು ಹೊದಿಸಿರುವಲ್ಲಿ ಕೂಡ ಮಳೆ ಬಿದ್ದು ಎರಡು ಮೂರು ದಿವಸಗಳಲ್ಲೇ ಮೊಳೆ ಹುಟ್ಟುವಾಗ್ಯ, ಭತ್ತವನ್ನು ಬಡಿದು ಒಗೆಯಲು ಸಹ ಅವಕಾಶವಿಲ್ಲದಂತೆ ಆರೇಳು ದಿವಸಗಳ ಮಳೆಯ ಹಾವಳಿಯನ್ನು ಹೇಳಿ ಪೂರೈಸಲಾಗವುದಿಲ್ಲ. ನೀರು ನಿಂತಲ್ಲಿ ಭತ್ತ ಮೊಳಕೆ ಹುಟ್ಟಿರುವುದು ಮಾತ್ರವಲ್ಲ, ನೀರು ತಗಲಿದ ಮೆದೆಯೊಳಗಣ ಭತ್ತವೂ ಸಹ ನೀರಿನಿಂದ ಮುಗ್ಗಿ ಕಪ್ಪಾಗಿ ಊಟಕ್ಕೆ ಅಯೋಗ್ಯವಾಗಿದೆ. ಹುಲ್ಲು ಕೂಡ ಕೊಳೆತು ಹೋಗಿ ಬಹು ನಾಶವಾಗಿದೆ. ಈ ಅನಾಹುತದ ವಾರದಲ್ಲಿ ರೈತರು ಏನು ಮಾಡಬೇಕೆಂದು ತೋಚದೆ ವ್ಯಸನಾಕ್ರಾಂತರಾಗಿ ಸುಮ್ಮನೆ ಕೂತಿದ್ದರು. ಎಲ್ಲಿ ನೋಡಿದರೂ ಜನರ ಹಾಹಾಕಾರವೇ ಕೇಳಿಬರುತ್ತಿದೆ. ಈಗ ಮಳೆ ಬಿಟ್ಟಿರುವದರಿಂದ ಉಳಿದಿರುವ ಭತ್ತವನ್ನು ಸಾಧ್ಯವಾದಷ್ಟು ಬಡಿದು ಕೇರಿ ಒಣಗಿಸಿ ಬೇಜ ಮಾಡಿಕೊಳ್ಳುವದರಲ್ಲಿ ಮಗ್ನರಾಗಿದ್ದಾರೆಂತ ತಿಳಿಯುತ್ತೇವೆ. ಈ ಸಾರಿ ರೈತರಿಗೆ 'ಕೈಗೆ ಬಂದದ್ದು ಬಾಯಿಗೆ ಬಾರದಂತಾಯಿತು'. ಈ ವರ್ಷ ಬೀಜಕ್ಕೂ ಊಟಕ್ಕೂ ಒಳ್ಳೇ ಭತ್ತ ಸಿಕ್ಕಲು ಕಷ್ಟವಾಗುವದು ಮಾತ್ರವಲ್ಲ, ಇನ್ನು ಮಾರುವ ಭತ್ತವು ಒಳ್ಳೇದಲ್ಲವೆಂದು ಅದರ ಕ್ರಯವು ಬಹಳ ಕಡಿಮೆಯಾಗಿ ಒಕ್ಕಲಿಗರು ತುಂಬಾ ನಷ್ಟಕ್ಕೂ, ಕಷ್ಟಕ್ಕೂ ಒಳಗಾಗಬೇಕಾಗಿದೆ.

ಕಾಫಿ ಪ್ಲಾಂಟರಗಳಿಗೂ ತುಂಬಾ ನಷ್ಟ ಸಂಭವಿಸಬಹುದೆಂದೇ ಹಲವರ ಅಭಿಪ್ರಾಯ. ಈ ವರ್ಷದ ಫಸಲನ್ನು ಕುಯಿದು ಮುಗಿಸದೆ ಇರುವ ಕೆಲವು ಪ್ಲಾಂಟರುಗಳಿಗೆ ಕಾಫಿಯು ಗಿಡದಿಂದ ಬಿದ್ದು ಕೊಳೆತುಹೋದ ನಷ್ಟ ಒಂದು ಕಡೆ. ಇನ್ನು ಕುಯ್ಯುವಿಕೆ ಆಗದ ಈಗಿನ ಹೂವಿನ ನಷ್ಟ ಇನ್ನೊಂದು. ಕಾಫಿ ಕುಯ್ದು ಪೂರೈಸಿರುವ ಗಿಡಗಳಿಗೆ ಸಾಕಷ್ಟು ವಿಶ್ರಾಂತಿ ದೊರೆಯದೆ ಇಷ್ಟು ಬೇಗನೆ ಜೋರಾದ ಮಳೆ ಬಂದು ಹೂವು ಹೊರಬಿದ್ದ ಕಾರಣ ಇನ್ನು ಎರಡು ಮೂರು ತಿಂಗಳು ಬಿಸಿಲು ಕಾದರೆ ಬರುವ ಫಸಲು ಕಡಿಮೆಯಾಗದೆ ಇರದೆಂದು ಹಲವರು ಅಭಿಪ್ರಾಯಪಡುತ್ತಾರೆ. ಆದರೆ ಇಂಥಾ ಮಳೆಯ ಅನುಭವವುಳ್ಳವರು ಈಗ ಇರುವದೇ ದುರ್ಲಭವಾದ ಕಾರಣ ಇನ್ನು ಮುಂದೆ ಹೇಗಾಗಬಹುದೆಂದು ಈಗ ಭವಿಷ್ಯ ಹೇಳಲು ಜನರು ಹಿಂಜರಿಯುತ್ತಾರೆ.

ಹೇಗೂ ಈ ಮಳೆಯಿಂದ ದೇಶದಲ್ಲಿ ವಿಪರೀತ ನಷ್ಟ ಉಂಟಾಗಿರುವದರಲ್ಲಿ ಸಂದೇಹವಿಲ್ಲ. ಒಟ್ಟಾರೆ ನೋಡಿದರೆ ನಷ್ಟವು ಲಕ್ಷಗಟ್ಟಲೆಯಲ್ಲೇ ಆಗಿರಬಹುದೆಂದು ನಮಗೆ ತೋರುತ್ತದೆ. ಸರಕಾರದವರು ಈ ನಷ್ಟ ನಿವಾರಣೆ ಬಗ್ಗೆ ಏನು ಮಾಡುವರೆಂದು ನೋಡಬೇಕಾಗಿದೆ.

ಜಮೀನ್ದಾರರ ಸಂಘದ ವಿಶೇಷ ಮಹಾಸಭೆ.

ಜಮೀನ್ದಾರರ ಸಂಘದ ವಿಶೇಷ ಮಹಾಸಭೆಯು ಈ ತಾ ೭ರಲ್ಲಿ ಮಧ್ಯಾಹ್ನ 2 ಗಂಟೆಗೆ ವೀರರಾಜಪೇಟೆ ಟ್ರೈನಿಂಗ ರೂಮಿನ ಬಳಿ ಮೈದಾನದಲ್ಲಿ ನಡೆಯಿತು. ಸುಮಾರು 200 ಮೆಂಬರಗಳು ಹಾಜರಿದ್ದರು. ಹಾಜರಿದ್ದ ಮೆಂಬರುಗಳಲ್ಲಿ ಕೆಲವರು—ಮ. ಗೌರವದ ಪಿ ಟಿ ಕುಶಾಲಪ್ಪ, ಜಮ್ಮಡ ಮಾದಪ್ಪ, ಎನ್. ಆರ್ ಸುಬ್ಬಯ್ಯ, ಕೋಡಿಮಣಿಯಂಡ ಮೊಣ್ಣಪ್ಪ, ಕುಟ್ಟಂಡ ತಮ್ಮಯ್ಯ, ಪುತ್ತಮನೆ ಮುದ್ದಯ್ಯ, ಅಪ್ಪಿಗಟ್ಟಿರ ಪೊನ್ನಪ್ಪ, ಕಂಬೀರಂಡ ಗಣಪತಿ, ಪಟ್ಟಡ ಚಂಗಪ್ಪ, ತೆಕ್ಕಡ ತಿಮ್ಮಯ್ಯ, ಯಂ ಯಂ ಚಿಣ್ಣಪ್ಪ, ಕಾಮೋಡು ಸಬ್ಬಯ, ಮೊಯಿದು ಕುಟ್ಟಿ, ಕೊರವಂಡ ಪೊನ್ನಪ್ಪ, ಕಣ್ಣಾಪನ ಉಮ್ಮಡೆ, ಪಕ್ಕಳಿಗರ ಚೆನ್ನಯ್ಯ, ಕೊಳ್ಳಿಮಾಡ ಕರುಂಬಯ್ಯ, ಪುಲಿಯಂಡ ಗಣಪತಿ, ಗಿರಿಗೌಡನ ತಿಮ್ಮಯ್ಯ, ಪೊಕ್ಕಳಂಡ ಉತ್ತಯ್ಯ, ಮುಕ್ಕಾಟಿರ ಕರುಂಬಯ್ಯ, ಸಿ ಯಸ್ ಉತ್ತಯ್ಯ, ಎ ಪಿ ಮಾದಪ್ಪ, ಮೊವ್ವೇರಿಯಂಡ ಕಾಳಪ್ಪ, ಕೊಂಗಂಡ ಸುಬ್ಬಯ್ಯ, ಮಂಡೆಯಂಡ ಕಟ್ಟಪ್ಪ, ದಾವುದ್ ಖಾನ್, ಮುಕ್ಕಾಟಿರ ಮುಂದಣ್ಣ, ಯಂ ಯಂ ಸಿದ್ದೀಕ್, ಪುಲಿಯಂಡ ಬೋಪಯ್ಯ, ಸೈಯ್ಯದ್ ಅಹ್ಮದ್, ಕೇಳಿರ ತಮ್ಮಯ್ಯ, ಖರೀಂ ಖಾನ್, ಬಿದ್ದಂಡ ಬೋಪಯ್ಯ, ಸಾತ್ತೇಕಿ ನಾಣಪ್ಪ, ಸಿಂಗೂರು ಮಾದಪ್ಪ ಮತ್ತು ನಡಿಕೇರಿಯಂಡ ಸೋಮಯ್ಯ. ಸಂಘದ ಖಾಯಂ ಅಧ್ಯಕ್ಷರಾದ ಮ. ಪಿ ಟಿ ಕುಶಾಲಪ್ಪನವರು ಮೀಟಿಂಗಿನ ಅಧ್ಯಕ್ಷರಾಗಿದ್ದರು.

ರಾಯಲ್ ಕಮಿಷನನ್ನು ನೇಮಿಸಿದ ವಿಷಯ ಆದರ ವಿಷಯ ಏನೂ ತೀರ್ಮಾನಿಸಿಕೊಡದೆಂದೂ, ಈಗಿನ ಕೌನ್ಸಿಲಿನಿಂದ ಏನೊಂದೂ ಪ್ರಯೋಜನ ಇಲ್ಲದ ಕಾರಣ ಕೌನ್ಸಿಲ್ ತೋರಿಯುವ ಮಂಜೆ ಇದ್ದ ಸರಕಾರವೇ ತಮಗೆ ಬೇಕೆಂದೂ, ಕೊಡಗನ್ನು ಬೇರೆ ಯಾವ ಪ್ರಾಂತ್ಯಕ್ಕೂ ಸೇರಿಸದೆ ಪ್ರತ್ಯೇಕವಾಗಿರಬೇಕೆಂದೂ ಮುಂತಾಗಿ ಮ. ಕೊರವಂಡ ಪೊನ್ನಪ್ಪನವರು ಮತ್ತು ಮಡಿಕೇರಿ ನಾಡಿನ ಅನೇಕ ಜನರು ರುಜು ಮಾಡಿದ ಒಂದು ಪತ್ರವನ್ನು ಮ. ಕೆ ಪೊನ್ನಪ್ಪನವರ ಕೋರಿಕೆ ಮೇರೆ ಅಧ್ಯಕ್ಷರ ಅನುಮತಿಯಿಂದ ಜ. ಸಕ್ರೆಟರಿಯವರು ಓದಿ ಹೇಳಿದರು.

'ಅಖಿಲ ಹಿಂದೀಯ ನ್ಯಾಯವಿಧಾಯಕ ಸಭೆಗಳಿಂದ ಚುನಾಯಿಸಲ್ಪಡುವ ಕಮಿಟಿಗೆ ಸ್ಟ್ಯಾಚ್ಯೂಟರಿ ಕಮಿಟಿಯ ಮಾನಗ ಇರುವ ಹಕ್ಕುಗಳು ಸಿಕ್ಕುವವರೆಗೆ ಸೈಮನ್ ಕಮಿಷನಿಗೆ ಸಹಕರಿಸಕೂಡದು' ಎಂಬ ಠರಾವನ್ನು ಮ. ಸಿ ಎಸ್ ಉತ್ತಯ್ಯನವರು ಸೂಚಿಸಿ, ಸೈಮನ್ ಕಮಿಷನ್ನಿನ ಏರ್ಪಾಡಿಗೆ ಕಾರಣ ಅದನ್ನು ಇಡೀ ಹಿಂದೂಸ್ಥಾನವು ಯಾಕೆ ಬಹಿಷ್ಕರಿಸತಕ್ಕದ್ದು ಎಂಬುದನ್ನು ವಿವರಿಸಿದರು.

ಈ ಠರಾವನ್ನು ಮ. ಉದಿಯಂಡ ಮೊಣ್ಣಯ್ಯನವರು ಅನುಮೋದಿಸಿದರು.

ಮ. ಕೊಳ್ಳಿಮಾಡ ಕರುಂಬಯ್ಯನವರು 'ಈಗ ನೇಮಕವಾಗಿರುವ ರಾಯಲ್ ಕಮಿಷನು ಹಿಂದೀಯರ ಸ್ವಭಾಗ ನಿರ್ಣಯಕ್ಕೆ (self determination) ವಿರೋಧವಾಗಿರುವದರಿಂದ ಈ ಕಮಿಷನನ್ನು ಸಂಪೂರ್ಣ ಬಹಿಷ್ಕರಿಸಬೇಕು' ಎಂಬ ಠರಾವನ್ನು ಸೂಚಿಸಿ, ಹಿಂದೂ ದೇಶದಲ್ಲಿ ಹಿಂದೂ ಮುಸಲ್ಮಾನರೊಳಗೆ ಕಲಹವಿರುವ ಈ ಸಮಯದಲ್ಲಿ ರಾಯಲ್ ಕಮಿಷನನ್ನು ಯಾಕೆ ನೇಮಿಸಿರುವರೆಂದೂ, ಬ್ರಿಟಿಷರು ತಮ್ಮ ಭಾಷಣಗಳಿಗೆ ತಪ್ಪಿ ಇಂಡಿಯನರ ಅಭಿಪ್ರಾಯಕ್ಕೆ ವಿರೋಧವಾಗಿ ನೇಮಿಸಿರುವ ಸೈಮನ್ ಕಮಿಷನನ್ನು ಇಡೀ ಹಿಂದುಸ್ಥಾನವೇ ಬಹಿಷ್ಕರಿಸುತ್ತಿದೆಯೆಂದೂ ಮುಂತಾಗಿ ಮಾತಾಡಿದರು.

ಮ. ಅಬ್ದುಲ್ ಗಫೂರ್ ಖಾನ್ ಪೈಸಗಿಯವರು ಠರಾವನ್ನು ಅನುಮೋದಿಸಿ ಇಂಗ್ಲೀಷರು ಮೊದಲು ಮಾಡಿದ ಕೆಲವು ರಾಜತಂತ್ರಗಳನ್ನು ವಿವರಿಸಿದರು.

ಮ. ಬಿದ್ದಂಡ ಸುಬ್ಬಯ್ಯನವರು—ಈಗಿನ ಸರ್ಕಾರದವರು ಒಮ್ಮೆ ನಮಗೆ ಇದ್ದ ಹಕ್ಕುಗಳನ್ನು ಕಿತ್ತು ಬಿಟ್ಟಿದ್ದಾರೆ, ಬಾಕಿ ಹಕ್ಕುಗಳೂ ಕಡಿಮೆಯಾಗುತ್ತಿವೆ. ನಮಗೆ ಬೇರೆ ಪ್ರಾಂತ್ಯಗಳಂತೆ ರಾಜಕೀಯ ಸುಧಾರಣೆ ಕೊಡಲಿಲ್ಲ. ಆದ್ದರಿಂದ ಬ್ರಿಟಿಷ್ ಸರಕಾರದ ಮೇಲೆ ನಂಬಿಕೆಯು ಕಡಿಮೆಯಾಗುತ್ತಿದೆ. ವ್ಯಕ್ತಿಯಲ್ಲಿ ಸಹಾಯ ಮಾಡಿದೆವು. ನಮ್ಮ ದೇಶವನ್ನು ನಾವಾಗಿ ಬಿಟ್ಟು ಕೊಟ್ಟೆವು. ಹಿಂದೀಯರೊಂದಿಗೆ ನಾವೂ ಸೇರಿಕೊಳ್ಳಬೇಕು. ಅವರಿಗೆ ಸ್ವತಂತ್ರ ಸಿಕ್ಕುವಾಗ ನಮಗೂ ಸಿಕ್ಕುತ್ತದೆ ಎಂದು ಮುಂತಾಗಿ ಹೇಳಿ ಕರುಂಬಯ್ಯನವರ ಠರಾವಿಗೆ ಉತ್ಸಾಹದಿಂದ ಮಾತಾಡಿದರು.

ಮ. ಬಿದ್ದಂಡ ಬೋಪಯ್ಯನವರು—ಈ ಮೊದಲಿನ ಭಾಷಣಗಳಿಂದ ತನಗೆ ತೃಪ್ತಿಯಾಗಲಿಲ್ಲ. ಕೆಲಸವೆಷ್ಟು ಸಾಧ್ಯ

(4ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೨೧ನೇ ಪ್ರಕರಣ.

ಪೋಲಕರು ನಮ್ಮ ಗುಂಪಿಗೆ ಸೇರಿದುದು.

ಫೀನಿಕ್ಸಿನ ಆಶ್ರಮವನ್ನು ನಾನು ಸ್ಥಾಪಿಸಿದರೂ ಅಲ್ಲಿ ನಾನು ಆಗಾಗ ಸ್ವಲ್ಪ ಕಾಲ ಮಾತ್ರ ನಿಲ್ಲಲೂ ಸಾಧ್ಯವಾಗುತ್ತಿದ್ದುದು ನನಗೆ ಸದಾ ದುಃಖಕರವಾದ ವಿಷಯವಾಗಿದೆ. ಬರುಬರುತ್ತಾ ವಕೀಲಿ ಕೆಲಸವನ್ನು ಬಿಟ್ಟು ಫೀನಿಕ್ಸಿಗೆ ಹೋಗಿ ಅಲ್ಲಿ ಕೈಕೆಲಸದಿಂದ ಜೀವನವನ್ನು ಸಂಪಾದಿಸಿ ಆ ಆಶ್ರಮದ ಸಫಲತೆಯಲ್ಲಿ ಸೇವೆಯ ಆನಂದವನ್ನು ಪಡೆಯುವುದೇ ಮೊದಲು ನನ್ನ ಅಭಿಲಾಷೆಯಾಗಿದ್ದಿತು. ಆದರೆ ಅದು ದೇವರ ಇಚ್ಛೆಯಲ್ಲಿರಲಿಲ್ಲ. ಮನುಷ್ಯನು ನೆನೆಯುವುದೊಂದಾದರೆ ದೇವರು ಮಾಡುವುದು ಇನ್ನೊಂದೆಂಬುದು ಎಷ್ಟೋ ಸಲ ನನ್ನ ಅನುಭವಕ್ಕೆ ಬಂದಿದೆ. ಆದರೆ ಸತ್ಯದ ಉಪಾಸನೆಯೇ ಅಲ್ಲಿ ಅಂತಿಮ ಧ್ಯೇಯವಾಗಿರುತ್ತದೆಯೋ ಅಲ್ಲಿ ನಮ್ಮ ಪ್ರಯತ್ನಗಳು ಎಷ್ಟೇ ಅಸಫಲವಾಗಲಿ ಪರಿಣಾಮವು ಎಂದೂ ಅಶುಭವಾಗುವುದಿಲ್ಲ ಮತ್ತು ಅನೇಕವೇಳೆ ನಿರೀಕ್ಷಿಸಿದುದಕ್ಕಿಂತ ಉತ್ತಮವಾಗಿಯೇ ಇರುತ್ತದೆ. ಎಂಬುದು ಕೂಡ ನನ್ನ ಅನುಭವಕ್ಕೆ ಬಂದಿರುತ್ತದೆ. ಫೀನಿಕ್ಸ್ ಆಶ್ರಮವು ಅನಿರೀಕ್ಷಿತವಾಗಿ ಹೊಂದಿದ ರೂಪವೂ ಮತ್ತು ಇತರ ಅನಿರೀಕ್ಷಿತವಾದ ಘಟನೆಗಳೂ ನಮ್ಮ ನಿರೀಕ್ಷಣೆಗಿಂತ ಉತ್ತಮವಾಗಿದ್ದುವೆಂದು ಹೇಳುವುದು ಕಷ್ಟವಾಗಿದ್ದರೂ ಅಶುಭವಾಗಿರಲಿಲ್ಲವೆಂದು ಖಂಡಿತವಾಗಿ ಹೇಳಬಹುದು.

ಕೈಕೆಲಸದಿಂದಲೇ ನಮ್ಮಲ್ಲಿ ಪ್ರತಿಯೊಬ್ಬರೂ ಜೀವನ ಸಂಪಾದಿಸುವುದನ್ನು ಸಾಧ್ಯಮಾಡಲೋಸುಗ ಛಾಪಖಾನೆಯ ಸುತ್ತಲಿದ್ದ ಜಮೀನನ್ನು ಒಬ್ಬೊಬ್ಬರಿಗೆ ಮೂರು ಮೂರು ಎಕರೆಯಂತೆ ವಿಭಾಗಿಸಿದೆವು. ಇವುಗಳಲ್ಲಿ ಒಂದ ನನ್ನ ಪಾಲಿಗೆ ಬಿದ್ದಿತು. ಇವೆಲ್ಲವುಗಳ ಮೇಲೆ ನಮ್ಮ ಇಷ್ಟಕ್ಕೆ ವಿರೋಧವಾಗಿಯೇ ತಗಡಿನ ಮನೆಗಳನ್ನು ಕಟ್ಟಿದೆವು. ಸಾಧಾರಣ ರೈತರಿಗೆ ತಕ್ಕಹಾಗೆ ಹುಲ್ಲು ಹೊದಿಸಿದ ಮಣ್ಣಿನ ಮನೆಗಳನ್ನೋ ಅಥವಾ ಸಣ್ಣ ಇಟ್ಟಿಗೆಯ ಮನೆಗಳನ್ನೋ ಕಟ್ಟಬೇಕೆಂದು ನಾವು ಇಷ್ಟಪಡುತ್ತಿದ್ದೆವು. ಆದರೆ ಅದು ಸಾಧ್ಯವಾಗಲಿಲ್ಲ. ಅದಕ್ಕೆ ಖರ್ಚು ಹೆಚ್ಚಾಗುತ್ತಿದ್ದಿತು. ಹೊತ್ತೂ ಹೆಚ್ಚಾಗಿ ಹಿಡಿಯುತ್ತಿದ್ದಿತು. ನಾವೆಲ್ಲರೂ ಇದನ್ನು ಬಹು ಬೇಗನೆ ನೆಲಸುವುದಕ್ಕೆ ಆತುರರಾಗಿದ್ದೆವು.

ಇನ್ನೂ ಮನಸುಖಲಾಲ ನಾಜರರೇ ಪತ್ರಿಕೆಯ ಸಂಪಾದಕರಾಗಿದ್ದರು. ಅವರು ಈ ಹೊಸ ಏರ್ಪಾಡಿಗೆ ಸೇರದೆ ಡರ್ಬನ್ನಿನಲ್ಲಿಯೇ ವಾಸವಾಗಿದ್ದರು. ಡರ್ಬನ್ನಿನಲ್ಲಿ 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಕಚೇರಿಯ ಶಾಖೆಯೊಂದಿದ್ದಿತು.

ನಾವು ಅಕ್ಷರ ಜೋಡಿಸುವವರನ್ನು ಸಂಬಳಕ್ಕೆ ಇಟ್ಟುಕೊಂಡಿದ್ದರೂ ಈ ಆಶ್ರಮದಲ್ಲಿ ನೆಲಸಿರುವ ನಮ್ಮಲ್ಲಿ ಪ್ರತಿಯೊಬ್ಬರೂ ಅಕ್ಷರದ ಮೊಳೆಜೋಡಿಸುವುದನ್ನು ಕಲಿತುಕೊಳ್ಳಬೇಕೆನ್ನುವುದು ನನ್ನ ಅಭಿಪ್ರಾಯವಾಗಿದ್ದಿತು. ಅಚ್ಚಿನ ಕಾರ್ಖಾನೆಯಲ್ಲಿ ಜರುಗುವ ಕೆಲಸಗಳಲ್ಲೆಲ್ಲಾ ಇದು ಅತ್ಯಂತ ಸುಲಭವಾದುದಾದರೂ ಅಲ್ಲಿ ಇದಕ್ಕಿಂತಲೂ ಬೇಸರ ಹಿಡಿಸುವ ಕೆಲಸವಿನ್ನೊಂದಿಲ್ಲ. ನನ್ನ ಅಭಿಪ್ರಾಯದ ಪ್ರಕಾರ ಆಗ ಈ ಕೆಲಸ ತಿಳಿಯದೆ ಇದ್ದವರು ಇದನ್ನು ಕಲಿತುಕೊಂಡರು. ಕಡೆಯ ವರೆಗೂ ನಾನು ಈ ಕೆಲಸದಲ್ಲಿ ದಡ್ಡನಾಗಿಯೇ ಉಳಿದೆನು. ಮಗನಲಾಲ್ ಗಾಂಧಿಯು ನಮ್ಮೆಲ್ಲರನ್ನು ಹಿಂದೆ ಹಾಕಿದನು. ಆತನು ಹಿಂದೆ ಎಂದೂ ಛಾಪಖಾನೆಯಲ್ಲಿ ಕೆಲಸಮಾಡಿಲ್ಲವಾದರೂ ಅಕ್ಷರ ಜೋಡಿಸುವುದರಲ್ಲಿ ಅತಿ ಕುಶಲನಾಗಿ ಆ ಕೆಲಸವನ್ನು ಹೆಚ್ಚು ವೇಗದಿಂದ ಮಾಡಬಲ್ಲವನಾದುದಲ್ಲದೆ ಮುದ್ರಣಾಲಯಕ್ಕೆ ಸಂಬಂಧಪಟ್ಟ ಇತರ ಕಾರ್ಯಗಳಲ್ಲೆಲ್ಲಾ ಜಾಗ್ರತೆಯೂ, ದಕ್ಷತೆಯನ್ನು ಪಡೆದು ನನಗೆ ಆಶ್ಚರ್ಯವನ್ನೂ, ಸಂತೋಷವನ್ನೂ ಉಂಟುಮಾಡಿದನು. ಆತನಿಗೆ ತನ್ನ ಯೋಗ್ಯತೆಯ ಅರಿವೇ ಇರಲಿಲ್ಲವೆಂದು ನನಗೆ ಸದಾ ತೋರಬಂದಿದೆ.

ಕಟ್ಟಡಗಳೆಲ್ಲಾ ಸಿದ್ಧವಾಗಿ ನಾವು ನೆಲಸಿದೆವೋ ಇಲ್ಲವೋ ಅಷ್ಟುವಷ್ಟರಲ್ಲಿಯೇ ನಾನು ಹೊಸದಾಗಿ ಹೂಡಿದ ಗೂಡನ್ನು ಬಿಟ್ಟು ಜೋಹಾನ್ಸ್ ಬರ್ಗಿಗೆ ಹೋಗಬೇಕಾಗಿ ಬಂದಿತು. ನಾನು ಅಲ್ಲಿಯ ಕೆಲಸವನ್ನು ಎಷ್ಟು ದಿನವಾದರೂ ನೋಡಿಕೊಳ್ಳದೆ ಬಿಟ್ಟಿರುವ ಸ್ಥಿತಿಯಲ್ಲಿರಲಿಲ್ಲ.

ಜೋಹಾನ್ಸ್ ಬರ್ಗಿಗೆ ಹಿಂತಿರುಗಿದ ಮೇಲೆ ಪೋಲಕರಿಗೆ ನಾನು ನಡೆಸಿದ್ದ ಮಹತ್ವದ ಬದಲಾವಣೆಯ ವಿಚಾರವನ್ನು ತಿಳಿಸಿದೆನು. ತಾವು ನನಗೆ ಎರವಾಗಿ ಕೊಟ್ಟಿದ್ದ ಪುಸ್ತಕವು ಹೀಗೆ ಫಲಿಸಿರುವುದೆಂದು ತಿಳಿದ ಅವರ ಸಂತೋಷಕ್ಕೆ ಪಾರವಿರಲಿಲ್ಲ.

"ಈ ಹೊಸ ಸಾಹಸದಲ್ಲಿ ನಾನೂ ಭಾಗಿಯಾಗಲು ಸಾಧ್ಯವಿಲ್ಲವೇ" ಎಂದು ಅವರು ಕೇಳಿದರು.

"ನಿಮಗೆ ಇಷ್ಟ ತೋರಿದರೆ ನೀವು ಧಾರಾಳವಾಗಿ ಆಶ್ರಮಕ್ಕೆ ಸೇರಬಹುದು" ಎಂದು ನಾನು ಹೇಳಿದೆನು.

"ನೀವು ನನ್ನನ್ನು ಸೇರಿಸುವುದಾದರೆ ನಾನು ಸಿದ್ಧವಾಗಿ ಇದ್ದೇನೆ."

ಅವರ ಮನೋನಿಶ್ಚಯವು ನನ್ನನ್ನು ಮರುಳುಗೊಳಿಸಿತು. 'ಕ್ರಿಟಿಕ್' ಪತ್ರಿಕೆಯ ಕೆಲಸದಿಂದ ತಮ್ಮನ್ನು ಬಿಡುಗಡೆಯಾಗಿ ಮಾಡಬೇಕೆಂದು ಅವರು ತಮ್ಮ ಮುಖ್ಯಸ್ಥರಿಗೆ ಒಂದು ತಿಂಗಳ ಎಚ್ಚರಿಕೆ (ನೋಟೀಸ್) ಯನ್ನು ಕೊಟ್ಟು ಯಥಾಕಾಲಕ್ಕೆ ಫೀನಿಕ್ಸನ್ನು ತಲುಪಿದರು. ಅವರು ಜನರೊಡನೆ ಸೇರುವ ಸ್ವಭಾವದವರಾದುದರಿಂದ ಎಲ್ಲರ ಮನಸ್ಸನ್ನೂ ಒಲಿಸಿ ಶೀಘ್ರದಲ್ಲಿಯೇ ನಮ್ಮ ಕುಟುಂಬದಲ್ಲೊಬ್ಬರಾಗಿದ್ದರು. ಸರಳತೆಯು ಅವರಿಗೆ ಹುಟ್ಟಿನಿಂದಲೇ ಸಹಜವಾಗಿದ್ದಿತು. ಆದರೆ ಅವರಿಗೆ ಫೀನಿಕ್ಸಿನ ಜೀವನವು ವಿಚಿತ್ರವಾಗಿಯಾಗಲಿ ಕಷ್ಟತರವಾಗಿಯಾಗಲಿ ತೋರುವುದರ ಬದಲು ನೀರಿನಲ್ಲಿ ಮೀನು ಇದ್ದಂತೆ ಅವರಿಗೆ ಆ ಜೀವನವು ಒಪ್ಪಿತು. ಆದರೆ ನಾನು ಅವರನ್ನು ಅಲ್ಲಿ ಬಹು ದಿನ ಇಟ್ಟುಕೊಳ್ಳಲಾಗಲಿಲ್ಲ. ಮಿ. ರಿಚರು ತಮ್ಮ ವಕೀಲಿ ವ್ಯಾಪಾರವನ್ನು ನಿಬಂಧನೆಯಲ್ಲಿ ಪೂರೈಸಲು ನಿಶ್ಚಯಿಸಿದರು. ನಾನು ಒಬ್ಬನೇ ನನ್ನ ವಕೀಲಿ ಕೆಲಸವನ್ನು ನಿರ್ವಹಿಸುವಂತಿರಲಿಲ್ಲ. ಆದ್ದರಿಂದ ನಾನು ಪೋಲಕರಿಗೆ ಅವರು ನನ್ನ ಕಚೇರಿಗೆ ಸೇರಿಕೊಳ್ಳಬೇಕೆಂದೂ, ಅವರು ವಕೀಲರಾಗಬೇಕೆಂದೂ ಸೂಚಿಸಿದೆನು. ಕಟ್ಟಕಡೆಗೆ ನಾವಿಬ್ಬರೂ ವಕೀಲಿಯನ್ನು ಬಿಟ್ಟು ಫೀನಿಕ್ಸಿನಲ್ಲಿ ನೆಲಸಬೇಕೆಂದು ತಿಳಿದುಕೊಂಡಿದ್ದೆನು. ಆದರೆ ಇದು ನಡೆಯಬೇಕೆಂದು ದೈವೇಚ್ಛೆಯಿರಲಿಲ್ಲ. ಪೋಲಕರದು ಎಷ್ಟು ನಂಬಿಕೆಯ ಸ್ವಭಾವವೆಂದರೆ ಅವರು ಒಬ್ಬ ಮಿತ್ರನಲ್ಲಿ ವಿಶ್ವಾಸವನ್ನಿಟ್ಟ ಮೇಲೆ ಅವನೊಡನೆ ಚರ್ಚಿಸುವುದರ ಬದಲು ಅವನ ಅಭಿಪ್ರಾಯವನ್ನು ಅನುಮೋದಿಸಲು ಪ್ರಯತ್ನಪಡುತ್ತಿದ್ದರು. ಅವರು ನನಗೆ ಹೀಗೆ ಬರೆದರು.—

"ಇಲ್ಲಿನ ಜೀವನವು ನನ್ನ ಮನಸ್ಸಿಗೆ ಒಪ್ಪುತ್ತದೆ. ಇಲ್ಲಿ ನಾನು ಸಂಪೂರ್ಣ ಸುಖಿಯಾಗಿದ್ದೇನೆ. ಈ ಆಶ್ರಮವನ್ನು ಅಭಿವೃದ್ಧಿಗೊಳಿಸುವ ಆಸೆಯು ನನಗಿದೆ. ಆದರೂ ನಾನು ಆಶ್ರಮವನ್ನು ಬಿಟ್ಟು ನಿಮ್ಮ ಕಚೇರಿಗೆ ಸೇರಿ ವಕೀಲನಾಗುವುದರಿಂದ ನಮ್ಮ ಧ್ಯೇಯಗಳನ್ನು ಇನ್ನೂ ಶೀಘ್ರವಾಗಿ ಸಫಲಗೊಳಿಸಬಹುದೆಂದು ನೀವು ಯೋಚಿಸುವುದಾದರೆ ನಾನು ನಿಮ್ಮ ಸೂಚನೆಯಂತೆ ನಡೆಯಲು ಸಿದ್ಧನಾಗಿದ್ದೇನೆ."

ನನಗೆ ಈ ಪತ್ರದ ಅಭಿಪ್ರಾಯದಿಂದ ಸಂತೋಷವಾಯಿತು. ಪೋಲಕರು ಫೀನಿಕ್ಸನ್ನು ಬಿಟ್ಟು ಜೋಹಾನ್ಸ್ ಬರ್ಗಿಗೆ ಬಂದು ಸೇರಿಕೊಂಡರು.

ಅಲ್ಲಿಯ ವಕೀಲ ಪರೀಕ್ಷೆಗೆ ಸಿದ್ಧರಾಗಲು ನಾನು ಒಬ್ಬ ಯುವಕ ಸ್ಕಾಚ್ ಥಿಯೊಸಾಫಿಸ್ಟರಿಗೆ ಸಹಾಯ ಮಾಡುತ್ತಿದ್ದೆನು. ನನ್ನ ಸಲಹೆಯ ಮೇರೆಗೆ ಪೋಲಕರನ್ನು ಅನುಸರಿಸಿ ಅವರೂ ಸೇರಿದರು. ಈ ಸಮಯದಲ್ಲಿಯೇ ನನ್ನ ಕಚೇರಿಗೆ ಸಹಾಯಕರಾಗಿ ಸೇರಿದರು. ಅವರ ಹೆಸರು ಮಿ. ಮೆಕಿನ್ಟೈರ್

ಫೀನಿಕ್ಸ್ ಆಶ್ರಮದ ಧ್ಯೇಯಗಳನ್ನು ಶೀಘ್ರವಾಗಿ ಸಫಲಗೊಳಿಸಬೇಕೆಂಬ ಸದುದ್ದೇಶದಿಂದ ಹೀಗೆ ನಾನು ಅದಕ್ಕೆ ವಿರುದ್ಧವಾದ ಪ್ರವಾಹದಲ್ಲಿ ಬಹುದೂರ ಕೊಚ್ಚಿಕೊಂಡು ಹೋಗುತ್ತಿದ್ದೆನು. ದೇವರ ಇಚ್ಛೆಯು ಬೇರೆ ವಿಧವಾಗಿ ಇರದೆ ಹೋಗಿದ್ದರೆ ಸರಳ ಜೀವನದ ಹೆಸರಿನಲ್ಲಿ ಹರಡಿದ ಬಲೆಯಲ್ಲಿ ನಾನು ಬಂದಿಯಾಗಿ ಬೀಳುತ್ತಿದ್ದೆನು.

ಹೇಗೆ ನಮ್ಮ ಕಲ್ಪನೆಗಳ ನಿರೀಕ್ಷಣೆಗೂ ವಿರೋಧವಾಗಿ ನಾನೂ ನನ್ನ ತಂಡವೂ ರಕ್ಷಿಸಲ್ಪಟ್ಟೆವೆಂಬುದನ್ನು ವರ್ಣಿಸಲು ಇನ್ನೂ ಕೆಲವು ಅಧ್ಯಾಯ ಹಿಡಿಯುತ್ತದೆ.

ನಮ್ಮ ದೇಶವನ್ನು ನಾವೇ ಏತಕ್ಕಾಗಿ ಆಳಬೇಕು?

ಭಾಗ II.

(ಕೆ. ಪಿ. ಚೆಂಗಪ್ಪನವರಿಂದ)

ನಮ್ಮ ದೇಶದ ಸ್ಥಿತಿಯೂ, ಚರಿತ್ರೆ, ಕಟ್ಟಳೆಯೂ, ಜನಾಂಗವೂ ಸಂಸ್ಕೃತಿಯೂ ಎಲ್ಲಾ ದೇಶಕ್ಕಿಂತಲೂ ಪ್ರತ್ಯೇಕವಾಗಿ ಇರುವ ಈ ವಿಷಯವು ಪರಿಗಣಿಸಲ್ಪಟ್ಟಿತು. ಇದನ್ನು ವೈಸರಾಯಿ ಲಾರ್ಡ್ ರೀಡಿಂಗ್‌ರವರು 1926ರಲ್ಲಿ ಕೊಡಗು ಜನರಿಗಾದರ ಹಾಗೆ ಕಳಿಸಿದ ಜವಾಬಿನಲ್ಲಿ ಈ ರೀತಿಯಾಗಿ ಹೇಳಿರುತ್ತಾರೆ.

Nevertheless you may rest assured that Coorg and its people hold a very special interest for me and that I am conscious that the ties which connect them with my Government are of a very special nature. Coorg is a small country but it has a very great history behind it. Its people were allies of the British Govt. for nearly 50 years before their Country at their own request was taken over by the British. They rendered valuable assistance in the wars with Hyder Ali and Tippu. Their support was freely given in the suppression of the rising in South Canara in 1836, and at the time of Sepoy mutiny they rallied enmasse to the help of the British Government. These fine traditions found their echo in their record in the recent great war and even now when war is over by raising a territorial battalion and by keenness in enlisting they continue to foster and preserve their ideals of loyalty and service.

These annals establish a record in which Coorg though smaller in area and population than the average British district, may well take pride as a province. Its people as my Govt. have always recognised have their own racial linguistic and social characteristics and a distinct well marked individuality of own, and it was on these grounds that they were selected for integrity as a unit of administration and in view of these considerations, in spite of the comparative minuteness of the area and population involved, the Govt. of of India decided to establish a seperate Legislative Council in Coorg."

'ಕೊಡಗು ಮತ್ತು ಕೊಡಗಿನ ಜನರು ನನ್ನ ವಿಶೇಷ ಅಭಿಮಾನಕ್ಕೆ ಪಾತ್ರರಾಗಿದ್ದಾರೆಂತಲೂ ಮತ್ತು ಅವರಿಗೂ ನನ್ನ ಸರಕಾರಕ್ಕೂ ಇರುವ ಸಂಬಂಧವು ಬಹಳ ವಿಶೇಷ ಸ್ವಭಾವದ್ದೆಂಬುದನ್ನು ನಾನು ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆಂದೂ ನೀವು ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ. ಕೊಡಗು ಚಿಕ್ಕ ದೇಶವಾಗಿದೆ. ಆದರೆ ಅದರ ಚರಿತ್ರೆಯು ದೊಡ್ಡದಾಗಿದೆ. ಆ ದೇಶದ ಜನರ ಕೋರಿಕೆ ಮೇರೆ, ಆ ದೇಶವನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಮೊದಲು ಆ ದೇಶದ ಜನರು ಬ್ರಿಟಿಷ್ ಸರಕಾರಕ್ಕೆ ಮಿತ್ರರಾಗಿದ್ದರು. ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಮೇಲೆ ನಡೆದ ಯುದ್ಧಗಳಲ್ಲಿ ಅವರು ಅಮೂಲ್ಯ ಸಹಾಯಮಾಡಿದರು. 1836ರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಕಾಟಕಾಯಿಯನ್ನು ದಬಾಯಿಸಲಿಕ್ಕೆ ಅವರು ಸಹಾಯವನ್ನು ಧಾರಾಳವಾಗಿ ಕೊಟ್ಟರು. ಸಿಪಾಯಿ ದಂಗೆಯ ಸಮಯದಲ್ಲಿ ಬ್ರಿಟಿಷ್ ಸರಕಾರಕ್ಕೆ ಸಹಾಯ ಮಾಡಲು ಒಟ್ಟುತದಿಂದ ತಯಾರಾದರು. ಈ ನೊಗಸಾದ ಪ್ರಖ್ಯಾತ ಗುಣಕ್ಕನುಸಾರವಾಗಿ, ಮೊನ್ನೆ ನಡೆದ ಮಹಾಯುದ್ಧದಲ್ಲಿಯೂ ಸಹಾಯಮಾಡಿದರು. ಈಗ ಯುದ್ಧ ತೀರಿದನಂತರ ಒಂದು ಟೆರಿಟೋರಿಯಲ್ ಸೈನ್ಯವನ್ನು ಏರ್ಪಡಿಸಿದರಿಂದಲೂ ಅದಕ್ಕೆ ಸೇರಲು ತೋರಿಸಿದ ಕುತೂಹಲತೆಯಿಂದಲೂ ಅವರು ರಾಜಭಕ್ತಿಯ ಧ್ಯೇಯವನ್ನು ನಡೆಸುತ್ತಲೂ, ಉಳಿಸುತ್ತಲೂ ಇದ್ದಾರೆ.

ಈ ಐತಿಹಾಸಿಕ ಕಾರ್ಯಗಳಿಂದ ಸಾಧಾರಣ ಬ್ರಿಟಿಷ್ ಜಿಲ್ಲೆಗಿಂತ ವಿಸ್ತೀರ್ಣದಲ್ಲೂ, ಜನಸಂಖ್ಯೆಯಲ್ಲಿಯೂ ಕಡಿಮೆಯಾದರೂ ಪ್ರತ್ಯೇಕ ಪ್ರಾಂತ್ಯವೆಂಬ ಹೊಗಳಿಕೆಯನ್ನು ನ್ಯಾಯವಾಗಿಟ್ಟುಕೊಳ್ಳಬಹುದು. ನನ್ನ ಸರಕಾರವು ಯಾವಾಗಲೂ ಒಪ್ಪುವಂತೆ ಅವರ ಜನರು, ಜಾತಿಯಲ್ಲಿಯೂ, ಭಾಷೆಯಲ್ಲಿಯೂ, ಸಮಾಜ ರಚನೆಯಲ್ಲಿಯೂ ಬೇರೆ ಜನರಿಗಿಂತ ಪ್ರತ್ಯೇಕಿಸಲ್ಪಟ್ಟಿದ್ದಾರೆ. ಇದನ್ನೆಲ್ಲಾ ಯೋಚಿಸಿಯೇ ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ಬಹಳ ಚಿಕ್ಕದಾದರೂ, ಇಂಡಿಯಾ ಸರಕಾರವು ಕೊಡಗಿನಲ್ಲಿ ಪ್ರತ್ಯೇಕ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಲು ನಿಶ್ಚಯಿಸಿದಾಗಿದೆ'

ಈ ಮೇಲಿನ ದಾಖಲೆ ಪ್ರಕಾರ ನಮ್ಮ ವ್ಯಕ್ತಿತ್ವವನ್ನು ಗಳಿಸಲು ಸರಕಾರವು ನ್ಯಾಯವಿಧಾಯಕ ಸಭೆಯನ್ನು ಕೊಟ್ಟದ್ದರಿಂದ ಕೃತಜ್ಞರಾಗಿತ್ತು. ಆದರೆ ಕಳೆದ ಒಂದು ಶತಮಾನದ ಚರಿತೆಯಿಂದಲೂ ಮತ್ತು ಕೌನ್ಸಿಲ್ ಬಂದು ನಾಲ್ಕು ವರ್ಷದ ಅನುಭವದಿಂದಲೂ, ದೇಶೀಯರಿಗೆ ರಾಜ್ಯಭಾರದಲ್ಲಿ ಆಶಕ್ತಿ ಹೆಚ್ಚುತ್ತಾ ಬರುತ್ತದೆ. ಕೌನ್ಸಿಲು ಬಂದ ಕೂಡಲೇ ದೇಶದ ಜನರ ಕೋರಿಕೆಯೆಲ್ಲಾ ನೆರವೇರಬಹುದೆಂದೂ, ಎಲ್ಲಾ ಭಾಗದಲ್ಲಿಯೂ ಅಭಿವೃದ್ಧಿಯ ಚಿಹ್ನೆಯು ತಲೆದೋರಬಹುದೆಂದು ಗ್ರಹಿಸಿದ್ದು ನಿಷ್ಫಲವಾಯಿತು. ಪ್ರತಿ ಬಾರಿಯೂ ಹಣದ ಅಭಾವವೆಂಬ ಬಹಾನೆ ಹಾಡಿಕೆಯಾಯಿತು. ಈ ತರದ ರಾಜ್ಯಭಾರವನ್ನು ನೋಡಿ ನೋಡಿ ನಮಗೆ ಕಡೆಯ ಭಾವವನ್ನು ವೇದನೆಯೂ ಮರುಕವೂ ಹುಟ್ಟಿದೆ. ಯಾವ ದೇಶದಲ್ಲೇ ಆಗಲಿ ಆದಾಯವು ಹೆಚ್ಚಾಗಿದ್ದರೆ ಮಾತ್ರ ದೇಶದ ಅಭಿವೃದ್ಧಿ ಕೆಲಸವಾಗುತ್ತದೆಯಲ್ಲದೆ ಅನ್ಯಥಾ ಆಗುವುದಿಲ್ಲ. ನಮ್ಮ ಈಗಿನ ಸರಕಾರದಲ್ಲಿ ಆದಾಯಕ್ಕಿಂತ ವೆಚ್ಚವು ಹೆಚ್ಚುತ್ತ ಬರುವುದರಿಂದಲೂ, ಅಮೂಲ್ಯ ಉತ್ಪತ್ತಿಯಾದ ಗಂಧವು ನಶಿಸಿಹೋಗುತ್ತಾ ಬಂದಿರುವುದರಿಂದಲೂ, ಇನ್ನು ನಾಲ್ಕೈದು ವರ್ಷದೊಳಗೆ ಸರಕಾರವು ಬಾಧಿತವಾಗಿಯೂ ದಿವಾಳಿಯಾಗಬೇಕಾಗುತ್ತೆ; ಇಲ್ಲವೇ ಖರ್ಚು ಮತ್ತು ಆದಾಯವನ್ನು ಸರಿಪಡಿಸಲು ಅನೇಕ ಇಲಾಖೆಗಳನ್ನು ಮುಚ್ಚಬೇಕಾಗುತ್ತೆ. ಇದನ್ನು ಈಗಿನ ಸರಕಾರಕ್ಕೆ ಸಂಪಾದಿಸಲು ಆಗದೆ ಇರುವಾಗ ಬಾಧಿತವಾಗಿಯೂ, ನಮ್ಮ ದೇಶವನ್ನು ಮದ್ರಾಸು ಸರಕಾರಕ್ಕೆ ಸೇರಿಸಿಯೇ ಸೇರಿಸಬೇಕಾಗುವುದು. ಅಥವಾ ದೇಶದಲ್ಲಿ ಯಾವ ಅಭಿವೃದ್ಧಿಯೂ ಇಲ್ಲದೆ ಕೊರಗಬೇಕಾಗುವುದು.

ವೈಸರಾಯರ ಜವಾಬಿನ ಪ್ರಕಾರವಾಗಿ, ನಾವು ಬ್ರಿಟಿಷ ಜನರ ಸ್ನೇಹಿತರು, ನಾವಾಗಿ ಬಿಟ್ಟುಕೊಟ್ಟ ದೇಶ ಮತ್ತು ಕಷ್ಟಕಾಲದಲ್ಲಿ ಸಹಾಯ ಮಾಡಿದವರಾದ್ದರಿಂದ ಅವರು ಈ ಇಕ್ಕಟ್ಟಿನಲ್ಲಿ ನಮ್ಮ ದೇಶವನ್ನು ನಮಗೇನೇ ಕೊಟ್ಟು ನಮ್ಮ ಆದಾಯ ವೆಚ್ಚವನ್ನು ನಮಗೇನೇ ಸರಿಪಡಿಸಿಕೊಳ್ಳಲು ಬಿಡುವುದು ಒಳ್ಳೆಯದಲ್ಲವೇ? ನಮ್ಮ ದೇಶದ ಪ್ರಾರ್ಥನೆ ರಾಜ್ಯಭಾರವು ನಮಗೆ ಸಿಕ್ಕಿದನಂತರ ನಾವು ಮೈಸೂರು ಸಂಸ್ಥಾನದ ಮತ್ತು ಕರ್ನಾಟಕದವರೊಡನೆ ಮಿತ್ರರಂತೆ ಕಲೆತು ರಾ

ಸ್ತ್ರೀಯ ಕ್ಷೇಮ ಚಿಂತನೆಯನ್ನು ನೋಡಲಿಕ್ಕೆ ಆಸ್ಪದವೇನಿದೆ. ನಮಗೆ ಸ್ವತಂತ್ರ ಸಿಕ್ಕಿದನಂತರ ನಮ್ಮ ಹಕ್ಕುಬಾಧ್ಯತೆಗಳನ್ನು ಳಿಸಿಕೊಳ್ಳುವುದಕ್ಕೂ, ಕಡಿಮೆ ಜನ ಸಂಖ್ಯೆಯ ಕೋಮಿನವರಿಗೂ ಸಹ ಸಂಸಮಾನತೆಯನ್ನು ಕೊಟ್ಟು ಅವರ ಭದ್ರತೆಯನ್ನು ಸಹ ಕಾಪಾಡಲು ಅಭ್ಯಂತರವೇನು.

ಪ್ರತಿಒಂದು ಜನಾಂಗದ ಆಶೆಯು ತಮ್ಮ ರಾಜಕೀಯ ರಚನೆಯನ್ನು ತಾವೇ ಮಾಡಿಕೊಳ್ಳಬೇಕೆಂತಲೂ, ತಮ್ಮ ಕೋರಿಕೆಗಳನ್ನು ತಾವೇ ಪರಿಪಡಿಸಿಕೊಳ್ಳಬೇಕೆಂತಲೂ (Self determination) ಸ್ವಾಭಿಮಾನವನ್ನು ಕಾಪಾಡಬೇಕೆಂತಲೇ ಆಗಿದೆ. ಹೀಗಿರುವಾಗ ನಮಗೆ ಯಾವದು ಬೇಕೆಂದು ಈಗ ಇತ್ಯರ್ಥ ಮಾಡಿಕೊಳ್ಳುವ. ಹೀಗೆ ಇತ್ಯರ್ಥ ಮಾಡುವಾಗ ನಮ್ಮ ಆತ್ಮಾವಲಂಬನೆ ಮತ್ತು ಗೌರವವನ್ನು ಉಳಿಸಿಕೊಳ್ಳುವ (Self reliance & self respect) ಇಂಥಾದ್ದನ್ನು ಕಲೀಜನ ಸಂಖ್ಯೆಯಲ್ಲಿಯೂ ವಿಸ್ತೀರ್ಣದಲ್ಲಿಯೂ ಕಡಿಮೆಯಾದ ಈ ದೇಶಕ್ಕೆ ಕೌನ್ಸಿಲನ್ನು ಕೊಟ್ಟದೆಂದು ವೈಸರಾಯರು ಸಹ ಹೇಳಬಹುದಾಗಿದೆ.

ಆದ್ದರಿಂದ ಅವರ ಹೇಳಿಕೆಯ ಆಧಾರದ ಮೇಲೆ ನಮ್ಮ ದೇಶದ ಪೂರ್ತಿ ರಾಜ್ಯಭಾರವನ್ನು ನಾವೇ ಆಳುತ್ತೇವೆಯೆಂದು ನಮ್ಮ ಕೋರಿಕೆ ಮೇರೆ ಬಿಟ್ಟುಕೊಟ್ಟ ದೇಶವಾದ್ದರಿಂದ ಈಗ ನಾವು ಮರಳಿ ಕೋರುತ್ತೇವೆಯೆಂದೂ, ದಯಮಾಡಿ ನಾವು ಮಿತ್ರರಂತಿರುವುದರಿಂದ ನಮ್ಮ ರಾಜ್ಯಭಾರವನ್ನು ಪೂರ್ತಿಯಾಗಿ ನಮಗೆ ನಡೆಸಲಿಕ್ಕೆ ಬಿಡಬೇಕೆಂದೂ ಕೇಳುವುದಕ್ಕೆ ಇದೇ ಸಮಯವಾಗಿದೆ.

ಸಕೇಪ.

ಜಮೀನ್ದಾರರ ಸಂಘದ ವಿಶೇಷ ಮಹಾಸಭೆ.

(೭ನೇ ಪುಟದಿಂದ ಮುಂದುವರಿದದ್ದು.)

ಪ್ರೋ ಆಸ್ಟೀ ಮಾಡಿ ಎಂತ ಮಹಾತ್ಮ ಗಾಂಧಿಯವರು ಹೇಳುತ್ತಾರೆ. ಮಹಾತ್ಮರು ಕಮಿಷನನ್ನು ಬಹಿಷ್ಕರಿಸಿ ಎಂದು ಹೇಳಿದ್ದು ತನಗೆ ಗೊತ್ತಿಲ್ಲ. ಕೆಲವರು ಹೇಳಬಹುದು ನಮ್ಮಲ್ಲಿ ಒಗ್ಗಟ್ಟಿಲ್ಲ. ಒಗ್ಗಟ್ಟಾಗಲು ಪ್ರಯತ್ನಿಸಬೇಕಲ್ಲದೆ ಕಮಿಷನನ್ನು ವಿರೋಧಿಸುವದರಿಂದ ಪ್ರಯೋಜನವಿಲ್ಲವೆಂದು ಮುಂತಾಗಿ ಹೇಳಿದರು. ಮೆ. ಜಮ್ಮಡ ಮಾದಪ್ಪನವರು, ಮೆ ಕೆ. ಪಿ ಚೆಣ್ಣಪ್ಪನವರು ಮತ್ತು ಮೆ. ಮಾಚಿಮಂಡ ನಂಜುಂಡನವರು ಮೆ. ಕರುಂಬೈಯ್ಯನವರಿಗೆ ಒತ್ತಾಸೆಯಾಗಿ ಮಾತಾಡಿದಾಗ ಮಹಾತ್ಮ ಗಾಂಧಿಯವರು 1921ರಲ್ಲೇ ಅಸಹಕಾರವನ್ನು ಕೈಕೊಂಡಿರುವರು, ರಾಯಲ್ ಕಮಿಷನ್ನಿನ ವಿಷಯ ಕಾಂಗ್ರೆಸ್ ಅಧ್ಯಕ್ಷರ ಅಭಿಪ್ರಾಯವೇ ತನ್ನ ಅಭಿಪ್ರಾಯವೆಂದು ಮಹಾತ್ಮರು ಹೇಳಿರುವದರಿಂದ ಅವರೂ ಸಂಪೂರ್ಣ ಬಹಿಷ್ಕಾರಕ್ಕೆ ಒಪ್ಪಿರುವರೆಂದು ಮುಂತಾಗಿ ಹೇಳಿದರು.

"ಹಿಂದೀಯರ ಅಭಿಪ್ರಾಯವನ್ನು ಸಂಪೂರ್ಣ ಅಲ್ಲಗಳೆದು ನೇಮಿಸಿದ ಸ್ಟ್ಯಾಟ್ಯೂಟರಿ ಕಮಿಷನನ್ನು ಈ ಸಂಘವು ನಿಷೇಧಿಸುತ್ತದೆ ಈ ಕಮಿಷನ್ನಿನೊಂದಿಗೆ ಯಾವ ಕಾಲದಲ್ಲೇ ಆಗಲಿ ಯಾವ ರೀತಿಯಲ್ಲೇ ಆಗಲಿ ಈ ಸಂಘವು ಸಹಕರಿಸುವದಿಲ್ಲ ಎಂತ ಸಂಘದ ಅಭಿಪ್ರಾಯವಾಗಿದೆ" ಎಂದು ಮೆ. ಕರುಂಬೈಯ್ಯನವರ ಠರಾವನ್ನು ಕೆಲವು ಮಾತುಗಳಿಂದ ಬದಲಾಯಿಸಿ ಮೆ. ಪಿ. ಐ. ಬೆಳ್ಯಪ್ಪನವರು ಹೀಗೆಂದರು—ಹಿಂದೂದೇಶದ ಎಲ್ಲಾ ಪಾರ್ಟಿಗಳು ಸೇರಿ ಕಾಶಿಯಲ್ಲಿ ಬಹಿಷ್ಕಾರದ ಠರಾವನ್ನು ಪಾಸುಮಾಡಿರುವರು. ಅದೇ ರೂಪಿನಲ್ಲಿ ಮೇಲಿನ ಠರಾವಿನ ಮಾತುಗಳನ್ನು ಬದಲಾಯಿಸಿರುವದಾಗಿದೆ. ರಾಯಲ್ ಕಮಿಷನ್ನಿನಿಂದ ಇಂಡಿಯಾದಲ್ಲಿ ಒಗ್ಗಟ್ಟು ಬೆಳೆಯುತ್ತಿದೆ. ಸೈಮನ್ ಕಮಿಷನು ನಮ್ಮ ದೇಶಕ್ಕೂ ಲಗಾವಾಗುತ್ತೆ. ಬಹಿಷ್ಕಾರದ ವಿಷಯದಲ್ಲಿ ನಾವೂ ಹಿಂದಿಯರೊಂದಿಗೆ ಸೇರಬೇಕಾದದ್ದು ಅವಶ್ಯ.

ಮೆ ಕರುಂಬೈಯ್ಯನವರು ಮೆ. ಬೆಳ್ಯಪ್ಪನವರು ಸೂಚಿಸಿದ ಬದಲಾವಣೆಯನ್ನು ಒಪ್ಪಿಕೊಂಡರು.

'ಹಿಂದೂದೇಶದ ಒಂದು ಭಾಗವಾದ ನಮ್ಮ ದೇಶವೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರೊಂದಿಗೆ ಸೇರಲೇಬೇಕು. ಹಿಂದೂದೇಶಕ್ಕೆ ಅಪಮಾನವೆಂದರೆ, ನಮಗೂ ಅಪಮಾನ. ಆದುದರಿಂದ ರಾಯಲ್ ಕಮಿಷನನ್ನು ಸಂಪೂರ್ಣ ಬಹಿಷ್ಕರಿಸುವದು ನಮ್ಮ ಕರ್ತವ್ಯವೆಂದು ಹೇಳಿ ಮೆ. ಸಿ. ಯನ್. ವೆಂಕಪ್ಪಯ್ಯನವರು ಕರುಂಬೈಯ್ಯನವರಿಗೆ ಒತ್ತಾಸೆಕೊಟ್ಟರು.

ಮೆ. ಉತ್ತೈಯ್ಯನವರ ಠರಾವನ್ನು ಓಟಿಗೆ ಹಾಕಲಾಗಿ 38 ಜನರು ಪರವಾಗಿಯೂ, 53 ಜನರು ವಿರೋಧವಾಗಿಯೂ ಓಟುಕೊಟ್ಟದ್ದರಿಂದ ಠರಾವು ಪಾಸಾಗಲಿಲ್ಲ.

ಮೆ. ಕೆ. ಕರುಂಬೈಯ್ಯನವರ ಠರಾವು ಬದಲಾಯಿಸಿದ ರೂಪಿನಲ್ಲಿ ಓಟಿಗೆ ಹಾಕಲಾಗಿ ಪರವಾಗಿ 98 ಜನರು ಓಟು ಕೊಟ್ಟು ವಿರೋಧವಾಗಿ ಯಾರೂ ಇಲ್ಲದ್ದರಿಂದ ಈ ಠರಾವು ಸರ್ವಸಮ್ಮತದಿಂದ ಪಾಸಾಯಿತು.

2 "ಸೈಮನ್ ಕಮಿಷನನ್ನು ಬಹಿಷ್ಕರಿಸುವ ಬಗ್ಗೆ ಆ ಕಮಿಷನು ಹಿಂದೂದೇಶಕ್ಕೆ ಬಂದಿಳಿಯುವ ಫೆಬ್ರವರಿ 3ನೇ ದಿನ ದೇಶದ ಎಲ್ಲಾ ಕಡೆಗಳಲ್ಲಿ ಹರತಾಳವನ್ನು ಆಚರಿಸತಕ್ಕದ್ದೆಂದ ಈ ಸಂಘವು ದೇಶದವರನ್ನು ಕೋರುತ್ತದೆ" ಎಂಬ ಠರಾವನ್ನು ಮೆ. ಕೊಳ್ಳಿಮಾಡ ಕರುಂಬೈಯ್ಯನವರು ಸೂಚಿಸಿ, ಹಿಂದೂದೇಶದ ಪೇಟೆ ಎಲ್ಲಾ ಕಡೆಗಳಲ್ಲೂ ಆ ದಿನ ಹರತಾಳವನ್ನು 'ಆಚರಿಸುತ್ತಾರೆ. ಅದರಿಂದ ಕಮಿಷನ್ನಿನವರಿಗೆ ಹಿಂದೀಯರ ಅತೃಪ್ತಿಯು ಚೆನ್ನಾಗಿ ಗೊತ್ತಾಗುವದು ಎಂದು ಮೊದಲಾಗಿ ಹೇಳಿದರು.

ಮೆ. ಜಮ್ಮಡ ಮಾದಪ್ಪನವರು ಅನುಮೋದಿಸಿದರು.

ಮೆ. ಅಬ್ದುಲ್ ಗಫೂರ್‌ಖಾನ್‌ರವರು ಒತ್ತಾಸೆಕೊಟ್ಟರು.

ಮೆ ಪಲಂಗಂಡ ನಂಜಪ್ಪನವರು ಠರಾವನ್ನು ವಿರೋಧಿಸಿ ತಾನು ಒಬ್ಬ ವ್ಯಾಪಾರಿ, ತನಗೆ ಆ ದಿನವಾಗುವ ನಷ್ಟವನ್ನು ಕಟ್ಟುವವರ್ಯಾರು, ರೈತರು ತಮ್ಮ ಕೆಲಸವನ್ನು ಮಾಡುತ್ತಾ ಪೇಟೆಯ ವ್ಯಾಪಾರಿಗಳನ್ನು ಮಾತ್ರ ಹರತಾಳಮಾಡಿ ಎಂದು ಕೇಳುವದು ಸರಿಯಲ್ಲವೆಂದು ಮುಂತಾಗಿ ಹೇಳಿದರು.

'ವ್ಯಾಪಾರಿಗಳೊಬ್ಬರು ತಮ್ಮ ನಷ್ಟವನ್ನು ಸಂಘವು ಕೊಡಬೇಕೆಂದು ಕೇಳುವದು ನಾಚಿಗೇಡು, ದೇಶಕ್ಕಾಗಿ ಎಲ್ಲರೂ ಸ್ವಲ್ಪ ನಷ್ಟಪಡಲು ತಯಾರಾಗಬೇಕು. ಒಂದು ದಿನ ವ್ಯಾಪಾರ ನಿಲ್ಲಿಸುವದರಿಂದ ದೊಡ್ಡ ನಷ್ಟವೇನೂ ಆಗುವಂತಿಲ್ಲ' ವೆಂದು ಮುಂತಾಗಿ ಮೆ. ಕಾಳೇಂಗಡ ಚೆಣ್ಣಪ್ಪನವರು ಮಾತಾಡಿದರು.

ಮೆ. ನಾಯಡ ಬೆಳ್ಯಪ್ಪನವರು ಠರಾವಿಗೆ ವಿರೋಧವಾಗಿ ಮಾತಾಡಿದರು.

ಅಧ್ಯಕ್ಷರು ಠರಾವನ್ನು ಓಟಿಗೆ ಹಾಕುವ ಮುಂಚೆ, 'ರಾಯಲ್ ಕಮಿಷನನ್ನು ನೇಮಿಸಿ ನಮಗೆ ಅಪಮಾನವನ್ನುಂಟುಮಾಡಿರುವರು. ನಮ್ಮ ಮಾನವನ್ನು ಕಾಪಾಡಲು ನಾವು ಕಮಿಷನನ್ನು ಬಹಿಷ್ಕರಿಸಲೇ ಬೇಕು. ಈಗತಾನೇ ಪಾಸಾದ ಬಹಿಷ್ಕಾರದ ಠರಾವಿಗೆ ಒತ್ತಾಸೆಯಾಗಿ ಹರತಾಳದ ಠರಾವನ್ನು ಎಲ್ಲರೂ ಸೇರಿ ಮಂಜೂರು ಮಾಡಬೇಕು. ಮಾನ ಅಪಮಾನವನ್ನು ಯೋಚಿಸಿ ಎಲ್ಲರೂ ಓಟುಕೊಡುವರಾಗಿ ನಂಬುತ್ತೇನೆ' ಎಂದು ಹೇಳಿ ಓಟಿಗೆ ಹಾಕಿದರು. 120 ಮಂದಿ ಠರಾವಿನ ಪರವಾಗಿ ಓಟು ಕೊಟ್ಟರು ವಿರೋಧವಿರುವವರು ಕೈ ಎತ್ತಿವೆನ್ನುವಷ್ಟರಲ್ಲಿ ಮೆ. ಬಿದ್ದಂಡ ಬೋಪಯ್ಯ, ಪಳಂಗಂಡ ನಂಜುಂಡನವರೇ ಮುಂತಾದ ಕೆಲವರು ತಮಗೆ ಅಧ್ಯಕ್ಷರು ಅಪಮಾನದ ಮಾತುಗಳನ್ನಾಡಿದರಿಂದ ಅವರು ಕ್ಷಮಾಪಣೆ ಕೇಳಬೇಕೆಂದು ಕೂಗಿದರು. ಅಧ್ಯಕ್ಷರು ಯಾರಿಗೂ ಅಪಮಾನದ ಮಾತುಗಳನ್ನಾಡಲಿಲ್ಲವೆಂದು ಇನ್ನು ಕೆಲವರು ಹೇಳಿದರು. ಕೆಲವರು ಬಾಯಿಗೆ ಬಂದಹಾಗೆ ಕೂಗಿದ್ದರಿಂದ ಸ್ವಲ್ಪ ಗಲಿಬಿಲಿಯಾಯಿತು. ಸ್ವಲ್ಪದ್ದರಲ್ಲೇ ಎಲ್ಲರೂ ಸುಮ್ಮನೆ ಕೂತಮೇಲೆ ಅಧ್ಯಕ್ಷರು 'ಇಂಥಾ ಮಹಾ ಸಭೆಗಳಲ್ಲಿ ಗಲಿಬಿಲಿ ಎಬ್ಬಿಸಿದರೆ ಯಾವ ಕೆಲಸ ಮಾಡಲು ಸಾಧ್ಯವಿಲ್ಲವೆಂತಲೂ, ಬಹಿಷ್ಕಾರ ಮತ್ತು ಹರತಾಳವು ಹಿಂದೀಯರ ಮಾನ ಅಪಮಾನವನ್ನು ಒಳಕೊಂಡಿದೆಯೆಂದೂ, ಬಹಿಷ್ಕಾರದ ಠರಾವಿನ ನಂತರ ಹರತಾಳದ ಠರಾವನ್ನು ಪಾಸುಮಾಡಿ ಸಂಘವು ತನ್ನ ಮಾನವನ್ನು ಕಾಪಾಡಿಕೊಳ್ಳಬೇಕೆಂದೂ ಹೇಳಿದೆನಲ್ಲದೆ ತಾನು ಯಾರಿಗೂ ಅಪಮಾನದ ಮಾತುಗಳನ್ನು ಹೇಳಲಿಲ್ಲವೆಂತಲೂ, ಕೆಲವರು ತಪ್ಪಾಗಿ ತಿಳಕೊಂಡದ್ದಕ್ಕೆ ತಾನು ವ್ಯಸನಪಡುತ್ತೇನೆಂತಲೂ ವಿವರಿಸಿದರು.

ನಂತರ ಠರಾವಿಗೆ ವಿರೋಧವಾಗಿ ಯಾರೂ ಕೈ ಎತ್ತಲಿಲ್ಲವಾದುದರಿಂದ ಠರಾವು ಪಾಸಾಯಿತು.

3. "ಕೊಡಗಿನ ಮುಂದಿನ ರಾಜಕೀಯ ರಚನೆಯ ಮೇಲೆ ಅಭಿಪ್ರಾಯಕೊಡಲು 15 ಜನ ಸಂಘದ ಮೆಂಬರುಗಳ ಒಂದು ಉಪಕಮಿಟಿಯನ್ನು ನೇಮಿಸಬೇಕು. ಈ ಕಮಿಟಿಯವರು ಸಂಘದ ಮೆಂಬರುಗಳು ಅಥವಾ ಮೆಂಬರುಗಳಲ್ಲದವರನ್ನು 10ಕ್ಕೆ ಮೀರದೆ ಸೇರಿಸಿಕೊಳ್ಳಬಹುದು. ಇವರ ಅಭಿಪ್ರಾಯವನ್ನು ಸಂಘದ ಬರುವ ಮಹಾ ಸಭೆಯ ಮುಂದೆ ಇಡಬೇಕು" ಎಂಬ ಠರಾವನ್ನು ಮೆ. ಕೆ. ಪಿ. ಚಂಗಪ್ಪನವರು ಸಭೆಯ ಮುಂದಿಟ್ಟು, ನಮ್ಮ ಪ್ರಾಂತ್ಯವನ್ನು ನಾವೇ ಆಳಬೇಕು, ನಾವಾಗಿ ಬಿಟ್ಟುಕೊಟ್ಟ ದೇಶವನ್ನು ಬ್ರಿಟಿಷರು ನಮಗೆ ಈಗ ಯಾಕೆ ವಾಪಸು ಬಿಟ್ಟು ಕೊಡಬಾರದು, ಪ್ರಾಂತೀಕ ಸ್ವಾತಂತ್ರ್ಯಕ್ಕೆ ಎಲ್ಲರೂ ಹೋರಾಡಬೇಕು. ಇದಕ್ಕೆ ವೈಸರಾಯಿ ಅರ್ಡ್ ರೀಡಿಂಗರು ಒತ್ತಾಸೆಯಾಗಿ ಮಾತಾಡಿರುತ್ತಾರೆ ಎಂದು ಮುಂತಾಗಿ ಭಾಷಣ ಮಾಡಿದರು.

ಮೆ. ಸಿ. ಯಸ್. ಉತ್ತೈಯ್ಯನವರು ಅನುಮೋದಿಸಿದರು. ಮೆ ಬಿದ್ದಂಡ ಸುಬ್ಬೈಯ್ಯನವರು ಒತ್ತಾಸೆ ಕೊಟ್ಟರು.

ಮೆ. ಯಂ. ಯಂ. ಚಿಣ್ಣಪ್ಪನವರು ಮತ್ತು ಮೆ. ಕುದಿಯಂಡ ಮೊಣ್ಣೈಯ್ಯನವರು—ಸಂಘವು ಕರ್ನಾಟಕ ಏಕೀಕರಣಕ್ಕೆ ಒಪ್ಪಿರುವಾಗ ಪ್ರಾಂತೀಕ ಸ್ವಾತಂತ್ರ್ಯದ ಠರಾವು ತರುವುದು ನ್ಯಾಯವಲ್ಲವೆಂದು ಸೂಚಿಸಿದರು.

ಎಲ್ಲಾ ವಿಷಯ ಕಮಿಟಿಗೆ ಬಿಟ್ಟಿರುವುದರಿಂದ ತಾನು ಈ ಠರಾವಿಗೆ ಒತ್ತಾಸೆಕೊಡುತ್ತೇನೆಂದು ಮೆ. ವೆಂಕಪ್ಪೈಯ್ಯನವರು ಹೇಳಿದರು.

ಠರಾವು ಸರ್ವಸಮ್ಮತದಿಂದ ಪಾಸಾಯಿತು.

ಈ ಕೆಳಗಿನ ಮಹನೀಯರು ಮೇಲಿನ ಠರಾವಿನ ಉಪಕಮಿಟಿಯ ಮೆಂಬರುಗಳಾಗಿ ಚುನಾಯಿಸಲ್ಪಟ್ಟರು. ಮೆ. ಗಳಾದ 1. ಪಿ. ಟಿ. ಕುಶಾಲಪ್ಪ, 2. ಯನ್. ಆರ್. ಸುಬ್ಬಣ್ಣೈಯ್ಯ 3. ಸಿ. ಯನ್. ವೆಂಕಪ್ಪಯ್ಯ, 4. ಸಿ. ಯಸ್. ಉತ್ತೈಯ್ಯ, 5. ಜಮ್ಮಡ ಮಾದಪ್ಪ, ೦. ಕೊಳ್ಳಿಮಾಡ ಕರುಂಬೈಯ್ಯ, 7. ಯಂ ಯಂ. ಚಿಣ್ಣಪ್ಪ, 8 ಕುದಿಯಂಡ ಮೊಣ್ಣೈಯ್ಯ, 9. ಎ ಂ. ಎಂ. ಸಿದ್ದೀಕ್, 10. ಯನ್. ಮುದ್ದಪ್ಪ 11. ಯನ್. ಬಿ. ಸೋಮೈಯ್ಯ, 12. ಅಬ್ದುಲ್ ಗಫೂರ್ ಖಾನ್, 13 ಬಿದ್ದಂಡ ಸುಬ್ಬೈಯ್ಯ, 14. ಕೆ. ಪಿ. ಚಿಣ್ಣಪ್ಪ ಮತ್ತು 15. ಪಿ ಐ ಬೆಳ್ಯಪ್ಪ.

ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ... 5½ ಗಂಟೆಗೆ ಮುಕ್ತಾಯವಾಯಿತು.

ಪಿ. ಐ. ...
ಜನರಲ್ ...

ಕೆಲಸಗಾರರು ಬೇಕೇ?

ಚಪ್ಪಡಿ ನೀಸುವ, ಕಲ್ಲುಗಳನ್ನು ಕೆತ್ತುವ, ... ಒಡ್ಡರೂ, ನಾಜೂಕು ಕೆಲಸಮಾಡುವ ಮರಗೆಲಸ... ಕೈಕೆಳಗೆ ಇದ್ದಾರೆ. ಕಟ್ಟೋಣ, ಭಾವಿ, ... ರ್ ಇವೇ ಮೊದಲಾದುವುಗಳನ್ನು ಗುತ್ತಿಗೆ ... ನೆ. ಶೀಘ್ರದಲ್ಲಿಯೂ, ಭದ್ರವಾಗಿಯೂ, ಚೆನ್ನಾ... ರೈಸಿ ಕೊಡುತ್ತೇನೆ. ಈಗ ಪೊನ್ನಂಪೇಟೆ ... ಫರ್ನಿಚರ್ ಒಪ್ಪಿಕೊಂಡಿದ್ದೇನೆ.

ಕೆಲಸ ಕಂಟ್ರಾಕ್ಟು ಕೊಡಲಿಚ್ಛೆಯುಳ್ಳವರು ವಿಳಾಸದಲ್ಲಿ ವಿಚಾರಿಸಿರಿ —

ಯಂ. ಮುದ್ದ...
(ಮೈಸೂರ್ ಕಂಟ್ರ...)
4—3 C/o. ಜೋಡಿ...
ಪೊನ್ನಂಪೇ...

ಭಾರತದ ರಕ್ಷಣೆ.

(ಅಖಿಲ ಭಾರತೀಯ ರಾಷ್ಟ್ರ ಸಮಿತಿಯ ... ಶ್ರೀ. ಜವಾಹಿರ್ ಲಾಲರು ಬರೆದ ಲೇಖನದ ...)

ಭರತ ಖಂಡದ ಸ್ವಾತಂತ್ರ್ಯದ ಸಂಗತಿಯ... ಕ್ಷಣೆಯ ವಿಚಾರವು ಕೂಡಿಕೊಂಡಿದೆ. ಪರ... ಧಾಳಿಯಿಂದ ನಾವು ತಪ್ಪಿಸಿಕೊಳ್ಳುವ ಯೋಗ್ಯ... ಗಿಲ್ಲವೆಂದೂ, ತತ್ಕಾರಣದಿಂದ ಸ್ವಲ್ಪ ಕಾಲಕ್ಕಾ... ನಮ್ಮ ರಕ್ಷಣೆಗಾಗಿ ವಿದೇಶಿಯ ಸೈನ್ಯವನ್ನು ಅ... ಕ್ಯವೆಂದೂ ಹೇಳುವುದುಂಟು. ಈ ವಿಷಯವ... ಕೊಂಚ ಆಲೋಚಿಸೋಣ.

ಸ್ವತಂತ್ರದ ವಿಚಾರದಲ್ಲಿ ರಾಷ್ಟ್ರದ ಸೈನ್ಯ... ದ ಮಾತು ಕೂಡಿಕೊಂಡೇ ಇರುತ್ತವೆ. ನಾವು... ಗಿನ ಸ್ವರಾಜ್ಯವಾದರೂ (Dominion status) ... ಗಬೇಕು. ದೇಶದಲ್ಲಿ ವಿದೇಶೀಯ ದಂಡು ... ರೆ ನಮಗೆ ಅದರ ಮೇಲೆ ಆಡಳಿತದ ಹಕ್ಕು ಇರ... ತ್ತೆ ನಮ್ಮ ದೇಶದ ದಂಡು ಪರದೇಶಿ ಅಧಿಕಾರಿ... ರುವುದಾದರೆ ನಮ್ಮ ರಾಷ್ಟ್ರದೊಳಗೆ ಸ್ವಾತ... ಬಾದೀತು? ಹೆಚ್ಚಿನ ಆಡಳಿತದ ಜವಾಬ್ದಾರಿ... ಯ ಅಧಿಕಾರಿಗಳಲ್ಲಿರುವದಾದ ಪಕ್ಷಕ್ಕೆ ನಮಗೆ... ತ್ರ್ಯವು ಬೇಲಿಯಿಂದ ಸುತ್ತಲ್ಪಟ್ಟು ಅದಕ್ಕೆ ... ದಿನದ ಬಾಳ್ವಿಕೆಯು ಇರಲಾರದು. ನಮ್ಮ ... ಹಿಂದಿನಂತೆ ನಮ್ಮ ಸ್ವಾತಂತ್ರ್ಯವನ್ನು ಅಪ... ಡಬಹುದು ಇಂಗ್ಲೀಷರು ನಮ್ಮ ದೇಶದಲ್ಲಿ ... ಗಿ ದಂಡು ಧಾಳಿಯನ್ನು ರಚಿಸಿ ಅದನ್ನು ನಮ್ಮ... ಟ್ಟುಕೊಡುವರೆಂದು ಕೆಲವರು ಊಹಿಸುವ... ಹಿಂದಿನ ಚರಿತ್ರೆಯಾಗಲಿ, ನಮ್ಮ ಸ್ವಾನುಭವ... ತಿಗೆ ಒತ್ತಾಸೆ ಕೊಡಲಾರದು. ಸಹ ನಿ... ಸ್ವಾರ್ಥದೃಷ್ಟಿಯಿಂದ ಅವರು ನಮಗೆ ಸಹಾಯ... ಅಂಥ ಸಹಾಯವು ನಮ್ಮ ಅಭಿವೃದ್ಧಿಗೆ ... ರಿಣಮಿಸುವುದು.

ಆದ್ದರಿಂದ ನಮ್ಮ ದೇಶದಿಂದ ವಿದೇಶಿ ದ... ಹಿಸಿ ಸ್ವದೇಶಿ ದಂಡು ಸಹ ನಮ್ಮ ಆಡಳಿತಕ್ಕೆ ... ನಮಗೆ ಸ್ವಾತಂತ್ರ್ಯವೇ ಇಲ್ಲವೆಂಬುದು ಸ್ಪಷ್ಟ... ಈ ಮೇಲೆ ನಮ್ಮ ರಾಷ್ಟ್ರದ ರಕ್ಷಣದ ವಿಷಯ... ಗ್ಲಂಡಿನಿಂದ ನಮಗೆ ಯಾವ ಸಹಾಯವೂ ಸಿಕ್ಕ... ನ್ ಕಮಿಟಿಯು ವಿಷರ್ಜಾಗಿ ಅದು ಸೂಚಿಸ... ಸೂಚನೆಗಳು ಸಹ ಜಾರಿಗೆ ಬರಲಾರದಂತಾದ... ಚನೆಗಳನ್ನು ಬ್ರಿಟಿಷ್ ಸರಕಾರವು ತಿರಸ್ಕರಿಸಿ... ವು ವರುಷಗಳ ಹಿಂದೆ (ಮಹಾಯುದ್ಧದಲ್ಲಿ) ... ಶದಲ್ಲಿ ದೇವಡ್ಡ ದೊಡ್ಡ ಸೈನ್ಯಗಳು ನಿರ್ನಾ... ಸಾವಿರಗಟ್ಟಲೆ ಹುದ್ದೇದಾರರು ಕೆಲವು ತಿಂಗಳ... ಸಂಗತಿಯನ್ನು ನಾವು ಮರೆಯಬಾರದು. ... ಘ್ಘಾನಿಸ್ಥಾನವಾಗಲಿ ಈಗಿನ ಕಾಲದಲ್ಲಿ ಹಿಂದೂದೇಶ... ಕಾರ್ಯ ನಡಿಸುವಂತೆ ತನ್ನ ಆಗಿನ ಕೆಲಸವನ್ನು ... ಮಹಾಯುದ್ಧವು ಬಹು ದಿನಗಳ ತನಕ ನಡ... ಲ್ಲ, ಅದರ ಪರಿಣಾಮವೂ ಬೇರೆಯಾಗುತ್ತಿ...

ಇಂಗ್ಲೆಂಡು ದೇಶದವರೇ ನಮ್ಮನ್ನು ... ರೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ನಮಗೆ... ಯಾವ ಮುಖ ಎತ್ತಿಕೊಂಡು ಪರದೇಶೀಯ... ಕಾಯ ಲಿಕ್ಕೆ ಬನ್ನಿ ಎಂದು ಕೇಳಿಕೊಳ್ಳೋಣ ... ಣಾವು ಎಂತದ್ದೇ ಆದರೆ ನಮ್ಮ ದಂಡಿನ ... ವ್ಯವಶಕ್ಕೆ ಬರಬೇಕು. ಮತ್ತು ಕೂಡಲೇ ... ದನ್ನು ನಮ್ಮ ದೇಶದಿಂದ ಹೊರಡಿಸಬೇಕು.

(ಮುಂದುವರಿಯುವುದು)

ವರ್ತಮಾನ ಸಂಗ್ರಹ.

ಒಳದೇಶ

ಈ ವಾರ ಮಡಿಕೇರಿಯಲ್ಲಿ ನೇಟಿವ್ ಕಾಫಿ ಖಂಡಿಗೆ ರೂ. 325 ಮತ್ತು ಯೂಲಕ್ಕಿ ಮಣ್ಣಿಗೆ ರೂ 80 ಕ್ರಯವಿತ್ತು

ಜಮೀನ್ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗು ಈ ತಾ 13ನೇ ಸೋಮವಾರ ಮಧ್ಯಾಹ್ನ 2 ಗಂಟೆಗೆ ವೀರರಾಜಪೇಟೆ ಬಿದ್ದರ'ಸ್ಟೋರ್ ಹಾಲ್‌ನಲ್ಲಿ ನಡೆಯುವದು

ಸುಂಟಿಕೊಪ್ಪಲು ನಾಡು ಹಾಡಗೇರಿ ಗ್ರಾಮದ ಪಾಲೆ ಸುಬ್ಬನೆಂಬವನು ತಾ 3—2—28ರ ಸಾಯಂಕಾಲ ಸೇಂದಿ ತೆಗೆಯಲು ಬೈನೆ ಮರಕ್ಕೆ ಹತ್ತಿದವನು ಆಕಸ್ಮಾತಾಗಿ ಕೆಳಕ್ಕೆ ಬಿದ್ದು ಮೃತನಾದನಂತೆ

ಸೇಂಡ್ಹರ್ಸ್ಟ್ ಮಿಲಿಟರಿ ಕಾಲೇಜಿಗೆ ಪ್ರವೇಶ ಪರೀಕ್ಷೆಯು ಏಪ್ರಿಲ್ 30ರಿಂದ ಮೇ 11ರ ವರೆಗೆ ನಡೆವುದಲ್ಲಿ ನಡೆಯುವಂತೆ ಸೈನ್ಯ ಇಲಾಖೆಯವರು ಪಬ್ಲಿಕ್ ಸರ್ವಿಸ್ ಕಮಿಷನರು ತಿಳಿಸಿರುತ್ತಾರೆ

ಗೋಣಿಕೊಪ್ಪಲು ಮೈಸೂರಿನ ರಸ್ತೆಯ 11 ನೇ ಮೈಲಿನ ಬಳಿ ಇರುವ ಸೇತುವೆಯ ರಿಪೇರಿ ನಡೆಯುತ್ತಿರುವದರಿಂದ ಈ ತಾ 15 ಮತ್ತು 16 ರಲ್ಲಿ ಅಲ್ಲಿಗಾಗಿ ಯಾವ ವ್ಯಾಪಾರಕ್ಕೂ ಬಿಡ ಲಾಗುವದಿಲ್ಲವೆಂದು ಕಮಿಷನರು ಪ್ರಕಟಿಸಿರುವರು

ಕೊಡಗಿನ ಮುಂದಿನ ರಾಜಕೀಯ ರಚನೆಯನ್ನು ಯೋಚಿಸುವ ಒಗ್ಗೆ ಜಮೀನ್ದಾರರ ಸಂಘದಿಂದ ನೇಮಿಸಲ್ಪಟ್ಟಿರುವ ಉಪಕಮಿಟಿಯು ಮೀಟಿಂಗೊಂದು ಬರುವ ಸೋಮವಾರ (13—2—'28) ವೀರರಾಜಪೇಟೆಯಲ್ಲಿ ನಡೆಯಲಿಕ್ಕಿದೆ

ಮಡಿಕೇರಿ ಕೊಡವರ ಇನ್ಸ್ಟಿಟ್ಯೂಟಿನಲ್ಲಿ ಕಳೆದ ಆದಿತ್ಯವಾರ ಬ್ಯಾರಕ್ಸ್ ಒಳ ಮೈದಾನದಲ್ಲಿ ನಡೆಯಿತು. ಸುಮಾರು 150 ಜನರು ನೆರೆದಿದ್ದರು ನಾನಾ ವಿಧದ ಕರಹದ ಅಮಲು ಪದಾರ್ಥಗಳು ಮಾರಲ್ಪಟ್ಟವೆಂದು ತಿಳಿಯಬರುತ್ತದೆ

ನಾಪೋಕ್ಲು ಪುರದ ಮುಟ್ಟಿಹೊಳೆಯ ಸಂಕವು ಮೇಲೆ ಮರ ಲಿಗೆ ಹಾಕಿರುವದು ಸರಿಯಾಗಿಲ್ಲದ್ದರಿಂದ ಈ ತಾ 3ರಲ್ಲಿ ಅದರ ಮೇಲೆ ಒಂದು ಫರ್ಲಾಂಗಾಡಿ ದಾಟಿದಾಗ ಒಂದು ಎತ್ತು ಒಂದು ಕೈ ಮತ್ತು ಕಾಲು ಹಲಗೆಗಳ ನಡುವೆ ಸಿಕ್ಕಿ ಮುರಿದು ಹೋಗಿ ಮರುದಿನ ಆ ಎತ್ತು ಸತ್ತು ಹೋಯಿತೆಂದು ವರ್ತಮಾನ

ಸೆಲಿಬೆ ಗ್ರಾಮದ ಅಲ್ಲರಂಡ ಮಂದಣ್ಣನೆಂಬವರು ಕಳೆದ ಸೋಮವಾರ ಬೆಳಿಗ್ಗೆ ಮನೆಯ ಸಮೀಪದ ಕಾಡಿನಲ್ಲಿ ಒಂದು ಮರದಡಿಯಲ್ಲಿ ಸತ್ತುಬಿದ್ದಿದ್ದದ್ದು ಕಂಡುಬಂದಿದೆ ಅವರ ಕೈಯಲ್ಲಿ ತುಂಬಿದ ಕೋವಿಯೂ ತಲೆಯಲ್ಲಿ ಗಾಯವೂ ಇತ್ತಂತೆ ಮರಣದ ಕಾರಣವನ್ನು ಪೊಲೀಸಿನವರು ತನಿಖೆ ಮಾಡುತ್ತಿದ್ದಾರೆ

ಚಿಕ್ಕಮಗಳೂರು ಪೋಲೀಸ್ ಇನ್‌ಸ್ಪೆಕ್ಟರರಾದ ಮಿ ಮುಕ್ಕಾಟಿರ ಅಣ್ಣಯ್ಯನವರು ಈ ತಾ 1ರಲ್ಲಿ ಅಲ್ಲಿಯ ಸಮೀಪ ಸಲ್ಲೂರು ಗ್ರಾಮದಲ್ಲಿ ಜನರು ಮತ್ತು ದನಕರುಗಳಿಗೆ ತೊಂದರೆ ಕೊಡುತ್ತಿದ್ದ ಒಂದು ದೊಡ್ಡ ಹುಲಿಯನ್ನು ಗುಂಡು ಹೊಡೆದು ಕೊಂದರೆಂದೂ ಅದನ್ನು ಅಲ್ಲಿಯ ಜನರು ಚಿಕ್ಕಮಗಳೂರಿನಲ್ಲಿ ಮೆರವಣಿಗೆ ಮಾಡಿದರೆಂದೂ ತಿಳಿಯುತ್ತೇವೆ

ಈ ತಾ 2ನೇ ಗುರುವಾರದಿಂದ 8ನೇ ಬುಧವಾರದವರೆಗೆ ಕೊಡಗಿನ ಎಲ್ಲಾ ಭಾಗಗಳಿಗೂ ಮಳೆಯು ಬೀರಾಗಿ ಪ್ರತಿ ದಿನವೂ ಹೊಡೆಯಿತು ಮಡಿಕೇರಿಗೆ ಇದೊಂದು ವಾರದಲ್ಲಿ 3 15 ಇಂಚು ಮಳೆಯಾಯಿತು ಬೇರೆ ಕಡೆಗಳಲ್ಲಿ ಇದಕ್ಕಿಂತ ನಾಲ್ಕೈದರಷ್ಟು ಬಿದ್ದಿದೆ ಇದರಿಂದ ಬತ್ತದ ಒಕ್ಕಲು ಕೆಲಸ ಮುಗಿಯದೆ ಇರುವ ರೈತರಿಗೆ ವಿಪರೀತ ನಷ್ಟ ಉಂಟಾಗಿದೆ ಕಾಫಿ ತೋಟದವರಿಗೂ ನಷ್ಟ ಸಂಭವಿಸಿದೆ

ಮಡಿಕೇರಿಯಲ್ಲಿ ಮಿ ಕೋಡಿಮಣಿಯಂಡ ಕಾರ್ಯಪ್ಪಯ್ಯನವರ ಪತ್ನಿಯವರು ಒ ಭಾಪಿನ ದೆಸೆಯಿಂದ ತಾ 6 ನೇ ರಾತ್ರಿಯಲ್ಲಿ ಸಂಟ್ರಲ್ ಹೈಸ್ಕೂಲಿನ ಸ್ಕೂಲ್ ಫೈನಲ್ ಕ್ಲಾಸಿನ ವಿದ್ಯಾರ್ಥಿಯಾದ ಒಬ್ಬ ಮಗನನ್ನು ಅಗಲಿದರು ಈ ದಿನ ಬೆಳಿಗ್ಗೆ ನ ಜಾವದಲ್ಲಿ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ನಡಾದರೂ ತಿಳಿಸಲು ವ್ಯಸನಪಡುತ್ತೇವೆ.

ಹಿಂದೂದೇಶ.

ಮಿಕ್ಕದಲ್ಲಿ ಒಂದು ಶಾಲೆಯನ್ನು ಕಟ್ಟುವ ಒಗ್ಗೆ ಹೈದರಾಬಾದಿನ ನೈಜಾಮರು 25000 ರೂ ಉಚಿತವಾಗಿ ಕೊಟ್ಟಿರುತ್ತಾರೆ

ಹೈದರಾಬಾದು ಸಂಸ್ಥಾನದಲ್ಲಿ ಕೃಷಿ ಇಲಾಖೆಗೆ ಆಲೋಚನೆ ಕೊಡಲು ಡಾಕ್ಟರ್ ಹೆರಾಲ್ಡ್ ಮ್ಯಾನ್‌ರವರು ಮೂರು ತಿಂಗಳಿಗೆ ನೇಮಿಸಲ್ಪಟ್ಟಿದ್ದಾರೆ

ಮದ್ರಾಸಿನ ಮುಸಲ್ಮಾನ್ ಮಹಿಳೆಯರ ಸಭೆ ಸೇರಿ ಮುಸಲ್ಮಾನ್ ಬಾಲಿಕೆಯರಿಗೆ ಕಡ್ಡಾಯವಾಗಿ ಪ್ರೈಮರಿ ವಿದ್ಯೆ ಕೊಡುವಂತೆ ನೋಡಬೇಕೆಂತ ಮುನಿಸಿಪಲ್ ಅಧಿಕಾರಿಗಳನ್ನು ಕೇಳಿಕೊಂಡಿರುತ್ತಾರೆ.

ಡಿಲ್ಲಿಯಲ್ಲಿ ಅಖಿಲಭಾರತ ಮಹಿಳೆಯ ಮಹಾಸಭೆಯು ತಾ 7ರಲ್ಲಿ ಜರುಗಿತು ವೈಸ್‌ರಾಯರ ಪತ್ನಿಯಾದ ಲೇಡಿ ಇರ್ವಿನ್‌ರು ಈ ಸಭೆಯನ್ನು ತೆರೆದರು ಈ ಸಭೆಗೆ ಪ್ರೇಕ್ಷಕರಾಗಿ ಸರ್ ಜಾನ್ ಸೈಮನ್ ಮತ್ತು ಇತರರು ಬಂದಿದ್ದರು

ಮಹಾತ್ಮ ಗಾಂಧಿಯವರು ಪುನಃ ಅಸ್ವಸ್ಥತೆಯಲ್ಲಿದ್ದಾರೆ ಬ್ಲಡ್ ಪ್ರೆಶ್ಶರ್ (ರಕ್ತದ ಒತ್ತುವಿಕೆಯು) ತುಂಬಾ ಹೆಚ್ಚಾಗಿದೆಯಂತೆ ಓದುವದಾಗಲೀ ಬರೆಯುವದಾಗಲೀ ಮಾಡಬಾರದೆಂತಲೂ, ಮಲಗಿದಲ್ಲೇ ಇರಬೇಕೆಂತಲೂ ಡಾಕ್ಟರುಗಳು ತಿಳಿಸಿರುತ್ತಾರೆ

ತಿರುವಲ್ಲಿಯಲ್ಲಿ ಒಂದು ಹೊಳೆಯನ್ನು ದಾಟುತ್ತಿದ್ದ 5 ಹೆಂಗಸರು ನೀರಿನಿಂದ ಕೊಚ್ಚಲ್ಪಟ್ಟು ಮರಣಕ್ಕೆ ಗುರಿಯಾಗುತ್ತಿದ್ದವರನ್ನು ಅಲ್ಲಿಯೇ ಸ್ನಾನಕ್ಕೆ ಹೋಗಿದ್ದ ಸ್ಕೌಟ್ ಮಾಸ್ಟರ್ ಶಿವರಾಮ ಐಯ್ಯರ್ ಎಂಬವರು ದಡಕ್ಕೆ ತಂದು ಜೀವ ಉಳಿಸಿದರು

ರಂಗೂನ್ ಮುನಿಸಿಪಲ್ಟಿಯಲ್ಲಿ ಒಂದು ಪಬ್ಲಿಕ್ ಮೀಟಿಂಗಿನಲ್ಲಿ ಮಿ ಪ್ರಕಾಶಂ ಎಂಬವರು ಹೇಳಿದ್ದೇನಂದರೆ—ಹಿಂದೂ ಸ್ವರಾಜ್ಯ ಸರಕಾರ ಕ್ರಮದಲ್ಲಿ ಗ್ರಾಮಗಳಿಗೆ ಗ್ರಾಮಗಳ ಸಂಪೂರ್ಣ ಆಡಳಿತದ ಹಕ್ಕನ್ನು ಬಿಟ್ಟುಕೊಡಬೇಕು ಮತ್ತು ನ್ಯಾಯವಾದ ಪ್ರತಿನಿಧಿಗಳ ಸಾಮೂಹಿಕ ಸಂಗತಿಗಳ ನಿರ್ವಹಣೆ ಮಾಡುವ ಹಕ್ಕು ಇರಬೇಕು

ಸೈಮನ್ ಕಮಿಶನ್ ಬಹಿಷ್ಕಾರ ಹಾಕಲು ಮದ್ರಾಸ್ ಕೌನ್ಸಿಲು ಒಮ್ಮತದಿಂದ ತೀರ್ಮಾನ ಮಾಡಿದ್ದರಿಂದ ಮಂತ್ರಿಗಳು ಏನು ಮಾಡಬೇಕೆಂಬುದನ್ನು ನಿಶ್ಚಯಿಸಲಿಕ್ಕೆ ಸ್ವತಂತ್ರ ಪಾರ್ಟಿಯ ಮೀಟಿಂಗು ನಡೆಯಲಿಕ್ಕಿದೆ ಮುಖ್ಯಮಂತ್ರಿಯು ಈ ಮೊದಲೇ ರಾಜೀನಾಮೆ ಕೊಟ್ಟರೆಂತ ಮದ್ರಾಸ್ ಪತ್ರಿಕೆಯೊಂದರಲ್ಲಿ ಪ್ರಕಟವಾದ್ದು ನಿಜವಲ್ಲವೆಂತ ತಿಳಿದಿದ್ದಾರೆ

ತಾ 3ರಲ್ಲಿ ನಡೆದ ಹರತಾಳದ ದಿನ ಮದ್ರಾಸಿನಲ್ಲಿ ಬಹು ಗಲಭೆಗಳು ನಡೆದದ್ದರಿಂದ ಮದ್ರಾಸಿಗೆ ಸೈಮನ್ ಕಮಿಶನ್ ಬರುವ ದಿನವಾದ 17ನೇ ತಾರೀಖಿನಲ್ಲಿ ಮದ್ರಾಸಿನಲ್ಲಿ ಹರತಾಳ ನಡಿಸುವ ಒಗ್ಗೆ ಯಾವ ತರದ ಮೆರವಣಿಗೆಯನ್ನು ನಡೆಸಕೂಡದೆಂತ ಮೆಜಿಸ್ಟ್ರೇಟರು ಕ್ರಿಮಿನಲ್ ಪ್ರೋಸೀಜರ್ ಕೋಡು 144ನೇ ಸೆಕ್ಷನ್ ಮೇರೆ ಶ್ರೀಯುತ ಸತ್ಯಮೂರ್ತಿ, ಯಾಕೂಬ್ ಹಸ್ಸನ್, ದ್ವಾರ್ ಮೊದಲಾದವರು ಮುಂತಾದ ಮುಂದಾಳುಗಳಿಗೆ ನೋಟೀಸು ಕಳುಹಿರುತ್ತಾರೆ

ಶ್ರೀಯುತ ಪಿ. ಕೇಶವ ನಾಯರವರು ಮುಂಬಯಿಯ ಪ್ರವಾಸದಿಂದ ತಾ 6ರಲ್ಲಿ ಹಿಂದು ಸ್ಟ್ರೀಮರ್ ಮೂಲಕ ತಿರುಗಿ ಬಂದಿರುತ್ತಾರೆ ಅವರು ಪಶ್ಚಿಮ ದೇಶಗಳಲ್ಲಿ ಹಿಂದೂಸ್ಥಾನದ ವಿಷಯ ಮಾಹಿತಿ ಗೊತ್ತಿಲ್ಲ ಆದ್ದರಿಂದ ಅಲ್ಲಿ ಹಿಂದೂಸ್ಥಾನದ ವಿಷಯ ತಿಳಿಸಲು ಪ್ರಚಾರ ಕೆಲಸ ಮಾಡಬೇಕೆಂತ ಹೇಳಿರುತ್ತಾರೆ ಸೈಮನ್ ಕಮಿಷನಿಗೆ ಬಹಿಷ್ಕಾರದಿಂದಲೂ ಅದರ ಮೆಂಬರುಗಳು ನಿಂದಿಗೆ ಸಾಮಾಜಿಕ ಉಪಚಾರಗಳಲ್ಲಿ ಸೇರಲು ಆಕ್ಷೇಪಣೆಯಿಲ್ಲವೆಂತ ತಮ್ಮ ಸ್ವಂತ ಅಭಿಪ್ರಾಯವನ್ನು ತಿಳಿಸಿರುತ್ತಾರೆ

ತಾ 7ರಲ್ಲಿ ಮದ್ರಾಸ್ ಮಹಾಜನ ಸಭಾ ಹಾಲಿಗೆ ಒಳ ಯೂರೋಪಿಯನ್ ಅಸೋಸಿಯೇಷನು ಒಂದು ಹಿಂದೀಯರ ಸ್ವತಂತ್ರ ಸ್ಥಾಪನೆಗೆ ತಮ್ಮ ಸ್ವಸ್ವನ್ನು ಸಹಾಯ ಮಾಡಲು ತಯಾರಿದೆ ತಾವು ಮಸ್ಸು ಗಂಡು ಕೇಳುವ ಆಯ ಭಾಗವನ್ನು ಮತ್ತು ಇತರ ಸಹಾಯ ಗಳನ್ನು ಕೊಡಲು ತಯಾರಿದ್ದೇವೆ ಕಾಂಗ್ರೆಸ್ ಪ್ರಸಿಡೆಂಟರಿಗೆ ತಿಳಿಸಲು ಬಂದಿದ್ದೇನೆ ಎಂತ ಮುಂದಾಗಿ ಹೇಳಿದನಂತೆ ಸಾರ್ವಜನಿಕ ಕಾರ್ಯದ ಜನರನ್ನು ಜೋಪಡದಲ್ಲಿ ಸಿಕ್ಕಿಸಲು ಮಾಡಿದ ಪ್ರಯತ್ನವೆಂತ ನಿರ್ಣಯ ಮಾಡಲ್ಪಟ್ಟಿದೆ ಪೊಲೀಸ್ ತನಿಖೆ ನಡೆಯುತ್ತಲಿದೆ

ಲಾರ್ಡ್ ಬಿರ್ಕನ್‌ಹೆಡ್ ಎರ್ ಎಂಬುವವರು ಬರೆದ ಒಂದು ಕಾಗದ ಎಸೆಂಬ್ಲಿ ಚೇಂಬರಿನಲ್ಲಿ ಎಸೆಯಲ್ಪಟ್ಟಿದ್ದು ವಾಚಕರಿಗೆ ತಿಳಿದಿರಬಹುದು ಅದು ಮಂದ ವರಿಯಾದಂತೆ ಸ್ಟೇಟ್ ಸೆಕ್ರೆಟರಿಯವರು ಹೀಗೆ ಮಾಡಿದ್ದರು ಸ್ಟೇಟ್ ಸೆಕ್ರೆಟರಿಯವರಿಗೆ ಒಪ್ಪಿಗೆಯ ಗಳ ಇನ್ನೊಂದು ಮನೋದಿ ಎಸೆಂಬ್ಲಿಯನ್ನು ಹೇಗೆ ಎಸೆಯ ಬೇಕು ತರಬೇಕೆಂತ ಪೈನಾನ್ಸ್ ಮೆಂಬರು ಎಸೆಯಲು ಮಾಡಿದ್ದರು ಆದರ ಎಸೆಂಬ್ಲಿಯ ಪ್ರೆಸಿಡೆಂಟ್ ಶ್ರೀ ಜೆ ಪಟೇಲರು ಹಾಗೆ ಮಾಡಲು ಅನುಮತಿ ಕೊಡಲಿಲ್ಲ ಅನಂತರ ಹೀಗೆ ಎಸ್ಲಿನಲ್ಲಿಯೇ ಸರಕಾರಕ್ಕೆ ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳುವ ಎಸೆಂಬ್ಲಿಯು ಮಾಡಿರ ತಿಳಿಗೆ ಕಾಂಗ್ರೆಸ್ ತೀರ್ಮಾನದ ಪ್ರಕಾರ ಸ್ವರಾಜ್ಯ ಪಾರ್ಟಿಯ ಮೆಂಬರುಗಳು ಎಸೆಂಬ್ಲಿಯಲ್ಲಿ ಹಾಜರಿರುವದರಿಂದ ಸರಕಾರಕ್ಕೆ ಬೇಕಾದಂತೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಕಾಣುತ್ತದೆ

ವಿದೇಶ.

ಸಿಲೋನ್ ದ್ವೀಪದಲ್ಲಿ ತಪ್ಪಿತಸ್ಥರಿಗೆ ಮರಣ ದಂಡನೆ ವಿಧಿಸುವದನ್ನು ನಿಲ್ಲಿಸಬೇಕೆಂತ ಎಲ್ಲಾ ಜನರ ಪರವಾಗಿ ಸರಕಾರಕ್ಕೆ ಬರಕೊಂಡಿದ್ದಾರೆ

ಬ್ರಿಟಿಷ್ ಸರಕಾರಕ್ಕೆ ಹೆಸರು ತಿಳಿಸದೆ ಯಾರೋ ಒಬ್ಬರು 5 00 000 ಪೌಂಡ್ ಉಚಿತವಾಗಿ ಕೊಟ್ಟಿದ್ದಾರೆ ಇದನ್ನು ಸರಕಾರದ ಸಾಲ ತೀರಿಸಲು ಉಪಯೋಗಿಸಬೇಕೆಂತ ತಿಳಿಸಿರುತ್ತಾರೆ

ತಾರೀಖು 7ರಲ್ಲಿ ಪಾರ್ಲಿಮೆಂಟನ್ನು ಚಕ್ರವರ್ತಿಯವರು ತೆರೆದರು ಆ ಸಮಾರಂಭದ ಭಾಷಣದಲ್ಲಿ ಚೈನಾದ ಸ್ಥಿತಿಯು ಕೆಲವು ಮಟ್ಟಿಗೆ ಉತ್ತಮವಾದ್ದರಿಂದ ಅಲ್ಲಿಗೆ ಕಳುಹಿದ್ದ ಸೈನ್ಯವನ್ನು ಕಡಿಮೆ ಮಾಡಲು ಸಾಧ್ಯವಾಗಿದೆಯೆಂತಲೂ ವ್ಯಾಪಾರವು ಅಭಿವೃದ್ಧಿಯಾಗುತ್ತಿರುವದರಿಂದ ಕೈಗಾರಿಕೆಗೆ ಸಹಾಯವಾಗಬಹುದೆಂತಲೂ ಶೀಘ್ರದಲ್ಲೇ ಅಫ್ಘಾನಿಸ್ಥಾನದ ರಾಜರಿಗೆ ಸ್ವಾಗತ ಕೊಡುವ ಸುಸಂದರ್ಭ ಎದುರಿದೆಯೆಂತ ಸಂತೋಷವಾಗಿ ಹೇಳಿದರು

ಅಮೇರಿಕೆಯ ಹಾಗೆಂಬುದರ ಸ್ಕಾಟ್ಲ್ಯಾಂಡ್ ಎಂಬಲ್ಲಿ ಸಾಮುವೆಲ್ ಸ್ಮಿತ್ ಎಂಬ 'ಮನೋಹರ ಸನ್ಯಾಸಿ' ಮೂರು ವರ್ಷದ ಹಿಂದೆ ತನ್ನ ಹುಡುಗಿಯೊಂದಿಗೆ ಜಗಳವಾಡಿದಾಗ ಅವಳ ಬೆಂಬಲಿಗರಲ್ಲಿ ಒಂದು ಹೇಳಿದನು ಎರಡು ದಿವಸಗಳ ನಂತರ ಅವನು ಆಕಸ್ಮಿಕ ಒಂದು ಜಾಗದ ಅಡಿ ಹಾದುಹೋಗುವಾಗ, ಇಬ್ಬರ ಮಧ್ಯೆ ನಡೆದ ಮಾತು ತನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಗದು ಅವನು ಅಲ್ಲಿಯ ವಿಚಾರಕರ ರಾಜಿಯನ್ನು ಕೇಳಿದನು ಹಾಗೆ ಆ ಸಂಕಲ್ಪ ಸಾಯುವವರೆಗೆ ಎಂದೆಂದಿಗೂ ಮೌನವಾಗಿರುವದೆಂದು ರಾಜಿಯು ಅವನಿಂದ ಪ್ರಮಾಣ ಮಾಡಿಸಿಕೊಂಡಿತು ಹಾಗೆಯೇ ಅವನು 30 ವರ್ಷಗಳ ನಂತರ ಕಳೆದ ತಾ 22ರಲ್ಲಿ ತಾನು ಸಾಯುವ ವರೆಗೂ ಒಂದು ಶಬ್ದವನ್ನಾದರೂ ಮಾತಾಡದೆ ತನ್ನ ವ್ರತವನ್ನು ಕಾಪಾಡಿದನಂತೆ!

Notice.

Sealed tenders will be received at the Mercara Jail Office upto the 20th February 1928 for the supply by contract of all articles of diet etc for the use of the inmates of the Mercara Jail for 1928—29 For further particulars apply to the Superintendent Mercara Jail

K. CHENGAPPA,
(Superintendent.)

4—2—28

Wanted.

Two writers one for Pandiya Estate and the other for Brothiland Estate in Coorg with 200 or more coolies each Good pay and prospects Preference will be given only to those who have got established gangs For further particulars apply to SRIPAT D SAKAMMA, COFFEE PLANTER, SOMVARPET (N. COORG).

ಬೇಕಾಗಿವೆ

ಪಸ್ಸು ತೋಟಕ್ಕೆ ಒಬ್ಬ ಮತ್ತು ಬ್ರೋತಲ್ಯಾಂಡು ತೋಟಕ್ಕೆ ಒಬ್ಬ, 200 ಅಥವಾ ಹೆಚ್ಚು ಆಳುಗಳು ಸೇರಿಕೆ ಇರುವ ಇಬ್ಬರು ರೈಟರುಗಳು ಬೇಕಾಗಿವೆ ಸ್ವಂತ ಆಳುಗಳ ಗ್ಯಾಂಗ್ ಇರುವವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ ಒಳ್ಳೇ ಸಂಬಳ ಮತ್ತು ಉತ್ತೇಜನವಿದೆ ಹೆಚ್ಚಿನ ವಿಷಯ ತಿಳಿಯಲಿಕ್ಕೆ ಶ್ರೀಮತಿ ಡಿ ಸಾಕಮ್ಮನವರು, ಕಾಫಿ ಪ್ಲಾಂಟರು, ಸೋಮವಾರಪೇಟೆ ಈ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು 5—2

For Sale

About 300 acres of excellent paddy field and dry lands included in Palooru and Kanenikotte Estates

For further particulars apply —

SUPERINTENDENT,
PALLAIB ESTATE
TITTIMATI POST
S. COORG

5—1

ಹಿಂದುಸ್ಥಾನೀ ಸೇವಾದಳದ ವ್ಯಾಯಾಮ ಮಂದಿರ ಬಾಗಲಕೋಟೆ.

ಕರ್ನಾಟಕದ ಮಹಾಜನರೊಡನೆ ವಿಜ್ಞಾಪನೆ.

ಪ್ರಕಟಣೆ—೧

ಹಿಂದುಸ್ಥಾನವು ಕೈಕೊಂಡಿರುವ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಕೆಲಸವನ್ನು ಅತ್ಯಂತ ದಕ್ಷತೆಯಿಂದಲೂ ವಿಶ್ವಾಸದಿಂದಲೂ ನಡೆಸಲು ತಕ್ಕ ಶಿಕ್ಷಣವನ್ನು ಹೊಂದಿರುವ ರಾಷ್ಟ್ರಸೇವಕರ ಅವಶ್ಯಕತೆಯು ಸರ್ವಾನುಮತದಿಂದಾಗಿರ ಬೇಕಾದ ಒಂದ ಸೇವಾದಳದವರು ತಮ್ಮ ತಮ್ಮ ಸ್ವೇಚ್ಛೆಯ ನಾಲ್ವರಿಗೆ ಈ ಶಿಕ್ಷಣದ ಕಡೆಗೆ ಇತ್ತೀಚೆಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು, ಶಿಕ್ಷಣದ ವಿಷಯದ ಕರ್ನಾಟಕದ ಸ್ವಾತಂತ್ರ್ಯದ ದೇಹದಾರ್ಢ್ಯತೆಯು ದಿನದಿಂದ ದಿನಕ್ಕೆ ಕ್ಷೀಣಾವಸ್ಥೆ ಹೊಂದುತ್ತಿದೆಯೆಂಬುದೂ ದೇಶದ ಶಿಕ್ಷಣದ

ಆರೋಗ್ಯ ಮತ್ತು ಶರೀರ ವ್ಯಾಯಾಮಗಳಿಗೆ ಯೋಗ್ಯ ಗಮನ ಕೊಡುವುದು ಅತ್ಯಾವಶ್ಯಕವೆಂದೂ ನಿರ್ವಿವಾದವಿರುತ್ತದೆ. ಮದರಾಸ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಡಾಕ್ಟರ್ ಅನ್ಸಾರಿಯವರು ತಮ್ಮ ಅಧ್ಯಕ್ಷ ಪದವಿಯ ಭಾಷಣದಲ್ಲಿ ಕೂಡ ಈ ಪ್ರಶ್ನೆಯ ಮಹತ್ವದ ಕಡೆಗೆ ನಾಯಕರ ಲಕ್ಷ್ಯವನ್ನೆಳೆದಿರುವುದು ಶುಭ ಚಿಹ್ನೆಯೇ. ಇದಲ್ಲದೆ ಶಿಕ್ಷಿತರಾದ ಸ್ವಯಂಸೇವಕರು ಕೇವಲ ಮಾನಸಿಕ ಶಿಕ್ಷಣದಿಂದ ಮಾತ್ರವೇ ಅಷ್ಟು ಉಪಯೋಗವಾಗುವಂತಿಲ್ಲ. ಇದರಿಂದ ಎಲ್ಲ ದೇಶಗಳ ಮಾನಸಿಕ ಶಿಕ್ಷಣದ ಜೊತೆಗೆ ಶಾರೀರಿಕ ಶಿಕ್ಷಣವನ್ನು ಕೊಡುವುದು ತಮ್ಮ ಪ್ರಥಮ ಕರ್ತವ್ಯವೆಂದು ತಿಳಿದು ಸ್ವಾರ್ಥತ್ಯಾಗಿಗಳಾದ ಸೇವಾದಳದವರು ಕರ್ನಾಟಕದಲ್ಲಿ ಒಂದು ವ್ಯಾಯಾಮ ಸಂಸ್ಥೆಯನ್ನು ಸ್ಥಾಪಿಸಲು ಸಂಕಲ್ಪಿಸುವರು. ಬಾಗಲಕೋಟೆಯಲ್ಲಿ ಅಂತಹ ಒಂದು ಸಂಸ್ಥೆಯನ್ನು ಸ್ಥಾಪಿಸಲು ಅವಶ್ಯಕವಾದ ಏರ್ಪಾಡುಗಳನ್ನು ಕೈಕೊಂಡಿರುವರು. ಈ ಸಂಸ್ಥೆಯಲ್ಲಿ ಕೆಲವು ಮಂದಿ ಯುವಕರಿಗೆ ಇಂಥ ಶಿಕ್ಷಣ ಕೊಡುವುದು ಮಾತ್ರವಲ್ಲ, ಇಂಥ ಶಿಕ್ಷಣವನ್ನು ಇತರ ನಗರಗಳಲ್ಲಿಯೂ ಪ್ರಚಾರಕ್ಕೆ ತರಲು ಸಾಧ್ಯವಾಗುವಂತೆ ಸಮರ್ಥ ಶಿಕ್ಷಕರನ್ನು ತರ್ಬೇತುಗೊಳಿಸಬೇಕೆಂಬುದು ಕೂಡ ಈ ಸಂಸ್ಥೆಯ ಉದ್ದೇಶಗಳಲ್ಲೊಂದಾಗಿರುತ್ತದೆ. ಈ ಸಂಸ್ಥೆಯಲ್ಲಿ ಶಿಕ್ಷಣ ಹೊಂದುವ ಯುವಕರ ಸೇವೆಯನ್ನು ಕರ್ನಾಟಕದಲ್ಲಿಯೇ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಇದನ್ನು ಇಡೀ ಹಿಂದುಸ್ಥಾನಕ್ಕೆ ಮಾದರಿಯಾಗುವಂತೆ ಮಾಡಬೇಕೆಂಬುದೇ ಕರ್ನಾಟಕ ದಳದ ಉದ್ದೇಶವಾಗಿದೆ.

ದಳದವರ ಈ ಉದ್ದೇಶವು ಈಗಾಗಲೇ ಕಾರ್ಯಕ್ಷೇತ್ರದಲ್ಲಿ ರೂಪುಗೊಳ್ಳುವುದರಲ್ಲಿ ಒಂದಿದೆ. ಬಾಗಲಕೋಟೆಯಲ್ಲಿ ದಾನವಾಗಿ ದೊರೆತ ಸ್ಥಳದಲ್ಲಿ ದಳದವರು ಈ ಸಂಸ್ಥೆಯ ಕಟ್ಟಡವನ್ನು ಕಟ್ಟಬೇಕೆಂದು ನಿಶ್ಚಯಿಸಿ ಈಗಾಗಲೇ ಶಂಕುಸ್ಥಾಪನೆಯ ಸಮಾರಂಭವನ್ನು ನೆರವೇರಿಸಿ ಕಟ್ಟಡದ ಕೆಲಸಕ್ಕೆ ಪ್ರಾರಂಭಿಸಿರುವರು. ಇಡೀ ಕಟ್ಟಡದ ಖರ್ಚು ರೂಪಾಯಿ ೧೦೦೦೦ ಆಗಬಹುದೆಂದು ಅಂದಾಜು ಮಾಡಲ್ಪಟ್ಟಿರುವುದು. ಕಟ್ಟಡದ ಕೆಲಸವು ಜೋರಿನಿಂದ ನಡೆಯುತ್ತಿದ್ದು ಸಂಸ್ಥೆಯ ಪ್ರಾರಂಭದ ಮಹೋತ್ಸವವನ್ನು ನೂತನ ಕಟ್ಟೋಣದಲ್ಲಿ ಇದೇ ಬರುವ ಜುಲೈ ತಿಂಗಳ ನಡುವಿನ ತಾರೀಕಿನ ದಿವಸ ಬಹಳ ಠೀಕಿನಿಂದ ನಡೆಸಬೇಕಾಗಿರುವುದು. ಆದುದರಿಂದ ಕರ್ನಾಟಕದ ಮಹನೀಯರು ಈ ಮಹತ್ವದ ಕೆಲಸಕ್ಕೆ ತಮ್ಮ ಬೆಂಬಲವನ್ನು ಕೊಟ್ಟು ನಮ್ಮ ಸದುದ್ದೇಶವನ್ನು ಪೂರ್ತಿಗೊಳಿಸಲು ಧನಸಹಾಯ ಮಾಡಬೇಕೆಂದು ನಾವೆಲ್ಲರೂ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ಕರ್ನಾಟಕಸ್ಥರೇ! ದಳದವರಾದ ನಾವು ನಿಮ್ಮ ಕೆಲಸಗಾರರು. ಧನಿಕರಾದ ನಿಮ್ಮ ಸಹಾಯವಿಲ್ಲದೆ ನಮ್ಮ ಉದ್ದೇಶವನ್ನು ಪೂರ್ತಿ ಮಾಡಿಕೊಳ್ಳಲಾರೆವು. ನಾವು ಕೆಲಸಮಾಡಬಲ್ಲೆವು. ಶ್ರಮವನ್ನು ಗಣಿಸದ ದೇಶದಲ್ಲೆಲ್ಲ ತಿರುಗಿ ಭಿಕ್ಷೆ ಬೇಡಬಲ್ಲೆವು. ನಿಮ್ಮ ಸೂಕ್ತ ಸಲಹೆಗಳನ್ನು ತೆಗೆದುಕೊಂಡು ನಮ್ಮ ನಿಶ್ಚಿತ ಕಾರ್ಯದಲ್ಲಿ ಸಾಹಸದಿಂದ ಕೆಲಸ ಮಾಡಬಲ್ಲೆವು. ನಿಮ್ಮನ್ನು ನಂಬಿ ನಾವು ಕೈಕೊಂಡಿರುವ ಈ ಕಾರ್ಯದಲ್ಲಿ ನಮ್ಮನ್ನು ಮಧ್ಯ ಕೈಬಿಡದೆ ನಮ್ಮ ಸಂಕಲ್ಪವನ್ನು ನೆರವೇರಿಸಿಕೊಡಿರಿ. ಈ ಸಂಸ್ಥೆಯ ಮುಂದಿನ ಪರಿಣಾಮವು ಅತಿ ಮಹತ್ವದ್ದಿರುವುದೆಂದು ತಮಗೆ ಹೇಳಬೇಕಾಗಿಲ್ಲ.

ನೀವು ದಯಮಾಡಿ ಕೊಡುವ ಹಣವನ್ನು ನಮ್ಮ ಕೈಯಲ್ಲಿ ಈಗಲೇ ಕೊಡಿರಿ. ಸಮಕ್ಷಮ ಬೇಟಿಯಾಗದಿರುವವರು ಹಿಂದ ಸ್ಥಾನೀ ಸೇವಾದಳದ ಪ್ರಮುಖ ಕಾರ್ಯದರ್ಶಿಗಳಾದ ನಾ. ಸು. ಹರ್ಡೀಕರ ಹುಬ್ಬಳ್ಳಿ—ಇವರಿಗೆ ತಮ್ಮ ಕಾಣಿಕೆಯನ್ನು ಮಣಿಯಾರ್ಡರ್ ಮೂಲಕ ಕಳುಹಿಸಿ ಕೊಡಿ.

೧ ಶ್ರೀನಿವಾಸರಾವ್ ಕೌಜಲಗಿ ೨ ಹೊಸಕೊಪ್ಪ ಕೃಷ್ಣರಾವ್ ೩ ರಂಗರಾವ್ ದಿವಾಕರ ೪ ಹಿ. ನಾರಾಯಣರಾವ್ ೫ ವಾಮನರಾವ್ ನಾಯಿಕ ೬ ಕ. ರಂಗ ಅಯ್ಯಂಗಾರ ೭ ಪಿ. ಟಿ. ಕುಕಾಲಪ್ಪ ೮ ವ. ವಸವಾಲ ಪ್ಪ ೯ ದಾ. ಮ. ಲೇಂಗಡ ೧೦ ನಾ. ಸು. ಹರ್ಡೀಕರ

ಪತ್ರವ್ಯವಹಾರ

ಟಿಪ್ಪಣಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಸಂ]

ಅಯ್ಯಾ ಸಂಪಾದಕರೇ,

ನಾನು ಮತ್ತು ನನ್ನ ಹೆಂಡತಿ ಮಕ್ಕಳು ಸಹ ಮಡಿಕೇರಿಯಿಂದ ಲೈನು ಕಾವೇರಿ ಬಸ್ ಸರ್ವಿಸಿನಲ್ಲಿ ಮಡಿಕೇರಿಗೆ ಒರುವದಾಗಿ ಶಾಕೋಟೆ ಪರಿಯಂತ ಒಳ 14ನೆ ಮೈಲು ಕಲ್ಲಿನಲ್ಲಿ ಕಾರ್ ಗಳಿಗೆ ಸೀಟು ಸಿಕ್ಕದೆ ಹಿಂತೆಳೆದೆವು. ವೃದ್ಧನಾದ ನಾನೂ ಮತ್ತು ಸಣ್ಣ ಹುಡುಗರೂ ಸಹ ಪಟ್ಟ ಸಂಕಟವನ್ನು ತಮಗೆ ತಿಳಿಸದೆ ಯಾವ ನ್ಯಾಯಾಧೀಶರಿಗೆ ಅರಿಕೆ ಮಾಡಬೇಕೆಂಬುದು ನನಗೆ ತಿಳಿಯದ್ದರಿಂದ ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಚುರಪಡಿಸಿ ಇನ್ನು ಮುಂದಾದರೂ ಲೋಕೋಪಕಾರವಾದ ಕಾವೇರಿಯ ಹೆಸರಿಟ್ಟಿರುವ ಸರ್ವಿಸಿನವರು ಎರಡು ಬಸ್ ಸರ್ವಿಸ್ ಇಟ್ಟಲ್ಲಿ ನನ್ನಂತ ವೃದ್ಧರಿಗೂ, ಸಣ್ಣ ಹೆಣ್ಣು ಮಕ್ಕಳಿಗೂ ಸಹ ಅನುಕೂಲಪಡಿಸಿ ಉಪಕಾರವಾಗುವದಲ್ಲದೆ ಈ ಕಾವೇರಿ ಸರ್ವಿಸಿನವರಿಗೆ **ಲೋಕೋಪಕಾರದ ಕಾವೇರಿಯನ್ನು ನವರು** ಇಟ್ಟು ಎರಡನ್ನು ಇವರ ಪೂರ್ವಾರ್ಜಿತ ಹೆಸರನ್ನು ಸಾರ್ಥಕಪಡಿಸಬೇಕೆಂದು ವಿನಯ. ಇದರಿಂದ ಮತ್ತು ಇತರ ಎಲ್ಲಾ ಮೋಟಾರು ಸರ್ವಿಸಿನವರಿಗೂ ಇದು ನಮ್ಮ ತೊಂದರೆಗಳನ್ನು ಇಂದು ಬಸ್ಸಿನಲ್ಲಿ ಮಾಡಿದ ಪ್ರಾರ್ಥನೆ.

[illegible] ಮು. ಕಟ್ಟಪ್ಪ

ಮಡಿಕೇರಿ

ಒಡೆಯ,

ತಾ —— ೧೯೩೪ ಮಡಿಕೇರಿ ಬೆಟ್ಟದ ಮೇಲೆ ಇರುವ ಈ ಊರಿನ ಅನೇಕ ವ್ಯಾಪಾರದ ಅಂಗಡಿಗಳು ರಾತ್ರಿ ವೇಳೆ ಬೀಗಹಾಕಿದ್ದಾಗ ಪೊಲೀಸರ ಕಣ್ಣಿಗೆ ಮಣ್ಣೆರಚಿ ಕಳ್ಳತನ ನಡೆಸಿದ ವಿಷಯ ತಿಳಿದು ತಾ —— ಕಿರು ಬಂದು ಹಣವನ್ನು ಕಳೆದುಕೊಂಡವರು ಸ್ಥಳದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರವರು ಎರಡು ದಿನಗಳವರೆಗೆ ತನಿಖೆ ನಡೆಸಿ ಕಳ್ಳರನ್ನು ಕಂಡುಹಿಡಿಯಲು ಕೆಲವರನ್ನು ಬಂಧಿಸಿದರೂ ಅವರ ಬೆರಳಚ್ಚು ಗುರುತುಗಳನ್ನು ರದ್ದು ಮಾಡಿರುವುದರಿಂದ ಯಾವ ಸುಳಿವೂ ಸಿಗಲಿಲ್ಲ. ಇದೇ ತರದ ಹಲವಾರು ಕಳ್ಳತನಗಳು ಈ ಹಿಂದೆ ಮೂರನೆ ಅಂಗಡಿಯವರನ್ನು ಸಹ ತಲೆಯಿಡದು, ಕಳೆದ ಹಿಂದಿನ ಸ್ಥಾನದಲ್ಲಿ ಮಡಿಕೇರಿಯನ್ನು ಆ ಕಡೆಯ ದಿನದಲ್ಲಿ ನಡೆಗೆ ಅವಕಾಶ ಅವಕಾಶವಿಲ್ಲದಿರುವ ಈ ಬೆರಳ ರಾತ್ರಿಕಾವಲಿನ ಪದ್ಧತಿಯನ್ನು ತಮ್ಮ ಪತ್ರಿಕೆಯ ಮೂಲಕ ಜನರ ಗಮನಕ್ಕೆ ತರುತ್ತೇನೆ.

ಅದೇ ದಿವಸ ಪೊಲೀಸ್ ಸ್ಟೇಷನ್ನಿಗೆ ಬಂದಿದ್ದ ಡಿ. ಎಸ್. ಸಾಹೇಬರವರು ಅಲ್ಲಿಯ ಹವಾಲ್ದಾರ ವಿಷಯ ಯಾವ ತರದ ನಿರ್ಣಯವಾಗಲಿ, ಅತೃಪ್ತಿಯನ್ನಾಗಲಿ ತೋರಿಸದೆ ಇದ್ದದ್ದು ಕೃಷ್ಟಿಕರವೇ ಸರಿ.

ಹಾಜರಿದ್ದವ

ಡಿಸ್ಟ್ರಿಕ್ಟ್ ಬೋರ್ಡಿನ ತೆರಿಗೆ

ಅಯ್ಯಾ,

ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಕರ್ತವ್ಯವನ್ನು ಮರೆತಿರುವರೋ ಎಂದು ಈ ಭಯದಿಂದ ಸೂಚಿಸಬೇಕಾಗಿದೆ. ಹೌಸ್ ಟ್ಯಾಕ್ಸ್ ಎಂಬ ವಸತಿ ತೆರಿಗೆಯನ್ನು ಕ್ರಮಪಡಿಸುವ ನ್ಯಾಯವನ್ನೂ ತೀರ್ಮಾನವಾಗದೆ ಅನೇಕ ವರ್ಷದಿಂದ ಬಾಕಿಯಲ್ಲಿದೆ. ತೋಟ ವ್ಯವಸಾಯ ಮಾಡುವ ಮ್ಯಾನೇಜರುಗಳು ಅಡಿಯಾಯಿತಿಯಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಯಾವ ತರದ ತೆರಿಗೆಯನ್ನೂ ಕೊಡದ್ದರಿಂದ ಡಿ. ಬೋರ್ಡಿಗೆ ವರ್ಷಂಪ್ರತಿ ಸುಮಾರು ೬ ಸಾವಿರ ರೂಪಾಯಿಗಳ ನಷ್ಟವಾಗುತ್ತಿದೆ. ಈ ನಷ್ಟವನ್ನು ಹೋಗಲಾಡಿಸಿಕೊಳ್ಳುವ ಹಕ್ಕು ಚುನಾಯಿತ ಬಹುಮತವುಳ್ಳ ಈಗಿನ ಡಿಸ್ಟ್ರಿಕ್ಟ್ ಬೋರ್ಡಿಗೆ ಜಾರಿಯಾಗಿದೆ ಎಂದು ಸೂಚಿಸುವುದೇ ಈ ಲೇಖನದ ಉದ್ದೇಶ.

ಎಲ್ಲಾ ತರದ ಕಸಬುದಾರರು ನಮ್ಮ ದೇಶದಲ್ಲಿ ಎರಡು ತರದ ಕಂದಾಯಕ್ಕೆ ಒಡ್ಡಿರುತ್ತಾರೆ. ವ್ಯವಸಾಯಗಾರರೆಲ್ಲಾ ಭೂಕಂದಾಯವೆಂದು ಸರ್ಕಾರಕ್ಕೂ, ಹೌಸ್ ಟ್ಯಾಕ್ಸ್ ಎಂಬ ತೆರಿಗೆಯನ್ನು ಡಿಸ್ಟ್ರಿಕ್ಟ್ ಬೋರ್ಡು ಯಾ ಮುನಿಸಿಪಾಲಿಟಿಯೆಂಬ ಸ್ಥಳೀಯ ಆಡಳಿತಕ್ಕೂ ಕಂದಾಯ ಕೊಡುತ್ತಿರುವರು. ಅದರಂತೆಯೇ ವ್ಯಾಪಾರ ಕೈಗಾರಿಕೆ ಇತ್ಯಾದಿ ಕಸಬಿನವರು ಇನ್‌ಕಂ ಟ್ಯಾಕ್ಸ್ ಎಂಬ ಸರ್ಕಾರಿ ಕಂದಾಯವನ್ನು ಮತ್ತು ಡಿಸ್ಟ್ರಿಕ್ಟ್ ಬೋರ್ಡಿಗೆ ಯಾ ಮುನಿಸಿಪಾಲಿಟಿಗೆ ತೆರಿಗೆಯನ್ನು ನ್ಯಾಯಪ್ರಕಾರ ಕೊಡುತ್ತಿರುವರು. ಆದರೆ ದೊಡ್ಡ ಎಸ್ಟೇಟುಗಳ ಹೋಲ್ಡರುಗಳಾಗಿರುವ ಮ್ಯಾನೇಜರುಗಳು ಅಂದರೆ ನೌಕರರು ಇನ್‌ಕಂ ಟ್ಯಾಕ್ಸ್ ಎಂಬ ಸರ್ಕಾರಿ ಕಂದಾಯವನ್ನು ಮಾತ್ರ ಕೊಡುತ್ತಿರುವರಲ್ಲದೆ ಡಿಸ್ಟ್ರಿಕ್ಟ್ ಬೋರ್ಡಿಗಾಗಲಿ ಮುನಿಸಿಪಾಲಿಟಿಗಾಗಲಿ ಸಲ್ಲತಕ್ಕ ತೆರಿಗೆಯನ್ನು ಅವರು ಅಡಿಯಾಯಿತಿಯಿಂದ ಕೊಡುತ್ತಾ ಬಂದಿರುವುದಿಲ್ಲ. ಇದು ನ್ಯಾಯಸಮ್ಮತವಲ್ಲ.

ಈ ವಿಷಯವು ಮೊದಲು ಒಂದೆರಡಾವರ್ತಿ ಡಿ. ಬೋರ್ಡಿನಲ್ಲಿ ಚರ್ಚಿಸಲ್ಪಟ್ಟಿ ಸರ್ಕಾರ ಬಹುಮತದಿಂದ ನ್ಯಾಯವಾದ ತೀರ್ಮಾನಕ್ಕೆ ಬಾರದೆ ಬಿಟ್ಟು ಹೋಯಿತು. ಸರಕಾರವು ಮ್ಯಾನೇಜರ ಪರವನ್ನು ವಹಿಸಿ ಮಾತಾಡುವುದು ಏಂದಿಗೂ ನ್ಯಾಯಸಮ್ಮತವಲ್ಲ. ಕಳೆದ ಶತಮಾನದಲ್ಲಿ ಇಂಡಿಯಾ ಸರಕಾರವು ಮ್ಯಾನೇಜರುಗಳಿಗೆ ಇಂಥಾ ತೆರಿಗೆಯನ್ನು ಮನ್ನಾ ಕೊಟ್ಟಿರುವುದೆಂಬುದು ಒಪ್ಪತಕ್ಕ ಮಾತಲ್ಲ. ಈಚೆಗೆ ಡಿಸ್ಟ್ರಿಕ್ಟ್ ಬೋರ್ಡು ಹುಟ್ಟಿದಂದಿನಿಂದ ಅಂಥಾ ಮನ್ನಾವೇನೂ ಕೊಟ್ಟಿರುವುದಿಲ್ಲ. ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಪಕ್ಷವನ್ನು ಸರ್ಕಾರವು ಈ ರೀತಿ ತೆಗೆಯಲು ಯಾವ ಕಾರಣವೂ ಇಲ್ಲ. ಈ ಮ್ಯಾನೇಜರುಗಳು ಭೂಮಾಲೀಕರಲ್ಲ. ಅಂದರೆ—ಅವರ ಸಂಬಳವು ಮೂಲ ವ್ಯವಸಾಯದಿಂದ ಒರುವ ಉತ್ಪನ್ನವಲ್ಲ. ಆದರಿಂದಲೇ ಅವರಿಗೆ ಇನ್‌ಕಂ ಟ್ಯಾಕ್ಸ್ ಎಂಬ ಸರಕಾರಿ ಕಂದಾಯವನ್ನು ವಿಧಿಸಿರುವುದು. ಸರ್ಕಾರವು ಅವರ ಆಡಳಿತ ಮತ್ತು ಸೌಕರ್ಯಗಳಿಗೆ ಅನುಸಾರವಾದ ಕಂದಾಯವನ್ನು ವಸೂಲುಮಾಡುವಂತೆಯೇ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಾಲಿಟಿಯವರು ಅವುಗಳ ಆಡಳಿತ ಸೌಕರ್ಯಗಳ ಪ್ರಕಾರ ಬೇಕಾಗುವ ತೆರಿಗೆಯನ್ನು ಎಲ್ಲಾ ಪ್ರಜೆಗಳಿಂದಲೂ **ಭೇದವಿಲ್ಲದೆ ಎತ್ತಬೇಕಾದದ್ದು ಅತಿ ಅವಶ್ಯವಾಗಿದೆ.**

ನೌಕರರಾದ ಮ್ಯಾನೇಜರುಗಳು ಅನರವರ ಸಂಬಳದ ಒಂದೆರಗಳಲ್ಲಿ ವಾಸಮಾಡುತ್ತಿರುವವರಾದರೂ ಅಂಥಾ ಸ್ಥಳಗಳ ಬಾಡಿಗೆ ಬೆಲೆಯನ್ನು ಸಹ ಸೇರಿಸಿ ಸರ್ಕಾರವು ಇನ್‌ಕಂ ಟ್ಯಾಕ್ಸ್ ಎಂಬ ಕಂದಾಯವನ್ನು ಹಾಕಿರುವರು. ಇದರಿಂದಲೇ ಅವರು ವಾಸಿಸುವ ಮನೆಯ ಮೇಲೆ ತೆರಿಗೆಗೆ ಅರ್ಹರಲ್ಲವೆಂದು ತಿಳಿಯತಕ್ಕದ್ದಲ್ಲ.

ಮೊದಲು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಚರ್ಚೆಯಾದಾಗ ೯ ನೇ ತರಗತಿ ಅವರಿಗೆ ಸರ್ಕಾರವು ಇನ್‌ಕಂ ಟ್ಯಾಕ್ಸ್ ಹೆಚ್ಚಿಸಿರುವುದರಿಂದ ಪುನಃ ಡಿ. ಬೋರ್ಡು ತೆರಿಗೆ ಹಾಕುವುದು ಒಪ್ಪತಕ್ಕದ್ದಲ್ಲವೆಂದು ಮೊದಲಿನ ಕಮಿಷನರಾದ ಮಿ. ಸೂಟರವರು ಹೇಳುತ್ತಿದ್ದರು. ಅದು ಯಾವ ತರದ ನ್ಯಾಯವೆಂದು ನಮಗೆ ತಿಳಿಯಬಹುದು. ಅಲ್ಲದೆ ಡಿ. ಬೋರ್ಡಿನ ರಸ್ತೆಗಳು ಮೊದಲಾದವುಗಳಿಂದ ಮೇಲ್ಕಂಡ ಮ್ಯಾನೇಜರುಗಳನ್ನು ವಿನಾಯಿಸಿರುವುದಿಲ್ಲ. ಅವರು ಅವುಗಳ ಉಪಯೋಗವ ಬೇಕಿಲ್ಲದಿದ್ದರೂ ತೆರಿಗೆ ಕೊಡುವ ಹಕ್ಕಿರುವುದಿಲ್ಲ. ಹಾಗೆ ಬೇಡವೆಂದು ಪ್ರಜೆಗಳ ಅಲ್ಪಾಭಿಪ್ರಾಯದಂತೆ ಬೇರೆ ಜನ ಕಾನೂನು ಕಾಯಿದೆ ಮಾಡುವುದು ಯಾವ ದೇಶದಲ್ಲೂ ಇಲ್ಲ.

ಸರಕಾರದಿಂದ ಡಿ. ಬೋರ್ಡಿಗೆ ಒರುತ್ತಿರುವ ಗ್ರಾಂಟು ಈ ಮ್ಯಾನೇಜರುಗಳ ಪರವಾಗಿ ಮಾತ್ರ ಅಲ್ಲ. ಸರಕಾರದ ಗ್ರಾಂಟು ಬೇರೆ ಬೇರೆಗಳಲ್ಲಿ ಒದಗುವಷ್ಟು ನಮ್ಮ ಡಿ. ಬೋರ್ಡಿಗೆ ಒದಗುತ್ತಿಲ್ಲ. ಮತ್ತು ಕಂದಾಯ ಕೊಡುವ ಎಲ್ಲಾ ಪ್ರಜೆಗಳ ಪರವಾಗಿಯೂ ಸರಕಾರವು ಗ್ರಾಂಟು ಕೊಟ್ಟು ಎಲ್ಲರಿಗೂ ಡಿ. ಬೋರ್ಡಿನ ತೆರಿಗೆಯನ್ನು ಯಥೇಚ್ಛ ಮಾಫಿ ಮಾಡಬಾರದೆಂದ ಹೇಳಬೇಕಾಗುವುದು. ಸರಕಾರವು ಪ್ರಜೆಗಳ ಒಂದಂಶದ ಪರವಾಗಿ ಗ್ರಾಂಟು ಕೊಡತಕ್ಕದ್ದಲ್ಲವಾದರೂ ಪ್ರತ್ಯೇಕಿಸಿ ಹೇಳಬೇಕಾಗಿಲ್ಲ. ಅಲ್ಲದೆ ವ್ಯವಸಾಯಗಾರರ ಪ್ರತಿ ದಿವಸದ ವ್ಯವಸಾಯಗಾರರು ಅವರ ಹುಟ್ಟುವಳಿಗಿಂತ ವಿಶೇಷ ಕಂದಾಯವನ್ನು ತೆರುತ್ತಿರುವ ಹಾಗೆ ತೋಟ ವ್ಯವಸಾಯಗಾರರು ನಷ್ಟಕ್ಕೆ ಎದ್ದಿಲ್ಲ. ಅಂದವರ ಪರವಾಗಿ ಅವರ ತಾಬೆಯಲ್ಲಿರುವ ಮ್ಯಾನೇಜರುಗಳಿಗೆ ಡಿ. ಬೋರ್ಡಿನ ತೆರಿಗೆಯನ್ನು ಮಾಫಿ ಮಾಡುವ ಅವಶ್ಯವಿರುವುದಿಲ್ಲ. ಅಂಥಾ ವಿಷಯ ಆಲೋಚನೆ ಒಂದರೆ ದಿವಸದ ವ್ಯವಸಾಯಗಾರರಿಗೆ ಮಾಫಿ ಸಿಕ್ಕಬೇಕೆಂಬುದು ಹೆಚ್ಚು ನ್ಯಾಯಸಮ್ಮತವು. ಸರಕಾರಿ ನೌಕರರೆಲ್ಲರೂ ಮೇಲ್ಕಂಡ ತೆರಿಗೆಯನ್ನು ಕೊಡುತ್ತಿರುವರು. ಮುನಿಸಿಪಾಲಿಟಿಯೊಳಗೆ ಇರತಕ್ಕ ನೌಕರರು ಆಯಾಯ ಮುನಿಸಿಪಾಲಿಟಿಗೂ, ಅದರ ಹೊರಗೆ ಇರುವವರು ಡಿ. ಬೋರ್ಡಿಗೂ ತೆರಿಗೆ ಕೊಡುತ್ತಿರುವರು. ಇನ್‌ಕಂ ಟ್ಯಾಕ್ಸ್ ಎಂಬ ಸರಕಾರಿ ಕಂದಾಯಕ್ಕೆ ಒಳಪಟ್ಟ ದೊಡ್ಡ ಉದ್ಯೋಗಸ್ಥರೆಲ್ಲರೂ ಮುನಿಸಿಪಾಲಿಟಿಯೊಳಗೆ ವಾಸವಿರುವ ಕಾರಣ ಅವರು ಮುನಿಸಿಪಾಲಿಟಿ ತೆರಿಗೆಯನ್ನು ಕೊಟ್ಟೇ ಕೊಡುತ್ತಿದ್ದಾರೆ. ಅದರಂತೆಯೇ ಮುನಿಸಿಪಾಲಿಟಿಯ ಹೊರಗೆ ವಾಸವಿರುವ ಇನ್‌ಕಂ ಟ್ಯಾಕ್ಸಿಗೆ ಒಳಪಟ್ಟಿರುವ ಮ್ಯಾನೇಜರುಗಳು ಡಿ. ಬೋರ್ಡಿಗೆ ತೆರಿಗೆಯನ್ನು ಕೊಡುವುದು ನ್ಯಾಯಸಮ್ಮತವಲ್ಲವೆ?

ಮೊದಲು ಡಿ. ಬೋರ್ಡಿನ ಒಂದು ಮೀಟಿಂಗಿನಲ್ಲಿ ಮ್ಯಾನೇಜರುಗಳಿಗೆ ತೆರಿಗೆ ಹಾಕಬೇಕೆಂದು ತೀರ್ಮಾನವಾದರೂ ಅದಕ್ಕೆ ನಮ್ಮಂಥವಟ್ಟ ಪ್ಲಾಂಟರುಗಳ ಆಲೋಚನೆ ತೆಗೆಯಬೇಕೆಂದು ಚೀಫ್ ಕಮಿಷನರವರು ಹಿಂದಕ್ಕೆ ಕಳುಹಿಸಿದರಂತೆ! ಪುನಃ ಅದ ಮೀಟಿಂಗಿನಲ್ಲಿ ಪ್ಲಾಂಟರುಗಳ ಪಕ್ಷವನ್ನು ಸರಕಾರದ ಬಹುಮತವು ವಹಿಸಿದ್ದರಿಂದ ಪ್ರಜಾಪ್ರತಿನಿಧಿಗಳ ಠರಾವು ನಾಪಾಸಾಯಿತು. ಅನಂತರ ಸರಕಾರಿ ವಕೀಲರ ಆಲೋಚನೆಗೆ ಈ ವಿಷಯವು ಹೋಯಿತು. ಆಗಿನ ವಕೀಲರು ಚೆನ್ನಾಗಿ ಪರಿಶೋಧಿಸಿ ಮ್ಯಾನೇಜರುಗಳು ಮೇಲ್ಕಂಡ ತೆರಿಗೆಗೆ ಒಳಪಡುವುದು ನ್ಯಾಯವೆಂದು ಸೂಚಿಸಿದರಂತೆ.

ಅಲ್ಲದೆ ಡಿ. ಬೋರ್ಡಿಗೆ ಗ್ರಾಂಟು ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತಿದ್ದಾಗ ಡಿ. ಬೋರ್ಡಿನ ಹಕ್ಕಿನ ಉತ್ಪತ್ತಿಯನ್ನು ಕ್ರಮವಾಗಿ ಎತ್ತುತ್ತಿಲ್ಲವೆಂದೂ, ಡಿ. ಬೋರ್ಡಿನ ಮೇಲ್ಕಂಡ ತೆರಿಗೆಯನ್ನು ಎತ್ತಿದರೆ ಉತ್ಪತ್ತಿ ಹೆಚ್ಚುವುದರಿಂದ ಡಿ. ಬೋರ್ಡಿನ ಹುಟ್ಟುವಳಿಯು ಹೆಚ್ಚಬಹುದೆಂದೂ ಚೀಫ್ ಕಮಿಷನರವರು ಬರೆಯುತ್ತಿದ್ದದ್ದು ನೆನಪಿದೆ. ಇಂಥಾ ವಿಷಯವನ್ನು ಜಾಗ್ರತೆ ವಿಲೆ ಮಾಡದೆ ವಿಳಂಬದಲ್ಲಿಡುವುದು ಬಹು ದೊಡ್ಡ ಅನ್ಯಾಯ ಮಾತ್ರವಲ್ಲದೆ ಬೋರ್ಡಿಗೆ ತಂಬಾ ನಷ್ಟಕರ. ವರ್ಷಂಪ್ರತಿ 5—6 ಸಾವಿರ ರೂಪಾಯಿ ಗಳನ್ನು ಕಳೆದುಕೊಳ್ಳುವುದಕ್ಕೆ ಶಕ್ತಿಯಿರುವ ಬೋರ್ಡು ರೈತರ ತೆರಿಗೆಯನ್ನು ಈಚೆಗೆ ಎರಡರಷ್ಟು ಹೆಚ್ಚಿಸಿ ಸೊಕಷ್ಟಕ್ಕೆ ಒಳಪಡಿಸಿದ್ದು ಯಾವ ತರದ ನ್ಯಾಯ? ಅಶಕ್ತರೆಂದು ರೈತರಿಂದ ಸಿಕ್ಕಿದಷ್ಟನ್ನು ಕಿತ್ತುಕೊಂಡು ಬಲಾಢ್ಯ ಪಕ್ಷದವರಿಗೆ ತಲೆ ಬಗ್ಗಿಸುವರು. ನಮ್ಮ ಪ್ರತಿನಿಧಿಗಳಿಂದ ಕೂಡಿರುವ ಡಿ. ಬೋರ್ಡಿಗೆ ತಕ್ಕುದಲ್ಲ. ಆದರೆ ಇಷ್ಟು ವರ್ಷ ಪ್ರಜಾಪ್ರತಿನಿಧಿಗಳು ಬಹುಮತವಿಲ್ಲದೆ ನ್ಯಾಯ ಶಕ್ತಿಗೆ ಸರಕಾರದೊಡನೆ ಹೋರಾಡುತ್ತಿದ್ದಷ್ಟು ಪ್ರಯತ್ನವು ಈಗಿನ ಚುನಾಯಿತ ಬಹುಮತದ ಡಿ. ಬೋರ್ಡಿನಲ್ಲಿ ಕಾಣದಿರುವಾಗ ಇಷ್ಟೆಲ್ಲಾ ಬರೆಯಲಾಯಿತು. ರೈತರಿಗೆ ತೆರಿಗೆ ಎರಡರಷ್ಟು ಹೆಚ್ಚಿಸಿ ಹೊಟ್ಟೆಯುರಿಯಿಂದ ಮಾತ್ರ ಹೀಗೆ ಹೇಳುವುದಲ್ಲ. ತೆರಿಗೆ ತೆರುವುದರಿಂದ ತೃಪ್ತಿ ತರುವುದಕ್ಕೆ ಪ್ರಯತ್ನಿಸುವ ಬೋರ್ಡಿನವರು ತೆರಿಗೆಯನ್ನು ತಪ್ಪಿಸಿಕೊಂಡಿರುವ ತಕರಾರು ನಿಗದಿಪಡಿಸದೆ ಇರುವುದು ಯಾವ ತರದ ನ್ಯಾಯವೆಂದು ಕೇಳಬೇಕಾಗಿದೆ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣವೆಂಬ ತತ್ವವನ್ನು ಅನು

ಡಿ. ಬೋರ್ಡ್ ಅಥವಾ 'ಇನ್ನಾವ ಸಂಸ್ಥೆಯೂ ಕಾಲಕ್ಕೂ, ಯಾವ ದೇಶಕ್ಕೂ ಭೂಷಣವಲ್ಲ. ನಮ್ಮ ನಲ್ಲಿರುವ ಪ್ರಜಾಪ್ರತಿನಿಧಿಗಳಿಗ ಮತ್ತ ಅವರನ್ನ ದ ದೇಹೀಯರಿಗೆ ಅವಕ್ಕರೆನಿಸಿಕೊಳ್ಳುವದಾಗಲಿ, ಕರ್ತ ಗಿಸಿಕೊಳ್ಳುವದಾಗಲಿ ತುಂಬಾ ಅಪಮಾನಕರ. ಸ್ವಾ ಉದಾಸೀನತೆಯೂ ಅಡಚಣೆಯೂ ಗಿದ್ದರೆ ಒಟರರ ತಕ್ಕ ಚಿಕಿತ್ಸೆ ನುಂದಕ್ಕೆ ಮಾಡಿಕೊಳ್ಳಬಲ್ಲರ.

ಅ. ಪೂಪಪ್ಪ.

ಮಡಿಕೇರಿಯಲ್ಲಿ ಸಿಡುಬು.

ಸ್ವಾಮೀ,

ಮನೆಯಲ್ಲು ಸಿಡುಬು ರೋಗವು ತಗಲಿವೆ ಎಂದು ಕಳ ನೇ ವಾರದಲ್ಲು 'ಕೊಡಗು' ಪತ್ರ 'ಲೋಕಪಾವನ ಲ್ಲು ಓದಿ ಬಹಳ ವ್ಯಸನಪಡಲು ಕಾರಣವಾಯಿ ತಂಗಿಯು ಮೈಸೂರಿನಲ್ಲಿ ಅವಳ ಮಗುವಿಗೆ ಕಾಯಿ ತಿಳಿಸಿದಕ್ಕೆ ನಾನು ಆ ಕಷ್ಟವನ್ನು ತಿಳಿಯಲು ಹೋ ಅಲ್ಲಿ ಆ ಮಗುವಿಗೆ ಅಂಗರಕಜ್ಜಿ ಯೆಂದು ಅಲ್ಲಿಯ ರವರು ಹೇಳಿದ ಮೇರೆ ಹತ್ತು ದಿನದ ವೇಳೆ ವಾಸಿ ತರ ಅವಳನ್ನು ಮತ್ತು ಮಗುವನ್ನು ಕರಕೊಂಡು ಬಂ ಒಂದು ಕೆಲವು ದಿನದಲ್ಲಿ ಮಗುವನ್ನು ಎತ್ತಿಕೊಳ್ಳ ಗಿಗೆ ಅಂಗರಕಜ್ಜಿ ಎಂದು ಇಲ್ಲಿಯೂ ಒಬರು 5 ದಿ ಗೆ ಹೇಳುತ್ತಾ ಬಂದು 6ನೇ ದಿವಸದಲ್ಲು ಸಿವಿಲ್ ಸ ವರು ಒಂದು ನೋಡಿದಲ್ಲು ಸಿಡುಬು ಎಂದು ಹೇಳಿ ಲಿ ಅವಳನ್ನು ಸೆಗ್ರಿಗೇಶನ್ ವಾರ್ಡಿಗೆ ಕಳುಹಿಸಿ ಅವಳು ಅಲ್ಲಿ ಮೃತಳಾದಳು. ನಂತರ ನನ್ನ ಮ ದೇವರ ದಯದಿಂದ ಏನೊಂದೂ ಗಲಾಟೆ ಇಲ್ಲ.

ಮಿಸೆಸ್ ಸಿ. ಯಂ. ಅಪ್ಪಚ್ಚು.

Arms, Ammunition and Shooting Requisites !!!



1928 Illustrated Catalogue Just Issued Free on Application !

D. B. B. L. Rifles	Rs	120	to Rs.	2750
S. B. B. L. "	"	35	to "	950.
D. B. B. L. Guns	"	50	to "	1350.
S. B. B. L. "	"	35	to "	275.
D. B. M. L. "	"	45	to	135.
S. B. M. L. "	"	30	to "	80
B. L. Revolvers	"	35	to "	350.
Automatic Pistols	"	30	to "	150

Brilliant Search Light Lamp For Shooting, Camping, Fishing and All such Other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition Cheapest priced firm in India,

24–17 210 Abdul Rehman Street, BOMBAY.

National Swords and Silver Belts (Thodanga) for "Scotland of India,"

ಸಂಪ್ರದಾಯಕವಾಗಿ ಧರಿಸಲ್ಪಟ್ಟ "ಒಬ್ಬ ಕನ್ ಯೂನಿಫಾರಂ" ರೀತಿ ಉಡಿಗೆಗಳನ್ನು ಒದಿಗೊ ಅರಿಸಲ್ಪಟ್ಟ "ಒಬ್ಬ ಲೆಪ್ಟನೆಂಟ್ ಯೂನಿಫಾರಂ" ಯಾಕೆ ವಿಸ್ಮಯಗೊಳ್ಳುತ್ತೀರಿ? ಸವಿಲು ಗರಿ ಂದ ಶೃಂಗರಿಸಲ್ಪಟ್ಟ ಕಾಗ ಸರಿಯಾಗುವದೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ಮ ಅದರ ಕತ್ತಿ. ಸೊಂಟದ ಬದಿಯಲ್ಲು ಚಿನ್ನದ ಯ ಪೀಚೆಕತ್ತಿ. ಇವುಗಳಿಗೆ ತಕ್ಕ ಬೆಳ್ಳಿಯ ಪಣ (ಉಮ್ಮತ್ತ) ರೇಕ್ಷೆ ಮತು ಪತ್‌ಪೆಟ್ ಪ ಇದಲ್ಲವೇ ನಿಮ್ಮ ಗೌರವ? ಕಾನಾಟ್, ಲಕ್ಕರ್, ನ್ ಮೊದಲಾದವರೇ ಸದರಿ ವಿಷಯ ವಿಸನ್ ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿ ಪಕ್ಕೇ ಸ್ವದೇಶಾಭಿಮಾನ!

ಮೆ ಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರಿವೆ. ಟ್ಸಿನ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದುಕೊಳ್ಳಿ.

Commercial Store,
Murnad, Coorg

12–6

ಸ್ಪೆಟ್ರೇಟ್ ಆಫ್ ಸೋಡಾ.

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ.

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸತ್ವಾಂಶವು 15—16% ಅಂದರೆ ಮಾಸ ವಾ ಬಳಸುವ [illegible] ಗೊಬ್ಬರದಲ್ಲಿರ ಪ್ರದಕ್ಷಿ [illegible] ಇರುವದು. ಇದರಲ್ಲಿ ಸಿಕ್ಕವನ್ನು ಸಾರಜ [illegible] ಮಾದ ಗೊಬ್ಬರ [illegible] ಬೆಳೆಗಳಿಗೆ ದೊರಯುತ್ತದೆ. ಅದ್ದರಿಂದಲೇ ಭೂಲೋಕದ [illegible] ಉಪಯೋಗಿಸುತ್ತಾರೆ ಭತ್ತ, ಕಬ್ಬು, ತೆಂಗು, ಅಡಿಕೆ [illegible] ಕಾಫಿ, ಚಾ, ಹತ್ತಿ, [illegible] ದಲಾದ [illegible] ಅಥವಾ [illegible] ಗೊಬ್ಬರಗಳ [illegible] ಈ ಗೊಬ್ಬರ [illegible] ಉಪಯೋಗಿಸುವದರಿಂದ [illegible] ಸ್ಪೆಟ್ರೇಟ್ ಆಫ್ ಸೋಡಾದಲ್ಲಿರ [illegible] ಇರುವದು. ತರದ ಸಸ್ಯಾಹಾರವನ್ನು [illegible] ಒದಗಿಸಿಕೊ ಡುತ್ತದೆ [illegible] ಎಕರೆ ಒಂದಕ್ಕೆ 100—200 ರಾ ತಲು ಸಾಕಾಗುವದು. [illegible] "ಕೃಷಿ ಸಂಪದ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸ ದಾರರಿಂದ [illegible]

ಸ್ಪೆಟ್ರೇಟ್ ಆಫ್ ಸೋಡಾ ಈ ಕೆಳಗಿನ ಸ್ಥಳಗಳಲ್ಲಿ ದೊರೆಯುವವು.

ಮೆಸರ್ಸ್ ಸ್ಟ್ಯಾರಿ ಅಂಡ್ ಕೋ., ಮಡಿಕೇರಿ.

ಮೆಸರ್ಸ್ ಸ್ಟ್ಯಾರಿ ಅಂಡ್ ಕೋ., [illegible]

or	A. S. K[illegible] Esq., Near Post Office, Mangalore	Chilean Nitrate Committee, Post Box 469, Calcutta

24–1

[illegible] ಯಲ್. ಕೋವಿಗಳು ರೂ. 75 ರಿಂದ ರೂ 450.
[illegible] ಬಿ. ಯಲ್. ಕೋವಿಗಳು ರೂ. 35 ರಿಂದ ರೂ 250/
ಬಿ. ಯಮ್. ಯಲ್. ಕೋವಿಗಳು ರೂ. 35 ರಿಂದ 65/.
[illegible]ಗಳು. ರೂ. 10/ರಿಂದ ರೂ 145/ರ ವರೆಗೆ.

[illegible] ಮತ್ತು ಸಿಂಗಲ್ ಶೋಟರ್ ಮತ್ತ ಕೇವು ಕೋ [illegible] ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬ [illegible]) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಬ [illegible]ಡಲಾಗುವದು.

[illegible] ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ [illegible]ಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇ [illegible]ದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂ [illegible] ನಮ್ಮನ್ನು ಕೇಳಿ ಪಡಿರಿ.

[illegible]ಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪನಿ.

[illegible]ಂದೂಸ್ಥಾನದ ಬಹು ಹಳೇದು ಬಿರಿಯ, ಕಂಪೆನಿ.

[illegible]9 12. ಬ್ರಾಡ್ವೆ, ಮದ್ರಾಸ್

[illegible]ಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ)

ಆಲ್ ಇಂಡಿಯಾ ಮ್ಯೂಚ್ಯುವಲ್ ವಿಡೋಸ್ ಅಂಡ್ ಪೂವರ್‌ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ [illegible] ಮತ್ತು [illegible] ಅವರ [illegible] ಎಲ್ಲವೂ ಈ [illegible] ತಾ. 29ರಲ್ಲಿ ಮಡಿಕೇರಿಯಲ್ಲಿ ನಡದ [illegible] ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾದೆ ಇನ್ನು ಮುಂದೆ ಇತರ ದೇಶದವರಿಗೆ, ಕೊಡಗಿನ ಮೇರು ಪಕ್ಕ [illegible] ಯಾವ ಸಂಬಂಧವೂ ಇರ ವುದಿಲ್ಲ.

I ಅನಾಥರಾದ ಅಂಗಹೀನರಿಗೆ ಈ ಸಂಸ್ಥೆಯಿಂದ ಬೇಗನೆ ಅನ್ನಸಹಾಯ ಮಾಡಲು ಏರ್ಪಾಡಾಗುವುದು.

II 1928ನೇ ಇಸವಿ ಮಾರ್ಚ ತಿಂಗಳು 31ಕ್ಕೆ ಪ್ರೀಮಿಯಂ ಸಡಿಲು ಸ್ತ 3.

(1) ಇವರ ಮಾಲಿಕ ಬಡ್ಡಿ ಇಲ್ಲದೆ ಸಾಲ ಕೊಡಲಾಗುವುದು.

(2) ಸುಲಭವಾದ ಡಿಸ್ಪೋ ಕಂತುಗಳು ದೊರೆಯುವವು.

3) ಸರ್ವರೂ ಆ ತಾರೀಖಿನೊಳಗೆ ಪ್ರೀಮಿಯಂಗೆ ಅರ್ಹತೆ ಪಡೆಯಬೇಕಾಗಿದೆ.

(4) ದೇಶ ಸೇವೆಗೂ, ಜನ ಸೇವೆಗೂ ಒಳ್ಳೆಯ ಅನುಕೂಲ.

ಟಿ. ಎ. ಕುಪ್ಪುಸ್ವಾಮಿ ಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್ಸ್,
ಮಡಿಕೇರಿ.

25–1

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	--	50,000
ವಸೂಲಾದ ಶೇರ್ ಮೊಬಲಗು	--	15,510
ಜಮೂಬಂದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಶಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಕೋದಂಡ ಅಪ್ಪೈಯ್ಯನವರು,
ರಾವ್ ಬಹದ್ದೂರ್.

ಟ್ರೆಜರರ್.
ಕೊಂಗೆಟ್ಟಿರ ಅಪ್ಪೈಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪೈಯ್ಯನವರು, ಬಿ.ಎ, ಬಿ.ಎಲ್.
ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಮ. ಪೇರಿಯಂಡ ಪೂವೈಯ್ಯನವರ ಜವಾಬ್ದಾರಿಕೆ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮ. ಪೇರಿಯಂಡ ಪೂವೈಯ್ಯನವರನ್ನೂ ಮತ್ತು ಮ. ಕಾಳೇಂಗಳ ಚಿಣ್ಣಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರರಾಜಪೇಟೆ—ಖಾದಿ ಭಂಡಾರದಲ್ಲಿ, ಮ. ಪಾರುವಂಗಡ ಅಚ್ಚೈಯ್ಯನವರು.
ನಾಪೋಕ್ಲು—ಮ. ಅರೆಯಡ ಸುಬ್ಬೈಯ್ಯನವರು,
ಗೋಣಿಕೊಪ್ಪಲು—ಮ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ, ಸಿದ್ದಾಪುರ—ಮ. ಐಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಯ್ಯೈಯ್ಯನವರು,
ಹುದಿಕೇರಿ & ತಿತಿಮತ್ತಿ—ಮ. ಜಿ ಮಾದವ್ವೈಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
'ಕೊಡಗು' ಮಡಿಕೇರಿ.

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY. 3
Telegraphic Address:-"SHOOTER" Bombay.

57—22 'Please write for our Catalogue 1928–1929.

ಕಟುಕಷಾಯ ಮಲೇಜರಕ್ಕ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ವ್ಯಾಧಿಗಳಿಗೆ ಖಂಡಿತ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0; 3ಕ್ಕೆ ರೂ. 4–0–0, 6ಕ್ಕೆ ರೂ 7–8–0; 12ಕ್ಕೆ ರೂ. 14.

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲು ಸಾಮರ್ಥ್ಯವಿಲ್ಲದಿರುವುದು. ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದ ಮುಚ್ಚುವ ರೋಗ ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲು 1, 3 6ಕ್ಕೆ ರೂ. 1–[illegible], 3–8–0, 6–12–0.

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು. ಅವಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2–10–0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5–6–0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ:— ಮನೋಲ್ಲಾಸಿನಿ ಕಂಪೆನಿ.
52–18 9. ಮಂಗಳೂರು.

Kapurchand & Co.

The OLDEST and MOST RELIABLE House in Bangalore.
[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickapet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ. 52—36

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,08,000.
	1925	ರೂ.	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000.

ಮೂಲಧನವು ಜಾಸ್ತಿ ಬಂದ 42 ಲಕ್ಷ ರೂಪಾಯಿಗಳಿಂದ ರೂ. 7,38,80,000ಗೆ ಹೆಚ್ಚಿರುತ್ತದೆ.
ಪ್ರಿಮಿಯಂ ವರಮಾನವು ವರ್ಷಕ್ಕೆ ರೂ. 1,05,30,000ಗೆ ಏರಿರುತ್ತದೆ.

"ಓರಿಯಂಟಲ್‌ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್. ಎಫ್. ಎಫ್. ಎ, ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶಮಾಡದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.
52—43
ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

EMPIRE OF INDIA
LIFE ASSURANCE COMPANY, LIMITED.

ESTED. 1897.

VALUATION RESULTS

FOR THE FIVE YEARS ENDING 28TH FEBRUARY 1927.

SURPLUS—RS. 37,66,689.

A REVERSIONARY BONUS DISTRIBUTION OF

RS. 15 PER ANNUM PER RS. 1,000 ASSURED ON WHOLE LIFE ASSURANCES
AND
RS. 12 PER ANNUM PER RS. 1,000 ASSURED ON ENDOWMENT ASSURANCES

HAS BEEN DECLARED.

HEAD OFFICE:
Empire of India Life Building,
BOMBAY.

24—5.

BRANCH OFFICE.
Commercial Street,
BANGALORE.

Printed & published by P. I. Belliappa at 'Kodagu' Press, Mercara for "Kodagu" Ltd.

Reg. No. M. 1 ...
"KODAGU" OFFICE MERCARA

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಪಂದ್ಯಂಡ ಐ ಬೆಳ್ಯಪ್ಪ

ಸಂಪುಟ ೭] ಮಡಿಕೇರಿ, ೧೯೨೮ನೇ ಇಸವಿ ಫೆಬ್ರವರಿ ತಾರೀಖು ೧೭ ನೇ ಶುಕ್ರವಾರ [ಸಂಚಿಕೆ ೩೬

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52-3 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH SILVERSMITH & DEALER IN ALL PRECIOUS STONES.

Post Box 423.
TRIPLICANE, MADRAS

Catalogue Free
to Bonafide Enquirers



Rose Water Sprinkler



Nose-screws Clover Drops Thodu. Brooch

Chased Silver Mirror

Manufacture of HIGH CLASS GEMSET JEWELS a speciality

The special features of my productions are —
1 Best QUALITY.
2 Latest novel designs
3 Promptest execution
4 Neat & artistic finish
5 Most moderate prices

GOLD or SILVERWARE of all descriptions neatly executed.

52-23



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24-23

ಗೌರ

ಎ ಗನ್ನ ವಿ ಕ್ ಸ್ಟ ರ್

ಮಲೇರಿಯಾ ಇನ್ಫ್ಲುಯೆಂಜಾ ಮೊದಲಾದ ... ಮೇಲೆ ಇದನ್ನು ಉಪಯೋಗಿ ... ಇದರಿಂದ ... ಬಾಟ್ಲಿಗೆ ... ಟಪ್ಪಾಲು ವೆಚ್ಚ ಬೇರೆ

ಶಾ ರ ಸಾ ಪ ರಿ ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಪಡಿಸುವುದಕ್ಕೆ ಇದು ಖಾತ್ರಿಯಾದ ಔಷಧ ... ಬಾಟ್ಲಿಗೆ ರೂ ೧-೦-೦ ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್

12-6 ದುಬಾಶ್ ಲೇನ್,

ಗಿರಗಾಂವ, ಮುಂಬಾಯಿ

ಕೊಡಗು

೨೮ ೧೯೨೮ನೇ ಇಸವಿ ಫೆಬ್ರವರಿ
ತಾ. ೧೭ ನೇ ಶುಕ್ರವಾರ

ಜಮಿನ್ದಾರರ ಸಂಘದ ತೀರ್ಮಾನ.

ಕೊಡಗು ದೇಶವು ಚಿಕ್ಕ ಪ್ರಾಂತ್ಯವಾದರೂ ಪ್ರತ್ಯೇಕ ಪ್ರಾಂತೀಕ ಸರಕಾರವುಳ್ಳದ್ದಾಗಿರುವದರಿಂದ ಇಷ್ಟರ ವರೆಗೆ ಅಖಿಲಭಾರತ ರಾಜಕೀಯ ಚಳವಳಿಯು ಈ ದೇಶಕ್ಕೆ ವ್ಯಾಪಿಸುವದು ಅಪರೂಪವಾಗಿತ್ತು. ಆದರೆ ಈಗೀಗ ಇಲ್ಲಿಯವರು ತಮ್ಮ ಪ್ರಾಂತ್ಯವು ಬಹುಕಾಲದಿಂದ ಪ್ರತ್ಯೇಕವಾಗಿರ ವದಾದರೂ ಅದು ಹಿಂದೂದೇಶದ ಒಂದು ಭಾಗವೆಂಬದನ್ನೂ, ಹಿಂದೂದೇಶಕ್ಕೆ ಸ್ವರಾಜ್ಯವು ದೊರೆತಾಗಲೇ ತಮಗೂ ಸ್ವಾತಂತ್ರ್ಯವು ದೊರೆಯುವದೆಂಬದನ್ನು ಅರಿತವರಾಗಿ ಹಿಂದೂದೇಶದ ಚಳವಳದಲ್ಲಿ ತಾವೂ ಭಾಗಿಗಳಾಗುತ್ತಿರುವದು ಶುಭ ಸೂಚನೆಯಾಗಿದೆ. ಬ್ರಿಟಿಷ್ ಪಾರ್ಲಿಮೆಂಟಿನವರಿಂದ ನೇಮಿಸಲ್ಪಟ್ಟು ಈಗ ಹಿಂದೂದೇಶವನ್ನು ಸುತ್ತಾಡುತ್ತಿರುವ ಸೈಮನ್ ಕಮಿಷನು ಇಡೀ ಬ್ರಿಟಿಷ್ ಇಂಡಿಯಾದ ರಾಜಕೀಯ ಸುಧಾರಣೆಯನ್ನೂ ಪ್ರಜಾಪ್ರತಿನಿಧಿ ಸಭೆಗಳ ಬೆಳವಣಿಗೆಯನ್ನೂ ಅಜಮಾಯಿಸಿ ಹಿಂದೀಯರು ಸ್ವರಾಜ್ಯಕ್ಕೆ ಅರ್ಹರೋ, ಅಲ್ಲವೋ ಎಂಬದನ್ನು ಶಿಫಾರಸ್ಸು ಮಾಡಲಿಕ್ಕಿರುವದಾಗಿದೆ. ಕೊಡಗು ದೇಶವೂ ಒಂದು ಬ್ರಿಟಿಷ್ ಪ್ರಾಂತ್ಯವಾದುದರಿಂದಲೂ, ಇಲ್ಲಿಯೂ ಪ್ರಜಾಪ್ರತಿನಿಧಿ ಸಂಸ್ಥೆಯಿರುವದರಿಂದಲೂ ಈ ಕಮಿಷನಿನವರ ವರದಿಯಲ್ಲಿ ಕೊಡಗಿನ ಮುಂದಿನ ರಾಜಕೀಯ ಸುಧಾರಣೆಯನ್ನು ಕುರಿತು ಬರೆಯಲಾಗುವದೆಂಬುದರಲ್ಲಿ ಸಂಶಯವಿಲ್ಲ.

ಹೀಗಿರುವಲ್ಲಿ ಕೊಡಗಿನವರೂ ಈ ಕಮಿಷನಿನ ವಿಷಯ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕಾದದ್ದು ಅವರ ಕರ್ತವ್ಯವಾಗಿದೆ. ಇದರ ಪ್ರಾಮುಖ್ಯತೆಯನ್ನು ತಿಳಿದುಕೊಂಡೇ ಈ ದೇಶದ ಒಂದೇ ರಾಜಕೀಯ ಸಂಸ್ಥೆಯಾದ ಜಮೀನ್ದಾರರ ಸಂಘವು ಈ ತಿಂಗಳ ಪ್ರಾರಂಭದಲ್ಲಿ ಒಂದು ವಿಶೇಷ ಸಭೆ ಸೇರಿ ಸಭೆಯನ್ನು ಕೂಡಿಸಿ ಹಿಂದೂ ದೇಶದ ಎಲ್ಲಾ ಪಾರ್ಟಿಗಳ ಮುಖಂಡರು ತೀರ್ಮಾನಿಸಿರುವಂತೆ ಹಿಂದೀಯರ ಅಭಿಪ್ರಾಯವನ್ನು ಸಂಪೂರ್ಣ ಅಲ್ಲಗಳೆದು ನೇಮಿಸಿರುವ ಈ ರಾಯಲ್ ಕಮಿಷನಿನೊಂದಿಗೆ ಯಾವ ಕಾಲದಲ್ಲೇ ಆಗಲಿ, ಯಾವ ರೀತಿಯಲ್ಲೇ ಆಗಲಿ ಸಹಕರಿಸುವದಿಲ್ಲವೆಂದು ತೀರ್ಮಾನಿಸಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸಂಘದ ತೀರ್ಮಾನಕ್ಕನುಸಾರವಾಗಿ ಜನಸಮುದಾಯದವರು ಈ ತಾ. 3ರಲ್ಲಿ ಕೆಲವು ಪಟ್ಟಣಗಳಲ್ಲಿ ಹರತಾಳವನ್ನು ಆಚರಿಸಿ ತಮ್ಮ ಅತೃಪ್ತಿಯನ್ನು ಸೂಚಿಸಿದರು. ಸಂಘವು ಇಷ್ಟಕ್ಕೇನೇ ತನ್ನ ಚಳವಳವನ್ನು ನಿಲ್ಲಿಸಲಿಲ್ಲ. ಸರಕಾರಿ ಸಂಸ್ಥೆಯಾದ ಕೌನ್ಸಿಲಿನಲ್ಲೇ ಇಡೀ ದೇಶದ ಅತೃಪ್ತಿಯನ್ನು ಸೂಚಿಸಲಿಕ್ಕಾಗಿ ಈ ತಾ. 25—27ರಲ್ಲಿ ನಡೆಯುವ ಕೌನ್ಸಿಲಿನ ಬಜೆಟ್ ಚರ್ಚೆಯಲ್ಲಿ ಜನರ ಪ್ರತಿನಿಧಿಗಳಾದ ಉದ್ಯೋಗಸ್ಥರಲ್ಲದ ಮೆಂಬರುಗಳು ಭಾಗ ತೆಗೆದುಕೊಳ್ಳಬಾರದೆಂದು ಅವರನ್ನು ಕೋರಿಕೊಳ್ಳುವಂತೆ ಸಂಘವು ಅದರ ತಾ. 13—2—28ರ ಕಾರ್ಯಕಾರಿ ಮಂಡಳಿಯ ಮೀಟಿಂಗಿನಲ್ಲಿ ತೀರ್ಮಾನಿಸಿರುತ್ತದೆ.

ಈ ತೀರ್ಮಾನದಿಂದ ಸಂಘವು ತನ್ನ ಗೌರವವನ್ನು ಹೆಚ್ಚಿಸಿಕೊಂಡಿದೆಯೆಂದೇ ನಮ್ಮ ಅಭಿಪ್ರಾಯ. ಕೌನ್ಸಿಲುಗಳಿಗೆ ಬಹಿಷ್ಕಾರ ಹಾಕಬೇಕೋ, ಬೇಡವೋ ಎಂಬ ವಿಷಯದಲ್ಲಿ ಹಿಂದೂ ದೇಶದಲ್ಲಿ ಭಿನ್ನಾಭಿಪ್ರಾಯಗಳಿವೆ. ರಾಯಲ್ ಕಮಿಷನನ್ನು ವಿರೋಧಿಸುವ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಅಭಿಪ್ರಾಯದಲ್ಲಿ ದೇಶಕ್ಕೆ ಕೇಡಾಗಬಹುದಾದ ವಿಷಯಗಳನ್ನು ವಿರೋಧಿಸುವ ಮತ್ತು ತಮ್ಮ ಮೆಂಬರುತನಗಳನ್ನು ಖರ್ಚಾಗದಂತೆ ಮಾಡಿಕೊಳ್ಳುವ ಸಂದರ್ಭಗಳಲ್ಲಿ ಮಾತ್ರ ಮೆಂಬರುಗಳು ಎಸೆಂಬ್ಲಿ ಮತ್ತು ಕೌನ್ಸಿಲುಗಳಿಗೆ ಹೋಗಬಹುದೆಂತಲೂ, ಬಾಕಿ ಸಮಯಗಳಲ್ಲಿ ಹೋಗಕೂಡದೆಂತಲೂ ಕಾಂಗ್ರೆಸ್ಸಿನವರು ನಿಶ್ಚಯಿಸಿರುವರು. ಇದರಂತೆಯೇ ಸ್ವರಾಜ್ಯ ಪಕ್ಷದ ಮೆಂಬರರುಗಳು ಈಗ ವರ್ತಿಸುತ್ತಿರುವರು. ಆದರೆ ಬೇರೆ ಪಾರ್ಟಿಯ ಮೆಂಬರುಗಳು ಕೌನ್ಸಿಲಿಗೆ ಬಹಿಷ್ಕಾರ ಹಾಕದಿದ್ದರೂ ರಾಯಲ್ ಕಮಿಷನಿಗೆ ಸಹಾಯಮಾಡಲು ಎಸೆಂಬ್ಲಿ ಮತ್ತು ಪ್ರಾಂತೀಕ ಕೌನ್ಸಿಲುಗಳಿಂದ ನೇಮಿಸಲ್ಪಡಬೇಕಾದ ಕಮಿಟಿಗಳ ನಿರ್ಮಾಣಕ್ಕೆ ವಿರೋಧಿಸಲು ತಯಾರಾಗಿರುವರು. ನಮ್ಮ ಪ್ರಾಂತ್ಯದ ಕೌನ್ಸಿಲಿಗೆ ಇಂಥಾ ಕಮಿಟಿಯನ್ನು ಚುನಾಯಿಸುವ ಹಕ್ಕು ಕೊಡಲಾಗಿದೆಯೋ ಏನು, ಇನ್ನೂ ತಿಳಿಯಬಾರದಿರುವದಿಲ್ಲ. ಒಂದು ವೇಳೆ ಅಂಥಾ ಹಕ್ಕು ಕೊಡಲಾಗಿದ್ದರೆ ಆ ಕಮಿಟಿಯ ನೇಮಿಸುವಿಕೆಗೆ ವಿರೋಧಿಸಿ ನಮ್ಮ ಪ್ರತಿನಿಧಿಗಳು ದೇಶದ ಅತೃಪ್ತಿಯನ್ನು ತೋರಿಸಲು ಸಾಧ್ಯವಾಗುತ್ತು. ಅಂಥಾ ಸಂದರ್ಭವು ಇಲ್ಲದ್ದರಿಂದ ಸರಕಾರದವರು ನಿರ್ಧರಿಸಿದಾವ ತೀರ್ ಕೌನ್ಸಿಲಿನ ಮುಂದಿನ ಬಜೆಟ್ ಮೀಟಿಯಲ್ಲಿ ಭಾಗಗ ಳೆದೆ ತಮ್ಮ ಅಸಮ್ಮತಿಯನ್ನು ತೋರಿಸುವದೊಂದೇ ದಾರಿ. ಆದಾಗ್ಯೂ ಬಜೆಟ್ ಮೀಟಿಂಗು ಕಮಿಷನು ನೇಮಕವಾದ ನಂತರದಲ್ಲಿ ನಡೆಯಲಿಕ್ಕಿರುವ ಮೊದಲನೇ ಕೌನ್ಸಿಲು ಅಧಿವೇಶನವಾಗಿದೆ. ಕೊಡಗಿನ ಕೌನ್ಸಿಲಿನಲ್ಲಿ ವಾರ್ಷಿಕ ಬಜೆಟ್ ಮತ್ತು ಎಲ್ಲೋ ಒಂದು ಸರಕಾರದವರಿಂದ ಕೌನ್ಸಿಲಿನ ಮುಂದಿಡಲಾಗುತ್ತವೆ. ದೇಶಕ್ಕೆ ಸಂಬಂಧಿಸುವ ಬಾಕಿ ಸಾರ್ವಜನಿಕ ಸಂಗತಿಗಳೆಲ್ಲ ವಾಡಿಕೆಯಾಗಿ ಉದ್ಯೋಗಸ್ಥರಲ್ಲದ ಮೆಂಬರುಗಳಿಂದಲೇ ಚರ್ಚೆಗೆ ತರಲ್ಪಡುತ್ತವೆ. ಈಗ ಸದ್ಯಕ್ಕೆ ಸರಕಾರದವರು ಯಾವ ಮಸೂದೆಯನ್ನು ಕೌನ್ಸಿಲಿನ ಮುಂದಿಡುವ ಸಂಭವ ಕಾಣುವದಿಲ್ಲ. ಆದುದರಿಂದ ಮೆಂಬರುಗಳು ತಮ್ಮ ಅತೃಪ್ತಿಯನ್ನು ಸೂಚಿಸಲು ಕಮಿಶನು ಆದ ನಂತರ ನಡೆಯುವ ಪ್ರಥಮ ಬಜೆಟ್ ಮೀಟಿಂಗಿಗೆ ಹೋಗದೆ ಇರುವದೇ ಉತ್ತಮ ಹಾದಿ.

ಬೇರೆ ಕೌನ್ಸಿಲುಗಳಲ್ಲಿ ಮಾಡಿದಂತೆ ಕಮಿಷನನ್ನು ನಿಷೇಧಿಸುವ ಠರಾವನ್ನು ನಮ್ಮ ಕೌನ್ಸಿಲಿನಲ್ಲಿಯೂ ಚರ್ಚಿಸಿ ಅತೃಪ್ತಿಯನ್ನು ತೋರಿಸಬಹುದೆಂದು ಕೆಲವರು ಹೇಳಬಹುದು. ಅದೇ ತರಹದ ಠರಾವು ಒಂದನ್ನು ಇಲ್ಲಿಯ ಚುನಾಯಿತ ಮೆಂಬರೊಬ್ಬರು ಕಳುಹಿಸಿರುವರೆಂದು ತಿಳಿಯುತ್ತೇವೆ. ಆದರೆ ನಮ್ಮ ಕೌನ್ಸಿಲಿನ ಬಜೆಟ್ ಅಧಿವೇಶನದ ನೋಟೀಸು ಮೇರೆ ಈ ಮೀಟಿಂಗಿನಲ್ಲಿ ಬಜೆಟ್ಟಿನ ಚರ್ಚೆಗೆ ಮಾತ್ರ ಅವಕಾಶ ಕೊಡಲಾಗಿದೆಯಲ್ಲದೆ ಬೇರೆ ಸಾರ್ವಜನಿಕ ವಿಷಯಗಳನ್ನು ಕುರಿತ ಠರಾವುಗಳಿಗೆ ಎಡೆ ಕೊಟ್ಟಿರುವದಿಲ್ಲ. ಆದುದರಿಂದ ಈ ಠರಾವಿನ ಚರ್ಚೆಯನ್ನು ಈ ಮೀಟಿಂಗಿನಲ್ಲಿ ಬಿಡುವರೆಂಬುದು ಸಂಶಯಾಸ್ಪದವಾಗಿದೆ. ಒಂದು ವೇಳೆ ಹಾಗೆ ಬಿಟ್ಟದ್ದೇ ಆದರೆ ಮೆಂಬರುಗಳೆಲ್ಲರೂ ಹಾಜರಾಗಿ ಕಮಿಶನಿನ ನೇಮಿಸುವಿಕೆಯನ್ನು ನಿಷೇಧಿಸಲು ಹಿಂಜರಿಯಬಾರದು. ಈ ಮೀಟಿಂಗಿನಲ್ಲಿ ಅಲ್ಲದಿದ್ದರೆ ಬರುವ ಮೀಟಿಂಗಿನಲ್ಲಾದರೂ ಈ ಠರಾವನ್ನು ಚರ್ಚಿಸಬಹುದೆಂದು ಅಪ್ಪಣೆಯಿರಬಹುದು. ನಮ್ಮ ಕೌನ್ಸಿಲಿನ ಬರುವ ಮೀಟಿಂಗು ನಡೆಯುವಷ್ಟರೊಳಗೆ ರಾಯಲ್ ಕಮಿಷನು ಎರಡನೇ ಸಾರಿ ಹಿಂದೂ ದೇಶವನ್ನು ಸಂದರ್ಶಿಸಿ ಜನರ ಅಭಿಪ್ರಾಯವನ್ನು ತೆಗೆಯುವ ಕೆಲಸವನ್ನು ಪ್ರಾರಂಭಿಸಬಹುದು. ಅಷ್ಟು ತಡವಾಗಿ ನಮ್ಮ ದೇಶದ ಅತೃಪ್ತಿಯನ್ನು ಸೂಚಿಸುವದರಿಂದ ಪ್ರಯೋಜನವೇನೂ ಆಗಲಿಕ್ಕಿಲ್ಲ.

ಇದು ಸಾಧಾರಣದ ವಿಷಯವೇನೂ ಅಲ್ಲ. ಹಿಂದೂ ದೇಶದ ಗೌರವವನ್ನೇ ಒಳಕೊಂಡಿರುವ ಸಂಗತಿಯಾಗಿದೆ. ಹಿಂದೂದೇಶದ ಗೌರವದಲ್ಲಿ ನಮ್ಮ ದೇಶದ ಗೌರವವೂ ಅಡಗಿದೆ. ಮಾತೃಭೂಮಿಯ ಆತ್ಮಗೌರವವನ್ನು ಕಾಪಾಡುವದು ಅದರ ಪ್ರತಿನಿಧಿಗಳ ಕರ್ತವ್ಯವಾಗಿದೆ. ಆದುದರಿಂದ ಜಮೀನ್ದಾರರ ಸಂಘದ ಕೋರಿಕೆಯನ್ನು ನಮ್ಮ ದೇಶದ ಉದ್ಯೋಗಸ್ಥರಲ್ಲದ ಕೌನ್ಸಿಲು ಮೆಂಬರುಗಳು ಬಹುಮಾನಿಸಿ, ದೇಶದವರ ಅಪೇಕ್ಷೆಯನ್ನು ನೆರವೇರಿಸುವರಾಗಿ ಆಶಿಸುತ್ತೇವೆ.

ಹಿಂದುಸ್ಥಾನದ ನಿರಕ್ಷರತ್ವ. ಇದು ಸ್ವರಾಜ್ಯಕ್ಕೆ ಅಡ್ಡಿಯೋ?

(ಮೋಡರ್ನ್ ರಿವ್ಯು ಪತ್ರಿಕೆಯಲ್ಲಿ ಪ್ರಕಟವಾಗಿರುವ ಡಾ. ಸಂಡರ್ಲ್ಯಾಂಡ್‌ರವರ ಲೇಖನದ ತರ್ಜುಮೆ)

ಹಿಂದುಸ್ಥಾನದವರು ಸ್ವರಾಜ್ಯಕ್ಕೆ ಅರ್ಹರಲ್ಲವೆಂಬದಕ್ಕೂ, ಬೇರೆಯವರಿಂದಲೇ ಆಳಲ್ಪಡಬೇಕೆಂಬದಕ್ಕೂ ಆಧಾರವಾಗಿ ಅವರ ನಿರಕ್ಷರತ್ವವನ್ನು ಸೂಚಿಸುವದುಂಟು. ನಿರಕ್ಷರತ್ವವೆಂದರೆ ತಿಳುವಳಿಕೆ ಇಲ್ಲದಿರುವಿಕೆಯೆಂತಾದರೆ ಮೇಲ್ಕಂಡ ವಾದದಲ್ಲಿ ಸ್ವಲ್ಪ ಬಲವಿದೆಯೆನ್ನಬಹುದು. ಒಂದು ಜನಾಂಗವು ತಮ್ಮನ್ನು ತಾವೇ ಚೆನ್ನಾಗಿಯೂ, ಅಪಾಯವಿಲ್ಲದೆಯೂ ಆಳಿಕೊಳ್ಳಬೇಕಾದರೆ ಜನರಲ್ಲಿ ತಕ್ಕ ಮಟ್ಟಿಗೆ ತಿಳುವಳಿಕೆ ಇರಬೇಕೆಂಬದನ್ನು ಒಪ್ಪಬೇಕು.

ಆದರೆ ಈ ವಾದವು ಬ್ರಿಟಿಷರಿಂದ ಬರುವದರಲ್ಲಿ ಏನೋ ಆಶ್ಚರ್ಯವಿದೆ. ಹಿಂದೀಯರ ನಿರಕ್ಷರತ್ವಕ್ಕೆ ಕಾರಣವು ಯಾರು? ಒಂದೇ ಜವಾಬು ಸಾಧ್ಯವಿದೆ. ಮುಖ್ಯ ಜವಾಬ್ದಾರಿಯು ಬ್ರಿಟಿಷರ ಮೇಲೆಯೇ ಇದೆ. ಈ ನಿರಕ್ಷರತ್ವದಂಥ ಆಕ್ಷೇಪಣೆಯನ್ನು ಮುಚ್ಚಿ ಮರೆ ಮಾಡಲು ಬ್ರಿಟಿಷರು ಪ್ರಯತ್ನಿಸಬೇಕಿತ್ತು. ಇದರಿಂದ ಬ್ರಿಟಿಷರು ಹಿಂದುಸ್ಥಾನದಲ್ಲಿ ಇರಬೇಕೆಂಬದಕ್ಕೆ ಆಧಾರ ದೊರೆಯುವ ಬದಲು ಇವರು ಹಿಂದುಸ್ಥಾನವನ್ನು ನಿರಾತಂಕವಾಗಿ ಒಂದು ಶತಮಾನಕ್ಕಿಂತ ಹೆಚ್ಚು ಕಾಲ ಆಳಿ ಇನ್ನೂ ನಿರಕ್ಷರತ್ವವಿದೆಯೆಂದರೆ ಇವರ ಆಳಿಕೆಯು ನಿಷ್ಪ್ರಯೋಜಕವಾದದ್ದು; ಅದು ಕೆಡಕು ಮತ್ತು ಇನ್ನು ಮುಂದೆ ಇರಬಾರದೆಂಬದಕ್ಕೆ ಆಧಾರವಾಗಿದೆ. ಹಿಂದುಸ್ಥಾನದ ನಿರಕ್ಷರತ್ವಕ್ಕೆ ಬ್ರಿಟಿಷರು ಜವಾಬ್ದಾರರೆಂಬದನ್ನು ಯಾರೂ ಒಪ್ಪದಿರಲು ಸಾಧ್ಯವಿಲ್ಲ. ಹಿಂದುಸ್ಥಾನದ ಎಲ್ಲಾ ಜನರು (ಬಹಳ ಕೆಳಗಿನ ದರ್ಜೆಯವರು ಕೂಡ) ವಿದ್ಯೆಯನ್ನು ಮೋಹಿಸುತ್ತಾರೆ. ಹಿಂದೀ ಮುಂದಾಳುಗಳು ಕಳೆದ 50 ವರ್ಷಗಳಿಂದ ವಿದ್ಯೆ ಕೊಡಬೇಕೆಂತ ಬಹು ಒತ್ತಾಯದಿಂದ ವಾದಿಸುತ್ತಿದ್ದಾರೆ. ಹಿಂದುಸ್ಥಾನದ ಉತ್ಪತ್ತಿಯನ್ನು ಇಂಗ್ಲಿಷ್ ಜನರ ಅನಾವಶ್ಯಕದ ಸಂಬಳಕ್ಕೂ, ಪೆನ್ಶನಿಗೂ ಮತ್ತು ಅನಾವಶ್ಯಕ್ಕಿಂತ ಹೆಚ್ಚಾದ ಮಿಲಿಟರಿ ಇಲಾಖೆಯು ಮತ್ತು ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಗೆ ಬೇಕಾದ ಇತರ ಬಾಬುಗಳಿಗೆ ಖರ್ಚ ಮಾಡುವದನ್ನು ಬಿಟ್ಟರೆ ಜಪಾನಿನ ವಿದ್ಯೆಗಿಂತ ಉತ್ತಮ ವಿದ್ಯೆಗೆ ಬೇಕಾದಷ್ಟು ಹಣವು ಇಂಡಿಯಾ ಸರಕಾರದಲ್ಲಿ ಇದೆ.

ಜಪಾನಿನ ವಿದ್ಯೆಗೆ ಸಮನಾದ, ಸರ್ವರಿಗೂ ದೊರಕುವ, ಜನರ ಪ್ರೀತಿಗೆ ಪಾತ್ರವಾದ ವಿದ್ಯೆ ಎಂತ ನಾನು ಹೇಳಿರುವದಾಗಿದೆ. ಹಿಂದುಸ್ಥಾನದಲ್ಲಿ ಜಪಾನಿಗಿಂತ ಹೆಚ್ಚಿಗೆ ಜನಸಂಖ್ಯೆ ಇದೆಯೆಂಬುದು ನಿಜ. ಆದರೆ ಹಿಂದುಸ್ಥಾನದಲ್ಲಿ ಅನುಕೂಲಗಳೂ ಹೆಚ್ಚು ಇವೆ. ಹಿಂದುಸ್ಥಾನದ ಸರಕಾರವು ವಸೂಲ್ ಮಾಡುವ ತೆರಿಗೆಯನ್ನು ಪರಕೀಯರು ಸಾಗಿಸಿ ಬಿಡದೆ ಇದ್ದರೆ ಜಪಾನಿನ ವಿದ್ಯೆಗೆ ಸರಿಯಾದ ಅಲ್ಲ, ಮೇಲಾದ ವಿದ್ಯೆಯನ್ನು ಹಿಂದುಸ್ಥಾನದಲ್ಲಿ ಕೊಟ್ಟು ನಿರಕ್ಷರತ್ವವನ್ನು ಸಂಪೂರ್ಣವಾಗಿ ಹೋಗಲಾಡಿಸಬಹುದು. ಈ ವಿದ್ಯಮಾನಗಳನ್ನು ಬ್ರಿಟಿಷರು ಅಡಗಿಸುತ್ತಾರೆ. ಆದರೆ ಹಿಂದುಸ್ಥಾನದವರು ಬಹಳ ನೋವಿನಿಂದ ಇವನ್ನು ತಿಳಿದುಕೊಂಡಿದ್ದಾರೆ.

ಹಿಂದುಸ್ಥಾನದ ನಿರಕ್ಷರತ್ವವನ್ನು ಅಜಮಾಯಿಸುವ. ಅದರಿಂದ ಕೆಡಕಿದೆಯಾದರೂ ಸ್ವರಾಜ್ಯಕ್ಕೆ ಪರಿಹಾರವೆನ್ನುವಷ್ಟು ಕೆಡಕಿದೆಯೋ ಎಂತ ನೋಡುವ. ತಿಳುವಳಿಕೆ ಪಡೆಯಲು ಪಾಶ್ಚಿಮಾತ್ಯ ದೇಶಗಳಲ್ಲಿ ಬರೇ ಪುಸ್ತಕಗಳನ್ನೂ ವೃತ್ತಾಂತ ಪತ್ರಿಕೆಗಳನ್ನೂ ನಂಬಿರುವುದರಿಂದಲೂ ಪ್ರಿಂಟ್ ಪುಟದಿಂದ ದೊರೆಯುವ ತಿಳುವಳಿಕೆ ವಿನಹ ಬೇರೆ ತಿಳುವಳಿಕೆ ಇಲ್ಲದ್ದರಿಂದ ಅಲ್ಲಿ ಸ್ವರಾಜ್ಯ ನಡಿಸಲು ಹಿಂದುಸ್ಥಾನದಲ್ಲಿರುವುದಕ್ಕಿಂತ ಹೆಚ್ಚಿಗೆ ಅಕ್ಷರಸ್ಥರು ಬೇಕಾಗಬಹುದಾದರೂ ತಿಳುವಳಿಕೆ ಪಡೆಯಲು ಪುಸ್ತಕ ಮತ್ತು ಪತ್ರಿಕೆಗಳ ಗುಲಾಮರಾಗಿರದೇ ಬೇರೆ ಎಷ್ಟೋ ಅನುಕೂಲಗಳಿರುವ ಹಿಂದುಸ್ಥಾನದಲ್ಲೂ ಸ್ವರಾಜ್ಯ ನಡೆಸಲು ಅಷ್ಟೇ ಅಕ್ಷರಸ್ಥರು ಬೇಕೋ? ಪುರಾತನ ಕಾಲದಿಂದಲೂ ಸ್ವರಾಜ್ಯ ನಡಿಸುತ್ತಿದ್ದ ಜನಾಂಗಗಳೆಲ್ಲವೂ ಅಕ್ಷರ ತಿಳಿದವರಾಗಿಯೇ ಇದ್ದವೋ? ಆಸ್ಯ ಖಂಡದಲ್ಲೂ, ಯೂರೋಪ್ ಖಂಡದಲ್ಲೂ ಮತ್ತು ಪ್ರಪಂಚದ ಇತರ ಭಾಗಗಳಲ್ಲೂ ಈಗ ಹಿಂದುಸ್ಥಾನದಲ್ಲಿ ಇರುವದಕ್ಕಿಂತ ಕಡಿಮೆ ಅಕ್ಷರಸ್ಥರಿದ್ದ ಅನೇಕ ದೇಶಗಳು ಚೆನ್ನಾಗಿಯೇ ತಮ್ಮನ್ನು ತಾವೇ ಆಳಿಕೊಳ್ಳಲಿಲ್ಲವೇ? ಪರಕೀಯರ ಆಳ್ವಿಕೆಗಿಂತ ಎಷ್ಟೋ ಹೆಚ್ಚು ಚೆನ್ನಾಗಿ ಆಳಿಕೊಳ್ಳಲಿಲ್ಲವೇ?

ಹಿಂದುಸ್ಥಾನದ ಎಲ್ಲಾ ಜನರು ಅಕ್ಷರ ತಿಳಿಯದವರಲ್ಲವೆಂಬದನ್ನು ನೆನಪಿಸಲಿಚ್ಛೆಪಡುತ್ತೇನೆ. 32,00,00,000 ಕೋಟಿ ಜನಸಂಖ್ಯೆಗೆ ಹೋಲಿಸಿದರೆ ಕಡಿಮೆ ಎಂತ ತೋರಿದರೂ ಅಕ್ಷರ ತಿಳಿದವರ ಸಂಖ್ಯೆ ದೊಡ್ಡದಾಗಿದೆ. ಇಂಗ್ಲಿಷ್ ತಿಳಿದವರ ಸಂಖ್ಯೆಯೇ 25,00,00 ಇದೆ. ಯುನೈಟೆಡ್ ಸ್ಟೇಟ್ಸ್ ದೇಶದ 39 ಸ್ಟೇಟ್ಸ್‌ಗಳ ಪೈಕಿ ಯಾವದಾದರೂ ಒಂದು ಸ್ಟೇಟಿನ ಜನಸಂಖ್ಯೆಗಿಂತ ಹೆಚ್ಚಾಯಿತು. ಹೀಗಿರುವಾಗ ಸ್ವರಾಜ್ಯ ನಡಿಸಲು ಜನರು ಸಾಲದೆಂತ ಹೇಳಬಹುದೋ? ಹಿಂದುಸ್ಥಾನದ ಹರ್ಷ ಪ್ರಜೆಯಾಗಲು ಇಂಗ್ಲಿಷು ಬೇಡ. ದೇಶೀಯ ಭಾಷೆ ಸಾಕಾಗಿದೆ. ದೇಶೀಯ ಭಾಷೆಗಳಲ್ಲಿ ಅಕ್ಷರ ತಿಳಿದವರ ಸಂಖ್ಯೆಯು 2,26 23,651 ಇದೆ. ಈ ಸಂಖ್ಯೆಯು ಆಶ್ಚರ್ಯ ಹುಟ್ಟಿಸುವಂತಿದೆ. ಈ ಸಂಖ್ಯೆಗೆ ಇಂಗ್ಲಿಷ್ ತಿಳಿದವರ ಸಂಖ್ಯೆಯನ್ನೂ ಸೇರಿಸಿದರೆ ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡಿನ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿಗೆ, ಫ್ರಾನ್ಸಿನ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿಗೆ, ಜರ್ಮನಿಯ ಜನಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಹೆಚ್ಚಿಗೆ ಆಯಿತು. ಈ ಎರಡು ಕೋಟಿ ನಲ್ವತ್ತು ಲಕ್ಷ ಓದಬಲ್ಲವರು ಈ ದೇಶದ ಎಲ್ಲಾ ಕಡೆಗಳಲ್ಲೂ ಹಂಚಿರುವಾಗ ಹಿಂದುಸ್ಥಾನಕ್ಕೆ ಬ್ರಿಟಿಷ್ ಸರಕಾರವು ಸ್ವರಾಜ್ಯ ಕೊಡದೆ ಇರುವುದು ಹೇಗೆ ಎಂತ ಗೊತ್ತಾಗುವದಿಲ್ಲ.

(ಮುಂದೆ ಸರಿಯುವುದು.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೨೬ನೇ ಪ್ರಕರಣ.

ಜೀವರಕ್ಷಣೆಗೋಸ್ಕರ ದುಡಿದುದು

ಈಗ ನಾನು ಹಿಂದೂಸ್ಥಾನಕ್ಕೆ ತಿರುಗಿ ಬರುವ ಆಸೆಯನ್ನು ಬಿಟ್ಟುಬಿಟ್ಟಿದ್ದೆನು. ಒಂದು ವರ್ಷದೊಳಗಾಗಿ ವಾಪಸು ಬರುವೆನೆಂದು ನಾನು ನನ್ನ ಹೆಂಡತಿಗೆ ಮಾತು ಕೊಟ್ಟಿದ್ದೆನು. ವರ್ಷವೇನೋ ಮುಗಿಯಿತು; ಆದರೆ ಹಿಂದಿರುಗುವ ಆಸೆಯು ದೂರವಾಯಿತು. ಆದ್ದರಿಂದ ನಾನು ನನ್ನ ಹೆಂಡತಿ ಮಕ್ಕಳನ್ನು ಕರೆಸಿಕೊಳ್ಳಬೇಕೆಂದು ನಿಶ್ಚೈಸಿದೆನು. ಅವರನ್ನು ದಕ್ಷಿಣ ಆಫ್ರಿಕಕ್ಕೆ ಒಯ್ಯುತ್ತಿದ್ದ ಹಡಗಿನಲ್ಲಿ ನನ್ನ ಮೂರನೇಯ ಮಗನಾದ ರಾಮದಾಸನು ಹಡಗಿನ ಮುಖ್ಯಾಧಿಕಾರಿಯೊಡನೆ ಆಟವಾಡುತ್ತಿರುವಾಗ ಕೈ ಮುರಿದುಕೊಂಡನು. ಮುಖ್ಯಾಧಿಕಾರಿಯು ಅವನನ್ನು ಚೆನ್ನಾಗಿ ನೋಡಿಕೊಂಡು ಹಡಗಿನ ವೈದ್ಯರಿಂದ ಅವನಿಗೆ ಚಿಕಿತ್ಸೆ ಮಾಡಿಸಿದರು. ಆದುದರಿಂದ ರಾಮದಾಸನು ಹಡಗಿನಿಂದಿಳಿದಾಗ ಅವನ ಕೈಯು ತೂಗ ಕಟ್ಟಿತ್ತು. ನಾವು ಮನೆಯನ್ನು ತಲಪಿದೊಡನೆಯೇ ಯಾರಾದರೂ ಯೋಗ್ಯ ವೈದ್ಯರ ಕೈಯ್ಯಲ್ಲಿ ಗಾಯಕ್ಕೆ ಚಿಕಿತ್ಸೆ ಮಾಡಬೇಕೆಂದು ಹಡಗಿನ ವೈದ್ಯರು ಹೇಳಿದ್ದರು. ಆದರೆ ನನ್ನ ಮಣ್ಣಿನ ಚಿಕಿತ್ಸೆಯ ಪ್ರಯೋಗಗಳಲ್ಲಿ ನನಗೆ ಪೂರ್ಣ ವಿಶ್ವಾಸವಿದ್ದುದು ಈ ಸಮಯದಲ್ಲಿಯೇ. ನನ್ನ ಕುರುಡ ವೈದ್ಯದಲ್ಲಿ ನಂಬಿಕೆ ಇಟ್ಟಿದ್ದ ಕೆಲವು ಕಕ್ಷಿಗಾರರು ಕೂಡ ಮಣ್ಣು ಮತ್ತು ನೀರಿನ ಚಿಕಿತ್ಸೆಯನ್ನು ಮಾಡಿ ನೋಡುವಂತೆ ಅವರನ್ನು ಪ್ರೇರಿಸಲು ನಾನು ಮಾಡಿದ ಪ್ರಯತ್ನವು ಕೂಡ ಸಫಲವಾಗಿದ್ದಿತು.

ಹಾಗಾದರೆ ನಾನು ರಾಮದಾಸನ ವಿಷಯದಲ್ಲಿ ಮಾಡಬೇಕಾದುದೇನು? ಅವನಿಗೆ ಆಗ ಎಂಟು ವರ್ಷ. "ನಿನ್ನ ಗಾಯಕ್ಕೆ ನಾನು ಚಿಕಿತ್ಸೆ ಮಾಡುವುದು ನಿನಗೆ ಹಿತವೋ?" ಎಂದು ನಾನು ಅವನನ್ನು ಕೇಳಲು ಅವನು ಮುಗುಳುನಗೆಯಿಂದ ನಗುತ್ತಾ ಅದಕ್ಕೆ ಒಪ್ಪಿದನು. ಆ ವಯಸ್ಸಿನಲ್ಲಿ ಅವನಿಗೆ ತನಗೆ ಅತ್ಯಂತ ಹಿತವಾದುದಾವುದೆಂಬುದನ್ನು ನಿಶ್ಚೈಸಲು ಸಾಧ್ಯವಾಗಿರಲಿಲ್ಲ. ಆದರೆ ಅವನಿಗೆ ಕುರುಡು ವೈದ್ಯಕ್ಕೂ, ಯೋಗ್ಯಚಿಕಿತ್ಸೆಗೂ ಇರುವ ವ್ಯತ್ಯಾಸವು ಚೆನ್ನಾಗಿ ಗೊತ್ತಿದ್ದಿತು. ನಾನು ಮನೆಯಲ್ಲಿಯೇ ಮಾಡುತ್ತಿದ್ದ ಅಭ್ಯಾಸವು ಅವನಿಗೆ ತಿಳಿದಿದ್ದಿತು. ನನ್ನ ಚಿಕಿತ್ಸೆಗೆ ಒಪ್ಪುವ ನಂಬಿಕೆಯು ಅವನಿಗಿದ್ದಿತು. ನಡುಗುತ್ತಾ ನಾನು ಪಟ್ಟಿಯನ್ನು ಬಿಚ್ಚಿ ಗಾಯವನ್ನು ತೊಳೆದು ಶುಚಿಯಾದ ಮಣ್ಣಿನ ಪಟ್ಟಿಯನ್ನು ಹಾಕಿ ಪುನಃ ಮಣ್ಣಿನ ಪಟ್ಟಿಯನ್ನು ಕಟ್ಟಿದೆನು. ಹೀಗೆಯೇ ಒಂದು ತಿಂಗಳು ಪ್ರತಿದಿನವೂ ಚಿಕಿತ್ಸೆ ಮಾಡಲು ಗಾಯವು ಸಂಪೂರ್ಣವಾಗಿ ಮಾಯಿತು. ಗಾಯವು ಬೇರೆ ವಿಧವಾಗಿ ಗುಣವಾಗುತ್ತಾ ಒಂದು ಸಾಧಾರಣವಾದ ಚಿಕಿತ್ಸೆಯಿಂದ ಎಷ್ಟು ಕಾಲದಲ್ಲಿ ಗುಣವಾಗುವುದೆಂದು ಹಡಗಿನ ವೈದ್ಯರು ಹೇಳಿದ್ದರೋ ಅದಕ್ಕಿಂತ ಹೆಚ್ಚು ಕಾಲ ಹಿಡಿಯಲಿಲ್ಲ.

ಈ ಮತ್ತು ಇತರ ಪ್ರಯೋಗಗಳು ನನಗೆ ಮನೆ ಮದ್ದುಗಳಲ್ಲಿದ್ದ ವಿಶ್ವಾಸವನ್ನು ಹೆಚ್ಚಿಸಿದುವು. ನಾನು ಇನ್ನು ಹೆಚ್ಚಾದ ಧೈರ್ಯದಿಂದ ಈ ಪ್ರಯೋಗಗಳನ್ನು ನಡಸತೊಡಗಿದೆನು. ಗಾಯ, ಜ್ವರ, ಅಜೀರ್ಣ ಕಾಮಾಲೆ ಮತ್ತು ಇತರ ರೋಗಗಳಿಗೆಲ್ಲ ಮಣ್ಣು, ನೀರು ಮತ್ತು ಉಪವಾಸದ ಚಿಕಿತ್ಸೆಯನ್ನು ಪ್ರಯೋಗಿಸಿದೆನು. ಈ ಪ್ರಯೋಗಗಳು ಬಹು ಮಟ್ಟಿಗೆ ಸಫಲವಾದುವು. ಹೀಗೆ ನಾನು ಪ್ರಯೋಗ ಕ್ಷೇತ್ರವನ್ನು ವಿಸ್ತರಿಸಿದೆ. ಆದರೆ ಈಗ ನನಗೆ ಇವುಗಳಲ್ಲಿ ದಕ್ಷಿಣ ಆಫ್ರಿಕದಲ್ಲಿನಷ್ಟು ದೃಢನಂಬಿಕೆಯಿಲ್ಲ. ಆ ಪ್ರಯೋಗಗಳಲ್ಲಿ ಸ್ಪಷ್ಟವಾಗಿ ಅಪಾಯಗಳಿವೆ ಎಂದು ಕೂಡ ಈಗ ಅನುಭವದಿಂದ ಗೊತ್ತಾಗಿದೆ.

ಆದುದರಿಂದ ಇಲ್ಲಿ ಈ ಪ್ರಯೋಗಗಳ ವಿಚಾರವನ್ನು ಹೇಳಿದುವುದು ಅವುಗಳ ಸಫಲತೆಯನ್ನು ತೋರಿಸುವುದಕ್ಕಲ್ಲ. ಯಾವ ಪ್ರಯೋಗವು ಸಂಪೂರ್ಣ ಸಫಲತೆಯನ್ನು ಪಡೆಯಿತೆಂದು ನಾನು ಹೇಳುವ ಹಾಗಿಲ್ಲ. ವೈದ್ಯರು ಕೂಡ ತಮ್ಮ ಪ್ರಯೋಗಗಳ ವಿಷಯವಾಗಿ ಹೀಗೆ ಹೇಳಲಾಗುವುದಿಲ್ಲ. ಹೊಸ ಪ್ರಯೋಗಗಳನ್ನು ನಡಸುವವನು ತನ್ನ ಸ್ವಂತ ಮೈಯಿಂದಲೇ ಮೊದಲು ಪ್ರಾರಂಭಿಸಬೇಕೆಂದು ತಿಳಿಸುವುದಷ್ಟೇ ನನ್ನ ಇಚ್ಛೆ. ಇದರಿಂದ ಸತ್ಯಾನ್ವೇಷಣವು ಇನ್ನೂ ಚೆನ್ನಾಗಿ ಆಗುತ್ತದೆ. ದೃಢ ಮನಸ್ಸಿನಿಂದ ಪ್ರಯೋಗ ನಡಸುವವನನ್ನು ದೇವರು ಕಾಪಾಡುತ್ತಾನೆ. [illegible] ಚಿಕಿತ್ಸೆಯಲ್ಲಿ ಅಪಾಯಗಳೂ ಹೆಚ್ಚಿನವಾಗಿದ್ದುವು. ಅವು ಬೇರೆ ವಿಧವಾಗಿರಬೇಕೆಂದೇ ಪ್ರತ್ಯಕ್ಷ. ಆದರೆ ಈ ಸಂಬಂಧ ನನ್ನ ಬಗೆಸುವುದರಲ್ಲಿ ನಾನು ಜಾಗರೂಕತೆ ಯೋಚನೆಯನ್ನು ಕೂಡ ಮಾಡಲಿಲ್ಲ.

ನಾನು ಪೋಲಕರನ್ನು ನನ್ನೊಡನೆ ವಾಸಿಸಲು ಕರೆದೆನು. ನಾವು ಸಹೋದರರಂತೆ ಒಟ್ಟಿಗೆ ವಾಸಿಸತೊಡಗಿದೆವು. ಆ ವರೆಗೂ ಅವರನ್ನು ಮದುವೆ ಮಾಡಿಕೊಳ್ಳಬೇಕೆಂದಿದ್ದ ಹುಡುಗಿಯೊಡನೆ ನಿಶ್ಚಯವಾಗಿ ಕೆಲವು ವರ್ಷಗಳಾಗಿದ್ದವು. ಆದರೆ ಮದುವೆಗಾಗಿ ಸುಸಮಯವನ್ನು ಕಾಯುತ್ತಿದ್ದರು. ಕೈಗೆ ಹಣವನ್ನು ಕೂಡಿಸುವುದಕ್ಕೆ ಮತ್ತು ಸ್ವಲ್ಪ ಹಣವನ್ನು ಕೂಡಿಟ್ಟುಕೊಳ್ಳಬೇಕೆಂದು ಪೋಲಕರ ಇಷ್ಟವೆಂತ ನನಗೆ ತೋರಿತು. ಆದರೆ ನನಗಿಂತ ಚೆನ್ನಾಗಿ ರಸ್ಕಿನರ ತತ್ವಗಳು ಪರಿಚಯವಾಗಿದ್ದರೂ ಅವರು ಅನ್ಯರನ್ನು ಬಿಡದೆ ವಿದ್ಯೆಯ ವೃದ್ಧಿಗೆ ಪರ ಪಾಶ್ಚಾತ್ಯ ವಾತಾವರಣವು ಅಡಚಣೆ ಮಾಡಿದ್ದಿತು. ಆದರೆ ನಾನು ಅವರೊಂದಿಗೆ ಹೀಗೆ ವಾದಿಸಿದೆನು:— "ನಮ್ಮಂತೆ ಹೃದಯದಲ್ಲಿ ಒಬ್ಬರನ್ನು ಒಬ್ಬರು ಪ್ರೀತಿಸುವ [illegible] ಹಣದ ಅಭಾವದಿಂದ ಮದುವೆಯನ್ನು ಮುಂದಕ್ಕೆ ಹಾಕುವುದು ಉಚಿತವಲ್ಲ. ದರಿದ್ರನೇ ಆಗಿದ್ದರೆ ನಿಮಗೆ ಮದುವೆ ಮಾಡಿಕೊಳ್ಳಲಾಗದ್ದು ಇಲ್ಲ. ಇದಲ್ಲದೆ ಈಗ ನೀವು ನನ್ನೊಡನೆ ಇರುವುದರಿಂದ ಮನೆಯ ವೆಚ್ಚದ ಪ್ರಶ್ನೆಯೇ ಇಲ್ಲ. ಆದಷ್ಟು ಬೇಗನೆ ನೀವು ಮದುವೆ ಮಾಡಿಕೊಳ್ಳಬೇಕೆಂದು ನನ್ನ ಕೋರಿಕೆ." ನಾನು ಹಿಂದೆಯೇ ಹೇಳಿರುವಂತೆ ಪೋಲಕರೊಡನೆ ನಾನು ಎರಡು ಸಲ ವಾದಿಸಬೇಕಾಗಿ ಬರಲೇ ಇಲ್ಲ. ನಾನು ಹೇಳಿದುದರ ಔಚಿತ್ಯವನ್ನು ಮನಗಂಡು ಅವರು ಒಡನೆಯೇ ಆಗ ಇಂಗ್ಲೆಂಡಿನಲ್ಲಿದ್ದ ಮಿಸೆಸ್ ಪೋಲಕ (ಆವಾಗ ಮದುವೆಯಾಗಬೇಕೆಂದಿದ್ದಾಕೆ) ಕೊಡನೆ ಕಾಗದ ಬರೆದರು. ಆಕೆಯು ಈ ಸೂಚನೆಯನ್ನು ಸಂತೋಷದಿಂದ ಅಂಗೀಕರಿಸಿ ಕೆಲವು ತಿಂಗಳುಗಳಲ್ಲಿಯೇ ಜೊಹಾನ್ಸ್‌ಬರ್ಗಿಗೆ ಬಂದರು. ಮದುವೆಗಾಗಿ ವೆಚ್ಚ ಮಾಡುವ ಮಾತೇ ಇರಲಿಲ್ಲ. ಅದಕ್ಕಾಗಿ ಪ್ರತ್ಯೇಕವಾದ ಉಡುಪು ಕೂಡ ಅವಶ್ಯಕವೆಂದು ಎಣಿಸಲಿಲ್ಲ. ಅವರ ವಿವಾಹಕ್ಕೆ ಧರ್ಮವಿಧಿಯ ಮುದ್ರೆಯು ಬೇಕಾಗಿಯೇ ಇರಲಿಲ್ಲ. ಪೋಲಕರ ಹೆಂಡತಿಯು ಆ ಜನ್ಮತಃ ಕ್ರಿಶ್ಚಿಯನಳು, ಪೋಲಕರು ಯೆಹೂದ್ಯರಾಗಿಯೂ ಇದ್ದರು. ಅವರಿಬ್ಬರಿಗೂ ಸಾಮಾನ್ಯವಾದ ಧರ್ಮವು ನೀತಿಧರ್ಮವೇ.

ಈ ಮದುವೆಯ ಕಾಲದಲ್ಲಿ ಸಂಭವಿಸಿದ ಒಂದು ವಿನೋದದ ಘಟನೆಯನ್ನು ಇಲ್ಲಿ ತಿಳಿಸುತ್ತೇನೆ. ಟ್ರಾನ್ಸ್‌ವಾಲಿನ ಯೂರೋಪಿಯನರ ಮದುವೆಗಳ ರಿಜಿಸ್ಟ್ರಾರ್ [illegible] ಅಧಿಕಾರಿ ಇರಲಿಲ್ಲ. ಈ ಮದುವೆಯಲ್ಲಿ ನಾನೇ 'ಬೆಸ್ಟ್‌ ಮ್ಯಾನ್' (ಅಂದರೆ ವರನ ಕಡೆಯ ಮುಖ್ಯ ವ್ಯಕ್ತಿ) ಆದೆನು. [illegible]

[illegible]

ಮಾಡಿಕೊಂಡ, ಆಕೆಯೊಡನೆ ವಾದಿಸಿ, ಒಂದರು ಆಕೆಯು ಆ ಬೆಳ್ಳಿಯ ವೋಡಿನ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹುಡುಗಿ. ಆಕೆಗೆ ಕಛೇರಿ ಕೆಲಸದಲ್ಲಿ ಕೂಡ ಸ್ವಲ್ಪ ಅನುಭವವಿತ್ತು. ನಾನು ಆಕೆಯ ಸೌಂದರ್ಯವನ್ನೊಂದು ಹೇಳಲಿಲ್ಲ. [illegible] ನನ್ನ ಹೆಂಡತಿಯೊಡನೆ ಆಕೆಗೆ ಸ್ನೇಹವಿದ್ದಿತು. [illegible]

ನಾನು ಈ ಐರೋಪ್ಯ ಮಿತ್ರರನ್ನು ಮದುವೆಯಾದವಳ ಕಲ್ಲು ಪ್ರೇರಿಸಿದಂತೆಯೇ ಭಾರತೀಯ ಮಿತ್ರರು ತಮ್ಮ ಸಂಸಾರವನ್ನು ಹಿಂದೂಸ್ಥಾನದಿಂದ ಕರೆಸಲು ಪ್ರೋತ್ಸಾಹಿಸುತ್ತಿದ್ದೆನು. ಇದಾದ ನಂತರ ಸಂಸಾರಗಳ ಅಭಿವೃದ್ಧಿ ಹೊಂದಿ ಫೀನಿಕ್ಸ್ ಆಶ್ರಮವು ಈ ರೀತಿಯಾಗಿ ಒಂದು ಸಣ್ಣ ಹಳ್ಳಿಯಾಗಿ ಬೆಳೆಯಿತು.

ನಮ್ಮ ರಾಜ್ಯವನ್ನು ನಾವೇ ಆಳಬೇಕಾಗಿದೆ.

(ಕ. ಪಿ. ಬೋಜಪ್ಪನವರಿಂದ)

(ಮುಂದರಿದುದು.)

ಕಳೆದ ವಾರದಲ್ಲಿ ಬ್ರಿಟಿಷರಿಗೂ ನಮಗೂ ಪೂರ್ವದಿಂದಲೇ ಇದ್ದ ಸಂಬಂಧವೂ, ವಿತ್ತತ್ವವೂ ಮತ್ತು ಅದನ್ನು ವ್ಯಾಪಾರಾಯಕರು ದೃಢೀಕರಿಸಿದ್ದೂ, ನಮ್ಮ ದೇಶದ ವಿಶೇಷ ಚರಿತ್ರೆಯಿಂದ ಯಾವಾಗಲೂ ನಮ್ಮನ್ನು ಪ್ರತ್ಯೇಕವಾಗಿಟ್ಟುಕೊಂಡೇ ಆಳುತ್ತೇವೆ ಎಂಬುದಾಗಿ ಹೇಳಿದ್ದು ವಿವರಿಸಲ್ಪಟ್ಟಿತ್ತು.

ಇದನ್ನು ಕಳೆಯಬೇಕಾದರೆ ಏನಾಗಬೇಕು.

ನಮ್ಮ ಆದಾಯವನ್ನು, ವೆಚ್ಚವನ್ನು ಪರಿಪಾಲಿಸುವ ಮತ್ತು ದೇಶದ ಸಂಪೂರ್ಣ ಆಡಳಿತವು ನಮಗೆ ಸಿಕ್ಕಲೇ ಬೇಕು. ಇದರಲ್ಲಿ ಪ್ರಧಾನವಾಗಿ ದೊರೆ ಕಳೆಯಬೇಕಾದ ಸಂಕಟವನ್ನು ಧಾರಣೆಯ ಇಳಿಮುಖದಲ್ಲಿ ಜನಗಳ ಆದಾಯವು ಬಹಳ ಕಡಿಮೆ ದರ್ಜೆಗೆ ಇಳಿದಿದೆ ಕಡಿಮೆ ಪಕ್ಷ ಮೂರು ಲಕ್ಷ ರೂಪಾಯಿ ಒಳ್ಳೆಯ ಬಜೆಟ್ ಆಗಿದೆ. ಹೀಗೆ ಅನಾವಶ್ಯಕವಾಗಿ ಹೋಗುವ ಹಣವನ್ನು ದೇಶದ ಅಭಿವೃದ್ಧಿಗೆ ಸಹಾಯ ಮಾಡಲಿಕ್ಕೆ ಅನುಕೂಲವಿದೆ.

ಕಳೆದ ನಮ್ಮ ದೇಶದಲ್ಲಿ ಮುಖ್ಯವಾಗಿದ್ದರಿಂದ ಯಾವ [illegible]

[illegible]

ನಮ್ಮ ಉದ್ಯೋಗಸ್ಥರು.

[illegible]

ಯ ು ಬಳೀ ಮೂರು ವರ್ಷಕ್ಕೆ ಮಾತ್ರವಿರುತ್ತದೆ. ಅವನು ನ್ಯಾಯವಿಧಾಯಕ ಸಭೆಯಿಂದ ಚುನಾಯಿಸಲ್ಪಡುತ್ತಾನೆ ಮತ್ತು ಯಾವಾಗಲೂ ನ್ಯಾಯ ವಿಧಾಯಕ ಸಭೆಗೆ ಒಳಪಟ್ಟಿರಬೇಕು. ಅವನು ಯಾವಾಗಲೂ ಓಟರುಗಳ ಇಷ್ಟಕ್ಕನುಸಾರವಾಗಿಯೇ ಕೆಲಸ ನಡಸಬೇಕು. ಅವನ ಅಧೀನದಲ್ಲಿಯೇ ಎಲ್ಲಾ ಉದ್ಯೋಗಸ್ಥರಿರುತ್ತಾರೆ. ಅವನಿಗೆ ತನ್ನ ಕೈಕೆಳಗಿನ ಎಲ್ಲಾ ಉದ್ಯೋಗಸ್ಥರ ಮೇಲೆ ಅಧಿಕಾರ ನಡಿಸುವ ಹಕ್ಕು ಇರುತ್ತದೆ. ಯಾವ ಉದ್ಯೋಗಸ್ಥನೇ ಆಗಲಿ ರೈತನಿಗೆ ಅನ್ಯಾಯ ಮಾಡಿದರೆ ಅಂಥಾ ರೈತನಿಗೆ ಚುನಾಯಿತ ಮಂತ್ರಿಗೆ ಫಿರ್ಯಾದು ಮಾಡಲು ಅನುಕೂಲವಿರುತ್ತೆ. ಎಲ್ಲಾ ಉದ್ಯೋಗಸ್ಥರೂ (ಪಬ್ಲಿಕ್ ಸರ್ವೆಂಟ್ಸ್) ನಮ್ಮ ದೇಶದ ಪ್ರಜೆಗಳ ಸೇವಕರಾಗಿರುತ್ತಾರೆ. ಪ್ರಜೆಗಳಿಗೆ ಯಜಮಾನರಾಗಿರುವುದಿಲ್ಲ. ಇದೇ ಪ್ರಜಾಪ್ರತಿನಿಧಿ ಸರಕಾರಕ್ಕೂ, ಈಗ ಇಟ್ಟ ವ ನಮ್ಮನ ಆಡಳಿತಕ್ಕೂ ಭೇದ.

ಭಾಷಾನುಸರಣ ಪ್ರಕಾರ ನಾವು ಕರ್ನಾಟಕಕ್ಕೆ ಸೇರಿದರೆ ಒಳ್ಳೆಯದಲ್ಲವೋ? ಈ ಅಭಿಪ್ರಾಯವು ಬಹಳ ಒಳ್ಳೇದ. ಆದರೆ ಇಂದಿನ ದಿನ್ನನ್ನು ರ್ಯಲ್ಲೆ ಯೂನಿವರ್ಸಿಟಿ ಸರಕಾರಿ ಕೆಲಸ ವಗೈರೆ ಬಾಬಿನಲ್ಲಿ ಮಾತ್ರ ಗಮನಿಸಿ ಕೆಗೆದುಕೊಳ್ಳಬೇಕಾಗಿದೆ. ಇಂದಿನ ದಿನಕ್ಕೂ ನಾವು ಎಂದೂ ವಿರೋಧ ಮಾಡುವ ಅವಶ್ಯಕತೆ ಇಲ್ಲ. ಕೊಡಗಿನ ವ್ಯಕ್ತಿತ್ವವನ್ನು ಳಿಸಿಕೊಂಡು ನಾವು ಖಂಡಿತವಾಗಿಯೂ ಇಂಥಾ ದೊಡ್ಡ ಸಗಗೆ ಕ್ಕ ಹ ಕಿಯೇ ತೀರಬೇಕಾಗಿದೆ. ವತ್ತು ಇದೇ ಕರ್ನಾಟಕದ ಆ ಒಂದಾಗ ಬೇಕಾಗಿದೆ. ಒಂದುವರೂ ನಮ್ಮ ಬೇಶವು ಪ್ರತ್ಯೇಕವಾಗಿ ನಮ್ಮ ದೇಶದ ಆಡಳಿತವನ್ನು ನಾವೇ ನಡಿಸಬೇಕೆಂದರೆ ವಾಗ ಈಗಲೇ ನಮ್ಮ ಹಕ್ಕಿಗೆ ಹೋರಾಡುವುದು ಒಳ್ಳೆಯದಲ್ಲವೋ?

ಇದೇ ಎರಕಬಂಡವೇ ಗ್ರಾಮಕ್ಕ ಹಿಂದಿರುಗಿ ಎಂಬುದಾಗಿ ಸಾರುತ್ತಲಿ ಇದೆ. ಈ ಸಮಯದಲ್ಲಿ ನಾವು ಬೇರೆ ದೇಶದವರೊಡನೆ ಸೇರಿದೆ ಹೊ ದರೆ ನಮ್ಮ ವಿದ್ಯಾಕಲಿತ ಯುವಕರ ಗತಿಯೇನು? ಅವರಿಗೆ ಸರಕಾರೃತ್ತಿ ಎಲ್ಲಿ ಎಂಬುದನ್ನು ಯೋಚಿಸುವುದಿಲ್ಲ. ವರ್ಷಕ್ಕೆ ಎಂಟು ಹತ್ತು ಯುವಕರು ಪ್ರಯೋಜನವನ್ನು ನೋಡಿ ಸಾವಿರಾರು ಜನ ರೈತ ಯುವಕರನ್ನು ಹಿಂದಕ್ಕಟ್ಟುವುದಲ್ಲ. ಎಲ್ಲಾ ಯುವಕರೂ ವಿದ್ಯೆ ಕಲಿತು ಪೂರಾ ಸರಕಾರಿ ನೌಕರಿಗೂ ಸೇವಾವೃತ್ತಿಗೂ ಇಲ್ಲ. ತನ್ನ ಜನ ವೃತ ಸಹೋದರನ ಸ್ಥಿತಿಯನ್ನು ತಾನು ಕಲಿತ ವಿದ್ಯೆಯ ಪ್ರಭಾವದಿಂದ ಉನ್ನತ ಸ್ಥಿತಿಗೆ ತರುವುದೇ ಸತ್ಯವಾದ ವಿದ್ಯೆ ಇವರಿಗೆ ತೋಂದರೆಯಿಲ್ಲದ ರೀತಿ ತನ್ನ ಜೀವನವನ್ನು ನಡೆಸಿಕೊಂಡು ಹೋಗುವುದೂ ಪ್ರತಿಯೊಬ್ಬ ವಿದ್ಯೆ ಕಲಿತ ಯುವಕನ ಅಭಿಲಾಷೆಯಾಗಿರಬೇಕು.

ನಮ್ಮ ದೇಶವನ್ನು ಮದ್ರಾಸಿಗೆ ಯಾ ಕರ್ನಾಟಕಕ್ಕೆ ಯಾ ಮೈಸೂರಿಗೆ ಸೇರಿಸಿದರೂ ಸಹ ನಮ್ಮ ಗ್ರಾಮಗಳ ಸ್ಥಿತಿಯನ್ನು ನಾವೇ ಮುಂದಕ್ಕೆ ತರಬೇಕಾಗಿದೆ. ಆದ್ದರಿಂದ ನಾವು ಖಂಡಿತವಾಗಿಯೂ ನಮ್ಮ ಸ್ವಾಭಿಮಾನವನ್ನು ಳಿಸಿಕೊಂಡು ನಮ್ಮ ದೇಶದ ಅಭಿವೃದ್ಧಿಯನ್ನು ನಾವೇ ಆಳುವುದರ ವ ಹಲಕ ಹೆಚ್ಚಿಸ ಬೇಕಾಗಿದೆ.

ನಮ್ಮ ದೇಶವು ಪ್ರತ್ಯೇಕವಿರಲು ಸಾಧ್ಯವಿದೆಯೋ?

ಕೊಡಗಿನ ಸಂಸ್ಥಾನದ ಸ್ಥಿತಿಯನ್ನೂ ಅಲ್ಲಿನ ರಾಜ್ಯಾದಿಕವನ್ನೂ ನೋಡಿದರೆ ಖಂಡಿತವಾಗಿಯೂ ನಮಗೆ ಪ್ರತ್ಯೇಕವಾಗಿರಲು ಸಾಧ್ಯವಾಗಿದೆಯೆಂಬುದು 1926ನಲ್ಲಿ ಜಮೀನ್ದಾರರ ಸಂಘದ ನಾಪೋಕ್ಲು ಅಧಿವೇಶನದಲ್ಲಿ ಮೆ ಮುಂಡೀರ ರಾಮಯ್ಯನವರು ಕೊಟ್ಟ ಅಗ್ರಾಸನದಲ್ಲಿ ವ್ಯಕ್ತವಾಗುತ್ತದೆ.

ಅವರು ಹೇಳಿದ್ದೇನೆಂದರೆ— ಈ ಸೆಗಗನಾದ ಕೊಡಗು ಪ್ರಾಂತ್ಯದ ಒಂದು ಪ್ರತ್ಯೇಕ ಸಂಸ್ಥಾನವಾಗಿಯೇ ಇರಬೇಕೆಂಬ ಅನ ಕರೆ ವುದಲ್ಲಿ ನ್ಯಾಯ ಇದೆ ಎಂತ ಎಲ್ಲರೂ ಒಪ್ಪಬೇಕಾಗಿದೆ. ಬೇರೆ ಬೇರೆ ಪ್ರಾಂತ್ಯವನ್ನೂಳಗೊಂಡ ರಾಷ್ಟ್ರೀಯ ಸಂಯುಕ್ತ ಹಿಂದೂಸ್ಥಾನದಲ್ಲಿ ತನ್ನ ವ್ಯಕ್ತಿತ್ವವನ್ನುಳಿಸಿಕೊಂಡು ಸ್ವರಾಜ್ಯ ಪಡೆಯಬೇಕೆಂಬುದು ನಿಮ್ಮ ಧ್ಯೇಯವಾಗಿರಬೇಕು. ಕೊಡಗ ಕೇಲಳ ತೀರದ ಸ್ವಿಟ್ಸರ್ಲ್ಯಾಂಡೆನಿಸುತ್ತದೆ. ಪೂರ್ಣ ಜವಾಬ್ದಾರಿ ಪದ್ಧತಿಯನ್ನು ಪಡೆಯಲು ಕೊಡಗು ಪ್ರಯತ್ನಿಸಲೇ ಬೇಕು. ಕೊಡಗನ್ನು ಕೊಚ್ಚಿ ಸಂಸ್ಥಾನಕ್ಕೆ ಹೋಲಿಸಿ ನೋಡಬಹುದು. ಕೊಡಗು ಬೆಟ್ಟಸೀಮೆ. ಕೊಚ್ಚಿ ಸಮುದ್ರ ತೀರದ ದೇಶವಾದ್ದರಿಂದ ಒಂದಕ್ಕೊಂದು ಸಂಬಂಧವಿಲ್ಲವೆಂದು ಹೇಳಬಹುದು. ಎರಡು ದೇಶಗಳ ವಿಸ್ತೀರ್ಣವು ಸಾಧಾರಣವಾಗಿ ಸರಿಯಾಗಿದೆ. ಜನಸಂಖ್ಯೆ ಕೊಚ್ಚಿ ದೇಶದಲ್ಲಿ 10 ಲಕ್ಷ. ಕೊಚ್ಚಿಯ ಸ್ಥಿತಿಯನ್ನು ಅವಲೋಕಿಸಿದರೆ ನಿಮ್ಮ ದೇಶವನ್ನು ನೀವು ಹೇಗೆ ಅಭಿವೃದ್ಧಿ ಮಾಡಿಕೊಳ್ಳಬಹುದೆಂಬುದನ್ನು ತಿಳಿಯಬಹುದು. ಕೊಚ್ಚಿಯಲ್ಲಿ ಅಧಿಕಾರವಾದ ಟ್ರಾಮುವೇ ಇದೆ. 65 ಮೈಲು ರೈಲ್ವೆ ಇದೆ. 171 ಸರಕಾರಿ ಸಕಂಡರಿ ಶಾಲೆಗಳೂ, 326 ಏಡ್ಸ ಶಾಲೆಗಳೂ, 38 ಅಪ್ಪರ್ ಸೆಕೆಂಡರಿ ಶಾಲೆಗಳೂ 748 ಪ್ರೈಮರಿ ಶಾಲೆಗಳೂ, 83 ಬಾಲಿಕಾ ಪಾಠ ಶಾಲೆಗಳು, 36769 ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳೂ ಇದ್ದಾರೆ. ಬಾಲಿಕೆಯರಿಗೆ 10 ಹೈ ಸ್ಕೂಲುಗಳಿವೆ. 1 ರಾತ್ರಿ ಶಾಲೆಗಳಿವೆ. ಒಂದು ಕ್ರಿಶ್ಚಿಯನ್ ಕಾಲೇಜೂ, ಮತ್ತೊಂದು ಸರಕಾರಿ ಕಾಲೇಜೂ, ಬಾಲಿಕೆಯರಿಗೊಂದು ಪ್ರತ್ಯೇಕ ಕಾಲೇಜೂ ಇದೆ.

ಪ್ರಜಾಪ್ರತಿನಿಧಿ ಸರಕಾರವಿಲ್ಲದಿದ್ದರೂ, ಸ್ವತಂತ್ರ ಸರಕಾರವಿಲ್ಲದಿದ್ದರೂ ಯಾವ ರೀತಿ ಅಭಿವೃದ್ಧಿಯಾಗಬಹುದೆಂದು ಕೊಡಗು ದೇಶಕ್ಕೆ ಇದರಿಂದ ಚೆನ್ನಾಗಿ ತಿಳಿಯಬಹುದು ಎಂಬ ದಾಗಿ ಹೇಳಿದ್ದಾರೆ.

ಇದನ್ನು ಪುಷ್ಟೀಕರಿಸಿ ಕಳೆದ ಜಮೀನ್ದಾರರ ಸಂಘದ ಅಮ್ಮತ್ತಿ ಅಧಿವೇಶನದ ಅಧ್ಯಕ್ಷರಾಗಿದ್ದ ಶ್ರೀಮಾನ್ ಶ್ರೀನಿವಾಸಯ್ಯಂಗಾರರು ಸಹ ಹೇಳಿರುವುದೇನೆಂದರೆ —

ಸರ್ಕಾರವು ಒಗರ ಅನುಮತಕ್ಕ ಬರ ವಂತೆ ಮಾಡಬೇಕು. ಎರಡಕ್ಕೆ ಎಲ್ಲರ ಗಮನವೂ ಕೊಡಲ್ಪಡಬೇಕು. ಈ ಪ್ರಾಂತ್ಯದಲ್ಲಿ ಬಗ್ಗೆ ಬ್ಬಾಗಲು ಹಚಿನ ಅವಕಾಶವಿದೆಯೆಂತ ನಾನು ನಂಬುತ್ತೇನೆ. ಈ ದೇಶದ ಜೀವನಾಗೆಯನ್ನು ಅನೇಕ ವಿಧದಲ್ಲಿ ಮಾಡಬಹುದು. ಈ ದೇಶದಲ್ಲಿ ಜನಸಂಖ್ಯೆಯು ದಟ್ಟವಾಗಿಲ್ಲ. ಜನಸಂಖ್ಯೆ ಹೆಚ್ಚಿಸಲಿಕ್ಕೆ ಬಹಳ ಅವಕಾಶವಿದೆ. ದೇಶದ ಸಾಂಪತ್ತಿಕ ಸಾಧನಗಳನ್ನು ಇನ್ನೂ ಸಂಪೂರ್ಣವಾಗಿ ಉಪಯೋಗಿಸಿಕೊಂಡಿಲ್ಲ. ನಿಮ್ಮದು ಚಿಕ್ಕ ರಾಜ್ಯವಾಗಿದೆ. ಸ್ವರಾಜ್ಯ ಆಡಳಿತವನ್ನು ಬಯಸುವದಾಗಿ ನಡೆಸಿಕೊಳ್ಳಲು ತುಂಬಾ ಅನುಕೂಲವಿದೆ. ಎಲ್ಲಾ ಸಂಕಷ್ಟಗಳಿಗೂ ನಿವಾರಣೆಯು ದೊರೆಯುವುದೊಂದೇ ಸ್ವರಾಜ್ಯ. ಸ್ವತಂತ್ರ್ಯವೆಂದರೆ ತಮ್ಮನ್ನು ತಾವೇ ಆಳಿಕೊಳ್ಳುವ ಶಕ್ತಿ, ತಮ್ಮ ಸಂಕಷ್ಟಗಳನ್ನು ತಾವೇ ಪರಿಹಾರಮಾಡುವ ಶಕ್ತಿ, ಎಲ್ಲರಿಗೂ ಸಮನವಾಗಿ ನ್ಯಾಯಕೊಡುವ ಶಕ್ತಿ. ಸ್ವರಾಜ್ಯಕ್ಕೆ ಎರಡು ಮುಖಗಳಿವೆ. ಒಂದ, ಸ್ವರಾಜ್ಯವೆಂದರೆ—ಸಂಪೂರ್ಣ ರಾಜಕೀಯ ಸ್ವತಂತ್ರ ಆದಾಯ ವೆಚ್ಚದ ಸ್ವತಂತ್ರ ಇನ್ನೊಂದು ಮುಖವು ಸರಿಯಾದ ಮತ್ತು ಬಲವಾದ ರಾಷ್ಟ್ರೀಯತ್ವವು ಎಂಬುದಾಗಿ ಹೇಳಿರುತ್ತಾರೆ.

ನಮ್ಮ ದೇಶವನ್ನು ನಾವೇ ಆಳಿಕೊಳ್ಳಬೇಕೆಂಬುದಕ್ಕ ಮೇಲೆ ತೋರಿಸಿದ ಮತ್ತು ಈ ನೊಡಲು ಕಾಣಿಸದ ಕಾರಣಗಳೇ ಸಾಕಾಗಿರುವುದರಿಂದ ಇದನ್ನು ಒಡನೆ ಸಾಧಿಸಲಿಕ್ಕೆ ದೇಶದ ಜನರು ಶೀಘ್ರದಲ್ಲಿ ಮುಂದಕ್ಕೆ ಬರುವರೋ?

COORG CIVIL SURGEON'S OFFICE,
MERCARA, DATED THE 15TH FEBRUARY 1928

NOTICE.

Sealed tenders for the hiring out of calves to the Vaccine Depot, at Mercara for one year commencing from 1st April 1928 to 31st March 1929 will be received at the Civil Surgeon's Office Mercara up to 11 A M on Monday the 12th March 1928.

For terms and others particulars apply to the Vaccine Inspector or to the Civil Surgeon's Office at Mercara.

F R THORNTON,
Major, I M S
Civil Surgeon and Superintendent
2—1 of Vaccination Coorg.

ಕೊಡಗಿನ ರಾಜಕೀಯ ರಚನ ಕಮಿಟಿ

ಜಮೀನ್ದಾರರ ಸಂಘದ ಈ ತಾ 26ರಲ್ಲು ನಡೆದ ವಿಶೇಷ ಮಹಾ ಸಭೆಯಲ್ಲಿ ಕೊಡಗಿನ ಮುಂದಿನ ರಾಜಕೀಯ ರಚನೆಯನ್ನು ಆಲೋಚಿಸಲು ನೇಮಿಸಲ್ಪಟ್ಟ ಉಪಕಮಿಟಿಯ ಮೀಟಿಂಗು ಈ ತಾ 13ರಲ್ಲಿ ವೀರಾಜಪೇಟೆಯಲ್ಲಿ ಸಭೆಯು ಸಂಘದ ಅಧ್ಯಕ್ಷರಾದ ಮೆ ಪಿ ಟಿ ಕುಶಾಲಪ್ಪನವರು ಚೇರ ಮ್ಯಾನರಾಗಿದ್ದರು. ಮೆ ಗಳಾದ 2 ಎ ಯನ್ ಮೊಕಪ್ಪಯ್ಯ 3 ಯನ್ ಪಿ ಸೋಮಯ್ಯ 4 ಜ ಎ ಮೇದಪ್ಪ 5 ಕೆ ಕರುಂಬಯ್ಯ 6 ಎ ಯನ್ ಉತ್ತಯ್ಯ 7 ಯಂ ಚಿನ್ನಪ್ಪ 8 ಅಬ್ದುಲ್ ಗಫೂರ್ ಖಾನ್ ಮತ್ತು 9 ಪಿ ಬೆಳ್ಳಪ್ಪ—ಇವರು ಹಾಜರಿದ್ದರು.

ಈ ಉಪಕಮಿಟಿಗೆ ಕೆ ಡವಾಗಿರುವ ಹಕ್ಕಿನ ಮೇರ ಈ ಕೆಳಗಿನ 10 ಮಹನೀಯರನ್ನು ಸದರಿ ಕಮಿಟಿಗೆ ಮೆಂಬರುಗಳಾಗಿ ಸೇರಿಸಲು, ಅವರನ್ನ ಕೇಳಿಕೊಳ್ಳುವಂತೆ ತೀರ್ಮಾನವಾಯಿತು. ಮೆ ಗಳಾದ 1 ಎ ಬಿ ಚಂಗಪ್ಪ, 2 ಪಿ ಎ ಮೇದಪ್ಪ 3 ರಾ ಸಾ ಕೆ ಸಬ್ಬಯ್ಯ 4 ಸಾಂತೆಯಂ ಸನ್ನಪ್ಪ 5 ಗಿರಿಗೌಡನ ತಿಮ್ಮಯ್ಯ 6 ಬಿ ಶೀನಪ್ಪರಾವ್, 7 ಎ ಸಿ ಸುಬ್ಬಯ್ಯ 8, ಕೇಳಪಂಡ ಅಜ್ಜಯ್ಯ, 9 ವ್ಯಾಟ್ಕಿನ್ ಟೋಬೊ ಮತ್ತು 10 ಬಲ್ಗೈ ಈರ

2 ಈ ಉಪಕಮಿಟಿಯ ಮೀಟಿಂಗೊಂದನ್ನು ಬರುವ ತಾ ೧೯ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆ ಬದ್ರಿಯಾ ಸ್ಕೂಲ್ ಮಹಡಿಯಲ್ಲಿ ನಡಿಸುವಂತೆ ತೀರ್ಮಾನವಾಯಿತು.

For Sale

About 300 acres of excellent paddy field and dry lands included in Palpare and Kanchikote Estates.

For further particulars apply —

SUPERINTENDENT,
PALPARE ESTATE,
TITTIMATTI POST
5—2 S. COORG.

COORG CIVIL SURGEON'S OFFICE
MERCARA, DATED THE 15TH FEBRUARY 1928

NOTICE.

Sealed tenders will be received at the Civil Surgeon's Office Mercara upto 11 A M on Monday the 12th March 1928 for the supply by contract of all articles of diet, etc required separately for the use of the inmates of (1) Mercara (2) Virajpet and (3) Somwarpet Hospitals from 1st April 1928 to 31st March 1929 (both days inclusive)

For further particulars apply to the Medical Officer in charge of the Hospitals concerned

F R THORNTON,
Major, I M S,
2—1 Civil Surgeon, Coorg.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಈ ತಾ 13ರಲ್ಲಿ ವೀರಾಜಪೇಟೆ ಬಾಡಿಘರದ ಮಹಡಿಯಲ್ಲಿ ನಡೆಯಿತು. ಮೆ ಪಿ ಟಿ ಕುಶಾಲಪ್ಪನವರು ಅಧ್ಯಕ್ಷರಾಗಿದ್ದರು. ಈ ಕೆಳಗಿನ ಮೆಂಬರುಗಳು ಹಾಜರಿದ್ದರು. ಮೆ ಗಳಾದ 2 ಎ ಯನ್ ಮೊಕಪ್ಪಯ್ಯ 3 ಯನ್ ಉತ್ತಯ್ಯ, 4 ಪಟ್ಟಡ ಚಂಗಪ್ಪ, 5 ಚಂಗಂಡ ಕಟ್ಟಪ್ಪ, 6 ಅಜ್ಜಮಾಡ ಮೊದಪ್ಪ 7 ಪಿ ಮುತ್ತಣ್ಣ ೮ ಕೆ ಕರುಂಬಯ್ಯ 9 ಎ ಕಸ್ತೂರಿ 10 ಕೆ ಯಂ ಸಬ್ಬ 11 ಜಮ್ಮಡ ಮೊದಪ್ಪ 12 ಗುಡ್ಡಂಡ ಭೀಮಯ್ಯ 13 ಕೊಳುವಂಡ ನಂಜಪ್ಪ 14 ಯಂ ಯಂ ಚಿಪ್ಪ 15 ನಾಯಡ ಚಂಗ ಮತ್ತು 16 ಪಿ ಐ ಬೆ (ಜ ಸಕ್ರೆಟರಿ)

1 ಕಳೆದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್ ಓ ಪ್ಪಲಾಯಿತು.

2 ಕಳೆದ ಮೀಟಿಂಗಿನಲ್ಲಿ ಹೊಸ ಆಡಿಟರುಗಳನ್ನು ನೇಮಿಸಲ್ಪಟ್ಟವರ ಪೈಕಿ ಮೆ ಉ ಮಾಚಯ್ಯನವರು ಮೆ ಸಿ ಉತ್ತಪ್ಪನವರು ಮತ್ತು ಮೆ ಎ ಪಿ ಮ ದಪ್ಪನವರು ಆ ಪರಿಗ ನೋಡಲು ಕೊಟ್ಟ ರೀತಿ ಪುಸ್ತಕಗಳನ್ನು ಹದ್ನೈದು ದಿವಸಗಳೊಳಗೆ ವಾಪಸು ಕಳಿಸಬೇಕೆಂತ ಅವರನ್ನು ಕೇಳಿಕೊಳ್ಳಬೇಕೆಂತಲೂ ಹಾಗೆ ಕೊಡದೆ ಹೋದರೆ ಅವರ ಬದಲು ಬೇರೆ ಆಡಿಟರುಗಳನ್ನು ನೇಮಿಸಿ ನೇಮಿಸಬೇಕೆಂತಲೂ ಪ್ರಸ್ತಾಪಿಸಲಾಯಿತು. ಮತ್ತು ಪುಸ್ತಕಗಳನ್ನು ವಾಪಸು ಕೊಡದೆ ಇದ್ದರೆ ಆ ಪುಸ್ತಕಗಳನ್ನು ಅಥವಾ ಅವುಗಳ ಬದಲು ವಸೂಲ್ ಮಾಡಲು ತಕ್ಕ ಏರ್ಪಾಡು ಮಾಡಬೇಕಾಗುತ್ತದೆಯೆಂತ ಅವರಿಗೆ ತಿಳಿಸಬೇಕೆಂತಲೂ ತೀರ್ಮಾನವಾಯಿತು.

3 ನಂ 183ನೇ ರಶೀತಿ ಪುಸ್ತಕವನ್ನು ಮೆ ಕಾಂಗೀರ ಚೆಣ್ಣಪ್ಪನವರು ವಾಪಸು ಮಾಡಿ, ಈ ಪುಸ್ತಕವನ್ನು ಗದ್ದಲೆ ತಿಂದು 3 ರಶೀತಿಗಳು ಇಲ್ಲದಾಗಿರುವದರಿಂದ ಅದನ್ನು ಮಾಫಿ ಮಾಡಬೇಕಾಗಿ ಕೇಳಿಕೊಂಡಿರುವ ಪತ್ರವು ಓದಲಾಯಿತು. ಸದರಿ ಪುಸ್ತಕವನ್ನು ನೋಡಿ ಗದ್ದಲೆ ತಿಂದದ್ದು ನಿಜವೆಂದು ಕಂಡಿದ್ದರಿಂದ 3 ರಶೀತಿಗಳನ್ನು ಮಾಫಿ ಮಾಡುವಂತೆ ತೀರ್ಮಾನವಾಯಿತು.

4 ಹಿಂದುಸ್ಥಾನದ ರಾಜಕೀಯ ಸುಧಾರಣೆಯ ಮತ್ತು ಪ್ರಜಾ ಪ್ರತಿನಿಧಿ ಸಭೆಗಳ ಬೆಳವಣಿಗೆಯನ್ನು ಅವಲೋಕಿಸಿ ಹೆಚ್ಚಿನ ಸುಧಾರಣೆಗೆ ಹಿಂದಿಯರ ಅರ್ಹತೆಯನ್ನು ತೀರ್ಮಾನಿಸುವುದಕ್ಕೋಸ್ಕರ ಬರುವ ಸೈಮನ್ ಕಮಿಷನ್ ಹಿಂದೂದೇಶದ ಜನರ ಅಭಿಮತಕ್ಕೆ ವಿರೋಧವಾಗಿರುವದರಿಂದ ಈ ದೇಶದ ಅಭಿಪ್ರಾಯವನ್ನು ತೋರಿಸುವ ಒಗ್ಗೆ ಕೊಡಗು ಕೌನ್ಸಿಲ್ ಉದ್ಯೋಗಸ್ಥರಲ್ಲದ ಮೆಂಬರುಗಳು ಈ ತಾ 20—27ರಲ್ಲಿ ನಡೆಯಲಿಕ್ಕಿರುವ ಬಜೆಟ್ ಚರ್ಚೆಯಲ್ಲಿ ಭಾಗವಹಿಸಬಾರದೆಂತ ಈ ಸಂಘವು ಕೇಳಿಕೊಳ್ಳುತ್ತದೆ ಎಂಬ ನಿರ್ಣಯವನ್ನು ಮೆ ಸಿ ಯನ್ ವೆಂಕಪ್ಪಯ್ಯನವರು ಸೂಚಿಸಿದರು. ಮೆ ಸಿ ಯನ ಉತ್ತಯ್ಯನವರು ಅನುಮೋದಿಸಿದರು. ಮೆ ಕೆ ಎ ಕರುಂಬಯ್ಯನವರು ಪುಷ್ಟೀಕರಿಸಿದರು. ನಿರ್ಣಯವು ಸರ್ವಸಮ್ಮತದಿಂದ ಅಂಗೀಕರಿಸಲಾಯಿತು.

ಕೆಲಸಗಾರರು ಬೇಕೇ?

ಚಪ್ಪಡಿ ಸೀಳುವ, ಕಟ್ಟಿಗಲ್ಲು ಕೆತ್ತುವ, ಬಾವಿ ಕಟ್ಟುವ ಒಡ್ಡರೂ, ನಾಟಾಕು ಕೆಲಸಮಾಡುವ ಮರಗೆಲಸದವರೂ ನನ್ನ ಕೈಕೆಳಗೆ ಇದ್ದಾರೆ. ಕಟ್ಟೋಣ, ಭಾವಿ, ಸೇತುವೆ, ಫರ್ನಿಚರ್ ಇವೇ ಮೊದಲಾದವುಗಳನ್ನು ಗುತ್ತಿಗೆ ಒಪ್ಪಿಕೊಳ್ಳುತ್ತೇನೆ. ಶೀಘ್ರದಲ್ಲಿಯೂ, ಭದ್ರವಾಗಿಯೂ, ಚೆನ್ನಾಗಿಯೂ ಕಟ್ಟಿಕೊಡುತ್ತೇನೆ. ಈಗ ಪೊನ್ನಂಪೇಟೆ ಬೋರ್ಡಿಂಗಿನ ಫರ್ನಿಚರ್ ಒಪ್ಪಿಕೊಂಡಿದ್ದೇನೆ.

ಕೆಲಸ ಕಟ್ಟಿಸುವವರು ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ.

ಯಂ ವಿ ಭದ್ರಪ್ಪ,
(ವ್ಯವಸಾಯ ಕಂಟ್ರಾಕ್ಟರ್)
4—4 C/o ಬೋರ್ಡಿಂಗ್,
ಪೊನ್ನಂಪೇಟೆ.

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿಯಲ್ಲಿ ಲೇಟ್ ಪೃಚ್ಛಂಡ ಮಾದೈಯ್ಯನವರ ಪತ್ನಿಯವರು ಈ ದಿನ ಮಧ್ಯಾಹ್ನ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ!

ಕೊಡಗಿನಲ್ಲಿ ಭತ್ತದಿಂದ ಸಾರಾಯಿ ಮಾಡುವುದು ಲಾಭಕರವೋ? ಎಂಬುದನ್ನು ಅಜಮಾಯಿಸಿ ನೋಡುವುದಕ್ಕಾಗಿ ಮದ್ರಾಸು ಎಕ್ಸೈಸ್ ಇಲಾಖೆಯ ಮೆ ಬೆಂತಾಲ್ ಎಂಬವರು ಈಗ ಮಡಿಕೇರಿಯಲ್ಲಿರುವರು.

ರಜೆಯಲ್ಲಿದ್ದ ಮಡಿಕೇರಿ ಸೆಂಟ್ರಲ್ ಹೈ ಸ್ಕೂಲಿನ ಹೆಡ್ ಮಾಸ್ಟರರಾದ ಮೆ ಪಿ. ವೆಂಗೇಶರಾಯರು ಈ ತಾ. 13ರಲ್ಲಿ ಮಡಿಕೇರಿಗೆ ಬಂದು ಮೆಡಿಕಲ್ ಸರ್ಟಿಫಿಕೇಟು ಪಡೆದು ಇನ್ನೂ 1½ ತಿಂಗಳು ರಜೆಗೆ ಬರೆದಿರುವರೆಂದು ವರ್ತಮಾನ.

ಮೆ. ಪಟ್ಟಡ ಸಿ. ಪೊನ್ನಪ್ಪನವರು ಮತ್ತು ಮೆ. ಕಲ್ಯಾಟಂಡ ಬೆಳ್ಯಪ್ಪನವರು ತಿಂಡಿವನಂ ಎಂಬಲ್ಲಿ ಮರಗೆಲಸದ ತರಬೇತನ್ನು ಮುಗಿಸಿಕೊಂಡು ವಾಪಸು ಬಂದವರನ್ನು ವೀರಾಜಪೇಟೆ ಇಂಡಸ್ಟ್ರಿಯಲ್ ಶಾಲೆಯಲ್ಲಿ ಉಪಾಧ್ಯಾಯರುಗಳಾಗಿ ನೇಮಿಸಿರುತ್ತಾರೆ.

ಆಲ್ ಇಂಡಿಯಾ ಮ್ಯೂಚುವಲ್ ಪುಡ್ ಅಂಡ್ ಪೂರ್ ಹೌಸ್ ಎಸೋಸಿಯೇಶನಿನ ಆಶ್ರಯದಲ್ಲಿ ಪ್ರೋವಿನ್ಸಿಯಲ್ ಬೋರ್ಡ್ ಚೇರ್‌ಮ್ಯಾನರಾದ ರಾ|| ಸಾ|| ಪಿ. ದೇವಯ್ಯನವರ ಅಧ್ಯಕ್ಷತೆಯಲ್ಲಿ ಗುಡುಗಳಲೆ ಮೈದಾನದಲ್ಲಿ ಈ ತಾ. 15ರಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆದು ಹಲವರು ಬಾಂಡು ತೆಗೆದುಕೊಂಡರೆಂದು ವರ್ತಮಾನ.

ತಾ. 8—1—'28ರಲ್ಲಿ ನಡೆದ ಕೊಡಗು ವಿದ್ಯಾಭಿವೃದ್ಧಿ ಫಂಡಿನ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸು ಆ ಮೀಟಿಂಗಿನಲ್ಲಿ ಹಾಜರಿದ್ದವರ ಬಹುಮತದ ಅಭಿಪ್ರಾಯದ ಮೇರೆ ರದ್ದು ಪಡಿಸಿದೆಯಾಗಿಯೂ, ಇನ್ನೊಂದು ಜನರಲ್ ಮೀಟಿಂಗು ಈ ತಾ 28ನೇ ಮಂಗಳವಾರ ಸಾಯಂಕಾಲ 5½ ಗಂಟೆಗೆ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ನಡೆಯುವದೆಂದೂ ಸಕ್ರೆಟರಿಯವರು ತಿಳಿಸಿರುತ್ತಾರೆ.

ಮಡಿಕೇರಿ ವೇದಾಂತ ಸಂಘದವರು ಸ್ವಾಮಿ ವಿವೇಕಾನಂದರವರ 66ನೇ ಜಯಂತ್ಯುತ್ಸವವನ್ನು ಇದೇ ಫೆಬ್ರವರಿ ತಾ. 12ನೇ ಆದಿತ್ಯವಾರ ಬಿ ಸ್ಥಾರಕ ಸಂಘದ ಹಾಲ್‌ನಲ್ಲಿ ನಡಿಸಿದರು. ಮೆ. ಯು ಕೆ. ಮಂಜುನಾಥಯ್ಯ ಬಿ. ಎ. ಯವರು ಅಧ್ಯಕ್ಷರಾಗಿದ್ದರು. ಭಜನೆಯನಂತರ ಮೆ. ಮೇಕೇರಿಯಂಡ ಮಾದಪ್ಪ ಬಿ. ಎ. ಯವರು ಇಂಗ್ಲಿಷಿನಲ್ಲಿಯೂ, ಮೆ. ಡಿ. ಯಂ. ಸಿದ್ದಲಿಂಗಪ್ಪನವರು ಕನ್ನಡದಲ್ಲಿಯೂ ಸ್ವಾಮಿಗಳವರ ಚರಿತ್ರೆ ಮತ್ತು ಬೋಧನೆಯನ್ನು ಕುರಿತು ಉಪನ್ಯಾಸ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮಂಗಳಾರತಿಯಾಯಿತು.

ಮಿಸಸ್ ಮಾಳೇಟ್ಟಿರ ದೇವಯ್ಯನವರು ಗತಿಸಿದ ತನ್ನ ಪತಿಯವರ ಜ್ಞಾಪಕಾರ್ಥವಾಗಿ ಕೊಟ್ಟ ಬೆಳ್ಳಿಯ ಇನಾಮು ಬಟ್ಟಲಿಗಾಗಿ ಈ ತಾ 11 ರಿಂದ ಮಡಿಕೇರಿಯಲ್ಲಿ ಹಾಕಿ ಟೂರ್ನಮೆಂಟು ನಡೆದು, ತಾ. 11ರಲ್ಲಿ ಫಾರೆಸ್ಟು ಟೀಮಿನವರು ಅತ್ಲೆಟಿಕ್ ಸಂಘದವರನ್ನೂ, ತಾ 12ರಲ್ಲಿ ಸಂಟ್ರಲ್ ಹೈಸ್ಕೂಲು ಎ ಟೀಮಿನವರು ಬಿ ಟೀಮಿನವರನ್ನೂ, ತಾ 14ರಲ್ಲಿ ಸ್ಕೂಲು ಎ ಟೀಮಿನವರು ಫಾರೆಸ್ಟು ಟೀಮಿನವರನ್ನೂ, ತಾ. 15ರಲ್ಲಿ ವ್ಯಾಲಿಸ್ಪೋರ್ಟ್ಸ್ ಟೀಮಿನವರು ಹಳೇ ವಿದ್ಯಾರ್ಥಿಗಳನ್ನೂ, ಸೋಲಿಸಿದರು. ತಾ. 16ರಲ್ಲಿ ನಡೆದ ಫೈನಲ್ ಆಟದಲ್ಲಿ ವ್ಯಾಲಿಸ್ಪೋರ್ಟ್ಸ್ ಟೀಮಿನವರು ಸ್ಕೂಲ್ ಎ ಟೀಮನ್ನು ಸೋಲಿಸಿ 'ದೇವಯ್ಯ' ಬಟ್ಟಲನ್ನು ಪಡೆದರು. ಗೆದ್ದ ಟೀಮಿಗೆ ಮೇಜರ್ ಹೇಮಿಲ್ಟನ್‌ರವರು ಇನಾಮು ಬಟ್ಟಲನ್ನು ಕೊಟ್ಟರು. ನಂತರ ಕಡೇದಿನದ ಎರಡು ಟೀಮಿನವರು ಒಂದು ಟೀಪಾರ್ಟಿಯಲ್ಲಿ ಭಾಗಿಗಳಾದರು

ಹಿಂದೂದೇಶ.

ಸಂಬಳ ಹೆಚ್ಚು ಬೇಕೆಂಬ ಕಾರಣದಿಂದ ರಂಗೂನಿನ ಪಟ್ಟಿ ಬಂದರಿನ 2000 ಆಳುಗಳು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ಮಹಾತ್ಮ ಗಾಂಧಿಯವರ ಆರೋಗ್ಯವು ಉತ್ತಮವಾಗುತ್ತಾ ಬರುತ್ತಿದೆ. ಅವರು ತೆಗೆದುಕೊಳ್ಳುತ್ತಿದ್ದ ಆಹಾರವನ್ನು ಹೆಚ್ಚಿಸಿರುವರು.

ಮಾಸ್ಕೋದ ಬೊಲ್‌ಶೆವಿಕರ ಸಂಬಂಧದಲ್ಲಿರುವ ವಿದ್ಯಾರ್ಥಿಗಳೇ ಮದ್ರಾಸಿನಲ್ಲಿ ಹರತಾಳದ ಸಮಯದಲ್ಲಿ ದಂಗೆ ಮಾಡಿದರೆಂದು 'ಡೈಲಿಮೆಯಿಲ್' ಎಂಬ ಇಂಗ್ಲಿಷ್ ಪತ್ರಿಕೆಯು ತನ್ನ ಶಂಕೆ ಕನಸನ್ನು ಬಹಿರಂಗಪಡಿಸಿದೆ.

ಲಾಲಾ ಲಜಪತರಾಯರು ಮಿಸ್ ಮೇಯೊಳ "ಮದರ್ ಇಂಡಿಯಾ" ಕ್ಕೆ ಉತ್ತರವಾಗಿ "ಅನ್‌ಹ್ಯಾಪಿ ಇಂಡಿಯಾ" ಎಂಬ ಪುಸ್ತಕವನ್ನು ಬರೆದಿರುವರು. ಇದು ಕಲ್ಕತ್ತಾದ ಬನ್ನಾ ಪಬ್ಲಿಷಿಂಗ್ ಕಂಪೆನಿಯಲ್ಲಿ ದೊರೆಯುವುದು.

ಸೂರತ್ ಡಿಸ್ಟ್ರಿಕ್ಟಿನ ಬಾರ್ಡೋಲಿ ತಾಲೋಕಿನವರು ಈಗ ಸ್ವಂತ ಬೊಂಬಾಯಿ ಸರಕಾರದವರು ಹೊರಿಸಿದ 22% ಹೆಚ್ಚಿನ ಭೂಕಂದಾಯವನ್ನು ಕೊಡದೆ ತಿರಸ್ಕರಿಸುವಂತೆ ನಿರ್ಧರಿಸಿರುವರು. ಅಹ್ಮದಾಬಾದಿನ ಮೆ. ವಿ. ಜೆ. ಪಟೇಲರವರು ಇದಕ್ಕೆ ಮುಂದಾಳಾಗಿರುವರು.

ಸೈಮನ್ ರಾಜಕೀಯ ಸಮಿತಿಯು ಹಿಂದೂಸ್ಥಾನಕ್ಕೆ ಬಂದು ತನ್ನ ಕಾರ್ಯಕಲಾಪವನ್ನು ತೀರಿಸಿಕೊಂಡು ಹಿಂತಿರುಗುವುದಕ್ಕೆ ಸುಮಾರು 8 ಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ನಿರ್ಧರಿಸಿರುತ್ತಾರೆ. ಈ ವೆಚ್ಚವೆಲ್ಲವನ್ನು ಹಿಂದೂಸ್ಥಾನವೇ ತೆರಬೇಕಂತೆ!

ರಾಯಲ್ ಕಮಿಷನು ಮದ್ರಾಸಿಗೆ ಬರುವಾಗ ಅಲ್ಲಿ ಹರತಾಳವನ್ನು ಮಾಡಕೂಡದೆಂದೂ, ಅಲ್ಲಿಯ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ಮಾಡಿರುವ ಹುಕುಮನ್ನು ಅಂಗೀಕರಿಸಬೇಕೆಂದೂ, ಅದು ಉಲ್ಲಂಘಿಸಬೇಕೆಂದೂ ಎಂದು, ಮದ್ರಾಸು ಬುಪ್ಪಾರ ಕಮಿಟಿಯವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಅಭಿಪ್ರಾಯ ಕೇಳಿರುವರು.

ರಾಯಲ್ ಕಮಿಷನಿನ ನೇಮಕವನ್ನು ನಿಷೇಧಿಸುವ ಠರಾವು ಎಸೆಂಬ್ಲಿಯಲ್ಲಿ ಈ ತಾ 16ರಲ್ಲಿ ಚರ್ಚಿಸಲ್ಪಡಲಿಕ್ಕಿದೆ ಈ ಕಮಿಷನು ಒಪ್ಪಲು ಯೋಗ್ಯವಾದದ್ದಲ್ಲವೆಂಬ ಲಾಲಾ ಲಜಪತರಾಯರ ಠರಾವಿಗೆ ಕಾಂಗ್ರೆಸ್ ಪಾರ್ಟಿಯವರೂ, ನೇಶನಲಿಸ್ಟರು ಮತ್ತು ಇಂಡಿಪೆಂಡೆಂಟ್ ಪಾರ್ಟಿಯವರೂ ಬಹುತ್ವಾಸ ಕೊಡುವರೆಂದು ತಿಳಿಯಬರುತ್ತದೆ

ಯೂರೋಪು ಪ್ರವಾಸವನ್ನು ಮುಗಿಸಿಕೊಂಡು ಈಗ ತಾನೇ ಇಂಡಿಯಾಕ್ಕೆ ವಾಪಸು ಬಂದಿರುವ ಪಂಡಿತ ಮೋತಿಲಾಲ್ ನೆಹರುರವರ ಬಹುಮಾನಾರ್ಥವಾಗಿ ಶ್ರೀನಿವಾಸಯ್ಯಂಗಾರರು, ಶಣ್ಮುಗಂ ಚೆಟ್ಟಿಯವರು, ಇನ್ನು ಕೆಲವರು ಸೇರಿ ಎಸೆಂಬ್ಲಿಯ ಮೆಂಬರುಗಳಿಗೆ ಮತ್ತು ಬೇರೆ ಕೆಲವರಿಗೆ ಈ ತಾ. 15ರಲ್ಲಿ ಡೆಲ್ಲಿಯಲ್ಲಿ ಒಂದು ಟೀ ಪಾರ್ಟಿ ಕೊಟ್ಟರು.

ಕನ್ನಡ ಭಾಷೆಯಾಡುವ ಬ್ರಿಟಿಷ್ ಪ್ರಾಂತ್ಯಗಳನ್ನೆಲ್ಲಾ ಒಂದುಗೂಡಿಸಿ ಒಂದು ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸುವ ವಿಷಯವನ್ನು ಈಗ ಹಿಂದೂ ದೇಶದ ಮುಂದಾಳುಗಳು ತಯಾರಿಸುವ ರಾಜಕೀಯ ರಚನೆಯು ಒಳಕೊಂಡಿರಬೇಕೆಂದು ಕರ್ನಾಟಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಮತ್ತು ಕರ್ನಾಟಕ ಏಕೀಕರಣ ಸಭೆಯ ಅಧ್ಯಕ್ಷರ ಮೂಲಕ ಈ ಎರಡು ಸಂಸ್ಥೆಗಳು ಎಲ್ಲಾ ಪಾರ್ಟಿ ಕಾನ್‌ಫರೆನ್ಸಿಗೆ ವಿಜ್ಞಾಪನಾ ಪತ್ರಗಳನ್ನು ಕಳುಹಿಸಿರುವವು.

ಹಿಂದೂದೇಶದ ಮುಂದಿನ ರಾಜಕೀಯ ರಚನೆಯನ್ನು ತಯಾರಿಸುವ ಬಗ್ಗೆ ಎಲ್ಲಾ ಪಾರ್ಟಿಗಳ ಕಾನ್‌ಫರೆನ್ಸು ಕಾಂಗ್ರೆಸ್ಸಿನ ಅಧ್ಯಕ್ಷರಾದ ದಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಈ ತಾ 12ರಲ್ಲಿ ಡೆಲ್ಲಿಯಲ್ಲಿ ಪ್ರಾರಂಭವಾಗಿದೆ. ದೀರ್ಘಚರ್ಚೆಯಾದನಂತರ ಹಿಂದದೇಶಕ್ಕೆ ಸಂಪೂರ್ಣ ಜವಾಬ್ದಾರಿಯ ಸರಕಾರ ಸ್ಥಾಪನೆಯ ರಚನೆಯನ್ನು ತಯಾರಿಸಲು ಒಂದು ಕಮಿಟಿಯನ್ನು ನೇಮಿಸುವಂತೆ ತೀರ್ಮಾನಿಸಲಾಯಿತು ಈಗ ಸದರಿ ಸಭೆಯು ಹಿಂದೂ ಮುಸಲ್ಮಾನರ ಒಗ್ಗಟ್ಟಿನ ವಿಷಯ ಚರ್ಚಿಸುತ್ತಿದೆ

ಹಿಂದೂ ದೇಶದ ಎಸೆಂಬ್ಲಿಯಲ್ಲಿ ಒಬ್ಬರ್ ದೇಶವರ ಕಡೆಗೆ ಏನೂ ಸಹಾನುಭೂತಿ ಇಲ್ಲದೆ ಇರುವದರಿಂದ ಹಿಂದದೇಶಕ್ಕೆ ಸ್ವರಾಜ್ಯ ಸಿಕ್ಕಿದರೂ ಒರ್ಮಾವು ಅದರ ಒಂದು ಭಾಗವಾಗಿಉಳಿಕ್ಕಾಗುವದಿಲ್ಲವೆಂತಲೂ, ಬರ್ಮಾವು ಸ್ವತಂತ್ರ ಪ್ರಾಂತ್ಯವಾಗಿರುವದರಿಂದ ಅದಕ್ಕೆ ಇಂಡಿಯಾ ಮತ್ತು ಜೈನಾ ಶತ್ರುಗಳ ಬಾಧೆಯನ್ನು ತಡೆಕೊಳ್ಳಲು ಸಾಧ್ಯವಿಲ್ಲವೆಂತಲೂ, ಆದುದರಿಂದ ಬರ್ಮಾವು ಎಂದೆಂದಿಗೂ ಬ್ರಿಟಿಷ್ ಸಾಮ್ರಾಜ್ಯದೊಳಗೇ ಇರಬೇಕಾಗುವದೆಂತಲೂ ಸರ್ ರೆಜಿನಾಲ್ಡ್ ಕ್ರಾಡಕ್‌ರವರು ಸೂಚಿಸಿರುವರು.

ಮುಂಬೈಯಲ್ಲಿದ್ದ ಮೆ. ಅಯ್ಯರ ಎಂಬ ಗೃಹಸ್ಥನ ಸುಬ್ರಹ್ಮಣ್ಯ ಎಂಬ ಬಾಲಕನು ಇತ್ತೀಚೆಗೆ ಮರಣ ಹೊಂದಿದನು. ಅವನಿಗೆ ಕೇವಲ 10 ವರ್ಷಗಳಾಗಿದ್ದುವು. ಅವನು 5 ಭಾಷೆಗಳಲ್ಲಿ ಮಾತಾಡುತ್ತಿದ್ದನು. ಇಂಗ್ಲಿಷಿನಲ್ಲಿ ಬಹು ಚನ್ನಾಗಿ ಮಾತಾಡುತ್ತಿದ್ದನು. ಚನ್ನಾಗಿ ಬರೆಯುತ್ತಲೂ ಇದ್ದನು. ಗಾಯನ, ವಾದ್ಯ ಮುಂತಾದವುಗಳಲ್ಲಿ ಪರಿಣಿತನಾದ ಗಳಲ್ಲೂ ಒಪ್ಪಣನಿದ್ದನು. ಲಂಡನ್ನಿನ ಬಾಲಪುಸ್ತಕದಲ್ಲಿ ಅವನು ಲೇಖ ಬರೆಯುತ್ತಿದ್ದನು. ಅವನಿಗೆ ಪ್ರತಿದಿನ 25 ಪತ್ರಗಳು ಬರುತ್ತಿದ್ದುವು. ತನ್ನ ತಂದೆಯ ಗ್ರಂಥಾಲಯದೊಳಗಣ ಎಲ್ಲಾ ಪುಸ್ತಕಗಳನ್ನೂ ಅವನು ಓದಿಬಿಟ್ಟಿದ್ದನು.

ವಾರ್ಧಾ ಯುವತಿಯರು ಇತ್ತೀಚೆಗೆ ತಮ್ಮ ಹಸರನ್ನು ತಾವು ಧರಿಸುವ ಕಾಲುಚೀಲದ ಮೇಲೆ ಅಂದರೆ ಹಿಮ್ಮಡಿಯ ಕಾಣುವಂತೆ ಮುಂದಿನ ಕೆಳಗೆ ಕಸೂತಿಯಿಂದ ಹಾಕಿಸಿಕೊಂಡು ಆ ಕಾಲುಚೀಲಗಳನ್ನು ಧರಿಸುತ್ತಿರುವರಂತೆ. ಹಿಂದೆ ಭರತ ಮಹಾರಾಜನು ರಾಮ ಬಂದ ದು ಗೊತ್ತಾಗಬೇಕೆಂದು ಗಂಟೆ ಕಟ್ಟಿಕೊಂಡು ತಿರುಗಾಡುತ್ತಿದ್ದನೆಂದು ಒಂದು ಗಾದೆಯುಂಟು. ಆಗ ವಾರ್ಧಾ ಯುವತಿಯರು ಯಾರು ಬಂದರೂ ಅವರ ಹೆಸರನ್ನು ತಿಳಿಯಬೇಕಾದರೆ ಅವರ ಹಿಂದಿಯ ಕೆಳಗೆ ನೋಡಿದರೆ ಸಾಕೇ ಹೊರತು ಅವರನ್ನು ಕೇಳಬೇಕಾಗಿಲ್ಲ. ಕಾಲಕ್ರಮದಲ್ಲಿ ಹೆಸರನ್ನು ಹಣೆಯಮೇಲೆ ಬರೆದು ಅಂಟಿಸಿಕೊಂಡರೆ ಇನ್ನೂ ಅನುಕೂಲವಾಗುವುದು.

ಪ್ರೈ. ಸ್ಸಾ.

ವಿದೇಶ.

ಗ್ರೇಟ್ ಬ್ರಿಟನ್ನಿನ ಹಿಮ್ಮೆ ಪ್ರಧಾನ ಮಂತ್ರಿಯಾಗಿದ್ದ ಅರ್ಲ್ ಆಫ್ ಆಕ್ಸ್‌ಫರ್ಡ್ ಅಸ್ಕ್ವಿತ್‌ರವರು ಈ ತಾ. 15ರಲ್ಲಿ ಸ್ವರ್ಗಸ್ಥರಾದರು.

ಅಮೇರಿಕಾದೇಶದಕ್ಕೆ ಸೇರಿದ ಒಂದು ಸಂಸ್ಥಾನದಲ್ಲಿ 8 ವಯಸ್ಸಿನ ಒಂದು ಹಸುವು 305 ದಿವಸಗಳಲ್ಲಿ 19,569 ಪೌಂಡ್ ಹಾಲನ್ನು ಕರೆದಿರುವುದು

ಟರ್ಕಿಸ್ಥಾನದ ಸರಕಾರದ ಅಧ್ಯಕ್ಷರಾದ ಮುಸ್ತಾಫ ಕಮಾಲ್ ಪಾಷಾರವರು ಈ ತಾ. 13ರಲ್ಲಿ ಅಂಗೋರದ ಬೀದಿಯಲ್ಲಿ ಹಠಾತ್ ಸ್ಮೃತಿತಪ್ಪಿ ಬಿದ್ದರೆಂತಲೂ, ಮತ್ತು ಬಹು ಕಷ್ಟದಿಂದ ಹುಷಾರಾದರೆಂದೂ ಸುದ್ದಿ ಇದು ನಿಜವಲ್ಲವೆಂತಲೂ ಇನ್ನೊಂದು ವರ್ತಮಾನ

ಈಗಿನ ರಾಯಲ್ ಕಮಿಷನನ್ನು ಬಹಿಷ್ಕರಿಸುವದರಲ್ಲಿ ಹಿಂದೀಯರು ಬಯಸೀದರಾದರೆ, ಲಿಬರಲ್ ಸರಕಾರವು ಪಾರ್ಲಿಮೆಂಟಿನ ಹೊರಗಿನ ಮೆಂಬರುಗಳನ್ನೂ ಒಳಕೊಂಡ ಇನ್ನೊಂದು ಕಮಿಟಿಯನ್ನು ನೇಮಿಸುವದೆಂಬುದು, ಈಗಿನ ಕಮಿಷನಿಗೆ ಲೇಬರ್ ಪಾರ್ಟಿಯವರ ಬೆಂಬಲವಿರುವದರಿಂದ ಇದನ್ನು ಬದಲಾಯಿಸಲಾಗುವದಿಲ್ಲವೆಂತಲೂ ರೇಮ್ಸೆ ಮೆಕ್ಡೊನಾಲ್ಡರವರು ಕಮಿಷನಿನ ಒಬ್ಬ ಮೆಂಬರಾದ ಮೆ. ಹಾರ್ಟ್‌ಶಾರ್ನರವರಿಗೆ ಬರೆದಿರುವರಂತೆ.

ಸ್ವೀಕಾರ.

ಕೊಳ್ಳೇಗಾಲದ ಹೆಗ್ಗೇರೆ ಜಮೀನ್‌ದಾರ್ ಮೆ. ವಿ. ಆರ್. ಶ್ರೀನಿವಾಸಯ್ಯಂಗಾರರು ಶ್ರೀಮದ್ರಾಮಾಯಣವನ್ನು ಒಂದು ಪೋಸ್ಟ್ ಕಾರ್ಡಿನಲ್ಲಿ ಅಡಕವಾಗುವಂತೆ ಗಾನರೂಪದಲ್ಲಿ ರಚಿಸಿ ನಮಗೆ ಕಳುಹಿಸಿರುವ ಕೆಲವು ಪತ್ರಿಕೆಗಳನ್ನು ವಂದನಾಪೂರ್ವಕ ಸ್ವೀಕರಿಸುತ್ತೇವೆ. ಇವರಿಗೆ 2 ಆಣೆ ಸ್ಟಾಂಪು ಕಳುಹಿಸಿ ಇದನ್ನು ಪಡೆಯಬಹುದು.

Wanted.

Two writers one for Pannya Estate and the other for Boothankad Estate in Coorg with 200 or more coolies each. Good pay and prospects. Preference will be given only to those who have got established gangs and who do not want advance. For further particulars apply to SRIMATI D. SARAMMA, COFFEE PLANTER, SOMWARPET, (N. COORG).

ಬೇಕಾಗಿದೆ

ಪನ್ಯ ತೋಟಕ್ಕೆ ಒಬ್ಬ ಮತ್ತು ಭೂತನಕಾಡು ತೋಟಕ್ಕೆ ಒಬ್ಬ, 200 ಅಥವಾ ಹೆಚ್ಚು ಆಳುಗಳು ಸಮೇತ ಇರುವ ಇಬ್ಬರು ರೈಟರುಗಳು ಬೇಕಾಗಿವೆ. ಖಾಯಂ ಆಳುಗಳ ಗ್ಯಾಂಗ್ ಇರುವವರಿಗೆ ಮತ್ತು ಅಡ್ವಾನ್ಸು ತೆಗೆದುಕೊಳ್ಳದವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಒಳ್ಳೇ ಸಂಬಳ ಮತ್ತು ಉತ್ತೇಜನವಿದೆ. ಹೆಚ್ಚಿನ ವಿಷಯ ತಿಳಿಯಲಿಕ್ಕೆ ಶ್ರೀಮತಿ ಡಿ. ಶಾರಮ್ಮನವರು, ಕಾಫಿಪ್ಲಾಂಟರು, ಸೋಮವಾರಪೇಟೆ. ಈ ವಿಳಾಸಕ್ಕೆ ಬರಕೊಳ್ಳತಕ್ಕದ್ದು. 5—2

ಭಾರತ ರಕ್ಷಣೆ.

(ಕಳೆದ ವಾರದಿಂದ ಮುಂದುವರಿದದ್ದು.)

ಇನ್ನು ಹೀಗಾದರೆ ನಮ್ಮ ಮೇಲೆ ದಂಡೆತ್ತಿ ಬರುವವರಾದರೂ ಯಾರು ? ಪಶ್ಚಿಮ ಯೂರೋಪಿನ ರಾಜ್ಯಗಳೊಳಗ ಅಂತಃಕಲಹಗಳು ವಿಪರೀತ. ಹಾಗಾದರೆ ಅವರ ದೃಷ್ಟಿ ನಮ್ಮ ಕಡೆಗೆ ಇಲ್ಲ. ಸಂಯುಕ್ತರಾಜ್ಯಗಳಂತೂ ಬಹು ದೂರದಲ್ಲಿದೆ. ಆ ಮೇಲೆ ಜಪಾನವು ನಮ್ಮ ಮೇಲೆ ಬರಬಹುದೆ ಎಂದರೆ ಅದಕ್ಕೆ ಚೀನಿಯರ ಕಾಟ ಒಂದುಕಡೆ, ಮತ್ತೊಂದುಕಡೆ ಅಮೇರಿಕದವರು. ಪಶ್ಚಿಮ ಯೂರೋಪಿನ ರಾಜ್ಯಗಳು ಜಪಾನೀಯರು ಮುಂದೆ ಹೆಚ್ಚು ಬರದಂತೆ ನೋಡಿಕೊಳ್ಳುತ್ತಲೇ ಇರುವರು. ಚೀನಿಯರಂತೂ ಅವರ ಒಳಕಲಹಗಳ ದೆಸೆಯಿಂದ ನಮ್ಮ ಮೇಲೆ ಬೀಳಲಾರರು. ಅವರು ನಮ್ಮ ಮಿತ್ರರಾಗಿರುವರೇ ಹೊರತು ಶತ್ರುಗಳಾಗಿರಲಿಕ್ಕಿಲ್ಲ. ಅನಂತರ ಅಫ್ಘಾನಿಸ್ಥಾನದ ಮಾತು. ಹಿಂದೆ ಅಫ್ಘಾನರು ನಮ್ಮ ಮಿತ್ರರು, ಈಗಲೂ ನಾವಿಬ್ಬರೂ ಮಿತ್ರತ್ವದಲ್ಲಿಯೇ ಇರುವಂತೆ ಯತ್ನಿಸುವೆವು. ಒಂದುವೇಳೆ ಹಾಗಾಗದಿದ್ದರೆ ಅವರಿಗೆ ನಾವು ಹೆದರಬೇಕಾದ್ದಿಲ್ಲ. ಅವರ ದಂಡು ಬಹಳ ಸಣ್ಣದು. ನಮಗಿಂತಲೂ ಅವರು ಬಹಳವಾಗಿ ಹಿಂದರಿಯುತ್ತಿರುವರೇನೋ ನಿಜ. ಆದರೆ ಅವರಿಗೆ ಈಗ ಬೇಕಾದಷ್ಟು ಕಾಲಾವಕಾಶ. ಒಂದು ವೇಳೆ ನಮ್ಮೊಂದಿಗೆ ಯುದ್ಧಕ್ಕೆ ಬಂದರೆ ಕಡಿಯಲ್ಲಿ ಅವರು ತಮ್ಮ ಪ್ರತಾಪವನ್ನು ತೋರಿಸಿದರೂ ಅಂತ್ಯದಲ್ಲಿ ಅವರಿಗೆ ಜಯವಿರಲಿಕ್ಕಿಲ್ಲ.

ಆ ಮೇಲೆ ರಷ್ಯದವರ ಧಾಳಿ. ಅವರು ದಿನ ದಿನಕ್ಕೆ ಬಲಶಾಲಿಗಳಾಗುತ್ತಿರುವರು. ಅವರು ನಮ್ಮ ಮೇಲೆ ಬೀಳಲಿಕ್ಕೆ ಸಾಧ್ಯವಿದೆ. ಆದರೆ ಅವರು ತಮ್ಮ ಮೇಲಿನ ಧಾಳಿಯನ್ನು ತಡೆಯಲಿಕ್ಕೆ ಯೋಗ್ಯರಿರುವರೇ ಹೊರತು ಇನ್ನೊಬ್ಬರ ಮೇಲೆ ಬೀಳುವಷ್ಟು ಶಕ್ತಿಯಿಲ್ಲ. ಸೋವಿಯಟ್ ಸರಕಾರಕ್ಕೆ ಅದು ಸ್ಥಾಪಿತವಾದ ಹತ್ತು ವರ್ಷಗಳ ಕಾಲಾವಧಿಯಲ್ಲಿ

ನ್ನ ಶತ್ರುಗಳ ಬಾಧೆಯನ್ನು ತಪ್ಪಿಸಿಕೊಳ್ಳುವದೇ ಆಯಿತು ಇದಲ್ಲದೆ ಅವರ ಮನೆ ಒಗೆಳವೇ ಮೆತ್ತಾಗಿದೆ ಸನ್ನಕ್ಕೆ ಆವರಿಗೆ ದೇಶಾಭಿವೃದ್ಧಿಗಾಗಿ ಶಾಂತಿ ಸಿಕ್ಕಿದರೆ ಸಾಕಾಗಿದೆ ಯೂರೆ ಹಿಪ್ಕೃತ್ಯಸಿಂದಲೂ ಅವರು ಯೂರ ಮೇಲಧಿ ... ಮಾಡುವವರಾಗಿಲ್ಲ ಅವರ ಸರಕಾರವು ... ಓದ್ಯೋಗಿಕರ ... ಯಲ್ಲಿರುವಾಗ ಇವರ ಯುದ್ಧವನ್ನು ... ಸ್ಥರಿಸುವವರಲ್ಲದೆ ಪುರಸ್ಕರಿಸಲಾರರು. ಅವರ ಮೇಲೆ ... ರಾದರೂ ಒದರೆ ಮಾತ್ರ, ಅವರು ... ರ್ತ ಆದರಾಗಿ ಯಾರ ಮೇಲೆ ... ಪಟ್ಟಿಮ ಯೂರೋಪಿನ ರಾಜ್ಯಗಳು ... ಸೆಯುತ್ತಿರವಾಗ ಅವರು ಇಂಡಿಯಾದೇಶದ ಮೇಲೆ ... ಒಗಳವನ್ನು ಕೈಯಕ್ಕೆ ಕೂಡಿಕೊಳ್ಳುವರೆ ... ಪತ್ತಿನ ಆಸೆಯಿಂದ ಅವರು ಇಂಡಿಯದ ಮೇಲೆ ... ಅಗತ್ಯವೂ ಇಲ್ಲ ಇಂಡಿಯವೂ ... ಗಳಾಗಿದ್ದು ಕೈಗಾರಿಕೆಯಲ್ಲಿ ... ದ ರಾಷ್ಟ್ರಗಳಲ್ಲಿಯೂ ದೇಶಪ್ರ ... ದರೆ ... ದಣಗಲು

ಇಂಗ್ಲೆಂಡಿಗೆ ಇಂಡಿಯಾದಿಂದ ಒಪ ... ಇಂಗ್ಲೆಂಡಿನಲ್ಲಿ ಯಂತ್ರಗ ... ಅಪರಿಮಿತವಾಗಿವೆ ... ಲಪ್ಪಿಲ್ಲದಷ್ಟು ಹಣವೂ ಇವೆ ... ಇಷ್ಟು ... ವೂ ಇಲ್ಲ, ಅದು ಹಲವು ತಲಾಂತರಗಳ ವರೆಗೆ ... ಇರಬೇಕಾಗುವುದು

ಇಂಗ್ಲೀಷರಿಗೂ, ರಷ್ಯಯನ್ನರಿಗೂ ಒಹು ಕಾಲದಿಂದ ಲೂ ಒಗಳವಿದೆ ಇಂಗ್ಲಿಷರ ದೆಸೆಯಿಂದ ಇಂಡಿಯದವರು ರಷ್ಯನರ ವಿಷಯದಲ್ಲಿ ಹೆದರಬೇಕಾಗಿದೆ ಇಂಗ್ಲಿಷರಿಗಾಗಿ ನಾವು ರಷ್ಯನರ ಮೇಲೆ ... ಕಟ್ಟಿಕೊಳ್ಳಬೇಕು? ರಷ್ಯನರೂ, ... ಮಿತ್ರರಾಗಿರ ತ್ತಾರಲ್ಲದೆ ಶತ್ರುಗಳಾಗಲಾರರು ಬ್ರಿಟಿಷರು ಹಿಂದೂ ದೇಶವನ್ನು ಬಿಟ್ಟುಕೊಡಲು ರಷ್ಯನರ ಧಾಳಿಯ ... ದೂರವಾಗುವದು ಇಂಡಿಯವು ಬ್ರಿಟಿಷ ಸಾಮ್ರಾಜ್ಯದಲ್ಲಿ ಸೇರಿಕೊಂಡಿದ್ದಷ್ಟೂ ನಮಗೆ ಒಯ ... ಯಾವಾಗ ನಾವು ಸ್ವತಂತ್ರರಾಗುವೆವೋ ಆವಾಗ ನಮಗೆ ರಷ್ಯನರ ಬಯ ... ಇರದ

ಹೀಗಾಗಿ ಇತರ ದೇಶದವರಾರೂ ನಮ್ಮ ಮೇಲೆ ಬೀಳಲಾರರೆಂಬುದು ನಮಗೆ ಗೋಚರವಾಗುವುದು ಬ್ರಿಟಿಷ್ ಸೈನ್ಯವು ಹಿಂದೂ ದೇಶವನ್ನು ಬಿಟ್ಟೋದ ನ ಹಿಂದೆಯೇ ... ಬಹಳ ದೊಡ್ಡ ಸಂಕಟ ಪ್ರಾಪ್ತವಾಗಬಹುದೆಂದು ಕಲವರ ಊಹನೆ ಈ ಊಹನೆಯು ಸಬಲವಾದುದಲ್ಲ. ಒಂದು ದೇಶದ ದಂಡಿನ ಒಲವು ಇತರ ದೇಶಗಳ ಯಾ ಪ್ರಸಂಚದ ದಂಡಿನ ಒಲದ ಹೋಲಿಕೆಯ ಪ್ರಮಾಣದ ಮೇಲೆ ಇರುತ್ತದೆ. ಅಮೇರಿಕದವರ ಹೊರ್ತು ಬೇರೆ ಯಾರೂ ಒಟ್ಟುಗೂಡಿದ ಸಾಲ್ವಾರು ರಾಜ್ಯಗಳ ಸೇನೆಯನ್ನು ಎದುರಿಸಲಾರರು. ಜೇಕೊಸ್ಲೇವಿಯೂ, ಪೋಲೆಂಡ, ಆಸ್ಟ್ರಿಯ, ಬಾಲ್ಟಿಕ್ ರಾಜ್ಯಗಳಂತ ಸಣ್ಣ ದೇಶಗಳನ್ನು ಈಗಿನ ಯಾವದಾದರೊಂದು ಒಲವಾದ ರಾಜ್ಯದವರು ಪುಡಿ ಪುಡಿ ಮಾಡಬಹುದು ಆದರೂ ಈ ಸಣ್ಣ ಪುಟ್ಟ ರಾಜ್ಯ ತಮ್ಮ ಸ್ವಾತಂತ್ರವನ್ನು ಕಾಕೊಂಡಿಲ್ಲ ಕಾರಣವೇನಂದರೆ—ಈ ರಾಜ್ಯಗಳೊಳಗಿರುವ ಪರಸ್ಪರ ಕಲಹವು ಹಿಂದೂದೇಶದ ಸ್ಥಿತಿಯು ಪ್ರಾಕೃತಿಕ ದೃಷ್ಟಿಯಿಂದ ಒಳ್ಳೆಯದೇ ಇದೆ. ಸ್ವರಕ್ಷಣೆಯ ವಿಷಯ ದಲ್ಲಿ ಅದು ವಿಶ್ವದ ರಾಷ್ಟ್ರಗಳ ಪರಿಸ್ಥಿತಿಯಿಂದ ಯಾವ ಗಾಬರಿಗಳಿಗೂ ಒಳಿಬೇಕಿದಂತಿದೆ

ಆದರೆ ನಮ್ಮ ದೇಶದ ಸ್ಥಿತಿಯು ಎಷ್ಟೇ ಸುರಕ್ಷಿತವಾದ ರೀತಿಯಲ್ಲಿದ್ದರೂ ಒರಬಹುದಾದ ಅಪಾಯಗಳನ್ನು ತಡೆಯಲಿಕ್ಕೆ ನಾವು ತಯಾರಾಗಿರಬೇಕು. ನಮಗೆ ಸ್ವಾತಂತ್ರ್ಯ ದೊರೆತೊಡನೆ ನಾವು ನಮ್ಮ ಸೈನ್ಯವನ್ನು ಯೋಗ್ಯವಾದ ರೀತಿಯಲ್ಲಿ ... ಕ್ಕೆ ಸೈನ್ಯವು ಬೀಳಬಾರದು. ಆದರೆ ನಮಗೆ ಅಧಿಕಾರ ಅಭಾವವಿದೆಯಷ್ಟೆ ... ಕಮಿಷನ್ ... ಅಧಿಕಾರಿಗಳನ್ನಾಗಿ ನಾಮಿಸಬಹುದು ಮತ್ತು ನಮಗೆ ಬೇಕಾದಷ್ಟು ಅಧಿಕಾರಿಗಳು ತಯಾರಾಗುವ ವರೆಗೆ ಇಂಗ್ಲೀಷ್ ಅಧಿಕಾರಿಗಳನ್ನು ನೇಮಕಮಾಡಿಕೊಳ್ಳುವುದು ಒಂದು. ಇಲ್ಲ ಅವರಿಷ್ಟವಿದ್ದರೆ ಫ್ರಾನ್ಸ್, ಜರ್ಮನಿ, ರಷ್ಯ ಜಪಾನ್ ದೇಶದ ಅಧಿಕಾರಿಗಳನ್ನು ನೇಮಕಮಾಡಬಹುದು. ಇಂಥ ಅಧಿಕಾರಿಗಳು ಬೇಕಾದಷ್ಟು ದೊರಕುವರು. ನಮ್ಮ ಜನ ಒಲದಿಂದಲೂ ಕರ್ತವ್ಯ ಬಲದಿಂದಲೂ ದೇಶದ ರಕ್ಷಣೆಯನ್ನು ನಾವು ಒಂದೆರಡು ವರ್ಷಗಳಲ್ಲಿಯೇ ಕಲಿಯಬಹುದು. ಇಂಗ್ಲೀಷರ ಆಳಿಕೆ ಹೋದಮೇಲೆ ಐದಾರು ವರ್ಷಗಳಲ್ಲಿ ... ದೇಶ ರಕ್ಷಣೆಯ ಕಾರ್ಯವು ನಾವು ಸ್ವತಂತ್ರರಾದಾಗ ಒಂದೇ ವರ್ಷದಲ್ಲಿ ನಡೆಯುವುದು.

ಮುಖ್ಯವಾಗಿ ನಮ್ಮ ದೇಶೀಯರಲ್ಲಿ ದೇಶಪ್ರೇಮದ ಭಾವನೆಯು ವೃದ್ಧಿಯಾಗಬೇಕು. ಜನಸಾಮಾನ್ಯರೆಲ್ಲರೂ ನಾವು ಸಂಪಾದಿಸತಕ್ಕ ಸ್ವಾತಂತ್ರ್ಯಕ್ಕೆ ಭಾಗಿಗಳಾಗುವರಾದರೆ ಈ ನೂತನ ಸ್ವಾತಂತ್ರ್ಯ ರಕ್ಷಣೆಗಾಗಿ ವೃಥಾ ಪ್ರಯತ್ನ ಮಾಡಬೇಕಾಗದು. ಈ ಸಂಬಂಧವಾಗಿ ಹಲವು ಉದಾಹರಣೆಗಳಿವೆ ಆದರೆ ಪರತಂತ್ರರಾದವನ್ನು ಸ್ವತಂತ್ರರನ್ನಾಗಿ ಮಾಡಿದ ಉದಾಹರಣೆಯೂ ಎಲ್ಲಿಯೂ ಇಲ್ಲ

ಆದುದರಿಂದ ವಿದೇಶೀಯ ದಂಡುದಾಳಿಯು ಈ ದೇಶದಿಂದ ಹೊರಗೆ ಹೋಗುವುದಗತ್ಯವೆಂಬುದು ಸ್ಪಷ್ಟವಾಗಿ ... ನಮ್ಮ ಸೈನ್ಯವು ... ಸ್ವತಂತ್ರ್ಯವನ್ನು ... ಅವರೆ ... ನಾವು ಸ್ವತಂತ್ರರಾದಾಗ ... ಒಂದು ವೇಳೆ ಅವ ... ಏತಕ್ಕೆಂತ ಶ್ರೇಯಸ್ಕರವಲ್ಲವೆ?

ಕೊಡಗಿನಲ್ಲಿ ... ಸೇವಾದಳವು

... ರವರಿಗೆ ...

... ಮಂದಿವಿಂದ ಪಕ್ಷ ... ಪ್ರಯತ್ನ ... ಇದರ ... ಸೇವಾದಳ ... ನಡೆಯುತ್ತಿರುವ ...

... ಪಟ್ಟಣದಲ್ಲಿ ... ಸೇವಾದಳದವ ... ಯನ್ನು ... ಸರ್ಕಾರದ ... ಶಿಕ್ಷಣವನ್ನು ಕೊಡಲು ಕಿಂಪ (ಕ್ಯಾಂಪು)ಗಳನ್ನು ಸ್ಥಾಪಿಸಿ ... ಈ ಸೇವಾದಳದ ಅನೇಕ ಕಡೆಗೆ ... ಹೇಳಿದ ಶಿಕ್ಷಣ ಪಡೆಯುವವರ ... ಕೊಡಗು ಸೇವಾದಳದ ... ಒಂದನ್ನು ... ನಿರ್ಧರಿಸಲ್ಪಟ್ಟಿದೆ ಅಲ್ಲದೆ ತಮ್ಮ ... ಹಿಂದುಸ್ಥಾನೀ ಸೇವಾದಳಕ್ಕಾಗಿ ಈಗ 3—4 ವರ್ಷಗಳಿಂದ ಕೆಲಸಮಾಡುತ್ತಿರುವ ... ಎನ್. ಸಿ. ... ಎಂಬವರನ್ನು ಕೊಡಗು ಸೇವಾದಳದ ... ಇಲ್ಲಿಂದ ಕಳುಹಿಸಲ್ಪಡುವ ... ಕ್ಕಾಗಿ ... ಈ ಕಾರ್ಯದಲ್ಲಿ ಅವರಿಗೆ ಎಲ್ಲರೂ ... ಸಹಾಯ ... ದ ... ಶಿಕ್ಷಣ ... ಕನಿಷ್ಠ ಪಕ್ಷಕ್ಕೆ 30 ಜನ ತರುಣರಿಗೆ ಶಿಕ್ಷಣವನ್ನು ಕೊಟ್ಟು ಅದರಿಂದಾಗುವ ಲಾಭವನ್ನು ಹೊಂದಬೇಕಾಗಿ ಬೇಡುತ್ತೇನೆ

ಹುಬ್ಬಳ್ಳಿ
14—2—28

ನಾ. ಸು. ಹರ್ಡೀಕರ
ಕಾರ್ಯದರ್ಶಿ
ಹಿಂದುಸ್ಥಾನೀ ಸೇವಾದಲ

ಪತ್ರವ್ಯವಹಾರ

ಪ್ರಕಟಿಸಲ್ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಅಯ್ಯಾ,

ಕೊಡಗು ದೇಶದಲ್ಲಿ ಅನೇಕ ಜನಗಳಿಗೆ ಇಲಾಖೆ ವೃತ್ತಿ ... ಯಿಂದ ಕೆಲವು ಮಟ್ಟಿಗೆ ಪ್ರಯೋಜನವಿದೆಯೆಂಬುದು ಎಲ್ಲರಿಗೂ ಕಂಡ ಹಾಗೆ ಇರುತ್ತದೆ ಹೀಗಿರುತ್ತಾ ಈ ಪಲೆಗಳನ್ನು ಪರದೇಶದವರು ... ಮಾಡಿದರೆ ಸರ್ಕಾರದವರೂ ... ಮೇಲೆ ... ಕಡಿಮೆಮಾಡಿ ... ಹೀಗೆ ಸರಕಾರದ ... ಗಳನ್ನು ತೆಗೆದುಕೊಳ್ಳದೆ ... ಕಳೆದ ವರ್ಷದ ಮಳೆಗಳ ... ಸರ್ಕಾರದವರು ... ಕೌನ್ಸಿಲು ಮೆಂಬರ ಗಳು ಅಭಿಪ್ರಾಯಪಡಬೇಕೆಂದಿದನ್ನು ಈ ಮೂಲಕ ಸೂಚಿಸುತ್ತೇನೆ

ಕೆ ಪದ್ಮನಾಭಾಚಾರ್ಯ

ಮಳೆಯಿಂದ ಬಂದಂಥ ಕಷ್ಟ.

ಅಯ್ಯಾ ಎಡಿಟರವರೇ,

ದಯವಿಟ್ಟು ಈ ಕೆಳಗೆ ಇರುವ ನಮ್ಮ ಅಭಿಪ್ರಾಯಗಳನ್ನು ... ಪತ್ರಿಕೆಯಲ್ಲಿ ಪ್ರಕಟಿಸಿ ... ನಮಗೆಲ್ಲರಿಗೂ ಒಂದು ವಿಷಯವನ್ನು ... ದೇಶದವರಾದ ನಾವುಗಳೆಲ್ಲರೂ ತಿಳಿಸಿಕೊಳ್ಳಬೇಕಾಗಿದೆ. ಇದೇ ತಾ. 20ರಲ್ಲಿ ಮಳೆ ಹೊಡೆಯಲು ಪ್ರಾರಂಭವಾಗಿ ಒಂದು ವಾರದ ವರೆಗೂ ಮಳೆ ಹೊಡೆದು ... ಭತ್ತವೆಲ್ಲವೂ ... ಒಂದು ... ಹಲ್ಲಲ್ಲಿ ... ಕಡ ಒಕ್ಕಲಿನಿಂದ ಭತ್ತ ತೆಗೆಯದೆಯೂ ಈ ವರ್ಷದ ... ಕೆಲಸದಲ್ಲಿ ಮಳೆ ಹೊಡೆದು ಒಕ್ಕಲೆಲ್ಲಾ ಗದ್ದೆಯಲ್ಲೇ ... ನಷ್ಟವಾಗಿರುವ ನಮಗಳ ಕಷ್ಟವನ್ನು ವರ್ಣಿಸಲು ಸಾಧ್ಯವಿಲ್ಲ. ಮತ್ತು ಈ ವೇಳೆ ಒಂದಿರುವ ಭತ್ತವನ್ನು ವಡನೆ ಒಕ್ಕಲು ಹಾಕಿ ತೆಗೆಯದ ಆದರೆ ಒಂದು ವಾರದ ... ಮಳೆಬಿಡಲೇ ಇಲ್ಲ. ... ಭತ್ತ ... ಈ ವೇಳೆ ಭತ್ತವನ್ನು ... ಈ ಕಿಸ್ತಿನ ಕಂದಾಯವು ... ಕಂದಾಯ ಕಟ್ಟುವದಕ್ಕೆ ... ಆದ್ದರಿಂದ ಈ ಕಿಸ್ತಿನ ಕಂದಾಯವನ್ನು ಮಾರ್ಚಿ ... ಕಟ್ಟಲಿಕ್ಕೆ ... ಮಾರ್ಚಿ ... ಕೊಡಲು ... ನೋಟೀಸು ... ಮಾಡದಂತೆ ... ಸರಕಾರವನ್ನು ಕೇಳಿಕೊಳ್ಳುತ್ತೇವೆ.

ಎ. ಪ್ಪು. ಕಾರ್ಯಪ್ಪ
ವಗೈರೆ 12 ಜನರು ರುಜುಮಾಡಿರುತ್ತಾರೆ

ಕೊಡಗಿನಲ್ಲಿ ಸರಕಾರಿ ಉದ್ಯೋಗಸ್ಥರು

ಅಯ್ಯಾ,

ಈಗ ಮೂರುವಾರಗಳ ಹಿಂದಿನ ಪತ್ರಿಕೆಯಲ್ಲಿ ಕೊಡಗಿನ ಉದ್ಯೋಗಸ್ಥರ ವರ್ಗಾವಣೆ ಮತ್ತು ಮುಂದುವರಿಕೆ (Extension)ಯ ವಿಷಯವಾಗಿ 'ನ್ಯಾಯಾಪೇಕ್ಷಿ' ಒಂದು ಚಾತ್ರಿಯನ್ನು ನೋಡಿದೆನು. ಅದರಲ್ಲಿ ಹೇಳಿರುವ ವಿಷಯಗಳಲ್ಲವನ್ನೂ ಸರಕಾರದವರು ಮತ್ತು ಉದ್ಯೋಗಸ್ಥರು ಚೆನ್ನಾಗಿ ಮನಸ್ಸಿಸಬೇಕಾಗಿದೆ ವರ್ಗಾವರ್ಗಿಯ ವಿಷಯ ... ಗಳು, ಬಾದಿರುವುದರಿಂದ ಅದರ ಸಂಬಂಧ ಇಲ್ಲಿ ಏನೂ ಹೇಳುವ ಅಗತ್ಯವಿಲ್ಲ ಅವರೆ ಉದ್ಯೋಗಸ್ಥರ ... ಈ ವಿಷಯದಲ್ಲಿ ಮಾತ್ರ ಇನ್ನೂ ಪುನಃ ಪುನಃ ... ಅಗತ್ಯವು ಕಂಡು ಬರುತ್ತದೆ ಏತಕ್ಕೆಂದರೆ—ಕಳೆದ ... ಈ ವಿಷಯದಲ್ಲೇ ಒಂದು ಚಾತ್ರಿಯು ಹೊರಟ ... ಕೂಡ ಒಬ್ಬ ಉದ್ಯೋಗಸ್ಥನ ಸರ್ವೀಸನ್ನು ಒಂದು ವರ್ಷ ... ಮಾಡಿದರೆಂದು ತಿಳಿದು ಒರುತ್ತದೆ ಇದರಿಂದ ಸರಕಾರವು ಜನರ ಅಭಿಪ್ರಾಯಗಳಿಗೆ ಏನೊಂದೂ ... ಕೆ ಕಾಣುತ್ತದೆ ದೇಶದ ಹಿತಕ್ಕಾಗಿ ಸರಕಾರವಿರುವಾಗ ದೇಶದ ಜನರ ಅಭಿಪ್ರಾಯದಂತೆ ಸರಕಾರವು ನಡೆಕೊಳ್ಳತಕ್ಕದ್ದು ಅದರ ಕರ್ತವ್ಯವಾಗಿದೆ ಹಾಗಿಲ್ಲದೆ ಜನರು ಏನಾದರೂ ಹೇಳಿಕೊಳ್ಳುತ್ತಿರಲಿ, ಅವರ ಕಷ್ಟಗಳು ಎಷ್ಟೇ ಇರಲಿ, ಅವುಗಳೊಂದನ್ನೂ ಗಮನಿಸದೆ, ಸರಕಾರದ ಅಧಿಕಾರ ... ಸರಕಾರವು ಕೆಲಸ ಮಾಡತಿರುವುದು ದೇಶಕ್ಕೂ, ಕಡೆಗೆ ಸರಕಾರಕ್ಕೂ ... ಎಲ್ಲರೂ ತಿಳಿಯ ತಕ್ಕದ್ದು ಆದ್ದರಿಂದ ಇನ್ನು ಮೇಲಾದರೂ ಸರಕಾರದವರು ... ಉದ್ಯೋಗಸ್ಥರಿಗೂ ... ರಣದಿಂದಲೂ, ಸರ್ವೀಸನ್ನು ಮುಂದುವರಿಸುವ ಹಕ್ಕನ್ನು ... ಅನುಕೂಲವನ್ನು (The privilege of extending his service) ಕೊಡದೆ ದೇಶದ ಯುವಕರಿಗೆ ಅನುಕೂಲತೆಗಳನ್ನು ಒದಗಿಸಿ ದೇಶದ ಜನರಿಗೆ ಖಾಯಂ ಇಲ್ಲಿಯೇ ಇರತಕ್ಕ ಉದ್ಯೋಗಸ್ಥರ ... ಸ್ವಲ್ಪವಾದರೂ ಕಡಿಮೆ ಮಾಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ"

" ದೇಶಹಿತೈಷಿ

ಕೊಡಗಿನ ಮುಂದಾಳುಗಳೂ ಖಾದಿಯೂ

ಭಾರತೀಯರೇ,

ಖಾದೀ, ಖಾದೀ ಎಂಬ ಮಾತುಗಳು ಅಲ್ಲಲ್ಲಿ ಕೇಳುತ್ತಿರುವುದೂ, ಕೊಡಗಿನ ಖಾದೀ ಬೋಧಿನವರು ಕಾಯತಾ ಕೆಲಸ ಪ್ರಾರಂಭಿಸಿರುವುದೂ, ಕೊಡಗು ... ತ್ತಿದೆಯೆಂದು ಸೂಚಿಸುತ್ತವೆ ಕೊಡಗಿನ ಕೆಲವು ಸಂಸ್ಥೆಗಳಲ್ಲಿ ಚುನಾಯಿತ ಸದಸ್ಯರಾಗಿರುವವರು, ಅವರು ದೇಶಕಾರ್ಯಗಳನ್ನು ಮಾಡುವ ನಿಮಿತ್ತ ಅಂಥಾ ಸಂಸ್ಥೆಗಳನ್ನು ಸೇರಿ, ಕಳೆದವರಾಗಿಂದು ತಮ್ಮ ... ದಗಿಸಿಕೊಡಲು ... ಬಯಲಾರರು ಅಂಥವರು ಖಾದೀ ಕೆಲಸಗಳಲ್ಲಿ ... ನ್ನು ಒದಗಿಟ್ಟು ಪೂರ್ತಿಯಾಗಿ ಸಹಾಯಮಾಡದಿದ್ದರೂ ... ವ್ಯಾಗಿ ... ಲ್ಲವೆಂದು ನಂಬಿಗೆಯಿದೆ. ಏತಕ್ಕೆಂದರೆ—ರಾಷ್ಟ್ರಧನವನ್ನೂ, ಸ್ವಾಭಿಮಾನವನ್ನೂ ಖಾದಿಯಲ್ಲಿದೆ, ಖಾದಿಯನ್ನು ಧರಿಸುವವರಲ್ಲವೆ ಎಂಬದಾಗಿ ... ಗಿ ಹಿಂದೂ ದೇಶದ ಮುಂದಾಳುಗಳು ಸಾರುತ್ತಿರುವ ... ದ ಮೇಲೆ ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿಯೂ ಇದನ್ನು ಅಲ್ಲಗಳೆಯಲಿಕ್ಕಿಲ್ಲವೆಂದು ತೋರುತ್ತೆ.

ಇಂಥಾ ಸಾರ್ವಜನಿಕ ಸಂಸ್ಥೆಗಳು, ಖಾದೀ ವಿಷಯದಲ್ಲಿ ಕಾರ್ಯತಃ ಯಾವ ಯಾವ ಕೆಲಸಗಳನ್ನು ಮಾಡಬಹುದೆಂದು ಏನೇನು ಪುನಃ ಈ ಲೇಖನದ ... ಉದ್ದೇಶ ಕೊಡಗು ಕಾಯಿದೇ ಮಂಡಲ, ಮರ್ಕೇರಾ ಮತ್ತು ವೀರರಾಜಪೇಟೆಯ ನಗರ ಸಭೆಗಳು, ಕೊಡಗು ಜಿಲ್ಲಾ ಲೋಕಲ್ ಬೋರ್ಡಿನ ರ, ಮುಂತಾದವು ಇಲಾಖೆ—ಇವು ಚುನಾಯಿತ ಸದಸ್ಯರುಗಳಿರುವ ಮಂಡಲಗಳಲ್ಲಿ ಕೆಲವು. ಇನ್ನೂ ಕೆಲವು. ಸಂಸ್ಥೆಗಳಿದ್ದರೂ ಇವುಗಳಿಗಿರುವಷ್ಟು ... ಯೂ, ಪ್ರತಿನಿಧಿಯೂ ಇಲ್ಲ. ಈ ಸಂಸ್ಥೆಗಳು ಈ ಕೆಲಸಗಳಲ್ಲಿ ಮುಂದ ... ದರೆ 'ಹರಿಯ ಕೃತ ಶೀಲರು ನೆ ... ಕಳೆಗಿಲ್ಲಾ' ಎಂಬ ಗಾದೆಯನ್ನು ಯಾರೂ ಮರೆಯಬಾರದು.

...ನಾಟುದೇ ಮಂಡಲಿಯು ಸದಸ್ಯರು ಅತಿ ಒಲೆಯುಳ್ಳ ಸರ ಒಟ್ಟಿಗಳಿಂದಲಂಕೃತರಾಗದೆ ಸ್ವವಸ್ತಿತ್ತಿ ಹಿಡಿಯುತ್ತಿದ್ದ ಪಾದಿಯನ್ನೇ ಧರಿಸಿ ಮಂದಿನ ಅಧಿವೇಶನದಲ್ಲಿ ಪ್ರೋತ್ಸಾಹಕ್ಕಾಗಿ ಕೆಲವು ಠರಾವುಗಳನ್ನು ತರಬೇಕು. ಕೊಡಗು ಸರಕಾರದವರು ತಮ್ಮ ಕೈಕೆಳಗಿರುವ ಪ್ರತಿ ಇಲಾಖೆಯಲ್ಲಿಯೂ ಉಪಯೋಗಿಸುವ ಒಟ್ಟೆಯು ಪಾದಿಯೇ ಆಗಿರಬೇಕು. ಆಸ್ಪತ್ರೆಗಳಲ್ಲಿಯೂ, ...ಯೂ ಒಟ್ಟೆಯನ್ನು ಹೆಚ್ಚಾಗಿ ಉಪಯೋಗಿಸುವರು. ...ಸ ಖಾದೀ ಪಾದೀ ಕೇಂದ್ರಕ್ಕೆ ಸರಕಾರದವರು ಸಹಾಯವನ್ನು ಮಾಡಬೇಕು, ಅಲ್ಲದೆ ತಕ್ಕ ಪ್ರೋತ್ಸಾಹವ ನ್ನು ಕೊಡಬೇಕು. ಈ ರೀತಿಯ ಠರಾವುಗಳನ್ನು ಕಾ ಸ್ಸಿಂಗಲಿಯಲ್ಲಿ ತಂದು, ಪಂಚಾಯಾರು ಮಾಡಿಸಿಕೊಂ ...ರ್ಯಗಳನ್ನು ನೆರವೇರಿಸಿಕೊಳ್ಳಬಹುದು.

...ಡಗಿನ ಎರಡು ಮುನಿಸೀಪಾಲಟಿಯವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಅವರು ತಮ್ಮ ಸಂಸ್ಥೆಗಳ ...ಸ ಗಾರ್ಥವಾಗಿ ಏತಕ್ಕೆ ಪಾದಿಯನ್ನು ತೆಗೆದುಕೊಳ್ಳಬಾರದು. ಶಾಲೆಗಳಲ್ಲಿಯೂ ನೂಲುವ ಕಲೆಗಳನ್ನು ಕಲಿಸುವ ...ನ್ನು ಮಾಡಬಹುದು. ಹಿಂದೂದೇಶದ ಇತರ ಮುನಿಸೀಪಾಲಟಿಗಳು ಪಾದಿಯ ಕೆಲಸದಲ್ಲಿ ಬಹಳ ಸಹಾಯವನ್ನಿತ್ತಿ...ದ್ದ ಮಹಾರಾಷ್ಟ್ರ ಪ್ರಾಂತ್ಯದ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಪೂನ ಮೊದಲಾದ ನಗರ ಸಭೆಯವರು ತ ...ಮ್ಮ ಶಾಲಾ ಮಕ್ಕಳು ನೂಲುವಂತೆ ಮಾಡಿದಲ್ಲದೆ, ನಗರ ಚಿಕ್ಕ ಪಾದಿಯನ್ನೇ ಉಪಯೋಗಿಸುತ್ತಿರುವುದೂ ಅಲ್ಲದೆ ಆ ...ನಡೆಯುತ್ತಿರುವ ಪ್ರದರ್ಶನಗಳಿಗೆ ಹಣ ಸಹಾಯವನ್ನು ಮಾಡುತ್ತಿರುವರು. ಕೊಡಗಿನವರು ಪಾದಿಗೆ ಸಹಾಯ ಮಾಡಲಾರರೇ ?

ಡಿಸ್ಟ್ರಿಕ್ಟ್ ಬೋರ್ಡಿನವರು ಮೇಲಿನ ಸೂಚನೆಗಳನ್ನು ಅಂಗೀಕರಿಸುವುದೂ ಅಲ್ಲದೆ ಒಂದು ಹೆಜ್ಜೆಯನ್ನು ಮುಂದಕ್ಕೆ ಇಡಬಹುದು. ನೂಲುವ ಕಲೆ ಇನ್ನೂ ಇರುವ ಕಡಾವೆಯೂ ಒಳಗಿನ ಶಾಲೆಗಳಲ್ಲಿ ಈ ಕಲೆಗೆ ಜೀವವನ್ನು ಕೊಟ್ಟು, ಅಲ್ಲಿನ ಪಾದೀ ಉತ್ಪತ್ತಿಯನ್ನು ಸರಿಯಾದ ರೀತಿಯಲ್ಲಿ ನಡೆಸುವುದ ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರು ಕೊಡಗು ಪಾದೀ ಬೋರ್ಡಿನಲ್ಲಿರುವುದರಿಂದ ಉದ್ಯೋಗಗಳಿಗೆ ತಕ್ಕ ಪ್ರೋತ್ಸಾಹ ದೊರೆಯುವುದೆಂದು ನಂಬುವೆನು. ಇವರು ಬೇಗನೆ ಪಾದಿಯನ್ನೇ ತಮ್ಮ ಉಡುಪನ್ನಾಗಿ ಮಾಡಿಕೊಳ್ಳಬೇಕೆಂದ ಬೇಡಿಕೊಳ್ಳುತ್ತೇನೆ.

ಕಡೆಗೆ ಕೊಡಗಿನ ಮುಖರಾದ ಇಲಾಖೆ ಇದು ಬಹಳ ಮುಖ್ಯವಾದ ಸಂಸ್ಥೆ. ಈ ಸಂಘದವರು ತೆಗೆಯುವ ಬಟ್ಟೆಯಿಲ್ಲಾ ದೇವರ ಉಪಯೋಗಾರ್ಥವಾಗಿದ್ದು, ದೇವರ ಅಲಂಕಾರಕ್ಕಾಗಿ ತೆಗೆಯುವ ಬಟ್ಟೆಯು ಶುದ್ಧವಾಗಿರಬೇಕು. ಸ್ವಾಭಿಮಾನದಿಂದ ತಂದ ತಳೆಸಬಾರದೇ. ಗಿರಣಿಯ ಸೂತಕದಿಂದೊಡಗೂಡಿದ ನೂಲಿನ ಬಟ್ಟೆಗಳನ್ನು ದೇವರಿಗ ಹಿಂದ ಗಂಡೂ ಉಪಯೋಗಿಸಬಾರದು. ಈ ಸಂಸ್ಥೆಯ ಸದಸ್ಯರು ಎಚ್ಚರಗೊಂಡಾರೇ ?

ವಾಚಕರಲ್ಲೊಂದು ವಿನಂತಿ. ಚುನಾಯಿತ ಸದಸ್ಯರಲ್ಲರೂ ಈ ಬೇಡಿಕೆಯನ್ನು ಓದುವರು. ಈ ವಿಷಯದಲ್ಲಿ ತಮ್ಮ ಕೈಯಲ್ಲಾದ ಸಹಾಯವನ್ನು ಮಾತ್ರ ಮಾಡುವುದಲ್ಲದೆ ಈ ವಿಷಯಗಳ ಸ್ವಳಕೊಂಡ ಠರಾವುಗಳನ್ನು ಆಯಾ ಸಂಸ್ಥೆಗಳಲ್ಲಿ ಆದಷ್ಟು ಬೇಗನೆ ತಂದು ಮಂಜೂರು ಮಾಡಿಸಿಕೊಂಡು, ನಾಡಿನ ಜನರ ಪ್ರೀತಿಗೆ ಪಾತ್ರರಾದಾರೆಂದು ನಂಬುತ್ತೇನೆ. ಇದರೊಡನೆ ಕೆಲವರು 'ಚುನಾಯಿತನಾಗುವ ವರೆಗೆ ನಿಮ್ಮ ಸೇವಕ, ಆ ವೇಳೆ ನೀವು ನನ್ನ ಸೇವಕ' ರೆಂಬುವ ಕೆಲವರು ಇತ್ತ ಮನಸ್ಸಿಡಾರರು. ಅದರಿಂದ ಚುನಾಯಿತರಾದ ಸದಸ್ಯರುಗಳನ್ನು ಬೇಡುವೆನು. ಈ ವಿಷಯ ಯಾವ ಯಾವ ಠರಾವುಗಳನ್ನು ಯಾವ ಯಾವ ಸಂಸ್ಥೆಗಳಲ್ಲಿ ತಂದರೆಂದೂ, ಈ ವಿಷಯದಲ್ಲಿ ಯಾವ ಯಾವ ಕೆಲಸಗಳನ್ನು ಮಾಡಿದರೆಂದೂ ಆಗಿಂದಾಗ್ಗೆ ಕೇಳುತ್ತಿರಬೇಕು. ಇನ್ನು ಚಿಕ್ಕದಾದ—ಆದರೆ ಬಹು ಮಹತ್ವದ, ರಾಷ್ಟ್ರ ಸೇವೆಯ, ಕಾರ್ಯಗಳನ್ನು ಮೈಸೂರಿಗೆ ಸೇರಿಸಬೇಕೆಂದು ಸ್ಪಷ್ಟಗಳಿಗಿಂತ ನೂರಾರು ಪಾಲು ಮಹತ್ವವುಳ್ಳ—ಕೆಲಸಗಳನ್ನು ಅವರು ಮಾಡಿದ್ದರೆ, ಅವರ ಸನ್ಮಿತ್ರರಿಗೆ ರಾಜಸನ್ಮಾನವನ್ನು ಕೊಟ್ಟು ಮನೆಯಲ್ಲಿ ಕುಳಿತುಕೊಳ್ಳಲಿ ಬಡವರಿಗೆ ಅನ್ನವನ್ನು ಕೊಡದಿದ್ದರೆ, ಹಾಡೆ ವಚನವನ್ನು ತಿಳಿಯಬಾರದು!! ಮುಂದೆ ಅವರ ಬದಲಿಗೆ ಬರುವವರು ಈ ಕೆಲಸವನ್ನು ಕೈಕೊಳ್ಳುವರು!!!

ವಾಚಕರೇ, ನಿಮ್ಮ ಕೆಲಸವನ್ನು ಮರೆಯದೆ ಪಾದಿಗೆ ಪ್ರೋತ್ಸಾಹವನ್ನೀಯಿರಿ.

ಪಾದಿಯೇ ಬಡ ಜನರ ಹಾದಿ!

ರಾಷ್ಟ್ರಾಭಿಮಾನಿ.

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L Rifles	Rs	120	to Rs	2750
S B B L	„	35	to	950.
D B B L Guns	„	50	to	1350
S B B L.	„	35	to	275
D B M L	„	45	to	135
S B M L	„	30	to „	80
B L Revolvers	„	35	to „	350
Automatic Pistols	„	50	to „	150

Brilliant Search Light Lamp For Shooting Camping, Fishing and All such Other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,

24–18 210 Abdul Rehman Street, BOMBAY.

National Swords and Silver Belts (Thodanga) For "Scotland of India."

ಸಂಪ್ರದಾಯಕವಾಗಿ ಧರಿಸಲ್ಪಟ್ಟ 'ಒಟ್ಟು ಕರ್ನಲ್ ಯೂನಿಫಾರಂ' ರೀತಿ ಉಡಿಗೆಗಳನ್ನು ಬದಿಗೊತ್ತಿ ಆರಿಸಲ್ಪಟ್ಟ "ಒಟ್ಟು ಲಫ್ಟನೆಂಟ್' ಯೂನಿಫಾರಂ ಕಡೆ ಯಾಕೆ ವಿಸ್ಮಯಗೊಳ್ಳುತ್ತೀರಿ? ನವಿಲು ಗರಿಯಿಂದ ಶೃಂಗರಿಸಲ್ಪಟ್ಟ ಕಾಗೆ ನವಿಲಾಗುವದೇ?

ಸೊಂಟದಲ್ಲಿ ಒಂದು ಬೆಳ್ಳಿಯ ತೊಡಂಗ ಮತ್ತು ಅದರ ಕತ್ತಿ, ಸೊಂಟದ ಬದಿಯಲ್ಲಿ ಚಿನ್ನದ ಹಿಡಿಯ ಪೀಚೆಕತ್ತಿ. ಇವುಗಳಿಗೆ ತಕ್ಕ ಬೆಳ್ಳಿಯ ಸಪಣಿ (ಉಮ್ಮತ) ರೀತಿ ಮತ್ತು ವಲ್ಲವಟ್ಟ ಪಟ್ಟಿ ಇದಲ್ಲವೇ ನಿಮ್ಮ ಗೌರವ? ಕಾನರ್, ರಿಕ್ಕಾರ್, ಬ್ರೌನ್ ಮೊದಲಾದವರೇ ಸದರಿ ವಿಷಯ ವಿನನ್ನುವರು. ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿಮ್ಮ ಹಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರಿವೆ. ಹಚ್ಚಿನ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದುಕೊಳ್ಳಿ

Commercial Store,
Murnad, Coorg

12–7

ಡಿ ಬಿ ಬಿ ಯಲ್. ಕೋವಿಗಳು ರೂ 75 ರಿಂದ ರೂ 450/
ಯಸ್ ಬಿ ಬಿ ಯಲ್ ಕೋವಿಗಳು ರೂ 35 ರಿಂದ ರೂ 250/.
ಯಸ್ ಬಿ. ಯಮ್ ಯಲ್ ಕೋವಿಗಳು ರೂ. 35 ರಿಂದ ...
ರಿವಾಲ್ವರ್‌ಗಳು. ರೂ 40/ರಿಂದ ರೂ 150/ರ ವ...

ಡಬ್ಬಲ್ ಮತ್ತು ಸಿಂಗಲ್ ಬೋರ್ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನಗಳ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯನ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಡ ಕಡಿಮೆ ಬೆಲೆಯ ಕಂಪೆನಿ.

24–10 12 ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಆಲ್ ಇಂಡಿಯಾ ಮ್ಯೂಚ್ಯುವಲ್ ವಿಡೋಸ್ ಅಂಡ್ ಪೂವರ್‌ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಲೀರು ಮತ್ತು ಜಾಂಡು ಹೋಲ್ಡರುಗಳ ಹಣ ಮತ್ತು ಆದರ ಬಡ್ಡಿ ಲಾಭ ವಗೈರೆ ಎಲ್ಲವೂ ಆ ದೇಶಸ್ಥರಿಗೆ ಕೊಡಬೇಕೆಂಬ ಠರಾವು ಜನವರಿ ತಾ 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಜಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

I ಅನಾಥರಾದ ಅಂಗಹೀನರಿಗೆ ಈ ಸಂಘದಿಂದ ಬೇಗನೆ ಅನ್ನಸಹಾಯ ಮಾಡಲು ಏರ್ಪಾಡಾಗುವುದು.

II 1928ನೇ ಇಸವಿ ಮಾರ್ಚ ತಿಂಗಳು 31ಕ್ಕೆ ಡ್ರಾಯಿಂಗ್ ನಡೆಯುತ್ತದೆ.

(1) ಇದರ ಮೂಲಕ ಬಡ್ಡಿ ಇಲ್ಲದೆ ಸಾಲ ಕೊಡಲಾಗುವುದು
(2) ಸುಲಭವಾದ ದೀರ್ಘ ಕಂತುಗಳು ದೊರೆಯುವವು
(3) ಸರ್ವರೂ ಆ ತಾರೀಖಿನೊಳಗೆ ಡ್ರಾಯಿಂಗಿಗೆ ಅರ್ಹತೆ ಪಡೆಯಬೇಕಾಗಿದೆ.
(4) ದೇಶ ಸೇವೆಗೂ, ಪರ ಸೇವೆಗೂ ಒಳ್ಳೆಯ ಅನುಕೂಲ.

ಟಿ. ರಿ. ಕುಪ್ಪುಸ್ವಾಮಿ ಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್ಸ್,
ಮಡಿಕೇರಿ.

52–2

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15 510
ಜಮೆಯಾದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1–7–1927.

ನೋಟೀಸು.

ಈ ಕೆಳಗಿನ ಮಹನೀಯರು «ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮೆ. ಪೇರಿಯಂಡ ಪೂವಯ್ಯನವರನ್ನೂ ಮತ್ತು ಮೆ. ಕಾಳೇಂಗಡ ಚಿಣ್ಣಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ, ಮೆ. ಪಾರ.ವಂಗಡ ಅಚ್ಚಯ್ಯನವರು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,

ಗೋಣಿಕೊಪ್ಪಲು—ಮೆ. ಚಮ್ಮಟ ಮಾದಪ್ಪನವರು,

ಅಮ್ಮತ್ತಿ ಸಿದ್ದಾಪುರ—ಮೆ ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ ಜಿ. ಮುದ್ದಪ್ಪಯ್ಯನವರು,

ಮುದಿಕೇರಿ & ತಿತಿಮತ್ತಿ—ಮೆ. ಬಿ ಮಾದಪ್ಪಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,

«ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,

'ಕೊಡಗು ' ಮಡಿಕೇರಿ.

ARMS & AMMUNITION MART.

Mahomedally-Noorbhoy,

321 Abdul Rehman Street, near Crawford Market, BOMBAY. 3
Telegraphic Address:-"SHOOTER" Bombay.

52–21 'Please write for our Catalogue 1028–1929.

ಕಟುಕಷಾಯ ಮಲೇರಿಯಾ ರಕ್ಷ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ಜ್ವರ, ಬಿಟ್ಟು ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ಸದಾಗಿ ಬರುವ ಜ್ವರ, ಮತ್ತು ಜ್ವರದ ದೋಷದಿಂದ ಬರುವ ಜ್ವರ... ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1–8–0, 3ಕ್ಕೆ ರೂ. 4–0–0, 6ಕ್ಕೆ ರೂ 7–8–0, 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ... ಹೋಗುವುದು, ಮೂತ್ರಕೋಶದ ಉರಿ, ಮೂತ್ರ ... ಗಳ ಉರಿ, ಮೂತ್ರನಾಳ ... ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ... ಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ವೀರ್ಯ ಬರುವುದು ಮು... ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ... ಬಿಡುವ ನೋವು ಇವುಗಳಿಗೆ ಪರಮ ಔಷಧಿ. ಬೆ ಬಾಟ್ಲಿ 1, 3 6ಕ್ಕೆ ರೂ 3–8–0, 6–12–0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ... ರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ... ರೂ. 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆನ್ನು ... ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವುದನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ... ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2–10–0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ ...

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ.—ಮನೋಲ್ಲಾಸಿನಿ ಕಂಪೆನಿ

52–19 9. ಮಂಗಳೂರು

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc,. Chickapet, BANGALORE-CITY.

ಅಪೂರ್ವ ಸಮಯ ! ಅಲಭ್ಯ ಲಾಭ !

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52–3

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,02,000.
	1925	ರೂ.	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000.

ಮೂಲಧನವು ಜಾಸ್ತಿ ಒಂದೆ 42 ಲಕ್ಷ ರೂಪಾಯಿಗಳಿಂದ ರೂ 7,38,80,000ಗೆ ಹೆಚ್ಚಿರುತ್ತದೆ.

ಪ್ರಿಮಿಯಂ ವರಮಾನವು ವರ್ಷಕ್ಕೆ ರೂ. 1,05,30,000ಗೆ ಏರಿರುತ್ತದೆ.

'ಓರಿಯಂಟಲ್'ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹಚ್., ಎಡ್ವಿನ್ ಜೋನ್ಸ್. ಎಫ್. ಎಸ್ ಎ, ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶಮಾಡದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52–44 ಎಲ್. ಆರ್. ಕೃಷ್ಣಸಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

EMPIRE OF INDIA LIFE ASSURANCE COMPANY, LIMITED.

ESTD. 1897.

VALUATION RESULTS

FOR THE FIVE YEARS ENDING 28TH FEBRUARY 1927.

SURPLUS—RS. 37,66,689.

A REVERSIONARY BONUS DISTRIBUTION OF

RS. 15 PER ANNUM PER Rs. 1,000 ASSURED ON WHOLE LIFE ASSURANCES AND **RS. 12** PER ANNUM PER Rs. 1,000 ASSURED ON ENDOWMENT ASSURANCES

HAS BEEN DECLARED.

HEAD OFFICE. Empire of India Life Building, BOMBAY. 21–6. BRANCH OFFICE. Commercial Street, BANGALORE.

Printed & published by P. I. Bellliappa at ' Kodagu" Press, Mercara for " Kodagu " Ltd.

If not delivered please return to
"KODAGU" OFFICE MERCARA.

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪಾದಕ—ಪಂದ್ಯಂಡ ಬಿ. ಬೆಳ್ಯಪ್ಪ.

ಸಂಪುಟ ೭] ಮಡಿಕೇರಿ, ಸ್ ೧೯೨೮ನೇ ಇಸವಿ ಫೆಬ್ರವರಿ ತಾರೀಖು ೨೪ ನೇ ಶುಕ್ರವಾರ [ಸಂಚಿಕೆ ೩೭

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52—4 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423.
TRIPLICANE, MADRAS

Catalogue Free
to Bonafide Enquirers



Rose Water Sprinkler.

Chased Silver Mirror.



Manufacturer of
HIGH CLASS
GEMSET JEWELS
a speciality

The special features of my productions are:—
1 Best QUALITY.
2 Latest novel designs.
3 Prompt test execution.
4 Neat & artistic finish.
5 Most moderate prices

GOLD
or
SILVERWARE
of all descriptions
neatly executed

52—24



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, Just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—24

ಎಗ್ಸಿಮ ಕ್ಯೂರ್

12—7

ಕೊಡಗು

ಸನ್ ೧೯೨೮ನೇ ಇಸವಿ ಫೆಬ್ರವರಿ
ತಾ. ೨೪ ನೇ ಶುಕ್ರವಾರ

ಕೊಡಗು ಸರಕಾರದ

೧೯೨೮—೨೯ನೇ ವರ್ಷದ ಬಜೆಟ್.

1928—29ನೇ ವರ್ಷದಲ್ಲಿ ರೂ. 13,38,000 ಉತ್ಪತ್ತಿಯೂ ರೂ. 14,14,000 ಖರ್ಚೂ ಅಂದಾಜು ಮಾಡಲ್ಪಟ್ಟಿರುವದರಿಂದ ಉತ್ಪತ್ತಿಗಿಂತ ಖರ್ಚು ರೂ. 76,000 ಹೆಚ್ಚಾಗಿದೆ. ಹಿಂದಿನ ವರ್ಷಗಳಲ್ಲಿ ದೇಶದ ಖರ್ಚಿಗೆ ಅವಶ್ಯವಿರುವದಕ್ಕಿಂತ ಹೆಚ್ಚು ಉತ್ಪತ್ತಿ ಮಾಡಿಕೊಂಡಿರುವದರಿಂದ ಆ ಉಳಿವರಿಯಿಂದ ಬಜೆಟ್ ವರ್ಷದ ಹೆಚ್ಚಿನ ಖರ್ಚಿಗೆ ಹಣ ಒದಗಿಸಲಾಗುತ್ತದೆ. ಬಜೆಟ್ ವರ್ಷದ ಅಖೈರಿನಲ್ಲಿ ಸಿಲ್ಕು ರೂ. 1,91,000 ಮಾತ್ರ ಉಳಿಯುತ್ತದೆ. ಈಗಿನಷ್ಟೇ ಖರ್ಚು ಮುಂದಿನ ವರ್ಷಗಳಲ್ಲೂ ಆಗುತ್ತದೆಯೆಂತ ಭಾವಿಸಿದರೆ 1930—31ನೇ ಇಸವಿಯಲ್ಲಿ ಖರ್ಚಿಗೆ ಹಣ ಸಾಲದೆ ಹೋಗುತ್ತದೆ. ಕೊಡಗಿನ ಆದಾಯ ವ್ಯಯವನ್ನು 1924ರಲ್ಲಿ ಬೇರ್ಪಡಿಸಿದಾಗ ರೂ. 50,000 ಸಿಲ್ಕು ಉಳಿಸಲೇ ಬೇಕೆಂತ ಮಾಲಿಕ ಸರಕಾರದವರು ತೀರ್ಮಾನಿಸಿರುತ್ತಾರೆ. ಅಷ್ಟರಿಂದ ಈ ಉಳಿವನ್ನು ಇಟ್ಟುಕೊಂಡರೆ 1930—31ರಲ್ಲಿ ಕೊಡಗಿನ ಸರಕಾರದ ಖರ್ಚಿಗೆ ಹಣವನ್ನು ಬೇರೆ ಎಲ್ಲಿಂದಾದರೂ ಉಚಿತವಾಗಿಯೋ, ಸಾಲವಾಗಿಯೋ ತೆಗೆದುಕೊಳ್ಳಬೇಕಷ್ಟೆ. ಆದರೆ ಅದರೊಳಗೆ ಹಿಂದುಸ್ಥಾನದ ಆಡಳಿತವು ಮಾರ್ಪಾಡಾಗಲಿಕ್ಕಿದೆ. ಕೊಡಗಿನ ಆಡಳಿತ ರಚನೆಯೂ ಅಷ್ಟರಲ್ಲಿ ನಿರ್ಧರಿಸಲ್ಪಡಬಹುದೆಂತ ನಂಬುತ್ತೇವೆ.

ಉತ್ಪತ್ತಿಯ ಅಂದಾಜು ಸಹ ತುಂಬಾ ಹೆಚ್ಚು ಮಾಡಲ್ಪಟ್ಟಿದೆ. 1927—28ರ ಅಂದಾಜಿಗಿಂತ ಬಜೆಟ್ ವರ್ಷದಲ್ಲಿ ರೆವೆನ್ಯೂ ಇಲಾಖೆಯ ಉತ್ಪತ್ತಿಯನ್ನು ರೂ. 10,000 ಹೆಚ್ಚಿಸಿದ್ದಾರೆ. ಇದಕ್ಕೆ ತಕ್ಕಷ್ಟು ಆಧಾರವಿದೆಯೆಂತ ನಮಗೆ ಸಮಾಧಾನವಾಗುವದಿಲ್ಲ. 1926—27ರ ನಿಜವಾದ ಲೆಖ್ಖದ ಮೇರೆ ಸಹ ಈ ಇಲಾಖೆಯ ಉತ್ಪತ್ತಿಯು ರೂ. 3,74,000 ಆಗಿತ್ತು. ಬಜೆಟ್ ವರ್ಷದಲ್ಲಿ ರೂ. 3,77,000 ಅಂದಾಜು ಮಾಡಲಾಗಿದೆ.

1926—27ರಲ್ಲಿ ಎಕ್ಸೈಸ್ ಇಲಾಖೆಯಿಂದ ರೂ. 3,30,000 ಉತ್ಪತ್ತಿಯಾಗಿತ್ತಷ್ಟೆ. ಬಜೆಟ್ ವರ್ಷದಲ್ಲಿ ಈ ಇಲಾಖೆಯಿಂದ ರೂ 3,38,000 ಅಂದಾಜು ಮಾಡಲಾಗಿದೆ. ದೇಶದಲ್ಲಿ ಕುಡುಕತನವನ್ನು ಕಡಿಮೆ ಮಾಡಲು ಜನರು ಮಾಡಿಕೊಂಡಿದ್ದ ತೀರ್ಮಾನವು ಮೂಲಕ ಸಿದ್ಧಾಂತಿಸಿಂದಲೂ ಈ ಇಲಾಖೆಯ ಉತ್ಪತ್ತಿಯು ಹೆಚ್ಚುತ್ತಲಿದೆ. 1927—28ರಲ್ಲಿ ರೂ. 3,36,000 ಅಂದಾಜು ಮಾಡಿದ್ದುದು ಬಜೆಟ್ ತಯಾರಾಗುವ ಮುಂಗಿನ ಆದಾಯ ವ್ಯಯವನ್ನು ನೋಡಿ ಉತ್ಪತ್ತಿ ರೂ 3,11,000 ಆಗಬಹುದೆಂತ ಅಂದಾಜನ್ನು ತಿದ್ದಿಕೊಂಡಿದ್ದಾರೆ. ಇದನ್ನು ನೋಡಿದರೆ ಮತ್ತು ಸೇಂದಿ, ಸಾರಾಯಿ ಕಂಟ್ರಾಕ್ಟುಗಳ ಹರಾಜು ಉತ್ಪತ್ತಿಯನ್ನು ನೋಡಿದರೆ ಬಜೆಟ್ಟಿನಲ್ಲಿ ಹಾಕಿರುವ ಸಂಖ್ಯೆ ಹೆಚ್ಚಾಯಿತೆಂತ ಹೇಳಲಿಕ್ಕಾಗುವದಿಲ್ಲ. ಸರಕಾರಕ್ಕೆ ಬರುವ ಉತ್ಪತ್ತಿಯನ್ನು ನೋಡುತ್ತಾರೆಯೇ ಹೊರತು ಕುಡುಕತನವನ್ನು ಕಡಿಮೆ ಮಾಡಲು ಸರಕಾರವು ತಕ್ಕ ವಿಚಾರಗಳು ಮಾಡದಿರುವದು ವಿಷಾದಕರವಾಗಿದೆ. ಸರಕಾರದ ಒಟ್ಟು ಉತ್ಪತ್ತಿಯ ನಾಲ್ಕರಲ್ಲಿ ಒಂದು ಭಾಗವು ಜನರ ಸಿರಾ ಸೇವನೆಯಿಂದ ಬರುವದೆಂಬುದು ಎಷ್ಟೊಂದು ದೊಡ್ಡ ನಾಚಿಕೆಯ ಸಂಗತಿಯಾಗಿದೆ. ಈ ಅಭ್ಯಾಸದಿಂದ ಸರಕಾರಕ್ಕೆ ಬರುವ ಉತ್ಪತ್ತಿ ಇಷ್ಟಿರುವಾಗ ಕುಡಿಯುವವರು ಕಂಟ್ರಾಕ್ಟರುಗಳ ಲಾಭ, ಸಾರಾಯಿಯನ್ನು ತಯಾರಿಸುವವರ ಲಾಭ ಮತ್ತು ಖರ್ಚನ್ನು ಸಹ ತೆರಬೇಕಾಗಿದೆ. ಇದನ್ನೆಲ್ಲಾ ಎಣಿಸಿದರೆ ಈ ಅನಾವಶ್ಯಕದ ಮತ್ತು ಕೆಡುಕಾದ ವಸ್ತುವಿನ ಸೇವನೆಯಿಂದ ದೇಶದ ಬಡತನಕ್ಕೆ ಎಷ್ಟೊಂದು ದೊಡ್ಡ ಕಾರಣವಾಗುತ್ತಿದೆಯೆಂಬುದನ್ನು ಊಹಿಸಬಹುದಾಗಿದೆ. ಸಿರಾ ಸೇವನೆಯಿಂದಲೇ ಹುಟ್ಟುವ ಹೊಡೆದಾಟ, ಕೊಲೆ ಮುಂತಾದ ಇತರ ಎಷ್ಟೋ ಕೆಡಕುಗಳು ಸಂಗಡಲೇ ಇವೆ.

ಈಗ ದೊರಕುವ ಜಿಲ್ಲೆಯ ಸಾರಾಯಿ ಬದಲಿಗೆ ಭತ್ತದ ಸಾರಾಯಿಯನ್ನು ದೇಶದಲ್ಲೇ ತಯಾರಿಸುವ ಯೋಚನೆ ಮಾಡಲಾಗುತ್ತದೆಯೆಂತ ತಿಳಿಯಲು ವ್ಯಸನ ಪಡಬೇಕಾಗಿದೆ. ದೇಶದಲ್ಲೇ ಈ ಸಾರಾಯಿಯನ್ನು ತಯಾರಿಸಿದರೆ ಸುಲಭ ದರದಲ್ಲಿ ಕುಡಿಯುವವರಿಗೆ ಸಾರಾಯಿಯನ್ನು ಒದಗಿಸಬಹುದೆಂತ ಈ ವಿಷಯ ಅನುಮೋದಿಸಲು ಒಂದು ಆಫೀಸರು ಅಭಿಪ್ರಾಯ ಪಡುತ್ತಾರಂತೆ. ಮನೆಯಲ್ಲಿ ಖಾನೂನಿಗೆ ವಿರೋಧವಾಗಿ ತಯಾರಿಸುವ ಸಾರಾಯಿಯೂ, ಸರಕಾರಿ ಸಾರಾಯಿಯೂ ಒಂದೇ ಜಾತಿಯದಾದರೆ ಸ್ವಂತ ತಯಾರಿಸಿದ ಸಾರಾಯಿಯನ್ನು ಬೇರ್ಪಡಿಸಲು ಸುಲಭ ಸಾಧ್ಯವಾಗಲಾರದೆಂತ ನಮಗೆ ತೋರುತ್ತದೆ. ಸುಲಭ ದರದಲ್ಲಿ ಸಾರಾಯಿ ಸಿಕ್ಕಿದರೂ, ಮನೆಯಲ್ಲಿ ಸ್ವಂತ ತಯಾರಿಗೆ ಅನುಕೂಲವಾದರೂ ದೇಶದಲ್ಲಿ ಕುಡುಕತನ ಹೆಚ್ಚಾಗುವದೆಂಬ ಭಯದಿಂದ ಭತ್ತದ ಸಾರಾಯಿಯ ತಯಾರಿಕೆ ಏರ್ಪಾಡಿಗೆ ನಾವು ವಿರೋಧಿಸುತ್ತೇವೆ.

ಗಂಧದ ಕೃಷಿ ಹೆಚ್ಚಿಸುವದು ಊಹೆಯಿಂದ ಭಾರತೀಯ ಉತ್ಪತ್ತಿಯ ಸಂಸ್ಥೆಯನ್ನು ಸ್ಥಾಪಿಸಿದ್ದು ಅನುಕೂಲವೆಂದು ಕೈಸ್ಪಿಕರಿಸಿ ಇವರ ಧರವಣಿಯೂ ಪ್ರಾಗಮಿರಲಿ ಎಂತ ಆಶಿಸುತ್ತೇವೆ.

ಪೋಲೀಸ್ ಇಲಾಖೆಯ ಉತ್ಪತ್ತಿಗೆ ರೂ. 11,500 ಹೊಸದಾಗಿ ಸೇರಿಸಿದ್ದಾರೆ. ಪೋಲೀಸ ಬಲಗಳಿಗೆ ಈ ವರ್ಷದಿಂದ ಹಾಕುವ ಹೊಸ ತೆರಿಗೆಯಿಂದ ಈ ಉತ್ಪತ್ತಿಯಾಗಬಹುದೆಂತ ಅಂದಾಜು ಮಾಡಲಾಗಿದೆ.

ಖರ್ಚಿನ ಬಾಬುಗಳನ್ನು ನೋಡಿದರೆ ಎಕ್ಸೈಸ್ ಇಲಾಖೆಯ ಪುನಃ ಖರ್ಚು ಹೆಚ್ಚಿಸಲು ಪ್ರಾರಂಭಿಸಿದ್ದು ಯುಕ್ತವಾಗಿ ತೋರುವದಿಲ್ಲ. ಬಹು ಹೆಚ್ಚಿನ ಎಕ್ಸೈಸ್ ಸಬ ಇನ್ಸ್‌ಪೆಕ್ಟರನ್ನು ನೇಮಿಸಿದ್ದರಿಂದ ಈ ಇಲಾಖೆಯ ಉತ್ಪತ್ತಿಯು 5000 ರೂ. ಹೆಚ್ಚಿತೆಂತ ಅಧಿಕಾರಿಗಳು ಅಭಿಪ್ರಾಯ ಪಟ್ಟಿರುವದು ಸರಿಯೆಂತ ಒಪ್ಪಲು ಸಾಧ್ಯವಿಲ್ಲ. ಈ ಹೊಸ ಆಫೀಸರ ಎಚ್ಚರದಿಂದ 5000 ರೂ. ನ ಸಾರಾಯಿಯನ್ನು ಸ್ವಂತವಾಗಿ ಮಾಡುವವನ್ನು ಬಿಟ್ಟು ಸರಕಾರಿ ಸಾರಾಯಿಯನ್ನೇ ಕುಡಿದನೆಂತ ಹೇಗೆ ಹೇಳುವದು? ಇಷ್ಟೆಲ್ಲ ಸಾರಾಯಿಯು ಸ್ವಂತವಾಗಿ ತಯಾರಾಗುತ್ತಿದೆಯೆಂತ ನಮಗೆ ತೋರುವದಿಲ್ಲ. ಈ ಇಲಾಖೆಯ ಉತ್ಪತ್ತಿ ಹೆಚ್ಚಲು ಜನರಲ್ಲಿ ಸಾರಾಯಿಯ ಮೋಹ ಹೆಚ್ಚಿದ್ದೇ ಕಾರಣವಷ್ಟೆ. ಆಫೀಸರುಗಳ ಹೆಚ್ಚಿಕೆಯಿಂದ ಜನರ ಕುಡುಕತನ ಕಡಿಮೆಯಾಗಿದ್ದರೆ ನಾವು ಸಂತೋಷದಿಂದ ಈ ಖರ್ಚಿಗೆ ಒಪ್ಪಬಹುದಿತ್ತು. ಅದರ ಆಧಾರ ಕಾಣಿಸಿಗೆ ಎಡೆ ಇಲ್ಲ.

ಫಾರೆಸ್ಟ್ ಇಲಾಖೆಯ ಖರ್ಚು ಇಳಿದಿದ್ದಷ್ಟು ಪುನಃ ಹೆಚ್ಚುತ್ತಲಿದೆಯಂತೆ. ಈ ಇಲಾಖೆಯ ಖರ್ಚು ಕಡಿಮೆ ಮಾಡಲು ಸರಕಾರವು ನಿರ್ಣಯ ಮಾಡಿದ ವಿಷಯ ಸರಕಾರದ ಆವಾಯ ವೆಚ್ಚ ಸರಿಯಾಗಲಾರದು. ಏನೂ ಖರ್ಚಿಲ್ಲದ ಗಂಧದಿಂದ ದೊಡ್ಡ ಉತ್ಪತ್ತಿ ತೋರಿಸಿ ಇಲಾಖೆಯ ಖರ್ಚನ್ನು ಹೆಚ್ಚಿಸುವದು ಅಥವಾ ಹೆಚ್ಚಾಗಿ ಇಟ್ಟುಕೊಳ್ಳುವದು ನ್ಯಾಯವಲ್ಲವೆಂತ ಎಷ್ಟು ಸಾರಿ ಹೇಳಿದರೂ ಏನೂ ಪ್ರಯೋಜನವಾಗಲಾರದು. ಈ ಇಲಾಖೆಯ ಖರ್ಚಿನ ತಖ್ತೆ ಬಜೆಟ್ಟಿನಲ್ಲಿ ಕೊಡುವದು ಸಾಲದು "ಮುಂತಾದ್ದು" ಎಂಬ ಮಾತನ್ನು ಮೂರು ಬಾಬುಗಳಿಗೆ ಸೇರಿಸಿದ್ದಾರೆ. ಈ 'ಮುಂತಾದ್ದು'ನ್ನು ವಿವರಿಸುವದು ಅತಿ ಅವಶ್ಯವಾಗಿದೆ. ಅವರು ಹೇಳಿದಂತೆ ಇಲಾಖೆಯವರೇ ಒಪ್ಪುವ ಬಹು ಆಫೀಸರನ್ನು, ಅವಶ್ಯ ಖಂಡಿತವಾಗಿಯೂ ಇಲ್ಲವೆಂತ ದೇಶದವರು ಹೇಳುವ ಇನ್ನೊಬ್ಬ ಆಫೀಸರನ್ನು ಮದ್ರಾಸ್ ಸರಕಾರವು ನಮ್ಮ ಸರಕಾರದ ಮೇಲೆ ಬಲಾತ್ಕಾರದಿಂದ ಹೊರಿಸುವದು ನ್ಯಾಯವಲ್ಲ. ಇದನ್ನು ನಿವಾರಿಸಲು ಶಕ್ತಿ ಇಲ್ಲದೆ ನಮ್ಮ ಸರಕಾರವು ದಂಡ ತೆರುತ್ತಲೇ ಬರಬೇಕಾಗಿದೆ.

ಮೂವತ್ತೊಕ್ಲು ಪ್ರಾಂತ್ಯದಲ್ಲಿ ಯಾವ ಯಾವ ಜಾತಿಯ ಮರ ದೊರೆಯುತ್ತದೆ ಎಂಬುದನ್ನು ಕಂಡು ಹಿಡಿಯಲು ಒಂದು ಸರ್ವೆಯಾಗಬೇಕಂತೆ. ಆ ಬಗ್ಗೆ 10,000 ರೂ. ಖರ್ಚು ಇಟ್ಟಿದೆ. ಮೂವತ್ತೊಕ್ಲಿನ ಟ್ರಾಮ್‌ವೇಗಾಗಿ ಹತ್ತುಹತ್ತು ಲಕ್ಷ ರೂ. ಖರ್ಚು ಮಾಡಿದಾಗ ಆ ಪ್ರಾಂತ್ಯದಲ್ಲಿ ಯಾವ ಯಾವ ಮರ ದೊರೆಯುತ್ತದೆ ಎಂಬುದನ್ನು ಅಜಮಾಯಿಷಿ ನಡೆಸಲಿಲ್ಲವೆಂತಾಯಿತು. ಎಂಥಾ ಮರ ದೊರೆಯುತ್ತದೆ ಎಂಬುದನ್ನು ನೋಡದೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ ಆಡಳಿತವು ಎಂಥಾ ಬೇಜವಾಬ್ದಾರಿ ಆಡಳಿತವಾಗಿರಬೇಕು? ಈಗಲೂ ಈ ಹೊಸ ಖರ್ಚಿನಿಂದ ಪ್ರಯೋಜನವಿದೆ ಎಂಬವಕ್ಕೆ ಆಧಾರವನ್ನು ಪ್ರಕಟಿಸದ ವಿನಹ ಇದನ್ನು ಒಪ್ಪುವದು ಸರಿಯಲ್ಲ.

ಇಂಜಿನೀಯರಿಂಗ್ ಇಲಾಖೆಯಲ್ಲಿ ಒಂದೆರಡು ಬಾಬುಗಳ ಮೇಲೆ ಟೀಕಿಸಬೇಕಾಗಿದೆ. ಬೆಂಗಳೂರಲ್ಲಿ ರೆಸಿಡೆಂಟರಿಗೆ ಹೊಸ ಆಫೀಸು ಮತ್ತು ಜುಡಿಶಿಯಲ್ ಕಮಿಶನರಿಗೆ ಹೊಸ ಬಂಗಲೆ ಮನೆ ಕಟ್ಟಲು ನಮ್ಮ ಸರಕಾರದಿಂದ ಯಾಕೆ ಖರ್ಚು ಕೊಡಬೇಕೆಂಬುದು ನಮಗೆ ಗೊತ್ತಾಗುವದಿಲ್ಲ. ಚೀಫ್ ಕಮಿಶನರ ಇಲಾಖೆಗೆ ಬಾಡಿಗೆ ಕೊಡುವದಾದರೂ ಇಲ್ಲಿಂದ ಕೊಡುವದು ನ್ಯಾಯವಲ್ಲ. ಅದರಲ್ಲೂ ಕಟ್ಟಡಗಳಿಗೂ ಇಲ್ಲಿಂದ ಹಣಕೊಡಬೇಕೆಂತ ಕೇಳುವದರಲ್ಲಿ ಏನೇನೂ ನ್ಯಾಯವಿಲ್ಲ. ಮಡಿಕೇರಿಯಲ್ಲಿ ಚೀಫ್ ಕಮಿಶನರ ಬಾಗ್ಲೆ ಬಳಿ ಆಳುಗಳಿಗೆ ಮನೆ ಇದ್ದರೂ ಹೊಸ ಮನೆಯೊಂದು ಕಟ್ಟಲು ಮಂಜೂರಿಸುವದು ಸರಿಯಲ್ಲ. ದೇಶಕ್ಕೆ ಅವಶ್ಯವಿರುವ ಎಷ್ಟೋ ಖರ್ಚುಗಳನ್ನು ಹಿಂದೆ ಇಟ್ಟು ಈ ಥಾರಾಳದ ಖರ್ಚು ಮಾಡುವದು ಉಚಿತವಲ್ಲ.

ದಕ್ಷಿಣ ಕೊಡಗಿನ ಕೋರ್ಟು ಕಚೇರಿಗೆ ಹೋಗುವ ಜನರ ಕಷ್ಟವನ್ನು ನೋಡಿದರೆ ವೀರಾಜಪೇಟೆಯಲ್ಲಿ ಸಬ್‌ಜಡ್ಜ್ ಒಬ್ಬರನ್ನು ನೇಮಿಸಬೇಕಾದದ್ದು ಅವಶ್ಯವಾಗಿತ್ತು. ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕ್ರಿಮಿನಲ್ ಕೇಸುಗಳು ಹೆಚ್ಚಿ ಸಿವಿಲ್ ಕೇಸುಗಳು ಪೂರ್ತಿ ಹಿಂದೆ ಬೀಳುತ್ತಿವೆ. ಸಿವಿಲ್ ವ್ಯಾಜ್ಯಗಳಿಂದ ಸರಕಾರಕ್ಕೆ ತುಂಬಾ ಉತ್ಪತ್ತಿ ಇರುವಾಗ ಸಿವಿಲ್ ವ್ಯಾಜ್ಯಗಳ ತೀರ್ಮಾನಕ್ಕೆ ಸಹಾಯ ಕೊಡಬೇಕಾದದ್ದು ಸರಕಾರದ ಕರ್ತವ್ಯವಾಗಿದೆ.

ಜಮೀನ್ದಾರರ ಸಂಘದ ವಿನಂತಿ.

ಸೈಮನ್ ಕಮಿಷನಿನ ನೇಮಿಸುವಿಕೆಯಿಂದ ದೇಶದಲ್ಲಿ ಉಂಟಾಗಿರುವ ಅತೃಪ್ತಿಯನ್ನು ಸೂಚಿಸಲಿಕ್ಕಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಈ ಸಾರಿಯ ಬಜೆಟ್ ಚರ್ಚೆಯಲ್ಲಿ ಭಾಗಿಗಳಾಗಬಾರದೆಂತ, ಅವರಿಗೆ ಜಮೀನ್ದಾರರ ಸಂಘವು ಮಾಡಿರುವ ವಿನಂತಿಯು ತೀರ್ಮಾನದ ಮೇರೆ ಸಂಘದ ಜನರಲ್ ಸೆಕ್ರೆಟರಿಯವರು ಆಯಾ ಮೆಂಬರುಗಳಿಗೆ ಕಳುಹಿಸಿರುವ ಪತ್ರವೂ, ಅದಕ್ಕೆ ವಿರೋಧವಾಗಿ ಕೌನ್ಸಿಲಿನ ಒಬ್ಬ ಚುನಾಯಿತ ಮೆಂಬರಾದ ಪಿ. ಎ. ಬಿ. ಚಂಗಪ್ಪನವರು ಮಾಡಿರುವ ವಿಜ್ಞಾಪನೆಯೂ ಇನ್ನೊಂದು ಕಡೆ ಪ್ರಕಟಿಸಲ್ಪಟ್ಟಿವೆ.

ಜಮೀನ್ದಾರರ ಸಂಘವು ಕೊಡಗಿನ ಒಂದೇ ರಾಜಕೀಯ ಸಂಸ್ಥೆಯೆಂಬುದೂ, ಅದರ ಮೂಲಕ ದೇಶದ ಹೆಚ್ಚಿನ ಜನರ ಅಭಿಪ್ರಾಯವು ಸೂಚಿಸಲ್ಪಡುತ್ತಿದೆ ಎಂಬುದೂ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇನ್ನೊಂದು ಕಡೆ ಕೊಟ್ಟಿರುವ ಪ್ರಕಟಣೆಯ ಮೇರೆ ಕೌನ್ಸಿಲಿನ 13 ಚುನಾಯಿತ ಇಂಡಿಯನ್ ಮೆಂಬರುಗಳಲ್ಲಿ ಬಹುಮತವು ಅಂದರೆ 8 ಜನರು ಸಂಘದ ಕೋರಿಕೆ ಮೇರೆ ಈ ಸಾರಿ ಕೌನ್ಸಿಲ್ ಮೀಟಿಂಗಿಗೆ ಹೋಗುವದಿಲ್ಲವೆಂದು ನಿಶ್ಚಯಿಸಿರುವದು ಇದಕ್ಕೆ ಉದಾಹರಣೆಯಾಗಿದೆ. ಈ ಸಂಘಕ್ಕೆ ಮೆಂಬರಾಗಿ ಸೇರಲು ಯಾರಿಗೂ ತಡೆಗಟ್ಟಿರುವದಿಲ್ಲ. ಹೀಗಿರುವಲ್ಲಿ ಈ ಸಂಘವು ಕೆಲವರದು ಮಾತ್ರವೆಂದೂ, ಇದರಲ್ಲಿ ದೇಶದ ಎಲ್ಲಾ ತರಹದ ಅಭಿಪ್ರಾಯಗಳ ಮೆಂಬರುಗಳಿಲ್ಲವೆಂದೂ ಹೇಳುವದರಲ್ಲಿ ಎಷ್ಟರ ಮಟ್ಟಿಗೆ ನ್ಯಾಯವಿದೆಯೆಂದು ವಾಚಕರೇ ಊಹಿಸಿಕೊಳ್ಳಬಹುದು.

ಸಂಘವು ಕೌನ್ಸಿಲಿಗೆ ಪ್ರತಿನಿಧಿಗಳನ್ನು ಕಳುಹಿಸಿರುವದಿಲ್ಲವೆಂಬವರೇನೋ ನಿಜ. ಆದರೆ ಸಂಘದ ಮೆಂಬರುಗಳೂ ಕೌನ್ಸಿಲ್ ಮೆಂಬರುಗಳನ್ನು ಆರಿಸುತ್ತಾರಷ್ಟೆ. ಪಿ. ಎ. ಬಿ. ಚಂಗಪ್ಪನವರೂ ಸಂಘದ ಮೆಂಬರಾಗಿ ಇರುತ್ತಾರೆ. ಇವರೇ ಮ. ಮುಂಡ್ಯೋಳಗಿ ಮತ್ತು ಆರ್‌ಚ್‌ ಜೆರ್ಮನ್ ಫರ್ನಾಂಡಿಸರವರು ಮುಂದೆ ಡೆಪ್ಯೂಟೇಷನಿನಲ್ಲಿ ಹೋಗಿ ಸಂಘವು ದೇಶದ ಅಭಿಪ್ರಾಯವನ್ನು ಸೂಚಿಸುವ ಸಂಸ್ಥೆಯೆಂತ ಹೇಳಲಿಲ್ಲವೇ? ಸಂಘದ ಮೆಂಬರುಗಳಿಂದ ಚುನಾಯಿಸಲ್ಪಟ್ಟ ಕಾರ್ಯಕಾರಿ ಮಂಡಳಿಯ ತೀರ್ಮಾನವು ಅದರ ಮೆಂಬರುಗಳಾದ ಓಟರುಗಳ ಅಭಿಪ್ರಾಯವನ್ನು ಸೂಚಿಸುವದಿಲ್ಲವೆಂದು ಯಾರು ತಾನೇ ಹೇಳಬಲ್ಲರು. ಅದರಲ್ಲೂ, ಸಂಘದ ಕಮಿಟಿಯು ಉದ್ಯೋಗಸ್ಥರಲ್ಲದ ಕೌನ್ಸಿಲು ಮೆಂಬರುಗಳಲ್ಲಿ ವಿನಂತಿ ಮಾಡಿಕೊಂಡದೆಯಲ್ಲದೆ ಹೀಗೆಯೇ ಮಾಡಬೇಕೆಂದು ಆಜ್ಞಾಪಿಸಿರುವದಿಲ್ಲ. ದೇಶದ ಏಳಿಗೆಗಾಗಿ ಹೋರಾಡುತ್ತಿರುವ ಈ ಸಂಘವು ದೇಶದ ಗೌರವವನ್ನು ಕಾಪಾಡಲು ತನಗೆ ಉತ್ತಮವಾದದ್ದೆಂದು ತೋರಿದ ದಾರಿಯಲ್ಲಿ ಹೋಗುವಂತೆ ದೇಶದ ಪ್ರತಿನಿಧಿಗಳಿಗೆ ವಿಜ್ಞಾಪಿಸಿಕೊಂಡದರಲ್ಲಿ ಅದು ಅದರ ಕರ್ತವ್ಯವನ್ನು ಮಾಡಿರುವದಲ್ಲದೆ ತಪ್ಪೇನೂ ಕಾಣುವದಿಲ್ಲ. ಕೌನ್ಸಿಲಿನಲ್ಲಿ ಈ ವಿಷಯ ಹೇಗೆ ವರ್ತಿಸಬೇಕೆಂಬುದನ್ನು ನಿಶ್ಚಯಿಸಬೇಕಾದದ್ದು ಪ್ರತಿನಿಧಿಗಳ ಕರ್ತವ್ಯವಾಗಿತ್ತು. ಹಾಗೆ ಮಾಡದೆ ಇರುವದು ಸಂಘದ ತಪ್ಪಲ್ಲ. ಸಂಘವು ತನ್ನ ವಿನಂತಿಯ ಮೂಲಕ ಕೌನ್ಸಿಲು ಮೆಂಬರುಗಳನ್ನು ಎಚ್ಚರಿಸಿಯೂ ಕೂಡ ಅವರು ತಮ್ಮ ಕರ್ತವ್ಯವನ್ನು ಮಾಡದೆ ಇದ್ದರೆ ಜವಾಬ್ದಾರರು ಯಾರು? ತೀರ್ಮಾನವು ನ್ಯಾಯವಾದದ್ದಾದರೆ ಅದನ್ನು ಯಾರೇ ಮಾಡಿರಲಿ, ಅದಕ್ಕೆ ತಮ್ಮ ಆಲೋಚನೆಯನ್ನು ಕೇಳಲಿಲ್ಲವೆಂಬ ಕಾರಣದಿಂದ ಅದನ್ನು ವಿರೋಧಿಸುವದು ಸರಿಯಲ್ಲವೆಂದು ನಾವು ಹೇಳಬೇಕಾಗಿಲ್ಲ.

ಎಸೆಂಬ್ಲಿಯ ಜಯ.

'ಸೈಮನ್ ಕಮಿಷನಿನ ಮೇಲೆ ಎಸೆಂಬ್ಲಿ ಸಭೆಗೆ ವಿಶ್ವಾಸವಿಲ್ಲ'ವೆಂಬ ಶ್ರೀಯುತ ಲಾಲಾ ಲಜಪತರಾಯರ ಠರಾವಿನ ಚರ್ಚೆಯು ಆ ಸಭೆಯಲ್ಲಿ ಈ ತಾ. 16ರಲ್ಲಿ ಪ್ರಾರಂಭವಾಯಿತು. ಈ ವಿಷಯವು ಬಹು ಮಹತ್ವದ್ದಾದ ದರಿಂದ ಸರಕಾರ ಪಕ್ಷದವರಿಗೂ, ಜನರ ಪಕ್ಷದವರೂ ಓಟಿನಲ್ಲಿ ಭಾಗಿಗಳಾಗಲು ತುಂಬಾ ಕುತೂಹಲವುಳ್ಳವರಾಗಿದ್ದರು. ಸಿಂಧು ಪ್ರಾಂತ್ಯದ ಸೇ. ಹ ಜೇಂದ್ರಾಯಿ ವಿಶಿನ್ದಾಸ್ ಎಂಬವರು ಕಾಯಿಲೆಯವರಾಗಿದ್ದರೂ ಕೂಡ ಈ ಠರಾವಿನ ಪರವಾಗಿ ಓಟು ಕೊಡುವ ಅಭಿಲಾಷೆಯಿಂದ ಆ ದಿನ ಡೆಲ್ಲಿಗೆ ಬಂದವರು, ಮಧ್ಯಾಹ್ನದ ಹೊತ್ತಿನಲ್ಲಿ ಆಸ್ಪತ್ರೆಗೆ ಒಯ್ಯುತ್ತಿರುವಾಗ ದಾರಿಯಲ್ಲಿ ಸ್ವರ್ಗಸ್ಥರಾದರು. ಇವರ ಮರಣವು ಬಹು ವಿಷಾದಕರವಾದರೂ ಇವರು ತಮ್ಮ ದೇಶದ ಹಿತಕ್ಕಾಗಿ ತಮ್ಮ ಕರ್ತವ್ಯವನ್ನು ಮಾಡುವದರಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದ್ದು ಸ್ತೋತ್ರಾರ್ಹವಾಗಿದೆ. ಇವರ ಮರಣವಾರ್ತೆಯನ್ನು ಕೇಳಿದ ಕೂಡಲೇ ಎಸೆಂಬ್ಲಿಯ ಕೆಲಸವು ಆ ದಿನಕ್ಕೆ ಬಾಕಿ ಮಾಡಲ್ಪಟ್ಟು ಮೆಂಬರುಗಳಲ್ಲನೇಕರು ಅವರ ಶವದ ಮೆರವಣಿಗೆಯಲ್ಲಿ ಹಾಜರಿದ್ದರು. ಮರುದಿನ ಮುಸಲ್ಮಾನರಿಗೆ ರಜಾ ದಿನವಾದುದರಿಂದ ತಾ. 18ರಲ್ಲಿ ಈ ಠರಾವಿನ ಚರ್ಚೆಯು ಮುಂದರಿಸಲಾಯಿತು. ಪಾರ್ಟಿಯ ಮುಂದಾಳುಗಳಾದ ಲಾಲಾ ಲಜಪತರಾಯರು, ಶ್ರೀನಿವಾಸ ಅಯ್ಯಂಗಾರರು, ಜಿನ್ನಾರವರು, ಜಯಕರ್‌ರವರು ಮತ್ತು ಪಂಡಿತ ಮದನಮೋಹನ ಮಾಳವೀಯರು ಸಕಾರಣಗಳಿಂದ ಕೂಡಿದ ತಮ್ಮ ಭಾಷಣಗಳಿಂದ ರಾಯಲ್ ಕಮಿಷನಿನ ನೇಮಿಸು

(೯ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೨೩ನೇ ಪ್ರಕರಣ

ಗೃಹಕೃತ್ಯದ ಒಂದು ದೃಶ್ಯ

ಅಲ್ಲಿ ಗೃಹಕೃತ್ಯದ ವೆಚ್ಚವು ಹೆಚ್ಚಾಗಿದ್ದಿತಾದರೂ ಮನಸ್ಸು ಸರಳ ಜೀವನದ ಕಡೆಗೆ ಡರ್ಬನ್ನಿನಲ್ಲಿಯೇ ಬಾಗಿತೆಂದು ನಾವು ಆಗಲೇ ನೋಡಿದ್ದೇವೆ. ಆದರೆ ಜೋಹಾನ್ಸ್ ಬರ್ಗಿನ ಮನೆಯು ಆಡಳಿತವು ರಸ್ಕಿನರ ಉಪದೇಶದ ದಸ್ [illegible] ಕವಾಗಿ ಮಾರ್ಪಟ್ಟಿತು.

ಬ್ಯಾರಿಸ್ಟರ ಮನೆಯಲ್ಲಿ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿನ ಸರಳತೆಯನ್ನು ನಾನು ನನ್ನ ಮನೆಯಲ್ಲಿ ಹುಟ್ಟಿಸಿ [illegible] ಸ್ವಲ್ಪಮಟ್ಟಿಗೆ ಕುರ್ಚಿ ಮೇಜು ಮುಂತಾದ ಸಾಮಾನುಗಳನ್ನು ಇಟ್ಟುಕೊಳ್ಳದಿರುವುದು ಸಾಧ್ಯವಿರಲಿಲ್ಲ. ಬಾಹ್ಯ ಸುಧಾರಣೆಗಿಂತಲೂ ಆಂತರಿಕ ಪರಿವರ್ತನವೇ ಹೆಚ್ಚಾಗಿದ್ದಿತು. ಶಾರೀರಕವಾದ ಕೆಲಸಗಳನ್ನೆಲ್ಲಾ ಸ್ವತಃ ಮಾಡುವುದರಲ್ಲಿ ಆಸಕ್ತಿಯು ಹೆಚ್ಚಿತು. ಆದ್ದರಿಂದ ನನ್ನ ಮಕ್ಕಳಿಗೂ ಆ ಶಿಕ್ಷಣವನ್ನೇ ಕೊಡ ತೊಡಗಿದೆನು.

ಅಂಗಡಿಯ ರೊಟ್ಟಿಯನ್ನು ಕೊಳ್ಳುವುದರ ಬದಲು ಕೂನೆಯವರು ಹೇಳಿರುವಂತೆ ಹುಳಿ ಸೋಕದ ಹಿಟ್ಟಿನ ರೊಟ್ಟಿಯನ್ನು [illegible] (ಯಂತ್ರಗಳಲ್ಲಿ ಹಸನು ಮಾಡಿರುವ ದಾನ್ಯದಲ್ಲಿ ಸತ್ವವೆಲ್ಲಾ ಹೋಗಿರುವುದರಿಂದ ಅದರ ಸತ್ವವು ತೊಲಗಿ ಅಂತಹ ದಾನ್ಯವು ಆರೋಗ್ಯಕ್ಕೆ ಹಾನಿಕರವೆಂದು ವೈದ್ಯಶಾಸ್ತ್ರಜ್ಞರ ಅಭಿಪ್ರಾಯ) ರೊಟ್ಟಿಯನ್ನು ಮನೆಯಲ್ಲಿಯೇ ಮಾಡ ತೊಡಗಿದೆವು. ಇದಕ್ಕೆ ಸಾಮಾನ್ಯವಾಗಿ ದೊರಕುವ ಹಿಟ್ಟು ಪ್ರಯೋಜನವಿಲ್ಲವಾದುದರಿಂದ ಕೈಯಿಂದ ಬೀಸಿದ ಹಿಟ್ಟು ಹೆಚ್ಚು ಸರಳತೆ, ಆರೋಗ್ಯ, ಮಿತವ್ಯಯದಲ್ಲಿ [illegible] ವುದೆಂದು ಯೋಚಿಸಿದೆವು. ಆದುದರಿಂದ ನಾನು ೭ ಪೌಂಡು ಕೊಟ್ಟು ಬೀಸುವ ಕಲ್ಲನ್ನು ತೆಗೆದುಕೊಂಡೆನು. ಇದು ಕಬ್ಬಿಣದ್ದಾದುದರಿಂದ ಒಬ್ಬರು ಬೀಸಲು ಇದು ಬಹು ಭಾರವಾಗಿದ್ದಿತು. ಆದರೆ ಇಬ್ಬರು ಇದನ್ನು ಸುಲಭವಾಗಿ ತಿರುಗಿಸಬಹುದಾಗಿತ್ತು. [illegible] ಹೆಚ್ಚಿನ ಮಟ್ಟಿಗೆ ಪೋಲಕರು, ನಾನು ಮತ್ತು ಹುಡುಗರು ಬೀಸುತ್ತಿದ್ದೆವು. ಬೀಸುವ ಹೊತ್ತೇ ಕಸ್ತೂರಿಬಾಯಿಗೆ ಅಡಿಗೆಯ ಸಮಯವಾಗಿರುತ್ತಿದ್ದಿತು. ಆದರೂ ಒಮ್ಮೊಮ್ಮೆ ಆಕೆಯೂ ಈ ಕೆಲಸಕ್ಕೆ ಕೈ ಹಾಕುತ್ತಿದ್ದಳು. ಈಗ ಪೋಲಕರ ಹೆಂಡತಿಯು ಬಂದಮೇಲೆ ಆಕೆಯು ನಮಗೆ ನೆರವಾದಳು. ಈ ಕೆಲಸವು ಹುಡುಗರಿಗೆ ಬಹು ಲಾಭದಾಯಕವಾದ ವ್ಯಾಯಾಮವಾಯಿತು. ಈ ಕೆಲಸವನ್ನಾಗಲಿ ಅಥವಾ ಇನ್ನಾವ ಕೆಲಸವನ್ನಾಗಲಿ ಅವರ ಮೇಲೆ ಒತ್ತಾಯದಿಂದ ಹೇರುತ್ತಿರಲಿಲ್ಲ. ಆದರೆ ಅವು ಒಂದು ನೆರವಾಗುವುದು ಅವರಿಗೊಂದು ಆಟವಾಗಿದ್ದಿತು. ಬೇಸರವಾದೊಡನೆ ಬಿಟ್ಟುಬಿಡ [illegible] ಅವರಿಗೆ ಯಾವ ಅಡ್ಡಿಯೂ ಇರಲಿಲ್ಲ. ಆದರೆ ಈ ಹುಡುಗರಾಗಲಿ, ನಾನು ಮುಂದೆ ಪರಿಚಯ ಮಾಡಿಕೊಡಬೇಕಾಗಿ ಬರುವ ಹುಡುಗರಾಗಲಿ ಸಾಮಾನ್ಯವಾಗಿ ಎಂದೂ ಕೆಲಸಕ್ಕೆ ಹಿಂತೆಗೆಯುತ್ತಿರಲಿಲ್ಲ. [illegible] ಇಲ್ಲವೆಂದಲ್ಲ. ಮುಕ್ಕಾಲುವಾಸಿ ನಗು ಮುಖದಿಂದಲೇ ಕೆಲಸ ಮಾಡುತ್ತಿದ್ದರು. ಕೆಲಸಕ್ಕೆ [illegible] ಅಥವಾ ಆಯಾಸವಾಯಿತು ಎನ್ನುತ್ತಿದ್ದ ಹುಡುಗರು ಹೆಚ್ಚಾಗಿ ಇದ್ದಂತೆ ನನಗೆ ನೆನಪಿಲ್ಲ.

ಮನೆಯನ್ನು ನೋಡಿಕೊಳ್ಳುವುದಕ್ಕೆ ನಾವು ಒಬ್ಬ ಆಳನ್ನು ಇಟ್ಟುಕೊಂಡಿದ್ದೆವು. ಅವನು ಕುಟುಂಬಕ್ಕೆ ಸೇರಿದವನಾಗಿ ನಮ್ಮೊಡನೆಯೇ ವಾಸಿಸುತ್ತಿದ್ದನು. ಅವನ ಕೆಲಸದಲ್ಲಿ ಹುಡುಗರು ಅವನಿಗೆ ನೆರವಾಗುತ್ತಿದ್ದರು. ಪೌರಸಭೆಯ ಜಾಡಮಾಲಿಯೊಬ್ಬನು ಮಲಮೂತ್ರಾದಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರೂ ಬಚ್ಚಲನ್ನು ತೊಳೆಯುವುದರ ಬದಲು ನಾವೇ ಕಕ್ಕಸವನ್ನು ಶುಚಿ ಮಾಡುತ್ತಿದ್ದೆವು. ಬಚ್ಚಲನ್ನು [illegible] ಇದು ಹುಡುಗರಿಗೆ ಮಾಡುವರೆಂದು ನಿರೀಕ್ಷಿಸುತ್ತಿರಲಿಲ್ಲ. ಇದರ ಫಲವೇನಾಯಿತೆಂದರೆ ಒಳ್ಳೆಯ ಶಿಕ್ಷಣವಾಯಿತು. ನನ್ನ ಮಕ್ಕಳಲ್ಲಿ ಒಬ್ಬರಿಗೂ ಜಾಡಮಾಲಿಯ ಕೆಲಸದಲ್ಲಿ ಅಸಹ್ಯ ಹುಟ್ಟದಿದ್ದುದಲ್ಲದೆ ಸ್ವಚ್ಛತೆಯ ನಿಯಮಗಳ ಜ್ಞಾನವು ಅವರಿಗೆ ಸ್ವಭಾವವಾಗಿಯೇ ಉಂಟಾಯಿತು. ಜೋಹಾನ್ಸ್ ಬರ್ಗಿನ ಮನೆಯಲ್ಲಿ ಕಾಯಿಲೆ ಒಂದಾದರೂ ಇರಲಿಲ್ಲ. [illegible] ಅದು ಒಂದಾಗ ಹುಡುಗರು ಶ್ರದ್ಧಾಪೂರ್ವಕವಾಗಿ [illegible] ಯ ಶುಶ್ರೂಷೆಯನ್ನು ಮಾಡುತ್ತಿದ್ದರು. ಅವರಿಗೆ ಸಾಹಿತ್ಯ ಶಿಕ್ಷಣವನ್ನು ಕೊಡುವ ವಿಚಾರದಲ್ಲಿ ನಾನು ಉದಾಸೀನನಾಗಿದ್ದೆನೆಂದು ಹೇಳುವುದಿಲ್ಲ. ಇದು ಇತರ ಲಕ್ಷಣಕ್ಕಾಗಿ ಅದನ್ನು ಬಲಿಗೊಡಲು ನಾನು ಹಿಂತೆಗೆಯಲಿಲ್ಲ. ಆದ್ದರಿಂದ ಈ ವಿಷಯವಾಗಿ ನನ್ನ ಮಕ್ಕಳು ನನ್ನನ್ನು ಆಕ್ಷೇಪಿಸಬಹುದು. ಅವರು ಹಾಗೆ ಮಾಡಿಯೂ ಇದ್ದಾರೆ. ಅದಕ್ಕೆ ಉತ್ತರವಾಗಿ ನಾನು ಸ್ವಲ್ಪಮಟ್ಟಿಗೆ ತಪ್ಪಿತಸ್ಥನೆಂದೇ ಹೇಳಬೇಕು. ಅವರಿಗೆ ಸಾಹಿತ್ಯ ಶಿಕ್ಷಣವನ್ನು ಕೊಡಿಸಬೇಕೆಂಬ ಇಚ್ಛೆಯು ನನ್ನಲ್ಲಿ ಇದ್ದೇ ಇದ್ದಿತು. ನಾನೇ ಆ ಕೆಲಸವನ್ನು ಮಾಡಲು ಪ್ರಯತ್ನಪಟ್ಟೂ ಪಟ್ಟೆನು. ಆದರೆ ಆ ಕೆಲಸಕ್ಕೆ ಯಾವದಾದರೊಂದು ಅಡಚಣೆಯು ಒದಗುತ್ತಲೇ ಇದ್ದಿತು. ಅವರಿಗೆ ಇನ್ನಾರಿಂದಲೂ ವಿಶೇಷ [illegible] ವಿದ್ಯಾಭ್ಯಾಸವನ್ನು ಮಾಡಿಸಲಿಲ್ಲವಾದುದರಿಂದ ನಾನು ಪ್ರತಿನಿತ್ಯವೂ ನನ್ನ ಕಚೇರಿಗೆ ಹೋಗುವಾಗ ಮತ್ತು ಅಲ್ಲಿಂದ ಬರುವಾಗ ಅವರೊಡನೆ ನಡೆಯುತ್ತಿದ್ದೆನು. ಇದು ಒಟ್ಟು ಸು [illegible] ಮೈಲಿ ನಡೆಯಬೇಕಾಗುತ್ತಿದ್ದಿತು. ಇದರಿಂದ ಅವರಿಗೂ ನನಗೂ ತಕ್ಕಷ್ಟು ವ್ಯಾಯಾಮವಾಗುತ್ತಿದ್ದಿತು. ಹೀಗೆ ನಡೆಯುವ ಕಾಲದಲ್ಲಿ ಇತರರಾರೂ ನನಗೆ ಕೆಲಸ ಇಲ್ಲದಿದ್ದಾಗ ನಾನು ಮಾತಾಡುವುದರಲ್ಲಿಯೇ ಅವರಿಗೆ [illegible] ವನ್ನು ಕೊಡಲು ಪ್ರಯತ್ನಪಟ್ಟೆನು. ನನ್ನ ಹಿರಿಯ ಮಗನಾದ ಹರಿಲಾಲನನ್ನು ಬಿಟ್ಟು, ಉಳಿದ ಎಲ್ಲ ಮಕ್ಕಳೂ ಜೋಹಾನ್ಸ್ ಬರ್ಗಿನಲ್ಲಿ ಈ ರೀತಿಯ ಶಿಕ್ಷಣವನ್ನೇ ಪಡೆದರು. [illegible] ಪ್ರತಿದಿನವೂ ತಪ್ಪದೆ ಕಟ್ಟಕಡೆಗೆ ಒಂದು ಗಂಟೆಯ ಪಟ್ಟಾಗಿ ಪಾಠವಾದರೂ ಅವರಿಗೆ ಹೇಳಿಕೊಡುವುದು ನನಗೆ ಸಾಧ್ಯವಾಗಿದ್ದರೆ ಅವರಿಗೆ ಆದರ್ಶಪ್ರಾಯವಾದ ಶಿಕ್ಷಣವನ್ನು ಕೊಟ್ಟಂತಾಗುತ್ತಿತ್ತೆಂದು ನನ್ನ ಅಭಿಪ್ರಾಯ. ಆದರೆ ನಾನು ಅವರಿಗೆ ಸಾಕಾದಷ್ಟು ಸಾಹಿತ್ಯ ಶಿಕ್ಷಣವನ್ನು ದೊರಕಿಸಲಿಲ್ಲ. ಇದು ಅವರಿಗೂ ನನಗೂ ಕೂಡ ವಿಷಾದಕ್ಕೆ ಕಾರಣವಾಗಿದೆ. ನನ್ನ ಹಿರಿಯ ಮಗನು ಈ ವಿಷಯವಾಗಿ ತನ್ನ ದುಃಖವನ್ನು ನನ್ನ ಬಳಿಯೂ ಪತ್ರಿಕೆಗಳ ಮೂಲಕವಾಗಿಯೂ ಅನೇಕ ಸಾರಿ ವ್ಯಕ್ತಪಡಿಸಿದ್ದಾನೆ. ಇತರ ಮಕ್ಕಳು [illegible] ಈ ದೋಷವನ್ನು ಅನಿವಾರ್ಯವೆಂದು ತಿಳಿದು ಉದಾರ ಬುದ್ಧಿಯಿಂದ ಮನ್ನಿಸಿದ್ದಾರೆ. [illegible] ಇದರಿಂದ ನನಗೆ ದುಃಖವಾದ ಪಶ್ಚಾತ್ತಾಪವೇನೂ ಇಲ್ಲ. [illegible] ಪಶ್ಚಾತ್ತಾಪವೇನಾದರೂ ಇದ್ದರೆ ಅದು ನಾನು ಆದರ್ಶ ತಂದೆಯಾಗಲಿಲ್ಲವಲ್ಲಾ ಎಂಬುದಕ್ಕಾಗಿ ಮಾತ್ರ. ಆದರೆ ನಾನು [illegible] ಅರಿವಿಲ್ಲದೆ [illegible] ಸಮಾಜಸೇವೆ ಮಾಡಿದ್ದೇನೆ [illegible] ನನ್ನ ಅಭಿಪ್ರಾಯ. ಅವರ ಸಾಹಿತ್ಯ ಶಿಕ್ಷಣವನ್ನು ಬಲಿಕೊಟ್ಟೆನು. [illegible] ನನ್ನ ಮಕ್ಕಳು [illegible] ಅವರ ಶಿಕ್ಷಣವನ್ನು [illegible] ನಾನು [illegible] ಅವರ ಶೀಲ ರಚನೆಗೆ [illegible] ಕೊಡುವುದು [illegible] ಪ್ರಯತ್ನ [illegible] ಅವರಿಗೆ [illegible] ಶೀಲವು ಶಿಕ್ಷಣದ ಅಡಿಗಲ್ಲು [illegible] ತಂದೆತಾಯಿಗಳ [illegible] ವಾಗಿ ಒಪ್ಪಿಸಿದೆ.

ಮಕ್ಕಳು [illegible] ಇವರ ಗುಣದೋಷಗಳಿಗೆ ನಾನು ಸಹ ಜವಾಬ್ದಾರನೆಂದು ಭಾವಿಸುತ್ತೇನೆ. [illegible] ಗರ್ಭಸ್ಥ ಮಗುವಿನ ಮೇಲೆ [illegible] ನನ್ನ ದೋಷಗಳೂ [illegible] ನನ್ನ ಮಕ್ಕಳಲ್ಲಿ [illegible] ಇದಕ್ಕೆ ಕಾರಣ [illegible] ಇದು ಎತ್ತರದ [illegible]

ಈ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡದ ವಿಷಯ [illegible] ಹಿಂದೂಸ್ಥಾನದ [illegible] ಮಕ್ಕಳಿಗೆ ಬಾಲ್ಯದಿಂದ ಇಂಗ್ಲಿಷ್ ಭಾಷೆಯಲ್ಲಿಯೇ ಮಾತನಾಡುವುದನ್ನು [illegible] ಮಾತೃಭಾಷೆಯನ್ನು ಕಲಿಸಿಕೊಡದೆ [illegible] ತಮ್ಮ ಮಕ್ಕಳಿಗೂ ತಮ್ಮ ದೇಶಕ್ಕೂ [illegible] ಮಕ್ಕಳು [illegible] ಅವರ ತಮ್ಮ ಮಕ್ಕಳಿಗೆ [illegible] ಸಂಸ್ಕೃತಿಯ [illegible] ಪರಂಪರೆಯಲ್ಲಿ ಆ ಮಕ್ಕಳನ್ನು [illegible] ಆ ಕಾರಣದಿಂದ ನಾನು ಯಾವಾಗಲೂ ನನ್ನ ಮಕ್ಕಳೊಡನೆ ಗುಜರಾತಿಯಲ್ಲಿಯೇ ಮಾತನಾಡುತ್ತಿದ್ದೆನು. ಪೋಲಕರಿಗೆ [illegible] ನಡೆಯುತ್ತಿರಲಿಲ್ಲ. ನಾನು [illegible] ಮಕ್ಕಳ [illegible] ದನ್ನು ಕೆಡಿಸುತ್ತಿದ್ದೇನೆಂದು [illegible] ನನ್ನ ಮಕ್ಕಳು ಇಂಗ್ಲಿಷಿನಂತಹ ಜಗದ್ವ್ಯಾಪಕವಾದ ಭಾಷೆಯನ್ನು ತಮ್ಮ ಚಿಕ್ಕಂದಿನಿಂದ ಕಲಿತರೆ [illegible] ಅವರ ಇತರರನ್ನು ಸುಲಭವಾಗಿ ಹಿಂದೆ ಹಾಕಬಹುದೆಂದು ಪೋಲಕರು [illegible] ಅಗತ್ಯದ ವಿಷಯ ಅತ್ಯಂತ ಪೂರ್ವಕವಾಗಿ [illegible] ನನ್ನ ಅಭಿಪ್ರಾಯವು [illegible] ಯಿಂದ ಅವರನ್ನು [illegible] ಅಥವಾ ಅವರು ನನ್ನನ್ನು [illegible] ಇದು ನಡೆದು ಸುಮಾರು ೨೦ ವರ್ಷವಾಯಿತು. ನನ್ನ ಅನುಭವದೊಂದಿಗೆ ನನ್ನ ಅಭಿಪ್ರಾಯವೂ ಮತ್ತು ಹೆಚ್ಚು ದೃಢವಾಗುತ್ತಾ ಬಂದಿದೆ. [illegible] ಶಿಕ್ಷಣವಿಲ್ಲದುದರಿಂದ ನನ್ನ ಮಕ್ಕಳಿಗೆ [illegible] ಅವರು ಸ್ವಭಾವವಾಗಿ ಗಳಿಸಿದ ತಾಯ್ನುಡಿಯ ಅರಿವು ಅವರಿಗೂ, ದೇಶಕ್ಕೂ ಮಂಗಳಕರವಾಗಿಯೇ [illegible] ವಿಕಾಂಬರಿ [illegible] ಹೀಗೆ ವಿಚಿತ್ರವಾಗಿದ್ದಾರೆ [illegible] ಈಗ ವಿದೇಶಿಗರಂತೆ [illegible] ಅನೇಕ ವಿದ್ವಾಂಸರ ಸಂಪರ್ಕವುಂಟಾಗುತ್ತಿದ್ದುದರಿಂದಲೂ [illegible] ಮಿತ್ರರೊಡನೆ ಸಂಪರ್ಕವುಂಟಾಗುತ್ತಿದ್ದುದರಿಂದಲೂ ಇಂಗ್ಲಿಷ್ ಭಾಷೆಯನ್ನೇ ಮುಖ್ಯವಾಗಿ ಮಾತನಾಡುವ ದೇಶದಲ್ಲಿ ಅವರು ಇದ್ದುದರಿಂದಲೂ ಆ ಭಾಷೆಯಲ್ಲಿ ಸಾಕಷ್ಟು [illegible] ದಲ್ಲಿ ಪರಿಣತಿ ಹೊಂದಿದರು, ಬರೆಯಲು ಬಲ್ಲವರಾಗಿ [illegible] ದ್ವಿಭಾಷಿಗಳಾದರು.

ಹಿಂದೂಸ್ಥಾನದ ನಿರಕ್ಷರತ್ವ.

ಇದು ಸ್ವರಾಜ್ಯದ ಅಡ್ಡಿಯೋ?

(ಕನ್ನಡ [illegible] ದಿಂದ ಭಾಷಾಂತರಿಸಿದ್ದು)

ಇದ [illegible] ಹಿಂದೂಸ್ಥಾನದಂಥ ದೇಶದಲ್ಲಿ ಸ್ವರಾಜ್ಯ [illegible] ಅಕ್ಷರಸ್ಥರು ಸ್ಥಾಪಿಸಿದರು ಕೊಡುವದನ್ನು [illegible] ? ಓದು ಬರಹದ ಜ್ಞಾನ [illegible] ವಿಷಯಗಳ [illegible] ಮತ್ತು [illegible] ಉಪಯೋಗಗಳಿಗೆ ಅವಶ್ಯವಿರಬಹುದು. ಹಿಂದೂಸ್ಥಾನದಂಥ ದೇಶದಲ್ಲಿ ಒಬ್ಬ ಪ್ರಜೆಯು [illegible] ಉಪಯೋಗಿಯಾಗಬೇಕಾದರೆ ಪ್ರಜೆಯು [illegible] ತಿಳುವಳಿಕೆಯನ್ನು ಪಡೆಯಬೇಕು. ಅಕ್ಷರ ತಿಳಿಯದ ಪ್ರಜೆಗಳು [illegible] ಇದರಲ್ಲಿ ಪ್ರಜೆಗಳು ಅಕ್ಷರ ತಿಳಿದಿರಬೇಕೆಂದು ಹೇಳುವವರಾದರೂ ನಮ್ಮ ಸಂಸ್ಕೃತಿಗೆ ಸಂಬಂಧವಿಲ್ಲದ ಬೇರೆಯವರ ಮಾತು ಹೇಳುವ [illegible] ದೇಶಗಳಲ್ಲಿ ಅಕ್ಷರ ತಿಳಿದವರೇ ಬುದ್ಧಿವಂತರು; ಅಕ್ಷರ ತಿಳಿಯದವರು ಮೂರ್ಖರೆಂದು ನಾವು ಭಾವಿಸುತ್ತೇವೆ. ಇದು ಸರಿಯಲ್ಲ. ಅಕ್ಷರ ತಿಳಿದವನು ಮೂರ್ಖನಾಗಿಯೂ ಇರಬಹುದು. ಅಕ್ಷರ ತಿಳಿಯದವನು ಬುದ್ಧಿವಂತನಾಗಿಯೂ ಇರಬಹುದು.

[illegible] ವ್ಯಕ್ತಿಯಲ್ಲಿ ಪರೀಕ್ಷೆ ಮಾಡಿದ್ದರಲ್ಲಿ ಅಕ್ಷರ ತಿಳಿಯದ ಒಬ್ಬ ವ್ಯಕ್ತಿಗೆ [illegible] ಯೇ ಬಾಗಿ [illegible] ಬುದ್ಧಿಯುಕ್ತಿಗಳು ಕಂಡು ಬಂದಿವೆ. ಅ [illegible] ಓದು ಬರಹದ ಜ್ಞಾನವಿಲ್ಲ [illegible] ಬುದ್ಧಿವಂತಿಕೆಗೂ ಇದರ ಸಂಬಂಧದಲ್ಲಿ ತಪ್ಪು ತಿಳುವಳಿಕೆ ಇದೆ. [illegible] ಓದು ಬರಹವಿಲ್ಲದೆ ತಿಳುವಳಿಕೆ ಪಡೆಯುವದು [illegible] ಪುರಾತನ ಕಾಲದಿಂದಲೂ ನೋಡಿದರೆ ಮನುಷ್ಯನ ತಿಳುವಳಿಕೆಯು ಬೆಳೆಯುತ್ತಿರುವುದರಿಂದ ಬಂದದ್ದು [illegible] ಕಂಡ ಒರತ್ತದೆ. ಪುಸ್ತಕಗಳ [illegible] ಪುರಾತನ ಕಾಲದ [illegible] ತಲೆಯಿಂದ ಬಾಯಿ [illegible] ಕಾಲಾಂತರದಿಂದ [illegible] ಬರುವ [illegible] ಬುದ್ಧಿವಂತಿಕೆ [illegible] ಪುರಾತನ ಕಾಲದ ಚರಿತ್ರೆಯಿಂದ ತಿಳಿಯುತ್ತದೆ.

ಅಥವಾ ಕಾಲದವರಿಗೆ [illegible] ಬೋಧಕರು ಪುಸ್ತಕಗಳಿಂದಾಗಲೀ ಓದುಬರಹದಿಂದಾಗಲಿ ಬೋಧಿಸುತ್ತಿರಲಿಲ್ಲ. [illegible] ಸಂಪಾದಿಸಿ [illegible] ಬೋಧಿಸುತ್ತಿದ್ದರು. ಯೇಸುಕ್ರಿಸ್ತನು [illegible] ಬೋಧಿಸಿದ [illegible] ತನ್ನ ಶಿಷ್ಯರಿಗೆ [illegible] ತನ್ನ ಜೀವನಕಾಲದಲ್ಲೆಲ್ಲಾ ಬೋಧಕನಾಗಿದ್ದನು. ಇವನು ಪೂರ್ತಿಯಾಗಿ [illegible] ಬರೆಯಲು ಓದಲು [illegible] ತಿಳಿದಿದ್ದನೆಂದು ತಿಳಿಯುವುದಕ್ಕೆ [illegible] ಸಾಕ್ರೆಟೀಸ್, ಬುದ್ಧ [illegible] ಮಹಾತ್ಮ [illegible] ಪೀಠವಿಕರು [illegible] ಮೊದಲೇ [illegible] ತಮ್ಮ ಶಿಷ್ಯರನ್ನು ಗಂಡಾಂತರದಿಂದ ಕಾಪಾಡುತ್ತಿದ್ದ [illegible] ದೇವಸ್ಥಾನಗಳಲ್ಲಿ ಬೋಧಿಸುತ್ತಿದ್ದರು. ಇವರಿಗೆ ಪುಸ್ತಕ, ಬರವಣಿಗೆ ಮುಂತಾದ ಉಪಾಯಗಳ ಅವಶ್ಯವೇ ಇರಲಿಲ್ಲ.

ಪೂರ್ವಕಾಲದ [illegible] ಪ್ರಖ್ಯಾತ ಮನುಷ್ಯರು ಅಕ್ಷರಗಳು ಹುಟ್ಟಿದಂದಿನಿಂದ ಸಹ ಅಕ್ಷರ ತಿಳಿಯದವರಾಗಿದ್ದರು. [illegible] ರಾಜ್ಯತಂತ್ರ ಪ್ರವೀಣರು, ಸೈನ್ಯಾಧಿಪತಿಗಳು, ಹೊಸ ಮತಗಳನ್ನು ಕಂಡುಹಿಡಿದವರು ಸಹ ನಿರಕ್ಷರಸ್ಥರಾಗಿದ್ದರು. ಇವರನ್ನಾಗಲೀ ಇವರ ಅನುಯಾಯಿಗಳನ್ನಾಗಲೀ ಅಕ್ಷರ ತಿಳಿಯದವರೆಂಬ ಕಾರಣದಿಂದ ಹಿಂದೆ [illegible] ಬೇಕೆಂದು ಯಾರೂ ಹೇಳಲಿಲ್ಲ. ಹಾಗಾದರೆ ಹಿಂದೀಯರನ್ನು ಮಾತ್ರ ಈ ಕಾರಣದಿಂದ ಸ್ವರಾಜ್ಯಕ್ಕೆ ಅನರ್ಹರೆಂದು ಹಿಂದೂಸ್ಥಾನದ ಚರಿತ್ರೆ, ಸಂಸ್ಕೃತಿ, ಸಂಸ್ಥೆಗಳು ಮತ್ತು ಅವಶ್ಯಕತೆಗಳನ್ನು ತಿಳಿಯದ ಸಾಹೇಬರು ವೈಲುಗಳು [illegible] ಹಿಂದೀಯರು ಅಕ್ಷರ ತಿಳಿಯದ ಮೂರ್ಖರೆಂಬ ಹೆಸರನ್ನು ಇಟ್ಟವರು ಒಂದು ಆಲೋಚನೆ ಮಾಡುವುದು ಹೇಗೆ? ಈಗ ಒಂದು ಶತಮಾನಕ್ಕಿಂತ ಹಿಂದಿನವರೆಗೆ ಬ್ರಿಟನಲ್ಲಿ ಅಕ್ಷರ ತಿಳಿದವರ ಸಂಖ್ಯೆ ಬಹಳ ಕಡಿಮೆ ಇತ್ತು. ಬ್ರಿಟನು [illegible] ಕಟ್ಟಿ [illegible] ಪಾರ್ಲಿಮೆಂಟನ್ನು ಸ್ಥಾಪಿಸಿದಾಗ ಜನಸಾಮಾನ್ಯರು ಓದು ಬರಹ ಅಕ್ಷರ ತಿಳಿದವರಾಗಿರಲಿಲ್ಲ. ಆದುದರಿಂದ ಬ್ರಿಟನು ತನ್ನನ್ನು ತಾನೇ ಆಳಿಕೊಳ್ಳಲು ಅಯೋಗ್ಯವಾಗಿಲ್ಲ. ಅನೇಕರಿಗೆ [illegible] ಹೋಗಲು [illegible] ಊರುಗಳಲ್ಲಿ, ಈಗಿನ ಸರಕಾರದ ಮಾಯೆ [illegible] ಓದುಬರಹ ತಿಳಿಯದವರಾಗಿದ್ದರು. ಪುಸ್ತಕ [illegible] ಇದರ [illegible] ಎಷ್ಟು ಜನರು ಅವರಿಗೆ ಬುದ್ಧಿಯಲ್ಲಿಯೂ ಗಣಿತದಲ್ಲಿಯೂ ಸಮಾನರಾದರು? ಅನೇಕರಾದವರು ಬ್ರಿಟನಿಗೆ ಎದುರು ನಿಂತು ಸ್ವತಂತ್ರರಾಗಿ ಅಲ್ಲಿನ ಜನಾಂಗದ ಅರ್ಧಕ್ಕಿಂತ ಹೆಚ್ಚಿಗೆ ಓದುಬರಹ ತಿಳಿಯದ

ರಲಿಲ್ಲ. ಆದರೂ ಸ್ವಾತಂತ್ರ್ಯಕ್ಕಾಗಿ ಎಷ್ಟು ಗೌರವದಿಂದ ಹೋರಾಡಿದವರು ಎಂದಾ ಜನಾಂಗದ [illegible]

ಅಮೇರಿಕದ ಅಬ್ರಾಮ್ ಲಿಂಕನ್ ಹುಟ್ಟಿದ [illegible] ಜನಾಂಗ ಬಾಗವು ಒಮ್ಮೆ ಮಟ್ಟಿಗೆ [illegible] ತಿಳಿಯದವರಾಗಿದ್ದರು. [illegible]

ಹಿಂದೂಸ್ಥಾನ [illegible] ಕಗಳ ಮೊದಲ [illegible] ಕಗಳಲ್ಲಿ ಇರುವ ವಿಷಯಗಳು [illegible] ಸ್ವಲ್ಪ ಹೇಳಿ ತಿಳಿದುಕೊಂಡಿದ್ದಾನೆ. ಪಾಶ್ಚಿಮಾತ್ಯರಿಗೆ ಇದನ್ನು ನೋಡಿ ಆಶ್ಚರ್ಯವಾಗುತ್ತದೆ. ನಾನು ಹಿಂದೂಸ್ಥಾನಕ್ಕೆ ಅಯ್ಯರ್ ಸಾರಿ ಹೋದಾಗ ಬಂಗಾಳದ ಪದಗಳನ್ನು ಕೋಟ್ಯಾಂತರ ಜನರು ಬಾಯಿಪಾಠ ಮಾಡಿದ್ದಾರೆಂತ ತಿಳಿದು ಆಶ್ಚರ್ಯವಾಯಿತು. ಪಾಶ್ಚಿಮಾತ್ಯ ದೇಶಗಳಲ್ಲಿ ಬೈಬಲ್‌ನ್ನು ಬಾಯಿಪಾಠ ಮಾಡಿರುವದಕ್ಕಿಂತ ಎಷ್ಟೋ ಹೆಚ್ಚು ಜನರು ಹಿಂದುಸ್ಥಾನದ ಎರಡು ಮುಖ್ಯ ಪುರಾಣಗಳಾದ ರಾಮಾಯಣ ಮಹಾಭಾರತವನ್ನು ಬಾಯಿಪಾಠ ಮಾಡಿರುತ್ತಾರೆ. ಮುಸಲ್ಮಾನರು ಖುರಾನನ್ನು ಹೀಗೆಯೇ ಬಾಯಿಪಾಠ ಮಾಡಿದವರು ತುಂಬಾ ಇದ್ದಾರೆ.

ಮ್ಯಾಕ್ಸ್‌ಮುಲ್ಲರ್ ಹೇಳಿರುವದೇನೆಂದರೆ- "ಪುಸ್ತಕಗಳಿಲ್ಲದ ಸಾಮಾಜಿಕ ವಿದ್ಯಾಭ್ಯಾಸನೆಂಬವೊಂದು ಇದೆ. ಈ ಪ್ರಪಂಚದ ಎಲ್ಲಾ ಕಡೆಗಳಿಗಿಂತ ಹಿಂದುಸ್ಥಾನದಲ್ಲಿ ಈ ತರದ ವಿದ್ಯಾಭ್ಯಾಸ ಹೆಚ್ಚಾಗಿದೆ. ಪುರಾಣ ಕಥೆಗಳನ್ನು ಬಾಯಿಪಾಠ ಮಾಡಿದವರಿಂದಲೂ, ಮೆಚ್ಚುಗೆಯಾದ ಹಾಡುಗಳಿಂದಲೂ, ನಾಟಕಗಳಿಂದಲೂ, ಮತಸಂಬಂಧದ ಕರ್ಮಗಳಿಂದಲೂ, ಕ್ರಿಯೆಗಳಿಂದಲೂ, ತೀರ್ಥಯಾತ್ರೆಗಳಿಂದಲೂ ಹಿಂದೂ ಸಮಾಜಕ್ಕೆ ಸಂಸ್ಕೃತಿಯ ಬೆಳವಣಿಗೆಯೂ, ವಿದ್ಯಾಭ್ಯಾಸವೂ ಆಗುತ್ತದೆ. ಹೀಗೆ ಬರುವ ತಿಳುವಳಿಕೆಯು ಸ್ಕೂಲುಗಳಿಂದ ಮತ್ತು ವೃತ್ತಾಂತ ಪತ್ರಿಕೆಗಳಿಂದ ಬರುವ ತಿಳುವಳಿಕೆಗಿಂತ ಉತ್ಕೃಷ್ಟವಾದದ್ದು. ಒಂದು ಬಗೆಯಲ್ಲಿ ನೋಡಿದರೆ ಇದಕ್ಕಿಂತ ದೊಡ್ಡದಾದ ದಯೆಯಲ್ಲಿ ಅದು ಬೆಳೆಯುತ್ತದೆ" ಮಿ. ರೋಮೇನ್ ಚಂದ್ರದತ್ತರು ಗ್ರಾಮಗಳಲ್ಲಿ ಜನರ ಸಂಖ್ಯೆ ಇರುವ ಮಿಂದಾಳುಗಳು ಇದ್ದೇ ಇರುತ್ತಾರೆ ಎಂತ ಹೇಳಿದ್ದಾರೆ. ವಿದ್ಯೆ ಇಲ್ಲದ್ದರಿಂದ ಹಿಂದೀಯರು ಪರಕೀಯರ ಅಧೀನರಾಗಿಯೇ ಇರಬೇಕೆನ್ನುವವರು ಈ ವಿಷ್ಯಗಳನ್ನು ಚೆನ್ನಾಗಿ ಯೋಚಿಸಿ ನೋಡಬೇಕು.

ನಿರಕ್ಷರತ್ವಕ್ಕೂ, ಸ್ವರಾಜ್ಯಕ್ಕೂ ಇರುವ ಸಂಬಂಧವನ್ನು ಕೆಳಗೆ ಬರೆದ ಎರಡು ಸವಾಲುಗಳಿಂದ ವಿವರಿಸಬಹುದು. ಸವಾಲುಗಳಿಗೆ ಜವಾಬು ಅವುಗಳಲ್ಲಿಯೇ ಇದೆ.

1 ಹಿಂದುಸ್ಥಾನದಲ್ಲಿ ಹುಟ್ಟಿದವರಾಗಿದ್ದು, ತಮ್ಮ ಅಭಿರುಚಿಯಲ್ಲ್ಲಾದೂರದೇಶದಲ್ಲಿರುವ, ಅವರಲ್ಲಿ ಹುಟ್ಟಿದ ಜನರು ಹಿಂದೀಯರ ಕಡೆಗೆ ಗರ್ವಿಷ್ಠರಾಗಿಯೂ, ನಿಷ್ಠುರಿಗರಾಗಿಯೂ ಇರುವ, ಹಿಂದೀ ನಾಗರೀಕತೆಯಲ್ಲಿಯೂ, ಧ್ಯೇಯದಲ್ಲಿಯೂ ಸಹಾನುಭೂತಿ ಇಲ್ಲದ, ಹಿಂದುಸ್ಥಾನದ ವಿಷಯ ಅತ್ಯಲ್ಪ ತಿಳುವಳಿಕೆ ಇರುವ ಪರಕೀಯರಿಂದ ಹಿಂದುಸ್ಥಾನವು ಆಳಲ್ಪಡಬೇಕೋ ? ಅಥವಾ

(2) ಇಂಗ್ಲಿಷ್ ಓದುಬರಹ ತಿಳಿಯುವ 25,00,000 ಹಿಂದೀಯರೂ ಮತ್ತು (2) ದೇಶಭಾಷೆಗಳಲ್ಲಿ ಓದುಬರಹ ತಿಳಿದ 2,26,0,000 ಹಿಂದೀಯರೂ ಮತ್ತು (3) ಓದುಬರಹ ತಿಳಿಯದಿದ್ದರೂ ತುಂಬಾ ತಿಳುವಳಿಕೆ ಇರುವ, ತಮ್ಮ ದೇಶವನ್ನು ಇಂಗ್ಲಿಷರು ಪ್ರೀತಿಸುವಂತೆ ಪ್ರೀತಿಸುವ, ಹಿಂದುಸ್ಥಾನವೇ ತಮ್ಮ ಮನೆಯಾಗಿರುವ, ಹಿಂದುಸ್ಥಾನದಲ್ಲೇ ತಮ್ಮ ಪೂರ್ಣ ಅಭಿರುಚಿ ಇರುವ ಪರಕೀಯರಿಗಿಂತ ಎಷ್ಟೋ ಹೆಚ್ಚಾಗಿ ತಮ್ಮ ದೇಶದ ಕಷ್ಟಸುಖಗಳನ್ನು ತಿಳಿದ ಎಷ್ಟೋ ಕೋಟಿ ಸಂಖ್ಯೆ ಜನರೂ ಸಹ ಸೇರಿ ಹಿಂದುಸ್ಥಾನವನ್ನು ಆಳಬೇಕೋ? ಸವಾಲಿನಲ್ಲೇ ಜವಾಬು ಇದೆ.

ಈ ಲೇಖನದಿಂದ ಲೇಖಕನು ಓದು ಬರಹಕ್ಕೆ ಬೆಲೆ ಕೊಡುವದಿಲ್ಲವೆಂತ ಯಾರೂ ಭಾವಿಸಬಾರದು. ಓದು ಬರಹದಿಂದ ತುಂಬಾ ಪ್ರಯೋಜನ ಮಾಡಿಕೊಳ್ಳಬಹುದು. ಹಿಂದೀಯರು ವಿದ್ಯೆ ಕಲಿಯಬೇಕೆಂತ ಕೇಳುತ್ತಲೇ ಇದ್ದಾರೆ.

ದೌರ್ಭಾಗ್ಯದ ಹಿಂದುಸ್ಥಾನವು ವಿದ್ಯೆ ಇಲ್ಲದೆ ಇದ್ದರೂ ಸ್ವರಾಜ್ಯಕ್ಕೆ ಅರ್ಹವಾಗಿದೆಯೆಂತ ಪತ್ರಾಯದಿಂದಲೂ, ವಸುಪೂರ್ತಿಯಾಗಿಯೂ ಹೇಳುತ್ತಲಿದೆ. ಎಲ್ಲಾ ಧರ್ಮ ಬೀತಿಯಿಂದಲೂ ಅದಕ್ಕಾ ಹಕ್ಕು ಇದೆ. ಇನ್ನೂ ಏನೆಂದರೆ—ಸ್ವರಾಜ್ಯದಿಂದಲೇ ಓದುಬರಹ ವಿದ್ಯೆ ಒಮ್ಮೆಂಬ ಬಲವಾದ ಕಾರಣದಿಂದಲೇ ಸ್ವರಾಜ್ಯ ಬೇಕೆಂತ ಕೇಳುತ್ತಲಿದೆ.

ನೋಟೀಸು.

ನನ್ನ ಬಾಬ್ತು ನಂಬರು $\frac{5}{11}$ 65112ನೆ ಒಂದು ನೂರು ರೂಪಾಯಿನ ಮದ್ರಾಸು ಕರನ್ಸಿ ನೋಟಿನ ಎಡಭಾಗದ ಅರ್ಧ ನೋಟು ತಾ 5—2—28 ರಲ್ಲು ಹೇಗೋ ಗೈರ್ ಹಿಲಯಾಗಿದ್ದುದರಿಂದ ಅದನ್ನು ಪತ್ತೆ ಮಾಡಿ ನನ್ನ ಈ ಕೆಳಗಿನ ಅಡ್ರೆಸಿಗೆ ಕಳಿಸಿದ ಮನುಷ್ಯರಿಗೆ ಹತ್ತು ರೂಪಾಯಿ ಇನಾಮು ಕೊಡುತ್ತೇನೆ

ಸಿದ್ದಾಪುರ, 20—2—28 ಯಂ ಕೃಷ್ಣಸೆಟ್ಟಿ, ಬಜಾರಿಗ ಎಸ್ಟೇಟ್.

ಎಸೆಂಬ್ಲಿಯ ಜಯ.

(೪ನೇ ಪುಟದಿಂದ ಮುಂದುವರಿದದ್ದು)

ಸಿಕೆಯು ಹಿಂದೀ ಜನಾಂಗದ ಆತ್ಮ ಗೌರವಕ್ಕೆ ಹಾನಿ ಉಂಟು ಮಾಡಿದೆಯೆಂದೂ, ಅವರಲ್ಲಿ ದೇಶೀಯರಿಗೆ ವಿಶ್ವಾಸವಿಲ್ಲವೆಂದೂ, ಆದುದರಿಂದ ಅದನ್ನು ಎಲ್ಲರೂ ಬಹಿಷ್ಕರಿಸಬೇಕೆಂದು ಸ್ಪಷ್ಟವಾಗಿ ತೋರಿಸಿದರು. ಸರ್ಕಾರಕ್ಕೆ ಬಹ್ಳ ನ್ಯಾಯವಾಗಿ ಸರ್ ಬ್ಯಾಸಿಲ್ ಬ್ಲಾಕೆಟ್ ಅಲಿ ಎಂಬ ಒಬ್ಬ ಮುಸ್ಲೀಮ ಮೆಂಬರು 'ಕಮಿಷನು ನಿರ್ದಿಷ್ಟಪಡಿಸಿದ ಕಾರ್ಯಕ್ರಮವು ತೃಪ್ತಿಕರವಾದುದೆಂಬ' ಠರಾವನ್ನು ಸೂಚಿಸಿದಾಗ ಸರ್ಕಾರದ ನಾಮಕರಣ ಮೆಂಬರುಗಳೂ, ಕೆಲವು ಮುಸಲ್ಮಾನ್ ಮೆಂಬರುಗಳೂ ರಾಯಲ್ ಕಮಿಷನಿನ ನೇಮಕವು ನ್ಯಾಯವಾದದ್ದೆಂತ ಬಹಳ ಪರಿಯಿಂದ ಎಲ್ಲರಿಂದ ಒಪ್ಪಿಸಬೇಕೆಂತಲೂ ವಾದವಾಗಿ ಮಾಡಿದರು. ಚರ್ಚೆಯು ಮುಗಿದು ಓಟಿಗೆ ಹಾಕಲಾಗಿ ಲಜಪತರಾಯರ ಠರಾವಿಗೆ ಪರವಾಗಿ 68 ಮೆಂಬರುಗಳೂ, ವಿರೋಧವಾಗಿ 62 ಮೆಂಬರುಗಳೂ ಓಟು ಕೊಟ್ಟದ್ದರಿಂದ ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕೆಂಬುದು ಎಸೆಂಬ್ಲಿಯಲ್ಲಿ 6 ಜನರ ಬಹುಮತದಿಂದ ಪಾಸಾಯಿತೆಂದು ತಿಳಿಸಲು ಸಂತೋಷ ಪಡುತ್ತೇವೆ

ಎಸೆಂಬ್ಲಿಯ ಈ ತೀರ್ಮಾನದಿಂದ ಇಡೀ ಹಿಂದೂಸ್ಥಾನದಲ್ಲಿ ತುಂಬಾ ತೃಪ್ತಿಯೂ, ಸಂತೋಷವೂ ಉಂಟಾಗಿದೆ. ಈ ವಿಷಯದಲ್ಲಿ ಎಸೆಂಬ್ಲಿಯಲ್ಲಿರುವ ಚುನಾಯಿತ ಹಿಂದೀ ಮೆಂಬರುಗಳು ತಮ್ಮ ಕರ್ತವ್ಯವನ್ನು ಚೆನ್ನಾಗಿ ಮಾಡಿದ್ದಾರೆಂಬುವದರಲ್ಲಿ ಸಂಶಯವಿಲ್ಲ. ದೇಶದ ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳಿರುವ ಅಖಿಲಭಾರತದ ನ್ಯಾಯ ವಿಧಾಯಕ ಸಭೆಯ ತೀರ್ಮಾನವೇ ಇಡೀ ಹಿಂದೀ ದೇಶದ ತೀರ್ಮಾನವೆಂದು ಯಾರೂ ಒಪ್ಪಬೇಕಾಗುವುದು. ಆದರಲ್ಲಿ ಸರ್ಕಾರ ಪರ ಎಂದರೆ ಕಮಿಷನನ್ನು ಬಹಿಷ್ಕರಿಸಬಾರದೆಂದು ಓಟು ಮಾಡಿದವರಲ್ಲಿ 26 ಉದ್ಯೋಗಸ್ಥರೂ, 13 ನಾಮಕರಣ ಮೆಂಬರುಗಳೂ, 9 ಯೂರೋಪಿಯನ್ ಚುನಾಯಿತ ಮೆಂಬರುಗಳೂ, 12 ಚುನಾಯಿತ ಮುಸಲ್ಮಾನ್ ಮೆಂಬರುಗಳೂ ಮತ್ತು 2 ಹಿಂದೂ ಚುನಾಯಿತ ಮೆಂಬರುಗಳೂ ಆಗಿರುವರು. ಬಹಿಷ್ಕಾರಕ್ಕೆ ಪರವಾಗಿ ಓಟು ಮಾಡಿದವರಲ್ಲಿ 67 ಚುನಾಯಿತ ಹಿಂದೀಯರೂ, ಒಬ್ಬ ನಾಮಕರಣ ಹಿಂದೀಯರೂ ಆಗಿರುವರು. ಜನರಿಂದ ಓಟು ಕೊಟ್ಟು ಚುನಾಯಿಸಲ್ಪಟ್ಟವರೇ ಜನರ ನಿಜವಾದ ಪ್ರತಿನಿಧಿಗಳೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸರ್ಕಾರದ ಸಂಬಂಧವಿರುವ ಕಾರಣದಿಂದಾಗಿ ಅವರ ಉದ್ಯೋಗಸ್ಥರಿಂದ ನಾಮಕರಣದಿಂದ ಕುರ್ಚಿ ಪಡೆದವರಲ್ಲಿ ಅವರಲ್ಲಿಟ್ಟು ಸರ್ಕಾರ ಸಂಸ್ಥೆಯಾಗಿ ಚುನಾಯಿತರಲ್ಲಿರುವ ಜನರ ಪ್ರತಿನಿಧಿಗಳಾದ ಹಿಂದೀ ಮೆಂಬರುಗಳಲ್ಲಿ 67 ಜನರು ಬಹಿಷ್ಕಾರಕ್ಕೆ ಪರವಾಗಿಯೂ, 14 ಜನರು ವಿರೋಧವಾಗಿಯೂ ಓಟು ಕೊಟ್ಟಿರುವಾಗ ಹಿಂದೂದೇಶದ ಕೆಲವರನ್ನು ಬಿಟ್ಟು ಬಾಕಿ ಎಲ್ಲರೂ ಸೈಮನ್ ಕಮಿಷನಿನೊಂದಿಗೆ ಸಹಕರಿಸುವುದಿಲ್ಲವೆಂಬುದನ್ನು ಸರ್ಕಾರದವರೂ, ಬ್ರಿಟಿಷ್ ಪಾರ್ಲಿಮೆಂಟಿನವರೂ ಒಪ್ಪಿಕೊಳ್ಳದೆ ಇರಲು ಸಾಧ್ಯವಿಲ್ಲ.

ಬ್ರಿಟಿಷ್ ಸರ್ಕಾರದವರು ಈ ವಿಷಯದಲ್ಲಿ ದೇಶದ ಜನರ ನಿಜವಾದ ಅಭಿಪ್ರಾಯವನ್ನು ತಿಳಿಯಬೇಕಾದರೆ ತಿಳಿದುಕೊಂಡ ನಂತರ ಎಸೆಂಬ್ಲಿಯ ಅಂದಿನ ವಿಶೇಷ ತೀರ್ಮಾನವನ್ನು ಗಮನಿಸಿದ ಕಮಿಷನಿನ ಕಾರ್ಯಕ್ರಮವನ್ನು ಮುಂದುವರಿಸದೆ ಜನರು ಹೇಗೆ ಪರಿಗಣಿಸಬೇಕೆಂಬುದು ಅವರಿಗೆ ಇಷ್ಟರಲ್ಲೇ ತಿಳಿದ ಪಟ್ಟಿಗೆ ತಿಳಿದಿರಬೇಕಾದರೂ ಮುಂದಾಳುಗಳು ಬಹಿಷ್ಕಾರದ ಚಳವಳಿಯು ದೇಶದ ಎಲ್ಲಾ ಮೂಲೆಗಳಿಗೂ ಹರಡುವಂತೆ ಮಾಡಬೇಕಾದುದು ಅವಶ್ಯವಾಗಿದೆ. ಕಮಿಷನು ಇಂಡಿಯಾದಲ್ಲಿ ಸಂಚರಿಸುತ್ತಿರುವ ವರೆಗೆ ಮುಂದಾಳುಗಳು ತಮ್ಮ ಸಂಗಡ ಭಾಷಣಗಳನ್ನು ಮಾಡಿ, ಒಗ್ಗಟ್ಟಾಗಿ ಪರರಿಗೆ ದೇಶದ ಆತ್ಮ ಗೌರವವನ್ನು ಕಾಪಾಡಿ ಕೊಳ್ಳಬೇಕಾಗಿದೆ. ಎಸೆಂಬ್ಲಿ, ಮದ್ರಾಸು, ಮ ಪ್ರ, ಮಧ್ಯಪ್ರಾಂತ್ಯದ ಕೌನ್ಸಿಲುಗಳ ಉದಾಹರಣೆಯನ್ನು ಬಾಕಿ ಎಲ್ಲಾ ಪ್ರಾಂತೀಯ ಕೌನ್ಸಿಲುಗಳು ಹಿಂಬಾಲಿಸಿ ಬಹಿಷ್ಕಾರದ ಠರಾವನ್ನು ಪಾಸು ಮಾಡುವರಾಗಿ ಕೋರುತ್ತೇವೆ. ನಮ್ಮ ಪ್ರಾಂತ್ಯದ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಅದರಲ್ಲೂ ಚುನಾಯಿತ ಹಿಂದೀ ಮೆಂಬರುಗಳು ಈ ಸಂಗತಿಯಲ್ಲಿ ತಮ್ಮ ದೇಶಾಭಿಮಾನ, ಸ್ವಾರ್ಥ ತ್ಯಾಗ, ಧೈರ್ಯ, ಸ್ಥೈರ್ಯಗಳನ್ನು ತೋರಿಸಲು ಹಿಂಜರಿಯಲಿಕ್ಕಿಲ್ಲವಾಗಿ ಆಶಿಸುತ್ತೇವೆ

COORG CIVIL SURGEON'S OFFICE,
MERCARA DATED THE 15TH FEBRUARY 1928.

NOTICE.

Sealed tenders for the hiring out of calves to the Vaccine Depot, at Mercara for one year commencing from 1st April 1928 to 31st March 1929 will be received at the Civil Surgeon's Office, Mercara up to 11. 30 A. M on Monday the 12th March 1928

For terms and other particulars apply to the Vaccine Inspector or to the Civil Surgeon's Office at Mercara.

F. R. THORNTON,
Major, I. M. S,
Civil Surgeon and Superintendent
of Vaccination, Coorg.

2—2

ಜಮೀನುದಾರರ ಸಂಘದ ಸೆಕ್ರೆಟರಿಯವರ ಪತ್ರ

ಕೊಡಗು ಜಮೀನ್‌ದಾರರ ಸಂಘದ ಸಕ್ರೆಟರಿ ಯವರು, ಉದ್ಯೋಗಸ್ಥರಲ್ಲದ ಎಲ್ಲಾ ಕೌನ್ಸಿಲ್ ಮೆಂಬರುಗಳಿಗೂ ಕಳುಹಿಸಿದ ವಿಜ್ಞಾಪನಾ ಪತ್ರವನ್ನು ಪ್ರಕಟಿಸುವ ಬಗ್ಗೆ ನಮಗೆ ಕಳುಹಿಸಿದ್ದನ್ನು ಇಲ್ಲಿ ಕೊಟ್ಟಿರುತ್ತೇವೆ

ಮಹಾಸ್ವಾಮಿರವರೇ,

ಕೊಡಗು ಜಮೀನ್‌ದಾರರ ಸಂಘದ ಎಕ್ಸಿಕ್ಯೂಟಿವ್ ಕಮಿಟಿಯವರು ಮಾಡಿದ ತೀರ್ಮಾನವನ್ನು ತಮ್ಮ ತಿಳುವಳಿಕೆ ಬಗ್ಗೆ ಮತ್ತು ಅದರಲ್ಲಿ ಸೂಚಿಸಿರುವ ಕೋರಿಕೆಯಂತೆ ಸಹಕರಿಸುವ ಬಗ್ಗೆ ಇಲ್ಲಿ ಕೊಟ್ಟಿರುತ್ತೇನೆ.

"ಹಿಂದೂದೇಶದ ರಾಜಕೀಯ ಸುಧಾರಣೆಯನ್ನು ಮತ್ತು ಪ್ರಜಾಪ್ರತಿನಿಧಿ ಸಭೆಗಳ ಬೆಳವಣಿಗೆಯನ್ನು ಪರಿಶೀಲಿಸಿ ಹೆಚ್ಚಿನ ಸುಧಾರಣೆಗೆ ಹಿಂದೀಯರ ಅರ್ಹತೆಯನ್ನು ನಿರ್ಧರಿಸುವರೆ ನೇಮಕವಾಗಿರುವ ಸೈಮನ್ ಕಮಿಷನು ಹಿಂದೂದೇಶದ ಜನರ ಅಭಿಮತಕ್ಕೆ ವಿರೋಧವಾಗಿರುವದರಿಂದ ಈ ದೇಶದ ಅತೃಪ್ತಿಯನ್ನು ತೋರಿಸುವ ಬಗ್ಗೆ ಕೊಡಗು ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಈಗ ನಡೆಯಲಿಕ್ಕಿರುವ ಬಜೆಟ್ ಚರ್ಚೆಯಲ್ಲಿ ಭಾಗಿಗಳಾಗಬಾರದೆಂತ ಜಮೀನ್‌ದಾರರ ಸಂಘವು ಕೇಳಿಕೊಳ್ಳುತ್ತದೆ "

ಸೈಮನ್ ಕಮಿಷನಿನ ಮುಂದೆ ಅಭಿಪ್ರಾಯ ಕೊಡಲು ಕೊಡಗು ಕೌನ್ಸಿಲಿನಿಂದ ಚುನಾಯಿಸಿದ ಕಮಿಟಿಯನ್ನು ಚುನಾಯಿಸಲಾಗಬಹುದೆಂದು ಸಂಘಕ್ಕೆ ಇನ್ನೂ ತಿಳಿದು ಬಂದಿಲ್ಲ. ಹಾಗೆ ಚುನಾಯಿಸಬೇಕಾಗಿದ್ದರೆ ಅಂಥಾ ಕಮಿಟಿಯನ್ನು ಚುನಾಯಿಸದೆ ದೇಶದ ಅತೃಪ್ತಿಯನ್ನು ತೋರಿಸಬಹುದಿತ್ತು. ದೇಶದ ಅತೃಪ್ತಿಯನ್ನು ಸರ್ಕಾರಕ್ಕೆ ತಿಳಿಯುವಂತೆ ಮಾಡಬೇಕಾದರೆ ಈ ಕಮಿಷನು ನೇಮಕವಾದನಂತರ ನಡೆಯಲಿಕ್ಕಿರುವ ಮೊದಲನೇ ಕೌನ್ಸಿಲು ಅಧಿವೇಶನಕ್ಕೆ ಉದ್ಯೋಗಸ್ಥರಲ್ಲದ ಮೆಂಬರುಗಳು ಹೋಗದೆ ಇರುವದು ಒಂದೇ ಉತ್ತಮ ದಾರಿಯೆಂತ ಸಂಘದ ಕಮಿಟಿಯು ತೀರ್ಮಾನಿಸಿದೆ. ಈ ಕೋರಿಕೆಯನ್ನು ನೆರವೇರಿಸುವರಾಗಿ ನಂಬುತ್ತೇನೆ.

ಮಡಿಕೇರಿ, ಪಿ. ಐ. ಬೆಳ್ಯಪ್ಪ,
16—2—28. ಜನರಲ್ ಸಕ್ರೆಟರಿ

ವಿಜ್ಞಾಪನೆ.

ಸೈಮನ್ ಕಮಿಷನಿನ ನೇಮಕಕ್ಕೆ ದೇಶದ ವಿರೋಧವನ್ನು ತೋರಿಸಲಿಕ್ಕಾಗಿ ಬರುವ ಕೌನ್ಸಿಲ್ ಬಜೆಟ್ ಚರ್ಚೆಗೆ ಉದ್ಯೋಗಸ್ಥರಲ್ಲದ ಮೆಂಬರುಗಳು ಹೋಗಬಾರದೆಂತ ಕೇಳಿಕೊಂಡ ಕೊಡಗು ಜಮೀನುದಾರರ ಸಂಘದ ಜನರಲ್ ಕಮಿಟಿಯವರ ಕರ್ತವ್ಯಲೋಪವನ್ನು, ನೀತಿ, ಅದನ್ನು ವಿರೋಧಿಸಿ ಈ ವಿಜ್ಞಾಪನೆಯನ್ನು ಪ್ರಕಟಿಸಿರುತ್ತೇನೆ.

ಉದ್ಯೋಗಸ್ಥರಲ್ಲದ ಕೌನ್ಸಿಲ್ ಮೆಂಬರುಗಳೇ ಜನರ ಪ್ರತಿನಿಧಿಗಳು. ಇಂಥಾ ಸೂಚನೆಗಳು ಅವರಿಂದ ಮಂಜೂರಾಗಬೇಕಿತ್ತು. ಸಂಘವು ಕೌನ್ಸಿಲಿಗೆ ಪ್ರತಿನಿಧಿಗಳನ್ನು ಕಳುಹಿಸಿಲ್ಲ. ಸದರಿ ಮಂಡಳಿಯ ಜನರು ಪ್ರತಿನಿಧಿಗಳನ್ನು ಕಳುಹಿಸದ್ದರಿಂದ ಅವರು ತಮ್ಮ ಸಲಹೆಗಳನ್ನು ಕೊಡಬಹುದು.

ಜಮೀನುದಾರರ ಸಂಘದ ಕಮಿಟಿಯು ದೇಶದ ಪ್ರತಿನಿಧಿಯಲ್ಲ. ಸಂಘದಲ್ಲೂ ಎಲ್ಲಾ ಅಭಿಪ್ರಾಯ ಭೇದಗಳ ಪ್ರತಿನಿಧಿಗಳಿಲ್ಲ. ದೇಶದ ಕೆಲವರಿಂದ ಕೂಡಿದ ಸಂಘದ ಹೇಳಿಕೆಯಂತೆ ನ್ಯಾಯವಿಧಾಯಕ ಸಭೆಯು ವರ್ತಿಸಬೇಕೆಂಬ ಪತ್ರವಿಲ್ಲ. ದೇಶದ ಹಕ್ಕು ಬಾಧ್ಯತೆಗಳನ್ನು ಕೌನ್ಸಿಲ್ ಮೂಲಕ ಸಾಧಿಸಲು ಎಲ್ಲಾ ಕೌನ್ಸಿಲ್ ಮೆಂಬರುಗಳೂ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ. ದೇಶದ ಪ್ರತಿನಿಧಿಗಳನ್ನು ಈ ರೀತಿ ಸರ್ಕ್ಯುಲರನ್ನು ಕಳುಹಿಸಿದ ಕಲಹ ಕೋರಿಕೆ ಮೇರೆ ಕೌನ್ಸಿಲಿಗೆ ಹೋಗದೆ ನಿಂತರೆ ಸರಕಾರಕ್ಕೆ ಸಹಾಯ ಮಾಡಿದಂತಾಗುತ್ತದೆ ಮತ್ತು ನಮ್ಮ ದೇಶಕ್ಕೂ, ದೇಶದ ಜನರಿಗೂ ಅನ್ಯಾಯ ಮಾಡಿದಂತಾಗುತ್ತದೆ.

ಗ್ರೀನ್ ಹಿಲ್, 21—2—28. ಎ. ಬಿ ಚಂಗಪ್ಪ.

ನೋಟೀಸು.

ವೀರರಾಜಪೇಟೆ ನಾಡು, ಬೇಟೋಳಿ ಗ್ರಾಮದ ಕೊಂಕಣಸ್ಥರ ರಾಮೈಯ್ಯನವರ ಮಗ ಮಕ್ಕಿ ನಾರಣೈಯ್ಯನು ಈ ಮೂಲಕ ತಿಳಿಯಪಡಿಸುವುದೇನೆಂದರೆ—ಬೇಟೋಳಿ ಗ್ರಾಮದಲ್ಲಿ ಇರುವ ಸಾಗಿನ ಸರ್ವೆ ನಂಬರು 326ರ 5—55 ಎಕ್ರೆ ಭೂಮಿ, ಸರ್ವೆ ನಂಬರು 320ರ 6—35 ಯೇಕ್ರೆಯ ಬಾಣೆ ಸಹ ನನ್ನ ದೊಡ್ಡ ತಂದೆ ಸುಬ್ಬೈಯ್ಯನವರು ಪಿತ್ರಾರ್ಜಿತ ಸೊತ್ತಿನಿಂದ ಸಂಪಾದಿಸಿದ ಆಸ್ತಿಯಾಗಿದೆ. ಅವರಿಗೆ ಪುತ್ರಸಂತತಿ ಇಲ್ಲದ್ದರಿಂದ ಅವರು ಪೌತಿಯಾದನಂತರ ಅವರ ಹೆಂಡತಿ ಅಮ್ಮಕ್ಕಮ್ಮನವರ ಹೆಸರಿನಲ್ಲು ಜಮಾಬಂದಿ ನಡೆದು ಬರುತ್ತದೆ. ಇವರಿಗೆ ಈ ಸೊತ್ತು ಇವರ ಜೀವಮಾನದ ವರೆಗೆ ಫಲ ಅನುಭವಿಸುವ ಹಕ್ಕೇ ವಿನಹ ಸಂಪೂರ್ಣ ಮಾಡುವ ಸ್ವತಂತ್ರವಿರುವದಿಲ್ಲ. ಈ ಸೊತ್ತಿಗೆ ನಾನು ಹಕ್ಕುದಾರನಾಗಿದ್ದೇನೆ. ನನಗೆ ಬೋಧನೆ ಸೂಡುವ ಇರಾದೆಯಿಂದ ಇದನ್ನು ಪರಭಾರೆ ಮಾಡುವ ಸಂಭವದಲ್ಲಿದ್ದಾರೆ. ನಾನು ಹಕ್ಕುದಾರನಾದ್ದರಿಂದ ಈ ಸೊತ್ತನ್ನು ಯಾರೂ ಕ್ರಯ, ಭೋಗ್ಯ, ಅಧಮ ಬೇರೆ ವಿಧದ ಸ್ವಾಧೀನ ಇವರಿಂದ ಮಾಡಿಕೊಳ್ಳಬಾರದಾಗಿ ಈ ಮೂಲಕ ತಿಳಿಯಪಡಿಸುತ್ತೇನೆ. ಹಾಗೆ ಮಾಡಿದ ಪಕ್ಷ ಅದು ಅಸಿಂಧುವಾಗತಕ್ಕದ್ದು.

2—1 ಮಕ್ಕಿ ನಾರಣೈಯ್ಯ, ಬೇಟೋಳಿ ಗ್ರಾಮ.

ವರ್ತಮಾನ ಸಂಗ್ರಹ.

ಒಳದೇಶ

ಕೌನ್ಸಿಲು ಮೀಟಿಂಗು ಸಂಬಂಧ ಚೀಫ್ ಕಮಿಷನರವರು ಈ ದಿನ ಮಡಿಕೇರಿಗೆ ಬರುವರು.

ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 29ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಮಡಿಕೇರಿಯಲ್ಲಿ ನಡಿಯಲಿಕ್ಕಿದೆ.

ಜಮಾನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಮಾರ್ಚ ತಾ. 3ರಲ್ಲಿ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆ ಬಿಸ್ಟರ್ ಸ್ಕ್ವೇರ್ ಹಾಲ್‌ನಲ್ಲಿ ನಡೆಯುವದು.

ಅಬ್ಕಾರಿ ಸಬ್ ಇನ್ಸ್ಪೆಕ್ಟರುಗಳಾದ ಮಿ. ಪಾಲೇಕಂಡ ಕಾರ್ಯಪ್ಪನವರನ್ನು ಮಡಿಕೇರಿಯಿಂದ ಸಾಮ್ವಾರಪೇಟೆಗೂ, ಮಿ. ಕೋದಂಡ ನಾಣೈಯ್ಯನವರನ್ನು ಸೋಮವಾರಪೇಟೆಯಿಂದ ಮಡಿಕೇರಿಗೂ ತಾ. 22ರಿಂದ ವರ್ಗಾಯಿಸಿರುವರು'

ತಾವಳಗೇರಿ ಸೆಟ್ಟಿಗೇರಿ ಸ್ಕೂಲು ಉಪಾಧ್ಯಾಯರಾಗಿದ್ದ ತಾವಳಗೇರಿ ಗ್ರಾಮದ ಮಿ. ತಡಿಯಂಗಡ ಬಿದ್ದಯ್ಯನವರನ್ನು ಈ ತಾ. 19ರಲ್ಲಿ ಅವರ ಮನೆ ಚಂಗಪ್ಪನವರು ಗುಂಡು ಹೊಡೆದು ಕೊಂದಿರವೆಂದೂ ಈ ವಿಷಯವು ಪೋಲೀಸು ತನಿಖೆಯಲ್ಲಿದೆಯೆಂದೂ ಸುದ್ದಿ.

ಜಮಾನ್ದಾರರ ಸಂಘದ ಸೇವಾದಳದ ತರಬೇತು ಉಪಕಮಿಟಿಯ ಮೀಟಿಂಗು ಈ ತಾ. 29ರಲ್ಲಿ ಅಮ್ಮತ್ತಿಯಲ್ಲಿ ನಡೆಯುವದು. ಸೇವಾದಳದ ತರಬೇತು ಮಾರ್ಚ 1ರಲ್ಲಿ ಪ್ರಾರಂಭವಾಗಲಿಕ್ಕಿದೆ.

ಈ ತಾ 15ರಲ್ಲಿ ವೀರಾಜಪೇಟೆಯಲ್ಲಿಯೂ, 17ರಲ್ಲಿ ಮಡಿಕೇರಿಯಲ್ಲಿಯೂ ನಡೆದ ಸೇಂದಿ, ಸಾರಾಯಿ ಮತ್ತು ಗಾಂಜ ಅಂಗಡಿಗಳ ಕಂಟ್ರಾಕ್ಟು ಹರಾಜಿನಲ್ಲಿ ಕಳೆದ ವರ್ಷಕ್ಕಿಂತ ಸುಮಾರು 14,700 ರೂ. ಹೆಚ್ಚು ಉತ್ಪತ್ತಿಯಾಗಿದೆಯೆಂದು ತಿಳಿಯ ಬರುತ್ತದೆ.

ಸೈಮನ್ ಕಮಿಷನಿನ ನೇಮಿಸುವಿಕೆಯಿಂದ ದೇಶದಲ್ಲಿ ಉಂಟಾಗಿರುವ ಅತೃಪ್ತಿಯನ್ನು ತೋರಿಸುವ ಬಗ್ಗೆ ಕೊಡಗು ಕೌನ್ಸಿಲಿನ 13 ಚುನಾಯಿತ ಇಂಡಿಯನ್ ಮೆಂಬರರ ಪೈಕಿ 8 ಜನರು ನಾಳೆ ನಡೆಯಲಿಕ್ಕಿರುವ ಬಜೆಟ್ ಚರ್ಚೆಗೆ ಹೋಗುವದಿಲ್ಲವೆಂದು ಇಷ್ಟರವರೆಗೆ ತಿಳಿದು ಬಂದಿದೆ.

ಹೊಸಕೋಟೆಯಲ್ಲಿದ್ದ ಮಿ. ಪೊನ್ನಕಚ್ಚಿರ ಗಣಪತಿಯವರು ಅಸ್ವಸ್ಥರಾಗಿ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದವರು ಈ ತಾ 15ರಲ್ಲಿ ಅಲ್ಲಿಯೇ ಶಿವಾಧೀನರಾದರೆಂದು ತಿಳಿಯಲು ವ್ಯಸನ ಪಡುತ್ತೇವೆ. ಅವರ ಶವವನ್ನು ಬಿಟ್ಟಂಗಾಲದಲ್ಲಿರುವ ಅವರ ಮನೆಗೆ ತಂದು ದಹನ ಮಾಡಿದರಂತೆ.

ಕೊಡಗಿನ ಮುಂದಿನ ರಾಜಕೀಯ ರಚನೆಯ ಯೋಜನೆ ಬಗ್ಗೆ ಜಮಾನ್ದಾರರ ಸಂಘವು ನೇಮಿಸಿರುವ ಉಪಕಮಿಟಿಯ (ಪತ್ರಿಕೆಗೆ ಸೇರಿಸಲ್ಪಟ್ಟಿರುವ 10 ಮೆಂಬರುಗಳ ಸಹಿತ) ಮೀಟಿಂಗು ಮಾರ್ಚ ತಾ. 3ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆ ಖಾದಿ ಭಂಡಾರದ ಮಹಡಿಯಲ್ಲಿ ನಡಿಯಲಿಕ್ಕಿದೆ.

ಜಮಾನ್ದಾರರ ಸಂಘದ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು ಮತ್ತು ಜನರಲ್ ಸೆಕ್ರೆಟರಿಯವರು ಮೆ. ಪಾಂಡ್ಯೇರಿ ಸಣ್ಣಪ್ಪನವರ ಕೋರಿಕೆ ಮೇರೆ. ಈ ವರ್ಷ ಸಂಘದ ಜನರಲ್ ಮೀಟಿಂಗನ್ನು ಸಂಪಾಜೆ ಪಟ್ಟಿ ತಾಲೋಕಿನಲ್ಲಿ ನಡಿಸಬೇಕೆಂಬ ವಿಷಯ ಕುರಿತು ಈ ತಾ. 18ರಲ್ಲಿ ಶನಿವಾರಸಂತೆಯಲ್ಲಿಯೂ, 19ರಲ್ಲಿ ರಾಮಸ್ವಾಮಿ ಕಣಿವೆಯಲ್ಲಿಯೂ ಮತ್ತು 20ರಲ್ಲಿ ಸೋಮವಾರಪೇಟೆಯಲ್ಲಿ ಮೀಟಿಂಗು ನಡಿಸಿದರೆಂದೂ, ಅನೇಕರ ಅಪೇಕ್ಷೆ ಮೇರೆ ಸದರಿ ಮಹಾ ಸಭೆಯನ್ನು ಸೋಮವಾರಪೇಟೆಯಲ್ಲಿ ನಡಿಸುವಂತೆ ತೀರ್ಮಾನಿಸಲಾಗಿದೆಯೆಂದು ಅಲ್ಲಿಯ ಮುಖಂಡರು ಸಂಘದ ಜನರಲ್ ಸೆಕ್ರೆಟರಿಯವರಿಗೆ ಒದಗಿಸಿರುವರೆಂದೂ, ಈ ಬಗ್ಗೆ ಮುಂದಿನ ಏರ್ಪಾಡುಗಳನ್ನು ಮಾಡಲು ಆ ತಾಲೋಕಿನವರ ಮೀಟಿಂಗೊಂದು ಮೆ. ಬಿ. ಡಿ. ನಾರಾಯಣಶೆಟ್ಟಿಯವರ ಕೋರಿಕೆ ಮೇರೆ ಮಾರ್ಚ ತಾ. 1ರಲ್ಲಿ ಸೋಮವಾರಪೇಟೆಯಲ್ಲಿ ನಡೆಯುವದೆಂದೂ ತಿಳಿದು ಬರುತ್ತದೆ.

ಹಿಂದೂದೇಶ.

ಮೈಸೂರು ಮಹಾರಾಜರವರಿಗೆ ಕಳೆದ ವಾರ ಸ್ವಲ್ಪ ಜ್ವರ ಬಂದಿದೆ ಈಗ ಅವರಿಗೆ ಗುಣವಾಗುತ್ತಿದೆಯೆಂದು ತಿಳಿಯ ಬರುತ್ತದೆ

ಸೈಮನ್ ಕಮಿಷನನ್ನು ಕುರಿತು ಬಹಿಷ್ಕಾರ ಕುರಿತು ಹಿಡಿದ ರಠರಾವನ್ನು ಪಂಜಾಬು ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷರು ಚರ್ಚೆಗೆ ಬಿಡಲಿಲ್ಲ.

ಸೈಮನ್ ಕಮಿಷನು ಕಾಶೀಪಟ್ಟಣಕ್ಕೆ ತಾ. 19ರಲ್ಲಿ ಹೋದಾಗ ಅಲ್ಲಿಯ ನಿವಾಸಿಗಳು ಹರತಾಳವನ್ನು ಆಚರಿಸಿ ತಮ್ಮ ಅತೃಪ್ತಿಯನ್ನು ತೋರಿಸಿದರು

ಸ್ವಾಮಿ ಶ್ರದ್ಧಾನಂದರವರ ಮಗ ಪಂಡಿತ ಇಂದ್ರರವರ ಮೇಲೆ ವಿಧಿಸಿದ್ದ ಶಿಕ್ಷೆಯು ಅಪ್ಪೀಲು ಕೋರ್ಟಿನಲ್ಲಿ 6 ತಿಂಗಳು ಕಠಿಣಕ್ಕೂ, 300 ರೂ. ಜುಲ್ಮಾನೆಗೂ ಇಳಿಸಲಾಗಿದೆ.

'ಇಂಡಿಯನ್ ನೇವಿ ಬಿಲ್'ನ್ನು ಒಂದು ಸಿಲೆಕ್ಟ್ ಕಮಿಟಿಯ ಚರ್ಚೆಗೆ ಬಿಡಬೇಕೆಂದು ಸರ್ಕಾರದವರು ತಂದ ಠರಾವು ಎಸೆಂಬ್ಲಿಯಲ್ಲಿ ಪ್ರಜಾಪ್ರತಿನಿಧಿಗಳ ಬಹುಮತದಿಂದ ಸೋಲಿಸಲ್ಪಟ್ಟಿತು

ಬೊಂಬಾಯಿ ಸರಕಾರದ ಮಾಜಿ ಮಂತ್ರಿಯಾದ ಮೆ. ಬಿ. ವಿ. ಜಾಧವರವರು, ಮೆ. ನೂರಮಹಮ್ಮದರವರು ಡಿವೆಲಪ್ಮೆಂಟ್ ಇಲಾಖೆಯ ಅಕ್ರಮಗಳನ್ನು ಹೊರಗೆಡಹಿ ಮಾಡಿದ ಪಬ್ಲಿಕ್ ಕೆಲಸವನ್ನು ಎಣಿಸಿ ಸರಕಾರದ ಮೇಲು ಅವರ ಕೇಸಿನ ಖರ್ಚಿನ ಬಗ್ಗೆ ಹಣ ಕೊಡಬೇಕೆಂದು ಬೊಂಬಾಯಿ ಕೌನ್ಸಿಲಿಗೆ ಒಂದು ಠರಾವು ತಂದಿರುವರು

'ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕು' ಎಂಬ ಲಾಲಾ ಲಜಪತ ರಾಯರ ಠರಾವು ಎಸೆಂಬ್ಲಿಯಲ್ಲಿ ತಾ 16 ಮತ್ತು 18ರಲ್ಲಿ ಚರ್ಚಿಸಲ್ಪಟ್ಟು, ಠರಾವಿನ ಪರವಾಗಿ 63 ಜನರೂ, ವಿರೋಧವಾಗಿ 62 ಜನರು ಓಟು ಕೊಟ್ಟದ್ದರಿಂದ ಠರಾವು 1 ಓಟಿನ ಬಹುಮತದಿಂದ ಪಾಸಾಯಿತು. ಪ್ರಜಾಪ್ರತಿನಿಧಿಗಳ ಈ ಜಯವು ಇಡೀ ಹಿಂದೂದೇಶದಲ್ಲಿ ಸಂತೋಷವನ್ನುಂಟುಮಾಡಿದೆ.

ಬ್ರಿಟಿಷ ಸರಕಾರಕ್ಕೆ ರಾಜಭಕ್ತಿಯನ್ನು ತೋರಿಸಲಿಲ್ಲವೆಂಬ ಕಾರಣದಿಂದ ನಾಬಾದ ಮಹಾರಾಜರವರ ಪದವಿಯನ್ನು ತೆಗೆದು ಹಾಕಿ, ಅವರ ಖಜಾನೆಗ ವಶಪಡಿಸಿ ಕೊಟ್ಟಿದ್ದ ರೂ 25,000 ನ್ನು 10,000 ಇಳಿಸಿ, ಅವರನ್ನು ಕೊಡಕನಾಲ್ ಎಂಬ ಸ್ಥಳಕ್ಕೆ ತಂದು ಅಲ್ಲಿ ವಾಸಿಸುವಂತೆ ಮಾಡಿರುವರು. ಈ ವಿಷಯ ಎಸೆಂಬ್ಲಿಯಲ್ಲಿ ಚರ್ಚಿಸಬೇಕೆಂದು ಮೆಂಬರರು ಕೇಳಿದಕ್ಕೆ ಅದರ ಅಧ್ಯಕ್ಷರು ಅವಕಾಶ ಕೊಟ್ಟಿರುವದಿಲ್ಲ.

ರಾಯಲ್ ಕಮಿಷನು ತಾ. 20ರಲ್ಲಿ ಕಲ್ಕತ್ತಾಕ್ಕೆ ಹೋದಾಗ ಅಲ್ಲಿಯ ಜನರು ಬ್ಯಾಸ ಸಂಗಮದ ಮೈದಾನಗಳಲ್ಲಿ ಕೂಡಿ ಒಂದು ದೊಡ್ಡ ಪಬ್ಲಿಕ್ ಮೀಟಿಂಗನ್ನು ನಡಿಸಿದರು. ಆಚಾರ್ಯ ಪಿ. ಸಿ. ರೇ ಯವರು ಅಧ್ಯಕ್ಷರಾಗಿದ್ದರು. 50,000 ಕ್ಕಿಂತ ಹೆಚ್ಚು ಜನರು ಸೇರಿದ್ದರು. ಸೈಮನ್ ಕಮಿಷನನ್ನು ನಿಷೇಧಿಸಿ ಠರಾವು ಪಾಸು ಮಾಡಿದಲ್ಲದೆ ಬ್ರಿಟಿಷ್ ಸಾಮಾನುಗಳಿಗೆ ಬಹಿಷ್ಕಾರ ಹಾಕಬೇಕೆಂದು ತೀರ್ಮಾನಿಸಿದರು

— — —

ವಿಜ್ಞಾಪನೆ

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—ನನ್ನ ಜಾಪ್ತು ಸುಮಾರು ಕಪ್ಪು ಬಣ್ಣದ (ಕಂದುಬಣ್ಣದ), ಸಣ್ಣಗೂಳಿನ, ಸುಮಾರು ಮೂರು ವರ್ಷ ಪ್ರಾಯದ, ಕಪ್ಪು ಕಣ್ಣಿನ ಒಂದು ಕೋಣ ಹಿಂದೆ ಹಿಡಿದು ಹೋಗಿರುವ ಬಗ್ಗೆ ಹೆಚ್ಚು ಜನ ವೀರಾಜಪೇಟೆಯಿಂದ ಈಗ ಹರಾಜಿನಿಂದ ಒಂದು ತಿಂಗಳಾಗಿರತ್ತೆ. ಎಲ್ಲಿಯೂ ಸಿಕ್ಕಿಯಾಗಿದ್ದಲ್ಲಿ ಅದನ್ನು ಹಿಡಿದವರು ಈ ಕೆಳಗಿನ ಅಡ್ರೆಸ್ಸಿಗೆ ತಿಳಿಸಿದ ಮನುಷ್ಯನಿಗೆ ಬರತಕ್ಕ ರೂಪಾಯಿ ಬಹುಮಾನ ಕೊಡುತ್ತೇನೆ.

ಮಡಿಕೇರಿ,   ಪಿ. ಸಿ. ಉತ್ತಯ್ಯ.
ತಾ 23-2-28   ಪಾರ್ಟ ಸಬ್ ಅಸಿಸ್ಟಂಟ್ ಇನ್ಸ್ಪೆಕ್ಟರ್

COORG CIVIL SURGEON'S OFFICE,
MERCARA, DATED THE 15TH FEBRUARY 1928

NOTICE.

Sealed tenders will be received at the Civil Surgeon's Office, Mercara upto 11 A. M on Monday the 12th March 1928 for the supply by contract of all articles of diet, etc required separately for the use of the inmates of (1) Mercara (2) Virajpet and (3) Somwarpet Hospitals from 1st April 1928 to 31st March 1929 (both days inclusive).

For further particulars apply to the Medical Officer in charge of the Hospitals concerned.

I. R. THORNTON,
Major, I. M. S.,
Civil Surgeon, Coorg

2—2

ನೋಟೀಸು.

ಇಂಡಿಯನ್ ರೆಡ್ ಕ್ರಾಸ್ ಸಂಘದಿಂದ ಪ್ರತಿ ವರ್ಷ ನಡಿಸಲು ಮಗು ಶಿಶುಗಳ ಮತ್ತು ಆರೋಗ್ಯ ರಕ್ಷಣೆ ಕುರಿತ ಪ್ರದರ್ಶನವು 1928ನೇ ಇಸವಿ ಮಾರ್ಚ ತಾರೀಕು 12ರಿಂದ 14 ರವರೆಗೆ ಮಡಿಕೇರಿ ಸರಕಾರಿ ಶಾಲೆಯಲ್ಲಿಯೂ, 16 ಮತ್ತು 17ರಲ್ಲಿ ವೀರಾಜಪೇಟೆಯಲ್ಲಿಯೂ ನಡಿಸಲ್ಪಡುತ್ತೆ. ಸರ್ವರೂ ದಯಮಾಡಿಸಬೇಕಾಗಿ ಕೇಳಿಕೊಳ್ಳಲಾಗಿರುತ್ತೆ.

ಎ. ಬಿ. ಕಾರ್ಯಪ್ಪ.
ಗೌರವ ಕಾರ್ಯದರ್ಶಿ.

ಸೈಮನ್ ಕಮಿಷನೂ, ಕೊಡಗು ಕೌನ್ಸಿಲೂ.

'ಹಿಂದೂದೇಶದ ರಾಜಕೀಯ ಸುಧಾರಣೆಯನ್ನು ಮತ್ತು ಪ್ರಜಾಪ್ರತಿನಿಧಿ ಸಭೆಗಳ ಬೆಳವಣಿಗೆಯನ್ನು ಬಗ್ಗೆ ಮುಂದಿನ ಸುಧಾರಣೆಗೆ ಹಿಂದೀಯರ ಆವಶ್ಯಕತೆಯನ್ನು ತಿಳಿಯಲು ನೇಮಿಸಲಾಗಿರುವ ಸೈಮನ್ ಕಮಿಷನು ಹಿಂದೀಯರ ಜನರ ಅಭಿಪ್ರಾಯಕ್ಕೆ ವಿರೋಧವಾಗಿರುವದರಿಂದ ಈ ದೇಶದ ಅತೃಪ್ತಿಯನ್ನು ತೋರಿಸುವ ಬಗ್ಗೆ ಕೊಡಗು ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಈ ತಿಂಗಳ 25—27ರಲ್ಲಿ ನಡೆಯಲಿಕ್ಕಿರುವ ಬಜೆಟ್ ಚರ್ಚೆಯಲ್ಲಿ ಭಾಗಿಗಳಾಗಬಾರದೆಂತ ಜಮಾನ್ದಾರರ ಸಂಘವು ಕೇಳಿಕೊಂಡ ಮೇರೆ ಈ ಕೆಳಗೆ ರುಜು ಮಾಡಿದ ನಾವು ನಾಳೆ ಪ್ರಾರಂಭವಾಗುವ ಬಜೆಟ್ ಮೀಟಿಂಗಿಗೆ ಹೋಗುವದಿಲ್ಲವೆಂದು ನಿಶ್ಚಯಿಸಿದ್ದೇವೆ.

೧. ಪಾರ್ವಂಗಡ ಕುಟ್ಟಾಲಪ್ಪ.
೨. ಕೋದಂಡ ಉತ್ತಯ್ಯ.
೩. ನಿಡ್ಯಮಲೆ ಮುದ್ದಪ್ಪ.
೪. ಪಾಂಡ್ಯೇರಿ ಸಣ್ಣಪ್ಪ.
೫. ಮನೆಯಪ್ಪಂಡ ಚೆಣ್ಣಪ್ಪ.
೬. ಸಿ. ಎಸ್. ವೆಂಕಪ್ಪಯ್ಯ.
೭. ಕೊಳ್ಳಿನೂಡ ಕರುಂಬೈಯ.

ತಾ 21—2—28   ೮. ಪಂದ್ಯಂಡ ಬೆಳ್ಯಪ್ಪ.

ಪ್ರಸಿದ್ಧ ಪತ್ರಿಕೆ.

ಸೋಮವಾರಪೇಟೆ ನಾಡು ಚೌಡ್ಲು ಗ್ರಾಮಕ್ಕೆ ಸೇರಿದ ಕಿರ್ಬೆಟ್ಟದ ಮೊಳ್ಳನೆ 1ನೇ ಲಿಂಗಪ್ಪ ಮತ್ತು 2ನೇ ಪೂವೈಯ್ಯ ನಹ ನಮ್ಮ ಕಟುಂಬದ ಪರವಾಗಿ ಈ ಮೂಲಕ ಬಹಿರಂಗವಾಗಿ ಎಲ್ಲರಿಗೂ ಪ್ರಾರ್ಥಿಸಿ ತಿಳಿಯಪಡಿಸುವದೇನಂದರೆ—ನಮ್ಮ ಮನೆ ಇದೇ ಕಿರ್ಬೆಟ್ಟದ ಕೊಪ್ಪಲಲ್ಲಿ ಇರುವ ಪಾತಿ ಸುಬ್ಬೈಯ್ಯ ಎಂಬವನ ಸರ್ವ ಮೂಲ ಚರಸ್ಥಿರ ಸ್ವಯಾರ್ಜಿತದ ಆಸ್ತಿ ಪಾಸ್ತಿಗಳಿಗೆ ನಾವುಗಳು 1ನೇ ದಾಯ ಹಕ್ಕುದಾರಿಕ ಸ್ವತಂತ್ರರಾಗಿರುವುದರಿಂದಲೂ, ಇನ್ನು ಮುಂದೆ ಕ್ರಿಯಾದಿ ಪಗೈರೆ ಕಾರ್ಯಭಾರವನ್ನು ನಾವುಗಳು ನಡೆಸಬೇಕಾದ ಕಾರಣದಿಂದ ಈ ಪತ್ರಿಕೆಯ ಮೂಲಕ ಬಹಿರಂಗವಾಗಿ ಸರ್ವ ಮಹಾಜನರಿಗೆ ಪ್ರಕಟ ಕೊಳ್ಳುವದೇನಂದರೆ—ಈ ಪಾತಿಗೆ ಸುಮಾರು 80 ವರ್ಷ ಮೇಲ್ಪಟ್ಟ ವೃದ್ಧ ಪಂಡಿತ ಪುತ್ರ ಸಂತಾನ ಮತ್ತು ಇವನ ಸಾಕು ಕೂಡ ಗ್ರಾಮಕ್ಕೆ ಪಾಲಿಕ ಹೋಗಿ ಗಂಡ ಸತ್ತು ಕಿರಿಯ ಮನೆಯಲ್ಲಿ ವಿಧವೆಯಾದ ಪುತ್ರಿಯರ ಸಂತತಿಯನ್ನು ನೋಡುವ ಗೃಹಕೃತ್ಯದಲ್ಲಿದ್ದಾಳೆ. ಇಂಥಾ ಸ್ತ್ರೀ ಪುರುಷರಿಗೆ ಅನೇಕ ಜನರು ದುರ್ಬೋಧನೆ ಮಾಡುವದರಿಂದ ಪೂರ್ವಾಯಿಸಿ ಪಾತಿಯ ಜಾಪ್ತು ಸಾಮಾನುಗಳನ್ನು ಮಾರ್ಪಡಿಸುವ ಸ್ತ್ರೀಯರು ದತ್ತು ಸ್ವೀಕಾರ ಪಗೈರೆ ಮಾಡುವ ಸಂಭವವಿದೆಯೆಂದು ತಿಳಿಯುತ್ತೇವೆ. ಸದರಿ ಪಾತಿಯ ಸೊತ್ತುಗಳು ಪುತ್ರಸಂತಾನವಿರದಾಗಿ ನಮಗೇ ಹಕ್ಕು ಬರತಕ್ಕದ್ದಾದರೂ ಯಾವ ವಿಧದಿಂದಲೂ ಪಡೆಯಬಾರದೆನ್ನುವ ಉದ್ದೇಶ ಮತ್ತು ಇನ್ನು ಮುಂದೆ ಇವರಲ್ಲಿ ಯಾವ ಲೇವಾದೇವಿ ಪಗೈರೆ ಮಾಡುವದು ನಡೆದರೂ ಹಿರಿಯರಾದ ನಮ್ಮ ಒಪ್ಪಿಗೆ ಇಲ್ಲದೆ ಈ ಮೂಲಕ 1ನೇ ಹಕ್ಕುದಾರರಾದ ನಾವುಗಳು ಮುಂದಾಗಿ ತಿಳಿಸಿರುತ್ತೇವೆ ಅಂತಹ ಮೋಸಕೃತ್ಯದಿಂದ ನಡೆಯುವ ಕಾರ್ಯಗಳಿಗೆ ವಿರೋಧವಾಗಿ ನಡೆದಲ್ಲಿ ಸರಕಾರಿ ಪಡೆದು ವ್ಯವಹಾರಕ್ಕೆ ಜವಾಬ್ದಾರರಾಗತಕ್ಕದ್ದಲ್ಲದ ಸೊತ್ತು ಪತ್ರ ತಿಳಿಯಾದ ಬಳಿಕ ಲಾಭ ನಷ್ಟ ಪ್ರಯೋಜನ ಮಾಡದಂತೆ ಅವರೇ ಕೇವಲ ಸ್ವತಃ ಜವಾಬ್ದಾರರಾಗತಕ್ಕವರು ಈ ನೋಟೀಸಿನ ಮೂಲಕ ಅಂತಿಮ ಮುಂದಾಗಿ ಪ್ರಕಟಿಸಿ ಸರ್ವರಿಗೂ ತಿಳಿಯಪಡಿಸುತ್ತೇವೆ.

ಕಿರ್ಬೆಟ್ಟ,   ಮೊಳ್ಳನೆ ಲಿಂಗಪ್ಪ
ತಾ. 18—2—28   ಕೆ. ಎ. ಪೂವೈಯ್ಯ.

Wanted.

Two writers one for Pennya Estate and the other for Boothankad Estate in Coorg with 200 or more coolies each. Good pay and prospects. Preference will be given only to those who have got established gangs and who do not want advance. For further particulars apply to SRIMATI D. SAKAMMA, COFFEE PLANTER, SOMWARPET, (N. COORG).

ಬೇಕಾಗಿದೆ

ಪನ್ಯ ಎಸ್ಟೇಟಿಗೆ ಒಬ್ಬ ಮತ್ತು ಬೂತನಕಾಡು ಕೋಟೆಗೆ ಒಬ್ಬ, 200 ಅಥವಾ ಹೆಚ್ಚು ಕೂಲಿಗಳು ಸಹಿತ ಇರುವ ರೈಟರು ಗಳು ಬೇಕಾಗಿವೆ. ಒಳ್ಳೆ ಸಂಬಳ ಸಿಗುವದು. ಗ್ಯಾಂಗ್ ಇರುವವರಿಗೆ ಮತ್ತು ಅಡ್ವಾನ್ಸು ತೆಗೆದುಕೊಳ್ಳದವರಿಗೆ ಪ್ರಥಮ ಪ್ರೋತ್ಸಾಹ ದೊರೆಯುತ್ತದೆ. ಒಳ್ಳೆ ಸಂಬಳ ಮತ್ತು ಉತ್ತೇಜನವಿದೆ. ಹೆಚ್ಚಿನ ವಿವರ ತಿಳಿಯಲಿಕ್ಕೆ ಶ್ರೀಮತಿ ಡಿ. ಶಾಕಮ್ಮನವರು, ಕಾಫೀಪ್ಲಾಂಟರು, ಸೋಮವಾರಪೇಟೆ, ಈ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು.   ೨—೪

For Sale

About 300 acres of excellent paddy field and dry lands included in Palpare and Kanchikote Estates

For further particulars apply:—

SUPERINTENDENT,

PALPARE ESTATE,

TITTIMATHI POST

5—3 S. COORG

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ.]

ಆಲ್ ಇಂಡಿಯಾ ಮ್ಯೂಚ್ಯುವಲ್ ಎಯಿಡ್ ಸಂಘ

ಮಹಾಸ್ವಾಮಿಯರೇ,

ಈ ಸಂಘದ ಪ್ರೋವಿನ್ಸಿಯಲ್ ಚೇರ್‌ಮೇನರಾದ ರಾ. ಸಾ. ಪಟ್ಟಮಾಡ ದೇವಯ್ಯನವರು ಮತ್ತು ಡೈರೆಕ್ಟರಾದ ಮಿ. ಪಂಡೇಟಿರ ಅಪ್ಪಯ್ಯನವರು ನನ್ನ ಕೋರಿಕೆಮೇರೆ ಕಳೆದ ತಾರೀಖು 1ರಲ್ಲು ಶನಿವಾರ ಸಂಜೆಗೆ ದಯಮಾಡಿಸಿದಲ್ಲು ಗೋಣಿಕೊಪ್ಪ ಮೈದಾನದಲ್ಲಿ ಒಂದು ಸಭೆ ಸೇರಿದು ಅಂದಾಜು 75 ಜನರು ಸೇರಿದ್ದರು.

ಅಧ್ಯಕ್ಷರಾದ ದೇವಯ್ಯನವರು ಈ ಸಂಘದ ಉದ್ದಿಶ್ಯವನ್ನು ಸವಿಸ್ತಾರವಾಗಿ ಜನರಿಗೆ ಬೋಧಿಸಿದಲ್ಲು ಹುಟ್ಟಿದ ಕ[illegible] ಪ್ರಶ್ನೆಗಳಿಗೆ ಮಿ. [illegible] ನವರು ಮತ್ತು [illegible] ಎಲ್ಲರ ಮನಸ್ಸಿಗೆ [illegible] ಸಮಾಧಾನ [illegible] ಸಂಘದ ಬಾಂಡುಗ[illegible] ಹೆಸರ[illegible] ಪತ್ರಿಕೆಯಲ್ಲಿ [illegible] ಪ್ರಕಟಿಸ[illegible] [illegible] ಮೇ[illegible] ತೆರೆದುಕೊಂಡ[illegible] ಅವರ ಸಹೋದರರಾದ ಮಿ. [illegible] ಮತ್ತು [illegible] ಮಹಾಶಯರುಗಳಿಗೂ ಈ ಮೂಲಕ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಸಭೆಯು ಅಂದಾಜು 1½ ಗಂಟೆಗೆ ಅಧ್ಯಕ್ಷರಿಗೆ ವಂದನೆಗಳಿಂದ ಬರಖಾಸ್ತಾಯಿತು.

ಟಿ. ಎ. [illegible]ಸ್ವಾಮಿ ಪಿಳ್ಳೆ.

ಸುಂಟಿಕೊಪ್ಪ ಯೂನಿಯನ್ ಕ್ಲಬ್

ಸುಂಟಿಕೊಪ್ಪ ಮತ್ತು ಇದರ ಸುತ್ತು ಮುತ್ತಲು ಇರುವ ಕಾಫಿ ತೋಟಗಳ ಮಹಾಶಯರುಗಳೆಲ್ಲರೂ ಸೇರಿ ತಾರೀಖು 12—2—1928ರಲ್ಲು ಸುಂಟಿಕೊಪ್ಪದಲ್ಲು ಒಂದು ಕ್ಲಬ್ ಮಾಡುವ ಏರ್ಪಾಡಿಗಾಗಿ ಮಿ. ಯಂ. ಯಲ್. ತಿಮ್ಮಾಚಾರರ ಅಧ್ಯಕ್ಷತೆಯಲ್ಲು ಒಂದು ಜನರಲ್ ಮೀಟಿಂಗ ನಡೆಯಿತು. ಆ ದಿನ ಹಾಜರಿದ್ದ ಸುಮಾರು 40 ಜನ ಮಹಾಶಯರು ಏಕಾಭಿಪ್ರಾಯದಿಂದ ಒಂದು ಕ್ಲಬ್ ಸ್ಥಾಪಿಸಬೇಕಾಗಿ ಅಭಿಪ್ರಾಯ ಪಟ್ಟ ಮೇರೆ ಸರ್ವಸಮ್ಮತದಿಂದ ಈ ಕೆಳಗೆ ಕಂಡ ಠರಾವುಗಳು ಮಂಜೂರಾಗಲ್ಪಟ್ಟವು.

1. ಸದರಿ ಕ್ಲಬ್ ಸುಂಟಿಕೊಪ್ಪ ಯೂನಿಯನ್ ಎಂದಾಗಿ ಕರೆಯಲ್ಪಡುವದು.

2. ಈ ಕೆಳಗೆ ನಮೂದು ಮಾಡಿರುವವರನ್ನು ಕ್ಲಬ್ಬಿನ ಮೆಂಬರುಗಳನ್ನಾಗಿ ಚುನಾವಣ ಮಾಡಲಾಯಿತು.

(1) ಮಿ. ಜಿ. ಯಂ. ಮಂಜುನಾಥಯ್ಯನವರು, ಪ್ರೆಸಿಡೆಂಟರು (2) ಮಿ. ಸಿ. ಎ. ಚಂಗಪ್ಪನವರು, ವೈಸ್‌ಪ್ರಸಿಡೆಂಟರು

ಕಮಿಟಿ ಮೆಂಬರುಗಳು —

(3) ಮಿ. ಗೌಡಾದ ಕೆ. ಎ. ಎಯ್ಯಪ್ಪನವರು (4) ಕೆ. ಕೆ. ಚಂಗಪ್ಪನವರು, (5) ಬ್ರಾಂ ತಿಮ್ಮಪ್ಪಯ್ಯನವರು, (6) ಯಂ. ಯಂ. ಕಾರ್ಯಪ್ಪನವರು (7) ಯಂ. ಯಂ. ಚಂಗಪ್ಪನವರು, (8) ಪನ್ನ ಬಿಪ್ಪನವರು (9) ಬಿ. ಎನ್. ಕುಶಾಲಪ್ಪನವರ, (10) ಕೆ. ಪೂವಯ್ಯನವರ, (11) ಪಿ. ಆರ್. ಗೋವಿಂದರಾಜುಲು ನಾಯಡುರವರು ಸಕ್ರೆಟರಿ ಮತ್ತು ಟ್ರೆಜರರ್.

3. ಪ್ಲಾಂಟರುಗಳು ಪ್ರತಿ ಒಬ್ಬರು 5 ರೂಪಾಯಿ ಮತ್ತು ಇತರರು ಒಂದು ರೂಪಾಯಿಯಂತೆ ದಾಖಲಾತಿ ಸೀಜು ಮತ್ತು 1 ರೂಪಾಯಿ ಮತ್ತು 8 ಅಣೆ ಮೇರೆ ಮಾಹೆಯಾನ ಚಂದಾ ಸಹ ಕೊಡಬೇಕು.

4. (1) ಕೊಡಗು, (2) ಲೋಕಪಾವನ (3) ಲೋಕರಹಸ್ಯ, (4) ಸಾಧ್ವಿ (5) ಜಯಕರ್ನಾಟಕ, (6) ಕರ್ಮವೀರ, (7) ಆರೋಗ್ಯಚಂದ್ರಿಕ, (8) ವಿಕಟಪ್ರತಿಪಕ್ಷಿ, (9) ಹಿಂದು, (10) ಯಂಗ್ ಇಂಡಿಯಾ, (11) ಮಂಗಳೂರು ಮೇಯಿಲ್, (12) ಮದೀಶ ಇಂತಿಷ್ಟು ಪತ್ರಿಕೆಗಳನ್ನು ತರಿಸಬೇಕಾಗಿ ತೀರ್ಮಾನವಾಯಿತು.

5. ಮೊದಲನೇ 1 ರೂಪಾಯಿ ಸ[illegible] ದಾನವನ್ನು [illegible] ತೀರ್ಮಾನ[illegible]

6. [illegible] ಕಮಿಟಿಯ [illegible] ಮಾನ [illegible] ತೀರ್ಮಾನಿಸಲಾಯಿತು.

7. ದಾಖಲಾತಿ ಸೀಜು ಮತ್ತು [illegible] ತಾ. 1ರೊಳಗೆ ಸಕ್ರೆಟರಿಯವರಿಗೆ [illegible]

8. ಈ ಪ್ರೋಸೀಡಿಂಗ್ಸ[illegible] ಕೊಡಗು ಮತ್ತು ಲೋಕಪಾವನ ಪತ್ರಿಕೆಗಳಿಗೂ [illegible] ಎಲ್ಲರಿಗೂ [illegible] ಕಳುಹಿಸಬೇಕ.

9. ಕ್ಲಬ್ [illegible] ಸಹಾಯ ಮಾಡಬೇಕಾಗಿ [illegible] ಅಲ್ಲಿ ನೆರೆದಿದ್ದವರು 713 ರೂಪಾಯಿ ವರೆಗೆ [illegible] ದರು ಅವರಲ್ಲಿ ಮಿ. ಪಿ. ಯು. [illegible]ಯ್ಯನವರು ಒಂದು ಕಟ್ಟಡಕ್ಕಾಗಿ 101 ರೂ. [illegible] ಸೇರಿದೆ.

ಮೇಲ್ಕಂಡ ಮಹಾಶಯರ ಉದಾರತ್ವಕ್ಕೂ ಮತ್ತು ಅಧ್ಯಕ್ಷರಿಗೂ ಸಹ ಸಭಿಕರ ವಂದನೆಗಳನ್ನು ಸೂಚಿಸಿ ಮೀಟಿಂಗನ್ನು ಬರಖಾಸ್ತು ಮಾಡಲಾಯಿತು.

ಪಿ. ಆರ್. ನಾಯಡು,
ಸಕ್ರೆಟರಿ

ಮಳೆಯ ಹಾವಳಿ.

ಅಯ್ಯಾ ಎಡಿಟರವರೇ,

ನಿಮ್ಮ ಅನುಕೂಲ್ಯವಾದ ಪತ್ರಿಕೆಯಲ್ಲಿ ಅಕಾಲ ಮಳೆಯಿಂದ ಜನರಿಗ ಆದ ನಷ್ಟವನ್ನು ನೀವು ಸೂಚಿಸಿದ್ದೀರಿ. ಬರದುದೆಲ್ಲವೂ ಅಕ್ಷರಶಃ ನಿಜವಾಗಿದೆ. ಈಗಾಗಲೇ ದಕ್ಷಿಣ ಕೊಡಗಿನ ಕೆಲವು ಭಾಗಗಳನ್ನು ಸುತ್ತಿಕೊಂಡು ಬಂದಿರುವ ಒಬ್ಬ ಮಹಾಶಯರು ಎಲ್ಲಿಯೂ ಹಾನಿ ಕಾರವೂ ಸೆಗೆಗೊಂಡಿರುವುದೂ, ಸುಮಾರು ಒಂದು ಲಕ್ಷ ರೂಪಾಯಿಯ ಮೇಲೆ ಜನರಿಗೆ ನಷ್ಟ ಉಂಟಾಗಿದೆಯೆಂದೂ ಹೇಳುವರು. ಜನರ ಜೀವನಾಧಾರವಾದ ಭತ್ತಕ್ಕೇ ಇಂಥಾ ನಷ್ಟ ಉಂಟಾದರೆ ಅವರ ಮುಂದಿನ ಗತಿಯನ್ನು ಊಹಿಸಲಸದಳವಾಗಿದೆ. ಈ ವಿಪತ್ತು ಮನುಷ್ಯ ಮಾಡಿದ್ದಲ್ಲ. ಆದುದರಿಂದ ಇದಕ್ಕೆ ಬಳಗಾದವರೂ, ದನಸಂತತಿಯೂ ಏಕ[illegible]ಂದ ಸಹಾಯ ಮಾಡಬೇಕಾಗಿದೆ. ಜನರ ನಿಜ ಸ್ಥಿತಿಯನ್ನು ಅರಿಯಲು ಒಳ್ಳೆಯ ಸೌಲಭ್ಯವೂ ಒದಗಿ[illegible] ನಷ್ಟ ಹೊಂದಿದವರಿಗಲ್ಲದಿಗೂ ಸರಕಾರದಿಂದ ಸಂಪೂರ್ಣ ಸಹಾಯ ಪಡೆಯಲಾಗಲಿಕ್ಕಿಲ್ಲ. ಇಂಥ ವಿಪತ್ತು ಕಾಲದಲ್ಲಿ ಸರಕಾರದವರೂ, ದೇಶೀಯರೂ ಒಟ್ಟುಕೂಡಿ ಸಹಾಯ ಮಾಡಬೇಕಾಗಿದೆ. ಹೀಗೆ ಮಾಡಿದರೆ ಸಂಕಟದಲ್ಲಿ ಸಂಕುಚ್ಚಿರುವ ರೈತರಿಗೆ ಪ್ರಯೋಜನ ಉಂಟಾಗುವುದು. ಈ ಅನಾಹುತಕ್ಕೆ ಸಿಕ್ಕಿದ ಮಹಾಶಯರು ತಮ್ಮ ಶಕ್ತ್ಯನುಸಾರ ಹಣ, ಭತ್ತ ಮೊದಲಾದವುಗಳ ಮೂಲಕ ಸಹಾಯ ಮಾಡಬೇಕಾಗಿದೆ.

ಇನ್ನು ಮುಂದಕ್ಕೆ ನಡೆಯುವ ಜಮೀನ್ದಾರರ ಸಂಘದ ಮೀಟಿಂಗುಗಳಲ್ಲಿಯೂ, ಕೋಆಪರೇಟಿವ್ ಮೀಟಿಂಗುಗಳಲ್ಲಿಯೂ ಇದನ್ನು ಸೂಚಿಸಿ ಆಗಬೇಕಾದ್ದನ್ನು ನಿರ್ಧರಿಸಿ ಕಷ್ಟ ಪರಿಹರಿಸುವ ಸಾಧನಗಳ ವಂದು ಒಂದು ಸ್ಕೀಮನ್ನು ನಿರ್ಮಿಸಬೇಕಾಗಿದೆ. ನಮ್ಮ ದೇಶದ ಮುಂದಾಳುಗಳೆನಿಸಿದ ಮಹಾಶಯರು ಈ ವಿಷಯ ಅಲಕ್ಷಿಸಲಾರರೆಂದು ನಂಬಿರುವೆನು ನನ್ನಲ್ಲಿದೆ.

ದಾನ ಧರ್ಮಗಳಿಗೆ ಎಲ್ಲರಿಗೂ ಸುಸಮಯ. [illegible] ಕಾರ್ಯಗಳಿಗೆ ಸರಸೂಕ್ತವಾಗಿ ಒಲಿಯುವನ.

ಕೆ. ಮುದ್ದಪ್ಪ

ಕೊಡಗು ಮತ್ತು ಮೈಸೂರು.

ಅಯ್ಯಾ,

ಮೈಸೂರಿಗೆ ಕೊಡಗನ್ನು ಸೇರಿಸುವದು ಒಳ್ಳೆಯದೆಂದೋ, ಇದಕ್ಕೆ ಎಲ್ಲರೂ ಪ್ರೋತ್ಸಾಹಕೊಟ್ಟು ಸದರಿ ಚಳವಳವನ್ನು ಜಯಶೀಲವಾಗಿ ಮಾಡಬೇಕೆಂಬ ಅಭಿಪ್ರಾಯದಿಂದೋ ವೆ. ಊ. ಮಾದಯ್ಯನವರು ಬರೆದ ಬಾತ್ಮಿಯನ್ನು ನೋಡಿ ಮಹಾಶಯರಲ್ಲಿ ಒಂದು ವಿಜ್ಞಾಪನೆಯನ್ನು ಕಳೆದ ತಿಂಗಳು 20ನೇ ತಾರೀಖಿನ ಸಂಚಿಕೆಯಲ್ಲಿ ಬರೆದಿದ್ದೆನು. ಆದರೆ ಅದರ ಹಚ್ಚಿನ ಕುಂದುಕೊರತೆಗಳೇನೂ ಬರಿಯಲ್ಲಿಲ್ಲವಾಗಿ ನನ್ನ ಮನಸ್ಸಿಗೆ ಕೋರುತ್ತೆ. ಈ ವಿಷಯದಲ್ಲಿ ಮೊದಲು ಪತ್ರಿಕೆಯಲ್ಲಿ ಪ್ರಕಟಿಸಿದ ಬಾತ್ಮಿದಾರರಿಗೆ ಪತ್ರ ಸ್ವಲ್ಪ ಅಸಮಾಧಾನವಾಗಿ ಕಂಡುಬಂದು ಕೆಲವು ಸಂಗತಿಗಳನ್ನು ಪತ್ರಿಕೆಯ ಮೂಲಕ ಅವರಿಗೆ ತಿಳಿಸಬೇಕಾಗಿಯೂ, ನನ್ನ ನಾಮಕರಣವನ್ನು ಸೂಚಿಸಿ ಜನರ ಮನಸ್ಸಿನ ಕಳವಳವನ್ನು ಹೋಗಲಾಡಿಸಬೇಕಾಗಿಯೂ ಬರೆದಿದ್ದಾರೆ. ಇದಕ್ಕೆ ಸರಿಯಾದ ಪ್ರತ್ಯುತ್ತರವನ್ನು ಕೊಡುವದು ನನ್ನ ಕರ್ತವ್ಯವಾದ್ದರಿಂದ ಅದನ್ನು ಮಹಾಶಯರ ತಿಳುವಳಿಕೆಯ ಒಳ್ಳೆಯ, ಬಾತ್ಮಿದಾರರಿಗೆ ಸಮಾಧಾನ ಉಂಟುಮಾಡುವಂತೆಯೂ ವಿವರಿಸುತ್ತೇನೆ ಮಹನೀಯರೇ,

ತಾರೀಖು 3ನೇ ಫೆಬ್ರವರಿಯಲ್ಲಿ ಸದರಿ ಬಾತ್ಮಿದಾರರು ಬರೆದ ಮೊದಲನೇ ಪ್ಯಾರದಲ್ಲಿ ನನ್ನ ಅಭಿಪ್ರಾಯವನ್ನು ಕುರಿತು ನಾನು 'ಇಂಡಿಯಾದೇಶಕ್ಕೆ ಸುಧಾರಣೆಯನ್ನು ಕೊಡಲು ಬರುವ ಕಮಿಷನ್ ನಿರ್ಮಿಸಿದ್ದು ತಿಳಿದು ಮೊದಲನೇ ಬಾತ್ಮಿದಾರರು ಬರೆದದ್ದು ತಿಳುವಳಿಕೆಯ ಕಾರ್ಯವಾಗಲಿಲ್ಲವೆಂದು ಸೂಚಿಸಿದ್ದು ಅವರ ಮನಸ್ಸಿಗೆ ಅಸಮಾಧಾನವನ್ನುಂಟು ಮಾಡಿದೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವು ಹಾಗಿಲ್ಲ. ಇಂಡಿಯಾದೇಶದ ಸ್ವರಾಜ್ಯ ಸ್ಥಾಪನೆಯಲ್ಲಿ ಮುಂದಾಳುಗಳ ಅಭಿಪ್ರಾಯವನ್ನು ಬೇರೆ ಪತ್ರಿಕೆಗಳಲ್ಲಿ ಓದಿದರೆ ವ್ಯಕ್ತವಾಗುತ್ತೆ.

ಸದರಿ ಬಾತ್ಮಿದಾರರು ಎರಡನೇ ಪ್ಯಾರದಲ್ಲಿ ಅವರಿಗೆ 33 ವರ್ಷ ನ್ಯಾಯವೆಂದೂ, 33 ವರ್ಷ ಸರಕಾರಿ ಸೇವಾವೃತ್ತಿ ಮಾಡಿ ಅವರ ಅನುಭವವನ್ನೂ ಮತ್ತು ಮಣ್ಣಿನ ಕ್ಲಾಸಿಫಿಕೇಶನ್ ಮಾಡಿದ್ದನ್ನು ಸೂಚಿಸಿದ್ದಾರೆ. ಈ ಅನುಭವಗಳಿಂದ ಕೊಡಗನ್ನು ಮೈಸೂರಿಗೆ ಸೇರಿಸಿದರೆ ಉಂಟಾಗುವ ಗುಣಾವಗುಣಗಳನ್ನು ತಿಳಿಯುವದಕ್ಕೂ ಯಾವ ಸಂಬಂಧವೂ ಕಾಣುವದಿಲ್ಲ. ಬಯಲು ಮಣ್ಣಿನ ಕ್ಲಾಸಿಫಿಕೇಶನ್ ಮಾಡಿ ವಾಡಿಕೆಯಾದವರಲ್ಲಿಯೂ, ಪುಸ್ತಕದಲ್ಲಿಯೂ ಸಂಪನ್ನರಾಗಿದೆ ಎಂದು ಭಾವಿಸುತ್ತಾರೋ? ಅದು ಎಂದಿಗೂ ಸರಿಯಲ್ಲ. ಒಂದು ಕಪ್ಪೆಯು ಆಳವಾದ ಬಾವಿಯಲ್ಲಿ 100 ಯಾ 1,000 ವರ್ಷಗಳು ಜೀವಿಸಿದರೆ ಅದರ ಅನುಭವವು ತಾನೇ ಹೇಗೆ ಹಚ್ಚುವುದು. ಸದರಿ ಬಾವಿಯಿಂದ ಹೊರಗೆ ಬಂದರೆ ತಾನೇ ಅವಶ್ಯ ಕಾಣುವದು ಇತರ ಮೃಗಗಳಿಂದ ತಾನು ಕೊಲ್ಲಲ್ಪಡಬಹುದೆಂದು ಗೊತ್ತಾಗುವದು. ಒಂದು ವೇಳೆ ಕಾಣಿ ಮೊತ್ತುಕೊಂಡ[illegible] ಗುವಾಗ ತಾನು ಬಾವಿಯೊಳಗೆ ಇರುವುದೇ ಕ್ಷೇಮವೆಂದು ಯೋಚಿಸಿದರೆ ಪ್ರಯೋಜನವೇನು? ಈ ಅನುಭವವನ್ನು ಸ್ವಲ್ಪ ಪಡೆಯಬೇಕೆಂದೇ ಸದರಿ ಬಾತ್ಮಿದಾರರ ಅಭಿಪ್ರಾಯವಾಗಿ ಕಾಣುತ್ತೆ.

ಇವರ 3ನೇ ಪ್ಯಾರಾದಲ್ಲಿ ದೊಡ್ಡ ರಾಜ್ಯಗಳಿಗೆ ಸೈಮನ್ (Simon) ಕಮಿಷನ್ ಕೊಡುವ ಸುಧಾರಣೆಗಿಂತ ಹೆಚ್ಚು ಸುಧಾರಣೆ ಹಿಂದೂರಾಜರಿಂದ ಆಳಲ್ಪಡುವ ರಾಜ್ಯಗಳಿಗೆ ಬಟ್ಲರ್ ಕಮಿಷನ್ ಕೊಡಲಿಕ್ಕಿಲ್ಲವೇನೋ ಎಂದು ಪ್ರಶ್ನೆ ಕಟ್ಟುತ್ತಾರೆ. ಇದು ಹ್ಯಾಗಾಗುತ್ತೆ. ಸ್ವರಾಜ್ಯವೆಂದರೇನು? ಸೈಮನ್ ಕಮಿಷನ್ ನಮಗೆ ಸ್ವರಾಜ್ಯ ಯಾ ಸುಧಾರಣೆ (Reforms) ಕೊಡುವದು ಮೇಲ್ತೋ, ಬಟ್ಲರ್ ಕಮಿಷನ್ ಹಿಂದೂರಾಜರಿಗೆ ಸ್ವಾತಂತ್ರ್ಯ ಕೊಟ್ಟು ಅವರಿಂದ ನಮಗೆ ಸ್ವರಾಜ್ಯ ಸಿಕ್ಕುವುದು ಮೇಲೋ? ಸೈಮನ್ ಕಮಿಷನ್ ಮೇಲೋ ಯಾ ಬಟ್ಲರ್ ಕಮಿಷನ್ ಮೇಲೋ? ಸದರಿ ಬಾತ್ಮಿದಾರರ ಅಭಿಪ್ರಾಯದಂತೆ ಎಲ್ಲರೂ ಒಪ್ಪಿ ಕೊಡಗನ್ನು ಮೈಸೂರಿಗೆ ಸೇರಿಸಿದರೆ ಏನು ಕೊಟ್ಟರೂ ತಿಂಗ್ಳುಯಿಸ್ಪಕೊಡ ಎಂಬ ಗಾದೆಗೆ ಸರಿಯಾಗುತ್ತೆ. ಈಗಿನ ಮೈಸೂರು ಮಹಾರಾಜರೇನೋ ಬಹು ಧರ್ಮಶಾಲಿಗಳು, ದೇವರಿಗೆ ಸಮಾನವಾದವರು. ಇವರಿಗೆ ಎಷ್ಟು ಕಾಲದ ವರೆಗೆ ರಾಜ್ಯವಾಳ ಆಕ್ರ? ಪೂರ್ವದಲ್ಲಿ ನಮಗೆ ರಾಜರಿರಲಿಲ್ಲವೋ? ವಿಶೇಷ್ವರ ನಮ್ಮ ಹಿರಿಯರು ಬ್ರಿಟಿಷ್ ಸರ್ಕಾರಕ್ಕೆ ವಹಿಸಿಕೊಟ್ಟರು. ಈಗ ಬಾತ್ಮಿದಾರರಂಥ ಅನುಭವಶಾಲಿಗಳು ಪುನಃ ರಾಜರೇ ಬೇಕು ದು ಕೇಳುವವರ ಒದಲು ಮೊದಲು ಬ್ರಿಟಿಷ ಸರಕಾರಕ್ಕೆ ತಂಕೊಟ್ಟ ರಾಜ್ಯವನ್ನು ಪುನಃ ವಾಪಸು ನಮಗೇ ಬಿಟ್ಟುಕೊಡುವಂತೆ ಯಾಕೆ ಕೇಳಬಾರದು? ಮೈಸೂರಿಗೆ ಸೇರಿಸುವದು ಒದಲು ಪ್ರಿಟಿಷರೇ ಆಳಿದರ ಕೇಡಕೇನು? ಈ ವಿಷಯದಲ್ಲಿ ಮಿ. ಕೆ. ಪಿ. ಚಿಣ್ಣಪ್ಪನವರ ಬಾತ್ಮಿಯ ನ್ಯಾಯವಾಗಿಯೂ ಒಪ್ಪತಕ್ಕದ್ದಾಗಿಯೂ ಇದೆ. ನಮ್ಮ ರಾಜ್ಯವನ್ನು ನಾವೇ ಯಾಕೆ ಆಳಬಾರದು. ಖಂಡಿತವಾಗಿಯೂ ಸ್ವಾತಂತ್ರ್ಯ ಪಡೆಯಬೇಕು. ಸೇವಾವೃತ್ತಿಯಲ್ಲಿರುವದಕ್ಕಿಂತ ಸಾಯುವದೇ ಲೇಸು.

ಅಯ್ಯಾ ಬಾತ್ಮಿದಾರರೇ, ಎರಡು ವರ್ಷಗಳ ಹಿಂದೆ ನನ್ನ ಅಭಿಪ್ರಾಯವು ಬಾವಿಯಲ್ಲಿದ್ದ ಕಪ್ಪೆಯ ಅಭಿಪ್ರಾಯದಂತೆ ತ್ತು. ಇತ್ತಲಾಗಿ ಹೊರಗೆ ಬಂದು ನೋಡಿಯೂ ಅನುಭವಿಯೂ ಪುನಃ ಬಾವಿಯೊಳಗೆ ಇರುವುದೇ ಸರಿಯೆಂದು ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಾಗಿದೆ. ನನ್ನ ನಾಮಕರಣವನ್ನು ಕೇಳಿದ ಮಾತ್ರಕ್ಕೆ ಅದರಿಂದ ಯಾವ ಪ್ರಯೋಜನವನ್ನು ಉಂಟುಮಾಡಲಾರದು. ದಯವಿಟ್ಟು ಅದನ್ನು ಬಿಟ್ಟು ಕೇಳಬೇಡಿ ನನಗೆ ನಿಮ್ಮ ಅರ್ಧದಷ್ಟು ಮಾತ್ರ ವಯಸ್ಸಾಗಿದೆ. ಇಷ್ಟು ವಯಸ್ಸಿನಲ್ಲಿ ಇಂಡಿಯಾದೇಶದ ಅರ್ಧಭಾಗವನ್ನು ಸುತ್ತಿಯೂ, ಹೊರಗಿನ ಕೆಲವು ರಾಜ್ಯಗಳನ್ನು ನೋಡಿಯೂ ಸ್ವರಾಜ್ಯವನ್ನು ಹೊಂದುತ್ತಿರುವ ದೇಶಗಳನ್ನು ಸಂಚರಿಸಿಯೂ ಇದ್ದೇನೆ. ಅಲ್ಲದೆ 1918ನೇ ಇಸವಿಯಲ್ಲಿ ಈಗ ಹಿಂದೂ ರಾಜರ ರಾಜ್ಯಗಳಿಗೆ ಸುಧಾರಣೆ ವಿಷಯ ವಿಚಾರಿಸುವ ಕಮಿಷನ್ ಚೇರ್‌ಮ್ಯಾನ್ ಸರ್ ಹಾರ್ಕಾರ್ಟ್ ಬಟ್ಲರವರ ಜೊತೆಯಲ್ಲಿ ಸ್ವಲ್ಪ ಸ್ಥಾಪಿಸುವ ಸಂದರ್ಭವೂ ನನಗೆ ಸಿಕ್ಕಿದೆ. ಪ್ರಪಂಚದಲ್ಲಿ ಅಮೇರಿಕ, ಜರ್ಮನಿ, ರಷ್ಯ, ಟರ್ಕಿ, ಇಟಲಿ, ಗ್ರೀಸ್, ಬ್ರಿಟಿಷ್ ದ್ವೀಪ ಆಸ್ಟ್ರೇಲಿಯಾ ಇನ್ನು ಅನೇಕ ದೇಶದ ಜನರನ್ನು ನೋಡಿಯೂ ಇದ್ದೇನೆ. ಇಷ್ಟು ಮಾತ್ರಕ್ಕೆ ನಾನು ತಿಳುವಳಿಕೆಯುಳ್ಳವನೆಂದೂ, ನನ್ನ ಅಭಿಪ್ರಾಯವೂ ನ್ಯಾಯವಾದದ್ದೆಂದೂ ಎಂದೂ ಹೇಳಲಾರೆ. ಮಹಾಶಯರ ತಿಳುವಳಿಕೆಗೆ ಅಭಿಪ್ರಾಯಗಳನ್ನು ಸೂಚಿಸಲಿಕ್ಕ ಯಾರ ಅಭ್ಯಂತರವೂ ಇಲ್ಲ. ಖಂಡಿತವಾಗಿಯೂ ಪ್ರತಿಯೊಬ್ಬ ಅನುಭವಶಾಲಿಯೂ ಅವರವರ ಅಭಿಪ್ರಾಯಗಳನ್ನು ಸೂಚಿಸಿ ಜನರಿಗೆ ತಿಳುವಳಿಕೆ ಕೈಯನ್ನು ಹೆಚ್ಚಿಸಿ ಆ ಮೇಲೆ ಕೊಡಗನ್ನು ಮೈಸೂರಿಗೆ ಸೇರಿಸುವ ಗುಣ ಅವಗುಣಗಳನ್ನು ತಿಳಿದು ಬರುತ್ತದಂದ ಅರ್ಜಿಸಿದರೆ ನಾನು ಬಂದು ವಿರೋಧಿಸುವವನಲ್ಲ.

ಮೈಸೂರು ಕೊಡಗ

ನಾಡು ಕಚೇರಿಯ ನೌಕರರ ವಾಸದ ಕಟ್ಟಡ.

ಸ್ವಾಮಿ,

ನಮ್ಮ ದೇಶದಲ್ಲಿ ಅನೇಕ ನಾಡುಕಚೇರಿಗಳು ... [illegible]

[illegible]

ಅರ್ಯಾಂಡ್ ರಿಕಾರ್ಡ್ ಡಿಪಾರ್ಟ್ ಮೆಂಟಿನ ... [illegible]

[illegible]

ಸಿ. ಬಿ. ಯಾ.

Arms, Ammunition and Shooting Requisites !!!



1928 Illustrated Catalogue Just Issued Free on Application !

D B B L Rifles	Rs	120	to Rs	2750
S B P L		35	to „	950.
D P B L Guns		50	to „	1350.
S B B L „		35	to „	275
D B M L „		15	to	135
S B M L „		30	to „	80
B L Revolvers	„	35	to „	350
Automatic Pistols	„	33	to „	150

Brilliant Search Light Lamp For Shooting, Camping, Fishing and All such Other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

24–19 210 Abdul Rehman Street, BOMBAY.

National Swords and Silver Belts (Thodanga) For "Scotland of India,"

ಸಂಪ್ರದಾಯದಂತೆ ಧರಿಸಲ್ಪಟ್ಟ "ಒಬ್ಬ ಕರ್ಸ್ಟ್ ಲಾ ಯೂನಿಫಾರಂ" ರೀತಿ ಉಡುಗೆಗಳನ್ನು ಬದಿಗೆ ತ್ತಿ ಆರಿಸಲ್ಪಟ್ಟ "ಒಬ್ಬ ಲೆಫ್ಟಿನೆಂಟ್ ಯೂನಿಫಾರಂ" ಕಡೆ ಯಾಕೆ ವಿಸ್ಮಯಗೊಳ್ಳುತ್ತೀರಿ? ನಮಿಲು ಗರಿಯಿಂದ ಶೃಂಗರಿಸಲ್ಪಟ್ಟ ಕಾಗ ನವಿಲಾಗುವದೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ಮತ್ತು ಅದರ ಕತ್ತಿ. ... [illegible]

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ದೊರೆಯುವ. ಹೆಚ್ಚಿನ ವಿದ್ಯಮಾನಕ್ಕೆ ನಮಗೆ ಬರೆದು ಕೇಳಿರಿ.

Commercial Store,
Murnad, Coorg

12–8



ಡಿ. ಬಿ. ಯಲ್. ಕೋವಿಗಳು ರೂ. 75 ರಿಂದ ... [illegible]

... ರಿವಾಲ್ವರ್ಗಳು ರೂ. 10/ರಿಂದ ... [illegible]

[illegible]

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ... [illegible]

ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳಿಯ ಬೆಳೆಯ ಕಂಪೆನಿ.

24–11 12. ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ)

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯವಶ್ಯವಾದ ಗೊಬ್ಬರ.

... ಸಸ್ಯಾಹಾರವು 15—16% ... [illegible]

[illegible]

ನೈಟ್ರೇಟ್ ಆಫ್ ಸೋಡಾ ... ಮಂಗಳೂರು

or A. S Rao Esq, Near Post office, Mangalore.

Chilean Nitrate Committee, Post Box 469, Calcutta

24–2

ಪ್ರಕಟಣೆ.

[illegible] ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	[illegible]
ವಸೂಲಾದ ಶೇರು ಹಣ	—	[illegible]
[illegible] ನಿಧಿ	—	1,02,014

ಈ ಬ್ಯಾಂಕಿನಿಂದ [illegible] ಸಹಕಾರಿ ಸಂಘ [illegible] ಸಾಲ ಕೊಡಲಾಗುತ್ತದೆ.

[illegible] ವರ್ಷ ಹಾಗೂ [illegible] ದೇವಸ್ಥಾನಗಳಿಗೆ [illegible] ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ಕೊಡಲಾಗುತ್ತದೆ. [illegible] ನಾಲ್ಕು [illegible] ಸಾಲಿಯಾನ 4ರ ಬಡ್ಡಿ ದೊರೆಯುತ್ತದೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸಿ ಹೋಗುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್,
ಕೋದಂಡ ಅಪ್ಪಯ್ಯನವರು,	ಕೊಂಗಟ್ಟಿರ ಅಪ್ಪಯ್ಯ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು [illegible] ಪೂವಯ್ಯನವರ [illegible] ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಭಾಗದಲ್ಲಿ [illegible] ಅಲ್ಲದೆ ಮೆ. [illegible] ಪೂವಯ್ಯನವರನ್ನು [illegible] ಕಾಲೇಂಗಳ [illegible] ನೇಮಕ ಮಾಡಿರು [illegible] ಚಂದಾದಾರರು [illegible] ಕೊಡ [illegible]

ಏಜಂಟರುಗಳು,

ವೀರಾಜಪೇಟೆ—[illegible] ಭಂಡಾರದಲ್ಲಿ, ಮ [illegible] ಅಚ್ಚಯ್ಯನವರು

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,

[illegible]—ಮ [illegible] ಮಾದಪ್ಪನವರು,

[illegible]—[illegible] ಮಾದಪ್ಪನವರು,

[illegible]—[illegible] ಸುಬ್ಬಯ್ಯನವರು,

[illegible]—[illegible] ಮಾದಯ್ಯನವರು,

[illegible]—[illegible] ಕುಟ್ಟಪ್ಪನವರು,

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನನುಸಾರವಾಗಿ ತಯಾರಿಸಲ್ಪಟ್ಟ ನಾನಾ ಫಾರಂಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,

"ಕೊಡಗು" ಮಡಿಕೇರಿ

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY, 3

Telegraphic Address "SHOOTER" Bombay

[illegible] write for our Catalogue [illegible] 28—1929.

ಕಟುಕಜ್ವರಾಯ ಮಲೇರಿಯ ರಕ್ಷೆ:—ಇದು ಕ್ವಿನೈನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ, [illegible] ಬರುವ ಜ್ವರ [illegible] ದಿವಸಕ್ಕೊಂದು ಬಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ [illegible] ಬುಡ್ಡಿಗೆ ರೂ 1—[illegible] 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ, [illegible] ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ [illegible] ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, [illegible] ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ [illegible] ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ [illegible] ಪರಮ ಔಷಧಿ ಚಿಕ್ಕ ಬಾಟ್ಲು 1, 3 6ಕ್ಕೆ ರೂ 1—[illegible] 3—8—0 6—12—0

ಬೋನುನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ [illegible] ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿ [illegible] 1 ಡಜನಿಗೆ [illegible]—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಯ [illegible] ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ರೆ [illegible] ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ [illegible] ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ [illegible] ಕೂದಲಿಗೆ [illegible] ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ [illegible] ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5[illegible]

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ.—ಮನೋಲ್ಲಾಸಿನಿ ಕಂಪನಿ

52—20

೯. ಮಂಗಳೂರು

Kapurchand & Co,

The OLDEST and MOST RELIABLE House in Bangalore.

[Cawnpore Woollen Mills Agency]

Dealers in high class Cotton, Woollen and Silk Piece Goods, Caps Hosiery, Stationary, etc, etc,. Chickapet, BANGALORE CITY.

ಅಪೂರ್ವ ಸಮಯ ! **ಅಲಭ್ಯ ಲಾಭ !**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—38

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,08,000.
	1925	ರೂ	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000

ಮೂಲಧನವು ಜಾಸ್ತಿ ಬಂದ 42 ಲಕ್ಷ ರೂಪಾಯಿಗಳಿಂದ ರೂ 7,38,80,000ಗೆ ಹೆಚ್ಚಿರುತ್ತದೆ

ಪ್ರೀಮಿಯಂ ವರಮಾನವು ವರ್ಷಕ್ಕೆ ರೂ 1,05,30,000ಗೆ ಏರಿರುತ್ತದೆ.

'ಓರಿಯಂಟಲ್'ನ ಸಾಸಧಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಟ್ಕಿನ್ ಜೋನ್ಸ್, ಎಫ್ ಎಫ್ ಎ, ಎ ಐ ಎ ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶವಿಲ್ಲದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು

52—45

ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

EMPIRE OF INDIA

LIFE ASSURANCE COMPANY, LIMITED.

ESTD. 1897.

VALUATION RESULTS

FOR THE FIVE YEARS ENDING 28TH FEBRUARY 1927.

SURPLUS—RS. 37,66,689.

A REVERSIONARY BONUS DISTRIBUTION OF

RS. 15 PER ANNUM PER Rs. 1,000 ASSURED ON WHOLE LIFE ASSURANCES

AND

RS. 12 PER ANNUM PER Rs 1,000 ASSURED ON ENDOWMENT ASSURANCES

HAS BEEN DECLARED.

HEAD OFFICE.		BRANCH OFFICE.
Empire of India Life Building,		Commercial Street,
BOMBAY	24—7.	BANGALORE.

Printed & published by P I. Belliappa at "Kodagu" Press, Mercara for "Kodagu" Ltd,

"KODAGU" OFFICE, MERCARA.
If not delivered please return to

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಹಂಡ್ಸಂಡ ಐ. ಬೆಳ್ಯಪ್ಪ.

ಸಂಪುಟ ೭] ಮಡಿಕೇರಿ, [illegible] [ಸಂಚಿಕೆ ೩೮

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52—5 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS

Catalogue Free
to Bonafide Enquirers

Rose Water Sprinkler.




Chased Silver Mirror.

Manufacture of
HIGH CLASS
GEMSET JEWELS.
a speciality.

The special features
of my productions are :—
1 Best QUALITY.
2 Latest model designs
3 Promptest execution
4 Neat & artistic finish
5. Most moderate prices

GOLD
or
SILVERWARE
of all descriptions
neatly executed

52—25



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,
Bombay, 3.

24—1

[illegible]

ಕೊಡಗು

ಸನ್ ೧೯೩೪ನೇ ಇಸವಿ ಮಾರ್ಚ
ತಾ. ೨ ನೇ ಶುಕ್ರವಾರ

ಕೌನ್ಸಿಲು ಅಧಿವೇಶನ.

ಈ ಸಾರಿಯ ಕೌನ್ಸಿಲು ಮೀಟಿಂಗಿನಲ್ಲಿ ಮುಖ್ಯ ತೀರ್ಮಾನವೇನೂ ಆಗದಿದ್ದರೂ, ಈ ಮೀಟಿಂಗಿಗೆ ಒಂದು ತರಹದ ವಿಶೇಷತ್ವವು ಒಂದಿದೆ. ಕೊಡಗಿಗೆ ಕೌನ್ಸಿಲು ದೊರೆತಂದಿನಿಂದ ಮೆಂಬರುಗಳು ಅದಕ್ಕೆ ಬಹಿಷ್ಕಾರ ಹಾಕಿದ್ದು ಇದೇ ಪ್ರಥಮವಾಗಿದೆ. ಅರ್ಧ ಕೌನ್ಸಿಲು ಖಾಲಿಯಾದದ್ದು ಇದೇ ಮೊದಲು. ಈ ಮೊದಲೇ ನಾವು ಬರೆದಿದ್ದಂತೆ ದೇಶದ ರಾಜಕೀಯ ಸಂಸ್ಥೆಯಾದ ಜಮೀನ್ದಾರರ ಸಂಘವು ದೇಶದ ಆತ್ಮಗೌರವವನ್ನು ಕಾಪಾಡುವದಕೋಸ್ಕರ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರಗಳು ಈ ವರ್ಷದ ಬಜೆಟ್ ಚರ್ಚೆಯಲ್ಲಿ ಭಾಗಿಗಳಾಗ ಬಾರದೆಂದು ನ್ಯಾಯವಾಗಿ ಅವರನ್ನು ಕೋರಿಕೊಂಡಿತ್ತು. ಈ ಕೋರಿಕೆಯು ಸಫಲವಾಯಿತೆನ್ನುವದರಲ್ಲಿ ಸಂಶಯವಿಲ್ಲ. 13 ಚುನಾಯಿತ ಇಂಡಿಯನ್ ಮೆಂಬರುಗಳ ಪೈಕಿ 10 ಜನರು ಕೌನ್ಸಿಲು ಮೀಟಿಂಗಿಗೆ ಹೋಗಲಿಲ್ಲ. ಕೌನ್ಸಿಲಿನ ಮೆಂಬರುಗಳ ಒಟ್ಟು ಸಂಖ್ಯೆಯ ಶೇಕಡ 50ರಷ್ಟು ಮತ್ತು ಚುನಾಯಿತ ಇಂಡಿಯನ್ ಪ್ರತಿನಿಧಿಗಳ ಶೇಕಡ 77ರಷ್ಟು ಮೆಂಬರುಗಳು ಮೀಟಿಂಗನ್ನು ಬಹಿಷ್ಕರಿಸಿದ್ದು ಇಷ್ಟರವರೆಗೆ ಇಂಡಿಯಾ ದೇಶದ ಬೇರೆ ಯಾವ ಕೌನ್ಸಿಲಿನಲ್ಲೂ ಆಗಲಿಲ್ಲವೆಂದೇ ನಮ್ಮ ತಿಳುವಳಿಕೆ. ಚುನಾಯಿತ ಮೆಂಬರುಗಳ ಬಹುಮತದವರು ದೇಶದ ಜನರ ನಿಜವಾದ ಅಭಿಪ್ರಾಯವನ್ನು ಅರಿತುಕೊಂಡು, ದೇಶದ ಅತೃಪ್ತಿಯನ್ನು ಸೂಚಿಸಲು ಸ್ವಲ್ಪವೂ ಅಧೈರ್ಯಪಡದೆ, ಸರ್ಕಾರದವರ ಕೋಪತಾಪವನ್ನು ಗಣಿಸದೆ ಕೌನ್ಸಿಲು ಮೀಟಿಂಗನ್ನು ಜಯಪ್ರದವಾಗಿ ಬಹಿಷ್ಕರಿಸಿ ಅವರು ತಮ್ಮ ಪ್ರತಿನಿಧಿತ್ವವನ್ನು ಉಳಿಸಿಕೊಂಡಿರುವರೆಂದು ಇಲ್ಲಿ ಪ್ರತ್ಯೇಕ ಹೇಳಬೇಕಾಗಿಲ್ಲ.

ಪ್ರತಿನಿಧಿಗಳಲ್ಲಿ ಹೆಚ್ಚಿನ ಜನರು ಜಮೀನ್ದಾರರ ಸಂಘದ ಕೋರಿಕೆಯನ್ನು ನೆರವೇರಿಸಿದ್ದರಿಂದ ಸದರಿ ಸಂಘದ ಪ್ರಾಮುಖ್ಯತೆ ಹೆಚ್ಚಿದೆ. ಈ ಸಂಘವು ದೇಶದ ಬಹುಮತದವರ ಅಭಿಪ್ರಾಯವನ್ನು ಸೂಚಿಸುತ್ತದೆಂಬುದು ಪ್ರತ್ಯಕ್ಷವಾಯಿತು. ಚಿಕ್ಕ ಪ್ರಾಂತ್ಯವಾದ ಕೊಡಗು ಇಷ್ಟು ವರ್ಷಗಳ ವರೆಗೆ ರಾಜಕೀಯ ಸಂಸ್ಥೆಗಳಲ್ಲಿಯೂ, ಚಳವಳಿಯಲ್ಲಿಯೂ ಹಿಂದು ಬಿದ್ದಿದ್ದರೂ ಈಗ ರಾಜಕೀಯ ಚಳವಳಿಯಲ್ಲಿ ಹಿಂದೂದೇಶದ ಬೇರೆ ಪ್ರಾಂತ್ಯಗಳೊಂದಿಗೆ ಸಮನಾಗಿ ಮುಂದುವರಿಯುತ್ತಿರುವ ಸೂಚನೆಗಳು ಕಂಡುಬರುವದು ಸ್ತೋತ್ರಾರ್ಹವಾಗಿದೆ. ರಾಜಕೀಯ ಚಳವಳಿಯಲ್ಲಿ ಮುಂದೆ ಕಷ್ಟದ ದಿನಗಳಿರಬಹುದು. ತುಂಬಾ ಸ್ವಾರ್ಥತ್ಯಾಗವು ಬೇಕಾಗುವದು. ಸ್ವರಾಜ್ಯದ ದಾರಿಯು ಹತ್ತಿಯ ಮೆತ್ತೆಯಂತಿಲ್ಲ, ಮುಳ್ಳಿನ ಹಾಸಿಗೆಯಂತಿದೆ. ಇದನ್ನು ಚೆನ್ನಾಗಿ ತಿಳಿದುಕೊಂಡು ಇಲ್ಲಿಯ ಮುಂದಾಳುಗಳು ತಾವು ಮುಂದಿಟ್ಟಿರುವ ಹೆಜ್ಜೆಯನ್ನು ಹಿಂದಕ್ಕೆ ತೆಗೆಯದೆ ಮುಂದುವರಿಯುತ್ತಾ ಹೋಗುವರೆಂದು ಆಶಿಸುತ್ತೇವೆ.

ಕೌನ್ಸಿಲಿಗೆ ಹೋಗದೆ ಹೊರಗೆ ನಿಂತದ್ದರಿಂದ ಉಂಟಾದ ಪ್ರಯೋಜನವೇನು, ಹಾಗೆ ಬಹಿಷ್ಕರಿಸುವದಕ್ಕಿಂತ ಕೌನ್ಸಿಲಿಗೆ ಹೋಗಿ ಅಲ್ಲಿ ಅತೃಪ್ತಿಯನ್ನು ಸೂಚಿಸಬಹುದಿತ್ತು ಎಂಬ ಪ್ರಶ್ನೆಗಳು ಕೆಲವರಲ್ಲಿ ಹುಟ್ಟಿವೆ. ಇವುಗಳಿಗೆ ಈ ಮೊದಲೇ ಸಮರ್ಪಕವಾದ ಉತ್ತರವು ಕೊಡಲಾಗಿದ್ದರೂ, ಪುನಃ ಇಲ್ಲಿ ವಾಚಕರ ಜ್ಞಾಪಕದ ಬಗ್ಗೆ ಸಂಕ್ಷೇಪವಾಗಿ ಕೊಡುತ್ತೇವೆ. ಕೌನ್ಸಿಲಿಗೆ ಹೋಗಿದ್ದರೆ ದೇಶಕ್ಕೇನೂ ಪ್ರಯೋಜನವಾಗುತ್ತಿರಲಿಲ್ಲವೆಂಬುದು ಕಳೆದ ನಾಲ್ಕು ಬಜೆಟ್ ಮೀಟಿಂಗುಗಳ ಪ್ರೊಸೀಡಿಂಗ್ಸಿನಿಂದ ಸ್ಪಷ್ಟವಾಗುತ್ತದೆ. ಅಷ್ಟೇಕೆ, ಕಳೆದ ಅಕ್ಟೋಬರ್ ತಿಂಗಳ ಮೀಟಿಂಗಿನಲ್ಲಿ ಬಹುಮತದಿಂದ ಪಾಸಾದ ನಾಲ್ಕು ಠರಾವುಗಳನ್ನೂ ಚೀಫ್ ಕಮಿಷನರವರು ಮಂಜೂರು ಮಾಡಿರುವದಿಲ್ಲ. ಬಹುಮತದ ಪ್ರತಿನಿಧಿಗಳು ಮೀಟಿಂಗಿಗೆ ಹೋಗದೆ ಬಹಿಷ್ಕರಿಸಿದ್ದರಿಂದ ದೇಶದಲ್ಲಿ ಉಂಟಾಗಿರುವ ಅತೃಪ್ತಿಯು ಸರ್ಕಾರದವರಿಗೆ ಗೊತ್ತಾಗುವಂತಾಯಿತು. ಇಷ್ಟರ ವರೆಗೆ ಕೊಡಗಿನವರು ನಿಷ್ಕಪಟ ಬಳಕೆಯಲ್ಲಿ ನಂಬಿಕೆ ಇಟ್ಟು ತಮ್ಮ ಕೆಲಸವನ್ನು ತಾವು ಮಾಡಿ ತೃಪ್ತಿಪಡುವಂತೆ ವರ್ತಿಸಿದ್ದರಿಂದಲೇ ಈ ದೇಶವು ರಾಜಕೀಯ ಸುಧಾರಣೆಯಲ್ಲಿ ಬಹಳ ಹಿಂದೆ ಹಾಕಲ್ಪಟ್ಟಿದ್ದಾಯಿತು. ಇನ್ನಾದರೂ ಇಲ್ಲಿಯವರು ತಮ್ಮ ಅತೃಪ್ತಿಯನ್ನೂ, ಅಸಮಾಧಾನವನ್ನೂ ಆಗಾಗ ಸರಿಗೆ ತೋರಿಸುತ್ತಾ ಬೇರೆ ಪ್ರಾಂತ್ಯಗಳಂತೆ ಮುಂದಿನ ರಾಜಕೀಯ ಚಳವಳಿಯಲ್ಲಿ ಭಾಗಿಗಳಾದರೇನೇ ಇಲ್ಲಿಗೂ ಹೆಚ್ಚಿನ ಸುಧಾರಣೆಗಳು ದೊರೆಯುವವಲ್ಲದೆ ಅನ್ಯಥಾ ಇಲ್ಲ. ಕೈ ಕೆಸರಾದರೆ ಬಾಯಿ ಮೊಸರಾಗುವದು ಎಂಬ ಹೇಳಿಕೆಯನ್ನು ಯಾರೂ ಮರೆಯಬಾರದು. ಕಷ್ಟಪಟ್ಟರೇನೇ ಸುಖ ದೊರೆಯುವದು. ಸುಮ್ಮನೆ ಕುಳಿತುಕೊಂಡರೆ ಸುಧಾರಣೆಗಳು ಎಂದೂ ದೊರೆಯಲಾರವು.

ಕೌನ್ಸಿಲಿಗೆ ಹೋಗಿ ಅಲ್ಲಿ ಅತೃಪ್ತಿಯನ್ನು ಸೂಚಿಸಲು ಯಾವ ಸಂದರ್ಭವೂ ಬರಲಿಲ್ಲ. ಇತರ ಮೆಂಬರುಗಳು ಕಳುಹಿಸಿದ್ದ ಸೈಮನ್ ಕಮಿಷನಿನ ಮೇಲೆ ಪ್ರಸ್ತಾವದ ಠರಾವುಗಳಿಗೆ ಅಧ್ಯಕ್ಷರು ಯಾವ ಉತ್ತರವನ್ನೂ ಕಳುಹಿಸುವದಿಲ್ಲ. ಕಮಿಷನಿನ ಮುಂದೆ ಅಭಿಪ್ರಾಯ ಕೊಡಲು ಈ ಕೌನ್ಸಿಲಿನಿಂದ ಕಮಿಟಿಯನ್ನು ಚುನಾಯಿಸುವ ವಿಷಯ ಇನ್ನೂ ಇಲ್ಲಿಯ ಸರ್ಕಾರದವರಿಗೆ ಏನೊಂದೂ ತಿಳಿಸಿರುವದಿಲ್ಲವೆಂತ ಕೌನ್ಸಿಲಿನ ಒಂದು ಸವಾಲಿಗೆ ಜವಾಬು ಬಂದಿದೆ. ಹೀಗಿರುವಲ್ಲಿ ಕೌನ್ಸಿಲಿನಲ್ಲಿ ಅತೃಪ್ತಿ ತೋರಿಸುವ ಬಗೆ ಹೇಗೆ? ಕೌನ್ಸಿಲಿಗೆ ಹೋಗಿದ್ದ ಚುನಾಯಿತ ಮೆಂಬರುಗಳು ಯಾಕೆ ತಮ್ಮ ಅತೃಪ್ತಿಯನ್ನು ತೋರಿಸಲಿಲ್ಲ? ಇವು ಮುಂತಾದವುಗಳೇ ಮೇಲಿನ ಸಂಶಯವನ್ನು ಪರಿಹರಿಸುವವು.

ಈ ಸಾರಿಯ ಮೀಟಿಂಗಿನಿಂದ ತಿಳಿಯಬೇಕಾದ ಇನ್ನೊಂದು ಮುಖ್ಯ ಸಂಗತಿಯು ಕೌನ್ಸಿಲಿನ ಟೊಳ್ಳು ಸ್ವಭಾವವಾಗಿದೆ. ಈ ವಿಷಯವು ಜನಗಳಿಗೆ ಮೊದಲೇ ತಿಳಿದಿರಲಿಲ್ಲವೆಂದಲ್ಲ. ಈ ಕೌನ್ಸಿಲಿನಿಂದ ಏನೊಂದೂ ಪ್ರಯೋಜನ ಇಲ್ಲವೆಂಬ ಪ್ರಜೆಗಳ ಅಭಿಪ್ರಾಯವು ದಿನೇ ದಿನೇ ಬಲಪಡಿಸಲ್ಪಡುತ್ತಿದೆ. ಮೇಲೆ ಹೇಳಿದಂತೆ ಕಳೆದ ಮೀಟಿಂಗಿನ ನಾಲ್ಕು ಠರಾವುಗಳೂ ಚೀಫ್ ಕಮಿಷನರಿಂದ ತಿರಸ್ಕರಿಸಲ್ಪಟ್ಟಿವೆ. ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿಯೇ ಮೆಂಬರರು ಎಲ್ಲಾ ತರಹದ ಕಾರಣಗಳನ್ನು ಕೊಟ್ಟು ಪರವಾಗಿಯೂ, ವಿರೋಧವಾಗಿಯೂ ದೀರ್ಘ ಚರ್ಚೆ ಮಾಡಿ ಬಹುಮತದಿಂದ ಪಾಸಾದ ಠರಾವುಗಳನ್ನು ಚೀಫ್ ಕಮಿಷನರು ಒಂದನ್ನಾದರೂ ಮಂಜೂರು ಮಾಡದೆ ಯಾವದನ್ನೂ ಅಂಗೀಕರಿಸಲಾಗುವುದಿಲ್ಲವೆಂದು ನಿರಂಕುಶ ಪ್ರಭುತ್ವವನ್ನು ಸ್ಪಷ್ಟೀಕರಿಸಿರುವರು. ವ್ಯವಸಾಯಕರ ಜನರ ಜೀವನೋಪಾಯಕ್ಕೆ ಅತ್ಯವಶ್ಯವಿರುವ ದನಗಳಿಗೆ ಮೇವಿಗೂ, ತಮ್ಮ ಇಡೀ ವರ್ಷದ ಕಷ್ಟದ ಫಲರೂಪವಾದ ಫಸಲುಗಳನ್ನು ನಾಶಪಡಿಸುವ ಕಾಡು ಮೃಗಗಳ ಬೇಟೆಗೂ ಸರ್ಕಾರದವರೇ ಏರ್ಪಾಡು ಮಾಡಬೇಕಾದದ್ದು ಅವರ ಕರ್ತವ್ಯವಾಗಿದೆ. ಪೂರ್ವದ ಹಿಂದೂ ರಾಜರುಗಳು ಈ ವಿಷಯದಲ್ಲಿ ಹೇಗೆ ವರ್ತಿಸುತ್ತಿದ್ದರೆಂಬುದನ್ನು ನಮ್ಮ ಪುರಾಣೇತಿಹಾಸಗಳಿಂದ ಕೇಳಬಲ್ಲೆವು. ಸರ್ಕಾರದ ಬೊಕ್ಕಸಕ್ಕಾಗಲೀ, ರೈತರ ಅನುಕೂಲಕ್ಕಾಗಲೀ ಏನೂ ಸಹಾಯವಿಲ್ಲದ ರಿಸರ್ವ್ ಫಾರೆಸ್ಟುಗಳಲ್ಲಿ ಮೇಲ್ಕಂಡ ಅನುಕೂಲಗಳನ್ನು ಮಾಡಿ ಕೊಡಬೇಕೆಂತ ರೈತರ ಪ್ರತಿನಿಧಿಗಳು ನಮ್ರತೆಯಿಂದಲೂ, ಗೌರವದಿಂದಲೂ ಕೌನ್ಸಿಲು ಮೂಲಕ ಕೇಳಿಕೊಂಡರೂ ಚೀಫ್ ಕಮಿಷನರು ತಿರಸ್ಕರಿಸಿದ್ದರಿಂದ ಇಲಾಖೆಯ ಮುಖ್ಯ ಅಧಿಕಾರಿಯ ಅಭಿಪ್ರಾಯವನ್ನು ಗೌರವಿಸುವದೇ ಇವರ ಉದ್ದೇಶವಾದಂತಾಯಿತು. ರೈತರ ನಿಜವಾದ ಕಷ್ಟಕ್ಕೂ ಸಹ ಇವರು ಸಹಾನುಭೂತಿ ತೋರಿಸಿದಂತಾಗಲಿಲ್ಲ.

ಸ್ಥಳೀಯ ಸರ್ಕಾರದ ಈ ತರಹದ ವರ್ತನೆಯನ್ನು ಇಂಡಿಯಾ ಸರ್ಕಾರದ ತಿಳುವಳಿಕೆಗೆ ತರಲಿಕ್ಕೂ ಮತ್ತು ಈ ದೇಶದ ಚಿಕ್ಕ ತರಹದ ಹಕ್ಕು ಬಾಧ್ಯತೆಗಳನ್ನು ಇಂಡಿಯಾ ಸರ್ಕಾರದ ಮುಂದೆ ಪ್ರತಿಪಾದಿಸಲಿಕ್ಕೆ ಅನುಕೂಲವಾಗುವಂತೆ ಈ ದೇಶದ ಒಬ್ಬ ಪ್ರತಿನಿಧಿಯನ್ನು ಎಸೆಂಬ್ಲಿಗೆ ಕಳುಹಿಸುವ ಹಕ್ಕು ಕೊಡಬೇಕೆಂತ ಸ್ಥಳೀಯ ಸರ್ಕಾರವು ಇಂಡಿಯಾ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಆದ ಕೌನ್ಸಿಲಿನ ಬಹುಮತದ ತೀರ್ಮಾನವನ್ನು ಸ್ಥಳೀಯ ಸರ್ಕಾರದವರೇ ಆದ ಚೀಫ್ ಕಮಿಷನರು ತಿರಸ್ಕರಿಸಿದ್ದು ಯಾವ ವಿಧದ ನ್ಯಾಯವೋ? ಈ ದೇಶದ ಅಭಿಪ್ರಾಯವನ್ನು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದರೆ ಈ ಸರ್ಕಾರಕ್ಕೆ ಏನು ನಷ್ಟವೂ ಇರಲಿಲ್ಲ. ಜನರ ಅವಿಶ್ವಾಸಕ್ಕೆ ಗುರಿಯೂ ಆಗುತ್ತಿರಲಿಲ್ಲ.

ಈ ರೀತಿ ಚೀಫ್ ಕಮಿಷನರವರು ಪದೇ ಪದೇ ಜನರ ಪ್ರತಿನಿಧಿಗಳ ಕೋರಿಕೆಗಳನ್ನು ಏನೂ ಕಾರಣ ಕೊಡದೆ ಅಲ್ಲಗಳೆಯುತ್ತಾ ಬರುವದರಲ್ಲಿ ಪ್ರಯೋಜನವೇನೂ ಇಲ್ಲವೆಂದು ಹೇಳಲಿಕ್ಕಾಗುವದಿಲ್ಲ. ಕೋರಿಕೆಗಳು ಅಂಗೀಕರಿಸಲ್ಪಡುವದರ ಮೂಲಕ ಪ್ರಯೋಜನವಾಗದಿದ್ದರೂ ಜನರಿಗೆ ರಾಜಕೀಯ ಪರಿಸ್ಥಿತಿಯು ಪ್ರಜಾಹಿತಕ್ಕೆ ಸಹಕಾರಿಯಾಗಿಲ್ಲವೆಂಬುದನ್ನು ತೋರಿಸಿ ಕೊಟ್ಟು, ಸರ್ಕಾರವು ಪ್ರಜೆಗಳ ಮತಕ್ಕೆ ಅನುಸಾರವಾಗಿ ನಡೆಯುವಂತೆ ಮಾಡಿಕೊಳ್ಳಲು ಮತ್ತು ಪ್ರಜೆಗಳಿಗೆ ಜವಾಬ್ದಾರಿಯಾದ ಸರಕಾರವನ್ನು ಸ್ಥಾಪಿಸಲು ಪ್ರಯತ್ನ ಪಡಬೇಕೆಂತ ಎಚ್ಚರಿಸುತ್ತದೆ. ಈ ಎಚ್ಚರಿಕೆಯನ್ನು ಜನರು ಸದುಪಯೋಗ ಮಾಡಿಕೊಂಡರೆ ಅವರ ಕ್ಲೇಶ ನಿವಾರಣೆಯ ದಿನವು ದೂರವಿಲ್ಲವೆಂತ ಹೇಳಬಹುದು.

ವಿಮರ್ಶೆ.

ಸತ್ಯಶೋಧನೆ.

ಪ್ರಕಾಶಕರು — ವಿಶ್ವಕರ್ನಾಟಕ ಪುಸ್ತಕ ಪ್ರಕಾಶನಾಲಯ, ಬೆಂಗಳೂರು ನಗರ—ಬೆಲೆ ಹನ್ನೆರಡಾಣೆ.

ಇದು ಮಹಾತ್ಮಾ ಗಾಂಧೀಜಿಯವರ ಆತ್ಮಕಥೆಯ ಮೊದಲನೆಯ ಭಾಗವು. ಮೊದಲು ಇದನ್ನು ಮಹಾತ್ಮರು ಗುಜರಾತಿ ಭಾಷೆಯಲ್ಲಿ ಬರೆದು ನವಜೀವನವೆಂಬ ಗುಜರಾತಿ ಪತ್ರಿಕೆಯು ಪ್ರಕಟಪಡಿಸಿದರು. ಇದನ್ನೇ ಇಂಗ್ಲಿಷಿನಲ್ಲಿ "ಯಂಗ್ ಇಂಡಿಯಾ'ದಲ್ಲಿ ಪ್ರಕಟಿಸುತ್ತಾ ಬಂದ ಹಾಗೆ ಕನ್ನಡ, ತಮಿಳು ಮುಂತಾದ ಇಂಡಿಯದ ಪ್ರಾಂತಿಕ ಭಾಷೆಗಳಿಗೆ [illegible]ಗೆ ಪರಿವರ್ತಿಸಲಾಗಿದೆ.

ಶ್ರೇಷ್ಠಪುರುಷರ ಜೀವಚರಿತ್ರೆಯನ್ನು ನಾವು ಓದುವದರಿಂದ ನಾವು ನಮ್ಮ ನಡವಳಿಯನ್ನು ತಿದ್ದಿಕೊಳ್ಳಬಹುದು. ಈ ಮಾತನ್ನು ಎಲ್ಲರೂ ಬಲ್ಲರು. ಕಾರ್ಲೈಲ್ ಎಂಬ ಇಂಗ್ಲಿಷ್ ಮಹನೀಯರೊಬ್ಬರು 'ಹೀರೋಸ್ ಅಂಡ್ ಹೀರೋ ವರ್ಷಿಪ್'' ಎಂಬುದಾಗಿ ಬರೆದಿರುವ ಗ್ರಂಥದಲ್ಲಿ ಮೇಲಿನ ಮಾತಿನ ಮಹತ್ವವು ಚೆನ್ನಾಗಿ ವರ್ಣಿಸಲ್ಪಟ್ಟಿದೆ. ಆತ್ಮಚರಿತ್ರೆಯನ್ನು ಬರೆಯುವ ಪದ್ಧತಿಯು ಪಾಶ್ಚಾತ್ಯ ಸೀಮೆಗಳಲ್ಲಿ ಹೆಚ್ಚಿನ ರೂಢಿಯಲ್ಲಿದೆ. ಆದರೆ ಭಾರತೀಯರಲ್ಲಿ ಆತ್ಮಚರಿತ್ರೆಗಳೇ ಇಲ್ಲ. ಇರುವುದಾದರೂ, ಗಾಂಧೀಜಿಯವರದೊಂದೇ ನಮ್ಮ ಭಾವನೆ. ಆತ್ಮಚರಿತ್ರೆಯು ಬೇರೆಯವರಿಂದ ಬರೆಯಲ್ಪಟ್ಟ ಜೀವಚರಿತ್ರೆಗಳಿಗಿಂತ ಉತ್ತಮವಾದದ್ದು. ಡಾಕ್ಟರ್ ಜಾನ್ಸನ್ ಎಂಬವನ ಚರಿತ್ರೆಯನ್ನು ಬಾಸ್ವೆಲ್ ಎಂಬವನು ಬರೆದಿರುವನಾದರೂ, ಅನೇಕ ವಿಷಯಗಳನ್ನು ಬರಹಗಾರನು ಬಿಟ್ಟುಬಿಟ್ಟಿರುವನು. ಆದರೆ ಆತ್ಮಕಥೆಯನ್ನು ಇನ್ನೊಬ್ಬರು ಬರೆಯದೆ ತಾನೇ ಬರೆಯುವುದರಿಂದ ಅದರಲ್ಲಿ ಸತ್ಯಾಸತ್ಯವು ಯೋಗ್ಯವಾದ ರೀತಿಯಲ್ಲಿಯೇ ಬರಬೇಕಾಗುವುದು. ಮಹಾತ್ಮರು ತಮ್ಮ ಆತ್ಮಕಥೆಗೆ 'ಸತ್ಯಶೋಧನೆ' ಎಂದು ಏಕೆ ನಾಮಕರಣ ಮಾಡಿರುವರೆಂದು ನಮಗೆ ಈಗ ವ್ಯಕ್ತವಾಗುವುದು.

ಮಹಾತ್ಮರು ತಮ್ಮ ಚರಿತ್ರೆಯಲ್ಲಿ ತಮ್ಮ ಅನುಭವಕ್ಕೆ ಬಂದ ಹಲವು ಅಮೂಲ್ಯವಾದ ವಿಷಯಗಳನ್ನು ಬರೆದಿರುವರು. ಅವರು ದಿವಾನರ ಮಕ್ಕಳು, ಅಲ್ಲದೆ ಪಾಶ್ಚಿಮಾತ್ಯ ವಿದ್ಯೆಯನ್ನು ಗಳಿಸಿದ ನಾಗರೀಕರು. ಇಂಥ ಮನುಷ್ಯರು ತಮ್ಮ [illegible]ದಾಯಕ್ಕೆಲ್ಲಾ ಎಳ್ಳುನೀರು ಬಿಟ್ಟು, ತ್ಯಾಗಿಗಳಲ್ಲಿ ಚಕ್ರವರ್ತಿ ಎನ್ನಿಸಿಕೊಂಡಿರುವರು. ಸ್ವಾರ್ಥಕ್ಕೆ ಎಂಬುದರ ಸ್ಪರ್ಶ ಅವರಿಗಿಲ್ಲ. ಅವರು ಪ್ರಜೋದ್ಧಾರಕ್ಕಾಗಿ ಅವತರಿಸಿದ ಕಲಿಯುಗದ ಮಹಾತ್ಮರು.

ಸುಳ್ಳು, ಹಿಂಸೆ, ನಿಷಿದ್ಧಪದಾರ್ಥ ಸೇವನೆ, ದುರ್ವ್ಯವಹಾರ ಇವುಗಳನ್ನು ನಿಷ್ಕಲ್ಮಷವಾದ ಮನಸ್ಸಿನಿಂದ ಕೂಲಂಕಷವಾಗಿ ಬಣ್ಣಿಸಿರುವರು. ನಾಲ್ಕು ಮಂದಿ ಹೆಂಡತಿಯರನ್ನು ತಮ್ಮ ತಂದೆಯು ಮದುವೆ ಮಾಡಿಕೊಂಡಿದ್ದರಿಂದ, ಅವರನ್ನು ಸಹ ಮಹಾತ್ಮರು ದೂರಿಗೆ ಗುರಿಪಡಿಸಿರುವರು. ತಾವೇ ತಮ್ಮ 13ನೇ ವಯಸ್ಸಿನಲ್ಲಿ 8 ವರ್ಷದ ಕನ್ನಿಕೆಯನ್ನು (ಈಗ ಜೀವದಿಂದಿರುವ ಕಸ್ತೂರಿಬಾಯಿಯವರನ್ನು) ಲಗ್ನವಾಗಿ ಮಾಡಿಕೊಂಡದ್ದಕ್ಕಾಗಿ ಪರಿತಪಿಸುವರು. ಅಪ್ಪನು ಸಾಯುತ್ತಿರುವಾಗ, ತಾನು ಹೆಂಡತಿಯೊಂದಿಗೆ ರಮಿಸುತ್ತಿದ್ದ ಸಂಗತಿಯು ಬಹು ನಾಚಿಕೆಕರವೆಂದು ಮಹಾತ್ಮರು ಹೇಳುವರು. ಇವರು ಬಾಲಕರಾಗಿರುವಾಗ ಸ್ನೇಹಿತನೊಬ್ಬನ ಮೋಸದಿಂದ ಮಾಂಸಸೇವನೆ ಮಾಡಿದರು. ಸೂಳೆ ಮನೆಗೆ ಹೋದರು. ಇದಲ್ಲದೆ ಪೋಟ್ಸ್ಮಠನಲ್ಲಿಯೂ, ಲಂಡನಿನಲ್ಲಿಯೂ ಇಂಗ್ಲಿಷ್ ಹುಡುಗಿಯರ ಬಲೆಯಿಂದ ತಪ್ಪಿಸಿಕೊಂಡರು. ಇವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿದ್ದಾಗ, ತಾವೇ ಅಡಿಗೆ ಮಾಡಿಕೊಳ್ಳುತ್ತಿದ್ದರು. ಅವರ ಖರ್ಚನ್ನು ಅವರು ಬಹಳವಾಗಿ ಕಟಾವು ಮಾಡಿದರು. ಶಾಕಾಹಾರ ಚಳವಳಿಗೆ ತಾವು ಇಂಗ್ಲೆಂಡಿನಲ್ಲಿ ತಮ್ಮ ಕೈಲಾದಷ್ಟು ಒತ್ತಾಸೆಕೊಟ್ಟರು. 'ಡಿನ್ನರ್ ಬ್ಯಾರಿಸ್ಟರ್'' ವಿಚಾರದಲ್ಲಿ ಇವರ ಅಭಿಪ್ರಾಯವು ಬಹು ಲಘುವಾಗಿದೆ. ಬ್ಯಾರಿಸ್ಟರಾದರೂ, ಇವರಿಗೆ ಇಂಡಿಯದ ಕಾನೂನು ಏನೂ ತಿಳಿದಿರಲಿಲ್ಲ !!

ಈ ಪುಸ್ತಕದಲ್ಲಿ ಅವರು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಹೊರಡುವ ವರೆಗಿನ ಸಂಗತಿಗಳೂ ಅಡಗಿವೆ. ಮಹಾತ್ಮರ ಚರಿತ್ರೆಯನ್ನು ಓದುವದೆಂದರೆ ನಮಗೆ ಬಹಳ ಆನಂದ. ಅವರ ಚರಿತ್ರೆಯು ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುದರಿಂದ ಈ ಗ್ರಂಥವನ್ನು ಇಟ್ಟುಕೊಳ್ಳಲು ಹಲವರು ಅಪೇಕ್ಷಿಪಡುವರೆಂದು ನಾವು ನಂಬಿದ್ದೇವೆ. ಪುಸ್ತಕದ ಮುದ್ರಣವು ಎಷ್ಟು ಮುದ್ದು. ಬೆಲೆ ಕಡಿಮೆ. (ಈ ಪುಸ್ತಕವು ಈಗ ಮಡಿಕೇರಿಯಲ್ಲಿಯೂ ದೊರೆಯುವದು.)

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೨೪ನೇ ಪ್ರಕರಣ

ಜುಲು 'ದಂಗೆ'

ಜೋಹಾನ್ಸ್ ಬರ್ಗಿನಲ್ಲಿ ನಾನು ನೆಲೆಸಿದೆನೆಂದು ತಿಳಿದ [illegible] ಮೇಲೆಯೂ ಒಂದು ಕಡೆ ನಿಂತು ಜೀವಿಸುವುದು [illegible] ಹಣೆಯಲ್ಲಿ ಬರೆದಿರಲಿಲ್ಲ. ಇನ್ನು ನೆಮ್ಮದಿಯಾಗಿರುವೆ [illegible] ನನಗೆ ತೋರಿತೋ, ಇಲ್ಲವೋ [illegible] ಅನಿರೀಕ್ಷಿತವಾದ ಘಟನೆಯೊಂದು ಸಂಭವಿಸಿತು. [illegible] ಜುಲು ಜನರು ದಂಗೆಯೆದ್ದಿರುವರೆಂಬ ವರ್ತಮಾನವನ್ನು ವೃತ್ತಪತ್ರಿಕೆಗಳು ತಿಳಿಸಿದುವು. ಜುಲುಗಳ ಮೇಲೆ ನನಗೆ ಯಾವ ವೈರವೂ ಇರಲಿಲ್ಲ. ಅವರು ಯಾವ ಭಾರತೀಯನಿಗೂ [illegible] ಮಾಡಿರಲಿಲ್ಲ. ದಂಗೆ'ಯೆದ್ದಿರುವುದೋ ಇಲ್ಲವೋ ಎಂಬ ವಿಷಯವಾಗಿಯೇ ನನಗೆ ಸಂಶಯವಿದ್ದಿತು. ಆದರೆ ನಾನು ಬ್ರಿಟಿಷ್ ಚಕ್ರಾಧಿಪತ್ಯವು ಪ್ರಪಂಚದ ಉದ್ಧಾರಕ್ಕಾಗಿ ಇರ್ದ್ದಿತೆಂದು ನಂಬಿದ್ದೆನು. ಅಕೃತ್ರಿಮ ರಾಜಭಕ್ತಿಯು ನನ್ನನ್ನು ಚಕ್ರಾಧಿಪತ್ಯಕ್ಕೆ ಕೇಡನ್ನುಂಟುಮಾಡುವುದಕ್ಕೆ ಬಿಡುತ್ತಿರಲಿಲ್ಲ. ಆದುದರಿಂದ 'ದಂಗೆ'ಯ ನೀತಿ [illegible] ನನ್ನ ಮನೋನಿಶ್ಚಯವನ್ನು ತಪ್ಪಿಸಲಿಲ್ಲ. [illegible] ಸ್ವಯಂಸೇವಕರ ಸೈನ್ಯವೊಂದು ಇದ್ದಿತು. [illegible] ಹೆಚ್ಚಿಗೆ ಜನರನ್ನು ಸೇರಿಸಿಕೊಳ್ಳಬಹುದಾಗಿತ್ತು. [illegible] ದಂಗೆಯನ್ನು ಅಡಗಿಸುವುದಕ್ಕೆ ಈ ಸೈನ್ಯವು ಆಗಲೇ ಸಿದ್ಧವಾಗಿದ್ದಿತೆಂದು ನಾನು ವೃತ್ತಪತ್ರಿಕೆಗಳಲ್ಲಿ ಓದಿದೆನು. [illegible] ನನಗೆ [illegible] ಸಂಬಂಧವಿದ್ದುದರಿಂದ ನಾನು [illegible] ಪ್ರದೇಶವೇ ಎಂದು ನನ್ನ ಭಾವನೆಯಾಗಿದ್ದಿತು. ಆದುದರಿಂದ ನಾನು ಆಳ್ವಿಕೆಯವರಿಗೆ ಭಾರತೀಯರ [illegible] ಶುಶ್ರೂಷಾದಳವೊಂದನ್ನು ಕಳುಹಿಸಲು ಸಿದ್ಧನಾಗಿರುವೆನೆಂದು ಗವರ್ನರಿಗೆ ಪತ್ರ ಬರೆದೆನು. ಅವರು ಅಂಗೀಕರಿಸಿದುದು ಒಡನೆಯೇ ಉತ್ತರವನ್ನು ಕಳುಹಿಸಿದರು.

ನನ್ನ ಸೂಚನೆಗೆ ಇಷ್ಟು ಶೀಘ್ರವಾಗಿ ಒಪ್ಪಿಗೆ ದೊರೆಯುವುದೆಂದು ನಾನು ನಿರೀಕ್ಷಿಸಿರಲಿಲ್ಲ. ಅದೃಷ್ಟವಶಾತ್ ನಾನು ಆ ಪತ್ರವನ್ನು ಬರೆಯುವುದಕ್ಕೆ ಮುಂಚೆಯೇ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿದ್ದೆನು. ನನ್ನ ಸಲಹೆಯು ಅನುಮೋದಿತವಾದರೆ ನಾನು ಜೋಹಾನ್ಸ್‌ಬರ್ಗಿನ ಮನೆಯನ್ನು ಬಿಟ್ಟುಬಿಡಬೇಕೆಂದೂ, ಪೋಲಕರು ಬೇರೊಂದು ಸಣ್ಣ ಮನೆಗೆ ಹೋಗಬೇಕೆಂದೂ ಕಸ್ತೂರಿಬಾಯಿಯು ಫೀನಿಕ್ಸಿಗೆ ಹೋಗಿ ಅಲ್ಲಿರಬೇಕೆಂದೂ ನಿಶ್ಚಯಿಸಿದ್ದೆನು. ಈ ತೀರ್ಮಾನದಲ್ಲಿ ಅವಳು ಪೂರ್ಣ ಸಹಾನುಭೂತಿಯಿದ್ದಿತು. ಇಂತಹ ವಿಚಾರದಲ್ಲಿ ಅವಳು ನನ್ನ ಎಂದೂ ಅಡ್ಡ ಬಂದುದಿಲ್ಲ. ಆದುದರಿಂದ ನನಗೆ ಗವರ್ನರ ಉತ್ತರ ಬಂದೊಡನೆಯೇ ನಾನು ಮನೆಯೊಡೆಯನಿಗೆ ಮನೆಯನ್ನು ಬಿಡುವೆನೆಂದು ಪದ್ಧತಿಯ ಪ್ರಕಾರ ಒಂದು ತಿಂಗಳು 'ತಿಳುವಳಿಕೆ (ನೋಟೀಸು)' ಯನ್ನು ಕೊಟ್ಟು ಕೆಲವು ಸಾಮಾನುಗಳನ್ನು ಫೀನಿಕ್ಸಿಗೆ ಕಳುಹಿ [illegible] ಪೋಲಕರ ವಶಕ್ಕೆ ಒಪ್ಪಿಸಿದೆನು.

ನಾನು ಡರ್ಬನ್ನಿಗೆ ಹೋಗಿ ಜನ ಸಹಾಯವನ್ನು ಬೇಡಿದೆನು. [illegible] ಅನೇಕ ಜನರೂ ಬೇಕಾಗಿರಲಿಲ್ಲ. ನಾವು ೨೪ ಜನ ಇದ್ದೆವು. ನಮ್ಮಲ್ಲಿ ನಾನಲ್ಲದೆ ನಾಲ್ವರು ಗುಜರಾತಿಗಳು ಇದ್ದರು. ಉಳಿದವರೆಲ್ಲ ದಕ್ಷಿಣ ಹಿಂದೂಸ್ಥಾನದ [illegible] ಒಬ್ಬ ಸ್ವತಂತ್ರ ಪಠಾಣನು [illegible].

[illegible] ದರ್ಜೆಯನ್ನು ಕೊಡಲೂ, ಕೆಲಸವನ್ನು ಸುಲಭವಾಗಿ ನಡೆಸಲೂ ಹಾಗೂ ಆಗಿನ ಪದ್ಧತಿಯ ಪ್ರಕಾರವಾಗಿಯೂ ವೈದ್ಯಕೀಯಾಧಿಕಾರಿಗಳು ನನ್ನನ್ನು ತಾತ್ಕಾಲಿಕವಾಗಿ 'ಸಾರ್ಜೆಂಟ್ ಮೇಜರ್' ದರ್ಜೆಗೆ ನೇಮಿಸಿದರು. ಮೂರು ಜನರನ್ನು ಸಾರ್ಜೆಂಟ್ ರನ್ನಾಗಿಯೂ ಒಬ್ಬನನ್ನು ಕಾರ್ಪೊರಲನ್ನಾಗಿಯೂ ನಾನು ಆರಿಸಿದೆನು. ನಮ್ಮ ಉಡುಪುಗಳನ್ನು ಸರಕಾರದಿಂದ ಒದಗಿತು. ನಮ್ಮ ದಳವು ಆರು ವಾರದ ಕಾಲ ಸತತ ಸೇವೆಯಲ್ಲಿ ತೊಡಗಿದ್ದಿತು. ನಾನು 'ದಂಗೆ'ಯ ಸ್ಥಳಕ್ಕೆ ಹೋಗಿ ನೋಡಲು ದಂಗೆಯೆನ್ನಿಸಿಕೊಳ್ಳುವಂತಹುದು ಅಲ್ಲಿ ಏನೂ ಕಾಣಬರಲಿಲ್ಲ. ಯಾರೂ ಎದುರಿಸುವಂತೆ ಕಾಣಲಿಲ್ಲ. [illegible] ಜುಲುಗಳ ಮೇಲೆ ಸರಕಾರದವರು ಹೊಸದಾಗಿ ಹಾಕಿದ್ದ ತೆರಿಗೆಯನ್ನು ಕೊಡಬಾರದೆಂದು ಹೇಳಿ [illegible] ಕೂಡಿಸಲು ಹೋಗಿದ್ದ ಸಾರ್ಜೆಂಟನ್ನು [illegible] ಕತ್ತರಿಸಿ ಹಾಕಿದ್ದನು. ಅದೇನೇ [illegible] ನನ್ನ ಹೃದಯವೆಲ್ಲಾ ಜುಲುಗಳ ಪರವಾಗಿ ಇದ್ದಿತು. [illegible] ಮುಖ್ಯ ಕೆಲಸವನ್ನು ಗಾಯಗೊಂಡಿದ್ದ ಜುಲುಗಳಿಗೆ ಶುಶ್ರೂಷೆ ಮಾಡುವುದೇ ನಮ್ಮ ಮುಖ್ಯವಾದ ಕೆಲಸವೆಂದು ತಿಳಿದು ನನಗೆ ಬಹು ಸಂತೋಷವಾಯಿತು. ಅಲ್ಲಿ ವೈದ್ಯಕೀಯಾಧಿಕಾರಿಗಳು ನಮ್ಮನ್ನು ಆದರದಿಂದ ಬರಮಾಡಿಕೊಂಡರು. ಗಾಯ ಹೊಂದಿದ ಜುಲುಗಳನ್ನು ಬಿಳಿಯ ಜನರು ಮನಸ್ಸಿಟ್ಟು ಶುಶ್ರೂಷಿಸುತ್ತಿರಲಿಲ್ಲವೆಂದೂ, ಅವರ ಗಾಯಗಳು ಕೊಳೆಯುತ್ತಿದ್ದುವೆಂದೂ, ಅವುಗಳಿಗೆ ಏನೂ ಮಾಡಲಾರದೆ ತೋಚದವರಾಗಿರುವುದೆಂದೂ ಅವರು ಹೇಳಿದರು. ನಾವು ಒಂದುದು ಏನೂ ಅರಿಯದ ಆ ಜನರ ಅದೃಷ್ಟವೆಂದು ಸಂತೋಷಪಟ್ಟು ಅವರು ನಮಗೆ ಗಾಯಕ್ಕೆ ಕಟ್ಟುವ ಪಟ್ಟಿ, ಕ್ರಿಮಿನಾಶಕದ್ರವ್ಯ ಮುಂತಾದವುಗಳನ್ನು ಒದಗಿಸಿಕೊಟ್ಟು ನಮ್ಮನ್ನು ಆ ಜನಯಕ್ಕೆ ಏರ್ಪಡಿಸಿದ್ದ ವೈದ್ಯಶಾಲೆ (ಆಸ್ಪತ್ರೆ)ಗೆ ಕರೆದುಕೊಂಡು ಹೋದರು. ಜುಲುಗಳು ನಮ್ಮನ್ನು ನೋಡಿ ಸಂತೋಷಪಟ್ಟರು. [illegible] ನನಗೆ ಅನೇಕ [illegible] ನೋಡಿ [illegible] ಗಾಯಗಳನ್ನು [illegible] ಪ್ರಯತ್ನ ಪಡುತ್ತಿದ್ದರು. [illegible] ಅವರು [illegible] ಜುಲುಗಳ [illegible] ಮಾತುಗಳ [illegible] ಇದ್ದರೂ [illegible] ಪರಿಣಾಮವಾಗಿ ಅವರ ನಡುವೆ [illegible] ವಿಶೇಷ ಬಟ್ಟೆಯಿತ್ತರು.

[illegible] ಜುಲುಗಳೆಲ್ಲ [illegible] ವೈದ್ಯರ [illegible] ನಡೆದ [illegible] ಈಗ ನನ್ನ ಸಹಾಯವನ್ನು ನೋಡಿ ಅವರಿಗೆ ಆಶ್ಚರ್ಯವಾಗಿ ಅವರು ಅದಕ್ಕಾಗಿಯೇ ನನ್ನನ್ನು ಕಂಡು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಅವರ [illegible] ಸ್ನೇಹಿತರು [illegible] ಅವರಿಗೆ ನನ್ನ ಪರಿಚಯವನ್ನು ಮಾಡಿಕೊಟ್ಟರು. [illegible] ದ್ವೇಷ [illegible] ಪ್ರಸಿದ್ಧರಾದ [illegible] ಅಂಗಡಿಯನ್ನಿಟ್ಟಿದ್ದ [illegible] ಪ್ರಸಿದ್ಧರಾಗಿದ್ದರು. [illegible] ತಾನು [illegible] ಹಾಗೆಯೇ [illegible] ಜ್ಞಾನವನ್ನು [illegible] ಪಡೆದಿದ್ದರು.

ನನ್ನ ವರ್ಷದ [illegible] ಜುಲುಗಳು [illegible] ಕಾಲದ [illegible] ದೀರ್ಘ [illegible] ಪ್ರತಿ [illegible] ಗಾಯವಾಗಿದ್ದಿತು. ಇವುಗಳನ್ನು [illegible] ಇವರು [illegible] ದಂಗೆ [illegible] ಗುರುತಿಸಿ [illegible] ಸ್ವಕೀಯ [illegible] ಗಾತ್ರವಿಲ್ಲ [illegible] ದ ಹಾದಿಯಿಂದ ಹಾದಿದರ [illegible].

[illegible] ನನ್ನ [illegible] ನಾನು ಒಂದು [illegible] ಈ ದಿನ [illegible] ನನಗೆ ಸುಲಭ [illegible] ವಿಷಯ [illegible].

[illegible] ನಮ್ಮನ್ನು [illegible] ನಾವು [illegible] ತೊಂದರೆ [illegible] ಸಮಯ [illegible] ನಾವು [illegible] ಕಡವೆ [illegible] ನಮಗೆ [illegible] ದಿನದ ನಡೆಯು ಬಿದಿಗೆಯಷ್ಟಿತು. [illegible] ಸೈನಿಕರು ತಿಳಿಯದೆ [illegible] ಗಾಯ ಮಾಡಿದ ಜುಲು [illegible] ನಾವು [illegible] ಬೇಕಾಗಿದ್ದಿತು.

ನನ್ನ ಬೆಳೆವನ್ನು ನಾನೇ ಆಳಬೇಕು.

ಕ ಪಿ ಚೆಲ್ಲಪ್ಪನಿಂದ

(ವ . ಮುಂದುವರಿದುದು)

ಬೇರೆ [illegible] ವಿಷಯವನ್ನು ಗಮನಿಸಿದರೆ ಮತ್ತು ಅದರ [illegible] ನಮಗೆ [illegible] ಅವಿಕಾರದ [illegible] ನಮ್ಮ ಉತ್ಪತ್ತಿಯನ್ನು ಹೆಚ್ಚಿಸ [illegible] ಇದರಲ್ಲಿ ಮುಖ್ಯವಾಗಿ ಕಾಫಿಯ ವ್ಯವಸಾಯವನ್ನು ತೆಗೆದುಕೊಳ್ಳುವ.

ಕಾಫಿ ವ್ಯವಸಾಯ ಮತ್ತು ಕಂದಾಯ.

ಯಾವ ರಾಜ್ಯಭಾರವೇ ಆಗಲಿ ಕಂದಾಯವನ್ನು ಹಾಕುವುದು ಪ್ರತಿ [illegible] ಉತ್ಪತ್ತಿಯ ಮೇಲೆ ಆಗಿದೆ. ಒಂದು [illegible] ಉತ್ಪತ್ತಿಯೆಂದು ಪರಿಶೀಲಿಸ [illegible] ಸರಕಾರದವರ ಈ ಕಂದಾಯ ವಿಧಿ [illegible] ಕೊಡಗಿನಲ್ಲಿ [illegible] ವ್ಯವಸಾಯ [illegible] ಮುಖ್ಯ [illegible] ಉತ್ಪತ್ತಿ ಮತ್ತು [illegible] ಸರಕಾರದವರೂ [illegible] ಉತ್ಪತ್ತಿ ಮತ್ತು [illegible] ಸರಕಾರದವರೂ [illegible] ನಿಗದಿ [illegible] ಬೇಕಾಗಿದೆ.

ಸರಕಾರದ ಪರವಿಯನ್ನು ನೋಡಿದರೆ [illegible] ವ್ಯವಸಾಯದಲ್ಲಿ [illegible] ಉತ್ಪತ್ತಿಯನ್ನು [illegible] ಕಾಫಿಯ ಉತ್ಪತ್ತಿ [illegible] ಹೆಚ್ಚಿದೆ [illegible] ಕೊಡುವುದೇ [illegible] ಇದರಲ್ಲಿ [illegible] ಈ ವಿಷಯದಲ್ಲಿ ೧೯೨೪ ರಿಂದ ೧೯೨೭ರ ವರೆಗೆ ಮೂರು ವರ್ಷಗಳಲ್ಲಿ ಅನೇಕ ಪ್ರಶ್ನೆಗಳನ್ನು ಕಳೆದ ಕೌನ್ಸಿಲಿನಲ್ಲಿ ಕೇಳಿದರೂ, ಕಾಫಿ [illegible] ಸರಕಾರದ [illegible] ವಿಷಯದ ಮತ್ತು ಕಂದಾಯದ ವಿಷಯ ಹಾಗೆ ಸರಕಾರದಿಂದ ಉತ್ತರವೂ ಸರಕಾರದಿಂದ ಬಂದಿರ ಪ್ರಶ್ನೆ ೧೯೨೬ರಲ್ಲಿ (ಪ್ರಶ್ನೆ ನಂಬರು ೨೯) ಕೊಡಗು ಕೌನ್ಸಿಲಿನಲ್ಲಿ [illegible] ಉತ್ತರ.

(ಪ್ರಶ್ನೆ)—[illegible] ಕಾಫಿ [illegible] ಕಂದಾಯ ಪ್ರಕಾರ [illegible] ಉತ್ಪತ್ತಿ [illegible] ಎಷ್ಟು? (ಉತ್ತರ)—[illegible] ೮—೧—೦ ರಿಂದ ೧೨—೦—೦ [illegible] (Ilex [illegible] to does not [illegible] to coffee lands which are [illegible] with exception [illegible] restrictions) [illegible] ಕಂದಾಯ [illegible] ಉತ್ತರ.

(ಪ್ರಶ್ನೆ) ಕಾಫಿಗೆ [illegible] ಕಂದಾಯ [illegible] ಇಂಡಿಯಾ ಸರಕಾರಕ್ಕೆ [illegible] ಕಮಿಷನರರ [illegible] ಮುಂದಿಡಬೇಕು (೭) [illegible] IV ಪುಟ ೧ ನಂಬರು ೧೭ [illegible] (ಉತ್ತರ) ಮೇಲ್ಕಂಡ ಕರೆಸ್ಪಾಂಡೆನ್ಸ್ [illegible] ಬಹಿರಂಗಪಡಿಸಲು ಆಗುವುದಿಲ್ಲ. (೨) [illegible] ಕಾಫಿ ಕಂದಾಯವು ಇದೇ ರೀತಿಯಲ್ಲಿರಬೇಕು [illegible] ಅಭಿಪ್ರಾಯ [illegible] ಮೇಲ್ಕಂಡ ಕಾರಣದಿಂದ ಕಾಫಿಯಲ್ಲಿ [illegible] ಉತ್ಪತ್ತಿ [illegible] ಉತ್ಪತ್ತಿ [illegible] ಕಂದಾಯ ಹಾಕುವುದಿಲ್ಲವೆಂದು ನಿಶ್ಚಯಿಸಿತು.

ಇದರ ಜೊತೆಗೆ ೧೯೨೭—೨೮ರ ರಾಜ್ಯಾಡಳಿತ ವರದಿಯಲ್ಲಿ ಸರಕಾರಕ್ಕೆ [illegible] ಕಂದಾಯ [illegible] ಸಟ್ಲ್ಮೆಂಟ [illegible] ಮಾಡಿದ್ದಾರೆಂದು [illegible] ಕಾಫಿ [illegible] ಉತ್ಪತ್ತಿ [illegible] ಕಂದಾಯ [illegible].

[illegible] ಸರಕಾರ [illegible] ೧೪ ರಿಂದ [illegible] ೦—೧—೦ [illegible] ೨—೪—೦ [illegible] ೨—೦—೦ [illegible] ಕಂದಾಯ ಕಾಫಿಗೆ ೨—೦—೦ [illegible] ಕಂದಾಯ [illegible] ಉತ್ಪತ್ತಿಯನ್ನು [illegible] ೧೫ರಿಂದ ೩೦ [illegible] ಕಂದಾಯ ಹಾಕಿಯೇ [illegible] ಒಟ್ಟು ಕಾಫಿ ವ್ಯವಸಾಯ ೨೪,೭ [illegible] ೧೯೨೦—೦—೦ ರೂಪಾಯಿ [illegible] ಕಂದಾಯದಿಂದಲೇ ೧೧,೪೬೦೦ [illegible] ಕಂದಾಯ [illegible] ೬೯೧೦ [illegible] ೩—೦—೦ ರೂಪಾಯಿ [illegible] ೧೯೮೨೦ ರೂಪಾಯಿ [illegible] ೩೧,೮೩೩ ಎಕರೆಗೆ [illegible] ೨—೦—೦ ರೂ [illegible] ೭೪೭೮೬ [illegible] ೭೬೦೩ ಎಕರೆ [illegible] ೧೧೦೦೦ [illegible] ೪೦೯೨ ಎಕರೆ [illegible] ೨೩೭ ಎಕರೆ [illegible] ೭೩೨೫ [illegible] ೨೫೦೧ ಎಕರೆ [illegible] ೧೦೧ ಎಕರೆ [illegible] ೪೫೦ [illegible] ೪೦ ಎಕರೆ [illegible] ಉತ್ಪತ್ತಿ ಮತ್ತು [illegible] ಕಂದಾಯ ಹಾಕಿದರೆ [illegible] ೨ ಲಕ್ಷ ರೂಪಾಯಿ [illegible] ಉತ್ಪತ್ತಿ [illegible] ಕಂದಾಯ [illegible] ಸರಕಾರದವರಿಗೆ [illegible].

ಈ ಕಾರಣದಿಂದ [illegible] ನಮ್ಮ ಉತ್ಪತ್ತಿ [illegible] ಕಂದಾಯ [illegible].

ಉತ್ಪತ್ತಿ ಮತ್ತು [illegible] ಕಂದಾಯ [illegible] ನಮಗೆ [illegible] ೨೩ ಲಕ್ಷ [illegible].

[illegible] ಉತ್ಪತ್ತಿಯನ್ನು [illegible].

[illegible] ಪಟ್ಟಣದವರಲ್ಲಿ [illegible] ದೇಶದವರೆಲ್ಲರೂ [illegible] ಕಾಫಿಯ ಸರಕಾರ [illegible] ಮತ್ತು [illegible] ಸರಕಾರವನ್ನು [illegible].

ಕೌನ್ಸಿಲ್ ಮೀಟಿಂಗು.

ಅರ್ಧ ಕೌನ್ಸಿಲು ಗೈರುಹಾಜರು!

ಚುನಾಯಿತ ಮೆಂಬರುಗಳ ಜನಾಭಿಪ್ರಾಯದ ಬಹಿಷ್ಕಾರ.

ಕಳೆದ ತಾ. 26 ಮತ್ತು 27ರಲ್ಲಿ ನಡೆದ ಕೌನ್ಸಿಲ ಮೀಟಿಂಗಿನಲ್ಲಿ ಒಟ್ಟು 0 ಮೆಂಬರುಗಳ ಪೈಕಿ 10 ಜನರು ಮಾತ್ರ ಹಾಜರಿದ್ದರು! 1, ಚುನಾಯಿತ ಒಂದಿಯನ್ ಮೆಂಬರುಗಳಲ್ಲಿ 10 ಜನರು ಸೈಮನ್ ಕಮಿಷನಿನ ಮೇಲೆ ದೇಶದ ಅತೃಪ್ತಿಯನ್ನು ತೋರಿಸಲು ಈ ಸಾರಿಯ ಮೀಟಿಂಗಿಗೆ ಬಹಿಷ್ಕಾರ ಹಾಕಿದರು!! ಮೊದಲನೇ ದಿನ ಬಜೆಟ್ ಚರ್ಚೆಯು 45 ಮಿನಿಟುಗಳಲ್ಲಿ ಮುಗಿದು!! 2ನೇ ದಿನ ಠರಾವುಗಳು ಮೂರೇ, ಆ ದಿನ ಮೀಟಿಂಗು 15 ನಿಮಿಷಗಳಲ್ಲಿ ಮುಗಿಯಿತು!!!

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಈ ವರ್ಷದ ಬಜೆಟ್ ಮೀಟಿಂಗು ಫೆಬ್ರವರಿ ತಾ 26ರಲ್ಲಿ ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾಯಿತು. ಅರ್ಧ ಕೌನ್ಸಿಲು ಮಾತ್ರ ಹಾಜರಿತ್ತು. ಹಿಂದೂದೇಶದವರ ಅಭಿಮತಕ್ಕೆ ವಿರೋಧವಾಗಿ ನೇಮಿಸಲ್ಪಟ್ಟ ಸೈಮನ್ ಕಮಿಷನಿನ ಮೇಲೆ ದೇಶದವರಿಗೆ ವಿಶ್ವಾಸವಿಲ್ಲವೆಂಬುದನ್ನು ತೋರಿಸಲಿಕ್ಕಾಗಿ ಈ ಮೊದಲೇ ಪ್ರಕಟಿಸಲ್ಪಟ್ಟಿದ್ದಂತೆ ಬಹಿಷ್ಕಾರ ಸಂಪಾದಕ ಕೂಡಿಕೆ ಮೇರೆ ಚುನಾಯಿತ ಮೆಂಬರುಗಳು ಯಾರೆಂದರೆ 1 ತಿ ಟಿ ಕುಶಾಲಪ್ಪ, 2 ಯಂ ಯಂ ಚಿಣ್ಣಪ್ಪ 3 ಸಿ ಯನ್ ಉತ್ತಯ್ಯ, 4 ಸಿ. ಎಸ್ ವೆಂಕಪ್ಪಯ್ಯ, 5 ಚಾಲ್ಡ್ ಕಾಮತ್, 6 ಸಾಂತ್ಯೇರಿ ಸಣ್ಣಪ್ಪ, 7. ಸಯ್ಯದ್ ಅಹ್ಮದ್ ಸಾಹೇಬ್, 8 ಎನ್. ಮುದ್ದಪ್ಪ, 9 ಕೊಳ್ಳುವಡ ಕರುಂಬಯ್ಯ ಮತ್ತು 10 ಪಿ ಎ. ಬೆಳ್ಳಪ್ಪ—ಈ ಹತ್ತು ಜನರು ಮೀಟಿಂಗಿನಲ್ಲಿ ಹಾಜರಿರಲಿಲ್ಲ. ನಾಲ್ಕು ಉದ್ಯೋಗಸ್ಥರು, ನೇಮಿತ ಮೆಂಬರಾದ ಮೆ. ಪೂಂಚಾರವರು, ಚುನಾಯಿತ ಯೂರೋಪಿನಿಯನ್ ಮೆ. ಪಿ ಬಿ ಟಿಪ್ಪಿಂಗ್ ಮತ್ತು ಸಿ ನಿಕೊಲ್ಸನ್‌ರವರು ಮತ್ತು ಚುನಾಯಿತ ಇಂಡಿಯನರು ಮೆ. ಗಳಾದ ಎ ಬಿ ಚಂಗಪ್ಪ, ಪಿ ಬಿ ಮೇದಪ್ಪ ಮತ್ತು ಕಾಂಬಿರಂಡ ಮಂದಣ್ಣ, ಈ ಹತ್ತು ಜನರು ಹಾಜರಿದ್ದರು. ಕೌನ್ಸಿಲಿನ ಒಂದು ಭಾಗದ ಕುರ್ಚಿಗಳೆಲ್ಲವೂ ಬರಿದಾಗಿದ್ದುದರಿಂದ ಪ್ರೊಸೀಡಿಂಗ್ಸಿನಲ್ಲಿ ಜೀವಕಳೆಯೇ ಇಲ್ಲದಂತೆ ತೋರುತಿತ್ತು. ಅಧ್ಯಕ್ಷರಾದ ಚೀಫ್ ಕಮಿಷನರವರ ಮುಖದಲ್ಲಿ ನಗೆಯೇ ಅಪರೂಪವಾಗಿತ್ತು. ಬಹಿಷ್ಕಾರದ ತಮಾಷೆಯನ್ನು ನೋಡಲಿಕ್ಕೋ ಏನೋ ಪ್ರೇಕ್ಷಕರು ತುಂಬಾ ನೆರೆದಿದ್ದರು.

ಹೊಸ ಮೆಂಬರಾದ ಕೇಶವನ್ ಮೆ ಜ. ಡಬ್ಲ್ಯು ಪ್ರೆಸ್ಕಾಟ್‌ರವರು ರಾಜಭಕ್ತಿಯ ಪ್ರಮಾಣವನ್ನು ಮಾಡಿದ್ದರು. ತರ ಮೆಂಬರುಗಳು ಕೇಳಿದ್ದ ಪ್ರಶ್ನೆಗಳಿಗೆ ಉತ್ತರಗಳು ಓದಲಾದವು. ಆ ಮೇಲೆ ಕೇಳಿದ ಅಕ್ಟೋಬರು ತಿಂಗಳ ಅಧಿವೇಶನದಲ್ಲಿ ಪಾಸಾದ ಈ ಕೆಳಗಿನ ನಾಲ್ಕು ಠರಾವುಗಳ ಮೇಲೆ ಚೀಫ್ ಕಮಿಷನರವರ ತೀರ್ಮಾನವು ಪ್ರಕಟವಾದುದರಿಂದ ಕೌನ್ಸಿಲಿನ ... (1) ಕೊಡಗಿನಲ್ಲಿ ಸ್ಕೂಲುಗಳಿಗೆ ... ವಿದ್ಯಾರ್ಥಿಗಳಿಗೆ ... (2) ... (3) ... ಸ್ಕೂಲುಗಳಲ್ಲಿ ... ಈ ನಾಲ್ಕು ಠರಾವುಗಳನ್ನು ಅಂಗೀಕರಿಸಲಾಗುವದಿಲ್ಲವೆಂಬುದೇ ಚೀಫ್ ಕಮಿಷನರ ತೀರ್ಮಾನ!

ಪೈನಾನ್ಸ್ ಮೆಂಬರು 1928—29ನೇ ವರ್ಷದ ಬಜೆಟ್ಟನ್ನು ಕೌನ್ಸಿಲಿನ ಮುಂದಿಟ್ಟು ಹೇಳಿದ ಸಾರಾಂಶವೇನೆಂದರೆ—ಬಜೆಟ್ಟಿನ ವರ್ಷದ ಅಂದಾಜು ಉತ್ಪತ್ತಿ ರೂ. 13,38,000 ಮತ್ತು ಅಂದಾಜು ಖರ್ಚು, ರೂ. 14,14 000 ಆಗುವದರಿಂದ ರೂ. 76,000 ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತದೆ. ರೂ. 76,000 ಕಳೆದ ವರ್ಷಗಳ ಉಳುವರಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಈ ವರ್ಷ ರೆವಿನ್ಯೂ ಇಲಾಖೆಯಿಂದ ರೂ 10,000 ಅಬ್ಕಾರಿ ಇಲಾಖೆಯಿಂದ 2,000 ಮತ್ತು ಫಾರೆಸ್ಟು ಇಲಾಖೆಯಿಂದ ರೂ 36,500 ಹೆಚ್ಚು ಉತ್ಪತ್ತಿ ಅಂದಾಜು ಮಾಡಲಾಗಿದೆ. ಗಂಧದ ಕ್ರಯವು ಚೆನ್ನಾಗಿತ್ತು. ಮಾವುಕೊಟದ ಫಾರೆಸ್ಟುಗಳಲ್ಲಿ ರೈಲ್ವೆ ರಸ್ತೆ ತೊಲೆಗಳನ್ನು ತಯಾರಿಸುವ ಬಗ್ಗೆ ಆಲೋಚಿಸುವ ಯೋಚನೆ ಇದೆ. ಅಂದಾಜಿನ ರಿಪೇರಿ ಕೆಲಸ ನಡೆಯಬೇಕಾಗಿದೆ. ಹಣದ ಅಭಾವದಿಂದ ದೇಶದ ಆರೋಗ್ಯ ಮೊದಲಾದ ಕೆಲಸಗಳಿಗೆ ಬೇಕಾದ ಹಣ ಕೊಡಲು ಸಾಧ್ಯವಾಗುವದಿಲ್ಲ. ಸರ್ಕಾರದ ಆರ್ಥಿಕ ಸ್ಥಿತಿಯಲ್ಲಿ ಈ ವರ್ಷ 76,000 ಉತ್ಪತ್ತಿಗಿಂತ ಖರ್ಚು ಹೆಚ್ಚಾಗಿದ್ದರೂ ನಾನು "ಧೈರ್ಯ ಪಡುವದಿಲ್ಲ. ಅದನ್ನು ರಿಪೇರಿ ಮಾಡುವಂತಹದ್ದು ಪ್ರತಿ ವರ್ಷವೂ ಇರುವದಿಲ್ಲ. ಪೋಲೀಸು ಇಲಾಖೆಯಲ್ಲಿ ಮೆಂಬರುಗಳು ಹೆಚ್ಚು ಖರ್ಚು ಮಾಡುವದಾದರೂ ಅದರ ಉತ್ಪತ್ತಿಯು ಅಭಿವೃದ್ಧಿಯಾಗುವಂತಿಲ್ಲ. ಆದರೆ ಪೆಟ್ರೋಲ ಉತ್ಪತ್ತಿಯ ಗಂಧದಿಂದಾಗಿದೆ. ಸಾರಾಯಿ ಅಂಗಡಿಗಳ ಸಂಖ್ಯೆಯು ಹಾಕಬೇಕು ಇಲ್ಲ. ಕಡ್ಡಾಯ ಸಾರಾಯಿ ಪಾನ ಪದ್ಧತಿಯಲ್ಲಿ ಕಡಿಮೆಯಾಗಲಿದೆ. ಭಕ್ತದ ಸಾರಾಯಿ ಮಾರಾಟದಿಂದ ಅಬ್ಕಾರಿ ಇಲಾಖೆಯ ಉತ್ಪತ್ತಿ ಹೆಚ್ಚಾಗಿದೆ.

ಮೆ. ಎ. ಬಿ. ಚಂಗಪ್ಪನವರ ಭಾಷಣದ ಸಾರ — ಎದುರು ಸೀಟಿನ ಮೆಂಬರುಗಳು ಸೈಮನ್ ಕಮಿಷನಿನ ನೇಮಕದ ವಿಷಯದಲ್ಲಿ ಅತೃಪ್ತಿಯನ್ನು ತೋರಿಸಲಿಕ್ಕಾಗಿ ಬಹಿಷ್ಕಾರ ಹಾಕಿ ಇಲ್ಲಿ ಬರದಿರುವದರಿಂದ ನನಗೆ ವ್ಯಸನವಾಗುತ್ತದೆ. ಅವರು ಕೌನ್ಸಿಲಿಗೆ ಒಂದು ರೀತಿಯ ಪ್ರತಿನಿಧಿಗಳಾದರೂ ತಮ್ಮ ಅತೃಪ್ತಿಯನ್ನು ತೋರಿಸಬಹುದಿತ್ತು. ಸೈಮನ್ ಕಮಿಷನ್ ಬರುವದರಿಂದ ನಮ್ಮ ದೇಶವನ್ನು ಪ್ರತ್ಯೇಕವಾಗಿಯೇ ಇಟ್ಟುಕೊಂಡು ದೊಡ್ಡ ಪ್ರಾಂತ್ಯಗಳ ಸಂಗಡ ಸೇರಿಸದೆ ಇರಬೇಕೆಂದು ನಮ್ಮ ಅಭಿಪ್ರಾಯವನ್ನು ಕೊಡಬೇಕಾಗಿತ್ತು. ಕೌನ್ಸಿಲಿನವರು ಕೇಳುತ್ತಿರುವ ಹಾಗೆ ಇಂಡಿಯಾ ಸರ್ಕಾರವು ಪೂರ್ವದ ಉದ್ಯೋಗಸ್ಥರ ವೇತನವನ್ನು ನಮ್ಮ ಮೇಲೆ ಹಾಕುತ್ತಿದೆ. ಚೀಫ್ ಕಮಿಷನರ ಕೊಡಗಿನಲ್ಲೇ ಕೋರ್ಟು ಮಾಡಿದರೆ ಅದರ ಖರ್ಚಕ್ಕೆ ಬೇಕಾದ ಖರ್ಚು ಉಳಿಯುತ್ತದೆ. ಪೋಲೀಸು ಇಲಾಖೆಯಲ್ಲಿ ತುಂಬಾ ಅನಾವಶ್ಯಕ ಖರ್ಚು ಇದೆ. ಮಾನ್ಯ ಕೊಡ ಸರಿಗೆ ಇಟ್ಟ ರೂ 10,000 ಅನಾವಶ್ಯಕ. ಸಿ ಪಿ ಡಬ್ಲ್ಯು ಡಿಯಲ್ಲಿ ಆಗುವ ಖರ್ಚಿನಲ್ಲಿ 25% ಸ್ಟಾಫಿನಿಂದಿಗ ಆಗುತ್ತದೆ. ರಸ್ತೆಗಳು ಚೆನ್ನಾಗಿಲ್ಲ. ಇತರ ಯಾವ ಕೆಲಸಗಳೂ ತೃಪ್ತಿಕರವಾಗಿಲ್ಲ. ವೈದ್ಯ ಇಲಾಖೆಗೆ ಖರ್ಚುಮಾಡುವದು ಸಾಲದ. ಕೃಷಿ ಇಲಾಖೆಯು ಮೂಲಕ ರೈತರಿಗೆ ಸಹಾಯವಾಗದೆ ಇರುವದು ವ್ಯಸನಕರ. ವೀರರಾಜಪೇಟೆ ಶಾಲೆಯಲ್ಲಿ ಗುಸ್ತಿಗಳಾಟ ಇತ್ಯಾದಿ, ಬೋರ್ಡಿಂಗ್ ಕಟ್ಟಡ ಮಾಡಿಕೊಡಬೇಕು. ಬೆಂಗಳೂರಿನಲ್ಲಿರುವ ಇನ್ಸ್‌ಪೆಕ್ಟರು ನಮಗೆ ಅನಾವಶ್ಯ. ಕಮಿಷನರನ್ನು ಆಗಾಗ್ಗೆ ಬದಲಾಯಿಸುವದು ಯುಕ್ತವಲ್ಲ. ಕೊಡಗಿಗೆ ಪ್ರತ್ಯೇಕ ತರಬೇತು ಹೋರಾಡಬೇಕು.

ಮ. ಪಿ. ಆರ್. ಟಿ ಪೂಂಚಾರವರು—ಸರ್ಕಾರವು ಹಿಂದುಳಿದ ಪಂಗಡದವರಿಗೆ ಕೊಡಬೇಕಾದ ಸಹಾಯ ಕೊಡುತ್ತಿರುವದಿಲ್ಲ ವರಿಗ ಸಿಗಿಯುವ ಸ್ಕಾಲರ್‌ಷಿಪ್‌ಗಳನ್ನು ಮಾಡಿಕೊಡಲು ಆಲೋಚಿಸುತ್ತಾರೆಯೇ ಹೊರತು ಕಟ್ಟಿಸಿ ಕೊಡುವದಲ್ಲ. ಅವರಿಗೆ ಪ್ರತ್ಯೇಕ ಶಾಲೆ ಅವಶ್ಯವಲ್ಲ. ಕಾಫಿಕಾರರ ಕ್ಷೇಮವನ್ನು ನೋಡುವ ಇಲಾಖೆಯಿಂದ ಬೇಕು. ಇದರ ವಿಷಯಕ್ಕೆ ಗಮನಕೊಡುದ್ದರೆ ಇದನ್ನು ನಿರುಪಯೋಗವಾಗುವದು.

ಮೆ. ಪಿ. ಬಿ. ಮೇದಪ್ಪನವರು—ನಮ್ಮ ದೇಶದ ಆದಾಯ ಹಣವನ್ನು ನೋಡಿದರ ದೃಷ್ಟಿಯಿಂದ ... ಬೇರೆ ಪ್ರಾಂತ್ಯದೊಂದಿಗೆ ಸೇರಿಕೊಳ್ಳಬೇಕಾದ ಅಗತ್ಯವಿಲ್ಲ. ಕಾಫಿ ಕಂದಾಯ ಬಹಳ ಕಡಿಮೆಯಾಗಿದೆ. ಹೆಚ್ಚಿಸಿಕೊಳ್ಳ ಹುದು. ಫಾರೆಸ್ಟು ಇಲಾಖೆಯಲ್ಲಿ ತುಂಬಾ ಖರ್ಚು ಕಡಿಮೆ ಮಾಡಬಹುದು. ಗ್ರಾಮ ಪಂಚಾಯಿತಿ ಆಕ್ಟನ್ನು ಇನ್ನೂ ಜಾರಿಗೆ ತಂದಿರುವದಿಲ್ಲ. ಕ್ಯಾಟಲ್ ಕಮಿಟಿ ರಿಪೋರ್ಟು ಇನ್ನೂ ಹೊರಬಿದ್ದಿರುವದಿಲ್ಲ. ವರ್ಷ ವರ್ಷ ಕಾಫಿ ತೋಟಗಳ ಏರುಪೇರಿನಿಂದ ಆದಾಯ ಕಡಿಮೆಯಾಗುತ್ತದೆ.

ಫೈನಾನ್ಸ್ ಮೆಂಬರು—ಕಾಫಿ ಕಂದಾಯವು ಸ್ಥಿರಗೊಂಡ ... ಸೆಟಲ್‌ಮೆಂಟಿನಲ್ಲಿ ನಿಶ್ಚಯಿಸಲ್ಪಟ್ಟಿರುವದರಿಂದ ಅದನ್ನು ಈಗ ಏರಿಸಲಾಗದು. ಆದರೆ ಕಾಫಿ ವ್ಯವಸಾಯಗಾರರಲ್ಲಿ ಹುಟ್ಟಿಸಿದ ಭರವಸೆಯನ್ನು ಕಾಪಾಡಬೇಕಾಗುತ್ತದೆ. ಇದು ಸಾಧ್ಯವಿಲ್ಲ.

ಮೀಟಿಂಗು 11-45 ಗಂಟೆಗೆ ಬರಖಾಸ್ತಾಯಿತು.

ಎರಡನೇ ದಿನ

ತಾ 27ರಲ್ಲಿ ಕೌನ್ಸಿಲು ಎಂದಿನಂತೆ ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾಯಿತು. ಮೊದಲಿನ ದಿನದಲ್ಲಿ ಹಾಜರಿದ್ದ 10 ಮೆಂಬರುಗಳು ಮಾತ್ರ ಬಂದಿದ್ದರು. ಪ್ರೇಕ್ಷಕರು ಒಬ್ಬರು ಇದ್ದರು. ಪ್ರಶ್ನೋತ್ತರಗಳು ಆದನಂತರ ಬಜೆಟ್ಟಿನ ಮೇಲೆ ಠರಾವುಗಳು ಚರ್ಚೆ ನಡೆಯಿತು.

1. ಕ. ಯಂ ಮಂದಣ್ಣನವರ —ಮೊದಲನೇದರಲ್ಲಿರುವ ಒಂದು ಕಂ... ಗೆ 500 ರೂ. ಕೊಡಬೇಕೆಂದು ಸೂಚಿಸಿ, ಈ ಕರಾರಿನಂದ 1000 ವರೆಗೆ ... ಕೊಡಬೇಕು, ಅದನ್ನು ರಿಪೇರಿ ಮಾಡತಕ್ಕಂತ 3ನೇ ಬಂದರು ಬೇಕೆ ಸಹಾಯ ಗ ದಿಲ್ಲವೆಂದು ಹೇಳಿದರು.

ಫೈನಾನ್ಸ್ ಮೆಂಬರ್—ಈ ಕೆರೆಯು ದೊಡ್ಡ ಕೆರೆ ... ಅಲ್ಲ. ಇದರಿಂದ ಅಷ್ಟು ದೊಡ್ಡ ಒಕ್ಕಲಿಗೆ ನೀರು ಸಿಕ್ಕುವಂತಿಲ್ಲ. ಇದರ ರಿಪೇರಿಗೆ 1928ನೇ ಇಸವಿಯಲ್ಲಿ ಸ್ವಲ್ಪ ಹಣ ಕೊಡಲಾಗಿದೆ. ತಾಕೀತ ಬಂದು ನೋಡಿ ಅವಶ್ಯ ಕಂಡರೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಸ್ವಲ್ಪ ಹಣ ಕೊಡಬಹುದು. ಠರಾವು ವಾಪಸು ತೆಗೆದುಕೊಳ್ಳಲಾಯಿತು.

2 ... ಪಿ. ಬಿ ಮೇದಪ್ಪನವರು.—ಅಬ್ಕಾರಿ ಇಲಾಖೆಯ ಖರ್ಚಿನಲ್ಲಿ ಅಕ್ಕ ... ನ್ಯಾಯವಾಗಿರುವದನ್ನು ಸರ್ಕಾರಕ್ಕೆ ತಿಳಿಸುವ ಬಗ್ಗೆ ... ರಲ್ಲಿ 1 ರೂ. ಕಡಿಮೆ ಮಾಡ ಬೇಕೆಂದು ಠರಾವನ್ನು ಸೂಚಿಸಿ, ಹೀಗೆಂದರು—ಈಗ ಮಾರಾಟ

ವಾಗುತ್ತಿರುವ ಸಾರಾಯಿಯು ತುಂಬಾ ಕೆಟ್ಟದಾಗಿರುವ ದಲ್ಲ, ಅಳತೆಯಲ್ಲಿ ಮೋಸ ಮಾಡುವದರಿಂದಲೂ ಬಹು ಅತೃಪ್ತಿ ಇದೆ. ಅದರಿಂದ ಅನೇಕ ಬಡ ರೈತರು ಭಕ್ತದ ಸಾರಾಯಿ ಮಾಡಿಕೊಳ್ಳುತ್ತಾರೆ. ಕೇಸುಗಳ ಸಂಖ್ಯೆ ಹೆಚ್ಚುವದೇ ಇದಕ್ಕೆ ಸಾಕ್ಷಿ. ಪತ್ತೆಯಾಗದಿರುವವು ಸೂಕ್ತ ಕೇಸುಗಳಿವೆ. ನಾನು ಮಿತಪಾನದಲ್ಲಿ ತುಂಬಾ ನಂಬುವವನು. ಆದರೆ ಬೋರ್ಡಿನಿಂದ ಇದನ್ನು ಸಾಧಿಸಲಾಗುವದಿಲ್ಲ. ಸರ್ಕಾರದವರು ರೈತರಿಗೆ ಭಕ್ತದ ಸಾರಾಯಿ ಮಾಡಿ ಒದಗಿಸಿಕೊಡಬೇಕು. ಇದನ್ನು ಔಷಧಿಯಾಗಿ ಪೂರ್ವ ನ ಕಾಲದಿಂದಲೂ ಈ ದೇಶದಲ್ಲಿ ಉಪಯೋಗಿಸುತ್ತಿದ್ದಾರೆ. ಇಲಾಖೆಯು ಸಿಬ್ಬಂದಿಯನ್ನು ಹೆಚ್ಚಿಸಬೇಕು.

ಫೈನಾನ್ಸ್ ಮೆಂಬರು—ಒಂದು ಸಾರಿ ಕೆಟ್ಟ ಸಾರಾಯಿ ಕೊಡಲ್ಪಟ್ಟದ್ದು ಗೊತ್ತಾಗಿ ಕೂಡಲೆ ಸರಬರಾಜು ದಾರರಿಂದ ಸಾರಾಯಿ ವಿಷಯ ಆಲೋಚನೆ ಮಾಡಲಾಗುತ್ತದೆ. ಸಾರಾಯಿ ಕೆಲಸದ ವಿಷಯದಲ್ಲಿ ತರಬೇತು ಹೊಂದಿದವನ್ನು ನೇಮಿಸುವ ಅವಶ್ಯ ಕಂಡಲ್ಲಿ ಹಾಗೆ ಮಾಡಲಾಗುವದು. 3 ಇಲಾಖೆ ಮಳಿಗೆಗಳನ್ನು ದೇಶದವರಿಗೇ ಕೊಡಬೇಕು.

ಈ ಠರಾವನ್ನು ಮು. ಕೆ ಮಂದಣ್ಣನವರು ಸೂಚಿಸಿದರು. ದೇಶದವರು ಗೇಣಿ ಮಳಿಗೆಗಳಿಗೆ ತುಂಬಾ ಹಣ ಕೊಡುವದರಿಂದ ದೇಶದವರಿಗೆ ಕೊಂಡರೆಯಾಗುತ್ತದೆಂದು ವಾದಿಸಿದರು. ಪರದೇಶದವರಿಗೆ ರಿಯಾಯತಿ ಕೊಡುವದಿಲ್ಲ. ಹರಾಜಿನ ಹಿಡ ಪಡೆದವರೇ ಹೆಚ್ಚು ಕೊಡಬೇಕಿದ್ದಲ್ಲಿ ಅವರಿಗೇ ಕೊಡುವ ಪದ್ಧತಿ ಉಂಟು. ಇಂಥಾದ್ದು ಎರಡು ಮೂರು ಮಾತ್ರ. ಇನ್ನುಳಿದ ಎಲ್ಲಾ ಕೊಂಡರೆ ಇಲ್ಲ. ಎಂತ ಫೈನಾನ್ಸ ಮೆಂಬರು ಜವಾಬು ಕೊಟ್ಟನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

ಮೀಟಿಂಗು 11-35 ಗಂಟೆಗೆ ಬರಖಾಸ್ತಾಯಿತು. ಸೈಮನ್ ಕಮಿಷನರು ಭಾಷಣವೇನೂ ಮಾಡಲಿಲ್ಲ.

(ಮೂರನೇ ಪುಟದಿಂದ ಮುಂದುವರಿದದ್ದು)

ದಾಗಿಯೂ ಜಮಾಖಾನೆಗೆ 1ಕ್ಕೆ ಮೂರರಷ್ಟು ತೆರಿಗೆ ಕೊಟ್ಟು ಕ್ರಮೇಣ ಎಲ್ಲಾ ಜಮಾ ವ್ಯವಸಾಯಗಾರರೂ ದಿವಾಳಿಯಾಗುವದು ಖಂಡಿತ. ಇನ್ನಾದರೂ ದೇಶದ ಜನರು ಇದನ್ನು ಆಲೋಚಿಸುವರೋ?

ನೋಟೀಸು.

ವೀರರಾಜಪೇಟೆ ನಾಡು ಬೇಟೋಳಿ ಗ್ರಾಮದ ಕೊಂಕಣಸ್ಥರ ರಾಮಯ್ಯನವರ ಮಗ ಮಕ್ಕಿ ನಾರಣೈಯ್ಯನು ಈ ಮೂಲಕ ತಿಳಿಯಪಡಿಸುವದೇನೆಂದರೆ—ಬೇಟೋಳಿ ಗ್ರಾಮದಲ್ಲಿ ಇರುವ ನಾಗಿನ ಸರ್ವೆ ನಂಬರು 326ರ 5—55 ಎಕ್ರೆ ಭೂಮಿ, ಸರ್ವೆ ನಂಬರು 320/6 ರ 6—35 ಯೇಕ್ರೆ ಬಾಣೆ ಸಹ ನನ್ನ ದೊಡ್ಡ ತಂದೆ ಸುಬ್ಬೈಯ್ಯನವರು ಪಿತಾರ್ಜಿತ ಸ್ವತ್ತಿನಿಂದ ಸಂಪಾದಿಸಿದ ಆಸ್ತಿಯಾಗಿದೆ. ಅವರಿಗೆ ಪುತ್ರಸಂತತಿ ಇಲ್ಲದ್ದರಿಂದ ಅವರು ಮೃತರಾದನಂತರ ಅವರ ಹೆಂಡತಿ ಅಮ್ಮಕ್ಕಮ್ಮನವರ ಹೆಸರಿನಲ್ಲಿ ಖಾತೆಯಾಗಿ ನಡೆದು ಬರುತ್ತದೆ. ಇವರಿಗೆ ಈ ಸ್ವತ್ತು ವಿನಃ ಜೀವನೋಪಾಯಕ್ಕೆ ಬೇರೆ ಫಲ ಅನುಭವಿಸುವ ಹಕ್ಕೇ ವಿನಹ ಪರಾಧೀನ ಮಾಡುವ ಸ್ವತಂತ್ರವಿರುವದಿಲ್ಲ. ಈ ಸ್ವತ್ತಿಗೆ ನಾನು ಹಕ್ಕುದಾರನಾಗಿದ್ದೇನೆ. ನನಗೆ ಮೋಸ ಮಾಡುವ ಇರಾದೆಯಿಂದ ಇದನ್ನು ಪರಭಾರೆ ಮಾಡುವ ಸಂದರ್ಭದಲ್ಲಿ ದಸ್ತೈರ ನಾನು ಹಕ್ಕುದಾರನಾದ್ದರಿಂದ ಈ ಸ್ವತ್ತನ್ನು ಯಾರೂ ಕ್ರಯ, ಭೋಗ್ಯ ಅಥವ ಬೇರೆ ವಿಧದ ಪರಾಧೀನ ಇವರಿಂದ ಮಾಡಿಕೊಳ್ಳಬಾರದಾಗಿ ಈ ಮೂಲಕ ತಿಳಿಯ ಪಡಿಸಿರುತ್ತೇನೆ. ಹಾಗೆ ಮಾಡಿದ ಪಕ್ಷ ಅದು ಅಸಾಧುವಾಗಿರತಕ್ಕದ್ದು.

4—4 ಮಕ್ಕಿ ನಾರಣೈಯ್ಯ
ಬೇಟೋಳಿ ಗ್ರಾಮ

Wanted.

Two writers one for Pannya Estate and the other for Boothankad Estate in Coorg with 200 or more coolies each Good pay and prospects Preference will be given only to those who have got established gangs and who do not want advance. For further particulars apply to SRIMATI D SAKAMMA, COFFEE PLANTER, SOMWARPET, (N COORG).

ಬೇಕಾಗಿದೆ

ಪನ್ಯ ತೋಟಕ್ಕೆ ಒಬ್ಬ ಮತ್ತು ಭೂತನಕಾಡು ತೋಟಕ್ಕೆ ಒಬ್ಬ, 200 ಅಥವಾ ಹೆಚ್ಚು ಆಳುಗಳ ಸಮೇತ ಇರುವ ಇಬ್ಬರು ರೈಟರುಗಳು ಬೇಕಾಗಿದೆ. ಸ್ವಂತ ಆಳುಗಳ ಗ್ಯಾಂಗ್ ಇರುವವರಿಗೆ ಮತ್ತು ಅಡ್ವಾನ್ಸು ತೆಗೆದುಕೊಳ್ಳದವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಒಳ್ಳೇ ಸಂಬಳ ಮತ್ತು ಉತ್ತೇಜನ ಇದೆ. ಹೆಚ್ಚಿನ ವಿಷಯ ತಿಳಿಯಲಿಕ್ಕೆ ಶ್ರೀಮತಿ ಡಿ. ಸಾಕಮ್ಮನವರು, ಕಾಫಿ ಪ್ಲಾಂಟರು, ಸೋಮವಾರಪೇಟೆ ಈ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು. 5—4

ನಿಮ್ಮ ಚಂದಾಹಣದ ಬಾಯಿಜೆಯು ತೀರಿ ಒಬ್ಬ ದಿವಸಗಳಾದಾಗ್ಯೂ ವಸೂಲಿದಣ ವರ್ಷದ ಹಣ ಈ ... ಗೆ ಕಳುಹಿಸದ್ದರಿಂದ ಪತ್ರಿಕೆ ಕಳುಹಿಸ್ಸ ... ಇಲ್ಲವಾದ್ದ ... ಪಾರ್ಟಿಂದ ಪತ್ರಿಕೆ ನಿಲ್ಲಿಸಲೇ ಬೇಕಾಗುತ್ತೆ.

ವರ್ತಮಾನ ಸಂಗ್ರಹ.

ಒಳದೇಶ.

... ಡಿಕೇರಿಯಲ್ಲಿ ಕುರುದ ಒಬ್ಬ ಈ ತಾ ... ಮತ್ತು ... ಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

... ಡಿಕೇರಿ ವೇದಾಂತ ಸಂಘದವರು ಶ್ರೀರಾಮ ಕೃಷ್ಣ ಪ ... ಹಂಸರವರ 92ನೇ ವರ್ಧಂತಿ ಉತ್ಸವವನ್ನು ಕಳದ ತಾ ... ಲ್ಲಿ ... ಸಿದರು. ... ಹರಿಕಥೆಯೂ ಇತ್ತು.

ಮಡಿಕೇರಿಯಲ್ಲಿ ಈ ವಾರ ಸೇರಿದ್ದ ಕಾಫಿ ಬಿಂಡಿಗ ... 360, ಪಾರ್ಚ್‌ಮೆಂಟು ಹಂಡ್ರೆಡ್‌ವೆಯಿಟಿಗೆ ರೂ 76 ... ಚಿಕ್ಕಿ ವ ... ರೂ. 72 ಕ್ರಯವಿತ್ತು.

... ಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ 10ಲ್ಲಿ ರಾ ಬಾ ಕೋದಂಡ ಅಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವದು.

ಕಳೆದ ಆದಿತ್ಯವಾರ ಮಡಿಕೇರಿಯಲ್ಲಿ ನಡೆದ ಕ್ರಿಕೆಟು ... ದದ ಆಟದಲ್ಲಿ ಉತ್ತರ ಕೊಡಗು ಜಮ್ಮಾ ... ದವರು ವೀರಾ ... ಟೆ ಏರ್ಕೋಲಿಯ ಕ್ಲಬ್ಬಿನವರನ್ನು ಸೋಲಿಸಿದರು.

ಕಳದ ತಾ 29ರಲ್ಲಿ ಕೋರಂ ಇಲ್ಲದ್ದರಿಂದ ಸೆಂಟ್ರಲ್ ... ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ನಡೆಯಲಿಲ್ಲ ... ಮೀಟಿಂಗು ಈ ತಾ 5ಕ್ಕೆ ಇಡಲ್ಪಟ್ಟಿದೆ.

... ವಾಡಿನಾಲ್ಕುನಾಡ ಇಗ್ಗುತಪ್ಪ ದೇವರ ಕುಂಬ ಮಾಸ ... ಕಲಾಡಿಚ್ಚ ಹಬ್ಬವು ಕುಂಬ ಮಾಸ 23ರಲ್ಲಿ ಅಂದರೆ ... ಚು ತಾ 6ರಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ಕೌನ್ಸಿಲು ಮೀಟಿಂಗಿಗಾಗಿ ಮಡಿಕೇರಿಗೆ ಬಂದಿದ್ದ ಚೀಫ್ ಕಮೀಷನರವರು ಫೆಬ್ರವರಿ ತಾ 27ರ ಮಧ್ಯಾಹ್ನದ ಮೇಲೆ ಬಂಗಳೂರಿಗೆ ವಾಪಸು ಹೊರಟು ಹೋದರು.

ಸಕ್ರೆಟರಿಯವರ ನೋಟೀಸು ಮೇರೆ ಫೆಬ್ರವರಿ ತಾ 28ರ ... ನಡೆಯಬೇಕಾಗಿದ್ದ ಕೊಡವ ವಿದ್ಯಾಭಿವೃದ್ಧಿ ಫಂಡಿನ ಜ ... ರ್ ಮೀಟಿಂಗ ಅಧ್ಯಕ್ಷರ ಅಸೌಖ್ಯದ ದೆಸೆಯಿಂದ ನಡಿಸುವ ... ಕೆ ಮೂಡಲಾಗಿದೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬಜೆಟ್ಟ್ ಮೀಟಿಂ... ಫೆಬ್ರವರಿ ತಾ 25 ಮತ್ತು 27ರಲ್ಲಿ ನಡೆಯಿತು. ... ದೇಶೀಯ ಮೆಂಬರುಗಳಲ್ಲಿ ಹಲವು ಜನರು ಸೈಮನ್ ಕ ... ಷನಿನ ಸಂಬಂಧ ಕೌನ್ಸಿಲ್ ಮೀಟಿಂಗ ಬಹಿಷ್ಕಾರ ಹಾಕಿ ... ರು. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಈಗಿನ ಚೀಫ್ ಕಮಿಷನರವರಾದ ಮೆ ... ಕೀ ... ರವರು ... ಈ ತಾ 14ಲ್ಲಿ 6 ತಿಂಗಳು ರಜೆಯಲ್ಲಿ ಇಂಗ್ಲೆಂಡಿಗೆ ಹೋಗುವದರಿಂದ ಮಿ. ಎಸ್. ಯಂ ಕ್ರಂಪ್‌ರವರು ಬೆಂಗ ... ಳೂರಿಗೆ ತಾ 12ರಲ್ಲಿ ಬಂದು 14ರಲ್ಲಿ ಅವರಿಂದ ಚಾರ್ಜು ... ದುಕೊಳ್ಳುವರು.

ಈಗ ಬಾಗಮಂಡ್ಲ ಸ್ಕೂಲು ಮಾಸ್ಟರಾದ ಮೆ ... ಯ್ಯನವರು ಕಳದ ಘೋರ ಯುದ್ಧದ ... ಸಿನಲ್ಲಿ ಮಾಡಿದ ಸಹಾಸ ಕಾರ್ಯಗಳಿಗೆ ಇಂಡಿಯಾ ಸ ... ರವರ ದಯಪಾಲಿಸಿದ ಯುದ್ಧದ ಮೆಡಲನ್ನು ... ನವರು ಅವರಿಗೆ ಕೊಟ್ಟರೆಂದು ತಿಳಿದು ಸಂತೋಷಪಡುತ್ತೇವ.

... ಟೆರಿಟೋರಿಯಲ್ ಪಟಾಲಾಮಿನ ... ಹೊಸದಾಗಿ ಸೇರಿದ ಸಿಪಾಯಿಗ ... ವಾರ್ಚ 12 ರಿಂದ ಏಪ್ರಿಲ್ 8ರ ವ ... ಟ್ಟು ಪಟಾಲಾಮಿನ ವಾರ್ಷಿಕ ತಂಬೀತು ಏಪ್ರಿಲ್ 9 ... ವ ಮೇ 6ರ ವರೆಗೂ ಮಡಿಕೇರಿಯಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಮಾರ್ಚ ತಾ. 17ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಕೊಡಗು ಪಂಚಮರ ಕಾನ್ಫರೆನ್ಸೊಂದು ... ಯ ಕಾರಣಕರ್ತರಾದ ಸ್ವಾಮಿ ... ನಂದರವರ ಅಧ್ಯಕ್ಷತೆಯಲ್ಲಿ ಪಟ್ಟಣಗಾಲದಲ್ಲಿ ನಡೆಯ ... ಸೀಗಲ್ಲರೂ ಅಲ್ಲಿಗೆ ಸೇರಿ ... ಬೇಕೆಂದೂ ಪಟ್ಟಣಗಾಲದ ... ಯಾಗಿದೆ.

ಹಿಂದೂದೇಶ.

ಮೈಸೂರು ಮಹಾರಾಜರವರು ... ಸಂಪೂ ... ಗುಣಹೊಂದಿರುವರೆಂದು ತಿಳಿಯಬರುತ್ತದೆ.

ಮೈಸೂರು ಸಂಸ್ಥಾನದಲ್ಲಿ ಕೃಷಿ ... ಯಲ್ಲಿ ... ಎಕ್ರ ಕೊಡುವದೆಂದು ಅಲ್ಲಿಯ ಸರ್ಕಾರ ... ಮೊಡಿರುವರು.

ಇಲಾವಲ್ ... ಕಾನ್ಫರೆನ್ಸಿನಲ್ಲಿ ತೀರ್ಮಾನಿಸಲ್ಪಟ್ಟಿರುವ ... ಅಲೋಚಿಸುವ ಬಗ್ಗೆ ಅಲ್ ಇಂಡಿಯಾ ... ಈಗಿನ ... ಕೌನ್ಸಿಲಿನ ಮೀಟಿಂಗು ಈ ತಾ ... ಲ್ಲಿ ಡೆಲ್ಲಿಯಲ್ಲಿ ನಡೆಯುವದು.

ಮದ್ರಾಸು ಕೌನ್ಸಿಲಿನ ಬಜೆಟ್ಟು ಮೀಟಿಂಗು ... 28—2—28ರಲ್ಲಿ ಪ್ರಾರಂಭವಾಗಿದೆ. ಅಲ್ಲಿಯ 1928-29 ರ ಆದಾಯ ರೂ. 1697.33 ಲಕ್ಷ ಮತ್ತು ಖರ್ಚು ರೂ 1747.53 ಲಕ್ಷ. ಉತ್ಪತ್ತಿಗಿಂತ ಖರ್ಚು 50.20 ಲಕ್ಷ ಹೆಚ್ಚಾಗುವದೆಂದು ಅಂದಾಜು ಮಾಡಲಾಗಿದೆ.

ಓರಿಯಂಟಲ್ ಜೀವವಿಮೆ ಕಂಪೆನಿ 1926ರಲ್ಲಿ ರೂ 3,91,39,612 ... 1927 ರಲ್ಲಿ ರೂ 4 6 ... 21 402 ... ಅಂದರೆ 76 ... 4031 ... ಹೆಚ್ಚಾಗಿ ... ಕೊಂಪನಿಗೆ ...

... ಮಹಾರಾಜ ಸರ್ ಕೃಷ್ಣರಾಜ ... ಕಾಲೇಜು ... ತಾ 12ರ ... ಲ್ಲಿ ... ನಡೆಯಿತು.

... ಸೈಮನ್ ಕ ... ಪ್ರಾರಂಭದ ಕೌನ್ಸಿಲಿನಲ್ಲಿ ಸೈಮನ್ ಕ ... ಮಿಷನ್ ... [illegible]

... [illegible]

... ಕಮಿಷನ್ ... ಸ್ವಾಗತ ... ಹೇಳಿದ ... [illegible]

... [illegible] ... 9 ... 14 ... [illegible]

... ಕಾನ್ಫರೆನ್ಸ್ ... ಮದ್ರಾಸ ... [illegible]

... ಮದ್ರಾಸು ಕಾಂಗ್ರೆಸ್ ಪಾರ್ಟಿಯವರ ಸ್ವರಾಜ್ ... [illegible]

ವಿದೇಶ.

... ಚೀನಾ ದೇಶದಲ್ಲಿ ... 21 ... 214 ... [illegible]

... [illegible]

... 60 ... 8 ... 24ರ ... [illegible]

ನೋಟೀಸು.

ಮಡಿಕೇರಿ ... ಯಿಂದ —

ಸನ್ 1928ನೇ ಇಸವಿ ಏಪ್ರಿಲ್ ತಾರೀಕು 1ರಿಂದ ಸನ್ 1929ನೇ ಇಸವಿ ಮಾರ್ಚ ತಾರೀಕು 31ರವರೆಗೆ 1 ವರ್ಷ ... ಕೆಲಸಕ್ಕಾಗಿ ... 19... ನೇ ಮಾರ್ಚ ತಾರೀಕು 10ನೇ ... ಸಾಯಂಕಾಲ ... ಟೆಂಡರುಗಳನ್ನು ... ಕೊಡತಕ್ಕದ್ದು ... ನ್ನೂ ತಿಳಿಯತಕ್ಕದ್ದು.

ಯ.೦ ಭುಜಂಗರಾವ್.
ಪ್ರೆಸಿಡೆಂಟ್.

2—3—28

For Sale

About 30 acres of excellent paddy field and dry lands included in Palpare and Kanchikote Estates. For further particulars apply —

SUPERINTENDENT,
PALPARE ESTATE,
TITIMATTI POST
S. COORG.

5—4

ಪ್ರಕಟಣೆ.

... ಸಾರ್ವಜನಿಕ ... ಹಾಲಿ ... ಪ್ರದರ್ಶನ ಮತ್ತು ... ಪ್ರದರ್ಶನವನ್ನು ... ತಾರೀಕು 12ರಿಂದ ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿ ನಡೆಯಲಿಕ್ಕಿದ್ದ ಪ್ರದರ್ಶನಗಳನ್ನು ... ಕ್ಕೆ ನಿಲ್ಲಿಸಲ್ಪಟ್ಟಿರುತ್ತೆ. ಮುಂದಕ್ಕೆ ... ಪತ್ರಿಕೆಗಳ ಮುಖಾಂತರ ... ಪಡಿಸಲಾಗುವದು.

ಎ. ಬಿ ಕಾರ್ಯಪ್ಪ
ಗೌರವ ಕಾರ್ಯದರ್ಶಿ

WANTED!

Energetic students for music tuitions from the undersigned in I Harmonium, II Flute, III Veena, IV Vocal.

For detailed information apply to the undersigned K. R. Iyer of Trichinopally, Residing at Chamundi Extension, Door no 243?
Mysore City

ದಿ ಕ್ರೈಟ ... ಜನರಲ್ ಮಿ. ಚರ್ಚಿಲ್‌ರವರಿಗೆ ... ಯುತ ... ಹೊಸ ವರ್ಷದ ಸನ್ಮಾನ.

(... ಪತ್ರಿಕೆಯ ...)

... 'ಯಾವ ... ' ... [illegible] ... ಗ್ರಂಥವನ್ನು ... [illegible]

... ದೆಯಲ್ಲಿ ಕಂಡ ... ಹಿಂದೂಸ್ಥಾನ ... ರಾಷ್ಟ್ರ ... [illegible]

ನಮ್ಮ ದೇಶದ ... ವೈದ್ಯ ... ಸ್ತ್ರೀವೈದ್ಯರೆಲ್ಲರೂ (Women doctors) ... 1891ರಲ್ಲಿ ... 13 ... 7 ... 20 ಲಕ್ಷ ... 31½ ಕೋಟಿ ... [illegible]

... 192?ನೇ ಇಸವಿ ... ರಲ್ಲಿ ... ' Report of the ... mental Committee on sexual offences ... ' ... [illegible] ... ಹೋಲೀಸ್ ... ನ್ಯಾಯಸ್ಥಾನದಲ್ಲಿ ತೀರ್ಮಾನವಾದ ಸಂಗತಿಗಳು ... ಅವುಗಳನ್ನು ಕೆಳಗೆ ವಿವರಿಸಿದೆ.

ಅಪರಾಧ.	ಸಂಖ್ಯೆ 1910ರಿಂದ 1917.
ಅಸ್ವಾಭಾವಿಕ ಅಪರಾಧಗಳು Unnatural offences	67
ಅಸ್ವಾಭಾವಿಕ ಅಪರಾಧಗಳಿಗೆ ಮಾಡಿದ ಪ್ರಯತ್ನಗಳು	61
ಗಂಡಸರಲ್ಲಿ ಅತ್ಯಾಚಾರ Indecency with males	132
ಬಲಾತ್ಕಾರ (Rape)	165
ಹೆಂಗಸರ ಮೇಲೆ ಬಲಾತ್ಕಾರ Indecent assaults on females	1124
13 ವರ್ಷಗಳೊಳಗಿನ ಹುಡುಗಿಯರನ್ನು ಕೆಡಿಸಿದ್ದು Defilement of girls under 13	187
do. 16	214
Incest (ಅಯೋಗ್ಯ ಸಂಬಂಧ)	50
	1991

X X X X X X ಈ ಸಂಖ್ಯೆಗಳು ಗಣನೆಯಲ್ಲಿರಲಿ 13 ಮತ್ತು 16 ವಯಸ್ಸಿಗ ಒಳಪಟ್ಟ ಹುಡುಗಿಯರ ಮಾನಭಂಗ ಮಾಡಿದವರ ಸಂಖ್ಯೆಯು ಇದಕ್ಕಿಂತಲೂ ಎಷ್ಟೋ ಹೆಚ್ಚಿರಬೇಕೆಂದು ವರದಿಯಿಂದ ತಿಳಿಯ ಬರುತ್ತೆ. ಹೆಂಗಸರ ಮೇಲೆ ಬಲಾತ್ಕಾರ. ಮೊದಲಿನವರು ಸೊಸೆಯರನ್ನೂ ಅಪ್ಪಂದಿಯರು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನೂ ಭೋಗಿಸುವುದನ್ನು ನಿಲ್ಲಿಸಲು ಶಾಸನ ಮಾಡಬೇಕೆಂದು ಅನೇಕ ಸಾಕ್ಷಿಯರು ಸರಕಾರಕ್ಕೆ ಶಿಫಾರಸ್ಸು ಮಾಡಿದರಂತೆ

ಸದರಿ ವರದಿಯ ಅಂತ್ಯ ಭಾಗದಲ್ಲಿ 'ಹಿರಿಯರು ಕಿರಿಯರ ಮೇಲೆ ನಡೆಸುವ ಅತ್ಯಾಚಾರವನ್ನು ಕುರಿತ ಉದಾಹರಣೆಗಳು ಕೆಲವು ಮಾತ್ರ ಇವೆ' ಎಂದಿದೆ. ಆದರೆ ಈ ಕೆಲವು ಉದಾಹರಣೆಗಳು ನಮ್ಮ ದೇಶದ ಆಸ್ಪತ್ರೆ ಮತ್ತು ಕ್ರಿಮಿನಲ್ ಕೋರ್ಟುಗಳ ಅಧಿಕಾರಿಗಳನ್ನು ಗೃಹಕೊಂಡು ಸ್ವೇಚ್ಛಾನುಸಾರ ಹಲ್ಲುಬಿಡುತ್ತಿರುವ ಮಿಸ್. ಮೇಯೋ ಮತ್ತು ಮಿ. ಚರ್ಚಿಲ್ಲರುಗಳ ಕಪಾಲಗಳು ಕಳಚಿ ಹೋಗದಷ್ಟರ ಮಟ್ಟಿಗಾದರೂ ತಡೆಯದಾವೆಂದು ನಂಬೋಣ

ಯೂರೋಪ್ ಖಂಡದ ಸ್ತ್ರೀಪುರುಷ ಸಂಬಂಧ ಜ್ಞಾನದಲ್ಲಿ ಅದ್ವಿತೀಯರೆಂದೆಣಿಸಲ್ಪಡಬಹುದಾದ ಡಾಕ್ಟರ್ ಬ್ಲೋಚ್ ಎಂಬವರು 18ನೆ ಶತಮಾನದಲ್ಲಿ ಇಂಗ್ಲೆಂಡಿನವರು ಕನ್ಯಾಭೋಗ ಭ್ರಾಂತರಾಗಿ ಹೋಗಿದ್ದರೆಂತಲೂ, ಆ ಕಾರಣ ಆಗಿನ ಕಾಲದ ಹೆಣ್ಣುಮಕ್ಕಳಿಗೆ ತುಂಬಾ ಸಂಕಟಕರವಾಗಿತ್ತೆಂದೂ ಹೇಳಿರುವರು. ಪಶ್ಚಿಮದ ಅನೇಕ ದೇಶದವರು ಪರಂಗಿ ಮೇಹವೇ ಮುಂತಾದ ಸ್ತ್ರೀಸಮ್ಮಂಧ ರೋಗಗಳು ಚಿಕ್ಕ ಹುಡುಗಿಯರೊಡನೆ ಸಂಭೋಗಿಸುವುದರಿಂದ ನಿರ್ಮೂಲವಾಗುವವೆಂಬ ತಪ್ಪು ಅಭಿಪ್ರಾಯದವರಾಗಿದ್ದದ್ದು ಈ ಹೆಣ್ಣುಮಕ್ಕಳ ಹಾವಳಿಕೆಗ ತುಂಬಾ ಉತ್ತೇಜನ ಕೊಟ್ಟಿರಬೇಕು ಒಬ್ಬ ಹಳ್ಳಿಗನು ಪರಂಗಿಪೀಡಿತನಾಗಿ ರೋಗರಹಿತನಾಗಲು ತನ್ನ ಸ್ವಂತ ಮಗಳನ್ನೇ ಭೋಗಿಸಿ ಗುಣ ಹೊಂದಿದನಂತೆ! ಚಿಕ್ಕ ಮಕ್ಕಳು ಮೇಹವೇ ಮೊದಲಾದ ರೋಗಗಳಿಂದ ಪೀಡಿತರಾಗಲು ಈ ದುರಭಿಪ್ರಾಯವೇ ಬಹಳ ಮಟ್ಟಿಗೆ ಕಾರಣವೆಂದು ನಾನು ಇಲ್ಲಿ ಬರೆದಿರುವ ಬಹುಮಟ್ಟಿನ ವಿಷಯಗಳನ್ನೆಲ್ಲಾ ಬಳಕೊಂಡಿರುವ "The departmental committee on sexual offences" ಎಂಬ ಕಮಿಟಿಯವರೇ ತಮ್ಮ ವರದಿಯಲ್ಲಿ ಒಪ್ಪಿಕೊಂಡಿದ್ದಾರಲ್ಲದೆ ಆವಷ್ಟು ಜಾಗ್ರತೆ ಈ ನಿಂದನೀಯವಾದ ಅಭ್ಯಾಸದಿಂದ ತಮ್ಮ ದೇಶದವರೆಲ್ಲರೂ ಮುಕ್ತರಾಗಲೆಂದು ಹಾರೈಸಿರುವರು.

ದೈವಕಾನುಗ್ರಹದಿಂದ ಅವರ ಇಷ್ಟೆಯು ಜಾಗ್ರತೆಯಾಗಿ ನೆರವೇರಲಿ

(ಕೆ. ಸಿ. ಕರುಂಬಯ್ಯನವರಿಂದ ಬರೆದು ಬಂದದ್ದು.)

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗ್‌ಲ್ ಮಲೇರಿಯ ರೋಗಕ್ಕ್ ಕಾರಣ

ಕೊಡಗ್‌ಲ್ ಕಲವು ಕಾಲತ್ಂಜಿ ನಿಮೋನಿಯ (ಕೋವ) ಮಲೇರಿಯೂ (ಚಳಿಜ್ವರ) ಈ ತರತ್‌ರ ಕಾಯಿಲ ಜಾಸ್ತಿಯಾಯಿತ್ ಒಂದಾನಗುಂಡ್ ಕೂಡಗ್‌ಲ್ ಅನೇಕ ಜನತ್‌ರ ಪ್ರಾಣ ಕಳಂದದ್ ಬಪ್ಪದ್ ನಿಂಗಕ್ಕೆಲ್ಲ ಗೊತ್ತೇ ಉಂಡ್. ಇದ್‌ಂಗ್ ನಾವ ಮನಸ್ಸ್‌ಕ್ ಕಂಡ್ ಒಂದ ದಂಡ್ ಕಾರಣತ್‌ನ ಇದ್‌ಂಡ ಅರಿಕ್ ಎಳ್ದಿಯೆ.

ಕೊಡಗ್‌ಲ್ ಮೇಲೆ ಎಣ್ಣನ ಕಾಯಿಲ ಜಾಸ್ತಿಯೂ ಪನೇ ಪಂದನಂಡ್. ಪಂದಿರ ಎರಚಿನ್ ಪೆಕ್ ನೆಯ್ಯಿ ಉಳ್ಳನಗುಂಡ್ ಅದ್‌ನ ತಿಂಬಂಕ ಜನಕ್ಕ್ ನಕ ಆ ನಯ್ಯಿ ಮಣ್‌ನ್ಯಂಡ ಕರುರ ಬಳ್‌ತ್ ಸೇರಿತ್ ಅದ್ ನೇರಸ್ಸಾಯಿತ್ ಅರಗಿಸ ಆಕೆ ಅಲ್ಲಿಯೇ ನಿಪ್ಪಾನಗುಂಡ್ ಆ ಪಂದಿರ ನೆಯ್ಯಿರ ಪಲ್ ಅನೇಕ ತರತ್‌ರ ಕಾಯಿಲ ಪುಟ್ಟುವಾಂಗ್ ಅನುಮಾನ ಇಲ್ಲೆ. ಕೊಡಗ್‌ಲ್ ಮಂಗ್‌ಲ ಮುಂಚಿ ಜಾಸ್ತಿ ನಿಪ್ಪೋ, ಮೇ ತಿಂಗತ್ಲ್ ಅರಪ್, ಅಕ್ಕ ಈ ಪಂದಿರ ಎರಚ್ಚಿನ ತಿಂದಾಂಗ ಗುಣ ಜೂನ್, ಜುಲೈ ತಿಂಗತ್ಲ್ ಅರಿಯುವ. ಈ ತಿಂಗತ್ಲ್ ನಿಮೋನಿಯ, ಮಲೇರಿಯೂ ಈ ತರತ್‌ರ ಕಾಯಿಲತ್ ಉಳ್ಳವು ಜಾಸ್ತಿಯಾಯಿತ್ ಅಪ್ಪತ್ತ್‌ಕೂ ಅದ್ ನಿನ್ನೆ ಸಮಯತ್‌ಲ್ ಅಪ್ಪಕ್ಕ್ ಬಾಗೇ ಇಲ್ಲತ್ತೆ ಆಳ್ ಪ್ಪೊಳ.

ಅದಕ್ ಅಲ್ಲತೆ ಪಂದಿ ಚಾಕುನಯಿಂಜ ಮನೆರ ಒಂಚಿನ ದಾರಕ್ ಎಣ್ಣಂರ ದ ನೀರ ಪ್ರಾಣಿಯನ ಪಂದಿ ಪಟ್ಟಿ [illegible] ಬಳ್‌ತ್ [illegible] ಮನೆರ ಸುತ್ತು ಮುತ್ತ [illegible] ಕೊಳ ಕುಂದಿ ಮಳಿಯುಂಡ್ ಅಲ್ಲಿ [illegible] ಇಪ್ಪನಗುಂಡ್ ಚೇರಿ ತಟಲತ್ [illegible] ಮನೆರ [illegible] ಅದ್ ಪ್ಪ ವಳೇ [illegible] ಈ ವಿಚಾರ ಕೇಳತುಂಡ ಎಲ್ಲಾ ವಿಚಾರ [illegible] ನಾನ್ ಎಣ್ಣ ಮನ ಬ್‌ಡ್ [illegible]

ಪಂದಿಯ [illegible] ನೆರ್‌ ಪೂರ್ವ ಕಾಲತ್ತಿಂಜೇ ನಾಡ ಅಪ್ಪ, ಅಜ್ಜಂಗಡ ಕಾಲತ್ಲೇ ತಿಂಬ ಇಂಜತ್, ಅತ್ತ ಅವ್ರ ಎಲ್ಲ [illegible], ನಮ್ಮತ್ತ್‌ಲೂ ಇಪ್ಪಂಜತ್. ಇದಾಂಗ್ [illegible] ಎನ್ನಂದ್ ಕೇಳಕ್ಕು ವಡಿ.

ಅದಾಂಗ್ ನಾಮ್ಮ ಎನ್ನಂದ್ ಎಣ್ಣಬೇಂಗಿ ಪಂದಿ ನೆರ್‌ರ ನೆಯ್ಯ ನಮಗಡ ಕೆಲತ್ಲ್ ಅಗ್‌ಣೆ ಆವುವೇಂಗಿ ಬಾಯೋಡೆ ನಾಗ್ ತರ್ದ್ಯಂಡ, ಇಲ್ಲತೆ ಪ್ರೋಚೆಂಗಿ ಕಳ್ಳ ಕುಡಿಕಂಡ. ಕೊಡಗ್‌ಲ್ ಜನ ಆಯಿಂಡ ಮನಸ್ಸೋ ಇಷ್ಟ ಪ್ರಕಾರ ಪ್ರಾಯತ್ಲ್ ಕಳ್ಳ, ಕಾಪಿ ಮುಂಡಾ?, ಕಂಜಿ ಮಾಡಿಯುಂಡೂ ಕುಡಿನಾಂಜನಗುಂಡ್ ಪಂದಿಯುಚಿರ ನೆಯ್ಯಿನ ಅರ್ಗಣೆ ಮಾಡುವ ಶಕ್ತಿ ಆ ತಳ್ಳತ್ ಇಂಜಿಲ್ಲತೆ, ಎರೆರಕ್ ತಂಪಾಯಿತ್, ಪೆರ್ ಆಯಿಅಕ್ ನಲ್ಲ ಮರ್ದಾಯಿತಿ ಇಂಜತ್. ಅಕ್ಕಾಚೇಂಗಿ ಎನೆಲ್ಲಾ ತರತ್‌ರ ಮನತ್ತ್‌ರ ಅಟ್ಟಿಲ್ ಮೂವಾನ ಎಷ್ಟಕ್ಕೋ ತರತ್‌ರ ಕಾಯಿಲತ್, ತಿಂದು ನಯೂಯಿತ ಚಿಲ್ಲ ನಾಗರಾಯಂದ್ ಎಣ್ಣುವ ಕಳ್ಳನ ತಾಂಡ ನಂನಾರಕ್ಕ್ ಮಾಚನೆ ಮಾಡಿತ್ ದುಡ್ಡ್ ಕೊಡ್‌ತಿತ್ ಕುಡಿಚಿತ್, ಕಾಯಿಲ ಬೋಂಡೆಂಡ್ ಕೊಂಡ್ ಬಪ್ಪ. "ಪೈಸ ಕೊಡ್‌ತ್‌ಟ್ಟ್ ಪಿರಾಂದ್ ಮಂಬ್" ಎಂಡ್ ಎಣ್ಣುವ ಮಲೆಯಾಳ ತರ್ಕ್ಕದ ಪ್ರಕಾರ ಈ ಕಳ್ಳ ಕುಡಿಪತ್ ದೇಶೇ ಪಾಳಾಯಿ ಪ್ರೋಚಿ ಇದೂ ಅಲ್ಲತೆ ನಂಗಡ ಅಪ್ಪ ಅಜ್ಜಪ್ಪಂಗಡ ಕಾಲತ್ಲ್ ಪ್ರಾಣಾಪಾಯಿಟ್ಟಂಜಿ ಬೈಟಾಕಣಕ್ಕ ಗುದ್ದಲಿ ಎದ್‌ತಂದ್ ಪಣಿ ಕಯ್ಯಿಪಾಂಜತ್ ಇಕ್ಕಲೇ ಗದ್ದಲಿಂದೆಣ್ಣವದ್ ಒಬ್ಬರೋ ಕೈಲೂ ಕಾಂಬದೇ ಅದರ [illegible] ಕಡ್ ಕ್ಕ್ ನರ ಆಳಾಂಡ್. ಇಕ್ಕ ಎಲ್ಲರ ಚಾಯಿಲ, ನಾನ್ [illegible] ಪಣಿ ಕಜ್ಜತೇಂಗಿ ಮ ರ್ಯಾಡಕ್ ಅಪ್ಪಿಂದೆಣ್ಣುವ ಒಬ್ಬಂಕ ಪೆಕ್ ಬೋರಾಯಿ, ಪ್ರೋನಾಗುಂಡೂ, ಶರೀರ ಚಾರ್ಯೆನೆಡೆ ಇಲ್ಲತೆ ಪ್ರತಿಯಬ್ಬಂಡ ವ ಊರ್‌ಲ್ ಚೋಲಿ ಇಲ್ಲತೆಯೂ ಅಪ್ಪಕ್ಕ್ ಕಾರಣೇ ಮೇಲ್ ಎಣ್ಣನ ಕಾಯಿಲತ್ತ್‌ರ ಪೇತೂ.

ದೇಶತ್‌ರ ಅಭಿವೃದ್ಧಿಕೂ, ಶರೀರ ಶಕ್ತಿಕೂ ಅತ್ಯ ಕಡಮೆಯಳೇ ಮುಖ್ಯ ಕಾರಣ ಆಯಿಂಗ್ ನಂಗಡ ನೆಲ್ಲ್‌ಲ್ ಆಪ ತೌಡ್, ಕಳ್ಳರ ಕಂಜಿ ಇದ್‌ನ್ನೆಲ್ಲಾ ಕೊಡ್‌ತಿತ್ ಅಮೇನ ಪುಷ್ಟಿಯಾಯಿತ್ ಚಾಕಿಯುಂಡಕ್ಕೇಂಗಿ, ನಂಗಡ ಕಂಬ್‌ಯಂಕ್ ಪಾಲೂ ಅಚಿ, ನಂಗಕ್ ಮೋರೂ, ನಯ್ಯೂ ಅಚಿ. ಇದ್‌ನ್ನೆಲ್ಲಾ ನಂಗ ಚಾಯೋಡೆ ತಿಂದಾಡ ಚಾತೇಂಗಿ ನಂಗಡ ಶರೀರ ಚಾಯೋಡೆ ಇಕ್ಕು. ಅಡಕ್ಕದ್‌ನ ಬಟ್ಟಿತ್ ಕಂಜಿ ತೌಡ್ ನೆಲ್ಲಾ ಈ ನೀಜ ಪ್ರಾಣಿಯನ ಪಂದಿಕ್ ಕೊಡ್‌ತಿತ್, ಅದರ ಎಚಿನ ತಿಂದಿತ ಕಾಯಿಲ ಕ್‌ಟ್ಟವದ್ದಿ ಮಕ್ಕಕ್ಕ್, ನಂಗಕ್ಕ್, ಪಾಲ್ ಮೋರ್, ನಯ್ಯ ಇಲ್ಲತೆ ನಂಗಡ ತಡಿ ನಾಳಾಯಿತ್ ಓರ್ ಕೆಲ್ಸಕ್ಕ್ ಪ್ರಯೋಜನ ಅವ್‌ಲೆ. ಕೂಡಿರ್ ಎಣ್ಣನ ಕಂಜಿ ತೌಡೆಲ್ಲ ಆ ಮಾಳ್ ಪಂದಿಕ್ಕಾನಗುಂಡ್ ಅತ್ತ ಕಪ್ಪಚಿ ಯತ್ಕ್ ಇಕ್ಕ ದಾರೂ ಮೋಹಿಚಿರತೆ ಉಳ್ಳಬಣಂಗ್‌ನ ಪಲ್ಲೇ ಅಲ್ಲತ ಬೋರೆ ಒಂದೂ ಗತಿ ಇಲ್ಲೆ. ಅದಲ್ಲತೆ ಇಕ್ಕತ ಕುಂಞಯಕ್ಕ್ ಮೊಳೆ ಪಾಲೇ ಗತಿ ಬಂಞ ಚೆನ್ನಂಗ್ ಕಾಲತ್‌ಲ್ ಅದ್‌ಂಗೂ ಗತಿ ಇಲ್ಲತ್ತಾಯಿ ಪ್ರೋಕ ಎನ್ನತಾಂ ಗ್‌ಂದೆಣ್ಣಚೇಂಗಿ, ಇಕ್ಕತ್ತ ಪೊಣ್ಣಾಳ ಕಾಯಿಲ್ ಮೊಳೆನೆಲ್ಲ ಬಚ್ಚ್‌ಲ್ ಕಟ್ಟಿತ್, ಎನೆಕ್ಕ ನಮನಯಿ ತಾ ಮೂಡು ವಾನ್‌ಗುಂಡ್ ಅದಾಂಡ ಚೇರೆಲ್ಲ ಅಲ್ಲೇಯೇ ಚಾನ. ಇನ್ನನೆ ಕಟ್ಟಿಯಂದ್ ಚಾತೇಂಗಿ ಮೊಳಿರ್ ಪಾಲ್ ಎನ್ನನೆ ಮಕ್ಕಕ್ ಕ್‌ಟ್ಟಿತ್ ಅವು ಬಾಯೋಡೆ ಬೊಳಿಯುವ? ಪೂರ್ವತ್ಲ್ ನಂಗಡ ಅಪ್ಪ ಅಜ್ಜಪ್ಪಂಗಡ ಕಾಲತ್ಲ್ ಮೊಳೆ ಒಬ್ಬ ಪೊಣ್ಣ್, ಬಿಡಿನ ಒಬ್ಬ ಆಣೂಂದೆಣ್ಣುವ ಪಳಮೆ ಇಂಜತ್. ಅದ್‌ನಲ್ಲ ಇಕ್ಕತ ಆಣ, ಪೊಣ್ಣ್ ಬರಿಲ್ ಇಟ್ಟಿತ್ ಪ್ರೋಕಾಂಕ್ ನಲು ಮಣಿ ನಾನಗುಂಡೇ ನಂಗಡ ದೇಶ [illegible] ಕ್ ಒಂದರಾಚಿ ಮೊಳೆನ ಬಿಲ್ ಅಲ್ ಕೆಲ್ಲ ಅಭ್ಯಾಸ ಇಕ್ಕತ್ರ ಕಾಸ್ಸಿಂಟ್ ವಿದ್ಯಾತ್‌ನಗುಂಡೇ ಉಂಟಾಚೇಂದ್ ದ್ಯಕ್ಷತ್ಲ್ ಎಣ್ಣುವಾಂಗ್ ಅದ ಪ್ರೋನಿಯೂ ಇಲ್ಲೆ. ಇನ್ನತ್ರ ಪಾಪಕೃತ್ಯತ್‌ರ ಕೆಲಸತ್ತ್‌ನ ಬಿಡಿಬಾಯಿತೂ ನಿಪ್ಪಿಚಿಟ್ಟಕ್ಕೇಂಗಿ ಮಿಂಞಕ್ ಮಕ್ಕಡ ಬಾಳ್‌ಕ್ ಅನುಕೂಲ ಅವಾಂ ವ್ ಎನ್ನುವಾಂಗ್ ಒರೂ ಸಂಶಯವಿಲ್ಲೆ. ಇನ್ನನೆ ಮಾಡಿಯಂಡ್ ಬಪ್ಪನಗುಂಡೇ ದಿನಕಾಳ್‌ರ ನಂಡಳ್ ಮಂಡ ತುಂಬ್ ಒದ್‌ಲ್ ಕುಕ್ಕೆಯ, ಪೊಡ್ಯಾಳ್‌ರ ಎದ್‌ಲ್ ಮಾರ ಒದ್‌ಲ್ ಮಾಯಿಯೂ ಆಯಿ ಪ್ರೋಚಿ

ಮಕ್ಕಳ ಚಾಕುವನ್ನಕ್ಕ್ ಈ ಪಂದಿನ ಚಾಕಿತ್ ಇದ್‌ನ ತಾಂಡ ಮ ಕ್ಕಡ ಮಂಗಲ ಮಂಜಿಕ್ ಅದ್‌ನ ಕೊಂದಿತ್ ತಿಂಬಂಜಿ ಆಡ ಜೇನತ್‌ನ ಕೈಲಾಸಕ್ಕ್ ಆಯಿಪ. ಇದ್ ಏದ್ ತರತ್‌ರ ಹಿಂದೂಧರ್ಮ? ಮಂಗಳಾಂದ್ ಎಣ್ಣುವ ಶುಭಕಾರ್ಯ ಇಂಥ ಹೀನಕಾರ್ಯತ್‌ಲ್ ಆ ನೀಚಪ್ರಾಣಿನ ಕೊಂದಿತ್, ಅದ್‌ಂಡ ಯರಚ್ಚಿನ ಕರಿಚಿತ್ತಿತ್ ಕೊಳ್ ಕೊಡ್ತ ಆರ ಧರ್ಮಾರ್ಥನ ಎನ್ನಂಗಾಯಿತ್ ಹೊಡುವದ್, [illegible] ನ ಉಪಯೋಗಿಚಿಪಾನಗಂಡ್ ಮಂಗ್‌ಲ ಕಾಗದ [illegible] ಶುಭಕಾರ್ಯಂದ್ ಎಣ್ಣುವಾನ ಅಶುಭಕಾರ್ಯಂದ್ [illegible] ಗ್ ಎಣ್ಣನಕ್ಕಾಗ?

ಜೇನಜಂತುರ ಸ್ಥಿತಿ ಅತ್ತಿಯಪ, ಪಂದಿರ [illegible] ನಾಳ್ ಪಾರ್ ಇಂದ್ ಪಳಂಚಿನ್ನ ಉಂಟ. ಇನ್ನನೆ [illegible] ಪಂಡ ಯರಚ್ಚಿ ಬಪ್ಪಾಂಡ ನಂಗಡ ಊಟಕ್ಕ್ ಚೆ [illegible] ನಾನದ್ದಲ್ಲ ಅಂಗುಂಡ್ ಜ್ಞಾನವಂತರಗಳು [illegible] ಮನನೀಯಂಗ ಇಂಗ್ ಎಣ್ಣಕ್ಕಾಚೇಂಗಿಯು [illegible] ಪ್ರಾಣಿನ ಚಾಕತ್ತನ್ನಕ್ಕ ಮಾಡಿತ್, ಶುಭಕಾರ್ಯತ್‌ಲ್ [illegible] ಯರಚ್ಚಿನ ಉಪಯೋಗತ್ತನ್ನಕ್ಕ ಪಾಡಿತ್ ನಂಗಡ [illegible] ಕತ್‌ರ ಮಂಗ್‌ರ್‌ನ ಬಂಕ ಮಾಡಂಡರಂಡ್ ನಾನ್ [illegible] ಯಂಗ್ ಅಲ್ಲತೆ ಇದ್‌ನ ತಿಂಬಾನ ಬಂದ್ ಅನೇಕ [illegible] ನಂಗಳ ಮೇಯಳಚಿರುವ ಅತ್ಯಂತ ಅಪಮರ್ಯಾದೆ [illegible] ಕತ್‌ರ ಮಂಡಾಳ್ ಅಪ್ಪ ಮನಸ್ಸತ್ ಎದ್‌ಕಂಡ್ ಅದ [illegible] ನ ಪನ್ನ ನೂರಿತ್ ಕೊಡನ ಇತರ ಹಿಂದೂ ಮನುಷ್ಯರ [illegible] ಎದ್‌ತಿತ್ ನಡೆನಿಸಿರ ಇಂಗ್ ಆಚೇಂ [illegible] ಮಾಡಂಡಂ ನಾನ್ ಬೇಡುವ.

ಕೊಡವ

ಅಕಾಲ ಮಳೆಯಿಂದುಂಟಾದ ಕಷ್ಟ.

ಅಯ್ಯಾ,

ಕಿಗ್ಗಟ್ಟುನಾಡಿನ ಕಲವು ರೈತರ ಗೋಳನ್ನು ಪತ್ರಿಕೆಯಲ್ಲಿ ಸಾರಿರುವೆನು ಅವರಲ್ಲಿ ಅನೇಕ ಭತ್ತವನ್ನು ಮಾರ್ಚಿ ತಿಂಗಳು ಕಂದಾಯ ಕಿಸ್ತನ್ನು ಮಾಚಿ, ಏಪ್ರಿಲ್ ತಿಂಗಳಿಗೆ ಮಗಾಯಿ ಮಾಡಿಕೊಂಡು, ಪ್ರಾಸೆಸ್ ವಿಧಿಸುವದೆಂದು ಮಾತ್ರ ಕೇಳಿರುತ್ತಾರೆ. ಅದು ಆಗಾದರೋ ಸರ್ಕಾರ ಉಪೇಕ್ಷೆ ಇದೆ. ಕಂದಾಯಕ್ಕೂ ಅವರ ಊಟಕ್ಕೂ ಅನುಮಾನಿಸು ಕಾಣುತ್ತೆ. ನಾಲ್ಕು ನಾಡಿನ ರೈತರಿಗಾದರೋ ಜಾಸ್ತಿ ತನ್ನ ಮೊದಲ ಗದ್ದೆಗಳು ಹಸಿರು ಮಳೆ ಗದ್ದೆಗಳಿಗೆ ಕೊಡೆ ಹಿಡಿಯುವ ಕಾಲದಲ್ಲಿ ಮಳೆ ಇಲ್ಲದೆ ಪೂರಾ ಒಣ ಹೋಯಿತು. ನೀರಾವರಿ ಗದ್ದೆ [illegible] ಕುರುಳು ಕಾಳು ಕೆಲಸ ಮಾಡಿದರೂ ಕೂಡ ಗದ್ದೆಯಲ್ಲಿ ಬಿತ್ತಿದಕ್ಕೂ, ಮಡಿ ಬಿಟ್ಟದಕ್ಕೂ [illegible] ದಿನ ಸದಾ ಹಗಲು, ರಾತ್ರಿಯು ಮಳೆ ಮಾಡದ ಹಾನಿ ಒಂದೆರಡಲ್ಲ [illegible] ಒಡೆದು ಹೋಗಿ ಮಣ್ಣು ಒತ್ತಿ ಬತ್ತ ವಶವೂ [illegible] ಹುಲ್ಲೂ ಇಲ್ಲದಂತೆ ಹಾಳಾಗಿ ಹೋಗಿವೆ, ಇದರಿಂದ ನಷ್ಟ ಹೊಂದಿರುವ ರೈತರು ಒಟ್ಟಿನಿಂದ ಅರ್ಜಿ ಯೊಡನೆ ದೂರು ಹೂಡಿದರೆ, ಯಾವ ಪರಿಹಾರ ಮಾಡಲ್ಪಡುವುದೆಂದು ತಿಳಿದುಕೊಳ್ಳಲು ಸರಕಾರವು ಸಾಹುಕಾರಲ್ಲಿ ದಯೆಯಿಟ್ಟು [illegible] ಕಲ್ಲರ, ಗುಂಡಪ್ಪ ಕಾಡಿ ಹೊಲಸಪ್ಪ ಮೊದಲಾದ [illegible] ರೈತರು ಮಳೆಯಿಂದ ಕೊಚ್ಚಿ ಹೋದ ರೈತರು ಪ್ರಾಣ ನರಳುತ್ತಿರುವರು. ಈಗ ಅವರಿಗೆ ಕಂದಾಯ ಮನ್ನಾ ಮಾಡುವುದಕ್ಕೆ ಹೆಚ್ಚು ವಿಚಾರಿಸಬೇಕಾಗಿದೆ. ಸರಕಾರದ ಉತ್ಪತ್ತಿ ಇವೆಯೋ ಎಂದು ನೋಡಲು ಬಹಳ ಅವಸರದಿಂದ ಕರೆದಿದ್ದಾರಂತೆ ರೈತರ ಗೋಳನ್ನು ನೋಡಲು ಒಬ್ಬ ಸರದಾರರೂ ಇಲ್ಲವೇ? ರೈತರ ಕಷ್ಟ ನೀಗಿಸಿ ಕಂದಾಯ ಮಾಫಿ ಮಾಡುವ ಸರಕಾರದ ಸಮ್ಮತಿ ಪತ್ರಿಕೆಯಲ್ಲಿ ಪ್ರಕಟವಾಗಲು ಹೇಳಲಾಗದೋ?

ಉದಯಂಡ ಸೋಮಯ್ಯ

ರಸೀತಿ ಪುಸ್ತಕಕ್ಕೆ ಗಜ್ಜಲಿನ ಬಾಧೆ.

ಮಹಾಶಯರೇ,

ಈಗ ಎರಡು ಮೂರು ವರ್ಷಗಳಿಂದ ಜಮೀನುದಾರರ ಸಂಘದ ರಸೀತಿ ಪುಸ್ತಕಗಳು ಹಾಳಾಗುವದು ಮತ್ತು ಗಜ್ಜಲುಗಳ ಹಾವಳಿಗೆ ತುತ್ತಾಗುವದು ಜೋರಾಗಿದೆ. ಇತರರು ಕೆಲವು ರಸೀತಿ ಪುಸ್ತಕಗಳನ್ನು ಬಂದೆರಡು ವರ್ಷಗಳ ತನಕ ಇಟ್ಟುಕೊಂಡು ಕಡೆಗೆ ತನ್ನ ಆಸಾಮಿಗಳ ಜೊತೆಯಲ್ಲಿ ಇಟ್ಟದ್ದು ಗಜ್ಜಲು ತಿಂದು ಹೋಯಿತು, ಅದರ ಬಾಬು ಚಿಲ್ಲರೆಯೂ ಉಳಿಕೆ ಇಲ್ಲವೆಂದು ನಂಘಕ್ಕೆ ತಿಳಿಸುವುದು ತುಂಬಾ ವ್ಯಸನದ ಸಂಗತಿ.

ಇದೆಲ್ಲಾ ನೋಡಿದರೆ ಅವರುಗಳ ಉದಾಸೀನತೆಯನ್ನು ತೋರಿಸುವುದಲ್ಲದೆ ನಂಘಕ್ಕೂ ಅಗೌರವವನ್ನು ತಂದುಕೊಡುವುದು. ಸಂಘದ ರಸೀತಿ ಪುಸ್ತಕವನ್ನು ಗಜ್ಜಲು ತಿನ್ನುವುದೆಂದರೆ ಸಂಘದ ವಿಷಯದಲ್ಲಿ ಅವರು ಎಷ್ಟರ ಮಟ್ಟಿಗೆ ಅಲಕ್ಷ್ಯದಿಂದ ವರ್ತಿಸಿದರೆಂದು ತೋರ್ಪಡಿಸುವುದಲ್ಲವೆ? ರಸೀತಿ ಪುಸ್ತಕಗಳನ್ನು ಗಜ್ಜಲು ತಿಂದು ಹೋಯಿತು ಎಂಬ ಈ ಸಂಗತಿಯನ್ನು ಪತ್ರಿಕೆಯಲ್ಲಿ ಓದುವಾಗ ನಮಗೆ ನಾಚಿಕೆಯಾಗುತ್ತದೆ. ಇನ್ನಾದರೂ ಪುಣ್ಯಾತ್ಮರು ಇಂಥ ಸಂಗತಿಯನ್ನು ತಿಳಿಸಲು ಹಿಂಜರಿಯಲಿ ಸಂಘದ ರಸೀತಿ ಪುಸ್ತಕಗಳಿಗೆ ಗಜ್ಜಲು ತಿನ್ನುವದನ್ನು ನೋಡಿ ನಮ್ಮ ಉದಾಸೀನತೆಗೆ ನಿರಿ ಪ್ರಾಯಶ್ಚಿತವನ್ನು ಯಾರು ಮಾಡುತ್ತಾರಲ್ಲವೇ?

ಅದು ಹಿರಿ—ಗಜ್ಜಲುಗಳ ಹಾವಳಿಯನ್ನು ಬಲ್ಲವನೇ ಬಲ್ಲ. ಹೀಗಿರೋ ಇದನ್ನೆಲ್ಲಾ ಸೋಘದವರು ಮಾಫಿಯನ್ನು ಕೊಡುತ್ತಾ ಬಾದರೆ ಗಜ್ಜಲುಗಳ ಮತ್ತು ಸಾಲಕಾರರ ಪ್ಪ

[illegible] ಬೋರಾಗುವುದು ಅದ್ದರಿಂದ ಸಂಪದ [illegible] ಹಾಗೆ ವೃದ್ಧಿಗೆ ತಕ್ಕ [illegible] ಉದಯವನ್ನು [illegible]

ಎ ಎಸ್ ಚಂಗಪ್ಪ

ದುಂದುಗಾರಿಕೆಯ ವ್ಯಯ

[illegible]ದರುಗಳೇ,

ನಮ್ಮ ಉತ್ಪತ್ತಿಯು ಬಹಳ ಕಡಿಮೆ [illegible] ಕೂಲಿಗಾರರ ಸಂಬಳ [illegible] ನಾವು ದುಂದುಗಾರಿಕೆಯ [illegible] ಗ್ರಾಮದ ಅಧಿಕಾರಿಯವ್ನ [illegible] ಗ್ರಾಮದ ಅಧಿಕಾರಿಯ್ನ್ನ ಊರಿನ [illegible]

[illegible] ಗ್ರಾಮದ [illegible] ದುಂದುಗಾರಿಕೆಯು [illegible]

[illegible] ದೊರೆವುದು? ನಾವು ದಾ [illegible]

ನಾವು [illegible] ಸಂಪಾದಿಸುವ [illegible] ನಾಗರೀಕರು [illegible] ದೇಶವು ಅಭಿವೃದ್ಧಿಯಾಗುವದು. ಸಾಧ್ಯವಿಲ್ಲವೆ?

ಕ ಚಂಗಪ್ಪ

Arms, Ammunition and Shooting Requisites !!!



1928 Illustrated Catalogue Just Issued Free on Application !

D B B L Rifles	Rs	120	to	Rs	2750
S B B L		30	to		950
D B B L Guns		50	to		1350
S B B L „		35	to		275
D B M L „	,	45	to		135
S B M L „	„	30	to	„	80
B L Revolvers	„	30	to	,	350
Automatic Pistols	„	30	to	,	150

Brilliant Search Light Lamp For Shooting Camping, Fishing and All such Other Night Sports and work Rs 30 Free delivery

Also swords Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

210 Abdul Rehman Street, BOMBAY.

24–20

National Swords and Silver Belts (Thodanga) For "Scotland of India."

ಸಂಪ್ರದಾಯಕವಾಗಿ [illegible] ಒಡಿಗೆ [illegible]

ನೊಂಟದಲ್ಲು ಒಂದು ಬೆಳ್ಳಿಯ ತೊಡಂಗ [illegible] ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! [illegible]

Commercial Store,
Murnad, Coorg

12–0

[illegible] ಬಿ ಬಿ ಯಲ್. ಕೋವಿಗಳು ರೂ 75 ರಿಂದ ರೂ 400, [illegible] ಕೋವಿಗಳು ರೂ 35 ರಿಂದ ರೂ 250/ [illegible] ರೂ 40/ರಿಂದ ರೂ. 125/ರ ವರೆಗೆ [illegible]

60 ವರ್ಷಗಳಿಂದ [illegible]

ಯನ್. ವಿ. ರಾಮಾನುಜಂ ಚೆಟ್ಟಿ
ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ಫಿರಿಯ ಕಂಪೆನಿ.

24–12 12, ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

102/ನೇ [illegible] 28[illegible] [illegible] ವರ್ಷಗಳ ಕೆಲಸದ

ಚಿಲಿಕಟ್ಟದಲ್ಲಿ

ರೂ 37,66,669.

[illegible]

ಒಟ್ಟಿ ಜೀವವಿಮೆಯ 1000 ರೂಪಾಯಿಗಳಿಗೆ [illegible] 15 ರೂಪಾಯಿ [illegible]

ನ್ಯಾಯ ನಿರವಿನ ವಿಮೆಯ 1000 ರೂಪಾಯಿ ಗಳಿಗೆ 12 ರೂಪಾಯಿ [illegible]

[illegible]

ವಿಳಾಸ
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ, ಬೊಂಬಾಯಿ.

24–8

ಬ್ರಾಂಚ್ ಆಫೀಸು
ಕಮರ್ಶಿಯಲ್ ಬೀದಿ
ಬೆಂಗಳೂರು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ [illegible] ಸ್ಟೇಟ್‌ಮೆಂಟ್ [illegible]

ಶೇರ್ ಬಂಡವಾಳ [illegible]
ವಸೂಲಾದ ಶೇರ್ ಮೊಬಲಗು [illegible]
ಜಮೂಬಂದ ಶೇರುದಾರರು —— 1 [illegible] 14

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ [illegible] ಸಾಲಕೊಡತಕ್ಕದ್ದು.

[illegible] ವರ್ಷ ಮಾಮೂಲಿ ಆಡವ ಠೇವಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. [illegible] ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪೦ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್. — ಟ್ರೆಜರರ್. ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.
ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಮ. ಪೇಠಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮ. ಪೇಠಿಯಂಡ ಪೂವಯ್ಯನವರನ್ನೂ ಮತ್ತು ಮ. ಕಾಳೇಂಗಡ ಚಿಣ್ಣಪ್ಪನವರನ್ನೂ ನಮ್ಮ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ, ಮ. ಪಾರುವಂಗಡ ಅಚ್ಚಯ್ಯನವರು.
ನಾಪೋಕ್ಲು—ಮ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮ. ಚಮ್ಮಡ ಮಾದಪ್ಪನವರು,
ಅಮ್ಮತ್ತಿ ಸಿದ್ದಾಪುರ—ಮ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮ. ಸಿ. ಜಿ. ಮುದ್ದಯ್ಯನವರು,
ಕುದಿಕೇರಿ & ತಿತಿಮತ್ತಿ—ಮ. ಬಿ. ಮಾದಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಒವರಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವೀರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY, 3

Telegraphic Address:-"SHOOTER" Bombay.

(12-25) 'Please write for our Catalogue 1928-1929.

[illegible] ಮಾತ್ರೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ [illegible] ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳ [illegible] 1-[illegible], 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14.

ಚಂದನ ಸಾರ:—ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ [illegible] ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ [illegible] ಸೊಪ್ಪಾಗಿ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, [illegible] ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ [illegible] ವಿಲ್ಲದಿರುವುದು ಮೈಯಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, [illegible] ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3 6ಕ್ಕೆ ರೂ [illegible] 0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ [illegible] ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿ [illegible] 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುಣ್ಣು, [illegible] ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರ[illegible] ನೆನಪು ಶಕ್ತಿ [illegible] ಇವುಗಳೆಲ್ಲ ಒಂದೇ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು [illegible] ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ [illegible] ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0- ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ [illegible]

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ.—ಮನೋಲ್ಲಾಸಿನಿ ಕಂಪೆನಿ, ೧. ಮಂಗಳೂರು

52—21

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickpet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—39

ನ ರ ಕಾ ರ ದ ಭ ರ ವ ಸ ಪು ಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924 ರೂ. 2,37,34,000	} ಜಾಸ್ತಿ ರೂ. 59,08,000.
	1925 ರೂ 2,96,42,000	
	1926 ರೂ. 3,91,39,000	} ಜಾಸ್ತಿ ರೂ 94,97,000.

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ. 7,38,80,000ಗೆ ಹೆಚ್ಚಿರುತ್ತದೆ.
ಪ್ರೀಮಿಯಂ ವರಮಾನವು ವರ್ಷಕ್ಕೆ ರೂ 1,05,30,000ಗೆ ಏರಿರುತ್ತದೆ

"ಓರಿಯಂಟಲ್‌ನ ಸುಸದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್, ಎಫ್. ಎಸ್. ಎ., ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶಮಾಡದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. — ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

52—46

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪ್ರಾವಿಡೆಂಟ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಎಲ್ಲಾ ಈ ದೇಶಸ್ಥರಿಗೆ ಕೊಡತಕ್ಕದ್ದೆಂಬ ಠರಾವು ಜನವರಿ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

I ಅನಾಥರಾದ ಅಂಗಹೀನರಿಗೆ ಈ ಸಂಘದಿಂದ ಬೇಗನೆ ಅನ್ನ ಸಹಾಯ ಮಾಡಲು ಏರ್ಪಾಡಾಗುವುದು.
II 1928ನೇ ಇಸವಿ ಮಾರ್ಚಿ ತಿಂಗಳು 31ಕ್ಕೆ ಡ್ರಾಯಿಂಗ್ ನಡೆಯುತ್ತದೆ.

(1) ಇವರ ಮೂಲಕ ಬಡ್ಡಿ ಇಲ್ಲದೆ ಸಾಲ ಕೊಡಲಾಗುವುದು,
(2) ಸುಲಭವಾದ ದೀರ್ಘ ಕಂತುಗಳು ದೊರೆಯುವುವು.
(3) ಸರ್ವರೂ ಆ ತಾರೀಖಿನೊಳಗೆ ಡ್ರಾಯಿಂಗಿಗೆ ಅರ್ಹತೆ ಪಡೆಯಬೇಕಾಗಿದೆ.
(4) ಬೇರ ಸೇವೆಗೂ, ಹಿತ ಸೇವೆಗೂ ಒಳ್ಳೆಯ ಅನುಕೂಲ.

ಟಿ. ಎ. ಕುಪ್ಪಸ್ವಾಮಿಪಿಳ್ಳೆ, ಅಂಡ್ ಸನ್ಸ್,
ಚೀಫ್ ಏಜೆಂಟ್ಸ್,
ಮಡಿಕೇರಿ.

52—3

Printed & published by P. I Belliappa at 'Kodagu Press, Merc[ara] for "Kodagu" Ltd.

"KODAGU" WEEKLY, MERCARA.
If not delivered please return to

ಕೊಡಗು.

ಸ್ವೇನ ಕೃಷಕರಯಾಯಃ ಖಿದ್ಯಾ, ತೇತಿ ಶ್ರಯುಕ್ತರಾ || ಏಕ್ಯಮುಕ್ತೇನ ದೇಶಾನಾಂ ಸುಸ್ಥಿರಾ ರಾಷ್ಟ್ರ ಸಂಪದಃ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ:—ಹಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೭] ಮಡಿಕೇರಿ, ೧೯೨೮ನೇ ಇಸವಿ ... ಶುಕ್ರವಾರ [ಸಂಚಿಕೆ ೩೯

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52—6 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

[GOLDSMITH, SILVERSMITH & DEALER IN ALL PRECIOUS STONES.

Post Box 423, TRIPLICANE, MADRAS

Catalogue Free to Boanfide Enquirers.

Rose Water Sprinkler.



Nose-screws. Claver Drops Thodu. Brooch

Chased Silver Mirror.

Manufacturer of HIGH CLASS GEMSET JEWELS. a speciality

The special features of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices

GOLD or SILVERWARE of all descriptions neatly executed

52—26

Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—2

ಎಗ್ಸಿಮಿಕ್ಸ್ಚರ್

ಮಕ್ಕಳಿಗೂ ಇನಪ್ಲುಯೆಂಜಾ, ಸಡುಕಜ್ವರ ... ಇದನ್ನು ... ಇದರಿಂದ ... ಬಾಟ್ಲಿಗೆ ... ಟಪ್ಪಾಲು ವೆಚ್ಚ ಬೇರೆ.

ಪಾರಸಾ ಪರಿಲಾ.

ಕೆಟ್ಟಹೋದ ರಕ್ತವನ್ನು ಶುದ್ಧಮಾಡುವದಕ್ಕೆ ಇದು ಮಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧-೦-೦ ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್
ದುಕಾನ್ ಲೇನ್.
12—9 ಗಿರಗಾಂವ. ಮುಂಬಯಿ

ಕೊಡಗು

ಸನ್ ೧೯೨೮ನೇ ಇಸವಿ ಮಾರ್ಚಿ
ತಾ ೯ ನೇ ಶುಕ್ರವಾರ.

ಕೊಡಗಿನ ಆಡಳಿತ ರಚನೆ.

ಹಿಂದೂ ದೇಶಕ್ಕೆ ಹೆಚ್ಚಿನ ಜವಾಬ್ದಾರಿಯ ಸರ್ಕಾರವನ್ನು ಕೊಡಬೇಕೋ ಬೇಡವೋ ಎಂಬದನ್ನು ವಿಚಾರಿಸುವ ಇಂಗ್ಲೆಂಡಿನ ಪಾರ್ಲಿಮೆಂಟಿನವರು ಇಂಡಿಯಾಕ್ಕೆ ಕಳುಹಿಸಿದ ಸೈಮನ್ ಕಮಿಶನು ಪೂರ್ತಿ ಅತೃಪ್ತಿಕರವಾದುದೆಂದೂ, ಅದರೊಂದಿಗೆ ಸಹಕರಿಸತಕ್ಕದ್ದಲ್ಲವೆಂದೂ ಭರತ ಖಂಡದ ಎಲ್ಲಾ ಪಾರ್ಟಿಗಳ ಮುಖಂಡರೂ ತೀರ್ಮಾನಿಸಿರುವದಾದರೂ ಮದ್ರಾಸು ಕಾಂಗ್ರೆಸ್ಸಿನ ತೀರ್ಮಾನದ ಮೇರೆ ನೇಮಿಸಲ್ಪಟ್ಟ ಕಮಿಟಿಯವರು ಹಿಂದೂಸ್ಥಾನದ ಎಲ್ಲಾ ಪಂಗಡಗಳ ಮುಖಂಡರುಗಳನ್ನು ಸೇರಿಸಿ ಇಂಡಿಯಾದ ಮುಂದಿನ ಆಡಳಿತ ರಚನೆಯನ್ನು ತಯಾರಿಸಲು ಪ್ರಯತ್ನಿಸುತ್ತಿದ್ದಾರೆ. ಕಳೆದ ತಾ 12ರಲ್ಲಿ ಡಿಲ್ಲಿಯಲ್ಲಿ ಪ್ರಾರಂಭವಾದ ಆ ಎಲ್ಲಾ ಪಾರ್ಟಿ ಕಾನ್ಫರೆನ್ಸಿನಲ್ಲಿ ಹಿಂದೂದೇಶದಲ್ಲಿ ಇಷ್ಟರ ಸಂಪೂರ್ಣ ಜವಾಬ್ದಾರಿಯ ಸರ್ಕಾರವನ್ನು ಸ್ಥಾಪಿಸತಕ್ಕದ್ದು ಎಂದು ಎಲ್ಲಾ ಅಭಿಮತದವರಿಗೂ ಒಪ್ಪುವಂಥ ಠರಾವನ್ನು ಪಾಸು ಮಾಡಿ ಅದಕ್ಕೆ ಸರಿಯಾದ ಆಡಳಿತ ರಚನೆಯನ್ನು ತಯಾರಿಸಲು ಒಂದು ಉಪಕಮಿಟಿಯು ನೇಮಿಸಲಾಗಿದೆ

ಕೊಡಗು ಚಿಕ್ಕ ಪ್ರಾಂತ್ಯವಾದರೂ ಹಲವು ಶತಮಾನಗಳಿಂದ ಪ್ರತ್ಯೇಕ ಪ್ರಾಂತೀಕ ಸರ್ಕಾರವುಳ್ಳದ್ದಾಗಿರುವದರಿಂದ ಇದರ ಮುಂದಿನ ಆಡಳಿತವು ಯಾವ ತರಹದ್ದಾಗಿರಬೇಕೆಂಬದನ್ನು ಯೋಚಿಸಬೇಕಾದದ್ದು ಇಲ್ಲಿಯ ಮುಂದಾಳುಗಳ ಕರ್ತವ್ಯವಾಗಿದೆ ಆದುದರಿಂದಲೇ ಜಮೀನ್ದಾರರ ಸಂಘವು ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕೆಂದು ತೀರ್ಮಾನಿಸಿದರೂ ಈ ದೇಶದ ಮುಂದಿನ ಆಡಳಿತ ರಚನೆಯನ್ನು ತಯಾರು ಮಾಡಲು ಒಂದು ಕಮಿಟಿಯನ್ನು ನೇಮಿಸಿ ಅದಕ್ಕೆ ಬೇರೆ ಅಭಿಮತದ ಮುಂದಾಳುಗಳನ್ನು ಮೆಂಬರುಗಳಾಗಿ ಸೇರಿಸಿಕೊಳ್ಳುವ ಅಧಿಕಾರ ಕೊಟ್ಟದ್ದಾಗಿದೆ ಇದರಲ್ಲಿ ಕೊಡವರೂ, ಬ್ರಾಹ್ಮಣರೂ, ಗೌಡುಗಳೂ, ಶಿವಚಾರದವರೂ ಮತ್ತು ದೀಯರೂ, ಒಕ್ಕಲಿಗರೂ, ಪಂಚಮರೂ ಸಹ ಮೆಂಬರುಗಳಾಗಿ ಇರುವರು ಇದಕ್ಕ ಸಾಧ್ಯವಾದಷ್ಟು ಎಲ್ಲಾ ತರಹದ ಅಭಿಪ್ರಾಯಗಳ ಮುಖಂಡರು ಆರಿಸಲ್ಪಟ್ಟಿರುವರು. ಆದ ಕಾರಣ ಈ ಕಮಿಟಿಯ ಅಭಿಪ್ರಾಯವು ದೇಶದ ಎಲ್ಲಾ ಪಂಗಡಗಳ ಅಭಿಪ್ರಾಯವಲ್ಲವೆಂದು ಹೇಳಲು ಸಾಧ್ಯವಿಲ್ಲ

ಈ ಕಮಿಟಿಯ ಮೀಟಿಂಗು ಈ ತಾ 3ರಲ್ಲಿ ನಡೆದು ಆದ ತೀರ್ಮಾನಗಳನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ "ಮುಂದೆ ಆಗಲಿಕ್ಕಿರುವ ಹಿಂದೂ ದೇಶದ ರಾಜಕೀಯ ರಚನೆಯ ಮೂಲಾಧಾರದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ತತ್ವವನ್ನನುಸರಿಸಿ ಕೊಡಗನ್ನು ಸೇರಿಕೊಂಡ ಕರ್ನಾಟಕ ಪ್ರಾಂತ್ಯವಾಗಲು ಕೊಡಗು ಒಪ್ಪುತ್ತದೆ ಅದು ಆಗುವ ವರೆಗೆ ಈ ದೇಶವು ಪೂರ್ತಿ ಪ್ರಜಾಸತ್ತಾತ್ಮಕವಾದ ಪ್ರಾಂತೀಕ ಸ್ವಾತಂತ್ರ್ಯವುಳ್ಳದ್ದಾಗಿರಬೇಕು ಎಂದು ಠರಾವೇ ಆ ಮೀಟಿಂಗಿನ ಮುಖ್ಯ ತೀರ್ಮಾನವಾಗಿದೆ. ಜಮೀನ್ದಾರರ ಸಂಘದ ಕಳೆದ ಎರಡು ವರ್ಷಗಳ ಮಹಾಸಭೆಯ ತೀರ್ಮಾನದಂತೆ ಕರ್ನಾಟಕ ಏಕೀಕರಣದ ತತ್ವಕ್ಕೆ ಒಪ್ಪಿಗೆಯನಿತ್ತದ್ದು ನ್ಯಾಯವಾಗಿದೆ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಕುರಿತು ಈ ಮೊದಲೇ ಬರೆದಿದ್ದೇವೆ. ಹಿಂದಲ್ಲದಿದ್ದರೂ ಒಂದು ದಿನ ಭಾಷಾವಾರು ಪ್ರಾಂತ್ಯ ರಚನೆಯಾಗಬೇಕೆಂಬದನ್ನೂ, ಚಿಕ್ಕ ಪ್ರಾಂತ್ಯವಾದ ಕೊಡಗು ತನ್ನ ಅಲ್ಪ ಆಸ್ತಿತ್ವದಿಂದ ಎಲ್ಲಾ ವಿಷಯಗಳಲ್ಲಿಯೂ ಪ್ರತ್ಯೇಕ ಪ್ರಾಂತೀಕ ಸರ್ಕಾರವನ್ನು ನಡಿಸಲು ಸಾಧ್ಯವಿಲ್ಲವೆಂಬದನ್ನೂ ಮುಂದಾಳುಗಳು ದಿನೇ ದಿನೇ ಹೆಚ್ಚಾಗಿ ಅರಿತುಕೊಳ್ಳುತ್ತಾ ಬರುತ್ತಿರುವದು ಕಂಡು ಬರುತ್ತದೆ ಆದರೂ ಬಹು ಕಾಲಗಳಿಂದ ಪ್ರತ್ಯೇಕವಾಗಿರುವ ಕೊಡಗಿನವರು ಕವರಿಗಿರುವ ಅನನುಕೂಲ ಪಕ್ಷ್ಯ ಭಾದ್ಯತೆಗಳಿಗಾಗಿಯೂ, ಕೋ[illegible] [illegible] ಪಡೆಯುವ [illegible] ಸ್ಥಳೀಕ [illegible] [illegible] ಪ್ರತ್ಯೇಕ ಸರ್ಕಾರವಾಗಿ [illegible] [illegible] ಹಾಗೆ ಮಾಡಲು ಕಮಿಟಿಯವರಿಗೆ [illegible] [illegible] [illegible] [illegible] [illegible] ಆದಿವಾಸಿ [illegible] [illegible] ಕೇಳುತ್ತಿರುವದು. ಕಳೆದ ನಾಲ್ಕೈದು ವರ್ಷಗಳ ಕೌನ್ಸಿಲು ಸರ್ಕಾರದಿಂದ ಅಂದರೆ ಇಲ್ಲಿಯ ಪ್ರಾಂತೀಕ ಸ್ವಾತಂತ್ರ್ಯವು ಬೇಕಾದಷ್ಟು ಇದ್ದುದರಿಂದ ಇಲ್ಲಿಯ ಆಡಳಿತವನ್ನು ಪ್ರಜೆಗಳಿಗೆ ಹಿತಕರವಾಗಿ ನಡಿಸಲು ಸಾಧ್ಯವಿಲ್ಲವೆಂದು ಇನ್ನೂ ಅಂಥವರಿಗೆ ಮನದಟ್ಟಾಗಿರುವಂತೆ ಕಾಣುವದಿಲ್ಲ ಹಾಗೆ ಮನಗಂಡವರನೇಕರು ಕೊಡಗನ್ನು ಬೇರೆ ಯಾವ ಪ್ರಾಂತ್ಯದೊಂದಿಗೆ ಸೇರಿಸಿಯೇ ತೀರಬೇಕೆನ್ನುತ್ತಿರುವರು ಕರ್ನಾಟಕ ಪ್ರಾಂತ್ಯವಾಗುವ ವರೆಗೆ ಈ ದೇಶವನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸುವದು ಉತ್ತಮವೆಂದೂ ಹಾಗೆ ಮಾಡಿದ ವಿನಹ ಚೀಫ್ ಕಮಿಷನರವರ ಏಕ ಪ್ರಭುತ್ವದಿಂದ ತಪ್ಪಿಸಲು ಸಾಧ್ಯವಿಲ್ಲವೆಂತಲೂ, ಅವರು ವಾದಿಸುತ್ತಾರೆ ಮದ್ರಾಸು ಪ್ರಾಂತ್ಯಕ್ಕೆ ಸೇರಿಸುವದರಿಂದ ನಷ್ಟವಲ್ಲದೆ ಲಾಭವಿಲ್ಲವೆಂದೂ, ನಮ್ಮ ಪ್ರಾಂತ್ಯವನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕೆಂದೂ ಅನ್ನುವವರಿಗೆ ಪ್ರಜೆಗಳಿಗೆ ಪೂರ್ತಿ ಜವಾಬ್ದಾರಿಯಾದ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರದ ಕಲವು ವರ್ಷಗಳ ಅನುಭವವು ದೊರೆತರೆ ಅದು ಸಾಧ್ಯವಿಲ್ಲವೆಂಬದು ಅವರಿಗೆ ಪ್ರತ್ಯಕ್ಷ ಗೊತ್ತಾಗುವದು ಆ ಮೇಲೆ ಅಂಥವರೂ ಕರ್ನಾಟಕ ಪ್ರಾಂತ್ಯ ರಚನೆಗೆ ಸಂಪೂರ್ಣ ಒಪ್ಪುವರೆಂಬುದರಲ್ಲಿ ಸಂಶಯವಿಲ್ಲ ಆಗ ದೇಶದವರೆಲ್ಲರೂ ಒಮ್ಮತದಿಂದ ಕರ್ನಾಟಕ ಏಕೀಕರಣವನ್ನು ಸಾಧಿಸುವರು ಆದುದರಿಂದಲೇ ಕರ್ನಾಟಕ ಪ್ರಾಂತ ರಚನೆಯು ಕಾರ್ಯಕ್ಕೆ ಜಾರಿಗೆ ಬರುವವರೆಗೆ ಈ ದೇಶವು ಸಂಪೂರ್ಣ ಪ್ರಜಾಸತ್ತಾತ್ಮಕವಾದ ಪ್ರಾಂತೀಕ ಸ್ವಾತಂತ್ರ್ಯವುಳ್ಳದ್ದಾಗಿರಬೇಕೆಂದು ಒಪ್ಪಿರುವದಾಗಿದೆ. ಈಗ ಯಾವದೊಂದು ರಚನೆಗೂ ಎಲ್ಲರೂ ಒಗ್ಗಟ್ಟಾಗಿ ಒಪ್ಪದ್ದರಿಂದ ಎಲ್ಲಾ ಪಾರ್ಟಿಗಳ ಅಭಿಪ್ರಾಯಗಳಿಗೆ ಎಡೆ ಕೊಡುವಂಥ ಮೇಲಿನ ಠರಾವು ಪಾಸು ಮಾಡಿದ್ದು ಯುಕ್ತವಾಗಿದೆ

ತತ್ಕಾಲ ಕೊಡಗನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಿದರೆ ಕರ್ನಾಟಕ ಏಕೀಕರಣಕ್ಕೆ ಮತ್ತಷ್ಟು ಅಡಚಣೆಯಾಗಬಹುದು. ಈಗ ಇರುವ ಹಾಗೆಯೇ ನಾವು ಪ್ರತ್ಯೇಕ ಪ್ರಾಂತ್ಯವಾಗಿದ್ದರೆ ಕರ್ನಾಟಕ ಪ್ರಾಂತ್ಯದ ರಚನೆಗೆ ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡಬಹುದು, ಮತ್ತು ಅಂಥಾ ರಚನೆಯಲ್ಲಿ ಕೊಡಗಿನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗಬಹುದು

ಈ ಎಲ್ಲಾ ಕಾರಣಗಳಿಗಾಗಿ ಕೊಡಗಿನ ಎಲ್ಲಾ ಪಾರ್ಟಿಗಳ ಕಮಿಟಿಯವರು ಮಾಡಿರುವ ತೀರ್ಮಾನವು ದೇಶದ ಈಗಿನ ಸ್ಥಿತಿಗೆ ಸರಿಯಾದದ್ದೆಂದೇ ನಮ್ಮ ಅಭಿಪ್ರಾಯ ಕಮಿಟಿ ಮೀಟಿಂಗಿನಲ್ಲಿ ಹಲವು ವಿಧದ ಚರ್ಚೆಗಳು ನಡೆದರೂ ಕಡೆಗೆ ಅಲ್ಲಿ ನೆರೆದವರೆಲ್ಲರೂ ಒಮ್ಮತದಿಂದ ಮೇಲೆ ಸೂಚಿಸಿದ ಠರಾವನ್ನು ಒಪ್ಪಿಕೊಂಡದ್ದು ಸಂತೋಷಕರ ಆದರೆ ಆ ಮೀಟಿಂಗಿನಲ್ಲಿ ಕೆಲವು ಮೆಂಬರುಗಳು ಹಾಜರಿರಲಿಲ್ಲ. ಅವರು ಯಾವ ಕಾರಣಗಳಿಂದ ಅಲ್ಲಿಗೆ ಬಂದಿಲ್ಲವೋ ತಿಳಿಯದು, ದೇಶದವರ ಒಗ್ಗಟ್ಟಿನ ಪ್ರಯತ್ನಕ್ಕೆ ಸಹಕರಿಸಬಾರದೆಂಬ ಇರಾದೆಯಿಂದ ಅಲ್ಲಿಗೆ ಯಾರೂ ಬರದೆ ಇರಲಿಲ್ಲವೆಂದೂ, ಬೇರೆ ಸ್ವಂತ ಅನಾನುಕೂಲತೆಗಳಿಂದ ಅಂಥವರು ಗೈರ್ ಹಾಜರಾಗಿದ್ದಿರಬೇಕೆಂದೂ ನಂಬುತ್ತೇವೆ ಹೇಗೂ ದೇಶದವರೆಲ್ಲರೂ ಈ ತೀರ್ಮಾನಕ್ಕೆ ಒತ್ತಾಸೆಕೊಟ್ಟು ಸ್ವಾತಂತ್ರ್ಯ ಪಡೆಯಲು ಒಗ್ಗಟ್ಟಾಗಿ ವರ್ತಿಸುವರಾಗಿ ಆಶಿಸುತ್ತೇವೆ

ಜಮೀನ್ದಾರರ ಸಂಘದ ಮಹಾ ಸಭೆಯ ಅಧ್ಯಕ್ಷರು.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಕೋರಿಕೆ ಮೇರೆ ಈ ವರ್ಷ ಏಪ್ರಿಲ್ ತಿಂಗಳು 21 ಮತ್ತು 22ರಲ್ಲಿ ಸೋಮವಾರಪೇಟೆಯಲ್ಲಿ ನಡೆಯಲಿಕ್ಕಿರುವ ಸಂಘದ ವಾರ್ಷಿಕ ಮಹಾ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಮದ್ರಾಸಿನ ಶ್ರೀಯುತ ಯಸ್. ಸತ್ಯಮೂರ್ತಿಯವರು ಒಪ್ಪಿಕೊಂಡದ್ದು ಕೇಳಿ ಸಂತೋಷಪಡುತ್ತೇವೆ. ಇವರು ರಾಷ್ಟ್ರೀಯ ಕೆಲಸದಲ್ಲಿ ಸಂಪೂರ್ಣ ಮುಳಗಿರುವವರು ಮದ್ರಾಸು ಕೌನ್ಸಿಲಿನಲ್ಲಿ ಸ್ವರಾಜ್ಯ ಪಾರ್ಟಿಯ ಡೆಪ್ಯುಟಿ ಲೀಡರಾಗಿರುವರು ಇವರಿಂದಲೇ ಆ ಕೌನ್ಸಿಲಿನಲ್ಲಿ ಹೆಚ್ಚಿನ ಜೀವಕಳೆ ಇರುವದೆಂದು ಹಲವರ ಹೇಳಿಕೆಯಾಗಿದೆ. ಇವರು ವಾಗ್ಮಿತ್ವದಲ್ಲಿ ಅದ್ವಿತೀಯರು ಕೆಲವು ವರ್ಷಗಳ ಹಿಂದೆ ಇವರು ಇಂಗ್ಲೆಂಡಿಗೆ ಹೋಗಿದ್ದಾಗ ಇವರ ವಾಕ್ಚಾತುರ್ಯದಿಂದ ಲೋಕಪ್ರಸಿದ್ಧರಾದರು ದೇಶಭಕ್ತಿಯು ಇವರಲ್ಲಿ ತುಂಬಿ ತುಳುಕುತ್ತಿದೆ ಇಂಥಾ ದೇಶ ಸೇವಕರು ನಮ್ಮ ದೇಶಕ್ಕೆ ಒಂದು ಸಂಘದ ಕಾನ್ಫರೆನ್ಸಿನ ಅಧ್ಯಕ್ಷ ಪದವಿಯನ್ನು ಅಲಂಕರಿಸಿ ದೇಶದ ಜನರಲ್ಲಿ ರಾಷ್ಟ್ರೀಯತ್ವದಲ್ಲಿ ಉತ್ಸಾಹ ಹೆಚ್ಚಿಸುವರಾಗಿ ನಂಬುತ್ತೇವೆ

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿ.

ಜಮೀನ್ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗು ಈ ತಾ 3ರಲ್ಲಿ ವೀರರಾಜಪೇಟೆ ಖಾದಿ ಭಂಡಾರದ ಮಹಡಿಯಲ್ಲಿ ನಡೆಯಿತು. ಸಂಘದ ಖಾಯಂ ಅಧ್ಯಕ್ಷರಾದ ಮೆ. ಪಿ. ಟಿ ಕುಶಾಲಪ್ಪನವರು ಮೀಟಿಂಗಿನ ಚೇರ್‌ಮ್ಯಾನರಾಗಿದ್ದರು ಹಾಜರಿದ್ದ ಮೆಂಬರುಗಳು—ಮೆ. ಗಳಾದ 2 ಸಿ. ಯಸ್ ವೆಂಕಪ್ಪಯ್ಯ, 3 ಸಿ ಯಸ್ ಉತ್ತಯ್ಯ, 4 ಪಿ ಸುಬ್ಬಯ್ಯ, 5 ಜಮ್ಮಡ ಮಾದಪ್ಪ, 6 ನಾಯಡ ಚಂಗಪ್ಪ, 7 ಚಂಗಂಡ ಕುಟ್ಟಪ್ಪ 8 ಯಂ ಯಂ. ಸಿದ್ದೀಕ್, 9 ಅಜ್ಜಮಾಡ ಮಾದಪ್ಪ 10 ಕೆ ಸಿ ಕರುಂಬಯ್ಯ, 11 ಐದ್ದಂಡ ಸುಬ್ಬಯ್ಯ 12 ಕೋಡಿರ ತಮ್ಮಯ್ಯ, 13 ಉದಿಯಂಡ ಮಾಚಯ್ಯ, 14. ಗುಡ್ಡಂಡ ಭೀಮಯ್ಯ, 15 ಯಂ ಯಂ ಚಿಣ್ಣಪ್ಪ, 16 ಪಿ. ಎ. ಬೆಳ್ಳಪ್ಪ, 17. ಕೆ ಪಿ. ಚಿಣ್ಣಪ್ಪ, 18 ಕೀಕಿರ ಅಯ್ಯಯ್ಯ, 19 ಬಿ ಎ ತಿಮ್ಮಯ್ಯ, 20 ಎ ಕುಶಾಲಯ್ಯನವರು

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2 ಫೆಬ್ರವರಿ ತಿಂಗಳ ಲೆಕ್ಕ ಓದಿ ಮಂಜೂರು ಮಾಡಲಾಯಿತು

3 (ಅ) ಸಂಘದ ಈ ವರ್ಷದ ಮಹಾಸಭೆಯನ್ನು ಸೋಮವಾರಪೇಟೆಯಲ್ಲಿ ನಡಿಸಬೇಕೆಂತ ನಂಜರಾಜಪಟ್ಣ ತಾಲೋಕಿನವರು ಕಳುಹಿಸಿರುವ ಆಮಂತ್ರಣವನ್ನು ಅಂಗೀಕರಿಸುವಂತೆ ತೀರ್ಮಾನವಾಯಿತು

(ಆ) ಸದರಿ ಮಹಾಸಭೆಯನ್ನು ಏಪ್ರಿಲ್ ತಿಂಗಳು 21 ಮತ್ತು 22ನೇ ಶನಿವಾರ ಮತ್ತು ಆದಿತ್ಯವಾರ ನಡಿಸುವಂತೆ ತೀರ್ಮಾನವಾಯಿತು

4 ಈ ವರ್ಷದ ಜನರಲ್ ಮೀಟಿಂಗಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವಂತೆ ಮದ್ರಾಸಿನ ಮೆ ಯಸ್ ಸತ್ಯಮೂರ್ತಿ ಯಂ ಯಲ್ ಸಿ. ಯವರನ್ನು ಕೋರಿಕೊಳ್ಳುವಂತೆ ನಿಶ್ಚೈಸಲಾಯಿತು

5 ಮೆ. ಸಿ ಯಸ್ ವೆಂಕಪ್ಪಯ್ಯನವರ ಬದಲು ಮೆ. ಐಚೆಟ್ಟಿರ ಸಿ ಸುಬ್ಬಯ್ಯನವರನ್ನೂ, ಮೆ ಮಡೆಯಂಡ ದೇವಯ್ಯನವರ ಬದಲು ಮೆ ಮುಂಜಾಂದಿರ ದೇವಯ್ಯನವರನ್ನೂ ಎಗ್ಸಿಕ್ಯುಟಿವ್ ಕಮಿಟಿ ಮೆಂಬರುಗಳಾಗಿ ಆರಿಸಲಾಯಿತು

6 ಮೆ. ಉದಿಯಂಡ ಮಾಚಯ್ಯನವರು, ತನ್ನಿಂದ ಸಂಘಕ್ಕೆ ಬರಬೇಕಾಗಿರುವ 19 ರಶೀತಿ ಪುಸ್ತಕಗಳನ್ನು ಜಮೆ ಮಾಡಿ ವಾಪಸು ಕೊಡಲು ಸೋಮವಾರಪೇಟೆ ಜನರಲ್ ಮೀಟಿಂಗಿನ ವರೆಗೆ ವಾಯಿದೆ ಕೊಡಬೇಕೆಂದು ಕೇಳಿಕೊಂಡರು ಮೆ. ಚಂಗಂಡ ಕುಟ್ಟಪ್ಪನವರು ಮತ್ತು ಮೆ. ಕೋಟಿರ ಚಿಣ್ಣಪ್ಪನವರು ಸಹ ತಮ್ಮಿಂದ ಬರಬೇಕಾದ ರಶೀತಿ ಪುಸ್ತಕಗಳಿಗೆ ಈ ವರ್ಷದ ಮಹಾಸಭೆಯ ವರೆಗೆ ವಾಯಿದೆ ಕೇಳಿದರು.

ಇವರೆಲ್ಲರಿಗೂ ಈ ಮಾರ್ಚ ಆಖೈರು ವರೆಗೆ ವಾಯಿದೆ ಕೊಡಬಹುದೆಂತ ತೀರ್ಮಾನವಾಯಿತು ಇತರ ಬಾಕಿದಾರರಿಗೂ ಹೀಗೆಯೇ ವಾಯಿದೆಕೊಟ್ಟು ನೋಟೀಸು ಕೊಡಬೇಕಾಗಿ ನಿಶ್ಚೈಸಲಾಯಿತು

7. ರಶೀತಿ ಪುಸ್ತಕ ನಂ 50ನ್ನು ಹೊಂದಿಕೊಂಡ ಮೆ ಕೈಬಲಿರ ತಮ್ಮಯ್ಯನವರು ಮೃತರಾದುದರಿಂದ ಆ ಪುಸ್ತಕದಲ್ಲಿ ಹರಿದಿರುವ ಒಂದು ಹಾಳೆಯನ್ನು ಮಾಫಿ ಮಾಡಬಹುದಾಗಿ ತೀರ್ಮಾನವಾಯಿತು

8 ಮೆ. ಪಾಂಡಂಡ ಮುತ್ತಣ್ಣನವರನ್ನು ಮತ್ತು ಮೆ ಅಬ್ದುಲ್ ಗಫೂರ್ ಖಾನರವರನ್ನು ಸಂಘದ 1927ರ ಲೆಕ್ಕ ಚೆಕ್ಕು ಮಾಡಲು ನೇಮಿಸಲಾಯಿತು.

9. ಮೆ. ಬಿ ತಿಮ್ಮಣ್ಣನವರನ್ನು ಆಡಿಟರಾಗಿ ನೇಮಿಸಲಾಯಿತು.

10. ಕಡಿಯತ್ತುನಾಡಿಗೆ ಮೆ. ಕೋಡಿರ ತಮ್ಮಯ್ಯನವರನ್ನೂ, ಎಡೆನಾಲ್ಕುನಾಡಿನ ಚೆಂಬೆಬೆಳಿಯೂರು, ಕುಕ್ಲೂರು, ಮಗ್ಗುಲ, ಬಿಳುಗುಂದ, ದೇವಣಗೇರಿ, ಹಾಲುಗುಂದ ಹೆಗ್ಗಳ ಮತ್ತು ಹೊದ್ದೂರು ಗ್ರಾಮಗಳಿಗೆ ಮೆ. ಗುಡ್ಡಂಡ ಭೀಮಯ್ಯನವರನ್ನೂ, ಅಮ್ಮತ್ತಿನಾಡು ಪೂರ್ತಿಗೆ ಮೆ ದಾವೂದ್‌ಖಾನ್ ಷೆಟ್ಟಿಯವರನ್ನೂ, ನಾಲ್ಕುನಾಡಿಗೆ ಮೆ. ತಿಮ್ಮಚಾಳಿಯಂಡ ಸೋಮಯ್ಯನವರನ್ನೂ ಆರ್ಗನೈಜರುಗಳಾಗಿ ನೇಮಿಸಲಾಯಿತು. ಬೆಪ್ಪುನಾಡಿಗೆ ಆರ್ಗನೈಜರನ್ನು ನೇಮಿಸಲು ಮೆ. ಸಿ. ಯಸ್ ಉತ್ತಯ್ಯನವರಿಗೆ ಅಧಿಕಾರ ಕೊಡಲಾಯಿತು

ಪಿ. ಟಿ ಕುಶಾಲಪ್ಪ,
(ಅಧ್ಯಕ್ಷ)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೨೫ನೇ ಪ್ರಕರಣ

ಹೃದಯ ಮಂಥನ

ಜೂಲೂ ದಂಗೆಯಿಂದ ನನಗೆ ಅನೇಕ ಹೊಸ ಅನುಭವಗಳುಂಟಾಗಿ ಅದು ಬಹು ವಿಷಯೋಪಿಚಾರಕ್ಕೆ ಕಾರಣವಾಯಿತು. ಯುದ್ಧದ ಭಯಂಕರ ಸ್ವರೂಪವು ನನಗೆ ಈ ದಂಗೆಯಿಂದ ಮನಮುಟ್ಟಿದಷ್ಟು ಬೋಯರ್ ಯುದ್ಧದಿಂದ ಉಂಟಾಗಿರಲಿಲ್ಲ. ಇದು ಮನುಷ್ಯರ ಬೇಟೆಯಾಗಿದ್ದಿತೇ ಹೊರತು ಯುದ್ಧವಾಗಿರಲಿಲ್ಲ. ಈ ಅಭಿಪ್ರಾಯವು ನನ್ನದು ಮಾತ್ರವೇ ಆಗಿರದೆ ನನ್ನೊಡನೆ ಮಾತನಾಡಲು ಸಂದರ್ಭವೊದಗಿದ ಅನೇಕ ಇಂಗ್ಲೀಷರದೂ ಆಗಿದ್ದಿತು. ಅಪರಾಧವಿಲ್ಲದ ಹಳ್ಳಿಗಳ ಮಧ್ಯೆ ದಿನಬೆಳಗಾದರೆ ಸಿಪಾಯಿಗಳ ಕೋವಿಯ ಗುಂಡುಗಳು ಪಟಾಕಿಯಂತೆ ಸಿಡಿದು ಹಾರುವುದನ್ನು ಕೇಳುತ್ತಾ ಇವರ ಮಧ್ಯೆ ವಾಸಿಸುವುದು ದುಸ್ಸಹವಾಗಿದ್ದಿತು. ಅದರ ಗಾಯಗೊಂಡಿದ್ದ ಜೂಲೂಗಳನ್ನು ಶುಶ್ರೂಷಿಸುವುದು ಮಾತ್ರವೇ ನಮ್ಮ ದಳದ ಕೆಲಸವಾಗಿದ್ದುದರಿಂದ ನಾನು ಈ ಸಂಕಟವನ್ನು ಸಹಿಸಿದೆನು. ನಾವಿಲ್ಲದಿದ್ದರೆ ಜೂಲೂಗಳಿಗೆ ದಿಕ್ಕೇ ಇರುತ್ತಿರಲಿಲ್ಲವೆನ್ನುವುದು ವಿಶದವಾಗಿದ್ದಿತು. ಇದರಿಂದ ಈ ಕೆಲಸವು ನನ್ನ ಹೃದಯದ ಹೊರೆಯನ್ನು ಕಡಮೆ ಮಾಡಿತು.

ಆದರೆ ಇದಲ್ಲದ ಯೋಚಿಸಬೇಕಾದ ವಿಚಾರಗಳನೇಕವಾಗಿದ್ದುವು. ದೇಶದ ಆ ಭಾಗದಲ್ಲಿ ಜನಸಾಂದ್ರತೆಯು ಬಹು ಕಡಮೆಯಾಗಿದ್ದಿತು. ದೂರ ದೂರವಾಗಿ ಗುಡ್ಡ ಕಣಿವೆಗಳ ಮಧ್ಯೆ ಈ ಸರಳ ಸ್ವಭಾವದ ಅನಾಗರಿಕ ಜೂಲೂಗಳ 'ಕ್ರಾಲ್' (ಸಣ್ಣ ಹಳ್ಳಿ)ಗಳಿದ್ದುವು. ಗಾಯ ಹೊಂದಿದವರೊಡನೆ ಅಥವಾ ಅವಿಲ್ಲದ ಈ ಗಂಭೀರ ನಿರ್ಜನ ಪ್ರದೇಶಗಳ ಮೂಲಕ ನಡೆಯುತ್ತಾ ನಾನು ಅನೇಕ ವೇಳೆ ವಿಚಾರ ಸಾಗರದಲ್ಲಿ ಮಗ್ನನಾಗುತ್ತಿದ್ದೆನು.

ಬ್ರಹ್ಮಚರ್ಯ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ವಿಚಾರವಾಗಿ ಚಿಂತಿಸಿದೆನು. ಆ ವಿಷಯದಲ್ಲಿನ ನನ್ನ ಮನವರಿಕೆಯು ಇನ್ನೂ ದೃಢಪಟ್ಟಿತು. ಈ ವಿಚಾರವಾಗಿ ನನ್ನ ಜೊತೆಗಾರರೊಂದಿಗೆ ಚರ್ಚಿಸಿದೆನು. ಆತ್ಮಸಂದರ್ಶನಕ್ಕೆ ಬ್ರಹ್ಮಚರ್ಯವು ಕೇವಲ ಅನಿವಾರ್ಯವಾದುದೆಂದು ಆಗ ನನಗೆ ಅರಿವಿರಲಿಲ್ಲ. ಆದರೂ ಆತ್ಮ ಸಾಕ್ಷಾತ್ಕಾರಕ್ಕೋಸ್ಕರ ಸೇವಾಕಾಂಕ್ಷಿಯಾಗಿರುವವನಿಗೆ ಬ್ರಹ್ಮಚರ್ಯವಿಲ್ಲದೆ ಅಗದೆಂಬುದನ್ನು ನಾನು ಸ್ಪಷ್ಟವಾಗಿ ಕಂಡೆನು. ಇಂತಹ ಸೇವಾ ಕಾರ್ಯವು ನನ್ನ ಪಾಲಿಗೆ ಮುಂದೆ ಹೆಚ್ಚು ಹೆಚ್ಚಾಗಿ ಬರುವುದೆಂದೂ ನಾನು ಸಂಸಾರ ಸುಖದಲ್ಲಿಯೂ, ಪ್ರಜೋತ್ಪತ್ತಿಯಲ್ಲಿಯೂ, ಮಕ್ಕಳ ಪೋಷಣೆಯಲ್ಲಿಯೂ ನಿರತನಾಗಿದ್ದರೆ ನನ್ನ ಕರ್ತವ್ಯವನ್ನು ನಾನು ಸರಿಯಾಗಿ ಮಾಡಲಾಗುವುದಿಲ್ಲವೆಂದೂ ನನಗೆ ಹೊಳೆಯಿತು.

ಒಂದು ಮಾತಿನಲ್ಲಿ ಹೇಳಬೇಕೆಂದರೆ ಒಬ್ಬನು ಶರೀರ ಭೋಗಿಯೂ ಆಗಿಯೂ, ಯೋಗಿಯೂ ಆಗಿಯೂ ಇರುವುದು ಸಲ್ಲದು. ಉದಾಹರಣೆಗಾಗಿ, ಈಗ ನನ್ನ ಹೆಂಡತಿಯು ಗರ್ಭಿಣಿಯಾಗಿದ್ದಿದ್ದರೆ ನಾನು ಈ ಸೇವಾಕಾರ್ಯದಲ್ಲಿ ತೊಡಗುವುದಕ್ಕೇ ಆಗುತ್ತಿರಲಿಲ್ಲ. ಬ್ರಹ್ಮಚರ್ಯಪಾಲನೆಯಿಲ್ಲದ ಕುಟುಂಬಪಾಲನೆಯೂ, ಲೋಕಸೇವೆಯೂ ಒಂದಕ್ಕೊಂದು ವಿರುದ್ಧವಾಗಿ ಪರಿಣಮಿಸುವುವು. ಬ್ರಹ್ಮಚರ್ಯದಿಂದ ಈ ವಿರುದ್ಧಭಾವವು ಸಂಪೂರ್ಣವಾಗಿ ಹೋಗುವುದು.

ಹೀಗೆ ಆಲೋಚಿಸುತ್ತಾ ನಾನು ಆಜೀವ ಬ್ರಹ್ಮಚರ್ಯವ್ರತವನ್ನು ಹಿಡಿಯಲು ಸ್ವಲ್ಪ ಆತುರನಾದೆನು. ವ್ರತವಾದರೆಯು ಸಿಕ್ಕಿನಿಸ್ಸಂಬೀತ ಒಂದು ರೀತಿಯ ಹುರುಪನ್ನುಂಟುಮಾಡಿತು. ಕಲ್ಪನಾಶಕ್ತಿಗೆ ಕೂಡ ಕ್ರೀಡಿಸಲು ಮಿತ ಅವಕಾಶ ದೊರಕಿ ಅದು ಸೇವಾಕಾರ್ಯದ ಅನಂತ ಕ್ಷೇತ್ರಗಳನ್ನು ಸೃಷ್ಟಿಸಿತು.

ಹೀಗೆ ನನ್ನ ಮನಸ್ಸು ಗಾಢಪರಿಶ್ರಮದಲ್ಲೂ, ಶರೀರವು ಶ್ರಮದಲ್ಲೂ ನಿರತವಾಗಿರುವಾಗ ದಂಗೆಯನ್ನು ಅಡಗಿಸುವ ಕಾರ್ಯವು ಇನ್ನೇನು ಮುಗಿಯಿತೆಂದೂ, ನಮ್ಮನ್ನು ಶೀಘ್ರದಲ್ಲಿಯೇ ಬಿಟ್ಟುಬಿಡುವರೆಂದೂ ವರದಿ ಬಂದಿತು. ಇದಾದ ಒಂದೆರಡು ದಿನದೊಳಗಾಗಿ ನಮ್ಮನ್ನು ಬಿಟ್ಟುಬಿಟ್ಟರು. ಆದ ಕೆಲವು ದಿವಸಗಳಲ್ಲಿ ನಾವು ನಮ್ಮ ಮನೆಗೆ ಸೇರಿಕೊಂಡೆವು. ಸ್ವಲ್ಪ ಕಾಲದಲ್ಲಿಯೇ ಗವರ್ನರು ನಮ್ಮ ದಳಕ್ಕೆ ನೀಡಿದ ಸಹಾಯಕ್ಕಾಗಿ ಕೃತಜ್ಞತೆ ತಿಳಿಸಿ ನನಗೆ ಕಾಗದವನ್ನು ಬರೆದರು.

ನಾನು ಫೀನಿಕ್ಸಿಗೆ ಬಂದ ಮೇಲೆ ಬ್ರಹ್ಮಚರ್ಯದ ವಿಚಾರವನ್ನು ಛಗನಲಾಲ್, ಮಗನಲಾಲ್, ವೆಸ್ಟ್ ಮುಂತಾದವರೊಡನೆ ಉತ್ಸಾಹಪೂರ್ವಕವಾಗಿ ಚರ್ಚಿಸಿದೆನು. ಅವರು ಈ ವಿಷಯವನ್ನು ಒಪ್ಪಿದರು. ಅವರು ವ್ರತ ಹಿಡಿಯುವುದರ ಆವಶ್ಯಕತೆಯನ್ನೇನೋ ಒಪ್ಪಿದರು, ಆದರೆ ಅದು ಎಷ್ಟು ಕಷ್ಟಸಾಧ್ಯವಾದುದೆಂಬುದನ್ನು ವಿವರಿಸಿದರು. ಅನೇಕರು ಕಲವು ಧೈರ್ಯದಿಂದ ಬ್ರಹ್ಮಚರ್ಯ ವ್ರತವನ್ನು ಪಾಲಿಸತೊಡಗಿದರು. ಕೆಲವರು ಆ ಪ್ರಯತ್ನದಲ್ಲಿ ಸಫಲರಾದರೆಂದೂ ನನಗೆ ಗೊತ್ತು.

ನಾನೂ ಆಜೀವ ಬ್ರಹ್ಮಚರ್ಯ ವ್ರತವನ್ನು ಹಿಡಿದೆನು. ನಾನು ಕೈಗೊಂಡ ಕಾರ್ಯವು ಎಷ್ಟು ದೊಡ್ಡದೆಂದೂ, ಮಹತ್ತರವೆಂದೂ ಆಗ ನನಗೆ ಸಂಪೂರ್ಣವಾಗಿ ತಿಳಿದಿರಲಿಲ್ಲವೆಂದು ನಾನು ಒಪ್ಪಿಕೊಳ್ಳಬೇಕು. ಇಂದು ಕೂಡ ನನಗೆ ಅದರ ಕಷ್ಟಗಳು ಅನುಭವವಾಗುತ್ತಿವೆ. ವ್ರತದ ಮಹತ್ವವು ಹೆಚ್ಚು ಹೆಚ್ಚಾಗಿ ತಿಳಿದು ಬರುತ್ತಿದೆ. ಬ್ರಹ್ಮಚರ್ಯವಿಲ್ಲದ ಜೀವನವು ಶುಷ್ಕವೆಂದೂ, ಪಶುಜೀವನ ಸಮಾನವೆಂದೂ ನನಗೆ ಭಾಸವಾಗುತ್ತದೆ. ಪಶುವು ಸ್ವಭಾವತಃ ಆತ್ಮಸಂಯಮ ಗೊತ್ತಿಲ್ಲದ್ದು. ಮನುಷ್ಯನಿಗೆ ಆತ್ಮಸಂಯಮ ಶಕ್ತಿ ಇರುವುದರಿಂದಲೇ ಮತ್ತು ಆ ಶಕ್ತಿಯನ್ನು ಉಪಯೋಗಿಸುವ ಮಟ್ಟಿಗೆ ಅವನನ್ನು ಮನುಷ್ಯನನ್ನುವುದು. ನಮ್ಮ ಧರ್ಮಗ್ರಂಥಗಳಲ್ಲಿ ಹೇಳಿರುವ ಬ್ರಹ್ಮಚರ್ಯದ ಸ್ತುತಿಯು ಮಿತಿಮೀರಿದ್ದೆಂದು ತೋರುತ್ತಿದ್ದಿತು. ಆದರೆ ಅದು ಯಥಾರ್ಥವಾದುದೆಂದೂ ಅನುಭವಸಿದ್ಧವಾದುದೆಂದೂ ದಿನ ದಿನವೂ ಹೆಚ್ಚು ಸ್ಪಷ್ಟವಾಗುತ್ತಿದೆ.

ಇಂತಹ ಅಸಾಧಾರಣ ಶಕ್ತಿಯಿಂದ ಕೂಡಿದ ಬ್ರಹ್ಮಚರ್ಯವು ಎಂದಿಗೂ ಸುಲಭ ಸಾಧ್ಯವಾಗಿರಲಾರದೆಂದೂ, ಒಂದು ಕೇವಲ ಶಾರೀರಕವಾಗಿರಲಾರದೆಂದೂ ನಾನು ಕಂಡೆನು. ಬ್ರಹ್ಮಚರ್ಯವು ಶಾರೀರಸಂಯಮದಲ್ಲೇ ಮೊದಲಾದರೂ ಅಷ್ಟಕ್ಕೆ ನಿಲ್ಲುವುದಿಲ್ಲ. ಪೂರ್ಣ ಬ್ರಹ್ಮಚರ್ಯವು ಮನಸ್ಸಿನ ಭಾವಪೂರ್ವಕವೂ ಎಡೆಗೊಡದಾದದ್ದು. ನಿಜವಾದ ಬ್ರಹ್ಮಚಾರಿಯು ಸ್ವಪ್ನದಲ್ಲಿ ಕೂಡ ವಿಷಯ ತೃಪ್ತಿಯನ್ನು ಬಯಸುವುದಿಲ್ಲ. ಆ ಸ್ಥಿತಿಗೆ ಬರುವ ವರೆಗೂ ಬಹಳ ಸಾಧಿಸಬೇಕಾದುದು ದೇಕಾದಷ್ಟಿದೆ.

ನನಗೆ ಶಾರೀರಿಕ ಬ್ರಹ್ಮಚರ್ಯವನ್ನು ಪಾಲಿಸುವುದರಲ್ಲಿ ಕೂಡ ಅನೇಕ ಕಷ್ಟಗಳು ತೋರಬಂದಿವೆ. ಇಂದು ನಾನು ಈ ವಿಷಯದಲ್ಲಿ ಕ್ಷೇಮವಾಗಿದ್ದೇನೆಂದು ಹೇಳಬಹುದು. ಆದರೆ ನಾನು ಇನ್ನೂ ಆ ಪ್ರಾಮುಖ್ಯವಾದ ಸಂಪೂರ್ಣ ಮನೋನಿಗ್ರಹವನ್ನು ಗಳಿಸಬೇಕು. ಇದಕ್ಕೆ ಸಂಕಲ್ಪವಾಗಲಿ, ಪ್ರಯತ್ನವಾಗಲಿ ಸಾಲದೆಂದಲ್ಲ. ಆದರೆ ಅನಿಷ್ಟಗಳಾದ ವಿಚಾರಗಳು ಹೇಗೆ ಗುಪ್ತ ರೀತಿಯಿಂದ ಮನಸ್ಸನ್ನು ಆಕ್ರಮಿಸುವುವೋ ಅದು ನನಗೆ ಎಂದಿನ ವರೆಗೂ ತಿಳಿದಿಲ್ಲ. ಅನಿಷ್ಟ ವಿಚಾರಗಳನ್ನು ಮನೋರಾಜ್ಯದ ಹೊರಗೆ ಇಡಲು ಮನುಷ್ಯನಿಗೆ ಶಕ್ತಿಯಿದೆಯೆಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಆದರೆ ಆ ಶಕ್ತಿಯನ್ನು ಅನವರತ ಕಂಡು ಹಿಡಿಯಬೇಕು. ನಂಥುನಂತರವೋ ತಮ್ಮ ಅನುಭವವನ್ನು ನಮಗೆ ಬಿಟ್ಟಿದ್ದಾರೆ. ಇದರ ಅನುಭವ ನನಗಿರುವುದು ಸ್ಪಷ್ಟ. ಸಂಪೂರ್ಣ ಮನೋನಿಗ್ರಹವೆಂಬುದು ನಿರಂತರವಾದುದನ್ನು ನನಗೆ ಕೊಟ್ಟಿಲ್ಲ. ಒಕ್ಕಂದ ಎನರ್ಮನಸ್ಸಿನ ಶೈಲಿಯಾಗಲಿ ನೃಪ್ತಿಸಂಖ್ಯೆವಾಗಲಿ ಅಕ್ಕರ ದ್ರುಸಾದವೆ ಮಾತ್ರ ಜರುಗುವುದು. ಅದರಿಂದ ಅದಕ್ಕೆ ತಾಗೋಣನೇನಲ್ಲ. ತಮ್ಮ ಶಿಷ್ಯರಿಗೂ ಅವರ ಸ್ಪರ್ಶ ಕಾವಾದ ತಿಳ್ಳು ಎಂದು ಪ್ರವಾಹದಿಂದ ಪ್ರಾಪಂಚಿಕ ರಾಗವೂ ಮನುಷ್ಯನ ಮನಸ್ಸಿನಲ್ಲಿ ಮಂದವಾಗಿ ಇರುವ ಕೃಷ್ಣನಿಗೆ ನಿರಂತರವಾಗಿ ದಿಟ್ಟವಾಗಿ ಸಂಪೂರ್ಣವಾದ ಉತ್ಸಾಹವಿಲ್ಲದ ಪೂರ್ಣಮನೋನಿಗ್ರಹ ಎಂದೂ ಅಸಾಧ್ಯವಲ್ಲ ಎಂಬುದು ನನ್ನ ವಿಶ್ವಾಸ. ಸಂಪೂರ್ಣ ಬ್ರಹ್ಮಚರ್ಯ ಕ್ಕಾಗಿ ಪ್ರಯತ್ನ ಮಾಡುವ ಪ್ರಯತ್ನವೂ ಕ್ಷಣಕ್ಷಣಕ್ಕೂ ಇದರ ನಿಶ್ಚಯ ವ್ಯಕ್ತವಾಗುತ್ತಿದೆ.

ಅದರ ಆ ಸ್ಪಷ್ಟತೆಯ ಆಲೋಚನೆಯ ಬುದ್ಧಿಯ ಅಪ್ಪಣೆಯಂತೆ ಸ್ವಲ್ಪ ಕಾಲವೂ ಆದಿನ ಅವ್ಯಾಹತವಾಗಿ ಎಂದಿನವು. ನಾನು ಈ ವ್ರತದ ಕಾಠಿಣ್ಯವನ್ನೇ ಈಗ ತಿಳಿದು ನಮ್ಮ ಕೆಲವರ ಈ ಪ್ರಕರಣವನ್ನು ಮುಗಿಸುವ ಉತ್ಸಾಹದ ಮನದುಂಬಿದ ನಲ್ಲಿ ಪ್ರಕಟಿಸಲಾರೆನು. ಎಷ್ಟು ಸುಲಭವಾಗಿ ಕಂಡಿತು. ನನ್ನ ಜೀವನದ ಆತೀವ ಆಸಕ್ತಿಕರವಾದ ಮೊದಲನೆ ಮೆಟ್ಟಿಲು ಹತ್ತಿದೆ. ನನ್ನ ಕೊನೆಗಾಲದಲ್ಲಿ ವ್ರತವೊಂದೇ ಸಾಧನ ಎಂದಾಗಲಿ, ಅಥವಾ ಅದು ಕೋರಿದ ಅನುಕೂಲವು ಉಂಟಾಗಿದ್ದನ್ನು ಹೇಳ್ವೆನು.

ಹೀಗೆ ನನಗೆ ಈ ವ್ರತದಿಂದ ಎಲ್ಲ ಒಲಿದು ಬಂದಿದೆ. ವರ್ಷಗಳಲ್ಲಿ ನನಗಾದ ಬ್ರಹ್ಮಚರ್ಯದ ವಿವರವನ್ನು ಮುಂದಿನ ಅಧ್ಯಾಯಗಳಲ್ಲಿ ವ್ಯಕ್ತವಾಗಿ ಹಿಡಿದೆ.

ಜನಿವಾರಪ್ಪರ ಸಂಘದ ೧೦ನೇ ಕಾನ್ಫರೆನ್ಸಿನ ಸ್ವಾಗತ ಏರ್ಪಾಡಿನ ಪಬ್ಲಿಕ್ ಮೀಟಿಂಗು.

ತಾ 1-3-38ರಲ್ಲಿ ಸೋಮವಾರಪೇಟೆ ಎಕ್ಸ್ಟೆನ್ಷನ್ನಿನ ವಿಶ್ವೇಶ್ವರಯ್ಯ ಹಾಲಿನಲ್ಲಿ ಕಾಂಫರೆನ್ಸಿನ ಬಗ್ಗೆ ಪಬ್ಲಿಕ್ ಮೀಟಿಂಗು ನಡೆಯಿತು.

ಕೊಡಗು ಜನಿವಾರಪ್ಪರ ಸಂಘದ 10ನೇ ವಾರ್ಷಿಕ ಮಹಾಸಭೆಯನ್ನು ಸೋಮವಾರಪೇಟೆಯಲ್ಲಿ ನಡೆಸಬೇಕಾಗಿ ಅಧ್ಯಕ್ಷರ ಸೂಚನೆಯಂತೆ ಮೇಲೆ ಹೇಳಿದ ಸಭೆಯು ಸರ್ವಸಮ್ಮತಿಯಿಂದ ವಹಿಸಲಾಯಿತು. ಮೇ. ಹಾನಗಲ್ಲು ಕಾಳೇಗೌಡರು ಮೇ. ಸಿದ್ಧಸ್ವಾಮಿಯ್ಯನವರನ್ನು ಸ್ವಾಗತ ಕಮಿಟಿಯ ಅಧ್ಯಕ್ಷರನ್ನಾಗಿ ಸೂಚಿಸಿದರು. ಇದನ್ನು ಮೇ. ಅನ್ನಪ್ಪನವರು ಅನುಮೋದಿಸಲಾಗಿ ಸರ್ವಸಮ್ಮತಿಯಿಂದ ಅಂಗೀಕರಿಸಲಾಯಿತು. ಮೇ. ಸಿದ್ಧಸ್ವಾಮಿಯ್ಯನವರು ಒಪ್ಪಿದ್ದಲ್ಲದೆ ಈ ಕೆಳಗೆ ತೋರಿಸಿರುವ ಸ್ವಾಗತ ಕಮಿಟಿ ಪದಾಧಿಕಾರಿಗಳ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿದರು. ಅವರನ್ನು ಮಂಡಿಸಲಾಯಿತು.

ಸ್ವಾಗತ ಅಧ್ಯಕ್ಷರು—ಮೇ. ಸಿದ್ಧದ ಸಿದ್ಧಸ್ವಾಮಿಯ್ಯನವರು, ಟ್ರೆಜರರ್—ಮೇ. ಕಡಮನ ತಿಮ್ಮಪ್ಪನವರು, ಸೆಕ್ರೆಟರಿ—ಮೇ. ಎ ಕೆ. ಕಟ್ಟೆಪ್ಪನವರು, ಜಾಯಿಂಟ್ ಸೆಕ್ರೆಟರಿ—ಮೇ. ಕೆ ಚಂದ್ರಶೇಖರಪ್ಪನವರು. ಕಮಿಟಿ ಮೆಂಬರುಗಳು—1 ಮೇ. ಗೌಡದ ಎ ಬಿ ಸಿದ್ದಪ್ಪಶೆಟ್ಟಿ, 2 ಬಿ ಎಸ್ ಶಿವಣ್ಣಯ್ಯಶೆಟ್ಟಿ, 3 ಅಪ್ಪ ವೀರಭದ್ರಪ್ಪನವರು, 4 ಚಿಟ್ಟದ ಪುರದ ರುದ್ರಪ್ಪಶೆಟ್ಟಿ, 5 ಬೇಳೂರು ಗಂಗೇಗೌಡರು, 6 ಹಾ ಕಾಳೇಗೌಡ

ಹಿಂದಿನ ಪಡಿಕಾರಿಕೆ ಬಳಿಕ ಎಲ್ಲಾ ಸ್ಥಳಗಳಲ್ಲೂ ಮೆಂಬರುಗಳ ಮೀಟಿಂಗು ನಡೆಯಿತು. ಇದೇ ತಾರೀಕು 20ರ ಒಳಗೆ ಪಡಿಕಾರಿ ಕಿಂಗ್ ಪ್ರೆಸ್ ಕೈಯಿಂದ ಕೊಡುವರು ಕೊಡುವ ಹಣ ಈ ಕಾಲಕ್ಕೆ ಮೀಟಿಂಗಿನ ಕರ್ತನ ಉದ್ದೇಶ ಪಡೆದ ಮೆಂಬರುಗಳಲ್ಲ ಎದ್ದ ಕಾದು ಉಳಿಕ ಸಂತೋಷ ವಸೂಲು ಎಂದು ವಿಶ್ವ ಈ ಹಣವನ್ನು ಸೆಕ್ರೆಟರಿಯವರಿಗೆ ಒಪ್ಪಿಸ ಬೇಕು. ಹಾಗೆ ಕೊಡದ ಮೆಂಬರುಗಳ ವಿಚಾರವಾಗಿ ಇಲ್ಲಿ ಒಳ್ಳೆ ನಿರ್ಣಯಕ್ಕೆ ಬರುವುದಾಗಿ ಎಲ್ಲರನ್ನು ಕೇಳಿಕೊಳ್ಳಲ್ಪಟ್ಟಿದೆ. ತೀರ್ಮಾನವಾಯಿತು.

ಒಟ್ಟು ಮೀಟಿಂಗಿಗೆ ಹೋಗುವವರಿಗಾಗಿ ಮೋಟಾರ್ ವಿತ್ತೊದಿಸ್ಟ್ ಈ ಮಂತ್ರಿ ಉಪಯೋಗಿ ಪತ್ರಿಕೆಯವರು ಸಹಾಯವಿತ್ತು ಅಲ್ಲಿಗೆ ಬರುವವರಿಗೆ ಒಂದು ದಿನ ಸಂಬಳ ಒಟ್ಟು ಸೆಕ್ರೆಟರಿಯವರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನವಾಯಿತು.

ಸದರಿ ಒಟ್ಟು ಮೀಟಿಂಗಿನ ಉದ್ದೇಶ ಪತ್ರವನ್ನು ಪ್ರಕಟಿಸುವಂತೆ ಕ್ರಿಯ ಕೆ ಡಿ ಸಾಹುಕಾರ ನವರನ್ನು ಪತ್ರಿಕೆಯವರು ಕಾಗದ ಬರೆದು ಕೇಳಿಕೊಳ್ಳತಕ್ಕದ್ದು.

ಈ ತಾ 28ರಲ್ಲಿ 2 ಗಂಟೆಗೆ ಛತ್ರದಲ್ಲಿ ನಡೆಯುವ ಕಮಿಟಿ ಮೀಟಿಂಗಿಗೆ ಎಲ್ಲಾ ಕಮಿಟಿ ಮೆಂಬರುಗಳು ತಪ್ಪದೆ ತಮ್ಮ ಪಡಿಕಾರಿಯ ಪುಸ್ತಕಗಳನ್ನೂ ರಶೀತಿ ಪುಸ್ತಕಗಳ ಸಮೇತ ಹಾಜರು ಪಡಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ಈ ಮಧ್ಯೆ ಬರುವ ಕಾಗದ ಪತ್ರಗಳಲ್ಲಿ ಸೆಕ್ರೆಟರಿಯವರು ಕೋಶಾಧ್ಯಕ್ಷರಿಗೆ ಕೊಡತಕ್ಕದ್ದು ಕಾರ್ಯಕಾರಿ ಕಮಿಟಿ ಮೆಂಬರುಗಳು ಸೇರದ ಕಾಗಿ ತೀರ್ಮಾನಿಸಲಾಯಿತು.

ಈ ಮಂಡಳಿಯ ಎಲ್ಲಾ ಕಾರ್ಯ ಕೆಲಸಗಳಿಗೂ ಮೇ. ಡಿ ನಾರಾಯಣಶೆಟ್ಟಿ ಮತ್ತು ಮೇ. ಚೌಡ್ಲು ಕಾಳಪ್ಪ ಎಸ್. ಎಸ್ ಸಿ ಯವರು ಸಹಾಯಕರಾಗಿ ಇರಬೇಕಾಗಿ ಕೇಳಿಕೊಳ್ಳಲಾಯಿತು.

ಹೊರಡಿಸಿದ ವಿಜ್ಞಾಪನೆಯನ್ನು ಸ್ವಾಗತ ಮಂಡಳಿಯ ಸೆಕ್ರೆಟರಿಯವರ ಮೂಲಕ ಪ್ರಕಟಣೆಗೆ ಕೊಡುವಂತೆ ತೀರ್ಮಾನವಾಯಿತು.

ಡಿ ನಾರಾಯಣಶೆಟ್ಟಿ
ಅಧ್ಯಕ್ಷರು

ಸ್ವಾಗತ ಪರಿಷತ್ ಕಮಿಟಿ ಮೀಟಿಂಗು

ತಾ 1-3-38ರಲ್ಲಿ ಸಾಯಂಕಾಲ 6 ಗಂಟೆಗೆ ನಡೆದ ಕಮಿಟಿ ಮೀಟಿಂಗಿನ ತೀರ್ಮಾನಗಳು.

ಹಾಜರಿದ್ದವರು.

1 ಮೇ. ಗೌಡದ ಬಿ ವಿ ಸಿದ್ದಪ್ಪಶೆಟ್ಟಿ, 2 ತಿಮ್ಮಪ್ಪ ವೀರಭದ್ರಪ್ಪನವರು, 3 ಬಿ ರುದ್ರಪ್ಪಶೆಟ್ಟಿ, 4 ಮಲ್ಲಿಕಾರ್ಜುನಯ್ಯ ಶೆಟ್ಟಿ, 5 ಹಾ ಕಾಳೇಗೌಡರು.

ಈ ದಿನ ಬೆಳಿಗ್ಗೆ ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಮೇ. ಸಿದ್ಧಸ್ವಾಮಿಯ್ಯನವರನ್ನು ಸ್ವಾಗತ ಕಮಿಟಿ ಅಧ್ಯಕ್ಷರನ್ನಾಗಿ ಆರಿಸಿ ಅವರ ಮಾರ್ಗದರ್ಶನದಂತೆ ಮುಂದಿನ ಕೆಲಸವನ್ನು ನಡೆಸಬೇಕೆಂದು ಮೇ. ಹಾ ಕಾಳೇಗೌಡರು ಸೂಚಿಸಿದ್ದನ್ನು ಮೇ. ಅಪ್ಪ ವೀರಭದ್ರಪ್ಪನವರ ಅನುಮೋದಿಸಿದರು. ಆಗ ಮೇ. ಶಿವಣ್ಣಯ್ಯ ಶೆಟ್ಟರವರು, ಮೇ. ಸಿದ್ದಪ್ಪಶೆಟ್ಟಿಯವರು, ಸ್ವಾಗತ ಅಧ್ಯಕ್ಷರಾಗಲು ಒಪ್ಪುವುದಿಲ್ಲವಾಗಿ ಕಾರಣಗಳನ್ನು ಹೇಳಿದ್ದರಿಂದ ಸದರಿ ನಿರ್ಣಯವನ್ನು ಹಾ ಕಾಳೇಗೌಡರು ವಾಪಸು ತೆಗೆದುಕೊಂಡರು. ಆದುದರಿಂದ ಬೇರೊಬ್ಬರನ್ನು ಸ್ವಾಗತ ಅಧ್ಯಕ್ಷರಾಗಿ ಆರಿಸಬೇಕಾಗಿ ಸೂಚಿಸಲಾಯಿತು.

ಹಾನಗಲ್ಲು ಕಾಳೇಗೌಡರನ್ನು ಸ್ವಾಗತ ಕಮಿಟಿಯ ಚೇರ್ಮನ್ನರನ್ನಾಗಿ ಆರಿಸಬೇಕಾಗಿ ಮೇ. ಅಪ್ಪ ವೀರಭದ್ರಪ್ಪ ಸೂಚಿಸಲಾಗಿ ಮೇ. ಬಿ ವಿ ಸಿದ್ದಪ್ಪಶೆಟ್ಟಿ ಅನುಮೋದಿಸಿದ ಮೇರೆ ಸರ್ವಸಮ್ಮತಿಯಿಂದ ಅಂಗೀಕರಿಸಲಾಯಿತು.

ಇನ್ನೊಂದು ಕಮಿಟಿ ಮೀಟಿಂಗನ್ನು ಇದೇ ಭಾನುವಾರ ದಿನ ಬೆಳಿಗ್ಗೆ 10 ಗಂಟೆಗೆ ಛತ್ರದಲ್ಲಿ ನಡೆಸುವಂತೆ ನಿಶ್ಚಯವಾಯಿತು.

ಹಾ ಹೊ ಜೆ. ಕಾಳೇಗೌಡ,
ಅಧ್ಯಕ್ಷರು

WANTED

Private students for music lessons by the undersigned in I Harmonium II Fidl, III Veena IV Vokal

For detail information apply to the undersigned

K. R. Iyer of Tirumopolli,
Residing at Chamundi Extension,
Door no 2432,
Mysore City

ಕೊಡಗಿನ ರಾಜಕೀಯ ರಚನೆಯ ಕಮಿಟಿ

ಕೊಡಗಿನ ಮುಂದಿನ ರಾಜಕೀಯ ರಚನೆಯ ವಿಷಯ ಯೋಚಿಸಲು ಆರಿಸಲ್ಪಟ್ಟ ಉಪಸಭೆಯು ಈ ತಾ 3ನೇ ದಿ ರಾಜಾಪೇಟೆಯಲ್ಲಿ ನಡೆದ ಮೀಟಿಂಗಿನ ವಿವರ

ಈ ಉಪಸಭೆಯ 25 ಮೆಂಬರುಗಳ ಪೈಕಿ 16 ಮೆಂಬರುಗಳು ಹಾಜರಿದ್ದರು. ಮಿ ಪಿ ಟಿ ಕುಶಾಲಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದರು.

ಮಿ ಶ್ರೀನಿವಾಸರಾಯರು ತನ್ನ ಅನಾರೋಗ್ಯಸ್ಥಿತಿಯಿಂದ ಈ ಸಭೆಯ ಸದಸ್ಯನಾಗಲು ಸಾಧ್ಯವಿಲ್ಲವೆಂತಲೂ, ಮಿ. ಸುಬ್ಬಯ್ಯನವರು ತಾನು ಆ ದಿನ ಬರಲಿಕ್ಕೆ ಆಗಲಿಲ್ಲ, ಆದರೆ ಬೇರೆ ಪ್ರಾಂತ್ಯಕ್ಕೆ ಕೊಡಗನ್ನು ಸೇರಿಸದೆ ಈಗ ಇರುವ ಆಡಳಿತವನ್ನೇ ಸರಿಪಡಿಸಬೇಕೆಂತಲೂ ಬರೆದ ಪತ್ರಗಳನ್ನು ಓದಲಾಯಿತು. ಶ್ರೀ ದಿವಾಕರ ರಂಗರಾಯರು ಕರ್ನಾಟಕ ಏಕೀಕರಣಕ್ಕೆ ಒಪ್ಪಬೇಕೆಂತ ಬರೆದ ಪತ್ರವನ್ನೂ ಓದಲಾಯಿತು. ಮಿ ಕಾವೇರಿ ಸಣ್ಣಪ್ಪನವರು ಬರಲು ಅನಾನುಕೂಲತೆಯನ್ನು ಸೂಚಿಸಿ ಕಳುಹಿಸಿದ ಟೆಲಿಗ್ರಾಮನ್ನು ಸಭೆಯ ಮುಂದೆ ಇಡಲಾಯಿತು

ಶ್ರೀ ಇಡಿಯಂಡ ಪೂಣಚ್ಚನವರು ಚರ್ಚೆಯನ್ನು ಪ್ರಾರಂಭಿಸಿದರು. ನಾವಾಗಿ ಬಿಟ್ಟುಕೊಟ್ಟ ದೇಶವನ್ನು ನಮಗೆ ಬಿಟ್ಟುಕೊಡಬೇಕೆಂತ ಕೇಳಬೇಕು. ಹಾಗೆ ಬಿಟ್ಟುಕೊಟ್ಟರೆ ನಾವು ಹೇಗೆ ಆಳಿಕೊಳ್ಳಬಹುದೆಂಬುದನ್ನು ಯೋಚಿಸಬೇಕು ಎಂತ ಹೇಳಿದರು

ಶ್ರೀ ಸಿ ಯಸ್ ಉತ್ತಯ್ಯನವರು ಹೇಳುವುದೇನೆಂದರೆ— ಜಮೀನ್ದಾರರ ಸಭೆಯ ಠರಾವಿಗೆ ವಿರೋಧ ಮಾಡಿದವರಾಗಿಲ್ಲ. ಕರ್ನಾಟಕ ಪ್ರಾಂತ್ಯವಾಗಿ ಹಾಗೆ ನಮ್ಮ ದೇಶದ ವ್ಯಕ್ತಿತ್ವವನ್ನು ಹೇಗೆ ಉಳಿಸಿಕೊಂಡು ಕರ್ನಾಟಕ ಪ್ರಾಂತ್ಯಕ್ಕೆ ಸೇರಬೇಕೆಂಬುದನ್ನು ಆಲೋಚಿಸಬೇಕು. ಅದು ಆಗುವವರೆಗೆ ನಾವು ಪ್ರಾಂತೀಯ ಸ್ವರಾಜ್ಯವನ್ನು ಪಡೆಯಬೇಕು. ವಿದ್ಯೆಯಲ್ಲಿ ಮುಂದಿದ್ದೇವೆ. ಓಟು ಕೊಟ್ಟ ಲೆಕ್ಕದಲ್ಲಿ ನಮ್ಮ ದೇಶವು ತುಂಬಾ ಮುಂದೆ ಇದೆ. ಆದ್ದರಿಂದ ಸ್ವರಾಜ್ಯಕ್ಕೆ ಅರ್ಹರಾಗಿದ್ದೇವೆ. ದೊಡ್ಡ ಪ್ರಾಂತ್ಯದಿಂದ ಶ್ರೀಮಂತರಿಗೆ ಪ್ರಯೋಜನವಾಗಬಹುದಾದರೂ ಸಾಧಾರಣ ರೈತರಿಗೆ ಪ್ರಯೋಜನವಾಗಲಾರದು. ನಮಗೆ ಸ್ವತಂತ್ರ ಸಿಕ್ಕಿದರೆ ಕೋರ್ಟು ಖಚೇರಿಗಳಿಗೆ ಖರ್ಚು ಕಡಿಮೆ ಮಾಡಬಹುದು. ವೈದ್ಯ ಇಲಾಖೆಯಲ್ಲಿ ಆಯುರ್ವೇದಕ್ಕೆ ಉತ್ತೇಜನ ಕೊಡುವದರ ಮೂಲಕ ಖರ್ಚು ಉಳಿಸಬಹುದು. ರಾಷ್ಟ್ರೀಯ ವಿದ್ಯಾಕ್ರಮವನ್ನು ಕೊಡಗಿ ವಿದ್ಯಾ ಇಲಾಖೆಯ ಖರ್ಚು ಉಳಿಸಬಹುದು. ಬೇರೆ ಪ್ರಾಂತ್ಯಕ್ಕೆ ಸೇರಿದರೆ ನಮ್ಮ ಈ ದೇಶಕ್ಕೆ ಒಬ್ಬ ಕೌನ್ಸಿಲ್ ಮೆಂಬರನಾದರೂ ಸಿಕ್ಕುವದು ಕಷ್ಟವಾದೀತು. ದೊಡ್ಡ ಅಧಿಕಾರಿಗಳು ಹೊರಗಿನಿಂದ ಬರುವರು. ಹೇಗೆ 500 ರೂ. ಗಿಂತ ಹೆಚ್ಚಿನ ಸಂಬಳದ ಅಧಿಕಾರಗಳು ನಮಗೆ ಬೇಕು. ಪ್ರೊವಿನ್ಸಿಯಲ್ ಅಟಾನಮಿಯನ್ನು ತತ್ಕ್ಷಣ ಪಡೆದರೆ ಸಾಕಾಗಿದೆ.

ಶ್ರೀ ಅಬ್ದುಲ್ ಗಫ್ಫಾರ್ ಖಾನ್ ಸಾಹೇಬರು ನಮ್ಮ ದೇಶದ ಸ್ವಾತಂತ್ರ್ಯವನ್ನು ಪೂರ್ಣ ಪಡೆದುಕೊಂಡು ಖರ್ಚು ಕಡಿಮೆ ಮಾಡಿಕೊಂಡು ಇರಬಹುದೆಂತ ಹೇಳಿದರು.

ನಮ್ಮ ದೇಶವನ್ನು ನಮಗೇನೇ ಬಿಟ್ಟುಕೊಡಿ ಎಂದು ಹಕ್ಕುಗಳನ್ನು ಕೇಳಿದರೇನೇ ಆಗುವದಿಲ್ಲ. ಬಿಟ್ಟುಕೊಡಬೇಕು ಎಂಬ ಕಾರಣ ರುಜುವಾಗಿದೆ. ಆದರೆ ಅದು ಸಾಧ್ಯವೋ, ಇಲ್ಲವೋ ಎಂಬುದನ್ನು ಯೋಚಿಸಬೇಕಾಗಿದೆ ಎಂತ ಶ್ರೀ ಯಮ್. ಚಿಣ್ಣಪ್ಪನವರು ಹೇಳಿದರು.

ಮಿ. ಕೆ. ಸಿ. ಕರುಂಬಯ್ಯನವರು —

ಏಕೀಕರಣಕ್ಕೆ ಉತ್ತೇಜನ ಕೊಡುತ್ತೇವೆ. ಸರ್ವಪಕ್ಷ ಸಭೆಯ ಮುಂದೆ ಕರ್ನಾಟಕ ಏಕೀಕರಣವೂ ಕೇಳಲ್ಪಟ್ಟಿದೆ. ಕರ್ನಾಟಕದ ಮುಖಂಡರಿಗೆ ನಾವು ಸಹಾಯ ಕೊಡಬೇಕು. ಈ ವರೆಗಿನ ಮಾತಿನಲ್ಲಿ ಏಕೀಕರಣ ಬಾಕಿ ಇದ್ದರೂ, ತಕ್ಷಣ ಸ್ವತಂತ್ರ ಕೇಳುವ" ಎಂತ ಹೇಳಿದಂತೆ ಕಂಡುಬಂತು. ಅದಾಗದು. ಕರ್ನಾಟಕ ಏಕೀಕರಣ ಕೇಳಲೇಬೇಕು. ಆ ವರೆಗೆ ಪ್ರೊವಿನ್ಷಿಯಲ್ ಅಟಾನಮಿ ಕೇಳಬೇಕು. ತಲೆ ಭಾರದ ಆಡಳಿತ ತೆಗೆದರೆ ಸ್ವರಾಜ್ಯವಾಗಲಿಲ್ಲ. ನಮ್ಮಲ್ಲಿ ಅನಾರೋಗ್ಯ ತುಂಬಾ ಇದೆ. ಬೇರೆ ಇದ್ದು ಜೀವಿಸಬೇಕಾದರೆ ತೋಟ್ಟಾಂತರ ರೂಪಾಯಿ ಖರ್ಚು ಮಾಡಬೇಕು. ಕಾಡಿನ ಪ್ರಯೋಜನ ಹೊಂದಬೇಕಾದರೂ, ಭೂಮಿಯ ಪ್ರಯೋಜನ ಹೊಂದಬೇಕಾದರೂ ಹಣಬೇಕು. ಇಲ್ಲಿ ಕಮ್ಮಿ ಸಂಬಳದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಬೇರೆಯವರನ್ನು ಕರೆಯಲೂ ಸಾಧ್ಯವಿಲ್ಲ. ಒಳ್ಳ ದಾರಿಯಲ್ಲಿ ಜೀವನ ನಡೆಸಲು, ಸಹಾಯ ಕೊಡುವ ವಿದ್ಯೆ ಇಲ್ಲ. ಐಶ್ವರ್ಯ ಹುಟ್ಟಿಸುವ ವಿದ್ಯೆ ಇಲ್ಲ. ಬಳೀ ಒನರ ಕೆಲ್ಸಗಳನ್ನು ಅನುಕರಿಸುವ ವಿದ್ಯೆ ಮಾತ್ರ ಇದೆ. ಆದ್ದರಿಂದ ಕರ್ನಾಟಕ ಮುಖಂಡರಿಗೆ ಸಹಾಯವಾಗಬೇಕು.

ಮಿ. ಸಿ. ಯಸ್. ವೆಂಕಪ್ಪಯ್ಯನವರು—ಕರ್ನಾಟಕ ಏಕೀಕರಣವಾಗಬೇಕೆಂತ ನಾವು ಒಪ್ಪುವದಾದರೆ ಅದಕ್ಕೆ ಸಹಾಯಕೊಡಬೇಕು. ಅದು ತತ್ಕಾಲ ಬೇಡವೆಂತ ಹೇಳಿರರು. ರಾಷ್ಟ್ರೀಯತ್ವದ ಬೆಳವಣಿಗೆಗೆ ಜಾತಿಗಳ್ನೇಮವು ಮಾಡಲು ಸುಷ್ಟಬೇಕು. ಕೊಡಗಿನಲ್ಲಿ ಅನೇಕ ಜಾತಿಗಳಿಂದ ವ್ಯವಹಾರದ ಭಾಷೆಯು ಕನ್ನಡವಾಗಿದೆ. ಆದ್ದರಿಂದ ಕನ್ನಡ ಪ್ರಾಂತ್ಯದೊಳಗೆ ಸೇರಲು ಕೂಡಿಕೊಂಡರೆ ಭಾಷಾಪ್ರೇಮವು ಬೆಳೆಯುತ್ತದೆ. ಮುಂದಿನ ಸ್ವರಾಜ್ಯ ಆಡಳಿತದಲ್ಲಿ ಗ್ರಾಮಗಳಿಗೆ ಹೆಚ್ಚಿನ ಹಕ್ಕುಗಳು ಸಿಕ್ಕುತ್ತವೆ. ಆದ್ದರಿಂದ ಬೇರೆ ಆಡಳಿತದ ಹೆಚ್ಚಿನ ಭಾಗವನ್ನು ಈ ದೇಶದ ಸರಕಾರವಲ್ಲೇ ಇರುತ್ತದೆ. ಆದದರಿಂದ ಕರ್ನಾಟಕಕ್ಕೆ ಸೇರಿದರೆ ನಷ್ಟ ಏನೂ ಇಲ್ಲ. ನಮಗೆ ಸ್ವತಂತ್ರ ಬೇಕಾದರೆ ನಮ್ಮ ದೇಶದವರು ಮಾತ್ರ ಕೇಳುವರೆ ಸಿಕ್ಕಲಾರದು. ನಮ್ಮ ಕೋರಿಕೆಗೆ ನೆರೆಯವರ ಮತ್ತು ಒಟ್ಟು ಹಿಂದೂಸ್ಥಾನದ ಹಿಂಬಲವು ಸಿಕ್ಕಬೇಕು. ಪ್ರತ್ಯೇಕ ಸರಕಾರದಲ್ಲಿ ಅನೇಕ ಅಧಿಕಾರಿಗಳ ಗೊತ್ತು ಮಾಡುತ್ತಿ ಕೊಂಡರೆ ಕೆಲವರಿಗೆ ಮಾತ್ರ ಪ್ರಯೋಜನವಾದೀತು. ಇದು ನಿಜವಲ್ಲ. ಕಲಸಗಾರರಿಗೆ ಉದ್ಯೋಗ ಸಿಕ್ಕುವದಾದರೂ ಆಧುನಿಕ ಅನುಭವಿ ರಾಜನೀತಿಜ್ಞ ಸಮಾಗಮ ಪಡೆದ ಒಬ್ಬ ಅಧಿಕಾರಿಯಲ್ಲಿ ಆಡಳಿತ ಅಧಿಕಾರಗಳನ್ನು ಒಪ್ಪಿಸಬೇಕು. ಆದರೆ ಏಕೀಕರಣವಾಗುವ ವರೆಗೆ ಬೇರೆಯೇ ಇರಬೇಕು

ಮಿ ವೆಂಕಪ್ಪಯ್ಯನವರೂ, ಮಿ ಉತ್ತಯ್ಯನವರೂ ಹೇಳಿದ್ದಕ್ಕೆ ಸ್ವಾತಂತ್ರ್ಯದ ಕಾರಣದಲ್ಲಿ ಭಾಷಾವಾರು ಪ್ರಾಂತ ರಚನೆಗೆ ವಿರೋಧ ಇದ್ದಿಲ್ಲ. ಅಟಾನಮಿ ಪಡೆಯಲು ಕಷ್ಟವಿಲ್ಲ. ಸ್ವತಂತ್ರ ಪ್ರಾಂತ್ಯವಾಗಿ ನಡೆಸಲು ಹಣದ ಅಡಚಣೆ ಇಲ್ಲ. ಕಾಫಿ ತೆರಿಗೆಯಿಂದ 20 ಲಕ್ಷ ರೂಪಾಯಿ ಸಿಕ್ಕಬಹುದು. ಸ್ವಾತಂತ್ರ್ಯ ದೇಶ ಸ್ವಾತಂತ್ರ್ಯಕ್ಕೆ ಹೇಗೆ ಸಾಧ್ಯವಾದೆ ಮುಂಬಯ್ಯ ಯೋಚಿಸುತ್ತಾ ಕೂರದೆ ನಮ್ಮ ರಾಜ್ಯವನ್ನು ನಮಗೇ ಬಿಟ್ಟುಕೊಡಬೇಕೆಂತ ಕೇಳಬೇಕು ಎಂತ ಕೆ ಪಿ ಚಿಣ್ಣಪ್ಪನವರು ಹೇಳಿದರು

ಮಿ ಐ ಸಿ ಸುಬ್ಬಯ್ಯನವರು ಈವರೆಗೆ ಮಾತಾಡಿದವರೊಳಗೆ ಹಲವರ ವಾದದ ಕಾರಣದಲ್ಲಿ ಆದರೆ ನನ್ನ ಅಭಿಪ್ರಾಯ, ಸ್ವರಾಜ್ಯ ದೊರೆತ ನಂತರ ಭಾಷಾವಾರು ಪ್ರಾಂತ್ಯವಾಗಬೇಕೆಂಬವರ ಹೊಸ ಅರ್ಥ ಇದೆ. ಪ್ರತ್ಯೇಕ ಪ್ರಾಂತ್ಯವಾಗಿಯೇ ನಡೆಸಲು ಸಾಧ್ಯವಿಲ್ಲ. ಮದ್ರಾಸಿಗೆ ಸೇರಿಕೊಂಡರೆ ಕರ್ನಾಟಕ ಏಕೀಕರಣ ಸುಲಭವಾಗುತ್ತದೆ. ಅಟಾನಮಿಯಲ್ಲಿ ಖರ್ಚು ಹೆಚ್ಚುತ್ತದೆ. ಆದ್ದರಿಂದ ಮದ್ರಾಸಿಗೆ ಸೇರಬೇಕು. ಅಟಾನಮಿಯಲ್ಲಿ ಮುಂದುವರಿಯಲಿಕ್ಕೆ ಸಾಧ್ಯವಿಲ್ಲ. ಮದ್ರಾಸಿನಿಂದ ನಮ್ಮ ದೇಶಕ್ಕೆ ಬೇಕಾದ ಧನ ಸಹಾಯ ಸಿಕ್ಕಬಹುದು

ಶ್ರೀ. ಯಂ. ಯಂ. ಸುಬ್ಬಣ್ಣನವರು ಅಧ್ಯಕ್ಷರ ಅನುಮತಿಯಿಂದ ಮಾತಾಡಿದರು—ಅಟಾನಮಿ ಕೇಳುವದರಲ್ಲಿ ಸಿಕ್ಕದನ್ನು ಕೇಳಿದರೆ ಡಿಫೆಕ್ಟು ಸ್ಪಷ್ಟ ಆಗುತ್ತದೆ. ಕಾಫಿಯಿಂದ 20 ಲಕ್ಷ, ಇನ್ನೊಂದರಿಂದ 20 ಲಕ್ಷ ಸಿಕ್ಕುತ್ತದೆ ಎಂತ ಹೇಳಿದರೂ ಲೆಕ್ಕವಿಲ್ಲ. ಏಕೀಕರಣಕ್ಕೆ ಒಪ್ಪಲೇಬೇಕು. ಆ ವರೆಗೆ ಮದ್ರಾಸಿಗೆ ಸೇರುವದು ಉತ್ತಮ. ಆಗ ನಮ್ಮ ಉತ್ಪತ್ತಿಯಿಂದಲೇ ನಮ್ಮ ಜಿಲ್ಲೆಯ ಖರ್ಚು ನಡೆಯಬೇಕೆಂತ ಇಲ್ಲ.

ಶ್ರೀ. ಯಸ್ ಸೋಮಯ್ಯನವರು—ದೇಶವನ್ನು ವಾಪಸು ಕೇಳಿದರೆ ಪ್ರಯೋಜನವಿಲ್ಲ. ಏಕೀಕರಣ ಬಿಟ್ಟು ಮದ್ರಾಸಿಗೆ ಸೇರಲು ಕೇಳಬೇಕು.

ಶ್ರೀ. ಬ ಪೂವಪ್ಪನವರು ಮದ್ರಾಸಿಗೆ ಸೇರುವದಕ್ಕೆ ಒತ್ತಾಸೆಯಾಗಿ ಮಾತಾಡಿದರು

ಶ್ರೀ. ಪಿ ಐ ಬೆಳ್ಳಿಯಪ್ಪನವರು—ಏಕೀಕರಣಕ್ಕೆ ಸ್ವಾರ್ಥತ್ಯಾಗ ಮಾಡಿ ಕೆಲಸ ಮಾಡಿದರೆ ಏಕೀಕರಣ ಬೇಗ ಆಗುತ್ತದೆ. ಸಂಪೂರ್ಣ ರಾಜಿಗೆ ಬೆಲೆ ಕೊಡಬೇಕು. ಮದ್ರಾಸಿನಿಂದ ಧನ ಸಹಾಯ ಸಿಕ್ಕಲಾರದು. ವ್ಯಕ್ತಿತ್ವದ ರಕ್ಷಣೆಯೇ ದೃಷ್ಟಿಯಾಗಿ ಹೋಗಿದೆ. ಇಷ್ಟು ಕಾಲ ಕಷ್ಟಪಟ್ಟಂತೆ ಬೇರೆಯೇ ಇದ್ದು ಏಕೀಕರಣಕ್ಕಾಗಿ ಪ್ರಯತ್ನಿಸುವ.

ಶ್ರೀ. ಯಂ ಯಂ ಸಿದ್ದೀಕರು—ಮದ್ರಾಸಿಗೆ ಸೇರಿದರೂ ಲಾಭವಿರುವಂತ ಇಲ್ಲ. ಸ್ವರಾಜ್ಯ ಸಿಕ್ಕುವ ವರೆಗೆ ಎಲ್ಲಿ ಸೇರಿದರೂ ಪ್ರಯೋಜನವಿಲ್ಲ. ಬೇರೆಯವರು ಸ್ವರಾಜ್ಯಕ್ಕೆ ಕಷ್ಟಪಡುವಂತೆಯೇ ನಾವೂ ಕಷ್ಟಪಡಬೇಕು. ಭಾಷಾವಾರು ಪ್ರಾಂತ್ಯ ರಚನೆ ಆಗಲೇ ಬೇಕು. ದೇಶ ಬಿಕ್ಷೆ ಬೇಡಿ ಸಿಕ್ಕುವದಿಲ್ಲ. ದುಡ್ಡು ಕಾಸು ಸಿಕ್ಕಬಹುದು. ಆದ್ದರಿಂದ ಕಷ್ಟಪಟ್ಟು ಸ್ವರಾಜ್ಯ ಪಡೆಯಬೇಕು.

ಕೇಳಿದರೆ ಕೊಡುತ್ತಿದ್ದೆವು ಎಂಬ ಮಾತನ್ನು ತಪ್ಪಿಸಬೇಕು. ಸ್ವರಾಜ್ಯ ಸಿಕ್ಕದರೆ ಪೂರ್ವದಂತೆ ಕಡಿಮೆ ಸಂಬಳದ ಅಧಿಕಾರಿಗಳನ್ನು ಇಟ್ಟುಕೊಂಡು ರಾಜ್ಯಭಾರ ನಡಿಸಬಹುದು. ಎಂತ ಶ್ರೀ. ಬಿ ಪೂಣಚ್ಚಯ್ಯನವರು ಹೇಳಿದರು.

ಅನಂತರ ಶ್ರೀ. ಸಿ. ಯಸ್. ಉತ್ತಯ್ಯನವರು ಈ ಕೆಳಗಿನ ಠರಾವನ್ನು ಸೂಚಿಸಿದರು.

'ಮುಂದೆ ಆಗಬಹುದಾದ ಹಿಂದೂ ದೇಶದ ರಾಜಕೀಯ ರಚನೆಯು ಪರಿವರ್ತನೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ತತ್ವವನ್ನನುಸರಿಸಿ ಕೊಡಗನ್ನೊಳಕೊಂಡ ಕರ್ನಾಟಕ ಪ್ರಾಂತ್ಯವಾಗಲು ಕೊಡಗು ಒಪ್ಪುತ್ತದೆ. ಅದು ಆಗುವ ವರೆಗೆ ಈ ದೇಶವು ಪೂರ್ಣ ಪ್ರಜಾ ಸತ್ತಾತ್ಮಕವಾದ ಪ್ರಾಂತೀಕ ಸ್ವಾತಂತ್ರ್ಯವುಳ್ಳದ್ದಾಗಿರಬೇಕು.'

ಶ್ರೀ. ಬಿ. ಪೂಣಚ್ಚಯ್ಯನವರು—ಈ ದೇಶವನ್ನು ದೇಶದವರಿಗೇನೇ ಬಿಟ್ಟುಕೊಡುವಂತೆ ಕೇಳಬೇಕೆಂಬ ಠರಾವನ್ನು ಸೂಚಿಸಿದರು.

ಶ್ರೀ. ಐ. ಸಿ. ಸುಬ್ಬಯ್ಯನವರು—ಕರ್ನಾಟಕ ಏಕೀಕರಣವಾಗುವವರೆಗೆ ಮದ್ರಾಸಿಗೆ ಸೇರಿಕೊಳ್ಳಬೇಕೆಂತ ಸೂಚಿಸಿದರು.

ಇವುಗಳ ಮೇಲೆ ಚರ್ಚೆ ನಡೆಯಿತು. ಎಲ್ಲಾ ಅಭಿಪ್ರಾಯದವರಿಗೂ ಒಪ್ಪಿಗೆಯಾಗುವ ಹಾಗೆ ಠರಾವಿಗೆ ಒಪ್ಪಿಗೆ ಕೊಡಬೇಕೆಂತ ಮಿ. ಉತ್ತಯ್ಯನವರು ಕೇಳಿಕೊಂಡರು. ... ಗ ಸರ್ವಸಮ್ಮತದಿಂದ ಅವರ ಠರಾವು ಮಂಜೂರಾಯಿತು

ಸ್ವತಂತ್ರ ಪ್ರಾಂತೀಕ ಸರಕಾರದ ಆಡಳಿತದ ತಪಶೀಲನ್ನು ನಿರ್ಣಯಿಸಿ ಈ ಸಭೆಯ ಮುಂದೆ ಒಂದು ತಿಂಗಳೊಳಗೆ ಇಡುವಂತೆ ಈ ಕೆಳಗಿನ ಉಪಸಮಿತಿಯು ನೇಮಿಸಲ್ಪಟ್ಟಿತು

ಶ್ರೀ—ಪಿ. ಟಿ ಕುಶಾಲಪ್ಪನವರು, ಸಿ ಯಸ್. ಉತ್ತಯ್ಯನವರು, ಸಿ ಯಸ್. ವೆಂಕಪ್ಪಯ್ಯನವರು, ಕೆ. ಪಿ ಚಿಣ್ಣಪ್ಪನವರು, ಯಸ್. ಮಂದಪ್ಪನವರು, ಐ ಸಿ. ಸುಬ್ಬಯ್ಯನವರು ಮತ್ತು ಪಿ ಐ ಬೆಳ್ಳಿಯಪ್ಪನವರು.

Executive Engineer's Office,
Mercara, the 2nd March '28.

NOTICE.

It is hereby notified for general information that the building known as "Inspection Bungalow at Kunnmotte" whose details are given below will be auctioned by the undersigned on 16th April 28 at 11 A. m. at the site. All intending purchasers are requested to be present at the place and at the time mentioned. The building will be knocked down to the highest bidder.

Intending bidder will have to deposit Rs 25 at the beginning of the sale. The amount of the unsuccessful bidder will be refunded as soon as the sale is closed. The successful bidder should pay 25% of the sale amount on the spot. The balance money must be paid at the Mercara Sub Divisional Office on or before 16–5–28, failing which, the building will be resold at his risk.

The sale will be subject to the approval of the Executive Engineer, Coorg Division.

DETAILS.

Inspection Bungalow at Kunnmotte	Superficial Plinth area including verandahs.	Cubic contents
Land 1 37 acres.		
Main building.	2,129	34,061.
Out House.	558	5,301
Latrine.	67	436
Bullock shed.	288.	2,592.

Sd/–C. A. Rajagopala Iyyengar,
Offg. Executive Engineer, Coorg.

ನೋಟೀಸು.

ಚೀಫ್ ಫಾರೆಸ್ಟ್ ಆಫೀಸ್,
ತಾ 1ನೇ ಮಾರ್ಚ್ 1928.

ಮಡಿಕೇರಿ ಪ್ಲಾಂಟೇಶನ್ ನಂಬರು 3ನೇ ತುಂಡಿನಲ್ಲಿ ಕಡಿದ ಬಿದ್ದಿರುವ 13 ನಮ್ಮರ ಲಾಟುಗಳನ್ನು 1928ನೇ ಇಸವಿ ಮಾರ್ಚ್ ತಾ. 16ನೇ ಬುಧವಾರ ಬೆಳಿಗ್ಗೆ 9 ಗಂಟೆಗೆ ಬಹಿರಂಗವಾಗಿ ಸದರಿ ಜಾಗದಲ್ಲಿ ಹರಾಜು ಮಾಡಲಾಗುವುದು. ಖರೀದಾರರು, ಸದರಿ ದಿನ ಹರಾಜು ಸ್ಥಳಕ್ಕೆ ಬಂದು ಸದರಿ ಸವುದೆಯನ್ನು ಚಡವರೆಕರನ್ನು ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ಸಂಗತಿಗಳನ್ನು ಹೆಡ್ಡಾಫೀಸಿನಿಂದ ತಿಳಿದುಕೊಳ್ಳುವುದು.

ಸಿ. ಯಂ. ಕುಶಾಲಪ್ಪ.
ಚೀಫ್ ಫಾರೆಸ್ಟ್ ಆಫೀಸರಿಗಾಗಿ

For Sale

About 300 acres of excellent paddy field and dry lands included in Palpare and Kanchikote Estates. For further particulars apply —

Superintendent,
Palpare Estate,
Titimatti Post

5—4 S. Coorg

ನೋಟೀಸು.

ಸೆಂಟ್ರಲ್ ಸಹಕಾರ ಬ್ಯಾಂಕಿಗೆ ಬರಬೇಕಾದ ಸಿ. ಪರ್ವಿ ಬಿಸ್ ಫಂಡಿನ ಪೈಕಿ ಬಾಕಿ ಮಾಡಿದ ಸೊಸೈಟಿಗಳಿಗೆ ಹಣ ಸಾಲ ಕೇಳಿದ ರಿಜಿಸ್ಟ್ರಾರ್ ಕೋಆಪರೇಟಿವ್ ಸೊಸೈಟಿಸ್ ರವರು ಆರ್ಡರ್ ಮಾಡಿರುವುದರಿಂದ ಎಲ್ಲಾ ಸೊಸೈಟಿಗಳ ಅವಗಾಹನೆಗೆ ಈ ಮೂಲಕ ತಿಳಿಸಲಾಗಿದೆ

ಸಿ. ಯಸ್. ವೆಂಕಪ್ಪಯ್ಯ.
ಗೌ. ಸೆಕ್ರೆಟರಿ

ವರ್ತಮಾನ ಸಂಗ್ರಹ.

ಒಳದೇಶ

ಕೊಡಗು ಸ್ಪೆಶ್ಯಲ್ ಟೆಸ್ಟ್ ಪರೀಕ್ಷೆಗಳು ಈ ತಾ. 26 ಮತ್ತು 27ರಲ್ಲಿ ಮಡಿಕೇರಿಯಲ್ಲಿ ನಡೆಯುವವು.

ಕಳೆದ ಮಂಗಳವಾರ ಮಡಿಕೇರಿಯಲ್ಲಿ ಕುದುರೆ ಜೂಜು ನಡೆಯಿತು. ಪುನಹ ನಾಳೆ ದಿನವೂ ನಡೆಯುವದು.

ಕಳೆದ ಫೆಬ್ರವರಿ ತಾ. 15ರಿಂದ ಒಂದು ವರ್ಷದ ವರೆಗೆ [illegible]ಯಲ್ಲಿ ಒಂದು ದೊಡ್ಡಿಯು ಸ್ಥಾಪಿಸಲಾಗಿದೆ.

ಕಳೆದ ಸೋಮವಾರ ಕೋರಂ ಇಲ್ಲದ್ದರಿಂದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ನಡೆಯಲಿಲ್ಲ. ಆ ಮೀಟಿಂಗು ನಾಳೆ [illegible] ಇಡಲಾಗಿದೆ.

ಈ ತಾ. 7 ಮತ್ತು 8ರಲ್ಲಿ ಮಡಿಕೇರಿಯಲ್ಲಿ ಉತ್ತರ ಕೊಡಗಿನ ಒಕ್ಕಲಿಗರಿಗೂ, ಬೆಂಗಳೂರು [illegible] ಪಂದ್ಯಾಟವು ನಡೆದು ಬೆಂಗಳೂರು [illegible] ಗೆದ್ದರು.

ಚೀಫ್ ಫಾರೆಸ್ಟ್ ಆಫೀಸರಾದ ಪೆ. ಜಿ. ಸಿ. ರಾಜನ್ ರವರಿಗೆ ಏಪ್ರಿಲ್ 9ರಿಂದ ಈಸ್ಟರ್ ರಜಾ ದಿನಗಳಲ್ಲದೆ [illegible] ಒಂದು ತಿಂಗಳ ಅವಧಿಯಲ್ಲಿಯೂ ರಜೆ ಮಂಜೂರಾಗಿದೆ.

ಸಿವಿಲ್ ಸರ್ಜನರಾದ ಮೇಜರ್ ಯಫ್. ಆರ್. ತಾರಾಪೋರವರಿಗೆ ಮಂಜೂರಾಗಿರುವ ಪೂರ್ತಿ ಸಂಬಳದ 8 ತಿಂಗಳ ರಜೆಯಲ್ಲಿ ಮೇ ತಿಂಗಳು 15ನೇ ತಾರೀಖು ವರೆಗೆ [illegible] ರಜೆಯು ಕೊಡಲಾಗಿದೆ.

ಕೊಡಗು ದೇಶದಲ್ಲಿ [illegible] ದಿನಗಳ [illegible] ಚೀಫ್ ಕಮಿಷನರವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಗೆ ಅಧಿಕಾರ ಕೊಟ್ಟಿರುವರು.

ಮಡಿಕೇರಿಯ ಎಮೆಚೂರ್ ನಾಟಕ ಮಂಡಳಿಯವರು [illegible] ಆದಿತ್ಯವಾರ ರಾತ್ರಿ ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ [illegible] ನಾಟಕವನ್ನು ತೃಪ್ತಿಕರವಾಗಿ ಆಡಿದರು [illegible] ಎಂದು ತಿಳಿಯುತ್ತೇವೆ.

ಹೈಸೊಡ್ಲೂರು ಗ್ರಾಮದ ದೇವಸ್ಥಾನದ ಪೂಜಾರಿ ವೆಂಕಟಮೂರ್ತಿ ಹುದಾರರು ಈ ತಾ 2ರಲ್ಲಿ ತನ್ನ ಮನೆಯ [illegible] ಕತ್ತಿಗೆಯನ್ನು ಜಾರಿಯಿಂದ ಕುಯಿದುಕೊಂಡು ಆತ್ಮಹತ್ಯ ಮಾಡಿಕೊಂಡಿರುವರೆಂದೂ ಇದು [illegible] ಎಂದೂ ವರ್ತಮಾನ.

ಕೊಡಗು ದೇಶದ ಎಲ್ಲಾ ಸಂತೆ ಸ್ಥಳಗಳಲ್ಲಿ 1928ನೇ ಏಪ್ರಿಲ್ 1ರಿಂದ ಒಂದು ವರ್ಷದ ವರೆಗೆ ಸಂತೆ ಸುಂಕ [illegible] ಆಯಾಯ ತಾಲೂಕು ಕಚೇರಿ [illegible] ಮಾರ್ಚಿ 8ರಿಂದ 21ರ ವರೆಗೆ ನಡೆಸಲ್ಪಡುವ ಹರಾಜು ಮೂಲಕ ಮಾರಲ್ಪಡುವದು.

ಮಕ್ಕಂದೂರು ಗ್ರಾಮದ ಮ[illegible]ಗೌಡ ಅಪ್ಪನವರ [illegible] ಒಂದು ಮನೆ, ಹಟ್ಟಿ, ಮುಂದೆ, [illegible] ಒಂದು ದಿನದಿನ ಕೊಟ್ಟಿಗೆಯು [illegible] ದಿನ ಮಧ್ಯಾಹ್ನ ಆಕಸ್ಮಾತ್ತಾಗಿ ಬೆಂಕಿಯಿಂದ ಸುಟ್ಟು ಸುಮಾರು 500 ರೂಪಾಯಿ ನಷ್ಟ [illegible] ಎಂದು ತಿಳಿಯುತ್ತೇವೆ.

[illegible]ಯೂರು ಗ್ರಾಮದ [illegible] ಗಣಪತಿಯವರು [illegible] ತಾ 3ರ ರಾತ್ರಿ [illegible] ಗ್ರಾಮದ [illegible] ಸುಬ್ಬಯ್ಯನವರು (ಪೂರ್ವದವರು) [illegible] ತಾ. 7ರಲ್ಲಿಯೂ [illegible] ತಿಳಿಯಲು ವ್ಯಸನಪಡುತ್ತೇವೆ.

ಕೊಡಗಿನ ಎಲ್ಲಾ ಸಂತೆ ಮೈದಾನಗಳಲ್ಲಿ ಮಕ್ಕ[illegible] 1928ನೇ ಏಪ್ರಿಲ್ 1ರಿಂದ 1929ನೇ ಮಾರ್ಚಿ ವರೆಗೆ ಒಂದು ವರ್ಷದ ಗುತ್ತಿಗೆಯನ್ನು [illegible] ಆಯಾಯ ತಾಲೂಕು [illegible] ತಾ 8 ರಿಂದ [illegible] ವರೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ಜನಿವಾರ್ರದ ಸಂಘದ 9 ವರ್ಷದ ವಾರ್ಷಿಕ ಸಭೆಯು [illegible] ಏಪ್ರಿಲ್ ತಾ. 21 ಮತ್ತು 22ರಲ್ಲಿ ನಡೆಯ[illegible] ಅಧ್ಯಕ್ಷಸ್ಥಾನವನ್ನು [illegible] ಶ್ರೀ. ಯಸ್. ಸತ್ಯಮೂರ್ತಿ [illegible] ಒಪ್ಪಿಗೆಯ [illegible] ಎಂಬ ಶೋಚನೀಯ ವರ್ತಮಾನವನ್ನು ಕೇಳಿ ಸಂತೋಷಪಡುತ್ತೇವೆ.

ಜನಿವಾರ್ರದ ಸಂಘದ 16ನೇ ಕಾನ್ಫರೆನ್ಸಿನ ಸ್ವಾಗತ [illegible] ಈ ತಾ 10ರಲ್ಲಿ ಸೋಮವಾರಪೇಟೆಯಲ್ಲಿ [illegible] ಮೀಟಿಂಗ್ ನಡೆದು [illegible] ವರ್ಕಿಂಗ್ ಕಮಿಟಿಯನ್ನು ಆರಿಸಿದರು. ಸದರಿ [illegible] ಮಿ. ಸಿ. ಹೆಚ್. ಜಿ. ರಾಜೇಗೌಡರನ್ನು ಸ್ವಾಗತ [illegible] ಇದರ ವಿವರವು [illegible] ಕಳೆ ಪ್ರಕಟವಾಗಲಿ.

ಪೊನ್ನಂಪೇಟೆ ನಾಡಿಗೆ ಸಂಬಂಧ ಎಲ್ಲಾ ಕೊಡವ [illegible] ಸಂಘಗಳ [illegible] ಪೊನ್ನಂಪೇಟೆ [illegible] ಸುಬ್ಬಯ್ಯನವರು [illegible] ತಾ. 27–2–28 ರಲ್ಲಿ ಮೀಟಿಂಗ್ ಮಾಡಿ ತೀರ್ಮಾನಿಸಿರುವ [illegible] ಬ್ಯಾಂಕಿನ ಗೌರವ [illegible] ರಂತೆ.

[illegible] ಹೈಸ್ಕೂಲ್ [illegible] ಈ ತಾ. [illegible] ಶ್ರೀ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಅದರಲ್ಲಿ ಅಧ್ಯಕ್ಷರು ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು. ನಂತರ ಹೆಡ್‌ಮಾಸ್ಟರ್ ವಿ. ಸಿ. [illegible] ರವರು ಸ್ಕೂಲಿನ ವರದಿಯನ್ನು ಓದಿದರು. ಅಧ್ಯಕ್ಷರ ಭಾಷಣವಾದ ನಂತರ ಒಂದು ಇಂಗ್ಲಿಷ್ ನಾಟಕ [illegible] ದಿಂದ [illegible] ಆಡಲ್ಪಟ್ಟಿತು.

ಹಿಂದೂದೇಶ.

[illegible] ಅವಿಭಕ್ತ ಕುಟುಂಬ [illegible] ತಾ. 4ರಲ್ಲಿ [illegible] ಬಂದು [illegible]

[illegible] 10 [illegible] ತಾ 13ರಲ್ಲಿ [illegible]

[illegible]

WANTED

An Anglo Indian or Indian Aya to take over charge of a child aged eight months. Freight, Boarding, Clothes and food given free. Salary 150/ per annum. Only those willing to travel from Coorg to Central Province need apply in person to.

Mrs. K. D. Kuttappa,
Kaikeri Village,
Gonikoppal Post,
(South Coorg).

ಬೇಕಾಗಿದ್ದಾಳೆ.

8 ತಿಂಗಳ ಪ್ರಾಯದ ಒಂದು ಮಗುವಿನ ಪೋಷಣೆಗಾಗಿ ಒಬ್ಬ ಇಂಡಿಯನ್ ಅಥವಾ ಆಂಗ್ಲೋ ಇಂಡಿಯನ್ ಆಯಿ ಬೇಕಾಗಿದ್ದಾಳೆ. ಪ್ರಯಾಣದ ಖರ್ಚು, ಊಟ, ಬಟ್ಟೆ ಕೊಡಲ್ಪಡುವುದು. ವರ್ಷಕ್ಕೆ ರೂ. 150 ಸಂಬಳ ಕೊಡಲಾಗುವುದು. ಕೊಡಗಿನಿಂದ ಸೆಂಟ್ರಲ್ ಪ್ರಾವಿನ್ಸಿಗೆ ಹೋಗಲು ತಯಾರಾದವರು ಮಾತ್ರ ಈ ಕೆಳಗಿನ ಅಡ್ರೆಸ್ಸಿಗೆ ಖುದ್ದು ಬಂದು ಅಪ್ಲಿಕೇಶನ್ ಕೊಡತಕ್ಕದ್ದು.

ಮಿಸೆಸ್ ಕೆ. ಡಿ. ಕುಟ್ಟಪ್ಪ,
ಕೈಕೇರಿ ಗ್ರಾಮ,
ಗೋಣಿಕೊಪ್ಪಲು,
(ದ. ಕೊಡಗು)

ಆಲ ಇಂಡಿಯಾ ಮ್ಯಾನ್ಯುಫ್ಯಾಕ್ಚರರ್ಸ್ [illegible] ಅಸೋಸಿಯೇಶನ್ ಲಿಮಿಟೆಡ್, ಮಡಿಕೇರಿ, (ಕೊಡಗು)

ತಾರೀಕು 11—1—1928ರ [illegible] ದೇಶದ 250 [illegible] 130 [illegible] ಮಡಿಕೇರಿ [illegible] ಹೆಡ್ ಆಫೀಸಿನಲ್ಲಿ ತಾರೀಕು 2— — 9ನೇ ಸಾಯಂಕಾಲ 3 ಗಂಟೆ [illegible]

1 ಬ್ರಾಂಚಿನ [illegible] ಕೊಡಗು ದೇಶದಲ್ಲಿ ಬ್ರಾಂಚಿಗೆ [illegible]

2 ಬ್ರಾಂಚಿನ [illegible] (consolidated) [illegible]

3. ಹೆಡ್ ಆಫೀಸಿನಲ್ಲಿ ಬ್ರಾಂಚಿನ (consolidated) [illegible]

ಪ್ರತಿ ವರ್ಷವೂ ಬ್ರಾಂಚ್ ಆಫೀಸಿನ ಮೆನ್ಯಾನೇಜರಿಗೆ ೬೦೦ ರೂಪಾಯಿಗಳನ್ನು ಕೊಡತಕ್ಕದ್ದು. ಅಂದರೆ ಈ ದಿನ ಮಾಡಿದ ನಿಬಂಧನೆಗಳು ಸೆಂಟ್ರಲ್ ಬೋರ್ಡಿನವರಿಂದ ಮಂಜೂರಾಗಲ್ಪಟ್ಟ ತಾರೀಖು ಲಾಗಾಯಿತಿನಿಂದ ಪ್ರತಿ ಸಾಲಿನ ಅಂತ್ಯದಲ್ಲಿ ಮೆನ್ಯಾನೇಜರಿಗೆ ಕೊಡತಕ್ಕದ್ದು.

೪ ಸಂಘದ ಚೀಫ್ ಆರ್ಗನೈಜರಿಗೆ ಸಂಘದೊಡನೆ ಮಾಡಿಕೊಂಡಿರತಕ್ಕ ಎಗ್ರಿಮೆಂಟು ಸಮ್ಮಂಧವಾಗಿ ಇವರು ಈ ಬ್ರಾಂಚಿಗೆ ರಿಯಾಯಿತಿ ತೋರಿಸಿ ಬರಕೊಂಡಿರುವ ಇವರ ತಾರೀಖು 29—12—1927ರ ನಂಬರು 1970ರ ಲೆಟರ್ ಮೇರೆ ಕೊಡಗು ದೇಶದಲ್ಲಿ ತೆಗೆದುಕೊಳ್ಳಲ್ಪಡುವ ಪ್ರತಿ ಬಾಂಡು ಒಂದಕ್ಕೆ ನಾಲ್ಕಾಣೆ ಪ್ರಕಾರ ಕಮಿಷನ್ ಬ್ರಾಂಚಿನಿಂದ ಚೀಫ್ ಆರ್ಗನೈಜರಿಗೆ ಕೊಡಲ್ಪಡತಕ್ಕದ್ದು. ಇದು ಬ್ರಾಂಚಿನ ಖರ್ಚುಗಳಲ್ಲಿ ಒಂದಾಗಿರತಕ್ಕದ್ದು.

ಮೇಲೆ ಬಂದಿನ ಪ್ಯಾರಾದಲ್ಲಿ ನಮೂದಿಸಿರುವಂತೆ ಒಟ್ಟು ಆದಾಯದಲ್ಲಿ ಅವರ ಎಲ್ಲಾ ವಿಧವಾದ ಖರ್ಚುಗಳು ಹೋಗುತ್ತಾ ಉಳಿಯುವ ನಿವ್ವಳ ಲಾಭ (Net profit) ದಲ್ಲಿ ಅರ್ಧವನ್ನು ಬಾಂಡು ಹೋಲ್ಡರುಗಳಿಗೂ, ಉಳಿದ ಅರ್ಧದಲ್ಲಿ ಪ್ರೊವಿನ್ಸಿಯಲ್ ಡೈರೆಕ್ಟರುಗಳ ಸಲಹೆಯಂತೆ ಕೊಡಗು ದೇಶದ ಶೇರು ಹೋಲ್ಡರುಗಳೂ ನಿರ್ಧರಿಸುವ ಪ್ರಕಾರ ರಿಸರ್ವ ಫಂಡಿಗಾಗಿ ಎತ್ತಲ್ಪಡತಕ್ಕ ಮೊಬಲಗು ಬಾತ ಉಳಿಯುವ ಮೊಬಲಗನ್ನು ಶೇರು ಹೋಲ್ಡರುಗಳಿಗೂ ಹಂಚತಕ್ಕದ್ದು.

೬ ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಮೂಲಧನವನ್ನು ಕೊಡಗು ಗವರ್ನಮೆಂಟಿನಲ್ಲಿಯೂ ಅಥವಾ ಕೊಡಗು ಗವರ್ನಮೆಂಟ್ ಮಾಡಿದ ಸಕ್ಯುರಿಟಿಯಲ್ಲಾಗಲಿ ಡಿಪಾಜಿಟ್ಟು ಇಡುವುದಕ್ಕೆ ತಕ್ಕ ಏರ್ಪಾಡನ್ನು ಪ್ರೊವಿನ್ಸಿಯಲ್ ಡೈರೆಕ್ಟರುಗಳು ಮಾಡತಕ್ಕದ್ದು. ಈ ವಿಧವಾಗಿ ಇಡಲ್ಪಡತಕ್ಕ ಮೂಲಧನ ಮತ್ತು ಅದರಿಂದ ಬರತಕ್ಕ ಬಡ್ಡಿ ಮತ್ತು ಲಾಭಗಳಿಗೆ ಇತರ ಕಡೆಗಳಲ್ಲಿ ಅಂದರೆ ಹೆಡ್ಡಾಫೀಸಿಗೂ ಬೇರೆ ಬ್ರಾಂಚು ಆಫೀಸುಗಳಿಗೂ ಸಂಘಕ್ಕೆ ಉಂಟಾಗಬಹುದಾದ ನಷ್ಟಕ್ಕೆ ಯಾವ ವಿಧವಾಗಿಯೂ ಆಧಾರ ಕೊಡದು. ಈ ಕಾರಣದಿಂದ ಕೊಡಗು ದೇಶದಲ್ಲಿರುವ ಬಾಂಡು ಮತ್ತು ಶೇರು ಹೋಲ್ಡರುಗಳು ಕೊಡಗು ದೇಶದಲ್ಲಿ ನಡಿಯುವ ಬ್ರಾಂಚಿನ ಕಾರ್ಯಗಳಿಂದ ಉಂಟಾಗುವ ಲಾಭಕ್ಕೆ ಮಾತ್ರ ಅರ್ಹರಾಗಿರತಕ್ಕದ್ದೇ ಹೊರತು, ಕೊಡಗು ದೇಶದ ಹೊರಗಡೆ ಸಂಘಕ್ಕೆ ಉಂಟಾಗುವ ಆದಾಯ ನಷ್ಟಗಳಿಗೆ ಸಂಬಂಧವಿರುವುದಿಲ್ಲ.

ಸಂಘದ ನಿಬಂಧನೆಗಳಿಗೂ ಮತ್ತು ಮೇಲ್ಕಂಡ ನಿಬಂಧನೆಗಳಿಗೂ ಅನುಸಾರವಾಗಿ ಪ್ರೊವಿನ್ಸಿಯಲ್ ಡೈರೆಕ್ಟರುಗಳು ಮೇನೇಜ್‌ಮೆಂಟ್ ಮಾಡುವ ಸಂದರ್ಭದಲ್ಲಿ ಬ್ರಾಂಚು ಯಾವಾಗಲೂ ಖಾಯಂ ಆಗಿರತಕ್ಕದ್ದು. ಪ್ರೊವಿನ್ಸಿಯಲ್ ಡೈರೆಕ್ಟರುಗಳನ್ನು ಚುನಾಯಿಸುವ ಅಧಿಕಾರವು ಕೊಡಗು ದೇಶದಲ್ಲಿರುವ ಶೇರು ಮತ್ತು ಬಾಂಡು ಹೋಲ್ಡರುಗಳಿಗೇನೇ ಇರತಕ್ಕದ್ದು.

೮ ಸಂಘದ 89 (1) ನಿಬಂಧನೆಯನ್ನು ಈ ನಿಬಂಧನೆಗಳಿಗೆ ಅನುಸಾರವಾಗಿ ತಿದ್ದುಪಡಿ ಮಾಡಬೇಕಾದ ಅವಶ್ಯಕತೆ ಇರುವುದರಿಂದ ಅದನ್ನು ಈ ಕೆಳಗೆ ಕಂಡ ಮೇರೆ ಈ ಬ್ರಾಂಚು ತಕ್ಕ ಮಟ್ಟಿಗೆ ತಿದ್ದುಪಡಿ ಮಾಡತಕ್ಕದ್ದು.

ಬ್ಯಾಂಕ್ ಸಂಗಡ ಮಾಡುವ ಲೇವಾದೇವಿ ಬಾಬಿನಲ್ಲಿ ಈ ಬ್ರಾಂಚಿನ ಚೇರ್‌ಮ್ಯಾನರವರ, ಬೋರ್ಡ್ ಡೈರೆಕ್ಟರು ಮತ್ತು ಸೆಕ್ರೆಟರಿಯವರು ಸಹಿ ರುಜು ಮಾಡತಕ್ಕದ್ದು.

೯ ಈ ನಿಬಂಧನೆಗಳನ್ನು ಇನ್ನು ಮುಂದೆ ಆಗಿಂದಾಗ್ಯೆ ಅವಶ್ಯ ಕಂಡಾಗೆಲ್ಲಾ ತಿದ್ದುಪಡಿ ಮಾಡುವ ಅಧಿಕಾರವು ಈ ಬ್ರಾಂಚಿಗೆ ಇರತಕ್ಕದ್ದು.

ಮಡಿಕೇರಿ

ಸಿ. ದೇವಯ್ಯ,
(ಅಧ್ಯಕ್ಷರು.)

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಗ್ರಹಚಾರ

ಅಯ್ಯಾ,

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಗ್ರಹಚಾರವೆಂತಹದೆಂದು ಹೇಳಲಿ! ಈ ಫಂಡು ಕಳೆದ ಮೂರು ನಾಲ್ಕು ವರ್ಷಗಳಿಂದ ಸರಿಯಾದ ಜನರಲ್ ಮೀಟಿಂಗು ಕಮಿಟಿ ಮೀಟಿಂಗುಗಳು ನಡೆಯದೆ ನಿದ್ರಾವಸ್ಥೆಯಲ್ಲಿದ್ದುದನ್ನು ನೋಡಲಾರದೆ ಇದರ ಕೆಲವು ಮೆಂಬರುಗಳು ಒಂದು ಜನರಲ್ ಮೀಟಿಂಗು ಮಾಡುವಂತೆ ಸೆಕ್ರೆಟರಿಯವರಿಗೆ ಒಂದು ಕೋರಿಕೆಯ ಪತ್ರವನ್ನು ಕಳುಹಿಸಿದರು. ಆದರ ಮೇರೆ ಸೆಕ್ರೆಟರಿಯವರು ಕಳೆದ ಜನವರಿಯಲ್ಲಿ ಒಂದು ಜನರಲ್ ಮೀಟಿಂಗನ್ನು ನಡಿಸಿದರು. ಮೀಟಿಂಗಿನಲ್ಲಿ ನೆರೆದಿದ್ದ ಮೆಂಬರುಗಳು ತುಂಬಾ ಉತ್ಸಾಹದಿಂದ ದೀರ್ಘ ಕಾಲ ಚರ್ಚಿಸಿ ಫಂಡಿನ ಅಭಿವೃದ್ಧಿಯನ್ನು ಸಾಧಿಸುವ ನಿರ್ಧಾರಗಳನ್ನು ಮಾಡಿದರು. ಇದರಿಂದ ಫಂಡಿನ ಗ್ರಹಚಾರ ದೋಷವು ಪರಿಹಾರವಾಯಿತೆಂದು ನಂಬಿದೆವು. ಆದರೆ ಅದರ ಶನಿ ದೆಸೆಯು ಇನ್ನೂ ಬಿಡಲಿಲ್ಲ. ಆ ದಿನ ನಿರ್ಧಾರಗಳನ್ನು ಜಾರಿಗೆ ತರಬೇಕೆಂಬುವಷ್ಟರಲ್ಲಿ ಆ ಮೀಟಿಂಗಿನ ಪ್ರೊಸೀಡಿಂಗ್ಸನ್ನೇ ಅಲ್ಲಗಳೆಯುವ ವಿವಾದಗಳು ನಡೆಯಿತು. ಆದರೂ ಕೂಡ ಇನ್ನೊಂದು ಮೀಟಿಂಗ್ ಮಾಡಿ ಫಂಡಿನ ಏಳಿಗೆಯನ್ನು ಸಾಧಿಸುವ ಎಂಬ ಅಭಿಪ್ರಾಯದಿಂದ ಇನ್ನೊಂದು ಮೀಟಿಂಗು ಮಾಡಲು ಹಲವರು ಒಪ್ಪಿದರು. ಆ ಮೀಟಿಂಗು ಕಳೆದ ಫೆಬ್ರವರಿ 28ರಲ್ಲಿ ನಡೆಯುವದೆಂದು ಸೆಕ್ರೆಟರಿಯವರು ಪತ್ರಿಕೆಗಳಲ್ಲಿ ನೋಟೀಸು ಪ್ರಕಟಿಸಿದರು. ನೋಟೀಸಿನ ಮೇರೆ ಸದರಿ ದಿನ ದೇವಸ್ಥಾನದ ಹಾಲ್‌ಗೆ ಹೋಗಿ ನೋಡಿದಲ್ಲಿ ಅಧ್ಯಕ್ಷರಾದ ರಾ ಬಾ. ಕೆ ಬಂಗಪ್ಪನವರಿಗೆ ಅಸೌಖ್ಯವಾದುದರಿಂದ ಮೀಟಿಂಗು ಆದಿನ ನಡೆಯುವದಿಲ್ಲವೆಂದು ತಿಳಿಯಬಂತು. ಮತ್ತ್ಯಾವಾಗ ನಡೆಯುವದೆಂದು ವಿಚಾರಿಸಿದಾಗ ಮೀಟಿಂಗು "ಸೈನೆ ಡೈ" ಇನ್ನೊಂದು ಹುಕುಮಿನ ವರೆಗೆ ಮುಂದಕ್ಕೆ ಹಾಕಲಾಗಿದೆಯೆಂದು ಸುದ್ದಿ ಸಿಕ್ಕಿತು! ಫಂಡಿನ ದುರಾದೃಷ್ಟದಿಂದಲ್ಲವೇ ಆ ದಿನ ಅಧ್ಯಕ್ಷರಿಗೆ ಕಾಯಿಲೆಯಾದದ್ದು! ಅಧ್ಯಕ್ಷರಿಗೆ ಕಾಯಿಲೆಯಾದರೆ ಮೀಟಿಂಗನ್ನು ಬಾಕಿ ಮಾಡುವ ಪದ್ಧತಿ ಬೇರೆ ಎಲ್ಲಿಯೂ ಇಲ್ಲದಿದ್ದರೂ, ಫಂಡಿನ ಹೀನ ದೆಸೆಯಿಂದಲ್ಲವೇ ಆ ದಿನ ಮೀಟಿಂಗು ಬಾಕಿ ಮಾಡಲಾದದ್ದು? ಬಡ ವಿದ್ಯಾರ್ಥಿಗಳ ಸಹಾಯಕ್ಕಾಗಿ ಹೊರಟ ಈ ಫಂಡಿನ ಗ್ರಹಚಾರವು ಯಾವಾಗ ಪರಿಹಾರವಾಗುವದೆಂದೂ, ಇದರ ಜನರಲ್ ಮೀಟಿಂಗು ಯಾವಾಗ ನಡೆದು ಕೆಲಸವು ಸರಿಯಾಗಿ ಪ್ರಾರಂಭವಾಗುವದೆಂದೂ ತಿಳಿದ ಜೋತಿಷ್ಯಗಾರರ್‍ಯಾರಾದರೂ ಪ್ರಕಟಿಸಿದ್ದರೆ ಅವರಿಗೆ ಋಣಿಯಾಗುತ್ತಿದ್ದೆನು.

'ಕೊಡವ

'ಶನಿವಾರಸಂತೆ ಯೂನಿಯನ್'

ಕಲವು ದಿವಸಗಳ ಹಿಂದೆ ಇಲ್ಲಿಯ ಕೆಲವು ಉದ್ಯೋಗಸ್ಥರೂ, ಸುತ್ತು ಮುತ್ತಲಿನ ಕಲವು ಮಹನೀಯರೂ ಸೇರಿ "ಶನಿವಾರಸಂತೆ ಯೂನಿಯನ್" ಎಂಬ ಒಂದು ಸಂಘವನ್ನೇರ್ಪಡಿಸಿದರು. ಈ ಸಂಘಕ್ಕೆ ಈಗ ಅನೇಕ ಮುಖ್ಯ ವರ್ತಮಾನ ಪತ್ರಿಕೆಗಳು ಬರುತ್ತಿರುವವು. ಇದು ಇನ್ನೂ ಸ್ಥಾಪನೆಯಾಗಿ ಒಂದು ತಿಂಗಳಾಗಿರುವದಿಲ್ಲ. ಆಗಲೇ ಮೆಂಬರುಗಳೆಲ್ಲರೂ ಬಹಳ ಉತ್ಸುಕತೆಯನ್ನು ತೋರಿಸುತ್ತಿರುವರು.

ಈಗಾಗಲೇ ಅದರ ಒಂದು ಜನರಲ್ ಮೀಟಿಂಗು ಕಳೆದ ವಾರದಲ್ಲು ನಡೆಯಿತು. ಈ ಕೆಳಗಿನ ಮಹನೀಯರು ಈ ಸಂಘದ ಕಾರ್ಯಕ್ರಮಗಳನ್ನು ಸುಲಲಿತವಾಗಿ ನಡೆಸಲು ಚುನಾಯಿತರಾಗಿರುವರೆಂದು ತಿಳಿಯ ಬರುತ್ತದೆ

ಮೆ ಪಿ ಜಿ. ಪೂಣಚ್ಚನವರು	ಅಧ್ಯಕ್ಷರು.
ಮೆ. ಸಿ. ಹೆಚ್ ಜಿ ಕಾಳಯ್ಯಗೌಡರು	ಉಪಾಧ್ಯಕ್ಷರು
ಮೆ. ಕೆ. ಸಿ ಮುದ್ದಪ್ಪನವರು	ಕಾರ್ಯದರ್ಶಿ

ಮೆ ಗಳಾದ ಕೆ ಟಿ ನಂಜಪ್ಪನವರು, ಎ ಬಸವರಾಜುಗೌಡರು, ಸಿ. ಡಿ ಉತ್ತಯ್ಯನವರು ಮತ್ತು ಸಿ ವಿ ಚೆನ್ನಕೇಶವಯ್ಯನವರು ಕಮಿಟಿ ಮೆಂಬರುಗಳಾಗಿ ಚುನಾಯಿತರಾಗಿರುವರು.

ಇಂಥಾ ಏರ್ಪಾಡುಗಳನ್ನು ನೋಡುವಾಗ, ಈ ಸಂಘಕ್ಕೆ ಕಲವು ಕಾಲ ಆಯುಷ್ಯ ಇರಬಹುದಾಗಿ ಕಂಡುಬರುತ್ತದೆ. ಈಗಾಗಲೇ ಆ ಸಂಘದವರು ಮೆ. ಎಂ. ಎಸ್ ದೇವರಾಯರಿಂದ ಒಂದು ಹರಿಕಥೆಯನ್ನು ನಡೆಸಲು ನಿಶ್ಚೈಸಿರುವರು. ಇಂಥ ಉತ್ಸುಕತೆಯು ಎಂದಿನ ವರೆಗೆ ಇರುತ್ತದೆಂದು ನೋಡಬೇಕಾಗಿದೆ. ಪೂರ್ವದಲ್ಲಿ ನಮ್ಮ ತಂದೆಯವರ ಕಾಲದಲ್ಲೂ ಇಂಥಾ ಒಂದು ಸಂಘವು ಸ್ಥಾಪನೆಯಾಗಿದ್ದಿತು. ಅನೇಕ ಮೆಂಬರುಗಳು ಸೇರಿದ್ದರು. ಆದರೆ ಕಲವು ಕಾಲದಲ್ಲಿಯೇ ಅಂತ್ಯಕಾಲವು ಪ್ರಾಪ್ತವಾಯಿತು. ಈ ಸಂಘವೂ ಅದನ್ನೇ ಹಿಂಬಾಲಿಸುತ್ತದೋ ಯಾ ಸುತ್ತು ಮುತ್ತಲಿನ ಸಂಘಕ್ಕೆ ಒಂದು ಮಾದರಿಯನ್ನು ಏರ್ಪಡಿಸುತ್ತದೋ ಎಂಬುದನ್ನು ನೋಡಬೇಕಾಗಿದೆ. ಈಗಿನ ಉತ್ಸುಕತೆಯು ಇನ್ನು ಮುಂದಕ್ಕೂ ಇದ್ದರೆ ಖಂಡಿತವಾಗಿ ಊರ್ಜಿತ ಸ್ಥಿತಿಯನ್ನು ಹೊಂದಬಹುದು. ಅದೇ ಎಲ್ಲರ ಆಕಾಂಕ್ಷೆಯು. ಅದನ್ನು ಸಫಲಗೊಳಿಸುವರೆಂದು ಭಾವಿಸುತ್ತೇನೆ.

'ದೂರದೃಷ್ಟಿ'

ಸಂಬರಾಜ ಪಟ್ಣ ತಾಲೋಕು ಮಹಾ ಜನರಲ್ಲಿ ವಿನಂತಿ.

ಮಹನೀಯರೇ,

ರಾಷ್ಟ್ರಾಭಿಮಾನವಿರುವ ಎಲ್ಲಾ ಸಂಸ್ಥೆಗಳೂ ಖಾದಿಗೆ ಉತ್ತೇಜನ ಕೊಡುತ್ತಿರುವವು, ಹಾಗೆಯೇ ಜಮೀನ್ದಾರರ ಸಂಘವೂ ಸಹ ಉತ್ತೇಜನ ಕೊಡುತ್ತಿದೆ. ಮುಂದಿನ ಅಧಿವೇಶನ ಸಮಯದಲ್ಲಿ ಒಂದು ಖಾದೀ ಪ್ರದರ್ಶನವನ್ನು ಏರ್ಪಡಿಸುವರು. ಇದಕ್ಕಾಗಿ ಹೆಚ್ಚಿಗೆ ಖರ್ಚು ಇರುವುದರಿಂದ ವಿಶೇಷವಾಗಿ ಬರುವವರು ಪ್ರದರ್ಶನದಲ್ಲಿ ಟಿಕೇಟುಗಳನ್ನು ಕೊಳ್ಳಬೇಕು. ಚಂದಾ ಹಣವನ್ನಿತ್ತಾಗಲಿ ಈ ಖರ್ಚನ್ನು ಸರಿ ಪಡಿಸಬಹುದು. ನಾವೆಲ್ಲ ಸಭೆಯನಂತರ ಮುಂದಾಳುಗಳು ನಿಂತು ಹೊರಗಿನಿಂದ ಬರಲು ಪ್ರಾರಂಭಿಸಿದರು, ಆ ಸ್ಮೃತಿ ಸಭೆಗೆ ರಾಷ್ಟ್ರ ಮಹಾಸಭೆಯ ಅಧ್ಯಕ್ಷರೇ ಈ ಸಭೆಗೂ ಅಧ್ಯಕ್ಷರೆಂದರು, ಸೋಮವಾರಪೇಟೆಯ ಮಹಾ ಸಭೆಯಲ್ಲಿ ಖಾದೀ ಪ್ರದರ್ಶನವು ನಡೆಯಿತೆಂದು ಹೆಸರು ಬರಲಿ! ಅಖಿಲ ಭಾರತೀಯ ಚರಕ ಸಂಘದವರ ಕರ್ನಾಟಕ ಶಾಖೆಯವರು ಈ ಕೆಲಸವನ್ನು ಯಾವ ತೊಂದರೆಯೂ ಇಲ್ಲದೆ ಸುಲಭದಲ್ಲಿ ನಡೆಸುವರು. ಇಂಥಾ ಖಾದೀ ಪ್ರದರ್ಶನಗಳನ್ನು ಏರ್ಪಡಿಸಲು ಮಹಾ ಖಾದೀ ಭಕ್ತರನ್ನು ಬರಮಾಡಿಕೊಳ್ಳಬೇಕು. ಸ್ಥಾನಿಕರು ಮನಸ್ಸು ಮಾತ್ರ ಮಾಡಬೇಕು. ಸಂಬರಾಜ ಪಟ್ಣದವರು ಈ ವಿಷಯವನ್ನು ಆಲೋಚಿಸದೇ ಬಿಡರು ವೆಂದು ನಂಬುತ್ತೇನೆ.

ರಾಷ್ಟ್ರಾಭಿಮಾನಿ

ಇರ್ಪು ದೇವಸ್ಥಾನದ ಮೀಟಿಂಗು.

ಅಯ್ಯಾ,

ಇರ್ಪು ಜಾತ್ರೆಯಲ್ಲು ತಾ 20—2—28ರಲ್ಲಿ ರಾಮಕ್ಷೇತ್ರ ದೇವಾಲಯದಲ್ಲು ಅಲ್ಲಿ ನೆರೆದಿದ್ದ ಕಿಗ್ಗಟ್ಟು ನಾಡಿನವರ ಮತ್ತು ಈ ದೇಶದ ಮತ್ತು ಇತರ ದ ಮಹನೀಯರ ಒಂದು ಮೀಟಿಂಗು ಜರಗಿತು. ನಂಬರಲ್ಲಿ ಅನೇಕ ಮಹನೀಯರ ಮೆ. ಅಜ್ಜಮಾಡ ಬೆಳ್ಯಪ್ಪನವರು ಅಧ್ಯಕ್ಷರಾಗಿ ಮೀಟಿಂಗಿನ ವಿವರವನ್ನು ಕೊಡಬೇಕೆಂದು ಕೇಳಿಕೊಂಡ ಮೇರೆ, ಮೆ. ಬೋಪಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಈ ಕೆಳಗಿನ ಅಭಿಪ್ರಾಯಗಳನ್ನು ವಿವರಿಸಿ ಹೇಳಿದರು. ಮಹಾ ಶಿವರಾತ್ರಿನ ಈ ಜಾತ್ರೆಯಲ್ಲು ಈಗೀಗ ಜನ ಸಮುದಾಯವು ಕಡಿಮೆಯಾಗುತ್ತಿರುವದೂ ದೇವಸ್ಥಾನದ ಉತ್ಪತ್ತಿ ಹೆಚ್ಚುತ್ತಿಲ್ಲದಿರುವದರ ಕುಂದಕವೆಂದು ಕಾಣುತ್ತದೆಂದು ಹೇಳಿ ಕಿಗ್ಗಟ್ಟು ನಾಡಿನವರಾದ ನಮ್ಮ ಅಜ್ಜಂದಿಯರು ಇಲ್ಲಿ ಮಾಡಿದ ಕೆಲಸದ ಸಾಕ್ಷಿ ಒಗ್ಗ ಮಡಗಿದ ಶಿಲಾ ಶಾಸನವನ್ನು ಓದಿ ಹೇಳಿದರು. ಶಿಲಾ ಶಾಸನ—' ಶಾಲಿವಾಹನ ಶಕ ವರ್ಷ 1... ನೇ ಸಾರ್ವರಿನಾಮ ಸಂವತ್ಸರದಲ್ಲಿ ಕಿಗ್ಗಟ್ಟು ಪತ್ತು ನಾಡಿನ ರೈತರು ತಮ್ಮ ಬಕ್ತಿಯಿಂದ ಲಕ್ಷ್ಮಣತೀರ್ಥದ ಒಳ ಇರುವ ಇರ್ಪು ರಾಮೇಶ್ವರ ದೇವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ' ಸದ್ಭಕ್ತರಾದ ಅಜ್ಜಂದಿಯರ ಮಕ್ಕಳಾದ ನಾವು ಈ ದೇವಾಲಯವನ್ನು ಈ ರೀತಿ ಇಟ್ಟಿರುವದು ನಮ್ಮ ವೃದ್ಧಿಯನ್ನು ತೋರಿಸಿದಂತಾಗುವದಿಲ್ಲ. ಇದನ್ನು ವೃದ್ಧಿಗೊಳಿಸಿ ಭಕ್ತಿಯನ್ನು ಹೆಚ್ಚಿಸಲಿಕ್ಕೆ ಒಗ್ಗಟ್ಟಿಲ್ಲದೆ ಇರುವುದೇ ಒಂದು ಕಾರಣವಾಗಿದೆ. ಇದನ್ನು ಸರಿಪಡಿಸುವದಕ್ಕೆ ಎಲ್ಲರೂ ಒಮ್ಮನಸ್ಸು ಮಾಡಿದರೆ ಅತಿ ಸುಲಭದಲ್ಲಿ ಬೆಳೆ ತಾಲೋಕಿನವರು ಮೊದಲಿನಂತೆ ಒಂದುನೂರು ಒಟ್ಟು ಮನೆಗೆ 0—8—0 ಯಾ 10 ಸೇರು ಭತ್ತ ಕೊಟ್ಟರೆ ಸಾಕಾಗಿದೆ. ಆ ವಸೂಲಾತಿಯಿಂದ ದೇವಸ್ಥಾನದ ನಾಲ್ಕು ಭಾಗಗಳಲ್ಲಿ ಪೌಳಿ ಸರಿಪಡಿಸಿ ಹೆಚ್ಚಿನ ಮಾಳಿಗೆಗಳನ್ನು ಕಟ್ಟಿಸಬಹುದು. ಇದರಿಂದ ಅನೇಕ ಭಕ್ತಾದಿಗಳು ಬಂದು ಉಳಕೊಳ್ಳಲಿಕ್ಕೆ ಅನುಕೂಲವಾಗಿ ದೇವಸ್ಥಾನದ ಉತ್ಪತ್ತಿಯೂ, ವ್ಯಾಪಾರಿಗಳ ವ್ಯಾಪಾರವೂ ಹೆಚ್ಚುವದು. ಅಲ್ಲದೆ ನಾವು ನಮ್ಮ ಅಜ್ಜಂದಿರ ಸತ್ಪುತ್ರರೆಂದು ತೋರಿಸಿದಂತಾಗುತ್ತೆ. ಇದಕ್ಕೆ ಕೊಡಗಿನ ಎಲ್ಲಾ ಭಾಗದ ನಿವಾಸಿಗಳೂ ಮತ್ತು ಇತರ ಮತಸ್ಥರೂ ಸಹ ತುಂಬಾ ಸಹಾಯ ಮಾಡುವರೆಂದು ಭರವಸೆ ಇದೆಯೆಂದು ಮೊದಲಾಗಿ ಹೇಳಿ, ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಸಭಿಕರೆಲ್ಲರೂ ಇದಕ್ಕೆ ಸಂತೋಷಪಟ್ಟು ಈ ಕಾರ್ಯವನ್ನು ಖಂಡಿತವಾಗಿ ನಡಿಸಬೇಕೆಂತಲೂ ಇದನ್ನು ತಕ್ಕ ರೀತಿಯಿಂದ ನಡಿಸಲಿಕ್ಕೆ ಮೆಂಬರುಗಳೂ, ಕಾರ್ಯದರ್ಶಿಗಳೂ ವಗೈರೆಯವರನ್ನು ಚುನಾಯಿಸಿ ಈ ಕಾರ್ಯವನ್ನು ವಹಿಸ ಕೈಕೊಳ್ಳುವ ಏರ್ಪಾಡು ಮಾಡಲಿಕ್ಕೆ ಬೇಕಾದ ಎಲ್ಲಾ ಕಾರ್ಯಭಾರಗಳನ್ನು ಈ ದಿನ ಅಧ್ಯಕ್ಷರಾದ ಮೆ. ಬೋಪಯ್ಯನವರೇ ವಹಿಸಿಕೊಂಡು, ತಕ್ಕ ಮೀಟಿಂಗುಗಳನ್ನು ಏರ್ಪಡಿಸಬೇಕಾಗಿ ಕೇಳಿಕೊಂಡರು. ಇದಕ್ಕೆ ಅಧ್ಯಕ್ಷರು ತುಂಬಾ ಸಂತೋಷದಿಂದ ಪ್ರಯತ್ನಿಸುತ್ತೇನೆಂದು ಒಪ್ಪಿಕೊಂಡರು. ದೇವರಿಗೆ ವಂದನೆಯನ್ನರ್ಪಿಸಿ ಕರತಾಡನದಿಂದ ಮೀಟಿಂಗು ಬರಕಾಸ್ತು ಆಯಿತು.

ಎ. ಡಬ್ಲ್ಯು ಕೆ

ಡಿಸ್ಟ್ರಿಕ್ಟ್‌ಬೋರ್ಡಿನ ವಿಷಯಗಳು.

ಅಯ್ಯಾ,

ಈ ಕೆಳಗಿನ ಸಂಗತಿಗಳು ಬರುವ ಡಿಸ್ಟ್ರಿಕ್ಟ್‌ಬೋರ್ಡ್ ಮೀಟಿಂಗಿನಲ್ಲಿ ಚರ್ಚಿಸಲ್ಪಡುವದರಿಂದ ಇವುಗಳನ್ನು ಜನರ ತಿಳುವಳಿಕೆ ಬಗ್ಗೆ ಪ್ರಕಟಿಸುವಿರಾಗಿ ನಂಬುತ್ತೇನೆ.

(1) ಎಲಿಮೆಂಟರಿ ಶಾಲೆಗಳ ಪಂಚಾಯತರನ್ನು ವರ್ಷಕ್ಕೊಮ್ಮೆ ಆಯಾಯ ಸ್ಕೂಲಿಗೆ ಸಮ್ಮಂಧಪಟ್ಟ ಗ್ರಾಮಸ್ಥರೇ ಚುನಾಯಿಸಿಕೊಳ್ಳುವಂತೆ ಏರ್ಪಾಡು ಆಗಬೇಕು

(2) ಎಲಿಮೆಂಟರಿ ಶಾಲೆಗಳ ಟೆಕ್ಸ್ಟ್‌ಬುಕ್ಕು ಕಮಿಟಿ ನಮ್ಮ ದೇಶಕ್ಕೆ ಬೇರೆಯಾಗಬೇಕು

(3) ಪ್ರೈಮರಿ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡುವದಕ್ಕೆ ತಕ್ಕ ಏರ್ಪಾಡು ಮಾಡಲು ಒಂದು ಕಮಿಟಿಯನ್ನು ಏರ್ಪಡಿಸಬೇಕು.

(4) ಅಮ್ಮತ್ತಿ ಎಲಿಮೆಂಟರಿ ಸ್ಕೂಲನ್ನು 8ನೇ ಸ್ಟಾಂಡರ್ಡಿಗೆ ಏರಿಸಿಕೊಡಬೇಕು.

(5) ಪೊನ್ನಂಪೇಟೆಯಲ್ಲಿರುವ ಸ್ವಂತ ಸ್ಕೂಲನ್ನು ಬೋರ್ಡಿನವರು ವಹಿಸಿಕೊಳ್ಳಬೇಕು.

(6) ಇಂಪೀರಿಯಲ ಗವರ್ನಮೆಂಟಿನಿಂದ ಸ್ಥಳೀಯ ಗವರ್ನಮೆಂಟಿಗೆ ಬಿಟ್ಟುಕೊಟ್ಟಿರುವ 12,000 ರೂಪಾಯಿಗಳಲ್ಲಿ 5000 ರೂಪಾಯಿಗಳನ್ನು ಡಿ ಬೋರ್ಡಿಗೆ ಬಿಟ್ಟುಕೊಡುವಂತೆ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳಬೇಕು.

(7) 18 ವರ್ಷ ಪ್ರಾಯಕ್ಕೆ ಕಮ್ಮಿ ಇರುವವರು ಸಿಗರೇಟು ಬೀಡಿ ವಗೈರೆಗಳನ್ನು ಸೇದದಂತೆ ಮಾಡಲು ಒಂದು ಕಾನೂನು ಆಗಬೇಕು.

ಬ. ಬೋರ್ಡಿಗೆ ನಾನ್ ಆಫೀಷಿಯಲ್ ಪ್ರೆಸಿಡೆಂಟ ರು.
ಅಮ್ಮತ್ತಿ—ಮಡೂನರ್ಹಾಡು ರಸ್ತೆಯನ್ನು ಸ್ಥಳೀಯ ಗ ಟ್ಟಿನ ಅಧಿಕಾರಕ್ಕೆ ಒಪ್ಪಿಸಿಸಬೇಕು.
ಅಮ್ಮತ್ತಿ—ಕೊಂಡಂಗೇರಿ ಪಿ ಬೀ. ರಸ್ತೆಗೆ 5 ಲ್ಲಿ ಒಂದು ಪೈಪು ಸೋರಿ ಹಾಕಿಸಬೇಕು.

ಬಿ ಪಿ. ಮಾದಪ್ಪ.
ಡಿ. ಬಿ ಎಂ.

ನಮ್ಮ ಪಂಚಮ ಸಹೋದರರು.

ಗಳಲ್ಲಿ ಶಾಲೆಗೆ ಹೋಗುವ ವಿದ್ಯಾರ್ಥಿಗಳು ಬೇ ಗಾಗಲೂ ಹೆಚ್ಚಾಗಿವೆಯೆಂದು ಹಿಂದೂ ದೇಶದ ಗಲ್ಲಿ ಕಂಡುಬರುತ್ತದೆ. ಬೇರೆ ದೇಶಗಳಿಂದ ಬೊಂಬಾಯಿ, ಕಲ್ಕತ್ತಾ, ಇಂಥಾ ದೊಡ್ಡ ಪ ಇತರ ಸ್ಥಳಗಳಲ್ಲಿ ಕೂಡಾ, ಮೊದಲನೇ ಸ್ಥಾನವ ಕೊಂಡಿದೆ. ಆದರೆ ಈ ಶಾಲೆಗೆ ಹೋಗುವ ಗಳು ಯಾವ ಪಂಗಡಕ್ಕೆ ಸೇರಿದ್ದು ಎಂದು ಯೋ ಗಿದೆ. ನಮ್ಮ ದೇಶದಲ್ಲಿ ಹೆಚ್ಚಾಗಿ ಕಾಡಿಗರು, ಮತ್ತು ಕಲವು ಇತರ ಮುಂದುವರಿದ ಪಂಗಡ ಮಾತ್ರ ಪಾಠಶಾಲೆಗೆ ಹೋಗುವರು. ಹಾ ದ ಪಂಗಡದವರಿಗೆ ನಮ್ಮ ದೇಶದಲ್ಲಿ ವಿದ್ಯಾ ಪ್ರವೊಂದೂ ಏರ್ಪಾಡುಗಳು ಮಾಡಿಲ್ಲವೋ ಯು ಒರುವುದು ತಕ್ಕ ಮಟ್ಟಿಗೆ ಅವರಿಗೆ (ಸಂ ಸಂಪಕಂಕೆಗಳನ್ನು ಕೆಲವು ವರ್ಷಗಳ ಹಿಂದೆಯೇ ಮಾಡಿರುವುದಾಗಿ ಕಂಡುಬರುತ್ತದೆ. ಅವರ ಜನಸಂಖ್ಯೆ ಹೆ ಚ್ಚಾಗಿರುವ ಸ್ಥಳಗಳಲ್ಲಿ ನಮ್ಮ ಸರಕಾರವು ಪಾಠಶಾಲೆಗಳ ನ್ನು ಕಟ್ಟಿಸಿ, ಉಪಾಧ್ಯಾಯರನ್ನು ನೇಮಿಸಿ ಪಾಠವನ್ನು ಹೇ ಳಿಸುತ್ತಿರುವರು. ಕೆಲವು ಸ್ಥಳಗಳಲ್ಲಿ ಹಗಲು ಹೊತ್ತಿನಲ್ಲಿ ಜೀವನಕ್ಕಾಗಿ ದುಡಿಯಬೇಕಾದುದರಿಂದ ಅವರಿಗೆ ರಾತ್ರಿ ಪಾಠಶಾಲೆಗಳನ್ನು ಇಟ್ಟಿರುವರು. ಒಟ್ಟೆಬರೆಗಳನ್ನು ಸಹ ಕೊಡುತ್ತಿರುವರು.

ಈ ಸುಧಾರಣೆಗಳೇ ಸಾಲದೆಂದು ಕೆಲವು ಮುಂದಾಳು ಗಳ ಅಭಿಪ್ರಾಯವಿದ್ದಿತು. ಅವರು ಆದ್ರಾವಿಡರಾದ್ದರಿಂದ (ಇಂಡಿಯಾ ದೇಶದ ಮೂಲ ನಿವಾಸಿಗಳು) ಅವರನ್ನು ಬೇರೆ ಎಲ್ಲಾ ಶಾಲೆಗಳಿಗೂ ಸೇರಿಸಿಕೊಳ್ಳಬೇಕೆಂದೂ, ಅವರಿಗೆ ಪ್ರ ತ್ಯೇಕ ಶಾಲೆ ಇಡಬಾರದೆಂದೂ ಅಭಿಪ್ರಾಯಪಟ್ಟರು. ಇದ ಕ್ಕಾಗಿ ಇಲ್ಲಿಯೇ ಅಲ್ಲ, ಬೇರೆ ಎಲ್ಲಾ ದೇಶಗಳಲ್ಲಿಯೂ ಮುಂ ದಾಳುಗಳು ಹೋರಾಡುತ್ತಿರುವರು. ಈ ಪ್ರಾರ್ಥನೆಯು ನ ಮ್ಮ ದೇಶದ ಪಂಚಮ ಸಹೋದರರಿಗೆ ಇಂದು ಸಿಕ್ಕಿರುವುದು. ಎಲ್ಲಾ ಶಾಲೆಗಳ ಮತ್ತು ಉಪಾಧ್ಯಾಯರುಗಳು ಪಂಚಮ ಹುಡುಗರು ಶಾಲೆಗೆ ಸೇರುತ್ತೇನೆಂದ ತಿಳಿಸಿದಲ್ಲಿ ಅವರ ಆ ಪೇಕ್ಷೆಯನ್ನು ತಿರಸ್ಕರಿಸಕೂಡದೆಂದು ಶಾಲಾ ಇನ್ಸ್‌ಪೆಕ್ಟರವ ರು ಅಪ್ಪಣೆ ಇತ್ತಿರುವರಂತೆ. ಇದು ನಿಜವಾದ ಪಕ್ಷದಲ್ಲಿ ಇನ್ಸ್‌ಪೆಕ್ಟರವರು ಪಂಚಮರಿಗೆ ಒಳ್ಳೆ ಜಾಗ ದೇವತೆಯಂತೆ ಆದವರೆಂದು ಕಾಗಬೇಕು. ಸಿದ್ದಾಪುರದಲ್ಲಿರುವ ನಮ್ಮ ಪಂಚಮ ಸಹೋದರರು ಎಷ್ಟೆಷ್ಟು ಇದರ ಪ್ರಯೋಜನವನ್ನು ಅನುಭವಿಸಬೇಕಾಗಿದೆ. ಅವರನ್ನು ಮುಂದುವರಿದ ಪಂಗಡದ ವರು ತಮ್ಮ ಸಭೆಗೆ ಸೇರಿಸದೆ ಇರುವುದಕ್ಕೆ ಒಂದು ಮುಖ್ಯ ಕಾರಣವಿದೆ. ಅದೇ ಶುಚಿತ್ವವು. ಆ ಶುಚಿತ್ವವು ಅವರಲ್ಲಿ ಉಂಟಾದರೆ, ಮುಂದುವರಿದ ಪಂಗಡದವರು ಅವರನ್ನು ತ ಮ್ಮ ಕೂಟಕ್ಕೆ ಖಂಡಿತವಾಗಿಯೂ ಸೇರಿಸಿಕೊಳ್ಳುವರೆಂದು ಭಾವಿಸತ್ತೇನೆ.

ಉಪಾಧ್ಯಾಯರಿಂದ ಶಿಕ್ಷಣವನ್ನು ಹೊಂದಿ, ಬೇರೆ ಮುಂದುವರಿದ ಪಂಗಡದ ವಿದ್ಯಾರ್ಥಿಗಳ ಜೊತೆಯಲ್ಲಿ ಬೆರೆತು ತಮ್ಮ ನಡವಳಿಕೆಯನ್ನು ತಿದ್ದುಕೊಳ್ಳಲು ಪಾಠಶಾಲೆಯು ಸಹ ಕರಿಸುತ್ತದೆ. ಅಂಥ ಪಾಠಶಾಲೆಯ ಬಾಗಿಲು ಇಂದು ತೆರೆದಿರುವುದು. ನೀವು ಮೊದಲೇ ಅದರ ನಿಮಗೆ ಅಲ್ಲಿ ಸು ಸ್ವಾಗತವು. ಯಾವುದೇ ಬಾಧೆ ಪಡ್ಡೆ ಆಗಲಿ, ತನ್ನಲ್ಲಿ ಇ ಲ್ಲದಿರುವಾಗ ಅದರ ಅವಶ್ಯಕತೆ ನಮ್ಮಲ್ಲಿ ಹೆಚ್ಚುವುದು. ಅ ದು ನಿಜವಾಗಿ ನಮ್ಮ ಕೈಗೆ ಸಿಕ್ಕಿದಲ್ಲಿ ಅದರ ಅವಶ್ಯಕತೆ ಕ ಅವ ಮಟ್ಟಿಗೆ ಮಾಯವಾಗುತ್ತದೆ. ಇಂಥಾ ಆಲೋಚನೆಗ ಳಿಗೆ ನಮ್ಮ ಕೊಡಗಿನ ಪಂಚಮರು ಆಸ್ಪದ ಕೊಡರೆಂದು ನಾನು ಭಾವಿಸುತ್ತೇನೆ. ನಮ್ಮ ದೇಶವು ಮುಂದುವರಿ ಯಲು ನಿಮ್ಮದೊಂದು ದೊಡ್ಡ ಅಡಚಣೆಯಾಗಿದೆ. ಆ ಅಡ ಚಣೆಯನ್ನು ಹೋಗಲಾಡಿಸುವ ಶಕ್ತಿಯು ನಿಮ್ಮಲ್ಲಿಯೇ ಅಡ ಗಿದೆ. ಆದುದರಿಂದ ಬೇಗನೆ ಎಚ್ಚತ್ತು ನಮ್ಮ ಪಿಘಂಟಿನಿಂದ ಹಿಂದುಳಿದ ಪಂಗಡ(Depressed class) ಎಂಬ ಶಬ್ದವನ್ನು ತೆಗಿಸಿಬಿಡಬೇಕೆಂದೂ, ಮತ್ತು ನಿಮ್ಮ ಸಹೋದರರ ಕೂಟದ ಹೋರಾಟದಲ್ಲಿ ಸಹ ಭಾಗಿಯಾಗಬೇಕೆಂದೂ, ನಿಮ್ಮನ್ನು ಕೇಳಿಕೊಳ್ಳುವೆನು. ಆ ಶಕ್ತಿಯನ್ನು ನಿಮಗೆ ಭಗವಂತನು ಅ ನುಗ್ರಹಿಸಲೆಂಬುದೇ ನನ್ನ ಪ್ರಾರ್ಥನೆ.

"ಸಹೋದರ"

National Swords and Silver Belts (Thodangu) of "Scotland of India."

ಸಂಪ್ರದಾಯಕವಾಗಿ ಧರಿಸಲ್ಪಟ್ಟ " ಒಡ್ಡಿ ಕತ್ತಿ ಸಹಿತ " ಕ್ಷಾತ್ರ ಉಡಿಗೆಗಳನ್ನು ಒದಗಿಸ ಲ್ಪಟ್ಟ "ಒಡ್ಡಿ ಲೆಪ್ಪಂಟ' ಯನ್ನು ಸಿಸಾರಂ' ಯಾಕೆ ವಿಸ್ಮಯಗೊಳ್ಳುತ್ತೀರಿ? ನಮಲು ಗರಿ ಶೃಂಗರಿಸಲ್ಪಟ್ಟ ಕಾಗ ನವಿಲಾಗುವದೇ?
ಸೊಂಟದಲ್ಲು ಒಂದು ಬೆಳ್ಳಿಯ ಕೊಡಂಗ ಮ ಅದರ ಕತ್ತಿ. ಸೊಂಟದ ಬದಿಯಲ್ಲು ಚಿನ್ನದ ಯ ಪೀಚೆಕತ್ತಿ. ಇವುಗಳಿಗೆ ತಕ್ಕ ಬೆಳ್ಳಿಯ ಣ (ಜಮ್ಮತ) ಬೀಲ್ಟಿ ಮತ್ತು ವೆಲ್‌ವೆಟ್ಟ್ ಪ ಇದಲ್ಲವೇ ನಿಮ್ಮಗೌರವ? ಕಾನಾಡ', ಸಕ್ಕದ', ನ' ಮೊದಲಾದವರೇ ನದರ ವಿಷಯ ನನ್ನ . ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನ ಹಕ್ಕೇ ಸ್ವದೇಶಾಭಿಮಾನ!
ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರಿದೆ. ನ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದುಕೊಳ್ಳಿ.

Commercial Store,
Murnad, Coorg

12–10



ಡಿ ಬಿ. ಯಲ್. ಕೋವಿಗಳು ರೂ. 75 ರಿಂದ ರೂ. 150/
ಎಸ್. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. 250/
ಬಿ. ಯಮ್. ಯಲ್. ಕೋವಿಗಳು ರೂ. 35 ರಿಂದ 65/
ರಿವಾಲ್ವರ್‌ಗಳು. ರೂ. 40 ರಿಂದ ರೂ. 125/ರ ವರೆಗೆ.
ಟ್ವೆಲ್ ಮತ್ತು ಸಿಂಗಲ್ ತೋಟಾ ಮತ್ತು ಕಾಪು ತೋ ಎಲ್ಲಾ ದರ್ಜೆಯ ಜಿನಸುಗಳು (ಆಶ್ಚರ್ಯವಂತಾಗೂ ಬ ಲು) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಬ ಕೊಡಲಾಗುವದು.
30 ವರ್ಷಗಳಿಂದ ನಮಗೆ ಒದಿದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇ ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂ ಮುಖ್ಯ ನಮ್ಮನ್ನು ಕೇಳಿ ವಿಚಾರಿಸಿ.

ಎಸ್. ವಿ. ರಾಮಾನುಜಂ ಚೆಟ್ಟಿ
ಅಂಡ್ ಕಂಪೆನಿ.
ಹಿಂದೂಸ್ಥಾನದ ಬಹು ಕೀರ್ತಿಯ ಹಿರಿಯ ಕಂಪೆನಿ.

4—13 12, ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವುದು ಉತ್ತಮ.)

Arms, Ammunition and Shooting Requisites !!!



1928 Illustrated Catalogue Just Issued Free on Application !

D B B L Rifles	Rs	120	to Rs	2750
S B. B L	"	35	to "	950.
D B B L Guns		50	to "	1350.
S B B L "	,	55	to ,	275
D B M L "	,	45	to	135.
S B M L ,	"	30	to "	80
B L Revolvers	"	35	to "	350.
Automatic Pistols	"	30	to "	150.

Brilliant Search Light Lamp For Shooting, Camping, Fishing and All such Other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS

Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24—21

ಎಂಪಯರ್ ಆಫ್ ಇಂಡಿಯಾ
ಲೈಫ್ ಇನ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರುವರಿ 28ಕ್ಕೆ ಆಖೈರಾದ 5 ವರ್ಷಗಳ ಕೆಲಸದ
ಬಿಲೆ ಕಟ್ಟಿದ ಪಲ್ಲಿ
ರೂ. 37,66,689.
ಉಳಿವರ ಕಂಡುಬಂದಿದೆ

ಒಟ್ಟು ಜೀವವಿಮೆಯು 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಗಳಂತೆಯೂ } ಮತ್ತು { ಪ್ರಾಯ ನಿರವಿನ ವಿಮೆಯು 1000 ರೂಪಾಯಿಗಳಿಗೆ 12 ರೂಪಾಯಿಗಳಂತೆಯೂ

೬ ವರ್ಷದ ಬೋನಸ್ ಹಂಚ ಬರುವಂತೆ ತೀರ್ಮಾನವಾಗಿದೆ.

ವಿಳಾಸ.
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ, ಬೊಂಬಾಯಿ.

24—0

ಬ್ರಾಂಚ್ ಆಫೀಸು.
ಕಮರ್ಶಿಯಲ್ ಬೀದಿ
ಬೆಂಗಳೂರು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಗಳಿಗೆ ಪ್ರಕಾರ ವಿವರ್ಸ್ತರಾಗಿವೆ

ಶೇರ್ ಬಂಡವಾಳ	——
ವಸೂಲಾದ ಶೇರ್ ಮೊಬಲಗು	—
ಜವಾಬಿನ ಠೇವಣಾತಿ	——

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘ ಗಳಿಗೇನೇ ಸಾಲ ಕೊಡುತ್ತೇವೆ.

ಒಂದು ವರ್ಷ ವಾಯಿದೆ ಆದವ ಪೆಟ್ಟಿಸ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ ೬—೦ ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕನಿಷ್ಟ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪ ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೂಲ ಪರೀಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ

ಪ್ರೆಸಿಡೆಂಟರು, ಕೋಲ್ಮಾಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ ಎ, ಬಿ ಎಲ್

ತಾರೀಖು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿತ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮೆ. ಪೇರಿಯಂಡ ಪೂವಯ್ಯನವರನ್ನೂ ಮತ್ತು ಮೆ. ಕಾಳೇಂಗಳ ಚಿನ್ನಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಭಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬಹುದು.

ಏಜಂಟರುಗಳು,

ವೀರಾಜಪೇಟೆ—ಖಾದಿ ಭಂಡಾರದಲ್ಲಿ, ಮೆ ಪಂದಿಎಂಗಡ ಅಚ್ಚಯ್ಯನವರು

ನಾಪೋಕ್ಲು—ಮೆ ಅರೆಯಡ ಸುಬ್ಬಯ್ಯನವರು,

ಗೋಣಿಕೊಪ್ಪಲು—ಮೆ ಚಮ್ಮಡ ಮಾದಪ್ಪನವರು,

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ ಜಿ ಮುದ್ದಯ್ಯನವರು,

ಮಡಿಕೇರಿ & ತಿತಿಮತ್ತಿ—ಮೆ ಜಿ ಮಾದಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾಖ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್

"ಕೊಡಗು" ಮಡಿಕೇರಿ

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3

Telegraphic Address.—"SHOOTER" Bombay.

(12-26) 'Please write for our Catalogue 1928–1929

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ... ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಜ್ವರಗಳ್ಳಿ ದೋಷದಿಂದ ಬರುವ ... ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—6—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ... ಹೋಗುವುದು ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರ ... ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವ ... ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ... ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ... ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಚಿಕ್ಕ ಬಾಟ್ಲಿ 1 3, ... 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ... ರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ ರೂ 1, 1 ಡಜನಿಗೆ 3—8—0,

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ... ತಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ... ಮ ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾ ... ನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕಪ್ಪು ... ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆ ...

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂ...

52—22 ೯. ಮಂಗ...

Kapurchand & Co.

The OLDEST and MOST RELIABLE House in Bangalore

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery Stationary, etc., etc., Chickpet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಒಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದ್ದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,31,000	
	1925	ರೂ	2,96,42,000	ಜಾಸ್ತಿ ರೂ. 59,03,000.
	1926	ರೂ.	3,91,39,000	ಜಾಸ್ತಿ ರೂ. 94,97,000

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ. 7,38,80,000ಗೆ ಹೆಚ್ಚಿರುತ್ತದೆ ಪ್ರೀಮಿಯಂ ವರಮಾನವು ವರ್ಷಕ್ಕೆ ರೂ 1,05,30,000ಗೆ ಏರಿರುತ್ತದೆ.

ಓರಿಯಂಟಲ್‌ನ ಸಾಸದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್ ಎಫ್ ಎಫ್ ಎ, ಎ ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶವಿಲ್ಲದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

52—47

ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ

ಆಲ್ ಇಂಡಿಯಾ ಮ್ಯೂಚ್ಯುಯಲ್ ಏಯಿಡ್ ಅಂಡ್ ಪ್ರೂವರ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಆ ದೇಶಸ್ಥರಿಗೆ ಕೊಡತಕ್ಕಬೇಕೆಂಬ ಠರಾವು ಜನವರಿ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

I ಅಪಘಾತದ ಅಂಗಹೀನರಿಗೆ ಈ ಸಂಘದಿಂದ ಬೇಗನೆ ಅನ್ನಸಹಾಯ ಮಾಡಲು ಏರ್ಪಾಡಾಗುತ್ತದೆ

II 1928ನೇ ಇಸವಿ ಮಾರ್ಚಿ ತಿಂಗಳು 31ಕ್ಕೆ ಡ್ರಾಯಿಂಗ್ ನಡೆಯುತ್ತದೆ.

(1) ಇದರ ಮೂಲಕ ಬಡ್ಡಿ ಇಲ್ಲದೆ ಸಾಲ ಕೊಡಲಾಗುವುದು.

(2) ಸುಲಭವಾದ ದೀರ್ಘ ಕಂತುಗಳು ದೊರೆಯುವವು.

(3) ಸರ್ವರೂ ಆ ತಾರೀಖಿನೊಳಗೆ ಡ್ರಾಯಿಂಗಿಗೆ ಅರ್ಹತೆ ಪಡೆಯಬೇಕಾಗಿದೆ.

(4) ದೇಶ ಸೇವೆಗೂ, ಕುಲ ಸೇವೆಗೂ ಒಳ್ಳೆಯ ಅನುಕೂಲ.

ಟಿ. ಎ. ಕುಪ್ಪಸ್ವಾಮಿಪಿಳ್ಳೆ, ಅಂಡ್ ಸನ್ಸ್,
ಚೀಫ್ ಏಜೆಂಟ್ಸ್,
ಮಡಿಕೇರಿ

52—4

Printed & published by P. I. Belliappa at "Kodagu" Press, Me... for "Kodagu" Ltd.

"KODAGU" OFFICE, MERCARA.

ಕೊಡಗು.

ಸಂಪಾದಕ—

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಪುಸ್ತಕ ೭] ಮಡಿಕೇರಿ, ... ಶುಕ್ರವಾರ [ಸಂಚಿಕೆ ೪೦

"THE SUNSHINE OF THE NIGHT."

Coleman Quick Lite Lamps.

Bracket lamp	Rs	45 - & 42/-
Table Lamp	,,	37/8/-
Lantern	,,	35 -
Pendant Lamp	,,	37 8/-
Chandelier Lamp	,,	82 -

The Coleman Quicklite is Brilliant, clean, simple and safe.

52-7 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH SILVERSMITH & DEALER IN ALL PRECIOUS STONES

Post Box 423.
TRIPLICANE, MADRAS

Catalogue Free
to Boanfide Enquirers



Nose screws · Clover · Drops · Knot · Brooch

Manufacture of
HIGH CLASS
GEMSET JEWELS
a speciality

The special features
of my products are—
1 Best QUALITY
2 Latest designs
3 Prompt execution
4 Neat artistic finish
5 Most moderate prices

GOLD
or
SILVERWARE
of all descriptions
neatly executed

52-27



Before buying any Arms & Ammunition please refer our Reduced NETT PRICED current Catalogue of GUNS RIFLES REVOLVERS AUTOMATIC PISTOLS AMMUNITION, & Shooting Requisites, just out

CATALOGUE of 1927-28 on application.

The Bombay Armoury.

331, Abdul Rehman Street,
Bombay, 3.

21—9

ಶಾರದಾ ಪ(?)ಲ

12—10

ಕೊಡಗು.

ಸನ್ ೧೯೨೮ನೇ ಇಸವಿ ಮಾರ್ಚ
ತಾ. ೧೬ನೇ ಶುಕ್ರವಾರ

ಮದ್ರಾಸು ಸಹಕಾರಿ ಕಮಿಟಿಯ ವರದಿ.

ಮದ್ರಾಸು ಇಲಾಖೆಯಲ್ಲಿ ಸಹಕಾರಿ ಚಳವಳಿಗೆಯ ವಿಷಯ ತನಿಖೆ ಮಾಡಿ ಅದರ ಜ್ಞಾನ ಬೋರ್ಡುಗಳ ಅಭಿವೃದ್ಧಿಗೆ ಆ ಸಮಯ ನನ್ನ ಸೂಚಿಸುವ ಬಗ್ಗೆ ಮದ್ರಾಸು ಸರಕಾರದಿಂದ ನೇಮಿಸಲ್ಪಟ್ಟ ಕಮಿಟಿಯು ನಾಲ್ಕು ತಿಂಗಳ ಕಾಲ ಪ್ರಾಂತ್ಯವೆಲ್ಲಾ ಸುತ್ತಿ ಜನರ ಅಭಿಪ್ರಾಯ ತೆಗೆದುಕೊಂಡು ವರದಿಯನ್ನು ಈಗ ಸರಕಾರವು ಮದ್ರಾಸಿನಲ್ಲಿ ಪ್ರಕಟಿಸಿದೆ. ಆ ವರದಿಯ ಎಮಿಕಸ್ಸುಗಳು ಮಾತ್ರ ಮದ್ರಾಸ್ ಪತ್ರಿಕೆಗಳಲ್ಲಿ ಬಂದು ಒಂದಿವೆ. ವರದಿಯನ್ನು ಪೂರ್ತಿ ಯಾವ ಪತ್ರಿಕೆಯೂ ಇದರ ವರೆಗೆ ಪ್ರಕಟಿಸಲಿಲ್ಲ. ಇಲವು ಜ್ಞಾನ ಸಂಗತಿಗಳು ತಿಳಿಯ ಬರುತ್ತವೆ. ಈ ಕಮಿಟಿಯಲ್ಲಿ ಮಹನೀಯರು ದಿವಾನ್ ಬಹದ್ದೂರ್, ನಾಲ್ಕು ಜನ ಹಿಂದಿಯರೂ ಸದಸ್ಯರಾಗಿದ್ದರು. ಈ ದೇಶದಲ್ಲಿ ಒಮ್ಮೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ, ಕಮಿಶನರಾಗಿಯೂ ಇದ್ದ ಮಿ. ಆರ್ ಹೆಚ್ ಎಲ್ಲಿಸರೂ ಕಮಿಟಿಯ ಮೆಂಬರುಗಳಲ್ಲಿ ಒಬ್ಬರಾಗಿದ್ದರು.

ಈ ವರದಿ ಪೂರ್ತಿ ನಮಗೆ ತಿಳಿದುಬಂದರೆ ವಿಮರ್ಶಿಸುವದು. ತಕ್ಕದಾದರೂ ಈಗ ಪ್ರಕಟವಾಗಿರುವಷ್ಟು ಸಂಗತಿಗಳನ್ನು ವಾಚಕರ ಮುಂದೆ ಇಡುವದು ಉಚಿತವಾಗಿದೆ. ಕಮಿಟಿಯವರು ಶಿಫಾರಸ್ಸುಗಳನ್ನು ಕಟ್ಟಿ ತಯಾರಿಸಿದ್ದರಲ್ಲಿ 248 ಶಿಫಾರಸ್ಸುಗಳಿವೆ. ಇವುಗಳಲ್ಲಿ ಎಷ್ಟನ್ನು ಮದ್ರಾಸ್ ಸರಕಾರದವರು ಸ್ವೀಕರಿಸಿಕೊಳ್ಳುವರೋ ನೋಡಬೇಕಷ್ಟೆ. ಸಹಕಾರ ಚಳವಳಿಯಲ್ಲಿ ಸಂಬಂಧ ಇರುವವರೆಲ್ಲರೂ ಈ ವರದಿಯನ್ನು ಉಪಯೋಗಿಸಿಕೊಂಡರೆ ಪ್ರಯೋಜನವಾಗದೆ ಇರದು. ನಮ್ಮ ಸರಕಾರವು ಸಂದರ್ಭಾನುಸಾರ ಮದ್ರಾಸ್ ಸರಕಾರದ ಪುಸ್ತಕಗಳನ್ನು ಉಪಯೋಗಿಸಿಕೊಳ್ಳುವದರಿಂದ ಈ ರಿಪೋರ್ಟನ್ನೂ ಉಪಯೋಗಿಸುವ ಸಂಭವವಿದೆ. ಮದ್ರಾಸಿನ ಸ್ಥಿತಿಗತಿಗಳು ಅನೇಕ ವಿಧದಲ್ಲಿ ನಮ್ಮ ದೇಶಕ್ಕೆ ಸರಿಹೋಲುವದಿದ್ದರೂ ನಮಗೆ ಮಾತ್ರ ಸಂಬಂಧಪಡುವ ವಿಷಯಗಳೇ ಕೆಲವು ಇವೆ. ಅವುಗಳನ್ನು ಆಲೋಚಿಸಲು ನಮ್ಮ ದೇಶದಲ್ಲೂ ಸಣ್ಣ ಕಮಿಟಿಯೊಂದು ಬೇಕಾಗಬಹುದು.

ಸಹಕಾರಿ ಚಳವಳಿಯಿಂದ ದೇಶದ ಅಭ್ಯುದಯಕ್ಕೆ ಸಹಾಯವಾಗುವಷ್ಟು ಬೇರೆ ಯಾವದರಿಂದಲೂ ಆಗಲಾರದೆಂತಲೂ, ಆದ್ದರಿಂದ ಈ ಇಲಾಖೆಯಿಂದ ಆಗಬೇಕಾದಷ್ಟು ಪ್ರಯೋಜನ ದೇಶಕ್ಕೆ ಆಗುವಂತೆ ಈ ಇಲಾಖೆಗೆ ಹೆಚ್ಚು ಹಣ ಖರ್ಚು ಮಾಡಬೇಕೆಂತಲೂ ಕಮಿಟಿಯವರು ಅಭಿಪ್ರಾಯ ಪಟ್ಟಿರುತ್ತಾರೆ. ಮದ್ರಾಸ್ ಅಧಿಪತ್ಯದ ಸರಕಾರದಲ್ಲಿ ಈ ಇಲಾಖೆಗೆ ಸಂಯುಕ್ತ ಪ್ರಾಂತ್ಯ ಒಂದು ವಿನಹ ಬೇರೆ ಪ್ರಾಂತ್ಯಗಳಿಗಿಂತ ಕಡಿಮೆ ಖರ್ಚಾಗುತ್ತಿದೆಯೆಂತ ತಿಳಿಸಿರುತ್ತಾರೆ. ನಮ್ಮ ದೇಶದ ಖರ್ಚು ಈ ಕಮಿಟಿಯವರಿಗೆ ತಿಳಿದಿರಲಾರದೆಂತ ತೋರುತ್ತದೆ. ಇಲ್ಲಿ ಇಬ್ಬರು ಗುಮಾಸ್ತರು ಮತ್ತು ಒಬ್ಬ ಸೇವಕರಿದ್ದ ಮಂಗಳೂರು ಇನ್ಸ್‌ಪೆಕ್ಟರುಗಳಿದ್ದರು — ಇವರ ಸಂಬಳ ವಿನಹ ಬೇರೆ ಈ ಇಲಾಖೆಗಾಗಿಯೇ ಖರ್ಚಾಗುವದೇನೂ ಇಲ್ಲ. ಇನ್ನೂ ಇಬ್ಬರು ಇನ್ಸ್‌ಪೆಕ್ಟರು ಬೇಕೆಂತ ಕೌನ್ಸಿಲ್ ಮೂಲಕ ದೇಶವು ಕೇಳಿಕೊಂಡರೂ ಕೊಟ್ಟಿರುವದಿಲ್ಲ. ಈಗ ವಿಮರ್ಶಿಸುತ್ತಿರುವ ರಿಪೋರ್ಟನ್ನು ನೋಡಿ ಹೆಚ್ಚಿಗೆ ಇನ್ಸ್‌ಪೆಕ್ಟರುಗಳನ್ನು ನೇಮಿಸುವ ಯೋಚನೆ ಮಾಡಬಹುದೆಂತ ನಮ್ಮ ಕೌನ್ಸಿಲಿನ ಫೈನಾನ್ಸ್ ಕಮಿಟಿಯವರು ಅಭಿಪ್ರಾಯ ಕೊಟ್ಟಿರುವರು. ಕಮಿಟಿಯು ಶಿಫಾರಸ್ಸೇನೆಂದರೆ — 'ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಬ್ಬ ಡೆಪ್ಯುಟಿ ರಿಜಿಸ್ಟ್ರಾರರು ಇರಬೇಕು. ಇವರಿಗೆ ಒಬ್ಬ ಪರ್ಸನಲ್ ಅಸಿಸ್ಟಂಟ್ ಇರಬೇಕು. ಪ್ರತಿ ಅರುವತ್ತು ಸಂಘಗಳಿಗೊಂದು ಅಡಿಟ್ ಇನ್ಸ್‌ಪೆಕ್ಟರೂ, ಪ್ರತಿಯೊಂದು ಜಿಲ್ಲೆಯಲ್ಲಿಯ ೧ ಮೂವರು ಅಡಿಶನಲ್ ಇನ್ಸ್‌ಪೆಕ್ಟರುಗಳೂ, ಹಣವಿದ್ದಂ ಪ್ರತಿಯೊಬ್ಬ ಇನ್ಸ್‌ಪೆಕ್ಟರಿಗೂ ಒಬ್ಬೊಬ್ಬ ಜವಾನನೂ ಇರಬೇಕು.' ಬೇರೆ ಉದ್ಯೋಗಸ್ಥರನ್ನು ಬಿಟ್ಟರೂ ನಮ್ಮ ದೇಶಕ್ಕೆ ಈ ರಿಪೋರ್ಟಿನ ಶಿಫಾರಸ್ಸು ಮೇರೆ ಅದರೆ ನಾಲ್ಕು ಆಡಿಟ್ ಇನ್ಸ್‌ಪೆಕ್ಟರುಗಳೂ, ಮೂರು ಅಡಿಶನಲ್ ಇನ್ಸ್‌ಪೆಕ್ಟರುಗಳೂ ಬೇಕು. ನಮ್ಮ ದೇಶದ ಈಗಿನ ಆದಾಯ ವೆಚ್ಚವನ್ನು ನೋಡಿದರೆ ಇಷ್ಟೆಲ್ಲಾ ಸಿಕ್ಕುವದು ಸಾಧ್ಯವಾಗಿ ತೋರುವದಿಲ್ಲ. ಸಹಕಾರಿ ಚಳವಳಿಯು ಬೇಗನೆ ಅಭಿವೃದ್ಧಿ ಹೊಂದಬೇಕಾದರೆ ಇನ್ನಿಬ್ಬರು ಇನ್ಸ್‌ಪೆಕ್ಟರುಗಳಾದರೂ ಬೇಕು. ಈಗ ಮಂಜೂರಾದ ಬಜೆಟ್ಟಿನಲ್ಲೇ ಈ ಅತ್ಯಾವಶ್ಯಕವಾದ ಉದ್ಯೋಗಸ್ಥರ ಸಂಬಳಕ್ಕೆ ಹಣವನ್ನು ಒದಗಿಸುವದು ಸರಕಾರದ ಕರ್ತವ್ಯವಾಗಿದೆ.

ಗ್ರಾಮಾಭಿವೃದ್ಧಿಯ ಎಲ್ಲಾ ಕಾರ್ಯಗಳಿಗೂ ಸಹಕಾರಿ ಇಲಾಖೆಯ ಸಹಾಯ ಮಾಡಬೇಕೆಂತ ಕಮಿಟಿಯ ಒಮ್ಮತದ ಶಿಫಾರಸ್ಸಾಗಿದೆ. ನಮ್ಮ ದೇಶದಲ್ಲೂ ಈ ಶಿಫಾರಸ್ಸನ್ನು ಅಂಗೀಕರಿಸ ಬೇಕಾದದ್ದು ಅತಿ ಅವಶ್ಯವಾಗಿದೆ. ದೇಶದ ಅ[illegible]

[illegible] ಗಳ, [illegible] ಇಲ್ಲದವ [illegible] ಸ್ಸನ್ನು ಗೆ [illegible] ಅಸಿಗಾರರ [illegible]

[illegible] ಸಂಘಗಳ [illegible] ಕಮಿಟಿಯ [illegible] ಇದೆ [illegible] ಬೇಕು [illegible] ಅದು ತೀರಿಸಿ [illegible] ಗಳಿಗೆ [illegible] ಬೇಕು [illegible] ಒಡೆಯ [illegible] ಸ್ವಲ್ಪ ಕಾಲದ [illegible]

ಸರಕಾರದಿಂದ ಮೆಂಬರುಗಳಿಗೂ ವ್ಯವಸಾಯ ಸಂಘಗಳಿಗೂ ಕೊಡುವ ಸಾಲಗಳು ಸ್ವಲ್ಪ ಕಾಲದ ಸಾಲ, ದೀರ್ಘ ಕಾಲದ ಸಾಲವೆಂತ ವಿಭಾಗಿಸಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಸ್ವಲ್ಪ ಕಾಲದ ಸಾಲವೆಂದರೆ ಅದೇ ವರ್ಷದ ಉತ್ಪತ್ತಿಯಿಂದ ತೀರಿಸುವಂಥವು. ದೀರ್ಘ ಕಾಲದ ಸಾಲವೆಂದರೆ ಸಾಲಗಾರರ ಉಳಿತಾಯಿಂದ ಕಿಸ್ತುವಾರಾಗಿ ತೀರಿಸುವಂಥವು. ಹೀಗೆ ವಿಭಾಗ ಮಾಡಿ ಇಡುವದರಿಂದ ಹೆಚ್ಚು ಪ್ರಯೋಜನವೇನೆಂಬದನ್ನು ಪೂರ್ತಿ ರಿಪೋರ್ಟು ಓದಿನೋಡಿ ತಿಳಿದುಕೊಳ್ಳಬೇಕಷ್ಟೆ. ಲ್ಯಾಂಡ್ ಮಾರ್ಗೇಜ್ ಬ್ಯಾಂಕ್ ಎಂಬ ಹೊಸ ಸಂಸ್ಥೆಯಲ್ಲಿ ೧೧ ವರ್ಷಕ್ಕಿಂತ ಹೆಚ್ಚು ಕಂತು ಕೊಡಕೂಡದಂತ ಅಭಿಪ್ರಾಯ ಪಟ್ಟಿರುತ್ತಾರೆ. ನಮ್ಮ ದೇಶದ ಸಂಘಗಳು ಮೆಂಬರುಗಳಿಗೆ ಕಂತು ದಾರಾಳ ಕೊಡುತ್ತಿರುವ ಆದುದರಿಂದ ಬ್ಯಾಂಕಿನಿಂದ ಸಂಘಗಳಿಗೆ ಕೊಡುವ ಸಾಲಗಳಿಗೆ ಕಂತು ಕಡಿಮೆಯಾಗುತ್ತದೆಂಬ ಆಕ್ಷೇಪ ಇದೆ.

ಲ್ಯಾಂಡ್ ಮಾರ್ಗೇಜ್ ಬ್ಯಾಂಕುಗಳಿಂದ ಅಂದರೆ ಭೂ ಅಡವು ಬ್ಯಾಂಕುಗಳಿಂದ 5000 ರೂಪಾಯಿ ವರೆಗೆ ಮೆಂಬರುಗಳಿಗೆ ಸಾಲ ಕೊಡಬಹುದೆಂತಲೂ, ಹೆಚ್ಚು ಕಂತ ಕೊಡಬಹುದೆಂತಲೂ ಅಭಿಪ್ರಾಯ ಪಟ್ಟಿದ್ದಾರೆ. ಇಂಥಾ ಬ್ಯಾಂಕುಗಳು ಮದ್ರಾಸಿನಲ್ಲಿ ಈ ವರೆಗೆ ಸ್ಥಾಪಿತವಾಗಿಲ್ಲ. ೧—೫೦ ವರ್ಷಗಳಲ್ಲಿ ಮರು ಪಾವತಿ ಮಾಡುವ ಡಿಬೆಂಚರುಗಳ ಮೂಲಕ ಬಿಡಿಸ್ಕೆ ಹಣ ಸಂಗ್ರಹಿಸಬೇಕೆಂತಲೂ ಇವು ಪ್ರಾರಂಭವಾಗಿ ೫ ವರ್ಷಗಳ ವರೆಗೆ ಸರಕಾರವು ಡಿಬೆಂಚರುಗಳ ಬಡ್ಡಿಗೆ ಜಾಮೀನಾಗಬೇಕೆಂತಲೂ ಉಪಾಯ ಸೂಚಿಸಿರುತ್ತಾರೆ. ಶೇರು ಬಂಡವಾಳ ಎಷ್ಟು ಕ್ಷೇಮನಿಧಿಯು 2೦ ಪಟ್ಟು ಸಾಲ ತೆಗೆದುಕೊಳ್ಳಬಹುದಂತೆ. ನಮ್ಮ ದೇಶದಲ್ಲಿ ಗ್ರಾಮಗಳಲ್ಲಿ ಇರುವ ಹೆಚ್ಚಿನ ಸಂಘಗಳೆಲ್ಲಾ ಭೂ ಅಡವಿನ ಮೇಲೆಯೇ ಸಾಲ ಕೊಡುತ್ತಿವೆ. ಆದ್ದರಿಂದ ನಮ್ಮಲ್ಲಿರುವ ಸಂಘಗಳು ಈಗಾಗಲೇ ಗಿರ್ವಿ ಬ್ಯಾಂಕುಗಳಾಗಿವೆಯೆಂದರೆ ತಪ್ಪಾಗಲಾರದು. ದೊಡ್ಡ ಹಣ ಬೇಕಾದವರಿಗೆ ಸಾಲ ಕೊಡಲಿಕ್ಕೂ, ಮೆಂಬರ ಎಲ್ಲಾ ತರದ ಅವಶ್ಯಕತೆಗೆ ಸಾಲ ಪಡೆದುಕೊಳ್ಳಲಿಕ್ಕೂ ಅನುಕೂಲ ಮಾಡಿಕೊಟ್ಟರೆ ಹೊಸ ಏರ್ಪಾಡು ಇಲ್ಲದೆ ನಮ್ಮ ದೇಶದ ಸಂಘಗಳಿಂದ ಗಿರ್ವಿ ಬ್ಯಾಂಕುಗಳ ಪ್ರಯೋಜನವನ್ನು ಹೊಂದಬಹುದು.

ಕೃಷಿಕರ ಸಂಘಗಳನ್ನು ಉತ್ತಮ, ಮಧ್ಯಮ, ಅಧಮ ವಂತ ವಿಭಾಗಿಸಿ ಇಟ್ಟುಕೊಳ್ಳಬೇಕೆಂತ ರಿಜಿಸ್ಟ್ರಾರರುಗಳ ಕಾನ್ಫರೆನ್ಸಿನ ತೀರ್ಮಾನವನ್ನು ಅಂಗೀಕರಿಸಲಾಗಿದೆ. ಈ ಸಂಘಗಳಲ್ಲಿ ಲಾಭ ಹಂಚಿಕೆಯನ್ನು ನಿಲ್ಲಿಸಬೇಕು. ನಮ್ಮ ದೇಶದ ಗ್ರಾಮದ ಸಂಘಗಳಲ್ಲಿ ಲಾಭ ಹಂಚುವಾಯ ಮೇಲೆ ತುಂಬಾ ಆಸೆ ಇದೆ. ಈ ಶಿಫಾರಸ್ಸಿಗೆ ಕೊಟ್ಟಿರುವ ಕಾರಣಗಳು ಪ್ರಕಟವಾದಾಗ ನೋಡಿ ಉಪಯೋಗಿಸಿಕೊಳ್ಳಬೇಕು. ಮೆಂಬರುಗಳು ಆಸ್ತಿಯ ತಖ್ತೆ ಪಟ್ಟಿಯನ್ನು ಮಾಡಿ ಇಡಲೇ ಬೇಕೆಂತ ಅಭಿಪ್ರಾಯ ಪಟ್ಟಿರುತ್ತಾರೆ. ನಮ್ಮ ದೇಶದ ಒಂದು ಸಂಘವಾದರೂ ಇದನ್ನು ಮಾಡಿರುವದಿಲ್ಲ. ಈ ಅವಶ್ಯವಾದ ಕೆಲಸವನ್ನು ಇಲ್ಲಿಯೂ ಪ್ರಾರಂಭಿಸಬೇಕು. ವಾಯಿದೆ ಮೀರಿದ ಸಾಲಗಳ ಲಿಸ್ಟನ್ನೇ ಬೇರೆ ಇಟ್ಟು ಅವುಗಳ ವಸೂಲಾತಿಗೆ ಹೆಚ್ಚಿಗೆ ನಿಗ ಇಡಬೇಕೆಂತ ಅಭಿಪ್ರಾಯ ಪಟ್ಟಿರುತ್ತಾರೆ.

ಕೃಷಿಯನ್ನು ಅಭಿವೃದ್ಧಿಗೊಳಿಸುವ ಸಂಘಗಳನ್ನು ಇಲಾಖೆಯವರೇ ನಡಿಸಬೇಕಂತೆ. ಸಾಲ ಮತ್ತು ಮಾರಾಟದ ಸಂಘಗಳ ಸ್ಥಾಪನೆಗೆ ಸಹಾಯ ಕೊಡಬೇಕೆಂತ ಹೇಳಿದ್ದಾರೆ. ಮೆಂಬರನು ಬೆಳೆಸಿದ ಫಸಲಿನ ಆಧಾರದ ಮೇಲೆ ಸಾಲ ಕೊಟ್ಟು ಬೆಲೆ ಬಂದಾಗ ಫಸಲನ್ನು ಮಾರುವ ಸಂಸ್ಥೆಗಳು ಫಸಲನ್ನು ಸ್ವೀಕರಿಸಿಕೊಂಡು ಹಣ ಕೊಡಬೇಕಂತೆ. ಈ ಕೆಲಸವನ್ನು ನಮ್ಮ ದೇಶದ ದವಸದ ಭಂಡಾರಗಳು ಮಾಡುವಂತೆ ಅನುಕೂಲ ಮಾಡಿದರೆ ಅಗಬಹುದು. ಕಾಫಿ ವ್ಯವಸಾಯಗಾರರಿಗೆ ಈ ಉಪಯೋಗ ಮಾಡಿಕೊಳ್ಳುವ ಸಂಘವೊಂದು ನಮ್ಮ ದೇಶದಲ್ಲಿ ಇದೆ. ಆದರೆ ಅದನ್ನು ಈ ಬಾಬಿಗೆ ಈ ವರೆಗೂ ಉಪಯೋಗಿಸಲಿಲ್ಲ. ಪತ್ತದ ಮಾರಾಟಕ್ಕಾಗಿ ಇಂಥಾ ಸಂಘಗಳನ್ನು ಭತ್ತದ ವ್ಯಾಪಾರ ಸ್ಥಳಗಳಾದ ಅಮ್ಮತ್ತಿ, ವೀರರಾಜಪೇಟೆ, ಗೋಣಿಕೊಪ್ಪಲು, ಪೊನ್ನಂಪೇಟೆ ಈ ಸ್ಥಳಗಳಲ್ಲಿ ಏರ್ಪಡಿಸಬೇಕಾದದ್ದು ಅವಶ್ಯವಾಗಿದೆ.

ಕೋಆಪರೇಟಿವ್ ಸ್ಟೋರ್‌ಗಳನ್ನು ಏರ್ಪಡಿಸುವ ವಿಷಯದಲ್ಲಿ ಕಮಿಟಿಯವರು ಹೆಚ್ಚು ಉತ್ತೇಜನ ಕೊಟ್ಟಿರುವದಿಲ್ಲ. ಚಿಕ್ಕ ಚಿಕ್ಕ ಪಟ್ಟಣಗಳಲ್ಲಿ ಇವು ಸಾಧ್ಯವೇ ಇಲ್ಲವೆಂತ ಅಭಿಪ್ರಾಯ ಪಟ್ಟಿರುತ್ತಾರೆ. ಇವುಗಳನ್ನು ನಡಿಸಲು ಆ ಕಸುಬನ್ನು ತಿಳಿದ ನಿಪುಣರು ಬೇಕು. ಗ್ರಾಮವಾಸಿಗಳಿಗೆ ಬಗ್ಗೆ ಟ್ಟಣದ ಸಾಮಾನುಗಳನ್ನು ತರಿಸಿಕೊಳ್ಳುವದು ಮೇಲೆಂತ ತೀರ್ಮಾನವನ್ನು ಮಾಡಿರುತ್ತಾರೆ.

ಸೆಂಟ್ರಲ್ ಬ್ಯಾಂಕ್‌ಗಳಲ್ಲಿ ಆಯಾ ಸಂಘಗಳ ಚರಿತ್ರೆಯನ್ನೂ, ಆರ್ಥಿಕ ಸ್ಥಿತಿಯನ್ನೂ ತಿಳಿಸುವ ರಿಜಿಸ್ಟರ್ ಒಂದು ಇರಬೇಕಂತೆ. ಇದಕ್ಕೆ ನಮ್ಮ ದೇಶದ ಬ್ಯಾಂಕ್ ಗಮನ ಕೊಡಬೇಕು. ಸಾಧ್ಯವಿದ್ದಲ್ಲೆಲ್ಲಾ ಬ್ಯಾಂಕಿನಿಂದ ಕೊಡುವ ಸಾಲದ ಬಡ್ಡಿಯನ್ನು ಶೇಕಡ 7½ ವರೆಗೆ ಇಳಿಸಬೇಕೆಂತಲೂ ಸಂಘಗಳು ಮೆಂಬರುಗಳಿಗೆ ಕೊಡುವ ಸಾಲಕ್ಕೆ ಶೇಕಡ ರೂ ೧—೦—೦ಕ್ಕಿಂತ ಕಡಿಮೆ ಬಡ್ಡಿ ಮಾಡಬಾರದೆಂತಲೂ ಹೇಳಿರುತ್ತಾರೆ. ಈ ಶಿಫಾರಸ್ಸುಗಳನ್ನು ನಮ್ಮ ದೇಶದ ಸಹಕಾರಿ ಸಂಘಗಳು ಗಮನಕ್ಕೆ ತಂದುಕೊಳ್ಳಬಹುದು.

ಇನ್ನೂ ವಿಷಯಗಳು ಕೆಲವು ಇದ್ದರೂ ಲೇಖನವು ಉದ್ದವಾದ್ದರಿಂದ ನಿಲ್ಲಿಸಬೇಕಾಗಿದೆ. ಮದ್ರಾಸಿನಲ್ಲಿ ಸಹಕಾರಿ ಚಳವಳಿಯಿಂದ ಇನ್ನೂ ಶೇಕಡ 10ರಷ್ಟು ಭಾಗದ ಪ್ರಜೆಗಳಿಗೆ ಮಾತ್ರ ಪ್ರಯೋಜನ ದೊರೆತಿದೆಯಂತೆ. ನಮ್ಮ ದೇಶದಲ್ಲೂ ಈ ಚಳವಳಿಯಿಂದ ಪ್ರಯೋಜನ ಹೊಂದದೆ ಇರುವ ಜನ ಸಂಖ್ಯೆಯ ಭಾಗವು ದೊಡ್ಡದಾಗಿದೆ. ಸರಕಾರವೂ, ಜನ ಹಿತೈಷಿಗಳೂ ಸೇರಿ ಸಹಕಾರದ ಪ್ರಯೋಜನವನ್ನು ಎಲ್ಲರಿಗೂ ಮುಟ್ಟಿಸಬೇಕು.

ಲಾರ್ಡ್ ಸಿಂಹರ ನಿಧನ.

ಸಿಂಹ ಪ್ರಭುಗಳು ಈ ತಿಂಗಳ ನಾಲ್ಕನೇ ತಾರೀಖಿನ ಆದಿತ್ಯವಾರ ದಿನ ಹೃದಯ ರೋಗದ ಬೇನೆಯಿಂದ ತಮ್ಮ ೬೫ನೇ ಯ ವಯಸ್ಸಿನಲ್ಲಿ ಪರಲೋಕವನ್ನೈದಿದರೆಂದು ತಿಳಿಸಲು ನಮಗೆ ಬಹಳ ದುಃಖವೆನಿಸುತ್ತದೆ. ಸಿಂಹರು ಮುಂದ ದಕ್ಷ ಸಾಲಿದವರು. ಹಿಂದೂದೇಶವು ರಾಜಕೀಯ ಪ್ರಗತಿಗೆ ಕೊಡಗುವ ಕಾಲಕ್ಕೆ ಸಿಂಹರು ಮಾಡಿದ ದೇಶ ಸೇವೆಯು ವಿಶೇಷವಾಗಿದೆ. ಇವರು ತಮ್ಮ ವಿದ್ಯಾ ಪ್ರಭಾವದಿಂದ ಅನೇಕ ದೊಡ್ಡ ದೊಡ್ಡ ಸರಕಾರಿ ಹುದ್ದೆಗಳನ್ನು ಸಂಪಾದಿಸಿದರು. ಇವರಿಗೆ ದೊರಕಿದ ಪದವಿಗಳು ಭಾರತೀಯರಲ್ಲಿ ಪ್ರಾಪ್ತವಾದದ್ದು ಇವರಿಗೇ ಮೊದಲು. ಇವರು ಆದಿ ಇಂಡಿಯನ್ ಸ್ಟಾಂಡಿಂಗ್ ಕೌನ್ಸೆಲರೂ ಬಂಗಾಳದ ಆದಿ ಅಡ್ವೊಕೇಟ್ ಜನರಲರೂ, ವೈಸರಾಯರ ಆಡಳಿತ ಮಂಡಲಿಯಲ್ಲಿನ ಆದಿ ಸದಸ್ಯರೂ ಇಂಗ್ಲಾಂಡಿನಲ್ಲಿ ಭಾರತದ ಆದಿ ಉಪ ಮಂತ್ರಿಯರೂ, ಭಾರತದ ಆದಿ ಪ್ರಭುಗಳೂ ಮತ್ತು ಗವರ್ನರರೂ ಆಗಿದ್ದರು.

ಇವರು 1863ರಲ್ಲಿ ಸಿತಿಕಾಂತ ಸಿಂಹರ ಕಡೇ ಮಗನಾಗಿ ಹುಟ್ಟಿ ತಮ್ಮ ವಿದ್ಯೆಯನ್ನು ಬೀರಭೂಮ್ 'ಜಿಲ್ಲಾ ಶಾಲೆ'ಯಲ್ಲಿ ಕಲಿತು, 1877ರಲ್ಲಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅನಂತರ ಎರಡು ವರ್ಷಗಳು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಇಂಟರ್‌ಮಿಡಿಯೇಟ್ ಪರೀಕ್ಷೆ ಪಾಸಾದರು. ಆ ವೇಳೆ 1881ರಲ್ಲಿ ಇಂಗ್ಲಂಡಿಗೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆಗೆ ಓದಿ 1886ರಲ್ಲಿ ವಕೀಲರಾದರು. ಇವರು ವಕೀಲಿಕೆಯಲ್ಲಿ ಖ್ಯಾತಿಯನ್ನು ಹೊಂದಿದ್ದರಿಂದ ಬಂಗಾಳ ಸರಕಾರವು ಇವರನ್ನು 1908ರಲ್ಲಿ ಅಡ್ವೊಕೇಟ್ ಜನರಲರನ್ನಾಗಿ ನೇಮಿಸಿತು. ಮೋರ್ಲೆ ಪ್ರಭುಗಳು ಇಂಡಿಯದ ಮಂತ್ರಿಗಳಾಗಿದ್ದಾಗ ಹಿಂದೂ ದೇಶಕ್ಕೆ ಹೊಸ ಸುಧಾರಣೆಗಳನ್ನು ಕೊಟ್ಟರು. ಇದು 1909ರಲ್ಲಿ ಮೊದಲನೇಯದಾಗಿ ಸಿಂಹರು ವೈಸರಾಯರ ಕೌನ್ಸಿಲಿಗೆ ನೇಮಿಸಲ್ಪಟ್ಟರು. ಇಂಡಿಯನರನ್ನು ಈ ಕೌನ್ಸಿಲಿಗೆ ನೇಮಿಸಬಾರದೆಂದು ಏಳನೇ ಎಡ್ವರ್ಡ್ ರಾಜರ ಅಭಿಪ್ರಾಯವಿತ್ತು. ಆದರೂ ಮೋರ್ಲೆಯವರು ಹಿಂದೂ ದೇಶದ ಹಿತದ ದೃಷ್ಟಿಯಿಂದ ಸಿಂಹರನ್ನು ನೇಮಿಸಿಯೇ ಬಿಟ್ಟರು. ಅನಂತರ ಸಿಂಹರು ಆ ಪದವಿಗೆ ರಾಜಿನಾಮೆ ಕೊಟ್ಟರು. 1915ರಲ್ಲಿ ಬೊಂಬಾಯಿಯಲ್ಲಿ ಜರಗಿದ ರಾಷ್ಟ್ರಸಭೆಯ ಅಧ್ಯಕ್ಷರಾಗಿದ್ದು ಈ ದೇಶಕ್ಕೆ ಹುಟ್ಟಿನ ಸುಧಾರಣೆಗಳನ್ನು ಕೊಡಬೇಕೆಂದು ಜೋರಾಗಿ ಹೇಳಿದರು. ಅನಂತರ ಇವರು ಇಂಪೀರಿಯಲ್ ಕಾನ್ಫರೆನ್ಸಿಗೆ ಪ್ರತಿನಿಧಿಯಾಗಿ ಹೋಗಿದ್ದರು. ಇವರು 1920ರಲ್ಲಿ ಇಂಡಿಯದ ಉಪ ಮಂತ್ರಿಯಾಗಿ ಇಂಗ್ಲಾಂಡಿನಲ್ಲಿ ನೇಮಿಸಲ್ಪಟ್ಟು, ಅದೇ ವರ್ಷದಲ್ಲಿ ಇವರು 'ಪ್ರಭು' ಎನ್ನುವ ಪದವಿಗೆ ಏರಿಸಲ್ಪಟ್ಟರು. ಇವರು ಪಕ್ಷದ ಸುಧಾರಣೆಯ ಪ್ರೋತ್ಸಾಹಕರಾದುದರಿಂದ ಹಾವೇ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಅದನ್ನು ಜಯಪ್ರದವನ್ನಾಗಿ ಮಾಡಿದರು. ಆ ಮೇಲೆ ಇವರು ಬಿಹಾರ್—ಒರಿಸ ಪ್ರಾಂತದ ಗವರ್ನರಾದರು. ಅವರ ಕಾರ್ಯಕಾರಿ ಮಂಡಲದ ಸದಸ್ಯರು ಇವರು ನೇಟಿವ್ ಗವರ್ನರೆಂಬ ನಮಿಂದ ಕಲಹ ತಂದೊಡ್ಡಿದರು. ನಿರ್ವಾಹವಿಲ್ಲದೆ ಇವರು ರಾಜಿನಾಮೆ ಕೊಟ್ಟರು. ಅಂದಿನಿಂದ ಇವರು ಯಾವ ಚಳವಳದಲ್ಲಿಯೂ ಕೈ ಹಾಕದೆ ಇದ್ದರು.

ತಾವು ನಂಬಿದ್ದ ಮೋರ್ಲೆ ಸುಧಾರಣೆಯಿಂದ ಹಿಂದೀಯರಿಗೆ ಹೆಚ್ಚಿನ ಪ್ರಯೋಜನವಾಗಲಿಲ್ಲವೆಂದು ಇವರಿಗೆ ಈಚೆಗೆ ಗೊತ್ತಾದರೂ, ಇವರು ಬ್ರಿಟಿಶ್ ಆಳರಸುತನದ ಮೇಲೆ ಪ್ರೀತಿಯುಳ್ಳವರು. ಆದುದರಿಂದಲೇ ಇವರು ತಮ್ಮ ಮುಂದಿನ ಕಡೆಗೆ ವಿರೋಧವಾಗಿ ಸೈಮನ್ ನಿಷ್ಪಕ್ಷಗಳಿಗೆ ಸ್ವಾಗತವಿತ್ತರು. ಹಿಂದೂದೇಶದ ಹಲವು ಪಂಗಡದವರು ತಮಗೆ ಈ ಕಮಿಷನ್ ಅಗತ್ಯವಿಲ್ಲವೆಂದು ಕೂಗುತ್ತಿರುವಾಗ, ಸಿಂಹರು ಅದಕ್ಕೆ ಸ್ವಾಗತವನ್ನಿತ್ತದ್ದು ದುಃಖಕರ.

ಸಿಂಹರು ಭಿನ್ನಾಭಿಪ್ರಾಯವುಳ್ಳವರಾಗಿದ್ದರೂ, ಅವರು ದೇಶಕ್ಕೆ ತಮ್ಮ ಯೋಗ್ಯತಾನುಸಾರವಾಗಿ ಸೇವೆ ನಡಿಸಿರುವರು. ಅವರ ಆತ್ಮಕ್ಕೆ ದೇವರು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೨೬ನೇ ಪ್ರಕರಣ.

ಸತ್ಯಾಗ್ರಹದ ಜನ್ಮ.

ಈ ಆತ್ಮಶುದ್ಧಿಯು ನನ್ನನ್ನು ಸತ್ಯಾಗ್ರಹಕ್ಕೆ ಸಿದ್ಧಮಾಡಲೋಸುಗವೇ ಎಂಬಂತೆ ಜೋಹಾನ್ಸ್‌ಬರ್ಗಿನಲ್ಲಿ ಘಟನೆಗಳು ಸಂಭವಿಸುತ್ತಿದ್ದುವು. ನಾನು ಬ್ರಹ್ಮಚರ್ಯ ವ್ರತವನ್ನು ಕೈಕೊಳ್ಳುವುದರಲ್ಲಿ ಕೊನೆಗೊಂಡ ನನ್ನ ಜೀವನದ ಮುಖ್ಯ ಘಟನೆಗಳೆಲ್ಲಾ ನನಗೆ ತಿಳಿಯದಂತೆಯೇ ನನ್ನನ್ನು ಸತ್ಯಾಗ್ರಹಕ್ಕೆ ಸಿದ್ಧಗೊಳಿಸುತ್ತಿದ್ದುವೆಂದು ನನಗೆ ಈಗ ಕಾಣುತ್ತದೆ.

'ಸತ್ಯಾಗ್ರಹ'ವೆಂಬ ಶಬ್ದವನ್ನು ಸೃಷ್ಟಿಸುವುದಕ್ಕೆ ಮುಂಚೆಯೇ ಆ ತತ್ವವು ಹುಟ್ಟಿದ್ದಿತು. ಅಷ್ಟೇಕೆ, ಅದು ಉದಯಿಸಿದಾಗ ನನಗೇ ಅದರ ಸ್ವರೂಪವು ತಿಳಿದಿರಲಿಲ್ಲ. ಗುಜರಾತಿಯಲ್ಲಿ ಕೂಡ ನಾವು ಆ ತತ್ವವನ್ನು 'ಪ್ಯಾಸ್ಸಿವ್ ರೆಸಿಸ್ಟೆನ್ಸ್' ಎಂಬ ಹೆಸರಿನಿಂದಲೇ ಕರೆಯುತ್ತಿದ್ದೆವು. ಬಿಳಿಯರ ಒಂದು ಕೂಟದಲ್ಲಿ 'ಪ್ಯಾಸ್ಸಿವ್ ರೆಸಿಸ್ಟೆನ್ಸ್' ಎಂಬ ಮಾತಿಗೆ ಸಂಕುಚಿತಾರ್ಥವನ್ನು ಕೊಟ್ಟು ಅದು ನಿರ್ಬಲರ ಆಯುಧವೆಂದೂ ಅದರಲ್ಲಿ ದ್ವೇಷಕ್ಕೆ ಕೂಡ ಎಡೆಯುಂಟೆಂದೂ ಕಟ್ಟಕಡೆಗೆ ಅದು ಹಿಂಸಾತ್ಮಕವಾಗಿ ಕೂಡ ಪರಿಣಮಿಸಬಲ್ಲುದೆಂದೂ ಅವರು ವರ್ಣಿಸಿದುದನ್ನು ನಾನು ಕಂಡೆನು. ಆಗ ನಾನು ಇದೊಂದೂ ಭಾರತೀಯರ ಚಳವಳಿಗೆ ಅನ್ವಯಿಸುವುದಿಲ್ಲವೆಂದು ಹೇಳಿ ಆ ಚಳವಳಿಯ ನೈಜಸ್ವರೂಪವನ್ನು ವಿವರಿಸಬೇಕಾಯಿತು. ಭಾರತೀಯರ ಹೋರಾಟವನ್ನು ವರ್ಣಿಸಲು ಹೊಸದೊಂದು ಪದವನ್ನು ನಿರ್ಮಿಸಬೇಕೆಂದು ಸ್ಪಷ್ಟವಾಯಿತು.

ಆದರೆ ನಾನು ಬಹು ಪ್ರಯತ್ನಪಟ್ಟರೂ ಅಂತಹ ಪದವೊಂದೂ ನನಗೆ ಹೊಳೆಯಲಿಲ್ಲ. ಆದುದರಿಂದ ನಾನು ಈ ತತ್ವವನ್ನು ವರ್ಣಿಸಲು ಅತ್ಯುತ್ತಮವಾದ ಪದವನ್ನು ಸೂಚಿಸುವ ವಾಚಕರಿಗೆ ಸಣ್ಣದೊಂದು ಬಹುಮಾನವನ್ನು ಕೊಡುವುದಾಗಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಪ್ರಕಟಿಸಿದೆನು. ಇದರ ಫಲವಾಗಿ ಮಗನಲಾಲ್ ಗಾಂಧಿಯು 'ಸದಾಗ್ರಹ' (ಸತ್×ಆಗ್ರಹ) ವೆಂಬ ಪದವನ್ನು ಸೂಚಿಸಿ ಬಹುಮಾನವನ್ನು ಗೆದ್ದನು. ಆದರೆ ನಾನು ಆ ಪದದ ಅರ್ಥವನ್ನು ಇನ್ನೂ ಸ್ಪಷ್ಟ ಮಾಡಲೋಸ್ಕರ ಅದನ್ನು 'ಸತ್ಯಾಗ್ರಹ' ವೆಂದು ಮಾರ್ಪಡಿಸಿದೆನು. ಈ ಪದವು ನಮ್ಮ ಹೋರಾಟವನ್ನು ವರ್ಣಿಸಲು ಅಂದಿನಿಂದ ಗುಜರಾತಿಯಲ್ಲಿ ಪ್ರತೀತವಾಗಿದೆ.

ಈ ಧರ್ಮಯುದ್ಧದ ಇತಿಹಾಸವೇ ಎಲ್ಲಾ ಲೆಕ್ಕಕ್ಕೂ ದಕ್ಷಿಣ ಆಫ್ರಿಕದಲ್ಲಿ ನನ್ನ ಜೀವನದ—ಅದರಲ್ಲೂ ನಾನು ಅಲ್ಲಿ ನಡಸಿದ ಸತ್ಯಶೋಧನೆಯ—ಚರಿತ್ರೆಯಾಗಿದೆ. ಈ ಇತಿಹಾಸದ ಹೆಚ್ಚು ಭಾಗವನ್ನು ನಾನು ಯರವಡಾ ಕಾರಾಗೃಹದಲ್ಲಿ ಬರೆದು ನನಗೆ ಬಿಡುಗಡೆಯಾದ ಮೇಲೆ ಅದನ್ನು ಮುಗಿಸಿದೆನು. ಅದು 'ನವಜೀವನ'ದಲ್ಲಿ ಪ್ರಕಟವಾಗಿ ಈಚೆಗೆ ಪುಸ್ತಕರೂಪದಲ್ಲಿ ಪ್ರಚುರವಾಗಿದೆ. 'ಕರೆಂಟ್ ಥಾಟ್' ಎಂಬ ಮಾಸಪತ್ರಿಕೆಗಾಗಿ ವಾಲಜೀ ಗೋವಿಂದಜೀ ದೇಸಾಯಿಯವರು ಅದನ್ನು ಇಂಗ್ಲೀಷಿಗೆ ಭಾಷಾಂತರಿಸುತ್ತಿದ್ದಾರೆ. ಆದರೆ ಇಷ್ಟು ತೋರಿದವರು ನಾನು ದಕ್ಷಿಣ ಆಫ್ರಿಕದಲ್ಲಿ ನಡೆಸಿದ ಸತ್ಯಶೋಧನೆಯ ಪ್ರಯೋಗಗಳಲ್ಲಿ ಮುಖ್ಯವಾದುದನ್ನು ಬರೆತುಕೊಳ್ಳಲಿಕ್ಕೆಂದು ನಾನು ಈ ಇಂಗ್ಲಿಷ್ ಅನುವಾದವನ್ನು ಶೀಘ್ರದಲ್ಲಿಯೇ ಪುಸ್ತಕರೂಪದಲ್ಲಿ ಪ್ರಕಟಿಸಲು ಏರ್ಪಾಡು ಮಾಡುತ್ತಿದ್ದೇನೆ. ಅದರಲ್ಲಿ ಬರೆದಿರುವುದನ್ನು ನಾನು ಪುನಃ ಹೇಳುವುದಿಲ್ಲ. ಅದರ ಆ ಇತಿಹಾಸದಲ್ಲಿ ಕಾಣಬರದಿರುವ ದಕ್ಷಿಣ ಆಫ್ರಿಕದಲ್ಲಿ ಕೇವಲ ನನ್ನ ಜೀವನಕ್ಕೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು ಮುಂದಿನ ಕೆಲವು ಅಧ್ಯಾಯಗಳಲ್ಲಿ ತಿಳಿಸುವೆನು. ಇದಾದ ಮೇಲೆ ಒಡನೆಯೇ ನಾನು ಭರತಖಂಡದಲ್ಲಿ ನಡೆಸಿದ ಪ್ರಯೋಗಗಳ ವಿಚಾರವನ್ನು ಬರೆಯ ತೊಡಗುವೆನು. ಆದುದರಿಂದ ಈ ಪ್ರಯೋಗಗಳನ್ನು ಕಾಲಕ್ರಮದಲ್ಲಿ ಅವಿಚ್ಛಿನ್ನವಾಗಿ ತಿಳಿಯಬೇಕೆನ್ನುವ ವಾಚಕರು ದಕ್ಷಿಣ ಆಫ್ರಿಕದಲ್ಲಿನ ಸತ್ಯಾಗ್ರಹದ ಇತಿಹಾಸವನ್ನು ಓದುವುದೊಳ್ಳೆಯದು.

೪ನೇ ಭಾಗದಲ್ಲಿ ೨೭ನೇ ಪ್ರಕರಣ.

ಆಹಾರ ವಿಚಾರವಾಗಿ ಇನ್ನೂ ಹೆಚ್ಚು ಪ್ರಯೋಗಗಳು.

ಕಾಯಾ ವಾಚಾ ಮನಸಾ ಬ್ರಹ್ಮಚರ್ಯವನ್ನಾಚರಿಸಲು ನಾನು ಆತುರನಾಗಿದ್ದೆನು. ಸತ್ಯಾಗ್ರಹ ಯುದ್ಧದ ಅದನ್ನು ಹೆಚ್ಚಾಗಿ ಸಮಯವನ್ನು ಉಪಯೋಗಿಸಬೇಕು. ಅಂತಃಶುದ್ಧಿಯನ್ನು ಅಭ್ಯಾಸಿಸಿ ಆ ಹೋರಾಟಕ್ಕೆ ಸಿದ್ಧಪಡಿಸಿಕೊಳ್ಳಬೇಕು, ಎಂಬ ವಿಷಯದಲ್ಲಿಯೂ ನನಗೆ ಅಷ್ಟೇ ಆತುರತೆ ಇದ್ದಿತು. ಇವು ನಾನು ಆಹಾರದ ವಿಷಯದಲ್ಲಿ ಇನ್ನೂ ಹೆಚ್ಚು ಮಾರ್ಪಾಡುಗಳನ್ನು ಮಾಡುವುದಕ್ಕೂ ಹೆಚ್ಚು ಸಂಯಮವನ್ನು ನಡೆಸುವುದಕ್ಕೂ ಕಾರಣವಾದುವು. ಹಿಂದಿನ ಬದಲಾವಣೆಗಳೆಲ್ಲವೂ ಆರೋಗ್ಯದೃಷ್ಟಿಯಿಂದ ಮಾಡಲ್ಪಟ್ಟಿದ್ದುವು. ಆದರೆ ಈಗಿನ ಪ್ರಯೋಗಗಳನ್ನು ನಡಿಸಿದುದು ಧಾರ್ಮಿಕ ದೃಷ್ಟಿಯಿಂದ.

ಈಗ ಉಪವಾಸ ಅಲ್ಪಾಹಾರಗಳಿಗೆ ನನ್ನ ಜೀವನದಲ್ಲಿ ಹೆಚ್ಚು ಪ್ರಾಮುಖ್ಯತೆಯು ದೊರಕಿತು. ಮನುಷ್ಯನಲ್ಲಿ ವಿಷಯವಾಸನೆಯೂ, ಜಿಹ್ವಾಚಾಪಲ್ಯವೂ ಸಾಮಾನ್ಯವಾಗಿ ಜೊತೆಗೇ ಇರುತ್ತವೆ. ನನ್ನ ವಿಷಯವೇನೂ ಬೇರೆಯಾಗಿರಲಿಲ್ಲ. ವಿಷಯಾಸಕ್ತಿಯನ್ನೂ, ಬಾಯಿರುಚಿಯನ್ನೂ ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿ ನನಗೆ ಎಷ್ಟೋ ಅಡಚಣೆಗಳೊದಗಿವೆ. ಇಂದು ಕೂಡ ನಾನು ಇವನ್ನು ಸಂಪೂರ್ಣವಾಗಿ ಗೆದ್ದಿರುವೆನೆಂದು ಹೇಳಲಾರೆನು. ನಾನು ಅತ್ಯಾಹಾರಿಯೆಂದೇ ನನ್ನ ಎಣಿಕೆ. ಮಿತ್ರರು ನನ್ನಲ್ಲಿ ಕಾಣುವ ಸಂಯಮವು ನನಗೆ ಎಂದೂ ಹಾಗೆ ಕಂಡಿಲ್ಲ. ನನಗಿರುವ ಮಟ್ಟಿಗೆ ನಾನು ಸಂಯಮವನ್ನು ಅಭ್ಯಾಸಿಸದೆ ಹೋಗಿದ್ದರೆ ಪಶುಗಳಿಗಿಂತ ಕೀಳಾದ ಸ್ಥಿತಿಗೆ ಇಳಿದು ಹಾಳಾಗಿ ಹೋಗಿರುತ್ತಿದ್ದೆನು. ಆದರೆ ನಾನು ನನ್ನ ಕುಂದುಗಳನ್ನು ಸಾಕಾದಷ್ಟು ಮಟ್ಟಿಗೆ ಅರಿತಿದ್ದುದರಿಂದ ಅವುಗಳನ್ನು ಹೋಗಲಾಡಿಸಲು ದೊಡ್ಡ ಪ್ರಯತ್ನವನ್ನು ಮಾಡಿದೆ. ಈ ಪ್ರಯತ್ನದ ಫಲವಾಗಿಯೇ ನಾನು ಇಷ್ಟು ದಿನ ಈ ಶರೀರದೊಡನೆ ಕೂಡಿಕೊಂಡು ಬಂದಿದ್ದೇನೆ, ಅದರಿಂದ ತಕ್ಕಮಟ್ಟಿಗೆ ಕೆಲಸವನ್ನೂ ತೆಗೆದಿದ್ದೇನೆ.

ನನ್ನ ಈ ಕುಂದು ನನಗೆ ಗೊತ್ತಿದ್ದುದರಿಂದಲೂ, ಅನಿರೀಕ್ಷಿತವಾಗಿ ಹಿತವಾದ ಸಂಗವು ದೊರೆತುದರಿಂದಲೂ ಏಕಾದಶಿಯ ದಿನ ಫಲಾಹಾರವನ್ನು ಅಥವಾ ಉಪವಾಸವನ್ನು ಮಾಡತೊಡಗಿದೆನು. ಜನ್ಮಾಷ್ಟಮಿ ಮುಂತಾದ ಹಬ್ಬ ತಿಥಿಗಳನ್ನು ಆಚರಿಸ ತೊಡಗಿದೆನು. ಒಣಹಣ್ಣಿನ ಆಹಾರವನ್ನು ಮೊದಲು ಮಾಡಿದೆನು. ಆದರೆ ಸಂಯಮದ ದೃಷ್ಟಿಯಿಂದ ಹಣ್ಣಿನ ಆಹಾರಕ್ಕೂ, ಧಾನ್ಯದ ಆಹಾರಕ್ಕೂ ಹೆಚ್ಚಿನ ವ್ಯತ್ಯಾಸವೇನೂ ಕಾಣಬರುವುದಿಲ್ಲ! ಧಾನ್ಯದ ಆಹಾರದಿಂದ ನಮ್ಮ ನಾಲಗೆಯನ್ನು ರುಚಿಸುವುದು. ಎಷ್ಟರಮಟ್ಟಿಗೆ ಸಾಧ್ಯವೋ ಹಣ್ಣಿನಿಂದಲೂ ಅಷ್ಟರಮಟ್ಟಿಗೆ ಸಾಧ್ಯ ಮತ್ತು ಅದು ಅಭ್ಯಾಸವಾದ ಮೇಲೆ ಇನ್ನೂ ಹೆಚ್ಚಾಗಿಯೇ ಸಾಧ್ಯವಾಗುವುದನ್ನು ನಾನು ಕಂಡೆನು. ಆದ ದುಂದ ನಾನು ಇಂತಹ ಹಬ್ಬದಿನಗಳಲ್ಲಿ ಉಪವಾಸ ಮಾಡುವುದು ಅಥವಾ ಒಂದು ಹೊತ್ತು ಊಟ ಮಾಡುವುದಕ್ಕೆ ಪ್ರಾಮುಖ್ಯತೆಯನ್ನು ಕೊಡತೊಡಗಿದೆನು. ಇದಲ್ಲದೆ ಪ್ರಾಯಶ್ಚಿತ್ತವೇ ಮುಂತಾದ ಸಂದರ್ಭ ಒದಗಿದರೆ ಅದನ್ನೂ ಉಪವಾಸಕ್ಕಾಗಿ ಆನಂದದಿಂದ ಉಪಯೋಗಿಸಿಕೊಳ್ಳುತ್ತಿದ್ದೆನು.

ಈಗ ಶರೀರವು ಹೆಚ್ಚು ಸ್ವಚ್ಛವಾಗುವುದರಿಂದ ರುಚಿವು ಹೆಚ್ಚಾಗಿ ಊಟದಲ್ಲಿ ಹಸಿವು ವಿಪರೀತವಾಗುತ್ತಿದ್ದಿತೆಂದೂ ನನ್ನ ಅನುಭವಕ್ಕೆ ಬಂದಿತು. ಉಪವಾಸವು ಸಂಯಮೋಪಕರಣವಾಗುವಂತೆಯೇ ಅದನ್ನು ಭೋಗಕ್ಕೆ ಕಾರಣವನ್ನಾಗಿಯೂ ಮಾಡಿಕೊಳ್ಳಬಹುದೆಂದು ನನಗೆ ಗೊತ್ತಾಯಿತು. ಆ ಮೇಲೆ ನನಗುಂಟಾದ ಇದೇ ರೀತಿಯ ಅನುಭವಗಳಲ್ಲದೆ ಇತರರ ಅನುಭವಗಳೂ ಈ ಅಭಿಪ್ರಾಯ ಸಮರ್ಥನವನ್ನು ಸಮರ್ಥಿಸುವುದಕ್ಕೆ ದೊರೆಯುತ್ತಿವೆ. ನಾನು ನನ್ನ ಶರೀರಕ್ಕೆ ಶಿಕ್ಷಣ ಕೊಟ್ಟು ಉತ್ತಮಗೊಳಿಸಬೇಕೆಂದಿದ್ದೆನು. ಆದರೆ ಸಂಯಮಸಾಧನೆಯು, ಭೋಗಮಾತ್ರವೂ ಆಗ ನನ್ನ ಹಗ್ಗವಿಲ್ಲದುದರಿಂದ ನಾನು ಒಗ್ಗಿದ, ರುಚಿದಾಯಕವಾದ ಆಹಾರವನ್ನು ಬಿಡುವುದಕ್ಕಿಂತ ಅವರ ಆಶಯ ನನ್ನ ಶಕ್ತಿ ಮೀರಿದ್ದಾಗುತ್ತಿದ್ದಿತು. ಇದು ನನ್ನ ಬಿಡಿಯ ಒಂದೊಂದು ಆಹಾರವನ್ನು ಬಿಟ್ಟು ಕೆಲವನ್ನು ಮಾಡಿದ ಕೊಂಡರೆ ಮಾಡಬೇಕೆಂದಿರುವುದಕ್ಕಿಂತ ಎರಡನೆಯದು ಹೊಸ ರುಚಿಯನ್ನು ಹುಟ್ಟಿಸುವ ರೀತಿಯನ್ನೂ ಕೂಡ ತಿಳಿಸಿತು.'

ನಾನು ಈ ಪ್ರಯೋಗಗಳನ್ನು ನಡಸುವಾಗ ನನಗೆ ಅನೇಕ ಜೊತೆಗಾರರಿದ್ದರು. ಇವರಲ್ಲಿ ಹರ್ಮನ್ ಕಾಲನ್‌ಬ್ಯಾಕರೇ ಮುಖ್ಯರು. ನಾನು ಇವರ ವಿಷಯವಾಗಿ ದಕ್ಷಿಣ ಆಫ್ರಿಕದ ಸತ್ಯಾಗ್ರಹದ ಇತಿಹಾಸದಲ್ಲಿ ಬರೆದಿರುವುದರಿಂದ ಇಲ್ಲಿ ನಾನು ಪುನಃ ಆ ವಿಷಯಗಳನ್ನು ತಿಳಿಸುವುದಿಲ್ಲ. ಉಪವಾಸದಲ್ಲಿಯಾಗಲಿ ಏಕಾಹಾರದ ಮಾರ್ಪಾಡಿನಲ್ಲಿಯಾಗಲಿ ಕಾಲನ್‌ಬ್ಯಾಕರು ಯಾವಾಗಲೂ ನನ್ನೊಡನೆ ಇರುತ್ತಿದ್ದರು. ಸತ್ಯಾಗ್ರಹದ ಹೋರಾಟವು ತೀಕ್ಷ್ಣವಾಗಿ ನಡೆಯುತ್ತಿದ್ದಾಗ ನಾನು ಅವರ ಮನೆಯಲ್ಲಿಯೇ ಅವರೊಡನೆ ವಾಸಿಸುತ್ತಿದ್ದೆನು. ನಾವು ನಮ್ಮ ಆಹಾರದ ಬದಲಾವಣೆಗಳ ವಿಷಯವಾಗಿ ಚರ್ಚಿಸುತ್ತಾ ಹಿಂದಿನ ಆಹಾರಕ್ಕಿಂತಲೂ ಹೊಸ ಆಹಾರದಲ್ಲಿ ಹೆಚ್ಚು ರುಚಿಗಾಣುತ್ತಿದ್ದೆವು. ಈ ರೀತಿಯ ಮಾತುಕತೆಯು ಆಗ ಸಂತೋಷಜನಕವಾಗಿ ತೋರುತ್ತಿದ್ದಿತು. ಅವರಲ್ಲಿ ಯಾವ ಅನೌಚಿತ್ಯವೂ ನನಗೆ ಕಾಣುತ್ತಿರಲಿಲ್ಲ. ಆದರೆ ಆಹಾರದ ರುಚಿಯ ವಿಷಯವಾಗಿ ಮಾತನಾಡಿದುದು ತಪ್ಪೆಂದು ನನಗೆ ಅನುಭವದಿಂದ ಗೊತ್ತಾಗಿದೆ. ಊಟಮಾಡುವುದು ಶರೀರ ರಕ್ಷಣೆಗಲ್ಲದೆ ನಾಲಗೆಯ ರುಚಿಗಲ್ಲ. ಪ್ರತಿಯೊಂದು ಇಂದ್ರಿಯವೂ ಶರೀರಕ್ಕಾಗಿಯೂ, ಶರೀರದ ಮೂಲಕ ಆತ್ಮಕ್ಕಾಗಿಯೂ ಸೇವೆಗೈಯ್ಯುದಾಗ ಅದರ ವಿಷಯವಾದ ರಸವು ನಾಶವಾಗುತ್ತದೆ. ಆಗಲೇ ಅದು ಪ್ರಕೃತಿನಿಯಮಕ್ಕನುಸಾರವಾಗಿ ಕೆಲಸಮಾಡ ತೊಡಗುವುದು.

ಹೀಗೆ ಪ್ರಕೃತಿಯೊಡನೆ ಹೊಂದಿಕೊಳ್ಳಲು ಎಷ್ಟು ಪ್ರಯೋಗಗಳನ್ನು ನಡಸಿದರೂ ಕಡಮೆಯೇ, ಎಷ್ಟು ತ್ಯಾಗಮಾಡಿದರೂ ಹೆಚ್ಚಲ್ಲ. ಆದರೆ ದುರದೃಷ್ಟವಶಾತ್ ಇಂದಿನ ಪ್ರವಾಹವು ಇದಕ್ಕೆ ಎದುರಾಗಿ ಹರಿಯುತ್ತಿದೆ. ನಶಿಸಿ ಹೋಗುವ ನಮ್ಮ ಶರೀರವನ್ನು ಅಂದಗೊಳಿಸುವುದಕ್ಕಾಗಿಯೂ, ಅದರ ಆಯುಸ್ಸನ್ನು ಒಂದೆರಡು ಕ್ಷಣ ನಿಲ್ಲಿಸುವುದಕ್ಕಾಗಿಯೂ ಇತರ ಅನೇಕ ಪ್ರಾಣಿಗಳನ್ನು ಬಲಿಗೊಡುವುದಕ್ಕೆ ನಾವು ಹೇಸುವುದಿಲ್ಲ. ಇದರ ಫಲವೇನೆಂದರೆ—ಶರೀರವೂ, ಆತ್ಮವೂ ಎರಡೂ ಕ್ಷಯಿಸುತ್ತವೆ. ಹಳೆಯ ಜಾಡ್ಯವೊಂದನ್ನು ಹೋಗಲಾಡಿಸುವುದರಲ್ಲಿ ನಾವು ನೂರು ಹೊಸ ವ್ಯಾಧಿಗಳನ್ನು ತಂದುಕೊಳ್ಳುತ್ತೇವೆ; ಇಂದ್ರಿಯ ಭೋಗಪರವಶರಾಗಿ ಆ ಭೋಗಶಕ್ತಿಯನ್ನು ಕೂಡ ಕಳೆದುಕೊಳ್ಳುತ್ತೇವೆ. ಇದೆಲ್ಲಾ ನಮ್ಮ ಕಣ್ಣ ಮುಂದೆಯೇ ನಡೆಯುತ್ತಿದೆ. ಆದರೆ ಕಣ್ಣು ಮುಚ್ಚಿಕೊಂಡವನಿಗಿಂತ ಕುರುಡನುಂಟೆ?

ಆಹಾರ ವಿಷಯಕವಾದ ಪ್ರಯೋಗಗಳ ಉದ್ದೇಶವನ್ನೂ ಅವುಗಳಲ್ಲಿ ಹಿಡಿದ ವಿಚಾರ ಸರಣಿಯನ್ನೂ ಹೀಗೆ ವಿವರಿಸಿ ಮುಂದೆ ಆ ಪ್ರಯೋಗಗಳನ್ನು ತಕ್ಕಮಟ್ಟಿಗೆ ವಿಸ್ತಾರವಾಗಿ ವಿವರಿಸುತ್ತೇನೆ.

ಕಿತ್ತಳೆ ಮರಗಳಿಗೆ ತಗಲುವ 'ಡೈಬ್ಯಾಕ್' ರೋಗಕ್ಕೆ ಚಿಕಿತ್ಸೆ.

(192. ನೇ ಏಪ್ರಿಲು ತಿಂಗಳ (ಇಂಡಿಯಾದ ಎಗ್ರಿಕಲ್ಚರಲ್ ಜರ್ನಲ್, ನಲ್ಲಿ ಪ್ರಕಟವಾದದ್ದು)

1911—12ರಲ್ಲಿ ಬೊಂಬಾಯಿ ಪ್ರಾಂತ್ಯದ ಅಹ್ಮದ್‌ನಗರ ಜಿಲ್ಲೆಯ ಬಿಯೊಲಾಲಿ ಎಂಬಲ್ಲಿರುವ ನೀರು ಕಾಲುಗಾರಿಯ ಬಾಗ್ಲೆಯ ಬಳಿ ಒಂದು ಕಿತ್ತಳೆ ತೋಟವು ಪ್ರಾರಂಭಿಸಲ್ಪಟ್ಟಿತು, ಮತ್ತು ಗಿಡಗಳು 1918—19ರಲ್ಲಿ ಫಲಕೊಡಲು ಪ್ರಾರಂಭಿಸಿದವು. 1921—22ರಲ್ಲಿ 'ಡೈಬ್ಯಾಕ್' ಎಂಬ ರೋಗವು ಗಿಡಗಳಿಗೆ ತಗಲಿ, ಇಡೀ ತೋಟವೇ ಬೇಗನೆ ನಾಶವಾಗಿ ಹೋಗುವದೋ ಎನ್ನುವಷ್ಟು ಮಟ್ಟಿಗೆ ಅದು ಪ್ರಬಲವಾಯಿತು. ಗಿಡಗಳ ಬೇರುಗಳಿಗೆ ಹೆಚ್ಚಿನ ಗಾಳಿಯಾಡುವಂತೆ ಮಾಡುವದಕ್ಕಾಗಿ ತೋಟದಲ್ಲಿ ಚರಂಡಿಗಳನ್ನು ತೆಗೆದು ಅವುಗಳಿಗೆ ಕಲ್ಲು, ಇಟ್ಟಿಗೆ, ಎಲೆ ಕಸ್ಸ ಮುಂತಾದವುಗಳನ್ನು ತುಂಬಿಸುವ ಪರೀಕ್ಷೆಯನ್ನು 1925ನೇ ಮೇ ತಿಂಗಳಲ್ಲಿ ಅರ್ಧ ತೋಟದಲ್ಲಿ ಮಾಡಿದರು. ಈ ಚಿಕಿತ್ಸೆಯಿಂದ 10 ತಿಂಗಳಲ್ಲಿ ಗಿಡಗಳ ಸ್ಥಿತಿಯು ಬಹಳ ಉತ್ತಮವಾಯಿತು, ಮತ್ತು ಇದರ ವಿವರವು 1927ನೇ ಮಾರ್ಚಿ ತಿಂಗಳ 'ಇಂಡಿಯಾದ ಎಗ್ರಿಕಲ್ಚರಲ್ ಜರ್ನಲ್'ನಲ್ಲಿ ಪ್ರಕಟಿಸಲ್ಪಟ್ಟಿತು. ಚರಂಡಿಗಳಿಲ್ಲದ ಕಡೆಯ ಗಿಡಗಳು ಹಾಳಾಗುತ್ತಾ ಬಂದು ಸ್ವಲ್ಪ ಮಾತ್ರ ಫಸಲು ಕೊಟ್ಟವೆಂದು ಆಗ ಹೇಳಲ್ಪಟ್ಟಿತ್ತು.

ಬೇರೆ ಬೇರೆ ಭಾಗಗಳ ನಂತರದ ಫಸಲು ಪ್ರಥಮ ವರದಿಯ ಹೇಳಿಕೆಯನ್ನು ದೃಢೀಕರಿಸುತ್ತದೆ. ಮೆ. ಪಿ. ಜಿ. ಗೋಖಲೆ ಬಿ. ಎ. ಇ. ಯವರು ಕುಕ್ಕೆಯ ಹಣ್ಣುಗಳ ಲೆಕ್ಕವನ್ನು ಇಟ್ಟಿರುವರು. ಕುಕ್ಕೆಯೊಂದರಲ್ಲಿ 40 ಹಣ್ಣುಗಳ ದರದಲ್ಲಿ ಉಪಚರಿಸಿದ 76 ಗಿಡಗಳು 300 ಕುಕ್ಕೆ ಹಣ್ಣುಗಳನ್ನೂ, ಉಪಚರಿಸದ 74 ಗಿಡಗಳು 11 ಕುಕ್ಕೆ ಮಾತ್ರ ಹಣ್ಣುಗಳನ್ನು ಕೊಟ್ಟವು. ನೂರು ಗಿಡಗಳಿಗೆ ಲೆಕ್ಕ ಹಾಕಿದಲ್ಲಿ ಈ ಕಳಗಿನ ದರವಾಗುತ್ತದೆ.

ಉಪಚರಿಸಿದ ಗಿಡಗಳು 100ಕ್ಕೆ 15,7.. ಹಣ್ಣುಗಳು. ಉಪಚರಿಸದ ಗಿಡಗಳು 100ಕ್ಕೆ ... ಉಪಚರಿಸಿದ ಗಿಡಗಳು ಉಪಚರಿಸದ ಗಿಡಗಳ 39 ರಷ್ಟು ಹೆಚ್ಚು ಫಲ ಕೊಟ್ಟವು.

1926ನೇ ಮೇ ತಿಂಗಳಲ್ಲಿ ಉಪಚರಿಸದೆ ಇದ್ದ 74 ಗಿಡಗಳುಳ್ಳ ಭಾಗದಲ್ಲೂ ಚರಂಡಿಗಳು ತೆಗೆಯಲ್ಪಟ್ಟವು. ಈಗ ಆ ಗಿಡಗಳೂ ಉತ್ತಮವಾಗುತ್ತಿವೆ. ಆದುದರಿಂದ ಪ್ರಥಮ ಪರೀಕ್ಷೆಯ ಫಲಿತಾಂಶವು ನಿಜವೆಂದಾಯಿತು. ... ಚಿಕಿತ್ಸೆ ಪಡೆದ ಭಾಗದ ಗಿಡಗಳೂ ಚೆನ್ನಾಗಿವೆ.

ವಾಚಕರು ಮೊದಲು ಕೆಲವು ಗಿಡಗಳ ಸಾಲುಗಳಿಗೆ ಚರಂಡಿ ತೆಗೆದ ಕಾರಣ ಅವುಗಳೂ ಚೆನ್ನಾಗಿ ಬೆಳೆಯುತ್ತಿವೆ.

(ಡಿ. ಎಲ್. ಸಹಸ್ರಬುದ್ಧೆ)

ಮಹಾತ್ಮಗಾಂಧಿಯವರು ಮಗನಿಗೆ ಮಾಡಿದ ಉಪದೇಶ.

ಭಗವದ್ಗೀತೆ—ರತ್ನಗಳ ಗಣಿ.

ಮಹಾತ್ಮಾಜೀಯವರು ಕಳೆದ ತಿಂಗಳಲ್ಲಿ ನಡೆದ ತಮ್ಮ ಮಗ ಶ್ರೀಯುತ ರಾಮದಾಸ್ ಗಾಂಧಿಯವರ ವಿವಾಹ ಕಾಲದಲ್ಲಿ ಅವರಿಗೆ ಈ ಕೆಳಗೆ ಹೇಳುವ ಬೋಧೆ ನುಡಿದಿದ್ದರು.

'ನೀನು ನಿನ್ನ ಅಪರಾಧಗಳನ್ನೆಲ್ಲಾ ನನ್ನೊಡನೆ ಹೇಳಿಬಿಟ್ಟಿದ್ದೀಯೆ. ಅವು ನನಗೆ ನಿಶ್ಚಯವಾಗಿಯೂ ಗಾಬರಿಯನ್ನುಂಟುಮಾಡಲಿಲ್ಲ. ಬದಲಾಗಿ ನೀನು ನಿಸ್ಸಂಕೋಚವಾಗಿ ಹೇಳಿಕೊಂಡ ಆ ತಪ್ಪು ಒಪ್ಪುಗಳೆಲ್ಲಾ ನಿನ್ನ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಸ್ಥಿರಗೊಳಿಸಿದುವು. ನೀನು ಪ್ರಪಂಚದಲ್ಲಿ ಸರ್ವರಿಂದಲೂ ಮೋಸಗೊಳಿಸಲ್ಪಟ್ಟರೂ ಚಿಂತೆಯಿಲ್ಲ. ಆದರೆ ನೀನು ಮಾತ್ರ ಯಾರನ್ನೂ ಮೋಸಗೊಳಿಸದಂತಿರಬೇಕು. ಅದು ಮಾತ್ರ ನನಗೆ ಹೆಚ್ಚು ಸಂತೋಷವನ್ನುಂಟುಮಾಡುವುದು. ನೀನು ಎಂದಿಗೂ ಈ ಬಗೆಯ ನಡತೆಯಲ್ಲೇ ನಡೆಯಬೇಕೆಂಬುದು ನನ್ನ ಆಶಯ.'

'ನೀನು ನಿನ್ನ ಪತ್ನಿಯ ಗೌರವವನ್ನು ರಕ್ಷಿಸತಕ್ಕವನಾಗಿರಬೇಕಲ್ಲದೆ ಆಕೆಯ ಮೇಲೆ ಅಧಿಪತ್ಯ ಮಾಡುವವನಾಗಿರಬಾರದು. ಆಕೆಯ ನಿಜವಾದ ಸ್ನೇಹಿತನಾಗಿರು. ನೀನು ಆಕೆಯ ದೇಹ ಮತ್ತು ಆತ್ಮಗಳನ್ನು ಪೂಜ್ಯಭಾವದಿಂದ ಕಾಣಬೇಕು. ಆಕೆಯೂ ನಿನ್ನ ದೇಹ—ಆತ್ಮಗಳನ್ನು ಅದೇ ಪೂಜ್ಯಭಾವದಿಂದ ಕಾಣುವಳೆಂದು ಅಪೇಕ್ಷಿಸುತ್ತೇನೆ. ಅದಕ್ಕೆ ಸಾಧನವೇನೆಂದರೆ, ನೀನು ಶ್ರಮಪೂರ್ವಕವಾದ ನಿನ್ನ ಪ್ರಾರ್ಥನೆ, ಪಂಚಭಾಷಣ, ಸದಾಚಾರಜೀವನ ಮತ್ತು ಪರಿಶುದ್ಧತೆಗಳನ್ನು ಕಳೆದುಕೊಳ್ಳದಂತೆ ನಿನ್ನ ಜೀವನಯಾತ್ರೆಯನ್ನು ಸಾಗಿಸಬೇಕಾಗಿದೆ. ನಿಶ್ಚಿಂತನೆಯಾದರೇ ಆಗಲಿ, ಇಬ್ಬರು ಮಕ್ಕಳ ತಾಯ್ತಂದೆಗಳಾದರೂ ಆಗಲಿ ಸಹಾನುಭೂತಿಯಿಂದ ಭಾವಿಸಬೇಕಾಗಿದೆ.

'ನೀವೆಲ್ಲರೂ ನಿಮ್ಮ ಶಿಕ್ಷಣೆಯಲ್ಲಿ ಸ್ವಲ್ಪ ಭಾಗವನ್ನು ಈ ಆಶ್ರಮದಲ್ಲಿದ್ದು ಹೊಂದಿದ್ದೀರಿ. ನಿಮ್ಮ ಜೀವಿತಗಳು ಮಾತೃಭೂಮಿಯ ಸೇವೆಗಾಗಿ ಮುಡುಪಾಗಿ ಇರಲೆಂದಿದೆ. ಅಷ್ಟು ಮಾತ್ರವಲ್ಲ, ಅವು ಆ ಕಾರ್ಯದಲ್ಲೇ ಸವೆದು ಹೋಗುವ ಎಂಥಾ ಕರ್ಮವೂ ಆದ್ದರಿಂದ ನಿಲ್ಲಿಸಬೇಕು. ಸಾಕ್ಷಿ ದಾರಿದ್ರ್ಯವ್ರತವನ್ನು ಸ್ವೀಕರಿಸಿದ್ದೇವೆಂಬುದು ತಿಳಿದಿದೆಯಲ್ಲವೆ? ಆದುದರಿಂದ ನೀವೆಲ್ಲರೂ ನಿಮ್ಮ ಆಹಾರವನ್ನು ಕೇವಲ ಒದಗಿಸುವುದಕ್ಕೋಸ್ಕರವೇ ಸ್ವತಃ ಕಷ್ಟದಿಂದಲೇ ಸಂಪಾದಿಸಿಕೊಳ್ಳಲು ಸಿದ್ಧರಿರಬೇಕು. ನೀವೆಲ್ಲರೂ ಆ ಒಗೆಯ ಪ್ರತಿ ದಿನದ ಕಾರ್ಯ ಕಲಾಪಗಳಲ್ಲಿ ಪರಸ್ಪರ ಸಹಾಯಕರಾಗಿ ಆದರಿಂದಲೇ ಆನಂದಗೂಳ್ಳಿರಿ.'

'ನಾನು ನಿಮಗ ಯಾವ ಒಗೆಯ ಬಳುವಳಿ—ಒಡುಮತಿಗಳನ್ನು ಕೊಡಲಿಲ್ಲ. ಈಗ ನಾನು ಕೊಡುತ್ತಿರುವ ಈ ಎರಡು ಶಕ್ತಿಗಳು ಮತ್ತು ನಾನು ಅತಿಶಯ ಪ್ರೀತಿಸುವ ಶ್ರೀ ಭಗವದ್ಗೀತಾ ಮತ್ತು ಭಜನಾವಳಿಯ ಈ ಎರಡು ಪುಸ್ತಕಗಳು ಇಷ್ಟಲ್ಲದೆ ನಾನು ಮತ್ತೇನನ್ನೂ ಕೊಡಲಾರೆನು. ಈ ಕೈನೂಲಿನ ಹಾರಗಳೆರಡು ನಿಮಗೆ ರಕ್ಷಾಕವಚಗಳಾಗಿದ್ದು ನಿಮ್ಮನ್ನು ಸಂರಕ್ಷಿಸಲಿ! ನನ್ನ ವಿಶ್ವರಿಂದ ನಿಮಗೆ ಒಂದು ವೇಳೆ ನಾನು ಬಹು ಬೆಲೆಯ ಉಡುಗೊರೆಗಳನ್ನು ಕೊಡಿಸಿದ್ದರೆ ಲೋಕವು ನನ್ನ ವಂಚಕ ಸ್ವಭಾವವನ್ನು ಕುರಿತು ಹುಗಿಸದೆ ಇರುತ್ತಿರಲಿಲ್ಲ. ಆದರೆ ಈಗ ನಾನು ನನ್ನ ಸ್ಥಿತಿಗೆ ಉಚಿತವಾದಂಥ ವಸ್ತುಗಳನ್ನೇ ನಿಮಗೆ ಕೊಟ್ಟಿರುವುದರಿಂದ ಈ ವಿಷಯದಲ್ಲೂ ಲೋಕವೇ ಸಾಕ್ಷಿಯಾಗಿರುವುದು!

'ಶ್ರೀ ಭಗವದ್ಗೀತಾ ಗ್ರಂಥವಂಬುದು ನಿಮಗೂಂದು ರತ್ನಗಳ ಗಣಿಯಂತಿರಲಿ, ನಾನಾದರೂ ಅದನ್ನು ಆ ಭಾವನೆಯಿಂದಲೇ ಸ್ವೀಕರಿಸಿದ್ದೇನೆ. ಅದು ನಿಮ್ಮ ಲೋಕಯಾತ್ರೆಯಲ್ಲಿ ಸದಾ ಸಹಾಯಕನಾದ ಓ ದಕನೂ, ಉಪ್ಪೃಮಿತ್ರನೂ, ಆಗಿರಲಿ! ಅದು ನಿಮ್ಮ ನಡವಳಿಕೆಯ ಮಾರ್ಗವನ್ನು ಪ್ರಕಾಶಗೊಳಿಸಲಿ. ನಿಮ್ಮ ಸತ್ಕಾರ್ಮ ಕರ್ಮಗಳಿಗ ಉತ್ತೇಜನ ಕೊಡಲಿ. ಸರ್ವೇಶ್ವರನು ನಿಮಗೆ ಲೋಕಸೇವೆಯಲ್ಲಿ ವಿನಿಯೋಗಿಸಲಿಕ್ಕಾಗಿ ದೀರ್ಘಾಯುರಾರೋಗ್ಯಗಳನ್ನು ದಯೆ ಪಾಲಿಸಲಿ.

EXECUTIVE ENGINEER'S OFFICE,
Mercara, the 2nd March '28.

NOTICE.

It is hereby notified for general information that the building known as "Inspection Bungalow at Kunnmotte" whose details are given below, will be auctioned by the undersigned on 16th April '28 at 11 A. m. at the site. All intending purchasers are requested to be present at the place and at the time mentioned. The building will be knocked down to the highest bidder.

Intending bidder will have to deposit Rs 25 at the beginning of the sale. The amount of the unsuccessful bidder will be refunded as soon as the sale is closed. The successful bidder should pay 25% of the sale amount on the spot. The balance money must be paid at the Mercara Sub Divisional Office on or before 16—5—'28, failing which, the building will be resold at his risk.

The sale will be subject to the approval of the Executive Engineer, Coorg Division.

DETAILS.

Inspection Bungalow at Kunnmotte.	Superficial Plinth area including verandahs.	Cubic contents.
Land 1 37 acres.		
Main building.	2,129.	34,064.
Out House	528.	5,301.
Latrine.	67	436.
Bullock shed	253.	2,592.

Sd/—C. A. Rajagopala Iyyengar,
3—2 Offg. Executive Engineer, Coorg.

ನೋಟೀಸು.

ಸೆಂಟ್ರಲ್ ಸಹಕಾರಿ ಬ್ಯಾಂಕಿಗೆ ಒರಬೇಕಾದ ಸುಖಾಂ ವಿಲನ್ ಫಂಡಿನ ಮೊಬಲಗು ಪಾವತಿ ಮಾಡದ ಸೊಸೈಟಿಗಳಿಗೆ ಹಣ ಸಾಲ ಕೇಳಿದರೆ ಕೊಡಕೂಡದಾಗಿ ಕೋಆಪರೇಟಿವ್ ರಿಜಿಸ್ಟ್ರಾರವರು ಆರ್ಡರ್ ಮಾಡಿದ್ದವರಿಂದ ಎಲ್ಲಾ ಸೊಸೈಟಿಗಳ ಅವಗಾಹನೆಗೆ ಈ ಮೂಲಕ ತಿಳಿಸಲಾಗಿದೆ.

ಸಿ. ಯಸ್. ವೆಂಕಪ್ಪಯ್ಯ,
ಗೌ. ಕಾರ್ಯದರ್ಶಿ

ಸೆಂಟ್ರಲ್ ಬ್ಯಾಂಕ್.

ತಾರೀಖು 10—3—1928ರಲ್ಲಿ ನಡೆದ ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನ ಪ್ರೊಸೀಡಿಂಗ್.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಬ್ಯಾಂಕಿನ ಮತ್ತು ಫ್ಯಾಮಿನ ತಿಂಗಳ ಒಟ್ಟು ಮತ್ತು ಜನವರಿ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಸಾಲದ ಅರ್ಜಿಗಳನ್ನು ಓದಿ ಈ ಕೆಳಗಿನ ಮೇರೆ ಸೊಸೈಟಿಗಳಿಗೆ ಸಾಲ ಮಂಜೂರು ಮಾಡಲಾಯಿತು.

ಮಡಿಕೇರಿ ಟವ್ನ್ ಸೊಸೈಟಿಗೆ ರೂ. 1000, ಕಾಟಕೇರಿ ಸೊಸೈಟಿಗೆ ರೂ. 2000, ನಲ್ವತ್ತೊಕ್ಲು ಸೊಸೈಟಿಗೆ ರೂ. 1000 ಚೆಂಬೆಬೆಳ್ಳೂರು ಸೊಸೈಟಿಗೆ ರೂ. 2000, ಸೋಮವಾರಪೇಟೆ ಮಲ್ಲೇಶ್ವರ ಸೊಸೈಟಿಗೆ ರೂ. 600, ಬಿಟ್ಟಂಗಾಲ ಟಿಂಬಾರ್ಕೆರೆಗೆ ರೂ. 500, ಮೂರ್ನಾಡು ಬಾಡಗ ಸೊಸೈಟಿಗೆ ರೂ 5000 ಮತ್ತು ಕಾರ್ಮಾಡು ಸೊಸೈಟಿಗೆ ರೂ. 2000 ಸಾಲ ಮಂಜೂರಾಯಿತು.

4. ವೀರಾಜಪೇಟೆ ಟವ್ನ್ ಸೊಸೈಟಿಯವರ ಸಾಲದ ಅರ್ಜಿ ಮೇರೆ, ಸದರಿ ಸೊಸೈಟಿಗೆ ಮೆಂಬರುಗಳಿಂದ ಬಹಳ ದೊಡ್ಡ ಹಣ ಬಾಕಿ ಒರಬೇಕಾಗಿರುವುದರಿಂದ ಈಗ ಪುನಹ ಸಾಲ ಮಂಜೂರು ಮಾಡ ಕೂಡದಾಗಿ ತೀರ್ಮಾನವಾಯಿತು.

5. ಮಾದ್ರೆ ಸೊಸೈಟಿಯ ಸಾಲದ ಅರ್ಜಿಯ ಮೇರೆ, ಬ್ಯಾಂಕಿಗೆ ಬರಬೇಕಾದ ಹಳೇ ಬಾಕಿ ಪಾವತಿ ಮಾಡಿದ ನಂತರ ಹೊಸ ಸಾಲ ಮಂಜೂರು ಮಾಡಲು ಅಡ್ಡಿಯಿಲ್ಲವೆಂತ ನಿರ್ಣಯಿಸಲಾಯಿತು.

6 ಬ್ಯಾಂಕಿನಲ್ಲಿ ರೇವಣಾತಿ ಇಟ್ಟ ಮಂಡಲಿಗಳಿಂದ ಸಾಲದ ಅರ್ಜಿ ಒಂದು ವೇಳೆ ಪ್ರೆಸಿಡೆಂಟರೇ ಮಂಜೂರು ಮಾಡಿ ಸಾಲ ಕೊಡಬಹುದೆಂತ ತೀರ್ಮಾನವಾಯಿತು.

7. ಈ ವರ್ಷದ ಕಂತಿನ ಹಣಕ್ಕೆ ವಾಯಿದೆ ಕೊಡಬೇಕೆಂದು ಹರಿಹರ ಸೊಸೈಟಿಯವರು ಬರಕೊಂಡ ಅರ್ಜಿ ಓದಲಾಯಿತು.

ಬರುವ ವರ್ಷದ ವರೆಗೆ ವಾಯಿದೆ ಕೊಡಬಹುದೆಂತಲೂ, ಈ ವರ್ಷ ಪೂರ್ತಿ ಹಣದ ಬಡ್ಡಿ ಪಾವತಿ ಮಾಡಬೇಕೆಂತಲೂ ತೀರ್ಮಾನವಾಯಿತು.

8 ಬ್ಯಾಂಕಿನ ಈ ವರ್ಷದ ಜನರಲ್ ಮೀಟಿಂಗನ್ನು ಏಪ್ರಿಲ್ ತಾ. 7ನೇ ಶನಿವಾರ ದಿನ ಮಧ್ಯಾಹ್ನ 2 ಗಂಟೆಗೆ ಮಡಿಕೇರಿಯಲ್ಲಿ ನಡಿಸುವಂತೆ ತೀರ್ಮಾನವಾಯಿತು.

9. ಡೈರೆಕ್ಟರುಗಳ ಕರಡು ರಿಪೋರ್ಟನ್ನು ಓದಿ ಮಂಜೂರು ಮಾಡಲಾಯಿತು ಮತ್ತು ರಿಜಿಸ್ಟ್ರಾರರ ರಿಪೋರ್ಟನ್ನು ಸಹ ಓದಲಾಯಿತು.

ಕೆ ಅಪ್ಪಯ್ಯ,
(ಅಧ್ಯಕ್ಷರು)

Wanted.

Two writers one for Panuya Estate and the other for Boothankad Estate in Coorg with 200 or more coolies each. Good pay and prospects. Preference will be given only to those who have got established gangs and who do not want advance. For further particulars apply to SRIMATI D SAKAMMA, COFFEE PLANTER, SOMWARPET, (N. COORG).

ಬೇಕಾಗಿವೆ

ನನ್ನ ಕೋಟೆಕ್ಕೆ ಒಬ್ಬ ಮತ್ತು ಭೂತನಕಾಡು ತೋಟಕ್ಕೆ ಒಬ್ಬ, 200 ಅಥವಾ ಹೆಚ್ಚು ಆಳುಗಳು ಸಮೇತ ಇರುವ ಇಬ್ಬರು ರೈಟರುಗಳು ಬೇಕಾಗಿವೆ. ಖಾಯಂ ಆಳುಗಳ ಗ್ಯಾಂಗ್ ಇರುವವರಿಗೆ ಮತ್ತು ಅಡ್ವಾನ್ಸು ತೆಗೆದುಕೊಳ್ಳದವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಒಳ್ಳೇ ಸಂಬಳ ಮತ್ತು ಉತ್ತೇಜನವಿದೆ. ಹೆಚ್ಚಿನ ವಿಷಯ ತಿಳಿಯಲಿಕ್ಕೆ ಶ್ರೀಮತಿ ಡಿ. ಸಾಕಮ್ಮನವರು, ಕಾಫಿಪ್ಲಾಂಟರು, ಸೋಮವಾರಪೇಟೆ ಈ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು. 5—5

ಭಗವಾನ್ ಬುದ್ಧ ದೇವನ ಶಾಂತಿ.

'ಒಬ್ಬ ಮನುಷ್ಯನು ಬುದ್ಧಿಯಿಲ್ಲದೆ ನನ್ನ ವಿಷಯದಲ್ಲಿ ಅಪರಾಧ ಮಾಡಿದರೆ, ಪ್ರತಿಯಾಗಿ ನಾನು ನನ್ನ ಉದಾರ ವರದ ಹಸ್ತವನ್ನು ನೀಡಿ ಆಶೀರ್ವದಿಸುವೆನು. ಅವನಿಂದ ನನ್ನ ವಿಷಯದಲ್ಲಿ ಎಷ್ಟು ಅಧಿಕವಾದ ಅಪರಾಧ ನಡೆದರೆ, ಅವನ ವಿಷಯದಲ್ಲಿ ಅಷ್ಟು ಹೆಚ್ಚಿನ ಪ್ರೀತಿಯು ನನ್ನಿಂದ ಹೊರಡುವುದು. ಸ್ವಚ್ಛವಾದ ಸದ್ಭಾವನೆಯು ಯಾವಾಗಲೂ ನನ್ನ ಕಡೆಗೆ ಬರುವುದು. ಮತ್ತು ಕೆಡುಕಿನ ದೂಷಿತ ದುರ್ವಾಸನೆಯು ಅವನ ಕಡೆಗೆ ಹೋಗುವುದು,' ಎಂದು ಭಗವಾನ್ ಬುದ್ಧದೇವನು ನುಡಿದನು.

ದೂಷಣೆಗೆ ಪ್ರತಿಯಾಗಿ ಪ್ರೀತಿಮಾಡುವ—ಅಪಕಾರಕ್ಕೆ ಪ್ರತಿಯಾಗಿ ಉಪಕಾರ ಮಾಡುವ ಬುದ್ಧದೇವನ ಈ ಅಪೂರ್ವ ಮಧ್ಯೇಯದ ವಿಚಾರವನ್ನು ತಿಳಿದು, ಅದನ್ನು ದುರುಪಯೋಗ ಪಡಿಸಲೆಳಸಿದ ಒಬ್ಬ ನೀಚನು ಆ ಮಹಾನುಭಾವನ ಸಮೀಪಕ್ಕೆ ಒಂದು ಆ ಸಾಧು ಸರ್ಯಾಸನನ್ನು ಮನಸ್ವಿ ದೂಷಣೆಗೈದನು. ಬುದ್ಧದೇವನಾದರೋ—ಹಸನ್ಮುಖಿಯಾಗಿದ್ದುಕೊಂಡೇ ಎಲ್ಲವನ್ನೂ ಕೇಳಿ ಅವನ ಅಜ್ಞಾನತೆಗಾಗಿ ಮರುಗಿದ[illegible]. ಅವನ ದೂಷಣೆಯೆಲ್ಲವೂ ಮುಗಿದ ತರುವಾಯ ಬುದ್ಧದೇವನು ಆತನನ್ನು ಸಮೀಪಕ್ಕೆ ಕರೆದು, ಮಂದಹಾಸವು ಹೊರಸೂಸುತ್ತಿರಲು—' ಮಗೂ ನೀನು ಯಾರಿಗಾದರೂ ಬಂದು ಬಹುಮಾನ ಕೊಟ್ಟಾಗ್ಯೂ ಅವನು ಅದನ್ನು ಸ್ವೀಕರಿಸದೆ ಇದ್ದರೆ ಅದು ಯಾರಿಗೆ ಹೋಗುವುದು ಹೇಳುವೆಯಾ' ಎಂದು ಪ್ರಶ್ನಿಸಿದನು. ಅಂತಹ ಸಂದರ್ಭದಲ್ಲಿ ಅದು ತಪ್ಪದೆ ಯಾರು ಕೊಟ್ಟನೋ ಅವನಿಗೇ ಸೇರುವುದು' ಎಂದು ಆ ದೂಷಕನು ತಿರಸ್ಕಾರ ದೃಷ್ಟಿಯಿಂದ ನುಡಿದನು.

'ಹಾಗಾದರೆ ಮಗೂ, ನೀನು ನನ್ನ ಮೇಲೆ ಎರಚಿದ ಈ ದೂಷಣೆಯ ರಾಶಿಯನ್ನು ನಾನು ತೆಗೆದುಕೊಳ್ಳದೆ ತಿರಸ್ಕರಿಸುತ್ತೇನೆ. ಅಲ್ಲದೆ ಅವುಗಳನ್ನು ನಿನ್ನಲ್ಲೇ ಇಟ್ಟುಕೊಳ್ಳಬೇಕಾದೂ ಕೇಳಿಕೊಳ್ಳುತ್ತೇನೆ. ಅದು ನಿನಗೆ ಅತಿದಿಯ ಚಿಂತಾಜನಕ ವಿಚಾರವಲ್ಲವೇ! ಪ್ರತಿದ್ವನಿಯು ಧ್ವನಿಗೂ, ನೆರಳು ತನುವಿಗೂ ಸಂಬಂಧಿಸಿರುವಂತೆಯೇ, ಚಿಂತೆಯೂ ದುಷ್ಕರ್ಮಿಯನ್ನು ಎಂದಿಗೂ ಬಿಟ್ಟಿರಲಾರದು,' ಎಂದು ಭಗವಾನನು ನುಡಿದನು.

ಆ ದೂಷಕನು ಪ್ರತ್ಯುತ್ತರ ಕೊಡದೆ ಭ್ರಾಂತನಂತೆ ನಿಂತಿರಲು, ಭಗವಾನನು ಪುನಃ ಮುಂದರಿಸಿ —

"ಮಗೂ ಕೇಳು, ಸಾಧುಗಳನ್ನು ದೂಷಿಸುವ ದುಷ್ಟನು ಮ ಖವನ್ನು ಮೇಲಕ್ಕೆತ್ತಿಕೊಂಡು ಅಂತರಿಕ್ಷದ ಕಡೆಗೆ ಉಗುಳುವ ಬುದ್ಧಿಹೀನನಂತಿರುವನು. ಉಗುಳು ಅಂತರಿಕ್ಷವನ್ನು ಸೋಕುವುದಿಲ್ಲ. ಆದರೆ ಹಿಂದಿರುಗಿ ಒಂದು ಅವನ ಮುಖದ ಮೇಲೆಯೇ ಬೀಳುವುದು."

"ಸುಳ್ಳುಗಾರನು ಎದುರ ಗಾಳಿ ಇರುವಾಗ ತನ್ನ [illegible] ದುರಾಳಿಯ ಮುಖಕ್ಕೆ ಮಣ್ಣು ತೂರಿದವನಂತೆ ಇರುವನು. ಮಣ್ಣು ಹಿಂದಿರುಗಿ ಒಂದು ಅವನ ಮುಖದ ಮೇಲೆಯೇ ಅವನ ಕಣ್ಣುಗಳಲ್ಲೇ ಬೀಳುವುದಲ್ಲವೇ! ಸಾಧು ಜೀವಿಯು ಹಿಂಸೆಗೊಳಗಾಗನು. ಆದರೆ ಆತನಿಗೆ ಯಾವನು ಹಿಂಸೆಮಾಡಲೆತ್ನಿಸುವನೋ ಅವನಿಗೇ ಅದು ತಪ್ಪದೆ ಹಿಂದಿರುಗುವುದು.

ಜಗದ್ವಾಸನ ಆ ಮಾತುಗಳನ್ನು ಕೇಳಿ ನಾಚಿ, ಮುಖ ತಗ್ಗಿಸಿಕೊಂಡು, ಆ ದೂಷಕನು ಪಶ್ಚಾತ್ತಾಪದಿಂದ ಹೊರಟುಹೋದನು. ಆದರೆ ಪುನಃ ಹಿಂದಿರುಗಿ ಒಂದು ಆ ಸಾಧುವಿನ ಪಾದಗಳಿಗೂ, ಧರ್ಮಕ್ಕೂ, ಸಂಘಕ್ಕೂ ಶರಣುಹೋಗಿ, ಆ ಸತ್ಯಸ್ವರೂಪನಿಂದ ಒನ್ನ ಸಾರ್ಥಕ್ಯವನ್ನು ಹೊಂದಿದನು.

"ಸುಬೋಧ."

WANTED

An Anglo Indian or Indian Aya to take over charge of a child aged eight months. Freight Boarding, Clothes and food given free. Salary 150/ per annum. Only those willing to travel from Coorg to Central Province need apply in person to.

Mrs. K D. Kuttappa,
Kaikeri Village,
Gonikoppal Post,
(South Coorg).

ಬೇಕಾಗಿದ್ದಾಳೆ.

8 ತಿಂಗಳು ಪ್ರಾಯದ ಒಂದು ಮಗುವಿನ ಪೋಷಣೆಗಾಗಿ ಒಬ್ಬ ಇಂಡಿಯನ್ ಅಥವಾ ಆಂಗ್ಲೋ ಇಂಡಿಯನ್ ಆಯ ಬೇಕಾಗಿದ್ದಾಳೆ. ಪ್ರಯಾಣದ ಚಾರ್ಜು, ಊಟ, ಬಟ್ಟೆ ಕಾರ್ಚು ಕಳೆದು ವರ್ಷಕ್ಕೆ ರೂ. 150 ಸಂಬಳ ಕೊಡಲಾಗುವುದು. ಕೊಡಗಿನಿಂದ ಸೆಂಟ್ರಲ್ ಪ್ರಾವಿನ್ಸಿಗೆ ಹೋಗಲು ತಯಾರಾದವರು ಮಾತ್ರ ಈ ಕೆಳಗಿನ ಅಡ್ರೆಸ್ಸಿಗೆ ಖುದ್ದು ಒಂದು ಅಪ್ಲಿಕೇಶನ್ ಕೊಡತಕ್ಕದ್ದು.

ಮಿಸೆಸ್ ಕೆ ಡಿ. ಕುಟ್ಟಪ್ಪ,
ಕೈಕೇರಿ ಗ್ರಾಮ,
4—2 ಗೋಣಿಕೊಪ್ಪಲು,
(ದ. ಕೊಡಗು.)

For Sale

About 300 acres of excellent paddy field and dry lands included in Palpare and Kunchikote Estates. For further particulars apply —

SUPERINTENDENT,
PALPARE ESTATE,
TITTIMATTI POST
5—5 S. COORG

ವರ್ತಮಾನ ಸಂಗ್ರಹ.

ಒಳದೇಶ

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಬಡ್ಜೆಟ್ ಮೀಟಿಂಗು ಈ ... ಮಡಿಕೇರಿಯಲ್ಲಿ ನಡೆಯಿತು.

ಈ ವಾರ ಮಡಿಕೇರಿಯಲ್ಲಿ ಕಾಫಿಯ ಕ್ರಯ ಪಾರ್ಚ್‌ಮೆಂಟ್ ಮಂಡೈಡ್‌ವೈಟಿಗೆ ರೂ. 74 ನೇಟಿವ್ ಬಾಡಿಗೆ ರೂ. 42 ಮತ್ತು, ಯಾಲಕ್ಕಿ ಮಣಕ್ಕೆ ರೂ. 68 ಇತ್ತು.

ಬೆಂಗಳೂರಿನ ಪ್ರೊಫೆಸರ್ ಆರ್. ಶಸ್ತ್ರಿ ಯವರು ಈಗ ... ಟನ್ ವಾಲಾರವರ ಯಕ್ಷಿಣಿ ಮತ್ತು ಮನೋವಿದ್ಯೆಯನ್ನು ಮಡಿಕೇರಿಯಲ್ಲಿಯೂ, ವೀರರಾಜಪೇಟೆಯಲ್ಲಿಯೂ ಮಾಡಿ ತೋರಿಸುತ್ತಿರುವರು.

ಡೆಲ್ಲಿಯಲ್ಲಿ ನಡೆಯುತ್ತಿರುವ ಹಿಂದೂ ದೇಶದ ಸರ್ವ ಪಾರ್ಟಿ ಕಾನ್‌ಫರೆನ್ಸಿನಲ್ಲಿ ಕೊಡಗಿಗೂ ಬೇರೆ ಪ್ರಾಂತ್ಯಗಳಂತೆಯೇ ರಾಜಕೀಯ ಸುಧಾರಣೆ ದೊರೆಯಬೇಕೆಂದು ತೀರ್ಮಾನಿಸಲಾಗಿದೆ

ಮೈಸೂರಿನ ರಾಜರಾಜೇಶ್ವರಿ ನಾಟಕ ಕಂಪೆನಿಯವರು ಈಗ ವೀರರಾಜಪೇಟೆಯಲ್ಲಿ ನಾಟಕಗಳನ್ನು ಅಭಿನಯಿಸುತ್ತಿರುವರೆಂದೂ, ಸಿಡುಬಿನ ಭಯದಿಂದ ಜನರು ಅಲ್ಲಿಗೆ ಹೋಗಲು ಹಿಂಜರಿಯುತ್ತಿರುವರೆಂದೂ ಒಂದು ವಾರ್ತೆ.

ಈಗ ಮೆಯಿಲ್ ಬಸ್ಸುಗಳಲ್ಲಿ ಟಪ್ಪಾಲು ಪೆಟ್ಟಿಗೆಗಳು ಇಡಲಾಗಿವೆಯೆಂತಲೂ, ಬಸ್ಸುಗಳು ನಿಲ್ಲುವ ಸ್ಥಳಗಳಲ್ಲೆಲ್ಲಾ ಜನರು ಕಾಗದಗಳನ್ನು ಆ ಟಪ್ಪಾಲು ಪೆಟ್ಟಿಗೆಯಲ್ಲಿ ಹಾಕಬಹುದೆಂತಲೂ ಪೋಸ್ಟಲ್ ಸುಪರಿಂಟೆಂಡೆಂಟರು ಪ್ರಕಟಿಸಿರುತ್ತಾರೆ.

ಮೂರ್ನಾಡಿನ ಕೋಡಂಬೂರು — ಮುತ್ತಾರುಮುಡಿ ಸಹಕಾರ ಸಂಘದ ವಾರ್ಷಿಕ ಜನರಲ್ ಮೀಟಿಂಗು ಈ ತಾ. 11ರಲ್ಲಿ ಮೂರ್ನಾಡಿನಲ್ಲಿ ನಡೆದು ಈ ವರ್ಷದ ಉದ್ಯೋಗಸ್ಥರ ಮತ್ತು ಕಮಿಟಿಯ ಚುನಾವಣೆಯಾಯಿತು. ಮ. ಪಾರೆಯಂಡ ಪೊಣ್ಣಪ್ಪನವರು ಸಭೆಯ ಅಧ್ಯಕ್ಷರಾಗಿದ್ದರು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ಶನಿವಾರ ದಿನ ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆಯಿತು. ಬ್ಯಾಂಕಿನ ವಾರ್ಷಿಕ ಜನರಲ್ ಮೀಟಿಂಗನ್ನು ಏಪ್ರಿಲ್ ತಾ. 7ರಲ್ಲಿ ಮಡಿಕೇರಿಯಲ್ಲಿ ನಡೆಸುವಂತೆ ತೀರ್ಮಾನವಾಯಿತು. ಮೀಟಿಂಗಿನ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಮ. ಗಣಪದ ಕೋಡಿರ ಉತ್ತಪ್ಪನವರು ಮತ್ತು ನಲ್ಲಮಕ್ಕಳ ಸುಬ್ಬಯ್ಯನವರು ಟೆರಿಟೋರಿಯಲ್ ಪಟಾಲಮಿನ ಕವಾಯಿತಿಗೆ ಮಡಿಕೇರಿಗೆ ಬರುವದರಿಂದ ಇವರ ಬದಲು ಇಂದಿನಿಂದ ಮೇ ತಿಂಗಳ ಒಂದನೇ ವಾರದ ವರೆಗೆ ಮ. ಬಲ್ಲಚಂಡ ಚಂಗಪ್ಪನವರನ್ನು ಪೊನ್ನಂಪೇಟೆ ಪಾರುಪತ್ಯಗಾರರಾಗಿಯೂ, ಮ. ಮನೆಯಪಂಡ ತಿಮ್ಮಯ್ಯನವರನ್ನು ಶ್ರೀಮಂಗಲ ಪಾರುಪತ್ಯಗಾರರಾಗಿಯೂ, ಮ. ಮಲ್ಚೀರ ಅಚ್ಚಯ್ಯನವರನ್ನು ಪೊನ್ನಂಪೇಟೆ ಅಸಿಸ್ಟೆಂಟ್ ಪಾರುಪತ್ಯಗಾರರಾಗಿಯೂ ಮ. ಯನ್. ಗಣಪತಿರಾಯರನ್ನು ವೀರರಾಜಪೇಟೆ ಪಾರುಪತ್ಯಗಾರರಾಗಿಯೂ ನೇಮಿಸಿರುವರೆಂದು ತಿಳಿಯುತ್ತೇವೆ.

ಹಿಂದೂದೇಶ.

ರಾ. ಬಾ. ಅನಂತಕೃಷ್ಣ ಅಯ್ಯರವರು ಮದ್ರಾಸಿನ ಅಡ್ವೊಕೇಟ್ ಜನರಲಾಗಿ ನೇಮಿಸಲ್ಪಟ್ಟಿರುವರು.

ಇನ್ನು ಸ್ಥಾಪಿಸಲ್ಪಡುವ ವಿಶ್ವವಿದ್ಯಾಲಯವನ್ನು ಕಾಶಿಯಲ್ಲಿಡುವಂತೆ ಸಿಲೋನಿನ ಕೌನ್ಸಿಲಿನವರು ಒಪ್ಪಿರುವರು.

ಮ. ಸಿ. ಆರ್. ರೆಡ್ಡಿಯವರು ಪುನಹ ಮೂರು ವರ್ಷಗಳ ವರೆಗೆ ಆಂಧ್ರ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾಗಿ ಆರಿಸಲ್ಪಟ್ಟಿರುವರು.

ಸೆಂಟ್ರಲ್ ಪ್ರಾವಿನ್ಸಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ನಡೆಯುತ್ತಿರುವ ಬಡ್ಜೆಟ್ಟಿನ ಚರ್ಚೆಯ ಹಲವು ಬಾಬ್ತುಗಳಲ್ಲಿ ಸರಕಾರದ ಪ್ರತಿನಿಧಿಗಳು ಸರ್ಕಾರದವರನ್ನು ಸೋಲಿಸಿರುವರು.

ಸರಕಾರಿ ಕಾಲೇಜುಗಳಲ್ಲಿಯೂ, ಸೆಕೆಂಡರಿ ಶಾಲೆಗಳಲ್ಲಿಯೂ ಫೀಸನ್ನು ಹೆಚ್ಚಿಸಬೇಕೆಂಬ ವಿಷಯ ವಿರೋಧಿಸುವ ಠರಾವು ಒಂದು ಬೆಂಗಾಲು ಕೌನ್ಸಿಲಿನಲ್ಲಿ ಮಂಜೂರಾಯಿತು.

ಡೆಲ್ಲಿಯಲ್ಲಿ ನಡೆಯುತ್ತಿದ್ದ ಹಿಂದೂದೇಶದ ಸರ್ವ ಪಾರ್ಟಿ ಕಾನ್‌ಫರೆನ್ಸಿನವರು ನೇಮಿಸಿದ ಸಬ್ ಕಮಿಟಿಯ ಶಿಫಾರಸ್ಸುಗಳು ಬಹಿರಂಗಗೊಳಿಸಲಾಗಿವೆ. ಅವುಗಳ ಸಾರಾಂಶವನ್ನು ಇನ್ನೊಂದು ಕಡೆ ಪ್ರಕಟಿಸಿಯತ್ತೇವೆ.

ಸೈಮನ್ ಕಮಿಷನಿನ ಖರ್ಚಿಗೆ ಒದಗಬೇಕೆಂದಿದ್ದ ರೂ. 3,40,000 ನ್ನು ಪಂಜಾಬಿನ ಮುಂಗಡಪತ್ರದಿಂದ ಪಂಡಿತ ನೇಕಿರಾಮ್‌ರವರ ಠರಾವು ಎಸೆಂಬ್ಲಿಯಲ್ಲಿ ಪಾಸಾಯಿತು. ಠರಾವಿನ ಪರವಾಗಿಯೂ 66 ಜನ ವಿರೋಧವಾಗಿಯೂ 59 ಓಟು ಮಾಡಿದರು.

ಈ ತಾ. 11ರಲ್ಲಿ ಡೆಲ್ಲಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಉಪಸ್ಥಿತರಿದ್ದವರು ಬ್ರಿಟಿಷರ ಸಾಮ್ರಾಜ್ಯವಾದಿ ತತ್ವಕ್ಕೆ ವಿರೋಧವಾಗಿ ನಡೆಯುತ್ತಿರುವ ರಾಷ್ಟ್ರೀಯ ಚಳವಳಿಗಳಲ್ಲಿ ಸಹಾನುಭೂತಿಯನ್ನು ತೋರಿಸುವ ಠರಾವನ್ನು ಪಾಸು ಮಾಡಿದರು

ಮಾರ್ಚಿ ತಾ. 18 ನ್ನು ಇಡೀ ಹಿಂದೂಸ್ಥಾನದಲ್ಲಿ ('ಯೂತ್ ಡೆ') ಯುವಕರ ದಿನವಾಗಿ ಆಚರಿಸಬೇಕೆಂತಲೂ, ಆ ದಿನ ಯುವಕರ ಸಂಘಗಳ್ಳದ ... ಆಟ ಓಟಗಳನ್ನು ನಡಿಸಿ ಗೆದ್ದವರಿಗೆ ಪದಕಗಳನ್ನು ಕೊಡಬೇಕೆಂತಲೂ ನಾಯಕರು ... ನಿ ಮೊದಲಾದ ಮುಂದಾಳುಗಳು ಹಿಂದೂಯರಲ್ಲಿ ಕೇಳಿಕೊಂಡಿರುವರು.

ಪಾಟ್ನಾದಲ್ಲಿ ಈ ತಾ. 27 ಮತ್ತು 28 ರಲ್ಲಿ ನಡೆಯಲಿಕ್ಕಿರುವ ಬಿಹಾರ್ ಮತ್ತು ಒರಿಸ್ಸಾ ಪ್ರಾಂತ್ಯದ ಕೋಪರೇಟಿವ್ ಕಾನ್‌ಫರೆನ್ಸನ್ನು ಆ ಪ್ರಾಂತ್ಯದ ಗವರ್ನರಾದ ಸರ್ ಹ್ಯೂ ಸ್ಟೀವನ್‌ಸನ್‌ರವರು ತೆರೆಯುವರು. ಬೊಂಬಾಯಿಯ ಸರ್ ಲಾಲೂಭಾಯಿ ಸಾಮಲ್ದಾಸ್‌ರವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವರು.

ಇಂದೂರಿನ ಮಾಜಿ ಮಹಾರಾಜರಾದ ಸರ್ ತುಕೋಜಿ ರಾವುರವರು ಮದುವೆಯಾಗಲಿಕ್ಕಿರುವ ಅಮೇರಿಕದ ಮಿಸ್ ಮಿಲ್ಲರನ್ನು ಈ ತಾ 15ರಲ್ಲಿ ಹಿಂದೂ ಮತಕ್ಕೆ ಸೇರಿಸುವ ಸಮಾರಂಭವು ನಾಸಿಕದಲ್ಲಿ ನಡೆಯಿತು. ಶಂಕರಾಚಾರ್ಯರು ಅವಳಿಗೆ ದೇವಿ ಶರ್ಮಿಷ್ಠಾದೇವಿ ಎಂದು ಹೆಸರನ್ನಿಟ್ಟು ಅವಳಿಗೆ ಆಶೀರ್ವಾದ ಮಾಡಿದರು. ಹಲವು ಯೂರೋಪಿಯನರು ಹಾಜರಿದ್ದರು.

ಸೈಮನ್ ಕಮಿಷನ್ನಿನವರು ಈ ತಾ. 10ರಲ್ಲಿ ಲಾಹೋರಿಗೆ ತಲಪಿದರು. ಪಟ್ಟದಲ್ಲಿ ಹರತಾಳ ನಡೆಸಿದ್ದರೂ ಬಹಿಷ್ಕಾರ ವಾದಿಗಳು ಕಪ್ಪು ಬಾವುಟಗಳೊಂದಿಗೆ ದೊಡ್ಡ ಮೆರವಣಿಗೆಯನ್ನು ಮಾಡಿದರು. ದಾರಿಯಲ್ಲಿ ಪೋಲೀಸಿನವರು, ಮೆರವಣಿಗೆ ಹೋಗುತ್ತಿದ್ದವರೂ ಜಗಳವಾಗಿ ಸುಮಾರು 15 ಜನರಿಗೆ ಗಾಯಗಳಾಗಿವೆ. ಕೆಲವು ಮುಂದಾಳುಗಳಿಗೂ ಸ್ವಲ್ಪ ಏಟು ಉಂಟಾಗಿದೆಯಂತೆ.

ಮದ್ರಾಸಿನ ಎಗ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಲಾ ಮೆಂಬರಾಗಿದ್ದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಈ ತಾ. 10ರಲ್ಲಿ ರಿಟಯರ್ ಆದರು. ಮದ್ರಾಸಿನ ಅಡ್ವೊಕೇಟ್ ಜನರಲ್ಲಾಗಿದ್ದ ಮ. ಟಿ ಆರ್ ವೆಂಕಟರಾಮ ಶಾಸ್ತ್ರಿಯವರು ಲಾ ಮೆಂಬರಾಗಿ ನೇಮಿಸಲ್ಪಟ್ಟರು. ಈ ವರೆಗೆ ಲಾ ಮೆಂಬರರ ಅಧೀನದಲ್ಲಿದ್ದ ಪೋಲೀಸು ಮತ್ತು ಸೆರೆಮನೆ ಕಾರ್ಯಗಳಾದಿ ಇಲಾಖೆಗಳನ್ನು ಬೇರೆ ಮೆಂಬರುಗಳ ಅಧಿಕಾರಕ್ಕೆ ಗವರ್ನರು ಕೊಟ್ಟದರಿಂದ ಮ. ಶಾಸ್ತ್ರಿಯವರು ತಾ 13ರಲ್ಲಿ ತಮ್ಮ ಲಾ ಮೆಂಬರಿಕೆಗೆ ರಾಜೀನಾಮೆ ಕೊಟ್ಟಿರುವರು. ತತ್ಸ್ಥಾನಕ್ಕೆ ಮ. ಕೃಷ್ಣನ್‌ನಾಯರ್‌ರವರು ಲಾ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಹಿಂದೂದೇಶದ ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ವಿದೇಶಿ ... ಅದರಲ್ಲಿ ಹಿಂದೀಯರು ಹೆಚ್ಚಾಗಿ ... ಬೇಕೆಂದು ಮ. ... ನೇಮಿಸಿದ ... ಕಮಿಟಿಯ ... ರಿಪೋರ್ಟನ್ನು ಸರಕಾರದವರು ತಿರಸ್ಕರಿಸುವದರಿಂದ ದೇಶದ ... ಸೂಚಿಸಲು ಮ. ... ತಾ. 11ರಲ್ಲಿ ಎಸೆಂಬ್ಲಿಯಲ್ಲಿ ಎಡ್ಜರ್ನ್‌ಮೆಂಟ್ ಠರಾವನ್ನು ತಂದರು. ಆಗ ರಾಷ್ಟ್ರೀಯ ಪಕ್ಷದ ಮುಂದಾಳುಗಳು ಸರಕಾರದವರಿಗೆ ಹಿಂದೀಯರ ಮೇಲೆ ಇರುವ ತಿರಸ್ಕಾರ ಭಾವವನ್ನು ಬಹಿರಂಗವಾಗಿ ... ಮಾತಾಡಿದರು. ಈ ಠರಾವಿನ ಪರವಾಗಿ 70 ಮೆಂಬರುಗಳೂ, ವಿರೋಧವಾಗಿ 41 ಮೆಂಬರುಗಳೂ ಓಟು ಮಾಡಿದ್ದರಿಂದ ಸರಕಾರದವರು ಸೋಲಿಸಲ್ಪಟ್ಟರು.

ವಿದೇಶ.

ಅಮೇರಿಕದ ಕ್ಯಾಲಿಫೋರ್ನಿಯಾ ... ಬಳಿಯಲ್ಲಿ ... ಒಡೆದು ಹೋಗಿ ... ಮುನ್ನುಗ್ಗಿದ ... ಸುಮಾರು 200 ಕ್ಕಿಂತ ಹೆಚ್ಚು ಜನ ಪ್ರಾಣವನ್ನು ನೀಗಿದರು.

ಅಫ್ಘಾನಿಸ್ತಾನದ ಅಮೀರರು ಪತ್ನಿ ಸಮೇತ ತಾ 13ರಲ್ಲಿ ಇಂಗ್ಲಂಡಿಗೆ ತಲಪಿದರು. ... ವೇಲ್ಸ್‌ ಯುವರಾಜರು, ಅವರ ಮೊತೆ ಸೇರಿದರು. ... ರವರು ವಿಕ್ಟೋರಿಯ ಸ್ಟೇಷನಿನಲ್ಲಿ ಇಂಗ್ಲೆಂಡಿನ ದೊರೆಯವರು ಅವರನ್ನು ಎದುರುಗೊಂಡರು. ಅವರ ಸ್ವಾಗತಕ್ಕಾಗಿ ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡಿದ್ದರು.

ಈ ತಾ 12ರಲ್ಲಿ ಸ್ಪಾನಿಷ್ ಸಾಗರದ ಬಳಿಯ ... ದಲ್ಲಿ ... ಬಹು ಜನರು ... ಕಟ್ಟಲ್ಪಟ್ಟವು. ಅವುಗಳಲ್ಲಿ 164 ಜನ ವ್ಯಕ್ತಿ ಸತ್ತಿರುವರು. ... ಸಮಯದಲ್ಲಿ ಚಳಿ ... 160 ಪ್ರಯಾಣಿಕರು ಮತ್ತು ... ಕೆಲಸಗಾರರು ಇದ್ದ ಅಮೇರಿಕದ ಹಡಗಿನ ವಿಷಯ ವರ್ತಮಾನವೇನೂ ಇಲ್ಲವಂತೆ

ಹಿಂದೂ ದೇಶದಲ್ಲಿ ದೊಡ್ಡ ಹುದ್ದೆಗಳನ್ನು ಇಂಡಿಯನರಿಗೆ ಕೊಡಬೇಕೆಂದು ಇಲ್ಲಿಯ ಜನರು ಅಪೇಕ್ಷಿಸುವದಿಲ್ಲವೆಂತಲೂ, ಯುರೋಪಿಯನರೇ ಆ ಹುದ್ದೆಗಳಲ್ಲಿರಬೇಕೆಂದು ಜನರ ಅಭಿಪ್ರಾಯವೆಂತಲೂ, ಎಸೆಂಬ್ಲಿಯೂ ದೇಶದ ನಿಜವಾದ ಪ್ರತಿನಿಧಿಗಳಿಂದ ಕೂಡಿರುವದಿಲ್ಲವೆಂತಲೂ ಮುಂತಾಗಿ ಸರ್ ರೆಜಿನಾಲ್ಡ್ ಕ್ರೆಡೋಕ್‌ರವರು ಲಂಡನ್ನಿನ 'ದಿ ಮೋರ್ನಿಂಗ್ ಪೋಸ್ಟ್' ಎಂಬ ಪತ್ರಿಕೆಯಲ್ಲಿ ಬರೆದಿರುವರು.

ಸರ್ವ ಪಂಗಡಗಳ ಸಮ್ಮೇಲನ.

ಸರ್ವ ಪಾರ್ಟಿಗಳ ಕಾನ್‌ಫರೆನ್ಸಿನಿಂದ ನೇಮಕವಾದ ಉಪ ಸಭೆಯ ರಿಪೋರ್ಟನ್ನು ಚರ್ಚಿಸಲು ಡೆಲ್ಲಿಯಲ್ಲಿ ಡಾ. ಅನ್ಸಾರಿಯವರ ಸ್ವಗೃಹದಲ್ಲಿ ಈ ತಿಂಗಳು ತಾ. 11ರಲ್ಲಿ ಅವರು (ಎಲ್ಲಾ ಪಂಗಡದವರು) ಒಂದುಗೂಡಿದ್ದರು. ಸಭೆಯಲ್ಲಿ ಈ ಠರಾವುಗಳು ಪಾಸಾದವು.—

1 ಮದ್ರಾಸು ಪ್ರಾಂತ, ಬಲೂಚಿಸ್ಥಾನ, ಡೆಲ್ಲಿ, ಅಜಮೀರ ಮೇರವಾರ, ಕೊಡಗು ಇವರ ಮುಂತೆ ಪ್ರತ್ಯೇಕವಾಗುವ ಯಾವುದೇ ಪ್ರಾಂತ್ಯಕ್ಕೂ ಇತರ ಪ್ರಾಂತಗಳಿಗೆ ಕೊಡುವ ಸುಧಾರಣೆಯನ್ನು ಕೊಡಲ್ಪಡುವದು.

2. ಸಿಂಧ ಪ್ರಾಂತವನ್ನು ಪ್ರತ್ಯೇಕಿಸುವ ಸಂದರ್ಭದಲ್ಲಿ ಅದರ ಆಯ ವ್ಯಯ ಸ್ಥಿತಿಯನ್ನು ಪರಿಶೋಧಿಸಿ, ಅದು ಪ್ರತ್ಯೇಕವಾಗಿರಲು ಸಾಧ್ಯವೇ ಎಂಬುದನ್ನು ನೋಡತಕ್ಕ ಒಂದು ಸಮಿತಿ ನಿರ್ಮಿತವಾಗುವುದು.

3. ಜನ ಸಂಖ್ಯಾನುಸಾರ ಮೆಂಬರುಗಳ ಚುನಾವಣೆ ನಡೆಯುವುದು.

4. ಭಿನ್ನವಾದ ಮಿಶ್ರವಾದ ಎಲೆಕ್ಟೋರೇಟು ಮತ್ತು ನ್ಯಾಷನಲ್ ಕಾಂಗ್ರೆಸ್ ಸಮಿತಿಯ ರಿಪೋರ್ಟ್ ಬರುವ ವರೆಗೆ ಈ ಸಂಗತಿಗಳನ್ನು ಮುಂದಿಕ್ಕಲಾಗುವದು.

5 ತಯಾರಾಗಿರುವ ಸಬ್ ಕಮಿಟಿಯ ರಿಪೋರ್ಟನ್ನು ರಾಜಕೀಯ, ಕಾರ್ಮಿಕ, ವ್ಯಾಪಾರ ಸಂಸ್ಥೆಗಳು ಮುಂತಾದವುಗಳಿಗೆ ಕಳುಹಿಸುವದು.

ಸಬ್‌ಕಮಿಟಿಯ ರಿಪೋರ್ಟ.

ಈ ರಿಪೋರ್ಟು ಸಂಗ್ರಹವಾಗಿ ಕಳಗಿನಂತಿದೆ

ಡಿಕ್ಲರೇಶನ್ ಆಫ್ ರೈಟ್ಸ್ ವಿಷಯದಲ್ಲಿ ಸರ್ವ ಮಂಡಲವು ಏಕಾಭಿಪ್ರಾಯವುಳ್ಳವರಾಗಿದ್ದಾರೆ.

ದೇಶಿಯ ರಾಜ್ಯಗಳು ಇಂಡಿಯಾ ಸರಕಾರದ ಭಾಗವಾಗಿರಬೇಕು. ಇಂಡಿಯಾ ಕಾಮನ್ ವೆಲ್ತ್ ಬ್ರಿಟಿಷ್ ಸರಕಾರದ ಅಧಿಕಾರವನ್ನು ವಹಿಸಿಕೊಳ್ಳುವದು. ತನ್ನ ದೇಶೀಯ ರಾಜ್ಯದ ಹಿಂದಿನ ಹಕ್ಕುಗಳನ್ನು, ಕರ್ತವ್ಯಗಳನ್ನು ಮನ್ನಿಸುವದು. ದೇಶೀಯ ರಾಜ್ಯಗಳ ಪ್ರಜೆಗಳಿಗೆ ಕಾಮನ್ ವೆಲ್ತಿನ ಪ್ರಜೆಗಳಿಗಿರುವ ಹಕ್ಕುಗಳಿರಬೇಕು

ಕಾಮನ್ ವೆಲ್ತಿನ ರಾಷ್ಟ್ರಭಾಷೆಯು ಹಿಂದುಸ್ಥಾನಿಯಾಗಿರಬೇಕು. ದೇವನಾಗರಿ ಇಲ್ಲವೇ ಉರ್ದು ಲಿಪಿಯನ್ನು ಉಪಯೋಗಿಸುವದು. ಇಂಗ್ಲಿಷನ್ನು ಆವಶ್ಯಕವಿದ್ದಲ್ಲಿ ಉಪಯೋಗಿಸಬಹುದು

ಮಧ್ಯವರ್ತಿ ಸರಕಾರಕ್ಕೆ ಎರಡು ಸಭೆಗಳು—ಸೆನೆಟ್ ಮತ್ತು ಲೋಯರ್ ಹೌಸ್ ಇರುವವು. ಪ್ರಾಂತಿಕ ಸರಕಾರಕ್ಕೆ ಒಂದೇ ಸಭೆ ಸಾಕು

ಮಧ್ಯವರ್ತಿ ಸರಕಾರಕ್ಕೆ ಸಭಾಸ್ಥರ ವಯಸ್ಸು 25 (ಲೋಯರ್ ಹೌಸಿಗೆ) ಮತ್ತು 30 (ಅಪ್ಪರ್ ಹೌಸಿಗೆ). ಲೋಯರ್ ಹೌಸ್ ಸಭೆ ... ಅಪ್ಪರ್ ... ಹೆಚ್ಚಾಗಿ ... ಅಪ್ಪರ್ ಹೌಸಿಗೆ 250 ಸಭ್ಯರು. ಪ್ರಾಂತೀಕ ಸಭೆಗಳಿಗೆ ಅಕ್ಕಸ್ಯೂಟ ... ಎಲೆಕ್ಟೋರೇಟ್ ವಿಷಯವು ಇದ್ದ ದೊಡ್ಡದಾದುದರಿಂದ ಅದನ್ನು ನಿರ್ಣಯಿಸಲಿಲ್ಲ

ಮಧ್ಯವರ್ತಿ ಸರಕಾರಕ್ಕೂ, ಪ್ರಾಂತೀಕ ಸರಕಾರಗಳಿಗೂ ಇರುವ ಹಕ್ಕುಗಳ ಪಟ್ಟಿ ಮಾಡಲಾಗಿದೆ ಮಧ್ಯವರ್ತಿ ಸರಕಾರಕ್ಕೂ, ಪ್ರಾಂತೀಕ ಸರಕಾರಕ್ಕೂ ಇರತಕ್ಕ ಕಲಹವನ್ನು ತೀರ್ಮಾನಿಸಲಿಕ್ಕೆ ಸುಪ್ರೀಂ ಕೋರ್ಟ್ ಇರುವದು. ಕಮಿಟಿಯನ್ನು ನೇಮಿಸುವದು.

NOTIFICATION.

The public are hereby informed that the Postal Department has introduced a system of attaching Letter boxes to the Motor buses which convey mails. These letter boxes are cleared at all Post offices on the mail route and the contents are disposed of immediately. The public of the road side villages of the mail route who cannot conveniently go to a Post office have the advantage of posting their letters in these Letter boxes. The letters will be conveyed as safely and as quickly as those posted in a Post office.

Mysore, 4th March 1928.

G. C. E. COMBES,
Superintendent of Post offices,
Mysore Division.

ಪತ್ರವ್ಯವಹಾರ

[ವಾರ್ತೆದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಅಭಿನಂದನ

ಭಾಗಮಂಡಲ
ತಾ. ೮—೩—೨೮.

ಮಾನ್ಯ ಸಂಪಾದಕರೇ,

ಕರ್ನಾಟಕದ ಭಾಗವಾದ ಕೊಡಗಿನವರು ನಡೆದ ಪ್ರಸಂಗದಲ್ಲಿ ತಮ್ಮ ವೀರಪತ್ರಿಕೆ ಮಾಡಿ ತಲೆ ಬಾಗಿ ನಡೆ ನಡೆಯದನ್ನು ನೋಡಿದರೆ ಯಾರಿಗೆ ತಾನೇ ಆನಂದವಾಗಲಿಕ್ಕಿಲ್ಲ. ಸೈಮನ್ ಕಮಿಷನ್ನಿಗೆ ಬಹಿಷ್ಕಾರ ಹಾಕುವ

ವಿಷಯದಲ್ಲಿ ಕೊಡಗಿನವರು ತೋರಿಸಿದ ಸ್ವಾಭಿಮಾನದ ರೀತಿಯನ್ನು ಎಲ್ಲಾ ಕರ್ನಾಟಕದ ಕೌನ್ಸಿಲಿನಲ್ಲಿಯ ಪ್ರತಿನಿಧಿಗಳು ಅನುವರ್ತಿಸುವಂತಿದೆ.

ಅಲ್ಲಿಯ ಸರ್ವಪಕ್ಷೀಯರು ಸಂಘಟಿತರಾಗಿ ಕೊಡಗಿನ ರಾಜ್ಯಘಟನೆಯನ್ನು ಕುರಿತು ಸ್ವೀಕರಿಸಿದ ತೀರ್ಮಾನವು ಕೂಡ ಒಹಳ ಸಮಂಜಸವಾಗಿದೆ. ಅವರು ಅತ್ಯಂತ ಉದಾರ ಬುದ್ಧಿಯಿಂದ ಸ್ವಾತಂತ್ರ್ಯ ವಾಸನೆಯ ತತ್ವಕ್ಕೆ ಒಪ್ಪಿ ಐಕಮತ್ಯದಿಂದ ಸ್ವೀಕರಿಸಿದ ಕೊಡಗಿನ ಕಾಂಗ್ರೆಸ್ಸಿನಲ್ಲಿ ಮಾಡಿದ ತೀರ್ಮಾನವನ್ನು ಪ್ರತ್ಯೇಕವಾಗಿ ಬಹಳ ಸಂತೋಷದ ಜೊತೆಗೂ ಸಮಾಧಾನದ ಜೊತೆಗೂ... ಇಂಥ ಪ್ರಸಂಗದಲ್ಲಿ ನಾನು ಇಕ್ಕರೆಯ ಕನ್ನಡಿಗನ ಸಲುವಾಗಿ ಕೊಡಗಿನ ನನ್ನ ಪ್ರಿಯ ಬಾಂಧವರನ್ನು ಸಾರ್ವಜನಿಕ ರೀತಿಯಿಂದ ಅಭಿನಂದಿಸದೆ ಇರಲಾರೆನು.

ಇದೇ ಬಗೆಯ ಭಾವ, ವಿಚಾರ ಮತ್ತು ವರ್ತನದಿಂದ ನಮ್ಮ ಇಡೀ ಕರ್ನಾಟಕದ ಛಿನ್ನಾವಿಛಿನ್ನ ಭಾಗಗಳೆಲ್ಲ ಒಂದಾಗಿ ಪೂರ್ವ ವೈಭವವನ್ನು ನಾವು ಪಡೆಯಬಹುದೆಂಬ ಆಶೆಯು ಹುಟ್ಟಲಿಕ್ಕೆ ಈಗ ಅವಕಾಶವಾಗಿದೆ. ಕರ್ನಾಟಕದ ಮಿಕ್ಕ ಭಾಗದವರು ಸಹ ಕೊಡಗಿನಂತೆಯೇ ಘಟ್ಟಿಯಾಗಿ ಕಮಿಷನ್ನಿನ ವಿಷಯಕ್ಕೆ ತಮ್ಮ ಸ್ವಾವಲಂಬಿಯಾದ ವರ್ತನವನ್ನು ಬಿಡದೆ ರಾಷ್ಟ್ರಕಾರ್ಯಕ್ಕೆ ಸಹಾಯಭೂತರಾಗಬೇಕು.

ರಂಗನಾಥ ದಿವಾಕರ,
ಸಂಪಾದಕ ಕರ್ಮವೀರ, ಧಾರವಾಡ.

ಸುಂಟಿಕೊಪ್ಪ ಯೂನಿಯನ್ನಿನ ಕಟ್ಟಡ.

ವಾಚಕ ಮಹಾಶಯರೆ,

ಈಗ್ಗೆ ಕೆಲವು ವಾರಗಳ ಹಿಂದೆ ಪ್ರಕಟಿಸಲ್ಪಟ್ಟಿದ್ದ ಸುಂಟಿಕೊಪ್ಪ ಯೂನಿಯನ್ನಿನ ಪ್ರೊಸೀಡಿಂಗ್ಸ್‌ನಲ್ಲಿ ನಾನು ಸದರಿ ಯೂನಿಯನ್ನಿಗೆ 500 ರೂಪಾಯಿಗಳನ್ನು ವಾಗ್ದಾನ ಮಾಡಿರುವದಾಗಿ ಒಂದು ವಾಕ್ಯವಿತ್ತು. ಇದು ತಪ್ಪು. ಯೂನಿಯನ್ನಿನ ಮೀಟಿಂಗಿನಲ್ಲಿ ನಾನು ಯೂನಿಯನ್ ಕ್ರಮವಾಗಿ ನಡೆಸಲ್ಪಡುವ ವರೆಗೆ ಒಂದು ಕಟ್ಟಡವನ್ನು ಕೊಡುತ್ತೇನೆಂದು ಹೇಳಿದ್ದೇನಲ್ಲದೆ, 500 ರೂಪಾಯಿಗಳನ್ನು ಕೊಡುತ್ತೇನೆಂದು ವಾಗ್ದಾನ ಮಾಡಲಿಲ್ಲವೆಂದು ಈ ಮೂಲಕ ಸರ್ವರಿಗೂ ತಿಳಿಯಪಡಿಸುತ್ತೇನೆ.

ಬಿ. ಯಂ. ಮಂಜುನಾಥಯ್ಯ,
ಕಾಫಿಪ್ಲಾಂಟರ್, ಸುಂಟಿಕೊಪ್ಪ

ಡಿಸ್ಟ್ರಿಕ್ಟ್ ಬೋರ್ಡಿನ ವಿಷಯಗಳು.

ಅಯ್ಯಾ,

ಇದೇ ತಿಂಗಳು 16ನೇ ತಾರೀಖಿನಲ್ಲಿ ನಡೆಯುವ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗಿನಲ್ಲಿ ಚರ್ಚಿಸಿ ತೀರ್ಮಾನಿಸಲ್ಪಡಲು ಕಳುಹಿಸಿರುವ ಈ ಕೆಳಗೆ ಕಂಡ ಠರಾವುಗಳನ್ನು ತಮ್ಮ ಪತ್ರಿಕೆಯ ಈ ಸಂಚಿಕೆಯಲ್ಲಿ ದಯವಿಟ್ಟು ಪ್ರಕಟಿಸಬೇಕಾಗಿ ಕೋರುತ್ತೇನೆ.

1. ಫ್ರೇಜರ್‌ಪೇಟೆ ಹೋಬಳಿ ಹೊಸಕೋಟೆ (ನಂ 7) ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಭಾವಿಯನ್ನು ತೆಗೆಯಿಸಬೇಕು.

2 ನಲ್ಲೂರು ಗ್ರಾಮದಲ್ಲಿ ಒಂದು ಭಾವಿಯನ್ನು ತೋಡಿಸತಕ್ಕದ್ದು.

3. ಹೆಬ್ಬಾಲೆ ಶಾಲೆಗೆ ಒಂದು ಕಟ್ಟಡವನ್ನು ಕಟ್ಟಿಸಿ ಕೊಡಬೇಕು.

4. ಫ್ರೇಜರ್‌ಪೇಟೆ—ಸಿದ್ದಾಪುರದ ದೊಡ್ಡ ರಸ್ತೆಯಿಂದ ಅಮ್ಮಂಗಾಲ ಮತ್ತು ವಾಲನೂರು ಗ್ರಾಮಗಳಿಗೆ ಹೋಗಲು ಹಾಲಿ ಇರುವ ಗಾಡಿ ರಸ್ತೆಗಳನ್ನು ವಿಲೇಜ್ ಕಮ್ಯೂನಿಕೇಷನ್ ಪಟ್ಟಿಯಲ್ಲಿ ಸೇರಿಸಿ ಪ್ರತಿ ಒಂದು ರಸ್ತೆಯ ರಿಪೇರಿಯ ಬಗ್ಗೆ ಸಾಲಿಯಾನ 20/ ರೂಪಾಯಿಯಂತೆ ಒದಗಿಸಲು ಮಂಜೂರು ಮಾಡಿಸತಕ್ಕದ್ದು.

ರಾಂಪುರ ಗ್ರಾಮದ ಬಳಿ ಇರುವ ಕುಡಿಯುವ ನೀರಿನ ಹೊಂಡವನ್ನು 50/ ರೂಪಾಯಿ ಖರ್ಚಿನಿಂದ ರಿಪೇರಿಯಾಗಬೇಕು.

6. ಶಿರಂಗಾಲದ ಸ್ಕೂಲಿಗೆ ಒಬ್ಬ ಸಹಾಯೋಪಾಧ್ಯಾಯರನ್ನು ನೇಮಿಸತಕ್ಕದ್ದು.

7. ತೊರೆನೂರು ಗ್ರಾಮದಲ್ಲಿ ಒಂದು ನೈಟ್ ಸ್ಕೂಲ್ (ರಾತ್ರಿ ಶಾಲೆ) ನ್ನು ಏರ್ಪಡಿಸಬೇಕು.

೮. ಕೂಡಿಗೆ ಸೇತುವೆ ಬಳಿಯಿಂದ ಚಿಕ್ಕತ್ತೂರಿಗೆ ಗಾಡಿ ಹೋಗಲು ರಸ್ತೆಯನ್ನು ಮಾಡಿಸತಕ್ಕದ್ದು.

9 ಶನಿವಾರಸಂತೆ ಮತ್ತು ಮೂರ್ನಾಡಿನಲ್ಲಿ ಆಸ್ಪತ್ರೆಗಳನ್ನು ತೆರೆಬೇಕು.

10. ಹೆಬ್ಬಾಲೆಯಲ್ಲಿ ರಾತ್ರಿ ಪಾಠಶಾಲೆಯನ್ನು ಇಡತಕ್ಕದ್ದು.

ಫ್ರೇಜರ್‌ಪೇಟೆ, ಯಸ್. ಯನ್. ರಾಮಶೆಟ್ಟಿ.
13—3—'28.

ಖಾದಿ ಕಮಿಟಿ.

ಕೈನೂಲು ಕಸಬನ್ನು ಪುನರುಜ್ಜೀವನ ಮಾಡಲಿಕ್ಕೆ ಶ್ರೀಯುತ ರಾಜಗೋಪಾಲಾಚಾರ್ಯರಾಗಲೀ, ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರಾಗಲಿ ಬರುವಂತೆ ಕಾಗದ ಬರೆದಿದ್ದು ಎಂತ ತಿಳಿಸಲಾಗಿತ್ತು. ಶ್ರೀಯುತ ರಾಜಗೋಪಾಲಾಚಾರ್ಯರು ತಾನು ಬರಲು ಸಾಧ್ಯವಿಲ್ಲವೆಂತ ಬರೆದರು. ಶ್ರೀ. ಗಂಗಾಧರರಾಯರಿಂದ ಈ ವರೆಗೂ ಉತ್ತರವಿಲ್ಲ. ಇವರಲ್ಲಿ ಯಾರನ್ನಾದರೂ ಬರುವಂತೆ ಮಾಡಬೇಕೆಂತ ಧಾರವಾಡದ ದಿವಾಕರ ರಂಗನಾಥರಾಯರಿಗೆ ಬರಕೊಳ್ಳಲಾಗಿದೆ.

ತೊರೆನೂರು, ಶಿರಂಗಾಲ ಗ್ರಾಮದ ನಿವಾಸಿಗಳು ಹತ್ತಿ ಬೆಳೆಯುವದನ್ನು ಬಿಟ್ಟಿರುವದಾಗಿಯೂ, ಬೀಜ ತರಿಸಿಕೊಟ್ಟರೆ ಪುನಹ ಹತ್ತಿ ಬೆಳೆಯುವದಾಗಿಯೂ ಹೇಳಿದ್ದರು. ಶ್ರೀ. ರಾಜಗೋಪಾಲಾಚಾರ್ಯರನ್ನು ಬೀಜ ಕಳುಹಿಸಿಕೊಡಬೇಕೆಂತ ಕೋರಿಕೊಂಡದ್ದಕ್ಕೆ ನಂಜನಗೂಡು ಬಳಿ ನಡೆಸಲ್ಪಡುತ್ತಿರುವ ಖಾದಿಕೇಂದ್ರ ಸ್ಥಾನದ ಬದನವಾಳದಿಂದ ಬೀಜ ಕಳುಹಿಸುವ ಏರ್ಪಾಡು ಮಾಡುವದಾಗಿ ತಿಳಿಸಿರುತ್ತಾರೆ. ಈಗ 50 ರಾತಲು ಬೀಜ ಬರುತ್ತದೆ. ಜನರಿಗೆ ಇದು ಸಾಲದಿದ್ದರೆ ಪುನಹ ತರಿಸುವ ಏರ್ಪಾಡು ಮಾಡಲಾಗುತ್ತದೆ.

ಈಗ ಬರುವ 50 ರಾತಲು ಬೀಜವನ್ನು ಉಪಯೋಗಿಸಲು ಇಚ್ಛೆ ಇರುವ ಕಣಿವೆ ಹೋಬಳಿಯ ಮಹನೀಯರು ಕೂಡಲೇ ನನಗೆ ತಿಳಿಸಬೇಕೆಂತ ಈ ಮೂಲಕ ಕೋರಿಕೊಳ್ಳುತ್ತೇನೆ.

ತಾ. 13—3—28. ಸಿ. ಯನ್. ವೆಂಕಪ್ಪಯ್ಯ.
(ಖಾದಿ ಕಮಿಟಿಯ ಪರವಾಗಿ)

ಹಾಲೇರಿನಾಡು ಬಪ್ಪಕೊಜ್ಜ ಶಾಲೆ.

ಮಹನೀಯರೇ,

ಕಳೆದ ಪಬ್ರವರಿ ತಾರೀಕು 21ರಲ್ಲು ಮ. ಮುದ್ದುರ ಬಿಕ್ಯಪ್ಪನವರು ಕಟ್ಟಿಸಿರುವ ಹಾಲೇರಿನಾಡು ಬಪ್ಪಕೊಜ್ಜ ಶಾಲೆಯ ಮಾಸ್ಟರವರು ಮತ್ತು ಮಕ್ಕಳು, ನಾಡಿನ ಯೌವನಸ್ಥರು ಸಹ ಸೇರಿ ಆ ದಿನ 8 ಗಂಟೆ ರಾತ್ರಿಗೆ ಸಣ್ಣದಾಗಿಯೂ, ಹೊಸದಾಗಿಯೂ ಇರುವ ಒಂದು ನಾಟಕವನ್ನು ಆಡಿ ತೋರಿಸಿದರು. ಇದರಲ್ಲಿ ನಾಡಿನವರಲ್ಲದೆ ಬೇರೆ ಹೊರಗಿನಿಂದ ಬಂದ ಮಹನೀಯರುಗಳು ನಾಟಕವನ್ನು ನೋಡಿ ಬಹಳ ಆನಂದ ಪಟ್ಟಿರಬಹುದಾಗಿ ನಂಬುತ್ತೇನೆ. ಈ ನಾಟಕಕ್ಕೆ ಸುಮಾರು 500 ಜನರು ಸೇರಿದ್ದರು. ಈ ಶಾಲೆ ಕಟ್ಟಿದನಂತರ ಇದೇ ಹೊಸ ನಾಟಕ ಮಾಡಿದ್ದಾಗಿರುತ್ತೆ. ಮತ್ತು ಇಷ್ಟು ಜನರು ಸಹ ಸೇರಿದ್ದಾಗಿರುತ್ತೆ. ಶಾಲೆಗೆ ಬಾರದೆ ಇರುವ ಬಡ ಮಕ್ಕಳನ್ನು ಸಹ ಶಾಲೆಗೆ ಬರುವ ಹಾಗೂ ಮತ್ತು ಅವರಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುವದಕ್ಕಾಗಿಯೂ ಅನೇಕ ಮಹನೀಯರುಗಳು ಧನ ಸಹಾಯ ಮಾಡಿರುತ್ತಾರೆ. ಈ ಪೈಕಿ ಮ. ರಾ. ರಾ. ಗಳಾದ ಮುದ್ದುರ ಬಿಕ್ಯಪ್ಪನವರ, ಮತ್ತು ಮೆ. ಮರುವಂಡ ಪೋಸ್ತಯ್ಯನವರು, ಸರ್ವ ತರದಲ್ಲು ಜೊಂದರೆ ತೆಗೆದುಕೊಂಡು ಇದಕ್ಕೆ ಪ್ರೋತ್ಸಾಹ ಕೊಟ್ಟದ್ದಕ್ಕಾಗಿ ನಾಡಿನವರ ಕಡೆಯಿಂದ ಇವರಿಗೆ ತುಂಬಾ ವಂದನೆ. ಆ ದಿನ ನಾಟಕ ನೋಡಲಿಕ್ಕಾಗಿ ದೂರದಿಂದ ಬಂದ ಮಹಾನೀಯರುಗಳ ಪೈಕಿ ಮೆ. ಮನುಮಂಡ ಚಿಣಪ್ಪನವರೂ ಮತ್ತು ಮೆ. ಯಂ. ಯಂ. ಸಿದ್ದೇಶರವರೂ ಶಾಲಾಮಕ್ಕಳ ವಿಷಯವಾಗಿಯೂ, ನಾಡಿನವರ ವಿಷಯವಾಗಿಯೂ ಭಾಷಣ ಮಾಡಿದರು. ಮೆ. ಯಂ ಯಂ. ಸಿದ್ದೇಶರವರು, ಶಾಲಾ ಮಕ್ಕಳಿಗೆ ಸ್ಲೇಟುಗಳನ್ನೂ, ಎಕ್ಸರ್‌ಸೈಸ್ ಪುಸ್ತಕಗಳನ್ನೂ ಬಹುಮಾನವಾಗಿ ಕೊಟ್ಟರು. ನಾನು ತಿಳಿದ ಮೇರೆ ಚಂದಎತ್ತಿದ್ದರಲ್ಲಿ ಖರ್ಚು ಹೋಗಲಾಗಿ ಬಾಕಿ ಹಣ ನಾಟಕದ 17—0—0 ರೂಪಾಯಿಯನ್ನು ಬಡಮಕ್ಕಳಿಗೆ ಕೊಡುವದಕ್ಕಾಗಿ ಶಾಲಾ ಮಾಸ್ಟರು ಕೋಡಿರ ಯಂ. ಕಾರ್ಯಪ್ಪನವರ ಸ್ವಾಧೀನಕ್ಕೆ ಕೊಡಲಾಗಿದೆ. ಈ ಶಾಲೆಯಲ್ಲಿ ನಾಟಕಕ್ಕೆ ಹೆಚ್ಚು ಪ್ರಯತ್ನ ತೆಗೆದುಕೊಂಡವರುಗಳು—ಮ. ರಾ ರಾ. ಗಳಾದ ಯಸ್. ಪಿ. ಕಾಳಯ್ಯಣ್ಣ, ಯಂ. ಬಿ. ಬಿದ್ದಯ್ಯ, ಯಂ. ಯಸ್. ಕಾರ್ಯಪ್ಪ, ಕೆ. ಯಂ. ಕಾರ್ಯಪ್ಪ ಸ್ಕೂಲು ಮಾಸ್ಟರು ಮತ್ತು ಪಿ. ಸಿ. ಕಾಳಯ್ಯಣ್ಣ, ಪಿ. ಪಿ. ಮುದ್ದಪ್ಪ ಇವರೇ ಮೊದಲಾದವರು. ಇವರು ತೆಗೆದುಕೊಂಡ ಶ್ರಮಕ್ಕೆ ತುಂಬಾ ವಂದಿಸಬೇಕಾಗಿದೆ. ಈ ಶಾಲೆಯ ವಿಷಯವಾಗಿ ಇನ್ನಾದರೂ ದಯಾಳುಗಳಾದ ಕೊಡಗಿನ ಕಮೀಷನರವರೂ, ಶಾಲಾ ಇನ್ಸ್‌ಪೆಕ್ಟರವರೂ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳೂ ಸಹ ತುಂಬಾ ನಿಗವಿಟ್ಟು ಈ ಬಡನಾಡಿನ ಶಾಲೆಯನ್ನು ಬೇಗನೆ ಬೋರ್ಡ್ ಶಾಲೆಯಾಗಿ ಮಾಡುವದಾಗಿಯೂ ಮತ್ತು ಬಡಮಕ್ಕಳಿಗೆ ವಿದ್ಯೆಗೆ ಸಹಾಯವನ್ನು ಕೊಡುವದಾಗಿಯೂ ಬೇಡಿಕೊಳ್ಳುತ್ತೇನೆ.

ನಾಡಿನವ.

ಟಕಾವಿ ಸಾಲವೂ, ಜಮ್ಮ ಭೂಮಿಯೂ.

ಅಯ್ಯಾ,

ಈ ಮೊದಲು ಯಾವನಾದರೂ ಸರಕಾರದಿಂದ ಟಕಾವಿ ಹಣ ಪಡಿಯಬೇಕಾದರೆ ಅರ್ಜಿದಾರನ ಕೋರಿಕೆಯನ್ನು ಮನೆಯ ಪಟ್ಟೆದಾರ ಮತ್ತು ಇತರ ಅಣ್ಣ, ತಮ್ಮ, ಕುಟುಂಬಸ್ಥರನ್ನು ಆ ಇಲಾಖೆದಾರರು ವಿಚಾರಿಸಿ ಅವರು ಒಪ್ಪಿದರೆ ಅರ್ಜಿದಾರನ ಅನುಭವದ ಜಮ್ಮ ಭೂಮಿಯನ್ನು ಗಿರ್ವಿ ತೆಗೆದುಕೊಂಡು ಹಣ ಮಂಜೂರು ಮಾಡಿ ಕೊಡುವ ಪದ್ಧತಿ ಇತ್ತು. ಈಗ ನಾನು ತಿಳಿದಲ್ಲಿ ... ... ಎಂಬವನು ಈ ಮೊದಲು ಟಕಾವಿ ಹಣ ಪಡಕೊಂಡು ತನ್ನ ಹಿಸೆ ಭೂಮಿಯನ್ನು ಸರಕಾರಕ್ಕೆ ಗಿರ್ವಿ ಕೊಟ್ಟು ಟಕಾವಿ ಹಣ ಪಡಕೊಂಡಿದ್ದರೂ ಸಾಲ ಇನ್ನೂ ತೀರಲಿಲ್ಲ. ಈಗ ಬೇರೆ ಭೂಮಿ ಇಲ್ಲದ ಮತ್ತು ಪಾಲಾಗದ ತನ್ನ ಮಗನೊಬ್ಬನು ಟಕಾವಿ ಹಣಕ್ಕೆ ಅರ್ಜಿ ಮಾಡಿಕೊಂಡಿರುವನಂತೆ. ಇದಕ್ಕೆ ಸರಕಾರದವರು ಹಣ ಮಂಜೂರಾತಿ ಮಾಡಿರುವರಂತೆ. ತನ್ನ ಚಿಕ್ಕಪ್ಪನ ಭೂಮಿಯನ್ನು ತನ್ನದೆಂದು ಸರಕಾರಕ್ಕೆ ಅವನೂ ಹೇಳಿದರ ಮೇಲೆ ಅದನ್ನು ಸರಕಾರದವರು ನಂಬಿ ಕುಟುಂಬಸ್ಥರ ಒಪ್ಪಿಗೆ ಕೇಳದೆ ಹಣ ಕೊಡುವುದಂತೆ. ಹೀಗಾದರೆ ಹಿರಿಯವರು ಮಾಡಿದ ಜಮ್ಮ ಭೂಮಿಯನ್ನು ಒಬ್ಬರನ್ನೊಬ್ಬರು ಸ್ವಾಧೀನ ಮಾಡಿಕೊಂಡು ಇದ್ದ ಆಸ್ತಿಗಳನ್ನು ಪಂಚಾರಿ ಕೂಡಿ ಸಾಲಗಾರರಿಗೆ ಮೋಸಪಡಿಸುವ ಸಂದರ್ಭಕ್ಕೆ ಇದು ಉತ್ತೇಜನ ಕೊಡುತ್ತದಲ್ಲವೇ. ಹೀಗೆ ಮೊದಲು ಯಾರ್ಯಾರು ಎಷ್ಟು ಮಾಡಿದ್ದಾರೋ ತಿಳಿಯದು. ದಯವಿಟ್ಟು ಸರಕಾರದವರು ಇನ್ನಾದರೂ ಯಾವ ಮನುಷ್ಯನಿಗಾದರೂ ಟಕಾವಿ ಹಣ ಕೊಡಬೇಕಾದರೆ ತಕ್ಕ ಕುಟುಂಬಸ್ಥರ ಒಪ್ಪಿಗೆ ತೆಗೆದುಕೊಳ್ಳದೆ ಹೋದಲ್ಲಿ ಮುಂದೆ ಅನೇಕರು ಹೀಗೇನೇ ಹಿರಿಯರು ಮಾಡಿದ ಜಮ್ಮ ಭೂಮಿಯನ್ನು ಕಳಕೊಳ್ಳಲು ಮತ್ತು ಸಾಲಗಾರರಿಗೆ ಮೋಸ ಮಾಡಲು ಸರಕಾರವೇ ಎಡೆ ಕೊಟ್ಟಂತಾಗುವುದರಲ್ಲಿ ಸಂಶಯವಿಲ್ಲ.

ಯಂ. ಬಿ. ಪೊನ್ನಪ್ಪ.

ಗೋಣಿಕೊಪ್ಪಲಿನ ವಾರ್ತೆ.

ಅಯ್ಯಾ,

ಒಂದೆರಡು ವರ್ಷಗಳಿಂದ ಗೋಣಿಕೊಪ್ಪಲಿನ ಸ್ಥಿತಿಗತಿಯು ಬದಲಾಗುತ್ತಾ ಬರುತ್ತಿದೆ. ಅಂಗಡಿಗಳು ಹೆಚ್ಚುತ್ತಾ, ವ್ಯಾಪಾರವು ಬಲವಾಗುತ್ತಾ, ಹೊಟೇಲ್, ಸಾರಾಯಿ ಅಂಗಡಿಗಳ ಸಂಖ್ಯೆ ಏರುತ್ತಾ, ವಾದ ವಿವಾದಗಳು, ಕೇಸುಗಳು ಜೋರಾಗುತ್ತಾ, ಜೂಜಾಟಗಳು, ಪಂಥವಾಟಗಳು ಬೆಳೆಯುತ್ತಾ ಹೋಗುತ್ತಿರುವದು ಅಲ್ಲಲ್ಲಿ ಆಗಾಗ ಕಾಣಬರುತ್ತಿದೆ. ಈ ತನ್ಮಧ್ಯೆ ದೇಶದ ಜನರ ಉದಾರತ್ವದಿಂದಲೂ, ಪೇಟೆ ಸೆಟ್ಟಿ ಮ. ಅಬ್ದುಲ್ ಕರೀಂಸಾಹೆಬರವರು ತೆಗೆದುಕೊಂಡ ಪ್ರಯತ್ನದಿಂದಲೂ ಒಂದು ಪಬ್ಲಿಕ್ ಕಟ್ಟಡವು ಪಬ್ಲಿಕ್ ಜನರ ಉಪಯೋಗಾರ್ಥವಾಗಿ ಕಟ್ಟಲ್ಪಡುತ್ತಿದೆ. ಆ ಕಟ್ಟಡದ ಉದ್ದಿಷ್ಟ ಹೆಚ್ಚಿನ ದ್ರವ್ಯ ಸಹಾಯ ಕೊಡುತ್ತೇನೆಂದು ಒಪ್ಪಿ ವಾಗ್ದಾನ ಮಾಡಿದ ಮಹನೀಯರೊಬ್ಬರು ಕಟ್ಟಡದ ಕೆಲಸಕ್ಕೆ ಕೈ ಹಚ್ಚಿ ಪೂರೈಸುತ್ತಾ ಬಂದರೂ ಆ ಹಣವನ್ನು ಕೊಡದ್ದರಿಂದ ಕೋರ್ಟಿನ ಮೂಲಕ ವಸೂಲು ಮಾಡುವಂತೆ ತರದೂದು ನಡೆಯುತ್ತಿವೆ ಎಂಬುದು ದೇಶದ ಜನರಿಗೆ ಆಶ್ಚರ್ಯ ತೋರದಿರದು. ಹ್ಯಾಗೂ ಇತರ ಮಹನೀಯರ ಪ್ರೋತ್ಸಾಹದಿಂದ ಕಟ್ಟಡವು ಪೂರೈಸುವದೆಂದು ಎಲ್ಲರ ಭಾವನೆ. ಇಲ್ಲಿ ಮೊದಲಿನಿಂದಲೇ ನಡೆಯುವ ಒಂದು ಮಿಶನ್ ಸ್ಕೂಲ್ ಇದೆ. ಅದರಲ್ಲಿ ಸಿಬ್ಬಂದಿಯು ಸಾಕಷ್ಟು ಚೆನ್ನಾಗಿಲ್ಲದೆ ವಿದ್ಯಾರ್ಥಿಯರ ಈಗಿನ ಸ್ಥಿತಿಯು ಬಹು ಹಾಳಾಗುವಂತಿದೆ. ಈ ಶಾಲೆಯನ್ನು ಕೊಡಗಿನ ಸ್ಕೂಲ್ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರು ಸಂದರ್ಶಿಸಿ ಅದರ ವಿಷಯ ಆಲೋಚನೆಯನ್ನು ಕೊಟ್ಟಿರುತ್ತಾರೆ. ಹಾಗೂ ಈ ವಿಷಯವಾಗಿ ಸುತ್ತುಮುತ್ತಲಿನ ಜನರು ತಮ್ಮ ಮಕ್ಕಳ ವಿದ್ಯೆಗಾಗಿ ತಮ್ಮ ಕೈಯಿಂದ ಆ ಸ್ಕೂಲಿಗೆ ಕೊಡುತ್ತಿರುವ ವಂತಿಗೆಗೆ ಸರಿಯಾಗಿ ಕಾರ್ಯವು ನಡೆಯುತ್ತಿದೆಯೋ ಎಂಬುದನ್ನು ಸಹ ತಿಳುಕೊಳ್ಳುವದಕ್ಕೂ ಕುತೂಹಲಿಗಳಾಗದಿರುವದು ಬಹು ಶೋಚನೀಯ.

ಆದರೆ ಹೆಂಡದ, ಸಾರಾಯಿಯ ಅಂಗಡಿಗಳು ಐದಾರು ಇದ್ದು ದಿನೇ ದಿನೇ ಅದರ ಉತ್ಪತ್ತಿಯು ಹೆಚ್ಚುತ್ತಿದ್ದು ಈ ಭಾಗದ ಜನರ ಐಶ್ವರ್ಯವು ಒಂದು ಕಡೆಯಿಂದ ಹರಿದು ಹೋಗುವಂತಿದೆ. ಇನ್ನೊಂದು ಸಣ್ಣ ವಾರಕ್ಕೊಂದು ಸಂತೆ ನಡೆಯುತ್ತಿರುವ ಸ್ಥಳದಲ್ಲಿ ಐದಾರು ಅಂಗಡಿಗಳು ಇದೆ ಎಂದರೆ ಯಾರಿಗೆ ತಾನೇ ಆಶ್ಚರ್ಯವೂ, ಬೇಸರವೂ ಉಂಟಾಗದೆ ಇರುವದು? ಅದರಲ್ಲೂ ಹಳ್ಳಿವಾಸಿಗಳು ಹೆಚ್ಚಾಗಿ ಮಾಪಿಳ್ಳೆಗಳೇ ಆಗಿರುವದರಿಂದ ಬಹು ವಿಶೇಷವಾದದ್ದೇ ಸರಿ.

ಇದರ ಪರಿಣಾಮವೇನು? ಒಂದೆರಡು ವರ್ಷಗಳಿಂದ ಬೆಂಚು ಕೋರ್ಟುಗಳಲ್ಲಿ ಈ ಭಾಗದಿಂದ ನಡೆಯುವ ಕೇಸುಗಳ ಸಂಖ್ಯೆಯು ಹೆಚ್ಚುತ್ತಿದೆ. ಜೂಜಾಟವು ದಿನೇ ದಿನೇ ಹೆಚ್ಚುತ್ತಾ ಪೇಟೆಯ ಸಂದುಗೊಂದುಗಳಲ್ಲಿ ಸಮೀಪವಿರುವ ಹೊಳೆಯ ದಡಗಳಲ್ಲಿ ತಮಾಷೆಗಳಿಗೆ ಸಾಟಿಯೇ ಇಲ್ಲ. ಕೊಡಗಿನ ಹೆಸರುಗೊಂಡ ಪೋಲೀಸ್ ಇಲಾಖೆಯವರು ಇವರ ಕಡೆಗೆ ಸ್ವಲ್ಪ ಗಮನವನ್ನಿತ್ತರೆ ಜನರ ಸ್ಥಿತಿಯು ಉತ್ತಮವಾಗುವದೆಂದು ತೋರುತ್ತದೆ.

ಕಾಯಿಲೆಯು ಹೆಚ್ಚುತ್ತಿದ್ದರೂ ಅದಕ್ಕೆ ಸರಿಯಾದ ಔಷಧಿಯೂ, ಚಿಕಿತ್ಸೆಯೂ ದೊರೆಯುವದಿಲ್ಲವೆಂಬ ಅತೃಪ್ತಿಯು ಜನರಲ್ಲಿ ಕಂಡು ಬರುತ್ತದೆ. ಸ್ಥಳೀಯ ಆಸ್ಪತ್ರೆಯಲ್ಲಿರುವ ಡಾಕ್ಟರವರು ಇಲ್ಲಿಗೆ ಬಂದು ಬಹಳ ವರ್ಷಗಳಾಗಿರುವದರಿಂದ ಅವರಿಗೂ ಇಲ್ಲಿ ಬೇಸರ ಹುಟ್ಟಿರ ಬಹುದು. ಆದುದರಿಂದ, ಇವರನ್ನು ಬೇರೆ ಕಡೆಗೆ ವರ್ಗಾಯಿಸುವದರಿಂದ ಡಾಕ್ಟರರಿಗೂ, ಇಲ್ಲಿಯ ಜನರಿಗೂ ಪ್ರಯೋಜನವಾಗಬಹುದೆಂದು ನನ್ನ ಅಭಿಪ್ರಾಯ.

ಭತ್ತದ ವ್ಯಾಪಾರವು ಹಿಂದಿನಂತೆ ಇದ್ದರೂ ಮೊಳೆ ಒಂದ ಭತ್ತವಾದ್ದರಿಂದ ಬೆಲೆಯ ಏರಿಳಿತದಿಂದ ಯಾವ ಪ್ರಯೋಜನವೂ ವ್ಯವಸಾಯಗಾರರಿಗೆ ಸಿಕ್ಕುವಂತಿಲ್ಲ. ಇಲ್ಲಿ ಒಂದು ಅಕ್ಕಿಯ ಗಿರಣಿ (ರೈಸ್‌ಮಿಲ್)ಯನ್ನು ಇಡಲು ಪ್ರಯತ್ನಗಳು ನಡೆಯುತ್ತಿವೆ. ಆದುದರಿಂದ ಆವಶ್ಯಕ ಸಿದ್ಧತೆಗೆ ವ್ಯವಸಾಯಗಾರರಿಗೆ ಒಂದು ತರಹದ ಪ್ರಯೋಜನವು ಸಿಕ್ಕಬಹುದೆಂದು ಊಹಿಸುತ್ತೇನೆ.

ಹೇಗೂ ದೇವರೂ, ಸರಕಾರದವರೂ ನಮ್ಮ ಈ ಭಾಗದ ಮೇಲೆ ಕರುಣೆ ಇಟ್ಟು ಒಳ್ಳೆಯ ದಾರಿಗೆ ಒಸರ ಮನ ಎಳೆಯಲಿ ಎಂದು ಅಪೇಕ್ಷಿಸುವ.

"ಪಟ್ಟಣಿಗ"

'ಸುಂಟಿಕೊಪ್ಪ ಯೂನಿಯನ್'

ಫೆಬ್ರವರಿ ತಿಂಗಳು 2ನೇ ಶುಕ್ರವಾರ ದಿನ ಸುಂಟಿ ಯೂನಿಯನ್ ಕ್ಲಬ್ಬಿನ ಪ್ರವೇಶ ಉತ್ಸವವು ಒಹು ವಿಜೃಂಭಣೆಯಿಂದ ಜರಗಿತು. ಪ್ರಸಿಡೆಂಟರಾದ ಮೆ. ಪಿ. ನಂಜುಂಡಯ್ಯನವರೂ, ವೈಸ್ ಪ್ರಸಿಡೆಂಟರಾದ ಪಿ. ಎ. ಚಂಗಪ್ಪನವರೂ ಕಮಿಟಿ ಮೆಂಬರ ಗಳೂ ಅಲ್ಲದೆ ಸು. 80 ಜನರು ಹಾಜರಿದ್ದರು. ಸಾಯಂಕಾಲ 8 ಗಂಟೆಗೆ ಬ್ರಾಹ್ಮಣರಿಗೆ ಫಲಹಾರವೂ, ಜಾತಿಯವರಿಗೆ ಭೋಜನವೂ ಒಹು ಸಂತೋಷದಿಂದ ನಡೆಯಿತು. ಭೋಜನದ ನಂತರ ಗಂಟೆಗೆ ವಾದ್ಯ ಸಮೇತ ಸವ ಸ್ಯರೂ ಕ್ಲಬ್ಬಿಗೆ ದಯಮಾಡಿಸಿ ಮೆ. ಬಸ್ಸಾಂ ತಿಮ್ಮಪ್ಪಯ್ಯನವರಿಂದ ಪೂಜೆ ಪುನಸ್ಕಾರಗಳನ್ನು ಮಾಡಿಸಿ ಎಲ್ಲರೂ ತಮ್ಮ ತಮ್ಮ ಆಸನಗಳನ್ನು ಹಿಡಿದರು. ಆ ವೇಳೆ ಮೆ. ಪಿ. ಎ. ಚಂಗಪ್ಪನವರನ್ನು ಸಭಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಅಧ್ಯಕ್ಷರ ಭಾಷಣದ ಸಾರಾಂಶ.—"ಸುಂಟಿಕೊಪ್ಪಲಿಗೆ ನಾನು ಬಂದು ವರ್ಷಗಳಾದವು ಇಷ್ಟರ ವರೆಗೆ ಇಂಥಾ ಕ್ಲಬ್ಬಿನ ಏರ್ಪಾಡುಗಳೇನೂ ಆಗಿರಲಿಲ್ಲ. ಆದರೆ ನಮಗೆಲ್ಲರ ಅಭಿಪ್ರಾಯಕ್ಕೆ ಸ್ಥಿರವಾಗಿಯೋ, ದೇವರ ಪ್ರೀತಿಯೋ ಸುಂಟಿಕೊಪ್ಪ ಉದ್ಯೋಗಸ್ಥರು ಮತ್ತು ಇತರರು ಒಹು ಶ್ರಮಪಟ್ಟು ಈ ಕ್ಲಬ್ಬನ್ನು ಏರ್ಪಾಡಿಸಿದರು. ಈ ಕ್ಲಬ್ಬಿಗೆ ಮಹನೀಯರುಗಳು ತಮ್ಮ ಧನಗಳಿಂದ ಸಹಾಯ ಮಾಡಿದ್ದನ್ನು ನೋಡುವಾಗ ಸ್ವರಂಜಿ ಸಾಗಿಯೋ ಇದು ಒಹುನೆಂದು ಕಾಣು. ಅದೂ ಅಲ್ಲದೆ ಇಲ್ಲಿ ಜಾತಿ ಮತ್ತು ವರ್ಣಭೇದಗಳೆಲ್ಲರೂ ಸಮ್ಮೇದರಕ್ತದಲ್ಲಿ ನಡಿಯುವದು ಒಹು ಉತ್ತಮವಾಗಿದೆ. ಎಲ್ಲರ ಒಗ್ಗಟ್ಟಿಗೆ ಪರಸ್ಪರ ಪ್ರೀತಿ ಈಗ ಕ್ಲಬ್ಬಿನ ಸತ್ಯಾಭಿಲಾಷೆತ್ವಮ್ಮ ಕಲ್ಪದವನ್ನು ಮಾಡಿ ಸ್ವಾರ್ಥದಿಂದ ಕಟ್ಟಿದವ ಮೆ. ಸಿ. ಬ್ರೀಜ ನಾಪ್ಪ ವರೆಗ ನಾವೆಲ್ಲರೂ ಎನ್ನು ವಂದಿಸಿದ್ದೇವೆ. ಮೆ. ಆರ್. ಜಿ. ನಾಯುಡು ಅವರು ಈ ಸಕ್ರೆಟರಿ ಪದವಿಯನ್ನು ವಹಿಸಿಕೊಂಡು ಅವರು ತೆಗೆದುಕೊಳ್ಳುವ ತೊಂದರೆಯು ಒಹು ಶ್ಲಾಘನೀಯವಾಗಿದೆ. ಮೂತ್ತಸ ಸಗಳಲ್ಲರನ್ನು ಸಮ್ಮೇದ ರತ್ತದಲ್ಲಿ ಈ ಕ್ಲಬ್ಬಿಗೆ ಯಶಸ್ಸನ್ನು ಕೊಟ್ಟು ದಿರ್ಘಾಯುಷ್ಯಕೊಡಲೆಂದು ನಾವೆಲ್ಲರೂ ಸದಾ ಪ್ರಾರ್ಥಿಸುವ.

ಸಂತಪ್ಪ ಕ್ಲರ ಕೋಲಿ ಮೇರಿ ಗ್ಯಿರ್ ಹಾಲರಾವ ವೊಂದುಸ್ತ್ರೀಗಳನ್ನು ಕ್ಲಬ್ಬಿನ ಸಕ್ರೆಟರಿಯವರು ಓದಿ ಹೇಳಿದರು. ಮೇಲೆ ಮೆ. ಬೆಲ್ಲರಂಡ ಕ ಅಪ್ಪಯ್ಯನವರು ಅನ್ನುಲ್ಲಿ ಗೆದ್ದ ಒಂದು ಬೆಳ್ಳಿ ಕಪ್ಪನ್ನು ಕ್ಲಬ್ಬಿಗೆ ಬಹುಮಾನ ಕಳ್ಸಿ ಸುಂಟಿಕೊಪ್ಪ ಟೀಮು ಒಂದನ್ನ ಉಪಾಧ್ಯಕ್ಷರು ಮಾತಾಡಿ ಅನೇಕ ಮಹನೀಯರುಗಳು ಕ್ಲಬ್ಬಿನಾರಕ್ಷವಾಗಿ ಪ್ರತ್ಯೇಕ ಪತ್ರಿಕಗಳನ್ನು ತರಿಸಿಕೊಡುವುದು ಒಪ್ಪಂದ ಮಾಡಿದರು. ಮೆ. ಅಬ್ದುಲ್ ಅಜೀಜ್ ಅವರು ಕೊ ರವರು ಕ್ಲಬ್ಬಿಗೆ ಬೇಕಾದ ಎಣ್ಣೆಯನ್ನು ಕೊಡುವುದಕ್ಕೆ ಒಪ್ಪಿಕೊಂಡರು. ಈ ಮಹನೀಯರುಗಳಿಗೆ ನಮ್ಮ ಕ್ಲಬ್ಬಿನ ಪರವಾಗಿ ಅನೇಕ ವಂದನೆಗಳನ್ನು ಅರ್ಪಿಸುತ್ತೇವೆ. ಕಡೆಗೆ ಮೆ. ತಿರುವ ಎಂಗಾರ್ಯರು ಮತ್ತು ಅವರ ಮಗ ಮೆ. ರಾಮಸ್ವಾಮಿಯ್ಯಂಗಾರವರು ಒಹು ಕರ್ಣಾನಂದಕರವಾಗಿ ಗಾಯನವ ಮಾಡಿ ಸಭೆಯನ್ನು ಒಹು ಆನಂದ ಪಡಿಸಿದರು. ಈ ರಾಮಸ್ವಾಮಿ ಅಯ್ಯಂಗಾರವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಸಭೆಯನ್ನು ಆನಂದ ಪಡಿಸಿದ ಹಾಗೆಯೇ ಮುಂದ ಆ ಶ್ರೀರಾಮ ನ ಅನುಗ್ರಹ ಅನುರಾಗೋತ್ಸವ ಸಂದದನ್ನು ಕೊಟ್ಟು ಅಭಿವೃದ್ಧಿಯಾಗಲೆಂದು ನಾವೆಲ್ಲರೂ ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಈ ಕ್ಲಬ್ಬಿನ ಕಟ್ಟಡವನ್ನು ಡೆಕೊರೇಷನ್ ಮಾಡುವದರಲ್ಲಿ ಒಹು ಶ್ರಮ ವಹಿಸಿದ ಮೆ. ಯಂ ಹೆಚ್. ಟಾವರ್ ಮೆ. ಟಿನ್ ಪೀರ್ ಸಾಹೇಬರಿಗೂ ಮತ್ತು ಆದಿಯಿಂದಲೂ ಈ ವಿಷಯದಲ್ಲಿ ಒಹು ಮಟ್ಟಿಗೆ ಕಷ್ಟ ವಹಿಸಿಕೊಂಡು ಇದರ ಸ್ಥಾಪನೆಗೆ ಕಾರಣ ಕರ್ತರಾದ ಡಾಕ್ಟರ್ ಸಿ. ಬಿ. ಅಪ್ಪಯ್ಯನವರಿಗೂ ಮತ್ತು ಕೆ ಕ ಚಂಗಪ್ಪನವರಿಗೂ ನಮ್ಮ ಕ್ಲಬ್ಬಿನ ಪರವಾಗಿ ಅನೇಕ ವಂದನೆಗಳು. ಕ್ಲಬ್ಬಿಗೆ ಸೇರಲಿಕ್ಕೆ ಬಾಕಿ ಇರುವ ಮೆಂಬರುಗಳು ತಮ್ಮ ಚಂದವನ್ನು ಕೊಟ್ಟು ಸದಾ ಕ್ಲಬ್ಬಿಗೆ ಹಾಜರಾಗುತ್ತಾ ಕ್ಲಬ್ಬಿನ ಯಶಸ್ಸನ್ನು ಕಾಪಾಡಬೇಕಾಗಿ ಕೋರುವ.

ಕೆ. ಆರ್. ಜಿ. ನಾಯುಡು,
(ಸಕ್ರೆಟರಿ.)

National Swords and Silver Belts (Thodanga) For "Scotland of India,"

ಸಂಪ್ರದಾಯದಿಂದ ಬಳಸಲ್ಪಟ್ಟ "ಒಡ್ಡಿ ಕತ್ತಿ" ಯೂ ನಿಮ್ಮ ಹಿರಿಯರಿಂದ ಉಪಯೋಗಿಸಲ್ಪಟ್ಟ "ಒಡ್ಡಿ ಪಿಸ್ತಲ್" ಯೂ ನಿಮಗೆ ಬೇಕಾ? ಯಾಕ ಒಳ್ಳೆಯದಾಗುತ್ತಿಲ್ಲ? ನಮ್ಮ ಗಳಿಂದ ಶೃಂಗರಿಸಲ್ಪಟ್ಟ ಕಾಗೆ ನವಿಲಾಗುವದೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ತ್ತು ಅದರ ಕತ್ತಿ. ಸೊಂಟದ ಒದಿಯಲ್ಲು ಪಿಸ್ತೂಲ ಹಿಡಿಯ ಬೇಕಾಗುತ್ತಿ. ಇವುಗಳಿಗೆ ತಕ್ಕ ಬೆಳ್ಳಿ ನೆಲಮಾ (ಉಮ್ಮತ್ರ) ರೀತಿ ಮತ್ತು ವಲ್‌ಪೆಟ್ಟಿ. ಇದಲ್ಲವೇ ನಿಮ್ಮ ಗೌರವ? ಕಾನಾಲ್, ಲೆಕ್ಕಾಚಾರ ಮೊದಲಾದವರೇ ನಿದಿ ವಿಷಯ ಎನ್ನಿ ಒರು ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು ನಿಮ್ಮ ಹಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರು. ಹೆಚ್ಚಿನ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದುಕೊಳ್ಳಿ.

Commercial Store
Murnad, Coorg

12–11



ಡಿ ಬಿ ಯಲ್. ಕೋವಿಗಳು ರೂ. 7 ರಿಂದ ರೂ. 45/
ಎಸ್ ಬಿ ಬಿ. ಯಲ್. ಕೋವಿಗಳು ರೂ. 5 ರಿಂದ ರೂ. 250
ಎಸ್. ಬಿ. ಯಮ್ ಯಲ್. ಕೋವಿಗಳು ರೂ. 35 ರಿಂದ
ರಿವಾಲ್ವರ್‌ಗಳು. ರೂ. 40/ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟಾ ಮತ್ತು ಕೇಪ್ ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಶ್ರೀಮಂತರಿಗೂ ಬಡವರಿಗೂ) ಅನುಕೂಲವಾಗುವಂತೆ ಆ ವಿಧದ ಕ್ರಯದಲ್ಲಿ ಮಾರಲ್ಪಡುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಿರಿ.

ಯನ್. ಪಿ. ರಾಮನಂಜಂ ಚೆಟ್ಟಿ
ಅಂಡ್ ಕಂಪೆನಿ.
ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.
12. ಬ್ರಾಡ್ವೆ, ಮದ್ರಾಸ್
?—14
(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

Arms, Ammunition and Shooting Requisites !!!



1928 Illustrated Catalogue Just Issued Free on Application!

D. B. B. L. Rifles	Rs.	120	to	Rs.	2750
S. B. B. L.	"	35	to	"	950.
D. B. B. L. Guns	"	50	to	"	1350
S. B. B. L. "	"	15	to	"	275.
D. B. M. L. "	"	45	to		135
S. B. M. L. "	"	30	to	"	80
B. L. Revolvers	"	35	to	"	350.
Automatic Pistols	"	30	to	"	150.

Brilliant Search Light Lamp For Shooting Camping, Fishing and All such other Night Sports and work Rs 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

210 Abdul Rehman Street, BOMBAY.

24–22

ಎಂಪಯರ್ ಆಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರವರಿ 28ಕ್ಕೆ ಆಖೈರಾದ 5 ವರ್ಷಗಳ ಕೆಲಸದ

ಬೆಲೆಕಟ್ಟಿದದ್ದಲ್ಲಿ

ರೂ. 37,66,689.

ಉಳಿದದ್ದು ಕಂಡುಬಂದಿದೆ.

ಒಟ್ಟು ಜೀವವಿಮೆಯ 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಯಂತೆಯೂ } ಮತ್ತು { ವಾಯಿದೆ ವಿಮೆಯ 1000 ರೂಪಾಯಿಗಳಿಗೆ 12 ರೂಪಾಯಿ ಸಾಲಿಯಾನ

ರಿವರ್ಷನರಿ ಬೋನಸ್ ಬಹು ಒಹುದೊಡ್ಡ ತೀರ್ಮಾನವಾಗಿದೆ.

ವಿಳಾಸ
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು
ಕಮರ್ಷಿಯಲ್ ಬೀದಿ
ಬೆಂಗಳೂರು

24–10

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಷೇರ್ ಬಂಡವಾಳ —	50,000
ವಸೂಲಾದ ಷೇರ್ ಹಣಗಳು —	15 510
ಜಮೆಯಾದ ಠೇವಣಾತಿ —	1,o2 911

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಸಾಯಿದೆ ಅವಧಿ ಹೆಚ್ಚಿನ ಸಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ಕೊಡಲಾಗುತ್ತೆ. ಕಡಿಮೆ ಸಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ಕೊಡಲಾಗುತ್ತೆ.

ಪರ್ಮನೆಂಟ್ ಮಾಸ್ಟರ್ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್

ಟ್ರೆಜರರ್, ಕೊಂಗಟ್ಟೀರ ಅಪ್ಪಯ್ಯನವರು

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು 1—7—1927.

ನೋಟೀಸು.

ಈ ಕೆಳಗಿನ ವರ್ತಮಾನ ''ಕೊಡಗು'' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಸೀತಿ ಪುಸ್ತಕಗಳನ್ನು ಮ. ಪೇರಿಯಂಡ ಪೂವಯ್ಯನವರ ಒಪ್ಪಿದಾರಿಕ [illegible] ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಬಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ. ಅಲ್ಲದೆ ಮ. ಪೇರಿಯಂಡ ಪೂವಯ್ಯನವರನ್ನು ಮತ್ತು ಮ. ಕಾಳೇಂಗಡ ಬಿದ್ದಪ್ಪನವರನ್ನೂ ಸಹ ಏಜಂಟರುಗಳಾಗಿ ನೇಮಕ ಮಾಡಿರುವುದರಿಂದ ಕೊಡಗಿನ ಎಲ್ಲಾ ಬಾಗಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಹಣಬಾಕಿ ಕೊಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಖಾದಿ ಭಂಡಾರದಲ್ಲಿ, ಮ. ಪಾಡುವಂಗಡ ಅಚ್ಚಯ್ಯನವರು

ಸಾಮೋಕ್ಲು—ಮ. ಆಲೆಯಂಡ ಸುಬ್ಬಯ್ಯನವರು,

ಗೋಣಿಕೊಪ್ಪಲು—ಮ. ಚಮ್ಮರ ಮಾದಪ್ಪನವರು,

ಅಮ್ಮತ್ತಿ ಸಿದ್ದಾಪುರ—ಮ. [illegible] ಮಾದಪ್ಪನವರು,

ಪೊನ್ನಂಪೇಟೆ—ಮ. ಪಿ ಜಿ ಮುದ್ದಪ್ಪಯ್ಯನವರು,

ಹುದಿಕೇರಿ & ತಿತಿಮತಿ—ಮ ಜಿ ಮಾದಪ್ಪಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
''ಕೊಡಗು'' ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಉಪಾಚಾರ [illegible] ಸಹಾಯಕ ಸಂಘದ ಉಪನಿಬಂಧನೆಗಳೂ, ದಾನ ಒಡೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಒರಿಯುತ್ತದೆಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾನಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವೀರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
''ಕೊಡಗು'' ಮಡಿಕೇರಿ

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY, 3

Telegraphic Address:—"SHOOTER" Bombay.

(5—?) 'Please write for our Catalogue 1928-1929.

ಕಟಿಶ್ವಾಯು ಮಾಲಿಶ [illegible] ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಚಳಿ ಬರುವ ಜ್ವರ, 3½ ದಿವಸಕ್ಕೊಂದು ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಬ್ಯಗಡ್ಡೆ ದೋಷದಿಂದ ಬರುವ ಜ್ವರಗಳಿಗೆ [illegible] 1ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ [illegible] ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲಿ [illegible] ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, [illegible] ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ [illegible] ದುರುವುದು, ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ [illegible] ರೋಗ ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1 3 6ಕ್ಕೆ ರೂ 1—[illegible] 3—0, [illegible]—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ [illegible] ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗೆ [illegible] 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆನವೆ, [illegible] ಮೂಗು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ [illegible] ಸ್ಮರಣ ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಬೇಗ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ [illegible] ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ [illegible] ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, [illegible] ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—[illegible]

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ.—ಮನೋಲ್ಲಾಸಿನಿ ಕಂಪನಿ,
9. ಮಂಗಳೂರು

52—23

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc. Chickpet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—41

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,31,000	ಜಾಸ್ತಿ ರೂ. 59,03,000.
	1925	ರೂ.	2,96,42,000	
	1926	ರೂ.	3,91,39,000	ಜಾಸ್ತಿ ರೂ 94,97,000.

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ 7,38,80,000ಗೆ ಹೆಚ್ಚಿರುತ್ತದೆ.
ಪ್ರೀಮಿಯಂ ವರಮಾನವು ವರ್ಷಕ್ಕೆ ರೂ 1,0[illegible]0,000ಗೆ ಏರಿರುತ್ತದೆ.

''ಓರಿಯಂಟಲ್‌ನ ಸುಸಮೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ.''

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್, ಎಫ್. ಎಫ್. ಎ., ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶವಿಲ್ಲದೆ ಬರೆಯಬೇಕಾಗಿ ಕೋರಿಗೆ

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

52—48

ಎಲ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರೆಟರಿ.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪ್ರಾವಿಡೆಂಟ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್
ಚೀಫ್ ಏಜನ್ಸಿ ಆಫೀಸ್—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಎಲ್ಲವೂ ಈ ದೇಶಸ್ಥರಿಗೆ ಕೊಡಬೇಕೆಂಬ ಠರಾವು ಜನವರಿ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

I ಅನಾಥರಾದ ಅಂಗಹೀನರಿಗೆ ಈ ಸಂಘದಿಂದ ಬೇಗನೆ ಅನ್ನ ಸಹಾಯ ನೀಡಲು ಏರ್ಪಾಡಾಗುವುದು

II 1928ನೇ ಇಸವಿ ಮಾರ್ಚ ತಿಂಗಳು 31ಕ್ಕೆ ಡ್ರಾಯಿಂಗ್ ನಡೆಯುತ್ತದೆ.

(1) ಇದರ ಮೂಲಕ ಬಡ್ಡಿ ಇಲ್ಲದೆ ಸಾಲ ಕೊಡಲಾಗುವುದು.

(2) ಸುಲಭವಾದ ದೀರ್ಘ ಕಂತುಗಳು ದೊರೆಯುವವು.

(3) ಸರ್ವರೂ ಆ ತಾರೀಖಿನೊಳಗೆ ಡ್ರಾಯಿಂಗಿಗೆ ಅರ್ಹತೆ ಪಡೆಯಬೇಕಾಗಿದೆ.

(4) ದೇಶ ಸೇವೆಗೂ, ಈಶ ಸೇವೆಗೂ ಒಳ್ಳೆಯ ಅನುಕೂಲ.

ಟಿ. ಎ. ಕುಪ್ಪುಸ್ವಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್ಸ್,
ಮಡಿಕೇರಿ.

52—5

Printed & published by P. I Belliappa at 'Kodagu' Press, Merca[ra] for 'Kodagu Ltd,

If not claimed please return to
KODAGU OFFICE MERCARA.

ಕೊಡಗು.

ಸ್ವೇನ ಘಟಕದಲ್ಲಿಯು ಐದ್ಯಾ ಜೀ ಪ್ರಯತ್ನಶಾ || ಚರ್ಮಮತ್ಯನ ದೇಶಾನಾಂ ಸುಸ್ಥಿರಾ ರಾಷ್ಟ್ರ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಸಂದ್ಯಂದ ಬಿ. ಚೆಲ್ವ

ಪುಟ ೭] ಮಡಿಕೇರಿ, ಸ್ಗ ೧೯೨೮ನೇ ಇಸವಿ ಜನವರಿ ತಾರೀಕು ೨೩ ನೇ ಶುಕ್ರವಾರ [ಸಂಚಿಕೆ ೪೧

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35 -
Pendant Lamp	,,	37/8/-
Chandelier Lamp	,,	82 -

The Coleman Quicklite is Brilliant, clean, simple and safe.

52–8 SPENCER & CO. LTD. Lamp Depot MERCARA.

V. SUBRAMANIA IYER


Manufacturing,

JEWELLER

GOLDSMITH SILVERSMITH & DEALER IN ALL PRECIOUS STONES

Rose Water Sprinkler

Post Box 423,
TRIPLICANE, MADRAS

Catalogue Free
to Boanfide Enquirers

Chased Silver Mirror


Nose-screws Clavers Drops Thodu. Brooch

Manufacture of
HIGH CLASS
GEMSET JEWELS.
a speciality

The special features
of my productions are —
1 Best QUALITY
2 Latest novel designs
3 Promptest execution
4 Neat & artistic finish
5 Most moderate prices

GOLD
or
SILVERWARE
of all descriptions
neatly executed

52–28



Before buying any Arms & Ammunition please refer our Reduced NETT PRICED current Catalogue of GUNS RIFLES, REVOLVERS, AUTOMATIC PISTOLS, AMMUNITION, & Shooting Requisites, just out

CATALOGUE of 1927–28 on application.

The Bombay Armoury.

331, Abdul Rehman Street,

Bombay, 3.

ರೋಗ

ಎ ಗ್ಯ ವಿ ಕ್ ಸ್ಟ ರ್

ಮಲೇರಿಯಾ ಇನ್‌ಫ್ಲುಯೆಂಜಾ ಸಂಸರ್ಗ ಜ್ವರ ಅವಿರ್ಭವಗಳು ವೇಳೆ ಇದನ್ನು ಉಪಯೋಗಿಸಿ ಇದರಿಂದ ಮಲ ಶುದ್ಧಿಯಾಗಿ ಜ್ವರವು ಒಂದು ದಿವಸದಲ್ಲಿ ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪ ಟಪ್ಪಾಲು ವೆಚ್ಚ ಬೇರೆ

ಸಾ ರ ಸಾ ಪ ರಿ ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಪಡಿಸ ಪ್ರಕೃತಿ ಇದು ಮಾತ್ರಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ ೧—೦—೦ ಟಪ್ಪಾಲು ವೆಚ್ಚ ಬೇರೆ

ಕರ್ನಾಟಕ ಬ್ರದರ್ಸ್

ದುಬಾಷ ಲೇನ್

12–11

ಗಿರಗಾಂವ, ಮುಂಬಾಯಿ

ಕೊಡಗು.

ಸನ್ ೧೯೨೮ನೇ ಇಸವಿ ಮಾರ್ಚಿ
ತಾ. ೨೩ನೇ ಶುಕ್ರವಾರ.

ಹಿಂದೂ ಮುಸಲ್ಮಾನ್ ಅನ್ಯೋನ್ಯತೆ.

ಒಟ್ಟು ಹಿಂದುಸ್ಥಾನದಲ್ಲಿ ಹಿಂದೂ ಮುಸಲ್ಮಾನರೊಳಗ ವೈಮನಸ್ಯವು ಬೆಳೆಯುತ್ತಿದ್ದ ಸಮಯದಲ್ಲೇ ಮಡಿಕೇರಿಯಲ್ಲಿ ನಡೆದ ಕಳೆದ ದಸರಾ ಮೆರವಣಿಗೆಯಲ್ಲಿ ಹಿಂದೂ ಮುಸಲ್ಮಾನರೊಳಗೆ ತಕರಾರುಗಳು ಬಂದಿದ್ದವು. ಮಸೀದಿ ಮುಂದುಗಡೆ ವಾದ್ಯ ನಿಲ್ಲಿಸಬೇಕೆಂದು ಮಾಮೂಲಿದೆಯೆಂತ ಮುಸಲ್ಮಾನರು ವಾದಿಸಿದರು. ಬಾಜಾ ಅಂದರೆ ತಮಟೆ ವಾಲಗ ಮುಂತಾದ ವಾದ್ಯಗಳನ್ನು ಎಂದಿನಂತೆಯೇ ನಿಲ್ಲಿಸುತ್ತೇವೆ, ಆದರೆ ಪೂಜೆಗೆ ಸಂಬಂಧಪಟ್ಟ ಸಾಹಿತ್ಯಗಳೊಡನೆ ಭಜನೆಮಾಡುತ್ತಾ ಹೋಗುವ ಮಾಮೂಲಿ ಇದೆ ಅದರಂತೆಯೇ ಮಾಡುತ್ತೇವೆಂತ ಹಿಂದೂಗಳು ವಾದಿಸಿದರು. ಆ ದಿನದ ಮೆರವಣಿಗೆಯನ್ನು ಬಹಳ ಹೊತ್ತಿನಿಂದ ನಿಲ್ಲಿಸಿ ಅಂಬುತಕ್ಕೀ(?)ಗಾಗಿ ಮುಸಲ್ಮಾನರ ಮೇಲೆ ಕ್ರಿಮಿನಲ್ ಕೇಸು ನಡೆಯುತ್ತಿದೆ. ಈ ವರ್ಷ ಇನ್ನು ಮುಂದೆ ಇಂಥಾ ತಕರಾರುಗಳು ಬಾರದಂತೆ ತೀರಿಸಿ ಕೊಡಬೇಕೆಂತ ಮುಸಲ್ಮಾನ್ ಮುಂದಾಳುಗಳು ಅಧಿಕಾರಿಗಳಿಗೆ ಬರಕೊಂಡರು. ಅಧಿಕಾರಿಗಳು ತಕರಾರುಗಳನ್ನು ತೀರಿಸಲು ಅನೇಕ ಸಾರಿ ಉಭಯ ಮತಸ್ಥರನ್ನೂ ಸಭೆ ಸೇರಿಸಿ ಪಂಚಾಯಿತಿ ನಡಸಿದರು. ಅಧಿಕಾರಿಗಳ ಮುಂದೆ ಅಷ್ಟು ತೀರ್ಮಾನವಾಗದಿದ್ದಾಗ್ಯೂ, ಈಗ ಉಭಯ ಮತಸ್ಥರೂ ರಾಜಿಯಿಂದ ಒಪ್ಪಂದಕ್ಕೆ ಬಂದಿರುತ್ತಾರೆಂತ ತಿಳಿಯುತ್ತೇವೆ. ಮುಂದೆ ಕಲಹಗಳು ಬಾರದಂತೆ ಸ್ನೇಹದಿಂದ ತೀರ್ಮಾನವಾದದ್ದು ಸರ್ವರಿಗೂ ಸಂತೋಷಕರ.

ಮಸೀದಿ ಮುಂದೆ ಬಾಜಿ ಬಂದ ಹಾಡಬಹುದು, ಆದರೆ ತಂಬೂರಿ, ಕೊಳಲು ಮುಂತಾದ ಸಾಹಿತ್ಯಗಳನ್ನು ಉಪಯೋಗಿಸಕೂಡದು. ಹಿಂದು ದೇವಾಲಯಗಳ ಮುಂದ ಮುಸಲ್ಮಾನರೂ ಹಾಗೆಯೇ ಮರ್ಯಾದೆ ಪಾಲಿಸಬೇಕು ಎಂಬದೇ ರಾಜಿ ತೀರ್ಮಾನದ ಶರತ್ತೆಂತ ತಿಳಿಯುತ್ತೇವೆ. ಈ ತೀರ್ಮಾನದಿಂದ ಉಭಯತ್ರರ ಗೌರವಕ್ಕೂ ಹಾನಿಯಿಲ್ಲ. ದೇವರ ನಾಮವನ್ನು ಹೇಳುವ ಹಿಂದೂಗಳ ಹಕ್ಕನ್ನೂ, ಮಸೀದಿಯಲ್ಲಿ ಪ್ರಾರ್ಥನೆಯಲ್ಲಿರುವ ಮುಸಲ್ಮಾನರ ಮನಸ್ಸನ್ನು ವಾದ್ಯಗಳ ಗದ್ದಲದಿಂದ ಕದಲಿಸಬಾರದೆಂಬ ಮುಸಲ್ಮಾನರ ಹಕ್ಕನ್ನೂ ಅನ್ಯೋನ್ಯ ಗೌರವಿಸಿದಂತಾಯಿತು. ದೇವರ ಪ್ರಾರ್ಥನೆಗಾಗಿಯೇ ಜಗಳವಾಡುವದು ನಾಚಿಕೆಗೇಡಾಗಿತ್ತು. ಈಗ ದೇವರ ಪ್ರಾರ್ಥನೆಯ ಸ್ವಾತಂತ್ರ್ಯವನ್ನು ಮನ್ನಿಸಲು ಒಪ್ಪಿರುವದು ಶ್ಲಾಘನೀಯವಾಗಿದೆ.

ಈ ತಕರಾರು ಹೊಸದಾಗಿಗುವಂತೆ ಕಾಣುವದಿಲ್ಲ. 1911ನೇ ಇಸವಿಯಲ್ಲೇ ಇದೇ ಭಜನೆಯ ಸಂಬಂಧವಾಗಿ ಉಭಯ ಮತಸ್ಥರೊಳಗೆ ತಕರಾರು ನಡೆದು ಅಧಿಕಾರಿಗಳಿಗ ಅರ್ಜಿಕೊಟ್ಟು ಅವರ ಮುಂದೆ ಎರಡು ಮತದ ಕೆಲವು ಮುಂದಾಳುಗಳು ರಾಜಿ ಮುಚ್ಚಳಿಕ ಕೊಟ್ಟಿದ್ದರು. ಅದರ ಶರತ್ತುಗಳನ್ನೇ ಸ್ವಲ್ಪ ವ್ಯತ್ಯಾಸದಿಂದ ಈಗಲೂ ಒಪ್ಪಿರುವದಾಗಿದೆ. ಹೀಗ ಮಾಡಿಕೊಂಡ ತೀರ್ಮಾನವು ಶಾಶ್ವತವಾಗಿರಲೆಂತ ಆಶಿಸುತ್ತೇವೆ.

ಈ ಸಂಬಂಧ ಕಳೆದ ಕಾಂಗ್ರೆಸ್ಸಿನಲ್ಲಿ ಆದ ತೀರ್ಮಾನವನ್ನು ನೆನೆಸಿಕೊಳ್ಳಬೇಕಾಗಿದೆ. 'ಮಸೀದಿ ಮುಂದೆ ಹಿಂದೂಗಳು ವಾದ್ಯಗಳೊಡನೆ ಹೋಗಲು ಹಕ್ಕಿದೆಯೆಂತ ಮುಸಲ್ಮಾನರು ಒಪ್ಪಿಕೊಳ್ಳಬೇಕು. ಆದರೆ ಮುಸಲ್ಮಾನ್ ಬಂಧುಗಳ ಧಾರ್ಮಿಕ ಮನೋಭಾವವನ್ನು ಗೌರವಿಸಿ ಹಿಂದುಗಳು ಮಸೀದಿ ಮುಂದೆ ವಾದ್ಯ ನಿಲ್ಲಿಸಬೇಕೆಂತ ಕಾಂಗ್ರೆಸ್ಸಿನಲ್ಲಿ ಇರುವ ಹಿಂದೂಗಳು ಸಮುದಾಯದ ಹಿಂದೂಗಳನ್ನು ಕೇಳಿಕೊಳ್ಳಬೇಕು' ನಮ್ಮ ದೇಶದಲ್ಲಿ ಕಲಹಕ್ಕೆ ಕಾರಣವಿರುವ ಈ ಮಸೀದಿ ಮುಂದಿನ ವಾದ್ಯದ ಸಂಬಂಧವಾಗಿ ಕಾಂಗ್ರೆಸ್ಸಿನ ತೀರ್ಮಾನವು ಇದೇ ಆಗಿದೆ. ಸಮುದಾಯದ ಜನರಿಗೆ ಈ ತೀರ್ಮಾನವು ಒಪ್ಪಿಗೆಯಾಗಲು ಇನ್ನೂ ತುಂಬಾ ಸಮಯಬೇಕು. ಆದರೆ ಈ ಕಾಂಗ್ರೆಸ್ ನಿರ್ಣಯವನ್ನು ಜಾರಿಗ ತರಲು ಅವಶ್ಯವಿರುವ ಮನೋಭಾವಗಳನ್ನುಂಟುಮಾಡುವದು ಮುಂದಾಳುಗಳ ಕರ್ತವ್ಯವಾಗಿದೆ. ಮುಸಲ್ಮಾನ್ ಸಹೋದರರು ಹಿಂದೂಗಳಿಗೆ ಪಬ್ಲಿಕ್ ರಸ್ತೆಯನ್ನು ನ್ಯಾಯರೀತಿಯಿಂದ ಉಪಯೋಗಿಸುವ ಹಕ್ಕಿದೆಯೆಂತ ಒಪ್ಪಿಕೊಳ್ಳಬೇಕು. ಇದರಿಂದ ತಮ್ಮ ಧರ್ಮಕ್ಕ ಏನೂ ಹಾನಿಬರುವದಿಲ್ಲವೆಂತ ಮುಸಲ್ಮಾನ್ ಮುಖಂಡರಾದ ಮೌಲಾನಾ ಮಹಮ್ಮದಾಲಿ ಮುಂತಾದವರೇ ಒಪ್ಪಿರುತ್ತಾರೆ. ಮುಸಲ್ಮಾನ್ ಬಂಧುಗಳು ಈ ದಾರಾಳ ಬುದ್ಧಿ ತೋರಿಸಿದೊಡನೆಯೇ ಹಿಂದೂ ಮಹನೀಯರು ಮುಸಲ್ಮಾನರ ಅಪೇಕ್ಷೆಯನ್ನು ಮನ್ನಿಸಲು ತಯಾರಾಗಲೇಬೇಕು. ಅವರ ಪ್ರಾರ್ಥನೆಗೆ ಅಡ್ಡಿಯಾಗದಂತೆ ಮಸೀದಿ ಮುಂದಿನ ರಸ್ತೆಯಲ್ಲಿ ಗದ್ದಲಮಾಡದೆ ಹೋಗಬೇಕು. ಒಂದು ಕುಟುಂಬದ ಆಡಳಿತ ನಡಿಸುವಾಗ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯು ಬೇರೆಯವರ ಅಭಿಪ್ರಾಯಗಳಿಗ ಒಪ್ಪಿರಾಗಿ ತಮ್ಮ ಅಭಿಪ್ರಾಯಗಳನ್ನು ಕೆಲವು ಮಟ್ಟಿಗ ಬಿಟ್ಟುಕೊಡಬೇಕಾಗುವದು ಸ್ವಾಭಾವಿಕವಾಗಿದೆ. ಭರತಖಂಡದಲ್ಲಿ ಈ ಎರಡು ಮುಖ್ಯ ಮತದವರೂ ಇತರ ಮತಗಳ ಅನುಯಾಯಿಗಳೊಡನೆ ಒಂದು ಕುಟುಂಬದವರಂತೆ ನಿರಂತರವೂ ವಾಸಿಸುತ್ತಿರಬೇಕಾದದ್ದು ಅವಶ್ಯವಾಗಿರುವದರಿಂದ ಅನ್ಯೋನ್ಯ ಹಕ್ಕು ಮತ್ತು ಮನೋಭಾವಗಳನ್ನು ಗೌರವಿಸಬೇಕಾದದ್ದು ಅತ್ಯಂತ ಅಗತ್ಯವಾಗಿದೆ.

ಡಿಸ್ಟ್ರಿಕ್ಟ್‌ಬೋರ್ಡೂ ಟೊಳ್ಳಾಯಿತೇ?

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು ಬರೇ ಸಿಫಾರಸ್ಸಿನ ಕೌನ್ಸಿಲೆಂತಲೂ, ಅದರ ಸಿಫಾರಸ್ಸುಗಳು ವಾಡಿಕೆಯಾಗಿ ಸರ್ವ ಅಧಿಕಾರವುಳ್ಳ ಚೀಫ್ ಕಮಿಷನರವರಿಗೆ ರುಚಿಸುವದಿಲ್ಲವೆಂತಲೂ, ಆದಕಾರಣ ಕೌನ್ಸಿಲಿನ ತೀರ್ಮಾನಗಳಲ್ಲಿ ಹೆಚ್ಚು ಕಮ್ಮಿ ಎಲ್ಲವೂ ಅವರಿಂದ ತಿರಸ್ಕರಿಸಲ್ಪಡುತ್ತಿರುವದರಿಂದ ಕೌನ್ಸಿಲಿನ ಟೊಳ್ಳು ಸ್ವಭಾವ ದೇಶೀಯರಿಗೆಲ್ಲಾ ಚೆನ್ನಾಗಿ ಗೊತ್ತಾಗಿದೆ. ಸಿಫಾರಸ್ಸು ಮಾಡುವದಲ್ಲದೆ ಇನ್ಯಾವ ತೀರ್ಮಾನದ ಹಕ್ಕುಗಳು ಇಲ್ಲದ್ದರಿಂದಲೇ ಕೌನ್ಸಿಲಿನ ಗತಿ ಹೀಗಾಯಿತೆಂದು ಜನರು ತಿಳಿದುಕೊಂಡಿರಬಹುದು. ಆದರೆ ಅದರ ಆದಾಯ ವೆಚ್ಚದಲ್ಲಿಯೂ, ಕಾರ್ಯ ಕ್ರಮದಲ್ಲಿಯೂ ಸಂಪೂರ್ಣ ಹಕ್ಕು ಕೊಡಲ್ಪಟ್ಟಿರುವ ಸ್ಥಳೀಯ ಸ್ವರಾಜ್ಯ ಸಂಸ್ಥೆಯಾದ ಡಿಸ್ಟ್ರಿಕ್ಟ್ ಬೋರ್ಡಿನ ಗತಿ ಏನೆಂದು ಸ್ವಲ್ಪ ವಿಚಾರಿಸುವ.

ಪಬ್ಲಿಕ್ ರಸ್ತೆಯಲ್ಲಾಗಲೀ, ಅದರ ಬಾಜಿನಲ್ಲಾಗಲೀ ಕಾವಲುಗಾರನಿಲ್ಲದೆ ದನಕರುಗಳು ಮೇಯುತ್ತಾ ಯಾ ತಿರುಗಾಡುತ್ತಾ ಇದ್ದರೆ ಅವುಗಳನ್ನು ದೊಡ್ಡಿಗ ಸೇರಿಸುವದು ಮಾತ್ರವಲ್ಲದೆ ಅವುಗಳ ಮಾಲೀಕರನ್ನು ಪ್ರಾಸಿಕ್ಯೂಟ್ ಮಾಡಬಹುದೆಂಬ ಡಿಸ್ಟ್ರಿಕ್ಟ್‌ಬೋರ್ಡಿನ ನಿಬಂಧನೆಯು ಜನರಿಗ ತುಂಬಾ ತೊಂದರೆಯನ್ನುಂಟುಮಾಡುತ್ತಿದೆ ಎಂಬ ಕೂಗು ಕೆಲವು ವರ್ಷಗಳ ಹಿಂದೆಯೇ ಹುಟ್ಟಿದೆ. ಡಿಸ್ಟ್ರಿಕ್ಟ್ ಬೋರ್ಡಿನ ರೂಲುಗಳಿಂದ ಜನ ಸಾಮಾನ್ಯಕ್ಕ ಉಂಟಾಗಿರುವ ಕಷ್ಟಗಳ ಪೈಕಿ ಇದೊಂದು ಬಹು ಮುಖ್ಯವಾದದ್ದು. ಮಾಲೀಕರನ್ನು ಪ್ರಾಸಿಕ್ಯೂಟ್ ಮಾಡುವ ರೂಲನ್ನು ರದ್ದುಮಾಡಬೇಕೆಂದು ಇದಕ್ಕಿಂತ ಮುಂಚಿನ ಡಿ. ಬೋರ್ಡಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಬಹಳ ಪ್ರಯತ್ನಪಟ್ಟರು. ಆದರೆ ಆಗ ಅವರಿಗೆ ಬಹುಮತವಿಲ್ಲದ್ದರಿಂದ ಅವರ ಪ್ರಯತ್ನವು ಸಫಲವಾಗಲಿಲ್ಲ. ಜನರ ಪ್ರತಿನಿಧಿಗಳ ಬಹುಮತವಿರುವ ಈಗಿನ ಬೋರ್ಡಿನಲ್ಲಾದರೂ ಈ ಉಪದ್ರದ ನಿಬಂಧನೆಯು ವಜಾಮಾಡಲ್ಪಟ್ಟೀತೆಂದು ಜನರು ನಂಬಿಕೊಂಡಿದ್ದರು. ಬೋರ್ಡಿನವರ ಮಟ್ಟಿಗೇನೋ ಜನರ ವಿಶ್ವಾಸವು ನೆರವೇರಿತು. ಹಿಂದೆ ನಡೆದ ಒಂದು ಮೀಟಿಂಗಿನಲ್ಲಿ ಮಾಲೀಕರನ್ನು ಪ್ರಾಸಿಕ್ಯೂಟ್ ಮಾಡುವ ರೂಲನ್ನು ರದ್ದು ಮಾಡತಕ್ಕದೆಂದು ತೀರ್ಮಾನ ಮಾಡಿದರು. ಆದರೆ ಚೀಫ್ ಕಮಿಷನರ ಏಕಪ್ರಭುತ್ವವು ಜನರಿಗೂ ಬೋರ್ಡಿಗೂ ಮಧ್ಯೆ ಬಂತು. ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಟ್ಟಿರುವ ಹೆಚ್ಚಿನ ಸುಧಾರಣೆಯು ಮೇರೆ ಚೀಫ್ ಕಮಿಷನರು ಆದರ ತೀರ್ಮಾನವನ್ನು ಮಂಜೂರು ಮಾಡಬೇಕಾಗಿತ್ತು. ಬದಲು ಅವರು ಅದನ್ನು ತಿರಸ್ಕರಿಸಿರುವರು. ತಾನು ಸರ್ವಾಧಿಕಾರಿಯೆಂಬುದು ತೋರಿಸಲಿಕ್ಕಾಗಿ ಹೀಗೆ ಮಾಡಿರುವರೋ ಏನೋ? ಈ ನಿಬಂಧನೆಯಿಂದ ಮೋಟಾರು ಇಟ್ಟವರಿಗೆ ಮಾತ್ರ ಸಹಾಯವಾಗುತ್ತದಲ್ಲದೆ ಜನಸಮುದಾಯಕ್ಕೆ ದೊಡ್ಡ ತೊಂದರೆಯೆಂದು ಎಷ್ಟೋ ಸಾರಿ ಬರೆಯಲಾಗಿದೆ. ಸಾಮಾನ್ಯ ಜನರಿಗೆ ಉಪಕಾರವಾಗುವ ಇಂಥಾ ಮುಖ್ಯ ಸಂಗತಿಯಲ್ಲಿ ಚೀಫ್ ಕಮಿಷನರ ವರ್ತನೆಯು ಎಂದೂ ನ್ಯಾಯವಾದದ್ದೂ ಅಲ್ಲ, ತೃಪ್ತಿಕರವಾದದ್ದೂ ಅಲ್ಲ. ಇದರಿಂದ ಜನರನ್ನು ಸ್ವರಾಜ್ಯಕ್ಕೆ ತರಬೇತು ಮಾಡಲು ಜನಪ್ರತಿನಿಧಿ ಮೆಂಬರುಗಳ ಬಹುಮತವಿರುವ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಿಗೆ ತುಂಬಾ ಅಧಿಕಾರ ಕೊಡಲಾಗಿದೆ ಎಂಬುದು ಸುಳ್ಳಾಗಲಿಲ್ಲವೇ? ಡಿಸ್ಟ್ರಿಕ್ಟ್‌ಬೋರ್ಡಿನ ಟೊಳ್ಳು ಸ್ವಭಾವವನ್ನು ಇದು ಬಯಲು ಪಡಿಸಿದಂತಾಗಲಿಲ್ಲವೇ?

ಕೊಡಗು ಯುವಕ ಸಂಘ.

ಯಾವ ಕೆಲಸಕ್ಕೇ ಆಗಲಿ ಉತ್ಸಾಹ ತುಂಬಾ ಇರುವ ಯುವಕರನ್ನು ಒಟ್ಟು ಗೂಡಿಸಿ ಅವರ ದೇಹ ಮತ್ತು ಮಾನಸಿಕ ಶಕ್ತಿಗಳನ್ನು ಕ್ರಮಪಡಿಸಿ ಅಭಿವೃದ್ಧಿಗೊಳಿಸಿದರೆ ದೇಶದಲ್ಲಿ ಯಾವ ತರಹದ ಕೆಲಸಗಳನ್ನಾದರೂ ಮಾಡಲು ಸುಲಭವಾಗುವದು. ದೇಶದ ಮುಂದಿನ ಜನಾಂಗವಾದ ಈಗಿನ ಯುವಕರ ಅಭಿವೃದ್ಧಿಯನ್ನು ಬಯಸುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಇದರ ಪ್ರಾಮುಖ್ಯತೆಯನ್ನು ಅರಿತೇ ಪ್ರಸಿದ್ಧ ಪುರುಷರಾದ ಸಾಧುವಾಸ್ವಾನಿಯವರು ಭಾರತ ಯುವಕ ಸಂಘವನ್ನು ಸ್ಥಾಪಿಸಿದ್ದಾಗಿದೆ. ಅವರು ಈಗ ಹಿಂದೂ ದೇಶದ ಹಲವು ಭಾಗಗಳನ್ನು ಸುತ್ತಿ ಅಲ್ಲಲ್ಲಿ ಈ ಸಂಘದ ಶಾಖೆಗಳನ್ನು ತೆರೆಯಲು ಯುವಕರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದಾರೆ. ಈ ಮಹನೀಯರ ಬೋಧನೆಯನ್ನು ಕೇಳಿದ ಮಂಗಳೂರಿನಲ್ಲಿರುವ ಕೊಡಗು ಯುವಕರಿಗೆ ನಮ್ಮ ದೇಶದಲ್ಲಿಯೂ ಈ ಸಂಘದ ಶಾಖೆಯೊಂದನ್ನು ಸ್ಥಾಪಿಸಬೇಕೆಂಬ ಉತ್ಸಾಹ ಹುಟ್ಟಿದ್ದು ಶ್ಲಾಘನೀಯವಾದ ಸಂಗತಿ. ಈ ಸಂಬಂಧ ಕೊಡಗಿನ ಯುವಕರ ಒಂದು ಸಮ್ಮೇಳನವನ್ನು ವಿದ್ಯಾಭಿಮಾನಿ ಸಂಘದ ಮಹಾಸಭೆಯ ಸಮಯದಲ್ಲಿ ಸೋಮವಾರಪೇಟೆಯಲ್ಲಿ ನಡಿಸಬೇಕೆಂದು ಅವರು ಯುವಕ ಸಮುದಾಯಕ್ಕ ಮಾಡಿರುವ ವಿನಂತಿಯನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು. ಈ ದೇಶದ ಯುವಕರು ಈ ವಿನಂತಿಯ ಸ್ವಾ[?]ನೆರವೇರಿಸಿಕೊಡುವರೆಂದು ನಾವೂ ಆಶಿಸುತ್ತೇವೆ. ವಿದ್ಯಾಭಿಮಾನಿ ಸಂಘದವರೂ, ದೇಶದ ಹಿತಚಿಂತಕರೂ ನಮ್ಮ ಯುವಕರ ಈ ಯೋಗ್ಯವಾದ ಪ್ರಯತ್ನಕ್ಕ ತುಂಬಾ ಉತ್ತೇಜನ ಕೊಡುವರಾಗಿ ನಂಬುತ್ತೇವೆ.

ದೇಶದ ಮಹನೀಯರಲ್ಲಿ ವಿಜ್ಞಾಪನೆ

ಮಹನೀಯರೇ,

ವಿದ್ಯಾಭಿಮಾನಿ ಸಂಘದ ಈ ವರ್ಷದ ಮಹಾಸಭೆಯು ಏಪ್ರಿಲ್ ತಾ 21 ಮತ್ತು 22ರಲ್ಲಿ (ಈ ಸಭೆಯ ಅಧ್ಯಕ್ಷ[?]ರವರ ಅಪೇಕ್ಷೆ ಮೇರೆ ಈ ತಾರೀಕುಗಳನ್ನು 28 ಮತ್ತು 29ಕ್ಕೆ ಬದಲಾಯಿಸುವ ಸಂಭವವಿದೆ) ಸೋಮವಾರಪೇಟೆಯಲ್ಲಿ ನಡಸಲು ನಿಶ್ಚೈಸಿರುವುದು ನಿಮಗೆಲ್ಲರಿಗೂ ತಿಳಿದಿರಬಹುದು. ಮದ್ರಾಸಿನ ಪ್ರಸಿದ್ಧ ಕೌನ್ಸಿಲು ಮೆಂಬರಾದ ಶ್ರೀಯುತ ಸತ್ಯಮೂರ್ತಿಯವರು ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವದು ಸಂತೋಷಕರವಾದ ವಿಷಯವೆ. ಅಂಥಾ ಮಹನೀಯರು ಅಧ್ಯಕ್ಷರಾಗಿರುವದರಿಂದ ಮಹಾಸಭೆಗೆ ದೇಶದ ಎಲ್ಲಾ ಭಾಗಗಳಿಂದಲೂ ತುಂಬಾ ಜನರು ನೆರೆದು ಚರ್ಚೆಯಲ್ಲಿ ಭಾಗಿಗಳಾಗಬೇಕಾಗಿ ಕೋರುತ್ತೇನೆ.

ಮಹಾಸಭೆಯ ಚರ್ಚೆಯಲ್ಲಿ ಭಾಗಿಗಳಾಗಬೇಕಾದರೆ ಮೊದಲು ಸಂಘಕ್ಕ ವಾರ್ಷಿಕ ಚಂದಾ ಒಂದು ರೂಪಾಯಿ ಕೊಟ್ಟು ಮೆಂಬರನಾಗಿ ಸೇರಬೇಕಾಗಿದೆ. ಹಳೇ ಮೆಂಬರನಾಗಿದ್ದರೆ 1927 ಮತ್ತು 1928 ಈ ಎರಡು ವರ್ಷಗಳ ಚಂದಾಹಣ ಪಾವತಿಮಾಡದೆ ಇದ್ದಲ್ಲಿ ರೂಲು ಪ್ರಕಾರ ಅವರಿಗೆ ಓಟಿನ ಹಕ್ಕಿರುವದಿಲ್ಲ. ಮಹಾಸಭೆಗೆ ಮುಖ್ಯವಾಗಿ ಹೊರಗಿನಿಂದ ಪ್ರಾಮುಖ್ಯ ಮುಂದಾಳುಗಳು ಅಧ್ಯಕ್ಷರಾಗಿ ಒರುವಾಗ್ಯೆ ಅವರ ಭಾಷಣವನ್ನು ಕೇಳಲು ಹಲವರು ಪ್ರೇಕ್ಷಕರಾಗಿ ಬರುತ್ತಾರೆ. ಠರಾವುಗಳ ಚರ್ಚೆಯ ಮತ್ತು ಓಟಿನ ಸಮಯದಲ್ಲಿ ಚಂದಾಕೊಟ್ಟಿರುವ ಮೆಂಬರುಗಳನ್ನು ಮೆಂಬರುಗಳಲ್ಲದ ಬರೇ ಪ್ರೇಕ್ಷಕರನ್ನೂ ಪ್ರತ್ಯೇಕಿಸುವದು ಕಷ್ಟವಾಗುವದರಿಂದ ಕಳೆದ ವರ್ಷದ ಅಮ್ಮತ್ತಿ ಕಾನ್ಫರೆನ್ಸಿನಲ್ಲಿ ಓಟಿನ ಹಕ್ಕಿರುವ ಮೆಂಬರುಗಳಿಗೆ ಮೆಂಬರುಗಳ ಟಿಕೇಟನ್ನೂ, ಸ್ವಾಗತ ಕಮಿಟಿಯ ಮೆಂಬರುಗಳಿಗೆ ಆ ಹೆಸರಿನ ಟಿಕೇಟನ್ನೂ ಕೊಟ್ಟು ಅವರವರಿಗ ಪ್ರತ್ಯೇಕವಾಗಿ ಏರ್ಪಡಿಸಿಟ್ಟಿದ್ದ ಸ್ಥಳಗಳಲ್ಲಿ ಕೂರಿಸಲಾಗಿತ್ತು. ಪ್ರೇಕ್ಷಕರಿಗೆ ಸ್ವಲ್ಪ ದೂರದ ಸ್ಥಳವು ಇಡಲಾಗಿತ್ತು. ಇದರಿಂದ ಓಟಿನ ...

(೩ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೨೮ನೇ ಪ್ರಕರಣ

ಕಸ್ತೂರಿಬಾಯಿಯ ಸ್ಥೈರ್ಯ

ಕಸ್ತೂರಿಬಾಯಿಯು ಜೀವನದಲ್ಲಿ ಆಕೆಯ ಪ್ರಾಣಕ್ಕೆ ಕ್ರೂರಬಾಧ್ಯದಿಂದ ಮೂರುಸಲ ಗಂಡಾಂತರ ಒದಗಿತ್ತು. ಮೂರು ಸಲವೂ ಆಕೆಗೆ ಮನೆಯ ಮದ್ದಿನಿಂದಲೇ ಗುಣವಾಯಿತು. ಇವುಗಳಲ್ಲಿ ಮೊದಲನೆಯದು ಸಂಭವಿಸಿದ ಸಮಯದಲ್ಲಿ ಸತ್ಯಾಗ್ರಹವು ನಡೆಯುತ್ತಿದ್ದಿತು. ಅಥವಾ ಪ್ರಾರಂಭವಾಗುವುದರಲ್ಲಿದ್ದಿತು. ಆಕೆಗೆ ಬಾರಿಬಾರಿಗೆ ರಕ್ತಸ್ರಾವವಾಗುತ್ತಿದ್ದಿತು. ವೈದ್ಯಮಿತ್ರರೊಬ್ಬರು ಆಕೆಗೆ ಶಸ್ತ್ರಚಿಕಿತ್ಸೆ ಮಾಡಿಸಬೇಕೆಂದು ಸಲಹೆಯಿತ್ತರು. ಕಸ್ತೂರಿಬಾಯಿಯು ಸ್ವಲ್ಪ ಅನುಮಾನಪಟ್ಟುಕೊಂಡು ಆ ಮೇಲೆ ಇದಕ್ಕೆ ಒಪ್ಪಿದಳು. ಆಕೆಯ ಶರೀರವು ಬಹು ಕ್ಷೀಣವಾಗಿದ್ದುದರಿಂದ ವೈದ್ಯರು ಆಕೆಗೆ ಕ್ಲೋರೋಫಾರ್ಮನ್ನು (ಎಚ್ಚರ ತಪ್ಪಿಸುವ ಔಷಧ) ಕೊಡದೆಯೇ ಶಸ್ತ್ರಪ್ರಯೋಗವನ್ನು ಮಾಡಬೇಕಾಯಿತು. ಪ್ರಯೋಗವೇನೋ ನಿರ್ವಿಘ್ನವಾಗಿ ನೆರವೇರಿತು. ಆದರೆ ಆಕೆಯು ಬಹು ನೋವನ್ನು ಸಹಿಸಬೇಕಾಯಿತು. ಕಸ್ತೂರಿಬಾಯಿಯು ಇದನ್ನೆಲ್ಲಾ ಅಚ್ಚರಿಗೊಳಿಸುವ ಸ್ಥೈರ್ಯದಿಂದ ಸಹಿಸಿದಳು. ಆಕೆಗೆ ಶುಶ್ರೂಷೆಗೈಯುತ್ತಿದ್ದ ವೈದ್ಯರೂ ಅವರ ಹೆಂಡತಿಯೂ ಆಕೆಯನ್ನು ಬಹು ಎಚ್ಚರಿಕೆಯಿಂದ ನೋಡಿಕೊಂಡರು. ಇದು ನಡೆದುದು ದರಬನಿನಲ್ಲಿ. ವೈದ್ಯರು ನನಗೆ ಜೋಹಾನ್ಸ್‌ಬರ್ಗಿಗೆ ಹೋಗಬಹುದೆಂದೂ, ರೋಗಿಯ ವಿಚಾರವಾಗಿ ಸ್ವಲ್ಪವೂ ಚಿಂತಿಸಲು ಕಾರಣವಿಲ್ಲವೆಂದು ಹೇಳಿದರು.

ಆದರೆ ಕೆಲವು ದಿವಸಗಳಲ್ಲಿಯೇ ಕಸ್ತೂರಿಬಾಯಿಯ ದೇಹಸ್ಥಿತಿಯು ಕೆಟ್ಟದಾಗಿರುವುದೆಂದೂ ಆಕೆಗೆ ಹಾಸಿಗೆಯಲ್ಲಿ ಕುಳಿತುಕೊಳ್ಳುವಷ್ಟು ತ್ರಾಣವು ಕೂಡ ಇಲ್ಲವೆಂದೂ ಒಂದು ಸಲ ಆಕೆಯು ಎಚ್ಚರ ತಪ್ಪಿದ್ದಳೆಂದೂ ನನಗೆ ಪತ್ರ ಬಂದಿತು. ನನ್ನ ಅನುಮತಿಯಿಲ್ಲದೆ ಆಕೆಗೆ ಮದ್ಯವನ್ನಾಗಲಿ ಮಾಂಸವನ್ನಾಗಲಿ ಕೊಡತಕ್ಕದ್ದಲ್ಲವೆಂದು ವೈದ್ಯರಿಗೆ ತಿಳಿದಿದ್ದಿತು. ಆದುದರಿಂದ ಅವರು ಕಸ್ತೂರಿಬಾಯಿಗೆ ಬೀಫ್ ಟೀ (ಗೋಮಾಂಸದಿಂದ ಮಾಡಿದ ಚಹಾ) ಯನ್ನು ಕೊಡಲು ನನ್ನ ಅಪ್ಪಣೆಯನ್ನು ಜೊಹಾನ್ಸ್‌ಬರ್ಗಿನಿಂದ ಟೆಲಿಫೋನ್ ಮೂಲಕ ಕೇಳಿದರು. ನಾನು ಹಾಗೆ ಅಪ್ಪಣೆಕೊಡಲಾರೆನೆಂದೂ ಆದರೆ ಆಕೆಯು ತನ್ನ ಇಷ್ಟವನ್ನು ತಿಳಿಸುವ ಸ್ಥಿತಿಯಲ್ಲಿದ್ದರೆ ಆಕೆಯನ್ನು ಕೇಳಬಹುದೆಂದೂ, ಆಕೆಯು ತನ್ನಿಷ್ಟದಂತೆ ನಡೆಯಲು ಸ್ವತಂತ್ರಳೆಂದೂ ನಾನು ಉತ್ತರ ಕಳುಹಿಸಿದೆನು.

'ಈ ವಿಷಯಗಳಲ್ಲಿ ನಾನು ರೋಗಿಯ ಇಷ್ಟದಂತೆ ನಡೆಯಲು ಒಪ್ಪಲಾರೆನು. ನೀವೇ ಬರಬೇಕು, ನನಗೆ ಸ್ವಾತಂತ್ರ್ಯಕೊಡದಿದ್ದರೆ ನಿಮ್ಮ ಹೆಂಡತಿಯ ಪ್ರಾಣಕ್ಕೆ ನಾನು ಹೊಣೆಯಾಗುವುದಿಲ್ಲ,' ಎಂದು ವೈದ್ಯರು ಹೇಳಿದರು.

ನಾನು ಆ ದಿನದ ರೈಲಿನಲ್ಲಿಯೇ ದರಬನ್ನಿಗೆ ಹೋಗಿ ವೈದ್ಯರನ್ನು ಕಂಡೆನು. ಅವರು ಶಾಂತರೀತಿಯಿಂದ ಈ ಸಮಾಚಾರವನ್ನು ನನಗೆ ಒಡೆದರು. 'ನಿಮ್ಮನ್ನು 'ಟೆಲಿಫೋನ' ನಲ್ಲಿ ಕೇಳುವ ಹೊತ್ತಿಗೆ ನಾನು ಆಗಲೇ ನಿಮ್ಮ ಹೆಂಡತಿಗೆ ಬೀಫ್ ಟೀ ಯನ್ನು ಕೊಟ್ಟಿದ್ದೆನು.'

'ವೈದ್ಯರೇ, ಇದು ಮೋಸ' ಎಂದೆನು ನಾನು.

'ರೋಗಿಗೆ ವಿವಿಧ ಪಥ್ಯಗಳನ್ನು ನಿಯಮಿಸುವುದರಲ್ಲಿ ಮೋಸವೆಲ್ಲಿಂದ ಬಂದಿತು? ಅಷ್ಟೇಕೆ ಹಾಗೆ ಮಾಡುವುದರಿಂದ ರೋಗಿಗಳನ್ನು ಉಳಿಸುವುದು ನಮ್ಮ ಧರ್ಮ? ಆದರೆ ಅವರನ್ನು ಅಥವಾ ಅವರ ಬಾಂಧವರನ್ನು ಮೋಸಗೊಳಿಸುವುದು ಒಳ್ಳೆಯದೆಂದೇ ನಾವು ವೈದ್ಯರು ಭಾವಿಸುತ್ತೇವೆ' ಎಂದು ವೈದ್ಯರು ದೃಢತೆಯಿಂದ ಹೇಳಿದರು.

ನನಗೆ ಬಹು ಖೇದವಾಯಿತು. ಆದರೂ ನಾನು ಶಾಂತನಾಗಿದ್ದೆನು. ವೈದ್ಯರು ಒಳ್ಳೆಯ ಮನುಷ್ಯರಾಗಿದ್ದುದಲ್ಲದೆ ನನ್ನ ಗೆಳೆಯರಾಗಿಯೂ ಇದ್ದರು. ಅವರೂ ಅವರ ಹೆಂಡತಿಯೂ ನನ್ನ ಮೇಲೆ ಉಪಕಾರದ ಹೊರೆಯನ್ನು ಹೊರಿಸಿದ್ದರು. ಆದರೆ ಅವರ ವೈದ್ಯನೀತಿಗೆ ತಲೆಬಾಗಿಸಲು ನಾನು ಸಿದ್ಧನಾಗಿರಲಿಲ್ಲ.

"ವೈದ್ಯರೇ, ಈಗ ಏನು ಮಾಡಬೇಕೆಂದಿರುವಿರಿ ಹೇಳಿ. ಆಕೆಯು ಇಷ್ಟಪಟ್ಟಲ್ಲಿ ಹೊರತು, ಇಲ್ಲದಿದ್ದರೆ ಅದರಿಂದ ಆಕೆಯು ಸಾವಿಗೆ ಸಿದ್ಧವಾಗಿದ್ದರೂ ಆಕೆಗೆ ಮಾಂಸವನ್ನು ಕೊಡಿಸಲು ನಾನು ಎಂದಿಗೂ ಒಪ್ಪುವುದಿಲ್ಲ."

'ನಿಮ್ಮ ತತ್ವವಿಚಾರಕ್ಕೆ ನನ್ನದೇನೂ ಅಡ್ಡಿಯಿಲ್ಲ. ಇಗೋ ಕೇಳಿ. ನಿಮ್ಮ ಪತ್ನಿಗೆ ನಾನು ವೈದ್ಯನಾಗಿರುವವರೆಗೂ ಆಕೆಗೆ ನನ್ನಿಷ್ಟ ಬಂದುದನ್ನು ಕೊಡಲು ನನಗೆ ಸ್ವಾತಂತ್ರ್ಯವಿರಬೇಕು. ಇದು ನಿಮ್ಮ ಒಪ್ಪಿಗೆಗೆ ಬಾರದಿದ್ದರೆ ನಿಮ್ಮ ಹೆಂಡತಿಯನ್ನು ಕರೆದುಕೊಂಡು ಬೇಗ ಹೋಗಿ. ಇದು ವಿಷಾದಕರವಾದರೂ ನನ್ನ ಮನೆಯಲ್ಲಿಯೇ ಆಕೆಯು ಸಾಯುವುದನ್ನು ನಾನು ನೋಡಲಾರೆನು."

'ಹಾಗಾದರೆ ನಾನು ಈಗಲೇ ಆಕೆಯನ್ನು ಕರೆದುಕೊಂಡು ಹೋಗಬೇಕೋ?"

'ಆಕೆಯನ್ನು ಕರೆದುಕೊಂಡು ಹೋಗಿರೆಂದು ನಾನು ಹೇಳಿದುದು ಯಾವಾಗ? ನನಗೆ ಬೇಕಾದುದು ಇಷ್ಟೇ. ನನ್ನ ಕೈಕಟ್ಟಬೇಡಿ. ಇದಕ್ಕೆ ನೀವು ಒಪ್ಪಿದರೆ ನನ್ನ ಹೆಂಡತಿಯೂ, ನಾನೂ ಆಕೆಗೆ ನಮ್ಮ ಕೈಲಾದುದನ್ನೆಲ್ಲಾ ಮಾಡುತ್ತೇವೆ. ಆಕೆಯ ವಿಚಾರವಾಗಿ ಎಳ್ಳಷ್ಟೂ ಚಿಂತೆಯಿಲ್ಲದೆ ನೀವು ಹೋಗಬಹುದು. ಇಷ್ಟು ಸುಲಭವಾದ ವಿಷಯ ನಿಮಗೆ ತಿಳಿಯದೇ ಹೋದರೆ ನನ್ನ ಮನೆಯಿಂದ ನಿಮ್ಮ ಹೆಂಡತಿಯನ್ನು ಕರೆದುಕೊಂಡು ಹೋಗಿರೆಂದು ನಾನು ನಿಮಗೆ ಹೇಳಬೇಕಾಗುತ್ತದೆ.'

ನನ್ನ ಮಕ್ಕಳಲ್ಲಿ ಒಬ್ಬನು ನನ್ನ ಜೊತೆಗೆ ಇದ್ದನೆಂದು ನನಗೆ ತೋರುತ್ತದೆ. ಅವನೂ ನನ್ನ ಅಭಿಪ್ರಾಯವನ್ನು ಅನುಮೋದಿಸಿ ಕಸ್ತೂರಿಬಾಯಿಗೆ 'ಬೀಫ್ ಟೀ' ಯನ್ನು ಕೊಡಕೂಡದೆಂದು ಹೇಳಿದನು. ಇದಾದನಂತರ ನಾನು ನನ್ನ ಹೆಂಡತಿಯೊಡನೆ ಮಾತನಾಡಿದೆನು. ಈ ವಿಷಯದಲ್ಲಿ ಆಕೆಯ ಅಭಿಪ್ರಾಯವನ್ನು ಕೇಳುವುದಕ್ಕೆ ಕೂಡ ಆಕೆಯು ಕೇವಲ ನಿಶ್ಶಕ್ತಳಾಗಿದ್ದಳು. ಆದರೆ ಕೇಳುವುದು ದುಃಖಕರವಾದರೂ ಅದು ನನ್ನ ಕರ್ತವ್ಯವೆಂದು ಭಾವಿಸಿ ನಾನು ವೈದ್ಯರಿಗೂ ನನಗೂ ನಡೆದ ವಿಷಯವನ್ನು ಆಕೆಗೆ ತಿಳಿಸಿದೆನು. ಆಕೆಯು ದೃಢತಾಪೂರ್ವಕವಾಗಿ 'ನಾನು ಬೀಫ್ ಟೀ ಯನ್ನು ಸೇವಿಸುವುದಿಲ್ಲ. ಈ ಪ್ರಪಂಚದಲ್ಲಿ ಮನುಷ್ಯ ಜನ್ಮವೆತ್ತುವುದೇ ಬಹು ಅಪರೂಪ. ನಾನು ನಿಮ್ಮ ತೊಡೆಯ ಮೇಲೆ ಸತ್ತರೂ ಹೊರತು ಈ ಶರೀರವನ್ನು ಕಲುಷಿತವನ್ನಾಗಿ ಮಾಡುವುದಿಲ್ಲ' ಎಂದು ಹೇಳಿದಳು.

ನಾನು ಆಕೆಗೆ ಬುದ್ಧಿ ಹೇಳಿದೆನು. ನನ್ನ ಮತವನ್ನೇ ಆಕೆಯು ಅನುಸರಿಸಬೇಕಾದುದೇನೂ ಇಲ್ಲವೆಂದು ತಿಳಿಸಿದೆನು. ಮಾಂಸವನ್ನು ಔಷಧವಾಗಿ ತೆಗೆದುಕೊಂಡು ಅಭ್ಯಂತರವಿಲ್ಲದ ಹಿಂದೂ ಮಿತ್ರರ ಹೆಸರುಗಳನ್ನು ಉದಾಹರಣೆಗಳನ್ನಾಗಿ ಕೊಟ್ಟೆನು. ಆದರೆ ಆಕೆಯು ಕದಲಲಿಲ್ಲ. 'ಅದೆಲ್ಲಾ ಆಗುವುದಿಲ್ಲ. ನನ್ನನ್ನು ಇಲ್ಲಿಂದ ಬೇಗನೇ ಕರೆದುಕೊಂಡು ಹೋಗಿ' ಎಂದಳು.

ನನಗೆ ಬಹು ಸಂತೋಷವಾಯಿತು. ನಾನು ಕಸ್ತೂರಿಬಾಯಿಯನ್ನು ಅಲ್ಲಿಂದ ಕರೆದುಕೊಂಡು ಹೋಗಬೇಕೆಂದು ನಿಶ್ಚಯಿಸಿದೆನು. ಹೀಗೆ ನಿಶ್ಚಯಿಸಿದಾಗ ನನ್ನ ಹೃದಯವು ಕೇವಲ ಸ್ಥಿಮಿತವಾಗಿರಲಿಲ್ಲ. ನಾನು ವೈದ್ಯರ ಬಳಿಗೆ ಹೋಗಿ ನನ್ನ ಹೆಂಡತಿಯ ಮನೋನಿಶ್ಚಯವನ್ನು ತಿಳಿಸಿದೆನು. ಅವರು ರೇಗಿ,

'ಎಂತಹ ಕಲ್ಲೆದೆ ನಿಮ್ಮದು! ಆಕೆಯು ಈಗಿನ ಸ್ಥಿತಿಯಲ್ಲಿ ಈ ವಿಷಯವಾಗಿ ಮಾತನಾಡುವುದಕ್ಕೆ ನಿಮಗೆ ನಾಚಿಕೆಯಾಗಲಿಲ್ಲವೇ? ನಾನು ಹೇಳುವುದನ್ನು ಕೇಳಿ. ನಿಮ್ಮ ಪತ್ನಿಯು ಈಗ ಇಲ್ಲಿಂದ ಸಾಗಿಸತಕ್ಕ ಸ್ಥಿತಿಯಲ್ಲಿಲ್ಲ. ಆಕೆಯ ಶರೀರವು ಬಹು ಗಾಸಿಗೊಂಡಿದೆ. ಬಹು ಸಣ್ಣ ಕಾರಣದಿಂದಲೂ ಆಕೆಗೆ ದಾರಿಯಲ್ಲಿಯೇ ಪ್ರಾಣಾಪಾಯವಾದರೂ ಆಶ್ಚರ್ಯವೇನೂ ಇಲ್ಲ. ನೀವು ಕಠಿಣ ಹಠದಿಂದ ಹೋಗಬೇಕೆಂದರೆ ಅದು ನಿಮ್ಮ ಇಷ್ಟ. ನೀವು ಆಕೆಗೆ ಬೀಫ್ ಟೀ ಯನ್ನು ಕೊಡದಿದ್ದರೆ ಆಕೆಯನ್ನು ನನ್ನ ಮನೆಯಲ್ಲಿ ಒಂದು ದಿನ ಕೂಡ ಇಟ್ಟುಕೊಳ್ಳುವ ಜವಾಬ್ದಾರಿಯನ್ನು ನಾನು ವಹಿಸಲು ಸಿದ್ಧನಾಗಿಲ್ಲ' ಎಂದು ಹೇಳಿದರು.

ಆದುದರಿಂದ ನಾವು ಆ ಸ್ಥಳವನ್ನು ಬಿಡಬೇಕೆಂದು ನಿಶ್ಚಯಿಸಿದೆವು. ಜಿಟಿ ಮಳೆಯು ಸುರಿಯುತ್ತಿದ್ದಿತು. ರೈಲ್ವೆ ಸ್ಟೇಷನ್ನು ಸ್ವಲ್ಪ ದೂರವಾಗಿದ್ದಿತು. ಇದಲ್ಲದೆ ದರಬನ್ನಿನಿಂದ ಫೀನಿಕ್ಸಿಗೆ ರೈಲಿನಲ್ಲಿಯೂ, ಆ ಮೇಲೆ ಎರಡೂವರೆ ಮೈಲಿಯನ್ನು ಕಾಲುದಾರಿಯಲ್ಲಿಯೂ ಹೋಗಬೇಕಾಗಿತ್ತು. ನನ್ನ ಅಪಾಯವು ಹೆಚ್ಚಾಗಿದ್ದಿತು. ನಾನು ಮಾಡುತ್ತಿದ್ದುದೇನೋ ಗಂಡಾಂತರದ ಕೆಲಸ. ಆದರೆ ಈಶ್ವರನ ಮೇಲೆ ಭಾರವನ್ನು ಹಾಕಿ ನನ್ನ ಕಾರ್ಯದಲ್ಲಿ ಮುಂದುವರಿದೆನು. ಫೀನಿಕ್ಸ್ ಸ್ಟೇಷನಿಗೆ ಒಂದು ಸಂದೇಶ ಕಳುಹಿಸಿ, ಒಂದು ಡೋಲಿ, ಒಂದು ಬಾಟಲು ಬಿಸಿಹಾಲು, ಒಂದು ಬಾಟಲು ಬಿಸಿ ನೀರು, ಹೋಲಿಯಲ್ಲಿ ಕಸ್ತೂರಿಬಾಯಿಯನ್ನು ಹೊರುವುದಕ್ಕೆ ಆರು ಜನರನ್ನು ಸ್ಟೇಷನಿಗೆ ಕಳುಹಿಸಬೇಕೆಂದು ವೆಸ್ಟರಿಗೆ ಹೇಳಿ ಕಳುಹಿಸಿದೆನು. ಮರುದಿನ ರೈಲಿಗೆ ಹೊರಡುವಾಗ ಕಸ್ತೂರಿಬಾಯಿಯನ್ನು ರಿಕ್ಷಾದಲ್ಲಿಯೇ ಕರೆದುಕೊಂಡು ಹೋಗಲು ಅನುಕೂಲವಾಗುವಂತೆ ಒಂದು ರಿಕ್ಷಾವನ್ನು ತರಿಸಿ ಅದರಲ್ಲಿ ಆಕೆಯನ್ನು ಅಂತಹ ಅಪಾಯ ಸ್ಥಿತಿಯಲ್ಲಿಯೇ ಕೂಡಿಸಿ ಹೊರಟೆನು.

ನನ್ನ ಹೆಂಡತಿಗೆ ಧೈರ್ಯ ಹೇಳಬೇಕಾದ ಅವಶ್ಯಕತೆ ಬೇಕಿರಲಿಲ್ಲ. ಆಕೆಯೇ 'ನನಗೆ ಏನೂ ಆಗುವುದಿಲ್ಲ. ನೀವು ಚಿಂತಿಸಬೇಡಿ' ಎಂದು ಹೇಳಿ ನನ್ನನ್ನು ಸಂತೈಸಿದಳು.

ಎಷ್ಟೋ ದಿನ ಆಹಾರವಿಲ್ಲದೆ ಹೋದುದರಿಂದ ಆಕೆಯ ಶರೀರದಲ್ಲಿ ಚರ್ಮವೂ ಎಲುಬುಗಳಲ್ಲದೆ ಇನ್ನೇನೂ ಇರಲಿಲ್ಲ. ಸ್ಟೇಷನಿನ ಪ್ಲಾಟ್‌ಫಾರ್ಮು (ಸ್ಟೇಷನ್ನಿನ ಪ್ಲ್ಯಾಟ್ ಫಾರ್ಮ್) ಬಹು ದೊಡ್ಡದಾಗಿದ್ದುದರಿಂದ ರೈಲುಗಾಡಿಗೆ ರಿಕ್ಷಾವು ಹೋಗಲು ಮುಂಚೆ ಬಹಳ ದೂರ ನಡೆಯಬೇಕಾಗಿದ್ದಿತು. ಆದುದರಿಂದ ನಾನು ಆಕೆಯನ್ನು ಎತ್ತಿಕೊಂಡು ಹೋಗಿ ಗಾಡಿಯಲ್ಲಿ ಕುಳ್ಳಿರಿಸಿದೆನು. ಫೀನಿಕ್ಸಿನಿಂದ ನಾವು ಆಕೆಯನ್ನು ಡೋಲಿಯಲ್ಲಿ ಹೊರಿಸಿಕೊಂಡು ಹೋದೆವು. ಅಲ್ಲಿ ಆಕೆಯು ಜಲ ಚಿಕಿತ್ಸೆಯಿಂದ ನಿಧಾನವಾಗಿ ಗುಣಹೊಂದಿದಳು.

ನಾನು ಫೀನಿಕ್ಸನ್ನು ತಲುಪಿದ ಎರಡು ಮೂರು ದಿವಸಗಳಲ್ಲಿ ಸ್ವಾಮಿಗಳೊಬ್ಬರು ನಮ್ಮ ಮನೆಗೆ ಬಂದರು. ನಾವು ಹೇಗೆ ಮನೋದಾರ್ಢ್ಯದಿಂದ ವೈದ್ಯರ ಸಲಹೆಯನ್ನು ತಿರಸ್ಕರಿಸಿದ್ದೇವೆಂಬುದನ್ನು ಕೇಳಿ ನನ್ನ ಮೇಲೆ ಕರುಣೆಗೊಂಡು ನಮಗೆ ತಿಳಿಯ ಹೇಳುವುದಕ್ಕಾಗಿ ಅವರು ಬಂದಿದ್ದರು. ನನಗೆ ನೆನಪಿರುವ ಮಟ್ಟಿಗೆ ನನ್ನ ಎರಡನೆಯ ಮಗ, ಮೂರನೆಯ ಮಗ ನಾದ ಮಣಿಲಾಲನೂ ರಾಮದಾಸನೂ ಸ್ವಾಮಿಗಳು ಬಂದಾಗ ಅಲ್ಲಿದ್ದರು. ಅವರು ಹಿಂದೂಸ್ಮೃತಿಯ ಶ್ಲೋಕಗಳನ್ನು ಉದಹರಿಸುತ್ತಾ, ಮಾಂಸಾಹಾರವು ಧರ್ಮಕ್ಕೆ ವಿರುದ್ಧವಲ್ಲವೆಂದು ವಾದಿಸಿದರು. ಅವರು ನನ್ನ ಹೆಂಡತಿಯ ಎದುರಿಗೆ ಈ ವಿಚಾರವನ್ನು ನಡೆಸುತ್ತಿದ್ದುದು ನನಗೆ ಸರಿಬೀಳಲಿಲ್ಲ. ಆದರೆ ಮರ್ಯಾದೆಗಾಗಿ ಸಹಿಸಲು ಸಿದ್ಧನಾದೆನು. ಅವರನ್ನು ಅಡ್ಡಿಮಾಡಲಿಲ್ಲ. ನನಗೆ ಮನುಸ್ಮೃತಿಯ ಆ ಶ್ಲೋಕಗಳು ತಿಳಿದಿದ್ದವು. ನನ್ನ ಮನಸ್ಸಿಗೆ ಆ ಶ್ಲೋಕಗಳು ಅವಶ್ಯಕವಾಗಿರಲಿಲ್ಲ. ಆ ಶ್ಲೋಕಗಳು ಪ್ರಕ್ಷಿಪ್ತಗಳೆಂದು ಹೇಳುವ ಪಂಗಡದವರಿರುವುದು ನನಗೆ ಗೊತ್ತಿದ್ದಿತು. ಒಂದು ವೇಳೆ ಅವು ಪ್ರಕ್ಷಿಪ್ತಗಳಲ್ಲದಿದ್ದರೂ ಆಹಾರಾದಿ ವಿಚಾರಗಳಲ್ಲಿ ನನ್ನ ಅಭಿಪ್ರಾಯಗಳು ಈ ಶಾಸ್ತ್ರಗಳ ಆಧಾರದ ಮೇಲಲ್ಲದೆ ಸ್ವತಂತ್ರವಾಗಿ ಹುಟ್ಟಿದ್ದಿತು. ಕಸ್ತೂರಿಬಾಯಿಯ ನಂಬಿಕೆ ನನ್ನಂತೆ ಆಧಾರದ ಮೇಲೆ ಆಗಿರಲಿಲ್ಲ. ಶಾಸ್ತ್ರದ ವಿಚಾರವೇನೂ ಆಕೆಗೆ ತಿಳಿದಿರಲಿಲ್ಲ. ಆದರೆ ಕುಲಪರಂಪರೆಯಿಂದ ಬಂದ ಧರ್ಮ ಪ್ರಾಚೀನ ಧರ್ಮವನ್ನು ನಂಬಿದ್ದಳು. ಮಕ್ಕಳು ತಂದೆಯ ಮತವನ್ನೇ ಹಿಡಿದಿದ್ದರಾದುದರಿಂದ ಅವರು ಸ್ವಾಮಿಗಳ ವಾದಕ್ಕೆ ಬೆಲೆಯನ್ನು ಕೊಡುತ್ತಿರಲಿಲ್ಲ. ಕಸ್ತೂರಿಬಾಯಿಯು ಇವೆಲ್ಲ ಸಂವಾದವನ್ನು ಕೊನೆಗಾಣಿಸಿದಳು.

'ಸ್ವಾಮಿಗಳೇ, ನೀವು ಏನೇ ಹೇಳಿ, ನನಗೆ ಬೀಫ್ ಟೀ ಯನ್ನು ಕುಡಿದು ಗುಣಹೊಂದಬೇಕೆಂದಿಲ್ಲ. ದಯವಿಟ್ಟು ಇನ್ನು ನನ್ನ ತಲೆಯನ್ನು ಚಿಟ್ಟು ಹಿಡಿಸಬೇಡಿ. ನಿಮಗೆ ಇಷ್ಟವಿದ್ದರೆ ಈ ವಿಷಯವಾಗಿ ನನ್ನ ಮಕ್ಕಳೊಡನೆ ಮಾತನಾಡಿ. ಅವರೊಡನೆ ವಾದಿಸಬಹುದು. ನನ್ನ ಮನಸ್ಸಂತೂ ನಿರ್ಧರವಾಗಿದೆ.'

"ಕೊಡಗು" ಕಂಪೆನಿಯ ಡೈರೆಕ್ಟರಗಳ ಮೀಟಿಂಗು

ಕೊಡಗು ಪ್ರಿಂಟಿಂಗ್ ಕಂಪನಿಯ ಡೈರೆಕ್ಟರುಗಳ ಮೀಟಿಂಗು ಈ ತಾ 18ರಲ್ಲಿ ಕಂಪನಿಯ ಆಫೀಸಿನಲ್ಲಿ ನಡೆಯಿತು. ಮ. ರಾ. ರಾ. ಶ್ರೀಗಳಾದ ಸಿ. ಯಸ್. ವೆಂಕಪ್ಪಯ್ಯ, ಪಿ. ಟಿ. ಕರುಂಬಯ್ಯ, ಯಂ. ಯಂ. ತಿಮ್ಮಪ್ಪ, ಕೆ. ಬಿ. ಒಕ್ಕಪ ಮತ್ತು ಯು. ಮುತ್ತಪ್ಪ ಇವರು ಹಾಜರಿದ್ದರು. ಡೈರೆಕ್ಟರುಗಳ ಛೇರ್‌ಮನ್ನರಾದ ಸಿ. ಯಸ್. ವೆಂಕಪ್ಪಯ್ಯನವರು ಅಧ್ಯಕ್ಷರಾಗಿದ್ದರು.

1 ಕಳೆದ ಡೈರೆಕ್ಟರುಗಳ ಮೀಟಿಂಗಿನ ಪ್ರೊಸೀಡಿಂಗ್ಸು ಓದಿ ಒಪ್ಪಲಾಯಿತು.

2 ಹೊಸ ಪತ್ರ ಪ್ರಿಂಟರ ಆಗಬೇಕಾದ ಬಗ್ಗೆ ಆಡಿಟರ ರವರ ವರದಿ ಓದಿ ಅಂಗೀಕರಿಸಲಾಯಿತು.

3 ಕಂಪೆನಿಯ ರೆಗ್ಯುಲೇಷನ 73ನೇ ಕಲಂ ಪ್ರಕಾರ ಟೀರ್ಮಿನಲ್ ಡೇ ನೋಟೀಸ್ ಕಳುಹಿಸಿ ಕೂಡ ಬರದೆ ಇರುವ ಷೇರುದಾರರ ಷೇರುಗಳನ್ನು ಮುಟ್ಟುಗೋಲು ಹಾಕಲು ತೀರ್ಮಾನಿಸಲಾಯಿತು.

4 ಮೆ. ಕಿ. ಯಸ್. ಪ್ರಿಂಟಿಂಗ್ ವರ್ಕ್ಸ್ ಕಂ. ಮೇರೆಗೆ ಅವರು 4 ಅಣೆ ಛೇರ ಕಟ್ಟದ ಹೊರತು ಆ ಷೇರು ಸರ್ಟಿಫಿಕೇಟು ಕೊಡತಕ್ಕದ್ದೆಂದು ನಿರ್ಧರಿಸಲಾಯಿತು.

5 ಕಂಪನಿಯ ಹೊಂದಿಕೊಳ್ಳುವ ಸಾಮಾನುಗಳನ್ನು ಕೊಳ್ಳುವ ಕೆಲಸವನ್ನು ಮ್ಯಾನೇಜರವರು ಪಿ. ಟಿ. ಕರುಂಬಯ್ಯನವರು ಒಪ್ಪಿಕೊಂಡ ಪತ್ರವು ಓದಲಾಯಿತು.

ಅವರಿಗೆ ಎರಡನೆಯವರಿಂದ ಆಕ್ಷೇಪಣೆ ಬರಲಿಲ್ಲವಾದ್ದರಿಂದ ಈ ತಾ 20ರಿಂದ ಗೌರವ ಮ್ಯಾನೇಜರರಾಗಿ ನೇಮಿಸಲಾಯಿತು.

6 ನೆ ಷೇರುದಾರರ ಸಭೆ ಮತ್ತು ಮೀಟಿಂಗಿನ ಆಕ್ಷೇಪಣೆಗಳು ಕಳೆದ ಸಲ ಆದುದರಿಂದ ಬೇಗನೆ ನಡೆಯಬೇಕಾದ ದಿನದ ಬಗ್ಗೆ ಈ ಸಭೆಯನ್ನು ಸದಸ್ಯರುಗಳು ಶ್ರೀಮಂಗಲಕ್ಕೆ ಬಂದು ಅಲ್ಲಿ ಸಭೆ ನಡೆಸಬೇಕು. ಅಧ್ಯಕ್ಷರು ಹೇಳಿದಂತೆ ಪತ್ರಿಕೆಯ ಪ್ರಚಾರ ಕೆಲಸ ಮಾಡಲು ಏಜೆಂಟರುಗಳನ್ನು ನೇಮಿಸಲಾಯಿತು.

ಸಿ. ಯಸ್. ವೆಂಕಪ್ಪಯ್ಯ
(ಅಧ್ಯಕ್ಷರು)

ನೋಟೀಸು.

ವೀರಾಜಪೇಟೆ ಇಂಪೀರಿಯಲ್ ಬ್ಯಾಂಕಿನಲ್ಲಿ ಇರುವ ನಿಧಿಯ ಬಡ್ಡಿಯಿಂದ ಏಪ್ರಿಲ್ ತಾ 1ರಿಂದ ವರ್ಷಗಳಿಗೆ ಕಲಿಯುವುದಕ್ಕೋಸ್ಕರ ಕೊಡಲ್ಪಡುತ್ತಿರುವ ರೂ 5 ರಂತೆ 11 ವಿದ್ಯಾರ್ಥಿ ವೇತನಗಳು ಖಾಲಿಯಾಗುವುವು. ಅವುಗಳಿಗೆ ಕಲಿಯುವ ಕೊಡವ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಕೊಡಗು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಇನ್ಸ್‌ಪೆಕ್ಟರವರಿಗೆ ಇದೇ ಮಾರ್ಚಿ ಆಖೈರು ಒಳಗೆ ತಲುಪುವಂತೆ ಕಳುಹಿಸತಕ್ಕದ್ದು.

ಉಮೇದ್ವಾರರ ಹುಟ್ಟಿದ ತಾರೀಖು, ಈಗ ಓದುವ ತರಗತಿ ಮತ್ತು 15 ವರ್ಷಕ್ಕೆ ಮೀರಿದವರಾಗಿದ್ದರೆ ವಿದ್ಯಾಭ್ಯಾಸ ಮಾಡಬೇಕಾದ ಅವಧಿ ಎಷ್ಟು ವರ್ಷ ಆಗಿರುತ್ತದೆ. ಇವುಗಳನ್ನು ಅರ್ಜಿಯಲ್ಲಿ ತಿಳಿಸುವುದಲ್ಲದೆ ಸ್ಕೂಲ್ ಹೆಡ್ ಮಾಸ್ಟರರ ಸರ್ಟಿಫಿಕೇಟು ಇರಬೇಕು. ಅರ್ಜಿಗಳನ್ನು ಪರಿಶೀಲಿಸಿ ಮಂಜೂರು ಮಾಡಿದ ವೇತನಗಳು 1—4—28ರಿಂದ ಇಂಪೀರಿಯಲ್ ಬ್ಯಾಂಕಿನಲ್ಲಿ ಪಾವತಿ ಮಾಡಲ್ಪಡುವುವು.

ಸಿ. ಸಿ. ಉತ್ತಯ್ಯ

ತಾ 13-3-28   ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಇನ್ಸ್‌ಪೆಕ್ಟರ್

ದೇಶದ ಮಹನೀಯರಲ್ಲಿ ವಿಜ್ಞಾಪನೆ.

(2ನೇ ಪುಟದಿಂದ ಮುಂದುವರಿದದ್ದು.)

ಯದಲ್ಲಿ ಯಾವದೊಂದೂ ಗಲಿಬಿಲಿಯು ಉಂಟಾಗಲಿಲ್ಲ. ಈ ವರ್ಷವೂ ಅದೇ ರೀತಿ ಮಾಡಲಾಗುವದು. ಸ್ವಲ್ಪ ದೂರವಾಗಿದ್ದೂ ಪ್ರೇಕ್ಷಕರಾಗಿ ಕುಳಿತು ನೋಡಿದರೆ ಸಾಕೆಂದು ಕೆಲವರು ಯೋಚಿಸಬಹುದು. ಆದರೆ ತಮ್ಮ ದೇಶದ ಅಭಿವೃದ್ಧಿಯನ್ನೂ, ತಮ್ಮ ಕಷ್ಟನಷ್ಟಗಳನ್ನು ಹೋಗಲಾಡಿಸಲು ಉಪಾಯಗಳನ್ನೂ ಕುರಿತು ತಮ್ಮ ಸಹೋದರರು ಚರ್ಚಿಸಿ ತೀರ್ಮಾನಿಸುತ್ತಿರುವಾಗ ತಾವು ಅದರಲ್ಲಿ ಭಾಗಿಗಳಾಗದೆ ದೂರದಲ್ಲಿ ಪ್ರೇಕ್ಷಕರಾಗಿ ಕೂತು ನೋಡುವದು ಯಾರಿಗೂ ಯೋಗ್ಯವೆನಿಸಲಾರದು. ಸಂಘದ ಮೆಂಬರಾಗಲು ಅಡಚಣೆಯುಳ್ಳವರು ಅಂದರೆ ಸರ್ಕಾರಿ ಉದ್ಯೋಗಸ್ಥರೇ ಮೊದಲಾದವರು ಮಾತ್ರ ಹಾಗೆ ಪ್ರೇಕ್ಷಕರಾಗಿ ಬರಬಹುದಷ್ಟೆ. ಬಾಕಿ ದೇಶೀಯರೆಲ್ಲರೂ ಸಂಘದ ಮೆಂಬರುಗಳಾಗಿಯೇ ಅಲ್ಲಿಗೆ ಬರಬೇಕೆಂದು ಕೋರಿಕೆ. ದೇಶದ ಸ್ಥಿತಿಯು ಉತ್ತಮವಾದರೆ ಅದರ ನಿವಾಸಿಗಳ ಸ್ಥಿತಿಯೂ ಉತ್ತಮವಾಗತ್ತದೆ. ಅದು ದರಿಂದ ದೇಶದ ಏಳಿಗೆಗಾಗಿ ಹೋರಾಡುತ್ತಿರುವ ಈ ಸಂಘಕ್ಕೆ ಪ್ರತಿಯೊಬ್ಬ ದೇಶೀಯನೂ, ದೇಶೀಯಳೂ ಮೆಂಬರಾಗಿ ಅದರ ಕಾರ್ಯಗಳಿಗೆ ಉತ್ತೇಜನ ಕೊಡಬೇಕಾದದ್ದು ಎಲ್ಲರ ಕರ್ತವ್ಯವೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಆದ ಕಾರಣ ಪ್ರತಿಯೊಬ್ಬನೂ ಈ ಸಂಘಕ್ಕೆ ಸೇರಲು ಅನುಕೂಲವಾಗುವಂತೆ ಪ್ರತಿ ನಾಡುಗಳಿಗೂ ಆರ್ಗನೈಜರುಗಳನ್ನು ನೇಮಿಸಿ ಅವರ ಹೆಸರುಗಳು ಈ ಹೊದಲು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಅವರಿಗೆ ಎಲ್ಲರೂ ತಮ್ಮ ಚಂದಾ ಹಣವನ್ನು ಕೊಟ್ಟು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಲು ಅರ್ಹರಾಗಬೇಕಾಗಿ ವಿನಂತಿ.

ಮಹಾಸಭೆಗೆ ಇನ್ನು ಒಂದು ತಿಂಗಳೂ ಸಹ ಇಲ್ಲ. ಇಷ್ಟರವರೆಗೆ ಚಂದಾ ವಸೂಲಿಯು ಚೆನ್ನಾಗಿ ನಡೆದಿರುವದಿಲ್ಲ. ಆದ್ದರಿಂದ ಆರ್ಗನೈಜರುಗಳು ಸೊಂಟಕಟ್ಟಿ ಇಳಿದು ಉಳಿದಿರುವ ಕೆಲವು ದಿವಸಗಳಲ್ಲಿ ವಸೂಲಿಯ ಕೆಲಸವನ್ನು ಭರಾಟೆಯಿಂದ ಮಾಡುವರಾಗಿ ಕೋರಲಾಗಿದೆ.

1926 ಯೂ 1927 ಯೂ 1928ರ ಚಂದಾ ಕೊಟ್ಟವರಿಗೆ ಜನರಲ್ ಮೀಟಿಂಗಿನ ನೋಟೀಸು ಈಗ ಕಳುಹಿಸಲಾಗುತ್ತಿದೆ. ಹಳೇ ಮೆಂಬರುಗಳು ತಮ್ಮ ಬಾಕಿಯನ್ನೂ ಹೊಸ ಮೆಂಬರುಗಳು ತಮ್ಮ ಚಂದಾವನ್ನೂ ಪಾವತಿ ಮಾಡಿದ್ದು ನನಗೆ ತಿಳಿಯುತ್ತಾ ಬಂದಹಾಗೆ ಅವರಿಗೂ ನೋಟೀಸು ಕಳುಹಿಸಲಾಗುವದು.

ಮಹಾ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದರೆ ಮೆಂಬರುಗಳು ಅವುಗಳನ್ನು ಒಡನೆ ಜನರಲ್ ಸೆಕ್ರೆಟರಿಯವರಿಗೆ ಕಳುಹಿಸಬೇಕಾಗಿ ಕೋರಿಕೆ.

ಜಮಿನ್ದಾರರ ಸಂಘ. ಪಿ. ಐ. ಬೆಳ್ಯಪ್ಪ,
ಮಡಿಕೇರಿ, 20—3—'28. ಜನರಲ್ ಸೆಕ್ರೆಟರಿ.

Coorg District Magistrate's Office,
Mercara, Dated the 18th March 1928.

NOTICE.

In virtue of the power vested in the District Magistrate under rule 18 of the Coorg Motor Vehicles rules, 1927, it is notified for the information of the public that the use in Coorg of siren or any form of horn or whistle worked off the exhaust or any horn sounding more than a single note is prohibited with effect from 1st April 1928.

K. CHENGAPPA.
District Magistrate.

ಕೊಡಗಿನ ಆಡಳಿತ ರಚನಾ ಕಮಿಟಿ.

ಜಮಿನ್ದಾರರ ಸಂಘದ ಆಶ್ರಯದಲ್ಲಿ ಸೇರಿದ ಎಲ್ಲಾ ಪಂಗಡಗಳ ಮುಖಂಡರ ಸಭೆಯಿಂದ ನೇಮಿಸಲ್ಪಟ್ಟ ಆಡಳಿತ ರಚನಾ ಉಪಕಮಿಟಿಯ ಮೀಟಿಂಗ್ ಈ ತಾ 17—3—28ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಈ ಕೆಳಗಿನ 7 ಜನ ಕಮಿಟಿಯ ಮೆಂಬರುಗಳೆಲ್ಲರೂ ಹಾಜರಿದ್ದರು. ಮೆ. ಗಳಾದ ಸಿ. ಎನ್. ವೆಂಕಪ್ಪಯ್ಯನವರು, ಎ. ಸಿ. ಸುಬ್ಬಯ್ಯನವರು, ಯನ್. ಮುದ್ದಪ್ಪನವರು, ಪಿ. ಐ. ಬೆಳ್ಯಪ್ಪನವರು, ಪಿ. ಟಿ. ಕುಶಾಲಪ್ಪನವರು, ಸಿ. ಯಸ್. ಉತ್ತೈಯ್ಯನವರು ಮತ್ತು ಕೆ. ಪಿ. ಚಿಣ್ಣಪ್ಪನವರು. ಮೀಟಿಂಗ್ ಇಟ್ಟದ್ದು ತಾ. 18 ಕ್ಕಾದರೂ ಒಬ್ಬಿಬ್ಬರಿಗೆ 18ಕ್ಕೆ ನಿಲ್ಲಲು ಅನುಕೂಲವಿಲ್ಲದ್ದರಿಂದ 17ರಲ್ಲೇ ಸಾಯಂಕಾಲ 6 ಘಂಟೆಯಿಂದ ರಾತ್ರಿ 2 ಘಂಟೆ ವರೆಗೆ ನಡೆಯಿತು. ದೇಶಕ್ಕೆ ಈಗ ಇರುವ ಉತ್ಪತ್ತಿಯಿಂದಲೇ ಪ್ರಜಾಜವಾಬ್ದಾರಿ ಸರಕಾರವನ್ನು ನಡಿಸಲು ಸಾಧ್ಯವಿರುವ ರಚನೆಯನ್ನು ಯೋಚಿಸಲಾಯಿತು. ಪ್ರಜಾ ಜನರಿಂದಲೇ ಚುನಾಯಿಸಲ್ಪಡುವ ಒಬ್ಬ ಗವರ್ನರೂ, ಒಬ್ಬ ಅಥವಾ ಇಬ್ಬರು ಮಂತ್ರಿಯರೂ, ಕೌನ್ಸಿಲ್ ಮೆಂಬರುಗಳಿಂದಲೇ ಚುನಾಯಿಸಲ್ಪಡುವ ಒಬ್ಬ ಕೌನ್ಸಿಲ್ ಪ್ರೆಸಿಡೆಂಟರೂ—ಈ ಹೊಸ ಉದ್ಯೋಗಗಳ ನಿರ್ಮಾಣವಾಗಬೇಕೆಂತಲೂ, ಒಬ್ಬ ಜಡ್ಜಿ ಇರುವ ಹೈಕೋರ್ಟು ಒಬ್ಬ ಡಿಸ್ಟ್ರಿಕ್ಟ್ ಜಡ್ಜಿ, ಒಬ್ಬ ಮುನ್ಸೀಫ್, ಒಬ್ಬ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್, ಇಬ್ಬರು ಸಬ್ ಮೇಜಿಸ್ಟ್ರೇಟರು ಇಂತಿಷ್ಟು ನ್ಯಾಯತೀರ್ಪಿನ ಅಧಿಕಾರಿಗಳಿರಬೇಕೆಂತಲೂ ಗ್ರಾಮ ಪಂಚಾಯತಿಗಳಿಗೆ ಸಿವಿಲ್, ಕ್ರಿಮಿನಲ್ ಪವರ್ ಕೊಡಬೇಕೆಂತಲೂ, ಆಡಳಿತ ನಡಿಸಲು ಒಬ್ಬ ಕಲೆಕ್ಟರು, ಒಬ್ಬ ಲ್ಯಾಂಡ್ ರಿಕಾರ್ಡ್ ಡಿಪ್ಯುಟಿ ಡೈರೆಕ್ಟರು, ಪಾರುಪತ್ಯಗಾರರುಗಳು ಇರಬೇಕೆಂತಲೂ, ಸುಬೇದಾರರುಗಳು ಅವಶ್ಯವಿಲ್ಲವೆಂತಲೂ, ಈ ರೀತಿ ಆಡಳಿತವೂ ನ್ಯಾಯತೀರ್ಪಿನ ಅಧಿಕಾರವೂ ಬೇರ್ಪಡಿಸಲ್ಪಡಬೇಕೆಂತಲೂ, ದೊಡ್ಡ ಸಂಬಳದ ಇಂಪೀರಿಯಲ್ ಆಫೀಸರುಗಳನ್ನಾರನ್ನೂ ಇಟ್ಟುಕೊಳ್ಳದೆ ಮೇಲ್ಕಂಡ ಯಾವ ಅಧಿಕಾರಿಗಳಿಗೂ 1000 ರೂಪಾಯಿಗಿಂತ ಹೆಚ್ಚಿಗೆ ಸಂಬಳ ಕೊಡಬೇಕಾಗಿಲ್ಲವೆಂತಲೂ ಚರ್ಚೆಯಾಗಿ ಮಸೂದೆ ಮಾಡಿ ಇಡಲಾಯಿತು.

ಚುನಾವಣೆ ಹಕ್ಕು ಪ್ರತಿಯೊಬ್ಬ ಪ್ರಾಯಬಂದ ಗಂಡಸಿಗೂ, ಹೆಂಗಸಿಗೂ ಇರಬೇಕೋ ಅಥವಾ ಯಾವದಾದರೂ ಕೆಲಸ ಕೆಲವರವರಿಗೆ ಮಾತ್ರ ಇದ್ದರೆ ಸಾಕೋ ಎಂಬದು ಚರ್ಚೆಯಾಗಿ ಖಚಿತ ತೀರ್ಮಾನವಾಗಲಿಲ್ಲ. ಅಸ್ಪೃಶ್ಯ ವರ್ಗ ಹೊಲೆಯರೇ ಮೊದಲಾದವರಿಗೆ ನಿಯಮಿತ ಪ್ರತ್ಯೇಕ ಪ್ರತಿನಿಧಿತ್ವ ಕೂಡಬೇಕೋ, ಅಥವಾ ಅವರಿಂದಲೇ ಚುನಾಯಿಸಲ್ಪಡುವ ಮೆಂಬರುಗಳನ್ನು ಕೊಡಬೇಕೋ ಎಂಬದು ಯೋಚಿಸಲ್ಪಟ್ಟು ಚುನಾವಣೆ ಹಕ್ಕು ಕೊಡುವದೇ ಯುಕ್ತವೆಂತ ಅಭಿಪ್ರಾಯಪಡಲಾಯಿತು. ಮುಸಲ್ಮಾನ ಜನರಿಗೆ ಪ್ರತ್ಯೇಕ ಪ್ರತಿನಿಧಿತ್ವ ಇರಬೇಕೋ ಬೇಡವೋ, ಎಂತ ಯೋಚಿಸಿ ಪ್ರತ್ಯೇಕ ಇರಬೇಕಾದ್ದಿಲ್ಲವೆಂತ ತೀರ್ಮಾನವಾಯಿತು. ಕೌನ್ಸಿಲು ಮೆಂಬರುಗಳ ಸಂಖ್ಯೆ ಎಷ್ಟಿರಬೇಕು, ಚುನಾವಣೆ ಸರಹದ್ದುಗಳು ಯಾವದಿರಬೇಕು, ಒಂದು ಸರಹದ್ದಿಗೆ ಒಬ್ಬನೇ ಮೆಂಬರಿರಬೇಕೋ ಬೇಡವೋ ಎಂಬದೂ ಯೋಚಿಸಲಾಯಿತು. ಮೇಲೆ ಬರೆದ ಎಲ್ಲಾ ಸಂಗತಿಗಳನ್ನೂ ಫೈನಲ್ ತೀರ್ಮಾನ ಮಾಡಲು ಇನ್ನೊಂದಾವರ್ತಿ ಈ ಕಮಿಟಿಯು ಮೀಟಿಂಗ್ ಮಾಡಲು ತೀರ್ಮಾನಿಸಲಾಯಿತು.

ಈ ಉಪಕಮಿಟಿಯ ಮೆಂಬರುಗಳ ಪೈಕಿ ಮೆ. ಯನ್. ಮುದ್ದಪ್ಪನವರು ಮತ್ತು ಮೆ. ಎ. ಸಿ. ಸುಬ್ಬಯ್ಯನವರೂ ಕರ್ನಾಟಕ ಏಕೀಕರಣಕ್ಕೆ ಒಪ್ಪುವದಾದರೂ ಏಕೀಕರಣವಾಗುವವರೆಗೆ ಕೊಡಗಿಗೆ ಪ್ರಾಂತೀಕ ಸ್ವತಂತ್ರ ಸರಕಾರವು ಇರಲು ಸಾಧ್ಯವಿಲ್ಲವೆಂತಲೂ, ಅದರ ಬದಲು ಮದ್ರಾಸಿನ ಅಧಿಪತ್ಯದಲ್ಲಿ ಸೇರಿಕೊಳ್ಳುವದು ಉತ್ತಮವೆಂತಲೂ ವಾದಿಸಿದರು. ಈ ಉಪಕಮಿಟಿಯನ್ನು ನೇಮಿಸಿದ ಸಭೆಯು ಈ ವಿಷಯವನ್ನು ಮೊದಲೇ ತೀರ್ಮಾನಿಸಿರುವದರಿಂದ ಅದೇ ಸಂಗತಿಯನ್ನು ಈ ಉಪಕಮಿಟಿಯಲ್ಲಿ ಚರ್ಚಿಸಲು ಎಡೆಯಿಲ್ಲವಾದ್ದರಿಂದ ಇವರಿಬ್ಬರೂ ಈ ಉಪಕಮಿಟಿಯ ಕೆಲಸದಲ್ಲಿ ಭಾಗಿಗಳಾಗುವದಿಲ್ಲವೆಂತ ತಿಳಿಸಿದರು.

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಈ ತಾ. 16ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಬೆಳಿಗ್ಗೆ 11 ಘಂಟೆಯಿಂದ ಮಧ್ಯಾಹ್ನ 1½ ಗಂಟೆ ವರೆಗೆ ನಡೆಯಿತು. ಮೆ. ಚಾಂಡ್ಲ ಕಾಳಪ್ಪನವರು ಮತ್ತು ಮೆ. ಕೊಂಗಟ್ಟೀರ ಅಪ್ಪಯ್ಯನವರಲ್ಲದೆ ಬಾಕಿ ಎಲ್ಲಾ ಮೆಂಬರುಗಳು ಹಾಜರಿದ್ದರು. ಬೋರ್ಡಿನ ಪ್ರೆಸಿಡೆಂಟರಾದ ಕಮಿಷನರು ಚೇರ್‌ಮ್ಯಾನರಾಗಿದ್ದರು.

1. ಬೋರ್ಡಿನ 1928-29ನೇ ವರ್ಷದ ಬಜೆಟು ಮಂಜೂರು ಮಾಡಲಾಯಿತು.

2. ಶನಿವಾರಸಂತೆಯಲ್ಲಿ ಅಥವಾ ಮಾಲ್ದಾರಿನಲ್ಲಿ ಆಸ್ಪತ್ರೆಯನ್ನು ಇಡಲು ರೂ. 1000 ಮಂಜೂರು ಮಾಡುವ ವಿಷಯ, ಆಸ್ಪತ್ರೆ ಕಟ್ಟಡಕ್ಕಾಗಿ ಶನಿವಾರಸಂತೆ ಪ್ರಾಂತ್ಯದವರು ಹಣವೇನಾದರೂ ಸಂಗ್ರಹಿಸಿ ಕೊಡುತ್ತಾರೋ ಎಂಬದನ್ನು ನೋಡುವ ಬಗ್ಗೆ, ಇನ್ನೊಂದು ಮೀಟಿಂಗಿಗೆ ಇಡಲಾಯಿತು.

3. ಕೊಣ್ಣಾನೂರು ಮತ್ತು ಬೇರೆ ಸ್ಥಳಗಳಲ್ಲಿ ಪ್ಲೇಗಾದುದರಿಂದ ಶಿರಂಗಾಲ ಗೇಟಿಗಾಗಿ ತಾ. 11—9—'27 ರಿಂದ 31—12—'27ರ ವರೆಗೆ ಗಾಡಿ ವ್ಯವಹಾರವನ್ನು ನಿಲ್ಲಿಸಿದ ಕಾರಣ ಉಂಟಾದ ನಷ್ಟಕ್ಕಾಗಿ ಆ ಸಮಯದಲ್ಲಿ ತಿಂಗಳಿಗೆ ರೂ. 65ರಂತೆ (ಕಂಟ್ರಾಕ್ಟರು ಕೇಳಿದರ ಅರ್ಧದಷ್ಟು) ಕಂಟ್ರಾಕ್ಟು ಮೊಬಲಗನ್ನು ಮಾಫ ಕೊಡಬಹುದೆಂದು ತೀರ್ಮಾನವಾಯಿತು.

4. ಎಲಿಮೆಂಟರಿ ಶಾಲೆಗಳನ್ನು ಇಡಬೇಕಾದ ಸ್ಥಳ ಮತ್ತು ಅವುಗಳ ಸಿಬ್ಬಂದಿಯ ವಿಷಯ ವಿಚಾರಿಸಲು ವೈಸ್ ಪ್ರೆಸಿಡೆಂಟರಾದ ಮೆ. ಪಿ. ಚಂಗಪ್ಪನವರು, ಶಾಲಾ ಸಬ್ ಅಸಿಸ್ಟಾಂಟ್ ಇನ್‌ಸ್ಪೆಕ್ಟರಾದ ಮೆ. ಪಿ. ಸಿ. ಉತ್ತಯ್ಯನವರು, ಮೆ. ಯನ್. ಮುದ್ದಪ್ಪನವರು ಮತ್ತು ಮೆ. ಪಿ. ಜಿ. ಮುದ್ದಪ್ಪಯ್ಯನವರು—ಇವರುಗಳ ಒಂದು ಕಮಿಟಿ ನೇಮಿಸಲಾಯಿತು ಈ ಕಮಿಟಿಯಲ್ಲಿರುವ ಉದ್ಯೋಗಸ್ಥರಲ್ಲದ ಮೆಂಬರುಗಳು ಬತ್ಯವಿಲ್ಲದೆ ಕೆಲಸ ಮಾಡಲು ಒಪ್ಪಿಕೊಂಡರು.

5. ಬೇತರಿ, ಸಿರಂಗಾಲ, ಬೆಳ್ಳುಮಾಡು, ಕಕ್ಕಬೆ ಮತ್ತು ಕೊಡಂಬೂರು ಕಡವುಗಳಿಗೆ ಐದು ಹೊಸ ದೋಣಿಗಳಿಗಾಗಿ ರೂ. 2200 ಮಂಜೂರು ಮಾಡಲಾಯಿತು.

6. ಕಳೆದ ಆಕ್ಟೋಬರು ತಿಂಗಳಲ್ಲಿ ಸೋಮವಾರಪೇಟೆಯಲ್ಲಿ ಪ್ಲೇಗು ಉಂಟಾದ ಕಾರಣ ಶನಿವಾರಸಂತೆ ಮಾರ್ಕೆಟ್ ಕಂಟ್ರಾಕ್ಟರಿಗೆ ಉಂಟಾದ ನಷ್ಟಕ್ಕಾಗಿ ಅವನಿಗೆ ರೂ. 78 ಮಾಫಿ ಬಿಡಲಾಯಿತು.

7. ಶಾಂತಳ್ಳಿ ಎಲಿಮೆಂಟರಿ ಶಾಲೆಯಲ್ಲಿ ಹಯರ್ ಎಲಿಮೆಂಟರಿ ತರಗತಿಗಳನ್ನು ಇಡಬೇಕೆಂದು ಮೆ. ಕೀತಿಯಂಡ ಕುಶಾಲಪ್ಪನವರು ಸೂಚಿಸಿದ ರಿಸೊಲ್ಯೂಶನ್ ಪಾಸಾಗಲಿಲ್ಲ. (ಈ ವಿಷಯ ತಾ 20—1—1928 ರ ಪತ್ರಿಕೆಯಲ್ಲಿ ಪ್ರಕಟವಾದ ವರ್ತಮಾನವು ನಿಜವಲ್ಲವಾದದ್ದಕ್ಕೆ ವ್ಯಸನಪಡುತ್ತೇವೆ. ಸಂ.)

ಬ್ರಿಟಿಷರು ಭರತಖಂಡವನ್ನು ಕಾಯುವ ಬಗೆ.

(ಮೋಡರ್ನ್ ರಿವ್ಯುನಲ್ಲಿ ಪ್ರಕಟವಾದ ಡಾಕ್ಟರ್ ಸಂಡರ್ಲ್ಯಾಂಡ್‌ರವರ ಲೇಖನದ ಸಾರಾಂಶ)

ಭರತಖಂಡದ ರಕ್ಷಣಾರ್ಥವಾಗಿಯೇ ಇದರ ಮೇಲೆ ಗ್ರೇಟ್ ಬ್ರಿಟನ್ ಆಡಳಿತ ನಡೆಸುವುದಂತೆ. ಭಾರತೀಯರು ಸ್ವರಕ್ಷಣೆ ಮಾಡಿಕೊಳ್ಳಲಾರರಾದುದರಿಂದ ರಕ್ಷಣ ಸೇವೆಯನ್ನು ಬ್ರಿಟನ್ನರು ಕೈಕೊಂಡಿರುವರು. ಭರತಖಂಡದ ಸೈನ್ಯದ ಖರ್ಚು ವಿಪರೀತವೆಂದು ಭಾರತೀಯರು ಹೇಳಿದರೆ "ಈ ವಿಷಯದಲ್ಲಿ ನೀವು ದುಃಖಿಸುವ ಕಾರಣವಿಲ್ಲ. ನಿಮ್ಮ ಹಿತಕ್ಕಾಗಿಯೇ ಈ ಖರ್ಚು. ಬ್ರಿಟನ್ನಿನ ನೌಕಾ ಸೈನ್ಯವು ನಿಮ್ಮ ಹಿತಕ್ಕಾಗಿಯೇ ಇದೆ. ನೀವೇ ಈ ಸೈನ್ಯವನ್ನು ಇಟ್ಟುಕೊಳ್ಳುವುದೆಂದರೆ ಬಹಳ ಖರ್ಚು ತಗಲುವುದು. ನಮ್ಮ ಉಪಕಾರವನ್ನು ನೀವು ಸದಾ ಸ್ಮರಿಸತಕ್ಕದ್ದು,' ಎಂಬದಾಗಿ ಆಂಗ್ಲೇಯರು ಉತ್ತರಕೊಡುವರು. ಆದರೆ ಈ ಮಾತೆಲ್ಲವು ಸುಳ್ಳೆಂದು ಭಾರತೀಯರು ಹೇಳುವರು.

ಬ್ರಿಟನರು ಭಾರತೀಯರ ರಕ್ಷಕರಾಗಿರುವ ಬದಲು ಅವರ ಪ್ರಿಯ ಜನ್ಮಭೂಮಿಯನ್ನೂ, ಸ್ವಾತಂತ್ರ್ಯವನ್ನೂ ಹರಣ ಮಾಡಿರುವರೆಂದೂ, ಅವುಗಳನ್ನು ಇವರಿಗೆ ಹಿಂತಿರುಗಿಸಲು ಒಪ್ಪುವುದಿಲ್ಲವೆಂದೂ, ಈ ಕಾರಣದಿಂದಲೇ ಯಾವದಾದರೂ ಪರ ರಾಜ್ಯದಾಡಳಿತದಿಂದ ತಪ್ಪಿಸಿಕೊಳ್ಳುವಂತಿದ್ದರೆ, ಅದು ಬ್ರಿಟನ್ನೇ ಆಗಿದೆಂತಲೂ ಭಾರತೀಯರ ಅಭಿಪ್ರಾಯವಾಗಿದೆ.

" ಸಾವಿರಾರು ಮೈಲಿಗಳ ದೂರದಲ್ಲಿರುವ ಬ್ರಿಟನ್ನರು ನಮ್ಮ ದೇಶದಲ್ಲಿರಲು ಯಾವ ಹಕ್ಕಿಲ್ಲದಿದ್ದರೂ, ನಮ್ಮನ್ನು ಗೆದ್ದು, ನಮ್ಮ ಇಚ್ಛೆಗೆ ವಿರೋಧವಾಗಿ ನಮ್ಮನ್ನು ತಮ್ಮ ಕೈವಶಮಾಡಿಕೊಂಡು ನಮ್ಮ ದೇಶವನ್ನು ಲೂಟಿ ಮಾಡುತ್ತಿರುವರು. ಬ್ರಿಟಿಷರ ಜಲ ನೆಲ ಸೇನೆಗಳು ನಮ್ಮ ಮೇಲಿನ ಆಂಗ್ಲ ಅಧಿಕಾರವನ್ನು ಬಲಪಡಿಸಿ, ನಮ್ಮನ್ನು ಉದ್ಧಾರ ಮಾಡುವುದರ ಬದಲಿಗೆ ಹಾಳುಮಾಡಿವೆ. ಅನ್ಯಾಯವಾದ ರೀತಿಯಿಂದ ಸಂಪಾದಿಸಿರುವ ಈ ದೇಶವು ಇತರರ ಪಾಲಿಗೆ ಹೋಗಬಾರದೆಂಬ ಉದ್ದಿಶ್ಯದಿಂದಲೇ ಆ ಸೈನ್ಯಗಳನ್ನು ಇಟ್ಟುಕೊಂಡಿದೆ, " ಎಂಬುದೆ ಭಾರತೀಯರ ಹೇಳಿಕೆಯಾಗಿದೆ.

ಭಾರತೀಯರು ಅಮೇರಿಕನರಾದ ನಮಗೆ ಹೇಳುವ ಮಾತೇನಂದರೆ " ಒಂದುವೇಳೆ ಅಮೇರಿಕ ದೇಶವನ್ನು ಜರ್ಮನರು ಗೆದ್ದು ಅಮೇರಿಕನರ ಖರ್ಚಿನಿಂದಲೇ ದೊಡ್ಡ ಸೈನ್ಯವನ್ನು ಇಟ್ಟುಕೊಂಡು ಅವರನ್ನು ಅಂಕೆಯಲ್ಲಿಟ್ಟುಕೊಂಡು, ಇಂಗ್ಲೆಂಡಾಗಲೀ, ಫ್ರಾನ್ಸಾಗಲೀ ಜರ್ಮನರಿಂದ ಅಮೇರಿಕವನ್ನು ಕಿತ್ತುಕೊಳ್ಳದಂತೆ ಮಾಡುವ ಮಾತೇ ನಮಗೂ ಗಂಟು ಬೀಳುತ್ತದೆ. ಜರ್ಮನಿಯರಿಗೆ ಅಮೇರಿಕನರ ಸೈನ್ಯದಿಂದಲೇ ಅವರು (ಜರ್ಮನರು) ಕಳವು ಮಾಡಿದ ದೇಶವನ್ನು ಕಾಯುವುದಕ್ಕಾಗಿ ಅಮೇರಿಕನರು ಕೃತಜ್ಞರಾಗಿರಬೇಕೇ ? " ಹೀಗೆ ಭಾರತೀಯರು ಹೇಳುವುದು ಸಹಜವಲ್ಲವೇ ?

ಒಂದು ದೇಶವನ್ನು ರಕ್ಷಣೆಮಾಡುವುದೆಂದರೆ ಆ ದೇಶದವರನ್ನು ಪರರಾಷ್ಟ್ರದವರಿಂದ ಕಾಯುವುದೂ, ಅವರನ್ನು ಲೂಟಿಮಾಡದಂತೆ ಮಾಡುವುದು, ಅವರನ್ನು ನಾಶಪಡಿಸದೆ ಇರುವುದೂ ಆಗಿದೆ. ಆದರೆ ಬ್ರಿಟಿಷರು ಈ ಕೆಲಸವನ್ನಾವುದನ್ನೂ ಮಾಡುವುದಿಲ್ಲ. ಅದರ ಬದಲು ವಿರೋಧವಾಗಿ ಆಚರಿಸುತ್ತಲಿದೆ. ಭಾರತೀಯರನ್ನು ಪರರ ಧಾಳಿಯಿಂದ, ಲೂಟಿಯಿಂದ, ಹಿಂಸೆಯಿಂದ, ಆಡಳಿತದಿಂದ ಬಿಡುಗಡೆ ಮಾಡುವುದರ ಬದಲು ಈ ದುಷ್ಕೃತಿಗಳನ್ನಾಚರಿಸುವ ಉದ್ದಿಶ್ಯದಿಂದ ಬ್ರಿಟನು ತನ್ನ ಸೇನೆಯನ್ನು ಬಲಪಡಿಸಿದೆ.

ನನ್ನ ಮನೆಯನ್ನು ಯಾವನಾದರೂ ನನ್ನಿಂದ ಮೋಸಪಡಿಸಿ ಕಿತ್ತುಕೊಂಡರೆ, ನಾನು ಆ ಮೋಸಗಾರನು ನನ್ನಿಂದ ಕಳವು ಮಾಡಿರುವ ಮನೆಯನ್ನು ಇತರರು ಕಿತ್ತುಕೊಳ್ಳದಂತೆ ಭದ್ರಪಡಿಸುವ ಹಾಗೆ ಸಹಾಯ ಕೊಡಲಾರೆನು. ಹಾಗೆ ಮಾಡಿರುವುದರಿಂದ ನನಗೆ ಯಾವ ಪ್ರಯೋಜನವೂ ಇಲ್ಲ. ನನಗೆ ಬೇಕಾದದ್ದು ನನ್ನ ಮನೆ. ಹೀಗೆ ಮಾಡಿದರೆ ನನ್ನ ಹಕ್ಕಿನ ರಕ್ಷಣೆಯಾದಂತಾಯಿತು. ಹಾಗೆಯೇ ಭಾರತೀಯರನ್ನು ರಕ್ಷಣೆಮಾಡುವುದೆಂದರೆ—ಅವರಿಂದ ಕಿತ್ತುಕೊಂಡಿರುವ ರಾಜ್ಯವನ್ನು ಅವರಿಗೆ ಹಿಂತಿರುಗಿಸುವುದೇ ಆಗಿದೆ.

ಬ್ರಿಟಿಷರು ಇಂಡಿಯಾದಲ್ಲಿ ತಮ್ಮ ಸೇನೆಯನ್ನಿಟ್ಟಿರುವುದು ಇಂಡಿಯಾದ ರಕ್ಷಣೆಗಾಗಿಯಲ್ಲ, ಆದರೆ ತನಗಿರುವ ಎರಡು ಅಪಾಯಗಳಿಂದ ಬಿಡುಗಡೆಯಾಗಲಿಕ್ಕೆ—ಒಂದು ಭಾರತೀಯರು ತಾವು ಕಳೆಕೊಂಡಿರುವ ರಾಜ್ಯವನ್ನು ಪುನಃ ಸ್ವಾಧೀನಪಡಿಸಿಕೊಳ್ಳುವದು. ಎರಡನೇದು, ಇತರರು ತಾವು ಹಿಡಕೊಂಡಿರುವ ದೇಶವನ್ನು ಕಿತ್ತುಕೊಂಡಾರೆಂಬುದ. ಹೀಗಾಗಿ ಇಂಗ್ಲೆಂಡಿನ ದೊಡ್ಡ ಸೈನ್ಯದ ದೆಸೆಯಿಂದ ಇಂಡಿಯಕ್ಕೆ ಸಿಗತಕ್ಕ ಲಾಭ ಯಾವದೆಂದರೆ—ಭಾರತೀಯರನ್ನು ದಮನಮಾಡುವುದು, ಅವರನ್ನು ಬಂಧನದಲ್ಲಿಡುವದು, ವ್ಯಾಪಾರದ ಲೂಟಿ, ಸ್ವಾತಂತ್ರ್ಯವನ್ನು ಕಳಕೊಳ್ಳುವುದು, ಜನಾಂಗಳ ಮಧ್ಯೆ ಇರತಕ್ಕ ಯೋಗ್ಯತೆಯನ್ನು ಕಳಕೊಳ್ಳುವುದು.

(ಮುಂದುವರಿಯುವುದು.)

ವರ್ತಮಾನ ಸಂಗ್ರಹ.

ಒಳದೇಶ

ಹೊಸ ಚೀಫ್‌ಕಮಿಷನರ ಭೇಟಿಗಾಗಿ ಕಮಿಷನರೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಕಳೆದ ಆದಿತ್ಯವಾರ ಮೈಸೂರಿಗೆ ಹೋಗಿದ್ದರು

ಕೊಡಗಿನ ಸಿವಿಲ್ ಕೋರ್ಟುಗಳಿಗೆ ಏಪ್ರಿಲ್ ತಾ 11 ರಿಂದ ಮೇ ತಾ 22ರ ವರೆಗೆ ಬೇಸಿಗೆ ಕಾಲದ ರಜೆಯು ಏಡ ಲಾಗುವದೆಂದು ತಿಳಿಯುತ್ತೇವೆ

ಕೊಡಗಿನ ಚೀಫ್ ಕಮಿಷನರಾಗಿದ್ದ ಮಿ ಯಸ್ ಇ ಪಿಯರ್ಸ್‌ರವರು ಈ ತಾ 11ನಲ್ಲಿ ಮಿ ಎಲ್ ಯಂ ಕ್ರಂಪ ರವರಿಗೆ ಚಾರ್ಜುಕೊಟ್ಟು 6 ತಿಂಗಳ ರಜೆಯಲ್ಲಿ ಇಂಗ್ಲೆಂಡಿಗೆ ಹೊರಟು ಹೋದರು.

ರೇಂಜರಾಗಿರುವ ಮಿ ಮಂಡೇಟ್ಟಿರ ಸುಬ್ಬಯ್ಯನವರ ಪತ್ನಿಯವರು ಹೆತ್ತು ಮೂರು ದಿನಗಳಲ್ಲಿ ನಿನ್ನೆ ರಾತ್ರಿ ಮಡಿಕೇರಿಯಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಒಕ್ಕಲಿಗರ ಸಂಘದ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ನೇಮಿಸಲ್ಪಟ್ಟಿರುವ ಉಪಕಮಿಟಿಯವರು ತಮ್ಮ ಮೀಟಿಂಗೊಂದನ್ನು ಈ ತಾ 17ರ ರಾತ್ರಿ ಸಂಘದ ಆಫೀಸಿನಲ್ಲಿ ನಡಿಸಿ ತಮ್ಮ ಕೆಲಸವನ್ನು ಮುಗಿಸಿದರೆಂದು ತಿಳಿಯುತ್ತೇವೆ

ಮೂರ್ನಾಡು ಒಳಗಿನ ಗ್ರಾಮದ ಕಂಬೀರಂಡ ಪೊನ್ನಪ್ಪನವರ ದೊಡ್ಡ ದೇದ ಮಗಳೊಬ್ಬಳು ಈ ತಾ 21ರಲ್ಲಿ ಒಳ್ಳೆ ಬೇರಿ ಕಡವಿನಲ್ಲಿ ಹೊಳೆಗೆ ಬಿದ್ದು ಪ್ರಾಣಹತ್ಯ ಮಾಡಿಕೊಂಡಳೆಂದೂ, ಕಾರಣ ಇನ್ನೂ ತಿಳಿದಿರುವದಿಲ್ಲವೆಂದೂ ವರ್ತಮಾನ

ಕೊಡಗಿನ ಆಡಳಿತ ಶಾಸನವನ್ನು ತಯಾರಿಸಲು ಎಲ್ಲಾ ಪಾರ್ಟಿಗಳ ಸಭೆಯಿಂದ ನೇಮಿಸಲ್ಪಟ್ಟಿರುವ ಉಪಕಮಿಟಿಯ ಮೀಟಿಂಗು ಈ ತಾ. 17ರ ರಾತ್ರಿ ಒಕ್ಕಲಿಗರ ಸಂಘದ ಹಾಲ್‌ನಲ್ಲಿ ನಡೆಯಿತು ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ

ಹೊಸ ಚೀಫ್ ಕಮಿಷನರಾದ ಮಿ ಕ್ರಂಪ್‌ರವರು ಮಡಿಕೇರಿಗೆ ಈ ತಾ 26ರಲ್ಲಿ ಬಂದು, ತಾ. 29ರಲ್ಲಿ ಒಂದು ದರ್ಬಾರನ್ನು ನಡಿಸುವರೆಂದೂ, ಆ ದರ್ಬಾರಿಗೆ ಐದುವಂತೆ ಸುಮಾರು 300 ಜನರಿಗೆ ಆಮಂತ್ರಣ ಕಳುಹಿಸಲಾಗುವದೆಂದೂ ವರ್ತಮಾನವಿದೆ

ಮೈಸೂರು ಪ್ರಾಂತ್ಯದ ಚೀಫ್ ಇಲೆಕ್ಟ್ರಿಕ್ ಇಂಜಿನೀಯರಾದ ಮಿ ಪೋರ್ಬ್ಸ್‌ರವರು 7 ತಿಂಗಳು ರಜೆಯಲ್ಲಿ ಹೋಗುವದರಿಂದ ಮಿ. ಕೋದಂಡ ಯಂ ಕಾರ್ಯಪ್ಪನವರು ಅವರ ಬದಲು ಚೀಫ್ ಇ ಇಂಜಿನೀಯರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ

ಕೊಡಗಿನ ಸಿವಿಲ್ ಸರ್ಜನರಾಗಿದ್ದ ಮೇಜರ್ ತಾಂಟನ್‌ರವರು 8 ತಿಂಗಳ ರಜೆಯಲ್ಲಿ ಈ ತಾ 20ರಲ್ಲಿ ಇಂಗ್ಲೆಂಡಿಗೆ ಹೊರಟು ಹೋದರು ವೀರರಾಜಪೇಟೆಯಲ್ಲಿ ಅಸಿಸ್ಟಂಟ್ ಸರ್ಜನರಾಗಿದ್ದ ಮಿ ಡಿ ಸ್ವಾಮಿಯವರು ಈಗ ಮಡಿಕೇರಿ ಆಸ್ಪತ್ರೆಯ ಚಾರ್ಜಿನಲ್ಲಿರುವರು ಮೆಡಿಕಲ್ ಇಲಾಖೆಯವರು ತಾ 19ರ ಸಾಯಂಕಾಲ ತಾಂಟನ್‌ರವರಿಗೆ ಒಂದು ಟೀ ಪಾರ್ಟಿಯನ್ನು ಕೊಟ್ಟರು

ಬ್ರಾಹ್ಮಣೇತರರ ಸಂಘದ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವ ಶ್ರೀಯುತ ಯ ನ . ಸತ್ಯಮೂರ್ತಿಯವರಿಗೆ ಏಪ್ರಿಲ್ ತಾ 21 ಮತ್ತು 22 ಅನಾನುಕೂಲವಾದುದರಿಂದ ತಾ 28 ಮತ್ತು 29ರಲ್ಲಿ ಸಭೆಯನ್ನು ನಡಿಸಲು ಸಾಧ್ಯವೋ ಎಂದು ಅವರು ಕೇಳಿಕೊಂಡ ಕಾರಣ ಇದನ್ನು ತೀರ್ಮಾನಿಸಲು ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಈ ತಾ 29 ರಲ್ಲಿ ಮಡಿಕೇರಿಯಲ್ಲಿ ನಡೆಯುವದು.

ಈ ತಾ 18ರಲ್ಲಿ ನಡೆಯಬೇಕಾಗಿದ್ದ ಕೊಡಗು ವಿದ್ಯಾಭಿವೃದ್ಧಿ ಫಂಡಿನ ಮೀಟಿಂಗು ಆ ದಿನವು ನಡೆಯಲಿಲ್ಲ ಆ ದಿನ ದೇವಸ್ಥಾನದ ಹಾಲ್‌ನಲ್ಲಿ ನೆರೆದಿದ್ದವರು, ಸೆಕ್ರೆಟರಿಯವರು ಎಲ್ಲಾ ಮೆಂಬರುಗಳಿಗೆ ನೋಟೀಸು ಕೊಡದ್ದರಿಂದಲೂ ಮತ್ತು ಈ ಮೀಟಿಂಗಿನ ನೋಟೀಸು ಎರೇ ಮೂರು ದಿನವಾದುದರಿಂದಲೂ, ಈ ಮೀಟಿಂಗನ್ನು ನಡಿಸದೆ, ಜನರಲ್ ಮೀಟಿಂಗು ಏಪ್ರಿಲ್ ತಾ. 15ರಲ್ಲಿ ನಡೆಯುವದೆಂದು ಎಲ್ಲಾ ಮೆಂಬರುಗಳಿಗೂ ನೋಟೀಸು ಕೊಡುವಂತೆ ತೀರ್ಮಾನಿಸಿದರು.

ಕಳೆದ ದಸರ ಹಬ್ಬದ ಸಮಯದಲ್ಲಿ ಮಡಿಕೇರಿಯಲ್ಲಿ ಮಹಮ್ಮದೀಯರ ಮಸೀದಿಯ ಎದುರುಗಡೆ ರಸ್ತೆಯಲ್ಲಿ ಹಿಂದುಗಳು ಬಜನೆಮಾಡಿಕೊಂಡು ಹೋಗಕೂಡದೆಂದು ಮಹಮ್ಮದೀಯರು ತಡೆದದ್ದರಿಂದ ಜಗಳವಾಗಿ ಮುಸಲ್ಮಾನರ ಮೇಲೆ ಪೋಲೀಸು ಕೇಸು ನಡೆಯುತ್ತಿದೆ ಹಿಂದುಗಳು ಮಸೀದಿಯ ಮುಂದೆ ಸಾಹಿತ್ಯ (ತಾಳ ಮದ್ದಳೆ ವಗೈರೆ) ಇಲ್ಲದೆ ಭಜನೆ ಮಾಡಿಕೊಂಡು ಹೋಗಬಹುದೆಂದು ಹಿಂದೂ ಮುಸಲ್ಮಾನರು ಒಪ್ಪಿ ರಾಜಿಯಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಹಿಂದೂದೇಶ.

ಪೋಸ್ಟೇಜು ಚಾರ್ಜನ್ನು ಮತ್ತು ಉಪ್ಪಿನ ಸುಂಕವನ್ನು ಕಡಿಮೆಮಾಡಬೇಕೆಂಬ ಠರಾವುಗಳು ಅಸೆಂಬ್ಲಿಯಲ್ಲಿ ನಾಪಾಸಾದುವು.

ಬಂಗಾಳ ಕೌನ್ಸಿಲಿನಲ್ಲಿ ಮಂತ್ರಿಗಳ ಸಂಬಳವನ್ನು ಮಂಜೂರು ಮಾಡಕೂಡದೆಂಬ ಸ್ವರಾಜ್ಯ ಪಾರ್ಟಿಯವರ ಠರಾವು ಪಾಸಾಗಲಿಲ್ಲ

ಮಹಾತ್ಮಗಾಂಧಿಯವರ ಆರೋಗ್ಯವು ಪೂರಾ ಚೆನ್ನಾಗಿರಲಿಲ್ಲವೆಂದೂ ರೋಗ ಉಲ್ಬಣವಾಗುತ್ತಾ ಬರುತ್ತಿದೆಯೆಂದೂ ತಿಳಿಯಬರುತ್ತದೆ

ಕಲ್ಕತ್ತಾ ಮುನ್ಸಿಪಲ್ ಕಮಿಟಿಯ ಚುನಾವಣೆಯಲ್ಲಿ ಶ್ರೀಯುತ ಸುಭಾಸ್ ಚಂದ್ರ ಬೋಸ್‌ರವರು ವಿರೋಧಿಗಳಿಲ್ಲದೆ ಚುನಾಯಿಸಲ್ಪಟ್ಟಿರುವರು

ಅಸೆಂಬ್ಲಿಯ ಸ್ಟೇಂಡಿಂಗ ಕಮಿಟಿಯ ಚುನಾವಣೆಗೆ ಸ್ವರಾಜ್ಯಪಾರ್ಟಿ ಅಸೆಂಬ್ಲಿ ಮೆಂಬರ ಗಳ್ಯಾರೂ ಉಮೇದುವಾರರಾಗಿ ನಿಲ್ಲುವದಿಲ್ಲವೆಂದು ಅವರು ತೀರ್ಮಾನಿಸಿಕೊಂಡಿರುವರು

ಕಲ್ಕತ್ತಾ ಪೋಲೀಸಿನವರು ಸೈಮನ್ ಕಮಿಷನ್ ಬಹಿಷ್ಕಾರದ ಹರತಾಳದ ಸಮಯದಲ್ಲಿ ನಡಿಸಿದ ಅಕ್ರಮಗಳನ್ನು ಕುರಿತು ಬಂಗಾಳ ಕೌನ್ಸಿಲಿನ ಒಬ್ಬ ಮೆಂಬರು ಒಂದು ಪ್ರಶ್ನೆ ಕೇಳಿದಾಗ ... ಬಿಡಿಸಿ ಮಾತಾಡಿದರು.

ಅಸೆಂಬ್ಲಿಯಲ್ಲಿ ಸ್ವರಾಜ್ಯಪಾರ್ಟಿ ಮೆಂಬರುಗಳು ಸಾಂಡರ್ಸ್ ಸಿಯರ‍ರ ಟೀಪಾರ್ಟಿಗಳಿಗೆ ಹೋಗುವದಿಲ್ಲವಾದ್ದರಿಂದ ಸ್ವರಾಜ್ಯಪಾರ್ಟಿಯವರು ಅಸೆಂಬ್ಲಿಯ ಅಧ್ಯಕ್ಷರಾದ ಸರದಾರ ಪಟೇಲರವರಿಗೆ ಕೊಟ್ಟ ಟೀಪಾರ್ಟಿಗೆ ಯೋರೋಪಿಯನರು ಹೋಗಲಿಲ್ಲ

ಏಪ್ರಿಲ್ ತಿಂಗಳ ಮಧ್ಯದಲ್ಲಿ ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ಲಾ ಮೆಂಬರಾದ ಮಿ ಎಸ್ ಆರ ದಾಸ್‌ರವರು ನಾಲ್ಕು ತಿಂಗಳು ರಜೆಯಲ್ಲಿ ಹೋಗುವಾಗ ಬೊಂಬಾಯಿ ಹೈಕೋರ್ಟಿನ ಅಡ್ವೋಕೇಟರಾದ ಮಿ ಡಿ. ಎನ್ ಮುಲ್ಲಾರವರು ತಾತ್ಕಾಲಿಕವಾಗಿ ನೇಮಿಸಲ್ಪಡುವರು

ಸತಾರ ಡಿಸ್ಟ್ರಿಕ್ಟಿನ ಮಸೂರಿನ ಕ್ರಿಸ್ತ ಬಿಶಪ್ ಆಶ್ರಮದ ಸೆಕ್ರೆಟರಿಯವರು ಗೋವಾದಲ್ಲಿ ... ಕಳೆದ ನಡಿಸಿದ ಶುದ್ಧಿವಿಧಿಯಿಂದ 370 ಜನ ಕ್ರೈಸ್ತರನ್ನು (ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟ ಹಿಂದೂಗಳನ್ನು) ಪುನಃ ಹಿಂದೂ ಮತಕ್ಕೆ ಸೇರಿಸಿದರು ... ಸನಾತನ ಸಭೆಯವರಿಗೂ ಅಲ್ಲಿಯ ಸರಕಾರದವರ ಸಹ ಹಿಡಿದಿರುವರು.

ವಿದೇಶ.

ಈಜಿಪ್ಟಿನ ಹೊಸ ಪ್ರಧಾನ ಮಂತ್ರಿಯವರ ನಹಾಸ್ ಪಾಷಾರವರು ಈಜಿಪ್ಟಿನ ಸಂಪೂರ್ಣ ಸ್ವಾತಂತ್ರ್ಯಕ್ಕೆ ವಿರೋಧವಾಗದ ಯಾವ ಷರತ್ತುಗಳಿಂದಲೂ ಬ್ರಿಟಿಷರ ಸಂಗಡ ಒಪ್ಪಂದ ಮಾಡಲು ಅವರ ಸರಕಾರವು ತಯಾರಿದೆ ಎಂದು ಹೇಳಿರುವರು.

ಮೇನಲ್ಲಿ ನಡೆಯುವ ಒಲಿಂಪಿಕ್ ಗೇಮ್ಸ್ ಕಾನ್ ಫರೆನ್ಸಿಗೆ ಇಂಡಿಯಾ ಸರಕಾರದ ಪರ ಸರ್ ಅಬ್ದುಲ್ ಕರೀಮ್ ... (ಪಂಜಾಬು) ಮತ್ತು ಡಾಕ್ಟರ್ ಪರಾಂಜಪೆ ... ನಾಗೇಶ್ವರ ... ಬೆಂಗಾಲ ... ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು.

ನೋಟೀಸು.

ಮಡಿಕೇರಿ ಮುನಿಸಿಪಲ್ ಆಫೀಸಿನಿಂದ ತಾ 20—3—28

ಸನ್ 1928ನೇ ಇಸವಿ ಏಪ್ರಿಲ್ ತಾರೀಕು 1ರ ಆರಂಭ ಮೊದಲ್ಗೊಂಡು 1929ನೇ ಇಸವಿ ಮಾರ್ಚಿ ತಾರೀಕು 31ರ ವರೆಗೆ ಮಡಿಕೇರಿ ಮುನಿಸಿಪಾಲಿಟಿ

ಅಸ್ಸರ್ ಬಜಾರು ಕಸ ಮತ್ತು ಮಡಿಕೇರಿ ಮಹದೇವಪೇಟೆ ಕಟ್ಟೆಯಲ್ಲು ಪ್ರತಿ ದಿವಸವೂ ಸಂತೆ ವಸೂಲಿ ಮಾಡುವ ಹಕ್ಕನ್ನು ಮತ್ತು ಮುನಿಸಿಪಲ್ ಮಾರ್ಕೆಟ್ಟಿನೊಳಗೆ ಮತ್ತು ಮುನಿಸಿಪಾಲಿಟಿಗೆ ಸೇರಿದ ಜಾಗದಲ್ಲಿ ಸಂತೆ ದಿವಸ ವಸೂಲು ಮಾಡುವ ಹಕ್ಕನ್ನು ಮತ್ತು

ಮುನಿಸಿಪಲ್ ಏರಿಯಾದೊಳಗಿನಲ್ಲಿ ಬಿದ್ದಿರುವ ಗೊಬ್ಬರವನ್ನು ಮತ್ತು ಕಸ ಕಡ್ಡಿ ... ಹಿಂದುಗಡೆ ಜಮೀನು ಆದ ಕರಿ ಗೊಬ್ಬರಗಳನ್ನು ಕೊಂಡು ಹೋಗುವ ಹಕ್ಕನ್ನು ಸಹ ಇದೇ ಮಾರ್ಚಿ ತಾರೀಕು 30ನೇ ಶುಕ್ರವಾರ ದಿನ ಮಧ್ಯಾಹ್ನ 1 ಘಂಟೆ ಸಮಯಕ್ಕೆ ಮುನಿಸಿಪಲ್ ಆಫೀಸು ಮುಂದುಗಡೆ ಏಲಂ ಮಾಡಲ್ಪಡುವದು. ಷರತ್ತುಗಳನ್ನು ಮುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳತಕ್ಕದ್ದು

ಯಂ. ಭುಜಂಗರಾವ್,
ಪ್ರೆಸಿಡೆಂಟ್

ಕೊಡಗು ಗೌಡ ವಿದ್ಯಾಭಿವೃದ್ಧಿ ಸಂಘ.

ಈ ಕೆಳಗಿನ ಮಹಾಶಯರು ಶಾಶ್ವತ ಫಂಡಿಗೆ ... ಮುಂದಿನ ಕಂತುಗಳಿಗೆ ಉದಾರಭಾವದಿಂದ ಚಂದಾ ಪಾವತಿ ಮಾಡಿರುವರು. ಇದೇ ರೀತಿಯಲ್ಲಿ ... ಕ್ಕಿಂತ ಹೆಚ್ಚಾಗಿ ಪಾವತಿಮಾಡಿದ ಮಹಾಶಯರುಗಳ ಹೆಸರುಗಳನ್ನು ಅವರು ಪಾವತಿ ಮಾಡುತ್ತಾ ಬಂದ ಹಾಗೆ ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಬರುತ್ತೇವೆ

1	ಮಿ ಕುಟುವಾರನ ಕುಶಾಲಪ್ಪನವರು,	ರೂ	25
2	,, ಚೆರಿಯ ಮನೆ ಕುಶಾಲಪ್ಪನವರು,	,,	6
3	ಬರಿಯಮನೆ ಸಂಬಯ್ಯನವರು,		5
4	,, ಪಾಲೆಯಂಡ ಪದ್ಮಯ್ಯನವರು		5
5	ಶ್ರೀಮತಿ ಚಿಕ್ಕಡ ಅಕ್ಕಮ್ಮನವರ	,,	5
6	ಮಿ ಕಂಡೇಲ್ಲ ಸುಬ್ಬಯ್ಯನವರು,	,,	5
7	,, ಬಳ್ಳಿಯಾರನ ಸುಬ್ರಾಯನವರ	,,	5

ಮಡಿಕೇರಿ ಯನ್. ಮುದ್ದಪ್ಪ,
ತಾ 22—3—28 (ಪ್ರೆಸಿಡೆಂಟ್)

WANTED

An Anglo Indian or Indian Aya to look after a child aged eight months Travelling, Boarding Clothes and food given free Salary 150 per annum Only those willing to travel from Coorg to Central Province need apply in person to Mrs K D Kuttappa

Kaikeri Village,
Gonikoppal Post
(South Coorg)

ಬೇಕಾಗಿದ್ದಾಳೆ.

8 ತಿಂಗಳು ಪ್ರಾಯದ ಒಂದು ಮಗುವಿನ ಪೋಷಣೆಗಾಗಿ ಒಬ್ಬ ಇಂಡಿಯನ್ ಅಥವಾ ಆಂಗ್ಲೋ ಇಂಡಿಯನ ಆಯ ಬೇಕಾಗಿದ್ದಾಳೆ ಪ್ರಯಾಣದ ಚಾರ್ಜು ಊಟ ಬಟ್ಟೆ ಕೊಡುತ್ತೇವೆ ವರ್ಷಕ್ಕೆ ರೂ 150 ಸಂಬಳ ಕೊಡಲಾಗುವದು ಕೊಡಗಿನಿಂದ ಸೆಂಟ್ರಲ ಪ್ರಾವಿನ್ಸಿಗೆ ಹೋಗಲು ತಯಾರಾದವರು ಮಾತ್ರ ಈ ಕೆಳಗಿನ ಅಡ್ರೆಸ್ಸಿಗೆ ಖುದ್ದು ಬಂದು ಅಪ್ಲಿಕೇಶನ್ ಕೊಡತಕ್ಕದ್ದು ಮಿಸೆಸ್ ಕೆ ಡಿ ಕುಟ್ಟಪ್ಪ,

ಕೈಕೇರಿ ಗ್ರಾಮ,
4—3 ಗೋಣಿಕೊಪ್ಪಲು
(ದ ಕೊಡಗು)

EXECUTIVE ENGINEER'S OFFICE,
Mercara the 2nd March 28

NOTICE

It is hereby notified for general information that the building known as Inspection Bungalow at Kunnimotte whose details are given below will be auctioned by the undersigned on 16th April 28 at 11 A m at the site All intending purchasers are requested to be present at the place and at the time mentioned The building will be knocked down to the highest bidder

Intending bidder will have to deposit Rs 25 at the beginning of the sale. The amount of the unsuccessful bidder will be refunded as soon as the sale is closed The successful bidder should pay 25% of the sale amount on the spot The balance money must be paid at the Mercara Sub Divisional Office on or before 16—3—28 failing which the building will be resold at his risk

The sale will be subject to the approval of the Executive Engineer, Coorg Division

DETAILS

Inspection Bungalow at Kunnimotte	Superficial Plinth area including verandahs	Cub contents
Land 1 37 acres		
Main building.	2,129	34 064
Out House.	558	5,501
Latrine	67	436
Bullock shed	288	2 592

Sd/—C A Rajagopala Iyengar
3—3 Offg Executive Engineer Coorg

Coorg District Magistrate's Office
Mercara Dated the 16th March 1928

COMMUNIQUE.

Applications are invited for the post of a Traffic Inspector on Rs 80/— per mensem for a period of one year, with effect from 1—5—28 The applicant should possess a sound knowledge of the mechanism of motor vehicles Application with copies of testimonials should reach the undersigned by the 10th April 1928

K. Chengappa
District Magistrate

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ಯುವಕ ಸಂಘ.

ಮಹನೀಯರೆ,

" A nation rises or falls with her youths. 'ಒಂದು ಜನಾಂಗದ ಏಳುವಿಕೆಗೂ, ಬೀಳುವಿಕೆಗೂ ಅದರ ಯುವಕರೇ ಕಾರಣ' ಎಂಬ ಲೋಕೋಕ್ತಿಯು ಎಲ್ಲಾ ಜನಾಂಗಳ ಚರಿತ್ರೆಯ ಸಾರಾಂಶವಾಗಿರುತ್ತದೆ. ಆಗಿರುವಾಗ್ಯೆ ಕೊಡಗು ದೇಶವೂ, ಅದರ ಮಹತ್ವವೂ, ಅದರ ಯುವಕರಿಂದಲೇ ಅಭಿವೃದ್ಧಿಯನ್ನು ಹೊಂದಬೇಕು. ಈಗಾಗಲೇ ಲೋಕದ ಪ್ರತಿಯೊಂದು ಜನಾಂಗದವರು ಈ ಮಾತಿನ ಸ್ವಾರಸ್ಯವನ್ನು ತಿಳಿದವರಾಗಿ ತಮ್ಮ ತಮ್ಮ ದೇಶಗಳಲ್ಲಿ ಯುವಕ ಸಂಘಗಳನ್ನು (Youth Movements) ಸ್ಥಾಪಿಸಿ ಸರ್ವ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದಾರೆ. ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಈ ಸಂಘಗಳು ಸಂಘವಾಸ್ಥಾನಿಕರುವವರ ಮುತುವರ್ಜಿಯಿಂದ ಸ್ಥಾಪಿತವಾಗಿ ತಮ್ಮ ತಮ್ಮ ಕಾರ್ಯಗಳನ್ನು ತೃಪ್ತಿಕರವಾಗಿ ನಡಿಸುತ್ತಾ ಬರುತ್ತಿವೆ. ಈ ಸಮಯದಲ್ಲಿ ಕೊಡಗು ದೇಶದ ಯುವಕರು ಸಹ ತಮ್ಮ ಮುಂದಿನ ಮಹತ್ತರವಾದ ಕಾರ್ಯವನ್ನು ಮರೆತು ಆಲಸ್ಯರಾಗಿರುವದು ಮಾತ್ರ ತಮ್ಮ ಕರ್ತವ್ಯವೆಂದು ತಿಳಿದು ನಿದ್ದೆಗೈದರೆ ಎಷ್ಟರಮಟ್ಟಿಗೆ ತಮ್ಮ ದೇಶೋದ್ಧಾರಕ್ಕಾಗಿ ಏನ್ನರವು ಟ್ಟಿಗೆ ತಾವು ಸಹಾಯಮಾಡಲು ಅರ್ಹರೋ ಅಷ್ಟರವರೆಗೆ ವಾಚಕ ಮಹಾಶಯರೇ ತಿಳಿಯತಕ್ಕದ್ದು.

ಈ ಯುವಕ ಸಂಘಕ್ಕೂ, ಈಗಿನ ರಾಜಕೀಯ ಚಳವಳಿಗೂ ಏನೊಂದು ಸಂಬಂಧವಿರುವದಿಲ್ಲ. ಈ ಸಂಘದ ಧ್ಯೇಯಗಳನ್ನೂ, ಕಾರ್ಯವ್ಯವಹಾರಗಳನ್ನೂ ಕುರಿತು ಸಾವಧಾನದಿಂದಿರುವವರು ಮಂಗಳೂರಿನಲ್ಲಿ ಮಾಡಿದ ಭಾಷಣ ವನ್ನು ಓದಿ ಕಾಲೇಜ್ ವಿದ್ಯಾರ್ಥಿಯು ವಿವರಿಸುವೆನು. ಹೆಟ್ಟಿನ ಸಂಗತಿ ತಿಳಿಯಲು " ವಿದ್ಯಾರ್ಥಿಗಳ ಕೋರಿಕೆಗಳಿಗೆ ಕಲ್ಪನೆಕ್ಕನಂತಿರುವ ಶ್ರೀಯುತ ಸತ್ಯಮೂರ್ತಿಯವರನ್ನು ಈ ಸಂಘದ ಅಧಿವೇಶನದ ಅಧ್ಯಕ್ಷರನ್ನಾಗಿ ಮಾಡಿ ಅವರಿಂದ ತಿಳಿಯಲ್ಪಟ್ಟಿತು. ಈ ಮಹನೀಯರು ನಮ್ಮ ಅಧ್ಯಕ್ಷರಾಗಿ ನಮ್ಮ ಮುಂದಿನ ಏಪ್ರಿಲ್ ತಿಂಗಳಲ್ಲಿ ಬರುವುದರಿಂದ ಆ ಸಮಯದಲ್ಲಿ ಕೊಡಗು ದೇಶದ ಎಲ್ಲಾ ಯುವಕರು ತಪ್ಪದೆ ಸೋಮವಾರಪೇಟೆಗೆ ಬರಬೇಕಾಗಿ ಕೋರಿಕೆ. ಕೊಡಗು ದೇಶದ ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳೂ, ಹೊರದೇಶದಲ್ಲಿ ಓದುತ್ತಿರುವ ವಿದ್ಯಾರ್ಥಿಗಳೂ, ವಿದ್ಯಾರ್ಥಿಗಳಲ್ಲದ ಯುವಕರೂ ಸಂತೋಷದಿಂದ ಸೋಮವಾರಪೇಟೆಗೆ ಜಮೀನ್ದಾರರ ಸಂಘದ ಸಮ್ಮೇಳನದ ದಿವಸ ದಯಮಾಡಿಸಬೇಕಾಗಿ ಕೋರುತ್ತೇವೆ.

ಕೊಡಗು ದೇಶದ ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಎರಡು ತರದ ಅಡಚಣೆಗಳು ಕಾಣಬರಬಹುದು. ಈ ಸಂಘಕ್ಕೂ, ಈಗಿನ ರಾಜಕೀಯ ಚಳವಳಿಕ್ಕೂ ಏನಾದರೂ ಸಂಬಂಧವಿರಬಹುದೆಂಬುದೊಂದು, ಅಷ್ಟು ದೂರದಲ್ಲಿರುವ ಸೋಮವಾರಪೇಟೆಗೆ ಹೋಗುವುದು ಹೇಗೆ ಎಂಬುದು ಮತ್ತೊಂದು. ಒಂದನೆಯ ಅಡಚಣೆಗೆ ಆಧಾರವೇ ಇಲ್ಲ. ಯಾತಕ್ಕೆಂದರೆ, ಹಿಂದೂಸ್ಥಾನದ ಇತರ ಕಡೆಗಳಲ್ಲಿ ಸ್ಥಾಪಿತವಾಗಿರುವ ಈ ಸಂಘದ ಮೆಂಬರುಗಳು ಕೇವಲ ಸರಕಾರಿ ಉದ್ಯೋಗಸ್ಥರು, ಶಾಲಾ ಉಪಾಧ್ಯಾಯರುಗಳು ಮತ್ತು ಶಾಲಾ ವಿದ್ಯಾರ್ಥಿಗಳೇ ಆಗಿರುತ್ತಾರೆ. ಮಂಗಳೂರು ಯುವಕ ಸಂಘದ ಮೊದಲನೆಯ ಅಧಿವೇಶನವು ಗವರ್ನಮೆಂಟ್ ಕಾಲೇಜ್ ಹಾಲಿನಲ್ಲಿ ಸೆಂಟ್ ಎಲಾಯಿಸಿಯಸ್ ಕಾಲೇಜ್ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ನಡೆಯಿತು. ಇದು ರಾಜಕೀಯ ಚಳವಳಿಕ್ಕೆ ಸಂಬಂಧಪಟ್ಟ ಚಳವಳವಾಗಿದ್ದರೆ ಗವರ್ನಮೆಂಟ್ ಕಾಲೇಜ್ ಪ್ರಿನ್ಸಿಪಾಲರು ಸ್ಥಳ ಕೊಡುತ್ತಲೂ ಇರಲಿಲ್ಲ, ಮತ್ತು ಎಲಾಯಿಸಿಯಸ್ ಕಾಲೇಜ್ ಪ್ರಿನ್ಸಿಪಾಲರು ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪುತ್ತಲೂ ಇರಲಿಲ್ಲ. ಇದರಿಂದ ಇದು ರಾಜಕೀಯ ಚಳವಳವಲ್ಲವೆಂಬುದು ವೇದ್ಯವಾಗುತ್ತದೆ.

ಎರಡನೆಯದು—ದೂರದ ವಿಷಯ. ಇಂಥಾ ಮಹಾಕಾರ್ಯಗಳನ್ನು ನಡೆಸುವಾಗ ಅಲ್ಪಸಂಕಷ್ಟಗಳನ್ನು ಎಣಿಸಬಾರದು. ಎಲ್ಲಾ ಯುವಕರು ವೀರರಾಜೇಂದ್ರಪೇಟೆ ಮತ್ತು ಮಡಿಕೇರಿ ಎರಡು ಸ್ಥಳಗಳಲ್ಲಿ ಎರಡು ದಿವಸಕ್ಕೆ ಮೊದಲು ಸೇರಿ ಒಟ್ಟಾಗಿ ನಡೆದು ಹೋದರೆ, ಬಳಲಿಕೆಗಾಗಿ ಬಹು ಸುಲಭದಿಂದ ಹೋಗಬಹುದು. ಈ ವಿಷಯದಲ್ಲಿ ಬೇಕಾದ ಸಹಾಯವನ್ನು ನಾವು ಕೊಡಲು ಸಿದ್ಧರಾಗಿದ್ದೇವೆ.

ಜಮೀನ್ದಾರರ ಸಂಘದ ಅಧ್ಯಕ್ಷರು ಮತ್ತು ಸೆಕ್ರೆಟರಿಯವರು ಈ ವಿಷಯದಲ್ಲಿ ಅವರ ಸರ್ವ ಸಹಾಯವನ್ನು ನಮಗೆ ಕೊಡಬೇಕಾಗಿ ಅವರನ್ನು ಕೋರುತ್ತೇವೆ. ಮಹಾಸಭೆಯ ಸ್ವಾಗತದ ಕಮಿಟಿಯ ಪ್ರೆಸಿಡೆಂಟರು ಸಹ ನಮಗೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ನಮ್ಮ ವಿನಂತಿ. ಸಂಘದ ಪ್ರೆಸಿಡೆಂಟರು ಶ್ರೀಯುತ ಸತ್ಯಮೂರ್ತಿಯವರ ಸಮಯವನ್ನು ತಿಳಿದು ಸಂಘದ ಕಾರ್ಯಕ್ರಮ ಪಟ್ಟಿಯಲ್ಲಿ (" Youth Conference') ಯುವಕ ಸಂಘದ ಸಮ್ಮೇಳನಕ್ಕೆ ಪ್ರತ್ಯೇಕ ಸಮಯವನ್ನು ಕಾಣಿಸಬೇಕಾಗಿ ಈ ಮೂಲಕ ಬೇಡಿಕೊಳ್ಳುತ್ತೇವೆ.

ಈ ಪತ್ರಿಕೆಯನ್ನು ಓದುವ ಮಹನೀಯರು ಈ ಬಾತ್ಮಿಯನ್ನು ತಮ್ಮ ತಮ್ಮ ಮನೆ ಮತ್ತು ಊರಿನ ಯುವಕರಿಗೆ ತಪ್ಪದೆ ತಿಳಿಸಬೇಕಾಗಿ ನಮ್ಮ ಕೋರಿಕೆ.

ಮಂಗಳೂರು,
ತಾ. 20—3—'28.

ಪಿ. ಜಿ. ಐಯ್ಯಪ್ಪ,
ಬಿ. ಯಂ. ಕಾರ್ಯಪ್ಪ,
ಯನ್. ಜಿ. ಉತ್ತಯ್ಯ,
ಕೆ. ಯಂ. ನಂಜುಂಡ.

ರೆಡ್‌ಕ್ರಾಸ್ ಸಂಘ.

ಅಯ್ಯಾ,

ರೆಡ್ಡ್‌ಕ್ರಾಸ್ ಸಂಘದ ಕೊಡಗು ಶಾಖೆಯವರು ತಾ 13—3—28ನೇ ಮಂಗಳವಾರ ರಾತ್ರಿ ಪೊದವಾಡ ಗ್ರಾಮದ ಕೋಡಿರ ಮನೆ ಬಳಿ ಶಿಶು ಪರಿಪಾಲನೆ, ಮಲೇರಿಯ ಜ್ವರ ಸಂಭವಿಸುವಿಕೆ, ಅದರ ನಿವಾರಣೆ ಮತ್ತು ಕುಡಿ ಕತವದ ಪರಿಣಾಮ ವಗೈರೆಯನ್ನು ಛಾಯ ದೀಪದ ಮೂಲಕ ತೋರಿಸಿ ಅದಕ್ಕೆ ತಕ್ಕ ಬೋಧನೆಗಳನ್ನು ಸಹ ಕೊಟ್ಟರು. ಇದನ್ನು ನೋಡಲು ನೂರಾರು ಜನ ಗ್ರಾಮಸ್ಥರು ಸೇರಿದ್ದರು. ಹಳ್ಳಿಯವರಿಗೆ ಈ ನೂತನ ವಿನೋದವನ್ನು ತೋರಿಸಿ ಬೋಧನೆ ಕೊಟ್ಟದಕ್ಕೆ ಸಂಘದವರನ್ನು ಜನಸಂದಣಿಯು ವಂದಿಸುತ್ತದೆ. ಈ ಸಂಘದವರು ಈ ಮೇರೆ ಗ್ರಾಮಸ್ಥರಿಗೆ ಬೋಧನೆ ಕೊಟ್ಟು ಅವರ ತಿಳುವಳಿಕೆಯನ್ನು ಹೆಚ್ಚಿಸಲು ಇನ್ನು ಮುಂದಕ್ಕೂ ಸಹಾಯಕರಾಗಬೇಕಾಗಿ ಕೋರುವ,

ಕೋಡಿರ ತಮ್ಮಯ್ಯ.

ಲೋಕಲ್‌ಫಂಡು ರಸ್ತೆಗಳ ಹೀನಸ್ಥಿತಿ.

ಅಯ್ಯಾ,

ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನವರು ಗ್ರಾಮಗಳೊಳಗೆ ಗಾಡಿ ವಗೈರೆ ಸರಾಸರಿ ತಿರುಗಾಡುವಂತೆ ಮಾಡಲಿಕ್ಕಾಗಿ ಲೋಕಲ್ ಫಂಡು ಬಡ್ಜೆಟ್ಟಿನಿಂದ ಹಣ ಮಂಜೂರು ಮಾಡಿ ಗ್ರಾಮಗಳ ರಸ್ತೆ ರಿಪೇರಿಗಾಗಿ ಹಣ ಕೊಟ್ಟು ರಿಪೇರಿ ಮಾಡಿಸುತ್ತಿರುವರು. ಆದರೆ ಡಿ. ಬೋರ್ಡಿನಿಂದ ಕೊಟ್ಟ ಹಣವು ಸರಿಯಾದ ರಸ್ತೆ ರಿಪೇರಿ ಕೆಲಸದಲ್ಲಿ ಉಪಯೋಗಿಸಲ್ಪಟ್ಟಿದೆಯೋ ಎಂಬುದಕ್ಕೆ ತಕ್ಕಷ್ಟು ಗಮನ ಕೊಡದೆ ಇರುವದು ವ್ಯಸನಕರ.

ಶ್ರೀಮಂಗಲನಾಡಿನ ಲೋಕಲ್‌ಫಂಡು ರಸ್ತೆಗಿಂತ, ಪೊನ್ನಂಪೇಟೆಯ ಆಚೆಗೆ ವೀರಾಜಪೇಟೆಯ ವರೆಗಿನ ಲೋಕಲ್ ಫಂಡು ರಸ್ತೆಯು ಬಹಳ ಹೀನಸ್ಥಿತಿಯಲ್ಲಿ ಇರುವದು ನಾನು ಕಣ್ಣಾರೆ ನೋಡಿದಂತಾಗಿದೆ. ಆ ರಸ್ತೆಗೆ ಕೊಟ್ಟ ಹಣವಾದರೋ ಶ್ರೀಮಂಗಲನಾಡು ರಸ್ತೆಗೆ ಕೊಟ್ಟ ಹಣಕ್ಕಿಂತ ಹೆಚ್ಚಿನ ಮೊಬಲಗೆಂದು ನಾನು ತಿಳಿದೆನು. ಈ ರಸ್ತೆಗಳನ್ನು ನೋಡಲು ಮೇಲಿನ ಅಧಿಕಾರಿಗಳಿಗೆ ತೊಂದರೆಯೇನೂ ಇಲ್ಲ. ಡಿ. ಬೋರ್ಡ್ ಮೆಂಬರುಗಳಾಗಲಿ, ವೈಸ್ ಪ್ರೆಸಿಡೆಂಟರಾಗಲೀ ಆ ರಸ್ತೆಗಳನ್ನು ನೋಡಿರುವುದಿಲ್ಲವೇ? ಹಾಗೆ ನೋಡಿದ್ದ ಪಕ್ಷಕ್ಕೆ ಅವರು ಏನು ಹೇಳುತ್ತಾರೆ? ಅದ್ದರಿಂದ ಗ್ರಾಮನಾಡು ಬೀಳಿಯೊಳಿದ್ದರೂ ರಸ್ತೆಗಳು ಎಲ್ಲಾ ಜನರಿಗೂ ಉ

ಆಲ್ ಇಂಡಿಯ ಯುನೈಟೆಡ್ ವಿಡೋಸ್ ಅಂಡ್ ಪೂವರ್ ಹೌಸ್ ಎಸೋಸಿಯೇಶನ್

ಲಿಮಿಟೆಡ್ ಸಂಘ, ಮಡಿಕೇರಿ.

ಫೆಬ್ರವರಿ ತಾರೀಖು 21ರ ಸಂಚಿಕೆಯಲ್ಲಿ ಇದೇ ಪತ್ರಿಕೆಯಲ್ಲಿ ಪ್ರಕಟಿಸಿದ ಮೇರೆ ಗುಡುಗಳಲೆ ಮೈದಾನದಲ್ಲಿ ನಡೆದ ಮೀಟಿಂಗಿನಲ್ಲಿ ನಮ್ಮ ಸಂಘದ ಬಾಂಡುಗಳನ್ನು ತೆಗೆದುಕೊಂಡ ಮಹನೀಯರ ಹೆಸರುಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ನಂ.	ಬಾಂಡು ಹೋಲ್ಡರುಗಳ ಹೆಸರು.	ಬಾಂಡುಗಳ ಮೊಬಲಗು. ರೂಪಾಯಿ.
1.	ಮಿ. ಸಿ. ಹೆಚ್. ಜಿ. ಕಾಳೇಗೌಡರು, ಪ್ಲಾಂಟರ್, ಗೋಪಾಲಪುರ.	500
2.	„ ಜಿ. ಜಿ. ಬಸಪ್ಪಗೌಡರು, ಪ್ಲಾಂಟರ್ ಮತ್ತು ಬೆಂಚ್ ಮೇಜಿಸ್ಟ್ರೇಟರು, ಬೇಳೂರು.	500
3.	„ ಡಿ. ಪಿ. ಗುರಪ್ಪನವರು, ಬೇಳೂರು	250
4.	„ ಬೇಳೂರು ಮಲ್ಲೇಗೌಡರ ನಂಜೆಗೌಡರು, ಪ್ಲಾಂಟರು.	250
5	„ ಬೆಳ್ಳಾರಳ್ಳಿ ಸಾಂಕ್ಯಯ್ಯನವರ ಬಸವಣ್ಣಯ್ಯನವರು, ಪ್ಲಾಂಟರ್.	250
6.	„ ಚಿಕ್ಕಕುಂದ ಬಿ. ಪಿ. ಕಪನೇಗೌಡರು,	100
7	„ ಶಿರಿಗಳಲೆ ಮಠದ ಪಟ್ಟದ ಚನ್ನಬಸಪ್ಪಸ್ವಾಮಿಗಳು.	50
8.	„ ಗುಡುಗಳಲೆ ಜಂಗಮ ಕಲ್ಲುಮಯ್ಯ ಮಗನೆ ಸಣ್ಣಯ್ಯನವರು	50
9.	„ ಹಂಡ್ಲಿ ಮೊಗಣ್ಣಗೌಡರ ,	50
10	„ ಸುಲುಗಳಲೆ ಜಂಗಮ ತಿಮ್ಮಯ್ಯನವರು,	50
11.	„ ಬೆಟ್ಟದ ಹಳಿ ಬಿ ಮಲ್ಲಪ್ಪನವರು,	50
12.	„ ಊರುಗುತ್ತಿ ಪಟೇಲ್ ಸಿದ್ದೆಗೌಡರು,	50
13.	„ ಗುಡುಗಳಲೆ ಸಣ್ಣಯ್ಯನವರು,	50
14.	„ ದೊಡ್ಡಬಳಸದ ಬಿ ಪಿ. ರುದ್ರಪ್ಪನವರು,	50
15.	„ ಮಿಂಗೋನ್ಸ್‌ರವರು, ಬೇಳೂರು,	50
16.	„ ಹೆಚ್. ಡಿ. ಚೆನ್ನಮಲ್ಲಪ್ಪನವರು, ಡಿ. ಬಿ. ಮೆಂಬರು.	50
17.	„ ಹೊಸಗುತ್ತಿ ವೀರಗೌಡರ ರಾಮೇಗೌಡರ ,	50
18.	„ ಮುಳ್ಳೂರು ಪುಟ್ಟೇಗೌಡರ ಮುತ್ತೇಗೌಡರು,	50
19.	„ ಮುಳ್ಳೂರು ಬಸವೇಗೌಡರ ಪುಟ್ಟಪ್ಪಗೌಡರು,	50
20.	„ ಮುಳ್ಳೂರು ವೀರಪ್ಪಗೌಡರ ಶಾಂತಪ್ಪಗೌಡರು,	50
21.	„ ಕಾಜೂರ್ ರಾಮೇಗೌಡರ ವೀರಪ್ಪಗೌಡರು,	50
22.	„ ಹುಲ್ಲ ಮಲ್ಲೇಗೌಡರ ಪುಟ್ಟಸ್ವಾಮಿಗೌಡರು, ಪ್ಲಾಂಟರು, ಹಾಸನ.	50
23;	„ ಕೆಲಗಳಲೆ ತಿಮ್ಮೇಗೌಡರ ಸುಬ್ಬೆಗೌಡರು, ಪ್ಲಾಂಟರು, ಹಾಸನ	50
24.	„ ಶಿ ಮರಿಗಂಜಪ್ಪನವರ ಮಲ್ಲಪ್ಪನವರು, ಹಾಸನ.	50
25.	„ ಗುಡುಗಳಲೆ ಶಿ. ಸಿಂಗೆಗೌಡರು,	50
26.	„ ಮರೂರು ನಂಜಪ್ಪಗೌಡರು, ಕೊಡ್ಲಿಪೇಟೆ.	50
27.	„ ಬೆಟ್ಟದಳ್ಳಿ ಮಲ್ಲಪ್ಪನವರು, ಪ್ಲಾಂಟರು.	50
28.	„ ಹೆಗ್ಗಡಳ್ಳಿಮಠದ ಶಾಂತಮಲ್ಲಯ್ಯ ಸ್ವಾಮಿಯವರು,	50
29.	„ ಶಿಡಿಗಳಲೆ ಶಿ. ಮಲ್ಲಪ್ಪನವರು,	50
30.	„ ಕಿತ್ತೂರು ರಾಚೆಗೌಡರ ಮಲ್ಲೆಗೌಡರು, ಪಟೇಲರು.	50
31.	„ ಹೊನ್ನಗುಡಿ ಶಿ. ಬಸಪ್ಪಗೌಡರು.	50
32.	„ ಕಾಜೂರು ಬಿ. ಕೆ. ತಿಪ್ಪಣ್ಣನವರು,	50
33.	„ ಮಾವಿನಹಳ್ಳಿ ಚೆನ್ನಬಸಪ್ಪನವರು, ಕೊಡ್ಲಿಪೇಟೆ	50
34.	„ ಹಂಡ್ಲಿ ಪುಟ್ಟೆಗೌಡರ ಮಲ್ಲೆಗೌಡರು,	50
35.	„ ಬಿದರೂರು ಶಿ. ಮಹದೇವಯ್ಯನವರು,	50
36.	„ ಬಿದರೂರು ಬಿ ಯಂ. ಶಿವಶಂಕ್ರನವರು,	50
37.	„ ಸಿ. ಬಿ. ಪೋಲಪ್ಪನವರು, ಪಡುಪುಟ್ಟಗೌಡರು,	50
38.	„ ಬಿದರೂರು ಈರೇಗೌಡರ ಬಸವರಾಜುಗೌಡರು,	50
39.	„ ಹಂಡ್ಲಿ ಹೆಚ್. ಕೆ ವೀರಪ್ಪನವರು,	50
40	„ ಕೂಗೆಹಣಕೋಡು ಮೊಬ್ಬೆ ಪಟೇಲ್ ಸೋಮೇಗೌಡರು,	50
41.	„ ಕೂಗೆಹಣಕೋಡು ಸಿದ್ದರಾಮೇಗೌಡರು,	50

ಟಿ. ಎ. ಕುಪ್ಪಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜಂಟ್ಸ್, ಮಡಿಕೇರಿ.

...ಗವಿರುವ ಕಾರಣ ಸಮ್ಮಂಧಪಟ್ಟ ಅಧಿಕಾರಿಗಳು ಮನ...ಕ್ಕೆ ತಂದು ಎಲ್ಲಾ ರಸ್ತೆಗಳಿಗೂ ಕೆಲಸಕ್ಕೆ ತಕ್ಕಂತೆ ಹಣ ...ರು ಮಾಡಿಸಿ ಕೆಲಸವಾದ ಮೇಲೆ ಪ್ರತಿ ರಸ್ತೆಯನ್ನೂ ...ಶಿಸಿ ನೋಡಿ ಹಣಕ್ಕೆ ಸರಿಯಾದ ಕೆಲಸವು ನಡೆದಿದೆಯೋ ...ದು ಚೆಕ್ಕು ಮಾಡಬೇಕಾದದ್ದು ಅವಶ್ಯ.

ರಸ್ತೆ ನೋಡಿದವ.

ಮಡಿಕೇರಿ ಕಾನ್ವೆಂಟಿನಲ್ಲಿ ಅಂಗಲಾಚಜ್ಜಿ.

ಮಾನ್ಯರೆ,

ಮಡಿಕೇರಿ ಹುಡುಗಿಯರ ಶಾಲೆಯಲ್ಲಿ ಒಂದು ವಾರದಿಂದ ...ಗೆ ಕೆಲವು ಹುಡುಗಿಯರಿಗೆ ಸೀತಾಳಿಜ್ವರ, ಅಂಗಲಾಚಜ್ಜಿ ... ಇದಕಾರಣ ಅವರನ್ನು ದೂರ ಇಡದೆ ಅಲ್ಲಿಯೇ ಒಂದು ...ಯಲ್ಲಿ ಇಟ್ಟುಕೊಂಡು ಅವರ ಮದ್ದುಗಳು ಗುಟ್ಟಾಗಿದ್ದಾರಂತೆ. ಇಂಥಾ ಅಂಟುರೋಗವನ್ನು ಇವರು ...ರಂಗಪಡಿಸದೆ ಗುಟ್ಟಾಗಿಡುವದರ ಅರ್ಥವೇನು? ಈ ...ಗೆ ಅನೇಕ ಹುಡುಗಿಯರು ಮನೆಯಿಂದ ಹೋಗುವರು ಇದ್ದಾರೆ. ಇವರು ಮನೆಗಳಲ್ಲಾ ತಂದು ಹಾಕಿ ಕಡೆಗೆ ಮಡಿಕೇರಿಯನ್ನೇ ಈ ಕಾಯಿಲೆಯಿಂದ ನರಳಿಸುವದಿಲ್ಲವೇ? ಇಂಥಾ ಅಂಟುರೋಗಕ್ಕೆ ಲಕ್ಷ್ಯ ಮಾಡದೆ ...ಯನ್ನು ಮುಚ್ಚದೆ ಇರಲು ಕಾರಣವೇನು? ಆದುದರಿಂದ ...ದ ಪರೀಕ್ಷೆಯನ್ನು ಮುಂದಕ್ಕೆ ಇಟ್ಟು ಅವರಿಗೆ ಕೆಲವು ...ಗಳ ವರೆಗೆ ರಜ ಕೊಡುವದು ಉತ್ತಮವೆಂದು ತೋರು... ಈ ವಿಷಯ ಶಾಲಾಧಿಕಾರಿಗಳು ಇನ್ನಾದರೂ ...ರ ಮಾಡುವರಾಗಿ ನಂಬುವ

"ಕೇಳಿ ತಿಳಿದವ."

ಪ್ರೈಮರಿ ಪರೀಕ್ಷೆ.

ಪ್ರೈಮರಿ ಪರೀಕ್ಷೆಗೆ ಪ್ರಿಂಟುಮಾಡುವ ಪ್ರಶ್ನೆಗಳಲ್ಲಿ ಎಲ್ಲವೂ ಎಲ್ಲರಿಗೂ ವಿವರವಾಗಿ ಗೊತ್ತಾಗುವದಿಲ್ಲ. ನಿಜವಾದ ವಾಕ್ಯಾರ್ಥವನ್ನು ತಿಳಿಕೊಳ್ಳುವದು ಸಣ್ಣ ಮಕ್ಕಳಿಗೆ ಕಷ್ಟವಾಗುತ್ತದೆ. ಇಂಥಾ ಪ್ರಶ್ನೆಗಳನ್ನು ಕೆಲವು ಶಾಲೆಗಳಲ್ಲಿ ಪರೀಕ್ಷೆಯ ಸುಪರ್ವೈಜರುಗಳು ಮಕ್ಕಳಿಗೆ ವಿವರಿಸಿ ಹೇಳಿ ಕೊಡುವದುಂಟು. ಆದರೆ ಕೆಲವು ಶಾಲೆಗಳಲ್ಲಿ ಹಾಗೆ ಹೇಳಿ ಕೊಡದೆ ಅವರವರಷ್ಟಕ್ಕೇನೇ ಬಿಟ್ಟು ಬಿಡುತ್ತಾರೆ. ಇದರಿಂದ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳದೆ ಸರಿಯಾದ ಉತ್ತರ ಕೊಡಲು ಅಶಕ್ತರಾದ ಮಕ್ಕಳೂ ಪರೀಕ್ಷೆಯಲ್ಲಿ ಸೋಲುವದುಂಟು. ಅಲ್ಲದೆ ಕೆಲವು ಕಡೆ ಮಾತ್ರ ವಿವರಿಸಿ ಹೇಳಿಕೊಡುವದರಿಂದ ಪಕ್ಷಪಾತ ಮಾಡಿದಂತೆಯೂ ಆಗುತ್ತದೆ.

ಪರೀಕ್ಷೆಯ ಉದ್ದೇಶವು ಮಕ್ಕಳ ಜ್ಞಾನವನ್ನು ಕಂಡು ಹಿಡಿಯುವಿಕ್ಕಾಗಿದೆ. ಹಾಗಿರುವಲ್ಲಿ ಅವರು ಉತ್ತರಕೊಡಬೇಕಾದ ಪ್ರಶ್ನೆಗಳೇ ಅವರಿಗೆ ಅರ್ಥವಾಗದೆ ಹೋದರೆ ಅವರ ತಿಳುವಳಿಕೆಯನ್ನು ಕಂಡುಹಿಡಿಯುವದು ಹೇಗೆ? ಆದುದರಿಂದ ಎಲ್ಲಾ ಶಾಲೆಗಳಲ್ಲೂ ಪರೀಕ್ಷೆಯ ಮೇಲ್ವಿಚಾರಕರು ಪ್ರಶ್ನೆಗಳನ್ನು ಮಕ್ಕಳಿಗೆ ತಿಳಿಯುವಂತೆ ವಿವರಿಸಿ ಹೇಳುವದು ಉತ್ತಮವೆಂದೂ, ಹಾಗೆ ಮಾಡಿದರೆ ಮಕ್ಕಳ ನಿಜವಾದ ಯೋಗ್ಯತೆಯು ಗೊತ್ತಾಗುವದೆಂದೂ ನಾನು ಹೇಳಬೇಕಾಗಿಲ್ಲ. ಈ ಮೊದಲೇ ಉಪಾಧ್ಯಾಯರುಗಳು ಈ ವಿಷಯ ಎತ್ತರ ತೆಗೆದುಕೊಳ್ಳಬೇಕಾಗಿತ್ತು. ಇನ್ನಾದರೂ ಇದನ್ನು ಸರಿಪಡಿಸಿ ಸಣ್ಣ ಮಕ್ಕಳ ಕಷ್ಟವನ್ನು ನೀಗುವರಾಗಿ ನಂಬುತ್ತೇನೆ.

ಪಿ ಯಂ ಮುತ್ತಣ್ಣ.

ಕೊಡಗಿನ ಹರದಾಸರು ಮಂಗಳೂರಿನಲ್ಲಿ.

ಅಯ್ಯ,

ಇಂಗ್ಲಿಷರಿಗೆ ಶೇಕ್ಸ್ಪಿಯರ್‌ನಂತೆಯೇ ನಮಗೆ ಶ್ರೀ. ಅಪ್ಪಚ್ಚ ಹರದಾಸರು. ಇವರು ತಾ 18—3—28ರಲ್ಲು ಮಂಗಳೂರಿಗೆ ತನ್ನ ಕೆಲಸದ ಮೇಲೆ ಬಂದಿರಲು, ಅಲ್ಲಿಯ ಟ್ರೈನಿಂಗ್ ಶಾಲೆಯ ಮ... ಸುಸ್ವರವಾದ ಉಪ್ಪಾರ ಮಂಗೇಶರಾಯರ ಕೇಳಿಕೆ ಮೇರೆ ಅದೇ ದಿವಸ ಆ ಶಾಲೆಯಲ್ಲಿ ಸಾಯಂಕಾಲ ... ಘಂಟೆಗೆ "ಶಿವರಾತ್ರಿ" ಎಂಬ ಹರಿಕಥೆಯನ್ನು ಒಬ್ಬ ಮಹಾರಾಜಕರಾಗಿ ಮಾಡಿದರು. ವೃದ್ಧರಾದರೂ ಇವರು ನೆರೆದಿದ್ದ ಸ್ತ್ರೀಪುರುಷರನ್ನು ತಮ್ಮ ವಾಕ್ಚಾತುರ್ಯದಿಂದಲೂ, ಕವಿತಾಸ್ವಾರಸ್ಯದಿಂದಲೂ ಸಂಗೀತ ಸ್ವಾರಸ್ಯದಿಂದಲೂ ಉಲ್ಲಾಸಗೊಳಿಸಿದರು. ಈ ರೀತಿ ಮ... ಮರಂಗೇರಿಸುವುದರು. ಅವರ ಭಾಷಣದಲ್ಲಿ ಹರದಾಸರ ಪ್ರತಿಭೆಯನ್ನು ಒಮ್ಮೆಗೆ ಕಾಣಬಹುದಾದರೆ ... ಕೊಡಗು ದೇಶದಲ್ಲಿ ಇವರು ಒಬ್ಬರೆ, ಆ ಸಣ್ಣ ದೇಶದ ದೇಶಭಾಷೆಯಾದ ಕೊಡಗು ಭಾಷೆಯಲ್ಲಿ ಅನೇಕ ಕಾವ್ಯಗಳನ್ನು ನಾಟಕರೂಪವಾಗಿ ಬರೆದು, ಕೊಡಗು ಭಾಷೆಯಲ್ಲಿ ಕವಿತೆ ಜನರು ತ್ವರಿತವಾದಿಸುವ ಆಲೋಚನೆಯನ್ನು ಇವರು ಈ ಜನರಿಗೆ ಕಲ್ಪಿಸಿರುವರು. ಇವರ ಜ್ಞಾನವು ಕಮ್ಮಿಯಿಲ್ಲ—ಎಂದು ದೃಢವಾಗಿ ಅವರು ಭಾಷಣಮಾಡಿದರು. ಅವರ ಚಮತ್ಕಾರವನ್ನು ಪರೀಕ್ಷಿಸಿ ನೋಡುವಾಗ ಅವರನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಆಗುವುದು. ನಿಜವಾಗಿಯೂ ಇವರು ಹರದಾಸರು!

ಹಾಜರಿದ್ದವ.

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L Rifles	Rs	120	to	Rs	2750
S B. B L	.	35	to	„	900.
D B B L Guns	„	50	to	„	1350
S B B. L. „	.	35	to	„	275
D B M L „	„	45	to		135.
S B M. L „	„	30	to	„	80.
B L Revolvers	„	35	to	„	350
Automatic Pistols	„	30	to	„	150

Brilliant Search Light Lamp For Shooting Camping, Fishing and All such Other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites, at the most competitive rates.

GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

210 Abdul Rehman Street, BOMBAY.

24—23

National Swords and Silver Belts (Thodang) For "Scotland of India,"

ಸಂಪ್ರದಾಯಾನುಸಾರವಾಗಿ ಧರಿಸಲ್ಪಟ್ಟ "ಒಬ್ಬ ಕರ್ನಲ್ ಯೂನಿಫಾರಂ" ರೀತಿ ಉಡುಗೆಗಳನ್ನು ಓದಿಗೆ ತ್ತಿ ಆರಿಸಲ್ಪಟ್ಟ "ಒಬ್ಬ ಲೆಫ್ಟಿನಂಟ್ ಯೂನಿಫಾರಂ" ಕಡೆ ಯಾಕೆ ವಿಸ್ಮಯಗೊಳ್ಳುತ್ತೀರಿ? ನವಿಲು ಗರಿಯಿಂದ ಶೃಂಗರಿಸಲ್ಪಟ್ಟ ಕುಲಗ ನವಿರಾಗುವದೇ?

ಸೊಂಟದಲ್ಲಿ ಒಂದು ಬೆಳ್ಳಿಯ ತೊಡಂಗ ಮತ್ತು ಆದರ ಕತ್ತಿ. ಸೊಂಟದ ಬದಿಯಲ್ಲಿ ಚಿನ್ನದ ಹಿಡಿಯ ಪೀಚೆಕತ್ತಿ. ಇವುಗಳಿಗೆ ತಕ್ಕ ಬೆಳ್ಳಿಯ ಸರಪಣಿ (ಅಮ್ಮತ್ತ) ರೇಶ್ಮೆ ಮತ್ತು ವೆಲ್‌ವೆಟ್ಟ ಪಟ್ಟಿ. ಇದಲ್ಲವೇ ನಿಮ್ಮ ಗೌರವ? ಕರ್ನಲ್, ಆಫೀಸರ್, ಪ್ರಿನ್ಸ್ ಮೊದಲಾದವರೇ ನಮ್ಮ ವಿಷಯ ವಿನಸ್ನವರು. ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿಮ್ಮ ಹಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರಿಸಿ. ಪಟ್ಟಿಸ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದುಕೊಳ್ಳಿ.

Commercial Store,
Murnad, Coorg

12—12

ಡಿ ಬಿ ಬಿ ಯಲ್. ಕೋವಿಗಳು ರೂ. 75 ರಿಂದ ರೂ. 150,
ಯಸ್ ಬಿ ಬಿ. ಯಲ್. ಕೋವಿಗಳು ರೂ 35 ರಿಂದ ರೂ. 250/
ಯಸ್. ಬಿ. ಯಮ್ ಯಲ್ ಕೋವಿಗಳು ರೂ. 35 ರಿಂದ 60/-
ರಿವಾಲ್ವರ್‌ಗಳು. ರೂ. 40/ರಿಂದ ರೂ. 125/ರ ವರೆಗೆ.

ಪಿಸ್ತೂಲ್ ಮತ್ತು ಸಿಂಗಲ್ ಕೋವಿಗಳು ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಒದಗಿದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಮೆಸರ್ಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—15 12. ಬ್ರಾಡ್ವೆ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು **1897.**

1927ನೇ ಇಸವಿ ಫೆಬ್ರುವರಿ 28ಕ್ಕೆ ಅಖೈರಾದ 5 ವರ್ಷಗಳ ಕೆಲಸದ

ಬೆಲೆಕಟ್ಟುವಲ್ಲಿ

ರೂ. 37,66,689.

ಉಳಿತಾಯ ಕಂಡುಬಂದಿದೆ.

ಒಟ್ಟು ಜೀವವಿಮೆಯ 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಯಂತೆಯೂ } ಮತ್ತು { ಪ್ರಾಯ ನಿರಮಿತ ವಿಮೆಯ 1000 ರೂಪಾಯಿಗಳಿಗೆ 12 ರೂಪಾಯಿಯಂತೆಯೂ

ವರ್ಷವಾರಿ ಬೋನಸ್ ಪಾಲು ಬರುವಂತೆ ತೀರ್ಮಾನವಾಗಿದೆ.

ವಿಳಾಸ.
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು.
ಕಮರ್ಷಿಯಲ್ ಬೀದಿ
ಬೆಂಗಳೂರು

24—11

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಾಬತಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮಾಬಂದ ಠೇವಣಾತಿ	—	1,02 011

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹಣ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಕೋಡಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂಣ್ಣಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂಣ್ಣಯ್ಯನವರು

ವೀರಾಜಪೇಟೆ—ಖಾದಿ ಭಂಡಾರದಲ್ಲಿ,—ಮೆ. ಪಾರುವಂಗಡ ಅಪ್ಪಯ್ಯನವರು.

ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ಮರೆನಾಡು—ಮೆ. ಕೇಕಿರ ಅಪ್ಪಯ್ಯನವರು.

ಸಬ್ ಏಜಂಟರುಗಳು.

ಸಾಪ್ಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ ಜಿ. ಮುದ್ದಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
"ಕೊಡಗು" ಮಡಿಕೇರಿ.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಚಳಿ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ [illegible] ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು, ಬೆನ್ನುಹುರಿಯಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳ [illegible] ಬುಟ್ಟುವ ಸೋಂಕು ಇವುಗಳಿಗೆ ಪರಮ ಔಷಧಿ ಚಿಕ್ಕ ಬಾಟ್ಲಿ 1, 3 6ಕ್ಕೆ ರೂ. 1—[illegible] 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0,

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ, ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.

52—24 9. ಮಂಗಳೂರು.

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickapet, BANGALORE CITY.

ಅಪೂರ್ವ ಸಮಯ! ಅಲಭ್ಯ ಲಾಭ!

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—42

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,08,000.
	1925	ರೂ	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ. 7,38 80,000ಗೆ ಹೆಚ್ಚಿರುತ್ತದೆ.

ಪ್ರಿಮಿಯಂ ವರಮಾನವು ವರ್ಷಕ್ಕೆ ರೂ. 1,05,30,000ಗೆ ಏರಿರುತ್ತದೆ

'ಓರಿಯಂಟಲ್‌ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೇ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ.'

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್. ಎಫ್. ಎಫ್. ಎ, ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶಪಡದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52—49 ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಫ್ಯೂನರ್‌ಹೌಸಸ್ ಅಸೋಸಿಯೇಷನ್, ಲಿಮಿಟೆಡ್.
ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗ್ಯೆರೆ ಎಲ್ಲವೂ ಈ ದೇಶಸ್ಥರಿಗೆ ಸೇರಿರಬೇಕೆಂಬ ಠರಾವು ಜನವರಿ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

I ಅನಾಥರಾದ ಅಂಗಹೀನರಿಗೆ ಈ ಸಂಘದಿಂದ ಬೇಗನೆ ಅನ್ನಸಹಾಯ ಮಾಡಲು ಏರ್ಪಾಡಾಗುವುದು

II 1928ನೇ ಇಸವಿ ಮಾರ್ಚಿ ತಿಂಗಳು 31ಕ್ಕೆ ಡ್ರಾಯಿಂಗ್ ನಡೆಯುತ್ತದೆ.

(1) ಇದರ ಮೂಲಕ ಬಡ್ಡಿ ಇಲ್ಲದೆ ಸಾಲ ಕೊಡಲಾಗುವುದು.

(2) ಸುಲಭವಾದ ದೀರ್ಘ ಕಂತುಗಳು ದೊರೆಯುವವು.

(3) ಸರ್ವರೂ ಆ ತಾರೀಖಿನೊಳಗೆ ಡ್ರಾಯಿಂಗಿಗೆ ಅರ್ಹತೆ ಪಡೆಯಬೇಕಾಗಿದೆ.

(4) ದೇಶ ಸೇವೆಗೂ, ಹಿತ ಸೇವೆಗೂ ಒಳ್ಳೆಯ ಅನುಕೂಲ.

ಬಿ. ಎ. ಕುಪ್ಪುಸ್ವಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್ಸ್,
ಮಡಿಕೇರಿ.

52—6

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address:—"SHOOTER" Bombay.

(— 28) 'Please write for our Catalogue 1928—1929

Printed & published by P. I. Belliappa at "Kodagu" Press, Mercara for "Kodagu" Ltd.

ಮಡಿಕೇರಿ ತಾ. 31 ? 1928

"KODAGU" OFFICE MERCARA.
Not called for return to

ಕೊಡಗು.

ಸ್ವೇನ ಕ್ಷಾತ್ರದಯುಯಾ ವಿದಾ, ಸೀತ ಪ್ರಯತ್ನತಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಃ |

ಸಂಪಾದಕ—ಪಂದ್ಯಂಡ ಐ ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೭] ಮಡಿಕೇರಿ, ೧೯೨೮ನೇ ಇಸವಿ ಮಾರ್ಚಿ ತಾರೀಕು ೩೦ ನೇ ಶುಕ್ರವಾರ [ಸಂಚಿಕೆ ೪೨

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman QuickLite is Brilliant, clean, simple and safe.

52—9 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES

Post Box 423, TRIPLICANE, MADRAS

Catalogue Free to Bonafide Enquirers







Manufacture of HIGH CLASS GEMSET JEWELS a speciality

The special features of my products are —
1 Best QUALITY
2 Latest novel designs
3 Promptest execution
4 Neat & artistic finish
5 Most moderate prices

GOLD or SILVERWARE of all descriptions neatly executed

52—29



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS AUTOMATIC PISTOLS AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—5

ಎ ಗಸ್ತ್ರಬಿ ಾ ಕ ಪ್ರ ಪ್

ಮತಿ ದಿವಸ ಇನ್ ಫ್ಲುಯೆಂಜಾ ನ ೀಕಪ್ಪತ
ಒಡೆಯಪ್ಪತ ಅಪ್ಪಗಳ ಮೇಲೆ ಇದನ್ನು ಉಪಯೋಗಿ
ಸಿದ ಇದರಿಂದ ಮುಲಕ ಪ್ರಿಯನಾ ಬೆಲೆ ೩೦
ಮುಚ್ಚಿರ ಬಿಸ್ಕತ್ತು ಬೆಲೆ ೧ ಬಾಟ್ಲಿಗೆ ಆಣೆ ೧೪
ಟಪ್ಪಾಲು ವೆಚ್ಚ ಬೇರೆ

ಶಾರಸಾ ಪರಿಲಾ.

ಕಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ
ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ
ರೂ ೧—೨—೦ ಟಪ್ಪಾಲು ವೆಚ್ಚ ಬೇರೆ

ಕರ್ನಾಟಕ ಫಾರ್ಮಸಿ
ಬಜಾರ್ ರೋಡ್,

12—12 ಗೋಣಿಕೊಪ್ಪ, ಪೊನ್ನಂಪೇಟೆ (?)

ಕೊಡಗು.

ಸೆ ೧೯೨೮ನೇ ಇಸವಿ ಮಾರ್ಚಿ
ತಾ|| ೩೦ನೇ ಶುಕ್ರವಾರ.

"ಯುಗಾಂತರಗಳಿಂದ ಹಿಂದುಸ್ಥಾನ"

ಮದ್ರಾಸ್ ಯುನಿವರ್ಸಿಟಿಯ ಕೋರಿಕೆ ಮೇರೆ ಪ್ರಖ್ಯಾತ ಇತಿಹಾಸಕಾರರಾದ ಪ್ರೊಫೆಸರ್ ಯದುನಾಥ್ ಸರಕಾರವರು ಈ ತಿಂಗಳ ಪ್ರಾರಂಭದಲ್ಲಿ ಮದ್ರಾಸಿನಲ್ಲಿ "ಯುಗಾಂತರಗಳಿಂದ ಹಿಂದುಸ್ಥಾನ" ಎಂಬ ವಿಷಯದ ಮೇಲೆ ಐದು ಉಪನ್ಯಾಸಗಳನ್ನು ಕೊಟ್ಟರು. ತುಂಬಾ ತಿಳುವಳಿಕೆಯಿಂದಲೂ, ಬುದ್ಧಿಶಕ್ತಿಯಿಂದಲೂ ಮಾಡಿದ ಈ ಉಪನ್ಯಾಸಗಳನ್ನು ಹಿಂದೀಯರೆಲ್ಲರೂ ಓದಿದರೆ ಪ್ರಯೋಜನವಾಗದೆ ಇರದು. ಆದರೆ ಆ ಉಪನ್ಯಾಸಗಳು ನಮ್ಮ ವಾಚಕರಿಗೆ ಪೂರ್ತಿಯಾಗಿ ಸಿಕ್ಕುವದು ತತ್ಕಾಲಕ್ಕೆ ದುಸ್ಸಾಧ್ಯವಾದ್ದರಿಂದ ಅವುಗಳಲ್ಲಿ ಇರುವ ಕಲವು ವಿಷಯಗಳನ್ನಾದರೂ ಇಲ್ಲಿ ವಿಮರ್ಶಿಸಲು ಯೋಚಿಸಿದ್ದಾಗಿದೆ.

"ಹಿಂದುಸ್ಥಾನದ ಜನರಲ್ಲಿ ಒಂದು ಏಕರೂಪದ ಸಂಸ್ಕೃತಿಯಿದೆಯೆಂಬದನ್ನು ಎಲ್ಲರೂ ಒಪ್ಪುತ್ತಾರೆ. ಈ ಸಂಸ್ಕೃತಿಯು ಈ ಹಿಂದುಸ್ಥಾನದಲ್ಲಿ ಯುಗಾಂತರಗಳಿಂದ ಪರಧರ್ಮದವರ ಮುತ್ತಿಗೆಯನ್ನೂ, ಪರಮತ ಬೋಧನೆಯನ್ನೂ ಮತ್ತು ಇತರ ಕಠಿಣ ಪರೀಕ್ಷೆಗಳನ್ನೆಲ್ಲಾ ಸಹಿಸಿಕೊಂಡು ಈಗಲೂ ತನ್ನ ಉನ್ನತಿಸ್ಥಿತಿಯಲ್ಲಿ ಯಾವಾಗಲೂ ಕುಂದದೆ ಇರುತ್ತದೆ ಇರುತ್ತಾರೆ" ಎಂಬ ಅಭಿಪ್ರಾಯವನ್ನು ಉಪನ್ಯಾಸಕರು ಹೇಳಿರುತ್ತಾರೆ. ಈ ಮಾತುಗಳನ್ನು ದೇಶದ ಹಿತಚಿಂತಕರೂ, ವಿರೋಧಿಗಳೂ ಸಹ ತಿಳಿದಿರಬೇಕು. ದೇಶೋದ್ಧಾರದ ಕೆಲಸವನ್ನು ಉತ್ಸಾಹದಿಂದಲೂ, ಧೈರ್ಯದಿಂದಲೂ ಮಾಡಬೇಕಾದರೆ ಜನಾಂಗದ ಪೂರ್ವದ ಮಹತ್ವವು ಸಹಾಯಕವಾಗದಿರದು. ಇದಲ್ಲದೆ ಇದು ಹಿಂದೀಯರನ್ನು ಅನಾಗರೀಕರೆನ್ನುವ, ಇವರಲ್ಲಿ ಯಾವ ನಾಗರೀಕತೆ ಇದ್ದರೂ ಪಾಶ್ಚಿಮಾತ್ಯ ದೇಶಗಳಿಂದ ಬಂದದ್ದೇ ಆಗಿದೆ ಎಂಬ ಯುರೋಪಿಯನ್ ವಿದ್ವಾಂಸರು, ದೇಶೀಯರು ಇರುತ್ತಾರೆ. ಇವರ ಅಭಿಪ್ರಾಯವು ವಿಚಾರಮಾಡಬೇಕಾದದ್ದು. ಇದರಿಂದ ಮಾತನಾಡುವವರ ಅಭಿಪ್ರಾಯಗಳು ಸರಿಯಾಗದೆ ಇರದು.

ಹಿಂದುಸ್ಥಾನದಲ್ಲೆಲ್ಲಾ ಸಂಸ್ಕೃತಿಯು ಒಂದೇ ಆಗಿರುವ ನಾಲ್ಕು ಕಾರಣಗಳು ಕೊಡಲ್ಪಟ್ಟಿವೆ. (1) ಯಾತ್ರಿಕ ವಿದ್ಯಾರ್ಥಿ, (2) ಚಕ್ರಾಧಿಪತ್ಯದ ದೃಷ್ಟಿ ಇರುವ ರಾಜರುಗಳು, (3) ಯುದ್ಧಪ್ರಿಯ ಶಿಪಾಯಿ ಮತ್ತು (4) ಅಗ್ನಿ ಸಂಬಂಧ. ಈ ವಿಷಯಗಳು ತಿಳಿದಿರುವದೇ ಆದರೂ ಉಪನ್ಯಾಸಕರ ವಿಭಜನೆಯನ್ನು ಕೊಡಲಾಗಿದೆ. ಕೊಡಗು ದೇಶದ ಪ್ರಮುಖ್ಯ ಜನಾಂಗವು ಹಿಂದುಸ್ಥಾನದ ಇತರರಿಗಿಂತ ಅನೇಕ ವಿಷಯಗಳಲ್ಲಿ ಬೇರ್ಪಟ್ಟಿದ್ದರೂ ಕೊಡಗು ಹಿಂದುಸ್ಥಾನದ ಭಾಗವಾಗಿರಲು ಮೇಲೆ ಕೊಟ್ಟ ಕಾರಣಗಳು ಆಗಿವೆ.

ಹಿಂದುಸ್ಥಾನಕ್ಕೆ ಆದಿಯಲ್ಲಿ ಬಂದ ಆರ್ಯರ ಯಾವ ಗುಣಗಳಿಂದ ಹಿಂದುಸ್ಥಾನದ ಸಂಸ್ಕೃತಿಯು ಬೆಳೆದಿದೆಯೆಂದರೆ—(1) ಅವರಲ್ಲಿದ್ದ ಆತ್ಮವಿಚಾರದ ಗಂಭೀರ ಸ್ವಭಾವವು. (2) ಯಾವ ಆಲೋಚನಾಪರಂಪರೆಯನ್ನಾದರೂ ಒಳ್ಳೇ ರೀತಿಯಿಂದ ಬೆಳೆಸುವ ಇಚ್ಛೆ. (3) ವಾಙ್ಮಯ ಮತ್ತು ಕಲೆಯಲ್ಲಿ ಕ್ರಮವನ್ನನುಸರಿಸಿದ ಯೋಜನೆ. (4) ಕಸಬಿನ ಮೇಲೆ ಜನರ ಪಂಗಡಗಳನ್ನು ಏರ್ಪಡಿಸಿರುವಿಕೆ. (5) ಸ್ತ್ರೀಯರಿಗೆ ಗೌರವ. (6) ಋಷಿಗಳ ಆಶ್ರಮಗಳು. ಆತ್ಮ ವಿಚಾರದ ಸ್ವಭಾವವಿದ್ದದ್ದರಿಂದಲೇ ಹಿಂದುಸ್ಥಾನದಲ್ಲಿ ಆರ್ಯರಿಗಿಂತ ಮುಂಚೆ ಇದ್ದ ಮತಗಳನ್ನೆಲ್ಲಾ ಒಳಕೊಂಡ ಹಿಂದೂಮತವೆಂಬುದು ಆದದ್ದು. ಕಟ್ಟಡಗಳಿಲ್ಲದೆ ಶಿವಲಿಂಗ ಪೂಜೆ ಮಾಡುವ ಪದ್ಧತಿಯು ಆರ್ಯರಿಗಿಂತ ಪೂರ್ವದಲ್ಲೇ ಇದ್ದ ಪೂಜಾಕ್ರಮವಂತೆ. ಈ ತರದ ಪೂಜೆಯು ನಮ್ಮ ದೇಶದಲ್ಲಿ ಈಗಲೂ ಇರುವದು ನೋಡಿದರೆ ಈ ದೇಶದ ಪ್ರಾಚೀನ ಕಾಲವು ಆರ್ಯರಿಗಿಂತ ಮುಂದಿನದೇ ಆಗಿರಬಹುದೋ ಎಂಬ ಸಂಶಯ ಬರುತ್ತದೆ. ಶಿವಲಿಂಗ ಪೂಜೆ, ಸಾಲಿಗ್ರಾಮ ಪೂಜೆ ಸಹ ಆರ್ಯರಿಗಿಂತ ಪೂರ್ವದ್ದೆಂತಲೂ, ಆರ್ಯರು ಪೂಜೆಗಳಿಗೆ ವೈದೀಕ ವಿವರಣೆಗಳು ಕೊಟ್ಟರೆಂತಲೂ ಉಪನ್ಯಾಸಕರು ಹೇಳಿರುತ್ತಾರೆ.

ಆರ್ಯರ ಆಲೋಚನಾಶಕ್ತಿಗೆ ನಿದರ್ಶಕವಾಗಿ ವೈದ್ಯ, ತತ್ವವಿಚಾರ, ರಾಜತಂತ್ರ, ವ್ಯಾಕರಣ, ನ್ಯಾಯ, ಕರ್ಮವಿಧಿ, ಗಣಿತ ಶಾಸ್ತ್ರ ಮುಂತಾದ ವಿಷಯಗಳ ಮೇಲೆ ಅವರು ಬರೆದಿಟ್ಟ ಗ್ರಂಥಗಳನ್ನು ವಿವರಿಸಿದ್ದಾರೆ. ಹಿಂದುಸ್ಥಾನದ ಸಂಸ್ಕೃತಿ ಬೆಳೆಯಲು ಋಷಿಗಳ ಆಶ್ರಮಗಳಷ್ಟು ಮಹತ್ವದ ಕಾರಣ ಬೇರೆ ಇಲ್ಲವೆಂತ ಉಪನ್ಯಾಸಕರ ಅಭಿಪ್ರಾಯವಾಗಿದೆ. ಆಶ್ರಮಗಳಲ್ಲಿದ್ದ ಋಷಿಗಳೂ ಮತ್ತು ಅವರ ಮೂಲಕ ಜ್ಞಾನ ಸಂಪಾದಿಸಿದ ಬ್ರಾಹ್ಮಣರೂ ಸಹ ಜನಪ್ರಿಯರಾಗಿಯೂ ಮೇಲ್ಮರಗತಿಯವರಾಗಿಯೂ ಇದ್ದರೂ ತಮ್ಮ ಶಕ್ತಿಯನ್ನೂ, ಮೇಲ್ಮೆಯನ್ನೂ ಜ್ಞಾನಾಭಿವೃದ್ಧಿಗಾಗಿಯೂ, ಮತಬೋಧನೆಗಾಗಿಯೂ ಉಪಯೋಗಿಸುತ್ತಿದ್ದರೇ ಹೊರತು ಐಶ್ವರ್ಯ ಸಂಪಾದನೆಗಾಗಿಯಾಗಲೀ, ಭೋಗಕ್ಕಾಗಿಯಾಗಲೀ ಉಪಯೋಗಿಸುತ್ತಿರಲಿಲ್ಲ. ಈಗಿನ ಸಮಾಜ ರಚನೆಯು ಅಲ್ಲೋಲ ಕಲ್ಲೋಲವಾಗಲು ಪೂರ್ವದವರಂತೆ ಸಾರ್ವಜನಿಕ ಹಿತವನ್ನೇ ಸಡೆ ಇರುವದೇ ಮುಖ್ಯಕಾರಣವಾಗಿದೆ.

ಬ್ರಾಹ್ಮಣರ ಪ್ರಾಬಲ್ಯ ಕಡಿಮೆಯಾಗಿ ಕ್ಷತ್ರಿಯರು ಹೆಚ್ಚಿನ ಆಲೋಚನಾಪರರಾದದ್ದರಿಂದ ಕ್ಷತ್ರಿಯನಾಗಿ ಹುಟ್ಟಿದ ಗೌತಮ ಬುದ್ಧನು ಪರಮಾರ್ಥಿಕ ಬೋಧನೆಯನ್ನು ಮಾಡಿ ಬೌದ್ಧಮತ ಸ್ಥಾಪನೆಯಾಯಿತೆಂತ ಉಪನ್ಯಾಸಕರ ಅಭಿಪ್ರಾಯವಾಗಿದೆ. (1) ಬೌದ್ಧಮತದಿಂದ ಬ್ರಾಹ್ಮಣರ ಕರ್ಮಭಾಗವೆಲ್ಲಾ ಮೂಲೆಗೆ ಒತ್ತಲ್ಪಟ್ಟು, ಸರ್ವರಿಂದಲೂ ಸಾಧಿಸಲು ಅನುಕೂಲವಾದ ಧರ್ಮವು ಸ್ಥಾಪನೆಯಾದದ್ದು. (2) ಮೂರ್ತಿಪೂಜೆಯು ಪ್ರಾರಂಭವಾದದ್ದೇ ಬಹುಶಃ ಬೌದ್ಧರಿಂದ (3) ಸನ್ಯಾಸಿಗಳ ಕೂಟಗಳ ಏರ್ಪಾಡು, (4) ಸಾಧಾರಣ ಜನರ ಮಾತೃಭಾಷೆಯಲ್ಲಿ ತುಂಬಾ ಗ್ರಂಥಗಳು ಬರೆಯಲ್ಪಟ್ಟದ್ದು. (5) ಪ್ರತಿಮೆಗಳ ಮತ್ತು ಕಟ್ಟಡಗಳ ನಿರ್ಮಾಣದ ಕುಶಲತೆ, (6) ಹಿಂದುಸ್ಥಾನಕ್ಕೂ, ಹೊರ ಪ್ರಾಂತ್ಯಕ್ಕೂ ಸಂಬಂಧದ ಬೆಳವಣಿಗೆ. ಈ ಆರು ಗುಣಗಳು ಬೌದ್ಧಮತದಿಂದ ಆಯಿತೆಂತ ಉಪನ್ಯಾಸಕರು ಹೇಳಿರುತ್ತಾರೆ. ಬುದ್ಧ ಧರ್ಮದ ಪ್ರಾಬಲ್ಯ ಕಾಲದಲ್ಲಿ ಅನೇಕ ಪಾರ್ತಿಸ್ಥಾನದವರು ಸಹ ಹಿಂದೀ ಸಂಸ್ಕೃತಿಯ ಅನುಯಾಯಿಗಳಾದರಂತೆ. ಆರ್ಯರು ತಮ್ಮ ಮತದವರಿಗೆ ಎಲ್ಲಾ ಧರ್ಮದವರನ್ನೂ ಸೇರಿಸಿಕೊಳ್ಳುತ್ತಿದ್ದ ಮಹತ್ವದ ಸ್ವಭಾವಕ್ಕೆ ಉಪನ್ಯಾಸಕರು ತುಂಬಾ ಮೇಲ್ಮೆ ಕೊಟ್ಟಿದ್ದಾರೆ.

ಬೌದ್ಧಮತದ ಹಿಂಬಾಲಕರಲ್ಲಿ ಲೋಪಗಳು ಹೆಚ್ಚುತ್ತಾ ಬಂದಂತೆ ಹಿಂದೂಮತವು ಪುನಃ ಪ್ರಾಮುಖ್ಯತೆಗೆ ಬಂತು. ಇದಕ್ಕೆ ಶಂಕರಾಚಾರ್ಯರು, ರಾಮಾನುಜಾಚಾರ್ಯರು ಮತ್ತು ಚೈತನ್ಯದೇವ ಮುಂತಾದವರೇ ಕಾರಣರಾಗಿದ್ದಾರೆ.

ಅನಂತರ ಹಿಂದುಸ್ಥಾನಕ್ಕೆ ಮುಸಲ್ಮಾನರ ಪ್ರವೇಶವಾಯಿತು. ಇವರು ಹಿಂದೂಧರ್ಮದೊಳಗೆ ಅಡಕವಾಗಲಿಲ್ಲ. ಹಿಂದೂಗಳು ಅವರನ್ನು ತಮ್ಮೊಳಗೆ ಸೇರಿಸಿಕೊಳ್ಳಲು ಪ್ರಯತ್ನಿಸಿದರು. ಅಲ್ಲ ಉಪನಿಷತ್ ಎಂತ ಸಹ ಬರೆದರು. ಆದರೆ ಇಸ್ಲಾಂ ಧರ್ಮವು ಹಿಂದೂಧರ್ಮದೊಳಗೆ ಅಡಕವಾಗಲೇ ಇಲ್ಲ. ಹಿಂದೂಧರ್ಮದ ಅಗ್ನಿಯೊಳಗಿಂತಲೂ ಇಸ್ಲಾಂ ಧರ್ಮದವರು ಸಹ ಸೇರಲಾಗಿದ್ದಿದ್ದರೆ ಈ ಎರಡು ಧರ್ಮಗಳ ಸಮ್ಮಿಳಿತವಾಗಿ ಅನೇಕ ನಡೆದ ಹೋರಾಟಗಳು ಇರುತ್ತಲೇ ಇರಲಿಲ್ಲ. ಇಸ್ಲಾಂ ಧರ್ಮದವರು ಹಿಂದುಸ್ಥಾನದಲ್ಲಿ ಸುಮಾರು ನಾಲ್ಕು ಶತಮಾನಗಳವರೆಗೆ ಯುದ್ಧಸನ್ನದ್ಧರಾಗಿಯೇ ಇದ್ದರು. ಅಕ್ಬರ್ ಚಕ್ರವರ್ತಿಯನರು ಬರೇ ಯುದ್ಧಸನ್ನದ್ಧತೆಯನ್ನು ಬಿಟ್ಟು ರಾಜ್ಯಾಡಳಿತದಲ್ಲಿ ದೇಶೀಯರನ್ನು ಸೇರಿಸಿಕೊಳ್ಳಲು ಪ್ರಾರಂಭಿಸಿದರು. ಹಿಂದುಸ್ಥಾನಕ್ಕೆ ಆದಕ್ಕ ಮೊದಲು ಪ್ರವೇಶಿಸಿದ್ದ ಬೇರೆ ಜನಾಂಗಗಳಿಗೂ, ಮುಸಲ್ಮಾನರಿಗೂ ಈ ಎರಡು ಮುಖ್ಯ ವ್ಯತ್ಯಾಸಗಳನ್ನು ತೋರಿಸಿ ಮುಸಲ್ಮಾನರಿಂದ ಹಿಂದುಸ್ಥಾನದಲ್ಲಿ ಆದ ಮಾರ್ಪಾಟುಗಳನ್ನು ವಿವರಿಸಿದ್ದಾರೆ.

ಹಿಂದುಸ್ಥಾನಕ್ಕೆ ಮುಸಲ್ಮಾನರ ಪ್ರವೇಶದಿಂದ ಆದ ಮಾರ್ಪಾಟುಗಳು ಯಾವವೆಂದರೆ (1) ಹೊರಗಿನ ದೇಶಗಳೊಂದಿಗೆ ಸಂಪರ್ಕ ಬೆಳೆಯಿತು. (2) ದೇಶದ ಹೆಚ್ಚಿನ ಭಾಗದಲ್ಲಿ ಶಾಂತತೆ ಹೆಚ್ಚಿತು. (3) ದೇಶದಲ್ಲೆಲ್ಲಾ ಒಂದೇ ತರದ ಆಳ್ವಿಕೆಯಾಯಿತು. (4) ಮೇಲ್ಮರಗತಿಯ ಜನರಲ್ಲಿ ಒಂದೇ ವಿಧದ ಉಟ್ಟೆ ಮತ್ತು ನಡೆನುಡಿಗಳು ಹೆಚ್ಚಿತು. (5) ಕಲಾಕೌಶಲ್ಯ ಹೆಚ್ಚಿತು. (6) ಒಂದೇ ಭಾಷೆ ಹಿಂದುಸ್ಥಾನಿಯ ಉಪಯೋಗ ಪ್ರಾರಂಭವಾಯಿತು. (7) ದೇಶೀಯ ಭಾಷೆಗಳಿಗೆ ಪ್ರಾಬಲ್ಯ ದೊರಕಿತು. (8) ಒಬ್ಬನೇ ದೇವರನ್ನು ನಂಬುವ ಮತಗಳಿಗೆ ಪ್ರಾಬಲ್ಯ ಬಂತು. (9) ಐತಿಹಾಸಿಕ ಗ್ರಂಥಗಳು ಹೆಚ್ಚಾದವು. (10) ಯುದ್ಧದ ಕುಶಲತೆ ಹೆಚ್ಚಿತು. ನಾಗರೀಕತೆ ಒಟ್ಟಿನ ಮೇಲೆ ಹೆಚ್ಚಿತು.

ಅನಂತರ ಇಂಗ್ಲಿಷರ ಪ್ರವೇಶದಿಂದ ತುಂಬಾ ಮಾರ್ಪಾಟುಗಳು ಆದವೆಂತಲೂ, ಅವರಿಂದ ಉಂಟಾದ ಮಾರ್ಪಾಟುಗಳು ಆರ್ಯರ ಪ್ರವೇಶದಿಂದ ಆದ ಮಾರ್ಪಾಟುಗಳಿಗೆ ಹೋಲಿಸಬಹುದೆಂತಲೂ ಉಪನ್ಯಾಸಕರು ಹೇಳಿದ್ದಾರೆ. ಉಪನ್ಯಾಸಕರ ಅಭಿಪ್ರಾಯಗಳು ಹೀಗಿರುತ್ತವೆ. (1) ದೇಶದಲ್ಲೆಲ್ಲಾ ಶಾಂತಿ ಸ್ಥಾಪಿಸಲ್ಪಟ್ಟಿತು. (2) ಹೊರಗಿನ ಪ್ರಪಂಚದ ಸಂಪರ್ಕ ತುಂಬಾ ಬೆಳೆಯಿತು. (3) ಆಡಳಿತದ ಏಕರೂಪತೆ ಸಂಪೂರ್ಣವಾಯಿತು. (4) ಜನರೊಳಗೆ ಆನ್ಯೋನ್ಯತೆ ಹೆಚ್ಚಿ ಸರಿಸಮಾನತ್ವವು ಉಂಟಾಗುತ್ತಲಿದೆ (5) ಸರಕಾರದ ಪ್ರಯತ್ನದಿಂದಲೂ, ಯುರೋಪಿಯನರ ಜೀವನ ಕ್ರಮದಿಂದಲೂ ದೇಶೀಯರ ಜೀವನಕ್ರಮವು ಅಭಿವೃದ್ಧಿಯಾಯಿತು.

ಯುರೋಪಿಯನರ ಬರುವಿಕೆಯಿಂದಲೂ, ಆಳ್ವಿಕೆಯಿಂದಲೂ ಆದ ಕೆಡುಕುಗಳನ್ನು ಉಪನ್ಯಾಸಕರು ಸೂಚಿಸದೆ ಇರುವದು ನ್ಯಾಯವಾಗಿ ತೋರಲಿಲ್ಲ.

ಬ್ರಿಟಿಷರು ಭರತಖಂಡವನ್ನು ಕಾಯುವರು

(ಕಳೆದ ವಾರದಿಂದ ಮುಂದುವರೆದದ್ದು.)

ಇಷ್ಟು ಖರ್ಚಿನ ಬಾಬಿನಲ್ಲಿ ಬ್ರಿಟಿಷರು ಇಂಡಿಯಾ ರಕ್ಷಣೆ ಮಾಡುತ್ತಾರೆಂದೂ, ಆಂಥ ರಕ್ಷಣೆಗಾಗಿ ಹಿಂದೂ ಶವು ತಾನೇ ತನ್ನನ್ನು ರಕ್ಷಣೆ ಮಾಡಿಕೊಳ್ಳುವುದಾಗಿದ್ದಕ್ಕದಲ್ಲಿ ತನಗೆ ತಗಲುವ ಖರ್ಚಿಗಿಂತ ಎಷ್ಟೋ ಕಡಿಮೆಯಿಂದ ಕಾರ್ಯ ನಡೆಸುತ್ತಿದೆಂದೂ ಹೇಳುವುದುಂಟು. ಮಾತು ಸತ್ಯವಲ್ಲವೆಂದು ಹಿಂದೀಯರು ಹೇಳುವರು.

ಹಿಂದೀಯರು ಈ ವಿಚಾರವನ್ನು ಚೆನ್ನಾಗಿ ಬಲ್ಲವರು. ಸೈನ್ಯದ ಖರ್ಚು ಈಗ ಬಹಳ ಹೆಚ್ಚೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಹಿಂದೂದೇಶಕ್ಕೆ ಏನೊಂದು ಯೋಜನವಿಲ್ಲದ ಬ್ರಿಟಿಷ್ ಸೈನ್ಯದ ದೆಸೆಯಿಂದ ಹಿಂದೂದೇಶವು ಸ್ವತಂತ್ರವಾಗಿದ್ದಾಗ ಇಟ್ಟುಕೊಳ್ಳುವ ಜಲ ನೆಲ ಸೈನ್ಯಕ್ಕಿಂತ ಹೆಚ್ಚು ಖರ್ಚನ್ನು ಹೊತ್ತುಕೊಂಡಿದೆ.

ಜಪಾನಿನ ಪ್ರಾಕೃತಿಕ ಸ್ಥಿತಿಯು ಹಿಂದೂದೇಶದ ದರಕ್ಕಿಂತ ಹೀನ. ಅದಕ್ಕೆ ಇಂಡಿಯಕ್ಕಿಂತ ಶತ್ರುಗಳು ಹೆಚ್ಚು. ಬಡಿಯದ ದೊಡ್ಡ ಶತ್ರುವೆಂದು ಇಂಗ್ಲಿಷರು ಭಾವಿಸಿರುವ ರಷ್ಯಾದೇಶವು ಜಪಾನಿಗೆ ಸಮೀಪ. ರಷ್ಯದ ಮೇರೆಯು ಜಪಾನಿಗೆ ತಗಲಿದೆ. ಆದರೆ ರಷ್ಯಕ್ಕೂ, ಇಂಡಿಯಾಕ್ಕೂ ನಡುವೆ ಹಲವು ದೈವ್ಯಲಿಗಳ ಅಂತರವಿರುವುದಲ್ಲದೆ, ಮಧ್ಯೆ ದುಸ್ತರವಾದ ಪರ್ವತಗಳೂ ಇವೆ. ಇಂಥಾ ಸ್ಥಿತಿಯಲ್ಲಿ ಜಪಾನಿನ ಜಲ ನೆಲ ಸೈನ್ಯದ ಖರ್ಚು ಇಂಡಿಯಾದೇಶದ ಖರ್ಚಿಗಿಂತ ಬಹಳ ಕಡಿಮೆಯಾಗಿದೆ. 1926ನೇ ಇಸವಿಯ ಜಪಾನಿನ 'ಸ್ಟೇಟ್ಸ್‌ಮೇನ್ ಇಯರ್' ಬುಕ್ಕಿನ ಪ್ರಕಾರ ಅದರ ಭೂ ಮತ್ತು ನೌಕಾಸೈನ್ಯದ ಖರ್ಚು 146,612270 ಡಾಲರುಗಳು (1 ಡಾಲರು = 3 ರೂಪಾಯಿ) ಅದೇ ವರ್ಷದ ಪ್ರಕಾರ ಇಂಡಿಯಾದ ಒಟ್ಟು ಖರ್ಚು 200,735,660 ಡಾಲರುಗಳು. ಅಂದರೆ ವರ್ಷ ಒಂದರ 50,000,000 ಡಾಲರುಗಳು ಜಪಾನಿಗಿಂತ ಹೆಚ್ಚಾಗಿ ಪರರಿಂದ ಪಡೆಯುತ್ತಿರುವ ರಕ್ಷಣಾ ಕಾರ್ಯಕ್ಕಾಗಿ (ಇದು ರಕ್ಷಣವಲ್ಲ ದಬ್ಬಾಳಿಕೆ) ಇಂಡಿಯಾವು ಖರ್ಚು ಮಾಡುತ್ತದೆ.

ಇಷ್ಟೇ ಅಲ್ಲ. ಇಷ್ಟೆಲ್ಲಾ ಖರ್ಚು ಮಾಡಿದರೂ ಹಿಂದೂದೇಶಕ್ಕೆ ಒಂದು ಸೈನಿಕ ಶಾಲೆಯಾಗಲಿ, ನೌಕಾ ಶಾಲೆಯಾಗಲಿ, ಒಬ್ಬ ಸೇನಾಪತಿಯಾಗಲಿ, ಒಬ್ಬ ನೌಕಾ ಸೇನಾಪತಿಯಾಗಲಿ, ಇಲ್ಲವೇ ಒಂದು ಯುದ್ಧದ ಹಡಗಾಗಲಿ, ವಿಮಾನವಾಗಲಿ, ಒಂದು ಕೋಟೆಯಾಗಲಿ, ಒಂದು ರೆಜಿಮೆಂಟಾಗಲಿ, ಒಂದು ತೋಪಾಗಲಿ, ಕೋವಿಯಾಗಲಿ ತನ್ನದೆಂದು ಹೇಳುವಂತದ್ದಿಲ್ಲ. ಜಪಾನಿನಲ್ಲಾದರೆ ಎಲ್ಲವೂ ಜಪಾನಿಯರದೇ. ಇನ್ನೊಂದು ಪರಕೀಯ ರದ್ದಲ್ಲ. ಇವೆಲ್ಲವೂ ಜಪಾನೀಯರಿಗಾಗಿ ಜಪಾನೀಯರಿಂದಲೇ ಉಪಯೋಗಿಸಲ್ಪಡುತ್ತಿವೆ.

ಈಗೀಗ ಹಿಂದೂದೇಶದ ಕಾರ್ಯಕಲಾಪಗಳಲ್ಲಿ "ರಾಯಲ್ ಇಂಡಿಯನ್ ನೇವಿ"ಯ ನಿರ್ಮಾಣ ಒಂದು. ಇಂಗ್ಲೆಂಡಿನಲ್ಲಿಯೂ, ಇಂಡಿಯಾದಲ್ಲಿಯೂ ಈ ವಿಚಾರವಾಗಿ ದೊಡ್ಡ ಚಳವಳಿ ನಡೆಯಿತು. ಅಂತ್ಯದಲ್ಲಿ ನೌಕಾ ಸೇನೆಯು ಬೇಕೆಂತಲೇ ತೀರ್ಮಾನವಾಯಿತು. ಮೊದಲು ಮೊದಲು ಇಂಥ ಏರ್ಪಾಡಿನಿಂದ ಇಂಡಿಯಾಕ್ಕೆ ಪ್ರಯೋಜನವಿದೆಂದು ಊಹಿಸಲಾಗಿತ್ತು. ಆದರೆ ಇದರಿಂದ ಇಂಡಿಯಾಕ್ಕೆ ಪ್ರಯೋಜನವೇನೂ ಇಲ್ಲವೆಂದೂ, ಪ್ರಯೋಜನವೆಲ್ಲವೂ ಇಂಗ್ಲೆಂಡಿಗೆ ಎಂದೂ ನಿರ್ಧಾರವಾಗುವುದು. ಹಿಂದೂದೇಶದ ಹೆಸರನ್ನೂ, ಹಣವನ್ನೂ ಉಪಯೋಗಿಸಿಕೊಂಡು ಬ್ರಿಟಿಷ್ ಸೈನ್ಯವನ್ನು ಬಲಪಡಿಸುವುದೇ ಮೇಲಿನ ಮಸೂದೆಯ ಉದ್ದೇಶ. 1927ನೇ ಇಸವಿ ಏಪ್ರಿಲ್ 5ರಲ್ಲಿ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯ ಮೇಲಿಂದ ಈ ಮಸೂದೆಯ ಉದ್ದೇಶಗಳು ಇವು ಎಂದು ತೋರುವುದು.—

1. ಹಿಂದೀಯರ ಹಣದಿಂದ ನಿರ್ಮಿತವಾದ ನೌಕಾ ಸೇನೆಯು ಭರತಖಂಡದ ರಕ್ಷಣಾರ್ಥವಾಗಿಯೇ ಭರತಖಂಡದ ಸಮುದ್ರಗಳಲ್ಲಿಯೇ ಉಪಯೋಗಿಸಲ್ಪಡತಕ್ಕದ್ದು. ದೂರ ಪ್ರದೇಶಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕಾಗಿ ಉಪಯೋಗಿಸಲ್ಪಡಬಾರದು.

2. ದೂರ ದೇಶಕ್ಕೆ ನದಿ, ಸೈನ್ಯವನ್ನು ಸಾಮ್ರಾಜ್ಯದ ಸಹಾಯಕ್ಕಾಗಿ ಕಳುಹಿಸುವುದಾದರೆ ಈ ಸಂಬಂಧದ ಖರ್ಚೆಲ್ಲಾ ಸಾಮ್ರಾಜ್ಯವೇ ಹೊರಬೇಕಲ್ಲದೆ ಇಂಡಿಯಾವಲ್ಲ.

3. ಹಿಂದೀ ಪಾರ್ಲಿಮೆಂಟಿನ ಅನುಮತಿ ಇಲ್ಲದೆ ನವಸೈನ್ಯವನ್ನು ಸಾಮ್ರಾಜ್ಯದ ಸಲವಾಗಿ ಕಳುಹಿಸಲಾಗದು.

ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಈ ಮೂರು ಬದಲಾವಣೆಗಳೂ ಸೋತವು ಮಾತ್ರವಲ್ಲ, ಬ್ರಿಟಿಷ್ ಪಾರ್ಲಿಮೆಂಟಿನವರು ಈ ತೀರ್ಮಾನಗಳನ್ನು ಮಾಡಿಯೇ ಬಿಟ್ಟರು.

1. ಹಿಂದೀ ಸೈನ್ಯವು ಹಿಂದೀ ಜನರ ಖರ್ಚಿನಿಂದ ನಡೆಸಲ್ಪಟ್ಟರೂ ಬ್ರಿಟಿಷ್ 'ಅಡ್‌ಮರಲ್ಟಿ'ಯ ಅಧಿಕಾರಕ್ಕೊಳಪಟ್ಟ, ಸಾಮ್ರಾಜ್ಯ ಸೈನ್ಯದ ಒಂದು ಭಾಗವಾಗಿರತಕ್ಕದ್ದು.

2. ಪಾರ್ಲಿಮೆಂಟಿನ ಇಚ್ಛಾನುಸಾರವಾಗಿ ಹಿಂದೀ ಸೈನ್ಯದ ಹೊರಗಣ ಖರ್ಚು ಹಿಂದೂದೇಶದ ಮೇಲೆ ಬೀಳಬಹುದು.

3. ಹಿಂದೀ ಪಾರ್ಲಿಮೆಂಟಿಗೆ ಈ ವಿಷಯವಾಗಿ ಯಾವ ಹಕ್ಕೂ ಇಲ್ಲ.

(4ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೨೯ನೇ ಪ್ರಕರಣ.

ಮನೆಯಲ್ಲಿ ಸತ್ಯಾಗ್ರಹ.

ನನಗೆ ಮೊಟ್ಟಮೊದಲು ಕಾರಾಗೃಹವಾಸದ ಅನುಭವವಾದುದು ೧೯೦೮ರಲ್ಲಿ. ಕೈದಿಗಳು ಅನುಸರಿಸಬೇಕಾದ ಕಟ್ಟುಗಳಲ್ಲಿ ಕೆಲವು, ಬ್ರಹ್ಮಚಾರಿಯೂ, ಸಂಯಮಿಯೂ ತಾನಾಗಿಯೇ ಆಚರಿಸಬೇಕಾದಂತಹವೆಂದು ಆಗ ನನಗೆ ಗೊತ್ತಾಯಿತು. ಉದಾಹರಣೆಗಾಗಿ ಸೂರ್ಯಾಸ್ತಮಯಕ್ಕೆ ಮುಂಚೆಯೇ ದಿನವೂ ಕಡೆಯ ಊಟವನ್ನು ಮುಗಿಸಿಬಿಡಬೇಕೆಂಬುದು ಇಂತಹವನ್ನೊಂದು ಕಟ್ಟಾಗಿದ್ದಿತು. ಭಾರತೀಯ ಕೈದಿಗಳಿಗಾಗಲಿ, ಆಫ್ರಿಕದ (ನಿಗ್ರೋ) ಕೈದಿಗಳಿಗಾಗಲಿ ಕಾಫಿ, ಚಹಾಗಳನ್ನು ಕೊಡುತ್ತಿರಲಿಲ್ಲ. ಬೇಯಿಸಿದ ಆಹಾರಕ್ಕೆ ತಮಗೆ ಬೇಕಾದ ಉಪ್ಪನ್ನು ಸೇರಿಸಿಕೊಳ್ಳಬಹುದಾಗಿದ್ದಿತು. ಆದರೆ ಕೇವಲ ಬಾಯಿ ರುಚಿಗಾಗಿ ಅವರಿಗೆ ಏನನ್ನೂ ಕೊಡುತ್ತಿರಲಿಲ್ಲ. ನಮಗೆ ಮಸಾಲೆ ಪುಡಿಯನ್ನು ಕೊಡಬೇಕೆಂದೂ, ಬೇಯಿಸುವಾಗ ಉಪ್ಪು ಹಾಕುವುದಕ್ಕೆ ಬಿಡಬೇಕೆಂದೂ ಒಂದೇ ಬಾರಿಯ ವೈದ್ಯಾಧಿಕಾರಿಗಳನ್ನು ನಾನು ಕೇಳಿದೆನು. ಅದಕ್ಕೆ ಅವರು "ಬಾಯಿಚಪಲವನ್ನು ತೃಪ್ತಿಗೊಳಿಸುವುದಕ್ಕಲ್ಲ ನೀವಿಲ್ಲಿರುವುದು. ಆರೋಗ್ಯದೃಷ್ಟಿಯಿಂದ ಮಸಾಲೆ ಪುಡಿಯು ಆವಶ್ಯಕವೇ ಅಲ್ಲ, ಉಪ್ಪನ್ನು ಬೇಯಿಸುವಾಗ ಹಾಕಿದರೂ ಒಂದೇ, ಆ ಮೇಲೆ ಸೇರಿಸಿದರೂ ಒಂದೇ," ಎಂದು ಹೇಳಿದರು.

ಕಡೆಗೇನೋ ಈ ಕಟ್ಟುಗಳನ್ನು ಮಾರ್ಪಡಿಸಿದರು. ಆದರೆ ಅದಕ್ಕೆ ಬಹಳ ಕಷ್ಟಪಡಬೇಕಾಯಿತು. ಆದರೆ ಇವೆರಡೂ ಸಂಯಮ ಸಾಧನೆಗೆ ಒಳ್ಳೆಯ ನಿಯಮಗಳಾಗಿದ್ದುವು. ಹೊರಗಿನಿಂದ ಹೊರಿಸಿದ ಕಟ್ಟುಗಳು ಸಫಲವಾಗುವುದು ಅಪರೂಪ. ಆದರೆ ಅವನ್ನು ಅಂತಃಪ್ರೇರಣೆಯಿಂದ ಅನುಸರಿಸಿದರೆ ಅವುಗಳಿಂದ ಧಾರಾಳವಾಗಿ ಸತ್ಪರಿಣಾಮವುಂಟಾಗುತ್ತದೆ. ಆದುದರಿಂದ ನನಗೆ ಕಾರಾಗಾರದಿಂದ ಬಿಡುಗಡೆಯಾದೊಡನೆಯೇ ನಾನು ಇವೆರಡು ನಿಯಮಗಳನ್ನೂ ನಡಿಸತೊಡಗಿದೆನು. ಚಹಾ ಕುಡಿಯುವುದನ್ನು ಆದಷ್ಟು ಮಟ್ಟಿಗೆ ನಿಲ್ಲಿಸಿಬಿಟ್ಟೆನು. ಮತ್ತು ಕಡೆಯ ಊಟವನ್ನು ಹೊತ್ತು ಮುಳುಗುವುದಕ್ಕೆ ಮುಂಚೆಯೇ ಮುಗಿಸಿಬಿಡುತ್ತಿದ್ದೆನು. ಇವೆರಡಕ್ಕೂ ಈಗ ಪ್ರಯತ್ನವೇ ಅವಶ್ಯಕವಿಲ್ಲ.

ಒಂದು ಸಂದರ್ಭವೊದಗಿ ನಾನು ಉಪ್ಪನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕಾಯಿತು. ನಾನು ಇದನ್ನು ಹತ್ತು ವರ್ಷ ನಡಿಸಿದೆನು. ಮನುಷ್ಯನಿಗೆ ಉಪ್ಪು ಆವಶ್ಯಕವಾದ ಆಹಾರಪದಾರ್ಥವಲ್ಲವೆಂದೂ, ಮತ್ತೆ ನೋಡಿದರೆ ಉಪ್ಪಿಲ್ಲದ ಆಹಾರವೇ ದೇಹಾರೋಗ್ಯಕ್ಕೆ ಇನ್ನೂ ಒಳ್ಳೆಯದೆಂದೂ ನಾನು ಶಾಕಾಹಾರವನ್ನು ಕುರಿತು ಕೆಲವು ಪುಸ್ತಕಗಳಲ್ಲಿ ಓದಿದೆನು. ಇದರಿಂದ ನಾನು ಬ್ರಹ್ಮಚಾರಿಗೆ ನಿರ್ಲವಣಾಹಾರವು ಲಾಭದಾಯಕವೆಂದು ತರ್ಕಿಸಿದೆನು. ನಿರ್ಬಲರು ಬೇಳೆ ಮುಂತಾದುವನ್ನು ತ್ಯಜಿಸಬೇಕೆಂದು ನಾನು ಓದಿಯೂ ಇದ್ದೆನು, ಅನುಭವದಿಂದಲೂ ತಿಳಿದಿದ್ದೆನು. ನನಗೆ ಅವುಗಳಲ್ಲಿ ಬಹು ಇಷ್ಟವಿದ್ದಿತು. ಹೀಗಿರುವಲ್ಲಿ ಶಸ್ತ್ರೋಪಚಾರವಾದ ಮೇಲೆ ಕೆಲವು ದಿನ ಕಸ್ತೂರಿಬಾಯಿಗೆ ರಕ್ತಸ್ರಾವವು ನಿಂತಿದ್ದಿತಾದರೂ ಅದು ಪುನಃ ಆಕೆಯನ್ನು ಬಾಧಿಸತೊಡಗಿ ಮೊಂಡ ವ್ಯಾಧಿಯಾಗಿ ನಿಂತಂತೆ ತೋರಿತು. ಬರಿಯ ಜಲಚಿಕಿತ್ಸೆಯಿಂದಲೇ ಪ್ರಯೋಜನವಾಗಲಿಲ್ಲ. ಕಸ್ತೂರಿಬಾಯಿಗೆ ನನ್ನ ಚಿಕಿತ್ಸೆಗಳಲ್ಲಿ ಅಷ್ಟೇನೂ ನಂಬಿಕೆಯಿರಲಿಲ್ಲ. ಆದರೆ ಆಕೆಯು ಅವಕ್ಕೆ ಅಡ್ಡಬರಲಿಲ್ಲ. ಹೊರಗಿನವರನ್ನಂತು ಆಕೆಯು ಆಸಿಸಲೇ ಇಲ್ಲ. ಆದುದರಿಂದ ಚಿಕಿತ್ಸೆಗಳೆಲ್ಲಾ ಅಪ್ರಯೋಜಕವಾಗಿ ಕಂಡುಬಂದ ಮೇಲೆ ನಾನು ಉಪ್ಪನ್ನೂ, ಬೇಳೆಗಳನ್ನೂ ಬಿಟ್ಟುಬಿಡಬೇಕೆಂದು ಆಕೆಯನ್ನು ಬೇಡಿಕೊಂಡೆನು. ಇದಕ್ಕೆ ಬೆಂಬಲ ಕೊಡುವ ಆಧಾರಗಳನ್ನು ನಿರೂಪಿಸಿ ಆಕೆಗೆ ಎಷ್ಟು ತಿಳಿಯ ಹೇಳಿದರೂ ಆಕೆಯು ಇದಕ್ಕೆ ಒಪ್ಪಲೊಲ್ಲಳು. ಕಟ್ಟಕಡೆಗೆ ಆಕೆಯು 'ನಿಮಗೆ ಯಾರಾದರೂ ಇವುಗಳನ್ನು ಬಿಟ್ಟುಬಿಡಿರೆಂದು ಹೇಳಿದರೆ ನೀವು ಕೂಡ ಬಿಡಲಾರಿರಿ" ಎಂದು ನನ್ನನ್ನೇ ಪಂಥಕ್ಕೆ ಎಳೆದಳು. ನನಗೆ ಇದರಿಂದ ದುಃಖವೂ ಉಂಟಾಯಿತು ಮತ್ತು ಅಷ್ಟೇ ಸಂತೋಷವೂ ಉಂಟಾಯಿತು. ಸಂತೋಷವೇಕೆಂದರೆ—ಆಕೆಯ ಮೇಲೆ ಪ್ರೇಮವನ್ನು ಮಳೆಗರೆಯಲು ನನಗೆ ಅವಕಾಶ ದೊರಕಿತೆಂದು.

"ನೀನು ತಿಳಿದುಕೊಂಡಿರುವುದು ತಪ್ಪು. ನಾನು ನರಳುತ್ತಿದ್ದು ವೈದ್ಯರು ಇವನ್ನಾಗಲಿ, ಮತ್ತಾವ ಪದಾರ್ಥವನ್ನಾಗಲಿ ಬಿಡಬೇಕೆಂದು ಹೇಳಿದ್ದರೆ ನಾನು ಎರಡು ಸಲ ಯೋಚಿಸದೆ ಅದಕ್ಕೆ ಒಪ್ಪಿಯೇ ಬಿಡುತ್ತಿದ್ದೆನು. ಅಷ್ಟೇಕೆ, ಈಗ ಯಾವ ವೈದ್ಯರ ಸಲಹೆಯೂ ಇಲ್ಲದೆ ನಾನು ಇಂದಿನಿಂದ ಒಂದು ವರ್ಷದ ವರೆಗೆ ಉಪ್ಪನ್ನೂ, ಬೇಳೆಗಳನ್ನೂ ಬಿಟ್ಟುಬಿಡುತ್ತೇನೆ. ನೀನು ಬಿಡುವುದೂ, ಬಿಡದಿರುವುದೂ ಬೇರೆ ಮಾತು" ಎಂದು ಹೇಳಿದೆನು.

ಆಕೆಗೆ ಸಿಡಿಲು ಬಡಿದಂತಾಯಿತು. ಬಹು ವ್ಯಾಕುಲದಿಂದ ಆಕೆಯು "ನಿಮಗೆ ದಮ್ಮಯ್ಯ ಕ್ಷಮಿಸಿ. ನಿಮ್ಮ ಸ್ವಭಾವವನ್ನು ಅರಿತೂ ಅರಿತೂ ನಾನು ನಿಮ್ಮನ್ನು ರೇಗಿಸಬಾರದಾಗಿದ್ದಿತು. ನಾನು ಈ ಪದಾರ್ಥಗಳನ್ನು ಬಿಟ್ಟುಬಿಡುವೆನೆಂದು ಆಣೆ ಇಡುತ್ತೇನೆ. ಆದರೆ ದೇವರಾಣೆ ನಿಮ್ಮ ವಚನವನ್ನು ಹಿಂದಕ್ಕೆ ತೆಗೆದುಕೊಳ್ಳಿ ಇದು ನನಗೆ ಕ್ರೂರ ಶಿಕ್ಷೆ," ಎಂದು ಅಂಗಲಾಚಿದಳು.

"ನೀನು ಈ ಪದಾರ್ಥಗಳನ್ನು ತ್ಯಜಿಸಿದರೆ ಬಹಳ ಒಳ್ಳೆಯದೇ ಆಯಿತು. ಅವಿಲ್ಲದಿರುವುದರಿಂದ ನಿನಗೆ ಲಾಭವಾಗುವುದೆನ್ನುವುದರಲ್ಲಿ ನನಗೆ ಸಂದೇಹವೇ ಇಲ್ಲ. ನಾನಂತೂ ಮನಃಪೂರ್ವಕವಾಗಿ ಕೊಟ್ಟ ಮಾತನ್ನು ಹಿಂದಕ್ಕೆ ತೆಗೆಯಲಾರೆನು. ಮತ್ತು ಅದರಿಂದ ನನಗೆ ಒಳ್ಳೆಯದಾಗುವುದು ಖಂಡಿತ. ಏಕೆಂದರೆ—ಎಲ್ಲಾ ಸಂಯಮವೂ ಅದಕ್ಕೆ ಕಾರಣವು ಏನೇ ಆಗಿರಲಿ, ಮನುಷ್ಯನಿಗೆ ಶ್ರೇಯಸ್ಕರವಾದುದು. ಆದುದರಿಂದ ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡು. ನನಗೆ ಇದು ಪರೀಕ್ಷೆಯಾಗಿಯೂ ನಿನ್ನ ನಿಶ್ಚಯವನ್ನು ನಡೆಸಲು ನಿನಗೆ ಬೆಂಬಲವಾಗಿಯೂ ಇರುತ್ತದೆ.'

ಅದಾದಮೇಲೆ ಆಕೆಯು ನನ್ನನ್ನು ಬಿಟ್ಟಳು. 'ನೀವು ಬಹು ಹಟಮಾರಿಗಳು, ಯಾರ ಮಾತನ್ನೂ ಕೇಳುವುದಿಲ್ಲ" ಎಂದು ಹೇಳಿ ತನ್ನ ಹೃದಯದ ಬೆಂಕಿಯನ್ನು ಕಣ್ಣೀರಿನಲ್ಲಿ ಆರಿಸಿದಳು.

ಈ ಘಟನೆಯು ಸತ್ಯಾಗ್ರಹದ ದೃಷ್ಟಾಂತವೆಂದೂ, ನನ್ನ ಜೀವನದ ಅತ್ಯಂತ ಸವಿನೆನಪುಗಳಲ್ಲಿ ಒಂದೆಂದೂ ನನ್ನ ಎಣಿಕೆ.

ಇದರನಂತರ ಕಸ್ತೂರಿಬಾಯಿಗೆ ತ್ವರೆಯಿಂದ ಗುಣವಾಗುತ್ತಾ ಬಂದಿತು. ಹೀಗಾದದ್ದೂ ಉಪ್ಪು, ಬೇಳೆಗಳಿಲ್ಲದ ಆಹಾರದಿಂದಲೋ, ಅಥವಾ ಅದರಿಂದ ಉಂಟಾದ ಇತರ ಪರಿಣಾಮದಿಂದಲೋ ಜೀವನದ ಇತರ ನಿಯಮಗಳನ್ನು ಆಕೆಯು ಪಾಲಿಸುವುದರಲ್ಲಿ ನಾನು ಬಹು ಎಚ್ಚರಿಕೆಯಿಂದಿದ್ದುದರಿಂದಲೋ ಅಥವಾ ಮೇಲೆ ಹೇಳಿದ ಘಟನೆಯಿಂದುಂಟಾದ ಮಾನಸಿಕ ಉಲ್ಲಾಸದಿಂದಲೋ ಒಂದುವೇಳೆ ಇದು ನಿಜವಾದರೆ ಎಷ್ಟರ ಮಟ್ಟಿಗೆ ಅದರಿಂದ ಉಂಟಾಯಿತೋ ನಾನು ಹೇಳಲಾರೆನು.

ನನಗಾದರೋ ಈ ತ್ಯಾಗಗಳಿಂದ ಒಳಿತೇ ಉಂಟಾಯಿತು. ಬಿಟ್ಟುಬಿಟ್ಟ ಪದಾರ್ಥಗಳ ಮೇಲೆ ನನಗೆ ಬಯಕೆಯೇ ಉಂಟಾಗಲಿಲ್ಲ. ವರ್ಷವೂ ವೇಗದಿಂದ ಕಳೆದು ಹೋಯಿತು. ನನ್ನ ಇಂದ್ರಿಯಗಳು ಎಂದಿಗಿಂತ ಹೆಚ್ಚಾದ ಶಾಂತತೆಯನ್ನು ಹೊಂದಿದುವು. ಈ ಪ್ರಯೋಗದಿಂದ ನನಗೆ ಆತ್ಮಸಂಯಮದ ಕಡೆ ಮನಸ್ಸು ಇನ್ನೂ ತೀವ್ರವಾಗಿ ಓಡಲಾರಂಭಿಸಿತು. ಭಾರತಕ್ಕೆ ಹಿಂದಿರುಗಿದ ಮೇಲೆ ಅನೇಕ ದಿನದ ವರೆಗೂ ನಾನು ಈ ಪದಾರ್ಥಗಳ ತ್ಯಾಗವನ್ನು ನಡಿಸಿದೆನು. ನಾನು ಲಂಡನ್ನಿನಲ್ಲಿರುವಾಗ ೧೯೧೪ರಲ್ಲಿ ಒಂದೇ ಒಂದು ಸಲ ಇವೆರಡು ಪದಾರ್ಥಗಳನ್ನು ತೆಗೆದುಕೊಂಡೆನು. ಆ ಸಂದರ್ಭದ ವಿಚಾರವಾಗಿಯೂ ಪದಾರ್ಥಗಳನ್ನು ನಾನು ಪುನಃ ತೆಗೆದುಕೊಳ್ಳಲು ಹೇಗೆ ಆರಂಭಿಸಿದೆನೆಂಬುದನ್ನು ಮುಂದಿನ ಒಂದು ಅಧ್ಯಾಯದಲ್ಲಿ ತಿಳಿಸುವೆನು.

ಉಪ್ಪು ಬೇಳೆಗಳಿಲ್ಲದ ಆಹಾರದ ಪ್ರಯೋಗಗಳನ್ನು ನಾನು ನನ್ನ ಸಹವಾಸಿಗಳಲ್ಲಿ ಅನೇಕರ ಮೇಲೆ ದಕ್ಷಿಣ ಆಫ್ರಿಕದಲ್ಲಿ ನಡೆಸಿದ್ದೇನೆ. ಇವುಗಳ ಪರಿಣಾಮವು ಒಳ್ಳೆಯದಾಗಿಯೇ ಇದ್ದಿತು. ವೈದ್ಯಶಾಸ್ತ್ರ ದೃಷ್ಟಿಯಿಂದ ಉಪ್ಪು, ಬೇಳೆಗಳಿಲ್ಲದ ಆಹಾರದ ಗುಣಾವಗುಣಗಳ ವಿಚಾರವಾಗಿ ಮತಭೇದವಿರಬಹುದು. ಆದರೆ ನೈತಿಕ ದೃಷ್ಟಿಯಿಂದ ನೋಡಿದರೆ ಎಲ್ಲಾ ವಿಧವಾದ ಸಂಯಮವೂ ಆತ್ಮಕ್ಕೆ ಒಳ್ಳೆಯದೆನ್ನುವುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಭೋಗಿಯ ಆಹಾರವೂ, ಸಂಯಮಿಯ ಆಹಾರವೂ ಅವರ ಜೀವನದ ಪಥಗಳು ಭಿನ್ನವಾಗಿರುವಂತೆ ಭಿನ್ನವಾಗಿಯೇ ಇರಬೇಕು. ಬ್ರಹ್ಮಚರ್ಯವ್ರತಪಾಲನಾಕಾಂಕ್ಷಿಗಳು ವಿಲಾಸಿಯ ಜೀವನಕ್ಕೆ ತಕ್ಕ ಮಾರ್ಗವನ್ನನುಸರಿಸಿ ತಮ್ಮ ಗುರಿಗೆ ತಾವೇ ಅಡ್ಡ ಬರುತ್ತಾರೆ.

ನೊಣಗಳ ಮಹಾಸಭೆ.

ಅಪಾಯಕರವಾದ ಒಂದು ವಿನೋದದ ಕೂಟ

ಈ ವರ್ಷದ ಕ್ರಿಸ್ಮಸ್ ರಜಾದಿನಗಳಲ್ಲಿ ಮದರಾಸ್ ಪಟ್ಟಣದಲ್ಲಿ ಕಾಂಗ್ರೆಸ್ ಮಹಾಸಭೆಯು ನಡೆದಾಗ, ಇನ್ನೂ ಅನೇಕ ಸಮ್ಮೇಳನಗಳು ಕೂಡಿದ್ದುವು. ಬೇರೆ ಬೇರೆ ಅನೇಕ ವಿಚಾರಗಳು ಚರ್ಚಿಸಲ್ಪಟ್ಟುವು. ಅನೇಕ ತೀರ್ಮಾನಗಳೂ ನಡೆದುವು. ಅವುಗಳಲ್ಲಿ ಕೆಲವು ರಾಜಕೀಯ ವಿಚಾರಗಳು, ಕೆಲವು ಸಾಮಾಜಿಕಗಳು, ಕೆಲವು ದೇಶದ ಸಂಪದಭ್ಯುದಯವನ್ನು ಕುರಿತ ವಿಚಾರಗಳು, ಬೇರೆ ಕೆಲವು ಕೇವಲ ವೈದಿಕವಾದ ಸನಾತನ ಧರ್ಮಸಂಬಂಧವಾದುವುಗಳು. ಅವ್ಯಾವುದೂ ಈ ಪತ್ರಿಕೆಗೆ ಸಂಬಂಧಪಟ್ಟ ವಿಚಾರಗಳಲ್ಲ. ಅವುಗಳ ವ್ಯಾಖ್ಯಾನವು ನಮಗೆ ಬೇಕಾದುದಿಲ್ಲ. ಜನಗಳಲ್ಲಿ ಆರೋಗ್ಯ ಪ್ರಚಾರವೊಂದೇ ಆರೋಗ್ಯಚಂದ್ರಿಕೆಯ ಉದ್ದೇಶವು. ಆರೋಗ್ಯಪದ್ಧತಿ, ಚಿಕಿತ್ಸಾಪದ್ಧತಿ, ಫಿಸಿಕಲ್ ಕಲ್ಚರ್ ಮುಂತಾಗಿ ಜನಾರೋಗ್ಯ ಪ್ರಚಾರಕ್ಕೆ ಸಂಬಂಧಪಟ್ಟ ಕೂಟಗಳೂ ಸೇರಿ ಆ ವಿಚಾರವಾಗಿಯೂ ಆಗ ಅಲ್ಲಲ್ಲಿ ಪ್ರಸಂಗಗಳು ನಡೆದುವು.

ಆದರೆ ಹೀಗೆ ಆರೋಗ್ಯ ವಿಚಾರವಾದ ಕೂಟಗಳು ನಡೆಯುತ್ತಿರುವಾಗಲೇ ಇವಕ್ಕೆ ಪ್ರತಿಪಕ್ಷವಾಗಿ ಬೇರೊಂದು ದೊಡ್ಡ ಕೂಟವೂ ಸೇರತೊಡಗಿತು. ಈ ಕೂಟವಾದರೂ ಸಾಮಾನ್ಯವಾದುದಲ್ಲ. ಇದಕ್ಕಾಗಿ ಬಂದು ನೆರೆಯುತ್ತಿದ್ದ ಪ್ರತಿನಿಧಿಗಳ ಸಂಖ್ಯೆಗೆ ಪಾರವೇ ಇರಲಿಲ್ಲ. ಯಾವ ಛತ್ರಗಳಲ್ಲಿ ಅಥವಾ ಹೋಟೇಲುಗಳಲ್ಲಿ ನೋಡಿದರೂ ಇವರ ಹಾವಳಿಗಳೇ! ಬೀದಿ ಬೀದಿಗಳಲ್ಲೆಲ್ಲ ಇವರ ಬಿಡಾರಗಳೇ! ಸಂದುಗೊಂದುಗಳಲ್ಲೆಲ್ಲ ಇವರ ಕ್ಯಾಂಪುಗಳೇ! ಇವರ ಮೊಕ್ಕಾಂಗಳೆಲ್ಲ ಮೈದಾನಗಳಲ್ಲಿಯೇ! ಈ ಕ್ರಿಸ್ಮಸ್ ದಿನಗಳಲ್ಲಿ ಊರೂರುಗಳಿಂದ ಬರುವ ಜನಸಮುದಾಯದ ಸೌಕರ್ಯಕ್ಕಾಗಿ ಅಲ್ಲಲ್ಲಿ ಕಾಫಿ ಹೋಟೇಲುಗಳೂ, ಭೋಜನ ಶಾಲೆಗಳೂ, ಅನ್ನಛತ್ರಗಳೂ, ಮಿಠಾಯಿ ಅಂಗಡಿಗಳೂ ಹೊಸದಾಗಿ ಏರ್ಪಟ್ಟ ಹಾಗೆಲ್ಲ, ಮೊಟ್ಟಮೊದಲು ಈ ಮೇಲ್ಕಂಡ ಮಹಾಸಭೆಯ ಡೆಲಿಗೇಟುಗಳೇ ಅಗ್ರಾಸನ ಸ್ವೀಕರಿಸಿಕೊಳ್ಳುತ್ತಿದ್ದರು. ಹೆಚ್ಚೇಕೆ? ಇವರು ಮೊದಲು ರುಚಿನೋಡಿ ಬಿಟ್ಟ ಆಹಾರಗಳೇ ಇತರರಿಗೆ ಸರಬರಾಜಾಗುತ್ತಿದ್ದುವು.

ಇಷ್ಟೊಂದು ದೊಡ್ಡ ಕೂಟವು ನೆರೆದಿದ್ದರೂ, ಅದರ ಕಾರ್ಯಾರಂಭಗಳು ರಾಜಸಭೆಯಂತೆ "[illegible]ಕಾಗಿದ್ದಿಲ್ಲ. ಹೆಸರು, ಇತರ ಸಭೆಗಳಲ್ಲಿ ಹೇಗೋ ಹಾಗೆ ಇದರಲ್ಲಿ ಉಪನ್ಯಾಸದ ಆಡಂಬರಗಳೂ ಅತ್ಯಾವಾಸಗಳೂ ಇರಲಿಲ್ಲ. ಆಗಾಗ 'ಘೊಂಯ್' ಎಂಬ ಜಯಘೋಷವೊಂದು ಹೊರತು ಬೇರೆ ವಿವಾದಗಳಾಗಲಿ, ಚರ್ಚೆಗಳಾಗಲಿ ಹೊರಕ್ಕೆ ತಿಳಿಯದುದರಿಂದ ಈ ಕೂಟದ ನಡವಳಿಕೆಗಳೊಂದೂ ಪತ್ರಿಕೆಗಳ ಮೂಲಕ ಜನಗಳ ಗಮನಕ್ಕೆ ಬರಲು ಅವಕಾಶವಾಗಲಿಲ್ಲ.

ಮ್ಯೂಸಿಕ್ ಕಾನ್ಫರೆನ್ಸ್, ಕಾಂಗ್ರೆಸ್ ಮುಂತಾದ ಇತರ ಸಭೆಗಳಲ್ಲಿ ಹೇಗೋ ಹಾಗೆ, ಈ ಕೂಟಗಳನ್ನು ನೋಡಲು ಪೇಕ್ಷೆಯುಳ್ಳವರಿಗೆ ಟಿಕೆಟ್ಟುಗಳ ನಿರ್ಬಂಧವಾಗಲಿ, ವಾಲಂಟಿಯರುಗಳ ಸಹಕಾರವಾಗಲಿ ಇಲ್ಲದುದರಿಂದ, ವಿನೋದ ಸಂಚಾರಕ್ಕಾಗಿ ಹೋದವರು ಸ್ವಲ್ಪ ಹೊತ್ತು ನಿಶ್ಚಿಂತರಾಗಿ ನಿಂತು ಆ ಕೂಟದ ನಡವಳಿಕೆಗಳನ್ನು ನೋಡಲು ಅವಕಾಶವಿರುತ್ತಿತ್ತು.

ಇಂತಹ ಒಂದು ಮಹಾಕೂಟದಲ್ಲಿ ನಡೆದ ಕೆಲವು ನಡವಳಿಗಳನ್ನು ಜನಗಳ ಗಮನಕ್ಕೆ ತರಲು ಈ "ಆರೋಗ್ಯ ಚಂದ್ರಿಕೆಯೇ" ತಕ್ಕ ಸಾಧನವೆಂದು ತೋರಿ ಅದನ್ನು ಈ ಕೆಳಗೆ ಕೊಟ್ಟಿದೆ.

ಬೇರೆ ಎಲ್ಲಾ ಸಭೆಗಳಲ್ಲಿಯೂ ನಡೆಯುವಂತೆ ಇದರಲ್ಲಿಯೂ ಅಗ್ರಾಸನಾಧಿಪತಿಗಳ ಚುನಾವಣೆ. ಅಧ್ಯಕ್ಷರ ಭಾಷಣದಲ್ಲಿ ಸಹಿತ ಎಲ್ಲಾ ಕಡೆಯೂ ನಡೆಯುವಂತೆ, ಅಧ್ಯಕ್ಷರು ಅಂತಹ ಗೌರವಸ್ಥಾನವನ್ನು ವಹಿಸಲು ತಮಗಿರುವ ಅನರ್ಹತೆ, ಆ ಗೌರವವನ್ನು ಕೊಟ್ಟುದಕ್ಕಾಗಿ ಸಭಿಕರಲ್ಲಿ ಕೃತಜ್ಞತೆ ಮುಂತಾದ ಆನುಪೂರ್ವಿಗಳಲ್ಲಿ ನಾವು ಹೋಗುವುದಕ್ಕಿಲ್ಲ. ಮುಗಿಯುವಾಗ ಅಗ್ರಾಸನಾಧಿಪತಿಗಳ ಆ ಉಪನ್ಯಾಸದಲ್ಲಿ ಈ ಕೆಳಗೆ ಬಂದ ನಾಲ್ಕಾರು ಮಾತುಗಳು ಮಾತ್ರ ನಮ್ಮ ಕಿವಿಗೆ ಬಿದ್ದುವು. ಏನೆಂದರೆ —

ಅಧ್ಯಕ್ಷರ ಭಾಷಣ—ನಮ್ಮ ಸಮುದಾಯದ ಮೇಲ್ಮೆ.

ಪ್ರಿಯ ಸೋದರ ಸೋದರಿಯರೇ! ಈಗಿನ ಕಾಲದ ಕ್ಲೇಶಗಳನ್ನು ಚರ್ಚಿಸುವುದಕ್ಕೆ ಮೊದಲು ನಮ್ಮ ಸಮುದಾಯದ ಪ್ರಾಚೀನತೆಯನ್ನೂ, ಅದರ ಮಹತ್ವವನ್ನೂ, ನಮ್ಮ ಜನಬಾಹುಳ್ಯವನ್ನೂ ಈ ಮಹಾಸಭೆಯಲ್ಲಿ ತಿಳಿಸುವುದು ನನ್ನ ಕರ್ತವ್ಯವಾಗಿದೆ.

ನಮ್ಮ ಸಮುದಾಯದ ಪ್ರಾಚೀನತೆ.

ಸೃಷ್ಟಿಕರ್ತನಾದ ಸಾಕ್ಷಾತ್ ಚತುರ್ಮುಖ ಬ್ರಹ್ಮನಿಗಿಂತ ಮೊದಲೇ ನಮ್ಮ ಮೂಲಪುರುಷನಿದ್ದನೆಂದು, ಜನರಿಗೆ ಸಾಬೀತುಪಡಿಸಬಹುದು. ಅದರ ಯುಕ್ತಿವಾದದಿಂದ ನಾವು ಇದನ್ನು ಸುಲಭವಾಗಿ ಸ್ಥಾಪಿಸಬಹುದು. ಜಗತ್ಸೃಷ್ಟಿಗೆ ಮೊದಲು ಶ್ರೀ ಮಹಾವಿಷ್ಣುವಿನ ನಾಭಿಯಿಂದ ಬಂದು ಕಮಲವು ಹೊರಟಿತೆಂದು ಹೇಳುವರಲ್ಲವೇ? ಇದು ನಿಜವಾಗಿದ್ದ, ಕಮಲವೊಂದ ಮೇಲೆ ಅದರಲ್ಲಿ ಮಧುವಿದ್ದೇ ಇರಬೇಕು! ಮಧುವಿದ್ದ ಕಡೆಯಲ್ಲಿ ನೊಣಗಳಿದ್ದಿರುವುದನ್ನು ನೀವೆಲ್ಲರೂ ಕಂಡು ಕೇಳಿರುವಿರಾ? (ಸಭಿಕರು [illegible] ಇಲ್ಲ! ಇಲ್ಲ!) ಆದುದರಿಂದ ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನಿಗಿಂತಲೂ ಮೊದಲು ಅನಾದಿಕಾಲದಿಂದ ನಮ್ಮ ಜನಾಂಗವು ಆರಂಭವಾಯಿತೆಂಬುದು ಅದರಲ್ಲಿ ಅತಿಶಯೋಕ್ತಿಯಾಗಲಿ ಅತ್ಯುಕ್ತಿಯಾಗಲಿ ಇಲ್ಲವೆಂಬುದಕ್ಕೆ ಸಂದೇಹವೇನಿದೆ?

ನಮ್ಮ ಜನಬಾಹುಳ್ಯ.

ನಮ್ಮ ಸಮುದಾಯವು ಇನ್ನು ಅನಾದಿ ಕಾಲದಿಂದ ಬಂದುದು ಮಾತ್ರವಲ್ಲ. ಪ್ರಜಾಸಂಖ್ಯೆಯಲ್ಲಿಯೂ ಬಹಳ ಮಹತ್ತಾದುದು. ಒಂದು ಮನೆಯಲ್ಲಿ ಬರುವ ಕುಟುಂಬಕ್ಕೆ ಸೇರಿದ ಜನರ ಸಂಖ್ಯೆ ಸಾವಿರಾರು ಮಂದಿಗಿಂತ ಹೆಚ್ಚಿರಬಹುದು. ಹೀಗಿರುವಾಗ ಮನೆಯಲ್ಲಿ ನಮ್ಮ ಕುಲದವರೆಷ್ಟೆಂದು ಎಣಿಸುವುದಕ್ಕೂ ಸಾಧ್ಯವಿಲ್ಲ. ಅಷ್ಟೇಕೆ? ಇಂಡಿಯಾ ದೇಶದ ಜನಸಂಖ್ಯೆ ಮೊತ್ತಕ್ಕೆ ೩೩ ಕೋಟಿಯೆಂದರೆ ಅದಕ್ಕೂ ಕೋಟಿ ಪಾಲು ಹೆಚ್ಚಾಗಿ ನಮ್ಮ ಸಂಖ್ಯೆಯಿದೆ.

ಈ ಮಹಾ ಸಮ್ಮೇಳನದ ಆವಶ್ಯಕತೆ.

ನಮ್ಮ ಸಮುದಾಯವು ಇಷ್ಟೊಂದು ದೊಡ್ಡದಾಗಿದ್ದರೂ ಈಗ ನಾವೆಲ್ಲರೂ ಒಂದು ಕಡೆ ಏಕಮತ್ಯದಿಂದ ಸೇರಿ ನಮ್ಮ ಅಭಿವೃದ್ಧಿಗೆ ತಕ್ಕ ಕಾರ್ಯಾಲೋಚನೆಗಳನ್ನು ಮಾಡುವುದಕ್ಕೆ ನಮ್ಮದೊಂದು ಸಭೆಯಿರಬೇಕೆಂಬುದನ್ನು ನಾನು ಹೇಳಬೇಕಾಗಿಲ್ಲ. ನಾಲ್ಕಾರು ಜನಗಳು ಸಣ್ಣ ಸಣ್ಣ ಕೂಟದವರೆಲ್ಲ ಈ ಕಾಲದಲ್ಲಿ ತಮ್ಮದೊಂದು ಸಂಘವನ್ನು ಮಾಡಿಕೊಂಡು ಎಷ್ಟೋ ಆಡಂಬರಗಳನ್ನು ನಡೆಸುತ್ತಿರುವಾಗ ನಾವು ಮಾತ್ರ ಸೋಮಾರಿಗಳಂತೆ ಸುಮ್ಮನೆ ಕುಳಿತಿರಬಹುದೇ?

ಈ ಸಮ್ಮೇಳನದ ಕಾರ್ಯೋದ್ದೇಶಗಳು.

ಇನ್ನು ಈ ಸಮ್ಮೇಳನದ ಕಾರ್ಯೋದ್ದೇಶವೇನೆಂಬುದನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಿ ನಾನು ಉಪನ್ಯಾಸವನ್ನು ಮುಗಿಸುವೆನು. ಈಗ ಅಲ್ಲಲ್ಲಿ ಬೇರೆ ಬೇರೆ ಕೂಟಗಳು ಕೂಡಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಮುಂತಾದ ವಿಷಯಗಳನ್ನು ಚರ್ಚಿಸುತ್ತಿವೆ. ಈ ವೇಳ್ಯಂತ ಸಮ್ಮೇಳನಗಳ ಸ್ಥಿತಿ ಒಂದಕ್ಕೊಂದು ವಿರುದ್ಧಾಭಿಪ್ರಾಯವುಳ್ಳ ತೀರ್ಮಾನಗಳೂ ನಡೆಯುತ್ತಿವೆ. ಒಂದು ಕಡೆಯಲ್ಲಿ "ಕೋಆಪರೇಟಿವ್ ಮೂವ್ಮೆಂಟು" ಗಳು, ಮತ್ತೊಂದು ಕಡೆಯಲ್ಲಿ "ನಾನ್ ಕೋಆಪರೇಷನ್" ತೀರ್ಮಾನಗಳು, ಒಂದು ಕಡೆ ಸಂಘ ಸಂಸ್ಕರಣ ಪ್ರಯತ್ನಗಳು, ಮತ್ತೊಂದು ಕಡೆ ವರ್ಣಾಶ್ರಮ ನಿರ್ಬಂಧದ ತೀರ್ಮಾನಗಳು. ಒಂದು ಕಡೆ ಬ್ರಾಹ್ಮಣರು, ಮತ್ತೊಂದು ಕಡೆ ಬ್ರಾಹ್ಮಣೇತರರು. ಒಂದು ಕಡೆ ವೀರಪಕ್ಷದವರು, ಮತ್ತೊಂದು ಕಡೆ ಶಾಂತಪಕ್ಷದವರು. ಹೀಗ ಅನೇಕರು ಗುಂಪುಕೂಡಿ ತಮ್ಮ ತಮ್ಮ ಇಷ್ಟದಂತೆ ತಮ್ಮ ತೀರ್ಮಾನಗಳನ್ನು ನಡೆಸುತ್ತಿರುವರು. ಈಗ ನಾವೂ ಹಾಗೆಯೇ ಪ್ರವರ್ತಿಸಬೇಕಾದ ಸಂಭವವು ಒದಗಿದೆ. ಈಗ ನಾವು ತಟಸ್ಥರಾಗಿದ್ದರೆ ಮುಂದೆ ನಮಗೆ ಬಹಳ ಹಾನಿಯುಂಟು. ಆರೋಗ್ಯ ಪ್ರಚಾರಣ ಕಾರ್ಯಗಳು ನಿರಾತಂಕವಾಗಿ ನಡೆಯುವಂತೆ ಅವಕಾಶ ಕೊಟ್ಟರೆ, ಆ ಮೇಲೆ ನಮಗೆ ಅನುಕೂಲವಾದ ವಸತಿಗಳಿಲ್ಲದಂತಾಗಿ ನಮ್ಮ ಜನಾಂಗಕ್ಕೇ ಉಳಿಗಾಲವಿಲ್ಲದಂತಾಗುವುದು. ಜನರಲ್ಲಿ ಅನಾರೋಗ್ಯವು ಹೆಚ್ಚಿ, ಶುಚಿತ್ವವು ಕಡಿಮೆಯಾದಷ್ಟೂ ನಮಗೆ ಸೌಕರ್ಯವುಂಟು. ಅದಕ್ಕಾಗಿ ಈಗ ನಾವು 'ಅನಾರೋಗ್ಯ ಪ್ರಚಾರಣ ಸಮಿತಿ" ಯೆಂಬ ಹೆಸರಿನಿಂದ ಒಂದು ಸಂಘವನ್ನು ಸ್ಥಾಪಿಸಿ ಕಾರ್ಯಭಾರಗಳನ್ನು ನಡೆಸಬೇಕು. ನಮ್ಮ ಕೂಟದಲ್ಲಿ ಸ್ಥಳ, ಜಾತಿಸಂಬಂಧವಾದ ಬೇಧಭಾವದಿಂದನ್ನೂ ಇಟ್ಟುಕೊಳ್ಳದೆ ಎಲ್ಲರೂ ಈ ಸಂಘದಲ್ಲಿ ಸೇರಿ ಒಂದೇ ಮನಸ್ಸಿನಿಂದ ಏಕಮತ್ಯದೊಡನೆ ಕೆಲಸಮಾಡಬೇಕು. ಇನ್ನು ಸಂಘದ ಕಟ್ಟುಪಾಡುಗಳನ್ನೂ, ಮುಂದಿನ ಕಾರ್ಯಕ್ರಮಗಳನ್ನೂ ಕುರಿತು ನಿಮಗೆ ತೋರಿದ ಅಭಿಪ್ರಾಯಗಳನ್ನು, ತೀರ್ಮಾನಗಳನ್ನೂ ತರಬಹುದು ಎಂದು ಹೇಳಿ ಅಗ್ರಾಸನಾಧಿಪತಿಗಳು ಸುಮ್ಮನಾದರು.

ಆ ಮೇಲೆ ಆ ಸಭೆಯಲ್ಲಿದ್ದ ಸೊಳ್ಳೆಯೊಂದು ಮೇಲೆದ್ದು ನಿಂತು —"ಈ ನಮ್ಮ ಸಂಘಕ್ಕೆ ಯಾರ ಯಾರು ಸೇರಬಹುದೆಂಬ ವಿಚಾರವನ್ನು ಕುರಿತು ನಾನು ಕೆಲವು ಸಂಗತಿಗಳನ್ನು ಇಲ್ಲಿ ತಿಳಿಸಬೇಕಾಗಿದೆ. ನಮ್ಮಲ್ಲಿ ಎಷ್ಟೋ ಜಾತಿ ಬೇಧಗಳಿವೆ. ಅವುಗಳ ಸ್ಥಿತಿ ನಗರವಾಸಿಗಳಾಗಿ ನಾಗರಿಕತೆಯಲ್ಲಿಯೂ, ಅನುಭವದಲ್ಲಿಯೂ ಮೇಲೆನಿಸಿದ ಈ ನಮ್ಮ ಸಂಘಕ್ಕೆ ಅನಾಗರಿಕಗಳಾದ ಕಾಡುಸೊಳ್ಳೆಗಳನ್ನು ಸೇರಿಸಬೇಕೆಂಬುದು ತಪ್ಪು. ಅವು ಜಾತಿಯಲ್ಲಿ ಸೊಳ್ಳೆಗಳಾಗಿದ್ದರೂ ನಮ್ಮ ಸಮಾನಸ್ಕಂಧತೆಗೆ ಅರ್ಹವಲ್ಲವೆಂಬುದು ನನ್ನ ಅಭಿಪ್ರಾಯವು"

ಆಗ ಮತ್ತೊಂದು ಸೊಳ್ಳೆಯು ಮೇಲೆದ್ದು "ಈ ಅಭಿಪ್ರಾಯಕ್ಕೆ ನಾನು ಸಮ್ಮತಿಸಲಾರೆನು. ಹಿಂದೆ ಬಿದ್ದವರನ್ನು ಮುಂದಕ್ಕೆ ತರುವುದೇ (Elevation of Depressed Classes) ನಮ್ಮ ಉದ್ದೇಶವಾಗಿರಬೇಕು. ಆದುದರಿಂದ ಆ ಪಂಗಡದವರನ್ನೂ ನಮ್ಮ ಸಂಘಕ್ಕೆ ಸೇರಿಸಿಕೊಳ್ಳಲೇ ಬೇಕೆಂದಿತು."

ಆ ಮೇಲೆ ಮತ್ತೊಂದು ಸೊಳ್ಳೆಯು ಮೇಲೆದ್ದು "ಕಾಡುಸೊಳ್ಳೆಗಳ ಸಂಗತಿ ಹೇಗಾದರೂ ಹೋಗಲಿ! ಜೇನುನೊಣಗಳನ್ನು ನಾವು ಬಹಿಷ್ಕರಿಸಲೇ ಬೇಕು. ಏಕೆಂದರೆ—ಅವು ಜೇನನ್ನು ಸಂಗ್ರಹಿಸಿಟ್ಟು ಜನರ ಆರೋಗ್ಯಕ್ಕೆ ಸಹಕರಿಸುತ್ತಿರುವುದರಿಂದ 'ಅನಾರೋಗ್ಯ ಪ್ರಚಾರಣ ಸಮಿತಿ" ಯ ಕಾರ್ಯಕ್ಕೆ ಅದು ಕೇವಲ ವಿರೋಧಕರವು. ಹೀಗೆ ನಮ್ಮ ಸಮುದಾಯಕ್ಕೆ ಸೇರಿದ್ದು ನಮ್ಮ ಸಮಿತಿಯ ಉದ್ದೇಶಕ್ಕೂ, ನಮ್ಮ ಕುಲವೃತ್ತಿಗೂ ಅವು ಕೇವಲ ವಿರುದ್ಧವಾಗಿ ಪ್ರವರ್ತಿಸುತ್ತಿರುವುದರಿಂದ, ಜನರೊಡನೆ (Non co operators) ಅಸಹಕಾರದಲ್ಲಿರುವ ನಾವು ಅವನ್ನು ಸೇರಿಸಬಾರದು."

ಇದಕ್ಕೆ ವಿರುದ್ಧ ಪಕ್ಷವಾಗಿ ಮತ್ತೊಂದು ಸೊಳ್ಳೆಯು 'ಈ ಮೇಲಿನ ಅಭಿಪ್ರಾಯಕ್ಕೆ ನನ್ನ ಸಮ್ಮತಿಯಿಲ್ಲ! ಜೇನು ನೊಣಗಳು ಜನಾರೋಗ್ಯಕ್ಕೆ ಮನಃಪೂರ್ವಕವಾಗಿ ಸಹಕರಿಸುವುದಿಲ್ಲ. ಮೋಸದಿಂದ ಜನರು ಅವು ಸಂಗ್ರಹಿಸಿದ ಮಧುವನ್ನು ಕೊಂಡುಹೋದರೆ ಅವುಗಳ ತಪ್ಪೇನಿದೆ? ಅಷ್ಟೇ ಅಲ್ಲ! ಅವು ನಮಗಿಂತ ತೀವ್ರವಾಗಿ ಮನುಷ್ಯರನ್ನು ಕಚ್ಚಿ ಹಿಂಸಿಸುವುವು. ಆದುದರಿಂದ ಅವೂ ನಮ್ಮ ಉದ್ದೇಶಕ್ಕೆ ಸಹಕಾರಿಗಳೇ! ಅವುಗಳನ್ನು ನಾವು ಬಹಿಷ್ಕರಿಸಲೇ ಬಾರದು.

ಮತ್ತೊಂದು ಸೊಳ್ಳೆಯು ಎದ್ದುನಿಂತು 'ಸಭಾಧ್ಯಕ್ಷರೆ ಮತ್ತು ಸಭಾಸದರೆ! ಈ ವಾದ ಪ್ರತಿವಾದಗಳೇನೋ ನನಗೆ ಬಹಳ ಬೇಸರಹುಟ್ಟಿಸುತ್ತಿವೆ. ನಮ್ಮ ಜಾತಿಯಲ್ಲಿಯೇ ನಾವು ಹೀಗೆ ಪರಸ್ಪರ ಭೇದಬುದ್ಧಿಯಿಂದ ಜಗಳವಾಡುತ್ತಿದ್ದರೆ ಮುಂದೆ ನಮ್ಮ ಕಾರ್ಯೋದ್ದೇಶವನ್ನು ಸಾಧಿಸುವುದಕ್ಕಾದೀತೇ? ನನ್ನ ಅಭಿಪ್ರಾಯದಲ್ಲಿ ನೊಣಗಳ ಪಂಗಡಕ್ಕೆ ಸೇರಿದ ಪ್ರಾಣಿಗಳು ಮಾತ್ರವೇ ಅಲ್ಲ. ಎಲ್ಲಾ ನೊಣಗಳು, ನಾಳ್ಳಿಗಳು, ಚಿಗಟಗಳು, ಹೇನು, ತಿಗಣೆ, ಜಿರಲೆ, ಜಿಗಣೆ ಇನ್ನೂ ಇತರ ಕ್ರಿಮಿಗಳೆಲ್ಲ ಈ ಸಮಿತಿಗೆ ಸೇರಲು ಅವಕಾಶವನ್ನು ಕೊಡಬೇಕು. ಸೋಂಕು ರೋಗದ ಮೂಲಕವಾಗಿಯೋ ಸ್ವಂತ ವಿಷದ ಮೂಲಕವಾಗಿಯೋ ಜನರಿಗೆ ಹಾನಿಯನ್ನುಂಟು ಮಾಡಬೇಕೆಂಬುದೇ ನಮ್ಮೆಲ್ಲರ (Our goal) ಉದ್ದೇಶವು. ಮೇಲೆ ಹೇಳಿದ ಪಂಗಡಗಳೆಲ್ಲ ಅದಕ್ಕಾಗಿಯೇ ಸೃಷ್ಟಿಸಲ್ಪಟ್ಟಿವೆ. ಆದುದರಿಂದ ಈ ಎಲ್ಲಾ ವರ್ಗದವರನ್ನೂ ಸೇರಿಸಿದ ಮಹಾಸಭೆಯೊಂದನ್ನು (All party meeting) ನಡೆಸಿ, ಎಲ್ಲರಲ್ಲಿಯೂ ಏಕಮತ್ಯವನ್ನು ಹುಟ್ಟಿಸಬೇಕು ಎಂಬುದು ನನ್ನ ಅಭಿಪ್ರಾಯವು' ಎಂದಿತು.

ಜಯಘೋಷದೊಡನೆ ಎಲ್ಲರೂ ಇದನ್ನನುಮೋದಿಸಿದರು.

ಆ ವೇಳೆ ಮತ್ತೊಂದು ಸೊಳ್ಳೆಯು— ಮಹನೀಯರೇ! ಈಗ ನಾನು ನಮ್ಮ ಸಮುದಾಯದ ವಿಷಯದಲ್ಲಿ ಮಾಡಬೇಕಾದ (Social reform) ನವೀನ ಸಂಸ್ಕಾರಗಳ ವಿಷಯವಾಗಿ ಒಂದೆರಡು ತೀರ್ಮಾನಗಳನ್ನು ಈ ಸಭೆಯ ಮುಂದೆ ತರಬೇಕೆಂದಿರುವೆನು. ನಮ್ಮ ಕುಲವೇ ವಂಶಕ್ಕೆ ಅಸಹ್ಯವಾದ ಕಕ್ಕಸುಗಳೂ, ಮಲದ ಗುಂಡಿಗಳೂ ಗೊಬ್ಬರದ ರಾಶಿಯೂ ಇರತಕ್ಕ ಸ್ಥಳಗಳನ್ನೇ ಬಹು ಪ್ರಿಯವಾಗಿ ಭಾವಿಸಿ ಅಲ್ಲಿಯೇ ಕಾಲ ಕಳೆಯುತ್ತಿರುವುದು. ಯಾವ ಪಡಸಾಲೆಗಳಲ್ಲಿ ನೋಡಿದರೂ, ಯಾವ ಸಾಮಿಯಾನಗಳಲ್ಲಿ ನೋಡಿದರೂ ನಮ್ಮವರ ಗುಂಪೇ! ಈ ಅಸಭ್ಯಾಚಾರವನ್ನು ಬಿಡಿಸಿದರೆ ನಮ್ಮ ಸಮುದಾಯಕ್ಕೆ ಒಂದು ಗೌರವವುಂಟು. ಆದುದರಿಂದ ಇನ್ನು ಮೇಲೆ ಈ ಸಂಘಕ್ಕೆ ಸೇರಿದವರಾರೂ ಅಂತಹ ಸ್ಥಳಗಳಿಗೆ ಹೋಗಕೂಡದೆಂದೂ, ಹಾಗೆ ಹೋದವರು ಸಂಘದಿಂದ ಬಹಿಷ್ಕರಿಸಲ್ಪಡುವರೆಂದೂ ಒಂದು ತೀರ್ಮಾನವನ್ನು ಮಾಡಬೇಕು" ಎಂದಿತು.

ಒಡನೆಯೇ ಮತ್ತೊಂದು ಸೊಳ್ಳೆಯು—"ಈ ತೀರ್ಮಾನವು ಸರ್ವಥಾ ಉಚಿತವಲ್ಲ! ನಾವು ಹುಟ್ಟಿ ಬೆಳೆದ ಸ್ಥಾನವು ಕಕ್ಕಸುಗಳು! ನಮ್ಮ ಮೊಟ್ಟೆ ಮರಿಗಳನ್ನು ನಾವು ಬೆಳೆಸಿದ ಸ್ಥಾನವೂ ಕಕ್ಕಸುಗಳೇ! ಹೀಗಿರುವಾಗ ನಮ್ಮ ಜನಗಳಿಗೆ ನಮ್ಮ ಮಾತೃಭೂಮಿಯ ವಾತ್ಸಲ್ಯವನ್ನು ತಪ್ಪಿಸುವುದಕ್ಕೆ ನಾವೇ ಪ್ರಯತ್ನಿಸುವುದೇ? ಇದು ಕೇವಲ ದೇಶದ್ರೋಹಿಗಳ ಮಾತು! ಇದನ್ನು ಅಂಗೀಕರಿಸಲೇ ಬಾರದು (ಎಲ್ಲರೂ ಒಪ್ಪಿದರು)

ಆ ಮೇಲೆ ಮತ್ತೊಂದು ಸೊಳ್ಳೆಯು—"ಮಿತ್ರರೇ! ನನ್ನದೊಂದು ಅಭಿಪ್ರಾಯವು. ಹಾವು, ಚೇಳು ಮುಂತಾದ ವಿಷಜಂತುಗಳಿಗೆ ಹೇಗೋ ಹಾಗೆ ನಮಗೆ ಜನರು ಅಷ್ಟಾಗಿ ಭಯಪಡುವುದಿಲ್ಲ. ನಮಗೆ ವಿಷವಿಲ್ಲ! ನಿರಾಯುಧರಾದ (Unarmed) ನಾವು ವಿಷಕ್ರಿಮಿಗಳ ಸಹಾಯಕರಾಗಿ, ಆ ಮೂಲಕ ರೋಗಗಳನ್ನು ಹರಡಿ ಜನಗಳನ್ನು ಹಾನಿಗೊಳಿಸಬೇಕಾಗಿದೆ. ಆದುದರಿಂದ ಇನ್ನು ಮೇಲೆ ನಾವೇ ನೇರವಾಗಿ ಜನರನ್ನು ಕೊಲ್ಲುವುದಕ್ಕೆ ತಕ್ಕ ವಿಷದ ಕೊಂಡಿಗಳನ್ನಿಟ್ಟುಕೊಂಡು ಧೈರ್ಯದಿಂದ ನಮ್ಮ ಕಾರ್ಯಸಾಧನೆಯನ್ನು ಮಾಡಬೇಕೇ ಹೊರತು ಈ 'ಪರೋಪಜೀವನ ವ್ಯಾಪಾರವು' ಏಕೆ?

ಇದನ್ನು ಕೇಳಿದೊಡನೆ ಸಭೆಯಲ್ಲಿ 'ಬಲೆ! ಭಲೆ!!' ಎಂಬ ಕೋಲಾಹಲವು ಕೇಳಿಸಿತು. ಈ ತೀರ್ಮಾನವಾಗುವಷ್ಟರಲ್ಲಿ ಮೂಲೆಯಲ್ಲಿದ್ದ ಮತ್ತೊಂದು ಮುದಿಸೊಳ್ಳೆಯು ಮಿತ್ರರೇ! ಈ ವಿಚಾರದಲ್ಲಿ ನನ್ನದೊಂದು ಅಭಿಪ್ರಾಯವುಂಟು. ನಾವು ಈಗಿನ ಸ್ಥಿತಿಯಲ್ಲಿರುವುದೇ ಮೇಲು. ವಿಷಜಂತುಗಳಂತೆ ನಾವೂ ನೇರವಾಗಿ ಜನಗಳ ಹಾನಿಕಾರ್ಯಕ್ಕೆ ಪ್ರವರ್ತಿಸಿದರೆ, ಹಾವು, ಚೇಳುಗಳ ಗತಿಯೇ ನಮಗೂ ಬರುವುದು. ವಿಷಜಂತುಗಳನ್ನು ಕಂಡ ಕಡೆಯಲ್ಲಿ ಜನಗಳು ಕೊಲ್ಲುವುದನ್ನು ನೀವು ಕಾಣರಾ? ಈಗ ನಾವು ಜನಗಳನ್ನು ತಂತ್ರದಿಂದ ಕೊಲ್ಲುವೆವು. ಇದರಿಂದ ಜನರಿಗರಿಯದೆ ಧಾರಾಳವಾಗಿ ಓಡಾಡಲು ನಮಗೆ ಅವಕಾಶವಿದೆ. ಹಾಗಿಲ್ಲದೆ ನಾವು ವಿಷಪ್ರಯೋಗವನ್ನಾರಂಭಿಸಿದ ಪಕ್ಷದಲ್ಲಿ ಹಾವು, ಚೇಳುಗಳಂತೆ ನಾವೂ ಜನಗಳಿಗೆ ತಲೆತಪ್ಪಿಸಿಕೊಂಡಿದ್ದು, ಅವರ ಕಣ್ಣಿಗೆ ಬಿದ್ದೊಡನೆ ಸಾವಿಗೆ ಗುರಿಯಾಗಬೇಕಾಗುವುದು. ಇದಲ್ಲದೆ ಈಗ ನಮಗೆ ವಿಷವಿಲ್ಲವೆಂದು ತಿಳಿಯಬೇಡಿರಿ! ನಾವು ಸತ್ತರೂ ನಮ್ಮ ವಿಷವೇಗವು ಮಾತ್ರ ಅಡಗುವುದಿಲ್ಲ. ನಮ್ಮ ಮೃತದೇಹವು ಜನರ ಹೊಟ್ಟೆಗೆ ಸೇರಿದೊಡನೆ ಅವರಿಗೆ ಸಹಿಸಬಾರದ ಸಂಕಟವನ್ನುಂಟುಮಾಡಿ, ಅವರು ಹಿಂದೆ ತಿಂದುದನ್ನೆಲ್ಲ ಹೊರಕ್ಕೆ ಕಕ್ಕಿಸುವುದು. ಆದುದರಿಂದ ನಮಗೆ ಈಗ ನಾವಿರತಕ್ಕ ಸ್ಥಿತಿಯೇ ಮೇಲು! ನವೀನ ಸಂಸ್ಕಾರಗಳೊಂದೂ ಬೇಡ ಎಂದಿತು (ಸಭೆಯಲ್ಲಿ ಹೌದು! ಹೌದು! ಬೇಡಲೇ ಬೇಡ!) ಎಲ್ಲರೂ ಅನುಮೋದಿಸಿದರು. ಇಷ್ಟರಲ್ಲಿ ಬೇರೊಂದು ಸೊಳ್ಳೆಯು—ಸಭಾಧ್ಯಕ್ಷರೇ! ಮತ್ತು ಪ್ರಿಯ ಸಹೋದರ ಸೋದರಿಯರೇ! ಈ ದಿನದ ಕೂಟವನ್ನು ಇಷ್ಟಕ್ಕೇ ನಿಲ್ಲಿಸಬೇಕು. ಹೊತ್ತು ಮೀರುತ್ತಿದೆ! ಕತ್ತಲೆಯಾದ ಮೇಲೆ ನಮಗೆ ಕಣ್ಣು ಕಾಣುವುದಿಲ್ಲವಾದ್ದರಿಂದ ಬೆಳಕಿರುವಾಗಲೇ ನಾವು ನಮ್ಮ ನಮ್ಮ ಸ್ಥಳಕ್ಕೆ ಹೋಗಿ ಸೇರಿಕೊಳ್ಳಬೇಕು. ಹಾಗಿಲ್ಲದೆ ತಾಮಸ ಮಾಡಿದರೆ ಕುರುಡರಂತೆ ನಾವೇ ಒಬ್ಬರ ಮೇಲೊಬ್ಬರು ಬಿದ್ದು ನಾಯಬೇಕಾಗುವುದು. ಆದ್ದರಿಂದ ಈ ದಿನದ ಕಾರ್ಯವನ್ನು ಇಷ್ಟಕ್ಕೇ ನಿಲ್ಲಿಸುವೆವು. (ಜಯಘೋಷದೊಡನೆ ಎಲ್ಲರೂ ಅನುಮೋದಿಸಿದರು.)

ಆ ವೇಳೆ ಸಭಾಧ್ಯಕ್ಷರು—ಸಭೆಯನ್ನು ನೋಡಿ ಈಗ ಹೇಳಿದುದು ನಿಜ. ಬೆಳಕಿರುವಾಗಲೇ ನಾವು ನಮ್ಮ ನಮ್ಮ ಕ್ಯಾಂಪುಗಳಿಗೆ ಹೋಗಿ ಸೇರಬೇಕು. ನಮ್ಮ ಪ್ರೀತಿಯ ಗೀತೆಯೊಡನೆ ● ದಿನದ ಸಭೆಯನ್ನು ಮುಗಿಸುವೆವು.

"ಆರೋಗ್ಯ ಚಂದ್ರಿಕ"

ಬ್ರಿಟಿಷರು ಭರತಖಂಡವನ್ನು ಕಾಯುವ ಬಗೆ!

(2ನೇ ಪುಟದಿಂದ ಮುಂದುವರಿದದ್ದು)

ಹೀಗಾಗಿ ಹಿಂದೀ ನೌಕಾ ಸೈನ್ಯವು ಅದರ ನೆಲೆಗೆ ಬಂದಂತೆ ಆಯಿತು. ಹಿಂದೀಯರ ದುಡಿತದಿಂದ ಇಟ್ಟುಕೊಳ್ಳುವ ಸೈನ್ಯವು ಹಿಂದೀಯರದಾಗಿರದೆ ಸರ್ವ ಕಾಲಕ್ಕೂ ಬ್ರಿಟಿಷರದಾಗಿದೆ (ವಾಷಿಂಗ್‌ಟನ್ನಿನ ಕಾನ್ಫರೆನ್ಸಿನ ಪ್ರಕಾರ ಇಂಗ್ಲೆಂಡು ತನ್ನ ಆಯುಧಗಳನ್ನು ಕಡಿಮೆ ಮಾಡಿದ್ದು ಹಿಂದೂದೇಶಕ್ಕೆ ನೌಕಾ ಸೇನೆಯನ್ನು ಕೊಟ್ಟು ಸಾಮ್ರಾಜ್ಯದ ಬಲವನ್ನು ವೃದ್ಧಿಪಡಿಸಿಕೊಳ್ಳುವುದು ಆ ಕಾನ್ಫರೆನ್ಸಿನ ತೀರ್ಮಾನಕ್ಕೆ ವಿರೋಧವಲ್ಲವೇ ಎಂಬ ಮಾತು ಇತರ ರಾಷ್ಟ್ರಗಳ ಧುರೀಣರಿಂದ ಚರ್ಚಿಸಲ್ಪಡುತ್ತಿದೆ)

ಹಿಂದೀಯರನ್ನು ಅಪಾಯಗಳಿಂದ ತಪ್ಪಿಸುವ ವ್ಯಾಪಾರವನ್ನು ಹಾಳುಮಾಡದಿರುವ, ಯೋಗ್ಯತೆಯ ನೌಕಾ ಸೇನೆಗಲ್ಲ ಹಿಂದೂದೇಶವು ಬ್ರಿಟಿಷ್ ಸಾಮ್ರಾಜ್ಯದಿಂದ ತಪ್ಪಿ ಹೋಗದಂತೆ ಕಾವಲಿಕ್ಕಾಗಿಯೇ ಈ ನೌಕಾ ಸೇನೆಯು. ನೌಕಾ ಸೇನೆಯು ನಿರ್ಮಾಣವಾಗುವ ಮೊದಲೇ ಹಿಂದೂದೇಶವು ಜಪಾನಿಗಿಂತ ಐನತ್ತು ಮಿಲಿಯ ಪೌಂಡುಗಳನ್ನು ಖರ್ಚು ಮಾಡುತ್ತಿದೆಯೆಂಬುದು ನಮಗೆ ತಿಳಿದಿದೆ. ಖರ್ಚಿಗೆ ಇನ್ನು ನಿರ್ಮಾಣವಾಗುವ ನೌಕಾ ಸೈನ್ಯದ ಖರ್ಚನ್ನು ಸೇರಿಸಿದರೆ ನಿರ್ಗತಿಕರಾದ ಬಡ ಹಿಂದೀಯರು ಒಟ್ಟು ಎಷ್ಟು ಖರ್ಚನ್ನು ಜಲ ನೆಲ ಸೇನೆಗಳಿಗಾಗಿ ವಹಿಸಿಕೊಳ್ಳಬೇಕೆಂಬುದು ಗೋಚರವಾಗುವುದು.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಲಿ

ಜಮೀನ್ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗು ಈ ತಾ 29 ರಲ್ಲು ಸಂಘದ ಆಫೀಸಿನಲ್ಲಿ ನಡೆಯಿತು. ಸಂಘದ ಖಾಯಂ ಅಧ್ಯಕ್ಷರು ಗೈರುಹಾಜರಾದ್ದರಿಂದ ವೈಸ್ ಪ್ರೆಸಿಡೆಂಟರಾದ ಸಿ. ಎನ್. ವೆಂಕಪ್ಪಯ್ಯನವರು ಮೀಟಿಂಗಿನ ಚೆಯರ್ಮ್ಯಾನರಾಗಿದ್ದರು. ಹಾಜರಿದ್ದ ಮೆಂಬರುಗಳು —

1 ಮೆ ಗಳಾದ ಯಂ ಯಂ ಸಿದ್ದೀಕ್, 2. ಎ. ಸಿ. ಸುಬ್ಬಯ್ಯ, 3 ಯಂ. ಯಂ ಬೆಳ್ಯಪ್ಪ, 4 ಯಸ್. ಮುದ್ದಪ್ಪ 5 ಯಂ ದೇವಯ್ಯ, 6 ಹೆಚ್ ಟಿ ಮಂಜಣ್ಣ, 7 ಕರ್ಣಿ ಪೂವಯ್ಯ, 8 ದೊಣ್ಣಂಡ ಪೊನ್ನಪ್ಪ ಮತ್ತು 9 ಪಿ. ಬೆಳ್ಯಪ್ಪ

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಮೆ ಯಸ್. ಸತ್ಯಮೂರ್ತಿ ಯಂ ಯಲ್. ಸಿ ಯವರು ಬರಕೊಂಡ ಪತ್ರದ ಮೇರೆ ಈ ವರ್ಷದ ಸಂಘದ ಜನರಲ್ ಮೀಟಿಂಗಿನ ದಿವಸಗಳನ್ನು ಬರುವ ಮೇ 5 ಮತ್ತು 6ನೇ ತಾರೀಕಿಗೆ ಮುಂದರಿಸಲಾಯಿತು.

3 ಗವರ್ನಮೆಂಟಿನಿಂದ ಬಂದ 'ಇಂಟರೆಸ್ಟ್ ಬಿಲ್ಲನ್ನು ಓದಿನೋಡಿ ಅದನ್ನು ಅನುಮೋದಿಸಿ ಜವಾಬು ಕೊಡಬಹುದೆಂತ ತೀರ್ಮಾನವಾಯಿತು.

4 ಗವರ್ನಮೆಂಟಿನಿಂದ ಬಂದ ಚಿಲ್ಡ್ರನ್ಸ್ ಪ್ರೊಟೆಕ್ಷನ್ ಬಿಲ್ಲನ್ನು ಓದಿನೋಡಿ ಇದಕ್ಕೆ ವಿರೋಧಿಸಿ ಅಭಿಪ್ರಾಯ ಕೊಡಬೇಕೆಂತ ಬಹು ಮತದಿಂದ ತೀರ್ಮಾನವಾಯಿತು.

5 ಸಂಘದ ರೂಲ್ಸ್‌ಗಳನ್ನು ಎಗ್ಸಿಕ್ಯೂಟಿವ್ ಕಮಿಟಿಯವರು ತಿದ್ದಿ ಈ ವರ್ಷದ ಮಹಾಸಭೆಯ ಮುಂದೆ ಇಡಬೇಕೆಂತ ಕಳೆದ ವರ್ಷದ ಮಹಾ ಸಭೆಯಲ್ಲು ಮಂಜೂರಾದ ಮೇರೆ ನಿಯಮಿತ ಕಮಿಟಿ ಮೆಂಬರುಗಳಿಂದ ತಿದ್ದುಪಡಿ ಮಾಡಿದ್ದ ರೂಲ್ಸನ್ನು ಚರ್ಚಿಸಿ ಕೆಲವು ಹೊಸ ತಿದ್ದುಪಡಿಗಳೊಡನೆ ಮಂಜೂರ್ಮಾಡಲಾಯಿತು.

ಸಿ. ಎನ್. ವೆಂಕಪ್ಪಯ್ಯ,
(ಅಧ್ಯಕ್ಷರು)

WANTED

An Anglo Indian or Indian Aya to look after a child aged eight months Travelling, Boarding, Clothes and food given free Salary 150/ per annum. Only those willing to travel from Coorg to Central Province need apply in person o Mrs. K D Kuttappa,

Kaikeri Village,
Gonikoppal Post
(South Coorg).

ಬೇಕಾಗಿದ್ದಾಳೆ.

8 ತಿಂಗಳು ಪ್ರಾಯದ ಒಂದು ಮಗುವಿನ ಪೋಷಣೆಗಾಗಿ ಒಬ್ಬ ಇಂಡಿಯನ್ ಅಥವಾ ಆಂಗ್ಲೊ ಇಂಡಿಯನ್ ಆಯ ಬೇಕಾಗಿದ್ದಾಳೆ. ಪ್ರಯಾಣದ ಚಾರ್ಜು, ಊಟ, ಬಟ್ಟೆ ಖರ್ಚು ಕಳೆದು ವರ್ಷಕ್ಕೆ ರೂ. 150 ಸಂಬಳ ಕೊಡಲಾಗುವುದು. ಕೊಡಗಿನಿಂದ ಸೆಂಟ್ರಲ್ ಪ್ರಾವಿನ್ಸಿಗೆ ಹೋಗಲು ತಯಾರಾದವರು ಮಾತ್ರ ಈ ಕೆಳಗಿನ ಅಡ್ರೆಸ್ಸಿಗೆ ಖುದ್ದು ಬಂದು ಅಪ್ಲಿಕೇಶನ್ ಕೊಡತಕ್ಕದ್ದು. ಮಿಸೆಸ್ ಕೆ ಡಿ. ಕುಟ್ಟಪ್ಪ,

ಕೈಕೇರಿ ಗ್ರಾಮ,
4—3 ಗೋಣಿಕೊಪ್ಪಲು,
(ದ. ಕೊಡಗು)

ವರ್ತಮಾನ ಸಂಗ್ರಹ.

ಒಳದೇಶ

ಸ್ಕೂಲ್ ಫೈನಲ್ ಪರೀಕ್ಷೆಯು ಈ ತಾ. 23ರಲ್ಲಿ ಪ್ರಾರಂಭವಾಗಿ ನಾಳೆಗೆ ಮುಗಿಯುತ್ತದೆ.

ಕೊಡಗು ಎಥ್ಲೆಟಿಕ್ ಎಸೋಸಿಯೇಶನ್ನಿನ ಕ್ರಿಕೆಟ್ ಟೂರ್ನಮೆಂಟು ಏಪ್ರಿಲ್ ತಾ. 1ರಲ್ಲೂ, ಟೆನ್ನಿಸ್ ಟೂರ್ನಮೆಂಟು 16ರಲ್ಲೂ ಶುರುವಾಗುವದು.

ಶ್ರೀ ಚಾಮುಂಡಿ ಸರ್ವಿಸಿನವರಿಗೆ ಏಪ್ರಿಲ್ ತಾ. 1ರಿಂದ ವೀರಾಜಪೇಟೆಯಿಂದ ಕಣ್ಣಾನೂರಿಗೆ ಬಸ್ಸು ನಡಿಸುವಂತೆ ಲೈಸನ್ಸು ಕೊಡಲಾಗಿದೆ.

ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರವರ ಜಯಂತ್ಯುತ್ಸವವು ಪೊನ್ನಂಪೇಟೆ ಶ್ರೀ ಶಾರದಾಶ್ರಮದಲ್ಲಿ ಏಪ್ರಿಲ್ ತಾರೀಕು 28ನೇ ಶನಿವಾರ ನಡಿಸಲ್ಪಡುವದೆಂದು ತಿಳಿಯುತ್ತೇವೆ.

ಮೆ. ಪಿ. ಮಂಗೇಶರಾಯರು ರಜ ಮುಗಿಸಿಕೊಂಡು ಬಂದು ತಾ. 28ರಲ್ಲಿ ಸೆಂಟ್ರಲ್ ಹೈಸ್ಕೂಲಿನ ಚಾರ್ಜು ತೆಗೆದುಕೊಂಡರು. ಮೆ. ಸಿ. ಯಂ. ರಾಮರಾಯರು ಬರುವ ಮಂಗಳವಾರ ವೀರಾಜಪೇಟೆ ಹೈಸ್ಕೂಲಿನ ಚಾರ್ಜು ತೆಗೆದುಕೊಳ್ಳುವರೆಂದು ತಿಳಿದು ಬರುತ್ತದೆ.

ಕುದಿಕೇರಿ ಬ್ರಾಂಚು ಪೋಸ್ಟಾಫೀಸಿಗೆ ಈ ತಾ. 21ರ ರಾತ್ರಿ ಹೊತ್ತಿಗಾಗಿ ಕಳ್ಳರು ಇಳಿದು ಸುಮಾರು 5 ರೂಪಾಯಿಯ ಸ್ಟಾಂಪು ಮತ್ತು ನಗದು 1½ ರೂಪಾಯಿ ಇದ್ದ ಪೆಟ್ಟಿಗೆಯನ್ನು ಕಳವು ಮಾಡಿರುವರೆಂದೂ ಈ ವಿಷಯ ಪೋಲೀಸ ವಿಚಾರದಲ್ಲಿದೆಯೆಂದೂ ವರ್ತಮಾನ.

ಸೋಮವಾರಪೇಟೆಯಲ್ಲಿ ರೇಂಜರಾಗಿರುವ ಮೆ. ಪಾಲೇಕಂಡ ತಮ್ಮಯ್ಯನವರು ಎರಡು ತಿಂಗಳು ರಜದಲ್ಲಿ ಹೋಗುವದರಿಂದ, ರೇಂಜರಗಳಾದ ಮೆ. ಕಾಮುಮಾಡ ದೇವಯ್ಯನವರನ್ನು ತಿತಿಮತಿಯಿಂದ ಸೋಮವಾರಪೇಟೆಗೂ, ಮೆ. ಮೊಳ್ಳೆರ ಐಯ್ಯಣ್ಣನವರನ್ನು ಫ್ರೇಜರ್ ಪೇಟೆಯಿಂದ ತಿತಿಮತಿಗೂ ವರ್ಗಾಯಿಸಿರುವರೆಂದು ವರ್ತಮಾನ.

ಮಡಿಕೇರಿ ವೇದಾಂತಸಂಘದವರು ಶ್ರೀರಾಮಕೃಷ್ಣಪರಮಹಂಸರ 93ನೇ ಜಯಂತ್ಯುತ್ಸವವನ್ನು ಈ ತಾ. 31ನೇ ಶನಿವಾರ ನಡಿಸುವರು. ಬೆಳಿಗ್ಯೆ ಓಂಕಾರೇಶ್ವರ ದೇವಸ್ಥಾನದ ಬಳಿ ದರಿದ್ರನಾರಾಯಣರಿಗೆ ಭಿಕ್ಷೆಯನ್ನು ಕೊಡುವರು. ಸಾಯಂಕಾಲ ಸೆಂಟ್ರಲ್ ಹೈಸ್ಕೂಲಿನ ಹಾಲಿನಲ್ಲಿ ಉಪನ್ಯಾಸವು ನಡೆಯುವದು.

ಶ್ರೀ ರಾಮಕೃಷ್ಣ ಮಠದ ಶ್ರೀಮತ್ಸಿದ್ಧೇಶ್ವರಾನಂದ ಸ್ವಾಮಿಯವರು ಮಡಿಕೇರಿಗೆ ತಾ. 28ರಲ್ಲಿ ಬಂದಿರುವರು. ಇವರು ನಿನ್ನೆ ದಿನ ಸಾಯಂಕಾಲ ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ 'ಧರ್ಮವಿಚಾರದ ಅವಶ್ಯಕತೆ' ಯನ್ನು ಕುರಿತು ಉಪನ್ಯಾಸ ಮಾಡಿದರು. ಈ ದಿನ ಸಾಯಂಕಾಲ 'ಭಗವದ್ಗೀತೆಯ ತತ್ವವಿಚಾರ' ವನ್ನು ಕುರಿತು ಭಾಷಣ ಮಾಡುವರು.

ಹೊಸ ಚೀಫ್ ಕಮಿಷನರಾದ ಮೆ. ಎಲ್. ಎಂ. ಕ್ರಂಪ್ ಸಿ. ಐ. ಇ., ಐ. ಸಿ. ಎಸ್. ರವರು ಈ ತಾ. 26ರಲ್ಲಿ ಮಡಿಕೇರಿಗೆ ಬಂದಿರುವರು. ಕಳೆದ ವಾರ ವರ್ತಮಾನವಿದ್ದಂತೆ ಅವರ ದರ್ಬಾರು ತಾ. 29ರಲ್ಲಿ ನಡೆಯಲಿಲ್ಲ. ಸದರಿ ದರ್ಬಾರು ಏಪ್ರಿಲ್ ತಾ. 2ನೇ ಸೋಮವಾರ ಸಾಯಂಕಾಲ 4½ ಗಂಟೆಗೆ ಮಡಿಕೇರಿ ಅರಮನೆಯಲ್ಲಿ ನಡೆಯುವದೆಂದು ಹಲವರಿಗೆ ಆಮಂತ್ರಣವು ಕಳುಹಿಸಲಾಗಿದೆ.

ತಾ. 29ರಲ್ಲಿ ನಡೆದ ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗಿನಲ್ಲಿ ಸಂಘದ ವಾರ್ಷಿಕ ಕಾನ್ಫರೆನ್ಸಿನ ಅಧ್ಯಕ್ಷರಾಗಿ ಬರುವ ಮದ್ರಾಸಿನ ಶ್ರೀ ಯಮ್. ಸತ್ಯಮೂರ್ತಿಯವರ ಕೋರಿಕೆ ಮೇರೆಗೆ ಪೊನ್ನಂಪೇಟೆ ಮಹಾಸಭೆಯನ್ನು ನಡಿಸಲು ಮೊದಲು ನಿಶ್ಚಯಿಸಿದ ಏಪ್ರಿಲ್ ತಾ. 21 ಮತ್ತು 22ನ್ನು ಬದಲಾಯಿಸಿ ಮೇ ತಾ. 5 ಮತ್ತು 6ನೇ ಶನಿವಾರ ಮತ್ತು ಆದಿತ್ಯವಾರ ನಡಿಸುವಂತೆ ತೀರ್ಮಾನ ಮಾಡಲಾಗಿದೆ.

ಹಿಂದೂದೇಶ.

ಬಂಗಾಳ ಕೌನ್ಸಿಲಿನಲ್ಲಿ ಮಂತ್ರಿಗಳಲ್ಲಿ ಅವಿಶ್ವಾಸದ ಠರಾವು ಪಾಸಾಗಲಿಲ್ಲ.

ಸೈಮನ್ ಕಮಿಷನಿನವರು ಈ ತಾ. 30ರಲ್ಲಿ ಡೆಲ್ಲಿಯಿಂದ ಹೊರಟು ಬೊಂಬಾಯಿಗಾಗಿ ಇಂಗ್ಲೆಂಡಿಗೆ ಹೋಗುವರು.

ಮಾರ್ಚ ಎರಡನೇ ವಾರದಲ್ಲಿ ಯುನೈಟೆಡ್ ಪ್ರಾವಿನ್ಸಿನಲ್ಲಿ ಪ್ಲೇಗ್ ರೋಗದಿಂದ 4630 ಮರಣಗಳುಂಟಾಗಿವೆಯಂತೆ.

ದಿವಾನ್ ಬಹದ್ದೂರ್ ಯಂ. ಕೃಷ್ಣನಾಯರ್‌ರವರು ಮದ್ರಾಸು ಎಗ್ಸಿಕ್ಯೂಟಿವ್ ಕೌನ್ಸಿಲಿನ ಲಾ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ತಾ. 25ರಲ್ಲಿ ಪಂಡಿತ ಮದನಮೋಹನ ಮಾಳವೀಯರು ಲಾಹೋರಿನಲ್ಲಿ ಲಜಪತರಾಯಿ ಹಾಲ್ ಮತ್ತು ಲೈಬ್ರರಿಯ ಕಟ್ಟಡದ ಅಡಿಗಲ್ಲನ್ನು ಇಟ್ಟರು.

ಡಾಕ್ಟರ್ ರವೀಂದ್ರನಾಥ್ ಠಾಗೋರ್‌ರವರು ಏಪ್ರಿಲ್ ತಿಂಗಳಲ್ಲಿ ಯೂರೋಪಿಗೆ ಹೋಗಿ, ಆಕ್ಸ್‌ಫರ್ಡಿನಲ್ಲಿ ಇಂಗ್ಲೆಂಡಿನಲ್ಲಿ ಹಿಬ್ಬರ್ಟ್ ಉಪನ್ಯಾಸಗಳನ್ನು ಕೊಡುವರು.

ಸನ್ಯಾಸಿಯರು ಸ್ವದೇಶೀವ್ರತವನ್ನು ಕಡ್ಡಾಯವಾಗಿ ಅವಲಂಬಿಸಬೇಕೆಂದು ಕಾಶಿಯಲ್ಲಿ ಸ್ವಾಮಿ ಸ್ವರೂಪಾನಂದರ ಅಧ್ಯಕ್ಷತೆಯಲ್ಲಿ ಸೇರಿದ ಸನ್ಯಾಸಿಗಳ ಸಭೆಯಲ್ಲಿ ನಿರ್ಧಾರವಾಗಿದೆ.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನ ಮಾರ್ಚ ಮೀಟಿಂಗು ತಾ. 26ರಲ್ಲಿ ಬೆಂಗಳೂರಿನ ಕಟ್ಟಿಸಿರುವ ಹೊಸ ಕೌನ್ಸಿಲ್ ಹಾಲಿನಲ್ಲಿ ಪ್ರಾರಂಭವಾಯಿತು. ದಿವಾನರು ಅಧ್ಯಕ್ಷರಾಗಿದ್ದರು.

ಸೈಮನ್ ಕಮಿಷನಿಗೆ ಬಹಿಷ್ಕಾರ ಹಾಕುವ ಬಗ್ಗೆ ರಾವಲ್‌ಪಿಂಡಿಯಲ್ಲಿ ಕಪ್ಪು ಬಾವುಟಗಳ ಸಮೇತ ವಿದ್ಯಾರ್ಥಿಗಳ ಮೆರವಣಿಗೆಯು ಹೊರಟಿರುವದನ್ನು ಪೋಲೀಸಿನವರು ಸ್ಥಗಿತಗೊಳಿಸಿರುವರಂತೆ.

ಮದ್ರಾಸು ಕೌನ್ಸಿಲಿನಲ್ಲಿ ಅಲ್ಲಿಯ ಪೋಲೀಸಿನವರಿಗೆಲ್ಲಾ ಖಾದಿಯ ಉಡುಪನ್ನೇ ಕೊಡಬೇಕೆಂದು ನಿಶ್ಚಯವಾಗಿದೆಯಂತೆ. ಆದರೆ ಆ ಉಡುಪು ಸುಖಕರವಲ್ಲವೆಂದು ಸರ್ಕಾರದವರು ಹೇಳುತ್ತಿರುವರಂತೆ.

ಮುಸ್ಲಿಮರ ಮತವನ್ನು ಅವಲಂಬಿಸಿರುವ ಲಾರ್ಡ ಹೆಡ್ಲೀಯವರು ಈಗ ಹಿಂದೂಸ್ಥಾನದಲ್ಲಿ ಸಂಚರಿಸಿ ಲಂಡನಿನಲ್ಲಿ ಒಂದು ಮಸೀದಿಯನ್ನು ಕಟ್ಟಲು 60,000 ಪೌಂಡುಗಳನ್ನು ವಸೂಲಿ ಮಾಡಿರುವರು.

'ನ್ಯೂ ಇಂಡಿಯಾ' ಪತ್ರಿಕೆಯನ್ನು ದೈನಿಕ ಪತ್ರಿಕೆಯಾಗಿ ಪ್ರಕಟಿಸಲು ಡಾಕ್ಟರ್ ಅನಿಬೆಸೆಂಟರವರು ನಿಶ್ಚೈಸಿರುವರೆಂದೂ, ಪ್ರಥಮ ಸಂಚಿಕೆಯು ಏಪ್ರಿಲ್ ತಾ. 10ರಲ್ಲಿ ಹೊರಬೀಳುವದೆಂದೂ ವರ್ತಮಾನ.

ಮಹಾತ್ಮ ಗಾಂಧಿಯವರ ಆರೋಗ್ಯಾಭಿವೃದ್ಧಿಗೆ ಅವರು ಯುರೋಪ್ ಖಂಡಕ್ಕೆ ಹೋಗುವದು ಉತ್ತಮವೆಂದು ಡಾಕ್ಟರುಗಳು ಅಭಿಪ್ರಾಯಪಟ್ಟಿರುವರೆಂದೂ, ಮಹಾತ್ಮರು ಹಾಗೆ ಹೋಗಬಹುದೆಂದೂ ಸುದ್ದಿ.

ಮಹಾಸಭೆಗಳೊಳಗೆ ಐಕಮತ್ಯವನ್ನು ವೃದ್ಧಿಪಡಿಸುವ ಬಗ್ಗೆ ಬೇರಾವುದೋ ಡೆಪ್ಯುಟೇಶನ್ ಹೋಗಲು ಏರ್ಪಡಿಸಿದ್ದರಲ್ಲಿ ಮಿಸೆಸ್ ಬೆಸೆಂಟ್, ಪಂಡಿತ ಮೋತಿಲಾಲ್ ನೆಹರು, ಗೋಖಲೆ ಮತ್ತು [illegible] ಯವರ ಹೆಸರು ಸೂಚಿಸಲ್ಪಟ್ಟಿರುವದು.

[illegible] ಮದುವೆ ವಿಷಯ [illegible] ಪಟ್ಟಿ [illegible] ತಾ. 24ರಲ್ಲಿ [illegible] ಬೊಂಬಾಯಿಯಲ್ಲಿ [illegible] ಸಭೆಗಳನ್ನು ನಡಿಸಿದರು.

[illegible] ಮೇ ತಾ. 2 ಮತ್ತು 3ರಲ್ಲಿ ಪೂನಾದಲ್ಲಿ ನಡಿಸುವಂತೆಯೂ, [illegible] ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಶ್ರೀಯುತ [illegible] ಕೇಳಿಕೊಳ್ಳುವಂತೆಯೂ ತೀರ್ಮಾನವಾಗಿದೆ.

[illegible] ಬಹಿಷ್ಕಾರ ಮಾಡುವ ಬಗ್ಗೆ [illegible] ಮಹಾತ್ಮ ಗಾಂಧಿಯವರ [illegible] ಗಿರಣಿ ಕೆಲಸಗಾರರ [illegible] ಈ ತಾ. 25ರಲ್ಲಿ ನಡಿಸಿದರು.

ಬೊಂಬಾಯಿಗೆ ಸಮೀಪದ [illegible] ತಾ. [illegible] ರಲ್ಲಿ [illegible] ಸುಮಾರು 2000 ಮಂದಿ ಅಸ್ಪೃಶ್ಯರಿಗೆ [illegible] ಮಾಡಿ, ಉಪವಾಸ [illegible] ಗಾಯತ್ರಿ [illegible] ಮತ್ತು ಇತರ [illegible]

ಲಂಡನ್ ಪಟ್ಟಣದ ಡಾಕ್ಟರ್ [illegible] ಎಂಬ ಯುರೋಪಿಯನರು ಬೊಂಬಾಯಿಯಲ್ಲಿ ಹಿಂದೂ ಮತವನ್ನವಲಂಬಿಸಿರುವರು. ಇದುವರೆಗೂ ಹಿಂದೂ ಮತದಲ್ಲಿ ವಿಶೇಷ ಆಸಕ್ತಿಯಿದ್ದುದರಿಂದಲೂ, ಇವರಿಬ್ಬರೂ ಹಿಂದೂ ವೇದದ ತತ್ವವನ್ನು ತಿಳಿಯಲು ಮಾಡಿದ ಪ್ರಯತ್ನದ ಫಲವೇ ಡಾಕ್ಟರರು ಹಿಂದೂವಾದದ್ದೆಂದು ವರ್ತಮಾನ.

ವಿದೇಶ.

1927ರಲ್ಲಿ ಶಾಂಘಾಯಿನಲ್ಲಿ ಪರದೇಶಸ್ಥರ ಮೇಲೆ ನಡಿಸಿದ ಆಕ್ರಮಣಗಳನ್ನು ಕುರಿತು ಇಂಗ್ಲೆಂಡಿಗೂ, ಚೈನಾದವರಿಗೂ ನಡೆಯುತ್ತಿದ್ದ ಒಪ್ಪಂದವು ತೀರ್ಮಾನಕ್ಕೆ ಬರದೆ ಮುರಿದು ಹೋದಂತೆ ತೋರುತ್ತದೆ.

ರಷ್ಯಾದ ಗತಿಸಿದ ಬಹು ಪ್ರಸಿದ್ಧ ಮುಂದಾಳಾಗಿದ್ದ ಲೆನಿನ್ನರವರ ಮೆದುಳನ್ನು ಮಾಸ್ಕೋದ ಇನ್ಸ್ಟಿಟ್ಯೂಟಿನಲ್ಲಿ ಪರೀಕ್ಷಾರ್ಥವಾಗಿ 31,000 ತುಂಡುಗಳಾಗಿ ಕತ್ತರಿಸಿ, ಪ್ರತ್ಯೇಕ ಪ್ರತ್ಯೇಕವಾಗಿ ಪರೀಕ್ಷಿಸುತ್ತಿರುವರಂತೆ.

ನೆಟಾಲ ಪ್ರಾಂತ್ಯದಲ್ಲಿ ಯಾವತ್ತು ಉತ್ತಮ ಸಂಬಳ ಸಿಗುವ ಉದ್ಯೋಗಗಳಿಂದ ಹಿಂದೀಯರನ್ನು ಆತು ಕರ್ಜನರನ್ನು ತೊಲಗಿಸಲು ಕಾನೂನು ಉಂಟಾಗಿದೆ ಎಂಬುದೂ, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಮಾನತ್ವವನ್ನೂ, ಬಾಂಧವ್ಯವನ್ನೂ ಸಾಧಿಸುತ್ತಿರುವರೆಂಬುದಕ್ಕೆ ಇನ್ನೊಂದು ಪ್ರಚಂಡ ಉದಾಹರಣೆ. ಮೋಟಾರು ನಡಿಸುವ ಡ್ರೈವರು ಹಿಂದೀಯರಾದಲ್ಲಿ ಯುರೋಪಿಯನರ ಮೋಟಾರುಗಳನ್ನು ಅವರು ನಡೆಸಬಾರದೆಂದು ಹೊಸ ಶಾಸನವಾಗಿದೆ. ಈ ವಿಷಯವಾಗಿ ಇಂಡಿಯಾ ಸರಕಾರಕ್ಕೆ ವಾರ್ತೆಯನ್ನು ಹಿಂದೀಯರು ಅಲ್ಲಿಂದ ಕಳುಹಿಸಿರುವರು.

ನೋಟೀಸು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್,
ಇದರ ಆಫೀಸಿನಿಂದ.

ಸದರಿ ಬ್ಯಾಂಕಿನ ಜನರಲ್ ಮೀಟಿಂಗು ತಾ. 7–4–28ನೇ ಶನಿವಾರ ದಿನ ಹಗಲು 2 ಗಂಟೆಗೆ ಮಡಿಕೇರಿಯಲ್ಲಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆ. ಮೀಟಿಂಗಿನಲ್ಲಿ ಚರ್ಚಿಸಬೇಕಾದ ವಿಷಯಗಳೇನಾದರೂ ಇದ್ದರೆ ಕೂಡಲೇ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ.

ಚರ್ಚಿಸತಕ್ಕ ವಿಷಯಗಳು.

1. ಡೈರೆಕ್ಟರುಗಳ ರಿಪೋರ್ಟು ಮತ್ತು ಲಾಭ ಹಂಚುವಿಕೆ.
2. ಡೈರೆಕ್ಟರುಗಳ ಮತ್ತು ಅಧ್ಯಕ್ಷರ ಚುನಾವಣೆ.
3. ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

ಮಡಿಕೇರಿ,
ತಾ. 23–3–28.

ಸಿ. ಎನ್. ವೆಂಕಪ್ಪಯ್ಯ,
ಗೌರವ ಕಾರ್ಯದರ್ಶಿ.

— ಓಂ —

ಆಲ್ ಇಂಡಿಯಾ ಮ್ಯೂಚ್ಯುಯಲ್ ಏಯಿಡ್ ಅಂಡ್ ಪ್ರೊವರ್ ಹೌಸಸ್ ಎಸೋಸಿಯೇಶನ್ ಲಿಮಿಟೆಡ್.
ಚೀಫ್ ಏಜನ್ಸಿ ಆಫೀಸ್. ಮಡಿಕೇರಿ, (ಕೊಡಗು)

ನೋಟೀಸು.

ಆಧಾರ ಮತ್ತು ಬಡ್ಡಿ ಇಲ್ಲದೆ ಸಾಲಗಳನ್ನು ಕೊಡುವ ಉದ್ದಿಷ್ಟ ಮೇಲ್ಕಂಡ ಸಂಘದ ಮೊದಲನೇ ಡ್ರಾಯಿಂಗ್ ಅಂದರೆ ಚೀಟಿ ಎತ್ತುವದು ಇದೇ ತಿಂಗಳು 31ನೇ ತಾರೀಕು ಶನಿವಾರ ಸಾಯಂಕಾಲ 3 ಗಂಟೆಗೆ ಸರಿಯಾಗಿ ಮಡಿಕೇರಿಯಲ್ಲಿರುವ ಸಂಘದ ಚೀಫ್ ಏಜನ್ಸಿ ಆಫೀಸಿನಲ್ಲಿ ನಡೆಯುವದು. ಆದಕಾರಣ ಮೇಲ್ಕಂಡ ಸಂಘದ ಶೇರು ಮತ್ತು ಪಾಲಿಸಿ ಹೋಲ್ಡರುಗಳು ಆ ಕಾಲಕ್ಕೆ ಎಲ್ಲರೂ ದಯವಿಟ್ಟು ಹಾಜರಾಗಬೇಕಾಗಿ ಕೋರುತ್ತೇನೆ.

ಟಿ. ಎ. ಕುಪ್ಪಸ್ವಾಮಿಪಿಳ್ಳೆ,
ಚೀಫ್ ಏಜಂಟ್.

COORG FOREST DEPARTMENT.
(SOUTH DIVISION.)
NOTICE.

Mercara, the 21st March 1928.

Tenders (in the prescribed form) are invited by 10th April 1928 for the Supply of the following quantities of rations for the use of the Departmental Live Stock in the Tithimatti and Nagerhole Ranges.

1.	Ragi	14,739 Seers.
2.	Gram	14,719 ,,
3.	Jaggery	6,375 Lumps each weighing 24 tolas.
4.	Salt	2,228 Seers.
5.	Cotton seed	2,007 Lbs.
6.	Straw	7,665 pullas weighing 5 Lbs. each.

For further particulars and tender forms apply to the DIVISIONAL FOREST OFFICE, SOUTH COORG, MERCARA.

ಕೊಡಗು ಫಾರೆಸ್ಟ್ ಇಲಾಖೆ, ದಕ್ಷಿಣ ಕೊಡಗು ಡಿವಿಜನ್,
ತಾ. 21–3–1928.

ನೋಟೀಸು.

ಇಲಾಖೆಯ ತಿತಿಮತಿ ಮತ್ತು ನಾಗರಹೊಳೆ ರೇಂಜುಗಳಲ್ಲಿರುವ ಜಾನುವಾರುಗಳಿಗೋಸ್ಕರ ಕೆಳಗೆ ನಮೂದಿಸಿರುವ ಆಹಾರ ಪದಾರ್ಥಗಳನ್ನು ಒದಗಿಸುವ ಬಗ್ಗೆ ದರಖಾಸ್ತುಗಳು (ದರಖಾಸ್ತು ಫಾರಮಿನಲ್ಲಿ) 1928ನೇ ಇಸವಿ ಏಪ್ರಿಲ್ ತಾ. 10ರೊಳಗೆ ಅಂಗೀಕರಿಸಲ್ಪಡುತ್ತದೆ.

1.	ರಾಗಿ	14,739 ಸೇರು.
2.	ಹುರುಳಿ	14,719 ,,
3.	ಬೆಲ್ಲ	6,375 ಅಚ್ಚು. (ಪ್ರತಿ ಅಚ್ಚು 24 ತೊಲ ತೂಕವುಳ್ಳ.)
4.	ಉಪ್ಪು	2,228 ಸೇರು.
5.	ಹತ್ತಿಬೀಜ	2,007 ಪೌಂಡ್.
6.	ಹುಲ್ಲು	7,665 ಕಂತೆ (ಪ್ರತಿ ಕಂತೆ 5 ಪೌಂಡ್ ತೂಕವುಳ್ಳ.)

ಮತ್ತಿನ ವಿಷಯಗಳಿಗೆ ಮತ್ತು ದರಖಾಸ್ತು ಫಾರಮುಗಳಿಗೆ ದಕ್ಷಿಣಕೊಡಗು ಡಿವಿಜನ್ ಫಾರೆಸ್ಟ್ ಆಫೀಸರರಿಂದ ಒಡನೆ ತಿಳಿಯತಕ್ಕದ್ದು.

ಪ್ರಾಂ. ಕಾಂ. ಕಮಿಟಿಯ ಕಾರ್ಯಕಾರೀ ಮಂಡಲದ ಮುಖ್ಯ ತೀರ್ಮಾನಗಳು.

ತಾ. ೧೧—೩—೩೮ ಮತ್ತು ೧೨—೩—೩೮ನೆಯ ದಿವಸ ಕ ಪ್ರಾಂ. ಕಾಂ ಕಮಿಟಿಯ ಕಾರ್ಯಕಾರೀ ಮಂಡಲವು ಗದಗಿನಲ್ಲಿ ಕೂಡಿತ್ತು. ಕೆಳಗೆ ಬರೆದ ನಿರ್ಣಯಗಳು ಗೊತ್ತಾದವು

(1) ಅಸೆಂಬ್ಲಿಯವರು, ಸರ್ವಪಕ್ಷೀಯ ಸಭೆಯವರ, ಮತ್ತು ರಾಷ್ಟ್ರದಲ್ಲಿಯ ಎಲ್ಲ ಪ್ರಮುಖ ರಾಜಕೀಯ ಸಂಘದವರು ಸೈಮನ್ ಕಮಿಶನ್ನವನ್ನು ಸಂಪೂರ್ಣವಾಗಿ ಬಹಿಷ್ಕರಿಸಿರಲಿಕ್ಕಾಗಿ ಕರ್ನಾಟಕದಲ್ಲಿಯ ಹಲಕೆಲವು ವ್ಯಕ್ತಿಗಳು ಕರ್ನಾಟಕ ಏಕೀಕರಣದ ನೆವದಿಂದ ಸೈಮನ್ ಕಮಿಶನ್ನಿನ ಕೂಡ ಸಹಕರಿಸಲಿಚ್ಛಿಸುತ್ತಿರುವದು ಗರ್ಹಣೀಯವೆಂದು ಈ ಮಂಡಲದ ಮತವಿದೆ

(೨) ಇಡೀ ಕರ್ನಾಟಕದಲ್ಲಿ ಆಯಾ ಸ್ಥಳಗಳಲ್ಲಿ ಕಮಿಶನ್ನಿಗೆ ಸಂಪೂರ್ಣ ಬಹಿಷ್ಕಾರ ಬೀಳುವಂತೆ ಪ್ರಯತ್ನಿಸಬೇಕೆಂದು ಈ ಮಂಡಲವು ನಿಶ್ಚಯಿಸುತ್ತದೆ ಮತ್ತು ಎಲ್ಲ ಪಕ್ಷದವರು ಈ ಕಾರ್ಯದಲ್ಲಿ ಸಹಾಯ ಮಾಡಬೇಕೆಂದು ಅವರಿಗೆ ಬಿನ್ನವಿಸುತ್ತದೆ.

(೩) ಬ್ರಿಟಿಶರು ಪುನಃ ಪುನಃ ಹಿಂದುಸ್ಥಾನಕ್ಕೆ ಮಾಡಿದ ಅನೇಕ ಅಪಮಾನಗಳಿಗೆ ಪ್ರತ್ಯುತ್ತರವೆಂದು ಕರ್ನಾಟಕದ ವರ್ತಕರೂ, ಎಲ್ಲ ಜನಗಳೂ ಬ್ರಿಟಿಶ ಬಟ್ಟೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ಈ ಸಭೆಯು ಅವರನ್ನು ಪ್ರಾರ್ಥಿಸುತ್ತದೆ ಈ ಕಾರ್ಯವು ಚನ್ನಾಗಿ ಆಗುವದರ ಸಲುವಾಗಿ ಸಂಪೂರ್ಣ ಖಾದೀ ತೊಡುವವರದೊಂದು ಮತ್ತು ಸ್ವದೇಶೀ ಬಟ್ಟೆಯನ್ನು ತೊಡುವವರದೊಂದು ಹೀಗೆ ಪ್ರತಿಜ್ಞಾ ಪತ್ರಗಳನ್ನು ತಯಾರಿಸಿ ಈ ವರ್ಷದಲ್ಲಿ ಖಾದೀ ತೊಡುವವರ ೫೦೦೦ ಅಂಕಿತಗಳನ್ನೂ ಸ್ವದೇಶೀ ತೊಡುವವರ ಅದಷ್ಟು ಹೆಚ್ಚು ಅಂಕಿತಗಳನ್ನೂ ತೆಗೆದುಕೊಳ್ಳಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ

(೪) ಈ ಪ್ರಾಂತದಲ್ಲಿಯ ಪ್ರಚಾರ ಕಾರ್ಯವನ್ನು ಈ ಕೆಳಗಿನಂತೆ ನಡಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. ೧೯೨೮ರ ನವೆಂಬರು ೧ ತಾರೀಖಿನ ಒಳಗಾಗಿ ಇಡೀ ಪ್ರಾಂತದಲ್ಲಿ—

(೧) ಸೈಮನ್ ಕಮಿಶನ್ನಿನ ಬಹಿಷ್ಕಾರ (೨) ಬ್ರಿಟಿಶ ಬಟ್ಟೆಯ ಬಹಿಷ್ಕಾರ (೩) ಕಾಂಗ್ರೆಸ ಕಮಿಟಿಯ ಸಂಘಟನ (೪) ವ್ಯಾಯಾಮ ಸಂಸ್ಥೆಗಳ ಸ್ಥಾಪನೆ (೫) ಖಾದಿಯ ಪ್ರಸಾರ (೬) ಕರ್ನಾಟಕ ಏಕೀಕರಣ—ಈ ವಿಷಯಗಳ ಪ್ರಚಾರವನ್ನು ಮಾಡತಕ್ಕದ್ದು.

ಪ್ರಚಾರಕರಲ್ಲಿ ಯಾರಿಗೆ ಇಷ್ಟವಿದೆಯೋ ಅವರು ಮೊದಲು ಕ ಪ್ರಾಂ. ಕಾಂ ಕಮಿಟಿಯಲ್ಲಿ (ಬಾಗಲಕೋಟೆ ಅಲ್ಲಿ) ನೇಮಿಸಿದ ಪ್ರಚಾರಕ ಮಂಡಲಕ್ಕೆ ತಿಳಿಸಿದಲ್ಲಿ ಮಂಡಲದವರು ಪ್ರವಾಸ ವೆಚ್ಚವನ್ನು ಕೊಡುವದಲ್ಲದೆ ಕಾರ್ಯ ಮಾಡಿದ ಪ್ರತಿ ದಿನಕ್ಕೆ ರೂ. ೧ರಿಂದ ...ವರೆಗೆ ಹಣವನ್ನು ಸಲ್ಲಿಸುವದೆಂದು ಈ ಸಭೆಯು ನಿರ್ಣಯಿಸುವದು.

(೫) ಸ್ಥಾನಿಕ ಕಾಂಗ್ರೆಸ ಕಮಿಟಿಯವರು ಆಚ್ಚು ಹಾಕಿಸಿದ ಕಾಂಗ್ರೆಸ ಸಭಾಸದರನ್ನು ಮಾಡುವ ನಮೂನೆಗಳನ್ನೇ ಇಡೀ ಪ್ರಾಂತ್ಯದಲ್ಲಿಯ ಕಾಂಗ್ರೆಸ ಕಮಿಟಿಯವರು ಉಪಯೋಗಿಸ ಬೇಕು ಏಸ್ತು ಮತ್ತು ಲೆಕ್ಕದ ದೃಷ್ಟಿಯಿಂದ ಅವಶ್ಯವಿರುವದು. ಇನ್ನು ಈ ಒಳಗಾಗಿ ಯಾವದಾದರೊಂದು ಕಮಿಟಿಯವರು ಬೇರೆ ನಮೂನೆಗಳನ್ನು ಛಾಪಿಸಿದ್ದರೆ ಅವುಗಳ ಲೆಕ್ಕವನ್ನು ಪ್ರಾಂ. ಕಾಂ ಕಮಿಟಿಗೆ ಕಳುಹಿಸಬೇಕಲ್ಲದೆ ಇನ್ನುಮುಂದೆ ಹೀಗೆ ಬೇರೆ ಫಾರ್ಮಗಳನ್ನು ಅಚ್ಚು ಹಾಕಿಸಬಾರದೆಂದು ಈ ಸಭೆಯು ಸೂಚಿಸುತ್ತದೆ

(೬) ಈ ಪ್ರಾಂತದಲ್ಲಿಯ ಕಾಂಗ್ರೆಸ ಕಮಿಟಿಯ ಸಭಾಸದರನ್ನು ಮಾಡುವ ಕಾರ್ಯವನ್ನು ಕರ್ನಾಟಕ ಸೇವಾದಳದವರು ಕೈಕೊಂಡದ್ದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆ ಆದರೆ ಆಯಾ ಕಾಂಗ್ರೆಸ ಕಮಿಟಿಯವರ ಸಮತಿಯಿಂದ ಕರ್ನಾಟಕ ಸೇವಾದಳದವರು ಈ ಕಾರ್ಯವನ್ನು ಕೈಕೊಳ್ಳಬೇಕೆಂದು ಅವರಿಗೆ ಈ ಸಭೆಯು ಬಿನ್ನವಿಸುತ್ತದೆ ಈ ಕಾರ್ಯಕ್ಕಾಗಿ ಸೇವಾದಳದವರಿಗೆ ಸ್ಥಾನಿಕದತ್ತದ ಫೀಯ ¼ ಭಾಗವು ಸಲ್ಲತಕ್ಕದ್ದೆಂದು ಈ ಸಭೆಯು ನಿರ್ಣಯಿಸುತ್ತದೆ.

(೭) ಪಂಚಾಯಿತರನ್ನು ನೇಮಿಸಿ ಪೂರ್ಣ ಚೌಕಸಿ ಮಾಡಿ ಆ ಮೇಲೆ ಭೂಕಂದಾಯವನ್ನು ಏರಿಸಬಹುದು. ಅಥವಾ ಇಳಿಸಬಹುದು ಎಂಬ ಬಾರಡೋಲಿ ತಾಲೂಕಿನ ನ್ಯಾಯವಾದ ಬೇಡಿಕೆಯನ್ನು ಲಕ್ಷಿಸದೆ ಸರಕಾರದವರು ಭೂಕಂದಾಯ ಏರಿಸಿದ್ದು ಅತ್ಯಂತ ಅನ್ಯಾಯದ ಸಂಗತಿಯೆಂದು ಈ ಸಭೆಯ ಮತವಿರುವದು. ಈ ಅನ್ಯಾಯದ ವಿರುದ್ಧ ಬಾರಡೋಲಿಯವರು ನಡೆಸಿದ ಸತ್ಯಾಗ್ರಹಕ್ಕಾಗಿ ಅವರನ್ನು ಈ ಸಭೆಯು ಅಭಿನಂದಿಸುವದು

(೮) ಕರ್ನಾಟಕ ಕೈಪಿಡಿ ಮತ್ತು Karnatak Hand Book ಎಂಬ ಪುಸ್ತಕಗಳ ಬೆಲೆಯು ೮ ಆ. ಎಂದು ನಿಶ್ಚಯಿಸಿರುತ್ತದೆ. ೨೦ ಅಥವಾ ಹೆಚ್ಚು ಪುಸ್ತಕಗಳನ್ನು ಒಮ್ಮೆಲೆ ಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ೧೦೦ಕ್ಕೆ ೨೦ರಂತೆ ದಲ್ಲಾಲಿ ಕೊಡಬಹುದಾಗಿ ಸಭೆಯು ನಿರ್ಣಯಿಸುವದ.

ಮುದ್ದೂರಾವ ಕಂಭಾವಿ,
ರಂಗನಾಥ ದಿವಾಕರ,
ಕಾರ್ಯದರ್ಶಿಗಳು.

“ಗೀತೆಯ ಗುಟ್ಟು ಅಥವಾ ಪರಮಾತ್ಮ ಯೋಗವು.”

ಈ ಹೆಸರಿನ ಒಂದು ಕನ್ನಡ ಪುಸ್ತಕವು ಪ್ರಕಾಶಿತವಾಗಿದೆ ಲೇಖಕರು ರಂಗನಾಥ ರಾಮಚಂದ್ರ ದಿವಾಕರ ಯಂ ಎ, ಯಲ್ ಯಲ್ ಬಿ, ಸಂಪಾದಕ, “ಕರ್ಮವೀರ” ಧಾರವಾಡ ಬೆಲೆ ೧ ರೂ. ಪುಸ್ತಕವು ಇವರಲ್ಲೇ ಬೆಲೆಗೆ ದೊರೆಯುತ್ತದೆ

ಗೀತಾ ವಿವೇಚನೆಯು ೯ ಅಧ್ಯಾಯಗಳಲ್ಲಿ ಮೊದಲನೇ ೧೦೪ ಪುಟಗಳಲ್ಲಿ ಮಾಡಲಾಗಿದೆ ಅನಂತರ ೫೦ ಪುಟಗಳಲ್ಲಿ ಶ್ರೀಮದ್ಭಗವದ್ಗೀತೆಯ ಮೂಲವು ಕನ್ನಡ ಅಕ್ಷರದಲ್ಲಿಯೂ ಕೆಳಗೆ ಕನ್ನಡ ಅನುವಾದವೂ—ಕೊಟ್ಟಿದೆ —ಅಂತ್ಯದ ೧೨ ಪುಟಗಳಲ್ಲಿ ಗೀತೆಯ ಕಲವು ಕಠಿಣ ಶಬ್ದಗಳ ಅರ್ಥವೂ, ಟಿಪ್ಪಣಿಗಳೂ ಕೊಡಲ್ಪಟ್ಟಿವೆ “ವಿವೇಚನೆ” ಎಂದರೆ ಏನೆಂತ ತಿಳಿಯಲಿಕ್ಕೆ ಅದರ ೯ ಅಧ್ಯಾಯಗಳ ಹೆಸರುಗಳನ್ನು ತಿಳಿದರೆ ಗೊತ್ತಾಗುತ್ತದೆ ೧. ಗೀತೆಯ ಮಹತ್ವವೂ ಮತ್ತು ಮಹಾತತ್ವವು, ೨ ಗೀತೆ ಮತ್ತು ಸನ್ಯಸ್ಥಿತಿಯೂ, ೩. ಗೀತೆ ಮತ್ತು ಕರ್ನಾಟಕವೂ ೪ ಗೀತೆಯ ಭೂಮಿಕೆ ಎಂದರೆ ಗೀತೆಯು ಯಾವ ಸಂದರ್ಭದಲ್ಲಿ ಹೇಳಲ್ಪಟ್ಟಿತು ಎಂಬದು, ೫ ಗೀತೆಯಲ್ಲಿಯ ಸನಾತನ ಧರ್ಮ, ೬ ಗೀತೆಯಲ್ಲಿಯ ಯುಗಧರ್ಮ, ೭ ಯೋಗ ಪಂಚಕ, ೮ ಯೋಗಸಮನ್ವಯ, ೯ ಗೀತೆಯ ಗುಟ್ಟುಗುರುಗಳು ಎಂಬವೇ ೯ ಅಧ್ಯಾಯಗಳು “ಗೀತೆಯು ಆಧ್ಯಾತ್ಮಿಕ ಅನುಭವದ ಗ್ರಂಥವಾಗಿರುವದು. ಗೀತೆಯು ಸರ್ವತತ್ವಗಳನ್ನು ವಿವೇಚಿಸುವ ಗ್ರಂಥ’ ಎಂತಲೂ ವರ್ಣಿಸಿದ್ದಾರೆ ಈ ಗ್ರಂಥವು ಇಷ್ಟು ಮಹತ್ವದ್ದಾದರೂ ಚಿಕ್ಕದಾಗಿಯೂ, ಸರಳವಾಗಿಯೂ, ಕಾವ್ಯ ಸೌಂದರ್ಯವುಳ್ಳದ್ದಾಗಿಯೂ ಲೋಕಪ್ರಿಯರಾದ ಕೃಷ್ಣಾರ್ಜುನರೊಳಗಿನ ಸಂವಾದವಾಗಿಯೂ, ಸ್ತ್ರೀಶೂದ್ರರೇ ಮೊದಲಾದ ಸಾಮಾನ್ಯ ಜನರಿಗೂ ಉಪಯೋಗಕರವಾಗಿಯೂ ಇರುವ ಗೀತೆಯ ಮಹಾತ್ಮ್ಯವನ್ನು ವರ್ಣಿಸಲ್ಪಟ್ಟಿದೆ ಹಿಂದುಸ್ಥಾನವು ಈಗ ಆಧ್ಯಾತ್ಮಿಕ, ರಾಜಕೀಯ, ಧಾರ್ಮಿಕ, ಸಾಮಾಜಿಕ ಆರ್ಥಿಕ ಮುಂತಾದ ಎಲ್ಲಾ ಪರಿಸ್ಥಿತಿಯಲ್ಲಿಯೂ ವ್ಯಸನವನ್ನುಂಟುಮಾಡುವ ಸ್ಥಿತಿಯಲ್ಲಿದೆ ಗೀತೆಯ ಉಪದೇಶವನ್ನು ಅನುಸರಿಸಿ ನಡೆಯದಿರುವದೇ ಇದಕ್ಕೆ ಕಾರಣವೆಂಬದನ್ನು ವಿವರಿಸಿದ್ದಾರೆ. ಭಾರತ ಯುದ್ಧಾರಂಭದಲ್ಲಿ ಅರ್ಜುನನಿಗೆ ಉಂಟಾಗಿದ್ದ ಹೇಡಿತನ, ದಿಕ್ಕು ತೋಚದಿರುವಿಕೆ, ದುರ್ಬಲತೆ ಮುಂತಾದವು ಹಿಂದುಸ್ಥಾನದವರಿಗೆ ಈಗ ಬಂದಿವೆ ಇದನ್ನೆಲ್ಲಾ ಪರಿಹರಿಸಲಿಕ್ಕೆ ಆಧ್ಯಾತ್ಮಿಕ ಜ್ಞಾನವಾಗಲೇಬೇಕು. ಇದಾಗಬೇಕಾದರೆ ಹಿಂದುಸ್ಥಾನದ ಜನರ ಕೈಯಲ್ಲಿ “ವೇದಸಾರವಾದ ಉಪನಿಷದ್ರಸವಾದ, ಜ್ಞಾನತತ್ವಪೂರ್ಣ, ಯೋಗಾಮೃತವಾದ ಶ್ರೀಮದ್ಭಗವದ್ಗೀತೆಯನ್ನು ಕೊಡಬೇಕು,” ಎಂತ ಹೇಳಿದ್ದಾರೆ ಸ್ವಿಜರ್‌ಲ್ಯಾಂಡ್, ಪೋಲೇಂಡ್ ಮುಂತಾದ ಪಶ್ಚಿಮಾತ್ಯ ದೇಶಗಳು ಗೀತೆಯನ್ನು ತಮ್ಮ ತಮ್ಮ ಭಾಷೆಗೆ ತರ್ಜುಮೆಮಾಡಿಕೊಂಡು ೨ ರೂ ಯಿಂದ ೮ ರೂ ವರಗೆ ಬೆಲೆ ಇದ್ದರೂ ಕೊಂಡುಕೊಂಡು ಅಭ್ಯಾಸಮಾಡುತ್ತಿರುವಾಗ ಹಿಂದುಸ್ಥಾನದವರು ೨ ಆಣೆಗೆ ದೊರಕುವ ಗೀತೆಗೆ ಪ್ರಾಮುಖ್ಯತೆಕೊಟ್ಟು ಅದನ್ನು ಉಪಯೋಗಿಸದಿರುವದು ನಾಚಿಕೆಗೇಡಾಗಿದೆಯೆಂತ ವಿವರಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಪುರಾತನ ಕಾಲದಿಂದಲೂ ಗೀತೆಗೆ ಮಹತ್ವ ದೊರಕಿತ್ತೆಂತಲೂ ಈಗ ಗೀತೆಯ ಉಪದೇಶವನ್ನು ನೆನೆಸಿಕೊಂಡು ಆಚರಣೆಗೆ ತರುವದು ಅವಶ್ಯವಾಗಿದೆಯೆಂತ ಹೇಳಿ ಅರ್ಜುನ ಕೃಷ್ಣರೆಂದರೆ ನರನಾರಾಯಣರು, ನರನೆಂದರೆ ಸಾಧಾರಣ ಮನುಷ್ಯ, ನಾರಾಯಣನೆಂದರೆ ಪರಮಾತ್ಮನೆಂತ ತಿಳಿದರೂ ಯುಕ್ತವಾಗುವದು ಯಾವ ಯುಕ್ತಿಯಿಂದ ನವಜೀವನದ ಸಂಚಾರವಾಗಿ ಅರ್ಜುನನು ಲೋಕಸಂಗ್ರಹಕ್ಕಾಗಿ ಅತ್ಯವಶ್ಯವಿರುವ ರಾಷ್ಟ್ರಕಾರ್ಯವನ್ನು ಮಾಡತೊಡಗಿದನೋ ಆ ಯುಕ್ತಿಯೇ ಗೀತೆ ಎಂತ ಮುಂತಾಗಿ ಗೀತೆಯ ಶಕ್ತಿಯು ಬಹಳ ವಿಶೇಷವಾಗಿ ವರ್ಣಿಸಲ್ಪಟ್ಟಿದೆ

ವಿವೇಚನೆಯಲ್ಲಿ ಉಪಯೋಗಿಸಿರುವ ಮಾತುಗಳನ್ನೇ ಉಪಯೋಗಿಸಿ ಈ ವರೆಗೆ ಬರೆದದ್ದಾಯಿತು. ವಿವೇಚನೆಯ ಭಾಷಾಶೈಲಿಯು ಬಹಳ ಚನ್ನಾಗಿದೆ. ಪ್ರಾರಂಭಿಸಿದರೆ ಬಿಡಲಿಕ್ಕೆ ಮನಸು ಬರುವದಿಲ್ಲ. ಶ್ರೀಯುತ ದಿವಾಕರರು ಕೊಡಗಿನವರಿಗೆ ಅಪರಿಚಿತರಲ್ಲ. ಇವರಿಗೆ ದೇವರು ಕೊಟ್ಟಿರುವ ತುಂಬಾ ಶಕ್ತಿಯನ್ನು ಜನಸಮುದಾಯದ ಪ್ರಯೋಜನಕ್ಕಾಗಿಯೇ ಉಪಯೋಗಿಸುತ್ತಾ ತಾನು ಸಂಪೂರ್ಣ ಬಡತನದಲ್ಲಿರುವವರು, ಗೀತೆಯ ಬೋಧನೆಯನ್ನು ಕಾಯಾ ಉಪಯೋಗಿಸಿ ನಿ ದುಃಖಗಳನ್ನು ಎಣಿಸದೆ ಹಗಲಿರುಳು ದೇಶೋದ್ಧಾರಕ್ಕಾಗಿ ಕೆಲಸಮಾಡುತ್ತಿರುವವರು—ಕನ್ನಡ ಭಾಷೆಯ ಸೇವೆಯಲ್ಲಿ ಸದಾ ನಿರತರಾದವರು ಇಂಥವರು ಬರೆದ ಮಾತುಗಳನ್ನು ಓದಲು ಎಲ್ಲಾ ಕನ್ನಡಿಗರೂ ಆತುರಪಡಲೇಬೇಕು ಓದಿದರೆ ಮನಸ್ಸಿಗೆ ಹೊಸ ಬೆಳಕು ಹೊಳೆಯುದೆಂಬ ಇತ್ಯಾದಿ.

ಗೀತೆಯ ಭಾಷಾಂತರವೂ ಬಹಳ ಸೊಗಸಾಗಿದೆ. ಇದನ್ನು ಓದುವಾಗ ಗೀತೆಯ ಸಂವಾದವು ನಿಮಗೂ ನಿಮ್ಮ ಗುರುವಿಗೂ ಆಗುತ್ತಿರುವದೋ ಎಂಬಂತೆ ತೋರುತ್ತದೆ. ಈ ಸ್ವಲ್ಪ ಕ್ರಯದ ಚಿಕ್ಕ ಪುಸ್ತಕವು ಪ್ರತಿಯೊಬ್ಬ ಕನ್ನಡಿಗನ ಕೈಯಲ್ಲೂ ಇರಬೇಕಾದದ್ದು ಅವಶ್ಯವಾಗಿದೆ.

“ವಿ”

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಕರ್ತರು ಜವಾಬ್ದಾರರಲ್ಲ. ಸಂ||

ಮಡಿಕೇರಿ ರಾಜಸೀಟಿನ ಬಳಿಯ ಸಂತೆ

ಮಹನೀಯರೆ,

ಮಡಿಕೇರಿಯಲ್ಲಿ ವಾರಕ್ಕೊಮ್ಮೆ ಎರಡು ಸಂತೆಗಳು ನಡೆಯುತ್ತವೆ ಒಂದು ಮಾರ್ಕೆಟ್ಟಿನಲ್ಲಿ, ಮತ್ತೊಂದು ರಾಜಾಸೀಟಿನ ಬಳಿಯಲ್ಲಿ ಈ ಎರಡು ಸಂತೆಗಳಿಗೂ ಒಂದು ಮೈಲಿಗಿಂತ ಹೆಚ್ಚು ದೂರವಾಗಬಹುದು. ಮಾರ್ಕೆಟ್ಟಿನ ಸಂತೆಯಲ್ಲಿ ಎಲ್ಲಾ ಸಾಮಾನುಗಳೂ ದೊರೆಯುತ್ತವೆ ಆದರೆ ರಾಜಾಸೀಟಿನ ಬಳಿಯ ಸಂತೆಯಲ್ಲಿ ತರಕಾರಿಗಳು, ಅಕ್ಕಿ ಮಾತ್ರ ಮಾರಾಟವಾಗುವುದು. ಎರಡು ಸಂತೆಗಳಿರುವುದರಿಂದ ಪಟ್ಟಣವಾಸಿಗಳಿಗೆ ತುಂಬಾ ಅನಾನುಕೂಲ ಪಟ್ಟಣದಲ್ಲಿ ಸರ್ಕಾರಿ ಉದ್ಯೋಗಸ್ಥರು ಅನೇಕರಿದ್ದಾರೆ. ಇವರು ಮತ್ತು ಪಟ್ಟಣದ ಇತರ ಜನರು ಸಾಮಾನುಗಳನ್ನು ಕೊಳ್ಳಬೇಕಾದರೆ ಎರಡೂ ಕಡೆಗೆ ಹೋಗಬೇಕು ಸರ್ಕಾರಿ ನೌಕರರಿಗೆ ಶುಕ್ರವಾರ ದಿನ ಬೆಳಿಗ್ಗೆ ಸಂತೆಯ ಒಗ್ಗೆ ಒಂದು ಗಂಟೆಯ ಹೆಚ್ಚು ಸಮಯ ಕೊಟ್ಟಿದ್ದಾರೆ ಈ ಸಮಯದೊಳಗೆ ಅವರು ಎರಡು ಸಂತೆಗಳಿಗೂ ಹೋಗಿ ಸಾಮಾನು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸರಕಾರಿ ನೌಕರರಲ್ಲದವರೂ ಸಹ ತೊಂದರೆಪಡುತ್ತಿರುವರು. ಮಡಿಕೇರಿಯಂತ ಸಣ್ಣ ಪಟ್ಟಣದಲ್ಲಿ ಎರಡು ಸಂತೆಗಳ ಆವಶ್ಯಕತೆಯಿಲ್ಲ ತರಕಾರಿ ಇತ್ಯಾದಿ ಸಾಮಾನುಗಳನ್ನು ತರತಕ್ಕ ಮಾಲಿಕರಿಗೆ ಒಂದೇ ಸ್ಥಳದಲ್ಲಿ ಸ್ಪರ್ಧೆಯಿಂದ ಸಿಕ್ಕುವ ಬೆಲೆಯು ಹೆಚ್ಚಾಗಿರುತ್ತದೆ ನಾಡು ಜನರು ತಮ್ಮ ತರಕಾರಿಯನ್ನು ರಾಜಾಸೀಟಿನ ಸಂತೆಯಲ್ಲಿ ಮಾರಾಟಮಾಡಿದ ಮೇಲೆ ತಮಗೆ ಬೇಕಾದ ಎಣ್ಣೆ, ಬೇಳೆ, ಉಪ್ಪು ಮುಂತಾದ ಸಾಮಾನುಗಳನ್ನು ಕೊಳ್ಳಲಿಕ್ಕೆ ಪೇಟೆ ಸಂತೆಗೆ ಬರಲೇಬೇಕು. ಇವರು ತಮ್ಮ ಸಾಮಾನುಗಳನ್ನು ಒಂದೇಸಲ ಪೇಟೆ ಸಂತೆಗೆ ತಂದು ಅವನ್ನು ಮಾರಾಟ ಮಾಡಿ ಹೆಚ್ಚು ಲಾಭ ಹೊಂದಿ ಪುರಸೊತ್ತಿನಿಂದ ತಮಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಂಡು ಹೋಗಬಹುದು ಆದುದರಿಂದ ಪಟ್ಟಣದ ಜನರ ಮತ್ತು ನಾಡುಜನರ ಸೌಕರ್ಯಕ್ಕಾಗಿ ರಾಜಾಸೀಟಿನ ಸಂತೆಯನ್ನು ನಿಲ್ಲಿಸಿ, ಪೇಟೆಸಂತೆಯೊಂದರಲ್ಲಿಯೇ ಎಲ್ಲಾ ಸಾಮಾನುಗಳು ದೊರೆಯುವಂತೆ ಮುನಿಸಿಪಾಲಿಟಿಯವರು ಏರ್ಪಾಡು ಮಾಡಬೇಕಾಗಿ ಕೋರುತ್ತೇನೆ.

ಪಟ್ಟಣಿಗ.

ನಿರಖು ಪಡಿಯ ಗತಿ ಏನಾಯಿತು ?

ಅಯ್ಯಾ,

ಈಗ ದೇಶದಲ್ಲಿ ನಿರಖು ಅಳತೆಯ ಪಡಿ ಇಲ್ಲದೆ ಭತ್ತ ಮಾರಾಟ ಮಾಡುವ ರೈತರ ಕಷ್ಟ ಮತ್ತು ನಷ್ಟವನ್ನು ಹೇಳಿ ಪೂರೈಸಲಾಗುವದಿಲ್ಲ ಹತ್ತು ಸೇರಿನ ಪಡಿಯು ಬೆಳೆಯುತ್ತಾ ಒಂದು ಈಗ 12 ಸೇರಿಗಿಂತಲೂ ದೊಡ್ಡದಾಗುತ್ತಿದೆ ಎಷ್ಟು ಸೇರಿನ ಪಡಿ ಇಟ್ಟುಕೊಂಡರೂ ವ್ಯಾಪಾರಿಗಳನ್ನು ಕೇಳುವವರ್‍ಯಾರು? ಈ ಪುಕಾರುಗಳನ್ನೆಲ್ಲಾ ಎರಡು ಮೂರು ವರ್ಷಗಳ ಹಿಂದೆ ಈ ಪತ್ರಿಕೆಯ ಮೂಲಕವೇ ಬಹಿರಂಗ ಪಡಿಸಿದ್ದರಿಂದಲೂ, ಓಟುಗಳ ಕೂಗಿನಿಂದಲೂ ಕೌನ್ಸಿಲಿನಲ್ಲಿ ಪ್ರತಿನಿಧಿ ಮೆಂಬರುಗಳು ಈ ವಿಷಯ ಚರ್ಚೆಗೆ ತಂದು ಸರ್ಕಾರಿ ಸೀಲಿನಿಂದ ನಿರಖು ಪಡಿ ಇಡುವಂತೆ ಮಾಡಬೇಕೆಂದು ಬಹು ಮತದಿಂದ ತೀರ್ಮಾನವಾದ ನೆನಪು ನನಗಿದೆ ಆದರ ಮೇಲೆ ಸರ್ಕಾರದವರು ಆ ತೀರ್ಮಾನವನ್ನು ಅಂಗೀಕರಿಸಿ ಇದರ ಖರ್ಚಿಗಾಗಿ 700 ರೂಪಾಯಿಗಳೂ ಮಂಜೂರು ಮಾಡಲಾಯಿತಂತೆ ಆಗ ಕಮಿಷನರಾಗಿದ್ದ ಮಿ. ಟಾಸ್ಕರವರು ಇದರ ವಿಷಯ ತುಂಬಾ ಮೇಹನತ್ತು ತೆಗೆದುಕೊಳ್ಳುತ್ತಿದ್ದರೆಂದು ತಿಳಿದುಬಂತು. ಅವರು 80 ಪಡಿಗಳನ್ನು ಮಾಡಿಕೊಡಲು ಕಂಟ್ರಾಕ್ಟಿಗೆ ಟೆಂಡರ್ ಕೇಳಿದ್ದೂ ಸಹ ನನಗೆ ಜ್ಞಾಪಕವಿದೆ ಆದರೆ ಅವರು ಕೂಡಲೇ ವರ್ಗಾಯಿಸಲ್ಪಟ್ಟರು ಅವರ ನಂತರ ಈ ವರೆಗೆ ನಾಲ್ಕು ಕಮಿಷನರುಗಳಾದರು ಇವರಲ್ಲಿ ಯಾರೂ ಈ ವಿಷಯಕ್ಕೆ ಗಮನಕೊಟ್ಟಂತೆ ಕಾಣುವದಿಲ್ಲ. ಕಾರಣವೇನೋ ಗೊತ್ತಾಗುವದಿಲ್ಲ.

ರೈತರಿಗೆ ಬಹು ಮುಖ್ಯವಾದ ಈ ವಿಷಯವು ರೈತರ ಹಿತಚಿಂತಕರೆನ್ನಿಸಿಕೊಳ್ಳುವ ಕಮಿಷನರುಗಳಿಗೆ ಅಲ್ಪ ಸಂಗತಿಯೆಂದು ಕಂಡಬಂತೋ? ಅಥವಾ ಹೊಸಬರಾದ ಅವರಿಗೆ ಅವರ ಕೆಳಗಿನ ಆಫೀಸರುಗಳು ಈ ಸಂಗತಿಯ ಪ್ರಾಮುಖ್ಯತೆಯನ್ನು ತಿಳಿಸಲಿಲ್ಲವೇ? ಈ ವಿಷಯದಲ್ಲಿ ರೈತರು ಬಹಳ ನಷ್ಟಕ್ಕೊಳಗಾಗುತ್ತಿದ್ದಾರೆಂಬುದು ಇನ್ನಾದರೂ ಅಧಿಕಾರಿಗಳ ಗಮನಕ್ಕೆ ಬರುವದೇ? ಕೌನ್ಸಿಲಿನ ತೀರ್ಮಾನದಿಂದ ಇದೊಂದು ಚಿಕ್ಕ ಪ್ರಯೋಜನವಾದರೂ ದೊರೆಯಬಹುದೆಂದು ಕಾಯುತ್ತಿದ್ದ ಓಟರುಗಳಿಗೆ ಆಶಾಭಂಗವಾಯಿತಲ್ಲವೇ? ಇನ್ನಾದರೂ ಕೌನ್ಸಿಲಿನವರೂ, ಅಧಿಕಾರಿಗಳೂ ಈ ವಿಷಯದಲ್ಲಿ ರೈತರ ಕೋರಿಕೆಯನ್ನು ನೆರವೇರಿಸಬೇಕಾಗಿ ನಂಬುವೆ.

“ರೈತ”

ರಮ್ಜಾನ್ ಬಕ್ರೀದ್ ಮೆರವಣಿಗೆ

ಸ್ವಾಮಿಯ್ಯ,

ಈ ವರುಷದ ಬಕ್ರೀದ್ ಹಬ್ಬವು ಮಡಿಕೇರಿ ಮುಸಲ್ಮಾನರಿಗೆ ಏನೊಂದೂ ವೈಮನಸ್ಸಿಲ್ಲದ ಆನಂದದಿಂದ ನಡೆಯಿತೆಂದು ಹೇಳಲು ನಾನು ಬಹು ಸಂತೋಷ ಪಡುತ್ತೇನೆ. ಈ [illegible]ವರೆಗೆ ಬಕ್ರೀದ್ ಹಬ್ಬದ ದಿನ ಈದಗಾಹ್ಕೆ ಅಂದರೆ ಪ್ರಾರ್ಥನಾ ಬಯಲಿಗೆ ಬೀದಿಗಳಾಗಿ ಹೋಗುವಾಗ ಬಾಜಾಬಜಂತ್ರಿ ಇರಬೇಕೆಂದು ಕೆಲವರೂ, ಅದು ಇರಬಾರದೆಂದು ಕೆಲವರೂ ಸುಮಾರು ಹತ್ತೆಂಟು ವರುಷಗಳಿಂದ ವಾದ ಮಾಡುತ್ತಿದ್ದುದರಿಂದ, ಇಲ್ಲಿನ ಮುಸಲ್ಮಾನರೊಳಗೆ ಅಸಮಾಧಾನವಿತ್ತು. ಈ ವರುಷ ಬಹು ಮುಸಲ್ಮಾನ ಮಹನೀಯರ ಪ್ರಯತ್ನದಿಂದ ಎಲ್ಲಾ ಮುಸಲ್ಮಾನರೂ ಒಂದುಗೂಡಿ ಬಾಜಾಬಜಂತ್ರಿ ಇಲ್ಲದೆ ಈದಗಾಹ್ಕೆ ಹೋದರು. ಹೀಗೆ ನಮ್ಮೊಳಗೆ ಇದುವರೆಗೆ ಇದ್ದ ಭಿನ್ನಾಭಿಪ್ರಾಯಗಳನ್ನು ದೂರ ಮಾಡಿ ನಮ್ಮಲ್ಲಿ ಸ್ನೇಹಭಾವವನ್ನು ಹೆಚ್ಚಿಸಿದುದಕ್ಕಾಗಿ ನಾವು ಆ ಪುಣ್ಯಾತ್ಮರಿಗೆ ತುಂಬಾ ಕೃತಜ್ಞರಾಗಿದ್ದೇವೆ

ನಾವು ಈದಗಾಹ್ಕೆ ಹೋಗುವಾಗ ಕೆಲವು ದೊಡ್ಡ ಮನುಷ್ಯರು ಮೋಟಾರು ಗಾಡಿಗಳ ಮೇಲೆ ಕುಳಿತುಕೊಳ್ಳುವರು. ಇತರ ದೇಶಗಳಲ್ಲಿನ ಮುಸಲ್ಮಾನರು ಹೀಗೆ ಮೋಟಾರುಗಾಡಿಯಲ್ಲಿ ಕೂತು ಹೋಗುವುದಿಲ್ಲ. ಎಲ್ಲರೂ ನಡೆದೇ ಹೋಗುವರು. ಒಂದುವೇಳೆ ಯಾರಾದರೂ ಅಸ್ವಸ್ಥರಾಗಿದ್ದರೆ, ಅವರು ಮಾತ್ರ ಗಾಡಿಯಲ್ಲಿ ಹೋಗಬಹುದು. ಹೀಗೆ ಹೋಗುವುದಾದರೂ ಅವರ ಗಾಡಿಯು ಜನರ ಗುಂಪಿನ ಮುಂದೆ ಹೋಗದೆ ಹಿಂದೆ ಹೋಗುವುದುತ್ತಮ. ಇನ್ನು ಮುಂದಿನ ವರುಷದಲ್ಲಾದರೂ ಈ ವಿಚಾರವನ್ನು ಗಮನಿಸಿ ನಮ್ಮ ಧರ್ಮಶಾಸ್ತ್ರಗಳಿಗನುಸಾರವಾಗಿ ನಡೆದುಕೊಳ್ಳಲು ಪ್ರಯತ್ನಿಸಬೇಕಾಗಿ ನನ್ನ ಪ್ರಾರ್ಥನೆ

ಒಬ್ಬ ಮುಸಲ್ಮಾನ.

ಮಹನೀಯರೇ,

ತಾ 17—3—28ನೇ ದಿನ ಬೆಟ್ಟಂಗಾಲದಲ್ಲಿ ಒದಗಿದ ಪಂಚಮರ ಸಮ್ಮೇಳನಕ್ಕೆ ಪ್ರೆಸಿಡೆಂಟ ಶಾರದಾಶ್ರಮದ ಮುಖ್ಯಾಧಿಕಾರಿಯಾದ ರಾಮಪ್ರಸಾದ ಸ್ವಾಮಿಯವರು ಅಧ್ಯಕ್ಷಪದವಿಯನ್ನು ವಹಿಸಿಕೊಂಡದ್ದು ತುಂಬಾ ಶ್ರೇಯಸ್ಕರವಾದದ್ದೇ ಸರಿ. ಅಸ್ಪೃಶ್ಯರಾಗಿ ನಮ್ಮ ದೇಶದ ಹಿಂದುಳಿದ ವಂಗಡಕ್ಕೆ ಇವರು ಕೊಟ್ಟ ಪ್ರೋತ್ಸಾಹ ಪೂರಿತ ಬೋಧನೆಯು ಮತ್ತಷ್ಟು ಶ್ಲಾಘ್ಯತರವಾದದ್ದು. ಆದರೆ ರಾಮಕೃಷ್ಣ ಮಠಕ್ಕೆ ಬಹಳಷ್ಟು ಸನ್ಯಾಸತ್ವವನ್ನು ಕೈಕೊಂಡಿರುವ ಮತ್ತು ದೇಶದ ಹಿರಿಗ ಎನಿಸುತ್ತಿರುವ ಈ ಸ್ವಾಮಿಗಳವರು ಸದರಿ ಹಿಂದುಳಿದ ವಂಗಡದ ಸಮ್ಮೇಳನದಲ್ಲಿ ಸಹ ಪಂಕ್ತಿ ಭೋಜನವನ್ನು ಸ್ವೀಕರಿಸುವುದಕ್ಕೆ ಹಿಂಜರಿದು ತಾವು ಪಂಚಮರ ಕೂಟಕ್ಕೆ ತಮ್ಮ ಮನೋ ಅಭಿಪ್ರಾಯವನ್ನು ಕೊಟ್ಟದ್ದಕ್ಕೆ ಪೂರಾ ವಿರುದ್ಧವಾಗಿ ನಡೆದುಕೊಂಡ ಸಂಗತಿಯನ್ನು ಕೇಳಲು ತುಂಬಾ ವಿಷಾದಿಸುತ್ತೇನೆ

ದೇಶದ ಏಳಿಗೆಯಲ್ಲಿ ಮುಂದಾಳಾಗಿ ಲೋಕಸಂಗ್ರಹಾರ್ಥವಾಗಿ ಹೇರಾಡುವುದೇ ಈಗಿನ ಕಾಲದ ಸನ್ಯಾಸಿಯ ಮುಖ್ಯ ಲಕ್ಷಣವಾಗಿದೆ. ನಿಜವಾದ ಸನ್ಯಾಸತ್ವವು ಮಾಡುವ ಆಲೋಚನೆಯು ಹ್ಯಾಗೋ ಹಾಗೇನೇ ಆಡುವ ಮಾತಿನಲ್ಲಿಯೂ, ಮಾಡುವ ಕೃತ್ಯದಲ್ಲಿಯೂ ವ್ಯತ್ಯಾಸವಿಲ್ಲದಂತೆ ನಡೆಕೊಳ್ಳುವುದರಲ್ಲಿ ಇದೆಯೋ ಅಲ್ಲದೆ ಮನೋಭಿಪ್ರಾಯಗಳು ಒಂದಕ್ಕೊಂದು ವಿರುದ್ಧವಾದಂಥ ಸಂದರ್ಭಗಳಲ್ಲಿಲ್ಲ. ಯಾರ ಹೃದಯದಲ್ಲಿ ಸಂಪೂರ್ಣ ವೈರಾಗ್ಯವೂ ಹಾಗೂ ಫಲಾಪೇಕ್ಷೆ ಇಲ್ಲದ ಆಚರಣೆಯೂ ನೆಲೆಗೊಂಡಿರುವುದೋ ಅವರೇ ಸನ್ಯಾಸವನ್ನು ಕೈಗೊಂಡಿರುವುದಕ್ಕೆ ಅರ್ಹರು. ಈಡು ಬಟ್ಟೆ ಹಸುರು ಮಾತ್ರಕ್ಕೆ ಕೈಗೊಂಡಿರುವ ಸನ್ಯಾಸತ್ವದಿಂದ ಲೋಕಕ್ಕೆ ಯಾವ ಪ್ರಯೋಜನವೂ ಉಂಟಾಗಲಾರದು. [illegible] ಮೇಲೆ ಹುಲಿ ಚರ್ಮವನ್ನು ಹೊದಿಸಿದರೆ ಅದು ಹುಲಿಯಾಗಬಲ್ಲುದೇ? ನಾಲಿಗೆಯಿಂದ ಪುಸ್ತಕಗಳನ್ನು ಸಂಗ್ರಹಿಸಿಟ್ಟ ಮಾತ್ರಕ್ಕೆ ಜ್ಞಾನಿಯೆನಿಸುವನೇ? ಓದಿದನ್ನು ಮಾರ್ಗದರ್ಶಕೊಟ್ಟ ಮಾತ್ರಕ್ಕೆ ದೊಡ್ಡ ಆಚಾರಶೀಲನಾಗುವನೇ? ಹೀಗಿರೋಣ ಮನಸಾ, ವಾಚಾ, ಕರ್ಮಣಾ ಏಕಪ್ರಕಾರವಾಗಿ ಯಾರಿಗೆ ನಡೆಕೊಳ್ಳುವ ಶಕ್ತಿಯಿರುವುದೋ ಅವರೇ ಸನ್ಯಾಸಿಗಳು—ಅವರೇ ಜ್ಞಾನಿಗಳು—ಅವರೇ ಮಹಾತ್ಮರು—ಅವರೇ ಧನ್ಯರು

ಲೋಕಪ್ರಸಿದ್ಧರಾದ ಶ್ರೀಮದ್ರಾಮಕೃಷ್ಣ ಪರಮಹಂಸರವರೂ ಮತ್ತು ಅವರ ಪರಮ ಶಿಷ್ಯರಾದ ಸ್ವಾಮಿ ವಿವೇಕಾನಂದರವರೂ ರಾಮಕೃಷ್ಣ ಮಠದ ನಾಮ ಶಿರೋಮಣಿಗಳಲ್ಲಿ ಒಬ್ಬರಾದ ಸ್ವಾಮಿ ರಾಮಪ್ರಸಾದರವರಿಗೆ ತಾವು ಕೈಕೊಂಡಿರುವ ಕೆಲ್ಸಕಾರ್ಯಗಳಲ್ಲಿ ಮನಸಾ, ವಾಚಾ, ಕರ್ಮಣಾ ಒಂದಾಗಿ ನಡಕೊಳ್ಳುವಂತೆ ಸದ್ಬುದ್ಧಿಯನ್ನೂ, ಶಕ್ತಿಯನ್ನೂ, ಆಯುರಾರೋಗ್ಯ ಸಂಪತ್ತನ್ನೂ ಕೊಟ್ಟು ಕಾಪಾಡಲೆಂದು ನಾನು ಈ ಮೂಲಕ ಪ್ರಾರ್ಥಿಸುವವನಾಗಿದ್ದೇನೆ.

"ಕಾಳಿದಾಸ."

National Swords and Silver Belts (Thodang) For "Scotland of India."

ಸಂಪ್ರದಾಯಕವಾಗಿ ಧರಿಸಲ್ಪಟ್ಟ 'ಒಬ್ಬ ಕರ್ನಲ್ ಯೂನಿಫಾರಂ' ರೀತಿ ಉಡುಗೆಗಳನ್ನು ಒದಗಿಸುತ್ತ ಆರಿಸಲ್ಪಟ್ಟ "ಒಬ್ಬ ಅಪ್ಪನೆಂಟ್' ಯೂನಿಫಾರಂ' ಕಡೆ ಯಾಕ ವಿಸ್ಮಯಗೊಳ್ಳುತ್ತೀರಿ? ನವಿಲು ಗರಿಯಿಂದ ಶೃಂಗರಿಸಲ್ಪಟ್ಟ ಕುಲಗ ನವಿಲಾಗುವದೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ಮತ್ತು ಅದರ ಕತ್ತಿ. ಸೊಂಟದ ಒಡಿಯಲ್ಲ ಚಿನ್ನದ ಹಿಡಿಯ ಪೀಚೆಕತ್ತಿ. ಇವುಗಳಿಗೆ ತಕ್ಕ ಬೆಳ್ಳಿಯ ಸಂಪಣಿ (ಉಮ್ಮತ್ತ) ಲೇಸ್ಟ್ ಮತ್ತು ವಲಿಪಟ್ಟಿ. ಇದಲ್ಲವೇ ನಿಮ್ಮ ಗೌರವ? ಕಾನರಾ, ರಕ್ಸಾರ, ಬಿರ್ನ ಮೊದಲಾದವರೇ ನಮಗೆ ವಿಷಯ ಏನನ್ನುವರು. ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿಮ್ಮ ಪಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರವ ಹಚ್ಚಿನ ವಿದ್ಯಮಾನಕ್ಕ ನಮಗ ಒರೆದು ತಿಳಿದ ಕೊಳ್ಳಿ

Commercial Store,
Murnad, Coorg

12—1

ಡಿ. ಬಿ ಬಿ ಯಲ್. ಕೋವಿಗಳು ರೂ. 75 ರಿಂದ ರೂ. 450/
ಯಸ್ ಬಿ ಬಿ. ಯಲ್. ಕೋವಿಗಳು ರೂ 35 ರಿಂದ ರೂ 250/
ಯಸ್. ಬಿ. ಯಮ್ ಯಲ್ ಕೋವಿಗಳು ರೂ. 35 ರಿಂದ 60/.
ರಿವಾಲ್ವರ್‌ಗಳು ರೂ. 40/ರಿಂದ ರೂ 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟಗ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ತಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯನ್. ವಿ. ರಾಮಾನುಜಂ ಚೆಟ್ಟಿ
ಅಂಡ್ ಕಂಪೆನಿ.
ದ. ಹಿಂದೂಸ್ಥಾನದ ಬಹು ಹಳೆಯ ಕಂಪೆನಿ,
24—16 **12. ಬ್ರಾಡ್ವೆ, ಮದ್ರಾಸ್**
(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ)

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L Rifles	Rs	120	to Rs	2750
S B B L		35	to	950.
D B B L Guns	"	50	to	1350
S B B L "		35	to	275
D B M L "	"	45	to	135
S B M L "	"	30	to "	80
B L Revolvers	"	35	to "	350
Automatic Pistols	"	30	to "	150

Brilliant Search Light Lamp For Shooting, Camping, Fishing and All such Other Night Sports and work Rs 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24—24

EMPIRE OF INDIA
LIFE ASSURANCE COMPANY, LIMITED.

ESTD. 1897.

VALUATION RESULTS

FOR THE FIVE YEARS ENDING 28TH FEBRUARY 1927.

SURPLUS—RS. 37,66,689.

A REVERSIONARY BONUS DISTRIBUTION OF

RS 15 PER ANNUM PER Rs. 1,000 ASSURED ON WHOLE LIFE ASSURANCES AND **RS. 12** PER ANNUM PER Rs 1,000 ASSURED ON ENDOWMENT ASSURANCES

HAS BEEN DECLARED.

HEAD OFFICE.
Empire of India Life Building,
BOMBAY.

BRANCH OFFICE.
Commercial Street,
BANGALORE.

24—12.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮೂಬಂದ ಠೇವಣಾತಿ	—	1,02,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಸಹಾಯಕ್ಕಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1-7-1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ವೀರಾಜಪೇಟೆ—ಖಾದಿ ಭಂಡಾರದಲ್ಲಿ,—ಮೆ. ಪಾರುವಂಗಡ ಅಚ್ಚಯ್ಯನವರು
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚೆಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೀಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವಾ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಏಡ್ವರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address.—"SHOOTER" Bombay.

(52—29) 'Please write for our Catalogue 1928—1929.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಬಿಟ್ಟು ಬರುವ ಜ್ವರ 3-4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0, 3ಕ್ಕೆ ರೂ 4-0-0, 6ಕ್ಕೆ ರೂ 7-8-0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಹಸಿಯಾಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ, ಮೂತ್ರನಾಳದಲ್ಲಿ ಉರಿ, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಸ್ವಪ್ನದಲ್ಲಿ ಧಾತು ಜಾರಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲು ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಚಿಕ್ಕ ಬಾಟ್ಲು 1, 3 6ಕ್ಕೆ ರೂ 1-[illegible], 3-8-0, 6-12-0

ರೋಮನಾಶಿನಿ:—ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗೆ ರೂ 1, 1 ಡಜನಿಗೆ 3-8-0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣು ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2-10-0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-[illegible]

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—25 9. ಮಂಗಳೂರು.

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickapet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ. 52—43

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ 59,08,000.
	1925	ರೂ.	2,96,42,000	
	1926	ರೂ	3,91,39,000	ಜಾಸ್ತಿ ರೂ 94,97,000

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ. 7,38,80,000ಗೆ ಹೆಚ್ಚಿರುತ್ತದೆ.
ಪ್ರೀಮಿಯಂ ವರಮಾನವು ವರ್ಷಕ್ಕೆ ರೂ 1,05,30,000ಗೆ ಏರಿರುತ್ತದೆ.

'ಓರಿಯಂಟಲ್‌ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೇ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಡ್ವಿನ್ ಜೋನ್ಸ್, ಎಫ್. ಎಫ್. ಎ, ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶವಿಲ್ಲದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52—50 ಎಲ್. ಆರ್. ಕೃಷ್ಣಸ್ವಾಮಯ್ಯರ್, ಬ್ರಾಂಚ್ ಸೆಕ್ರೆಟರಿ.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಫ್ಯೂನರಲ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್. ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಎಲ್ಲವೂ ಈ ದೇಶಸ್ಥರಿಗೆ ಕೂಡಿರಬೇಕೆಂಬ ಠರಾವು ಜನವರಿ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

I ಅನಾಥರಾದ ಅಂಗಹೀನರಿಗೆ ಈ ಸಂಘದಿಂದ ಬೇಗನೆ ಅನ್ನಸಹಾಯ ಮಾಡಲು ಏರ್ಪಾಡಾಗುವುದು.
II 1928ನೇ ಇಸವಿ ಮಾರ್ಚಿ ತಿಂಗಳು 31ಕ್ಕೆ ಡ್ರಾಯಿಂಗ್ ನಡೆಯುತ್ತದೆ.

(1) ಇದರ ಮೂಲಕ ಬಡ್ಡಿ ಇಲ್ಲದೆ ಸಾಲ ಕೊಡಲಾಗುವುದು.
(2) ಸುಲಭವಾದ ದೀರ್ಘ ಕಂತುಗಳು ದೊರೆಯುವವು.
(3) ಸರ್ವರೂ ಆ ತಾರೀಖಿನೊಳಗೆ ಡ್ರಾಯಿಂಗಿಗೆ ಅರ್ಹತೆ ಪಡೆಯಬೇಕಾಗಿದೆ.
(4) ದೇಶ ಸೇವೆಗೂ, ಹಿತ ಸೇವೆಗೂ ಒಳ್ಳೆಯ ಅನುಕೂಲ.

ಟಿ. ಎ. ಕುಪ್ಪುಸ್ವಾಮಿ ಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
52—7 ಮಡಿಕೇರಿ.

Printed & published by P. I Belliappa at "Kodagu Press, Mercara for "Kodagu" Ltd.

If not delivered please return to "KODAGU" OFFICE, MERCARA.

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಪು ೭] ಮಡಿಕೇರಿ, ... ಶುಕ್ರವಾರ [ಸಂಚಿಕೆ ೪೩]

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52—10 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423.
TRIPLICANE, MADRAS

Catalogue Free
to Boanfide Enquirers

Rose Water Sprinkler.



Nose-screws. Claver. Drops. Thodu Brooch

Chased Silver Mirror.

Manufacture of
HIGH CLASS
GEMSET JEWELS
a speciality.

The special features of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices

GOLD
or
SILVERWARE
of all descriptions
neatly executed



52—30



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—6

ಕರ್ನಾಟಕ ಬ್ರದರ್ಸ್
ದುಬಾಷ ಲೇನ್.
12—1
ಗಿರಗಾಂವ. ಮುಂಬಾಯಿ.

ಕೊಡಗು.

ಸನ್ ೧೯೩೪ನೇ ಇಸವಿ ಏಪ್ರಿಲ್
ತಾ. ೬ನೇ ಶುಕ್ರವಾರ.

ರಾಷ್ಟ್ರ ಭಾಷೆ.

ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಕ್ಕಬೇಕಾದರೆ ನಡಿಸಬೇಕಾದ ಹೋರಾಟದಲ್ಲೂ, ಸ್ವರಾಜ್ಯ ಸಿಕ್ಕಿದ ಮೇಲೆ ನಡಿಸಬೇಕಾದ ಆಡಳಿತದಲ್ಲೂ ಅಖಿಲ ಭಾರತ ದೇಶಕ್ಕೆಲ್ಲಾ ಒಂದೇ ಭಾಷೆಯ ಉಪಯೋಗವು ಅವಶ್ಯವಿದೆಯೆಂತ ಎಲ್ಲರೂ ಒಪ್ಪುತ್ತಾರೆ. ಹಿಂದುಸ್ಥಾನದ ಎಲ್ಲಾ ಭಾಗದವರೂ ಒಂದೇ ತರದ ಪರಾಧೀನತೆಯಲ್ಲಿ ಇರುವುದರಿಂದಲೂ, ಸ್ವರಾಜ್ಯ ಸಿಕ್ಕಿದ ಮೇಲೂ ಹಿಂದುಸ್ಥಾನದ ಎಲ್ಲಾ ಭಾಗಗಳನ್ನು ಒಳಕೊಂಡ ಸಂಯುಕ್ತ ಹಿಂದುಸ್ಥಾನ ಸರಕಾರವಿರಲೇ ಬೇಕಾಗಿರುವದರಿಂದಲೂ ಒಟ್ಟು ಹಿಂದುಸ್ಥಾನದವರು ಅನ್ಯೋನ್ಯತೆಯಿಂದಲೇ ಕೆಲಸ ಮಾಡಬೇಕಾಗಿದೆ. ಕಲೆತು ಕೆಲಸ ಮಾಡಬೇಕಾದರೆ ಒಬ್ಬರ ಮಾತು ಒಬ್ಬರಿಗೆ ತಿಳಿಯಲೇ ಬೇಕಾಗಿದೆ. ಅಂಥಾ ಭಾಷೆಯು ದೇಶೀಯ ಭಾಷೆಗಳಲ್ಲೊಂದು ಆಗಿರಬೇಕೆಂಬ ದೇಶದ ಮುಂದಾಳುಗಳ ಅಭಿಪ್ರಾಯವನ್ನು ನಾವು ಆಗೀಕರಿಸುತ್ತೇವೆ.

ಯಾವ ದೇಶದಲ್ಲೇ ಆಗಲಿ ರಾಷ್ಟ್ರೀಯತ್ವದ ಜಾಗ್ರತಿಗೆ ಮಾತೃಭಾಷೆಯ ಮತ್ತು ರಾಷ್ಟ್ರಭಾಷೆಯ ಪ್ರೇಮವು ಅತಿ ಅವಶ್ಯವಾಗಿದೆ. ತಾಯಿಯ ಹಾಲೂ, ತಾಯಿಯ ಪ್ರೇಮವೂ ಮಗುವಿನ ಬೆಳವಣಿಗೆಗೆ ಅವಶ್ಯವಿರುವಂತೆಯೇ ಜನಾಂಗದ ಬೆಳವಣಿಗೆಗೆ ಮಾತೃಭಾಷೆಯ ಉಪಯೋಗವೂ, ಅಭಿವೃದ್ಧಿಯೂ ಅವಶ್ಯವಿದೆ. ಮನುಷ್ಯನ ಅಭಿಪ್ರಾಯವನ್ನು ತನ್ನ ಮಾತೃಭಾಷೆಯಲ್ಲಿ ಹೇಳಲು ಸಾಧ್ಯವಾಗುವಷ್ಟು ಬೇರೆ ಭಾಷೆಯಲ್ಲಿ ಹೇಳಲು ಸಾಧ್ಯವಾಗುವದಿಲ್ಲ. ಅಲ್ಲದೆ ತನ್ನ ಮನೋಭಾವವನ್ನು ಬೇರೆಯವರಿಗೆ ತಿಳಿಸಲು ಅನ್ಯ ಭಾಷೆಯು ಅವಶ್ಯವೆಂಬ ಅಭಿಪ್ರಾಯವು ಜನರಲ್ಲಿ ಬೇರೂರಿದರೆ ಸ್ವಾಭಿಮಾನವೂ, ಆತ್ಮ ಗೌರವವೂ ಕಡಿಮೆಯಾಗಿ ರಾಷ್ಟ್ರೀಯ ಬುದ್ಧಿಯೇ ನಾಶವಾಗುತ್ತದೆ. ಈ ಕಾರಣಗಳಿಂದಲೇ ಪ್ರಾಂತೀಕ ಆಡಳಿತದ ವ್ಯವಹಾರವೂ, ಉಚ್ಚ ವಿದ್ಯೆಯೂ ಮಾತೃಭಾಷೆಯಲ್ಲೇ ಆಗಬೇಕೆಂತ ವಾದಿಸುವದಾಗಿದೆ.

ಮೇಲೆ ಸೂಚಿಸಿದ ವಾದದಿಂದ ಜನರಿಗೆ ಮಾತೃಭಾಷೆಯ ವಿನಹ ಬೇರೆ ಭಾಷೆಯ ಉಪಯೋಗವು ಕೇಡಕೆಂತ ಭಾವನೆಯು ಹುಟ್ಟಬಹುದು. ನಾವು ಮೊದಲೇ ಹೇಳಿದಂತೆ ಅಖಿಲ ಹಿಂದುಸ್ಥಾನದ ಜನರೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಾದ ಆವಶ್ಯಕತೆಯಿರುವದರಿಂದಲೂ, ಒಟ್ಟು ಹಿಂದೂಸ್ಥಾನದಲ್ಲೆಲ್ಲಾ ಒಂದೇ ಮಾತೃಭಾಷೆಯಿಲ್ಲದ್ದರಿಂದಲೂ ಒಂದು ರಾಷ್ಟ್ರಭಾಷೆಯ ಆವಶ್ಯಕತೆ ಇದೆ. ಯೂರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಎಷ್ಟೋ ಸ್ವತಂತ್ರ ರಾಜ್ಯಗಳೂ ಭಾಷೆಗಳೂ ಇದ್ದರೂ ರಾಷ್ಟ್ರಗಳೊಳಗೆ ಅನ್ಯೋನ್ಯ ವ್ಯವಹಾರ ನಡಿಸಲು ಫ್ರೆಂಚ್ ಭಾಷೆಯನ್ನು ಅಂತರರಾಷ್ಟ್ರೀಯ ಭಾಷೆಯಾಗಿ ಇಟ್ಟುಕೊಂಡಿದ್ದಾರೆ. ಹೀಗೆಯೇ ಸಂಯುಕ್ತ ಹಿಂದುಸ್ಥಾನದ ಎಲ್ಲಾ ಭಾಗಗಳ ನಿವಾಸಿಗಳಿಗೆ ಗೊತ್ತಿರುವ ಒಂದು ಭಾಷೆ ಇರಬೇಕು.

ಹಿಂದುಸ್ಥಾನಕ್ಕೆಲ್ಲಾ ಒಂದೇ ಸಂಸ್ಕೃತಿ ಇರುವದೆಂತ ಎಲ್ಲರೂ ಒಪ್ಪತಕ್ಕ ವಿಷಯವಾಗಿದೆ. ರಾಜಕೀಯ ಕಾರ್ಯಗಳಲ್ಲಿ ಮಾತ್ರವಲ್ಲ, ಧಾರ್ಮಿಕ ಕಾರ್ಯದಲ್ಲೂ ಸಹ ಹಿಂದೂಸ್ಥಾನದ ಎಲ್ಲಾ ಭಾಗದವರೂ ಸಂಪರ್ಕಕ್ಕೆ ಬರುತಲಿದ್ದಾರೆ. ಕೊಡಗಿನಿಂದ ಪ್ರತಿ ವರ್ಷವೂ ಕೆಲವರಾದರೂ ಉತ್ತರ ಹಿಂದುಸ್ಥಾನದ ಯಾತ್ರಾಸ್ಥಳಗಳಿಗೆ ಹೋಗುತ್ತಿದ್ದಾರೆ. ಉತ್ತರ ಹಿಂದುಸ್ಥಾನದ ಅನೇಕರು ನಮ್ಮ ದೇಶದ ಕುಲದೇವತೆಯಾದ ಶ್ರೀ ಕಾವೇರಿಯ ಉದ್ಭವಸ್ಥಾನಕ್ಕೆ ಬರುತ್ತಿರುತ್ತಾರೆ. ಇಂಥಾ ಪ್ರಯಾಣಿಕರಿಗೆಲ್ಲಾ ತಿಳಿದ ಒಂದು ಭಾಷೆಯ ಆವಶ್ಯಕತೆಯು ಸ್ಪಷ್ಟವಾಗಿಯೇ ಇದೆ. ಹಿಮಾಲಯದಿಂದ ಕನ್ಯಾಕುಮಾರಿ ವರೆಗೂ ಸಂಸ್ಕೃತ ಒಂದೇ ಹಿಂದುಸ್ಥಾನದ ಸಂಸ್ಕೃತಿಯ ಭಾಷೆಯಾಗಿ ಉಪಯೋಗಿಸಲ್ಪಡುತ್ತಿದೆ. ಆದರೆ ಸಂಸ್ಕೃತ ಭಾಷೆಯು ಜನರೊಳಗೆ ಮಾತಾಡುವ ಭಾಷೆಯಾಗಿಲ್ಲ. ಆದುದರಿಂದ ರೂಢಿಯಲ್ಲಿರುವ ಜೀವನದಲ್ಲಿರುವ ಭಾಷೆಯೊಂದು ಹಿಂದೂ ಧರ್ಮದ ಪ್ರಚಾರಕ್ಕೂ ಅವಶ್ಯವಿದೆಯೆಂತಾಯಿತು.

ಇಂಥಾ ಭಾಷೆಯು ಹಿಂದಿಯೇ ಎಂಬುದನ್ನು ತೋರಿಸಬೇಕಾದರೆ ಅನೇಕ ಶತಮಾನಗಳ ವರೆಗೆ ಹಿಂದುಸ್ಥಾನದಲ್ಲಿ ಆಧಿಪತ್ಯ ನಡಸಿದ ಮುಸಲ್ಮಾನರ ಆಡಳಿತದಲ್ಲಿ ಹಿಂದುಸ್ಥಾನದಲ್ಲೆಲ್ಲಾ ರೂಢಿಗೆ ಬಂದ ಒಂದೇ ಭಾಷೆಯು ಹಿಂದುಸ್ಥಾನಿಯಾಗಿದೆ. ಆಗ ಉಪಯೋಗದಲ್ಲಿದ್ದ ಭಾಷೆಯ ಎಷ್ಟೋ ಶಬ್ದಗಳು ಈಗಿನ ರೂಢಿಯಲ್ಲಿರುವ ದೇಶೀಯ ಭಾಷೆಗಳಲ್ಲಿ ಸೇರಿಕೊಂಡಿವೆ. ಪೇಟೆ ಪಟ್ಟಣಗಳಲ್ಲಿ ಹಿಂದುಸ್ಥಾನಿ ಭಾಷೆಯು ಅನೇಕರಿಗೆ ತಿಳಿದಿರುತ್ತದೆ. ಮುಸಲ್ಮಾನರಿಗೂ, ಹಿಂದುಗಳಿಗೂ ಮಾತುಕತೆ ನಡೆಯಬೇಕಾದರೆ ಹಿಂದುಸ್ಥಾನಿ ಭಾಷೆಯು ಮೂಲಕವಾಗಿದೆ. ಹಿಂದುಸ್ಥಾನಿಯು ಭಾಷೆಯೆಂದರೆ ಮುಸಲ್ಮಾನರ ಭಾಷೆಯೆಂತ ಅನೇಕರು ತಪ್ಪು ತಿಳುವಳಿಕೆ ಮಾಡಿಕೊಂಡಿರುತ್ತಾರೆ. ಉತ್ತರ ಹಿಂದೂಸ್ಥಾನದಲ್ಲಿ ಹಿಂದುಗಳೆಲ್ಲಾ ಹಿಂದುಸ್ಥಾನಿಯನ್ನೇ ಮಾತಾಡುತ್ತಾರೆ. ಆದರೆ ಹಿಂದುಗಳ ಹಿಂದುಸ್ಥಾನಿಗೂ, ಮುಸಲ್ಮಾನರ ಹಿಂದುಸ್ಥಾನಿಗೂ ತುಂಬಾ ವ್ಯತ್ಯಾಸವಿದೆಯೆಂತ ನಮಗೆ ಗೊತ್ತಿದೆ. ಆದರೂ ಹಿಂದೂಸ್ಥಾನಿಯು ರಾಷ್ಟ್ರಭಾಷೆಯಾದರೆ ಬಹು ಶೀಘ್ರದಲ್ಲಿ ಈ ವ್ಯತ್ಯಾಸಗಳೆಲ್ಲಾ ಹೊರಟು ಹೋದಾವು.

ಉತ್ತರ ಹಿಂದುಸ್ಥಾನದಲ್ಲಿ ಹಿಂದುಗಳು ಮಾತಾಡುವ ಭಾಷೆಗೆ ಹಿಂದೀಯೆಂಬ ಹೆಸರು. ಈ ಹಿಂದೀ ಭಾಷೆಯ ಅಕ್ಷರವು ಸಂಸ್ಕೃತ ಅಕ್ಷರವೇ ಆಗಿದೆ. ಉತ್ತರ ಹಿಂದುಸ್ಥಾನದಲ್ಲಿ ಹಿಂದೀಭಾಷೆಯನ್ನಾಡದ ಇತರರ ಭಾಷೆಗಳಿಗೂ ಅಕ್ಷರಗಳು ಸಂಸ್ಕೃತದವೇ ಆಗಿವೆ. ಅಥವಾ ಸಂಸ್ಕೃತ ಅಕ್ಷರಗಳಿಗೆ ಸಂಬಂಧ ಪಡುವವು ಆಗಿವೆ. ಆದ್ದರಿಂದ ಅಕ್ಷರಗಳ ಉಪಯೋಗದಲ್ಲಿ ಹಿಂದೀಯಷ್ಟು ಅನುಕೂಲದ್ದು ಇನ್ನು ಯಾವದೂ ಇಲ್ಲ. ದಕ್ಷಿಣ ಹಿಂದುಸ್ಥಾನದವರಿಗೂ, ಮುಸಲ್ಮಾನರಿಗೂ ಹಿಂದೀ ಅಕ್ಷರ ಕಲಿಯಲು ಸ್ವಲ್ಪ ಪ್ರಯತ್ನ ಬೇಕಾಗಿದೆಯಷ್ಟೆ.

ಹಿಂದುಸ್ಥಾನದಲ್ಲಿ ದೇಶೀಯ ಭಾಷೆಗಳನ್ನು ಆಡುವವರಲ್ಲಿ ಹಿಂದೀ ಭಾಷೆಯನ್ನು ಆಡುವವರ ಸಂಖ್ಯೆಯಷ್ಟು ಬೇರೆ ಯಾವ ಭಾಷೆಯನ್ನಾಡುವವರದೂ ಇಲ್ಲ. 9,81,15000 ಜನರು ಹಿಂದೀಯನ್ನಾಡುತ್ತಾರೆ; ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಸುಮಾರು 3ನೇ ಒಂದು ಭಾಗ. ಎರಡನೇ ಹೆಚ್ಚಿನದು ಬಂಗಾಳಿ. ಇದನ್ನು ಆಡುವವರ ಸಂಖ್ಯೆ ಸುಮಾರು 5 ಕೋಟಿ. ಕನ್ನಡವನ್ನಾಡುವವರು 1,03,74,000. ಇದರಿಂದ ಹಿಂದೀಯನ್ನೇ ರಾಷ್ಟ್ರಭಾಷೆಯನ್ನಾಗಿ ಮಾಡುವದು ಸುಲಭವೆಂತ ಗೊತ್ತಾಗುತ್ತದೆ.

ಹಿಂದೀ ಭಾಷೆಯಲ್ಲಿ ತುಂಬಾ ಸಂಸ್ಕೃತ ಶಬ್ದಗಳ ಉಪಯೋಗವಿದೆ. ಎಲ್ಲಾ ದೇಶೀಯ ಭಾಷೆಗಳಲ್ಲೂ ಸಂಸ್ಕೃತ ಶಬ್ದಗಳ ಉಪಯೋಗವು ಧಾರಾಳವಾಗಿದೆ. ಹಿಂದೀಭಾಷೆಯ ವಾಕ್ಯರಚನೆಯ ಕ್ರಮವನ್ನು ತಿಳಿದುಕೊಂಡರೆ ಹಿಂದೀ ಭಾಷೆಯನ್ನು ಅರ್ಥಮಾಡಿಕೊಳ್ಳುವದು ಕಷ್ಟವಿಲ್ಲ. ಪ್ರಪಂಚದಲ್ಲಿ ಈಗ ಇರುವ ನಾಗರೀಕತೆಯ ವಿಷಯಗಳನ್ನೆಲ್ಲಾ ವಿವರಿಸಲು ದೇಶೀಯ ಭಾಷೆಗಳಲ್ಲಿ ಉಚಿತ ಶಬ್ದಗಳಿಲ್ಲ. ಅಂಥಾ ಮಾತುಗಳಿಗೆ ಹೊಸ ಶಬ್ದಗಳನ್ನು ಉಪಯೋಗಿಸಲು ಪ್ರಾರಂಭಿಸುವಾಗ ಹಿಂದೀ ಭಾಷೆಯಲ್ಲಿ ಉಪಯೋಗಕ್ಕೆ ತರುವ ಶಬ್ದಗಳನ್ನೇ ಆರಿಸಿಕೊಂಡರೆ ರಾಷ್ಟ್ರಭಾಷೆಯನ್ನು ಅರ್ಥ ಮಾಡಿಕೊಳ್ಳುವದು ಸುಲಭವಾಗುತ್ತದೆ.

ಇಂಗ್ಲಿಷ್ ಭಾಷೆಯು ಈಗಲೇ ರಾಷ್ಟ್ರಭಾಷೆಯಾಗಿದೆ. ಇದನ್ನು ಬಿಟ್ಟು ಇನ್ನೊಂದು ಹೊಸ ರಾಷ್ಟ್ರಭಾಷೆ ಕಲಿಯುವದು ಯಾತಕ್ಕೆಂತ ಕೆಲವರು ಕೇಳಬಹುದು. ಇಂಗ್ಲಿಷ್ ತಿಳಿದವರ ಸಂಖ್ಯೆಯನ್ನು ಹಿಂದೀ ತಿಳಿದವರ ಸಂಖ್ಯೆಯೊಂದಿಗೆ ಹೋಲಿಸಿದರೆ ಈ ವಾದದಲ್ಲಿ ನ್ಯಾಯವಿಲ್ಲವೆಂತ ಗೊತ್ತಾಗುತ್ತದೆ. ಹಿಂದೀ ಅಥವಾ ಹಿಂದುಸ್ಥಾನಿ ತಿಳಿದ ಜನರ ಸಂಖ್ಯೆ ತುಂಬಾ ಹೆಚ್ಚಿದೆ. ಇಂಗ್ಲಿಷ್ ಭಾಷೆಯ ಅಭ್ಯಾಸವು ಅನುಕೂಲಸ್ಥರಿಗೆ ಮಾತ್ರ ಸಾಧ್ಯವಿದೆ. ಹಿಂದುಸ್ಥಾನಿ ಭಾಷೆಯು ಈಗಾಗಲೇ ಪಟ್ಟಣಗಳಲ್ಲಿ ವಾಸ ಇರುವ ತುಂಬಾ ಗರೀಬರಿಗೆ ಗೊತ್ತಿದೆ. ಅನುಕೂಲಸ್ಥರಿಗೆ ಹಿಂದುಸ್ಥಾನಿಯು ಸಾಧಾರಣವಾಗಿ ತಿಳಿದಿರುತ್ತದೆ. ಆದ್ದರಿಂದ ಇಂಗ್ಲಿಷಿಗಿಂತ ಹಿಂದುಸ್ಥಾನಿಯನ್ನೇ ರಾಷ್ಟ್ರಭಾಷೆಯಾಗಿ ಮಾಡಿಕೊಳ್ಳುವದು ಸುಲಭ. ಇಂಗ್ಲಿಷ್ ಓದು ಬರಹ ತಿಳಿಯದವರ ಮುಂದೆ ಇಂಗ್ಲಿಷ್ ಮಾತನಾಡಿದರೆ ಅವರಿಗೆ ಏನೂ ತಿಳಿಯುವದಿಲ್ಲ. ಹಿಂದೀ ಭಾಷೆಯನ್ನು ಮಾತಾಡಿದರೆ ಕೆಲವು ಮಟ್ಟಿಗಾದರೂ ತಿಳಿಯುತ್ತದೆ ಯಾಕೆಂದರೆ—ನಾವು ಮೊದಲೇ ತಿಳಿಸಿದಂತೆ ಹಿಂದಿಯಲ್ಲಿ ಬೇರೆ ದೇಶೀಯ ಭಾಷೆಗಳಲ್ಲಿ ಉಪಯೋಗದಲ್ಲಿರುವ ತುಂಬಾ ಸಂಸ್ಕೃತ ಶಬ್ದಗಳಿವೆ.

ಹಿಂದೀ ಭಾಷೆಯ ಅಭ್ಯಾಸದಿಂದ ನಮ್ಮ ಸಂಸ್ಕೃತಿ ನಾಶವಾಗುವ ಸಂಭವವಿಲ್ಲ. ಅದರ ಬದಲು ನಮ್ಮ ಸಂಸ್ಕೃತಿಯು ಬೆಳವಣಿಗೆಯಾಗುವದರಲ್ಲಿ ಸಂಶಯವಿಲ್ಲ. ಇಂಗ್ಲಿಷ್ ಭಾಷೆಯ ಅಭ್ಯಾಸದಿಂದ ಇಂಗ್ಲಿಷರ ಅನುಕರಣವನ್ನು ನಮ್ಮ ನಡೆನುಡಿಗಳಲ್ಲಿಯೂ ಜಾರಿಗೆ ತಂದು ನಮ್ಮ ಸಂಸ್ಕೃತಿಯೇ ಮರೆತು ಹೋಗುವ ಸಂಭವವಿದೆ. ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಸ ಕೊಡಲು ಪ್ರಾರಂಭ ಮಾಡಿದವರಾದ ಲಾರ್ಡ್ ಮೆಕಾಲೆಯವರು ಇಂಗ್ಲಿಷ್ ವಿದ್ಯಾಭ್ಯಾಸದಿಂದ ಹಿಂದುಗಳಿಗೆ ಹಿಂದೂ ಧರ್ಮದಲ್ಲಿ ನಂಬಿಕೆ ಕಡಿಮೆಯಾಗುತ್ತದೆಯೆಂತ ಹೇಳಿರುತ್ತಾರೆ.

ದೇಶೀಯರ ಅನುಭವದಿಂದ ಇದು ಕೆಲವು ಮಟ್ಟಿಗಾದರೂ ನಿಜವೆಂತ ತಿಳಿದು ಬಂದಿದೆ. ಇಂಗ್ಲಿಷ್ ತಿಳಿದವರಿಗೂ ಮನೆಯಲ್ಲಿ ಮತ್ತು ಊರಲ್ಲಿ ಇಂಗ್ಲಿಷ್ ತಿಳಿಯದವರಿಗೂ ಸಂಪರ್ಕ ಕಡಿಮೆಯಾಗುತ್ತದೆ. ಇಂಗ್ಲಿಷ್ ಓದಿದವರಿಗೆ ಮೇಲ್ಪಂಕ್ತಿಗಳೆಲ್ಲಾ 6,000 ಮೈಲು ದೂರದ ಆಚೆ ಇರುವವರಿಂದ ಸಿಕ್ಕುತ್ತದೆ. ರಾಷ್ಟ್ರವು ನಾಶವಾಗಬಾರದೆಂತಾದರೆ ದೇಶೀಯರು ಪೂರ್ವಜರ ಮೇಲೆ ಗೌರವ, ಸ್ವದೇಶ, ಸ್ವಸಂಸ್ಕೃತಿಯಲ್ಲಿ ಪ್ರೀತಿ ವಿಶ್ವಾಸ ಹುಟ್ಟಾಗಬೇಕು. ಇದು ಸಾಧ್ಯವಾಗಬೇಕಾದರೆ ದೇಶೀಯ ರಾಷ್ಟ್ರಭಾಷೆಯಿಂದಲೇ ಸಾಧ್ಯವಿದೆಯಷ್ಟೆ.

ಉತ್ತರ ಹಿಂದುಸ್ಥಾನದ ಜನರಿಗೂ, ದಕ್ಷಿಣ ಹಿಂದು ... ಸದವರಿಗೂ ಸಮ್ಮಿಳಿತವೇ ಕಡಿಮೆಯಾಗಿ ಹೋಗಿದೆ ... ಷ್ಟ್ರೀಯ ಜಾಗ್ರತಿಯನ್ನು ಕೊಡುವ ಪತ್ರಿಕೆಗಳು ಎಲ್ಲಾ ... ತ್ಯಗಳಲ್ಲಿ ಬೇಕಾದಷ್ಟು ದೊರಕುವದಿಲ್ಲ. ದೊಡ್ಡ ... ಖ್ಯೆಯ ಪ್ರಯೋಜನಕ್ಕಾಗಿ ಪ್ರಕಟವಾಗುತ್ತಿರುವ ... ರಾಷ್ಟ್ರೀಯ ಪತ್ರಿಕೆಗಳನ್ನು ತಿಳಕೊಳ್ಳುವಷ್ಟು ಹಿಂದೀ ... ಯ ಜ್ಞಾನವು ಸಾರ್ವಜನಿಕ ಕೆಲಸಗಾರರಿಗೆ ಅತ್ಯವಶ್ಯ ...

ಚೀಫ್ ಕಮಿಷನರವರ ದರ್ಬಾರು.

ಹೊಸ ಚೀಫ್ ಕಮಿಷನರಾದ ಮಿ. ಎ. ಲ್. ಯಂ ... ಫ್ ಸಿ. ಎ. ಇ., ಐ. ಸಿ. ಎಸ್ ರವರು ರಾಜಭಕ್ತಿಯ ... ತ್ತು ತಮ್ಮ ಉದ್ಯೋಗದ ಪ್ರಮಾಣವನ್ನು ಮಾಡುವ ... ಈ ತಾ. 2ನೇ ಸೋಮವಾರ ಸಾಯಂಕಾಲ 4.15 ಗಂ... ಮಡಿಕೇರಿ ಅರಮನೆಯ ಮುಂದುಗಡೆ ಅಂಗಳದಲ್ಲಿ (ಡೇ... ಪಟ್ಟಿಯಲ್ಲಿ) ಒಂದು ದರ್ಬಾರನ್ನು ನಡಿಸಿದರು. ದರ್ಬಾ... ನಲ್ಲಿ ಸುಮಾರು 270 ಜನರು ಹಾಜರಿದ್ದರು. ಗೇಟಿನಲ್ಲಿ ಮಂತ್ರಣ ಟಿಕೇಟು ತೋರಿಸಿದವರನ್ನು ಮಾತ್ರ ಒಳಗೆ ಬಿ... ರು ಆಮಂತ್ರಣದಲ್ಲಿ ಹೇಳಲ್ಪಟ್ಟಿದ್ದ ಮೇರೆ 4 ಗಂಟೆ... ಒಳಗೆ ಮಹನೀಯರೆಲ್ಲರೂ ತಮ್ಮ ತಮ್ಮ ಆಸನಗಳನ್ನು ಅ... ಕರಿಸಿದ್ದರು.

4½ ಗಂಟೆಗೆ ಸರಿಯಾಗಿ ಚೀಫ್ ಕಮಿಷನರು ಅವರ ಸೆ... ಕ್ರೆಟರಿ ಮತ್ತು ಪರ್ಸನಲ್ ಅಸಿಸ್ಟೆಂಟರ ಸಮೇತ ಅಲ್ಲಿಗೆ ಬಂದರು. ಅವರಿಗೆ ಕಮಿಷನರು ಗಜೆಟೆಡ್ ಉದ್ಯೋಗಸ್ಥರ ಸಮೇತ ಗೇಟಿನಲ್ಲಿ ಸ್ವಾಗತವನ್ನೀಡಿದರು. ಕೂಡಲೆ ಚೀಫ್ ಕಮಿಷನರು ಟೆರಿಟೋರಿಯಲ್ ಪಟಾಲಾಮಿನ 'ಗಾರ್ಡ್ ಆಫ್ ಆನರ್' ನ್ನು ಪರೀಕ್ಷಿಸಿದರು. ಆ ಮೇಲೆ ಅವರು—ಕಮಿಷನರು, ಚೀ. ಕ. ರವರ ಸೆಕ್ರೆಟರಿಯವರು, ಅ. ಕಮಿಷನರು, ಪೊಲೀಸು ಡಿಪ್ಯುಟಿ ಸುಪರಿಂಟೆಂಡೆಂಟರು ಮತ್ತು ಪರ್ಸನಲ್ ಅಸಿಸ್ಟೆಂಟರ ಮೆರವಣಿಗೆಯಿಂದ ದರ್ಬಾರಿಗೆ ಬಂದರು.

ಚೀಫ್ ಕಮಿಷನರು ಒಳಬರುವಾಗ್ಯೆ ಸಭೆಯವರೆಲ್ಲರೂ ಎದ್ದು ನಿಂತು ಅವರಿಗೆ ಮರ್ಯಾದೆಯನ್ನು ತೋರಿಸಿದರು. ಮಧ್ಯದಲ್ಲಿ ಸ್ವಲ್ಪ ಎತ್ತರವಾಗಿ ಏರ್ಪಡಿಸಲ್ಪಟ್ಟಿದ್ದ ಆಸನವನ್ನು ಅವರು ಅಲಂಕರಿಸಿದರು. ಅವರ ಸಮೀಪ ಬಲ ಮತ್ತು ಎಡ ಪಕ್ಕದಲ್ಲಿ ಕಮಿಷನರು ಮತ್ತು ಚೀ. ಕ. ರ ಸೆಕ್ರೆಟರಿಯವರೂ, ಹಿಂದೆ ಪರ್ಸನಲ್ ಅಸಿಸ್ಟೆಂಟರೂ, ಎಡ ಬಲ ಪಾರ್ಶ್ವಗಳ ಮುಂದಿನ ಸಾಲಿನಲ್ಲಿ ಗಜೆಟೆಡ್ ಉದ್ಯೋಗಸ್ಥರೂ, ಹಿಂದಿನ ಸಾಲಿನಲ್ಲಿ ಉದ್ಯೋಗಸ್ಥರಲ್ಲದ ಕೌನ್ಸಿಲ್ ಮೆಂಬರುಗಳೂ, ಚೀ. ಕಮಿಷನರ ಎದುರುಗಡೆಯ ಸ್ವಲ್ಪ ದೂರದಲ್ಲಿ ಮುಂದಿನ ಸಾಲುಗಳಲ್ಲಿ ಟೈಟಲ್‌ದಾರರೂ, ಟೆರಿಟೋರಿಯಲ್ ಪಟಾಲಾಮಿನ ಉದ್ಯೋಗಸ್ಥರೂ, ಮಡಿಕೇರಿ ಮತ್ತು ವೀರರಾಜಪೇಟೆ ಮುನ್ಸಿಪಾಲಿಟಿಯ ಪ್ರೆಸಿಡೆಂಟರುಗಳೂ, ಡಿಸ್ಟ್ರಿಕ್ಟ್ ಬೋರ್ಡಿನ ವೈಸ್ ಪ್ರೆಸಿಡೆಂಟರೂ, ಹಿಂದಿನ ಸಾಲುಗಳಲ್ಲಿ ಬೇರೆ ಮಹನೀಯರೂ, ಚ ಕಮಿಷನರ ಹಿಂದುಗಡೆಯಲ್ಲಿ ಮಹಿಳೆಯರೂ, ಯೂರೋಪಿಯನ್ ಮಹನೀಯರೂ ಕೂತಿದ್ದರು. ಯೂನಿಫಾರ್ಮ್ ಇರುವ ಉದ್ಯೋಗಸ್ಥರೆಲ್ಲರೂ ಯೂನಿಫಾರ್ಮನ್ನು, ಕೊಡವರೆಲ್ಲರೂ ಕುಪ್ಪಸ ದಟ್ಟಿಯನ್ನೂ ಧರಿಸಿದ್ದರು.

ಚೀ. ಕಮಿಷನರ ಸೆಕ್ರೆಟರಿಯವರು ಚೀ ಕಮಿಷನರ ಅನುಮತಿ ಮೇರೆ ದರ್ಬಾರು ತೆರೆಯಲಾಯಿತೆಂದು ಹೇಳಿದರು. ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಕಮಿಷನರು ದರ್ಬಾರಿನ ಉದ್ದಿಶ್ಯವನ್ನು ಹೇಳಿ ರಾಜಭಕ್ತಿಯ ಪ್ರಮಾಣವನ್ನು ಮಾಡಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಂಡರು. ತಾನು ಕೈಕೊಳ್ಳುವ ಹೊಸ ಪದವಿಯಲ್ಲಿರುವ ವರೆಗೆ ತಾನು ಸಾರ್ವಭೌಮರಾದ ಜಾರ್ಜ್ ಚಕ್ರವರ್ತಿಗಳಿಗೂ, ಅವರ ನಂತರ ಪಟ್ಟಕ್ಕೆ ಬರುವವರಿಗೂ ಪೂರ್ತಿ ರಾಜ ಭಕ್ತಿಯುಳ್ಳವನಾಗಿರುತ್ತೇನೆಂತಲೂ, ಹಿಂದೂದೇಶದಲ್ಲಿ ಜಾರಿಯಲ್ಲಿರುವ ಕಾನೂನು ಕಾಯಿದೆಗಳನ್ನನುಸರಿಸಿ ಪಕ್ಷಪಾತವಿಲ್ಲದೆ ತನ್ನ ಕಾರ್ಯವನ್ನು ನಡಿಸುತ್ತೇನೆಂತಲೂ ಚೀ. ಕಮಿಷನರು ಬೈಬಲ್ ಪುಸ್ತಕ ಹಿಡಿದು ಪ್ರಮಾಣ ಮಾಡಿದರು.

ನಂತರ ಕಮಿಷನರು ಚೀಫ್ ಕಮಿಷನರಿಗೂ, ಅವರ ಸೆಕ್ರೆಟರಿಯವರಿಗೂ ಅತ್ತರ್ ಮತ್ತು ಪಾನ್‌ಸುಪಾರಿಯನ್ನು ಕೊಟ್ಟು ಹೂವಿನ ಹಾರಗಳನ್ನು ಹಾಕಿದರು. ಚೀ|| ಕಮಿಷನರ ಸೆಕ್ರೆಟರಿಯವರು ಕಮಿಷನರಿಗೂ, ಗಜೆಟೆಡ್ ಉದ್ಯೋಗಸ್ಥರಿಗೂ ಅತ್ತರ್ ಪಾನ್‌ಸುಪಾರಿಗಳನ್ನು ಕೊಟ್ಟು ಹೂವಿನ ಹಾರಗಳನ್ನು ಹಾಕಿದರು. ಕೌನ್ಸಿಲ್ ಮೆಂಬರುಗಳಿಗೆ ಅತ್ತರ್, ಪಾನ್ಸುಪಾರಿ ಮತ್ತು ಹೂವಿನ ಹಾರಗಳು ಅಸಿಸ್ಟೆಂಟ್ ಕಮಿಷನರಿಂದ ಕೊಡಲಾದವು. ತರುವಾಯ ಹೀಗೆಯೇ ಸಬ್ ಜಡ್ಜರು ಹಿಂದುಗಡೆ ಕೂತಿದ್ದ ಮಹಿಳೆಯರಿಗೂ, ಮಹನೀಯರಿಗೂ, ಉತ್ತರ ಕೊಡಗು ಸುಬೇದಾರರು ಮತ್ತು ಮಡಿಕೇರಿ ನಾಡು ಪಾರುಪತ್ಯಗಾರರು ಮುಂದುಗಡೆಯಲ್ಲಿ ಕೂತಿದ್ದ ಬೇರೆ ಎಲ್ಲಾ ಮಹನೀಯರಿಗೂ ಹೂವಿನಹಾರ, ಅತ್ತರ್ ಪಾನ್‌ಸುಪಾರಿಗಳನ್ನು ಕೊಟ್ಟರು.

ಇದಾದ ಮೇಲೆ ಸೆಕ್ರೆಟರಿಯವರು ಚೀಫ್ ಕಮಿಷನರ ಅನುಮತಿ ಮೇರೆ ದರ್ಬಾರು ಮುಗಿಯಿತೆಂದು ಹೇಳಿದರು. ಚೀಫ್ ಕಮಿಷನರು ಬಂದಂತೆ ಮೆರವಣಿಗೆಯಲ್ಲಿ ಹೊರಟು ಹೋದರು. ಎದ್ದು ನಿಂತಿದ್ದ ಸಭಿಕರೆಲ್ಲರೂ ನಂತರ ಹೊರಟು ಹೋದರು.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೩೦ನೇ ಪ್ರಕರಣ

ಸಂಯಮದ ದಾರಿಯಲ್ಲಿ

ನನ್ನ ಆಹಾರದಲ್ಲಿ ಕೆಲವು ಮಾರ್ಪಾಡುಗಳಾಗಲು ಕಸ್ತೂರಬಾಯಿಯ ಕಾಯಿಲೆಯು ಹೇಗೆ ಕಾರಣವಾಯಿತೆನ್ನುವುದನ್ನು ಹಿಂದಿನ ಅಧ್ಯಾಯದಲ್ಲಿ ವರ್ಣಿಸಿದ್ದೇನೆ. ಆ ಮೇಲೆ ಬ್ರಹ್ಮಚರ್ಯ ಸಾಧನೆಗಾಗಿ ಇನ್ನೂ ಕೆಲವು ಬದಲಾವಣೆಗಳನ್ನು ನಡಿಸಿದೆನು.

ಇವುಗಳಲ್ಲಿ ಮೊದಲನೆಯದು ಹಾಲಿನ ತ್ಯಾಗ. ಹಾಲು ಇಂದ್ರಿಯ ವಿಕಾರಕ್ಕೆ ಸಹಾಯ ಮಾಡುವುದೆಂಬುದನ್ನು ನಾನು ಮೊಟ್ಟಮೊದಲು ತಿಳಿದುಕೊಂಡದ್ದು ರಾಯಚಂದಭಾಯಿಯಿಂದ. ಶಾಕಾಹಾರವನ್ನು ಕುರಿತ ಪುಸ್ತಕಗಳು ಈ ಅಭಿಪ್ರಾಯವನ್ನು ದೃಢಪಡಿಸಿದುವು. ಆದರೆ ನಾನು ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸುವವರೆಗೂ ಹಾಲನ್ನು ಬಿಟ್ಟುಬಿಡಲು ಸಂಕಲ್ಪಿಸಲಾಗಲಿಲ್ಲ. ಶರೀರ ನಿರ್ವಾಹಕ್ಕೆ ಹಾಲಿನ ಅಗತ್ಯವಿಲ್ಲವೆಂದು ನಾನು ಬಹುಕಾಲ ಮನಗಂಡಿದ್ದೆನು. ಆದರೆ ಅದನ್ನು ಬಿಡುವುದು ಸುಲಭವಾಗಿರಲಿಲ್ಲ. ಇಂದ್ರಿಯ ನಿಗ್ರಹದ ಸಲುವಾಗಿ ಹಾಲಿನ ತ್ಯಾಗದ ಆವಶ್ಯಕತೆಯು ನನಗೆ ಬಲತ್ತರವಾಗಿ ತೋರುತ್ತಾ ಬಂದಾಗ ನನ್ನ ಕೈಗೆ ಆಕಳು ಮತ್ತು ಎಮ್ಮೆಗಳಿಗೆ ಅವುಗಳ ಮಾಲಿಕರು ಮಾಡುವ ಚಿತ್ರಹಿಂಸೆಗಳನ್ನು ವರ್ಣಿಸುವ ವಹಿಗಳು ಮುಟ್ಟಿದುವು. ಇದರಿಂದ ನನ್ನ ಮನಸ್ಸಿನ ಮೇಲೆ ಮಹತ್ವದ ಪರಿಣಾಮವುಂಟಾಯಿತು. ಈ ವಿಷಯವಾಗಿ ನಾನು ಕಾಲನ್ಬೇಕರೊಡನೆ ಚರ್ಚಿಸಿದೆನು.

ನಾನು ಮಿ. ಕಾಲನ್ಬೇಕರ ಪರಿಚಯವನ್ನು 'ದಕ್ಷಿಣ ಆಫ್ರಿಕದ ಸತ್ಯಾಗ್ರಹದ ಇತಿಹಾಸ'ದಲ್ಲಿ ವಾಚಕರಿಗೆ ಮಾಡಿಕೊಟ್ಟಿದ್ದೇನೆ. ಮತ್ತು ಹಿಂದಿನ ಪ್ರಕರಣ ಒಂದರಲ್ಲಿ ಅವರ ವಿಚಾರವು ಬಂದಿದೆ.

ಆದರೂ ಅವರ ವಿಷಯವಾಗಿ ಇನ್ನೆರಡು ಮಾತುಗಳನ್ನು ಹೇಳುವುದು ಆವಶ್ಯಕವೆಂದು ನನಗೆ ತೋರುತ್ತದೆ. ನನಗೂ ಅವರಿಗೂ ಕೇವಲ ಆಕಸ್ಮಿಕವಾಗಿ ಪರಿಚಯವುಂಟಾಯಿತು. ಅವರು ಮಿ. ಖಾನರ ಗೆಳೆಯರಾಗಿದ್ದರು. ಖಾನರು ಇವರ ವ್ಯಕ್ತಿಯಲ್ಲಿ ಅಂತರ್ಗತವಾದ ವೈರಾಗ್ಯವೃತ್ತಿಯನ್ನು ಕಂಡುದರಿಂದ ಅವರ ಪರಿಚಯವನ್ನು ನನಗೆ ಮಾಡಿಕೊಟ್ಟರು. ಅವರ ಪರಿಚಯವಾದಾಗ ನನಗೆ ಅವರ ಭೋಗಾಸಕ್ತಿಯನ್ನೂ, ದುಂದುಗಾರಿಕೆಯನ್ನೂ ನೋಡಿ ಆಶ್ಚರ್ಯವಾಯಿತು. ಆದರೆ ನಮಗೆ ಮೊದಲನೆಯ ಸಲ ಭೇಟಿಯಾದಾಗಲೇ ಅವರು ಧರ್ಮವಿಷಯಕವಾದ ಸೂಕ್ಷ್ಮ ಪ್ರಶ್ನೆಗಳನ್ನು ಹಾಕಿದರು. ಮಾತನಾಡುತ್ತಾ ಭಗವಾನ್ ಬುದ್ಧನ ತ್ಯಾಗದ ವಿಷಯವೂ ಕೂಡ ಬಂದಿತು. ನಮ್ಮ ಪರಿಚಯವು ಶೀಘ್ರದಲ್ಲಿಯೇ ಅತಿ ಗಾಢವಾದ ಮೈತ್ರಿಯಾಗಿ ಬೆಳೆಯಿತು. ಇದು ಎಷ್ಟರಮಟ್ಟಿಗೆ ವೃದ್ಧಿಯಾಯಿತೆಂದರೆ ನಮ್ಮಿಬ್ಬರ ಮನೋವಿಚಾರಗಳೂ ಒಂದೇ ರೀತಿಯವಾಗಿದ್ದುವಲ್ಲದೆ ನನ್ನ ಜೀವನದಲ್ಲಿ ನಾನು ನಡೆಸುತ್ತಿದ್ದ ತಿದ್ದುಪಾಟುಗಳನ್ನು ಅವರು ತಮ್ಮ ಜೀವನದಲ್ಲಿಯೂ ನಡೆಸಬೇಕೆಂದು ಅವರಲ್ಲಿ ನಂಬಿಕೆ ಹುಟ್ಟಿತ್ತು. ಮೊಟ್ಟಮೊದಲು ನಾನು ಅವರನ್ನು ನೋಡಿದಾಗ ಅವರು ಒಬ್ಬಂಟಿಗರಾಗಿದ್ದು ಮನೆಯ ಬಾಡಿಗೆಯಲ್ಲದೆ ತಮ್ಮೊಬ್ಬರ ಮೇಲೆಯೇ ತಿಂಗಳಿಗೆ ೧೨೦೦ ರೂಪಾಯಿ ಖರ್ಚುಮಾಡುತ್ತಿದ್ದರು. ಈಗಲೇ ಅವರ ಜೀವನವು ಎಷ್ಟು ಸರಳವಾಯಿತೆಂದರೆ ತಿಂಗಳ ವೆಚ್ಚವು ೧೨೦ ರೂಪಾಯಿಗೆ ಇಳಿಯಿತು. ನಾನು ನನ್ನ ಮನೆಯನ್ನು ಬಿಟ್ಟು ನನಗೆ ಬಂದೀಖಾನೆಯಿಂದ ಬಿಡುಗಡೆಯಾದ ಮೇಲೆ ನಾವಿಬ್ಬರೂ ಜೊತೆಯಲ್ಲಿ ವಾಸಮಾಡತೊಡಗಿದೆವು. ನಾವು ನಡೆಸುತ್ತಿದ್ದ ಜೀವನವು ಕಷ್ಟಜೀವನವೆಂದೇ ಹೇಳಬಹುದು.

ಈ ಸಮಯದಲ್ಲಿಯೇ ನಾವು ಹಾಲಿನ ವಿಚಾರವಾಗಿ ಚರ್ಚಿಸಿದುದು. ಮಿ ಕಾಲನ್ಬೇಕರು 'ನಾವು ಹಗಲೆಲ್ಲಾ ಹಾಲಿನ ದುಷ್ಪರಿಣಾಮಗಳ ವಿಚಾರವಾಗಿ ಮಾತನಾಡುತ್ತೇವೆ. ನಾವು ಅದನ್ನು ಬಿಟ್ಟುಬಿಡುವುದಿಲ್ಲವೇಕೆ? ಅದು ಅಗತ್ಯವಾದುದೆನ್ನೂ ಹೇಳುವ ಹಾಗಿಲ್ಲ' ಎಂದರು. ಈ ಸೂಚನೆಯನ್ನು ಕೇಳಿ ನನಗೆ ಆಶ್ಚರ್ಯವೂ, ಸಂತೋಷವೂ ಉಂಟಾಯಿತು. ನಾನು ಈ ಸೂಚನೆಗೆ ಉತ್ಸಾಹದಿಂದ ಒಪ್ಪಿದೆನು. ನಾವಿಬ್ಬರೂ ಅಲ್ಲಿಯೇ ಆಗಲೇ ಹಾಲನ್ನು ತ್ಯಜಿಸುವೆವೆಂದು ಪ್ರಕಟಿಸಿದೆವು. ಇದು ೧೯೧೨ರಲ್ಲಿ 'ಟಾಲ್‌ಸ್ಟಾಯ್ ಫಾರ್ಮ್'ನಲ್ಲಿ ನಡೆಯಿತು.

ಆದರೆ ಈ ತ್ಯಾಗವಷ್ಟೇ ನನ್ನ ಆತ್ಮವನ್ನು ತೃಪ್ತಿಪಡಿಸುವಂತಹುದಾಗಿರಲಿಲ್ಲ. ಇದಾದ ಸ್ವಲ್ಪ ದಿವಸದಲ್ಲಿಯೇ ನಾನು ಕೇವಲ ಹಣ್ಣನ್ನು ತಿನ್ನುವುದರಿಂದಲೇ ಜೀವನವನ್ನು ನಡೆಸಬೇಕೆಂದೂ, ಆ ಹಣ್ಣುಗಳು ಕೂಡ ಆದಷ್ಟು ಮಟ್ಟಿಗೆ ಅತ್ಯಂತ ಅಗ್ಗವಾದವುಗಳಾಗಬೇಕೆಂದೂ ನಿಶ್ಚಯಿಸಿದೆನು. ಅತಿ ಬಡಜನರ ಜೀವನವನ್ನು ನಡೆಸಬೇಕೆಂಬುದೇ ನನ್ನ ಮಹತ್ವಾಕಾಂಕ್ಷೆಯಾಗಿದ್ದಿತು.

ಈ ಹಣ್ಣಿನ ಆಹಾರವು ನಮಗೆ ಬಹು ಅನುಕೂಲವಾಗಿಯೂ ಕಂಡುಬಂದಿತು. ಬೇಯಿಸುವ ಕೆಲಸವು ತಪ್ಪಿದಂತೆಯೇ ಆಯಿತು. ಹಸಿನೆಲಗಡಲೆಕಾಯಿ, ಬಾಳೆಹಣ್ಣು, ಖರ್ಜೂರ, ನಿಂಬೆಹಣ್ಣು ಮತ್ತು 'ಆಲಿವ್' ಎಣ್ಣೆ ಇವೇ ಸಾಮಾನ್ಯವಾಗಿ ನಮ್ಮ ಆಹಾರ.

ಬ್ರಹ್ಮಚರ್ಯ ವ್ರತಪಾಲನಾಕಾಂಕ್ಷಿಗಳಿಗೆ ನಾನು ಇಲ್ಲಿ ಒಂದು ಎಚ್ಚರಿಕೆಯ ನುಡಿಯನ್ನು ಹೇಳಬೇಕು. ಆಹಾರಕ್ಕೂ, ಬ್ರಹ್ಮಚರ್ಯಕ್ಕೂ ನಿಕಟ ಸಂಬಂಧವಿದೆಯೆಂದು ನಾನು ಹೇಳಿರುವೆನಾದರೂ ಮನಸ್ಸೇ ಮುಖ್ಯವಾದುದೆಂಬುದು ಖಂಡಿತ. ಪ್ರಯತ್ನತಃ ಮಲಿನವಾದ ಮನಸ್ಸನ್ನು ಉಪವಾಸದಿಂದ ಶುದ್ಧಪಡಿಸಲಾಗುವುದಿಲ್ಲ. ಆಹಾರದ ತಿದ್ದುಪಾಟುಗಳಿಂದ ಈ ಸಂದರ್ಭದಲ್ಲಿ ಯಾವ ಪ್ರಯೋಜನವೂ ಉಂಟಾಗುವುದಿಲ್ಲ. ಮನಸ್ಸಿನ ವಿಷಯಲಂಪಟತೆಯನ್ನು ನಿರ್ಮೂಲ ಮಾಡಲು ತೀಕ್ಷ್ಣವಾಗಿ ಆತ್ಮಪರಾಮರ್ಶೆ ಮಾಡಿಕೊಳ್ಳುವುದೂ, ಈಶ್ವರನನ್ನು ಶರಣುಹೋಗುವುದೂ ಮತ್ತು ಕಡೆಗೆ ಈಶ್ವರನ ಕೃಪೆ, ಇವಲ್ಲದೆ ಬೇರೆ ಮಾರ್ಗವಿಲ್ಲ. ಆದರೆ ಮನಸ್ಸಿಗೂ, ದೇಹಕ್ಕೂ ಗಾಢಸಂಬಂಧದ ನಿಮಿತ್ತ ವಿಷಯಾಸಕ್ತ ಚಿತ್ತವು ಸದಾ ಸ್ವಾದಿಷ್ಟಪದಾರ್ಥಗಳಿಗೂ ಭೋಗಕ್ಕೂ ಹಾತೊರೆಯುತ್ತದೆ. ಹೀಗೆ ಎಳೆಯುತ್ತಿರುವ ಮನಸ್ಸನ್ನು ನಿಂತರುವುದಕ್ಕೆ ಆಹಾರವಿಷಯಕವಾದ ನಿಯಮಗಳೂ ಉಪವಾಸವೂ ಆವಶ್ಯಕವೆಂದು ತೋರುತ್ತದೆ. ಭೋಗಾಸಕ್ತವಾದ ಮನಸ್ಸು ಇಂದ್ರಿಯಗಳನ್ನು ಅಂಕೆಯಲ್ಲಿಟ್ಟಿರುವುದರ ಬದಲು ತಾನೇ ಅವುಗಳ ಊಳಿಗದ ಆಳಾಗುತ್ತದೆ. ಆದುದರಿಂದ ಶರೀರಕ್ಕೆ ಯಾವಾಗಲೂ ಶುಚಿಯಾದ ಮತ್ತು ವಿಕಾರಕ್ಕೆ ಅತ್ಯಂತ ಕಡಮೆಯಾಗಿ ಎಡೆಗೊಡುವ ಆಹಾರವೂ, ಆಗಾಗ ಉಪವಾಸವೂ ಆವಶ್ಯಕ.

ಆದುದರಿಂದ ಆಹಾರನಿಯಮಗಳನ್ನೂ, ಉಪವಾಸವನ್ನೂ ಕೀಳಾಗಿ ಎಣಿಸುವವರು ಕೂಡ ಕೇವಲ ಅವುಗಳನ್ನೇ ನಂಬಿರುವವರಷ್ಟೇ ದೊಡ್ಡ ತಪ್ಪು ಮಾಡುತ್ತಾರೆ. ಸಂಯಮದ ಕಡೆ ಹರಿಸುತ್ತಿರುವ ಮನಸ್ಸುಳ್ಳವರಿಗೆ ಆಹಾರನಿಯಮಗಳೂ, ಉಪವಾಸವೂ ಬಹು ಸಹಾಯಕವಾದುವೆಂದು ನನ್ನ ಅನುಭವವು ಹೇಳುತ್ತದೆ. ವಾಸ್ತವಿಕವಾಗಿ ಅವುಗಳ ನೆರವಿಲ್ಲದೆ ಮನಸ್ಸಿನಿಂದ ವಿಷಯವಾಸನೆಯನ್ನು ಪೂರ್ತಿಯಾಗಿ ತೊಡೆದು ಹಾಕಲಾಗುವುದಿಲ್ಲ.

ಸ್ವಾಮಿ ವೀರೇಶ್ವರಾನಂದರು ಮಡಿಕೇರಿಯಲ್ಲಿ.

ಸ್ವಾಮಿ ವೀರೇಶ್ವರಾನಂದರು ಕಳೆದ 28ನೇ ಬುಧವಾರ ಮಂಗಳೂರಿಂದ ಮಡಿಕೇರಿಗೆ ಚಿತ್ತೈಸಿ ಇಲ್ಲಿ ಮೂರು ಭಾಷಣಗಳನ್ನು ಕೊಟ್ಟರು. ಇವರು ಮಾಯಾವತಿಯಲ್ಲಿರುವ ಅದ್ವೈತಾಶ್ರಮದ ಅಧ್ಯಕ್ಷರು. ಇವರು ರಾಮಕೃಷ್ಣ ಸಂಸ್ಥೆಯಿಂದ ಹೊರಡುತ್ತಿರುವ ಪ್ರಬುದ್ಧ ಭಾರತವೆಂಬ ಇಂಗ್ಲಿಷ್ ಮಾಸಿಕಪತ್ರದ ಪ್ರಕಟನಾಕಾರರು. ಇವರು ಧರ್ಮವಿಚಾರದಲ್ಲಿ ವಿಶಾರದರೆಂಬುದರಲ್ಲಿ ಸಂದೇಹವಿಲ್ಲ. ಇವರು [illegible] ಕಾಲಕ್ಕೆ [illegible] ಧರ್ಮ ಜೀವನದಿಂದ ಬಹು ಪ್ರಯೋಜನವನ್ನು ಹೊಂದಿದರು.

ಮೊದಲನೇ ದಿನ ಇವರು "ಧರ್ಮದ ಆವಶ್ಯಕತೆ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಪ್ರಪಂಚದಲ್ಲಿನ ಸರ್ವ ಪ್ರಾಣಿಗಳು ಸುಖವನ್ನಪೇಕ್ಷಿಸುತ್ತವೆ. ಆದರೆ ಇಹಲೋಕದ ಸುಖವು ನಿಜವಾದ ಸುಖವಲ್ಲವೆಂದೂ, ನಿಜವಾದ ಪ್ರಾಪ್ತಿಯ ಗಣೇಶವಾದರೆ ಸುಖ—ದುಃಖಗಳಿಂದ ಕೂಡಿದ ಈ ತುಲನಾತ್ಮಕ ಪ್ರಪಂಚವನ್ನು (relative world) ಬಿಟ್ಟು ಪರಮಾತ್ಮನ ಸ್ಥಿತಿಗೆ ಏರಬೇಕೆಂದೂ, ಇಂಥ ಸುಖವನ್ನು ಪಡೆಯುವುದಕ್ಕಾಗಿ ಸಾಧನ ಚತುಷ್ಟಯಗಳನ್ನು ಕೈಕೊಂಡು ತನ್ನ ಸ್ವಭಾವಕ್ಕನುಗುಣವಾಗಿ ಜ್ಞಾನ, ಭಕ್ತಿ, ಕರ್ಮ ಮತ್ತು ರಾಜ ಮಾರ್ಗಗಳಲ್ಲಿ ಯಾವುದಾದರೊಂದನ್ನು ಅನುಸರಿಸುವುದವಶ್ಯವೆಂದೂ, ವಿಜ್ಞಾನಕ್ಕೂ, ಧರ್ಮಕ್ಕೂ ಪರಸ್ಪರ ಹೋಲಿಕೆ ಇರುವುದಲ್ಲದೆ ಭೇದವಿಲ್ಲವೆಂದೂ, ಸಕಲ ಮತಗಳ ಧ್ಯೇಯವು ಒಂದೇ ಆಗಿದ್ದರೂ ಬೇರೆ ಭಿನ್ನಭಿನ್ನ ಮಾರ್ಗಗಳು ಕಲಹ ಮಾಡುವುದು ಉಚಿತವಲ್ಲವೆಂದೂ, ಪ್ರಪಂಚದಲ್ಲಿರುವ ಅನೇಕಾನೇಕ ಮತಗಳಿಂದ ಒಳ್ಳೆಯದಾಗಿದೆಯೆಂದೂ, ಅದರ ಪ್ರಾಣವಾದ ಒಳಗೊಳಗಿನ ವ್ಯಕ್ತಿ, ರಾಷ್ಟ್ರಭಾವನೆ, ಪರೋಪಕಾರ, ದೇಶಾಭಿವೃದ್ಧಿ, ಕಲೆಗಳ ಪೋಷಣೆ, ಸಮಾಜದೊಳಗಿನ ಸುವ್ಯವಸ್ಥೆ, ಅಹಿಂಸೆ, ಸತ್ಯ, ಬುದ್ಧಿಶಕ್ತಿಯ ವೃದ್ಧಿ, ಧರ್ಮ ಇತ್ಯಾದಿಗಳು ಜನತೆಯೊಳಗೆ ಹಬ್ಬಿವೆಯೆಂದೂ, ಮುಂದಿನ ಕೆಡಕಾಗಿರುವುದಾದರೆ ನಿಜವಾದ ಧರ್ಮದ ದೃಷ್ಟಿಯಿಂದಲ್ಲವೆಂದೂ, ಮತಾಂಧತೆಯಿಂದಲೆಂದೂ" ಸ್ವಾಮಿಗಳು ನುಡಿದರು. ಈ ದಿನದ ಉಪನ್ಯಾಸಕ್ಕೆ ಬಹಳ ಮಂದಿಯು ನೆರೆದಿದ್ದರು. ಸ್ವಾಮಿಗಳು ಸಮಂಜಸವಾಗಿಯೂ, ಶಾಸ್ತ್ರೀಯವಾಗಿಯೂ ಮಾತಾಡಿದರು.

ಎರಡನೆ ದಿನ ಇವರು 'ಗೀತೆ'ಯನ್ನು ಕುರಿತು ಮಾತಾಡಿದರು. ಗೀತೆಯು ಪ್ರತಿಯೊಬ್ಬ ಹಿಂದುವಿನ ಆಸ್ತಿಯಾಗಿರುವುದರಿಂದಲೇ ಅದರ ಮಹತ್ವವನ್ನು ಬಹಳವಾಗಿ ಹೊಗಳಿ ಮಾತಾಡಿದರು. ಗೀತೆಯಲ್ಲಿ ಆತ್ಮನ ಅವಿನಾಶಿತ್ವವು ಭಯದಿಂದ ಗಾಬರಿ ಪಟ್ಟ ಅರ್ಜುನನಿಗೆ ಶ್ರೀಕೃಷ್ಣನಿಂದ ಮೊದಲು ವಿವರಿಸಲ್ಪಟ್ಟಿತು. ಅವಿನಾಶಿತ್ವವು ನಿಶ್ಚಯವಾದ ಮೇಲೆ ಅವರವರ ಕರ್ಮಗಳ ದೆಸೆಯಿಂದ ಪುನರ್ಜನ್ಮವು ಪ್ರಾಪ್ತವಾಗುವುದು. ಈ ಪುನರ್ಜನ್ಮದ ಸಂಕೋಲೆಯಿಂದ ತಪ್ಪಿಸಿಕೊಳ್ಳುವದೇ ಪಾರಮಾರ್ಥಿಕ ಮಾರ್ಗವೆನ್ನಿಸಲ್ಪಡುವುದು. ಗೀತೆಯಲ್ಲಿ ಭಕ್ತಿ, ಜ್ಞಾನ, ಕರ್ಮ ಈ ಮೂರು ಯೋಗಗಳ ವಿಚಾರವು ಬಂದಿದೆ. ಆದರೆ ಗೀತೆಯು ಕರ್ಮ ಮಾರ್ಗಕ್ಕೇನೆ ಪ್ರಾಶಸ್ತ್ಯವನ್ನು ಕೊಟ್ಟಿದೆ. ಗೀತೆಯು ಸರ್ವಭೂತಹಿತರ ತತ್ವವನ್ನು ಬಹಳವಾಗಿ ಬೋಧಿಸುತ್ತದೆ. ಅವನವನ ಗುಣ ಕರ್ಮಗಳ ದೆಸೆಯಿಂದ ಮನುಷ್ಯನು ವೇದಗಳನ್ನು ಓದಲಿಕ್ಕೆ ಅನುಕೂಲವಿಲ್ಲದಿರಬಹುದು. ಆದರೆ ಗೀತೆಯು ಸರ್ವರಿಂದಲೂ ಹೆಚ್ಚೇಕೆ—ಸ್ತ್ರೀ ಶೂದ್ರರಿಂದಲೂ ಪಠನಯೋಗ್ಯವಾದದ್ದು. ಗೀತೆಯಲ್ಲಿ ಸಾಕಾರ ಬ್ರಹ್ಮನ ವಿಚಾರವೇ ಹೆಚ್ಚು. ಗೀತೆಯು ವೇದೋಪನಿಷತ್ತುಗಳ ಸಾರವು. ವರ್ಣಧರ್ಮವು ಗೀತೆಯಲ್ಲಿ ಬೇರೆ ರೀತಿಯಿಂದ ವರ್ಣಿಸಲ್ಪಟ್ಟಿದೆ. ಹುಟ್ಟುತ್ತಾ ಯಾವನೂ ಬ್ರಾಹ್ಮಣನಾಗಲಾರನು, ಆತನ ಗುಣದಿಂದಲೇ ಬ್ರಾಹ್ಮಣನು ಬ್ರಾಹ್ಮಣನೆನಿಸಿಕೊಳ್ಳುವನು. ಒಂದು ಜಾತಿಯವನು ಇನ್ನೊಂದು ಜಾತಿಯವನನ್ನು ತಿರಸ್ಕರಿಸಬಾರದೆಂದು ಗೀತೆಯು ಬೋಧಿಸುತ್ತದೆ" ಎಂದು ಮುಂತಾಗಿ ಸ್ವಾಮಿಯವರು ಭಾಷಣ ಮಾಡಿದರು. ಭಾಷಣಾನಂತರದಲ್ಲಿ ಪ್ರಶ್ನೋತ್ತರಗಳು ನಡೆದುವು.

ಮೂರನೆ ದಿನ ರಾಮಕೃಷ್ಣ ಪರಮಹಂಸರ ೧೦೩ನೇ ಜನ್ಮೋತ್ಸವವಾದುದರಿಂದ ಪರಮಹಂಸರ ಜೀವನಚರಿತ್ರೆಯನ್ನು ಸಾಂಗವಾಗಿಯೂ, ಸ್ವಾರಸ್ಯಕರವಾಗಿಯೂ ಸ್ವಾಮಿಯವರು ವಿವರಿಸಿದರು. ಪರಮಹಂಸರು ಹುಟ್ಟಿದ ಕಾಲಕ್ಕೆ ಪಾಶ್ಚಾತ್ಯರ ವಿಜ್ಞಾನವಾದವು ಭರತಖಂಡದಲ್ಲಿ ನಡೆಸುತ್ತಿದ್ದ ಅನಾಹುತವು ಎಷ್ಟೆಂಬುದನ್ನೂ, ಇವರ ಜನ್ಮದಿಂದ ಹಿಂದೂ ಮತವು ಹೇಗೆ ಕಳೆ ಏರಿತೆಂಬುದನ್ನೂ ಸ್ವಾಮಿಯವರು ಚೆನ್ನಾಗಿ ವಿವರಿಸಿದರು. "ಏನೊಂದೂ ವಿದ್ಯೆಯನ್ನು ಕಲಿಯದ ಗದಾಧರನೆಂಬ ಬಡ ಬ್ರಾಹ್ಮಣ ಯುವಕನು ಮನೆಯಲ್ಲಿ ರಾಮಾಯಣ ಭಾರತ ಕಥೆಗಳನ್ನು ಕೇಳಿ ಅವುಗಳನ್ನು ಜೀರ್ಣಿಸಿಕೊಂಡಿದ್ದ ಕಾಲಕ್ಕೆ ಸಂಯೋಗವಾಗಿ ಕಲಕತ್ತೆಯಲ್ಲಿನ ರಾಣಿ ರಶ್ಮಣಿಯವರ ಕಾಳೀದೇವಾಲಯದಲ್ಲಿ ಪೂಜಾರಿ ನೌಕರಿಯು ದೊರೆತದ್ದೇ ಸರಿ, ಪೂಜಾರಿಯು ಹನ್ನೆರಡು ವರ್ಷಗಳ ತನಕ ಕಠಿಣ ತರದ ಸಾಧನವನ್ನು ಕೈಗೊಂಡು ಯೋಗಿಯಾಗಿ, ತೋತಾಪುರಿ ಇವರ ಸಹಾಯದಿಂದ ಶೀಘ್ರವಾಗಿ ಕಾಳಿಯನ್ನು ಸಾಕ್ಷಾತ್ಕಾರ ಮಾಡಿಕೊಂಡನು. ಪರಮಹಂಸರ ಪತ್ನಿಯೂ ಇವರ ಶಿಷ್ಯಳಾಗಿ ಹೆಸರು ಪಡೆದರು. ಪರಮಹಂಸರ ಪ್ರಾಮುಖ್ಯ ಬೋಧನೆಯೇನೆಂದರೆ—ಸರ್ವ ಮತಗಳ ಧ್ಯೇಯವೂ ಒಂದೇ ಎಂಬುದು. ಹೀಗಿರುವಾಗ ತನ್ನ ಮತದ ಮೇಲಿನ ಪ್ರೀತಿಯು ಕಡಿಮೆಯಾಗುವುದೆಂಬ ಕರ್ತವ್ಯ ಬರುವುದು. ಹಾಗಲ್ಲ ಮನೆ ಯಜಮಾನಿಯು ತಾಯಿ, ಅತ್ತೆ, ಭಾವ, ಮೈದುನ, ಗಂಡ ಇವರೆಲ್ಲರನ್ನೂ ಪ್ರೀತಿಸುವುದು ಸಹಜವಷ್ಟೆ. ಆದರೆ ಇವರಲ್ಲಿ ಅವಳಿಗೆ ಗಂಡನ ಮೇಲೆ ಪ್ರೀತಿ ಹೆಚ್ಚು. ಹಾಗೆಯೇ ನಾವು ನಮ್ಮ ನಮ್ಮ ಮತವನ್ನು ಹೆಚ್ಚಾಗಿ ಪ್ರೀತಿಸುತ್ತಾ ಅನ್ಯಮತಗಳನ್ನು ತಿರಸ್ಕರಿಸಬಾರದು. ದ್ವೈತಾದ್ವೈತ ವಿಶಿಷ್ಟಾದ್ವೈತ ಮಾರ್ಗಗಳು ಒಂದಕ್ಕೊಂದು ಸಹಾಯಕವಾಗಿಯೇ ಹೊರತು ವಿರೋಧವಿಲ್ಲವೆಂಬುದು ಪರಮಹಂಸರ ಬೋಧನೆಯಿಂದ ತಿಳಿಯುವುದು. ಈ ಮತದ ಗುಟ್ಟನ್ನು ತಿಳಿಯುವುದಕ್ಕಾಗಿ ಪರಮಹಂಸರು ಕ್ರೈಸ್ತ ಪಾದ್ರಿಯನ್ನೂ, ಮುಸಲ್ಮಾನ ಮೌಲ್ವಿಯನ್ನೂ ಆಶ್ರಯಿಸಿ ಆಯಾ ಧರ್ಮತತ್ವಗಳನ್ನು [illegible] ಸರ್ವ ಮತಗಳ ಸಮನ್ವಯ [illegible]. ಇವರ ಈ ಸಂದೇಶವನ್ನು ಭೂಮಂಡಲಕ್ಕೆ ಹರಡಿದವರು ಸ್ವಾಮಿ ವಿವೇಕಾನಂದರು. ಪರಮಹಂಸರ ಬೋಧನೆಯನ್ನು ಅನುಸರಿಸಿದರೆ, ಎಲ್ಲ ಜನಾಂಗದವರು [illegible] ಎಲ್ಲೆಲ್ಲಿಯೂ ಶಾಂತಿಯು ನೆಲೆಸುವುದು." ಎಂಬುದಾಗಿ ಹೇಳಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಜಯಂತ್ಯೋತ್ಸವದ ದಿನ [illegible] ಸ್ವಾಮಿಗಳೂ ಅವರಲ್ಲಿ ಭಾಗಿಗಳಾದರು. ಉತ್ಸವವು ಸಾಂಗವಾಗಿ ನಡೆಯಿತು.

ಮರುದಿನ ಸ್ವಾಮಿಗಳು [illegible] ಅಲ್ಲಿಗೆ ದಯೆ ಮಾಡಿದರು.

ಮಾಂಸಾಹಾರವು ಮತ್ತು ಶಾಕಾಹಾರವು.

ನಮ್ಮ ಪೂರ್ವ ಜನರು ಹೇಗೆ ಆವರದ ಸಂಪ್ರದಾಯಕ್ಕನುಸಾರವಾಗಿ ಚಾತುರ್ವರ್ಣ್ಯವನ್ನೇರ್ಪಡಿಸಿದರೋ ಹಾಗೆಯೇ ನಾವು ಆವರವರು ತೆಗೆದುಕೊಳ್ಳುವ ಆಹಾರಕ್ಕನುಸಾರವಾಗಿ ಇಡೀ ಜನಾಂಗವನ್ನು ಎರಡು ವಿಧವಾಗಿ ವಿಂಗಡಿಸಬಹುದು —ಮಾಂಸಾಹಾರಿಗಳು ಮತ್ತು ಶಾಕಾಹಾರಿಗಳು.

ಇವು ಎರಡರಲ್ಲಿ ಯಾವ ಪದ್ಧತಿಯು ಹೆಚ್ಚಿನದು ನಾವು ದೃಢವಾಗಿ ಹೇಳಲಾರೆವು. ಯಾಕೆಂದರೆ ಎಷ್ಟೋ ಜನರು ತಮ್ಮ ಪೂರ್ವಜರು ತೆಗೆದುಕೊಳ್ಳುತ್ತಿದ್ದ ಆಹಾರವನ್ನು ಬಿಟ್ಟು, ತಮಗೆ ಯೋಗ್ಯವಾದುದು ಕಂಡುಬಂದ ಆಹಾರವನ್ನು ತೆಗೆದುಕೊಳ್ಳುತ್ತಿರುವರು. ಈ ಎರಡು ಆಹಾರಗಳಲ್ಲಿ ಗುಣಪ್ರದ ಯಾವುದೆಂದು ದೃಢೀಕರಿಸಬೇಕಾಗಿದೆ.

ಕೆಲವು ಪಂಗಡಗಳಲ್ಲಿ ಮಾಂಸಭಕ್ಷಣೆಗೆ ಮಹತ್ವಪಡದೆಂಬ ನಿರ್ಬಂಧವಿದೆ. ಹಾಗೆ ಮಾಡಿದ್ದೇ ಆದಲ್ಲಿ ಅವನನ್ನು ಜಾತಿಯಿಂದ ಬಹಿಷ್ಕಾರ ಹಾಕುವ ಸಂಭವವೂ ಉಂಟು. ಮೂರನೆ ಪಾಲಿನವರಲ್ಲಿ ಇಂಥ ನಿರ್ಬಂಧವೇನೂ ಇಲ್ಲ. ಅವರು ಮಾಂಸವನ್ನೇ ಭುಂಜಿಸಬೇಕು, ಶಾಕಾಹಾರಗಳನ್ನು ತೆಗೆದುಕೊಳ್ಳಬಾರದೆಂಬ ಪದ್ಧತಿ ಜಾರಿಯಲ್ಲಿರುವುದಿಲ್ಲ. ಇಂಥ ಆಹಾರಗಳನ್ನು ನೋಡುವಾಗ ಯಾವ ಆಹಾರ ಉತ್ತಮವೆಂದು ಸಾಮಾನ್ಯ ಮನುಷ್ಯನಿಗೆ ಗೋಚರವಾಗದೆ ಇರಲಿಕ್ಕಿಲ್ಲ.

ಕೆಲವು ಕಾಲಗಳ ಹಿಂದೆ ಯೂರೋಪ್ಯ ಡಾಕ್ಟರು ಗಳೇ ಮಾಂಸಾಹಾರವನ್ನು ಶ್ಲಾಘಿಸಿದರೋ ಅದೇ ಡಾಕ್ಟರುಗಳು ಈಗೀಗ ಅದನ್ನು ಖಂಡಿಸಿ ಬರೆಯುತ್ತಿರುವರು. ಯಾವ ಆಹಾರವು ನಮ್ಮ ದೇಹ ದಾರ್ಢ್ಯಕ್ಕೆ ಅತಿ ಒಳ್ಳೆಯದೆಂದು ಒಂದು ಕಾಲದಲ್ಲಿ ಕಂಡು ಬಂದಿತ್ತೋ ಅದು ಈಗ ಅತೀ ಕೆಟ್ಟದೆಂದು ಪರಿಶೋಧಿಸಲ್ಪಟ್ಟಿದೆ. ನಮ್ಮ ದೇಹಕ್ಕೆ ಬೇಕಾದ ಪುಷ್ಟಿ ಅಂಶಗಳು ಮಾಂಸಾಹಾರದಲ್ಲಿರುವುದಕ್ಕಿಂತಲೂ ಹೆಚ್ಚಾಗಿ ಸಸ್ಯಾಹಾರದಲ್ಲಿ ಕಂಡುಬಂದಿವೆ. ಅದರ ಇಷ್ಟೆಲ್ಲವೂ ನಮ್ಮ ಪೂರ್ವಿಕರಿಗೆ ತಿಳಿದಿರಲಿಲ್ಲವೋ ಎಂಬ ಸಂದೇಹವು ನಮ್ಮಲ್ಲಿ ಉಂಟಾಗುವುದು. ಆದರೆ ವಿಷಯ ನಾವು ನಮ್ಮ ಆಚಾರ, ನಡೆನುಡಿಗಳನ್ನು ಚೆನ್ನಾಗಿ ಪರಿಶೀಲಿಸ ನೋಡಿದರೆ ನಮ್ಮ ಹಿರಿಯರೂ ಸ್ವಲ್ಪಮಟ್ಟಿಗೆ ವಿರೋಧಿಗಳಾಗಿದ್ದರೆಂದು ಕಂಡು ಬರುವುದು. ಯಾವ ಕಾಯಿಲೆಯೇ ಆಗಲಿ, ನಮ್ಮ ವೈದ್ಯರು ಔಷಧಿ ಕೊಡುವಾಗ ಮಾಂಸ ಮೀನುಗಳನ್ನು ಸೇವಿಸಬಾರದೆಂಬ ಪಥ್ಯವನ್ನು ನಿಯಮಿಸುವರು. ಕೆಲವು ಆಪತ್ಕಾಲಗಳ ವಿಷಯದಲ್ಲೂ ಪಥ್ಯವಿರಬೇಕಾಗಿ ಬಂದರೂ ಅದು ಅಷ್ಟು ಕಠಿಣ ತರದ್ದಾಗಿರುವುದಿಲ್ಲ. ಅದನ್ನು ಅನುಸರಿಸಿ ಸೇವಿಸಿದರೂ ದೇಹಕ್ಕೇನೂ ಹಾನಿಯುಂಟಾಗುವುದಿಲ್ಲ. ಆದರೆ ಮಾಂಸ, ಮೀನುಗಳನ್ನು ಭಕ್ಷಿಸಿದುದೇ ಆದಲ್ಲಿ ಆ ಕಾಯಿಲೆಯು ಅನೇಕ ಸಾರಿ ವಿಪರೀತವಾಗುವುದೂ ಉಂಟು. ಇದರಿಂದ ಯೂರೋಪ್ಯ ಡಾಕ್ಟರುಗಳಿಗೆ ಈಗೀಗ ಅದರ ದುರ್ಗುಣಗಳು ಕಂಡು ಬಂದಿದ್ದರೂ, ನಮ್ಮ ವೈದ್ಯರಿಗೆ ಇದು ಬಹುಕಾಲಗಳ ಹಿಂದೆಯೇ ತಿಳಿದಿರಬೇಕೆಂಬುದು ಸ್ಪಷ್ಟವಾಗುವುದು.

ಈ ಮಾಂಸಾಹಾರದ ಪ್ರಶ್ನೆಯು ಅಹಿಂಸಾತತ್ವವನ್ನೂ ಒಳಕೊಂಡಿದೆ. ನಾವು ಯಾವಾತನನ್ನು ಮಹಾಪುರುಷನೆಂದು ಕೊಂಡಾಡುತ್ತೇವೋ, ಯಾವನನ್ನು ಆತನು ಜೀವಿಸಿರುವಾಗಲೇ ದೇವತಾವತಾರಿಯೆಂದು ಪ್ರಾರ್ಥಿಸುತ್ತೇವೋ ಅಂಥಾ ಲೋಕವಿಖ್ಯಾತನಾದ ಮಹಾತ್ಮಗಾಂಧಿಯವರೇ ಈ ತತ್ವವನ್ನು ಪ್ರಚುರಗೊಳಿಸಲು ತಮ್ಮ ಆಯುಷ್ಯವನ್ನು ವಿನಿಯೋಗಿಸುತ್ತಲಿರುವರು. ಅವರ ಅಹಿಂಸಾತತ್ವವು ಬಹಳ ಕಠಿಣತರದ್ದು. ಅವರು ಹಾಲು ಮೊದಲಾದವುಗಳು ಪ್ರಾಣ ಹಿಂಸೆಯನ್ನು ಒಳಗೊಂಡಿರುವುದರಿಂದ ಅದನ್ನು ಸಹ ಸೇವಿಸಕೂಡದೆಂದು ತಮ್ಮ ಅನುಯಾಯಿಗಳಿಗೆ ಬೋಧಿಸುತ್ತಿರುವರು. ಅವರ ಮಹತ್ವವನ್ನು ಓದಿಯೂ, ಕೇಳಿಯೂ ಇರುವ ನಾವು ಅವರು ಬೋಧಿಸುತ್ತಿರುವ ಕೆಲವು ಅಂಶಗಳನ್ನಾದರೂ ಆಚರಿಸಲು ಹೋದಾಗಲೂ ಅವರ ಸಂತೋಷಕ್ಕೆ ಪಾರವೇ ಇಲ್ಲದಾಗುತ್ತಿತ್ತು. ಅವರು ಬೋಧಿಸುತ್ತಿರುವುದು ನಮಗೆ ನವೀನವೆಂದು ಕಂಡುಬಂದರೂ ಅದೂ ಸಹ ಪೂರ್ವದಲ್ಲಿ ಆಚರಣೆಯಲ್ಲಿದ್ದಿತ್ತೆಂದು ಕಂಡುಬರುವುದು. ನಾವು ಮರೆತು ಹೋಗಿರುವ ಅಂಶವನ್ನು ಮಹಾತ್ಮರು ನಮಗೆ ಜ್ಞಾಪಕಕ್ಕೆ ತರುತ್ತಿರುವರೇ ಹೊರತು ಯೇಸುಕ್ರಿಸ್ತ, ಬುದ್ಧರಂತೆ ಹೊಸ ಮತವನ್ನು ಬೋಧಿಸುವುದಿಲ್ಲ.

ನಾವು ಆತ್ಮಜ್ಞಾನವನ್ನು ಇನ್ನೂ ಹೊಂದಿಲ್ಲವಾದುದರಿಂದ, ಇಷ್ಟು ಅಂಧಕಾರದಲ್ಲಿರಬೇಕಾದವರಾಯಿತು. ನಮ್ಮ ಸ್ವಪ್ರಯೋಜನಕ್ಕಾಗಿಯೇ ಈ ಭೂಲೋಕದ ವಿಧ ಮೃಗಪಕ್ಷಿಗಳು ಸೃಷ್ಟಿಸಲ್ಪಟ್ಟಿವೆಯೆಂದು ನಾವು ಭಾವಿಸಿದ್ದೇವೆ. ಇದರಿಂದ—ಎಂದರೆ, ಕೇವಲ ಸ್ವಾರ್ಥಪರತೆಯಿಂದಲ್ಲವೇ ನಾವು ನಿರ್ಭಯವಾಗಿ ಅರಣ್ಯದಲ್ಲಿ ಸಂಚರಿಸುವ ಆ ಮೂಗ ಜಂತುಗಳನ್ನು ಕಳ್ಳರಂತೆ ಹೊಂಚುಹಾಕಿ ಕೊಂದು ತಿನ್ನುತ್ತಿರುವುದು. ಅದೇ ಸ್ವಾರ್ಥಪರತೆಯಿಂದಲ್ಲವೇ ನಮ್ಮನ್ನೇ ಶರಣುಹೊಕ್ಕಿರುವ ಕೋಳಿ, ಹಂದಿ, ಕುರಿ, ಆಡುಗಳನ್ನು ನಾವು ನಿರ್ದಾಕ್ಷಿಣ್ಯದಿಂದ ಕೊಂದು ತಿನ್ನುತ್ತಿರುವುದು. ಆತ್ಮಜ್ಞಾನವನ್ನರಿತವರು ಇದನ್ನು ಸ್ವಲ್ಪ ದೃಷ್ಟಿಗೆ ನೋಡಿದರೆ ಅವರು ಇದು ಎಷ್ಟು ಹೇಯವೆಂದು ಭಾವಿಸದೆ ಇರಲಾರರು.

ಬಲಿಷ್ಠರು ದುರ್ಬಲರನ್ನು ಹಿಂಸಿಸುವುದನ್ನು ತಪ್ಪಿಸುವುದಕ್ಕಾಗಿಯೇ ನಮಗೆ ದೇವರು ಆಲೋಚನಾ ಶಕ್ತಿಯನ್ನೂ ಮತ್ತು ದೇಹ ಶಕ್ತಿಯನ್ನೂ ದಯಪಾಲಿಸಿರುವನು. ಆ ಕಾರ್ಯವನ್ನು ಮರೆತುದ್ದೇ ಆದರೆ ಬೇಲಿಯೇ ಹೊಲವನ್ನು ನಾಶಪಡಿಸಿದಂತಾಗುವುದು. ಯಾವುದೇ ಪ್ರಾಣಿಯಾದರೂ ಅದನ್ನು ನಾವು ಹಿಂಸಿಸದೆ ಅದು ನಮ್ಮನ್ನು ಕಚ್ಚಲು ಬರಲಾರದು. ಅಂಥ ಕ್ರೂರ ಮೃಗವಾದ ಸಿಂಹವೇ ತನಗೆ ಸಹಾಯ ಮಾಡಿದ ಅಂಡ್ರೋಕ್ಲಿಸ್ ಎಂಬ ರೋಮನ್ ಯುವಕನಿಗೆ ಕಷ್ಟಕಾಲದಲ್ಲಿ ಸಹಾಯ ಮಾಡಿದೆ. ಇದು ಕೇವಲ ಕಥೆಯೆಂದು ತಿಳಿಯಬಾರದು. ನಾವು ಹಿಂಸೆ ಮಾಡದೆ ಇದ್ದಲ್ಲಿ ಕಾಡು ಮೃಗಗಳು ನಮ್ಮೊಂದಿಗೆ ಅನ್ಯೋನ್ಯದಿಂದ ವಾಸಮಾಡಬಲ್ಲವು. ಈಗ್ಗೆ ಕೆಲವು ವರ್ಷಗಳ ಹಿಂದೆ ಎವರೆಸ್ಟ್ ಪರ್ವತವನ್ನು ಹತ್ತಲು ಹೋಗಿದ್ದ ಕೆಲವು ಪರದೇಶಿಯರು ಅಲ್ಲಿಯ ಕಾಡು ಮೃಗಗಳು ನಿರ್ಭಯದಿಂದ ನಮ್ಮ ಹತ್ತಿರ ಬರುತ್ತಿದ್ದುವೆಂದು ಹೇಳಿರುವರು.

ಆದರೆ ಇದರ ವಿಷಯ ಚರ್ಚೆ ಮಾಡುವುದು ನನ್ನ ಉದ್ದೇಶವಲ್ಲ. ನಮ್ಮ ಹಿರಿಯರಿಗೆ ಈ ಅಹಿಂಸಾತತ್ವವು ತಿಳಿದಿತ್ತೋ, ಇಲ್ಲವೋ ಎಂಬುದು ತಿಳಿಯಬೇಕಾಗಿದೆ. ನಮ್ಮ ಪೂರ್ವಿಕರು ಯುದ್ಧ, ಬೇಟೆ ಮೊದಲಾದುವುಗಳಲ್ಲಿ ಅತಿ ನಿಪುಣರೆನಿಸಿಕೊಂಡಿರುವರು. ಅವರಿಗೆ ಇದರ ಗಂಧವೇ ಇರುತ್ತಿರಲಿಲ್ಲವೇ ಎಂಬ ಸಂಶಯವು ಉಂಟಾಗುವುದು. ನಮ್ಮ ಈಗಿನ ಕೆಲವು ಆಚರಣೆಗಳನ್ನು ನೋಡುವಾಗ ಅದೂ ಸಹ ಅವರಿಗೆ ತಿಳಿದಿದ್ದಿತೆಂದು ಗೊತ್ತಾಗುವುದು. ನಮ್ಮ ಆಪ್ತ ಬಾಂಧವರ ಮರಣ ಹೊಂದಿದ್ದೇ ಆದರೆ ನಾವು ಕೆಲವು ದಿವಸಗಳ ವರೆಗೆ ಮಾಂಸ, ಹಾಲು ಜೇನು ಮೊದಲಾದುವುಗಳನ್ನು ಸೇವಿಸುವುದನ್ನು ಬಿಡುವೆವು. ನಾವು ಅತಿಶಯವಾದ ವ್ಯಸನವನ್ನು ಅನುಭವಿಸುವುದರಿಂದ ಕೆಲವು ದಿವಸಗಳ ವರೆಗೆ ಅಹಿಂಸೆಯನ್ನು ಆಚರಿಸುವೆವು. ನಮ್ಮ ಬಂಧು ಮಿತ್ರರು ಕ್ಷಣ ಕಾಲದಲ್ಲಿಯೇ ಕಣ್ಮರೆಯಾಗುವುದರಿಂದ ನಮಗೆ ಕೆಲವು ಕಾಲಗಳ ವರೆಗೆ ಆತ್ಮಜ್ಞಾನವುಂಟಾಗುವುದು. ಆದುದರಿಂದ ಆಪ್ತರ ನಷ್ಟ ನಮಗೆ ನಮ್ಮಂತೆ ಸ್ವಾತಂತ್ರ್ಯ ಬೇರೆ ಜಂತುಗಳಿಗೂ ಇದೆಯೆಂದು ನಾವು ತಿಳಿದಂತಾಗುವುದು. ಇದು ಕೇವಲ ಮನುಷ್ಯ ಸ್ವಭಾವವಾದ ದರಿಂದ ಇದು ಎಲ್ಲರ ಅನುಭವಕ್ಕೂ ಬರುತ್ತದೆ. ಆದುದರಿಂದಲೇ ಅದು ನಮ್ಮಲ್ಲಿ ಆಚರಣೆಯಲ್ಲಿದೆ. ಇದನ್ನು ಹೆಚ್ಚು ಜೋರಾಗಿ ಪರಿಶೀಲಿಸಿ ನೋಡಿದರೆ ಮಹಾತ್ಮರ ಅಹಿಂಸಾತತ್ವವು ಸ್ಪಷ್ಟವಾಗುವದು. ಹಾಲೂ, ಜೇನೂ ಸಹ ಅಹಿಂಸಾತತ್ವವನ್ನು ಒಳಕೊಂಡಿದೆ. ನಾವು ಅದನ್ನು ಬಲತ್ಕಾರದಿಂದ ತೆಗೆಯುವುದರಿಂದ ಅದೂ ಸಹ ಪ್ರಾಣಿ ಹಿಂಸೆಯಾಗಿದೆ. ಆದುದರಿಂದಲೇ ಮೃತಿಯನ್ನೊಂದಿದವರ ಬಂಧುಗಳು ಅದನ್ನು ತ್ಯಜಿಸುವರೆಂದು ಭಾಸವಾಗುತ್ತದೆ. ಮಹಾತ್ಮರೂ ಸಹ ತಾನು ಇದೇ ಕಾರಣದಿಂದಲೇ ಅದನ್ನು ತ್ಯಜಿಸಿದನೆಂದು ಪ್ರಕಟಿಸುವರು.

ಇದಕ್ಕಿಂತ ಹೆಚ್ಚಿನವರು ಒಂದೊಂದು ವಿಧದಲ್ಲಿ ತೆಗೆದುಕೊಳ್ಳಬಹುದು. ಆದರೆ ಜನ ಕ್ಷೇಮಕ್ಕಾಗಿ ಅದರಿಂದ ಒಳ್ಳೆ ಅರ್ಥವನ್ನು ತೆಗೆದುಕೊಳ್ಳುವುದು ಉತ್ತಮವಾಗಿದೆ. ಮೇಲೆ ವಿವರಿಸಿದ ಎರಡು ಆಹಾರಗಳಲ್ಲಿ ಶಾಕಾಹಾರವೇ ಉತ್ತಮವೆಂದು ಅನೇಕರು ಸೂಚಿಸುವರು. ಕೆಲವರು ಮಾಂಸಾಹಾರವು ಕೆಟ್ಟದೆಂದು ಗೊತ್ತಿದ್ದರೂ ಅದನ್ನು ಬಿಡಲು ಆಗುವದಿಲ್ಲವೆಂದು ಹೇಳುತ್ತಿರುವರು. ಇದು ಬಾಯಿಗೆ ರುಚಿಯಾದುದರಿಂದ ಬೀಡಿ ಸಿಗರೇಟುಗಳಂತೆ ಇದನ್ನು ಬಿಡಲು ಆಗದೆ, ಹಾಗೆ ಬಿಡಲು ಹೆಚ್ಚಿನ ಶಕ್ತಿ ಬೇಕಾಗಿದೆ. ಇಂಥ ಶಕ್ತಿಯನ್ನು ನಮ್ಮ ಜನಾಂಗಕ್ಕೆ ಭಗವಂತನು ಅನುಗ್ರಹಿಸಲೆಂದು ನಾನು ಸದಾ ಪ್ರಾರ್ಥಿಸುತ್ತೇನೆ.

ಕೆ. ಟಿ. ಯಂ.

ಮಜ್ಜಿಗೆ.

ಇದರಲ್ಲಿರುವ ಆಹಾರಗುಣಗಳು ಮತ್ತು ಔಷಧಗುಣಗಳು.

ಮಜ್ಜಿಗೆಯೆಂಬುದೇನು? ಹಾಲನ್ನು ಮೊಸರು ಮಾಡಿ, ಅದನ್ನೇ ಕಡೆದು ಅದರಲ್ಲಿರುವ ವಿಶೇಷವಾದ ಕೊಬ್ಬಿನ ಪದಾರ್ಥವನ್ನು (ಬೆಣ್ಣೆಯನ್ನು) ತೆಗೆದು ಬಿಟ್ಟರೆ ಅದೇ ಮಜ್ಜಿಗೆ. ಎಂದರೆ—ಹಾಲಿನ ಪರಿಣಾಮವೇ ಮಜ್ಜಿಗೆಯೆನಿಸುವುದು. ಮಜ್ಜಿಗೆಯಲ್ಲಿ ಕಾಣುವ ಹುಳಿಗೆ ಹಾಲಿನಲ್ಲಿರುವ ಸಕ್ಕರೆಯು ಹುಳಿತು "ಲ್ಯಾಕ್ಟಿಕ್ ಆಸಿಡ್" ಎಂಬ ಆಮ್ಲವಸ್ತುವು ಅದರಿಂದುಂಟಾಗಿ ಅದರ ಮೇಲೆ ಮಜ್ಜಿಗೆಯಲ್ಲಿ ಹುಳಿಯು ಕಾಣಿಸುವುದು. ಹಾಲಿನಲ್ಲಿರುವ ಕಸೀಯು ಇದರಲ್ಲಿ ವಿರಳವಾಗಿಯೂ, ಬಹಳ ಮಿತವಾಗಿಯೂ ಸೇರಿರುವುದರಿಂದ ಹಾಲಿಗಿಂತಲೂ ಇದು ಸುಲಭ ಜೀರ್ಣವಾಗತಕ್ಕದ್ದು. ಮಜ್ಜಿಗೆಯಲ್ಲಿ "ಪ್ರೊಟೀನ್" ಎಂಬ ಪುಷ್ಟಿಜನಕ ವಸ್ತುವು ಹೆಚ್ಚಾಗಿದೆ. 2 ಔನ್ಸು ತೂಕದಷ್ಟು ರೊಟ್ಟಿಯಲ್ಲಿರುವ ಪುಷ್ಟಿಸಾಮಗ್ರಿಯು ಒಂದು ಬಟ್ಟಲಿನಷ್ಟು ಮಜ್ಜಿಗೆಯಲ್ಲಿದೆಯೆಂದು ಹೇಳಬಹುದು. ಮಜ್ಜಿಗೆಯು ಪ್ರಕೃತಿಗೆ ಹಿತವಾದ ಮತ್ತು ಪ್ರಿಯವಾದ ಪಾನೀಯವಾಗಿರುವುದರೊಡನೆ ಮೂತ್ರಸ್ರಾವವನ್ನು ಉತ್ತೇಜನಗೊಳಿಸತಕ್ಕ ಔಷಧಗುಣಗಳೆಲ್ಲವೂ ಇದರಲ್ಲಿ ವಿಶೇಷವಾಗಿದೆ.

ಈಚೆಗೆ ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್ ನಗರದ "ಪಾಸ್ಟರ್ ಇನ್ಸ್ಟಿಟ್ಯೂಟ್" ಎಂಬ ಸಂಸ್ಥೆಯಲ್ಲಿ ಪ್ರಸಿದ್ಧ ಕ್ರಿಮಿಶಾಸ್ತ್ರಜ್ಞರಾದ ಎಲಿಮೆಂಟ್ ಕ್ರಿಕಾಫ್ ಎಂಬವರು ಹುಳಿಬಂದ ಹಾಲಿನಿಂದ ಮಾಡಬಹುದಾದ ಕೆಲವು ಚಿಕಿತ್ಸಾ ಕ್ರಮಗಳನ್ನೂ ಮತ್ತು ಹಾಲು ಹುಳಿಯುವುದಕ್ಕೆ ಅಥವಾ ಒಡೆದುಹೋಗುವುದಕ್ಕೆ ಕಾರಣವಾಗಿ ಅದರಲ್ಲಿ ಹುಟ್ಟುವ "ಲ್ಯಾಕ್ಟಿಕ್ ಒರ್ಗನ್" ಎಂಬ ಕ್ರಿಮಿಗಳ ಮೂಲವಾಗಿ ಮಾಡತಕ್ಕುದಾದ ಕೆಲವು ಚಿಕಿತ್ಸಾ ಪದ್ಧತಿಗಳನ್ನೂ ಚಿಕಿತ್ಸಕರ ತಿಳುವಳಿಕೆಗಾಗಿ ಪ್ರಕಟಿಸಿರುವರು.

ಪದಾರ್ಥಗಳು ಕೊಳೆಯದಂತೆ ಕಾಪಾಡುವುದಕ್ಕೆ "ಲ್ಯಾಕ್ಟಿಕ್ ಆಸಿಡ್" ಎಂಬ ಆಮ್ಲದ್ರಾವಕವು ಬಹಳ ಮುಖ್ಯವಾದುದೆಂದು ನ್ಯಾಯಗಳು ತಿಳಿದಿರುವುದು. ಹಾಲಿನಲ್ಲಿ ಹುಳಿ ಬಂದ ಮೇಲೆ ಎಂದರೆ "ಲ್ಯಾಕ್ಟಿಕ್ ಆಸಿಡ್" ಎಂಬ ಆಮ್ಲವು ಹುಟ್ಟಿದನಂತರ ಹಾಲಿನಲ್ಲಿರುವ ಸಕ್ಕರೆಯು ಹುಳಿ ಬಂದು, ನಿಂತುಹೋದ ಮೇಲೆ ಅದು ಬೇರೆ ವಿಧವಾಗಿ ಮುಂದೆ ಆ ವಸ್ತು ದುರ್ಗಂಧ ಬೀರಿ ಕೆಟ್ಟುಹೋಗದಂತೆ ಹೆಚ್ಚು ಕಾಲದ ವರೆಗೆ ಕಾಪಾಡಬಲ್ಲದು. ಹೀಗೆ ಹಾಲನ್ನು ಹುಳಿ ಬರಿಸಿ ಅದರ ಮೊಸರನ್ನು ಉಪಯೋಗಿಸುವ ಪದ್ಧತಿಯು ಬಹಳ ಪ್ರಾಚೀನವಾದ ಕಾಲದಿಂದ ಬಂದಿದ್ದು ಆದರ ಗುಣವನ್ನು ಕಂಡ ಮೇಲೆ ಪಾಶ್ಚಾತ್ಯ ವಿಜ್ಞಾನಿಗಳೂ ಆಗಾಗಿನ ಮಲಸಂಗ್ರಹದಿಂದ ದುಷ್ಪರಿಣಾಮಗಳೇನೂ ಉಂಟಾಗದಂತೆ ತಡೆದಿಡುವುದಕ್ಕೆ ಹಾಲಿನಲ್ಲಿ "ಲ್ಯಾಕ್ಟಿಕ್ ಆಸಿಡ್" ಎಂಬ ಆಮ್ಲವನ್ನು ಹುಟ್ಟಿಸುವ ಕಾರಣವಾದ ಅಣುಜೀವಿಗಳ ಕಾರ್ಯವೇ ಅಲ್ಲಿಯೂ ನಡೆಯುವಂತೆ ಮಾಡಬೇಕಾದದು ಅವಶ್ಯವೆಂಬ ತೀರ್ಮಾನವು ಅವರ ಮನಸ್ಸಿಗೆ ಬರುವಂತಾಯಿತು.

ಹಾಲನ್ನು ಮೊಸರು ಮಾಡುವುದರಿಂದ ಆ ಹಾಲನ್ನು ಸುಲಭ ಜೀರ್ಣವಾಗುವ ಸ್ಥಿತಿಗೆ ತಂದಂತಾಗುವುದು. ಎಂದರೆ—ಆ ಹಾಲಿನಲ್ಲಿರುವ ಕೆನೆಯು ಪದಾರ್ಥದಲ್ಲಿ ಬಹು... ವು ಮೊದಲಿನಂತಲ್ಲದೆ ನೀರಿನಲ್ಲಿ ಬೇಗ ಕರಗುವ ಸ್ಥಿತಿ... ಬಿಡುವುದು. ಈ ಕಾರಣದಿಂದಲೇ ಹಾಲನ್ನು ಹೆಪ್ಪು ಹಾಕಿ ಮಾಡಿದ ಮೊಸರು ಆಹಾರವಾಗಿಯೂ, ಔಷಧವಾಗಿಯೂ ಉಪಯೋಗಕ್ಕೆ ಬರುವುದು.

ದೀರ್ಘಕಾಲದ ರಕ್ತಕ್ಷಯ, ಸಂಧಿವಾತ, ಮೂತ್ರಪಿಂಡಗಳಲ್ಲಿ ಉಂಟಾಗುವ ವ್ರಣಗಳು, ಕಜ್ಜಿವಾಯು, ಕೀಲುನೋವು, ಕರುಳುಗಳಲ್ಲಿ ಶೀತದೋಷ ಮುಂತಾದ ಅನೇಕ ರೋಗಗಳಿಗೆ ಮಜ್ಜಿಗೆಯ ಮಿಶ್ರಣದಿಂದ ಮಾಡಿದ ಕೆಲವು ಔಷಧಿಗಳು ಬಹು ಬೇಗನೆ ಗುಣಕಾರಿಗಳಾಗಿ ಕಂಡುಬಂದಿವೆ. ... ಹುದಲ್ಲಿ ಪ್ರೊಟೀನ್ ಎಂಬ ವಸ್ತುವು ವಿಶೇಷವಾಗಿ ಸೇರಿ... ಲ್ಲಿಯೇ ಕೊಳೆತು ಅದರಿಂದ ಬುದ್ಧಿಯು ಮತ್ತೇರಿದ ... ಯಲ್ಲಿ, ಈ ಮಜ್ಜಿಗೆಯ ಚಿಕಿತ್ಸೆಯು ಬಹಳ ಪ್ರಯೋಜನ... ರಿಯಾಗಿದೆ. ಆದರೆ ಪಿಷ್ಟಪದಾರ್ಥವು ಹೆಚ್ಚಾಗಿ ದೇಹವನ್ನು ಸೇರಿದ ಸಂದರ್ಭಗಳಲ್ಲಿ ಇದರ ಚಿಕಿತ್ಸೆಯೇನೂ ಅಷ್ಟು ಉಪಕಾರಿಯಲ್ಲ.

ಹಾಲಿಗೆ ಎರಡು ರೂಪಾಂತರಗಳುಂಟು. ಅವಕ್ಕೆ ಹೆ... ಪರನ್ನು ಸೇರಿಸಿ ಹೆಪ್ಪು ಹಾಕಿ ಕಡೆದು ಅದರಲ್ಲಿರುವ ಕೊಬ್ಬಿನ ಪದಾರ್ಥವನ್ನು (ಬೆಣ್ಣೆಯನ್ನು) ತೆಗೆದ ಮೇಲೆ ನಿಂತ ಮಜ್ಜಿಗೆಯು ಒಂದು ವಿಧವು. ಹುಳಿ ಬಂದ ಹಾಲು ಮತ್ತೊಂದು ವಿಧವು. ಎರಡನೆಯದರಲ್ಲಿ ಕೊಬ್ಬಿನ ಪದಾರ್ಥವು ಅದರಲ್ಲಿಯೇ ನಿಂತಿರುವುದು. ಇವೇ ಎರಡಕ್ಕೂ ಇರುವ ಅಂತರವು. ಹಿಂದೆ ಹೇಳಿದಂತೆ "ಲ್ಯಾಕ್ಟಿಕ್ ಆಸಿಡ್" ಎಂಬ ಆಮ್ಲವನ್ನು ಹುಟ್ಟಿಸುವುದಕ್ಕೆ ಕಾರಣಗಳಾದ ಜೀವಾಣುಗಳ ಸಂಬಂಧವಿರುವ ಹಾಗೆ ಮಾಡಿದ ಮಿಶ್ರಣದಿಂದ ಅನೇಕ ಸಂದರ್ಭಗಳಲ್ಲಿ ಮಲಕೋಶದಲ್ಲಿ ಬಹಳ ಗುಣಾಂಶಗಳು ಕಂಡು ಬಂದಿವೆ. ಎಂದರೆ—ಮಲದಲ್ಲಿ ಮೊದಲಿದ್ದ ಅಸಹ್ಯವಾದ ದುರ್ಗಂಧವಿಲ್ಲದಂತೆ ಮಾಡುವುದು. ಇಲ್ಲಿ ಮುಖ್ಯವಾಗಿ ನೆನಪಿನಲ್ಲಿಡಬೇಕಾದ ಅಂಶವೇನೆಂದರೆ—"ಲ್ಯಾಕ್ಟಿಕ್ ಆಸಿಡ್" ಎಂಬ ಆಮ್ಲವನ್ನು ಹುಟ್ಟಿಸಲು ಕಾರಣವಾದ ಅಣುಜೀವಿಗಳು ಸಾಧಾರಣವಾದ ಆಹಾರ ಸೇವನೆಯಲ್ಲಿ ಅಧಿಕ ಗುಣಗಳನ್ನು ತೋರಿಸುವುವು.

'ಆ. ಚಂದ್ರಿಕೆ.'

ಕೆನರಾ ಹೈಸ್ಕೂಲ್ ಸೋಡ್ತಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲಿನ ಮತ್ತು ಕೆನರಾ ಬಾಲಕಿಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಅತೀ ಮಹತ್ವದ ಒಂದು ಸೋಡ್ತಿಯನ್ನು ತೆಗೆಯಲು ನಿಶ್ಚೈಸಿಯದೆ ಇದರ ಆಡಳಿತೆಯನ್ನು ಜವಾಬ್ದಾರಿಯುಳ್ಳ ಪ್ರಮುಖ ಗೃಹಸ್ಥರು ನಡಿಸುವರು.

ಒಟ್ಟೂ ಟಿಕೇಟಿನ ಮೌಲ್ಯ ಒಂದುಲಕ್ಷ ರೂಪಾಯಿ. ಈ ಪೈಕಿ ರೂಪಾಯಿ 15,000 ಖರ್ಚಿನ ಬಗ್ಗೆ ವಜಾ ಮಾಡೋಣಾಗುವದು. ರೂಪಾಯಿ 40,000 ಶಾಲೆಗಳ ಉಪಯೋಗದ ಬಗ್ಗೆ ವಿನಿಯೋಗಿಸಲ್ಪಡುವದು ಮತ್ತು 45,000 ರೂಪಾಯಿಗಳನ್ನು 3013 ಸೋಡ್ತಿ ಬಹುಮಾನಗಳಾಗಿ ಹಂಚಲಾಗುವದು. ಈ ಬಹುಮಾನಗಳ ತಪಶೀಲು ಕೆಳಗ ಕಾಣಿಸಿದೆ.

1ನೇ ಬಹುಮಾನ ರೂಪಾಯಿ 12500. 2ನೇ ಬಹುಮಾನ ರೂಪಾಯಿ 5000. ರೂಪಾಯಿ 1000ದರದ 2 ಬಹುಮಾನಗಳು. ರೂಪಾಯಿ 500 ದರದ 3 ಬಹುಮಾನಗಳು. ರೂಪಾಯಿ 250 ದರದ 6 ಬಹುಮಾನಗಳು. ರೂಪಾಯಿ 100 ದರದ 10 ಬಹುಮಾನಗಳು. ರೂಪಾಯಿ 50 ದರದ 30 ಬಹುಮಾನಗಳು. ರೂಪಾಯಿ 20 ದರದ 100 ಬಹುಮಾನಗಳು. ರೂಪಾಯಿ 10 ದರದ 800 ಬಹುಮಾನಗಳು. ರೂಪಾಯಿ 5 ದರದ 2100 ಬಹುಮಾನಗಳು.

ಟಿಕೇಟು ಮಾರಾಟವು ತಾ 4—1—29ಕ್ಕೆ ಮುಗಿಯುವದು ಮತ್ತು ಸೋಡ್ತಿಯು ತಾ. 26—1—29ರಲ್ಲಿ ತೆಗೆಯೋಣಾಗುವದು.

ಪ್ರತಿ ಒಂದು ಟಿಕೇಟಿನ ಬೆಲೆಯು ಬರೇ ಒಂದು ರೂಪಾಯಿ ಆಗಿರುತ್ತದೆ. 24 ಟಿಕೇಟುಗಳು ಮಾರಿದವರಿಗೆ ಪ್ರತಿಫಲವಾಗಿ ಒಂದು ಟಿಕೇಟು ಜಾಸ್ತಿ ಸಿಕ್ಕುವದಲ್ಲದೆ ಹೆಚ್ಚು ಟಿಕೇಟುಗಳು ಮಾರಿದವರಿಗೆ ವಿಶೇಷ ಬಹುಮಾನಗಳು ದೊರೆಯುವವು. ಈ ಶಿವಾಯಿ ಯೋಗ್ಯವಾದ ಎರಡು ಸಂಸ್ಥೆಗಳಿಗೆ ಮುಖ್ಯವಾಗಿ ಕೆನರಾ ಹೈಸ್ಕೂಲಿನ ಸಂಬಂಧವಾಗಿ ಈಗ ತೆರೆಯೋಣಾಗಬೇಕಾಗಿ ನಿಶ್ಚೈಸಿದ ಕೈಗಾರಿಕೆ ಶಾಲೆಗೆ ಕೂಡ ಅವರು ಸಹಾಯ ಮಾಡಿದಂತಾಗುವದು. ಅಪೇಕ್ಷೆಯುಳ್ಳ ಏಜೆಂಟರು ಸೋಡ್ತಿ ಕಮಿಟಿಯ ಹಾನರರಿ ಸೆಕ್ರೆಟರಿಯವರಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಬಹುದು. ಏಜೆಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು.

ಬಿ. ಮಂಜುನಾಥ ಬಾಳಿಗ,

ತಾ. 16—3—28. ಹಾನರರಿ ಸೆಕ್ರೆಟರಿ

ಕೆನರಾ ಹೈಸ್ಕೂಲ್ ಸೋಡ್ತಿ ಕಮಿಟಿ

ಬ್ರಿಟಿಷ್ ಗಲ್ಲಿ, ಫಳನೀರ,

೬—1 ಮಂಗಳೂರು.

ವರ್ತಮಾನ ಸಂಗ್ರಹ.

ಒಳನಾಡು

ತಾ 1-4-'28ರಲ್ಲಿ ಸ್ಕೂಲು [illegible] (ಬೋರ್ಡು) ಪರೀಕ್ಷೆಗಳು ನಡೆದವು

[illegible] ಕಾಲದ ರಜೆಗಾಗಿ ಸೆಂಟ್ರಲ್ ಹೈಸ್ಕೂಲು [illegible] ರಿಂದ ಮೇ ತಾ. 20ರ ವರೆಗೆ ಮುಚ್ಚಲ್ಪಟ್ಟಿದೆ

[illegible] ತಾ. 5 ರಿಂದ ಕೊಡಗಿನ ಎಲ್ಲಾ [illegible] ಲೈಸೆನ್ಸ್‌ದಾರರಿಗೆ ಬೇಟೆಯಾಡಲು ಬಿಡಲ್ಪಟ್ಟಿದೆ.

ಕೊಡಗು ವಿದ್ಯಾಭಿವೃದ್ಧಿ ಸಂಘದ [illegible] ತಾ. 15ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದು ತಿಳಿದಿದೆ

ಕೊಡಗಿನ ಸಿವಿಲ್ ಕೋರ್ಟುಗಳು [illegible] ಕೋರ್ಟು ಸಮೇತ ಈ ತಾ. 11 ರಿಂದ ಮೇ 31ರ ವರೆಗೆ ಮುಚ್ಚಲ್ಪಡುತ್ತವೆ.

[illegible] ಪೇಟೆಯಲ್ಲಿದ್ದ [illegible] ತನ್ನ 76ನೇ ವಯಸ್ಸಿನಲ್ಲಿ ತಾ. 30-3-'28ರಲ್ಲು [illegible] ರಾದರೆಂದು ತಿಳಿಸಲು ವಿಷಾದಿಸುತ್ತೇವೆ

[illegible] ಮುಂದೆ ಕೊಡಗಿನಲ್ಲಿರುವ ಎಲ್ಲಾ [illegible] ಗಳಿಗೆ ಆದಿತ್ಯವಾರದೊಂದಿಗೆ [illegible] ರಜ [illegible] ಬಾದಿದೆಯೆಂದು ವರ್ತಮಾನ.

ಕಮಿಷನರವರು ಆರೋಗ್ಯದ [illegible] ತಾ. 30ರಲ್ಲಿ [illegible] ತಾ. 13ರಲ್ಲಿ ವಾಪಸು [illegible]

[illegible] ಕಮಿಷನಿನ ಮುಂದಿಡಲು ಕೊಡಗಿನ [illegible] ಪರಿಸ್ಥಿತಿಯ ವಿಷಯ ತಕ್ಕ [illegible] ಸರ್ಕಾರದವರು ಸಂಗ್ರಹಿಸುತ್ತಿರುವರಾದ ವರ್ತ [illegible]

ಕಳೆದ ಒಂದು ವಾರದಿಂದ ಕೊಡಗಿನ ಎಲ್ಲಾ ಭಾಗಗಳ [illegible] ಜೋರಾಗಿ ಮಳೆ ಬಿದ್ದಿದೆ [illegible] ಮೋಡವಿಲ್ಲದೆ ಆಕಾಶವು ಶುಭ್ರವಾಗಿ ಕಾಣುತ್ತದೆ

ಸ್ಕೂಲ್ ಫೈನಲ್ ಪರೀಕ್ಷೆಯ ಪ್ರಶ್ನೆಗಳು ಕೆಲವು [illegible] ಮೊದಲೇ [illegible] ಕಾರಣ ಈ 30ನೇ [illegible] ಪುನಹ ಪರೀಕ್ಷೆ ಮಾಡಲಾಗುವದೆಂದು ವರ್ತಮಾನ

ಚೀಫ್ ಕಮಿಷನರವರ ದರ್ಬಾರು ಕಳೆದ ಸೋಮವಾರ ಸಾಯಂಕಾಲ 4½ ಗಂಟೆಗೆ ಮಡಿಕೇರಿ ಕೋಟೆಯ [illegible] ಯಲ್ಲಿ ನಡೆಯಿತು. ಇದರ ವಿವರವು ಇನ್ನೊಂದು [illegible]

ಸಬ್ ಅಸಿಸ್ಟೆಂಟ್ ಸರ್ಜನರುಗಳಾದ [illegible] ವೀರರಾಜಪೇಟೆಗೆ, [illegible] ಮಡಿಕೇರಿಯಿಂದ [illegible] ವರ್ಗಾಯಿಸಿರುವರು.

ಕಳೆದವಾರ [illegible] ಒಂದು ಹುಲಿ [illegible] ಮೃತವಾದವೆಂದೂ [illegible] ವರ್ತಮಾನ

ವೀರರಾಜಪೇಟೆ ಬೆಂಚ್ ಮೇಜಿಸ್ಟ್ರೇಟುಗಳ [illegible] ಎಂ. ಎಸ್. ಎಂ. [illegible] ಬೆಂಚ್ ಮೇಜಿಸ್ಟ್ರೇಟರಾಗಿ ನೇಮಿಸಿರುವರು.

ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ [illegible] ಕಮಿಷನರು [illegible] ಕೊಡಗಿನಲ್ಲಿ [illegible] ಸರ್ಟಿಫಿಕೇಟ್ ಕೊಡಲು ಲೈಸೆನ್ಸ್ ಕೊಟ್ಟಿರುವರು.

ಕಳೆದ ವಾರದ ಮಳೆಯ [illegible] ಅಭದ್ರವಾದುದರಿಂದ ಬಸ್ಸುಗಳು [illegible] ಕಾರಣ ಈಗ ವೀರರಾಜಪೇಟೆ ಮತ್ತು [illegible] ಬಸ್ಸುಗಳು [illegible]

ಒಂದು ಹಂದಿಯು [illegible] ಒಂದು ಮನೆಯನ್ನು [illegible] ಅಸ್ಪತ್ರೆಗೆ [illegible] ತಿಳಿಯಬರುತ್ತದೆ.

ಆಲ್ ಇಂಡಿಯಾ ಮ್ಯೂಸಿಯಂ [illegible] ಹೌಸನ್ ಎಸೋಸಿಯೇಶನಿನ ವಾರ್ಷಿಕ [illegible] ಕಳೆದ ತಾ. 31ರಲ್ಲಿ ಮಡಿಕೇರಿಯಲ್ಲಿ ನಡೆಯಿತು. [illegible] ಕಡಗದಾಳು ಗ್ರಾಮದ [illegible] 500 ರೂಪಾಯಿಯ [illegible] ತಿಳಿಯುತ್ತೇವೆ.

ಕಳೆದ ತಾ. 29ರಲ್ಲಿ ಕಡಗದಾಳು ಗ್ರಾಮದ [illegible] ಮಂಗಳೂರಿಂದ ವಾಪಸು ಬರುವಾಗ್ಗೆ [illegible] ಒಂದು ಹೊಟೇಲಿನಲ್ಲಿ ಯಾವದೋ ಕಾರಣದಿಂದ ಜಗಳವಾಗಿ ಅವರು 9 [illegible] ದ ಮೈಲು ದೂರ [illegible] ಹಾಕಿದವರ ಪೈಕಿ ನಾಲ್ಕೈದು [illegible] ವರೆಂದೂ, [illegible] ಪೊಲೀಸು [illegible] ತಿಳಿಯಬರುತ್ತದೆ.

ಹೇಗ್ಗರೂರು ಗ್ರಾಮದ [illegible] ಪೊಲೀಸಿಗೆ [illegible] ಕೋಟೆಯಲ್ಲಿ [illegible] 42 [illegible] ಸಿಕ್ಕಿದುವೆಂದು ವರ್ತಮಾನ. [illegible]

ಕೊಡಗು ಎಸ್ಟೇಟ್ ಎಸೋಸಿಯೇಶನಿನ ಕ್ರಿಕೆಟ್ ಟೂರ್ನಮೆಂಟು [illegible] ಮಡಿಕೇರಿಯಲ್ಲಿ [illegible] ತಾ. 1 ಮತ್ತು 2ರಲ್ಲಿ ನಡೆದ [illegible] ತಾ. 4 ಮತ್ತು 5ರಲ್ಲಿ ನಡೆ [illegible]

ಸೋಮವಾರಪೇಟೆ [illegible] 20 ದಿವಸಗಳ [illegible] ಪೊಲೀಸು [illegible]

ಹಿಂದೂದೇಶ.

[illegible] ತಾ. 6ರಲ್ಲಿ [illegible]

[illegible]

ಕಲ್ಕತ್ತಾ [illegible]

ಬ್ರಿಟಿಷ್ [illegible]

[illegible] 10 ಜನ [illegible] 15 [illegible]

ಇಂಡಿಯನ್ ಸರ್ಕಾರದವರ [illegible] ಐ. ಸಿ. ಎಸ್. [illegible]

ಬೊಂಬಾಯಿಯಲ್ಲಿ [illegible] 15 [illegible]

ತಾ. 2ರಲ್ಲಿ ಕರಾಚಿಯಲ್ಲಿ [illegible] 80 [illegible]

ಜಗತ್ತಿನಲ್ಲಿ ಮಹಾತ್ಮ ಗಾಂಧಿಯವರಿಗಿಂತ ದೊಡ್ಡ [illegible]

ಸೈಮನ್ ಕಮಿಷನಿನೊಂದಿಗೆ [illegible] 'ರೌಂಡ್ ಟೇಬಲ್ ಕಾನ್‌ಫರೆನ್ಸ್' [illegible] ಕಾಂಗ್ರೆಸ್ ಪಕ್ಷದವರು [illegible]

[illegible] ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರು ಸೂಚಿಸಿರುವರು.

ವಿದೇಶ.

ಬ್ರಿಟನ್ ಪಾರ್ಲಿಮೆಂಟಿನ ಕಾರ್ಯವು 13ರಲ್ಲಿ [illegible]

[illegible] ಡಾಕ್ಟರ್ [illegible]

ಕಳೆದ ಎರಡು ತಿಂಗಳೊಳಗೆ ಅಮೇರಿಕದಲ್ಲಿ [illegible] 12 ಮಿಲ್ಯ [illegible] ಕ್ಯಾಲಿಫೋರ್ನಿಯದ [illegible] ತಿಳಿಸಿರುವರು.

ವಿಜ್ಞಾಪನೆ.

[illegible] ನನ್ನ ಕುಟುಂಬಕ್ಕೆ ಉಂಟಾಗಿರುವ ದುಃಖದಲ್ಲಿ [illegible] ಪತ್ರಗಳ [illegible] ನನ್ನ ಕೃತಜ್ಞತೆಯನ್ನು ಸೂಚಿಸುವವನಾಗಿದ್ದೇನೆ.

ವೀರರಾಜಪೇಟೆ, ಚಿಟ್ಟಿಯಂಡ ಉತ್ತಯ್ಯ.
ತಾ 1-4-28,

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗ್ ತಾ 15-4-28ರಲ್ಲು ಮಡಿಕೇರಿ [illegible] ಬೆಳಿಗ್ಗೆ 9 ಗಂಟೆಗೆ ನಡೆಯುತ್ತೆ. [illegible] ದಯಮಾಡಿಸಬೇಕಾಗಿ ಕೇಳಿಕೊಳ್ಳಲಾಗಿದೆ

ಸೆಕ್ರೆಟರಿ

Wanted

Energetic students for music tutions from the undersigned in I Harmonium, II Flute, III Veena, IV Vokal

For detailed information [illegible] to the undersigned.

K. R. Iyer [illegible]
Residing at Ch[illegible]on,
Door No 452,
Mysore City.

A Horse For Sale.

For Particulars apply to -
G M Manjinathiya
Coffee Planter Suntikoppa Coorg
4-1

ಪತ್ರವ್ಯವಹಾರ

[illegible] ಪತ್ರಕರ್ತರು ಜವಾಬ್ದಾರರಲ್ಲ. ಸಂ.]

[illegible]

ಅಯ್ಯಾ,

ಈ [illegible] ತಾ 1-4-28ರ ಕೊಡಗು ಪತ್ರಿಕೆಯಲ್ಲಿ "ಕ್ರೀಡಾ" [illegible]

"ಶ್ರೀ ರಾಮಕೃಷ್ಣ ವಿವೇಕಾನಂದರು [illegible] 'ಕೊಡವ' [illegible]

'ಕೊಡವ' ದ [illegible]

ಹಿಸುವುದು ಉಚಿತವಲ್ಲ. ಸ್ವಾಮಿಯವರು ಹೊಸ ರೀತಿಯಲ್ಲಿ ವರ್ತಿಸುವವರಲ್ಲ. ಅವರು ಪಂಚಮರೊಂದಿಗೆ ಕೂತು ಪಂಚಮರಿಂದಲೇ ತಯಾರಿಸಲ್ಪಟ್ಟ ಆಹಾರವನ್ನು ತಿಂದ ಮಾತ್ರಕ್ಕೆ ಪಂಚಮರ ಏಳಿಗೆಯಾಗುವುದೆಂದು ಅವರು ಯೋಚಿಸಲಾರರು. ಈ ಅಭಿಪ್ರಾಯವನ್ನೇ ಹಲವು ವಿದ್ಯಾವಂತ ಜನರು ಸಹ ಮನ್ನಿಸುವರು. ರಾಮಕೃಷ್ಣ ಸಂಸ್ಥೆಯವರು ಪಂಚಮರನ್ನೆಲ್ಲಾ ಒಂದೇ ಸಲ ಒಂದೇ ದಿನ ಉತ್ತಮ ಪದವಿಗೆ ಎತ್ತುವ ವಿಚಾರವನ್ನೂ ಪ್ರಲಾಪರು. ಅದು ಸಾಧ್ಯವಿಲ್ಲದ ಮಾತೂ ಹೌದು ಪಂಚಮರ ಕೂಟದಲ್ಲಿ ಊಟ ಮಾಡುವ ಮಾತಂತಿರಲಿ, ಕೇಳಿದವರೇ ಎಷ್ಟೋ ಸಲ ಪಂಚಮರೊಂದಿಗೆ ಕೂತು ಊಟ ಮಾಡಿದ್ದಾರೋ ನನಗೆ ತಿಳಿಯದು. ಹಾಗೆ ಮಾಡಿದ್ದರೆ ಸಮಸ್ಯೆಯ ನಿಜಾಂಶವು ಅವರಿಗೆ ತಿಳಿಯಲಾಗುತ್ತಿತ್ತು. ಬ್ರಾಹ್ಮಣನೂ, ಲಿಂಗಾಯತನೂ ಒಂದಾಗಿ ಕೂತು ಊಟ ಮಾಡಲಾರರು. ಮೊದಲಿಯಾರನ ಮನೆಯಲ್ಲಿ ಒಕ್ಕಲಿಗನಾಗಲಿ, ಇತರ ಉತ್ತಮ ಜಾತಿಯವನಾಗಲಿ ಊಟ ಮಾಡಲಾರನು. ಹೀಗಾಗಲಿಕ್ಕೆ ಮುಖ್ಯ ಕಾರಣವೇನು? ಸಮಾಜದ ಕಟ್ಟು ಕಟ್ಟಳೆಗಳೇ ಸಮಾಜಕ್ಕೆ ವಿರೋಧವಾಗಿ ನಡೆಯಲು ಸಾಧ್ಯವಿಲ್ಲ ಸಮಾಜದಲ್ಲಿ ನ್ಯೂನತೆಗಳಿದ್ದರೆ ಅವು ವಿದ್ಯಾಪ್ರಸಾರದಿಂದ ಕಳಚಿ ಬಿದ್ದು ಹೋಗಬೇಕು. ಆದುದರಿಂದಲೇ ಸುಧಾರಣೆಯ ಕಾರ್ಯವು ಸಾವಕಾಶವಾಗಿ ನಡೆಯಬೇಕು. ಒಮ್ಮಲೇ ಪಂಚಮರಿಗೂ ಉತ್ತಮ ಪದವಿಯ ಮುದ್ರೆ ಹಾಕಿದರೆ ಸಮಾಜವು ತಲೆಕೆಳಕಾದೀತು.

ಇಂಗ್ಲಂಡಿನಲ್ಲಿಯೂ ಮೇಲು ಜಾತಿಯವರು ಜಾಡಮಾಲಿಯರ ಮನೆಯಲ್ಲಿ ಊಟ ಮಾಡುವುದೂ ಇಲ್ಲ, ಅವರೊಂದಿಗೆ ಕೂಡಾಡುವುದೂ ಇಲ್ಲ. ಹಾಗೆಯೇ ಜಪಾನಿನಲ್ಲಿಯೂ ಅತಿ ಕೀಳುಜಾತಿಯವರು ಪ್ರತ್ಯೇಕವಾಗಿರುವರು. ಅಮೇರಿಕಾದೇಶದ ನೀಗ್ರೋ ಜನರು ಕ್ರೈಸ್ತರಾದರೂ ಅವರ ಹಾಡಬಾಳು ನಮ್ಮ ಹೊಲೆಯರಿಗಿಂತಲೂ ಕಡೆ. ಕೀಳು ಮೇಲೆಂಬ ತರಗತಿಗಳೂ ಎಲ್ಲಾ ಜನಾಂಗದ ಜನರಲ್ಲಿಯೂ ಇವೆ. ಆದರೆ ತಿರಸ್ಕಾರ ಮಾತ್ರ ಇರಕೂಡದು. ಈ ತಿರಸ್ಕಾರ ಭಾವನೆಯನ್ನು ದೂರ ಮಾಡಲು ರಾಮಕೃಷ್ಣ ಸಂಸ್ಥೆಯು ಯತ್ನಿಸಿದೆ.

ಹೊಲೆಯರೊಂದಿಗೆ ಕೂತು ಊಟ ಮಾಡುವುದು ದೊಡ್ಡ ಮಾತಲ್ಲ. ಅವರ ಹೊಲಸು ಸ್ವಭಾವವು ದೂರವಾದೊಡನೆ ಅವರು ನಮ್ಮೊಳಗೆ ಕೂಡಾಡುವರು. ಆದುದರಿಂದ ಮೊದಲು ಪಂಚಮರೊಳಗೆ ಕೆಲವು ಒಳ್ಳೇ ಸುಧಾರಣೆಗಳಾಗುವಂತೆ ಸುಧಾರಕರು ಪ್ರಯತ್ನಿಸಬೇಕು. ಅವರು ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಬಾರದು. ಅವರು ತಮ್ಮ ಶರೀರವನ್ನು ವಾರಕ್ಕೊಮ್ಮೆಯಾದರೂ ತೊಳೆದು, ಒಟ್ಟೆಬರೆಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು. ಮನೆಮಾರುಗಳನ್ನು ಅಚ್ಚುಕಟ್ಟಾಗಿಟ್ಟುಕೊಳ್ಳಬೇಕು. ಹೆಂಡ ಕುಡಿಯಬಾರದು. ಅವರಿಗ ಸ್ಕೂಲುಗಳನಿಟ್ಟು ವಿದ್ಯೆ ಕೊಡಬೇಕು. ಅವರ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಪಡಿಸಲಿಕ್ಕಾಗಿ ಅವರಿಗೆ ಕೈ ಕೆಲಸಗಳನ್ನೂ, ಶಾಸ್ತ್ರೀಯ ವ್ಯವಸಾಯ ಕ್ರಮವನ್ನೂ ಕಲಿಸಬೇಕು. ಹೀಗೆಲ್ಲಾ ಮಾಡಿದರೆ ಪಂಚಮರು ಮುಂದುವರಿದಾರು ಅದು ಬಿಟ್ಟು ಅವರೊಂದಿಗೆ ಕುಳಿತು ಊಟ ಮಾಡುವುದರಿಂದ ಏನೂ ಕಾಸಿನ ಪ್ರಯೋಜನವಾಗಲಾರದು.

ಪಂಚಮರನ್ನು ಮೇಲಕ್ಕೆತ್ತಬೇಕಾದದ್ದು ಪ್ರತಿಯೊಬ್ಬ ಉತ್ತಮನ ಕೆಲಸವೆಂದು ಸ್ವಾಮಿ ವಿವೇಕಾನಂದರು ಹೇಳುವರು. ಆದರೆ ನಾವು ಅವರ ಸ್ಥಿತಿಗೆ ಹೋಗದೆ ಅವರನ್ನು ನಮ್ಮ ಮೆಟ್ಟಲಿಗೆ ಎತ್ತಬೇಕೆಂದು ಹೇಳುವರು. ಆ ಕೆಲಸ ನೀಚವಾದದ್ದು, ಈ ಕೆಲಸ ಉತ್ತಮವಾದದ್ದು ಎಂಬದಾಗಿ ಹೇಳಿ ಹಕ್ಕು ಸ್ಥಾಪನೆಗಾಗಿ ನಾವು ಒದ್ದಾಡಬಾರದು. ಸ್ವಾಮಿ ವಿವೇಕಾನಂದರು ಜಾತಿ ಹಕ್ಕಿನ ವಿಚಾರವಾಗಿ ಅನ್ನುವುದೆ ನೆಂದರೆ.

"ಅನೇಕತ್ವವು ಪ್ರಪಂಚದ ಜೀವಾಳ. ಜಾತಿಗಳ ಈ ಬಹುತ್ವವನ್ನು ನಾವು ನಾಶಪಡಿಸಬಾರದು. ಬುದ್ಧಿ ಮತ್ತು ಬಲಗಳಲ್ಲಿ ವ್ಯತ್ಯಾಸವಿರುವಂತೆ ಕರ್ಮ ಮತ್ತು ವ್ಯಕ್ತಿಗಳಲ್ಲಿ ಭೇದವಿರುತ್ತದೆ. ಒಬ್ಬನು ಸ್ವಭಾವಮುಖದವನಿದ್ದರೆ, ಇನ್ನೊಬ್ಬನು ಜಾಡಮಾಲಿಯಾಗಿರುವನು. ಜಾತಿಗಳಿಂದ ಕಲೆಗಳೂ, ಕೈಗಾರಿಕೆಗಳೂ ಉದ್ಧಾರವಾಗಿವೆ. ಈಗ ಮುಖ್ಯವಾದ ಜಗಳವೇನಂದರೆ—ದೊಡ್ಡಸ್ತಿಕೆ.

ಹಿಂದೂದೇಶವು ಹಲವು ದೇಶೀಯ ಮತ್ತು ವಿದೇಶೀಯ ಜಾತಿಗಳಿಂದಲೂ, ಧರ್ಮಗಳಿಂದಲೂ ಕೂಡಿದೆ. ಆರ್ಯಧರ್ಮವು ಮತ್ತು ಆರ್ಯ ಸಂಸ್ಕೃತಿಯು ಈ ಜಾತಿಗಳೊಳಗೆ ಹರಡಿಲ್ಲ. ಈ ಜಾತಿ ಜನರಿಗೆ ಆರ್ಯರ ಹಕ್ಕುಗಳನ್ನು ಕೊಟ್ಟು ಅವರನ್ನು ಸಂಪೂರ್ಣವಾಗಿ ಆರ್ಯರನ್ನಾಗಿ ಮಾಡಬೇಕಾದದ್ದು ಸದ್ಯದ ಕಾರ್ಯವಾಗಿದೆ.

'ಕೇಳಿದವರು' ಶಂಭವಾನಂದರಿಗೆ ಸ್ವಾಮಿ ವಿವೇಕಾನಂದರು ಸದ್ಬುದ್ಧಿಯನ್ನು ಕೊಡಲೆಂದು ಕೇಳಿಕೊಂಡಿದ್ದರ ದೆಸೆಯಿಂದ ಮೇಲಿನ ಸ್ವಾಮಿ ವಿವೇಕಾನಂದರ ಮಾತನ್ನು ಕೊಡಲಾಯಿತು. ಯಾರು ಬೇಕಾದರೂ ಪಂಚಮರೊಂದಿಗೆ ಕೂತು ಊಟ ಮಾಡಬಹುದು. ಆದರೆ ಒಬ್ಬೇ ಹೀಗೆ ಮಾಡುವುದರಿಂದ ಪಂಚಮರ ಏಳಿಗೆಯಾಗುವುದೆಂದು ಮಾತ್ರ ಯಾರೂ ನಂಬಬಾರದು. ಅವರೊಂದಿಗೆ ಒಡನಾಡುವುದು, ಅವರನ್ನು ಮುಟ್ಟಾಡಿಸಲಿಕ್ಕಾಗಿ ಮಾತ್ರ. ಅವರು ಏಳಿಗೆಯಾಗಬೇಕಾದರೆ ಅವರಿಗ ವಿದ್ಯೆ, ಲೌಕಿಕ ಹಾಗು ಪಾರಮಾರ್ಥಿಕ ವಿದ್ಯೆ ಕೈಗಾರಿಕೆ, ಕೃಷಿ ಇವನ್ನು ಕಲಿಸಬೇಕು.

ನಾನು ಸಹ ಪಂಚಮರೊಂದಿಗೆ ಕೂತು ತಿಂಡಿತೀರ್ಥ ತಿಂದವನೇ. ನನ್ನನ್ನು ಸಹ ನನ್ನ ಸಮಾಜದವರು ಅವಹೇಳನ ಮಾಡಿದರು ಇಂಥ ಸ್ಥಿತಿಯು ಒದಗದಂತೆ ಮಾಡಬೇಕಾದರೆ ಪಂಚಮರಿಗೆ ವಿದ್ಯೆ ಮೊದಲು ಕೊಟ್ಟು ಅವರನ್ನು ಸುಧಾರಿಸಬೇಕು.

ಪಂಚಮಸೇವಕ.

ಕೈಕೇರಿ ದೇವಸ್ಥಾನ

ಅಯ್ಯಾ,

'ಲೋಕಪಾವನ'ದ ತಾ. 27—1—28ರ ಸಂಚಿಕೆಯಲ್ಲಿ 'ಗ್ರಾಮಸ್ಥ'ರೊಬ್ಬರು ತಾರೀಕು 1—3—28ರಲ್ಲಿ ನಡೆದ ಕೈಕೇರಿ ದೇವಸ್ಥಾನ ಹಬ್ಬದ ವಿಷಯ ಒಂದು ಜಾತ್ರೆ ಬರೆದುದನ್ನು ನೋಡಿ ಆಶ್ಚರ್ಯವಾಯಿತು. ದೇವಾಲಯವು ಕಟ್ಟಲ್ಪಟ್ಟು 8 ವರ್ಷಗಳಿಂದ ಉತ್ಸವವು ನಡೆಯುತ್ತಿದೆ. ದೇವಸ್ಥಾನದ ಮುಖ್ಯಾಧಿಕಾರಿಗಳು ಜನ್ಮದ ಹುಲೆಯರು ಅಲ್ಲ. ಬೇರೆ ಮನೆಯವರಾಗಿರುತ್ತಾರೆ. ಆ ತಾರೀಕಿನ ಹಬ್ಬವು ಬೋಡಹಬ್ಬವಾಗಿದೆ. ಆದರೆ ಕಡೇ ಹಬ್ಬವಲ್ಲ. ಸರ್ವರೂ ಜಾತಿ, ಮತ ಭೇದವಿಲ್ಲದೆ ದೇವರ ಕೆಲಸವನ್ನು ವೇಷಗಳಿಂದ ಕೂಡಿ ಬೇಡು ಪದಗಳಿಂದ ಹಾಡಿ ರಾತ್ರೆ ಸಮಯದಲ್ಲಿ ಕಟ್ಟಿದ ಕುದುರೆ, ಆನೆ ಸಮೇತ ದೇವಸ್ಥಾನದ ಹೊರಗಣ ಅಂಗಳಕ್ಕೆ ಸೇರಿ ಅಲ್ಲಿ ಬ್ರಾಹ್ಮಣನಿಂದ ಪ್ರಸಾದವನ್ನು ತೆಗೆದುಕೊಂಡು ಆಟ್ಟರು ಮಾಡುವುದುಂಟು. ದೇವಸ್ಥಾನದ ಶಾಂತಿಗಾರನು ಯಾವಾಗಲೂ ಹೇಳುವಂತೆ ಹೇಳುತ್ತಾರೆಯೇ? ದೇವರ ಪೂಜೆಯನ್ನು ಮಾಡಿ ರಾತ್ರಿ ಸಮಯದಲ್ಲಿ ಮಾತ್ರ ಆಟದವರಿಗೆ ಪ್ರಸಾದ ಕೊಡುವದಾಗಿದೆ. ಆ ಸಮಯದಲ್ಲಿ ಹೊಲೆಯರ ದೇವರೂ ಸಹ ದೇವಸ್ಥಾನದ ಹೊರಗಣ ಅಂಗಳಕ್ಕೆ ಕೂಡಿ ಬರುವುದುಂಟು. ದೇವಸ್ಥಾನದ ಶಾಂತಿಗಾರನು ಆ ದಿವಸ ಇರಲಿಲ್ಲ. ಬೇರೊಬ್ಬ ಬ್ರಾಹ್ಮಣನು ಪ್ರಸಾದ ಕೊಟ್ಟನಂತರ ಆಟದವರ ತಮಾಷೆಯಿಂದ ಆಟವು ಮುಕ್ತಾಯವಾಯಿತು. ಈ ತನ್ಮಧ್ಯೆ ಬೋಡು ಹಬ್ಬವು ಏನು ಎಂಬದನ್ನು ತಿಳಿದ ವಾಚಕರಿಗೆ ಹೇಳಬೇಕಾಗಿಲ್ಲ. ಜಾತಿ, ಮತ ಭೇದವಿಲ್ಲದೆ ಪದ ಹೇಳುವದೂ, ವೇಷಹಾಕುವದೂ ಪದ್ಧತಿಯೆಂದರೆ ಹೊಲೆಯ ವಿಷಯ ಏನೂ ಹೇಳಬೇಕಾಗಿಲ್ಲ. ಬ್ರಾಹ್ಮಣ ವೇಷವನ್ನು ಹಾಕಿದವನು ಬಲಾತ್ಕಾರದಿಂದ ಪ್ರಸಾದ ಕೊಟ್ಟನು ಎಂದು ಹೇಳುವ ವಿಜಾತೀಯ ಸಖ್ಯಿಗೆ ಏನು ವಿರೋಧಿಸಬೇಕಾಗಿದೆ. ವೇಷ ಹಾಕಿದವನು ದೇಶಕ್ಕೆ ಉಪಕಾರ ಮಾಡುತ್ತೇನೆಂದು ಸಾರಿದ್ದು ಆ ಜಾತ್ರೆದಾರನ ತಿಳುವಳಿಕೆಗೆ ಮಾತ್ರ ಒಂದಿದ್ದು ಬಹು ವಿಶೇಷ.

ಎರಡು ಮೂರು ವರ್ಷಕ್ಕೆ ಮೊದಲು ಇದೇ ದೇವಸ್ಥಾನದ ಉತ್ಸವಕ್ಕೆ ಸಹಾಯಕನಾಗಿ ಒಬ್ಬ ಬ್ರಾಹ್ಮಣನು ಇಂಥಾ ಬೋಡು ಹಬ್ಬದಲ್ಲಿ ಬ್ರಾಹ್ಮಣ ವೇಷಧಾರಿಯಿಂದ ಹೂಮಾಲೆ ಹಾಕಿಸಿಕೊಂಡದ್ದಲ್ಲದೆ ಪ್ರಸಾದವನ್ನು ಹೊಂದಿಕೊಂಡದ್ದು ಉಂಟು ಅವರ ಕುಲಸ್ಥರು ಅದನ್ನು ಅವಮಾನಕರವಾಗಿ ತೆಗೆದುಕೊಳ್ಳಲಿಲ್ಲವೆಂಬುದು ಆ ಜಾತ್ರೆದಾರರಿಗೆ ಗೊತ್ತಿಲ್ಲವೋ? ಕೊಡಗಿನಲ್ಲೇ ಆದ ವೇಷದಾರರು ಕಳೆದ ವರ್ಷದ ಕಾಲದಲ್ಲೂ ಹೂವಿನಲೆಯನ್ನು ಹಾಕಿದ್ದೂ ಪ್ರಸಾದ ಕೊಟ್ಟದ್ದೂ ತಪ್ಪೆಂದ ಪಕ್ಷ ಅದೇ ಸ್ಥಳಕ್ಕೆ ಹೊಲೆಯರ ದೇವರು ಕಾಲಿಕ್ಕಿದ್ದರಿಂದ ಆ ಬ್ರಾಹ್ಮಣ ಕುಲಸ್ಥನಿಗೆ ಅವಮಾನಿಕೆಯಾಗಿ ಕಂಡು ಬರುವದಲ್ಲ!

ಹೇಗೂ ಕೈಕೇರಿ ಗ್ರಾಮದಲ್ಲಿನ ಒಗ್ಗಟ್ಟಿಗೆ ವಿಘ್ನ ತರುವ ಒಂದು ಚತುರತೆಯ ಜಾತ್ರೆಯೇ ಇದು. ಆದರ ಈ ತರಹದ ಚಾಣಾಕ್ಯತನವನ್ನು ತಿಳಿಯಲಾರದ ಮೂಢರು ನಮ್ಮಲ್ಲಿ ಏನು ಕಮ್ಮಿ. ಇವರ ಒಲೆಗೆ ಬೀಳುವವರ್‍ಯಾರೂ ಇಲ್ಲ. ಅದಂತಿರಲಿ—ಹಾಳು ಬಿದ್ದ ದೇವಾಲಯದ ಗೋಳು ಯಾವಾಗಲೂ ಒಂದೇ. ಬರುವ ವರ್ಷ ಒದಗಾಗುವದು ಹೇಗೆ? ಕಟ್ಟುವಾಗ್ಯೆ ಸಿಕ್ಕುವಷ್ಟು ಗೋಳು ಕಟ್ಟಿದ ಮೇಲೆ ಆಗಲಿಕ್ಕಿಲ್ಲವೆಂದು ತಿಳಿಯಲಿ. ಆದರೆ ಕಟ್ಟಲ್ಪಟ್ಟ ದೇವಾಲಯದಲ್ಲಿ ಸದಾ ಕೆಲಸವು ನಡೆಯುತ್ತಿದೆ. ಇನ್ನು ಕಟ್ಟಲಿಕ್ಕಿರುವ ದೇವಾಲಯವೂ ಇಲ್ಲ. ಇದ್ದರೆ ಗೋಳಾಟವನ್ನು ಆ ಜಾತ್ರೆದಾರನು ನೋಡಬಹುದು.

ಒಂದು ಸಂಗತಿಯನ್ನು ಇಲ್ಲಿ ಹೇಳಬೇಕಾಗಿದೆ. ಹಿಂದೂಸ್ಥಾನದಲ್ಲಿ ಹಿಂದೂ ಮತದಲ್ಲಿ ಅನೇಕ ಒಳಮತದವರೆಲ್ಲಾ ಒಂದೇ ತೆರನದಲ್ಲಿ ನಡೆಯುವ ಪ್ರಯತ್ನಕ್ಕೆ ಹೋರಾಡುವ ಕಾಲದಲ್ಲಿ ಹಿಂದೂ ಮತದಲ್ಲಿ, ಬ್ರಾಹ್ಮಣನೆಂಬವನು ಇನ್ನಿರುವವರನ್ನು ತಗ್ಗಿಸಿ ಹಿಂದಕ್ಕೆ ನಿಲ್ಲಿಸುವ ಆಶೆಯು ಕೊಡಗು ದೇಶದ ಕೆಲವು ಬ್ರಾಹ್ಮಣ ಜಜ್ಞಾನಿಯ ಮನಸ್ಸಿನಲ್ಲಿದ್ದ ರೂ ಅದು ಏನು ವರ್ಷಗಳ ವರೆಗೆ ಇರಲಿಕ್ಕಿಲ್ಲವೆಂದೂ, ಹಿಂದೂ ಮತದವರಿಗೆಲ್ಲರಿಗೂ ಹಿಂದೂದೇವಾಲಯದಲ್ಲಿ ಶಾಂತಿ ಮಾಡಲು ಅನುಕೂಲ ಒದಗಿಸಲಿಕ್ಕೆ ಪ್ರಯತ್ನಿಸುವ ಕಾಲದಲ್ಲಿ ಈ ತರಹದ ಕುಬುದ್ಧಿಕೆಯು ಕಣ್ಮರೆಯಾಗುವದೆಂದೂ ಹೇಳಬೇಕಾಗಿಲ್ಲ. ಆದರೂ ಇಂಥಾ ಅಲ್ಪ ಸಂಗತಿಯಲ್ಲಿ ಒಡಕು ತರಲು ಪ್ರಯತ್ನಿಸುವದು ಯಾರಿಗೂ ಯೋಗ್ಯವಲ್ಲ. ಆದರ ಅಲ್ಪ ಇನ್ನುಳ್ಳವರಿಂದ ಕೇಳಿದನ್ನು 'ಅಂತೆ, ಕಂತೆ, ತಿಳಿದು ಬಂದ' ಎಂದು ಬರೆಯುವದು ಗ್ರಾಮದ ಹಿತಚಿಂತಕರಿಗೆ ಮರ್ಯಾದೆಯಲ್ಲ. ದೇವರ ಭಕ್ತರಿಗೆ ಶಾಂತಿಗಾರರ ಭಯವು ಇರಲಿಕ್ಕಿಲ್ಲವೆಂದು ನಂಬಿದೆ.

ಕೈಕೇರಿ ಗ್ರಾಮಸ್ಥ.

ಡಿಸ್ಟ್ರಿಕ್ಟುಬೋರ್ಡಿನಲ್ಲಿ ಚರ್ಚಿಸಬೇಕಾದ ವಿಷ[ಯ]

ಅಯ್ಯಾ,

ನಮ್ಮ ನಾಡಿನ ಡಿ. ಬೋರ್ಡು ಮೆಂಬರು [illegible] ಕಂಡ ವಿಷಯಗಳನ್ನು ಬರುವ ಡಿಸ್ಟ್ರಿಕ್ಟುಬೋರ್ಡು [illegible] ಗಿನಲ್ಲಿ ಚರ್ಚೆಗೆ ತಂದು ವಾದಿಸಿ ಮಂಜೂರು ಮ[ಾಡ]ಕಾಗಿ ಕೋರುತ್ತೇನೆ.

1. ಸೋಮವಾರಪೇಟೆನಾಡು ನಾರಾತಳ್ಳಿ ಗ್ರಾ[ಮದಲ್ಲಿ]ರುವ ಶಾಲೆಗೆ ಒಬ್ಬ ಸಹೋಪಾಧ್ಯಾಯರನ್ನು ನೇ[ಮಿಸಿ]ಲ್ಲದೆ ಪ್ರೈಮರಿಯ ವರೆಗೆ ಇಂಗ್ಲಿಷು ವಿದ್ಯಾಭ್ಯಾ[ಸ]ದಾರಿಗೆ ತರುವಂತೆ ಏರ್ಪಾಡು ಮಾಡುವದು.

2. ಬೇಲ್ಕುಂಡ ಶಾಲೆಯ ಬಾಲಕ ಬಾಲಕೀಯ[ರ] ಉಪ[ಯೋಗ]ಕ್ಕಾಗಿಯೂ, ನನರಿ ಶಾಲೆಯ ಸಮೀಪದಲ್ಲಿರುವ [illegible]ಯದ ಉಪಯೋಗಕ್ಕಾಗಿಯೂ ಒಂದು ಭಾವಿಯ[ನ್ನು ತೋ]ಡಿಸುವುದು.

3. ಸೋಮವಾರಪೇಟೆನಾಡು ಕುಂದಳ್ಳಿ ಗ್ರಾ[ಮದ]ಈಗ ಸದರಿ ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಿಂದ [ಮಾಡಿ]ಕೊಂಡಿರುವ ಕಾಲು ರಸ್ತೆಯನ್ನು ಗಾಡಿ ತಿರುಗು[ವಂತೆ ಮಾ]ಡಲು ಏರ್ಪಡಿಸುವುದು.

4. ಸೋಮವಾರಪೇಟೆ ನಾಡಿನ ಜನರು ವಿದ್ಯೆ[ಯಲ್ಲಿ] ತುಂಬಾ ಹಿಂದಿರುವುದರಿಂದ ಪ್ರೈಮರಿ ವಿದ್ಯಾಭ್ಯಾಸವನ್ನು [ಕಡ್ಡಾ]ಯವಾಗಿ ಜಾರಿಗೆ ತರುವಂತೆ ಏರ್ಪಡಿಸುವುದು.

ನಮ್ಮ ಈ ಕಡೆಯ ಗ್ರಾಮಗಳು ಬಹಳ ಹಿಂದೆ [illegible] ಎಂಬ ಸಂಗತಿ ದೇಶವಾಸಿಗೆಲ್ಲರಿಗೂ ತಿಳಿದ ಸಂಗತಿ[ಯು]. ಇಲ್ಲಿಯವರನ್ನು ಮುಂದಕ್ಕೆ ತರಲು ದೇಶದ ಹಿತಚಿಂತ[ಕ]ರೂ ಸಹಾಯಮಾಡಬೇಕಾಗಿದೆ. ಆದುದರಿಂದ ಡಿಸ್ಟ್ರಿಕ್ಟು ಬೋರ್ಡಿನಲ್ಲಿರುವ ಇತರ ನಾಡುಗಳ ಪ್ರತಿನಿಧಿಗಳೂ, [ಇತ]ರ ಮೆಂಬರುಗಳೂ ಈ ವಿಷಯಗಳನ್ನು ಮಂಜೂರು ಮಾ[ಡಲು] ಸಹಾಯಕರಾಗುವರಾಗಿ ನಂಬುವೆ.

"ಗ್ರಾಮಸ್ಥ

ಹಾಲೇರಿ ನಾಡು ಒಪ್ಪತೊಟ್ಟೆ ಶಾಲೆ

ಅಯ್ಯಾ,

ಕಳೆದ ಮಾರ್ಚ ತಾರೀಕು 22ರಲ್ಲು ಹಾಲೇರಿ ಒಪ್ಪತ[ೊಟ್ಟೆ] ಶಾಲೆಯಲ್ಲಿ ಮೆ. ಮುದ್ದೂರ ಬೆಳ್ಯಪ್ಪನವರ ಅಧ್ಯಕ್ಷತೆ[ಯಲ್ಲಿ] ಹಾಲೇರಿ ಶಾಲಾ ನಾಟಕ ಮಂಡಳಿಯವರು ಕೂಡಿ ಶಾ[ಲಾ] ಮಕ್ಕಳಿಗೆ ಸ್ಪೋರ್ಟ್ಸುಗಳನ್ನು ನಡಿಸಿದಾಗ ಸಾಧಾರಣ [illegible] ಜನರು ನೆರೆದಿದ್ದರು. ಆ ದಿನ ಆಟ ಓಟಗಳಲ್ಲಿ ಗೆದ್ದ ಮ[ಕ್ಕ]ಳಿಗೆ ಅಧ್ಯಕ್ಷರು ಇನಾಮುಗಳನ್ನು ಕೊಟ್ಟರು. ಮತ್ತು [ಕೆ]ಲವು ಮಹಾನೀಯರು ಶಾಲಾಪರವಾಗಿ ಭಾಷಣವನ್ನು ಮಾ[ಡಿ]ದರು. ಈ ಸ್ಪೋರ್ಟ್ಸಿನ ಖರ್ಚು ಪೂರಾ ಶಾಲಾ ನಾಟಕ ಮಂಡಳಿಯವರಿಂದ ಕೊಟ್ಟದಾಗಿರುತ್ತದೆ. ಆಟ ವಿನೋದ[ಗಳಾ]ದ ಅದನಂತರ ನೆರೆದಿದ್ದ ಮಹಾನೀಯರುಗಳಿಗೆ ಮತ್ತು [ಶಾ]ಲಾ ಮಕ್ಕಳಿಗೂ ಸಹ ಒಂದು ಟೀ ಪಾರ್ಟಿ ಇತ್ತು. ಆ ಸ[ಭೆ]ಯ ಸಂಗೀತ ಹಾಡುಗಳಿಂದ ಈ ಸಭೆಯು ಅಂತ್ಯವಾಯಿತು.

"ನಾಡಿನವ'

ಶ್ರೀ ಶಾಂತಮಲ್ಲೇಶ್ವರ ದೇವಸ್ಥಾನದ ಮೀಟಿಂಗು

ಅಯ್ಯಾ,

ತಾ. 25—3—28ನೇ ಭಾನುವಾರ ಸೋಮವಾರಪೇಟೆ ನಾಡು ಪುಷ್ಪಗಿರಿಯಲ್ಲು ಇರುವ ಶ್ರೀ ಶಾಂತಮಲ್ಲೇಶ್ವರ ದೇವಾಲಯದ ವಿಷಯವಾಗಿ ಸೋಮವಾರಪೇಟೆನಾಡಿಗೆ ಸೇರಿದ ನಾರಾತಳ್ಳಿ ಸ್ಕೂಲು ಬಳಿ ಅಸ್ತೀಮದದ ಬಾಚಳ್ಳಿಯಲ್ಲಿ ಇರುವ ಮೆ. ಯನ್. ಮುಳ್ಳೈಯ್ಯನವರ ಅಧ್ಯಕ್ಷತೆಯಲ್ಲು ಮೀಟಿಂಗು ಮಾಡಲಾಯಿತು. ಮೀಟಿಂಗಿಗೆ ಸಮೀಪ ಗ್ರಾಮಗಳ ಅನೇಕ ಮಹನೀಯರುಗಳು ಹಾಜರಿದ್ದರು.

ಮೆ. ಕುಂದಳ್ಳಿ ಪಟೇಲ್ ಚಂಗಪ್ಪನವರು ಶ್ರೀ ಶಾಂತಮಲ್ಲಸ್ವಾಮಿ ದೇವಾಲಯದ ವಿಷಯವಾಗಿ ಹೀಗಂದರು— ಹಿಂದೆ ಸೋಮವಾರಪೇಟೆಯಲ್ಲಿ ಮೆ. ಕೋದಂಡ ಪಯ್ಯಣ್ಣ ಆರ್. ಎಸ್. ರವರು ಪೊಲೀಸ್ ಸಬ್ ಇನ್ಸ್ಪೆಕ್ಟರಾಗಿದ್ದಾಗ್ಯೂ ಸದರಿ ದೇವಾಲಯವು ಪೂರ್ತಿ ಜೀರ್ಣಾವಸ್ಥೆಯಲ್ಲಿರಲು ಪಯ್ಯಣ್ಣನವರ ಪ್ರೋತ್ಸಾಹದ ಮೇರೆಗೆ ಅಬ್ಬಿಮಠದಲ್ಲಿದ್ದ ದೊಡ್ಡ ಮಲ್ಲಿಕಾರ್ಜುನ ಸ್ವಾಮಿಯವರು ದೇವಾಲಯವನ್ನು ಕಟ್ಟಿಸಿದರು. ಆನಂತರ ಸರಿಯಾದ ನಿಗವಿಲ್ಲದೆ ಹೋದ ಕಾರಣ ಈಗ ಸದರಿ ದೇವಾಲಯವು ಪುನಃ ಜೀರ್ಣಾವಸ್ಥೆಗೆ ಬಂದಿರುವುದು ಬಹಳ ಶೋಚನೀಯವಾದ ಸಂಗತಿಯಾಗಿದೆ. ಅದರಿಂದ ಈಗ ಇಲ್ಲಿ ನೆರದಿರತಕ್ಕ ಮಹನೀಯರುಗಳು ತಮ್ಮ ಶಕ್ತ್ಯಾನುಸಾರ ಚಂದಾವನ್ನು ಹಾಕಬೇಕಲ್ಲದೆ ಪ್ರತಿಯೊಬ್ಬರೂ ಕೊಡಗಿನ ಇತರ ಭಕ್ತಾದಿಗಳಿಂದ ಆದಷ್ಟು ಚಂದಾವಸೂಲು ಮಾಡಬೇಕಾಗಿಯೂ, ಈಗ ಈ ನಾಡಿಗೆ ಹಾಲಿ ಶ್ಯಾನುಭೋಗರಾಗಿರುವ ಮೆ. ಎಂ. ರಾಜಪ್ಪನವರು ಸದರಿ ದೇವಸ್ಥಾನದ ರಿಪೇರಿ ಬಗ್ಗೆ ತಾವು ಆದಷ್ಟು ಸಹಾಯ ಮಾಡುವದಾಗಿ ವಾಗ್ದಾನ ಮಾಡಿರುವುದರಿಂದ ತಾವು ಸದರಿ ಮೆ. ರಾಜಪ್ಪನವರ ಸಹಾಯವನ್ನು ಹೊಂದಿ ಮೇಲ್ಕಂಡ ದೇವಾಲಯದ ಕಟ್ಟಡದ ಕೆಲಸಕ್ಕೆ ಪ್ರಾರಂಭಿಸುತ್ತೇವಾಗಿಯೂ ಹೇಳಿದರು

ಮೆ. ದೊಡ್ಡಕೋಳೂರು ಪಟೇಲ್ ಅಪ್ಪಯ್ಯನವರು ಇದರ ವಿಷಯದಲ್ಲಿ ಪ್ರತಿ ಗ್ರಾಮದ ಪಟೇಲರುಗಳು ತಮ್ಮ

ಗ್ರಾಮಗಳಲ್ಲಿ ಆದಷ್ಟು ಚಂದಾ ವಸೂಲು ಮಾಡಬೇ ...ಾ, ಸದರಿ ಕಟ್ಟಡದ ರಿಪೇರಿಬಗ್ಗೆ ತುಂಬಾ ಹಣ ಬೇ ...ದರಿಂದ ಸಾಧ್ಯವಿದ್ದ ವ ಹಣೀಯರುಗಳು ಸೋಮ ...ಟಿನಾಡಿನ ಹೊರಗೆ ಹೋಗಿ ಆದಷ್ಟು ಚಂದಾ ವಸೂ ...ಬೇಕಾಗಿಯೂ ಹೇಳಿದ್ದಕ್ಕೆ ಸರ್ವರೂ ಸಮ್ಮತಿಸಿ

...ಟಿಂಗಿನಲ್ಲಿ ಹಾಜರಿದ್ದ ಸಾಂತಳ್ಳಿ, ಕುಂದಳ್ಳಿ, ಪರ ...ೀಪುರ ಮತ್ತು ದೊಡ್ಡತೋಳೂರು ಗ್ರಾಮಗಳ ಪ ...ಗಳೂ ಮತ್ತು ಇತರ ಮುಖಸ್ಥರುಗಳೂ ತಾವು ತ ...ಗ್ರಾಮಗಳಲ್ಲಿಯೂ ಸಾಧ್ಯವಿದ್ದವರು ಇತರ ಗ್ರಾಮಗ ...ೂ ಸಹ ಮೀಟಿಂಗುಗಳನ್ನು ಮಾಡಿ ಚಂದಾ ವಸೂಲು ...ವಾಗಿ ಒಪ್ಪಿಕೊಂಡುದಲ್ಲದೆ ಅಲ್ಲಿ ನೆರೆದಿದ್ದ ಮುಖ ...ರುಗಳಿಂದ ಮೂವತ್ತು ರೂಪಾಯಿಗಳ ಚಂದಾ ಪಾ ...ಪ್ಪ, ಆರು ರೂಪಾಯಿಗಳ ನಗದು ಪಾವತಿಯಾ ...

...ವಿ. ಚಂಗಪ್ಪನವರು ಇನ್ನು ಮುಂದೆ ಪಸೆಂಬತಿ ಹಾ ...ಮ್ಮ ಮೈ ಮುಳ್ಳಯ್ಯನವರಲ್ಲಿ ಇಡಬೇಕಾಗಿಯೂ, ... ವಗ್ಯೆರೆ ಸರ್ವವನ್ನೂ ಕ್ರಮವಾಗಿಡಲು ನೆಕ್ಸಿಟರಿಯ ...ಗಿ ಸಾಂತಳ್ಳಿ ಗ್ರಾಮದ ಶಾಲಾ ಉಪಾಧ್ಯಾಯರಾ ... ಕೆ. ರಾಮರಾಯರನ್ನು ನೇಮಿಸಿಕೊಳ್ಳುವುದೂ ಒಳ್ಳೆ ...ಗಿಯೂ ತಂದ ಠರಾವನ್ನು ಮೈ ಪಿ. ಅಪ್ಪಯ್ಯನವರ ...ದ ಪಟೇಲರೂ ಅನುಮೋದಿಸಿದ್ದಕ್ಕೆ ಸರ್ವರೂ ಸಮ್ಮತಿ

ಅಧ್ಯಕ್ಷರು ಹೇಳಿದ್ದೇನೆಂದರೆ— ಈ ದಿವಸ ಈ ಸಭೆಯ ...ಸನಾಗಿ ನನ್ನನ್ನು ನೇಮಿಸಿದ್ದಕ್ಕೆ ನಿಮಗೆಳಿಗೆಲ್ಲಾ ವಂ ...ದಿಸುತ್ತೇನೆ. ಮೈ. ಪಿ. ಚಂಗಪ್ಪನವರು ಹೇಳಿದ ಮೇರೆ ಮೈ ಕೋದಂಡ ಐಯ್ಯಣ್ಣನವರು ತುಂಬಾ ಪ್ರಯತ್ನಪಟ್ಟು ಆಗ ನಾ ... ಅಪ್ಪ ಮರದಲ್ಲಿದ್ದ ದೊಡ್ಡ ಮಲ್ಲಿಕಾರ್ಜುನ ಸ್ವಾಮಿಯ ವರಿಂದ ಸದರಿ ದೇವಸ್ಥಾನವನ್ನು ಕಟ್ಟಿಸಿದ ಕೆಲವು ದಿವಸಗಳ ನಂತರ ಅವರು ಇಲ್ಲಿಂದ ವರ್ಗವಾಗಿ ಹೋದರೆಂದು ನಾನು ಕೇಳಿರುತ್ತೇನೆ. ಈಗ ನೈ. ಎಂ. ರಾಜಪ್ಪ ಶ್ಯಾನುಭೋಗರ ವರ, ಸಾಂತಳ್ಳಿ ಶಾಲಾ ಉಪಾಧ್ಯಾಯ ರಾದ ಮೈ. ಕೆ. ರಾ ಮ ರಾಯರವರೂ ತಮ್ಮ ರಜಾಗಳಲ್ಲಿ ದೇಶಾಲಯ ದ ಅಭಿವೃದ್ಧಿಯ ವಿಚಾರದಲ್ಲಿ ತುಂಬಾ ಪ್ರಯತ್ನಪಟ್ಟು ಕೆಲಸ ಮಾಡಿರುವ ನಾನು ನೋಡಿರುತ್ತೇನೆ. ದೇವರ ಬಾಬ್ತು ಚಂದಾ ಹಣವನ್ನು ವಸೂಲು ಮಾಡಲು, ನೇಮಿಸಲ್ಪಡುವ ಸ ... ಹಣವನ್ನು ವಸೂಲು ಮಾಡುವ ಹಣವನ್ನ ನೆಕ್ರೆಟರಿಯವರಿಗೆ ತಲುಪಿಸಿ ಅವರಿಂದ ರಶೀದಿ ಪಡೆದುಕೊಳ್ಳತಕ್ಕದ್ದು. ನೆಕ್ರೆಟರಿಯವರು ತಮಗೆ ಸಿಕ್ಕಿದ ಹಣವನ್ನು ... ಮೂ ಒಕ್ಕಿಗ ನಾಬುಬಾ ಮಾಡಿಕೊಂಡು ಸದರಿ ಹಣವನ್ನು ಸನಗೆ ತಲುಪಿಸಿ ನನ್ನಿಂದ ರಶೀದಿ ಪಡೆದುಕೊಳ್ಳತಕ್ಕದ್ದು. ನಾನು ಸದರಿ ಹಣವನ್ನು ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ಶ್ರೀ ಶಾಂತಮಲ್ಲಸ್ವಾಮಿಯವರ ಹೆಸರಿನಲ್ಲಿ ಹಾಕುತ್ತಾ ಬರುತ್ತೇನೆ. ಇದರಿಂದ ದೇವಸ್ಥಾನದ ರಿಪೇರಿಬಗ್ಗೆ ಬೇಕಾದ ಹಂಚು, ಗಾರೆ, ಸುಣ್ಣ ವಗ್ಯೆರೆ ಎಲ್ಲಾ ಕೆಲಸಗಳನ್ನು ಮೈ. ರಾಜಪ್ಪ ಶ್ಯಾನುಭೋಗರವರು, ಕೆ. ಪಿ. ಚಂಗಪ್ಪನವರೂ ಸುದುಮಾಡಿಸಲು ತಕ್ಕ ಏರ್ಪಾಡು ಮಾಡಬೇಕಲ್ಲದೆ ಸದರಿ ಕೆಲಸಕ್ಕೆ ಬೇಕಾಗುವ ಖರ್ಚನ್ನು ಆಗಿಂದಾಗ್ಗೆ ನೆಕ್ರೆಟರಿಯವರಿಗೆ ತಿಳಿಸಿಕೊಟ್ಟು ಹಣ ಪಡೆದುಕೊಳ್ಳಬೇಕಲ್ಲದೆ ತಮ್ಮಲ್ಲಿಯೂ ಸಹ ಸರಿಯಾದ ಜಮಾ ಖರ್ಚನ್ನು ಇಟ್ಟುಕೊಳ್ಳತಕ್ಕದ್ದು. ಪತ್ರಿಕೆಯಲ್ಲದೆ ಪರ ಪ್ರಾಂತ್ಯಗಳಿಗೆ ಚಂದಾವಸೂಲಿ ಬಗ್ಗೆ ಹೋಗುವ ಮುಖಂಡರುಗಳಿಗೆ ದಸ್ತು ಕೊಡುವುದಲ್ಲದೆ ಚಂದಾ ಕೊಟ್ಟವರ ಹೆಸರನ್ನು 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಬೇಕು. ಈ ದೇವರ ಕಾರ್ಯಕ್ಕೆ ತಮಗೆ ತಿಳಿದುಕೊಳ್ಳುವ ಮತ್ತು ಸಹಾಯಮಾಡುವ ಸರ್ವ ಮಹನೀಯರುಗಳಿಗೂ ಶ್ರೀ ಶಾಂತಮಲ್ಲಸ್ವಾಮಿಯು ಆಯುರಾರೋಗ್ಯವನ್ನೀಯಲಿ ಎಂಬದಾಗಿ ಹೇಳಿದ್ದಕ್ಕೆ ಸರ್ವರೂ ಸಂತೋಷವನ್ನು ಸೂಚಿಸಿದರು. ಸಭೆಯು ವಿಸರ್ಜಿಸಲ್ಪಟ್ಟಿತು.

ಕೆ. ಯಸ್. ಚಂಗಪ್ಪ.

Arms, Ammunition and Shooting Requisites !!!



1928 Illustrated Catalogue Just Issu d Free on Application !

D. B B. L Rifles	Rs.	120	to Rs	2750
S F. B. L	"	35	to "	950.
D. B. B L Guns	"	50	to "	1350.
S. P B L. "	"	35	to "	275.
D. B M. L "	"	45	to	135.
S B M L "	"	30	to "	50
B L Revolvers	"	35	to "	350.
Automatic Pistols	"	[illegible]	to "	150

Electric Search Light Lamp for Shooting, Camping, Fishing and all such Other Night Sports and work Rs 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24–1

National Swords and Silver Belts (Thodang) For "Scotland of India."

ಸಂಪ್ರದಾಯವಾಗಿ ಧರಿಸಲ್ಪಟ್ಟ "ಒಬ್ಬಿ ಕರ್ನಲ್ ಯೂನಿಫಾರಂ" ರೀತಿ ಉಡುಗೆಗಳನ್ನು ಬದಿಗೆ ಇತ್ತು ಆರಿಸಲ್ಪಟ್ಟ "ಒಬ್ಬ ಲೆಫ್ಟಿನಂಟ್ ಯೂನಿಫಾರಂ" ಕಡೆ ಯಾಕೆ ವಿಸ್ಮಯಗೊಳ್ಳುತ್ತೀರಿ? ನವಿಲು ಗರಿಯಿಂದ ಶೃಂಗರಿಸಲ್ಪಟ್ಟ ಕಾಗೆ ನವಿಲಾಗುವುದೇ?

ಸೊಂಟದಲ್ಲು ಒಂದು ಬೆಳ್ಳಿಯ ತೊಡಂಗ ಮತ್ತು ಅದರ ಕತ್ತಿ. ಸೊಂಟದ ಬದಿಯಲ್ಲು ಚಿನ್ನದ ಹಿಡಿಯ ಪೀಚೆಕತ್ತಿ. ಇವುಗಳಿಗೆ ತಕ್ಕ ಬೆಳ್ಳಿಯ ಸರಪಣಿ (ಜುಮ್ಮಾ) ರೀತ್ಯಾ ಮತು ವೆಲ್‌ವೆಟ್ ಪಟ್ಟಿ. ಇವಲ್ಲವೇ ನಿಮ್ಮ ಗೌರವ? ಕಾನರ್, ರಕ್ಸರ್, ಜಾನ್ ಮೊದಲಾದವರೇ ಸದರಿ ವಿಷಯ ತಿಳಿಸುವರು. ನಿಮ್ಮ ಸಂಪ್ರದಾಯವೇ ನಿಮ್ಮ ಹಕ್ಕು! ನಿಮ್ಮ ಹಕ್ಕೇ ಸ್ವದೇಶಾಭಿಮಾನ!

ಮೇಲ್ಕಂಡ ಸಾಮಾನುಗಳು ನಮ್ಮಲ್ಲಿ ತಯಾರಿಸಿ, ಹೆಚ್ಚಿನ ವಿದ್ಯಮಾನಕ್ಕೆ ನಮಗೆ ಬರೆದು ತಿಳಿದುಕೊಳ್ಳಿ.

Commercial Store,
Murnad, Coorg

12–2

ಡಿ ಬಿ ಯಲ್. ಕೋವಿಗಳು ರೂ. 75 ರಿಂದ ರೂ. ...
ಯಸ್ ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. ...
ಯಸ್. ಬಿ. ಯಮ್ ಯಲ್. ಕೋವಿಗಳು ರೂ. 35 ರಿಂದ 65/.
ರಿವಾಲ್ವರ್‌ಗಳು. ರೂ. 40/ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟೆ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಬಗೆಗಳು (ಬಿಕ್ಕಪ್ರಯೋಜನಕ್ಕೂ ಬೇಟೆಗೂ) ಅನುಕೂಲವಾಗುವಂತೆ ಏದ ಬಗೆ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಇದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯನ್. ಪಿ. ರಾಮಾನಂಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ಬೆಲೆಯ ಕಂಪೆನಿ.

24–17 12. ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಆಲ್ ಇಂಡಿಯಾ ಮ್ಯೂಚುವಲ್ ಬಿಲ್ಡಿಂಗ್ ಅಂಡ್ ಪ್ರಾವಿಡೆನ್ಸ್ ಅಸೋಸಿಯೇಷನ್, ಲಿಮಿಟೆಡ್.
ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ರೈತರು ಮತ್ತು ಜಾಂಡು ಹೋಲ್ಡರುಗಳ ಹಣ ಮತ್ತು ಆದರ ಒಟ್ಟಿ ಲಾಭ ವಗ್ಯೆರೆ ಎಲ್ಲವೂ ಈ ದೇಶಸ್ಥರಿಗೆ ಕೂಡಿಬರಬೇಕೆಂಬ ಠರಾವು ಜನವರಿ ತಾ. ೨೯ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೆ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿನ ಮೇರೆ ನಮ್ಮ ಸಂಘದ ಕೊಡಗಿನ ಪ್ರೊವಿನ್ಶಿಯಲ್ ಬೋರ್ಡಿನ ಪ್ರಾಯಿಂಗ್ ತಾ. 31–3–1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ಕೆ ... ಗ್ರಾಮದ ನೈ. ಕೊರವಂಡ ಮುದ್ದಣ್ಣನವರ ಕುಟುಂಬ ಪಡೆದುಕೊಂಡಿರುವ ... ಈ ವರ್ಷದ ಪ್ರಥಮ ಪ್ರಾಯಿಂಗ್‌ನ ಐದು ನೂರು ರೂಪಾಯಿಗಳ (500–0–0) ಸಾಲ ... ಇದು ನೋಲಿಸ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ... ಮುಂದಣ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲಿಸಲ್ಲ ... ಅವನ್ನು ಕೂಡುವದಕ್ಕೆ ಆದಷ್ಟು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ.

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹಪಡಿಸಬೇಕಾಗಿ ಈ ಮೂಲಕ ಕೋರುತ್ತೇನೆ.

ಅನಾದರಣದಂಥ ಅಂಗಹೀನರುಗಳಿಗೆ ಬರುವ ಏಪ್ರಿಲ್ ತಿಂಗಳಿಂದ ಈ ಸಂಘದ ಖರ್ಚಿನಲ್ಲು ಅನ್ನಾದಾನ ... ದಿಗಳು ಕೊಡಲ್ಪಡುತ್ತೆ.

ಟಿ. ಎ. ಸುಬ್ಬರಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
ಮಡಿಕೇರಿ.

52–8

ಪ್ರಕಟಣೆ.

ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್, ಲಿಮಿಟೆಡ್ ... ...

ಷೇರ್ ಬಂಡವಾಳ	—	50,000
ವಸೂಲಾದ ಷೇರ್ ಹಣ	—	15,510
... ರೇವಣೆ ...	—	1,02,014

ಈ ಬ್ಯಾಂಕಿನ ... ... ಬೇಕೆನ್ನುವವರು ... ...

ಒಂದು ವರ್ಷ ... ... ರೂ 5-0-0 ರ ದರದಲ್ಲಿ ... ... ಬಡ್ಡಿ ದೊರೆಯುತ್ತೆ.

... ... ಲಕ್ಷ್ಯ ಆಹ್ವಾನಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು

ಸೆಕ್ರೆಟರಿ

ಸಿ ಎಸ್. ವೆಂಕಪ್ಪಯ್ಯನವರು, ಬಿ ಎ, ಬಿ ಎಲ್

ತಾರೀಕು 1-7-1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ... ... ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಪಿ ... ಪೂವ್ವಯ್ಯನವರು.

ಪೊನ್ನಂಪೇಟೆನಾಡು—ಮ ... ಚಿಣ್ಣಪ್ಪನವರು

ಶ್ರೀಮಂಗಲನಾಡು—ಮ ... ಮಾದಪ್ಪನವರ

ಮರ್ನಾಡು—ಮ ... ಅಪ್ಪಯ್ಯನವರು

ಸಬ್ ಏಜಂಟರುಗಳು.

ನಾಪೋಕ್ಲು—ಮ. ... ಸುಬ್ಬಯ್ಯನವರು,

ಗೋಣಿಕೊಪ್ಪಲು—ಮ ... ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮ ... ಮಾದಪ್ಪನವರು,

ಪೊನ್ನಂಪೇಟೆನಾಡು—ಮ ಪಿ ಬಿ ಮುದ್ದಪ್ಪಯ್ಯನವರು,

ಹುದಿಕೇರಿ & ತಿತಿಮತ್ತಿ—ಮ ಪಿ ಮಾದಪ್ಪಯ್ಯನವರು

ಕೊಡಗಿನ ಎಲ್ಲಾ ಭಾಗಕ್ಕೂ—ಮ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಿಗೂ ಇರಬೇಕಾದ ಅಮಿತ ... ... ಸಹಾಯಕ ಸಂಘದ ಉಪನಿಬಂಧನೆಗಳೂ, ... ಫಾರಮುಗಳೂ, ... ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ... ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address.- 'SHOOTER' Bombay.

(52-30) **'Please write for our Catalogue 1928-1929**

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯ ... ಬರುವ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳ ... ... ಸೀಸೆ ಒಂದಕ್ಕೆ ರೂ 1-8-0 3ಕ್ಕೆ ರೂ 4-0-0 6ಕ್ಕೆ ರೂ 7-8-0 12ಕ್ಕೆ ರೂ 14

ಚಂದ್ರನಾಸವ—ಇದು ... ... ಮೂತ್ರ ... ಹೋಗುವುದು, ಮೂತ್ರಕೋಶದ ... ... ಮೂತ್ರನಾಳದಲ್ಲಿ ... ... ಮೂತ್ರ ನಾಳದಿಂದ ಕೀವು ಬರುವುದು, ... ಧಾತು ಹುಡಿ ಹೋಗುವುದು ಅಗಾಗ್ಗೆ ಮೂತ್ರ ಬರುವುದು ಮೂತ್ರ ... ... ಇವುಗಳಿಗೆ ಪರಮ ಔಷಧಿ ಚಿಕ್ಕ ಬಾಟ್ಲು 1 3 6ಕ್ಕೆ ರೂ 1- 3-8-0, 6-12-0

ರೋಮನಾಶಿನಿ:—ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ... ರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿ ರೂ 1, 1 ಡಜನಿಗೆ 3-8-0,

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಬಿಸಿ, ... ಕಣ್ಣು ನೋವು ಅಪಸ್ಮಾರ ನಿದ್ದೆ ... ... ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಹಿಂದಿಸ ಗುಣವೂದುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ... ... ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ... ... ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2-10-0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ
52-26 9. ಮಂಗಳೂರು

Kapurchand & co,

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc, etc,. Chickapet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52-44

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ

ಹೊಸ ವಿಮೆಗಳು	1924	ರೂ	2,37,31,000	ಜಾಸ್ತಿ ರೂ. 59,08,000.
	1925	ರೂ	2,96,42,000	
	1926	ರೂ.	3,91,39,000	ಜಾಸ್ತಿ ರೂ. 94 97,000

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ 7,38 80,000ಗೆ ಹೆಚ್ಚಿರುತ್ತದೆ
ಪ್ರೀಮಿಯಂ ವರಮಾನವು ವರ್ಷಕ್ಕೆ ರೂ 1,05,30,000ಗೆ ಏರಿರುತ್ತದೆ

'ಓರಿಯಂಟಲ್'ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗಬೇಕೆನ್ನುವವರು ಬೆಂಗಳೂರಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹಚ್ ಎಟ್ಕಿನ್ ಜೋನ್ಸ್ ಎಫ್ ಎಸ್ ಎ, ಎ ಐ ಎ ರವರುಗಳಿಗೆ ಅಥವಾ ಕಂಪೆನಿಯ ಇತರ ಅಧಿಕಾರಿಗಳಿಗಾಗಲೀ ನಾವಕಾಶವೂಡನೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು

ಎಲ್. ಆರ್. ಕೃಷ್ಣಸ್ವಾಮಯ್ಯರ್
52-51 ಬ್ರಾಂಚ್ ಸೆಕ್ರೆಟರಿ.

EMPIRE OF INDIA
LIFE ASSURANCE COMPANY, LIMITED.

ESTD. 1897.

VALUATION RESULTS

FOR THE FIVE YEARS ENDING 28TH FEBRUARY 1927.

SURPLUS—RS. 37,66,689.

A REVERSIONARY BONUS DISTRIBUTION OF

RS 15 PER ANNUM PER Rs. 1,000 ASSURED ON WHOLE LIFE ASSURANCES AND **RS. 12** PER ANNUM PER Rs 1,000 ASSURED ON ENDOWMENT ASSURANCES

HAS BEEN DECLARED

HEAD OFFICE
Empire of India Life Building,
BOMBAY

24-13

BRANCH OFFICE.
Commercial Street,
BANGALORE.

Printed & published by P. I. Belliappa at 'Kodagu' Press, Mercara for 'Kodagu' Ltd,

If not delivered please return to
"KODAGU" OFFICE, MERCARA.

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರದ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಪು ೭] ಮಡಿಕೇರಿ, ೯ನೇ ೧೯೨೮ನೇ [ಸಂಚಿಕೆ ೪೪

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52—11 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423, TRIPLICANE, MADRAS

Catalogue Free to Boanfide Enquirers


Rose Water Sprinkler.


Nose-screws. Claver. Drops Thodu. Broach

Chased Silver Mirror.

Manufacture of HIGH CLASS GEMSET JEWELS a speciality.

The special features of my productions are —
1 Best QUALITY.
2 Latest novel designs
3 Promptest execution
4 Neat & artistic finish.
5. Most moderate prices

GOLD or SILVERWARE of all descriptions neatly executed

52—31



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

21—7

ರಿಂಗ್

ಎ ಗ್ರ್ಯಾಂಡ್ ಗಿಫ್ಟ್

ಕಟ್ಟುಹೋದ ರಕ್ತವನ್ನು ಶುದ್ಧಮಾಡುತ್ತದೆ.

ರೂ. ೧—೦—೦ ಟಪಾಲು ವೆಚ್ಚ ಬೇರೆ

ಕರ್ನಾಟಕ ಬ್ರದರ್ಸ್

ದುಬಾಷ್ ಲೇನ್,

ಗಿರಗಾಂವ, ಮುಂಬಾಯಿ.

12—3

ಕೊಡಗು.

ಸನ್ ೧೯೨೮ನೇ ಇಸವಿ ಏಪ್ರಿಲ್
ತಾ. ೧೩ನೇ ಶುಕ್ರವಾರ

"ಯುವಕರ ಕರ್ತವ್ಯ"

ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಮಂತ್ರಿ ಮಿ. ಬಾಲ್ಡ್ವಿನರವರು ಕಳೆದ 10ನೇ ತಾರೀಕಿನಲ್ಲಿ ಯುವಕ ಸಮಾಜಕ್ಕೆ ಕೊಟ್ಟ ಒಂದು ಉಪನ್ಯಾಸವು 'ಹಿಂದೂ' ಪತ್ರಿಕೆಯಲ್ಲಿ ಕಳೆದ ವಾರ ಪ್ರಕಟವಾಗಿತ್ತು. ಪ್ರಪಂಚವನ್ನೆಲ್ಲಾ ಆವರಿಸಿಕೊಂಡಿರುವ ಸಾಮ್ರಾಜ್ಯದ ಯುವಕರಿಗೆ ಅವರ ಬೋಧನೆಯು ಅವಶ್ಯವಾಗಿದೆಯಾದರೆ ಅತಿ ಪುರಾತನ ಕಾಲದಿಂದ ಪ್ರಪಂಚಕ್ಕೆ ಆದರ್ಶವಾಗಿದ್ದ ಸಂಸ್ಕೃತಿಯನ್ನು ಕೊಟ್ಟಿದ್ದ ನಮ್ಮ ಹಿಂದುಸ್ಥಾನವು ಈಗ ಪರಾಧೀನತೆಗೆ ಸಿಕ್ಕಿ ಅತಿ ಶೋಚನೀಯ ಸ್ಥಿತಿಯಲ್ಲಿರುವಾಗ ಬಾಲ್ಡ್ವಿನರ ಬೋಧನೆಯು ಯುವಕರಿಗೆ ಮಾತ್ರವಲ್ಲ ಪ್ರತಿಯೊಬ್ಬ ವ್ಯಕ್ತಿಗೂ ಸಿಕ್ಕಬೇಕಾಗಿದೆ. ಅವರ ಬೋಧನೆಯು ಉದ್ದವಾಗಿಲ್ಲದಿದ್ದರೂ ಕೆಲವು ಅತಿ ಗಂಭೀರವಾದ ಮತ್ತು ನಿಜವಾದ ಮಾತುಗಳಿಂದ ಕೂಡಿದ್ದಾಗಿದೆ.

ರಾಜಕೀಯ ಕಾರ್ಯವೆಂದರೆ ಏನೆಂಬದನ್ನು ವಿವರಿಸುವದರಲ್ಲಿ ಅವರು ಹೇಳಿರುವದೇನೆಂದರೆ—'ರಾಜಕೀಯ ಕಾರ್ಯದಲ್ಲಿ ಕೈ ಹಾಕುವಾಗ ತನಗೆ ಏನು ಸಿಕ್ಕುತ್ತದೆಯೆಂತ ಕೈ ಹಾಕಬೇಡ. ತನ್ನಿಂದ ಏನು ಮಾಡಲು ಸಾಧ್ಯವಿದೆಯೆಂಬ ಯೋಚನೆಯಿಂದ ರಾಜಕೀಯದಲ್ಲಿ ಭಾಗ ತೆಗೆದುಕೊ.'' ಈ ಮಾತುಗಳು ಹಿಂದುಸ್ಥಾನದಲ್ಲಿ ಮುಖ್ಯವಾಗಿ ನಮ್ಮ ಈ ದೇಶದಲ್ಲಿ ಎಲ್ಲರೂ ಮನಸ್ಸಿಗೆ ತೆಗೆದುಕೊಳ್ಳಬೇಕಾಗಿದೆ. ರಾಜಕೀಯ ಕಾರ್ಯಗಳಲ್ಲಿ ಕೈ ಹಾಕಿದ್ದಕ್ಕೆ ತನಗೆ ಮರ್ಯಾದೆ ಸಿಕ್ಕಲಿಲ್ಲ, ತನ್ನ ಜಾತಿಗೆ ಮರ್ಯಾದೆ ಸಿಕ್ಕಲಿಲ್ಲವೆಂತ ಯೋಚಿಸುವವರೇ ಹೆಚ್ಚಾಗಿದ್ದಾರೆ. ತನ್ನಿಂದ ದೇಶಕ್ಕೆ ಆಗುವಷ್ಟು ಸಹಾಯ ಮಾಡಬೇಕಾದದ್ದು ತನ್ನ ಕರ್ತವ್ಯ. ದೇಶದ ಉನ್ನತಿಯೇ ತನ್ನ ಮರ್ಯಾದೆ ಎಂತ ಯೋಚಿಸಬೇಕಾದದ್ದು ಅವಶ್ಯವಿದೆ. ಇದೇ ಸಂಬಂಧವಾಗಿ ಬಾಲ್ಡ್ವಿನರು ಹೇಳಿರುವ ಇನ್ನೊಂದು ಮಾತೇನೆಂದರೆ—'ನಮ್ಮ ಹಕ್ಕುಗಳ ಕುರಿತು ಮಾತಾಡಬೇಡಿ. ನಮ್ಮ ಕರ್ತವ್ಯಗಳ ಕುರಿತು ಮಾತನಾಡಿ. ಈ ದೇಶದ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಮಾಡಿದರೆ ಹಕ್ಕುಗಳ ಮಾತೇ ಬರಲು ಅವಕಾಶವಿರುವದಿಲ್ಲ. ಯಾಕೆಂದರೆ—ಪ್ರತಿಯೊಬ್ಬನು ತನ್ನ ಕರ್ತವ್ಯವನ್ನು ಮಾಡಿದರೆ ಹಕ್ಕುಗಳು ತಾವಾಗಿಯೇ ಉಳಿಯುತ್ತವೆ.'' ಈ ಮಾತುಗಳ ಮೇಲೆ ಪ್ರತ್ಯೇಕ ಟೀಕಿಸಬೇಕಾಗಿಲ್ಲ.

ಈಗಿನ ಕಾಲದಲ್ಲಿ ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯು ಜಾರಿಯಲ್ಲಿ ಇರುವಲ್ಲಿ ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಯು ಕುಂಬಾ ಇದೆ ಎಂತ ವರ್ಣಿಸಿರುತ್ತಾರೆ. 'ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯಲ್ಲಿ ನಾವೆಲ್ಲರೂ ಗಂಡಸರು, ಹೆಂಗಸರು, ವೃದ್ಧಾಪ್ಯದವರು, ನಡುಪ್ರಾಯದವರು, ಯುವಕರು ಸಹ ಜವಾಬ್ದಾರಿಯುಳ್ಳವರಾಗಿದ್ದೇವೆ. ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಮಾಡದೆ ಇದ್ದರೆ ತನ್ನ ಕಾರ್ಯವು ಸ್ವಲ್ಪವೇ ಆದರೂ ಅಂಥ ಸ್ವಲ್ಪದಿಂದಲೇ ದೊಡ್ಡ ಕಾರ್ಯಗಳು ಆಗುವದೆಂತ ತಿಳಿಯದೆ ಇದ್ದರೆ ಅಂಥವರು ಇರುವ ಸಮಾಜವು ನಾಶವಾಗುತ್ತದೆ.' ಈ ಮಾತುಗಳನ್ನು ನಮ್ಮ ದೇಶದವರು ಮುಂದೆ ಹೊಳೆಯುವ ಅಕ್ಷರಗಳಲ್ಲಿ ಕೆತ್ತಿ ಇಡಬೇಡವೇ? ಹಿಂದುಸ್ಥಾನದಲ್ಲಿ ಅದರಲ್ಲೂ ನಮ್ಮ ದೇಶದಲ್ಲಿ ಪ್ರಜಾ ಜನರಲ್ಲಿ ಹೆಚ್ಚಿನವರು ಸಮಾಜದ ಕಡೆಗೆ ತನ್ನ ಕರ್ತವ್ಯವೇನಾದರೂ ಇದೆಯೆಂತ ತಿಳಿದುಕೊಂಡೇ ಇಲ್ಲ. ಪುರಾತನ ಕಾಲದಲ್ಲಿ ಧರ್ಮವನ್ನನುಸರಿಸಿ ರಾಜ್ಯವಾಳುತ್ತಿದ್ದ ಕಾಲವಿದ್ದಾಗ ಪ್ರಜೆಯರು ತಮ್ಮ ತಮ್ಮ ಗೃಹಕೃತ್ಯದ ಕಾರ್ಯ ನಡಿಸುತ್ತಿರಬಹುದಾಗಿತ್ತೋ ಏನೋ! ಈಗ ಆದರೋ ಜನರ ಅಭಿಪ್ರಾಯಕ್ಕೆ ಅನುಗುಣವಾಗಿ ಆಡಳಿತವು ನಡೆಯಬೇಕಾಗಿರುವಲ್ಲಿ ಸಾರ್ವಜನಿಕ ಕೆಲಸಗಳಿಗೆ ಪ್ರತಿಯೊಬ್ಬನು ಗಮನ ಕೊಡಲೇ ಬೇಕಾಗಿದೆ. ಎಲ್ಲರೂ ಒಂದೇ ತರದ ಕೆಲಸ ಮಾಡಬೇಕಾಗಿಲ್ಲ; ಮಾಡಲು ಸಾಧ್ಯವೂ ಇಲ್ಲ. ಆದರೆ ಸಾರ್ವಜನಿಕ ಕಾರ್ಯಗಳಲ್ಲಿ ಕೈ ಹಾಕಿರುವ ಮುಂದಾಳುಗಳು ಕೊಡುವ ಸಲಹೆಗಳನ್ನು ಕೆಲವು ಮಟ್ಟಿಗಾದರೂ ಜಾರಿಗೆ ತರಲು ಪ್ರಯತ್ನಿಸಬೇಕಾಗಿದೆ

"ಕಳೆದ ಯುದ್ಧದಲ್ಲಿ ತಂದೆಯನ್ನಾಗಲಿ ಅಣ್ಣತಮ್ಮಂದಿಯರನ್ನಾಗಲಿ ಕಳಕೊಳ್ಳದ ಯುವಕರಿಲ್ಲ. ಆದ್ದರಿಂದ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಮಾತ್ರ ಮಾಡಿದರೆ ಸಾಲದು. ಹಾಗೆ ದೇಶಕ್ಕಾಗಿ ದೇಹಕೊಟ್ಟ ಭಾಗವನ್ನೂ ಸಹ ಉಳಿದವರು ಮಾಡಬೇಕಾಗಿದೆ" ಎಂತ ಬಾಲ್ಡ್ವಿನವರು ಹೇಳಿದರು. ಗುಲಾಮಗಿರಿಯಲ್ಲೇ ಹೆಮ್ಮೆ ಪಡುವ ಹಿಂದುಸ್ಥಾನದಲ್ಲಿ ದೇಶಕ್ಕಾಗಿ ದೇಹ ಕೊಡುವದಂತಿರಲಿ, ದೇಶಕ್ಕಾಗಿ ಸ್ವಲ್ಪ ಅನುಕೂಲಗಳನ್ನು ಬಿಟ್ಟ ಜನರು ಸಹ ಅತಿ ಅಲ್ಪ ಸಂಖ್ಯೆಯವರಾಗಿದ್ದಾರೆ. ದೇಶದ ಜನರಲ್ಲಿ ತ್ಯಾಗ ಬುದ್ಧಿ ಇಲ್ಲವೆಂತಲ್ಲ. ಧರ್ಮಕ್ಕಾಗಿ ಸಾಮ್ರಾಜ್ಯವನ್ನೇ ಬಿಟ್ಟ ಬುದ್ಧನೂ, ಗರೀಬರ ಉದ್ಧಾರಕ್ಕಾಗಿ ತನ್ನದು ಎಂಬದು ಎಳ್ಳಷ್ಟೂ ಇಲ್ಲದೆ ಅಹೋರಾತ್ರಿ ಕೆಲಸ ಮಾಡುತ್ತಿರುವ ಮಹಾತ್ಮ ಗಾಂಧಿಯಂಥವರೂ ಹುಟ್ಟಿದ ದೇಶದಲ್ಲಿ ದೇಶೋದ್ಧಾರಕ್ಕಾಗಿ ದೇಹತ್ಯಾಗ ಮಾಡಲು ಜನರು ತಯಾರಾಗಲಾರರು ಎಂತ ಹೇಳಲು ಸಾಧ್ಯವೇ ಇಲ್ಲ. ಆದರೆ ಯುವಕರಿಗೆ ಈಗ ಸಿಕ್ಕುತ್ತಿರುವ ವಿದ್ಯೆಯಿಂದ ಸ್ವದೇಶ ಪ್ರೀತಿಯೆಂಬವೇ ಇದೆಯೆಂತ ಗೊತ್ತಿಲ್ಲದ ಕಾಲವಾಗಿದೆ. ಜನರ ಮನಸ್ಸನ್ನು ಸರಿಯಾದ ರೀತಿಯಲ್ಲಿ ತಿದ್ದಿದರೆ ಪಾರಮಾರ್ಥಿಕದಲ್ಲಿ ಸಂಪೂರ್ಣವಾಗಿ ನಂಬಿಕೆ ಇದ್ದು ಪ್ರಾಪಂಚಿಕ ವಿಷಯಗಳನ್ನು ಅಶಾಶ್ವತವಾದದ್ದೆಂತ ತಿಳಿಯುವ ಸಂಸ್ಕೃತಿ ಇರುವ ಹಿಂದುಸ್ಥಾನದವರಲ್ಲಿ ಸಾರ್ವಜನಿಕ ಕಾರ್ಯಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡುವ ಜನರು ಲಕ್ಷಗಟ್ಲೆ ಸಿಕ್ಕುವದು ಅಸಾಧ್ಯವಲ್ಲ. ತತ್ವವನ್ನೆಲ್ಲಾ ತಿಳಿದಿದ್ದರೂ ಐಹಿಕ ಸುಖಭೋಗವನ್ನು ಎಳ್ಳಷ್ಟಾದರೂ ಬಿಡಲು ಮನಸು ಬರದೆ ಇರುವಂಥ ವಿದ್ಯೆಯು ವಿದ್ಯಾವಂತರಲ್ಲಿ ತುಂಬಿರುವದರಿಂದಲೂ ವಿದ್ಯಾವಂತರೇ ಮಿಕ್ಕವರಿಗೆ ಆದರ್ಶರಾಗಿರುವದರಿಂದ ವೈರಾಗ್ಯವೆಲ್ಲಾ ಗ್ರಂಥಗಳಲ್ಲಿ ಇದೆಯೇ ಹೊರತು ಕಾರ್ಯತಃ ಜಾರಿಯಲ್ಲಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಮಂತ್ರಿಯು ತಮ್ಮ ದೇಶದ ಉದ್ಧಾರಕ್ಕಾಗಿ ತಂದೆಯವರನ್ನೂ, ಅಣ್ಣತಮ್ಮಂದಿಯರನ್ನೂ ಕಳಕೊಳ್ಳದವರು ತಮ್ಮಲ್ಲಿ ಯಾರೂ ಇಲ್ಲ ಎಂತ ಹೆಮ್ಮೆಯಿಂದ ಹೇಳಿದರು. ಆ ಜನರು ಪ್ರಾಪಂಚಿಕ ವಿಷಯಗಳೆಲ್ಲಾ ತುಚ್ಛೀಕರಿಸಲ್ಪಡಬೇಕೆಂಬ ವೈರಾಗ್ಯ ಮಾರ್ಗವನ್ನು ನಂಬಿದವರಲ್ಲ. ತಮ್ಮ ದೇಶದ ಕ್ಷೇಮವೇ ತಮ್ಮ ಮೋಕ್ಷವೆಂತ ನಂಬಿದವರಾಗಿದ್ದಾರೆ. ಆ ನಂಬಿಕೆಯಿಂದ ಪ್ರತಿಯೊಂದು ಕುಟುಂಬದಿಂದಲೂ ದೇಶಕ್ಕಾಗಿ ನರಬಲಿ ಕೊಟ್ಟಿದ್ದಾರೆ. ನಮ್ಮಲ್ಲಿ ಪ್ರಾಣ ಕೊಡಬೇಕಾದ ಕಾಲವೇನೂ ಬಂದಿರುವದಿಲ್ಲ. ಆದರೆ ದೇಶದ ಸುಖದುಃಖಗಳನ್ನು ಯೋಚಿಸಲು ಸಮಸ್ತ ಜನರೂ ಕೆಲವು ನಿಮಿಷಗಳ ಸಮಯವನ್ನಾದರೂ ತ್ಯಾಗಮಾಡಬೇಕೆಂತಲೂ ಕೆಲವರಾದರೂ ರಾಷ್ಟ್ರೋದ್ಧಾರಕ್ಕಾಗಿ ಸುಖಗಳನ್ನು ಬಿಟ್ಟು ಕಷ್ಟ ಸಹಿಸಲು ತಯಾರಾಗಬೇಕೆಂತಲೂ ಮಾತ್ರ ನಿರೀಕ್ಷಿಸಲಾಗಿದೆ.

'ಪ್ರಜಾಸತ್ತಾತ್ಮಕ ಸರಕಾರದಲ್ಲಿ ಜನರಲ್ಲೇ ಆಡಳಿತದ ಜವಾಬ್ದಾರಿ ಇರುವದಾದರೂ ಜನರಿಂದ ಆರಿಸಲ್ಪಟ್ಟ ಕೆಲವರೇ ಕೆಲಸಗಳನ್ನು ನಡಿಸುವದಾಗಿದೆ. ಆದ್ದರಿಂದ ಪ್ರತಿನಿಧಿಗಳನ್ನು ಆರಿಸುವದರಲ್ಲಿ ಬಹಳ ಜಾಗರೂಕರಾಗಿರಬೇಕು. ನಿಮ್ಮ ಮನೆ ಕಾರ್ಯವನ್ನು ನಡಿಸಲು ಯೋಗ್ಯರನ್ನು ಆರಿಸಲು ಹೇಗೆ ಜಾಗರೂಕರಾಗಿರಬೇಕೋ ಹಾಗೆಯೇ ಸಮುದಾಯಿಕ ಕಾರ್ಯಗಳನ್ನು ನಡಿಸಲು ಜನರನ್ನು ಆರಿಸುವದರಲ್ಲಿ ಅತ್ಯಂತ ಜಾಗರೂಕರಾಗಿರಬೇಕು. ಪ್ರತಿನಿಧಿಗಳನ್ನು ಆರಿಸುವದರಲ್ಲಿ ಜಾಗರೂಕತೆ ತಪ್ಪಿದರೆ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಅತ್ಯಂತ ಹಾನಿಕರವಾದ ಅಪಾಯವಿದೆ' ಎಂತ ಉಪನ್ಯಾಸಕರು ಹೇಳಿದ್ದಾರೆ. ಈ ಬೋಧನೆಯು ಪ್ರಜಾಪ್ರತಿನಿಧಿ ಸಭೆಗಳು ಮೊಳೆಕೆಯೊಡೆಯುತ್ತಿರುವ ನಮ್ಮ ದೇಶದಲ್ಲಿ ಈ ಸಮಯದಲ್ಲಿ ಅತ್ಯಂತ ಅವಶ್ಯವಿದೆ. ಈ ಮಾತುಗಳು ಬ್ರಿಟಿಷ್ ಮಂತ್ರಿಯರು ಹೇಳಬೇಕಾದರೆ ಎಷ್ಟರ ಮಹತ್ವದ್ದಿರಬೇಕೆಂಬದನ್ನು ವಾಚಕರು ಊಹಿಸಬೇಕಾಗಿದೆ. ಪ್ರಜೆಯರ ಹಕ್ಕನ್ನು ಸ್ವಲ್ಪ ಕಾಲದ ವರೆಗೆ ಪೂರ್ತಿಯಾಗಿ ಬೇರೆಯವರಿಗೆ ವಹಿಸಿಕೊಡುವಾಗ ದೇಶದ ಹಿತವನ್ನೇ ಬಯಸುವವರನ್ನೇ ಆರಿಸಿಕೊಳ್ಳದೆ ಹೋದರೆ ಅತ್ಯಂತ ಕೇಡಾಗುವದರಲ್ಲಿ ಸಂಶಯವಿಲ್ಲ.

"ಸಾಮುದಾಯಿಕ ಕೆಲಸದಲ್ಲಿ ಬಹಳ ಸಮಾಧಾನವಿರಬೇಕು. ನಿಮ್ಮ ಪ್ರಯತ್ನದ ಪ್ರತಿಫಲ ನಿಮ್ಮ ಕಾಲದಲ್ಲೇ ಸಿಕ್ಕುತ್ತದೆಯೆಂತ ಇಲ್ಲ. ಮನುಷ್ಯ ಜಾತಿಯ ಇತಿಹಾಸ ಬಹಳ ಪುರಾತನದ್ದು. ಒದಗಾವಣೆಗಳು ಸಮಾಧಾನದಿಂದ ಆಗುತ್ತವೆಯಷ್ಟೆ. ನಾವು ಮಾಡುವ ಕೆಲಸವು ನಿಂತಲ್ಲಿಂದ ಬೇರೆಯವರು ಪ್ರಾರಂಭಿಸಿ ಮುಂದರಿಸುತ್ತಾರೆಂಬ ಭರವಸೆಯಿಂದ ಕೆಲಸ ಮಾಡಬೇಕು.'' ಈ ಬುದ್ಧಿವಾದಗಳು ಹಿಂದುಸ್ಥಾನದಲ್ಲಿ ಅವಶ್ಯವಿದೆ. ಕಾಂಗ್ರೆಸ್ಸಿನಿಂದ ಏನಾಯಿತು, ಗಾಂಧಿ ಚಳವಳಿಯಿಂದ ಏನಾಯಿತು; ಈ ದೇಶದಲ್ಲೇ ಆದರ್ಶ ಮಾನ್‌ದಾರರ ಸಂಘದಿಂದ ಏನು ಪ್ರಯೋಜನವಾಯಿತು ಎಂತ ಇತ್ಯಾದಿಯಾಗಿ ಸವಾಲುಗಳನ್ನು ಗ್ರಾಮವಾಸಿಗಳಿರಲಿ, ವಿದ್ಯಾವಂತರೇ ಕೇಳುತ್ತಾರೆ. ಈ ಸಂಸ್ಥೆಗಳಿಂದ ಪ್ರಯೋಜನಗಳು ದೊರಕುತ್ತಲೇ ಇವೆ. ಆದರೆ ದೊರಕಬೇಕಾಗಿರುವ ಪ್ರತಿಫಲಗಳು ಇನ್ನೂ ಹತ್ತೆಂಟು ವರ್ಷಗಳಲ್ಲಿ ಅಥವಾ ಒಂದೆರಡು ತಲೆಗಳಲ್ಲಿ ಯಾ ಒಂದೆರಡು ಶತಮಾನದಲ್ಲಿ ಸಿಕ್ಕುತ್ತವೆ ಎಂಬ ಭರವಸೆಯಿಂದ ಕೆಲಸ ಮಾಡಬೇಕು. ಶೀಘ್ರದಲ್ಲೇ ಪ್ರತಿಫಲ ದೊರಕಬೇಕಾದರೆ ಸಂಪೂರ್ಣ ತ್ಯಾಗಬುದ್ಧಿಯಿಂದ ಒಗ್ಗಟ್ಟಿನಿಂದ ಕೆಲಸ ಮಾಡಬೇಕು.

ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಯು ಬ್ರಿಟಿಷ್ ಯುವಕರನ್ನು ಹೊಂದಿದೆ. ಪ್ರಪಂಚದ ಪ್ರಯೋಜನಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯವು ಭದ್ರವಾಗಿರಬೇಕೆಂತ ಬ್ರಿಟಿಷರ ಸ್ವಾಭಾವಿಕ ಅಹಂಕಾರದಿಂದ ಮಾತನಾಡಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯವು ಎಷ್ಟೇ ಭದ್ರವಾಗಿರಲು ನಮ್ಮ ಆಕ್ಷೇಪಣೆಯಿಲ್ಲ. ಆದರೆ ಯಾವದೇ ಜನಾಂಗವನ್ನು ಅಧೀನದಲ್ಲಿಟ್ಟುಕೊಂಡು ಆ ಜನಾಂಗದ ಅಭಿವೃದ್ಧಿಗೆ ಗಮನ ಕೊಡದೆ ತನ್ನ ಸ್ವರಾಜ್ಯದ ಮೇಲ್ಮೆಯನ್ನೇ ಸಾಧಿಸುತ್ತಿರುವದನ್ನು ನಿಲ್ಲಿಸಲು ಹಿಂದೂಸ್ಥಾನದವರು ಪ್ರಯತ್ನಿಸುತ್ತಿದ್ದಾರೆ. ಸಾಮ್ರಾಜ್ಯವನ್ನು ನಡಿಸಲು ನಿಸ್ವಾರ್ಥ ಯುವಕರು ಬೇಕಾಗಿದ್ದರೆ ಅಧೀನದಲ್ಲಿರುವದನ್ನು ತಪ್ಪಿಸಿಕೊಳ್ಳಲಿಕ್ಕೆ ಎಷ್ಟು ಹೆಚ್ಚು ಸ್ವಾರ್ಥತ್ಯಾಗಿಗಳು ಬೇಕೆಂಬವನ್ನು ಊಹಿಸಬಹುದು.

ಸ್ವಾರ್ಥತ್ಯಾಗಕ್ಕೆ ತಯಾರಾದ ಯುವಕರು ಇಂಗ್ಲೆಂಡಿನಲ್ಲಿ ಈಗ ಇರುವಷ್ಟು ಎಂದೂ ಇರಲಿಲ್ಲವೆಂತ ಮಿ. ಬಾಲ್ಡ್ವಿನರು ಹೇಳಿರುತ್ತಾರೆ. ಈ ಮಾತುಗಳನ್ನು ಹಿಂದುಸ್ಥಾನದ ಮುಖಂಡರು ಎಂದು ಹೇಳಲು ಸಾಧ್ಯವಾದೀತೋ ತಿಳಿಯದಿಲ್ಲ. ಸ್ವಾರ್ಥತ್ಯಾಗಿಗಳು ಕಡಿಮೆಯಾಗಿದ್ದಾರೆಂಬ ಕಾರಣದಿಂದ ಧೈರ್ಯಗುಂದದೆ, ದೇಶಭಕ್ತಿಯು ಹೊರಬಿದ್ದು ತ್ಯಾಗ ಮಾಡಲು ತಯಾರಾಗಬೇಕೆಂಬ ಯೋಚನೆ ಹುಟ್ಟಿದಾಗ ಅಂಥಾ ಯೋಚನೆ ಹುಟ್ಟಿದವರು ತಮ್ಮಿಂದ ಸಾಧ್ಯವಾದಷ್ಟು ಸಹಾಯವನ್ನು ಸಮುದಾಯದ ಕೆಲಸಕ್ಕೆ ಕೊಟ್ಟರೆ ಬಹಳ ಪ್ರಯೋಜನವಾದೀತು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಶೇರ ದಾರರ ವಾರ್ಷಿಕ ಜನರಲ್ ಮೀಟಿಂಗು ಈ ತಾ. 7ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ಮಡಿಕೇರಿಯಲ್ಲಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯಿತು. ರಾ. ಬಾ. ಕೋದಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು. 88 ಸಂಘ ಮೆಂಬರುಗಳ ಪ್ರತಿನಿಧಿಗಳೂ, 15 ಬಿಡಿಮೆಂಬರುಗಳೂ ಹಾಜರಿದ್ದರು. ರಿಜಿಸ್ಟ್ರಾರವರೂ, ಇಬ್ಬರು ಕೋಆಪರೇಟಿವ್ ಇನ್ಸ್‌ಪೆಕ್ಟರುಗಳೂ, ಕೆಲವು ಸುಪರ್‌ವೈಜರುಗಳೂ ಬಂದಿದ್ದರು.

1. ಡೈರೆಕ್ಟರುಗಳ ವರದಿಯೂ, ರಿಜಿಸ್ಟ್ರಾರವರ ಆಡಿಟ್ ರಿಪೋರ್ಟೂ ಓದಲಾಯಿತು.

2. ಶೇರುದಾರರಿಗೆ ಶೇಕಡ 6¼ರಂತೆ ಲಾಭ ಹಂಚಬೇಕೆಂಬ ಡೈರೆಕ್ಟರುಗಳ ಶಿಫಾರಸ್ಸನ್ನು ಅನುಸರಿಸಿ ಅದೇ ದರದಲ್ಲಿ ಲಾಭ ಹಂಚಲು ಒಮ್ಮತದಿಂದ ಮಂಜೂರಾಯಿತು.

3. ಉಳಿದ ನಿವ್ವಳ ಲಾಭವನ್ನು ರಿಜಿಸ್ಟ್ರಾರವರ ಸೂಚನೆ ಮೇರೆ ಇಡಲು ತೀರ್ಮಾನವಾಯಿತು.

4. ಅನಂತರ ಡೈರೆಕ್ಟರುಗಳ ವರದಿಯು ಮಂಜೂರು ಮಾಡಿಕೊಳ್ಳಲಾಯಿತು

5 ಸಂಘಗಳಿಗೆ ಅವಶ್ಯ ಬೀಳಬಹುದಾದ ಸಾಲದ ಅದಾಜು ಪಟ್ಟಿಯನ್ನು ವರ್ಷದ ಆರಂಭದಲ್ಲಿ ಬ್ಯಾಂಕಿಗೆ ತರಿಸಿಕೊಳ್ಳಬೇಕೆಂತ ಸೊಪಾಡಿ ಸಂಘದ ಪ್ರತಿನಿಧಿ ಮಿ. ಯ. ನ. [illegible]ಯ್ಯನವರು ಸೂಚಿಸಿದ್ದರ ಮೇಲೆ ಸ್ವಲ್ಪ ಕಾಲ ಚರ್ಚೆ ನಡೆದು ರಿಜಿಸ್ಟ್ರಾರವರ ಆಲೋಚನೆ ತೆಗೆದುಕೊಂಡು ಡೈರೆಕ್ಟರುಗಳು ಈ ವಿಷಯವನ್ನು ಅಜಮಾಯಿಸಿದರೆ ಸಾಕೆಂತ ಸೂಚಕರು ಒಪ್ಪಿಕೊಂಡರು.

6. ಉತ್ತರ ಕೊಡಗಿನ ಬೇರೆಕಡೆಗಳಲ್ಲೆಲ್ಲಾ ಬ್ಯಾಂಕಿನ ಮಹಾ ಸಭೆ ನಡೆಯಬೇಕೆಂತ ಮಿ. ಮುಕ್ಕಾ[illegible]ನವರು ಸೂಚಿಸಿ ಮಿ. ನಿಶ್ಚಿತ ವೆಂಕಟರವಣಯ್ಯನವರು ಅನುಮೋದಿಸಿ ಚರ್ಚೆ ನಡೆದನಂತರ ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು

(4ನೇ ಪುಟದಲ್ಲಿ ಮುಂದುವರಿದಿದೆ)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೨೧ನೇ ಪ್ರಕರಣ.

ಉಪವಾಸ.

ನಾನು ಹಾಲನ್ನೂ ಧಾನ್ಯಗಳನ್ನೂ ಬಿಟ್ಟು ಬಿಟ್ಟು ಫಲ ಹಣ್ಣಿನ ಆಹಾರವನ್ನು ತೆಗೆದುಕೊಳ್ಳುವ ಪ್ರಯೋಗವನ್ನು ಮೊದಲು ಮಾಡಿದ ಸಮಯದಲ್ಲಿಯೇ ಸಂಯಮದ ಸಾಧನೆಗಾಗಿ ಉಪವಾಸವನ್ನು ಆರಂಭಿಸಿದೆನು. ಇದರಲ್ಲಿ ಮಿ. ಕಾಲನ್‌ಬೇಕರು ಜೊತೆಗೂಡಿದರು. ಆಗ ಉಪವಾಸವಾಸನೆಗೆ ಅಭ್ಯಾಸವಾಗಿದ್ದಿತು. ಆದರೆ ಆ ಉಪವಾಸಗಳನ್ನೆಲ್ಲಾ ಮಾಡುವುದು ಕೇವಲ ಆರೋಗ್ಯ ದೃಷ್ಟಿಯಿಂದ. ಇಂದ್ರಿಯ ನಿಗ್ರಹಕ್ಕೆ ಉಪವಾಸವು ಆವಶ್ಯಕವೆಂಬುದನ್ನು ನಾನು ತಿಳಿದುಕೊಂಡದ್ದು ಒಬ್ಬ ಮಿತ್ರರಿಂದ. ವೈಷ್ಣವ ಕುಟುಂಬದಲ್ಲಿಯೂ ಎಲ್ಲಾ ವಿಧದ ಕಠಿಣವ್ರತಗಳನ್ನು ನಡಿಸುತ್ತಿದ್ದ ತಾಯಿಯ ಹೊಟ್ಟೆಯಲ್ಲಿಯೂ ಹುಟ್ಟಿದವನಾದುದರಿಂದ ನಾನು ಹಿಂದೂಸ್ಥಾನದಲ್ಲಿದ್ದಾಗ ಏಕಾದಶಿ ಮುಂತಾದ ದಿನಗಳಲ್ಲಿ ಉಪವಾಸವ್ರತವನ್ನು ನಡೆಸಿದ್ದೆನು. ಆದರೆ ಹೀಗೆ ಮಾಡಿದ್ದುದೆಲ್ಲ ನನ್ನ ತಾಯಿಯ ಮೇಲ್ಪಂಕ್ತಿಯನ್ನು ಅನುಸರಿಸಿ ನನ್ನ ತಂದೆ ತಾಯಿಗಳನ್ನು ಸಂತೋಷಪಡಿಸಲು ಯತ್ನಿಸಿದ್ದೇ ಹೊರತು ಮತ್ತೇನೂ ಇಲ್ಲ. ಆಗ ನನಗೆ ಉಪವಾಸದ ಮಹಿಮೆಯು ತಿಳಿದಿರಲಿಲ್ಲ. ಅದರಲ್ಲಿ ನನಗೆ ನಂಬಿಕೆಯೂ ಇರಲಿಲ್ಲ. ಆದರೆ ನಾನು ಮೇಲೆ ತಿಳಿಸಿರುವ ಮಿತ್ರರು ಅದರಿಂದ ಲಾಭವೊಂದು ಸಿದ್ಧವೆಂದೂ, ಬ್ರಹ್ಮಚರ್ಯ ವ್ರತವನ್ನು ಪಾಲಿಸುವುದರಲ್ಲಿ ಇದು ಸಹಾಯವಾಗುವುದೆಂಬ ಆಸೆಯಿಂದ ಇದನ್ನು ನಡೆಸುತ್ತಿದ್ದರೆಂದೂ ನಾನು ಕಂಡೊಡನೆಯೇ ಅವರ ದೃಷ್ಟಾಂತವನ್ನನುಸರಿಸಿ ಏಕಾದಶಿಯ ದಿನ ಉಪವಾಸ ಮಾಡತೊಡಗಿದೆನು. ಸಾಮಾನ್ಯವಾಗಿ ಉಪವಾಸದ ದಿನ ಹಣ್ಣನ್ನೂ, ಹಾಲನ್ನೂ ತೆಗೆದುಕೊಳ್ಳುತ್ತಾರೆ. ಆದರೆ ನಾನು ಈ ರೀತಿಯ ಉಪವಾಸವನ್ನು ಪ್ರತಿ ದಿನವೂ ಮಾಡುತ್ತಿದ್ದೆನು. ಆದುದರಿಂದ ನಾನು ಈಗ ನೀರನ್ನುಳಿದು ಇನ್ನೇನನ್ನೂ ತೆಗೆದುಕೊಳ್ಳದೆ ಪೂರ್ಣೋಪವಾಸವನ್ನಾಚರಿಸ ತೊಡಗಿದೆನು.

ನಾನು ಈ ಪ್ರಯೋಗವನ್ನು ಆರಂಭಿಸಿದಾಗ ಶ್ರಾವಣ ಮಾಸವೂ, ರಮ್‌ಜಾನ್ ತಿಂಗಳೂ ಆಕಸ್ಮಾತ್ ಒಟ್ಟುಗೂಡಿದುವು. ಗಾಂಧಿಮನೆತನದವರು ವೈಷ್ಣವ ವ್ರತಗಳನ್ನಲ್ಲದೆ ಶೈವ ವ್ರತಗಳನ್ನೂ ಪಾಲಿಸುತ್ತಿದ್ದರು. ವಿಷ್ಣು ದೇವಾಲಯಕ್ಕೆ ಹೋಗುತ್ತಿದ್ದಂತೆಯೇ, ಶಿವಾಲಯಕ್ಕೂ ಹೋಗುತ್ತಿದ್ದರು. ನಮ್ಮ ಮನೆಯಲ್ಲಿ ಮಂದಿ ಇಡೀ ಶ್ರಾವಣಮಾಸದಲ್ಲಿ ಪ್ರದೋಷ (ಸಂಜೆಯವರೆಗೂ ಉಪವಾಸ)ವನ್ನಾಚರಿಸುತ್ತಿದ್ದರು. ನಾನೂ ಹಾಗೆಯೇ ಮಾಡಲು ನಿರ್ಧರಿಸಿದೆನು.

ಈ ಮಹತ್ವದ ಪ್ರಯೋಗಗಳ ಆರಂಭವು 'ಟಾಲ್‌ಸ್ಟಾಯ್ ಫಾರಂ'ನಲ್ಲಿ ಆಯಿತು. ಮಿ. ಕಾಲನ್‌ಬೇಕರೂ, ನಾನೂ, ಅಲ್ಲಿ ಹುಡುಗರೂ, ಮಕ್ಕಳನ್ನೂ ಹಗೂಂಡಿದ್ದ ಕೆಲವು ಸತ್ಯಾಗ್ರಹಿ ಕುಟುಂಬಗಳೊಂದಿಗೆ ಅಲ್ಲಿ ವಾಸಿಸುತ್ತಿದ್ದೆವು. ಈ ಹುಡುಗರ, ಮಕ್ಕಳಿಗಾಗಿ ನಾವು ಶಾಲೆಯನ್ನಿಟ್ಟಿದ್ದೆವು. ಇವರಲ್ಲಿ ನಾಲ್ಕೈದು ಜನ ಮುಸಲ್ಮಾನರಾಗಿದ್ದರು. ತಮ್ಮ ಧಾರ್ಮಿಕ ನಿಯಮಗಳನ್ನೆಲ್ಲಾ ಪಾಲಿಸುವುದಕ್ಕೆ ನಾನು ಯಾವಾಗಲೂ ಅವರಿಗೆ ಉತ್ತೇಜನವನ್ನೂ, ಸಹಾಯವನ್ನೂ ಕೊಡುತ್ತಿದ್ದೆನು. ಅವರು ಪ್ರತಿನಿತ್ಯವೂ 'ನಮಾಜ್' (ಪ್ರಾರ್ಥನೆ) ಮಾಡುವಂತೆ ನಾನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದೆನು. ಆಶ್ರಮದಲ್ಲಿ ಕ್ರಿಸ್ತಾಯೀ ಮತ್ತು ಪಾರಸೀ ಹುಡುಗರೂ ಇದ್ದರು. ಅವರೂ ತಮ್ಮ ತಮ್ಮ ಧರ್ಮಕ್ಕೆ ಅನುಸಾರವಾಗಿ ನಡೆದುಕೊಳ್ಳುವಂತೆ ಅವರಿಗೆ ಉತ್ತೇಜನ ಕೊಡುವುದು ನನ್ನ ಕರ್ತವ್ಯವೆಂದೆಣಿಸಿದೆನು. ಆದುದರಿಂದ ಈ ತಿಂಗಳಲ್ಲಿ ಮುಸಲ್ಮಾನ ಹುಡುಗರು ರಮ್‌ಜಾನ್ ಉಪವಾಸವನ್ನಾಚರಿಸುವಂತೆ ನಾನು ಅವರನ್ನು ಪ್ರೇರಿಸಿದ್ದೆನು. ನಾನಂತೂ ಪ್ರದೋಷವನ್ನಾಚರಿಸಲು ನಿರ್ಧರಿಸಿದ್ದೆನು. ಈಗ ಹಿಂದೂ, ಪಾರಸೀ, ಕ್ರಿಸ್ತಾಯೀ ಹುಡುಗರಿಗೆ ಇದರಲ್ಲಿ ನನ್ನೊಡನೆ ಒಂದುಗೂಡಬೇಕೆಂದು ಹೇಳಿದೆನು. ಆತ್ಮನಿಗ್ರಹದ ಯಾವ ವಿಷಯದಲ್ಲಿಯಾದರೂ ಇತರರೊಡನೆ ಸೇರುವುದು ಯಾವಾಗಲೂ ಒಳ್ಳೆಯದೆಂದು ಅವರಿಗೆ ವಿವರಿಸಿದೆನು. ಆಶ್ರಮದ ನಿವಾಸಿಗಳಲ್ಲಿ ಅನೇಕರು ನನ್ನ ಸೂಚನೆಯನ್ನು ಸಂತೋಷದಿಂದ ಅನುಮೋದಿಸಿದರು. ಹಿಂದೂ ಮತ್ತು ಪಾರಸೀ ಯುವಕರು ಮುಸಲ್ಮಾನ ಹುಡುಗರನ್ನು ಎಲ್ಲಾ ವಿಷಯಗಳಲ್ಲಿಯೂ ಅನುಸರಿಸಲಿಲ್ಲ. ಅದು ಅವಶ್ಯಕವೂ ಇರಲಿಲ್ಲ. ಮುಸಲ್ಮಾನ ಹುಡುಗರು ತಮ್ಮ ಊಟಕ್ಕೆ ಸೂರ್ಯಾಸ್ತಮಯವಾಗುವವರೆಗೆ ಕಾಯಬೇಕಾಗಿತ್ತು. ಇತರರು ಹೀಗೆ ಮಾಡುತ್ತಿರಲಿಲ್ಲ. ಇದರಿಂದ ಆ ಇತರರು ಮುಸಲ್ಮಾನ ಮಿತ್ರರಿಗಾಗಿ ರುಚಿಕರ ಪದಾರ್ಥಗಳನ್ನು ಸಿದ್ಧಪಡಿಸಿ ಒದಗಿಸುವುದಕ್ಕೆ ಅವಕಾಶವಾಗುತ್ತಿದ್ದಿತು. ಹಾಗೆಯೇ ಸೂರ್ಯೋದಯಕ್ಕಿಂತ ಮುಂಚೆ ಮುಸಲ್ಮಾನರು ಊಟಮಾಡಬೇಕಾದಾಗ ಹಿಂದೂ ಮತ್ತು ಇತರ ಯುವಕರೇನೂ ಅವರ ಜೊತೆಗೆ ಕೂಡಬೇಕಾಗುತ್ತಿರಲಿಲ್ಲ. ಮುಸಲ್ಮಾನರನ್ನುಳಿದು ಮಿಕ್ಕವರೆಲ್ಲರೂ ಹಗಲು ಹೊತ್ತು ನೀರು ಕುಡಿಯುವುದನ್ನು ಬಿಟ್ಟಿರಲಿಲ್ಲ.

ಈ ಪ್ರಯೋಗಗಳೆಲ್ಲದರ ಫಲವೇನಾಯಿತೆಂದರೆ,—ಎಲ್ಲರಿಗೂ ಪೂರ್ಣೋಪವಾಸ, ಅರ್ಧೋಪವಾಸಗಳ ಮಹತ್ವದಲ್ಲಿ ನಂಬಿಕೆ ಹುಟ್ಟಿತು ಮತ್ತು ಅವರಲ್ಲಿ ಪ್ರೇಮಭಾವದ ಐಕ್ಯತೆಯು ಭಾವವು ಬೆಳೆಯಿತು. ಟಾಲ್‌ಸ್ಟಾಯ್ ಫಾರ್ಮಿನಲ್ಲಿ ನಾವೆಲ್ಲರೂ ಶಾಕಾಹಾರಿಗಳಾಗಿದ್ದೆವು. ಎಲ್ಲರೂ ನನ್ನ ಮನಸ್ಸನ್ನು ನೋಯಿಸದಿರಲು ಸಿದ್ಧರಾಗಿದ್ದುದೇ ಇದಕ್ಕೆ ಕಾರಣವೆಂದು ನಾನು ಕೃತಜ್ಞತೆಯಿಂದ ಹೇಳಬೇಕು. ರಮ್‌ಜಾನ್ ಕಾಲದಲ್ಲಿ ಮಾಂಸವಿಲ್ಲದಿರುವುದು ಮುಸಲ್ಮಾನ ಹುಡುಗರಿಗೆ ಕೊರತೆಯಾಗಿರಬೇಕು. ಆದರೆ ಅವರಲ್ಲಿ ಒಬ್ಬರಾದರೂ ಈ 'ಕೊರತೆ'ಯನ್ನು ನನ್ನ ಮುಂದೆ ಎಂದೂ ಹೇಳಲಿಲ್ಲ. ಅವರು ಶಾಕಾಹಾರವನ್ನು ತಿನ್ನಲು ಸಂತೋಷಪಡುತ್ತಿದ್ದರು. ಆದರಲ್ಲಿ ಆಗಾಗ್ಗೆ ರುಚಿಕರವಾದ ಹಿಂದೂ ಪದಾರ್ಥಗಳು, ಆಶ್ರಮದ ಸರಳತೆಗೆ ತಕ್ಕಂತಹ ರುಚಿಕರ ಶಾಕಾಹಾರವನ್ನು ಹಿಂದೂ ಹುಡುಗರು ಸಿದ್ಧಮಾಡುತ್ತಿದ್ದರು.

ಉಪವಾಸದ ಕುರಿತ ಈ ಅಧ್ಯಾಯದಲ್ಲಿ ನಾನು ಉದ್ದೇಶಪೂರ್ವಕವಾಗಿಯೇ ಈ ವಿಷಯವನ್ನು ಎತ್ತಿದ್ದೇನೆ. ಏಕೆಂದರೆ—ಈ ಮಧುರ ಸಂಸ್ಮರಣೆಗಳನ್ನು ಬೇರೆಲ್ಲಿಯೂ ಪ್ರಸ್ತಾಪಿಸಲು ಸಾಧ್ಯವಾಗುತ್ತಿರಲಿಲ್ಲ. ಇದೂ ಅಲ್ಲದೆ ಈ ವಿಷಯದಿಂದ ನನ್ನ ಸ್ವಭಾವ ವೈಶಿಷ್ಟ್ಯವೊಂದನ್ನು ವಿವರಿಸಿದ್ದೇನೆ. ಅದೇನೆಂದರೆ—ನನಗೆ ಒಳ್ಳೆಯದೆಂದು ತೋರಿದ ಕಾರ್ಯಗಳಲ್ಲೆಲ್ಲಾ ನನ್ನ ಸಹವರ್ತಿಗಳನ್ನೂ ಸೇರಿಸಿಕೊಳ್ಳಲು ನಾನು ಸದಾ ಪ್ರೇಮಪೂರ್ವಕವಾಗಿ ಪ್ರಯತ್ನಪಟ್ಟಿದ್ದೇನೆ. ಅವರಿಗೆಲ್ಲ ಪೂರ್ಣೋಪವಾಸ, ಅರ್ಧೋಪವಾಸಗಳಿಗೆ ಹೀಗ ಹೊಸಬರಾಗಿದ್ದರು. ಆದರೆ 'ಪ್ರದೋಷ' ಮತ್ತು 'ರಮ್‌ಜಾನ್' ಉಪವಾಸಗಳ ಮೂಲಕ ಅವರಲ್ಲಿ ಉಪವಾಸವು ಇಂದ್ರಿಯನಿಗ್ರಹ ಸಾಧನೆಗೆಂದು ಮಾರ್ಗವೆಂಬ ಅಭಿಪ್ರಾಯವನ್ನು ಹುಟ್ಟಿಸುವುದು ಸುಲಭವಾಯಿತು.

ಹೀಗೆ ಆತ್ಮ ಸಂಯಮದ ವಾತಾವರಣವು ಆಶ್ರಮದಲ್ಲಿ ಸಹಜವಾಗಿಯೇ ಬೆಳೆಯಿತು. ಈಗ ಆಶ್ರಮ ನಿವಾಸಿಗಳೆಲ್ಲರೂ ಪೂರ್ಣೋಪವಾಸ, ಅರ್ಧೋಪವಾಸಗಳನ್ನಾಚರಿಸುವುದರಲ್ಲಿ ನನ್ನೊಡನೆ ಸೇರತೊಡಗಿದರು. ಇದರಿಂದ ಅವರಿಗೆ ಒಳ್ಳೆಯದಾಯಿತೆಂದೇ ನನ್ನ ದೃಢ ನಂಬಿಕೆ. ಈ ಇಚ್ಛೆ, ಮನಸ್ಸು, ತ್ಯಾಗವು ಅವರ ಹೃದಯವನ್ನು ಎಷ್ಟರ ಮಟ್ಟಿಗೆ ತಟ್ಟಿತೋ ಮತ್ತು ಇಂದ್ರಿಯ ನಿಗ್ರಹಕ್ಕಾಗಿ ಅವರು ಮಾಡಿದ ಪ್ರಯತ್ನದಲ್ಲಿ ಇದು ಎಷ್ಟು ಮಟ್ಟಿಗೆ ಸಹಾಯವಾಯಿತೋ ನಾನು ನಿಶ್ಚಯವಾಗಿ ಹೇಳಲಾರೆನು. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಉಪವಾಸದಿಂದ ಆರೋಗ್ಯದೃಷ್ಟಿಯಿಂದಲೂ, ನೈತಿಕ ದೃಷ್ಟಿಯಿಂದಲೂ ಬಹಳ ಲಾಭವನ್ನು ಹೊಂದಿದೆನೆಂದು ಹೇಳಬಲ್ಲೆ. ಆದರೆ ಉಪವಾಸವೇ ಮುಂತಾದ ನಿಯಮಗಳಿಂದ ಎಲ್ಲರ ಮೇಲೆಯೂ ಒಂದೇ ರೀತಿಯ ಪರಿಣಾಮವಾಗುವುದೆಂದು ತರ್ಕಿಸಲಾಗದೆಂದು ನನಗೆ ಗೊತ್ತು. ಇಂದ್ರಿಯ ನಿಗ್ರಹದ ಉದ್ದೇಶದಿಂದ ಕೈಕೊಂಡ ಉಪವಾಸದಿಂದಾಗಲೇ ಆ ಉದ್ದೇಶ ಸಾಧನೆಯಾಗಬಲ್ಲದು. ಕೆಲವು ಸ್ನೇಹಿತರ ಅನುಭವವು ಇದಕ್ಕೆ ವ್ಯತಿರಿಕ್ತವಾಗಿದೆ—ಉಪವಾಸಗಳ ಪರಿಣಾಮವಾಗಿ ತಮ್ಮ ವಿಷಯೇಚ್ಛೆಯೂ, ರುಚಿಯೂ ಹೆಚ್ಚು ತೀವ್ರವಾಗಿರುವುದನ್ನು ನನ್ನ ಮಿತ್ರರಲ್ಲಿ ಕೆಲವರು ಅನುಭವಿಸಿದ್ದಾರೆ. ಇದರ ಅರ್ಥವೇನೆಂದರೆ—ಇಂದ್ರಿಯ ಸಂಯಮವನ್ನು ಸಾಧಿಸಬೇಕೆಂದು ನಿರಂತರವಾದ ಬಯಕೆಯಿಲ್ಲದಿದ್ದರೆ ಉಪವಾಸವು ನಿರರ್ಥಕ. ಕೇವಲ ಉಪವಾಸದಿಂದ ಇಂದ್ರಿಯನಿಗ್ರಹವನ್ನು ಸಾಧಿಸಬಹುದೆಂದೆಣಿಸುವುದು ತಪ್ಪು. ಈ ಸಂದರ್ಭದಲ್ಲಿ ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿನ ಪ್ರಸಿದ್ಧವಾದ ಈ ಕೆಳಗಿನ ಶ್ಲೋಕವು ತಿಳಿಸಲು ಯೋಗ್ಯವಾಗಿದೆ:

> ವಿಷಯಾವಿನಿವರ್ತಂತೆ ನಿರಾಹಾರಸ್ಯದೇಹಿನಃ।
> ರಸವರ್ಜಂ ರಸೋಽಪ್ಯಸ್ಯ ಪರಂದೃಷ್ಟ್ವಾ ನಿವರ್ತತೇ॥

(ಉಪವಾಸ ಮಾಡುವವನಿಂದ ಇಂದ್ರಿಯಗಳ ಬಯಕೆ ದೂರವಾಗುತ್ತದೆ. ಆದರೆ ಅವುಗಳ ಮೇಲಿನ ಬಯಕೆಯು ನಿಲ್ಲುತ್ತದೆ. ಈ ಬಯಕೆಯು ಕೂಡ ಈಶ್ವರ ದರ್ಶನದಿಂದಲೇ—ಈಶ್ವರನ ಪ್ರಸಾದದಿಂದಲೇ—ನಾಶಹೊಂದುತ್ತದೆ.)

ಆದುದರಿಂದ ಉಪವಾಸವೇ ಮುಂತಾದ ವ್ರತನಿಯಮಗಳು ಸಂಯಮ ಸಾಧನೆಗೆ ಮಾರ್ಗವೇ ಹೊರತು ಅವುಗಳೇ ಸರ್ವಸ್ವವಲ್ಲ. ಶರೀರೋಪವಾಸದ ಜೊತೆಗೆ ಮನಸ್ಸಿನ ಉಪವಾಸವೂ ಇಲ್ಲದಿದ್ದರೆ ಅದು ದಾಂಭಿಕತನದಲ್ಲಿಯೂ ಕಾಪಟ್ಯದಿಂದ ಫಲಿಸುವ ಅನರ್ಥದಲ್ಲಿಯೂ ಕೊನೆಗಾಣುತ್ತದೆ.

ಭಾರತ ವರ್ಷದ ಪ್ರಾಚೀನ ಸಮಯದ ಶಾಸನ ವ್ಯವಸ್ಥಾ.

ಪ್ರಜಾಪ್ರಭುತ್ವ ಪದ್ಧತಿಯು (Republican form of Govt.) ಯೂರೋಪಿಯ ದೇಶಗಳಲ್ಲಿಯೇ ಮೊದಲು ಆರಂಭವಾಯಿತೆಂದು ಪಾಶ್ಚಾತ್ಯ ವಿದ್ವಾಂಸರು ಇದುವರೆಗೆ ಅಭಿಪ್ರಾಯ ಪಡುತ್ತಿದ್ದರು. ಆದರೆ, ಇದು ಕೇವಲ ಅವರ ಭ್ರಮೆಯಾಗಿದೆ. ಭಾರತ ದೇಶದಲ್ಲಿ ಸುಮಾರು ೩೦೦೦ ವರ್ಷಗಳ ಹಿಂದಿನಿಂದಲೂ ಕೂಡ ಈ ಪ್ರಕಾರದ ಪದ್ಧತಿಯು ಪ್ರಚಲಿತವಾಗಿತ್ತೆಂದು ಸಿದ್ಧಮಾಡಲು ಪ್ರಯತ್ನವಾಗಿದೆ. ಪ್ರಾಚೀನಕಾಲದಲ್ಲಿ ಆರ್ಯರು ರಾಜ್ಯಶಾಸನದಲ್ಲಿ ಅಪೂರ್ವ ಉನ್ನತಿಯನ್ನು ಹೊಂದಿದ್ದರೆಂದು ಲೋಕಮಾನ್ಯ ತಿಲಕರು ಮಾಸ್ಟರ ಗೋಪಿಲೆ ಮೊದಲಾದ ನಮ್ಮ ದೇಶದ ವಿದ್ವಾಂಸರು ಸಿದ್ಧಪಡಿಸಿದ್ದಾರೆ. ರಾಜ್ಯ ಪರಿಪಾಲನ ಕ್ರಮವು ಸ್ವತಂತ್ರವು. ಮತ್ತು ತಮ್ಮ ಪ್ರಜೆಗಳ ಹಿತಸಾಧನವೇ ರಾಜ್ಯದ ಮುಖ್ಯ ಉದ್ದೇಶವಾಗಿತ್ತು. ಜನಸಾಧಾರಣರ ಜೀವನಗಳ ಪ್ರಧಾನ ಕರ್ತವ್ಯವಾಗಿತ್ತು. ಜನ ಸಾಧಾರಣರ ಆವಶ್ಯಕತೆಗಳನ್ನು ಪೂರ್ಣ ಮಾಡುವುದು, ಮತ್ತು ಅವರ ನೈತಿಕ ಮತ್ತು ಮಾನಸಿಕ ಉನ್ನತಿ ಮಾಡುವುದೇ ಎಲ್ಲಾ ರಾಜ ಸಂಸ್ಥೆಗಳ ಉದ್ದೇಶವಾಗಿತ್ತು. ವೈದಿಕ ಸಮಯದ ಸಾಹಿತ್ಯದಲ್ಲಿ 'ಸಮಿತಿ' ಮತ್ತು 'ಸಭಾ' ಇವು ಸಿಕ್ಕುತ್ತವೆ. ಮತ್ತು ಇವುಗಳು ರಾಜನ ಕಸ್ಟೆ (?) ಗಳೆಂಬುದಾಗಿ ಬರೆಯಲ್ಪಟ್ಟಿವೆ ಮತ್ತು ಅವರಲ್ಲಿ ಪ್ರಜೆಗಳ ಕಾರ್ಯವು ಪರಿಣಾಮದ ನೀತಿಯಿಂದ ಸಂಪಾದಿಸಲ್ಪಡುತ್ತಿತ್ತು. ಬೌದ್ಧಧರ್ಮದ ಭಾರತದಲ್ಲಿ ಪ್ರಜಾಸತ್ತಾತ್ಮಕ ರಾಜ್ಯದ ವರ್ಣನೆಯು ಸಿಗುತ್ತದೆ. ಡಾ. ಪಿ. ಎಂ. ಜೆ. ರೈಸ್‌ಡೇವಿಡ್ಸ್ ಮೊದಲಾದ ವೇತ್ತರುಗಳು ಆ ಪ್ರಜಾಸಮಯದಲ್ಲಿ ರಾಜರುಗಳ ಸ್ಥಿತಿಯು ಅಷ್ಟು ಉನ್ನತಿಯನ್ನು ಹೊಂದಿರಲಿಲ್ಲ. ಆದರೂ ರಾಜಕಾರ್ಯವು ಪ್ರಜೆಗಳ ಇಚ್ಛಾನುಸಾರವೇ ನಡೆಯುತ್ತಿತ್ತು. ಭಾರತದಲ್ಲಿ ರಾಜರಿಗೆ ಗಣರಾಜರೆಂದು (Republican Rulers) ಹೆಸರಿತ್ತು. ಪ್ರೊ. ರೈಸ್ ಡೇವಿಡ್ಸರು ತಮ್ಮ ಅರ್ಥಶಾಸ್ತ್ರಗ್ರಂಥದಲ್ಲಿ ಈ ಪ್ರಕಾರ ಶಾಸನದ ಪ್ರಮುಖ ಅಧಿಕಾರ ಮತ್ತು ರಾಜ್ಯ ಕರ್ಮಚಾರಿಗಳ ವರ್ಣನೆಮಾಡುತ್ತಾರೆ. ಅವರ ಹೆಸರುಗಳನ್ನು ಸಭಾಪತಿ (President) ಉಪಸಭಾಪತಿ (Vice President) ಮತ್ತು ಸೇನಾನಾಯಕ (Generalissimo of the forces of the community) ಎಂಬುದಾಗಿ ತಿಳಿಸುತ್ತಾರೆ. ಲಿಚ್ಛವಿ (Lichchavi clan) ವಂಶದ ಸಮಯದಲ್ಲಿ ಪಂಚಾಯತಿಗಳ ಮತ್ತು ಸಭೆಗಳ ವರ್ಣನೆಯು ಸಿಗುತ್ತದೆ. ಇದರಲ್ಲಿ ಶಾಸ್ತ್ರಾರ್ಥ ಅಥವಾ ವಾದವಿವಾದ ಮತ್ತು ಕಾರ್ಯಕ್ರಮದ ನಿಯಮಗಳು ವಿಸ್ತಾರವಾಗಿ ಬರೆಯಲ್ಪಟ್ಟಿವೆ.

ವಿನಯ ಪಿಟಕದಲ್ಲಿ (Vinaya Pithake) ಒಂದು ಸುಸಂಘಟಿತವಾದ ನಿಯಮಾವಳಿ ಇದೆ. ಇದರಲ್ಲಿ ಆ ಸಮಯದ ಸಮಿತಿಗಳಲ್ಲಿ ಯಾವ ಪ್ರಕಾರ ಕಾರ್ಯಗಳು ನಡೆಯುತ್ತಿದ್ದವು ಎಂಬುದು ವರ್ಣಿತವಾಗಿದೆ. ಬೌದ್ಧ ಸಮಿತಿಗಳು ಒಂದು ವಿಧವಾದ ಪ್ರಜಾತಂತ್ರ ಸಂಸ್ಥೆಗಳಾಗಿದ್ದುವು. ಇವುಗಳಲ್ಲಿ ಮಹತ್ವಪೂರ್ಣವಾದ ವಿಚಾರಗಳೂ, ಮತ್ತು ನ್ಯಾಯವನ್ನು ತಿಳಿಸುವ ಕಾರ್ಯಗಳೂ ನಡೆಯುತ್ತಿದ್ದುವು.

ಹಿಂದೂ ರಾಜನು ತನ್ನ ಪ್ರಜೆಗಳ ಮೇಲೆ ಸಂಪೂರ್ಣ ಹಿತದೃಷ್ಟಿಯಿಂದ ಶಾಸನ ಮಾಡಬೇಕೆಂಬ ಒಂದು ನಿಯಮವನ್ನು ಮಾಡಬೇಕಾಗಿತ್ತು. ಮಹಾಭಾರತದಲ್ಲಿ ಈ ವಿಷಯದ ವರ್ಣನೆಯು ಶಾಂತಿ ಪರ್ವದಲ್ಲಿ ಹೇಳಲ್ಪಟ್ಟಿದೆ ಶ್ಲೋಕ:—

> ಪ್ರತಿಜ್ಞಾಂ ಚಾಧಿರೋಹಸ್ವ ಮನಸಾ ಕರ್ಮಣಾ ಗಿರಾ
> ಪಾಲಯಿಷ್ಯಾಮ್ಯಹಂ ಭೌಮಂ ಬ್ರಹ್ಮ ಇತ್ಯೇವ ಚಾಸಕೃತ್॥
> ಯಶ್ಚಾತ್ರ ಧರ್ಮೋ ನೀತ್ಯುಕ್ತೋ ದಂಡನೀತಿ ವ್ಯಪಾಶ್ರಯಃ॥
> ತಮಶಂಕಃ ಕರಿಷ್ಯಾಮಿ ಸ್ವವಶೋ ನ ಕದಾಚನ।

"ನಾನು ದೇಶದ ಉನ್ನತಿಗೆ ಪ್ರಯತ್ನ ಮಾಡುವೆನು ಮತ್ತು ಅವರ ಸಂರಕ್ಷಣೆ ಮಾಡುವೆನು. ಮತ್ತು ದಂಡ ನೀತಿಯನ್ನು ಉತ್ತಮ ರೀತಿಯಿಂದ ನಡೆಸುವೆನು. ಸ್ವೇಚ್ಛೆಯಾಗಿ ಯಾವ ಕಾರ್ಯವನ್ನೂ ಮಾಡುವುದಿಲ್ಲ."

ರಾಜಾಧಿಕಾರದಲ್ಲಿ ಎಂದಿಗೂ ಕೇವಲ ಧನಿಕರ ಸಂಸ್ಥೆ ಅಥವಾ ಸ್ವೇಚ್ಛಾಚಾರಿ ನಡೆಯುತ್ತಿರಲಿಲ್ಲ. ಮತ್ತು ದರ್ಬಾರ್ ಧರ್ಮ, ಮತ್ತು ಅರ್ಥ, ಕಾಮ, ಮೋಕ್ಷ ಈ ವರ್ಗಗಳು ಅಲ್ಲದೆ ರಾಜ್ಯ ಸಮಿತಿಗಳು ಇದ್ದುವು. ನ್ಯಾಯ ಶಾಸನದ ಭಿನ್ನ ಭಿನ್ನ ಭಾಗಗಳಿದ್ದುವು. ಇವುಗಳಲ್ಲಿ ಕಾರ್ಯಗಳು ಸುಶಾಸನ ರೂಪವಾದ ಪತ್ರ ಇಲ್ಲದೆ ನಡೆಯುತ್ತಿದ್ದುವು. ಏಕೆಂದರೆ ರಾಜನ ಕಾರ್ಯದ ವಿಚಾರಕ್ಕೆಂದು ಕರಪಟ್ಟಿತು. ರಾಜನು ಪ್ರಜೆಗಳಿಂದ ಕಂದಾಯವನ್ನು ಅವಶ್ಯ ತೆಗೆದುಕೊಳ್ಳುತ್ತಿದ್ದನು. ಆದರೆ ಅದನ್ನು ಅವರ ಹಿತಕಾರ್ಯಗಳಲ್ಲಿಯೇ ವ್ಯಯಮಾಡುತ್ತಿದ್ದನು. ಹೇಗೆ ಸೂರ್ಯನು ಪೃಥ್ವಿಯ ನೀರನ್ನು ತನ್ನ ಕಿರಣಗಳಿಂದ ಶೋಷಿಸಿ ಪುನಃ ಮಳೆಯ ರೂಪದಲ್ಲಿ ಧನಧಾನ್ಯ ವೃದ್ಧಿಗೋಸ್ಕರ ಕೊಡುತ್ತಾನೋ ಹಾಗೆಯೇ ಕರದ ವಿಷಯವೂ ಇತ್ತು. ಮನು ಇದರ ವಿಷಯದಲ್ಲಿ ಹೀಗೆ ಹೇಳುತ್ತಾನೆ:—

> ಸ್ವಭಾಗ ಭೃತ್ಯಾ ದಾಸ್ಯತ್ವೇ ಪ್ರಜಾನಾಂ ಚ ನೃಪಃ ಕೃತಃ।
> ಬ್ರಹ್ಮಣಾ ಸ್ವಾಮಿ ರೂಪಸ್ತು ಪಾಲನಾರ್ಥಂ ಹಿ ಸರ್ವದಾ

'ಈಶ್ವರನು ರಾಜನನ್ನು ಯದ್ಯಪಿ ಸ್ವಾಮಿಯ ರೂಪದಲ್ಲಿ ಕೊಟ್ಟು ಜನಸಾಧಾರಣರ ದಾಸನನ್ನಾಗಿ ಮಾಡಿದ್ದಾನೆ. ಏಕೆಂದರೆ—ಅವನಿಂದ ಕರದ ರೂಪದಲ್ಲಿ ತನ್ನ ಭಾಗವನ್ನು ತೆಗೆದುಕೊಂಡು ಅವರ ಹಿತಕ್ಕಾಗಿಯೇ ವ್ಯಯಮಾಡುವುದಕ್ಕಾಗಿ'

ಈ ಸಮಯದಿಂದ ಮುಂದೆ ನೋಡಿದರೆ ಮಾರ್ಯಾದಾ ಸುಸಂಘಟಿತ ರಾಜ್ಯ ಸ್ಥಿತಿಯು ಸಿಗುತ್ತದೆ. ಅದರಲ್ಲಿ ಸರ್ವಾಧಿಕಾರವು ಒಬ್ಬ ವ್ಯಕ್ತಿಯ ಕೈಯಲ್ಲಿರಲಿಲ್ಲ. ಪರಂತು ಭಿನ್ನ ಭಿನ್ನ ವಿಭಾಗಗಳಿಗೆ ಭಿನ್ನ ಭಿನ್ನ ರಾಜ್ಯ ಸಮಿತಿಗಳು ನಿಯಮಿತವಾಗಿದ್ದುವು. ಎಲ್ಲಾ ಕೆಲಸಗಳೂ ಈ ರಾಜ ಸಮಿತಿಗಳಲ್ಲಿ ನಿಯುಕ್ತವಾಗಿದ್ದುವು. ಅವರ ಮನಸ್ಸಿನಿಂದ ಯುದ್ಧ ಸಾಮಗ್ರಿ ಬಂದರೆ, ಕರಗಳು, ಪ್ರಜೆ, ನ್ಯಾಯ, ಮಂತ್ರ ಇವುಗಳೆಲ್ಲವೂ ಇದ್ದುವು. ಪ್ರತ್ಯೇಕ ಗ್ರಾಮಗಳು ತಮ್ಮ ಎಲ್ಲಾ ಆವಶ್ಯಕತೆಗಳನ್ನು ತಾವೇ ಪೂರ್ಣ ಮಾಡುತ್ತಿದ್ದುವು. ತಮ್ಮ ತಮ್ಮಲ್ಲಿನ ವಿವಾದಗಳನ್ನು ಸ್ವಾಯತ್ತ ನಿಯಮಗಳಂತೆ ತೀರಿಸಿಕೊಳ್ಳುತ್ತಿದ್ದರು. ದೃಷ್ಟಿ ಈ ಪ್ರಕಾರದ ಬೇರೆ ಇರುವುದರಿಂದ ಕಲವು ಕಾ—

ಳೂ ಇದ್ದುವು. ಆದರೆ ಇದಕ್ಕೆ ಪ್ರತಿಕೂಲ ಲಕ್ಷಣವಾದರೋ ಬಹಳವಿದ್ದುವು. ಭಿನ್ನಭಿನ್ನ ಜಾತಿಗಳು ಅಥವಾ ಧರ್ಮಾವಲಂಬಿಗಳಲ್ಲಿ ಈಗ ಹಿಂದೂ ಮುಸಲ್ಮಾನ ಮತ್ತು ಬೇರೆ ಬೇರೆ ಮತಾನುಯಾಯಿಗಳಲ್ಲಿ ಜಗಳವಾಗುವಂತೆ ಆಗ ಪರಸ್ಪರ ಯುದ್ಧ ಮತ್ತು ಜಗಳಗಳು ನಡೆಯುತ್ತಿದ್ದಿಲ್ಲ. ಇದೇ ಎಲ್ಲಕ್ಕಿಂತಲೂ ದೇಶಕ್ಕೆ ದೊಡ್ಡ ಲಾಭವಿತ್ತು.

ದೇಶವು ಬಹಳ ದೊಡ್ಡದಾದುದರಿಂದ ರಾಜಕೀಯ ಕೇಂದ್ರವು ದೂರ ಭಾಗಗಳ ಪ್ರತ್ಯೇಕ ವಿಷಯಗಳನ್ನು ಉತ್ತಮರೀತಿಯಿಂದ ನೋಡಲಾರದಿತ್ತು. ಆದರೂ ಚಿಕ್ಕ ಚಿಕ್ಕ ಪ್ರಾಂತಗಳ ವಿಷಯಗಳಲ್ಲಿ ಸ್ಥಾನೀಯ ಅಧಿಕಾರಿಗಳಿಗೆ ಪೂರ್ಣ ಅಧಿಕಾರವಿರುತಿತ್ತು. ಹಿಂದೂ ಶಾಸನದ ಈ ಸುವ್ಯವಸ್ಥೆಯು ಮಹಾರಾಜಾ ಹರ್ಷನ ಕಾಲದವರೆಗೂ ನಡೆದು ಬಂದಿತು. ಸುಪ್ರಸಿದ್ಧ ಚೀನಾ ಯಾತ್ರಿಕ ಹಿಯೂನ್-ತ್ಸ್ಯಾಂಗನು ತನ್ನ ಪುಸ್ತಕದಲ್ಲಿ ಇದರ ಸವಿಸ್ತಾರ ವರ್ಣನೆಯನ್ನು ಮಾಡಿದ್ದಾನೆ.

"ದೇಶದ ಶಾಸನವು ಉತ್ತಮವಾದ ದಯೋಯುಕ್ತನಿಯಮಗಳಿಂದ ಸ್ಥಿರಪಡಿಸಲ್ಪಟ್ಟಿತ್ತು. ರಾಜ್ಯದ ಶಾಸನವನ್ನು ೪ ಮುಖ್ಯ ಭಾಗಗಳಾಗಿ ವಿಂಗಡಿಸಿದ್ದರು. ಮೊದಲನೆಯ ಭಾಗವು ನ್ಯಾಯ ಮತ್ತು ರಾಜಕಾರ್ಯ ಸೂತ್ರಗಳದ್ದಿತು. ಎರಡನೆಯದು ಮಂತ್ರಿಗಳನ್ನು ನಿಯಮಿತ ಮಾಡುವುದು ಅಥವಾ ವರ್ಗ ಮಾಡುವುದು. ಮೂರನೆಯ ಭಾಗವು ಅಸಾಧಾರಣ ಯೋಗ್ಯತೆಯುಳ್ಳ ಮನುಷ್ಯರನ್ನು ಪಾರಿತೋಷಕ ಅದವಾ ದಾನಮಾಡುವುದು ಮತ್ತು ನಾಲ್ಕನೆಯದು ಪರದೇಶಗಳೊಡನೆ ಯುದ್ಧ ಸಂಬಂಧ ಮೊದಲಾದ ವಿಷಯದ್ದಿದ್ದಿತು. ಜನಗಳ ಮೇಲಿನ ಕರವು ಹಗುರವಾಗಿತ್ತು. ಸೋಮಾರಿತನದ ಮಾರ್ಗವೂ ಬಹಳ ಕಡಿಮೆಯಿತ್ತು. ಜನರು ಭೂಮಿ ಮತ್ತು ವಾಣಿಜ್ಯದಿಂದ ನಿರ್ವಾಹ ಮಾಡುತ್ತಿದ್ದರು. ಜಮೀನಿನ ಹುಟ್ಟುವಳಿಯಲ್ಲಿ ಷಷ್ಠಾಂಶವನ್ನು ಕರದ ರೂಪದಲ್ಲಿ ಕೊಡುತ್ತಿದ್ದರು. ಶಿಕ್ಷಣದ ಪ್ರಚಾರವು ಬಹಳ ಮಟ್ಟಿಗಿತ್ತು. ನಲಂದ ವಿದ್ಯಾಲಯದಲ್ಲಿ ೧೦,೦೦೦ ವಿದ್ಯಾರ್ಥಿಗಳು ಬೇರೆ ಬೇರೆ ಕಲೆಗಳ ಅಥವಾ ವಿದ್ಯೆಗಳನ್ನು ಅಧ್ಯಯನ ಮಾಡುತ್ತಿದ್ದರು. ಶಾಸ್ತ್ರಾರ್ಥದ ರೀತಿಯು ಬಹಳ ಪ್ರಚಾರದಲ್ಲಿತ್ತು. ಈ ಮಹಾವಿದ್ಯಾಲಯದ ಪೂರ್ಣ ಖರ್ಚು ಸರಕಾರದ ಮೇಲಿತ್ತು. ಮಹಾರಾಜಾ ಹರ್ಷನು ಸ್ವಯಂ ವಿದ್ವಾನ್ ಮತ್ತು ಕವಿ ಇದ್ದು ನಾಗಾನಂದ ರತ್ನಾವಳಿ ಮುಂತಾದ ಗ್ರಂಥಗಳನ್ನು ರಚಿಸಿದನು. ಯದ್ಯಪಿ ಆತನು ಬೌದ್ಧ ಮತಾವಲಂಬಿಯಾಗಿದ್ದನು. ಆದರೆ ಶಿವ, ಸೂರ್ಯ ಮೊದಲಾದ ದೇವತೆಗಳ ಪೂಜೆಯನ್ನು ಮಾಡುತ್ತಿದ್ದನು. ಮತ್ತು ಪ್ರತಿ ಐದು ವರ್ಷಕ್ಕೊಮ್ಮೆ ಒಂದು ಮಹಾ ಸಭೆಯನ್ನು ಕೂಡಿಸಿ ಬಹುಮೂಲ್ಯದ ವಸ್ತ್ರ ಭೂಷಣಗಳನ್ನು ದಾನಮಾಡುತ್ತಿದ್ದನು. ಸಹಗಮನವು ಆ ಸಮಯದಲ್ಲಿ ಆಚರಣೆಯಲ್ಲಿತ್ತು. ಚಿಕ್ಕ ವಯಸ್ಸಿನ ಬಾಲಕ, ಬಾಲಕಿಯರ ವಿವಾಹ ನಡೆಯುತ್ತಿರಲಿಲ್ಲ. ಸ್ತ್ರೀಯರನ್ನು ಆದರ ದೃಷ್ಟಿಯಿಂದ ನೋಡುತ್ತಿದ್ದರು. ಜನರು ಒಳ್ಳೆಯವರಾಗಿಯೂ, ನಂಬಿಗಸ್ತರಾಗಿಯೂ ಇರುತ್ತಿದ್ದರು. ಅವರು ಕರ್ಮಫಲವನ್ನು ಮನ್ನಿಸುತ್ತಿದ್ದರು. ಆದುದರಿಂದಲೇ ಸತ್ಯದ ಮೇಲೆ ಹೆಚ್ಚು ಪ್ರೇಮವಿಟ್ಟಿದ್ದರು. ಏಕೆಂದರೆ—ಕುಕರ್ಮದ ಫಲವನ್ನು ಅವಶ್ಯವಾಗಿ ಅನುಭವಿಸಬೇಕಾಗುವುದು. ತಮ್ಮ ಶಪಥ ಮತ್ತು ವಚನಗಳಂತೆ ನಡೆಯುತ್ತಿದ್ದರು. ಮತ್ತು ಎಂದಿಗೂ ಅದನ್ನು ಬಿಡುತ್ತಿರಲಿಲ್ಲ. ದೇಶದಲ್ಲಿ ಎಲ್ಲಾ ವಿಧವಾದ ಶಾಂತಿನೆಲೆಸಿತ್ತು. ಏನಾದರೂ ಅರಾಜಕವಾದ ಕಾರ್ಯಗಳು ನಡೆದರೆ ದುಷ್ಟರಿಗೆ ಅತಿ ಕಠೋರವಾದ ದಂಡನೆಯನ್ನು ವಿಧಿಸುತ್ತಿದ್ದರು.

ಪ್ರಾಚೀನ ಕಾಲದಲ್ಲಿಯೂ ಕೂಡ ಭಾರತೀಯರು ಶಾಸನ ವಿಷಯದಲ್ಲಿ ಪೂರ್ಣ ಉನ್ನತಿಯನ್ನು ಹೊಂದಿದ್ದರೆಂಬುದು ಈ ಪ್ರಕಾರದ ಸುವ್ಯವಸ್ಥಿತ ರಾಜ್ಯಪದ್ಧತಿಯಿಂದ ಸಿದ್ಧವಾಗುತ್ತದೆ.

"ಸುಬೋಧ"

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು.

(2ನೇ ಪುಟದಿಂದ ಮುಂದುವರಿದುದು.)

7. ಮೆ. ಅಬ್ದುಲ್ ಗಫೂರ್‌ಖಾನ್ ಸಾಹೇಬರು ಬ್ಯಾಂಕಿನಿಂದ ಕೊಡುವ ಸಾಲಗಳಿಗೆ 4ರಿಂದ ೬ಕಂತುಗಳ ವರೆಗೆ ಕೊಡಬೇಕೆಂತ ಸೂಚಿಸಿದರು. ಮೆ. ಕೊಳ್ಳಿಮಾಡ ಕರುಂಬೈಯ್ಯನವರು ಅನುಮೋದಿಸಿದರು. ಬ್ಯಾಂಕಿಗೆ ಠೇವಣಾತಿ ಕೊಡುವವರೆಲ್ಲರೂ ಒಂದೇ ವರ್ಷ ವಾಯಿದೆಗೆ ಕೊಡುವದರಿಂದಲೂ, ಈಗಾಗಲೇ ದೊಡ್ಡ ಸಾಲಗಳಿಗೆ ನಾಲ್ಕು ವರ್ಷಗಳ ವಾಯಿದೆ ಕೊಡುತ್ತಿರುವದರಿಂದಲೂ, ಇನ್ನೂ ಹೆಚ್ಚಿನ ವಾಯಿದೆ ಬೇಕಾದರೆ 25, 30 ವರ್ಷಗಳ ವಾಯಿದೆಯಿಂದ ಡಿಬೆಂಚರ್ ಪಡೆದುಕೊಳ್ಳುವ ಲ್ಯಾಂಡ್ ಮಾರ್ಗೇಜ್ ಬ್ಯಾಂಕ್‌ಗಳು ಬೇಕೆಂತಲೂ ಬ್ಯಾಂಕಿನ ಸಕ್ರೆಟರಿಯವರು ವಿವರಿಸಿದರು. ರಿಜಿಸ್ಟ್ರಾರವರು, ಲ್ಯಾಂಡ್ ಮಾರ್ಗೇಜ್ ಬ್ಯಾಂಕ್ ಮಾಡಲು ಜನರು ಅಪೇಕ್ಷಿಸಿದರೆ ಸರಕಾರದವರು ಮಂಜೂರ್ ಮಾಡಿಯಾರೆಂದೂ, ಈಗ ಇರುವ ಸಂಘಗಳು ಚಿಕ್ಕ ಸಾಲಗಳನ್ನು ಮಾತ್ರ ಕೊಡಲು ಇರುವವು ಆದುದರಿಂದಲೂ, ಕೃಷಿಕರ ವ್ಯವಸಾಯಕ್ಕೂ, ಭೂಮಿ ಬಿಡಿಸಿಕೊಳ್ಳುವುದಕ್ಕೂ ಮಾತ್ರ ಈಗ ಕೊಡುವ ಸಾಲಗಳು ಉಪಯೋಗವಾಗಬೇಕಾಗಿರುವದರಿಂದ ಸಂಘದ ಸದಸ್ಯರುಗಳಿಗೆ ತುಂಬಾ ಕಂತುಗಳನ್ನು ಕೊಡುವುದು ನ್ಯಾಯವಲ್ಲವೆಂತಲೂ ವಿವರಿಸಿದರು. ಠರಾವು ವಾಪಸು ತೆಗೆದುಕೊಳ್ಳಲಾಯಿತು.

8. ಮೆ. ಮನೆಯಪಂಡ ಬಿದ್ದಪ್ಪನವರು ಬ್ಯಾಂಕಿನಿಂದ ಕೊಡುವ ಸಾಲಗಳಿಗೆ ಬಡ್ಡಿ ದರವನ್ನು ಇಳಿಸಬೇಕೆಂತ ಸೂಚಿಸಿದರು.

ಬ್ಯಾಂಕಿಗೆ ಬರುವ ಠೇವಣಾತಿಗಳಿಗೆ ಬಡ್ಡಿ ದರವನ್ನು ಈಚೆಗ ಇಳಿಸಿದ್ದರೂ ಈಗಲೂ ಠೇವಣಾತಿಯು ಹೆಚ್ಚಿನ ಭಾಗಕ್ಕೆ ಶೇಕಡ ೬|೨ ದರದಲ್ಲೇ ಬಡ್ಡಿ ಸಲ್ಲುತ್ತಿರುವದರಿಂದಲೂ, ಬ್ಯಾಂಕಿನ ಅನುಕೂಲತಕ್ಕೆ ಬೇಕಾದಷ್ಟು ಸಿಬ್ಬಂದಿ ಈಗ ಇಲ್ಲದ್ದರಿಂದ ಬೇಗನೆ ಹೆಚ್ಚಿಸಿಕೊಳ್ಳಬೇಕಾಗುತ್ತದೆಂತಲೂ ಇದ್ದುದರಿಂದ ಬ್ಯಾಂಕಿನ ಉತ್ಪತ್ತಿಯನ್ನು ಇಳಿಸಿದರೆ ತೊಂದರೆಯಾಗಬಹುದು ಎಂಬದಾಗಿ ಸೆಕ್ರೆಟರಿಯವರು ವಿವರಿಸಿದರು. ಠರಾವು ವಾಪಸು ತೆಗೆದುಕೊಳ್ಳಲಾಯಿತು.

9 ಯೂನಿಯನ್‌ಗಳ ಆಡಳಿತದ ಮೇಲೆ ಬ್ಯಾಂಕ್ ನಿಗಾ ಇಟ್ಟು ಯೂನಿಯನ್‌ಗಳ ಮೂಲಕ ಸಂಘಗಳ ಮೇಲ್ವಿಚಾರ ನಡಸಬೇಕಂಬ ಠರಾವನ್ನು ಮೆ. ಕೆ. ಪಿ. ಚಿಣ್ಣಪ್ಪನವರು ಸೂಚಿಸಿದರು. ಮೆ. ಎನ್. ಮೊಣ್ಣಪ್ಪನವರು ಅನುಮೋದಿಸಿದರು.

ಕೆಲವು ಸಂಘಗಳ ಪ್ರತಿನಿಧಿಗಳು-ಯೂನಿಯನ್ ಮೆಂಬರರು ಕೆಲಸ ಮಾಡುತ್ತಿಲ್ಲವಾದ್ದರಿಂದ ಅವರ ಮೂಲಕ ಸಾಲದ ಅರ್ಜಿಗಳು ಬರಬೇಕಾದರೆ ತೊಂದರೆ ಮತ್ತು ಅಡಚಣೆಯಾಗುತ್ತೆಂತ ವಾದಿಸಿದರು. ಮೇಲ್ವಿಚಾರಕ್ಕೆ ಬ್ಯಾಂಕಿನವರು ಯೂನಿಯನ್‌ಗಳನ್ನು ಉಪಯೋಗಿಸಲು ಏನೂ ಅಡ್ಡಿ ಇಲ್ಲ. ಆದರೆ ಯೂನಿಯನ್‌ಗಳನ್ನು ಬ್ಯಾಂಕ್ ಉಪಯೋಗಿಸುವದಿಲ್ಲವೆಂತ ಈ ವರೆಗೆ ಪುಕಾರು ಬಂದಿರುವದಿಲ್ಲ ಎಂತ ಮುಂತಾಗಿ ಸಕ್ರೆಟರಿಯವರು ತಿಳಿಸಿದರು. ಮೆ. ಕೆ. ಪಿ. ಚಿಣ್ಣಪ್ಪನವರು ಯೂನಿಯನ್ ಮೆಂಬರುಗಳಿಗೆ ಕೊಟ್ಟಿರುವ ಹಕ್ಕು ಸಾಲದು. ಮೆಂಬರುಗಳಿಗೆ ಭತ್ಯ ಕೊಡಬೇಕು, ಸುಪರ್‌ವೈಜರುಗಳನ್ನು ಯೂನಿಯನ್ನಿನ ಸ್ವಾಧೀನ ಕೊಡಬೇಕು ಎಂತ ಮುಂತಾಗಿ ವಾದಿಸಿದರು. ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ನಾಪಾಸಾಯಿತು.

10. ಮೆ. ಸಿ. ಎನ್. ವೆಂಕಪ್ಪಯ್ಯನವರು ಸೆಕ್ರೆಟರಿಯಾಗಿಯೂ, ಮೆ. ಕೊಂಗಟ್ಟಿರ ಅಪ್ಪಯ್ಯನವರು ಟ್ರೆಜರರಾಗಿಯೂ ಬಹುಮತದಿಂದ ಚುನಾಯಿಸಲಾಯಿತು.

11. ಬಿಡು ಮೆಂಬರುಗಳ ಪರವಾಗಿ ಮೆ.ಗಳಾದ 1. ಕೆ ಅಪ್ಪಯ್ಯ ಆರ್. ಬಿ 2. ಪಿ. ದೇವೈಯ್ಯ, ಆರ್. ಎಸ್. 3. ಪಿ. ಐ. ಬೆಳ್ಯಪ್ಪ, 4. ಯನ್. ಮಂದ್ದಪ್ಪ, 5. ಯಮ್. ಯಮ್. ಬೆಳ್ಯಪ್ಪ ಇವರ ಹೆಸರುಗಳು ಮಾತ್ರ ಸೂಚಿಸಲ್ಪಟ್ಟು ಓಟಿಲ್ಲದೆ ಡೈರೆಕ್ಟರುಗಳಾಗಿ ಚುನಾಯಿತರಾದರ.

12. ಸಂಘದ ಮೆಂಬರುಗಳ ಪರವಾಗಿ ಡೈರೆಕ್ಟರುತನಕ್ಕೆ ಮೆ. ಗಳಾದ ಪಿ. ಎ ಚಂಗಪ್ಪನವರೂ, ಕೆ. ಪಿ. ಚಿಣ್ಣಪ್ಪನವರೂ, ಯಮ್. ಸಿದ್ಲಿಂಗಪ್ಪನವರೂ, ಯನ್. ಮೊಣ್ಣಪ್ಪನವರೂ, ಕೆ. ಸಿ. ಕರುಂಬೈಯ್ಯನವರೂ, ಪಿ: ಮುದ್ದವೈಯ್ಯನವರೂ, ಯಸ್. ಯನ್. ರಾಮಶೆಟ್ಟರೂ, ಹೆಚ್. ಜಿ ಕಾಳೆಗೌಡರೂ, ಎ. ಕೆ. ಕೃಷ್ಣಯ್ಯನವರೂ, ಯನ್. ದೇವೈಯ್ಯನವರೂ, ಐ. ಪಿ. ಮಾದಪ್ಪನವರೂ ಸೂಚಿಸಲ್ಪಟ್ಟರು. ಮೆ. ನಾಯಡ ಬೆಳ್ಯಪ್ಪನವರ ಹೆಸರು ಸೂಚಿಸಲ್ಪಟ್ಟರೂ ಅವರು ಚುನಾವಣೆಗೆ ನಿಲ್ಲಲು ಅಪೇಕ್ಷೆ ಪಡಲಿಲ್ಲ. ಓಟ್ ತೆಗೆಯಲಾಗಿ ಈ ಕೆಳಗಿನವರು ಚುನಾಯಿತರಾದರು. ಮೆ ಗಳಾದ (1) ಪಿ. ಎ. ಚಂಗಪ್ಪನವರು, (2) ಕೆ. ಪಿ. ಚಿಣ್ಣಪ್ಪನವರು, (3) ಯಮ್. ಸಿದ್ಲಿಂಗಪ್ಪನವರು, (4) ಯನ್. ಮೊಣ್ಣಪ್ಪನವರ, (5) ಎ. ಕೆ. ಕೃಷ್ಣೈಯ್ಯನವರು, (6) ಪಿ. ಮುದ್ದಮ್ಮೈಯ್ಯನವರು, (7) ಸಿ. ಹೆಚ್. ಜಿ. ಕಾಳೇಗೌಡರು.

ಅಧ್ಯಕ್ಷ ಪದವಿಗೆ ಮೆ.ಗಳಾದ ಕೋದಂಡ ಅಪ್ಪಯ್ಯನವರು ಆರ್. ಬಿ ಪಟ್ಟಮಾಡ ದೇವೈಯ್ಯನವರು ಆರ್. ಎಸ್. ಸೂಚಿಸಲ್ಪಟ್ಟರು. ಓಟ್ ತೆಗೆಯಲಾಗಿ ಮೆ. ಅಪ್ಪಯ್ಯನವರಿಗೆ ಬಹುಮತವಿದ್ದುದರಿಂದ ಅವರು ಚುನಾಯಿತರಾದರು.

ಬ್ಯಾಂಕಿನ ಸಮುದಾಯದ ಫಂಡಿನ ಖರ್ಚಿನಿಂದ ಪ್ರತಿನಿಧಿಗಳಿಗೆ ಫಲಹಾರ ಕೊಡಲಾಯಿತು.

ಸಿ. ಯನ್. ನೆಂಕಪ್ಪೈಯ್ಯ,
ಗೌ. ಕಾರ್ಯದರ್ಶಿ.

ದೊಡ್ಡ ಲೋಕದ ಚಿಕ್ಕ ತಾಯಿ.

ಮಿಸೆಸ್ ಲಿಯೋ ವಿಲ್‌ಹೆಲ್ಮ್ ಮೆಯರ್ ಎಂಬವಳು ಇಡೀ ಭೂಲೋಕದಲ್ಲಿ ಬಲು ಗಿಡ್ಡ ಹೆಂಗಸು. ಇವಳ ಉದ್ದ 28 ಇಂಚು ಮಾತ್ರವೆ. ಇವಳ ಗಂಡನೂ, ಮಗಳೂ ಎಲ್ಲರಂತೆ ಉದ್ದವಾಗಿದ್ದಾರೆ.

ಎಮ್ಸ್ಟರ್‌ಡಮ್ ನಗರವು ಇವಳ ಜನ್ಮಭೂಮಿ. 24 ವರ್ಷಗಳ ಹಿಂದೆ ಈ ಕುಳ್ಳ ಹೆಂಗಸು ತನ್ನ ಹಿರಿಯ ಮಗಳನ್ನು ಪ್ರಸವಿಸಿದಾಗ ಯೂರೋಪ್‌ದೇಶದ ಎಲ್ಲಾ ಪ್ರಸಿದ್ಧ ವೈದ್ಯರು, ವೈದ್ಯಕೀಯ ಶಾಸ್ತ್ರದಲ್ಲಿ ಅತ್ಯಾಶ್ಚರ್ಯಕರವಾದ ಈ ಸಂಗತಿಯನ್ನು ಪರೀಕ್ಷಿಸುವುದಕ್ಕೆ ಅಲ್ಲಿಗೆ ಹೋಗಿದ್ದರು.

ಅವಳ ಚಂದದ ಹೆಣ್ಣು ಮಗುವಿನ ಭಾರ 12 ರಾತಲುಗಳಾಗಿತ್ತು. ಕುಳ್ಳತನದ ಲಕ್ಷಣಗಳೇ ಅವಳಲ್ಲಿರಲಿಲ್ಲ. 24 ವರ್ಷಗಳ ವರೆಗೆ ಈ ಮಗಳನ್ನು ತಾಯಿಯು ಸಾಕಿರುವಳು. ಈಗ ಮಗಳಿಗೆ ಮಕ್ಕಳಿದ್ದಾರೆ. ಒಂದರ ವಯಸು 5 ವರ್ಷ, ಇನ್ನೊಂದರ ವಯಸ್ಸು ಒಂದು ವರ್ಷ. ಹೀಗಾಗಿ ಮೆಯರಳು ಇಡೀ ಲೋಕದಲ್ಲಿ ಸಣ್ಣ ಮಾತಾಮಹಿಯಾಗಿದ್ದಾಳೆ.

ತನು ಭಾಷೆಯನ್ನು ಒಲ್ಲಳು.

ಮೆಯರಳು ಯೋಗ್ಯ ತಾಯಿ ತಂದೆಗಳಿಗೆ ಹುಟ್ಟಿದಳು. ಹುಟ್ಟುವಾಗಲೇ ಹ್ರಸ್ವವಾಗಿದ್ದುದರಿಂದ ಅವಳನ್ನು ಉದ್ದಮಾಡುವುದಕ್ಕೆ ತಾಯಿ ತಂದೆಗಳು ಎಷ್ಟೋ ಹಣವನ್ನು ವ್ಯಯ ಮಾಡಿದರು. ಆದರೂ ಪ್ರಯೋಜನವಾಗಲಿಲ್ಲ.

ಈಗ ಅವಳು 47 ವರ್ಷ ಪ್ರಾಯದವಳಾಗಿದ್ದಾಳೆ, ಮನಸ್ಸಿನಲ್ಲಿ ಸಂತುಷ್ಟಳಾಗಿ ದೇಹದಲ್ಲಿ ಆರೋಗ್ಯಯುಕ್ತಳಾಗಿಯೂ ಇರುವಳು. ಅವಳ ಗಂಡನು ಸಿಂಹವನ್ನು ಪಳಗಿಸುವ ವೃತ್ತಿಯವನು. 5 ಫೀಟ್ 5 ಇಂಚ್ ಉದ್ದದವನು. ತಾನು ವಿವಾಹಿತನಾಗುವಾಗ ಹೆಂಡತಿಯ ಮೇಲೆ ಅವನಿಗೆಷ್ಟು ಪ್ರೇಮವಿತ್ತೋ ಅಷ್ಟೇ ಪ್ರೇಮವು ಈಗಲೂ ಇದೆ.

ಅವಳು ತನ್ನ ಪೂರ್ವಕಥೆಯನ್ನು ಹೀಗೆ ಹೇಳುತ್ತಾಳೆ— ಡಿಸೆಲ್‌ಡೋರ್ಫ್ ಎಂಬಲ್ಲಿ ಮೊದಲು ನಾನಾ ದೇಖಾವೆಗಳಲ್ಲಿ ಭಾಗ ವಹಿಸುತ್ತಿದ್ದೆನು. ಭಾರವನ್ನು ಎತ್ತುವುದರಲ್ಲಿ ನನಗೆ ಸಣ್ಣ ಪ್ರಾಯದಿಂದಲೂ ಅಭ್ಯಾಸವಾಗಿದೆ. 3 ವರ್ಷ ಪ್ರಾಯವಾದಾಗ 10 ರಾತ್ಲು ಭಾರವನ್ನು ಎತ್ತುತ್ತಿದ್ದೆನು. ಪ್ರಾಯವು ಹೆಚ್ಚಿದಂತೆ ನನ್ನ ಮೂರರಷ್ಟು ಭಾರವನ್ನು ಎತ್ತಲು ನನಗೆ ಶಕ್ತಿ ಬಂತು. ಆದರೆ ನನ್ನ ತಾಯಿ ತಂದೆಗಳು ವ್ಯಾಪಾರಿಗಳಾಗಿದ್ದರು. ಆದ್ದರಿಂದ ಸ್ವಾಭಾವಿಕವಾಗಿ ನನ್ನ ಮನಸ್ಸೂ ಆ ಕಡೆಗೆ ಹರಿಯಿತು.

ಈ ತನ್ಮಧ್ಯೆ ಲಿಯೋ ವಿಲ್‌ಹೆಲ್ಮ್ ಮೆಯರ್ ಎಂಬವನ ಸಂದರ್ಶನವು ನನಗೆ ಲಭಿಸಿತು. ನಮ್ಮ ಹೊಟೇಲಿನಲ್ಲಿಯೇ ಅವನಿದ್ದನು. ಕಾಣುವಾಗ ಸುಂದರನು; ಸತ್ಸ್ವಭಾವದವನು. ಅವನಿಗೆ ಏಳು ಭಾಷೆಗಳು ಗೊತ್ತಿವೆ. ನಾನು ಆರು ಭಾಷೆಗಳನ್ನಾಡುತ್ತೇನೆ.

ನಾವು ಇಬ್ಬರೂ ಒಟ್ಟಿಗೆ ಅತ್ತಿತ್ತ ತಿರುಗಾಡುತ್ತಾ ಹೋದೆವು. ಆಗ ಅವನು ತನ್ನನ್ನು ಮದುವೆಯಾಗಬೇಕೆಂದು ನನ್ನೊಡನೆ ಕೇಳಿದನು. ಅವನ ಪ್ರೇಮದ ವಿಷಯದಲ್ಲಿ ನನಗೆ ಸಂದೇಹವಾಯಿತು. ಅವನು ತನ್ನ ಅನುರಾಗದ ನಿಷ್ಕಲ್ಮಷತೆಯ ವಿಷಯವಾಗಿ ನನಗೆ ಭರವಸೆಯಿತ್ತನು. ಮತ್ತೆ ನನ್ನ ಮದುವೆಯಾಯಿತು. ಇದಕ್ಕಾಗಿ ನಾನೆಂದೂ ಪಶ್ಚಾತ್ತಾಪವನ್ನು ಹೊಂದಿದುದಿಲ್ಲ.

ನಮ್ಮ ಮದುವೆ ನಡೆದು ಸುಮಾರು ಕಾಲು ಶತಮಾನವಾಯಿತು. ಇಂದಿನ ವರೆಗೆ ಒಂದು ಕಲಹವಾದರೂ ನಮ್ಮಲ್ಲಿ ಉಂಟಾಗಲಿಲ್ಲ.

ನನ್ನ ಮದುವೆಯಾದುದು 13 ವರ್ಷದಲ್ಲಿ. ಆ ವೇಳೆ ನಾನು ಸರ್ಕಸ್ ದೇಖಾವೆಗಳನ್ನು ಬಿಟ್ಟು ಒಳ್ಳೆಯ ಗೃಹಿಣಿಯಾಗುವುದಕ್ಕೆ ಪ್ರಯತ್ನಪಟ್ಟೆನು. ಮನೆ ಒಗೆಯುವುದು, ಅಡಿಗೆ ಮಾಡುವುದೇ ಮೊದಲಾದ ಎಲ್ಲಾ ಗೃಹಕೃತ್ಯಗಳನ್ನು ನಾನು ಮಾಡುತ್ತಿದ್ದೆನು. ಆದರೆ ರಂಗಭೂಮಿಯು ಮತ್ತೊಮ್ಮೆ ನನ್ನನ್ನು ಆಕರ್ಷಿಸ ತೊಡಗಿತು. ಸರ್ಪವನ್ನು ಕುಣಿಸುವ ಕೆಲಸದಲ್ಲಿ ಮತ್ತೆ ನಾನು ಉದ್ಯುಕ್ತಳಾದೆನು. ಗರ್ಭಿಣಿಯಾದೊಡನೆ ನಾನು ಹಾಲೆಂಡ್ ದೇಶಕ್ಕೆ ಹಿಂತಿರುಗಿದೆನು. ಅಲ್ಲಿ ನನ್ನನ್ನು ವೈದ್ಯರೆಲ್ಲಾ ಪರೀಕ್ಷೆ ಮಾಡಿದರು. ಎಲ್ಲರಿಗೂ ಆಶ್ಚರ್ಯವಾಯಿತು.

ನನ್ನ ಮಗುವಿಗೆ ಸಂಪೂರ್ಣ ವೈದ್ಯಕೀಯ ಚಿಕಿತ್ಸೆಯು ಸಿಕ್ಕಬೇಕೆಂದು ನಾನು ನಿರ್ಧರಿಸಿದೆನು. ಜನ್ಮದ ಪರಿಣಾಮವಾಗಿ ನನ್ನ ಮಗಳು ಕಷ್ಟಪಡಬಾರದೆಂದು ನನ್ನ ಎಣಿಕೆ. ನನ್ನ ಮಗಳೂ ಗಿಡ್ಡಾಗಿ ಇರಬಹುದೆಂದು ನಾನು ಭಾವಿಸಿದ್ದೆನಾದರೂ ಅವಳು ಇತರರಷ್ಟೆ ಸುಖವಲ್ಲಿರಬೇಕೆಂದು ನನ್ನ ಅಪೇಕ್ಷೆ ಇತ್ತು.

ಈ ಸಮಯಕ್ಕೆ ನಾನು ಭಾರವನ್ನು ಎತ್ತುವುದರಲ್ಲಿ ಹೆಚ್ಚು ಅಭ್ಯಾಸ ಮಾಡಿದ್ದರಿಂದ ನನ್ನ ಸ್ನಾಯುಗಳು ಬಲವಾಗಿದ್ದುವು. ನನ್ನ ದೇಹ ಶಕ್ತಿಯೇ ನನ್ನನ್ನು ಕಾಪಾಡಿತೆಂದು ಡಾಕ್ಟರರು ಅಭಿಪ್ರಾಯಪಟ್ಟರು. ಇಪ್ಪತ್ತು ವರ್ಷ ವಯಸ್ಸಾದಾಗ ನಾನು ಸುಮಾರು 140 ರಾತಲು ಭಾರವನ್ನು ಎತ್ತುತ್ತಿದ್ದೆನು.

ನನ್ನ ಮಗಳ ಹೆಸರು ಫ್ರೆಥಾ ಎಂದು. ಅವಳು ದೊಡ್ಡವಳಾದೊಡನೆ ವ್ಯಾಪಾರ ವೃತ್ತಿಯನ್ನು ಅವಲಂಭಿಸಿದಳು. ನಾನು ಮೊದಲು ಬಾರ್ನಮ್ ಎಂಬವರ ಸರ್ಕಸಿಗೆ ಸೇರಿದೆನು. ಅವರನ್ನು ಪೋಪ್ ಎಂಬ ಹೆಸರಿನಿಂದ ಕರೆಯುತ್ತಿದ್ದೆನು. ಸರ್ಕಸ್ ಕಂಪೆನಿಯಲ್ಲಿ ಒಂದೇ ಕುಟುಂಬದವರಂತೆ ನಾವು ವಾಸಿಸುತ್ತಿದ್ದೆವು.

ನಾನು ಯೂರೋಪಿನ ಎಲ್ಲಾ ಭಾಗಗಳಲ್ಲಿಯೂ ಸಂಚಾರ ಮಾಡಿದ್ದೇನೆ. ಎಲ್ಲಾ ರಾಜರನ್ನು ನೋಡಿದ್ದೇನೆ. ಎಡ್ವರ್ಡ್ ಚಕ್ರವರ್ತಿಗಳು ಯುವರಾಜರಾಗಿದ್ದಾಗಲೂ ರಾಜರಾದ ಮೇಲೂ ಅವರನ್ನು ನಾನ ಸಂದರ್ಶಿಸಿದ್ದೆನು. ಇಸ್ಟೆಂಡಿನಲ್ಲಿದ್ದಾಗ ಬೆಲ್ಜಿಯಮ್ಮಿನ ರಾಜರ ಭೇಟಿಯೂ ನನಗಾಯಿತು.

ಇಪ್ಪತ್ತು ವರ್ಷಗಳ ಹಿಂದೆ ಜರ್ಮನ್ ಕೈಸರರ ಭೇಟಿ ತೆಗೆದುಕೊಳ್ಳುವುದಕ್ಕೆ ನನಗೆ ಅಪ್ಪಣೆ ದೊರೆಯಿತು. ಅವರನ್ನೂ ಮಹಾರಾಣಿಯವರನ್ನೂ ನೋಡಿದೆನು. ಇಬ್ಬರೂ ನನ್ನ ಕ್ಷೇಮ ಸಮಾಚಾರವನ್ನು ವಿಚಾರಿಸಿದರು.

ಮನೆಯ ಎಲ್ಲಾ ಕೆಲಸಗಳನ್ನು ನಾನೇ ಮಾಡುತ್ತೇನೆ. ಒಳ್ಳೆಯ ತಿಂಡಿಗಳನ್ನು ತಿನ್ನುವುದಕ್ಕೆ ನನಗೆ ಬಹು ಪ್ರೀತಿ. ನಾನು ಅವುಗಳನ್ನು ತಯಾರಿಸುತ್ತೇನೆ. ಅವನ್ನೇ ನನ್ನ ಗಂಡನು ಇಚ್ಛಿಸುತ್ತಾನೆ. ಓದುವುದು, ಸಂಗೀತ, ನೃತ್ಯ, ಪ್ರಾಣಿರಕ್ಷಣೆ ಇತ್ಯಾದಿ ಕೆಲಸಗಳಲ್ಲಿ ನನಗೆ ಹೆಚ್ಚಿನ ಆಸಕ್ತಿ. ಬಿಟ್ಟರೆ ಎಲ್ಲರಂತೆ ನಾನು ಸುಖವನ್ನು ಅವಲಂಭಿಸುತ್ತೇನೆ. ಸುಖವು ಆಯಾ ವ್ಯಕ್ತಿಯನ್ನು ಅವಲಂಭಿಸಿಕೊಂಡಿದೆ. ನನ್ನ ಜೀವನವು ಸುಖಮಯವಾಗಬೇಕೆಂದೇ ನನ್ನ ನಿರ್ಧಾರ.

'ನವಯುಗ'

ನಿಮ್ಮ ಚಂದಾಹಣವು ಈ ತಿಂಗಳ ಆಖೈರಿಗೆ ತೀರುತ್ತೆ. ಪಡ್ಡೆ ಹಣ ಕಳುಹಿಸದಿದ್ದರೆ ಹಾಯಿದೆ ತೀರಿದನಂತರ ಪತ್ರಿಕೆ ನಿಲ್ಲಿಸಲೇ ಬೇಕಾಗುತ್ತೆ.

ವರ್ತಮಾನ ಸಂಗ್ರಹ.

ಒಳದೇಶ

ಸ್ಕೂಲ್ ಫೈನಲ್ ಪರೀಕ್ಷೆಯನ್ನು ಪ್ರಕಟ ಪಡಿಸುವದಿಲ್ಲವೆಂದು ಈಚೆಗೆ ತಿಳಿಯ ಬಂದಿದೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 16—4—28ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯುವದು.

ಬೇತರಿ ಕಡುವಿನ ಮತ್ತು ಕಕ್ಕೆಹೊಳೆಯ ಸೇತುವೆಗಳು ತಯಾರಿಯಾಗಿರುವದರಿಂದ ಈಗ ಬಸ್ಸುಗಳು ಎಂದಿನಂತೆ ಅತ್ತಿತ್ತ ಓಡಾಡುತ್ತಿವೆ.

ಮಡಿಕೇರಿ ಕಾನ್ವೆಂಟಿನಲ್ಲಿ ಉಪಾಧ್ಯಾಯರಾಗಿದ್ದು ಎಲ್. ಟಿ. ಪರೀಕ್ಷೆಗೆ ಹೋಗಿದ್ದ ಮಿ ಕಂಬೀರಂಡ ಮುತ್ತಣ್ಣನವರು ಈಗ ಬೆಂಗಳೂರಿನ ಟ್ರೈನಿಂಗ್ ಶಾಲೆಯಲ್ಲಿ ಉಪಾಧ್ಯಾಯರಾಗಿ ನೇಮಿಸಲ್ಪಟ್ಟಿರುವರಾಗಿ ತಿಳಿಯಬರುತ್ತದೆ

ಬೊಂಬಾಯಿ ವಿಕ್ಟೋರಿಯಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಎಲೆಕ್ಟ್ರಿಕಲ್ ಇಂಜಿನೀಯರಿಂಗ ಮೆಕನಿಕಲ್ ಇಂಜಿನೀಯರಿಂಗ್ ಇತ್ಯಾದಿ ಇಲಾಖೆಗಳಲ್ಲಿ ತರಬೇತಾಗಲು ಅಪೇಕ್ಷಿಸುವವರು ಸೆಂಟ್ರಲ್ ಹೈಸ್ಕೂಲ್ ಹೆಡ್ಡಮಾಸ್ಟರವರಿಂದ ವಿವರ ಪೂರ್ಣ ಮಾಹಿತಿಯನ್ನು ತಿಳಕೊಳ್ಳಬಹುದು.

ಚೀಫ್‌ಕಮಿಷನರವರು ನಿನ್ನೆ ದಿನ ಸಾಯಂಕಾಲ 4½ ಗಂಟೆಗೆ ಕ್ರಿಕೆಟ್ ಮೈದಾನದಲ್ಲಿ (ಮ್ಯಾನ್ಸ್ ಕಾಂಪೌಂಡಿನಲ್ಲಿ) ಈಗ ನಡೆಯುತ್ತಿರುವ ಟೂರ್ನಮೆಂಟಿನಲ್ಲಿ ಭಾಗ ತೆಗೆದುಕೊಂಡ ಎಲ್ಲಾ ಆಟಗಾರರಿಗೂ, ಅವರನ್ನು (ಚೀ ಕಮಿಷನರನ್ನು) ಖಾಸಗಿಯಾಗಿ ಕಾಣಲಿಕ್ಕೆ ಹೋದವರಿಗೂ ಒಂದು ಟೀ ಪಾರ್ಟಿಯನ್ನು ಕೊಟ್ಟರು

ಸೈಮನ್ ಕಮಿಷನಿಗೆ ಯಾವ್ಯಾವ ವಿಷಯಗಳ ಮೇಲೆ ಅಭಿಪ್ರಾಯ ಕೊಡಬಹುದೆಂಬುದನ್ನು ಸೂಚಿಸಿ, ಬರವಣಿಗೆ ಮೂಲಕ ತಮ್ಮ ಅಭಿಪ್ರಾಯಗಳನ್ನು ಮೇ ತಿಂಗಳ 7ರೊಳಗೆ ಕಳುಹಿಸಿ ಕೊಡಬಹುದೆಂದು ಪ್ಲಾಂಟರುಗಳ ಸಂಘಕ್ಕೂ, ಜಮೀನ್ದಾರರ ಸಂಘಕ್ಕೂ, ಕೊಡವ ಸಭೆಗೂ ಮತ್ತು ಎಲ್ಲಾ ಕೌನ್ಸಿಲು ಮೆಂಬರುಗಳಿಗೂ ಕಮಿಷನರಿಂದ ಪತ್ರಗಳು ಕಳುಹಿಸಲಾಗಿವೆ

ರೆಡ್ಡ್ ಕ್ರಾಸ್ ಸಂಘದವರಾಗಿ ಕೊಡಗಿನಲ್ಲಿ ಕೆಲಸ ಮಾಡಲು ಸರ್ಕಾರದವರು ಒಬ್ಬ 'ಹೆಲ್ತ್ (ಆರೋಗ್ಯ) ಆಫೀಸರನ್ನು ನೇಮಕ ಮಾಡಲಿಲ್ಲವೆಂಬ ಕಾರಣದಿಂದ ಸದರಿ ಸಂಘದ ಕೊಡಗು ಶಾಖೆಯ ಪ್ರಾರಂಭದಿಂದಲೇ ವೈಸ್ ಪ್ರೆಸಿಡೆಂಟರಾಗಿದ್ದು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದ ಶ್ರೀಮತಿ ಕೊಡಂದೇರ ಸೀತಮ್ಮ (ಪಿ.ಸಿ. ತಿಮ್ಮಯ್ಯ)ನವರು ಆ ಪದವಿಗೆ ರಾಜಿನಾಮೆ ಕೊಟ್ಟಿರುವರೆಂದು ತಿಳಿಯುತ್ತೇವೆ

ಕೊಡಗು ಎಥ್ಲೆಟಿಕ್ ಎಸೋಸಿಯೇಶನಿನ ಕ್ರಿಕೆಟ್ ಟೂರ್ನಮೆಂಟು ಇನ್ನೂ ಮುಗಿದಿರುವದಿಲ್ಲ. ತಾ 7 ಮತ್ತು 8 ರಲ್ಲಿ ನಡೆದ ಪಂದ್ಯದಾಟದಲ್ಲಿ ಟೆರಿಟೋರಿಯಲ್ ಪಟಾಲಾಮಿನವರು ದಕ್ಷಿಣಕೊಡಗು ಟೀಮ್ನವರನ್ನು ಸೋಲಿಸಿದರು. ಈಗ ಅಖೈರು ಆಟವನ್ನು ಟೆರಿಟೋರಿಯಲ್ ಪಟಾಲಾಮಿನವರೂ, ಉತ್ತರಕೊಡಗು ಟೀಮಿನವರೂ ಆಡುತ್ತಿರುವರು. ಚೀಫ್‌ಕಮಿಷನರವರು ಉತ್ತರ ಕೊಡಗು ಟೀಮಿಗೆ ಆಡುತ್ತಿದ್ದಾರೆ.

ಪೇರಡನ್ ಪಾಲಿಸ್ಟು ಕಾಲೇಜಿನಲ್ಲಿ ಪ್ರೊವಿಷನಲ್ ತರಗತಿಯಲ್ಲಿ ಓದುತ್ತಿದ್ದ ಮಿ. ಬಿದ್ದಂಡ ಚಂಗಪ್ಪನವರು ತಮ್ಮ ಫೈನಲ್ ಪರೀಕ್ಷೆಯಲ್ಲಿ 11 ವಿದ್ಯಾರ್ಥಿಗಳ ಪೈಕಿ ಮೊದಲನೆಯವರಾಗಿ ಪಾಸಾಗಿ ಐದು ಮೆಡಲುಗಳನ್ನೂ, ಸೆಂಟ್ರಲ್ ಪ್ರಾವಿನ್ಸಿನಿಂದ ಕಳುಹಿಸಲ್ಪಟ್ಟ ಮಿ ಸುರಾಬುದ್ದಿನ್ನ್ ಸಯ್ಯದ್‌ರವರು ಮೂರನೆಯದಾಗಿ ಪಾಸಾಗಿ ಬಂದು ಮೆಡಲನ್ನು ಪಡೆದಿರುವರೆಂದು ಕೇಳಿ ಸಂತೋಷಪಡುತ್ತೇವೆ ಇವರಿಬ್ಬರಿಗೂ ನಮ್ಮ ಅಭಿನಂದನೆಗಳಿವೆ.

ಹಿಂದೂದೇಶ.

ವೈಸರಾಯರು ಎಸೆಂಬ್ಲಿಯ ಬೈಠಕ್ಕನ್ನು ತಾ 10 ರಲ್ಲಿ ಬರಖಾಸ್ತು ಮಾಡಿದರು.

ಮದ್ರಾಸು ಬಂದರದಲ್ಲಿ 'ಸುಕರ್ಣ' ಎಂಬ ಹಡಗಿಗೆ ಬೆಂಕಿ ಹತ್ತಿತು. ಆಸರ ಹೆಚ್ಚಿನ ನಷ್ಟವಾಗಲಿಲ್ಲ

ತಾ. 4ರಲ್ಲಿ ಮಧುರೆಯ ಕಾಲೇಜಿಗೆ ಆಕಸ್ಮಾತ್ತು ಬೆಂಕಿಬಿದ್ದು ಸುಮಾರು ಹತ್ತು ಸಾವಿರ ರೂಪಾಯಿ ನಷ್ಟವಾಗಿದೆಯಾಗಿ ವರ್ತಮಾನ

ಗೋವಾ ಸರ್ಕಾರದವರು ಮದುವೆಯ ಪ್ರಾಯವನ್ನು ಹುಡುಗರಿಗೆ 21 ರಿಂದ 18 ಕ್ಕೂ, ಹುಡುಗಿಯರಿಗೆ 16 ರಿಂದ 14 ಕ್ಕೂ ಇಳಿಸಿರುವರು

ಸರ್ ಬೇಸಿಲ್ ಬ್ಲಾಕೆಟ್‌ರವರ ಬದಲಿಗೆ ಇಂಡಿಯಾ ಸರ್ಕಾರದ ಕೋಶಮಂತ್ರಿಗಳಾಗಿ ಹುಂಗಾಮಿಯಾಗಿ ಸರ್ ಬಿ ಎನ್. ಮಿತ್ರರವರನ್ನು ನೇಮಿಸಿರುತ್ತಾರೆ

ಸ್ವಾಮಿ ಶ್ರದ್ಧಾನಂದರವರ ಪುತ್ರರಾದ ಇಂದ್ರರವರಿಗೆ ಮತದ್ವೇಷ ಹುಟ್ಟಿಸಿದರೆಂದು ಶಿಕ್ಷೆಯಾಗಿದ್ದುದ್ದು ಲಾಹೋರು 'ಹೈಕೋರ್ಟಿನಲ್ಲಿ ವಜಾಮಾಡಲ್ಪಟ್ಟಿದೆಯಾಗಿ ತಿಳಿಯಬರುತ್ತದೆ.

ಸರ್ ಅಣ್ಣಾಮಲೈಚೆಟ್ಟಿಯಾರ್‌ರವರು ಚಿದಂಬರದಲ್ಲಿ ಒಂದು ಯುನಿವರ್ಸಿಟಿಯನ್ನು ಸ್ಥಾಪಿಸಲಿಕ್ಕಾಗಿ 20 ಲಕ್ಷ ರುಪಾಯಿಗಳನ್ನು ಉಚಿತವಾಗಿ ಕೊಟ್ಟದ್ದು ಪ್ರಶಂಸಾರ್ಹವಾಗಿದೆ.

ಸೇಠ್ ಜಮ್ನಲಾಲ್ ಬಜಾಜರವರ ಏರ್ಪಾಟಿನಂತೆ ಗಾಂಧೀಜಿಯವರು ಅಖಿಲಭಾರತ ದೇಶಬಂಧು ಸ್ಮಾರಕ ನಿಧಿಗೆ ಕಲ್ಕತ್ತಾದಲ್ಲಿ ಎರಡು ದಿವಸಗಳಲ್ಲಿ 16,233—8—0 ಜಮೆ ಮಾಡಿರುವರು.

ತಾ 9ರಲ್ಲಿ ಬಂಗಾಳದ ಪ್ರಾಂತಿಕ ರಾಜಕೀಯ ಪರಿಷತ್ತಿನಲ್ಲಿ ಸೈಮನ್ ಕಮಿಷನು ಬಹಿಷ್ಕರಿಸುವ ಪತ್ರ, ಬ್ರಿಟಿಷ್ ಸಾಮಾನುಗಳನ್ನು ಬಹಿಷ್ಕರಿಸಬೇಕೆಂದೂ, ನಾಡ ಪ್ರಸಾರಕ್ಕೆ ಉತ್ತೇಜನ ಕೊಡಬೇಕೆಂದೂ ಠರಾವುಗಳು ಪಾಸಾದವು

ಅಸ್ಸಾಮ್ ಪ್ರಾಂತ್ಯದಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕಲಿಸಬೇಕೆಂತಲೂ ಇದಕ್ಕಾಗಿ ಸರ್ಕಾರದವರು 5೦ ಲಕ್ಷ ರೂಪಾಯಿ ಸಾಲ ತೆಗೆದುಕೊಳ್ಳಬೇಕೆಂತಲೂ ಅಲ್ಲಿನ ಕೌನ್ಸಿಲಿನಲ್ಲಿ ಠರಾವು ಪಾಸು ಮಾಡಲಾಗಿದೆ

ಬಂಗಾಳ ಎಕ್ಸಿಕ್ಯುಟಿವ್ ಕೌನ್ಸಿಲಿನ ಒಬ್ಬ ಮೆಂಬರಾದ ನವಾಬ್ ಮುಷರಫ ಹುಸೇನ ರವರು ಎರಡು ತಿಂಗಳು ರಜೆಯಲ್ಲಿರುವದರಿಂದ ವೃಸರಾಯರು ಸರ್ ಸಾಸಿ ರಂಜನ ಬ್ಯಾನರ್ಜೀಯವರನ್ನು ಹುಂಗಾಮಿ ಮೆಂಬರಾಗಿ ನೇಮಿಸಿರುವರು.

ಹಿಂದದೇಶದ ಹಲವು ಮಿಲ್ಲು ಪಟ್ಟಣಗಳಲ್ಲಿ ಸ್ಟ್ರೈಕ್ ಯುವರ ವು ಕಾಣಿಸಲ್ಪಡುತ್ತಿದೆ ... ಪ್ರಚಾರಕ್ಕೆ ಉತ್ತೇಜನ ಕೊಡುವ ಸ್ವಮನಾ ... ಪಟ್ಟಿಯ ಒಪ್ಪಂದಕ್ಕೆ ಒತ್ತಾಯ ಕೊಡುವ ಕೆಲಸಗಳು ಉತ್ಸಾಹದಿಂದ ಮಾಡಲ್ಪಡುತ್ತಿವೆ

ಸರ್ ಜಗದೀಶ ಚಂದ್ರಬೋಸರವರು ಪತ್ನಿ ಸಮೇತ ಯೂರೋಪಿಗೆ ಪ್ರಯಾಣ ಹೋದರು. ಅವರು ಜಿನೀವಾದಲ್ಲಿ ಕೂಡುವ ಒಂದು ಕಮಿಟಿಯ ಮೀಟಿಂಗುಗಳಲ್ಲಿ ಭಾಗವಹಿಸುವದಲ್ಲದೆ ಯೂರೋಪಿನ ಹಲವು ಯುನಿವರ್ಸಿಟಿಗಳಲ್ಲಿ ಉಪನ್ಯಾಸಗಳನ್ನು ಮಾಡುವರು

ತಾ 11ರಲ್ಲಿ ಅಮೃತಸರದಲ್ಲಿ ನಡೆಯುತ್ತಿರುವ ಪಂಜಾಬು ರಾಜಕೀಯ ಕಾನ್ಫರೆನ್ಸಿನಲ್ಲಿ ಸ್ವಾಗತಕಮಿಟಿಯ ಅಧ್ಯಕ್ಷರಾದ ಡಾಕ್ಟರ್ ಕಿಚ್ಲುರವರು ಸ್ವರಾಜ್ಯ ಪಡೆವುದ ಜನರ ... ಸಾಧಿಸಲು ಎಲ್ಲರೂ ಸೇರಬೇಕೆಂದು ಅಪ್ಪೀಲು ಮಾಡಿದರು.

ಬರುವ ಮೇ ತಿಂಗಳ ಮಧ್ಯಕಾಲದಲ್ಲಿ ಮಂಗಳೂರಿನಲ್ಲಿ ನಡೆಯಲಿಕ್ಕಿರುವ ಕರ್ನಾಟಕ ಪ್ರಾಂತ್ಯದ ಆಯುರ್ವೇದ ವೈದ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಸಂಗ್ರಹಿಸಿ ಕಳುಹಿಸಬೇಕೆಂದೂ, ವೈದ್ಯ ... ಪ್ರಬಂಧ ಬರೆಯುವವರು, ಪ್ರದರ್ಶನ ವಸ್ತುಗಳನ್ನು ಕಳುಹಿಸುವವರೂ ತಮ್ಮ ಪೂರ್ಣ ವಿಳಾಸಗಳನ್ನು ಸ್ವಾಗತ ಸಮಿತಿಯ ಕಾರ್ಯದರ್ಶಿ ಡಾಕ್ಟರ್ ಪಿ. ಗೋವಿಂದರಾವ್, ... ಇವರಿಗೆ ಕಳುಹಿಸಬೇಕೆಂದು ಅವರು ಕೋರಿರುವರು.

ವಿದೇಶ.

ಈ ವರ್ಷ ಪೋರ್ಚುಗಲ್ ದೇಶದಲ್ಲಿ ... ದಂಗೆ ಎದ್ದಿತು. ಆದರೆ ಸರಕಾರದವರು ಅದನ್ನು ಬೇಗನೆ ಅಡಗಿಸಿಬಿಟ್ಟರು.

ಈಗ ಜರ್ಮನಿಯ ಮುಖ್ಯ ಪಟ್ಟಣವಾದ ಬರ್ಲಿನಿನಲ್ಲಿರುವ ಅಫಘಾನಿಸ್ಥಾನದ ಅಮೀರರಾದ ಅಮಾನುಲ್ಲಾರವರಿಗೆ ಅಲ್ಲಿ ಗಂಟಲು ನೋವಿಗೆ ಶಸ್ತ್ರಕ್ರಿಯೆ ಮಾಡಲಾಗುವದಂತೆ

ಜಪಾನಿನಲ್ಲಿ ಕಮ್ಯೂನಿಸ್ಟು ಸಂಘದವರ ಹಾವಳಿ ಹೆಚ್ಚಾದುದರಿಂದ ಸರ್ಕಾರದವರು ಅವರಲ್ಲಿ ಹಲವರನ್ನು ಸೆರೆ ಹಿಡಿದು ಅವರ ಪಾರ್ಟಿಗಳನ್ನು ನಿಷೇಧಿಸಿರುವರು.

ಅಮೇರಿಕಾ ದೇಶದ ಜಾನ್ಸ್‌ಟನ್ ಪಟ್ಟಣದಲ್ಲಿ ಮಿಸೆಸ್ ರಾಬಿನ್‌ಸನ್ ಎಂಬವಳ ... ಮನುಷ್ಯನಂತೆ ಮಾತನಾಡುತ್ತದಂತೆ! ಹಲವರು ಇದನ್ನು ಹೋಗಿ ನೋಡುತ್ತಿದ್ದಾರಂತೆ.

ಟರ್ಕಿ ಸ್ಥಾನದಲ್ಲಿ ಸರ್ಕಾರಕ್ಕೂ ಮತಕ್ಕೂ (ಮತಶಾಸ್ತ್ರ) ಏನೂ ಸಂಬಂಧವಿಲ್ಲವೆಂಬ ಮಾಡುವ 'ಬಿಲ್ಲ'ನ್ನು ಅಲ್ಲಿಯ ರಾಷ್ಟ್ರೀಯ ಅಸೆಂಬ್ಲಿಯವರು ಮಂಜೂರು ಮಾಡಿರುವರು.

1927ನೇ ಜುಲೈ 1ರಿಂದ ಡಿಸೆಂಬರು 31ರ ವರೆಗೆ ಲಂಡನ್ ಪಟ್ಟಣ ಒಂದರಲ್ಲಿಯೇ 20 ವರ್ಷಕ್ಕಿಂತ ಕಡಿಮೆ ಪ್ರಾಯದ 1117 ಹುಡುಗಿಯರನ್ನು ಹಿಡಿಸಿಕೊಂಡು ಹೋಗಿರುವರು, 1926ನೇ ಜುಲೈ 1ರಿಂದ ಡಿಸೆಂಬರು 31ರ ವರೆಗೆ ಹಿಡಿದುಕೊಂಡುಹೋದ ಹುಡುಗಿಯರ ಸಂಖ್ಯೆಯು 1070 ಇದ್ದಿತು ... ಪಾರ್ಲಿಮೆಂಟಿನಲ್ಲಿ ಪ್ರಶ್ನೆಗೆ ಉತ್ತರ ಸಿಕ್ಕಿತು.

ನೋಟೀಸು.

ಎಡೆನಾಲ್ಕುನಾಡಿನ ... ಕೋಆಪರೇಟಿವ್ ಸೊಸೈಟಿಗೆ ಸೆಂಟ್ರಲ್ ಬ್ಯಾಂಕಿನಿಂದ ಸಾಲ ಪಡೆಯಲು ಬ್ಯಾಂಕಿಗೆ ಅರ್ಜಿ ಕಳುಹಿಸಬೇಕೆಂದು ಸದರಿ ಅರ್ಜಿಯು ಎಡೆನಾಲ್ಕುನಾಡು ... ಮೂಲಕ ತಿಳಿಸಲಾಗಿದೆ

ಮಡಿಕೇರಿ — ಸಿ. ಯಸ್. ವೆಂಕಪ್ಪಯ್ಯ.
ತಾ 13—4—28. — ಗೌರವ ಕಾರ್ಯದರ್ಶಿ.

ಗೌಡ ವಿದ್ಯಾಭಿವೃದ್ಧಿ ಸಂಘ.

ಈ ಕೆಳಗಿನ ಮಹನೀಯರು ಸಂಘಕ್ಕೆ ಉದಾರ ಭಾವದಿಂದ ಚಂದಾ ಪಾವತಿ ಮಾಡಿರುವರು

1	ಮಿ. ಪೈಕೆರ ವೆಂಕಪ್ಪಯ್ಯನವರು,	10	0	0
2	,, ಕಬ್ಬಾಳ್ಲಿ ಅಣ್ಣಯ್ಯ ಮತ್ತು ರಾಮಯ್ಯನವರು,	6	0	0
3	,, ಡಾಂಯಿಲನ ಪೊನ್ನಪ್ಪನವರು,	5	4	0
4	,, ಒಕ್ಕಲಿಗ ಕಲ್ಲೇಗೌಡರು (ಚಿಕ್ಕ...)	5	0	0
5	,, ಪೂದೇವ ಅಣ್ಣಪ್ಪನವರ	5	0	0
6	,, ದಂಬೆಕೋಡಿ ಅಪ್ಪಣ್ಣನವರು	5	0	0
7	,, ಮುಕ್ಕಾಟಿ ಅಣ್ಣಯ್ಯನವರ,	5	0	0
8	,, ಯಾಂಕನ ಸುಬ್ರಾಯನವರು,	5	0	0
9.	,, ಪೈಕನ ಮೇದಪ್ಪನವರು,	5	0	0
10	ಕಡ್ಲೆರ ಅಯ್ಯಪ್ಪನವರು,	5	0	0
11	,, ಕಳಗಿ ಮನೆ ರಾಮಣ್ಣನವರು (ಅಮ್ಮತ್ತಿನಾಡು)	5	0	0
12	,, ಪರಚಾ ಅಪ್ಪಯ್ಯನವರು ಮತ್ತು ಪೂವಯ್ಯನವರು	5	0	0
13	,, ಬಸ್ಸುತ್ತಾರು ಜೆ ಮಹಾಸಂಘದವರ,	5	0	0

ಅಲ್ಲದೆ ಮಿ ಮುಗೇರ ನೀರಯ್ಯನವರ ಸಂಘದ ಸಾಲದ ಹಿಬ್ಬು ಅಸಲು ಹಣ ಪೂರ್ತಿ ಸಂದ್ದಾಗಿದೆ

ಮಡಿಕೇರಿ, ತಾ 13—4—28 — ಎಸ್ ಮುದ್ದಪ್ಪ, (ಪ್ರೆಸಿಡೆಂಟ್)

ನೋಟೀಸು.

ನನ್ನ ಬಾಪ್ತು ಒಂದು ಕರೀ ಬಣ್ಣದ ಸುಮಾರು 4 ವರುಷದ ಗಿಡ್ಡ ಮತ್ತು ದಪ್ಪ ಕೋಡಿನ ಉದ್ದ ಬಾಲದ ... ಉದ್ದ ಮಟುವ, ಕಾಲು ಗಂಟುಗಳಿಗೆ ತಾಗುವಷ್ಟು ಉದ್ದ ಇರುವ ಸಾಧಾರಣ 4 ಅಡಿ ಎತ್ತರವಿರುವ ಹಸು ತಾ 1—4—28ರಿಂದ ಕಾಣೆಯಾಗಿದೆ ಪತ್ತೆ ಮಾಡಿ ಕೊಟ್ಟವರಿಗೆ ರೂ. 2 ಇನಾಮು ಕೊಡಲಾಗುವುದು.

ಮಡಿಕೇರಿ. — ಪಿ ಯಮ್ ನಾರಾಯಣಶಾಸ್ತ್ರಿ
ತಾ 17—4—28 — ಮಹದೇವಪೇಟೆ

A Horse For Sale.

For Particulars apply to—
G M Manjunathaya
Coffee Planter Suntikoppa Coorg
4—2

ನೋಟೀಸು.

ಒಮ್ಮತ್ತಾರದ ಸಂಘದವರಾದ ... ಕಮಿಟಿಯವರು ಸಾರ್ವಜನಿಕರ ... ದಿಕ್ಕಿನಿಂದ, ನ್ಯಾಯದಿಂದ ... ರ, ರಾಗಾಲ ಗ್ರಾಮಗಳಲ್ಲಿ ... ಮಾಡುವ ... ಪ್ರೋತ್ಸಾಹಿಸಬೇಕೆಂತ ಯೋಚಿಸಲಾಗಿದೆ ... ಅಪೇಕ್ಷಿಸುವವರು ... ಬೇಕಾಗಿ ಕೇಳಿಕೊಳ್ಳುತ್ತೇವೆ

ಸಿ. ಯಸ್. ವೆಂಕಪ್ಪಯ್ಯ.
(... ಕಮಿಟಿಯ ಪರವಾಗಿ)

ಸೇವಾದಳದ ಕಾರ್ಯಕ್ರಮ.

ಮೊದಲು ನಿಶ್ಚಯಿಸಿದಂತೆ ಈ ವರ್ಷ ಕರ್ನಾಟಕ ಪ್ರಾಂತ್ಯದ ಬೇರೆ ಬೇರೆ ಜಾಗಗಳಲ್ಲಿ ಶಿಕ್ಷಣ ಶಿಬಿರ (ಕ್ಯಾಂಪು)ಗಳನ್ನು ಹಿಂದುಸ್ಥಾನಿ ಸೇವಾದಳದವರಿಂದ ಸ್ಥಾಪಿಸುವ ಕಾರ್ಯವು ನಡೆದಿದೆ. ಕೊಡಗು ದೇಶದಲ್ಲಿ ಒಂದು ಶಿಬಿರವನ್ನು ತೆಗೆಯಬೇಕೆಂದು ಪ್ರಯತ್ನಿಸುತ್ತಿರುವಾಗ ಅದು ಸಾಧ್ಯವಾಗದೆ ಕೇವಲ ಒಂದು ವರ್ಗವನ್ನು ನಡೆಸಿ ಆ ಕಾರ್ಯವನ್ನು ಮುಗಿಸಬೇಕಾಯಿತು. ಇದೇ ತಿಂಗಳ ... ತಾರೀಕಿನ ದಿವಸ ಮೈಸೂರು ಸಂಸ್ಥಾನಕ್ಕೆ ಸೇರಿದ ತೀರ್ಥಹಳ್ಳಿಯಲ್ಲಿ ಶ್ರೀ ಕೆ ವಿ ವೆಂಕಟರಾಮಯ್ಯನವರ ನೇತೃತ್ವದ ಕೆಳಗೆ ಒಂದು ಶಿಕ್ಷಣ ಶಿಬಿರವು ಪ್ರಾರಂಭಿಸಲ್ಪಡುವದು. ಈ ಶಿಬಿರವನ್ನು ಪ್ರಾರಂಭಿಸಲು ಬೇಕಾಗುವ ಸಿದ್ಧತೆಯನ್ನು ಮಾಡುವದಕ್ಕಾಗಿ ಶ್ರೀ ... ರವರು ಇವರಿಬ್ಬರು ತೀರ್ಥಹಳ್ಳಿಗೆ ಈಗ ಒಂದು ವಾರದ ಹಿಂದೆಯೇ ಹೋಗಿ ನಿಂತಿರುವರು ... ತೀರ್ಥಹಳ್ಳಿಯ ಶಿಬಿರದ ... ಶಿಕ್ಷಕರಲ್ಲಿ ... ಈ ಶಿಬಿರವು (೪೦) ದಿವಸಗಳ ವರೆಗೆ ನಡೆಯುವದು. ಕರ್ನಾಟಕ ಪ್ರಾಂತ್ಯದ ಈ ವರ್ಷದ ಕೆಲಸವು ... ನಡೆಯುತ್ತದೆ.

ಇದಲ್ಲದೆ ಪರ ಪ್ರಾಂತ್ಯಗಳಲ್ಲಿಯೂ ಕೂಡ ಸೇವಾದಳದ ಕಾರ್ಯವು ನಡೆದಿದೆ. ಮಹಾರಾಷ್ಟ್ರ ಪ್ರಾಂತ್ಯಕ್ಕೆ ಸೇರಿದ ನಾಸಿಕ ಎಂಬ ಊರಲ್ಲಿ ಇದೇ ತಿಂಗಳು ... ತಾರೀಖಿನಿಂದ ಸೇವಾದಳದ ಶಿಕ್ಷಣ ಶಿಬಿರವು ಪ್ರಾರಂಭವಾಗುವದು

ಹಾರ ವಿದ್ಯಾಪೀಠದ ವಿದ್ಯಾರ್ಥಿಗಳೂ ಶಿಕ್ಷಕರೂ ಈ ಶಿಬಿರದಲ್ಲಿ ಶಿಕ್ಷಣ ಹೊಂದುವರು. ಸೇವಾದಲದ ಶಿಕ್ಷಕರಲ್ಲಿ ಒಬ್ಬರಾದ ಶ್ರೀ. ಏಕಾಂಬರಯ್ಯರವರು ೯ನೇ ತಾರೀಕಿನ ದಿವಸ ಹುಬ್ಬಳ್ಳಿಯಿಂದ ಪಾಟನಾಕ್ಕೆ ಆ ಶಿಬಿರದ ಕಾರ್ಯವನ್ನು ವಹಿಸಲು ಹೋದರು. ಸೇವಾದಲದ ಮತ್ತೊಬ್ಬ ಶಿಕ್ಷಕರಾದ ಶ್ರೀ. ಸದಾಶಿವ ಮೂಂದೇವ ಅಲೀಗಢ ಇವರು ಪಾಟನಾಕ್ಕೆ ಹೋಗಿ ಶಿಬಿರದ ಕಾರ್ಯದಲ್ಲಿ ಶ್ರೀ. ಅಯ್ಯರವರಿಗೆ ಸಹಾಯ ಮಾಡುವರು. ಡಾಕ್ಟರ್ ಹಾರ್ಡಿಕರರು ಬಂಗಾಲ ಪ್ರಾಂತ್ಯದಲ್ಲಿಯೂ ಇಂಥ ಶಿಕ್ಷಣ ಶಿಬಿರಗಳನ್ನು ಪ್ರಾರಂಭಿಸಿ ಕಲಕತ್ತೆಯಲ್ಲಿ ಕೂಡುವ ಮುಂದಿನ ಅಖಿಲಭಾರತ ರಾಷ್ಟ್ರೀಯ ಸಭೆಗೆ ಸ್ವಯಂ ಸೇವಕರನ್ನು ಸಿದ್ಧಗೊಳಿಸಲು ಪ್ರಯತ್ನಿಸುತ್ತಿರುವರು.

ತಾ. ೯—೪—೧೯೨೮ ನಾ. ವೆ. ಕರಗುದರಿ,
ಹುಬ್ಬಳ್ಳಿ. ಹಿಂದುಸ್ಥಾನೀ ಸೇವಾದಲ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಶ್ರೀ ಶಾರದಾಶ್ರಮ, ಪೊನ್ನಂಪೇಟೆ.

ಆಯ್ಯಾ,

ಏಪ್ರಿಲ್ ತಿಂಗಳು 28ನೇ ತಾರೀಕಿನಲ್ಲಿ ಶ್ರೀ ಶಾರದಾಶ್ರಮದಲ್ಲಿ ನಡೆಸಲ್ಪಡುವ ಉತ್ಸವಕ್ಕೆ ಆ ಆಶ್ರಮ ಮತ್ತು ಬೆಂಗಳೂರು, ಕೇರಳ ಪ್ರಾಂತ್ಯಗಳಲ್ಲಿರುವ ಶ್ರೀ ರಾಮಕೃಷ್ಣ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ನಿರ್ಮಲಾನಂದಜಿಯವರು ದಯಮಾಡಿಸುವರಾಗಿದ್ದಾರೆ.

ಅದೇ ದಿವಸ ರಾತ್ರಿ ಆಶ್ರಮದಲ್ಲಿ ಮೈಸೂರಿನ ಸುಪ್ರಸಿದ್ಧರಾದ ಹರಿಕಥಾ ವಿದ್ವಾಂಸ ಡಾ. ರಾಮಕೃಷ್ಣ ಶಾಸ್ತ್ರಿಯವರು "ಭಕ್ತ ಸೂರದಾಸ್" ಎಂಬ ಹರಿಕಥೆಯನ್ನು ಮಾಡುವರು. ಉತ್ಸವದ ಇತರ ಕ್ರಮಗಳನ್ನು ಒರುವ ವಾರದ ಪತ್ರಿಕೆಯಲ್ಲಿ ಪ್ರಕಟಿಸಲಾದೀತು.

ರಾಮಕೃಷ್ಣ ಮಠದ ಭಕ್ತಮಂಡಳಿಗೆ ಸೇರಿದ ಮೈಸೂರಿನ ಕೆಲವು ಕಾಲೇಜ್ ವಿದ್ಯಾರ್ಥಿಗಳೂ, ಉಪಾಧ್ಯಾಯರುಗಳೂ ಒಂದು ನಾಟಕ ಸಭೆಯನ್ನೇರ್ಪಡಿಸಿಕೊಂಡು ಹಾಸನ, ಶಿವಮೊಗ್ಗ, ಮಂಗಳೂರು ಪ್ರಾಂತ್ಯಗಳಲ್ಲಿ ಕೆಲವು ನಾಟಕಗಳನ್ನಾಡಿ, ತಾ. 21ನೇ ತಾರೀಕಿಗೆ ಮಡಿಕೇರಿಗೆ ಬರುವವರಾಗಿದ್ದಾರೆ. ತಾ. 22, 23ರಲ್ಲು ಮಡಿಕೇರಿಯಲ್ಲೂ, ತಾ 25. 26ರಲ್ಲಿ ವೀರರಾಜಪೇಟೆಯಲ್ಲೂ, 'ನಂದನರ್' ಚರಿತ್ರೆಯನ್ನೂ "ಪೋಲಿ ಕಿಟ್ಟಿ" "ಟೊಳ್ಳು ಗಟ್ಟಿ" ಮತ್ತು ಇತರ (Social dramas) ನಾಟಕಗಳನ್ನೂ ಅಭಿನಯಿಸುವರು. 28ನೇ ತಾರೀಕಿಗೆ ಉತ್ಸವಕ್ಕೆ ಪೊನ್ನಂಪೇಟೆಗೂ ಬರುವರು. ಕೊಡಗಿನಲ್ಲಿ ಆಡುವ ನಾಟಕಗಳೆಲ್ಲಾಗದಕ್ಕ ಉತ್ಪತ್ತಿಯನ್ನು ಖರ್ಚು ಕಳೆದು ಶ್ರೀ ಶಾರದಾಶ್ರಮಕ್ಕೆ ಕೊಡುವವರಾಗಿದ್ದಾರೆ. ಈ ಹಣದಿಂದ ಒಂದು ಮ್ಯಾಜಿಕ್ ಲ್ಯಾಂಟರನನ್ನು ಧರ್ಮ ಸಂಬಂಧವಾದ, ಆರೋಗ್ಯ, ವ್ಯವಸಾಯ ಮತ್ತು ಜನರಿಗೆ ಪ್ರಯೋಜನಕರವಾದ ಇತರ Slides ಗಳನ್ನು ಕೊಂಡು ಕೊಂಡು, ಆಶ್ರಮಕ್ಕೆ ಸೇರಿದವರಲ್ಲಿ ಕೆಲವರು ಗ್ರಾಮ ಗ್ರಾಮಗಳಲ್ಲಿಯೂ ವ್ರಗಳನ್ನು ತೋರಿಸಿ ಜನರಿಗೆ ಜ್ಞಾನ ಅಭಿವೃದ್ಧಿಯನ್ನು ಮಾಡಬೇಕೆಂದಿರುವರು. ಆದುದರಿಂದ ಕೊಡಗಿನ ಮಹನೀಯರುಗಳೆಲ್ಲಾ ಈ ನಾಟಕಮಂಡಳಿಯವರಿಗೆ ಪ್ರೋತ್ಸಾಹಿಸಬೇಕೆಂದು ಕೋರಿಕೆ. ಎಸ್. ಕನಕ್ಕನ್, ಯಂ. ಎ, ಬಿ. ಎಲ್. ಎಫ್. ಯಂ. ಯು. ಯವರು ಇದರ ಮೇನೇಜರು.

ನಾಟಕವನ್ನೇ ಕಸಬು ಆಗಿ ಇಟ್ಟುಕೊಂಡಿರುವವರಷ್ಟೇ ಚೆನ್ನಾಗಿ ಅಭಿನಯಿಸುವರೆಂದು ಮೈಸೂರಲ್ಲಾ ಸುಪ್ರಸಿದ್ಧ.

"ಭಕ್ತ"

ಸುಂಟಿಕೊಪ್ಪ(?) ಮಲ್ಲೇಶ್ವರ ಸಹಕಾರಿ ಸಂಘದ ವಾರ್ಷಿಕ ಮಹಾಸಭೆ.

ಅಯ್ಯಾ,

ನಮ್ಮ ಮಲ್ಲೇಶ್ವರ ಪರಸ್ಪರ ಸಹಾಯಕ ಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾರೀಕು 10—4—1928ನೇ ಮಂಗಳವಾರ ದಿನ ಕೊಡಗು ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರ್ ಸಾಹೇಬರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಸಂಘದ ಕಾರ್ಯಕಲಾಪಗಳು ಕೊನೆಗೊಂಡ ಮೇಲೆ ಸಾಯಂಕಾಲ 9 ಗಂಟೆಗೆ ರೆಡ್ ಕ್ರಾಸ್ ಸಂಘದ ಕಡೆಯಿಂದ ಮಾಯಲಾಂದ್ರಪ್ರದರ್ಶನವಿತ್ತು. ಮಾಯಲಾಂದ್ರದಲ್ಲಿ ಮಲೇರಿಯ ಜ್ವರದ ಕಾರಣ ಮತ್ತು ಅದರ ನಿವಾರಣೆಯ ಉಪಾಯಗಳು, [illegible] ಕ್ರಮ, ಮನೆಯನ್ನೂ ಮತ್ತು ಅದರ ಸುತ್ತುಮುತ್ತಲಿನ ಸ್ಥಳವನ್ನು [illegible] [illegible]

[illegible]

ಕಾಟಕೇರಿ ಗ್ರಾಮದ ಶಾಲೆ.

ಆಯ್ಯಾ,

ಈ ಗ್ರಾಮದಲ್ಲಿ ಹಲವು ವರ್ಷಗಳ ಹಿಂದೆ ಒಂದು ಹಂಗಾಮಿ ಶಾಲೆಯು ಇತ್ತಷ್ಟೆ. ಆದರೆ ಈ ಶಾಲೆಗೆ ತಕ್ಕ ತರಬೇತಾದ ಬೋಧಕನೊಬ್ಬನು ಇಲ್ಲದೇ ಇದ್ದುದರಿಂದ ಇದು ಹೀನ ಸ್ಥಿತಿಗೆ ಒಂದು ಒಂದೆರಡು ವರ್ಷಗಳಲ್ಲೇ ಇದರ ಹೆಸರು ಅಡಗಿ ಹೋಯಿತು. ಅಲ್ಲಿಂದೀಚೆ ಬಡ ಜನರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೋಸ್ಕರ ಮಡಿಕೇರಿ ಶಾಲೆಗೆ ಕಳುಹಿಸುತ್ತಿದ್ದರು. ಆದರೆ ಈ ಗ್ರಾಮವು ಮಡಿಕೇರಿಯಿಂದ ಐದಾರು ಮೈಲುಗಳು ದೂರದಲ್ಲಿರುವುದರಿಂದ ಬಡ ಜನರಿಗೆ ಅದಕ್ಕೂ ಅಡಚಣೆಯಾಗಿ ಏನೂ ಉಪಾಯ ತೋರದೆ ತಮ್ಮ ವ್ಯವಸಾಯ ವೃತ್ತಿಯನ್ನೇ ಕೈಕೊಳ್ಳುತ್ತಿದ್ದರು. ಹೀಗಾಗಿ ಈ ಗ್ರಾಮದಲ್ಲಿ ಬಡ ರೈತರೂ, ತಮ್ಮ ಮಕ್ಕಳೂ ವಿದ್ಯೆಯಲ್ಲಿ ಹಿಂದು ಬಿದ್ದಿರುವುದನ್ನು ನೋಡಿದರೆ ಈ ಗ್ರಾಮವು ಇನ್ನು ಮುಂದಕ್ಕೆ ಅಭಿವೃದ್ಧಿಗೆ ಬರಲಾರದೆಂಬುವುದನ್ನು ಸೂಚಿಸುತ್ತಿತ್ತು.

ಈ ಸೂಚನೆಯನ್ನು ಕಂಡು ಮನನೊಂದ ಮಿ. ಚಿಮ್ಮಂಡ ಬೋಪ್ಪಯ್ಯನವರು 1923ನೇ ಇಸವಿಯಲ್ಲಿ ತಮ್ಮ ಉದಾರತ್ವದಿಂದ ಈ ಗ್ರಾಮದಲ್ಲಿ ಒಂದು ಶಾಲೆಯನ್ನು ಏರ್ಪಡಿಸಿ ಕೆಲವು ತಿಂಗಳುಗಳ ವರೆಗೆ ಇದನ್ನು ಹಂಗಾಮಿಯಾಗಿಟ್ಟು ಈ ಗ್ರಾಮದಲ್ಲಿಯೂ ಬಾಲಕ, ಬಾಲಕಿಯರಿಗೆ ವಿದ್ಯಾಪ್ರದಾನ ಮಾಡಿಸುತ್ತಿರುವಾಗ್ಯೆ ಶಾಲಾ ಮಕ್ಕಳ ಸಂಖ್ಯೆಯು ಏರುತ್ತಾ ಬಂದದ್ದರಿಂದ ಈ ಮಕ್ಕಳಿಗೆಲ್ಲಾ ವಿದ್ಯಾ ಸಹಾಯ ಮಾಡುವುದಕ್ಕೆ ನನ್ನಿಂದ ಅಸಾಧ್ಯವೆಂದು ಯೋಚಿಸಿ ಘನ ಸರಕಾರಕ್ಕೆ ಬರಕೊಂಡರು. ಘನ ಸರಕಾರದವರು ಇದನ್ನು ಮಹಿಸಿಕೊಂಡು ಈ ಶಾಲೆಗೆ ಒಬ್ಬ ಬೋಧಕನನ್ನು ಕಳುಹಿಸಿ ಕೊಟ್ಟರು. ಇದನ್ನು ಕಂಡು ನಮ್ಮ ನೆರೆ ಗ್ರಾಮದವರೂ ಸಹ ತಮ್ಮ ಬಾಲಕರನ್ನು ಈ ಶಾಲೆಗೆ ಕಳುಹಿಸುತ್ತಿದ್ದುದರಿಂದ ಮೇಲ್ಕಂಡ ಶಾಲೆಯಲ್ಲಿ ಬಾಲಕ ಬಾಲಕಿಯರ ಸಂಖ್ಯೆಯು ಪುನಹ ಹೆಚ್ಚುತ್ತಾ ಬಂದದ್ದರಿಂದ ಮೊದಲು ಕಳುಹಿಸಿದ ಬೋಧಕನನ್ನು ವರ್ಗಾಯಿಸಿ ಬೇರೊಬ್ಬ ಬೋಧಕನನ್ನು ನೇಮಿಸಿ, ಕಟ್ಟಡದ ಕೆಲವು ಭಾಗಗಳಿಗೆ ಹಂಚು ಹಾಕಿಸಿ ಇದರ ಅಜುಬಾಜುಗಳಲ್ಲಿದ್ದ ಕಾಡುಗಳನ್ನೆಲ್ಲಾ ಕಡಿಸಿ ದಾರಿಯನ್ನು ಮಾಡಿಸಿದರು.

ಆದರೆ ಒಂದೆರಡು ವರ್ಷಗಳಲ್ಲೇ ಬಾಲಕ, ಬಾಲಕೀಯರ ಸಂಖ್ಯೆಯು ಐವತ್ತಕ್ಕೆ ಏರಿದ್ದರಿಂದ ಘನ ಸರಕಾರದವರು ಕಳುಹಿಸಿಕೊಟ್ಟ ಒಬ್ಬ ಬೋಧಕನು ಈ ಶಾಲೆಯಲ್ಲಿರುವ ಐದು ತರಗತಿಗಳಿಗೂ ಹೇಗೆ ತಾನೇ ವಿದ್ಯಾಪ್ರದಾನ ಮಾಡುವನು? ಆ ಬೋಧಕನ ಶ್ರಮವು ಎಷ್ಟರ ಮಟ್ಟಿಗೆ ಇರಬಹುದೆಂದು ವಾಚಕರಿಗೆ ವೇದ್ಯವಾಗ ಬಹುದು. ಆದುದರಿಂದ ಶಾಲೆಗೆ ಇಂಗ್ಲಿಷು ತರಬೇತು ಹೊಂದಿದ ಒಬ್ಬ ಸಹೋಪಾಧ್ಯಾಯನನ್ನು ಕಳುಹಿಸಿಕೊಡಬೇಕೆಂದು ನಾವು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮೊರೆಯಿಟ್ಟರೂ, ಘನ ಸರಕಾರಕ್ಕೆ ಬರಕೊಂಡರೂ ಪ್ರಯೋಜನವಿಲ್ಲದೆ ಹೋದುದರಿಂದ ಮೇಲ್ಕಂಡ ಶಾಲೆಯಲ್ಲಿ ಈಗ ಬಾಲಕ ಬಾಲಕೀಯರ ಸಂಖ್ಯೆಯು ಕಮ್ಮಿಯಾಗುತ್ತಾ ಬರುವುದನ್ನು ನೋಡಿದರೆ ಗ್ರಾಮದ ದುರಾದೃಷ್ಟವೇ ಸರಿ.

ಆದುದರಿಂದ ಇನ್ನಾದರೂ ನಮ್ಮ ಘನ ಸರಕಾರದವರೂ, ಡಿ. ಬೋ. ಮೆಂಬರುಗಳೂ ಕೊಂಚ ಶ್ರಮ ವಹಿಸಿ ಈ ಕಟ್ಟಡಕ್ಕೆ ಬೇಕಾಗುವ ಹಂಚುಗಳನ್ನು ಸರಬರಾಯಿ ಮಾಡಿಸಿ ಈ ಶಾಲೆಯಲ್ಲಿ ಪೈಮರಿ ವರೆಗೆ ಇಂಗ್ಲಿಷು ಪಾಠಕ್ರಮವನ್ನು ಜಾರಿಗೆ ತಂದು ಒಬ್ಬ ಸಹೋಪಾಧ್ಯಾಯನನ್ನು ಕಳುಹಿಸಿಕೊಟ್ಟು ಬಡ ಜನರ ಮಕ್ಕಳಿಗೆ ವಿದ್ಯಾದಾನ ಮಾಡುವವರಾಗಿ ನಂಬುವ.

"ಗ್ರಾಮಸ್ಥ."

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಮತ್ತು ಪೂವರ್ ಹೌಸಸ್ ಅಸೋಸಿಯೇಶನ್ ಲಿಮಿಟೆಡ್.

ಮಹನೀಯರೇ,

ಈ ಹೆಸರಿನ ಕಂಪೆನಿಯೊಂದು ಕೊಡಗಿನಲ್ಲಿ ಬಹು ಚಟುವಟಿಕೆಯಿಂದ ಕೆಲಸವಹಿಸುತ್ತದೆ. ಬಡ ಬಗ್ಗರೂ ಸಹ ಈ ಕಂಪೆನಿಯಿಂದ ತುಂಬಾ ಪ್ರಯೋಜನವಾಗುತ್ತದೆಯೆಂಬ ಆಶೆಯಿಂದ ಈ ಕಂಪೆನಿ ಏ ಶೇರ್‌ಗಳಿಗೆ ಹಣ ಹಾಕುತ್ತಿದ್ದಾರೆ. ನನಗೆ ಈ ಕೆಳಗಿನ ಕೆಲವು ವಿಷಯಗಳು ತಿಳಿಯಬೇಕಾಗಿದೆ. ಈ ಕಂಪೆನಿಯ ಅಧಿಕಾರಿಗಳಾಗಲಿ, ಈ ಕಂಪೆನಿಯ ವಿಷಯ ತಿಳಿದವರಾಗಲಿ ಯಾರಾದರೂ ಈ ಕೆಳಗಿನ ಸವಾಲುಗಳಿಗೆ ಜವಾಬು ಕೊಟ್ಟರೆ ನನಗೂ, ಈ ಕಂಪೆನಿಯಲ್ಲಿ ಶೇರ್ ತೆಗೆದುಕೊಂಡವರಿಗೂ ಮತ್ತು ತೆಗೆದುಕೊಳ್ಳಬೇಕೆಂತ ಇರುವವರಿಗೂ ಉಪಕಾರವಾದೀತು.

1. ಈ ತರದ ಕಂಪೆನಿಯು ಪ್ರಪಂಚದಲ್ಲಿ ಪ್ರಖ್ಯಾತವಾಗಿ ಹಿಂದುಸ್ಥಾನದಲ್ಲಿ ಈ ವರೆಗೆ ಸ್ಥಾಪಿತವಾಗಿದೆಯೋ? ಅಥವಾ ಈ ಕಂಪೆನಿಯೇ ಈ ತರದ ಕೆಲಸ ಕೈಕೊಳ್ಳುವದರ ಮೊದಲನೇ ಗಡಿಯಲ್ಲೇ?

2. ಈ ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಶನನ್ನು ಶೇರ್ ಹೋಲ್ಡರುಗಳಿಗೆ ಕೊಡಲಾಗಿದೆಯೋ ಕೇಳು[ವು]ದಾದರೆ ಚಾರ್ಜು ಕೊಡಬೇಕೋ?

3. ಆರ್ಟಿಕಲ್ಸ್ ಆಫ್ ಅಸೋಸಿಯೇಶನನ್ನು ನೋಡ[ದೆ] ಕೊಳ್ಳದೆ ಇದ್ದರೆ ಶೇರ್‌ದಾರರಿಗೆ ಕಂಪೆನಿಯ ಅಧಿಕಾರ ಹಕ್ಕು ಏನಿದೆಯೆಂಬದು ತಿಳಿಯುವದೇ ಇಲ್ಲವೆಂಬದು [ನಿಜ]ವಲ್ಲವೇ?

4. ಮಿ. ಯಂ. ಯಲ್. ನಾಗಣ್ಣನವರಿಗೂ, ಕಂಪೆನಿಗೂ ಆಗಿರುವ ಒಡಂಬಡಿಕೆಯನ್ನು ಶೇರ್‌ದಾರರಾಗಲಿ, ಬಾಂಡ್ ಹೋಲ್ಡರುಗಳಾಗಲಿ ಈ ವರೆಗೆ ನೋಡಿದ್ದಾರೆಯೇ? ೭೦ ವರ್ಷದವರೆಗೆ ಜಾರಿಯಲ್ಲಿರಬೇಕಾದ ಒಪ್ಪಂದವು ಶೇರ್‌ದಾರರ ಹಕ್ಕುಗಳನ್ನು ಎಷ್ಟರ ಮಟ್ಟಿಗೆ ನಾಶಪಡಿಸುವದಿಲ್ಲವೋ?

5. ಶೇರ್‌ದಾರರಿಗೆ ಈ ವರೆಗೆ ಸಿಕ್ಕಿರುವ ಪತ್ರಗಳಿಂದ ಚೀಟಿ ಎತ್ತಿಕೊಡುವ ಸಾಲವು ಒಡ್ಡಿಯ ಒಂದು ಭಾಗವೆಂತ ಕಾಣಬರುತ್ತದೆ. ಕೊಡಗಿನಲ್ಲಿ ಈಗಾಗಲೇ 500 [ರೂಪಾಯಿ]ನ ಒಂದು ಸಾಲ ಚೀಟಿ ಎತ್ತಿಕೊಡಲಾಯಿತಷ್ಟೆ. ಅಷ್ಟು [ಹಣ] ಬಡ್ಡಿಯಿಂದಲೇ ಉತ್ಪತ್ತಿಯಾಗಿದೆಯೋ?

6. ಒಂದು ಸಾವಿರ ಬಾಂಡುಗಳು ಹಂಚಲ್ಪಟ್ಟಿದ್ದ[ರೆ ಒಂ]ದು ವರ್ಷಕ್ಕೆ ಒಂದು ಸಾವಿರದ ಒಂದು ಸಾಲ ಮಾತ್ರ [ಕೊಡ]ಲಾಗುತ್ತದೆಯಲ್ಲವೇ?

7. ಸಂಘದ ಪ್ರಕಟಣಾ ಪತ್ರದಲ್ಲಿ ಈ ಬಾಂಡಿನ ವಿಷಯವು ಲಾಟರಿಯಲ್ಲವೆಂತ ಬರೆದಿದ್ದರೂ ಒಬ್ಬ ಬಾಂಡ್‌ದಾರದರೂ ಒಂದು ಸಾವಿರ ವರ್ಷದವರೆಗೆ ಚೀಟಿ ಹಣ ಸಿಕ್ಕ[ದೆ] ಕಾಯಬೇಕಾದರೆ ಇದು ಲಾಟರಿಯಲ್ಲದೆ ಮತ್ತೇನು? [ಸರ್ಕಾ]ರ್ ಕೆಲಸಕ್ಕೆ ಲಾಟರಿ ನಡಿಸಲು ಬಿಡುವದಿಲ್ಲವೆಂತ ಹೇಳ[ುವ] ನಮ್ಮ ಸರಕಾರವು ಈ ವಿಷಯವನ್ನು ವಿಚಾರಮಾಡಿ[ದೆ]ರೋ?

8. ಈ ತರದ ಲಾಟರಿಯಲ್ಲಿ ಸೇರಿದವರು ನೂರಾರು [ವ]ರ್ಷ ಕಾಯಬೇಕೆಂತ ಗೊತ್ತಾದರೆ ಹೊಸ ಹೊಸ ಬಾಂಡು[ದಾರರು] ಸೇರ[ಬ]ೇಕೆ? ಕಂಪೆನಿಗೆ ಹಣ ಕೊಡುವವರಿರಲಾರರೆಂತ ನನಗೆ ತೋರುತ್ತದೆ. ಸಾಲ ಪಡೆದವರು ಮೊಬಲಗು ಮರುಪಾವತಿ ಮಾಡದೆ ಇದ್ದರೆ ವಸೂಲು ಮಾಡಲು ತಕ್ಕ ಆಧಾರವೇನೂ ಇರುವದಿಲ್ಲ. ಕೊಡಲು ಅಸಕ್ತನೆಂತಾದರೆ ವಸೂಲು ಮಾಡದೆ ಬಿಡಬಹುದೆಂದು ರೂಲಿನಲ್ಲೇ ಇದೆ. ಆದರೆ ಸಾಲವಾಗಿ ಕೊಡುವ ಹಣ ಮೊಬಲಗು ವಸೂಲಾಗುವದಿಲ್ಲವೆಂತಲೇ ಇಟ್ಟುಕೊಳ್ಳಬಹುದು. ಆದ್ದರಿಂದ ಬಾಂಡ್‌ದಾರರಿಗೆ ದೊಡ್ಡ ಲಾಭ ಸಿಕ್ಕುತ್ತದೆಯೆಂಬದು ಸಂಶಯಾಸ್ಪದವಾಗಿದೆ. ಈ ನನ್ನ ಸಂಶಯವು [ಸ]ರಿಯೋ, ತಪ್ಪೋ?

9. ಸಂಘದ ನಾಲಿಯಾನ ಖರ್ಚು ಎಷ್ಟು?

10. ಸಂಘದ ಹೆಡ್ ಆಫೀಸಿನಲ್ಲಿ ಆಡಳಿತ ಕೆಟ್ಟು ಸಂಘವು ಮುಕ್ತಾಯವಾಗಬೇಕಾಗಿ ಬಂದರೆ ಆಗ ಸಂಘದಿಂದ ಸ[ಾಲ] ತಕ್ಕ ಸಾಲಗಳಿದ್ದರೆ ಕೊಡಗಿನಲ್ಲಿ ವಸೂಲಾದ ಹಣವೆಲ್ಲಾ ಕಂಪೆನಿಯ ಮಾಲೀಕರ ಕೈ ಸೇರಬೇಕಲ್ಲವೇ?

11. ಕೊಡಗಿನಲ್ಲಿ ಈಗ ಬಾಂಡ್‌ದಾರರೆಷ್ಟು, ಶೇರ್‌ದಾರರೆಷ್ಟು ಆಗಿದ್ದಾರೆ?

12. ಕೊಡಗಿನಲ್ಲಿ ಧರ್ಮದ ಕೆಲಸ ಪ್ರಾರಂಭಿಸುವದು ಯಾವಾಗ?

13. ತಾ. 31—1—28ರಲ್ಲಿ ಸಂಘದ ಎಲ್ಲಾ ಆಫೀಸುಗಳಲ್ಲಿಯೂ ಚೀಟಿ ಹಾಕಿ ಸಾಲ ಹಂಚಲಾಯಿತೇ? ಹಾಗೆ ಹಂಚಿದ್ದರೆ ಒಟ್ಟಿಗೆ ಹಂಚಿದ ಸಾಲವೆಷ್ಟು?

"ಅಕ್ಷರ."

ಬಿಟ್ಟಂಗಾಲ ಪಂಚಮರ ಮಾಟಿಂಗು.

ಮಹನೀಯರೇ,

ಮಾರ್ಚ್ ತಾರೀಕು 30ರ 'ಕೊಡಗು' ಪತ್ರಿಕೆಯಲ್ಲಿ 'ಕೇಳಿದವ" ರು ತಾರೀಕು 17—3—28 ರಲ್ಲು ಬಿಟ್ಟಂಗಾಲದಲ್ಲಿ ಜರಗಿದ ಪಂಚಮರ ಸಮ್ಮೇಳನದ ವಿಷಯ ಬರೆದ ಸಂಗತಿಯನ್ನು ನೋಡಿದೆನು. ಈ "ಕೇಳಿದವರು" ಶಾಂಭವಾನಂದ ಸ್ವಾಮಿಯವರು ಪಂಚಮರ ಸಹಪಂಕ್ತಿಯಲ್ಲಿ ಭೋಜನ ಮಾಡದ ವಿಷಯಕ್ಕೆ ಅವರನ್ನು ಬಹಳವಾಗಿ ಆಕ್ಷೇಪಿಸಿರುವರು. ಈ ಬಾತ್ಮಿದಾರರು ಸ್ವಾಮಿಯವರು ತಾವು ಮಾತಾಡಿದ ವಿಷಯಕ್ಕೆ ವಿರುದ್ಧವಾಗಿ ನಡೆದರು ಎಂಬದಾಗಿ ಹೇಳುತ್ತಾರೆ. ಆದರೆ ನಾನು ಸಮ್ಮೇಳನದಲ್ಲಿ ಇರಲೂ ಇಲ್ಲ, ಮತ್ತು ಅಲ್ಲಿ ಅವರು ಮಾಡಿದ ಭಾಷಣವನ್ನು ಇಷ್ಟರ ವರೆಗೆ ಯಾವ ಪತ್ರಿಕೆಯಲ್ಲಿಯೂ ನೋಡಿದಂತಿಲ್ಲ. ಆದುದರಿಂದ ಆ ವಿಷಯದಲ್ಲಿ ತತ್ಕಾಲಕ್ಕೆ ನಾನು ಏನೂ ಹೇಳಲಾರೆನು.

ಆದರೆ ಕೇಳಿದವರು' ಸಹಪಂಕ್ತಿಯಲ್ಲಿ ಸ್ವಾಮಿಯವರು ಭೋಜನ ಮಾಡದ ವಿಷಯ ಆಕ್ಷೇಪಿಸಿದ್ದಕ್ಕೆ ಒಂದೆರಡು ಮಾತು ಹೇಳಬೇಕಾಗಿದೆ, ಅದೇನೆಂದರೆ: —

ಹಿಂದುಳಿದ ಪಂಗಡದವರನ್ನು ಮೇಲಕ್ಕೆ ಎತ್ತುವದೆಂದರೆ ಸಹಪಂಕ್ತಿ ಭೋಜನ ಅಥವಾ ಜಾತ್ಯಾಂತರ ವಿವಾಹ (inter marriage) ಇಂದಲ್ಲ. ಅವರಿಗೆ ನ್ಯಾಯವಾದ ವಿದ್ಯೆಯನ್ನು ಕೊಟ್ಟು ಅವರಿಗೆ ಬುದ್ಧಿ ಚಾತುರ್ಯ, ನಡನಳಿಕೆ, ಉಡಿಗೆ ತೊಡಿಗೆ, ಶುಚಿತ್ವವನ್ನು ಕಲಿಸಿ ಆರೋಗ್ಯಶಾಸ್ತ್ರವನ್ನೂ ಮತ್ತು ಮನೆ, ಹಿತ್ಲುಗಳನ್ನು ಇಟ್ಟುಕೊಳ್ಳುವ ವಿಧಾನವನ್ನೂ (Sanitation) ಸಹ ಹೇಳಿಕೊಟ್ಟು ಕ್ರಮೇಣ ಅವರಿಗೆ ದೇಶಭಕ್ತಿ ಮತ್ತು ದೇವಭಕ್ತಿ ಮಗ್ಗಿಯನ್ನು ಸಹ ತಿಳಿಸಬೇಕು. ದೇವತಾಭಕ್ತಿಯು ಹೆಚ್ಚಿದಂತೆಯೇ ಕ್ರಮೇಣ ಪ್ರತಿಯೊಬ್ಬನಿಗೂ

...ೂ, ಮತ್ತೊಬ್ಬನಿಗೂ ಮತ್ತು ದೇವರು ಸೃಷ್ಟಿಸಿದ ಪ್ರತಿ ...ಂದು ಜೀವ ಜಂತುವಿಗೂ ಏನೊಂದು ಬಾಧೆಯಿಲ್ಲವೆಂದು ... ಮನಸ್ಸಿನ ಶಕ್ತಿ ಬೆಳೆಯುತ್ತದೆ. ಆ ಬುದ್ಧಿ ... ಸೇರಿಕೊಂಡಾಗ ಆತನು ತನಗೂ ಸಾಧನು ವಗೈರೆ ...ಗೂ ಭೇದವಿಲ್ಲವೆಂದು ವರ್ತಿಸಬೇಕಲ್ಲದೆ ಅದಕ್ಕೆ ಮೊ... ಮನಸ್ಸಿನಲ್ಲಿ ಒಂದು ಯೋಚನೆ ಇರ ವಾಗ ಕಾರ್ಯದ ...ಇನ್ನೊಂದು ಮಾಡುವುದು ಸರಿಯಲ್ಲ. ಇದರಿಂದ ಅವ... ತನ್ನ ಮನಸ್ಸಾಕ್ಷಿಗೆ ತಾನೇ ವಿರುದ್ಧವಾಗಿ ನಡೆದಂತೆ ಆ...ವುದು. ಅದೇ ಪ್ರಕಾರ ಸ್ವಾಮಿಯವರು ಸರ್ವ ಸಿದ್ಧಾಂತ ...ಸಹ ಅವರ ಮನಸ್ಸಿನ ಶಕ್ತಿಯು ಅತ್ಯಂತ ಮೇಲ್ಮಟ್ಟಿಗೆ ಬೆಳೆ...ದೆ ಇರುವುದಲ್ಲದೆ ಅವರು ಸಹಪಂಕ್ತಿ ಭೋಜನಕ್ಕೆ ಹಿಂಜರಿಯುವರೆಂತಲೂ ಹೇಳಬೇಕಾಗಿದೆ. ಇ...ಂದ ಅವರು ಬಾಧಿತರಾಗಿಯೂ ಅವರ ಆತ್ಮಸಾಕ್ಷಿಗೆ ಸ...ರಾಗಿ ನಡೆದಿರುವರು. ಇದರಿಂದ ಅವರ ಕೆಲಸದಲ್ಲಿ ಸ್ವ...ಲ್ಪ ಆಕ್ಷೇಪಕರವಾದ ವಿಷಯವಿಲ್ಲವೆಂತ ಸಾರ ಬೇಕು...ನು.

ಇದಲ್ಲದೆ 'ಕೇಳಿದವರು' ಸನ್ಯಾಸತ್ವವೆಂದರೆ ಏನೆಂಬುದ... ಸ್ವಲ್ಪವೂ ತಿಳಿದುಕೊಂಡಿರುವದಿಲ್ಲವೆಂಬುದು ಅವರ ಬಾ...ಂದಲೇ ವೇದ್ಯವಾಗುತ್ತೆ. ಅವರೂ ಸಹ ಅವರು ಸನ್ಯಾ...ವನ್ನು ವಿರೋಧಿಸಿ ಬರೆದಿವರ. ದೇಶದ ಜನಗಳಿಗೆ ಸನ್ಯಾ...ಸಿಗಳು ಮುಂದಾಳುಗಳಾಗಿರಬೇಕಾದರೆ ಅವರ ನಡೆನುಡಿಗಳು, ...ಆಚಾರಗಳೂ ಜನಸಮೂಹದ ಏಳಿಗೆಗೆ ಅನುಕೂಲವಾಗುವಂತೆ ವರ್ತಿಸುವದು ಅವರ ಒಂದನೆಯ ಕರ್ತವ್ಯವಾಗಿದೆ. ...ದಲ್ಲದೆ ಅವರು ಪಂಚಮರಲ್ಲಿ ಸಹಪಂಕ್ತಿ ಭೋಜನ ಮಾಡಿದ ...ಉದ್ದೇಶಕ್ಕೆ ಅವರು ಎಂದೂ ಮುಂದಾಳುಗಳನ್ನಿಸಲಿಲ್ಲ. ...ಾಗಿ ಪಂಚಮರನ್ನು ಮೇಲಕ್ಕೆ ತರಬೇಕೆಂಬರ ನ್ಯಾಯ ವೇ... ಹೇಳಿದುತ ರೀತಿಯಲ್ಲಿ ಅವರನ್ನು ಅಭಿವೃದ್ಧಿಗೆ ತಂದರೆ ತನ್ನ... ತಾನೇ ಅವರು ಸಹ ಪಂಕ್ತಿ ಭೋಜನಕ್ಕೆ ಅರ್ಹರಾ...ಗುವರು. ಈ ರೀತಿಯಲ್ಲಿ ಅವರನ್ನು ಮೇಲಕ್ಕೆ ತಂದು ಸ...ವೆಂದು ಹೇಳಬೇಕಲ್ಲದೆ ಅವರನ್ನು ಪೂರ್ವದ ಸ್ಥಿತಿಯ... ...ಲ್ಲಿಯೇ ಇಟ್ಟುಕೊಂಡು ನಾವೆಲ್ಲರೂ ಒಂದೇ ಎಂಬುದಾಗಿ ...ಸಹಪಂಕ್ತಿ ಭೋಜನ ಮಾಡುವುದರಿಂದ ತನ್ನನ್ನು ತಾನೇ ಕ...ಟ್ಟಿ ಮಾಡಿಕೊಂಡಂತೆ ಆಗುವದಲ್ಲದೆ ಅವರು ಮುಂದಕ್ಕೆ ...ಬಂದಂತೆ ಆಗುವದಿಲ್ಲ. ಈ ಸೂಕ್ಷ್ಮತ್ವವನ್ನು ಪಂಚಮರು ...ತಮ್ಮ ಬುದ್ಧಿಯ ಬೆಳವಣಿಗೆ (Mental development) ...ಯಿಂದ ತಿಳಿದು ಕೊಳ್ಳಬೇಕಲ್ಲದೆ ಒಂದೇ ದಿವ ನಾವೆಲ್ಲಾ ಒಂದೇ ಎಂಬುದಾಗಿ ಹೇಳಿದಾಗ ಅವರ ಮೂಢತ್ವದಿಂದ ಅವ...ರು ಆ ಶಬ್ದದ ನಿಜವಾದ ಅರ್ಥವನ್ನು ತಿಳಿದುಕೊಳ್ಳಲಾರದೆ ...ಒಂದು ಹೆಮ್ಮೆಯಿಂದ ಮನಸ್ಸಿಗೆ ಬಂದಂತೆ ನಡೆದು ತ...ಮಗೆ ತಾವೇ ತೊಂದರೆಯನ್ನು ತಂದುಕೊಳ್ಳುವರು.

ಸನ್ಯಾಸಿಯು ಆಲೋಚನೆ ಮಾಡುವಂತೆಯೇ ಮಾತಿನಲ್ಲಿ... ...ಯೂ ಮತ್ತು ಕೃತ್ಯದಲ್ಲಿಯೂ ಇರಬೇಕೆಂಬುದೆ ನಿಜ. ಅ...ದೇ ಪ್ರಕಾರ ಸ್ವಾಮಿಯವರು ಸನ್ಯಾಸಕ್ಕೆ ವಿರೋಧವಿಲ್ಲ...ದೆ ನಡೆದಿರುವರೆಂದು ಮೇಲೆಯೇ ಹೇಳಲ್ಪಟ್ಟಿದೆ. ಅದರೆ ಸ...ನ್ಯಾಸಿ ಎನಿಸಿಕೊಂಡ ಮಾತ್ರಕ್ಕೆ ಎಲ್ಲಾ ಕೆಲಸವನ್ನೂ ಮಾಡ... ಬೇಕೆಂಬ ಬಹು ತಪ್ಪು ಅಭಿಪ್ರಾಯವನ್ನು 'ಕೇಳಿದವರು' ಮಾಡಿಕೊಂಡಂತೆ ಕಾಣುತ್ತದೆ. ಆದುದರಿಂದ ಅವರು ತಮ್ಮ...ನ್ನು ತಾನೇ ಇನ್ನಾದರೂ ತಿದ್ದಿಕೊಳ್ಳಬಹುದು. ಹುಲಿಯ...ಯ ಮೇಲೆ ಹುಲಿಯ ಚರ್ಮವನ್ನು ಹಾಕಿದರೆ ಅದು ಹುಲಿ...ಯಾಗ ವುದಿಲ್ಲವಂತೆ, ಆದರೆ ಹುಲಿಯು ತನ್ನ ಜೀವಿತವರ...ನ್ನು ಬಿಟ್ಟು ಯಾವಾಗಲೂ ಕಾಡಿನೊಳಗೆ ಬೆಟ್ಟದಲ್ಲಿಯೇ ಇದ್ದರೆ ಅದೂ ಸಹ ನರಿ, ತೋಳ, ಕಾಡಾನೆ ವಗೈರೆಗಳಲ್ಲಿ ಕು...ರಿಯಂತೆ ಆಗುವದೆಂಬುದನ್ನು 'ಕೇಳಿದವರು' ತಿಳಿದಿರುವುದು...

ಲ್ಲವಾಗಿ ಕಾಣುತ್ತದೆ. ಪುಸ್ತಕವನ್ನು ಓದಿದ ಮಾತ್ರಕ್ಕೆ ಜ್ಞಾನಿಯೆನಿಸುವುದಿಲ್ಲವಾಗಿ, ಆದರೆ ಸಂಚಮರಲ್ಲಿ ಸಹಪಂಕ್ತಿ ಭೋಜನ ಮಾಡಿದ ಮಾತ್ರಕ್ಕೆ ಜ್ಞಾನಿಯೆನಿಸುವನೇ ? ಆ ...ದುದರಿಂದ 'ಕೇಳಿದವರಿಗೆ' ಸನ್ಯಾಸದ ವಿಷಯ ಏನೊಂದೂ ಅಭಿಪ್ರಾಯವಿಲ್ಲವೆಂತಲೂ, ಶಾಂತಾನಂದ ಸ್ವಾಮಿಯವರ ... ಕೃತ್ಯವು ನ್ಯಾಯವೆಂತಲೂ ನಾನು ಹಿಂತೆ ಒತ್ತಿ ಹೇಳಬೇಕಾಗಿದೆ. ಈ ನನ್ನ ಹೇಳಿಕೆಯನ್ನು ಸ್ಥಿರಪಡಿಸಲು ನಾನು ಬಂದೆರಡು ಉದಾಹರಣೆಗಳನ್ನು ಇಲ್ಲಿ ಬರೆಯ...ಬೇಕಾಗಿದೆ ಅದೇನೆಂದರೆ —

ಒಂದು ಸಣ್ಣ ಗಿಡವು ಬೆಳೆಯುತ್ತಿರುವಾಗ ಅದಕ್ಕೆ ಹೊರಗಿನ ಬಾತುಗಳಿಂದ ಕೆಡಕಾಗದಂತೆ ಬೇಲಿಯು ಅವಶ್ಯವಿದೆ. ಅದೇ ಗಿಡವು ಬೆಳೆದು ಮರವಾದ ಮೇಲೆ ಅದಕ್ಕೆ ಇತರ ಜಂತುಗಳನ್ನು ಕಟ್ಟಿಹಾಕಿದರೂ ಆ ಜಂತುಗಳಿಂದ ಆ ಮರಕ್ಕೆ ತೊಂದರೆಯಾಗುವುದಿಲ್ಲ. ಅದೇ ರೀತಿ ಸನ್ಯಾಸವನ್ನು ಅವಲಂಬಿಸಿದ ಮೇಲೆ ಅವರ ಜ್ಞಾನವು ಬೆಳೆಯುವ ವರೆಗೆ ಎಲ್ಲಾ ತರದ ...ಕಟ್ಟುಪಾಡುಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ ಅದಿಲ್ಲದಿದ್ದರೆ ಅವರು ಮುಂದರಿಸುವ ಬದಲು ಹಿಂದರಿಸಬೇಕಾ...

...ದೀತು. ಆದುದರಿಂದಲೇ ಶ್ರೀ ರಾಮಕೃಷ್ಣ ಪರಮಹಂಸರು ಮೊದಲು ಮೊದಲು ಅಪವಿತ್ರವಾದ ವಸ್ತುಗಳನ್ನು ಮುಟ್ಟುತ್ತಿರಲಿಲ್ಲ. ಆದರೆ ಅವರು ಪರಮ ಹಂಸರಾದನಂತರ ಪಂಚಮರ ... ಸಹ ತಮ್ಮ ಕೂಡಲಿನಿಂದ ಗುಡಿಸಿ...ದರು.

ಅದೇ ರೀತಿ ಶಂಕರ ಭಗವತ್ಪಾದರು ತಮ್ಮ ಶಿಷ್ಯರಿಗೆ ಬೋಧಿಸಿರುವದೇನೆಂದರೆ—

ಅನತಿಕಾರ ಪೂರುಷನಿ, ಸರ್ ಸಂಸರ್ಗ, ಅವದೂತರೂ ... ಕೆಲಸಗಳನ್ನು ... ಒಂದೇ ದಿನ ಮಾಡ ಕೂಡದು. ಆದರೆ ತಾವು ಆ ಸ್ಥಿತಿಗೆ ಬಂದಿನ ಮೇಲೆ ಯಾವ ಕೆಲಸವನ್ನು ಬೇಕಾದರೂ ಮಾಡಬಹುದು.

ಈ ಪ್ರಕಾರ ಅನುಸರಿಸಿದ ಶಾಂತಾನಂದ ಸ್ವಾಮಿಯವರ ಕೃತ್ಯವು ಜನ ಸಮೂಹಕ್ಕೆ ಅವರು ಪಂಚಮರಲ್ಲಿ ಸಹ ಪಂಕ್ತಿ ಭೋಜನ ಮಾಡಿದ್ದರ ಆಗುತ್ತಿದ್ದುದಕ್ಕಿಂತ ಹೆಚ್ಚಿನ ಮತ್ತು ಅತ್ಯಂತ ಪ್ರಯೋಜನಕರವಾದ ಬುದ್ಧಿವಾದಕವನ್ನು ಕೊಡುತ್ತದೆ.

'ತಿಳಿದವ'

Arms, Ammunition and Shooting Requisites !!!



1928 Illustrated Catalogue Just Issued Free on Application !

D. B B L. Rifles	Rs.	120	to	Rs	2750.
S B. B. L.	"	35	to	"	950.
D. B B L Guns	"	50	to	"	1350.
S B. B L	"	35	to	"	275.
D B M L	"	45	to	"	135.
S B M. L	"	30	to	"	80
B L Revolvers	"	35	to	"	350.
Automatic Pistols	"	30	to	"	150.

Electric Search Light Lamp For Shooting, Camping, Fishing and All such other Night Sports and work Rs 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in india,
210 Abdul Rehman Street, BOMBAY

24—2



ಡಿ. ಬಿ. ಬಿ. ಎಲ್. ಕೋವಿಗಳು ರೂ. 75 ರಿಂದ ರೂ. 150/-
ಯಸ್. ಬಿ. ಬಿ. ಎಲ್. ಕೋವಿಗಳು ರೂ. 35 ರಿಂದ ರೂ. 250/-
ಯೆಸ್. ಬಿ. ಯಮ್. ಎಲ್. ಕೋವಿಗಳು ರೂ. 35 ರಿಂದ 65/-
ರಿವಾಲ್ವರುಗಳು. ರೂ. 40 ರಿಂದ ರೂ. 125/- ವರೆಗೆ.

ಡಬ್ಬಲ್ ಮತ್ತು ಸಿಂಗಲ್ ಕೋಟೆ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಬಗೆಗಳು (ಶ್ರೀಮಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿವಿಧ ಕ್ರಯದಲ್ಲಿ ಸಿದ್ಧಗೊಳಿಸಿ ಕೊಡಲಾಗುವುದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನುಜಂ ಚೆಟ್ಟಿ
ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.
24—18 12. ಬ್ರಾಡ್ವೆ, ಮದ್ರಾಸ್
(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ)

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪ್ರಾವಿಡೆಂಟ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್.
ಚೀಫ್ ಏಜನ್ಸಿ ಅಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಕೇರಿ ಮತ್ತು ಬಾಂಡು ಕೋಲ್ಪುಗಳ ಹಣ ಮತ್ತು ಆದರ ಬಗ್ಗೆ ... ವಗೈರೆ ಎಲ್ಲವೂ ಈ ದೇಶಕ್ಕಾಗಿ ಕೂಡಿಸಬೇಕೆಂಬ ರಾವ್ ಜನರ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಕೇರಿದಾರರ ಜನರಲ್ ಮೀಟಿಂಗಿನಲ್ಲಿ ಸರ್ವಸಮ್ಮತದಿಂದ ನಿರ್ಣಯಿಸಲಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಕೇರಿ ಮತ್ತು ಬಾಂಡು ಕೋಲ್ಪುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿನ ಮೇರೆ ನಮ್ಮ ಸಂಘದ ಕೊಡಗಿನ ಪ್ರೋವಿನ್ಸಿಯಲ್ ಬೋರ್ಡಿನ ಪ್ರಾರಂಭದ ತಾ. 31—3—1928ರಲ್ಲು 1 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ನಂಬಿಕೆ ... ಗಳಾಗಿ ಮಡಿಕೇರಿ ... ಕಡೆಗಳಾಗು ಸ್ಥಾನದ ... ಮುಂದಣ್ಣನವರ ... ಏನು ನಾವು ... (500—0—0) ... ಈ ವರ್ಷದ ಪ್ರಥಮ ... ಇದು ಮೇಲಿನ ಸಂಘದ ಪ್ರಥಮ ವರ್ಷದ ಕಾರ್ಯ... ವನ್ನು ಹೊಂದಲು ತೀರ್ಮಾನವಾಯಿತು. ... ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲವಿಲ್ಲ. ... ಅವನ್ನು ಕೊಡುವದಕ್ಕೆ ಅದಷ್ಟು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ.

ಕೊಡಗು ದೇಶದ ಎಲ್ಲಾ ಮಹಾಶಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಕೋರುತ್ತೇನೆ.

ಅನಾಥರಾದಂಥ ಅಂಗಹೀನರುಗಳಿಗೆ ಬರುವ ... ತಿಂಗಳಿಂದ ಈ ಸಂಘದ ... ಅನ್ನದಾನ ... ದಿಗನು ಕೊಡಲ್ಪಡುತ್ತೆ.

ಬಿ. ರ. ಕುಪ್ಪುಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
ಮಡಿಕೇರಿ.

52—9

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಇನ್ಸ್ಟಿಟ್ಯೂಟ್ ಆಸ್ತಿ ಪ್ರಕಾರ ನಿರ್ಧರಿಸಲಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮೆಯಾದ ಠೇವಣಾತಿ	—	1,02,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ಆಡಿಟ್ಟರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗಟ್ಟೀರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು. "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಿ ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಳ್ಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಬಿ. ಮುದ್ದಪ್ಪಯ್ಯನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART,
Mahomedally-Noorbhoy.

321 Abdul Rehman Street, near Crawford Market, BOMBAY. 3
Telegraphic Address:-"SHOOTER" Bombay.
(52—31) Please write for our Catalogue 1928—1929.

ಕಟುಕಷಾಯ ಮಾಲಿಕ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣಕೊಡುತ್ತದೆ ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹಸಿಹಸಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳ ಕಟ್ಟುವ ರೋಗ ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3 6ಕ್ಕೆ ರೂ 1—[illegible] 3—8—0 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—3—0,

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ತಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.
.52—27 ೯. ಮಂಗಳೂರು.

Kapurchand & co,

The OLDEST and MOST RELIABLE House in Bangalore.
[Cawnpore Woollen Mills Agency.]
Dealers in high class Cotton, Woollen and Silk Piece-Goods, Caps, Hosiery, Stationary, etc., etc,. Chickapet, BANGALORE CITY.

ಅಪೂರ್ವ ಸನ್ನು! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ. 52—45

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ.

ಹೊಸ ವಿಮೆಗಳು	1924	ರೂ.	2,37,34,000	ಜಾಸ್ತಿ ರೂ. 59,08,000.
	1925	ರೂ.	2,96,42,000	
	1926	ರೂ.	3,91,39,000	ಜಾಸ್ತಿ ರೂ. 94,97,000

ಮೂಲಧನವು ಜಾಸ್ತಿ ಒಂದ 42 ಲಕ್ಷ ರೂಪಾಯಿಗಳಿಂದ ರೂ. 7,38,80,000ಗೆ ಹೆಚ್ಚಿರುತ್ತದೆ.
ಪ್ರಿಮಿಯಂ ವರಮಾನವು ವರ್ಷಕ್ಕೆ ರೂ. 1,05,30,000ಗೆ ಏರಿರುತ್ತದೆ.

'ಓರಿಯಂಟಲ್'ನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ."

ಪಾಲಿಸಿದಾರರಾಗತಕ್ಕವರು ಬೊಂಬಾಯಿನ ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮ್ಯಾನೇಜರು ಹೆಚ್. ಎಮ್ಸ್ ಜೋನ್ಸ್, ಎಫ್. ಎಫ್. ಎ, ಎ. ಐ. ಎ. ರವರಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಸಾವಕಾಶಮಾಡದೆ ಬರೆಯಬೇಕಾಗಿ ಕೋರಿದೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52—52 ಎಲ್. ಆರ್. ಕೃಷ್ಣಸ್ವಾಮಯ್ಯರ್, ಬ್ರಾಂಚ್ ಸೆಕ್ರೆಟರಿ.

EMPIRE OF INDIA
LIFE ASSURANCE COMPANY, LIMITED.

ESTED. 1897.

VALUATION RESULTS

FOR THE FIVE YEARS ENDING 28TH FEBRUARY 1927.

SURPLUS—RS. 37,66,689.

A REVERSIONARY BONUS DISTRIBUTION OF

RS 15 PER ANNUM PER Rs. 1,000 ASSURED ON WHOLE LIFE ASSURANCES AND **RS. 12** PER ANNUM PER Rs 1,000 ASSURED ON ENDOWMENT ASSURANCES

HAS BEEN DECLARED.

HEAD OFFICE: Empire of India Life Building, BOMBAY. 24—14. BRANCH OFFICE. Commercial Street, BANGALORE.

Printed & published by P. I. Belliappa, at 'Kodagu' Press, Mercara for "Kodagu" Ltd,

“KODAGU” OFFICE, MERCARA.
If not delivered please return to

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ [illegible] ಪ್ರಕಟಿಸಲ್ಪಡುವದು.

[illegible] ಮಡಿಕೇರಿ, [illegible] ಏಪ್ರಿಲ್ ತಾರೀಕು [illegible] ಶುಕ್ರವಾರ [ಸಂಚಿಕೆ ೪೫

“THE SUNSHINE OF THE NIGHT.”

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	32/-

The Coleman Quicklite is Brilliant, clean, simple and safe.

52—12 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS

Catalogue Free
to Bonafide Enquirers





Manufacture of
HIGH CLASS
GEMSET JEWELS.
a speciality.

The special features
of my productions are —
1 Best QUALITY.
2 Latest novel designs
3 Prompt execution
4 Neat & artistic finish
5. Most moderate prices

GOLD
or
SILVERWARE
of all descriptions
neatly executed

52—52



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—8



[illegible]

ಸಾರಸಾ ಪರಿಲಾ.

[illegible]

12—3

ಕೊಡಗು.

ಸನ್ ೧೯೨೮ನೇ ಇಸವಿ ಏಪ್ರಿಲ್
ತಾ. ೨೦ನೇ ಶುಕ್ರವಾರ.

ದನಗಳ ಕಮಿಟಿ ವರದಿ.

೧.

ಕೊಡಗಿನಲ್ಲಿ ದನಗಳು ಕ್ಷೀಣವಾಗುತ್ತಾ ಬರಲು ಕಾರಣಗಳನ್ನು ಕಂಡುಹಿಡಿದು ದನಗಳ ಜಾತಿಯನ್ನು ಉತ್ತಮ ತರದ್ದಕ್ಕೆ ಬದಲಾಯಿಸಲಿಕ್ಕೂ, ಮೇವಿನ ಅನುಕೂಲತೆಗಳನ್ನು ಹೆಚ್ಚಿಸಲಿಕ್ಕೂ, ಹೊರಗಿನಿಂದ ದೇಶದಲ್ಲಿ ವ್ಯಾಪಾರಕ್ಕೆ ಬರುವ ದನಗಳಿಂದ ರೋಗಗಳು ಬಾರದಂತೆಯೂ ಕೊಡಗಿನಲ್ಲಿ ದನಗಳ ಬಾಯಿಲೆಯು ಹೆಚ್ಚದಂತೆಯೂ ನೋಡಿಕೊಳ್ಳಲಿಕ್ಕೂ ಮತ್ತು ಕೊಡಗಿನಲ್ಲಿ ದನಗಳು ಎಲ್ಲಾ ತರದಿಂದಲೂ ಅಭಿವೃದ್ಧಿಹೊಂದಲಿಕ್ಕೂ ಸಲಹೆ ಕೊಡಲಿಕ್ಕಾಗಿ ನೇಮಕವಾಗಿದ್ದ ಕಮಿಟಿಯ ವರದಿಯು ಪ್ರಕಟವಾಗಿದೆ. ಇಂಥಾ ವರದಿಗಳನ್ನು ಬೇರೆ ದೇಶಗಳಲ್ಲಿ ವೃತ್ತಾಂತ ಪತ್ರಿಕೆಗಳಿಗೆ ಸರಕಾರವು ಕಳುಹಿಸಿ ಕೊಡುವ ಪದ್ಧತಿ ಇದೆ. ಆದರೆ ಇಲ್ಲಿ ಇನ್ನೂ ಆ ಪದ್ಧತಿಯನ್ನನುಸರಿಸದೆ ಇರುವುದು ದುರ್ದೈವವಾಗಿದೆ. ಕೌನ್ಸಿಲ್ ಮೆಂಬರುಗಳಿಗೆ ಬಂದ ಒಂದು ಪ್ರತಿಯನ್ನು ನೋಡಿ ನಾವು ಇಲ್ಲಿ ವಿಮರ್ಶಿಸಬೇಕಾಗಿದೆ.

ವರದಿಯು ಚಿಕ್ಕದಾದರೂ ಅನೇಕ ಒಳ್ಳೇ ಸಲಹೆಗಳು ಉಕ್ತವಾಗಿದೆ. 23 ಮುಖ್ಯ ಸಲಹೆಗಳನ್ನು ಕೊಟ್ಟಿದೆ. ದನಗಳ ಜಾತಿಯನ್ನು ಅಭಿವೃದ್ಧಿಗೊಳಿಸಲಿಕ್ಕೆ ಮಡಿಕೇರಿ ಮತ್ತು ವೀರರಾಜಪೇಟೆ ಸಮೀಪದಲ್ಲಿ ಎರಡು ಕರಹಟ್ಟಿಗಳನ್ನು ಸ್ಥಾಪಿಸಬೇಕೆಂಬುದೇ ಮುಖ್ಯ ಸಲಹೆಯಾಗಿದೆ. ಈ ಒಂದೊಂದು ಕರಹಟ್ಟಿಯಲ್ಲಿಯ 15 ನಾಡು ದನಗಳನ್ನೂ, ಇವುಗಳ ಉಪಯೋಗಕ್ಕೆ ಒಂದು ಹಳ್ಳಿಕಾರು ಹೋರಿಯನ್ನು, 5 ಸಿಂಧಿ ದನಗಳನ್ನೂ, ಒಂದು ಸಿಂಧಿ ಹೋರಿಯನ್ನೂ ಇಡಬೇಕು. ಇಲ್ಲಿ ಹುಟ್ಟಿ ಬೆಳೆಯುವ ದನಗಳನ್ನು ರೈತರಿಗೆ ಸುಲಭ ಕರಾರುಗಳಿಂದ ಕೊಡಬೇಕು. ಈ ದೇಶದ ಥಳಿ ಮಳೆಗೆ ಅಮೃತಮಹಾಲ್, ಸಿಲ್ಲಾರು ಮುಂತಾದ ಜಾತಿಯ ದನಗಳು ತಡೆಯಲಾರದವಾದ್ದರಿಂದಲೂ, ನಾಡು ದನವೇ ಈ ದೇಶಕ್ಕೆ ಯುಕ್ತವಾದದ್ದೆಂತಲೂ, ಆದರೆ ಅವುಗಳು ಹಾಲಿರುವ ಜಾತಿಯಲ್ಲದ್ದರಿಂದಲೂ, ಹಳ್ಳಿಕಾರು ಜಾತಿಗೆ ಕೆಲವು ಮಟ್ಟಿಗೆ ಹಾಲಿರುವದರಿಂದಲೂ, ಇವೆರಡು ಜಾತಿಗಳ ಬೆರಕೆಯಿಂದ ಉತ್ಪನ್ನವಾಗುವ ಜಾತಿಯೇ ಈ ದೇಶಕ್ಕೆ ಸರಿಯಾದ ಜಾತಿಯಾಗಬಹುದೆಂತ ಸಲಹೆ ಕೊಟ್ಟಿರುತ್ತಾರೆ. ನಮಗೆ ದನಗಳನ್ನು ಸಾಕುವ ಶಾಸ್ತ್ರ ತಿಳಿಯುವದಿಲ್ಲವಾದ್ದರಿಂದ ಇದು ಜಯಪ್ರದವಾಗುತ್ತದೋ ಇಲ್ಲವೋ ಎಂತ ಹೇಳಲಾರೆವು. ವರದಿಯಲ್ಲಿ ಹೇಳಿರುವ ಮೇರೆ ನ್ಯಾಯವಾದ ಬೀಜದ ಹೋರಿಗಳಿಲ್ಲದೆ ಕೇವಲ ರಕ್ತಸಂಬಂಧದ ದನ ಮತ್ತು ಹೋರಿಗಳ ಬೆರಕೆಯಿಂದಲೇ ಕರುಗಳು ಇಳಿಯುತ್ತಾ ಬರುವದೇ ದನಗಳ ಜಾತಿಯು ಕ್ಷೀಣವಾಗಲು ಮುಖ್ಯ ಕಾರಣವಾಗಿದೆ. ಆದ್ದರಿಂದ ರೈತರಿಗೆ ಮಾದರಿಯಾಗಿರುವಂತೆ ಸರಕಾರದ ಖರ್ಚಿನಿಂದ ಕರಹಟ್ಟಿಗಳನ್ನು ಸುಧಾರಿಸಿದ ರೀತಿಯಲ್ಲಿ ಇಡುವದನ್ನು ಕಲಿಸುವರ ತಾಣೆಯಲ್ಲಿ ಕರಹಟ್ಟಿಗಳನ್ನು ಇಡುವದು ಅತ್ಯಾವಶ್ಯವಾಗಿದೆ.

ಜನರಿಗೆ ದನಗಳನ್ನು ಸಾಕುವದರಲ್ಲಿ ಅಭಿರುಚಿಯೇ ತಪ್ಪಿ ಹೋಗಿದೆಯೆಂತಲೂ, ದನಗಳನ್ನು ಕೂಡುವ ಕೊಟ್ಟಿಗೆಯನ್ನು ಇರಿಸಬೇಕಾದಂತೆ ಇರಿಸುವದಿಲ್ಲವೆಂತಲೂ ಮುಂತಾಗಿ ಕಮಿಟಿಯ ಮುಂದೆ ಇಡಲ್ಪಟ್ಟ ಅಭಿಪ್ರಾಯವು ಬಹಳ ಮಟ್ಟಿಗೆ ನಿಜವೆಂತ ನಾವೂ ಒಪ್ಪಬೇಕಾಗಿದೆ. ಆದ್ದರಿಂದ ಜನರ ಮನಸ್ಸು ಈ ವಿಷಯಗಳ ಮೇಲೆ ತಿರುಗಬೇಕಾದರೆ ವರದಿಯಲ್ಲಿ ಹೇಳಿರುವ ಮೇರೆ ಪತ್ರಿಕೆಗಳಿಂದಲೂ ಬೋಧನೆಯಿಂದಲೂ ಸಾಧ್ಯವಿಲ್ಲ. ಮಾದರಿ ಕರಹಟ್ಟಿಗಳನ್ನು ಇಡುವದರಿಂದ ಜನರಿಗೆ ಮೇಲ್ಪಂಕ್ತಿಯಾಗುತ್ತದೆ. ಕೊಟ್ಟಿಗೆ ಹಟ್ಟಿಯನ್ನು ಇಡಬೇಕಾದ ರೀತಿ ತಿಳಿಯುವದೂ ಅಲ್ಲದೆ ಕ್ಷೀಣ ದೇಶಕ್ಕೆ ಬೇಕಾದ ಹೋರಿಗಳೂ ಇಲ್ಲಿಯೇ ದೊರೆಯುತ್ತವೆ. ಮತ್ತು ಈ ಕರಹಟ್ಟಿಗಳನ್ನು ನೋಡಿ ಅನುಕೂಲವಿರುವವರಿಗೆ ಒಳ್ಳೇ ಜಾತಿಯ ದನಗಳನ್ನೂ, ಹೋರಿಗಳನ್ನೂ ಸ್ವಂತವಾಗಿ ಸಾಕಲು ಉಮೇದು ಹುಟ್ಟುತ್ತದೆ.

ಹೆಗ್ಗಳ ಗ್ರಾಮದಲ್ಲಿ ಒಂದು ಡಜನ್ ಎಮ್ಮೆಗಳನ್ನೂ, ಒಂದು ಬೀಜದ ಕೋಣವನ್ನೂ ಇಡಲು ಸಲಹೆ ಕೊಟ್ಟಿದ್ದಾರೆ. ಹಾಲು ಕೊಡಲಿಕ್ಕೂ, ಗದ್ದೆ ವ್ಯವಸಾಯಕ್ಕೂ ಕೊಡಗಿನಲ್ಲಿ ಎಮ್ಮೆ ದನಗಳು ಉಪಯೋಗವಾಗುತ್ತವೆ ಎಂಬದರಲ್ಲಿ ಸಂಶಯವಿಲ್ಲ.

ಮೇವಿಗೆ ಹುಲ್ಲುಗಾವಲುಗಳು ಕಡಿಮೆಯಾಗಿವೆಯೆಂಬದು ನಿಜವಾದ ಮಾತು. ಮೇವಿಗೆ ಇದ್ದ ಜಾಗಗಳನ್ನು ಕಾಫಿ ವ್ಯವಸಾಯಕ್ಕೆ ಮನಸೋ ಇಚ್ಛೆ ಉಪಯೋಗಿಸಿ ಈಚೆಗೆ ಪಾಳು ಬಿಟ್ಟದ್ದರಿಂದ ಲಂಟಾನ ತುಂಬಿ ಹುಲ್ಲು ಬೆಳೆಯದಂತೆಯಾಯಿತು. ದನಗಳನ್ನು ನಾಶಮಾಡುವ ಜಂತುಗಳಿಗೂ ವಾಸಸ್ಥಾನವೂ ಆಯಿತು. ಲಂಟಾನ ತೆಗೆಯಲು ತನ್ನ ಪೂರ್ತಿ ಮನಸ್ಸನ್ನು ಕೊಟ್ಟಿದ್ದ ಕಮಿಷನರ್ ಮಿ. ಯಲ್. ಟಿ ಹಬ್ಬರ್ಡರವರಿಗೆ ಅಭಿನಂದನೆಗಳನ್ನು ಹೇಳಿ ಈಚೆಗೆ ಬಂದ ಕಮಿಶನರುಗಳೂ ಅಭಿರುಚಿ ತೆಗೆದುಕೊಳ್ಳುತ್ತಿದ್ದಾರೆಂತ ವರದಿಯಲ್ಲಿ ಬರೆದಿದೆ. ಆದರೆ ಈಚೆಗೆ ಬಂದ ಕಮಿಶನರುಗಳ ಅಭಿರುಚಿಯು ಬಹಳ ಕಡಿಮೆಯಾಗಿದೆಯೆನ್ನಬೇಕಾಗಿದೆ. ಲಂಟಾನ ತೆಗೆದವರಿಗೆ ರುಮಾಲು, ಕತ್ತಿ ಮುಂತಾದ್ದನ್ನು ಇನಾಮಾಗಿ ಕೊಡುತ್ತಿದ್ದ ಪದ್ಧತಿಯಿಂದ ತುಂಬಾ ಪ್ರೋತ್ಸಾಹವಿತ್ತು. ಈಚೆಗಿನ ಕಮಿಶನರುಗಳ ಕಾಲದಲ್ಲಿ ಆ ಪದ್ಧತಿಯು ಬಿಟ್ಟುಹೋಯಿತು. ಅಂಥಾ ಪದ್ಧತಿಯನ್ನು ಪುನಹ ಸ್ಥಾಪಿಸಬೇಕೆಂತಲೂ, ಸಹಕಾರ ತತ್ವವನ್ನು ಉಪಯೋಗಿಸಿ ಲಂಟಾನ ತೆಗೆಯಲು ಪ್ರೋತ್ಸಾಹ ಕೊಡಬೇಕೆಂತಲೂ ಮುಂತಾಗಿ ವರದಿಯಲ್ಲಿ ಸಮೂದಿಸಿದೆ.

ದನ ಮೇವಿಗೆ ಅಡಚಣೆ ಬಂದದ್ದು ಲಂಟಾನದಂತೆಯೇ ಫಾರೆಸ್ಟ್ ಇಲಾಖೆಯೆಂಬದನ್ನು ವರದಿಯು ಒತ್ತಿ ಒತ್ತಿ ಹೇಳಿರುತ್ತದೆ. ರಿಜರ್ವ್ ಫಾರೆಸ್ಟುಗಳು ಗದ್ದೆ ಗೆರೆಕಾಣುವರೆಗೆ ಒಂದುಬಿಟ್ಟರೆ ದನಗಳಿಗೆ ಮೇವಿಗೆ ಜಾಗವೆಲ್ಲಿ? ದನಗಳನ್ನು ನಾಶಪಡಿಸುವ ಕಾಡು ಮೃಗಗಳನ್ನು ಬೆಳೆಸಲಿಕ್ಕೆ ಏರ್ಪಾಡು ಮಾಡಿದಂತಾಗಿದೆ. ಅವುಗಳನ್ನು ನಾಶಪಡಿಸಲು ಬೇಟೆಯಾಡಲಿಕ್ಕೆ ಫಾರೆಸ್ಟಿಗೆ ಹೋಗಕೂಡದು. ಸ್ವಲ್ಪ ಫೀಸ್ ಕೊಟ್ಟರೆ ದನಮೇಯಿಸಲು ಬಿಡಲಾಗುವದೆಂತ ಇಲಾಖೆಯವರು ಹೇಳುತ್ತಾರೆ. ಹಾಗೆ ಬಿಡುವ ಜಾಗಗಳು ರೈತರಿಗೆ ಅನುಕೂಲವಿರುವವಲ್ಲ. ದನ ಮೇಯಿಸುವ ಮತ್ತು ಬೇಟೆಯಾಡುವ ಹಕ್ಕು ಕೊಡಬೇಕೆಂತ ಕೌನ್ಸಿಲಿನಲ್ಲಿ ಠರಾವು ಪಾಸಾದದ್ದನ್ನು ಚೀಫ್ ಕಮಿಶನರು ಮೊನ್ನೆ ತಾನೇ ತಿರಸ್ಕರಿಸಿದ್ದಾರೆ. ಸರಕಾರದಿಂದಲೇ ನೇಮಕವಾದ ಈ ಕಮಿಟಿಯ ಶಿಫಾರಸ್ಸಿನ ಮೇಲಾದರೂ ಈ ಎರಡು ಅತ್ಯಾವಶ್ಯವಾದ ಹಕ್ಕುಗಳನ್ನು ಕೊಡಲು ಸರಕಾರವು ತೀರ್ಮಾನಿಸಿದರೆ ಈ ಕಮಿಟಿಯನ್ನು ನೇಮಿಸಿದ್ದಕ್ಕೆ ಸಾರ್ಥಕವಾದೀತು. ಕಾಡು ಮೃಗಗಳಿಂದ ಸರಾಸರಿ 1000 ನಡೆ ದನಗಳನ್ನು ಪ್ರತಿ ವರ್ಷವೂ ಸಾಯುತ್ತಿವೆಯೆಂತ ಲೆಖ್ಖ ಸಿಕ್ಕಿದೆಯಂತೆ. ಲೆಖ್ಖಕ್ಕೆ ಸಿಕ್ಕದೆ ಇರುವದು ಇನ್ನೂ ಇದರ ಅರ್ಧವಾದರೂ ಇರಬಹುದು. ವರ್ಷ ಒಂದರ ಕಡಿಮೆಪಕ್ಷ 30,000 ರೂಪಾಯಿನ ದನಗಳು ಕಾಡುಮೃಗಗಳಿಂದ ನಾಶವಾಗುವದೆಂತಾದರೆ ರಿಜರ್ವ್ ಫಾರೆಸ್ಟನ್ನು ಎಷ್ಟು ದೂರ ಓಡಿಸಿದರೂ ಸಾಲದು. ಲಂಟಾನವನ್ನು ನಿರ್ಮೂಲ ಮಾಡಬೇಕಾದದ್ದು ಅವಶ್ಯವೇ. ಕೋವಿ ಹಿಡಿಯುವ ಹಕ್ಕನ್ನು ಪ್ರತಿಯೊಬ್ಬ ರೈತನಿಗೂ ಕೊಡಬೇಕು. ಈ ವಿಷಯದಲ್ಲಿ ಕಮಿಟಿಯು ಶಿಫಾರಸುಮಾಡದೆ ಇರಲು ಕಾರಣವೇನೆಂದೋ ಗೊತ್ತಾಗಲಿಲ್ಲ.

ಜಮೀನ್ದಾರರ ಮಹಾ ಸಭೆ.

ಮೇ ತಾರೀಖು 5 ಮತ್ತು 6ಕ್ಕೆ ಸೋಮವಾರಪೇಟೆಯಲ್ಲಿ ನೆರೆಯಲಿಕ್ಕಿರುವ ಜಮೀನ್ದಾರರ ಸಂಘದ ಮಹಾ ಸಭೆಗೆ ದೇಶದ ಎಲ್ಲಾ ಕಡೆಯ ಮಹಾಜನರು ಎಂದಿಗಿಂತಲೂ ಹೆಚ್ಚಾಗಿ ಸೇರಬೇಕಾದದ್ದು ಅತ್ಯಾವಶ್ಯವಾಗಿದೆ. ಬರುವ ನವೆಂಬರ್—ಸೈಮನ್ ಕಮಿಷನ್ ವಿಷಯವಾಗಿ ನಮ್ಮ ದೇಶದ ಮುಂದಿನ ರಾಜಕೀಯ ರಚನೆಯು ಹೇಗಾಗಬೇಕೆಂಬದನ್ನು ಸಂಘದ ಉಪಕಮಿಟಿಯು ಪರ್ಯಾಲೋಚಿಸಿದ್ದರೂ ಬರುವ ಮಹಾ ಸಭೆಯಲ್ಲಿ ನಿಸ್ಸಂದೇಹವಾಗಿ ತೀರ್ಮಾನಿಸಿ ಪುಷ್ಟೀಕರಿಸಬೇಕಾಗಿದೆ. ಈ ಸುಸಂಧಿಯನ್ನು ಕಳಕೊಂಡರೆ ಮುಂದಿನ ದೇಶದ ದುರ್ದೆಶೆಗೆ ದೇಶೀಯರ ಉದಾಸೀನವೇ ಕಾರಣ ಭೂತವಾಗುವದು. ಹಲಕೆಲವು ಮುಂದಾಳುಗಳು ಇಂಥಾ ಮಹಾ ಸಭೆಯನ್ನು ತೀರ್ಮಾನಿಸಿ ಬಾಯಿ ಒಡಕೊಂಡರೆ ಸಾಕೆಂದು ದವರೆಲ್ಲಾ ಸೇರುವದಕ್ಕೆ ಅನಾನುಕೂಲಗಳೆಂದೂ ಮರೆತರೆ ದೇಶದ ಮಹನೀಯರೇ ದೇಶದ್ರೋಹಿಗಳಾದೆ ಪರರಾಜರ ಅರಾಜಕೀಯ ವರ್ತನೆಯು ಕೊನೆಗಾಣ...

ಹಿಂದೂ ದೇಶದ ಮುಂದಾಳುಗಳು ರಾಜಕೀಯದಲ್ಲಿ ಕೊಡಗಿಗೆ ಯಾವ ಸ್ಥಳವನ್ನು ಎಷ್ಟರ ಮಟ್ಟಿಗೆ ಕೊಡಬಹುದೆಂಬದನ್ನು ಆಲೋಚಿಸುತ್ತಿರುವ ಈ ಸಮಯದಲ್ಲಿ ದೇಶದ ಪರವಾಗಿ ಮಹಾ ಸಭೆಯ ಅಭಿಪ್ರಾಯವನ್ನು ಅಂಥಾ ಮುಂದಾಳುಗಳ ಮಹತ್ವದ ಕೆಲಸಕ್ಕೆ ಸಹಾಯವಾಗಬೇಕಾದದ್ದು ಅತಿ ಅವಶ್ಯವಲ್ಲದೆ ನಮ್ಮ ಕರ್ತವ್ಯವೂ ಆಗಿದೆ. ಅಲ್ಲದೆ ಜಮೀನ್ದಾರರ ಸಂಘವು ಒಂದೆ ಮದ್ರಾಸಿಗೆ ಸೇರಬೇಕೆಂದೂ, ಇನ್ನೊಂದು ವೇಳೆ ಪ್ರತ್ಯೇಕವಾಗಿರಬೇಕೆಂದೂ, ಮತ್ತೊಮ್ಮೆ ಕರ್ನಾಟಕ ಏಕೀಕರಣವಾಗಿ ಮತ್ತೆ ಪುನಹ ಮದ್ರಾಸಿಗೆ ಸೇರಲಿಕ್ಕಾಗಿ ಅಲ್ಲಿಯ ಶ್ರೀಯುತ ಸತ್ಯಮೂರ್ತಿಯವರನ್ನು ಅಧ್ಯಕ್ಷರನ್ನಾಗಿ ಮಾಡಿರುವರೋ ಎಂದೆಲ್ಲ ಆಡುತ್ತಿರುವ ನಮ್ಮ ಮಿತ್ರರಿಗೆ ಸಂಘದ ಕಂಠೋಕ್ತವಾದ ತೀರ್ಪನ್ನು ಕೇಳಿ ಆಗಬಹುದು.

ಮಹಾಸಭೆಯ ಅಧ್ಯಕ್ಷರಾದ ಶ್ರೀ. ಸತ್ಯಮೂರ್ತಿಯವರಾದರೋ ಬಹಳ ಕೀರ್ತಿವಂತರಾದವರು. ಮುಂದಾಳುಗಳನ್ನು ಹಳಿಯುವದು ಗುಣವಾಗಿರುವಲ್ಲಿರುವ ಅವರ ಗಿರಿಗೆ ಒಂದು ವ್ಯಾಧಿಯಾಗಿದೆಯೆಂದು ಹಿಂದೂದೇಶದಲ್ಲೇ ಇತರ ಪರದೇಶಗಳಿಗೂ ಸಹ ಕೀರ್ತಿ ಹೋಗಿದೆ. ಹಳಿವವರ ಸೊಲ್ಲು ನಮಗೆ ಬೇಡ. ಕಳೆದ ವರ್ಷದ ಅಧ್ಯಕ್ಷರಾದ ಶ್ರೀಯುತ ಶ್ರೀನಿವಾಸೈಯ್ಯಂಗಾರರು ರಾಜಕೀಯ ವಿಷಯದಲ್ಲಿ ಎಷ್ಟು ತೇಜಸ್ವಿ ಇರುವರೋ ಸತ್ಯಮೂರ್ತಿಯವರೂ ಅಷ್ಟೇ ಇರುವರೆಂದು ಮಹಾಜನರು ತಿಳಕೊಳ್ಳಬೇಕು. ಅವರು ವಿಶೇಷ ತರದ ಭಾಷಣಕಾರರೆಂದೂ, ರಾಜಕೀಯ ವಿಷಯದಲ್ಲಿ ತುಂಬಾ ಪರಿಜ್ಞಾನವಿರುವವರೆಂದೂ ಹಿಂದೂ ದೇಶದ ಹೊರಗೂ ಸಹ ಪ್ರಸಿದ್ಧಿ ಇದೆ. ಕಾಂಗ್ರೆಸ್ಸಿನ ಹಾಗೂ ಸ್ವರಾಜ್ಯಪಕ್ಷದ ವಿಜಯಕ್ಕೆ ಮದ್ರಾಸು ಕೌನ್ಸಿಲಿನ ಒಳಗೂ ಹೊರಗೂ ಮಿ. ಸತ್ಯಮೂರ್ತಿಯವರಷ್ಟು ಕಾರಣಭೂತರು ಮತ್ತೊಬ್ಬರಿಲ್ಲ. ಸೈಮನ್ ಕಮಿಷನ್ ಮದ್ರಾಸಿನಲ್ಲಿ ಬಂದಾಗ ಮಿ. ಶ್ರೀನಿವಾಸೈಯ್ಯಂಗಾರರು ಡೆಲ್ಲಿಯಲ್ಲಿದ್ದರೂ ಬಹಿಷ್ಕಾರದ ಸಂಬಂಧವಾಗಿ ಮದ್ರಾಸಿನಲ್ಲಿ ಉಂಟಾದ ನಷ್ಟಕಷ್ಟದಲ್ಲಿ ಮಿ. ಸತ್ಯಮೂರ್ತಿಯಂಥವರ ತಾಳ್ಮೆಯನ್ನೊಳಗೊಂಡ ಕೃಪೆಯಿಂದ ಬಹಿಷ್ಕಾರದ ಚಳವಳವು ಮತ್ತಷ್ಟು ಜಯಪ್ರದವಾಗಿ ಪರಿಣಮಿಸಿದ್ದು ವಾಚಕರಿಗೆ ತಿಳಿದಿರಬಹುದು. ಸ್ಥಿತಿಗತಿಯ ಅಹಂಕಾರದಲ್ಲಿ ಮುಳುಗಿದವರಿಗೆ ನಾವು ಎಷ್ಟು ಬರೆದರೂ ಸಾಲದು. ಆದರೆ ಅಧ್ಯಕ್ಷರಾದ ಶ್ರೀ. ಸತ್ಯಮೂರ್ತಿಯವರನ್ನು ನೋಡಿಯೂ, ಅವರ ಭಾಷಣವನ್ನು ಕೇಳಿಯೂ ಅವರನ್ನು ಪರಿಷ್ಕಾರವಾಗಿ ತಿಳಕೊಂಡು ಗೌರವಿಸಬಹುದು. ಮತ್ತು ಅಂಥವರಿಂದ ತನು, ಮನ, ಧನವನ್ನು ದೇಶಸೇವೆಗೆ ಧಾರೆ ಎರೆಯುವದೆಂದರೇನೆಂಬದನ್ನು ನಮ್ಮ ದೇಶೀಯರಿಗೆ ತಿಳಕೊಳ್ಳಲಿಕ್ಕೆ ಇದೊಂದು ಸುಸಮಯ.

ಕೊಡಗು ಬಾಂಧವರು ಬೇರೆ ಯಾವ ದೇಶದವರಿಗೂ ಹಿಂದುಳಿದವರಲ್ಲದವರೆಂದು ಹೇಳುವ ಮಾತಿಗೆ ನಾವು ಒಪ್ಪುತ್ತೇವೆ. ಕಾರ್ಯತಃ ಬರುವ ಮಹಾಸಭೆಗೆ ಎಲ್ಲರೂ ಸೇರಿ ಆಚರಣೆಯಿಂದ ಹೊರಗಿನಿಂದ ಬರತಕ್ಕ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀನಿವಾಸ ರಾವ್ ಕೌಜಲಗಿ, ಮಹಾತ್ಮ ಗಾಂಧಿಯವರ ಬಲಗೈಯ್ಯಂತಿರುವ ಗಂಗಾಧರರಾವ್ ದೇಶಪಾಂಡೆ, ಕರ್ನಾಟಕದ ಕಣ್ಮಣಿಯಂತಿರುವ ರಂಗನಾಥ ದಿವಾಕರ್‌ರವರಿಗೂ ಮತ್ತು ಮಹಾ ಸಭೆಯ ಅಧ್ಯಕ್ಷರಾಗಿ ಬರುವವರಿಗೂ ತೋರ್ಪಡಿಸಿ ನಮ್ಮ ರಾಜಕೀಯ ಆಕಾಂಕ್ಷೆಯನ್ನು ಮುಂದುವರಿಯ ಬೇಕೆಂಬ ಅಭಿಲಾಷೆಯಿಂದ ದೇಶದ ಮಹಾಜನರನ್ನು ನಾವು ಈ ಮೂಲಕ ಕೋರುತ್ತೇವೆ.

A Horse For Sale.

For Particulars apply to—
G. M. Manjanathaya.
Coffee Planter. Suntikoppa. Coorg
4—3

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೩೩ನೇ ಪ್ರಕರಣ.

ಉಪಾಧ್ಯಾಯನಾಗಿ.

“ದಕ್ಷಿಣ ಆಫ್ರಿಕದ ಸತ್ಯಾಗ್ರಹದ ಇತಿಹಾಸ” ದಲ್ಲಿ ...ದಿರುವ ಅಥವಾ ಸೂಕ್ಷ್ಮವಾಗಿ ಮಾತ್ರ ತಿಳಿಸಿರುವ ವಿ...ಗಳನ್ನು ಮಾತ್ರ ನಾನು ಇಲ್ಲಿ ವರ್ಣಿಸುತ್ತಿರುವೆನೆಂಬು... ವಾಚಕರು ಮನಸ್ಸಿನಲ್ಲಿಟ್ಟುಕೊಂಡಿದ್ದರೆ (ಹಾಗೆ ಮಾ...ಬೇಕೆಂದು ನನ್ನ ಆಸೆ) ಈಚಿನ ಅಧ್ಯಾಯಗಳಲ್ಲಿ ಒಂದಕ್ಕೊಂ...ರುವ ಸಂಬಂಧವು ಸುಲಭವಾಗಿ ತಿಳಿಯುತ್ತದೆ

ಆಶ್ರಮವು ಅಭಿವೃದ್ಧಿಯಾಗುತ್ತಾ ಬಳ್ಳಿಸ ಹುಡುಗ, ಹುಡುಗಿಯರ ವಿದ್ಯಾಭ್ಯಾಸಕ್ಕೆ ಏನಾದರೂ ವ್ಯವಸ್ಥೆ ಮಾಡು...ವು ಅವಶ್ಯಕವಾಗಿ ಕಂಡು ಬಂದಿತು. ಇವರಲ್ಲಿ ಹಿಂದೂ, ...ಸಲ್ಮಾನ, ಪಾರಸೀ ಮತ್ತು ಈಸಾಯಿ ಹುಡುಗರೂ, ಕೆಲ... ಹಿಂದೂ ಹುಡುಗಿಯರೂ ಇದ್ದರು. ಅವರಿಗೆ ಪ್ರತ್ಯೇ...ವಾದ ಶಿಕ್ಷಕರನ್ನು ನಿರುಮಿಸುವುದು ಸಾಧ್ಯವಿರಲಿಲ್ಲ, ನಾ... ಅದನ್ನು ಅವಶ್ಯಕವೆಂದು ಎಣಿಸಲೂ ಇಲ್ಲ. ಅನು ಸಾ...ವಿಲ್ಲದುದು ಏಕೆಂದರೆ—ತಕ್ಕ ಯೋಗ್ಯತೆಯುಳ್ಳ ಭಾರತೀ... ಉಪಾಧ್ಯಾಯರು ದೊರಕುವುದು ಕಷ್ಟವಾಗಿದ್ದಿತು. ಒಂ... ವೇಳೆ ದೊರಕಿದರೂ ಸಣ್ಣ ಸಂಬಳದ ಮೇಲೆ ಜೊಹಾನ್ಸಬರ್ಗಿನಿಂದ ... ಮೈಲು ದೂರವಿರುವ ಸ್ಥಳಕ್ಕೆ ಬರತಕ್ಕವರಾರು? ಇ...ಲ್ಲದೆ ನಮ್ಮ ಖಜಾನೆಯಲ್ಲೇನೂ ಹಣವು ತುಂಬಿ ತುಳುಕುತ್ತಿ...ಲ್ಲ. ಆಶ್ರಮದ ಹೊರಗಿನಿಂದ ಉಪಾಧ್ಯಾಯರನ್ನು ಕರೆ...ವುದನ್ನು ನಾನು ಅನಾವಶ್ಯಕವೆಂದೆಣಿಸಿದೆನು. ನನಗೆ ...ರ್ತಮಾನ ಶಿಕ್ಷಣಕ್ರಮದಲ್ಲಿ ವಿಶ್ವಾಸವಿರಲಿಲ್ಲ. ಅನುಭ...ದಿಂದಲೂ, ಪ್ರಯೋಗದಿಂದಲೂ ನಿಜವಾದ ಪದ್ಧತಿಯನ್ನು ...ಡು ಹಿಡಿಯಬೇಕೆಂದು ನನಗೆ ಮನಸ್ಸಿದ್ದಿತು. ನನಗೆ ಗೊ...ತ್ತಿದ್ದುದು ಇಷ್ಟು. ಆದರ್ಶ ಪರಿಸ್ಥಿತಿಯಲ್ಲಿ ತಾಯಿ ತಂದೆಗಳೇ ...ಜವಾದ ವಿದ್ಯೆಯನ್ನು ಕಲಿಸುವರು; ಆಗ ಹೊರಗಿನ ಸಹಾ...ಯವು ಸಾಧ್ಯವಾದಷ್ಟು ಕಡಿಮೆಯಾಗಿರಬೇಕು, ‘ಟಾಲ್‌ಸ್ಟಾಯ್ ಫಾರ್ಮ್’ ಕೂಡ ಒಂದು ಕುಟುಂಬವಾಗಿದ್ದಿತು, ಆ ಕುಟುಂ...ದಲ್ಲಿ ನಾನೇ ತಂದೆಯ ಸ್ಥಾನದಲ್ಲಿದ್ದೆನು; ಶಕ್ಯವಿರುವ ಮ...ಟ್ಟಿಗೆ ನಾನು ಹುಡುಗರಿಗೆ ಶಿಕ್ಷಣಕೊಡುವ ಜವಾಬ್ದಾರಿಯ...ನ್ನು ಹೊತ್ತುಕೊಳ್ಳಬೇಕು.

ಈ ಕಲ್ಪನೆಯಲ್ಲಿ ದೋಷವಿಲ್ಲದಿರಲಿಲ್ಲವೆನ್ನುವುದೇನೋ ನಿ...ಜವಾಗಿದ್ದಿತು. ಹುಡುಗರೆಲ್ಲಾ ತಮ್ಮ ಶೈಶವದಿಂದ ನನ್ನ ಬ...ಳಿ ಇದ್ದಿರಲಿಲ್ಲ. ಒಬ್ಬೊಬ್ಬರು ಒಂದೊಂದು ವಾತಾವರಣ...ದಲ್ಲಿಯೂ, ಒಂದೊಂದು ಪರಿಸ್ಥಿತಿಯಲ್ಲಿಯೂ ಬೆಳೆದಿದ್ದರು. ಒಬ್ಬೊಬ್ಬರ ಧರ್ಮವೂ ಬೇರೆಯಾಗಿದ್ದಿತು. ಹೀಗಿರುವಲ್ಲಿ ನಾನು ಯಜಮಾನನ ಸ್ಥಾನವನ್ನು ವಹಿಸಿದರೂ ಈ ಹುಡುಗರ...ಲ್ಲರ ವಿಷಯದಲ್ಲಿಯೂ ನನ್ನ ಕರ್ತವ್ಯವನ್ನು ಪೂರ್ಣವಾಗಿ ಮಾಡಬಲ್ಲೆನೆಂತು?

ಆದರೆ ನಾನು ಯಾವಾಗಲೂ ಹಾರ್ದಿಕ ಶಿಕ್ಷಣಕ್ಕೆ—ಸ...ಚರಿತೆಯ ಸಂಪಾದನೆಗೆ—ಅಗ್ರಸ್ಥಾನವನ್ನು ಕೊಟ್ಟಿದ್ದೆನು. ಮ...ತ್ತು ಹುಡುಗರ ವಯಸ್ಸುಗಳಲ್ಲಿಯೂ, ಅವರನ್ನು ಬೆಳೆಸಿದ ರೀ...ತಿಯಲ್ಲಿಯೂ ಎಷ್ಟೇ ವ್ಯತ್ಯಾಸವಿರಲಿ ಎಲ್ಲರಿಗೂ ಒಂದೇ ಸ...ಮನಾದ ನೈತಿಕ ಶಿಕ್ಷಣವನ್ನು ಕೊಡಬಹುದೆಂದು ನನಗೆ ದೃ...ಢ ವಿಶ್ವಾಸವಿದ್ದುದರಿಂದ ನಾನು ಅವರ ಮಧ್ಯೆ ಅವರ ತಂದೆ...ಯಂತೆ ದಿನದ ಇಪ್ಪತ್ತನಾಲ್ಕು ತಾಸೂ ವಾಸಿಸಲು ನಿಶ್ಚಯಿಸಿ...ದೆನು. ಅವರ ಶಿಕ್ಷಣಕ್ಕೆ ಸ್ವಭಾವಸಂಪಾದನೆಯೇ ಸರಿಯಾದ ...ತಳಹದಿಯೆಂದು ಎಣಿಸಿದ್ದೆನು. ಈ ತಳಹದಿಯು ಸರಿಯಾಗಿ ಬಿ...ದ್ದರೆ ಹುಡುಗರು ಉಳಿದುದನೆಲ್ಲಾ ತಾವಾಗಿಯೇ ಅಥವಾ ಮಿತ್ರ ಸಹಾಯದಿಂದ ಕಲಿತುಕೊಳ್ಳಲಾಪರೆಂಬ ನಂಬಿಕೆಯೂ ನನಗಿದ್ದಿತು.

ಆದರೆ ಇದರಜೊತೆಗೆ ಸಾಹಿತ್ಯ ಶಿಕ್ಷಣದ ಅವಶ್ಯಕತೆಯ...ನ್ನು ನಾನು ಚೆನ್ನಾಗಿ ತಿಳಿದಿದ್ದುದರಿಂದ ಮಿ. ಕಾಲೆನ್‌ಬೇಕ...ರು ಮತ್ತು ಶ್ರೀ ಪ್ರಾಗ್ಜೀ ದೇಸಾಯಿ ಇವರ ಸಹಾಯದಿಂದ ಕೆಲವು ವರ್ಗಗಳನ್ನು ಆರಂಭಿಸಿದೆನು. ಶರೀರವ್ಯವಸಾಯಕ್ಕ...ೂ ನಾನೇನೂ ಕಡಿಮೆಯಾಗಿ ಬೆಲೆ ಕಟ್ಟಲಿಲ್ಲ. ಇದು ಅ...ವರಿಗೆ ತಮ್ಮ ದಿನಚರಿಯಲ್ಲಿಯೇ ದೊರಕುತ್ತಿದ್ದಿತು. ...ಕೆಂದ...ರೆ—ಆಶ್ರಮದಲ್ಲಿ ಸೇವಕರಾರೂ ಇರಲಿಲ್ಲ. ಅಡಿಗೆಯಿಂದ ಮೊದಲುಗೊಂಡು ಕಕ್ಕಸುಬಳಿಯುವವರೆಗೂ ಕೆಲಸಗಳನ್ನೆಲ್ಲಾ ಆಶ್ರಮ ನಿವಾಸಿಗಳೇ ಮಾಡುತ್ತಿದ್ದರು. ನಾಟಿಕೊಳ್ಳುವ ಹಕ್ಕೆ ಬೇಕಾದಷ್ಟು ಹಣ್ಣಿನ ಮರಗಳಿದ್ದುವು; ಮಾಡುವ ಕೃಷಿ ಸಾಕಾದಷ್ಟು ತೋಟದ ಕೆಲಸವೂ ಇರುತ್ತಿದ್ದಿತು. ಮಿ. ಕಾಲೆನ್‌ಬೇಕರಿಗೆ ತೋಟದ ಕೆಲಸವೆಂದರೆ ಇಷ್ಟ. ಸರಕಾರದ ಆದರ್ಶಕ್ಷೇತ್ರ (ಮಾಡೆಲ್ ಫಾರ್ಮ್) ವೊಂದರಲ್ಲಿ ಅವರು ಈ ಕೆಲಸದಲ್ಲಿ ಸ್ವಲ್ಪ ಪರಿಶ್ರಮವನ್ನು ಪಡೆದಿದ್ದರು. ಅಡಿಗೆಯ ಮನೆಯಲ್ಲಿ ಕೆಲಸ ಮಾಡುತ್ತಿದ್ದವರೆಲ್ಲರೂ—ಹುಡುಗರೂ, ಮುದುಕರೂ—ಈ ಕೆಲಸವನ್ನು ಸ್ವಲ್ಪ ಹೊತ್ತು ಮಾಡಬೇಕಾಗಿದ್ದಿತು. ಇದರಲ್ಲಿ ದೊಡ್ಡಪಾಲು ಹುಡುಗರಿಗೇ ಬೀಳುತ್ತಿದ್ದಿತು. ಪಾತಿ ಅಗೆಯುವುದು, ಮರಕಡಿಯುವುದು, ಹೊರೆ ಹೊರುವುದು ಇವೆಲ್ಲವೂ ಇದರಲ್ಲಿ ಸೇರಿದ್ದುವು. ಇದರಿಂದ ಅವರಿಗೆ ಬೇಕಾದಷ್ಟು ವ್ಯಾಯಾಮವಾಗುತ್ತಿದ್ದಿತು. ಈ ಕೆಲಸದಲ್ಲಿ ಅವರು ಆನಂದ ಪಡುತ್ತಿದ್ದರು. ಆದುದರಿಂದ ಅವರಿಗೆ ಬೇರೇ ವ್ಯಾಯಾಮ ಅಥವಾ ಆಟಪಾಟದ ಆವಶ್ಯಕತೆ ಇರಲಿಲ್ಲ. ಅವರಲ್ಲಿ ಕೆಲವರು ಒಂದೊಂದು ವೇಳೆ ಎಲ್ಲರೂ ಕ...ಲ್ಲ... ಆಟಪಾಟದಕ್ಕೆ ...ದಲು ಹಿಂದೇಟು ಹಾಕುತ್ತಿದ್ದರು. ...ಮಾಡುತ್ತಿದ್ದರು. ಕೆಲವು ವೇಳೆ ನಾನೂ ಅವರೊಡನೆ ಸೇರಿ ಚೆನ್ನಾಟವಾಡುತ್ತಿದ್ದೆನು. ಅನೇಕ ವೇಳೆ ಬಲಾತ್ಕಾರದಿಂದ ಅವರ ಕೈಯಲ್ಲಿ ಕೆಲಸ ಮಾಡಿಸುತ್ತಿದ್ದೆನು. ನನ್ನ ಬಲಾತ್ಕಾರ ಅವರ ಇಷ್ಟಕ್ಕೆ ವಿರುದ್ಧ ಇದ್ದಿರಬಹುದು. ಆದರೆ ಅವರು ಅದನ್ನು ವಿರೋಧಿಸಿದುದು ನನಗೆ ನೆನಪಿಲ್ಲ. ನಾನು ಹೀಗೆ ಬಲಾತ್ಕಾರ ಮಾಡಿದ್ದಾಗ ಆಟವಾಡುತ್ತಾ ಕೆಲಸ ಮಾಡುವುದು ಸರಿಯಲ್ಲವೆಂದು ಸಕಾರಣವಾಗಿ ಅವರಿಗೆ ತಿಳಿಸುತ್ತಿದ್ದುದು ನೆನಪಿದೆ. ಆದರೆ ಅದರಲ್ಲಿ ಹುಟ್ಟಿದ ಶ್ರದ್ಧೆಯು ಒಂದು ಕ್ಷಣಕ್ಕೆ ಮಾತ್ರವಾಗಿ ಮರುಕ್ಷಣದಲ್ಲಿ ಅವರು ಕೆಲಸವನ್ನು ಬಿಟ್ಟು ಆಟಕ್ಕೆ ಹೋಗುತ್ತಿದ್ದರು. ಅದು ಏನೇ ಆಗಲಿ—ನಾವು ಹೊಂದಿಕೊಂಡು ಹೋಗುತ್ತಿದ್ದೆವು; ಅವರು ಕಾಯಪ್ರಯತ್ನವನ್ನು ಸಂಪಾದಿಸಿದರು. ಒಳ್ಳೆಯ ಗಟ್ಟಿಯೂ, ನೀರೋಗಿಗಳೂ ಆದ ಕಾಲಕ್ಕೆ ಸುಮ್ಮನೆ ಊಟವೂ ಇದರ ಜೊತೆಗೆ ಸೇರಿ ಆಶ್ರಮದಲ್ಲಿ ಕಾಯಿಲೆಯು ಸುಳಿವೇ ಇಲ್ಲದಂತೆ ಮಾಡಿತೆನ್ನಬಹುದು.

ಈ ಸಂದರ್ಭದಲ್ಲಿ ಔದ್ಯೋಗಿಕ ಶಿಕ್ಷಣದ ವಿಚಾರವಾಗಿಯೂ ಒಂದೆರಡು ಮಾತನ್ನು ಹೇಳಲು ಬಯಸುತ್ತೇನೆ. ಈ ಹುಡುಗರಲ್ಲಿ ಪ್ರತಿಯೊಬ್ಬನಿಗೂ ಯಾವುದಾದರೊಂದು ಉಪಯೋಗಕರವಾದ ಕೈ ಕೆಲಸವನ್ನು ಕಲಿಸಬೇಕೆಂಬುದು ನನ್ನ ಉದ್ದೇಶವಾಗಿದ್ದಿತು. ಇದಕ್ಕಾಗಿ ಮಿ. ಕಾಲೆನ್‌ಬೇಕರರು ಬಂದು ‘ಟ್ರಾಪಿಸ್ಟ್ ಮೊನಾಸ್ಟರಿ’ (ಒಂದು ಕ್ರೈಸ್ತ ಸಂಘದ ಮಠಕ್ಕೆ) ಹೋಗಿ ಅಲ್ಲಿ ಜೋಡು ಹೊಲಿಯುವುದನ್ನು ಕಲಿತುಕೊಂಡು ಹಿಂತಿರುಗಿದರು. ಅವರಿಂದ ನಾನು ಅದನ್ನು ಕಲಿತುಕೊಂಡು ಅದನ್ನು ಅಭ್ಯಾಸಿಸಲು ಸಿದ್ಧರಾಗಿದ್ದವರಿಗೆ ನಾನು ಆ ವಿದ್ಯೆಯನ್ನು ಕಲಿಸಿಕೊಟ್ಟೆನು. ಮಿ. ಕಾಲೆನ್‌ಬೇಕರಿಗೆ ಬಡಗಿಯ ಕೆಲಸದ ಅನುಭವವು ಸ್ವಲ್ಪಮಟ್ಟಿಗೆ ಇದ್ದಿತು. ಇದನ್ನು ತಿಳಿದ ಇನ್ನೊಬ್ಬಾತನೂ ಆಶ್ರಮದಲ್ಲಿದ್ದುದರಿಂದ ನಾವು ಬಡಗಿ ಕೆಲಸದ ವರ್ಗವನ್ನು ಆರಂಭಿಸಿದೆವು. ಅಡಿಗೆಯಂತೂ ಹೆಚ್ಚುಕಡಿಮೆ ಎಲ್ಲಾ ಹುಡುಗರಿಗೂ ಬರುತ್ತಿದ್ದಿತು.

ಇದೆಲ್ಲವೂ ಅವರಿಗೆ ಹೊಸದಾಗಿದ್ದಿತು. ಈ ವಿಷಯಗಳನ್ನು ಎಂದಾದರೂ ಒಂದು ದಿನ ಕಲಿತುಕೊಳ್ಳಬೇಕಾಗುವುದೆಂದು ಅವರು ಸ್ವಪ್ನದಲ್ಲಿಯೂ ಕಾಣಿರಲಿಲ್ಲ. ಏಕೆಂದರೆ—ದಕ್ಷಿಣ ಆಫ್ರಿಕದಲ್ಲಿ ಭಾರತೀಯ ಹುಡುಗರಿಗೆ ಸಾಮಾನ್ಯವಾಗಿ ದೊರಕುತ್ತಿದ್ದುದು ಕೇವಲ ಅಕ್ಷರಜ್ಞಾನ ಮತ್ತು ಗಣಿತದ ಶಿಕ್ಷಣ. ಶಿಕ್ಷಕರು ಸ್ವತಃ ಮಾಡದೆ ಇಷ್ಟವಿಲ್ಲದುದನ್ನು ಹುಡುಗರಿಗೆ ವಿಧಿಸಕೂಡದೆಂಬ ನಿಯಮವನ್ನು ನಾವು ‘ಟಾಲ್‌ಸ್ಟಾಯ್ ಫಾರ್ಮ್’ನಲ್ಲಿ ಇಟ್ಟುಕೊಂಡಿದ್ದೆವು. ಆದುದರಿಂದ ಅವರಿಗೆ ಯಾವುದಾದರೂ ಕೆಲಸವನ್ನು ಹೇಳಿದರೆ ಯಾವಾಗಲೂ ಅವರೊಡನೆ ಕೆಲಸಮಾಡುತ್ತಾ ಯಾರಾದರೊಬ್ಬರು ಶಿಕ್ಷಕರು ಇದ್ದೇ ಇರುತ್ತಿದ್ದರು. ಈ ಕಾರಣದಿಂದ ಹುಡುಗರು ತಾವು ಏನನ್ನೇ ಕಲಿಯಲಿ ಸಂತೋಷದಿಂದ ಕಲಿಯುತ್ತಿದ್ದರು.

ಅವರ ಸ್ವಭಾವ ಸಂಪಾದನೆಯ ವಿಷಯವಾಗಿಯೂ ಅಕ್ಷರ ಶಿಕ್ಷಣದ ವಿಚಾರವಾಗಿಯೂ ಮುಂದೆ ಬರೆಯೋಣ.

ಎನ್ನು ಸೂಲುವ ಕೈಗಾರಿಕೆಯನ್ನು ಕೊಂದವರಾರು?

ಬಂಗಾಲದ ರಮೇಶಚಂದ್ರ ದತ್ತರವರು ಬ್ರಿಟಿಷ ಹಿಂದುಸ್ಥಾನದ ಆರ್ಥಿಕ ಇತಿಹಾಸವನ್ನು ಬರೆದಿದ್ದಾರೆ. ಅದರೊಳಗೆ ಹಿಂದುಸ್ಥಾನದೊಳಗಿನ ನಯ್ಗೆಯ ಉದ್ಯೋಗವು ಹ್ಯಾಗೆ ಹಾಳಾಗಿ ಕೊಲ್ಲಲ್ಪಟ್ಟಿತೆಂಬುದನ್ನು ಆಂಗ್ಲ ಪರ್ಯಟಕರ ಆಧಾರದಿಂದಲೇ ಹೇಳಿದ್ದಾರೆ. ದತ್ತರವರು ಮಾಂಟಗೊಮೆರಿ, ಮಾರ್ಟಿನ, ಲಿಕ್ಕಿ, ಸರ್ಜಂಟ ಬ್ರಿಗ್ಸ್, ವಿಲಿಯಮ್ ಬೋಲ್ಟ್ಸ್, ಟಿಂಕಿಂಗ, ಹೊರೇಸ, ಹೆ. ಹೆ. ವಿಲ್ಸನ್ ಪ್ರಭೃತಿಗಳ ಕಥನಗಳನ್ನು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ಮೊಂಟಗೊಮೆರಿ ಮಾರ್ಟಿನರವರು ಬರೆಯುವದೇನಂದರೆ:—

“ನಮ್ಮಲ್ಲಿ ತಯಾರಾಗುವ ಸರಕುಗಳನ್ನು ಹಿಂದೀಯರಿಗೆ ಕೊಂಡುಕೊಳ್ಳಲು ನಾವು ಒತ್ತಾಯ ಪಡಿಸಿದೆವು. ನಮ್ಮಲ್ಲಿಯ ಉಣ್ಣೆಯ ಅರಿವೆ ಅಂಚಡಿಗಳು ಅವರು ಕೇರಿಗೆಯಿಲ್ಲದೆ ಇಲ್ಲಿ ವಿಕ್ರಯಿಸಲ್ಪಡುತ್ತಿದ್ದವು. ನಮ್ಮಲ್ಲಿ ತಯಾರಾಗುವಂಥ ಸರಕುಗಳ ಮೇಲೆ ನೂರಕ್ಕೆ ೧೦—೨೦—೩೦—೫೦—೧೦೦—೫೦೦—೧೦೦೦ ದ ತನಕ ಜಕಾತು ತೆರಿಗೆಯನ್ನಿಟ್ಟು ಆ ಸರಕುಗಳಿಗೆ ಪ್ರತಿಬಂಧಿಸಿದೆವು. ಸೂರತ, ಡಾಕಾ, ಮುರ್ಶಿದಾಬಾದ ಮುಂತಾದ ಪಟ್ಟಣಗಳೊಳಗಿನ ದೇಶೀಯ ಉದ್ಯೋಗಗಳನ್ನು ನಾಶಮಾಡಿದ ವೃತ್ತಾಂತವು ಶೋಕಜನಕವಿದೆ. ನಾವು ನೀತಿಯಿಂದ ಈ ಪಟ್ಟಣಗಳನ್ನು ಹಾಳುಗೆಡಹಿದೆವೆಂದು ಅಭಿಪ್ರಾಯ ಪಡುವದಿಲ್ಲ. ಪ್ರಬಲರ ಬಲಾತ್ಕಾರದಿಂದಲೇ ಅವು ಹಾಳಾಗಿದ್ದುವು.

ಲಿಕ್ಕಿಯವರು ಬರೆಯುವದೇನಂದರೆ:—‘೧೭ನೇ ಶತಮಾನದ ಕೊನೆಗೆ ಅಗ್ಗದ ಅರಿವೆ—ಅಂಚಡಿಗಳೂ, ಮಲಮಲಗಳೂ ಹಿಂದುಸ್ಥಾನದಿಂದ ವಿಲಾಯಿತಿಗೆ ಬಹಳ ಬರುತ್ತಿದ್ದವು. ಇವು ಸೂಬಗುಳ್ಳವು, ಬಹು ಅಗ್ಗವಾಗಿ ಸಿಕ್ಕುತ್ತಿದ್ದವು ಇವುಗಳ ಬರುವಿಕೆಯಿಂದ ಇಂಗ್ಲೆಂಡದೊಳಗಿನ ಉಣ್ಣೆ ರೇಷ್ಮೆಗಳ ನೇಕಾರರು ದಿಗಿಲುಪಟ್ಟರು. ಅದರಿಂದ ೧೭೦೦ ೧೭೨೧ನೇ ಇಸವಿಗಳಲ್ಲಿ ಪಾರ್ಲಮೆಂಟದಿಂದ ನಮ್ಮಲ್ಲಿ ಬರುವ ಅರಿವೆಗಳನ್ನು ಧರಿಸಲಾಗದೆಂದು ಕಾನೂನು ಮಾಡಲಾಯಿತು. ಈ ಕಾನೂನಿನಂತೆ ಹಿಂದುಸ್ಥಾನದಿಂದ ಬರುವ ಅರಿವೆಗಳನ್ನು ಧರಿಸುವದು ಶಾಸನಬಾಹಿರವಾಯಿತು. ಧ್ಯಾನ್ಸವೇಕರ ಒಂದು ವಸ್ತ್ರವನ್ನು ತೆರೆದುಕೊಂಡು ಒಬ್ಬ ಹೆಂಗಸು ೧೭೬೬ನೇ ಇಸವಿಯಲ್ಲಿ ಗಿಲ್ಡಹಾಲಿನಲ್ಲಿ ಹೋಗಿದ್ದಳು. ಅದಕ್ಕಾಗಿ ಅವಳಿಗೆ ೨೦೦ ಪವನು ದಂಡ ವಿಧಿಸಲಾಯಿತು.”

ಸರ್ಜಂಟ ಬ್ರಿಗ್ಸ್‌ರವರು ಕಂಪನಿ ಸರಕಾರದ ಗುಮಾಸ್ತರ ಅತ್ಯಾಚಾರಗಳನ್ನು ೨೫—೫—೧೭೬೨ನೇ ದಿನ ಬರೆದ ಪತ್ರದಲ್ಲಿ ವಿವರಿಸಿದ್ದಾರೆ. ಅವರು ಬರೆಯುವದೇನಂದರೆ—“ವರ್ತಕರೊಬ್ಬರು ಮಾರಾಟಕ್ಕಾಗಲಿ, ಖರೀದಿಗಾಗಲಿ ಗುಮಾಸ್ತರನ್ನು ಕಳುಹುತ್ತಾರೆ. ತಾವು ತಂದ ಸರಕುಗಳನ್ನು ಕೊಳ್ಳದ ಜನರಿಗೆ ಗುಮಾಸ್ತರು ಚಿತ್ರಹಿಂಸೆ ಮಾಡುತ್ತಾರೆ. ಸೆರೆಮನೆಯಲ್ಲಿ ದೂಡುತ್ತಾರೆ. ತನ್ನಂಥ ಸರಕುಗಳನ್ನು ಬೇರೆಯವರು ಮಾರದಂತೆ ಪ್ರತಿಬಂಧಗಳನ್ನೇರ್ಪಡಿಸುತ್ತಾರೆ. ಖರೀದಿ ಮಾಡುವ ಪ್ರಕಾರವಾದರೂ ಹೀಗೆಯೇ. ಜನರು ತಮ್ಮಲ್ಲಿಯ ಸರಕುಗಳನ್ನು ಗುಮಾಸ್ತರು ಹೇಳಿದ ದರದಂತೆ ಮಾರಬೇಕು. ಕೆಲಕೆಲವು ಸರ್ತಿ ಕೊಂಡ ಸರಕುಗಳಿಗೆ ಗುಮಾಸ್ತರು ಹಣ ಕೊಡುವದೇ ಇಲ್ಲ. ನಾನು ಈ ವ್ಯಾಪಾರದಲ್ಲಿ ಕೈಹಾಕಿದರೆ ನನ್ನ ಮೇಲೆ ದೊಡ್ಡದೊಂದು ಆರೋಪ ಬರುತ್ತದೆ. ಈ ವ್ಯಾಪಾರಗಳನ್ನು ನನಗೆ ಹೇಳಲು ಬಾಯಿ ಬರದು. ಇವರಿಂದ ಬಂಗಾಲದಂಥ ಭಾಗ್ಯಶಾಲಿ ಪ್ರದೇಶವು ನಿರ್ಜನವಾಯಿತು. ನಿತ್ಯವೂ ಜನರು ದೇಶಾಂತರ ಮಾಡುತ್ತಿದ್ದಾರೆ. ತರತರದ ಸರಕು ಹುಟ್ಟುವ ಪ್ರದೇಶವು ಈಗ ದಾರಿದ್ರ್ಯವಸ್ಥೆಗೆ ಮುಟ್ಟಿದೆ. ಮೊದಲು ಸಾರ್ವಜನಿಕ ಕಚೇರಿಯಲ್ಲಿ ನ್ಯಾಯ ನಿರ್ಣಯವಾಗುತ್ತಿತ್ತು. ಈಗ ಗುಮಾಸ್ತರೇ ನ್ಯಾಯಮೂರ್ತಿಗಳು; ಅವರ ಮನೆಯೇ ದೊಡ್ಡ ಕಚೇರಿ. ಜಮೀನ್ದಾರರ ಮೇಲೂ ಇವರು ಇಲ್ಲದ ಸಲ್ಲದ ಆರೋಪ ಹೊರಿಸಿ, ಶಿಕ್ಷೆ ವಿಧಿಸುತ್ತಾರೆ. ಬೇರೆಯವರ ಕಡೆಯಿಂದ ಜಮೀನ್ದಾರರು ಅಪರಾಧ ಮಾಡಿದರೆಂದು ಜಗಳ ಹುಟ್ಟಿಸಿ ಶಿಕ್ಷೆ ವಿಧಿಸುತ್ತಾರೆ. ನಿಜವಾಗಿ ನೋಡಿದರೆ, ನಮ್ಮ ಜನರೇ ಅಪರಾಧ ಕೃತ್ಯ ಮಾಡುತ್ತಾರೆ.”

ವಿಲಿಯಮ್ ಬೋಲ್ಟ್ಸ್‌ರವರು ಬರೆಯುವದೇನಂದರೆ.—ಕಂಪನಿ ಸರಕಾರದಿಂದ ಅಮಿತವಾಗಿ ಪೀಡಿಸಲಾಗುತ್ತದೆಂದು ಈಗ ನಿಶ್ಚಯವಾಗಿ ಹೇಳಬಹುದು. ಇದರಿಂದ ನೇಕಾರರಿಗೂ, ಇತರ ಕೈಗಾರಿಕೆಯವರಿಗೂ ಬಹಳ ಕಷ್ಟವಾಗಿಯದೆ. ಪ್ರತಿಯೊಬ್ಬ ನೇಕಾರನು ಕೊಡಬೇಕಾದ ಸರಕುಗಳ ಪರಿಮಾಣವನ್ನು, ದರವನ್ನೂ ಬ್ರಿಟಿಶರು ತಮ್ಮ ಬಲವಾದ ಆಲೋಚನೆಯಿಂದ ನಿಶ್ಚಯಿಸಿಬಿಡುತ್ತಾರೆ. ಆ ಮೇಲೆ ಗುಮಾಸ್ತರಿಗೆ ಒಪ್ಪಿಸುತ್ತಾರೆ. ಗುಮಾಸ್ತರು ಪಟ್ಟಣಕ್ಕೆ ಬಂದು ದಲಾಲರಿಂದ ನೇಕಾರರಿಗೆ ಕರೆಕಳುಹಿಸುತ್ತಾರೆ. ಮತ್ತು ಕಂಪನಿ ಸರಕಾರಕ್ಕೆ ಇಂತಿಷ್ಟು ದರದಿಂದ, ಇಂತಿಷ್ಟು ಸರಕುಗಳನ್ನು, ಇಂತಿಷ್ಟು ಅವಧಿಯಲ್ಲಿ ಒಪ್ಪಿಸಿ ಕೊಡತಕ್ಕದ್ದೆಂದು ಕರಾರು ಬರೆಸಿಕೊಳ್ಳುತ್ತಾರೆ. ಕೆಲವು ಹಣವನ್ನು ಮುಂಚೆ ಕೊಡುವದಾಗಿ ಕೂಡ ಹೇಳುತ್ತಾರೆ. ನೇಕಾರನಿಗೆ ಬಿಕ್ಕಲ್ಲ. ಗುಮಾಸ್ತರು ಹೇಳಿದಂತೆ ನೇಕಾರನು ಸೈನು ಮಾಡಿ ಕೊಡಬೇಕು. ಒಪ್ಪದಿದ್ದರೆ ಚಿತ್ರಹಿಂಸೆ ಮಾಡುತ್ತಾರೆ. ನೇಕಾರರು ತಮ್ಮ ಸರಕುಗಳನ್ನು ಬೇರೆ ಯಾರಿಗೂ ಕೊಡಲಾಗದು. ಗುಮಾಸ್ತರಿಗೇ ಕೊಡಬೇಕು. ಒಬ್ಬ ಗುಮಾಸ್ತನು ಹೇಳಿದರೆ ಇನ್ನೊಬ್ಬನು ಬರುತ್ತಾನೆ. ಗುಮಾಸ್ತರ ದುಷ್ಕೃತ್ಯಗಳನ್ನು, ಪೀಡನೆಗಳನ್ನು ಕಲ್ಪಿಸಲಿಕ್ಕೂ ಸಾಧ್ಯವಿಲ್ಲ. ನೇಕಾರರಿಗೆ ಪೇಟೆಯ ದರ ನೂರಕ್ಕೆ ೪೦ ಕ್ಕೆ ಮಿಕ್ಕಿ ಕಡಿಮೆ. ದರದಿಂದ ತಮ್ಮ ಸರಕುಗಳನ್ನು ಮಾರಲು ಒತ್ತಾಯಿಸಾಗುತ್ತದೆ. ನೇಕಾರರು ಈ ದರದಿಂದಲ್ಲಿ ಸಾಯುವರು. ಅವರು ತರುವ ಹಣವು ಅವರಿಂದ ಕಸ್ತೂಲಿಸಲಾಯಿತು. ಮಲಮಲ ದರ. (ಕಂಪನಿ ಸರಕಾರದ ನಿಬಂಧನೆ) ನೇಕಾರರ ಇತರ ಸಾಮಗ್ರಿಗಳನ್ನು ಜಪ್ತು ಮಾಡುತ್ತಾರೆ. ನಾಗರೀಕ ಜನರ ಮೇಲೂ ಹೀಗೆಯೇ ಅನ್ಯಾಯ ನಡೆಯಿತು. ನಾಗರೀಕರೆಂದರೆ—ರೇಶ್ಮೆ ಸುತ್ತುವ ಜನರು. ಇವರು ಕಂಪನಿಯವರ ಅನ್ಯಾಯವನ್ನು ಸಹಿಸಲಾರದೆ ನೆತ್ತುವ ಕೆಲಸಕ್ಕೆ ಆವಶ್ಯಕವಾದ ತಮ್ಮ ಹೆಬ್ಬೆಟ್ಟುಗಳನ್ನು ಕೊಯ್ದುಕೊಂಡು ಬಿಟ್ಟರು. ಸುತ್ತುವ ಕೆಲಸವು ಗುಮಾಸ್ತರು ತಮಗೆ ಹತ್ತಬಾರದೆಂದು ಕೊಯ್ದುಕೊಂಡರು.

೧೭—೩—೧೭೬೬ ದಿನ ಕಂಪನಿ ಸರಕಾರವು ಹಿಂದುಸ್ಥಾನದೊಳಗಿನ ತಮ್ಮ ನೌಕರರಿಗೆ ಬರೆದದ್ದೇನಂದರೆ:—ರೇಶ್ಮೆ ಸುತ್ತುವ ಜನರಿಗೆ ಕಂಪನಿಯ ಗಿರಣಿಯಲ್ಲಿ ಕೆಲಸಮಾಡಲು ಒತ್ತಾಯಪಡಿಸಬೇಕು, ಮನೆಯಲ್ಲಿ ಕೆಲಸಮಾಡಲು ಪ್ರತಿಬಂಧಿಸಬೇಕು, ೧೭೮೩ನೇ ಇಸವಿಯಲ್ಲಿ ಹಿಂದುಸ್ಥಾನದೊಳಗಿನ ನ್ಯಾಯದಾನದ ಕಾರಭಾರವನ್ನು ಪರಾಂಬರಿಸಲು ಒಂದು ಕಮಿಟಿಯು ನೇಮಕವಾಯಿತು. ಅವರು ಮೇಲ್ಕಂಡ ೧೭—೩—೧೭೬೬ ದಿನ ಬರೆದ ಪತ್ರದ ಬಗ್ಗೆ ಅಭಿಪ್ರಾಯಪಟ್ಟದ್ದೇನಂದರೆ.—“ಈ ಪತ್ರದಲ್ಲಿ ಕಂಪನಿ ಸರಕಾರದ ಧೋರಣವು ವ್ಯಕ್ತವಾಗಿದೆ. ಬಂಗಾಲದ ಸ್ಥಿತಿಯು ಸ್ಪಷ್ಟವಾಗಿ ಕಾಣುತ್ತದೆ. ಬಂಗಾಲದೊಳಗಿನ ಕೈಗಾರಿಕೆಗಳು ಇವರಿಂದ ನಷ್ಟವಾಗುವವು. ಈ ಧೋರಣದಿಂದ ಇಡೀ ಪ್ರದೇಶದ ಅವಸ್ಥೆಯೇ ಬದಲಾಗುವದು. ಗ್ರೇಟ್ ಬ್ರಿಟನ್ನಿನೊಳಗಿನ ಕೈಗಾರಿಕೆಯವರಿಗೆ ಅವಶ್ಯವಿದ್ದ ಕಚ್ಚಾ ಮಾಲನ್ನು ಪೂರೈಸಲು ಅನುಕೂಲವಾಗುವದು. ...” ಈ ಕಮಿಟಿಯ ಮುಂದೆ ಸಾಕ್ಷಿ ಕೊಟ್ಟರು. ಅವರು ... ಹಿಂದೀ ಸರಕುಗಳ ಮೇಲೆ ಹೇರಿದ ಪ್ರತಿಬಂಧಕ ...

ವರ್ಣಿಸಿದ್ದಾರೆ ಹಿಂದುಸ್ಥಾನದಿಂದ ಇಲಾಯತಿಗೆ ಬರುವ ಅರಳೆ ವಸ್ತ್ರ ನೂರಕ್ಕೆ ೩ ಪವನು ೭ ಶಿಲಿಂಗ್ ೮ ಪೆನ್ಸು ಕರವಿದೆ ಈ ಕರವನ್ನು ಆಮದಾದ ಕೂಡಲೇ ತೆರಬೇಕು ಇಂಗ್ಲಂಡ್ ದೇಶದಲ್ಲಿಯೇ ಈ ಸರಕು ವಿಲೇವಾರಿಯಾಗ ಬೇಕಾಗಿದ್ದರೆ ನೂರಕ್ಕೆ ೭೮ ಪವನು ೬ ಶಿಲಿಂಗ್ ೮ ಪೆನ್ಸಿನಂತೆ ಸುಂಕ ಕರ ತೆರಬೇಕು ಮಲಮಲುಗಳನ್ನು ಆವದು ಮಾಡುವರೆ ಕೇಳಕೆ ೧೦ ರಷ್ಟು ಕರವನ್ನು ಮೊದಲು ಕೊಟ್ಟು ಅವನ್ನು ದೇಶದಲ್ಲೇ ವಿನಿಯೋಗ ಮಾಡುವದಾದರೆ ೨೭ ಪವನು ೬ ಶಿಲಿಂಗ್ ೮ ಪೆನ್ಸು ತೆರಬೇಕು ಮಲಮಲುಗಳನ್ನು ಪಾರ್ಲಿಮೆಂಟಿನಲ್ಲಿ ಈಗಾದ ಹೊಸ ಕಾನೂನಿನಂತೆ ಹಿಂದುಸ್ಥಾನದೊಳಗಿನ ಅರಳೆ ವಸ್ತ್ರಗಳನ್ನು ಬ್ರಿಟಿಷರು ಉಪಯೋಗಿಸಬೇಕಾದರೆ ಕೇಳಕೆ ೬೮ ಪವನು ೯ ಶಿಲಿಂಗು ೮ ಪೆನ್ಸಿನಂತೆ ಕರಗ ತೆರಬೇಕು ಮಲಮಲುಗಳನ್ನು ಉಪಯೋಗಿಸುವದಾದರೆ ೩ ಪವನು ೯ ಶಿಲಿಂಗು ೮ ಪೆನ್ಸು ತೆರಬೇಕು

ಹೊರೇಸ್ ಹೇಮನ್ ವಿಲ್ಸನ್‌ರವರು ಬ್ರಿಟಿಶ ಘೋರ ನೀತಿಯಿಂದುಂಟಾದ ಪರಿಣಾಮಗಳನ್ನು ತಾತ್ಪರ್ಯದಿಂದ ಹೇಳಿದ್ದಾರೆ ೧೮೧೩ನೇ ಇಸ್ವಿಯ ತನಕ ಹಿಂದೂಸ್ಥಾನದೊಳಗಿನ ಅರಳೆಯ ಹಾಗು ರೇಶ್ಮೆಯ ಸರಕುಗಳನ್ನು ಬ್ರಿಟಿಶ ದೇಶದಲ್ಲಿ ಮಾರಿಕೊಂಡು ಲಾಭ ಪಡೆಯುವದಿತ್ತು ಇಂಥ ಸರಕುಗಳು ಇಂಗ್ಲಂಡ್ ದೇಶದಲ್ಲಿ ತಯಾರಾಗುತ್ತಿದ್ದವು ಆದರೆ ಹಿಂದುಸ್ಥಾನದೊಳಗಿನ ಸರಕುಗಳು ಬ್ರಿಟಿಷ ಸರಕುಗಳ ಅರ್ಧ ಬೆಲೆ ಸಿಕ್ಕುತ್ತಿದ್ದವು ಆದರಿಂದ ಶೇಕಡ ೭೦ ೮೦ ರಂತೆ ತೆರಿಗೆಗಳು ಜಾರಿಯಾದವು ಪ್ರತಿಬಂಧಕ ತೆರಿಗೆಗಳಿಲ್ಲದಿದ್ದರೆ ಪ್ಲೇಸ್ಲಿ-ಮ್ಯಾಂಚೆಸ್ಟರಗಳೊಳಗಿನ ಗಿರಣಿಗಳು ಹುಟ್ಟದಾಗಲೇ ಸಾಯುತ್ತಿದ್ದವು ಹಿಂದೀ ನೇಕಾರರಿಗೆ ಬಲಿಕೊಟ್ಟು ಈ ಗಿರಣಿಗಳು ನಿರ್ಮಿಸಲ್ಪಟ್ಟಿವೆ ಹಿಂದುಸ್ಥಾನ ದೇಶವು ಸ್ವತಂತ್ರವಿದ್ದರೆ ಬ್ರಿಟಿಷ ಸರಕುಗಳ ಮೇಲೆ ಪ್ರತಿಬಂಧಕ ತೆರಿಗೆಗಳನ್ನು ಹೇರಿ ಆತ್ಮಸಂರಕ್ಷಣೆ ಮಾಡಿಕೊಳ್ಳುತ್ತಿತ್ತು ಬಂಗಾಲದಲ್ಲಿ ಕಂಪೆನಿಯ ನೌಕರರು ಬಡ ನೇಕಾರರಿಗೆ ತಂದು ಅವರ ಕಡೆಯಿಂದ ಅವರು ಬಯಸಿದ ಸರಕಗಳನ್ನು ತಮಗೇ ಕೊಡಬೇಕೆಂದು ಕರಾರು ಬರೆಸಿಕೊಳ್ಳುತ್ತಿದ್ದರು ಹೇಳಿದಷ್ಟು ಅವರ ಮನೆಗೆ ಕಳುಹಿಸದಿದ್ದರೆ ಆಜ್ಞೆಯಂತೆ ದಂಡ ತರಬೇಕಾಗುತ್ತಿತ್ತು ಆದಿಗೆ ಪಾತ್ರರನ್ನು ಹಿಡಿದು ದಂಡವನ್ನು ವಸೂಲು ಮಾಡುತ್ತಿದ್ದರು ಹೀಗೆಯೇ ನೇಕಾರರು ಕಂಪನಿ ನೇಕಾರರ ಅಧೀನದಲ್ಲಿದ್ದರು

(ಕ ಟಾ)

ಹುಚ್ಚುನಾಯಿಗಳು ಕಚ್ಚಿದೊಡನೆ ಏನು ಮಾಡಬೇಕು?

ಕಚ್ಚುವ ನಾಯಿಗಳೆಲ್ಲಾ ಹುಚ್ಚು ನಾಯಿಗಳಲ್ಲ ಬೊಗಳುವುದೂ ಕಚ್ಚುವುದೂ ನಾಯಿಗಳ ಸ್ವಭಾವವೆಂಬುದು ನಮಗೆಲ್ಲ ತಿಳಿದುದೇ! ಸ್ಪಷ್ಟವಾಗಿ ಹುಚ್ಚು ನಾಯಿಯೆಂದು ತಿಳಿಯದೆ ಇರುವ ಬೀದಿ ನಾಯಿಯು ನಮ್ಮನ್ನು ಕಚ್ಚಿದರೆ ನಾವು ಅದನ್ನು ಹತ್ತು ದಿನಗಳ ವರೆಗೆ ಕಟ್ಟಿ ಹಾಕಿ ಅದರ ಚರ್ಯೆಯನ್ನು ಪರೀಕ್ಷಿಸುತ್ತಿರಬೇಕು ಹತ್ತು ದಿನಗಳಿದ್ದೂ ಹುಚ್ಚು ಹಿಡಿದಿಲ್ಲವೆಂದು ಸ್ಪಷ್ಟವಾಗಿ ತೋರುವ ವರೆಗೂ ಅದನ್ನು ಕೊಂದು ಹಾಕಕೂಡದು ಅದು ಕಚ್ಚಿದಾಗ ನಾಯಿಗೆ ಹುಚ್ಚಿದ್ದರೆ ಹತ್ತು ದಿನಗಳೊಳಗೆ ರೋಗದ ಚಿಹ್ನೆಗಳನ್ನು ತೋರಿ ತಾನೇ ಸಾಯುವುದು ನಿಜವು ಹತ್ತು ದಿನಗಳಾದ ಮೇಲೆಯೂ ಅದು ಆರೋಗ್ಯವಾಗಿದ್ದರೆ ಅದು ಕಚ್ಚಿದ ಮನುಷ್ಯನಿಗೆ ಚಿಕಿತ್ಸೆ ಮಾಡಬೇಕಾದ ಆವಶ್ಯಕತೆಯಿರುವುದಿಲ್ಲ ಕೆಣಕದೆ ಇದ್ದರೂ ಕೆಲವು ನಾಯಿಗಳು ಅನೇಕ ವೇಳೆ ಮನುಷ್ಯರನ್ನು ಕಚ್ಚಿ ಓಡಿ ಹೋಗುವುವು ಅಂಥಾ ಸಂದರ್ಭಗಳಲ್ಲಿ ಆ ಮನುಷ್ಯರು ಆ ಕ್ಷಣವೇ ಅದಕ್ಕಾಗಿ ಏರ್ಪಟ್ಟಿರುವ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಕೊಳ್ಳಬೇಕು

ಹುಚ್ಚು ನಾಯಿಗಳು ಕಚ್ಚಿದ ಮನುಷ್ಯರು ಮಾಡಬೇಕಾದುದಕ್ಕೆ ಸೂಚನೆಗಳು

(1) ಒಂದು ಗೊತ್ತಿಲ್ಲದ ನಾಯಿಯಾಗಲಿ ನರಿಯಾಗಲಿ ಒಬ್ಬ ಮನುಷ್ಯನನ್ನು ಕಾರಣವಿಲ್ಲದೆ ಕಚ್ಚಿದರೆ ತಡಮಾಡದೆ ಆ ಮನುಷ್ಯನು ಹೋಗಿ ಚಿಕಿತ್ಸೆ ಮಾಡಿಸಿಕೊಳ್ಳಬೇಕು ಅಂಥ ನಾಯಿಗಳಿಗೂ, ನರಿಗಳಿಗೂ ಹುಚ್ಚು ಹಿಡಿದಿರುವುದು ಅನುಭವದಿಂದ ಗೊತ್ತಾಗಿರುವುದು

(2) ಒಂದು ತಿಳಿದ ನಾಯಿಯು ಒಬ್ಬ ಮನುಷ್ಯನನ್ನು ಕಚ್ಚಿದರೆ ಕೊಂದು ಹಾಕದೆ ಅದನ್ನು ಹಿಡಿದು ಭದ್ರವಾಗಿ ಕಟ್ಟಿ ಹಾಕಬೇಕು.

(a) ಕಚ್ಚಿದ ಹತ್ತು ದಿನಗಳಾದ ಮೇಲೆಯೂ ಅದು ಒಡನೆ ಆರೋಗ್ಯವಾಗಿದ್ದರೆ ಅದು ಕಚ್ಚಿದ ಮನುಷ್ಯನು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ಹೋಗಬೇಕೆಂದಿಲ್ಲ

(b) ಆದರೆ ಹತ್ತು ದಿನಗಳೊಳಗೆ ಆ ನಾಯಿಯು ಕಾಯಿಲೆಯಾಗಿ ಸತ್ತರೆ ಆ ನಾಯಿಯು ಕಚ್ಚಿದ ಮನುಷ್ಯನು ಚಿಕಿತ್ಸೆ ಮಾಡಿಸಿಕೊಳ್ಳಲೇ ಬೇಕು ಆ ನಾಯಿಯ ಮೆದುಳಿನ ಭಾಗಗಳನ್ನು ಪರೀಕ್ಷೆಗಾಗಿ ತೆಗೆದು ಕೊಂಡು ಹೋಗಬೇಕು.

(3) ನಾಯಿಯು ಗಾಯವಿಲ್ಲದಂತೆ ಚರ್ಮವನ್ನು ನೆಕ್ಕಿದ್ದರೆ ಅಂಥಾ ಮನುಷ್ಯರು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ಹೋಗಬೇಕಾದುದಿಲ್ಲ

(4) ಸುಮ್ಮನೆ ಹುಚ್ಚು ನಾಯಿಗಳನ್ನು ಮುಟ್ಟಿದರೂ ಮನುಷ್ಯ ಅವರ ಮೇಲೆ ಹೊಸ ಗಾಯಗಳಿಲ್ಲದಿದ್ದರೂ ಅಂಥಾ ಮನುಷ್ಯರು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ಹೋಗಬೇಕಾದುದಿಲ್ಲ.

ಚಟಿಕಿ ಹಾಕುವುದು

ಹುಚ್ಚು ಹಿಡಿದ ಪ್ರಾಣಿಯು ಕಚ್ಚಿದ ಸ್ಥಳದಲ್ಲಿ ನಂಜಿನ ಸ್ವರೂಪ ಅದು ದೇಹದೊಳಗೆಲ್ಲ ಹರಡಿಕೊಳ್ಳುವುದಕ್ಕೆ ಸ್ವಲ್ಪ ಕಾಲ ಹಿಡಿಯುವುದು ಆ ಸ್ಥಳದಲ್ಲಿರುವ ಎಲ್ಲಾ ನಂಜನ್ನೂ ನಾಶ ಮಾಡುವುದಕ್ಕೆ ಆಗದಿದ್ದರೂ ಬಹಳ ಭಾಗವನ್ನು ತಕ್ಕ ಕ್ರಮಗಳಿಂದ ನಾಶಮಾಡಬಹುದು ಆ ಭಾಗದಲ್ಲಿ ತಾತ್ಸಾರ ಮಾಡಕೂಡದು ಏಕೆಂದರೆ—ನಂಜು ಶರೀರದೊಳಗೆ ಎಷ್ಟು ಹರಡದೋ ಅವಕ್ಕೆ ಸರಿಯಾದಷ್ಟು ರೋಗ ತಗಲುವ ಅಪಾಯವಿರುವದು ಆ ನಂಜಿನಲ್ಲಿ ವಿಶೇಷ ಭಾಗವನ್ನು ನಾಶಮಾಡುವುದರಿಂದ ಅದಕ್ಕೆ ತಕ್ಕ ಹಾಗೆ ರೋಗ ತಗಲುವ ಅಪಾಯವೂ ಕಡಿಮೆಯಾಗುವುದು ಕಚ್ಚಲ್ಪಟ್ಟ ಮನುಷ್ಯನು ಆ ಕ್ಷಣವೇ ಆಸ್ಪತ್ರೆಗೆ ಹೋಗಿ ಆ ಗಾಯಕ್ಕೆ ಚಟಿಕಿ ಹಾಕಿಸಬೇಕು ಅಥವಾ ಒಬ್ಬ ಡಾಕ್ಟರನ್ನು ಬರಮಾಡಿಕೊಂಡು ಚಟಿಕಿ ಹಾಕಿಸಬಹುದು

ಸೂಜಿ ಹಾಕಿಸುವುದು

ಹುಚ್ಚು ಹಿಡಿದ ನಾಯಿಯು ಕಚ್ಚಿದ ರೋಗಿಯು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕಾಗಿ ಕೂನೂರಿಗೆ ಹೋಗಬೇಕು ದಿನಕ್ಕೆ ಒಂದು ಸಾರಿಯ ಪ್ರಕಾರ 14 ದಿನಗಳು ಆ ರೋಗವನ್ನು ಹೋಗಲಾಡಿಸುವುದಕ್ಕೆ ಸೂಜಿ ಹಾಕುತ್ತಾರೆ ಒಬ್ಬ ಮನುಷ್ಯನಿಗೆ ರೋಗವು ಹೋಗಬೇಕಾದರೆ ಕಾಲ ಹಿಡಿಯುವುದು ಹುಚ್ಚು ಹಿಡಿದ ನಾಯಿಯು ಕಚ್ಚಿದ ಕೂಡಲೇ ಎಷ್ಟು ಜಾಗ್ರತೆ ಸೂಜಿಯನ್ನು ಹಾಕಿದರೆ ರೋಗವು ಅಷ್ಟು ಜಾಗ್ರತೆಯಲ್ಲಿ ಹೋಗಿಬಿಡುವುದು ಯಾವ ಮನುಷ್ಯನನ್ನಾದರೂ ಹುಚ್ಚು ಹಿಡಿದ ನಾಯಿಯು ಕಚ್ಚಿದ ಎಷ್ಟು ಕಾಲದ ಮೇಲೆ ಅವನಲ್ಲಿ ರೋಗವು ಕಾಣಿಸಿಕೊಳ್ಳುವದೋ ಅದನ್ನು ಮುಂದಾಗಿ ಹೇಳುವದಕ್ಕೆ ಆಗದೆ ಇರುವದರಿಂದ ಈ ಸೂಜಿ ಹಾಕಿಸಿಕೊಳ್ಳುವುದು ಬಹಳ ಮುಖ್ಯವಾಗಿರುವುದು ರೋಗವು ಬಲಿಯುವುದಕ್ಕಿಂತ ಮುಂಚಿತವಾಗಿ ಅದನ್ನು ಅಡಗಿಸುವುದೇ ಸೂಜಿ ಹಾಕಿಸುವುದರ ಉದ್ದೇಶವು ಹುಚ್ಚು ನಾಯಿಯು ಕಚ್ಚಿದರೆ ಸಾವಕಾಶವನ್ನು ಮಾಡಕೂಡದು

ರೋಗದ ಭಯ

ಹುಚ್ಚು ನಾಯಿಯು ಕಡಿದರೆ ಎಲ್ಲರಿಗೂ ನಂಜೇರುವುದಿಲ್ಲ ಅಂಥಾ ಮನುಷ್ಯರಿಗೆ ಚಿಕಿತ್ಸೆ ಮಾಡದಿದ್ದರೂ ಸ್ವಾಭಾವಿಕವಾಗಿ ಅವರು ೧೦೦ಕ್ಕೆ ೧೬ರಿಂದ ೨೦ರ ವರೆಗೆ ಹೊಂದಿರುವರು ನಾಯಿಯು ಕಚ್ಚಿದಾಗ ಅವರ ಮೈಮೇಲೆ ಬಹುಶಃ ಬಟ್ಟೆಯಿದ್ದಿದ್ದರೆ ಅದರ ಹಲ್ಲುಗಳು ಚರ್ಮದೊಳಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ಮಧ್ಯ ಇರುವ ಆ ಹೊದಿಕೆ ಬಟ್ಟೆಯು ಅವುಗಳನ್ನು ಒರಸಿ ಶುಚಿ ಮಾಡಿರಬಹುದು ಶರೀರದೊಳಗೆ ಹೋಗಿರುವ ನಂಜಿನ ಪರಿಮಾಣವು ಬಹಳ ಕಡಿಮೆಯಾಗಿರಬಹುದು.

ಹ್ಯಾಗಾದರೂ ರೋಗ ತಗಲಿದೆಯೋ ಇಲ್ಲವೋ ಎಂಬುದನ್ನು ನಿರ್ಣಯ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ ಆದ್ದರಿಂದ ಮುಂದಾಗಿ ಚಿಕಿತ್ಸೆ ಮಾಡಿ ಕೊಳ್ಳುವುದಕ್ಕೆ ತಾತ್ಸಾರ ಮಾಡದಿರುವದು ಅತ್ಯಂತ ಕ್ಷೇಮಕರವಾದ ಉಪಾಯವಾಗಿರುವದು

ಚಿಕಿತ್ಸೆ ಮಾಡಿಸಿಕೊಳ್ಳದೆ ಇದ್ದರೆ ನಿಜವಾಗಿಯೂ ಹುಚ್ಚು ಹಿಡಿದ ನಾಯಿಗಳು ಕಚ್ಚಿದ ಮನುಷ್ಯರಲ್ಲಿ ಶೇಕಡಾ 30 ಅಥವಾ 40 ಜನರಿಗೆ ರೋಗವು ಕಾಣಿಸಿಕೊಂಡು ಸತ್ತು ಹೋಗಿರುವದಕ್ಕೆ ದಾಖಲೆ ಇರುವದು ಮನುಷ್ಯರಲ್ಲೇ ಆಗಲಿ ನಾಯಿಯಲ್ಲೇ ಆಗಲಿ ರೋಗವು ಬೆಳೆದ ಮೇಲೆ ಗುಣವಾಗುವುದಿಲ್ಲ

ಆ ಚ

ಶ್ರೀ ಶಾರದಾಶ್ರಮ, ಪೊನ್ನಂಪೇಟೆ

ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ಶ್ರೀಮತ್ ಸ್ವಾಮಿ ವಿವೇಕಾನಂದರವರ ಜಯಂತ್ಯುತ್ಸವವನ್ನು ಈ ಆಶ್ರಮದಲ್ಲಿ ಇದೇ ತಿಂಗಳು 28ನೆಯ ಶನಿವಾರ ದಿವಸ ಆ ಮಹಾತ್ಮರ ಶಿಷ್ಯರೂ ಭಕ್ತರೂ ಸೇರಿ ನಡಸ ತಕ್ಕದಾದ ಕಾರಣ ಈ ಉತ್ಸವಕ್ಕೆ ತಾವು ತಮ್ಮ ಮಿತ್ರಮಂಡಲಿಯೊಡನೆ ದಯಮಾಡಿಸಿ ಆ ಪುಣ್ಯಪುರುಷರ ಪರಮಪಾವನ ಚರಿತ್ರೆಯನ್ನೂ, ಉಪದೇಶಗಳನ್ನೂ ಶ್ರವಣಮಾಡಿ ಕೃತಾರ್ಥರಾಗಬೇಕೆಂದು ಕೋರುತ್ತೇವೆ

ಉತ್ಸವ ಕ್ರಮ

೧ ಪೂಜಾಭಾಗ — ಬೆಳಿಗ್ಗೆ ೯ರಿಂದ ೧೨ ಘಂಟೆ ವರೆಗೆ

೨ ಭಕ್ತಾದಿಗಳ ಸಂತರ್ಪಣೆ — ೧೨ರಿಂದ ೩ ವರೆಗೆ

೩ ಉಪನ್ಯಾಸ —ಕನ್ನಡ — ೪ರಿಂದ ೬ರ ವರೆಗೆ

ವಿಷಯ —ಶ್ರೀ ಸ್ವಾಮಿ ವಿವೇಕಾನಂದರವರ ಸಂದೇಶ—ಡಾಕ್ಟರ್ ಎಂ ಎಚ್ ಕೃಷ್ಣಯ್ಯಂಗಾರ್, ಎಂ ಎ ಡಿ ಲಿಟ್ (ಲಂಡನ) ಪ್ರೊಫೆಸರ್, ಮೈಸೂರ ಮಹಾರಾಜರವರ ಕಾಲೇಜು

ಶ್ರೀರಾಮಕೃಷ್ಣದೇವರ ಚರಿತ್ರೆ ಮತ್ತು ಉಪದೇಶಗಳು — ಮ|| ರಾ|| ಕೆ ವೆಂಕಟರಾಮಯ್ಯನವರು, ಬಿ ಎ ಬಿ ಟಿ ಮೈಸೂರು ಗವರ್ನಮೆಂಟ್ ಕನ್ನಡ ಟ್ರೈನಿಂಗ ಲೇಡರ್

ಶ್ರೀರಾಮಕೃಷ್ಣ ಸಂಸ್ಥೆ—

ರಾವ್ ಸಾಹೇಬ್ ಕೆ ಚೆನ್ನಯ್ಯನವರು.

ಶ್ರೀಮತ್ ಸ್ವಾಮಿ ಸಿದ್ಧೇಶ್ವರಾನಂದಜೀಯವರ ಅನುಗ್ರಹ ಮತ್ತು ಉಪಸಂಹಾರ.

೪ ಭಜನೆ — ೬ರಿಂದ ೯ರ ವರೆಗೆ

ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ

೫ ಹರಿಕಥೆ— ರಾತ್ರಿ ೧೦ ರಿಂದ

ವೇ|| ಸೂರದಾಸ್ ಮ|| ರಾ|| ಹೆಚ್ ರಾಮಶಾಸ್ತ್ರಿಯವರಿಂದ

11ನೇ ಏಪ್ರಿಲ್ 1928 — ನಿರ್ಮಲಾನಂದ

(ಅಂದು ಬೆಳಿಗ್ಗೆ ವೀರಾಜಪೇಟೆಯಿಂದ ಪೊನ್ನಂಪೇಟೆಗೆ ಬಸ್ಸು ನಡಸುವ ಏರ್ಪಾಡಾಗುವದೆಂದು ಸುದ್ದಿ ಇದೆ)

ನೋಟೀಸು.

ಎಡೆನಾಲ್ಕುನಾಡಿನ ಎಲ್ಲಾ ಕೋಪರೇಟಿವ್ ಸೊಸೈಟಿಗಳು ಸೆಂಟ್ರಲ್ ಬ್ಯಾಂಕಿನಿಂದ ಸಾಲ ಪಡೆಯಲು ಬ್ಯಾಂಕಿಗೆ ಅರ್ಜಿ ಕಳುಹಿಸಬೇಕಾದರೆ ಸದರಿ ಅರ್ಜಿಯು ಎಡೆನಾಲ್ಕುನಾಡು ಯೂನಿಯನ್ ಮೂಲಕ ಬಂದ ವಿನಹ ಮಂಜೂರಾಗುವುದಿಲ್ಲವಾಗಿ ಈ ಮೂಲಕ ತಿಳಿಸಲಾಗಿದೆ

ಮಡಿಕೇರಿ — ಸಿ ಯಸ್ ವೆಂಕಟಪ್ಪಯ್ಯ

ತಾ 13—4—28 — ಗೌರವ ಕಾರ್ಯದರ್ಶಿ

ಸುರಾ—ದೇವಿ.

|| ಭಾಮಿನೀ ಷಟ್ಪದಗಳು ||

ಮರುಳ ಮನುಜರು ಬಯ್ಸಿ ನಿನ್ನನು ।
ಭರದಿ ಸೇವಿಸ ನಿನ್ನ ಕೃಪೆಯಿಂ ।
ಆವಗಳಿಗೆ ನಿನ್ನಂತ್ಯ ಸೇವೆಯ ಗೈದೆ ಮೋಡಿಸವೆ ||
ಉರಿಯ ಹುಚ್ಚಿನ ದೇಹ ಮಧ್ಯದಿ, ।
ಮರೆತು ಎಸಿಸುವಿ ದೇಹ ಭಾವನೆ ।
ಹಿರಿಯ ಕಿರಿಯರು ಎಂಬ ಅಂಜಿಕೆ ತೆಗೆದು ಹಾಕಿಸುವಿ||೧|
ಹರಣ ಮಾಡುತ ಧನದ ನಿಧಿಯಂ ।
ಪರಟೆಯೊಂದನ ಕೊಡ ಕೈತವದಿ ।
ಹೊರಳಿಸುವಿ ಯ್ಯೋ ಕತ್ತೆಯಂದದಿ ತಿಪ್ಪೆತಿಪ್ಪೆಯಲಿ||
ಮರೆತು ಬಿಡಿಸುವಿ ಕುಲದ ಗೋತ್ರವ ।
ತೊರೆದು ಬಿಡಿಸುವಿ ಮಾನಮನ್ನಣೆ ।
ನಿರುತ ಕಲಿಸುವಿ ಜಗಳ ಜೂಟಿಯ ಕಳವು ಸುಲಿಗೆಯನ ||೨|
ಭರದಿ ಸೇವಿಸ ನಿನ್ನ ಚರಣವ ।
ನರರನಟ್ಟುವ ಸೆರೆಯಮನೆಯೊಳು ।
ಮರಣಮಾಡುವಿ ಕಟ್ಟಕಡೆಯೊಳು ಜೀವರಕ್ಷವನು ||
ಸೆರೆಯ ಗಡಿಗೆ ಕರ ಕುಡಿಯ ಬೇಡಿರಿ ।
ಸೆರೆಯ ತೊಟ್ಟನು ಎಂದು ಪೇಳುವ ।
ಸೆರೆಯ ಹಾಕಲು ಬೋಧ ನೀಡಿದ ಗಾಂಧಿ ಮಹಾತ್ಮರನು||೩|

ಸುವಾಸಿನಿ'

ಸಹಕಾರಿ ಸೆಂಟ್ರಲ್ ಬ್ಯಾಂಕ್

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಹೊಸ ಡೈರೆಕ್ಟರ ಗಳ ಪ್ರಥಮ ಮೀಟಿಂಗು ಬ್ಯಾಂಕಿನ ಆಫೀಸಿನಲ್ಲಿ ತಾ 1೯ರಲ್ಲಿ ನಡೆಯಿತು ಹಾಜರಿದ್ದವರು—ರಾ ಸಾ ಪಟ್ಟಮಾಡ ದೇವಯ್ಯನವರ ಮೆ ಗಳಾದ ಯಂ ಸಿದ್ಲಿಂಗಪ್ಪನವರ ಪಾಂಡಂಡ ಪೊಂಗಪ್ಪನವರ ಯಂ ಯಂ ಬೆಳ್ಳಿಯಪ್ಪನವರ ಸಿ ಬಿ ಬೆಳ್ಯಪ್ಪನವರು ಮತ್ತು ಗೌರವ ಸೆಕ್ರೆಟರಿಯಾದ ಸಿ ಯಸ್ ವೆಂಕಟಪ್ಪಯ್ಯನವರು ಉತ್ತರ ಕೊಡಗಿನ ಕೋಆಪರೇಟಿವ ಇನ್ಸ್‌ಪೆಕ್ಟರೂ ಹಾಜರಿದ್ದರು. ಖಾಯಂ ಅಧ್ಯಕ್ಷರು ಗೈರಹಾಜರಾದುದರಿಂದ ರಾ ಸಾ ಪಿ ದೇವಯ್ಯನವರು ಛೇರ್‌ಮ್ಯಾನರಾಗಿ ಆರಿಸಲ್ಪಟ್ಟರು

1 ಕಳದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು

2 ಮಾರ್ಚಿ ತಿಂಗಳ ಲೆಖ್ಖ ಓದಿ ಮಂಜೂರು ಮಾಡಲಾಯಿತು.

3 ಈ ಕೆಳಗಿನ ಕೋ ಸೊಸೈಟಿಗಳಿಗೆ ಸಾಲ ಮಂಜೂರು ಮಾಡಲಾಯಿತು 1 ಸಂಪಾಜೆ ಸಂಘಕ್ಕೆ ರೂ 900 2 ಅರ್ಜಿಗ ರೂ 1000 3 ಮಡಿಕೇರಿ ಪಟ್ಟಣಕ್ಕೆ ರೂ 1500 4 ಬೇಗೂರು ರೂ 2500, 5 ಪಾಕತ್ತೂರು ರೂ 1500 6 ಹೊಸೂರು ರೂ 500, 7 ಕಿತ್ತೂರು ರೂ 2000, 8 ಕೋಟೂರ ರೂ 1300, 9 ಆರಪಟ್ಟಿ ರೂ 1500 10 ಹುದೂರು ರೂ 1500 11 ಮತ್ತೂರು ರೂ 1500, 12 ಕೊಡ್ಲಿಪೇಟೆ ರೂ 1000 13 ಕಳಿಯಂಡ ?? ರೂ ?? 14 ಕುಂಬಗೇರಿ ರೂ 2000, 15 ದೇವಣಗೇರಿ ರೂ 2000 16 ಇಬ್ನಿವಳವಾಡಿ ರೂ 1000, 17 ಐಮಂಗಲ ರೂ 1000 18 ಕಡಗದಾಳು ರೂ 1000 19 ಸಲಕ್ಕಲ (ಪೊನ್ನಂಪೇಟೆ) ರೂ 500, 20 ಬೆಕ್ಕೆಸೊಡ್ಲೂರು ರೂ 1200, 21 ಕಾವಾಡಿ ರೂ 1500, 22 ಮುಳ್ಳೂರು ರೂ 1000 ಮತ್ತು 23 ಹಾರಂಗಿ ರೂ 800.

ಸರಿಯಾದ ಫಾರಂನಲ್ಲಿ ಅರ್ಜಿ ಬರೆಯದ್ದರಿಂದ ಬೇಟೋಳಿ ಸಂಘಕ್ಕೂ ಪೆರಂಬಾಡಿ ಸಂಘಕ್ಕೆ ನಾಯಿದೆ ಮೀರಿದ ಸಾಲ ತುಂಬಾ ಬಾಕಿ ಇರುವದರಿಂದ ಕೊಟ್ಟಗೇರಿ ಮತ್ತು ಕೆದಮುಳ್ಳೂರು ಸಂಘಗಳಿಗೂ ಸಾಲ ಮಂಜೂರು ಮಾಡಲಾಗಲಿಲ್ಲ

ಇನ್ನು ಕೆಲವು ಚಿಲ್ಲರೆ ಸಂಗತಿಗಳನ್ನು ಚರ್ಚಿಸಿದನಂತರ ಮೀಟಿಂಗು ಬರಕಾಸ್ತಾಯಿತು.

ಪಿ ದೇವಯ್ಯ.
(ಅಧ್ಯಕ್ಷ)

ವರ್ತಮಾನ ಸಂಗ್ರಹ.

ಒಳನಾಡು.

ಕಣ್ಣಾನೂರಿನ ಶ್ರೀಯುತ ವಿಶ್ವೇಶ್ವರ ದಾಸರವರು ಈಗ ಕೇರಿಯಲ್ಲಿ ಹರಿಕೀರ್ತನೆಗಳನ್ನು ಮಾಡುತ್ತಿರುವರು.

ಕೊಡವ ಮಹಾಸಭೆಯ ವಾರ್ಷಿಕ ಜನರಲ್ ಮೀಟಿಂಗ್ ತಾ 3ರಲ್ಲಿ ವೀರರಾಜಪೇಟೆಯಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ಬೇಗ್ ಕಮಿಷನರವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಸಭೆ ಮೀಟಿಂಗಿಗಾಗಿ ಈ ವಾರ ನಾಗರಹೊಳೆ ಕ್ಯಾಂಪಿಗೆ ಹೋಗುವರೆಂದು ವರ್ತಮಾನ.

ಮಡಿಕೇರಿ ವಿಕ್ಟೋರಿಯ ಮೋಟಾರು ಸರ್ವಿಸಿನ ಮಾಲಿಕರಾಗಿದ್ದ ಮಿ. ಸಭಾಪತಿ ಮೊದಲಿಯಾರ್‌ರವರು ತಾ. 14 ರಲ್ಲಿ ದೈವಾಧೀನರಾದದ್ದಕ್ಕೆ ವ್ಯಸನಪಡುತ್ತೇವೆ.

ಮದ್ರಾಸಿನ ಫಾರೆಸ್ಟ್ ಕಾಲೇಜಿನಿಂದ ಹಿಂತಿರುಗಿ ಬಂದ ಮಿ. ಬಿದ್ದಂಡ ಚಂಗಪ್ಪನವರು ರಜೆ ತೀರಿ ಈಗ ತಿತಿಮತಿಯಲ್ಲಿ ರೇಂಜರ್ ಕೆಲಸದ ಚಾರ್ಜನ್ನು ವಹಿಸಿಕೊಂಡಿರುವರೆಂದು ತಿಳಿಯಬರುತ್ತದೆ.

ಸೈಮನ್ ಕಮಿಷನಿಗೆ ರಾಜಕೀಯ ಪರಿಸ್ಥಿತಿಯ ವಿಷಯ ಅಭಿಪ್ರಾಯ ಕೊಡಲು ಕಳೆದವಾರ ಪ್ರಕಟಿಸಿದವರಿಗೆ ಮಾತ್ರವಲ್ಲ, ಅತ್ತೀಚೆಗೆ ಇನ್ನೂ ಹಲವರಿಗೆ ಕಮಿಷನಿಂದ ಪತ್ರ ಕಳುಹಿಸಲಾಗಿದೆ ಎಂದು ತಿಳಿಯುತ್ತೇವೆ.

ತಾ. 14 ರಲ್ಲಿ ಮುಗಿದ ಎತ್ಲೆಟಿಕ ಅಸೋಸಿಯೇಶನ್ನಿನ ಟೆನ್ನಿಸ್ ಟೂರ್ನಮೆಂಟಿನ ಆಖೈರು ಆಟದಲ್ಲಿ ದಕ್ಷಿಣ ಕೊಡಗಿನ ಪಟ್ಟಮಾಡ ಬೋಪಣ್ಣನವರು ಉತ್ತರ ಕೊಡಗಿನ ಬೆಳ್ಯಪ್ಪನವರನ್ನು ಸೋಲಿಸಿ ಇನಾಮಿನ ಕಪ್ಪನ್ನು ಗೆದ್ದರು.

ಸೈಮನ್ ಕಮಿಷನನ್ನು ಎಲ್ಲಾ ವಿಧಗಳಲ್ಲೂ ಬಹಿಷ್ಕರಿಸಬೇಕೆಂದು ಜಮೀನ್ದಾರರ ಸಂಘವು ಅವರ ತಾ. 2—2—'28 ರ ಮಹಾಸಭೆಯಲ್ಲಿ ತೀರ್ಮಾನಿಸಿರುವದರಿಂದ ಸದರಿ ಸಂಘದ ಮೆಂಬರುಗಳ್ಯಾರೂ ಈ ಕಮಿಷನ್ನಿಗೆ ಅಭಿಪ್ರಾಯ ಕಳುಹಬಾರದೆಂದು ಸಂಘದ ಸೆಕ್ರಟರಿಯವರು ಸರ್ಕ್ಯುಲರು ಕಳುಹಿಸಿರುವರೆಂದು ತಿಳಿಯುತ್ತದೆ.

ಕಳೆದ ಸಂಚಿಕೆಯ ಒಳನಾಡು ವರ್ತಮಾನದಲ್ಲಿ ಮದ್ರಾಸ ಫಾರೆಸ್ಟ್ ಕಾಲೇಜಿನ ಪ್ರೊವಿನ್ಶಿಯಲ್ ಕ್ಲಾಸಿನಲ್ಲಿ 3ನೇಯವನಾಗಿ ಪಾಸಾದ ಮಿ. ಸುರಾಜುದ್ದೀನ್ ಸಯ್ಯದ್‌ರವರು ಸಂಸ್ಥಾನದಿಂದ ಕಳುಹಿಸಲ್ಪಟ್ಟವರಾದರೂ ಅವರು ಕೊಡಗಿನವರೇ. ಅವರು ಅಮ್ಮತ್ತಿನಾಡಿನ ಬಿಳುಗುಂದ ಗ್ರಾಮದ ಸಯ್ಯದ್ ಗೌಸ್‌ರವರ ಪುತ್ರರು.

ಕೊಡಗು ಎತ್ಲೆಟಿಕ್ ಅಸೋಸಿಯೇಶನ್ನಿನ ಟೆನ್ನಿಸ್ ಟೂರ್ನಮೆಂಟು ತಾ. 16 ರಿಂದ ಕಾಸ್ಮೊಪಾಲಿಟನ್ ಕ್ಲಬ್ ಟೆನ್ನಿಸ್ ಕೋರ್ಟಿನಲ್ಲಿ ಪ್ರಾರಂಭವಾಗಿದೆ. ತಾ. 18ರಲ್ಲಿ ನಡೆದ ಸಿಂಗಲ್ಸ್ ಆಖೈರು ಆಟದಲ್ಲಿ ಮಿ. ಕೊರವಂಡ ಬಿದ್ದಯ್ಯನವರು ವೆ. ಯಸ್. ಒಡಪ್ಪನವರನ್ನು ಸೋಲಿಸಿ ಇನಾಮಿನ ಕಪ್ಪನ್ನು ಗೆದ್ದರು. ಡಬ್ಬಲ್ಸ್ ಆಟಗಳು ನಡೆಯುತ್ತಿವೆ.

ಮಿ. ನರಿಕೇರಿಯಂಡ ಚೆಣ್ಣಪ್ಪನವರ ರಜೆ ಮುಗಿದು ಈಗ ವಿರಾಜಪೇಟೆಯಲ್ಲಿ ಪ್ರಾಸಿಕ್ಯೂಟಿಂಗ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ ಕೆಲಸದ ಚಾರ್ಜು ತೆಗೆದುಕೊಂಡಿರುವರು. ಸಬ್ ಇನ್ಸ್‌ಪೆಕ್ಟರುಗಳಾದ ಮಿ. ಚೇಂದ್ರಿಮಾಡ ಮುತ್ತಣ್ಣನವರು ವಿರಾಜಪೇಟೆಯಿಂದ ಸಿದ್ದಾಪುರಕ್ಕೂ, ಮಿ. ಕಂಡ್ರತಂಡ ಕಾರ್ಯಪ್ಪನವರನ್ನು ವಿರಾಜಪೇಟೆ ಪಟ್ಟಣಕ್ಕೂ ವರ್ಗಾಯಿಸಿರುವರು.

ಹಿಂದೂದೇಶ.

ಹೌರ ಮುನಿಸಿಪಾಲಿಟಿಯ ಜೋಟಗಳ ಮುಷ್ಕರವು ಅಂತ್ಯವಾಗಿದೆ. ಈಗ ಅವರೆಲ್ಲರೂ ಎಂದಿನಂತೆ ಕೆಲಸ ಮಾಡುತ್ತಿದ್ದಾರೆ.

ಕೇರಳ ಸಂಸ್ಥಾನಗಳ ಪ್ರಜೆಗಳ ಕಾನ್‌ಫರೆನ್ಸ್ ತಾ. ರಲ್ಲಿ ಮಿ. ಆರ್. ಕಣ್ಮಗಂಚೆಟ್ಟಿ ಯಂ. ಯಲ್ ಎ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಲಾಲಾ ಲಜಪತರಾಯರು ಹಾಜರಿದ್ದರು.

ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧ್ಯಕ್ಷರಾದ ಸಾಮಧಾರಿ ವಿ. ಜೆ. ಪಟೇಲರವರಿಗೆ ತಾ. 11ರಲ್ಲಿ ಪಂಜಾಬಿನ ಕೆಲವು ಮುಂದಾಳು ಸೇರಿ ಒಂದು ಟೀ ಪಾರ್ಟಿಯನ್ನು ಕೊಟ್ಟರು. ಎಲ್ಲಾ ಪಂಗಡಗಳ ಮುಂದಾಳುಗಳು ಹಾಜರಿದ್ದರು.

ಮಿ. ಸಿ. ಯಸ್ ..ರವರು ಕಳೆದ ವಾರ ಬೊಂಬಾಯಿಯಲ್ಲಿ ವೈಸರಾಯ ಎಗ್ಸಿಕ್ಯೂಟಿವ್ ಕೌನ್ಸಿಲಿನ ಲಾ ಮೆಂಬರ ಚಾರ್ಜನ್ನು ಮಿ. ಮುಲ್ಲಿರವರಿಗೆ ವಹಿಸಿ ಇಂಗ್ಲೆಂಡಿಗೆ ಹೊರಟು ಹೋದರು. ಮಿ. ಮುಲ್ಲರವರು ತಾ ರಲ್ಲಿ ಸಿಮ್ಲಾಕ್ಕೆ ತಲಪಿರುವರು.

ಬೊಂಬಾಯಿಯ ಗಿರಣಿಗಳ ಕೆಲಸಗಾರರ ಮುಷ್ಕರವು ಪುನಃ ಪ್ರಾರಂಭವಾಗಿದೆ. ಈಗ 19 ಗಿರಣಿಗಳ ಸುಮಾರು 32,000 ಕೆಲಸಗಾರರು ಕೆಲಸಕ್ಕೆ ಹೋಗದೆ ಸುಮ್ಮನಿರುವರು. ಉಳಿದ ಗಿರಣಿಗಳ ಎಲ್ಲಾ ಕೆಲಸಗಾರರೂ ಕೆಲಸಕ್ಕೆ ಹೋಗದಂತೆ ಮಾಡಲು ಚಳವಳ ನಡೆಯುತ್ತಿಯಂತೆ.

ಶೃಂಗೇರಿ ಕಾರ್ಯದ ಬಗ್ಗೆ ಇಂದೂರಿನ ಮಹಾರಾಜರಾದ ಸರ್ ತುಕೋಜಿರಾವ್‌ರವರು ಎರಡು ಲಕ್ಷ ರೂಪಾಯಿಗಳನ್ನು ಶ್ರೀ ಶಂಕರಾಚಾರ್ಯರಿಗೆ ಅರ್ಪಿಸಿರುವರು.

ಕಳೆದ ವರ್ಷ ವಿಮೆ ಕಂಪನಿಗಳ ಮೂಲಕ 48 ಕೋಟಿ ರೂಪಾಯಿಗಳು ಇಂಡಿಯಾದಿಂದ ಪರದೇಶಗಳಿಗೆ ಹೋದವೆಂದು ಲೆಕ್ಕ ಹಾಕಲಾಗಿದೆ.

ತಾ. 17ರಲ್ಲಿ ಎರ್ನಾಕುಲಂನಲ್ಲಿ ನಡೆದ ಅಖಿಲ ಕೇರಳ ಗೇಣಿದಾರರ ಕಾನ್ಫರೆನ್ಸಿಗೆ ಶ್ರೀಯುತ ಲಾಲಾ ಲಜಪತರಾಯರು ಅಧ್ಯಕ್ಷರಾಗಿದ್ದರು. ನಂತರ ಅವರು ಹಿಂದೂ ದ ಸಂಗಡಿಗರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಮಲಬಾರಿನಲ್ಲಿ ನಾಲ್ಕು ದಿವಸಗಳವರೆಗೆ ಪ್ರವಾಸ ಮಾಡಿದರು.

ಪಂಡಿತ ಜವಾಹರಲಾಲರವರ ಅಧ್ಯಕ್ಷತೆಯಲ್ಲಿ ನಡೆದ ಪಂಜಾಬು ಪ್ರಾಂತೀಯ ಕಾನ್ಫರೆನ್ಸಿನಲ್ಲಿ ಸೈಮನ್ ಕಮಿಶನಿಗೆ ಬಹಿಷ್ಕಾರ ಹಾಕಬೇಕೆಂದೂ, ಇಂಡಿಯಾದ ರಾಜಕೀಯ ಚಳವಳದ ಉದ್ದೇಶವು ಸಂಪೂರ್ಣ ಸ್ವಾತಂತ್ರ್ಯ ಸಂಪಾದನವಾಗಿರಬೇಕೆಂದೂ ಠರಾವುಗಳು ಪಾಸಾದುವು.

ಕಲ್ಕತ್ತೆಯ "ವಸುಮತಿ" ಪತ್ರಿಕೆಯ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರವರ ಮೇಲೆ ಸಿ ಮಂಬೇರಿ ರಾಮ್ಯಯ್ಯರವರು ತಂದಿದ್ದ ಮಾನನಷ್ಟದ ಮೊಕದ್ದಮೆಯಲ್ಲಿ ಅಪರಾಧಿಗಳು ಕೋರ್ಟಿನಲ್ಲಿ ವಿಷಾದಿಯ ಕ್ಷಮೆ ಕೇಳಿ ಕೊಂಡದ್ದರಿಂದ ಕೇಸು ವಾಪಸು ತೆಗೆದುಕೊಳ್ಳಲಾಯಿತು.

ಜಾಕೊಬಾಬಾದಿನಲ್ಲಿ ನಡೆದ ಸಿಂಧ ಪ್ರಾಂತೀಯ ಖಿಲಾಫತ್ ಕಾನ್ಫರೆನ್ಸಿನಲ್ಲಿ ಬೇರೆ ಠರಾವುಗಳೊಂದಿಗೆ 'ಎಲ್ಲಾ ತರಹದ ವಿದೇಶ ಪದಾರ್ಥಗಳ ನಿಷೇಧವು ಸ್ವರಾಜ್ಯ ರಹಸ್ಯವು ಒಂದು ಮುಖ್ಯ ನಿಬಂಧನೆಯಾಗಿರಬೇಕೆಂದೂ, ಹಿಂದೂ ಮುಂದಾಳುಗಳೆಲ್ಲರೂ ಈ ಚಳವಳಕ್ಕೆ ಸಹಾಯ ಮಾಡಬೇಕೆಂದೂ' ಠರಾವು ಸರ್ವಾನುಮತದಿಂದ ಪಾಸು ಮಾಡಿದರು.

ಇಂಡಿಯಾದ ಆಶ್ರಿತ ಸಂಸ್ಥಾನಗಳ ರಾಜಕೀಯ ಸುಧಾರಣೆಯ ವಿಷಯ ವಿಚಾರಿಸಲು ನೇಮಿಸಿರುವ ಬಟ್ಲರ್ ಕಮಿಷನು ತಾ. 18ರಲ್ಲಿ ಬೊಂಬಾಯಿಯಲ್ಲಿ ಕೆಲಸ ಪ್ರಾರಂಭಿಸಿದೆ. ಅಲ್ಲಿಗೆ ಹಲವು ಸಂಸ್ಥಾನಗಳ ರಾಜರುಗಳು ಹೋಗಿರುವರು. ತಾ. 16ರಲ್ಲಿ ಕೆಲವು ರಾಜರುಗಳು ಸರ್ ಬಟ್ಲರರಿಗೆ ಒಂದು ಪಾರ್ಟಿಯನ್ನು ಮಾಡಿದರು.

ಬಾಲ್ಯ ವಿವಾಹವು ಬಂಗಾಳದಲ್ಲಿ ಜೋರಿನಿಂದ ನಡೆಯುತ್ತದೆ. ಕ್ರಿಶ್ಚನ್ ಅಸೋಸಿಯೇಶನ್ನಿನ ಡೆಪ್ಯುಟೇಶನ್ನಿನವರು ಬಂಗಾಳದಲ್ಲಿ ಸಂಚರಿಸಿ ಹಲವು ಮೀಟಿಂಗುಗಳನ್ನು ನಡಿಸಿದ್ದಾರೆ. ಸಾರಿಸಭೆಗೆ ಜನರು ಬಹಳ ಆಸಕ್ತಿಯಿಂದ ಬರುತ್ತಿದ್ದಾರೆ. ಶ್ರೀಯುತ ಸಿಸಿಲ ಕುಮಾರ ಸಿಂಗ್‌ರವರು 10,000 ರೂಪಾಯಿಗಳನ್ನು ಈ ನಿಧಿಗೆ ಉಚಿತವಾಗಿ ಕೊಟ್ಟಿರುವರು.

ಮದ್ರಾಸ ಮತ್ತು ಆಂಧ್ರ ಪ್ರಾಂತ್ಯದ ಮುಖ್ಯ ವಿಷಯ ಗಳಲ್ಲಿ ಹಿಂದೂಗಳೂ ಮುಸಲ್ಮಾನರೊಂದಿಗೆ ಸಮಸಮಾನ ಹಕ್ಕಿನಂತೆ ಮಾಡಲು ಒಂದು ಕಮಿಟಿಯನ್ನು ನೇಮಿಸುವಂತೆ ಎಸೆಂಬ್ಲಿ ಮತ್ತು ಕೌನ್ಸಿಲ್ ಆಫ್ ಸ್ಟೇಟ್ಸ್‌ಗಳಲ್ಲಿ ಠರಾವುಗಳನ್ನು ತರುವಂತೆ ಆ ಎರಡು ಸಂಸ್ಥೆಗಳ ಉದ್ಯೋಗಸ್ಥರಲ್ಲದ ಮೆಂಬರುಗಳು ತೀರ್ಮಾನ ತೆಗೆದುಕೊಳ್ಳಬೇಕೆಂದು ಬೊಂಬಾಯಿಯಲ್ಲಿ ತಾ. 11ರಲ್ಲಿ ನಡೆದ ಸ್ತ್ರೀಯರ ಒಂದು ಮಹಾ ಸಭೆಯಲ್ಲಿ ಠರಾವು ಪಾಸು ಮಾಡಲಾಯಿತು.

ವಿದೇಶ.

ಮೆಕ್ಸಿಕೊದಲ್ಲಿ ತಾ. 17ರಲ್ಲಿ ಭೂಕಂಪ ಉಂಟಾಗಿ ಓಕ್ಸಾಕಾ ಎಂಬ ಪ್ರಾಂತ್ಯದಲ್ಲಿ ಹಲವು ಪಟ್ಟಣಗಳು ನಾಶವಾದುವೆಂದು ಸುದ್ದಿ.

1927ರಲ್ಲಿ ಗ್ರೇಟ್ ಬ್ರಿಟನ್ನಿನ ರಸ್ತೆಗಳಲ್ಲಿ ಉಂಟಾದ ಅಪಘಾತಗಳಿಂದ 5,329 ಜನರು ಮೃತರಾದರಂದೂ, 1,48,000 ಜನರಿಗೆ ಗಾಯ ಆಯಿತೆಂದೂ ಕಂಡುಹಿಡಿಯಲಾಗಿದೆ.

ಕ್ಯೂಬಾದ ಹವಾನಾ ಎಂಬಲ್ಲಿ ಬೆಂಕಿ ಬಿದ್ದು ಒಂದು ಅಮೇರಿಕ ಕಂಪೆನಿಯವರಿಗೆ ಸೇರಿದ ಮೂರು ಮಿಲ್ಲಿಯ ರೂಪಾಯಿಗಳಷ್ಟು ಬೆಲೆಯ ಸಕ್ಕರೆಯು ನಷ್ಟವಾಗಿದೆಯಂತೆ.

ಪ್ರಶ್ಯದ ಅಲೆನ್ಸ್ಟೀನ್ ಎಂಬಲ್ಲಿ ಒಂದು ಮದುವೆ ಮನೆಗೆ ಅಕಸ್ಮಾತ್ ಬೆಂಕಿಬಿದ್ದು ಮನೆ ಪೂರ್ತಿ ಬೆಂದುದಲ್ಲದೆ ವಧುವರರೂ, ಒಬ್ಬ ತಾಯಿ ಮತ್ತು ಆಕೆಯ ಆರು ಮಕ್ಕಳೂ ಮತ್ತು ಬೇರೆ ನಾಲ್ಕು ಅತಿಥಿಗಳೂ ಮೃತರಾದರಂತೆ.

ಅಮೇರಿಕದ 38 ನೆ ಯ ಪಟ್ಟದ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಕಕ್ಷಿಗಳ ಉಮೇದುವಾರರುಗಳ ವಾಟ ಗಳವರಿಗೆ ಮನಸ್ತಾಪ ಉಂಟಾಗಿ ಹಲವು ಕಡೆಗಳಲ್ಲಿ ಜಗಳವಾಯಿತು. ಅಲ್ಲಿಯ ನಿವಾಸಿಯಾದ ಒಬ್ಬ ನೀಗ್ರೋ ಉಮೇದುವಾರರು ಅವರ ಮೋಟಾರು ಕಾರಿನಲ್ಲಿ ಹೋಗುತ್ತಿದ್ದಾಗ ಕೊಲ್ಲಲ್ಪಟ್ಟರು. ಇನ್ನೂ ಹಲವು ಅಕೃತ್ಯಗಳು ನಡೆದುವಂತೆ.

ಅಫ್ಘಾನಿಸ್ತಾನದ ಅಮೀರರ ಪರವಾಗಿ ಅವರ ಪ್ರತಿನಿಧಿಗಳು ವನೇ ಜಾರ್ಜ ಪ್ರಭುಗಳವರಿಗೆ ಪರ್ಶಿಯ ಮತ್ತು ಅರೇಬಿಯನ್ ಪುಸ್ತಕಗಳನ್ನು ಇನಾಮಾಗಿ ಕೊಟ್ಟಿರುವರು. ಅದರಲ್ಲಿ ಒಂದು ಪುಸ್ತಕವು ಎರಡು ಶತಮಾನಗಳ ಹಿಂದೆ ಮೊಗಲರು ಯದ ಔರಂಗಜೇಬನ ಒಡೆಯದ್ದಾಗಿದೆ. ಅದರ ಕೈ ಬರಹ ಅತ್ಯುತ್ತಮವಾದದ್ದು. 50 ಪುಟಗಳುಳ್ಳ ಆ ಪುಸ್ತಕವನ್ನು ಬರೆಯಲು ಐದು ವರ್ಷಗಳು ಹಿಡಿದವಂತೆ.

ಪೈನಾದ ರಷ್ಯನ್ರಿಯ ಪಕ್ಷದವರು ಉತ್ತರದ ಸೇನಾಧಿಪತಿಗಳ ಮೇಲೆ ಯುದ್ಧವನ್ನು ಈ ತಾ. 7ರಲ್ಲಿ ಪ್ರಾರಂಭಿಸಿರುವರು. ರಷ್ಯನ್ರಿಯ ಪಕ್ಷದವರು ಮೂರು ಪಂಗಡಗಳಾಗಿ ಉತ್ತರಕ್ಕೆ ಮುಂದುವರಿಯುತ್ತಿರುವರು. ಸುಮಾರು 7 ಲಕ್ಷ ಸೈನಿಕರು ಈ ಯುದ್ಧದಲ್ಲಿ ಭಾಗಿಗಳಾಗುವರಂತೆ. ಈ ಗಲಿಬಿಲಿಯ ಸಮಯದಲ್ಲಿ ಜಪಾನಕ್ಕೆ ಸೈನ್ಯವನ್ನು ಕಳುಹಿಸಲು ಜಪಾನಿನ ಸರಕಾರದವರೂ ತಯಾರು ಮಾಡುತ್ತಿರುವರಂತೆ.

For Sale

1927 Overland Whippet, Tourer 15·9 H. P. Done 9,500 miles only. Recently overhauled, splendid running condition. Tyres nearly new. Price Rs. 1,700 or nearest offer.

Apply. D. Tweedie,
Glen Lorna,
Hudikeri,
S. Coorg.

ವಿಮರ್ಶೆ.

ಕುರುಬರ ಪತ್ರಿಕೆ—ಸಂಪಾದಕರು, ನೀಲಗಿರಿ ಮಿ. ಜಿ ಸಂಜೀವಯ್ಯ, ಯಂ ಯಲ್. ಸಿ. ರವರು. ಪ್ರಕಟವಾಗುವ ಸ್ಥಳ— ಬೆಂಗಳೂರು. ವಾರ್ಷಿಕ ಚಂದಾ 2—1—0. ಇದು ಕುರುಬರ ಮಾನಸಿಕ, ನೈತಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯನ್ನು ಸಾಧಿಸಲಿಕ್ಕಾಗಿ ಪ್ರತಿ ಮಾಸವಾರ ಬೆಂಗಳೂರಿನಲ್ಲಿ ಪ್ರಕಟಿಸಲ್ಪಡುವ ಕನ್ನಡ ಮಾಸ ಪತ್ರಿಕೆಯಾಗಿದೆ. ಇದರ ಹೆಸರಿನಿಂದಲೇ ಇದೊಂದು ಕೋಮುವಾರು ಪತ್ರಿಕೆಯೆಂದು ಗೊತ್ತಾಗುವದು. ಹಳ್ಳಿಗಳ ಸ್ಥಿತಿಯೊಂದು ಮುಖ್ಯಕರ ವರ್ತಮಾನ ಪತ್ರಿಕೆಗಳು ಹೋಗಬೇಕಾಗಿರುವ ಈ ಸಮಯದಲ್ಲಿ ಎಷ್ಟು ಪತ್ರಿಕೆಗಳು ಹೊರಟರೂ ಸಾಲದು. ಆದುದರಿಂದ ಕನ್ನಡಿಗರೆಲ್ಲರೂ ಇದಕ್ಕೆ ಪ್ರೋತ್ಸಾಹ ಕೊಡುವರಾಗಿ ಆಶಿಸುತ್ತೇವೆ.

ಭೋಜನಕಾಲದಲ್ಲಿ ನೀರನ್ನು ಕುಡಿಯಬೇಕೆ?

ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳುಂಟು. ಕೆಲವರು ಆಹಾರ ಕಾಲದಲ್ಲಿ ನೀರನ್ನು ಕುಡಿದರೆ ಅಜೀರ್ಣಕ್ಕೆ ಕಾರಣವಾಗುವುದೆನ್ನುವರು.

ಇದರಲ್ಲಿ ಯಾವುದು ಸರಿಯೆಂಬುದನ್ನು ಪ್ರಮಾಣಪೂರ್ವಕವಾಗಿ ಪರೀಕ್ಷಿಸಿ ತಿಳಿಯಬೇಕೆಂದು ಒಂದು ವೈದ್ಯಶಾಲೆಯಲ್ಲಿ ಪ್ರಯತ್ನಿಸಲ್ಪಟ್ಟಿತು. ಅಲ್ಲಿನ ವಿದ್ಯಾರ್ಥಿಗಳೆಲ್ಲರೂ ದೃಢಕಾಯರಾಗಿ ಒಳ್ಳೇ ಜೀರ್ಣಶಕ್ತಿಯುಳ್ಳವರಾಗಿದ್ದರು. ಭೋಜನಕಾಲದಲ್ಲಿ ಬೇಕಾದಷ್ಟು ನೀರನ್ನು ಕುಡಿಯುವುದು ಅವರೆಲ್ಲರ ಪದ್ಧತಿಯಾಗಿತ್ತು.

ಅವರಲ್ಲಿ 8 ಮಂದಿಯನ್ನು ಪ್ರತ್ಯೇಕಿಸಿ, ಭೋಜನಕಾಲದಲ್ಲಿ ನೀರನ್ನು ಕುಡಿಯದಂತೆಯೂ, ಇತರ ಕಾಲಗಳಲ್ಲಿ ದಾಹಶಾಂತಿಗೆ ಬೇಕಾದಷ್ಟು ಮಾತ್ರ ನೀರನ್ನು ಕುಡಿಯಬಹುದೆಂದೂ ಅವರಿಗೆ ನಿರ್ಬಂಧಿಸಲ್ಪಟ್ಟಿತು. ಬೇರೆ 8 ಮಂದಿಗೆ ಭೋಜನಕಾಲದಲ್ಲಿ ಕ್ಲಿಷ್ಟವಾಗಿ ಒಂದು ಕ್ವಾರ್ಟಿನಷ್ಟು ನೀರನ್ನು ಕುಡಿಯುವಂತೆಯೂ, ಇತರ ಕಾಲಗಳಲ್ಲಿ ಕೂಡ ಧಾರಾಳವಾಗಿ ನೀರನ್ನು ಕುಡಿಯಬಹುದೆಂದೂ ಸೂಚಿಸಲ್ಪಟ್ಟಿತು.

ಮೊದಲನೇ ವರ್ಗದವರಲ್ಲಿ ಒಬ್ಬನ ಹೊರತು ಬೇರೆ 7 ಮಂದಿಗಳಿಗೂ ಮೈತೂಕವು ಕ್ರಮಕ್ರಮವಾಗಿ ತಗ್ಗಿತು, ಒಂದಿತು ಅವರೊಡನೆ ತಲೆನೋವು, ಮಲಬದ್ಧತೆ, ಮುಂತಾದ ಉಪಾಧಿಗಳೆಲ್ಲಾ ಕಾಣಿಸಿಕೊಂಡವು. ಎರಡನೆಯ ವರ್ಗದವರಲ್ಲಿ ಒಬ್ಬನಿಗೆ ಹೊರತು ಬಾಕಿ 7 ಮಂದಿಗೂ ದೇಹದ ತೂಕವು ಅಧಿಕವಾಗುತ್ತ ಬಂದಿತು. ಇವರಲ್ಲಿ ಯಾರಿಗೂ ಯಾವ ಉಪಾಧಿಯೂ ಇರಲಿಲ್ಲ. ಇದರಿಂದ ನಾವು ಈ ಗುಣಾವಗುಣಗಳ ತಾರತಮ್ಯವನ್ನು ತಿಳಿಯಬಹುದು.

"ಆ. ಚಂದ್ರಿಕೆ."

ನೋಟೀಸು.

ಜಮೀನ್ದಾರರ ಸಂಘದವರಿಂದ ನೇಮಿಸಲ್ಪಟ್ಟ ಬಿದ್ದರ್ ಕಮಿಟಿಯವರು ಸಂಜೀವಗೋಡು ಬಳಿ ಬಸವಾಳ ಎಂಬ ಬಾಡಿಕೆಯ ಸ್ಥಾನದಿಂದ ಹುಲ್ಲುಬೀಜ ತರಿಸಿದ್ದಾರೆ. ತೋಟಗಳಲ್ಲಿ, ಸಿಂಗಾಲ ಗದ್ದೆಗಳಲ್ಲಿ ಸ್ವತಃ ಕೃಷಿಯನ್ನು ಮಾಡುವವರಿಗೇನೇ ಈ ಬೀಜವನ್ನು ಹಾಕಿ ಕೃಷಿಯನ್ನು ಮಾಡುವದಕ್ಕೆ ಪ್ರೋತ್ಸಾಹಿಸಬೇಕೆಂದು ಹೇಳಲಾಗಿದೆ. ಈ ಕರಾರಿಗೆ ಒಪ್ಪುವವರು ಜಮೀನ್ದಾರರ ಸಂಘಕ್ಕೆ ತಿಳಿಸತಕ್ಕದ್ದು. ಕೊಡಗಿನ ಗ್ರಾಮದ ಪಟೇಲರಲ್ಲೂ ಸಹ ತೋಟಗಾರು ವಿದ್ದಾರೆ ... ನಿಂಗದೆ ನಲ್ಲಿ ಬಿತ್ತಬೇಕಾದವರು ಬೇಕಾಗಿ ಕೇಳಿಕೊಳ್ಳಲಾಗಿದೆ.

ಸಿ. ಯಸ್. ಮೊಕಪ್ಪಯ್ಯ,
(ಬಿದ್ದರ್ ಕಮಿಟಿಯ ಪರವಾಗಿ)

ಮಾರಾಟಕ್ಕೆ

ಮಡಿಕೇರಿಯಲ್ಲಿರುವ ಲೇಟ್ ಮಿ. ಬೇನಿಸಿಂಗರವರ ಸ್ಕೂಲ್ ರೋಡಿನ ಬಳಿ ಇರುವ ಒಂದು ದೊಡ್ಡ ಬಂಗ್ಲೆ ಮತ್ತು ಅವರ ಪಕ್ಕದಲ್ಲಿರುವ ಇನ್ನೊಂದು ಸಣ್ಣ ಬಂಗ್ಲೆ ಸಹ ಮಾರಾಟಕ್ಕಿದೆ. ಖಾಯಿಷ್ ಪಡುವವರು ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆದು ಕೊಳ್ಳತಕ್ಕದ್ದು.

P. J. Sarvan Singh,
No. 16 Shivanchetty
Garden Street,
Bangalore Cantonment.

ಪತ್ರವ್ಯವಹಾರ

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.

ಕೊಡವ ಹರದಾಸರು.

ಈ ತಾರೀಕು 12ನೇ ದಿನ ಕೊಡಗಿನ ಕೊಡವ ಕವಿ ಶ್ರೇಷ್ಠರಾದ ಮ. ರಾ. ಶ್ರೀ. ಅಪ್ಪನೆರವಂಡ ಅಪ್ಪಚ್ಚ ಹರದಾಸರು ಪ್ರಯಾಣದ ಮೇಲೆ ಪೊಳ್ಳಿಬೆಟ್ಟಕ್ಕೆ ದಯಮಾಡಿಸಿದಲ್ಲಿ ಪೊಳ್ಳಿಬೆಟ್ಟದ ಮಹನೀಯರ ಕೋರಿಕೆ ಮೇರೆ ತಾರೀಕು 13ನೇ ದಿನ ಸಾಯಂಕಾಲ 6ಗಂಟೆಯಿಂದ 9ಗಂಟೆವರೆಗೆ ಪೊಳ್ಳಿಬೆಟ್ಟದ ಎಲಿಮೆಂಟರಿ ಸ್ಕೂಲಿನಲ್ಲಿ 'ಶಿವರಾತ್ರೆ ಮಹಿಮೆ' ಎಂಬ ಶಿವಪುರಾಣವನ್ನು ಭಕ್ತಿ ವಿಶ್ವಾಸದಿಂದಲೂ, ಯುಕ್ತಿ ಯುಕ್ತದಿಂದಲೂ ಭಜನೆ ಕಾಲಕ್ಷೇಪ ನಡಿಸಿ ನೆರೆದಿದ್ದ ಅನೇಕ ಮಹಿಳೆ, ಮತ್ತು ಮಹನೀಯರ ಮನಸ್ಸನ್ನು ಉಲ್ಲಾಸ ಪಡಿಸಿದರು. ಈ ಮೊದಲು ಇವರು ಕಾವಾಡಿ ದೇವಸ್ಥಾನದಲ್ಲಿಯೂ, ಅಮ್ಮತ್ತಿ ಸ್ಕೂಲಿನಲ್ಲಿಯೂ ಭಜನೆ ನಡಿಸಿ ನೆರದವರನ್ನಾನಂದಿಸಿರುವರಾಗಿ ಪರಸ್ಪರ ತಿಳಿಯುತ್ತೇನೆ.

'ಕಂಡಾನಂದಿಸಿದವ'

ಹೈಸ್ಕೂಲಿನಲ್ಲಿ ಟೆರಿಟೋರಿಯಲ್ ಪಟಾಲಾಂ.

ಅಯ್ಯಾ,

ಯುದ್ಧದ ಸಮಯದಲ್ಲಿ ಮಾತ್ರ ಯಾವ ಕಟ್ಟಡವನ್ನಾದರೂ ಅವಶ್ಯವಿದ್ದರೆ ಸೈನಿಕರ ಉಪಯೋಗಕ್ಕೆ ಬಿಟ್ಟು ಕೊಡಬೇಕೆನ್ನುವದನ್ನು ನಾನು ಕೇಳಿರುತ್ತೇನೆ. ಆದರೆ ಈಗಿನಂತಹ ಶಾಂತ ಸಮಯದಲ್ಲಿಯೂ ಕೂಡ ಮಿಲಿಟರಿಯವರಿಗೆ ಸರಕಾರದ ಬೇರೆ ಇಲಾಖೆಗಳ ಅದರಲ್ಲಿ ವಿದ್ಯಾ ಇಲಾಖೆಯ ಕಟ್ಟಡಗಳನ್ನು ಬಿಟ್ಟು ಕೊಡುವದರಲ್ಲಿ ಯಾವ ನ್ಯಾಯವಿದೆಯೆಂದು ನನಗೆ ಗೊತ್ತಾಗುವದಿಲ್ಲ. ವಸ್ತು ವಿಜ್ಞಾನ ಶಾಸ್ತ್ರದ ಅಭಿವೃದ್ಧಿಯ ಈಗಿನ ಕಾಲದಲ್ಲಿ ಯುದ್ಧವಂದರೆ ಮಿಲಿಯಗಟ್ಟಲೆ ಜನರ ಪ್ರಾಣನಷ್ಟವೆಂಬುದನ್ನು ಎಲ್ಲಾ ನಾಗರೀಕ ಜನಾಂಗಗಳು ಅರಿತವರಾಗಿಯೇ ಜನಾಂಗಗಳ ಕೂಟದವರು ಭೂಲೋಕದಲ್ಲಿ ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸುತ್ತಿರುವದಾಗಿದೆ. ಹೀಗಿರುವಲ್ಲಿ ಮುಂದಿನ ಜನಾಂಗವನ್ನು ತಯಾರಿಸುವ ಶಾಲೆಗಳನ್ನೇ ಮಿಲಿಟರಿಯವರ ವಸತಿಗೆ ಬಿಟ್ಟು ಕೊಟ್ಟರೆ ಆ ಕಟ್ಟಡಗಳಲ್ಲಿ ವಿದ್ಯಾದೇವತೆಯು ಹೇಗೆ ತಾನೇ ವಾಸವಿರುವಳು? ಮತ್ತು ಅಲ್ಲಿ ಕಲಿಯುವ ಮಕ್ಕಳಿಗೆ ಶಾಂತಿಯ ಮೇಲೆ ಪ್ರೀತಿಯು ಹೇಗೆ ತಾನೇ ಉಂಟಾಗುವದು? ಅದಂತಿರಲಿ —

ಮಡಿಕೇರಿ ಸೆಂಟ್ರಲ್ ಹೈಸ್ಕೂಲನ್ನೂ, ಬೋರ್ಡಿಂಗ್ ಮನೆಯನ್ನೂ ಕೊಡಗಿನ ಟೆರಿಟೋರಿಯಲ್ ಪಟಾಲಾಮಿನ ಉಪಯೋಗಕ್ಕೆ ವರ್ಷಕ್ಕೆ ಒಂದು ತಿಂಗಳಂತೆ ಕೆಲವು ವರ್ಷಗಳಿಂದ ಬಿಡುತ್ತಾ ಬರುತ್ತಿರುವದು ಸರಿಯಷ್ಟೆ. ವಿದ್ಯಾರ್ಥಿಗಳಿಗೂ, ಸಿಪಾಯಿಗಳಿಗೂ ಇರುವ ವ್ಯತ್ಯಾಸಗಳು ಎಲ್ಲರಿಗೂ ಗೊತ್ತಿರುವ ಕಾರಣ ಅವುಗಳನ್ನು ನಾನು ಇಲ್ಲಿ ಬರೆಯುವ ಅವಶ್ಯ ಕಾಣುವದಿಲ್ಲ. ಸಿಪಾಯಿಯವರು ಆ ಕಟ್ಟಡಗಳಲ್ಲಿ ವಾಸವಿರುವದರಿಂದ ಕಟ್ಟಡಕ್ಕೂ, ಅಲ್ಲಿಯ ಸಾಮಾನುಗಳಿಗೂ ನಷ್ಟ ಉಂಟಾಗದೆ ಇರದು. ಈ ನಷ್ಟವನ್ನೆಲ್ಲಾ ಮಿಲಿಟರಿ ಇಲಾಖೆಯವರು ಸರಿಪಡಿಸಿ ಕೊಡುತ್ತಾರೋ? ಅವರು ಬಿಟ್ಟು ಹೋಗುವಾಗ ಕಟ್ಟಡದ ಗೋಡೆಗಳಿಗೆ ಸುಣ್ಣ ಬಳಿಸಿ ಕೊಡುತ್ತಾರೋ? ಒಂದು ವೇಳೆ ಇಷ್ಟು ಮಾಡಿದರೂ ಅದೂ ಸಾಲದು. ಮಿಲಿಟರಿಯು ಇಂಡಿಯಾ ಸರಕಾರದ (ಮಧ್ಯವರ್ತಿ ಸರಕಾರದ) ಇಲಾಖೆಯು. ವಿದ್ಯಾ ಇಲಾಖೆಯು ಪ್ರಾಂತೀಕ ಸರ್ಕಾರದ್ದು. ಒಂದೇ ಸರ್ಕಾರದ ಆಡಳಿತೆಯಲ್ಲಿರುವ ಒಂದು ಇಲಾಖೆಯು ಕಟ್ಟಡಗಳನ್ನು ಇನ್ನೊಂದು ಇಲಾಖೆಯವರ ಉಪಯೋಗಕ್ಕೆ ಬಿಟ್ಟುಕೊಟ್ಟರೆ ಅದಕ್ಕೆ ಉಪಯೋಗಿಸುವವರು ಬಾಡಿಗೆ ಕೊಡುವದು ಅಗತ್ಯವೆಂದು ತಿಳಿಯುತ್ತೇನೆ. ಹೀಗಿದ್ದರೆ ಮಧ್ಯವರ್ತಿ ಸರ್ಕಾರದ ಮಿಲಿಟರಿ ಇಲಾಖೆಯವರು ಪ್ರಾಂತೀಕ ಸರ್ಕಾರದ ವಿದ್ಯಾ ಇಲಾಖೆಯ ಕಟ್ಟಡವನ್ನು ಉಪಯೋಗಿಸುವದಕ್ಕೆ ಏನಾದರೂ ಬಾಡಿಗೆ ಕೊಡುತ್ತಿದ್ದಾರೋ? ಇಷ್ಟರ ವರೆಗೆ ಬಾಡಿಗೆ ಕೊಟ್ಟಂತೆ ತೋರಿ ಬರುವದಿಲ್ಲ. ಇದು ನಿಜವಾದರೆ ಈ ವಿಷಯ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ನಿಗವಿಡದೆ ಇರಲು ಕಾರಣವೇನು? ನಮ್ಮ ಪ್ರಾಂತೀಕ ಸರ್ಕಾರದ ಉತ್ಪತ್ತಿಯು ಬಹಳ ಸಣ್ಣದಾದ ಕಾರಣ ಯಾವದೊಂದು ಪ್ರಜಾ ಉಪಯೋಗಕರವಾದ ಕೆಲಸವನ್ನು ಮಾಡಲು ಹಣದ ಅಭಾವವನ್ನು ತಂದೊಡ್ಡುತ್ತಿರುವ ಅಧಿಕಾರಿಗಳು ಈ ಬಾಡಿಗೆಯ ಉತ್ಪತ್ತಿಯನ್ನು ಪಡೆಯಲು ಪ್ರಯತ್ನಿಸದೇ ಇರುವದು ವ್ಯಸನಕರ. ಬಾಡಿಗೆಯಿಂದ ವರ್ಷಕ್ಕೆ ಒಂದೆರಡು ಸಾವಿರ ರೂಪಾಯಿಗಳು ದೊರೆತರೆ ಅಷ್ಟನ್ನಾದರೂ ವಿದ್ಯಾಪ್ರಚಾರದ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದಲ್ಲವೇ? ಮಿಲಿಟರಿ ಇಲಾಖೆಗೆ ಬಡತನವೇನೂ ಇಲ್ಲ. ಹಿಂದೂದೇಶದ ಸರಕಾರದ ಇಲಾಖೆಗಳಲ್ಲಿ ಇದರಷ್ಟು ಐಶ್ವರ್ಯವುಳ್ಳ ಇಲಾಖೆಯು ಬೇರೆ ಯಾವುದೂ ಇಲ್ಲವೆಂಬುದು ಯಾರಿಗೆ ತಾನೇ ತಿಳಿಯದು! ವರ್ಷಕ್ಕೆ ಒಂದೆರಡು ಸಾವಿರ ರೂಪಾಯಿ ಬಡ್ಡಿ ಕೊಡುವದೆಂದರೆ ಟೆರಿಟೋರಿಯಲ್ ಪಟಾಲಾಮಿನ ಇಲಾಖೆಗೆ ಕಷ್ಟವಾಗಲಾರದು. ಆದುದರಿಂದ ಈ ವಿಷಯ ಸ್ಥಳೀಯ ಸರ್ಕಾರದವರು ಇನ್ನಾದರೂ ಎಚ್ಚತ್ತು ನ್ಯಾಯವಾಗಿ ಸಿಕ್ಕಬೇಕಾದ ಉತ್ಪತ್ತಿಯನ್ನು ಕಳಕೊಳ್ಳಬಾರದಾಗಿ ಆಶಿಸುವ,

"ಕಂದಾಯ ಕೊಡುವವ"

ಆಲ್ ಇಂಡಿಯಾ ಮ್ಯೂಚ್ಯುಯಲ್ ಏಯಿಡ್ ಅಂಡ್ ಪೂವರ್ ಹೌಸ್ ಅಸೋಸಿಯೇಷನ್ ಲಿಮಿಟೆಡ್.

ಸ್ವಾಮಿ,

ಇದೇ ತಿಂಗಳು 13ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ ಮೇಲ್ಕಂಡ ಸಂಘದ ವಿಷಯವಾಗಿ ಯಾರೋ ಒಬ್ಬರು 'ಅಕ್ಷರ' ಎಂಬ ಹೆಸರನ್ನಿಟ್ಟುಕೊಂಡು ಕೆಲವು ಪ್ರಶ್ನೆಗಳನ್ನು ಕೇಳಿರುತ್ತಾರೆ. ಅದಕ್ಕೆ ತಕ್ಕ ಉತ್ತರಗಳನ್ನು ಸದರಿ ಲೇಖಕರ ಮತ್ತು ತಮ್ಮ ವಾಚಕರ ತಿಳುವಳಿಕೆ ಒಗ್ಗೆ ಈ ಕೆಳಗೆ ನಂಬರು ವಾರು ಕ್ರಮವಾಗಿ ಬರೆದಿರುತ್ತೇನೆ. ಆದುದರಿಂದ ತಾವು ದಯವಿಟ್ಟು ಈ ಉತ್ತರಗಳನ್ನು ತಮ್ಮ ಮುಂದಿನ ವಾರದ ಪತ್ರಿಕೆಯಲ್ಲಿ ಪ್ರಕಟಿಸುವಿರಾಗಿ ನಂಬುತ್ತೇನೆ.

ಉತ್ತರಗಳು.

1. ಈ ತರಹದ ಕಂಪೆನಿಯೂ ಸಂಘವು ಹಿಂದೂಸ್ಥಾನದಲ್ಲಾಗಲಿ ಅಥವಾ ಪ್ರಪಂಚದ ಇನ್ನ್ಯಾವ ಭಾಗದಲ್ಲಾಗಲಿ ಈ ವರೆಗೆ ಸ್ಥಾಪಿತವಾಗಿಲ್ಲ. ಈ ಸಂಘವೇ ಈ ತರಹದ ಕೆಲಸವನ್ನು ಮೊದಲನೇ ಸಾರಿ ಕೈಕೊಂಡಿರುವುದು.

2, ಸಂಘದ ಆರ್ಟಿಕಲ್ಸ್ ಆಫ್ ಅಸೋಸಿಯೇಷನನ್ನು ನೋಡಲು ಅಪೇಕ್ಷಿಸುವ ಎಲ್ಲರಿಗೂ ಅದನ್ನು ಕೊಡಲಾಗುತ್ತದೆ. ಪ್ರತಿ ಒಂದು ಕಾಪಿಗೆ ಎಂಟಾಣೆ ಪ್ರಕಾರ ಚಾರ್ಜು ಕೊಡಬೇಕು.

3. ಸಂಘದ ವಿಶಿಷ್ಟ ಕಾರ್ಯಗಳ ನಿಬಂಧನೆಗಳನ್ನು ತಿಳಿದುಕೊಳ್ಳಬೇಕಾದರೆ ಆರ್ಟಿಕಲ್ಸ್ ಆಫ್ ಅಸೋಸಿಯೇಷನನ್ನು ನೋಡತಕ್ಕದ್ದು ಅವಶ್ಯಕವಾಗಿರುವುದು ನಿಜ. ಆದರೆ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ ಸಾರಾಂಶವಾದ ಸಂಘದ (ಪ್ರಾಸ್ಪೆಕ್ಟಸ್) ಪ್ರಕಟಣ ಪತ್ರಿಕೆಯು ಷೇರುದಾರರುಗಳು ತಾವು ಅವಶ್ಯಕವಾಗಿ ತಿಳಿಯಬೇಕಾದ ವಿಷಯಗಳನ್ನು ತಿಳಿಸುತ್ತದೆ.

4. ಪಿ. ಯಂ. ಎಲ್. ನಾಗಣ್ಣನವರಿಗೂ ಮತ್ತು ಸಂಘಕ್ಕೂ ಆಗಿರುವ ಒಡಂಬಡಿಕೆಯನ್ನು ನೋಡುವ ಅಧಿಕಾರವು ಎಲ್ಲಾ ಶೇರು ಮತ್ತು ಬಾಂಡು ಹೋಲ್ಡರುಗಳಿಗೆ ಇರುವದಲ್ಲದೆ ಅವರುಗಳ ಪೈಕಿ ಅನೇಕರು ಅದರ ಕಾಪಿಯನ್ನು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನಲ್ಲಿಯೂ ಮತ್ತು ಸಂಘದ ಹೆಡ್ ಆಫೀಸಿನಲ್ಲಿಯೂ ನೋಡಿರುತ್ತಾರೆ. ಸದರಿ ಒಡಂಬಡಿಕೆಯಿಂದ ಶೇರುದಾರರಿಗೆ ಯಾವ ವಿಧವಾದ ನಷ್ಟವೂ ಇರುವುದಿಲ್ಲ. ಏತಕ್ಕಂದರೆ—25 ವರ್ಷದ ಒಳಗಾಗಿ ಅವರು ಒಂದು ವೇಳೆ ಕೆಲಸವನ್ನು ಬಿಟ್ಟರೂ ಆ ಕೆಲಸಕ್ಕಾಗಿ ಇನ್ನೊಬ್ಬರನ್ನು ನೇಮಿಸಬೇಕಾಗಿ ಬರುವುದರಿಂದ ಇವರಿಗೆ ಕೊಡಬೇಕಾಗುವ ವೇತನವನ್ನೇ ಹೊಸಬರಿಗೂ ಕೊಡಬೇಕಾಗುತ್ತೆ. ಅಲ್ಲದೆ ಮಿ. ನಾಗಣ್ಣನವರೇ ಈ ಸಂಘವನ್ನು ಬಹಳ ಶ್ರಮದಿಂದ ಸ್ಥಾಪಿಸಿ ಅಭಿವೃದ್ಧಿಗೆ ತಂದಿರುವದರಿಂದ ಈ ಸಂಘದ ಕಾರ್ಯಗಳ ವಿಷಯದಲ್ಲಿ ಅವರಷ್ಟು ಅನುಭವವು ಮತ್ತು ಅಭಿಮಾನವು ಇರತಕ್ಕವರು ಸಿಕ್ಕುವುದು ಕಷ್ಟ. ಈ ವಿಷಯವನ್ನು ಶೇರುದಾರರು ತಿಳಿದೇ ಮೇಲ್ಕಂಡ ಒಡಂಬಡಿಕೆಯನ್ನು ಮಾಡಿರುತ್ತಾರೆ.

5. ಶೇರು ಮತ್ತು ಬಾಂಡು ಹೋಲ್ಡರುಗಳಿಗೆ ಚೀಟಿ ಎತ್ತಿಕೊಡುವ ಸಾಲಗಳು ಬಡ್ಡಿ ಹಣದಿಂದಲೇ ಕೊಡಲ್ಪಡುತ್ತವೆ. ಈಗ ಕೊಡಲ್ಪಟ್ಟಿರುವ 500 ರೂಪಾಯಿನ ಸಾಲವು ಬಡ್ಡಿಯ ಹಣದಿಂದಲೇ ಕೊಡಲ್ಪಟ್ಟಿದೆ. ಇದುವರೆಗೆ ಕೊಡಗು ದೇಶದಲ್ಲೇ 1500 ರೂ. ಮೇಲ್ಪಟ್ಟು ಬಡ್ಡಿ ಉತ್ಪತ್ತಿಯಾಗಿರುವದರಿಂದ ಮೇಲ್ಕಂಡ ಸಾಲದ ಮೊಬಲಗು ಮತ್ತು ಕೊಡಗು ದೇಶದಲ್ಲಿರುವ ಸಂಘದ ಆಫೀಸಿಗೆ ಸಂಬಂಧಪಟ್ಟ ಖರ್ಚುಗಳು ವಜಾ ಹೋಗಿ ಇನ್ನೂ ಸುಮಾರು 750 ರೂ. ಗಳು ಉಳಿದಿರುತ್ತವೆ. ಈ ಮೊಬಲಗನ್ನು ಪೂವರ್ ಹೌಸ್ (ಧರ್ಮಶಾಲೆ)ನ್ನು ಸ್ಥಾಪಿಸುವದಕ್ಕೂ, ಶೇರು ಮತ್ತು ಬಾಂಡು ಹೋಲ್ಡರುಗಳಿಗೆ ನಫೆ ಹಂಚುವುದಕ್ಕೂ ಮತ್ತು ರಿಸರ್ವ್ ಫಂಡು ಮಾಡುವುದಕ್ಕೂ ಉಪಯೋಗಿಸಬಹುದು.

6. ಒಂದು ಸಾವಿರ ಬಾಂಡು ಹೋಲ್ಡರುಗಳಿದ್ದರೆ ಒಂದು ವರ್ಷಕ್ಕೆ ಒಂದು ಸಾವಿರದ ಒಂದು ಸಾಲವಾಗಲಿ ಅಥವಾ ಡೈರೆಕ್ಟರುಗಳು ಮತ್ತು ಬಾಂಡು ಹೋಲ್ಡರುಗಳು ಇಚ್ಛಿಸಿದರೆ ಐದು ನೂರು ರೂಪಾಯಿನ ಎರಡು ಸಾಲಗಳು ಕೊಡಲ್ಪಡುತ್ತವೆ.

7. ಸಾಧಾರಣವಾಗಿ ನಡೆಯತಕ್ಕ ಲಾಟರಿಯಲ್ಲಿ ಅನೇಕ ಜನಗಳಿಂದ ವಸೂಲಾಗತಕ್ಕ ಮೊಬಲಗು ಸ್ವಲ್ಪ ಜನಗಳಿಗೆ ಮಾತ್ರ ಹಂಚಲ್ಪಡುವದರಿಂದ ಅನೇಕರು ತಾವು ಕೊಟ್ಟ ಮೊಬಲಗನ್ನು ಕಳೆದುಕೊಂಡು ನಷ್ಟ ಪಡುವರು. ನಮ್ಮ ಸಂಘದ ಏರ್ಪಾಡಿನಲ್ಲಿ ಬಾಂಡು ಹೋಲ್ಡರುಗಳು ಕೊಡತಕ್ಕ ಅಷ್ಟು ಬಾಂಡು ಮೊಬಲಗು ಗವರ್ನಮೆಂಟಿನಲ್ಲಾಗಲಿ ಅಥವಾ ಗವರ್ನಮೆಂಟ್ ಸೆಕ್ಯೂರಿಟಿಗಳಲ್ಲಾಗಲಿ ಪೂರ್ತಾ ಖಾಯಮ್ಮಾದ ಫಂಡಾಗಿ ಇಡಲ್ಪಡುವುದರಿಂದ ಯಾವ ಬಾಂಡು ಹೋಲ್ಡರುಗಳೂ ತಾವು ಕೊಟ್ಟ ಮೊಬಲಗು ನಷ್ಟವಾದಂತೆ ಆಗುವುದಿಲ್ಲ.

ಸದರಿ ಫಂಡಿನ ಮೇಲೆ ಪ್ರತಿ ವರ್ಷವೂ ಬರತಕ್ಕ ಬಡ್ಡಿಯಲ್ಲಿ ಅರ್ಧವು ಧರ್ಮಕಾರ್ಯಗಳಿಗೆ ಉಪಯೋಗಿಸಲ್ಪಡುವದರಿಂದ ಉಳಿದ ಅರ್ಧಭಾಗದಲ್ಲಿ ಮೂರನೇ ಎರಡು ಭಾಗವು ಬಾಂಡು ಹೋಲ್ಡರುಗಳಿಗೆ ಚೀಟಿ ಎತ್ತಿಕೊಡುವ ಸಾಲಕ್ಕಾಗಿ ಉಪಯೋಗಿಸಲ್ಪಡುತ್ತದೆ. ಪ್ರತಿ ವರ್ಷವೂ ಬೇರೆ ಬೇರೆ ಬಾಂಡು ಹೋಲ್ಡರುಗಳಿಗೆ ಸಾಲಗಳು ಹಂಚಲ್ಪಡುವುದರಿಂದ ಪ್ರತಿಯೊಬ್ಬ ಬಾಂಡು ಹೋಲ್ಡರು ಒಂದು ವರ್ಷ ಅಲ್ಲದೆ ಮತ್ತೊಂದು ವರ್ಷ ಸಾಲವನ್ನು ಪಡದೇ ಪಡೆಯುತ್ತಾನೆ. ಅಲ್ಲದೆ ಸಾಲವನ್ನು ಪಡೆಯುವ ವರೆಗೆ ಬಾಂಡು ಹೋಲ್ಡರುಗಳು ಸಂಘದ ಲಾಭದ ಹಂಚುವಿಕೆಗೆ ಅರ್ಹರಾಗಿರುವದರಿಂದಲೂ ಪ್ರತಿ ವರ್ಷವೂ ಹೊಸ ಸಾಲಗಳು ಕೊಡಲ್ಪಡುವುದರಿಂದ ಸಾಲಗಳನ್ನು ಪಡೆದವರಿಂದ ವಸೂಲಾಗುವ ಕಂತು ಮೊಬಲಗುಗಳು ವರ್ಷೇ ವರ್ಷೇ ಒಂದು ಕಡೆ ಹೆಚ್ಚಿ ಇನ್ನೊಂದು ಕಡೆ ಸಾಲವನ್ನು ಪಡೆಯದೇ ಇರತಕ್ಕ ಬಾಂಡು ಹೋಲ್ಡರುಗಳ ಸಂಖ್ಯೆಯು ವರ್ಷೇ ವರ್ಷೇ ಕಡಮೆಯಾಗುತ್ತಾ ಬರುವುದರಿಂದಲೂ, ಸಾಲವನ್ನು ಪಡೆಯದೇ ಇರತಕ್ಕ ಬಾಂಡು ಹೋಲ್ಡರುಗಳಿಗೆ ಹಂಚಿಕೆಯಾಗುವ ನಫೆ ದರವು ವರ್ಷೇ ವರ್ಷೇ ಹೆಚ್ಚುತ್ತದೆ. ಆದ್ದರಿಂದ ಅನೇಕ ವರ್ಷಗಳ ವರೆಗೂ ಸಾಲವು ಸಿಕ್ಕದೆ ಹೋದರೂ ಬಾಂಡು ಹೋಲ್ಡರುಗಳಿಗೆ ವಿಶೇಷವಾದ ಲಾಭವು ಸಿಕ್ಕುವದರಿಂದ ಅವರಿಗೆ ಯಾವ ವಿಧವಾದ ನಷ್ಟಕ್ಕೂ ಅವಕಾಶವೇ ಇರುವುದಿಲ್ಲ. ಈ ಕಾರಣಗಳಿಂದ ಸಂಘದ ಏರ್ಪಾಡು ಲಾಟರಿ ಎಂಬದಾಗಿ ತಿಳಿದುಕೊಂಡಿರುವದು ಸರಿಯಲ್ಲ.

8. ಧರ್ಮಕಾರ್ಯವನ್ನೇ ಮುಖ್ಯವಾದ ಉದ್ದೇಶವನ್ನಾಗಿಟ್ಟುಕೊಂಡು ಸಂಘವು ಸ್ಥಾಪಿಸಲ್ಪಟ್ಟಿರುವುದರಿಂದ, ಧರ್ಮದಲ್ಲಿ ದೃಷ್ಟಿ ಇಲ್ಲದಯೂ, ಚೀಟಿ ಎತ್ತಿ ಕೊಡುವ ಸಾಲಗಳು ಸಿಕ್ಕುವದು ಬಹು ನಿಧಾನವಾದರೂ, ಅಷ್ಟು ಹೆಚ್ಚಾಗಿ ಲಾಭವು ದೊರೆಯುತ್ತದೆಂಬ ವಿಷಯವನ್ನು ಲೆಖ್ಖಾಚಾರದಿಂದ ತಿಳಿದುಕೊಳ್ಳಲು ಶಕ್ತಿ ಇಲ್ಲದವರು ಮಾತ್ರ ಸಂಘದ ಬಾಂಡು ಹೋಲ್ಡರುಗಳಾಗಿ ಸೇರಲು ಇಚ್ಛಿಸುವುದಿಲ್ಲ. ಬಾಂಡುಗಳನ್ನು ತೆಗೆದುಕೊಳ್ಳುವವರೆಲ್ಲರೂ ಕೇವಲ ನಿರ್ಗತಿಕರೇ ಅದ ಪಕ್ಷದಲ್ಲಿ ಕೊಡಲ್ಪಡತಕ್ಕ ಸಾಲದ ಮೊಬಲಗಿನಲ್ಲಿ ಹೆಚ್ಚಿನ ಭಾಗವು ವಸೂಲಾಗುವುದು ಕಷ್ಟವಾಗಿ ಲಾಭವು ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ. ಶ್ರೀಮಂತರುಗಳು ಮತ್ತು ಸಾಮಾನ್ಯವಾಗಿ ಅನುಕೂಲವುಳ್ಳವರೇ ಹೆಚ್ಚಾಗಿ ಸಂಘದ ಬಾಂಡು ಹೋಲ್ಡರುಗಳಾಗಿರುವದರಿಂದ ಸಾಲವಾಗಿ ಕೊಡಲ್ಪಡತಕ್ಕ ಮೊಬಲಗಿನಲ್ಲಿ ಹೆಚ್ಚು ಭಾಗವು ವಸೂಲಾಗಿ ಲಾಭವು ವಿಶೇಷವಾಗಿ ಬಂದೇ ಬರುತ್ತದೆ.

9. ಕಳೆದ ವರ್ಷದ ಆಖೈರು ವರೆಗೆ ಸಂಘವು ಸ್ಥಾಪನೆಯಾಗಿ ಒಂದುವರೆ ವರ್ಷಗಳಾಗಿರುತ್ತವೆ. ಅದು ವರೆಗೆ ಆದಿಯ ಖರ್ಚು (Preliminary Expenses) ಸೇರಿ 3,500 ರೂ ಗಳ ವರೆಗೆ ಸಂಘಕ್ಕಾಗಿ ಖರ್ಚು ಆಗಿರುವದರಿಂದ ಸಾಲಿಯಾನ ಸುಮಾರು 2,500 ರೂ. ನಿಂದ 3,000 ವರೆಗೆ ಖರ್ಚು ಆಗುತ್ತದೆ.

10. ಸಂಘವು ನಷ್ಟವಾಗಬಹುದಾದ ಯಾವ ವಿಧವಾದ ಕಾರ್ಯವನ್ನು ಕೈಕೊಳ್ಳದೇ ಇರುವದರಿಂದ ಸಂಘದ ಹೆಡ್ಡಾಫೀಸಿನಲ್ಲಾಗಲಿ ಅಥವಾ ಬೇರೆ ಕಡೆಗಳಲ್ಲಾಗಲಿ ನಷ್ಟವಾಗಿ ಸಂಘವು ಮುಕ್ತಾಯವಾಗಬೇಕಾದ ಸಂಭವವೇ ಒದಗುವದಾಗಿಲ್ಲ. ಅಲ್ಲದೆ ಕೊಡಗು ದೇಶದಲ್ಲಿರತಕ್ಕ ಶೇರು ಮತ್ತು ಬಾಂಡು ಹೋಲ್ಡರುಗಳ ಇಷ್ಟಾನುಸಾರ ಕೊಡಗು ದೇಶಕ್ಕೋಸ್ಕರವೇ ಪ್ರತ್ಯೇಕವಾದ ಬ್ರಾಂಚನ್ನು ಏರ್ಪಡಿಸುವುದಕ್ಕೂ ಮತ್ತು ಕೊಡಗು ದೇಶದಲ್ಲಿ ವಸೂಲಾಗುವ ಹಣವು ಸಂಘದ ಇತರ ಕಡೆಗಳಲ್ಲಿ ಉಂಟಾಗಬಹುದಾದ ಅಪಾಯ ನಷ್ಟಗಳಿಗೆ ಸಂಬಂಧವಿಲ್ಲದ ಹಾಗೆ ಮಾಡುವುದಕ್ಕೂ ಡೈರೆಕ್ಟರುಗಳು ಒಪ್ಪಿರುತ್ತಾರಾದುದರಿಂದ ಕೊಡಗು ದೇಶದಲ್ಲಿ ವಸೂಲಾದ ಹಣಕ್ಕೆ ಯಾವಾಗಲೂ ಯಾವ ವಿಧವಾಗಿಯೂ ಅಪಾಯವು ಬರುವುದಿಲ್ಲ.

11. ಕೊಡಗಿನಲ್ಲಿ ಇದು ವರೆಗೆ 900 ಶೇರು ಮತ್ತು ಬಾಂಡುಗಳು ಖರ್ಚಾಗಿರುತ್ತವೆ.

12. ಕೊಡಗು ದೇಶದಲ್ಲಿ ಧರ್ಮ ಕಾರ್ಯವನ್ನು ಕೂಡಲೇ ಪ್ರಾರಂಭಿಸುವದಕ್ಕೆ ಕೊಡಗು ದೇಶದ ಡೈರೆಕ್ಟರುಗಳು ತಕ್ಕ ಏರ್ಪಾಡುಗಳನ್ನು ಮಾಡುತ್ತಲಿದ್ದಾರೆ.

13. ಸಂಘದ ಎಲ್ಲಾ ಆಫೀಸುಗಳಲ್ಲಿಯೂ ಈ ಸಾರಿ ಚೀಟಿ ಎತ್ತಿ ಕೊಡಲ್ಪಟ್ಟ ಸಾಲಗಳು ಏಳಾಗಿರುತ್ತವೆ.

ಮೈಸೂರು. ಹೆಚ್. ವೆಂಕಟೇಶಯ್ಯ.
ತಾ. 17—4—28. ಸೆಕ್ರೆಟರಿ.

ಮಡಿಕೇರಿ ಹೈಸ್ಕೂಲೂ, ವಿದ್ಯಾರ್ಥಿನಿಯರೂ

ಮಾನನೀಯರೆ,

ಮಡಿಕೇರಿಯಲ್ಲಿ ಎರಡು ಹೈಸ್ಕೂಲುಗಳಿರುವವು. ಕಾನ್ವೆಂಟ್ ಹೈಸ್ಕೂಲು ಕ್ರಿಶ್ಚಿಯನ್ ಮಿಶನರಿಗಳಿಂದ ನಡಿಸಲ್ಪಡುತ್ತಿರುವ ಬರೇ ಹುಡುಗಿಯರ ಶಾಲೆಯಾಗಿದೆ. ಅದು ಪಟ್ಟಣದಿಂದ ಸ್ವಲ್ಪ ಹೊರಗೆ ಇದೆ. ಸೆಂಟ್ರಲ್ ಹೈಸ್ಕೂಲು ಸರಕಾರಿ ಶಾಲೆಯಾಗಿದೆ. ಅದರಲ್ಲಿ ಹೆಚ್ಚಾಗಿ ಹುಡುಗರೇ ಓದುತ್ತಿರುವದಾದರೂ ಕೆಲವು ಹುಡುಗಿಯರೂ ಇದರಲ್ಲಿ ವಿದ್ಯಾಭ್ಯಾಸ ಹೊಂದುತ್ತಿರುವರು. ಕೆಲವು ವರ್ಷಗಳ ಹಿಂದೆ ಕಾನ್ವೆಂಟ್ ಶಾಲೆಗೆ ಸಾಕಷ್ಟು ಹುಡುಗಿಯರು ಹೋಗುತ್ತಿರಲಿಲ್ಲವೆಂದು ತೋರಿದಾಗ ಸಮೀಪದಲ್ಲಿ ಹುಡುಗಿಯರಿಗೆ ಪ್ರತ್ಯೇಕ ಶಾಲೆ ಇರುವದರಿಂದ ಸೆಂಟ್ರಲ್ ಹೈಸ್ಕೂಲಿಗೆ ಹುಡುಗಿಯರನ್ನು ಸೇರಿಸಿಕೊಳ್ಳಲಾಗುವದಿಲ್ಲವೆಂದು ಮೊದಲೇಕೆಂತ ಅಭಿಪ್ರಾಯವು ಹೊರಬಿದ್ದಾಗ ಹಲವು ಮಹನೀಯರು ಅದನ್ನು ಪ್ರತಿಭಟಿಸಿದ ಕಾರಣ ಹುಡುಗಿಯರು ಸೆಂಟ್ರಲ್ ಹೈಸ್ಕೂಲಿಗೆ ಸೇರುವದನ್ನು ಅಡ್ಡಿ ಮಾಡದೆ ಬಾಕಿ ಮಾಡಿದರೆಂದು ಹೇಳುವದು ಕೇಳಿದ್ದೇನೆ. ಆದರೆ ಈ ಕೂಗು ಪುನಃ ಈಗ ಸೆಂಟ್ರಲ್ ಹೈಸ್ಕೂಲಿನಲ್ಲಿಯೇ ಹೊರಟಿತೆಂತೆ ಸುದ್ದಿ. ಹೈಸ್ಕೂಲಿನ ಉಪಾಧ್ಯಾಯರುಗಳಲ್ಯಾರೋ ಕ್ಲಾಸಿನಲ್ಲಿ ರಜ ಬಿಡುವದಕ್ಕೆ ಮೊದಲು ಇನ್ನು ಮುಂದೆ ಹುಡುಗಿಯರನ್ನು ಈ ಹೈಸ್ಕೂಲಿಗೆ ಸೇರಿಸಿಕೊಳ್ಳುವದಿಲ್ಲವೆಂತಲೂ, ಅವರೆಲ್ಲರೂ ಕಾನ್ವೆಂಟಿಗೆ ಹೋಗಬೇಕೆಂತಲೂ ಹೇಳಿದರಂತೆ. ಇಂಥಾ ಹುಕುಂ ಇದ್ದ ಪಕ್ಷದಲ್ಲಿ ಅದನ್ನು ಹೆಡ್ಮಾಸ್ಟರವರು ಎಲ್ಲಾ ಕ್ಲಾಸುಗಳಿಗೆ ತಿಳಿಸುತ್ತಿದ್ದರು. ಇಂಥಾ ಹುಕುಂ ಇಲ್ಲದೆ ಇರುವಾಗ ಯಾವ ಉಪಾಧ್ಯಾಯರೇ ಆಗಲಿ ಹಾಗೆ ಹೇಳಲು ಕಾರಣವಿಲ್ಲ. ಒಂದು ವೇಳೆ ಅವರು ತಮಾಷೆಗಾಗಿ ಹೇಳಿರಬಹುದು. ಆದರೆ ಸಣ್ಣ ವಿದ್ಯಾರ್ಥಿನಿಯರು ಉಪಾಧ್ಯಾಯರ ಬಾಯಿಯಿಂದ ಬಿದ್ದದ್ದು ನಿಜವೆಂದು ನಂಬಲಿಕ್ಕೆ ಸಾಕು.

ಹೈಸ್ಕೂಲು ತರಗತಿಗಳಲ್ಲಿ ಹುಡುಗರೂ, ಹುಡುಗಿಯರೂ ಒಟ್ಟಿಗೆ ವಿದ್ಯಾಭ್ಯಾಸಹೊಂದುವದು ಉತ್ತಮವೆಂದು ನಂಬುವವರೂ ಇರುವರು; ಬೇರೆ ಬೇರೆ ವಿದ್ಯಾಭ್ಯಾಸ ಕೊಡುವದು ಉತ್ತಮವೆನ್ನುವವರೂ ಇರುವರು. ಈ ವಿಷಯ ಯಾವ ವಿಧವು ಒಂದಕ್ಕಿಂತ ಒಂದು ಉತ್ತಮವಾದದ್ದೆಂದು ವಿದ್ಯಾನಿಪುಣರು ಒಂದು ತೀರ್ಮಾನಕ್ಕೆ ಬಂದಿರುವದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಇವೆರಡು ಪದ್ಧತಿಯ ಮೇಲೆ ನಡೆಸುವದರಲ್ಲಿಯೇ ವಿದ್ಯಾರ್ಥಿ ಹೀಗಿರುವಲ್ಲಿ ತಂದೆ ತಾಯಿಗಳಿಗೆ ತಮಗೆ ಇಷ್ಟ ಬಂದ ವಿಧದಲ್ಲಿ ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಸ್ವಾತಂತ್ರ್ಯವನ್ನು ಕೊಡಬೇಕು.

ಅಲ್ಲದೆ ಮಡಿಕೇರಿಯಲ್ಲಿ ಹೈಸ್ಕೂಲಿನ ಸಮೀಪ ಮನೆ ಇರುವ ಮಕ್ಕಳಿಗೆ ಒಂದು ಮೈಲು ದೂರದಲ್ಲಿರುವ ಕಾನ್ವೆಂಟು ಶಾಲೆಗೆ, ಅದರಲ್ಲೂ ಮಳೆಗಾಲದಲ್ಲಿ ಹೋಗುವದೆಂದರೆ ಬಹು ಕಷ್ಟವಾದ ಕೆಲಸವಾಗಿದೆ. ಆದುದರಿಂದ ಇಂಥಾ ಅನಾನುಕೂಲವನ್ನುಂಟುಮಾಡುವ ಮತ್ತು ತಂದೆತಾಯಿಗಳ ಸ್ವಾತಂತ್ರ್ಯಕ್ಕೆ ಅಡ್ಡಿಬರುವ ಹುಕುಮನ್ನು ಇಲ್ಲವೇ ವರ್ತಮಾನವನ್ನು ಹುಟ್ಟಿಸುವದು ಯಾರಿಗೂ ಸರಿಯಲ್ಲ. ಇದರಿಂದ ವಿದ್ಯಾರ್ಥಿನೀಯರ ತಂದೆತಾಯಿಗಳು ಗಾಭರಿಗೊಳ್ಳಬಾರದಾಗಿ ನಂಬುವ

"ವಿದ್ಯಾಭಿಮಾನಿ"

ಚೀಫ್ ಕಮಿಷನರ ದರ್ಬಾರು.

ಅಯ್ಯಾ,

ಚೀಫ್ ಕಮಿಷನರವರು ಈ ತಾ ೭ರಲ್ಲಿ ಮಡಿಕೇರಿ ಅರಮನೆಯಲ್ಲಿ ನಡಿಸಿದ ದರ್ಬಾರಿನ ಪ್ರೊಸೀಡಿಂಗ್ಸನ್ನು ಓದಿ ನೋಡಿದೆನು. ಹೊಸ ಚೀಫ್ ಕಮಿಷನರು ಕೊಡಗಿಗೆ ಬಂದು ಪ್ರಥಮತಃ ದರ್ಬಾರು ನಡಿಸುವಾಗ ವಿಶೇಷ ಬದಲಾವಣೆ ಏನಾದರೂ ಕೊಡಗಿಗೆ ಸಿಕ್ಕಬಹುದೆಂಬ ನಿರೀಕ್ಷಣ ಇತ್ತು. ಅಂಥಾದ್ದೇನೂ ಕಾಣಲಿಲ್ಲ. ಒಂದು ಕಾಲು ಗಂಟೆಯ ಕಾಲಕ್ಕಾಗಿ ದೇಶದ ಮುಖಂಡರೆನಿಸಿಕೊಂಡ ಸುಮಾರು ೩೦೦ ಜನರನ್ನು ಬರಮಾಡಿಕೊಂಡ ಒಂದೆರಡು ಗಂಟೆ ಅವರನ್ನು ಆಗಾರದಲ್ಲಿ ಬಿಸಿಲಿನಲ್ಲಿ ತಡಿಕೆ ಬೆಂಚುಗಳ ಮೇಲೆ ಕುಳಿತಿದ್ದ ಎಲ್ಲರ ಅನುಭವದ ಸಂಗತಿಯಾಗಿದೆ. ಇಷ್ಟು ಜನರು ಅಲ್ಲಿ ಸೇರಲಿಕ್ಕೆ ನಾಲ್ಕಾರು ದಿವಸ ವೆಚ್ಚಮಾಡಿರುವುದು. ಅದಕ್ಕೆ ಪ್ರತಿಫಲವಾಗಿ ದರ್ಬಾರು ಎಂದರೆ ಬೇಸರಿಕೆಯ ಕೂಟ ಎಂಬುದೊಂದು ಅವರಿಗೆ ತಿಳಿದಂತಾಯಿತು. ಇಂಥಾ ದರ್ಬಾರುಗಳನ್ನು ಮಾಡುವದು, ಬಿಡುವದು ಅಧಿಕಾರಿಗಳ ಮನಸ್ಸಿನಂತೆ. ಅದರ ವಿಷಯ ಇಲ್ಲಿ ಹೆಚ್ಚು ಹೇಳುವದಿಲ್ಲ.

ಆದರೆ ಹೊಸ ಚೀಫ್ ಕಮಿಷನರುಗಳು ಎಷ್ಟೋ ಬಂದು ಹೋಗಿರುತ್ತಾರೆ. ಅವರೆಲ್ಲರೂ ಅಧಿಕಾರ ವಹಿಸಿಕೊಳ್ಳುವದಕ್ಕೆಂದು ಆಸರದ ದರ್ಬಾರು ಮಾಡಿದ್ದು ನನಗೆ ನೆನಪಿಲ್ಲ. ಈಗಿನ ಚೀಫ್ ಕಮಿಷನರು ಇಲ್ಲಿಂದು ಕೌನ್ಸಿಲ್ ಸಭೆಯ ಅಧಿವೇಶನದ ಸಮಯದಲ್ಲಿ ಪ್ರಮಾಣ ಪ್ರತಿಜ್ಞೆಗಳನ್ನೆಲ್ಲಾ ಮುಗಿಸಿಕೊಳ್ಳಬಹುದಿತ್ತು. ಈ ಸಾರಿ ದರ್ಬಾರು ಬಂದಾಯಿತು. ದರ್ಬಾರುಗಳಿಗೆ ಕಲವು ಮುಖ್ಯ ಸಂಗತಿಗಳು ದೃಷ್ಟಾಂತರವಾಯಿತು. ಗಜೆಟೆಡ್ ಉದ್ಯೋಗಸ್ಥರು ಚೀಫ್ ಕಮಿಷನರವರ ಅಂದರೆ ಸನ್ನು ಸರಕಾರದ ಮುಂದಾಳುಗಳೆಂದೂ, ದೇಶದ ಮುಖಂಡರಾಗಿ ಸೇರಿದ್ದ ಇತರ ದರ್ಬಾರಿಗಳು ಹಿಂದುಗಡೆ ಕೂರಬೇಕಾಗಿದ್ದದರಿಂದ ಹಿಂದಾಳುಗಳೆಂದೂ ಕಂಡಂತಾಯಿತು. ಅದರ ಅರ್ಥವೇನೋ ನಾನು ಹೇಳಲಾರೆ. ಆದರೆ ಹೂಮಾಲೆ ಪಾನ್‌ಸುಪಾರಿ ಹಂಚುವಾಗಲೂ ಕಮಿಷನರು ಚೀಫ್ ಕಮಿಷನರಿಗೂ, ಅವರ ಸೆಕ್ರೆಟರಿಗೂ, ಗಜೆಟೆಡ್ ಉದ್ಯೋಗಸ್ಥರಿಗೆ ಚೀಫ್ ಕಮಿಷನರ ಸೆಕ್ರೆಟರಿಯವರೂ, ಕೌನ್ಸಿಲ್ ಮೆಂಬರುಗಳಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ ಹೀಗೆ ವಿಭಾಗಿಸಿ ಕೆಲಸ ಜರಗಿತು. ಇದರಲ್ಲೇನಿಲ್ಲ ಗೂಢಾರ್ಥವಿರಬಹುದು ಎಲ್ಲರಿಗೂ ತಿಳಿಯುತ್ತದೆ. ಇರುವ ಜನ್ಮಭೂಮಿಯ ಮರ್ಯಾದೆಗೆ ನಾನು ಮರುಳಾಗತಕ್ಕವನಲ್ಲವಾದರೂ ಇಂಥಾ ವ್ಯತ್ಯಾಸದ ತಾರತಮ್ಯದಿಂದ ದೇಶದ ಪ್ರತಿನಿಧಿಗಳನ್ನು ಹಾಗಿಸುವ ಅಭಿಪ್ರಾಯವನ್ನು ಹುಟ್ಟಿಸತಕ್ಕ ಕಾರ್ಯಕ್ರಮಗಳನ್ನು ನಿಂದಿಸಲೇ ಬೇಕಾಗಿದೆ.

ಕೌನ್ಸಿಲಿಗೆ ಬಹಿಷ್ಕಾರ ಹಾಕಿದ ಮುಂದಾಳುಗಳ ತಿಳಿಗೇಡಿತನವನ್ನು ಕುರಿತು ಹಗುರವಾಗಿ ಟೀಕಿಸ ಮನವಿಗೂ, 'ಟಯಮ್ಸ್ ಆಫ್ ಇಂಡಿಯಾ' ಇತ್ಯಾದಿ ಪತ್ರಿಕೆಗಳಿಗೆ ಅಲ್ಲದ ಸಲ್ಲದ ವರ್ತಮಾನಗಳನ್ನು ಬರದು ಹಿಗ್ಗುವವರಿಗೂ ಈ ದರ್ಬಾರಿನಲ್ಲಿ ಆದರಿಗಾದ ಹುಡುರದ ಪುರಸ್ಕಾರಕ್ಕೆ ಅಂಥಾ ಮುಖಂಡರೇ ಆದರೆ ಕಪ್ಪ ಬೇಕು. ನಾಡಿನಿಂದ ಹಾರಿಗಿ ನಡೆದಿದ್ದ ಕಲವು ಮುಖಂಡ ಮಹನೀಯರು ಮಾತ್ರ ಇಂಥಾ ದರ್ಬಾರಿಗೂ ನಮ ಯಾತಕ್ಕೆ ಬಹಿಷ್ಕಾರ ಹಾಕಲಿಕ್ಕೆ ಯಂ ಯಲ್ ಸಿ ವ ಎಂದಾಳುಗಳು ದಾರಿ ತೋರಲಿಲ್ಲವೆಂದು ಹೇಳಿಕೊಳ್ಳುವದು ಅಲ್ಲಲ್ಲಿ ಕೇಳಬರುತ್ತಿದೆ. ಅಲ್ಲದೆ ಕೌನ್ಸಿಲು ಮೆಂಬರುಗಳ ವಿಷಯ ಒಂದು ಮಾತು. ಈ ದರ್ಬಾರಿನ ಕುರಿತು ಬಹಿಷ್ಕಾರದ ಮಾತು ಯಾತಕ್ಕ ಆಗುಂದ ಹೊರಡಲಿಲ್ಲವೋ ತಿಳಿಯದು. ಕೌನ್ಸಿಲಿಗೆ ಹಾಕಿದ ಬಹಿಷ್ಕಾರವು ಬಿಡಲ್ಪಟ್ಟಿಲ್ಲವೆಂದು ಉಪದೇಶಿಸುವ ಬಗ್ಗೆ ಈ ವರ್ಷದ ದರ್ಬಾರು ಬಂದನ್ನು ಚೀಫ್ ಕಮಿಷನರು ನಂಬಿದ ಎಡುಬೆದು ಹಳ್ಳಿಗರ ಮನಸ್ಸಿಗೆ ಹೇಳಿಸುತ್ತಿದೆ. ಆದುದರಿಂದ ಅದಕ್ಕೂ ಬಹಿಷ್ಕಾರ ಹಾಕಿದ್ದರೆ ದೇಶದ ಅಕ್ಕರೆಯನ್ನು ಮತ್ತಷ್ಟು ತೋರಗೊಡುತ್ತಿತ್ತು.

"ದರ್ಬಾರಿ"

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L Rifles	Rs	120	to	Rs	2750
S B B L	„	35	to	„	950
D B B L Guns	„	50	to	„	1350
S B B L	„	35	to		275
D B M L	„	45	to		135
S B M L	„	30	to	„	80
B L Revolvers	„	35	to	„	350
Automatic Pistols	„	30	to	„	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India,

24–3 210 Abdul Rehman Street, BOMBAY.



ಡಿ ಬಿ ಬಿ ಯಲ್ ಕೋವಿಗಳು ರೂ 75 ರಿಂದ ರೂ 150/
ಯಸ್ ಬಿ ಬಿ ಯಲ್ ಕೋವಿಗಳು ರೂ 35 ರಿಂದ ರೂ 250/
ಯಸ್. ಬಿ. ಯಮ್ ಯಲ್. ಕೋವಿಗಳು ರೂ 35 ರಿಂದ 65/-
ರಿವಾಲ್ವರ್‌ಗಳು ರೂ 40/ರಿಂದ ರೂ 125/ರ ವರೆಗೆ

ಡಬ್ಬಲ್ ಮತ್ತು ಸಿಂಗಲ್ ತೋಟಾ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಆವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯನ್. ವಿ. ರಾಮಾನಂಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—18 12. ಬ್ರಾಡ್ವೇ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು, ಬೊಂಬಾಯಿ. ಸ್ಥಾಪಿತವಾದದ್ದು 1874.

ಮಿ. ಕೆ. ಪಿ. ಚಿಣ್ಣಪ್ಪನವರು 1928 ನೇ ಏಪ್ರಿಲ್ 1 ರಿಂದ ಮಡಿಕೇರಿಯಲ್ಲಿ ಈ ಕಂಪೆನಿಯ ಹಣ ವಸೂಲಾತಿಯ ಏಜೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52–1 ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	15,510
ಜಮೆ ಬಂದ ಠೇವಣಾತಿ	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೋದಂಡ ಅಪ್ಪಯ್ಯನವರು, ಕೊಂಗೆಟ್ಟಿರ ಅಪ್ಪಯ್ಯ
ರಾವ್ ಬಹದ್ದೂರ್. ನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1-7-1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೇಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಬಮ್ಮಡ ಮಾದಪ್ಪನವರು,
ಅಮ್ಮತ್ತಿ-ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಬಿ. ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜೆ. ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನ ಪುನಹ ಸರಿಯಾಗಿ ಒದೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದಪ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:-"SHOOTER" Bombay.
(52-2) 'Please write for our Catalogue 1928-1929.

ಕಟುಕಷಾಯ ಮಲೇರಿ ರಕ್ಷೆ:—ಇದು ಇಂಕ್ಲೂಯನ್ಸ ಮತ್ತು ಕ್ವೈನಿನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ಜ್ವರ, ದಿನಾ ಬರುವ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಬಹಳ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0, 3ಕ್ಕೆ ರೂ 4-0-0, 6ಕ್ಕೆ ರೂ 7-8-0, 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹಸಿಸಿ ಹೋಗುವುದು ಮೂತ್ರಕೋಶದ ಉರಿ, ಮೂತ್ರ ಹಿಂದಗಳ ಉರಿ, ಮೂತ್ರನಾಳದಲ್ಲಿ ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದ ಬಿಸುಪು ರೋಗ ಇವುಗಳಿಗೆ ಪರಮ ಔಷಧ. ಬೆಲೆ ಬಾಟ್ಲು 1, 3 6ಕ್ಕೆ ರೂ 1-4, 3-8-0, 6-12-0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗೆ ರೂ 1. 1 ಡಜನಿಗೆ 3-8-0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭ್ರಮೆ, ಕಣ್ಣು ತಿರುವಿಯಿಂದ ಶೀತ ಸೋರುವುದು ಕೆಮ್ಮುವಿಕೆ, ಕಣ್ಣು ನೋವು ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಆಕಾಶಕ್ಕೆ ಹಚ್ಚಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2-10-0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-8-0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ.—ಮನೋಲ್ಲಾಸಿನಿ ಕಂಪೆನಿ.
52-28 9. ಮಂಗಳೂರು.

Kapurchand & co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc,. Chickapet, BANGALORE CITY.

ಅಪೂರ್ವ ಸಮಯ ! **ಅಲಭ್ಯ ಲಾಭ !**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52-46

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರುವರಿ 28ಕ್ಕೆ ಆಖೈರಾದ 5 ವರ್ಷಗಳ ಕೆಲಸದ

ಬೆಲೆಕಟ್ಟಿದಲ್ಲಿ
ರೂ. 37,66,689.
ಉಳುವರಿ ಕಂಡುಬಂದಿದೆ.

ಜೀವವಿಮೆಯ		ಪ್ರಾಯ ನಿರ್ಧರಿಸಿದ ವಿಮೆಯ
1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಸಂತೆಯೂ	ಮತ್ತು	1000 ರೂಪಾಯಿಗಳಿಗೆ 12 ರೂಪಾಯಿಸಂತೆಯೂ

ರಿವರ್ಶನರಿ ಬೋನಸ್ ಹಂಚ ಬಹುದೆಂತ ತೀರ್ಮಾನವಾಗಿದೆ.

ವಿಳಾಸ. ಬ್ರಾಂಚ್ ಆಫೀಸು.
ಎಂಪಯರ್ ಆಫ್ ಇಂಡಿಯಾ ಕಮರ್ಶಿಯಲ್ ಬೀದಿ
ಲೈಫ್ ಬಿಲ್ಡಿಂಗ್, ಬೊಂಬಾಯಿ. 24-15 ಬೆಂಗಳೂರು.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪ್ರಾವಿಡೆಂಟ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅವರ ಬಡ್ಡಿ ಲಾಭ ವಗೈರೆ ಎಲ್ಲವೂ ಈ ದೇಶಸ್ಥರಿಗೆ ಕೊಡಿರಬೇಕೆಂಬ ಠರಾವು ಜನವರಿ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿ ಮೇರೆ ನಮ್ಮ ಸಂಘದ ಕೊಡಗಿನ ಪ್ರೋವಿನ್ಸಿಯಲ್ ಬೋರ್ಡಿನ ಡ್ರಾಯಿಂಗ್ ತಾ. 31-3-1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ತೆಗೆಯಲಾಗಿ ಮಡಿಕೇರಿನಾಡು ಕಡಗದಾಳು ಗ್ರಾಮದ ಮೆ. ಕೊರವಂಡ ಮಂದಣ್ಣನವರ ಕುಟುಂಬ ಮಹಜನ್ನನರಿಗೆ ಚೀಟಿ ಎತ್ತಿ ಒದಲು ಈ ವರ್ಷದ ಪ್ರಥಮ ಡ್ರಾಯಿಂಗ್‌ನ ಐದು ನೂರು ರೂಪಾಯಿಗಳ (500-0-0) ಸಾಲವನ್ನು ಹೊಂದಲು ತೀರ್ಮಾನವಾಯಿತು. ಇದು ಮೇಲಿನ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲಿಸಲಿಲ್ಲ. ಮುಂದಣ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡುವದಕ್ಕೆ ಆದಷ್ಟು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ.

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹ ಪಡಿಸಬೇಕಾಗಿ ಈ ಮೂಲಕ ಕೋರುತ್ತೇನೆ.

ಅನಾಥರಾದಂಥ ಅಂಗಹೀನರುಗಳಿಗೆ ಬರುವ ಏಪ್ರಿಲ್ ತಿಂಗಳಿಂದ ಈ ಸಂಘದ ಖರ್ಚಿನಲ್ಲಿ ಅನ್ನಾಹಾರಾದಿಗಳು ಕೊಡಲ್ಪಡುತ್ತೆ.

ಬಿ. ಎ. ಕುಪ್ಪಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
52-10 ಮಡಿಕೇರಿ.

Printed & published by P. I. Belliappa, at 'Kodagu' Press, Mercara for "Kodagu" Ltd.

ಕೊಡಗು.

If not delivered please return to "KODAGU" OFFICE MERCARA.

[illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪುಸ್ತಕ ೭] ಮಡಿಕೇರಿ, ಸನ ೧೯೨೮ ನೇ ಇಸವಿ ಏಪ್ರಿಲ್ ತಾರೀಖು ೨೭ ನೇ ಶುಕ್ರವಾರ [ಸಂಚಿಕೆ ೪೬

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52–13 SPENCER & CO. LTD. Lamp Depot. MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.



Rose Water Sprinkler.

Chased Silver Mirror.

Post Box 423. TRIPLICANE, MADRAS

Catalogue Free to Boanfide Enquirers.



Manufacture of HIGH CLASS GEMSET JEWELS a specialty.

The special features of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices

GOLD. or SILVERWARE of all descriptions neatly executed

52–33



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

11—9

ರೋಗ

ಎಗ್ಸಿಮಾ ಪ್ಲಸ್ಟರ್

[illegible]

ಸಾರಸಾ ಪರಿಲಾ.

[illegible]

12—1

ಕೊಡಗು.

ಸನ್ ೧೯೨೮ನೇ ಇಸವಿ ಏಪ್ರಿಲ್
ತಾ. ೨೭ನೇ ಶುಕ್ರವಾರ.

ದನಗಳ ಕಮಿಟಿ ವರದಿ.

೨.

ಕಳೆದ ವಾರದಲ್ಲಿ ಈ ವರದಿಯ ಶಿಫಾರಸ್ಸುಗಳ ಪೈಕಿ ಕರಪಟ್ಟಿಗಳನ್ನು ನಿರ್ಮಾಡಿಸುವಿಕೆ, ಹುಲ್ಲುಗಾವಲಿಗೆ ಅಡಚಣೆಯಾದ ಲಂತಾನವನ್ನು ನಾಶಪಡಿಸುವಿಕೆ, ದನಗಳ ಅಭಿವೃದ್ಧಿಗೆ ಬೇಕಾದ ರಿಜರ್ವ್ ಫಾರೆಸ್ಟನ್ನು ಊರಿಗೆ ದೂರವಾಗಿ ಇಡುವಿಕೆ, ಈ ಮೂರು ಮುಖ್ಯ ವಿಷಯಗಳನ್ನು ವಿವರಿಸಿದ್ದಾಯಿತು. ಈ ಲೇಖನದಲ್ಲಿ ಇತರ ಶಿಫಾರಸ್ಸುಗಳು ವಿವರಿಸಲಾಗುವೆ.

ದನಗಳು ಅಂಟುರೋಗದಿಂದ ನಾಶವಾಗುವುದು ಜನರ ಬಡತನದ ಮುಖ್ಯಕಾರಣಗಳಲ್ಲಿ ಒಂದಾಗಿದೆ. ಇದರ ಸಂಬಂಧವಾದ ಶಿಫಾರಸ್ಸುಗಳು ತುಂಬಾ ಇವೆ. ಸರಕಾರದಿಂದ ಆಗಬೇಕಾದವು ಕೆಲವು, ಪ್ರಜಾ ಜನರಿಂದಲೇ ಆಗಬೇಕಾದವು ಇನ್ನು ಕೆಲವು. ನಾಲ್ಕು ಈಗ ವ' ವೈದ್ಯರು ಮಾತ್ರ ಇದ್ದಾರೆ, ಇನ್ನು ಹೆಚ್ಚಿಗೆ ಇಬ್ಬರನ್ನಾದರೂ ನೇಮಿಸಬೇಕೆಂತಲೂ, ನಾಪೋಕ್ಲಿನಲ್ಲಿ ಒಂದು ಪಶು ಚಿಕಿತ್ಸೆ ಆಸ್ಪತ್ರೆ ಇಡಬೇಕೆಂತಲೂ, ಎಲ್ಲಾ ಪಶುವೈದ್ಯ ಆಸ್ಪತ್ರೆಗಳಲ್ಲೂ ಕಂಪೌಂಡರಬೇಕೆಂತಲೂ, ದನಗಳಿಗೆ ಬಾಯಿ ಕಾಲು ಬಾರದಂತೆ ಹೊಸ ರೀತಿಯಲ್ಲಿ ಇನಾಕ್ಯುಲೇಶನ್ ಮಾಡಲು ಎಲ್ಲಾ ಪಶುವೈದ್ಯರಿಗೂ ತರಬೇತು ಕೊಡಬೇಕೆಂತಲೂ, ಚಿಕಿತ್ಸೆಗೆ ಬೇಕಾದಷ್ಟು ಔಷಧಿಯನ್ನು ಒದಗಿಸಿ ಇಟ್ಟಿರಬೇಕೆಂತಲೂ ಮುಂತಾಗಿ ಬರೆದಿದೆ. ಕೊಡಗಿನಲ್ಲಿ ಸಾಂಕ್ರಾಮಿಕ ಜಾಡ್ಯಗಳು ಇಲ್ಲದೆ ಇರುವ ಸಮಯವೇ ಇಲ್ಲವೆಂತ ಆಗಿರುವ ಈ ಕಾಲದಲ್ಲಿ ಪಶು ವೈದ್ಯರ ಸಂಖ್ಯೆ ಹೆಚ್ಚಾಗಬೇಕಾದದ್ದು ಅತಿ ಅವಶ್ಯವಾಗಿದೆ. ಪಾಡಿನಾಲ್ಕುನಾಡು ತಾಲೋಕಿಗೆ ಈ ವರೆಗೆ ಪಶುಚಿಕಿತ್ಸೆಯ ಆಸ್ಪತ್ರೆ ಇಲ್ಲದೆ ಇರುವದು ದೊಡ್ಡ ಕೊರತೆಯಾಗಿದೆ. ಇದಕ್ಕೆ ಕಮಿಟಿಯ ಗಮನವು ದೊರೆತದ್ದು ಸಂತೋಷಕರವಾಗಿದೆ. ಖಾಯಿಲೆ ಬರದಂತೆ ದನಗಳಿಗೆ ಇನಾಕ್ಯುಲೇಶನ್ ಮಾಡಲು ಸೀರಂ ಇಲ್ಲವೆಂಬ ಉತ್ತರವು ವೆಟರಿನರಿ ಡಾಕ್ಟರುಗಳಿಂದ ಆಗಿಂದಾಗ್ಯೆ ಕೇಳುತ್ತಿರುತ್ತದೆ. ಅಂಥಾ ಲೋಪಕ್ಕೆ ಎಡೆಕೊಡದೆ ಇರಬೇಕಾದದ್ದು ಇಲಾಖೆಯವರ ಕರ್ತವ್ಯವಾಗಿದೆ. ಖಾಯಿಲೆ ತಗಲಿದ ದನಗಳ ಚಿಕಿತ್ಸೆಗೂ ಆಸ್ಪತ್ರೆಗಳಲ್ಲಿ ಔಷಧಿ ಬೇಕಾದಷ್ಟು ಇರಬೇಕಾದದ್ದು ಅವಶ್ಯ. ಚಿಕಿತ್ಸೆಗೆ ಬೇಕಾದ ಸಾಧನ ಸಲಕರಣೆಗಳೂ ಸಾಕಷ್ಟು ಇರಬೇಕೆಂತ ಶಿಫಾರಸ್ಸು ಮಾಡಲಾಗಿದೆ. ಚಿಕಿತ್ಸೆಗೆ ತಕ್ಕ ಆಯುಧಗಳು ಇಲ್ಲದಿದ್ದರೆ ಎಷ್ಟು ಡಾಕ್ಟರುಗಳಿದ್ದರೂ ಹೆಚ್ಚಿನ ಪ್ರಯೋಜನವಾಗಲಾರದು.

ದನಗಳ ಖಾಯಿಲೆ ಹೆಚ್ಚಲು ಚರ್ಮ ವ್ಯಾಪಾರಿಗಳ ವರ್ತನೆಯು ಕೆಲವು ಮಟ್ಟಿಗೆ ಕಾರಣವೆಂತ ಅನೇಕರು ನಂಬುತ್ತಾರೆ. ಚರ್ಮ ಒದಗಿಸಿಕೊಡಲು ಒಪ್ಪುವ ಜನರು ದನಗಳ ನಾಶಕ್ಕೆ ಕೆಲವು ಮಟ್ಟಿಗಾದರೂ ಕಾರಣರಾಗಿರಬಹುದೆಂಬ ಸಂಶಯಕ್ಕೆ ಕಾರಣವಿದೆ. ಚರ್ಮದ ವ್ಯಾಪಾರಿಗಳು ಲೈಸನ್ಸ್ ಪಡೆದುಕೊಳ್ಳಬೇಕೆಂಬ ಕಾನೂನು ಮಾಡಲು ವರದಿಯಲ್ಲಿ ಶಿಫಾರಸ್ಸು ಇದೆ. ಇದರಿಂದ ಕೆಲವು ಮಟ್ಟಿಗೆ ಪ್ರಯೋಜನವಾಗಬಹುದು. ದನಗಳ ವ್ಯಾಪಾರವಾಗುವ ಸಂತೆಗಳಿಗೆ ಮಾರಾಟಕ್ಕೆ ಬರುವ ಜಾನುವಾರುಗಳನ್ನು ವೆಟರಿನರಿ ಡಾಕ್ಟರುಗಳು ಪರೀಕ್ಷೆ ಮಾಡಿ ಆರೋಗ್ಯವಾದವುಗಳನ್ನು ಮಾತ್ರ ಮಾರಾಟಕ್ಕೆ ಬಿಡುವದು ಉತ್ತಮವಾಗಿದೆ. ಕೆಲವು ಕಾಲ ಖಾಯಿಲೆ ತಗಲಿದ ದನಗಳನ್ನೂ, ಕೊಡಗಿನಲ್ಲಿ ಜೀವಿಸಿರಲು ಸಾಧ್ಯವಿಲ್ಲದಂಥವುಗಳನ್ನೂ ಮಾರಾಟಕ್ಕೆ ಬಿಡದೆ ವಾಪಸು ಕಳುಹಿಸಿದರೆ ಮುಂದೆ ಆರೋಗ್ಯವಾಗಿರುವ, ಬಾಳಿಕೆ ಬರುವ ದನಗಳೇ ಮಾರಾಟಕ್ಕೆ ಬಂದಾವೆಂಬ ವರದಿಯ ಅಭಿಪ್ರಾಯವನ್ನು ಒಪ್ಪುತ್ತೇವೆ.

ಖಾಯಿಲೆ ಹರಡದಂತೆ ನೋಡಿಕೊಳ್ಳಲು ಜನರು ಮಾಡಬೇಕಾದ ಕರ್ತವ್ಯಗಳು ಯಾವವೆಂದರೆ—ಖಾಯಿಲೆ ತಗಲಿದ ದನವನ್ನು ಬೇರ್ಪಡಿಸಿ ಇಡುವದು ಮತ್ತು ಖಾಯಿಲೆಯಿಂದ ಸತ್ತ ದನವನ್ನು ಹೊಲೆಯರಿಗೆ ಕೊಡದೆ ಹೂಳುವದು. ಬೇರ್ಪಡಿಸಿ ಇಡಲು ತಕ್ಕ ಅನುಕೂಲಗಳನ್ನು ಎಲ್ಲಾ ರೈತರು ಮಾಡಿ ಇಟ್ಟುಕೊಳ್ಳಲು ಸಾಧ್ಯವಿಲ್ಲದಿರುವದರಿಂದ ಊರವರೆಲ್ಲರೂ ಸೇರಿ ಖಾಯಿಲೆ ತಗಲಿದ ದನಗಳನ್ನು ಇಡಲು ಒಂದು ಸ್ಥಳ ಏರ್ಪಡಿಸಿಕೊಳ್ಳಬೇಕೆಂತ ಸಲಹೆ ಕೊಟ್ಟಿರುತ್ತಾರೆ. ಸತ್ತ ದನಗಳ ಶವಗಳನ್ನು ಊರು ಹೊಲೆಯರ ಸಹಾಯವಿಲ್ಲದೆ ಹೂಳುವದು ಸುಲಭ ಸಾಧ್ಯವಲ್ಲವೆಂತ ಕಮಿಟಿಯವರು ಒಪ್ಪುತ್ತಾರೆ. ಹೊಲೆಯರಿಗೆ ಸತ್ತ ದನ ಸಿಕ್ಕಿದರೆ ಜಾಡ್ಯವು ಹರಡಲು ಅನುಕೂಲವಾಗುತ್ತದೆ. ಅವರ ಚರ್ಮ ಸುಲಿದು ಮಾಂಸ ಮೂಳೆಗಳನ್ನು ದನಗಳು ಮೇಯುವಲ್ಲಿ ಹಾಕುವದಲ್ಲದೆ ದನಗಳು ಕುಡಿಯುವ ನೀರಿನಲ್ಲಿ ಅವರ ಕರುಳು ಮುಂತಾದ್ದನ್ನು ತೊಳೆಯುತ್ತಾರೆ. ಈ ನಡತೆಯಿಂದಲೂ ಊರಲ್ಲೆಲ್ಲಾ ಖಾಯಿಲೆಯು ಸುಲಭದಲ್ಲೇ ಹರಡುತ್ತದೆ. ಆದ್ದರಿಂದ ಅಂಟುರೋಗದಿಂದ ಸತ್ತ ದನಗಳನ್ನು ಹೂಳುವದು ಅವಶ್ಯ. ಆದರೆ ಇದು ಸಾಧ್ಯವಾಗಬೇಕಾದರೆ ಊರ ಜನರು ಒಗ್ಗಟ್ಟಾಗಬೇಕು. ಈ ಸಲಹೆಗಳನ್ನು ಜಾರಿಗೆ ತರಲು ಗ್ರಾಮ ಪಂಚಾಯಿತಿಗಳು ಬಹು ಪ್ರಯೋಜನಕರವಾಗುವವು. ಗ್ರಾಮ ಪಂಚಾಯಿತಿಯವರು ಗ್ರಾಮಸ್ಥರು ಇಂಥಾ ಸಂದರ್ಭಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ನಿಯಮ ಮಾಡಿಟ್ಟರೆ ಅಂಥ ನಿಯಮಕ್ಕೆ ವಿರೋಧವಾಗಿ ನಡೆದವರಿಗೆ ಶಿಕ್ಷಿಸುವ ಹಕ್ಕು ಇಟ್ಟುಕೊಳ್ಳಬಹುದು.

ಹುಲ್ಲುಗಾವಲುಗಳು ಕಡಿಮೆಯಾಗುತ್ತಾ ಬಂದಿರುವ ಕೊರತೆಯನ್ನು ಹೋಗಲಾಡಿಸಲು ದನಗಳ ಮೇವಿಗೆ ಉಪಯೋಗವಾಗುವ ಹೊಸ ಹುಲ್ಲುಗಳನ್ನು ಬೆಳೆಸಲು ಪ್ರಾರಂಭಿಸಬೇಕು. ಹೊಸ ಹುಲ್ಲುಗಳ ಬೀಜ ತರಿಸಿ ಕೊಡಲು ಸರಕಾರವು ಸಹಾಯ ಕೊಡಬೇಕೆಂತ ವರದಿಯಲ್ಲಿ ಶಿಫಾರಸ್ಸು ಸೂಚಿಸಲಾಗಿದೆ. ಬೈಲು ಸೀಮೆಗಳಲ್ಲಿ ದನಗಳ ಮೇವಿಗೋಸ್ಕರವೇ ಜೋಳದ ದಂಟು ಮುಂತಾದ್ದನ್ನು ಬೆಳಸಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಈ ಕ್ರಮವು ಗೊತ್ತೇ ಇಲ್ಲ. ಮೇವಿಗೆ ಬಹಳ ಕಡಿಮೆಯಾಗಿರುವಾಗ ಮೇವಿನ ಪದಾರ್ಥಗಳನ್ನು ಬೆಳೆಸಿಕೊಳ್ಳಲೇ ಬೇಕು. ಹೀಗೆ ಬೆಳೆದ ಹುಲ್ಲು ಮುಂತಾದ ಪದಾರ್ಥಗಳನ್ನು ನೆಲದಲ್ಲಿ ಗುಂಡಿ ತೋಡಿ ಮುಚ್ಚಿಡುವ ಕ್ರಮವನ್ನು ಜನರು ತಿಳಿದುಕೊಳ್ಳತಕ್ಕದ್ದು. ಮಳೆ ಹೆಚ್ಚಿರುವ ಈ ದೇಶದಲ್ಲಿ ಈ ಕ್ರಮವನ್ನು ಜಯಪ್ರದವಾಗಿ ಮಾಡಿಕೊಳ್ಳಬಹುದೋ ಎಂಬದನ್ನು ಸರಕಾರವು ಅಜಮಾಯಿಸಬೇಕಾಗಿದೆ ಎಂತ ಸಹ ವರದಿಯಲ್ಲಿ ಹೇಳಲಾಗಿದೆ.

ಕರಪಟ್ಟಿಗಳನ್ನೂ ಸರಕಾರದವರು ಏರ್ಪಡಿಸಿ ರೈತರಿಗೆ ಅದರ ಪ್ರಯೋಜನ ಸಿಕ್ಕುವ ವರೆಗೆ ಜನರು ಕಾಯದೆ ಊರುಗಳಲ್ಲಿ ಚೆನ್ನಾಗಿಲ್ಲದ ಹೋರಿಗಳನ್ನು ಬೀಜ ತೆಗೆದು ಒಳ್ಳೇ ಹೋರಿಗಳನ್ನೇ ಇಟ್ಟುಕೊಳ್ಳಬೇಕು. ಬೀಜ ಕುಟ್ಟಿದ್ದು ತೆಗೆಯುವದು ಒಳ್ಳೇದೋ, ಈ ವರೆಗೆ ಮಾಡುತ್ತಿದ್ದಂತೆ ಹಿಸುಕಿ ಒಡೆಯುವದು ಒಳ್ಳೇದೋ ಎಂಬದನ್ನು ಚರ್ಚಿಸಿ ಕುಯಿದು ತೆಗೆಯುವದೇ ಉತ್ತಮವೆಂತ ಅಭಿಪ್ರಾಯ ಪಟ್ಟಿರುತ್ತಾರೆ.

ವರದಿಯ ಶಿಫಾರಸ್ಸುಗಳಲ್ಲಿ ಬಹು ವಿಶೇಷ ಸಂಗತಿಗಳಿಲ್ಲವಾದರೂ ದೇಶವೆಲ್ಲಾ ಸುತ್ತಿ ಜನರ ಅಭಿಪ್ರಾಯ ತೆಗೆದು ಬರೆದ ರಿಪೋರ್ಟಾದ್ದರಿಂದ ಅದಕ್ಕೆ ಪ್ರಜಾಜನರೂ, ಸರಕಾರವೂ ಬೆಲೆ ಕೊಡಬೇಕಾಗಿದೆ. ಈ ಶಿಫಾರಸ್ಸುಗಳಲ್ಲಿ ಕರಪಟ್ಟಿಗಳನ್ನು ಏರ್ಪಡಿಸುವ ಸಲುವಾಗಿಯೇ ಮೊದಲನೇ ವರ್ಷ 11000 ರೂ. ಮತ್ತು ಸಾಲಿಯಾನ 9000 ರೂ. ಸಹ ಖರ್ಚು ಬೇಕಾಗುತ್ತದೆಯೆಂತ ವರದಿಯಲ್ಲೇ ಅಂದಾಜು ಮಾಡಲಾಗಿದೆ. ಹೆಚ್ಚಿಗೆ ವೆಟರಿನರಿ ಡಾಕ್ಟರುಗಳನ್ನು ನೇಮಿಸುವದು ಮುಂತಾದ ಸಲಹೆಗಳ ಖರ್ಚು ಇದಕ್ಕೆ ಸೇರಿಸಲ್ಪಟ್ಟಿರುವದಿಲ್ಲ. ಈ ರೀತಿ ಹೊಸ ಖರ್ಚನ್ನು ಸರಕಾರದವರು ಮಾಡಬೇಕಾದರೂ, ಖರ್ಚು ಮಾಡಬೇಕೆಂತ ಜನರು ಕೇಳಿಕೊಳ್ಳಬೇಕಾದರೂ ಇಂಥಾ ಕಮಿಟಿಯ ಶಿಫಾರಸ್ಸಿನ ಆಧಾರ ಬೇಕಾಗಿದೆ.

ಕಮಿಟಿಯ ವರದಿಯು ಪ್ರಕಟವಾಯಿತೆಂತ ಜನರು ತೃಪ್ತಿಪಟ್ಟುಕೊಳ್ಳುವಂತಿಲ್ಲ. ಶಿಫಾರಸ್ಸುಗಳನ್ನು ಸರಕಾರವೂ, ಜನರೂ ಜಾರಿಗೆ ತಂದರೆ ಪ್ರಯೋಜನವಾದೀತಷ್ಟೆ. ಜನರ ಜೀವನದ ಅಭಿವೃದ್ಧಿಗೆ ಅವಶ್ಯವಿರುವ ಈ ವಿಷಯಕ್ಕೆ ಸರಕಾರವು ಎಷ್ಟು ಹಣವನ್ನಾದರೂ ಖರ್ಚು ಮಾಡಲು ತಯಾರಿರಬೇಕು. ಆದರೆ ಶಿಫಾರಸ್ಸಿನಲ್ಲಿ ಅಂದಾಜು ಮಾಡಲ್ಪಟ್ಟಿರುವ ಖರ್ಚು ಕಡಿಮೆಯಾಗಿಯೇ ಇದೆ. ಆದುದರಿಂದ ವಿಳಂಬ ಮಾಡದೆ ಶಿಫಾರಸ್ಸುಗಳನ್ನು ಜಾರಿಗೆ ತರಬೇಕೆಂತ ನಂಬುತ್ತೇವೆ.

ಗ್ರೇಟ್ ಬ್ರಿಟನ್ ಮತ್ತು ಈಜಿಪ್ಟ್

ಇತ್ತೀಚೆಗೆ ಗ್ರೇಟ್ ಬ್ರಿಟನ್ನಿಗೂ, ಈಜಿಪ್ಟಿಗೂ ರಾಜ್ಯದ ಸಂಬಂಧವು ನಯವಾಗಿಲ್ಲ. ಕಳೆದ ಘೋರ ಯುದ್ಧಕ್ಕೆ ಮುಂಚೆ ಈಜಿಪ್ಟ್ ದೇಶವು ಹಿಂದೂದೇಶದಂತೆಯೇ ಬ್ರಿಟಿಷರ ಅಧೀನವಲ್ಲತ್ತು. ಯುದ್ಧವು ಕಳೆದನಂತರ ಅಲ್ಲಿಯವರ ಒಗ್ಗಟ್ಟಿನ ಚಳವಳಿಯಿಂದ ಅವರಿಗೆ ಸ್ವಾತಂತ್ರ್ಯ ಸರಕಾರವನ್ನು ಬ್ರಿಟಿಷರು ಕೊಡಬೇಕಾಗಿ ಬಂತು. ಆದರೆ ಈಜಿಪ್ಟಿನ ಕರಾವಳಿಯಲ್ಲಿರುವ ಸುವೆಜ್ ನಾಲೆಯು ಯುರೋಪ ಖಂಡದಿಂದ ಪೂರ್ವಾರ್ಧ ಭೂಗೋಳ ದೇಶಗಳಿಗೆ ಹೆಬ್ಬಾಗಿಲಿನಂತಿದೆ. ಈ ನಾಲೆಯು ಮೂಲಕವೇ ಸಮುದ್ರ ಮಾರ್ಗ ವ್ಯಾಪಾರಗಳೆಲ್ಲವೂ ನಡೆಯಬೇಕಾಗಿದೆ. ಇದು ಬ್ರಿಟಿಷ ಅಧೀನದಲ್ಲಿದೆ. ಈಜಿಪ್ಟಿನವರಿಗೆ ಸ್ವಾತಂತ್ರ್ಯವು ದೊರೆತ ದಿನದಿಂದ ಅವರ ರಾಷ್ಟ್ರೀಯ ಸರಕಾರವು ಬಲವಾಗುತ್ತಾ ಬಂದು ಅವರ ದೇಶ ಸಂರಕ್ಷಣೆಗಾಗಿ ಎಲ್ಲಾ ವಿಧದಲ್ಲಿಯೂ ಪ್ರಯತ್ನ ಪಡುತ್ತಿರುವದು ಸಹಜವಾಗಿದೆ. ಈ ವೇಳೆಯಲ್ಲಿ ಬ್ರಿಟಿಷರಿಗೂ, ಈಜಿಪ್ಟಿನವರಿಗೂ ಒಂದು ಹೊಸ ಒಪ್ಪಂದವನ್ನು ಮಾಡಿಕೊಳ್ಳಲು ಪ್ರಯತ್ನಗಳು ನಡೆದವು. ಬ್ರಿಟಿಷ್ ಸಾಮ್ರಾಜ್ಯದ ಭಾಗವಾದ ಹಿಂದೂದೇಶ, ಆಸ್ಟ್ರೇಲಿಯ ಮುಂತಾದ ಭಾಗಗಳಿಗೂ, ಬ್ರಿಟನ್ನಿಗೂ ಇರುವ ಸಂಬಂಧಕ್ಕೆ ಕುಂದಕ ಬಾರದಂತೆ ನೋಡಿಕೊಳ್ಳುವ ಉದ್ದೇಶ ಸುವೆಜ್ ನಾಲೆಯ ಮೇಲೆ ತಮಗಿರುವ ಅಧಿಕಾರವನ್ನು ಭದ್ರಪಡಿಸಿಕೊಳ್ಳುವದಕ್ಕೆ ಬ್ರಿಟಿಷರ ಸೈನ್ಯವನ್ನು ಈಜಿಪ್ಟಿನಲ್ಲಿ ಇಡಲು ಬಿಡಬೇಕು. ಇದು ಈ ಹೊಸ ಕರಾರಿನ ಒಂದು ಷರತ್ತಾಗಿದೆ. ಈ ಷರತ್ತು ಈಜಿಪ್ಟಿನ ರಾಷ್ಟ್ರೀಯ ಸರಕಾರದವರು ಒಪ್ಪಲಿಲ್ಲ. ಇದು ಬ್ರಿಟಿಷರಿಗೆ ಅತೃಪ್ತಿಯನ್ನುಂಟುಮಾಡಿದೆ.

ಈ ಮಧ್ಯೆ ಈಜಿಪ್ಟಿನಲ್ಲಿ ಭಾಷಣ ಸ್ವಾತಂತ್ರ್ಯ, ಕವಿ, ಕತ್ತಿ ಆಯುಧಗಳನ್ನು ಹಿಡಿಯುವ ಸ್ವಾತಂತ್ರ್ಯ ಮುಂತಾದ ಪ್ರಾಮುಖ್ಯ ವಿಷಯಗಳನ್ನು ಕುರಿತ ಕಾನೂನಿನ ಒಂದು ಮಸೂದೆಗಳು ಅಲ್ಲಿಯ ಪಾರ್ಲಿಮೆಂಟಿನ ಮುಂದೆ ಬಂದಿವೆ. ಭಾಷಣ ಸ್ವಾತಂತ್ರ್ಯದ ಮಸೂದೆಯು ಚರ್ಚಿಸಲ್ಪಡುತ್ತಿದೆ. ಅದರ ಪ್ರಕಾರ ಮೀಟಿಂಗನ್ನು ನಡೆಸುವ ಕಮಿಟಿಯವರ ಜವಾಬ್ದಾರಿಗೆ ಮಾಲಕರ ಕೋರಿಕೆ ಮೇರೆ ಅಥವಾ ಮೀಟಿಂಗಿನಲ್ಲಿ ದೊಡ್ಡ ಅಕ್ರಮಗಳುಂಟಾದರೆ ಮಾತ್ರ ಪೋಲೀಸು ಅಧಿಕಾರಿಗಳು ಮೀಟಿಂಗನ್ನು ಬರಖಾಸ್ತು ಮಾಡಬಹುದೆಂತಲೂ, ಬೇರೆ ಕಾರಣಗಳಿಂದ ಅಧಿಕಾರಿಗಳು ಮೀಟಿಂಗನ್ನು ಬರಖಾಸ್ತು ಮಾಡಿದಲ್ಲಿ ಅವರ ಮೇಲೆ ಈ ಕಾನೂನನ್ನು ಉಲ್ಲಂಘನೆ ಮಾಡಿದವರಿಗೆ ಸುಲಭ ಶಿಕ್ಷೆ ಪಾತ್ರರಾಗುವರೆಂತಲೂ ಇರುವ ಸೆಕ್ಷನುಗಳನ್ನು ಕುರಿತು ಬ್ರಿಟಿಷ್ ಪತ್ರಿಕೆಗಳು ತುಂಬಾ ಅಸಮಾಧಾನವನ್ನು ಸೂಚಿಸುತ್ತಿರುವವು. ಈ ಕಾನೂನು ಜಾರಿಗೆ ಬಂದರೆ ಈಜಿಪ್ಟಿನಲ್ಲಿರುವ ಒಂದು ಲಕ್ಷ ಪರದೇಶೀಯರ ಜೀವನಕ್ಕೂ, ಆಸ್ತಿಗೂ ಏನೂ ಬೆಲೆ ಇರಲಿಕ್ಕಿಲ್ಲವೆಂತಲೂ, ಈಜಿಪ್ಟಿನ ಸರಕಾರದವರು ಪರದೇಶೀಯರ ಹಕ್ಕು ಬಾಧ್ಯತೆಗಳನ್ನು ಕಾಪಾಡುವ ತಮ್ಮ ಜವಾಬ್ದಾರಿಯನ್ನು ಇನ್ನೂ ತಿಳಕೊಂಡಿರುವದಿಲ್ಲವೆಂತಲೂ ಈ ಬಿಲ್ಲನ್ನು ಬ್ರಿಟಿಷರು ವಿರೋಧಿಸುವ ಮುಂಚೆ ದೀರ್ಘಕಾಲ ತಡೆಕೊಟ್ಟು ಈಜಿಪ್ಟಿನವರೇ ಅದನ್ನು ವಾಪಸು ತೆಗೆದುಕೊಳ್ಳುವಂತೆ ಮಾಡಬೇಕೆಂತಲೂ ಮುಂತಾಗಿ ಬ್ರಿಟನ್ನಿನ ಪತ್ರಿಕೆಗಳು ಬ್ರಿಟಿಷ್ ಸರಕಾರದವರಿಗೆ ಸೂಚನೆಗಳನ್ನು ಕೊಡುತ್ತಿವೆ. ಈಜಿಪ್ಟಿನ ಸರಕಾರದವರು ಬ್ರಿಟಿಷರ ಹೊಸ ಒಪ್ಪಂದಕ್ಕೆ ರುಜು ಹಾಕಿದ್ದರೆ ಈ ಸ್ವಾತಂತ್ರ್ಯದ ಮಸೂದೆಗಳಿಗೆ ಯಾವದೂ ಬ್ರಿಟಿಷರು ವಿರೋಧ ಒಡ್ಡುತ್ತಿರಲಿಲ್ಲವೆಂದು ರಾಜಕೀಯ ಜ್ಞಾನದ ಅಭಿಪ್ರಾಯವಾಗಿದೆ.

ಹೇಗೂ ಇವೆರಡು ದೇಶಗಳ ಸಂಬಂಧಗಳು ಕಠಿಣಸ್ಥಿತಿಗೆ ಬರುವಂತೆ ತೋರುತ್ತದೆ. ಈಜಿಪ್ಟಿನವರು ಸ್ವಾತಂತ್ರ್ಯಕ್ಕೋಸ್ಕರವಾಗಿ ಭಯಭೀತಿ ದಾಕ್ಷಿಣ್ಯಗಳಿಲ್ಲದೆ ತಮ್ಮ ಕರ್ತವ್ಯವನ್ನು ಮಾಡಲು ಸಿದ್ಧರಾಗಿರುವರು. ಬ್ರಿಟಿಷರು ಪರದೇಶೀಯರ ಹಿತವನ್ನು ಕಾಪಾಡುವ ನೆಪದಿಂದ ತಮ್ಮ ಬಲವನ್ನು ಪ್ರಯೋಗಿಸುವರಾದರೂ ಈ ವಿಷಯಕ್ಕೆ ಕಷ್ಟಗಳು ದೃಢವಾದಂತೆ ಕಾಣುತ್ತದೆ. ಇದು ಯುದ್ಧಕ್ಕೆ ಕಾರಣವಾಗಿ ಬರುವದೋ ಎಂಬ ಸಂಶಯವು ಬಲವಾಗಿದೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೩೩ನೇ ಪ್ರಕರಣ

ಅಕ್ಷರ ಶಿಕ್ಷಣ

ಟಾಲ್‌ಸ್ಟಾಯ್ ಫಾರ್ಮಿನಲ್ಲಿ ಶಾರೀರಕ ಶಿಕ್ಷಣಕ್ಕೂ, ಅದರೊಡನೆಯೇ ಔದ್ಯೋಗಿಕ ಶಿಕ್ಷಣಕ್ಕೂ ಹೇಗೆ ಏರ್ಪಡಿಸಿದೆವೆಂಬುದನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಈ ಏರ್ಪಾಡು ನನಗೆ ತೃಪ್ತಿಯಾಗುವ ರೀತಿಯಲ್ಲಿ ಮಾಡಲ್ಪಟ್ಟಿತೆಂದು ಹೇಳಲಾಗುವುದಿಲ್ಲವಾದರೂ ಅದು ಹೆಚ್ಚು ಕಡಿಮೆ ಸಫಲವಾಯಿತೆನ್ನಬಹುದು. ಆದರೆ ಅಕ್ಷರ ಶಿಕ್ಷಣವು ಹೆಚ್ಚು ಕಷ್ಟದ ವಿಷಯವಾಗಿದ್ದಿತು. ಅದಕ್ಕೆ ಬೇಕಾದ ಅನುಕೂಲಗಳು, ಪಾಂಡಿತ್ಯಾದಿಗಳು ನನ್ನಲ್ಲಿರಲಿಲ್ಲ. ಮತ್ತು ಈ ವಿಷಯಕ್ಕೆ ಉಪಯೋಗಿಸಬೇಕೆನ್ನುವಷ್ಟು ವಿರಾಮವು ನನಗಿರಲಿಲ್ಲ. ನಾನು ಪಡುತ್ತಿದ್ದ ದೇಹಶ್ರಮದಿಂದ ಕೆಲಸದ ಕೊನೆಯಲ್ಲಿ ದಿನವೂ ನಾನು ದಣಿದಿರುತ್ತಿದ್ದೆನು. ನನಗೆ ವಿಶ್ರಾಂತಿಯು ಅತ್ಯಾವಶ್ಯಕವಿದ್ದಾಗಲೇ ನಾನು ಪಾಠ ಹೇಳಿಕೊಡುತ್ತಿದ್ದೆನು. ಆದುದರಿಂದ ನಾನು ಉತ್ಸಾಹದಿಂದ ಶಾಲೆಗೆ ಹೋಗುವದರ ಬದಲು ಅಲ್ಲಿ ಎಚ್ಚರವಾಗಿರುವುದೇ ಕಷ್ಟವಾಗಿರುತ್ತಿದ್ದಿತು. ಬೆಳಿಗ್ಗೆ ಹೊಲದ ಕೆಲಸವನ್ನೂ, ಮನೆಗೆಲಸವನ್ನೂ ಮಾಡಬೇಕಾಗಿದ್ದಿತು. ಇದರಿಂದ ಮಧ್ಯಾಹ್ನದ ಊಟವಾದ ಮೇಲೆ ಪಾಠವನ್ನು ಹೇಳಿಕೊಡಬೇಕಾಗಿದ್ದಿತು. ಇದನ್ನು ಬಿಟ್ಟು ಶಾಲೆಗೆ ಅನುಕೂಲವಾದ ಸಮಯವೇ ದೊರಕುತ್ತಿರಲಿಲ್ಲ.

ಅಕ್ಷರ ಶಿಕ್ಷಣಕ್ಕೆ ಹೆಚ್ಚೆಂದರೆ ಮೂರು ತಾಸನ್ನು ಉಪಯೋಗಿಸುತ್ತಿದ್ದೆವು. ಹಿಂದೀ, ತಮಿಳು, ಗುಜರಾತೀ ಮತ್ತು ಉರ್ದು ಇವೆಲ್ಲವನ್ನೂ ಹೇಳಿಕೊಡುತ್ತಿದ್ದೆವು. ಈ ಶಿಕ್ಷಣವು ಹುಡುಗರ ತಾಯ್ನುಡಿಗಳಲ್ಲಿ ನಡೆಯುತ್ತಿದ್ದಿತು. ಇಂಗ್ಲಿಷನ್ನೂ ಕಲಿಸುತ್ತಿದ್ದೆವು. ಮತ್ತು ಗುಜರಾತಿ ಹಿಂದೂ ಹುಡುಗರಿಗೆ ಸ್ವಲ್ಪ ಸಂಸ್ಕೃತದ ಜ್ಞಾನವನ್ನೂ, ಎಲ್ಲಾ ಹುಡುಗರಿಗೂ ಚರಿತ್ರೆ, ಭೂಗೋಳ ಮತ್ತು ಅಂಕಗಣಿತಗಳ ಪರಿಚಯವನ್ನೂ ಮಾಡಿಕೊಡಬೇಕಾಗಿದ್ದಿತು. ತಮಿಳು ಮತ್ತು ಉರ್ದು ಭಾಷೆಗಳನ್ನು ಹೇಳಿಕೊಡಲು ನಾನು ಒಪ್ಪಿಕೊಂಡಿದ್ದೆ. ನನಗಿದ್ದ ಅಲ್ಪಸ್ವಲ್ಪ ತಮಿಳು ಜ್ಞಾನವು ನಾನು ಸಮುದ್ರಯಾನಗಳಲ್ಲಿಯೂ, ಜೈಲಿನಲ್ಲಿಯೂ ಸಂಪಾದಿಸಿದುದಾಗಿದ್ದಿತು. ಪೋಪನ ಅತ್ಯುತ್ತಮವಾದ 'ತಮಿಳು ಕೈಪಿಡಿ'ಗಿಂತ ಹೆಚ್ಚಾಗಿ ನನ್ನ ಓದು ಸಾಗಿರಲಿಲ್ಲ. ನಾನು ಸಂಪಾದಿಸಿದ್ದ ಉರ್ದುಲಿಪಿಯ ಜ್ಞಾನವೆಲ್ಲವೂ ಒಂದೇ ಒಂದು ಸಮುದ್ರಯಾನದಲ್ಲಿ ಕಲಿತುಕೊಂಡದ್ದಾಗಿದ್ದಿತು. ಆ ಭಾಷೆಯ ಶಬ್ದ ಸಂಪತ್ತು ಮುಸಲ್ಮಾನ ಮಿತ್ರರ ಸಂಪರ್ಕದಿಂದ ನನ್ನ ಬುದ್ಧಿಗೆ ಬಂದಿದ್ದ ಅರಬ್ಬೀ ಮತ್ತು ಪಾರಸೀ ಶಬ್ದಗಳಿಗೆ ಸೀಮಿತವಾಗಿದ್ದಿತು. ಹೈಸ್ಕೂಲಿನಲ್ಲಿ ಕಲಿತುಕೊಂಡುದಕ್ಕಿಂತ ಹೆಚ್ಚಾಗಿ ನನಗೆ ಸಂಸ್ಕೃತವು ಬರುತ್ತಿರಲಿಲ್ಲ. ನನ್ನ ಗುಜರಾತೀ ಭಾಷಾ ಜ್ಞಾನವು ಕೂಡ ಶಾಲೆಯಲ್ಲಿ ಕಲಿತುಕೊಳ್ಳುವುದಕ್ಕಿಂತ ಹೆಚ್ಚಾಗಿರಲಿಲ್ಲ.

ಈ ಬಂಡವಾಳದ ಮೇಲೆಯೇ ನಾನು ನನ್ನ ಕೆಲಸವನ್ನು ನಿರ್ವಹಿಸಬೇಕಾಗಿದ್ದುದು. ಭಾಷಾಜ್ಞಾನ ದಾರಿದ್ರ್ಯದಲ್ಲಿ ನನ್ನ ಜೊತೆಯವರು ನನಗಿಂತ ಒಂದು ಕೈ ಮಿಗಿಲಾಗಿದ್ದರು. ಆದರೆ ನನ್ನ ತಾಯ್ನುಡಿಯ ನುಡಿಗಳಲ್ಲಿ ನನಗಿದ್ದ ಮಮತೆಯೂ, ನಾನು ಪಾಠ ಹೇಳಿಕೊಡಬಲ್ಲೆನೆಂಬ ನನಗಿದ್ದ ಧೈರ್ಯವೂ, ನನ್ನ ಶಿಷ್ಯರ ಅಜ್ಞಾನವೂ ಇದಕ್ಕಿಂತ ಹೆಚ್ಚಾಗಿ ಅವರ ಔದಾರ್ಯವೂ ನನಗೆ ಬೆಂಬಲ ಕೊಟ್ಟವು.

ತಮಿಳು ಹುಡುಗರೆಲ್ಲಾ ದಕ್ಷಿಣ ಆಫ್ರಿಕದಲ್ಲಿಯೇ ಹುಟ್ಟಿದವರಾಗಿದ್ದುದರಿಂದ ಅವರಿಗೆ ತಮಿಳು ಸ್ವಲ್ಪವಾಗಿ ಬರುತ್ತಿತ್ತು. ತಮಿಳು ಲಿಪಿಯ ಗಂಧವಂತೂ ಅವರಿಗೆ ಇರಲೇ ಇಲ್ಲ. ಆದುದರಿಂದ ನಾನು ಅವರಿಗೆ ಬಹಳವನ್ನೂ ವ್ಯಾಕರಣದ ಪ್ರಥಮಾಂಶಗಳನ್ನೂ ಹೇಳಿಕೊಡಬೇಕಾಗಿದ್ದಿತು. ಇದಂತೂ ಸುಲಭವಾಗಿಯೇ ಇದ್ದಿತು. ತಮಿಳಿನಲ್ಲಿ ಮಾತನಾಡುವುದರಲ್ಲಿ ನನ್ನನ್ನು ಯಾರೇ ಆದರೂ ಸೋಲಿಸಬಲ್ಲರೆಂದು ನನ್ನ ಶಿಷ್ಯರಿಗೆ ಗೊತ್ತಿದ್ದಿತು. ಇಂಗ್ಲಿಷ್ ಅರಿಯದ ತಮಿಳರು ನನ್ನನ್ನು ನೋಡಲಿಕ್ಕೆ ಬಂದಾಗ ಅವರು ನನ್ನ ಮಾತಿನ ಅರ್ಥವನ್ನು ಅವರಿಗೆ ಹೇಳುತ್ತಿದ್ದರು. ನನ್ನ ಅಜ್ಞಾನವನ್ನು ನನ್ನ ಶಿಷ್ಯರಿಂದ ಮುಚ್ಚಿಡಲು ನಾನು ಯಾವಾಗಲೂ ಪ್ರಯತ್ನಪಡಲಿಲ್ಲವಾದುದರಿಂದ ನನ್ನ ಕೆಲಸವು ಸರಾಗವಾಗಿ ಒದಗಿತು. ಆದುದರಿಂದ ನಾನು ನಿಜವಾಗಿಯೂ ಇದ್ದಂತೆಯೇ ಅವರಿಗೆ ಎಲ್ಲಾ ವಿಷಯದಲ್ಲಿಯೂ ತಿಳಿಸಿಕೊಂಡೆನು. ನನಗೆ ಭಾಷೆಯ ಜ್ಞಾನವು ಕೇವಲ ಕಡಿಮೆಯಾಗಿದ್ದರೂ ನಾನು ಅವರ ಪ್ರೇಮವನ್ನೂ, ಗೌರವವನ್ನೂ ಕಳೆದುಕೊಳ್ಳಲಿಲ್ಲ. ಮುಸಲ್ಮಾನ ಹುಡುಗರಿಗೆ ಉರ್ದುವನ್ನು ಕಲಿಸಿಕೊಡುವುದು ಇದಕ್ಕಿಂತ ಸುಲಭವಾಗಿದ್ದಿತು. ಅವರಿಗೆ ಲಿಪಿಯು ಗೊತ್ತಿದ್ದಿತು. ಓದುವುದರಲ್ಲಿ ಆಸಕ್ತಿಯನ್ನುಂಟುಮಾಡುವದು ಮತ್ತು ಅವರ ಬರಹವನ್ನು ಉತ್ತಮಗೊಳಿಸುವದು ಇಷ್ಟನ್ನು ಮಾತ್ರ ನಾನು ಮಾಡಬೇಕಾಗಿದ್ದಿತು.

ಈ ಹುಡುಗರಲ್ಲಿ ಹೆಚ್ಚು ಮಂದಿ ನಿರಕ್ಷರರಾಗಿಯೂ, ಶಾಲೆಗೆ ಹೋಗಿಲ್ಲದವರಾಗಿಯೂ ಇದ್ದರು. ಆದರೆ ಅವರ ಸೋಮಾರಿತನವನ್ನು ಹೋಗಲಾಡಿಸುವುದು ಮತ್ತು ಅವರು ಅಭ್ಯಾಸ ಮಾಡುತ್ತಿರುವಾಗ ಅವರನ್ನು ವಿಚಾರಿಸಿಕೊಳ್ಳುವುದು ಇದನ್ನು ಬಿಟ್ಟು ಅವರಿಗೆ ಹೇಳಿಕೊಡಬೇಕಾದುದು ಅತ್ಯಲ್ಪವೆಂದು ನನಗೆ ಕಲಸ ಮಾಡುತ್ತಾ, [illegible] ನನಗೆ ಇದಕ್ಕಿಂತ ಹೆಚ್ಚಾಗಿ ಏನೂ ಬೇಕಾಗಿರಲಿಲ್ಲವಾದುದರಿಂದ ಬೇರೆ ಬೇರೆ ವಯಸ್ಸಿನ, ಬೇರೆ ಬೇರೆ ಪಾಠಗಳನ್ನು ಕಲಿಯುತ್ತಿರುವ ಹುಡುಗರನ್ನೆಲ್ಲಾ ಒಂದೇ ಕೊಠಡಿಯಲ್ಲಿಟ್ಟುಕೊಂಡು ಶಿಕ್ಷಣವನ್ನು ನಡೆಸುವದು ನನಗೆ ಸಾಧ್ಯವಾಯಿತು.

ಈಗ ನಾವು ಪಠ್ಯ ಪುಸ್ತಕಗಳ ವಿಷಯವಾಗಿ ಅಷ್ಟು [illegible] ಆಗ ಅವುಗಳ ಅಭಾವ [illegible] ಪುಸ್ತಕಗಳನ್ನು ಕೂಡ [illegible] ಪುಸ್ತಕಗಳ [illegible] ಹುಡುಗರ ಮೇಲೆ ಹೊರಿಸುವುದರ ಆವಶ್ಯಕತೆಯೇ ನನಗೆ ಕಾಣಲಿಲ್ಲ. ನನಗೆ ಸದಾ ಕಂಡು ಬರುತ್ತಿದ್ದುದೆಂದರೆ— ಗುರುವೇ ಶಿಷ್ಯನಿಗೆ ನಿಜವಾದ ಪಠ್ಯಪುಸ್ತಕ. ನನ್ನ ಶಿಕ್ಷಕರು ಪುಸ್ತಕಗಳಿಂದ ಹೇಳಿಕೊಟ್ಟುದರಲ್ಲಿ ನನಗೆ ನೆನಪಿರುವ ಭಾಗವು ಬಹು ಕಡಿಮೆ. ಪುಸ್ತಕಗಳಿಲ್ಲದೆ ಅವರು ಹೇಳಿಕೊಟ್ಟ ವಿಷಯಗಳ ಜ್ಞಾಪಕವು ನನಗೆ ಈಗಲೂ ಸ್ಪಷ್ಟವಾಗಿ ಇದೆ. ಓದುವುದರಿಂದ ಗ್ರಹಿಸುವುದಕ್ಕಿಂತಲೂ ಹೆಚ್ಚು ವಿಷಯಗಳನ್ನು ಮತ್ತು ಕಡಿಮೆ ಶ್ರಮದಿಂದ ಹುಡುಗರು ಕೇಳುವುದರ ಮೂಲಕ ಗ್ರಹಿಸುತ್ತಾರೆ. [illegible] ಯಾವುದೂ ಒಂದು ಪುಸ್ತಕವನ್ನು ಕೂಡ ಓದಿದೆನೆಂದು ನನಗೆ ನೆನಪಿಲ್ಲ. ಆದರೆ ಅನೇಕ ಪುಸ್ತಕಗಳನ್ನು ಓದಿ ಮನದಟ್ಟು ಮಾಡಿಕೊಂಡುದನ್ನೆಲ್ಲಾ ನಾನು ಅವರಿಗೆ ನನ್ನ ಮಾತಿನಲ್ಲಿಯೇ ಹೇಳುತ್ತಿದ್ದೆನು. ಇದನ್ನು ಅವರು ಇನ್ನೂ ತಮ್ಮ ಸ್ಮರಣೆಯಲ್ಲಿಟ್ಟುಕೊಂಡಿರುವರೆಂದು ನಾನು ಹೇಳಬಲ್ಲೆ. ತಾವು ಪುಸ್ತಕಗಳಲ್ಲಿ ಕಲಿತ ಕೂಡಲೆ ದನ್ನು ನೆನಪಿಟ್ಟುಕೊಳ್ಳುವುದು ಅವರಿಗೆ ಕ್ಲೇಶದ ಕೆಲಸವಾಗಿದ್ದಿತು. ಆದರೆ ನಾನು ಬಾಯಲ್ಲಿ ಹೇಳಿಕೊಟ್ಟುದನ್ನು ಅವರು ಅತಿ ಸುಲಭವಾಗಿ ಒಪ್ಪಿಸುತ್ತಿದ್ದರು. ಓದುವುದು ಅವರಿಗೊಂದು ಕೆಲಸವಾಗಿದ್ದಿತು. ಆದರೆ ನಾನು ಹೇಳುವ [illegible] ನನ್ನ ವಿಷಯವನ್ನು [illegible] ಅವರಿಗೆ ಸಂಕೋಚವಾಗುತ್ತಿರಲಿಲ್ಲ. ಇಲ್ಲವೆ ನಾನು ಹೇಳಿದುದರ ವಿಷಯವಾಗಿ ಅವರು ಕೇಳುವ ಪ್ರಶ್ನೆಗಳಿಂದ ಅವರ ಗ್ರಹಣ ಶಕ್ತಿಯು ಅಳೆಯಲು ನನಗೆ ಅವಕಾಶವಾಗುತ್ತಿದ್ದಿತು.

ನಿಂಬೇಹಣ್ಣಿನ ೧೦ ಉಪಯೋಗಗಳು.

[illegible] ಪ್ರಯೋಜನಕಾರಿಯಾಗಿ ಒದಗುವ ವಸ್ತು ಯಾವುದು? ಎಂಬ ಪ್ರಶ್ನೆಗೆ ನಿಂಬೆಹಣ್ಣು ಎಂಬುದೇ ಉತ್ತರವೆಂದು ಬಲ್ಲವರು ಹೇಳಿದರು. ಇದರಿಂದ [illegible] ನಿಂಬೇಹಣ್ಣಿನಲ್ಲಿ ಅನೇಕ ವಿಧ ಗುಣಗಳೂ ಇರುವುದರಿಂದ ಅನೇಕ ಕೈಗಾರಿಕೆಯ ಕೆಲಸಗಳಿಗೂ ಉಪಯೋಗಿಸುವರು.

ನಿಂಬೇಹಣ್ಣು ಅನೇಕ ಬಗೆಗಳಲ್ಲಿ ಕೆಲಸಕ್ಕೆ, ಪ್ರಯೋಜನಕ್ಕೂ, ಹೆಚ್ಚು ಕಾಲ ಸೇವನಕ್ಕೂ ಅಧಿಕ ಶಕ್ತಿಯನ್ನು ಕೊಡುವುದು. ಇದರ ಪ್ರಮುಖವಾದ ಉಪಯೋಗಗಳೇನೆಂದರೆ— ಸ್ತ್ರೀಯರು ಮಲಿನವಾದ ಬಟ್ಟೆಗಳನ್ನು ನಿಂಬೇಹಣ್ಣಿನ ರಸವನ್ನು ಹಿಂಡಿದ ನೀರಿನಲ್ಲಿ ಚೆನ್ನಾಗಿ ಕುದಿಸಿದರೆ ಅವು ಹೊಸ ಬಟ್ಟೆಗಳಂತೆ ಶುದ್ಧವಾಗುವವು. ಹಿತ್ತಾಳೆಯ ಪಾತ್ರೆಗಳನ್ನು ನಿಂಬೇಹಣ್ಣಿನ [illegible] ಬಟ್ಟೆಯಿಂದ ತಿಕ್ಕಿದರೆ ಅದಕ್ಕೆ ಹೊಳಪು ಬರುವುದು. ಈ ಹೊಳಪು ಬಹುಕಾಲದವರೆಗೆ ಕೆಡುವುದಿಲ್ಲ. ಬಿಳೀ ಬಿಂದಿಗೆಗಳನ್ನು, ಹಾಗೆ ಹಸಿರು ಪಾತ್ರೆಗಳನ್ನೂ ನಿಂಬೇಹಣ್ಣಿನ ರಸವು ಹಿಂಡಿದ ನೀರಿನಿಂದ ತೊಳೆದರೆ ಶುದ್ಧವಾಗುವುದು. ದುರ್ಗಂಧವಾಗಿದ್ದ ಪಕ್ಷದಲ್ಲಿ ಪಾತ್ರೆಗಳನ್ನು ತೊಳೆದರೆ ಹೋಗದ ದುರ್ಗಂಧವು ನಿಂಬೆಹಣ್ಣಿನ ಸಿಪ್ಪೆಯನ್ನು ಒಕ್ಕಿದರೆ ಬಿಟ್ಟುಹೋಗುವುದು. [illegible] ಕಣ್ಣಿನ ಕಪ್ಪು [illegible] ನೀಗಿಸಿ ಶುದ್ಧಪಡಿಸುವುದು. ಇದಲ್ಲದೆ ಬೆಳಗ್ಗೆ ಎದ್ದ ಕೂಡಲೇ ಒಂದು ಬಟ್ಟಲು ನೀರಿಗೆ ಒಂದು ನಿಂಬೇಹಣ್ಣಿನ ರಸ ಹಿಂಡಿ ಕುಡಿಯುತ್ತಾ ಬರುವುದರಿಂದ ಮುಖದಲ್ಲಿರುವ ಮಚ್ಚೆಗಳೂ, ಕಲೆಗಳೂ ಇಲ್ಲವಾಗಿ ಹೋಗುವವು. ಅಲ್ಲದೆ ಕಣ್ಣು ಮಂಜು ಕವಿದಂತಿರುವದರಿಂದ ನೀಗುವುದು. ಹಲ್ಲು ಹುಳುಕಾಗಿದ್ದರೆ ಅಥವಾ ಒಣಗಿದ್ದರೆ ಇದ್ದಲಿನ ಪುಡಿಗೆ ನಿಂಬೆಹಣ್ಣನ್ನು ಹಿಂಡಿ ಅದರಿಂದ ಹಲ್ಲುಜ್ಜಿದರೆ ಅವು ಬೆಳ್ಳಗೆ [illegible] ಹೊಂದುವುವು. ಹೀಗೆಯೇ ಇನ್ನೂ ಅನೇಕ ರೀತಿಗಳಿಗೆ ನಿಂಬೇಹಣ್ಣು ಉಪಯೋಗವಾಗುವುದು.

ನಿಂಬೆಯ ರಸವು ಸನ್ನಿ ಅಥವಾ ಸೋಂಕು ಕ್ರಿಮಿಗಳನ್ನು ಕೊಲ್ಲುವುದೇ?

ಸನ್ನಿಪಾತ ಜ್ವರ ಕ್ರಿಮಿಗಳ ಸಂಬಂಧವುಳ್ಳ ಒಂದು ಬಟ್ಟಲು ನೀರಿಗೆ ನಿಂಬೆಯ ಹಣ್ಣಿನ ರಸವನ್ನು ಹಿಂಡಿದರೆ ಕೆಲವು ನಿಮಿಷಗಳಲ್ಲಿ ಆ ರಸದ ವೇಗದಿಂದ ಆ ಕ್ರಿಮಿಗಳೆಲ್ಲ ಸಾಯುವವು. ಆದರೆ ಇದರಲ್ಲಿ [illegible] ಒಂದು ವಿಷಯವೇನೆಂದರೆ—ವಿಷದ ಸೋಂಕನ್ನು ನೀಗಿಸುವ ವಿಷಘ್ನ ಶಕ್ತಿಯು ಸಾಮಾನ್ಯವಾಗಿ [illegible] ಲೇ ಫಲಕಾರಿಯಾಗುವುದು. ಆದುದರಿಂದ [illegible] ದು [illegible] ಕುಡಿಯುವ ನೀರು ವಿಷದ ಸೋಂಕಿನಿಂದ ಸಂದೇಹಕ್ಕೆ ಆಸ್ಪದವಿದ್ದಲ್ಲಿ ನಿಂಬೆಯ ರಸವನ್ನು ಹಿಂಡಿದ [illegible] ಸಂದೇಹವಿಲ್ಲದೆ [illegible] ಕುಡಿಯುವುದೇ ಉತ್ತಮವು. ಹಾಗೆ [illegible] ಇಟ್ಟಿದ್ದು, ಆ ಮೇಲೆ ಅದಕ್ಕೆ ಸ್ವಲ್ಪ ನಿಂಬೆಯ ರಸವನ್ನು ಹಿಂಡಿ [illegible] ಹಿತಕರವಾಗುವುದು. [illegible] ಕೊಡಲೆ ಇದರಲ್ಲಿ [illegible]

[illegible] ನಿಂಬೆಯ ರಸವನ್ನು [illegible] ಹೆಚ್ಚು [illegible]

ಬಿಳೀ ಸಕ್ಕರೆ.

ನಮ್ಮ ಆಹಾರ ವಸ್ತುಗಳಲ್ಲಿ ಅನಾವಶ್ಯಕವಾದ ಮತ್ತೊಂದು ಆಹಾರವೆಂದರೆ—ಸಕ್ಕರೆ! 60 ವರ್ಷದ ಕೆಳಗೆ ಅಮೆರಿಕಾ ದೇಶದಲ್ಲಿ ವರ್ಷಕ್ಕೆ ತಲೆಯೊಂದಕ್ಕೆ 11 ಪೌಂಡು ಸಕ್ಕರೆಯು ವಿನಿಯೋಗವಿತ್ತು. ಈಗ ಅದೇ ಪ್ರಾಂತ್ಯದಲ್ಲಿ ವರ್ಷಕ್ಕೆ ತಲೆಯೊಂದಕ್ಕೆ 60 ಪೌಂಡು ಸಕ್ಕರೆಯು ಖರ್ಚಾಗುತ್ತಿರುವುದು. ಹೀಗಿರುವಾಗ ಈಗ ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ಮಧುಮೇಹ, [illegible] ರೋಗಗಳು ಸಕ್ಕರೆಯನ್ನು ಅಧಿಕವಾಗಿ ಉಪಯೋಗಿಸುವುದರಿಂದ ಉಂಟಾಗುವ ಇನ್ನೂ ಅನೇಕ ರೋಗಗಳು ಪ್ರಬಲವಾಗುತ್ತಿರುವುದೇನೂ ಆಶ್ಚರ್ಯವಲ್ಲ.

ನಮ್ಮ ದೇಹಕ್ಕೆ ಪ್ರತಿ ದಿನವೂ ಅವಶ್ಯಕವಾದ ಸಕ್ಕರೆಯಲ್ಲಿ [illegible] ಅಧಿಕವಾಗಿ ನಮ್ಮ ಮೂತ್ರಕೋಶಗಳು ತಮ್ಮಲ್ಲಿ ಸಂಗ್ರಹಿಸಲು ಶಕ್ತಿಯುಳ್ಳವುಗಳಾಗಿವೆ. ಇದಕ್ಕೆ ಅಧಿಕವಾಗಿ ಸಕ್ಕರೆಯನ್ನು ಉಪಯೋಗಿಸಿದರೆ ನಮ್ಮ ಮೂತ್ರಕೋಶಗಳು ಅದನ್ನು ತಡೆಯಲಾರವು. [illegible] ಸಕ್ಕರೆಯು [illegible] ನಮ್ಮ ದೇಹದೊಳಗೆ ಸೇರುವುದು. ಹಣ್ಣುಗಳು, ಜೇನು ತುಪ್ಪ, ಗೋಧಿ ಮತ್ತು ಕಾಳುಗಳು ಇವುಗಳಲ್ಲಿರುವ ಸಹಜವಾದ ಸಿಹಿಯು ದೇಹಕ್ಕೆ ಆರೋಗ್ಯಕರವಾದುದು— ಇವುಗಳಲ್ಲಿರುವ [illegible] ಆಹಾರದ [illegible] ಪದಾರ್ಥಗಳನ್ನು ಉಪಯೋಗಿಸುವುದರಿಂದ [illegible] ಅನೇಕ ವಿಧವಾದ ಫಲ [illegible] ಮತ್ತು [illegible] ಹಸಿವಿಗೆ [illegible] ಉಪಯೋಗಿಸುವುದು ಉತ್ತಮ. [illegible] ಬೇರೆ ಯಾವ ಆಹಾರದ [illegible] ಮತ್ತು [illegible] ನೋಡಿರಿ.

[illegible] ಮಕ್ಕಳು [illegible] ಇನ್ನೂ ಅನೇಕ [illegible] ಪದಾರ್ಥಗಳನ್ನು [illegible] ಸಕ್ಕರೆಗಳು [illegible] ತಿನ್ನುತ್ತಿರುವುದು [illegible] ಅಭ್ಯಾಸವನ್ನು [illegible] ನಮ್ಮ ದೇಹದ [illegible] ಸಕ್ಕರೆ [illegible] ಇನ್ನೂ ಅನೇಕ ರೋಗಗಳು ಸ್ವಲ್ಪ ಕಾಲದ [illegible] ಸಕ್ಕರೆಯನ್ನು [illegible] ಹಣ್ಣು [illegible] ಅಥವಾ [illegible] ಆಹಾರವು ಹೆಚ್ಚಾಗಿ [illegible] ನಾಲ್ಕು ಐದು ಹೆಚ್ಚಾಗಿ [illegible] ಮುಂದೆ [illegible] ಸಕ್ಕರೆ [illegible] ಹಣ್ಣುಗಳನ್ನು ಮತ್ತು [illegible] ಇನ್ನೂ ಅನೇಕ [illegible] ಬಿಡಬೇಕು.

[illegible] ಪತ್ರಿಕೆ.

A Horse For Sale.

For Particulars apply to—
G. M. Manjunatha
Coffee Planter Suntikoppa
4—4

ಸರ್ಕ್ಯುಲಾರು.

ಜಮೀನ್ದಾರರ ಸಂಘವು ತನ್ನ ತಾ. 2—2—'28ರ ವೀರಾಜಪೇಟೆ ವಿಶೇಷ ಮಹಾಸಭೆಯಲ್ಲಿ "ಹಿಂದೀಯರ ಅಭಿಪ್ರಾಯವನ್ನು ಸಂಪೂರ್ಣ ಅಲ್ಲಗಳೆದು ನೇಮಿಸಿದ ಸ್ಟ್ಯಾಟ್ಯೂಟರಿ ಕಮಿಷನನ್ನು ಈ ಸಂಘವು ನಿಷೇಧಿಸುತ್ತದೆ; ಈ ಕಮಿಷನಿನೊಂದಿಗೆ ಯಾವ ಕಾಲದಲ್ಲೇ ಆಗಲಿ, ಯಾವ ರೀತಿಯಲ್ಲೇ ಆಗಲಿ ಈ ಸಂಘವು ಸಹಕರಿಸುವದಿಲ್ಲ" ವೆಂತ ಠರಾವನ್ನು ಸರ್ವಸಮ್ಮತದಿಂದ ಮಂಜೂರು ಮಾಡಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ರಾಜಕೀಯ ಪರಿಸ್ಥಿತಿಯನ್ನು ಕುರಿತು ಸೈಮನ್ ಕಮಿಷನಿಗೆ ಅಭಿಪ್ರಾಯಗಳನ್ನು ಬರೆದು ಕಳುಹಿಸಬೇಕೆಂದು ಕಮಿಷನರವರು ದೇಶದ ಹಲವು ಮಹನೀಯರಿಗೆ ಪತ್ರಗಳನ್ನು ಕಳುಹಿಸಿರುವರೆಂದು ತಿಳಿಯಬರುತ್ತದೆ. ಸಂಘದ ಮೇಲಿನ ತೀರ್ಮಾನದ ಮೇರೆ ಸಂಘದ ಮೆಂಬರುಗಳ್ಯಾರೂ ತಮ್ಮ ಅಭಿಪ್ರಾಯಗಳನ್ನು ರಾಯಲ್ ಕಮಿಷನಿಗೆ ಕಳುಹಿಸಕೂಡದೆಂಬುದು ಸ್ಪಷ್ಟವಾಗಿದೆ. ದೇಶೀಯರ ಸ್ವಾಭಿಮಾನವನ್ನು ತೋರಿಸಲಿಕ್ಕಾಗಿ ಕಮಿಷನನ್ನು ಬಹಿಷ್ಕರಿಸಲು ನಿಶ್ಚೈಸಿರುವ ಈ ಸಂಘದ ಗೌರವವನ್ನು ಕಾಪಾಡಲಿಕ್ಕಾಗಿ ದೇಶದ ಬೇರೆ ಮಹನೀಯರುಗಳೂ ತಮ್ಮ ಅಭಿಪ್ರಾಯಗಳನ್ನು ಕಮಿಷನಿಗೆ ಕಳುಹಿಸದಂತೆ ಅವರನ್ನು ಕೋರಿಕೊಳ್ಳುವದು ಸಂಘದ ಪ್ರತಿಯೊಬ್ಬ ಮೆಂಬರನ ಧರ್ಮವಾಗಿದೆ. ಪ್ರತಿಯೊಬ್ಬ ಮೆಂಬರನೂ ತನ್ನ ಕರ್ತವ್ಯವನ್ನು ಮಾಡಬೇಕೆಂದು ಸಂಘವು ನಿರೀಕ್ಷಿಸುತ್ತದೆ.

ಜಮೀನ್ದಾರರ ಸಂಘ, ಪಿ. ಐ. ಬೆಳ್ಯಪ್ಪ,
ಮಡಿಕೇರಿ, 20—4—28. (ಜನರಲ್ ಸೆಕ್ರಟರಿ.)

ಕೊಡವ ಯುವಕರಲ್ಲಿ ವಿನಂತಿ.

ಮಾರ್ಚಿ ತಿಂಗಳ ಎರಡನೇ ವಾರದ 'ಕೊಡಗು' ಮತ್ತು 'ಲೋಕಪಾವನ' ಪತ್ರಿಕೆಗಳಲ್ಲಿ ಕೊಡಗು ಯುವಕ ಸಂಘದ ವಿಷಯವಾಗಿ ಬರೆದಿದ್ದ ಬಾತ್ಮಿಗಳು ಎಲ್ಲರ ಗಮನಕ್ಕೆ ಬಂದಿರುವದಷ್ಟೆ. ಈ ಸಂಘದ ಪ್ರಥಮ ಕೂಟವನ್ನು ಸೋಮವಾರಪೇಟೆಯಲ್ಲಿ ಜಮೀನ್ದಾರರ ಸಂಘದ ಮಹಾಸಭೆಯ ಜೊತೆಯಲ್ಲಿ ಜರಗಿಸುವಂತೆ ಬರೆದಿದ್ದೆವು. ಆದರೆ ಈಗ ಇಲ್ಲಿಯ ಕೆಲವು ಮಹನೀಯರ ಅಭಿಪ್ರಾಯವನ್ನು ಕೇಳಿದಲ್ಲಿ ಆ ರೀತಿ ಈ ಸಂಘದ ಕಾರ್ಯವನ್ನು ಜರಗಿಸಿದರೆ, ಈ ಸಂಘವನ್ನು ಸರಕಾರದವರು ಒಂದು ಕಡು ರಾಜಕೀಯ ಚಳವಳವೆಂದು ಭಾವಿಸಬಹುದು. ಅದಕಾರಣ ಈ ಸಂಘಕ್ಕೆ ಹೆಚ್ಚಿನ ಪ್ರೋತ್ಸಾಹವೂ, ಮೆಂಬರುಗಳೂ ಸಿಕ್ಕಲಾರದು ಮತ್ತು ಸೋಮವಾರಪೇಟೆಯು ಬಹು ದೂರದಲ್ಲಿರುವದರಿಂದ ದಕ್ಷಿಣ ಕೊಡಗಿನ ಯುವಕರಿಗೆ ಆ ಸಂಘದ ಕೂಟದಲ್ಲಿ ಭಾಗಿಗಳಾಗಲು ಹೆಚ್ಚಿನ ಅನುಕೂಲತೆಯೂ ಉಂಟಾಗುವದಿಲ್ಲವೆಂದು ತಿಳಿಯಬಂತು.

ಈ ಯುವಕ ಸಂಘಕ್ಕೂ, ಈಗಿನ ರಾಜಕೀಯ ಚಳವಳಕ್ಕೂ ಯಾವದೊಂದು ಸಂಬಂಧವೂ ಇರುವದಿಲ್ಲ. ಇದನ್ನು ಜಮೀನ್ದಾರರ ಸಂಘದ ವಾರ್ಷಿಕ ಮಹಾ ಸಭೆಯ ಬೆಟ್ಟಿಗೆ ನಡೆಸಿದರೆ ಸರಕಾರದವರು ಇದನ್ನು ರಾಜಕೀಯ ಚಳವಳವೆಂದೇ ಗ್ರಹಿಸಿಯಾರು. ಈ ಕಾರಣದಿಂದಲೂ ಮತ್ತು ಕೊಡಗು ದೇಶದ ಎಲ್ಲ ಯುವಕರು ಈ ಮೀಟಿಂಗಿಗೆ ಹಾಜರಾಗುವ ಹಾಗೆ ಮಾಡಬೇಕೆಂಬ ಅಭಿಪ್ರಾಯದಿಂದಲೂ ಈ ವರ್ಷದ ಪ್ರಥಮ ಕೂಟವನ್ನು ವೀರಾಜಪೇಟೆಯಲ್ಲಿ ಒಬ್ಬ ಘನಪಟ್ಟ ಸರಕಾರ ಉದ್ಯೋಗಸ್ಥನ ಅಧ್ಯಕ್ಷತೆಯಲ್ಲಿ ಮೇ ತಾರೀಕು 10ನೇ ಗುರುವಾರ ಅಪರಾಹ್ನ ಜರಗಿಸಲು ನಿಶ್ಚೈಸಲಾಗಿದೆ. ಮಾತೃ ಭೂಮಿಯ ಮೇಲೂ, ಜನಾಂಗದ ಮೇಲೂ, ನಮ್ಮ ದೇಶದ ಜನರ ಮುಂದಿನ ಅಭಿವೃದ್ಧಿಯ ಮೇಲೂ, ಅಭಿಮಾನವಿರತಕ್ಕ ಪ್ರತಿಯೊಬ್ಬ ಯುವಕನೂ ಈ ಮೀಟಿಂಗಿಗೆ ದಯಮಾಡಿಸಬೇಕಾಗಿ ಕೋರುತ್ತೇನೆ. ಈ ಚಳವಳದಲ್ಲಿ ಅಭಿಮಾನವಿದ್ದು ನಮ್ಮ ಯುವಕರನ್ನು ಪ್ರೋತ್ಸಾಹಿಸಬೇಕೆಂಬ ಮನಸ್ಸು ಇರುವ ನಮ್ಮ ದೇಶದ ಎಲ್ಲಾ ಮುಖಂಡರೂ, ವಿದ್ಯಾವಂತರೂ, ಉದ್ಯೋಗಸ್ಥರೂ ಸಹ ದಯಮಾಡಿಸಿ ನಮಗೆ ಉತ್ತೇಜನಕೊಡಬೇಕಾಗಿ ನನ್ನ ಪ್ರಾರ್ಥನೆ.

ದೇಶದ ಎಲ್ಲಾ ಜನರ ತಿಳುವಳಿಕೆಗಾಗಿಯೂ, ಸರಕಾರದವರು ಇದನ್ನು ರಾಜಕೀಯ ಚಳವಳವೆಂದು ಸಂಶಯ ಪಡದ ಹಾಗೂ ಈ ಸಂಸ್ಥೆಯ ಉದ್ದಿಶ್ಯಗಳನ್ನೂ, ಕಾರ್ಯಕ್ರಮಗಳನ್ನೂ ಇಲ್ಲಿ ಸಂಕ್ಷೇಪವಾಗಿ ಕೊಟ್ಟಿರುತ್ತೇನೆ.

ಈ ಸಂಘ ಜಾತಿ, ಮತ ಭೇದಗಳನ್ನು ಲೆಕ್ಕಿಸದೆ ಪ್ರತಿಯೊಬ್ಬ ಯುವಕನನ್ನೂ ವಯಸ್ಸು ನಿಘಂಟು ಇಲ್ಲದೆ ಮೆಂಬರಾಗಿ ತೆಗೆದುಕೊಳ್ಳುತ್ತದೆ. ಪ್ರತಿಯೊಬ್ಬ ಮೆಂಬರು ಸಾಲಿಯಾನ ನಾಲ್ಕಾಣೆ ಮೇರೆ ಚಂದಾ ಕೊಡಬೇಕು. ಇದರ ಹೆಚ್ಚಿನ ಕ್ರಮಗಳನ್ನು ಎಂದರೆ ಕಾರ್ಯನಿರ್ವಾಹಕ ಸಭೆಯ ಸ್ಥಾಪನೆ ಮುಂತಾದುವುಗಳನ್ನು 10ನೇ ತಾರೀಕಿನ ಸಭೆಯಲ್ಲೇ ಎಲ್ಲರ ಅನುಮತಿ ಮೇರೆ ತೀರ್ಮಾನಿಸಲಾಗುವುದು.

ಈ ಸಂಘದ ಉದ್ದಿಶ್ಯಗಳು.

I. (a) ಪ್ರತಿ ಗ್ರಾಮದ ಯಾ ಪಟ್ಟದ ಯುವಕರು ಆಯಾ ಸ್ಥಳಗಳಲ್ಲಿ ಸಣ್ಣ ಸಣ್ಣ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ನಾಡು ಜನರಿಗೆ ಆರೋಗ್ಯದ ವಿಷಯವನ್ನೂ, ಕಾಯಿಲೆಗಳ ವಿಷಯಗಳನ್ನೂ ಬೋಧಿಸುವುದು. ಅವರು ಮನೆಗಳನ್ನೂ ಶರೀರವನ್ನೂ, ಬಾವಿಗಳನ್ನೂ, ಮೈ ಬಟ್ಟೆಗಳನ್ನೂ ಚೊಕ್ಕಟವನ್ನಾಗಿಟ್ಟುಕೊಳ್ಳುವ ಹಾಗೆ ಹೇಳುವುದು. ಅಷ್ಟೇ ಅಲ್ಲ ಕೆಲವು ಸಾರಿ ತಾವೇ ಮಾಡಿ ತೋರಿಸುವುದು. ಸಮಯ ದೊರೆತ ಹಾಗೆಲ್ಲಾ ಮ್ಯಾಜಿಕ್ ಲ್ಯಾಂಟರ್ನ್ ಮುಖೇನ ಕುಚಿತ್ರ, ಶಿಶುಪಾಲನೆ, ರೋಗಗಳ ಕಾರಣ ಮುಂತಾದವುಗಳನ್ನು ಪ್ರದರ್ಶಿಸುವದು.

(b) ಪ್ರಥಮ ಚಿಕಿತ್ಸೆ (first aid) ಕೊಡುವುದು. ಕಾಯಿಲಸ್ಥರಿಗೆ ಆಸ್ಪತ್ರೆಗಳಿಂದ ಒಳ್ಳೇ ಔಷಧಿಗಳನ್ನು ತಂದು ಕೊಡುವುದು. ಬಲಿ, ಯಂತ್ರ ಮುಂತಾದುವುಗಳಲ್ಲೇ ಮಗ್ನರಾದ ಜನರಿಗೆ ಔಷಧಿಯ ಮಹತ್ವವನ್ನು ಬೋಧಿಸುವುದು.

(c) ವ್ಯವಸಾಯ ಮಾಡುವ ಕ್ರಮಗಳನ್ನೂ, ಗೊಬ್ಬರವನ್ನು ಸಂಪಾದಿಸುವ ರೀತಿಯನ್ನೂ, ಅದರ ಪ್ರಯೋಜನವನ್ನೂ, ದನ ಕರುಕರುಗಳನ್ನು ಸಾಕುವ ಕ್ರಮ, ಅವುಗಳ ಕಾಯಿಲೆ ಮುಂತಾದುವುಗಳನ್ನೂ ಕುರಿತು ಈ ವಿದ್ಯೆಯಲ್ಲಿ ತರಬೇತಾದ ಸರಕಾರಿ ಉದ್ಯೋಗಸ್ಥರಿಂದ ನಾಡವರಿಗೆ ಆಗಾಗ್ಗೆ ಬೋಧನೆಗಳನ್ನು ಕೊಡಿಸುವುದು.

(d) ಸರಕಾರವೆಂದರೇನು? ನಮ್ಮನ್ನು ಆಳುವ ಕ್ರಮ ಹೇಗೆ? ಓಟು ಕೊಡುವದೆಂದರೇನು? ಎಂಬೀ ವಿಷಯಗಳನ್ನು (Civics) ಸಮಯ ಸಿಕ್ಕಿದ ಹಾಗೆ ಹೇಳಿ ಕೊಡುವುದು.

(e) ಜನರಿಗೆ ಕೆಲಸದ ಗೌರವವನ್ನೂ (Dignity of Labour) ಸೋಮಾರಿತನದಿಂದುಂಟಾಗುವ ನಷ್ಟ ಕಷ್ಟಗಳನ್ನೂ ಬೋಧಿಸುವುದು. ಸಹಕಾರದ ಅರ್ಥವನ್ನೂ, ಪ್ರಯೋಜನವನ್ನೂ, ಕುಡುಕುತನದ ಅನರ್ಥವನ್ನೂ, ಮಿತಜೀವನದ ಲಾಭಗಳನ್ನೂ ಮಂದಟ್ಟಾಗುವ ಹಾಗೆ ಹೇಳಿ ಮತ್ತು ಮಾಡಿ ತೋರಿಸುವುದು.

II (a) ದೇಶದಲ್ಲಿ ಈಗ ಬಹು ಹೀನ ಸ್ಥಿತಿಯಲ್ಲಿರುವ ನಮ್ಮ ಶರೀರದಾರ್ಢ್ಯವನ್ನು ಪುನಹ ಉತ್ತಮ ಸ್ಥಿತಿಗೆ ತರಲೋಸುಗ ಎಲ್ಲಾ ತರದ ವ್ಯಾಯಾಮಗಳನ್ನೂ, ಆಟಗಳನ್ನೂ (sports) ಪ್ರೋತ್ಸಾಹಿಸುವುದು. ಕೊಡಗು ದೇಶದ ಎಲ್ಲಾ ಜನರೂ ಸೇರಬಹುದಾದ ಒಂದು ತರದ ಒಲಿಂಪಿಕ್ ಸ್ಪೋರ್ಟ್ಸ್ (Olympic Sports) ನ್ನು ಸ್ಥಾಪಿಸಿ ಕೊಡಗು ದೇಶದ ಮಹನೀಯರು ಈ ಸಂಘದಲ್ಲಿ ತಮ್ಮ ತಮ್ಮ ಹೆಸರುಗಳಲ್ಲಿ ಬೆಳ್ಳಿ ಬಟ್ಟಲುಗಳನ್ನೂ (cups) ಮತ್ತು ಮೆಡಲ್‌ಗಳನ್ನು ಇಡುವ ಹಾಗೆ ಕೇಳಿಕೊಂಡು ದೇಶದ ಸ್ಪೋರ್ಟ್ಸ್‌ನ್ನು ಪ್ರೋತ್ಸಾಹಿಸುವುದು.

ಈ ಎಲ್ಲಾ ವಿಷಯಗಳನ್ನೂ ಸಾಂಗವಾಗಿಯೂ, ವಿವರವಾಗಿಯೂ 10ನೇ ತಾರೀಕಿನಲ್ಲಿ ವಿವರಿಸಲಾಗುವುದು. ಈ ಕಾರ್ಯಕ್ರಮಗಳನ್ನು ತಾ. 22—4—28ರಲ್ಲು ಈ ಚಳವಳದಲ್ಲಿ ಉತ್ಸಾಹಿಗಳಾದ ಕೆಲವು ಮಹನೀಯರ ಅಭಿಪ್ರಾಯದ ಪ್ರಕಾರ ತಯಾರಿಸಿದ್ದಾಗಿದೆ. ಹೆಚ್ಚಿನ ವಿಷಯಗಳನ್ನು ಸೇರಿಸಲು ಇಚ್ಛಿಸುವ ಮಹನೀಯರು ಆ ವಿಷಯಗಳನ್ನು 10ನೇ ತಾರೀಕಿನ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಕಳುಹಿಸಿದಲ್ಲಿ ಅವುಗಳನ್ನು ಮೀಟಿಂಗಿನ ದಿನ ಸಭೆಯವರ ಮುಂದೆ ಇಡಲಾಗುವುದು. ಈ ಬರುವ ಮೀಟಿಂಗಿನಲ್ಲಿ ಭಾಷಣ ಮಾಡಲು ಇಚ್ಛಿಸುವ ಮಹನೀಯರು ತಮ್ಮ ಹೆಸರನ್ನೂ, ವಿಷಯವನ್ನೂ ಬೇಗನೆ ಕಳುಹಿಸಿದರೆ ಕಾರ್ಯ ಕ್ರಮ ಪಟ್ಟಿಯನ್ನು ತಯಾರಿಸಲು ಸಹಾಯವಾಗುತ್ತದೆ. ಅಧ್ಯಕ್ಷರ ಹೆಸರೂ, ಮೀಟಿಂಗಿನ ಸ್ಥಳವೂ ಇನ್ನೊಂದು ವಾರದ ಪತ್ರಿಕೆಗಳ ವರ್ತಮಾನ ಸಂಗ್ರಹಗಳಲ್ಲಿ ಪ್ರಕಟಿಸಲಾಗುವದು. ಎಲ್ಲಾ ಯುವಕರನ್ನೂ, (ವಿದ್ಯಾರ್ಥಿಗಳು ಮಾತ್ರವಲ್ಲ) ಮಹನೀಯರನ್ನೂ ಈ ಮೀಟಿಂಗಿಗೆ ದಯಮಾಡಿಸಬೇಕಾಗಿ ಮತ್ತೊಮ್ಮೆ ಕೋರುತ್ತೇನೆ.

ವೀರಾಜಪೇಟೆ. ಪಿ. ಬಿ. ಅಯ್ಯಪ್ಪ.
ಕನ್ವೀನರ್.

ಕೊಡವ ವಿದ್ಯಾಭಿವೃದ್ಧಿ ಸಂಘ.

ತಾರೀಕು 15—4—1928ರಲ್ಲು ಮಡಿಕೇರಿ ದೇವಸ್ಥಾನದ ಮುಖಡಿಯಲ್ಲು ನಡೆದ ಕೊಡವ ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸ್.

ರಾವ್‌ಬಹದ್ದೂರ್ ಕೆ. ಚಂಗಪ್ಪನವರು ಅಧ್ಯಕ್ಷರಾಗಿದ್ದರು. 39 ಮೆಂಬರುಗಳು ಹಾಜರಿದ್ದರು.

1 ಮೆ. ಸಿ. ಯಂ. ಕುಶಾಲಪ್ಪನವರು, 'ಆಡಿಟರವರ ರಿಪೋರ್ಟನ್ನು ಅಂಗೀಕರಿಸಿ ಆಡಿಟರವರಿಗೆ ಅಭಿವಂದನೆಗಳನ್ನರ್ಪಿಸುವ' ಎಂದು ಸೂಚಿಸಿದ್ದನ್ನು ಮೆ. ಬಿ. ಸಿ ಕುಟ್ಟಪ್ಪನವರು ಅನುಮೋದಿಸಿದ ಮೇಲೆ ಸರ್ವಸಮ್ಮತದಿಂದ ಮಂಜೂರಾಯಿತು. (ಈ ರಿಪೋರ್ಟನ್ನು ಹಿಂದಕಿಂದ ಪ್ರಕಟಿಸಲಾಗುತ್ತೆ.)

2. ಕಳದ ಜನವರಿ ತಾರೀಕು 8ರ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಅಂಗೀಕರಿಸಬೇಕೋ ಯಾ ಬೇಡವೋ ಎಂಬದು ಚರ್ಚಿಸಲಾಗಿ ಅಧ್ಯಕ್ಷರು ಓಟಿಗೆ ಹಾಕಬೇಕೆಂದು ತೀರ್ಮಾನಿಸಿದ ಮೇರೆ ಓಟಿಗೆ ಹಾಕಲಾಗಿ ಬಹುಮತದಿಂದ ಅಂಗೀಕರಿಸಕೂಡದೆಂದು ತೀರ್ಮಾನಿಸಲಾಯಿತು.

3. ಕಾರ್ಯದರ್ಶಿಯವರ ರಿಪೋರ್ಟನ್ನು ಒಪ್ಪಿಕೊಳ್ಳುವಂತೆ ತೀರ್ಮಾನವಾಯಿತು.

4. ರಾವ್‌ಬಹದ್ದೂರ್ ಕೆ. ಚಂಗಪ್ಪ, ಬಿ. ಎ. ಯವರು ಪ್ರೆಸಿಡೆಂಟರಾಗಿಯೂ, ಮೆ. ಬಿ. ಐ. ಕುಟ್ಟಪ್ಪನವರು ಸೆಕ್ರಟರಿಯಾಗಿಯೂ ಮತ್ತು ಮೆ. ಕೇತಿಯಂಡ ಬೆಳ್ಯಪ್ಪನವರು ಖಜಾನ್ಜಿಯರಾಗಿಯೂ ಆರಿಸಲ್ಪಟ್ಟರು.

5. ಓಟಿನ ಮೂಲಕ ಕೆಳಗಿನ ಮಹನೀಯರು ಸೆಂಟ್ರಲ್ ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟರು.

1. ರಾವ್‌ಬಹದ್ದೂರ್ ಕೆ. ಅಪ್ಪಯ್ಯನವರು, 2. ರಾವ್ ಸಾಹೇಬ್ ಪಿ. ದೇವಯ್ಯನವರು, 3. ಮೆ. ನಡಿಕೇರಿಯಂಡ ಕಾಳಪ್ಪನವರು, 4. ಮೆ. ಅಪ್ಪಾರಂಡ ಕಾರ್ಯಪ್ಪನವರು, 5. ಮೆ. ಸಿ. ಯಂ. ಕುಶಾಲಪ್ಪನವರು, 6. ಸಿ. ಯಂ. ದೇವಯ್ಯನವರು, 7. ಮೆ. ಕೊಡಂದೇರ ದೇವಯ್ಯನವರು, 8. ಮೆ. ಪಾಂಡಂಡ ನಂಜಪ್ಪನವರು, 9 ಮೆ. ಸಿ. ಯನ್. ಮುತ್ತಣ್ಣನವರು, 10 ಮೆ. ಪಾಲೇಕಂಡ ಮೇದಪ್ಪನವರು, 11. ಮೆ. ಬಿ. ಯಸ್ ಕುಶಾಲಪ್ಪನವರು, 12. ಮೆ. ಪಿ. ಸಿ. ಉತ್ತಯ್ಯನವರು.

6. ಮೆ. ಪಿ. ಐ. ಬೆಳ್ಯಪ್ಪನವರು ಸಂಘದ ನಿಬಂಧನೆಗಳನ್ನು ತಿದ್ದುಪಡಿಮಾಡಲು ಒಂದು ಉಪಕಮಿಟಿಯನ್ನು ಆರಿಸಬೇಕೆಂದು ಸೂಚಿಸಿದರು. ಮೆ. ಯನ್. ಎ. ಕಾಳಪ್ಪನವರು ನಿಬಂಧನೆಗಳಲ್ಲಿ ನ್ಯೂನತೆಗಳನ್ನು ಕಂಡ ಮೆಂಬರುಗಳು ತಮ್ಮ ತಿದ್ದುಪಡಿಗಳನ್ನು ಮೇ ತಾರೀಕು 31ರ ವಳಗ ಸೆಕ್ರೆಟರಿಯವರಿಗೆ ಕಳುಹಿಸುವಂತೆಯೂ, ಮತ್ತು ಈ ವಿಷಯವನ್ನು ಒಂದು ಜನರಲ್ ಮೀಟಿಂಗಿನಲ್ಲಿ ಇತ್ಯರ್ಥ ಮಾಡುವಂತೆಯೂ ತಂದ ಬದಲಾವಣೆಯು ಬಹುಮತ ಓಟಿನಿಂದ ಮಂಜೂರಾಯಿತು.

7. ಸೆಂಟ್ರಲ್ ಕಮಿಟಿಯವರು ಆಯಾಯ ತಾಲೋಕಿನ ಚಂದದಾರರ ಹೆಸರುಗಳನ್ನು ಕಂಡು ಹಿಡಿದು ತಾಲೋಕು ಸಬ್ ಕಮಿಟಿಗಳನ್ನು ನೇಮಕಮಾಡಲಿಕ್ಕೆ ಒಂದು ತಾರೀಕನ್ನು ಗೊತ್ತುಮಾಡುವಂತೆ ತೀರ್ಮಾನಮಾಡಲಾಯಿತು. ಏಪ್ರಿಲ್ ತಾರೀಕು 23ರಲ್ಲು 3 30 ಗಂಟೆಗೆ ಸಮಯವು ನಿಶ್ಚೈಸಲಾಯಿತು.

8. ನಿವೃತ್ತರಾದ ಕಾರ್ಯಕಮಿಟಿ ಮೆಂಬರುಗಳಿಗೂ ಮತ್ತು ಚೇರ್‌ಮ್ಯಾನರಿಗೂ ಅಭಿವಂದನೆಗಳನ್ನು ಕೊಟ್ಟನಂತರ ಮೀಟಿಂಗು ಮುಕ್ತಾಯವಾಯಿತು

ತಾರೀಕು 23—4—28ರಲ್ಲು ನಡದ ಸೆಂಟ್ರಲ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

ಈ ಫಂಡಿನ ಕೆಲಸಕ್ಕೋಸ್ಕರ ದೇಶವನ್ನು ಈ ಕೆಳಗೆ ಕಂಡ ರೀತಿ ವಿಭಾಗಿಸಿ ಆಯಾಯ ಸ್ಥಳಕ್ಕೆ ನೇಮಿಸಲ್ಪಟ್ಟ ಸೆಂಟ್ರಲ್ ಕಮಿಟಿ ಮೆಂಬರುಗಳು ನಾಡುವಾರು ಉಪಕಮಿಟಿಗಳನ್ನು ನೇಮಿಸತಕ್ಕದು.

ರಾವ್ ಬಹದ್ದೂರ್ ಕೆ ಅಪ್ಪಯ್ಯನವರು—ಮಡಿಕೇರಿ ನಾಡು.

ಮೆ ಸಿ. ಯಂ ಕುಶಾಲಪ್ಪನವರು—ಸೋಮವಾರಪೇಟೆ ನಾಡು, ಬೇಂಗುನಾಡು, ಫ್ರೇಜರ್‌ಪೇಟೆ ಹೋಬಳಿ.

ಮೆ. ಸಿ ಯಂ ದೇವಯ್ಯನವರು, ಮೆ. ಕೊಡಂದೇರ ದೇವಯ್ಯನವರು, ಮೆ. ಪಾಂಡಂಡ ನಂಜಪ್ಪನವರು —ಕುಟ್ಟಪ್ಪನಾಡು.

ಮೆ. ಸಿ. ಯನ್. ಮುತ್ತಣ್ಣನವರು, ರಾವ್ ಸಾಹೇಬ ಪಿ. ದೇವಯ್ಯನವರು, ಮೆ. ನಡಿಕೇರಿಯಂಡ ಕಾಳಪ್ಪನವರು, ಮೆ ಪಾಲೇಕಂಡ ಮೇದಪ್ಪನವರು, ಮೆ. ಪಟ್ಟಡ ಉತ್ತಯ್ಯನವರು —ದಕ್ಷಿಣಕೊಡಗ ತಾಲೋಕು.

ಮೆ. ಕೇತಿಯಂಡ ಬೆಳ್ಯಪ್ಪನವರು ಮಡಿಕೇರಿಯಲ್ಲಿರತಕ್ಕ ಉದ್ಯೋಗಸ್ಥರವರ ಚಂದಾಹಣ ವಸೂಲ್ ಮಾಡತಕ್ಕದ್ದು.

1 ಪ್ರೆಸಿಡಂಟರ ಸೈನ್ ಎನಿಸಿ ಕನ್ನಡದಲ್ಲಿ ಒಂದು ಅಪ್ಪೀಲು ತಯಾರಿಸಿ ಕೊಡಗು ದೇಶದ ಹೊರಗೆ ಇರತಕ್ಕ ಕೊಡವರಿಗೆ ಕಳುಹಿಸತಕ್ಕದ್ದು ಮತ್ತು ಸದರಿ ಅಪ್ಪೀಲಿನ ನಕಲನ್ನು ಸೆಂಟ್ರಲ್ ಕಮಿಟಿ ಮೆಂಬರುಗಳಿಗೆ ಬಡವಾಡ ಬಗ್ಗೆ ಕಳುಹಿಕೊಡತಕ್ಕದ್ದು.

2. ಈ ಸಂಘದಿಂದ ಸಾಲವಾಗಿಯಾಗಲೀ, ಸ್ಕಾಲರ್‌ಶಿಪ್ ಮೂಲಕವಾಗಿಯಾಗಲೀ ಪ್ರಯೋಜನ ಹೊಂದಿದವರು ದ ಪ್ರತಿ ತಿಂಗಳೂ ಅವರ ಸಂಬಳದಲ್ಲಿ ಶೇಕಡ 5ಕ್ಕೆ ಕಮ್ಮಿಯಾಗದಂತೆ ವಸೂಲ್ ಮಾಡತಕ್ಕದ್ದು.

3. ಈ ಸಂಘದ ಕಮಿಟಿ ಮೀಟಿಂಗನ್ನು ಪ್ರತಿ ತಿಂಗಳ 1ನೇ ತಾರೀಕಿನಲ್ಲು ನಡಸತಕ್ಕದ್ದು.

ಬಿಟ್ಟಿಯಂಡ ಕುಟ್ಟಪ್ಪ.
ತಾ.24—4—28. ಗೌರವ ಕಾರ್ಯದರ್ಶಿ.

ನೋಟೀಸು.

ಸಂಘದ 16ನೇ ವಾರ್ಷಿಕ ಜನರಲ್ ಮೀಟಿಂಗು ಸೋಮವಾರಪೇಟೆಯಲ್ಲಿ ಮದ್ರಾಸಿನ ಶ್ರೀಯುತ ಯಸ್. ಸತ್ಯಮೂರ್ತಿ ಯಂ. ಎಲ್. ಸಿ. ರವರ ಅಧ್ಯಕ್ಷತೆಯಲ್ಲಿ 1928ನೇ ಇಸವಿ ಮೇ ತಾರೀಕು 5 ಮತ್ತು 6ರಲ್ಲು ಮಧ್ಯಾಹ್ನ 1 ಗಂಟೆಗೆ ನಡೆಯುತ್ತೆ. ಊಟ ಉಪಚಾರಕ್ಕೆ ಸೋಮವಾರಪೇಟೆ ತಾಲೋಕಿನವರು ಏರ್ಪಾಡು ಮಾಡುತ್ತಾರೆ. ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತ ಕೋರುತ್ತೇನೆ.

ಚಂದಾ ಮೊಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ.

ಕೊಡಗು ಜಮೀನ್ದಾರರ ಸಂಘ, ಐ. ಪಿ. ಬೆಳ್ಯಪ್ಪ
ಮಡಿಕೇರಿ, ತಾ. 1—4—1928. ಜನರಲ್ ಸೆಕ್ರಟರಿ.

ವರ್ತಮಾನ ಸಂಗ್ರಹ.

ಸ್ವದೇಶ

ಚೀಫ್ ಕಮಿಷನರವರು ತಾ 23—4—28ರಲ್ಲಿ ಮಡಿಕೇರಿಯಿಂದ ಮೈಸೂರಿಗೆ ಹೊರಟು ಹೋದರು.

ಕೊಡಗಿನ ಯುವಕರ ಒಂದು ಕಾನ್ಫರೆನ್ಸು ಮೇ ತಾರೀಕು 10ರಲ್ಲಿ ವೀರರಾಜಪೇಟೆಯಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಕೊಡಗಿನ ವೀರಶೈವ ವಿದ್ಯಾಭಿವೃದ್ಧಿ ಸಂಘದ ವಾರ್ಷಿಕ ಮಹಾ ಸಭೆಯು ತಾ 13—5—28ರಲ್ಲಿ ಮೈಸೂರಿನ ಶಾಸ್ತ್ರದ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಶನಿವಾರಸಂತೆಯಲ್ಲಿ ನಡೆಯುವದು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ರವರ ವಾರ ಮಾಡಿದ ಆ ರಸುವಿಕೆಯ ಫಲಿತಾಂಶವಾಗಿ ಮೆ ಮುತ್ತಣ್ಣನವರು ಕೊಡಗಿನ ಟ್ರಾಫಿಕ್ ಇನ್‌ಸ್ಪೆಕ್ಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯ ಬರುತ್ತದೆ.

ಕುರುಂದವಾಡಿನ ಪ್ರೊಫೆಸರ್ ತುಕಾರಾಮ ಬಿವೇಕರ್‌ರವರ ರಾಮ ಪ್ರಸಾದ ಸರ್ಕಸಿನವರು, ಶ್ರೀ ವಿಜಯಲಕ್ಷ್ಮಿ ವಿಲಾಸ ಕರ್ಣಾಟಕ ನಾಟಕಸಭಾದವರೂ ಈಗ ಮಡಿಕೇರಿಯಲ್ಲಿ ತಮ್ಮ ಆಟಗಳನ್ನು ಆಡಿ ತೋರಿಸುತ್ತಿರುವರು.

ಮಡಿಕೇರಿ—ಕೊಡ್ಲಿಪೇಟೆ ರಸ್ತೆಯ 9ನೇ ಮೈಲು 7ನೇ ಫರ್ಲಾಂಗದ ಬಳಿ ಇರುವ ಹಟ್ಟಿಹೊಳೆ ಸೇತುವೆಯು ರಿಪೇರಿಯಲ್ಲಿರುವದರಿಂದ ಅಲ್ಲಿಗಾಗಿ ಟ್ರಾಫಿಕ್ಕು ಈ ತಾ 23ರಿಂದ ಬಿಡಲಾಗುವದಿಲ್ಲವೆಂದು ಕಮಿಷನರು ಪ್ರಕಟಿಸುತ್ತಾರೆ.

ಈ ಮೊದಲು ಕೂಲಿಯಾಳಿದರಿಂಬ ತಕ್ಸೀರಿನ ಮೇಲೆ ಸಂಪಾಜೆಯ ಶೀನಪ್ಪಯ್ಯನವರಿಗೆ ಮಂಗಳೂರು ಸೆಷನ್ ಜಡ್ಜಿಯವರು ವಿಧಿಸಿದ್ದ ನಾಲ್ಕು ವರ್ಷ ಕಠಿಣ ಸಜೆಯನ್ನು ಮದ್ರಾಸು ಹೈಕೋರ್ಟು ಅಪ್ಪೀಲಿನಲ್ಲಿ ಈ ತಾ 20ರಲ್ಲಿ ರದ್ದು ಮಾಡಿ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿರುವರು.

ಮೈಸೂರಿನ ಶ್ರೀರಾಮಕೃಷ್ಣ ಭಕ್ತ ಮಂಡಲಿಯವರು ಈ ತಾ 23ಮತ್ತು 24ರಲ್ಲಿ ಮಡಿಕೇರಿಯಲ್ಲಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ಎರಡು ನಾಟಕಗಳನ್ನು ಆಡಿಸಿಯುವ [illegible]ದ ಸುಮಾರು 140 ರೂಪಾಯಿಗಳನ್ನು ಪೊನ್ನಂಪೇಟೆ ಶ್ರೀ ಶಾರದಾಶ್ರಮ ಗ್ರಾಮಾಭಿವೃದ್ಧಿ ನಿಧಿಗೆ ಕೊಟ್ಟಿರುವದು ಸ್ತುತ್ಯಾರ್ಹವಾಗಿದೆ.

ಜಮೀನ್ದಾರರ ಸಂಘದ ಸೋಮವಾರಪೇಟೆ ವಸಾಸಭೆಯ ಅಧ್ಯಕ್ಷರಾಗಲಿಕ್ಕಿರುವ ಮದ್ರಾಸಿನ ಶ್ರೀಯತ ಯಸ್ ಸತ್ಯಮೂರ್ತಿಯವರು ಮೇ ತಾ. 4ರಲ್ಲಿ ಮಡಿಕೇರಿಗೆ ಬಂದು, ಸಾಯಂಕಾಲ ಮಡಿಕೇರಿಯಲ್ಲಿ ಒಂದು ಉಪನ್ಯಾಸ ಕೊಡುವರೆಂದೂ, ತಾ ಐದು ಆರರಲ್ಲಿ ಸೋಮವಾರಪೇಟೆ ಕಾನ್ಫರೆನ್ಸನ್ನು ಮುಗಿಸಿಕೊಂಡು ತಾ 7ರಲ್ಲಿ ತಲಕಾವೇರಿಗೆ ಹೋಗುವರೆಂದೂ, ತಾ 8ರಲ್ಲಿ ಮಡಿಕೇರಿಯಲ್ಲಿ ಇನ್ನೊಂದು ಭಾಷಣ ಮಾಡುವರೆಂದೂ, ತಾ 9ರಲ್ಲಿ ವಿರಾಜಪೇಟೆಯಲ್ಲಿ ಉಪನ್ಯಾಸ ಮಾಡಿ ತಾ 10ರಲ್ಲಿ ವಾಪಸು ಮದ್ರಾಸಿಗೆ ಹೊರಟು ಹೋಗುವರೆಂದೂ ತಿಳಿಯುತ್ತೇವೆ.

ಹಿಂದೂದೇಶ.

ಮಹಾತ್ಮ ಗಾಂಧಿಯವರು ಈ ವರ್ಷ ಯೂರೋಪಿಗೆ ಹೋಗುವದಿಲ್ಲವೆಂದು ನಿಶ್ಚಯಿಸಿರುವರು.

ಸಂಬಳ ಸಾಲದೆಂದು ಬೊಂಬಾಯಿ ಕಿತ್ತಿನಿರಾರು ಗಿರಣಿಯ ಸುಮಾರು 10,000 ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ಮೆ ಯಸ್ ಶ್ರೀನಿವಾಸಯ್ಯಂಗಾರರು ತಮ್ಮ ಯೂರೋಪಿನ ಪ್ರವಾಸಕಾಗಿ ಮೇ ತಿಂಗಳು ಪ್ರಾರಂಭದಲ್ಲಿ ಮದ್ರಾಸಿನಿಂದ ಹೊರಡಲಿಕ್ಕಿರುವರು.

ಇಂಡಿಯನ್ ಸಂಸ್ಥಾನಗಳ ರಾಜರುಗಳ ವಿಷಯವಾಗಿ ಚೌಕಶಿಯಾಗಿ ಬಂದಿದ್ದ ಕಮೀಷನರವರು ಬೊಂಬಾಯಿಯ ಹೋಟೆಲಿನಲ್ಲಿ ತಂಗಿರುವರು ಅಲ್ಲಿ ತಾ 21ರಲ್ಲಿ 'ಪೀಸ್, ಕಾನ್ಫರೆನ್ಸ ಮೈಸೂರು' ರಾಜರವರು.

'ರಾಷ್ಟ್ರೀಯ ಕಷ್ಟಗಳ ನಿವಾರಣೆಗೆ ಸ್ವದೇಶಿ ವ್ರತವೇ ದಾರಿ' ಎಂದು ಎಸ್ಪ್ಲನೇಡಿನ ಅವ್ಯಕ್ತರಾದ ಸಾಮಧಾರಾ ವಿಜಯ ಪಟ್ಟೆಲವರು ತಾ 21ರಲ್ಲಿ ಎರಡನೆ ಕಾಲೇಜು ಇಸಾವಿ ಕೊಡುವಿಕೆಯ ಸಮಾರಂಭದ ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಮದ್ರಾಸು ಗವರ್ನರವರ ಎಕ್ಸಿಕ್ಯುಟಿವ್ ಕೌನ್ಸಿಲಿನ ಲಾ ಮೆಂಬರಾಗಿರತಕ್ಕ ದಿವಾನ್ ಬಹದ್ದೂರ್ ಯಂ ಕೃಷ್ಣನ್ ನಾಯರ್‌ರವರು ನೇಮಿಸಿಕೊಳ್ಳುವಿಕೆಯನ್ನು ಚಕ್ರವರ್ತಿಯವರು ಮಂಜೂರು ಮಾಡಿರುವರು. ಅವರು ತಮ್ಮ ಹೊಸ ಉದ್ಯೋಗವನ್ನು ತಾ 25ರಲ್ಲಿ ಕೈಕೊಂಡರು.

ಖಾದಿಪ್ರವಾಸ ಪಾರ್ಟಿಯವರಿಗೆ ಬಂಗಾಳದ ಹಲವು ಕಡೆಗಳಲ್ಲಿ ಉತ್ಸಾಹದ ಸ್ವಾಗತವು ದೊರೆಯುತ್ತಿದೆ. ಅನೇಕ ಪಟ್ಟಣಗಳಲ್ಲಿ ಅವರಿಗೆ ಬಿನ್ನವತ್ತಳೆಗಳು ಅರ್ಪಿಸಲ್ಪಡುತ್ತಿವೆ. ಅವರು ಆ ಪ್ರಾಂತ್ಯದಲ್ಲಿ ತಾ 23ರ ವರೆಗೆ ದಾಸ್ ಸ್ಮಾರಕ ಖಾದಿ ಫಂಡಿಗೆ 55,000 ರೂಪಾಯಿ ಒಟ್ಟುಗೂಡಿಸಿದರು.

ತಾ 24ರಲ್ಲಿ ಕಲ್ಕತ್ತಾದ 'ಕಿಂಗ್ ಜಾರ್ಜ' ಡಾಕಿನಲ್ಲಿ 1000 ಇಂಡಿಯನ್ ಮತ್ತು 200 ಚೈನೀಸ್ ಕೆಲಸಗಾರರಿಗೆ ಒಗ್ಗಟ್ಟಿನಿಂದಾಗಿ ಕಲ್ಲುಗಳನ್ನು ಎಸೆದಾಡಿ 21 ಜನರಿಗೆ ಏಟು ಆಗಿದೆಯಂತೆ.

ಮಹಾತ್ಮ ಗಾಂಧಿಯವರ ಅಣ್ಣನ ಮಗನಾದ ಮಗನ್‌ಲಾಲ್ ಗಾಂಧಿಯವರು ತಾ 23ರಲ್ಲಿ ಪಾಟ್ನಾದಲ್ಲಿ ತೀರಿಕೊಂಡರು. ಇವರು ಮಹಾತ್ಮರ ಶಿಷ್ಯರಾದ [illegible] ಸಾಬರಮತಿ ಆಶ್ರಮಕ್ಕಾಗಿ ಕೆಲಸ ಮಾಡುತ್ತಿದ್ದರು. ಇವರ ಮರಣದಿಂದ ಒಂದು ದೇಶವು ಒಬ್ಬ ನಿಜವಾದ ದೇಶಭಕ್ತನನ್ನು, ಒಬ್ಬ [illegible] ಕಳಕೊಂಡಂತಾಗಿದೆ.

ಕಮೀಷನು ಇಂಡಿಯಾದಲ್ಲಿ ಸಂಚರಿಸುವಾಗ ನಾನಾ ಕಡೆಗಳಲ್ಲಿ ಬಹಿಷ್ಕಾರವು ಪ್ರಬಲವಾಗಿ ಇದೆ. ಆದರೂ ಎಲ್ಲವೂ ಅನುಕೂಲವಾಗುತ್ತಿದೆ ಎಂದು ಸೈಮನ್ ಕಮೀಷನ್ನು [illegible] ಹೊಗಳುತ್ತಿದೆ. [illegible] ತನ ಪಕ್ಷ [illegible] ಮಾಡುತ್ತಿದೆ ಎಂದು ಮೆ ದಬಾಲ್ ಎಂಬವರು ಮುಂಬಯಿ [illegible] ಬರೆಯುತ್ತಾರೆ.

ಬೊಂಬಾಯಿಯ ಗಿರಣಿಗಳ ಕೆಲಸಗಾರರ ಮುಷ್ಕರವು ಪ್ರಬಲವಾಗುತ್ತಿದೆ. [illegible] ಮುಷ್ಕರದಾರರಿಗೂ ಪೋಲೀಸರವರಿಗೂ ಘರ್ಷಣೆಯಾಯಿತು. ಬಂದ ಪೋಲೀಸು ಇನ್ಸ್‌ಪೆಕ್ಟರು ಗಾಯ ಹೊಂದಿದರು [illegible] ಸಹಾಯವಾಯಿತು. ಸುಮಾರು 117,000 ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರಿಸಿರುವರು. 81 ಗಿರಣಿಗಳು ಮುಚ್ಚಲ್ಪಟ್ಟಿವೆ.

ಇಂಡಿಯನ್ ಮಾಜಿ ರಾಜಕೀಯ ಸೆಕ್ರೆಟರಿ ಕೋಹೋಪಾದ್ ಕೋಲ್ಕರರವರು ತಾ 24ರಲ್ಲಿ ತನ್ನ ಅಮೇರಿಕನ್ ಪತ್ನಿ ಸಮೇತ ಕಲ್ಕತ್ತೆಯಿಂದ ಬಂದ [illegible] ಹೊಸ ಪತ್ನಿಯವರಿಗೆ 'ಎಮಿಗ್ರೇಶನ್' ಕಾನೂನಿನ ಪ್ರಕಾರ [illegible] ಎಂಬ ಪ್ರಶ್ನೆ [illegible] ಬ್ರಿಟಿಷ್ ಹೋಲಿಕ್ಕಿದರು. ನಂತರ ಯೂರೋಪು ಪ್ರವಾಸವನ್ನು ಪ್ರಾರಂಭಿಸಿರುವರಂತೆ.

ಇಂಡಿಯಾದ ಪತ್ರಕರ್ತರ ಸಂಘದ ವಾರ್ಷಿಕ ಸಭೆಯು ತಾ 21ರಲ್ಲಿ ಬೊಂಬಾಯಿಯಲ್ಲಿ ನಡೆದು [illegible] ಅಧ್ಯಕ್ಷತೆಯಲ್ಲಿ [illegible] ರಂಗಸ್ವಾಮಿ ಅಯ್ಯಂಗಾರರವರು. ಮತ್ತು [illegible] ರಾವ್ [illegible] ಕನ್ಸ್ಟ್ರಕ್ಷನ್ ಮೊದಲಾದವರು ಹಾಜರಿದ್ದರು. [illegible] ಆರಿಸಲ್ಪಟ್ಟರು.

ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಮೂವರು ಗೌಡರು ಕೊಲೆಯ ಆಪಾದನೆ ಹೊಂದಿದರು. [illegible] ಸಾಕ್ಷಿಗಾರರಲ್ಲಿ ಮುಖ್ಯನಾದ [illegible] ಹೊಂದಿದ [illegible] ದೇವಸ್ಥಾನದ ಸಂದರ್ಭದಲ್ಲಿ ಸಾಕ್ಷಿ [illegible] ರ ಕತ್ತಲೆಯಲ್ಲಿ ಹೊರಟು ಬರುವಾಗ, ಈ ಸಾಕ್ಷಿಗಾರರ [illegible] ಮೂವರನ್ನು ಕೊಲ್ಲಲಾಯಿತು. ನಂತರ ಗೌಡರನ್ನು [illegible] ಹಾಕುವರೆ [illegible] ಹೈಕೋರ್ಟು ಆಗಲೂ ಗೌಡರನ್ನು ಬಿಡುಗಡೆ ಮಾಡಿಯೂ ಇದ್ದವರು ಮೂವರು, ಕೊಂದವರು ಯಾರು? ಎಂಬಂತಾಗಿದೆ.

ವಿದೇಶ.

ಗ್ರೀಸ್ ದೇಶದ ಕಾರಿಂತ ಪಟ್ಟಣದಲ್ಲಿ ತಾ 23ರಲ್ಲಿ ಭೂಕಂಪ ಉಂಟಾಗಿ 21 ಜನರು ಮೃತರಾಗಿರುವರೆಂದೂ 100 ಜನರಿಗೆ ಏಟು ಉಂಟಾಗಿವೆಯೆಂದೂ, ಸುಮಾರು ಹದಿನಾರು ಸಾವಿರ ಜನರು ಮನೆಮಠಗಳಿಲ್ಲದೆ ಕಷ್ಟಪಡುತ್ತಿರುವರೆಂದೂ ಸುಮಾರು ಎರಡುಕೋಟಿ ಬೆಲೆಯ ಸೊತ್ತುಗಳು ನಷ್ಟ ಸಂಭವಿಸಿದೆಯೆಂದೂ ವರ್ತಮಾನ.

ಚೈನಾದಲ್ಲಿ ಉತ್ತರದ ಪೆಕಿಂಗ್ ಸರಕಾರದ ಸೈನ್ಯಕ್ಕೂ, ದಕ್ಷಿಣದ ನಾಂಕಿಂಗ್ ಸರಕಾರದ ಸೈನ್ಯಕ್ಕೂ ಯುದ್ಧವು ನಡೆಯುತ್ತಲೇ ಇದೆ. ದಕ್ಷಿಣ ಸೈನ್ಯದವರು ಕೆಲವು ಕಡೆಗಳಲ್ಲಿ ಜಯಶೀಲರಾಗಿರುವರೆಂದೂ ಇದು ನಿಜವಲ್ಲವೆಂದೂ ಬೇರೆ ಬೇರೆ ವರ್ತಮಾನಗಳು ಬರುತ್ತಿವೆ. ಈ ಯುದ್ಧದ ದೆಸೆಯಿಂದ ಜಪಾನಿನವರು ಶಾಂಟುಂಗಿಗೆ ತಮ್ಮ ಸೈನ್ಯವನ್ನು ಕಳುಹಿಸಿರುವದಕ್ಕೆ ಚೈನಾದ ಎರಡು ಸರಕಾರಗಳೂ ವಿರೋಧಿಸಿರುವವು.

'ಇಂಗ್ಲೆಂಡಿನ ಸೈಮನ್ ಕಮೀಷನ್ನಿಗೆ ವಿರೋಧ ಸಲ್ಲದು' [illegible] ಲಾರ್ಡ್ ಬರ್ಕನ್‌ಹೆಡ್ಡರವರ ವಿರುದ್ಧ ಜನರನ್ನು ಕರಾಚಿಗೆ [illegible] ನ್ಯಾಯ ಮಂದಿರವೇ ಸರ್ ಜಾನ್ ಸೈಮನ್ [illegible] ಬ್ರಿಟಿಷ್ ಸರಕಾರದ [illegible] ಅನ್ಯಾಯ [illegible] ಇಂಡಿಯಾ, ಚೈನಾ, ಈಜಿಪ್ಟುಗಳಲ್ಲಿ ಮೆ [illegible] ಪ್ರಕಟಿಸಿ [illegible] ಈಗ ಇನ್ನಲ್ಲದಿರು [illegible] ಸ್ವರಾಜ್ಯ ಕೊಡುವರೆಂಬುದನ್ನು ಭಾವಿಸುವಾಗಲೇ? ಹಿಂದೀಯರನ್ನು ಬಂಧಿಸಲು ಬಲವಾದ ಸಂಕೋಲೆಗಳನ್ನು ಹಿಂ[illegible]

[illegible] ದೇಶಿಸಲು ಈ ಕಮೀಷನ್ನು ಇವರ [illegible] ಎಂಬರ್ಥದ ಕಂಠಿನಾಕ್ಷೆಯೊಂದನ್ನು ಮಿ ಬರ್ನಾರ್ಡ್ ಹಾಟನ್‌ರವರು ಹಿಂದೂದೇಶದ ವರ್ತಮಾನ ಪತ್ರಿಕೆಗಳಿಗೆ ಏಪ್ರಿಲ್ 10ರಲ್ಲಿ ಕಳುಹಿಸಿದರು. ಆದು ಸ್ವತಂತ್ರ ಯೂರೋಪ್ [illegible] ಈಗ ಮಿ ಹಾಟನ್‌ರವರೇ ಅದನ್ನು ಒದರು ಕಳಿಸಿರುವರು.

ಶ್ರೀ ರಾಮಕೃಷ್ಣ ಭಕ್ತ ಮಂಡಲಿ

(ಒಬ್ಬ ಸಾಕ್ಷಿದಾರನಿಂದ)

ಈ ಮಂಡಲಿಯವರು ಮೈಸೂರಿನವರಾಗಿದ್ದು, ಪೊನ್ನಂಪೇಟೆ ಶಾರದಾಶ್ರಮದಲ್ಲಿ ಇದೇ ತಿಂಗಳು 8ನೇ ಶನಿವಾರ ದಿನ ಅಲ್ಲಿ ಜರಗಿದ ಶ್ರೀ ರಾಮಕೃಷ್ಣ ಪರಮಹಂಸರ ಜಯಂತೀ ಉತ್ಸವಕ್ಕಾಗಿ ಬೇಗಳ ಸಂದರ್ಭದಲ್ಲಿ ಮಡಿಕೇರಿಗೆ ಬಂದು ತಾ 22ರಲ್ಲಿ ಒಂದು ತಾ 23ರಲ್ಲಿ 'ಸಟರಾಜ ಪಕ್ಷ' ಎಂಬ ಕಥೆಯನ್ನು ತಾ 24ರಲ್ಲಿ ಜೀವನ್ಮುಕ್ತ ಎಂಬ ಪ್ರಹಸನವನ್ನೂ ಜಮೀನ್ದಾರರ ಸಂಘದ ಹಾಲಿನಲ್ಲಿ ಆಡಿದರು. ಮೊದಲನೇ ದಿನದ ನಾಟಕಕ್ಕೆ ಜನ ಕಡಿಮೆಯಿದ್ದರು. ಎರಡನೇ ದಿನದ ಸಭೆಯು ಹಿಂದಿನ ದಿನದ ಆನಂದವಿತ್ತು [illegible] ಮಂಡಲಿಯವರು [illegible] ಪಟ್ಟಣಕ್ಕೆ [illegible] ಹೋಟೆಲಿಗೆ ಸಕಲ [illegible] ಇದ್ದುದರಿಂದ ಉತ್ಸಾಹವು ಹೆಚ್ಚಿನದಾಗಿತ್ತು. ಒಟ್ಟಿನಲ್ಲಿ ಮಂಡಲಿಯವರ ಸಮಾಗಮ ಪ್ರಶಂಸಾರ್ಹವಾಗಿತ್ತು. ಈ ಹಣವೆಲ್ಲಾ ಶಾರದಾಶ್ರಮದ ಗ್ರಾಮಾಭಿವೃದ್ಧಿಯ ಫಂಡಿಗೆ ಕೊಡಲು ಮಾಡಿದೆಂದು ತಿಳಿದು ತೀರ ನಾಟಕ ಮಂಡಲಿಯವರು 80 ಮೈಲು ದೂರದಲ್ಲಿರುವ ಮೈಸೂರು ಪಟ್ಟಣದಿಂದ ಇಲ್ಲಿಗೆ ಬಂದು ಅವರು ದೇಶಸೇವಾ ಕಾರ್ಯಕ್ಕಾಗಿ ಸ್ವಾರ್ಥ ತ್ಯಾಗ [illegible] ಮಾಡಿದ್ದಾರೆ. ನಾಟಕ ಮಂಡಲಿಯ ಪ್ರಮುಖರಾದ ಶ್ರೀಮಾನ್ [illegible] ರವರು ಇದಕ್ಕೆ ಮೊದಲು ಈ ವರ್ಷಗಳಿಗೆ [illegible] ಕರ್ಣಾಟಕ [illegible] ಪ್ರೀತಿಗೆ ಪಾತ್ರರಾಗಿರುವರು. ಇವರ ಪರೋಪಕಾರ ಬುದ್ಧಿಯು [illegible] ಹೊಗಳತಕ್ಕದ್ದಿದೆ.

[illegible] ರಾತ್ರಿ ಎರಡನೆ [illegible] ನಾಟಕ [illegible] ಅವರ ಅಭಿನಯ [illegible] ಕಲ್ಲು [illegible] ಉತ್ತಮ [illegible] ನಾಟಕ ಮಂಡಲಿಯ [illegible] ಪಾತ್ರಗಳು [illegible] ಒಂದು ಉತ್ತಮ ನಾಟಕ [illegible] ಮಹಾತ್ಮರ [illegible] ಸ್ತ್ರೀ ಪಾತ್ರವನ್ನು [illegible] ನಾಟಕದ [illegible] ಪಾತ್ರಗಳು [illegible] ಅವರು ಪಾತ್ರವನ್ನು ಅಭಿನಯಿಸಿದರು. [illegible] ಎಂಬ ಪ್ರಹಸನದಲ್ಲಿ ಶ್ರೀನಿವಾಸರಾವ್‌ರವರು 'ಅಮೃತ' ಪಾತ್ರವನ್ನು ಸುಂದರವಾಗಿ ನಟಿಸಿದರು.

ಮೊದಲನೇ ದಿನ ನಾಟಕದ ಪಾತ್ರಗಳನ್ನು ಅಭಿನಯಿಸಿದ್ದ ನಟರು [illegible] ಯವರೇ ಎರಡನೇ [illegible] ಪಾತ್ರವನ್ನು ಧರಿಸಿದ್ದರು. ಜೀವನ್ಮುಕ್ತ ಎಂಬ ಪ್ರಹಸನದಲ್ಲಿ [illegible] ಪ್ರಹಸನದ ಹಾಸ್ಯವಿನೋದ [illegible] ಈ ಮಂಡಲಿಯವರು ಆಡಿದ 'ಪೋಲಿ ಕಿಟ್ಟಿ' ಎಂಬ ಪ್ರಹಸನವು ಹೃದಯಂಗಮವಾಗಿತ್ತು.

ಈ ಕಂಪೆನಿಯವರು ಮುಂದಿನ ವರ್ಷಗಳಲ್ಲಿ ಆಗಾಗ ಬಂದು ತಮ್ಮ ಆಟಗಳನ್ನಾಡಿದ್ದೇ ಆದರೆ, ಇಲ್ಲಿಯೂ ನಾಟಕ ಕಲೆಯು ವೃದ್ಧಿಯಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಈ ಮಂಡಲಿಯವರು ಇನ್ನೂ ಹೆಚ್ಚಿನ ಏಳಿಗೆಯನ್ನು ಹೊಂದುವಂತೆ ಶ್ರೀರಾಮಕೃಷ್ಣ ಪರಮಹಂಸರು ಅವರನ್ನು ಪಾಲಿಸಲೆಂದು ಹಾರೈಸುತ್ತೇನೆ.

ನೋಟೀಸು.

ಜಮೀನ್ದಾರರ ಸಂಘದವರಿಂದ ಸೇರಿಸಲ್ಪಟ್ಟ ಚಿತ್ರದ [illegible] ಸಂಬಂಧಿಸಿದ ಪುಸ್ತಕಗಳು [illegible] ಯವರ ಕೈಯಲ್ಲಿರುವದರಿಂದ [illegible] ಗ್ರಾಮಗಳಲ್ಲಿ [illegible] ಈ ವಿಷಯಗಳನ್ನು [illegible] ಕೈಸೇರಿಸುವುದು [illegible] ಸಂಬಂಧಪಟ್ಟವರು [illegible] ಕೇಳಿಕೊಳ್ಳಲಾಗಿದೆ.

ಪಿ ಯಸ್ ನಂಜಪ್ಪ ಬಿಟಿ

(ಸಭ್ವರ್ ಕಮಿಟಿಯ)

ಪತ್ರವ್ಯವಹಾರ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಲೇಖಕರು ಜವಾಬ್ದಾರರಲ್ಲ. ಸಂ.॥

ಮಡಿಕೇರಿ—ಸೋಮವಾರಪೇಟೆ ರಸ್ತೆ

ಅಯ್ಯಾ,

ಮಡಿಕೇರಿಯಿಂದ ಸೋಮವಾರಪೇಟೆಗೆ ಹೋಗುವ ರಸ್ತೆಯಲ್ಲಿ ಬರುವ ಹಟ್ಟಿ ಸೇತುವೆ ರಿಪೇರಿಗಾಗಿ ಆ ರಸ್ತೆ ಮುಚ್ಚಲ್ಪಟ್ಟಿದೆಯೆಂತ ನಮಗೆ ಸೋಮವಾರಪೇಟೆಯಲ್ಲಿ ತಿಳಿಯಿತು. ಸೋಮವಾರಪೇಟೆಯಿಂದ ಮಡಿಕೇರಿಗೆ ಆ ರಸ್ತೆಯಲ್ಲಿ ಹಟ್ಟಿ ಸೇತುವೆಗಾಗಿ 21 ಮೈಲು ಆಗುತ್ತದೆ. ಹಟ್ಟಿ ಸೇತುವೆ ತಪ್ಪಿಸಿ ಹಾದಿಗಾಗಿ ಸುಂಟಿಕೊಪ್ಪಲು ಮೇಲೆ ಮಡಿಕೇರಿಗೆ ಬರಲಿಕ್ಕೆ 26 ಯಾ 27 ಮೈಲು ಮಾತ್ರ ಆಗಬಹುದು. ಸೋಮವಾರಪೇಟೆಯಿಂದ ಫ್ರೇಸರ್‌ಪೇಟೆಗಾಗಿ ಮಡಿಕೇರಿಗೆ 38 ಮೈಲಿಯಾಗುತ್ತದೆ. ಆದ್ದರಿಂದ ಹರದೂರು ಮೇಲೆ ಹೋಗಬೇಕೆನ್ನುವಂತೆ ಕುಸುಬೂರಿಗೆ ಒಂದು ನೋಡುವಲ್ಲಿ ಬೇಲಿಗಳೂ, ಮಡಾವುರಕ್ಕೆ ರಸ್ತೆ ಒಡೆಯುವಲ್ಲಿ ರಸ್ತೆಗೆ ಅಡ್ಡಲಾಗಿ ಮಣ್ಣಿನ ದಿಣ್ಣೆ ಹಾಕಿದ್ದು ನೋಡಿ ಆಶ್ಚರ್ಯವಾಯಿತು. ಹಟ್ಟಿ ಸೇತುವೆ ತಪ್ಪಿಸಿ ಹರದೂರು ಹಂಗಾಮಿ ಸೇತುವೆಗಾಗಿ ಬರಲಿಕ್ಕೆ ದಾರಿ ಇರುವಾಗ ಯಾತಕ್ಕೆ ಈ ರೀತಿ ತಡ ಮಾಡಿದರೋ ತಿಳಿಯಲಿಲ್ಲ.

ಹಟ್ಟಿ ಹಾಗೂ, ಸೋಮವಾರಪೇಟೆಗೂ ಮಧ್ಯೆ ಇರುವ ತೋಟಗಾರರಿಗೂ, ಇತರರಿಗೂ ಸೋಮವಾರಪೇಟೆಗೆ ಹೋಗಲಿಕ್ಕೆ ಇರುವ ರಸ್ತೆಯನ್ನು ಮುಚ್ಚಿದ್ದಕ್ಕೆ ಆ ಪ್ರಾಂತ್ಯದವರು ಯಾಕೆ ತಕರಾರು ಮಾಡಿದವರಿಲ್ಲವೋ ತಿಳಿಯಲಿಲ್ಲ.

ಸುಂಟಿಕೊಪ್ಪಲಿನಿಂದ ಸೋಮವಾರಪೇಟೆಗೆ ಹೋಗುವ ರಸ್ತೆಯು ಒಟ್ಟು ಐದು ಮೈಲು ಮಾತ್ರ ... ಅಡ್ಡಲಾಗಿ ಸಿಕ್ಕುವ ಹಟ್ಟಿ, ಮಡಾವುರ ಹೊಳೆಗಳು ... ದಾಟಿ ಹೋಗುವ ಹರದೂರು ಹೊಳೆಗೆ ... ತಿರುಗಿಸಲ್ಲಿ ... ಸೇತುವೆಗೆ ಹಂಗಾಮಿ ಸೇತುವೆ ಹಾಕಿರುವದರಿಂದ ಮಾಡಿದ್ದರೆ ... ರಸ್ತೆಯು ಬೇಸಿಗೆಗೆ ಚೆನ್ನಾಗಿಯೇ ಇದೆ. ಹಾಗೆ ಇರುವಾಗ ಕುಸುಬೂರಲ್ಲಿ ರಸ್ತೆಗೆ ಅಡ್ಡಲಾಗಿ ಕಟ್ಟಿರುವುದರಲ್ಲಿ ಏನೂ ನ್ಯಾಯವಿಲ್ಲ. ಮಡಿಕೇರಿಯಿಂದ ಸೋಮವಾರಪೇಟೆಗೆ ಕಾರುಗಳಲ್ಲಿಯೂ, ಗಾಡಿಗಳಲ್ಲಿಯೂ ಹರದೂರು ಮೇಲೆ ಹೋಗಲಿಕ್ಕೆ ಅನುಕೂಲವಾದೆಯೆಂತ ಬಹಿರಂಗವಾಗಿ ಪ್ರಕಟಿಸುವದು ಇಲಾಖೆಯವರ ಕರ್ತವ್ಯವಾಗಿತ್ತು. ಇದಕ್ಕೆ ವಿರೋಧವಾಗಿ ರಸ್ತೆಯನ್ನು ಕಟ್ಟಿರುವದು ನ್ಯಾಯವಲ್ಲ.

ಕುಸುಬೂರಲ್ಲಿ ಹಾಕಿದ ಅಡಚಣೆಯನ್ನು ತೆಗೆದು ಹರದೂರು ಮೇಲೆ ಹೋಗಲು ಅನುಕೂಲವಿದೆಯೆಂತ ಇಲಾಖೆಯವರು ಬಹಿರಂಗಪಡಿಸಬೇಕೆಂತ ಕೋರುತ್ತೇನೆ.

"ಕಾರ್"

ಸಂಪಾಜೆ ಆಸ್ಪತ್ರೆ.

ಅಯ್ಯಾ,

ಸಂಪಾಜೆ ಮತ್ತು ನೆರೆಗ್ರಾಮಗಳು ಮಲೆನಾಡಿನಲ್ಲಿದ್ದು ಮಲೇರಿಯ ಜ್ವರದ ಹಾವಳಿಗೆ ತುತ್ತಾಗತಕ್ಕ ಗ್ರಾಮಗಳೆಂದು ಮಾನ್ಯ ಡಿಸ್ಟ್ರಿಕ್ಟ್ ಬೋರ್ಡ್ ಪ್ರಸಿಡೆಂಟರಿಗೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಿಗೂ ವೇದ್ಯವಿರುವ ಸಂಗತಿಯಾಗಿದೆ. ಆದುದರಿಂದಲೇ ಕಳೆದ ಎರಡು ಮೂರು ವರ್ಷಗಳಿಂದ ಇಲ್ಲಿ ಒಂದು ಹಂಗಾಮಿ ಆಸ್ಪತ್ರೆಯನ್ನು ತೆರೆಯುವ ಕ್ರಮವನ್ನು ಜಾರಿಗೆ ತಂದಿದ್ದರು. ಈ ವರ್ಷ ಮಳೆಯು ಬಹಳ ಬೇಗ ಬಂದುದರಿಂದ ಮಲೇರಿಯ ಅಸುಗಳಿಗೆ ಬಹಳ ಅನುಕೂಲವಾಗಿದೆ. ಒಡವರಲ್ಲಾ ಮಲೇರಿಯ ಜ್ವರದ ಹಾವಳಿಯಿಂದ ನರಳುತ್ತಿರುವರು. ಅಲ್ಲಲ್ಲಿ ಸನ್ನಿಪಾತ ಜ್ವರವು ಇರುವುದರಿಂದ ಬಾಧ್ಯಕರ ಪಾಡು ಇನ್ನೂ ಕಷ್ಟತರವಾಗಿ ಪರಿಣಮಿಸಿರುವುದು. ಏಪ್ರಿಲ್ ತಿಂಗಳು ಅಂತ್ಯವಾಗುತ್ತಾ ಬಂದರೂ ಇಲ್ಲಿ ಎಂದಿನಂತೆ ಹಂಗಾಮಿ ಆಸ್ಪತ್ರೆಯನ್ನು ತೆರೆಯದಿರುವುದು ಬಹಳ ವ್ಯಸನಕರವಾಗಿದೆ.

ಆದುದರಿಂದ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಮೊದಲಿನಂತೆ ಹಂಗಾಮಿ ಆಸ್ಪತ್ರೆಯನ್ನು ಕೂಡಲೇ ತೆರೆಯುವಂತೆ ಹುಕುಂ ಮಾಡಿ ಬಡಜನರ ಕಷ್ಟವನ್ನು ನಿವಾರಣೆ ಮಾಡಬೇಕೆಂಬ ದೈನ್ಯದಿಂದ ಕೋರುವ

"ಒಡರೋಗಿ"

ಭೂಮಿಯ ಗಿರ್ವಿ ಬ್ಯಾಂಕು.

ಅಯ್ಯಾ,

ದೇಶದ ಅಭ್ಯುದಯಕ್ಕೆ ಮುಖ್ಯ ಕಾರಣರು ರೈತರು. ರೈತರ ಸ್ಥಿತಿಯು ಉತ್ತಮವಾದಷ್ಟು ದೇಶದ ಆರ್ಥಿಕ ಅವಸ್ಥೆಯು ಏಳಿಗೆಯಾಗುತ್ತದೆ. ರೈತರು ಸುಖಸಂಪತ್ತುಗಳಿಂದ ಬಾಳುವಂತೆ ಮಾಡಬೇಕಾದದ್ದು ಸರ್ಕಾರದ ಮತ್ತು ಜನತೆಯ ಕರ್ತವ್ಯವಾಗಿದೆ.

ಈ ದೆಸೆಯಲ್ಲಿ ರೈತರ ಬಾಳುವೆಯನ್ನು ಉತ್ತಮಪಡಿಸುವ ನಿಮಿತ್ತ ಸಹಕಾರ ಚಳವಳಿಯು ಬಹಳ ಸಹಾಯಕವಾಗಿದೆಯೆಂದನ್ನು ನಾವೆಲ್ಲರೂ ನಂಬುತ್ತೇವೆ. ಆದರೆ ಈ ಚಳವಳಿಯಿಂದ ರೈತರಿಗೆ ಯುಕ್ತ ತೋರುವಷ್ಟು ಪ್ರಯೋಜನ ಉಂಟಾಗಿದೆಯೋ ಎಂಬುದನ್ನು ಮಾತ್ರ ನೋಡಿದರೆ ಅವರಿಗೆ ದೊರಕಬೇಕಾದಷ್ಟು ಅನುಕೂಲಗಳು ಇನ್ನೂ ದೊರಕಿಲ್ಲವೆಂಬ ನಂಬುವುದು ಸಹಕಾರದ ಸಧ್ಯದ ಚಳವಳಿಯಿಂದ ಒಡೆನ. ತೋರುತ್ತದೆ. ರೈತರು ಇನ್ನೂ ಸಾಹುಕಾರರ ಸೆರೆಯಿಂದ ತಪ್ಪಿಸಿಕೊಂಡಿಲ್ಲ. ಹೀಗಿರುವಲ್ಲಿ ಅವರು ಮಿತವ್ಯಯಿಗಳಾಗಿ ಬಂದಿಷ್ಟು ಹಣವನ್ನು ಆಪತ್ಕಾಲಕ್ಕಾಗಿ ಗಳಿಸಲು ಸಾಧ್ಯವಿಲ್ಲ. ಬಿನಾಗಸ್ಯ ಸಹಕಾರ ಚಳವಳಿಯು ಹಿಂದೆ ಬಿದ್ದಿದೆ ಎಂತ ಹೇಳಬೇಕಾಗಿಲ್ಲ. ಸಹಕಾರ ಚಳವಳಿಯಿಂದ ಪ್ರಯೋಜನಕ್ಕಿಂತಲೂ ಅಪ್ರಯೋಜನವೇ ಹೆಚ್ಚೆಂದು ಕೆಲವರು ಹೇಳುವದುಂಟು. ಈ ಮಾತಿನಲ್ಲಿ ಏನೂ ಸತ್ಯತೆ ಇಲ್ಲ.

ಆಗಿರತಕ್ಕ ಸಹಕಾರ ಸಂಘಗಳಿಂದ ರೈತನಿಗೆ ಹೆಚ್ಚು ಸಾಲ ದೊರೆಯದ ಕಾರಣ ಅವನು ತನ್ನ ಆಸ್ತಿಯನ್ನು ರಕ್ಷಿಸುವದಕ್ಕೆ ಉಪಾಯವಿಲ್ಲ. ದೊಡ್ಡ ರಖಮಿನ ಸಾಲ ದೊರೆತರೆ ಅವನು ತನ್ನ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಲ್ಲನು. ಹೀಗೆ ಮಾಡಲು ಭೂಮಿ ಗಿರ್ವಿ ಬ್ಯಾಂಕು ಒಂದೇ ಉಪಾಯ. ಇಂಥ ಬ್ಯಾಂಕನ್ನು ನಿರ್ಮಿಸುವ ಸಂದರ್ಭದಲ್ಲಿ ಜಮ್ಮದ ಮಾತು ನಮ್ಮ ಮುಂದೆ ಬರುವುದು. ಜಮ್ಮದ ಭೂಮಿಯನ್ನು 'ಟಕಾವಿ' ಸಾಲಕ್ಕೆ ಈಡು ಮಾಡುವಂತೆ ಟಕಾವಿ ಸಾಲದ ಉದ್ದೇಶಗಳಿಗೇನೇ ಮೀಸಲಿಸ ಬ್ಯಾಂಕಿನಿಂದ ಪಡೆಯುವ ಸಾಲಕ್ಕೆ ಈಡು ಮಾಡುವಂತೆ ಸರಕಾರದವರು ಅನುಕೂಲಪಡಿಸಿದರೆ ಒಳ್ಳೇಯದಾಗುತ್ತಿತ್ತು.

ರೈತನಿಗೆ ಸುಖಜೀವನವೆಂದರೆ ಇರಲಿಕ್ಕೊಂದು ಮನೆ, ಸಂಸಾರ ನಡೆಸಲಿಕ್ಕೊಂದು ಹಣ್ಣು. ರೈತನು ಲಗ್ನವಿಲ್ಲದೆ ತನ್ನ ಭೂಮಿಯನ್ನು ಮಾಡಿಸಲಿಕ್ಕೆ ಸಾಧ್ಯವೇ ಇಲ್ಲ. ಆ ಮೇಲೆ ವಾಸಕ್ಕೆ ಮನೆಯೂ ಬೇಕು. ಈ ಮುಖ್ಯ ಕಾರ್ಯಗಳಿಗೆ ಅಂದರೆ ಮದುವೆಗೂ, ಮನೆ ಕಟ್ಟಲಿಕ್ಕೂ ಈಗ ದೊರೆಯುವದು 200 ರೂಪಾಯಿಗಳಿಗಿಂತ ಹೆಚ್ಚಿಲ್ಲ. ರೈತನಿಗೆ ಮದುವೆಗೆ, ಮನೆ ಕಟ್ಟಲಿಕ್ಕೆ ತಕ್ಕಷ್ಟು ಹಣವು ಸಹಕಾರ ಸಂಘದಿಂದ ಸಾಲ ದೊರೆಯುವಿದ್ದರೆ ಅವನು ಸಾಹುಕಾರನ ಬಳಿಗೆ ಹೋಗುವ ನಿರ್ಬಂಧವಿಲ್ಲ. ಲ್ಯಾಂಡ ಮಾರ್ಗೇಜ್ ಬ್ಯಾಂಕು ಇದ್ದದ್ದೇ ಆದರೆ ರೈತನಿಗೆ ಹೆಚ್ಚು ಹಣವೂ, ಹಣವನ್ನು ಮರುಪಾವತಿ ಮಾಡಲಿಕ್ಕೆ ಹೆಚ್ಚು ಸಮಯವೂ ದೊರೆಯುತ್ತಿತ್ತು. ಈಗ ಇಂಥ ಒಂದು ಬ್ಯಾಂಕು ಇಲ್ಲದೆ ರೈತರು ... ಕೊಂಡದಪಡುತ್ತಿರುವರು. ಆದುದರಿಂದ ಅದು ಸ್ಥಾಪಿಸಲ್ಪಡಬೇಕಂತ ಎಲ್ಲರೂ ಪ್ರಯತ್ನಿಸುವುದು ಅವಶ್ಯವಾಗಿದೆ. ಮದರಾಸಿನ ಕೋಆಪರೇಟಿವ್ ಕಮಿಷನ್ ಸದಸ್ಯರು ಇಂಥ ಲ್ಯಾಂಡ್ ಮಾರ್ಗೇಜ್ ಬ್ಯಾಂಕುಗಳು ಅಗತ್ಯವೆಂದು ತಮ್ಮ ರಿಪೋರ್ಟಿನಲ್ಲಿ ಬರೆದಿರುತ್ತಾರೆ. ಮೈಸೂರಲ್ಲಿ ಮೊನ್ನೆ ಮೊನ್ನೆ ಇಂಥಾದ್ದೊಂದು ಬ್ಯಾಂಕು ಸ್ಥಾಪಿತವಾಗಿದೆ.

ರೈತ.

ಪಂಚಮರ ಸಹಪಂಕ್ತಿಭೋಜನ ಮತ್ತು ಶಾಂತಿಗಾರಿಕ.

ಅಯ್ಯಾ,

ಬಿಟ್ಟಂಗಾಲದ ಪಂಚಮರ ಸಮ್ಮೇಳನದಲ್ಲಿ ಅವರ ಸಹಪಂಕ್ತಿಯಲ್ಲಿ ಊಟಮಾಡಿದ ಮೆ. ಹೂಳ್ಳ ಕೃಷ್ಣಯ್ಯನವರು ಕೋಟೂರು ಗ್ರಾಮದ ಅಯ್ಯಪ್ಪದೇವರ ಅರ್ಚಕರ ಹಕ್ಕುದಾರರು. ಈ ವರೆಗೆ ಕೃಷ್ಣಯ್ಯನವರ ಮುಖಪತ್ತಿನಲ್ಲಿ ಅವರೊಟ್ಟಿಗಿದ್ದ ಹವೀಕ ಗಣಪಯ್ಯನವರು ಶಾಂತಿ ಮಾಡುತ್ತಿದ್ದರು. ಈ ಸಮ್ಮೇಳನದನಂತರ ಕೋಟೂರು ಗ್ರಾಮದಲ್ಲಿ ಸದಾ ಗಲಾಟೆ. ಅಲ್ಲಿಯ ಗ್ರಾಮಸ್ಥರೂ ಅವರ ಮುಂದಾಳಿನ ಆ ಊರಿನ ಒಬ್ಬ ಎಯ್ಯಪ್ಪದೇವರು ಒರತಕ್ಕ ತಿರುವಾಳದವರೂ ಸೇರಿ, ಸದರಿ ಗಣಪಯ್ಯನವರು ಅಶುದ್ಧರಾಗಿದ್ದಾರೆ, ಅವರಿಂದ ಇನ್ನು ಮುಂದೆ ಶಾಂತಿಮಾಡಿಸಕೂಡದು ಎಂದು ಸದರಿ ತಿರುವಳ ಬಂದವರು ಊರವರಿಗೆ ಹೇಳಿ ಶಾಂತಿ ಎರಡು ವಾರಗಳವರೆಗೆ ಬಾಕಿ ಮಾಡಲ್ಪಟ್ಟಿತು. ಇಷ್ಟರಲ್ಲೇ ಈ ವರ್ತಮಾನ ಸದರಿ ಕೃಷ್ಣಯ್ಯನವರಿಗೆ ತಿಳಿಯಲಾಗಿ ತಾ. 8.4.28 ರಲ್ಲಿ ಸದರಿ ಊರವರು ಮತ್ತು ಕೃಷ್ಣಯ್ಯನವರು ಈ ವಿಷಯವಾಗಿ ಚರ್ಚಿಸುತ್ತಿರಲಾಗಿ ಸದರಿ ತಿರುವಳ ಬಂದು ಬಹಳವಾಗಿ ಚರ್ಚೆ ಮಾಡಿತು. ಕಡೆಗೆ ಕೃಷ್ಣಯ್ಯನವರು ಆ ತಿರುವಳ ಬಂದವರೊಡನೆ ಅನೇಕ ವಿಧವಾಗಿ ಚರ್ಚಿಸಿ ತಾನು ಪಂಚಮರಲ್ಲಿ ಊಟಮಾಡಿದವನಾದರೂ ತಾನು ಆ ದೇವರಿಗೆ ಶಾಂತಿ ಮಾಡಲು ತಯಾರು ಇದ್ದೇನೆಂದು ಹೇಳಲು ಸದರಿ ತಿರುವಳ ಬಂದವರು ನೀನು ಇಂದಿನಿಂದ ಪೂಜೆ ಕೈಗೊಂಡದಾದರೆ ಇನ್ನು ಇಂದಿಗೆ ಎಂಟು ದಿನದೊಳಗೆ ನಿನಗೆ ತಕ್ಕ ಫಲ ಕೊಡುವನೆಂದು ಹೇಳಿತು. ಆದರಂತೆ ಮೆ ಕೃಷ್ಣಯ್ಯನವರು ದೃಢಭಕ್ತಿಯಿಂದ ತಾರೀಕು 15-4-28ರ ವರೆಗೆ ಶಾಂತಿಮಾಡಿದರು. ಯಾವ ತರದ ಫಲ ಸಿಕ್ಕಬಹುದೆಂದು ಇದಿರುನೋಡುತ್ತಿದ್ದ ಊರಿನವರ ಆಶೆ ನಿರಾಶೆಯಾಯಿತು. ತಿರುವಳ ಮಾಯವಾಯಿತು. ಕೃಷ್ಣಯ್ಯನವರು ಆರೋಗ್ಯದಲ್ಲಿ ದತ್ತರು. ಈಗ ಮೊದಲಿನ ಗಣಪಯ್ಯನವರೇ ಶಾಂತಿಗಾರರು.

ಈ ತರದಲ್ಲಿ ತಿಳುವಳಿಕೆ ಇಲ್ಲದ ಜನರನ್ನು ಯಾರು ತಾನೇ ಮರುಳುಮಾಡದಿರರು. ಪಂಚಮರಲ್ಲಿ ಊಟಮಾಡಿದ ಮಾತ್ರಕ್ಕೆ ಪಂಚಮನಾದರಾ? ಅವರಲ್ಲಿ ಇರತಕ್ಕ ಸುಗುಣ, ದೃಢಭಕ್ತಿ ಕಮ್ಮಿಯಾದೀತೆ? ಮಾಣಿ ಕೃಷ್ಣ ತಿಪ್ಪೆಯಲ್ಲಿ ಬಿದ್ದರೂ ಅದರ ಬೆಲೆ ಕಮ್ಮಿಯಾದೀತೆ? ಅದಮಾತ್ರದಲ್ಲಿ ಇವರು ಪೂಜೆ ಮಾಡಬಾರದು, ದೇವಸ್ಥಾನಕ್ಕೆ ಬರಕೂಡದು, ಈ ತರದ ಪಕ್ಷಪಾತ ಈ ನರಮನುಷ್ಯನಿಗೆ ಅಲ್ಲದೆ ಕರುಣಾನಿಧಿಯಾದ ಆ ಪರಮಾತ್ಮನಿಗೆ ಇದೆಯೇ? ಬೇಡರ ಕಣ್ಣಪ್ಪ ಕನಕದಾಸ, ಕಾಳಿದಾಸ ಇವರೆಲ್ಲರೂ ನೀಚ ಕುಲದಲ್ಲಿ ಹುಟ್ಟಿದರು. ಇವರಿಗೆ ದೇವರು ಒಲಿಯಲಿಲ್ಲವೇ? ಇವರ್ಯಾರೂ ಈ ತರದ ಪಕ್ಷಪಾತದ ನ್ಯಾಯವಿಲ್ಲದ ವಿವಾದಕ್ಕೆ ಎಡೆಗೊಡದ ರೀತಿ ಆ ಪರಮಾತ್ಮನು ಸರ್ವರಿಗೂ ದೃಢಭಕ್ತಿಯನ್ನೂ ನಿರ್ಮಲ ಹೃದಯವನ್ನು ಕೊಡಲೆಂದು ನನ್ನ ಪ್ರಾರ್ಥನೆ.

ಕೇಳಿದವ

ಹಿಂದೀ ಪ್ರಚಾರ.

ಮಹನೀಯರೇ,

ನಮ್ಮ ಈ ಭಾರತ ಭೂಮಿಯಲ್ಲಿ ಅನೇಕ ಭಾಷೆಗಳು ರೂಢಿಯಲ್ಲಿ ಇವೆ. ಒಂದು ಭಾಷೆಗೂ, ಇನ್ನೊಂದು ಭಾಷೆಗೂ ಯಾವ ಸಂಬಂಧವೂ ಇರುವುದಿಲ್ಲ; ಅಥವಾ ಇದ್ದರೂ ಅದು ಸ್ವಲ್ಪವೇ. ನಮ್ಮ ಮಾತೃಭಾಷೆಯೊಂದನ್ನೇ ಕಲಿತುಕೊಂಡರೆ ಸಾಲದು (ಎಂದರೆ ನಮ್ಮ ಮಾತೃಭಾಷೆಯನ್ನೇ ಕಲಿಯಬಾರದೆಂಬುದು ನನ್ನ ತಾತ್ಪರ್ಯವಲ್ಲ.) ಯಾಕೆಂದರೆ ನಮ್ಮ ಮಾತೃಭಾಷೆ ಎಂದರೆ ಕನ್ನಡ. ಇದು ಕರ್ನಾಟಕದಲ್ಲಿ ಮಾತ್ರ ರೂಢಿಯಲ್ಲಿದೆಯೇ ಹೊರತು ಬೇರೆ ಯಾರಿಗೂ ತಿಳಿಯುವುದಿಲ್ಲ. ಆದುದರಿಂದ ಕನ್ನಡ ತಿಳಿಯದ ಅನ್ಯ ಜನರೊಡನೆ ಮಾತಾಡಲು ನಮಗೆ ಒಂದು ಸಾಮಾನ್ಯ ಭಾಷೆ ಬೇಕಾಗಿದೆ. ಈ ಕಾರ್ಯವನ್ನು ನಡೆಸಲು ಯಾವ ಭಾಷೆ ಸಹಾಯವಾದೀತೆಂಬುದನ್ನು ನಾವು ನೋಡಬೇಕಾಗಿದೆ.

ತತ್ಕಾಲಕ್ಕೆ ಇಂಗ್ಲಿಷ್ ಭಾಷೆಯೇ ಭಾರತೀಯರ ಸಾಮಾನ್ಯ ಭಾಷೆಯಾಗಿ ಕಂಡು ಬರುವುದು. ಆದರೆ ಇದು ಬಹಳ ಕಠಿಣವಾಗಿಯೂ ನಮ್ಮ ಸಾಮಾನ್ಯ ಭಾಷೆಯಲ್ಲ. ಯಾಕೆಂದರೆ ನಮ್ಮ ಸಹೋದರ, ಸಹೋದರಿಯರಲ್ಲಿ ಹೆಚ್ಚಿನ ಸಂಖ್ಯೆಗೆ ಇದರ ಸುಳಿವೇ ತಿಳಿಯುವದಿಲ್ಲ. ಇದನ್ನು ಅರಿಯಲು ಇಚ್ಛಿಸುವವರಿಗೆ ಇದನ್ನು ಪರಿಗ್ರಹಿಸಲು ದೀರ್ಘಕಾಲ ಹಿಡಿಯುವದು. ಹೀಗಾಗಿ ಈ ಭಾಷೆಯ ಪಾಂಡಿತ್ಯವು ಕೆಲವು ಜನರಿಗೆ ಮಾತ್ರ ಉಂಟಾಗಿದೆ. ಇದನ್ನು ಕಲಿಯಲು ಉಪಯೋಗಿಸುವ ಸಮಯವನ್ನು ಬೇರೆ ಯಾವುದಾದರೂ ಭಾಷೆಯನ್ನು ಕಲಿಯಲು ಉಪಯೋಗಿಸಿದರೆ ಅದರಲ್ಲಿ ಪಾಂಡಿತ್ಯವನ್ನು ಸಂಪಾದಿಸಬಹುದು. ಹೀಗಾಗಿ ಇಂಗ್ಲಿಷ್ ತಿಳಿಯುವವರಿಗೂ, ತಿಳಿಯದವರಿಗೂ ಒಂದು ತರದ ಜಾತಿ ಭೇದ ಉಂಟಾಗಿದೆ. ಆದುದರಿಂದ ಇಂಥ ಭಾಷೆ ನಮ್ಮ ಜನರ ಸಾಮಾನ್ಯ ಭಾಷೆಯಾಗಲಾರದು.

ಇನ್ನು ಈ ಮಹಾಕಾರ್ಯವನ್ನು ನಡೆಸಲು ಹಿಂದೀ ಭಾಷೆಗಲ್ಲದೆ ಇನ್ಯಾವ ಭಾಷೆಗೂ ಅರ್ಹತೆ ಇಲ್ಲವೆಂದು ದೃಢವಾಗಿ ಹೇಳಬಹುದು. ಯಾಕೆಂದರೆ—ನಾವು ಸಾಮಾನ್ಯ ಭಾಷೆಯಾಗಿ ಮಾಡಬೇಕಾಗಿರುವ ಭಾಷೆಯು ಹಿಂದೂಗಳಿಗೇ ಅಲ್ಲ ಮಹಮ್ಮದೀಯರಿಗೂ ತೃಪ್ತಿಯನ್ನುಂಟುಮಾಡಬೇಕಾಗಿದೆ. ಹಿಂದೀ ಭಾಷೆಯಲ್ಲಿ ಈ ಎರಡು ಅಂಶವು (ನಾಗರಿ ಮತ್ತು ಉರುದು) ಸಮ್ಮಿಶ್ರವಾಗಿರುವುದರಿಂದ ನಮ್ಮ ಐಕ್ಯಮತ್ಯಕ್ಕೆ ಭಂಗವುಂಟಾಗದು.

ಆದುದರಿಂದ ಇಂಥ ಭಾಷೆಯನ್ನು ನಮ್ಮ ದೇಶದಲ್ಲಿ ಪ್ರಚುರಪಡಿಸಬೇಕಾಗಿದೆ. ಹಿಂದೀ ಭಾಷೆಯನ್ನರಿತವರು ಈ ದೇಶದಲ್ಲಿ ಹೆಚ್ಚು ಕಮ್ಮಿ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಬೇರೆ ಅನೇಕ ಭಾಗಗಳಲ್ಲಿ ಹಿಂದೀ ಪ್ರಚಾರದ ಸಂಸ್ಥೆಗಳನ್ನು ತೆರೆದಿರುವರು. ದೇಶದ ಮುಂದಾಳುಗಳು ಈ ಭಾಷೆಯನ್ನು ಪ್ರಚಾರಗೊಳಿಸಲು ತಮ್ಮ ತನು, ಮನ, ಧನವನ್ನರ್ಪಿಸುತ್ತಿರುವರು. ಹೆಚ್ಚೇಕೆ—ಮಹಾತ್ಮ ಗಾಂಧಿಯವರ ಸಹಾನುಭೂತಿಯು ದಕ್ಕಿರುವುದು. ಈ ಸಂಸ್ಥೆಯಲ್ಲಿರುವ ಮಹನೀಯರು ಪ್ರಾಯಶಃ ಉಚಿತವಾಗಿ ತಮ್ಮ ಶಿಷ್ಯರಿಗೆ ಹಿಂದೀಯನ್ನು ಕಲಿಸುತ್ತಿರುವರು. ಇವರಿಗೆ ಹಣದ ಮೇಲೆ ಆಸೆ ಇರುವುದಿಲ್ಲ. ಹೆಚ್ಚಿನ ವಿಷಯ ಸಿಕ್ಕಿದರೆ ಅದೇ ತಾವು ಮಾಡಿದ ಕಾರ್ಯಕ್ಕೆ ಪ್ರತಿಫಲವೆಂದು ನೆನೆದು ಸಂತೋಷಪಡುವರು.

ಇಂಥ ಸಂಸ್ಥೆಗೆ ಒಳಪಟ್ಟಿರುವ ಪಂಡಿತ ಸಿದ್ಧನಾಥಪಂತರವರು ನಮ್ಮ ಬ್ರಾಹ್ಮಣೇತರರ ಸಂಘದ ಅಧಿವೇಶನಕ್ಕೆ ಬರಲು ಒಪ್ಪಿರುವರು. ಈ ಸುಸಮಯವನ್ನು ಕಳಕೊಳ್ಳದೆ ನಾವೆಲ್ಲರೂ ಅವರನ್ನು ಇಲ್ಲಿ ಒಂದು ಶಾಲೆಯನ್ನು ತೆರೆಯಲು ಕೇಳಿಕೊಳ್ಳಬೇಕಾಗಿದೆ. ಆದರೆ ಇದಕ್ಕೆ ಮೊದಲು ಈ ಭಾಷೆಯನ್ನು ಕಲಿಯಲು ಇಚ್ಛಿಸುವವರ ಎಷ್ಟು ಜನರಿದ್ದಾರೆಂದು ತಿಳಿದಲ್ಲದೆ ಈ ಕಾರ್ಯವು ಇನ್ನಷ್ಟು ಸುಲಭವಾದೀತು. ಯಾಕೆಂದರೆ—ಅವರು ಕಲಿಯಲು ಇಚ್ಛಿಸುವ ಮಹನೀಯರ ಸಂಖ್ಯೆಯನ್ನು ನೋಡಿ ತಮ್ಮ ಕಾರ್ಯಕ್ಕೆ ಭಾಗವಾಗಲಾರರೆಂಬ ಭಾವನೆಯಿಂದ ತಮ್ಮಲ್ಲಿ ಒಬ್ಬರನ್ನು ಖಂಡಿತವಾಗಿ ಸಂತೋಷದಿಂದ ಕಳುಹಿಸುವರು.

ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಗಳು ಇದನ್ನು ಸುಲಭದಲ್ಲಿ ಕಲಿಯಬಹುದಾಗಿದೆ. ಶಾಲೆಯ ಪಾಠಕ್ರಮಗಳಿಗೆ ಇದರಿಂದೇನೂ ಕುಂದುಕ ಉಂಟಾಗಲಾರದು. ಅವರು ಯಾವ ಸಮಯದಲ್ಲಾದರೂ ಪಾಠ ಹೇಳಲು ಸಿದ್ಧರಾಗಿರುವರು. ಆದುದರಿಂದ ಈ ಭಾಷೆಯನ್ನು ಕಲಿಯಲು ಇಚ್ಛಿಸುವ ಮಹನೀಯರುಗಳು ತಮ್ಮ ಹೆಸರು ಮತ್ತು ವಾಸಸ್ಥಳವನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಮೀಟಿಂಗಿಗೆ ಬರುವವರು ಅವರೊಡನೆ ಮುದ್ದಾಗಿ ಮಾತಾಡಬಹುದಾಗಿದೆ. ಎಲ್ಲರೂ ಈ ಸುಸಮಯವನ್ನು ಕಳೆದುಕೊಳ್ಳದೆ ಇಲ್ಲಿ ಒಂದು ಶಾಲೆಯನ್ನು ಸ್ಥಾಪಿಸಲು ಅನುಕೂಲಿಸಬೇಕಾಗಿ ಕೇಳಿಕೊಳ್ಳುತ್ತೇನೆ.

"ಹಿಂದಿ"

C/o Editor

"Kodagu" Mercara

ಎಲ್ ಸ್ವಸ್ ಬೋರ್ಡ್

ಕೊಡಗಿನಲ್ಲಿ ಕುಡಿತವು ಏನೂ ಕಡಿಮೆಯಾಗುವಂತೆಯೇ ಕಾಣುವದಿಲ್ಲ. ಬದಲು ಹೆಚ್ಚುತ್ತಾ ಹೋಗುತ್ತದೋ ಎಂಬ ಶಂಕೆಯು ದೊಡ್ಡದಾಗುತ್ತಿದೆ. ಕಲವು ವರ್ಷಗಳ ಹಿಂದೆ ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳದ ಸಮಯದಲ್ಲಿ ಇಡೀ ಹಿಂದೂ ದೇಶದಲ್ಲಿ ನಿಷಾನಿಷೇಧದ ಚಳವಳವು ... ಉತ್ಸಾಹದಿಂದ ನಡೆಸಲ್ಪಟ್ಟಾಗ ... ಇಲ್ಲಿಗೂ ಬೀಸಿ, ಕೊಡಗಿನಲ್ಲಿಯೂ ಕೆಲವು ... ಈ ಕೆಲಸಕ್ಕೆ ಕೈ ಹಚ್ಚಿದರು. ಗ್ರಾಮ ಗ್ರಾಮಗಳಲ್ಲಿ ... ಪಿಕೆಟಿಂಗ ನಡೆಯು ನಡೆದು. ಸೇಂದಿ ಇಳಿಸುವದನ್ನು ... ಪಟ್ಟಿಗೆ ಬಾಕಿ ಮಾಡಿದಲ್ಲದೆ ಮದ್ಯದ ಮುಂಚೆ ... ಶೋಧನಗಳಲ್ಲಿ ಅಮಲು ಪದಾರ್ಥಗಳನ್ನು ... ಕಡಿಮೆಯಾಗುತ್ತಾ ಬರುತ್ತಿತ್ತು. ಅಬ್ಕಾರಿ ಇಲಾಖೆಯ ... ಸರ್ಕಾರದವರಿಗೆ ಉತ್ಪತ್ತಿಯು ಕಡಿಮೆಯಾಗುತ್ತಾ ಬಂ... ಸೇಂದಿ, ಸಾರಾಯಿ ಅಂಗಡಿಗಳ ಹರಾಜಿನಲ್ಲಿ ಕೂಗುವ ... ಕಡಿಮೆಯಾದರು. ಸರ್ಕಾರದವರಿಗೆ ಗಾಬರಿ ಹುಟ್ಟಿ ... ಈ ಚಳವಳವು ಪ್ರಬಲವಾದರೆ ತಮ್ಮ ಉತ್ಪತ್ತಿಯ ... ಕಳೆದು ಹೋಗಬಹುದೆಂಬ ಭಯವು ಉಂಟಾಯಿತೋ ... ಯಾವದೋ ಕಾರಣದಿಂದ ನಿಷಾನಿಷೇಧದ ಚಳವಳ ... ರಾಜಭಕ್ತಿಯ ಚಳವಳವಲ್ಲವೆಂಬ ಭಾವನೆಯು ಜನರಲ್ಲಿ ಹುಟ್ಟಿಸಿದರು. ಆದಕಾರಣ ತಮ್ಮ ಹೊಟ್ಟೆಪಾಡಿಗಾಗಿ ಸರ್ಕಾರದ ನೌಕರರಾಗಿರುವಂಥವರು ... ದಾಕ್ಷಿಣ್ಯಗಳನ್ನು ... ದವರೂ ಕೂಡ ಈ ದೇಶೋದ್ಧಾರದ ಚಳವಳದಿಂದ ಹಿಂತೆಗೆಯಲಾರಂಭಿಸಿದರು. ಅನೇಕ ... ಈ ಚಳವಳವನ್ನು ವಿರೋಧಿಸ ಹತ್ತಿ ಕುಡಿತವು ಈ ದೇಶದಲ್ಲಿ ... ಜನರಲ್ಲಿ ಬೋಧಿಸ ತೊಡಗಿದರು. ನಿಷಾನಿಷೇಧ ವಾದಿಗಳಿಗೆ ಸಹಾಯವು ಕಡಿಮೆಯಾಗುತ್ತಾ ಬಂತು. ಆದರೂ ಗ್ರಾಮಗಳಲ್ಲಿ ಮಾಡಿದ್ದ ಉತ್ಸಾಹ ... ಈಗ ಪುನಹ ಗ್ರಾಮಗಳಲ್ಲಿಯೂ, ಪೇಟೆಗಳಲ್ಲಿಯೂ, ... ಯ ಪ್ರಾಬಲ್ಯವನ್ನು ಹೊಂದುತ್ತಿದ್ದಾಳೆ. ... ಗಲ್ಲಿ ನಡೆದ ಸೇಂದಿ, ಸಾರಾಯಿ ಅಂಗಡಿಗಳ ಹರಾಜಿನಲ್ಲಿ ... ವರ್ಷಕ್ಕಿಂತ ಸುಮಾರು ... ಹೆಚ್ಚಿಗೆ ಉತ್ಪತ್ತಿಯಾಗಿದೆಯಂತೆ! ... ಪೂರ್ಣ ಅಧಿಕಾರವುಳ್ಳವರಾಗಿದ್ದ ಸರ್ಕಾರದವರ ಸಹಾನುಭೂತಿಯೂ, ಸಹಾಯವೂ ಇಲ್ಲದೆ ಇಂಥಾ ಜನಸಮುದಾಯದ ಸುಧಾರಣೆಗಳನ್ನು ಮಾಡುವುದು ಸಾಧ್ಯವಲ್ಲವೆಂಬುದು ಪ್ರತ್ಯಕ್ಷವಾಗಿದೆ.

ಪ್ರಜೆಗಳ ಕಂದಾಯದಿಂದ ನಡೆಸಲ್ಪಡುತ್ತಿರುವ ಸರ್ಕಾರವು ಕಂದಾಯ ಕೊಡುವವರ ಹಿತವನ್ನು ... ನಡೆಸಬೇಕಾದದ್ದು ಧರ್ಮವೆಂಬುದು ... ವರಿಗೆ ತಿಳಿದ ಸಂಗತಿಯಾಗಿದೆ. ಹೀಗಿರುವಲ್ಲಿ ಸರ್ಕಾರದವರು ನಿಷಾನಿಷೇಧದಿಂದ ಪ್ರಜೆಗಳಿಗುಂಟಾಗುವ ... ಕಷ್ಟ ನಷ್ಟಕ್ಕೆ ಒಳಗಾಗುತ್ತಿರುವದನ್ನು ನೋಡಿ ... ಉತ್ಪತ್ತಿಯನ್ನು ತೆಗೆದುಕೊಳ್ಳಲು ಸ್ವಲ್ಪವೂ ಹಿಂಜರಿಯದೆ ತಾವು ಪ್ರಜೆಗಳ ಹಿತಕ್ಕಾಗಿ ಆಡಳಿತ ಮಾಡುತ್ತಿದ್ದೇವೆಂದು ಹೇಳುವದು ಎಷ್ಟು ನಾಚಿಕೆಗೇಡಿನದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಪೂರ್ತಿ ನಿಷಾನಿಷೇಧವನ್ನು ಪಕ್ಕನೆ ಸಾಧಿಸಲು ಆಗುವದಿಲ್ಲವೆಂತಲೂ, ಮೆಲ್ಲ ಮೆಲ್ಲಗೆ ಸ್ವಲ್ಪವಾಗಿ ಸಾಧಿಸಬೇಕೆಂತಲೂ ಹೇಳುವವರು ಹಲವರಿದ್ದಾರೆ. ಸರ್ಕಾರ ಅಧಿಕಾರಿಗಳಲ್ಲಿ ಈ ಅಭಿಪ್ರಾಯಕ್ಕೆ ಸಹಾನುಭೂತಿ ತೋರಿಸುವವರು ಕೆಲವರು ಇದ್ದಾರೆ. ಸರ್ಕಾರದವರು ಈ ವಿಷಯದಲ್ಲಿ ಜನರ ... ಕ್ಕೆ ಸಿಕ್ಕದಂತೆ ಮಾಡಿಕೊಳ್ಳಲು ಎಕ್ಸೈಸ್ ಬೋರ್ಡು ... ಕಾದ ಏರ್ಪಾಡುಗಳನ್ನು ಮಾಡುತ್ತಿದ್ದಾರೆ ... ಪ್ರಾಂತ್ಯದಲ್ಲಿರುವಂತೆಯೇ ನಮ್ಮ ದೇಶದಲ್ಲೂ ಕುಡಿತವನ್ನು ... ಕಡಿಮೆ ಮಾಡಲು ... ಗಳನ್ನು ... ಸೇಂದಿ, ಸಾರಾಯಿ ಅಂಗಡಿಗಳನ್ನು ಕಡಿಮೆ ಮಾಡಲು ... ಮಾಡಿದರೋ, ಅಮಲುಪದಾರ್ಥ ಮಾರಾಟದ ... ನಾದರೂ ಒದಗಿಸಿದರೋ, ಅಂಗಡಿಗಳ ಸ್ಥಳವನ್ನು ... ಯಾವದೋ ಕಾರಣದಿಂದ ... ಪತ್ರಿಕೆ ... ಸನ್ನದುದಾರರು ... ಗುಟ್ಟಿನ ... ಕೆಲಸಕ್ಕೆ ... ಯವಿದೆಯಂತೆ ... ಇದರ ಪ್ರೊಸೀಡಿಂಗ್ಸು ... ಕಾರಣವೇನೆಂದು ಗೊತ್ತಾಗುವದಿಲ್ಲ. ... ನಡೆದ ಸಂಗತಿಗಳನ್ನು ಪತ್ರಿಕೆಗೆ ಬರೆಯಬಹುದಿತ್ತು. ... ಕಳುಹಿಸಲು ... ತಮ್ಮ ಕರ್ತವ್ಯವಲ್ಲವೇ? ... ಇನ್ನು ಮುಂದಾದರೂ ಅಧಿಕಾರಿಗಳಾಗಲೀ, ... ಮೆಂಬರುಗಳಾಗಲೀ ಆದರ ಪ್ರೊಸೀಡಿಂಗ್ಸನ್ನು ಪ್ರಕಟಿಸುವರಾಗಿ ನಂಬುತ್ತೇವೆ.

'ನಿಷಾನಿಷೇಧಿ'

ಕೊಡಗು ವೀರಶೈವ ವಿದ್ಯಾನಿಧಿ ಸಂಘ.

ಅವಸ್ಥಾ

ಕೊಡಗು ... ತಾ. 20—1—28ರಲ್ಲಿ ... ಮೀಟಿಂಗ್ ನಡೆಯಿತು. 41 ಜನರು ಹಾಜರು ಇದ್ದರು. ... ಮೀಟಿಂಗನ್ನು ನಡೆಸಿ ... ಕೊಂಡು ... ಸಂಘದ ಸೆಕ್ರೆಟರಿ ... ಮೀಟಿಂಗ್ ... 13ನೇ ... 10 ... ತಾರೀಖಿನಂತೆ ... ಡಾಕ್ಟರ ... ಕ್ರಮವಾಗಿ ... ಆಯಿತು.

ಈ ಸಭೆಯ ... ಅಧ್ಯಕ್ಷರು ... ಜನರನ್ನು ... 15 ಜನರನ್ನು ... ಸದಸ್ಯರನ್ನಾಗಿಯೂ ... ಕರೆಯಿಸಿ ... ಕಮಿಟಿ ... ಆರಿಸಲಾಯಿತು.

... ರಿಜಿಸ್ಟರ್ ಮಾಡಿಸಿ ... ಸರ್ಟಿಫಿಕೇಟನ್ನು ... ಮಾಡಿ ... ಮತ್ತು ... ಕೆಲವು ... ಕಾರ್ಯಕಾರಿ ಕಮಿಟಿ ... ನಿರ್ಧರಿಸಲಾಯಿತು.

ಕ. ಸಾಂತವೀರಪ್ಪ.

ಮಡಿಕೇರಿ ... ಸೆಕ್ರೆಟರಿ

Arms, Ammunition and Shooting Requisites!!!



19-8 Illustrated Catalog e Just Issu d Fr on Applicati

D B B L Rifles	Rs	120	to	Rs	2750
S·B. B L „	„	35	to	„	950.
D B B L Guns	.	50	to	„	1350
S· B B L. „	.	35	to	.	275
D B M L. ,	„	45	to		135
S B M L „	„	30	to	„	60
B. L Revolvers	„	35	to	„	350·
Automatic Pistols	„	50	to		150

Brilliant Search Light Lamp For Shooting Camping, F... and All such other Night Sports and work Rs 30 Free delivery. Also swords, Daggers, Cartridges, Caps, Gunpowder and Sa... Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and A...
Cheapest priced firm in India,
210 Abdul Rehman Street, BOMBAY.

24—4



ಡಿ. ಬಿ. ಬಿ. ಯಲ್. ಕೋವಿಗಳು ರೂ. 75 ರಿಂದ ರೂ. ...
ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. ...
ಯಸ್. ಬಿ. ಯಮ್. ಯಲ್. ಕೋವಿಗಳು ರೂ. ... ರಿಂದ ...
ರಿವಾಲ್ವರ್‌ಗಳು. ರೂ. 40/ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟೆ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೆ (ಬೆಸ್ತ ... ವವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ದೊರಕಿ ಕೊಡಲಾಗುವದು.

60 ವರ್ಷಗಳಿಂದ ನಮ್ಮ ... ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಒಪ್ಪಿಸುತ್ತೇವೆ. ಇದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಿರಿ.

ಯಸ್. ವಿ. ರಾಮನಾಥಂ ಚೆಟ್ಟಿ

ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—19 12. ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದದ್ದು 1874.

ಹೆಡ್ ಆಫೀಸು, ಬೊಂಬಾಯಿ.

ಮಿ. ಕೆ. ಸಿ. ಚೆನ್ನಪ್ಪನವರು 1928 ನೇ ಏಪ್ರಿಲ್ 1 ರಿಂದ ಮಡಿಕೇರಿಯಲ್ಲಿ ಈ ಕಂಪೆನಿಯ ಹಣ ವಸೂಲಾತಿಯ ಏಜೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

52—2

ಎಲ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರೆಟರಿ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15 510
ಜಮೆಯಾದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಕೊಂಗಟ್ಟೀರ ಅಪ್ಪಯ್ಯನವರು

ಸೆಕ್ರೆಟರಿ

ಸಿ ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರ್ಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ಕವ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು
ಪೊನ್ನಂಪೇಟೆನಾಡ.—ಮೆ. ತಾಳೀಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ ಕೀಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಚಿಣ್ಣಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡ—ಮೆ ಪಿ ಜೆ ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಪ್ಪಯ್ಯನವರು
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಒಪಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
"ಕೊಡಗು" ಮಡಿಕೇರಿ

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:-"SHOOTER" Bombay.

(17—33) 'Please write for our Catalogue 1926—1929

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ತ್ವರಿತ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ.—ಇದು ಪ್ರಮೇಹ ಮೂತ್ರ ಕಟ್ಟು, ಮೂತ್ರ ಹನಿ ಹನಿ ಹೋಗುವುದು ಮೂತ್ರಕೋಶದ ಉರಿ, ಮೂತ್ರ, ಹಿಂಡಗಳ ಉರಿ, ಮೂತ್ರನಾಳದಲ್ಲಿ ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಹಿಡಿಯಲು ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರಾಘಾತ, ಮುಟ್ಟುವ ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆನವೆ, ಕಣ್ಣುರಿ, ತಿವಿಯಿಂದ ಕಿವಿ ಸೋರುವುದು ಕೆತ್ತುಹುಣ್ಣು, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ — ಮನೋಲ್ಲಾಸಿನಿ ಕಂಪೆನಿ.
52—29 ೦. ಮಂಗಳೂರು

Kapurchand & co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc, etc,. Chickapet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—47

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರವರಿ 28ಕ್ಕೆ ಆಖೈರಾದ 5 ವರ್ಷಗಳ ಕೆಲಸದ

ಬೆಲೆಕಟ್ಟಿದದಲ್ಲಿ

ರೂ. 37,66,689.

ಉಳುವರಿ ಕಂಡುಬಂದಿದೆ.

ಒಟ್ಟು ಜೀವವಿಮೆಯ 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಸಂತೆಯೂ	ಮತ್ತು	ಪ್ರಾಯ ನಿರವಿನ ವಿಮೆಯು 1000 ರೂಪಾಯಿಗಳಿಗೆ 12 ರೂಪಾಯಿಸಂತೆಯೂ

ರಿವರ್ಶನರಿ ಬೋನಸ್ ಹಂಚ ಬಹುದೆಂತ ತೀರ್ಮಾನವಾಗಿದೆ.

ವಿಳಾಸ.		ಬ್ರಾಂಚ್ ಆಫೀಸು
ಎಂಪಯರ್ ಆಫ್ ಇಂಡಿಯಾ		ಕಮರ್ಶಿಯಲ್ ಬೀದಿ
ಲೈಫ್ ಬಿಲ್ಡಿಂಗ್, ಬೊಂಬಾಯಿ.	24—16	ಬೆಂಗಳೂರು.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪೂವರ್‌ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಎಲ್ಲವು ಈ ದೇಶಸ್ಥರಿಗೆ ಕೂಡಿರಬೇಕೆಂಬ ಠರಾವು ಜನವರಿ ತಾ 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿ ಮೇರೆ ನಮ್ಮ ಸಂಘದ ಕೊಡಗಿನ ಪ್ರೊವಿನ್ಸಿಯಲ್ ಬೋರ್ಡಿನ ಡ್ರಾಯಿಂಗ್ ತಾ. 31—3—1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ತೆಗೆಯಲಾಗಿ ಮಡಿಕೇರಿನಾಡು ಕಡಗದಾಳು ಗ್ರಾಮದ ಮೆ ಕೊರವಂಡ ಮುದ್ದಣ್ಣನವರ ಕುಟುಂಬ ಮಾಚವ್ವನವರಿಗೆ ಚೀಟಿ ಎತ್ತಿ ಬರಲು ಈ ವರ್ಷದ ಪ್ರಥಮ ಡ್ರಾಯಿಂಗ್‌ನ ಐದು ನೂರು ರೂಪಾಯಿಗಳ (500—0—0) ಸಾಲವನ್ನು ಹೊಂದಲು ತೀರ್ಮಾನವಾಯಿತು ಅದನ್ನು ಈಚೆಗೆ ಕೊಡಲಾಗಿದೆ. ಇದು ವೇಳಿನ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲಿಸಲಿಲ್ಲ. ಮುಂದಿನ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡುವದಕ್ಕೆ ಅದನ್ನು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ.

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹ ಪಡಿಸಬೇಕಾಗಿ ಈ ಮೂಲಕ ಕೋರುತ್ತೇನೆ

ಅನಾಥರಾದಂಥ ಅಂಗಹೀನರುಗಳಿಗೆ ಈ ತಿಂಗಳು 20 ರಿಂದ ಈ ಸಂಘದ ಖರ್ಚಿನಲ್ಲು ಅನ್ನಾಹಾರಾದಿಗಳು ಕೊಡಲು ಶುರುಮಾಡಲಾಗಿದೆ.

ಟಿ. ಎ. ಕುಪ್ಪಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜಂಟ್,
52—11 ಮಡಿಕೇರಿ.

Printed & published by P. I. Belliappa, at 'Kodagu" Press, Mercara for 'Kodagu" Ltd,

If not called for please return to "KODAGU" OFFICE MERCARA.

ಕೊಡಗು.

[illegible] ||

ಸಂಪಾದಕ—ಪಂಡಿತ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೬] ಮಡಿಕೇರಿ, ೧೯೨೭ನೇ ಇಸವಿ ಮೇ ತಾರೀಖು ೬ ನೇ ಶುಕ್ರವಾರ [ಸಂಚಿಕೆ ೪೬

"THE SUNSHINE OF THE NIGHT"

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52—14 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423, TRIPLICANE, MADRAS

Catalogue Free to Boanfide Enquirers

Rose Water Sprinkler.



Nose-screws. Claver Drops. Thodu. Brooch

Chased Silver Mirror.

Manufacture of HIGH CLASS GEMSET JEWELS a speciality.

The special features of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices

GOLD or SILVERWARE of all descriptions neatly executed

52—34



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION. & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—10

ರಕ್ತರ

[illegible]

[illegible]

ಸಾರ [illegible]

[illegible]

ರೂ. ೧—೦—೦, [illegible]

[illegible]

12—5

ಕೊಡಗು.

ಸನ್ ೧೯೨೮ನೇ ಇಸವಿ ಮೇ
ತಾ. ೪ನೇ ಶುಕ್ರವಾರ.

ಗ್ರಾಮ ಸಂಘಟನೆ.

ದೇಶದ ಉನ್ನತಿಗೆ ಸಹಾಯವಾಗುವ ಯಾವ ಕಾರ್ಯಗಳೇ ಆಗಲಿ ಗ್ರಾಮವಾಸಿಗಳ ಬೆಂಬಲವಿಲ್ಲದೆ ಸಫಲವಾಗಲಾರದು. ಹಿಂದುಸ್ಥಾನದಲ್ಲಿ ಕೃಷಿ ಕಸಬಿನಿಂದ ಜೀವಿಸುವವರ ಸಂಖ್ಯೆಯೇ ಹೆಚ್ಚಾಗಿರುವದರಿಂದ ಗ್ರಾಮಗಳಲ್ಲಿ ವಾಸ ಮಾಡುವವರ ಸಂಖ್ಯೆಯೇ ಹೆಚ್ಚಾದಂತಾಯಿತು. ಗ್ರಾಮವಾಸಿಗಳು ತಮ್ಮ ಕರ್ತವ್ಯವೇನು ಎಂತ ತಿಳಿಯುವ ವರೆಗೆ ಸ್ವರಾಜ್ಯ ಸಂಪಾದನೆಯೇ ಆಗಲಿ ಆರ್ಥಿಕ ಬೆಳವಣಿಗೆಯೇ ಆಗಲಿ ಸಾಧ್ಯವಿಲ್ಲ. ಪೂರ್ವ ಕಾಲದಲ್ಲಿ ಗ್ರಾಮಗಳಲ್ಲಿ ಇದ್ದ ಒಗ್ಗಟ್ಟು, ರಚನಾತ್ಮಕ ವೆಲ್ಲಾ ಈಚೆಗೆ ನಾಶವಾಗಿರುವದು ನಮ್ಮ ದೇಶದ ಗ್ರಾಮಗಳಲ್ಲಿ ಪ್ರತ್ಯಕ್ಷವಾಗಿಯೇ ಇದೆ. ಹೀಗಾಗಲು ಗ್ರಾಮವಾಸಿಗಳು ಕಾರಣರಲ್ಲ. ಈಗಿನ ನಾಗರೀಕತೆಯ 'ತನಗೆ ತಾನು' ಎಂಬ ಸ್ವಾರ್ಥತೆಯ ಭಾವನೆಯು ಗ್ರಾಮಾಂತರಗಳಲ್ಲಿ ನುಗ್ಗಿರುವದೂ, ಈಗಿನ ಕಾಲದಲ್ಲಿ ಜೀವನೋಪಾಯ ಸಾಗಿಸಿಕೊಳ್ಳುವ ಕಷ್ಟವೂ ಧರ್ಮಬುದ್ಧಿ ಹುಟ್ಟುವ ವಿದ್ಯೆ ಕೂಡದಿರುವದೂ ಗ್ರಾಮಜೀವನದ ಬಗೆ ತಪ್ಪಲು ಸಂಭವಿಸಿರುವ ಕಾರಣಗಳಲ್ಲಿ ಕೆಲವು ಆಗಿವೆ. ಪಾಶ್ಚಿಮಾತ್ಯ ದೇಶಗಳಲ್ಲಿಯೂ ವ್ಯಕ್ತಿಯ ಅನುಕೂಲಗಳನ್ನು ಮಾತ್ರ ಸಾಧಿಸುವದೇ ಮುಖ್ಯ ಗುಣವಾಗಿದ್ದರೂ ಸ್ವದೇಶಭಕ್ತಿಯ ಬಲದಿಂದ ದೇಶವೆಲ್ಲಾ ಒಗ್ಗಟ್ಟಾಗಿ ಕೆಲಸ ಮಾಡುತ್ತಿರುವದರಿಂದ ಅಧಿಕ ಸಂಪತ್ತನ್ನು ಬೆಳಸುತ್ತಲೇ ಹೋಗುತ್ತಿದ್ದಾರೆ. ದೇಶಭಕ್ತಿಯ ಭಾವನೆಯು ಈ ದೇಶದಲ್ಲಿ ಹೆಚ್ಚಾಗಿ ಎಷ್ಟೆಂತ ಕಂಡು ಬರುವದಿಲ್ಲ. ಆದರೆ ಹಿಂದೂ ಧರ್ಮದ ಸಂಸ್ಕೃತಿಯ ಬಲದಿಂದ ಗ್ರಾಮಗಳಲ್ಲಿ ಜನರು ಒಂದು ಕುಟುಂಬದವರಂತೆ ಜೀವಿಸುತ್ತಿದ್ದರು. ಈಗ ಧರ್ಮದ ಕಟ್ಟು ಬಿಚ್ಚಿ ಹೋಗಿದೆ. ದೇಶಭಕ್ತಿ ಎಂಬುದು ವಿಶೇಷವಾಗಿ ಬೆಳೆದಿರುವದಿಲ್ಲ. ಅದನ್ನು ಬೆಳೆಯಲಿಕ್ಕೆ ಸಂದರ್ಭವೂ ಒದಗುವದೂ ಇಲ್ಲ.

ಗ್ರಾಮವಾಸಿಗಳ ಸಂಘಟನೆಯು ಸರಕಾರದಿಂದ ಆದೀತೆಂತ ಯೋಚಿಸಿ ಕೂರಲು ಸಾಧ್ಯವೇ ಇಲ್ಲ. ಗ್ರಾಮವಾಸಿಗಳ ಸಹಾಯಕ್ಕಾಗಿ ಸಹಕಾರಿ ಸಂಘಗಳು ಸ್ಥಾಪಿತವಾಗಿರುವದೇನೋ ನಿಜ. ಸಹಕಾರಿ ತತ್ವಗಳು ಒಳ್ಳೇದಾಗಿದ್ದರೂ ಆ ತತ್ವಗಳೆಲ್ಲಾ ಆಚರಣೆಗೆ ಬಂದಿರುವದಿಲ್ಲ. ಸಹಕಾರಿ ಸಂಘಗಳೆಂದರೆ ಹಣದ ಲೇವಾದೇವಿ ನಡಿಸುವ ಸಂಸ್ಥೆಗಳಾಗಿವೆಯೇ ಹೊರತು ಬೇರೆ ನೀತಿಗಳನ್ನು ಸ್ಥಿರಗೊಳಿಸುವ ಸಂಸ್ಥೆಗಳು ಇನ್ನೂ ಆಗಿರುವದಿಲ್ಲ. ದೇಶಭಕ್ತಿಯನ್ನು ಬೋಧಿಸುವ ವಿನಹ ನೀತಿಗಳಿಗೆ ವಿಶೇಷ ಎಡೆ ಇಲ್ಲ. ಸಹಕಾರಿ ಸಂಘಗಳು ಸರಕಾರದ ಪ್ರೋತ್ಸಾಹದಿಂದ ಸ್ಥಾಪಿತವಾಗಿರುವ ಸಂಸ್ಥೆಗಳಾಗಿರುವದರಿಂದ ದೇಶಭಕ್ತಿಯನ್ನು ಬೋಧಿಸಲು ಆ ಸಂಸ್ಥೆಗಳಲ್ಲಿ ಎಡೆ ಇಲ್ಲ.

ಗ್ರಾಮ ಪಂಚಾಯಿತಿಗಳನ್ನು ಏರ್ಪಡಿಸಿ ಕೊಡಬೇಕೆಂತ ದೇಶದವರು ಅನೇಕ ವರ್ಷಗಳಿಂದ ಕೇಳುತ್ತಾ ಬಂದರೂ ಬರೇ ಆಡಳಿತದ ಪಂಚಾಯಿತಿಗಳನ್ನು ಏರ್ಪಡಿಸುವ ಖಾನೂನು ಮಾತ್ರ ಮಾಡಿದರು. ಅದು ಮಾಡಿ ೩½ ವರ್ಷವಾದರೂ ಅಂಥಾ ಪಂಚಾಯಿತಿಗಳನ್ನು ಸ್ಥಾಪಿಸಲು ಏರ್ಪಾಡೇನೂ ಇನ್ನೂ ಮಾಡಿರುವದಿಲ್ಲ. ಆದ್ದರಿಂದ ಗ್ರಾಮದ ಅಭಿವೃದ್ಧಿಗೆ ದೇಶದ ಮುಖಂಡರೇ ಗಮನ ಕೊಡಬೇಕಾಗಿದೆ.

ಜಮೀನ್‌ದಾರರ ಸಂಘವು ಸರಕಾರಕ್ಕೆ ಅರ್ಜಿ ಬರೆದು ಕೊಳ್ಳುತ್ತಿರುವದರ ಜೊತೆಗೆ ಕೆಲವು ಗ್ರಾಮಗಳನ್ನಾದರೂ ಮಾದರಿ ಗ್ರಾಮಗಳನ್ನಾಗಿ ಮಾಡಲು ಪ್ರಯತ್ನಿಸಬೇಕು. ದೇಶದ ಉನ್ನತಿಗಾಗಿ ಕೆಲಸ ಮಾಡ ಬಯಸುವ ಯಾವ ಸಂಸ್ಥೆಗಾದರೂ ಯಾವ ವ್ಯಕ್ತಿಗಾದರೂ ನಮ್ಮ ಕೋರಿಕೆ ಇದೇ ಆಗಿದೆ. ನಮ್ಮ ದೇಶದ ಕೆಲವು ಪ್ರಾಂತ್ಯಗಳಲ್ಲಿ ಜನರಿಗೆ ತಮ್ಮ ಸ್ವಂತ ಹೊಟ್ಟೆಪಾಡಿನ ಕೆಲಸವಲ್ಲದೆ ಒಗ್ಗಟ್ಟಿನ ಕೆಲಸ ಹೊರತಕ್ಕದ್ದಿದೆ ಎಂತ ಗೊತ್ತೇ ಇಲ್ಲ. ಕೆಲವು ಕಡೆಗಳಲ್ಲಿ ಜನರಲ್ಲಿ ಈ ತಿಳುವಳಿಕೆ ಇದ್ದರೂ ಆ ತಿಳುವಳಿಕೆಯನ್ನು ಉಪಯೋಗಿಸುವವರೇ ಇಲ್ಲ. ಆದ್ದರಿಂದ ಕೆಲವು ಗ್ರಾಮಗಳಲ್ಲಾದರೂ ದೇಶಸೇವೆಯ ಬುದ್ಧಿ ಹುಟ್ಟುವಂತೆ ಮಾಡಬೇಕಾದದ್ದು ಅತಿ ಅವಶ್ಯವಿದೆ.

ಗ್ರಾಮವಾಸಿಗಳ ಜೊತೆಯಲ್ಲಿ ಅವರಂತೆಯೇ ಜೀವನ ನಡೆಸಿಕೊಂಡು ಅವರ ಸುಖದುಃಖಗಳಲ್ಲಿ ಭಾಗಿಗಳಾಗಿರುವಂಥವರಿಂದ ಮಾತ್ರ ಗ್ರಾಮದ ಸುಧಾರಣೆಯು ಸಾಧ್ಯವಿದೆ. ಯುಕ್ತ ದೇಶಭಕ್ತಿಯ ಮಹತ್ವವನ್ನು ತಿಳಿಯಬೇಕಾದರೆ ಕೆಲವು ಮಟ್ಟಿಗೆ ವಿದ್ಯೆ ಬೇಕು. ಅಂಥಾ ವಿದ್ಯೆ ದೊರತವರು ಪಟ್ಟಣವಾಸಿಗಳಾಗಿ ತಮ್ಮ ಹೊಟ್ಟೆಪಾಡು ಹುಡುಕುವದರಲ್ಲೇ ಮಗ್ನರಾಗುತ್ತಾರೆ. ಆದ್ದರಿಂದ ಮುಂದಾಳುಗಳು ಕೆಲವು ಗ್ರಾಮವಾಸಿಗಳಿಗೇನೇ ದೇಶಭಕ್ತಿಯ ಪುರುಷನ್ನು ತುಂಬಿ ಗ್ರಾಮಗಳಲ್ಲಿ ಕೆಲಸಮಾಡಲು ಬಿಡಬೇಕು. ಅಂಥಾ ಕೆಲಸಗಾರರು ಸಿಕ್ಕದಿದ್ದರೆ ಮುಂದಾಳುತನವನ್ನು ಬಿಟ್ಟು ಗ್ರಾಮದ ಕೆಲಸಗಾರರಾಗುವದು ಉತ್ತಮ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ನೇ ಭಾಗದಲ್ಲಿ ೩೪ನೇ ಪ್ರಕರಣ

ಆಧ್ಯಾತ್ಮಿಕ ಶಿಕ್ಷಣ

ಹುಡುಗರ ಶಾರೀರಕ, ಮಾನಸಿಕ ಶಿಕ್ಷಣಗಳಿಗಿಂತಲೂ ಅವರ ಆಧ್ಯಾತ್ಮಿಕ ಶಿಕ್ಷಣವು ಕಷ್ಟತರವಾದ ವಿಷಯವಾಗಿದ್ದಿತು. ಅವರ ಆತ್ಮವನ್ನು ವಿಕಾಸಗೊಳಿಸುವುದಕ್ಕೆ ನಾನು ಧರ್ಮ ಗ್ರಂಥಗಳ ಮೇಲೆ ಹೆಚ್ಚು ಭಾರವನ್ನು ಹಾಕಲಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಧರ್ಮದ ಮೂಲ ತತ್ವಗಳು ತಿಳಿದಿರಬೇಕೆಂದೂ, ತನ್ನ ಧರ್ಮ ಗ್ರಂಥಗಳ ಸಾಮಾನ್ಯ ಜ್ಞಾನವಿರಬೇಕೆಂದೂ ನಾನು ತಿಳಿದಿದ್ದುದೇನೋ ನಿಜ. ಆದುದರಿಂದ ನನ್ನ ಕೈಲಾದ ಮಟ್ಟಿಗೆ ಅವರಿಗೆ ಅಂತಹ ತಿಳುವಳಿಕೆಯುಂಟಾಗಲು ಅನುಕೂಲ ಪಡಿಸಿದೆನು. ಆದರೆ ಇದು ಬುದ್ಧಿಯ ಶಿಕ್ಷಣದ ಒಂದು ಭಾಗವೆಂದೇ ನನ್ನ ಎಣಿಕೆಯಾಗಿದ್ದಿತು. ಟಾಲ್‌ಸ್ಟಾಯ್ ಫಾರ್ಮ್‌ನ ಬಾಲಕರ ಶಿಕ್ಷಣವನ್ನು ಕೈಗೊಳ್ಳುವುದಕ್ಕೆ ಬಹು ಕಾಲ ಮುಂಚೆಯೇ ನನಗೆ ಆಧ್ಯಾತ್ಮಿಕ ಶಿಕ್ಷಣವೇ ಬೇರೆಯ ವಸ್ತುವೆಂಬ ಮನವರಿಕೆಯುಂಟಾಗಿದ್ದಿತು. ಆತ್ಮವನ್ನು ವಿಕಾಸಗೊಳಿಸುವುದೆಂದರೆ ಸ್ವಶೀಲನಿರ್ಮಾಣ, ದೇವರ ಅರಿವನ್ನು ಸಂಪಾದಿಸುವುದು, ಮತ್ತು ಆತ್ಮಜ್ಞಾನವನ್ನು ಹೊಂದುವುದು. ಬಾಲಕರ ಶಿಕ್ಷಣದಲ್ಲಿ ಇದು ಮುಖ್ಯವಾದ ಭಾಗವೆಂದೂ, ಇದಿಲ್ಲದೆ ಇತರ ಶಿಕ್ಷಣವು ವ್ಯರ್ಥವೆಂದೂ, ಒಂದು ವೇಳೆ ಹಾನಿಕರವಾದರೂ ಆಗಬಹುದೆಂದೂ ನನ್ನ ಅಭಿಪ್ರಾಯವಾಗಿದ್ದಿತು.

ಆತ್ಮಜ್ಞಾನವನ್ನು ಹೊಂದುವುದು ನಾಲ್ಕನೆಯ ಆಶ್ರಮದಲ್ಲಿಯೇ ಎಂದರೆ ಸನ್ಯಾಸಾಶ್ರಮದಲ್ಲಿಯೇ ಸಾಧ್ಯವೆಂಬ ಮೂಢ ತಿಳುವಳಿಕೆಯು ನನಗೆ ಚೆನ್ನಾಗಿ ಗೊತ್ತು. ಆದರೆ ಈ ಅವ ಮೂಲ್ಯವಾದ ಅನುಭವಕ್ಕೆ ಸಿದ್ಧಪಡಿಸಿಕೊಳ್ಳುವುದಕ್ಕೆ ತಮ್ಮ ಜೀವನದ ಕಡೆಯ ಭಾಗದವರೆಗೂ ಕಾದು ತಡ ಮಾಡುತ್ತಾರೆಯೋ ಅವರು ಪಡೆಯುವುದು ಆತ್ಮಜ್ಞಾನವಲ್ಲ. ಕರುಣಾಜನಕವಾದ ಎರಡನೆಯ ಶೈಶವದಂತಿರುವ, ಭೂಮಿಗೆ ಭಾರವಾಗಿ ಬಾಳುವಂತೆ ಮಾಡುವ, ವೃದ್ಧಾಪ್ಯವನ್ನು. ಇದು ಸಾಮಾನ್ಯವಾಗಿ ತಿಳಿದ ವಿಷಯ. ನಾನು ಪಾಠ ಹೇಳಿಕೊಡುತ್ತಿದ್ದಾಗ ಕೂಡ ಎಂದರೆ ೧೯೧೧—೧೨ರಲ್ಲಿ ಒಂದು ವೇಳೆ ಆಗ ಇದನ್ನು ಈ ಮಾತುಗಳಲ್ಲಿಯೇ ವ್ಯಕ್ತಪಡಿಸುತ್ತಿರಲಿಲ್ಲವೇ ಹೊರತು ನಾನು ಇದೇ ಅಭಿಪ್ರಾಯವುಳ್ಳವನಾಗಿದ್ದೆನೆಂದು ನನಗೆ ಚೆನ್ನಾಗಿ ನೆನಪಿದೆ.

ಹಾಗಾದರೆ ಈ ಆಧ್ಯಾತ್ಮಿಕ ಶಿಕ್ಷಣವನ್ನು ಕೊಡುವುದೆಂತು? ನಾನು ಹುಡುಗರು ಸ್ತೋತ್ರಗಳನ್ನು ಗಟ್ಟಿಮಾಡಿ ಹೇಳುವಂತೆ ಮಾಡಿದೆನು. ನೀತಿ ಶಿಕ್ಷಣದ ಮೇಲಿನ ಪುಸ್ತಕಗಳಿಂದ ಅವರಿಗೆ ಓದಿದೆನು. ಆದರೆ ಇದರಿಂದ ನನಗೆ ಎಳ್ಳಷ್ಟೂ ತೃಪ್ತಿಯಾಗಲಿಲ್ಲ. ಅವರೊಡನೆ ಸಂಬಂಧವು ನಿಕಟವಾಗುತ್ತಾ ಬಂದಂತೆ ಆಧ್ಯಾತ್ಮಿಕ ಶಿಕ್ಷಣವನ್ನು ಕೊಡಲಾಗುವುದು ಪುಸ್ತಕಗಳ ಮೂಲಕವಲ್ಲವೆಂಬುದನ್ನು ನಾನು ಕಂಡೆನು. ಶಾರೀರಕ ಶಿಕ್ಷಣವನ್ನು ಶರೀರ ವ್ಯಾಯಾಮದ ಮೂಲಕವೂ, ಮಾನಸಿಕ ಶಿಕ್ಷಣವನ್ನು ಮನೋ ವ್ಯವಸಾಯದ ಮೂಲಕವೂ ಕೊಡುವಂತೆಯೇ ಆಧ್ಯಾತ್ಮಿಕ ಶಿಕ್ಷಣವು ಆಧ್ಯಾತ್ಮಿಕ ಅಭ್ಯಾಸಗಳಿಂದಲೇ ಸಾಧ್ಯ. ಈ ಕ್ರಿಯೆಗೆ ಶಿಕ್ಷಕನ ಜೀವನದರೀತಿ ಮತ್ತು ಅವನ ಶೀಲ ಆಧಾರ. ಶಿಕ್ಷಕನು ಹುಡುಗರ ಮಧ್ಯದಲ್ಲಿರಲಿ, ದೂರವಿರಲಿ, ತನ್ನ ನಡತೆಯ ಸೂಕ್ಷ್ಮಾಂಶಗಳ ವಿಷಯವಾಗಿ ಸದಾ ಎಚ್ಚರಿಕೆಯುಳ್ಳವನಾಗಿರಬೇಕು. ನೂರಾರು ಮೈಲಿ ದೂರವಿರುವ ಶಿಷ್ಯರಿಗೆ ತನ್ನ ಜೀವನದ ರೀತಿಯಿಂದ ತನ್ನ ಶಿಷ್ಯರ ಮೇಲೆ ಪರಿಣಾಮವನ್ನುಂಟುಮಾಡುವುದು ಸಾಧ್ಯ. ನಾನು ಸುಳ್ಳುಗಾರನಾಗಿದ್ದು ನನ್ನ ಹುಡುಗರಿಗೆ ಸತ್ಯವನ್ನು ಕಲಿಸುವುದು ವ್ಯರ್ಥ. ಹೇಡಿಯಾದ ಶಿಕ್ಷಕನು ತನ್ನ ಶಿಷ್ಯರನ್ನು ಎಂದೂ ಧೈರ್ಯವಂತರನ್ನಾಗಿ ಮಾಡಲಾರನು. ಇಂದ್ರಿಯ ನಿಗ್ರಹದ ಗಂಧವನ್ನರಿಯದವನು ತನ್ನ ಬಳಿಯಿರುವ ವಿದ್ಯಾರ್ಥಿಗಳಿಗೆ ಸಂಯಮದ ಬೆಲೆಯನ್ನು ಕಲಿಸುವುದು ಸಾಧ್ಯವಿಲ್ಲ. ಆದುದರಿಂದ ನಾನು ನನ್ನ ಬಳಿಯಲ್ಲಿದ್ದ ಹುಡುಗ ಹುಡುಗಿಯರಿಗೆ ಸದಾ ಆದರ್ಶಪ್ರಾಯವಾಗಿರಬೇಕೆನ್ನುವುದನ್ನು ಕಂಡೆನು. ಹೀಗೆ ನನ್ನ ಶಿಷ್ಯರು ನನ್ನ ಶಿಕ್ಷಕರಾದರು. ನನಗೋಸ್ಕರವಾಗಿಯಾದರೂ ನಾನು ಒಳ್ಳೆಯವನಾಗಿಯೂ ನೇರವಾಗಿಯೂ ಇರಬೇಕೆಂಬುವುದನ್ನು ಕಲಿತುಕೊಂಡೆ. ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿ ನಾನು ಬರುಬರುತ್ತಾ ಹೆಚ್ಚಾಗಿ ಕಟ್ಟುಗೂ, ಸಂಯಮಕ್ಕೂ ನನ್ನನ್ನು ಅಧೀನನನ್ನಾಗಿ ಮಾಡಿಕೊಂಡದ್ದು ಬಹು ಮಟ್ಟಿಗೆ ಈ ನನ್ನ ಶಿಷ್ಯರಿಂದಲೇ ಎಂದು ಹೇಳಬಹುದು.

ಇವರಲ್ಲಿ ಒಬ್ಬನು ಅಸಭ್ಯನಾಗಿಯೂ, ಅಂಕೆಯಿಲ್ಲದವನಾಗಿಯೂ, ಜಗಳಗಂಟನಾಗಿಯೂ ಇದ್ದನು. ಒಂದು ದಿನ ಇವನು ಅತ್ಯಂತವಾಗಿ ಅಂಕೆ ತಪ್ಪಿದನು. ಇವನಿಂದ ತಾಳ್ಮೆಯು ತಪ್ಪಿತು. ನಾನು ನನ್ನ ಹುಡುಗರನ್ನು ಶಿಕ್ಷಿಸುತ್ತಿರಲಿಲ್ಲ. ಆದರೆ ಈ ಸಲ ನನಗೆ ಬಹು ಸಿಟ್ಟು ಬಂದಿತು. ನಾನು ಅವನಿಗೆ ತಿಳಿಯ ಹೇಳಲು ಪ್ರಯತ್ನಪಟ್ಟೆನು. ಆದರೆ ಅವನು ಕದಲಲಿಲ್ಲ. ಅಷ್ಟೇ ಅಲ್ಲದೆ ನನ್ನನ್ನು ಮೋಸಗೊಳಿಸಲು ಕೂಡ ಯತ್ನಿಸಿದನು. ಕಡೆಗೆ ನಾನು ಹತ್ತಿರದಲ್ಲಿಯೇ ಇದ್ದ ಗೆರೆಯೆಳೆಯುವ ದಂಡುಕೋಲೊಂದನ್ನು (ರೂಲರ್) ತೆಗೆದುಕೊಂಡು ಅವನ ತೋಳಿಗೆ ಒಂದು ಏಟು ಕೊಟ್ಟೆನು. ಅವನನ್ನು ಹೊಡೆಯುವಾಗ ನಾನು ಕಂಪಿಸುತ್ತಿದ್ದೆನು. ಇದನ್ನು ಅವನು ನೋಡಿರಬೇಕು. ಇದು ಎಲ್ಲರಿಗೂ ಕೇವಲ ಹೊಸ ಅನುಭವದ ವಿಷಯವಾಗಿದ್ದಿತು. ಹುಡುಗನು ಅತ್ತು ಕ್ಷಮಾಪಣೆ ಬೇಡಿದನು. ಅವನು ಅತ್ತ ಕಾರಣವು ಏಟಿನ ನೋವಲ್ಲ—ಹದಿನೇಳು ವರ್ಷದ ದೃಢಕಾಯನಾದ ಯುವಕನಾಗಿದ್ದುದರಿಂದ ಅವನು ಇಷ್ಟ ಪಟ್ಟರೆ ನನ್ನ ಮೇಲೆ ಮುಯ್ಯಿ ತೀರಿಸಿಕೊಳ್ಳಬಹುದಾಗಿದ್ದಿತು. ಹಿಂಸೆಯ ಉಪಾಯವನ್ನು ಅವಲಂಬಿಸಬೇಕಾಗಿ ಬಂದುದರಿಂದ ನನಗುಂಟಾದ ದುಃಖವನ್ನು ಅವನು ಮನಗಂಡನು. ಈ ಘಟನೆಯಾದಮೇಲೆ ಅವನು ಇನ್ನೆಂದೂ ನನಗೆ ಅವಿಧೇಯನಾಗಿ ನಡೆಯಲಿಲ್ಲ. ಆದರೆ ಆ ಹಿಂಸೆಗಾಗಿ ನಾನು ಇಂದೂ ಪಶ್ಚಾತ್ತಾಪ ಪಡುತ್ತೇನೆ. ಆದು ನಾನು ಅವನಿಗೆ ತೋರಿಸಿದುದು ನನ್ನಲ್ಲಿರುವ ಆತ್ಮನನ್ನಲ್ಲ, ನನ್ನ ಪಾಶವ ಪ್ರವೃತ್ತಿಯನ್ನು. ಇದೇ ನನ್ನ ಶಂಕೆ.

ನಾನು ಯಾವಾಗಲೂ ದೇಹದಂಡನೆಯ ವಿರೋಧಿಯಾಗಿದ್ದೇನೆ. ನಾನು ನನ್ನ ಮಕ್ಕಳಲ್ಲಿ ಒಬ್ಬನಿಗೆ ದೇಹದಂಡನೆಯನ್ನು ಕೊಟ್ಟ ಒಂದೇ ಒಂದು ಸಂದರ್ಭವು ನನಗೆ ನೆನಪಿದೆ. ಆದುದರಿಂದ ದಂಡುಕೋಲನ್ನು ಉಪಯೋಗಿಸಿದುದು ಸರಿಯೋ, ತಪ್ಪೋ ಎಂಬುದನ್ನು ನಿರ್ಣಯಿಸಲು ನನಗೆ ಇಂದಿನವರೆಗೂ ಸಾಧ್ಯವಾಗಿಲ್ಲ. ಪ್ರಾಯಶಃ ಅದು ಅನುಚಿತವಾಗಿದ್ದಿತು. ಏಕೆಂದರೆ—ಸಿಟ್ಟೂ, ದಂಡಿಸಬೇಕೆಂಬ ಇಚ್ಛೆಯೂ ಅದಕ್ಕೆ ಕಾರಣಗಳಾಗಿದ್ದುವು. ಅದು ಕೇವಲ ನನ್ನ ದುಃಖದ ಸೂಚನೆಯಾಗಿದ್ದರೆ ಅದನ್ನು ನಾನು ಉಚಿತವೆಂದೆಣಿಸುತ್ತಿದ್ದೆನು. ಆದರೆ ಈ ಸಂದರ್ಭದಲ್ಲಿ ಉದ್ದೇಶವು ಮಿಶ್ರವಾಗಿದ್ದಿತು. ಈ ಪ್ರಸಂಗವು ನಾನು ಯೋಚಿಸುವಂತೆ ಮಾಡಿ ಹುಡುಗರನ್ನು ತಿದ್ದುವುದಕ್ಕೆ ಇದಕ್ಕಿಂತ ಉತ್ತಮವಾದ ಮಾರ್ಗವನ್ನು ಕಲಿಸಿಕೊಟ್ಟಿತು. ಹಿಂದೆ ಹೇಳಿದ ಸಂದರ್ಭದಲ್ಲಿ ಆ ಮಾರ್ಗದ ಉಪಯೋಗವು ಎಷ್ಟು ಮಟ್ಟಿಗೆ ಸಫಲವಾಗುತ್ತಿದ್ದಿತೋ ನಾನರಿಯೆ. ಆ ಯುವಕನು ಆ ಪ್ರಸಂಗವನ್ನು ಕೆಲವು ದಿವಸದಲ್ಲಿ ಮರೆತನು. ಆದರೆ ಅವನು ಎಂದೇ ಆಗಲಿ ಹೆಚ್ಚು ಮಾರ್ಪಟ್ಟಂತೆ ಕಾಣೆ. ಆದರೆ ಈ ಘಟನೆಯಿಂದ ನನಗೆ ವಿದ್ಯಾರ್ಥಿಗಳನ್ನು ಕುರಿತು ಉಪಾಧ್ಯಾಯರ ಕರ್ತವ್ಯವು ಮೊದಲಿಗಿಂತ ಚೆನ್ನಾಗಿ ತಿಳಿಯಿತು. ಇದಾದ ಮೇಲೆ ಹುಡುಗರು ಎಷ್ಟೋ ಸಲ ತಪ್ಪು ಮಾಡಿದರು. ಆದರೆ ನಾನು ದಂಡನೀತಿಯನ್ನೆಂದೂ ಅನುಸರಿಸಲಿಲ್ಲ. ಹೀಗೆ ನನ್ನ ಕೈಕೆಳಗಿದ್ದ ಬಾಲಕರು, ಬಾಲಿಕೆಯರಿಗೆ ಆಧ್ಯಾತ್ಮಿಕ ಶಿಕ್ಷಣವನ್ನು ಕೊಡುವ ಪ್ರಯತ್ನದಲ್ಲಿ ನಾನು ಆತ್ಮಬಲವನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳುತ್ತಾ ಬಂದೆನು.

ಶ್ರೀ ಶಾರದಾಶ್ರಮ ಪೊನ್ನಂಪೇಟೆ

(ಒಬ್ಬ ಬಾತ್ಮೀದಾರರಿಂದ)

ಈ ಆಶ್ರಮದಲ್ಲಿ ಏಪ್ರಿಲ್ ತಾ. 28ನೇ ಶನಿವಾರ ಭಗವಾನ್ ರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವವು ವಿಜೃಂಭಣೆಯಿಂದ ನಡೆಯಿತು. ಸುಮಾರು 1500 ಜನರು ಬಂದಿದ್ದರು. ಹೊರ ಪ್ರಾಂತ್ಯಗಳಿಂದ ಡಾಕ್ಟರ್ ಕೃಷ್ಣಯ್ಯಂಗಾರ್, ಶ್ರೀಮಾನ್ ವೆಂಕಟರಾಮಯ್ಯ, ಶ್ರೀಮಾನ್ ಕ[illegible]ಸ್ವಾರಿ, ಶ್ರೀಮಾನ್ ಶೇಷಗಿರಿರಾವ್, ಶ್ರೀಮಾನ್ ಕುಪ್ಪಿರಾಮ ಮೆನನ್ ಮತ್ತು ರಾವ್ ಸಾಹೇಬ್ ಚನ್ನಯ್ಯ ಇವರೇ ಮೊದಲಾದವರು ದಯಮಾಡಿಸಿದ್ದರು. ಬೆಳಗ್ಗೆ ಭಜನೆಯೊಂದಿಗೆ ಪಟ್ಟಣದ ಸುತ್ತ ರಾಮಕೃಷ್ಣ ಪರಮಹಂಸರ ಮತ್ತು ವಿವೇಕಾನಂದರ ಚಿತ್ರಪಟಗಳ ಮೆರವಣಿಗೆಯಾಯಿತು. ಮಧ್ಯಾಹ್ನದಲ್ಲಿ ನೆರೆದಿದ್ದ ಜನಕ್ಕೆ ಭೋಜನವಾಯಿತು. ಅಂದು ಸುಮಾರು ಸಾಯಂಕಾಲ 3 ಗಂಟೆಗೆ ವ್ಯಾಖ್ಯಾನಗಳು ನಡೆದವು. ಡಾಕ್ಟರ್ ಕೃಷ್ಣಯ್ಯಂಗಾರರು ಸ್ವಾಮಿ ವಿವೇಕಾನಂದರ ಜೀವ ಚರಿತ್ರೆಯ ಮೇಲೂ, ಶ್ರೀ ವೆಂಕಟರಾಮಯ್ಯ ಮೈಸೂರಿನ ಕನ್ನಡ ಟ್ರಾನ್ಸ್‌ಲೇಟರ್ ಇವರು ಭಗವಾನ್ ರಾಮಕೃಷ್ಣ ಪರಮಹಂಸರ ಜೀವ ಚರಿತ್ರೆ ಮೇಲೂ, ರಾವ್ ಸಾಹೇಬ್ ಚನ್ನಯ್ಯನವರು ರಾಮಕೃಷ್ಣ ಸಂಸ್ಥೆಯು ಮಾಡುತ್ತಿರುವ ಕಾರ್ಯದ ಮೇಲೂ ಭಾಷಣಮಾಡಿದರು. ಅನಂತರ ಮಲಬಾರಿನ ವಕೀಲರಾದ ಶ್ರೀ ಕುಪ್ಪಿರಾಮನ್ ಮೆನನ್‌ರವರು ರಾಮಕೃಷ್ಣ ಸಂಸ್ಥೆಯು ಮಲಬಾರು, ಕೊಚ್ಚಿ, ತಿರುವಾಂಕೂರು ಪ್ರಾಂತ್ಯಗಳಲ್ಲಿ ಮಾಡುತ್ತಿರುವ ಸೇವಾಕಾರ್ಯದ ಸಂಬಂಧವಾಗಿ ಭಾಷಣವನ್ನಿತ್ತರು. ಅಂತ್ಯದಲ್ಲಿ ಸ್ವಾಮಿ ನಿರ್ಮಲಾನಂದಜೆಯವರು ಸಭಿಕರಿಗೆ ಆಶೀರ್ವಾದ ವಚನವನ್ನಿತ್ತು ಆ ದಿನದ ಕಾರ್ಯಕ್ರಮವನ್ನು ಪೂರ್ಣಗೊಳಿಸಿದರು. ರಾತ್ರಿಯಲ್ಲಿ ಶ್ರೀ ರಾಮಕೃಷ್ಣ ಶಾಸ್ತ್ರಿಗಳು "ಸೂರದಾಸ" ನ ಮೇಲೆ ಹರಿಕಥಾ ಕಾಲಕ್ಷೇಪವನ್ನು ಧರ್ಮಾರ್ಥವಾಗಿ ನಡಿಸಿದರು. ಹರಿಕಥೆಗೂ ಬಹಳ ಮಂದಿ ಸೇರಿದ್ದರು.

ಈ ದಿನದ ಉತ್ಸವವು ನಿರ್ವಿಘ್ನವಾಗಿ ನಡೆಯಿತು. ಆ ಮಾತ್ರಕಂಗೆ ಎಲ್ಲಾ ಏರ್ಪಾಡುಗಳು ಮಾಡಲಾಗಿದ್ದುವು. ಈ ಸಮಾರಂಭದಲ್ಲಿ ಮೈಸೂರಿನ ಎಳೇ ವಯಸ್ಸಿನ ಒಬ್ಬ ಕುರುಡ ಹುಡುಗನು ಸೊಗಸಾಗಿ ಸಂಗೀತ ನಡಿಸಿದ್ದೊಂದು ವಿಶೇಷವಾದ ಸಂಗತಿ.

ಮೈಸೂರಿನ ಸ್ವಾಮಿ ವಿವೇಕಾನಂದ ಲೋವರ್ಸ್ ಎಂಬ ಹವುಗಾರರು ಜಯಂತ್ಯುತ್ಸವಕ್ಕೆ ಬಂದು, ತಮ್ಮ ಕೈಯಿಂದ ಸೇವೆಯನ್ನು ಮಾಡಿ, ಕೊಡಗಿನ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿರುವರು. ಇವರು ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ ತಮ್ಮ ನಾಟಕಗಳನ್ನು ಪ್ರದರ್ಶಿಸಿ, ಬಂದ ಉತ್ಪತ್ತಿಯನ್ನು ಪೊನ್ನಂಪೇಟೆ ಆಶ್ರಮದ ಗ್ರಾಮಾಭಿವೃದ್ಧಿ ಫಂಡಿಗೆ ದಾನ ಮಾಡಿದರು. ಇದಕ್ಕಾಗಿ ನಾವು ಇವರನ್ನು ಎಷ್ಟು ಹೊಗಳಿದರೂ ಸಾಲದು. ಇವರು ಬಹುದೂರದಿಂದ ಬಂದು ಅನೇಕ ತೊಂದರೆಗಳಿಗೆ ಗುರಿಯಾಗಿ ಲೋಕಸೇವಾ ಕಾರ್ಯವನ್ನು ನಡೆಸಿದ್ದಕ್ಕಾಗಿ ನಾವೆಲ್ಲರೂ ಇವರಿಗೆ ತುಂಬ ಉಪಕೃತರಾಗಿದ್ದೇವೆ.

ದಕ್ಷಿಣ ಹಿಂದುಸ್ಥಾನದ ದೇವಾಲಯಗಳ ಅಚ್ಚರಿಗಳು.

(ಹೊಸದಾಗಿ ಕಲ್ಕತ್ತಾ ಪಟ್ಟಣದಲ್ಲಿ ಸ್ಥಾಪಿತವಾಗಿರುವ 'ಕಾಸ್ಮಾಪಾಲಿಟನ್' ಎಂಬ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾದ ಡಾ. ಅರ್ಥರ್‌ರಾಯ್‌ರವರ ಲೇಖನದ ಅನುವಾದ)

೧. ಸಾವಿರದೊಂದು ಊಟದೆಲೆಗಳು.

ವೈಕಂ ದೇವಸ್ಥಾನದ ಸಮಾರಾಧನೆಯ ದಿವಸ ಒಂದೇ ಒಂದು ಸಾವಿರ ಎಲೆಗಳನ್ನು ಹಾಕುತ್ತಾರೆ. ಬಾಗಿಲಿನಲ್ಲಿ ಪೋಲೀಸ್ ಅಧಿಕಾರಿಗಳು ನಿಂತು ಸಾವಿರ ಮಂದಿ ಬ್ರಾಹ್ಮಣರನ್ನು ಮಾತ್ರ ಒಳಕ್ಕೆ ಬಿಡುತ್ತಾರೆ. ಎಲೆಗಳಲ್ಲಿ ಬ್ರಾಹ್ಮಣ[illegible]ವಿದ್ದ ನಡೆಯದಂತೆ ಪೋಲೀಸ್ ಅಧಿಕಾರಿಗಳು ಎಚ್ಚರವಿರುವರು. ಎಲೆ[illegible]ತ್ತಾರೆ. ಆದರೇನು? ಎಲ್ಲರಿಗೂ ಊಟವಾಗುವದು. ಎಲೆ ಎತ್ತುವ ವೇಳೆ ಬರುವದು. ಎಲೆಗಳನ್ನೆಣಿಕೆಯಾಗುವುದ[illegible] ಒಂದು ಊಟದೆಲೆ ಮಾತ್ರ ಹೆಚ್ಚಾಗಿರುವದು. ಅಂದರೆ ಸಾವಿರ ಹೋಗಿ ಸಾವಿರದೊಂದು. ನಾಸ್ತಿಕರೂ, ಪೋಲೀಸ್ ಸುಪರಿಂಟೆಂಡೆಂಟರುಗಳೂ, ವಿಜ್ಞಾನಶಾಸ್ತ್ರ ಪಂಡಿತರುಗಳೂ ಈ ಗುಟ್ಟನ್ನು ಒಡೆಯಲು ಪ್ರಯತ್ನಿಸಿ, ಪ್ರಯತ್ನಿಸಿ ನಿಷ್ಫಲರಾದರು. [illegible] ದಿನವನ್ನು [illegible] ಸಾಕ್ಷಾತ್ ವೈಕ್ಕಪ್ಪ (ಶಿವ [illegible] ದೇವರು) ಒಂದು ಊಟ ಮಾಡಿ ಹೋಗುತ್ತಾನೆಂದು ಹೇಳುತ್ತಾರೆ.

೨. ಅನ್ಯಾಯ ಬೇಡ.

ಸಿಸಗರ್ಧ—ಸಸಗರ್ಧ.

ವಿಜಯನಗರದ ಬಳಿ ಇರುವ ಮಂಗಳಗಿರಿಯಲ್ಲಿ ಅದ್ಭುತವಾದ ನರಸಿಂಹ ದೇವರ ಶಿಲಾಮೂರ್ತಿಯೊಂದುಂಟು. ಅದರ ಬಾಯಿ ವಿಶಾಲವಾಗಿ ತೆರೆದಿದೆ. ನಿವೇದನವಾಗಿ ಯಾರು ಬೇಕಾದರೂ ಬಾಯೊಳಗೆ ಏನನ್ನು ಬೇಕಾದರೂ ಹಾಕಬಹುದು. ನಿವೇದನ ಮಾಗಿದ ಮೇಲೆ ಹಾಕಿದ ಪದಾರ್ಥದ ಅರ್ಧ ಸರಿಯಾಗಿ ಹೊರಗೆ ಬರುತ್ತದೆ. ಈ ಅಚ್ಚರಿಯನ್ನು ಒಬ್ಬರು ನಾನಾ ರೀತಿಯಿಂದ ಪರೀಕ್ಷಿಸಿದ್ದಾರೆ. ಒಮ್ಮೆ ಸಾ[illegible] ಪದ್ಧತಿಯಿಂದ ಮುಗ್ಗರಾಗಿದ್ದೊಬ್ಬ ಆ[illegible] ಫರ್ಸ್ಟ್ ಪಂಡಿತನು ಜಾವರ್ (ಕಾಕಾಂಬಿ) ಹಾಕಿದ್ದ ತಗಡಿನ ಡಬ್ಬಿ ಒಂದನ್ನು ದೇವರ ಬಾಯಿಗೆ ಹಾಕಿದನು. ನಿಷ್ಪಕ್ಷಪಾತಿ ನರಸಿಂಹ! ಅದನ್ನು ಅರ್ಧ ಸರಿಯಾಗಿ ಗರಿ ಹಾಕಿ ಕಯ್ಯಂತೆ ಸ್ವೀಕರಿಸಿದನು. ಉಳಿದರ್ಧವನ್ನು ಭಕ್ತನಿಗೆ ಹಿಂತಿರುಗಿ ಕಳುಹಿಸಿದನು. ಮತ್ತೊಮ್ಮೆ ತುಂಟತನದಿಂದೊಬ್ಬ ಪೃಥ್ವಿ ಅಧಿಕಾರಿಯು (ಜಕ ಬಳಿಯುವನು) ಮೂರ್ತಿಯ ಬಾಯೊಳಗೆ ಕೈಯಿಟ್ಟನು. ಅವನಿಗೇ ಭದ್ರವಾಗಿ ನಿಂತು ಬಳಿಯುವನ ಅಂಗಾಂಗಗಳಿಂದ ಬೆವರು ಹರಿಯಲಾರಂಭಿಸಿತು. ಆ ವೇಳೆಗೆ ಸಮಯೋಚಿತವಾಗಿ ಬ್ರಾಹ್ಮಣ ಬಂದ. ದೇವರಿಗೆ ಪೂಜೆ ಪುರಸ್ಕಾರಗಳ ಪ ಮೇಲೆ ಬಳಿಯುವನು ಬಾರಿ ಬಾರಿಗೆ ಬೇಡಿದ ಮೇಲೆ ಕೊಟ್ಟ ಕೈಗೆ ಸ್ವತಂತ್ರ. ನಮ್ಮ ನರಸಿಂಹ! ಕೈಲಾಸ ಕೀಳಲಿಕ್ಕೆ ಹೋದ ರಾವಣಾಸುರನ ತಮ್ಮನೆಂದು ಕಾಣುತ್ತದೆ ಈ ಬಳಿಯ ಕೈಲ್ಲಿಯುಸುರ.

ಇದರ ಪ್ರಬಲವಾದ ಸಮಸ್ಯೆಯೆಂದರೆ ನರಸಿಂಹನು ನುಂಗಿದ ಪದಾರ್ಥಗಳೆಲ್ಲಿ ಹೋಗಿ ಸೇರುತ್ತವೆ? ದೇವರ ಮೂರ್ತಿಯ ಕೆಳಗೆ ಹಳ್ಳವಿದ್ದಲ್ಲಿ ಅದು ಮುಚ್ಚಿ ನರಸಿಂಹನ ಮೂಗಿನ ವರೆಗ ತಿಂದ ಪದಾರ್ಥಗಳಿಂದಲೇ ಬರುತ್ತಿದ್ದುವು. ಯೋಚನೆ ಮಾಡಿ ಬಗೆ ಹರಿದ ಮೇಲೆ ಮಂಗಳಗಿರಿಗೆ ಹೋಗಿ ಪ್ರಯೋಗ ನಡೆಯಿಸಿ.

೩. ಒಂದು ಪೆಟ್ಟಿಗೆ ನಮಸ್ಕಾರು ಕೊಲೆಗಳು.

ಪೂನಾಬಳಿಯ ಒಳಿನೊಂದು ಕಾಳಿಕಾಂಬೆಯ ದೇವಾಲಯವಿದೆ. ತಾಯಿಯು ಏಳು ಅಡಿ ಇದ್ದಾಳೆ. ಹತ್ತು ತಲೆಗಳು, ಒಂದು ದೊಡ್ಡ ತಲೆ, ಅತ್ತಿತ್ತ ಐದು ಮತ್ತು ನಾಲ್ಕು ಸಣ್ಣ ತಲೆಗಳು, ಹದಿನಾರು ಹಸ್ತಗಳು. ದೇವಾಲಯದ ಬಾಗಿಲವು ವರ್ಷಕ್ಕೊಂದು ದಿನ ಉಳಿದು ಮಿಕ್ಕ ೩೬೪ ದಿವಸಗಳು ಮುಚ್ಚಲ್ಪಟ್ಟಿರುತ್ತದೆ. ಆ ದಿನ ನಮಸ್ಕಾರು ಎಮ್ಮೆ ಕೋಣಗಳು, ಮೇಕೆಗಳು, ಕೋಳಿಗಳು ಎಲ್ಲವನ್ನೂ ದೇವಾಲಯದ ಬಾಗಿಲಿದುರಿಗೆ ಒಂದರ ಹಿಂದೊಂದು ನಿಲ್ಲಿಸುತ್ತಾರೆ. ಬಾಗಿಲಿನ ಉಂಗುರಗಳಿಗೆ ಹಗ್ಗವನ್ನು ಕಟ್ಟಿ ಜನರೆತ್ತಿತ್ತ ಎಳೆದೊಡನೆಯೇ ತಾಯಿಯ ಎದುರಿಗೆ ನಿಂತ ಪ್ರಾಣಿಗಳು ಒಮ್ಮೆಲೆ ಮತ್ತು ತತ್‌ಕ್ಷಣವೇ ಮೃತಿಯನ್ನೈದುತ್ತವೆ. ಕಾಳಿ ಮೂರ್ತಿ ಎದುರಿಗೆ ಮನುಷ್ಯನು ನಿಂತರೆ ಅವನ ಪಾಡೂ ಇದೇ ಆಗುತ್ತದಂತೆ!! ಈ ಪ್ರಾಣಿಬಲಿಯಾದ ಮೇಲೆ ಕವಾಟ ಬಂದವಾಗುವದು. ಸಾಂಗೋಪಾಂಗವಾಗಿ ಹವನ ಹೋಮಾದಿಗಳು ನಡೆಯುವವು. ಈ ಸತ್ತ ಪ್ರಾಣಿಗಳನ್ನು ಯಾರೂ ತಿನ್ನುವದಿಲ್ಲ. ಗುಣಿ ತೆಗೆದು ಹೂಳುತ್ತಾರೆ. ಸಂಶೋಧಕರು ಹೋಗಿ ಅಂದು ಕಾಳಿಯ ಮೂರ್ತಿ ಎದುರಿಗೆ ನಿಂತು ತಮ್ಮ ಮತ್ತು ತಮ್ಮ ವಿಜ್ಞಾನ ಸಂಶೋಧನವನ್ನು ಪರಿಹಾರ ಮಾಡಿಕೊಳ್ಳಬಹುದು.

೪. ತಿರುಪತಿಯ ಕರ್ಪೂರ

ಮದರಾಸಿನ ಸಮೀಪದಲ್ಲಿರುವ ಜನರು ಪಶ್ಚಿಮಘಟ್ಟಗಳ ಮೇಲಿರುವ ದಂಡಪಾಣಿ ದೇವರಿಗೂ, ಇತರರು ತಿರುಪತಿಯ ವೆಂಕಟರಮಣ ದೇವರಿಗೂ ಹರಕೆಗಳನ್ನು ಹೊರುವ ವಾಡಿಕೆಯುಂಟು. ಮಕ್ಕಳು ಒದಗಲೆಂದು ಮಾತಾಪಿತೃಗಳು ಹರಕೆ ಹೊತ್ತರೆ ಅವರ ಇಷ್ಟಾರ್ಥ ನೆರವೇರುತ್ತದೆ. ಅವರೆವ ಗುರುತ ತಲೆಗೂದಲು ಮಾತ್ರ ನೆಟ್ಟಗಿರದೆ ಸೊಟ್ಟ ಸೊಟ್ಟಾಗಿರುತ್ತದೆ. ಎಷ್ಟು ಎಷ್ಟು ಎಷ್ಟೋ ಹೊಳಕಲೀ, ಎಷ್ಟು ಬಾಚಲೀ ಕೂದಲು ಬೇರೆ ನೆಟ್ಟಗಾಗ ವದಿಲ್ಲ. ಒಮ್ಮೆ ಮಗುವನ್ನು ತಿರುಪತಿಗಾಗಲೀ, ಪಳನಿಗಾಗಲೀ ಕರಕೊಂಡು ಹೋಗಿ ದೇವರಿಗೆ ಹಾಲು ಹಣ್ಣುಗಳೊಡನೆ ತಲೆಗೂದಲನ್ನರ್ಪಿಸಿದರೆಂದರೆ ಪುಷ್ಟವಾಗಿಯೂ, ಸುಂದರವಾಗಿಯೂ ಬೆಳೆಯಲಾರಂಭಿಸುತ್ತದೆ. ನೋಡಿದಿರಾ, ತಿರುಪತಿ ಕರ್ಪೂರದ ಮಹಾತ್ಮೆ ಹೇಗಿದೆ?

೫. ಅಕ್ಷಯ ಘೃತ

ತಿರಿಚೂರಿನಲ್ಲಿರುವ ಒಂದು ದೇವಸ್ಥಾನ, ತಿನವೇಲಿಯ ಕಾಯಮುತ್ತೂರು ಡಿಸ್ಟ್ರಿಕ್ಟಿನಲ್ಲಿರುವ ಒಂದು ದೇವಸ್ಥಾನ, ಈ ಎರಡು ಸ್ಥಳಗಳಲ್ಲಿ ಚಮತ್ಕಾರವೊಂದು ತಪ್ಪದೆ ನಡೆಯುತ್ತದೆ. ಒಂದು ದೇವಸ್ಥಾನದಲ್ಲಿ ದೊಡ್ಡ ಹಂಡೆಯ ತುಂಬ ತುಪ್ಪವಿದೆ. ಶತಮಾನಗಳಿಂದಲೂ, ಜನರು ತುಪ್ಪವನ್ನು ತೆಗೆದುಕೊಳ್ಳುತ್ತಿದ್ದರೂ ಅದರ ಪ್ರಮಾಣವಾಗಲೀ, ಗುಣವಾಗಲೀ ಕಡಿಮೆಯಾಗಿಲ್ಲ. ಬೇಕಾದ ಮನುಷ್ಯನು ಇಷ್ಟು ತೆಗೆದುಕೊಳ್ಳಬೇಕೆಂಬ ಮಿತಿಯುಂಟು. ಹೆಚ್ಚಿಗೆ ಕೈ ಹಾಕಿದರೆ ಅದು ಹಿಂದಿರುವುದೇ ಕಷ್ಟ. ಕೆಳಗಿನಿಂದ ಏನೋ ಒಂದು ಶಕ್ತಿಯು ಎಳೆದಂತಾಗಿ ಕೈ ಕೆಳಕ್ಕೇ ಹೋಗುತ್ತದೆ. ಇನ್ನೊಂದು ದೇವಾಲಯದಲ್ಲಿ ಒಂದು ಗುಣಿಯ ತುಂಬಾ ಅರ್ಧ ಹತ್ತ ತುಪ್ಪವಿದೆ. ಒಂದು ಸಣ್ಣ ಮಿಳ್ಳೆ (Spoon)ಯ ಪರಿಮಾಣದಷ್ಟು ಎಲ್ಲರೂ ತೆಗೆದುಕೊಳ್ಳಬಹುದು. ಹೆಚ್ಚಿಗೆ ತೆಗೆದುಕೊಂಡವನು ದೇವಸ್ಥಾನದ ಹೊಸ್ತಿಲು ದಾಟಿ ಬರುವುದೇ ಅಸಾಧ್ಯ. ತುಪ್ಪ ಕಡಿಮೆ ಯಾದ ಕ್ಷಣವೇ ಪುನಃ ಭರ್ತಿಯಾಗುತ್ತದೆ. ಈ ಎರಡು ದೇವಾಲಯಗಳ ಬಾಗಿಲನ್ನು ರಾತ್ರಿ ವೇಳೆಯಲ್ಲಿಯೂ ಮುಚ್ಚುವದಿಲ್ಲ. ಪೋಲೀಸಿನವರಿಗೆ ನಿರುದ್ಯೋಗವೆಂದರೆ ಈ ಸ್ಥಳದಲ್ಲಿಯೇ, ಬಾಣ ದೇವರು ತನ್ನ ಪದಾರ್ಥವನ್ನು ಎಷ್ಟು ಜೋಕೆಯಿಂದ ನೋಡಿಕೊಳ್ಳುವನು ನೋಡಿ!!

'ಕ. ವಿ.'

ಶ್ರೀಯುತ ಯಸ್. ಸತ್ಯಮೂರ್ತಿಯವರ ಕೊಡಗಿನ ಪ್ರವಾಸ.

ಕೊಡಗು ಜಮೀನ್‌ದಾರರ ಸಂಘದ ಈ ವರ್ಷದ ಮಹಾ ಸಭೆಯಲ್ಲಿ ಅಧ್ಯಕ್ಷ ಸ್ಥಾನವನ್ನು ವಹಿಸಲು ಬರುವ ಶ್ರೀಯುತ ಯಸ್. ಸತ್ಯಮೂರ್ತಿಯವರು ಮಡಿಕೇರಿಗೆ ತಾ: 4—5—28ನೇ ಶುಕ್ರವಾರ ಸಾಯಂಕಾಲ 6 ಘಂಟೆಗೆ ತಲುಪುತ್ತಾರೆ. ತಲುಪಿದನಂತರ ಕೂಡಲೇ ಜಮೀನ್‌ದಾರರ ಸಂಘದ ಹಾಲಿನ ಮುಂದುಗಡೆ ಮೈದಾನದಲ್ಲಿ "ಹಿಂದುಸ್ಥಾನದ ಈಗಿನ ರಾಜಕೀಯ ಸ್ಥಿತಿ" ಯ ಮೇಲೆ ಉಪನ್ಯಾಸ ಮಾಡುತ್ತಾರೆ.

ತಾ. 5—5—28ನೇ ಶನಿವಾರ 10 ಘಂಟೆಗೆ ಮಡಿಕೇರಿಯಿಂದ ಸೋಮವಾರಪೇಟೆಗೆ ಪ್ರಯಾಣ ಮಾಡಿ ಅಲ್ಲಿ ಮಧ್ಯಾಹ್ನ 1 ಘಂಟೆಗೆ ಪ್ರಾರಂಭವಾಗುವ ಸಂಘದ ಮಹಾ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿ ಆಗಲೇ ಅವರ ಅಧ್ಯಕ್ಷ ಪದವಿಯ ಭಾಷಣ ಮಾಡುವರು.

ತಾ. 6—5—28ನೇ ಆದಿತ್ಯವಾರ ಸೋಮವಾರಪೇಟೆಯಲ್ಲಿ ಸಭೆಯ ಕಾರ್ಯ ತೀರಿಸಿಕೊಂಡು ಮಡಿಕೇರಿಗೆ ಪ್ರಯಾಣ ಮಾಡುತ್ತಾರೆ. ತಾ. 7—5—28ನೇ ಸೋಮವಾರ ತಲಕಾವೇರಿ ಯಾತ್ರೆ ಮಾಡಿ ವಾಪಸು ಬರುತ್ತಾರೆ.

ತಾ. 8—5—28ನೇ ಮಂಗಳವಾರ ಬೆಳಗ್ಗೆ 8.30 ಘಂಟೆಗೆ ರಾಜಸೀಟಿನ ಬಳಿ "ಕೊಡಗಿನ ಮುಂದಿನ ರಾಜಕೀಯ ರಚನೆ" ಯ ಮೇಲೆ ಭಾಷಣ ಮಾಡುತ್ತಾರೆ. ಅದೇ ಸಾಯಂಕಾಲ ಸಂಘದ ಹಾಲ್ ಬಳಿ 6.30 ಘಂಟೆಗೆ 'ತಮ್ಮ ದೇಶಕ್ಕಾಗಿ ಜನರ ಕರ್ತವ್ಯ" ದ ಮೇಲೆ ಭಾಷಣಮಾಡುತ್ತಾರೆ.

ತಾ. 9—5—28ನೇ ಬುಧವಾರ ವೀರರಾಜಪೇಟೆಯಲ್ಲಿ ತಾಲೋಕು ಬಚೇರಿ ಬಳಿ ಮೈದಾನದಲ್ಲಿ ಮಧ್ಯಾಹ್ನ 2 ಘಂಟೆಗೆ "ಕೋಪ[illegible] ಭಾವನೆಯ ಕಡಕುಗಳ" ಮೇಲೆ ಉಪನ್ಯಾಸ ಮಾಡುತ್ತಾರೆ. ತಾ. 10—5—28ರಲ್ಲಿ ಮೈಸೂರಿಗೆ ಪ್ರಯಾಣ ಬೆಳಸುವರು.

ಜಮೀನ್‌ದಾರರ ಸಂಘ, ಪಿ. ಐ. ಬೆಳ್ಯಪ್ಪ
ತಾ. 4—5—28. ಜನರಲ್ ಸೆಕ್ರೆಟರಿ.

NOTICE.

DATED 1ST MAY 1928.

It is proposed to depute a candidate to undergo training in the Agricultural College, Coimbatore, for three years with effect from the 15th June 1928 on a stipend of Rs 25/- per mensem.

2 Application will be received up to the 25th May 1928.

Candidates must have reached the age of 18 years on or before the 1 th of may in the year when application is made and must produce the following certificates —

(a) Certificate of the physical fitness, granted by a registerd medical practitioner.
(b) Vaccination certificates showing that the candidate has been vaccinated or has had small-pox after the age of 10
(c) University certificate, if any.
(d) Testimonials of good character covering the previous two years

Applications must be in the candidate's own handwriting.

Candidates must have passed completely the Intermediate Examination in arts and science of the University of Madras and have qualified in group I or II thereof or an examination of some other University recognised as equivalent thereto.

The selection of candidates will be made by the Commissioner at 10 A. M. on the 28th May 1928. Applicants should appear in person. The selected candidates will have to appear before the Selection Board at Coimbatore, in June on the dates that will be notified. The Board will make the final selection.

The successful candidate at the final selection should be required to execute an undertaking binding himself to serve the Coorg Administration whenever required, at the close of the training course.

Any further information on the subject can be had in the Office of the undersigned

K N Sub[illegible]
Deputy [illegible]
L. R. ಸೆಕ್ರೆಟರಿ

ಸೂಚನೆ.

ಪ್ರೆಸ್ಸಿನ ಕೆಲಸಗಾರರಲ್ಲಿ ಕೆಲವರಿಗೆ ಕಾಯಿಲೆಯಾದುದರಿಂದ ಈ ವಾರ 6 ಪುಟಗಳು ಮಾತ್ರ ಪ್ರಕಟಿಸಲಾಗಿವೆ.

ಮೇನೇಜರು.

ವರ್ತಮಾನ ಸಂಗ್ರಹ.

ಒಳದೇಶ

ಟೆರಿಟೋರಿಯಲ್ ಪಟಾಲಮಿನವರ ತರಬೇತು ಮುಗಿದು ಈ ತಾ. ೯ರಲ್ಲಿ ಬಿಡುಗಡೆಯಾಗುತ್ತಾರೆ

ಕೊಡವ ಸಭೆಯ ವಾರ್ಷಿಕ ಜನರಲ್ ಮೀಟಿಂಗು ನಿನ್ನೆ ದಿನ ವೀರರಾಜಪೇಟೆಯಲ್ಲಿ ನಡೆಯಿತೆಂದು ತಿಳಿಯುತ್ತೇವೆ.

ಟೆರಿಟೋರಿಯಲ್ ಪಟಾಲಮಿನವರ ಸ್ಪೋರ್ಟ್ಸ್ ಮತ್ತು ಟೀ ಪಾರ್ಟಿಯು ಈ ದಿನ ಸಾಯಂಕಾಲ ಮ್ಯಾನ್ಸ್ ಕಾಂಪೌಂಡಿನಲ್ಲಿ ನಡೆಯುವದು.

ಶಾಲೆಗಳ ಇನ್ಸ್‌ಪೆಕ್ಟರಾದ ಮಿ. ಜೆ. ಎ. ಯೇಟ್ಸ್‌ರವರು ತಾ. ೬ರಲ್ಲಿ ಕೊಡಗಿಗೆ ಬಂದು ಈ ತಿಂಗಳ ಅಖೈರು ವರೆಗೆ ಇಲ್ಲಿಯ ಶಾಲೆಗಳ ಇನ್ಸ್‌ಪೆಕ್ಷನ್ ಮಾಡಲಿಕ್ಕಿರುವರು.

ಮಡಿಕೇರಿ ಹಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಈ ತಾ ೪ರಲ್ಲಿ ಪೊನ್ನಂಪೇಟೆ ಶಾರದಾಶ್ರಮದ ಸ್ವಾಮಿ ಶಾಂಭವಾನಂದರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ

ಮಡಿಕೇರಿಯಲ್ಲಿದ್ದ ಸರ್ಕಸ್ ಕಂಪೆನಿಯವರು ಹೊರಟುಹೋದರು. ಅವರ ಬದಲು ಒಕ್ಕಲಿಗ ನಾಟಕ ಸಭಾದವರ ಅಭಿನಯಗಳು ಬಹಳ ಜನ ಸಂದಣಿಯನ್ನು ಆಕರ್ಷಿಸುತ್ತಿದೆ.

ಪೊನ್ನಂಪೇಟೆ ಶಾರದಾಶ್ರಮದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರವರ ಜಯಂತ್ಯುತ್ಸವವನ್ನು ಕಳೆದ ತಾ. ೨೮ರಲ್ಲಿ ಸ್ವಾಮಿ ನಿರ್ಮಲಾನಂದರವರ ಅಧ್ಯಕ್ಷತೆಯಲ್ಲಿ ನಡಿಸಿದರು ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಕೆಲವು ಸಮಯ ಹಿಂದೆ ಚೆಂಬು ಗ್ರಾಮದಲ್ಲಿ ತೀಯರ ಅಪ್ಪುಣ್ ಎಂಬವನನ್ನು ಕೊಲೆ ನಡಿಸಿದನೆಂಬ ಕೇಸಿನಲ್ಲಿ ಅಪರಾಧಿ ತೀಯರ ಚೇರಿಯಂದನೆಂಬವನಿಗೆ ತಾ. 27—4—28ರಲ್ಲಿ ಸೆಷನ್ಸ್ ಕೋರ್ಟಿನಲ್ಲಿ ಮೂರು ವರ್ಷ ಕಠಿಣ ಸಜೆಯು ವಿಧಿಸಲಾಯಿತು.

ಚೀಫ್ ಫಾರೆಸ್ಟ್ ಆಫೀಸರಾದ ಮಿ. ಜಿ. ಸಿ. ರಾಬಿನ್‌ಸನ್‌ರವರು ಕಳೆದ ತಿಂಗಳು 5ರಲ್ಲಿ 4½ ತಿಂಗಳು ರಜೆಯಲ್ಲಿ ಹೋಗಿರುವುದರಿಂದ ದಕ್ಷಿಣ ಕೊಡಗಿನ ಡಿವಿಜನಲ್ ಫಾರೆಸ್ಟ್ ಆಫೀಸರಾಗಿದ್ದ ಮಿ. ಎ. ಆರ್. ಬ್ರ್ಯಾಂಡ್‌ರವರನ್ನು ತತ್ಕಾಲ ಚೀಫ್ ಫಾರೆಸ್ಟ್ ಆಫೀಸರ ಕೆಲಸವನ್ನು ನೋಡಲು ನೇಮಿಸಿರುವರು.

ತಿದ್ದುಪಡಿ.

ಕಳೆದವಾರದ ಕೆಲವು ಪ್ರತಿಗಳ ೨ನೇ ಒಳದೇಶ ವರ್ತಮಾನದಲ್ಲಿ "ಸಂಪಾಜೆಯ ಶಿನಪ್ಪಯ್ಯನವರಿಗೆ" ಎಂಬುದರ ಬದಲು ಸಂಪಾಜೆ ಕೇಶವಯ್ಯನವರಿಗೆ ಎಂದು ಕೈ ತಪ್ಪಿನಿಂದ ಪ್ರಕಟವಾದದಕ್ಕೆ ವ್ಯಸನಪಡುತ್ತೇವೆ.

ಹಿಂದೂದೇಶ.

ಮದ್ರಾಸು ಯೂನಿವರ್ಸಿಟಿಯ ವೈಸ್ ಚಾನ್ಸಲರಾಗಿ ವಿ. ಕೆ. ರಾಮುಣ್ಣಿ ಮೆನನ್‌ರವರು ನೇಮಿಸಲ್ಪಟ್ಟಿರುವರು.

ಜಮ್‌ಶೆಡ್‌ಪುರದಲ್ಲಿರುವ ಟಾಟಾ ಕಂಪೆನಿ ಕಾರ್ಖಾನೆಯ 4000 ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ರಾಜಕೋಟೆ ದರ್ಬಾರಿನವರು ಅಲ್ಲಿಯ ಸರ್ಕಾರಿ ಆಫೀಸುಗಳಲ್ಲೆಲ್ಲಾ ಆ ಪ್ರಾಂತ್ಯದಲ್ಲಿ ತಯಾರಾದ ಸಾಮಾನುಗಳನ್ನೇ ಉಪಯೋಗಿಸಬೇಕೆಂದು ಹುಕುಂ ಮಾಡಿರುವರು

ಸೈಮನ್ ಕಮಿಷನಿನ ಬಹಿಷ್ಕಾರದ ಹರತಾಳ ಸಮಯದಲ್ಲಿ ಲಾಹೋರು ಕಾಂಗ್ರೆಸ್ ಮುಂದಾಳುಗಳು ದಂಗೆ ಎಬ್ಬಿಸಿದರೆಂದು ಅವರ ಮೇಲೆ ನಡೆಸುತ್ತಿದ್ದ ಕೇಸನ್ನು ಸರ್ಕಾರದವರು ವಾಪಸು ತೆಗೆದಿರುವರು.

ಕಳೆದ ತಾ. 30ರಲ್ಲಿ ನಡೆದ ಕಾಶೀ ಡಿಸ್ಟ್ರಿಕ್ಟಿನ 5ನೇ ಕಾನ್‌ಫರೆನ್ಸಿಗೆ ಅಧ್ಯಕ್ಷರಾಗಿದ್ದ ಪಂಡಿತ ಜವಾಹರ್ ಲಾಲ್ ನೆಹರುರವರು ಸ್ವಾತಂತ್ರ್ಯವು ದೊರೆಯಬೇಕಾದರೆ ಪರದೇಶೀ ಬಟ್ಟೆಗಳಿಗೆ ಬಹಿಷ್ಕಾರ ಹಾಕಿ ಖಾದೀ ಬಟ್ಟೆಯನ್ನೇ ಉಪಯೋಗಿಸಬೇಕೆಂದು ಅಪ್ಪೀಲು ಮಾಡಿದರು.

ಬೊಂಬಾಯಿಯಲ್ಲಿ ಮಾರ್ಟಿನ್ ಕಂಪೆನಿಯವರ ಕಟ್ಟಡದ ಬೀಗಗಳನ್ನು ತೆಗೆದು ತಾ. 30—4—28ರಲ್ಲಿ ಹೇಗೋ ಒಳಗೆ ನುಗ್ಗಿ ಕಳ್ಳರು ಸುಮಾರು 1 ಲಕ್ಷ ರೂಪಾಯಿ ಬೆಲೆಯ ಒಡವೆಗಳನ್ನು ಅಪಹರಿಸಿಕೊಂಡು ಹೋಗಿರುವರು.

ಬಂಗಾಳ ಪ್ರಾಂತ್ಯದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಈ ವರ್ಷದ ಭತ್ತದ ಬೆಳೆಯು ಹಾಳಾಗಿ ಹೋಗಿ ಕ್ಷಾಮವು ಸಂಭವಿಸಿ ಅದರೊಂದಿಗೆ ದನಗಳ ಕಾಯಿಲೆಯೂ ಅಲ್ಲಿ ಪ್ರಬಲಿಸುತ್ತಿದೆಯಂತೆ

[illegible] ಗಿರಣಿ ಕೂಲಿಗಾರರ ಮುಷ್ಕರದ ಫಲಿ [illegible] ಆಗಿದೆ. [illegible] ಒಂದು ಗಿರಣಿಯಲ್ಲಿ ಮಾತ್ರ ಕೆಲಸ ನಡೆ [illegible] ಸ್ಸಂತ ಹೊಟ್ಟಾಗಳೆಲ್ಲವೂ ಮುಚ್ಚಲ್ಪಟ್ಟಿವೆ. ಕೂ [illegible] ರಣಿಗಳ ಮಾಲೀಕರಿಗೂ ರಾಜಿ [illegible] ತೆಯುತ್ತಿವೆ.

ಗಿರಣಿಯ ಮಾಲೀಕರು ಅಲ್ಲಿಯ ಕೆಲಸಗಾರರನ್ನು ತಮ್ಮ ಮಕ್ಕಳು ಯಾ ಅಣ್ಣತಮ್ಮಂದಿಯರಂತೆಯೂ, ಉತ್ಪತ್ತಿಯ ಪಾಲುಗಾರರಂತೆಯೂ ಕಾಣಬೇಕೆಂದೂ, ಅವರಿಂದ ಹೆಚ್ಚು ಕೆಲಸ ತೆಗೆದುಕೊಳ್ಳುವ ಉದ್ದೇಶ್ಯದಿಂದ ಅವರನ್ನು ಚೆನ್ನಾಗಿ ನೋಡುವದು ಯೋಗ್ಯವಲ್ಲವೆಂದೂ ಮಹಾತ್ಮ ಗಾಂಧಿಯವರು ಹೇಳಿರುವರು.

ಲಾರ್ಡ್ ಸಿಂಹರವರು ಮೃತರಾದಾಗ 1½ ಕೋಟಿ ರೂಪಾಯಿ ಅವರ ಸಂಪಾದನೆ ಇತ್ತೆಂದೂ, ಅದರಲ್ಲಿ 55 ಲಕ್ಷ ಅವರ ಹಿರೀ ಮಗನಿಗೂ, 20 ಲಕ್ಷದಂತೆ ಇನ್ನಿಬ್ಬರು ಮಗಂದಿಯರಿಗೂ ತಿಂಗಳಿಗೆ 4000ದಂತೆ ಅವನ ಹೆಂಡತಿ ಮತ್ತು ಇನ್ನೊಬ್ಬ ಮಗನಿಗೂ ಒಂದು ಲಕ್ಷದಂತೆ ಅವರ ಮೂವರು ಹೆಣ್ಣು ಮಕ್ಕಳಿಗೂ, ಒಂದು ಲಕ್ಷ ದಾನಕ್ಕೂ ಕೊಡುವಂತೆ ಮರಣ ಶಾಸನ ಬರೆದಿಟ್ಟಿರುವರು.

ಬಾರ್ಡೋಲಿಯ ಭೂಮಾಲೀಕರು ಸರ್ಕಾರದವರು ಈ ವರ್ಷ ಹೆಚ್ಚಿನ ಕಂದಾಯ ಹಾಕಿದ್ದರಿಂದ ಕಂದಾಯವೇ ಕೊಡುವದಿಲ್ಲವೆಂಬ ಸತ್ಯಾಗ್ರಹ ವ್ರತವನ್ನು ಕೈ ಕೊಂಡಿರುವರು. ಸರ್ಕಾರದವರು ಅವರ ಚರಜಂಗಮಗಳನ್ನೂ, ಭೂಮಿಯನ್ನೂ ಜಪ್ತಿ ಮಾಡುತ್ತಿರುವರು. ಅವರ ಒಬ್ಬ ಮುಂದಾಳಾದ ಮಿ. ರವಿಶಂಕರ ವ್ಯಾಸ ಎಂಬವರನ್ನು ಸೆರೆಹಿಡಿದಿರುವರು ಪ್ರಧಾನ ಮುಂದಾಳಾದ ಮಿ. ಪಿ. ಬಿ ಪಟೇಲರನ್ನೂ ಇನ್ನೂ ಕೆಲವರ ಸಮೇತ ಸೆರೆ ಹಿಡಿಯುವರೆಂದು ಸುದ್ದಿ. ಮಹಾತ್ಮ ಗಾಂಧಿಯವರು, ಸುಬಾಸ್ ಚಂದ್ರಬೋಸ್, ಜಮ್ನಾಲಾಲ್ ಬಜಾಜ್‌ರವರು ಅಲ್ಲಿಗೆ ಹೋಗಿ ಈ ಚಳವಳವನ್ನು ಮುಂದರಿಸುವರಾಗಿಯೂ ಸುದ್ದಿ ಇದೆ. ಜನರು ಒಂದಿಷ್ಟೂ ಎದೆಗುಂದಿರುವದಿಲ್ಲವಂತೆ.

ವಿದೇಶ.

ಗಂಟೆಗೆ 450 ಮೈಲು ವೇಗವನ್ನು ಕೊಡುವ ಒಂದು ಮೋಟಾರು ಇಂಜಿನು ವೆನಿಸ್ ಪಟ್ಟಣದಲ್ಲಿ ತಯಾರು ಮಾಡಲ್ಪಟ್ಟಿದೆ.

ಫ್ರಾನ್ಸ್ ದೇಶದ ಪಾರ್ಲಿಮೆಂಟಿನ ಜನರಲ್ ಚುನಾವಣೆಯಲ್ಲಿ ಮಿ. ಪೋಯಿಂಕೇರ್‌ರವರ (ಜಾರಿಯಲ್ಲಿದ್ದ ಸರ್ಕಾರದ) ಪಾರ್ಟಿಯವರಿಗೇ ಬಹುಮತವು ದೊರೆತಿದೆ.

ಚೈನಾದಲ್ಲಿ ರಾಷ್ಟ್ರೀಯ ಪಕ್ಷದ ದಕ್ಷಿಣ ಸೈನ್ಯದವರಿಗೆ ಜಯವಾಗುತ್ತಾ ಇದೆ. ಉತ್ತರ ಸೈನ್ಯದವರು ಆಕ್ರಮಗಳನ್ನು ನಡಿಸದಂತೆ ನೋಡಿಕೊಳ್ಳಲು ಜಪಾನಿನ ಸೈನ್ಯವು ದಕ್ಷಿಣ ಸೈನ್ಯದೊಂದಿಗೆ ಸಹಕರಿಸುತ್ತಿದೆಯಂತೆ.

ಪೂರ್ವ ಆಫ್ರಿಕದ ನೈರೋಬಿ ಕೋರ್ಟಿನಲ್ಲಿ ಅಲ್ಲಿಯ ಒಬ್ಬ ಸ್ಥಳೀಕನು (ಕಪ್ಪು ಮನುಷ್ಯನು) ಒಬ್ಬ ಯೂರೋಪಿಯನ್ (ಬಿಳೀ) ಹೆಂಗಸಿನೊಂದಿಗೆ ಅಕ್ರಮ ಸಂಘ ಮಾಡಿದನೆಂಬ ತಕ್ರಾರಿಗೆ ಅವನಿಗೆ ಫಾಶಿ ಶಿಕ್ಷೆಯು ವಿಧಿಸಲಾಯಿತಂತೆ!

ಐರ್ಲೆಂಡ್ ಫ್ರೀಸ್ಟೇಟಿನ ಗವರ್ನರ್ ಜನರಲ್ಲಾದ ಮಿ. ಜೇಮ್ಸ್ ಮೆಕ್‌ನೀಲ್‌ರವರು ಈ ಪದವಿಗೆ ಬಂದಂದಿನಿಂದಲೇ ಅವರಿಗೆ ಯಾವಾಗಲೂ ಪೋಲೀಸು ಪಹರೆ ಇದೆ. ಅವರು ಈಗ ಕಾಯಿಲೆಯಾಗಿ ಲಂಡನ್ ಆಸ್ಪತ್ರೆಯಲ್ಲಿರುವಾಗಲೂ ಬಾಗಲಲ್ಲಿ ಪೋಲೀಸು ಪಹರೆಯಿರುವದಂತೆ.

ಮೋಟಾರುಗಳಿಗೆ ಒಂದು ಬಗೆಯ ಗಟ್ಟಿ ರಬ್ಬರಿನ ನಳಿಗೆಯನ್ನು ಎದುರಿಗೂ ಹಿಂದಕ್ಕೂ ಇಡುವ ಮೂಲಕ, ಅದು ತಾಸಿಗೆ ೩೦ ಮೈಲು ಪ್ರಕಾರ ಓಡುತ್ತ ಒಂದು ಮರಕ್ಕೆ ಬಡಿದರೂ ಮೋಟಾರಿಗೂ, ಪ್ರಯಾಣಿಕರಿಗೂ ಹಾನಿಯಾಗದಂತೆಯೂ, ಜನಕ್ಕೆ ಹೊಡೆದರೆ ಪ್ರಾಣಹಾನಿಯಾಗದಂತೆಯೂ, ಕಾಪಾಡುವಂಥ ಹೊಸದೊಂದು ಉಪಕರಣವನ್ನು ಜರ್ಮನನೊಬ್ಬನು ಉಂಟುಮಾಡಿರುವನು.

ಈಜಿಪ್ಟ್ ಸರ್ಕಾರದವರು ಪಬ್ಲಿಕ್ ಮೀಟಿಂಗಗಳ ವಿಷಯ ಜನರಿಗೆ ಹೆಚ್ಚಿನ ಸ್ವಾತಂತ್ರ್ಯ ಕೊಡುವಂತೆ ಒಂದು ಕಾನೂನು ಜಾರಿಗೊಳಿಸುವ ಮಸೂದೆಯನ್ನು ಅಲ್ಲಿಯ ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುತ್ತಿದ್ದರು. ಈ ಮಸೂದೆಯಿಂದ ಅಲ್ಲಿರುವ ಪರದೇಶಸ್ಥರ ಆಸ್ತಿಪಾಸ್ತಿಗಳು ಭದ್ರವಾಗಿರುವದಿಲ್ಲವೆಂಬ ಕಾರಣದಿಂದ ಇದನ್ನು ಬ್ರಿಟಿಷ್ ಸರ್ಕಾರದವರು ವಿರೋಧಿಸಿ, ಇದನ್ನು ಮುಂದುವರಿಸುವದಿಲ್ಲವೆಂದು ಮೂರು ದಿವಸಗಳೊಳಗೆ ಈಜಿಪ್ಟ್ ಸರ್ಕಾರದವರು ಜವಾಬು ಕೊಡದೆ ಹೋದರೆ ಬ್ರಿಟಿಷರು ಬೇಕಾದಂತೆ ವರ್ತಿಸುವರೆಂದು ಕಳೆದ ತಿಂಗಳ 30ರಲ್ಲಿ ಈಜಿಪ್ಟಿನ ಪ್ರಧಾನ ಮಂತ್ರಿ ನಹಾಸ್ ಪಾಷಾರವರಿಗೆ ತಿಳಿಸಿದರು. ಅಲ್ಲದೆ ಮಾಲ್ಟಾದಿಂದ ಈಜಿಪ್ಟಿಗೆ ಕೆಲವು ಬ್ರಿಟಿಷ್ ಯುದ್ಧದ ಹಡಗುಗಳನ್ನು ಕಳುಹಿಸಿದರು. ಇದರ ಮೇಲೆ ಈಜಿಪ್ಟ್ ಸರಕಾರವು ಈ ಮಸೂದೆಯ ಚರ್ಚೆಯನ್ನು ಬರುವ ನವಂಬರು ವರೆಗೆ ಬಾಕಿ ಇಡುವಂತೆ ತೀರ್ಮಾನಿಸಿರುವದಂತೆ!

ಮಂಗಳ ಮತ್ತು ಶನಿ ಗ್ರಹಗಳು ಕೂಡುತ್ತವಾದುದರಿಂದ ಈ ವರ್ಷವೇ ಮಹಾ ಯುದ್ಧವು ಆಗುತ್ತದೆಂದೂ, 1914ನೇ ಇಸವಿಯಲ್ಲಾದ ಯುದ್ಧಕ್ಕಿಂತ ಮೊದಲು ಇದೇ ಪರಿಸ್ಥಿತಿಯೇ ಆಗಲೂ ಒದಗಿದ್ದಿತೆಂತಲೂ, ಇಂಗ್ಲೆಂಡಿಗೆ ಇದರಿಂದ ತುಂಬಾ ನಷ್ಟವಾಗಬಹುದೆಂದೂ ಯೋರೋಪದ ಒಬ್ಬ ಜೋತಿಷ್ಯಗಾರರು ಹೇಳಿರುವರು.

ಕ. ವೈ.

ನೋಟೀಸು.

ಕೊಡಗು ವೀರಶೈವ ವಿದ್ಯಾನಿಧಿ ಸಂಘದ ವಾರ್ಷಿಕ ಜನರಲ್ ಮೀಟಿಂಗು ಮೇ ತಾ 13ನೇ ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 6ಗಂಟೆವರೆಗೆ ಶನಿವಾರಸಂತೆಯಲ್ಲಿ ಮ. ರಾ. ಮೈಸೂರಿನ ರಿಟೈರ್ಡ್ ಡಾಕ್ಟರು ಟಿ. ಯಸ್. ಸಿದ್ದಪ್ಪ ಎಲ್ ಯಂ. & ಯಸ್, ರವರ ಅಧ್ಯಕ್ಷತೆಯಲ್ಲಿ ನೆರೆಯುವಂತೆ ನಿಶ್ಚೈಸಿರುವುದರಿಂದ ಸದ್ರಿ ದಿನ ಸಭೆಗೆ ವೀರಶೈವ ಮತ ಭಾಂಧವರೆಲ್ಲರೂ ತಪ್ಪದೆ ದಯಮಾಡಿಸಿ ಸಮಾಜದ ಏಳಿಗೆಗೆ ಉತ್ತೇಜನಕೊಡಬೇಕಾಗಿ ಈ ಮೂಲಕ ಕೇಳಿಕೊಳ್ಳೋಣಾಗಿದೆ.

ಬಿ. ಪಿ. ಶಾಂತಪ್ಪ,
ಸಕ್ರೆಟರಿ.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ.]

ದಲಭೇರಿ

ಇದೇ ಮೇ ತಿಂಗಳ ೧ನೇ ತಾರೀಖಿನಿಂದ ಹಿಂದುಸ್ಥಾನಿ ಸೇವಾದಳದ ಕರ್ನಾಟಕ ಶಾಖೆಯ ಪರವಾಗಿ 'ದಲಭೇರಿ' ಎಂಬ ಮಾಸಿಕ ಪುಸ್ತಕವು ಪ್ರಕಟಿಸಲ್ಪಡುವದು. ಇದರಲ್ಲಿ ಕರ್ನಾಟಕ ದಲದವರು ಈ ವರೆಗೆ ಮಾಡಿದ ಸದ್ಯಕ್ಕೆ ಮಾಡುತ್ತಿರುವ ಮುಂದೆ ಮಾಡಬೇಕೆನ್ನುವ ಕಾಂಗ್ರೆಸ್ ಮತ್ತು ಇತರ ಕಾರ್ಯಗಳ ಬಗೆಗೆ ಬರೆಯಲ್ಪಡುವದು. ಅಲ್ಲದೆ ಶಾರೀರಕ ಶಿಕ್ಷಣಕ್ಕೆ ಮತ್ತು ತರುಣರ ಸಂಘಟನಕ್ಕೆ ಸಂಬಂಧಪಟ್ಟ ಜಗತ್ತಿನೊಳಗಿನ ಮುಖ್ಯ ಮುಖ್ಯ ವರ್ತಮಾನಗಳನ್ನು ಈ ಮಾಸಿಕ ಪುಸ್ತಕದಲ್ಲಿ ಕೊಡಬೇಕೆಂದು ನಿಶ್ಚಯವಾಗಿದೆ. ಈ ಪುಸ್ತಕವು "ಜಯಕರ್ನಾಟಕ" ವೆಂಬ ಮಾಸಿಕ ಪುಸ್ತಕದ ಆಕಾರದ ೮ ಪುಟಗಳುಳ್ಳದಾಗುವದು. ಇದನ್ನು ಹೊಂದಲಿಚ್ಛೈಸುವವರು ಈ ವರ್ಷದ ಕೊನೆಯವರೆಗೆ ಅಂದರೆ ಮೇ ತಿಂಗಳಿನಿಂದ ಡಿಸೆಂಬರದವರೆಗೆ ೮ ತಿಂಗಳ ನೆಲುವಾಗಿ ಒಂದು ರೂಪಾಯಿಯನ್ನು ಮನಿಆರ್ಡರ್ ಮೂಲಕ ಹುಬ್ಬಳ್ಳಿ, ಸೇವಾದಲದ ಕಚೇರಿಗೆ ಕಳುಹಿಸಬೇಕು.

ರಾ. ವೆ. ಕರಗುದರಿ.

ಕರ್ನಾಟಕ ರಂಗಭೂಮಿಯ ಸುಧಾರಣೆ.

ಭಾರತ ಭೂಮಿಯ ಮಹಾರಾಷ್ಟ್ರ, ಬಂಗಾಳ ಮುಂತಾದ ಇತರ ಪ್ರಾಂತಗಳಲ್ಲಿ ಕವಿಗಳೂ, ನಟವರ್ಗದವರೂ ಪ್ರಯತ್ನಪಟ್ಟು, ಅಲ್ಲಲ್ಲಿ ರಂಗಭೂಮಿಯ ಸುಧಾರಣೆಯನ್ನು ಮಾಡಿದ್ದರೂ, ಈ ಇಪ್ಪತ್ತನೇ ಶತಮಾನದಲ್ಲಿ ಕರ್ನಾಟಕ ರಂಗಭೂಮಿಯ ಸುಧಾರಣೆಯನ್ನು ಮಾಡಲಿಕ್ಕೆ ಕರ್ನಾಟಕಸ್ಥರು ಪ್ರಯತ್ನ ಪಡದಿದ್ದುದು ಕರ್ನಾಟಕದ ಪ್ರಗತಿಯನ್ನಾಕಾಂಕ್ಷಿಸುವವರಿಗೆ ಕುಂದಕವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯಾವದೋ ಒಂದು ಕಾಲದ ಸಂಪ್ರದಾಯವನ್ನನುಸರಿಸಿ, ಪೌರಾಣಿಕ ಯಾ ಐತಿಹಾಸಿಕ ನಾಟಕವನ್ನಾಡಿಯೇ ನಮ್ಮ ನಟವರ್ಗವೂ, ಪ್ರೇಕ್ಷಕವರ್ಗವೂ ತೃಪ್ತವಾಗುತ್ತಿದೆ. ಅಲ್ಲಲ್ಲಿ ಕೆಲವರು ಸಾಮಾಜಿಕ ನಾಟಕವನ್ನಾಡುತ್ತಲಿದ್ದರೂ ಆ ನಾಟಕಗಳಲ್ಲಿ ಉಪಯೋಗಿಸಲ್ಪಡುವ ಡ್ರೆಸ್, ಸೀನರಿಗಳ ಸನ್ನಿವೇಶದಿಂದ ಅದರ ಸಾಮಾಜಿಕತ್ವವು ನಷ್ಟವಾಗುತ್ತಿದೆ. ನಾಟ್ಯಕಲೆಯನ್ನು ಅವಲಂಬಿಸಿಯೇ ದೃಶ್ಯವು ನಾಟಕತ್ವವನ್ನು ಹೊಂದಿದೆಯೆಂಬುದನ್ನು ಮರೆತುಬಿಟ್ಟು ಕಾಲ, ದೇಶ, ಸಂದರ್ಭಗಳಿಗೆ ಅನುಚಿತವಾದ ಡ್ರೆಸ್ ಸೀನರಿಗಳ ಸನ್ನಿವೇಶದಿಂದಾಗಲಿ, ಅನಾವಶ್ಯಕವಾದ ಹಾಸ್ಯ, ಬೀಭತ್ಸ, ಶೃಂಗಾರ ಮುಂತಾದ ರಸಗಳ ಪ್ರದರ್ಶನದಿಂದಾಗಲಿ, ಸಂಗೀತ ಪಾಂಡಿತ್ಯ ಪ್ರದರ್ಶನದಿಂದಾಗಲಿ, ಪ್ರೇಕ್ಷಕ ವರ್ಗದ ಮನಸ್ಸನ್ನು ಸಂತೋಷಪಡಿಸಿ, ಹಣವನ್ನು ಸಂಗ್ರಹಿಸುವುದರಲ್ಲಿಯೇ ನಮ್ಮ ನಾಟಕಮಂಡಳಿಗಳು ತೃಪ್ತವಾಗಿವೆ. ನಾಟ್ಯವೆಂದರೇನು? ನಾಟಕದ ಉದ್ದೇಶವೇನು? ಎಂಬ ವಿಚಾರದಿಂದ ದೂರವಾಗಿ ನಾಟಕ ಮಂಡಳಿಗಳ ಈ ವಿಧವಾದ ವರ್ತನಕ್ಕೆ ಆಯಾಯ ಮಂಡಳಿಗಳ ಯಜಮಾನರುಗಿಂತಲೂ ಹೆಚ್ಚಾಗಿ ಕರ್ನಾಟಕದ ಪ್ರೇಕ್ಷಕವರ್ಗವೇ ಬಾಧ್ಯವಾಗಿರುತ್ತದೆ. ಇಂತಹ ದುರವಸ್ಥೆಯನ್ನು ಹೋಗಲಾಡಿಸುವದಕ್ಕೆ ಅಲ್ಲಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಆದರೆ ಕವಿಯೂ, ನಟವರ್ಗವೂ, ನಾಟಕ ಮಂಡಳಿಯ ಯಜಮಾನರೂ ಒಗ್ಗಟ್ಟಾಗಿ, ಈ ಕೆಲಸಕ್ಕೆ ಕೈ ಹಾಕಿದ್ದು ಅಪೂರ್ವವೇ ಸರಿ. ಇತ್ತೀಚೆಗೆ ರಂಗಭೂಮಿಯ ಸುಧಾರಣೆಯಲ್ಲಿ ಪ್ರಯತ್ನಪಟ್ಟು ಕೆಲಸಮಾಡಿದವರೆಂದರೆ ಶ್ರೀಯುತ ಸಿದ್ಧಲಿಂಗಪ್ಪ ಕಂಠಿಯವರು ಮತ್ತು ಶಿರಹಟ್ಟಿ ನಾಟಕ ಮಂಡಲಿಯವರು.

ಶ್ರೀಯುತ ಕಂಠಿಯವರು ಕೆಲವು ವರ್ಷಗಳ ಹಿಂದೆ (ಅಸಹಕಾರ ಯುಗದಲ್ಲಿ) "ದಿವ್ಯ ಪ್ರೇಮ" ವೆಂಬ ರಾಜಕೀಯ ವಿಷಯಗಳನ್ನೊಳಗೊಂಡ ಸ್ವತಂತ್ರ ಸಾಮಾಜಿಕ ನಾಟಕವನ್ನು ಬರೆದಿದ್ದರು. ಅದನ್ನು ರಂಗಭೂಮಿಯಲ್ಲಿ ತರಬೇಕಾದರೆ ಬಹಳ ಶ್ರಮಪಡಬೇಕಾಯಿತು. ನಟವರ್ಗದವರು ಒಪ್ಪಿದ್ದಲ್ಲಿ ಮಂಡಳಿಯ ಯಜಮಾನರು ಒಪ್ಪಲಿಕ್ಕಿಲ್ಲ. ಯಜಮಾನರು ಒಪ್ಪಿದರೆ ನಟವರ್ಗದವರು ಒಪ್ಪಲಿಕ್ಕಿಲ್ಲ. ಅಂತೂ ಎರಡು ವರ್ಷ ಪ್ರಯತ್ನ ಪಟ್ಟ ಈ ನಾಟಕವು ಈಗ ಶಿರಹಟ್ಟಿ ನಾಟಕ ಮಂಡಳಿಯವರಿಂದ ಪ್ರವರ್ತಿಸಲ್ಪಡುತ್ತಿದೆ. ಇದನ್ನು ನೋಡಿದ ಪ್ರತಿಯೊಬ್ಬ ಪ್ರೇಕ್ಷಕನಿಗೂ ರಂಗಭೂಮಿಯ ನಿಜವಾದ ಕಲ್ಪನೆಯಾಗುತ್ತದೆ.

ನಾಟಕ ಕಲಾಭಿಮಾನಿ.

ದಿವಂಗತ ಮ. ಕುಪ್ಪಂಡ ಗಣಪತ್ತಿಯವರು.

ಹೈಕೇರಿ ಗ್ರಾಮದ ಸೇವಾ ಮಂಡಲಿಯ ಪ್ರೆಸಿಡೆಂಟರು ಆಗಿ ಕಳೆದ ಮೂರು ವರ್ಷಗಳಿಂದ ಗ್ರಾಮದಭಿವೃದ್ಧಿಗೆ ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದ ಈ ಮಹನೀಯರು ಕಳೆದ 14ನೇ ತಾರೀಖಿನ ರಾತ್ರಿ ಶಿವಾಧೀನರಾದರು. ಇವರಿಗೆ 55 ವರ್ಷ ಪ್ರಾಯವಾಗಿದ್ದರೂ, ಸಾಂಘಿಕ ಸೇವೆಯಲ್ಲಿ ಬಹಳ ಉತ್ಸಾಹವುಳ್ಳವರಾಗಿ, ಅನೇಕ ಸಾರಿ ಗ್ರಾಮಸ್ಥರ ಕೆಲಸಗಳಲ್ಲಿ ಮುಂದಾಳಾಗಿರುತ್ತಿದ್ದರು. ಇವರ ಮರಣದಿಂದ ನಾಡಿನ ಒಂದು ಬಹಳ ಮಟ್ಟಿಗೆ ಕುಂದಿ ಹೋಯಿತು. ಇವರ ಕೆಲಸದ ಗುಣಗಳನ್ನು ಅನುಭವಿಸುತ್ತಿರುವ ಗ್ರಾಮಸ್ಥರು ಅದೇ ತಾರೀಖು 21ರಲ್ಲಿ ಮ. ಮಾಚಿಮಂಡ ನಂಜುಂಡನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ ಮ. ಜಮ್ಮಡ ಮಾದಪ್ಪನವರು ಗತರ ಸದ್ಗುಣಗಳನ್ನು ಸಾಂಗವಾಗಿ ವಿವರಿಸಿದನಂತರ ವ್ಯಸನ ಸೂಚಕವಾದ ಠರಾವನ್ನು ಸಭೆಯ ಮುಂದಿಟ್ಟರು. ಸಭೆಯವರೆಲ್ಲರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ದೇವರನ್ನು ಸ್ಮರಿಸಿ, ಎದ್ದು ನಿಂತು ಠರಾವನ್ನು ಮಂಜೂರು ಮಾಡಿದರು

ಪಿ. ಯಂ. ನಂಜುಂಡ.

ಬಿಟ್ಟಂಗಾಲದ ಪಂಚಮರ ಸಮ್ಮೇಳನ

ಈ ಬಾಬ್ತು ನಮ್ಮ ಬಾತ್ಮಿಗೆ 'ಪಂಚಮ ಸೇವಕ' ವೆನಿಸಿಕೊಂಬುವರೊಬ್ಬರು ತಾ. 6—4—28ರಲ್ಲಿ ಕೊಟ್ಟ ಉತ್ತರವನ್ನು ನೋಡಲಾಯಿತು. ಈ ಪರಿಯ ಅಭಿಪ್ರಾಯವನ್ನಿಟ್ಟುಕೊಂಡಿರುವ ಇವರು ಹೇಗೆ 'ಪಂಚಮ ಸೇವಕ' ಎಂಬ ನಾಮಾಂಕಿತದಿಂದ ಮೆರೆಯುತ್ತಿಲ್ಲರೋ ನಮಗೆ ತಿಳಿಯದು.

ಸ್ವಾಮಿ ಶಾಂಭವಾನಂದರವರ ಅಭಿಪ್ರಾಯವನ್ನು ಪ್ರಕಟಿಸಲಿಕ್ಕೆ ಇವರು ತೆಗೆದುಕೊಂಡ ಶ್ರಮೆಯನ್ನು ಅರಿಯಬೇಕಾದರೆ ಸ್ವಾಮಿಸೇವೆಯಲ್ಲಿ ಇವರು ಧುರಂಧರರಿರುವಂತೆಯೂ ಸ್ವಾಮಿಯವರಿಗೆ ತಮ್ಮ ಅಭಿಪ್ರಾಯಗಳನ್ನು ತಾವೇ ಸೂಚಿಸುವುದಕ್ಕೆ ಸ್ವಾತಂತ್ರ್ಯವೇ ಇಲ್ಲದೆ ಇರುವಂತೆಯೂ ಕಂಡುಬರುವದನ್ನು ಗ್ರಹಿಸಿದರೆ ಯಾವ ಮಾನವ ಶ್ರೇಷ್ಠನಿಗಾದರೂ ವಿಷಾದವಾಗದಿರದು.

ಮಾನವರಾಗಿ ಜನಿಸಿ ಪರತಂತ್ರರಾಯಿತಾದರೆ ಜನ್ಮವೇ ನಿರರ್ಥಕವಾಯಿತು. ದೇಶೋದ್ಧಾರಕರೇ ಆಗಲಿ, ಸಮಾಜೋದ್ಧಾರಕರೇ ಆಗಲಿ, ಮತೋದ್ಧಾರಕರೇ ಆಗಲಿ ಕೃತಕೃತ್ಯರಾಗಬೇಕಾದರೆ ಧೀರರೂ ನ್ಯಾಯ ವಿಮರ್ಶಕರೂ, ವಿಷಯಜ್ಞರೂ ಮತ್ತು ಸ್ವತಂತ್ರರೂ ಆಗಿರಬೇಕು. ಹಿಂದುಳಿದ ವರ್ಗದ ಅಭ್ಯುನ್ನತಿಗಾಗಿ ಹೀಗೆ ಮಾಡಬೇಕು—ಹಾಗೆ ಮಾಡಬೇಕು—ಇದು ತಪ್ಪು, ಅದು ಸರಿ—ನನಗೆ ಹೀಗೆ ಹೇಳುತ್ತಾರೆ, ಅವರು ಹಾಗೆ ಹೇಳುತ್ತಾರೆ—ಹೀಗೆ ಮಾಡುವದೆನ್ನಾಗಿತ್ತು—ಹಾಗೆ ಮಾಡಿದ್ದು ಆಗಲಿಲ್ಲ—ಬುದ್ಧಿವಂತರು ಹೀಗನ್ನುತ್ತಾರೆ, ರಾಮಕೃಷ್ಣ ಸಂಸ್ಥೆಯವರು ಹಾಗನ್ನುತ್ತಾರೆ— ಎಂಬುದಾಗಿ ಸ್ವೇಚ್ಛಾನುಸಾರ ಹಲವರು ಅನ್ನುತ್ತಿರುವರಾದರೂ ಮೇಲ್ಕಂಡ ವರ್ಗದವರ ಏಳಿಗೆಯೇ ನಮ್ಮ ದೇಶದ ಸಮಾಜದ ಮತ್ತು ಮತದ ಏಳಿಗೆಯೆಂದು ತಿಳಿದು ಪರ್ಯಾಸ ಬೇಕಾದ ಕೇವಲ ಸನ್ಯಾಸಿಗಳಾದಂಥಾ ಶಾಂಭವಾನಂದರವರೇ ತಮ್ಮ ಸಂಸ್ಥೆಯ ಧ್ಯೇಯಗಳಿಗೆ ವಿರುದ್ಧವಾದೀ ಬಾತ್ಮಿಗಳನ್ನು ಖಂಡಿಸದೆ ತಟಸ್ಥರಾಗಿರುವುದನ್ನು ನೋಡಿದರೆ ನಮಗಂತೂ ತುಂಬಾ ಪಶ್ಚಾತ್ತಾಪವಾಗುತ್ತಿದೆ. ಅಹಿತಹಿತ ವಿಚಾರ ಶೂನ್ಯರಾದರೆ ಮಾಡತಕ್ಕದ್ದೇನು?

ತಾ. 13—1—28ರ 'ಕೊಡಗು' ಪತ್ರಿಕೆಯಲ್ಲಿ ತಿಳಿದವರೊಬ್ಬರು—'ಸ್ವಾಮಿಯವರು ಸನ್ಯಾಸಿಯಾದರೂ ಸಹ ಅವರ ಮನಸ್ಸಿನ ಶಕ್ತಿಯು ಅಷ್ಟರ ಮಟ್ಟಿಗೆ (ಅಂದರೆ 'ತಮಗೂ ಪಂಚಮ ವರ್ಗದವರಿಗೂ ಬೇಧವಿಲ್ಲ' ಎಂಬಷ್ಟರ ಮಟ್ಟಿಗೆ) ಬೆಳೆಯದೆ ಇರಬಹುದೆಂಬರ್ಥ, ಆದದರಿಂದಲೇ ಅವರು ಸಹಪಂಗ್ತಿ ಭೋಜನಕ್ಕೆ ಹಿಂಜರಿದವರೆಂತಲೂ ಹೇಳಲಾಗಿದೆ. ಇದರಿಂದ ಅವರು ಪಂಡಿತರಾಗಿಯೂ ಆತ್ಮಸಾಕ್ಷಿಗೆ ಸಂಯೋಗಿ ನಡೆದಿರುವರು. ಇದರಿಂದ ಅವರ ಕೆಲಸದಲ್ಲಿ ಸ್ವಲ್ಪವೂ ಆಕ್ಷೇಪಕರವಾದ ವಿಷಯವಿಲ್ಲವೆಂತ ನಾನು ಹೇಳುವೆನು' ಎಂದು ಮುಂತಾಗಿ ಬರೆದಿರುವರು. ಸನ್ಯಾಸಿಯೂ ಮೊದಲೇ ಕಾವ್ಯದ ಮನಶ್ಶಕ್ತಿ ಪ್ರಾಬಲ್ಯವಿರದ ಮಾನವರಿಲ್ಲವಂತೆ, ಅದರೂ ಆತ್ಮ ಶಕ್ತಿಗೆ ಕುಂದಕವಾಗಲಿಲ್ಲವಂತೆ, ಇವರ ಅಭಿಪ್ರಾಯ ಪ್ರಕಾರ ನಿಜ ಸನ್ಯಾಸಿಗಳೂ, ಇವರಿಗೂ ಯಾವ ವ್ಯತ್ಯಾಸವೂ ಇಲ್ಲ! ಮನಶ್ಶಕ್ತಿ ಸಾಲದೆಂದು ಸನ್ಯಾಸಿಯೂ ನಮ್ಮಂತೆಯೇ ಸರ್ವತ್ರ ವರ್ತಿಸಬಹುದು! ಇದು ವಿಪರೀತ!!

'ಸನ್ಯಾಸಿ' ಅಂದರೆ ಎಲ್ಲವನ್ನೂ ತ್ಯಜಿಸಿದವನು, ವೈರಾಗಿ ಆತನಿಗೆ ತನ್ನದೆಂಬುದು ಯಾವುದೂ ಇಲ್ಲ. ಪೂರ್ಣ ವಿರಕ್ತ. ಇಂದ್ರಿಯನಿಗ್ರಹವನ್ನು ಮಾಡಿದಂಥಾವನು. ಆಟಿಪ ಅಂಟದೆ ಇರತಕ್ಕವನು. 'ಕೇವಲ ಸ್ವತಂತ್ರನು, ಸ್ವಾಧೀನನು, ಸತ್ಯ ಸಂಧನು. ಮನಸಾ, ವಾಚಾ, ಕರ್ಮಣಾ ಏಕ ಪ್ರಕಾರವಾಗಿ ನಡೆಕೊಳ್ಳತಕ್ಕಂಥಾವನು. ಯಾವ ಕರ್ಮದ ಫಲವನ್ನು ಅವನು ಇದಿರುನೋಡದೆ, ಕಾಯಕ್ಕಾಗಿ ಕಾರ್ಯವನ್ನು ತೃಪ್ತಿಯಿಂದ ಪಕ್ಷಪಾತ, ಮಾಯೆ, ಮೋಹ, ಹಿಂಸೆ ಇವು ಯಾವುವೂ ಇಲ್ಲದೆ ನಡೆಸಿಕೊಂಡು ಹೋಗತಕ್ಕಂಥಾವನು. ಪ್ರಪಂಚದಲ್ಲಿ ನ್ಯಾಯವಾದದ್ದಲ್ಲದೆ ಇನ್ನಾವುದಕ್ಕೂ ಅಂಜದೆ ಇರತಕ್ಕಂಥಾವನು. ಹಿಡಿದ ಕಾರ್ಯವನ್ನು ಎಡೆಬಿಡದೆ ಸಾಧಿಸತಕ್ಕಂಥಾವನು. ಯಾವುದೊಂದು ತಿರಸ್ಕಾರವಾದವನ್ನೂ ಮನಸ್ಸಿನಲ್ಲಿ ತಾಳದೆ ಪರಮಾತ್ಮ ಸ್ವರೂಪವನ್ನು ಪ್ರತಿಯೊಂದರಲ್ಲಿಯೂ ಕಾಣುತ್ತಿರುವಂಥಾವನು' ಹೀಗಿರುವಂಥವನೇ ನಿಜವಾದ ಸನ್ಯಾಸಿಯು. ಇವನನ್ನೇ 'ಸ್ವಾಮಿ' ಎಂದು ಕರೆಯಬೇಕಾದ್ದು. ಇವನೇ ನಿಜವಾದ ಲೋಕೋಪಕಾರಿಯು. ಇವನೇ ಒಬ್ಬ ನಾರಾಯಣನು. ಇವನೇ ಸರ್ವ ಜನಾಃ ಸುಖಿನೋ ಭವಂತು ಎಂದು ಪ್ರಾರ್ಥಿಸಲು ಅರ್ಹನು.

ಈ ಕಾಲದಲ್ಲಿ ಕೂಡ ನಮಗೆ ಈ ತರದ ಸನ್ಯಾಸವು ಬೇಕಾಗಿದೆ. ಇಂಥಾ 'ಸ್ವಾಮಿ'ಗಳು ಎಷ್ಟು ನಮ್ಮ ದೇಶದಲ್ಲಿ ಹುಟ್ಟುವರೋ ಅಷ್ಟು ದೇಶವು ಉನ್ನತ ಸ್ಥಿತಿಯನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಇದು ಬಿಟ್ಟು ಲೌಕಿಕದ ಗತಿಯ ಮರ್ಯಾದೆಗೋಸ್ಕರವೋ, ಸ್ವಾರ್ಥಪರತೆಗೋಸ್ಕರವೋ, ಹಿಂದಿನ ಸಂಪ್ರದಾಯಗಳಿಗೋ ಬೆದರಿ ಜಗದ ಬಾಯಿಗೆ ಹೆದರಿ ಬದಲಿಸುತ್ತಿರುವ ಸನ್ಯಾಸಕ್ಕೆ ಯಾರು ಅರ್ಹರಾಗುವರೋ ಅವರು ತಮ್ಮಲ್ಲಿ ಹುದುಗಿಕೊಂಡಿರುವ ಶ್ರೇಷ್ಠವಾದ ಸ್ವಾತಂತ್ರ್ಯವನ್ನು, ಆತ್ಮತೇಜಸ್ಸನ್ನು ಕಂಡುಕೊಳ್ಳುವುದರಿಂದಲ್ಲದೆ ಬಚ್ಚಿಟ್ಟು ಮಾಡಿದರಾಗುವದಿಲ್ಲವೆಂಬುವುದೇ ನಮ್ಮ ಕಡೆ ಅಭಿಪ್ರಾಯವು.

ಲೋಕಪ್ರಸಿದ್ಧರಾದ ಶ್ರೀರಾಮಕೃಷ್ಣ ಪರಮಹಂಸರವರೂ ಮತ್ತು ಅವರ ಪರಮ ಶಿಷ್ಯರಾದ ಸ್ವಾಮಿ ವಿವೇಕಾನಂದರೂ, ರಾಮಕೃಷ್ಣಾಶ್ರಮಕ್ಕೊಳಪಟ್ಟ ಈ ಶಾಂಭವಾನಂದರವರ ಹೃದಯದಲ್ಲಿ ನಿಜವಾದ ಸನ್ಯಾಸತ್ವವು ನೆಲೆಗೊಳ್ಳುವಂತೆ ಆಶೀರ್ವದಿಸಿ ಆ ಮೂಲಕ ತ್ರಿಕರಣಶುದ್ಧಿಯಿಂದ ನಡೆಕೊಳ್ಳುವನ್ನು, ಮನಶ್ಶಕ್ತಿಯನ್ನೂ, ವಿವೇಕವನ್ನೂ ಕೊಡಲೆಂದು 'ಪಂಚಮ ಸೇವಕ'ರೂ ಹಾಗೂ 'ತಿಳಿದವರೂ' ಸಹ ನನ್ನೊಡನೆ ಪ್ರಾರ್ಥಿಸುವರೆಂದು ನಾನು ನಂಬುತ್ತೇನೆ.

ನನ್ನ ಬಾತ್ಮಿಯು ಶಾಂಭವಾನಂದರವರನ್ನು ಕುರಿತದ್ದಾಗಿದೆ. ಇದರಲ್ಲಿ ಕಂಡು ಬರಬಹುದಾದ ನಿಷ್ಠುರತೆ ದೋಷಪರಿಹಾರಾರ್ಥವಾಗಿ ಸ್ವಾಮಿಜೀಯವರೊಬ್ಬರಲ್ಲದೆ ಬೇರೆ ಇತರ ಬಾತ್ಮಿಗಳನ್ನು ಪ್ರಕಟಿಸಿದರೂ ನಾವನ್ನು ಗಮನಿಸಲಾರೆವು. '...ವಿನಾ ಹೇತುಮಸಿದ್ಧಂ ಪ್ರಸನ್ನೈಕ ಸ್ವಾರ್ಥಸ್ಯ ಲಕ್ಷಣಂ.' ಎಂಬ ಶ್ಲೋಕಾರ್ಥದ ತತ್ವವೇ ನನ್ನ ಉದಾಸೀನಕ್ಕೆ ಕಾರಣವು.

ಕೇಳಿದವ.

Arms, Ammunition and Shooting Requisites!!!



19.8 Illustrated Catalogue Just Issued ... on Application

D. B. B. L. Rifles	Rs	120	to	Rs.	2750
S. B. B. L. "	"	35	to	"	950.
D. B. B. L. Guns	"	50	to	"	1350.
S. B. B. L. "	"	35	to	"	275.
D. B. M. L.	"	45	to	"	135.
S. B. M. L. "	"	30	to	"	80.
B. L. Revolvers	"	35	to	"	350
Automatic Pistols	"	30	to	"	150.

Brilliant Search Light Lamp For Shooting, Camping, Fishing, and All such other Night Sports and work Rs 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition.
Cheapest priced firm in India,
24—5 210 Abdul Rehman Street, BOMBAY.

ಡಿ. ಬಿ. ಬಿ. ಯಲ್. ಕೋವಿಗಳು ರೂ. 75 ರಿಂದ ರೂ. 150/
ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. 250/.
ಯಸ್. ಬಿ. ಯಮ್. ಯಲ್. ಕೋವಿಗಳು ರೂ. 35 ರಿಂದ 65/.
ರಿವಾಲ್ವರ್‌ಗಳು. ರೂ. 40/ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ಕೋರ್ಟ್ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿವಿಧ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.
24—20 12. ಬ್ರಾಡ್ವೆ. ಮದ್ರಾಸ್
(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸ, ಬೊಂಬಾಯಿ. ಸ್ಥಾಪಿತವಾದದ್ದು 1874.

ಮ. ಕೆ. ಪಿ. ಚಿಣ್ಣಪ್ಪನವರು 1928ನೇ ಏಪ್ರಿಲ್ 1ರಿಂದ ಮಡಿಕೇರಿಯಲ್ಲಿ ಈ ಕಂಪೆನಿಯ ಹಣ ವಸೂಲಾತಿಯ ಏಜೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. — ಎಲ್. ಆರ್. ಕೃಷ್ಣಸ್ವಾಮಯ್ಯರ್, ಬ್ರಾಂಚ್ ಸೆಕ್ರೆಟರಿ
52—3

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಒಟ್ಟೂ ಬಂದ ಠೇವಣಾತಿ	—	1,02,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೂಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗಟ್ಟೀರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಏಜೆಂಟರುಗಳಿಗೆ ಚಂದಾ ಹಣ ಕೊಟ್ಟು ನಮ್ಮ ರಶೀತಿ ಪಡೆಯಬೇಕಾಗಿ ಕೇಳಿಕೊಳ್ಳಲಾಗಿದೆ. ಹಣವಿಟ್ಟು ಕೊಡಲಾಗದವರು ನಮಗೆ ತಿಳಿಸಿದರೆ ಪ್ರತಿನಿಧಿ ಕಳುಹಿಸಲಾಗುವದು.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮಿ. ಕೋಳುಮಾಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮಿ. ಕಾಳೇರ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮಿ. ಅಜ್ಜಮಾಡ ಮಾದಪ್ಪನವರು.
ಮಡಿಕೇರಿ—ಮಿ. ಕೆ. ತಿಮ್ಮಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮಿ. ಅರೆಯಡ ಸುಬ್ಬಯ್ಯನವರು,
ವಿರಾಜಪೇಟೆ—ಮಿ. ಬಿದ್ದಂಡ ಪೂವಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮಿ. ಪಾಂಡ ಪೂವಪ್ಪನವರು,
ಪೊನ್ನಂಪೇಟೆನಾಡು—ಮಿ. ಪಿ. ಜಿ. ಮುದ್ದಯ್ಯನವರು,
ಕುಟ್ಟ ತಿತಿಮತ್ತಿ—ಮಿ. ಜಿ. ಪೂವಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮಿ. ಜಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬಾದ್ಯತೆಯ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ಇಂಗ್ಲೀಷಿನನುಸಾರವಾಗಿ ತಯಾರಿಸಲ್ಪಟ್ಟಿರುವ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಪಿಡ್ಡರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address.—"SHOOTER" Bombay.
(52—4) 'Please write for our Catalogue 1928—1929.

ಕಟುಕಷಾಯ ಮಲೇಜ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ಬಿಟ್ಟು ಬಿಟ್ಟು ಬರುವ ಜ್ವರ 3—1 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನ ಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಪಸಿರು ಹೋಗುವದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು ಮೂತ್ರ ಬೊಬ್ಬೆಯಾಗಿ ಉರಿಯುವದು, ಮೂತ್ರ ನಾಳದಿಂದ ಕೀವು ಬರುವದು, ನಿದ್ರೆಯಲ್ಲಿ ಧಾತು, ಹುಡಿ ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆವ ಸಾಮರ್ಥ್ಯವಿಲ್ಲದಿರುವದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳ ಮುಚ್ಚುವ ಸೋಂಕು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1 3 6ಕ್ಕೆ ರೂ. 1—, 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವದು, ತಲೆಭಾರ, ಕಣ್ಣು ಕಿವಿಯಿಂದ ಕೀವು ಸೋರುವದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ.—ಮನೋಲ್ಲಾಸಿನಿ ಕಂಪೆನಿ.
52—30 ೯. ಮಂಗಳೂರು

Kapurchand & co.

The OLDEST and MOST RELIABLE House in Bangalore.
[Cawnpore Woollen Mills Agency.]
Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickpet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—46

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರವರಿ 28ಕ್ಕೆ ಆಖೈರಾದ 5 ವರ್ಷಗಳ ಕೆಲಸದ

ಬೆಲೆ ಕಟ್ಟಿದಲ್ಲಿ
ರೂ. 37,66,689.
ಉಳಿವರಿ ಕಂಡುಬಂದಿದೆ.

ಒಟ್ಟು ಜೀವವಿಮೆಯ		ವ್ಯಾಯ ನಿರವಿನ ವಿಮೆಯ
1000 ರೂಪಾಯಿಗಳಿಗೆ ಸಾಲಿಯಾನ	ಮತ್ತು	1000 ರೂಪಾಯಿಗಳಿಗೆ
15 ರೂಪಾಯಿನಂತೆಯೂ		12 ರೂಪಾಯಿನಂತೆಯೂ

ರಿವರ್ಶನರಿ ಬೋನಸ್ ಹಂಚ ಬಹುದೆಂತ ತೀರ್ಮಾನವಾಗಿದೆ.

ವಿಳಾಸ.
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

24—17

ಬ್ರಾಂಚ್ ಆಫೀಸು.
ಕಮರ್ಶಿಯಲ್ ಬೀದಿ
ಬೆಂಗಳೂರು.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪ್ರೂವಿಡೆಂಟ್ ಫಂಡ್ ಅಸೋಸಿಯೇಷನ್, ಲಿಮಿಟೆಡ್.
ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಎಲ್ಲವೂ ಈ ದೇಶಸ್ಥರಿಗೆ ಕೂಡಿರಬೇಕೆಂಬ ಠರಾವು ಜನವರಿ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿ ಮೇರೆ ನಮ್ಮ ಸಂಘದ ಕೊಡಗಿನ ಪ್ರೋವಿನ್ಸಿಯಲ್ ಬೋರ್ಡಿನ ಡ್ರಾಯಿಂಗ್ ತಾ 31—3—1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ತೆಗೆಯಲಾಗಿ ಮಡಿಕೇರಿನಾಡು ಕಡಗದಾಳು ಗ್ರಾಮದ ಮೆ ಕೊತವಂಡ ಮುಂದಣ್ಣನವರ ಕುಟುಂಬ ಮಾಚವ್ವನವರಿಗೆ ಚೀಟಿ ಎತ್ತಿ ಒದಗಿ ಈ ವರ್ಷದ ಪ್ರಥಮ ಡ್ರಾಯಿಂಗ್‌ನ ಐದು ನೂರು ರೂಪಾಯಿಗಳ (500—0—0) ಸಾಲವನ್ನು ಹೊಂದಲು ತೀರ್ಮಾನವಾಯಿತು ಅದನ್ನು ಅವರಿಗೆ ಕೊಡಲಾಗಿದೆ. ಇದು ಮೇಲಿನ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲಿಸಲಿಲ್ಲ. ಮುಂದಿನ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡುವದಕ್ಕೆ ಅದನ್ನು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹ ಪಡಿಸಬೇಕಾಗಿ ಈ ಮೂಲಕ ಕೋರುತ್ತೇನೆ.

ಅನಾಥರಾದಂಥ ಅಂಗಹೀನರುಗಳಿಗೆ ಈ ತಿಂಗಳು 20 ರಿಂದ ಈ ಸಂಘದ ಖರ್ಚಿನಲ್ಲು ಅನ್ನಾಹಾರಾದಿಗಳು ಕೊಡಲು ಶುರುಮಾಡಲಾಗಿದೆ.

ಟಿ. ಎ. ಕುಪ್ಪುಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
ಮಡಿಕೇರಿ.

52—12

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1530.
If not delivered please return to
“KODAGU” OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ ೩ ೦ ೦

ಸ್ವೈನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಯಾ || ಬಿಸ್ಮಯುಕ್ತೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಕೊಡ್ಯಂಡ ಐ ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೭] ಮಡಿಕೇರಿ, ಸಗ ೧೯೨೮ನೇ ಇಸವಿ ಮೇ ತಾರೀಖು ೧೧ ನೇ ಶುಕ್ರವಾರ [ಸಂಚಿಕೆ ೪೬

“THE SUNSHINE OF THE NIGHT·”

Coleman Quick·Lite Lamps.

Bracket lamp	Rs.	45/– & 42/–
Table Lamp	,,	37/8/–
Lantern	,,	35/–
Pendant Lamp	,,	37/8/–
Chandelier Lamp	,,	82/–

The Coleman Quicklite is Brilliant, clean, simple and safe.

52—15 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423.
TRIPLICANE. MADRAS

Catalogue Free
to Bonafide Enquirers


Rose Water Sprinkler.

Chased Silver Mirror.

Nose screws. Claver. Drops Thodu. Brooch

Manufacture of
HIGH CLASS
GEMSET JEWELS.
a speciality.

The special features
of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices

GOLD
or
SILVERWARE
of all descriptions
neatly executed

52—35

Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—11

ಕರ್ಣಕ

ಎ ಗ್ಸ್ಯೆ ಮಿ ಕ್ಸ್ ಷ್ಚರ್

ಮಲೇರಿಯಾ ಇನ್‌ಫ್ಲುಯೆಂಜಾ ಸನ್ನಿಜ್ವರ ಆಡವಿಜ್ವರ ... ಇದನ್ನು ಉಪಯೋಗಿಸಿ ಇದರಿಂದ ... ಜ್ವರವು ಬಿಡುತ್ತದೆ ಬೆಲೆ ೧ ಬಾಟ್ಳಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಸಾ ರ ಸಾ ಪ ರಿ ಲಾ.

ಕೆಟ್ಟು ಹೋದ ರಕ್ತವನ್ನು ಶುದ್ಧಪಡಿಸುತ್ತದೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಳಿಗೆ ರೂ ೧—೦—೦ ಟಪ್ಪಾಲು ವೆಚ್ಚ ಬೇರೆ

ಕರ್ನಾಟಕ ಬ್ರದರ್ಸ
ದುಬಾಷ ಲೇನ್.
12—6 ಗಿರಗಾಂವ. ಮುಂಬಾಯಿ

ಕೊಡಗು.

ಸನ್ ೧೯೫೪ನೇ ಇಸವಿ ಮೇ
ತಾ. ೧೧ನೇ ಶುಕ್ರವಾರ.

ಕೊಡಗಿನ ರಾಜಕೀಯ ರಚನೆ.

೧.

ಕಳೆದ ವಾರ ನಡೆದ ಜಮೀನ್ದಾರರ ಸಂಘದ ಮಹಾ ಸಭೆಯಲ್ಲಿ ಆದ ಕೊಡಗಿನ ಮುಂದಿನ ರಾಜಕೀಯ ರಚನೆಯ ತೀರ್ಮಾನವು ಕೊಡಗಿನ ಚರಿತ್ರೆಯಲ್ಲಿ ಒಂದು ವಿಶೇಷವಾದ ಕಾರ್ಯವಾಗಿದೆ. ಕೊಡಗು ದೇಶವನ್ನು ಬ್ರಿಟಿಷರ ಅಧೀನಕ್ಕೆ ಕೊಡಗಿನ ಜನರ ಒಗ್ಗಟ್ಟಿನ ಒಪ್ಪಿಗೆ ಮೇರೆ ಬಿಟ್ಟುಕೊಟ್ಟವೆಂತ ಬ್ರಿಟಿಷ್ ಜನರು ಒಪ್ಪಿಕೊಳ್ಳುತ್ತಿರುವದರಿಂದ, ಕೊಡಗಿನ ಜನರ ಒಗ್ಗಟ್ಟಿನ ಅಭಿಪ್ರಾಯವು ಕೊಡಗಿನ ಆಡಳಿತವನ್ನು ಕೊಡಗಿನವರಿಗೆ ಬಿಟ್ಟುಕೊಡಬೇಕೆಂತ ಇರುವಾಗ ಒಂದು ನಿಮಿಷವಾದರೂ ಕೊಡಗನ್ನು ಬ್ರಿಟಿಷರ ಅಧೀನದಲ್ಲಿ ಇಟ್ಟುಕೊಳ್ಳುವದರಲ್ಲಿ ಧರ್ಮವಿಲ್ಲ. ಶ್ರೀಯುತ ಸತ್ಯಮೂರ್ತಿಯವರು ಹೇಳಿರುವ ಮೇರೆ ಕೊಡಗಿನ ಜನರ ತೀರ್ಮಾನವನ್ನು ತಮಗೆ ಅನುಕೂಲವಾದಾಗ ಮಾತ್ರ ಒಪ್ಪುತ್ತೇವೆ; ತಮ್ಮ ಅನುಕೂಲಕ್ಕೆ ಭಂಗ ಬಂದಾಗ ಜನರ ತೀರ್ಮಾನವನ್ನು ತಿರಸ್ಕರಿಸುತ್ತೇವೆ ಎಂತ ಬ್ರಿಟಿಷರು ಹೇಳಿದರೆ ನ್ಯಾಯವಾಗಲಾರದು.

ಸಂಘದ ಒಮ್ಮತದ ತೀರ್ಮಾನವನ್ನು ದೇಶವೆಲ್ಲಾ ಅಂಗೀಕರಿಸಿಕೊಂಡು ಅದಕ್ಕಾಗಿ ಕೆಲಸ ಮಾಡುವದು ಸಂಘದ ಮತ್ತು ದೇಶ ಹಿತೈಷಿಗಳ ಕೆಲಸವಾಗಿದೆ. ಚೀಫ್ ಕಮಿಶನರ್ ಒಬ್ಬರಲ್ಲಿರುವ ನಿರಂಕುಶ ಪ್ರಭುತ್ವವನ್ನು ಪ್ರಜಾ ಜನರಿಗೆ ವರ್ಗಾಯಿಸಬೇಕೆಂಬುದರಲ್ಲಿ ಮತಭೇದವಿರುವದೇ ಇಲ್ಲವೆಂತ ನಮಗೆ ತೋರುತ್ತದೆ. ಕರ್ನಾಟಕ ಏಕೀಕರಣದ ವಿಷಯದಲ್ಲಿ ಕೆಲವು ಮಟ್ಟಿಗೆ ಮತಭೇದವಿದೆಯಾದರೂ ಕೊಡಗು ಕೂಡಲೇ ತತ್ಕಾಲಕ್ಕಾದರೂ ಸ್ವತಂತ್ರ ಪ್ರಾಂತ್ಯವಾಗಿರಬೇಕೆಂಬುದಕ್ಕೆ ವಿರೋಧಿಸುವವರು ಬಹು ಕಡಿಮೆ. ಸ್ವತಂತ್ರವಾಗಿದ್ದರೆ ಕೆಲವು ತೊಡಕುಗಳಿವೆ. ಪ್ರಜಾತಂತ್ರವಿಲ್ಲದೆ ಪ್ರತ್ಯೇಕವಾಗಿರುವಾಗ ಪ್ರಜಾತಂತ್ರದೊಡನೆ ಪ್ರತ್ಯೇಕವಾಗಿರುವದನ್ನು ಪರೀಕ್ಷಿಸಿ ನೋಡಲು ನ್ಯಾಯವಾದ ಆಕ್ಷೇಪಣೆ ಏನೂ ಇರಲಾರದು. ಪ್ರತ್ಯೇಕ ಪ್ರಾಂತ್ಯವಾಗಿದ್ದರೆ ಉಂಟಾಗುವ ತೊಡಕುಗಳನ್ನು ಪರಿಹರಿಸಿಕೊಳ್ಳಲಿಕ್ಕೆ ಉಪಾಯಗಳನ್ನು ಕಂಡು ಹಿಡಿದುಕೊಂಡು ಒಮ್ಮತವಿರುವಷ್ಟು ವಿಷಯಕ್ಕೆ ಎಲ್ಲರೂ ಗಮನ ಕೊಡಬೇಕೆಂತ ನಮ್ಮ ಕೋರಿಕೆಯಾಗಿದೆ.

ಕಾನೂನು ಮಾಡುವ, ಆಡಳಿತ ನಡಿಸುವ ಮತ್ತು ನ್ಯಾಯ ತೀರ್ಪು ಮಾಡುವ ಹಕ್ಕುಗಳು ಒಬ್ಬ ವ್ಯಕ್ತಿಯಲ್ಲಿ ಇರುವದು ಅನಾಗರೀಕ ಕ್ರಮವಾಗಿದೆ. ನಮ್ಮ ದೇಶದಲ್ಲಿ ಈಗ ಇರುವ ಕಾಯಿದೆ ಮಂಡಲಿಗೆ ಕಾನೂನು ಮಾಡುವ ಹಕ್ಕು ಇದೆಯಾದರೂ ಅದಕ್ಕೆ ಅಡಚಣೆಗಳು ತುಂಬಾ ಇವೆ. ಮಾತ್ರವಲ್ಲ, ನಮ್ಮ ದೇಶವು ಶೆಡ್ಯೂಲ್ ಡಿಸ್ಟ್ರಿಕ್ಟ್ ಆಗಿರುವದರಿಂದ ಚೀಫ್ ಕಮಿಶನರಿಗೆ ಅವಶ್ಯವೆಂತ ತೋರಿದಾಗ ಬ್ರಿಟಿಷ್ ಇಂಡಿಯಾದ ಬೇರೆ ಯಾವ ಪ್ರಾಂತ್ಯದಲ್ಲಾದರೂ ಜಾರಿಯಲ್ಲಿರುವ ಕಾನೂನನ್ನು ಈ ದೇಶಕ್ಕೆ ವ್ಯಾಪಕವಾಗುವಂತೆ ಮಾಡುವ ಸ್ವಾತಂತ್ರ್ಯವು ಅವರಿಗೆ ಇದೆ. ಕಾನೂನು ಮಾಡಿಕೊಳ್ಳುವ ಹಕ್ಕು ಇನ್ನು ಮುಂದೆ ಕಾಯಿದೆ ಮಂಡಲಿಯವರಿಗೆ ಸಂಪೂರ್ಣವಾಗಿರಬೇಕು ಮತ್ತು ಅವರಿಗೆ ವಿನಹ ಬೇರೆ ಯಾರಿಗೂ ಇರಬಾರದು.

ಕಾನೂನು ಮಾಡಿಕೊಳ್ಳಬೇಕಾದ ಆವಶ್ಯಕತೆಯು ಆಗಿಂದಾಗ್ಗೆ ಬೀಳುವದಿಲ್ಲ. ಆದರೆ ದೇಶದ ಆಡಳಿತವು ಪ್ರತಿ ದಿವಸದಲ್ಲೂ, ಪ್ರತಿ ನಿಮಿಷದಲ್ಲೂ ಆಗುತ್ತಲೇ ಇರಬೇಕು. ಆಡಳಿತ ನಡಿಸುವ ಅಧಿಕಾರವು ಈಗ ಸಂಪೂರ್ಣವಾಗಿ ಚೀಫ್ ಕಮಿಶನರಲ್ಲಿ ಇದೆ. ಈ ಹಕ್ಕನ್ನು ಚೀಫ್ ಕಮಿಶನರಿಂದ ಪ್ರಜಾಪ್ರತಿನಿಧಿಗಳಿಗೆ ವರ್ಗಾಯಿಸಿಕೊಳ್ಳಬೇಕಾದದ್ದು ಅವಶ್ಯವಾಗಿದೆ. ಪ್ರಜಾ ಜನರಿಂದ ಚುನಾಯಿಸಲ್ಪಡುವ ಮಂಡಲಿಯ ಸದಸ್ಯರುಗಳಲ್ಲಿ ಒಬ್ಬ ಅಥವ ಇಬ್ಬರು ಮಂತ್ರಿಗಳನ್ನು ಆರಿಸಿಕೊಂಡು ಅವರಿಗೆ ಚೀಫ್ ಕಮಿಶನರ ಅಧಿಕಾರವನ್ನು ವರ್ಗಾಯಿಸಿದರೆ ಪ್ರಜೆಗಳಿಗೆ ಜವಾಬ್ದಾರಿಯುಳ್ಳ ಸರ್ಕಾರವು ದೊರೆತಂತಾಗುವುದು. ಪ್ರಜಾ ಜನರಿಂದ ಆರಿಸಲ್ಪಡುವ ಕಾಯಿದೆ ಮಂಡಲಿಯಲ್ಲಿ ಹೆಚ್ಚು ಸಂಖ್ಯೆ ಸದಸ್ಯರ ಬೆಂಬಲವಿರುವ ಮುಖಂಡರೇ ಮಂತ್ರಿಗಳಾಗುತ್ತಾರೆ. ಅಂಥವರ ಆಡಳಿತದ ನೀತಿಗಳನ್ನು ಕಾಯಿದೆ ಮಂಡಲಿಯ ಸದಸ್ಯರೂ, ಕಾಯಿದೆ ಮಂಡಲಿಯನ್ನು ಆರಿಸುವ ಪ್ರಜಾ ಜನರೂ ಅತಿ ಜಾಗರೂಕರಾಗಿ ನೋಡುತ್ತಿರುತ್ತಾರೆ. ಮಂತ್ರಿಗಳ ಆಡಳಿತ ನೀತಿಯು ದೇಶದ ಜನರ ಅಭಿಪ್ರಾಯಕ್ಕೆ ಅನುಗುಣವಾಗಿಲ್ಲದಿದ್ದರೆ ಅಂಥಾ ಮಂತ್ರಿಯು ತನ್ನ ಪದವಿಯನ್ನು ಕೂಡಲೇ ಬಿಟ್ಟುಬಿಡಬೇಕಾಗುವದು. ಈಗಲಾದರೋ ದೇಶದವರು ಸಂಘದ ಮೂಲಕವೂ, ಕೌನ್ಸಿಲಿನ ಮೂಲಕವೂ ಎಷ್ಟೋ ಚಿಕ್ಕ ಚಿಕ್ಕ ಅನುಕೂಲಗಳನ್ನೂ, ಸಹಾಯಗಳನ್ನೂ ಸರಕಾರದಿಂದ ಕೇಳಿದರೆ ಏನೂ ಕಾರಣ ಕೊಡದೆ ತಿರಸ್ಕರಿಸುವ ಅಧಿಕಾರವು ಚೀಫ್ ಕಮಿಶನರಲ್ಲಿ ಇದೆ. ದೇಶದ ಅಭಿಪ್ರಾಯವನ್ನು ಕಾಲು ಧೂಳಿಗಿಂತ ಕಡೆಯಾಗಿ ಪದೇ ಪದೇ ತಿರಸ್ಕರಿಸಿದರೂ ಅಂಥಾ ಚೀಫ್‌ಕಮಿಶನರು ದೇಶಕ್ಕೆ ಬೇಡವೆಂತ ಹೇಳುವ ಅಧಿಕಾರವು ದೇಶದವರಿಗೆ ಇಲ್ಲ. ಚೀಫ್ ಕಮಿಶನರ ನಿರಂಕುಶ ಪ್ರಭುತ್ವವನ್ನು ಹೋಗಲಾಡಿಸುವದು ದೇಶದ ಪ್ರತಿಯೊಬ್ಬನ ಕೆಲಸವೆಂತ ಸಂಕಲ್ಪ ಮಾಡಿಕೊಳ್ಳುವದು ಅವಶ್ಯವಾಗಿದೆ.

ಆದಾಯ ವೆಚ್ಚದ ಮೇಲೆ ಪ್ರಜಾಜನರಿಗೆ ಈಗ ಎಳ್ಳಷ್ಟು ಅಧಿಕಾರವಿಲ್ಲ. ಪ್ರಜಾಜನರ ಮೇಲೆ ಕಂದಾಯ ಹಾಕಿಕೊಳ್ಳುವ ಹಕ್ಕು ಮತ್ತು ಅದರಿಂದ ಬರುವ ಉತ್ಪತ್ತಿಯನ್ನು ಖರ್ಚು ಮಾಡುವ ಹಕ್ಕು ಪ್ರಜಾಪ್ರತಿನಿಧಿ ಸಂಸ್ಥೆಯಾದ ಕಾಯಿದೆ ಮಂಡಲಿಗೆ ಇರಬೇಕು. ಇಂಥಾ ಹಕ್ಕು ಇದ್ದಿದ್ದರೆ ಮಾವುಕೂಟದಲ್ಲಿ ಸುಮಾರು 15 ಲಕ್ಷ ರೂಪಾಯಿ ಕೊಚ್ಚಿಕೊಂಡು ಹೋಗಲು ಬಿಡುತ್ತಿರಲಿಲ್ಲ. ಫಾರೆಸ್ಟು ಇಲಾಖೆಯಲ್ಲಿ ದುಂದು ಖರ್ಚು ಆಗುತ್ತಿರಲಿಲ್ಲ. ದೇಶದ ಜನರಲ್ಲಿ ನೂರಕ್ಕೆ 93 ಜನರು ಅಕ್ಷರ ತಿಳಿಯದವರಾಗಿರುತ್ತಿರಲಿಲ್ಲ. ಪ್ರಜಾ ಜನರ ಅನುಮತಿ ಇಲ್ಲದೆ ಹಾಕುವ ತೆರಿಗೆಗಳು ಸುಲಿಗೆಯೆಂತ ಬ್ರಿಟಿಷ್ ಜನರು ನಂಬುತ್ತಾರೆ. ಈ ತತ್ವವು ನಮಗೆ ವ್ಯಾಪಕವಾಗುವಂತೆ ಮಾಡಿ ದೇಶದ ಸುಲಿಗೆಯು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳಬೇಕಾದದ್ದು ದೇಶದವರ ಕರ್ತವ್ಯವಾಗಿದೆ. ದೇಶದ ಆಡಳಿತ ನಡೆಯಬೇಕಾದರೆ ಜನರು ತೆರಿಗೆ ಕೊಡಲೇ ಬೇಕು. ಆದರೆ ಹಾಗೆ ಕೊಡುವ ತೆರಿಗೆಯನ್ನು ಜನರ ಒಪ್ಪಿಗೆಯಿಂದ ಕೊಡಬೇಕು ಮತ್ತು ಅದರ ಉತ್ಪತ್ತಿಯು ಜನರ ಅಪೇಕ್ಷೆಗೆ ಅನುಗುಣವಾಗಿ ಖರ್ಚಾಗಬೇಕು.

ಈ ಕಾಯಿದೆ ಮಂಡಲಿಯ ಸದಸ್ಯರುಗಳನ್ನು ಚುನಾಯಿಸುವ ಹಕ್ಕು ಯಾರಿಗೆ ಇರಬೇಕೆಂಬುವುದನ್ನು ಮತ್ತೆ ಯೋಚಿಸಬೇಕು. ದೇಶದ ನಿವಾಸಿಗಳೆಲ್ಲರ ಕ್ಷೇಮಕ್ಕಾಗಿ ದೇಶವು ಆಳಲ್ಪಡಬೇಕಾದರೆ ಕಾಯಿದೆ ಮಂಡಲಿಯು ದೇಶದ ಎಲ್ಲಾ ಖಾಯಂ ವಾಸಸ್ಥರಿಗೆ ಜವಾಬ್ದಾರಿಯಾಗಿರಬೇಕು. ಆದುದರಿಂದ ದೇಶದಲ್ಲಿ ಖಾಯಂ ವಾಸಸ್ಥರಿರುವ ಪ್ರಾಯ ಬಂದ ಪ್ರತಿಯೊಬ್ಬ ಗಂಡಸಿಗೂ, ಹೆಂಗಸಿಗೂ ಓಟಿನ ಹಕ್ಕಿರತಕ್ಕದ್ದು. ಇದು ಪ್ರಜಾ ಸತ್ತಾತ್ಮಕ ಸರ್ಕಾರದ ತಳಹದಿಯಾಗಿದೆ. ಹೀಗಿಲ್ಲವಾದರೆ ಈಗಿನ ಸ್ವರಾಜ್ಯದ ಚಳವಳವು ಬಿಳೀ ನಿರಂಕುಶ ಪ್ರಭುತ್ವದ ಅಧಿಕಾರವನ್ನು ದೇಶೀಯ ನಿರಂಕುಶ ಪ್ರಭುತ್ವಕ್ಕೆ ವರ್ಗಾಯಿಸಲು ಮಾಡುತ್ತಿರುವ ಪ್ರಯತ್ನವೆಂದು ನಮ್ಮ ಆಳರಸರು ಹೇಳುತ್ತಿರುವ ಆಕ್ಷೇಪಣೆಗೆ ಗುರಿಯಾಗಬೇಕಾಗುವದು. ದೇಶದಲ್ಲಿ ಸ್ಥಿರ ಆಸ್ತಿ ಇದ್ದು ಯಾವ ತರದಲ್ಲಾದರೂ ಕಂದಾಯ ಕೊಡುವಂತವರಿಗೆ ಮಾತ್ರ ಓಟಿನ ಹಕ್ಕು ಕೊಡುವದು ಉಚಿತವೆಂದು ವಾದಿಸುವವರೂ ಇದ್ದಾರೆ. ಆದರೆ ಈ ತತ್ವದ ಮೇಲೆ ಹೋಗುವದಾದರೆ ಈ ದೇಶದಲ್ಲಿಯೇ ಹುಟ್ಟಿ ಬೆಳೆದು, ಇಲ್ಲಿಯೇ ಸಾಯುವಂಥ ಜನರಿಗೆ ಓಟಿನ ಹಕ್ಕು ದೊರೆಯದು. ದೇಶದ ಜನರ ಅಭ್ಯುದಯಕ್ಕೆ ಒಂದಲ್ಲ ಒಂದು ವಿಧದಲ್ಲಿ ಕೆಲಸ ಮಾಡುತ್ತಿರುವ ಖಾಯಂ ವಾಸಸ್ಥರು ಕಂದಾಯ ಕೊಡುವದಿಲ್ಲವೆಂಬ ಕಾರಣದಿಂದ ಅವರಿಗೆ ದೇಶದ ಆಡಳಿತದಲ್ಲಿ ಹಕ್ಕಿಲ್ಲದಂತೆ ಮಾಡುವದು ಎಂದೂ ಸರಿಯಲ್ಲ.

ಕೋಮುವಾರು ಅಥವಾ ಪಂಗಡವಾಗಿ ಓಟರುಗಳನ್ನು ವಿಭಾಗಿಸಿ ಪ್ರತ್ಯೇಕವಾಗಿ ಪ್ರತಿನಿಧಿಗಳನ್ನು ಚುನಾಯಿಸುವದು ದೇಶದ ಏಳಿಗೆಗೆ ಹಿತಕರವಲ್ಲ. ಕೋಮುವಾರು ಚುನಾವಣೆಯಿಂದ ದೇಶದಲ್ಲಿ ಮಾತ್ರವಲ್ಲ ಕೌನ್ಸಿಲಿನಲ್ಲಿಯೂ ಜನರ ಒಗ್ಗಟ್ಟಿಗೆ ಕುಂದಕ ಬರುತ್ತದೆ. ಅಲ್ಲದೆ ಅಂಥಾ ಪ್ರತಿನಿಧಿತ್ವದಲ್ಲಿ ಯಾವದೊಂದು ಕೋಮಿಗೂ ಕೌನ್ಸಿಲಿನಲ್ಲಿ ಬಹುಮತ ದೊರೆಯುವುದಿಲ್ಲವಾದುದರಿಂದ ಅದರಿಂದ ಕೋಮುಗಳ ಹಿತವನ್ನು ಕಾಯಲು ಸಾಧ್ಯವಿಲ್ಲ. ಪ್ರತಿಯೊಬ್ಬ ಪ್ರತಿನಿಧಿಯೂ ಎಲ್ಲಾ ತರಹದ ಜನರಿಗೂ ಜವಾಬ್ದಾರನಾಗಿರಬೇಕು. ಆದುದರಿಂದಲೇ ಹಿಂದುಳಿದವರಿಗೂ ಕೂಡ ಪ್ರತ್ಯೇಕ ಪ್ರತಿನಿಧಿತ್ವ ಇರಬಾರದಾಗಿ ತೀರ್ಮಾನಿಸಿರುವದಾಗಿದೆ. ಕೂಡಲೇ ಒಗ್ಗಟ್ಟಾಗಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಲು ಅನುಕೂಲವಾಗುವದು. ಈ ವಿಷಯವನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕಾಗಿ ಕೋರುತ್ತೇವೆ.

ಜಮೀನ್ದಾರರ ಸಂಘದ ಮಹಾ ಸಭೆ.

ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಜನರಲ್ ಮೀಟಿಂಗು ಈ ತಾ ೯ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಸೋಮವಾರಪೇಟೆ ಶಾಲೆಯ ಬಳಿ ಹಾಕಿದ್ದ ಚಪ್ಪರದಲ್ಲಿ ಪ್ರಾರಂಭವಾಯಿತು. ದೇಶದ ಎಲ್ಲಾ ಭಾಗಗಳ ಸುಮಾರು ೪೦೦ ಜನರು ನೆರೆದಿದ್ದರು. ಈ ಕೆಳಗಿನ ಮುಖ್ಯಸ್ಥರು ಹಾಜರಿದ್ದವರ ಪೈಕಿ ಕೆಲವರಾಗಿದ್ದರು. ಮೆ ಗಳಾದ ಪಿ. ಟಿ. ಕ[illegible]ಕಾಳಪ್ಪ (ಸಂಘದ ಅಧ್ಯಕ್ಷರು) ಸಿ. ಯನ್. ವೆಂಕಪ್ಪಯ್ಯ ಮತ್ತು ಯನ್. ಆರ್. ಸುಬ್ಬಣ್ಣಯ್ಯ (ಉಪ ಅಧ್ಯಕ್ಷರುಗಳು.) ರಾ. ಬಾ. ಕೋದಂಡ ಅಪ್ಪಯ್ಯ, ಶ್ರೀಮತಿ ಕೊಡಂದೆರ ಸೀತವ್ವ, ಮೆ. ಗಳಾದ ಕೊಡಂದೆರ ಸಿ. ತಿಮ್ಮಯ್ಯ, [illegible]ಳ್ಳಿಮಾಡ ಕರುಂಬಯ್ಯ, ಸಿ. ಹೆಚ್. ಜಿ. ಕಾಳೇಗೌಡ, [illegible]ಮ್ಮಾಡ ಮಾದಪ್ಪ, ಯಂ. ಯಂ ಸಿದ್ದೀಕ್, ಸಂತ್ರೇರ [illegible]ಪ್ಪ, ಜಿ. ಯಂ ಮಂಜುನಾಥಯ್ಯ, ಅಬ್ದುಲ್ ಗಫೂರ್ ಖಾನ್ [illegible]ಮೈಸ್ಸಿ, ಮಾದಂಡ ಮಂದಣ್ಣ, ಪಟ್ಟರ ಹರಿಗಪ್ಪ, ಬಿ. ಯನ್ ಸಿದ್ದಪ್ಪ ಶೆಟ್ಟಿ, ಕೋಡಿರ ತಮ್ಮಯ್ಯ, ಕೋಟೆರ ಚಿಣ್ಣಪ್ಪ, [illegible]ದಿಯಂಡ ಮಾಚಯ್ಯ, ಡಿ. ನಾರಾಯಣ ಶೆಟ್ಟಿ, ಬಿದ್ದಂಡ ಸುಬ್ಬಯ್ಯ, ಯಂ. ಸಿದ್ದಲಿಂಗಪ್ಪ, ಮನೆಯಪಂಡ ತಿಮ್ಮಯ್ಯ, ಸಿಂಗೂರು ಮಾದಪ್ಪ, ಚೌರಿರ ಅಪ್ಪಯ್ಯ, ನಡಿಕೇರಿಯಂಡ ಕರುಂಬಯ್ಯ, ಬೆಳ್ಳಾರಳ್ಳಿ ಬಸವಣ್ಣಯ್ಯ, ಮಣವಟ್ಟಿರ [illegible]ಪ್ಪಯ್ಯ, ಮನೆಯಪಂಡ ಚಿಣ್ಣಪ್ಪ, ಹೆಬ್ಬಾಲೆ ಹೊನ್ನಪ್ಪ, ಬಿ. ರ್. ಶೇಷಣ್ಣ, ಕೆಳ್ಳಾಮನೆ ಶ್ಯಾಮಣ್ಣ, ಹೆಚ್. ಡಿ ಚೆನ್ನಪ್ಪ, ಚೇರಂಡ ಸೋಮಯ್ಯ, ನಡಿಕೇರಿಯಂಡ ಸಂಚಪ್ಪ, ಹೆಚ್. ಟಿ. ಮುತ್ತಣ್ಣ, ಡಿ. ಎ. ತಿಮ್ಮಯ್ಯ, ಅಜ್ಜಿಗುಟ್ಟಿರ [illegible]ನ್ನಪ್ಪ, ಅಜ್ಜಮಾಡ ಮಾದಪ್ಪ, ಬೇಳೂರು ಬಸವೇಗೌಡ, [illegible] ಯಂ. ಸುಫಿ, ಪಾಂಡಂಡ ಚಂಗಪ್ಪ, ಶೆಕ್ಕಡ ಅನಂದಯ್ಯ, ಕರ್ಗಳ್ಳಿ ಪುಟ್ಟಯ್ಯ, ಯಸ್. ಬಾವುದಿನ್, ಪಿ ಐ. ಬೆಳ್ಯಪ್ಪ (ಜ. ಸಕ್ರೆಟರಿ.) ಇವರಲ್ಲದೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪೋಲೀಸು ಡೆಪ್ಯುಟಿ ಸುಪರಿಂಟೆಂಡೆಂಟರು, ಉ. ಕೊಡಗು ತಾಲೋಕು ಸುಭೇದಾರರು, ಪಾರುಪತ್ಯಗಾರರು ಮೊದಲಾದ ಉದ್ಯೋಗಸ್ಥರೂ ಬಂದಿದ್ದರು.

ನಿಯಮಿತ ಕಾಲಕ್ಕೆ ಸರಿಯಾಗಿ ಮಧ್ಯಾಹ್ನ 12½ ಗಂಟೆಗೆ ಮಹಾಸಭೆಯ ಅಧ್ಯಕ್ಷರಾದ ಮದ್ರಾಸಿನ ಶ್ರೀಯುತ ಎಸ್. ಸತ್ಯಮೂರ್ತಿಯವರು ಮೋಟಾರು ಕಾರಿನಲ್ಲಿ ಮಡಿಕೇರಿಯಿಂದ ಸೋಮವಾರಪೇಟೆಗೆ ಬಂದು ತಲಪಿದರು. ಸಂಘದ ಅಧ್ಯಕ್ಷರೇ ಮೊದಲಾದವರು ಅವರಿಗೆ ಸ್ವಾಗತವಿತ್ತು ವಾಲಗ ಸಮೇತ ಅವರನ್ನು ಪೇಟೆಯ ಮಧ್ಯಕ್ಕಾಗಿ ಮೆರವಣಿಗೆಯಲ್ಲಿ ಸ್ಕೂಲಿಗೆ ಕರೆದುಕೊಂಡು ಹೋದರು. ಅಲ್ಲಿ ಸ್ವಾಗತ ಅಧ್ಯಕ್ಷರೇ ಮೊದಲಾದವರು ಅವರಿಗೆ ಸ್ವಾಗತವ ಕೊಟ್ಟರು. ಸತ್ಯಮೂರ್ತಿಯವರು ಶಾಲೆಯಲ್ಲಿ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡ ಮೇಲೆ ಚಪ್ಪರದ ಎದುರಿನಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿದರು. ಕೂಡಲೇ ಸಂಗೀತ ಪಾರ್ಟಿಯಿಂದ ಅಮ್ಮತ್ತಿಯಲ್ಲಿ ತರಬೇತಾದ ಸ್ವಯಂಸೇವಕರು ಮೆ. ಮಾತಂಡರವರೊಂದಿಗೆ ಬಾವುಟದ ಸುತ್ತಲೂ ನಿಂತು ರಾಷ್ಟ್ರೀಯ ಗೀತವನ್ನು ಹಾಡಿದರು.

ನಂತರ ಮಹಾ ಸಭೆಯ ಅಧ್ಯಕ್ಷರು ಚಪ್ಪರದ ಒಳ ಪ್ರವೇಶ ಮಾಡಲು ಅಲ್ಲಿ ನೆರೆದಿದ್ದ ಜನರು ಎದ್ದು ನಿಂತು ಚಪ್ಪಾಳೆಯಿಂದ ಅವರನ್ನು ಗೌರವಿಸಿದರು. ಚಪ್ಪರವು ವಿಶಾಲವಾದ ಹುಲ್ಲು ಮಾಡು ಸಮೇತ ಕಟ್ಟಲ್ಪಟ್ಟು ರಾಷ್ಟ್ರೀಯ ಧುರೀಣರ ಭಾವಚಿತ್ರಗಳಿಂದ ಅಲಂಕರಿಸಲ್ಪಟ್ಟಿತ್ತು. ಹಿಂದಲಿನ ರಾತ್ರಿ ಜೋರಾದ ಮಳೆ ಬಿದ್ದಿದ್ದರೂ ಚಪ್ಪರದಲ್ಲಿ [illegible] ಯಾವ ಅನಾನುಕೂಲವೂ ಆಗಲಿಲ್ಲ. ಅಧ್ಯಕ್ಷರು ಆಸನವನ್ನು ಅಲಂಕರಿಸಿದ ಮೇಲೆ ಸಣ್ಣ ಮಕ್ಕಳು ಪ್ರಾರ್ಥನೆ ಹಾಡನ್ನು ಇಂಪಾಗಿ ಹಾಡಿದರು. ನಂತರ ಸ್ವಾಗತಾಧ್ಯಕ್ಷರಾದ ಮೆ. ಸಿ. ಹೆಚ್. ಜಿ. ಕಾಳೇಗೌಡರು ತಮ್ಮ ಸ್ವಾಗತ ಭಾಷಣವನ್ನು ಓದಿದರು. (ಇದನ್ನು 5ನೇ ಪುಟದಲ್ಲಿ ಪ್ರಕಟಿಸಲಾಗಿದೆ.) ಇದು ಮುಗಿದ ಮೇಲೆ ಸ್ವಾಗತ ಅಧ್ಯಕ್ಷರು ಶ್ರೀ. ಸತ್ಯಮೂರ್ತಿಯವರನ್ನು ಮಹಾ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂದು ಕೋರಿಕೊಂಡು ಅವರಿಗೆ ಏಲಕ್ಕಿ ಹಾರವನ್ನು ಹಾಕಿ ಹಣ್ಣು ಹೂಫಲಗಳ ತಟ್ಟೆಯನ್ನು ಕೊಟ್ಟರು. ಕೂಡಲೇ ಶ್ರೀಯುತ ಸತ್ಯಮೂರ್ತಿಯವರು ಚಪ್ಪಾಳೆಗಳಿಂದ ಅಧ್ಯಕ್ಷ ಪದವಿಯನ್ನು ವಹಿಸಿ ತಮ್ಮ ಭಾಷಣವನ್ನು ಮಾಡಿದರು. ಇಂಗ್ಲೀಷ್ ಭಾಷೆಯಲ್ಲಿತ್ತು ಅವರ ಭಾಷಣವು ಕನ್ನಡದಲ್ಲಿ ತರ್ಜುಮೆ ಮಾಡಲ್ಪಟ್ಟಿತು.

ಅಧ್ಯಕ್ಷರ ಭಾಷಣ

ಮಹಿಳೆಯರೆ ಮತ್ತು ಮಹನೀಯರೇ,

ನಿಮ್ಮದೂ ಮತ್ತು ನನ್ನದೂ ಅಲ್ಲದ ಪರಕೀಯರ ಭಾಷೆಯಲ್ಲಿ ಮಾತಾಡಬೇಕಾದದ್ದಕ್ಕೆ ನಾನು ಬಹಳ ವ್ಯಸನಪಡುತ್ತೇನೆ. ನಿಮ್ಮ ಪರಿಚಯವನ್ನು ಮಾಡಿಕೊಳ್ಳಲು ನನಗೆ ಅನುಕೂಲ ಕಲ್ಪಿಸಿಕೊಟ್ಟದ್ದಕ್ಕಾಗಿ ಒಸೂನಸ್ವಾಗತ ಸಂಘಕ್ಕೂ, ಈ ಮಹಾಸಭೆಯ ಸಭ್ಯಗಳ ಸಮಿತಿಗೂ ತುಂಬಾ ವಂದಿಸುತ್ತೇನೆ. ಬ್ರಿಟಿಷ್ ಇಂಡಿಯಾದಲ್ಲಿರುವ ನಮಗೆ ಕೊಡಗು ದೇಶದ ವಿಷಯ ಹೆಚ್ಚೇನೂ ಗೊತ್ತಿಲ್ಲದೆ ಇರುವದರಿಂದ ಕೊಡಗು ದೇಶವು ವಿಶೇಷ ತರದ ಜನರಿಂದ ವಾಸಿಸಲ್ಪಡುವ ವಿಶೇಷ ಭೂಮಿಯಾಗಿರಬಹುದೆಂದು ನೆನೆಸಿದ್ದೆನು. ಆದರೆ ಇಲ್ಲಿಯೂ ಬ್ರಿಟಿಷ್ ಇಂಡಿಯಾದ ಬೇರೆ ಕಡೆಗಳಂತೆ ಹಿಂದೀಯರ ಸ್ವಭಾವಗಳು, ನಡತೆ ನೀತಿಗಳು ಮತ್ತು ಉಡುಪುಗಳು ಇರುವಂತವರೇ ಇರುವದನ್ನು ನೋಡಿ ನನಗೆ ಸಂತೋಷಕರವಾದ ನಿರಾಶೆಯೂ ಆಯಿತು. ನಿಮ್ಮ ಸಂಪದ ಹೆಸರು ಏನಿದ್ದರೂ ಅದು ಕೊಡಗಿನ ನಿವಾಸಿಗಳ ರಾಜಕೀಯ, ಮಾನಸಿಕ, ಆರ್ಥಿಕ ಅಭಿವೃದ್ಧಿಗೆ ಹೋರಾಡತಕ್ಕ ಪ್ರಜಾಸತ್ತಾತ್ಮಕ ಸಂಸ್ಥೆಯೆಂದು ನನಗೆ ಗೊತ್ತಾಗುತ್ತದೆ. ಪ್ರಕೃತಿಯು ಬಹು ಉದಾರದಿಂದ ನಿಮ್ಮ ದೇಶವನ್ನು ಫಲವಂತವಾಗಿ ಮಾಡಿದೆ

ಕೊಡಗಿಗೆ ಸ್ವರಾಜ್ಯ.

ನಿಮಗಾಗಿ ಶಾಸನವು ಮಾಡುವ ಹಕ್ಕು ಒಬ್ಬ ವ್ಯಕ್ತಿಗಿರುವ ಈಗಿನ ಪದ್ಧತಿಯು ಒಲಿಸ್ಯಕಿಯಕ್ಕೆ ಮಿಂಚಿದಂತಿದೆ ಮತ್ತು ಅದು ನಿಮ್ಮ ದೇಶವು ನಿಮಗೆ ಬೇಕಾದಂತೆ ಅಭಿವೃದ್ಧಿಗೊಳ್ಳಲು ಕಂಟಕವಾಗಿದೆ. ಈ ವಿಷಯದಲ್ಲಿ ನಿಮ್ಮ ಪ್ರಾಂತ್ಯವು ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳಿಗಿಂತ ಹಿಂದೆ ಬಿದ್ದಿರುವದು ವ್ಯಸನಕರ. ಚುನಾಯಿತ ಮಂಬರುಗಳುಳ್ಳ ಕೌನ್ಸಿಲಿನ ಮೂಲಕ ನಿಮ್ಮ ಕಂದಾಯ ವಿಧಿಸಿಕೊಳ್ಳುವ ಮತ್ತು ನಿಮ್ಮ ಸರ್ಕಾರದ ಆದಾಯ ವೆಚ್ಚವನ್ನು ಮಂಜೂರು ಮಾಡುವ ಹಕ್ಕು ನಿಮಗಿರಬೇಕು. ಆದಾಯ ವೆಚ್ಚಗಳ ಮೇಲೆ ಅಧಿಕಾರವಿಲ್ಲದಿರುವ ಕೌನ್ಸಿಲು ಜೀವವಿಲ್ಲದ ಮನುಷ್ಯನಂತೆಯೇ ಸರಿ. ಇನ್ನೊಂದು ವಿಷಯವೇನಂದರೆ —ಕಾಯಿದೆ ಮಂಡಲಿಗೆ ಜವಾಬ್ದಾರರಾಗಿರುವ ಮಂತ್ರಿಗಳ ಧೋರಣೆಗೆ ಒಳಪಟ್ಟು ಕೆಲಸಮಾಡುವ ಸೀದಾ ನೇಮಿಸಲ್ಪಡುವ ಸರ್ಕಾರಿ ಉದ್ಯೋಗಸ್ಥರಿರಬೇಕು. ಇವು ಸ್ವರಾಜ್ಯ ಶಬ್ದಕ್ಕೆ ಅರ್ಥಕವಾಗುವಂಥ ವಿಷಯಗಳಾಗಿವೆ. ಕೊಡಗಿಗೆ ತನ್ನ ಶಾಸನವನ್ನು ತಾನೇ ಮಾಡಿಕೊಳ್ಳುವ ಹಕ್ಕು, ತನ್ನ ಕಂದಾಯವನ್ನು ತಾನೇ ಹಾಕಿಕೊಳ್ಳುವ ಹಕ್ಕು, ಮಂತ್ರಿಗಳ ಅಧೀನರಾಗಿರುವ ಉದ್ಯೋಗಸ್ಥರನ್ನು ನೇಮಿಸಿಕೊಳ್ಳುವ ಹಕ್ಕು ಕೊಡಗಿಗೆ ಇರಬಾರದೆಂತ ಹೇಳುವವರು ಯಾರಾದರೂ ಈ ಸಭೆಯಲ್ಲಿ ಇದ್ದಾರೋ? ಕೊಡಗಿನಲ್ಲೇ ಅಂಥವರ್ಯಾರೂ ಇರಲಾರರೆಂತ ನಂಬುತ್ತೇನೆ. ನಿಮ್ಮ ಭಾವೀ ರಾಜಕೀಯ ಸ್ಥಿತಿಯನ್ನು ನಿರ್ಣಯಿಸುವ ಹಕ್ಕು ತತ್ಕಾಲ ಇರುವವರ ಮೇಲೆ ಶಾಂತತೆಯಿಂದಲೂ, ನ್ಯಾಯರೀತಿಯಿಂದಲೂ ಒತ್ತಾಯಪಡಿಸಿ ನಿಮ್ಮ ಆವಶ್ಯಕತೆಗಳನ್ನು ಕೈಗೂಡಿಸಿಕೊಳ್ಳಬೇಕು.

ಕೊಡಗಿನ ಈಗಿನ ರಾಜಕೀಯ ಸ್ಥಿತಿ.

ಈಗ ಜಾರಿಯಲ್ಲಿರುವ ರಾಜಕೀಯ ರಚನೆಯು ಅರ್ಧಕ್ಕೆ ತಲಪಿದಂತೂ ಸಹ ಇಲ್ಲ. ಅದು ತೂಗಹಾಕಿದ ಶವಯಂತಿದೆ. ಅದು ಮುಂದು ಪ್ರವಾಹಕ್ಕೆ ಒಂದಾದರೂ ಹೆಜ್ಜೆ ಇಡುವಂತಿದೆ. ಚುನಾಯಿತ ಮೆಂಬರುಗಳ ಬಹುಮತವಿದ್ದರೂ ತಕ್ಕ ಬೇಕಾದ ಶಾಸನಗಳನ್ನೆಲ್ಲಾ ಮಾಡಿಕೊಳ್ಳಲು ಹಕ್ಕಿಲ್ಲದ ಈ ತರದ ಕೌನ್ಸಿಲಿನಿಂದ ಪ್ರಯೋಜನವೇನು? ಹೆಚ್ಚಿಗೆ ಬಾಲು ಹಾಕುವ ಅಧಿಕಾರವಿದ್ದರೂ ಆದಕ್ಕೆ ಸರಿಯಾದ ಬೆಲೆ ಕೊಡುವದೂ, ಬಿಡುವದೂ ಅಧಿಕಾರಿಗಳ ಕೈಯಲ್ಲಿ. ಈ ಕೌನ್ಸಿಲಿನಿಂದ ಪ್ರಯೋಜನವಿಲ್ಲವೆಂದು ಜನರಿಗೆ ಸ್ವತಾಗಿ ತುಂಬಾ ಅತೃಪ್ತಿ ಉಂಟಾಗಿದೆ. ಮನುಷ್ಯತ್ವದ ಪ್ರವೃತ್ತಿಯನ್ನು ನೋಡಿದರೆ ದಬ್ಬಾಳಿಕೆಯೂ ಸ್ವರಾಜ್ಯ ವಿನಹ ಕಳಂಕತೆಯ ಕ್ರಮವಿಲ್ಲವೆಂತ ಹೇಳಬಹುದು. ಗ್ರೇಟ್ ಬ್ರಿಟನ್ನಿನವರು ಕೊಡಗನ್ನು ಆಳಬೇಕು, ಇಲ್ಲವೆ ಕೊಡಗಿನವರು ಕೊಡಗನ್ನು ಆಳಬೇಕು. ಈ ವಿಷಯ ಒಂದೆರಡು ಮಾತು ಹೇಳಬೇಕೆಂದಿದ್ದೇನೆ. ನೀವು ರಾಜಕೀಯ ಸುಧಾರಣೆ ಸಿಕ್ಕುತ್ತದೆಯೆಂತಲೂ, ಏನಾದರೂ ಸುಧಾರಣೆ ಸಿಕ್ಕಬಹುದೆಂತಲೂ ತಿಳಿಯುತ್ತೇನೆ. ದ್ವಿಮುಖ ಸರ್ಕಾರ ಕ್ರಮವು ನಿಮ್ಮ ಎರಡನೇ ಮೆಟ್ಟಲಾಗಿರಬಹುದೆಂತಲೂ ತಿಳಿಯುತ್ತ. ದ್ವಿಮುಖ ಸರಕಾರವನ್ನು ಬ್ರಿಟಿಷ್ ಇಂಡಿಯಾದ ಬೇರೆ ಪ್ರಾಂತ್ಯದವರು ಸಂಶಯವಿಲ್ಲದೆ ತಿರಸ್ಕರಿಸುತ್ತಾರೆ. ಆ ಸರಕಾರ ಕ್ರಮವನ್ನು ಒಪ್ಪಿಕೊಳ್ಳಬಾರದೆಂತ ನಿಮಗೆ ನಾನಾಗಿಯೂ ಹೇಳುತ್ತೇನೆ. ಪ್ರಾಂತೀಕ ಸ್ವತಂತ್ರಕ್ಕೆ ಕಡಿಮೆಯಾದ ಯಾವ ಸುಧಾರಣೆಯನ್ನೂ ಅಂಗೀಕರಿಸಿಕೊಳ್ಳಬಾರದು. ಕೊಡಗಿಗೆ ಸ್ವರಾಜ್ಯವೇ ಸಿಕ್ಕಬೇಕು. ಬ್ರಿಟಿಷ್ ಕಮೀಷನರ ನಿಶ್ಶಂಕವಿಲ್ಲದ ನಿರಂಕುಶ ಪ್ರಭುತ್ವವೇ ದ್ವಿಮುಖ ಸರಕಾರಕ್ಕಿಂತ ಒಳ್ಳೆಯದು. ದ್ವಿಮುಖ ಸರಕಾರವೆಂದರೆ ಕಮೀಷನರ ಬಲವಾದ ಮುಷ್ಟಿಗೆ ಮಂತ್ರಿಗಳೆಂಬ ಮಖಮಲ್ಲಿನ ಹೊದಿಕೆಯುಳ್ಳದ್ದಾಗಿದೆ. ದ್ವಿಮುಖ ಸರಕಾರವೆಂದರೆ ಆತ್ಮವ ನಾಶಪಡಿಸುವಂಥದ್ದಾಗಿದೆ.

ಕೊಡಗಿಗೆ ಸ್ವರಾಜ್ಯ ಬೇಕೆಂತಾದರೆ ಕೂಡಲೇ ಪಡೆಯಬೇಕಾದ ಕೆಲವು ಸುಧಾರಣೆಗಳಿವೆ. ಕೊಡಗಿನ ಭವಿಷ್ಯತ್ತು ಯಾವ ರೂಪ ತಾಳಬೇಕೆಂಬದೇ ಮುಖ್ಯವಾದ ಚರ್ಚಾಸ್ಪದ ವಿಷಯವೆಂತ ತಿಳಿಯುತ್ತೇನೆ. ಕೊಡಗು ಪ್ರತ್ಯೇಕವಾಗಿಯೇ ಇರಬೇಕೋ, ಮದ್ರಾಸಿನೊಂದಿಗೆ ಇರಬೇಕೋ, ಮುಂದೆ ಆಗಲಿಕ್ಕಿರುವ ಕರ್ನಾಟಕ ಪ್ರಾಂತ್ಯದೊಳಗೆ ಸೇರಿಕೊಳ್ಳಬೇಕೋ ಎಂಬುದರಲ್ಲಿ ಮತಭೇದವಿದೆಯೆಂತ ತಿಳಿಯುತ್ತೇನೆ. ಇದರ ವಿಷಯ ಹೇಳುವ ಮುಂಚೆ ಕೊಡಗು ಈಗ ಬಹು ಪ್ರಾಮುಖ್ಯವಾಗಿಯೇ ಇಲ್ಲವೆಂತ ಹೇಳಬೇಕಾಗಿದೆ. ಕೆಲವರು ಕೊಡಗು ಕೊಡಗಿನವರಿಗೇ ಇರಬೇಕೆಂತ ಹೇಳುವವರು ಕೊಡಗಿನಲ್ಲಿ ತುಂಬಾ ಯುರೋಪಿಯನರು ಇರುತ್ತಾರೆಂಬದನ್ನು ಮರೆಯುತ್ತಾರೆ. ಕೊಡಗು ಕೊಡಗಿನವರದೇ ಆಗಬೇಕಾದರೆ ಪೂರ್ತಿ ಸ್ವತಂತ್ರ ಪಡೆಯಬೇಕು.

ಸುಧಾರಣೆಗಳು.

ಆಡಳಿತದ ಅಧಿಕಾರವೂ ನ್ಯಾಯತೀರ್ಮಾನ ಅಧಿಕಾರವೂ ಬೇರ್ಪಡಿಸಲ್ಪಡಬೇಕು. ನೀದವಾಗಿಯಾಗಲೀ, ಬೇರೆ ವಿಧದಲ್ಲಾಗಲೀ ಮ್ಯಾಜಿಸ್ಟ್ರೇಟರು ಮತ್ತು ಜಡ್ಜಿಯು ಒಬ್ಬನೇ ಆಗಿರಬಾರದು. ಕಂದಾಯ ವಸೂಲಾತಿಯ ಅದಾಲತು ಸಂಬಂಧದ ಕೇಸಿನಲ್ಲಿ ಕಂದಾಯ ವಸೂಲು ಮಾಡುವ ಉದ್ಯೋಗಸ್ಥನೇ ಜಡ್ಜಿಯಾಗಿರಬಾರದು. ನಿಮ್ಮ ಒರಿಜಿನಲ್ ಜ್ಯೂರಿಸ್ಡಿಕ್ಷನಿನಲ್ಲಿ ಉಂಟಾಗುವ ಕೆಲವು ಬಾಧಕಾವಶ್ಯಕಗಳನ್ನು ನೀವು ಸುಧಾರಣೆಯೆಂದು ಹೇಳಬಹುದಾದರೂ ನಿಮ್ಮ ಎಪ್ಪಲೇಟ್ ಜ್ಯೂರಿಸ್ಡಿಕ್ಷನು ಪುರಾತನಕಾಲದ್ದಾಗಿದೆ. ಇದು ಹೀಗಿರಬಾರದು. ಕೊಡಗಿನ ಜನರಿಗೆ ಸಂಪೂರ್ಣ ವಿಶ್ವಾಸವಿರುವ ಅಪೀಲಿನ ಒಂದು ಹೈ ಕೋರ್ಟ್ ನಿಮಗಿರಬೇಕೆಂದು ನನಗೆ ತೋರುತ್ತದೆ. ಅದು ಮದ್ರಾಸು ಯಾ ಬೊಂಬಾಯಿ ಹೈ ಕೋರ್ಟಿನಲ್ಲಾಗಲೀ ಅಥವಾ ಮೈಸೂರು ಚೀಫ್ ಕೋರ್ಟಿನಲ್ಲಾಗಲಿ ಆಗಬಹುದೆಂದು ಸೂಚಿಸುತ್ತೇನೆ. ಯಾವ ಮನುಷ್ಯನಿಗೂ ಹೆದರದೆ ದೇವರಿಗೆ ಮಾತ್ರ ಭಯಪಟ್ಟು ಮನುಷ್ಯನಿಗೆ ನ್ಯಾಯ ತೀರ್ಪು ಕೊಡುವ, ಶಾಸನ ಗೊತ್ತಿರುವ ಜಡ್ಜಿಗಳಿರಬೇಕು.

2ನೇದು—ನಿಮ್ಮ ಆಬ್ಕಾರಿ ಇಲಾಖೆಯ ಉತ್ಪತ್ತಿಯು ನಾಶಕಾರಕವಾದದ್ದು ಮತ್ತು ಅದು ನಿಮ್ಮ ಸಣ್ಣ ಪ್ರಾಂತ್ಯಕ್ಕೆ ಅಪಕೀರ್ತಿಯಾದದ್ದೆಂದು ತಿಳಿಯಬೇಕು. ಈ ಉತ್ಪತ್ತಿಯು ಪ್ರತಿಯೊಂದು ಕಾಸೂ ಹುಚ್ಚಾಗಿ ತನ್ನ ಹೆಂಡತಿ ಮಕ್ಕಳಿಗೆ ಜೀವನದ ಬೇಕಾ ಅವಶ್ಯಕತೆಗಳನ್ನೂ ಸಹ ಕೊಡದೆ ಇರುವ ಮತ್ತು ಕುಡಿದು ತಮ್ಮನ್ನು ಮೃಗಗಳಂತೆ ಮಾಡಿಕೊಳ್ಳುವ ಅತಿ ಬಡವರಿಂದ ಬರುತ್ತದೆಂಬುದನ್ನು ನೀವು ತಿಳಿಕೊಳ್ಳತಕ್ಕದ್ದು. ಇದರ ಉತ್ಪತ್ತಿಯು ಭೂಕಂದಾಯದ ಉತ್ಪತ್ತಿಗೆ ಮಾತ್ರ ಎರಡನೇಯದಾಗಿರುವದರಿಂದ ಇದರಿಂದ ನಿಮ್ಮ ಸರ್ಕಾರಕ್ಕೆ ತುಂಬಾ ಹಣ ಬರುತ್ತದೆಂದು ನನಗೆ ಗೊತ್ತಿದೆ. ಆದರೆ

(4ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮ ಗಾಂಧಿಯವರ ಸ್ವಚರಿತ್ರೆ.

ಗಟ್ಟಿಯೂ, ಜೊಳ್ಳೂ.

ಮಿ. ಕಾಲೆನ್‌ಬಾಕರು ಹಿಂದೆ ಎಂದೂ ನನ್ನ ದೃಷ್ಟಿಗೆ ಬೀಳದಿದ್ದ ಪ್ರಶ್ನೆಯೊಂದರ ಕಡೆಗೆ ನನ್ನ ಲಕ್ಷ್ಯವನ್ನು ಟಾಲ್‌ಸ್ಟಾಯ್ ಫಾರ್ಮಿನಲ್ಲಿ ತಿರುಗಿಸಿದರು. ನಾನು ಈಗಲೇ ಹೇಳಿರುವಂತೆ ಆಶ್ರಮದಲ್ಲಿನ ಕೆಲವು ಹುಡುಗರು ಕೆಟ್ಟವರಾಗಿಯೂ ಇದ್ದರು. ಇವರಲ್ಲಿ ಕೆಲವು ಮಂದಿ ಸ್ವೇಚ್ಛಂದವರ್ತಿಗಳೂ ಕೂಡ ಇದ್ದರು. ಇವರೊಡನೆ ನನ್ನ ಮೂರು ಜನ ಮಕ್ಕಳೂ ಮತ್ತು ಇದೇ ರೀತಿಯ ಇತರ ಹುಡುಗರೂ ಸೇರುತ್ತಿದ್ದರು. ಇದರಿಂದ ಕಾಲೆನ್‌ಬಾಕರಿಗೆ ಚಿಂತೆಗೆ ಕಾರಣವಾಯಿತು. ಆದರೆ ಅವರ ಲಕ್ಷ್ಯವು ಮುಖ್ಯವಾಗಿ ನನ್ನ ಮಕ್ಕಳನ್ನು ಆ ನಿರಂಕುಶ ಬಾಲಕರೊಡನೆ ಇಟ್ಟಿದ್ದುದರ ಅಯುಕ್ತತೆಯ ಮೇಲೆ ನೆಟ್ಟಿದ್ದಿತು.

ಒಂದು ದಿನ ಅವರು ' ನಿಮ್ಮ ಮಕ್ಕಳನ್ನು ಈ ರೀತಿಯಾಗಿ ಕೆಟ್ಟ ಹುಡುಗರೊಡನೆ ಸೇರಿಸುವುದು ನನ್ನ ಮನಸ್ಸಿಗೆ ಒಪ್ಪುವದಿಲ್ಲ. ಇದರಿಂದ ಒಂದೇ ಒಂದು ಪರಿಣಾಮವಾಗಲು ಸಾಧ್ಯ: ಅವರು ಈ ದುಸ್ಸಹವಾಸದಿಂದ ಕೆಟ್ಟು ಹೋಗುವರು ' ಎಂದು ಬಾಯಿಬಿಟ್ಟು ಹೇಳಿದರು.

ಆಗ ನನಗೆ ಈ ಪ್ರಶ್ನೆಯು ತೊಡಕಾಗಿ ಕಂಡಿತೋ, ಇಲ್ಲವೋ ಎಂಬುದು ಜ್ಞಾಪಕವಿಲ್ಲ. ಆದರೆ ನಾನು ಅವರಿಗೆ ಹೀಗೆ ಹೇಳಿದುದು ನೆನಪಿದೆ.

' ನನ್ನ ಮಕ್ಕಳಿಗೂ, ಈ ಸ್ವೇಚ್ಛೆಯ ಹುಡುಗರಿಗೂ ನಾನೂ ಭೇದವನ್ನು ಕಲ್ಪಿಸುವದೆಂತು? ಇಬ್ಬರ ಜವಾಬ್ದಾರಿಯೂ ನನ್ನ ಮೇಲೆ ಒಂದೇ ಸಮನಾಗಿ ಇದೆ. ನಾನು ಕರೆದುದರಿಂದಲೇ ಈ ಹುಡುಗರು ಇಲ್ಲಿಗೆ ಬಂದಿರುವುದು. ನಾನು ಅವರ ಕೈಗೆ ಸ್ವಲ್ಪ ಹಣವನ್ನು ಕೊಟ್ಟು ಕಳುಹಿಸಿಬಿಟ್ಟರೆ ಅವರು ಒಡನೆಯೇ ಜೋಹಾನ್ಸ್‌ಬರ್ಗಿಗೆ ಓಡಿಹೋಗಿ ಅಲ್ಲಿ ತಮ್ಮ ಹಳೆಯ ದಾರಿಗೆ ಬೀಳುವರು. ನಿಜ ಹೇಳಬೇಕೆಂದರೆ ತಾವು ಇಲ್ಲಿ ಬಂದಿರುವುದರಿಂದ ನನ್ನ ಮೇಲೆ ಉಪಕಾರವನ್ನು ಹೊರಿಸಿರುವರೆಂದು ಅವರೂ, ಅವರ ಹಿರಿಯರೂ ತಿಳಿದುಕೊಂಡಿರುವುದೇನೂ ಅಸಂಭವದ ಮಾತಲ್ಲ. ಇಲ್ಲಿ ಅವರು ಅನೇಕ ಅನಾನುಕೂಲಗಳನ್ನು ಸಹಿಸಬೇಕಾಗಿದೆ. ನಿಮಗೂ, ನನಗೂ ಚೆನ್ನಾಗಿ ತಿಳಿದ ವಿಷಯವೇ. ಆದರೆ ನನ್ನ ಕರ್ತವ್ಯವು ಸ್ಪಷ್ಟವಾಗಿದೆ. ನಾನು ಅವರನ್ನು ಇಲ್ಲಿ ಇಟ್ಟುಕೊಂಡೇ ಇರಬೇಕು. ಅದುದರಿಂದ ನನ್ನ ಮಕ್ಕಳು ಅವಶ್ಯಕವಾಗಿ ಅವರೊಡನೆ ವಾಸಿಸಬೇಕು. ಮತ್ತು ತಾವು ಇತರ ಹುಡುಗರಿಗಿಂತ ಹೆಚ್ಚಿನವರೆಂದು ಇಂದಿನಿಂದ ನನ್ನ ಮಕ್ಕಳು ತಿಳಿದುಕೊಳ್ಳುವುದನ್ನು ನಾನು ಅವರಿಗೆ ಕಲಿಸಬೇಕೆಂದು ನೀವೆಂದಿಗೂ ಇಷ್ಟಪಡುವುದಿಲ್ಲ ! ಅವರ ಮನಸ್ಸಿನಲ್ಲಿ ಅಂತಹ ಹೆಚ್ಚುಗಾರಿಕೆಯ ಭಾವವನ್ನುಂಟುಮಾಡುವುದರಿಂದ ಅವರನ್ನು ತಪ್ಪುದಾರಿಗೆ ಎಳೆದಂತಾಗುತ್ತದೆ. ಇತರ ಹುಡುಗರೊಡನೆ ಬೆರೆತು ಸೇರುವದು ಅವರಿಗೆ ಒಳ್ಳೆಯ ಶಿಕ್ಷಣವಾಗಿ ಅವರು ತಾವಾಗಿ ತಾವೇ ಒಳಿತನ್ನೂ, ಕೆಡಕನ್ನೂ ವಿಂಗಡಿಸಲು ಕಲಿಯುತ್ತಾರೆ. ನಿಜವಾಗಿಯೂ ಅವರಲ್ಲಿ ಒಳ್ಳೆಯ ಅಂಶವೇನಾದರೂ ಇದ್ದರೆ ಅದರ ಪ್ರಭಾವವು ಅವರ ಸಂಗಾತಿಗಳಲ್ಲಿ ತೋರಿಸಿಕೊಳ್ಳುವುದೆಂದು ನಾವು ನಂಬಬೇಕು. ಏನೇ ಆಗಲಿ, ಆ ಹುಡುಗರನ್ನು ನಾನು ಇಲ್ಲಿ ಇಟ್ಟುಕೊಳ್ಳುವುದಲ್ಲದೆ ಬೇರೆ ಮಾರ್ಗವಿಲ್ಲ. ಅದರಲ್ಲಿ ಏನಾದರೂ ಅಪಾಯವಿದ್ದರೆ ನಾವು ಅದನ್ನು ಅನುಭವಿಸಬೇಕು. "

ಕಾಲೆನ್‌ಬಾಕರು ತಲೆಯಲ್ಲಾಡಿಸಿದರು. ಇದರ ಪರಿಣಾಮವು ಕೆಟ್ಟದಾಯಿತೆಂದು ಹೇಳಲಾಗುವುದಿಲ್ಲ. ಈ ಅನುಭವದಿಂದ ನನ್ನ ಮಕ್ಕಳು ಎಷ್ಟು ಮಟ್ಟಿಗೂ ಅಗಲಿ ಕೆಟ್ಟು ಹೋದರೆಂದು ನಾನು ಎಣಿಸುವದಿಲ್ಲ. ವಾಸ್ತವಿಕವಾಗಿ ಅವರಿಗೆ ಕೊಂಚಮಟ್ಟಿಗೆ ಲಾಭವಾಯಿತೆನ್ನುವದು ನನಗೆ ಸ್ಪಷ್ಟವಾಗಿದೆ. ಅವರಲ್ಲಿ ತಾವು ಹೆಚ್ಚಿನವರೆಂಬ ಭಾವದ ನೆಳಲೇನಾದರೂ ಇದ್ದಿದ್ದರೆ ಅದು ಅಳಿಸಿಹೋಗಿ ಎಲ್ಲ ತರದ ಹುಡುಗರೊಂದಿಗೆ ಬೆರೆಯುವುದನ್ನು ಕಲಿತುಕೊಂಡರು. ಇದು ಅವರನ್ನು ಶೀಲ ಶಿಕ್ಷಣಕ್ಕೆ ಗುರಿಮಾಡಿ ಪರೀಕ್ಷಿಸಿತು. ಒಳ್ಳೆಯ ಹುಡುಗರನ್ನು ಕೆಟ್ಟ ಹುಡುಗರ ಸಹವಾಸದಲ್ಲಿಟ್ಟು ಶಿಕ್ಷಣ ಕೊಡುವುದರಿಂದ ಅವರಿಗೇನೂ ಕೆಡಕಾಗುವುದಿಲ್ಲವೆಂದು ಈ ಮತ್ತು ಇದೇ ರೀತಿಯ ಇತರ ಅನುಭವಗಳಿಂದ ನನ್ನ ಗೋಚರಕ್ಕೆ ಬಂದಿದೆ. ಆದರೆ ಇಂತಹ ಕಾರ್ಯವನ್ನು ಕೈಕೊಂಡಾಗ ಹುಡುಗರ ತಾಯಿ ತಂದೆಗಳೂ, ಹಿರಿಯರೂ ಅವರನ್ನು ಜಾಗರೂಕತೆಯಿಂದ ಕಾಯುತ್ತಿರಬೇಕು

ಇದರಿಂದ ಜಾಡಿಯ ಹತ್ತಿನ ಗುಡಾನದಲ್ಲಿ ಬೆಳೆದ ಹುಡುಗರು ಮೋಹಪರರಾಗಿ ದೋಷರಹಿತರಾಗಿರುವರೆಂದು ನಿಶ್ಚಯಿಸಿದ್ದಲ್ಲ. ಆದರೆ ಬೇರೆ ಬೇರೆ ರೀತಿಯಲ್ಲಿ ಬೆಳೆದ ಹುಡುಗ ಹುಡುಗಿಯರಿಗೆ ಒಟ್ಟಿಗೆ ಶಿಕ್ಷಣ ಕೊಡುವಾಗ ಅವರ ತಾಯಿ ತಂದೆಗಳೂ, ಶಿಕ್ಷಕರೂ ಅತ್ಯಂತ ಕಠಿಣ ಪರೀಕ್ಷೆಗೆ ಗುರಿಯಾಗುತ್ತಾರೆನ್ನುವುದೇನೋ ನಿಜ. ಅವರು ಸದಾ ಎಚ್ಚರಿಕೆಯಿಂದಿರಬೇಕು.

NOTICE.

DATED 1ST MAY 1928.

It is proposed to depute a candidate to undergo training in the Agricultural College, Coimbatore, for three years with effect from the 15th June 1928 on a stipend of Rs 25/- per mensem.

2 Application will be received up to the 25th May 1928.

Candidates must have reached the age of 18 years on or before the 15th of May in the year when application is made and must produce the following certificates —

(a) Certificate of the physical fitness, granted by a registerd medical practitioner.

(b) Vaccination certificates showing that the candidate has been vaccinated or has had small pox after the age of 10.

(c) University certificate, if any

(d) Testimonials of good character covering the previous two years

Applications must be in the candidate's own handwriting.

Candidates must have passed completely the Intermediate Examination in arts and science of the University of Madras and have qualified in group I or II thereof or an examination of some other University recognised as equivalent thereto.

The selection of candidates will be made by the Commissioner at 10 A. m. on the 28th May 1928. Applicants should appear in person. The selected candidates will have to appear before the Selection Board at Coimbatore, in June on the dates that will be notified. The Board will make the final selection.

The successful candidate at the final selection should be required to execute an undertaking binding himself to serve the Coorg Administration whenever required, at the close of the training course.

Any further information on the subject can be had in the Office of the undersigned.

K. N Subbaraya
DEPUTY DIRECTOR,
L. R. & ...

ಅಧ್ಯಕ್ಷರ ಭಾಷಣ.

(3ನೇ ಪುಟದಿಂದ ಮುಂದುವರಿದದ್ದು)

'ಐಶ್ವರ್ಯವು ತುಂಬುತ್ತಾ ಜನರು ಕ್ಷೀಣಗತಿ ಹೊಂದಿದರೆ ಆ ದೇಶವು ಅವನತಿಯನ್ನೈದುವದು' ಎಂಬ ಮಾತನ್ನು ನೀವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಕಡುಕತನವು ಐಶ್ವರ್ಯವನ್ನು ಹೆಚ್ಚಿಸುವದಾದರೂ ಜನರನ್ನು ಹಾಳು ಮಾಡುತ್ತದೆ. ಆದುದರಿಂದ ಕೊಡಗು ದೇಶದ ಸಕಲ ಕೋಮಿನ ಜನರನ್ನು, ಈ ಐತಿಹಾಸಿಕ ಮತ್ತು ಸುಂದರವಾದ ಭೂಮಿಯಿಂದ ಈ ದುರ್ವ್ಯಸನವನ್ನು ಕೂಡಲೇ ಹೊರಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೊಡಗು ಸರ್ಕಾರವು ಜನರ ಇಂಥಾ ಕೆಟ್ಟ ಗುಣ ಮತ್ತು ಅಧಃಪತನದಿಂದ ಕೊಬ್ಬುವದಕ್ಕಿಂತ ಅದು ಹಣವಿಲ್ಲದೆ ಕಷ್ಟಪಟ್ಟರೂ ಚಿಂತೆಯಿಲ್ಲ. (ಕರತಾಡನಗಳು)

ಮಲೇರಿಯ ಜ್ವರವನ್ನು ನಾಶಪಡಿಸುವ ವಿಷಯಕ್ಕೆ ನೀವು ಗಮನಿಸಬೇಕಾದದ್ದೇ ಮೂರನೇ ಸುಧಾರಣೆಯಾಗಿದೆ. ಅದನ್ನು ನೀವು ಜಯಪ್ರದವಾಗಿ ನಡಿಸಿದರೆ ಮುಂದಿನ ಜನಾಂಗದ ತಲೆಮಾರಿಯನ್ನು ಕಾಪಾಡುವದಲ್ಲದೆ ಅವರ ಕೃತಜ್ಞತೆಯನ್ನು ಸಹ ನೀವು ಸಂಪಾದಿಸುವಿರಿ.

ಕೆಲವು ಅಭಿಮಾನಿಗಳು ಮುಂದಕ್ಕೆ ತಂದಿರುವ ಕೊಡಗಿನ ಪವಿತ್ರತೆಯ ವಿಷಯದಲ್ಲಿ ನಾನು ಕೊಂಚ ಹೇಳಬೇಕೆಂದಿದ್ದೇನೆ. ಈ ವಿಷಯವು ಕೊಡಗಿನ ಜನರಿಂದಲೇ ತೀರ್ಮಾನಿಸಲ್ಪಡಬೇಕಾದದ್ದಾಗಿದೆ. ಈ ವಿಷಯವನ್ನು ನಾನು ಬಹು ಜಾಗರೂಕತೆಯಿಂದಲೂ ಕುತೂಹಲದಿಂದಲೂ ಆಲೋಚಿಸಿದ್ದೇನೆ. ಮತ್ತು ಕೊಡಗು ದೇಶವು ಕೂಡಲೆ ಪೂರ್ಣ ಸ್ವತಂತ್ರವುಳ್ಳ ಪ್ರಾಂತೀಕ ಸರ್ಕಾರವನ್ನು ಪಡೆಯಲು ಯತ್ನಿಸಬೇಕು ಮತ್ತು ಮುಂದಿನ ಸ್ವಾತಂತ್ರ ಸಂಯುಕ್ತ ಹಿಂದೂ ದೇಶದಲ್ಲಿ ಬರುವ ಕರ್ನಾಟಕ ಪ್ರಾಂತ್ಯದ ಭಾಗವಾಗಬೇಕು ಎಂದು ನನ್ನ ತಿಳುವಳಿಕೆಗೆ ಬಂದಿರುವ ವಿಷಯಗಳಿಂದ ನಾನು ಅಭಿಪ್ರಾಯಪಟ್ಟಿರುತ್ತೇನೆ. ಕೊಡಗು ಮದ್ರಾಸಿನ ಜಿಲ್ಲೆಯಾಗುವದಕ್ಕೆ ನಾನು ಒಪ್ಪುವದಿಲ್ಲ. ಭಾಷಾವಾರು ಪ್ರಾಂತ್ಯಗಳಲ್ಲಿಯೇ ನನಗೆ ನಂಬಿಕೆ. ಹಿಂದೂ ದೇಶದಲ್ಲಿ ಭಾಷಾವಾರು ಪ್ರಾಂತ್ಯಗಳು ಆದಾಗ ಮಾತ್ರ ಸ್ವರಾಜ್ಯವು ನಿಜವಾಗುತ್ತದೆ.

ಸೈಮನ್ ಕಮಿಷನ್ ಬಹಿಷ್ಕಾರ.

ಸೈಮನ್ ಕಮಿಷನನ್ನು ಬಹಿಷ್ಕರಿಸಲು ಜಮೀನ್ದಾರರ ಸಂಘವು ಮಾಡಿರುವ ದೇಶಾಭಿಮಾನದ ಮತ್ತು ಬುದ್ಧಿವಂತಿಕೆಯ ತೀರ್ಪಿಗಾಗಿ ನಾನು ಸಂಘವನ್ನು ಅಭಿನಂದಿಸುತ್ತೇನೆ. ನಮ್ಮ ಸಮಸ್ಯೆಯು ಅತ್ಯಂತ ಕಠಿಣ ತರದ ಆಲೋಚನೆಗಳಿಂದ ಪರೀಕ್ಷಿಸಲ್ಪಟ್ಟಿದ್ದರೂ ಬಹಿಷ್ಕಾರವು ಸಿಟ್ಟಿನಿಂದಾಗಲೀ, ಹಠದಿಂದಾಗಲೀ ಉತ್ಪನ್ನವಾದದ್ದಲ್ಲ. ರಾಷ್ಟ್ರೀಯ ಸ್ವಾಭಿಮಾನದ ಮತ್ತು ಬ್ರಿಟಿಷ್ ಶಕ್ತಿಯನ್ನು ಓದುವಿಕೆಯಿಂದ ದೊರೆತ ತಿಳುವಳಿಕೆಯ ಮೇಲೆ ಆ ತೀರ್ಪು ಮಾಡಲಾಗಿದೆ. ಸೈಮನ್ ಕಮಿಷನಿನೊಂದಿಗೆ ಸಹಕರಿಸುವದರಿಂದ ಬ್ರಿಟಿಷ್ ಇಂಡಿಯಾಕ್ಕಾಗಲಿ ಮತ್ತು ಕೊಡಗಿಗೂ ಏನೊಂದೂ ಪ್ರಯೋಜನ ದೊರೆಯುವದಿಲ್ಲ. ಕಮಿಷನನ್ನು ಬಹಿಷ್ಕರಿಸುವದರಿಂದ ಬ್ರಿಟಿಷ್ ಇಂಡಿಯಾಕ್ಕಾಗಲೀ, ಕೊಡಗಿಗಾಗಲೀ ಏನೊಂದೂ ನಷ್ಟ ಸಂಭವಿಸುವದಿಲ್ಲ. ಸೈಮನ್ ಕಮಿಷನನ್ನು ಬಹಿಷ್ಕರಿಸಲು ನೀವು ಮಾಡಿಕೊಂಡಿರುವ ಬುದ್ಧಿವಂತಿಕೆಯ ತೀರ್ಮಾನವನ್ನು ನೀವು ಕೈಬಿಡಬಾರದಾಗಿ ನಾನು ಬೇಡಿಕೊಳ್ಳುತ್ತೇನೆ. ಕೊಡಗಿಗೆ ಒಂದು ರಾಜಕೀಯ ರಚನೆಯನ್ನು ತಯಾರಿಸಲು ತೀರ್ಮಾನಿಸಿದ್ದಕ್ಕೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಅಬ್ಕಾರಿ ಇಲಾಖೆಯ ಉತ್ಪತ್ತಿಯು ಕಡಿಮೆಯಾಗುವದೆಂದು ನಿಮಗೆ ಗೊತ್ತಿರುವಾಗ್ಯೂ ಸ್ವಾತಂತ್ರ ಪ್ರಾಂತೀಕ ಸರ್ಕಾರ ದೊರಕಿದಾಗ ಆಯ ವ್ಯಯವನ್ನು ನೀವು ಹೇಗೆ ಸರಿಪಡಿಸಬೇಕೆಂಬುದೇ ಮುಖ್ಯ ವಿಷಯವಾಗಿದೆ.

ಕೊಡಗಿನ ಕೆಲವು ಸಮಸ್ಯೆಗಳು.

ಸರ್ಕಾರದ ಆರ್ಥಿಕ ಸಮಸ್ಯೆಯನ್ನು ಬಿಡಿಸಲು ಎರಡು ಉಪಾಯಗಳಿವೆ. ಕೊಡಗಿನ ಯಾವ ಉದ್ಯೋಗಸ್ಥರಿಗೂ ತಿಂಗಳಿಗೆ ಸಾವಿರಕ್ಕಿಂತ ಹೆಚ್ಚಿನ ಸಂಬಳ ಕೊಡಕೂಡದೆಂದು ನಿಮ್ಮ ಕಮಿಟಿಯವರು ಏಕಮತವುಳ್ಳವರಾದದ್ದು ನನಗೆ ಸಂತೋಷ. ಹಲವು ವರ್ಷಗಳ ಹಿಂದೆ ನಾನು ಇದೇ ಮಾತನ್ನು ಬ್ರಿಟಿಷ್ ಇಂಡಿಯಾದಲ್ಲೂ ಹೇಳಿದ್ದೇನೆ. ಹಲವು ವರ್ಷಗಳಿಂದ ನಿಮ್ಮ ಉತ್ಪತ್ತಿಯ ಬಾಬತಿಯನ್ನು ಇಂಡಿಯಾ ಸರ್ಕಾರದವರು ತೆಗೆದುಕೊಂಡು ಹೋಗುತ್ತಿರುವದರಿಂದ ಮಧ್ಯವರ್ತಿ ಸರ್ಕಾರದ ಖಜಾನೆಯ ಮೇಲೆ ಹಕ್ಕು ನಿಮಗೂ ಇದೆ ಎಂದು ನನಗೆ ಎನಿಸುತ್ತದೆ. ಉಪಕಾರಕ್ಕೆ ಪ್ರತ್ಯುಪಕಾರವು ದೊರೆಯಲೇಬೇಕು. ಜವಾಬ್ದಾರಿಯ ಮಂತ್ರಿಗಳು ಬೇಕೆಂದು ಕೇಳಿದ್ದಕ್ಕೆ ನಾನು ಸಂತೋಷಪಡುತ್ತೇನೆ. ಶಾಸನ ಮಾಡುವ ಮತ್ತು ಆದಾಯ ವೆಚ್ಚವನ್ನು ನಡಿಸುವ ಅತ್ಯಂತ ಅಧಿಕಾರ ಸ್ಥಾನವಾದ ಕೌನ್ಸಿಲು ನಿಮಗಿರಬೇಕು. ಕೊಡಗಿಗೊಂದು ಹೈಕೋರ್ಟನ್ನು ನೀವು ಕೇಳಿರುತ್ತೀರಿ. ಅದು ಉತ್ತಮವಾದಾರಿಯೋ ಎಂದು ನಾನು ಹೇಳಲಾರೆ. ಅದಕ್ಕೆ ಆ ವಿಷಯ ನೀವು ಚೆನ್ನಾಗಿ ಆಲೋಚಿಸಬೇಕು. ಅಪೀಲು ವಿಚಾರದಲ್ಲಿ ಇಬ್ಬರು ಜಡ್ಜಿಯರಾದರೂ ಇರಬೇಡವೇ? ಅವರನ್ನು ಇಟ್ಟುಕೊಳ್ಳಲು ನಿಮಗೆ ಸಾಧ್ಯವೋ? ಆದರೆ ನೀವು ಮಾಡುವ ತೀರ್ಮಾನವನ್ನು ಗಟ್ಟಿ ಹಿಡಿದುಕೊಳ್ಳಿ ಮತ್ತು ಮೂರನೇಯವರು ನಿಮ್ಮಲ್ಲಿ ಭಿನ್ನಭೇದಗಳನ್ನು ಕಲ್ಪಿಸದಂತೆ ನೋಡಿಕೊಳ್ಳಿ. ನಿಮ್ಮೊಳಗಿನ ಕಲಹ ಮತ್ತು ತಪ್ಪು ತಿಳುವಳಿಕೆಗಳನ್ನು ಹೆಚ್ಚಿಸಲು ಮೂರನೇಯವರನ್ನು ಬಿಡಬೇಡಿ. ಎಷ್ಟಾದರೂ ಅಂಥಾದಕ್ಕೆ ಎಡೆಕೊಡಬೇಡಿ. ವಿದ್ಯಾವಿಷಯವಾಗಿ, ನಾನು ರಾಷ್ಟ್ರೀಯ ವಿದ್ಯದಲ್ಲಿ ಸಂಪೂರ್ಣ ನಂಬಿಕೆಯುಳ್ಳವನು. ಕೊಡಗಿನ ನರನಾರಿಯರನ್ನು ಯೂರೋಪಿಯನರ ಲಕ್ಷ್ಯವಿಲ್ಲದ ಅನುಯಾಯಿಗಳಾಗಿ ಮಾಡುವದರಲ್ಲಿ ನನಗೆ ವಿಶ್ವಾಸವಿಲ್ಲ. ನಿಮಗೆ ಮಡಿಕೇರಿಯಲ್ಲಿ ಒಂದು ಕಾಲೇಜು ಇರಬೇಕು ಮತ್ತು ಈಗಿನ ಚಿತ್ತ ಮತ್ತು ಶರೀರವನ್ನು ನಾಶಪಡಿಸುವ ಕ್ರಮವನ್ನು ನೀವು ವಿದ್ಯೆಯೆಂದು ಹೇಳುವದಾದರೂ ಅದರ ಬೋಧನ ಕ್ರಮವು ಕನ್ನಡದಲ್ಲಿಯೇ ಆಗಬೇಕು. ಇದರ ವಿಷಯ ನೀವು ಆಲೋಚಿಸಬೇಕು. ಒಂದು ತಲೆಯ ಯುವಕ ಯುವತಿಯರು ಮಾತೃಭಾಷೆಯಲ್ಲಿ ವಿದ್ಯೆಪಡೆದದ್ದೇ ಆದರೆ ನಿಮ್ಮೊಳಗಿರುವ ಕಲಹಗಳು ಮತ್ತು ಅಲ್ಪ ಅಭಿಪ್ರಾಯಗಳು ಮಾಯವಾಗಿ ನೀವು ನಿಮ್ಮ ಐಕ್ಯವನ್ನು ಕಂಡುಕೊಳ್ಳುವಿರಿ.

ನಾನು ಮಾತಾಡಲು ಹಿಂಜರಿಯುತ್ತೇನೆ. ಬ್ರಿಟಿಷ್ ಇಂಡಿಯಾದಲ್ಲಿರುವದಕ್ಕಿಂತ ಇಲ್ಲಿ ಸ್ವಲ್ಪ ಹೆಚ್ಚಿಗೆ ರಾಷ್ಟ್ರಾಭಿಮಾನ ಕುಂದಿದಂತೆ ಕಾಣುತ್ತದೆ. ಇನ್ನೊಂದು ಜನಾಂಗದ ನಡವಳಿಕೆಯನ್ನು ಯೋಚಿಸದೆ ಹಿಂಬಾಲಿಸುವದನ್ನು ನೀವು ಬಿಡಬೇಕು. ನಿಮ್ಮ ದೇಶಕ್ಕೆ ಪ್ರಕೃತಿಯ ಸಹಾಯವು ತುಂಬಾ ಇದ್ದರೂ ಕೈಗಾರಿಕೆಯ ಚರಿತ್ರೆಯೇ ಇಲ್ಲ! ಕೈಗಾರಿಕೆಯ ಭವಿಷ್ಯತ್ತೂ ಇರುವಂತೆ ಕಾಣುವದಿಲ್ಲ. ಅದು ಹಾಗಿರಬೇಕಾದುದಿಲ್ಲ. ಇದಕ್ಕೆ ನೀವು ಗಮನಿಸಬೇಕಾಗಿದೆ.

ಸಮಾಪ್ತಿ

ನಾನು ನಿಮಗೆ ವಿಸ್ತಾರವಾಗಿ ಮಾತಾಡಿರುತ್ತೇನೆ. ಬ್ರಿಟಿಷ್ ಇಂಡಿಯಾದಲ್ಲಿರುವ ನಮಗೆ ಕೊಡಗು ಎಂಬ ಹೆಸರಿನಲ್ಲಿ ಮನೋರಂಜನೆಯು ಮತ್ತು ಪರಿಶುದ್ಧತೆಯು ಕಂಡುಬರುತ್ತದೆ. ಯಾಕೆಂದರೆ—ನಮ್ಮ ಇಹ ಪರ ಜೀವನವನ್ನು ಶುದ್ಧಗೊಳಿಸುವ ಪವಿತ್ರ ಕಾವೇರಿಯು ನಿಮ್ಮ ದೇಶದಲ್ಲಿ ಹುಟ್ಟಿರುತ್ತಾಳೆ. ಪ್ರಾಪಂಚಿಕ ದೃಷ್ಟಿಯಿಂದ ತಂಜಾವೂರ, ತಿರುಚಿನಾಪಳ್ಳಿ, ಕೊಯಂಬುತ್ತೂರು, ಸೇಲಂ ಮೊದಲಾದ ಪ್ರಾಂತ್ಯಗಳಲ್ಲಿ ಇವಳು ನೀರಾವರಿಯ ಮೂಲಸ್ಥಾನಳಾಗಿದ್ದಾಳೆ. ನಿಮ್ಮ ಭೂಮಿಯ ಮಹಿಮೆಗೆ ತಕ್ಕಂತೆ ನೀವಿರುವಿರಾಗಿ ನನ್ನ ಇಚ್ಛೆ. ನಮಗಿಂತಲೂ ಬಹಳ ಈಚೆಗೆ ನೀವು ಸ್ವಾತಂತ್ರ್ಯವನ್ನು ಕಳಕೊಂಡಿರಿ. ನಿಮ್ಮ ಪ್ರಾಂತ್ಯವು ಬ್ರಿಟಿಷರ ಅಧೀನಕ್ಕೆ ಬಂದು ಇನ್ನೂ ಒಂದು ಶತಮಾನವಾಗಿಲ್ಲ. ಆದುದರಿಂದ ನೀವು ನಿಮ್ಮ ಸ್ವಾತಂತ್ರ್ಯದ ಕಾಲವನ್ನು ಇನ್ನೂ ಮರೆತಿರಲಿಕ್ಕಿಲ್ಲ. ಆದಕಾರಣ ನೀವು ಕೊಡಗಿನ ಮತ್ತು ಹಿಂದೂ ದೇಶದ ಸ್ವರಾಜ್ಯ ಸ್ಥಾಪನೆ ಕಾರ್ಯದಲ್ಲಿ ಮುಂದಿರಬೇಕು. ನಿಮ್ಮ ದೇಶವು ಹಿಂದೂಸ್ಥಾನದಿಂದ ಪ್ರತ್ಯೇಕವಾಗಿದ್ದು ಹಿಂದೂ ದೇಶದ ರಾಷ್ಟ್ರೀಯ ಚಳವಳದಲ್ಲಿ ಇಷ್ಟರವರೆಗೆ ಪೂರ್ತಿ ಸೇರದಿದ್ದರೂ ಕಳಕೊಂಡ ಕಾಲ ಮತ್ತು ಅವಸ್ಥೆಯನ್ನು ಸರಿಪಡಿಸಿಕೊಳ್ಳಲಿಕ್ಕಾಗಿ ಇನ್ನು ಕೊಡಗನ್ನು ರಾಷ್ಟ್ರೀಯ ಚಳವಳದ ಮುಂಭಾಗದಲ್ಲಿ ನಿಲ್ಲಿಸುವಿರಾಗಿ ನಂಬುತ್ತೇನೆ. ಹಿಂದೂ ದೇಶದ ಅತಿ ದೊಡ್ಡದಾದ ರಾಷ್ಟ್ರೀಯ ಸಭೆಯಾದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿಗೆ ಸೇರಿಸಿಕೊಳ್ಳಬೇಕೆಂದು ನಾನು ನಿಮ್ಮನ್ನು ಆಮಂತ್ರಿಸುತ್ತೇನೆ. ಆ ಸಂಸ್ಥೆಯು ಕಳೆದ 42 ವರ್ಷಗಳಿಂದ ಹಿಂದೂ ದೇಶದ ಉತ್ಕರ್ಷದ ಧ್ಯೇಯದಿಂದ ನಡಿಸಲ್ಪಡುತ್ತಿದೆ. ಈ ದಿನ ನನ್ನ ಮುಂದೆ ಅನೇಕ ಯುವಕರನ್ನು ನೋಡಲು ನನಗೆ ಆನಂದವೆನಿಸುತ್ತದೆ. ಚೆಂಡು ಅವರ ಕಾಲು ಬಳಿ ಇದೆಯೆಂಬುದನ್ನು ಅವರು ತಿಳಕೊಳ್ಳಲೆಂದು ನಾ ಅವರನ್ನು ಕೇಳಿಕೊಳ್ಳುತ್ತೇನೆ. ಅವರು ಅದನ್ನು ಒಸಿಯ ಮತ್ತು ನೆಟ್ಟಗೆ ಒದೆಯಬೇಕು. ಅಂಜಿಕೆಬೇಡ. ಒತ್ತ ವಾಗಿಯೂ ಗುರಿಯನ್ನು ಮಟ್ಟವಾದುದಾಗಿಯೂ ಅದನ್ನು ಎಷ್ಟೇ ಎತ್ತರದ ಗೋಲ್‌ಕೀಪರನಿಂದಲೂ ತಡೆ ಗುವದಿಲ್ಲ. ಇನ್ನು ನೀವು ಮುಂದಿನ ಕಾರ್ಯಕ್ರಮಕ್ಕೆ ಕಬಹುದು. ದೇವರು ನಿಮಗೆ ಸ್ವರಾಜ್ಯವನ್ನು ದಯ ಲೆಂದೂ, ಕೊಡಗನ್ನು ಹಿಂದೂ ದೇಶದ ಮಟ್ಟಕ್ಕೆ ದೂ ನಾನು ಪ್ರಾರ್ಥಿಸುತ್ತೇನೆ. ವಂದೇ ಮಾತರಂ

ಸೆಕ್ರೆಟರಿಯವರು ಸಂಘದ ವಾರ್ಷಿಕ ವರದಿಯನ್ನೂ ಆಡಿಟರ ರಿಪೋರ್ಟನ್ನೂ ಓದಿ ಹೇಳಿದರು. ಮಿ. ಡಿ ಗ್ಡೀಕರು ರಿಪೋರ್ಟನ್ನು ಅಂಗೀಕರಿಸಬಹುದೆಂತ ಸೂಚಿಸಿ ಮಿ. ಚೇರಿರ ಅಪ್ಪಯ್ಯನವರು ಅನುಮೋದಿಸಿ ಸರ್ವಾನುಮತ ದಿಂದ ಒಪ್ಪಿಕೊಳ್ಳಲಾಯಿತು. ಕಳೆದ ವರ್ಷದ ಮಹಾ ಯಿಂದ ನೇಮಿತವಾದ ಉಪಕಮಿಟಿಯವರು ಸಂಘದ ನಿ ನೆಗಳಲ್ಲಿ ಮಾರ್ಪಾಡು ಮಾಡಿದ್ದನ್ನು ಕಾರ್ಯಕಾರೀ ಲಿಯವರು ಮಂಜೂರ್ ಮಾಡಿ ಮಹಾಸಭೆಯ ಮುಂದೆ ಲಾಯಿತು. ಮಾರ್ಪಾಡುಗಳೆಲ್ಲವೂ ಪ್ರತ್ಯೇಕ ಪ್ರತ್ಯೇಕ ಚಿಸಲ್ಪಟ್ಟು ಸ್ವಲ್ಪ ವ್ಯತ್ಯಾಸದಿಂದ ಮಂಜೂರಾದವು. ರ್ಪಾಡಾದ ನಿಯಮಗಳನ್ನು ಇನ್ನೊಂದು ಸಾರಿ ಪ್ರಕಟಿ ಗುತ್ತದೆ.

ಸಂಘದ ವಿಶೇಷ ಮಹಾಸಭೆಯಿಂದ ಚುನಾಯಿತ ಉಪಕಮಿಟಿಯವರು ತಯಾರಿಸಿದ ಕೊಡಗಿನ ರಾಜಕೀಯ ಚನೆಯನ್ನು ಸಭೆಯ ಮುಂದೆ ಸೆಕ್ರೆಟರಿಯವರು ಇಟ್ಟ ಇದನ್ನು ಯೋಚನೆಗೆ ತೆಗೆದುಕೊಳ್ಳಲಿಕ್ಕೆ ಮೂರು ತಿಂ ಮಯ ಬೇಕೆಂತ ಮಿ. ಯಂ. ಸಿದ್ದೀಕರು ಸೂಚಿಸಿದರು. ಅಭಿಪ್ರಾಯಕ್ಕೆ ಮಿ. ಉದಿಯಂಡ ಮಾಚ್ಚಯ್ಯನವರು ದರು. ಉಪಕಮಿಟಿಯವರ ತೀರ್ಮಾನವು ದೇಶದ ಮ ಕೆಲವು ತಿಂಗಳುಗಳಿಂದಲೇ ಇರುವದರಿಂದಲೂ, ಸೈಮನ್ ಮಿಶನಿಗೆ ಮೇ ತಾರೀಕು 7ರ ವರೆಗೆ ಜವಾಬು, ಕೊಡ ತ ಅನೇಕರಿಗೆ ಪತ್ರ ಬಂದಿರುವದರಿಂದಲೂ ರಾಜಕೀಯ ಯ ತೀರ್ಮಾನವನ್ನು ಮುಂದರಿಸಿ ಇಡಬಾರದೆಂತ ಮ ಪ್ಪಯ್ಯನವರು ಅಭಿಪ್ರಾಯಪಟ್ಟರು. ವಿಷಯ ನಿಯಾ ಸಮಿತಿಯಲ್ಲಿ ಈ ದಿನ ರಾತ್ರಿ ಚರ್ಚಿಸಿ ನಾಳೆ ಮಹಾಸಭೆ ಮುಂದೆಯನ್ನು ಇಡಬೇಕೆಂತ ಮಿ. ಪಿ. ಟಿ. ಕುಶಾಲಪ್ಪ ರು ಸೂಚಿಸಿದ್ದನ್ನು ಸಭೆಯವರೆಲ್ಲರೂ ಒಪ್ಪಿಕೊಂಡರು. ಷಯ ನಿಯಾಮಕ ಸಮಿತಿಗೆ ತಾಲೋಕುವಾರು ಸದ ಗಳನ್ನು ಆರಿಸಿ ಸೆಕ್ರೆಟರಿಯವರಿಗೆ 5½ ಗಂಟೆ ವರೆಗೆ ಕೆಂತಲೂ, 6 ಗಂಟೆಗೆ ವಿಷಯ ನಿಯಾಮಕ ಸಮಿತಿ ಸೇ ದೆಂತಲೂ, ಮಾರಣೆ ದಿನ ಬೆಳಿಗ್ಗೆ 9 ಗಂಟೆಗೆ ಮಹಾಸ ರುತ್ತದೆಂತಲೂ ಅಧ್ಯಕ್ಷರು ಮಹಾಸಭೆಗೆ ತಿಳಿಸಿ 4½ ಗ ಸಭೆಯನ್ನು ಬರಖಾಸ್ತು ಮಾಡಿದರು.

ತಿಂಡಿ ತೀರ್ಥ ತೀರಿಸಿಕೊಂಡು 6 ಗಂಟೆಗೆ ವಿಷಯ ನಿಯಾಮಕ ಸಮಿತಿಯ ಸಭೆಯು ಸೇರಿ ಶ್ರೀಯುತ ಸಕ್ಕ ರ್ಜಿಯವರ ಅಧ್ಯಕ್ಷತೆಯಲ್ಲಿ 9 ಗಂಟೆ ವರೆಗೆ ರಾಜಕೀಯ ರಚನೆಯೊಂದನ್ನು ಬಹು ಜಾಗರೂಕತೆಯಿಂದ ವಿಮರ್ಶಿಸಿ ವು ಮಾರ್ಪಾಡುಗಳೊಡನೆ ಮಂಜೂರು ಮಾಡಿತು. ರ ಊಟ ತೀರಿಸಿಕೊಂಡು ಪುನಃ 10 ಘಂಟೆಗೆ ವಿಷಯ ನಿಯಾಮಕ ಸಭೆಯು ಕೂಡಿ ಮಧ್ಯರಾತ್ರೆ 2 ಘಂಟೆವರೆಗೆ ಕ ಬಂದು ಬಿದ್ದ ಎಲ್ಲಾ ವಿಷಯಗಳನ್ನೂ ವಿಮರ್ಶಿಸಿ ಸಭೆಯ ಮುಂದೆ ಇಡಬೇಕಾದ ವಿಷಯಗಳನ್ನು ನಿ ಕೊಂಡರು.

(ಮುಂದುವರಿಯುವುದು.)

ಕೊಡಗು ದೇಶದ ನಿವಾಸಿಗಳಿಗೆ.

ಸ್ನೇಹಿತರೇ,

ನಿಮ್ಮ ಜೊತೆಯಲ್ಲಿ ಒಂದು ವಾರದ ವರೆಗೆ ಸುದ್ದು ಹೊಂಟು ಹೋಗುವಾಗ ನಿಮಗೆಲ್ಲರಿಗೂ ಪ್ರತ್ಯೇಕವಾಗಿಯೂ, ಸಮುದಾಯಕವಾಗಿಯೂ ನನ್ನ ಕೀಯವಾದ ಧನ್ಯವಾದಗಳನ್ನು ಈ ಮೂಲಕ ಕೊಡ ಜಮೀನ್ದಾರರ ಸಂಘದ ತೀರ್ಮಾನಕ್ಕೆ ಅನುಸಾರವಾಗಿ ರಾಜ್ಯವನ್ನು ಆದಷ್ಟು ಬೇಗನೆ ಸಂಪಾದಿಸಲಿಕ್ಕೂ, ಕ ವೆಂಬ ಕೇಡನ್ನೂ ಮಲೇರಿಯ ಜಾಡ್ಯವನ್ನೂ ಹೋ ಸಿಕೊಳ್ಳಲಿಕ್ಕೂ, ಸ್ವತಂತ್ರ ಕರ್ನಾಟಕ ಪ್ರಾಂತ್ಯದೊಡ ಕೊಳ್ಳಲಿಕ್ಕೂ ಸಂಪೂರ್ಣವಾಗಿ ಪ್ರಯತ್ನಿಸಿರಿ ಎಂತ ನಿಮ್ಮನ್ನು ಬಿಟ್ಟು ಹೋಗುವ ಸಂದರ್ಭದಲ್ಲಿಯ ತ್ತೇನೆ. ಕೊಡಗಿನ ಜನರು ಒಗ್ಗಟ್ಟಾಗಿರಲಿಕ್ಕೂ ಸ್ವತಃ ರಲಿಕ್ಕೂ ಮನಸು ಮಾಡಿದರೆ ಕೊಡಗಿನ ಉದ್ದೇಶವು ನೆ ಇರಲಾರದು. ತಡವಿಲ್ಲದ ಅಂಥ ದೃಢಮನಸು ಮಾ ತ ನಾನು ಒತ್ತಿ ಕೇಳಿಕೊಳ್ಳುತ್ತೇನೆ. ಇನ್ನೊಂದ ಮಗೆ ವಂದನೆ ಮಾಡುತ್ತೇನೆ.

ವಂದೇ ಮಾತರಂ

ಯಸ್. ಸತ್ಯಮ

ವರ್ತಮಾನ ಸಂಗ್ರಹ.

ಸ್ವದೇಶ.

ಕೊಡಗು ಸಹಕಾರಿ ಸಾಂಟ್ರಲ್ ಬ್ಯಾಂಕಿನ ಡೈರೆಕ್ಟರು ಗಳ ಮೀಟಿಂಗು ಈ ತಾ 14 ರಲ್ಲಿ ಮಡಿಕೇರಿಯಲ್ಲಿ ನಡೆಯುವದು

ಕಳೆದ ವಾರ ದೇಶದ ಹಲವು ಕಡೆಗಳಲ್ಲಿ ಮಳೆ ಬಿದ್ದುದರಿಂದ ಕೆಲವರು ಬತ್ತ ವ್ಯವಸಾಯದ ಕೆಲಸಕ್ಕೆ ಪ್ರಾರಂಭಿಸಿರುವರು

ಕೊಡಗಿನ ಯುವಕರ ಕಾನ್‌ಫರೆನ್ಸು ಬಂದು ಈ ತಾ 10ರಲ್ಲಿ ವೀರರಾಜಪೇಟೆ ಮೋಡಲ್ ಸ್ಕೂಲ್ ಹಾಲಿನಲ್ಲಿ ನಡೆಯಿತು ಪಾರಸ್ಟು ಎಕ್ಸ್ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರಾದ ಮೊ ಸಿ ಯಾ ಕುಶಾಲಪ್ಪನವರು ಅಧ್ಯಕ್ಷರಾಗಿದ್ದರು

ಜಮೀನ್ದಾರರ ಸಂಘದ ಅಧ್ಯಕ್ಷರಾಗಿ ಮದರಾಸಿನಿಂದ ಕೊಡಗಿಗೆ ಬಂದಿದ್ದ ಶ್ರೀಮಾನ್ ಸತ್ಯಮೂರ್ತಿಯವರಿಗೆ ಅವರ ಸ್ನೇಹಿತರು ತಾ 8ರಲ್ಲಿ ಮಡಿಕೇರಿಯಲ್ಲಿಯೂ, ತಾ 9ರಲ್ಲಿ ವೀರರಾಜಪೇಟೆಯಲ್ಲಿಯೂ 'ಟೀ ಪಾರ್ಟಿ' ಗಳನ್ನು ಕೊಟ್ಟರು.

ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ 109 ವಿದ್ಯಾರ್ಥಿಗಳು ಕೆಳಗಿನ ಮೇರೆ ಪಾಸಾಗಿರುವರೆಂದು ತಿಳಿಯಬರುತ್ತದೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲು—26, ವೀರರಾಜಪೇಟೆ ಹೈಸ್ಕೂಲು—14, ಮಡಿಕೇರಿ ಕಾನ್ವೆಂಟು—7, ಸೋಮವಾರಪೇಟೆ ಹಯರ್ ಎಲಿಮೆಂಟರಿ ಶಾಲೆ—18, ಪೊನ್ನಂಪೇಟೆ ಹ ಎ ಶಾಲೆ—10 ಮಡಿಕೇರಿ ಹ ಎ ಶಾಲೆ—9 ಮತ್ತು ಕೊಡ್ಲಿಪೇಟೆ ಹ ಎ ಶಾಲೆ—3

ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಮಹಾಸಭೆಯು ಈ ತಾ 5 ಮತ್ತು 6ರಲ್ಲಿ ಸೋಮವಾರಪೇಟೆಯಲ್ಲಿ ನಡೆಯಿತು ಮದ್ರಾಸಿನ ಶ್ರೀಯುತ ಎಸ್ ಸತ್ಯಮೂರ್ತಿಯವರು ಅಧ್ಯಕ್ಷರಾಗಿದ್ದರು ಕೊಡಗಿನ ಮುಂದಿನ ರಾಜಕೀಯ ರಚನೆಯನ್ನು ಕುರಿತ ಠರಾವು ಅಲ್ಲಿ ಪಾಸಾದವುಗಳಲ್ಲಿ ಬಹು ಮುಖ್ಯವಾದದ್ದು. ಕರ್ನಾಟಕ ಏಕೀಕರಣ, ನಿಷೇಧ ಅಸ್ಪೃಶ್ಯತಾ ನಿವಾರಣೆ, ಖಾದಿಪ್ರಚಾರ, ಇಂಡಿಯಾ ಸರ್ಕಾರದಿಂದ ಸಿಕ್ಕಬೇಕಾದ ಹಕ್ಕುಗಳು, ಇವುಗಳನ್ನು ಕುರಿತ ಮುಖ್ಯ ಠರಾವುಗಳೂ ಪಾಸಾದವು ಈ ಕಾನ್ಫರೆನ್ಸಿನ ಪ್ರೊಸೀಡಿಂಗ್ಸು ವಿವರವಾಗಿ ಇನ್ನೊಂದು ಕಡೆ ಕೊಡಲಾಗಿದೆ.

ಈ ವರ್ಷದ ಪ್ರೈಮರಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಈ ಕೆಳಗಿನ ಮೇರೆ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ ವೀರರಾಜಪೇಟೆ ಮೋಡಲ್ ಸ್ಕೂಲು 30, ಸೋಮವಾರಪೇಟೆ ಮೋಡಲ್ ಸ್ಕೂಲು 23, ಶಾಂತಕೋಟು ಸರಕಾರಿ ಶಾಲೆ 21, ಕಲ್ಲೋನಿಯ ಶಾಲೆ 11, ವೀರರಾಜಪೇಟೆ ಹ ಡ ಗಿಯರ ಶಾಲೆ 10, ಕರಡ ಶಾಲೆ 9, ಮೂರ್ನಾಡು ಸ್ಕೂಲು 8, ವೀರರಾಜಪೇಟೆ ರೋಮನ್ ಕೆಥೋಲಿಕ್ ಸ್ಕೂಲು 7, ದೇವಣಗೇರಿ ಸ್ಕೂಲು 6, ಬೆಟ್ಟಗೇರಿ ಶಾಲೆ 4, ಅಮ್ಮತ್ತಿ ಶಾಲೆ 3, ವೀರರಾಜಪೇಟೆ ಮಹಮ್ಮದೀಯರ ಶಾಲೆ 3, ಬೆಯ್ಯಂಡಾಣೆ ಸ್ಕೂಲು 3, ಚೆಟ್ಟಿಮಾನಿ ಶಾಲೆ 3, ನಲ್ಲೂರ ಶಾಲೆ 1, ಕಕ್ಕಬೆ ಶಾಲೆ 2, ಸಿದ್ದಾಪುರ ಸ್ಕೂಲು 1, ಮತ್ತು ಶನಿವಾರಸಂತೆ ಶಾಲೆ 1 ಮಡಿಕೇರಿ ಮತ್ತು ಪೊನ್ನಂಪೇಟೆ ಸೆಂಟರುಗಳ ಫಲಿತಾಂಶವು ಇನ್ನೂ ಹೊರಬಿದ್ದಿರುವದಿಲ್ಲ

ಮದ್ರಾಸಿನ ಶ್ರೀ. ಯಸ್ ಸತ್ಯಮೂರ್ತಿ ಯಂ. ಎಲ್. ಸಿ. ಯವರು ತಾ. 4 ರಲ್ಲಿ ಮೈಸೂರಿನಿಂದ ಮಡಿಕೇರಿಗೆ ಬಂದು ಸಾಯಂಕಾಲ 6½ ಗಂಟೆಗೆ ಜಮೀನ್ದಾರರ ಸಂಘದ ಹಾಲ್ ಒಳಗೆ 'ಹಿಂದೂ ದೇಶದ ಈಗಿನ ರಾಜಕೀಯ ಪರಿಸ್ಥಿತಿ' ಯನ್ನು ಕುರಿತು ಭಾಷಣ ಮಾಡಿದರು ತಾ. 5 ಮತ್ತು 6ರಲ್ಲಿ ಸೋಮವಾರಪೇಟೆಯಲ್ಲಿ ನಡೆದ ಜಮೀನ್ದಾರರ ಸಂಘದ ವಾರ್ಷಿಕ ಜನರಲ್ ಮೀಟಿಂಗಿನ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ತಾ. 7 ರಲ್ಲಿ ತಲಕಾವೇರಿ ಸ್ನಾನಮಾಡಿಕೊಂಡು ಬಂದರು ತಾ. 8ರಲ್ಲಿ ಬೆಳಿಗ್ಗೆ 8.30 ಗಂಟೆಗೆ ಮಡಿಕೇರಿ ರಾಜಸೀಟ್ ಒಳಗೆ 'ಕೊಡಗಿನ ಮುಂದಿನ ರಾಜಕೀಯ ರಚನೆ'ಯ ವಿಷಯವೂ, ಸಾಯಂಕಾಲ 6 30 ಗಂಟೆಗೆ ಜಮೀನ್ದಾರರ ಸಂಘದ ಹಾಲ್ ಒಳಗೆ 'ರಾಷ್ಟ್ರೀಯ ವಿದ್ಯಾಭ್ಯಾಸ' ದ ವಿಷಯವೂ ಭಾಷಣಮಾಡಿದರು ಮರುದಿನ ಅವರು ವೀರರಾಜಪೇಟೆ ತಾಲೋಕು ಬೋರ್ಡಿಯ ಒಳಗೆ ಮೈದಾನದಲ್ಲಿ ಮಧ್ಯಾಹ್ನದ ವೇಳೆ 2 ಗಂಟೆಗೆ 'ಕೊಡಗಿನ ಮುಂದಿನ ಕೆಲಸ' ವನ್ನು ಕುರಿತು ಉಪನ್ಯಾಸಕೊಟ್ಟರು. ಅವರು ತಾ 10 ರಲ್ಲಿ ಬೆಳಿಗ್ಗೆ ವಾಪಸು ಮೈಸೂರಿಗೆ ಹೋದರು

ಹಿಂದೂದೇಶ.

ಇಂಡಿಯಾದ ಪರವಾಗಿ ಲಾರ್ಡ್ ಲಿಟ್ಟನ್‌ರವರೇ ಪುನಃ ಲೀಗ್ ಆಫ್ ನೇಶನ್ಸಿಗೆ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವರು.

ಖಾದಿ ಪ್ರಚಾರ ಪಾರ್ಟಿಯವರು ತಮ್ಮ ಬಂಗಾಳ ಪ್ರವಾಸದಲ್ಲಿ ಖಾದಿನಿಧಿಗೆ ಸುಮಾರು ಒಂದು ಲಕ್ಷ ರೂಪಾಯಿ ಜಮೆಮಾಡಿರುವರು.

ಬ್ರಿಟಿಸ್ ಸಾಮಾನುಗಳ ಮುಖ್ಯವಾಗಿ ಬಟ್ಟೆಯ ಬಹಿಷ್ಕಾರವನ್ನು ಪ್ರಚಾರ ಮಾಡುವದಕ್ಕಾಗಿ ಬೊಂಬಾಯಿ ಯಲ್ಲಿ ಒಂದು ಬಹಿಷ್ಕಾರ ಸಂಘವನ್ನು ಸ್ಥಾಪಿಸುತ್ತಲಿರುವರು

ಜಮಖಂಡಿಯ ಕೈಲಾಸ ತಾರಾನಾಥರವರು ಬಾವಿಮನೆ ಲಕ್ಷ ರೂಪಾಯಿಗಳನ್ನು ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ದಾನ ಮಾಡಿ ಶಾಸ್ತ್ರೀಯ ರೀತ್ಯಾ ವ್ಯಾಪಾರಿಕ ಕಲಿಸಲು ಉಪಯೋಗಿಸಬೇಕೆಂದು ಹೇಳಿರುವರು.

ಸ್ವಾಮಿ ಸತ್ಯಾನಂದರವರ ಪುತ್ರ ಪ್ರೊಫೆಸರ್ ಇಂದ್ರರವರು ಜೈಲಿನಲ್ಲಿ ಬಹಳ ಅಸ್ವಸ್ಥರಾಗಿರುವದರಿಂದ ಅವರನ್ನು ಬಿಡುಗಡೆ ಮಾಡಬಹುದೆಂದು ಪಂಜಾಬು ಸರ್ಕಾರದವರಿಗೆ ಬರೆದಿರುವರಂತೆ

ಹಿಂದೂದೇಶದಲ್ಲಿ ಅಸ್ಪೃಶ್ಯರಿಗೆ ವಿದ್ಯಾಭ್ಯಾಸ ಕೊಡುವದಕ್ಕಾಗಿ ಇಂಡಿಯಾ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಲಾಲಾ ಲಜಪತರಾಯರು ಎಸಂಬ್ಲಿಯಲ್ಲಿ ಠರಾವು ತರಲಿಕ್ಕಿರುವರು

ಪಂಜಾಬು ಕಾಂಗ್ರೆಸ್ ಕಮಿಟಿಯಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ಸರಿ ಮಾಡಲ್ಪಟ್ಟ ಕಾರಣ ಅವರ ಮೇಲೆ ಬೇರೆ ರಾಜಿನಾಮೆ ಕೊಟ್ಟಿದ್ದ ಸಭ್ಯ ಮೆಂಬರುಗಳೆಲ್ಲರೂ ರಾಜಿನಾಮೆಯನ್ನು ವಾಪಸು ತೆಗೆದುಕೊಂಡಿರುವರು

ಹಿಂದೂದೇಶದ ಸರ್ವ ಪಾರ್ಟಿಗಳ ಕಾನ್‌ಫರೆನ್ಸು ಪುನಃ ಈ ತಾ 19ರಲ್ಲಿ ಬೊಂಬಾಯಿಯಲ್ಲಿ ಸೇರಲಿಕ್ಕಿದೆ ಸದರಿ ಮೀಟಿಂಗಿಗೆ ಹಾಜರಾಗಬೇಕೆಂದು ಡಾಕ್ಟರ್ ಅನ್ಸಾರಿಯವರು ಎಲ್ಲಾ ಪ್ರಮುಖ ಧುರೀಣರಿಗೆ ತಂತಿವರ್ತಮಾನ ಕಳುಹಿಸಿರುವರು

ಬ್ರಿಟಿಷ್ ರಾಜರು, ಅಫ್ಘಾನಿಸ್ಥಾನದ ಅಮೀರರೇ ಮೊದಲಾದ ಸ್ವಾತಂತ್ರ್ಯ ರಾಜರುಗಳಿಗೆ ಇರುವಂಥ 'ಹಿಸ್ ಮೆಜೆಸ್ಟಿ' ಎಂಬ ಬಿರುದನ್ನು ಹೈದರಾಬಾದಿನ ನೈಜಾಮರಿಗೂ ಕೊಡಬೇಕೆಂದು ಅಲ್ಲಿಯ ಪ್ರಜೆಗಳು ಬ್ರಿಟಿಷ್ ಸರ್ಕಾರಕ್ಕೆ ಅರ್ಜಿ ಬರೆದುಕೊಂಡಿರುವರಂತೆ.

ಬಾರ್ಡೋಲಿಯಲ್ಲಿ ಜನರು ಕಂದಾಯ ಕೊಡದೆ ನಡೆಸುತ್ತಿರುವ ಸತ್ಯಾಗ್ರಹದ ಸಂಬಂಧ ಇಬ್ಬರು ಸೆರೆಹಿಡಿಯಲ್ಪಟ್ಟಿರುವರು ಆದರೆ ಜನರ ಧೈರ್ಯಗಳು ಅಡಗಿರುವದಿಲ್ಲ ಯಾವ ತರಹದ ಸ್ವಾರ್ಥತ್ಯಾಗವಾದರೂ ಮಾಡಲಿಕ್ಕಾದರೂ ತಯಾರಾಗಿರಬೇಕೆಂದು ಶ್ರೀಯುತ ವಲ್ಲಭಭಾಯಿ ಪಟೇಲರವರು ಅಲ್ಲಿಯ ರೈತರಿಗೆ ವಿನಂತಿ ಮಾಡಿರುವರು.

ಬೊಂಬಾಯಿ ಗಿರಣಿಗಳ ಕೆಲಸಗಾರರ ಮುಷ್ಕರವು ಹಾಗೆಯೇ ನಡೆದಿದೆ ಪೋಲೀಸಿನವರು ಹುಕುಂ ತೆಗೆದುಕೊಂಡು ಸಭೆಯನ್ನು ನಿಷೇಧಿಸಿರು. ಗಿರಣಿಗಳ ಬಾಗಿಲುಗಳಲ್ಲಿ ನಿಂತು ಕೆಲಸಕ್ಕೆ ಹೋಗುವ ಅಲ್ಪ ಸ್ವಲ್ಪ ಕೂಲಿಯವರನ್ನು ತಡೆಯುತ್ತಿರುವರು, ಗಲಾಟೆಯೇನೂ ಆಗಿರುವದಿಲ್ಲ. ಮುಷ್ಕರಹೂಡಿದವರಿಗೆ ಸರಕಾರದಿಂದ ಸಹಾಯಮಾಡುವಂತೆ ಮಜೂರರು ವಿನಂತಿ ಮಾಡುತ್ತಿರುವರು

ಈ ತಾ 2 ಮತ್ತು 3ರಲ್ಲಿ ಪೂನಾದಲ್ಲಿ ಶ್ರೀಯುತ ಸುಭಾಸ್ ಚಂದ್ರಬೋಸ್‌ರವರ ಅಧ್ಯಕ್ಷತೆಯಲ್ಲಿ ನಡೆದ ಮಹಾರಾಷ್ಟ್ರ ಪ್ರಾಂತೀಕ ಕಾನ್ಫರೆನ್ಸಿನಲ್ಲಿ ಮದ್ರಾಸ ಕಾಂಗ್ರೆಸ್ಸಿನ 'ಸ್ವಾತಂತ್ರ' ಠರಾವನ್ನೂ ಬ್ರಿಟಿಷ್ ಸಾಮಾನುಗಳ ಮತ್ತು ಸೈಮನ್ ಕಮಿಷನಿನ ಬಹಿಷ್ಕಾರದ ಠರಾವನ್ನೂ ಪಾಸುಮಾಡಿದಲ್ಲದೆ ರಾಜಕೀಯ ವಿಷಯಗಳ ಇಂದಿಗೆ ಮತ ಸಂಬಂಧ ಸಂಗತಿಗಳನ್ನು ಬೆರೆಸಿಕೊಳ್ಳಬಾರದೆಂದೂ ತೀರ್ಮಾನಿಸಿರುವರು

ವಿದೇಶ.

ದಕ್ಷಿಣ ಅಮೇರಿಕದ ವೆನೆಜುವೆಲ ಪ್ರಾಂತ್ಯದ ಸರ್ಕಾರ ಅಧ್ಯಕ್ಷರಾದ ಮಿ ಗೋಮೆಜ್‌ರವರು ಕೊಲೆ ಮಾಡಲ್ಪಟ್ಟಿರುವರೆಂದು ಸುದ್ದಿ

ರುಮೇನಿಯದ ಪದಚ್ಯುತರಾದ ರಾಜಕುಮಾರ ಕಾರೆಲ್‌ರವರು ಇಂಗ್ಲೆಂಡಿನಲ್ಲಿ ಅಜ್ಞಾತವಾಸ ಮಾಡುತ್ತಿದ್ದರಂತೆ ಅವರನ್ನು ಅಲ್ಲಿಂದಲೂ ಹೊರಡಿಸಿರುವರೆಂದು ಸುದ್ದಿ.

ಚೈನಾದ ಟ್ಸಿನಾಫು ಎಂಬಲ್ಲಿ ಚೈನಾದ ರಾಷ್ಟ್ರೀಯ ಸೈನ್ಯದವರಿಗೂ ಜಪಾನಿನ ಸೈನ್ಯದವರಿಗೂ ಯುದ್ಧವು ನಡೆಯುತ್ತಿದೆ. ಇವೆರಡು ಪಾರ್ಟಿಗಳನ್ನು ರಾಜಿಮಾಡಲು ಅಮೇರಿಕ ಸಂಯುಕ್ತ ಸಂಸ್ಥಾನದವರು ಮಧ್ಯಸ್ಥರಾಗುವ ಸೂಚನೆಯಿದೆ.

ಗಂಡಸರಂತೆ ಹೆಂಗಸರಿಗೂ 21 ವರ್ಷ ಪ್ರಾಯದ ಮೇಲೆ ಓಟಿನ ಹಕ್ಕು ಕೊಡುವ ಬಿಲ್ಲಿನ ಮಸೂದೆಯು ಗ್ರೇಟ್ ಬ್ರಿಟನ್ನಿನ ಕಾಮನ್ಸು ಪಾರ್ಲಿಮೆಂಟಿನಲ್ಲಿ 3ನೇ ಸಾರಿ ಪಾಸಾಯಿತು ಇನ್ನು ಅದು 'ಲಾರ್ಡ್ಸ' ಪಾರ್ಲಿಮೆಂಟಿನಲ್ಲಿ ಪಾಸಾಗಲಿಕ್ಕಿದೆ.

ಅಫ್ಘಾನಿಸ್ಥಾನದ ಅಮೀರ ಅಮಾನುಲ್ಲಾರವರು ಈ ತಾ 3 ರಲ್ಲಿ ರಷ್ಯಾದ ಮುಖ್ಯಪಟ್ಟಣವಾದ ಮಾಸ್ಕೋಕ್ಕೆ ತಲಪಿದರು ಈಗ ಅವರು ರಷ್ಯಾದಲ್ಲಿ ಸಂಚರಿಸುತ್ತಿರುವರು. ಎಲ್ಲಾ ಕಡೆಗಳಲ್ಲೂ ಜನರು ಅವರಿಗೆ ಉತ್ಸಾಹದಿಂದ ಸ್ವಾಗತವನ್ನೀಯುತ್ತಿರುವರು.

ಇಂಡಿಯಾದಿಂದ ಇಂಗ್ಲೆಂಡಿಗೆ ಹೋಗಿರುವ ಹಾಕಿ ಟೀಮಿನವರು ಹೆಚ್ಚು ಕಡಿಮೆ ಎಲ್ಲಾ ಪಂಧ್ಯಗಳಲ್ಲಿ ಇಂಗ್ಲಿಷ್ ಟೀಮಿನವರನ್ನು ಸೋಲಿಸಿರುವರು. ಇಂಡಿಯಾ ಟೀಮಿನವರು ಈಗ ಜರ್ಮನಿಯಲ್ಲಿ ಆಡುತ್ತಿರುವರು. ಅಲ್ಲಿಯೂ ಇವರಿಗೆ ಜಯವಾಗುತ್ತಿದೆ

ವಿಮರ್ಶೆ.

ಬೆಂಗಳೂರಿನಲ್ಲಿ ಹೊಸದಾಗಿ ಹೊರಟಿರುವ "ರಾಷ್ಟ್ರಬಂಧು" ಕನ್ನಡ ವಾರ ಪತ್ರಿಕೆಯ ಮೊದಲನೇ ಸಂಚಿಕೆಯನ್ನು ಸಂತೋಷಪೂರ್ವಕ ಸ್ವೀಕರಿಸುತ್ತೇವೆ ರಾಷ್ಟ್ರೀಯತ್ವವನ್ನು ಕರ್ನಾಟಕದಲ್ಲಿ ಹುಟ್ಟಿಸಲಿಕ್ಕಾಗಿ ಕೈಕೊಂಡ ಈ ಉದ್ಯಮವು ಶ್ಲಾಘನೀಯವಾಗಿದೆ ಈ ಪತ್ರಿಕೆಯು ಹೆಸರಿಗೆ ತಕ್ಕಂತೆ ರಾಷ್ಟ್ರದ ಏಳಿಗೆಗಾಗಿಯೇ ಕೆಲಸಮಾಡಲೆಂತಲೂ, ಕೊಡವ ವಾರ ಪತ್ರಿಕೆ ಅನೇಕಾತ ಕೊಡವರೆಂತಲೂ ಆಶಿಸುತ್ತೇವೆ ಇದರ ವಾರ್ಷಿಕ ಚಂದಾ ಎಂದರೆ 2—8 -0 ಇರುವದರಿಂದ ಇದು ಕರ್ನಾಟಕದ ಪ್ರತಿಯೊಂದು ಹಳ್ಳಿಯ ಮನೆಗೂ ತಲುಪಬೇಕೆಂದು ಹಾರೈಸುತ್ತೇವೆ ಇದರ ಸಂಪಾದಕರು ಶ್ರೀ ಕಡಂಗೋಡ್ಲು ಶಂಕರಭಟ್ಟರು

For Sale

A Chevrolet Car

Rs 1500

Or near offer

apply —

Apprchoo

Hallow

Mercara

ಕೆನರಾ ಹೈಸ್ಕೂಲ್ ಸೋಡ್ತಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲಿನ ಮತ್ತು ಕೆನರಾ ಬಾಲಕಿಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರವರ ಅಪ್ಪಣೆ ಪಡೆದ ಎರಡನೇ ಹತ್ತದ ಒಂದು ಸೋಡ್ತಿಯನ್ನು ತೆಗೆಯಲು ನಿಶ್ಚಯಿಸಿಯದೆ ಇದರ ಆಡಳಿತೆಯನ್ನು ಜವಾಬ್ದಾರಿಯುಳ್ಳ ಪ್ರಮುಖ ಗೃಹಸ್ಥರು ನಡಿಸುವರು

ಜುಮ್ಲಾ ಟಿಕೇಟಿನ ಮೌಲ್ಯ ಒಂದುಲಕ್ಷ ರೂಪಾಯಿ ಈ ಪೈಕಿ ರೂಪಾಯಿ 15,000 ಖರ್ಚಿನ ಬಗ್ಗೆ ಮಜಾವಣೆ ಆಗುವದು ರೂಪಾಯಿ 40,000 ಶಾಲೆಗಳ ಉಪಯೋಗದ ಬಗ್ಗೆ ವಿನಿಯೋಗಿಸಲ್ಪಡುವದು ಮತ್ತು 45,000 ರೂಪಾಯಿಗಳನ್ನು 3011 ಸೋಡ್ತಿ ಬಹುಮಾನಗಳಾಗಿ ಹಂಚಲಾಗುವದು ಈ ಬಹುಮಾನಗಳ ತಪಸಿಲು ಕೆಳಗೆ ಕಾಣಿಸಿಯದೆ.

1ನೇ ಬಹುಮಾನ ರೂಪಾಯಿ 12000 2ನೇ ಬಹುಮಾನ ರೂಪಾಯಿ 5000 ರೂಪಾಯಿ 1000 ದರದ 2 ಬಹುಮಾನಗಳು, ರೂಪಾಯಿ 500 ದರದ 3 ಬಹುಮಾನಗಳು ರೂಪಾಯಿ 250 ದರದ 6 ಬಹುಮಾನಗಳು ರೂಪಾಯಿ 100 ದರದ 10 ಬಹುಮಾನಗಳು ರೂಪಾಯಿ 50 ದರದ 20 ಬಹುಮಾನಗಳು, ರೂಪಾಯಿ 20 ದರದ 100 ಬಹುಮಾನಗಳು, ರೂಪಾಯಿ 10 ದರದ 800 ಬಹುಮಾನಗಳು, ರೂಪಾಯಿ 5 ದರದ 2100 ಬಹುಮಾನಗಳು

ಟಿಕೇಟು ಮಾರಾಟವು ತಾ 1—7—28 ಕ್ಕೆ ಮುಗಿಯುವದು ಮತ್ತು ಸೋಡ್ತಿಯು ತಾ 26—1—29ರಲ್ಲಿ ತೆಗೆಯಲ್ಪಡುವದು

ಪ್ರತಿ ಒಂದು ಟಿಕೇಟಿನ ಬೆಲೆಯು ಒಂದು ರೂಪಾಯಿ ಆಗಿರುತ್ತದೆ 24 ಟಿಕೇಟುಗಳು ಮಾರಿದವರಿಗೆ ಪ್ರತಿಫಲವಾಗಿ ಒಂದು ಟಿಕೇಟು ಬಿಟ್ಟಿ ಸಿಕ್ಕುವದಲ್ಲದೆ ಹೆಚ್ಚು ಟಿಕೇಟುಗಳು ಮಾರಿದವರಿಗೆ ವಿಶೇಷ ಬಹುಮಾನಗಳು ದೊರೆಯುವವು ಈ ವಿಷಯ ಯೋಗ್ಯ ದಾನ ಮಾಡು ಸಂಸ್ಥೆಗಳಿಗೆ ಮುಖ್ಯವಾಗಿ ಕೆನರಾ ಹೈಸ್ಕೂಲಿನ ಸಂಬಂಧವಾಗಿ ಈಗ ನಿರ್ಮಾಣಕ್ಕಾಗಿ ನಿಶ್ಚಯಿಸಿದ ಕೈಗಾರಿಕಾ ಶಾಲೆಗೆ ಕೂಡ ಅನುಕೂಲ ಸಹಾಯ ಮಾಡಿದಂತಾಗುವದು ಆಶೀರ್ವದಿಸಬೇಕು ಏಜಂಟರು ಸೋಡ್ತಿ ಕಮಿಟಿಯ ಹಾನರರಿ ಸೆಕ್ರೆಟರಿಯವರಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಬಹುದು ಏಜೆಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು

ಬಿ ಮಂಜುನಾಥ ಬಾಳಿಗ,

ತಾ 16—3—28 ಹಾನರರಿ ಸೆಕ್ರೆಟರಿ

ಕೆನರಾ ಹೈಸ್ಕೂಲ್ ಸೋಡ್ತಿ ಕಮಿಟಿ

ಬ್ರಹ್ಮ ಗಲ್ಲಿ, ಪೇಟೆ,

6—1 ಮಂಗಳೂರು

ಸ್ವಾಗತ ಅಧ್ಯಕ್ಷರ ಭಾಷಣ.

ಸಭಾಧ್ಯಕ್ಷರೆ, ಸಹೋದರ ಸಹೋದರಿಯರೆ,

ಕೊಡಗು ದೇಶದ ಉತ್ತರ ಭಾಗದಲ್ಲಿರುವ ಸೋಮವಾರಪೇಟೆಯ ತಾಲೋಕಿನವರ ಪರವಾಗಿ, ತಮಗೆಲ್ಲರನ್ನು ಈ 16ನೇ ಜಮೀನ್ದಾರರ ಸಂಘದ ಸಭೆಗೆ ಬರಮಾಡುವುದು ನನಗೆ ಸಂತೋಷವೆನಿಸುತ್ತದೆ ರಾಜಕೀಯ ಮೊದಲುಗೊಂಡು ಸಾಮಾಜಿಕ ವ್ಯವಹಾರಗಳಲ್ಲಿ, ಹಿಂದಿರುವ ನಮ್ಮ ತಾಲೋಕಿನವರ ಅಭಿವೃದ್ಧಿ ತಮಗೆಲ್ಲರನ್ನು ವಿಶ್ವಾಸಪೂರ್ವಕವಾಗಿ ಬರಮಾಡಲು ನನಗೆ ಪರಮಾನಂದವಾಗುತ್ತದೆ ಸಂಘವು ತನ್ನ ಕೆಲಸ ನಡೆಯಿಸಲು ಪ್ರಾರಂಭಿಸಿ ಇದುವರೆಗೆ 16 ವರುಷವಾದರೂ ಈ ಕಾಲದಲ್ಲಿ ಬರೆ 3 ಸಾರಿ ಈ ಸ್ಥಳದಲ್ಲಿ ಸಭೆ ನಡೆಸಿದ್ದು ನಡೆದಿದೆ ಎಂಬುದರಿಂದಲೇ ಈ ತಾಲೋಕಿನವರು, ಎಂಥಾ ಹಿಂದೆ ಬಿದ್ದಿರುವರೆಂಬುದು ಸ್ಪಷ್ಟವಾಗುತ್ತದೆ ಇದಾಗ್ಯೂ ಪ್ರಾರಬ್ಧವಶಾತ್ ಈ ಹಿಂದುಳಿದ ಕಾರಣದಿಂದ ಈ ರೂಪವಾಗಿ ಸೇರಿರುವುದರಿಂದ ಸ್ವಾಗತದ ಏರ್ಪಾಡುಗಳು ಇನ್ನಷ್ಟು ಚೆನ್ನಾಗಿರಬೇಕೆಂದು ಆಶಿಸಿದ್ದ ನಾನು

ಆದರೆ ಈ ಅಧಿವೇಶನದಿಂದ ಈ ಅಭಿಪ್ರಾಯವು ತಪ್ಪೆಂದು ಗೊತ್ತಾಗದೆ ಹೋಗದು. ತಾಲೋಕಿನ ಜನರಿಗೆ ಸಾರ್ವಜನಿಕ ಕಾರ್ಯಗಳಲ್ಲಿ ಅಭಿರುಚಿಯು ಹುಟ್ಟದೆ ಇರುವುದೇ ಈ ಲೋಪಗಳಿಗ ಕಾರಣವೇ ಹೊರತು ಮತ್ತೇನೂ ಅಲ್ಲ ಎಂಬುದನ್ನು ನಾನು ನಿಮಗೆ ಭರವಸೆಯಿಂದ ಹೇಳುತ್ತೇನೆ. ಕೊಡಗಿನ ಇತರ ಪ್ರಾಂತ್ಯಗಳಲ್ಲಿರುವ ಜಾಗ್ರತಸ್ಥಿತಿಯು ಇಲ್ಲಿಗೂ ಬರಲಿ ಎಂಬ ಆಶೆಯಿಂದಲೇ ಈ ಮಹಾಸಭೆಯನ್ನು ಇಲ್ಲಿಗೆ ಕರಯಿಸಿರುವದಾದ್ದರಿಂದ ಅಂಥ ಕುಂದು ಕೊರತೆಗಳನ್ನು ತಾವು ಮರೆಯಲೇ ಬೇಕಾಗಿದೆ.

ಈ ವರುಷದಲ್ಲಿ ಹಿಂದೂಸ್ಥಾನದ ರಾಜಕೀಯ ವಿಷಯಗಳಲ್ಲಿ ಹಲವು ಮಾರ್ಪಾಡುಗಳಾಗಿವೆ. ಇದಕ್ಕೆ ಕಾರಣವೇನೆಂದರೆ– ಸೈಮನ್ ಕಮಿಶನ್' ನವರು ಹಿಂದೂಸ್ಥಾನಕ್ಕೆ ಸುಧಾರಣೆಗಳನ್ನು ಹೇಗೆ ಕೊಡಬೇಕು ಎಂದು ಆಲೋಚಿಸುವುದೇ ಆಗಿದೆ. ಈ ಒಗ್ಗ ಇಷ್ಟೇ ಹಿಂದ ಸ್ಥಾನದಲ್ಲಿ ಚಳವಳವು ಹುಟ್ಟಿದೆ. ಆದರೆ ನಮ್ಮ ದೇಶದಲ್ಲಿ ಯಾವದೊಂದು ತರದ ಅಭಿಪ್ರಾಯವಾಗಲೀ, ಚಳವಳವಾಗಲೀ ಇನ್ನೂ ರೂಪಗೊಂಡಿರುವದಿಲ್ಲ. ಇದಕ್ಕೆ ಬದಲು ಕೆಲವು ಮಂದಿಗಳು ಮದ್ರಾಸಿಗೆ ಸೇರಿತವಾಗುವುದು ಒಳ್ಳೆಯದೆಂದೂ, ಇನ್ನು ಕೆಲವರು ಕರ್ನಾಟಕ ಪ್ರಾಂತ್ಯದೊಡನೆ ಏಕೀಕರಿಸುವದು ಉತ್ತಮವೆಂತಲೂ, ಇನ್ನು ಹಲವರು ಹಿಂದೂಸ್ಥಾನದ ಇತರ ಪ್ರಾಂತ್ಯಗಳಿಗೆ ದೊರೆತ ಹೆಚ್ಚಿನ ಸುಧಾರಣೆಗಳನ್ನು ದೊರಕಿಸಿಕೊಂಡು ಪ್ರತ್ಯೇಕ ಪ್ರಾಂತ್ಯವಾಗಿ ಇರಬಹುದೆಂತಲೂ ಮುಂತಾಗಿ ಅಭಿಪ್ರಾಯಪಟ್ಟಿರುತ್ತಾರೆ. ಇಂತಹ ಸಂದರ್ಭದಲ್ಲಿ ನಾವು ನಮ್ಮ ದೇಶಕ್ಕೆ ಹಿತಕರವಾಗುವಂಥ ಮತ್ತು ನೆರೆಕೆರೆಯವರ ಅಭಿವೃದ್ಧಿಗೆ ಬಗೆ ಲೋಪಬಾರದಂಥ ಅದೊಂದು ಏರ್ಪಾಡಿಗೆ ಸಾವಧಾನದಿಂದ ಅಭಿಪ್ರಾಯವನ್ನು ಕೊಟ್ಟು ಒಗ್ಗಟ್ಟನ್ನು ತರಬೇಕಾಗಿದೆ.

ರಾಜಕೀಯ ಕಾರ್ಯಕಲಾಪಗಳಲ್ಲಿ ಪ್ರಜಾಸಾಮಾನ್ಯವನ್ನು ಲಕ್ಷಿಸದ ಕಾಲವೊಂದಿದ್ದಿತು. ಆದರೆ ಈಗಿನ ಪ್ರಜಾಪ್ರಭುತ್ವದ ಧ್ಯೇಯಗಳು ಸರಕಾರದ ಆಡಳಿತದಲ್ಲಿ ಪ್ರವೇಶಿಸಿದ ಹಾಗೆಯೇ ಮಾರ್ಪಾಡುಗಳನ್ನು ತಂದೊಡ್ಡಿವೆ. ಬಹು ಕಾಲದಿಂದಲೂ ಕೆಲವು ಪಂಗಡಗಳಿಗೆ ಮಾತ್ರ ಇದ್ದ ಮೇಲ್ಮೆಯು ಈಗ ಇಳಿಯುತ್ತಾ ಒಂದು ಜನಸಾಮಾನ್ಯಕ್ಕೆ ಬರುತ್ತಾ ಇದೆ. ಇಂಥಾ ಸಂದರ್ಭದಲ್ಲಿ ಸ್ವಸಹಾಯದಿಂದ ದೇಶದ ಸಾರ್ವಜನಿಕ ಜೀವನದಲ್ಲಿ ಪ್ರತಿಯೊಬ್ಬ ಸಾಮಾನ್ಯನೂ ಒಂದು ಸ್ಥಾನವನ್ನು ಕಲ್ಪಿಸಿಕೊಳ್ಳುವುದರ ವಿನಹ ಬೇರೆ ಉಪಾಯವೇ ಇಲ್ಲ. ಇದಕ್ಕೆ ಉದಾಹರಣೆಯೆಂದರೆ–ಜಪಾನ್, ಟರ್ಕಿ ಮತ್ತು ಅಫಘಾನಿಸ್ಥಾನ ಮುಂತಾದ ದೇಶಗಳೇ ಸಾಕಾಗಿವೆ. ನಮ್ಮ ಕೊಂದರೆ ಎಂದರೆ ನಮ್ಮ ವಿಷಯವಾಗಿ ಪ್ರಶಂಸಿಸಬೇಕಾದ ಕಾಲದಲ್ಲೆಲ್ಲಾ ನಮ್ಮ ಹಿಂದಿನವರ ಘನತೆಯನ್ನೇ ವರ್ಣಿಸಿ ಆನಂದಪಡುತ್ತೇವೆ. ಈ ಕಾರಣದಿಂದಲೇ ನಮ್ಮ ರಾಜಕೀಯ ಅಭಿವೃದ್ಧಿಯು ನಾವಕಾಶವಾಗಿದೆ. ಇವುಗಳನ್ನು ಹಿಂದಕ್ಕಟ್ಟಬೇಕಾದರೆ, ವಿದ್ಯಾಭ್ಯಾಸದ ಮಹತ್ವಗಳನ್ನು ಬಿತ್ತುವುದೂ, ಆ ಮೂಲಕ ರಾಜಕೀಯ ವಿಷಯಗಳಲ್ಲಿ ವಿಶಾಲವಾದದೊಂದು ದೃಷ್ಟಿಮಂಡಲ ಬರುವಂತೆ ನವಜೀವನದ ಹುರುಪನ್ನು ಹುಟ್ಟಿಸಬೇಕು. ಮನುಷ್ಯನ ಯೋಗ್ಯತೆಯು ನಡವಳಿಕೆಯಿಂದ ಗೊತ್ತಾಗುವುದೇ ಹೊರತು ಬರಿಯ ಬಾಯಿ ಮಾತುಗಳಿಂದಲ್ಲ. ನಮ್ಮ ಭವಿಷತ್ತು ನಮ್ಮ ಕೈಯಲ್ಲಿಯೇ ಇದೆ. ಹಿಂದೂ ಮಾತೆಯು ತನ್ನ ನಾನಾ ಪಂಗಡದ ಮಕ್ಕಳೆಲ್ಲರೂ ಮುಂದೆ ಬರಲೆಂದೂ, ಅನೇಕ ಜನಾಂಗಗಳ ಸಮುದಾಯದಲ್ಲಿ ತನಗೆ ಪ್ರಾಪ್ತವಾಗಿದ್ದ ಗಣ್ಯವಾದ ಸ್ಥಾನವು ಪುನಃ ದೊರೆಯಲೆಂದೂ ಬಯಸುತ್ತಿರುವಳು. ನಮ್ಮ ನಮ್ಮ ಕೆಲಸವೊಡನೆ ಕೊಡಗು ದೇಶದ ಹಾಗೂ ಭರತ ವರ್ಷದ ಆಸಾರವಾದ ಹಿತಚಿಂತನೆಯನ್ನು ಸ್ವಲ್ಪ ಮಟ್ಟಿಗಾದರೂ ಮಾಡಬೇಕಾಗಿದೆ. ರಾಜ್ಯಾಂಗಕ್ಕೆ ನಾವುಗಳೆಲ್ಲರೂ ಸೇರದ ವಿನಹ ಅದು ಸುಸ್ಥಿರವಾಗದು. ಆದುದರಿಂದ ನಡವಳಿಕೆಯ ಕೆಲಸಗಳಿಂದ ದೇಶದ ಅಭಿವೃದ್ಧಿಯನ್ನು ಪ್ರತ್ಯಕ್ಷ ಕಾರ್ಯಗಳಿಂದ ಮಾಡುವಂಥಾ ಕಾರ್ಯಕ್ರಮವನ್ನು ಈ ಸಂಘದವರುಗಳಾದ ನಾವುಗಳೆಲ್ಲರೂ ಜಾಗ್ರತೆಯಾಗಿ ಮಾಡಬೇಕಾಗಿದೆ. ಈ ದೇಶದಲ್ಲಿ ರಾಜಕೀಯ ತಿಳುವಳಿಕೆಯಲ್ಲಿ ಹಿಂದೆ ಬಿದ್ದಿರುವ ತಾಲೋಕೆಂದರೆ ಇದೇ ಆಗಿದೆ. ಇದಕ್ಕೆ ಪ್ರಾಥಮಿಕ ವಿದ್ಯೆ ಇಲ್ಲದಿರುವುದೇ ಕಾರಣವಾಗಿದೆ. ವಿದ್ಯಾವಂತರಾಗಲು ಇರುವ ಅಡ್ಡಿಗಳಲ್ಲಿ ಬಡತನವು ಮುಖ್ಯವಾದುದು. ಕೊಡಗು ದೇಶವೇ ಬಡರಾಜ್ಯವಂತೆ. ಆದರಲ್ಲೂ ನಮ್ಮ ಈ ತಾಲೋಕನ್ನು ಕೇಳಬೇಕೆ? ಸಾಗಿನ ಕಂದಾಯದ ಅರ್ಧ ದರ ಇರುವಂಥಾ ಒಮ್ಮೆ ಗ್ರತರಿನೇನೋ ಸರಕಾರದ ಕೆಂಗೆಯು ಹೊರಬಂತೆ. ಈ ತಾಲೋಕಿನ ಹೆಚ್ಚಿನ ಜನರು ಪೂರ್ತಿ ಕಂದಾಯ ಕೊಡುವವರಾದ ಬಳಿಕ ಬಡವರಾಗದೆ ಇದ್ದಾರೆಯೆ? ಸಾಲದುದಕ್ಕೆ ದೇಶದ ಇತರ ತಾಲೋಕುಗಳಿಗೆ ಬೀಳುವಂಥಾ ಮಳೆಯೂ ಇಲ್ಲಿ ಬೀಳುವುದಿಲ್ಲ. ಹೀಗೆ ಕ್ರಮಕ್ಕೆ ತಕ್ಕ ಫಲ ಪೂರ್ತಿ ಕಂದಾಯ, ವಿದ್ಯೆ ಹರಡಲು ಸರಕಾರದ ಅಸಡ್ಡೆ, ಮುಂದಾಳುಗಳ ಉದಾಸೀನ, ಇವೆಲ್ಲಾ ಕಾರಣಗಳಿಂದ ಈ ತಾಲೋಕು ಹಿಂದ ಉಳಿದ ಹೋಯಿತು. ಇನ್ನು ಜನರ ಸ್ಥಿತಿಗತಿಗಳನ್ನು ವಿಚಾರಿಸುವುದಾದರೆ, ಸುಖದುಃಖಗಳನ್ನು ನೋಡುವುದಾದರೆ, ಆದೊಂದು ವಿಷಾದಕರವಾದ ಸಂಗತಿಯೆಂದೇ ನಾನು ಹೇಳಬೇಕಾಗಿದೆ. ಸಾಕಷ್ಟು ಮಳೆಯಿಲ್ಲದಿರುವುದರಿಂದ ನಮ್ಮ ಪ್ರಾಚೀನರು ಹಲವು ಕೆರೆಗಳನ್ನು ನಿರ್ಮಿಸಿದ್ದರು. ಈಗ ಈ ದೇಶದ ಸರಕಾರವು ಹೊಸದನ್ನು ನಿರ್ಮಿಸುವುದಿರಲಿ, ಹಳೆಯದನ್ನೂ ಕೂಡ ರಿಪೇರಿಮಾಡಲು ಸಾಕಷ್ಟು ಪ್ರಯತ್ನ ಮಾಡುತ್ತಿಲ್ಲ. ಇದರಿಂದ ಬೇಸಿಗೆ ಕಾಲದಲ್ಲಿ ಜಲದ ಗೊಜ್ಜೆಸೀರನ್ನು ಕುಡಿದು ಕಾಯಿಲೆ ಕಸಾಲೆಯಿಂದ ಬಳಲಿ ಎಷ್ಟೋ ಮಂದಿ ವರ್ಷ ವರ್ಷವೂ ಸಾಯುತ್ತಾ, ಕೊಡಗಿನ ಪ್ರತಿ ಒಂದು ಜನಕ್ಕೆ ಮೂರು ಸಾವೆಂಬುದನ್ನು ದೃಢೀಕರಿಸಿದೆ. ಇದಕ್ಕೆ ಪ್ರಾಯಶ್ಚಿತ್ತವಾಗಿ ತಕ್ಕ ಔಷಧೋಪಚಾರಗಳೆಂದರೆ. ಆದಕ್ಕೂ ಕಷ್ಟವು. ಈಗ ಆದೇನೋ ಶನಿವಾರಸಂತೆಗೆ ಆಸ್ಪತ್ರೆ ದೊರೆಯುವುದಾಗಿ—ಆದರಲ್ಲೂ ಹಲವು ಸಂಗತಿಗಳಲ್ಲಿ ಈ ತಾಲೋಕಿನವರು ಸರಕಾರದವರನ್ನು ತೃಪ್ತಿಪಡಿಸಿದರೆ—ದೊರೆಯುವುದಾಗಿ ಕೇಳುತ್ತೇನೆ. ಈ ವೈದ್ಯ ಕಟ್ಟಡಕ್ಕೆ ಧನಸಹಾಯ ದೊರೆತರ ಆಸ್ಪತ್ರೆ ದೊರೆತೀತು ಎಂದು ಸರಕಾರದವರು ಹೇಳುವುದು ನ್ಯಾಯವಲ್ಲ. ಸರಕಾರವಿರುವುದು ಪ್ರಜೆಗಳ ಕ್ಷೇಮಕ್ಕೆ. ಈಗ ಈ ಶನಿವಾರಸಂತೆ ಪ್ರಾಂತ್ಯದವರು ತಮ್ಮ ಒಂದು ಹೊತ್ತಿನ ಅನ್ನವನ್ನಾದರೂ ಬಿಟ್ಟು ಹಣವನ್ನು ಜೋಡಿಸುವುದಾಗಿ ಯೋಚಿಸಿರುತ್ತಾರೆಂಬ ಸಂಗತಿಯನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಕೇಳಿಕೊಳ್ಳುವುದೇನೆಂದರೆ ಈ ಪ್ರಯತ್ನಕ್ಕೆ ಈ ತಾಲೋಕಿನ ಮತ್ತು ದೇಶದ ಧನಿಕರು ಸಹಾಯಕೊಟ್ಟು ಸಂಕಟದಿಂದ ನರಳುತ್ತಿರುವ ನಿರಾಶ್ರಿತರಿಗೆ ಆಶ್ರಯಕಲ್ಪಿಸುವುದರ ಮೂಲಕ ಪುಣ್ಯಗಳಿಸಬೇಕಾಗಿ ಪ್ರಾರ್ಥಿಸುವವನಾಗಿರುತ್ತೇನೆ. ಕೃಷಿ, ಕೈಗಾರಿಕೆ, ವ್ಯಾಪಾರ ಇವುಗಳ ವಿಷಯವು ಹೀಗೆಯೇ! ನಮ್ಮ ತಾಲೋಕಿನ ಕೃಷಿ ಕಡಿಮೆ ಹೋಬಳಿ ಜನರಿಗೆ ಕ್ಷಾಮದ ಸ್ವರೂಪ ಆಗಿಂದಾಗ್ಯೆ ತಲೆದೋರುತ್ತಿದೆ. ಅವರ ಸಹಾಯಕ್ಕಾಗಿ ಒಂದು ಸಾಲ ಮಾಡಿಕೊಡಬೇಕೆಂದು ಆ ಹೋಬಳಿಯವರು ಎಷ್ಟೋ ಕಾಲದಿಂದ ಕೇಳಿದರೂ ಏನೂ ಪ್ರಯೋಜನವಾಗದೆ ನಿರಾಶರಾಗುತ್ತಿದ್ದಾರೆ. ಆ ಜನರು ಪೂರ್ತಿ ನಿರಾಶರಾಗಲು ಬಿಡದೆ ಏನಾದರೊಂದು ಸಂಚಿಕೆಯಿಂದ ಸರಕಾರದವರು ತಕ್ಕ ಪ್ರಯತ್ನ ಮಾಡಬೇಕಾಗಿ ಈ ಸಂಘದವರು ಒತ್ತಾಯಿಸಿ ತಿಳಿಸಬೇಕಾಗಿದೆ. ವ್ಯವಸಾಯದ ಸಾಧನ ಸಂಪತ್ತು ಎಂದರೆ ದನಕರುಗಳೇ. ನಮ್ಮ ತಾಲೋಕಿನ ರಿಸರ್ವ್ ಫಾರೆಸ್ಟಿನ ಹಾವಳಿಯಿಂದ ಮೇವಿಗೆ ಎಡೆ ಇಲ್ಲವಾಗಿದೆ. ಕೈತಿಂಡಿಕೊಟ್ಟು ಬೆಳೆಯಿಸಿದ ಜಾನುವಾರುಗಳು ಈ ರಿಸರ್ವ್ ಫಾರೆಸ್ಟು ವಾಸಿಗಳಾದ ದುಷ್ಟ ಮೃಗಗಳಿಗೆ ತುತ್ತಾಗುತ್ತಿವೆ. ಈ ವಿಷಯ ಕಣ್ಣಾರೆ ಕಂಡು, 'ಕ್ಯಾಟಲ್ ಕಮಿಟಿ'ಯವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಇದರಿಂದ ಹಲವು ಗ್ರಾಮಗಳು ಜನಶೂನ್ಯವಾಗಿ ಪಾಳುಬೀಳುತ್ತಾ ಇವೆ. ಈ ರಿಸರ್ವ್ ಫಾರೆಸ್ಟ್ ಕಾಟವನ್ನು ಸ್ವಲ್ಪ ಸಡಿಲ ಮಾಡಲು ಸರಕಾರದವರು ಒಪ್ಪುವಂತೆ ಏಕಾಭಿಪ್ರಾಯವು ನಮ್ಮ ದೇಶದಲ್ಲೆಲ್ಲಾ ಇರಲು, ಅದನ್ನು ಇನ್ನಷ್ಟು ಪುಷ್ಟೀಕರಿಸುವಂಥಾ ಚಳವಳವನ್ನು ಈ ಸಂಘದವರು ಮಾಡುತ್ತಾ ಇರಬೇಕಾಗಿ ಕೋರುತ್ತೇನೆ. ವಿದ್ಯೆಯ ಮಟ್ಟಿಗೆ ಸೋಮವಾರಪೇಟೆ ಮತ್ತು ಕೊಡ್ಲಿಪೇಟೆ ಶಾಲೆಗಳು ಇಂಗ್ಲೀಷ್ ಲೋವರ್ ಸೆಕೆಂಡರಿ ಶಾಲೆಗಳಾಗುವಂತೆ ಮಾಡಲೇ ಬೇಕಾಗಿದೆ. ಇತರ ಕಡೆಗಳಲ್ಲಿ ಸ್ವಲ್ಪ ಮಂದಿ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಗಳಲ್ಲಿ ಕೂಡ ವಿದ್ಯಾರ್ಥಿ ನಿಲಯಗಳನ್ನು ಸರಕಾರದವರು ಸ್ಥಾಪಿಸಿರುವಲ್ಲಿ ಈ ಪ್ರಾಂತ್ಯದಲ್ಲಿ ತಕ್ಕ ಪ್ರಯತ್ನ ಮಾಡದಿರುವುದು ವಿಷಾದಕರವಾಗಿದೆ. ಮಹನೀಯರೇ! ನಮ್ಮ ತಾಲೋಕಿನ ದೌರ್ಭಾಗ್ಯ ಸ್ಥಿತಿಗಳು ಇನ್ನೂ ಅನೇಕವಿರುವುದರಿಂದ ಅವುಗಳನ್ನು ತಮ್ಮ ಮುಂದೆ ಇಟ್ಟು ತಮ್ಮ ಸಮಯ ಹಾಳು ಮಾಡಲಿಚ್ಛಿಸೆನು. ಹಿಂದುಳಿದ ನಮ್ಮ ತಾಲೋಕಿಗೆ ಸರಕಾರದಿಂದ ದೊರೆಯಬಹುದಾದ ಪ್ರಯೋಜನಗಳೆಂದರೆ—ವಿದ್ಯಾ, ವೈದ್ಯ, ಕೃಷಿ ಸುಧಾರಣೆ ಮುಂತಾದುವುಗಳಲ್ಲಿ ಮೊದಲು ಸಮಗ ದೊರೆಯುವಂತೆ ತಾವುಗಳೆಲ್ಲರೂ ಪ್ರಯತ್ನಿಸಲೇ ಬೇಕಾಗಿದೆ ಎಂಬುದು ನನ್ನ ಅರಿಕೆಯಾಗಿದೆ. ಈಗ ನಮ್ಮ ಮುಂದಿರುವ ಮ. ಸತ್ಯಮೂರ್ತಿಗಳು ಮದ್ರಾಸಿನಿಂದ ಇಲ್ಲಿಯ ವರೆಗ ಸಮಗೋಸ್ಕರ ದಯಮಾಡಿರುತ್ತಾರೆ. ಇವರು ಸಂಶಯವಿಲ್ಲದ ವಾಕ್ಚಾತುರ್ಯವುಳ್ಳ ಮುಂದಾಳುಗಳು. ಈಗಿನ ರಾಜಕೀಯ ಸ್ಥಿತಿಯಲ್ಲಿ ಚೆನ್ನಾಗಿ ನುರಿತಂಥವರು. ಇಂಥವರ ಅಧ್ಯಕ್ಷತೆಯಲ್ಲಿ ನಮ್ಮ ದೇಶಸ್ಥರು ಸಾರ್ಥಕವಾದ ಪ್ರಯೋಜನವನ್ನು ಹೊಂದಿಯಾರೆಂತಲೇ ನನ್ನ ಭರವಸೆಯಾಗಿದೆ. ಇವರ ಅಮೂಲ್ಯ ಸಮಯದಲ್ಲಿ ನಾಲ್ಕಾರು ದಿನಗಳನ್ನು ನಮ್ಮ ದೇಶಕ್ಕಾಗಿ ವಿನಿಯೋಗಿಸಿದುದಕ್ಕೆ ಸಭೆಯ ಪರವಾಗಿ ಇವರನ್ನು ವಂದಿಸಿ ಅಧ್ಯಕ್ಷಸ್ಥಾನವನ್ನು ವಹಿಸಲು ಕೇಳಿಕೊಳ್ಳುತ್ತೇನೆ.

ಪತ್ರವ್ಯವಹಾರ

ವಾತ್ತಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ವೀರರಾಜಪೇಟೆನಾಡು ಸಹಕಾರಿ ಸಂಘಗಳ ಕಾನ್‌ಫರೆನ್ಸು.

ತಾರೀಖು 1—೩—1928ರಲ್ಲಿ ವೀರರಾಜಪೇಟೆ ತಾಲೋಕು ಕಚೇರಿ ಮೈದಾನದಲ್ಲಿ ವೀರರಾಜಪೇಟೆನಾಡು ಸಹಕಾರಿ ಸಂಘಗಳ ಕಾನ್‌ಫರೆನ್ಸ್ ನಡೆಸಿದರ ಪ್ರೊಸೀಡಿಂಗ್ಸ್.

ವೀರರಾಜಪೇಟೆನಾಡಿಗೆ ಸೇರಿದ 20 ಸಹಕಾರಿ ಸಂಘಗಳ 10೦ ಮೆಂಬರುಗಳು ಹಾಜರಿದ್ದರು.

ಈ ದಿನದ ಕಾನ್‌ಫರೆನ್ಸಿಗೆ ರಿಜಿಸ್ಟ್ರಾರ್ ಸಾಹೇಬರು ಅಧ್ಯಕ್ಷರಾಗಿರಬೇಕಾಗಿ ಮ. ನಡಿಕೇರಿಯಂಡ ಸೋಮಯ್ಯನವರು ಸೂಚಿಸಿದ ಮೇರೆ ಸರ್ವಸಮ್ಮತದಿಂದ ರಿಜಿಸ್ಟ್ರಾರ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿದರು.

ಅಧ್ಯಕ್ಷರು ಸಹಕಾರಿ ತತ್ವಗಳನ್ನು ಸಾಂಗವಾಗಿ ವಿವರಿಸಿದರು. ಅನಂತರ ಕಮಿಟಿ ಮೆಂಬರುಗಳ ಜವಾಬ್ದಾರಿಗಳನ್ನೂ ಮತ್ತು ಅವರು ಸಂಘದಲ್ಲಿ ಮಾಡಬೇಕಾದ ಕೆಲಸಗಳನ್ನೂ ವಿವರಿಸಿ ಹೇಳಿದರು. ಸಂಘದ ಸಕ್ರೆಟರಿಗಳು ರೂಲ್ಸ್, ಆಕ್ಟ್ ಮುಂತಾದವುಗಳನ್ನು ಓದಿ ಮನನ ಮಾಡಿಕೊಂಡು ಸಂಘದ ಕೆಲಸಗಳನ್ನು ಕ್ರಮವಾಗಿ ನಡೆಸಬೇಕೆಂದು ಸಹ ಹೇಳಿದರು.

ಎಲ್ಲಾ ಸಂಘಗಳ ರಿಜರ್ವ್‌ಫಂಡಿನಲ್ಲಿ ಶೇಕಡ ... ನ್ನು ಸಂಟ್ರಲ್ ಬ್ಯಾಂಕಿನಲ್ಲಾಗಲಿ, ಇದರ ಕಡೆಯಲ್ಲಾಗಲಿ ಡಿಪಾಜಿಟ್ ಮಾಡಬೇಕೆಂದು ಜೇಪ್ ಕಮಿಶನರವರು ... ಮಾಡಿರುತ್ತಾರೆಂದು ಅಧ್ಯಕ್ಷರು ಹೇಳಿದರು.

ಪಂಚಮ ವಗೈರೆ ಹಿಂದುಳಿದ ಪಂಗಡದವರು ... ಹಿಡುವಳಿದಾರರಾದರೆ ಮಾತ್ರ ಅಂಥವರನ್ನು ಗ್ರಾಮ ... ಗಳಿಗೆ ಸೇರಿಸಿಕೊಳ್ಳಬಹುದೆಂದು ಈ ಕಾನ್‌ಫರೆನ್ಸ್ ತೀರ್ಮಾನಿಸಿರುತ್ತೆ.

ಎಡೆನಾಲ್ಕುನಾಡು ನಾಗಿನ ಕುಳಗಳನ್ನು ಸೇರಿಸಿ ಒಂದು ಲ್ಯಾಂಡ್‌ಮಾರ್ಗೇಜ್ ಬ್ಯಾಂಕ್ ಮಾಡಬೇಕೆಂದು ಈ ಕಾನ್‌ಫರೆನ್ಸ್ ತೀರ್ಮಾನಿಸಿರುತ್ತೆ. ಅಂಥ ಸಂಘಗಳಲ್ಲಿ ಸೇರಲು ಇಷ್ಟಪಡುವ ಮೆಂಬರುಗಳ ಪಟ್ಟಿಯನ್ನು ಯೂನಿಯನ್ನಿನವರು ತಿಳಿದು ರಿಜಿಸ್ಟ್ರಾರ್‌ರವರಿಗೆ ಕಳುಹಿಸುವಂತೆ ತೀರ್ಮಾನವಾಯಿತು. ಇಂಥಾ ಬ್ಯಾಂಕನ್ನು ನಡೆಸಲಿಕ್ಕೆ ಬೇಕಾಗುವ ರೂಲ್ಸ್‌ಗಳನ್ನು ಮಾಡಿಕೊಡಬೇಕೆಂದು ರಿಜಿಸ್ಟ್ರಾರರವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

ಸಹಕಾರಿ ತತ್ವಗಳು ಇನ್ನು ಚೆನ್ನಾಗಿ ಹಬ್ಬದೆ ಇರುವುದರಿಂದ ಭತ್ತ ಮಾರಾಟದ ಮೊದಲಾದ ಕೋಪರೇಟಿವ್ ಸ್ಟೋರ್ ಏರ್ಪಾಡು ಮಾಡಲು ಅಸಾಧ್ಯವೆಂದು ಈ ಕಾನ್‌ಫರೆನ್ಸ್ ತೀರ್ಮಾನಿಸುತ್ತೆ.

ಹುತ್ತರಿ ಹಬ್ಬದ ಖರ್ಚಿಗೋಸ್ಕರ ಸಂಘದ ಮೆಂಬರುಗಳಿಗೆ ಪ್ರೋನೋಟು ಮೇರೆ ಸಣ್ಣ ಸಾಲಗಳನ್ನು ಕೊಡುವ ಬಗ್ಗೆ ಚರ್ಚೆ ಕೆಲವು ಹೊತ್ತು ನಡೆದು ಕಡೆಗೆ ಅಂಥಾ ಸಾಲವನ್ನು ಕೊಡಕೂಡದಾಗಿ ತೀರ್ಮಾನವಾಯಿತು.

ಸಂಘಗಳನ್ನು A. B C. D. E ತರಗತಿಗಳಾಗಿ ಭಾಗಿಸಬೇಕೆಂದು ಗವರ್ನ್‌ಮೆಂಟಿನವರು ಆರ್ಡರು ಮಾಡಿರುತ್ತಾರೆಂದೂ ಎಡೆನಾಲ್ಕುನಾಡು ಸಂಘಗಳೆಲ್ಲವೂ A ತರಗತಿಗೆ ಬರಲಿಕ್ಕೆ ಪ್ರಯತ್ನಪಡಬೇಕೆಂದೂ ಅಧ್ಯಕ್ಷರು ವಿವರಿಸಿ ಹೇಳಿದರು.

ಸಂಘದ ಪ್ರತಿ ಮೆಂಬರನ ಸಾಲ ಸ್ಕೂಲುಗಳ ಪಟ್ಟಿಯನ್ನು ತಯಾರಿಸಿಡಬೇಕೆಂದು ಅಧ್ಯಕ್ಷರು ಹೇಳಿದರು.

ಪ್ರತಿ ವರ್ಷದ ಡಿಸೆಂಬರ್ ತಿಂಗಳಲ್ಲಿ ಸಂಘದ ಮೆಂಬರುಗಳಿಗೆ ಬೇಕಾಗುವ ಸಾಲದ ಅಂದಾಜು ಪಟ್ಟಿಯನ್ನು ... ಯ ಸಂಘಗಳು ತಯಾರಿಸಿ ಯೂನಿಯನ್ನಿಗೆ ಕಳುಹಿಸುವುದು. ಯೂನಿಯನ್ನಿನವರು ಅವರ ಸಿಫಾರಸ್ಸಿನೊಡನೆ ಅಂದಾಜು ಪಟ್ಟಿಯನ್ನು ಸಂಟ್ರಲ್ ಬ್ಯಾಂಕಿಗೆ ಕಳುಹಿಸುವಂತೆ ತೀರ್ಮಾನವಾಯಿತು.

ಎಲ್ಲಾ ಸಂಘಗಳು ಸಂಟ್ರಲ್ ಬ್ಯಾಂಕಿನಿಂದ ಅವರ ಆವಶ್ಯಕಾನುಸಾರ ಐದು ಮೂರು ಹೆಚ್ಚು ಶೇರು ತೆಗೆಯುವಂತೆ ತೀರ್ಮಾನವಾಯಿತು.

ಎಡೆನಾಲ್ಕುನಾಡು ಮತ್ತು ಬೆಪ್ಪುನಾಡಿನವರು ಒಟ್ಟಾಗಿ ಸಂಘವನ್ನು ನಡಿಸಿಕೊಂಡು ಬರುತ್ತಿದ್ದ ಸಮಯದಲ್ಲಿ ಆಗಿದ್ದ ಖರ್ಚಿ ಮೇಜು, ಆಲ್ಮೈರ ವಗೈರೆಗಳ ದಾಮಾಷಾ ಕ್ರಯವನ್ನು ಎಡೆನಾಲ್ಕುನಾಡು ಯೂನಿಯನ್ನಿಗೆ ಕೊಡಿಸಿಕೊಳ್ಳುವುದಕ್ಕೆ ರಿಜಿಸ್ಟ್ರಾರ್‌ರವರಿಗೆ ಬರಕೊಳ್ಳುವಂತೆ ತೀರ್ಮಾನವಾಯಿತು.

ಎಡೆನಾಲ್ಕುನಾಡು ಯೂನಿಯನ್ನಿಗೆ ಸುಪರ್‌ವಿಜನ್ ಫಂಡಿನಿಂದ ಸಹಾಯ ಕೊಡುವುದರ ವಿಷಯ ದೇಶದ ಕಾನ್‌ಫರೆನ್ಸಿನಲ್ಲಿ ಇತ್ಯರ್ಥ ಪಡಿಸುವಂತೆ ತೀರ್ಮಾನವಾಯಿತು.

ಸಹಕಾರಿ ಸಂಘಗಳು ಮೆಂಬರುಗಳಿಗೆ ಸಾಲ ಕೊಡುವಾಗ ಅವರಿಂದ ವಸೂಲ್ಮಾಡುವ ರಿಜಿಸ್ಟ್ರೇಶನ್ ಫೀಜು ವಸೂಲ್ಮಾಡುವುದು ಅವಶ್ಯವಿಲ್ಲವೆಂದು ತೀರ್ಮಾನವಾಯಿತು. ಈ ವಿಷಯ ಸಂಘಗಳಿಗೆ ಸರ್ಕ್ಯುಲಾರ್ ಮೂಲಕ ತಿಳಿಸುವಂತೆ ರಿಜಿಸ್ಟ್ರಾರವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

ಅಧ್ಯಕ್ಷರಿಗೆ ವಂದನೆಗಳಿಂದ ಕಾನ್‌ಫರೆನ್ಸು ಬರಕಾಸ್ತಾಯಿತು.

ಸಿ. ಐ. ನಂಜಪ್ಪ,
ಸೆಕ್ರೆಟರಿ.

ಹಿಂದೂ ಸೇವಾದಲದ ಪರಶುರಾಮು

ಸ್ವಯಂಸೇವಕ ಶಿಕ್ಷಣ ಶಿಬಿರದ ಪ್ರಾರಂಭೋತ್ಸವವು.

ಸೇವಾದಲದ ಶಿಕ್ಷಣ ಶಿಬಿರವು ೭ನೇ ತಾರೀಕಿನ ದಿನ ಪಂಡಿತ ತಾರನಾಥರೆಯವರಿಂದ ಬಹಳ ವಿಜೃಂಭಣೆಯಿಂದ ಪ್ರಾರಂಭಿಸಲ್ಪಟ್ಟಿತು. ೧೦೦೦ ಜನರು ನೆರೆದಿದ್ದರು. ... ಗಂಟೆಗೆ ಶಿಬಿರದಿಂದ ಮೆರವಣಿಗೆ ಹೊರಟಿತು. ಪುರ ... ರು ತಂಡ ತಂಡವಾಗಿ ಒಂದು ಮೆರವಣಿಗೆಗೆ ಕೂಡಿದರು. ಮೆರವಣಿಗೆಯು ೪ ಗಂಟೆಗೆ ಭಾರತ ಮಾತೆಯ ಜಯಜಯಕಾರದೊಡನೆ ಶಿಬಿರವನ್ನು ಪ್ರವೇಶಿಸಿತು. ಕೂಡಲೇ ಧ್ವಜಾರೋಹಣವು ಮಾಡಲ್ಪಟ್ಟಿತು. ಅಧ್ಯಕ್ಷರಾದ ತಾರನಾಥರೆಯವರು ಪರಶುರಾಮ ಶಿಬಿರದ ಆಧಿಪತ್ಯವನ್ನು ಶ್ರೀ. ...

ರಾಮೈಯ್ಯನವರು ವೈಹಿಸಬೇಕೆಂದು ಹೇಳಿ ಅಧ್ಯಕ್ಷ ಸ್ಥಾನವನ್ನು ಸೂಚಿಸಿದರು. ಆ ಮೇಲೆ ಮೈಸೂರ್ ದಿವಾನ್ ನಿವಾಸ ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಸಾಹೇಬ್, ಮಾನ್ಯರವರ ಶ್ರೀನಿವಾಸರಾವ್ ಕೊಯ್ಲಿಗಿ, ಭಾರತಿ ಮು ಪತ್ರದ ಸಂಪಾದಕರಾದ ರಂಗಸ್ವಾಮಿ ಐಯ್ಯಂಗಾರ್ ಬೆಂಗಳೂರು ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳು, ಕೇಳಕರ, ಡಾಕ್ಟರ್ ಪಟವರ್ಧನ, ಪ್ರೊಫೆಸರ್ ವ... ನ್ ಇವರೇ ಮೊದಲಾದ ಅನೇಕ ಸಜ್ಜನರಿಂದ ಬಂದ ಅಭಿನಂದನ ಪತ್ರಗಳನ್ನು ಮತ್ತು ತಂತಿಗಳನ್ನು ಓದಿದ ಮೇಲೆ ... ಗಳು ವಸ್ತ್ರಗಳನ್ನು ಧರಿಸಿ, ತಾವು ಭಾರತಸಂತತಿ ಸೇವೆಯನ್ನು ಸಂಪೂರ್ಣ ಸ್ವಾರ್ಥತ್ಯಾಗದಿಂದ ಹಿಂದೂ ... ಸೇವಾದಳದ ಮುಖಾಂತರವಾಗಿ ಮಾಡುವೆನೆಂದು ... ಧ್ವಜದ ಕೆಳಗೆ ನಿಂತು ದೇವರನ್ನು ಸ್ಮರಿಸಿ ಪ್ರತಿಜ್ಞೆ ... ಮಾಡಿದನಂತರ ಶಿಬಿರದ ಎಲ್ಲ ... ರ್ಥಿಗಳು ಪ್ರತಿಜ್ಞೆಯನ್ನು ಮಾಡಿದರು. ಆ ಮೇಲೆ ... ರು ಸ್ವಯಂಸೇವಕರೆಂದರೇನು ? ಅವರ ಕರ್ತವ್ಯಗಳ ... ಬಗೆಗೆ ಬೋಧಪ್ರದವಾಗಿ ಉಪದೇಶ ಪರಾಮರ್ಶವನ್ನು ... ಡಿದರು. ವಿದ್ಯಾರ್ಥಿಗಳು ಕಲವು ಆಟಗಳನ್ನು ಮಾಡಿ ... ದನಂತರ ಅಧ್ಯಕ್ಷರ ಆಭಾರವನ್ನು ಮನ್ನಿಸಿ ಸಭೆ ವಿಸರ್ಜನ ಮಾಡಲ್ಪಟ್ಟಿತು.

೨೬—೪—೨೮ ಶ್ರೀನಿವಾಸರಾವ್, ಸೀರಂಪಾಕ

ತೀರ್ಥಹಳ್ಳಿ ಹಿಂ ಸೇ ದಳ

ಡಿ. ಬಿ. ಬಿ. ಯಲ್ ಕೋವಿಗಳು ರೂ 75 ರಿಂದ ರೂ 450/ ಯಸ್ ಬಿ ಬಿ. ಯಲ್ ಕೋವಿಗಳು ರೂ 35 ರಿಂದ ರೂ 150/ ಯಸ್ ಬಿ. ಯಮ್ ಯಲ್ ಕೋವಿಗಳು ರೂ 35 ರಿಂದ 65, ರಿವಾಲ್ವರ್‌ಗಳು ರೂ 40/ರಿಂದ ರೂ 125 ರ ವರೆಗೆ ಡಬ್ಬಲ್ ಮತ್ತು ಸಿಂಗಲ್ ತೋಟಗ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯನ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ

24—21 12. ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L Rifles	Rs	120	to	Rs	2750
S B B L	„	35	to	„	950
D B B L Guns	„	50	to	„	1350
S B B L	„	35	to		275
D B M L	„	45	to		135
S B M L	„	30	to	„	80
B L Revolvers	„	35	to	„	350
Automatic Pistols	„	30	to	„	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—6 210 Abdul Rehman Street, BOMBAY.

ಸರಕಾರದ ಭರವಸವುಳ್ಳ

ಓರಿಯಂಟಲ್ ಜೀವವಿಮೆ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874.

1926ನೇ ವರ್ಷವು ಉನ್ನತಾಭಿವೃದ್ಧಿ ಸೂಚಕವಾದ ಮತ್ತೊಂದು ವರ್ಷವಾಗಿರುತ್ತದೆ

ಹೊಸ ವಿಮೆಗಳು	1924 ರೂ	2,37,34,000		ಹೆಚ್ಚು ರೂ 59 0..
	1925 ರೂ	2,96,42 000		
	1926 ರೂ	3 91 39 000		ಹೆಚ್ಚು ರೂ 94 97 000

ಪಾಲಿಸಿಗಳ ಮೇಲೆ ಹೆಚ್ಚು ಬಂದ 42 ಲಕ್ಷ ರೂಪಾಯಿಗಳಿಂದ ರೂ 7 33 80 000ಗೆ ಹೆಚ್ಚಿರುತ್ತದೆ ... ವರ್ಷಕ್ಕೆ ರೂ 1,05 50 000ಗೆ ಏರಿರುತ್ತದೆ

ಓರಿಯಂಟಲಿನ ಸಂಪದಭಿವೃದ್ಧಿ ಸ್ಥಿತಿಯು ಜೀವವಿಮೆ ಮಾಡುವ ಪ್ರಜೆಗಳಿಗೆ ಸಮರ್ಪಕವಾದ ಸೇವೆಯನ್ನು ಮಾಡುತ್ತಿದೆ ಎಂಬುದಕ್ಕೆ ನಿದರ್ಶನ ಪ್ರಾಯವಾಗಿರುತ್ತೆ.

ಪಾಲಿಸಿದಾರರಾಗತಕ್ಕವರು ಬೆಂಗಳೂರು ಓರಿಯಂಟಲ್ ಬಿಲ್ಡಿಂಗ್ಸ್‌ನಲ್ಲಿರುವ ಮೆಸ್ಸರ್ಸ್. ... ಹಚ್. ಎಡ್ವಿನ್ ಜೋನ್ಸ್, ಎಮ್ ಎಸ್ ಎ, ಎ ಐ ಎ ರವರಿಗಾಗಲೀ ಅವರ ಕಂಪೆನಿ ... ಇತರ ಆಫೀಸುಗಳಿಗಾಗಲೀ ಸಾವಕಾಶವಿಲ್ಲದೆ ಬರೆಯಬೇಕಾಗಿ ಕೇಳಲಾಗಿದೆ

ಓರಿಯಂಟಲ್ ಬಿಲ್ಡಿಂಗ್ಸ್, ಪ್ರಾಂಚ್ ಪರೇಡ್, ಬೆಂಗಳೂರು. — 52—4 — ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳ.

... ಬಹಾದ್ದೂರ್ ಪ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
...ಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
...ಮೋಹನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
...ಲೋಸ್ಟೀಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
...ಸುಕುರಾಟಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌಂಟೆನ್ ಪೆನ್‌ಗಳು

ಬ್ಲ್ಯಾಕ್ ಬರ್ಡ್ ಫೌಂಟನ್ ಪೆನ್	1ಕ್ಕೆ 3—8—0 ಮತ್ತು 3—12—0
ಪರಲ್ ವಂಡರ್ ಫೌಂಟನ್ ಪೆನ್	1ಕ್ಕೆ 3—0—0 ಮತ್ತು 3—8—0
ಕಾಂಪ್ಯಾಕ್ಟ್ ಸಪ್ಟೇರಿಯನ್ ಫೌಂಟನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌಂಟನ್ ಪೆನ್	1ಕ್ಕೆ 8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ	12—0—0 ಮತ್ತು 15—0—0

ಜ ತ್ರಿಂ ಊದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಪೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ವೆಸ್ಟಂಡ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9—6—0
ಬಿಗ್ ಬೆನ್ ನವ ಊನ ಇಟಾಲಿಯನ್ ಟೈಂಪೀಸ್ 1ಕ್ಕೆ	6—1—0
ಅನ್ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	...—0—0

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟ್ಯಾಂಪು ರವಾನಿಸಿ

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

೨೬—೪

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊ ಅಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15 510
ಜಮೆಬಂದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.
ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಟ್ಟಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಮಾಡಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.

(52—15) 'Please write for our Catalogue 1928—1929.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ಚಳಿ ಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ ... ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ... ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ... ಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ... ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ... ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲ 1, 3, 6ಕ್ಕೆ ರೂ 1—.., 3—8—0, 6—12—0

ರೋಮನಾಸಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮ... ರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆವುರಿ, ಕ... ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—..

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ,
52—31 ೧. ಮಂಗಳೂರು

Kapurchand & co,

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc., Chickapet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—49

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರವರಿ 28ಕ್ಕೆ ಅಖೈರಾದ 5 ವರ್ಷಗಳ ಕೆಲಸದ

ಬೆಲೆಕಟ್ಟಿದಲ್ಲಿ
ರೂ. 37,66,689.
ಉಳುವರಿ ಕಂಡುಬಂದಿದೆ

ಒಟ್ಟು ಜೀವವಿಮೆಯ		ಪ್ರಾಯ ನಿರವಿನ ವಿಮೆಯ
1000 ರೂಪಾಯಿಗಳಿಗೆ ಸಾಲಿಯಾನ	ಮತ್ತು	1000 ರೂಪಾಯಿಗಳಿಗೆ
15 ರೂಪಾಯಿನಂತೆಯೂ		12 ರೂಪಾಯಿನಂತೆಯೂ

ರಿವರ್ಷನರಿ ಬೋನಸ್ ಹಂಚ ಬಹುದೆಂತ ತೀರ್ಮಾನವಾಗಿದೆ.

ವಿಳಾಸ
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು.
ಕಮರ್ಶಿಯಲ್ ಬೀದಿ
ಬೆಂಗಳೂರು.

24—18

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಫೂವರ್‌ಹೌಸಸ್ ಅಸೋಸಿಯೇಷನ್, ಲಿಮಿಟೆಡ್,

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು, ಅದರ ಬಡ್ಡಿ ಲಾಭ ವಗೈರೆ ಎಲ್ಲವೂ ಈ ದೇಶಸ್ಥರಿಗೆ ಕೊಡಿರಬೇಕೆಂಬ ಠರಾವು ಜನವರಿ ತಾ 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿ ಮೇರೆ ನಮ್ಮ ಸಂಘದ ಕೊಡಗಿನ ಪ್ರೋವಿನ್ಸಿಯಲ್ ಬೋರ್ಡಿನ ಡ್ರಾಯಿಂಗ್ ತಾ. 31—3—1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ತೆಗೆಯಲಾಗಿ ಮಡಿಕೇರಿನಾಡು ಕಡಗದಾಳು ಗ್ರಾಮದ ಮೆ. ಕೊರವಂಡ ಮಂದಣ್ಣನವರ ಕುಟುಂಬ ಮಾಚಪ್ಪನವರಿಗೆ ಚೀಟಿ ಎತ್ತಿ ಬರಲು ಈ ವರ್ಷದ ಪ್ರಥಮ ಡ್ರಾಯಿಂಗ್‌ನ ಐದು ನೂರು ರೂಪಾಯಿಗಳ (500—0—0) ಸಾಲವನ್ನು ಹೊಂದಲು ತೀರ್ಮಾನವಾಯಿತು ಅದನ್ನು ಅವರಿಗೆ ಕೊಡಲಾಗಿದೆ. ಇದು ಮೇಲಿನ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲಿಸಲಿಲ್ಲ. ಮುಂದಣ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡುವದಕ್ಕೆ ಆದಷ್ಟು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹ ಪಡಿಸಬೇಕಾಗಿ ಈ ಮೂಲಕ ಕೋರುತ್ತೇನೆ.

ಅನಾಥರಾದಂಥ ಲಂಗಹೀನರುಗಳಿಗೆ ಈ ತಿಂಗಳು 20 ರಿಂದ ಈ ಸಂಘದ ಖರ್ಚಿನಲ್ಲು ಅನ್ನಾಹಾರಾದಿಗಳು ಕೊಡಲು ಶುರುಮಾಡಲಾಗಿದೆ.

ಟಿ. ಎ. ಕುಪ್ಪುಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
ಮಡಿಕೇರಿ.

52—13

Printed & published by P. I. Belliappa, at 'Kodagu" Press, Mercara for "Kodagu" Ltd,

"KODAGU" OFFICE MERCARA.

If not delivered please return to

ಕೊಡಗು.

ಸಂಪಾದಕ—ಮಂದ್ಪಂಡ [illegible]

[illegible]

[ಸಂಚಿಕೆ ೪೮

"THE SUNSHNE OF THE NIGHT"

Colema Quick-Lite Lamps.

Bracket lan	Rs.	45/- & 42/-
Table Lam	„	37/8/-
Lantern	„	35/-
Pendant Lp	„	37/8/-
Chandelier amp	„	82/-

The Coleman Quickilite : Brilliant, clean, simple and safe.

52—36 SPENCER & Co. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH SILVERSMITH & DEALER IN ALL PRECIOUS STONES

Post Box 42
TRIPLICANE, MADRAS

Catalogue Free
to Boanfide Enquirers

Rose Water Sprinkler

Chased Silver Mirror.

Nose-screws — lever — Drops — Ifocu — Brooch

Manufcture of
HIGH CLASS
GEMSET JEWELS.
a speciality

The special features of my productions are —
1 Best QUALITY
2 Latest novel designs
3 Promptest execution
4 Neat & artistic finish
5 Most moderate prices

GOLD
or
SILVERWARE
of all descriptions
neatly executed

52—30



Before buying any Arms & Ammunition, please refer our Reduced NETT PRICED current Catalogue of GUNS RIFLES, REVOLVERS, AUTO-MATIC PISTOLS AMMUNITION, & Shooting Requisites, just out

CATALOGUE of 1927-28 on application.

The Bombay Armoury.

331, Abdul Rehman Street,

21—12 *Bombay, 3.*

[illegible]

[illegible]

17—7

ಕೊಡಗು.

ಸನ್ ೧೯೨೮ನೇ ಇಸವಿ ಮೇ
ತಾ. ೧೮ನೇ ಶುಕ್ರವಾರ.

ಕೊಡಗಿನ ರಾಜಕೀಯ ರಚನೆ.

೨.

ಕೊಡಗಿಗೆ ಸಿಕ್ಕಬೇಕಾದ ಖಾಯಿದೆ ಮಂಡಲಿಯಲ್ಲಿ ೩೦ ಜನ ಸದಸ್ಯರು ಇರಬೇಕೆಂತ ಜಮಿನ್ದಾರರ ಸಂಘವು ತೀರ್ಮಾನಿಸಿದೆ. ಪ್ರತಿನಿಧಿಗಳಿಗೂ, ಓಟರುಗಳಿಗೂ ಅನ್ಯೋನ್ಯ ಸಂಬಂಧವು ನಿಜವಾಗಿಯೂ ಇರುವಷ್ಟು ಪ್ರತಿನಿಧಿಗಳು ಇರಬೇಕು. ಸಂಘವು ತೀರ್ಮಾನಿಸಿಕೊಂಡ ಮೇರೆ ಓಟಿನ ಹಕ್ಕು ಸಿಕ್ಕಿದಾಗ ಸುಮಾರು ಒಂದು ಲಕ್ಷ ಓಟರುಗಳು ಇರಬಹುದೆಂತ ಊಹಿಸಬಹುದು. ಆದ್ದರಿಂದ ಮೂವತ್ತು ಸದಸ್ಯರಿದ್ದರೆ ಪ್ರತಿ 3300 ಓಟರುಗಳಿಗೆ ಒಬ್ಬ ಮೆಂಬರಾದಂತೆ ಆಯಿತು. ಇದಕ್ಕಿಂತ ಹೆಚ್ಚಿನ ಸಂಖ್ಯೆ ಅವಶ್ಯವಿದೆಯೆಂತ ಯಾರೂ ಹೇಳಲಾರರು. ಒಬ್ಬ ಓಟರಿಗೆ ಒಂದೇ ಓಟು ಇರುವ ರೀತಿಯನ್ನು ಅನುಸರಿಸಬೇಕೋ ಯಾ ಈಗಿರುವಂತೆ ಒಬ್ಬನಿಗೆ ಎರಡು, ಮೂರು ಇರಬೇಕೋ ಎಂಬುದನ್ನು ಸಂಘವು ತೀರ್ಮಾನಿಸಿರುವುದಿಲ್ಲ. ಒಬ್ಬ ಓಟರಿಗೆ ಒಂದೇ ಓಟು ಇರುವದೇ ಉತ್ತಮವೆಂತ ತಿಳಿದವರ ಅಭಿಪ್ರಾಯವಾಗಿದೆ. ಈ ಕ್ರಮವು ಜಾರಿಗೆ ಬರುವಂತೆ ದೇಶವನ್ನು ಮೂವತ್ತು ಭಾಗಗಳಾಗಿ ವಿಭಾಗಿಸಿಕೊಳ್ಳುವದು ಕಷ್ಟವಲ್ಲ. ಖಾಯಿದೆ ಮಂಡಲಿಯಲ್ಲಿ ನೇಮಿತ ಮೆಂಬರುಗಳಾಗಲೀ, ಸರ್ಕಾರಿ ಮೆಂಬರುಗಳಾಗಲೀ ಇರಕೂಡದೆಂಬ ಸಂಘದ ತೀರ್ಮಾನವು ನ್ಯಾಯವಾದದ್ದಾಗಿದೆ. ಇಂಥಾ ಮೆಂಬರುಗಳಿದ್ದರೆ ದೇಶದ ಅಭಿಪ್ರಾಯವು ಸರಿಯಾದ ರೀತಿಯಲ್ಲಿ ತೋರ್ಪಡುವದಿಲ್ಲ. ಓಟು ಎಣಿಸುವಾಗ ಸರ್ಕಾರಿ ಮೆಂಬರುಗಳು, ನೇಮಿತ ಮೆಂಬರುಗಳು ಎಂಬ ವ್ಯತ್ಯಾಸವಿಲ್ಲದೆ ಚುನಾಯಿತ ಮೆಂಬರುಗಳ ಸಂಖ್ಯೆಯಲ್ಲಿ ಹೆಚ್ಚುಮತವಿದ್ದರೂ ಸರ್ಕಾರಿ ಮತ್ತು ನೇಮಿತ ಮೆಂಬರುಗಳ ಸಂಖ್ಯೆಯಿಂದ ಚುನಾಯಿತರ ಬಹುಮತವು ಸ್ವಲ್ಪ ಮತವಾಗುತ್ತದೆ.

ಖಾಯಿದೆ ಮಂಡಲಿಗೆ ಆ ಮಂಡಲಿಯೇ ತನ್ನ ಮೆಂಬರುಗಳಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಬೇಕೆಂಬ ಸಾಧಾರಣ ಹಕ್ಕನ್ನು ಕೇಳಿದ್ದರಲ್ಲಿ ಏನೂ ವಿಶೇಷವಿಲ್ಲ. ನಿರಂಕುಶ ಪ್ರಭುವಾದ ಚೀಫ್ ಕಮಿಷನರು ಅಧ್ಯಕ್ಷಸ್ಥಾನದಲ್ಲಿದ್ದರೆ ಖಾಯಿದೆ ಮಂಡಲಿಯ ಚರ್ಚೆಯು ನಡೆಯಬೇಕಾದಷ್ಟು ಸ್ವಾತಂತ್ರ್ಯದಿಂದ ನಡೆಯುವುದಿಲ್ಲ. ಪ್ರಜಾಸಿದ್ಧ ಸರ್ಕಾರವಿರುವ ಎಲ್ಲಾ ದೇಶಗಳಲ್ಲೂ ಚುನಾಯಿತ ಅಧ್ಯಕ್ಷರೇ ಇದ್ದಾರೆ.

ಆಡಳಿತದ ಅಧಿಕಾರವೂ, ನ್ಯಾಯತೀರ್ಪಿನ ಅಧಿಕಾರವೂ ಎಲ್ಲಾ ದರ್ಜೆಯಲ್ಲೂ ಬೇರ್ಪಡಿಸಲ್ಪಡಬೇಕೆಂಬ ಹಳೇ ತೀರ್ಮಾನವನ್ನು ಹೊಸ ರಾಜಕೀಯ ರಚನೆಯು ಅಂಗೀಕರಿಸಿದೆ. ಇದು ಒಟ್ಟು ಹಿಂದುಸ್ಥಾನಕ್ಕೂ ವ್ಯಾಪಕವಾಗುವ ವಿಷಯವಾದರೂ ಹಿಂದುಸ್ಥಾನದ ದೊಡ್ಡ ಪ್ರಾಂತ್ಯಗಳಲ್ಲಿ ಚಕ್ರವರ್ತಿಯವರಿಂದಲೇ ನೇಮಿಸಲ್ಪಡುವ ಜಡ್ಜಿಗಳಿರುವ ಹೈಕೋರ್ಟುಗಳು ಬಹು ಕಾಲದಿಂದಲೇ ಜಾರಿಯಲ್ಲಿವೆ. ಈ ದೇಶದಲ್ಲಾದರೋ ಕಂದಾಯ ವಸೂಲಿಗೂ, ಶಾಂತತೆಯ ಇರುವಿಕೆಗೂ ಜವಾಬ್ದಾರರಾಗಿರುವ ಚೀಫ್ ಕಮಿಷನರೇ ನ್ಯಾಯತೀರ್ಪಿನಲ್ಲಿ ಹೈಕೋರ್ಟಿನ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ಇದು ನಾಗರೀಕ ಕ್ರಮವಲ್ಲವೆಂತ ಸರಕಾರವೇ ಒಪ್ಪಬೇಕು. ಇದನ್ನು ತಪ್ಪಿಸಲಿಕ್ಕೆ ಉಪಕಮಿಟಿಯವರು ಸೂಚಿಸಿದ ಒಬ್ಬ ಜಡ್ಜಿಯಿರುವ ಹೈಕೋರ್ಟನ್ನೂ, ಇನ್ನೂ ಬೇರೆ ಉಪಾಯಗಳನ್ನೂ ಯೋಚಿಸಿ ತತ್ಕಾಲಕ್ಕೆ ನ್ಯಾಯತೀರ್ಪಿನ ಅಧಿಕಾರಿಗಳ ಮೇಲೆ ಅಪ್ಪೀಲ್ ಅಧಿಕಾರವು ಮದ್ರಾಸ್ ಹೈಕೋರ್ಟಿಗೆ ಇರುವದು ಉತ್ತಮವೆಂತ ಸಂಘದವರು ತೀರ್ಮಾನಿಸಿಕೊಂಡಿರುತ್ತಾರೆ. ಈ ತೀರ್ಮಾನವು ಈ ದೇಶಕ್ಕಿಲ್ಲ. 1896ನೇ ಇಸ್ವಿಯಲ್ಲೇ ದೇಶದ ಪ್ರತಿನಿಧಿಗಳು ವೈಸರಾಯರ ಭೇಟಿಗೆ ಹೋದಾಗ ಒಪ್ಪಿಸಿದ ನಿವೇದನಾಪತ್ರದಲ್ಲೇ ಇದನ್ನು ಕೇಳಿಕೊಂಡಿರುತ್ತಾರೆ. ಸಂಘದ ಪ್ರತಿನಿಧಿಗಳು ದೇಶದ ಅಭಿಪ್ರಾಯಕೊಡಲು ಮೊನ್ನೆಗೂ ಚೆಮ್ಸ್‌ಫರ್ಡರ ಮುಂದೆ ಹೋಗಿದ್ದಾಗಲೂ ಈ ಕೋರಿಕೆಯನ್ನು ಮಾಡಿಕೊಂಡಿದ್ದಾರೆ. ಮದ್ರಾಸ್ ಹೈಕೋರ್ಟಿನವರು ಮದ್ರಾಸ್ ಅಧಿಪತ್ಯದ ಮುನಸೀಫರುಗಳನ್ನು ನೇಮಿಸುತ್ತಾರೆ. ಇದನ್ನು ತಪ್ಪಿಸಲಿಕ್ಕಾಗಿಯೇ ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ ಬೇಕೆಂತ ಸಂಘವು ಕೇಳಿಕೊಂಡಿರುವುದಾಗಿದೆ. ಈ ಕಮಿಷನೇ ಇತರ ಮೇಲಧಿಕಾರಿಗಳನ್ನು ಆರಿಸುವಿಕೆಗೂ ಸಹಾಯಮಾಡುವಂತೆ ಏರ್ಪಡಿಸಿಕೊಳ್ಳಬಹುದು.

ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಬೇಕಾಗಿದೆ. ದೊಡ್ಡ ಅಧಿಕಾರಿಗಳು ಬಹು ಕಾಲ ಇಲ್ಲೇ ಇರಬೇಕಾಗುವ ಕಷ್ಟವನ್ನು ತಪ್ಪಿಸಲು ದಾರಿಯನ್ನು ರಾಜಕೀಯ ರಚನೆಯಲ್ಲಿ ಸೂಚಿಸಿರುವದಿಲ್ಲ. ಅಧಿಕಾರಿ ನೀತಿ (ಪಾಲಿಸಿ)ಯನ್ನು ನಿರ್ಣಯಿಸುವ ಮಂತ್ರಿಯು ಪ್ರಜಾಪ್ರತಿನಿಧಿಗಳಿಗೆ ಜವಾಬ್ದಾರನಾಗಿರುವಾಗ ಖಾಯಂ ಅಧಿಕಾರಿಗಳ ಕೆಡಕು ಅಷ್ಟೊಂದು ಇರಲಾರದು. ಬೇರೆ ಪ್ರಾಂತ್ಯಗಳೊಡನೆ ಅಧಿಕಾರಿಗಳ ವರ್ಗಾವರ್ಗಿಯ ಅನುಕೂಲ ಸಹ ಮಾಡಿಕೊಳ್ಳಲು ಸ್ವತಂತ್ರ ಸರಕಾರಕ್ಕೆ ಕಷ್ಟವಾಗಲಾರದು.

ದೇಶದ ಉತ್ಪತ್ತಿಯಿಂದ ಸ್ವತಂತ್ರ ಸರ್ಕಾರ ನಡಿಸಲು ಸಾಧ್ಯವಾಗಲಾರದು ಎಂಬ ಕಷ್ಟವನ್ನರಿತೇ ಹಾಸಿಗೆ ಇದ್ದಷ್ಟು ಕಾಲು ನೀಡಬೇಕೆಂಬ ನಾಣ್ಣುಡಿಯನ್ನನುಸರಿಸಿ ಈ ದೇಶದಲ್ಲಿ 1000 ರೂ. ಗಿಂತ ಹೆಚ್ಚಿನ ಸಂಬಳದ ಅಧಿಕಾರಿ ಇರಕೂಡದೆಂತ ಸಂಘವು ತೀರ್ಮಾನಿಸಿದೆ. ಬ್ರಿಟಿಷಾಧಿಕಾರಿಗಳ ದರ್ಜೆಗೆ ತಕ್ಕಂಥ ಸಂಬಳ ಕೊಡಬೇಕೆಂಬದಕ್ಕೆ ಹೆಚ್ಚಿನ ಸಂಬಳ ಕೊಡುವದೇ ಹೊರತು, ದೇಶದ ಅವಶ್ಯಕತೆಯನ್ನ, ಆರ್ಥಿಕ ಅರ್ಹತೆಯನ್ನೂ ನೋಡಿ ಕೊಡುವದಲ್ಲ. ಆದ್ದರಿಂದ ಪ್ರಜಾಸತ್ತಾತ್ಮಕ ಆಡಳಿತದಲ್ಲಾದರೂ ಪ್ರಜಾಜನರು ವಸೂಲ್ ಮಾಡುವ ಹಣವನ್ನು ದುಂದು ಖರ್ಚು ಮಾಡಲು ಬಿಡದೆ ಇರಬೇಕಾದದ್ದು ನ್ಯಾಯವೂ ಅವಶ್ಯವೂ ಆಗಿದೆ.

ದೇಶದ ಪ್ರಾಂತೀಕ ಸರಕಾರಕ್ಕೆ ಬಿಟ್ಟುಕೊಟ್ಟಿರುವ ವಿಷಯಗಳನ್ನೂ, ಉತ್ಪತ್ತಿಯ ಮೂಲಗಳನ್ನೂ ತತ್ಕಾಲ ವ್ಯತ್ಯಾಸ ಮಾಡಲು ಸಂಘವು ಅಪೇಕ್ಷಿಸುವದಿಲ್ಲ. ಪ್ರಾಂತೀಕ ಸ್ವಾತಂತ್ರ್ಯವನ್ನು ಪಡೆಯಬೇಕಾದದ್ದೇ ಮುಖ್ಯವಾಗಿರುವಾಗ ಇದನ್ನು ಮರೆಮಾಡುವ ಅಥವ ಹಿಂದಕ್ಕೆ ತಳ್ಳುವ ಬೇರೆ ವಿವಾದಾಸ್ಪದವಾದ ಸಂಗತಿಗಳನ್ನು ಬಿಟ್ಟಿರುವದೇ ಯುಕ್ತವಾಗಿದೆ. ಆದರೆ ಬ್ರಿಟಿಷ್ ಹಿಂದೂಸ್ಥಾನದ ಬೇರೆ ಪ್ರಾಂತ್ಯಗಳಿಗೂ ಮಧ್ಯವರ್ತಿ ಸರಕಾರಕ್ಕೂ ಈ ವಿಷಯದಲ್ಲಿ ಬೇರೆ ಒಪ್ಪಂದವಾಗ ಬೇರೆ ಪ್ರಾಂತ್ಯಗಳಿಗೆ ಸಿಕ್ಕುವ ರಿಯಾಯ್ತಿಯೇ ಈ ದೇಶಕ್ಕೂ ಸಿಕ್ಕಬೇಕೆಂತ ಕೇಳಿದರೆ—ಇದು ನ್ಯಾಯವಾಗಿದೆ.

ಮಧ್ಯವರ್ತಿ ಖಾಯಿದೆ ಮಂಡಲಿಗೆ ಕೊಡಗಿನಿಂದ ಇಬ್ಬರು ಪ್ರತಿನಿಧಿಗಳು ಇರಬೇಕೆಂತ ದೇಶದವರು ಮೊದಲಿನಿಂದಲೇ ಕೇಳುತ್ತಿರುವ ಹಕ್ಕನ್ನೇ ಸಂಘವು ರಾಜಕೀಯ ರಚನೆಯಲ್ಲಿ ಸೇರಿಸಿಕೊಂಡಿದೆ. ಸೈನ್ಯ, ಸುಂಕ ಮುಂತಾದ ಅನೇಕ ವಿಷಯಗಳ ಆಡಳಿತ ನಡಿಸುವ ಮಧ್ಯವರ್ತಿ ಸರಕಾರದ ಕಾರ್ಯಗಳೆಲ್ಲವೂ ಬೇರೆ ಪ್ರಾಂತ್ಯಗಳಂತೆಯೇ ಕೊಡಗಿಗೂ ವ್ಯಾಪಿಸುತ್ತದೆ. ಆದ್ದರಿಂದ ಏನೂ ತಡವಿಲ್ಲದೆ ಕೊಡಗಿಗೆ ಅಸೆಂಬ್ಲಿಯಲ್ಲಿ ಪ್ರತಿನಿಧಿತ್ವ ಸಿಕ್ಕಲೇಬೇಕು.

ಈ ಎಲ್ಲಾ ಮಾರ್ಪಾಡುಗಳು ತತ್ಕಾಲವೇ ಸಿಕ್ಕಬೇಕು. ಆದರೆ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿಯೇ ಎಂದೆಂದಿಗೂ ಇರಲು ಸಾಧ್ಯವಿಲ್ಲ. ಅದು ಒಳ್ಳೇದೂ ಅಲ್ಲ. ಆದ್ದರಿಂದ ಕರ್ನಾಟಕ ಪ್ರಾಂತ್ಯವಾಗುವಾಗ ಕೊಡಗು ಅದರೊಳಗೆ ಸೇರಿಕೊಳ್ಳಬೇಕು. ಈ ವಿಷಯ ನಾವು ಅನೇಕ ಸಾರಿ ಬರೆದಿದ್ದೇವೆ. ಪುನಃ ಅದೇ ಮಾತುಗಳನ್ನು ಬರೆಯಬೇಕಾದ ಅವಶ್ಯವಿಲ್ಲ. ಸ್ವತಂತ್ರ ಕರ್ನಾಟಕದೊಳಗೆ ಕೊಡಗು ಸೇರಬೇಕು ಎಂತ ಕೇಳಿದ್ದರಿಂದ ಕೊಡಗಿನ ಈ ವರೆಗಿನ ಕೋರಿಕೆಯು ವ್ಯತ್ಯಾಸ ಹೊಂದಲಿಲ್ಲ. ಶೀಘ್ರದಲ್ಲೇ ಬ್ರಿಟಿಷ್ ಹಿಂದೂಸ್ಥಾನದಲ್ಲಿ ದೊರಕುವ ಸುಧಾರಣೆಯಲ್ಲಿ ಪ್ರಾಂತೀಕ ಸರ್ಕಾರಗಳು ಸ್ವತಂತ್ರವಾಗಿರುತ್ತವೆಂತ ಊಹಿಸಲ್ಪಟ್ಟಿದೆ. ಆದ್ದರಿಂದ ಕರ್ನಾಟಕ ಪ್ರಾಂತ್ಯವಾಗುವಾಗ ಸ್ವತಂತ್ರ ಕರ್ನಾಟಕ ಪ್ರಾಂತ್ಯವೇ ಆಗುತ್ತದೆ. ಆದರೆ ಶೀಘ್ರದಲ್ಲೇ ಆಗಲಿಕ್ಕಿರುವ ಸುಧಾರಣೆಯಲ್ಲಿ ಕರ್ನಾಟಕ ಪ್ರಾಂತ್ಯವಾಗಲಾರದು ಎಂಬ ಯೋಚನೆಯಿಂದ ಕೊಡಗು ಪ್ರತ್ಯೇಕ ಪ್ರಾಂತೀಕ ಸರ್ಕಾರವಾಗಿಯೇ ನಡೆಯಲು ಬೇಕಾದ ಸುಧಾರಣೆಗಳನ್ನು ಕೇಳಿರುವದಾಗಿದೆ. ಕರ್ನಾಟಕ ಪ್ರಾಂತ್ಯವಾಗುವ ವರೆಗೆ ಕೊಡಗಿನಲ್ಲಿ ಈಗ ಜಾರಿಯಲ್ಲಿರುವ ನಿರಂಕುಶ ಪ್ರಭುತ್ವ ನಡೆಯಬಾರದೆಂಬ ದೃಢ ನಿಶ್ಚಯವನ್ನು ಸಂಘವು ಮಾಡಿದೆ. ದೇಶವೆಲ್ಲವೂ ಹೀಗೆಯೇ ದೃಢ ಸಂಕಲ್ಪ ಮಾಡಬೇಕಾಗಿದೆ.

ಜಮಿನ್ದಾರರ ಸಂಘದ ಮಹಾಸಭೆ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

2ನೇ ದಿವಸ.

ತಾ 6—5—28ನೇ ಆದಿತ್ಯವಾರ ಬೆಳಿಗ್ಗೆ 9 ಘಂಟೆಗೆ ಸರಿಯಾಗಿ ಮಹಾಸಭೆಯ ಕಾರ್ಯವು ಪ್ರಾರಂಭವಾಯಿತು. ಸಭೆಯ ಮುಂದೆ ಇಡಲ್ಪಟ್ಟ ಮೊದಲನೇ ಠರಾವು ಯಾವುದೆಂದರೆ—

ಕೊಡಗಿನ ಆಡಳಿತ ರಚನೆ.

I. ಕೊಡಗಿನ ಆಡಳಿತದಲ್ಲಿ ಈ ಕೆಳಗಿನ ಮಾರ್ಪಾಡುಗಳನ್ನು ಕೂಡಲೇ ಜಾರಿಗೆ ತರಬೇಕೆಂತ ಸಂಘವು ಅಭಿಪ್ರಾಯಪಡುತ್ತದೆ.

(1) ಈ ರಾಜಕೀಯ ರಚನೆಯಲ್ಲಿ ಈಗಿನ ಆಡಳಿತದಲ್ಲಿ ಚೀಫ್ ಕಮಿಷನರು ನಡಿಸುತ್ತಿರುವ ಅಧಿಕಾರಗಳನ್ನು ನಡಿಸಕೂಡದು. ಆದರೆ ಸ್ವರಾಜ್ಯ ಸರಕಾರವಿರುವ ಬ್ರಿಟಿಷ್ ಸಾಮ್ರಾಜ್ಯದ ಉಪನಿವೇಶನಗಳಲ್ಲಿ (Dominions) ಗವರ್ನರಿಗೆ ಇರುವ ಹಕ್ಕುಗಳು ಮಾತ್ರ ಚೀಫ್ ಕಮಿಷನರಿಗೆ ಇರತಕ್ಕವು.

(2) ಖಾಯಿದೆ ಮಂಡಲಿಯ ಸದಸ್ಯರುಗಳ ಪೈಕಿಯಿಂದ ಖಾಯಿದೆ ಮಂಡಲಿಯ ನಂಬಿಕೆ ಇರುವ ಒಬ್ಬ ಅಥವ ಇಬ್ಬರು ಮಂತ್ರಿಗಳನ್ನು ಚೀಫ್ ಕಮಿಷನರು ದೇಶದ ಆಡಳಿತ ನಡಿಸಲು ನೇಮಿಸಬೇಕು. ಕೌನ್ಸಿಲಿನ ನಂಬಿಕೆಯಿರುವ ವರೆಗೆ ಮಾತ್ರ ಅವರು (ಮಂತ್ರಿ ಯಾ ಮಂತ್ರಿಗಳು) ಪದವಿಯಲ್ಲಿ ಇರಬೇಕು.

(3) ಖಾಯಿದೆ ಮಂಡಲಿಯು ಸದರಿ ಮಂಡಲಿಯಿಂದ ಒಬ್ಬರನ್ನು ಆ ಮಂಡಲಿಯ ಅಧ್ಯಕ್ಷರಾಗಿ ಆರಿಸಿಕೊಳ್ಳಬೇಕು.

(4) ಆಡಳಿತ ನಡಿಸುವ ಅಧಿಕಾರವೂ, ನ್ಯಾಯತೀರ್ಪಿನ ಅಧಿಕಾರವೂ ಎಲ್ಲಾ ದರ್ಜೆಯಲ್ಲಿಯೂ ಬೇರ್ಪಟ್ಟಿರಬೇಕು.

(5) ಕೊಡಗಿನ ನ್ಯಾಯತೀರ್ಪಿನ ಅಧಿಕಾರಿಗಳನ್ನು ನ್ಯಾಯತೀರ್ಪಿನ ಇಲಾಖೆಯ ಅಧಿಕಾರದಲ್ಲಿರುವ ಮಂತ್ರಿಯ ಶಿಫಾರಸ್ಸು ಮೇರೆ ಚೀಫ್ ಕಮಿಷನರು ನೇಮಿಸಬೇಕು. ಈ ಶಿಫಾರಸ್ಸು ಮಾಡಲು ಸಹಾಯಕರಾಗಲು ಗೌರವ ಪಬ್ಲಿಕ್ ಸರ್ವಿಸ್ ಕಮಿಷನೊಂದನ್ನು ನ್ಯಾಯತೀರ್ಪಿನ ಇಲಾಖೆಯ ಮಂತ್ರಿಯು ಆಗಿಂದಾಗ್ಯೆ ನೇಮಿಸಬೇಕು. ಇಷ್ಟು ವಿನಹ ಚೀಫ್ ಕಮಿಷನರಲ್ಲಿ ಇರುವ ಕೊಡಗಿನ ಬೇರೆ ಎಲ್ಲಾ ನ್ಯಾಯತೀರ್ಪಿನ ಅಧಿಕಾರಗಳು ಈ ರಚನೆಯಲ್ಲಿ ತತ್ಕಾಲ ಮದ್ರಾಸ್ ಹೈಕೋರ್ಟಿಗೆ ಇರತಕ್ಕದ್ದು.

(6) ಈ ರಚನೆಯಲ್ಲಿ ಕೊಡಗಿನ ಯಾವ ಅಧಿಕಾರಿಗೇ ಆಗಲೀ ತಿಂಗಳಿಗೆ 1000 ರೂ. ಗಿಂತ ಹೆಚ್ಚಿಗೆ ಸಂಬಳ ಇರಕೂಡದು.

(7) ಖಾಯಿದೆ ಮಂಡಲಿಯ ಸದಸ್ಯರನ್ನು ಚುನಾಯಿಸುವ ಹಕ್ಕು 21 ವರ್ಷ ಪ್ರಾಯದಿಂದ, ಕೊಡಗಿನಲ್ಲಿ ಖಾಯಂ ವಾಸಸ್ಥಳವಿರುವ, ಹುಚ್ಚನಲ್ಲದ, ಬಿಡುಗಡೆ ಹೊಂದದ ಇನ್ಸಾಲ್ವೆಂಟಲ್ಲದ ಪ್ರತಿಯೊಬ್ಬ ಗಂಡಸಿಗೂ, ಹೆಂಗಸಿಗೂ ಇರತಕ್ಕದ್ದು.

(8) ಕೊಡಗಿನ ಖಾಯಿದೆ ಮಂಡಲಿಗೆ ಯಾವ ತರದ ಪ್ರತ್ಯೇಕ ಚುನಾವಣೆಯ ಏರ್ಪಾಡೂ ಇರಬಾರದು.

(9) ಕೌನ್ಸಿಲಿನಲ್ಲಿ 30 ಚುನಾಯಿತ ಮೆಂಬರುಗಳಿರತಕ್ಕದ್ದು. ಸರ್ಕಾರಿ ಉದ್ಯೋಗಸ್ಥರಾಗಲೀ, ನೇಮಿತ ಮೆಂಬರುಗಳಾಗಲೀ ಇರಕೂಡದು.

(10) ಖಾಯಿದೆ ಮಂಡಲಿಗೆ ಆದಾಯ ವೆಚ್ಚದ ಮೇಲೆ ಸಂಪೂರ್ಣ ಹಕ್ಕಿರತಕ್ಕದ್ದು. ಬ್ರಿಟಿಷ್ ಸಾಮ್ರಾಜ್ಯದ ಸ್ವತಂತ್ರ ಉಪನಿವೇಶಗಳಲ್ಲಿರುವ ವಿನಾಯಿತಿಗಳು ವಿನಹ ಖಾಯಿದೆ ಮಾಡುವ ಹಕ್ಕು ಈ ಮಂಡಲಿಗೆ ಸಂಪೂರ್ಣವಾಗಿರತಕ್ಕದ್ದು.

(11) ಮಧ್ಯವರ್ತಿ ಸರ್ಕಾರಕ್ಕೂ, ಪ್ರಾಂತೀಕ ಸರ್ಕಾರಕ್ಕೂ ವಿಷಯಗಳು ಮತ್ತು ಉತ್ಪತ್ತಿಯ ಮೂಲಗಳಲ್ಲಿ ಹೊಸ ಬದಲಾವಣೆಗಳಾಗುವಾಗ ಹಿಂದೂಸ್ಥಾನದ ಇತರ ಪ್ರಾಂತ್ಯಗಳ ಹಕ್ಕೇ ಕೊಡಗಿಗೂ ಇರಬೇಕು.

(12) ಇಂಡಿಯಾದ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಕೊಡಗಿಗೆ ಇಬ್ಬರು ಚುನಾಯಿತ ಮೆಂಬರುಗಳಿರಬೇಕು. ಕೊಡಗಿನಲ್ಲಿರುವ ಎಲ್ಲಾ ಕಂದಾಯ ಕೊಡುವವರಿಗೂ ಈ ಮೆಂಬರುಗಳ ಚುನಾವಣೆಯಲ್ಲಿ ಓಟುಕೊಡುವ ಹಕ್ಕಿರತಕ್ಕದ್ದು.

ಉಪಕಮಿಟಿಯವರು ತಯಾರಿಸಿದ್ದ ಕೊಡಗಿನ ಆಡಳಿತ ರಚನೆಯನ್ನು ಸಬ್‌ಜೆಕ್ಟ್ಸ್ ಕಮಿಟಿಯವರು ಚರ್ಚಿಸಿ ಬದಲಾವಣೆಗಳೊಂದಿಗೆ ತೀರ್ಮಾನಿಸಿದ್ದನ್ನು ಮೇಲಿನ ಠರಾವು ರೂಪದಲ್ಲಿ ಜನರಲ್ ಸೆಕ್ರೆಟರಿ ಮ. ಪಿ. ಎ. ಬೆಳ್ಯಪ್ಪನವರು ಸಭೆಯ ಮುಂದಿಟ್ಟರು. ಇದನ್ನು ಮ. ಕ. ಸಿ. ಚಿಣ್ಣಪ್ಪನವರು ಅನು

(4ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೩೩ನೇ ಪ್ರಕರಣ

ಪ್ರಾಯಶ್ಚಿತ್ತರೂಪವಾದ ಉಪವಾಸ.

ಹುಡುಗರನ್ನೂ, ಹುಡುಗಿಯರನ್ನೂ ಸರಿಯಾದ ದಾರಿಯಲ್ಲಿ ಮುಂದಕ್ಕೆ ತಂದು ಅವರಿಗೆ ಶಿಕ್ಷಣವನ್ನು ಕೊಡುವುದು ಎಷ್ಟು ಕಷ್ಟವಾಗಿರುವುದೆಂದು ನನಗೆ ದಿನ ದಿನವೂ ಹೆಚ್ಚು ಹೆಚ್ಚು ಸ್ಪಷ್ಟವಾಗಿ ತೋರುತ್ತಾ ಬಂದಿತು. ನಾನು ನಿಜವಾಗಿಯೂ ಅವರ ಶಿಕ್ಷಕನೂ, ಪಾಲಕನೂ ಆಗಿರಬೇಕಾದರೆ ನಾನು ಅವರ ಹೃದಯವನ್ನು ಪ್ರವೇಶಿಸಬೇಕು, ನಾನು ಅವರ ಸುಖ ದುಃಖಗಳಲ್ಲಿ ಭಾಗಿಯಾಗಬೇಕು, ಅವರಿದಿರಿಗಿರುವ ತೊಡಕುಗಳನ್ನು ಬಿಡಿಸಲು ಅವರಿಗೆ ನೆರವೀಯಬೇಕು, ಅವರ ಯೌವನದ ಆಶೆಯ ತೆರೆಗಳನ್ನು ಯೋಗ್ಯಪಥದಲ್ಲಿ ಒಯ್ಯಬೇಕು.

ಸತ್ಯಾಗ್ರಹಿಗಳಲ್ಲಿ ಕೆಲವರಿಗೆ ಬಂಧೀಖಾನೆಯಿಂದ ಬಿಡುಗಡೆಯಾಗುತ್ತಲೇ ಟಾಲ್‌ಸ್ಟಾಯ್ ಫಾರ್ಮ್ ಹೆಚ್ಚು ಕಡಿಮೆ ನಿರ್ಜನವಾಯಿತು. ಅಲ್ಲಿ ಇದ್ದವರಲ್ಲಿ ಬಹುಮಂದಿ ಫೀನಿಕ್ಸ್ ಆಶ್ರಮಕ್ಕೆ ಸೇರಿದವರಾಗಿದ್ದರು. ಆದುದರಿಂದ ನಾನು ಅವರನ್ನು ಫೀನಿಕ್ಸಿಗೆ ಕಳುಹಿಸಿದೆನು. ಇಲ್ಲಿ ನಾನು ಬಹು ಉಗ್ರ ಪರೀಕ್ಷೆಗೊಳಗಾದೆನು. ನಾನು ಜೋಹಾನ್ಸ್‌ಬರ್ಗ್, ಫೀನಿಕ್ಸಿಗೂ ಮಧ್ಯೆ ಓಡಾಡುತ್ತಿರಬೇಕಾಗಿದ್ದಿತು. ಒಂದು ಸಲ ನಾನು ಜೋಹಾನ್ಸ್‌ಬರ್ಗಿನಲ್ಲಿರುವಾಗ ನನಗೆ ಆಶ್ರಮ ನಿವಾಸಿಗಳಿಬ್ಬರ ನೀತಿಪತನದ ವರ್ತಮಾನವು ಮುಟ್ಟಿತು. ಸತ್ಯಾಗ್ರಹಯುದ್ಧದಲ್ಲಿ ನಮಗೆ ಸೋಲಾಯಿತೆಂಬ ವರ್ತಮಾನವು ಬಂದಿದ್ದರೆ ನನಗೇನೂ ಗಾಬರಿಯಾಗುತ್ತಿರಲಿಲ್ಲ. ಆದರೆ ಈ ಸಂಗತಿಯನ್ನು ಕೇಳಿ ನನಗೆ ಸಿಡಿಲು ಬಡಿದಂತಾಯಿತು. ಆ ದಿನವೇ ನಾನು ರೈಲುಗಾಡಿಯಲ್ಲಿ ಫೀನಿಕ್ಸಿಗೆ ಹೊರಟೆನು. ಕಾಲನ್‌ಬಾಕರು ನನ್ನೊಡನೆ ಬರ ಬೇಕೆಂದು ಆಗ್ರಹ ಮಾಡಿದರು. ನಾನೊಬ್ಬನೇ ಹೋಗುವ ಮಾತನ್ನೇ ಅವರು ಕೇಳಲಿಲ್ಲ. ಏಕೆಂದರೆ—ನನ್ನ ಬುದ್ಧಿ ಭ್ರಮಣೆಗೆ ಕಾರಣವಾದ ಈ ಸಮಾಚಾರವನ್ನು ತಂದವರು ಅವರೇ ಆಗಿದ್ದರು.

ದಾರಿಯಲ್ಲಿ ನನ್ನ ಕರ್ತವ್ಯವು ನನಗೆ ಸ್ಪಷ್ಟವಾಯಿತು—ಅಥವಾ ಸ್ಪಷ್ಟವಾಯಿತೆಂದು ನಾನು ಎಣಿಸಿದೆನು. ತನ್ನ ಪೋಷಣೆಯಲ್ಲಿ ಅಥವಾ ಮೇಲ್ವಿಚಾರಣೆಯಲ್ಲಿರುವ ಹುಡುಗರ ತಪ್ಪಿಗೆ ಯಜಮಾನನು ಅಥವಾ ಶಿಕ್ಷಕನು ಸ್ವಲ್ಪ ಮಟ್ಟಿಗಾದರೂ ಜವಾಬ್ದಾರನೆಂದು ನನಗೆ ತೋರಿತು. ಆದುದರಿಂದ ಈ ಸಂದರ್ಭದಲ್ಲಿ ನನ್ನ ಜವಾಬ್ದಾರಿಯು ನನಗೆ ಸ್ಫಟಿಕದಂತೆ ಸ್ಪಷ್ಟವಾಗಿದ್ದಿತು. ನನ್ನ ಹೆಂಡತಿಯು [illegible] ಆಗಲೇ ಎಚ್ಚರಿಕೆ ಕೊಟ್ಟಿದ್ದಳು. ಆದರೆ ನಂಬಿಕೆಯ ಸ್ವಭಾವದವನಾದುದರಿಂದ ನಾನು ಅದನ್ನು ಗಮನಿಸಿರಲಿಲ್ಲ. ಮತ್ತು ನಾನು ಅವರ ತಪ್ಪಿಗಾಗಿ ಪ್ರಾಯಶ್ಚಿತ್ತ ಮಾಡಿಕೊಂಡರೆ ಮಾತ್ರ ಆ ತಪ್ಪಿನಲ್ಲಿ ಭಾಗಿಗಳಾದವರು ನನ್ನ ವೇದನೆಯನ್ನೂ, ತಮ್ಮ ದೋಷದ ಅಗಾಧತೆಯನ್ನೂ ಮನಗಾಣುವರೆಂದು ನನಗೆ ತೋರಿತು. ಆದುದರಿಂದ ನಾನು ಒಂದು ವಾರ ಉಪವಾಸಲೂ, ಆ ಮೇಲೆ ನಾಲ್ಕು ವರೆ ತಿಂಗಳು ಒಂದು ಹೊತ್ತು ಮಾತ್ರ ಊಟ ಮಾಡಲೂ ಪ್ರತಿಜ್ಞೆ ಮಾಡಿದೆನು. ಕಾಲನ್‌ಬಾಕರು ನನ್ನನ್ನು ತಡೆಯುವುದಕ್ಕೆ ಪ್ರಯತ್ನಪಟ್ಟರು. ಆದರಿಂದ ಫಲವಾಗಲಿಲ್ಲ. ಕೊನೆಗೆ ಅವರು ಈ ಪ್ರಾಯಶ್ಚಿತ್ತದ ಯುಕ್ತತೆಯನ್ನು ಒಪ್ಪಿಕೊಂಡು ತಾವೂ ಇದರಲ್ಲಿ ನನ್ನ ಜೊತೆಗಾರರಾಗುವುದಾಗಿ ಹಟಮಾಡಿದರು. ಆ ನಿರ್ಮಲ ಪ್ರೇಮದ ಬಲವನ್ನು ನಾನು ಇದಿರಿಸಲಾಗಲಿಲ್ಲ.

ನಿಶ್ಚಯದಿಂದ ನನ್ನ ಮನಸ್ಸಿನ ಮೇಲಿದ್ದ ದೊಡ್ಡ ಹೊರೆ ಇಳಿದು ನನ್ನ ಚಿಂತೆಯು ಬಹುಮಟ್ಟಿಗೆ ಇಳಿಯಿತು. ತಪ್ಪಿತಸ್ಥರ ಮೇಲೆ ನನಗಿದ್ದ ಕ್ರೋಧವು ಅಡಗಿ ಅವರ ವಿಷಯದಲ್ಲಿ ನಿಷ್ಕಲ್ಮಷವಾದ ಕರುಣೆಗೆ ಎಡೆಗೊಟ್ಟಿತು. ಹೀಗೆ ಬಹುಮಟ್ಟಿಗೆ ಶಾಂತಮನಸ್ಕನಾಗಿ ನಾನು ಫೀನಿಕ್ಸನ್ನು ತಲುಪಿದೆ. ಇನ್ನೂ ವಿಚಾರಿಸಿ ನಾನು ತಿಳಿಯಬೇಕಾಗಿದ್ದ ಉಳಿದ ವಿವರಗಳನ್ನು ತಿಳಿದುಕೊಂಡೆನು. ನನ್ನ ಪ್ರಾಯಶ್ಚಿತ್ತದಿಂದ ಎಲ್ಲರೂ ದುಃಖಿತರಾದುದೇನೋ ನಿಜ. ಆದರೆ ಅದರಿಂದ ವಾತಾವರಣವನ್ನು ನಿರ್ಮಲಗೊಳಿಸಿತು. ಪಾಪಮಾಡುವುದು ಎಷ್ಟು ಭಯಂಕರವಾದ ವಿಷಯವೆಂದು ಮನವರಿಕೆಯನ್ನು ಪ್ರತಿಯೊಬ್ಬರೂ ಪಡೆದರು. ಅಲ್ಲಿನ ಹುಡುಗ, ಹುಡುಗಿಯರೊಡನೆ ನನ್ನನ್ನು ಕೂಡಿಸಿದ್ದ ಸಂಬಂಧ ಇನ್ನೂ ನಿಕಟವೂ, ಸ್ವಚ್ಛವೂ ಆಯಿತು.

ಘಟನೆಯಲ್ಲಿಯೇ ಆರಂಭಿಸಿದ ಪ್ರಸಂಗವೊಂದರಿಂದ ನಾನು ಸ್ವಲ್ಪ ದಿನದನಂತರ ಹದಿನಾಲ್ಕು ದಿವಸದ ಉಪವಾಸವನ್ನು ಕೈಕೊಳ್ಳಬೇಕಾಗಿ ಬಂದಿತು. ಇದರಿಂದೂ ನನ್ನ ಪರಿಣಾಮವು ನನ್ನ ನಿರೀಕ್ಷಣೆಯನ್ನು ಕೂಡ ಮೀರಿಸಿ

ಶಿಷ್ಯರು ತಪ್ಪುಮಾಡಿದಾಗಲೆಲ್ಲಾ ಉಪವಾಸ ಮಾಡುವುದು ಶಿಕ್ಷಕನ ಕರ್ತವ್ಯವೆಂದು ಈ ಘಟನೆಗಳಿಂದ ಸಾಧಿಸುವುದನ್ನು ಆಶಿಸುವದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಈ ಕಠಿಣಪಾಯವೇ ಮದ್ದೆಂದು ನನ್ನ ಅಭಿಪ್ರಾಯ. ಆದರೆ ಇದಕ್ಕೆ ದೃಷ್ಟಿ ಸೌಕ್ಷ್ಮವೂ, ಆಧ್ಯಾತ್ಮಿಕ ಯೋಗ್ಯತೆಯೂ ಬೇಕಿರಬೇಕು. ಗುರುಶಿಷ್ಯರಿಗೆ ಸ್ವಚ್ಛವಾದ ಪ್ರೇಮವಿದ್ದಲ್ಲಿ, ವಿದ್ಯಾರ್ಥಿಯ ಪಾಪಕರ್ಮವು ಶಿಕ್ಷಕನ ಅಂತಃಕರಣವನ್ನು ಮುಟ್ಟದಿರುವಲ್ಲಿ, ಶಿಷ್ಯನಿಗೆ ಗುರುವಿನಲ್ಲಿ ಭಕ್ತಿಯಿರುವಲ್ಲಿ ಉಪವಾಸವು ಯುಕ್ತವಲ್ಲ. ಅಂತಹ ಸಂದರ್ಭದಲ್ಲಿ ಅದರಿಂದ ಹಾನಿಯುಂಟಾದರೂ ಉಂಟಾಗಬಹುದು. ಈ ರೀತಿಯ ಪ್ರಸಂಗಗಳಲ್ಲಿ ಹೀಗೆ ಉಪವಾಸದ ಸ್ವಾಭಾವಿಕವಾಗಿ ಸಂಶಯ ಹುಟ್ಟಿಸುವ ವಾದರೂ ಶಿಷ್ಯದೋಷಗಳಿಗೆ ಶಿಕ್ಷಕನ ಜವಾಬ್ದಾರಿಯ ವಿಷಯದಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

ಮೊದಲನೆಯ ಪ್ರಾಯಶ್ಚಿತ್ತವು ನಮ್ಮಲ್ಲಿ ಯಾರಿಗೂ ದುಸ್ಸಹವಾಗಿ ತೋರಲಿಲ್ಲ. ನನ್ನ ದಿನಚರಿಯಲ್ಲಿ ಯಾವ ಕಾರ್ಯವನ್ನೂ ನಿಲ್ಲಿಸಬೇಕಾಗಿ ಬರಲಿಲ್ಲ. ಮತ್ತು ಆ ಪ್ರಾಯಶ್ಚಿತ್ತ ಮುಗಿಯುವ ವರೆಗೂ ನಾನು ಕೇವಲ ಹಣ್ಣುಗಳನ್ನೇ ಸೇವಿಸುತ್ತಿದ್ದೆನೆಂಬ ವಿಷಯವನ್ನು ವಾಚಕರ ಗಮನಕ್ಕೆ ತರಬಹುದು. ಎರಡನೆಯ ಉಪವಾಸದ ಕಡೆಯ ಭಾಗವು ನನಗೆ ಕಷ್ಟತರವಾಯಿತು. ಆಗ ನಾನಿನ್ನೂ ರಾಮನಾಮದ ಮಹಾಮಹಿಮೆಯನ್ನರಿತಿರಲಿಲ್ಲ. ಕಷ್ಟವನ್ನು ಸಹಿಸುವ ಶಕ್ತಿಯು ನನ್ನಲ್ಲಿ ಅದಕ್ಕೆ ತಕ್ಕಂತೆ ಕಡಿಮೆಯಾಗಿಯೇ ಇದ್ದಿತು. ಇದಲ್ಲದೆ ನನಗೆ ಉಪವಾಸ ಕಲೆಯ ಜ್ಞಾನವೂ ಇರಲಿಲ್ಲ. ಅದರಲ್ಲಿಯೂ ವಿಶೇಷವಾಗಿ ನೀರು ಎಷ್ಟೇ ಸಪ್ಪೆಯಾಗಿ ಅಸಹ್ಯವಾಗಿ ತೋರಲಿ ಅದನ್ನು ಹೆಚ್ಚಾಗಿ ಕುಡಿಯಬೇಕೆಂಬುದು ನನಗೆ ಗೊತ್ತಿರಲಿಲ್ಲ. ಮತ್ತು ಮೊದಲನೆಯ ಉಪವಾಸವು ಸುಲಭವಾಗಿ ಕೊನೆಗೊಂಡಿದ್ದುದರಿಂದ ನಾನು ಎರಡನೆಯದರ ವಿಷಯದಲ್ಲಿ ಸ್ವಲ್ಪ ಅಜಾಗರೂಕನಾಗಿದ್ದೆನು. ಹೇಗೆಂದರೆ—ಮೊದಲನೆಯ ಉಪವಾಸದಲ್ಲಿ ನಾನು ಪ್ರತಿ ದಿನವೂ ಕ್ಯೂನೆಯವರ ಕ್ರಮದಂತೆ ಸ್ನಾನ ಮಾಡುತ್ತಿದ್ದೆನು. ಎರಡನೆಯ ಸಲ ಉಪವಾಸ ಮಾಡಿದಾಗ ನಾನು ಎರಡು ಮೂರು ದಿನಗಳಾದ ಮೇಲೆ ಆ ಸ್ನಾನವನ್ನು ಬಿಟ್ಟುಬಿಟ್ಟೆನು. ನೀರು ಕುಡಿದರೆ ಅದು ಅರುಚಿಯಾಗಿ ತೋರಿ ವಾಕರಿಕೆ ಬರುತ್ತಿದ್ದುದರಿಂದ ನಾನು ಅದನ್ನು ಬಹು ಕಡಿಮೆ ಮಾಡಿದೆನು. ಗಂಟಲು ಒಣಗಿ ದೇಹವು ಕ್ಷೀಣವಾಗಿ ನಾನು ಕಡೆ ಕಡೆಗೆ ಕೇವಲ ಉಸಿರಿನಲ್ಲಿ ಮಾತನಾಡುವಂತಾಯಿತು. ಹೀಗಾದರೂ ಬರವಣಿಗೆಯು ಅವಶ್ಯಕವಿದ್ದಾಗ ನಾನು ಹೇಳಿ ಬರೆಯಿಸಿ ನನ್ನ ಕೆಲಸವನ್ನು ನಡೆಸುತ್ತಿದ್ದೆನು. ರಾಮಾಯಣ ಮುಂತಾದ ಪವಿತ್ರ ಗ್ರಂಥಗಳನ್ನು ದಿನವೂ ತಪ್ಪದೆ ಶ್ರವಣಮಾಡುತ್ತಿದ್ದೆನು. ಅತ್ಯಗತ್ಯದ ವಿಷಯಗಳನ್ನು ಕುರಿತು ವಿಚಾರಮಾಡಿ ಸಲಹೆ ಕೊಡಲು ಸಾಕಾದಷ್ಟು ಚೈತನ್ಯವು ಕೂಡ ನನ್ನಲ್ಲಿದ್ದಿತು

COORG FOREST DEPARTMENT, SOUTH DIVISION.

Timber Sale Notice.

Mercara, the 11th May 1928.

Tenders are invited for the purchase of the following quantities of 3rd class logs and branch pieces felled and prepared departmentally in the Depots of the South Coorg Eastern Forests.—

Teak logs 1356 c. ft., branch pieces 205 c. ft. Etti logs 291 c. ft ; Nandi logs 256 c. ft.; branch pieces 158 c. ft, Mattu branch pieces 665 c. ft. and Junglewood 21 c. ft.

Tenders should reach this office on or before *10—6—1928.*

For further particulars please apply to the Divisional Forest Officer, South Coorg, Mercara.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪನಿಯು

ಲಾಭ, ನಂಬಿಕೆ ಮತ್ತು ಸೇವೆ— ಈ ವಿಚಾರಗಳಲ್ಲಿ ಸದಾ ಮುಂದಾಗಿದೆ.

೧೯೨೭ ನೇ ಡಿಸೆಂಬರ್ ೩೧ ನೇ ತಾರೀಖಿಗೆ ಮುಗಿಯುವ ಮೂರು ವರ್ಷಗಳ ಆದಾಯ ಪಟ್ಟಿ

ವಾರ್ಷಿಕ ಹೊಸ ವಿಮೆಗಳು	೨೯ ಲಕ್ಷ	ಗಳಿಂದ	೪೬೮ ಲಕ್ಷ	ಗಳಿಗೆ ಹೆಚ್ಚಿದೆ
ವಾರ್ಷಿಕ ಪ್ರೀಮಿಯಂ ಆದಾಯ	[illegible] ಲಕ್ಷ	”	೧೨೧ ಲಕ್ಷ	”
ಜೀವವಿಮೆ ಫಂಡುಗಳು	೬[illegible] ಲಕ್ಷ	”	೭೯೪ ಲಕ್ಷ	”

ನಂಬಿಕೆ

ಪುಸ್ತಕದಲ್ಲಿ ನಮೂದಿಸಿರುವ ವಿಮೆಯ ಜಾಮೀನು ಬಾಬಿನ ಬೆಲೆ ೧೯೨೭ನೇ ಡಿಸೆಂಬರ್ ೩೧ನೇ ತಾ॥ನಲ್ಲಿ ೭೦ ಲಕ್ಷಕ್ಕೆ ಏರಿಲ್ಪಟ್ಟಿತ್ತು

ಸೇವೆ

ಈ ಮೂರು ವರ್ಷಗಳ ವಿಮೆದಾರರು ಅಥವ ಅವರ ವಾರಸುದಾರರಿಗೆ ಕೊಟ್ಟಿರುವ ಹಣ ೧೮೩ ಲಕ್ಷಗಳು.

೧೯೨೮ನೇ ಇಸವಿ ಮಾರ್ಚಿ ೨೪ನೇ ತಾ॥ ದಿನ ಚಕ್ರವರ್ತಿ ಸಾರ್ವಭೌಮರಾದ ಕಿಂಗ್ ಜಾರ್ಜರವರ ಭಾಷಣದ ಸಾರಾಂಶ

“ಈ ರೀತಿ ಜನರಲ್ಲಿ ಜೀವವಿಮೆಯ ಅಭಿಪ್ರಾಯವು ಹೆಚ್ಚಾಗುತ್ತಾ ಬಂದ ಹಾಗೆಲ್ಲಾ ಅವರಲ್ಲಿ ಪರಸ್ಪರ ಸಹಾಯ ಕರ್ತವ್ಯವೂ, ಸೇವಾಧರ್ಮವೂ ಹೆಚ್ಚಿ, ತೊಂದರೆ ಸಂಭವಿಸಿದಾಗ ಒಬ್ಬ ವ್ಯಕ್ತಿ, ಒಂದು ಸಂಸಾರ ಅಥವ ಭಾಗಸ್ಥರಿಗುಂಟಾಗುತ್ತಿದ್ದ ಭಯಂಕರವಾದ ಕಷ್ಟವು ಈಗ ಅನೇಕರಲ್ಲಿ ಹಂಚಿಕೊಂಡಿರುವುದರಿಂದ ಯಾರಿಗೂ ತೊಂದರೆಯಿಲ್ಲದೆ ಜೀವನವು ನಡೆಯುತ್ತಾಗಿದೆ. ಜೀವವಿಮೆಯಿಂದ ಮಾನವನಿಂದ ಮಾನವನಿಗೂ, ಜನಾಂಗದಿಂದ ಜನಾಂಗಕ್ಕೂ ನಂಬಿಕೆಯ ಕಟ್ಟು ಯಾವರೀತಿ ಬೆಳೆದೊ ಹಾಗೆಯೇ ಅದು ನಾಗರೀಕತೆಯ ಹೆಗ್ಗುರುತಾಗಿದ್ದು ಪ್ರಪಂಚದಲ್ಲಿ ಶಾಂತಿಯು ನೆಲೆಸಲು ಕಾರಣವಾಗಿದೆ.”

ಓರಿಯಂಟಲ್‌ನಲ್ಲಿ ಜೀವವಿಮೆ ಮಾಡುವುದರ ಮೂಲಕ ನಿಮ್ಮ ಸಂಸಾರದ ಮುಂದಿನ ಕಷ್ಟ ಜೀವನಾಧಾರವನ್ನು ನಿರ್ಧರಿಸಿ. ಬೊಂಬಾಯಿಯಲ್ಲಿರುವ ಓರಿಯಂಟಲ್ ಮುಖ್ಯ ಕಚೇರಿಗಾಗಲೀ ಬೇರೆ ಕಡೆಗಳಲ್ಲಿರುವ ಶಾಖೆಗಾಗಲೀ ನೀವು ಬರೆದುಕೊಂಡರೆ, ಜೀವವಿಮೆಯಲ್ಲಿ ಸಕಲ ವಿಚಾರಗಳನ್ನೂ ತಿಳಿಸುವ ಪುಸ್ತಕವನ್ನು ನಿಮಗೆ ಕಳುಹಿಸಲಾಗುವುದು.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಯ್ಯರ್, ಬಿ.ಎ.,
ಬ್ರಾಂಚ್ ಸೆಕ್ರೆಟರಿ.

ಜಮೀನ್ದಾರರ ಸಂಘದ ಸಮಾವೇಶ.

(ನೇ ಪುಟದಿಂದ ಮುಂದುವರಿದದ್ದು)

ಮೋ[illegible]ಸಲಿಕ್ಕಾಗಿ ಮಿ ಅಬ್ದುಲ್ ಗಫೂರ [illegible] ಮತ್ತು ಮಿ ಸುಬ್ಬೇರ ಸಣ್ಣಪ್ಪನವರು [illegible] ಠರಾವು ಸರ್ವಾನುಮತದಿಂದ [illegible]ಯಿತು

2. [illegible]

3 [illegible] ಸಂಪೂರ್ಣ ನಿಲ್ಲಿಸುವದಕ್ಕೆ [illegible] ಠರಾವು [illegible] ಅಬ್ದುಲ್ ಗಫೂರ [illegible] ಅನುಮೋದಿಸಿದರು [illegible] ಠರಾವು ಸರ್ವಾನುಮತದಿಂದ [illegible]

4 [illegible]

5 [illegible]

6 ಇಂಡಿಯಾ ಸರಕಾರದವರು ಕೊಡಗಿನಿಂದ [illegible] 3 ವರ್ಷಗಳಿಂದ [illegible] ಠರಾವನ್ನು [illegible] ಸರ್ವಾನುಮತದಿಂದ [illegible]

7 [illegible]

8 [illegible]

9 [illegible] 1926 ನೇ ಮತ್ತು 1927 ನೇ ಇಸವಿಯ ಮಹಾಸಭೆಗಳ [illegible]

[illegible] ಸಭೆಯ ಅಧ್ಯಕ್ಷರಿಂದ [illegible]

10 [illegible] ಲೋಕಲ್ ಸರ್ಕಾರ [illegible]

11 [illegible]

12 [illegible] ಸಂಘವು [illegible]

[illegible] ಜಾಗದಲ್ಲಿ [illegible]

ರಕಾರಿ [illegible] ಪಡೆದರ ಮಾತ್ರ ಕೊಡುವ ಹಾಗೆ [illegible] ವ್ಯವಸಾಯ [illegible] ಬೇಕು.

11 [illegible] ಇರುವ ಶಾಲೆಯಲ್ಲಿ [illegible] ಬೋರ್ಡಿಂಗ್ ಶಾಲೆಯನ್ನು [illegible] ಈ ಸಂಘವು ಕೇಳಿಕೊಳ್ಳುತ್ತದೆ

12 [illegible]

16 ಹಾರಂಗಿ ಶಾಲೆಯನ್ನು [illegible] ಸಂಘವು [illegible]

17 [illegible] ತಾಲೋಕಿನ ಗ್ರಾಮಗಳಲ್ಲಿ [illegible]

18 [illegible] ತಾಲೋಕಿನಲ್ಲಿ [illegible] ಕಟ್ಟಬೇಕು

19 ಕೊಡಗಿಗೆ [illegible] ಸರಕಾರದವನ್ನು ಕೇಳಿಕೊಳ್ಳುತ್ತದೆ [illegible]

20 ಸರಕಾರದವರು [illegible]

21 [illegible]

22 [illegible]

23 [illegible]

24 ಈಗ ಕೊಡಗಿನ [illegible]

25 [illegible]

26 [illegible]

27 ಉತ್ತರ [illegible] 10 [illegible]

28 [illegible]

29 [illegible]

30 [illegible]

[illegible] ಠರಾವುಗಳಾದ ಮೇಲೆ [illegible]

ಸ್ವಾಗತ ಮಂಡಲಿಯ ಅಧ್ಯಕ್ಷರು [illegible] ಸ್ವಾಗತ ಮಂಡಲಿಯ [illegible]

ಮಿ ಪಿ ಟಿ. [illegible] ಸ್ವಾಗತ ಕಮಿಟಿಯವರು [illegible] ಸ್ವಾಗತ ಅಧ್ಯಕ್ಷರನ್ನು [illegible]

ಮಿ ಪಿ ಟಿ. [illegible] ಮಹಾಸಭೆಯು [illegible] ನಡೆಸುವದ [illegible]

ಗಳಿಂದ [illegible] ಸಂತ್ಯೇರಿ ಸಣ್ಣಪ್ಪನವರಿಗೆ [illegible] ಸ್ವಾಗತ ಮಂಡಲಿ [illegible] ಸಭೆಯ ಅಧ್ಯಕ್ಷರ [illegible] ತಮ್ಮ [illegible] ಕೃತಜ್ಞತೆಯನ್ನು ಸೂಚಿಸಿದರು

ನಂತರ ಸಭೆಯ ಅಧ್ಯಕ್ಷರಿಂದ ಶ್ರೀ [illegible] ರು ಸಮಯೋಚಿತ ಭಾಷಣವನ್ನು ಮಾಡಿದರು. ಈ [illegible] ಭಾಷಣವು ಕನ್ನಡದಲ್ಲಿ [illegible] ಪ್ರಕಟಿಸಲಾಗುವದು ಈ [illegible] ಷಣವು ಮುಗಿದನಂತರ ವಂದೇಮಾತರಂ ಎಂಬ [illegible] ಸಭೆಯು ಮಧ್ಯಾಹ್ನ 12 ಗಂಟೆಗೆ ಮುಕ್ತಾಯಿತು

[illegible]

NOTICE.

Dated 1st May 1928

It is proposed to depute a cand[illegible] undergo training in the Agricultural C[illegible] Coimbatore, for three years with effect fr[illegible] 15th June 1928 on a stipend of Rs 2[illegible] mensem.

2 Application will be received up [illegible] 25th May 1928

Candidate must have reached the [illegible] years on or before the 15th of May in the [illegible] when application is made and must produc[illegible] following certificates —

(a) Certificate of the physical fitness [illegible] by a registered medical practitioner
(b) Vaccination certificates showing that candidate has been vaccinated or h[illegible] small pox after the age of 10
(c) University certificate, if any
(d) Testimonials of good character [illegible] the previous two years

Applications must be in the candidate['s] handwriting

Candidates must have passed complet[illegible] Intermediate Examination in arts and s[illegible] the University of Madras and have [illegible] group I or II thereof or an examination [illegible] other University recognised as equivalent

The selection of candidates will be [illegible] the Commissioner at 10 A m on the [illegible] 19[illegible] Applicants should appear in perso[illegible] selected candidates will have to appear [illegible] the Selection Board at Coimbatore [illegible] the dates that will be notified The [illegible] make the final selection

The successful candidate at the [illegible] tion should be required to execute an [illegible] binding himself to serve the Coorg A[illegible] whenever required at the close of the [illegible] course

Any further information on the subject [illegible] be had in the Office of the undersigned

K N Subbaraya
Deputy Director
L R. & D

ಪ್ರಸಿದ್ಧ ಪತ್ರಿಕೆ.

ಕೊಡಗು ಮುಜರಾಯಿ ಇಲಾಖೆಯಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಸುವದೇನೆಂದರೆ [illegible] ಹೆಸರಾಲ್ಕುನಾಡು ಮತ್ತು ಕಿಗ್ಗಟ್ಟುನಾಡು [illegible] ಕಗಳಿಗೆ ನೇಮಕವಾಗಿದ್ದ [illegible] [illegible] ಇವರು [illegible] 15ನೇ [illegible] ತಾರೀಖಿನ 1) [illegible] ಏನೂ ತಿಳಿಸಲಾಗಿದೆ

[illegible]

ವರ್ತಮಾನ ಸಂಗ್ರಹ.

ಒ [illegible]

ಈಗ ರಚನೆಯಲ್ಲಿರುವ ಎಕ್ಸಿಕ್ಯುಟಿವ್ ಕಾನ್ಸಿಲಿನ ಸದಸ್ಯರಾದ [illegible] ಬಳಿ [illegible] ತಾ 25ರಲ್ಲಿ [illegible] ವಶ [illegible]

ಸಾರ್ವಭೌಮನು ಚಕ್ರವರ್ತಿ ಐದನೇ ಜಾರ್ಜ್ [illegible] ಹುಟ್ಟಿದ ದಿನವು [illegible] ಆ ದಿನ [illegible] ಬಿರುದುಗಳೂ, ಬಹುಮಾನಗಳೂ ಕೊಡಲ್ಪಡುವವು.

ಸತ್ಯನಾರಾಯಣ [illegible] ವಿಶ್ವವಿದ್ಯಾನಿಲಯದ [illegible] ಪರೀಕ್ಷಾ [illegible], ಅವನಲ್ಲಿ [illegible] ಲೈಸೆನ್ಸು [illegible] ದು ತಿಳಿಯುತ್ತೇವೆ

ಅಕ್ಟಿಂಗ್ ಎಗ್ಸಿಕ್ಯುಟಿವ್ ಇಂಜಿನಿಯರಾಗಿ [illegible] ಮೆ. [illegible] ಅಯ್ಯಂಗಾರವರು [illegible] ತಾ 15ರಲ್ಲಿ ತಮ್ಮ ಹುದ್ದೆಯಲ್ಲಿ [illegible]

ಕೆಲವು ತಿಂಗಳುಗಳ ಹಿಂದೆ [illegible] ಜಾತಿ ಗಲಭೆ [illegible] ತಾ 17ರಲ್ಲಿ [illegible] ಆಗಿದೆ

ಕಳೆದ ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಮೆ. [illegible] ಪಿ. [illegible] ಫಸ್ಟ್ ಕ್ಲಾಸಿನಲ್ಲಿಯೂ [illegible] ಬಿ. ಏ. ಗೆ [illegible] ಉತ್ತೀರ್ಣರಾಗಿರುವರು [illegible] ಪೂರ್ಣಯ್ಯನವರು [illegible] ಮತ್ತು ಮೆ. [illegible] 1 ನೇ ಕ್ಲಾಸಿನಲ್ಲಿ [illegible] ಉತ್ತೀರ್ಣರಾಗಿರುವರೆಂದು [illegible]

ಹಿಂದೂಸ್ಥಾನ.

[illegible] ಕಾಲೇಜು ವಿದ್ಯಾರ್ಥಿಗಳಿಗೆ [illegible] ಕೊಡುವುದು [illegible] ಲ್ಲಿ [illegible]

ಕರ್ನಾಟಕ ಪ್ರಾಂತ್ಯದ ವ [illegible] ಹುಬ್ಬಳ್ಳಿಯಲ್ಲಿ ಮೀಟಿಂಗು ನಡೆಸಿ [illegible] ನ್ನು [illegible]

ಕಲ್ಕತ್ತಾದ ಸಮೀಪದ ಕಾಶೀಪುರ ಮತ್ತು ಚಿತ್ಪುರದಲ್ಲಿ ರುವ 22 ಕಾರ್ಖಾನೆಗಳ ಕಾರ್ಮಿಕರು 15 00 ಕೆಲಸಗಾರರು ಸಂಬಳ ಸಾಲದೆಂದು ಕೆಲಸಕ್ಕೆ ಹೋಗದೆ ಬಹಿಷ್ಕಾರ ಹಾಕಿರುವರು.

ಹಿಂದೂ ದೇಶದ 179 ಮುಸ್ಲಿಂ ಮತ್ತು 5[illegible] [illegible] ಸಂಗ್ರಹಿಸಿರುವ [illegible] ಅಭಿನಂದಿಸಿರುವರು.

ಕಲ್ಕತ್ತಾದ 'ಬಂಗ್ಲಾರ್ ಕಥ' ಎಂಬ ಬಂಗಾಳಿ ಪತ್ರಿಕೆಯ ಸಂಪಾದಕರಾದ (ಅವರೇ 'ಫಾರ್ವರ್ಡ್' ಪತ್ರಿಕೆಯ ಎಡಿಟರು) ಮ. ಸತ್ಯರಂಜನ ಬಕ್ಷಿಯವರಿಗೂ, ಮುದ್ರಕರಾದ ವೆ. [illegible] ರಾಜದ್ರೋಹದ ಆಪಾದನೆಗಾಗಿ 1000 ಮತ್ತು 500 ರೂಪಾಯಿ ಜುಲ್ಮಾನೆ ವಿಧಿಸಿರುವರು

ಕಂದಾಯ ಕೊಡದೆ ಬಾರ್ಡೋಲಿಯವರು ನಡೆಸುತ್ತಿರುವ ಸತ್ಯಾಗ್ರಹ ಚಳವಳಿಗೆ ದ್ರವ್ಯ ಸಹಾಯ ಮಾಡಬೇಕೆಂದು ಶ್ರೀ ವಲ್ಲಭಭಾಯಿ ಪಟೇಲರವರು ಮಾಡಿರುವ ವಿನಂತಿಗೆ ದೇಶಾಭಿಮಾನಿಗಳೆಲ್ಲರೂ ಗಮನಕೊಟ್ಟು ಅಖಿಲಭಾರತ ಪ್ರಾಮುಖ್ಯತೆಯ ಈ ಚಳವಳಿಗೆ ಎಲ್ಲರೂ ಸಹಾಯ ಕೊಡಬೇಕೆಂದು ಮಹಾತ್ಮ ಗಾಂಧಿಯವರು ಬರೆದಿರುವರು.

[illegible] ಗಿರಣಿ ಕೆಲಸಗಾರರ ಮುಷ್ಕರವು [illegible] ಅರ್ಧ ಲಕ್ಷ ಜನರು [illegible] 20 [illegible] ಗಿರಣಿಗಳ [illegible] ಈ ಮುಷ್ಕರದ ಸಮಸ್ಯೆಯನ್ನು [illegible] ಒಂದು ವಿಶೇಷ ಮೀಟಿಂಗನ್ನು ಮಾಡಲಿಕ್ಕಿರುವರು.

ಬಾರ್ಡೋಲಿಯಲ್ಲಿ [illegible] ಗುಜರಾತಿನ ಪ್ರತಿನಿಧಿಗಳು ಮಾಡಿಕೊಂಡ ಕೋರಿಕೆಗೆ [illegible] ಗಮನ ಕೊಡದ್ದರಿಂದ ಗುಜರಾತಿನ 8 ಕೌನ್ಸಿಲು ಮೆಂಬರುಗಳ ಪೈಕಿ [illegible] ರಾಜಿನಾಮೆ ಕೊಟ್ಟಿರುವರು.

[illegible] ಬಾರ್ಡೋಲಿಯ ಸತ್ಯಾಗ್ರಹ [illegible] ಬಂತು.

ವಿದೇಶ.

[illegible] ಇಂಗ್ಲೆಂಡಿನ [illegible] ಪೂರ್ವದಲ್ಲಿ [illegible]

[illegible] ದಕ್ಷಿಣ [illegible] ಬ [illegible]

ಯುದ್ಧವನ್ನು ನಿವಾರಿಸಲು [illegible] ಇಂಗ್ಲೆಂಡ್ [illegible] ಪಾರ್ಲಿಮೆಂಟಿನಲ್ಲಿ [illegible]

[illegible] ಇಂಗ್ಲೆಂಡಿನ [illegible] ಸರ್ಕಾರದ [illegible]

[illegible] ವಿದ್ಯಾರ್ಥಿಗಳಿಗೆ [illegible] ಕೊಡಲು [illegible] 25ರಲ್ಲಿ [illegible]

[illegible] ಹಾಗು [illegible] 50 [illegible] 1927-28 ರಲ್ಲಿ ಇಂಗ್ಲೆಂಡಿನ [illegible] 1923-24 ರಲ್ಲಿ [illegible] 62 [illegible]

[illegible] 15 [illegible] 10 [illegible] ಪ್ರಕಟವಾಗುತ್ತದೆ

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ತಾ. 18 5—28 ರಲ್ಲಿ ನಡೆದ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ಡೈರೆಕ್ಟರ [illegible] ಈ ಕೆಳಗಿನ [illegible] ಸೊಸೈಟಿಗಳಿಗೆ [illegible]

1 [illegible] ಸೊಸೈಟಿಗೆ ರೂ. 4[illegible]0, 2. ಹುದಿಗೆರೆ ಸೊಸೈಟಿಗೆ ರೂ. 500, 3 [illegible] ಸೊಸೈಟಿಗೆ ರೂ [illegible], 4. [illegible] ಸೊಸೈಟಿಗೆ ರೂ 1000, 5 [illegible] ಸೊಸೈಟಿಗೆ ರೂ. 2000, 6 [illegible] ಸೊಸೈಟಿಗೆ ರೂ. 1200, 7 [illegible] ಸೊಸೈಟಿಗೆ ರೂ. 50[illegible], 8 [illegible] ಸೊಸೈಟಿಗೆ ರೂ 8[illegible], 9 [illegible] ಗ್ರೇಯಿನ್ ಬ್ಯಾಂಕಿಗೆ ರೂ. 100, 10. [illegible] ಸೊಸೈಟಿಗೆ ರೂ. 1000, 11. [illegible] ಸೊಸೈಟಿಗೆ ರೂ. 2000, 12 [illegible] ಸೊಸೈಟಿಗೆ ರೂ. [illegible]00, 13 [illegible] ಸೊಸೈಟಿಗೆ ರೂ 600, 14 [illegible] ಸೊಸೈಟಿಗೆ ರೂ 500 15 [illegible] ಸೊಸೈಟಿಗೆ ರೂ. 1500, 16. [illegible] ಸೊಸೈಟಿಗೆ ರೂ 750, 17. [illegible] ಸೊಸೈಟಿಗೆ ರೂ 1000 18 [illegible] ಸೊಸೈಟಿಗೆ ರೂ 1500 19 [illegible] ಸೊಸೈಟಿಗೆ ರೂ. 200[illegible], 20. [illegible] ಸೊಸೈಟಿಗೆ ರೂ. [illegible], 21. [illegible] ಸೊಸೈಟಿಗೆ ರೂ. 2000, 22. [illegible] ಸೊಸೈಟಿಗೆ ರೂ 8[illegible] 23 [illegible] ಸೊಸೈಟಿಗೆ ರೂ. 1[illegible]0, 24. [illegible] ಸೊಸೈಟಿಗೆ ರೂ 1000, [illegible] ಈ ವರ್ಷದ [illegible] ಸಾಲ ಕೊಡುವುದಿಲ್ಲ.

[illegible] ಸಂಘದ ೧೯೨೭–೧೯೨೮ ನೇ ವರ್ಷದ ವರದಿ.

1. ಉದ್ದೇಶಗಳು—ಈಗಿನ [illegible] 1[illegible]2 ನೇ [illegible] ನಡೆದ [illegible] ಹೊಸ [illegible] ಅಧ್ಯಕ್ಷರಾಗಿದ್ದ [illegible] 9—11—’[illegible] ರಲ್ಲಿ ತಮ್ಮ ಅಧ್ಯಕ್ಷಪದವಿಗೆ [illegible] 1—[illegible]—28ರ [illegible] ಮೆಂಕಯ್ಯ [illegible] ಅಧಿಕಾರ [illegible]

2 [illegible]—[illegible] 1918 [illegible] 1927ನೇ [illegible] 31ರಲ್ಲಿ 17[illegible] [illegible] 14 [illegible]

3. ಆದಾಯ ವೆಚ್ಚ—[illegible] 10ನೇ [illegible] 31ನೇ [illegible] 1927ನೇ [illegible] 17ನೇ [illegible] 1927ರಲ್ಲಿ [illegible] 1927—3—11, [illegible] 35[illegible]—3—3 [illegible] 772—5—8 [illegible] ರೂ. 1175—0—0 [illegible]

4. [illegible] 1927 [illegible] 72 [illegible] 1927ನೇ [illegible]

ಸ್ಯೆಜರುಗಳು ವಾಪಸು ಕಳುಹಿಸದೆ ಇರುವದು ವ್ಯಸನಕರ. ಇನ್ನಾದರೂ ಇವರು ತಮ್ಮ ಕರ್ತವ್ಯವನ್ನು ವಹಿಸಿ ಸಂಘದ ಮತ್ತು ತಮ್ಮ ಅಭಿಮಾನವನ್ನು ಕಾಪಾಡುವರೆಂದು ಆಶಿಸುತ್ತೇನೆ.

5. ಮೀಟಿಂಗುಗಳು—1927ನೇ ಏಪ್ರಿಲ್ 10ರಿಂದ ಈ ವರ್ಷದ ಮಾರ್ಚಿ ಆಖೈರು ವರೆಗೆ 10 ಕಾರ್ಯಕಾರಿ ಮಂಡಳಿ ಮೀಟಿಂಗುಗಳೂ, ಒಂದು ವಿಶೇಷ ಮಹಾಸಭೆಯೂ ನಡೆದವು. 6 ಕಮಿಟಿ ಮೀಟಿಂಗುಗಳು ವೀರರಾಜಪೇಟೆಯಲ್ಲಿಯೂ, 4 ಮೀಟಿಂಗುಗಳು ಮಡಿಕೇರಿಯಲ್ಲಿಯೂ ನಡೆದವು. ಕಳೆದ ವರ್ಷ 5 ಮೀಟಿಂಗುಗಳು ಮಾತ್ರ ಆಗಿದ್ದವು. ಹಿಂದಿನ ವರ್ಷಗಳಲ್ಲಿ ಕಾರ್ಯಕಾರಿ ಸಮಿತಿಯ ಮೆಂಬರುಗಳು ಸರಿಯಾಗಿ ಮೀಟಿಂಗಿಗೆ ಬರುತ್ತಿದ್ದಿಲ್ಲವಾದುದರಿಂದ 'ತಕ್ಕ ಕಾರಣವಿಲ್ಲದೆ ಒಂದಾಗಿ ಮೂರು ಮೀಟಿಂಗುಗಳಿಗೆ ಹಾಜರಾಗದ ಮೆಂಬರು ಕಮಿಟಿಯಿಂದ ವಜಾ ಮಾಡಲ್ಪಡುವನು' ಎಂಬ ನಿಬಂಧನೆಯನ್ನು ಜಾರಿಗೆ ತರಲು ಪ್ರಯತ್ನಿಸಿದ್ದರಿಂದ ಈ ವರದಿ ವರ್ಷದಲ್ಲಿ ಮೀಟಿಂಗುಗಳ ಹಾಜರಾತಿಯು ಉತ್ತಮವಾಯಿತು. ಒಂದು ಮೀಟಿಂಗು ಕೋರಂ ಇಲ್ಲದೆ ಬಾಕಿ ಆಗಲಿಲ್ಲ. ಕಮಿಟಿ ಮೀಟಿಂಗುಗಳ ಸರಾಸರಿ ಹಾಜರಾತಿಯು 1926—27ರಲ್ಲಿ 12 ಮಾತ್ರ ಇದ್ದದ್ದು ಈ ವರ್ಷ 17ಕ್ಕೆ ಏರಿದ. ಆದರೂ 50 ಮೆಂಬರುಗಳುಳ್ಳ ಕಮಿಟಿ ಮೀಟಿಂಗಿನ ಈ ಹಾಜರಾತಿಯು ಅಷ್ಟು ತೃಪ್ತಿಕರವಲ್ಲ. ಇನ್ನು ಮುಂದೆ ಈ ವಿಷಯದಲ್ಲಿ ಸದಸ್ಯರು ಆದಿಗಿಂತ ಹೆಚ್ಚಿನ ಉತ್ಸಾಹ ತೋರಿಸಿಯಾರಾಗಿ ನಂಬುತ್ತೇನೆ.

6. ಸಂಘದ ಮಹಾಸಭೆಯ ತೀರ್ಮಾನಗಳು—ವಾಡಿಕೆಯಂತೆ ಕಳೆದ ಮಹಾಸಭೆಯ ಠರಾವುಗಳು ಕಮಿಷನರವರಿಗೆ ಕಳುಹಿಸಲ್ಪಟ್ಟವು. ಆದರೆ ಅವರಿಂದ ಈ ವರೆಗೆ ಯಾವ ಜವಾಬೂ ಬಂದಿರುವದಿಲ್ಲ. ಹಾಗೆಯೇ, 1926ನೇ ವರ್ಷದ ಮಹಾಸಭೆಯ ತೀರ್ಮಾನಗಳಿಗೂ ಅವರು ಏನೊಂದೂ ಉತ್ತರ ಕೊಟ್ಟಿರುವದಿಲ್ಲ.

7. ಉಪಕಮಿಟಿಗಳು—ಕಳೆದ ಮಹಾಸಭೆಯಲ್ಲಿ ಕೆಲವು ಉಪಕಮಿಟಿಗಳು ನೇಮಿಸಲ್ಪಟ್ಟಿದ್ದವು. ಆದರ ಮೇರೆ ಒಂದು ಕಮಿಟಿಯವರು ಸಂಘದ ನಿಬಂಧನೆಗಳನ್ನು ತಿದ್ದುಪಡಿ ಮಾಡಿ ಕಾರ್ಯಕಾರಿ ಮಂಡಳಿಗೆ ಒಪ್ಪಿಸಿದರು. ಈ ಮಂಡಳಿಯವರು ಅದನ್ನು ಕೆಲವು ಬದಲಾವಣೆಗಳಿಂದ ಅಂಗೀಕರಿಸಿ ಈ ಮಹಾಸಭೆಯ ಮುಂದೆ ಮಂಜೂರಾತಿಗೆ ಇಟ್ಟಿರುವರು. ಖಿದ್ದರ್ ಕಮಿಟಿಯವರು ಪೂರ್ವದಿಂದಲೂ ನೂಲುವ ಕಸಬು ನಡೆದು ಬಂದಿರುವ ತೊರೆನೂರು, ಶಿರಂಗಾಲ ಗ್ರಾಮಗಳನ್ನು ಸಂದರ್ಶಿಸಿ ನೂಲುವ ಕಸಬನ್ನು ಪುನರ್ಜೀವಗೊಳಿಸಬೇಕೆಂತ ಜನರಿಗೆ ಬೋಧನೆಕೊಟ್ಟು, ಶ್ರೀ ಗಂಗಾಧರರಾವ್ ದೇಶಪಾಂಡೆ ಮತ್ತು ಶ್ರೀ ಸಿ. ರಾಜಗೋಪಾಲಾಚಾರ್ಯರಿಗೂ ಈ ಗ್ರಾಮಗಳಲ್ಲಿ ಕೈನೂಲಿನ ಕೇಂದ್ರಸ್ಥಾನವನ್ನು ಸ್ಥಾಪಿಸಲು ಬರಬೇಕೆಂದು ಆಮಂತ್ರಣ ಕಳುಹಿಸಿರುವರು. ಗಂಗಾಧರರಾಯರು ಮೇ ಆಖೈರಿಗೆ ಬರುತ್ತಾರೆಂದು ಒಪ್ಪಿರುವರು. ಅಲ್ಲಿ ಹತ್ತಿ ಬೀಜದ ಅವಶ್ಯಕತೆ ಕಂಡುಬಂದದ್ದರಿಂದ ರಾಜಗೋಪಾಲಾಚಾರ್ಯರ ಮೂಲಕ ಹತ್ತಿ ಬೀಜ ತರಿಸಿ ಹಂಚುವ ಏರ್ಪಾಡು ಮಾಡಲಾಗಿದೆ. ತಾ. 14—1—28ರ ಕಾರ್ಯಕಾರಿ ಮಂಡಳಿಯ ಮೀಟಿಂಗಿನ ತೀರ್ಮಾನದ ಮೇರೆ ಆ ದಿನ ನೇಮಿಸಲ್ಪಟ್ಟ ಉಪಕಮಿಟಿಯವರು ಹುಬ್ಬಳ್ಳಿಯ ಹಿಂದೂಸ್ಥಾನಿ ಸೇವಾದಳದ ಡಾಕ್ಟರ್ ಹರ್ಡೀಕರ್‌ರವರು ಕಳುಹಿಸಿಕೊಟ್ಟ ಮೆ. ಮಾತಂಡರವರ ಸಹಾಯದಿಂದ 9 ಸ್ವಯಂ ಸೇವಕರನ್ನು ಆ ವ್ಯಕ್ತಿಯಲ್ಲಿ ಮಾರ್ಚಿ 10ರಿಂದ ಏಪ್ರಿಲ್ 15ರ ವರೆಗೆ ತರಬೇತು ಮಾಡಿಸಿದರು. 12 ಜನ ಸ್ವಯಂಸೇವಕರನ್ನು ತರಬೇತು ಮಾಡಲು 250 ರೂಪಾಯಿ ಮಂಜೂರು ಮಾಡಲ್ಪಟ್ಟಿದ್ದರೂ ನಾಲ್ಕಷ್ಟು ಯುವಕರು ಮುಂದು ಬರದ್ದರಿಂದ 9 ಜನರನ್ನು ಮಾತ್ರ 175 ರೂ. ಖರ್ಚಿನಲ್ಲಿ ತರಬೇತು ಮಾಡಿದ್ದಾಗಿದೆ. ಹಿಂದೂಸ್ಥಾನಿ ಸೇವಾದಳದಲ್ಲಿ ತರಬೇತು ಹೊಂದಿರುವ ಮೆ. ಮಾತಂಡರವರ ಸಹಾಯವನ್ನು ಉಪಯೋಗಿಸಿಕೊಳ್ಳಲು ನಮ್ಮ ಯುವಕರು ಸಾಕಷ್ಟು ಮುಂದೆ ಬಾರದ್ದು ವ್ಯಸನಕರ. ಇಂಥಾ ಸಹಾಯಕರನ್ನು ಕಳುಹಿಸಿಕೊಟ್ಟದಕ್ಕೆ ಡಾ. ಹರ್ಡೀಕರವರಿಗೆ ನಮ್ಮ ವಂದನೆಗಳಿವೆ.

8. ಗಣಪತಿ ಲೈಬ್ರರಿ—ವೀರರಾಜಪೇಟೆಯಲ್ಲಿರುವ ಗಣಪತಿ ಪುಸ್ತಕಾಲಯವನ್ನು ಮಡಿಕೇರಿಯಲ್ಲಿರುವ ಸಂಘದ ಕಟ್ಟಡಕ್ಕೆ ವರ್ಗಾಯಿಸಬೇಕೆಂದು ಆ ಲೈಬ್ರರಿಯ ಜನರಲ್ ಬಾಡಿಯವರು ತೀರ್ಮಾನಿಸಿ ಕೇಳಿಕೊಂಡ ಮೇರೆ, ಅದಕ್ಕೆ ಕಾರ್ಯಕಾರಿ ಮಂಡಳಿಯವರು ಒಪ್ಪಿರುವರು. ಸದರಿ ಪುಸ್ತಕಾಲಯವನ್ನು ಬೇಗನೆ ಮಡಿಕೇರಿಗೆ ಸಾಗಿಸುವ ಏರ್ಪಾಡು ಮಾಡಲಾಗುತ್ತಿದೆ.

9. ವೈಸರಾಯರಿಗೆ ಡೆಪ್ಯುಟೇಶನ್—ಕಳೆದ ಫೆಬ್ರು ತಿಂಗಳಲ್ಲಿ ವೈಸರಾಯರು ಮೈಸೂರಿಗೆ ಬಂದಾಗ್ಯೆ ಸಂಘದಿಂದ ಅವರಿಗೊಂದು ಡೆಪ್ಯುಟೇಶನ್ ಕಳುಹಿಸಲು ಬಿನ್ನಹ ಪತ್ರದ ನಕಲನ್ನು ಕಮಿಷನರ ಕೋರಿಕೆ ಮೇರೆ ಅವರು ಕೇಳಿ 10 ದಿವಸಗಳಲ್ಲಿ ಕಳುಹಿಸಲಾಯಿತು. ಬಿನ್ನಹ ಪತ್ರವನ್ನು ತಯಾರಿಸಲು ಕಾರ್ಯಕಾರಿ ಮಂಡಳಿಯ ಮೀಟಿಂಗು ಆಗಬೇಕಾಗಿದ್ದ ಕಾರಣ 10 ದಿವಸಗಳು ಬೇಕಾದವು. ಆದರೆ ಅದು ತಡವಾದುದರಿಂದ ಡೆಪ್ಯುಟೇಶನನ್ನು ಒಪ್ಪಲಾಗುವದಿಲ್ಲವೆಂದು ಕಮಿಷನರು ತಿಳಿಸಿದರು. ಈ ತೀರ್ಮಾನವನ್ನು ಖಂಡಿಸಿ ವೈಸರಾಯರಿಗೂ, ಚೀಫ್ ಕಮಿಷನರಿಗೂ, ತಂತಿಗಳೂ, ಪತ್ರ... ...ದವು. 'ತನ್ನ ಈಗಿನ ಕಾರ್ಯಕ್ರಮ ಪಟ್ಟಿಯು ತುಂಬಿಹೋಗಿರುವದರಿಂದಲೂ, ತಾನು ಬೇಗನೆ ಕೊಡಗಿಗೆ ಬರುವ ಆಶೆಯುಳ್ಳವನಾಗಿರುವದರಿಂದಲೂ ಆಗ್ಯೆ ಡೆಪ್ಯುಟೇಶನನ್ನು ಸಂತೋಷದಿಂದ ಅಂಗೀಕರಿಸುವೆನೆಂದೂ' ವೈಸರಾಯರು ಜವಾಬು ತಂತಿಕೊಟ್ಟರು.

10. ಸೈಮನ್ ಕಮಿಷನು—ತಾ. 2—3—28ರಲ್ಲಿ ವೀರರಾಜಪೇಟೆಯಲ್ಲಿ ನಡೆದ ಸಂಘದ ವಿಶೇಷ ಮಹಾಸಭೆಯಲ್ಲಿ, 'ಹಿಂದೂದೇಶದ ರಾಜಕೀಯ ಸುಧಾರಣೆಯ ವಿಷಯ ವಿಚಾರಿಸುವ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟಿನಿಂದ ನೇಮಿಸಲ್ಪಟ್ಟಿರುವ ಸೈಮನ್ ಕಮಿಷನು ಹಿಂದೀಯರ ಅಭಿಪ್ರಾಯಕ್ಕೆ ಸಂಪೂರ್ಣ ವಿರೋಧವಾಗಿರುವದರಿಂದ ಅದನ್ನು ಈ ಸಂಘವು ನಿಷೇಧಿಸುತ್ತದೆ ಮತ್ತು ಈ ಕಮಿಷನನ್ನು ಸಂಘವು ಯಾವ ಕಾಲದಲ್ಲೇ ಆಗಲಿ, ಯಾವ ರೀತಿಯಲ್ಲೇ ಆಗಲಿ ಸಹಕರಿಸುವದಿಲ್ಲವೆಂದು ತೀರ್ಮಾನಿಸಲಾಯಿತು. ಈ ಸಂಘದ ಕೋರಿಕೆ ಮೇರೆ ಕೊಡಗು ಕೌನ್ಸಿಲಿನ ಕಳೆದ ಬಜೆಟ್ ಮೀಟಿಂಗಿಗೆ 13 ಚುನಾಯಿತ ಇಂಡಿಯನ್ ಮೆಂಬರುಗಳಲ್ಲಿ ಹತ್ತು ಜನರು ಹೋಗದೆ ಸೈಮನ್ ಕಮಿಷನಿನ ನೇಮಿಸುವಿಕೆಯಿಂದ ಉಂಟಾದ ಅತೃಪ್ತಿಯನ್ನು ತೋರಿಸಿದರು. ದೇಶದ ಪ್ರತಿನಿಧಿಗಳು ಸಂಘದ ಕೋರಿಕೆಯನ್ನು ಗೌರವಿಸಿ ತಮ್ಮ ಸ್ವಾಭಿಮಾನವನ್ನು ತೋರಿಸಿದಕ್ಕೆ ಅವರನ್ನು ಸಂಘವು ಅಭಿನಂದಿಸಬೇಕಾಗಿದೆ.

11. ಕೊಡಗಿನ ಮುಂದಿನ ರಾಜಕೀಯ ರಚನೆ—ಕೊಡಗಿನ ಮುಂದಿನ ರಾಜಕೀಯ ಸುಧಾರಣೆಯ ವಿಷಯ ಆಲೋಚಿಸಲು ವೀರರಾಜಪೇಟೆ ವಿಶೇಷ ಮಹಾಸಭೆಯಲ್ಲಿ 15 ಮೆಂಬರುಗಳ ಒಂದು ಉಪಸಭೆಯು ನೇಮಿಸಲಾಯಿತು. ಇವರಿಗೆ ಅಧಿಕಾರ ಕೊಡಲ್ಪಟ್ಟಿದ್ದ ಮೇರೆ ಇವರು ಕೊಡಗಿನ ಬೇರೆ 10 ಮಹನೀಯರನ್ನು ಈ ಸಭೆಗೆ ಸೇರಿಸಿಕೊಂಡು ಮೀಟಿಂಗು ಮಾಡಿ ಚೆನ್ನಾಗಿ ಚರ್ಚಿಸಿ ಕೊಡಗನ್ನು ಒಳಕೊಂಡ ಕರ್ನಾಟಕ ಏಕೀಕರಣಕ್ಕೆ ಒಪ್ಪುವಂತೆಯೂ, ಏಕೀಕರಣವಾಗುವ ವರೆಗೆ ಪೂರ್ಣ ಜವಾಬ್ದಾರಿಯ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರವು ಇರಬೇಕೆಂತಲೂ ತೀರ್ಮಾನಿಸಿ, ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರದ ರಚನೆಯನ್ನು ತಯಾರಿಸಲು ಒಂದು ಸಿಲೆಕ್ಟ್ ಕಮಿಟಿಯನ್ನು ನೇಮಿಸಿದರು. ಈ ಉಪಕಮಿಟಿಯವರು ತಯಾರಿಸಿದ ರಚನೆಯನ್ನು ಈ ಮಹಾಸಭೆಯ ಮುಂದೆ ಮಂಜೂರಾತಿಗೆ ಇಡಲಾಗಿದೆ.

ಸಿ. ಐ. ಬೆಳ್ಯಪ್ಪ.
ತಾ. 5—5—28. ಜ. ಸಕ್ರೆಟರಿ.

ಓರಿಯಂಟಲ್ ಲೈಫ್ ಅಷ್ಯೂರೆನ್ಸ್ ಕಂಪನಿ.

ಕಂಪೆನಿಯ ಸಭೆ.

(ಬರೆದು ಬಂದದ್ದು)

ಸರ್ಕಾರದ ಭರವಸೆಯುಳ್ಳ ಓರಿಯಂಟಲ್ ಜೀವವಿಮೆ ಕಂಪೆನಿಯ ಪಾಲುದಾರರ ಮತ್ತು ವಿಮೆದಾರರ ವಾರ್ಷಿಕ ಸಭೆಯು ನಡೆದಾಗ ಬೋರ್ಡ್ ಆಫ್ ಡೈರೆಕ್ಟರುಗಳ ಅಧ್ಯಕ್ಷರಾದ ಶ್ರೀ ಸೊರಾಬ್ಜೀ ಎದಲ್ಜೀ ವಾರ್ಡನ್‌ರವರು "ಈ ಕಂಪೆನಿಗೆ ಅನುಭವವುಳ್ಳ ಮುಂದಾಳುತನವನ್ನೂ, ಸಹಕರಿಸಿ ಕೆಲಸ ಮಾಡುವ್ರದನ್ನೂ ತೋರಿಸಿಕೊಡಲು ಅನುಕೂಲವಿರುವುದರಿಂದ ಮುಂದೆ ಅಂದರೆ ನಾವು ಭಾವಿಸಿಕೊಳ್ಳಬಹುದಾದ ಕಾಲಕ್ಕಿಂತ ಕ್ಷಿಪ್ರದಲ್ಲಿಯೇ ಈ ಕಂಪೆನಿಯು ಪ್ರಪಂಚದ ಅತ್ಯಂತ ದೊಡ್ಡ ಜೀವವಿಮೆ ಕಂಪೆನಿಗಳಲ್ಲಿ ಒಂದೆಂಬ ಕೀರ್ತಿಯನ್ನು ಪಡೆಯಲು ಸಾಧ್ಯ" ಎಂದು ಹೇಳಿದರು. ಆ ಸಂದರ್ಭದಲ್ಲಿ ಬಹು ಮಂದಿ ಪಾಲುದಾರರೂ, ವಿಮೆದಾರರೂ ಸಭೆಗೆ ದಯಮಾಡಿಸಿದ್ದರಲ್ಲದೆ ಕಂಪೆನಿಯ ಮೇನೇಜರಾದ ಮಿ. ಎಚ್. ಎಟ್ಕಿನ್ ಜೋನ್ಸ್‌ರವರೂ ಹಾಜರಿದ್ದರು.

೧೯೨೭ನೇ ಸಾಲಿನ ಡೈರೆಕ್ಟರುಗಳ ವರದಿಯನ್ನು ಸಭಿಕರು ಅಂಗೀಕರಿಸಬೇಕೆಂದು ಕೇಳಿಕೊಳ್ಳುವ ಸಂದರ್ಭದಲ್ಲಿ ಚೇರ್‌ಮೇನ್‌ರವರು, ಕಂಪೆನಿಯು ಕೆಲವು ವರ್ಷಗಳಿಂದೀಚೆಗೆ ಮಾಡಿರುವ ವೃದ್ಧಿ ಕಾರ್ಯಗಳನ್ನು ವಿವರಿಸಿದರು. ೧೯೨೭ನೇ ಇಸವಿಯಲ್ಲಿ ೩೯೧ ಲಕ್ಷ ರೂಪಾಯಿ ಬೆಲೆಯುಳ್ಳ ೧೭,೩೭೧ ವಿಮೆಗಳಿದ್ದುದು ೧೯೨೭ನೇ ಇಸವಿಯಲ್ಲಿ ೪೭೮ ಲಕ್ಷ ರೂಪಾಯಿ ಬೆಲೆಯುಳ್ಳ ೨೧,೪೧೮ ವಿಮೆಗಳ ಹೆಚ್ಚಿರುವ್ರದೇ ಕಂಪೆನಿಯ ವ್ಯವಸ್ಥೆಯಲ್ಲೂ, ಕಾರ್ಯ ಕ್ರಮದಲ್ಲೂ ನಾರೋದ್ಧಾರವಾಗಿ ನಡೆದಿರುವ ಅಭಿವೃದ್ಧಿಯನ್ನು ತೋರಿಸುತ್ತದೆ. ಪ್ರತಿ ವರ್ಷವೂ ಬೇರೆಬೇರೆ ಪ್ರದೇಶಗಳಲ್ಲಿ ಹೊಸ ಹೊಸ ಶಾಖೆಗಳೂ ಸ್ಥಾಪಿಸಲ್ಪಡುತ್ತಿವೆಯಲ್ಲದೆ ಇನ್ನು ಮುಂದೆ ಯಾವ ಪ್ರಾಂತ್ಯ ಆದಾಯಕರವಾದ ವ್ಯಾಪಾರ ನಡೆಸಬಹುದೆಂಬುದನ್ನು ಕಂಡುಹಿಡಿದು ಕಂಪೆನಿಯ ಕಾರ್ಯವನ್ನು ಸದಾ ವೃದ್ಧಿಮಾಡುವ್ರದಕ್ಕಾಗಿ ಕಂಪೆನಿಯ ಅಧಿಕಾರಿಗಳು ಹೆಚ್ಚು ಹುಡುಕಾಗಿ ಸಂಚರಿಸಲು ಏರ್ಪಡಿಸಿದೆ.

ಆದಾಯದ ಭಾಗ.

ಆದಾಯದ ವಿಚಾರದಲ್ಲಿ ಮಾತಾಡುತ್ತಾ ಚೇರ್‌ಮೇನ್‌ರವರು ಹೇಳಿದ್ದೇನಂದರೆ:—ಎಲ್ಲಾ ಭಾಗಗಳಿಂದ ೧೬೨.೫೪ ಲಕ್ಷ ರೂಪಾಯಿಗಳಿಗೆ ಏರಿತು. ಇದರಲ್ಲಿ ವಿಮೆಯ ಆದಾಯ ೧೨೧.೫೪ ಲಕ್ಷ ರೂಪಾಯಿ ಸೇರಿದೆ. ಕಳೆದ ವರ್ಷದ ವಿಮೆ ಆದಾಯಕ್ಕಿಂತ ಈ ವರ್ಷ ೧೬.೨೪ ಲಕ್ಷ ರೂಪಾಯಿ ಜಾಸ್ತಿಯಾಗಿದೆ. ಎಲ್ಲಾ ಭಾಗಗಳಲ್ಲೂ ಬಂದ ಬಡ್ಡಿ ೪೦.೨೪ ಲಕ್ಷ ರೂಪಾಯಿಗಳು. ವಿಮೆಮಾಡಿದವರಲ್ಲಿ ಮ... ...ವರೆಗೆ ೨೯.೫೪ ಲಕ್ಷ ರೂಪಾಯಿಗಳನ್ನು ಕೊ...ಯಿತು. ೧೯೨೬ನೇ ಸಾಲಿಗಿಂತ ಈ ವರ್ಷ ಈ ಬಾಬಿನಲ್ಲಿ ೨೪ ಲಕ್ಷ ರೂಪಾಯಿಗಳು ಕಡಿಮೆ. ವಾಸ್ತವ್ಯ... ...ಸಿದ ವಿಮೆಗಳ ಮೊಬಲಗು ಮೊದಲಿನ ಸ್ಥಿತಿಗೆ ಒಂದು... ...ಳೆದ ವರ್ಷ ಮಾತ್ರ ಸೋಡಿ ಬಿಟ್ಟದ್ದರಿಂದ ೯ ಲಕ್ಷ ... ...ಳು ಜಾಸ್ತಿಯಾಗಿತ್ತು. ವೆಚ್ಚದ ವಿಚಾರದಲ್ಲಿ, ವಿಮೆ ... ...ಯಕ್ಕಿಂತ ಶೇಕಡ ೨೨.೭ ರೂಪಾಯಿ ಕಡಿಮೆಯಾಗಿರು... ಸಂತೋಷಕರವಾದ ಸುದ್ದಿ. ಆದರೆ ಕಳೆದ ವರ್ಷಕ್ಕೆ ಶೇಕಡ ೧ ರೂಪಾಯಿ ಕಡಿಮೆ. ಹಿಂದೂಸ್ಥಾನದಲ್ಲಿ ... ...ಕ್ಕೇ ಕಾರ್ಯನಿರ್ವಾಹಕ ಶಕ್ತಿಯಿಂದ ಕೂಡಿರುವ ಜೀವ... ...ಮೆ ಕಂಪೆನಿಗಳಲೆಲ್ಲಾ ಓರಿಯಂಟಲ್ ಕಂಪೆನಿಯು ಮಿತವ್ಯಯದಿಂದ ಕಲಸಮಾಡುತ್ತಿದೆಯೆಂದು ಹೆಸರು ಬರು... ...ಮಟ್ಟಿಗೆ ಈ ಕಂಪೆನಿಯ ವೆಚ್ಚವನ್ನು ತಗ್ಗಿಸಿದೆ. ಈ ವರ್ಷ... ...ಕಾರ್ಯಾಚರಣೆಯಲ್ಲಿ ಒಟ್ಟು ೬೭.೫೪ ಲಕ್ಷ ರೂಪಾಯಿ... ...ಬಂದವು. ಕಳೆದ ವರ್ಷ ೪೨ ಲಕ್ಷ ರೂಪಾಯಿಗಳು ... ...ರಿಜರ್ವ್ ಫಂಡಿನಲ್ಲಿ ಹಾಕಿದ್ದ ಮುಖ್ಯ. ೧೫ ಲಕ್ಷ ರೂಪಾಯಿಗಳನ್ನು ಜೀವವಿಮೆ ಫಂಡಿಗೆ ಈ ವರ್ಷ ಸೇರಿಸಲಾಯಿತು. ಇದರಿಂದ ವಿಮೆದಾರರಿಗೂ, ಪಾಲುಗಾರರಿಗೂ ಸಮವಾಗಿ ಲಾಭ ಹಂಚಲು ಸಾಧ್ಯವಾಯಿತು. ತ್ರೈವಾರ್ಷಿಕ ಲೆಕ್ಕವು ಕಳೆದ ಸಾಲಿನಲ್ಲಿ ನಡೆಯಿತು. ಅದಕ್ಕಿಂತ ಹಿಂದಿನ ತ್ರೈವಾರ್ಷಿಕ ಲೆಕ್ಕಕ್ಕಿಂತ ಈ ತ್ರೈವಾರ್ಷಿಕ ಲೆಕ್ಕವು ಎಲ್ಲಾ ಭಾಗದಲ್ಲೂ ತೃಪ್ತಿಕರವಾಗಿತ್ತು. ಈಗ ಲೆಕ್ಕಾಚಾರ ನಡೆಯುತ್ತಿರುವುದು ... ...ಷ್ಟರಲ್ಲೇ ಪೂರೈಸಿ ಕೂಡಲೇ ವರದಿಯನ್ನು ಸಿದ್ಧಪಡಿಸಲು ಸಾಧ್ಯವೆಂದು ಚೇರ್‌ಮ್ಯಾನರು ಅಭಿಪ್ರಾಯಪಟ್ಟರು.

ತಗ್ಗಿಸಿದ ರೇಟುಗಳು.

ಕಂಪೆನಿಯ ಸಾಧಾರಣವಾದ ಒಡ್ಡಿಯಿಲ್ಲದ ಲೆಕ್ಕದಲ್ಲಿ ವಿಮೆಗಳ ದರವನ್ನು ತಗ್ಗಿಸಬಹುದೆಂದು ಬೋರ್ಡ್ ಆಫ್ ಡೈರೆಕ್ಟರು ಅನುಮತಿ ಕೊಟ್ಟ ವಿಚಾರವನ್ನು ಚೇರ್‌ಮ್ಯಾನರು ತಿಳಿಸಿದರು. ಈ ದರಗಳು ಅನೇಕರಿಗೆ ಅನುಕೂಲವಾದುವೆಂದೂ, ಹಿಂದೂಸ್ಥಾನದ ಬೇರೆ ಯಾವ ಜೀವವಿಮೆ ಕಂಪೆನಿಯಲ್ಲೂ ಇಷ್ಟು ಕಡಿಮೆ ದರದ ವಿಮೆಗಳಿಲ್ಲವೆಂದೂ ಹೇಳಿದರು. ಕಂಪೆನಿಗೆ ಆದಾಯ ತರುವ ಮತ್ತು ಆದಾಯ ತಂದಿರುವ ವಿಮೆಗಳ ಲಾಭದ ಪರಸ್ಪರ ಹೋಲಿಕೆಯನ್ನು ನೋಡಿದರೆ ಹಿಂದೂಸ್ಥಾನದ ಇನ್ನಾವ ಜೀವವಿಮೆ ಕಂಪೆನಿಯೂ ಕೊಡದಿರುವದಷ್ಟು ಲಾಭವನ್ನು ಓರಿಯಂಟಲ್ ಕಂಪೆನಿಯು ಎಲ್ಲಾ ತರದ ಜೀವವಿಮೆಯಲ್ಲೂ ಕೊಡುತ್ತದೆ.

ಇಂಡಿಯಾ ದೇಶದವರ ಶಿಕ್ಷಣ.

ಕಂಪೆನಿಯ ಹೆಡ್ ಆಫೀಸ್ ಮತ್ತು ಇತರ ಶಾಖೆಗಳಲ್ಲಿ ಕೆಲಸ ಮಾಡುವ್ರದಕ್ಕೆ ಹಿಂದೂಸ್ಥಾನದವರನ್ನೇ ತರಬೇತು ಮಾಡಲು ಕಂಪೆನಿಯು ಪ್ರಯತ್ನಿಸಿದೆ. ಮೆ. ಎಲ್. ಎಸ್. ವೈದ್ಯನಾಥನ್ ಎಂ. ಎ., ಎಫ್. ಐ. ಎ. ಯವರನ್ನು ಅಸಿಸ್ಟಂಟ್ ಆಕ್ಚ್ಯುಯೆರಿಯನ್ನಾಗಿ ನೇಮಿಸಲಾಗಿತ್ತು. ಈಗ ಅವರ ಹೆಸರು ಹೆಡ್ ಆಫೀಸ್ ಅಧಿಕಾರಿಗಳ ಪಟ್ಟಿಯಲ್ಲಿ ಪ್ರಥಮ ಸಾರಿ ಸೇರಿದೆ. ಹೆಡ್ ಆಫೀಸಿನಲ್ಲಿ, ಶಾಖೆಗಳಲ್ಲೂ ೧೧ ಯುವಕರು ಶಿಕ್ಷಣ ಪಡೆಯುತ್ತಿದ್ದರು. ಈ ಪೈಕಿ ೫ ಜನರು ತಮ್ಮ ಮೂರು ವರ್ಷದ ಶಿಕ್ಷಣದ ಅವಧಿಯನ್ನು ಮುಗಿಸಲು ಅವರಿಗೆಲ್ಲಾ ಕಂಪೆನಿಯ ಶಾಖೆಗಳಲ್ಲಿ ಸೀನಿಯರ್ ಅಧಿಕಾರ ಸ್ಥಾನಗಳನ್ನು ಕೊಡಲಾಗಿದೆ.

ಇದೇ ಚೇರ್ಮೆನ್ನರ ವರದಿಯ ಸಾರಾಂಶ. ಡೈರೆಕ್ಟರುಗಳಲ್ಲೊಬ್ಬರಾದ ಸರ್ ಪುರುಷೋತ್ತಮದಾಸ ಥಾಕರ್ದಾಸ್‌ರವರು ಅನುಮೋದಿಸಿದ ಮೇಲೆ ವರದಿಯು ಅಂಗೀಕೃತವಾಯಿತು.

ಸಭೆ.

ಪಾವತಿ ಮಾಡಿರುವ ಪಾಲಿನಗಿನ ಶೇರುಗಳಿಗೆ ಶೇರು ೧ಕ್ಕೆ (ಆದಾಯದ ತೆರಿಗೆ ಇಲ್ಲದೆ) ೧೯೨೭ನೇ ಸಾಲಿಗೆ ೩೦ ರೂಪಾಯಿ ನಫೆಯನ್ನು ಪ್ರತಿ ಶೇರ್‌ಹೋಲ್ಡರಿಗೂ ಕೊಡಬಹುದೆಂದು ಒಂದು ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು. ಡಿಸೆಂಬರು ತಾ. ೩೧ ನೇ ದಿನ ಕಂಪೆನಿಯ ಕೆಲಸದಲ್ಲಿದ್ದು ಅದಕ್ಕಿಂತ ಹಿಂದೆ ಒಂದು ವರ್ಷದಿಂದಲೂ ಕೆಲಸ ಮಾಡಿರುವ ಕಂಪೆನಿಯ ಅಧಿಕಾರಿಗಳಿಗೆ ಪ್ರತಿಯೊಬ್ಬರಿಗೂ ಒಂದೊಂದು ತಿಂಗಳ ಸಂಬಳದಷ್ಟು ಮೊಬಲಗನ್ನು ಬೋನಸ್ ಆಗಿ ಕೊಡಬಹುದೆಂದು ತೀರ್ಮಾನವಾಯಿತು.

ಸರ್ ಜೋಸೆಫ್ ಕೆ ಸತೋಶ್ರವ ಮುರಾರ್ಜಿ ಮತ್ತು ಮೆ ಸೊರಾಬ್ಜಿ ಎದಲ್ಜಿ ವಾರ್ಡನ್ ಇವರನ್ನು ಪುನಃ ಡೈರೆಕ್ಟರುಗಳನ್ನಾಗಿ ಚುನಾಯಿಸಲಾಯಿತು. ಮೆ. ಜಿ ಸಿ ಹ್ಯಾಸಿಂಗ್‌ರವರನ್ನು ಶಾಶ್ವತ ಡೈರೆಕ್ಟರನ್ನಾಗಿ ಮಾಡುವ ವಿಚಾರವು ಅನುಮೋದಿಸಲ್ಪಟ್ಟಿತು.

ಮೆಸರ್ಸ್ ಎಸ್. ಬಿ. ಬಿಳ್ಳಿಮೋರಿಯ ಅಂಡ್ ಕಂಪೆನಿಯವರು ಶೇರ್ ಹೋಲ್ಡರಿಗೂ, ಮೆಸರ್ಸ್ ಚಾಂದಭಾಯಿ ಮತ್ತು ಜಾಸೋಭಾಯಿಯವರು ಪಾಲಿಸಿ ಹೋಲ್ಡರಿಗೂ ೧೯೨೮ನೇ ಸಾಲಿನ ಆಡಿಟರುಗಳಾಗಿರಬೇಕೆಂದು ತೀರ್ಮಾನವಾಯಿತು.

ಚೇರ್‌ಮ್ಯಾನರಿಗೂ, ಬೋರ್ಡ್ ಆಫ್ ಡೈರೆಕ್ಟರುಗಳಿಗೂ, ಕಂಪೆನಿಯ ಅಧಿಕಾರಿಗಳಿಗೂ ವಂದನೆಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಪತ್ರವ್ಯವಹಾರ

[ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ರು ಸಿದ್ಧಾರೂಢ ಸ್ವಾಮಿ ಪ್ರಸನ್ನ! ಕೊಡಗು.
ಧರ ಮುರಾದೀಶಂ ಸಿದ್ಧಾರೂಢ ಯತೀಶ್ವರಂ ||
ಸ್ವರೂಪೇಣ ಶ್ರೀಸದ್ಗುರು ಮೂರ್ತಯೇ ||
ನಿತ್ಯ ನಿರ್ಗುಣ ನಿರಾಲಂಬ ನಿರ್ವಿಕಾರ ನಿರಂಜ
ನಿರ್ದ್ವಂದ್ವ ನಿಷ್ಕಲ ನಿಗಮಾತೀತ ಶ್ರೀಪಾದ ಸಂದಾ
ರ ಶ್ರೀ ಗುರು ಸಿದ್ಧಾರೂಢ ಸ್ವಾಮಿ ಗಳವರ ಶಿಷ್ಯ
ಸ್ವಾಮಿಗಳವರ ಮೂಲಕ
ಭಾಗಮಂಡಲನಾಥ. ತಾಲೂಕು ಚೇರಂ
ಲ್ಲಿ ಸಿದ್ಧಾಶ್ರಮದಲ್ಲಿರುವ ಸಿದ್ಧಾರೂಢ ಸ್ವಾಮಿಯ
ಮಾರ್ಗದರ್ಶ ಮಾಧವಾನಂದ ಸ್ವಾಮಿ ಯವರು ಮತ್ತು
ಮಂಡಲಿಯವರು ಸಹಿತ ನಮ್ಮ ಪ್ರಾರಂಭ ಮಾಡು

ಸನ್ 1928ನೇ ಇಸವಿ ಮೇ ತಾ 29ನೇ ಮಂಗಳವಾರ
ಪ್ರಾರಂಭವಾಗಿ ನಿತ್ಯ ಅನ್ನಸಂತರ್ಪಣೆ, ಬ್ರಹ್ಮವಿದ್ಯಾ
ಶೋರಾತ್ರಿ ಭಜನೆ ಅಥವ ಕೀರ್ತನೆ, ಈ ಪ್ರಕಾರ ನಡ
ರುವ ಜೂನ್ ತಿಂಗಳು 4ನೇ ಸೋಮವಾರ ಸಮಾಪ್ತ
ಆಗುವದು. ಕಾರಣ ತಾವು ಬಂದು ಈ ಕಾರ್ಯ ನೆರ
ಆಶೀರ್ವಾದ ತೆಗೆದುಕೊಂಡು ಹೋಗಬೇಕಾಗಿ ಕೋ

ಇತಿ ಆಶೀರ್ವಾದಗಳು.

ಓಂ ನಮಃ ಶಿವಾಯ
ಶಾಂತಿಃ ಶಾಂತಿಃ ಶಾಂತಿಃ

ಡಬಲ್ ಬ್ಯಾರಲ್ ಕೋವಿಗಳು ರೂ. 75 ರಿಂದ ರೂ. 450/
ಸಿಂಗಲ್ ಬ್ಯಾರಲ್ ಕೋವಿಗಳು ರೂ 35 ರಿಂದ ರೂ 250/
ಮಜಲ್ ಲೋಡ್ ಕೋವಿಗಳು ರೂ. 35 ರಿಂದ 65/
ರಿವಾಲ್ವರ್‌ಗಳು. ರೂ. 40/ರಿಂದ ರೂ 125/ರ ವರೆಗೆ.
ಡಬಲ್ ಮತ್ತು ಸಿಂಗಲ್ ತೋಟಾ ಮತ್ತು ಕೇಪು ಕೋ
ಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬ
ಡವರಿಗೂ) ಅನುಕೂಲವಾಗುವಂತೆ ನಾನಾ ವಿಧದ ಕ್ರಯದಲ್ಲಿ
ಕೊಡಲಾಗುವದು.
60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ
ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇ
ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂ
ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನುಜಂ ಚೆಟ್ಟಿ
ಅಂಡ್ ಕಂಪೆನಿ.

ದ ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ. ಕಂಪೆನಿ.

2|—22 12. ಬ್ರಾಡ್ವೇ. ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

Arms, Ammunition and Shooting Requisites!!!



1928 Illustrated Catalogue Just Issued Free on Application

D B B L Rifles	Rs	120	to	Rs.	2750
S B. B L	"	35	to	"	950.
D B B. L. Guns	"	50	to	"	1350
S B B L.	"	35	to	"	275
D B M L	"	45	to		135
S B M L	"	30	to	"	80
B. L Revolvers	"	35	to	"	350.
Automatic Pistols	"	30	to	"	150

Brilliant Search Light Lamp For Shooting, Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24—7

ಹೆಡ್ ಆಫೀಸು—ಬೊಂಬಾಯಿ.

ಸ್ಥಾಪನೆ—1874.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅದ್ವಿತೀಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	—	13545	—	ರೂ. 2,9,,42 000.
1926	—	17371	—	ರೂ. 3,91,39,000
1927	—	21418	—	ರೂ. 4,68,04,075.

— ಪ್ರೀಮಿಯಂ ಉತ್ಪತ್ತಿ —

1925	—	ರೂ 92,66,000.
1926	—	ರೂ. 1,05,33,000
1927	—	ರೂ. 1,21,53,000

ಇದುವರೆಗೆ ಪಾಲಿಸಿದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

52—5

ಎಲ್. ಆರ್. ಕೃಷ್ಣಸ್ವಾಮಿ ಅಯ್ಯರ್,
ಬ್ರಾಂಚ್ ಸೆಕ್ರಟರಿ.

ಎಂ. ಎಸ್. ಶಿವಪ್ಪ ಬ್ರದರ್ಸ್.
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್ ರೀಡ್ಸ್ ಹಾರ್ಮೋನಿ ಯಂಗಳ.

'ನಿಲ್ ಒಹಾರ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
'ಶಕುಂತಲಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
'ಮೋಸ್ಲೇಂ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
'ಮಹಾರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಟು ಬಂಗಾರದ ನಿಬ್ಬು ಹಾಕಿದ ಫೌನ್‌ಟನ್ ಪೆನ್ನುಗಳು.

ಬ್ಲಾಕ್ ಬರ್ಡ್ ಫೌನ್‌ಟನ್ ಪೆನ್ 1ಕ್ಕೆ 3—8—0 ಮತ್ತು 3—12—0	
ಪರ್ಲ್ಲ್ ವಂಡರ್ ಫೌನ್‌ಟನ್ ಪೆನ್ 1ಕ್ಕೆ 3—0—0 ಮತ್ತು 3—8—0	
ಕಾಂಪ್ಯಾಕ್ಟ್ ಸೆಫ್ಟಿ ಫೌನ್‌ಟನ್ ಪೆನ್ 1ಕ್ಕೆ	1—8—0
ವಾಟರ್ ಮನ್ ಫೌನ್‌ಟನ್ ಪೆನ್ 1ಕ್ಕೆ 8—0—0 ಮತ್ತು 8—8—0	
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್‌ಟನ್ ಪೆನ್ 1ಕ್ಕೆ 12—0—0 ಮತ್ತು 15—0—0	

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ವೆಸ್ಟ್‌ಕ್ಲಾಕ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9—5—0
ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ	6—12—0
ಅನಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕ್ಯಾಟಲಾಗ್ ಬಗ್ಗೆ ಉಚಿತ ಸ್ಟ್ಯಾಂಪು ರವಾನಿಸಿ.

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

52—2

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಇರುವಂಥ ಠೇವಣಾತಿ	—	1,02,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅದಕ್ಕೆ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ಸಿಕ್ಕುತ್ತದೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.
ಟ್ರೆಜರರ್, ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯಸ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ತೀತಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಆಲೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಬಿಮ್ಮಡ ಪೂವಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐಚಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಸಿ. ಜೆ. ಮುದ್ದಯ್ಯನವರು,
ಹುದಿಕೇರಿ & ತಿತಿಮತಿ—ಮೆ. ಜೆ. ಮಾದಯ್ಯನವರು.
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮ್ಯಾನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಒವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಒಡ್ಡರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮ್ಯಾನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:-"SHOOTER" Bombay.
'Please write for our Catalogue 1928-1929.

ಕಟುರಕ್ಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, [illegible] ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ [illegible] ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನ ಸವ.—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ [illegible] ಹೋಗುವದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ [illegible] ಮೂತ್ರ ಹೋಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, [illegible] ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ [illegible] ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರ[illegible] ಬುಚ್ಚುವ ರೋಗ ಇವುಗಳಿಗೆ ಪರಮ ಔಷಧಿ. ಚಿಕ್ಕ ಬಾಟ್ಲು 1, 3 ಕ್ಕೆ ರೂ [illegible] 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ [illegible]ರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣು [illegible]ಕಿವಿಯಿಂದ ಕೀವು ಸೋರುವುದು ಕೆಪ್ಪುತನ ಕಣ್ಣು ನೋವು ಅಪಸ್ಮಾರ ನಿದ್ದೆ [illegible]ದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ, ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ [illegible]ನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳ[illegible] ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5[illegible]

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪನಿ.
52—32 ೧. ಮಂಗಳೂರು

Kapurchand & co,

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc,. Chickpet, BANGALORE CITY.

ಅಪೂರ್ವ ಸಮಯ! ಅಲಭ್ಯ ಲಾಭ!

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ. ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—30

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1927ನೇ ಇಸವಿ ಫೆಬ್ರವರಿ 28ಕ್ಕೆ ಅಖೈರಾದ 5 ವರ್ಷಗಳ ಕೆಲಸದ

ಬಿಲಿಕಟ್ಟಿನಲ್ಲಿ
ರೂ. 37,66,689.
ಉಳಿವರಿ ಕಂಡುಬಂದಿದೆ

ಒಟ್ಟು ಜೀವವಿಮೆಯ 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಸಂತೆಯೂ	ಮತ್ತು	ವ್ಯಾಯ ನಿರವಿನ ವಿಮೆಯ 1000 ರೂಪಾಯಿಗಳಿಗೆ 12 ರೂಪಾಯಿಸಂತೆಯೂ

ರಿವರ್ಶನರಿ ಬೋನಸ್ ಹಂಚ ಬಹುದೆಂತ ತೀರ್ಮಾನವಾಗಿದೆ.

ವಿಳಾಸ. ಎಂಪಯರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
24—19
ಬ್ರಾಂಚ್ ಆಫೀಸು. ಕಮರ್ಶಿಯಲ್ ಬೀದಿ ಬೆಂಗಳೂರು.

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪೂವರ್‌ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಎಲ್ಲವೂ ಈ ದೇಶದವರಿಗೆ ಕೂಡಿರಬೇಕೆಂಬ ಠರಾವು ಜನವರಿ ತಾ 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

ಈ ಮೊದಲು ನಾವು ಪ್ರಕಟಿಸಿದ ಪ್ರಕಾರ ನಮ್ಮ ಸಂಘದ ಕೊಡಗು ಪ್ರೊವಿನ್ಸಿಯಲ್ ಬೋರ್ಡಿನ ಡ್ರಾಯಿಂಗ್ ತಾ 31—3—1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ತೆಗೆಯಲಾಗಿ ಮಡಿಕೇರಿನಾಡು ಕಡಗದಾಳು ಗ್ರಾಮದ ಮೆ. ಕೊರವಂಡ ಮುಂಡಣ್ಣನವರ ಕುಟುಂಬ ಪೂಣಚ್ಚನವರಿಗೆ ಚೀಟಿ ಎತ್ತಿ ಬರಲು ಈ ವರ್ಷದ ಪ್ರಥಮ ಡ್ರಾಯಿಂಗ್‌ನ ಐದು ನೂರು ರೂಪಾಯಿಗಳ (500—0—0) ಸಾಲವನ್ನು ಹೊಂದಲು ತೀರ್ಮಾನವಾಯಿತು. ಅದನ್ನು ಅವರಿಗೆ ಕೊಡಲಾಗಿದೆ. ಇದು ಮೇಲಿನ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲಿಸಲಿಲ್ಲ. ಮುಂದಿನ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡುವದಕ್ಕೆ ಆದಷ್ಟು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹ ಪಡಿಸಬೇಕಾಗಿ ಈ ಮೂಲಕ ಕೋರುತ್ತೇನೆ.

ಅನಾಥರಾದಂಥ ಅಂಗಹೀನರುಗಳಿಗೆ ಈ ತಿಂಗಳು 20 ರಿಂದ ಈ ಸಂಘದ ಖರ್ಚಿನಲ್ಲಿ ಅನ್ನಾಹಾರಾದಿಗಳು ಕೊಡಲು ಶುರುಮಾಡಲಾಗಿದೆ.

ಬಿ. ಎ. ಕುಪ್ಪುಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
ಮಡಿಕೇರಿ.

52—14

Printed & published by P. I. Belliappa. at 'Kodagu' Press, Mer for "Kodagu" Ltd.

If not delivered please return to "KODAGU" OFFICE MERCARA.

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

3 ೭] ಮಡಿಕೇರಿ, ೧೯೨೭ನೇ ... ಶುಕ್ರವಾರ [ಸಂಚಿಕೆ ೫೦

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

54—17 SPENCER & CO. LTD.; Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423.
TRIPLICANE, MADRAS.

Catalogue Free
to Boanfide Enquirers



Manufacture of HIGH CLASS GEMSET JEWELS. a speciality.

The special features of my productions are —
1 Best QUALITY.
2. Latest novel designs.
3 Promptest execution
4. Neat & artistic finish.
5. Most moderate prices.

GOLD or SILVERWARE of all descriptions neatly executed

52—37



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

24—13 *Bombay, 8.*

ರಣೋರ

ಎಗ್ಜಿಮಾ ಕ್ಯೂರ್

ಮಲೇರಿಯಾ ಇನ್‌ಫ್ಲುಯೆಂಝಾ ಸಹಕಜ್ವರ ಆಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಪಡಿಸುವದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧-೨-೦. ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್

12—8 ದುಬಾಷ ಲೇನ್,

ಗಿರಗಾಂವ, ಮುಂಬಾಯಿ.

ಕೊಡಗು.

ಸನ್ ೧೯೨೮ನೇ ಇಸವಿ ಮೇ

ತಾ. ೨೫ನೇ ಶುಕ್ರವಾರ

ಬಾರ್ದೋಲಿ ಸತ್ಯಾಗ್ರಹ.

ಬೊಂಬಾಯಿ ಅಧಿಪತ್ಯದ ಗುಜರಾಥ ಪ್ರಾಂತ್ಯದ ಬಾರ್ದೋಲಿ ಎಂಬ ಹೆಸರಿನ ತಾಲೋಕಿನಲ್ಲಿ ಈಗ ಸುಮಾರು ಎರಡು ತಿಂಗಳುಗಳಿಂದ ಪ್ರಜಾಜನರು ಸತ್ಯಾಗ್ರಹವನ್ನು ಕೈಕೊಂಡಿರುತ್ತಾರೆ. ಇವರ ಸತ್ಯಾಗ್ರಹವು ನಿಶ್ಶಸ್ತ್ರ ಜನರ ಅಪೂರ್ವ ಹೋರಾಟದ ರೂಪವನ್ನು ತಾಳಿದೆ. ಈ ಒಟ್ಟು ತಾಲೋಕಿನವರೆಲ್ಲಾ ಸರಕಾರಿ ಕಂದಾಯವನ್ನು ಕೊಡುವದಿಲ್ಲವೆಂತ ತೀರ್ಮಾನಿಸಿಕೊಂಡು ಅದರಿಂದ ಒದಗುವ ಕಷ್ಟವನ್ನೆಲ್ಲಾ ಶಾಂತ ರೀತಿಯಿಂದ ಅನುಭವಿಸುತ್ತಲಿದ್ದಾರೆ.

ಇವರ ಈ ಕಠಿಣ ತರದ ಹೋರಾಟಕ್ಕೆ ಕಾರಣವೇನೆಂದರೆ—ಇವರ ತಾಲೋಕಿನ ಕಂದಾಯದ ಸೆಟ್ಲ್‌ಮೆಂಟು ಆಯಿತು. ಸೆಟ್ಲ್‌ಮೆಂಟಿನಲ್ಲಿ ಈ ಮೊದಲು ಇದ್ದ ಕಂದಾಯಕ್ಕಿಂತ ಶೇಕಡ ಇಪ್ಪತ್ತೆಷ್ಟು ಅಂದರೆ ಈಗ ಇರುವದರ ಒಂದೂವರೆಯಷ್ಟಕ್ಕೆ ಏರಿಸಲು ಸರಕಾರದವರು ತೀರ್ಮಾನಿಸಿದರು. ಇದಕ್ಕೆ ತಾಲೋಕಿನವರು ವಿರೋಧಿಸಿದರು. ಹಾಗೆ ಹೆಚ್ಚಿಸಲಿಕ್ಕೆ ಸರಕಾರದವರು ಕೊಟ್ಟ ಕಾರಣಗಳು ನ್ಯಾಯವಾದದ್ದಲ್ಲ, ನಿಜವಾದದ್ದಲ್ಲವೆಂತ ವಾದಿಸಿದರು. ನಿಷ್ಪಕ್ಷಪಾತಿ ಕಮಿಟಿಯೊಂದನ್ನು ನೇಮಿಸಿ ಅದರ ಮೂಲಕ ವಿಚಾರಿಸಿದರೆ ಅಂಥಾ ಕಮಿಟಿಯ ತೀರ್ಮಾನಕ್ಕೆ ಒಪ್ಪುತ್ತೇವೆ ಎಂತ ತಿಳಿಸಿದರು. ಸರಕಾರದ ಸಂಬಂಧಪಟ್ಟ ಅಧಿಕಾರಿಗಳು ಕಿವಿಕೊಡಲಿಲ್ಲ. ಹೆಚ್ಚಿಸಿದ ದರವನ್ನು ಇಳಿಸಲು ಒಪ್ಪಲೇ ಇಲ್ಲ. ಮಹಾತ್ಮಗಾಂಧಿಯವರ ಪ್ರಮುಖ ಹಿಂಬಾಲಕರಲ್ಲಿ ಒಬ್ಬರಾದ ವಲ್ಲಭಭಾಯಿ ಪಟೇಲ್ ಎಂಬವರು ಅಹಮದಾಬಾದಿನ ಮುನ್ಸಿಪಲ್ ಪ್ರೆಸಿಡೆಂಟ್ ಪದವಿಯಲ್ಲಿ ಇದ್ದವರು ಅದನ್ನು ಬಿಟ್ಟುಕೊಟ್ಟು ಈ ಬಡರೈತರ ಹೋರಾಟದ ಮುಂದಾಳುಗಳಾದರು. ಇವರು ಪ್ರತಿ ಗ್ರಾಮದಲ್ಲಿಯೂ ಜನರನ್ನು ಕೂಡಿಸಿ ಕಂದಾಯ ಕೊಡದೆ ಇರುವ ಸತ್ಯಾಗ್ರಹದ ಕಷ್ಟಗಳನ್ನೆಲ್ಲಾ ವಿವರಿಸಿ ಪೂರ್ತಿ ತಾಲೋಕಿನವರ ಅಭಿಪ್ರಾಯ ತೆಗೆದುಕೊಂಡು ತಾಲೋಕಿನವರು ಹೆಚ್ಚಿನ ದರ ಮಾತ್ರವಲ್ಲ, ಹಳೇ ದರದ ಕಂದಾಯ ಸಹ ಕೊಡುವದಿಲ್ಲವೆಂತ ತೀರ್ಮಾನಿಸಿದರು.

ಬಡವರ ನಿಜವಾದ ಕಷ್ಟದಿಂದ ಪ್ರಾರಂಭವಾದ ಈ ಹೋರಾಟವನ್ನು ಸರಕಾರಿ ಅಧಿಕಾರಿಯೊಬ್ಬರು ಹಲ ಕೆಲವು ಚಳವಳಿಗಾರರ ಕೆಲಸವೆಂತ ಹೇಳಿದರು. ಚೌರಿಚೌರಾ ತಾಲೋಕಿನಲ್ಲಿ ಪ್ರವಾಹದ ಕಷ್ಟ ಪರಿಹಾರಕ್ಕಾಗಿ ಸರಕಾರದವರು ತುಂಬಾ ಟಕಾವಿ ಸಾಲ ಕೊಟ್ಟಿರುತ್ತಾರೆ. ಈ ಬಾರ್ದೋಲಿ ಹೋರಾಟದಲ್ಲಿ ಸರಕಾರದವರು ಬಗ್ಗಿಬಿಟ್ಟರೆ ಚೌರಿಚೌರಾದ ಸಾಲ ಮರುಪಾವತಿಗೂ ಇದೇ ತರದ ಅಡಚಣೆ ಹೂಡಿಯಾರೆಂತ ಅದೇ ಅಧಿಕಾರಿಗಳು ಹೇಳಿದರು. ಇದಕ್ಕೆ ಉತ್ತರವಾಗಿ ವಲ್ಲಭಭಾಯಿ ಪಟೇಲರು ಇದೆಲ್ಲಾ ನಿಜವಲ್ಲ. ಬಾರ್ದೋಲಿಯಲ್ಲಿ ರೈತರ ಹೋರಾಟವು ಜಯಪ್ರದವಾದರೆ ಚೌರಿಚೌರಾದಲ್ಲಿ ಟಕಾವಿ ಸಾಲವನ್ನು ಸ್ವಯಂಸೇವಕರ ಮೂಲಕ ವಸೂಲ್ ಮಾಡಿ ಕೊಡುತ್ತೇವೆ ಎಂತ ಹೇಳಿದರು.

ಈ ಕಂದಾಯ ಕೊಡದಿರುವ ಹೋರಾಟದಲ್ಲಿ ಜಾತಿಮತ ಭೇದಗಳೆಲ್ಲಾ ಮಾಯವಾಗಿದೆ. ಬಡವ, ದೊಡ್ಡವ ಎಂಬ ಭೇದವೇ ಇಲ್ಲ. ಆ ಪ್ರಾಂತ್ಯದಲ್ಲಿ ಪಾರ್ಶಿಯವರು ಸಾರಾಯಿ ಅಂಗಡಿಗಳ ಕಂಟ್ರಾಕ್ಟರುಗಳಾಗಿದ್ದಾರೆ. ಅವರು ಸಹ ಜಮೀನ್‌ದಾರರಾಗಿದ್ದಾರೆ. ಪಾರ್ಶಿ ಜನರು ಸಾಧಾರಣವಾಗಿ ಸರಕಾರಕ್ಕೆ ವಿರೋಧವಾದ ಚಳವಳದಲ್ಲಿ ಸೇರುವದು ಕಡಿಮೆ. ಆದರೆ ಬಾರ್ದೋಲಿಯಲ್ಲಿ ಒಗ್ಗಟ್ಟು ಅದ್ಭುತವಾಗಿದೆ. ಪಾರ್ಶಿಯವರೂ ಸಹ ತಮ್ಮ ಜಮೀನುಗಳನ್ನು ಕಳಕೊಳ್ಳಲಿಕ್ಕೆ ತಯಾರಾಗಿದ್ದಾರೆ. ಇವರು ಸಾರಾಯಿ ಅಂಗಡಿಯ ಕಂತು ಹಣವನ್ನು ಕಟ್ಟಿದರೆ ಅದನ್ನೇ ಅವರ ಭೂಮಿಯ ಕಂದಾಯವಾಗಿ ಸರಕಾರ ಅಧಿಕಾರಿಗಳು ಜಮೆ ತೆಗೆದುಕೊಳ್ಳುತ್ತಾರಂತೆ. ಆದರೂ ಇವರು ಧೈರ್ಯಗುಂದಲಿಲ್ಲ. ಜನರ ಒಗ್ಗಟ್ಟಿಗೆ ವಿರೋಧವಾಗಿ ಹೋಗಿರುವದಿಲ್ಲ.

ಹಿಂದೂ ಮುಸಲ್ಮಾನರೆಂಬ ಭೇದವಿಲ್ಲದೆ ಎಲ್ಲಾ ರೈತರೂ ಈ ಸತ್ಯಾಗ್ರಹದಲ್ಲಿ ಭಾಗಿಗಳಾಗಿದ್ದಾರೆ. ಈ ತಾಲೋಕಿನಲ್ಲಿ ಕೆಲಸದಲ್ಲಿದ್ದ ಹಿಂದೂ ಉದ್ಯೋಗಸ್ಥರು ಜನರ ಸಹಾನುಭೂತಿ ತೋರಿಸುತ್ತಾರೆಂಬ ಕಾರಣದಿಂದ ಬೇರೆ ಕಡೆಗಳಿಗೆ ವರ್ಗಾಯಿಸಲ್ಪಟ್ಟು ಮುಸಲ್ಮಾನ್ ಅಧಿಕಾರಿಗಳು ಈ ತಾಲೋಕಿನ ಅಧಿಕಾರ ಸ್ಥಾನಗಳಿಗೆ ಬಂದಿರುತ್ತಾರೆ. ಕಂದಾಯಕ್ಕಾಗಿ ಜಪ್ತಿಯಾಗಿ ಹರಾಜಾಗುವ ಮಾಲುಗಳನ್ನು ಕೊಂಡುಕೊಳ್ಳಲು ಜನರು ಯಾರೂ ನಿಲ್ಲದಿರುವದರಿಂದ ಮುಸಲ್ಮಾನ್ ಜಾತಿಗೆ ಸೇರಿದ ಪಠಾಣರನ್ನು ಸರಕಾರದವರು ಕರೆಸಿಕೊಂಡಿರುತ್ತಾರೆ. ಈ ತರದ ಭೇದೋಪಾಯಗಳನ್ನು ಮಾಡಿದರೂ ಹಿಂದೂ ಮುಸಲ್ಮಾನ್ ರೈತರೊಳಗೆ ಇರುವ ಒಗ್ಗಟ್ಟಿಗೆ ಹಾನಿ ಒಂದಿರುವದಿಲ್ಲ.

ಊರಿನಲ್ಲಿ ಮೇಯಲಿಕ್ಕೆ ಹೋದ ದನಗಳ ಹಿಂಡುಗಳನ್ನೆಲ್ಲಾ ಜಪ್ತಿಮಾಡಿ ಹರಾಜು ಮಾಡುತ್ತಿದ್ದಾರೆ. ಆ ದನಗಳ ಮಾಲೀಕರಿಂದ ಕಂದಾಯ ಬಾಕಿ ಇದೆಯೋ, ಇಲ್ಲವೋ ಎಂಬದನ್ನು ವಿಚಾರಮಾಡುವದಿಲ್ಲ. ಅಂಥಾ ದನಗಳ ಮಾಲೀಕರು ತಕರಾರು ಮಾಡಿದರೂ ಕೇಳುವದಿಲ್ಲ. ಆದರೂ ಅಂಥಾ ದನಗಳ ಮಾಲೀಕರಾದ ಬಡವರೂ ಸಹ ತಾಲೋಕಿನವರ ಕಷ್ಟನಿವಾರಣೆಗಾಗಿ ನಡೆಯುತ್ತಿರುವ ಹೋರಾಟಕ್ಕೆ ಅಡ್ಡಿ ಬರಬಾರದೆಂಬ ದೃಢ ನಿಶ್ಚಯದಿಂದ ಇಂಥಾ ಕಷ್ಟಕ್ಕಾಗಿ ಬೇರೆಯವರ ಮೇಲೆ ಸಿಟ್ಟೇಳದೆ ಶಾಂತತೆಯಿಂದ ಸಹಿಸಿಕೊಳ್ಳುತ್ತಿದ್ದಾರೆ.

ಬಡ ರೈತರ ನೂರಾರು ರೂಪಾಯಿ ಬಾಳುವ ದನಗಳನ್ನು ಕಂದಾಯಕ್ಕಾಗಿ ಜಪ್ತಿಮಾಡಿ ಅವುಗಳನ್ನು ಕೊಂಡುಕೊಳ್ಳುವರಿಲ್ಲದ್ದರಿಂದ ಕಟುಕರಿಗೆ ಇಪ್ಪತ್ತು, ಮೂವತ್ತು ರೂಪಾಯಿಗಳಿಗೆ ಸರಕಾರಿ ಅಧಿಕಾರಿಗಳು ಮಾರುತ್ತಲಿದ್ದಾರೆ. ಇಂಥಾ ಸಂದರ್ಭದಲ್ಲಿಯೂ ಸಿಟ್ಟುಗೊಳ್ಳದೆ ಸ್ವತಂತ್ರ ಹೋರಾಟವನ್ನು ಮುಂದರಿಸುತ್ತಲೇ ಇದ್ದಾರೆ.

ಜನರಿಗೆ ಬೋಧನೆ ಕೊಡುತ್ತಿರುವ ಮೂವರು ಸ್ವಯಂಸೇವಕರ ಮೇಲೆ ಈಗಾಗಲೇ ಮೊಕದ್ದಮ್ಮೆ ನಡಿಸಿ ಆರಾರು ತಿಂಗಳು ಸಜಕ್ಕೆ ಕಳುಹಿಸಿದರು. ಸರಕಾರಿ ಅಧಿಕಾರಿಗಳು ಸರ್ಕೀಟು ಬಂದರೆ ಅವರ ಸಾಮಾನುಗಳನ್ನು ಸಾಗಿಸಲು ಗಾಡಿ ಹೊಡೆಯುವವರು ಸಿಕ್ಕುವದಿಲ್ಲ. ಒಬ್ಬ ಅಧಿಕಾರಿಯು ಸಾಮಾನು ಸಾಗಿಸಲು ಬಂದ ಗಾಡಿಯವನಿಗೆ ಗಾಡಿ ಕೊಡಬೇಡವೆಂತ ಸ್ವಯಂ ಸೇವಕನೊಬ್ಬನು ಬೋಧಿಸಿದನು. ಗಾಡಿಯವನು ಗಾಡಿ ಕೊಡುವದಿಲ್ಲವೆಂತ ಹೇಳಿದನು. ಅಧಿಕಾರಿಗಳು ಬಿಡುವದಿಲ್ಲವೆಂತ ಹೇಳಿದರು. ಹಾಗಾದರೆ ಗಾಡಿ ಎತ್ತನ್ನು ಏನುಮಾಡಿದರೂ ಮಾಡಿ, ನಾನಂತೂ ಬರುವದಿಲ್ಲವೆಂತ ಹೇಳಿ ಹೊರಟು ಹೋದನು. ಈ ಗಾಡಿಯವನಿಗೆ ಬೋಧನೆಕೊಟ್ಟ ಸ್ವಯಂಸೇವಕನು ಆರು ತಿಂಗಳ ಸಜೆಗೆ ಗುರಿಯಾಗಿರುತ್ತಾನೆ. ಸರಕಾರಿ ಅಧಿಕಾರಿಯು ಅಧಿಕಾರ ಚಲಾವಣೆಗೆ ಅಡ್ಡಿಯಾದನೆಂಬದೇ ತಕ್ಸೀರು. ಇಂಥಾ ಸ್ವಯಂಸೇವಕನ ಮೇಲೆ ಮೇಜಿಸ್ಟ್ರೇಟರಲ್ಲಿ ಕೇಸ್ ನಡೆವಾಗ 'ನಾನು ಧರ್ಮದೃಷ್ಟಿಯಿಂದ ತಕ್ಸೀರು ಮಾಡಿರುವದಿಲ್ಲ. ಸರಕಾರದ ಕಾನೂನಿಗೆ ನನ್ನ ಕೆಲಸವು ವಿರೋಧವಾಯಿತೆಂತಾದರೆ ಕಾನೂನಿನಲ್ಲಿ ಈ ತಕ್ಸೀರಿಗೆ ಎಷ್ಟು ಕಠಿಣ ಶಿಕ್ಷೆ ಕೊಡಲು ಸಾಧ್ಯವಿದೆಯೋ ಅಷ್ಟನ್ನೂ ಕೊಡಿ' ಎಂತ ಸಂತೋಷದಿಂದ ಹೇಳಿದನು. ಈ ಸ್ವತಂತ್ರ ಹೋರಾಟದಲ್ಲಿ ಜೈಲಿಗೆ ಮೊದಲಾಗಿ ಹೋಗುವ ಪುಣ್ಯ ಲಭಿಸಿದ್ದಕ್ಕೆ ಧನ್ಯವಾದಗಳನ್ನು ಕೊಡುತ್ತೇನೆಂತಲೂ, ಸ್ಥಳ ಬದಲಾಯಿಸಲು ಸಾಧ್ಯವಿದ್ದರೆ ನಿನ್ನ ಸ್ಥಳವನ್ನು ನಾನು ತೆಗೆದುಕೊಳ್ಳುತ್ತಿದ್ದೆ ಎಂತಲೂ ಮಹಾತ್ಮ ಗಾಂಧಿಯವರು ಇವರಿಗೆ ತಂತಿವರ್ತಮಾನ ಕೊಟ್ಟರು.

ಈ ಸ್ವತಂತ್ರ ಹೋರಾಟದಲ್ಲಿ ರೈತರ ಕೋರಿಕೆಗೆ ಸರಕಾರವು ಗಮನಕೊಡದೆ ದಬ್ಬಾಳಿಕೆ ನಡಿಸುತ್ತಿರುವದಕ್ಕೆ ತಮ್ಮ ಅತೃಪ್ತಿಯನ್ನು ತೋರಿಸಲಿಕ್ಕಾಗಿ ಗುಜರಾಥ ಪ್ರಾಂತ್ಯದಿಂದ ಚುನಾಯಿತರಾದ ಒಂಭತ್ತು ಬೊಂಬಾಯಿ ಶಾಸನ ಮಂಡಲಿಯ ಸದಸ್ಯರು ತಮ್ಮ ಪದವಿಗೆ ರಾಜಿನಾಮೆ ಕೊಟ್ಟರು.

ಈಗ ಈ ಹೋರಾಟವು ಒಂದೇ ಪ್ರಾಂತೀಕವಾಗಿಲ್ಲ. ಒಟ್ಟು ಹಿಂದುಸ್ಥಾನವೂ ಈ ತಾಲೋಕನ್ನು ಅತಿ ಕುತೂಹಲ ದೃಷ್ಟಿಯಿಂದ ನೋಡುತ್ತಲಿದೆ. ಸ್ವರಾಜ್ಯಕ್ಕಾಗಿ ಈ ತಾಲೋಕಿನವರು ಹೋರಾಟ ನಡಿಸುವದಿಲ್ಲವಾದರೂ ಮಹಾತ್ಮಾಗಾಂಧಿಯವರು ಸ್ವರಾಜ್ಯ ಹೋರಾಟದಲ್ಲಿ ಜಪ್ಪೆರಿನಲ್ಲಿ ಒಟ್ಟು ಹಿಂದುಸ್ಥಾನವೆಲ್ಲಾ ಈ ಸತ್ಯಾಗ್ರಹವನ್ನು ಕೈಕೊಂಡರೇನೇ ಸ್ವರಾಜ್ಯ ಲಭಿಸೀತನ್ನ್ವೆ ಎಂತ ಹೇಳಿದ್ದಾರೆ. 1921ರಲ್ಲೇ ಈ ತಾಲೋಕಿನಲ್ಲೇ ಇದೇ ತರದ ಸತ್ಯಾಗ್ರಹವನ್ನು ಮಹಾತ್ಮ ಗಾಂಧಿಯವರು ಪ್ರಾರಂಭಿಸಿ ಅಲ್ಲಿಗೆ ಸಮೀಪವಾದ ಚೌರಿಚೌರಾದಲ್ಲಿ ಪುಂಡಾಯಿತೆಂಬ ಕಾರಣದಿಂದ ದೇಶ ಇನ್ನೂ ಕಂದಾಯ ಕೊಡದಿರಲು ತಯಾರಿಲ್ಲವೆಂತ ಬಿಟ್ಟಿದ್ದರು. ಈಗ ಮಹಾತ್ಮರ ಪ್ರೇರೇಪಣೆ ಇಲ್ಲದೆ ಜನರೇ ಪ್ರಾರಂಭಿಸಿದ್ದಾರೆ. ಜಯಪ್ರದವಾದರೆ ಈ ದಾರಿಯನ್ನು ದೇಶದ ಅನೇಕ ಕಡೆಗಳಲ್ಲಿ ಸ್ವರಾಜ್ಯ ಪ್ರಾಪ್ತಿಗಾಗಿ ಕೈಕೊಂಡಾರು. ಎಷ್ಟೆ ಜಯಪ್ರದವಾಗಬೇಕಾದರೂ ಸಂಪೂರ್ಣ ಸತ್ಯ ಮತ್ತು ಅಹಿಂಸೆಯನ್ನು ಅವಲಂಬಿಸಬೇಕೆಂಬದು ನಿಶ್ಚಿತ.

ಜನಿವಾರ್ಪ್ಪರ ಸಂಘದ ಮಹಾಸಭೆಯ ಮುಕ್ತಾಯದಲ್ಲಿ ಅಧ್ಯಕ್ಷರು ಮಾಡಿದ ಭಾಷಣದ ಸಾರಾಂಶ:—

ಮಹನೀಯರೇ ಮತ್ತು ಮಹಿಳೆಯರೇ—ನಿಮ್ಮ ಚರ್ಚೆಗಳೆಲ್ಲಾ ಬಹು ಸ್ವಾರಸ್ಯವಾಗಿ ಸಮಾಪ್ತಿಯಾಗುದಕ್ಕೆ ನಿಮಗೆ ಅಭಿನಂದಿಸುವ **ಸಂತೋಷಕರವಾದ ನನ್ನ ಕೆಲಸವು ಮಾತ್ರ ಉಳಿಯಿತು.** ಕಡುತರವಾದ ಮತ್ತು ಮಹತ್ವದ ವಿಷಯವಾದ ನಿಮ್ಮ ಈ ರಾಜಕೀಯ ರಚನೆಯನ್ನು ಚರ್ಚಿಸಿ ಠರಾವಿನ ರೂಪದಲ್ಲಿ ಮಂಜೂರು ಮಾಡಿಕೊಂಡಿರುತ್ತೀರಿ. ನಿಮ್ಮ ಆಡಳಿತದ ಯ ನೂರ್ವಾಡುಗಳ ಸಂಬಂಧವಾದ ಈ ಠರಾವೇ ನಿಮ್ಮ ಠರಾವುಗಳಲ್ಲೆಲ್ಲಾ ಅತ್ಯಂತ ಮುಖ್ಯವಾದದ್ದಾಗಿದೆ. ನಿಮ್ಮ ಸಮಯ ನಿಯಾಮಕ ಸಮಿತಿಯಲ್ಲಿ ನನ್ನ ಭಾಗ ತೆಗೆದುಕೊಂಡಿದ್ದೇನೆ. ನಿಮ್ಮಲ್ಲಿ ತುಂಬಾ ಕಾರ್ಯದಕ್ಷತೆಯೂ, ಅನ್ಯೋನ್ಯತಾ ಸ್ವಭಾವವೂ ತುಂಬಾ ಇದೆಯೆಂತ ನಿಮಗೂ, ಬೇರೆಯವರಿಗೂ ನಾನು ತಿಳಿಸಿಕೊಡಬೇಕಾಗಿದೆ. ನಮ್ಮನ್ನಾಳುವವರ ಅಭಿಪ್ರಾಯದಲ್ಲಿ ನಾವು ಸ್ವರಾಜ್ಯಕ್ಕೆ ಅರ್ಹರಲ್ಲ, ತತ್ಕಾಲ ಅರ್ಹತೆಗಳಿಕ್ಕೂ ಇಲ್ಲ. ಹಾಗೆ ಹೇಳುವದು ಅವರಿಗೆ ಪ್ರಯೋಜನ. ಬ್ರಿಟಿಷ್ ಹಿಂದೂಸ್ಥಾನದ ಬೇರೆ ಭಾಗದವರಂತೆಯೇ ನೀವು ಸಹ ಸ್ವರಾಜ್ಯಕ್ಕೆ ಅರ್ಹರಾಗಿದ್ದೀರಿ ಎಂತ ನಾನು ದೃಢವಾಗಿ ಹೇಳಬಲ್ಲೆನು. ಪ್ರಾಯ ಬಂದವರಿಗೆಲ್ಲಾ ಶಾಸನ ಮಂಡಲಿಗೆ ಸದಸ್ಯರನ್ನು ಆರಿಸುವ ಹಕ್ಕಿರಬೇಕೆಂತ ನೀವು ಮಾಡಿಕೊಂಡ ತೀರ್ಮಾನಕ್ಕೂ ನಿಮಗೆ ಅಭಿನಂದಿಸಬೇಕಾಗಿದೆ. ಸ್ವರಾಜ್ಯಕ್ಕೆ ಹೋರಾಡುವ ನಾವು ಬಿಳೀ ಅರಸರಿಂದ ಆಡಳಿತವನ್ನು ಕಪ್ಪು ಅಥವಾ ಮಸಕು ಬಣ್ಣದ ಅರಸರಿಗೆ ವರ್ಗಾಯಿಸಲು ಪ್ರಯತ್ನಿಸುತ್ತಿದ್ದೇವಷ್ಟೆ ಎಂತ ಹೇಳುವವರಿಗೆ ಈ ನಿಮ್ಮ ತೀರ್ಮಾನವು ಒಳ್ಳೇ ಸಮರ್ಪಕವಾದ ಉತ್ತರವಾಗಿದೆ. ಪ್ರತ್ಯೇಕ ಚುನಾವಣೆ ಕ್ರಮವನ್ನು ನೀವು ಬಿಟ್ಟು ಬಿಟ್ಟದ್ದಕ್ಕೆ ನಿಮಗೆ ಧನ್ಯವಾದಗಳಿವೆ. ನನ್ನಲ್ಲಿರುವ ಪೂರ್ತಿ ಶಕ್ತಿಯೊಡನೆ ನಾನು ಹೇಳುವದೇನೆಂದರೆ ಪ್ರಜಾ ಸತ್ತಾತ್ಮಕ ರಾಜ್ಯ ಪದ್ಧತಿಯೂ, ಪ್ರತ್ಯೇಕ ಚುನಾವಣೆಯೂ ಒಂದಕ್ಕೊಂದು ವಿರೋಧವಾದ ಕ್ರಮಗಳಾಗಿವೆ. ಒಂದು ಸರಕಾರದಲ್ಲಿ ಎರಡು ರಾಜಭಕ್ತಿ ಇರಕೂಡದು. ಆಡಳಿತದಲ್ಲಿ ದೇಶಕ್ಕೂ, ಜಾತಿಗೂ ಪ್ರತ್ಯೇಕ ಪ್ರತ್ಯೇಕ ಅಭಿಮಾನವಿರಕೂಡದು.

ನಿಮ್ಮ ರಾಜಕೀಯ ರಚನೆಯನ್ನು ಮಾಡಿಕೊಳ್ಳುವಾಗ ನಿಮಗೆ ಇರುವ ಅಡಚಣೆಗಳನ್ನು ನೀವು ತಿಳಿದುಕೊಂಡಿದ್ದೀರಿ. ಆಡಳಿತದ ಅಧಿಕಾರವೂ ನ್ಯಾಯತೀರ್ಪಿನ ಅಧಿಕಾರವೂ ಬೇರೆ ಬೇರೆ ಇಟ್ಟಿರಬೇಕು. ಎಲ್ಲಾ ತರದ ಬೇರೆ ಉಪಾಯಗಳನ್ನೆಲ್ಲಾ ಪರ್ಯಾಲೋಚಿಸಿ ಉಪಾಯವಿಲ್ಲದ್ದಕ್ಕೆ ಸ್ವತಂತ್ರ ಸಂಯುಕ್ತ ಹಿಂದೂಸ್ಥಾನದಲ್ಲಿ ಸ್ವತಂತ್ರ ಕರ್ನಾಟಕ ಪ್ರಾಂತ್ಯವಾಗುವವರೆಗೆ ನ್ಯಾಯ ತೀರ್ಪಿನ ಆಡಳಿತವನ್ನು ಮದ್ರಾಸಿನ ಹೈಕೋರ್ಟಿಗೆ ಕೊಟ್ಟಿರುತ್ತೀರಿ.

ಮಹಾತ್ಮಜಿಯವರ ದೇಶೋದ್ಧಾರದ ಮೂರು ಕಾರ್ಯಗಳನ್ನು ನೀವು ಉತ್ಸಾಹದಿಂದ ಮಂಜೂರು ಮಾಡಿಕೊಂಡಿದ್ದೀರೆಂತ ನೋಡಿ ಸಂತೋಷವಾಯಿತು. ಹಿಂದೂ ಮುಸಲ್ಮಾನ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಖದ್ದರ್ ಪ್ರಚಾರ ಇವುಗಳ ಮುಂದೆ ಆದ ಭಾಷಣಗಳಿಗೆ ಒಂದು ಮಾತ್ರ ಸೇರಿಸಲು ಅಪೇಕ್ಷಿಸುತ್ತೇನೆ. ಪರದೇಶಿ ಬಟ್ಟೆಯಿಂದ ಯಾವ ಫ್ಯಾಶನ್ ಬಟ್ಟೆ ಮಾಡಿಕೊಳ್ಳಬಹುದೋ ಅವನ್ನೆಲ್ಲಾ ಖದ್ದರಿನಿಂದಲೂ ಮಾಡಿಕೊಳ್ಳಬಹುದು. ಖಾದಿ ಧರಿಸಿಯೂ ಫ್ಯಾಶನೇಬಲ್ ಆಗಿ ಇರಬಹುದು. ನಿಷಾ ನಿವಾರಣೆಯು ಕೊಡಗಿಗೆ ದೊಡ್ಡದೊಂದು ಕೊರತೆಯಾಗಿದೆ. ನಿಮ್ಮ ಶಾಸನ ಸಭೆಗೆ ಮುಂಚೆ ಸರಕಾರದ ನಿಷಾ ಉತ್ಪತ್ತಿಯು ಈಗಿರುವದಕ್ಕಿಂತ ಕಡಿಮೆಯಾಗಲು ಪ್ರಯತ್ನಿಸುವಿರಿ ಎಂತ ನಂಬುತ್ತೇನೆ. ಈ ನಿಷಾ ಮಾರಿಯನ್ನು ಓಡಿಸಬೇಕೆಂತ ಈ ದಿನವೇ ಸಂಕಲ್ಪ ಮಾಡಿಕೊಳ್ಳಿ. ಸಂಕಲ್ಪ ಮಾಡಿದರೆ ಸಾಧಿಸುವದು ಕಷ್ಟವಲ್ಲ. ಸಾಮುದಾಯಿಕ ಕಾರ್ಯಗಳಲ್ಲಾದರೂ ಅಸ್ಪೃಶ್ಯತೆ ಇರಕೂಡದು. ಸಾಮುದಾಯಿಕ ರಸ್ತೆಗಳು, ಶಾಲೆಗಳು, ಬಾವಿಗಳು ಎಲ್ಲರಿಗೂ ಉಪಯೋಗಕ್ಕೆ ಅಡಚಣೆ ಇಲ್ಲದೆ ದೊರಕಬೇಕು. ವೇದ್ಯಪ್ರಕಾರ ಹಿಂದೂಧರ್ಮದಲ್ಲಿ ಅಸ್ಪೃಶ್ಯತೆಗೆ ಎಡೆಯೇ ಇಲ್ಲ. ದೇವರ ಮುಂದೆ ಎಲ್ಲರೂ ಒಂದೇ ದೇವರ ಸೃಷ್ಟಿಯಲ್ಲಿ ಒಬ್ಬನನ್ನು ಜನ್ಮತಃ ಅಸ್ಪೃಶ್ಯನೆಂತ ಹೇಳುವದು ದೇವರ ಮುಂದೆ ದೊಡ್ಡ ಪಾಪ.

ಸ್ನೇಹಿತರೇ—ನನ್ನ ಭಾಷಣವಾಯಿತು. ಭವಿಷ್ಯತ್ತು ದೇವರ ಕೈಯಲ್ಲಿದೆ. ಕೆಲಸ ಮಾಡಲು ಶಕ್ತಿ ನಮಗಿದೆ. ಪಡೆಯಬೇಕೆಂಬ ಅಭಿಲಾಷೆಯೂ ಇದೆ. ನಮ್ಮಿಂದ ಸಾಧ್ಯವಿದ್ದಷ್ಟು ಸಾಧಿಸುವದು ನಮ್ಮ ಕರ್ತವ್ಯವಾಗಿದೆ. ನಾವು ಸ್ವರಾಜ್ಯದ ಮಟ್ಟಿಗೆ ಪ್ರಯತ್ನಿಸುತ್ತೇವೋ, ಕೆಲಸ ಮಾಡುತ್ತೇವೋ ಅಷ್ಟರ ಮಟ್ಟಿಗೆ ಜಯಶೀಲರಾಗುತ್ತೇವೆ. ಜಯಪ್ರದವಾಗದಿದ್ದರೂ ನಮ್ಮ ಪ್ರಯತ್ನವು ನಿಷ್ಪ್ರಯೋಜನವಾಯಿತೆಂದು ಯೋಚಿಸಬೇಕಿಲ್ಲ. ಶ್ರಮವಿಲ್ಲದೆ ಪ್ರಯೋಜನವಿಲ್ಲ. ನಮಗೆ ಅತ್ಯುತ್ತಮವಾದ ಪ್ರಯೋಜನವು ನಮಗೆ ನಮ್ಮ ದೇಶಕ್ಕೆ ನಮ್ಮ ಪುತ್ರಪೌತ್ರ ಪಾರಂಪರ್ಯದವರಿಗೆ ಸ್ವರಾಜ್ಯಕ್ಕೆ ಇದಕ್ಕಾಗಿ ಪ್ರಯತ್ನಿಸಬೇಕು. ಈ ಸಂದರ್ಭದಲ್ಲಿ ಲೋಕಮಾನ್ಯ ತಿಲಕರು ನನಗೆ ಹೇಳಿದ ಭಕ್ತ—ಮಯ ಕಥೆಯು ನನಗೆ ನೆನಪಿಗೆ ಬಂತು. ಅಮೃತವನ್ನು ಪಡೆಯಲಿಕ್ಕಾಗಿ ದೇವತೆಯರು ಸಮುದ್ರಮಥನ ಮಾಡಿದಾಗ ನಾನಾ ವಿಧವಾದ ಮಣಿಭೂಷಣಾದಿಗಳು ದೊರೆತವು. ಅದಕ್ಕೆ ಮೋಹಿಸಲಿಲ್ಲ. ಹಾಲಾಹಲ ವಿಷ ಉತ್ಪನ್ನವಾಯಿತು. ಅದಕ್ಕೆ ಹೆದರಲಿಲ್ಲ. ಅಮೃತವನ್ನು ಅಂತ್ಯದಲ್ಲಿ ಪಡೆದೇ ಪಡೆದರು. ಸ್ವರಾಜ್ಯವೆಂಬ ಅಮೃತ ದೊರೆಯುವ ವರೆಗೂ ಹೋರಾಡುವ ಕೆಲಸ ನಮ್ಮದಾಗಿದೆ.

ವಂದೇ ಮಾತರಂ

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೩೭ನೇ ಪ್ರಕರಣ.

ಗೋಖಲೆಯವರನ್ನು ನೋಡುವುದಕ್ಕಾಗಿ.

ದಕ್ಷಿಣ ಆಫ್ರಿಕಕ್ಕೆ ಸಂಬಂಧಪಟ್ಟ ಅನೇಕ ನೆನಪುಗಳನ್ನು ನಾನು ಈಗ ಬಿಟ್ಟುಬಿಡಬೇಕು.

೧೯೧೪ರಲ್ಲಿ ಸತ್ಯಾಗ್ರಹ ಕದನವು ಮುಗಿದ ವೇಳೆ ಖಲೆಯವರಿಂದ ನಾನು ಲಂಡನ್ನಿನ ಮೂಲಕ ಸ್ವದೇಶಕ್ಕೆ ದಿರುಗಬೇಕೆಂದು ಆಜ್ಞಾ ಪತ್ರವು ಬಂದಿತು. ಆದುದರಿಂ ಕಸ್ತೂರಿಬಾಯಿಯೂ, ಕಾಲನಬೇಕರೂ, ನಾನೂ ಜೂಲೈ ಗಳಲ್ಲಿ ಸೀಮೆಗೆ ಪಯಣ ಬೆಳಸಿದೆವು

ಸತ್ಯಾಗ್ರಹ ಯುದ್ಧಕಾಲದಲ್ಲಿ ನಾನು ಮೂರನೆಯ ದ ಯಲ್ಲಿ ಪ್ರಯಾಣ ಮಾಡತೊಡಗಿದ್ದೆನು. ಆದುದರಿಂದ ನು ಈ ಯಾನಕ್ಕೆ ಮೂರನೆಯ ತರಗತಿಯ ಟಿಕೆಟ್ಟನ್ನೇ ಕೊಂಡೆನು. ಆದರೆ ಈ ಸಂಚಾರ ಪಥದ ಜಹಜಿನಲ್ಲಿ ಮೂ ಯ ತರಗತಿಯವರಿಗೆ ಮಾಡಿದ್ದ ಏರ್ಪಾಡಿಗೂ, ಹಿಂದೂ ಸ್ಥಾನದ ಸಮುದ್ರತೀರದಲ್ಲಿ ಸಂಚರಿಸುವ ಹಡಗುಗಳಲ್ಲಾಗಲಿ, ನ ರೈಲುಗಳಲ್ಲಾಗಲಿ ಈ ದರ್ಜೆಯ ಪ್ರಯಾಣಿಕರಿಗೆ ಡುವ ಸೌಕರ್ಯಕ್ಕೂ ಬಹು ಭೇದವುಂಟು. ಹಿಂದೂಸ್ಥಾ ದ ಪ್ರಯಾಣದಲ್ಲಿಯಾದರೋ ಕುಳಿತುಕೊಳ್ಳುವುದಕ್ಕೇ ಸಾ ದಷ್ಟು ಸ್ಥಳವಿರುವದಿಲ್ಲ. ಇನ್ನು ಮಲಗಿಕೊಳ್ಳುವುದ ತೇನು? ಶುಚಿತನವೂ ಬಹು ಕಡಿಮೆ. ಆದರೆ ನಾವು ಲಂ ನ್ನಿಗೆ ಪಯಣ ಮಾಡಿದಾಗ ಸಾಕಾದಷ್ಟು ಸ್ಥಳವಿದ್ದಿತು. ಅ ಶುಚಿಯಾಗಿಯೂ ಇದ್ದಿತು. ಇದಲ್ಲದೆ ಜಹಜಿನ ಸಂಸ್ಥೆ ವರು ನಮಗೆ ಪ್ರತ್ಯೇಕವಾಗಿ ಅನುಕೂಲಗಳನ್ನು ಒದಗಿ ರು. ನಮಗಾಗಿ ಪ್ರತ್ಯೇಕವಾದ ಕಕ್ಕಸವನ್ನು ಏರ್ಪಡಿಸಿ ರು. ನಾವು ಹಣ್ಣುಗಳನ್ನು ಮಾತ್ರ ತಿನ್ನುತ್ತಿದ್ದುದರಿಂದ ಮಗೆ ಹಣ್ಣುಗಳನ್ನೂ, ಬಾದಾಮಿ ಉತ್ತುತ್ತೆ ಮುಂತಾದುವ ನ್ನು ಒದಗಿಸಬೇಕೆಂದು ಜಹಜಿನ ಪಾರುಪತ್ಯಗಾರನಿಗೆ ಆ ಜ್ಞಾಪಿಸಿದ್ದರು. ಸಾಧಾರಣವಾಗಿ ಮೂರನೆಯ ದರ್ಜೆಯ ಯಾಣಿಕರಿಗೆ ಹಣ್ಣು ಹಂಪಲುಗಳನ್ನು ಕೊಡುವುದೇ ಅ ರ್ವ. ಈ ಸೌಕರ್ಯಗಳಿಂದ ನಾವು ಜಹಜಿನಲ್ಲಿದ್ದ ಹದಿ ಟು ದಿವಸಗಳು ಸುಖವಾಗಿ ಕಳೆದುವು.

ಈ ಯಾನದಲ್ಲಿ ನಡೆದ ಕೆಲವು ಘಟನೆಗಳು ಬರೆಯತಕ್ಕ ಗಿವೆ. ಕಾಲೆನ್‌ಬೇಕರಿಗೆ ದುರ್ಬೀನುಗಳೆಂದರೆ ಬಹು ಇ . ಅವರ ಬಳಿ ಬೆಲೆ ಬಾಳುವ ಒಂದೆರಡಿದ್ದುವು. ಇವುಗ ಲ್ಲಿ ಒಂದರ ವಿಷಯವಾಗಿ ನಾವು ದಿನವೂ ಚರ್ಚಿಸುತ್ತಿದ್ದೆ . ನಾವು ಸಾಧಿಸಬೇಕೆಂದಿದ್ದ ಸರಳಜೀವನದ ಆದರ್ಶದೊ ಇದನ್ನಿಟ್ಟುಕೊಂಡಿರುವುದು ಒಪ್ಪುವದಿಲ್ಲವೆಂದು ನಾನು ರಿಗೆ ತಿಳಿಯ ಹೇಳಲು ಯತ್ನಿಸುತ್ತಿದ್ದೆನು. ಒಂದು ದಿನ ವು ನಮ್ಮ ಕೊಠಡಿಯ ಸಮುದ್ರದ ಕಡೆಯ ಕಿಟಕಿಯ ಬ ನಿಂತಿರುವಾಗ ನಮ್ಮ ಚರ್ಚೆಯು ಅತಿ ತೀಕ್ಷ್ಣವಾಗಿ ನು

"ಇದು ನಮ್ಮ ಮಧ್ಯೆ ಜಗಳಕ್ಕೆ ಕಾರಣವಾಗಿರುವುದು ದಕ್ಕಿಂತ ಇದನ್ನು ಸಮುದ್ರದೊಳಗೆ ಬಿಸುಟು ತೊಲಗಿಸ ದೇಕೆ?" ಎಂದೆನು.

'ಅವಶ್ಯವಾಗಿ ಆ ಹಾಳು ಪದಾರ್ಥವನ್ನು ಎಸೆದು ಬಿಡಿ' ಎಂದರು. ಕಾಲನ್‌ಬೇಕರು

"ನಾನು ಹೇಳುವುದು ಬರಿಯ ಮಾತಲ್ಲ."

'ನಾನು ಹೇಳುವುದೂ ಹಾಗೆಯೇ'' ಎಂದು ಅವರು ಒ ನೆಯೇ ಉತ್ತರವಿತ್ತರು.

ಮರುಕ್ಷಣವೇ ನಾನು ಅದನ್ನು ಸಮುದ್ರಕ್ಕೆ ಬಿಸುಟೆ. ಅದರ ಕ್ರಯ ಸುಮಾರು ಏಳು ಪೌಂಡು [೧೦೫ ರೂ.] ದರ ಬೆಲೆಯಿದ್ದುದು ಅದರ ಕ್ರಯದಲ್ಲಲ್ಲ—ಕಾಲನ್‌ಬೇಕರ ಅದರಲ್ಲಿದ್ದ ಮೋಹದಲ್ಲಿ, ಆದರೆ ಅದು ತೊಲಗಿದ ಮೇಲೆ ವರು ಅದಕ್ಕೆ ಪಶ್ಚಾತ್ತಾಪ ಪಡಲಿಲ್ಲ.

ಕಾಲನ್‌ಬೇಕರಿಗೂ, ನನಗೂ ಮಧ್ಯೆ ನಡೆದ ಅನೇಕ ಘ ನೆಗಳಲ್ಲಿ ಇದು ಒಂದು.

ಪ್ರತಿ ದಿನವೂ ನಾವು ಈ ರೀತಿಯಾಗಿ ಏನಾದರೂ ಹೊ ಅರಿವನ್ನು ಪಡೆಯಬೇಕಾಗಿದ್ದಿತು. ಏಕೆಂದರೆ—ನಾವಿಬ್ಬ ಸತ್ಯಪಥಗಾಮಿಗಳಾಗಿರಲು ಪ್ರಯತ್ನ ಪಡುತ್ತಿದ್ದೆವು. ಸ ನ್ವೇಷಣದಲ್ಲಿ ಕ್ರೋಧ, ಸ್ವಾರ್ಥ ದ್ವೇಷ ಮುಂತಾದುವೆ ಸ್ವಾಭಾವಿಕವಾಗಿಯೇ ನಶಿಸುತ್ತವೆ. ಏಕೆಂದರೆ—ಹಾ ದೆ ಸತ್ಯವನ್ನು ಸಾಧಿಸಲಾಗುವುದಿಲ್ಲ. ರಾಗದ್ವೇಷಗಳಿ ಗಾದ ಮನುಷ್ಯನಿಗೆ ಸದಾಶಯಗಳಿರಬಹುದು, ಅವನು ಸ ಭಾಷಿಯಾಗಿಯೇ ಇರಬಹುದು. ಆದರೂ ಅವನಿಗೆ ಸ್ವ ಸತ್ಯವೆಂದಿಗೂ ದೊರಕುವುದಿಲ್ಲ. ಸಫಲವಾದ ಸ ನ್ವೇಷಣಕ್ಕೆ ರಾಗದ್ವೇಷ, ಸುಖ ದುಃಖ ಮುಂತಾದುವು ಂದ ಬಿಡುಗಡೆಯಾಗಬೇಕು.

ನಾವು ಪಯಣ ಬೆಳಸಿದಾಗ ನನ್ನ ಉಪವಾಸವು ಮುಗಿ ಬಹು ಕಾಲವಾಗಿರಲಿಲ್ಲ. ನನಗೆ ಇನ್ನೂ ನನ್ನ ಸಾ ನ್ಯವಾದ ಶಕ್ತಿಯು ಬಂದಿರಲಿಲ್ಲ. ಹಸಿವಾಗುವುದಕ್ಕಾ ಯೂ ನಾನು ಜಹಜಿನ ಕೈಸಾಲೆಯಲ್ಲಿ ತಿರುಗಾಡುತ್ತಿದ್ದೆ . ಆದರೆ ಈ ವ್ಯಾಯಾಮವು ಕೂಡ ನನ್ನ ಯೋಗ್ಯತೆಗೆ ರಿದುದಾಗಿದ್ದು ನನ್ನ ಕಾಲಿನ ಮೀನುಖಂಡಗಳು ನೋ ಯುತ್ತಿದ್ದುವು. ಲಂಡನ್ ನಗರವನ್ನು ತಲಪಿದಾಗ ಈ ಬಾ ಯು ಕುಂದುವುದಕ್ಕೆ ಬದಲಾಗಿ ಹೆಚ್ಚಿತು. ಅಲ್ಲಿ ನನಗೆ ಡಾ॥ ಜೀವರಾಜ ಮೆಹತಾರವರ ಪರಿಚಯವಾಯಿತು. ಆ ವರಿಗೆ ನಾನು ಉಪವಾಸಮಾಡಿದುದನ್ನೂ, ಆ ಮೇಲೆ ನನಗೆ ಕಾಲುನೋವು ಉಂಟಾದುದನ್ನೂ ಹೇಳಿದೆನು. ಅದಕ್ಕೆ ಅವರು ನೀನು ಇನ್ನು ಕೆಲವು ದಿವಸ ಪೂರ್ಣ ವಿಶ್ರಾಂತಿ ಪಡೆಯದಿದ್ದರೆ ನಿನ್ನ ಕಾಲುಗಳು ಪೂರ್ತಿಯಾಗಿ ಊನವಾಗುವ ಸಂಭವವಿದೆ ಎಂದರು

ದೀರ್ಘೋಪವಾಸದಿಂದ ಏಳುತ್ತಿರುವವನು ಶಕ್ತಿಯನ್ನು ಪುನಃ ಸಂಪಾದಿಸಲು ಆತುರನಾಗಕೂಡದೆಂದೂ, ಅವನು ತನ್ನ ಹಸಿವಿನ ಮೇಲೆ ಅಂಕೆಯನ್ನಿಟ್ಟುಕೊಂಡಿರಬೇಕೆಂದೂ ನನಗೆ ತಿಳಿದುದು ಆಗಲೇ. ಉಪವಾಸ ಮಾಡುವುದಕ್ಕಿಂತ ಅದನ್ನು ಮುರಿಯುವುದಕ್ಕೆ ಹೆಚ್ಚು ಎಚ್ಚರಿಕೆಯೂ ಬಹುಶಃ ಹೆಚ್ಚು ಅಂಕೆಯೂ ಆವಶ್ಯಕ.

ಮಹಾಯುದ್ಧವು ಯಾವ ಕ್ಷಣವಾದರೂ ಮೊದಲಾಗಬಹುದೆಂಬ ಸಮಾಚಾರವನ್ನು, ನಾವು ಮೆಡೀರಾ [ಸ್ಪೈಯಿನ್ ದೇಶದ ರಾಜಧಾನಿ] ದಲ್ಲಿ ಕೇಳಿದೆವು. ಇಂಗ್ಲಿಷ್ ಕಾಲುವೆ [ಇಂಗ್ಲೆಂಡಿಗೂ, ಫ್ರಾನ್ಸ್ ದೇಶಕ್ಕೂ ಮಧ್ಯೆ ಇರುವ ಅಗಲ ಕಡಿಮೆಯಾದ ಸಮುದ್ರದ ಭಾಗ]ವನ್ನು ಒಳಹೋಗುತ್ತಲೇ ನಮಗೆ ಮಹಾಯುದ್ಧವು ವಾಸ್ತವಿಕವಾಗಿ ಪ್ರಾರಂಭವಾದ ಸಂಗತಿಯು ತಿಳಿಯಿತು. ನಮ್ಮನ್ನು ಅಲ್ಲಿ ಸ್ವಲ್ಪ ಕಾಲ ತಡೆದರು. ಕಾಲುವೆಯಲ್ಲೆಲ್ಲಾ ನೀರಿನೊಳಗೆ ಗುಪ್ತವಾಗಿಟ್ಟಿದ್ದ ಮದ್ದಿನ ಗುಂಡುಗಳಿಗೆ ತಾಕದಂತೆ ಜಹಜನ್ನು ನಡೆಸುವುದು ಕಷ್ಟದ ಕೆಲಸವಾಗಿದ್ದಿತು. ಸೌಥಾಂಪ್ಟನ್ನಿಗೆ ಸೇರಲು ಎರಡು ದಿವಸ ಹಿಡಿಯಿತು.

ಯುದ್ಧ ಘೋಷವಾದುದು ಆಗಸ್ಟ್ ೪ರಲ್ಲಿ. ನಾವು ೬ನೆಯ ತಾರೀಕಿನಲ್ಲಿ ಲಂಡನನ್ನು ಮುಟ್ಟಿದೆವು.

ಕೊಡಗು ಜಮೀನ್ದಾರರ ಸಂಘದ 17ನೇ ರೂಲ್ ಮೇರೆ ಲೆಕ್ಕವನ್ನು ಆಡಿಟ್ ಮಾಡಿದ್ದರ ತಪಶೀಲ್.

ಕೊಡಗು ಜಮೀನ್ದಾರರ ಸಂಘದ ಪ್ರೆಸಿಡೆಂಟರವರ ಮತ್ತು ಕಮಿಟಿ ಮೆಂಬರುಗಳ ಜನಾಬಿಗೆ.

ಬಿಳುಗುಂದ ಗ್ರಾಮದ ಮು. ಅಬ್ದುಲ್ ಗಫೂರ್ ಖಾನ್ ಕೈಶ್ಗಿ ಮತ್ತು ಮೂರ್ನಾಡು ಕಮರ್ಶಿಯಲ್ ಸ್ಟೋರಿನ ಪಾಂಡಂಡ ಮುತ್ತಣ್ಣನು ಸಹ ಬರಕೊಂಡ ರಿಪೋರ್ಟು.

ಸಂಘದ ಎಗ್ಸಿಕ್ಯುಟಿವ್ ಕಮಿಟಿಯವರು ತಾ 3..3..28 ರ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನಿಸಿದ ಮೇರೆ ನಾವುಗಳು ಬಂದು ಸಂಘದ ಜಮಾ ಮತ್ತು ಖರ್ಚಿನ ಲೆಕ್ಕವನ್ನು ತಾ 1—1—1927ರಿಂದ 31—12—1927ರ ವರೆಗಿನ ಒಂದು ವರ್ಷದ್ದು ಚೆಕ್ಕುಮಾಡಿ ಅದರ ತಪಶೀಲ್ ಪಟ್ಟಿಯನ್ನು ಈ ಕೆಳಗೆ ಕೊಟ್ಟಿರುತ್ತೇವೆ. ಲೆಕ್ಕದಲ್ಲಿ ಹೆಚ್ಚು ಕಮ್ಮಿ ಏನೂ ಇರುವುದಿಲ್ಲ. ರಶೀತಿ ಬುಕ್ಕು ನಂಬ್ರ 9ರ 74ನೇ ರಶೀತಿಯಲ್ಲಿ ವಸೂಲಾದ 2 ರೂಪಾಯಿ ಪೈಕಿ 1 ರೂಪಾಯಿ ವಿನಹ ಬಾಕಿ ಎಲ್ಲಾ ಒಂದದ್ದೆಲ್ಲ ರೋಜಿನಾಮಕ್ಕೆ ಬರಕಾಗಿದೆ. ಖರ್ಚಿಗೆಲ್ಲ ಓಚರ್ಸ್‌ಗಳು ಇವೆ.

ನಂಬ್ರ 128, 130, 131, 133, 134, 138, 143, 144, 145, 146, 147, 148, 154, 157, 162, 164, 166, 170, 171, 195, 248, 252, 254, 255, 287, 305, 70, 182, 69, 72, 169, 212, 220, 237, 288, 83, 63, 120, 16, 35, 44, 47, 49, 51, 52, 184, ಮತ್ತು 306 ಇಂತಿಷ್ಟು ರಶೀತಿ ಪುಸ್ತಕಗಳು ಆಫೀಸಿನಲ್ಲಿ ಇಲ್ಲದ್ದರಿಂದ ಅವುಗಳನ್ನು ಚೆಕ್ಕುಮಾಡಲು ಆಗಲಿಲ್ಲ. ಮೇಲ್ಕಂಡ ಬುಕ್ಕುಗಳನ್ನು ಹಿಂದಿನ ವರ್ಷಗಳಲ್ಲಿ ವಸೂಲಾತಿಗೆ ಕೊಟ್ಟಿದೆಯಾಗಿ ತಿಳಿಯುತ್ತೇವೆ.

ರಶೀತಿ ಬುಕ್ಕು ನಂಬ್ರ 301 ಮತ್ತು 302 ಇವೆರಡು ಬುಕ್ಕುಗಳು ಹಾಳಾದ ಉದ್ದೇಶ್ಯ ಅವುಗಳನ್ನು 2—2—28ರ ಮೀಟಿಂಗಿನಲ್ಲಿ ವಜ ಮಾಡಿದ್ದರಿಂದ ಆ ಪುಸ್ತಕಗಳು ನಮಗೆ ಚೆಕ್ಕು ಮಾಡಲು ಸಿಕ್ಕಿರುವುದಿಲ್ಲ.

ನಂಬ್ರ 183ರ ರಶೀತಿ ಬುಕ್ಕು ಗೆದ್ದಲು ನಗ್ಗಿರೆ ತಿಂದು ಮೂರು ಹಾಳೆ ಹಾಳಾಗಿ ಹೋಗಿ ಬಾಕಿರುವುದು ಉಪಯೋಗಕ್ಕೆ ಅಯುಕ್ತವಲ್ಲದ್ದರಿಂದ ಅದನ್ನು ಲೆಕ್ಕದಿಂದ ವಜ ಮಾಡುವುದು ಉತ್ತಮವೆಂತ ಕಾಣುತ್ತೆ.

ಜಮಾ ಖರ್ಚಿನ ಪಟ್ಟಿ.

ಕೊಡಗು ಜಮೀನ್ದಾರರ ಸಂಘದ 1927ನೇ ಸಂವತ್ಸರದ (ಅಂದರೆ 1—1—1927ರಿಂದ 31—12—1927ರ ವರೆಗಿನ) ಜಮಾ ಖರ್ಚಿನ ಲೆಕ್ಕವನ್ನು ಆಡಿಟ್ ಮಾಡಬೇಕಾಗಿ ತಾ. 3—3—28ರ ಕಮಿಟಿ ಮೀಟಿಂಗಿನಲ್ಲಿ ಪಾಸಾದ ನಂಬ್ರ 8ನೇ ನಿರ್ಣಯದ ಮೇರೆ ನಾವುಗಳು ಲೆಕ್ಕವನ್ನು ಚೆಕ್ಕುಮಾಡಿದ್ದರಿಂದ ಅದರ ತಪಶೀಲು ಈ ಕೆಳಗೆ ನಮೂದಿಸಲಾಗಿದೆ

ಜಮಾ

1 ಚಂದಾ ವಸೂಲಿ.	975	0	0
2 ಕೊಡಗು ಕಂಪೆನಿಯಿಂದ ಸಾಲ ಮರುಪಾವತಿ.	500	0	0
3. ,, ಸಾಲದ ಬಡ್ಡಿ.	26	15	9
4 ಕಟ್ಟಡದ ಚಂದಾ ವಸೂಲಿ.	1475	0	0
5. ಹಳೆ ಸಾಮಾನು ಮಾರಾಟದಿಂದ (Pipes)	5	4	0
6. ಮನೆ ಬಾಡಿಗೆಯಿಂದ	100	0	0
7. ಪೋಸ್ಟಾಫೀಸು ಬಡ್ಡಿ.	32	6	2
ಜುಮ್ಲ.	3114	9	2
ಹಿಂದಿನ ಬಾಕಿ ಶಿಲ್ಕು	1183	0	9
ಒಟ್ಟು ಜುಮ್ಲ.	4297	9	11

ಖರ್ಚು.

1. ಸಿಬ್ಬಂದಿ ಖರ್ಚು.	264	0	0
2. ಬಸ್ಸು ಚಾರ್ಜು.	15	2	0
3. ಸ್ಟಾಂಪು ಖರ್ಚು.	25	0	0
4 ಕಟ್ಟಡದ ಫಂಡಿನ ಖರ್ಚು.	1484	15	0
5. ಮನೆಕಂದಾಯ.	12	8	0
6. ಕಮಿಷನ್.	130	8	0
7. ನೋಟೀಸು, ಕಾರ್ಡು ಚಾರ್ಜು.	99	11	0
8. ಟೆಲಿಗ್ರಾಫ್ ಖರ್ಚು.	12	1	0
9. ಪರ್ನೀಚರ್ಸ್.	39	4	6
10. ಪ್ರಿಂಟಿಂಗ್ ಚಾರ್ಜು	44	2	0
11. ಪ್ರಕಟಣೆ ಚಾರ್ಜು.	100	0	0
12. ಅಮಾನತ್ತು ಹಣ ವಾಪಸು ಕೊಟ್ಟದ್ದು.	280	0	0
13. ಲೈಬ್ರೆರಿಗೆ ಕೊಂಡುಕೊಂಡ ಬುಕ್ಕು.	8	15	0
14. ಸಾದಿಲ್ವಾರು ಖರ್ಚು.	7	0	9
15. ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟಿಗೆ ಕಳುಹಿಸಿದ್ದು.	1000	0	0
16. ರೀಡಿಂಗ್ ರೂಮ್ ಅಲೋಯೆನ್ಸ್.	2	0	0
ಜುಮ್ಲ.	3525	3	3
ಶಿಲ್ಕು.	772	6	8
ಒಟ್ಟು ಜುಮ್ಲ.	4297	9	11

ಯಂ. ಅಬ್ದುಲ್ ಗಫೂರ್ ಖಾನ್ ಕೈಶ್ಗಿ,
ಪಾಂಡಂಡ ಮುತ್ತಣ್ಣ.

ಕೊಡಗು ವಿದ್ಯಾಭಿವೃದ್ಧಿ ಸಂಘದ ಆಡಿಟರವರ ರಿಪೋರ್ಟು.

ಈ ಸಂಘದ ಕಡತಗಳನ್ನು ವಿಮರ್ಶೆ ಮಾಡಿದಲ್ಲಿ ಮಸೂದೆ ನಂಬರು 14 ರಲ್ಲಿ ವಿವರಿಸುವಂತೆ ಸಂಘದಿಂದ ಪ್ರಯೋಜನ ಹೊಂದಿದ ಯಾರೊಬ್ಬರೂ ಸಂಘದ ಮೆಂಬರಾಗಿರುವಂತೆ ಕಾಣುವದಿಲ್ಲ. ಅಲ್ಲದೆ ಸಂಘದಿಂದ ದ್ರವ್ಯಸಹಾಯ ಹೊಂದಿದವರು ಈ ಹಣವನ್ನು ಸಂಘಕ್ಕೆ ಯಾವ ದರದಲ್ಲಿ ಮತ್ತು ಯಾವ ಕಾಲದಲ್ಲಿ ವಾಪಸು ಮಾಡಬೇಕೆಂಬ ಸಂಗತಿಯನ್ನು ಸೆಂಟ್ರಲ್ ಕಮಿಟಿಯವರು ತೀರ್ಮಾನಿಸಿರುವದಿಲ್ಲ. ಈ ವಿಷಯವನ್ನು ತಾರೀಕು 23.4.28ರ ಮೀಟಿಂಗಿನಲ್ಲು ತೀರ್ಮಾನಿಸಿದೆ. ಆದ್ದರಿಂದ ಮಸೂದೆ ನಂಬರು 14 ಮೇಲಿನ ಸಂಗತಿಗಳೊಳಕೊಳ್ಳುವಂತೆ ಬದಲಾವಣೆಯಾಗಬೇಕಾಗಿದೆ. ಹಾಗಾಗದ ಪಕ್ಷದಲ್ಲಿ ಸಂಘದ ಹೊರವಿದ್ದ ಹಣವು ಖಂಡಿತವಾಗಿ ವಸೂಲಾಗುವದಿಲ್ಲ.

ಈ ಕೆಳಗಿನ ವಿವರವು ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಿದ ಮೊತ್ತವನ್ನೂ ಮತ್ತು ಲೇಟ್ ಮಿ. ಕಾಡುಬ ಸುಬ್ಬೈಯ್ಯನವರು ಉದಾರ ಮನಸ್ಸಿನಿಂದ ಕೊಟ್ಟ 5000 ರೂ. ಪಾಯಿಗಳ ಬಡ್ಡಿ ಸೇರಿಸಿ 1925–26ರ ಅಂತ್ಯದಲ್ಲಿ ಬಾಕಿ ಬಾಬತ ಉಳಿದುದನ್ನೂ ತೋರಿಸುವುದು.

ವರ್ಷ.	ಓಪನಿಂಗ್ ಬ್ಯಾಲೆನ್ಸ್ ರೂ.	ಆ.	ಪೈ.	ವಸೂಲಿ ರೂ.	ಆ.	ಪೈ.	ಜುಮ್ಲ ರೂ.	ಆ.	ಪೈ.
1923/1924	1131	1	1	1069	6	0	2200	7	1
1924/1925				1235	14	1	1235	14	1
1925/1926				849	11	0	849	11	0
ಜುಮ್ಲ	1131	1	1	3154	15	1	4286	0	2

ವರ್ಷ.	ಖರ್ಚು ರೂ.	ಆ.	ಪೈ.	ಬಾಬತ ಬಾಕಿ ರೂ.	ಆ.	ಪೈ.
1923/1924	860	4	0	1340	3	1
1924/1925	1125	10	0	110	4	1
1925/1926	835	4	0	14	7	0
ಜುಮ್ಲ	2821	2	0	1464	14	2

31 1—25 ರ ಅಂತ್ಯದಲ್ಲಿ 1450—7—2 ಬಾಬತ ಬಾಕಿ ತೋರುತ್ತೆ.

ಸಂಘದ ವಂತಿಗೆ ವಸೂಲಾತಿ ವಿಷಯದಲ್ಲಿ ಸೆಕ್ರೆಟರಿಯವರು ಹೆಚ್ಚು ನಿಗ ಕೊಡಬೇಕಾಗಿದೆ. ಪ್ರತಿ ಆಫೀಸಿನ ಉದ್ಯೋಗಸ್ಥರಿಂದ ಕ್ರಮವಾಗಿ ವಂತಿಗೆ ವಸೂಲಿಗೆ ತಕ್ಕ ಏರ್ಪಾಡು ಮಾಡಬೇಕಾಗಿದೆ. ಮತ್ತು ದಕ್ಷಿಣ ಕೊಡಗಿನ ಎಲ್ಲಾ ಕೋಪರೇಟಿವ್ ಸೊಸೈಟಿಯ ಪ್ರೆಸಿಡೆಂಟರುಗಳು ಅವರವರ ಸೊಸೈಟಿ ಕಾಮನ್ ಗುಡ್ ಫಂಡಿನಿಂದ ವರ್ಷಗಟ್ಲೆ ಏನಾದರೂ ವಂತಿಗೆ ಕೊಡಲು ಅನುಕೂಲಪಡಿಸಿದರೆ ಸಂಘದ ದ್ರವ್ಯ ಸಹಾಯವು ಹೆಚ್ಚುತ್ತಾ ಇರುವುದು.

ಸಂಘದ ಲೆಖ್ಖಾಚಾರಗಳು ಕ್ರಮವಾಗಿಡಲ್ಪಟ್ಟಿವೆ. ಆದರೆ ಸಂಘದ ಸೆಕ್ರೆಟರಿ ಮತ್ತು ಖಜಾನ್ಜಿ ಇವೆರಡು ಕೆಲಸಗಳನ್ನು ಒಬ್ಬನ ಮೇಲೆಯೇ ಹೊರಿಸುವುದು ಸರಿಯಾಗಿ ಕಾಣುವುದಿಲ್ಲ. ಪ್ರತಿ ತಿಂಗಳ ಅಂತ್ಯದಲ್ಲಿ ಖಜಾನ್ಜಿಯ ವಶವಿರುವ ಪುಸ್ತಕಕ್ಕೆ ಲೆಖ್ಖಾಚಾರ ಆಜಮಾಯಿಷಿ ಗುರ್ತು ಗೈ ಪ್ರೆಸಿಡೆಂಟರು ಸೈನ್ ಹಾಕಬೇಕು.

ಈ ಸಂಘದಿಂದ 1926ರ ವರೆಗೆ ಸಹಾಯ ಹೊಂದಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 33. ಇವರಲ್ಲಿ ಒಬ್ಬರು B. A. L. L. B ಗಳು, ಇಬ್ಬರು ಲಾ ವಿದ್ಯಾರ್ಥಿಗಳು, ಮೂವರು B. A. L. T ವಿದ್ಯಾರ್ಥಿಗಳು, ಏಳು ಜನರು B. A. ಪಾಸು ಮಾಡಿರುತ್ತಾರೆ, ಮೂವರು B. E. ಗಳು, ಒಬ್ಬರು ಇಂಟರ್‌ಮೀಡಿಯೇಟ್ ಪಾಸಾಗಿ ಇಂಜಿನೀಯರ್ ಡಿಪ್ಲೋಮ ಹೊಂದಿರುವರು, ಆರು ಜನರು B. A. ವಿದ್ಯಾರ್ಥಿಗಳು, ಇನ್ನಿತರರು ಇಂಟರ್‌ಮೀಡಿಯೇಟ್ ತೇರ್ಗಡೆ ಹೊಂದಿ ಈಗ ಇರುವುದೂ ಸರ್ಕಾರಿ ಉದ್ಯೋಗಸ್ಥರಾಗಿರುವರು. ನಾಲ್ವರು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಸೋತು ಹೋಗಿ ಚಾಕರಿ ಮಾಡುತ್ತಿರುವರು, ಒಬ್ಬರು ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಓದುತ್ತಿರುವರು, ಒಬ್ಬ ಪುಣ್ಯಾತ್ಮರು ಸತ್ತು ಹೋದರು, ಮತ್ತೊಬ್ಬರು ಸನ್ಯಾಸಿಯಾದರು.

ಈ ಸಂಘದಿಂದ ಸಹಾಯ ಹೊಂದಿದವರ ಪುರೋಭಿವೃದ್ಧಿಯು ಶ್ಲಾಘ್ಯವಾಗಿಯೂ, ತೃಪ್ತಿಕರವಾಗಿಯೂ ಇದೆ. ಇವರ ಕೆಲಸ ಕಾರ್ಯಗಳ ಸಮರ್ಥತೆಯನ್ನು ನಮ್ಮ ಜನಗಳೂ ಇತರರೂ ಸಹ ಒಮ್ಮೆ ಕೌತುಕದಿಂದಲೂ, ವಿಚಾರದಿಂದಲೂ ಪರಿಶೀಲಿಸುತ್ತಿರುವರು. ಆದರೆ ಇವರುಗಳು ಮಾತ್ರ ತಮ್ಮ ಅಭಿವೃದ್ಧಿಗೆ ಉತ್ತೇಜನ ಮತ್ತು ಸಹಾಯ ಕೊಟ್ಟ ಈ ಮಾನ್ಯ ಸಂಘವನ್ನು ಯಾವ ದೃಷ್ಟಿಯಿಂದ ನೋಡುತ್ತಿರುವರೋ ತಿಳಿಯಲಾಗುವುದಿಲ್ಲ. ಅವರೂ ಕೂಡ ಕೃತಜ್ಞತಾ ದೃಷ್ಟಿಯಿಂದ ಸಂಘದ ಪರಿಪಾಲನೆಗೂ, ಉತ್ತೇಜನೆಗೂ ಸಹಾಯಕರಾಗಿ ತಮ್ಮ ಮಾರ್ಗವನ್ನೇ ಅನುಸರಿಸಿ ಬರುವ ಮುಂದಿನ ತಮ್ಮ ಜನಾಂಗದ ಬಾಲಕರಿಗೆ ಆದರ್ಶರೂಪರಾಗಿದ್ದು ಈ ಸಂಘದ ಕೀರ್ತಿಗೂ ಮತ್ತು ಅಭಿವೃದ್ಧಿಗೂ ಕಾರಣರಾಗಬೇಕಾಗಿ ಕೋರಿಕೆ. ಈ ಸದುದ್ದೇಶದಿಂದ ಸ್ಥಾಪಿಸಿದ ಸಂಘದ ಪ್ರಯೋಜನಗಳನ್ನು ಮುಂದಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾಡಲು ಭಗವಂತನು ಇವರಿಗೂ, ಇವರ ಮೂಲಕವಾಗಿ ಇತರರಿಗೂ ಮನಸ್ಸನ್ನು ಕೊಡಬೇಕೆಂದು ನಮ್ಮ ಪ್ರಾರ್ಥನೆ. ಸಂಘದ ಉದ್ದೇಶಕ್ಕೆ ಕೊರತೆ ಒಂದಲ್ಲಿ ಆ ಕೊರತೆಯ ಹೆಚ್ಚಿನ ಭಾಗಕ್ಕೆ ಈ ಬಾಲಕವಾಂಡರೇ ಕಾರಣರಾಗುವುದರಲ್ಲಿ ಆಶ್ಚರ್ಯವೇನಿದೆ?

ಸಂಘದ ಸಹಾಯ ಹೊಂದಿದವರಲ್ಲಿಯೂ ಸಂಘಕ್ಕೆ ಸಹಾಯ ಮಾಡಲು ಉದ್ದೇಶಿಸುವವರಲ್ಲಿಯೂ ಒಂದು ಕಡೇ ವಿನಂತಿ. ಸಂಘದ ಅಲ್ಪಸ್ವಲ್ಪ ಕುಂದು ಕೊರತೆಗಳನ್ನೇ ಮುಂದಾಗಿಟ್ಟುಕೊಂಡು ತಾವು ಸಂಘಕ್ಕೆ ಮಾಡತಕ್ಕ ಸಹಾಯಗಳನ್ನು ನಿಲ್ಲಿಸಬಾರದಾಗಿಯೂ, ಸಂಘದ ದ್ರವ್ಯವು ಸದುದ್ದೇಶಕ್ಕೆ ವ್ಯಯವಾಗುವದೇ ಮುಖ್ಯ ಸಂಗತಿಯಾಗಿಯೂ, ಸಂಘದ ಮೂಲಧನವನ್ನು ಹಣದ ವಂತಿಗೆ, ಬತ್ತ ಪಸಿಗೆ ಮುಂತಾದವುಗಳ ಮೂಲಕ ಅಭಿವೃದ್ಧಿಪಡಿಸಬೇಕಾಗಿಯೂ, 'ಹನಿಗೂಡಿ ಹಳ್ಳ, ತೆನೆಗೂಡಿ ಭತ್ತ' ಎಂಬಂತೆ ಪ್ರತಿಯೊಬ್ಬನೂ ಸಂಘಕ್ಕೆ ತನ್ನ ಕೈಲಾದ ಸಹಾಯ ಮಾಡಬೇಕಾಗಿಯೂ, ನಾವು ಪೂರ್ವದಿಂದಲೂ ಅನುಸರಿಸಿ ಬಂದ ಧರ್ಮಬುದ್ಧಿಯನ್ನು ಮುಂದುವರಿಸಿ ಪಾಲಿಸಿಕೊಂಡು ಬರಬೇಕಾಗಿಯೂ ಪ್ರಾರ್ಥಿಸುತ್ತೇವೆ.

ಒಡುವಮಂಡ ಕುಶಾಲಪ್ಪ
ಪಟ್ಟಮಾಡ ಪೊನ್ನಪ್ಪ.

ಇಮಿಟೇಷನ್ ವಜ್ರದ ಪೆಂಡೋಲೆಗಳು.

ಈ ಪೆಂಡೋಲೆಗಳನ್ನು ಹೊಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಒಳ್ಳಾವು ಕಡಮೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಜಮೀನ್‌ದಾರರೂ ಮಹಳವಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0.
7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0.

ಸ್ಪಿರಿಟ್ ಸ್ಟೋವ್.



ಇವುಗಳನ್ನು ಹಿತ್ತಾಳೆಯಿಂದ ಮಾಡಿರುವದು. ಇದರಲ್ಲಿ ಒಬ್ಬರ ಸಹಾಯವಿಲ್ಲದೆಯೂ, ಯಾವ ತೊಂದರೆ ಇಲ್ಲದೆಯೂ ಎಷ್ಟು ಜನಗಳಿಗಾದರೂ ಪದಾರ್ಥಗಳನ್ನು ಬಹು ಬೇಗನೆ ಅಡಿಗೆಮಾಡಿಕೊಳ್ಳಬಹುದು.

ಕ್ರಯ 1ಕ್ಕೆ 2—8—0

ಇಂಗ್ಲೀಷ್ ಹೇರ್ ರಿಮೋವಿಂಗ್ ಸೋಪ್.



ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರ ಮಾಡಿಸಿಕೊಂಡಷ್ಟಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು ಬಿಡುವದು.

3 ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0.

ವಿಳಾಸ:—ಕೆ. ನಾಥಮುನಿ ಅಂಡ್ ಸನ್ಸ್,
168, ಚೈನಾ ಬಜಾರ್, ಮದರಾಸು.

ಪೊನ್ನಂಪೇಟೆನಾಡು ಸಹಕಾರಿ ಯೂನಿಯನ್ನಿನ ಜನರಲ್ ಮೀಟಿಂಗು.

ತಾರೀಕು 22—5—28ರಲ್ಲು ಪೊನ್ನಂಪೇಟೆಯಲ್ಲು ಈ ನಾಡಿನ ಗ್ರಾಮ ಸಂಘಗಳ ಕೂಟದ ಜನರಲ್ ಮೀಟಿಂಗು ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲು ನಡೆಯಿತು.

ಮೀಟಿಂಗಿಗೆ ಸಂಯೋಜಿಸಲ್ಪಟ್ಟ 21 ಸಂಘಗಳ ಪೈಕಿ 16 ಸಂಘಗಳ ಡೆಲಿಗೇಟರುಗಳು, 40 ಜನ ಶೇರು ಮೆಂಬರುಗಳು ಮತ್ತು ಕೋಆಪರೇಟಿವ್ ಇನ್ಸ್‌ಪೆಕ್ಟರು, ಸುಪರ್‌ವೈಜರು ಸಹ ಹಾಜರಿದ್ದರು.

ಕಳೆದ ವರ್ಷದ ಯೂನಿಯನ್ನಿನ ಕೆಲಸವನ್ನು ಕುರಿತು ಅದರ ಸೆಕ್ರೆಟರಿಯವರು ಓದಿ ಹೇಳಿದರು.

ಅಧ್ಯಕ್ಷರು ಕೂಟದ ಉದ್ದೇಶ್ಯವನ್ನು ಮತ್ತು ಅದನ್ನು ನಡೆಸುವ ವಿಧಾನವನ್ನು ಸಹ ಸಾಂಗವಾಗಿ ವಿವರಿಸಿದರು.

ಪೊನ್ನಂಪೇಟೆ ನಾಡು ಶ್ಯಾನುಬೋಗರ ಖಾಲಿ ಬಿದ್ದಿರುವ ಕೊಠಡಿಗಳ ಪೈಕಿ ಒಂದು ಕೊಠಡಿಯನ್ನು ಈ ಯೂನಿಯನ್ ಆಫೀಸಿನ ಉಪಯೋಗಕ್ಕಾಗಿ ಬಾಡಿಗೆ ಇಲ್ಲದೆ ಕೊಡಿಸಿಕೊಡಬೇಕಾಗಿ ಸರಕಾರದವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

ಸಂಯೋಜನೆ ಮಾಡಲ್ಪಟ್ಟ ಸಂಘಗಳ ವರದಿಯನ್ನು ಇನ್ನು ಮುಂದೆ ಯೂನಿಯನ್ನ ಮುಖಾಂತರ ರಿಜಿಸ್ಟ್ರಾರವರಿಗೆ ಕಳುಹಿಸಿಕೊಡಬೇಕಾಗಿ ತೀರ್ಮಾನವಾಯಿತು.

ಈ ಯೂನಿಯನ್ನಾಗಿ ಸವರು ಸೆಂಟ್ರಲ್ ಬೇಂಕಿನಿಂದ ಒಂದು ಶೇರು ತೆಗೆದುಕೊಳ್ಳುವಂತೆ ತೀರ್ಮಾನವಾಯಿತು.

ಮುಂದಣ ವರ್ಷಕ್ಕೆ ಯೂನಿಯನ್ನಿನ ಕೆಲಸವನ್ನು ನಡೆಸಲಿಕ್ಕಾಗಿ ಈ ಕೆಳಗಿನ ಮಹನೀಯರನ್ನು ಓಟುಮೂಲಕ ಚುನಾವಣೆ ಮಾಡಲಾಯಿತು.

ಮೆ. ಕೊಳ್ಳಿಮಾಡ ಕರುಂಬಯ್ಯನವರು, ಪ್ರೆಸಿಡೆಂಟರು.
„ ಪುತ್ತಮನೆ ಮುದ್ದಯ್ಯನವರು, ಸೆಕ್ರೆಟರಿ.
„ ಬಮ್ಮಡ ಮಾದಪ್ಪನವರು,
„ ಅಚ್ಚಿಯಂಡ ಸುಬ್ಬಯ್ಯನವರು
„ ಕೊಟ್ಟೀರಂಗಡ ಬೋಪಯ್ಯನವರು,
„ ಚೆಪ್ಪುಡೀರ ಪೂವಯ್ಯನವರು,
„ „ ಎ. ಪೊನ್ನಪ್ಪನವರು.
(ಕಮಿಟಿ ಮೆಂಬರುಗಳು.)

ಅಧ್ಯಕ್ಷರಿಗೆ ವಂದನೆಯಿಂದ ಈ ಮೀಟಿಂಗು ಬರಖಾಸ್ತಾಯಿತು.

ಕೆ ಯಸ್. ಸುಬ್ಬಯ್ಯ,
ಅಧ್ಯಕ್ಷರು.

ಪೊನ್ನಂಪೇಟೆನಾಡು ಗ್ರಾಮ ಸಂಘಗಳ ಮೀಟಿಂಗು.

ತಾರೀಕು 22—5—28ರಲ್ಲು ಪೊನ್ನಂಪೇಟೆಯಲ್ಲು ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲು ಈ ನಾಡಿನ ಗ್ರಾಮ ಸಂಘಗಳ ಒಂದು ಸಮ್ಮೇಳನವು ನಡೆಯಿತು.

ಈ ಸಮ್ಮೇಳನಕ್ಕೆ 70 ಜನ ಮೆಂಬರುಗಳು, ಇನ್ಸ್‌ಪೆಕ್ಟರು ಮತ್ತು ಸುಪರ್‌ವೈಜರು ಸಹ ಹಾಜರಿದ್ದರು.

ಅಧ್ಯಕ್ಷರು ಸಹಕಾರ ತತ್ವವನ್ನೂ ಗ್ರಾಮ ಸಂಘಗಳನ್ನು ನಡೆಸುವ ವಿಧಾನವನ್ನೂ ಮತ್ತು ಕಮಿಟಿ ಪ್ರೆಸಿಡೆಂಟರ ಜವಾಬ್ದಾರಿಕೆಯನ್ನೂ ಚೆನ್ನಾಗಿ ವಿವರಿಸಿ ಹೇಳಿದರು.

ಪ್ರತಿ ಸಂಘದ ರಿಜರ್ವ್ ಫಂಡಿನ ಶೇಕಡ 50 ರಷ್ಟಾದರೂ ಸೆಂಟ್ರಲ್ ಬೇಂಕಿನಲ್ಲಿಯಾಗಲಿ ಯಾ ಬೇರೆ ಬೇಂಕಿನಲ್ಲಾಗಲಿ ಚೀಫ್ ಕಮೀಷನರ ಹುಕುಂ ಮೇರೆ ಡಿಪಾಜಿಟ್ಟಾಗಿ ಇಡಬೇಕೆಂತ ತೀರ್ಮಾನವಾಯಿತು.

ಹಿಂದುಳಿದ ಪಂಗಡದವರಿಗೆ ಪ್ರತ್ಯೇಕ ಸಂಘಗಳನ್ನು ಏರ್ಪಡಿಸುವದು ಹೆಚ್ಚು ಪ್ರಯೋಜನಕರವಲ್ಲವೆಂದೂ ಅಂಥವರನ್ನು ಈ ಗ್ರಾಮ ಸಂಘಗಳಿಗೆ ಸೇರಿಸಿಕೊಂಡು ತಕ್ಕ ಉತ್ತೇಜನ ಕೊಡುವಂತೆ ತೀರ್ಮಾನವಾಯಿತು.

ಬರುವ ಅಕ್ಟೋಬರ್ ಒಂದನೇ ವಾರದಿಂದ ಹತ್ತು ದಿವಸಗಳ ವರೆಗೆ ಈ ನಾಡಿನ ಸೆಕ್ರೆಟರಿಯವರಿಗೆ ಒಂದು ಟ್ರೈನಿಂಗ್ ಕ್ಲಾಸ್ ಪೊನ್ನಂಪೇಟೆಯಲ್ಲಿ ತೆರೆಯುವಂತೆ ಏರ್ಪಾಡು ಮಾಡಬೇಕೆಂದು ಸರ್ವಸಮ್ಮತದಿಂದ ತೀರ್ಮಾನವಾಯಿತು.

ಎಲ್ಲಾ ಗ್ರಾಮ ಸಂಘಗಳಿಗೆ ಅವಶ್ಯವಿರುವ ಕಾಗದ, ಕಡ್ಡಿ, ಫಾರಂ ಮತ್ತು ಪುಸ್ತಕಗಳನ್ನು 'ಇಂಡೆಂಟ್' ಮೂಲಕ ಯೂನಿಯನ್‌ನವರು ತರಿಸಿಕೊಡುವಂತೆ ತೀರ್ಮಾನವಾಯಿತು.

ಪೊನ್ನಂಪೇಟೆ ಟವುನಿಗೆ ಒಂದು ಸಂಘವನ್ನು ಏರ್ಪಡಿಸಬೇಕೆಂದು ತೀರ್ಮಾನವಾಯಿತು

ಪ್ರತಿ ಜನವರಿ ತಿಂಗಳ ಆಖೈರಿನಲ್ಲಿ ಸಂಘಕ್ಕೆ ಅವಶ್ಯವಿರುವ ಸಾಲದ ಒಂದು ಪಟ್ಟಿಯನ್ನು ತಯಾರಿಸಿ ಸೆಂಟ್ರಲ್ ಬೇಂಕಿಗೆ ಕಳುಹಿಸುವಂತೆಯೂ, ಎಲ್ಲಾ ಸಂಘಗಳೂ ಇನ್ನು ಮುಂದೆ ಕನ್ನಡ ಸಹಕಾರಿ ಎಂಬ ಮಾಸ ಪತ್ರಿಕೆಯನ್ನು ತರಿಸಿ ಓದುವಂತೆಯೂ ತೀರ್ಮಾನವಾಯಿತು.

ಕೊಡಗಿನ ಎಲ್ಲಾ ಸಂಘಗಳನ್ನು ಸೇರಿಸಿ ಒಂದು ದೇಶದ ಕಾನ್‌ಫರೆನ್ಸನ್ನು ಅಕ್ಟೋಬರ್ ತಿಂಗಳನಂತರ ನಡೆಸುವಂತೆ ತೀರ್ಮಾನವಾಯಿತು.

ಕಡೆಗೆ ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ಮುಕ್ತಾಯವಾಯಿತು.

ಕೆ. ಯಸ್. ಸುಬ್ಬಯ್ಯ,
ಅಧ್ಯಕ್ಷರು.

ಮಾನವ ಮರ್ಮ ಶಾಸ್ತ್ರ.

ಈ ಪುಸ್ತಕವು ಮೊದಲು ಹಿಂದೂಸ್ಥಾನಿ, ಫ್ರೆಂಚ್, ... ಷೆಗಳಲ್ಲಿ ಇತ್ತು. ಇದನ್ನು ಈಗ ಕನ್ನಡಕ್ಕೆ ತರ್ಜುಮೆ ಮಾಡಿ ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ವಿಷಯಗಳು, ಶಿಶು ಉತ್ಪತ್ತಿ ಸ್ತ್ರೀ ಪುರುಷರು ಅನ್ಯೋನ್ಯವಾಗಿ ಇರುವಿಕೆ ಮುಂತಾದ ಎಲ್ಲಾ ವಿಷಯಗಳು ಇರುವವು.

ಕ್ರಯ 1ಕ್ಕೆ 1—0—0

ವಿಳಾಸ:—ಕೆ. ಎನ್ ರಾಧಕೃಷ್ಣ ಅಂಡ್ ಬ್ರದರ್
109 ಚೈನಾ ಬಜಾರ್ ರೋಡ್, ಮದರಾಸು.

ಶಿರಿಗನ್ನಡಂಗೆಲ್ಗೆ.
ವಿಭವ ನಾಮ ಸಂವತ್ಸರದ
(೧೪ನೇಯ)

ಕರ್ನಾಟಕ ಸಾಹಿತ್ಯ ಸಮ್ಮೇಳನವು.

ಇದೇ ಜೂನ್ ತಿಂಗಳು ೧—೨ ಮತ್ತು ೩ನೇ (ತಾ. ೨೭—೨೮—೨೯) ತಾ|| ಕ್ಕೆ ಕಲ್ಬುರ್ಗಿಯಲ್ಲಿ ಸೇರಲು ಗೊತ್ತಾಗಿದೆ. ಅಧ್ಯಕ್ಷ ಪದವಿಯನ್ನು ಅಲಂಕರಿಸಲು ರಾ ಶ್ರೀ ಶ್ರೀಕಂಠಯ್ಯನವರು ಯಂ. ಎ. ಬಿ. ಎಲ್. ರಜಿಸ್ಟ್ರಾರ, ಮೈಸೂರು ಯುನಿವರ್ಸಿಟಿ, ಇವರು ಒಪ್ಪಿಕೊಂಡಿರುವರು. ಈ ಸಮಯಕ್ಕೆ ಮೈಸೂರು, ಬೆಂಗಳೂರು, ಧಾರವಾಡ, ವಿಜಾಪುರ, ಮಂಗಳೂರು ಕೊಲ್ಹಾಪುರ ಮುಂತಾದ ಅನೇಕ ಭಾಗಗಳಿಂದ ಕನ್ನಡ ಭಾಷಾಭಿಮಾನಿಗಳೂ, ... ರೂ, ಸಾಹಿತ್ಯ ಭಕ್ತರೂ ಬರತಕ್ಕವರಿದ್ದಾರೆ.

ನಮ್ಮ ನಿಜಾಮ ಕರ್ನಾಟಕವು ಶೀರ ಹಿಂದೆ ... ಪ್ರಾಂತ್ಯ, ಕಲ್ಬುರ್ಗಿ ಬೀದರ ಜಿಲ್ಲೆಯಲ್ಲಿರುವ ಸುಮಾರು ... ಲಕ್ಷ ಕನ್ನಡಿಗರಿಗೆ ಕನ್ನಡ ಅಕ್ಷರಭ್ಯಾಸವೂ ಕೂಡ ಇಲ್ಲದಿರುವ ಶೋಚನೀಯ ಸ್ಥಿತಿಯಿರಲು ಕನ್ನಡ ಚಳವಳಿಯು ... ದು ಎಷ್ಟು ಅವಶ್ಯಕವೆಂಬುದು ಬೇರೆ ಹೇಳಬೇಕಾಗಿಲ್ಲ. ಕಾರಣ ಎಲ್ಲ ಮಹನೀಯರು ಈ ಸಮ್ಮೇಳನಕ್ಕೆ ಬಂದು ಕನ್ನಡ ಮಾತೆಯ ಸೇವೆಯನ್ನು ಮಾಡಬೇಕೆಂದು ಪ್ರಾರ್ಥನೆ.

ಕೃಷ್ಣರಾವ ಕಪಟರಾಳ ವಕೀಲ
ಗೌರವ ಕಾರ್ಯದರ್ಶಿ,
ಕರ್ನಾಟಕ ಸಂಘ ಕಲ್ಬುರ್ಗಿ.

ಚೀಫ್ ಫಾರೆಸ್ಟ್ ಆಫೀಸ್
ಮಡಿಕೇರಿ, ತಾ. 16—5—28

ನೋಟೀಸು.

ಕೊಡಗಿನ ರಿಸರ್ವ್ ಫಾರೆಸ್ಟ್‌ಗಳಲ್ಲೂ, ಸರಕಾರಿ ಸಾಲಿಗಳಲ್ಲೂ, ದೇವರ ಕಾಡುಗಳಲ್ಲೂ ಮತ್ತು ಬಾಣೆಗಳಲ್ಲೂ 1928ನೇ ಇಸವಿ ಜುಲೈ 1 ರಿಂದ 1929ನೇ ಇಸವಿ ಜೂನ್ 30ನೇ ತಾರೀಕಿನ ವರೆಗೆ ಮೈನರ್ ಫಾರೆಸ್ಟ್ ಉತ್ಪತ್ತಿಯನ್ನು ಒಮ್ಮೆಯಿಸುವ ಹಕ್ಕನ್ನು ಸೋಮವಾರಪೇಟೆಯಲ್ಲಿ ತಾ 11—6—28ರಲ್ಲೂ, ಫ್ರೇಜರ್‌ಪೇಟೆಯಲ್ಲಿ 12—6—28ರಲ್ಲೂ, ಮಡಿಕೇರಿಯಲ್ಲಿ 15—6—28ರಲ್ಲೂ, ವೀರಾಜಪೇಟೆಯಲ್ಲಿ 13—6—28ರಲ್ಲೂ, ಪೊನ್ನಂಪೇಟೆಯಲ್ಲಿ 16—6—28ರಲ್ಲೂ ಹರಾಜು ಮಾಡಲಾಗುವುದು.

ಆನೆಚೌಕೂರಿನ ಗೋಣಿಕೊಪ್ಪಲು ಮತ್ತು ಪಿರಿಯಾಪಟ್ಟಣಕ್ಕೆ ... ಪೇಟೆಗಾಗಿ ಕುಟ್ಟಕ್ಕೆ ಹೋಗುವ ರಸ್ತೆಯ ದಕ್ಷಿಣಕ್ಕೂ ಪೂರ್ವಕ್ಕೂ ಇರುವ ಕೊಡಗಿನ ಭಾಗದಲ್ಲಿ 1—6—28 ರಿಂದ 31—5—1929ರ ವರೆಗೆ ಕಕ್ಕೆ ಚಕ್ಕೆಯನ್ನು ತೆಗೆಯುವ ಹಕ್ಕನ್ನು ಸಹ ತಾರೀಕು 15—6—28ರಲ್ಲು ಮಡಿಕೇರಿಯಲ್ಲಿ ಹರಾಜು ಮಾಡಲಾಗುವುದು.

ಹೆಚ್ಚಿನ ಮಾಹಿತಿಗೆ "ಚೀಫ್ ಫಾರೆಸ್ಟ್ ಆಫೀಸರ್, ಮಡಿಕೇರಿ" ಇವರಿಗೆ ಬರೆಕೊಳ್ಳುವುದು.

ಸಿ. ಯಂ. ಕುಶಾಲಪ್ಪ
ಚೀಫ್ ಫಾರೆಸ್ಟ್ ಆಫೀಸರ್

ನೋಟೀಸು.

1928 ನೇ ಇಸವಿ ಜುಲಾಯಿ ತಿಂಗಳಲ್ಲಿ ನಡೆಯುವ ಮ್ಯುನಿಸಿಪಲ್ ಕಮಿಟಿ ಮೆಂಬರುಗಳ ಯಲೆಕ್ಷನ್ ಬಗ್ಗೆ ಓಟರ್ಸ್ ಪಟ್ಟಿ ತಯಾರಾಗಿದೆ. ಈ ಪಟ್ಟಿಯ ವಿಷಯ ತಕರಾರು ಹೆಚ್ಚು ಕಮ್ಮಿ ಇದ್ದಲ್ಲಿ ಈ ಜೂನ್ ತಾರೀಕು 6ರ ಒಳಗೆ ಮುನ್ಸಿಪಲ್ ಆಫೀಸಿಗೆ ಒಂದು ಪಟ್ಟಿಯನ್ನು ನೋಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದರಿ ಪಟ್ಟಿಯನ್ನು ಮಂಜೂರ್ ಮಾಡಲ್ಪಡುತ್ತೆ.

ಮುನ್ಸಿಪಲ್ ಆಫೀಸು.
ಮಡಿಕೇರಿ ತಾ. 21—5—28
ಯ. ಎಂ. ಭುಜಂಗರಾವ್
ಪ್ರೆಸಿಡೆಂಟ್

For Sale

A Chevrolet Car
Rs 1500
Or near offer
apply—
A. M. Appacho
Hallow, Mercara

ವರ್ತಮಾನಸಂಗ್ರಹ.

ಒಳಪದೆ

ಕೊಡಗಿನ ಸಿವಿಲ್ ಕೋರ್ಟು ಬೇಸಿಗೆ ರಜೆಕ್ಕೆ ಮುಚ್ಚಿದ್ದವು ಈ ದಿನ ತೆರೆಯಲ್ಪಟ್ಟಿ

ರಾವ್ ಸಾಹೇಬ್ ಕೋಠಿಯಂಡ ಸುಬ್ಬಯ್ಯನವರ ಪತ್ನಿಯವರು ಈ ತಾ. 19ಯಂದಾಲು ಪಿವಲೋಕವನ್ನೈದಿದರೆಂತ ತಿಳಿಯಲು ವಿಷಾಕ್ಕೀವೆ

ಕೊಡಗಿನ ಎಲ್ಲಾ ಶಾಲೆಗೆ ಶನಿವಾರ ಮತ್ತು ಆದಿತ್ಯವಾರ ಎರಡು ದಿನಗಳು ಪೂರ್ತಿಗಿ ವ ಎತ್ತಾಗಿ ಕೆಂತ ಇನ್ಸ್ಪೆಕ್ಟರಿಂದ ಆರ್ಡರಾಗಿದೆಯೆಂತ ತಿಳಿಯುತ್ತೇವೆ.

ಮಡಿಕೇರಿ ಹುಡುಗಿಯರ ಕೋರ್ಟ ಸ್ಕೂಲಿನಲ್ಲಿ ಮಾಸ್ಟರಾಗಿದ್ದ ಮೆ. ಯಂ. ಶ್ರೀನಿವಾಸರ ಬದಲು ಶ್ರೀಮತಿ ನೆರವಂಡ ಪೊನ್ನಮ್ಮನವರನ್ನು ನೇಕ ಮಾಡಲಾಗಿದೆ.

ಪ. ಪಂದ್ಯಂಡ ಬೆಳ್ಯಪ್ಪನವರ ತಮ್ಮನಾದ ಮೆ. ಪಿ. ಎ. ಕಾಳಪ್ಪನವರು 31ನೇ ದಿನ ಹೊಸೂರಲ್ಲಿ ಅವರ ಮನೆಯಲ್ಲಿ ನಿಮೋನಿಯಾಯಿಲಿಯಿಂದ ಮೃತರಾದರು.

ಈ ವಾರ ಕೊಡಗು ದೇಶದವು ಕಡೆಗಳಿಗೆ ಒಂದೆರಡು ಮಳೆ ಜೋರಾಗಿ ಬಿದ್ದಿದ್ದು ಮೋಡವು ಆಗಾಗ್ಯೆ ಕಾಣುತ್ತ ಒರುವುದರಿಂದ ಒಡ್ಡಳಿ ಹಿಡಿಯುವ ಸಂಭವವಿರುವ ಹಾಗೆ ಆಲೋಚಿಸ ಬೇಕಕ್ಕೆ.

ಈ ತಾರೀಕು 16ಲ್ಲು ಬಿ. ಸುಬ್ರಾಯ-ಸಂಬವನು ಆರ್ಜಿ ರಸ್ತೆಯಲ್ಲಿ ಬೈಸಿಕಲ್ಲಿನಲ್ಲಿ ಹೋಗುತ್ತಿರುವಾಗ್ಯೆ ಒಬ್ಬ ಮಾಪಿಳ್ಳ ಹೊಗಸಿಗೆ ತಗಲಿ (ಡಾ ಆಗಿ) ಆ ಕೂಡಲೇ ಅಲ್ಲಿಯೇ ಮೃತ ಪಟ್ಟನೆಂದೂ, ಈ ವಿರ ಪೋಲೀಸ್ ತನಿಖಿಸುಲ್ಲಿದೆಯೂಗಿಯೂ ವರ್ತಮಾನ

ಕೊಡಗು ಬ್ರಾಹ್ಮಣ ವಿಧ್ಯವೃದ್ಧಿ ನಿಧಿಯ ವಾರ್ಷಿಕ ಮಹಾಸಭೆಯು ತಾ. 3-5-28 ರಲ್ಲು ಮಡಿಕೇರಿ ವಿದ್ಯಾರ್ಥಿ ಭವನದಲ್ಲು ನಡಿಯುವದರಿಂದ ಇದರ ಹಿತಚಿಂತಕರೆಲ್ಲರೂ ಹಾಜರಾಗಬೇಕಾಗಿ ಈ ನಿಧಿಯ ಗೌರವ ಕಾರ್ಯದರ್ಶಿಯವರು ತಿಳಿಸಿರುತ್ತ

ಇಂಡಿಯನ್ ಫಾರೆಸ್ಟ್ ಕ್ಲಾಸಿಗೆ ಸೇರಲು ನಡಿಯುವ ಚುನಾವಣೆ ಪರೀಕ್ಷೆಗೆ ಬರಕೊಳ್ಳಬೇಕಾದ ಅರ್ಜಿ ಮಸೂದೆ ಮತ್ತು ತಿಳಿಯಬೇಕಾದ ಇತರ ನಿಬಂಧನೆಗಳು ಸಹ ನಮ್ಮ ಆಫೀಸಿಗೆ ಕಮಿಶನರಿಂದ ಕಳುಹಿಸಲ್ಪಟ್ಟಿವೆ. ತಿಳಿಯಲು ಅಪೇಕ್ಷಿಸುವವರು ಬಂದು ನೋಡಬಹುದು.

ಕೊಡಗು ಗೌಡ ವಿದ್ಯಾಭಿವೃದ್ಧಿನಿ ಸಂಘದ 1927—28 ನೇ ಸಂವತ್ಸರದ ವಾರ್ಷಿಕ ಸಭೆ ಈ ತಾ. 27ನೇ ಆದಿತ್ಯವಾರ ಏಳಿಗೇರಿ ದಾಚೆಕೋಡಿ ಹಿನೆ ಒಳ' ಬಾಣೆಯಲ್ಲಿ ನಡೆಯುವದರಿಂದ ಇದರ ಮೆಂಬರೆಲ್ಲರೂ ಆ ದಿನ ಬರಬೇಕಾಗಿ ಸದರಿ ಸಂಘದ ಪ್ರೆಸಿಡೆಂಟರು ತಿಳಿಸಿರುತ್ತಾರೆ.

ಮಡಿಕೇರಿಯಲ್ಲಿ ಕಾಫಿ ಪ್ಲಾಂಟರಾಗಿದ್ದ ಶ್ರೀಮತಿ ಶಿ. ಏದ್ಯಮ್ಮನವರು ತನ್ನ ದೇಹದ ಅನಾರೋಗ್ಯದ ದೆಸೆಯಿಂದ ಮೈಸೂರು ಆಸ್ಪತ್ರೆಗೆ ಚಿಕಿತ್ಸೆ ಹೊಂದಲು ಹೋದವರು ಕಳೆದ ತಾ 20 ರ ರಾತ್ರಿ ಸದರಿ ಆಸ್ಪತ್ರೆಯಲ್ಲಿ ಮೃತರಾದರೆಂದು ತಿಳಿದು ವ್ಯಸನಪಡುತ್ತೇವೆ. ಮೃತ ಶವವನ್ನು ಮಡಿಕೇರಿಯಲ್ಲಿರುವ ಅವರ ಮನೆಗೆ ಒಯ್ಯಲ್ಪಟ್ಟು ದಹನ ಮಾಡಿದರು. ಇವರು ಸಾರ್ವಜನಿಕ ಕಾರ್ಯಗಳಿಗೆ ಸಹಾಯ ಕೊಡುವವರಾಗಿದ್ದರು.

ಶ್ರೀಮತಿ ನೆರವಂಡ ಪೊನ್ನಮ್ಮನವರು, ಮೆ. ಗಳಿಂದ ಮಂಡೇಪಂಡ ಡಬ್ಲ್ಯೂ. ಕಾಳಪ್ಪನವರು, ಚೇಯಕಪೂವಂಡ ಥಿಮ್ಮಯ್ಯನವರು ಮತ್ತು ಕೆ. ಏನ್ ಶೀಶರಾಮರಾವ್ ನವರು ಈ ವರ್ಷದ ಬಿ. ಎ. ಪರೀಕ್ಷೆಯಲ್ಲಿ ಪೂರ್ತಿಯಾಗಿಯೂ, ಮೆ. ಗಳಿಂದ ಮುಂಡಾಂದಿರ ಬೆಳ್ಯಪ್ಪನವರು ಮತ್ತು ಪುಲಿಯಂಡ ಐಯ್ಯಪ್ಪನವರು ಒಂದು ಭಾಗದಲ್ಲಿಯೂ ಪಾಸಾಗಿರುವರೆಂದು ತಿಳಿದು ಸಂತೋಷ ಪಡುತ್ತೇವೆ. ಇವರಿಗೆ ನಮ್ಮ ಅಭಿವಂದನೆಗಳಿವೆ.

ಈ ತಾ. 16ರಲ್ಲಿ ಚೆಟ್ಟಳ್ಳಿ ಗ್ರಾಮದ ಮೆ. ಕೊಪದಿರ ಬೋಪ್ಪಯ್ಯನವರು ತನ್ನ ಇಬ್ಬರು ಸಂಗಾತಿಗಳೊಡನೆ ಚೆಂಬತಕೊಲ್ಲಿ ಎಂಬ ಮನೆಯ ಹತ್ತಿರ ಹೋಗುತ್ತಿರುವಾಗ ಒಂದು ಕಾಡು ಕೋಣವು (ಕಟಿಯು) ಅವರನ್ನು ಹಿಂಬಟ್ಟಿಕೊಂಡು ಬರಲು ಅವರು ಗಾಬರಿಯಿಂದ ಒಂದು ಮರವನ್ನೇರಿ ಕುಳಿತುಕೊಂಡಾಗ ಸದರಿ ಕಾಡುಕೋಣ ಆ ಮರದ ಸುತ್ತಲೂ ಕೂಗಿಕೊಂಡು ಓಡುವದನ್ನು ನೋಡಿ ಮೇಲ್ಕಂಡ ಬೋಪ್ಪಯ್ಯನವರು ಅದನ್ನು ಗುಂಡು ಹೊಡೆದು ಕೊಂದರೆಂತ ತಿಳಿಸುತ್ತಾರೆ.

ಹಿಂದೂದೇಶ.

ಮಂಗಳೂರಿನಲ್ಲಿ 2ನೇ ಕರ್ನಾಟಕ ಆಯುರ್ವೇದ ಸಮ್ಮೇಳನವು ಕಳೆದ ವಾರ ನಡಿಯಿತು.

ಮೌಲಾನಾ ಮಹಮ್ಮದ್ ಆಲಿಯವರು ಇಂಗ್ಲೆಂಡಿಗೆ ಜೂನ್ 2ರಲ್ಲಿ ಹೊರಟು ಹೋಗುತ್ತಾರೆ. ಅವರು ಚಿಕಿತ್ಸೆ ಹೊಂದಲು ಹೋಗುವದಾಗಿದೆ.

ಪೂರ್ವ ಬಂಗಾಳದಲ್ಲಿ ಬಿರುಗಾಳಿ ಸುಳಿಯಿಂದ ತುಂಬಾ ನಷ್ಟವಾಗಿದೆ. ಇಂಥಾ ಅನಾಹುತವು ಕಳೆದ 50 ವರ್ಷಗಳಿಂದ ಉಂಟಾಗಿರಲಿಲ್ಲವಂತೆ.

ಬಾರ್ದೋಲಿಯಲ್ಲಿ ಸತ್ಯಾಗ್ರಹ ನಡಿಯುತ್ತಿರುವದರಿಂದ ಅಲ್ಲಿನ ಗ್ರಾಮಗಳನ್ನು ಸಂದರ್ಶಿಸಲು ಕಾಂಗ್ರೆಸ್ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರು ಹೋಗುತ್ತಾರೆ

ಸೆಪ್ಟಂಬರ್ ಆಖೈರಿಗೆ ವೈಸ್‌ರಾಯರು ಊಟಕಮಂಡಿಗೆ ಬರಬಹುದೆಂತಲೂ, ಆಗ್ಯೆ ತನ್ನ ಕಾಲವನ್ನು ವಿರಾಮ ಹಿಡಿಯುವದರಲ್ಲಿ ಮೈಸೂರ್ ಕಾಡುಗಳಲ್ಲಿ ಬೇಟೆಯಾಡುವದರಲ್ಲೂ ಕಳೆಯಬಹುದೆಂತಲೂ ತಿಳಿಯ ಬಂದಿದೆ.

ತಿರುಪತಿಯಲ್ಲಿ ಕರುಣಾಕರದ ಸಾಂಕ್ರಾಮಿಕ ರೋಗವಿದೆಯಂತೆ ಯಾತ್ರಿಕರು ಜಾಗರೂಕರಾಗಿರಬೇಕೆಂತ ತಿರುಪತಿ ಮುನಿಸಿಪಾಲಿಟಿಯವರು ಪತ್ರಿಕೆಗಳಿಗೆ ತಿಳಿಸಿರುತ್ತಾರೆ ಅಲ್ಲಿ ನೀರಿನ ಕ್ಷಾಮವೂ ತುಂಬಾ ಇದೆಯಂತೆ

ಮಲಬಾರಿನ ತಿರೂರಿನಲ್ಲಿ ಕೇರಳ ಮಾಪಿಳ್ಳೆಯರ ಪರಿಷತ್ತೊಂದು ಹೋದ ವಾರ ನಡಿಯಿತು ಮುಂಬರಾದ ರ ರಾವ್ಯಗಳಲ್ಲಿ ಬೇರೆ ಜಾತಿಯವರ ಮೇಲೆ ಸಹನೆಯನ್ನು ತೋರಿಸಬೇಕೆಂಬ ಒಂದು ರಾಪು ಬಂದಾಗಿತ್ತು.

ಮಹಾತ್ಮ ಗಾಂಧಿಯವರ ಅಣ್ಣನ ಮಗ ಮಗನ ಲಾಲ ಗಾಂಧಿಯವರು ಮೃತರಾದದ್ದಕ್ಕೆ ಅವರ ಸ್ಮಾರಕವಾಗಿ ಖಾದಿ ಪ್ರದರ್ಶನ ಶಾಲೆಯೊಂದನ್ನು ತೆರೆಯಬೇಕಂತಲೂ, ಈ ಬಗ್ಯೆ ಬೇಕಾಗುವ ಒಂದು ಲಕ್ಷ ರೂಪಾಯಿಗಳನ್ನು ಕೊಡಲು ಸಹಾಯ ಮಾಡಬೇಕೆಂತಲೂ ಮಹಾತ್ಮ ಗಾಂಧಿಯವರು ಕೇಳಿಕೊಂಡಿರುವರು.

ಸ್ವಾಮಿ ಶ್ರದ್ಧಾನಂದರ ಮಗ ಪ್ರೊಫೆಸರ್ ಇಂದ್ರ ಇವರಿಗೆ ರಾಜದ್ರೋಹ ತಕ್ಸೀರಿಗಾಗಿ ಸಜಾಯ ಹೊಂದಿದವರು ಅವರ ಅನಾರೋಗ್ಯದ ಕಾರಣದಿಂದ ಬಿಡುಗಡೆ ಹೊಂದಿ ಬಂದವರು ಜೈಲ್ ಅಧಿಕಾರದ ಅಕ್ರಮಗಳನ್ನು ಪ್ರಕಟಿಸಿದ್ದಾರೆ. ವೈದ್ಯರಿಗೆ ಆರೋಗ್ಯದ ಶೋಧನೆ ಮತ್ತು ಚಿಕಿತ್ಸೆ ವಿಷಯ ದ ವಿಸಾಚನೆಯಾಗಿಲ್ಲವೆಂತ ಬರೆದಿರುತ್ತಾರೆ.

ಡಾಕ್ಟರ್ ಅನಿಬೆಸಂಟಮ್ಮನವರಿಗೆ ಬರುವ ಅನೇಕ ಪತ್ರಗಳನ್ನು ಯಾರೋ ತಡೆಯುತ್ತಿದ್ದಾರೆ. ಒಂದು ಸರಕಾರವೇ ಇರಬೇಕೆಂತಲೂ ಹಿಂದುಸ್ತಾನದ ಬ್ರಿಟಿಷ್ ಸಾಮ್ರಾಜ್ಯದಿಂದ ಬಿಡುಗಡೆ ಹೊಂದಲು ಬಯಸುವರೆಂತ ಪ್ರಯತ್ನಿಸುವ ತನಗೆ ಹೀಗೆ ಮಾಡಿದ್ದರಿಂದ ಹಿಂದುಸ್ತಾನದ ಆಳರಸರ ದಬ್ಬಾಳಿಕೆಯು ನಿದರ್ಶನವಾಗುತ್ತದೆಯೆಂತಲೂ, ತಾನು ಇಂಗ್ಲೆಂಡಿಗೆ ಹೋಗಿ ಈ ವಿಷಯದಲ್ಲಿ ಅಧಿಕಾರಿಗಳಿಗೆ ಸರಿಯಾದ ತಿಳುವಳಿಕೆ ಕೊಟ್ಟು ಚಳವಳಿ ನಡೆಸುವದಾಗಿ ನ್ಯೂ ಇಂಡಿಯಾ' ಪತ್ರಿಕೆಯಲ್ಲಿ ಬರೆದಿರುತ್ತಾರೆ

ಹಿಂದುಸ್ತಾನದ ಮುಂದಿನ ರಾಜಕೀಯ ರಚನೆಯನ್ನು ಆಲೋಚಿಸಲು ಎಲ್ಲಾ ಪಾರ್ಟಿಗಳ ಮುಖಂಡರ ಸಭೆಯೊಂದು ಡಲ್ಲಿಯಲ್ಲಿ ಸೇರಿ ಚರ್ಚೆ ನಡೆದು ಬೊಂಬಾಯಿಯಲ್ಲಿ ಸೇರಿದಂತೆ ಮೊದಲೇ ಮುಖಂಡರು ಅವ ಮೇರೆ ಸೇರಿ ರಾಜಕೀಯ ರಚನೆ ಕಲ್ಪಿಸಲು, ಮೋತಿಲಾಲ್ ನೆಹರುರವರು ಅಧ್ಯಕ್ಷರಾಗಿ ಒಟ್ಟು 9 ಜನರುಳ್ಳ ಒಂದು ಉಪಕಮಿಟಿಯು ನೇಮಕವಾಗಿದೆ. ಈ ಸಭೆಯ ಇತರ ಸದಸ್ಯರು ಯಾರೆಂದರೆ—ಸರ್ ತೇಜ ಬಹದ್ದೂರ ಸಪ್ರೂ, ಸರ್ ಅಲಿ ಇಮಾಮ್, ಮೆ. ಜಿ. ಆರ್. ಪ್ರಧಾನ್, ಖುರೇಶಿ, ಸುಭಾಸ ಚಂದ್ರಬೋಸ್, ಯಂ. ಯಸ್. ಅಣೆ, ಜಯಕರ್ ಜೋಶಿ. ಜುಲೈ 1ರ ಒಳಗೆ ರಾಜಕೀಯ ರಚನೆಯ ತತ್ವಗಳನ್ನು ನಿಷ್ಕರ್ಷಿಸಿ ಎಲ್ಲಾ ಪಾರ್ಟಿಗಳಿಗೂ ಕಳುಹಿಸಿಕೊಡಬೇಕು. ಆಮೇಲೆ ಸರ್ವಪಕ್ಷ ಸಮ್ಮೇಳನವು ಆಗಸ್ಟ್ ತಿಂಗಳಿನಲ್ಲಿ ಪುನಃ ಸೇರಬೇಕೆಂತಲೂ ತೀರ್ಮಾನವಾಗಿದೆ

ವಿದೇಶ.

ಜರ್ಮನಿ ದೇಶದಲ್ಲಿ ಅಲ್ಲಿನ ಪಾರ್ಲಿಮೆಂಟ್ ಚುನಾವಣೆಯಲ್ಲಿ ತುಂಬಾ ಗಲಭೆಗಳಾಗಿವೆ. ಒಬ್ಬನು ಚುನಾವಣೆಯಲ್ಲಿ ಕತ್ತಿ ಹೊಡೆತಕ್ಕೆ ಗುರಿಯಾಗಿ ಮೃತನಾಗಿರುತ್ತಾನೆ.

ಶ್ರೀಯುತ ಯಸ್. ಶ್ರೀನಿವಾಸಯ್ಯಂಗಾರರು ಲಂಡನಿಗೆ ತಲಪಿದ್ದಾರೆ. ಆರೋಗ್ಯದ ಕಾರಣದಿಂದ ತಾನು ಇಂಗ್ಲೆಂಡಿಗೆ ಬಂದದ್ದಾಗಿದೆ. ತನ್ನ ಪಾರ್ಟಿಯವರು ಸೈಮನ್ ಕಮಿಶನಿಗೆ ಬಹಿಷ್ಕಾರ ಹಾಕಿರುವದಾದರೂ ಹಿಂದುಸ್ಥಾನದ ಮೇಲೆ ಅಧಿಕಾರವಿರುವ ಮಹಾಜನರ ಸಭೆಯ ಸಂಭಾಗಣೆಗೆ ಸಹ ಬಹಿಷ್ಕಾರ ಹಾಕಿರುವದಿಲ್ಲ. ಇಂಗ್ಲೆಂಡ್, ಸ್ಕಾಟ್ಲ್ಯಾಂಡ್ ಮತ್ತು ವೇಲ್ಸ್‌ನಲ್ಲಿ ಸಹ ಸಂಚರಿಸುತ್ತೇನೆಂತ ಹೇಳಿರುತ್ತಾರೆ.

ಒವ್ರ್ಯಾನ್ ಮಹಾಶಯರು ಇಂಗ್ಲಿಷ ಪಾರ್ಲಿಮೆಂಟಿಗೆ ಮೆಂಬರರಾಗಲು ಅಪೇಕ್ಷಿಸುತ್ತಾರೆ ಕನ್ಸರ್ವೇಟಿವ್ ಪಾರ್ಟಿಗೆ ಸೇರಲು ಇಚ್ಛಿಸುತ್ತಾರೆ. ಅಲ್ಲಿನ ಚುನಾವಣೆಯಲ್ಲಿ ಜಯಪ್ರದವಾಗಲು ಸಾಧ್ಯವಿಲ್ಲವಾದರೆ ಇವರ ಜೀವಮಾನ ಕಾಲಕ್ಕೆ ಮಾತ್ರ ಇವರನ್ನು ಲಾರ್ಡ್ ಮಾಡಿ ಹೌಸ್ ಆಫ್ ಲಾರ್ಡ್ಸಿಗೆ ಮೆಂಬರಾಗಲು ಅನುಕೂಲ ಮಾಡಿಕೊಡುವ ಯೋಚನೆ ಅಧಿಕಾರಿಗಳಲ್ಲಿ ಇದೆಯಂತೆ. ಇವರು ಹಿಂದುಸ್ಥಾನದ ರಾಷ್ಟ್ರೀಯತ್ವಕ್ಕೆ ವಿರೋಧವಾದ ಅಭಿಪ್ರಾಯವುಳ್ಳವರಾಗಿರುತ್ತಾರೆ

ಹಿಂದುಸ್ಥಾನದ ಗಿರಣಿಗಳ ಮಾಲೀಕರಾದ ಪಾರ್ಸಿಯವರೂ ಮುಖ್ಯವಾಗಿ ಟಾಟಾ ಕಂಪೆನಿಯವರು ಕೂಲಿಕಾರರ ಸ್ಟ್ರೈಕಿನ ತುಂಬಾ ಕಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಇಂಗ್ಲಿಷ್ ಹಣಗಾರರನ್ನು ಬೇಡಿರುವರು, ಮುಖ್ಯವಲ್ಲವೆಂತ ಮಂತ್ರಿಗೆ ಕೈಮನ್ ಕ ಮೆಂಬರುಗಳಲ್ಲಿ ಒಬ್ಬರಾದ ಮೆ. ವರ್ನನ್ ಹಾಟ್ಸನ್‌ರವರು ಭಾಷಣ ಮಾಡಿದ್ದರಿಂದ ಹಿಂದೀ ಮಿಲ್‌ಗಳಲ್ಲಿ ತುಂಬಾ ಅತೃಪ್ತಿಯುಂಟಾಗಿದೆ. ಅಲ್ಲದೆ ಅವರ ಟಾಟಾ ಕಂಪೆನಿಯವರು ಕೇಸ್ ನಡಿಸುವ ವಿಚಾರದು ನಡ ರುತ್ತಾರೆ

PROPTY FOR SALE.

45 acres e in good condition, 300 batties wet land 5 acres Orange cultiv tion 50 acres Jungle be cult ated and 8 acres Miscellaneous with od bunglow & Cor lnes.

Price Rs 00 or near offe

For further par ars please apply to —

K. N. Appaya,

2—1. Teawoods,

Siddapur Coorg.

ಪತ್ರವಿಹಾರ

ವಾತ್ಮಿದಾರರು ಪಡುವಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೌನ್ಸಿಲ್ ಮೆಂಬರುಗಳಿಗೆ ವಿನಂತಿಗಳು.

ಅಯ್ಯಾ,

ಮಹನೀಯರೇ, ಗವರ್ನಮೆಂಟ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡುವ ಬಾಲಕರು ಒಂದು ತರಗತಿಯಲ್ಲಿ 2 ವರ್ಷ ಪಾಸಾಗದೆ ನೊಂದಾಗ ಅಂಥಾ ಬಾಲಕರನ್ನು ಸ್ಕೂಲಿನಿಂದ ವಜಮಾಡಿ ಬೇರೆ ಯಾವ ಸ್ಕೂಲ್‌ನಲ್ಲಿ ಸಹ ಸೇರಿಸಕೂಡದೆಂಬ ಕಠಿಣವಾದ ರೂಲ್ ಮಾಡಿದ್ದು ಎಲ್ಲರಿಗೂ ತಿಳಿದಿರಬಹುದಾಗಿ ನಂಬುತ್ತೇನೆ. ಇದರಿಂದ ತುಂಬಾ ತೊಂದರೆಯವಾದ ಸಂಗತಿಯೆಂದು ಹೇಳಿದ ಅದು ಎಂದೂ ತಪ್ಪಾಗಲಾರದು. ಈ ರೂಲಿನಿಂದ ನಮ್ಮ ಜನ ಪರಿಹಾರಕ್ಕೆ ಯಾವ ಆಧಾರವೆಂದು ಹೇಳಲಾಗಿಲ್ಲ. ರೈತರಿಗೆ ಅಂದರೆ—ವಿದ್ಯಾಭ್ಯಾಸ ಮಾಡುವ ಬಾಲಕರ ತಂದೆಗಳು ಯಾಕ್ಷೇನು ಜಾತಕರಿಗೆ ನಷ್ಟ ಆವಗಳು ಸೇವೆ. ಇಂಥಾ ಸಂದರ್ಭದಲ್ಲಿ ನಮ್ಮ ದೇಶ ಸೇವೆಗೆ ಕೈಕೊಂಡಿರುವ ಕೌನ್ಸಿಲ್ ಮೆಂಬರುಗಳು ತಮ್ಮ ಲಕ್ಷ್ಯಕ್ಕೆ ತಾರದಿರುವದು ತುಂಬಾ ಶೋಚನೀಯ. ಹಾಗಾದರೆ ಅವರು ಮರೆತು ಬಿಟ್ಟರೋ, ಅಲ್ಲ ಕೈತರಿಂದ ಪೂರಾ ಕಣ್ಣು ಮುಚ್ಚಿ ಬಿಟ್ಟರೋ ಕಾಣದು ಕೂರದೋ. ಹಾಗಾದ ಪಕ್ಷ ಈ ಮಹನೀಯರು ನಮ್ಮ ರೈತರ ಶಾಲೆಗೆ ಸೇರಿದವರಲ್ಲವೋ, ಇವರ ಬಾಲಕರು ಸಹ ವಿದ್ಯಾಭ್ಯಾಸ ಮಾಡತಕ್ಕವರಲ್ಲವೋ. ಅಲ್ಲವೇ ಈ ಮಹನೀಯರಿಗೆ ಓಟು ಸಿಕ್ಕಿದ ಮರುದಿನವೇ ದೇಶಸೇವೆಯ ಭಾಗಗಳಿಗೆ ತಿಲಾಂಜಲಿಯನ್ನು ಕೊಟ್ಟು ಸುಮ್ಮನೆ ಕುಳಿತರೋ, ಅದಂತಿರಲಿ, ಮಹನೀಯರೇ—ಇನ್ನಾದರೂ ಕಣ್ಣು ತೆರೆದು ಮೇಲಿನ ವಿಷಯವನ್ನು ಘನ ಸರ್ಕಾರದವರ ಮುಂದಿಟ್ಟು ಸದರಿ ರೂಲನ್ನು ರದ್ದು ಮಾಡಿಸಿ ದೇಶಸೇವಾ ಧುರೀಣರೆಂಬ ಬಿರುದಿಗೆ ಅರ್ಹರೆನಿಸಿಕೊಳ್ಳುವಿರಾಗಿ ಪ್ರಾರ್ಥಿಸುತ್ತೇನೆ. ಇದೇ ವಿಷಯವಾಗಿ ಒಂದು ರಜಾವನ್ನು ಕೊಡವ ಸಭೆಯ ಮುಂದೆ ಇಟ್ಟಿರುತ್ತೇನೆ. ಇದಲ್ಲದೆ ಗೌಡವರಲ್ಲಿಯೂ ಸಹ ಈ ವಿಷಯವು ಸಿಂಧುವಾದದ್ದೆಂದು ತೋರಿ ಬಂದರೆ ತಾವು ಗಳೂ ಸಹ ಇದನ್ನು ಪುಷ್ಟೀಕರಿಸಬೇಕಾಗಿ ನನ್ನ ಕೋರಿಕೆಯಾಗಿದೆ.

ಕೂ ಮೇದಪ್ಪ.

ಅಯ್ಯಾ,

ನಮ್ಮ ಸಂಪಾಜೆ ಪ್ರಾಂತ್ಯಕ್ಕೊಂದು ಆಸ್ಪತ್ರೆಯು ಅವಶ್ಯವೆಂದು ಈ ಪ್ರಾಂತ್ಯದ ಒಡ ರೈತರಾದ ನಾವು ಹಲವು ವರ್ಷಗಳಿಂದ ಮೊರೆ ಇಡುತ್ತಿದ್ದೆವು ನಮ್ಮ ಪುಣ್ಯದ ಲೋಕಲ್ ಬೋರ್ಡಿನ ಪ್ರೆಸಿಡೆಂಟರು, ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರ ಸಹಾಯವನ್ನು ಪಡೆದುಕೊಂಡು ಒಂದು ಆಸ್ಪತ್ರೆಯನ್ನು ಬರುವ ಜೂನ್ ತಿಂಗಳ 15ರ ಒಳಗೆ ತೆರೆಯುವುವಾಗಿ ಅಪ್ಪಣೆ ಕೊಟ್ಟಿರುವರು. ಆಸ್ಪತ್ರೆಯನ್ನು ಪ್ರಕೃತ ಕನ್ನಡ ಜಿಲ್ಲೆ ಸಂಪಾಜೆಯಲ್ಲಿರುವ ಪ್ರಯಾಣಿಕರ ಬಂಗ್ಲೆಯಲ್ಲಿ ತೆರೆಯುವರೆಂತಲೂ, ಬಂಗ್ಲೆಯಲ್ಲಿ ಆಗತ್ಯವಿರುವ ರಿಪೇರಿಗಳನ್ನು ಶ್ರೀಯುತ ಕೇಲಾಜೆ ರಾಮಚಂದ್ರಯ್ಯನವರು ತನ್ನ ಸ್ವಂತ ಖರ್ಚಿನಿಂದ ಮಾಡಿಸಿಕೊಡುವರೆಂತಲೂ ನಿಶ್ಚಯವಾಗಿದೆ. ಡಾಕ್ಟರಿಗೂ ಮತ್ತು ಕಂಪೌಂಡರಿಗೂ ಬೇಕಾಗುವ ಮನೆಗಳನ್ನು ಕೊಡುವುದಕ್ಕೆ ಶ್ರೀಯುತ ರಾಮಚಂದ್ರಯ್ಯನವರೇ ಉದಾರ ಮನಸ್ಸಿನಿಂದ ಒಪ್ಪಿಕೊಂಡಿರುವರು.

ಕೊಡಗು ಸರ್ಕಾರದವರು ಈ ಆಸ್ಪತ್ರೆಗೆ ಸಹಾಯ ಧನವನ್ನು ಕೊಡುವ ವಿಷಯವನ್ನು ಕೇಳಿ ಕೊಡಗು ಜಿಲ್ಲೆಯ ಜನರು ಗ್ರಾಮದ ನಿವಾಸಿಗಳಿಗೆ ತುಂಬಾ ಸಂತೋಷವುಂಟಾಗಿದೆ. ಆದರೆ ಮಳೆಗಾಲದಲ್ಲಿ ಹೊಳೆಯನ್ನು ದಾಟಿಕೊಂಡು ಆಸ್ಪತ್ರೆಗೆ ಬರಲಿಕ್ಕೆ ಸಾಧ್ಯವಿಲ್ಲದಿರುವುದರಿಂದ ಜನರು ಗ್ರಾಮದವರಿಗೆ ಆಸ್ಪತ್ರೆಯ ಪ್ರಯೋಜನವು ದೊರೆಯದಂತಿಲ್ಲ. ಆದ್ದರಿಂದ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರು ಉದಾರ ಮನಸ್ಸಿನಿಂದ ಪಯಸ್ವಿನಿ ಹೊಳೆಗೆ ಒಂದು ಪಾಲವನ್ನು ಕಟ್ಟಿಸಿಕೊಡಬೇಕಾಗಿ ಕೋರುವ,

ಸಂಪಾಜೆಯ ರೈತ.

ಪಾಡಿನಾಲ್ಕುನಾಡು ಸಹಕಾರ ಯೂನಿಯನ್ ಮೀಟಿಂಗು.

ತಾರೀಖು 23—4—28 ರಲ್ಲು ಪಾಡಿನಾಲ್ಕುನಾಡು ಯೂನಿಯನ್ನಿನ ಜನರಲ್ ಮೀಟಿಂಗ್ ನಾಪೋಕ್ಲು ಕಚೇರಿ ಒಳಿಯಲ್ಲಿ ನಡೆಯಿತು.

ಈ ದಿವಸದ ಮೀಟಿಂಗಿಗೆ 15 ಸಹಕಾರ ಸಂಘಗಳ ಪ್ರತಿನಿಧಿಗಳು ಮತ್ತು 50 ಶೇರು ಮೆಂಬರರು ಹಾಜರಿದ್ದರು.

ಮೆ. ಉದಿಯಂಡ ಮಾಚ್ಚಯ್ಯನವರು ರಿಜಿಸ್ಟ್ರಾರ್ ಸಾಹೇಬರವರನ್ನು ಈ ದಿವಸದ ಮೀಟಿಂಗಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂಬದಾಗಿ ಸೂಚಿಸ್ಸಲು ಎಲ್ಲರೂ ಅನುಮೋದಿಸಿ ಸರ್ವಸಮ್ಮತದಿಂದ ಅಧ್ಯಕ್ಷಸ್ಥಾನವನ್ನು ವಹಿಸಿದರು.

ಯೂನಿಯನ್ನಿನ ಆಳಿಕೆಯು ವೈಸ್ ಪ್ರೆಸಿಡೆಂಟರು ಓದಿದರು.

ಈ ಯೂನಿಯನ್ನನ್ನು ಸೆಂಟ್ರಲ್ ಬ್ಯಾಂಕಿನಿಂದ ಒಂದು ಪಾಲನ್ನು ಪಡೆಯಬೇಕೆಂದು ಮೆ. ಉದಿಯಂಡ ಮಾಚ್ಚಯ್ಯನವರು ಸೂಚಿಸಿದರು. ಮೆ. ಬಿದ್ದಾಟಂಡ ಚಂಗಪ್ಪನವರು ಅನುಮೋದಿಸಿದರು. ಸರ್ವರೂ ಸಮ್ಮತಿಸಿದರು.

ಸಂಯೋಜಿತ ಸಂಘಗಳು ಸಂಘಗಳುವಾರು ಬವೂ ಖರ್ಚಿನ ಪಟ್ಟಿಯನ್ನು ಯೂನಿಯನ್ನಿಗೆ ಕಳುಹಿಸಬೇಕೆಂದು ಮೆ. ಉದಿಯಂಡ ಮಾಚ್ಚಯ್ಯನವರು ಸೂಚಿಸಿದರು. ಮೆ. ನಾಪನೆರವಂಡ ಮೊಣ್ಣಪ್ಪನವರು ಅನುಮೋದಿಸಿದರು.

ಸರ್ವ ಸಮ್ಮತಿಯಿಂದ ಮಂಜೂರಾಯಿತು.

ಸಂಯೋಜಿತ ಸಂಘಗಳಿಂದ ಆಯಾಯ ಸಂಘಕ್ಕೆ ಬೇಕಾದ ಒಂದು ವರ್ಷದ ಸಾಲದ ಅಂದಾಜು ಪಟ್ಟಿಯನ್ನು ಪ್ರತಿವರ್ಷ ಜನವರಿ ತಿಂಗಳೊಳಗೆ ತರಿಸಿಕೊಳ್ಳಬೇಕು ಎಂದು ಮೆ. ನಾಪನೆರವಂಡ ಮೊಣ್ಣಪ್ಪನವರು ಸೂಚಿಸಿದರು. ಮೆ. ಉದಿಯಂಡ ಮಾಚ್ಚಯ್ಯನವರು ಪವರಿಸಿ ಅನುಮೋದಿಸಿದರು.

ಸರ್ವರೂ ಸಮ್ಮತಿಸಿದರು.

ಒಂದು ಆಫೀಸನ್ನು ಏರ್ಪಡಿಸುವ ವಿಷಯದಲ್ಲಿ ಅದರ ಕೆಲಸ ನಡಿಸುವ ಕ್ರಮವನ್ನು ಕುರಿತು ರೂಲ್ಸ್ ಮಾಡಲಿಕ್ಕೆ ಮೂರು ಮೆಂಬರುಗಳಿಂದ ಕೂಡಿದ ಒಂದು ಕಮಿಟಿಯನ್ನು ನೇಮಿಸುವ ವಿಷಯ ಚರ್ಚೆ ನಡೆದು ಮೆ. ಉದಿಯಂಡ ಮಾಚ್ಚಯ್ಯನವರನ್ನೂ, ಮೆ. ನಾಪನೆರವಂಡ ಮೊಣ್ಣಪ್ಪನವರನ್ನೂ ಮತ್ತು ಮೆ. ಅರೆಯಂಡ ಸುಬ್ಬಯ್ಯನವರನ್ನೂ ನೇಮಕ ಮಾಡಲಾಯಿತು.

ಪ್ರತಿ ಸಂಘಗಳು ಆಯಾಯ ಸಂಘದಲ್ಲಿರುವ ರಿಜರ್ವ್ ಫಂಡಿನಲ್ಲಿ ಅರ್ಧಾಂಶವನ್ನು ಅಥವಾ ಶೇಕಡ 50 ರಷ್ಟು ಸಂಟ್ರಲ್ ಬ್ಯಾಂಕಿಗೆ ಕಳುಹಿಸಬೇಕೆಂದು ಚೀಫ್ ಕಮಿಷನರ್ ಸಾಹೇಬರವರ ಆರ್ಡರನ್ನು ಅನುಸರಿಸಿ ರಿಜಿಸ್ಟ್ರಾರ್ ಸಾಹೇಬರವರು ಸೂಚಿಸಿದರು. ಹೆಚ್ಚಿನ ಚರ್ಚೆ ನಡೆದು ರಿಜರ್ವ್ ಫಂಡಿನ ಶೇಕಡ 50 ರಷ್ಟು ಸೆಂಟ್ರಲ್ ಬ್ಯಾಂಕಿಗೆ ಕಳುಹಿಸಬೇಕಾದರೆ ಈ ಕೊಡಗಿನಲ್ಲಿರುವ ಎಲ್ಲಾ ಸಂಘಗಳ ಒಂದು ಕಾನ್ಫರೆನ್ಸನ್ನು ನಡಿಸಿ ಅದರಲ್ಲಿ ಯಾವ ರೀತಿಯಲ್ಲಿ ತೀರ್ಮಾನವಾಗುತ್ತದೋ ಆ ಮೇರೆ ನಡೆದುಕೊಳ್ಳಬೇಕೆಂಬದಾಗಿ ಈ ಕಾನ್ಫರೆನ್ಸಿನಲ್ಲಿ ತೀರ್ಮಾನಿಸಲಾಯಿತು.

ಸಹಕಾರಿ ಸಂಘಗಳ ಸೆಕ್ರೆಟರಿಗಳಿಗೆ ಲೆಕ್ಕಗಳನ್ನು ಇಡುವ ಮತ್ತು ಸಾಲ ಮನವಿಗಳ ಪಟ್ಟಿಯನ್ನು ತಯಾರಿಸುವ ಕ್ರಮಗಳನ್ನು ಸುಪರ್‌ವೈಜರು ಮತ್ತು ಇನ್ಸ್‌ಪೆಕ್ಟರು ಕಲಿಸಿಕೊಡಬೇಕೆಂದು ಸರ್ವಸಮ್ಮತದಿಂದ ಮಂಜೂರಾಯಿತು.

ಸಹಕಾರಿ ಸಂಘಗಳ ಕಮಿಟಿ ಪ್ರೆಸಿಡೆಂಟರು, ಯೂನಿಯನ್ ಪ್ರೆಸಿಡೆಂಟರು ಮತ್ತು ಸುಪರ್‌ವೈಜರು ಸಹಕಾರದ ಆಕ್ಟು, ರೂಲ್ಸ್ ಮತ್ತು ಬೈಲಾಗಳನ್ನು ಜಾಡೊಂದು ಮೀಟಿಂಗು ಮಾಡಿ ಮೆಂಬರುಗಳಿಗೆ ಓದಿ ಅವರ ಮನಸ್ಸಿಗೆ ಮುಂದಟ್ಟುವಂತೆ ಮಾಡಬೇಕೆಂದು ಮಂಜೂರು ಮಾಡಲಾಯಿತು.

ಪ್ರತಿ ಸಂಘವು ಮಂಗಳೂರಿನಲ್ಲಿ ಹೊರಡಿಸಲ್ಪಟ್ಟ ಸಹಕಾರಿ ಮಾಸಪತ್ರಿಕೆಯನ್ನು ತರಿಸಿಕೊಳ್ಳಬೇಕೆಂದು ಸರ್ವ ಸಮ್ಮತದಿಂದ ಮಂಜೂರಾಯಿತು.

ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗು ಬರಕಾಸ್ತು ಮಾಡಲಾಯಿತು.

ಕೆ. ಯನ್. ಸುಬ್ಬರಾಯ,
ಅಧ್ಯಕ್ಷರು.

ಆಸ್ಪತ್ರೆ.

ಅಯ್ಯಾ,

ನಮ್ಮ ಆಸ್ಪತ್ರೆಗಳಲ್ಲಿ ಸ್ತ್ರೀವೈದ್ಯರುಗಳು (Lady doctors) ಇರುವುದು ಅಗತ್ಯವೆಂದು ಎಷ್ಟೋ ದಿಂದಿಯೇ ಜನರು ಅಭಿಪ್ರಾಯಕೊಟ್ಟಿದ್ದದ್ದು ನನಗೆ ಸ್ವಲ್ಪ ಜ್ಞಾಪಕಕ್ಕೆ ಬರುತ್ತೆ. ಹ್ಯಾಗೂ ಸಮ್ಮಂಧಪಟ್ಟ ಅಧಿಕಾರಿಗಳು ಇದಕ್ಕೆ ತಕ್ಕ ಏರ್ಪಾಡು ಮಾಡಿ ಬಹು ರೈತರ ಪ್ರೀತಿಗೆ ಪಾತ್ರರಾಗುವರೆಂದು. ನಾನು ಖಂಡಿತವಾಗಿ ನಂಬಿ ಈ ಸುಸಮಯವು ಯಾವಾಗ ಒದಗುವುದೆಂದು ಇದಿರು ನೋಡುತ್ತಾ ಇದ್ದೆನು. ಆದರೆ ಇಷ್ಟರ ವರೆಗೂ ನನ್ನ ಆಶಾಭಂಗವಾದದ್ದಕ್ಕೆ ನಾನು ಬಹಳವಾಗಿ ವ್ಯಸನಪಡುತ್ತೇನೆ. ನನ್ನಂತೆಯೇ ಈ ವಿಷಯದಲ್ಲಿ ಚಿಂತಿಸತಕ್ಕವರು ಬಹು ಜನರಿರಬಹುದೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಆದುದರಿಂದ ಕರುಣಾಳುಗಳಾಗಿ, ರೈತರ ಕ್ಷೇಮವೇ ನಮ್ಮ ಕ್ಷೇಮವೆಂದು ಭಾವಿಸುವ ನಮ್ಮ ಸರಕಾರವು ಈ ವಿಷಯಕ್ಕೆ ಹೆಚ್ಚಿನ ನಿಗಕೊಟ್ಟು ರೈತರ ಕಷ್ಟವನ್ನು ಕಡಿಮೆ ಮಾಡುವರಾಗಿ ನಂಬುತ್ತೇನೆ.

ಈ ವಿಷಯಕ್ಕೆ ದೇಶದ ಜನಗಳು ಮೊದಲೇ ಕೂಗುತ್ತಿರುವ ಕಾರಣ ನಾನು ಲೇಡಿ ಡಾಕ್ಟರ ಅಗತ್ಯವನ್ನು ವಿವರಿಸಿ ಹೇಳಬೇಕಾಗಿಲ್ಲ. ಆದರೆ ನಮ್ಮ ಸರಕಾರವು ಯಾವ ಕೆಲಸವನ್ನು ಮಾಡುವದಾದರೂ ಹಣದ ವಿಷಯವನ್ನು ಮುಂದಿಟ್ಟುಕೊಳ್ಳುವ ಕಾರಣ ಆ ಸಮ್ಮಂಧವಾಗಿ ನನ್ನ ಚಿಕ್ಕದೊಂದು ಅಭಿಪ್ರಾಯವನ್ನು ಈ ಮೂಲಕ ಸೂಚಿಸಬೇಕಾಗಿದೆ. ಅದೇನಂದರೆ.—

ತತ್ಕಾಲಕ್ಕೆ ಕೊಡಗಿನಲ್ಲಿ ಮಡಿಕೇರಿ ಮತ್ತು ವೀರರಾಜಪೇಟೆಗಳಲ್ಲಿ ಲೇಡಿ ಡಾಕ್ಟರು ಇರುವುದು ಅಗತ್ಯವಾಗಿದೆ. ಆದರೆ ಈ ಇಬ್ಬರ ಸಂಬಳಕ್ಕೆ ಹಣವಿಲ್ಲವೆಂದು ಕಂಡರೆ ತತ್ಕಾಲಕ್ಕೆ ಜನಸಂಖ್ಯೆಯು ಹೆಚ್ಚಾಗಿಯೂ ಮತ್ತು ಸಮಯಕ್ಕೆ ಸರಿಯಾಗಿ ಸಹಾಯವಿಲ್ಲದೆ ಹೆಚ್ಚಿನ ಗರ್ಭಿಣಿ ಸ್ತ್ರೀಯರು ಸಾಯುತ್ತಲೂ ಇರುವ ವೀರರಾಜೇಂದ್ರ ಪೇಟೆಯಲ್ಲಿ ಟೆಂಪರರಿ (Temporary) ಒಬ್ಬರನ್ನು ಮಡಗಿ ಒಂದು ವರ್ಷ ನೋಡಿ ಅಗತ್ಯವಿದ್ದರೆ ಮುಂದಕ್ಕೆ ಹ್ಯಾಗಾದರೂ ಮಾಡಿ ಅಷ್ಟು ಹಣವನ್ನು ಒದಗಿಸಿಕೊಳ್ಳಬೇಕು. ಇಂಥಾ ಅತಿ ಅಗತ್ಯವಾದ ಕಾರ್ಯಕ್ಕೆ ಒಂದು ವರ್ಷಕ್ಕೆ ಬೇಕಾಗುವ ಕಿಂಚಿತವಾದ ಹಣವನ್ನು ನಮ್ಮ ಸರಕಾರವು ಯಾವ ರೀತಿಯಲ್ಲಿಯಾದರೂ ಒದಗಿಸಿಕೊಳ್ಳಬಹುದೆಂದು ನನಗೆ ಪೂರಾ ಭರವಸೆ ಇದೆ. ಆಸ್ಪತ್ರೆಯ ಒಡ್ಜೆಟ್ಟಿನ ಉಳಿತಾಯದಿಂದಲೇ ಈ ಕಿಂಚಿತ ಖರ್ಚನ್ನು ಮಾಡಬಹುದಾಗಿದೆ,

ಹೀಗೆ ಮಾಡಲು ಒಪ್ಪಿದರೆ ನಮ್ಮ ಸರಕಾರವು ಮೊದಲಿನಂತೆ ಅದಕ್ಕಾಗಿ ಜನರನ್ನು ಕಳುಹಿಸಿ ಖರ್ಚುಕೊಟ್ಟು ತರಬೇಕು ಮಾಡಬೇಕಾದ ಅಗತ್ಯವಿಲ್ಲ. ಯಾಕಂದರೆ—ಈಗ ಎಷ್ಟೋ ಜನರು ತಮ್ಮ ತಮ್ಮ ಸ್ವಂತ ಖರ್ಚಿನಿಂದ ತರಬೇತು ಹೊಂದಿ ನಮ್ಮ ದೇಶದಲ್ಲಿ ಕೆಲಸವಿಲ್ಲದೆ ಪರದೇಶಕ್ಕೆ ಕೆಲಸಕ್ಕೆ ಹೋಗುವರು. ಇಂಥವರಿಗೆ ತಮ್ಮ ತಮ್ಮ ಸಹೋದರಿಯರಿಗೆ ಸಹಾಯಮಾಡುವಂಥ ಒಂದು ಸಂದರ್ಭವನ್ನು ನಮ್ಮ ಸರಕಾರದವರು ಒದಗಿಸಿಕೊಡಲು ಸ್ವಲ್ಪವೂ ಹಿಂಜರಿಯಲಿಕ್ಕಿಲ್ಲವಾಗಿ ನಾನು ನಂಬುತ್ತೇನೆ. ಈ ವಿಷಯಕ್ಕೆ ಸರಕಾರದವರು ತಕ್ಕಷ್ಟು ಗಮನವನ್ನು ಕೊಟ್ಟರೆ ಈಗ ತಾನೇ ತನ್ನ ತರಬೇತು ಮುಗಿಸಿಕೊಂಡು ಯಾವ ಕಡೆ ಹೋಗಬೇಕೆಂದು ಯೋಚಿಸುತ್ತಿರುವ ಶ್ರೀಮತಿ ಐಚೆಟ್ಟಿರ ಮುದ್ದಮ್ಮನವರಿಗೆ ಈ ಕೆಲಸವನ್ನು ಕೈಕೊಳ್ಳಲು ಅನುಕೂಲ ಒದಗಿದಂತೆ ಆಗುವುದು. ಇವರು ಮೈಸೂರು ಸರಕಾರದವರಲ್ಲಿ ತರಬೇತು ಹೊಂದಿದರೂ ಅಲ್ಲಿಯೇ ಕೆಲಸ ಮಾಡಬೇಕೆಂಬ ಒಲೋತ್ಸಂಧಿ ಏನೂ ಇಲ್ಲವೆಂದು ನಾನು ತಿಳಿಯುತ್ತೇನೆ. ಆದಕಾರಣದಿಂದಲೂ ಮತ್ತು ತನ್ನ ಜನರಿಗೆ ಕೈಲಾದ ಮಟ್ಟಿಗೆ ಸಹಾಯ ಮಾಡುತ್ತೇನೆಂಬ ಉದಾರ ಮನಸ್ಸಿನಿಂದಲೂ ಇವರು ಖಂಡಿತವಾಗಿಯೂ ನಮ್ಮ ದೇಶಕ್ಕೆ ಬರಲು ಸಂತೋಷ ಪಡುವರೆಂದು ನಾನು ಭಾವಿಸುವೆನು.

ಇದಾದ ಮೇಲೆ ನಮ್ಮ ಆಸ್ಪತ್ರೆಯ ಉಪಚಾರಕರ ವಿಷಯ ನಾನು ಒಂದೆರಡು ಮಾತು ಹೇಳಬೇಕಾಗಿದೆ. ಅದೇನಂದರೆ:—

ನಮ್ಮ ಆಸ್ಪತ್ರೆಗಳಲ್ಲಿ ಈಗ ಹೆಚ್ಚಾಗಿ ಯೂರೋಪಿಯನ್ ನರಸುಗಳು ಇದ್ದಾರೆ. ಇವರಿಗೆ ಸಾಧಾರಣವಾಗಿ ದೇಶದ ಭಾಷೆಯು ಚೆನ್ನಾಗಿ ಬರುವದಿಲ್ಲ. ಆದಕಾರಣ ಕಾಯಿಲಸ್ಥರು ಹೇಳುವ ವಿಷಯವು ಇವರಿಗೆ ಚೆನ್ನಾಗಿ ತಿಳಿಯುವದಿಲ್ಲ. ಅದಲ್ಲದೆ ಅವರು ಇವರ ಭಾಷೆಯು ತಮಗೆ ಬಾರದ್ದರಿಂದ ಕಾಯಿಲಸ್ಥರು ತಮಗೆ ಹೇಳಬೇಕೆಂದಿರುವ ವಿಷಯವನ್ನು ಹೇಳಲು ಸಹ ಹಿಂಜರಿಯುವರು. ಆದುದರಿಂದ ಇಂಥಾ ವಿಷಯಗಳನ್ನು ಆಲೋಚಿಸಿ ಇನ್ನು ಮುಂದಕ್ಕೆ ಎಲ್ಲಾ ಆಸ್ಪತ್ರೆಗಳಲ್ಲಿಯೂ ದೇಶೀಯ ಭಾಷೆಯನ್ನು ಚೆನ್ನಾಗಿ ಗೊತ್ತಿರುವ ಮತ್ತು ಯೂರೋಪಿಯನ್ ನರಸುಗಳಂತೆಯೇ ತರಬೇತು ಹೊಂದಿರುವವರನ್ನು ನರಸುಗಳಾಗಿ ನೇಮಿಸಬೇಕಾಗಿ ನಾನು ಈ ಮೂಲಕ ಕೇಳಿಕೊಳ್ಳುವೆನು. ನಮ್ಮ ದೇಶದವರು ಈಗೀಗ ಈ ವಿಷಯದಲ್ಲಿ ತರಬೇತು ಹೊಂದುತ್ತಲಿರುವರು. ಅಂಥವರನ್ನು ಈ ಕೆಲಸಗಳಿಗೆ ನೇಮಿಸಿ ಪ್ರೋತ್ಸಾಹಿಸಬೇಕಾಗಿ ನಾನು ಈ ಮೂಲಕ ಸರಕಾರದವರನ್ನು ಕೇಳಿಕೊಳ್ಳುವೆನು.

ದೇಶ ಹಿತೈಷಿ.

ಸಂಪಾದಕರಿಗೆ ಬಂದ ಪತ್ರ.

ಅಯ್ಯಾ,

ಕಾರ್ಯಕಾರಣ ಸಂಯೋಗಗಳಿಂದ ಒಂದು ದೇಶದಲ್ಲಿ ಜಾಗ್ರತಾವಸ್ಥೆಯು ತಲೆದೋರಿದಾಗ ಇತರ ದೇಶದ ಜನರು ಅಥವಾ ಇತರ ದೇಶಗಳಿಗೆ ಹೋಗಿ ಪಾಂಡಿತ್ಯವನ್ನು ಹೊಂದಿದಂಥ ಸ್ಥಳೀಕ ಜನರು ಸ್ವದೇಶಕ್ಕೆ ಒಂದು ದೇಶಸೇವೆಯನ್ನೂ ಸಮಾಜಸೇವೆಯನ್ನೂ ಜನ್ಮದಾರಭ್ಯ ಅಂಕುರಿಸಿರುವ ಭಾತೃವಾತ್ಸಲ್ಯದಿಂದಲೂ ದೇಶವಾತ್ಸಲ್ಯದಿಂದಲೂ ಇತರ ಜನಾಂಗದ ಜನರು ತಮ್ಮ ಪೂರ್ವಾನುಭವದ ಪ್ರತೀತಿಯಿಂದ ಸೂಕ್ಷ್ಮವೆಂದು ತಿಳಿದ ಧ್ಯೇಯಗಳನ್ನನುಸರಿಸಿ ಶಕ್ತ್ಯಾನುಸಾರದ ಮಟ್ಟಿಗೆ ನಿಸ್ಪೃಹತೆಯಿಂದ ಕೆಲಸವನ್ನು ಮಾಡಿಕೊಡುವರು. ಈ ರೀತಿಯಾಗಿ ಜಾಗ್ರತಾವಸ್ಥೆಯನ್ನು ಹೊಂದಿ ಕೆಲವು ದಿವಸಗಳಿಂದೀಚೆಗೆ ಚಿಕ್ಕ ಪ್ರಾಂತ್ಯವಾದ ನಮ್ಮ ಕೊಡಗು ದೇಶವೂ ಕೂಡ ಸ್ಥಳೀಯ ಜನರ ಮತ್ತು ಪರರ ಅವಗಾಹನೆಗೆ ಒಳಗಾಗಿದೆ.

ಈ ರೀತಿ ಇತರ ದೇಶಗಳಲ್ಲಿ ಸ್ಥಾಪಿತವಾದಂತೆ ರಾಮಕೃಷ್ಣ ಮಠದ ಒಂದು ಶಾಖೆಯು ಅದೃಷ್ಟವಶದಿಂದಲೋ ಅಥವಾ ದಕ್ಷಿಣ ಕೊಡಗಿನ ಶ್ರೀ. ಮಹಾಶಯರ ಸುಕೃತಫಲದಿಂದಲೋ ಪೊನ್ನಂಪೇಟೆಯಲ್ಲಿ ಸ್ಥಾಪಿತವಾಯಿತು. ಸ್ಥಾಪನದಕ್ಕೆ ಯಾವ ಅಡಚಣೆಯೂ ಇಲ್ಲದೆ ಶಾಂತ ಮನಸ್ಸಿನಿಂದಲೂ, ಶ್ರದ್ಧೆಯಿಂದಲೂ ಬಿಡದೆ ಪರದೇಶಗಳಲ್ಲಿ ಇರುವ ರಾಮಕೃಷ್ಣ ಮಠಗಳಲ್ಲಿ ಕೆಲಸ ಮಾಡುತ್ತಿದ್ದ ಮಹನೀಯರೊಬ್ಬರು ಕೊಡಗಿನ ಶಾಖಾ ಮಠದ ಕಾರ್ಯ ನಿರ್ವಹಿಸಲು ಒದಗಿದರು. ಈ ಮಹನೀಯರು ಸ್ಥಳೀಕರೆಂದೂ, ಕೊಡಗು ದೇಶದಲ್ಲೇ ಹುಟ್ಟಿ ಬೆಳೆದವರೆಂದೂ ಅನೇಕ ಜನರಿಗೆ ತಿಳಿದಿರಲಿಲ್ಲವು. ಅನೇಕ ಜನರಿಗೆ ಇನ್ನೂ ತಿಳಿದಿಲ್ಲವು. ಈ ಭಕ್ತರು ಯಾವ ಮನೋಭಾವದ ಪ್ರಭಾವದಿಂದ ಈ ಸರಳ ಜೀವನವನ್ನು ಅಪೇಕ್ಷಿಸಿ ಈ ಅವಸ್ಥೆಗೆ ಸೇರಿದರೆಂಬುವನ್ನು ಅನೇಕ ಜನರು ಮನನ ಮಾಡಿ ತಿಳಿದುಕೊಂಡಿರುವುದಿಲ್ಲವು. ಹ್ಯಾಗೂ ವ್ಯವಸ್ಥೆಯ ಧ್ಯೇಯಾನುಸಾರವಾಗಿ ಈ ಭಕ್ತರು ಶಾಂಭವಾನಂದ ಸ್ವಾಮಿಗಳೆಂಬ ನಾಮಧೇಯದಿಂದ ಸ್ಥಳೀಕ ಜನರ ಪ್ರೀತಿಗೆ ಪಾತ್ರರಾಗಿ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗುತ್ತಾ ಇರುವರು.

ಈ ತನ್ಮಧ್ಯೆ ಯಾವುದೋ ಕಾರಣದಿಂದ ಇವರನ್ನು ಬೆಂಗಳೂರಿನಲ್ಲಿ ಪಂಚಮರ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆರಿಸಿಕೊಂಡನಂತರ ಈ ಸ್ವಾಮಿಗಳ ಹೆಸರು ಬಹಿರಂಗವಾಗಿ ಪ್ರಚಾರಕ್ಕೆ ಬರುತ್ತಾ ಇದೆ. ಅದರೆ ಈ ಸ್ವಾಮಿಯವರು ಸಹಪಂಕ್ತಿಭೋಜನ ಮಾಡಲಿಲ್ಲವೆಂಬ ದೋಷಾರೋಪಣೆಯ ವಾರ್ತೆಗಳು ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿ ಅಲ್ಲದ ಸಲ್ಲದ ಚರ್ಚೆಗಳಿಗೆ ಎಡೆಗೊಟ್ಟಿದೆ. ಇದರಿಂದಲೇ ಅವರ ಹೆಸರು ಅನೇಕರಿಗೆ ತಿಳಿಯಬಂದರೂ ಕೂಡ ಈ ಸಂದರ್ಭವನ್ನು ದೊರಕಿಸಿಕೊಟ್ಟ ಕೆಲಸವು ಬಹಳ ಸ್ತುತ್ಯರ್ಹವಾದುದಲ್ಲ.

ವರ್ತಮಾನ ಪತ್ರಿಕೆಗಳು ಮತಾನು ಸಂಬಂಧ, ಪಂಗಡಭೇದ ಅಥವಾ ಜಾತಿಭೇದದ ವಿಷಯಗಳಲ್ಲಿ ಅದಷ್ಟು ಮಟ್ಟಿಗೆ ಚರ್ಚೆಗೆ ಕೊಂಚ ಎಡೆಯನ್ನು ಕೊಡಬೇಕಾದುದು ತಿಳಿಯದ ಸಂಗತಿಯಲ್ಲ. ಆದರೆ ಪಂಚಮ ಸಮ್ಮೇಳನವು ನಡೆದನಂತರ ಇಂದಿನ ವರೆಗೆ ನಿಮ್ಮ ಪತ್ರಿಕೆಯಲ್ಲಿ ಅನೇಕ ಚಚಾರ್ಸ್ಪದವಾದ ಸಹಪಂಕ್ತಿಭೋಜನ ವಿಷಯದಲ್ಲು ಪ್ರತಿ ವಾರವೂ ವಾರ್ತೆಗಳು ಪ್ರಕಟವಾಗುತ್ತಿವೆ. ಇದರಿಂದ ವರ್ತಮಾನ ಪತ್ರಿಕೆಯು ಕೇವಲ ಕಲಹ ಪ್ರಿಯವೆಂಬ ಭಾವವನ್ನು ಬಹಿರಂಗಪಡಿಸುವ ರಂಗಭೂಮಿಯಾಗಿದೆ ಎಂದ ಮೇಲೆ ವರ್ತಮಾನ ಪತ್ರಿಕೆಯು ಸಾಧಾರಣವಾಗಿ ಮತಾನು ಸಂಬಂಧ ಕಲಹಗಳನ್ನು ಈ ರೀತ್ಯಾ ಅವಕಾಶಕೊಟ್ಟು ಅಧಿಕಗೊಳಿಸುತ್ತದೆಂದು ಹೇಳುವುದು ಅತಿಶಯವು.

ಸಹಪಂಕ್ತಿಭೋಜನಕ್ಕೆ ವ್ಯಕ್ತಿಯ ಮನೋಭಾವವೇ ಮುಖ್ಯ ಕಾರಣ. ಸ್ವಾಮಿಗಳು ಅಂದರೆ ಸಮಾಜದ ಕಟ್ಟುಕಟ್ಟುಗಳಿಂದ ಬದ್ಧರಾಗದೆ ಬ್ರಾಹ್ಮಣ, ಪಂಚಮ, ವೈಶ್ಯ ಈ ಸಮಾಜಿಕರ ಮಧ್ಯೆ ಎಲ್ಲಿಯಾದರೊಂದರೆ ಇಲ್ಲದೆ ಬೆರೆಯಬಹುದು. ಪತ್ರಿಕೆಗಳಲ್ಲಿ ವಾರ್ತೆಗಳನ್ನು ಬರೆಯುವ ವಿವಿಧ ಜನರು ಈ ರೀತಿ ಬೆರೆತುಕೊಳ್ಳುವುದು ಬಹಳ ಕಷ್ಟವಾಗಿಯೇ ಇದೆ. ಈ ಕಾರಣದಿಂದಲೇ ಪಂಚಮರ ಜೊತೆಯಲ್ಲಿ ಮಾತ್ರ ಸೇರಿ ಭೋಜನ ಮಾಡಿದರೆ ಸಮಾಜೋದ್ಧಾರವಾಗಲಾರದೆಂದು ವಿದಿತವಾಗುವುದು. ಬ್ರಾಹ್ಮಣರ ಪಂಗಡದಲ್ಲಿ ಕೊಡಗರು ಸಹಪಂಕ್ತಿ ಭೋಜನವನ್ನು ಮಾಡಲು ಅವಕಾಶ ದೊರಕುವುದೋ? ಅಥವಾ ಕೊಡಗರ ಪಂಗಡದಲ್ಲಿ ಬ್ರಾಹ್ಮಣರು ಸಹಪಂಕ್ತಿಭೋಜನ ಮಾಡಿ ದೋಷಾರೋಪಣೆಯಿಲ್ಲದೆ ಹೋಗುವರೋ ಎಂಬೀ ವಿಷಯಗಳನ್ನು ಕೂಲಂಕಷವಾಗಿ ಪರೀಕ್ಷಿಸಬೇಕಾದುದು ಸಮಾಜೋದ್ಧಾರವನ್ನು ಅಪೇಕ್ಷಿಸುವ ಪ್ರತಿ ಒಬ್ಬ ಮಾನವನು ಆಲೋಚಿಸತಕ್ಕದ್ದು.

ಎಂದಿನ ವರೆಗೆ ಯಾವ ಪಂಗಡದಲ್ಲಿಯಾಗಲೀ ವಿದ್ಯೆ, ಬುದ್ಧಿ, ನೀತಿ, ನಡತೆ ಮೊದಲಾದ ಈ ವಿಷಯಗಳಿಗೆ ಪ್ರಾಶಸ್ತ್ಯ ಕೊಡದೆ ಬರೀ ಸಮ್ಮೇಳನಗಳಲ್ಲಿ ಸಹಪಂಕ್ತಿಭೋಜನವನ್ನು ಮಾಡಿದಾಕ್ಷಣ ಆ ಪಂಗಡವು ಜಾತ್ಯತೀತತ್ವಕ್ಕೆ ಬರುವುದೆಂಬ ಭಾವನೆಯಿಂದ ಜನರು ವರ್ತಿಸುವರೋ ಅಂದಿನ ವರೆಗೆ ಅಂಥ ಮಾನವರೇ ಈ ನಿಮ್ಮ ಜಾತಿಯ ಏಳಿಗೆಗೆ ಎಡರುಗಳೆಂದು ಭಾವಿಸತಕ್ಕದ್ದಾಗಿದೆ. ಇಂಥವರ ಮಾತ್ಸರ್ಯದಿಂದಲೇ ನೀತಿ ಮಾರ್ಗದಲ್ಲಿ ವರ್ತಿಸುವ ಕೆಲವು ಸಮಾಜದ ಸೇವಕರ ಕೆಲಸವು ಟೀಕಾಸ್ಪದವಾಗುತ್ತದೆ. ಕುಲಸೇವೆಯ ಸಮಾಜಸೇವೆಯ ರಹಸ್ಯವನ್ನು ಸರಿ ತಿಳಿದುಕೊಂಡಂತವರು ಈ ಟೀಕೆಗಳಿಗೆ ಭಯಪಡದೆ ಈ ಟೀಕೆಗಳನ್ನು ಓರೆಗಣ್ಣಿನಿಂದಲೂ ನೋಡದೆ ತಾವು ಹಿಡಿದ ಕೆಲಸವನ್ನು ಮುಂದರಿಸುವರು. ಇದೇ ಇಂತಹ ಸಜ್ಜನ ಸೇವಕರ ಕಾರ್ಯಗಳಲ್ಲಿ ಉಂಟಾಗುವ ಕೆಲವೇ ನ್ಯೂನತೆಗಳನ್ನು ಪತ್ರಿಕೆಗಳೇ ಚರ್ಚಿಸಲು ಪ್ರೋತ್ಸಾಹಕೊಟ್ಟರೆ ಸಮಾಜ ಸೇವೆಯ ಕೆಲಸವು ಬಹಳ ಮಟ್ಟಿಗೆ ನಿಧಾನವಾಗುವುದು.

ಆದುದರಿಂದ ಕೇವಲ ಉತ್ತಮ ವರ್ಗಕ್ಕೆ ಸೇರಿದ ನಿಮ್ಮ ಈ ಪತ್ರಿಕೆಯು ಈ ರಹಸ್ಯವನ್ನರಿತು ಇನ್ನು ಮುಂದೆ ಈ ವಿಷಯಕ್ಕೆ ಅಧಿಕ ಪ್ರಾಶಸ್ತ್ಯ ಕೊಡದೆ ಇಲ್ಲಿಗೆ ಅಂಥಾ ವಾರ್ತೆಗಳನ್ನು ನಿಲ್ಲಿಸಿ ಮಾಡಬೇಕಾಗಿ ಪ್ರಾರ್ಥಿಸಿ ಈ ನನ್ನ ವಿನಂತಿ ಕೋರಿಕೆಯನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರುವ.

ಯಂ. ಯಂ. ನಂಜುಂಡ.

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಕಾರ್ಖಾನೆಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸಮಾನವಾಗಿರುವದು. ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುತ್ತೇವೆ. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು.



ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ. 6—8—0

ಬೆಸ್ಟ್ ಫೌಂಟನ್‌ಪೆನ್.

ಈ ಪೇನವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಬಂಗಾರದ ಸಿಬ್ಬು ಹಾಕಿದೆ. ಈ ಪೇನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಂ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0

ವಿಳಾಸ —ಲೀಡರ್ ವಾಚ್ ಕಂಪನಿ

52—1 ಪೋ. ಬಾಕ್ಸ ನಂ 243, ಮದರಾಸ.

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L. Rifles	Rs. 120	to	Rs	2750.
S B. B L "	" 35	to	"	950.
D B B L Guns	" 50	to	"	1350.
S B. B L. "	" 35	to	"	275.
D B M L "	" 45	to		135
S B M L "	" 30	to	"	80.
B. L Revolver	" 35	to	"	350
Automatic Pistols	" 30	to	"	150.

Brilliant Search Light Lamp For Shooting, Camping, Fishing and All such other Night Sports and works Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rate.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

21 Abdul Rehman Street, BOMBAY.

24—6

ಡಿ ಬಿ ಬಿ ಯಲ್. ಕೋವಿಗಳು ರೂ. 75 ರಿಂದ ರೂ. 450/

ಯಸ್ ಬಿ ಬಿ. ಯಲ್ ಕೋವಿಗಳು ರೂ. 35 ರಿಂದ ರೂ 250/

ಯಸ್ ಬಿ. ಯಮ್ ಯಲ್ ಕೋವಿಗಳು ರೂ. 35 ರಿಂದ 65/.

ರಿವಾಲ್ವರುಗಳು ರೂ. 40/ರ ರೂ 125/ರ ವರೆಗೆ

ಡಬ್ಬಲ್ ಮತ್ತು ಸಿಂಗಲ್ ಬೋರಿನ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ಈ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಆವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಿರಿ.

ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆ ಬೀಲಿಯ ಕಂಪೆನಿ.

21—23 12. ಬ್ರಾಡ್ವೇ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925 —	13515 —	ರೂ 2,1,42,000.
1926 —	17371 —	ರೂ. 3,01,33,000.
1927 —	21418 —	ರೂ 4,68,04,075.

— ಪ್ರೀಮಿಯಂ ಉತ್ಪತ್ತಿ —

1925 —	ರೂ 92,66,000.
1926 —	ರೂ. 1,05,33,000.
1927 —	ರೂ. 1,21 53 000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.

ಕಂಪನಿಯ ಫಂಡು 6 ಕೋಟಿ ರೂಪಾಯಿಗಳಿಗೆ ಮೀರಿದೆ

ಜೀವವಿಮೆ ಮಾಡಬೇಕೆಂದಿರುವವರು ತಾವೆಕಾಣ ಪಡದ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದು ಕೇಳ್ಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬಂಗಳೂರು. 52—6

ಎಲ್. ಆರ್. ಕೃಷ್ಣಸ್ವಾಮಿ ಅಯ್ಯರ್, ಬ್ರಾಂಚ್ ಸಕ್ರೆಟರಿ

ಎಂ. ಎಸ್. ಶಿವಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಪದ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳು.

ಲ್ ಒಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
ಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
ಹುನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
ಸ್ಲೀಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	—0—0
ಹರಿಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	0

ಸಚಿತ್ರ ಕ್ಯಾಟಲಾಗ್ ... ರವಾನಿಸಿ.

ಉತ್ತಮ ತರಪದ 14 ಕ್ಯಾರೆಟ್ಟು ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು.

ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ	3—8—0 ಮತ್ತು 3—12—0
ವರಲ್ಡ್ಸ್ ವಂಡರ್ ಫೌಂಟನ್ ಪೆನ್ 1ಕ್ಕೆ	3—0—0 ಮತ್ತು 3—8—0
ಕಾಂಪ್ಯಾಕ್ಟ್ ಸಪ್ಲೈನ್ ಫೌಂಟನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ	8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ	12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ವೆಸ್ಟ್‌ಕ್ಲಾಕ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9—5—0
ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ	6—12—
ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	15 510
ಜನರಿಂದ ಠೇವಣಾತಿ	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹಣ್ಕಾಗಿ ಸಾಲಕೊಡಶಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲ್ಕರ ರೂ 5 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲ್ಕರ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್

ಟ್ರೆಜರರ್, ಕೊಂಗಟ್ಟಿರ ಅಪ್ಪಯ್ಯನವರು

ಸೆಕ್ರೆಟರಿ
ಸಿ ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್
ತಾರೀಕು 1—7—192

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಪೇರಿಯಂಡ ಪೂವಯ್ಯನವರು
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು
ಮರೆನಾಡು—ಮೆ ಕೇಕಿರ ಅಣ್ಣಯ್ಯನವರು

ಸಬ್ ಏಜಂಟರುಗಳು

ನಾಪೋಕ್ಲು—ಮೆ ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ ಒಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ ಐಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಪಿ ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ ಜಿ ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಒವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರದು ರಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ರರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್
ಕೊಡಗು ಮಡಿಕೇರಿ

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ ದಿನಾ ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಬಾಗ ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1—4—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ ಮೂತ್ರ ಪಿಂಡಗಳ ಉರಿ, ಮೂತ್ರನಾಳದಲಿ ಹುಣ್ಣಾಗುವುದು ಮೂತ್ರಕೋಶದ ಉರಿ ಮೂತ್ರ ನಾಳದಿಂದ ಕೀವು ಬರುವುದು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರ ಕಡಿಮೆಯಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳದ ಬಿಚ್ಚುವ ಸೋವು ಇವುಗಳಿಗೆ ಪರಮ ಔಷಧಿ ಬಾಟ್ಲಿ 1 3 6ಕ್ಕೆ ರೂ 1—1— 3—8—0 6—12—0

ರೋಮನಾಶಿನಿ:—ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುತ್ತದೆ ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ.—ತಲೆನೋವು ತಲೆತಿರುಗುವುದು, ತಲೆಶೂಲೆ, ಕಣ್ಣು ಕಿವಿಯಿಂದ ಕೀವು ಸೋರುವುದು ಕತ್ತಲೆ ಕಣ್ಣು ಸೊಪ್ಪು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಉದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—5—

ವಿಳಾಸ—ಮನೋಲ್ಲಾಸಿನಿ ಕಂಪೆನಿ.
೯. ಮಂಗಳೂರು

ನಮ್ಮ ಕೆಟಲಾಗು ತರಿಸಿ ನೋಡಿರಿ

52—33

Kapurchand & Co.

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery Stationary, etc., etc. Chickapet, BANGALORE CITY

ಅಪೂರ್ವ ಸಮಯ! ಅಲಭ್ಯ ಲಾಭ!

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಒಳ್ಳೆ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—11

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897

1927ನೇ ಇಸವಿ ಫೆಬ್ರುವರಿ 28ಕ್ಕೆ ಆಖೈರಾದ 5 ವರ್ಷಗಳ ಕೆಲಸದ

ಬೆಲೆಕಟ್ಟಿದಲ್ಲಿ
ರೂ. 37,66,689.
ಉಳಿವರಿ ಕಂಡುಬಂದಿದೆ

ಒಟ್ಟು ಜೀವವಿಮೆಯ 1000 ರೂಪಾಯಿಗಳಿಗೆ ಸಾಲಿಯಾನ 15 ರೂಪಾಯಿಸಂತೆಯೂ } ಮತ್ತು { ಪ್ರಾಯ ಮಿತಿಯ ವಿಮೆಯ 1000 ರೂಪಾಯಿಗಳಿಗೆ 12 ರೂಪಾಯಿಸಂತೆಯೂ

ವರ್ಷವಾರಿ ಬೋನಸ್ ಹಂಚ ಬಹುದೆಂತ ತೀರ್ಮಾನವಾಗಿದೆ

ವಿಳಾಸ
ಎಂಪಯರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು
ಕಮರ್ಶಿಯಲ್ ಬೀದಿ
ಬೆಂಗಳೂರು

24—20

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address—"SHOOTER" Bombay.

(2—37) 'Please write for our Catalogue 1928—1929

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಪೂವರ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್

ಚೀಫ್ ಏಜನ್ಸಿ ಆಫೀಸು—ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರುಗಳ ಹಣ ಮತ್ತು ಅವರ ಬಡ್ಡಿ ಲಾಭ ವಗೈರೆ ... ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವ ಸಮ್ಮತದಿಂದ ಮಂಜೂರಾಗಿದೆ ಈ ದೇಶಸ್ಥರಿಗೆ ಕೊಡಬೇಕೆಂಬ ಠರಾವು ಜನವರಿ ತಾ ೭೯ರಲ್ಲಿ ಮಡಿಕೇರಿಯಲ್ಲಿ ನಡದ ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿ ಮೇರೆ ನಮ್ಮ ಸಂಘದ ಕೊಡಗಿನ ಪ್ರೋವಿನ್ಸಿಯಲ್ ... ಮುಂದೆ ಡ್ರಾಯಿಂಗ್ ತಾ 31—3—1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ಗೆಯಲಾಗಿ ಮಡಿಕೇರಿನಾಡು ಕಡಗದಾಳು ಗ್ರಾಮದ ಮೆ. ಕೊರವಂಡ ಮಂದಣ್ಣನವರ ಕುಟುಂಬ ... ಗೆ ಚೀಟಿ ಎತ್ತಿ ಬರಲು ಈ ವರ್ಷದ ಪ್ರಥಮ ಡ್ರಾಯಿಂಗಿನ ಐದು ನೂರು ರೂಪಾಯಿಗಳ (500—0—0) ... ವನ್ನು ಹೊಂದಲು ತೀರ್ಮಾನವಾಯಿತು ಅದನ್ನು ಈಚೆಗೆ ಕೊಡಲಾಗಿದೆ ಇದು ನಮ್ಮ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲಿಸಲಿಲ್ಲ. ಮುಂದಿನ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡುವದಕ್ಕೆ ಆದಷ್ಟು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹ ಪಡಿಸಬೇಕಾಗಿ ಈ ಪತ್ರಿಕೆ ಕೋರುತ್ತೇನೆ

ಅನಾಧರಾದಂಥ ಅಂಗಹೀನರುಗಳಿಗೆ ಈ ತಿಂಗಳು 20 ರಿಂದ ಈ ಸಂಘದ ಖರ್ಚಿನಲ್ಲು ಅನ್ನಾಹಾರಗಳು ಕೊಡಲು ಶುರುಮಾಡಲಾಗಿದೆ.

ಟಿ. ಎ. ಕುಪ್ಪಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
ಮಡಿಕೇರಿ

52—15

Printed & published by P. ... for "Kodagu" Ld. ... "Kodagu" Press, M...

-13x2

146

1928

Reg. No. M 1558

If not delivered please return to "KODAGU" OFFICE MERCARA.

ಕೊಡಗು.

ಸಂಪಾದಕ— ಐ. ಬೆಳ್ಯಪ್ಪ.

ಪ್ರತಿ ... ಪ್ರಕಟಿಸಲ್ಪಡುವದು.

[ಸಂಚಿಕೆ ೧

"THE SUNSHINE OF THE NIGHT."

Coleman Quick-Lite Lamps.

Bracket lamp	Rs. 45/- & 42/-
Table Lamp	„ 37/8/-
Lantern	„ 35/-
Pendant Lamp	„ 37/8/-
Chandelier Lamp	„ 82/-

The Coleman Quicklite is Brilliant, clean, simp

SPENCER & CO. LTD. Lamp Depot MERC

18

ಡು.

...ವರೆಗೆ 1497/...

...5000—0—7 ...

...56,497...

V. SUBRAMANIA IYER,

Manufacturing,

JEWELLER

GOLDSMITH SILVERSMITH & DEALER IN ALL PRECIOUS STONES

Post Box 423,
TRIPLICANE, MADRAS

Catalogue Free
to Bonafide Enquirers





Manufacturer of
HIGH CLASS
GEMSET JEWELS
a speciality

The special features of my productions are—
1 best QUALITY
2 Latest novel designs
3 Prompt execution
4 Neat & artistic finish
5 Moderate prices

GOLD
or
SILVERWARE
of all descriptions
neatly executed

2 8



Before buying any Arms & Ammunition, please order our Reduced NEW PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

14

ಕರ್ಣಿಕ

... ರಿನ ಕಪ್ಪುಗಳ ... ಇದನ್ನು ...

... ಬೆವರು ...

... ಬಾಟ್ಲಿಗೆ ...

ಟಪ್ಪಾಲು ವೆಚ್ಚ ಬೇರೆ

ಸಾ ... ಲಾ.

ಕೆಟ್ಟು ಹೋದ ರಕ್ತವನ್ನು ಶುದ್ಧ ಮಾಡುವುದಕ್ಕೆ ಇದು ಖಾತ್ರಿಯಾದ ಔಷಧ ... ಬೆಲೆ ೧ ಬಾಟ್ಲಿಗ ರೂ ೧—೦—೦ ಟಪ್ಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್

12—1

... ಲೇನ್,

ಗಿರಗಾಂವ, ಮುಂಬಾಯಿ

ಕೊಡಗು.

ಸ್ ೧೯೨೮ನೇ ಇಸವಿ ಜೂನ್
ತಾ. ೧ನೇ ಶುಕ್ರವಾರ.

ಸ್ವ ವಿ ಷ ಯ.

ನಮ್ಮ ಈ ಸಂಚಿಕೆಯೊಡನೆ ನಮ್ಮ ಜನ್ಮದ ಏಳನೇ ವರ್ಷ ತೀರಿ ಎಂಟನೇ ವರ್ಷ ಪ್ರಾರಂಭವಾಗುತ್ತದೆ. ನಮ್ಮ ಒನ್ನ ಪತ್ರಿವಾಗ ಇಟ್ಟುಕೊಂಡ ಧ್ಯೇಯಗಳನ್ನು ಸಾಧಿಸಲು ಪ್ರಯತ್ನಿಸುತ್ತಲೇ ಬಂದಿರುತ್ತೇವೆ. ನಮಗೆ ದೊರಕಿರುವ ಉತ್ತೇಜನದಿಂದ ನಮ್ಮ ಅಭಿಪ್ರಾಯಗಳು ಜನಸಾಮಾನ್ಯಕ್ಕೆ ಪ್ಪಿಗೆಯಾಗಿದೆಯೆಂತ ಧೈರ್ಯದಿಂದ ಹೇಳಬಹುದು. ಗ್ರಾ ...ತರದ ಜನರಿಗೆ ಸಾರ್ವಜನಿಕ ಕಾರ್ಯಗಳಲ್ಲಿ ಅಭಿರುಚಿ ತ್ತಲೇ ಇದೆ.

...ಶದ ಮುಂದೆ ಜವಾನ್‌ದಾರರ ಸಂಘವು ಇಟ್ಟಿರುವ ...ಯನು ತಿಳಿದುಕೊಳ್ಳದೆ ಇರುವ ವ್ಯಕ್ತಿ ...ನ ವರೆಗೆ ಎಡೆಬಿಡದೆ ಕೆಲಸ ...ಈ ರಾಜಕೀಯ ರಚ... ಗಟ್ಟಿನಿಂದ ಕೆಲಸ ...ಕೊಂಡರೆಗಳ ...ಜನರಿಗೆ ಸಿ ...ಒಂದು ಕ ...ತ ಭಾವಿಸಿ ...ಕೊಂಡ ಸ್ವಾ ...ನ ಜನಾಂಗ ...ಕೃತಜ್ಞತೆಯ ...ಕೆಲಸದಲ್ಲಿ ಪತ್ರಿ ...ಕಾರ್ಯವ ...ಸಲು ದೇವರ, ವಾಚಕ ...ಉಳಕರಾದ ಶ್ರೀಯ ಶೇರ್ ...ಉತ್ತೇಜನವೂ ವರೆಗಿನಂತೆ ...ನ್ನು ಮುಂದಕ್ಕೂ ದೊರಕಬೇಕೆಂದ ಕೇಳಿಕೊಳ್ಳುತ್ತೇ... ನಮ್ಮ ಕೋರಿಕೆಯು ಸಫಲವಾಗುವಂತೆ ಮಾಡಲಿ ಎಂ ದೇವರನ್ನು ಪ್ರಾರ್ಥಿಸುತ್ತೇವೆ.

ಪ್ರಥಮ ಕರ್ನಾಟಕ ಖಾದಿ ಪರಿಷತ್ತು.

ಹೋದ ವಾರ ಧಾರವಾಡದಲ್ಲಿ ನಡೆದ ಕರ್ನಾಟಕಸ್ಥರ ಅನೇಕ ಪರಿಷತ್ತುಗಳ ಪೈಕಿ ಖಾದಿ ಪರಿಷತ್ತು ಒಂದಾಗಿದೆ. ಆ ಸಭೆಯ ಸ್ವಾಗತ ಮಂಡಲಿಯ ಅಧ್ಯಕ್ಷರಾದ ಶ್ರೀ ಆಲೂರ ವೆಂಕಟರಾಯರು ಚಿಕ್ಕದಾದರೂ ಬಹು ಸ್ವಾರಸ್ಯವಾದ ಭಾಷಣ ಮಾಡಿದರು. ಖಾದಿಯಿಂದ ಆರ್ಥಿಕ, ರಾಜಕೀಯ ಮತ್ತು ಪಾರಮಾರ್ಥ ಬೆಳವಣಿಗೆಯು ಸಾಧ್ಯವಿದೆಯೆಂತ ವಾದಿಸಿರುತ್ತಾರೆ.

ಈ ಪರಿಷತ್ತಿಗೆ ಜನಪ್ರಿಯರಾದ ಶ್ರೀ ಹರ್ಡೇಕರ ಮಂಜಪ್ಪನವರು ಅಧ್ಯಕ್ಷರಾಗಿದ್ದರು. ಇವರು ಹಿಂದುಸ್ಥಾನಿ ಸೇವಾದಳದ ಕೆಲಸ ಕೈಕೊಂಡಿರುವ ಡಾಕ್ಟರ ಹರ್ಡೇಕರರಲ್ಲ. ಇವರು ಲಿಂಗಾಯತ ಸಾಧುಗಳು, ಮಹಾತ್ಮ ಗಾಂಧಿಯವರ ಅನುಯಾಯಿಗಳು. ಬೊಂಬಾಯಿ ಕರ್ನಾಟಕದಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ ಮತಭೇದಗಳು ಇರುವಾಗ ಆ ಪ್ರಾಂತ್ಯದ ಬ್ರಾಹ್ಮಣೇತರ ಪಂಗಡಗಳಲ್ಲಿ ಮುಖ್ಯವಾದ ಲಿಂಗಾಯತ ಪಂಗಡದ ಪ್ರೀತಿಗೆ ಪಾತ್ರರಾಗಿರುವ ಶ್ರೀ ಮಂಜಪ್ಪನವರು ಈ ಪರಿಷತ್ತಿನ ಅಧ್ಯಕ್ಷರಾದ್ದರಿಂದ ಖಾದಿಯ ಕೆಲಸದಲ್ಲಿ ಪಂಗಡಭೇದಗಳಿಲ್ಲವೆಂತ ಸ್ಪಷ್ಟವಾಯಿತು. ಇವರು ಖಾದಿಯ ಮಹತ್ವವನ್ನು ಒಂದು ವಾಕ್ಯದಲ್ಲಿ ಬಹಳ ಸ್ವಾರಸ್ಯವಾಗಿ ಹೀಗೆಂತ ಹೇಳಿರುತ್ತಾರೆ.

"ಖಾದಿಯು ಬಡ ಜನಗಳ ಹೊಟ್ಟೆಗೆ ರೊಟ್ಟಿಯನ್ನು ದೊರಕಿಸಿಕೊಡುವ ಸಾಧನವೆಂಬ ಸಾಂಪತ್ತಿಕ ಸ್ವರೂಪವನ್ನು ಹೊಂದಿ ಆಳಿಗಳಿದ ಅರಸರವರೆಗೆ ಸಕಲರಿಂದಲೂ ಗೌರವಿಸಲ್ಪಡುತ್ತಾ ಇದೆ. ...ದಿಗಾಗಿ ಕೊಡುವ ಕ್ರಯ ಪೂರ್ತಿ ಕೃಷಿಕನಿಂದ ...ಡಿದು ...ಯವನ ವರೆಗೆ ಬಡಜನರಿಗೆ ಅನ್ನ ಕೊಡಲಿಕ್ಕೆ ಉಪಯೋಗವಾಗುತ್ತಲಿದೆಯೆಂಬದನ್ನು ಅವಶ್ಯ ತಿಳಕೊಡುವ ಅವಶ್ಯವಿದೆ. ಗಿರಣಿ ಜನರಿಗೆ ಆಗಿಂದಾಗ್ಯೆ ತಿಳಿಕೊಡುವ ... ಅಲ್ಪಭಾಗ ಮಾತ್ರ ... ಗಳಲ್ಲಿ ತಯಾರಾಗುವ ಬಟ್ಟೆಯ ಕ್ರಯದ ಅಲ್ಪಭಾಗ ಮಾತ್ರ ಬಡ ಕೆಲಸಗಾರರ ಅನ್ನ ಕೊಡಲು ಉಪಯೋಗವಾಗುತ್ತದೆ. ಉಳಿದ ಹಣ ಭಾಗವು ಧನಿಕರ ಧನವನ್ನು ಇನ್ನೂ ಹೆಚ್ಚಿಸಲು ಹೋಗುತ್ತದೆ. ಅಂಥಾ ಧನವನ್ನು ಉತ್ಪತ್ತಿಗೆ ಕಾರಣರಾದ ಕೂಲಿಕಾರರು ಹೊಟ್ಟೆ ತುಂಬಾ ಅನ್ನ ಸಹ ದೊರೆಯದೆ ಅವರ ಆಪ್ತಿಯು ಆಗಿಂದಾಗ್ಯೆ ಆಗುವ ಸ್ಟ್ರೈಕ್ (ಮುಷ್ಕರ) ಗಳಿಂದ ತಿಳಿದು ಬರುತ್ತದೆ. ಅಷ್ಟು ಮಾತ್ರವಲ್ಲ, ಗಿರಣಿಗಳಲ್ಲಿ ಕೆಲಸಮಾಡುವ ಕೂಲಿಕಾರರ ಜೀವನವು ಅತ್ಯಂತ ಶೋಚನೀಯವಾಗಿದೆ. ಅವರು ಉಳಕೊಳ್ಳುವ ಮನೆಯು ಮನೆಯಲ್ಲ, ಒಂದು ಗೂಡಿನಂತೆ ಇರುತ್ತದೆ. ಅವರ ಬಾಳು ಮನುಷ್ಯರ ಬಾಳಲ್ಲ, ಪಶು ಮೃಗಗಳ ಬಾಳಾಗಿರುತ್ತದೆ. ಇಂಥ ಧರ್ಮವಿರುದ್ಧ ರೀತಿಯಿಂದ ತಯಾರಾಗುವ ವಸ್ತುವನ್ನು ಬಿಟ್ಟು ಗ್ರಾಮಾಂತರಗಳಲ್ಲಿ ಅತಿ ಪರಿಶುದ್ಧ ರೀತಿಯಿಂದ ತಯಾರಾಗುವ ಖಾದಿಯಿಂದ ಬಡವರಿಗೇನೇ ಸಹಾಯ ದೊರೆಯುತ್ತದೆ.

ಈಗ ಖದ್ದರನ್ನು ಅರಸರಿಂದ ಆಳುವರಿವರೆಗೂ ಗೌರವಿಸುತ್ತಾರೆಂಬುದಕ್ಕೆ ನಿಜ ಮೈಸೂರು ಮಹಾರಾಜರು ಖಾದಿ ಪ್ರಚಾರಕ್ಕೆ ಸಂಪೂರ್ಣ ಉತ್ತೇಜನ ಕೊಟ್ಟಿರುತ್ತಾರೆ. ಅತೀ ಬಡವರು ಸಹ ನೋಡುವಾಗಲೇ ಖಾದಿಗೆ ಪ್ರೋತ್ಸಾಹಕರಾಗಿದ್ದಾರೆ. ಮಹಾತ್ಮಾ ಗಾಂಧಿಯವರು ಖಾದಿಯ ಮಂತ್ರವನ್ನು ಉಚ್ಚಾರಣೆ ಮಾಡಲು ಪ್ರಾರಂಭಿಸಿದಾಗ ಖಾದಿಯ ಸುದ್ದಿಯು ತುಂಬಾ ಕಿವಿಗೆ ಬೀಳುತ್ತಿದ್ದು ಆ ಮೊದಲಿನ ವರ್ಷ ಅಂದರೆ—1920ರಲ್ಲಿ ಕೇವಲ ಒಂದು ಲಕ್ಷ ರೂಪಾಯಿನ ಖಾದಿಯು ಉತ್ಪನ್ನವಾಯಿತು. ಅವರ ಬೋಧೆಯ ಕೂಗು ಕೇಳದಿದ್ದರೂ ಮೌನತೆಯಿಂದಲೇ ಖಾದಿಯು ಬೆಳವಣಿಗೆ ಆಗುತ್ತಲೇ ಇದೆ ಎಂಬದು 1926—27ರ ಇಪ್ಪತ್ತನಾಲ್ಕು ಲಕ್ಷ ರೂಪಾಯಿ ಖಾದಿಯು ಉತ್ಪನ್ನವಾಗಿ 33 ಲಕ್ಷ ರೂಪಾಯಿ ಖಾದಿಯು ಮಾರಾಟವಾಗಿದೆ ಎಂದದರಿಂದ ಗೊತ್ತಾಗುತ್ತದೆ. ಈ ಕೆಲಸದಿಂದ ಸುಮಾರು 5 ಸಾವಿರ ಜನರ ಜೀವನ ನಡೆಯುತ್ತಲಿದೆ. ಈ ಅಭಿವೃದ್ಧಿಯು ತುಂಬಾ ಆಶಾಜನಕವಾಗಿದೆ ಎಂಬದನ್ನು ಅಧ್ಯಕ್ಷರು ಒಳ್ಳೇ ರೀತಿಯಿಂದ ತೋರಿಸಿದ್ದಾರೆ. ಗಿರಣಿಗಳು ಈ ದೇಶದಲ್ಲಿ ಪ್ರಾರಂಭವಾಗಿ 150 ವರ್ಷಗಳಾದರೂ ಬರೇ ನಾಲ್ಕು ಲಕ್ಷ ಜನರಿಗೆ ಮಾತ್ರ ಅನ್ನ ಕೊಡುತ್ತಲಿದೆಯಂತೆ ಹಾಗಾದರೆ ಒರೇ ಏಳು ವರ್ಷದ ಕಲಸದಿಂದ 50,000 ಜನರಿಗೆ ಅನ್ನ ಕೊಟ್ಟರೆ ಇನ್ನು ಕೆಲವು ಕಾಲ ಖಾದಿ ಪ್ರಚಾರವು ಮುಂದೆ ಸಾಗಿದರೆ ಖಾದಿಯಿಂದ ಎಷ್ಟೊಂದು ಜನರಿಗೆ ಅನ್ನ ದೊರಕೀತೆಂಬದನ್ನು ಊಹಿಸಬಹುದು.

ಅಧ್ಯಕ್ಷರ ಮುಂದೆ ಸಾಗಿ ಅಮೇರಿಕಾ ದೇಶದ ಮಹನೀಯರಾದ ಮಿ. ರಿಚಾರ್ಡ್ ಗ್ರೇವ್ ಎಂಬವರು 'ಖದ್ದರಿನ ಅರ್ಥಶಾಸ್ತ್ರ' ವೆಂಬ ಹೆಸರಿನಿಂದ ಪ್ರಕಟಿಸಿದ ಪುಸ್ತಕದಿಂದ ಅಧ್ಯಾಂಗಗಳನ್ನು ಕೊಟ್ಟು ಜನರ ಜೀವನಕ್ಕೆ ಖಾದಿ ಪ್ರಸಾರ ವಿನಹ ಬೇರೆ ಉಪಾಯವೇ ಇಲ್ಲವೆಂತ ನಿರ್ದಶಿಸಿದ್ದಾರೆ.

ತಮಿಳು ನಾಡಿನವರು ಖಾದಿಯ ಕೆಲಸದಲ್ಲಿ ತುಂಬಾ ಮುಂದುವರಿದಿದ್ದಾರೆಂತಲೂ, ಕರ್ನಾಟಕದವರು ಹಿಂದಬಿದ್ದಿದ್ದಾರೆಂತಲೂ ತೋರಿಸಿ ಕರ್ನಾಟಕದಲ್ಲಿ ಖಾದಿಯು ಬೆಳೆಯಬೇಕಾದರೆ ಯಾವ ರೀತಿ ಕೆಲಸ ಮಾಡಬೇಕೆಂಬದನ್ನು ವಿವರಿಸುತ್ತಾರೆ. ಕಳೆದ ವರ್ಷ ಕರ್ನಾಟಕದಲ್ಲಿ ಸುಮಾರು ಅವತ್ತಾರು ಸಾವಿರ ರೂಪಾಯಿಯ ಖಾದಿಯು ಉತ್ಪತ್ತಿಯಾಯಿತು, ಎಪ್ಪತ್ತೆಂಟು ಸಾವಿರ ರೂಪಾಯಿಯ ಖಾದಿಯು ಮಾರಾಟವಾಗಿದೆಯಂತೆ. ಒಂದುವರೆ ಕೋಟಿ ಜನಸಂಖ್ಯೆಯುಳ್ಳ ಕರ್ನಾಟಕದಲ್ಲಿ ಖಾದಿಯ ಕಾರ್ಯದಲ್ಲಿಯೇ ದೇಹವನ್ನು ಸವೆಸುವ ಮಹಾತ್ಮರು ಬರೇ ಇಪ್ಪತ್ತೆಂಟು ಜನರು ಮಾತ್ರವಿದ್ದಾರೆಂತೆ. ಇಂಥಾ ನಾಚಿಕೆಯ ವಿಷಯವಾಗಿದೆ. ಕರ್ನಾಟಕದಲ್ಲಿ ಮಾರಾಟವಾದ ಖಾದಿಯು ಕೆಲವು ಭಾಗಕ್ಕೆ ಕರ್ನಾಟಕವು ಭಾಗಿಯಾಗಿರಬಹುದಾದರೂ ಖಾದಿಯ ಉತ್ಪತ್ತಿಗೆ ಕರ್ನಾಟಕವು ಏನೂ ಸಹಾಯ ಮಾಡಿಲ್ಲವೆಂಬದು ಬಹಳ ನಾಚಿಕೆಯ ಸಂಗತಿಯಾಗಿದೆ. ಕೈನೂಲಿನ ಬಟ್ಟೆ ತಯಾರಿಸುವ ಕಸಬನ್ನು ಕೊಡಗಿಗೆ ಹೊಸತಾಗಿ ತರಬೇಕಾಗಿಲ್ಲ. ಅದು ನಾಶವಾಗಿ ಹೋಗುತ್ತಿರುವದನ್ನು ಪುನರುಜ್ಜೀವನ ಮಾಡಿದರೆ ಸಾಕಾಗಿದೆಯೆಂತ ನಮ್ಮ ಪತ್ರಿಕೆಯಲ್ಲಿ ಆಗಾಗ್ಯೆ ಪ್ರಕಟವಾಗಿರುವದು ವಾಚಕರಿಗೆ ಗೊತ್ತಿದೆ. ಖದ್ದರ್ ಕೆಲಸಕ್ಕೆ ತನ್ನ ದೇಹವನ್ನು ಪೂರ್ತಿಯಾಗಿ ಒಪ್ಪಿಸಿದವರು ಕೆಲಸಮಾಡಿದರೆ ಕೊಡಗಿನಲ್ಲೂ ಸಾವಿರಾರು ರೂಪಾಯಿನ ಖದ್ದರ್ ತಯಾರಿಸಬಹುದು. ಕರ್ನಾಟಕ ಪ್ರಾಂತ್ಯದಲ್ಲಿ ಮಾಡಬೇಕಾದ ಈ ಕೆಲಸಕ್ಕೆ ಪ್ರೋತ್ಸಾಹ ಕೊಡಲು ಕೆಲಸಗಾರರನ್ನು ನಿರೀಕ್ಷಿಸುತ್ತಾ ಒಂದು ವರ್ಷವಾದರೂ ಯಾರೂ ದೊರೆಯಲಿಲ್ಲ. ಕೆಲಸಗಾರರ ಸಂಖ್ಯೆ ಕಡಿಮೆಯಾಗಿರುವದರಿಂದಲೇ ಹೀಗಾಗಿದೆ. ಮದ್ರಾಸ್ ಕಾಂಗ್ರೆಸಿಗೆ ಹೋದಾಗ ನಮ್ಮ ದೇಶದ ಕೆಲವರೊಂದಿಗೆ ಖಾದಿ ಕೆಲಸಗಾರರಲ್ಲಿ ಒಬ್ಬರಾದ ಕಾಕ ಕಾಲೇಲ್ಕರರು ಹೇಳಿದ ರೀತಿ ಈ ದೇಶದವರು ತಮ್ಮಲ್ಲಿಂದಲೇ ಯಾರನ್ನಾದರೂ ಖದ್ದರ್ ಕೆಲಸಕ್ಕೆ ತಯಾರಿಸಿ ಕೆಲಸ ಮಾಡಿಸಬೇಕಾಗಿದೆ. ಈ ತರಬೇತು ಹೊಂದಲು ಯುವಕರನ್ನು ಕಂಡು ಹಿಡಿಯುವದು ಮುಂದಾಳುಗಳ ಕರ್ತವ್ಯವಾಗಿದೆ.

ಅಧ್ಯಕ್ಷರ ಅಮೃತ ಮಾತುಗಳನ್ನು ಹೇಳಿ ಲೇಖನವನ್ನು ಮುಗಿಸುತ್ತೇವೆ. ಖಾದಿಯ ನಿಜ ಸ್ವರೂಪವು ನಮಗೆ ತೋರುವಂತಹ ದಿವ್ಯದೃಷ್ಟಿಯು ಜಾಗ್ರತೆ ಪ್ರಾಪ್ತವಾಗಲಿ. ಆಗ ಭಾರತೀಯರಲ್ಲುಳಿದಿರುವ ದೈವೀ ಸಂಪತ್ತು ಜಗತ್ತನ್ನೇ ಸನ್ಮಾರ್ಗಕ್ಕೆ ತರಲಿ. ಈಗಿನ ಬಂಧನವು ನಿವಾರಣೆಯಾಗಿ ಮೋಕ್ಷವು ಪ್ರಾಪ್ತವಾಗುವದಕ್ಕೋಸ್ಕರ ಶ್ರೀ ಕೃಷ್ಣ ಪರಮಾತ್ಮನ ದಿವ್ಯ ವಾಣಿಯಲ್ಲಿ ದೃಢ ವಿಶ್ವಾಸವಿರಲಿ. 12ನೇ ಶತಮಾನದಲ್ಲಿ ತಿಮ್ಮವ್ವ ಎಂಬ ಮಹಿಳೆಯು ತಾನು ತಿರುಗಿಸುತ್ತಿದ್ದ ರಾಟಿಯನ್ನು ತ್ರಿಮೂರ್ತಿಗಳಿಗೆ ಹೀಗೆಂದು ಹೋಲಿಸಿದ್ದಾಳೆ. 'ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ. ಅಡಿಯ ಹಲಿಗೆ ಬ್ರಹ್ಮ. ತೋರಣವಿಷ್ಣು, ನಿಂದಬೊಂಬೆ ಮಹಾರುದ್ರ, ರುದ್ರನ ಬೆಂಬಳಿಯವೆರಡು ಸೂತ್ರದ ಕಣ್, ಅವಂಬ ಕದುರು. ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿಸುತ್ತ ನೂಲು ಕದುರು ತುಂಬಿತ್ತು ರಾಟಿಯ ತಿರುಹಲಾರೆ, ಎನ್ನ ಗಂಡ ಹುಟ್ಟಿಸ ಇಕ್ಕೀವೆ ಕದಿರರೆಯೊಡೆಮ್ಮ ದುಮ್ಮೇಶ್ವರಾ!

ಸುದ್ದಿ ಪಡಿ.

ಕಳೆದ ವಾರದ ಅಗ್ರ ಲೇಖನದಲ್ಲಿ ಬಾರ್ದೋಲಿ ತಾಲೋಕಿನ ಸೆಟಲ್‌ಮೆಂಟಿನಲ್ಲಿ ಕಂದಾಯ ಹೆಚ್ಚಿಸಿರುವದು ಶೇಕಡ 50ರಷ್ಟು ಎಂತ ಬರೆದಿದ್ದೆವು. ಇದು ಸರಿಯಲ್ಲ ಶೇಕಡ 30ರಷ್ಟು ಹೆಚ್ಚಾಗಲು ಯೋಚಿಸಿ ಅನಂತರ ರೈತರ ತಕರಾರಿನ ಮೇಲೆ ಶೇಕಡ ಇಪ್ಪತ್ತೆರಡಕ್ಕೆ ಇಳಿಸಿದರು. ಇದಕ್ಕೂ ಒಪ್ಪದೆ ರೈತರು ಸತ್ಯಾಗ್ರಹವನ್ನು ಕೈಕೊಂಡಿರುವದಾಗಿದೆ.

ಕೆನರಾ ಹೈಸ್ಕೂಲ್ ಸೋಡ್ತಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲಿನ ಮತ್ತು ಕೆನರಾ ಬಾಲಕಿಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಅತೀ ಮಹತ್ವದ ಒಂದು ಸೋಡ್ತಿಯನ್ನು ತೆಗೆಯಲು ನಿಶ್ಚೈಸಿಯದೆ. ಇದರ ಆಡಳಿತೆಯನ್ನು ಜವಾಬ್ದಾರಿಯುಳ್ಳ ಪ್ರಮುಖ ಗೃಹಸ್ಥರು ನಡಿಸುವರು.

ಜುಮ್ಲಾ ಟಿಕೇಟಿನ ಮೌಲ್ಯ ಒಂದುಲಕ್ಷ ರೂಪಾಯಿ. ಈ ಪೈಕಿ ರೂಪಾಯಿ 15,000 ಖರ್ಚಿನ ಬಗ್ಗೆ ವಜಾ ಮಾಡಲಾಗುವದು. ರೂಪಾಯಿ 40,000 ಶಾಲೆಗಳ ಉಪಯೋಗದ ಬಗ್ಗೆ ವಿನಿಯೋಗಿಸಲ್ಪಡುವದು ಮತ್ತು 45,000 ರೂಪಾಯಿಗಳನ್ನು ಈ ಸೋಡ್ತಿ ಬಹುಮಾನಗಳಾಗಿ ಹಂಚಲಾಗುವದು. ಈ ಬಹುಮಾನಗಳ ತಪಶೀಲು ಕೆಳಗೆ ಕಾಣಿಸಿಯದೆ.

1ನೇ ಬಹುಮಾನ ರೂಪಾಯಿ 12500. 2ನೇ ಬಹುಮಾನ ರೂಪಾಯಿ 500. ರೂಪಾಯಿ 1000ದರದ 2 ಬಹುಮಾನಗಳು. ರೂಪಾಯಿ 500 ದರದ 3 ಬಹುಮಾನಗಳು ರೂಪಾಯಿ 250 ದರದ 6 ಬಹುಮಾನಗಳು. ರೂಪಾಯಿ 100 ದರದ 10 ಬಹುಮಾನಗಳು ರೂಪಾಯಿ 50 ದರದ 20 ಬಹುಮಾನಗಳು. ರೂಪಾಯಿ 20 ದರದ 100 ಬಹುಮಾನಗಳು. ರೂಪಾಯಿ 10 ದರದ 800 ಬಹುಮಾನಗಳು. ರೂಪಾಯಿ 5 ದರದ 2100 ಬಹುಮಾನಗಳು.

ಟಿಕೇಟು ಮಾರಾಟವು ತಾ. 4—1—29ಕ್ಕೆ ಮುಗಿಯುವದು ಮತ್ತು ಸೋಡ್ತಿಯು ತಾ. 26—1—29ರಲ್ಲಿ ತೆಗೆಯಲಾಗುವದು.

ಪ್ರತಿಯೊಂದು ಟಿಕೇಟಿನ ಬೆಲೆಯು ಬರೆ ಒಂದು ರೂಪಾಯಿ ಆಗಿರುತ್ತದೆ. 24 ಟಿಕೇಟುಗಳು ಮಾರಿದವರಿಗೆ ಪ್ರತಿಫಲವಾಗಿ ಒಂದು ಟಿಕೇಟು ಜಾಸ್ತಿ ಸಿಕ್ಕುವದಲ್ಲದೆ ಹೆಚ್ಚು ಟಿಕೇಟುಗಳ ಮಾರಿದವರಿಗೆ ವಿಶೇಷ ಬಹುಮಾನಗಳು ದೊರೆಯುವವು. ಈ ರೂಪಾಯಿ ಯೋಗ್ಯವಾದ ಎರಡು ಸಂಸ್ಥೆಗಳಿಗೆ ಮುಖ್ಯವಾಗಿ ಕೆನರಾ ಹೈಸ್ಕೂಲಿನ ಸಂಬಂಧವಾಗಿ ಈಗ ತೆರೆಯಲಾಗಬೇಕಾಗಿ ನಿಶ್ಚೈಸಿದ ಕೈಗಾರಿಕ ಶಾಲೆಗೆ ಕೂಡ ಅವರ ಸಹಾಯ ಮಾಡಿದಂತಾಗುವದು. ಆಪೇಕ್ಷೆಯುಳ್ಳ ಏಜೆಂಟರು ಸೋಡ್ತಿ ಕಮಿಟಿಯ ಹಾನರರಿ ಸಕ್ರೆಟರಿಯವರಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಬಹುದು. ಏಜೆಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು.

ಬಿ. ಮಂಜುನಾಥ ಬಾಳಿಗ,
16—3—28. ಹಾನರರಿ ಸಕ್ರೆಟರಿ
ಕೆನರಾ ಹೈಸ್ಕೂಲ್ ಸೋಡ್ತಿ ಕಮಿಟಿ
ಬ್ರಿಟಿಷ್ ಗಲ್ಲಿ, ಫಲನೀರ,
ಮಂಗಳೂರು.

6—

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೧೨ನೇ ಪ್ರಕರಣ.

ಯುದ್ಧದಲ್ಲಿ ನಾನು ಭಾಗಿಯಾದುದು.

ಗೋಖಲೆಯವರು ಪ್ಯಾರಿಸಿಗೆ ಹೋಗಿದ್ದರು. ಅವರು ಸದ್ಯಕ್ಕೆ ಅಲ್ಲಿಯೇ ನಿಲ್ಲಬೇಕಾಗುವುದೆಂದು ನಾನು ವಿಲಾಯತಿಯನ್ನು ಮುಟ್ಟಿದ ಮೇಲೆ ನನಗೆ ತಿಳಿಯ ಬಂತು. ಮತ್ತು ಲಂಡನಿಗೂ, ಪ್ಯಾರಿಸ್ಸಿಗೂ ಮಧ್ಯ ಓಡಾಟವು ನಿಲ್ಲಿಸಲ್ಪಟ್ಟುದರಿಂದ ಅವರು ಯಾವಾಗ ಹಿಂತಿರುಗುವರೆಂಬುದು ಗೊತ್ತಾಗುವಂತಿರಲಿಲ್ಲ. ಅವರನ್ನು ನೋಡದೆಯೆ ಸ್ವದೇಶಕ್ಕೆ ಹಿಂತಿರುಗಲು ನನಗೆ ಇಷ್ಟವಿರಲಿಲ್ಲ. ಆದರೆ ಅವರು ಯಾವಾಗ ಬರುವರೆಂಬುದನ್ನು ನಿಶ್ಚಯಪೂರ್ವಕವಾಗಿ ಯಾರೂ ತಿಳಿಸುವಂತಿರಲಿಲ್ಲ.

ಹಾಗಾದರೆ ಈ ಮಧ್ಯೆ ನಾನು ಮಾಡುವುದೇನು? ಯುದ್ಧದ ವಿಷಯದಲ್ಲಿ ನನ್ನ ಕರ್ತವ್ಯವೇನು? ಕಾರಾಗೃಹದಲ್ಲಿ ನನ್ನ ಜೊತೆಯ ಬಂದಿಯಾಗಿದ್ದ ಮತ್ತು ಸತ್ಯಾಗ್ರಹಿಗಳಾಗಿದ್ದ ಸೊರಾಬ್ಜಿ ಅಡಾಜಣಿಯಾರವರು ಆಗ ಲಂಡನ್ನಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೆ ಓದುತ್ತಿದ್ದರು. ಅತ್ಯುತ್ತಮರಾದ ಸತ್ಯಾಗ್ರಹಿಗಳಲ್ಲಿ ಇವರು ಒಬ್ಬರಾಗಿದ್ದುದರಿಂದ ಇವರು ದಕ್ಷಿಣ ಆಫ್ರಿಕಕ್ಕೆ ಹಿಂತಿರುಗಿದ ಮೇಲೆ ನನ್ನ ಸ್ಥಾನವನ್ನು ವಹಿಸಬೇಕೆಂಬ ಉದ್ದೇಶದಿಂದ ಇವರು ಸೀಮೆಗೆ ಬ್ಯಾರಿಸ್ಟರ್ ಆಗುವುದಕ್ಕಾಗಿ ಕಳುಹಿಸಲ್ಪಟ್ಟಿದ್ದರು. ಡಾ. ಪ್ರಾಣಜೀವನದಾಸ ಮೆಹತಾರವರು ಇವರ ವೆಚ್ಚವನ್ನು ವಹಿಸುತಿದ್ದರು. ವಿಲಾಯತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಡಾ. ಜೀವರಾಜ ಮೆಹತಾರವರೇ ಮುಂತಾದವರೊಡನೆ ಇವರ ಮೂಲಕವಾಗಿ ಮತ್ತು ಇವರ ಜೊತೆಯಲ್ಲಿ ಸಂಭಾಷಣೆಯು ನಡೆಸಿದೆನು. ಅವರೆಲ್ಲರ ಸಲಹೆಯನ್ನೂ ತೆಗೆದುಕೊಂಡು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡಿನಲ್ಲಿರುವ ಭಾರತೀಯರ ಸಭೆಯೊಂದನ್ನು ಕರೆಯಿಸಿದುದಾಯಿತು. ಆ ಸಭೆಗೆ ನನ್ನ ಅಭಿಪ್ರಾಯವನ್ನು ತಿಳಿಸಿದೆನು.

ವಿಲಾಯತಿಯಲ್ಲಿರುವ ಭಾರತೀಯರು ಯುದ್ಧದಲ್ಲಿ ತಮ್ಮ ಭಾಗವನ್ನು ಹೊರಬೇಕೆಂದು ನನಗೆ ತೋರುತ್ತಿತ್ತು. ಆಂಗ್ಲ ವಿದ್ಯಾರ್ಥಿಗಳು ಸೈನ್ಯಕ್ಕೆ ಸೇರಲು ಮುಂದೆ ಬಂದಿದ್ದರು. ಭಾರತೀಯರು ಇದಕ್ಕಿಂತ ಕಡಿಮೆ ಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯವಾಗಿತ್ತು. ಈ ರೀತಿಯ ತರ್ಕಕ್ಕೆ ಅನೇಕ ಆಕ್ಷೇಪಣೆಗಳು ಬಂದುವು. 'ಭಾರತೀಯರೆಲ್ಲಿ, ಇಂಗ್ಲಿಷರೆಲ್ಲಿ! ನಾವು ಗುಲಾಮರು, ಅವರು ಒಡೆಯರು. ಒಡೆಯನಿಗೆ ಸಂಕಟ ಬಂದಾಗ ಗುಲಾಮನು ಅವನಿಗೆ ಸಹಾಯಮಾಡುವುದೊ, ಸ್ವಾತಂತ್ರ್ಯವನ್ನು ಬಯಸುತ್ತಿರುವ ಗುಲಾಮನು ತನ್ನ ಒಡೆಯನ ಸಂಕಟ ಕಾಲದಲ್ಲಿ ತನ್ನ ಬಂಧವಿಮೋಚನೆಯನ್ನೇ ಸಾಧಿಸುವುದು ಅವನ ಕರ್ತವ್ಯವಲ್ಲವೇನು?' ಎಂದು ವಾದಿಸಿದರು. ಆಗ ಈ ತರ್ಕವು ನನ್ನ ಮನಸ್ಸಿಗೆ ಒಪ್ಪಲಿಲ್ಲ. ಭಾರತೀಯನಿಗೂ, ಆಂಗ್ಲೇಯನಿಗೂ ಗೊತ್ತಿರುವ ಸ್ಥಿತಿಯಲ್ಲಿನ ವ್ಯತ್ಯಾಸವನ್ನು ನಾನು ಅರಿತಿದ್ದೆನು. ಆದರೆ ಅವರು ನಮ್ಮನ್ನು ಸಲ ದಾಸ್ಯಸ್ಥಿತಿಯಲ್ಲಿಟ್ಟಿದ್ದರೆಂದು ನಾನು ಎಣಿಸಿರಲಿಲ್ಲ. ಸ್ಥಿತಿಗೆ ಬ್ರಿಟಿಷರ ರಾಜ್ಯಪದ್ಧತಿಗಿಂತ ಕೆಲವು ಬ್ರಿಟಿಷ್ ಅಧಿಕಾರಿಗಳೇ ಹೆಚ್ಚಾಗಿ ಕಾರಣರೆಂದೂ, ಅವರನ್ನು ಪ್ರೇಮದಿಂದ ಪರಿವರ್ತಿಸಬಹುದೆಂದೂ ನನಗೆ ತೋರುತ್ತಿತ್ತು. ಬ್ರಿಟಿಷರ ಸಹಾಯ ಸಹಕಾರಗಳಿಂದ ನಾವು ನಮ್ಮ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂದಿದ್ದರೆ ಅವರ ಕಷ್ಟಕಾಲದಲ್ಲಿ ಅವರಿಗೆ ನೆರವಿತ್ತು ಅವರ ಸಹಾಯವನ್ನು ಗೆಲ್ಲುವುದು ನಮ್ಮ ಕರ್ತವ್ಯವೆಂದು ನನ್ನ ಅಭಿಪ್ರಾಯವಾಗಿದ್ದಿತು. ರಾಜ್ಯಪದ್ಧತಿಯು ದೋಷಯುಕ್ತವಾಗಿ ಇದ್ದಿತಾದರೂ ಇಂದು ಕಾಣುವಂತೆ ಆಗ ನನಗೆ ಸಹನಾತೀತವಾಗಿ ತೋರಲಿಲ್ಲ. ಆದರೆ ಇಂದು ನನಗೆ ಆ ಪದ್ಧತಿಯಲ್ಲಿ ವಿಶ್ವಾಸವು ಹೋಗಿ ನಾನು ಬ್ರಿಟಿಷ್ ಸರಕಾರದೊಡನೆ ಸಹಕರಿಸಲು ಒಪ್ಪದಿದ್ದರೆ ಆಗ ಈ ಪದ್ಧತಿಯಲ್ಲಿ ಮಾತ್ರವೇ ಅಲ್ಲ ಅಧಿಕಾರಿಗಳಲ್ಲಿ ಕೂಡ ನಂಬಿಕೆಗೆಟ್ಟು ಆ ವಿಶ್ವಾಸ ಸಹಕರಿಸುವರು ಯಾರು?

ಇದಿರು ಪಕ್ಷದ ಮಿತ್ರರು ಭಾರತೀಯರಿಗೆ ಹಕ್ಕುಗಳನ್ನು ಉದ್ಘೋಷಿಸಲೂ, ಸ್ಥಿತಿಯನ್ನು ಉತ್ತಮಗೊಳಿಸಲೂ ಇದೇ ಸಮಯವೆಂದು ಅಭಿಪ್ರಾಯ ಪಟ್ಟರು. ಇಂಗ್ಲೆಂಡಿನ ಆಪತ್ಕಾಲದ ಲಾಭ ಪಡೆಯಬಾರದೆಂದೂ, ಯುದ್ಧ ನಡೆಯುತ್ತಿರುವಾಗ ಹಕ್ಕುಗಳಿಗಾಗಿ ಬ್ರಿಟಿಷರನ್ನು ಒತ್ತಾಯಪಡಿಸದೇ ಇರುವುದೇ ಹೆಚ್ಚು ಯೋಗ್ಯವಾದ ಮತ್ತು ದೂರದೃಷ್ಟಿಯುಳ್ಳದ್ದೆಂದೂ ನಾನು ಯೋಚಿಸಿದೆನು. ಆದುದರಿಂದ ನನ್ನ ಸಲಹೆಯನ್ನೇ ಒಪ್ಪಿ ಸೈನ್ಯದಲ್ಲಿ ಸೇರಲು ಇಚ್ಛೆಯುಳ್ಳವರು ಸ್ವಯಂಸೇವಕರಾಗಿ ಹೆಸರು ಕೊಡಬಹುದೆಂದು ಆಹ್ವಾನಿಸಿದೆನು. ಅನೇಕರು ಹೆಸರುಗಳನ್ನು ಕೊಟ್ಟರು. ಇವರಲ್ಲಿ ಎಲ್ಲಾ ಪ್ರಾಂತದವರೂ, ಎಲ್ಲಾ ಧರ್ಮದವರೂ ಇದ್ದರು.

ಆ ಬಳಿಕ ನಾನು ಲಾರ್ಡ್ ಕ್ರೂ ಅವರಿಗೆ ಈ ವಿಷಯವನ್ನು ತಿಳಿಸಿ, ಅಂಬ್ಯುಲೆನ್ಸ್ ಕೆಲಸಕ್ಕಾಗಿ ಶಿಕ್ಷಣ ಪಡೆಯುವುದು ಅವಶ್ಯಕವೆಂದು ಅದಕ್ಕಾಗಿ ನಮ್ಮ ಪ್ರಾರ್ಥನೆಯನ್ನೂ ಸ್ವೀಕರಿಸಬೇಕೆಂದೂ, ನಾವು ಪಡೆಯಬೇಕಾದ ಶಿಕ್ಷಣವನ್ನು ಕೊಡಲು ಸಿದ್ಧರಿರುವುದಾದರೆ ನಾವು ಹಾಗೆ ಶಿಕ್ಷಿತರಾಗಲು ಸಿದ್ಧರಿರುವೆವೆಂದೂ ತಿಳಿಸಿ ನಾನು ಲಾರ್ಡ್ ಕ್ರೂ ಅವರಿಗೆ ಪತ್ರವನ್ನು ಬರೆದೆನು.

ಮೊದಲು ಸಿದ್ಧರಿರುವುದಾಗಿ ಆ ವೇಳೆ ಸಹಾಯವನ್ನು ಅಂಗೀಕರಿಸಿ ಸಾಮ್ರಾಜ್ಯಕ್ಕೆ ಸಹಾಯವಾಗಿ ಸೇರಲು ಸಿದ್ಧರಾಗಿದ್ದುದಕ್ಕಾಗಿ ನಮಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಸ್ವಯಂಸೇವಕರು ಗಾಯ ಹೊಂದಿದವರಿಗೆ ಚಿಕಿತ್ಸೆ ಮಾಡುವ ಕ್ರಮದ ಅಭ್ಯಾಸವನ್ನು ಪ್ರಸಿದ್ಧರಾದ ಡಾ|| ಕ್ಯಾಂಟ್ಲಿಯವರ ಬಳಿ ಕಲಿಯ ತೊಡಗಿದರು. ಈ ಅಭ್ಯಾಸವು ಆರು ವಾರದ ಮಾತ್ರ ನಡೆದರೂ ಪ್ರಥಮ ಚಿಕಿತ್ಸೆಯ ಕೆಲಸಗಳನ್ನೆಲ್ಲಾ ಒಳಗೊಂಡಿದ್ದಿತು.

ನಮ್ಮ ತರಗತಿಯಲ್ಲಿ ಸುಮಾರು ೮೦ ಮಂದಿ ಇದ್ದರು. ಆರು ವಾರಗಳಲ್ಲಿ ನಮ್ಮೆಲ್ಲರ ಪರೀಕ್ಷೆಯಾಗಿ ಒಬ್ಬನನ್ನು ಬಿಟ್ಟು ಎಲ್ಲರೂ ತೇರ್ಗಡೆಯಾದರು. ಇವರಿಗೆ ಸರಕಾರದವರು ಸೈನಿಕರ ಕವಾಯತನ್ನೂ, ಇತರ ಶಿಕ್ಷಣವನ್ನೂ ಹೇಳಿಕೊಡಲು ಏರ್ಪಾಡು ಮಾಡಿದರು. ಈ ಕೆಲಸವು ಕರ್ನಲ್ ಬೇಕರವರಿಗೆ ವಹಿಸಲ್ಪಟ್ಟಿತು.

ಆ ಕಾಲದಲ್ಲಿ ಲಂಡನ್ನಿನ ದೃಶ್ಯವು ನೋಡತಕ್ಕದಾಗಿದ್ದಿತು. ಜನರು ಗಾಬರಿಗೊಂಡಿರಲಿಲ್ಲ. ಎಲ್ಲರೂ ಯಥಾಶಕ್ತಿಯಾಗಿ ಸಹಾಯಮಾಡುವುದರಲ್ಲಿ ಉದ್ಯುಕ್ತರಾಗಿದ್ದರು. ದೃಢಕಾಯರಾದ ಯುವಕರೆಲ್ಲರೂ ಸೈನಿಕರಾಗಿ ಯುದ್ಧ ಕಲಿಯಲು ಹೊರಟರು. ಆದರೆ ವೃದ್ಧರೂ, ಅಶಕ್ತರೂ, ಹೆಂಗಸರೂ ಮಾಡುವುದೇನು? ಮನಸ್ಸೊಂದಿದ್ದರೆ ಅವರಿಗೂ ಬೇಕಾದಷ್ಟು ಕೆಲಸವಿದ್ದಿತು. ಅದರಿಂದ ಅವರು ಬಟ್ಟೆಯನ್ನು ಕತ್ತರಿಸಿ ಹೊಲಿಯುವುದನ್ನೂ, ಗಾಯಕ್ಕೆ ಕಟ್ಟುವ ಪಟ್ಟಿಗಳನ್ನು ತಯಾರು ಮಾಡತೊಡಗಿದರು.

"ದಿ ಲೈಸಿಯಮ್" ಎಂಬ ಹೆಂಗಸರ ಸಮಾಜವು ಸೈನಿಕರಿಗೆ ತಮ್ಮ ಕೈಲಾದಷ್ಟು ಬಟ್ಟೆಗಳನ್ನು ಹೊಲಿದು ಕೊಡುವ ಭಾರವನ್ನು ಹೊತ್ತುಕೊಂಡಿತು. ಶ್ರೀಮತಿ ಸರೋಜಿನೀ ದೇವಿಯೂ ಆ ಸಮಾಜದ ಸದಸ್ಯರಾಗಿದ್ದರು. ಅವರೂ ಉತ್ಸಾಹ ಪೂರ್ವಕವಾಗಿ ಆ ಕೆಲಸವನ್ನು ಮಾಡತೊಡಗಿದರು. ಇದೇ ಅವರೊಡನೆ ನನ್ನ ಪ್ರಥಮ ಪರಿಚಯ. ಮೊದಲಿಯನ್ನು ಕತ್ತರಿಸಿದ್ದ ಒಟ್ಟೆಯ ರಾಶಿಯನ್ನು ನನ್ನ ಮುಂದಿಟ್ಟು ಅವುಗಳನ್ನು ಹೊಲಿಸಿ ತಂದುಕೊಡಬೇಕೆಂದು ಅವರು ನನಗೆ ಹೇಳಿದರು. ಅವರ ಅಪ್ಪಣೆಯನ್ನು ನಾನು ಆನಂದದಿಂದ ಸ್ವೀಕರಿಸಿ ಮಿತ್ರರ ಸಹಾಯದಿಂದ ಪ್ರಥಮ ಚಿಕಿತ್ಸಾ ಶಿಕ್ಷಣವನ್ನು ಹೊಂದುತ್ತಿದ್ದ ಆವಧಿಯಲ್ಲಿ ನನಗೆ ಸಾಧ್ಯವಾದಷ್ಟು ಬಟ್ಟೆಗಳನ್ನು ಹೊಲಿಸಿಕೊಟ್ಟೆನು.

ಕೊಡಗು ಜಮೀನ್ದಾರರ ಸಂಘದ 1927 ನೇ ಜನವರಿ 1ರಿಂದ ಡಿಸೆಂಬರ್ 31ರ ವರೆಗಿನ ಆಡಿಟ್ಟಿನ ವರದಿ.

(1) ರೋಜು ಬುಕ್ಕನ್ನು, ಮೆಂಬರ್ ರಿಜಿಸ್ಟರನ್ನೂ, 61 ರಶೀತಿ ಬುಕ್ಕುಗಳನ್ನೂ ಆಡಿಟು ಮಾಡಿದ್ದೇನೆ. ಕಂಡುಬಂದ ಅಕ್ರಮದ ವಿವರಗಳನ್ನು ಪ್ರತ್ಯೇಕವಾಗಿ ಮತ್ತು ನಂಬರುಗಳ ತಿಳುವಳಿಕೆ ಒಗ್ಗೆ ಈ ಕೆಳಗೆ ಕೊಡಲಾಗಿದೆ. ಇದರಂತೆ ಈ ವರ್ಷದ ಜಮಾ ಖರ್ಚಿನ ಲೆಕ್ಕವನ್ನೂ, ಆಸ್ತಿ ನಷ್ಟಗಳ ಪಟ್ಟಿಯನ್ನೂ ಮತ್ತು ಒಂದು ಪಟ್ಟಿಯನ್ನು (Balance Sheet) ತಯಾರು ಮಾಡಿದ್ದೇನೆ.

2. ರಶೀತಿ ಬುಕ್ಕು ನಂಬರು 9.

(a) 57ನೇ ರಶೀತಿಯಿಂದ 160 ರಶೀತಿ ವರೆಗೆ 45/ ರೂಪಾಯಿಗಳು ವಸೂಲಾಗಿರುವುದು. ಆದರೆ 44/ ರೂಪಾಯಿಗಳು ಮಾತ್ರ ರೋಜಿನಲ್ಲಿ ಜಮಾ ಆಗಿವೆ. 72 ನೇ ರಶೀತಿಯಲ್ಲಿ 2 ರೂಪಾಯಿಗಳು ವಸೂಲಾಗಿರುವುದು. ಅದಕ್ಕೆ ಒಂದು ರೂಪಾಯಿಯೆಂದು ಜಮೆಗೆ ತಕ್ಕೊಂಡಂತೆ ಕಾಣುತ್ತೆ. ಈ ಒಂದು ರೂಪಾಯಿಯು ಪುಸ್ತಕದ ಕೈಯ್ಯಲ್ಲಿರುವುದೇ ಯಾ ಆರ್ಗನೈಸರಲ್ಲಿರುವುದೇ ಎಂಬುವುದನ್ನು ನಿರ್ಧರಿಸಲು ಸಾಧ್ಯವಿಲ್ಲ. ಆದರೆ ಮೊತ್ತದ ಜಮಾಖರ್ಚಿಗೆ ಹೆಚ್ಚಾಗಿ ಈ ಸಂದರ್ಭಗಳು ಇರುವುದರಿಂದ ಒಂದು ರೂಪಾಯಿ ವಸೂಲ್ ಇದ್ದು ಮುಂದೆ ರಶೀತಿ ಬುಕ್ಕುಗಳಿಂದ ಬರುವ ಮೊಬಲಗನ್ನು ಎಂಬುದನ್ನು, ಒಂದಿರುವುದಷ್ಟು ಎಲ್ಲವನ್ನೂ ತಿದ್ದು ಬಾಕಿ ಇದ್ದಲ್ಲಿ ಕೂಡಲೇ ಆವರಿಂದ ವಸೂಲ್ ಮಾಡುವ ರೀತಿಯಲ್ಲಿ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಸೂಚಿಸಿರುತ್ತೆ. (ಈಗ ಸಂಪಡಿಸಲಾಗಿದೆ.)

(b) 15ನೇ ರಶೀತಿಯನ್ನು ಬರೆಯ ಕ್ಯಾನ್ಸಲ್ ಮಾಡಲು ಕಾರಣವೇನು ಎಂಬುದನ್ನು ತೋರಿಸಿದುವುದಿಲ್ಲ ಮತ್ತು ಪ್ರಸಿಡೆಂಟರ ಒಪ್ಪಿಗೆಗೆ ಅವರ ಚಿಕ್ಕ ರುಜುವನ್ನು (Initial) ಹಾಕಿಸಿರುವುದಿಲ್ಲ. ಈಗ ಹಾಕಿಸಿ ಪ್ರಸಿಡೆಂಟರ ಸೈನು ತೆಗೆಯಬೇಕು. (ಈಚೆಗೆ ತೆಗೆಯಲಾಗಿದೆ)

3. ರಶೀತಿ ಬುಕ್ಕು ನಂಬರು 20.

(a) 27 ರಿಂದ 100ರ ವರೆಗೆ 74/ ರೂಪಾಯಿ ಜಮಾ ಒಂದಿದ್ದನ್ನು 75/ರೂಪಾಯಿಗಳೆಂತ ತಿದ್ದಿ ಮತ್ತೆ ತಿದ್ದುವಿಕೆಗೂ, ರೋಜು ಬುಕ್ಕಿನಲ್ಲಿ ಸರಿಯಾಗಿ ಜಮಾ ಆಗಿರುವುದನ್ನು ಪ್ರಸಿಡೆಂಟರ ಚಿಕ್ಕ ರುಜು (initial) ಮಾಡಬೇಕು. (ಈಚೆಗೆ ಸಂಪಡಿಸಲಾಗಿದೆ)

4. ಬುಕ್ ನಂಬರು 140.

1ನೇ ರಶೀತಿಯಲ್ಲಿ 1/ ರೂಪಾಯಿ ವಸೂಲಾಗಿದ್ದು 'This is cancelled' ಎಂದು ಪೆನ್ಸಿಲಿನಿಂದ ಬರೆಯಲ್ಪಟ್ಟಿರುತ್ತೆ. ಇದಕ್ಕೆ ಪ್ರಸಿಡೆಂಟರ ರುಜು ಇರುವುದಿಲ್ಲ. ಈ ರಶೀತಿಯನ್ನು ಪ್ರಥಮತಃ ಬರೆದದ್ದು ಏಕೆ? ನಂತರ ಕ್ಯಾನ್ಸಲ್ ಮಾಡಲು ಕಾರಣವೇನು? ಇವರ ವಿವರವನ್ನು ಕ್ಯಾನ್ಸಲ್ ಮಾಡುವ ಕಾಲಗಳಲ್ಲಿ ಇನ್ನು ಮುಂದೆ ನಮೂದಿಸಿ ಪ್ರಸಿಡೆಂಟರ ರುಜು ತೆಗೆಯಬೇಕು (ಈಚೆಗೆ ತೆಗೆಯಲಾಗಿದೆ.)

ರಶೀತಿ ಬುಕ್ಕು ನಂಬರುಗಳು 150, 181, 246, 247, 260, 266, 272, 274, 277, 297, 219, & 300, ಈ ಬುಕ್ಕುಗಳಲ್ಲಿ 24—1—26ರಲ್ಲಿ ವಸೂಲಾದ ಮೊಬಲಗುಗಳು 31—3—27ರ ವರೆಗೆ ರೋಜು ಬುಕ್ಕಿನಲ್ಲಿ ಜಮಾ ಒಂದಿರುವುದಿಲ್ಲ, ಅಂದರೆ—14 ತಿಂಗಳುಗಳು ಸುಮ್ಮನಾಗಿರುತ್ತೆ. ಈ ರೀತಿ ಇನ್ನು ಮುಂದೆ ಆಗಕೂಡದು ಎಂಬ ಸಂಗತಿಯನ್ನು ಚಂದಾ ವಸೂಲ್ ಮಾಡುವ ಆರ್ಗನೈಜರುಗಳಿಗೆ ತಿಳಿಸಬೇಕು.

6. ರಶೀತಿ ಬುಕ್ಕು ನಂಬರು 13.

ಒಂದು, ಎರಡನೇ ರಶೀತಿಗಳಲ್ಲಿ ವಸೂಲಾದ 2/ ರೂಪಾಯಿಗಳು ಯಾವಾಗ ರೋಜಿನಲ್ಲಿ ಜಮಾ ಕಟ್ಟಿರುತ್ತೆ ಎಂದು ಷರಾ ಮಾಡಿರುವುದಿಲ್ಲ. ಈಗ ನೋಡಿ ಮಾಡಿಸಬೇಕು (ಈಚೆಗ ಮಾಡಲಾಗಿದೆ.)

7. ಈ ಕೆಳಗೆ ನಮೂದಿಸಿದ 61 ರಶೀತಿ ಪುಸ್ತಕಗಳನ್ನು ಪರಿಶೋಧಿಸುತ್ತೇನೆ. ಇವುಗಳಿಂದ ಈ ಸಾಲಿಗೆ 819/ ರೂಪಾಯಿಗಳು ಜಮಾ ಬಂದಿರುತ್ತೆ. ಬಾಕಿ 170/ರೂಪಾಯಿಗಳಿಗೆ ರಶೀತಿ ಬುಕ್ಕುಗಳು ಆಡಿಟಿಗೆ ಬಂದಿರುವದಿಲ್ಲ. ಇವುಗಳನ್ನು ಕೂಡಲೇ ಆಡಿಟಿಗೆ ಕಳುಹಿಸಿಕೊಡಬೇಕು. ಸದರಿ ಕಂಪ್ಲೀಟಾಗಿ ಆಡಿಟಿಗೆ ಕಳುಹಿಸಿಕೊಡುವ ಪದ್ಧತಿಯನ್ನು ಇನ್ನು ಮುಂದಾದರೂ ಅನುಸರಿಸಬೇಕು.

8. ಕಟ್ಟಡದ ಫಂಡು.

ಆದಿಯಿಂದ ಈ ಸಾಲಿನ ಆಖೈರು ವರೆಗೆ 4497/ರೂಪಾಯಿ 12 ಆಣೆಗಳು ಮಾತ್ರ ವಸೂಲಾಗಿರುವುದು. ಆದರೆ ಕಟ್ಟಡದ ಕೆಲಸಕ್ಕಾಗಿ 5060—5—7 ಕಾಸುಗಳು ಖರ್ಚಾಗಿರುವವು. ಅಂದರೆ—ಫಂಡಿನ ಜಮೆಯಕ್ಕಿಂತಲೂ ರೂ 562-9-7 ಕಾಸುಗಳು ಹೆಚ್ಚಿಗೆ ಖರ್ಚಾಗಿರುವುದು. ಫಂಡ್ ಕಲೆಕ್ಷನ್ ಹೆಚ್ಚು ಜಮೆಯಾಗುವ ಮೊದಲು ಸಾಧ್ಯವಿಲ್ಲದ ಪಕ್ಷ ಜಂಬಾ ಮೊಬಗಿನ ಉಳುವಿನಿಂದ ಇದಕ್ಕೆ ಖರ್ಚು ಮಾಡಲು ಪ್ರೊಸೀಡಿಂಗ್ಸಿನಲ್ಲಿ ಮಂಜೂರಾತಿಯನ್ನು ಹೊಂದಬೇಕು.

(ತಾ 6—9—1925ರಲ್ಲು ನಡೆದ ನಂ. 6ರ ಠರಾವು ಮೇರೆ ಸಂಘದ ಹಣದಿಂದ 500 ರೂ. ಕಟ್ಟಡದ ಫಂಡಿಗೆ ತೆಗೆದುಕೊಳ್ಳಬಹುದೆಂತ ತೀರ್ಮಾನವಾಗಿದೆ)

ಆಧ ನಷ್ಟಗಳು.

9. ಆದಿಯಿಂದ ಇದು ವರೆಗೆ ವಸೂಲಾದ ಚಂದಾ ಮೊಬಲಗಿನಲ್ಲಿ ಖರ್ಚು ಬಾಕಾ ನಿವ್ವಳ ಶಿಲ್ಕು ರೂ. 1657—9—5 ಆಗಿರುವುದು.

ಬಿ. ಸಿ. ಸುಬ್ಬಣ್ಣ,
ತಾ. 3—5—28.

ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ.

(ಚರ ವರ್ಷದ ವರದಿ)

ಈ ನಿಧಿಯು 1917ನೇ ಇಸವಿ ಜನವರಿ 15ರಲ್ಲಿ ಜನ್ಮಕ್ಕೆ ಬಂದಿತು. ಕೊಡಗು ದೇಶದ ಬ್ರಾಹ್ಮಣೋತ್ತಮರು ಆದ್ಯಂತ ಶ್ರದ್ಧೆ ಬ್ರಾಹ್ಮಣ ಸಮುದಾಯವು ವಿದ್ಯಾವಿಹೀನರಾಗಿ, ವಿದ್ಯಾಭ್ಯಾಸಕ್ಕೆ ಅನುಕೂಲತೆಗಳಿಲ್ಲದೇನೂ ಹಿಂದುಳಿದಿರ ವುದನ್ನು ಮನಗಂಡು ಕೆಲವು ಮಹನೀಯರು ಸೇರಿ ಈ ನಿಧಿಯನ್ನು ಸ್ಥಾಪಿಸಿದರು. ಈ ನಿಧಿಯು ಹುಟ್ಟಿದಂದಿನಿಂದ ಈ ವರೆಗೆ ಅನೇಕ ಬ್ರಾಹ್ಮಣ ಬಾಲಕರಿಗೆ ವಿದ್ಯಾಭ್ಯಾಸ ಮಾಡಲು ತಕ್ಕಷ್ಟು ಅನುಕೂಲಗಳನ್ನು ಒದಗಿಸಿ ಕೊಟ್ಟಿರುತ್ತದೆ. ಕೊಡುತ್ತಲೂ ಇದೆ. ನಿಧಿಯ ಮುಖ್ಯೋದ್ದೇಶ ಬ್ರಾಹ್ಮಣ ತರುಣರ ವಿದ್ಯಾರ್ಜನೆಗೆ ಸಹಾಯಮಾಡುವುದು. ಈ ಉದ್ದೇಶ ಸಾಧನವು ಕೆಲವು ಮಟ್ಟಿಗೆ ಕೆಳಗಿನ ರೀತಿಯಲ್ಲಿ ಆಗುತ್ತಿದೆ.—

(1) ಹೈಸ್ಕೂಲುಗಳಲ್ಲಿ ಓದುತ್ತಿರುವ ಅರ್ಹರಾದ ಬ್ರಾಹ್ಮಣ ಬಾಲಕರಿಗೆ ಸ್ಕೂಲ್ ಫೀ ಮತ್ತು ಊಟ ಉಪಚಾರಕ್ಕೆ ಅನುಕೂಲವಾಗುವಂತೆ ಚಿಕ್ಕ ಚಿಕ್ಕ ವೇತನಗಳನ್ನು ಕೊಡುವುದು.

(2) ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿರುವ ತರುಣರಿಗೆ ವೇತನಗಳನ್ನೂ, ಸಾಲಗಳನ್ನೂ ಕೊಡುವುದು.

(3) ಮಡಿಕೇರಿಯಲ್ಲಿ ಓದುತ್ತಿರುವ ಹುಡುಗರ ವಸತಿಗೆ ಅನುಕೂಲಿಸುವಂತೆ ಒಂದು ವಿದ್ಯಾರ್ಥಿ ಭವನವನ್ನು ನಡೆಸುತ್ತಿರುವುದು.

ಈ ವೇತನಗಳನ್ನೂ, ಸಾಲಗಳನ್ನೂ ಕೊಡಲು ಕೊಡಗಿನ ಬ್ರಾಹ್ಮಣ ಗೃಹಸ್ಥರು, ಮತ್ತು ಪ್ರೋತ್ಸಾಹಕರು ಕೊಟ್ಟ ಉಚಿತ ದ್ರವ್ಯದಿಂದಲೂ ಚಂದಾ ಮೊಬಲಗಿನಿಂದಲೂ ಕೂಡ ವುದಾಗಿದೆ. ಮಡಿಕೇರಿಯಲ್ಲಿಯ ಮೆಂಬರುಗಳು ತಿಂಗಳಿಗೆ ಇಂತಿಷ್ಟೆಂದು ಚಂದಾ ಕೊಡುವವರಾಗಿರುವರೂ, ಬಾಕಿಯವರು ವರ್ಷಕ್ಕೊಮ್ಮೆ ಕೊಡುವವರಾಗಿಯೂ ಇರುವರು. ಅಲ್ಲದೆ ಮದುವೆ, ಉಪನಯನ ಮುಂತಾದ ವಿಶೇಷ ಕಾರ್ಯಗಳಲ್ಲಿ ಕೆಲವು ಮಹನೀಯರು ತುಂಬಾ ತೊಂದರೆ ತೆಗೆದುಕೊಂಡು ಒಸಗೆ ಪ್ರೀತಿಯಿಂದ ಕೊಟ್ಟಂಥಾ ದಕ್ಷಿಣೆ ನೊಡಲಾದವುಗಳನ್ನು ಸಂಗ್ರಹಿ

ಸಿ ನಿಧಿಗೆ ಕಳುಹಿಸಿ ಕೊಟ್ಟಿರುತ್ತಾರೆ. ಹೀಗೆ ಶ್ರಮ ತೆಗೆದುಕೊಂಡವರಲ್ಲಿ ವೆ ಮರುಗೋಡು ರಾಮಭಟ್ಟರು ಮುಖ್ಯರಾಗಿರುತ್ತಾರೆ. ಇದಕ್ಕಾಗಿ ನಿಧಿಯು ಇವರನ್ನು ವಂದಿಸುತ್ತದೆ. ಕೊಡಗಿನ ಇತರ ಪುರೋಹಿತರುಗಳನ್ನೂ ಇದೇ ರೀತಿಯಾಗಿ ನಿಧಿಗೆ ಸಹಾಯ ಮಾಡಬೇಕಾಗಿ ಕೇಳಿಕೊಳ್ಳಲಾಗಿತ್ತು. ಆದರೆ ಈ ವರೆಗೆ ಅವರಿಂದ ಏನೂ ಸಹಾಯ ದೊರೆತಿರುವುದಿಲ್ಲ. ಇನ್ನು ಮುಂದಾದರೂ ಅವರು ಈ ವಿಷಯವನ್ನು ಮನಸ್ಸಿಗೆ ತೆಗೆದುಕೊಳ್ಳುವರಾಗಿ ನಿರೀಕ್ಷಿಸಿದೆ.

ಕಾರ್ಯನಿರ್ವಾಹಕ ಮಂಡಳಿ.

ನಿಧಿಯ ಆಡಳಿತವು ಒಂದು ಕಾರ್ಯನಿರ್ವಾಹಕ ಮಂಡಳಿಯ ಕೈಯಲ್ಲಿದೆ. ಈ ಮಂಡಳಿಯಲ್ಲಿ ಒಬ್ಬರು ಅಧ್ಯಕ್ಷರೂ, ಒಬ್ಬರು ಉಪಾಧ್ಯಕ್ಷರೂ, ಒಬ್ಬ ಕಾರ್ಯದರ್ಶಿಯೂ, 14 ಜನ ಇತರ ಮೆಂಬರುಗಳೂ ಇದ್ದಾರೆ. ಕಾರ್ಯದರ್ಶಿಗಳೇ ಖಜಾನ್ಚಿಯೂ ಆಗಿರುತ್ತಾರೆ. ಈ ಮಂಡಳಿಯವರೇ ಸಭೆಸೇರಿ ವೇತನಗಳನ್ನೂ, ಸಾಲಗಳನ್ನೂ ಮಂಜೂರು ಮಾಡುವುದಾಗಿದೆ.

ವೇತನಗಳು.

1926ನೇ ಇಸವಿಯಿಂದ ಕೊಡಗಿನ ಹೈಸ್ಕೂಲುಗಳಲ್ಲಿ ಓದುವ ಅರ್ಹರಾದ ವಿದ್ಯಾರ್ಥಿಗಳಿಗೆ ಒಂದೆರಡು ವೇತನಗಳನ್ನು ಕೊಡಲಾಗಿದೆ. ಹಣದ ಅಭಾವದಿಂದ ಹೆಚ್ಚಿನ ವಿದ್ಯಾರ್ಥಿಗಳಿಗೆ ಸಹಾಯ ಮಾಡಲಾಗಲಿಲ್ಲ. ಮಹನೀಯರ ಪ್ರೋತ್ಸಾಹದಿಂದಲೂ, ಸಹಾಯದಿಂದಲೂ ಇನ್ನು ಮುಂದಾದರೂ ಹೆಚ್ಚು ಹೆಚ್ಚು ವೇತನಗಳನ್ನು ಕೊಟ್ಟು ಬಡ ವಿದ್ಯಾರ್ಥಿಗಳ ವಿದ್ಯೆಗೆ ಸಹಾಯ ಕೊಡಲು ಸಾಧ್ಯವಾಗಬಹುದೆಂದು ನಂಬಲಾಗಿದೆ. ನಿಧಿಯು ಪ್ರಾರಂಭವಾದಂದಿನಿಂದ ಇಂದಿನ ವರೆಗೆ ವೇತನಗಳನ್ನು ಹೊಂದಿಕೊಂಡವರ ಪಟ್ಟಿಯೊಂದನ್ನು ಇದಕ್ಕೆ ಜೋಡಿಸಿದೆ. ಇವರ ಪೈಕಿ ಮೆ. ಎ. ಯಸ್. ರಾಮಯ್ಯನವರೂ, ಮೆ. ಹೆಚ್. ಯಸ್. ಕೃಷ್ಣಯ್ಯಂಗಾರರೂ 140 ಮತ್ತು 100 ರೂಪಾಯಿಗಳ ವೇತನಗಳನ್ನು 1918ರಲ್ಲೇ ಹೊಂದಿಕೊಂಡಿರುತ್ತಾರೆ. ಅವರಿಂದ ಕರಾರನ್ನು ಮಾಡಿಸಿಕೊಂಡಿರುವುದಿಲ್ಲ. ಅವರಿಬ್ಬರೂ ಈಗ ಸ್ವಯಾರ್ಜನೆಗೆ ಪ್ರಾರಂಭಿಸಿರುವುದರಿಂದ ನಿಧಿಯ ಮೇಲೆ ಪ್ರೇಮವಿಟ್ಟು ಅವರು ಆ ಹಣವನ್ನು ವಾಪಸು ಕೊಡುವರಾಗಿ ನಂಬಿದೆ.

ಸಾಲ.

ಈ ನಿಧಿಯಿಂದ ಸಾಲ ಹೊಂದಿಕೊಂಡಿರುವವರ ಪಟ್ಟಿಯೊಂದನ್ನು ಇದಕ್ಕೆ ಜೋಡಿಸಿದೆ. ಇವರಲ್ಲಿ ಮೆ. ಎ. ಕೆ. ಕೃಷ್ಣಯ್ಯನವರೂ, ಮೆ. ಯಂ. ಯಸ್. ಸುಬ್ರಾಯರೂ, ಮೆ. ಎ. ಯಸ್. ರಾಮಯ್ಯನವರೂ ತಾವು ಹೊಂದಿಕೊಂಡ ಮೊಬಲಗನ್ನು ಪೂರ್ತಿಯಾಗಿ 6¼ ರೂಪಾಯಿಯ ಬಡ್ಡಿಯೊಂದಿಗೆ ವಾಪಸು ಕೊಟ್ಟಿರುವರು. ಬಾಕಿಯವರೂ ಆದಷ್ಟು ಜಾಗ್ರತೆಯಾಗಿ ತಾವು ಕೊಡಬೇಕಾದ ಹಣವನ್ನು ವಾಪಸುಕೊಟ್ಟು ನಿಧಿಯ ಕಾರ್ಯದಲ್ಲಿ ಸಹಾಯಕರಾಗುವರಾಗಿ ನಂಬಿದೆ. ಪಟ್ಟಿಯಲ್ಲಿ ನಮೂದಿಸಿದಂತೆ ಒಟ್ಟು ರೂ. 2375—15—0 ಸಾಲವಾಗಿಯೂ, ರೂ. 900 ವೇತನ ರೂಪವಾಗಿಯೂ ಕೊಟ್ಟಿದೆ. ಸಾಲಕೊಟ್ಟದ್ದರಲ್ಲಿ ರೂ 1002—13—3, ವೇತನದಲ್ಲಿ ರೂ. 210—0—0 ಮರುಪಾವತಿಯಾಗಿದೆ. ರೂ. 2063—1—9 ಹಿಂದೆ ಬರುವುದಕ್ಕಿದೆ. ಈಗ ಕಾರ್ಯದರ್ಶಿಯ ಕೈಯಲ್ಲಿ ರೂ. 923/ ಇದೆ. ಇದರ ಪೈಕಿ ರೂ. 889 ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿದೆ.

ಆಡಿಟರ ರಿಪೋರ್ಟು.

ಇದು ವರೆಗೆ ಮೆಂಬರುಗಳಿಂದಲೂ, ಪ್ರೋತ್ಸಾಹಕರಿಂದಲೂ ಮತ್ತು ವಿಶೇಷ ದಿನಗಳಲ್ಲೂ ವಸೂಲಾದ ಹಣದ ಲೆಕ್ಕವನ್ನು ಸ್ವಲ್ಪವೂ ವ್ಯತ್ಯಾಸವಾಗದಂತೆ ಇಟ್ಟಿದೆ. ಈ ಲೆಕ್ಕವನ್ನು ಆಡಿಟ್ ಮಾಡುವುದಕ್ಕೆ 1927ನೇ ಇಸವಿಯ ಜನರಲ್ ಮೀಟಿಂಗಿನಲ್ಲಿ ಮೆ. [illegible] ಶ್ಯಾಮಣ್ಣನವರನ್ನು ಆಡಿಟರನ್ನಾಗಿ ನೇಮಕ ಮಾಡಲಾಯಿತು. ಅವರು ಅದಕ್ಕನುಸಾರವಾಗಿ ಲೆಕ್ಕವನ್ನೆಲ್ಲಾ ಚೆನ್ನಾಗಿ ಪರಿಶೋಧಿಸಿ ರಿಪೋರ್ಟನ್ನು ಒಪ್ಪಿಸಿರುತ್ತಾರೆ. ಅವರು ತಮ್ಮ ಅನುಕೂಲ್ಯವಾದ ಸಮಯವನ್ನು ನಿಧಿಯ ಲೆಕ್ಕವನ್ನು ಆಡಿಟ್ ಮಾಡಿಸಲು ಕೊಟ್ಟದ್ದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿರುತ್ತೇವೆ.

ವಿದ್ಯಾರ್ಥಿ ಭವನ.

1918ನೇ ಇಸವಿಯ ವಿರಾಜಪೇಟೆಯಲ್ಲಿ ನಡೆದ ನಿಧಿಯ ಮಹಾಸಭೆಯಲ್ಲಿ ನೆರೆದ ಮಹನೀಯರು ವಿದ್ಯಾರ್ಥಿಗಳಿಗೆ ವಾಸಿಸುವುದಕ್ಕೆ ಅನುಕೂಲವಾಗುವಂತೆ ಮಡಿಕೇರಿಯಲ್ಲಿ ಒಂದು ವಿದ್ಯಾರ್ಥಿ ಭವನವನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿದರು. ಅದರಂತೆ ಮೆ. ನಿಡ್ಯದ ಸುಬ್ಬಣ್ಣಯ್ಯನವರು ಉದಾರತೆಯಿಂದ ಕೊಟ್ಟ ಬ್ರಾಹ್ಮಣರ ಬೀದಿಯಲ್ಲಿರುವ ಅವರ ಮನೆಯಲ್ಲಿ ಭವನವನ್ನು ಸ್ಥಾಪಿಸಿದ್ದಾಗಿದೆ. ಅನೇಕ ಮಹನೀಯರುಗಳು ಪಾತ್ರೆ ಪದಾರ್ಥಗಳನ್ನು ಉಚಿತವಾಗಿ ಕೊಟ್ಟು ಭವನದ ಕಾರ್ಯವನ್ನು ಆರಂಭಿಸಿದರು. ಮೆ. ದಿವಂಗತ ಗುಂಡುಕಲ್ ಮಂಜಯ್ಯನವರು ಓದುವ ಹುಡುಗರ ಏಳ್ಗೆಗಾಗಿ 400/ ರೂಪಾಯಿಯನ್ನು ಕೊಟ್ಟಿರುತ್ತಾರೆ. ಈ ಹಣದ ಬಡ್ಡಿಯನ್ನು ಭವನದ ಏಳ್ಗೆಯ ಖರ್ಚಿಗೆ ಉಪಯೋಗಿಸುತ್ತಿದೆ. ಅಲ್ಲದೆ ಭವನದ ಹೊಸ ಕಟ್ಟಡಕ್ಕೆಂದು ಇವರು ಕೊಟ್ಟ 1000/ ರೂಪಾಯಿ ಮತ್ತು ಇತರ ಮಹನೀಯರುಗಳ ಉದಾರಾಶ್ರಯದಿಂದ ಸಹ 1926ರಲ್ಲಿ 2770/ ರೂಪಾಯಿಯ ಖರ್ಚಿನಿಂದ ಭವನದ ವಿದ್ಯಾರ್ಥಿಗಳ ವಸತಿಗೆ ಅನುಕೂಲವಾಗುವಂತೆ ಒಂದು ಹೊಸ ಮಂದಿರವನ್ನು ಕಟ್ಟಲಾಗಿದೆ. ಈ ಭವನದಲ್ಲಿ ಸರಾಸರಿ 13 ವಿದ್ಯಾರ್ಥಿಗಳು ವಾಸಿಸುತ್ತಿದ್ದಾರೆ. ಇದರ ಆಡಳಿತವೂ ಸಹ ನಿಧಿಯ ಕಾರ್ಯಕಾರಿ ಮಂಡಳಿಯ ವಶದಲ್ಲಿದೆ. ಭವನದ ಮೇಲ್ವಿಚಾರಣೆಗೆ ಒಬ್ಬ ಗೌರವ ಮೇನೇಜರನ್ನು ಮಂಡಳಿಯವರು ನೇಮಕ ಮಾಡಿರುತ್ತಾರೆ. 1926 ನೆಯ ಇಸವಿಯ ವರೆಗೆ ಮೇನೇಜರಿಗೆ ಕಿಂಚಿತ್ತು ಸಂಬಳವಿತ್ತು. 1926ರಿಂದ ಈಚೆಗೆ ಮೇನೇಜರು ಗೌರವವಾಗಿ ಅಂದರೆ ಸಂಬಳವಿಲ್ಲದೆ ಕೆಲಸ ಮಾಡುತ್ತಿರುವರು. ಕಳೆದ ಎರಡು ವರ್ಷಗಳಿಂದಲೂ ಮೆ. ಜಿ. ಯನ್. ಕೃಷ್ಣಯ್ಯನವರು ಈ ಭಾರವನ್ನು ವಹಿಸಿಕೊಂಡು [illegible]ಗಳಿಲ್ಲದಂತೆ ಕೆಲಸವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. 1918ನೇ ಇಸವಿಯಿಂದ 1926ರ ವರೆಗೆ ಮೆ. ಸಿ. ಯಸ್. ಶಂಭಯ್ಯನವರು ಮೇನೇಜರಾಗಿ ಭವನವನ್ನು ಚೆನ್ನಾಗಿ ನಡೆಸಿರುವರು.

ಭವನದ ಮಂದಿರವನ್ನು ಕಟ್ಟಲು ಮಹನೀಯರುಗಳು ಮಾಡಿದ ಧನಸಹಾಯಕ್ಕೆ ನಿಧಿಯು ಅವರನ್ನು ಬಹಳವಾಗಿ ವಂದಿಸುತ್ತದೆ. ಭವನದ ಅಡಿಗೆಯ ಮನೆಯು ಬೀಳುವಂತಿದೆ. ಇದಕ್ಕೆ ದುರಸ್ತಿ ರಿಪೇರಿಯಾಗಬೇಕಾಗಿದೆ. ಇಲ್ಲವಾದರೆ ಅದು ಈ ಮಳೆಗೆ ಬಿದ್ದು ಹೋಗುವುದೇ ಸರಿ. ಮಹನೀಯರು ಈ ಮನೆ ರಿಪೇರಿಗೆ ತಮ್ಮ ಕೈಲಾದ ಸಹಾಯ ಮಾಡಬೇಕಾಗಿ ಕೋರುತ್ತೇನೆ. ಅಲ್ಲದೆ ಮೊದಲಿನ ಕಟ್ಟಡಕ್ಕೆ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದ ಮಹನೀಯರಲ್ಲಿ ಕೆಲವರು ಈ ವರೆಗೂ ಹಣವನ್ನು ಕೊಟ್ಟಿರುವುದಿಲ್ಲ. ಅವರು ಈ ಸಮಯದಲ್ಲಿ ಸಹಾಯ ಮಾಡಿ ಭವನದ ಕಾರ್ಯ ಸರಾಗವಾಗಿ ನಡೆಯುವಂತೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

1. ವೇತನವನ್ನು ಹೊಂದಿಕೊಂಡವರ ಪಟ್ಟಿ.

	ಹೊಂದಿಕೊಂಡ ಮೊಬಲಗು.	ವಾಪಸು ಕೊಟ್ಟದ್ದು.	ಬಾಕಿ.
ಮೆ. ಎ. ಯಸ್. ರಾಮಯ್ಯನವರು, ಬಿ. ಎ. ಎಲ್‌ಎಲ್. ಬಿ.	140 0	,,	140 0 0
,, ಹೆಚ್. ಯಸ್. ಕೃಷ್ಣಯ್ಯಂಗಾರರು, ಬಿ. ಎ.	100 0	,,	100 0 0
,, ಯಂ. ಯಸ್. ಸುಬ್ರಾಯರು.	160 0	160 0 0	,,
,, ಜಿ. ಡಿ. ಪರಮೇಶ್ವರಯ್ಯನವರು, ಬಿ. ಎ.	100 0	,,	100 0 0
,, ಡಿ. ಯನ್. ಕೃಷ್ಣಯ್ಯನವರು, ಬಿ. ಎ.	100 0	50 0 0	50 0 0
,, ಕೆ. ಯನ್. ಸೀತಾರಾಮರಾಯರು, ಬಿ. ಎ.	200 0	,,	200 0 0
,, ಕಣ್ಣಂಗಾಲದ ಕೃಷ್ಣಯ್ಯನವರು.	30 0	,,	30 0 0
,, ನೂರಂಬಡದ ರಾಮಚಂದ್ರಯ್ಯನವರು,	70 0	,,	70 0 0
ಜುಮ್ಲ.	900 0 0	210 0 0	690 0 0

2. ಸಾಲವನ್ನು ಹೊಂದಿಕೊಂಡವರ ಪಟ್ಟಿ.

	ಹೊಂದಿಕೊಂಡ ಮೊಬಲಗು.	ವಾಪಸು ಕೊಟ್ಟದ್ದು.	ಬಾಕಿ.
ಮೆ. ಎ. ಯಸ್. ರಾಮಯ್ಯನವರು, ಬಿ. ಎ. ಎಲ್‌ಎಲ್. ಬಿ.	200 0 0	200 0 0	,,
,, ಯಂ. ಯನ್. ಗುಂಡುರಾಯರು, ಬಿ. ಎ.	150 0 0	,,	150 0 0
,, ಜಿ. ಜೀವರ ಭಟ್ಟರು,	300 0 0	61 14 0	238 2 0
,, ಕಿಗ್ಗಾಲು ಶಂಕರನಾರಾಯಣಯ್ಯನವರು, ಬಿ. ಎ.	450 0 0	250 0 0	200 0 0
,, ಯಂ. ಗಂಗಾಧರ ವೈದ್ಯರು,	105 15 0	61 13 8	44 1 4
,, ಕೆ. ವೆಂಕಟಗಿರಿ, ಬಿ. ಎ.	220 0	154 1 7	65 14 5
,, ಎ. ಕೆ. ಕೃಷ್ಣಯ್ಯನವರು, ಬಿ. ಎ. ಯಲ್‌ಯಲ್. ಬಿ.	200 0	200 0 0	,,
,, ಕಟ್ಟಿಗೆ ಕೃಷ್ಣಯ್ಯನವರು,	100 0	75 0 0	25 0 0
,, ಡಿ. ಯನ್. ಕೃಷ್ಣಯ್ಯನವರು, ಬಿ. ಎ.	100 0	,,	100 0 0
,, ಹೆಚ್. ಶ್ರೀಕಣ್ಠಯ್ಯನವರು,	200 0	,,	200 0 0
,, ಕೆ. ಯನ್. ಸೀತಾರಾಮರಾಯರು, ಬಿ. ಎ.	100 0	,,	100 0 0
,, ಸಿ. ಯಸ್. ಕೃಷ್ಣರಾಯರು,	150 0	,,	150 0 0
,, ತಲಕಾವೇರಿ ಕೆ. ನಾರಾಯಣಾಚಾರ್,	100 0		100 0 0
ಜುಮ್ಲ.	2375 15 0	1002 13 3	1373 1 9

3 ನಿಧಿಯ ಕಾರ್ಯಕಾರಿ ಮಂಡಳಿ.

ಅಧ್ಯಕ್ಷರು. ಮೆ. ಸಿ. ಯನ್. ವೆಂಕಪ್ಪಯ್ಯ, ಬಿ. ಎ. ಬಿ. ಯಲ್. & ಯಂ. ಯಲ್. ಸಿ. ಯವರು.
ಉಪಾಧ್ಯಕ್ಷರು ,, ಕೆ. ನಾರಾಯಣರಾಯರು.
ಕಾರ್ಯದರ್ಶಿ. ,, ಯಂ. ಕೃಷ್ಣಯ್ಯನವರು,

ಮೆಂಬರುಗಳು.

ಮೆ. ಪಿ. ಯಂ ಮಂಜುನಾಥಯ್ಯನವರು,
,, ಸಿ. ಯಂ ರಾಮರಾವ್, ಬಿ. ಎ. ಎಲ್. ಟಿ. ಯವರು,
,, ಕೆ. ಜಿ. ಸುಬ್ರಾಯರು,
,, ಪಿ. ಶ್ರೀನಿವಾಸಮೂರ್ತಿಯವರು,
,, ಕೆ. ಪಿ. ಸುಬ್ರಾಯರು,
,, ಸಿ. ಯನ್. ತಿಮ್ಮಪ್ಪಯ್ಯನವರು,
,, ಯಸ್. ಶಂಕರನಾರಾಯಣಯ್ಯನವರು,
,, ಸಿ. ಕೆ. ವೆಂಕಪ್ಪಯ್ಯನವರು,
,, ಸಿ. ಯಸ್. ಕೃಷ್ಣರಾವ್‌ನವರು,
,, ಯಸ್. ಯಸ್. ರಾಮಯ್ಯನವರು,
,, ಬಿ. ಶ್ಯಾಮಣ್ಣನವರು,
,, ಯಸ್. ಶ್ರೀನಿವಾಸಯ್ಯನವರು,
,, ಯಮ್. ಯಸ್. ಸುಬ್ರಾಯನವರು,
,, ಯನ್. ಆರ್. ಸುಬ್ಬಣ್ಣಯ್ಯನವರು,

ವಿಜ್ಞಾಪನೆ.

ನಿಧಿಯಿಂದ ಸಹಾಯವನ್ನು ಹೊಂದಿಕೊಂಡಿರುವ ಅನೇಕ ಯುವಕರು ಸ್ವತಂತ್ರ ಜೀವನೋಪಾಯವನ್ನು ಕೈಕೊಂಡು ಒಳ್ಳೆಯ ಸ್ಥಿತಿಗೆ ಬಂದಿರುವರು. ದೇವರ ದಯೆದಿಂದ ಇನ್ನೂ ಮುಂದಕ್ಕೆ ಬರುವರು. ಅವರು ತಾವು ಹೊಂದಿಕೊಂಡ ಹಣವನ್ನು ಮರುಪಾವತಿ ಮಾಡುವುದಲ್ಲದೆ ಹೆಚ್ಚಿನ ಸಹಾಯವನ್ನು ಮಾಡಿ ನಿಧಿಯು ಇನ್ನೂ ಹೆಚ್ಚು ಬಾಲಕರ ವಿದ್ಯೆಗೆ ಸಹಾಯಕವಾಗುವಂತೆ ಮಾಡುವರಾಗಿ ನಂಬಿದೆ.

ಇದು ವರೆಗೆ ಪ್ರೋತ್ಸಾಹ ಕೊಟ್ಟಿರುವ ಮಹನೀಯರೆಲ್ಲರೂ ಇನ್ನು ಮುಂದಕ್ಕೂ ಹೀಗೆಯೇ ಉತ್ತೇಜನ ಕೊಟ್ಟು ಈ ನಿಧಿಯೂ, ವಿದ್ಯಾರ್ಥಿ ಭವನವೂ ವೃದ್ಧಿಹೊಂದುವಂತೆ ಮಾಡಬೇಕಾಗಿ ಅತ್ಯಂತ ವಿನಯದಿಂದ ಬೇಡಿಕೊಳ್ಳುತ್ತೇನೆ. ಕೊಡಗಿನ ಬ್ರಾಹ್ಮಣ ಮಹನೀಯರೆಲ್ಲರೂ ನಿಧಿಯ ಮೆಂಬರುಗಳಾಗಿ ಸೇರಿ ನಿಧಿಯ ಶಕ್ತಿಯನ್ನು ವೃದ್ಧಿಗೊಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮಡಿಕೇರಿ, "ಹುಕುಂ ಮೇರೆ."
ತಾ. 30—5—28. ಯಂ ಕೃಷ್ಣಯ್ಯ,
ಕಾರ್ಯದರ್ಶಿ.

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹೊಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಗಿಲೀಟು ಭಂಗಾರದಿಂದ ಕಟ್ಟಿಡ ಕಟ್ಟಿರುವದು. ಇದರ ಪ್ರಕಾಶವು ಸಾಕ್ಷಾತ್ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಒಪ್ಪವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು.



7 ಕಲ್ಲಿನ ಬಿಳಿಯ ಓಲೆ ಜೋಡಿ 1ಕ್ಕೆ 2—0—0.
7 ಕೆಂಪು ಕಲ್ಲಿನ ಓಲೆ ಜೋಡಿ 1ಕ್ಕೆ 2—8—0.

ಸ್ಪಿರಿಟ್ ಸ್ಟೋವ್.



ಇವುಗಳನ್ನು ಹಿತ್ತಾಳೆಯಿಂದ ಮಾಡಿರುವದು. ಇದರಲ್ಲಿ ಒಬ್ಬರ ಸಹಾಯವಿಲ್ಲದೆಯೂ, ಯಾವ ತೊಂದರೆ ಇಲ್ಲದೆಯೂ ಎಷ್ಟು ಜನಗಳಿಗಾದರೂ ಪದಾರ್ಥಗಳನ್ನು ಬಹು ಬೇಗನೆ ಅಡಿಗೆಮಾಡಿಕೊಳ್ಳಬಹುದು.
ಕ್ರಯ 1ಕ್ಕೆ 2—8—0.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರ ಮಾಡಿಸಿಕೊಳ್ಳುವದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು ಬಿಡುವದು.
3 ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0.
ವಿಳಾಸ.—ಕೆ. ನಾಥಮುನಿ ಅಂಡ್ ಸನ್ಸ್,
52—2 168, ಚೈನಾ ಬಜಾರ್, ಮದರಾಸು.

PROPERTY FOR SALE.

45 acres Coffee in good condition, 500 batties wet lands. 15 acres Orange cultivation, 50 acres Jungle to be cultivated and 8 acres Miscellaneous with a good bunglow & Cooly lines.

Price Rs. 50,000 or near offer.

For further particulars please apply to:—

K. N. Appayya,
Teakwoods,
2—2. Siddapur, S. Coorg.

ಸೂಚನೆ.

ನಮ್ಮ ಚಂದಾದಾರರ ಪೈಕಿ ನಂ. 1ರಿಂದ 291ರ ವರೆಗಿನವರ ಪತ್ರಿಕೆಯ ಅವಧಿಯು ತಾ. 31—5—28ಕ್ಕೆ ತೀರಿರುವುದರಿಂದ ನವರಿಯವರೆಲ್ಲರೂ ತಮ್ಮ ಬಾಬ್ತು ಮುಂದಣ ಒಂದು ವರ್ಷದ ಚಂದಾಹಣ ರೂ. 3—8—0 ವನ್ನು ಒಂದು ವಾರದೊಳಗೆ ಪಾವತಿಮಾಡಬೇಕಾಗಿ ಕೋರುತ್ತೇವೆ. ತಪ್ಪಿದರೆ ಪತ್ರಿಕೆ ನಿಲ್ಲಿಸಲೇ ಬೇಕಾಗುವುದು. ಅಲ್ಲದೆ ಈ ಮೇಲ್ಕಂಡ ಚಂದಾದಾರರ ಪೈಕಿ ಹಲವು ಮಹನೀಯರು ಈ ವರೆಗೆ ಓದಿದ ಒಂದು ವರ್ಷದ ಪತ್ರಿಕೆಯ ಚಂದಾ ಹಣ ಪಾವತಿ ಮಾಡದ ಬಾಬಿನಲ್ಲಿ ತುಂಬಾ ವಿಷಾಧಿಸುತ್ತೇವೆ. ಇನ್ನಾದರೂ ಒಡನೆ ಪಾವತಿಯಿಂದ ಕಂಪೆನಿಯ ಕೆಲಸಕ್ಕೆ ಉತ್ತೇಜನ ಕೊಟ್ಟು ಪ್ರೋತ್ಸಾಹಿಸುವರಾಗಿ ನಂಬುತ್ತೇವೆ.

ವರ್ತಮಾನ ಸಂಗ್ರಹ.

ಒಳದೇಶ

ಕೊಡಗು ಸರಕಾರದ ಖರ್ಚಿನಿಂದ ಎಗ್ರಿಕಲ್ಚರಲ್ ಟ್ರೈನಿಂಗಿಗೆ ಕಳುಹಿಸುವ ಒಬ್ಬ ಕಮಿಶನರು ಮುಂಡಂಡ ಪೊನ್ನಪ್ಪನವರನ್ನು ಚುನಾಯಿಸಿರುತ್ತಾರೆ.

ನಂಟ್ರಲ್ ಸಹಕಾರಿ ಕೋಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ 9ನೇ ಶನಿವಾರ ದಿನ ಬೆಳಿಗ್ಗೆ 9 ಗಂಟೆಗೆ ಜಮಾನ್ದಾರರ ಸಂಘದ ಹಾಲಿನಲ್ಲಿ ನಡೆಯಲಿಕ್ಕಿದೆ.

ಎಗ್ರಿಕಲ್ಚರಲ್ ಇಂಜನಿಯರರಾದ ಎಲ್ ಎಮ್ ಫ್. ಬ್ಯಾರಟ್ ಇವರು 4 ತಿಂಗಳು ರಜೆಯಲ್ಲಿ ಇದ್ದವರು ಈ ತೀರ ತಾ. 25/5/28ರಲ್ಲಿ ಪುನಃ ಚಾರ್ಜು ತೆಗೆದುಕೊಂಡಿರುವರು.

ಮಿ. ಹೆಚ್. ಯಂ ಅಪ್ಪಣ್ಣಯ್ಯನವರು ಕಳೆದ ಬಿ. ಎ ಪರೀಕ್ಷೆಯಲ್ಲಿ ಎರಡನೇ ಭಾಗದಲ್ಲಿ ತೇರ್ಗಡೆ ಹೊಂದಿದವರಾಗಿ ಈಚೆಗೆ ತಿಳಿಯುತ್ತೇವೆ. ಅವರಿಗೆ ನಮ್ಮ ಅಭಿವಂದನೆಗಳಿವೆ.

ರಿಟೈರ್ಡ್ ಫಾರೆಸ್ಟ್ ರೇಂಜ್ ಆಫೀಸರಾಗಿದ್ದ ಮಿ. ಚೇನಂಡ ಮೇದಪ್ಪನವರು ಕೋಕೇರಿ ಗ್ರಾಮದ ಅವರ ಮನೆಯಲ್ಲಿ ಕಳೆದ ತಾ 26ರಲ್ಲಿ ಮೃತರಾದರೆಂದು ತಿಳಿಯಲು ವಿಷಾಧಿಸುತ್ತೇವೆ.

ತಾ. 27—8—28ರಲ್ಲಿ ಗೌಡ ವಿದ್ಯಾವರ್ಧಿನಿ ಸಂಘದ ಮಹಾಸಭೆಯು ಬಿಳಿಗೇರಿ ಗ್ರಾಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟುಬೋರ್ಡ್ ಮೆಂಬರಾದ ಮಿ. ಕೆ ರಾಮಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು.

ಹೋದ ವರ್ಷ ಇದೇ ಸಮಯದಲ್ಲಿ ಮಡಿಕೇರಿಯಲ್ಲಿ ಹರಿಕಥೆಮಾಡಿ ಹೋದ ಶಿರಸಿ ತಾಲೋಕು ಶೀಗೆಹಳ್ಳಿ ಮಠದ ಶಂಕರಾನಂದ ಸಾಧುಗಳು ಮಡಿಕೇರಿಗೆ ಬಂದಿರುತ್ತಾರೆ. ಈಗಾಗಲೇ ಮೂರು ಹರಿಕಥೆಗಳಾದವು.

ತಲಚೇರಿಯಿಂದ ಮಕೂಟಕ್ಕೆ ರೈಲ್ ಹಾಕಬೇಕೆಂಬ ಆಲೋಚನೆಯಿಂದ ಈ ಲೈನಿನಲ್ಲಿ ಸಾಮಾನು ಸಾಗಿಸುವದರಿಂದ ಎಷ್ಟು ಉತ್ಪತ್ತಿಯಾಗಬಹುದೆಂಬದನ್ನು ಅಜಮಾಯಿಸಿಕ್ಕಾಗಿ ಸೌತ್ ಇಂಡಿಯನ್ ರೈಲ್ವೇ ಕಂಪೆನಿಯ ಪ್ರತಿನಿಧಿಯೊಬ್ಬರು ತಾ. 29. 30ರಲ್ಲಿ ಮಡಿಕೇರಿಗೆ ಬಂದು ಕಮಿಶನರನ್ನೂ, ಚೀಫ್ ಫಾರೆಸ್ಟ್ ಆಫೀಸರನ್ನೂ ಭೇಟಿಮಾಡಿ ಹೋದರು.

ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಯೂ ದಿ ಮತ್ತು ಕಾಂಗ್ರೆಸ್ಸಿನಲ್ಲಿ ಹಿಂದುಸ್ಥಾನವು ಸಂಪೂರ್ಣ ಸ್ವಾತಂತ್ರ್ಯ ಪಡೆಯುವದೇ ಹಿಂದುಸ್ಥಾನದ ಧ್ಯೇಯವಾಗಬೇಕೆಂತ ಠರಾವನ್ನು ಕಾಂಗ್ರೆಸ್ಸಿನ ಮುಂದೆ ತಂದ ಪಂಡಿತ ಜವಾಹೀರ್‌ಲಾಲ್ ಕೇರಳ ಪ್ರಾಂತೀಕ ಪರಿಷತ್ತಿಗೆ ಅಧ್ಯಕ್ಷಸ್ಥಾನವನ್ನು ವಹಿಸಲಿಕ್ಕೆ ಹೋಗುವವರು ಮೈಸೂರಿನಿಂದ ವೀರರಾಜಪೇಟೆ ಮಾರ್ಗವಾಗಿ ಕಳೆದ ವಾರ ಪ್ರಯಾಣ ಮಾಡಿದರು. ಹಾಗೆ ಅವರು ಬರುವದು ದೇಶದವರಿಗೆ ಮುಂದಾಗಿ ತಿಳಿದೇ ಇರಲಿಲ್ಲ.

ತಿದ್ದುಪಡಿ.

ಕಾನ್ವೆಂಟ್ ಸ್ಕೂಲ್‌ನಲ್ಲಿ ಮಿ ಯಮ್. ಶ್ರೀನಿವಾಸಯರ ಬದಲು ನೇಮಿಸಲ್ಪಟ್ಟ ಮಿಸ್ ಪೊನ್ನಮ್ಮನವರಿಗೆ ಕೆಲಸವಾಗಿದೆಯೆಂತ ಕಳೆದ ವಾರ ನಾವು ಪ್ರಕಟಿಸಿದ ವರ್ತಮಾನ ಪೂರ್ತಿ ಸರಿಯಲ್ಲ. ಮಿಸ್ ಪೊನ್ನಮ್ಮನವರಿಗೆ ಹಂಗಾಮಿ ಕೆಲಸ ಒಂದು ಸಿಕ್ಕಿರುವದು ನಿಜ. ಆದರೆ ಮಿ. ಶ್ರೀನಿವಾಸಯರ ಬದಲಿಗೆ ನೇಮಕವಾದದ್ದಲ್ಲ. ಸರಿಯಲ್ಲದ ವರ್ತಮಾನ ಪ್ರಕಟವಾದದ್ದಕ್ಕೆ ವಿಷಾಧಿಸುತ್ತೇವೆ.

ಹಿಂದೂದೇಶ.

ಪಂಡಿತ ಮದನ ಮೋಹನ ಮಾಳವೀಯರು ಬೊಂಬಾಯಿಯಲ್ಲಿ ಬಾರ್ಡೋಲಿ ರೈತರ ಕಷ್ಟದ ಕುರಿತು ಮನಸ್ಸು ಕರಗುವ ಭಾಷಣ ಮಾಡಿದರು.

ಊಟಕಮಂಡಿನಲ್ಲಿ ತಾ 26ರಲ್ಲಿ ಮಹಿಳಾ ಪರಿಷತ್ತು ಸೇರಿತು. ತಿರುವಾಂಕೂರು ಸಂಸ್ಥಾನದ ಮಹಾರಾಣಿಯವರು ಅಧ್ಯಕ್ಷರಾಗಿದ್ದರು.

ಪುದುಕೋಟೆ ಸಂಸ್ಥಾನದ ರಾಜಾಮಾರ್ತಾಂಡ ಭೈರವ ತೊಂಡಮಾನ್ ಇವರು ಪ್ಯಾರಿಸ್ ಪಟ್ಟಣದಲ್ಲಿ ಮೇ ತಿಂಗಳು 28ರಲ್ಲಿ ಮೃತರಾದರು. ಲಂಡನ್ ಪಟ್ಟಣದಲ್ಲಿ ಅವರ ದೇಹದ ದಹನಾ ಸಂಸ್ಕಾರವು ನಡೆಯುವುದು.

ಲೋಕಮಾನ್ಯ ತಿಲಕರ ಮಗ ಶ್ರೀಧರ ಬಲ್ವಂತ್ ತಿಲಕ ರೈಲ್‌ಗಾಡಿ ಬರುವಾಗ ಅದರ ಅಡಿಯಲ್ಲಿ ಮಲಗಿ ಮೃತರಾದರು. ಲಾಯರುಗಳ ಕಾಟ ತಡೆಯಲಾರದೆ ಆತ್ಮಹತ್ಯ ಮಾಡಿಕೊಳ್ಳುವದೆಂತ ಕಲೆಕ್ಟರಿಗೆ ಪತ್ರ ಬರೆದಿದ್ದರು.

ಹಿರಾಕಪುರದ ಕಲೆಕ್ಟರಾದ ಮಿ ಎ ಸಿ ಡಬ್. ಎಂಬವರು ಬೇಟೆಗೆ ಹೋದಲ್ಲಿ ಹುಲಿಯು ಇವರನ್ನು ಕಚ್ಚಿ ಇವರು ಮೃತರಾದರು. ಇವರು ಕೆಲವು ವರ್ಷಗಳ ಹಿಂದೆ ಕೊಡಗಿನಲ್ಲಿ ಹಂಗಾಮಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿ ಆರು ತಿಂಗಳುಗಳ ವರೆಗೆ ಇದ್ದರು.

ತೂತುಕುಡಿ ಹತ್ತಿರ ಒಂದು ಗ್ರಾಮದಲ್ಲಿ ಒಂದು ಮನೆಯ ಜೊತೆ ಜಗಳಾಗ ಮನೆಯ ಹೆಂಗಸು ಇಬ್ಬರು ಮಕ್ಕಳನ್ನು ಎತ್ತಿಕೊಂಡು 5 ವರ್ಷ ಪ್ರಾಯದ ದೊಡ್ಡ ಹುಡುಗನನ್ನು ಬಾಗಿಲಲ್ಲೇ ಒರಲಿಕ್ಕೆ ಹೇಳಿ ಹೊರಗೆ ಬಂದಳು. ಅನಂತರ ಹುಡುಗನನ್ನು ಕಾಣದೆ ಹುಡುಕಿ ಹುಡುಗನ ದೇಹವು ಸುಟ್ಟುಬೂದಿಯಾಗಿದ್ದದ್ದು ಕಂಡು ಅವಳಿಗೆ ಹುಚ್ಚು ಹಿಡಿದು ಹೋಗಿದೆ.

ಉತ್ತರ ಮಲಬಾರಿನ ಪಯ್ಯನೂರಿನಲ್ಲಿ ಕೇರಳ ಪರಿಷತ್ತು ತಾ 27—28ರಲ್ಲಿ ನಡೆಯಿತು. ಪಂಡಿತ ಜವಾಹಿರ್‌ಲಾಲ್ ನೆಹರೂರವರು ಅಧ್ಯಕ್ಷರಾಗಿದ್ದರು. ಬಾವೀರಾಜ್ಯದ ರಚನೆಯಲ್ಲಿ ಕೇರಳವು ಪ್ರತ್ಯೇಕ ಪ್ರಾಂತ್ಯವಾಗಿರಬೇಕೆಂತಲೂ, ಕಾಂಗ್ರೆಸ್ಸಿನ ಸ್ವಾತಂತ್ರ್ಯದ ಠರಾವಿಗೆ ಒತ್ತಾಸೆಯಾಗಿಯೂ, ಕೈನೂಲಿನ ಬಟ್ಟೆ ಉಪಯೋಗಿಸಿ ಬ್ರಿಟಿಷ್ ಬಟ್ಟೆಗೆ ಬಹಿಷ್ಕಾರ ಹಾಕಬೇಕೆಂತಲೂ ಮುಂತಾಗಿ ಠರಾವುಗಳು ಪಾಸಾದವು.

ಮದ್ರಾಸ್ ಯುನಿವರ್ಸಿಟಿಗೆ ಸೇರಿದ ಕಾಲೇಜ್‌ಗಳಲ್ಲಿ ವಿದ್ಯಾಭ್ಯಾಸದ ಏರ್ಪಾಡು ಸರಿಯಾಗಿದೆಯೋ ಎಂಬುದನ್ನು ನೋಡಿ ಬೇರೆ ಯುನಿವರ್ಸಿಟಿಗಳನ್ನು ಸ್ಥಾಪಿಸಬೇಕೋ ಎಂಬ ವಿಚಾರದ ವಿಷಯ ಶಿಫಾರಸ್ಸು ಮಾಡಲು ಈ ಕೆಳಗಿನ ಒಂದು ಕಮಿಟಿ ನೇಮಕವಾಗಿದೆ. ಮಿ. ಗಳಾದ ಯಸ್ ಇ ರಂಗನಾಥನ್, ರೆವರೆಂಡ್ ಡಾಕ್ಟರ್ ಮೆಸ್ಟನ್, ಎ. ರಾಮಸ್ವಾಮಿ ಮೊದಲಿಯಾರ್, ಸತ್ಯಮೂರ್ತಿ, ಕೆ. ಎ ನೀಲಕಂಠ ಶಾಸ್ತ್ರಿ, ರಾವ್ ಬಹದ್ದೂರ್ ಕೆ ವಿ ರಂಗಸ್ವಾಮಿ ಅಯ್ಯಂಗಾರ್, ದಿವಾನ್ ಬಹದ್ದೂರ್ ಪಾತ್ರೋ, ರೆವರೆಂಡ್ ಡಾಕ್ಟರ್ ಎ ಜಿ ಹಾಗ್, ಕ. ಚಿನ್ನತಂಬಿ ಪಿಳ್ಳೆ, ಆರ್. ಗೋಪಾಲಯ್ಯರ್.

ಸಂಯುಕ್ತ ಪ್ರಾಂತ್ಯದ ಫರುಕಾಬಾದ್ ಜಿಲ್ಲೆಯ ಒಂದು ಗ್ರಾಮದ ಪಂಡಿತ ಗಂಗಾವಿಷ್ಣು ಎಂಬವರ ಮೂರು ವರ್ಷದ ಮಗಳು ರಾಮಕಲೀ ಎಂಬವಳಿಗೆ ಪೂರ್ವಜನ್ಮದ ಜ್ಞಾನವಿದೆಯೆಂತಲೂ ಅವಳ ಪೂರ್ವಜನ್ಮದ ಮನೆ ತನ್ನ ಊರಿನಲ್ಲಿ ಅಲ್ಲಿ ಅವಳ ಪೂರ್ವಜನ್ಮದ ಮಕ್ಕಳ ಹೆಸರುಗಳನ್ನೂ ಹೇಳಿ ಅವರನ್ನು ನೋಡಬೇಕೆಂತ ಹೇಳುತ್ತಿದ್ದಳು. ತಂದೆ ತಾಯಿ ಏನೋ ಹುಚ್ಚು ನುಡಿಯುತ್ತಾಳೆಂತ ಯೋಚಿಸಿದರು. ಕೊನೆಗೆ ಆಕೆ ಪ್ರಾರಂಭಿಸಿದ ಆಗ್ರಹವನ್ನೇ ಬಿಟ್ಟುಬಿಟ್ಟಿತು. ಅನಂತರ ತಂದೆಯು ಅವಳು ಹೇಳುವ ಸ್ಥಳಕ್ಕೆ ಕರಕೊಂಡು ಹೋಗಿ ತನ್ನ ಮಕ್ಕಳೆಂದವರ ಮತ್ತು ಅವರ ಹೆಂಡತಿಯರನ್ನು ಸಹ ಗುರ್ತಿಸಿದಳು. ಈ ವಿಷಯವು ಕಾನ್‌ಪುರದಿಂದ ಹೊರಡುವ "ಪ್ರತಾಪ" ಎಂಬ ಹಿಂದೀ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ವಿದೇಶ.

ಒಮರ್ದ ದೇಶದಲ್ಲಿ ಕೆಲವು ಕಾಡು ಜನರಲ್ಲಿ ನರಬಲಿಯು ಈಗಲೂ ಜಾರಿಯಲ್ಲಿ ಇರುವದಾಗಿಯೂ ಸರ್ ಹಾ ಕರ್ನಲ್ ಒಟ್ಲಿರವರು ಇದನ್ನು ನಿಲ್ಲಿಸಲು ಪ್ರಯತ್ನಿಸಿದರೂ ಪೂರ್ತಿ ಸಫಲವಾಗಿಲ್ಲವೆಂತ ತಿಳಿಸಿರುತ್ತಾರೆ.

ಮಿ ಬ್ರೈಲ್ಸ್‌ಫರ್ಡ್ ಎಂಬವರು ಮಿಸ್ ಮೇಯೋಳ ಪುಸ್ತಕವನ್ನು ಖಂಡಿಸಿ ಹಿಂದುಸ್ಥಾನದ ಸ್ವಾತಂತ್ರ್ಯದ ಹೋರಾಟಕ್ಕೆ ಉತ್ತೇಜನ ಕೊಟ್ಟು ಇಂಗ್ಲೆಂಡಿನ ಒಂದು ಪತ್ರಿಕೆಗೆ ಬರೆದಿದ್ದಾರೆ.

ಯುದ್ಧವನ್ನೇ ನಿಲ್ಲಿಸುವಂಥ ಕರಾರುಗಳನ್ನು ರಾಷ್ಟ್ರಗಳೊಳಗೆ ಆಗುವಂತೆ ಸಂಯುಕ್ತ ಸಂಸ್ಥಾನದ ಸರಕಾರವು ಪ್ರಯತ್ನಿಸುತ್ತಿದೆ. ಇವರ ಈ ವಿಚಾರದ ಕರಾರುಗಳಿಗೆ ಜಪಾನ್ ಸರಕಾರವೂ, ಬ್ರಿಟಿಷ್ ಉಪನಿವೇಶನಗಳ ಸರಕಾರಗಳೂ, ಇಂಡಿಯಾ ಸರಕಾರವೂ ಒಪ್ಪಿರುತ್ತವೆ.

ಶ್ರೀ ಸತ್ಯ ನಾರಾಯಣ ಮೋಟಾರ್ ಸರ್ವೀಸ್.

ಮಹನೀಯರೇ,

ತಾರೀಕು 16—5—29ರ ಲಾಗಾಯಿತು ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಬಾಬ್ತು ಒಂದು ಹೊಸ ಸರ್ವೀಸ್ ಬೆಳಿಗ್ಗೆ 7.30 ಗಂಟೆಗೆ ವೀರರಾಜಪೇಟೆಯಿಂದ ಹೊರಟು 10.30 ಗಂಟೆಗೆ ಕುಟ್ಟಕ್ಕೆ ತಲಪಿ ಅಲ್ಲಿಂದ ಸಾಯಂಕಾಲ 2 ಗಂಟೆಗೆ ಹಿಂತಿರುಗಿ ವೀರರಾಜಪೇಟೆಗೆ 5 ಗಂಟೆಗೆ ತಲಪುವಂತೆ ಏರ್ಪಾಡು ಮಾಡಿದ್ದೇವೆ. ಮಟೆಯೂಳ್, ಮಡಿಕೇರಿ, ಮೈಸೂರು ಮೊದಲಾದ ಸ್ಥಳಗಳಿಗೆ ಜಾಗ್ರತೆಯಾಗಿ ಹೋಗಿ ಬರಲು ಈ ನಮ್ಮ ಸರ್ವೀಸು ತುಂಬಾ ಪ್ರಯೋಜನಕಾರಿಯಾದೀತೆಂದು ನಂಬುತ್ತೇವೆ.

4—1. ಸಿ. ಟಿ. ರಾಮನಂಬಿಯಾರ್, ಮೇನೇಜರ್.

ಮಾನವ ಧರ್ಮ ಶಾಸ್ತ್ರ.

ಈ ಪುಸ್ತಕವು ಮೊದಲು ಹಿಂದೂಸ್ಥಾನಿ, ಫ್ರೆಂಚ್ ಭಾಷೆಗಳಲ್ಲಿ ಇತ್ತು. ಇದನ್ನು ಈಗ ಕನ್ನಡಕ್ಕೆ ತರ್ಜುಮೆ ಮಾಡಿ ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಧರ್ಮ ವಿಷಯಗಳು, ಶಿಶು ಉತ್ಪತ್ತಿ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ಇರುವಿಕೆ ಮುಂತಾದ ಎಲ್ಲಾ ವಿಷಯಗಳು ಇರುವವು.

ಕ್ರಯ 1ಕ್ಕೆ 1—0—0.

ವಿಳಾಸ.—ಕೆ. ಎಸ್ ರಾಧಕೃಷ್ಣ ಅಂಡ್ ಬ್ರದರ್ಸ್,
52—2 109. ಜೈನಾ ಬಜಾರ್ ರೋಡ್, ಮದರಾಸು.

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಸಬಯಸುವುದೇನಂದರೆ—ಮಾ. ಕುಟ್ಟೇಟಿರ ಸುಬ್ಬಯ್ಯನವರು ಅವರ ಸ್ವಾಧೀನದಲ್ಲಿರುವ ಸ್ಥಿರ ಮತ್ತು ಚರ ಆಸ್ತಿಗಳನ್ನು ವಿಕ್ರಯಿಸುವದಾಗಿ ತಿಳಿಯ ಬರುತ್ತದೆ. ಸದರಿ ಆಸ್ತಿಗಳಿಗೆ ನಾನು ಒಬ್ಬ ಹಕ್ಕುದಾರಳಾಗಿರುವದರಿಂದ ಮಿ ಸುಬ್ಬಯ್ಯನವರಿಗೆ ಸದರಿ ಆಸ್ತಿಗಳನ್ನು ವಿಕ್ರಯ ಮಾಡಲು ಯಾ ಪರಾಧೀನ ಮಾಡಲು ಯಾವ ಸ್ವತಂತ್ರವೂ ಇರುವದಿಲ್ಲ. ಒಂದು ವೇಳೆ ಯಾರಾದರೂ ಸದರಿ ಆಸ್ತಿಗಳನ್ನು ಕ್ರಯಕ್ಕೆ ಪಡಕೊಂಡರೆ ಅದರಿಂದ ಉಂಟಾಗುವ ವಿಶಿಷ್ಟ ನಷ್ಟಕ್ಕೂ, ತಪ್ಪಕ್ಕೂ ಬಾಧ್ಯಸ್ಥರಾಗಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಸೋಣವಾಗಿದೆ.

4—1 ಮಿಸೆಸ್ ಕುಟ್ಟೇಟಿರ ಕಾಯರ್ಸ್.

ಪತ್ರವ್ಯವಹಾರ

ಪತ್ರದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಪತಿಕರಿಸಲ್ಪಡದ ಪಂಚಮರು.

ಮಹಾಶಯರೇ,

"ಹಿಂದುಳಿದ ಪಂಗಡಗಳ ಆದಿಕರ್ನಾಟಕ—ಪಂಚಮ ಮತ್ತು ಇತರ ಕೀಳು ಜಾತಿಯ ಮಕ್ಕಳು ಉತ್ತಮರ ಶಾಲೆಗಳಿಗೆ ದಾಖಲಾಗಲು ಬಂದಲ್ಲಿ ಅವರನ್ನು ತಿರಸ್ಕರಿಸದೆ ಆಯಾ ಶಾಲೆಗಳಿಗೆ ಸೇರಿಸಿಕೊಳ್ಳಬೇಕೆಂದು, ಇಂಡಿಯಾ ಗವರ್ನಮೆಂಟಿನಿಂದ ನಾದರಾದ ನಂಬರು $\frac{208}{21-1-28}$ ನೇ ಹುಕುಂ" ಪ್ರಕಾರ ಎಲ್ಲಾ ಉಪಾಧ್ಯಾಯರಿಗೆ ನಡೆಕೊಳ್ಳತಕ್ಕದ್ದೆಂಬ ಸರ್ಕಲ್ ಇನ್ಸ್‌ಪೆಕ್ಟರವರ ಸರ್ಕ್ಯುಲಾರ್ ಮೇರೆ ನನ್ನ ಬಾಬ್ತು ಕೆಲವು ಯರವರ ಮಕ್ಕಳನ್ನು ಸಮೀಪದಲ್ಲೇ ಇರುವ ಬೆಕ್ಕೆಸೊಡ್ಲೂರು ಶಾಲೆಗೆ ಕಳುಹಿಸಿದೆನು. 6—7 ದಿನಗಳನಂತರ ನನ್ನ ಮಕ್ಕಳನ್ನು ಊರವರ ಅಭಿಮತಕ್ಕನುಸಾರವಾಗಿ ಆ ಶಾಲೆಯ ಮುಖ್ಯೋಪಾಧ್ಯಾಯರು ಮನೆಗೆ ಕಳುಹಿಸಿಬಿಟ್ಟರು. ಮಾರನೇ ದಿನವೇ ನಾನು ಈ ವಿಷಯವಾಗಿ ಇನ್ಸ್‌ಪೆಕ್ಟರವರಿಗೆ ಹೀಗೆಂದು ಬರೆದೆನು —

"Sir,

The Head master L. F. School Bekkesodlour has sent back all the four children of my labourers who were admitted about a week ago—taking as a pretext the rigorous interference of the villagers thereof. I cannot bear to see members of backward classes being so systematically

ತಳಾರಿಕೆ ಮಾಲುಗಳ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೂಲಿಯುಕ್ತ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.



ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಫಟೋ ರೀತಿಯಿಂದ ಖಚಿತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡುತ್ತೇವೆ.

ಕೇಶವಜೆಂದ್ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).
21 ಜೈನಾ ಬಜಾರ್‌ರೋಡ್, ಮದರಾಸು.

12—1

insulted and trodden down. I inform you of this incident with the belief that you will do all you can to see that justice is done to this much wronged community of people. It is an imperative necessity and to connive at it is ignoble, inhuman.

I hope therefore that you will not be tardy in issuing the necessary orders to the Hd-master concerned.'

Besagore,
6—3—28.

(Copied from memory)

ಹೆಚ್ಚು ಕಮ್ಮಿ ಮೂರು ವಾರಗಳು ಕಳೆದು ಹೋದರೂ ನನ್ನ ಈ ಕಾಗದಕ್ಕೆ ಉತ್ತರ ಬಾರದ್ದರಿಂದ ಮತ್ತೆ ಪುನಹ ಬರೆಯ ಬೇಕಾಯಿತು.

'Sir,

I am sorry that my letter of the 6th inst. does not seem to have been considered seriously. Official laxity, such as this, though not uncommon must not be carried too far. It appears you have personally instructed the Head-master of the Bekkesodloor School not to admit any children of the depressed classes until a written order is sent to him. If this is true it is incomprehensible to me how despite the Govt. of India Order, you could take it upon yourself to give him such instruction. The order I believe does not concede any such postponement of its enforcement; not even under emergencies. It is now more than three weeks since the children of the depressed classes have been kept out, not only at Bekkesodloor but at Besagore and several other villages. And yet the written order is no where to be seen or heard of. Your "Oral Order," on the other hand has become a very potent factor in the hands of the superstitious who are but too glad to make the most of it.

You see therefore that a Circular is to be sent to almost all the schools hereabout without any further delay impelling the immediate enforcement of the said Govt. of India Order."

Besagore,
29—3—28.

ಈ ಕಾಗದ ಬರೆದು ತಿಂಗಳೆರಡಾಗುತ್ತಾ ಬಂತಾದರೂ ಸಾಹೇಬರು ಸುಮ್ಮನಿರುವುದನ್ನು ನೋಡಿದರೆ ಸಮಾಜ ಬಾಹಿರರಾಗಿರುವ ಪಂಚಮರೇ ಮೊದಲಾದವರ ಪೂರ್ಣ ಹಿತಚಿಂತಕರೆಂದೆಂದುಕೊಳ್ಳುವ ನಮ್ಮ ಸರಕಾರದಿಂದ ನೇಮಿತರಾದ ಇವರು ತಾವು ಮಾಡಬೇಕಾದ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಿಲ್ಲವೆಂದೇ ಹೇಳಬೇಕಾಗಿದೆ. "ಅಕ್ಕಿ ಮಿಚಾರ್ಗಲೂ ಬಾರದು, ಅಕ್ಕಯ ಮಗಳು ಒಡವಾಗಲೂ ಬಾರದು." ಎಂಬಂತಿರುವ ಇವರ ವರ್ತನೆಯು ನ್ಯಾಯಸಮ್ಮತವಾದ್ದಲ್ಲ. "ದೊರೆಗಳು" ಅನ್ಯದೇಶೀಯರಾದರೂ ನಮ್ಮ ಉಪ್ಪು ತಿನ್ನುತ್ತಿರುವವರಾದ್ದರಿಂದ ನಮ್ಮ ಹಿತವನ್ನೇ ಬಯಸಬೇಕಾದದ್ದು ಇವರ ಧರ್ಮವಾಗಿದೆ ಡಿಸ್ಟ್ರಿಕ್ಟ್ ಬೋರ್ಡು ಪ್ರಸಿಡೆಂಟರಾದ ನಮ್ಮ ಕಮಿಷನರ್ ಸಾಹೇಬರವರು ಈ ವಿಷಯ ಪರ್ಯಾಲೋಚಿಸಿ ನ್ಯಾಯಸ್ಥಾಪನಾರ್ಥವಾಗಿ ತಕ್ಕ ವ್ಯವಸ್ಥೆ ಶೀಘ್ರದಲ್ಲೇ ಮಾಡುವರೆಂದು ನಂಬಿದ್ದೇನೆ.

ಬೆಸಗೂರು, ಹೆಚ್. ಆರ್. ಕೃಷ್ಣಯ್ಯ.
ತಾ. 24—5—'28.

ಬಸ್ಸಿನ ಅಡಚಣೆ.

ಮಂಗಳೂರು ಮಡಿಕೇರಿ ಲೈನಿನಲ್ಲಿ ಸಿ. ಪಿ. ಸಿ. ಕಂಪೆನಿಯವರಿಗೆ ಎರಡು ಬಸ್ಸುಗಳನ್ನು ಓಡಿಸುವುದಕ್ಕೆ ಲೈಸೆನ್ಸ್ ಕೊಟ್ಟಿದ್ದೇನೋ ಸರಿ. ಆದರೆ ಎರಡನೇ ಬಸ್ಸಿನಲ್ಲಿ ಮಡಿಕೇರಿಯಿಂದ ಸಂಪಾಜೆಗೆ 5 ಜನಗಳು ಮಾತ್ರ ಕೂರುವುದಕ್ಕೆ ಹುಕುಂ ಇದೆ. ಇದರ ಅಡಚಣೆ ಏನೊಂದು ಘನ ಸರ್ಕಾರದವರಿಗೆ ತಿಳಿದಿಲ್ಲ. ಮೊನ್ನೆ 23ನೇ ತಾರೀಕಿನ ಬೆಳಿಗ್ಗಿನ ಬಸ್ಸಿನಲ್ಲಿ ಹುಬ್ಬಾಲಿ ತೋಟಕ್ಕೆ ತುರ್ತು ಹೋಗುವ ಕೂಲಿಗಳು 12½ ಜನರು ಇದ್ದರು. ಇವರು ಸಾಯಂಕಾಲದೊಳಗೆ ತೋಟಕ್ಕೆ ಮುಟ್ಟಬಹುದೆಂಬ ಆತುರದಿಂದ ಇದರಲ್ಲಿ ಸಂಪಾಜೆಯ ವರೆಗೆ ಬಂದುದಾಯಿತು. ತೋಟಕ್ಕೆ ಹೋಗುವ ಬದಲು ಈ ಪೈಕಿ 7½ ಜನರು ಸಂಪಾಜೆ ಟೋಲ್‌ಗೇಟ್ ವಾಸ ಮಾಡಬೇಕಾಗಿ ಬಂತು. ಪಾಪ ಕೂಲಿಗಳು ಈ ಮೊದಲೇ ಮಳೆ ಬಂದು ತಣ್ಣಗಾಗಿದ್ದುದರಿಂದ ಹೊಳೆಯಲ್ಲಿ ನೀರಿಗೇನೂ ಅಭಾವವಿರಲಿಲ್ಲ. ಅಂತೂ ಭಗವಂತನಿಗೆ ಬಡವರ ಮೇಲೆ ಎಷ್ಟು ಕರುಣವೋ ಅದರ ಕಿಂಚಿತ್ ಪಾಲಾದರೂ ರಾಜಾ ಪ್ರತ್ಯಕ್ಷ ದೇವತಾ ಎಂತ ಇದ್ದರೂ ನಮ್ಮ ಸರ್ಕಾರದ ಅಧಿಕಾರಿಗಳಿಗೆ ಕರುಣವಿಲ್ಲ. ಮೇಲ್ಕಂಡ 7½ ಜನರು ಸಾಯಂಕಾಲದ ಬಸ್ಸಿನಲ್ಲಿ 4—30 ಗಂಟೆಗೆ ಮಡಿಕೇರಿಯನ್ನು ಸೇರಿದರು. ಅವರು ಹೊರಟ ಉದ್ದೇಶವು ನೆರವೇರಲಿಲ್ಲ. ಕೂಲಿಯವರಿಗೂ ತೋಟದಲ್ಲಿ ಕೆಲಸದ ಕಷ್ಟ! ಪ್ರಯಾಣದಲ್ಲೀ ಬಸ್ಸಿನ ಕಷ್ಟ! ಇದನ್ನು ಪರಿಹರಿಸುವವರ್‍ಯಾರು? ದೊಡ್ಡ ಬಸ್ಸಿಗೇನೇ ಲೈಸೆನ್ಸ್ ಇರುತ್ತಿದ್ದರೆ ಈ ಕಷ್ಟವು ಸಂಭವಿಸುತ್ತಿರಲಿಲ್ಲ. ಬೇರೆ ಬಸ್ಸಿನಲ್ಲಿ ಪ್ರಯಾಣ ಮಾಡೋಣವೆಂದರೆ ಕಂಪ್ನಿ ಬಸ್ಸಿನ ಎರಡನೇ ಸರ್ವೀಸ್ ಕ್ರಮವಾಗಿ ಬರುವದಿಲ್ಲ. ಇನ್ನೊಂದು ನಾಮದ ಬಸ್ಸಾದರೋ ಕೈತೋರಿಸುವುದಕ್ಕೆ ಮಂಜೆ ಮೂರು ಫರ್ಲಾಂಗ್ ಮುಂದೆ ಓಡುತ್ತದೆ. ಸಂಜೆಗೆ ಬರುವ ಈ ಬಸ್ಸಿನಲ್ಲಾದರೋ ಪ್ರಯಾಣಕ್ಕೆ 5 ಜನರ ಮಿತಿಯು ಸಹಜ ಆದ್ದರಿಂದ ಜನಗಳ ಹಿತವನ್ನರಿತು ಸರ್ಕಾರದವರು ಈ ಅಡಚಣೆಯನ್ನು ಪರಿಹರಿಸುವರಾಗಿ ನಂಬುವ.

ಬಡ ಪ್ರಯಾಣಿಕರ ಹಿತೈಷಿ.

ಕೊಡಗು ಸೆಂಟ್ರಲ್ ಕೋಪರೇಟಿವ್ ಬ್ಯಾಂಕು ಮತ್ತು ಪೊಳ್ಳಿಬೆಟ್ಟ ಕೋಪರೇಟಿವ್ ಸಂಘ.

ಮಹನೀಯರೇ,

ಇದೇ ತಾರೀಕು 18—5—28ರಲ್ಲು ಕೊಡಗು ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ಒಂದು ನಡೆದು ಪೊಳ್ಳಿಬೆಟ್ಟ ಸೊಸೈಟಿಗೆ ಸಾಲ ಹಣ ಮಂಜೂರು ಮಾಡಲಿಲ್ಲವೆಂದು ಪ್ರಕಟಿಸಿದ್ದನ್ನ 'ಕೊಡಗು' ಪತ್ರಿಕೆಯಲ್ಲಿ ಓದಿ ವಿಷಾದ ಪಡುತ್ತೇನೆ.

ಪೊಳ್ಳಿಬೆಟ್ಟ ಸೊಸೈಟಿಗೆ ಮೆಂಬರುಗಳಿಂದ ಬರತಕ್ಕ ಸಾಲ ಬಹಳ ಬಾಕಿ ಇವೆ ಎಂಬುವದೊಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದು ನಿಜವಾದರೆ ಸಂಘದ ಪ್ರಯೋಜನಕ್ಕಾದರೂ ವಿಮರ್ಶಿಸುವದು ಸಂಘದ ಮೆಂಬರರ ಕರ್ತವ್ಯವಾಗಿದೆ.

ತಾ. 10—7—27ರಲ್ಲಿ ಕೊ. ಕ್ರಿ. ಸಂಘದ ಸುಪರ್‌ವೈಸರು ಪೊಳ್ಳಿಬೆಟ್ಟ ಸಂಘವನ್ನು ತಾ 1—7—26 ರಿಂದ 30—6—27ರ ವರೆಗೆ ಆಡಿಟ್ ಮಾಡಿದಲ್ಲಿ ಸಾಲ ಮೂಲಗಳ ಪಟ್ಟಿಯ ಲೆಕ್ಕವು 6976—0—9 ಪೈ ಆಗಿದೆ. ಈ ಹಣಗಳ ಪೈಕಿ ಈ ಸಂವತ್ಸರ 3200 ರೂಪಾಯಿ ಮೇಲೆ ಸಂಘಕ್ಕೆ ವಸೂಲು ಬಂದಿದೆ. ಇದರಲ್ಲು ಸೆಂಟ್ರಲ್ ಬ್ಯಾಂಕಿನ ಸಾಲದ ಅಸಲು ಮತ್ತು ಬಡ್ಡಿ ಮರುಪಾವತಿಗಾಗಿ 3000 ರೂಪಾಯಿ ಮೇಲೆ ಪಾವತಿ ಮಾಡಿದಲ್ಲದೆ ಸುಪರ್‌ವಿಜನ್ ಫಂಡಿಗಾಗಿ ರೂ.52—8—0 ಪಾವತಿ ಮಾಡಿದೆ. ಬಾಕಿ ಹಣವು ಬಿಕ್ಕಿನಲ್ಲಿಯೂ ಇದೆ.

ಮಹನೀಯರೇ, ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳು ಪೊಳ್ಳಿಬೆಟ್ಟದ ಸೊಸೈಟಿಗೆ ಮೆಂಬರುಗಳಿಂದ ಬಹಳ ಹಣ ವಸೂಲಾಗಲು ಬಾಕಿ ಇದೆ ಎಂದು ಹೇಳುವಲ್ಲಿ ಸ್ವಲ್ಪ ನ್ಯಾಯವಿರಬಹುದಾದರೂ ಅದು ಎಂದೂ ಪೂರಾ ನ್ಯಾಯವಾದದ್ದಲ್ಲ. ಕಾರಣವೇನೆಂದರೆ—ಹಳೆ ಸಾಲ ಬಾಕಿ ಇರುವ ಹೆಚ್ಚು ಕಡಿಮೆ ಎಲ್ಲಾ ಮೆಂಬರರ ಮೇಲೆ ದಾವೆ ಡಿಕ್ರಿಯಾಗಿಯೂ, ಅಮಲ್‌ಜಾರಿ ನಡಿಸಿಯೂ ಸ್ವಲ್ಪ ವಸೂಲಾತಿ ಸಹ ಆಗಿದೆ ಬಾಕಿ ಕೆಲವರಿಗೆ ವಸೂಲಾತಿಗೆ ರಿಜಿಸ್ಟರ್ಡ್ ನೋಟೀಸ್ ಸಹ ಕೊಟ್ಟಿದೆ. ಒಬ್ಬರಿಗೆ ವೀರರಾಜಪೇಟೆ ಮುನಸೀಫರವರೇ ಸ್ವಲ್ಪ ಸಮಯವನ್ನು ಕೊಟ್ಟಿರುತ್ತಾರೆ. ಹ್ಯಾಗೂ ಕಾನೂನು ಪ್ರಕಾರ ಕಮಿಟಿಯವರು ವಸೂಲಿ ಮಾಡಬೇಕೇ ವಿನಹ ಬೇರೆ ವಿಧ ಸಾಧ್ಯವಿಲ್ಲವೆಂದು ಡೈರೆಕ್ಟರವರು ಒಪ್ಪಿಕೊಳ್ಳುವ ಸಂಗತಿಯಾಗಿದೆ.

ಹೀಗಿರುವಾಗ ಪೊಳ್ಳಿಬೆಟ್ಟ ಸೊಸೈಟಿಯು ಈ ಸಂವತ್ಸರ ಸೆಂಟ್ರಲ್ ಬ್ಯಾಂಕಿಗೆ 3000 ರೂ ಮೇಲೆ ಪಾವತಿ ಮಾಡಿದರೂ ಬರೇ 2000 ರೂಪಾಯಿಗೆ ಸಾಲಕ್ಕೆ ದರಕಾಸ್ತು ಮಾಡಿಕೊಂಡಿದೆ. ಸಂಘದ ದರಕಾಸ್ತುದಾರ ಮೆಂಬರರು ತಮ ತಮ್ಮ ಸಾಲ ಪೂರ್ತಿ ಪಾವತಿಮಾಡಿ ಸೆಂಟ್ರಲ್ ಬ್ಯಾಂಕಿನ ಹಣವನ್ನು ಕಾದು ಮಂಜೂರು ಮಾಡಲಿಲ್ಲವೆಂಬ ಡೈರೆಕ್ಟರವರುಗಳ ಜವಾಬು ದೊರಕಿದರೆ ಅವರ ಆಶೆಯು ಏನಾದೀತು! ಕತ್ತು ಕುಯಿದಂತಾಗಲಿಲ್ಲವೇ.

ಸೆಂಟ್ರಲ್ ಬ್ಯಾಂಕಿನ ಅಧಿಕಾರಿಗಳು ಮೇಲಿನ ಲೆಕ್ಕದಿಂದ ಹೆಚ್ಚು ಕಡಿಮೆ ಸಂಘದ ಬಂಡವಾಳದ ಅರೆವಾಸಿ ಹಣವು ವಸೂಲಾಗಿದೆ ಎಂದು ಒಪ್ಪಿಕೊಳ್ಳದೆ ನಿರ್ವಾಹ ವಿಲ್ಲ. ರಿಜಿಸ್ಟ್ರಾರ್ ಸಾಹೇಬರು ಸಹ ಸಂಘದ ಲೆಕ್ಕದ ಆಧಾರದಿಂದ ಒಪ್ಪಿಕೊಳ್ಳಲೇ ಬೇಕಾಗಿದೆ. ಇಂಥಾ ನ್ಯಾಯವಾದ ಸಂಬಂಧಗಳಿಗೆ ಮನಸ್ಸು ಕೊಡದೆ ವರ್ತಿಸಿದರೆ ಪೊಳ್ಳಿಬೆಟ್ಟ ಸಂಘದ ದೌರ್ಭಾಗ್ಯವಲ್ಲದೆ ಮತ್ತೇನು?

ಕಳೆದ 23—5—22 ರಿಂದ ಈ ಸಂಘವು ಸೆಂಟ್ರಲ್ ಬ್ಯಾಂಕಿನೊಂದಿಗೆ ಹಣದ ವಹಿವಾಟ ನಡೆಸುತ್ತಲೇ ಇದೆ. ಯಾವ ದಾದರೂ ಒಂದು ವರ್ಷದ ಕಂತು ಹಣ ಪಾವತಿ ಮಾಡದ ಸಂಗತಿಯನ್ನ ಅಧಿಕಾರಿಗಳು ತಿಳಿಸಲಿ. ಕಳೆದ ಸಾಲು 185 ರೂ. ಡಿವಿಡೆಂಡ್ ಹೊಂದಿದ ಪೊಳ್ಳಿಬೆಟ್ಟ ಸಂಘಕ್ಕೆ ತಿರಸ್ಕಾರದ ಜವಾಬು ಲೇಸೋ?

ಮೇಲೆ ಸೂಚಿಸುವ ಕಾರಣಗಳಿಗೆ ಗಮನಕೊಟ್ಟು ನ್ಯಾಯವೆಂದು ಒಪ್ಪಿದರೆ 2000 ರೂ. ಸಾಲ ಮಂಜೂರು ಮಾಡಬೇಕಾಗಿ ಪುನಹ ಬೇಡಿಕೊಳ್ಳುತ್ತೇನೆ. ತಮ್ಮ ನ್ಯಾಯವೇ ಸರಿಯೆಂದು ಅಧಿಕಾರಿಗಳು ಏನೊಂದು ಜವಾಬು ಕೊಡದೆ ಇದ್ದರೆ ಸಂಘದ ಜೀವ ಕತ್ತರಿಸಿದಂತಾಗಿ ಸುಮ್ಮನೆ ಕೂರುವುದಲ್ಲದೆ ಮತ್ತೇನು?

ಸಂಘದ ಮೆಂಬರು.

ಕಕ್ಕಬೆ ಸಂಘದ ಮೀಟಿಂಗು.

ತಾ. 28—4—28ರಲ್ಲು ಕಕ್ಕಬೆ ಸಹಕಾರ ಸಂಘಗಳ ಮತ್ತು ಪರೆಯಂಗೇರಿ, ಪೊರಾಡ್‌ಕೇರಿ ಸಂಘಗಳ ಕಾನ್‌ಫರೆನ್ಸ್ ಪಾಡಿ ಸುಬ್ರಹ್ಮಣ್ಯದೇವರ ದೇವಸ್ಥಾನದಲ್ಲಿ ನಡೆದದ್ದರ ತಪಶೀಲ್—

ಈ ದಿವಸದ ಮೀಟಿಂಗಿಗೆ ರಿಜಿಸ್ಟ್ರಾರ್ ಸಾಹೇಬರವರನ್ನು ಅಧ್ಯಕ್ಷಸ್ಥಾನಕ್ಕೆ ಮಿ. ಉದಿಯಂಡ ಮಾಚಯ್ಯನವರು ಸೂಚಿಸಿದರು. ಮಿ. ಕಂಬೆಯಂಡ ಚೀಯಣ್ಣನವರು ಅನುಮೋದಿಸಿದರು. ಸರ್ವಸಮ್ಮತದ ಮೇರೆ ಅಧ್ಯಕ್ಷಸ್ಥಾನವನ್ನು ವಹಿಸಿದರು.

ಕಕ್ಕಬೆ ಸಹಕಾರ ಸಂಘದ ಪ್ರೆಸಿಡೆಂಟರು ಕಕ್ಕಬೆ ಸಂಘದ ಮತ್ತು ಪರೆಯಂಗೇರಿ ದವಸದ ಬಂಡಾರದ ರಿಪೋರ್ಟುಗಳನ್ನು ಓದಿ ಹೇಳಲಾಯಿತು.

ಸಹಕಾರದ ಅಭಿವೃದ್ಧಿಗಾಗಿ ಈ ಮೂಲೆ ಪ್ರಾಂತ್ಯದಲ್ಲು ಹಗಲು ರಾತ್ರಿ ಕೆಲಸ ಮಾಡುತ್ತಿರುವ ಮಿ. ಉದಿಯಂಡ ಮಾಚಯ್ಯನವರಿಗೆ ತನ್ನ ಮಗ ಚಂಗಪ್ಪನ ಮರಣದಿಂದ ವೃದ್ಧಾಪ್ಯದಲ್ಲಿ ಪುತ್ರಶೋಕ ಉಂಟಾದದ್ದಕ್ಕೆ ಈ ಕಾನ್ಫರೆನ್ಸ್ ಹೆಚ್ಚಾದ ದುಃಖ ಪಡುತ್ತದೆ. ಈ ಕಾನ್ಫರೆನ್ಸ್ ಅವರ ದುಃಖದಲ್ಲಿ ಭಾಗಿಯಾಗಿರುತ್ತದೆ. ಇಂಥ ಕಷ್ಟದಲ್ಲಿ ಅವರಿಗೂ ಅವರ ಕುಟುಂಬಕ್ಕೂ ಈ ದುಃಖವನ್ನು ಸಹಿಸುವದಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರನು ಶಕ್ತಿ ಕೊಡಲಿ ಎಂತಲೂ, ಇನ್ನು ಮುಂದೆಯಾದರೂ ಇಂಥ ಕಷ್ಟಕ್ಕೆ ಗುರಿಮಾಡಬಾರದೆಂತಲೂ ಈ ಕಾನ್ಫರೆನ್ಸ್ ದೇವರಲ್ಲಿ ಪ್ರಾರ್ಥಿಸುತ್ತದೆ. ಈ ವಿಷಯವನ್ನು ಅವರಿಗೂ, ಅವರ ಕುಟುಂಬಕ್ಕೂ ತಿಳಿಸಬೇಕೆಂದು ಇತ್ಯರ್ಥ ಮಾಡಿದೆ.

ಈ ಸಂಘಗಳು ಮಂಗಳೂರಿನಲ್ಲಿ ಹೊರಡಿಸುವ ಕನ್ನಡ ಸಹಕಾರಿ ಮಾಸ ಪತ್ರಿಕೆಯನ್ನು ಕಳೆದ ಜನವರಿ ತಿಂಗಳ ಲಾಗಾಯಿತು ತರಿಸಿಕೊಳ್ಳಬೇಕು ಎಂದು ಸರ್ವಸಮ್ಮತದಿಂದ ಮಂಜೂರಾಯಿತು.

ಸೆಂಟ್ರಲ್ ಬ್ಯಾಂಕಿನಲ್ಲಿ ಹೆಚ್ಚಿನ ಸಾಲ ಗಳನ್ನು ಕೊಂಡುಕೊಳ್ಳಬೇಕೆಂದು ಸರ್ವಸಮ್ಮತದಿಂದ ಮಂಜೂರ್ಮಾಡಲಾಯಿತು.

ಅಧ್ಯಕ್ಷರು ಸಹಕಾರ ತತ್ವಗಳನ್ನು ಸಾಂಗವಾಗಿಯೂ, ಸಂಘಗಳನ್ನು ಅಭಿವೃದ್ಧಿಗೆ ತರುವ ವಿಧಾನವನ್ನು ಪರಿಸ್ಕಾರವಾಗಿಯೂ ವಿವರಿಸಿ ಹೇಳಿದರು.

ನಂತರ ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗು ಬರಖಾಸ್ತು ಮಾಡಲಾಯಿತು.

ಕೆ. ಯನ್. ಸುಬ್ರಾಯ,
ಅಧ್ಯಕ್ಷರು.

ಕೊಡಗು ವೀರಶೈವ ವಿದ್ಯಾನಿಧಿ ಸಂಘ.

ಈ ಸಂಘದ 3ನೇ ವಾರ್ಷಿಕ ಮಹಾಸಭೆಯು, ಶನಿವಾರಸಂತೆ ಸಂತೆ ಮಾರ್ಕೆಟ್ಟಿನಲ್ಲಿ ಇದೇ ತಾರೀಕು 13 ನೇ ಭಾನುವಾರ ಮಧ್ಯಾಹ್ನ 2 ಗಂಟೆಯಿಂದ ಮೈಸೂರು, ಮ ರಾ. ರಾ. ರಿಟಯರ್ಡ್ ಡಾಕ್ಟರ್ ಟಿ ಯಸ್. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ರಾತ್ರಿ 8½ ಗಂಟೆ ವರೆವಿಗೂ ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಸಭೆಗೆ ಸುಮಾರು 200 ಜನರ ವರೆವಿಗೂ ಸೇರಿದ್ದರು. ಅಲ್ಲದೆ 10—12 ಜನರು ಮಹಿಳೆಯರು ಸಹ ಸೇರಿದ್ದರು. 2 ಗಂಟೆಗೆ ಸಭಾಕಾರ್ಯವು ಪ್ರಾರಂಭವಾಗಿ ವಾದ್ಯ ವೈಭವದೊಡನೆ ಅಧ್ಯಕ್ಷರನ್ನು ಸಭೆಗೆ ಕರತಂದು, ಫಲಪುಷ್ಪಗಳನ್ನೊಪ್ಪಿಸಿ, ತಾವು ಅಧ್ಯಕ್ಷಸ್ಥಾನವನ್ನು ಅಲಂಕರಿಸಬೇಕೆಂದು ಸ್ವಾಗತ ಸಂಘಾಧ್ಯಕ್ಷರು ಮ ಜೆ. ಪಿ ಬಸವಣ್ಣಯ್ಯನವರು ಸಭೆಯ ಪರವಾಗಿ ಪ್ರಾರ್ಥಿಸಲಾಗಿ ಮಿ. ಟಿ ಯಸ್. ಸಿದ್ದಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಬಾಲಕರುಗಳಿಂದ ಪ್ರಾರ್ಥನೆ ನಡಿಸಲ್ಪಟ್ಟಿತು. ನಂತರ ಸ್ವಾಗತ ಸಂಘದ ಪ್ರಸಿಡೆಂಟರು ಸ್ವಾರಸ್ಯವಾದ ಭಾಷಣವನ್ನು ಓದಿದರು. ಸೆಕ್ರೆಟರಿಯ ರಿಪೋರ್ಟು ಓದಲ್ಪಟ್ಟಿತು. ಅಂದಿಗೆ ಶಿಲ್ಕು ಬಾಕಿ ಅಲ್ಲಿವರೆಗೆ ಒಟ್ಟು ಸಂಘದ ಜಮ 5803—9—7ಪೈ. ಖರ್ಚು ವಿದ್ಯಾರ್ಥಿ ವೇತನಗಳಿಗೆ ಮತ್ತು ಇತರ ಖರ್ಚು ಸೇರಿ 1017—11—10 ಜಾತಿ. 4785—13—9 ಪೈಯೂ, ಈ ದಿನ ಸಭೆಯಲ್ಲಿ ವಸೂಲಾದದ್ದು 613—14—0. ಜಮ್ಲ 5399—11—9 ಇರುತ್ತೆ. ಇದಾದನಂತರ ಅಧ್ಯಕ್ಷರು ಬಹು ಸ್ವಾರಸ್ಯವಾದ ತಮ್ಮ ಭಾಷಣವನ್ನು ಪ್ರಿಂಟುಮಾಡಿಸಿಕೊಂಡು ಬಂದದ್ದನ್ನು ಓದಿದರು ಮತ್ತು ಅಧ್ಯಕ್ಷರ ಭಾಷಣ ಪುಸ್ತಕಗಳನ್ನು ಸಭೆಯಲ್ಲಿ ಎಲ್ಲರಿಗೂ ಹಂಚಿದರು. ಇದು ಆದನಂತರ ಸಂಘದ ಪ್ರೆಸಿಡೆಂಟರು ಬಹು ಸ್ವಾರಸ್ಯವಾದ ಅವರ ಭಾಷಣವನ್ನು ಓದಿದರು. 4½ ಗಂಟೆಯಿಂದ 5½ ಗಂಟೆ ವರೆಗೆ ವಿರಾಮ ಕಾಲವು, ಅಲ್ಪಾಹಾರ, ಪಾನವೂ ಪೂರೈಸಿದನಂತರ ಪುನಃ ಸಭಾಪ್ರಾರಂಭವಾಗಿ 15 ಸಜೆಕ್ಟುಗಳು ಚರ್ಚೆ ವಿಚರ್ಚೆಯಿಂದ ಕೆಲವು ಪಾಸಾದವು. ಪ್ರಸಿಡೆಂಟರ, ಕಮಿಟಿ ಮೆಂಬರುಗಳ ಚುನಾವಣೆ ಆಯಿತು. ನಂತರ ಕೆಲವು ಮಹಾನೀಯರು ಭಾಷಣ ಮಾಡಿದರು. ಅಧ್ಯಕ್ಷರಿಂದ ಕೊನೆ ಭಾಷಣವು ಬಹು ಗಂಭೀರವಾಗಿ ಮಾಡಲ್ಪಟ್ಟಿತು. ಅಧ್ಯಕ್ಷರಿಗೆ ವಂದನೆಯರ್ಪಿಸಿ, ಮಂಗಲ ಘೋಷ, ಜಯಘೋಷದೊಡನೆ ಸಭೆಯು 8½ ಗಂಟೆಗೆ ಬರಖಾಸ್ತು ಆಯಿತು.

ಪಿ. ಪಿ. ಶಾಂತಪ್ಪ,
ಗೌ. ಸೆಕ್ರೆಟರಿ.

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ವೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸರಿಸಮನಾಗಿರುವುದು.



ಇದಕ್ಕೆ ಖಾತ್ರಿಯೊಡನೆ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ. 6—8—0

ಬೆಸ್ಟ್ ಫೌನ್‌ಟನ್ ಪೆನ್.

ಈ ಪೆನ್ನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಭಂಗಾರದಂಥ ನಿಬ್ಬು ಹಾಕಿದೆ. ಈ ಪೆನ್ನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಂ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ: —ಈಗಲ್ ವಾಚ್ ಕಂಪೆನಿ,

52—2 ಪೋ. ಬಾಕ್ಸ್ ನಂ 243, ಮದರಾಸು

Arms, Ammunitn and Shooting Requites!!!



19-8 Illustrated Catalogue Just Issued Free on Application!

D B B L Rifles	Rs	120	to Rs	[illegible]
S B B L ,,	,,	35	to ,,	[illegible]
D B B L Guns	,,	50	to ,,	[illegible]
S B B L ,,	,,	35	to ,,	5
D B M L ,,	,,	45	to ,,	5
S B M L ,,	,,	30	to ,,	10
B. L Revolvers	,,	35	to ,,	50
Antomatic Pistols	,,	30	to ,,	50

Brilliant Seaich Light Lamp For Shootin amping, Fishing and All such r Night Sports and work Rs 30 Free delive

Also swords, Daggers, Carrridges, Caps, Gowder and Shooting Requisites he most competitive rates.

GOOLAMHUSAIN ALLIIOY & SONS

argest Importers of Firears and Ammunition

Cheapest priced fir in India,

24—9 210 Abdul Rehman Stt, BOMBAY.



ಡಿ. ಬಿ. ಬಿ. ಯಲ್. ಕೋವಿಗಳು ರೂ. 75 ರಿಂದ ರೂ. 450/

ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ 250/

ಯಸ್. ಬಿ. ಯಮ್ ಯಲ್. ಕೋವಿಗಳು ರೂ. 35 ರಿಂದ 65/

ರಿವಾಲ್ವರುಗಳು. ರೂ. 40/ರಿಂದ ರೂ. 125/ರ ವರೆಗೆ

ಡಬ್ಬಲ್ ಮತ್ತು ಸಿಂಗಲ್ ತೋಟದ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನಂಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ಬಿಲಿಯ ಕಂಪೆನಿ

24—2 12. ಬ್ರಾಡ್ವೆ. ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

192

ಅತ್ಯುಚ್ಚ್ರಾಯ ಸ್ಥಿತಿಯನ್ನು ತೋರುವ ಮತ್ತೊಂದು ವರ್ಷ

ಓರಿಯಂಟಲ್ ಕಂಪನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿ—

1925	13545	ರೂ. 2,99,42,000.
1926	17371	ರೂ. 3,91,39,000.
1927	21418	ರೂ. 4,68,04,075.

—ಪ್ರೀಮಿಯಂ ವೃತ್ತಿ—

1925	ರೂ 92,66,000.
1926	ರೂ 1,05,33,000.
1927	ರೂ 1,21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡಲಿಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52—7 ಎಲ್. ಆರ್. ಕೃಷ್ಣಸ್ವಾಮಿ ಅಯ್ಯರ್, ಬ್ರಾಂಚ್ ಸೆಕ್ರಟರಿ.

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳು.

'ದಿಲ್ ಬಹಾರ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
'ಶಕುಂತಲಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
'ಮೋಸ್ಲೇಂ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
'ಮಹರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಟ್ ಬಂಗಾರದ ನಿಬ್ಬು ಹಾಕಿದ ಫೌನ್‌ಟನ್ ಪೆನ್‌ಗಳು.

ಬ್ಲಾಕ್ ಬರ್ಡ್ ಫೌನ್‌ಟನ್ ಪೆನ್ 1ಕ್ಕೆ	3—8—0 ಮತ್ತು 3—12—0
ಪರ್ಲ್ಸ್ ವಂಡರ್ ಫೌನ್‌ಟನ್ ಪೆನ್ 1ಕ್ಕೆ	3—0—0 ಮತ್ತು [illegible]—8—0
ಕಾಂಪ್ಯಾಕ್ಟ್ ನೆಪ್ಚ್ಯೂನ್ ಫೌನ್‌ಟನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌನ್‌ಟನ್ ಪೆನ್ 1ಕ್ಕೆ	8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್‌ಟನ್ ಪೆನ್ 1ಕ್ಕೆ	12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ವೆಸ್ಟ್ಕ್ಲಾಕ್ ಕಂಪನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9—6—0
ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ	6—12—0
ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

52—4

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾ,
ಲಿಮಿಟೆಡ್ ಕೊಆಪರೇಟಿವ್ ಸೊಸೈ
ಆಕ್ಟ್ ಪ್ರಕಾರ ರಿಜಿಸ್ಟರಂ

ಶೇರ್ ಬಂಡವಾಳ —— 00
ವಸೂಲಾದ ಶೇರ್ ಮೊಬಲಗು —— 0
ಜಮೂಬಂದ ಠೇವಣಾತಿ —— 4

ಈ ಬ್ಯಾಂಕಿನಿಂದ ಕೊಡಗು ದೇಶದ ಸ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ಮುದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ಬೆಸ್ತ್ರೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆ
ಕೋದಂಡ ಅಪ್ಪಯ್ಯನವರು, ಕೊಂಗಟ್ಟಿಯ್ಯ
ರಾವ್ ಬಹದ್ದೂರ್. ನವರು

ಸೆಕ್ರಟರಿ
ಸಿ ಯನ್. ವೆಂಕಪ್ಪಯ್ಯನವರು, ಬಿ ಎ. ಬಿ.
ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರಿಗೆ ಏಜಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಜೆ ಮುದ್ದಮ್ಮಯ್ಯನವರು,
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಮ್ಮಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾಖಲೆ ಬರೆದು ರಿಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಐದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address.—"SHOOTER" Bombay.
(೩—39), 'Please write for our Catalogue 1928—1929.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಚಳಿ ಜ್ವರ, ದಿನ ಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಜಠರದ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1—6—0 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ —ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಅಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1 3 6ಕ್ಕೆ ರೂ 1—4—0 3—3—0 6—12—0.

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಬೇಗ ಗುಣಪಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—6—0

ನಮ್ಮ ಕೆಟಲಾಗು ತರಿಸಿ ನೋಡಿರಿ ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—34 ೦. ಮಂಗಳೂರು.

Kapurchand & co,

The OLDEST and MOST RELIABLE House in Bangalore.

[Cawnpore Woollen Mills Agency.]

Dealers in high class Cotton, Woollen and Silk Piece-Goods, Caps, Hosiery, Stationary, etc., etc,. Chickapet, BANGALORE CITY.

ಅಪೂರ್ವ ಸಮಯ! **ಅಲಭ್ಯ ಲಾಭ!**

ತಾವು ಬೆಂಗಳೂರಿಗೆ ಬಂದಾಗ ಕಪೂರ್ ಚಂದ್ ಅಂಡ್ ಕಂಪೆನಿಗೆ ಹೋಗಲು ತಪ್ಪಬೇಡಿರಿ. ನಮ್ಮಲ್ಲಿ ಸ್ತ್ರೀಯರಿಗೆ ಬೇಕಾದ ಉಡುಗೆಗಳು ಸದಾ ಕಾಲದಲ್ಲಿ ದೊರೆಯುತ್ತವೆ ಅಲ್ಲದೆ ಮದುವೆ ಮಹೋತ್ಸವಗಳಿಗೆ ಬೇಕಾದ ಎಲ್ಲಾ ತರದ ಬಟ್ಟೆಗಳು ಸದಾ ಕಾಲದಲ್ಲಿಯೂ ಬಹಳ ಕಮ್ಮಿ ಬೆಲೆಗೆ ಸಿಕ್ಕುತ್ತವೆ 52—52

EMPIRE OF INDIA

LIFE ASSURANCE COMPANY, LIMITED.

ESTD. 1897.

VALUATION RESULTS

FOR THE FIVE YEARS ENDING 28TH FEBRUARY 1927

SURPLUS—RS. 37,66,689.

A REVERSIONARY BONUS DISTRIBUTION OF

RS 15 PER ANNUM PER Rs 1,000 ASSURED ON WHOLE LIFE ASSURANCES

RS. 12 PER ANNUM PER Rs 1,000 ASSURED ON ENDOWMENT ASSURANCES

HAS BEEN DECLARED

HEAD OFFICE. Empire of India Life Building, BOMBAY.

BRANCH OFFICE. Commercial Street, BANGALORE.

24—1

ಆಲ್ ಇಂಡಿಯಾ ಮ್ಯೂಚ್ಯುವಲ್ ಏಯಿಡ್ ಅಂಡ್ ಕವರ್‌ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಚೀಫ್ ಏಜನ್ಸಿ ಆಫೀಸು ಮಡಿಕೇರಿ (ಕೊಡಗು.)

ನೋಟೀಸು.

ಕೊಡಗು ದೇಶದ ಶೇರು ಮತ್ತು ಬಾಂಡು ಹೋಲ್ಡರ್‌ಗಳ ಹಣ ಮತ್ತು ಅದರ ಬಡ್ಡಿ ಲಾಭ ವಗೈರೆ ಎಲ್ಲವೂ ದೇಶಸ್ಥರಿಗೆ ಕೊಡಿರಬೇಕೆಂಬ ಠರಾವು ಜನವರಿ ತಾ 29ರಲ್ಲಿ ಮಡಿಕೇರಿಯಲ್ಲಿ ನಡೆದ ಶೇರುದಾರರ ಜನರಲ್ ಮೀಟಿಂಗಿನಲ್ಲಿ ಸರ್ವಸಮ್ಮತದಿಂದ ಮಂಜೂರಾಗಿದೆ. ಇನ್ನು ಮುಂದೆ ಇತರ ದೇಶದವರಿಗೂ, ಕೊಡಗಿನ ಶೇರು ಮತ್ತು ಬಾಂಡು ಹೋಲ್ಡರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ.

ಈ ಮೊದಲು ನಾವು ಪ್ರಕಟಿಸಿದ ಜಾಹೀರಾತಿ ಮೇರೆಗೆ ನಮ್ಮ ಸಂಘದ ಕೊಡಗಿನ ಪ್ರೋವಿನ್ಸಿಯಲ್ ಬೋರ್ಡಿನ ಡ್ರಾಯಿಂಗ್ ತಾ. 31—3—1928ರಲ್ಲು 3 ಗಂಟೆ ಸಮಯಕ್ಕೆ ಹಾಜರಿದ್ದ ಸಂಘದ ಮೆಂಬರುಗಳ ಮುಂದೆ ಕ್ರಮವಾಗಿ ಮಡಿಕೇರಿನಾಡು ಕಡಗದಾಳು ಗ್ರಾಮದ ಮೆ. ಕೋರವಂಡ ಮುದ್ದಣ್ಣನವರ ಕುಟುಂಬ ಮೊಣ್ಣಪ್ಪನವರ ಟಿಕೇಟು ಎತ್ತಿ ಬರಲು ಈ ವರ್ಷದ ಪ್ರಥಮ ಡ್ರಾಯಿಂಗ್ ಐದು ನೂರು ರೂಪಾಯಿಗಳ (500—0—0) ಸಾಲವನ್ನು ಹೊಂದಲು ತೀರ್ಮಾನವಾಯಿತು. ಅದನ್ನು ಅವರಿಗೆ ಕೊಟ್ಟಾಗಿದೆ ಇದು ಮೇಲಿನ ಸಂಘದ ಪ್ರಥಮ ವರ್ಷದ ಕಾರ್ಯಕ್ರಮವಾದ್ದರಿಂದ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡಲು ಅನುಕೂಲವಿರಲಿಲ್ಲ ಮುಂದಿನ ವರ್ಷ ಹೆಚ್ಚು ಮೆಂಬರುಗಳಿಗೆ ಸಾಲವನ್ನು ಕೊಡುವದಕ್ಕೆ ಆದಷ್ಟು ಶ್ರದ್ಧೆ ತೆಗೆದುಕೊಳ್ಳಲ್ಪಡುತ್ತದೆ

ಕೊಡಗು ದೇಶದ ಎಲ್ಲಾ ಮಹನೀಯರು ಈ ಧರ್ಮದ ಸಂಘವನ್ನು ಪ್ರೋತ್ಸಾಹ ಪಡಿಸಬೇಕಾಗಿ ಈ ಮೂಲಕ ಕೋರುತ್ತೇನೆ

ಅನಾಥರಾದಂಥ ಅಂಗಹೀನರುಗಳಿಗೆ ಈ ತಿಂಗಳು 2ರಿಂದ ಈ ಸಂಘದ ಖರ್ಚಿನಲ್ಲು ಅನ್ನಾಹಾರಾದಿಗಳು ಕೊಡಲು ಶುರುಮಾಡಲಾಗಿದೆ.

ಟಿ. ಎ. ಕುಪ್ಪಸಾಮಿಪಿಳ್ಳೆ ಅಂಡ್ ಸನ್ಸ್,
ಚೀಫ್ ಏಜೆಂಟ್,
ಮಡಿಕೇರಿ.

52—10

Printed & published by P. I. Belliappa, at 'Kodagu' Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸಖ್ಯೇನ ಭೂಪತಯೋಯಾ ವಿದ್ಯಾ ಸತಿ ಪ್ರಯುಕ್ತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ೯-೮-೦

ಸಂಪುಟ ೮] ಮಡಿಕೇರಿ, ಸನ್ ೧೯೨೮ನೇ ಇಸವಿ ಜೂನ್ ತಾರೀಕು ೮ ನೇ ಶುಕ್ರವಾರ [ಸಂಚಿಕೆ ೨

"THE SUNSHINE OF THE NIGHT."

Coleman Quick-Lite Lamps.

Bracket lamp	Rs.	45/- & 42/-
Table Lamp	,,	37/8/-
Lantern	,,	35/-
Pendant Lamp	,,	37/8/-
Chandelier Lamp	,,	82/-

The Coleman Quicklite is Brilliant, clean, simple and safe.

52—18 SPENCER & CO. LTD. Lamp Depot MERCARA.

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS.

Catalogue Free
to Boanfide Enquirers



Rose Water Sprinkler.



Nose-screws. Claver Drops. Thodu Brooch.

Chased Silver Mirror.

Manufacture of
HIGH CLASS
GEMSET JEWELS.
a specialty.

The special features
of my productions are —
1 Best QUALITY.
2 Latest novel designs
3 Promptest execution
4 Neat & artistic finish.
5 Most moderate prices.

GOLD
or
SILVERWARE
of all descriptions
neatly executed

52—39



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

1—15 *Bombay, 3*

ಕರ್ಣಿಕ

ಎ ಗ್ಯು ಮಿ ಕ್ಸ್ಚರ್

ಮಲೇರಿಯಾ ಇನ್‌ಫ್ಲುಯೆಂಝಾ ನಡುಕಜ್ವರ ಆಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ ಇದರಿಂದ ಮಲ ಶುದ್ಧಿಯಾಗಿ ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಸಾ ರ ಸಾ ಪ ರಿ ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧ ಮಾಡುವುದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ. ೧-೦-೦ ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್
12—30 ದುಬಾಷ್ ಲೇನ್.
ಗಿರಗಾಂವ್. ಮುಂಬಾಯಿ.

ಕೊಡಗು.

ಸನ್ ೧೯೨೮ನೇ ಇಸವಿ ಜೂನ್

ತಾ. ೮ನೇ ಶುಕ್ರವಾರ.

ವಿದ್ಯಾ ಇಲಾಖೆ.

ದೇಶದ ಮುಂದಿನ ಜನಾಂಗವನ್ನು ತರಬೇತು ಮಾಡುತ್ತಿರುವ ವಿದ್ಯಾ ಇಲಾಖೆಯು ಆಡಳಿತ ಕ್ರಮಕ್ಕೆ ದೇಶೀಯರು ತುಂಬಾ ನಿಗಕೊಡಬೇಕಾದದ್ದು ಅತ್ಯಾವಶ್ಯವಾಗಿದೆ. ಈಗ ಜಾರಿಯಲ್ಲಿರುವ ವಿದ್ಯಾಭ್ಯಾಸ ಕ್ರಮವು ಅಶಾಸ್ತ್ರೀಯವಾದದ್ದೂ, ಸ್ವಾಭಿಮಾನ, ದೇಶಾಭಿಮಾನ ರಹಿತವಾದದ್ದೂ ಆಗಿರುವದಾದರೂ ಅದರಿಂದ ಉಂಟಾಗುವ ಮಾನಸಿಕ ವಿಕಾಸತೆಯಿಂದ ಅಲ್ಪ ಸ್ವಲ್ಪ ಜನರಾದರೂ ತಮ್ಮ ನಿದ್ರೆಯಿಂದ ಎಚ್ಚತ್ತು ಕಣ್ಣು ತೆರೆದು ನೋಡುತ್ತಿರುವರು. ನಮ್ಮ ದೇಶಕ್ಕೆ ತಕ್ಕಂಥ ಉತ್ತಮ ತರಹದ ವಿದ್ಯಾಭ್ಯಾಸವು ಈಗ ದೊರೆಯುತ್ತಿಲ್ಲವಾದರೂ ಓದು ಬರಹ ತಿಳಿದವರ ಸಂಖ್ಯೆಯನ್ನಾದರೂ ಹೆಚ್ಚಿಸುವದಕ್ಕೆ ಎಲ್ಲಾ ಪ್ರಯತ್ನಗಳನ್ನು ನಡಿಸಬೇಕೆಂಬದಕ್ಕೆ ಯಾರೂ ವಿರೋಧಿಸಲಾರರು. ಆದುದರಿಂದ ಇಂಥಾ ಪ್ರಯತ್ನಕ್ಕೆ ಅಡ್ಡಬರುವ ಅಡಚಣೆಗಳನ್ನೆಲ್ಲಾ ಹೋಗಲಾಡಿಸಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಕೊಡಗಿನ ವಿದ್ಯಾ ಇಲಾಖೆಯವರು ಈ ವರ್ಷ ಹೊಸದಾಗಿ ಜಾರಿಗೆ ತಂದಿರುವ ಒಂದು ನಿಬಂಧನೆಯು ದೇಶದಲ್ಲಿ ವಿದ್ಯಾಭ್ಯಾಸದ ಹರಡುವಿಕೆಯನ್ನು ಅಡ್ಡಗಟ್ಟುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಎರಡು ವರ್ಷ ಒಬ್ಬ ವಿದ್ಯಾರ್ಥಿಯು ಒಂದು ಕ್ಲಾಸಿನಲ್ಲಿ ಸೋತು ಹೋದರೆ ಅವನನ್ನು ಪುನಹ ಶಾಲೆಗೆ ಸೇರಿಸಿಕೊಳ್ಳಕೂಡದು ಎಂಬುದೇ ಈ ಹೊಸ ರೂಲಾಗಿದೆ. ಈ ನಿಬಂಧನೆಯನ್ನು ಜಾರಿಗೆ ತರಬೇಕೆಂದು ಶಾಲಾ ಇನ್‌ಸ್ಪೆಕ್ಟರವರು ಹೆಡ್‌ಮಾಸ್ಟರುಗಳಿಗೆ ಹುಕುಂ ಕಳುಹಿಸಿರುವರೆಂದು ನಮಗ ವರ್ತಮಾನ ಸಿಕ್ಕಿದ ಕೂಡಲೇ ತಾರೀಕು 4—11—'28ರಲ್ಲಿ ಈ ಹುಕುಮನ್ನು ಖಂಡಿಸಿ ಅಗ್ರಲೇಖನ ಬರೆದಿದ್ದೆವು. ಇದು ಅನ್ಯಾಯಕರವಾದ ಹುಕುಂ ಆದಕಾರಣ ಇದರಿಂದ ದೇಶದವರಲ್ಲಿ ತುಂಬಾ ಅತೃಪ್ತಿಯುಂಟಾಗುವದೆಂದೂ, ಕೂಡಲೇ ದೇಶೀಯರು ಇದನ್ನು ರದ್ದು ಪಡಿಸಲು ಚಳವಳ ನಡಿಸಬೇಕೆಂದೂ, ಅಧಿಕಾರಿಗಳು ಈ ಹುಕುಮನ್ನು ಒಡನೆ ವಜಾ ಮಾಡುವದು ಅಗತ್ಯವೆಂದೂ ಬರೆದಿದ್ದೆವು. ಆದರೆ ಆಗ ಮುಂದಾಳುಗಳಾಗಲೀ, ಮಕ್ಕಳ ತಂದೆ ತಾಯಿಗಳಾಗಲೀ ಈ ವಿಷಯಕ್ಕೆ ತಕ್ಕಷ್ಟು ಗಮನ ಕೊಡದೆಯೂ, ಚಳವಳ ನಡಿಸದೆಯೂ ಆರೇಳು ತಿಂಗಳುಗಳ ವರೆಗೆ ಸುಮ್ಮನಿದ್ದದ್ದು ವ್ಯಸನಕರ. ಇದು ಸ್ಥಳೀಯ ಸರಕಾರದವರ ಗೋಚರಕ್ಕೆ ತರಲ್ಪಟ್ಟರೂ ಅವರು ಸುಮ್ಮನಾದದ್ದು ಮತ್ತಷ್ಟು ವಿಶಾದಕರ. ಶಾಲಾ ಅಧಿಕಾರಿಗಳು ಸ್ಥಳೀಯ ಸರಕಾರದ ತಿಳುವಳಿಕೆಗೆ ತಾರದೆ ಇಂಥಾ ಹುಕುಮುಗಳನ್ನು ಚಲಾವಣೆಗೆ ತಂದಾರೆಂದು ನಂಬಲಾಗುವದಿಲ್ಲ. ಚೀಫ್ ಕಮಿಷನರವರಿಗ ಈ ವಿಷಯ ಗೊತ್ತಿದ್ದೇ ಇರಬೇಕು. ಅವರಿಗೆ ಗೊತ್ತಿರುವದಾದರೆ ಅವರೂ ಇದಕ್ಕೆ ಸಮ್ಮತಿಯನ್ನಿತ್ತಂತಾಯಿತ್ತಲ್ಲವೇ. ಹಾಗಾದರೆ ದೇಶದಲ್ಲಿ ವಿದ್ಯಾಪ್ರಚಾರಕ್ಕೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿ ಕೊಡುವದರ ಬದಲು ಅಡಚಣೆಗಳನ್ನು ತಂದೊಡ್ಡುವದೇ ಮೇಲಧಿಕಾರಿಗಳ ಉದ್ದೇಶವೆಂದು ತೋರುತ್ತದಲ್ಲವೇ?

ಈ ಮೊದಲೇ ನಾವು ಸೂಚಿಸಿದಂತೆ ಒಬ್ಬ ವಿದ್ಯಾರ್ಥಿಯು ಎರಡು ವರ್ಷ ಒಂದು ತರಗತಿಯಲ್ಲಿ ಸೋಲಲು ಅವನ ಅಸ್ವಸ್ಥವೂ, ತಂದೆತಾಯಿಗಳಿಗೆ ಸಂಭವಿಸುವ ಸಂಕಷ್ಟಗಳೂ ಮಾತ್ರವಲ್ಲ, ಉಪಾಧ್ಯಾಯರುಗಳ ಉದಾಸೀನತೆಯೂ ಕೆಲವು ಕಾರಣಗಳಾಗಿವೆ. ಈ ಕಾರಣಗಳಿಂದ ಎರಡು ಸಾರಿ ಸೋತವರನ್ನು ಶಾಲೆಗೆ ಸೇರಿಸಿಕೊಳ್ಳಬಾರದೆಂಬುದು ನ್ಯಾಯವೆಂದು ಯಾರಿಗೂ ತೋರಲಾರದು. ಪ್ರೌಢ ವಿದ್ಯಾಭ್ಯಾಸಕ್ಕೆ ಕಳುಹಿಸಲು ಆಶೆಯೂ, ಅನುಕೂಲವೂ ಇಲ್ಲದೆ ಬರೇ ಅಕ್ಷರಸ್ಥರನ್ನಾಗಿ ಮಾಡಲು ಶಾಲೆಗೆ ಕಳುಹಿಸುತ್ತಿರುವ ಹೆಚ್ಚಿನ ವ್ಯವಸಾಯಕರ ಮಕ್ಕಳು ಒಂದು ಕ್ಲಾಸಿನಲ್ಲಿ ಎರಡು ವರ್ಷಕ್ಕಿಂತ ಹೆಚ್ಚು ಓದಿದರೂ ಲೌಕಿಕ ವ್ಯವಹಾರಕ್ಕೆ ಬೇಕಾದ ಓದು ಬರಹವನ್ನು ಆರ್ಜಿಸಲು ಅನುಕೂಲವಾಗುವದು. ಅಲ್ಲದೆ ಕೆಳ ತರಗತಿಗಳಲ್ಲಿ ದಡ್ಡ ಹುಡುಗರೆಂದು ತೋರಿದ ವಿದ್ಯಾರ್ಥಿಗಳು ಮೇಲ್ತರಗತಿಗಳಿಗೆ ಬಂದಾಗ್ಯೆ ಬಹು ಹುಶಾರಾದ ಉದಾಹರಣೆಗಳು ಹಲವು ಇವೆ. ಆದುದರಿಂದ ಸಣ್ಣ ಮಕ್ಕಳನ್ನು ದಡ್ಡರೆಂದು ವಿದ್ಯೆ ಬಿಡಿಸುವದು ಯೋಗ್ಯವಲ್ಲ.

ದಡ್ಡ ಹುಡುಗರನ್ನು ಎರಡು ವರ್ಷಕ್ಕಿಂತ ಹೆಚ್ಚಾಗಿ ಒಂದೇ ಕ್ಲಾಸಿನಲ್ಲಿ ಇಟ್ಟುಕೊಂಡರೆ ಕೆಳಗಿನ ತರಗತಿಗಳಿಂದ ಪಾಸಾಗಿ ಬರುವ ಹುಶಾರು ಹುಡುಗರಿಗ ಸ್ಥಳವಿಲ್ಲದಾಗುತ್ತದೆಂಬ ವಾದದಲ್ಲಿ ಸ್ವಲ್ಪ ನ್ಯಾಯವಿದೆ. ಆದರೆ ಮೇಲೆ ಸೂಚಿಸಿದ ಕಾರಣಗಳಿಂದ ಒಬ್ಬನು ಎರಡು ವರ್ಷ ಸೋತು ಹೋದರೆ ಅವನನ್ನು ದಡ್ಡನೆಂದು ನಿರ್ಧರಿಸಲಿಕ್ಕಾಗುವದಿಲ್ಲ. ಮೇಲಿನ ಕೊರತೆಯನ್ನು ಹೋಗಲಾಡಿಸಲು ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಾ ಬಂದ ಹಾಗೆ ಹೊಸ ತರಗತಿಗಳನ್ನು (ಡಿವಿಜನ್‌ಗಳನ್ನು) ತೆರೆದು ಉಪಾಧ್ಯಾಯರುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಒಂದು ವೇಳೆ ನಿಜವಾಗಿಯೂ ದಡ್ಡ ಹುಡುಗರು ಮೂರು ನಾಲ್ಕು ವರ್ಷ ಒಂದೇ ಕ್ಲಾಸಿನಲ್ಲಿ ಓದುತ್ತಿದ್ದು ಬೇರೆಯವರಿಗೆ ಸ್ಥಳವಿಲ್ಲವೆಂದಾದರೆ ಅಂಥವರನ್ನು ಶಾಲೆಯಿಂದ ಬಿಡಿಸುವ ಏರ್ಪಾಡನ್ನು ಮುಖ್ಯ ಉಪಾಧ್ಯಾಯರುಗಳಿಗೆ ಬಿಡಬಹುದಿತ್ತು. ಇದರ ಬದಲು ಎರಡು ವರ್ಷ ಸೋತವರನ್ನೆಲ್ಲಾ ಮನೆಗೆ ಕಳುಹಿಸಿ ಬಿಡುತ್ತಿರುವದು ನ್ಯಾಯವೂ ಅಲ್ಲ. ವಿದ್ಯಾ ಇಲಾಖೆಯವರಿಗೆ ಯಶಸ್ಕರವೂ ಅಲ್ಲ.

ವಿದ್ಯಾಭ್ಯಾಸದ ಬೆಲೆಯನ್ನು ಅರಿತು ಗ್ರಾಮವಾಸಿಗಳು ತಮ್ಮ ಮಕ್ಕಳನ್ನು ಹೆಚ್ಚಾಗಿ ಶಾಲೆಗಳಿಗ ಕಳುಹಿಸುತ್ತಿರುವದರಿಂದ ಈಗಿರುವ ಶಾಲೆಗಳಲ್ಲಿ ಸ್ಥಳ ಸಾಲದೆ ಇರುವದೇ ಈ ಮೇಲಿನ ವಿಶೇಷವು ಹುಕುಮಿಗೆ ಕಾರಣವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಈ ಕಾರಣದಿಂದಲೇ ಪ್ರೈಮರಿ ಮತ್ತು ಲೋವರ್ ಸೆಕೆಂಡರಿ ಬೋರ್ಡು ಪರೀಕ್ಷೆಗಳನ್ನು ಪುನಹ ಜಾರಿಗೆ ತಂದದ್ದಾಗಿದೆ. ಈ ಪರೀಕ್ಷೆಗಳಿಂದ ಫಸ್ಟ್ ಮತ್ತು ಫೋರ್ತ್ ಫಾರ್ಮುಗಳಲ್ಲಿ ಸ್ಥಳವಿರುವಷ್ಟೇ ಮಕ್ಕಳನ್ನು ಪಾಸುಮಾಡಿಕೊಳ್ಳುವ ಉಪಾಯವನ್ನು ಕಲ್ಪಿಸಿಕೊಂಡಿರುವರು. ಸ್ಥಳ ಸಂಕೋಚವಾದರೆ ಸ್ಥಳ ವಿಸ್ತರಿಸಿಕೊಳ್ಳುವದಲ್ಲವೇ ನ್ಯಾಯವಾದ ರೀತಿ. ಬದಲು ವಿದ್ಯಾಭ್ಯಾಸಕ್ಕೆ ಬಂದವರನ್ನು ಹೊರಗಟ್ಟುವದರ ಅರ್ಥವೇನು? ಇದೇಯೋ ನಮ್ಮ ಸರಕಾರದ ರಾಜನೀತಿ! ಎಲ್ಲಾ ದೇಶಗಳಲ್ಲೂ ಶಾಲೆಗೆ ಬಾರದವರನ್ನು ಕಡ್ಡಾಯವಾಗಿ ಬರಮಾಡಿಸಿ ಮಾಫಿಯಾಗಿ ವಿದ್ಯಾಭ್ಯಾಸ ಕೊಡಬೇಕೆಂದು ಪ್ರಯತ್ನಿಸುತ್ತಿರುವಾಗ್ಯೆ ಇತ್ತ ನಮ್ಮ ದೇಶದ ಸರಕಾರವು ಶಾಲೆಯಲ್ಲಿರುವವರನ್ನು ಹೊರತಳ್ಳುತ್ತಿರುವದಲ್ಲಾ! ಬೇರೆ ಕಡೆಗಳಲ್ಲಿ ವಿದ್ಯಾ ಇಲಾಖೆಯ ಖರ್ಚನ್ನು ಇತ್ತೀಚೆಗ ಎರಡು, ಮೂರರಷ್ಟು ಹೆಚ್ಚಿಸಿರುವಾಗ್ಯೆ ನಮ್ಮ ಪ್ರಾಂತ್ಯದಲ್ಲಿ ಕೆಲವು ವರ್ಷಗಳ ಮೊದಲು ಇದ್ದಷ್ಟೇ ಖರ್ಚಿನಿಂದ ವಿದ್ಯಾ ಪ್ರಚಾರವನ್ನು ಹೆಚ್ಚಿಸುತ್ತೇವೆಂದು ಹೇಳುವದರಲ್ಲಿ ಎಷ್ಟರ ಮಟ್ಟಿಗೆ ನಿಜಾಂಶವಿದೆಯೆಂಬದನ್ನು ವಾಚಕರೇ ಊಹಿಸಿಕೊಳ್ಳಬಹುದು. ದೇಶೀಯರ ಹಿತಕ್ಕಾಗಿ ರಾಜ್ಯಾಡಳಿತೆಯನ್ನು ನಡಿಸುತ್ತಿರುವೆವೆಂದು ಹೇಳುತ್ತಿರುವ ಸರಕಾರವು ವಿದ್ಯಾ ಇಲಾಖೆಗ ಅವಶ್ಯವಿರುವಷ್ಟು ಹಣವನ್ನು ಖರ್ಚುಮಾಡಲು ಹಿಂಜರಿಯ ಬಾರದು. ಸರಕಾರದವರು ತಮ್ಮ ಹೇಳಿಕೆಯಂತೆ ನಡೆಯುತ್ತಿಲ್ಲವಾದರೆ ಹಾಗೆ ನಡೆಯುವಂತೆ ಒತ್ತಾಯಪಡಿಸುವದು ಪ್ರಜೆಗಳ ಮತ್ತು ಅವರ ಪ್ರತಿನಿಧಿಗಳ ಕರ್ತವ್ಯವಾಗಿದೆ. ತತ್ಕಾಲ ಈ ಇಲಾಖೆಯ ಖರ್ಚಿಗೆ ಮಂಜೂರಾಗಿರುವ ಹಣವನ್ನೂ, ಈಗಿರುವ ಅನುಕೂಲತೆಗಳನ್ನೂ ವಿದ್ಯಾರ್ಥಿಗಳಿಗೆ ಸಾಧ್ಯವಾಗುವಷ್ಟು ಪ್ರಯೋಜನವಾಗುವಂತೆ ಉಪಯೋಗಿಸಬೇಕಾದದ್ದು ವಿದ್ಯಾ ಇಲಾಖೆಯ ಅಧಿಕಾರಿಗಳ ಧರ್ಮವಾಗಿದೆ. ದೇಶೀಯರು ತಮ್ಮ ಅತೃಪ್ತಿಯನ್ನು ತಮ್ಮತಮ್ಮೊಳಗೆ ಹೇಳಿಕೊಂಡರೆ ಪ್ರಯೋಜನವಾಗಲಾರದು. ಈ ಮೊದಲೇ ತಕ್ಕ ಚಳವಳವನ್ನು ನಡಿಸಿ ತಮ್ಮ ಅತೃಪ್ತಿಯನ್ನೂ, ಅಸಮಧಾನವನ್ನೂ ತೋರಿಸಬೇಕಾಗಿದ್ದಿತು. ಇನ್ನಾದರೂ ಸುಮ್ಮನಿರದೆ ಅಲ್ಲಲ್ಲಿಯ ಜನರು ಒಟ್ಟುಗೂಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಅಧಿಕಾರಿಗಳನ್ನು ಎಚ್ಚರಿಸುವದು ಯುಕ್ತವಾಗಿದೆ.

೫ನೇ ಕರ್ನಾಟಕ ಪ್ರಾಂತೀಕ ಪರಿಷತ್ತು.

ಅಖಿಲ ಕರ್ನಾಟಕದ ಮಹನೀಯರೆಲ್ಲರೂ ಕಲೆತು ನಡಿಸುವ ಈ ಪರಿಷತ್ತು ಕಾರಣಾಂತರಗಳಿಂದ ಕಳೆದ ವರ್ಷ ನಡೆಯದೆ ಇದ್ದರೂ ಈ ವರ್ಷ ಜಯಪ್ರದವಾಗಿ ಧಾರವಾಡದಲ್ಲಿ ನಡೆದದ್ದು ಸಂತೋಷಕರ. ಈ ಪರಿಷತ್ತಿಗೆ ಕೊಡಗಿನಿಂದ ಯಾರೂ ಹೋಗಲಿಲ್ಲ. ಈ ವರ್ಷದ ಪರಿಷತ್ತಿನ ಅಧಿವೇಶನವು ಮೇ ಆಖೈರಿಗೆ ಮಳೆ ಪ್ರಾರಂಭವಾಗುವ ಸಮಯದಲ್ಲಾದ್ದರಿಂದ ಇಲ್ಲಿಂದ ಪ್ರತಿನಿಧಿಗಳಿಗೆ ಹೋಗಲು ಅನನುಕೂಲದ ಸಮಯವಾಯಿತು. ಮಳೆ ಬಿದ್ದ ಕೂಡಲೇ ವ್ಯವಸಾಯದ ಕಾರ್ಯ ಕೈಕೊಳ್ಳಬೇಕಾಗಿದೆ. ಹೇಗೂ ಪರಿಷತ್ತಿನ ನಿರ್ಣಯಗಳು ಈ ದೇಶದವರ ಒಪ್ಪಿಗೆ ಪಡೆಯಬಹುದಾದಂಥವಾಗಿವೆ. ಇದರ ಅಧ್ಯಕ್ಷಸ್ಥಾನವನ್ನು ಬೊಂಬಾಯಿ ಇಲಾಖೆಯ ಖಾಯಿದೆ ಮಂಡಲಿಯ ಸದಸ್ಯರಾದ ಶ್ರೀಯುತ ಕೆ ಯಫ್ ನಾರಿಮನ್ ಎಂಬ ಪಾರ್ಸಿ ಸದ್ಗೃಹಸ್ಥರು ವಹಿಸಿದ್ದರು. ಇವರು ತಮ್ಮ ಭಾಷಣದಲ್ಲಿ ಪ್ರಾಂತೀಕ ವಿಷಯಗಳ ಮೇಲೆ ಹೆಚ್ಚೇನೂ ಹೇಳಲಿಲ್ಲ. ಆದರೆ ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಿಗೂ ಏಕರೀತಿಯಲ್ಲಿ ವ್ಯಾಪಿಸುವ ಸ್ವರಾಜ್ಯ ಸಾಧನೆಯ ಮೇಲೆ ವಿಷಯಗರ್ಭಿತವಾದ ಭಾಷಣ ಮಾಡಿರುತ್ತಾರೆ.

ಪರಿಷತ್ತಿನ ತೀರ್ಮಾನಗಳ ಪೈಕಿ ಸೈಮನ್ ಕಮಿಷನಿಗೆ ಬಹಿಷ್ಕಾರ ಹಾಕಬೇಕು ಎಂಬದೊಂದಾಗಿದೆ. ಈ ತೀರ್ಮಾನವನ್ನು ಕೊಡಗಿನ ಜಮೀನ್‌ದಾರರ ಸಂಘವೂ, ಕೊಡಗಿನ ಖಾಯಿದೆ ಮಂಡಲಿಯ ಚುನಾಯಿತ ಸದಸ್ಯರಲ್ಲಿ ಹೆಚ್ಚಿನವರೂ ಮೊದಲೇ ಅಂಗೀಕರಿಸಿರುತ್ತಾರೆ. ಹಿಂದೀಯರ ಆತ್ಮಗೌರವಕ್ಕೆ ಹಾನಿಯನ್ನು ತರುವ ಈ ಕಮಿಶನಿನೊಂದಿಗ ಬೇರೆ ರೀತಿಯಲ್ಲಿ ವರ್ತಿಸುವದರಿಂದ ದೇಶಕ್ಕೆ ಕಳಂಕವನ್ನುಂಟುಮಾಡಿದಂತಾಗುತ್ತದೆ. ಬ್ರಿಟಿಷ್ ಬಟ್ಟೆ ನೂಲುಗಳಿಗೆ ಬಹಿಷ್ಕಾರ ಹಾಕಬೇಕೆಂತ ಪರಿಷತ್ತು ದೇಶದವರನ್ನು ಕೇಳಿಕೊಳ್ಳುತ್ತದೆ ಎಂಬದು ಪರಿಷತ್ತಿನಲ್ಲಿ ಮಂಜೂರಾದ ಇನ್ನೊಂದು ಠರಾವಾಗಿದೆ. ಆಯಾ ಪ್ರಾಂತ್ಯದವರು ನಿರ್ಣಯಿಸುವ ಬ್ರಿಟಿಷ್ ಸಾಮಗ್ರಿಗಳನ್ನು ಬಹಿಷ್ಕರಿಸಬೇಕೆಂತ ಮದ್ರಾಸ್ ಕಾಂಗ್ರೆಸ್ಸಿನಲ್ಲಿ ಠರಾವು ಮಂಜೂರಾಯಿತು. ಕರ್ನಾಟಕ ಪ್ರಾಂತ್ಯದವರು ಬರೇ ಬ್ರಿಟಿಷ್ ಬಟ್ಟೆಗೂ, ನೂಲಿಗೂ ಬಹಿಷ್ಕಾರ ಹಾಕಲು ನಿಶ್ಚೈಸಿದ್ದು ಕರ್ನಾಟಕ ಪ್ರಾಂತ್ಯದವರ ಅಬಲತೆಯನ್ನು ತೋರಿಸುತ್ತದೆ. ಬ್ರಿಟಿಷ್ ಸಾಮಗ್ರಿಗಳಲ್ಲಿ ಕೆಲವನ್ನಾದರೂ ಆರಿಸಿ ಅಂಥವುಗಳನ್ನು ಬಹಿಷ್ಕರಿಸಲು ತೀರ್ಮಾನಿಸಬೇಕಿತ್ತು. ಬ್ರಿಟಿಷ್ ಬಟ್ಟೆಯನ್ನೂ, ನೂಲನ್ನೂ ಬಹಿಷ್ಕರಿಸಲು ದೇಶದವರನ್ನು ಕೇಳಿಕೊಂಡಿರುವದೇನೋ ನಿಜ. ಆದರೆ ಕೊಂಡುಕೊಳ್ಳುವವರು ಬ್ರಿಟಿಷ್ ಬಟ್ಟೆಗೂ, ಬೇರೆ ಪರದೇಶಗಳ ಬಟ್ಟೆಗೂ ವ್ಯತ್ಯಾಸವನ್ನು ಕಂಡು ಹಿಡಿಯುವದು ಸುಲಭ ಸಾಧ್ಯವಲ್ಲ. ಆದ್ದರಿಂದ ಬಟ್ಟೆ ಮತ್ತು ನೂಲಿನ ವಿಷಯದಲ್ಲಿ ಬರೇ ಬ್ರಿಟಿಷ್ ಮಾಲುಗಳಿಗೆ ಮಾತ್ರ ಬಹಿಷ್ಕರಿಸಲು ಮಾಡಿದ ತೀರ್ಮಾನವು ತೃಪ್ತಿಕರವಾಗಲಿಲ್ಲ. ಖಾದಿಯ ತಯಾರಿಯೊಂದೇ ಜನರಿಗೆ ಪ್ರಯೋಜನಕಾರಿಯಾಗುವಂತೆ ಕೈಕೊಳ್ಳಬಹುದಾದ ಕಸಬೆಂತ ಒಪ್ಪಿ ಕರ್ನಾಟಕಸ್ಥರೆಲ್ಲರೂ ಖಾದಿಗ ಪ್ರೋತ್ಸಾಹ ಕೊಡಬೇಕೆಂತ ಪರಿಷತ್ತು ಕೇಳಿಕೊಂಡಿದೆ. ಈ ಠರಾವು ಬಹಳ ಪ್ರಾಮುಖ್ಯವಾದದ್ದಾಗಿದೆ. ಜಾರಿಯಲ್ಲಿ ಸುಲಭವಾಗಿಯೂ ತಂಬಹುದಾದದ್ದು ಆಗಿದೆ. ಇದು ಮುಖ್ಯ ವಿಷಯವೆಂಬದಕ್ಕೆ ಈ ಒಗ್ಗೆ ನಡದ ಪ್ರತ್ಯೇಕ ಪರಿಷತ್ತೇ ನಿದರ್ಶನವಾಗಿದೆ. ಖಾದಿ ವಿಷಯದಲ್ಲೇ ಆಗಲೀ ಬೇರೆ ಯಾವ ವಿಷಯದಲ್ಲೇ ಆಗಲೀ ಬರೇ ವಿಜ್ಞಾಪನಾ ರೂಪವಾದ ಠರಾವುಗಳಿಂದ ಹೆಚ್ಚಿಗೆ ಪ್ರಯೋಜನವಾಗುವದಿಲ್ಲವೆಂತ ನಮ್ಮ ದೇಶದಲ್ಲಿ ಅನುಭವಕ್ಕೆ ಬಂದ ವಿಷಯವಾಗಿದೆ. ಇಂಥಾ ಠರಾವುಗಳನ್ನು ಜಾರಿಗೆ ಬರುವಂತೆ ಮಾಡಲು ಕೆಲಸಗಾರರು ಮುಂದೆ ಬರಬೇಕು. ಹಿಂಬಾ ಹಣ ಖರ್ಚು ಮಾಡಿ ನಡಿಸುವಂಥಾ ಪರಿಷತ್ತುಗಳ ಕಾರ್ಯದಿಂದ ಒಬ್ಬರಿಬ್ಬರು ಕೆಲಸಗಾರರಾದರೂ ಸೊಂಟಕಟ್ಟಿ ಹೊರಟರೆ ದೇಶದ ಕೆಲಸ ಸುಲಭವಾಗಿ ಮುಂದೆ ಸಾಗೀತು. ಇಂಥಾ ಕೆಲಸಗಾರರು ಹೊರಗೆ ಬರುವಂತೆ ಮಾಡಲು ಮಹಾತ್ಮ ಗಾಂಧಿಯವರಂಥ ಪುಣ್ಯ ಪುರುಷರೇ ಬೇಕಾದರೆ ದೇಶದ ಭವಿಷ್ಯತ್ತು ಕತ್ತಲಾಗಿಯೇ ಕಾಣುತ್ತದೆ.

ನಿಷಾ ಸೇವನೆಯನ್ನು ಸಂಪೂರ್ಣವಾಗಿ ಕರ್ನಾಟಕದೊಳಗ ನಿಲ್ಲಿಸಬೇಕೆಂತ ಇನ್ನೊಂದು ಠರಾವಾಗಿದೆ. ನಮ್ಮ ದೇಶದ ಸಾರ್ವಜನಿಕ ಸಭೆಯಾದ ಜಮೀನ್‌ದಾರರ ಸಂಘದಲ್ಲು ಇದೇ ರೀತಿಯ ಠರಾವು ಕೊಡಗಿನ ಸಂಬಂಧವಾಗಿ ಮಂಜೂರಾಗಿದೆ. ಇದನ್ನು ಸಾಧಿಸಲು ಕೆಲಸಗಾರರು ಬೇಕು. ಆದರೆ ಕೆಲಸಗಾರರು ಮುಂದೆ ಬರುವವರೆಗೆ ನಿಲ್ಲುವಂಥ ವಿಷಯಗಳು ಇವಲ್ಲ. ಪ್ರತಿಯೊಬ್ಬನೂ ತನ್ನಿಂದ ಸಾಧ್ಯವಿರುವಷ್ಟು ಮಟ್ಟಿಗೆ ಇಂಥಾ ದೇಶ ಹಿತದ ಕಾರ್ಯದಲ್ಲಿ ಭಾಗ ತೆಗದುಕೊಳ್ಳಬೇಕೆಂತ ಕೇಳಿಕೊಳ್ಳುತ್ತೇವೆ.

ಸರ್ವ ಪಕ್ಷೀಯ ಪರಿಷತ್ತಿನೆದುರಿನಲ್ಲಿ ಕರ್ನಾಟಕದ ಏಕೀಕರಣದ ಅವಶ್ಯಕತೆಯನ್ನು ಇರಿಸಲು ಶ್ರೀಯುತ ಬೆಳವಿ ಶ್ರೀನಿವಾಸರಾವ್ ಕೌಜಲಗಿ, ಎ. ನಾ. ಜೋಗ ಮತ್ತು ರಂಗನಾಥರಾವ್ ದಿವಾಕರ ಇವರಿಂದ ಕೂಡಿದ ಒಂದು ಮಂಡಲವನ್ನು ನೇಮಿಸಲಾಯಿತು. ಸರ್ವ ಪಕ್ಷೀಯ ಪರಿಷತ್ತಿನ ಮುಂದೆ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಈ ಮೊದಲೇ ಇಡದೆ ಇದ್ದದ್ದು ತಪ್ಪಾಗಿದೆ. ಈಗಲಾದರೂ ಈ ಕಾರ್ಯವನ್ನು ಕೈಕೊಂಡದ್ದು ಯುಕ್ತವಾಗಿದೆ.

ಪೂರ್ಣ ಸ್ವಾತಂತ್ರ್ಯವೇ ಹಿಂದೂಸ್ಥಾನದ ಅಂತಿಮ ಧ್ಯೇಯವೆಂದು ಈ ಪರಿಷತ್ತು ಸಾರಿ ಹೇಳುತ್ತದೆ ಎಂಬದು ಇನ್ನೊಂದು ತೀರ್ಮಾನವಾಗಿದೆ. ಈ ಸಂಬಂಧವಾಗಿ ಕಾಂಗ್ರೆಸ್ಸಿನ ಕಾರ್ಯದರ್ಶಿಯವರಾದ ಪಂಡಿತ ಜವಾಹರ್‌ಲಾಲ್ ನೆಹರುರವರು ಹಿಂದೂಸ್ಥಾನದ ಉದ್ದಗಲಕ್ಕೂ ಬೋಧಿಸುತ್ತಿದ್ದಾರೆ. ಈ ಅಭಿಪ್ರಾಯಕ್ಕೆ ಪ್ರತ್ಯೇಕ ಪ್ರತ್ಯೇಕ ಪ್ರಾಂತಗಳಲ್ಲಿ ಒಪ್ಪಿಗೆ ಕೊಡುತ್ತಾ ಬರುತ್ತಿವೆ. ದೇಶ ಭಕ್ತಿಯನ್ನು ಭಾಷಣದಲ್ಲೆಲ್ಲಾ ಹಬ್ಬಿಸಿ ಒಗ್ಗಟ್ಟಿನಿಂದ ಕೆಲಸ ಮಾಡಲು ಆದಾದರೆ ಹಿಂದೀಯರ ಅಭಿಲಾಷೆಯು ಕೈಗೂಡುವ ದಿನ ದೂರವಾಗಲಾರದು.

ನೀವು ಪತ್ರಿಕೆಯ ಚಂದಾದಾರರಾಗಿ ಆದರ ಚಂದಾ ಮೊಬಲಗು ಕಳುಹಿಸಬೇಕಾಗಿ ಅನೇಕ ನೃತ್ತಿ ತಿಳಿಸಿದಾಗ್ಯೂ ಈ ವರೆಗೂ ಕಳುಹಿಸದ್ದರಿಂದ ಇನ್ನಾದರೂ ವಹ್ನೆ ಕಳುಹಿಸಿ. ಇಲ್ಲವಾದರೆ ಪತ್ರಿಕೆ ಖಂಡಿತ ನಿಲ್ಲಿಸಲೇ ಬೇಕಾಗುತ್ತೆ.

ವರ್ತಮಾನ ಸಂಗ್ರಹ.

ಒಳದೇಶ

ಬಸ್ತೇರಿಯಲ್ಲಿದ್ದ ಹಟ್ಟಿಹೊಳೆ ಸೇತುವೆಯು ಈಗ ಎಲ್ಲಾ ವೈವಾಟಕ್ಕೆ ತೆರೆಯಲ್ಪಟ್ಟಿದೆ.

ಶ್ರೀಮತಿಗಳಾದ ಕುಲ್ಲಚಂಡ ಕೆ. ಅಕ್ಕಮ್ಮನವರೂ ಮತ್ತು ಕೊಡಂದೆರ ಸಿ. ಸೀತಮ್ಮನವರೂ ಮೈಸೂರು ಸೆಕ್ಕೆಂಡರಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯಲು ಸಂತೋಷಪಡುತ್ತೇವೆ.

ಮಳೆಗಾಲವು ಪ್ರಾರಂಭವಾಗುತ್ತಿರುವದರಿಂದ ಜಂಬೂರು–ಸುಂಟಿಕೊಪ್ಪ ರಸ್ತೆಯ ಹರದೂರು ಮಂಗಾಮಿ ಸೇತುವೆಯು ಈ ತಾ. 7 ರಿಂದ ಎಲ್ಲಾ ವೈವಾಟುಗಳಿಗೆ ಮುಚ್ಚಲ್ಪಟ್ಟಿದೆಯೆಂದು ಎಗ್ಸಿಕ್ಯುಟಿವ್ ಇಂಜಿನಿಯರವರು ತಿಳಿಸಿರುತ್ತಾರೆ.

ಕೆಲವು ತಿಂಗಳುಗಳ ಹಿಂದೆ ಮದ್ರಾಸು ರಾಮಕೃಷ್ಣ ಮಠಕ್ಕೆ ಹೋಗಿ ಸೇರಿದ್ದ ಮೆ. ಚೇನಂಡ ಕಾರ್ಯಪ್ಪನವರು ಕಾರಣಾಂತರಗಳಿಂದ ವಾಪಸು ಬಂದು ಪುನಹ ಡಿ. ಪಿ. ಡಬ್ಲ್ಯು ಆಫೀಸಿನಲ್ಲಿ ತಮ್ಮ ಮೊದಲಿನ ಉದ್ಯೋಗಕ್ಕೆ ಸೇರಿರುವರು

ಪರ್ಶಿಯಾ ದೇಶದ ತೆಹರಾನ್ ಪಟ್ಟಣದಲ್ಲಿದ್ದ ಮೆ. ಪಾಂಡಂಡ ಕೆ. ದೇವಯ್ಯನವರೂ, ಈ ತಾ 3 ರಲ್ಲಿ ಶುಂಠಿಕೊಪ್ಪನಾಡು ಹೊರೂರು ಗ್ರಾಮದಲ್ಲಿದ್ದ ಮೆ. ಚೆಪ್ಪುಡಿರ ಟಿ. ಪೂನ್ನಪ್ಪನವರೂ ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಮೆ. ಯನ್. ಆರ್. ಗೋಪಾಲಕೃಷ್ಣನವರು ಬಿ. ಎಲ್. ಪರೀಕ್ಷೆಯಲ್ಲೂ, ಮೆ. ಕೋದಂಡ ಸಿ. ಚಪ್ಪುರವರೂ, (ಅಯ್ಯಪ್ಪನವರೂ) ಮತ್ತು ಮೆ. ತಾಳಮನೆ ಮಹಾಬಲಯ್ಯನವರೂ ಯಫ್. ಎಲ್. ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿರುವರಾಗಿ ತಿಳಿಯುತ್ತೇವೆ. ಇವರನ್ನು ಅಭಿನಂದಿಸುತ್ತೇವೆ.

ಸೋಮವಾರಪೇಟೆಯ ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ. ಎ. ನಾಯ್ಡುರವರು ಎರಡು ವಾರ ರಜೆಯಲ್ಲಿ ಹೋಗಿರುವದರಿಂದ ಇವರ ಬದಲಿಗೆ ಮೆ. ಪಂದಿಕುತ್ತಿರ ಗಣಪತಿಯವರು ವೀರಾಜಪೇಟೆಯಿಂದ ಸೋಮವಾರಪೇಟೆಗೆ ವರ್ಗಾಯಿಸಲ್ಪಟ್ಟಿರುವರು

ಈ ತಾ. 2 ರಿಂದ ದೇಶದಲ್ಲಿ ಮಳೆಬೀಳಲು ಪ್ರಾರಂಭವಾಗಿದೆ. ಈಗೀಗ ಗಾಳಿಮಳೆಯು ಜೋರಾಗುತ್ತಾ ಮಳೆಗಾಲವು ಪ್ರಾರಂಭಿಸಿದಂತೆ ಕಾಣುತ್ತದೆ. ಮಡಿಕೇರಿಯಲ್ಲಿ ಜೂನ್ 1ರಿಂದ ಇಂದಿನ ವರೆಗೆ 7. 19 ಇಂಚೂ, ಜೋರಾಗಿ ಮಳೆ ಬಿದ್ದ ನಿನ್ನೆ ದಿನ 2. 50 ಇಂಚೂ ಮಳೆಯಾಗಿದೆ. ವ್ಯವಸಾಯಗಾರರನೇಕರು ತಮ್ಮ ಗದ್ದೆ ಕೆಲಸಗಳನ್ನು ಶುರುಮಾಡಿರುವರು. ಈ ಮಧ್ಯೆ ಮದುವೆಯ ಕೋಲಾಹಲವು ಇನ್ನೂ ಮುಗಿದಿರುವದಿಲ್ಲ.

ಹಿಂದೂದೇಶ.

ಸರ್ ಫ್ರೆಡ್ರಿಕ್ ಸೈಕ್ಸ್‌ರವರು ಬೊಂಬಾಯಿ ಪ್ರಾಂತ್ಯದ ಹೊಸ ಗವರ್ನರಾಗಿ ನೇಮಿಸಲ್ಪಟ್ಟಿರುವರು.

ಕಳೆದ ಚಂದ್ರಗ್ರಹಣ ಸಮಯದಲ್ಲಿ ಕಾಶಿಪಟ್ಟಣದಲ್ಲಿ ಸುಮಾರು ಒಂದು ಲಕ್ಷ ಜನರು ಗಂಗಾಸ್ನಾನ ಮಾಡಿದರಂತೆ.

ಕಲ್ಕತ್ತಾ ಜೂಟ್ ಗಿರಣಿಯ 600 ಹೆಂಗಸು ಕೆಲಸಗಾರರು ಕೆಲಸಕ್ಕೆ ಹೋಗದ್ದರಿಂದ ಆ ಗಿರಣಿಯನ್ನೇ ಮುಚ್ಚಿ 80000 ಜನರಿಗೆ ಕೆಲಸವಿಲ್ಲದಂತೆ ಮಾಡಿರುವರು.

ಕಲ್ಕತ್ತಾ ಮುನ್ಸಿಪಲ್ ಉಪಚುನಾವಣೆಯಲ್ಲಿ ಸುಭಾಸ್ ಚಂದ್ರಬೋಸರ ಸಹೋದರ ಶರತ್ ಚಂದ್ರಬೋಸರು ಕಾಂಗ್ರೆಸ್ ಮೆಂಬರಾಗಿ ಚುನಾಯಿತರಾಗಿರುತ್ತಾರೆ.

ಸರ್ವ ಪಕ್ಷೀಯ ಪರಿಷತ್ತು ಅಲ್ಲಾಹಾಬಾದಿನಲ್ಲಿ 5ನೇ ತಾರೀಕಿನಿಂದ ಸೇರುತ್ತದೆ. ಮೆ. ಜಯಕರರು ಅನಾರೋಗ್ಯದ ದೆಸೆಯಿಂದ ಈ ಪರಿಷತ್ತಿನ ಸದಸ್ಯತ್ವವನ್ನು ಬಿಟ್ಟಿರುತ್ತಾರೆ.

ಮೈಸೂರು ಮಹಾರಾಜರವರು ತಮ್ಮ ವರ್ಧಂತಿ ದಿನ ಅನೇಕ ಧರ್ಮಾರ್ಥ ಕಾರ್ಯಗಳನ್ನು ವರ್ಷ ವರ್ಷ ಮಾಡುತ್ತಿರುವದು ಸರಿಯಷ್ಟೆ. ಆ ಪ್ರಕಾರ ಈ ವರ್ಷ ಅಲ್ಲಿಯ ಸ್ಥಳೀಕ ಶ್ರೀರಾಮಕೃಷ್ಣ ಮಠಕ್ಕೆ ರೂ. 1000 ದಾನಮಾಡಿ ಅವರಿಗೆ ಈ ಸಂಸ್ಥೆಯ ಮೇಲಿರುವ ಅಭಿಮಾನವನ್ನು ವ್ಯಕ್ತಪಡಿಸಿರುವರು.

ಮೈಸೂರು ರಿಪ್ರೆಸೆಂಟೇಟಿವ್ ಎಸೆಂಬ್ಲಿಯಲ್ಲಿ ಸವಾಲ್ ಜವಾಬ್ ನಡೆಯುವಾಗ ಪ್ರೆಸಿಡೆಂಟರಾದ ದಿವಾನರು ಅಗೌರವಾಗಿ ಮಾತಾಡಿದರೆಂಬ ಕಾರಣದಿಂದ ಕೆಲವು ಪ್ರತಿನಿಧಿಗಳು ಸಭೆಯಿಂದ ಹೊರಟು ಹೋದರು. ಹಾಗೆ ಹೊರಟು ಬಂದ ಮೇಲೆ ಇತರ ಮೆಂಬರುಗಳೂ ಸೇರಿ ದಿವಾನರ ವರ್ತನೆಯನ್ನು ನಿಶೇಧಿಸಿದರು.

ಪುದುಕೋಟೆಯ ಮಹಾರಾಜರು ಫ್ರಾನ್ಸ್ ದೇಶದಲ್ಲಿ ಮೃತರಾದರು. ಅವರ ಶವವನ್ನು ಲಂಡನಿಗೆ ಒಯ್ದು ಅಲ್ಲಿ ದಹನ ಮಾಡಿದರು. ಅದರ ಬೂದಿಯನ್ನು ಪುದುಕೋಟೆಗೆ ತರುತ್ತಾರಂತೆ. ಪುದುಕೋಟೆ ಸಂಸ್ಥಾನದ ಜನರೆಲ್ಲರೂ

ದುಃಖ ಪ್ರದರ್ಶನಗಳನ್ನು ಮಾಡುತ್ತಿದ್ದಾರೆ ಕೋರ್ಟು ಕಚ್ಚೇರಿಗಳು ಮುಚ್ಚಲ್ಪಟ್ಟವು.

ಮೆ. ಬ್ರೈಯಿಲ್ಸ್ ಫರ್ಡ್ ಎಂಬವರು ಮಿಸ್ ಮೇಯೋಳ ಪುಸ್ತಕವನ್ನು ಖಂಡಿಸಿ ಹಿಂದುಸ್ಥಾನದ ಸ್ವಾತಂತ್ರ್ಯದ ಹೋರಾಟಕ್ಕೆ ಉತ್ತೇಜನೆ ಕೊಟ್ಟು ಇಂಗ್ಲೆಂಡಿನ ಒಂದು ಪತ್ರಿಕೆಗೆ ಬರೆದಿದ್ದಾರೆ.

ಇಂಡಿಯಾಕ್ಕೆ ಬೇಕಾದ ರಾಜಕೀಯ ಸುಧಾರಣೆಯ ವಿಷಯ ಚರ್ಚಿಸಲು ಒಂದು ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ಸೇರುವಂತೆ ಕಲ್ಕತ್ತಾದ "ಸ್ಟೇಟ್ಸ್‌ಮ್ಯಾನ್" ಪತ್ರಿಕೆಯ ಸಂಪಾದಕರಾದ ಸರ್ ಆರ್ಥರ್ ಮೂರ್ ಯಂ. ಎಲ್. ಎ. ಯವರು ಎಲ್ಲಾ ಪಾರ್ಟಿಯ ಮುಂದಾಳುಗಳಿಗೆ ಆಮಂತ್ರಣವನ್ನು ಕಳುಹಿಸಿರುವರು.

"ಹಿಂದುಸ್ಥಾನದ ಸ್ವರಾಜ್ಯವನ್ನು ಶಾಸನ ಮಂಡಲಿ ಮಂದಿರಗಳಲ್ಲಿ ಜಯಿಸಲ್ಪಡುವುದಿಲ್ಲ. ಆಶ್ರಮಗಳಲ್ಲೂ ವ್ಯಾಯಾಮ ಮಂದಿರಗಳಲ್ಲೂ ಜಯಿಸಲ್ಪಡುತ್ತದೆ" ಎಂತಲೂ ಹಿಂದುಸ್ಥಾನವು ಬಡವರನ್ನು ತುಳಿಯಲು ಪ್ರಾರಂಭಿಸಿದಂದಿನಿಂದ ಅಧೋಗತಿಗೆ ಹೋಯಿತೆಂತಲೂ ತಮ್ಮ ಉಪನ್ಯಾಸಗಳಲ್ಲಿ ಸಾಧು ವಾಸ್ವಾನಿಯವರು ಹೇಳಿರುತ್ತಾರೆ.

ಸೈಮನ್ ಕಮಿಶನಿಗೆ ಸಂಬಂಧಪಟ್ಟ ವಿದ್ಯಾವಿಚಾರದ ಕಮಿಟಿಯು 15ನೇ ತಾರೀಕಿನಲ್ಲಿ ಸಿಮ್ಲಾದಲ್ಲಿ ಸೇರಿ ಮುಂದಿನ ಕಾರ್ಯಕ್ರಮವನ್ನು ನಿಶ್ಚೈಸುತ್ತಾರೆ. ಮದ್ರಾಸ್ ಕೌನ್ಸಿಲಿನ ಡಿಪ್ಯುಟಿ ಪ್ರೆಸಿಡೆಂಟರಾದ ಡಾಕ್ಟರ್ ಮುತ್ತುಲಕ್ಷ್ಮಿ ಅಮ್ಮಾಳರವರು ಈ ಕಮಿಟಿಯ ಸದಸ್ಯರಾಗಿರುತ್ತಾರೆ. ಈ ಮಹಿಳೆಯು ಕೌನ್ಸಿಲಿನಲ್ಲಿ ಸೈಮನ್ ಕಮಿಶನ್ ಬಹಿಷ್ಕಾರದ ಪರವಾಗಿ ಓಟ್ ಕೊಟ್ಟವರಾಗಿರುತ್ತಾರೆ.

ಬಾರ್ಡೋಲಿಯ ಸತ್ಯಾಗ್ರಹ ಚಳವಳಕ್ಕೆ ಉತ್ತೇಜನ ಕೊಡಲು ಈ ತಾ 12 ನ್ನು ಹಿಂದೂದೇಶದಲ್ಲಿ ಬಾರ್ಡೋಲಿ ದಿನವಾಗಿ ಆಚರಿಸಿ, ಆ ದಿನ ಈ ಚಳವಳದ ಸಹಾಯಾರ್ಥವಾಗಿ ಹಣ ಸಂಗ್ರಹಿಸುವ ಮತ್ತು ಪಬ್ಲಿಕ್ ಮೀಟಿಂಗುಗಳನ್ನು ಮಾಡಿ ಸತ್ಯಾಗ್ರಹಕ್ಕೆ ಉತ್ತೇಜನ ಕೊಡುವ ಠರಾವುಗಳನ್ನು ಪಾಸುಮಾಡುವ ಕೆಲಸಗಳನ್ನು ಮಾಡುವದು ಉತ್ತಮವೆಂದು ಮಹಾತ್ಮ ಗಾಂಧಿಯವರು ಅರಿಕೆಮಾಡಿಕೊಂಡಿರುವರು.

ಬಾರ್ಡೋಲಿ ಸತ್ಯಾಗ್ರಹದ ಸಂಬಂಧ ಸುಮಾರು 15 ಬೊಂಬಾಯಿ ಕೌನ್ಸಿಲ್ ಮೆಂಬರುಗಳು ತಮ್ಮ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು. ಅಲ್ಲಿ ಸರ್ಕಾರಿ ಉದ್ಯೋಗಸ್ಥರು ದಯ ದಾಕ್ಷಿಣ್ಯವಿಲ್ಲದೆ ಜನರ ಆಸ್ತಿಪಾಸ್ತಿಗಳನ್ನು ಜಪ್ತಿಮಾಡಿ ತರತರದ ಮಾಡುತ್ತಿದ್ದಾರೆ. ಆದರೂ ಜನರು ಧೈರ್ಯಗುಂದದೆ ತಮ್ಮ ಸತ್ಯಾಗ್ರಹವನ್ನು ನಡೆಸುತ್ತಿರುವದು ಸ್ತುತ್ಯಾರ್ಹವಾಗಿದೆ. ಅಲ್ಲಿಯ ಗ್ರಾಮ ಪಟೇಲರೆಲ್ಲರೂ, ಬೇರೆ ಹಲವು ಗ್ರಾಮ ಉದ್ಯೋಗಸ್ಥರೂ ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವರಂತೆ.

ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಪಂಜಾಬು ಕೌನ್ಸಿಲಿನಿಂದ ನೇಮಿಸಲ್ಪಟ್ಟ ಕಮಿಟಿಯವರು ತಾ. 2ರಲ್ಲಿ ಮೀಟಿಂಗು ಮಾಡಿ ತಮ್ಮ ಕಮಿಟಿ ಮೆಂಬರುಗಳಿಗೂ, ಸೈಮನ್ ಕಮಿಷನ್ ಮೆಂಬರುಗಳಿಗೂ ಸರಿಸಮಾನತ್ವವಿಲ್ಲದೆ ಹೋದರೆ ತಮ್ಮ ಕೆಲಸವನ್ನು ಮಾಡಲು ಕಷ್ಟಸಾಧ್ಯವೆಂದು ಠರಾವು ಪಾಸುಮಾಡಿ ಅದನ್ನು ಪಂಜಾಬು ಸರ್ಕಾರದ ಮೂಲಕ ಸರ್ ಜಾನ್ ಸೈಮನ್‌ರವರಿಗೆ ಕಳುಹಿಸಿರುವರು. ಈ ವಿಷಯವು ಸಿಮ್ಲಾದಲ್ಲಿ ಸರ್ಕಾರಿ ಪಕ್ಷದ ಧುರೀಣರ ಮನಸ್ಸಿನಲ್ಲಿ ಸ್ವಲ್ಪ ಗಲಿಬಿಲಿಯನ್ನುಂಟುಮಾಡಿದೆ. ಸ್ಟಾಟ್ಯೂಟರಿ ಕಮಿಷನಿನೊಂದಿಗೆ ಸಂಪೂರ್ಣ ಸಹಕರಿಸುವರೆಂದು ನಂಬಿದ್ದ ಪಂಜಾಬಿನವರೇ ಹೀಗೆ ಮೇಲ್ಪಂಕ್ತಿ ಹಾಕಿದರೆ ಬಾಕಿ ಪ್ರಾಂತ್ಯಗಳೆಲ್ಲವೂ ಏನುಮಾಡುವವೋ ಎಂಬದೇ ಗಲಿಬಿಲಿಗೆ ಕಾರಣವಾಗಿದೆ. ಪಂಜಾಬಿನ ಹಿಂದೂ ಮಹಾಸಭಾದ ಕಮಿಟಿಯವರೂ ಈ ಠರಾವಿಗೆ ಒತ್ತಾಸೆಯಾಗಿ ತೀರ್ಮಾನಿಸಿರುವರು.

ಮಲಬಾರಿನ ಪಯ್ಯನ್ನೂರಿನಲ್ಲಿ ಕಳೆದ ವಾರ ಆದಿ ಕೇರಳ (ಅಸ್ಪೃಶ್ಯರ)ರ ಮಹಾಸಭೆಯು ನಡೆಯಿತು. ತಿರುವಾಂಕೂರಿನ ಶ್ರೀಮೂಲಂ ಮಹಾಸಭೆಯ ಪ್ರತಿನಿಧಿಯಾದ ಕೇಶವ ಪುಲಯನಾರ್ ಅಧ್ಯಕ್ಷರಾಗಿದ್ದರು. ಮಹಾಸಭೆಯಲ್ಲಿ ತೀರ್ಮಾನವಾದ ಮುಖ್ಯ ಠರಾವುಗಳು ಯಾವವೆಂದರೆ 1. ಮಲಬಾರಿನಲ್ಲಿ 9000 ವರ್ಷಗಳಿಗಿಂತ ಮೇಲ್ಪಟ್ಟು ವಾಸವಿರುವ ಕೃಷಿಕಸಬು ನಡಿಸುವ 'ಅಸ್ಪೃಶ್ಯ' ವರ್ಗದವರಿಗೆ ರಸ್ತೆಗಳಲ್ಲಿ ತಿರುಗಾಡುವ ಹಕ್ಕು ಕೊಡಬೇಕೆಂತ ಜಾತಿ ಹಿಂದುಗಳನ್ನು ಈ ಸಭೆಯು ಕೇಳಿಕೊಳ್ಳುತ್ತದೆ, (2) ಅಸ್ಪೃಶ್ಯರು ಹಾಗಾಗಿರಲು ಕಾರಣಗಳಾದ ಅಶುಚಿ ಜೀವನವನ್ನೂ, ಕುಡಿತ ತನವನ್ನೂ ಬಿಡುವಂತೆ ಅಸ್ಪೃಶ್ಯರೊಳಗೆ ಬೋಧನೆ ಕೊಡಬೇಕು. (3) ಬಾಯಿದೆ ಮಂಡಲಿಗಳಲ್ಲಿ ಅಸ್ಪೃಶ್ಯರ ಕ್ಷೇಮವನ್ನು ಕಾದಿಡಲು ನೇಮಿಸಲ್ಪಡುವ ಮೆಂಬರುಗಳು ಸ್ವಾರ್ಥತೆಯನ್ನು ಸಾಧಿಸಲು ಪ್ರಯತ್ನಿಸುತ್ತಾರೆಯೇ ಹೊರತು ತಮಗೆ ಸಹಾಯಮಾಡದ್ದರಿಂದ ಅಸ್ಪೃಶ್ಯರಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕು ಕೊಡಬೇಕು.

ವಿದೇಶ.

ಪ್ರಪಂಚದ ಯುವಕ ಪರಿಷತ್ತು ಈ ವರ್ಷ ಹಾಲೆಂಡಿನಲ್ಲಿ ಆಗಸ್ಟ್ 28ರಲ್ಲಿ ನಡಿಯುತ್ತದೆ.

ಗ್ರೀಕ್ ಪಾರ್ಲಿಮೆಂಟಿನವ ... ಮಂಡಲಿಯ ಮೇಲೆ ವಿಶ್ವಾಸದ ... ವರು.

ಲೀಗ್ ಎಸೆಂಬ್ಲಿಗೆ ಅಾರ್ಡ್‌ಲಿಟ್ಟನ ... ವಾಬ್ ಮತ್ತು ಸರ್ ಬಸಂತ ಕುಮಾರ ... ಇಂಡಿಯಾದ ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟಿರುವರು.

ಇಟಲಿಯ ಪ್ರಧಾನ ಮಂತ್ರಿಯವರಾದ ಸಿ. ಮುಸ್ಸಲೊನಿಯವರು ಇಟಲಿಯ ಪತ್ರಿಕೆಗಳ ಕಡೆಗೆ ಚೆನ್ನಾಗಿ ವರ್ತಿಸದ್ದರಿಂದ ಅಮೇರಿಕದ ನೇಷನಲ್ ಪ್ರೆಸ್ ಕ್ಲಬ್ಬಿನಲ್ಲಿ ಅವರಿಗೆ ಮೆಂಬರುತನವು ತಿರಸ್ಕರಿಸಲ್ಪಟ್ಟಿದೆ.

ಚೈನಾದ ಉತ್ತರ ಸೈನ್ಯಗಳ ಮುಖ್ಯ ಸೇನಾಧಿಪತಿಯಾದ ಚಾಂಗ್‌ಟ್ಸೊಲಿನ್‌ರವರು ಮುಖ್ಯ ಪಟ್ಟಣವಾದ ಪೆಕಿಂಗ್ ಪಟ್ಟಣವನ್ನು ಬಿಟ್ಟು ಹೊರಟಿರುವರು. ಲಕ್ಷಗಟ್ಟಲೆ ಜನರು ಆ ಪಟ್ಟಣವನ್ನು ಬಿಡುತ್ತಲಿದ್ದಾರೆ. ಚಾಂಗ್‌ಟ್ಸೊಲಿನ್‌ರವರನ್ನು ಒಯ್ಯುತ್ತಿದ್ದ ಸ್ಪೆಶ್ಯಲ್ ಟ್ರೈನಿಗೆ ಶತ್ರುಗಳು ಬಾಂಬು ಹಾಕಿ ಸುಟ್ಟರು. ಆದರೆ ಲಿನ್‌ರು ಸ್ವಲ್ಪ ಘಾಯದಿಂದ ತಪ್ಪಿಸಿಕೊಂಡರು. ಇತ್ತಲಾಗಿ ಅವರು ಮೃತರಾದರೆಂದು ವರ್ತಮಾನ. ದಕ್ಷಿಣದ ನೇಶನಲಿಸ್ಟ್ ಪಂಗಡದವರು ಪೆಕಿಂಗ್‌ನಲ್ಲಿ ಹೊಸ ಸರ್ಕಾರವನ್ನು ಸ್ಥಾಪಿಸಿರುವರು.

ಯೂರೋಪಿನಲ್ಲಿ ನಡೆದ 'ಒಲಿಂಪಿಕ್" ಹಾಕಿಟೂರ್ನಮೆಂಟಿನಲ್ಲಿ ಇಂಡಿಯನ್ ಟೀಮಿನವರು ಆಸ್ಟ್ರಿಯದವರನ್ನು 6, ಬೆಲ್ಜಿಯಮ್‌ನವರನ್ನು 9, ಡೆನ್ಮಾರ್ಕ್‌ನವರನ್ನು 5, ಸ್ವಿಟ್ಜರ್ಲಾಂಡ್‌ನವರನ್ನು 6 ಗೋಲ್‌ಗಳಿಂದ ಸೋಲಿಸಿ ಆಖೈರು ಆಟದಲ್ಲಿ ಹಾಲೆಂಡ್‌ನವರಿಗೆ 3 ಗೋಲ್‌ಗಳನ್ನು ಹಾಕಿ ಜಯಶೀಲರಾದರು ಇವರಿಗೆ ವಿರೋಧ ಪಕ್ಷದವರ್‍ಯಾರಿಂದಲೂ ಒಂದು ಗೋಲನ್ನೂ ಸಹ ಹಾಕಲು ಸಾಧ್ಯವಾಗಲಿಲ್ಲ. ಇಂಡಿಯನ್ ಟೀಮಿನವರ ವಿಶೇಷವಾದ ಜಯದಿಂದ ಹಿಂದೂದೇಶಕ್ಕೆ ಯಶಸ್ಸು ಬಂದಿದೆ ಎಂಬುದರಲ್ಲಿ ಸಂಶಯವಿಲ್ಲ.

ಮಾನವ ಮರ್ಮ ಶಾಸ್ತ್ರ.

ಈ ಪುಸ್ತಕವು ಮೊದಲು ಹಿಂದೂಸ್ಥಾನಿ, ಫ್ರೆಂಚ್ ಭಾಷೆಗಳಲ್ಲಿ ಇತ್ತು. ಇದನ್ನು ಈಗ ಕನ್ನಡಕ್ಕೆ ತರ್ಜುಮೆ ಮಾಡಿ ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ವಿಷಯಗಳು, ಶಿಶು ಉತ್ಪತ್ತಿ ಸ್ತ್ರೀ ಪುರುಷರು ಅನ್ಯೋನ್ಯವಾಗಿ ಇರುವಿಕೆ ಮುಂತಾದ ಎಲ್ಲಾ ವಿಷಯಗಳು ಇರುವವು.

ಕ್ರಯ 1ಕ್ಕೆ 1—0—0.

ವಿಳಾಸ.—ಕೆ. ಎನ್. ರಾಧಕೃಷ್ಣ ಅಂಡ್ ಬ್ರದರ್ಸ್,

52—3 109. ಚೈನಾ ಬಜಾರ್ ರೋಡ್, ಮದರಾಸು

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ.—ಮೆ. ಕುಟ್ಟೇಟಿರ ಸುಬ್ಬಯ್ಯನವರು ಅವರ ಸ್ವಾಧೀನದಲ್ಲಿರುವ ಸ್ಥಿರ ಮತ್ತು ಚರ ಆಸ್ತಿಗಳನ್ನು ವಿಕ್ರಯಿಸುವದಾಗಿ ತಿಳಿಯ ಬರುತ್ತದೆ. ಸದರಿ ಆಸ್ತಿಗಳಿಗೆ ನಾನು ಒಬ್ಬ ಹಕ್ಕುದಾರಳಾಗಿರುವದರಿಂದ ಮೆ. ಸುಬ್ಬಯ್ಯನವರಿಗೆ ಸದರಿ ಆಸ್ತಿಗಳನ್ನು ವಿಕ್ರಯ ಮಾಡಲು ಯಾ ಪರಾಧೀನ ಮಾಡಲು ಯಾವ ಸ್ವತಂತ್ರವೂ ಇರುವದಿಲ್ಲ. ಒಂದು ವೇಳೆ ಯಾರಾದರೂ ಸದರಿ ಆಸ್ತಿಗಳನ್ನು ಕ್ರಯಕ್ಕೆ ಪಡಕೊಂಡರೆ ಅದರಿಂದ ಉಂಟಾಗುವ ವಿಶಿಷ್ಟ ನಷ್ಟಕ್ಕೂ, ಕಷ್ಟಕ್ಕೂ ಭಾಧ್ಯಸ್ಥರಾಗಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

4—2 ಮಿಸೆಸ್ ಕುಟ್ಟೇಟಿರ ಕಾಯಮ್ಮ.

ಜೀವನಕ್ಕೊಂದು ಗುರಿಯಿರಲಿ.

ಈಗಣ ತರುಣವಿದ್ಯಾರ್ಥಿಗಳಲ್ಲಿ ಸರಿಯಾದ ಧ್ಯೇಯವಿರುವಂತೆ ಕಾಣುವದಿಲ್ಲ. ಹೇಗಾದರೂ ಹಣವನ್ನು ಸಂಪಾದಿಸಬೇಕೆಂಬ ವಿಚಾರವು ಮಾತ್ರ ಇರುತ್ತದೆ ಅದನ್ನಾದರೂ ಒಟ್ಟುಗೂಡಿಸುವ ಸಾಮರ್ಥ್ಯವು ಸಹ ಎಲ್ಲರಲ್ಲಿ ಇರುವದಿಲ್ಲ. ಅನೇಕ ತರುಣರಿಗೆ ತಮ್ಮ ಅಭಿರುಚಿಯು ಯಾವುದರಲ್ಲಿದೆ, ತಮ್ಮ ಸಾಮರ್ಥ್ಯವು ಯಾವ ಕಡೆಗೆ ಹರಿಯುತ್ತಿದೆ. ಎಂಬುದನ್ನು ತಿಳಿಯುವುದು ಕೂಡ ಪ್ರಯಾಸವಾಗಿದೆ. ಒಂದು ವೇಳೆ ತಿಳಿದರೂ ಅವುಗಳನ್ನು ಬೇಕಾದ ರೀತಿಯಲ್ಲಿ ಉಪಯೋಗಿಸುವ ಮಾರ್ಗವು ಕಾಣುವದಿಲ್ಲ. ಹೀಗಾಗಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಕೂಡಲೇ ಏನಾದರೂ ಒಂದು ಉಪಜೀವನದ ಮಾರ್ಗವನ್ನು ಕಂಡು ಹಿಡಿಯಲಿಕ್ಕಾಗಿ ಹಲವು ಅಧಿಕಾರಿಗಳ ಬಳಿಗೆ ವಿನಂತಿ ಪತ್ರವನ್ನು ಕಳುಹಿಸುತ್ತಾರೆ. ಹೀಗೆ ಆ

ಶಕ್ಕೆ ಗುಂಡು ಹೊಡೆದಂತೆ ಅನೇಕ ಕಡೆಗಳಿಗೆ ಕಳುಹಿಸಿಕೊ ವಿನಂತಿ ಪತ್ರಗಳಲ್ಲಿ ಒಂದಕ್ಕೆ ಅನುಕೂಲವಾದ ಉತ್ತರ ದಲ್ಲಿ ತಮ್ಮ ಜನ್ಮವು ಅಂದಿಗೆ ಸಾರ್ಥಕವಾಯಿತೆಂಬ ಭಾ ಯಿಂದ ಅವರು ಆ ಉದ್ಯೋಗವನ್ನು ಭಕ್ತಿ ಪೂರ್ವಕವಾ ಸ್ವೀಕರಿಸಿಕೊಳ್ಳುತ್ತಾರೆ. ಹಲವರು ಈ ವರ್ಗಕ್ಕೆ ಸೇರಿದ ು. ಇನ್ನು ಕೆಲವು ಐಶ್ವರ್ಯವಂತರ ಮಕ್ಕಳಿಗೆ ಉದರಾ ರಣದ ಕಾರ್ಯವನ್ನು ಸ್ವಲ್ಪ ಮುಂದಕ್ಕೆ ದೂಡಲು ಸಾಧ್ಯ ವಾಗುವುದು ಅವರು ತಮ್ಮಿಂದಾಗುವಷ್ಟು ವಿದ್ಯಾರ್ಜನೆಯ ಮಾಡಲು ಅನುಕೂಲಸ್ಥರಾಗಿರುವುದರಿಂದ ಮುಂದಿನ ಮಾರ್ಗವನ್ನು ನಿರ್ಧರಿಸುವ ಕಾಲವನ್ನು ಕೂಡ ಮುಂದುಸಬ ವರಾಗಿರುತ್ತಾರೆ. ಆದರೆ ಉದ್ಯೋಗ ನಿರ್ಣಯದ ಮಟ್ಟಿ ಇವರೂ ಮೊದಲನೆಯವರ ಹಾಗೆಯೇ ತಮ್ಮ ತಮ್ಮ ಯೋಗ್ಯತೆಗೂ, ಅಭಿರುಚಿಗೂ ಸರಿಯಾದ ಪ್ರವೃತ್ತಿಯನ್ನು ಕೈ ಕೊಳ್ಳಲು ಅಸಮರ್ಥರೇ.

ಈ ರೀತಿಯಾಗಿ ನಮ್ಮ ದೇಶದ ತರುಣರು ಯುಕ್ತಮಾ ರ್ಗಾವಲಂಬಿಗಳಾಗದಿರಲು ಅನೇಕ ಕಾರಣಗಳಿವೆ. ನಮ್ಮ ಲ್ಲಿ ಪ್ರಚಾರದಲ್ಲಿರುವ ವಿದ್ಯೆಯೇ ಇದಕ್ಕೆ ಮುಖ್ಯ ಕಾರಣ. ವಿದ್ಯಾರ್ಥಿಗಳ ಯೋಗ್ಯತೆಯನ್ನು ತಿಳಿದು ಅವರನ್ನು ಬೇರೆ ಬೇರೆ ಮಾರ್ಗಗಳಲ್ಲಿ ನಡೆಸತಕ್ಕ ವ್ಯವಸ್ಥೆಯು ನಮ್ಮ ವಿದ್ಯಾ ಭ್ಯಾಸ ಪದ್ಧತಿಯಲ್ಲಿಲ್ಲ. ಮತ್ತು ಪಾಶ್ಚಾತ್ಯರ ಆಳ್ವಿಕೆಯ ಲ್ಲಿರುವ ನಮಗೆ ಪಾಶ್ಚಾತ್ಯರ ಜೀವನದ ಧ್ಯೇಯವೇ ಉತ್ತಮ ಧ್ಯೇಯವೆಂದು ತೋರಿತೊಡಗಿರುವುದರಿಂದ ಹೇಗಾದರೂ ಐ ಹಿಕ ಸುಖವನ್ನು ಹೆಚ್ಚಿಸಲು ಮುಖ್ಯ ಸಾಧನವೆಂದೆಣಿಸಲ್ಪಡು ವ ಧನ ಸಂಗ್ರಹವೇ ಈ ಜೀವಮಾನದ ಮುಖ್ಯ ಉದ್ದೇಶವೆಂ ಬ ನಂಬಿಕೆಯೂ ದಿನೇ ದಿನೇ ಬೆಳೆಯುತ್ತಿದೆ. ಆದುದರಿಂದ ವಿದ್ಯಾರ್ಥಿಗಳ ಮನೋಭಾವನೆಯು ಆ ಕಡೆಗೆ ಸೆಳೆಯುವಂತೆ ಹೆ ತ್ತವರೂ, ಬಂಧುಮಿತ್ರರೂ ಆಗಿಂದಾಗ್ಗೆ ಈ ದಿವ್ಯ ಮಂತ್ರೋ ಪದೇಶವನ್ನು ಮಾಡುತ್ತಿರುತ್ತಾರೆ. ಕೆಲವು ಸಂಧರ್ಭಗಳಲ್ಲಿ ವಿದ್ಯಾರ್ಥಿಯ ಮನಸ್ಸು ಅದನ್ನು ಮತ್ತೊಂದು ಕಡೆಗೆ ಸೆಳೆ ಯುತ್ತಿದ್ದರೂ ಹೆತ್ತವರ ನಿರ್ಬಂಧದಿಂದ ಮುಕ್ತನಾಗಲು ಸಾ ಧ್ಯವಾಗದೆ ಅವರ ಇಷ್ಟವನ್ನು ಸಾಧಿಸುವುದಕ್ಕಾಗಿ ತಾನು ಕೂಡ ತರುಣರು ಹೋದ ರಾಜಮಾರ್ಗವನ್ನೇ ಅವಲಂಬಿಸು ತ್ತಾನೆ.

ಪ್ರತಿಯೊಬ್ಬ ತರುಣನಿಗೂ ಧನಸಂಪಾದನೆಗಿಂತ ಉತ್ಕೃ ಷ್ಟವಾದ ಧ್ಯೇಯವಿರತಕ್ಕದ್ದು. ಭೌತಿಕ ಸುಖವೇ ಮುಖ್ಯ ವೆಂದು ಹೋರಾಡುತ್ತಿರುವ ಪಾಶ್ಚಾತ್ಯರ ಪರಿಣಾಮವನ್ನು ನೋಡಿದರೇ, "ಅರ್ಥ ಮನರ್ಥಂ ಭಾವಯನಿತ್ಯಂ' ಎಂಬ ಆಪ್ತವಾಕ್ಯವು ನೆನಪಿಗೆ ಬಾರದಿರದು. ದೇವರ ಸಾಕ್ಷಾತ್ಕಾ ರವೇ ಪ್ರತಿಯೊಬ್ಬ ಮನುಷ್ಯನ ಜನ್ಮದ ಉದ್ದೇಶವೆಂದು ಧ ರ್ಮವು ಸಾರುತ್ತಿದೆ. ಹೀಗೆನ್ನುವುದರಿಂದ ತರುಣರೆಲ್ಲರೂ ಈ ಲೋಕದ ಒಡನಾಟಕ್ಕೆ ತಿಲಾಂಜಲಿಯನ್ನು ಕೊಟ್ಟು ಕಾಡಿ ಗೆ ಹೋಗಬೇಕೆಂಬ ತಾತ್ಪರ್ಯವಲ್ಲ. ತಮ್ಮ ತಮ್ಮ ಪೂರ್ವ ಸಂಸ್ಕೃತಿಗನುಸಾರವಾದ ಮಾರ್ಗವನ್ನು ಹಿಡಿದು ಪ್ರತಿಯೊಬ್ಬ ನೂ ಮುಂದುವರಿಯತಕ್ಕದ್ದು. ಆದರೆ ಗುರಿ ಮಾತ್ರ ತಪ್ಪ ದಂತೆ ಸದಾ ಎಚ್ಚರಿಕೆಯಿಂದಿರತಕ್ಕದ್ದು. ಧನಾರ್ಜನೆಯು ತಪ್ಪಲ್ಲ. ಅದನ್ನು ಉಪಯೋಗಿಸುವ ಮಾರ್ಗ ಮಾತ್ರ ತ ಪ್ಪಾದರೆ ಧನಾರ್ಜನೆಯು ನಿಷ್ಫಲವಾಗುವುದು. ಸಂಸಾರಿಗ ಳಾಗಿರುವುದು ತಪ್ಪಲ್ಲ. ಸಂಸಾರ ಜೀವನವನ್ನು ನಡಿಸುವಾ ಗ ಮಾತ್ರ ಸ್ವಧರ್ಮವನ್ನು ಪರಿಪಾಲಿಸದಿದ್ದರೆ ಆ ಸಂಸಾರಜೀ ವನವು ನಿಷ್ಫಲವಾಗುವುದು.

ತನ್ನ ಆತ್ಮದ ಬೆಳವಣಿಗೆಗೆ ತಾನು ಮಾಡಬೇಕಾದುದೇ ನೆಂಬುದನ್ನು ಕುರಿತು ಪ್ರತಿಯೊಬ್ಬ ತರುಣನೂ ಗಾಢವಾಗಿ ಆಲೋಚಿಸಬೇಕಾಗಿದೆ. ಮನುಷ್ಯನು ಸಾಮಾಜಿಕ ಜೀವಿಯಾ ದುದರಿಂದ ಒಬ್ಬಂಟಿಗನಾಗಿದ್ದು ಬೆಳೆಯುವುದು ಕಷ್ಟಸಾಧ್ಯ ವಾದ ವಿಷಯ. ತನ್ನ ಆತ್ಮನು ಬೆಳೆಯುತ್ತಾ ಹೋಗುವಾ ಗ ತನ್ನಲ್ಲಿ ಪರಿಶುದ್ಧವಾದ ಪ್ರೇಮವೂ ಬೆಳೆಯುವುದು. ಈ ಪ್ರೇಮವು ತನ್ನಿಂದ ಹೊರಗಿರುವ ಹೆತ್ತವರು, ಹೆಂಡತಿ, ಮಕ್ಕ ಳು ಮುಂತಾದವರು ಅಡಕವಾಗಿರುವ ಇಡೀ ಕುಟುಂಬಕ್ಕೆ ಕ್ರ ಮೇಣ ವ್ಯಾಪಿಸುವುದು. ಇವರ ಕ್ಷೇಮಕ್ಕಾಗಿ ತನ್ನಿಂದಾ ಗುವ ಪ್ರಯತ್ನವನ್ನು ಮಾಡುತ್ತಾ ಇವರ ಸುಖವೇ ತನ್ನ ಸು ಖ, ಇವರ ದುಃಖವೇ ತನ್ನ ದುಃಖ ಎಂಬ ಭಾವನೆಯಿಂದ ತ ನ್ನನ್ನು ಮರೆತು ಇವರ ಸುಖ ದುಃಖಗಳಲ್ಲಿ ಭಾಗಿಯಾಗತೊ ಡಗಲು ಪ್ರೇಮವು ತನ್ನ ಎಲ್ಲೆಯನ್ನು ಮೀರಿ ತನ್ನ ನೆರೆಯವರ ಲ್ಲಿಯೂ, ತನ್ನ ಜಾತಿಯವರಲ್ಲಿಯೂ, ಕ್ರಮೇಣ ತನ್ನ ದೇಶ ದಲ್ಲಿಯೂ ಕಟ್ಟಕಡೆಗೆ ಇಡೀ ವಿಶ್ವದಲ್ಲಿಯೂ ವ್ಯಾಪಿಸುವು ದು. ಈ ರೀತಿಯಾಗಿ ಪ್ರೇಮ ಹರಿಯತೊಡಗಲು ಅದನ್ನು ಸೇವೆಯಮೂಲಕ ಬಲಪಡಿಸತಕ್ಕದ್ದು. ಹೀಗೆ ಪರಾರ್ಥಕ್ಕಾ ಗಿ ಸ್ವಾರ್ಥವನ್ನು ಬಿಡುತ್ತಾ ಪ್ರೇಮದಿಂದ ಸೇವಾಶಕ್ತಿಯ ನ್ನೂ, ಸೇವೆಯಿಂದ ಪ್ರೇಮವನ್ನೂ, ಬೆಳೆಸುತ್ತಾ ಬರಲು, ಆ ಧನದಲ್ಲಿ ಅನೇಕ ದಿವ್ಯ ಗುಣಗಳು ಉತ್ಪನ್ನವಾಗಿ ಪ್ರಜ್ವಲಿಸು ವುವು. ಆ ಪ್ರೇಮಯುಕ್ತವಾದ ಸೇವೆಯಿಂದಲೇ ಅವರು ಜೀವನ್ಮುಕ್ತರಾಗುವರು.,

ನಮ್ಮ ದೇಶದ ತರುಣರಲ್ಲಿ ಉತ್ತಮ ಧ್ಯೇಯವು. ತಲೆ ದೋರಲಿ! ಧ್ಯೇಯದ ಸಲುವಾಗಿ ಹೋರಾಡುವ ಬುದ್ಧಿಯೂ ಶಕ್ತಿಯೂ ದಿನೇ ದಿನೇ ಬೆಳೆಯಲಿ !! ಅವರು ಸೇವೆಯ ಮೂ ಲಕ ಆತ್ಮಜ್ಞಾನವನ್ನು ಪಡೆಯಲಿ !!

'ವಸಂತ "

ನೋಟೀಸು.

ಕೊಡಗು ವಿದ್ಯಾಭಿವೃದ್ಧಿ ಸಂಘದಿಂದ ಪ್ರಯೋಜನವ ನ್ನು ಹೊಂದಿಕೊಂಡು ಪುನಹ ಈ ವರ್ಷ ಸಾಲ ಮತ್ತು ವೇ ತನಗಳನ್ನು ಕೇಳುವವರು ಅವರ ಅರ್ಜಿಗಳಿಗೆ ಕಾಲೇಜಿನ "ಪ್ರೋಗ್ರೆಸ್ ರಿಪೋರ್ಟುಗಳನ್ನು" ಜೋಡಿಸಿ 1928ನೇ ಇಸವಿ ಜೂನ್ ತಾರೀಕು 15ರ ವಳಗೆ ಕಳುಹಿಸಬೇಕು. ಸಾಲ ಮ ತ್ತು ವೇತನಗಳನ್ನು ಕೇಳತಕ್ಕವರು ಅವರ ವಯಸ್ಸು ಹೆಸರು, ತಂದೆಯ ಹೆಸರು ಮತ್ತು ಇತರ ವಿಳಾಸಗಳನ್ನು ವಿವರವಾಗಿ ಅವರ ಅರ್ಜಿಗಳಲ್ಲಿ ನಮೂದಿಸತಕ್ಕದ್ದು.

ತಾ. 2—6—28. ಬಿ. ಐ. ಕುಟ್ಟಪ್ಪ.
ಸೆಕ್ರಟರಿ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕ ರ್ತರು ಜವಾಬ್ದಾರರಲ್ಲ. ಸಂ.]

ಹಿಂದುಸ್ಥಾನದಲ್ಲಿ ಚಿನ್ನದ ನಾಣ್ಯಗಳನ್ನು ಚಲಾವಣೆ ಯಲ್ಲಿ ಇಡದೆ ರೈತರಿಗೆ ಬಹಳ ಕಷ್ಟವಾಗಿದೆ. ಇದರಿಂದ ಚಿನ್ನ ಬೇಕಾದವರು ಸಾಹುಕಾರರಿಂದ ಹೆಚ್ಚು ಬೆಲೆ ಕೊಟ್ಟು ಪೌನುಗಳನ್ನು ಕೊಂಡು ರೈತರು ನಷ್ಟ ಪಡುತ್ತಲಿದ್ದಾರೆ. ಆ ದ್ದರಿಂದ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತರಬೇಕಲ್ಲದೆ ಶುದ್ಧ ಚಿನ್ನ ಖಜಾನೆಯಲ್ಲಿ ದೊರಕುವಂತೆ ಸರಕಾರವು ಮಾ ಡಿಕೊಡಬೇಕೆಂತ 'ಕೆ. ಸಿ.' ಎಂಬವರು ಬರೆದ ಬಾತ್ಮಿಯನ್ನು ಪೂರ್ತಿಯಾಗಿ ಪ್ರಕಟಿಸುವನ್ನು ಕಾರಣ ಯುಕ್ತವಾಗಿಲ್ಲ.

'ಕೊ. ಸಂ.'

ಕಿರಗಂದೂರು ಸಹಕಾರಿ ಭತ್ತದ ಭಂಡಾರವನ್ನು ಕಮಿ ಟಿ ಮೆಂಬರುಗಳು ನಿದ್ರೆ ಮಾಡಲು ಬಿಟ್ಟಿರುತ್ತಾರೆ. ಇದ ನ್ನು ಎಚ್ಚರಿಸುವಂತೆ ಮಾಡಲು ಗ್ರಾಮದ ಮುಖ್ಯಸ್ಥರೂ, ಸ ಹಕಾರಿ ಇಲಾಖೆಯವರೂ ತೊಂದರೆ ತೆಗೆದುಕೊಳ್ಳಬೇಕೆಂತ ಆ ಗ್ರಾಮದಿಂದ ಒಬ್ಬರ ಒಂದು ಬಾತ್ಮಿ ಬಂದಿದೆ. ಸಂಬಂಧಪಟ್ಟ ಇಲಾಖೆಗೆ ಬರೆಕೊಂಡು ಸಫಲವಾಗದಿದ್ದರೆ ಪತ್ರಿಕೆಗೆ ಬರೆ ಯುವದು ಯುಕ್ತವಾಗಿದೆ.

'ಕೊ. ಸಂ.'

"ಒಡು ಗಾಡಿಯ ಪ್ರಯಾಣವು,' ನ ಪತ್ರದಲ್ಲಿ ಯಾ ವ ತೊಂದರೆಯನ್ನು ಕುರಿತು ಟೀಕಿಸುವದು ಎಂಬುದು ಗೊ ತ್ತಾಗದ್ದರಿಂದ ಅದನ್ನು ಪ್ರಕಟಿಸಲಿಲ್ಲ.

'ಕೊ. ಸಂ.'

ಕೆಲವು ಮಾರ್ಪಾಡುಗಳು.

ಅಯ್ಯಾ,

ಇಂಡಿಯಾ ದೇಶ ನಿವಾಸಿಗಳಾದ ಹಿಂದೂ ಮುಸಲ್ಮಾ ನ್ ಮಹಾಜನರೇ! ನಮ್ಮ ಈ ಭಾರತ ಮಾತೆಯ ಉದ್ಧಾರ ಕ್ಕಾಗಿಯೂ, ನಮ್ಮ ಬಾಲಕ ಬಾಲಕೀಯರ ಆರೋಗ್ಯೈಶ್ವ ರ್ಯಗಳ ಬೆಳವಣಿಗೋಸ್ಕರವೂ, ಕಷ್ಟ ಗಳ್ಳಗಳಿಲ್ಲದ ಕೆಲವು ಆ ಚರಣೆಗಳನ್ನು ಸರ್ವರೂ ಏಕೀ ಭಾವದಿಂದ ಬಿಟ್ಟು ಜಯಶಾ ಲಿಗಳಾಗಬೇಕಾಗಿ ನನ್ನ ವಿನಯಪೂರ್ವಕವಾದ ಒಂದು ವಿನಂ ತಿ ಏನಂದರೆ:—

(1) ಪರದೇಶದಲ್ಲಿ ಯಾವದೋ ಒಂದು ಕಾಲದಲ್ಲಿ ತ ಯಾರಿಸಿದ ಪುರಾತನ ಬಿಸ್ಕೆಟ್ಟನ್ನು ತಿನ್ನುವ ಅಭ್ಯಾಸವನ್ನು ಬಿ ಟ್ಟು, ನಿಮ್ಮ ಸ್ವದೇಶದಲ್ಲಿ ಉತ್ಪತ್ತಿಯಾಗುವ ನಿಮ್ಮ ನಿಮ್ಮ ಅನುಕೂಲಕ್ಕೆ ಸರಿಯಾದ ಹೊಸ, ಹೊಸ ತಿಂಡಿಗಳನ್ನು ನೀ ವೇ ತಯಾರಿಸಿ ತಿನ್ನುವ ಅಭ್ಯಾಸವನ್ನು ಏರ್ಪಡಿಸೋಣಾದಲ್ಲಿ ನಿಮ್ಮ ಆರೋಗ್ಯವೂ ಹೆಚ್ಚಿ, ದ್ರವ್ಯ ವ್ಯಯವೂ ನಿಂತು ದಿವ್ಯ ಅ ಡಿಗೆಗಳನ್ನು ಕಲಿತು ಸುಖ ಸಂತೋಷ ಪಡುವಿರಿ.

(2) ಸಿಗರೇಟು, ಬೀಡಿ, ಚುಟ್ಟಾ ಮುಂತಾದವುಗಳು ಸೇದಿ ಕೆಮ್ಮು, ದಮ್ಮು ಮುಂತಾದ ದುಷ್ಟ ರೋಗಗಳಿಗೆ ಗು ರಿಯಾಗದೆ ಕಾಸು ಕಾಸು ಕೊಟ್ಟು, ಕೋಟಿ ಕೋಟಿ ಬೀಡಿ ಸುಟ್ಟು ಲಕ್ಷಾನುಲಕ್ಷ ಹಣ ನಷ್ಟಹೊಂದುವ ಈ ಪಿಶಾಚ ಸ್ವ ರೂಪವಾದ ದುರಭ್ಯಾಸವನ್ನು ಬಿಟ್ಟು ಬಿಡಿ.

(3) ಸ್ನಾನ, ಮೊಖ ಪ್ರಕ್ಷಾಳನ ಇವುಗಳಿಗೋಸ್ಕರವಾ ಗಿ ಉಪಯೋಗಿಸುವ ಪರರಾಜ್ಯದ ಮತ್ತು ದುಷ್ಟ ಚರಬೀ ಮುಂತಾದವುಗಳಿಂದ ತಯಾರಿಸುವ ಕೆಟ್ಟ ಸಾಬೂನುಗಳ ಬಳಿ ಕೆಯನ್ನು ಬಿಡಿ. ಬದಲಾಗಿ ಸೀಗೆ, ಹೆಸರು ಮುಂತಾದ ವಸ್ತು ಗಳ ಹುಡಿಗಳನ್ನು ಉಪಯೋಗಿಸಿರಿ.

ಈ ಮೇಲ್ಕಂಡ ಸಾಧನಗಳನ್ನು ಕೈಕೊಳ್ಳುವವರಿಗೆ ತಿ ಳಾಂಶವಾದರೂ ನಷ್ಟವಿರುವದಿಲ್ಲ. ಆದ್ದರಿಂದ ನಾನು ಮೇಲೆ ವಿವರಿಸಿದ ನಿಯಮಗಳನ್ನು ತಾವೆಲ್ಲರೂ ಕೈಕೊಂಡು ನೀವೂ, ಮತ್ತು ದೇಶವೂ ಉದ್ಧಾರವಾಗುವದಕ್ಕಾಗಿ ಶಪಥ ಮಾಡಿ ಕಾರ್ಯ ಕೈಕೊಳ್ಳಬೇಕಾಗಿ ಅಂಜಲೀ ಬದ್ಧನಾಗಿ ಬೇ ಡುತ್ತೇನೆ.

" ಸ್ವದೇಶಿ "

ವರಿ.

ಓ ದೇವರೇ !

ಬಡರೈತರ ಮೊಖವನ್ನು ನೋಡಿ ಅನುಕೂಲ ಪಡಿಸಿಕೊಡು ವ ಸರ್ಕಾರವಿಲ್ಲವೇ? ನಮ್ಮನ್ನಾಳುವ ಅರಸರಿಗೆ ದಯವುಂ ಟು ಮಾಡಬಾರದೇ? ಬಡ ರೈತರು ಕಷ್ಟಪಟ್ಟು ಬೆಳೆಸಿದ ಅಲ್ಪ ಸ್ವಲ್ಪ ಧಾನ್ಯಗಳನ್ನು ಕಂದಾಯ ಕಾಣಿಕೆಗಾಗಿಯೂ, ಸನ ಕ ರು ಕೊಳ್ಳಲಿಕ್ಕಾಗಿಯೂ ಮತ್ತು ಬಟ್ಟೆ ಬರೆಗಳಿಗಾಗಿಯೂ ಮಾರಬೇಕಾಗುವದು. ಇದನ್ನು ಪಟ್ಟಣವಾಸಿಗಳಾದ ಸಾ ಹುಕಾರರು ತೆಗೆದುಕೊಂಡು ನಮಗೆ ದ್ರವ್ಯವೊದಗಿಸಿಕೊಡು ವದು ವಾಡಿಕೆಯಾಗಿದೆ. ಆದರೆ ಇಂಥ ವ್ಯಾಪಾರಿಗಳು ಸ್ವಾ ರ್ಥದೃಷ್ಟಿಯಿಂದ ಅಳೆಯುವ ಪಡಿ, ಸೇರುಗಳನ್ನು ತಂತಮ್ಮ ಇಚ್ಛಾನುಸಾರವಾಗಿಟ್ಟುಕೊಂಡು ಒಂದಕ್ಕೆ ಒಂದೂವರೆಯ ಷ್ಟು ಹೆಚ್ಚಾಗಿ ಅಳೆದುಕೊಳ್ಳುತ್ತಾರೆ. ಅವರ ಅಳತೆಗೆ ಒಪ್ಪ ದ ರೈತನ ಧಾನ್ಯವನ್ನು ಕೊಳ್ಳುವದಿಲ್ಲದೆ ಹಣದ ಅಡಚಣೆಗೆ ವಳಪಡಬೇಕಾಗುವದರಿಂದ, ಅವರಿಚ್ಛೆಯಂತೆ ಅಳತೆಗೆ ಕೊಟ್ಟು ರೈತರು ಪಿಡವರಾಗಿ ಅತಿ ದಾರಿದ್ರ್ಯವನ್ನನುಭವಿಸಿ ಇನ್ನೂ ತ ಡೆಯಲಾರದೆ ಆಳುವ ರಾಜರಿಗೆ ಅರಿಕೆಮಾಡಿಕೊಂಡದ್ದಲ್ಲದೆ, ಜಮಿೂನ್‌ದಾರರ ಸಂಘದ ಮೂಲಕವಾಗಿಯೂ, ಕೌನ್ಸಿಲ್ ಮೂಲಕವಾಗಿಯೂ ತಿಳುವಳಿಕೆಗೆ ತಂದದ್ದು ಅರಣ್ಯರೋದನ ವಾಯಿತು. ಇದರಿಂದ ಸರಕಾರಕ್ಕೆ ಯಾವ ವಿಧದಲ್ಲಿಯೂ ನಷ್ಟವಿಲ್ಲವಷ್ಟೆ. ನಿರಕ್ಕಾದ ಕಂದಾಯವು ಒಂದು ಕಾಸು ಬಾಕಿ ಯಿಲ್ಲದೆ ವಸೂಲಾಗುತ್ತಿದೆ. ಒಂದು ದಿನ ವಿಂರಿದಲ್ಲಿ ಪ್ರೋಸೆ ಸ್ ಎಂಬ ದಂಡವೂ ವಿಧಿಸಿ, ಜಪ್ತಿ, ಹರಾಜು ಮಾಡಿ ರೈತರ ನ್ನು ಭಿಕ್ಷುಕರನ್ನಾಗಿ ಮಾಡಿಬಿಡುತ್ತಾರೆ. ಕಷ್ಟ ಯಾರಿಗೆ? ರೈತರಿಗಲ್ಲವೇ? ಈ ಬೇಡುವಿಕೆ ಸುರುವಾದೀಚೆ ಎಷ್ಟೊ ಕಂ ದಾಯ, ಸೆಸ್, ವಸೂಲಾಗಿಯೇ ಆಯಿತು. ನಮ್ಮ ಕಷ್ಟ ಕೇಳುವವರ್ಯಾರು? ದೇವರೇ ರಾಜರಿಗೆ ದಯವನ್ನುಂಟುಮಾಡಿ ಉದ್ಧರಿಸೆಂದು ಬೇಡುವ.

ಬಡರೈತ.

ಸ್ಕೂಲು ಶಾಲೆ ಉಪಾಧ್ಯಾಯರುಗಳು

ಪೂಜ್ಯರೇ, ಲಾಲಿಸಿ ಕೇಳಿ! ಮಹುವರ್ಷ ಇದಿ! ತ್ವರೆ ಮಾಡಿ! ನಾನು ಹೇರಳ ಬರೆಯಲು ಶಕ್ತನಲ್ಲ. ಆಂದರೂ ಸ್ವಲ್ಪ ತಿಳಹದಿ ಇಡುವೆನು. ಪ್ರೀತಿಯಿಂದ ಇದನ್ನು ಗೌರವಿಸಿ. ನಮ್ಮ ಕೊಡಗು ದೇಶವು ಅತಿ ರಮಣೀಯವಾದ, ಪವಿತ್ರವಾ ದ ದೇಶವಾಗಿದೆ. ಇಂಥಾ ಈ ದೇಶದಲ್ಲು ಎಲ್ಲಿ ನೋಡಿದ ರೂ ಶಾಂತತೆಯೇ ಇಲ್ಲ. ಎಲ್ಲಾ ಕಡೆಯಲ್ಲೂ ಚಳವಳಿ. ಹೀಗೆ ಚಳವಳಿಕ್ಕೆ ಕಾರಣ ಕರ್ತರು ಯಾರು ಎಂಬದು ತಿಳಿ ಯಲಾಗುವುದಿಲ್ಲ. ನಮ್ಮ ಘನ ಸರಕಾರವು ನಮಗೆ ಅನು ಕೂಲತೆಯನ್ನು ಬಹು ವೈಭವವಾಗಿ ಕೊಟ್ಟಿರುತ್ತಾರೆ.

ಎಂದರೆ—ಈ ದೇಶವನ್ನು ಈಗ 2 ಭಾಗವಾಗಿ ವಿಂಗಡಿಸಿ ಆ ಭಾಗಗಳನ್ನು ನಾಡುಗಳಾಗಿಯೂ, ಹೋಬಳಿಗಳಾಗಿಯೂ, ಗ್ರಾಮಗಳಾಗಿಯೂ ಮತ್ತು ಊರುಕೇರಿಗಳಾಗಿಯೂ ವಿ ಭಾಗಿಸಿ ಕೊಟ್ಟಿರುತ್ತಾರೆ. ಇದಲ್ಲವೇ ಕೊಡಕು ಇಲ್ಲದ ಸಹಾಯ.

ಇದರ ಮೇಲೂ ರೈತರ ಅನುಕೂಲತೆಗೆ ಅನುಸಾರವಾ ಗಿ ಈ ದೇಶವನ್ನು ಇನ್ನೂ ಹಲವು ವಿಭಾಗಗಳಾಗಿ ಕತ್ತರಿಸಿ ರುತ್ತಾರೆ. ಅಂಥಾ ವಿಭಾಗವು ಪೋಲೀಸ್ ಇಲಾಖೆಯಿಂದ ಹಿಡಿದು ಅಬ್ಕಾರಿ ಶಾಖೆ ವರೆಗೆ ಅಡಗಿ ಹೋಯಿತು. ಈ ತರಗ ತಿಗಳ ವ್ಯಕ್ತಿ ಒಂದನ್ನು ತೆಗೆದುಕೊಂಡು ಸಾಧಾರಣ ವಿವರಿಸಿ ಹೇಳುವದೆಂದರೆ ಹಾವುದೆಂದು ಕೇಳಬಹುದಲ್ಲವೇ ?

ಇತ್ತ ಕೇಳಿ, ಬಡ ಜನರು, ಸಾಧುಗಳು, ಸಕಲ ಅಧಿಕಾರಿ ಗಳು ಎಂದರೆ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ. ಬಟ್ಟೆಗಿದ್ದರೆ ಮನೆ ಬಾಡಿಗೆಗೆ ಇಲ್ಲ. ಹೆಂಡತಿ ಮಕ್ಕಳಿಗೆ ಇಲ್ಲದೆಯೂ ಹೊಟ್ಟೆಗೆ ಸರಿಯಾಗಿ ತಿನ್ನದೆಯೂ ದಿವಸವನ್ನು ಕಷ್ಟದ ವೃತ್ತಿಯಿಂದ ಕಳೆಯುತ್ತಿರುವ ಬಡ ಲೋಕಲ್‌ಫಂಡ ಉಪಾಧ್ಯಾಯರು.

ಅಯ್ಯೋ ಪಾಪ, ಲೋಕಲ್‌ಫಂಡ್ ಉಪಾಧ್ಯಾಯರು ಗಳ ವ್ಯಕ್ತಿ ಪ್ರಮುಖ ಬೋಧಕರು. ಇವರಿಂದರೆ ಕಡೆಯ ಕೀಳು ತರದ ಕಸಬಿನವರಿಗೂ ಕಡೆಯಾದವರು. ಇಂಥಾ ಬಡ ಬೋಧ ಕರ ಗೋಳಾಟವನ್ನು ದೇಶದ ಮುಂದಾಳುಗಳೋ, ಇಲ್ಲವೇ ಇಲಾಖೆಯ ಮುಂದಾಳುಗಳೋ. ಎಂದಿಗೆ ಗೋಳು ಹೋಗ ಲಾಡಿಸಲು ಇವರಿಗೆ ಭಗವಂತನು ಮನಸ್ಸು ಕೊಡುವನೋ ತಿಳಿಯಲಾರದು.

ಈ ಬಡ ಬೋಧಕರೇ ದೇಶದ ಜನರ ಏಳಿಗೆಗೂ, ದೇಶದ ಘನತೆಗೂ, ದೇಶದ ಅಭಿವೃದ್ಧಿಗೂ, ಸ್ವತಂತ್ರಕ್ಕೂ ಮತ್ತು ದೇಶದ ಮುಂದಾಳುಗಳಾಗಿರಲಿಕ್ಕೂ ಕಲ್ಪಿಸುವ ತಳ ಹದಿಯರು. ಇವರಲ್ಲದೆ ಬೇರೆ ಯಾರು ಇರುವರು? ಇಂಥಾ ಬಡವಾಯಿಗಳಿಗೆ ತಿಂಗಳುವಾರು ತಲಬೋ 20 ರೂಪಾಯಿ ಮಾತ್ರ. ಈ 20 ರೂಪಾಯಿ ಅಲ್ಲದೆ ತಲೆ ಚಚ್ಚಿಕೊಂಡರೂ ಮುಂದಕ್ಕೆ ಒಂದು ಕಾಸು ಕಾಣುವ ದಾರಿ ಇವರ ಹಣೆಯ ಲ್ಲಿ ಬರೆದುಲೇ ಇಲ್ಲ. ಇವರ ಕೆಲಸವೇನೋ ಸಾಮಾನ್ಯ ವಲ್ಲ. ಬಹಳ ಕಠಿಣವಾದದ್ದು (ಎಂದರೆ ಜ್ಞಾನವೇ ಇಲ್ಲ ದಿಲ್ಲದ ಸವಿ)ಎಂಬ ಗಾದೆ ತಿಳಿದವರಿಗೇನೇ ಇದು ಗೊತ್ತಾದೀ ತು. ಕೂಲಿಯೇನೂ ಬಹು ಕಮ್ಮಿ. ಇದು ಚೆನ್ನಾಗಿ ಯೋ ಚಿಸಿದರೂ ಇವರು ತಮ್ಮಲ್ಲು ಇಟ್ಟುಕೊಂಡಿರುವ ಕೂಲಿ ಆ ಳುಗಳಿಗೆ ತಾವು ಕೊಡುವ ಕೂಲಿಗಿಂತಲೂ ಕಮ್ಮಿಯಾಯಿತು. ಆಗ ತೋಟದ ಪಾಟಿಗಳಿಗೆ ಸಂಬಳ ಹೇಗಾಯಿತು. ಅದಕ್ಕೂ ಕಡೆಯಾಯಿತೇ.

ಆದ್ದರಿಂದ ಘನ ಸರಕಾರವು ಬಹು ದೊಡ್ಡ ಮನಸ್ಸಿನಿಂ ದ ಪ್ರೀತಿಯಿಟ್ಟು ಈ ಗರೀಬ ಬಡವರನ್ನು ಕೈಹಿಡಿದು ಮೇಲಿನ ಮೆಟ್ಲು ಎಂದರೆ ಕಮ್ಮಿ ಪಕ್ಷ ರೂ. 30ಕ್ಕಾದರೂ, ತಲುಪಿಸಬ ಹುದೆಂಬದಾಗಿ ಪೂರ್ತಿಯಾಗಿ ನಂಬಿರುವೆನು. ಈ ಬಡವರ ಎಚ್ಚರ ನೋಡಲು ಕಾಲಾ ಅಧಿಕಾರಿಗಳು ಇರಲಿ; ಅವರು ಮಾಡಬೇಕಾದ ಕೆಲಸ ಅವರದು. ಊರು ದನ ಕಾದು

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೩೯ನೇ ಪ್ರಕರಣ

ಧಾರ್ಮಿಕ ಸಮಸ್ಯೆ.

ಇತರ ಭಾರತೀಯರೊಡನೆ ನಾನು ಯುದ್ಧದಲ್ಲಿ ಸೇವೆಗೈಯ್ಯಲು ಸಿದ್ಧನಾಗಿರುವೆನೆಂದು ಸರಕಾರಕ್ಕೆ ನನ್ನ ಹೆಸರನ್ನು ಕೊಟ್ಟಿರುವೆನೆಂಬ ವರ್ತಮಾನವು ದಕ್ಷಿಣ ಆಫ್ರಿಕಕ್ಕೆ ಮುಟ್ಟಿದೊಡನೆಯೇ ನನಗೆ ಎರಡು ತಂತಿಗಳು ಬಂದುವು. ಇವುಗಳಲ್ಲಿ ಒಂದು ಪೋಲಕರು ಕಳುಹಿಸಿದ್ದು. "ನೀವು ಮಾಡಿರುವ ಈ ಕೆಲಸವು ನಿಮ್ಮ ಅಹಿಂಸಾ ತತ್ವಕ್ಕೆ ಒಪ್ಪುತ್ತದೆಯೇ?" ಎಂದು.

ನಾನು ಈ ಆಕ್ಷೇಪಣೆಯನ್ನು ಸ್ವಲ್ಪ ಮಟ್ಟಿಗೆ ನಿರೀಕ್ಷಿಸಿಯೇ ಇದ್ದೆನು. ಏಕೆಂದರೆ—ನಾನು ಈ ಪ್ರಶ್ನೆಯನ್ನು ನನ್ನ 'ಹಿಂದೀ ಸ್ವರಾಜ್ಯ' ಎಂಬ ಪುಸ್ತಕದಲ್ಲಿ ವಿಮರ್ಶಿಸಿದ್ದೇನಲ್ಲದೆ ಈ ವಿಷಯವನ್ನು ದಕ್ಷಿಣ ಆಫ್ರಿಕದಲ್ಲಿ ಹಗಲಿರುಳು ಮಿತ್ರರೊಡನೆ ಚರ್ಚಿಸುತ್ತಿದ್ದೆನು. ಯುದ್ಧವು ಅನೀತಿಮಯವಾದುದೆಂದು ನಾವೆಲ್ಲರೂ ಒಪ್ಪುತ್ತಿದ್ದೆವು. ನನ್ನನ್ನು ಹೊಡೆದವನ ಮೇಲೆ ಕ್ರಮಜರುಗಿಸುವುದಕ್ಕೇ ನಾನು ಸಿದ್ಧನಾಗಿಲ್ಲದಿರುವಾಗ ಯುದ್ಧದಲ್ಲಿ ಭಾಗಿಯಾಗುವುದಕ್ಕೆ, ಅದರಲ್ಲಿಯೂ ನನಗೆ ಪಕ್ಷವಿಪಕ್ಷದವರ ಧರ್ಮಾಧರ್ಮವು ತಿಳಿಯದಿರುವಾಗ ನಾನು ಒಪ್ಪುವುದಂತೂ? ನಾನು ಬೋಅರ್ ಯುದ್ಧದಲ್ಲಿ ಭಾಗಿಯಾಗಿದ್ದೆನೆಂಬುದೇನೋ ನನ್ನ ಮಿತ್ರರಿಗೆ ಗೊತ್ತಿದ್ದಿತು. ಆದರೆ ಈಚೆಗೆ ನನ್ನ ಅಭಿಪ್ರಾಯವು ಮಾರ್ಪಟ್ಟಿದ್ದಿತೆಂದು ಅವರು ಎಣಿಸಿದ್ದರು.

ವಸ್ತುತಃ ಬೋಅರ್ ಯುದ್ಧದಲ್ಲಿ ಕಾಲಿಡಲು ನನ್ನನ್ನು ಪ್ರೇರಿಸಿದ್ದ ವಿಚಾರಸರಣಿಯೇ ಈ ಸಂದರ್ಭದಲ್ಲಿಯೂ ನನ್ನನ್ನು ಒಡಂಬಡಿಸಿದ್ದಿತು. ಯುದ್ಧದಲ್ಲಿ ಸೇರುವುದು ಅಹಿಂಸಾ ಧರ್ಮದೊಂದಿಗೆ ಎಂದಿಗೂ ಸರಿಹೋಗದೆಂಬುದು ನನಗೆ ಅತ್ಯಂತ ಸ್ಪಷ್ಟವಾಗಿದ್ದಿತು. ಆದರೆ ತನ್ನ ಕರ್ತವ್ಯವು ಸದಾ ಇಷ್ಟು ಮಟ್ಟಿಗೆ ಸ್ಪಷ್ಟವಾಗಿರುವುದು ಮನುಷ್ಯನ ಹಣೆಯಲ್ಲಿ ಬರೆದಿಲ್ಲ. ಸತ್ಯೋಪಾಸಕನು ಅನೇಕ ವೇಳೆ ಕತ್ತಲಲ್ಲಿ ಮಾರ್ಗಕ್ಕಾಗಿ ತಡಕಾಡಬೇಕಾಗುತ್ತದೆ.

ಅಹಿಂಸೆಯು ಬಹು ವ್ಯಾಪಕವಾದ ತತ್ವ. ನಾವು ಹಿಂಸೆಯ ದಳ್ಳುರಿಯಲ್ಲಿ ಸಿಕ್ಕಿರುವ ಕೈಲಾಗದ ನಿತ್ಯಜೀವಿಗಳು. ಜೀವಕ್ಕೆ ಜೀವವು ಆಹಾರವೆಂಬ ಹೇಳಿಕೆಯಲ್ಲಿ ಆಳವಾದ ಅರ್ಥವಿದೆ. ಮನುಷ್ಯನು ಅರಿತಾಗಲಿ, ಅರಿಯದಾಗಲಿ ಬಾಹ್ಯ ಹಿಂಸೆಯನ್ನು ಮಾಡದೆ ಕ್ಷಣಕಾಲವೂ ಜೀವಿಸಲಾರನು. ಅವನು ಬದುಕಿರುವುದೇ—ಉಣ್ಣುತ್ತಾ, ಕುಡಿಯುತ್ತಾ, ಓಡಾಡುತ್ತಾ ಹಿಂಸಾತ್ಮಕವಾದುದು, ಎಷ್ಟೇ ಅಲ್ಪವಾಗಿರಲಿ ಪ್ರಾಣಹಾನಿಕರವಾದುದು. ಆದುದರಿಂದ ಅಹಿಂಸೋಪಾಸಕನ ಕ್ರಿಯೆಯೆಲ್ಲಾ ಅನುಕಂಪಾತ್ಮಕವಾಗಿದ್ದರೆ ಅವನು ಅತ್ಯಲ್ಪ ಜಂತುವಿನ ಪ್ರಾಣಹಾನಿಗೆ ಕೂಡ ಕಾರಣನಾಗದಿರಲು ತನ್ನ ಕೈಲಾದಷ್ಟು ಪ್ರಯತ್ನಪಟ್ಟರೆ, ಅದನ್ನುಳಿಸಲು ಪ್ರಯತ್ನಿಸಿದರೆ, ಹೀಗೆ ಎಡಬಿಡದೆ ಹಿಂಸೆಯ ಯಮಪಾಶದಿಂದ ಬಿಡುಗಡೆ ಹೊಂದಲು ಶ್ರಮಪಟ್ಟರೆ ಅವನು ತನ್ನ ಧರ್ಮವನ್ನು ಕಾಪಾಡಿದಂತಾಗುತ್ತದೆ. ಅವನು ಸದಾ ಆತ್ಮನಿಗ್ರಹವನ್ನೂ, ಕಾರುಣ್ಯ ವೃತ್ತಿಯನ್ನೂ ಗಳಿಸುತ್ತಿರುತ್ತಾನೆ. ಆದರೆ ಅವನು ಬಾಹ್ಯ ಹಿಂಸೆಯಿಂದ ಎಂದಿಗೂ ಸಂಪೂರ್ಣವಾಗಿ ಬಿಡುಗಡೆ ಹೊಂದಲಾರನು.

ಇದಲ್ಲದೆ ಅಹಿಂಸಾತತ್ವದ ಮೂಲದಲ್ಲಿ ಸಕಲ ಜೀವದ ಐಕ್ಯತೆಯು ಇರುವುದರಿಂದ ಒಬ್ಬನ ದೋಷವು ಎಲ್ಲರನ್ನೂ ತಟ್ಟದಿರಲಾರದು. ಆದುದರಿಂದ ಮನುಷ್ಯನು ಹಿಂಸೆಯ ಸಂಪರ್ಕವೇ ಇಲ್ಲದೆ ಇರಲಾರನು. ಅವನು ಸಾಮಾಜಿಕ ವ್ಯಕ್ತಿಯಾಗಿರುವವರೆಗೂ ಸಮಾಜದ ಅಸ್ತಿತ್ವಕ್ಕೇ ಹೊಂದಿದ ಹಿಂಸೆಯಲ್ಲಿ ಭಾಗಿಯಾಗದಿರಲಾರನು. ಎರಡು ಜನಾಂಗಗಳು ಯುದ್ಧಮಾಡುತ್ತಿರುವಾಗ ಅಹಿಂಸೋಪಾಸಕನ ಕರ್ತವ್ಯವು ಯುದ್ಧವನ್ನು ನಿಲ್ಲಿಸುವುದು. ಈ ಕರ್ತವ್ಯವನ್ನು ಪಾಲಿಸಲಾರದವನು, ಯುದ್ಧವನ್ನು ಇದಿರಿಸಲಾರದವನು, ಯುದ್ಧವನ್ನು ಇದಿರಿಸಲು ಯೋಗ್ಯತೆಯಿಲ್ಲದವನು, ಯುದ್ಧದಲ್ಲಿ ಭಾಗಿಯಾಗಬಹುದು; ಆದರೂ ತನ್ನನ್ನೂ, ತನ್ನ ಜನಾಂಗವನ್ನೂ, ಲೋಕವನ್ನೂ ಯುದ್ಧದಿಂದ ಬಿಡುಗಡೆ ಮಾಡಲು ಮನಃಪೂರ್ವಕವಾಗಿ ಪ್ರಯತ್ನಿಸಬಹುದು.

ನಾನು ಬ್ರಿಟಿಷ್ ಚಕ್ರಾಧಿಪತ್ಯದ ಮೂಲಕ ನನ್ನ ಮತ್ತು ನನ್ನ ದೇಶದ ಸ್ಥಿತಿಯನ್ನು ಸುಧಾರಿಸುವ ಆಸೆಯನ್ನಿಟ್ಟುಕೊಂಡಿದ್ದೆನು. ನಾನು ಇಂಗ್ಲೆಂಡಿನಲ್ಲಿದ್ದಾಗ ಬ್ರಿಟಿಷರ ನೌಕಾಬಲದ ಸಂರಕ್ಷಣೆಗೊಳಗಾಗಿದ್ದೆನು. ನಾನು ಅದರ ಆ ಭುಜಬಲದ ಆಶ್ರಯದಲ್ಲಿದ್ದುದರಿಂದ ನಾನು ಅದರ ಹಿಂಸಾವೃತ್ತಿಯಲ್ಲಿ ಸ್ವತಃ ಭಾಗಿಯಾಗಿಯೇ ಇದ್ದೆನು. ಆದ್ದರಿಂದ ನಾನು ಚಕ್ರಾಧಿಪತ್ಯದ ಸಂಬಂಧವನ್ನು ಒಡೆದು ಆ ಧ್ವಜದ ಛಾಯೆಯಲ್ಲಿ ಬದುಕಬೇಕೆಂದೆಣಿಸಿದರೆ ಈ ಮೂರು ಮಾರ್ಗಗಳಲ್ಲಿ ಒಂದನ್ನು ಆರಿಸಬೇಕಾಗಿದ್ದಿತು. ಯುದ್ಧವನ್ನು ಬಹಿರಂಗವಾಗಿ ವಿರೋಧಿಸಿ ಚಕ್ರಾಧಿಪತ್ಯವು ಯುದ್ಧ ನೀತಿಯನ್ನು ತ್ಯಜಿಸುವ ವರೆಗೂ ಸತ್ಯಾಗ್ರಹದ ನಿಯಮದ ಪ್ರಕಾರ ಚಕ್ರಾಧಿಪತ್ಯಕ್ಕೆ ಬಹಿಷ್ಕಾರ ಹಾಕುವುದು; ಅಥವಾ ಅದರ ಶಾಸನಗಳನ್ನು ಸವಿನಯದಿಂದ ಭಂಗಪಡಿಸಿ ಸೆರೆಮನೆವಾಸವನ್ನು ಪಡೆಯುವುದು, ಅಥವಾ ಚಕ್ರಾಧಿಪತ್ಯದ ಪರವಾಗಿ ಯುದ್ಧದಲ್ಲಿ ತೊಡಗಿ ಆ ಮೂಲಕ ಯುದ್ಧದ ಹಿಂಸೆಯನ್ನು ಇದಿರಿಸುವ ಯೋಗ್ಯತೆಯೂ ಇಲ್ಲದಿದ್ದುದರಿಂದ ಯುದ್ಧದಲ್ಲಿ ಭಾಗಿಯಾಗುವುದಲ್ಲದೆ ಮಾರ್ಗವಿಲ್ಲವೆಂದು ನಾನು ಯೋಚಿಸಿದೆನು.

ಅಹಿಂಸಾ ದೃಷ್ಟಿಯಿಂದ ಯುದ್ಧ ಹೋರಾಡುವವರಿಗೂ, ಹೋರಾಡದಿರುವವರಿಗೂ ಏನೂ ಭೇದವು ಕಾಣುವುದಿಲ್ಲ. ಕಳ್ಳರು ದರೋಡೆ ಮಾಡುತ್ತಿರುವಾಗ ಅವರ ಕೂಲಿಯವನಾಗಲಿ, ಅವರ ಕಾವಲುಗಾರನಾಗಲಿ ಅಥವಾ ಅವರು ಗಾಯಹೊಂದಿದಾಗ ಶುಶ್ರೂಷೆ ಮಾಡುವವನಾಗಲಿ ಅವರಿಗೆ ಸೇವೆ ಸಲ್ಲಿಸುವವನು ದರೋಡೆಕಾರರಷ್ಟೇ ತಪ್ಪಿತಸ್ಥನಾಗಿರುತ್ತಾನೆ. ಇದೇ ರೀತಿಯಾಗಿ ಯುದ್ಧದಲ್ಲಿ ಗಾಯಹೊಂದಿದವರ ಸೇವಾಕಾರ್ಯದಲ್ಲಿ ಮಾತ್ರ ತೊಡಗಿರುವವರು ಕೂಡ ಯುದ್ಧದ ದೋಷದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

ಪೋಲಕರ ತಂತಿ ಬರುವುದಕ್ಕೆ ಮುಂಚೆ ನನ್ನಲ್ಲಿಯೇ ನಾನು ಇದನ್ನೆಲ್ಲಾ ಹೀಗೆ ವಿಚಾರಿಸಿದ್ದೆನು. ಅದು ಬಂದ ಸ್ವಲ್ಪ ಕಾಲದಲ್ಲಿಯೇ ಈ ಸಮಸ್ಯೆಗಳನ್ನು ಕೆಲವು ಮಿತ್ರರೊಂದಿಗೆ ಚರ್ಚಿಸಿ ಯುದ್ಧದಲ್ಲಿ ಭಾಗಿಯಾಗಲು ಮುಂದಾಗುವುದೇ ನನ್ನ ಧರ್ಮವೆಂದು ನಿರ್ಧರಿಸಿದೆನು. ಇಂದು ಕೂಡ ಆ ವಿಚಾರದ ಸರಣಿಯಲ್ಲಿ ಯಾವ ದೋಷವೂ ಕಾಣುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ವಿಷಯವಾಗಿ ನಾನು ಒಳ್ಳೆಯ ಅಭಿಪ್ರಾಯವುಳ್ಳವನಾಗಿದ್ದುದರಿಂದ ಆಗ ನಾನು ಮಾಡಿದುದಕ್ಕಾಗಿ ಪಶ್ಚಾತ್ತಾಪವೂ ಇಲ್ಲ.

ನನ್ನ ಅಭಿಪ್ರಾಯವು ಸರಿಯೆಂದು ಆಗ ಕೂಡ ನನ್ನ ಮಿತ್ರರೆಲ್ಲರನ್ನೂ ಒಪ್ಪಿಸಲು ನಾನು ಶಕ್ತನಾಗಲಿಲ್ಲವೆಂದು ನನಗೆ ತಿಳಿದಿದೆ. ಇದು ಅತಿ ಸೂಕ್ಷ್ಮವಾದ ಸಮಸ್ಯೆ. ಇದರಲ್ಲಿ ಮತಭೇದಕ್ಕೆಡೆಯುಂಟು. ಆದುದರಿಂದ ಅಹಿಂಸೆಯಲ್ಲಿ ನಂಬಿಕೆಯುಳ್ಳವರಿಗೂ, ಆ ಧರ್ಮವನ್ನು ಜೀವನದ ಪ್ರತಿಯೊಂದು ಭಾಗದಲ್ಲಿಯೂ ಅನುಸರಿಸಲು ಶ್ರದ್ಧಾಯುಕ್ತವಾದ ಪ್ರಯತ್ನವನ್ನು ನಡೆಸುತ್ತಿರುವವರಿಗೂ ನನ್ನ ವಿಚಾರಣೆಯನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ಹೇಳಿದೆ. ಸತ್ಯೋಪಾಸಕನು ವಾಡಿಕೆಗೆ ತಲೆಬಾಗಿ ಯಾವ ಕೆಲಸ ಮಾಡಲಾಗುವುದಿಲ್ಲ. ತನ್ನ ತಪ್ಪನ್ನು ತಿದ್ದಿಕೊಳ್ಳಲು ಸದಾ ಸಿದ್ಧನಾಗಿದ್ದು ದೋಷವು ತಿಳಿದೊಡನೆಯೇ ಆಗಲಿ ಎಂದು ಅದನ್ನು ಒಪ್ಪಿಕೊಂಡು ಅದಕ್ಕೆ ಪ್ರಾಯಶ್ಚಿತ್ತ ಮಾಡಬೇಕು.

ಪಂಡಿತ ಜವಾಹಿರ್ ಲಾಲರ ಭಾಷಣ.

ಸ್ವಾತಂತ್ರ್ಯವೇ ಹಿಂದುಸ್ಥಾನದ ಧ್ಯೇಯ.

ಹಿಂದುಸ್ಥಾನದ ಪ್ರಸಿದ್ಧ ನಾಯಕರುಗಳಾದ ಪಂಡಿತ ಜವಾಹಿರ್ ಲಾಲ ನೆಹರೂರವರು ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗಿ ಬೆಳಗಾವಿಯಲ್ಲಿ ಕರ್ನಾಟಕದ ಮುಂದಾಳುಗಳು ಆಗ್ರಹಪಡಿಸಿದ್ದರಿಂದ ಕಳೆದ ಬುಧವಾರ ಪೇಟೆಯ ಬೀದಿಯಿಂದ ಮೆರವಣಿಗೆಯಾದರು. ಸಾಯಂಕಾಲಕ್ಕೆ ಶ್ರೀ ಗಂಗಾಧರರಾಯರ ಅಧ್ಯಕ್ಷತೆಯಲ್ಲಿ ಪರಿಷತ್ತುಗಳ ಸ್ಥಳವಾದ ಟಿಳಕನಗರಿಯ ಭವ್ಯವಾದ ಮಂದಿರದಲ್ಲಿ ಅವರ ವ್ಯಾಖ್ಯಾನವಾಯಿತು. ಸಭೆಗೆ ೮—೯ ಸಾವಿರ ಸುಶಿಕ್ಷಿತರು ದಯಮಾಡಿಸಿದ್ದರು. ಆಗ ಶ್ರೀ ಜವಾಹಿರ್ ಲಾಲರು ಹೇಳಿದ್ದೇನೆಂದರೆ—

ನಾನು ಈಗ ೭ ವರ್ಷಗಳಿಂದ ಯೂರೋಪದಲ್ಲಿ ಪ್ರವಾಸ ಮಾಡುತ್ತಿದ್ದೆ. ಅಲ್ಲಿಯ ಸ್ಥಿತಿಯನ್ನೂ, ಇಲ್ಲಿಯ ಪರಿಸ್ಥಿತಿಯನ್ನೂ ಹೋಲಿಸಿ ನೋಡಿದರೆ ನಮ್ಮ ದೇಶದ ಒಂದು ಮಹತ್ವದ ದೋಷವು ಕಾಣುತ್ತದೆ. ಅದೇನೆಂದರೆ ನಮ್ಮ ಪ್ರತಿಯೊಂದು ಸಂಗತಿಯೂ ಧರ್ಮದ ಬೆಂಕಿ. ಮೊನ್ನೆ ನಡೆದ ಮಹಾರಾಷ್ಟ್ರ ಪರಿಷತ್ತಿನಲ್ಲಿಯೂ ಈ ವಿಷಯದ ಊಹಾಪೋಹವಾಗಿದೆ. ಈಗ ಎಷ್ಟೋ ಶತಮಾನ ವರ್ಷಗಳ ಹಿಂದಿನ ಪರಿಸ್ಥಿತಿಯಲ್ಲಿ ಧಾರ್ಮಿಕ ಬೇಲಿಯು ಸರಿಯಾಗಿರಬಹುದು. ಆದರೆ ಈಗ ಜಗತ್ತು ತೀರ ಬದಲಾವಣೆಯನ್ನು ಹೊಂದಿದೆ. ವೈಜ್ಞಾನಿಕ ಸುಧಾರಣೆಯಿಂದ ನಮ್ಮ ಜೀವನದ ಮಾರ್ಗವೇ ಬದಲಾಗಿದೆ. ಪೂರ್ವದ ಭೂವ್ಯವಸಾಯದ ಯುಗಕ್ಕೆ ಸರಿಹೋಗಿದ್ದ ಆಗಿನ ನಮ್ಮ ಧಾರ್ಮಿಕ ನಡವಳಿಕೆಗಳು ಈಗ ಏಕೆ ಮಾನ್ಯವಾಗಬೇಕು? ಹಿಂದುಗಳು ವೇದಕಾಲಕ್ಕೆ ತಿರುಗಿ ಹೋಗುವವೆಂದು ಬಯಸಿದರೆ ಮುಸಲ್ಮಾನರು ೧೩೦೦ ವರ್ಷಗಳ ಹಿಂದಿನ ಕಾಲದ ಅರಬಸ್ಥಾನದ ಪರಿಸ್ಥಿತಿಯನ್ನು ಸ್ಥಾಪಿಸಲು ಪ್ರಯತ್ನಿಸುವದೂ ಅಷ್ಟೇ ಹಾಸ್ಯಾಸ್ಪದವಾಗಿದೆ. ಈಗಿನ ನವಯುಗದಲ್ಲಿ ಧರ್ಮವು ಮನುಷ್ಯನಲ್ಲಿಯೇ ಉಳಿಯುವದು ಅವಶ್ಯವಾಗಿದೆ. ಅದು ಸಾಮಾಜಿಕ ರಾಜಕೀಯ ಮುಂತಾದ ಯಾವ ವಿಷಯದಲ್ಲಿಯೂ ತಲೆಹಾಕಬಾರದು. ಸ್ವರಾಜ್ಯದಲ್ಲಿ ಸರಕಾರವೇ ರಾಷ್ಟ್ರದ ಎಲ್ಲಾ ಮದುವೆ, ವ್ಯಾಪಾರ ಮುಂತಾದವುಗಳ ವ್ಯವಸ್ಥೆ ಮಾಡಬೇಕೆಂದು ನಾನು ತಿಳಿಯುತ್ತಿರುವುದರಿಂದ ಮದುವೆ ಮುಂತಾದ ಪ್ರಶ್ನೆಗಳನ್ನು ನಿರ್ಧರಿಸುವ ವಿಷಯದಲ್ಲಿ ಧರ್ಮಶಾಸ್ತ್ರವು ಕೈಹಾಕಕೂಡದೆಂದು ನನ್ನ ಅಭಿಪ್ರಾಯವಾಗಿದೆ.

ಧರ್ಮ ಹಾಗೂ ವ್ಯವಹಾರಗಳನ್ನು ಹೀಗೆ ಬೇರ್ಪಡಿಸಿದ್ದರಿಂದಲೇ ತುರ್ಕಸ್ಥಾನವು ಕಳೆದ ೪—೫ ವರ್ಷಗಳಲ್ಲಿ ಆಶ್ಚರ್ಯಗೊಳಿಸುವಂಥ ಪ್ರಗತಿಯನ್ನು ತೋರಿಸಿತು. ಅಫಘಾನಿಸ್ಥಾನದ ಅಮೀರರೂ ಕಳೆದ ವರ್ಷಗಳಿಂದ ಇದೇ ಧೋರಣವನ್ನು ಸ್ವೀಕರಿಸಿದ್ದರಿಂದ ಅದು ಪ್ರಗತಿಯ ಮಾರ್ಗವನ್ನು ಹಿಡಿದು ಖ್ಯಾತಿಯನ್ನು ಪಡೆದಿದೆ. ಈಗ ಯಾವದಾದರೊಂದು ರಾಷ್ಟ್ರವು ತನ್ನಷ್ಟಕ್ಕೆ ತಾನೇ ಇರುವದು ಸಾಧ್ಯವಿಲ್ಲ. ಸಂಕುಚಿತ ರಾಷ್ಟ್ರೀಯತ್ವವನ್ನೂ ನಾವು ಬಿಡಬೇಕಾಗಿದೆ. ಬುದ್ಧಿ ಪ್ರಾಧಾನ್ಯವೇ ನಮಗೆ ಮಾನ್ಯವಾಗಿರಬೇಕು. ಯಾವದೊಂದು ವಿಷಯವನ್ನು ಹಿಂದಕ್ಕೆ ನಮ್ಮಲ್ಲಿ ಹೀಗೆ ನಿರ್ಧರಿಸಿದ್ದಾರೆಂದು ತಿಳಿದು ಆ ತಿಳುವಳಿಕೆಯನ್ನೇ ಸಮಾಜವು ಗಟ್ಟಿಯಾಗಿ ಹಿಡಿದುಕೊಳ್ಳುವದು ತಪ್ಪು. ಇದರಿಂದ ಪ್ರಗತಿಯ ಮಾರ್ಗವು ಕಟ್ಟಾಗಿ ಸಮಾಜವು ನಿಂತ ನೀರಿನ ಒಂದು ಕೊಳಚೆಯಂತಾಗುತ್ತದೆ. ನಮ್ಮ ಪೂರ್ವ ವೈಭವವು ದೊಡ್ಡದಿರಬಹುದು. ಆದರಿಂದ ನಮ್ಮ ಸದ್ಯದ ಅವನತಿಯ ವಿಷಯವಾಗಿ ಮತ್ತಷ್ಟು ನಾಚಿಕೆಯುಂಟಾಗುವದಿಲ್ಲವೇ, ಜೀವನದ ಯಾವ ವಿಭಾಗದಲ್ಲಿಯೇ ಆಗಲಿ ನವನಿರ್ಮಾಣ ಶಕ್ತಿಯು ಇಲ್ಲದಂತಾದರೆ ಗತಿಯೇನು? ಆದ್ದರಿಂದ ವಿಶೇಷತಃ ತರುಣರು ಮುಂದಾಗಿ ಈ ಪ್ರಗತಿಯ ಆತಂಕವನ್ನು ಕಿತ್ತೊಗೆಯಬೇಕು.

ಜಾತಿ ಜಾತಿಗಳಲ್ಲಿಯ ಜಗಳದ ಪ್ರಶ್ನೆಯು ಸದ್ಯಕ್ಕೆ ಬಹಳ ಮಹತ್ವದ್ದಾಗಿದೆ. ಈಗ ೬—೭ ವರ್ಷಗಳ ಹಿಂದೆ ಸಿಂಧುಪ್ರಾಂತದ ಹಿಂದುಗಳೇ ಸಿಂಧುವನ್ನು ಬೇರ್ಪಡಿಸಬೇಕೆಂದು ಬೇಡುತ್ತಿದ್ದರು. ಮಹಮ್ಮದೀಯರು ಆಗ ಅವರನ್ನು ವಿರೋಧಿಸುತ್ತಿದ್ದರು. ಸದ್ಯಕ್ಕೆ ಮಹಮ್ಮದೀಯರು ಸಿಂಧುವನ್ನು ಬೇರ್ಪಡಿಸಬೇಕೆಂದು ಕೇಳುತ್ತಿರುವಾಗ ಹಿಂದುಗಳು ಅವರನ್ನು ವಿರೋಧಿಸುತ್ತಿರುವರು. ಇದು ಕೇವಲ ಪರಸ್ಪರ ಭೀತಿಯ ಪರಿಣಾಮವು.

ಬಲವಾದ ಮಧ್ಯವರ್ತಿ ಸರಕಾರವಿದ್ದು ಅದರ ನಿಯಂತ್ರಣದ ಕೆಳಗೆ ಆರ್ಥಿಕ ದೃಷ್ಟಿಯಿಂದ ಸ್ವಾವಲಂಬನವಾದ ಎಷ್ಟು ಚಿಕ್ಕಪ್ರಾಂತಗಳಿದ್ದರೂ ಅಡ್ಡಿಯಿರಕೂಡದು. ಸ್ವಿಜರ್ಲ್ಯಾಂಡ ದೇಶವು ನಮ್ಮ ಪ್ರಾಂತದ ಒಂದು ನಾಲ್ಕಂಶದಷ್ಟು. ಅದರಲ್ಲಿ ೨ ಲಕ್ಷ ಜನಸಂಖ್ಯೆಯುಳ್ಳ ಪಟ್ಟಣಗಳಾದರೂ ಸ್ವತಂತ್ರ ಪ್ರಜಾಸತ್ತಾತ್ಮಕ ಪ್ರಾಂತಗಳಾಗಿವೆ. ಬೇರೆ ಬೇರೆ ಸಂಸ್ಕೃತಿಯ ಹಾಗೂ ಭಾಷೆಯ ಪ್ರಾಂತಗಳು ಭಿನ್ನವಾಗಲಿಕ್ಕೆ ಬೇಕು.

ಸ್ವಾತಂತ್ರ್ಯವೇ ಈ ಚಿಕ್ಕ ಚಿಕ್ಕ ಪ್ರಾಂತಗಳನ್ನೊಳಕೊಂಡ ನಮ್ಮ ದೇಶದ ಧ್ಯೇಯವಾಗಿರಬೇಕು. ನಾವು ಬ್ರಿಟಿಷರ ಆಶ್ರಯವನ್ನು ಬಿಟ್ಟುಕೊಟ್ಟರೆ ಬೇರೆ ದೇಶದವರು ನಮ್ಮ ಮೇಲೆ ದಾಳಿಮಾಡಿ ಹಿಂದುಸ್ಥಾನವನ್ನು ಕೈವಶಮಾಡಿಕೊಳ್ಳಬಹುದೆಂಬ ಆಂಜಿಕೆಯು ಎಷ್ಟೇ ಧುರೀಣರಿಗಿದೆ. ಬ್ರಿಟಿಷರ ಅನ್ಯಾಯ ಪರಂಪರೆಗಳಿಗೀಡಾಗುವದಕ್ಕಿಂತ ಈ ಆಂಜಿಕೆ ಸ್ವರೂಪ ಅಷ್ಟು ಇಲ್ಲ; ನಾವು ಸ್ವತಂತ್ರರಾಗುವದು ಬೇಕೆಂದು ನನಗೆ ತೋರುತ್ತದೆ. ಬೆಲ್ಜಿಯಮ್, ರೊಮೇನಿಯಾ, ಹಾಲೆಂಡ ಮುಂತಾದ ಯೂರೋಪದ ಚಿಕ್ಕ ಚಿಕ್ಕ ರಾಷ್ಟ್ರಗಳಾದರೂ ಬಲಿಷ್ಠರೊಡನೆ ಕಾದುವ ಪ್ರಸಂಗ ಬಂದಾಗ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥವಿವೆಯೇ? ಆದರೂ ಅವೆಲ್ಲವೂ ಸ್ವತಂತ್ರ ರಾಷ್ಟ್ರಗಳಾಗಿವೆ. ಯಾವದೊಂದು ರಾಷ್ಟ್ರವು ಬಲಿಷ್ಠವಾಗಕೂಡದೆಂದು ಎಲ್ಲ ರಾಷ್ಟ್ರಗಳೂ ಹವಣಿಸುತ್ತಿರುವದರಿಂದ ಒಂದರ ಮೇಲೆ ಮತ್ತೊಂದು ರಾಷ್ಟ್ರವು ಏರಿ ಹೋಗದಂತೆ ತಾನಾಗಿಯೇ ವ್ಯವಸ್ಥೆಯಾಗುತ್ತದೆ. ಭೂಗೋಲದಲ್ಲಿಯ ಹಿಂದುಸ್ಥಾನದ ಸ್ಥಿತಿಯನ್ನು ನೋಡಿದರೆ ನಮ್ಮ ಮೇಲೆ ದಾಳಿಯಿಡಬಹುದಾದ ರಾಷ್ಟ್ರಗಳೇ ಇಲ್ಲವೆಂದು ಕಂಡುಬರುತ್ತದೆ. ಯೂರೋಪದ ಯಾವ ರಾಷ್ಟ್ರವೂ ನಮ್ಮ ಮೇಲೆ ದಾಳಿ ಮಾಡಲಾರದು. ಚೀನ, ಜಪಾನಗಳೂ ಹಾಗೆ ಮಾಡುವಂತಿಲ್ಲ. ಅಮೇರಿಕವೂ ಮಾಡಲಾರದು. ಅಫಘಾನಿಸ್ಥಾನವು ಮಾಡಬಯಸಿದರೂ ಚಿಕ್ಕ ರಾಷ್ಟ್ರವಾದ್ದರಿಂದ ಸಾಧ್ಯವಿಲ್ಲ. ರಷ್ಯಾ ದೇಶವು ಮಾತ್ರ ಹಾಗೆ ಮಾಡಬಹುದು. ಆದರೆ ಪಶ್ಚಿಮ ಯೂರೋಪವಲ್ಲವೂ ರಷ್ಯಾದ ವೈರಿಯಾದ್ದರಿಂದ ಅದು ರಷ್ಯಾಕ್ಕೆ ಹಾಗೆ ಮಾಡಗೊಡದು. ಅಲ್ಲದೆ ರಷ್ಯಾ ಹಾಗೂ ಹಿಂದುಸ್ಥಾನಗಳು ಭೂವ್ಯವಸಾಯದ ದೇಶಗಳು ಮಾತ್ರ ಆದ್ದರಿಂದ ವ್ಯಾಪಾರ ಮೊದಲಾದವುಗಳಿಗಾಗಿ ಹಿಂದುಸ್ಥಾನವನ್ನು ಹಿಡಿದುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯು ರಷ್ಯಾ ದೇಶಕ್ಕಿರದು. ಹಿಂದುಸ್ಥಾನದ ಸೈನಿಕ ಬಲವಾದರೂ ಶ್ರೇಷ್ಠವಾಗಿದೆ. ಅದನ್ನು ಇನ್ನೂ ಬೆಳೆಸಬಹುದು. ಹೀಗೆ ಮಾಡಲು ಸ್ಕೀನ್ ಕಮಿಟಿಗಳು ಬೇಕಿಲ್ಲ. ಮಹಾಯುದ್ಧದ ಕಾಲಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಕ್ಷಣಾರ್ಧದಲ್ಲಿ ದೊಡ್ಡ ದೊಡ್ಡ ಸೈನ್ಯಗಳು ಸಿದ್ಧಪಡಿಸುವಾಗ ಇಂಥ ಸ್ಕೀನ್ ಕಮಿಟಿಗಳನ್ನು ನೇಮಿಸುತ್ತಿದ್ದವೇ?

ಹಿಂದುಸ್ಥಾನಕ್ಕೆ ಯಾವ ತರದ ಸ್ವರಾಜ್ಯವಿರಬೇಕೆಂಬುದರ ಬಗ್ಗೆ ನಮಗೆ ಸ್ಪಷ್ಟವಾದ ಕಲ್ಪನೆಯಿರಬೇಕು. ನಿಜಾಮ ಇಲ್ಲವೇ ಕಾಶ್ಮೀರದ ಅರಸನನ್ನು ನೀವು ಈ ದೇಶದ ಮೇಲೆ ಆಳಗೊಡುವಿರೋ? ಅಥವಾ ಕೆಲವು ಸ್ವಾರ್ಥಿಗಳು ನಿಮ್ಮ ಮೇಲೆ ದಬ್ಬಾಳಿಕೆಯನ್ನು ನಡೆಸಿದರೆ ಅದು ನಿಮಗೆ ಸಮಾಧಾನಕರವಾಗಬಹುದೇ? ಹಿಂದುಸ್ಥಾನಕ್ಕೆ ನಿಜವಾದ ಪ್ರಜಾಸತ್ತಾತ್ಮಕ ರಾಜ್ಯವೇ ಬೇಕು. ಆ ಸ್ವರಾಜ್ಯದಲ್ಲಿ ರೈತರಿಗೂ, ಕೂಲಿಕಾರರಿಗೂ, ಬೇರೆ ಕೆಲಸಗಾರರಿಗೂ ಸಮಾನ ಹಕ್ಕುಗಳು ದೊರೆತು ಸುಖವು ದೊರೆಯಬೇಕು. ಸಮಾಜಸತ್ತಾವಾದವೆಂದರೆ ಈ ದೇಶದ ಹುಟ್ಟುವಳಿ ಹಾಗೂ ವ್ಯಾಪಾರದ ಸಾಧನಗಳ ನಿಯಂತ್ರಣವು ಸರಕಾರದಲ್ಲಿರುವ ಏಕ ಸಾಮಾಜಿಕ ವ್ಯವಸ್ಥೆಯಾದವು. ಎಲ್ಲರಿಗೂ ಲಾಭವಾಗುವಂಥ ಇಂಥ ತತ್ವಕ್ರಮವೇ ನಮಗೆ ಮಾನ್ಯವಾಗುವದು. ಇಂಥ ಸ್ವರಾಜ್ಯವನ್ನು ದೊರಕಿಸುವದಕ್ಕಾಗಿ ನಮ್ಮಲ್ಲಿ ಅತ್ಯಂತ ತಳಮಳವು ಬೇಕು. ಬಲಾಢ್ಯರಾದ ಪ್ರಭುಗಳ ಕೂಡ ಹೋರಾಡುವ ಶಕ್ತಿ ತುಂಬ

ಕಲಾಸಿರಿಯೆನ್ ರಾಷ್ಟ್ರಭಕ್ತರು ನನಗೆ ಯುರೋಪದಲ್ಲಿ ಭೇಟಿಯಾಗಿದ್ದರು. ಅವರಿಗೆ ತಮ್ಮ ದೇಶದ ಸಲುವಾಗಿ ಕಾದುವದೊಂದರ ವಿನಹ ಬೇರೇನೂ ಗೊತ್ತಿದ್ದಿಲ್ಲ. ಈ ಸಿರಿಯೆನ್ನರ ದೇಶಭಕ್ತಿಯ ೧೦೦ನೇ ಪಾಲಿನಷ್ಟು ಸ್ವಾತಂತ್ರ್ಯ ಪ್ರೇಮವಾದರೂ ನಮ್ಮಲ್ಲಿದ್ದರೆ ಒಂದೇ ವಾರದಲ್ಲಿ ನಾವು ಸ್ವತಂತ್ರರಾಗಬಹುದು!

"ಕರ್ಮವೀರ"

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಸಂಘದ ಒಂದು ಸೆಂಟ್ರಲ್ ಕಮಿಟಿ ಮೀಟಿಂಗು ತಾ 1–6–28ರಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ಪ್ರೆಸಿಡೆಂಟ್ ರಾವು ಬಹದ್ದೂರ್ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಹಾಜರಿದ್ದವರು.

ರಾವು ಬಹದ್ದೂರ್ ಕೆ. ಚಂಗಪ್ಪನವರು, ರಾವು ಬಹದ್ದೂರ್ ಕೆ. ಅಪ್ಪಯ್ಯನವರು, ರಾವ್ ಸಾಹೇಬ್ ಪಿ. ದೇವಯ್ಯನವರು, ಮೆ. ಗಳಾದ ಕೆ. ಸಿ. ದೇವಯ್ಯನವರು, ಯನ್. ಐ. ಕಾಳಪ್ಪನವರು, ಪಿ. ಬಿ. ಮೇದಪ್ಪನವರು, ಬಿ. ಯಸ್. ಕುಶಾಲಪ್ಪನವರು ಮತ್ತು ಕೆ. ಬೆಳ್ಯಪ್ಪನವರು.

ಗೈರ್ಹಾಜರಾದವರು.

ಮೆ. ಗಳಾದ ಎ. ಜಿ. ಕಾರ್ಯಪ್ಪನವರು, ಸಿ. ಯಂ. ಕುಶಾಲಪ್ಪನವರು, ಸಿ. ಯನ್. ಮುತ್ತಣ್ಣನವರು, ಪಿ. ಸಿ. ಉತ್ತಯ್ಯನವರು, ಪಿ. ಎ. ನಂಜಪ್ಪನವರು ಮತ್ತು ಸಿ. ಯಂ. ದೇವಯ್ಯನವರು.

ಚರ್ಚಿಸಿದ ವಿಷಯಗಳು.

ಕಳೆದ ಸಾರಿ ನಡೆದ ಮೀಟಿಂಗಿನಲ್ಲಿ ಚರ್ಚಿಸಿ ತೀರ್ಮಾನಿಸಿದ ವಿಷಯಗಳನ್ನು ಓದಿ ಒಪ್ಪಲಾಯಿತು.

ಸಂಘದಿಂದ ಸಾಲ ಮತ್ತು ವೇತನಗಳನ್ನು ಹೊಂದಿಕೊಂಡು ಅದನ್ನು ಮರುಪಾವತಿ ಮಾಡಬೇಕೆಂಬ ಅಭಿಪ್ರಾಯವಿಲ್ಲದವರಿಗೆ ಪ್ರೆಸಿಡೆಂಟರು ರಿಜಿಷ್ಟರ್ ನೋಟೀಸು ಕಳುಹಿಸಬೇಕೆಂದು ತೀರ್ಮಾನವಾಯಿತು

ಸಂಘದ ಕಾನೂನುಗಳನ್ನು ತಿದ್ದುಪಡಿ ಮಾಡುವದಕ್ಕೋಸ್ಕರ 1928 ನೇ ಇಸವಿ ಜುಲಾಯಿ ತಾರೀಕು 1 ರಲ್ಲಿ ಒಂದು ಜನರಲ್ ಮೀಟಿಂಗನ್ನು ಜರಗಿಸುವದಾಗಿ ನಿಶ್ಚೈಸಲ್ಪಟ್ಟಿತು.

ಕೊಡಗರ ಮದುವೆಯು ಜರಗಿದಾಗಲೆಲ್ಲಾ ಅವರವರ ಶಕ್ತ್ಯಾನುಸಾರ ಧನವನ್ನು ಕೊಡಗು ವಿದ್ಯಾಭಿವೃದ್ಧಿ ಸಂಘಕ್ಕೆ ಉಚಿತಾರ್ಥವಾಗಿ ಕಳುಹಿಸಿ ಕೊಡಬೇಕೆಂದು ಕೊಡಗು ಮಹನೀಯರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು

ಕೆ. ಚಂಗಪ್ಪ,
ಪ್ರೆಸಿಡೆಂಟ್.

Notice.

Applications are invited for a newly created clerk's post for Somwarpet Notified Area on a Salary of Rs. 25—1—40.

Applications will be received till the 25th June 1928.

Candidates must produce along with their applications Certificates of physical fitness and testimonials of good character.

Candidates must have passed at least the "Lower Secondary Examination," and should possess a good knowledge of English, plane-table and levelling survey.

The Selection will be made by the Notified Area Committee at 11 M. m. on 25–6—28 Applicants should appear in person.

Any further information on the subject can be had in the office of the undersigned.

M. S. MANDANNA,
President,
Notified Area,
Somwarpett.

2—1

ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ.

ಈ ನಿಧಿಯ ವಾರ್ಷಿಕ ಮಹಾ ಸಭೆಯು 1928ನೇ ಇಸವಿ ಜೂನ್ ತಾರೀಕು ೩ನೇ ಆದಿತ್ಯವಾರ ದಿನ ಮಡಿಕೇರಿ ವಿದ್ಯಾರ್ಥಿ ಭವನದಲ್ಲಿ ನಡೆಯಿತು.

ನಿಧಿಯ ಅಧ್ಯಕ್ಷರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡನಂತರ ನಿಧಿಯ ಕಾರ್ಯದರ್ಶಿಯವರು ನಿಧಿಯ 1927-28ನೇ ಸಂವತ್ಸರದ ವರದಿಯನ್ನೂ, ಆಡಿಟ್ ರಿಪೋರ್ಟನ್ನೂ ಓದಿದರು. ಇವುಗಳ ಸಾರಾಂಶವೇನಂದರೆ:—ವರದಿಯ ವರ್ಷದಲ್ಲಿ ರೂ. 631—3—6 ವರಮಾನ, ರೂ. 135—3—6 ಖರ್ಚು, ವರ್ಷಾಂತ್ಯದಲ್ಲಿ ರೂ. 496—0—0 ಶಿಲ್ಕು, ಹಿಂದಿನ ವರ್ಷದ ಶಿಲ್ಕು 393—0—3 ಸೇರಿ 31—3—28ರಲ್ಲಿ ಕಾರ್ಯದರ್ಶಿಯ ಕೈಯಲ್ಲಿ ರೂ. 889—0—3 ಇದ್ದಿತು.

ಎರಡನೆಯ ಮುಖ್ಯ ವಿಷಯವೇನೆಂದರೆ—ಸಾಲ ಮತ್ತು ವೇತನಗಳನ್ನು ಪಡೆದುಕೊಂಡವರು ತಾವು ಕೊಡಬೇಕಾದ ಮೊಬಲಗನ್ನು ಸರಿಯಾಗಿ ಮರುಪಾವತಿ ಮಾಡದಿರುವುದು. ಕೆಲವು ಜನರಿಂದ ಮೊಬಲಗುಗಳು ಕೋರ್ಟಿಗೆ ಹೋಗದ ವಿನಹ ಸಿಕ್ಕುವ ಸಂದರ್ಭವಿಲ್ಲವೆಂದು ಕಾರ್ಯದರ್ಶಿಯವರ ವರದಿಯಲ್ಲಿದ್ದುದನ್ನು ಪರ್ಯಾಲೋಚಿಸಿ ಮಹಾ ಸಭೆಯು ಅಂಥವರ ಮೇಲೆ ಇನ್ನು ತಡಮಾಡದೆ ದಾವೆ ಮಾಡಬೇಕೆಂದೂ, ಈ ಕಾರ್ಯವನ್ನು ಸೆಂಟ್ರಲ್ ಕಮಿಟಿಯವರು ಕೈಕೊಳ್ಳಬೇಕೆಂದೂ ತೀರ್ಮಾನವಾಯಿತು.

ಅನಂತರ ವಿದ್ಯಾರ್ಥಿ ಭವನದ ಮೇನೇಜರು ತಮ್ಮ ರಿಪೋರ್ಟನ್ನು ಓದಿದರು. ಭವನದ ಅಡಿಗೆಯ ಮನೆಯು ಬಹಳ ಅಭದ್ರ ಸ್ಥಿತಿಯಲ್ಲಿರುವುದರಿಂದ ಅದಕ್ಕೆ ಸದ್ಯದಲ್ಲಿ ಏನು ರಿಪೇರಿಯಾಗಬೇಕೆಂಬುವನ್ನು ಅಜಮಾಯಿಸಿ ಕೆಲಸ ನಡಿಸಲು ಮೆ. ಬಿ. ಯಸ್. ವೆಂಕಟರಾವ್, ಮೆ. ಜಿ. ಶ್ರೀನಿವಾಸಮೂರ್ತಿ ಮೆ. ಜಿ ಯನ್. ತಿಮ್ಮಪ್ಪಯ್ಯನವರುಗಳಿಂದ ಕೂಡಿದ ಒಂದು ಉಪಕಮಿಟಿ ನೇಮಕವಾಯಿತು. ಅಲ್ಲದೆ ಅಡಿಗೆಮನೆಯನ್ನು ಹೊಸತಾಗಿ ಕಟ್ಟಿಸುವ ಖರ್ಚಿಗೆ ಒಂದು ವಿಜ್ಞಾಪನಾ ಪತ್ರವನ್ನು ಹೊರಡಿಸಿ ದೇಶದ ಮಹನೀಯರುಗಳಿಂದ ಸಹಾಯವನ್ನು ಬೇಡಬೇಕಾಗಿ ನಿಷ್ಕರ್ಷೆಯಾಯಿತು. ಮೀಟಿಂಗಿನಲ್ಲಿ ನೆರೆದಿದ್ದವರು 80 ರೂಪಾಯಿಗಳವರೆಗೆ ಕೊಡುವುದಾಗಿ ವಾಗ್ದಾನ ಮಾಡಿದರು; ಕೆಲವರು ಕೂಡಲೆ ಹಣವನ್ನು ಕೊಟ್ಟರು.

ಅನಂತರ ಕಳೆದ ವರ್ಷದ ಮಹಾಸಭೆಯಲ್ಲಿ ನೇಮಕವಾದ ಉಪಕಮಿಟಿಯವರು ನಿಧಿಯ ನಿಬಂಧನೆಗಳನ್ನು ತಿದ್ದುಪಡಿ ಮಾಡಿದ್ದನ್ನು ಮಹಾಸಭೆಯು ಮಂಜೂರು ಮಾಡಿತು. ಇದಾದನಂತರ 1928–29 ನೇ ಸಂವತ್ಸರಕ್ಕೆ ಅಧ್ಯಕ್ಷರು, ಕಾರ್ಯದರ್ಶಿಯರೂ ಮತ್ತು ಕಮಿಟಿ ಮೆಂಬರುಗಳೂ, ಇಬ್ಬರು ಆಡಿಟರೂ ಆರಿಸಲ್ಪಟ್ಟರು.

ಅಧ್ಯಕ್ಷರು:—ಮೆ. ಸಿ. ಯನ್. ವೆಂಕಪ್ಪಯ್ಯ, ಬಿ ಎ. ಬಿ. ಯಲ್. ರವರು.

ಕಾರ್ಯದರ್ಶಿಯರು:—ಮೆ ಯಂ ಕೃಷ್ಣಯ್ಯನವರು, ಮತ್ತು ಮೆ. ಹೆಚ್. ಎನ್. ಸುಬ್ರಾಯನವರು, ಕಮಿಟಿಮೆಂಬರುಗಳು:—ಮೆ. ಜಿ. ಯಂ. ಮಂಜುನಾಥಯ್ಯನವರು, ಮೆ. ಜಿ. ಯನ್. ತಿಮ್ಮಪ್ಪಯ್ಯನವರು, ಮೆ. ಕೆ. ಜಿ. ಸುಬ್ರಾಯರು, ಮೆ ಟಿ. ಯಸ್. ಸುಬ್ರಮಣ್ಯ ಐಯರ್‌ರವರು, ಮೆ. ಯನ್. ಆರ್. ಗೋಪಾಲಕೃಷ್ಣಯ್ಯನವರು. ಬಿ. ಎ., ಮೆ. ಯನ್. ಆರ್. ಸುಬ್ರಹ್ಮಣ್ಯಯ್ಯನವರು, ಮೆ. ಸಿ. ಯಂ. ರಾಮರಾವ್ ಬಿ ಎ. ಯಲ್. ಟಿ. ರವರು, ಮೆ. ಜಿ. ಶ್ರೀನಿವಾಸಮೂರ್ತಿಯವರು, ಮೆ. ಲಕ್ಷ್ಮೀನಾರಾಯಣಶಾಸ್ತ್ರಿಯವರು, ಮೆ. ಬಿ. ಶ್ಯಾಮಣ್ಣನವರು, ಮೆ. ಯಂ. ಯನ್. ಸುಬ್ರಾಯರು, ಮತ್ತು ಮೆ. ಕೆ. ಪಿ. ಸುಬ್ರಾಯರು.

ಆಡಿಟರುಗಳು:—ಮೆ. ಹೆಚ್. ಯಸ್. ವೆಂಕಪ್ಪಯ್ಯನವರು ಮತ್ತು ಮೆ. ಯಸ್. ಕೆ. ನಾರಾಯಣನವರು.

ನಿಧಿಯ ರಶೀತಿ ಪುಸ್ತಕಗಳು ಯಾರ್‍ಯಾರಲ್ಲಿರುವುದೋ ಅವರೆಲ್ಲರೂ ಅದನ್ನು ಕಾರ್ಯದರ್ಶಿಯವರಿಗೆ ಕೂಡಲೆ ವಾಪಸು ಮಾಡುವಂತೆ ಅವರಿಗೆ ತಿಳಿಸಬೇಕಾಗಿ ತೀರ್ಮಾನವಾಯಿತು.

ಕಳೆದ ವರ್ಷ ಕೆಲಸಮಾಡಿದ ಕಮಿಟಿ ಮೆಂಬರುಗಳಿಗೂ ಸಭಾಧ್ಯಕ್ಷರಿಗೂ ವಂದನೆಯನ್ನು ಸಮರ್ಪಿಸಿದನಂತರ ಸಭೆಯು ಬರಖಾಸ್ತಾಯಿತು.

ಯಂ. ಕೃಷ್ಣಯ್ಯ,
ಸಕ್ರಟರಿ.

ಶ್ರೀ ಸತ್ಯ ನಾರಾಯಣ ಮೋಟಾರ್ ಸರ್ವೀಸ್.

ಮಹನೀಯರೇ,

ತಾರೀಕು 16—5—28ರ ಲಾಗಾಯಿತು ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ವಾಬತು ಒಂದು ಹೊಸ ಸರ್ವೀಸ್ ಬೆಳಿಗ್ಗೆ 7.30 ಗಂಟೆಗೆ ವೀರಾಜಪೇಟೆಯಿಂದ ಹೊರಟು 10.30 ಗಂಟೆಗೆ ಕುಟ್ಟಕ್ಕೆ ತಲಪಿ ಅಲ್ಲಿಂದ ಸಾಯಂಕಾಲ 3 ಗಂಟೆಗೆ ಹಿಂತಿರುಗಿ ವೀರಾಜಪೇಟೆಗೆ 6 ಗಂಟೆಗೆ ತಲಪುವಂತೆ ಏರ್ಪಾಡು ಮಾಡಿದ್ದೇವೆ. ಮರೆಯೂರು, ಮಡಿಕೇರಿ, ಮೈಸೂರು ಮೊದಲಾದ ಸ್ಥಳಗಳಿಗೆ ಜಾಗ್ರತೆಯಾಗಿ ಹೋಗಿ ಬರಲು ಈ ನಮ್ಮ ಸರ್ವೀಸು ತುಂಬಾ ಪ್ರಯೋಜನಕಾರಿಯಾದೀತೆಂದು ನಂಬುತ್ತೇವೆ.

ಸಿ. ಟಿ. ರಾಮನಂಬಿಯಾರ್,
ಮೇನೇಜರ್.

4—2.

ವಿಮರ್ಶೆ.

ಮದ್ಯನಿಷೇಧ:—ಲೇಖಕರು: ಶ್ರೀ-ಟಿ. ಬಿ. ಕೇಶವರಾಯರು. ಪ್ರಕಾಶಕರು:- ದಾವಣಗೆರೆಯ ಪ್ರಾಣದಯಾ ಜ್ಞಾನಪ್ರಸಾರಕ ಸಂಘದ ಗೌರವ ಕಾರ್ಯದರ್ಶಿಯವರು. ಉಚಿತ ಪುಸ್ತಕ. ಪುಸ್ತಕವು ಸಣ್ಣದಾದರೂ, ಇದರಲ್ಲಿ ಅತ್ಯಂತ ಹಿತಕರವಾದ ಬೋಧನೆ ಇದೆ. ಕುಡಿತದಿಂದುಂಟಾಗುವ ತೊಂದರೆಗಳೂ, ಅನರ್ಥಗಳೂ ಮತ್ತು ಅಮೇರಿಕನರು ಈ ದುರಾಭ್ಯಾಸವನ್ನು ನಿಲ್ಲಿಸಿದ ಮೇಲೆ ಅವರ ದೇಶವು ಈಗ ಯಾವ ಸ್ಥಿತಿಯಲ್ಲಿದೆ ಎಂಬ ಲೇಖನಗಳು ಓದಲರ್ಹವಾದುವು. ಕುಡಿತದಿಂದುಂಟಾಗುವ ಕೆಡುಕುಗಳಾವುವೆಂದರೆ.—ಹೃದಯರೋಗ, ಕ್ಷಯರೋಗ ಇವುಗಳು ಬರುವುವು; ಉತ್ಸಾಹವು ಕಡಿಮೆಯಾಗಿ ಸೋಮಾರಿತನವು ಬರುವುದು; ದೃಷ್ಟಿನಾಟ ಕುಗ್ಗುವುದು, ಅಂಗಾಂಗಗಳು ಬಲಹೀನವಾಗುವುವು, ಮೆದುಲು ಕೆಟ್ಟು ಹೋಗುವುದು, ಸಂತತಿಯು ನಿರ್ಬಲವಾಗುವುದು, ಆಯುಸ್ಸು ಕ್ಷೀಣವಾಗುವುದು, ಮನುಷ್ಯನ ದುಷ್ಟತನವು ಹೆಚ್ಚುವುದು, ಶಿಶು ಮರಣವು ಬೆಳೆಯುವುದು ಮತ್ತು ಅಕಾಲಮರಣ ಸಂಭವಿಸುವುದು. ಕುಡುಕರಿಗೆ ಘಾಯಗಳು ಮಾಯುವುದು ತಡ ಕುಡಿತದಿಂದುಂಟಾಗುವ ಅನರ್ಥಗಳನ್ನು ವರ್ಣಿಸಲಸಾಧ್ಯ. ಅಮೇರಿಕದ ಸ್ಥಿತಿಯು ಹೇಗಿರುತ್ತದೆಂದು ಪ್ರೆಸಿಡೆಂಟ್ ಹಾರ್ಡಿಂಜ್‌ರವರು ಬರೆಯುವುದೇನಂದರೆ:— "ಸಾಲಗಳನ್ನು ತೆಗೆದುಕೊಂಡವರು ತಿರುಗಿ ತಪ್ಪದೆ ಕೊಡುತ್ತಾರೆ. ಕುಡಿತ ಮತ್ತು ಫಲಹಾರ ಅಂಗಡಿಗಳಲ್ಲಿ ಹಾಳಾಗುತ್ತಿದ್ದ ಕೂಲಿಯವರ ದುಡ್ಡೆಲ್ಲವೂ ಮನೆಯನ್ನು ಸೇರುತ್ತದೆಂಬುದೂ ಸಂಸಾರಿಗಳಿಗೆ ಹೊಟ್ಟೆತುಂಬಾ ಆಹಾರ ಮತ್ತು ಮೈತುಂಬಾ ಬಟ್ಟೆ ಸಿಕ್ಕುತ್ತದೆಂಬುದೂ ಮತ್ತು ಶೇಖರವಾದ ಹಣವೆಲ್ಲಾ ಹೆಚ್ಚು ಹೆಚ್ಚಾಗಿ ಸೇವಿಂಗ್ಸ್ ಬ್ಯಾಂಕುಗಳಿಗೆ ಬರುತ್ತಿರುವುದು ಅನುಭವಸಿದ್ಧವಾಗಿದೆ."

ಅಮೇರಿಕದಲ್ಲಿ ಮರಣಸಂಖ್ಯೆ ಕಡಿಮೆಯಾಯಿತು, ರೋಗಾದಿಗಳು ಕಡಿಮೆಯಾದುವು, ಬ್ಯಾಂಕುಗಳು ಹೆಚ್ಚಿದವು, ಸರಕಾರದ ವರಮಾನವು ಹೆಚ್ಚಿತು, ಗೋರಕ್ಷಣೆಯು ಮಹತ್ವವಾಯಿತು, ಹುಚ್ಚರ ಆಸ್ಪತ್ರೆಗಳು ಕಡಿಮೆಯಾದುವು. ಇಂಥ ಸ್ಥಿತಿಯು ಹಿಂದೂದೇಶಕ್ಕೆ ಒದಗುವುದ್ಯಾವಾಗ? ಹೆಂಡ ಮತ್ತು ಸಾರಾಯದ ಅಂಗಡಿಗಳು ಮಾಯವಾದಾಗ ಅಲ್ಲವೇ?

ಪುಸ್ತಕವು ಉಚಿತವಾಗಿ ದೊರೆಯುವುದರಿಂದ ಕೊಡಗಿನಲ್ಲಿ ಕುಡಿತವನ್ನು ತಗ್ಗಿಸಬೇಕೆನ್ನುವಂತ ಮಹನೀಯರೆಲ್ಲರೂ ಇದನ್ನು ತರಿಸಿ ಓದಬೇಕೆಂದು ನಮ್ಮ ಆಗ್ರಹ ವಿನಂತಿ ಇದೆ.

First aid in child birth:—ಪ್ರಸೂತಿಯ ಪ್ರಥಮ ಚಿಕಿತ್ಸೆ ಎಂಬ ಈ ಪುಟ್ಟ ಪುಸ್ತಕವು ಇಂಗ್ಲೀಷಿನಲ್ಲಿದೆ. ಇದರ ಅನುವಾದವು ಇತರ ಪ್ರಾಂತೀಕ ಭಾಷೆಗಳಿಗೆ ಮಾಡಲ್ಪಡುತ್ತಿದೆಯೆಂದು ಮುನ್ನುಡಿಯಲ್ಲಿದೆ. ಡಾಕ್ಟರ್. ಯು. ರಾಮರಾಯರು ಇದರ ಲೇಖಕರು. ಇವರು ಇಂಥ ಹಲವು ಸಣ್ಣ ಪುಸ್ತಕಗಳನ್ನು ಬರೆದು, ಪ್ರಕಟಿಸಿರುವರು. ಹೆಂಗಸರಿಗೆ ಹೆರಿಗೆಯ ಕಾಲದಲ್ಲಿ ಸಾಮಾನ್ಯವಾಗಿ ತಿಳಿದಿರಬೇಕಾದ ವಿಷಯ ಮಾತ್ರ ಇದರಲ್ಲಿದೆ. ಡಾಕ್ಟರು ಬರುವವರೆಗೆ ಗರ್ಭಿಣಿಯರು ಹೇಗೆ ವರ್ತಿಸಬೇಕೆಂದು ಚೆನ್ನಾಗಿ ವಿವರಿಸಲ್ಪಟ್ಟಿದೆ. ಪುಸ್ತಕದಲ್ಲಿ ಸಮಯೋಚಿತವಾಗಿ ಚಿತ್ರಗಳು ಕೊಡಲ್ಪಟ್ಟಿವೆ. ಭಾಷೆಯು ಬಹು ಸುಲಭ. ಈ ಪುಸ್ತಕವನ್ನು ಪ್ರತಿಯೊಬ್ಬ ಗೃಹಸ್ಥನು ಸಂಗ್ರಹಿಸುವುದು ಯೋಗ್ಯವು. ಬೆಲೆ ನಾಲ್ಕಾಣೆ, ದೊರೆಯುವ ಸ್ಥಳ:—

ಶ್ರೀ ಕೃಷ್ಣ ಬದ್ರರ್ಸ್,
323. ತುಂಬು ಚಟ್ಟಿ ಬೀದಿ,
ಮದರಾಸು.

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬುಡವು ಕಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು.



7 ಕಲ್ಲಿನ ಬಿಳಿಯ ಓಲೆ ಜೋತೆ 1ಕ್ಕೆ 2—0—0.
7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0.

ಸ್ಪಿರಿಟ್ ಸ್ಟೋವ್.



ಇವುಗಳನ್ನು ಹಿತ್ತಾಳೆಯಿಂದ ಮಾಡಿರುವದು. ಇದರಲ್ಲಿ ಒಬ್ಬರ ಸಹಾಯವಿಲ್ಲದೆಯೂ, ಯಾವ ತೊಂದರೆ ಇಲ್ಲದೆಯೂ ಎಷ್ಟು ಜನಗಳಿಗಾದರೂ ಪದಾರ್ಥಗಳು ಬಹು ಬೇಗನೆ ಅಡಿಗೆಮಾಡಿಕೊಳ್ಳಬಹುದು. ಕ್ರಯ 1ಕ್ಕೆ 2—8.

ಇಂಗ್ಲೀಷ್ ಹೇರ್ ರಿಮೂವರ್ ಸೋಪ್

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ... ಯೂ ಇಲ್ಲದೆ ಕತ್ತಿಯಿಂದ ಕ್ಷೌರ ... ಕ್ಕಿಂತಲೂ ಚೆನ್ನಾಗಿ ... ಒಂದೇ ಒಂದು ನಿಮಿಷದಲ್ಲಿ ತೆಗೆದು ... ದು. 3 ಸೋಪುಗಳು ಇರುವ ... 1—(—0. ವಿಳಾಸ.—ಕೆ. ಸಾಧಮ ... ಸನ್ಸ್, 168. ಚೈನಾ ... ಮದರಾಸು.

52—3

ದೊಡ್ಡ ಬೋಧವೆಂಬ ಸಬೂಬು ಡಿ. ಬೋ. ಮೆಂಬರುಗಳೂ, ಯಂ. ಯಲ್. ಸಿ. ಗಳೂ ಸಂದರ್ಶನಾರ್ಥವಾಗಿ ಒಂದು ಶಾಲೆಗಳನ್ನು ನೋಡಿ ಶಾಲೆಯಲ್ಲಿ ಮಕ್ಕಳೇ ಇಲ್ಲ; ಉಪಾಧ್ಯಾಯರೇ ಇಲ್ಲ, ಸರಿಯಾಗಿ ಕೆಲಸವೇ ನಡೆದ ಹಾಗೆ ಕಾಣುವದಿಲ್ಲ ಎಂಬದಾಗಿ ಬರೆಯಲು ಕಾಗದ, ಕಡ್ಡಿ, ಕಪ್ಪು, ಸುಮ್ಮನೆ ಸಿಕ್ಕಿದರೆ ನಾನೂ ಸಹ ಒದೆದು ಬಿಡುವೆನು. ಆದರೆ ಇವರ ಗೋಳು ಮಾತ್ರ ಬರೆಯಲು ಯಾರೂ ಇಲ್ಲ. ಇವರ ಜೊತೆಯಲ್ಲು ಗೋಳಿಗೆ ಸರಿಯಾದ ಜೋಳಿಗೆಯಾಯಿತು.

ಶಾಲೆಗಳಿಗೆ ಸರಿಯಾದ ಕಿಟಿಕಿಗಳಿಲ್ಲದೆಯೂ ಬಾಗಿಲುಗಳಿಲ್ಲದೆಯೂ, ಪೂರ್ಣ ಬೆಳಕು ಒಳಗೆ ದೊರೆಯದೆಯೂ, ವೆರಾಂಡ ಇಲ್ಲದೆಯೂ, ನೆಲಕ್ಕೆ ಸರಿಯಾದ ನೆಲಹಾಸು ಇಲ್ಲದೆಯೂ, ಗಾರೆ ಮಗ್ಗೆರೆ ಹಾಕಿಸದೆಯೂ ಶಾಲೆ ಇಕ್ಕಟ್ಟಾಗಿಸಿ ಶಾಲೆ ಬದಲಾಯಿಸಬೇಕು ಮಗ್ಗೆರೆಯಾಗಿ ಬರೆಯುವ ಯಜಮಾನರು ಯಾರೂ ಇಲ್ಲ.

ಇದು ಅಲ್ಲದೆ ಶಾಲೆಗಳಲ್ಲಿ ಅನುಕೂಲತೆ ಮೀರಿ ಕೆರೆ, ತೋಡು ಇಲ್ಲ; ಇಂಥಾ ಶಾಲೆಗಳಿಗೆ ನೀರು ಭಾವಿಗಳು ಇಲ್ಲದೆ ಇರುವುದರಿಂದ ಎಷ್ಟು ದೊಡ್ಡ ನೀರಿನ ಗೋಳಾಟಗಳು ಆಗಿರಬಹುದು. ಇವನ್ನೆಲ್ಲಾ ಸುಮ್ಮನೆ ದೊರೆಯುವ ಸಂದರ್ಶನಾರ್ಥದ ಸಮಯದಲ್ಲು ಕಾಗದ, ಕಡ್ಡಿ ಮತ್ತು ಕಪ್ಪು ದೊರೆತಾಗ ಬರೆಯಬಾರದೇ

ದನಗಳನ್ನು ಕೂಡಿಸುವ ದನಗಳ ಕೊಟ್ಟಿಗೆಯೂ ಸಹ ಚೆನ್ನಾಗಿ ಮಾಡಿಸವರು ಇಟ್ಟುಕೊಂಡು ಇರುತ್ತಾರೆ. ಅದಕ್ಕಿಂತಲೂ ಕಡೆಯಾಗಿ ಸುಬಿಕೇರಿ H. ಶಾಲಾ ನೆಲವು ಇಡಲ್ಪಟ್ಟಿದೆ. ಇದರ ಹತ್ತಿರ ಆದರೆ 2-ವ್ಯಕ್ತಿಗಳ ಹಾರ್ನೆಯಲ್ಲಿ ಇರುವ ಶಾಲೆಗಳಲ್ಲಿ ನೀರಿನ ತೊಂದರೆ ಹೇಳಿ ವರ್ಣಿಸಲು ಆದಿಶೇಷನಿಗೂ ಕೂಡದು. ಮತ್ತು ಇಂಥಾ ಶಾಲೆಗಳಲ್ಲಿ ಕೆಲಸಕ್ಕೆ ದ್ರವ್ಯವು ಸರಕಾರದವರಿಂದ ದೊರೆತರೂ ಸಾಕು ನೀನು ಎಂಬ ಅಭಾವಭಾವದಿಂದ ಅವುಲಿಸುವುದೂ ಇಲ್ಲ.

ದೃಷ್ಟಾಂತಕ್ಕೆ ಕೊಡಮಕ್ಕಿಯ ಶೆಗೆ 150 ರೂ. ದ್ರವ್ಯ ಸಹಾಯ ದೊರೆತೂ ಅಲ್ಲಿಯ ಜನರ ಚಂದಾ ಹಣ ಬಾರತಿಯನ್ನು ಅಲ್ಲಿಯು ವಿದ್ಯಾವಂತರೂ, ಬುದ್ಧಿವಂತರೂ, ಧನವಂತರೂ, ದೊಡ್ಡ ಸಂಸ್ಥರೂ, ಧರ್ಮವಂತರೂ ಆದವರು ಹಣ ಕೊಡದೆ, ಮಾಡಿ ಆಗಿರುವ ಹಾಗೆ ಕಾಣುವದಿಲ್ಲ. ಎಂದರೆ ಇದರಾರ್ಥ ಮಾನವಿಲ್ಲವಾಗಿ ತೋರಿ ಬರುತ್ತದೆ. ಇದು ಆ ಶಾಲೆಯ ಮಕ್ಕಳ ಪುಣ್ಯವೋ ಯಾ ಉಪಾಧ್ಯಾಯರ ಫಲವೋ ಅಥವಾ ಗ್ರಾಮದವರ ಅದೃಷ್ಟವೋ, ಇಲ್ಲವೇ ಹಣವು ಸರಿಯಾಗಿ ಪ್ರಯತ್ನ ಮಾಡುವವರ ಕೆಲಸ ಹಾಗೆಯೆ ಇರುವಿಕೆಯೋ ಹೇಳಲಾರದು.

ಅದ್ದರಿಂದ ಈ ಒದಗಿದ ತಾಪತ್ರಯವನ್ನು ನಿವಾರಿಸಲು ಭಗವಂತನು ಸಾಸಸರಕಾರಕ್ಕೂ, ದೇಶದ ಮಹಾಜನಗಳಿಗೂ ಮತ್ತು ಯಂ. ಯಲ್. ಸಿ. ಯವರಿಗೂ ಡಿ. ಬೋ. ಮೆಂಬರುಗಳಿಗೂ ಕರುಣೆ ಹುಟ್ಟಿಸಿ ಈ ಬನಕ್ಕೆ ಕೃಪಾಕಟಾಕ್ಷ ಬಿಡ್ಡಿ ಕೊಡಲೆಂದು ಆತನಲ್ಲಿ ಪ್ರಾರ್ಥಿಸುತ್ತೇನೆ.

"ಕಷ್ಟದ ಯತನ ಕೇಳಿದವ."

ಟೇಬಲ್ ಟೈಂಪೀಸ್ ಇನಾಂ.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಒಳ್ಳೆಯ ಗಂಟೆಯನ್ನು ತೋರಿಸುವವು. ಇದರ ಕೇಸು ಛಂಗಾರಕ್ಕೆ ಸಮಾನವಾಗಿರುವದು. ಇವಕ್ಕೆ ಒಂದು ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ. 6—8—0.

ಬೆಸ್ಟ್ ಫೌಂಟೆನ್ ಪೆನ್.

ಈ ಪೇನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಛಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಂ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ —ರೀಗಲ್ ವಾಚ್ ಕಂಪೆನಿ,

52—3 ಪೋ. ಬಾಕ್ಸ್ ನಂ 213, ಮದರಾಸು

Arms, Ammunition and Shooting Requisites!!!



1928 Illustrated Catalogue Just Issue Free on Application!

D B B L Rifles	Rs	120	to	Rs	2750
S B B L	,,	35	to	,,	950
D B B L Guns	,,	50	to	,,	1350
S B B L	,,	35	to	,,	275
D B M L	,,	45	to	,,	135
S B M L	,,	30	to	,,	80
B. L Revolvers	,,	35	to	,,	350
Automatic Pistols	,,	30	to	,,	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—10 210 Abdul Rehman Street, BOMBAY.



ಡಿ ಬಿ ಬಿ ಯಲ್. ಕೋವಿಗಳು ರೂ. 75 ರಿಂದ ರೂ. 450/.
ಯಸ್ ಬಿ ಬಿ ಯಲ್ ಕೋವಿಗಳು ರೂ. 35 ರಿಂದ ರೂ. 250/.
ಯಸ್. ಬಿ. ಯಮ್ ಯಲ್. ಕೋವಿಗಳು ರೂ. 35 ರಿಂದ 65/.
ರಿವಾಲ್ವರ್‌ಗಳು ರೂ. 10/ರಿಂದ ರೂ 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟೆಗಳು ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಅದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಬೇಕು.

ಯನ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—1 12. ಬ್ರಾಡ್ವೇ. ಮದ್ರಾಸ್

(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ.)

ಎಂ. ಎಸ್. ಕಿದ್ದಪ್ಪ ಬ್ರದರ್ಸ್.
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳು.

'ದಿಲ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ 50—0—0
ಶಕುಂತಲಾ ಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ 40—0—0
'ಮೋಹಿನಿ ಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ 37—8—0
'ಮೋಸ್ಲೆಂ' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ 35—0—0
'ಮಹಾರಾಜಾ' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ 32—8—0

ಕೆಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

ಉತ್ತಮ ತರಹದ 14 ಕ್ಯಾರೆಟ್ ಬಂಗಾರದ ನಿಬ್ಬು ಹಾಕಿದ ಫೌಂಟೆನ್ ಪೆನ್‌ಗಳು.

ಬ್ಲಾಕ್ ಬರ್ಡ್ ಫೌಂಟೆನ್ ಪೆನ್ 1ಕ್ಕೆ 3—8—0 ಮತ್ತು 3—12—0
ವರಲ್ಡ್ ವಂಡರ್ ಫೌಂಟೆನ್ ಪೆನ್ 1ಕ್ಕೆ 3—0—0 ಮತ್ತು 3—8—0
ಕಾನ್ಕ್ಲಿನ್ಸ್ ನೆಪ್ಚ್ಯೂನ್ ಫೌಂಟೆನ್ ಪೆನ್ 1ಕ್ಕೆ 4—8—0
ವಾಟರ್ ಮನ್ ಫೌಂಟೆನ್ ಪೆನ್ 1ಕ್ಕೆ 8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟೆನ್ ಪೆನ್ 1ಕ್ಕೆ 12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ 4—6—0
ವೆಸ್ಟ್‌ಕ್ಲಾಕ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ 8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ 9—9—0
ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ 6—12—0
ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ 6—0—0

52 5 ಎಂ. ಎಸ್. ಕಿದ್ದಪ್ಪ ಅಂಡ್ ಬ್ರದರ್ಸ್,

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮೂಬಂದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಕೊಂಗಟ್ಟೀರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1-7-1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೀಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅಣೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ-ಸಿದ್ದಾಪುರ—ಮೆ. ಐಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಬಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಟ್ಟಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖಿದ್ಮತ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್, "ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:-"SHOOTER" Bombay.
(52-10). **Please write for our Catalogue 1928-1929.**

ಕಟಿಂಕೇಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3-ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0 3ಕ್ಕೆ ರೂ. 4-0-0, 6ಕ್ಕೆ ರೂ 7-8-0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ತಡೆಯಲಿಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ- ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1-4-0 3-8-0, 6-12-0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3-8-0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದೋಗುವುದು, ಇವುಗಳನ್ನೆಲ್ಲ ಒಂದೇ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2-10-0- ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5-8-0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ:—ಮನೋಲ್ಲಾಸಿನಿ ಕಂಪೆನಿ. ೧. ಮಂಗಳೂರು.

52-35

ಅಕಾರಿಕ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಆಜಮಾಯಿಸಿ ನೋಡಿರಿ.

ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ, ತುರಿತವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು.

ಕೇಶವಜಿ ದೇವಚಂದ್,
ಜ್ವಲ್ಲರ್, (ಕೆಟಲಾಗ್ ಮುಫತ್).
12-2 21 ಚೈನಾ ಬಜಾರ್ ರೋಡ್, ಮದರಾಸು.

EMPIRE OF INDIA LIFEASSURANCE COMPANY, LIMITED.

(Established 1897.)

FOR THE YEAR ENDING 29th FEBRUARY 1928.

New Business Exceeds	Rs. 1,16,00,000.
Income Exceeds	Rs. 54,95,000.
Assets Exceed	Rs. 3,15,64,000.

Wanted Agents in Important Places in Coorg.

HEAD OFFICE. Empire of India Life Building, BOMBAY.

21-22.

BRANCH OFFICE. 152, Commercial Street, BANGALORE.

ಸ್ಥಾಪನೆ-1874. ಹೆಡ್ ಆಫೀಸು-ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	13545	ರೂ.	2,96,42,000.
1926	17371	ರೂ.	3,91,39,000
1927	21418	ರೂ.	4,68,04,975.

—ಪ್ರೀಮಿಯಂ ಉತ್ಪತ್ತಿ—

1925	ರೂ.	92,66,000.
1926	ರೂ.	1,05,33,000.
1927	ರೂ.	1,21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ/ ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ.

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆಯಬಹುದು.

ಎಲ್. ಆರ್. ಕೃಷ್ಣಯ್ಯರ್, ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52-8

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 156.
If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ ೬.

ಸಂಪಾದಕ:—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಬುಧವಾರ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ಶಕ ೧೮೫೦ ನೇ ಪ್ರಭವ ಜೂನ್ ತಾರೀಖು ೧೫ ನೇ ಬುಧವಾರ [ಸಂಚಿಕೆ ೩

ESTATE REQUISITES

5 lbs Yates' hammer headed mamooties	Rs 3 0 0 Each.	Wo[illegible]ing forks @	Rs 1 4 0 Each
4½ „ „ „ „	„ 2 14 0 „	[illegible] trowels „	Rs 1 4 0 „
4 „ „ „ „	„ 2 12 0 „	P[illegible] „	Rs 1 8 0 „
Felling axes at Rs 3 0 0 &	„ 3 4 0 „	[illegible] „	Rs [illegible] 14 0 „
Grubbing mattocks at	„ [illegible] 4 0 „	D[illegible] forks „	Rs 4 0 0 „

MONSOON EQUIPMENT.

Planter boots	Rs 16 8 0	D[illegible] per tin	Rs 0 8 0
Mans' oil (water proof) per tin	Rs 2 0 0	[illegible]	Rs 4 8 0

52—20 SPENCER & CO. LTD. General Merchants MERCARA.



V. SUBRAMANIA IYER
Manufacturing,
JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS.

Catalogue Free
to Boanfide Enquirers

Manufacture of
HIGH CLASS
GEMSET JEWELS.
a speciality

The special features of my productions are
1 Best QU[illegible]
2 Latest no[illegible]
3 Promptest [illegible]
4 Neat & a[illegible]
5 Mo[illegible]

GOLD
or
SILVERWARE
of all descriptions
neatly executed

52—40



Before buying any Arms & Ammunition, please refer our Priced NETT PRICED current Catalogues of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

14—16 *Bombay, 3.*

ದಣಿಗ

ಮಲೇರಿಯಾ, ಇನ್‌ಫ್ಲ್ಯುಯೆಂಜಾ, ... ಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ೧೪. ಟಪಾಲು ವೆಚ್ಚ ಬೇರೆ.

ಸಾರ ಸಾ ಪರಿಲಾ.

ರಕ್ತದೋಷ ... ಬೆಲೆ ೧ ಬಾಟ್ಲಿಗೆ ೧—೦—೦. ಟಪಾಲು ವೆಚ್ಚ ಬೇರೆ.

ಕರ್ನಾಟಕ ಬ್ರದರ್ಸ್
13—11 ಮೆಡಿಕಲ್ ಹಾಲ್
ಶಿವಗಂಗ. ಮೈಸೂರು

ಕೊಡಗು.

ಸನ್ ೧೯೨೮ನೇ ಇಸವಿ ಜೂನ್

ತಾ. ೧೫ನೇ ಶುಕ್ರವಾರ.

ರಿಸರ್ವ್ ಫಾರೆಸ್ಟುಗಳ ಆಡಳಿತೆ.

ಮದ್ರಾಸ್ ಸರಕಾರದಿಂದ ನೇಮಕವಾದ ಪಬ್ಲಿಕ್ ಎಕೌಂಟ್ಸ್ ಕಮಿಟಿಯವರು ಮದ್ರಾಸ್ ಫಾರೆಸ್ಟ್ ಇಲಾಖೆಯು ಮರದ ವ್ಯಾಪಾರಕ್ಕಾಗಿ ಮಾಡಿದ ಏರ್ಪಾಡುಗಳೆಲ್ಲವೂ ನಷ್ಟವನ್ನುಂಟುಮಾಡಿರುವದರಿಂದ ಇಲಾಖೆಯವರು ನಡಿಸುವ ವ್ಯಾಪಾರದ ಏರ್ಪಾಡುಗಳೆಲ್ಲವೂ ಪ್ರಯೋಜನಕರವಾದಾವೋ ಎಂಬದನ್ನು ಪುನರ್ವಿಮರ್ಶೆ ಮಾಡಬೇಕೆಂತ ಮದ್ರಾಸ್ ಸರಕಾರವನ್ನು ಕೇಳಿಕೊಂಡಿರುತ್ತಾರೆ. ರಸಲ್‌ಕೊಂಡಾ ಎಂಬಲ್ಲಿ ಸ್ಥಾಪಿಸಿದ ಗರಗಸದ ಕಾರ್ಖಾನೆ ಮಾತ್ರವಲ್ಲ, ಬಲಿಪಕೋಟೆ ಗರಗಸದ ಕಾರ್ಖಾನೆ ಮತ್ತು ಜೇನತಾ ನಾಯರ್ ಫಾರೆಸ್ಟಿನ ಕೆಲಸ ಸಹ ತುಂಬಾ ನಷ್ಟವನ್ನುಂಟುಮಾಡಿವೆಯೆಂತ ಮದ್ರಾಸ್ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಲೇಖನಗಳಿಂದ ತಿಳಿಯ ಬರುತ್ತದೆ. ಈ ಪ್ರಾಂತ್ಯಗಳಲ್ಲಿ ಸಿಕ್ಕುವ ಮರಗಳನ್ನು ಕೊಂಡುಕೊಳ್ಳುವ ಗಿರಾಕಿ ಇದೆಯೋ ಇಲ್ಲವೋ ಎಂಬದನ್ನೂ, ಮತ್ತು ತುಂಬಾ ಕ್ರಯದ ಯಂತ್ರಗಳು ಈ ಪ್ರಾಂತ್ಯದ ಕಾಡುಗಳಿಗೂ ಅಲ್ಲಿ ದೊರೆಯುವ ಮರಗಳಿಗೂ ಉಪಯೋಗವಾಗಬಹುದೋ ಎಂಬದನ್ನೂ ಆಜಮಾಯಿಸಿಕೊಳ್ಳದೆ ಈ ಯಂತ್ರಗಳಿಗೆ ಲಕ್ಷಾಂತರ ರೂಪಾಯಿ ಹಾಕಿದ್ದಲ್ಲದೆ ಸಿಬ್ಬಂದಿಯನ್ನು ಮನಸೋ ಇಚ್ಛೆ ಹೆಚ್ಚಿಸಿಕೊಂಡದ್ದರಿಂದ ನಷ್ಟವಾಗಲು ಕಾರಣವಾಯಿತೆಂತ ತಿಳಿಯಬರುತ್ತದೆ. ಇದೇ ತತ್ವವನ್ನು ನಮ್ಮ ದೇಶದ ಫಾರೆಸ್ಟ್ ಇಲಾಖೆಯವರು ಅನುಸರಿಸಿದ್ದೂ, ಅದರಿಂದ ಸುಮಾರು 15-ಲಕ್ಷ ರೂಪಾಯಿ ನಷ್ಟವಾದದ್ದೂ ಮತ್ತು ದೇಶದ ಜನರು ಬಲವಾಗಿ ಆಕ್ಷೇಪಿಸಿದ್ದರಿಂದ ಮೂವ್ರ ಕೂಟದ ಟ್ರಾಮ್ವೇಯ ಕೆಲಸವನ್ನು ನಿಲ್ಲಿಸಿದ್ದೂ ವಾಚಕರಿಗೆ ತಿಳಿದೇ ಇದೆ. ಆದರೆ ಆ ಕಾಲದಲ್ಲಿ ಮುಂದಾಲೋಚನೆ ಇಲ್ಲದೆ ಇಲಾಖೆಯು ಖರ್ಚನ್ನು ಹೆಚ್ಚಿಸಿದ್ದರ ಫಲವನ್ನು ದೇಶವು ಈಗಲೂ ಅನುಭವಿಸುತ್ತಲೇ ಇದೆ. ಅದನ್ನು ನಿಲ್ಲಿಸಲು ನಮ್ಮ ದೇಶದ ಸರಕಾರವೂ ಒಂದು ಕಮಿಟಿಯನ್ನು ನೇಮಿಸುವದು ಬಹಳ ಅವಶ್ಯವಾಗಿದೆ.

ಈ ವಿಷಯದಲ್ಲಿ ನಾವು ಅನೇಕ ಸಾರಿ ಬರೆದರೂ ಫಾರೆಸ್ಟ್ ಇಲಾಖೆಯು ಗಮನ ಕೊಡುವಂತೆ ಕಾಣುವದೇ ಇಲ್ಲ. ಆದ್ದರಿಂದ ಈ ಇಲಾಖೆಯ ಆಡಳಿತದ ಖರ್ಚು ನ್ಯಾಯವಾದ ಮಟ್ಟಕ್ಕೆ ಇಳಿಯುವವರೆಗೆ ಇಲಾಖೆಯ ಆಡಳಿತದ ಮೇಲೆ ಟೀಕಿಸುವದು ಅವಶ್ಯವಿದೆ. ಮದ್ರಾಸ್ ಎಕೌಂಟ್ಸ್ ಕಮಿಟಿಯಂತೆ ಇಲ್ಲಿಯೂ ಒಂದು ಕಮಿಟಿ ಇದ್ದಿದ್ದರೆ ಅದರ ಅಭಿಪ್ರಾಯವೂ ಬೇರೆಯಾಗುತ್ತಿರಲಿಲ್ಲ. ಮದ್ರಾಸ್ ಎಕೌಂಟ್ಸ್ ಕಮಿಟಿಯು ಮದ್ರಾಸು ಫಾರೆಸ್ಟುಗಳಲ್ಲಿ ಈಗಲೂ ನಡಿಯುತ್ತಿರುವ ವ್ಯಾಪಾರದ ಏರ್ಪಾಡುಗಳನ್ನು ಆಕ್ಷೇಪಿಸಿರುವದಾಗಿದೆ. ನಮ್ಮ ದೇಶದ ಇಲಾಖೆಯಲ್ಲಿ ಮೂವ್ರಕೂಟವನ್ನು ಕೈಬಿಟ್ಟಂದಿನಿಂದ ಅಂಥಾ ದೊಡ್ಡ ಕೆಲಸವ್ಯಾವದೂ ಇಲ್ಲದಿದ್ದರೂ ಗಂಧ ಒಂದು ಬಿಟ್ಟು ಮಿಕ್ಕ ಮರಗಳ ವ್ಯಾಪಾರವು ಲಾಭಕರವಾಗಿಲ್ಲವೆಂತಲೇ ನಮ್ಮ ಅಭಿಪ್ರಾಯವಾಗಿದೆ. ಫಾರೆಸ್ಟ್ ಇಲಾಖೆಯಲ್ಲಿ ಗಂಧದ ಮರದ ವ್ಯಾಪಾರಕ್ಕಾಗಿ ಆಗುವ ಖರ್ಚನ್ನೂ, ಅದರ ಉತ್ಪತ್ತಿಯನ್ನೂ ವಜಾ ಮಾಡಿದರೆ ಉಳಿದ ವ್ಯಾಪಾರದ ಉತ್ಪತ್ತಿಯಿಂದ ಆ ಇಲಾಖೆಯ ಖರ್ಚಿನ ಬಹಳ ಸ್ವಲ್ಪ ಭಾಗ ಮಾತ್ರ ಹುಟ್ಟುವ ಹಾಗೆ ಆಗುತ್ತದೆ. ಆದರೆ ಇಲಾಖೆಯ ಸಿಬ್ಬಂದಿಯಲ್ಲಿ ಅನೇಕರು ಫಾರೆಸ್ಟುಗಳನ್ನು ಮುಂದಿನ ಜನಾಂಗಕ್ಕಾಗಿ ಕಾದಿಡುವ ಮತ್ತು ಬೆಳಸುವ ಕೆಲಸದಲ್ಲಿ ನಿರತರಾಗಿದ್ದಾರೆಂತ ಹೇಳಬಹುದು. ಈ ವಾದವು ಸರಿಯೋ ಎಂಬದನ್ನು ಆಜಮಾಯಿಸಲಿಕ್ಕಾಗಿಯೇ ಒಂದು ಕಮಿಟಿ ಬೇಕೆಂತ ಹೇಳುವದಾಗಿದೆ. ಇಲಾಖೆಗೆ ಉತ್ಪತ್ತಿಯನ್ನು ಕೊಡುವ ಜಾತಿ ಮರಗಳಿರುವ ಪೂರ್ವ ಫಾರೆಸ್ಟುಗಳಿಗಾಗಿ ಎಷ್ಟು ಖರ್ಚಾಗುತ್ತದೆ, ಪಶ್ಚಿಮ ಸಾಲಿನ ಫಾರೆಸ್ಟುಗಳಿಗಾಗಿ ಎಷ್ಟು ಖರ್ಚಾಗುತ್ತದೆ, ಪೂರ್ವ ಫಾರೆಸ್ಟುಗಳಲ್ಲಿ ಆಗುವ ಖರ್ಚು ಅವಶ್ಯವೋ ಮತ್ತು ಫಾರೆಸ್ಟುಗಳೊಳಗೆ ಹೊಸತಾಗಿ ಆಗುತ್ತಿರುವ ಮತ್ತು ಆಗಬೇಕೆನ್ನುವ ಕಟ್ಟಡಗಳು ಅವಶ್ಯವಿದೆಯೋ ಇತ್ಯಾದಿ ಸಂಗತಿಗಳನ್ನು ಆಜಮಾಯಿಸಬೇಕಾಗಿದೆ. ಇಲಾಖೆಯವರು ಒತ್ತಾಯಪಡಿಸಿ ಕೇಳುವಾಗ ಹೆಚ್ಚಿನ ಖರ್ಚನ್ನು ಸರಕಾರವು ಮಂಜೂರು ಮಾಡುತ್ತಲೇ ಬರುತ್ತದೆ. ಹೆಚ್ಚಿನ ಸಿಬ್ಬಂದಿ ಇರುವದಕ್ಕಾಗಿಯೇ ಕೆಲವು ಖರ್ಚುಗಳು ಆಗುತ್ತಿವೆಯೆಂಬ ನಮ್ಮ ಸಂಶಯವು ನಿವಾರಣೆಯಾಗುವಂಥ ಸಮಾಧಾನವು ಇಲಾಖೆಯ ಅಧಿಕಾರಿಗಳಿಂದ ದೊರೆತಿರುವದಿಲ್ಲ.

ಈ ನಮ್ಮ ವಾದವು ಸರಿ ಎಂಬದಕ್ಕೆ ಚಿಕ್ಕದಾದರೂ ಒಂದು ಉದಾಹರಣೆಯು ನಮಗೆ ದೊರಕಿದೆ. ರಸ್ತೆಗೆ ತುಂಬಾ ಕೇಡು ಮಾಡುವ ಮತ್ತು ಕಾರ್‌ಗಳಿಗೂ, ಬಸ್ಸ್‌ಗಳಿಗೂ ಬೆಂಕಿಯಿಂದಲೂ, ಹೊಡೆತದಿಂದಲೂ ಅಪಾಯದ ಭೀತಿಯನ್ನು ಉಂಟು ಮಾಡುತ್ತಿರುವ ಸೆಂಟಿನಲ್ ಲಾರಿಯು ಕೆಲಸವನ್ನು ನಿಲ್ಲಿಸಬೇಕೆಂತ ಜನರ ಪ್ರತಿನಿಧಿಗಳು ವಾದಿಸಿದಾಗ ಈ ಲಾರಿಯಿಂದ ಲಾಭವಿದೆಯೆಂತ ಚೀಫ್ ಫಾರೆಸ್ಟ್ ಆಫೀಸರು ಕೌನ್ಸಿಲಿನಲ್ಲಿ ಜವಾಬು ಕೊಟ್ಟರು. ಆದರೆ ಚುನಾಯಿತ ಮೆಂಬರುಗಳು ಅಂಥಾ ಜವಾಬಿನಿಂದ ತೃಪ್ತರಾಗದೆ ಈ ಲಾರಿಯ ಜಮಾ ಖರ್ಚಿನ ಲೆಖ್ಖವನ್ನು ಸವಾಲ್ ಮೂಲಕ ಕೌನ್ಸಿಲಿನಲ್ಲಿ ಕೇಳಿದ್ದಕ್ಕೆ ಎರಡು ವರ್ಷಗಳಲ್ಲೂ 1000 ರೂಪಾಯಿಗೆ ಕಡಿಮೆ ಇಲ್ಲದೆ ನಷ್ಟವಿದೆಯೆಂಬ ಸಂಖ್ಯೆಗಳು ದೊರೆತವು. ಈ ಲಾರಿಯು ಮೂವ್ರಕೂಟದಿಂದ "ಹಿಂದ ಗಳ"ವಾಗಿದೆ. ಇದನ್ನು ಟ್ರಾಕ್ಟರಿನ ಸಂಗಡ ನಿಲ್ಲಿಸಲು ಬಿಡದೆ ಇದಕ್ಕೂ ಮತ್ತು ಇಲಾಖೆಯ ಕೆಲವು ಸಿಬ್ಬಂದಿಗೂ ಕೆಲಸ ಕೊಡುವದಕ್ಕಾಗಿ ಇದನ್ನು ಓಡಿಸುತ್ತಿದ್ದಾರೆ. ಇದರಿಂದ ಮಡಿಕೇರಿ ನಿವಾಸಿಗಳಿಗೆ ಸೌದೆ ದೊರಕಿಸಲಾಗುತ್ತದೆಯೆನ್ನುತ್ತಾರೆ. ಈ ಇಲಾಖೆಯು ಧರ್ಮ ನಡಿಸುವ ಸಂಸ್ಥೆಯಲ್ಲ. ಧರ್ಮ ನಡಿಸುವ ಸಂಸ್ಥೆಯಾದರೆ ದೇಶದ ಅನೇಕ ಭಾಗದವರಿಗೆಲ್ಲಾ ತುಂಬಾ ಸಹಾಯವಾಗುವ ದಿನಗಳಿಗೆ ಮಾಫಿಯಾಗಿ ಮೇವಿನ ಅನುಕೂಲ ಕೊಡಬಹುದಿತ್ತು. ಈ ಬಾಬಿನಿಂದ ಇಲಾಖೆಗೆ ಸುಮಾರು 1000 ರೂ. ಮಾತ್ರ ಉತ್ಪತ್ತಿಯಾಗಿದೆ. ಇಂಥಾ ಅಲ್ಪ ಪ್ರಯೋಜನವನ್ನು ಬಹು ಜನರ ಸಹಾಯಕ್ಕಾಗಿ ಬಿಟ್ಟುಕೊಡುವದಿಲ್ಲ. ಆದ್ದರಿಂದ ಸೆಂಟಿನಲ್ ಲಾರಿಯನ್ನು ಮಡಿಕೇರಿಯವರಿಗೆ ಧರ್ಮ ಮಾಡುವುದಕ್ಕಾಗಿ ಕೆಲಸ ಮಾಡಿಸುವದಾಗಿರಲಾರದು.

ದೇಶದ ಸರಕಾರದ ಉತ್ಪತ್ತಿಯು ಬೆಳೆಯಲು ಅನುಕೂಲವಿರುವದು ಈ ಇಲಾಖೆಯಲ್ಲಿ ಎಂತ ನಮಗೆ ಗೊತ್ತಿದೆ. ಈ ಇಲಾಖೆಯಲ್ಲಿ ದೊರೆಯುವ ವಸ್ತುಗಳಿಂದಲೂ ಲಾಭವಾಗುವದೋ ಅಥವಾ ಲಾಭವಾಗಬೇಕಾದರೆ ಏನೇನು ಏರ್ಪಾಡು ಮುಂದಾಗಿಯೇ ಮಾಡಿಕೊಳ್ಳಬೇಕು ಎಂಬ ಇತ್ಯಾದಿ ವಿಷಯಗಳನ್ನು ಆಜಮಾಯಿಸುವದು ಅವಶ್ಯವಾಗಿದೆ.

ಕೊಡಗಿನ ಹೈಸ್ಕೂಲ್‌ಗಳಲ್ಲಿ ಸಂಸ್ಕೃತ.

ಕೊಡಗಿನ ಹೈಸ್ಕೂಲ್‌ಗಳಲ್ಲಿ ಸಂಸ್ಕೃತ ಭಾಷೆಯನ್ನು ಕಲಿಯುವಷ್ಟು ಅನುಕೂಲವು ಮೂರು ವರ್ಷಗಳ ಕೆಳಗಿನವರೆಗೆ ಇರಲೇ ಇಲ್ಲ. ಈ ಲೋಪವನ್ನು ಹೋಗಲಾಡಿಸಲು ಕೊಡಗಿನ ಖಾಯಿದೆ ಮಂಡಳಿಯಲ್ಲಿ ಠರಾವು ಮಂಜೂರಾದದ್ದರ ಮೇಲೆ ಸರ್ಕಾರವು ಖಾಯಮಿಯಾಗಿ ಎರಡು ಹೈಸ್ಕೂಲ್‌ಗಳಲ್ಲೂ ಒಬ್ಬೊಬ್ಬ ಮಾಸ್ತರರುಗಳನ್ನು ನೇಮಿಸಿದರು. ಆ ಮಾಸ್ತರ್ ಪದವಿಗಳನ್ನು ಖಾಯಂ ಮಾಡಿರುವರಾಗಿ ತಿಳಿಯುತ್ತೇವೆ. ಇದಕ್ಕೆ ಅಧಿಕಾರಿಗಳನ್ನು ಅಭಿನಂದಿಸುತ್ತೇವೆ.

ಹೀಗೆ ಈ ಕೆಲಸವನ್ನು ಖಾಯಂ ಮಾಡಬೇಕಾದರೆ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಈ ಭಾಷೆಯನ್ನು ಕಲಿಯಲು ಕುತೂಹಲವುಳ್ಳವರಾಗಿದ್ದಾರೆಂಬುದನ್ನು ಸರಕಾರದವರು ತಿಳಿದುಕೊಂಡಿರಬಹುದು. ಪ್ರತಿ ಕ್ಲಾಸಿನಲ್ಲೂ ಅನೇಕ ವಿದ್ಯಾರ್ಥಿಗಳು ಸಂಸ್ಕೃತ ಕ್ಲಾಸಿಗೆ ಸೇರಿದ್ದಾರೆಂತ ನಮಗೂ ತಿಳಿದು ಬಂದಿದೆ. ಸಂಖ್ಯೆಗಳು ನಮಗೆ ದೊರೆತಿರುವದಿಲ್ಲ.

ಈ ಭಾಷೆಯು ಕನ್ನಡಕ್ಕಿಂತ ತುಂಬಾ ಕಷ್ಟವೆಂಬ ಭಯವು ದೇಶದಲ್ಲಿ ಇತ್ತು. ಈ ವರ್ಷ ಮಡಿಕೇರಿ ಹೈಸ್ಕೂಲಿನಿಂದ ಸ್ಕೂಲ್ ಫೈನಲ್ ಪರೀಕ್ಷೆಗೆ ಹೋದವರ ಸಂಸ್ಕೃತ ರಿಸಲ್ಟ್ ನೋಡಿದರೆ ಕೊಡಗಿನ ವಿದ್ಯಾರ್ಥಿಗಳಿಗೆ ಸಂಸ್ಕೃತ ಹೆಚ್ಚಿನ ಕಷ್ಟವೆಂತ ತಿಳಿಯುವದಿಲ್ಲ. ಒಬ್ಬ ವಿದ್ಯಾರ್ಥಿಯು ತಪ್ಪಸಲ್ ಸಂಸ್ಕೃತ ಮತ್ತು ಮೂವರು ಎಲಿಮೆಂಟರಿ ಸಂಸ್ಕೃತವನ್ನು ತೆಗೆದುಕೊಂಡವರಾಗಿದ್ದರು. ಎಲ್ಲರೂ ಈ ಭಾಗದಲ್ಲಿ ಪಾಸಾಗಿರುತ್ತಾರೆ. ಕೆಳಗಿನ ದರ್ಜೆಯಿಂದಲೇ ಕಲಿಯುತ್ತಾ ಬರಬೇಕಾಗಿದ್ದಷ್ಟು ಭಾಗವನ್ನೆಲ್ಲಾ ಬರೇ ಎರಡುವರೆ ವರ್ಷಗಳಲ್ಲಿ ವಿದ್ಯಾರ್ಥಿಗಳು ಸುಲಭದಲ್ಲಿ ಕಲಿತುಕೊಳ್ಳಬಹುದೆಂಬದು ಸ್ಪಷ್ಟವಾಗುತ್ತದೆ. ಹುಡುಗರಿಗೆ ದೊರೆತ ಬೋಧನೆಯೂ ಚೆನ್ನಾಗಿಯೇ ಇದ್ದಿರಬೇಕು. ವೀರರಾಜಪೇಟೆ ಶಾಲೆಯಿಂದ ಹೋದವರಲ್ಲಿ ಸಂಸ್ಕೃತವನ್ನು ತೆಗೆದುಕೊಂಡವರು ಇದ್ದರೋ ಇಲ್ಲವೋ ನಮಗೆ ಇನ್ನೂ ತಿಳಿದು ಬಂದಿರುವದಿಲ್ಲ.

ಹಿಂದೂ ಜನಾಂಗದ ಸಂಸ್ಕೃತಿಯ ವಾಯುವಾಗಿರುವ ಸಂಸ್ಕೃತವನ್ನು ಅಭ್ಯಾಸಿಸಲು ಸರಕಾರವು ಮಾಡಿಕೊಟ್ಟಿರುವ ಅನುಕೂಲವನ್ನು ಕೊಡಗಿನ ವಿದ್ಯಾರ್ಥಿಗಳು ಹೆಚ್ಚೆಚ್ಚಾಗಿ ಉಪಯೋಗಿಸಿಕೊಳ್ಳಬಹುದೆಂತ ನಮ್ಮ ಅಪೇಕ್ಷೆಯಾಗಿದೆ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು. ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ 33ರಲ್ಲಿ 12 ಜನರು ಪಾಸಾಗಿರುವರು. 1. ಕುಕ್ಕೆಮನೆ ವಿ. ನಾರಾಯಣ, 2. ಬಿಟ್ಟಿಯಂಡ ಕೆ. ಸುಬ್ಬಯ್ಯ, 3. ಮನೆಯಪಂಡ ಯಂ. ನಂಜಪ್ಪ, 4. ಚಾರಿರ ಎ. ಮಂದಣ್ಣ, 5. ನಾಪನೆರವಂಡ ಯಂ ಕರುಂಬಯ್ಯ, 6. ಚೌಂಡಿರ ಪಿ. ಮಾದಪ್ಪ, 7. ಮಕ್ಕಿ ಯಸ್. ರಾಮಯ್ಯ, 8. ಮಂಡೇಪಂಡ ಎ. ಐಯ್ಯಪ್ಪ, 9. ಬಿಟ್ಟಿಯಂಡ ಕೆ. ಸೋಮಯ್ಯ, 10. ಬಲ್ಲರಂಡ ಸಿ. ಪೊನ್ನಪ್ಪ, 11. ಪೈಕೆರ ಯಸ್. ಈರಪ್ಪ, 12. ಎ. ಎ. ಸನಿರಮುತ್ತು (ಕಮುಕೀಯ ಬ್.)

ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನಲ್ಲಿ 6ರಲ್ಲಿ 5 ವಿದ್ಯಾರ್ಥಿನಿಯರು ಪಾಸಾಗಿರುವರು. 1. ನಡಿಕೇರಿಯಂಡ ಯಸ್. ಕಾಮವ್ವ, 2. ಮಂಡೇಪಂಡ ಬಿ. ತಂಗಮ್ಮ, 3. ಕೋದಂಡ ಎ. ಮುತ್ತಮ್ಮ, 4. ಚೆನ್ನಿರ ಯಂ. ಗಂಗಮ್ಮ, 5. ಚೇರಂಡ ಟಿ. ಮುದ್ದಮ್ಮ.

ವೀರರಾಜಪೇಟೆ ಹೈಸ್ಕೂಲಿನಲ್ಲಿ 20ರಲ್ಲಿ 11 ಜನರು ತೇರ್ಗಡೆ ಹೊಂದಿರುವರು. 1. ಕೇಚಮಾಡ ಸಿ. ಬೆಳ್ಯಪ್ಪ, 2. ಮಂಡೇಪಂಡ ಯಂ. ಕಾಳಪ್ಪ, 3. ಕುಂಬೆರ ಬಿ. ಪೊನ್ನಪ್ಪ, 4. ಮಾಚಿಮಂಡ ಯಂ. ಗಣಪತಿ, 5. ಪೆಮ್ಮಂಡ ಬಿ. ಮುದ್ದಪ್ಪ, 6. ಮನೆಯಪಂಡ ಪಿ ಬೆಳ್ಯಪ್ಪ, 7. ಕನ್ನಂಡ ಯಸ್. ಪೊನ್ನಪ್ಪ, 8. ಐರಿ ಸಿ. ಮಂದು, 9. ಮಾಂಗೆರ ಯಸ್. ಪೊನ್ನಪ್ಪ, 10. ಕೋಡಿಮಣಿಯಂಡ ಯಸ್. ಕುಟ್ಟಪ್ಪ, 11. ನಡಿಕೇರಿಯಂಡ ಸಿ. ಬಿದ್ದಪ್ಪ. ಪ್ರವೇಟಾಗಿ ವೀರರಾಜಪೇಟೆಯಲ್ಲಿ ಪರೀಕ್ಷೆಗೆ ಹೋದ ಚೋನಿರ ಯಸ್. ಮಾದಪ್ಪ. ಬೆಂಗಳೂರಿನಲ್ಲಿ ಪರೀಕ್ಷೆಗೆ ಹೋದ ನಂದೇಟಿರ ಯಂ. ಸುಬ್ಬಯ್ಯ. ಪಾಸಾದ ಇವರೆಲ್ಲರಿಗೂ ನಮ್ಮ ಅಭಿನಂದನೆಗಳಿವೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಖು 9—6—28 ರಲ್ಲು ನಡೆಯಿತು. ಹಾಜರಿದ್ದವರು :— ರಾವ್ ಬಹದ್ದೂರ್ ಕೆ. ಅಪ್ಪಯ್ಯನವರು (ಪ್ರೆಸಿಡೆಂಟರು), ರಾವ್ ಸಾಹೇಬ್ ಪಿ ದೇವಯ್ಯನವರು, ಮೆ. ಗಳಾದ ಯನ್. ಪೊಣ್ಣಪ್ಪನವರು, ಕೆ. ಪಿ. ಚಿಣ್ಣಪ್ಪನವರು, ಎ. ಕೆ. ಕೃಷ್ಣಯ್ಯನವರು, ಪಿ. ಎ. ಚಂಗಪ್ಪನವರು, ಸಿ. ಯನ್. ವಂಕಪ್ಪಯ್ಯನವರು, (ಗೌರವ ಸೆಕ್ರೆಟರಿ.) ಮತ್ತು ಕೆ. ಯಸ್. ಸುಬ್ರಾಯರು, (ಸಹಕಾರಿ ಸಂಘಗಳ ರಿಜಿಸ್ಟ್ರಾರರವರು.)

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಮೇ ತಿಂಗಳ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲ ಮಂಜೂರು ಮಾಡಲಾಯಿತು 1. ಮಡಿಕೇರಿ ಮಹದೇವಪೇಟೆ ಸೊಸೈಟಿಗೆ ರೂ. 1000, 2. ಬಿಟ್ಟಂಗಾಲಕ್ಕೆ ರೂ. 3000, 3. ಗೌಡಳ್ಳಿಗೆ ರೂ. 500, 4. ನೆಲಜಿಗೆ ರೂ. 500, 5. ಈಚೂರಿಗೆ ರೂ. 600 6. ವಾಲನೂರುತ್ಯಾಗತ್ತೂರಿಗೆ ರೂ. 800, 7. ಬಲಮುರಿಗೆ ರೂ. 1750, 8. ಹುದಿಕೇರಿಗೆ ರೂ. 1000, 9. ತೂಚಮಕೇರಿಗೆ ರೂ. 1000, 10. ಮರೆನಾಡಿಗೆ ರೂ. 1000, 11. ಹೊದ್ದೂರಿಗೆ ರೂ. 1500, 12. ಪೊನ್ನಂಪೇಟೆಕ್ಕೆ ರೂ. 2000.

4. ಬೈರಂಬಾಡ, ಕುಕ್ಲೂರು, ಕಾರ್ಮಾಡು, ಕೈಕೇರಿ, ಶನಿವಾರಸಂತೆ ಮತ್ತು ಐಮಂಗಲ ಸೊಸೈಟಿಗಳಿಗೆ ಸಾಲ ಮಂಜೂರಾಗಲಿಲ್ಲ.

ಕೆ ಅಪ್ಪಯ್ಯ,
(ಅಧ್ಯಕ್ಷರು.)

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ನೇ ಭಾಗದಲ್ಲಿ ೪೦ನೇ ಪ್ರಕರಣ.

ಸಣ್ಣ ಸತ್ಯಾಗ್ರಹ.

ನಾನು ಹೀಗೆ ಧರ್ಮದ ದೃಷ್ಟಿಯಿಂದ ಯುದ್ಧದಲ್ಲಿ ಪ್ರವೇಶಿಸಿದರೂ ಅದೃಷ್ಟವಶಾತ್ ನಾನು ಅದರಲ್ಲಿ ಸ್ವಂತವಾಗಿ ಭಾಗಿಯಾಗಲು ಆಗಲಿಲ್ಲವಷ್ಟೇ ಅಲ್ಲದೆ ಅಂತಹ ಇಕ್ಕಟ್ಟಿನ ಸಮಯದಲ್ಲಿಯೂ ಸಣ್ಣ ಸತ್ಯಾಗ್ರಹವನ್ನು ನಡೆಸಬೇಕಾಗಿ ಬಂತು.

ನಮ್ಮ ಹೆಸರುಗಳನ್ನು ನೋಂದಿ ಒಪ್ಪಿ ಪಟ್ಟಿಗೆ ಸೇರಿಸಿದೊಡನೆಯೇ ನಮಗೆಲ್ಲಾ ಕವಾತನ್ನು ಕಲಿಸಲು ಒಬ್ಬ ಅಧಿಕಾರಿಯನ್ನು ನೇಮಿಸಿದರೆಂದು ನಾನು ಆಗಲೇ ಹೇಳಿದ್ದೇನೆ. ಕೇವಲ ಯುದ್ಧ ಶಿಕ್ಷಣಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಮಾತ್ರ ಆ ಅಧಿಕಾರಿಯು ನಮ್ಮ ಒಡೆಯನೆಂದೂ ಉಳಿದ ವಿಚಾರಗಳಲ್ಲೆಲ್ಲಾ ನಾನೇ ನಮ್ಮ ದಳದ ನಾಯಕನೆಂದೂ ಒಳಸಿಯುವುಗಳಿಗೆಲ್ಲಾ ದಳದವರು ನನಗೆ ಜವಾಬ್ದಾರರೆಂದೂ ಅಧಿಕಾರಿಯು ದಳದೊಡನೆ ವ್ಯವಹಾರವನ್ನು ನನ್ನ ಮೂಲಕ ನಡೆಸಬೇಕೆಂದೂ ನಾವೆಲ್ಲರೂ ತಿಳಿದುಕೊಂಡಿದ್ದೆವು. ಆದರೆ ಮೊಟ್ಟ ಮೊದಲಿನಿಂದ ಅಧಿಕಾರಿಯು ಅಂತಹ ಭ್ರಮೆಗೇನೂ ಅವಕಾಶ ಕೊಡಲಿಲ್ಲ.

ಸೊರಾಬ್ಜಿ ಅದಾಜಣಿಯವರು ಚತುರರಾಗಿದ್ದರು. ಅವರು ನನಗೆ ಎಚ್ಚರಿಕೆ ಕೊಟ್ಟರು. "ಈ ಮನುಷ್ಯನ ವಿಚಾರದಲ್ಲಿ ಜೋಪಾನದಿಂದಿರಿ. ಈತನು ನಮ್ಮ ಮೇಲೆ ದರ್ಬಾರು ನಡೆಸಬೇಕೆಂದಿರುವಂತೆ ತೋರುತ್ತದೆ. ಈತನ ಆಜ್ಞೆಗಳು ನಮಗೆ ಬೇಕಿಲ್ಲ. ಈತನನ್ನು ನಮ್ಮ ಶಿಕ್ಷಕನೆಂದು ಭಾವಿಸಲು ಸಿದ್ಧರಾಗಿದ್ದೇವೆ. ಆದರೆ ನಮಗೆ ಕವಾತು ಕಲಿಸಲು ಈತನು ನೇಮಿಸಿರುವ ಯುವಕರು ಕೂಡ ತಾವು ನಮ್ಮ ಧಣಿಗಳಾಗಿ ಬಂದಿರುವೆವೆಂದು ತಿಳಿದುಕೊಂಡಿದ್ದಾರೆ."

ಈ ಯುವಕರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿದ್ದರು. ಅವರು ನಮಗೆ ಶಿಕ್ಷಣಕೊಡಲು ಬಂದಿದ್ದರು. ಮುಖ್ಯಾಧಿಕಾರಿಯು ಅವರನ್ನು ನಮ್ಮ ದಳವಿಭಾಗಗಳ ನಾಯಕರನ್ನಾಗಿ ನೇಮಿಸಿದ್ದನು.

ನಾನು ಕೂಡ ಅಧಿಕಾರಿಯು ಮಿತಿಮೀರಿದ ದರ್ಪವನ್ನು ಲಕ್ಷಿಸದೆ ಇರಲಿಲ್ಲ. ಆದರೆ ನಾನು ಸೊರಾಬ್ಜಿಯವರಿಗೆ ಚಿಂತಿಸಬೇಡಿರೆಂದು ಹೇಳಿ ಅವರನ್ನು ಸಮಾಧಾನಪಡಿಸಲೆತ್ನಿಸಿದೆನು. ಅವರು ಸುಲಭವಾಗಿ ಒಪ್ಪುವ ಮನುಷ್ಯರಾಗಿರಲಿಲ್ಲ.

"ನೀವು ಅತಿ ವಿಶ್ವಾಸಶೀಲರು. ಈ ಮನುಷ್ಯರು ಹಾಳು ಮಾತಿನಿಂದ ನಿಮ್ಮ ಕಣ್ಣಿಗೆ ಮಣ್ಣೆರಚುತ್ತಾರೆ. ಕಡೆಗೆ ನೀವು ಕಣ್ತೆರೆದಾಗ 'ನಡೆಯಿರಿ ಸತ್ಯಾಗ್ರಹ ಮಾಡೋಣ' ಎಂದು ಹೇಳಿ ನೀವು ತೊಳಲುವುದಲ್ಲದೆ ನಿಮ್ಮ ಜೊತೆಗೆ ನಮ್ಮನ್ನೂ ತೊಳಲಿಸುತ್ತೀರಿ," ಎಂದು ಅವರು ನಸುನಗುತ್ತಾ ಹೇಳಿದರು.

"ನನ್ನ ಸಹವಾಸಕ್ಕೆ ಸಿಕ್ಕಿದ ಮೇಲೆ ತೊಳಲುವುದಲ್ಲದೆ ಮತ್ತೇನನ್ನು ನಿರೀಕ್ಷಿಸುತ್ತೀರಿ? ಸತ್ಯಾಗ್ರಹಿಗಳು ಹುಟ್ಟಿರುವುದೇ ಕಣ್ಣಿಗೆ ಮಣ್ಣೆರಚಿಸಿಕೊಳ್ಳುವುದಕ್ಕೆ. ಅಧಿಕಾರಿಯು ನಮ್ಮನ್ನು ಮೋಸಪಡಿಸಲಿ. ಮೋಸಗಾರನು ಅಂತ್ಯದಲ್ಲಿ ತನ್ನನ್ನು ತಾನೇ ಮೋಸಪಡಿಸಿಕೊಳ್ಳುವನೆಂದು ನಾನು ನಿಮಗೆ ಸಾವಿರ ಬಾರಿ ಹೇಳಿಲ್ಲವೆ?"

ಇದನ್ನು ಕೇಳಿ ಸೊರಾಬ್ಜಿಯವರು ಗಟ್ಟಿಯಾಗಿ ನಕ್ಕು, "ಸರಿ ಸರಿ ಕಣ್ಣಿಗೆ ಮಣ್ಣೆರಚಿಕೊಳ್ಳುತ್ತಾ ಇರಿ. ಒಂದಲ್ಲ ಒಂದು ದಿನ ನೀವು ಸತ್ಯಾಗ್ರಹದಲ್ಲಿ ಮರಣ ಹೊಂದಿ ನಮ್ಮಂಥ ನಿರ್ಭಾಗ್ಯರನ್ನೂ ಜೊತೆಗೆಳೆದುಕೊಂಡು ಹೋಗುತ್ತೀರಿ" ಎಂದರು.

ಈ ಮಾತುಗಳು ಅಸಹಕಾರದ ವಿಷಯವಾಗಿ ದಿವಂ. ಮಿಸ್ ಎಮಿಲಿ ಹಾಬ್‌ಹೌಸರು ನನಗೆ ಬರೆದುದನ್ನು ನನ್ನ ಸ್ಮರಣೆಗೆ ತರುತ್ತವೆ. "ಸತ್ಯದ ಸಲುವಾಗಿ ಇಂದೋ ನಾಳೆಯೋ ನೀವು ಗಲ್ಲಿನಲ್ಲಿ ತಲೆ ಕಳೆದುಕೊಂಡರೆ ನನಗೇನೂ ಆಶ್ಚರ್ಯವಾಗಲಾರದು. ಭಗವಂತನು ನಿಮಗೆ ಸತ್ಪಥವನ್ನು ತೋರಿಸಿ ನಿಮ್ಮನ್ನು ರಕ್ಷಿಸಲಿ."

ಸೊರಾಬ್ಜಿಯವರೊಡನೆ ಈ ಸಂವಾದವು ಅಧಿಕಾರಿಯು ನಿಯಮಿತವಾದ ಸ್ವಲ್ಪ ಕಾಲದಲ್ಲಿಯೇ ನಡೆಯಿತು. ಕೆಲವು ದಿವಸಗಳಲ್ಲಿಯೇ ಅಧಿಕಾರಿಯೊಡನೆ ನಮ್ಮ ಸಂಬಂಧವು ಸಹನಾತೀತವಾಗಿ ಪರಿಣಮಿಸಿತು. ಹದಿನಾಲ್ಕು ದಿವಸದ ಉಪವಾಸವಾದ ಮೇಲೆ ನನ್ನ ಶರೀರಬಲವು ಯಥಾಸ್ಥಿತಿಗೆ ಬರುವುದಕ್ಕೆ ಮುಂಚೆಯೇ ನಾನು ಕವಾತು ಮಾಡತೊಡಗಿದೆನು. ಇದಕ್ಕಾಗಿ ಅನೇಕ ವೇಳೆ ಮನೆಯಿಂದ ಗೊತ್ತಾದ ಸ್ಥಳಕ್ಕೆ ಸುಮಾರು ಎರಡು ಮೈಲಿ ದೂರ ನಡೆಯುತ್ತಿದ್ದೆನು. ಇದರಿಂದ ನನಗೆ ಪಕ್ಕೆಶೂಲೆಯುಂಟಾಗಿ ನಾನು ಹಾಸಿಗೆ ಹಿಡಿದು ಮಲಗಿದೆನು. ಈ ಸ್ಥಿತಿಯಲ್ಲಿರುವಾಗ ನಾನು ವಾರದ ಕೊನೆಯಲ್ಲಿ ಪ್ರವಾಸ ಶಿಕ್ಷಣಕ್ಕೆ ಹೋಗುತ್ತಿದ್ದೆನು. ಇಲ್ಲಿಯೇ ಸತ್ಯಾಗ್ರಹ ನಡೆಸುವ ಸಂದರ್ಭವೊದಗಿದುದು.

ಅಧಿಕಾರಿಯು ತನ್ನ ಅಟೋಪವನ್ನು ಮಿತಿಮೀರಿ ನಡೆಸತೊಡಗಿದನು. ಯುದ್ಧದ ವಿಚಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿಯೇ ಅಲ್ಲದೆ ಇತರ ವಿಷಯಗಳಲ್ಲಿ ಕೂಡ ತಾನೇ ನಮ್ಮ ಯಜಮಾನನೆಂದು ಖಂಡಿತದಿಂದ ಹೇಳಿ ನಮಗೆ ತನ್ನ ಅಧಿಕಾರದ ರುಚಿಯನ್ನೂ ತೋರಿಸಿದನು. ಸೊರಾಬ್ಜಿಯವರು ನನ್ನ ಹತ್ತಿರಕ್ಕೆ ಓಡಿಬಂದರು. ಅವರು ಈ ನಿರಂಕುಶ ಪ್ರವರ್ತನೆಯನ್ನು ಸಹಿಸಲು ಸಿದ್ಧರಾಗಿರಲಿಲ್ಲ. ಅವರು "ಎಲ್ಲಾ ಆಜ್ಞೆಗಳೂ ನನಗೆ ನಿಮ್ಮ ಮೂಲಕವೇ ಬರಬೇಕು. ನಾವು ಇನ್ನೂ ಶಿಕ್ಷಣ ಶಿಬಿರದಲ್ಲಿಯೇ ಇದ್ದೇವೆ. ಆದರೂ ಎಲ್ಲಾ ವಿಧವಾದ ಅರ್ಥವಿಲ್ಲದ ಆಜ್ಞೆಗಳನ್ನು ಮಾಡುತ್ತಿದ್ದಾರೆ. ನಮಗೂ, ನಮ್ಮ ಶಿಕ್ಷಣಕ್ಕಾಗಿ ನೇಮಿಸಲ್ಪಟ್ಟಿರುವ ಯುವಕರಿಗೂ ಮಧ್ಯೆ ಸಲ್ಲದ ಭೇದಗಳನ್ನು ಮಾಡುತ್ತಿದ್ದಾರೆ. ಇದರ ವಿಷಯವಾಗಿ ನಾವು ಅಧಿಕಾರಿಯೊಡನೆ ಕಡಾಖಂಡಿತವಾಗಿ ಮಾತನಾಡಬೇಕು. ಇಲ್ಲದಿದ್ದರೆ ಕೆಲಸ ನಡೆಯುವ ಹಾಗಿಲ್ಲ. ನಮ್ಮ ಜೊತೆಗೆ ದಳಕ್ಕೆ ಸೇರಿರುವ ಭಾರತೀಯ ವಿದ್ಯಾರ್ಥಿಗಳೂ, ಇತರರೂ ಅರ್ಥವಿಲ್ಲದ ಆಜ್ಞೆಗಳನ್ನು ಮನ್ನಿಸುವುದಿಲ್ಲ. ಆತ್ಮಗೌರವಕ್ಕೋಸ್ಕರ ಕೈಗೊಂಡಿರುವ ಕಾರ್ಯದಲ್ಲಿ ಮಾನಕ್ಕೆ ಚ್ಯುತಿಬಂದರೆ ತಡೆದುಕೊಂಡಿರಲಾಗುವುದಿಲ್ಲ" ಎಂದು ಹೇಳಿದರು.

ನಾನು ಅಧಿಕಾರಿಯ ಬಳಿಗೆ ಹೋಗಿ ನನಗೆ ತಿಳಿದುಬಂದ ದೂರುಗಳನ್ನು ಆತನ ಲಕ್ಷ್ಯಕ್ಕೆ ತಂದೆನು. ಅವುಗಳನ್ನು ಬರಹದ ಮೂಲಕ ತಿಳಿಸಬೇಕೆಂದು ಆತನು ನನಗೆ ಕಾಗದ ಬರೆದನು. ಅದರಲ್ಲಿಯೇ "ದೂರು ಹೇಳುವವರು ಆಗ ನೇಮಿಸಲ್ಪಟ್ಟಿರುವ ತಮ್ಮ ದಳವಿಭಾಗದ ನಾಯಕರ ಮೂಲಕ ಅವುಗಳನ್ನು ನನಗೆ ತಿಳಿಸುವುದೇ ಸರಿಯಾದ ಮಾರ್ಗವೆಂದೂ ನಾಯಕರು ಶಿಕ್ಷಕರ ಮೂಲಕ ನನಗೆ ತಿಳಿಸುವರೆಂದೂ ಅವರಿಗೆ ಹೇಳಿ" ಎಂದೂ ಬರೆದನು.

ಇದಕ್ಕೆ ನಾನು "ಯಾವ ಅಧಿಕಾರವೂ ನನ್ನದೆಂದು ಹೇಳುವುದಿಲ್ಲ. ಸೈನಿಕರ ದೃಷ್ಟಿಯಿಂದ ನಾನು ಸಾಮಾನ್ಯ ಸಿಪಾಯಿಗಿಂತ ಹೆಚ್ಚಿನವನೇನೂ ಅಲ್ಲ. ಆದರೆ ನಾನು ಸ್ವಯಂಸೇವಕ ದಳದ ಅಧ್ಯಕ್ಷನಾದುದರಿಂದ ನನ್ನನ್ನು ಅನಧಿಕಾರಿಯಾದ ಅವರ ಪ್ರತಿನಿಧಿಯನ್ನಾಗಿರಲು ಬಿಡುವರೆಂದು ತಿಳಿದುಕೊಂಡಿದ್ದೆನು" ಎಂದು ಉತ್ತರಕೊಟ್ಟೆನು. ಅದರಲ್ಲಿಯೇ ನಾನು ನನ್ನ ಲಕ್ಷ್ಯಕ್ಕೆ ಬಂದಿದ್ದ ಕುಂದುಕೊರತೆಗಳನ್ನು ಎಂದರೆ ದಳದವರ ಅಭಿಪ್ರಾಯವನ್ನು ಗಣಿಸದೆ ದಳವಿಭಾಗಗಳಿಗೆ ನಾಯಕರನ್ನು ನೇಮಿಸಿದುದರಿಂದ ಬಹು ಅತೃಪ್ತಿಗೆ ಕಾರಣವಾಗಿದ್ದಿತೆಂದೂ, ಅವರನ್ನು ಹಿಂದಕ್ಕೆ ಕರೆಸಿ ದಳವು ಹೊಸನಾಯಕರನ್ನು ಚುನಾಯಿಸಲು ಬಿಡಬೇಕೆಂದೂ ಆದರೆ ಈ ಚುನಾವಣೆಯು ಅಧಿಕಾರಿಯ ಅನುಮತಿಯಿಲ್ಲದೆ ಕ್ರಮವಾಗತಕ್ಕುದಲ್ಲವೆಂದೂ ಬರೆದೆನು.

ಇದು ಅಧಿಕಾರಿಗೆ ಸರಿದೋರಲಿಲ್ಲ. ದಳ ವಿಭಾಗದ ನಾಯಕರನ್ನು ದಳದವರೇ ಚುನಾಯಿಸುವುದು ಸೇನಾನಿಯ ಭಾವಕ್ಕೇ ವಿರುದ್ಧವೆಂದೂ ನೇಮಿಸಿದ ನಾಯಕರನ್ನು ಹಿಂದಕ್ಕೆ ಕರೆಸುವುದರಿಂದ ದಳದ ಕಟ್ಟು ಸಡಿಲವಾಗುವುದೆಂದೂ ಆತನು ಹೇಳಿದನು.

ಆದುದರಿಂದ ನಾವು ಸಭೆಗೂಡಿ ಅದರಲ್ಲಿ ಹಿಂದಕ್ಕೆ ಬಂದು ಬಿಡಬೇಕೆಂದು ನಿರ್ಧರಿಸಿದೆವು. ನಾನು ಅಲ್ಲಿದ್ದವರಿಗೆ ಸತ್ಯಾಗ್ರಹದ ಗಂಭೀರ ಪರಿಣಾಮಗಳನ್ನು ತಿಳಿಸಿದೆನು. ಆದರೂ ನಿಯಮಿತರಾದ ದಳವಿಭಾಗಗಳ ನಾಯಕರನ್ನು ಹಿಂದಕ್ಕೆ ಕರೆದು ದಳದವರಿಗೇ ತಮ್ಮ ನಾಯಕರನ್ನು ಚುನಾಯಿಸುವ ಅವಕಾಶವನ್ನು ಕೊಡದಿದ್ದರೆ ದಳದವರು ಇನ್ನು ಮುಂದೆ ಕವಾತು ಮಾಡದೆಯೂ, ವಾರದ ಕೊನೆಯಲ್ಲಿ ಪ್ರವಾಸ ಶಿಕ್ಷಣಕ್ಕೆ ಹೋಗದೆಯೂ ನಿಲ್ಲಬೇಕಾಗುವುದು ಎಂಬ ಗೊತ್ತುವಳಿಯು ಬಹುಮತದಿಂದ ಸ್ವೀಕೃತವಾಯಿತು.

ಆ ಮೇಲೆ ನಾನು ಅಧಿಕಾರಿಗೆ, ನನ್ನ ಸೂಚನೆಯನ್ನು ನಿರಾಕರಿಸಿ ಆತನು ಬರೆದ ಕಾಗದದಿಂದ ನನಗೆ ಎಷ್ಟು ಆಶಾಭಂಗವಾಯಿತೆನ್ನುವುದನ್ನು ತಿಳಿಸಿ ಆತನಿಗೊಂದು ಕಾಗದವನ್ನು ಬರೆದೆನು. ಅಧಿಕಾರ ನಡೆಸಲು ನನಗೇನೂ ಆಸೆಯಿಲ್ಲವೆಂದೂ, ಸೇವೆಮಾಡಬೇಕೆಂಬುದೇ ನನ್ನ ಪ್ರಬಲವಾದ ಇಚ್ಛೆಯೆಂದೂ ಆತನಿಗೆ ಭರವಸೆ ಹೇಳಿದೆನು. ಹಿಂದಿನ ಘಟನೆಯೊಂದನ್ನು ಆತನ ಲಕ್ಷ್ಯಕ್ಕೆ ತಂದೆನು. ಬೋಯರ್ ಯುದ್ಧದ ಕಾಲದಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಶುಶ್ರೂಷಾ ದಳದಲ್ಲಿ ನನಗೆ ಯಾವ ಅಧಿಕಾರದ ಸ್ಥಾನವಿಲ್ಲದಿದ್ದರೂ ನನಗೂ, ನಮ್ಮ ಮುಖ್ಯಾಧಿಕಾರಿಗಳಾಗಿದ್ದ ಕರ್ನಲ್ ಗಾಲ್ವೆಯವರಿಗೂ ಮಧ್ಯೆ ಒಂದು ಸಲ ಕೂಡ ಅಸಮಾಧಾನಕ್ಕೆ ಕಾರಣವಾಗಿರಲಿಲ್ಲವೆಂದೂ, ದಳದ ಇಷ್ಟವನ್ನು ತಿಳಿದುಕೊಳ್ಳುವುದಕ್ಕಾಗಿ ನನ್ನನ್ನು ವಿಚಾರಿಸದೆ ಅವರು ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲವೆಂದೂ ಆತನಿಗೆ ಹೇಳಿದೆನು. ಈ ಕಾಗದದ ಜೊತೆಗೆ ಹಿಂದಿನ ಸಂಜೆ ನಾವು ಮಾಡಿದ್ದ ಗೊತ್ತುವಳಿಯ ಪ್ರತಿಯೊಂದನ್ನೂ ಇಟ್ಟು ಕಳುಹಿದೆನು.

ಇದರಿಂದ ಅಧಿಕಾರಿಯ ಮೇಲೆ ಪರಿಣಾಮವೇನೂ ಉಂಟಾಗಲಿಲ್ಲ. ಸಭೆಯೂ, ಗೊತ್ತುವಳಿಯೂ ದೊಡ್ಡ ನಿಯಮ ಭಂಗವೆಂದು ಆತನಿಗೆ ತೋರಿತು!

ಇದರ ಮೇಲೆ ನಾನು ಹಿಂದೂಸ್ಥಾನದ ಮೇಲ್ವಿಚಾರಕರಾದ ಸಚಿವರಿಗೆ ಎಲ್ಲಾ ವಿಷಯಗಳನ್ನೂ ವಿಶದಗೊಳಿಸಿ ಗೊತ್ತುವಳಿಯ ನಕಲೊಂದನ್ನು ಇಟ್ಟು ಕಾಗದ ಬರೆದೆನು. ಅವರು ದಕ್ಷಿಣ ಆಫ್ರಿಕದಲ್ಲಿನ ಸ್ಥಿತಿಯೂ ಬೇರೆಯಾಗಿತ್ತೆಂದೂ ದಳವಿಭಾಗಗಳ ನಾಯಕರನ್ನು ಸೇನಾ ನಿಯಮದ ಪ್ರಕಾರ ಮುಖ್ಯಾಧಿಕಾರಿಯೇ ನೇಮಿಸಬೇಕೆಂದೂ ಆದರೆ ಮುಂದೆ ಅವರನ್ನು ಗೊತ್ತು ಮಾಡಬೇಕೆಂಬುದಾಗಿ ಮುಖ್ಯಾಧಿಕಾರಿಯು ನನ್ನ ಸಲಹೆಗೂ ಗಮನಕೊಡುವನೆಂದೂ ಉತ್ತರ ಬರೆದರು.

ಇದಾದ ಮೇಲೆ ನಮ್ಮಿಬ್ಬರಿಗೂ ಇನ್ನೂ ಬೇಕಾದಷ್ಟು ಪತ್ರವ್ಯವಹಾರ ನಡೆಯಿತು. ಆದರೆ ನಾನೀ ವಿಷಾದ ಪ್ರಸಂಗವನ್ನು ದೀರ್ಘವಾಗಿ ವರ್ಣಿಸಲು ಇಷ್ಟವಿಲ್ಲ. ಹಿಂದೂಸ್ಥಾನದಲ್ಲಿ ನಾವು ದಿನವೂ ಪಡೆಯುವ ಅನುಭವಕ್ಕೆ ತಕ್ಕ ಹಾಗೆ ಇದೂ ಇದ್ದಿತೆಂದು ಹೇಳಿದರೆ ಸಾಕು. ಬೆದರಿಕೆಯಿಂದಲೂ, ಕೌಶಲದಿಂದಲೂ ಅಂತು ಅಧಿಕಾರಿಯು ನಮ್ಮ ದಳದಲ್ಲಿ ಭೇದವನ್ನು ಹುಟ್ಟಿಸಿದನು. ಗೊತ್ತುವಳಿಯ ಪರವಾಗಿ ಅಭಿಮತ ಕೊಟ್ಟವರಲ್ಲಿ ಕೆಲವರು ಅಧಿಕಾರಿಯ ಬೆದರಿಕೆಗೆ ಬಗ್ಗಿಯೋ, ಮಾತಿಗೆ ಮರುಳಾಗಿಯೋ ತಮ್ಮ ವಚನಕ್ಕೆ ತಪ್ಪಿದರು.

ಸುಮಾರು ಈ ಸಮಯದಲ್ಲಿ ನೆಟ್ಲಿ ಆಸ್ಪತ್ರೆಗೆ ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚು ಮಂದಿ ಗಾಯ ಹೊಂದಿದ ಸಿಪಾಯಿಗಳು ಬಂದರು. ನಮ್ಮ ದಳದವರಿಗೆ ಅವರ ಸೇವೆಗೆ ಹೋಗಬೇಕೆಂದು ಆಜ್ಞೆಯಾಯಿತು. ಅಧಿಕಾರಿಯು ಯಾರು ಯಾರನ್ನು ಒಪ್ಪಿಸಲು ಸಾಧ್ಯವಾಯಿತೋ ಅವರು ನೆಟ್ಲಿಗೆ ಹೋದರು. ಉಳಿದವರು ಹೋಗುವುದಿಲ್ಲವೆಂದು ಹೇಳಿದರು. ನಾನು ಹಾಸಿಗೆ ಹಿಡಿದು ಮಲಗಿದ್ದೆನು. ಆದರೂ ನಮ್ಮ ದಳದವರೊಡನೆ ವ್ಯವಹಾರ ನಡೆಸುತ್ತಿದ್ದೆನು. ಸಹಾಯಕ ಸಚಿವರಾಗಿದ್ದ ಮಿ. ರಾಬರ್ಟ್ಸರು ಆ ಕಾಲದಲ್ಲಿ ಅನೇಕ ಸಲ ನನ್ನನ್ನು ನೋಡಲು ಬಂದು ನನಗೆ ಮನ್ನಣೆ ಮಾಡಿದರು. ಇತರರು ಕೆಲಸಕ್ಕೆ ಹೋಗುವಂತೆ ನಾನು ಪ್ರೇರಿಸಬೇಕೆಂದು ಅವರು ನನ್ನನ್ನು ಒತ್ತಾಯ ಮಾಡಿದರು. ಇವರೆಲ್ಲರೂ ಸೇರಿ ಬೇರೆ ದಳವಾಗಬೇಕೆಂದೂ, ನೆಟ್ಲಿ ಆಸ್ಪತ್ರೆಯಲ್ಲಿ ಅವರು ಅಲ್ಲಿಯ ಮುಖ್ಯಾಧಿಕಾರಿಗೆ ಮಾತ್ರ ಜವಾಬ್ದಾರರಾಗಿರುವುದೆಂದೂ ಹಾಗಿದ್ದುದರಿಂದ ಆತ್ಮಗೌರವವು ಹಾನಿಯಾಗುವ ಸಂಭವವಿಲ್ಲವೆಂದೂ, ಇದರಿಂದ ಸರಕಾರಕ್ಕೆ ಸಮಾಧಾನವಾಗುವುದೆಂದೂ ಆಸ್ಪತ್ರೆಯಲ್ಲಿದ್ದ ನೂರಾರು ಮಂದಿ ಗಾಯಹೊಂದಿದವರಿಗೆ ಸಹಾಯಮಾಡಿದಂತಾಗುವುದೆಂದೂ ಸೂಚಿಸಿದರು. ಈ ಸಲಹೆಯು ನನ್ನ ಸಂಗಾತಿಗಳಿಗೂ, ನನಗೂ ಸಂತೋಷಕರವಾದುದರ ಫಲವಾಗಿ ಹಿಂದೆ ನಿಂತವರು ಕೂಡ ನೆಟ್ಲಿಗೆ ಹೋದರು.

ಆದರೆ ನಾನೊಬ್ಬನು ಮಾತ್ರ ಹಿಂದುಳಿದು ಹಾಸಿಗೆ ಹಿಡಿದು ಮಲಗಿದ ಸ್ಥಿತಿಯಲ್ಲಿಯೇ ಗೆಲುಮೊಗದಿಂದಿರಲು ಯತ್ನಿಸುತ್ತಿದ್ದೆನು.

೩ನೆಯ ಕರ್ನಾಟಕ ಏಕೀಕರಣ ಪರಿಷತ್ತು:

೨೨ ಹಾಗು ೨೩ ನೇ ಮೇ ತಾರೀಖುಗಳಲ್ಲಿ ಕೂಡಿದ ೩ನೆಯ ಕರ್ನಾಟಕ ಏಕೀಕರಣ ಪರಿಷತ್ತಿನಲ್ಲಿ ಸ್ವೀಕರಿಸಲ್ಪಟ್ಟ ನಿರ್ಣಯಗಳು.—

೧. ಕರ್ನಾಟಕ ಏಕೀಕರಣ ಸಂಬಂಧವಾಗಿ ಅವಿಶ್ರಾಂತ ಪರಿಶ್ರಮಪಟ್ಟು, ಕರ್ನಾಟಕದ ಸೇವೆಯಲ್ಲಿ ಸತತ ನಿರತರಾಗಿದ್ದ ಶ್ರೀ. ರಾಘವೇಂದ್ರರಾವ ಕಬಡಾ ಇವರ ಆಕಸ್ಮಿಕ ಮತ್ತು ಅಕಾಲಿಕ ನಿಧನದ ಬಗ್ಗೆ ಈ ಸಭೆಯು ಅಂತಃಕರಣಪೂರ್ವಕವಾದ ದುಃಖವನ್ನು ವ್ಯಕ್ತಪಡಿಸುತ್ತದೆ.

೨. ಅಖಿಲ ಹಿಂದುಸ್ಥಾನದ ಶಾಸನ [illegible] ಮುಖ್ಯಾಧಿಕಾರಿಗಳಾಗಿದ್ದ ರಾ. ಬಾ. ಹೆಚ್. ಕೃಷ್ಣಶಾಸ್ತ್ರಿಗಳವರು ಕೆಲಸದಿಂದ ನಿವೃತ್ತರಾದ ಕೆಲವು ದಿನಗಳಲ್ಲಿಯೇ ಮರಣ ಹೊಂದಿದ ಬಗ್ಗೆ ಈ ಸಭೆಗೆ ಅತ್ಯಂತ ದುಃಖವಾಗುತ್ತದೆ ಮತ್ತು ತಮ್ಮ ಅಧಿಕಾರಸ್ಥಾನದಲ್ಲಿದ್ದಾಗ ಕರ್ನಾಟಕ ಇತಿಹಾಸ ಸಂಶೋಧನ ಕಾರ್ಯದಲ್ಲಿ ಅತ್ಯಂತ ಪ್ರೋತ್ಸಾಹನಪಟ್ಟು ಮಾಡಿದ ಮಹತ್ಕಾರ್ಯಕ್ಕಾಗಿಯೂ, ಇತ್ತ ಕರ್ನಾಟಕದಲ್ಲಿ ದೊರೆಯುವ ಶಿಲಾಲಿಪಿಗಳ ಅಚ್ಚನ್ನು ತೆಗೆದುಕೊಳ್ಳುವಂತೆ ಮಾಡಿಟ್ಟಿದ್ದಕ್ಕಾಗಿಯೂ ಈ ಸಭೆಯು ಅವರ ಉಪಕಾರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತದೆ.

೩. ಕರ್ನಾಟಕ ಏಕೀಕರಣ ಸಂಘವು ಈಗ ಅನೇಕ ವರ್ಷಗಳಿಂದ ಅನೇಕ ವಿಧವಾಗಿ ಇಡೀ ಕರ್ನಾಟಕದಲ್ಲಿ ಬಹಿರಂಗವಾಗಿ ನಡೆಸುತ್ತಿರಲು ಸರಕಾರದವರು ಈ ವಿಷಯವಾಗಿ ಸಾಕಷ್ಟು ಬೇಡಿಕೆ ಇಲ್ಲವೆಂದು ಸಾಧಿಸುತ್ತಿರುವುದನ್ನು ಈ ಪರಿಷತ್ತು ಸ್ಪಷ್ಟವಾಗಿ ನಿಷೇಧಿಸುತ್ತದೆ.

ಹಿಂದುಸ್ಥಾನದ ಆಡಳಿತೆಯಲ್ಲಿ ಈಗಿನ ಪ್ರಾಂತ ವಿಭಾಗಗಳು ಅಸ್ವಾಭಾವಿಕವಾದವುಗಳಾಗಿರುವದರಿಂದ ಭಾಷಾನುಸಾರವಾಗಿ ಹೊಸ ವಿಭಾಗಗಳನ್ನು ಮಾಡುವದೇ ತತ್ವತಃ ಯೋಗ್ಯವಾದದ್ದೆಂಬ ವಿಷಯವು ಈಗ ಎಲ್ಲರಿಗೂ ಒಪ್ಪಿಗೆ ಇರುವ ಮೂಲಕ ಬ್ರಿಟಿಷ್ ಆಡಳಿತೆಗೊಳಗಾಗಿರುವ ಕರ್ನಾಟಕದ ಎಲ್ಲಾ ಭಾಗಗಳನ್ನು ಕೂಡಿಸಿ ಒಂದು ಪ್ರತ್ಯೇಕ ಪ್ರಾಂತವಾಗಿ ಮಾಡುವದು ಅತ್ಯವಶ್ಯವಾಗಿರುವದೆಂಬ ಈ ಪರಿಷತ್ತಿನ ಅಭಿಪ್ರಾಯವಿರುತ್ತದೆ. ಮತ್ತು ಈ ಮಹತ್ಕಾರ್ಯವನ್ನು ಸಾಧಿಸುವದಕ್ಕೆ ಕನ್ನಡನಾಡಿನಲ್ಲಿರತಕ್ಕ ಪ್ರತಿಯೊಬ್ಬ ವಿಚಾರವಂತ ಮನುಷ್ಯನು ಅವಶ್ಯವಾದ ಎಲ್ಲ ಬಗೆಯ ಪ್ರಯತ್ನಗಳನ್ನು ಮಾಡಿಯೇ ತೀರಬೇಕೆಂದು ಈ ಪರಿಷತ್ತು ಅತ್ಯಂತ ಆಗ್ರಹಪೂರ್ವಕ ವಿಜ್ಞಾಪನೆ ಮಾಡುತ್ತದೆ.

೪. (ಅ). ಈಗ ಸರ್ವಮಾನ್ಯವಾಗಿರುವ ಭಾಷಾನುಯೋಗಿ ಧೋರಣೆಯ ಪ್ರಾಂತವಿಂಗಡಣೆಯ ತತ್ವವನ್ನನುಸರಿಸಿ ರಾಷ್ಟ್ರೀಯ ಮಹಾಸಭೆಯು ಏರ್ಪಡಿಸಿಕೊಟ್ಟಿರುವ ಕರ್ನಾಟಕದ ಭಾಗಗಳನ್ನು ಆಂಧ್ರ, ಮಹಾರಾಷ್ಟ್ರ, ಮುಂತಾದ ಕರ್ನಾಟಕದ ನೆರೆ ಪ್ರಾಂತಗಳವರು ಒಂದಲ್ಲೊಂದು ರೀತಿಯಿಂದ ಆಕ್ರಮಿಸಬೇಕೆಂದು ಪ್ರತ್ಯಕ್ಷವಾಗಿಯೂ, ಅಪ್ರತ್ಯಕ್ಷವಾಗಿಯೂ ಪ್ರಯತ್ನ ನಡೆಸುವದು ಕಂಡು ಬರುವದರಿಂದಲೂ, ಮಹಾರಾಷ್ಟ್ರದವರ ಬೃಹನ್ಮಹಾರಾಷ್ಟ್ರದ ಕಲ್ಪನೆಯ ಕೆಲವು ಅಂಗಗಳು ರಾಷ್ಟ್ರೀಯ ಐಕ್ಯದ ಭಾವನೆಗೆ ಅತ್ಯಂತ ವಿರುದ್ಧವಾಗಿರುವದರಿಂದಲೂ, ಮಹಾರಾಷ್ಟ್ರದವರ [illegible] ಪರಿಷತ್ತು, ಸಾಹಿತ್ಯ ಸಮ್ಮೇಲನ ಮುಂತಾದವುಗಳಲ್ಲಿ ಆಗುವ ಕೆಲವು ನಿರ್ಣಯಗಳಲ್ಲಿ

ಅವರು ಸಾಮೂಹ್ಯವಾಗಿ ಕೈಕೊಂಡಿರುವ ಆಕ್ರಮಣಶೀಲ ಧೋರಣವು ಸ್ಪಷ್ಟವಾಗಿ ಗೋಚರವಾಗಿರುವದರಿಂದಲೂ ಅವರ ಈ ಬಗೆಯ ಪ್ರಯತ್ನಗಳನ್ನು ಈ ಪರಿಷತ್ತು ತೀವ್ರವಾಗಿ ನಿಷೇಧಿಸುತ್ತದೆ. ಮತ್ತು ನಮ್ಮ ನೆರೆ ಪ್ರಾಂತ್ಯದವರ ಈ ಕೃತಿಯಿಂದ ಪ್ರಾಂತ ಪ್ರಾಂತಗಳಲ್ಲಿ ನಿಷ್ಕಾರಣ ವೈಮನಸ್ಯ ಬೆಳೆದು ರಾಷ್ಟ್ರಕಾರ್ಯಕ್ಕೆ ವಿಘಾತವಾಗುವದರಿಂದ ಅವರು ಸರ್ವಥಾ ಹಾಗೆ ಮಾಡಬಾರದೆಂದು ಈ ಪರಿಷತ್ತು ಅವರಿಗೆ ಬಿನ್ನವಿಸುತ್ತದೆ.

(ಬ). ಕರ್ನಾಟಕದ ನೆರೆ ಪ್ರಾಂತಗಳವರ ಈ ಬಗೆಯ ಆಕ್ರಮಣ ಶೀಲ ಪ್ರವೃತ್ತಿಗೆ ಗಡಿನಾಡುಗಳಲ್ಲಿ ಅನುವು ದೊರೆಯದಂತೆ ಅಲ್ಲಲ್ಲಿಯ ಕನ್ನಡಿಗರನ್ನು ಕರ್ನಾಟಕತ್ವದ ಆತ್ಮೀಯ ಭಾವನೆಗೆ ಎಚ್ಚರಗೊಳಿಸುವಂತೆ ಅವಶ್ಯವಾದ ಎಲ್ಲ ಪ್ರಯತ್ನಗಳನ್ನು ಕರ್ನಾಟಕ ಏಕೀಕರಣ ಸಂಘದವರು ಕೂಡಲೇ ಕೈಕೊಳ್ಳಬೇಕೆಂದು ಈ ಪರಿಷತ್ತು ಸೂಚಿಸುತ್ತದೆ.

(ಕ) ಮೇಲಿನ (ಬ) ಕಲಮಿನಲ್ಲಿ ನಿರ್ದಿಷ್ಟವಾದ ಪ್ರಚಾರಕಾರ್ಯವು ಕರ್ನಾಟಕದ ಆಗಿನ ಗಡಿ ಸೀಮೆಗಳನ್ನು ಕಾಯಲು ಅತ್ಯಗತ್ಯದ್ದು ಆಗಿರುವದರಿಂದ ಇಂಥ ಪ್ರಚಾರ ಕಾರ್ಯಕ್ಕೆ ಬೇಕಾಗುವ ಧನಸಹಾಯವನ್ನು ಕನ್ನಡಿಗರೆಲ್ಲರೂ ಸಹಿಲುಗೈಯಿಂದ ಕೊಡಬೇಕೆಂದು ಪರಿಷತ್ತು ಬಿನ್ನವಿಸುತ್ತದೆ.

೫ ಕರ್ನಾಟಕದ ಭಾಷ, ಸಂಸ್ಕೃತಿ ಮುಂತಾದವುಗಳ ದೃಷ್ಟಿಯಿಂದ ಸದ್ಯಕ್ಕೆ ಅಖಿಲ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವಿರುವದು ಉಚಿತವಾಗಿರುವದರಿಂದಲೂ, ಮೈಸೂರು ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರ ಬೆಳೆಸಿ ಅದು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವಾಗುವಂತೆ ಏರ್ಪಾಡು ಮಾಡುವದೇ ಸದ್ಯಕ್ಕೆ ಹೆಚ್ಚಿಗೆ ಸಾಧ್ಯವಿರುವದರಿಂದಲೂ ಮೈಸೂರು, ಮದ್ರಾಸು, ಮುಂಬಾಯಿ ಮತ್ತು ಹೈದರಬಾದು ಸರಕಾರದವರು ಕೂಡಿ ಈ ವಿಷಯಗಳನ್ನು ಯೋಚಿಸಿ ತೀವ್ರವೇ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಏರ್ಪಡಿಸಬೇಕಾಗಿ ಆಯಾ ಸರಕಾರದವರಿಗೆ ಆಗ್ರಹ ಪೂರ್ವಕವಾಗಿ ಈ ಪರಿಷತ್ತು ಹೇಳಿಕೊಳ್ಳುತ್ತದೆ.

೬. ಬ್ರಿಟಿಷ್ ಕರ್ನಾಟಕದಲ್ಲಿ ಶಿಲಾಲೇಖಗಳು ಹೇರಳವಾಗಿರುವದರಿಂದಲೂ, ಪುರಾತನ ವಸ್ತು ಸಂಶೋಧನಕ್ಕೆ ಬೇಕಾದಷ್ಟು ಸಾಮಗ್ರಿ ಇರುವದರಿಂದಲೂ, ಇವುಗಳ ಮೇಲೆ ಕರ್ನಾಟಕದ ಪ್ರಾಚೀನ ಇತಿಹಾಸವು ಬಹುಮಟ್ಟಿಗೆ ಅವಲಂಬಿಸಿರುವದರಿಂದಲೂ ಬ್ರಿಟಿಷ್ ಕರ್ನಾಟಕದಲ್ಲಿ ಪುರಾತನ ಸಂಶೋಧನ ಖಾತೆಯೊಂದನ್ನು ಸ್ಥಾಪಿಸದೆ ಇತಿಹಾಸ ಸಂಶೋಧನ ಕಾರ್ಯವು ಮುಂದುವರಿಯುವದು ಶಕ್ಯವಿಲ್ಲದ್ದರಿಂದ ಅಂಥ ಪ್ರತ್ಯೇಕ ಶಾಖೆಯನ್ನು ಕರ್ನಾಟಕದಲ್ಲಿ ಸ್ಥಾಪಿಸುವದು ಅತ್ಯವಶ್ಯವೆಂದು ಈ ಪರಿಷತ್ತಿನ ಅಭಿಪ್ರಾಯವಿದೆ.

೭. (ಅ) ಕರ್ನಾಟಕದ ಲೋಕಮತವನ್ನು ಲೆಕ್ಕಿಸದೆ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನವರು ಕನ್ನಡ ಜಿಲ್ಲೆಯಾದ ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯದ ಆಡಳಿತಕ್ಕೆ ಸೇರಿದ್ದನ್ನು ಈ ಸಭೆಯು ತೀವ್ರವಾಗಿ ನಿಷೇಧಿಸುತ್ತದೆ. ಮತ್ತು ಬಳ್ಳಾರಿಯ ಶ್ರೀ. ನಾಗಣ್ಣಗೌಡ ಯಂ. ಎಲ್. ಸಿ ಇವರು ಬಳ್ಳಾರಿ ಜಿಲ್ಲೆಯನ್ನು ಆಂಧ್ರ ವಿಶ್ವವಿದ್ಯಾಲಯದ ಆಧಿಪತ್ಯದಿಂದ ಹೊರಡಿಸಬೇಕೆಂಬ ಸೂಚನೆಯನ್ನು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿಟ್ಟಿರುತ್ತಾರೆ; ಅವರ ಪ್ರಯತ್ನವನ್ನು ಈ ಪರಿಷತ್ತು ಮನಃಪೂರ್ವಕವಾಗಿ ಸಮರ್ಥಿಸುತ್ತದೆ.

(ಬ) ಆಂಧ್ರ ವಿಶ್ವವಿದ್ಯಾಲಯದ ಕೇಂದ್ರವನ್ನು ಅನಂತಪುರದಲ್ಲಿ ಸ್ಥಾಪಿಸುವದರಿಂದ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿಯ ಕನ್ನಡ ಭಾಷಾಭಿವೃದ್ಧಿಗೆ ಆತಂಕವುಂಟಾಗುವದರಿಂದ ಅನಂತಪುರವನ್ನೇ ಆಂಧ್ರ ವಿಶ್ವವಿದ್ಯಾಲಯದ ಕೇಂದ್ರವನ್ನಾಗಿ ಮಾಡುವ ಕುರಿತು ಗುತ್ತಿಯ ಶ್ರೀ. ಕೇಶವ ಪಿಲ್ಲೆಯವರು ಮದ್ರಾಸು ಕೌನ್ಸಿಲಿನಲ್ಲಿ ತಂದ ಬಿಲ್ಲನ್ನು ಈ ಸಭೆಯು ಸಂಪೂರ್ಣವಾಗಿ ನಿಷೇಧಿಸುತ್ತದೆ.

೮. ಉತ್ತರ ಕರ್ನಾಟಕದ ಭಾಗಗಳಾದ ಸಾಂಗಲಿ, ಮಿರಜಿ, ಮತ್ತು ಕೊಲ್ಹಾಪುರ ಸಂಸ್ಥಾನಗಳಲ್ಲಿಯ ಎಷ್ಟೋ ಭಾಗದ ಪ್ರಜೆಗಳ ಭಾಷೆಯೂ ಜಮಖಂಡೀ, ಮುಧೋಳ, ರಾಮದುರ್ಗ, ಜತ್ತ, ಅಕಲಕೋಟೆ ಮತ್ತು ಕುರುಂದವಾಡ ಮುಂತಾದ ಸಂಸ್ಥಾನಗಳಲ್ಲಿ ಎಲ್ಲಾ ಪ್ರಜೆಗಳ ಭಾಷೆಯೂ ಮುಖ್ಯವಾಗಿ ಕನ್ನಡವೇ ಆಗಿರುವದು. ಆದರೆ ಆಯಾ ಸಂಸ್ಥಾನಿಕರು ಮಾತ್ರ ಮರಾಟೆಗರಿದ್ದುದರಿಂದ ಕನ್ನಡ ಪ್ರಜೆಗಳ ಸಲುವಾಗಿ ಕೇವಲ ಮರಾಠೀ ಶಾಲೆಗಳನ್ನು ಇಡುವದು ಬಹಳ ಅನ್ಯಾಯವಾಗಿರುವದರಿಂದ ಕನ್ನಡ ಪ್ರಜೆಗಳಿಗಾಗಿ ಕನ್ನಡ ಶಾಲೆಗಳನ್ನು ಏರ್ಪಡಿಸುವದೂ, ಕೋರ್ಟಿನ ಭಾಷೆಯನ್ನು ಕನ್ನಡವನ್ನಾಗಿಯೇ ಇಡುವದೂ ಆಯಾ ಸಂಸ್ಥಾನಿಕರ ಕರ್ತವ್ಯವೆಂದು ಈ ಪರಿಷತ್ತಿನ ಅಭಿಪ್ರಾಯವಿರುವದು. ಆದುದರಿಂದ ಆಯಾ ಸಂಸ್ಥಾನಿಕರು ಆಯಾ ಭಾಗಗಳಲ್ಲಿ ಕನ್ನಡ ಶಾಲೆಗಳನ್ನೂ, ಕೋರ್ಟಿನಲ್ಲಿ ಕನ್ನಡ ಭಾಷೆಯನ್ನೂ ಸ್ಥಾಪಿಸುವಂತೆ ವ್ಯವಸ್ಥೆಮಾಡಬೇಕೆಂದು ಈ ಪರಿಷತ್ತಿನ ಬಿನ್ನಹವಿದೆ.

೯ ಸೊಲ್ಲಾಪುರ ಜಿಲ್ಲೆಯ ಅನೇಕ ಭಾಗಗಳಲ್ಲಿ ಕನ್ನಡವೇ ಜನರ ಒಲ್ಮೆಭಾಷೆಯಾಗಿರುವದರಿಂದ ಸೊಲ್ಲಾಪುರದಲ್ಲಿ ಕೋರ್ಟಿನ ಭಾಷೆಯು ಕನ್ನಡವಾಗಿರಬೇಕೆಂತಲೂ ಅಲ್ಲಲ್ಲಿಯ ಕನ್ನಡಿಗರ ಸಲುವಾಗಿ ಕನ್ನಡ ಶಾಲೆಗಳನ್ನು ನಿರ್ಣಯಿಸಬೇಕೆಂತಲೂ ಈ ಪರಿಷತ್ತಿನ ಸ್ಪಷ್ಟವಾದ ಅಭಿಪ್ರಾಯವಿರುವದರಿಂದ ಮುಂಬಾಯಿ ಹೈ ಕೋರ್ಟಿನವರು ಮತ್ತು ಸೊಲ್ಲಾಪುರ ಜಿಲ್ಲಾ ಲೋಕಲ್ ಬೋರ್ಡ ಮತ್ತು ಮುನಿಸಿಪಾಲಿಟಿಗಳು ಈ ಸಂಗತಿಯನ್ನು ಲಕ್ಷ್ಯಕ್ಕೆ ಕನ್ನಡಿಗರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಈ ಪರಿಷತ್ತು ಬಿನ್ನವಿಸುತ್ತದೆ.

೧೦. ಕರ್ನಾಟಕ ಏಕೀಕರಣವನ್ನು ಸಾಧಿಸುವಗೋಸುಗ ಸೈಮನ್ ಕಮಿಷನ್ನಿನೆದುರಿಗೆ ಸಾಕ್ಷಿ ಕೊಡಲಿಕ್ಕೆ ಹೋಗುವದು ಅನಾವಶ್ಯಕವೂ, ಸ್ವಾಭಿಮಾನಕ್ಕೆ ಧಕ್ಕೆ ತರುವಂತಹದೂ ಇರುತ್ತದೆ. ಈ ರೀತಿ ಕರ್ನಾಟಕದಿಂದ ಯಾರಾದರೂ ಸಯಮನ್ಸ್ ಕಮಿಶನ್ನಿನೆದುರಿಗೆ ಏಕೀಕರಣದ ಸಲುವಾಗಿ ಹೋದರೆ ಅವರಿಗೆ ಕರ್ನಾಟಕದ ಬೆಂಬಲವಿಲ್ಲವೆಂದು ಈ ಪರಿಷತ್ತಿನ ಸ್ಪಷ್ಟವಾದ ಅಭಿಪ್ರಾಯವಿರುತ್ತದೆ.

೧೧. ಜಾತೀಯ ದುರಭಿಮಾನವು ಕರ್ನಾಟಕ ಏಕೀಕರಣ ಕಾರ್ಯಕ್ಕೆ ಬಾಧಕವಿರುವದರಿಂದ ಕರ್ನಾಟಕ ಏಕೀಕರಣ ಸಂಘದ ಪ್ರತಿಯೊಬ್ಬ ಸಭಾಸದನು ತಾನು ಈ ತರಹದ ದುರಾಭಿಮಾನಕ್ಕೆ ಯಾವದೇ ಸ್ವರೂಪದಲ್ಲಿಯೂ, ಯಾವದೇ ರೀತಿಯಿಂದಲೂ ಬೆಂಬಲ ಕೊಡಕೂಡದೆಂದು ಈ ಪರಿಷತ್ತು ಆಜ್ಞಾಪಿಸುತ್ತದೆ.

೧೨. ಕರ್ನಾಟಕ ಏಕೀಕರಣವು ಕರ್ನಾಟಕಸ್ಥರ ಜನ್ಮಸಿದ್ಧ ಹಕ್ಕು ಇರುವದರಿಂದ ಅದು ಅವಶ್ಯವಿರುವದು ಎಂಬ ಬಗ್ಗೆ ಕರ್ನಾಟಕದಲ್ಲಿ ಹಳ್ಳಿ ಹಳ್ಳಿಗೆ ಅಡ್ಡಾಡಿ ಸುಮಾರು ೩೦,೦೦೦ ಸಹಿಗಳನ್ನು ಇದುವರೆಗೆ ಪಡೆದು ಏಕೀಕರಣಕ್ಕೆ ಸಹಾಯ ಮಾಡಿದ್ದಕ್ಕಾಗಿ ಕರ್ನಾಟಕ ಸೇವಾದಳದವರಿಗೆ ಈ ಪರಿಷತ್ತು ಧನ್ಯವಾದಗಳನ್ನು ಅರ್ಪಿಸುತ್ತದೆ.

೧೩. ಕರ್ನಾಟಕದ ವ್ಯಾಪಾರಾಭಿವೃದ್ಧಿಗಾಗಿ ಘಟಕಳ ಬಂದರವನ್ನು ಸರಕಾರದವರು ನಿರ್ಮಾಣ ಮಾಡಬೇಕೆಂದು ಈ ಪರಿಷತ್ತಿನ ಅಭಿಪ್ರಾಯವಿರುತ್ತದೆ.

೧೪. ಬೆಳಗಾವಿಯಲ್ಲಿ ಲಿಂಗರಾಜ ಆರ್ಟ್ಸ ಕಾಲೇಜವನ್ನು ಸ್ಥಾಪಿಸಲು ನಡೆದ ಪ್ರಯತ್ನಕ್ಕೆ ಈ ಸಭೆಯು ಸಂಪೂರ್ಣ ಸಹಾನುಭೂತಿಯನ್ನು ತೋರಿಸುತ್ತದೆ.

೧೫ ಈ ಕೆಳಗಿನ ಸದ್ಗೃಹಸ್ಥರು ಕಾರ್ಯಕಾರಿ ಮಂಡಲದಲ್ಲಿರಬೇಕೆಂದು ಈ ಪರಿಷತ್ತು ಗೊತ್ತು ಪಡಿಸುತ್ತದೆ.

೧. ರಾ. ಸಾ. ಹಳಕಟ್ಟಿ,	ಅಧ್ಯಕ್ಷರು.
೨. ಶ್ರೀ ಪಂಡಿತ ರಾಮಪ್ಪಾ ಚಿಕ್ಕೋಡಿ	ಉಪಾಧ್ಯಕ್ಷರು.
೩. „ ಶ್ರೀನಿವಾಸರಾವ ಕೌಜಲಗಿ.	ಉಪಾಧ್ಯಕ್ಷರು.
೪. „ ವ್ಹಿ. ವ್ಹಿ. ಪಾಟೀಲ.	ಕಾರ್ಯದರ್ಶಿಗಳು.
೫. „ ಶಾಂತೇಶ ಕಮಲಾಪೂರ.	ಕಾರ್ಯದರ್ಶಿಗಳು.
೬. „ ಮಂಗಳವೇಡೆ ಶ್ರೀನಿವಾಸರಾಯರು, ಕೋಶಾಧ್ಯಕ್ಷರು	
೭. „ ಕೃಷ್ಣರಾವ ಮುದವೇಡಕರ.	
೮. „ ಕನಕಾಪುರ ಗುರುರಾಜರಾವ್.	
೯. „ ರಂಗನಾಥ ದಿವಾಕರ	
೧೦. „ ವೆಂಕಟರಾವ ಆಲೂರ.	
೧೧. „ ಸಿ. ಕೆ. ಒಡೆಯರ.	
೧೨. „ ಮರುಗೆಯ್ಯನವರು ಜಂಗಿನ.	
೧೩. „ ಡಾ. ಶಿರಹಟ್ಟಿ.	

ಮಾನವ ಧರ್ಮ ಶಾಸ್ತ್ರ.

ಈ ಪುಸ್ತಕವು ಮೊದಲು ಹಿಂದೂಸ್ಥಾನಿ, ಫ್ರೆಂಚ್ ಭಾಷೆಗಳಲ್ಲಿ ಇತ್ತು. ಇದನ್ನು ಈಗ ಕನ್ನಡಕ್ಕೆ ತರ್ಜುಮೆ ಮಾಡಿ ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಧರ್ಮ ವಿಷಯಗಳು ಶಿಶು ಉತ್ಪತ್ತಿ ಸ್ತ್ರೀ ಪುರುಷರು ಅನ್ಯೋನ್ಯವಾಗಿ ಇರುವಿಕೆ ಮುಂತಾದ ಎಲ್ಲಾ ವಿಷಯಗಳು ಇರುವವು.

ಕ್ರಯ 1ಕ್ಕೆ 1—0—0.

ವಿಳಾಸ.—ಕೆ. ಎಸ್. ರಾಧಕೃಷ್ಣ ಅಂಡ್ ಬ್ರದರ್ಸ್,
52—4 109. ಜೈನಾ ಬಜಾರ್ ರೋಡ್, ಮದರಾಸು,

Notice.

Applications are invited for a newly created clerk's post for Somwarpet Notified Area on a Salary of Rs. 25—1—40.

Applications will be received till the 25th June 1928.

Candidates must produce along with their applications Certificates of physical fitness and testimonials of good character.

Candidates must have passed at least the "Lower Secondary Examination," and should possess a good knowledge of English, plane-table and levelling survey.

The Selection will be made by the Notified Area Committee at 11 M. m. on 25—6—28 Applicants should appear in person

Any further information on the subject can be had in the office of the undersigned.

M. S. Mandanna,
President,
2—2 Notified Area, Somwarpett.

Coorg Education Fund.
Mercara, Dated 7th, June 1928.

NOTICE.

The Attention of the beneficiaries from the Coorg Education Fund is drawn to the following paras, 4 & 5. of the memorandum of agreement, which they have entered into withthe Fundin terms of which, amounts were given out as scholarships It is therefore requested that the beneficiaries will kindly send up their subscriptions for membership before the end of June 1928, on which date the official year of the Association expires.

X X X X X X

(4) That the Second party doth from the time he is ordered to commence to repay the sum or sums advanced, become a member of the Coorg Education Fund and act and pay as a member of the said Fund in conformity with the rules thereof.

(5) That the second party in consideration of his having benefitted by the Fund shall thence forward continue to exert for the betterment of the Fund.

X X X X X X

ಕೊಡಗು ವಿದ್ಯಾಭಿವೃದ್ಧಿಸಂಘ.
ಮಡಿಕೇರಿ ತಾ 7—6—28.

ಪ್ರಕಟಣೆ.

ಮೇಲಣ ಸಂಘದ ಜನರಲ್ ಮೀಟಿಂಗು ತಾ. 1—7—28 ರಲ್ಲು ಮಡಿಕೇರಿಯಲ್ಲಿ ಓಂಕಾರೇಶ್ವರ ದೇವಸ್ಥಾನದ ಸಾತ್ ಕಮಾನ್ ಮಹಡಿಯಲ್ಲಿ ಸಾಯಂಕಾಲ 4 ಘಂಟೆಗೆ ನಡಿಸಲ್ಪಡುತ್ತೆ. ಮೆಂಬರಾಗತಕ್ಕವರೆಲ್ಲರೂ ದಯವಿಟ್ಟು ಮೀಟಿಂಗಿಗೆ ಹಾಜರಾಗಬೇಕಾಗಿ ಕೇಳಿಕೊಳ್ಳೋಣಾಗಿರುತ್ತೆ.

ಚರ್ಚಿಸತಕ್ಕ ವಿಷಯಗಳು.

ಸಂಘದ ರೂಲ್ಸ್ ತಿದ್ದುಪಡಿಮಾಡುವುದು.

ಒಂದು ತಿದ್ದುಪಡಿ.

"ಕೊಡವ ಮಹಾಶಯರಲ್ಲಿ ವಿನಂತಿ" ಎಬದಾಗಿ ಈ ಸಂಘದ ಪ್ರೆಸಿಡೆಂಟರ ಹೆಸರಿನಿಂದ ಜಾಹೀರಾಯಿತು ಹೊರಡಿಸಿದ ಪತ್ರದಲ್ಲಿ ಈ ಸಂಘದಿಂದ ಪ್ರಯೋಜನ ಹೊಂದಿಕೊಂಡ ಮಹನೀಯರ ಹೆಸರು ಪಟ್ಟಿಯಲ್ಲಿ ಪುಲಿಯಂಡ "ಅಪ್ಪಯ್ಯನವರು" ಎಂಬ ಹೆಸರಿನ ಬದಲಿ ಬಾಚ್ಚಿಯಪ್ಪನವರು ಎಂದೂ, ನಲ್ಲಮಕ್ಕಳ ದೇವಯ್ಯನವರು Medical Student ಎಂಬದರ ಬದಲಿಗೆ ನೆಲ್ಲಮಕ್ಕಳ ಸಿ. ದೇವಯ್ಯನವರು Intermediate ಎಂಬದಾಗಿ ಓದಿಕೊಳ್ಳುವುದು.

ಬಿ. ಐ. ಕುಟ್ಟಪ್ಪ,
ಗೌರವ ಕಾರ್ಯದರ್ಶಿ.

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹೊಸದಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಹೆಚ್ಚಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0.
7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0.

ಸ್ಪಿರಿಟ್ ಸ್ಟೋವ್.

ಇವುಗಳನ್ನು ಹಿತ್ತಾಳೆಯಿಂದ ಮಾಡಿರುವದು. ಇದರಲ್ಲಿ ಒಬ್ಬರ ಸಹಾಯವಿಲ್ಲದೆಯೂ, ಯಾವ ತೊಂದರೆ ಇಲ್ಲದೆಯೂ ಎಷ್ಟು ಜನಗಳಿಗಾದರೂ ಪದಾರ್ಥಗಳನ್ನು ಬಹು ಬೇಗನೆ ಅಡಿಗೆಮಾಡಿಕೊಳ್ಳಬಹುದು.

ಕ್ರಯ 1ಕ್ಕೆ 2—8—0.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿ ಯಾದರೂ ಕೂದಲನ್ನು ತೆಗಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರ ಮಾಡಿಸಿಕೊಳ್ಳುವದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು ಬಿಡುವದು.

3 ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0.

ವಿಳಾಸ,—ಕೆ. ನಾಥಮುನಿ ಅಂಡ್ ಸನ್ಸ್,
52—4 168. ಜೈನಾ ಬಜಾರ್, ಮದರಾಸು.

ವಿಜ್ಞಾಪನೆ.

ನಮ್ಮ ಚಂದಾದಾರರ ಪೈಕಿ ನಂ. 1ರಿಂದ 291ರ ವರೆಗಿನವರ ಪತ್ರಿಕೆಯ ಅವಧಿಯು ತಾ. 31—5—28ಕ್ಕೆ ತೀರಿರುವುದರಿಂದ ಸದರಿಯವರೆಲ್ಲರೂ ತಮ್ಮ ಬಾಕಿ ಮುಂದಿನ ಒಂದು ವರ್ಷದ ಚಂದಾಹಣ ರೂ. 3—8—0 ವನ್ನು ಒಂದು ವಾರದೊಳಗೆ ಪಾವತಿಮಾಡಬೇಕಾಗಿ ಕೋರುತ್ತೇವೆ. ತಪ್ಪಿದರೆ ಪತ್ರಿಕೆ ನಿಲ್ಲಿಸಲೇ ಬೇಕಾಗುವುದು. ಅಲ್ಲದೆ ಈ ಮೇಲ್ಕಂಡ ಚಂದಾದಾರರ ಪೈಕಿ ಹಲವು ಮಹನೀಯರು ಈ ವರೆಗೆ ಒಟ್ಟು ಒಂದು ವರ್ಷದ ಪತ್ರಿಕೆಯ ಚಂದಾ ಹಣ ಪಾವತಿ ಮಾಡದ ಬಾಬಿನಲ್ಲು ತುಂಬಾ ವಿಷಾದಿಸುತ್ತೇವೆ. ಮತ್ತು ಈಚೆಗೆ ಚಂದಾದಾರರಾಗಿರುವ ಮಹನೀಯರಲ್ಲಿ ಕೆಲವರು ಸಹ ಚಂದಾ ಹಣ ಪಾವತಿ ಮಾಡದೆ ಇರುವುದರಿಂದ ಇನ್ನಾದರೂ ವಹ್ನಿ ಪಾವತಿಯಿಂದ ಕಚೇರಿಯ ಕೆಲಸಕ್ಕೆ ಉತ್ತೇಜನ ಕೊಟ್ಟು ಪ್ರೋತ್ಸಾಹಿಸುವರಾಗಿ ನಂಬುತ್ತೇವೆ

ವರ್ತಮಾನ ಸಂಗ್ರಹ.

ಒಳದೇಶ

ಕೊಡಗು ಪ್ಲಾಂಟೇಶನ್ ಫಂಡಿನ ಮೀಟಿಂಗ್ ತಾ. 9ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಕಮಿಷನರು ಅಧ್ಯಕ್ಷರಾಗಿದ್ದರು.

ದಕ್ಷಿಣ ಕೊಡಗಿನ ಅನೇಕ ಕಡೆಗಳಲ್ಲಿ ವಾಂತಿ ಮತ್ತು ಭೇದಿ ಕಾಯಿಲೆಯಿಂದ ಹಲವು ಮರಣಗಳುಂಟಾದವೆಂದು ವರ್ತಮಾನ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 23ನೇ ಶನಿವಾರ ದಿನ ಬೆಳಿಗ್ಗೆ 9 ಗಂಟೆಗೆ ಜನರಲ್ ಸ್ಮಾರಕ ಸಂಘದ ಹಾಲಿನಲ್ಲಿ ನಡೆಯಲಿಕ್ಕಿದೆ.

ಪಿ. ಡಬ್ಲ್ಯು. ಡಿ. ಆಫೀಸಿನಲ್ಲು ಸಬ್ ಓವರ್ಸಿಯರಾಗಿದ್ದ ಮೆ. ಯೆಂಕನ ಡಿ. ಪೂವಯ್ಯನವರನ್ನು ವಿರಾಜಪೇಟೆ ಹೊಸ ಸೆಕ್ಷನಿಗೆ ಸೆಕ್ಷನ್ ಆಫೀಸರಾಗಿ ನೇಮಿಸಿರುತ್ತಾರೆ.

ಕಿಗ್ಗಟ್ಟುನಾಡಿನ ಅಮ್ಮಕೊಡವರ ವಾರ್ಷಿಕ ಮಹಾಸಭೆಯು ಕಳೆದ ತಾ. 9ರಲ್ಲು ಮತ್ತೂರು ದೇವಸ್ಥಾನದಲ್ಲಿ ಮೆ. ಹೆಚ್. ಟಿ. ಅಪ್ಪಣಮೈಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ತಾ. 12ರಿಂದ ಕಾವೇರಿ ಮೋಟಾರು ಸರ್ವಿಸಿನವರು ಮಡಿಕೇರಿ—ಮೂರ್ನಾಡು—ವೀರಾಜಪೇಟೆ ಲೈನಿನಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಬಸ್ಸುಗಳನ್ನು ನಡಿಸುತ್ತಿರುವರೆಂದು ತಿಳಿಯುತ್ತೇವೆ.

ಕೋಮರ ಗ್ರಾಮದಲ್ಲಿದ್ದ ಮೆ. ಮೂತಂಡ ಕಾರ್ಯಪ್ಪನವರು ಮತ್ತು ಕಿಗ್ಗಟ್ಟುನಾಡು ಅಮ್ಮ ಕೊಡವರ ಪೈಕಿ ಹಿರಿಯವರಾದ ಮಾಯಮುಡಿ ಗ್ರಾಮದ ಮೆ. ಬಲ್ಯಂಡ ಸುಬ್ಬಮೈಯ್ಯನವರು ಈ ತಾ. 10 ರಲ್ಲೂ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಬೇತರಿ ಕಡುವಿಗೆ ಈ ವರೆಗೆ ದೋಣಿ ಹಾಕದೆ ಪ್ರಯಾಣಸ್ಥರಿಗೆ ತುಂಬಾ ಅನಾನುಕೂಲವಾಗಿರುವುದರಿಂದ ಸಮ್ಮಂಧಪಟ್ಟ ಅಧಿಕಾರಿಗಳು ಇನ್ನಾದರೂ ಒಡನೆ ದೋಣಿ ಹಾಕಿಸಿ ಪ್ರಯಾಣಿಕರ ಕಷ್ಟವನ್ನು ನಿವಾರಿಸುವರಾಗಿ ಒಂದು ಬಾತ್ಮಿ.

ದೇಶದಲ್ಲಿ ಮಳೆಯು ಸದಾ ಹೊಡೆಯುತ್ತಿದೆ. ಜನರು ಭತ್ತದ ಬೀಜಗಳನ್ನು ಬಿತ್ತುವ ಏರ್ಪಾಡುಗಳನ್ನು ಮಾಡುತ್ತಾ ಇರುವರು. ತಾ. 8ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 9.31 ಇಂಚು ಮಳೆ ಬಿದ್ದಿದೆ. ಜೋರಾಗಿ ಮಳೆ ಹೊಡೆದ ನಿನ್ನೆ ದಿನ 2.33 ಇಂಚಾಗಿತ್ತು.

ದಕ್ಷಿಣ ಕೊಡಗಿನ ಪೋಲೀಸು ಸರ್ಕಲ್ ಇನ್‌ಸ್ಪೆಕ್ಟರಾದ ರಾ. ಸಾ. ಕೋದಂಡ ಅಯ್ಯಣ್ಣನವರು ಅನಾರೋಗ್ಯದ ದೆಸೆಯಿಂದ ಒಂದೂವರೆ ತಿಂಗಳು ರಜೆಯಲ್ಲಿರುವರು. ಇವರ ಬದಲು ಮೆ. ಸಣಿತೇರಿಯಂಡ ಚಿಣ್ಣಪ್ಪನವರು ಆಕ್ಟಿಂಗ್ ಇನ್‌ಸ್ಪೆಕ್ಟರಾಗಿ ನೇಮಿಸಲ್ಪಟ್ಟಿರುವರು.

ಕೊಡಗಿನ ಶಾಲೆಗಳಲ್ಲಿ ಎರಡು ವರ್ಷ ಒಂದು ತರಗತಿಯಲ್ಲಿ ಸೋತವರನ್ನು ಶಾಲೆಗೆ ಸೇರಿಸಿಕೊಳ್ಳಕೂಡದೆಂದು ಈ ವರ್ಷ ಜಾರಿಗೆ ತಂದಿರುವ ನಿಬಂಧನೆಯನ್ನು ಖಂಡಿಸಲು ಮಡಿಕೇರಿ ಮಹನೀಯರ ಪಬ್ಲಿಕ್ ಮೀಟಿಂಗೊಂದು ಈ ತಾ. 10ರಲ್ಲಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ರಾ. ಬಾ. ಕೋಡಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಅನ್ಯಾಯವಾದ ನಿಬಂಧನೆಯನ್ನು ಕುರಿತು ಕೆಲವರು ಭಾಷಣ ಮಾಡಿದನಂತರ ಇದನ್ನು ರದ್ದುಪಡಿಸುವಂತೆ ಚೀಫ್ ಕಮಿಷನರಿಗೂ ಮತ್ತು ಶಾಲಾ ಇನ್‌ಸ್ಪೆಕ್ಟರವರಿಗೂ ತಂತೀ ವಾರ್ತೆ ಕಳುಹಿಸುವಂತೆಯೂ, ರಾ. ಬಾ. ಕೆ. ಅಪ್ಪಯ್ಯನವರು, ರಾ. ಸಾ. ಪಿ ದೇವಯ್ಯನವರು, ಮೆ ಗಳಾದ ಸಿ. ಬಿ. ನಾ. ವೆಂಕಟಪ್ಪನವರು, ಪಿ ಎ. ಚಂಗಪ್ಪನವರು, ಪಿ ಡಿ. ಮೇದಪ್ಪನವರು, ಕೆ. ಪಿ ಚಿಣ್ಣಪ್ಪನವರು ಮತ್ತು ವೆಂಕಟಸುಬ್ಬಯ್ಯನವರು ಸೇರಿ ಕಮಿಷನರಲ್ಲಿಗೆ ಡೆಪ್ಯುಟೇಶನ್ ಹೋಗಬೇಕೆಂತಲೂ ತೀರ್ಮಾನಿಸಲಾಯಿತು. ಈ ಡೆಪ್ಯುಟೇಶನು ಈ ತಾ. 16 ರಲ್ಲಿ ಕಮಿಶನರಲ್ಲಿಗೆ ಹೋಗುವದಾಗಿ ತಿಳಿಯುತ್ತೇವೆ.

ಹಿಂದೂದೇಶ.

ಆಲ್ ಇಂಡಿಯಾ ಒಲಿಂಪಿಕ್ ಹಾಕಿ ಫಂಡಿಗೆ ವೈಸರಾಯರು 500 ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು.

ಪ್ರೊಫೆಸರ್ ಜಾದುನಾಥ್ ಸರ್ಕಾರ್‌ರವರು ಎರಡು ವರ್ಷಗಳ ವರೆಗೆ ಕಲ್ಕತ್ತಾ ಯುನಿವರ್ಸಿಟಿಯ ವೈಸ್ ಚಾನ್ಸಲರಾಗಿ ನೇಮಿಸಲ್ಪಟ್ಟಿರುವರು.

ಸರ್ ಜಾನ್ ಸೈಮನ್‌ರವರಿಗೆ ಕಮಿಷನಿನ ಕೆಲಸ ಮುಗಿದ ಒಳಕ ಲಾರ್ಡ್ ಬಿರುದು ಕೊಡಲಾಗುವದೆಂದು 'ನ್ಯೂ ಇಂಡಿಯಾ' ಪತ್ರಿಕೆಯು ಸೂಚಿಸುತ್ತದೆ.

ತಾ. 12ರಲ್ಲಿ ಬೊಂಬಾಯಿ ಮತ್ತು ಕಲ್ಕತ್ತಾ ಪಟ್ಟಣಗಳಲ್ಲಿ ಬಹಳ ಜೋರಾದ ಮಳೆ ಗಾಳಿಗಳಿಂದಾಗಿ ಬೀದಿಗಳಲ್ಲೆಲ್ಲಾ ನೀರು ತುಂಬಿಕೊಂಡ, ವ್ಯಾಪಾರಗಳಿಗೆ ತುಂಬಾ ಅಡಚಣೆಯಾಯಿತಂತೆ.

ಸುಮಾರು ಮೂರು ಲಕ್ಷ ರೂಪಾಯಿ ವೆಚ್ಚ ಮಾಡಿ ಪ್ರಪಂಚದಲ್ಲೆಲ್ಲಾ ಅದ್ವಿತೀಯವಾದ ಒಂದು ಜಲ ಜಂತು ಪ್ರದರ್ಶನಾಲಯವನ್ನು ಕೊಲೊಂಬೊದಲ್ಲಿ ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಲಿವೆ.

ಕರಾಚಿ ಮುನಿಸಿಪಾಲಿಟಿಯವರು ಅಲ್ಲಿಯ ಪ್ರೈಮರಿ ಶಾಲಾ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಲು ಮಂಜೂರು ಮಾಡಿರುವರು. ಈ ಏರ್ಪಾಟಿಗೆ 40 ಸಾವಿರ ರೂಪಾಯಿ ಹೆಚ್ಚಿಗೆ ಬೇಕಾಗುವದಂತೆ.

ಬಾಲುಫಾರ್ಟ್ ಪ್ರಾಂತ್ಯದಲ್ಲಿ ಕ್ಷಾಮದ ಬಾಧೆಯನ್ನು ತಡೆಯಲಾರದೆ ಜನರು ತಮ್ಮ ಮಕ್ಕಳನ್ನು ಮಾರುತ್ತಿರುವರಂತೆ. ಒಬ್ಬ ಫಕೀರನು 6 ವರ್ಷ ಪ್ರಾಯದ ತನ್ನ ಒಬ್ಬ ಮಗನನ್ನು 12 ರೂಪಾಯಿಗೆ ಒಬ್ಬ ಐಶ್ವರ್ಯವಂತನಿಗೆ ಮಾರಿ ಖರಾರು ರಿಜಿಸ್ಟರ್ ಮಾಡಲು ತಂದದನ್ನು ರಿಜಿಸ್ಟ್ರಾರವರು ಮೇಲಧಿಕಾರಿಗಳಿಗೆ ಕಳುಹಿಸುವರು.

ಯುನೈಟೆಡ್ ಪ್ರಾವಿನ್ಸಿನ ಮಂತ್ರಿಗಳಾದ ರಾಜಾ ರಾಜೇಶ್ವರ ಬಲಿ ಮತ್ತು ಕುನ್ವರ್ ರಾಜೇಂದ್ರ ಸಿಂಘ್‌ರವರು ಸೈಮನ್ ಕಮಿಶನಿನೊಂದಿಗೆ ಸಹಕರಿಸಲು ಒಪ್ಪದ್ದರಿಂದ ಅಲ್ಲಿಯ ಗವರ್ನರರವರ ಇಚ್ಛೆ ಮೇರೆ ಅವರುಗಳು ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟಿರುವರು. ಅವರು ಈಗ ಅಲ್ಲಿಯ ಕೌನ್ಸಿಲಿನ ರಾಷ್ಟ್ರೀಯ ಪಕ್ಷದವರೊಂದಿಗೆ ಸೇರಿರುವರು.

'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ 22ನೇ ವಾರ್ಷಿಕ ಮಹಾಸಭೆಯು ಈ ತಾ. 12ರಲ್ಲಿ ಪೂನಾದಲ್ಲಿ ನಡೆಯಿತು. ಅದರ ಅಧ್ಯಕ್ಷರಾದ ಮೆ. ಜಿ. ಕೆ. ದೇವಧರ್‌ರವರು ಸಂಘದ ಕೆಲಸವನ್ನು ಕುರಿತು ಉಪನ್ಯಾಸ ಮಾಡಿದರು. ಪಂಡಿತ ಮಾಲವೀಯರು ಸೊಸೈಟಿಯ ಅಭಿವೃದ್ಧಿಯನ್ನು ಕುರಿತು ಕೆಲವು ಸೂಚನೆಗಳನ್ನೊಳಕೊಂಡ ಭಾಷಣ ಮಾಡಿದರು.

ಗತಿಸಿಹೋದ ಚಿತ್ತರಂಜನ ದಾಸ್‌ರವರ ಸ್ಮಾರಕ ಆಸ್ಪತ್ರೆ ಫಂಡಿಗೆ ಹಣ ಸಂಗ್ರಹಿಸಲಿಕ್ಕಾಗಿ ಈ ತಾ. 16ರನ್ನು 'ದಾಸ್ ಆಸ್ಪತ್ರೆ ದಿನ'ವಾಗಿ ಆಚರಿಸಬೇಕೆಂದೂ, ಜನರು ಉದಾರಭಾವದಿಂದ ದ್ರವ್ಯ ಸಹಾಯ ಮಾಡಬೇಕೆಂದೂ ಡಾಕ್ಟರ್ ಅನ್ಸಾರಿ, ಪಂಡಿತ ಮೋತಿಲಾಲ್ ನೆಹರು, ಜಯಕರ್, ಸರ್ ಅಬ್ದುಲ್ ರಹೀಮ್ ಮೊದಲಾದ ಹಲವು ಧುರೀಣರು ಸೇರಿ ವಿಜ್ಞಾಪನಾ ಪತ್ರ ಪ್ರಕಟಿಸಿರುವರು.

ಮಹಾತ್ಮ ಗಾಂಧಿಯವರ ಸೂಚನೆ ಮೇರೆ ಕಾಂಗ್ರೆಸ್ಸ್ ಪ್ರೆಸಿಡೆಂಟರಾದ ಡಾಕ್ಟರ್ ಅನ್ಸಾರಿಯವರ ಕೋರಿಕೆಗನುಸಾರವಾಗಿ ಹಿಂದೂದೇಶದ ಹಲವು ಕಡೆಗಳಲ್ಲಿ ಈ ತಾ. 12ನೇ ದಿನವು "ಬಾರ್ದೋಲಿ ದಿನ"ವಾಗಿ ಆಚರಿಸಲ್ಪಟ್ಟಿತು. ಮೀಟಿಂಗುಗಳು, ಮೆರವಣಿಗೆಗಳನ್ನು ನಡಿಸಿ ಅಲ್ಲಿಯ ಸತ್ಯಾಗ್ರಹ ಚಳವಳಕ್ಕೆ ತುಂಬಾ ಹಣವು ವಸೂಲಿ ಮಾಡಲ್ಪಟ್ಟಿತು. ಬೊಂಬಾಯಿಯಲ್ಲಿ ಹರತಾಳವೂ ಆಚರಿಸಲ್ಪಟ್ಟಿತು.

'ಕರ್ನಾಟಕದಲ್ಲಿ ಮೊದಲನೇ ಖಾದಿ ಪರಿಷತ್ತು ಕೂಡುವ ಸುಸಂಧಿಯನ್ನು ಕಂಡು ಕರ್ನಾಟಕದಲ್ಲಿ ಖಾದಿ ಪ್ರಸಾರ ಮಾಡುವ ಮತ್ತು ಮಾರುವ ಕಾರ್ಯದಲ್ಲಿ ಅನುಕೂಲತೆಯನ್ನುಂಟು ಮಾಡಿಕೊಟ್ಟು ತನ್ನ [illegible] ಸ್ವೀಕರಿಸಬೇಕೆಂದು ಅಖಿಲಭಾರತ ನೂಲುವ ಸಂಘಕ್ಕೆ ಕರ್ನಾಟಕ ದಳವು ಬಿನ್ನವಿಸುತ್ತದೆ' ಎಂಬ ಠರಾವನ್ನು ಧಾರವಾಡದಲ್ಲಿ ಪರಿಷತ್ತುಗಳ ಕಾಲದಲ್ಲಿ ಕೂಡಿದ ಕರ್ನಾಟಕ ದಳದ ಸಭೆಯಲ್ಲಿ ಪಾಸುಮಾಡಿದರು.

ವಿದೇಶ.

'ಇಂಟರ್ ನೇಶನಲ್ ಲೇಬರ್ ಆಫೀಸಿನ ಆಡಳಿತ ಮಂಡಳಿಗೆ ಇಂಡಿಯಾದ ಪ್ರತಿನಿಧಿಯಾದ ಮಿ. ಜೋಶಿಯವರು ಒಬ್ಬ ಮೆಂಬರಾಗಿ ಆರಿಸಲ್ಪಟ್ಟಿರುವರು.

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷ ಪದವಿಯ ಚುನಾವಣೆಗೆ ಮಿ. ಕೂಲಿಡ್ಜ್‌ರವರು ನಿಲ್ಲುವದಿಲ್ಲವೆಂತಲೂ, ಮಿ. ಹೂವರ್‌ರವರು ರಿಪಬ್ಲಿಕನ್ ಪಾರ್ಟಿಯವರ ಉಮೇದುವಾರರಾಗುವರೆಂದೂ ವರ್ತಮಾನ.

ಶ್ರೀಯುತ ಶ್ರೀನಿವಾಸಯ್ಯಂಗಾರರ ಪ್ರೇರಣೆಯಿಂದ ಶ್ರೀ ಸಕ್ಲಾತವಾಲಾರವರು ಮತ್ತು ಶ್ರೀ. ಚರಣ ಸಿಂಹರವರು ಲಂಡನಿನಲ್ಲಿ ಒಂದು ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿರುವರು. ಆಗಲೇ ಅದಕ್ಕೆ 20 ಮೆಂಬರುಗಳು ಸೇರಿರುವರು.

ಈಜಿಪ್ಟಿನ ಪಾರ್ಲಿಮೆಂಟಿನಲ್ಲಿ ಅವರ ಅಧ್ಯಕ್ಷರ ಅಧಿಕಾರವನ್ನು ಹೆಚ್ಚಿಸುವ ಒಂದು ಮಸೂದೆಯು ಚರ್ಚೆಗೆ ಬಂದಾಗ ವಫ್ಡ್ ಪಾರ್ಟಿಯವರು ಅದನ್ನು ಚರ್ಚಿಸಕೂಡದೆಂದು ಹೇಳಿ ಮೀಟಿಂಗಿನಿಂದ ಎದ್ದು ಹೋಗಿಬಿಟ್ಟರು. ಆ ದಿನಕ್ಕೆ ಮೀಟಿಂಗು ಬಾಕಿಯಾಯಿತು.

ಜಪಾನಿನ ಪ್ರಧಾನ ಮಂತ್ರಿಯವರು ತಾ. 8ರಲ್ಲಿ ಟೋಕಿಯೋ ಪಟ್ಟಣದಿಂದ ಬೇರೊಂದು ಕಡೆ ಮೀಟಿಂಗಿಗೆ ಹೊರಡುತ್ತಿರುವಾಗ್ಗೆ ರೈಲ್ವೆ ಸ್ಟೇಶನಿನಲ್ಲಿ ಯಾವನೋ ಒಬ್ಬನು ಕೂಲಿಗಾರನ ಒಟ್ಟೆ ಹಾಕಿಕೊಂಡು ಅವರನ್ನು ಒಂದು ಚೂರಿಯಿಂದ ತಿವಿದು ಕೊಲ್ಲಲು ಪ್ರಯತ್ನಿಸಿದನಂತೆ. ಆದರೆ ಅವರ ಸಮೀಪವಿದ್ದವರು ಅವನನ್ನು ತಡೆದು ಸೆರೆ ಹಿಡಿದರಂತೆ.

ಅಫ್ಘಾನಿಸ್ಥಾನದ ಅಮೀರರು ಪತ್ನಿ ಸಮೇತ ಈಗ ಪರ್ಶಿಯಾದಲ್ಲಿ ಸಂಚಾರ ಮಾಡುತ್ತಿರುವರು. ಅಲ್ಲಿಯ ಅರಸರಾದ ಷಾಹರವರೂ, ಜನರೂ ಅಮೀರರಿಗೆ ಯೋಗ್ಯ ರೀತಿಯಲ್ಲಿ ಸ್ವಾಗತವನ್ನಿತ್ತು ಸತ್ಕರಿಸುತ್ತಿರುವರು. ತಮ್ಮ ಯೂರೋಪು ಪ್ರವಾಸದಲ್ಲಿ ಮುಸುಕನ್ನು ತೆಗದು ಬಿಟ್ಟಿದ್ದ ಅಫ್ಘಾನಿಸ್ಥಾನದ ಸೌರ್ಯ ಮಹಾರಾಣಿಯವರು ಪರ್ಶಿಯಕ್ಕೆ ಬಂದಾಗ ಮುಸುಕನ್ನು ಪುನಹ ಹಾಕಿಕೊಂಡರು.

ಚೈನಾದ ರಾಷ್ಟ್ರೀಯ ಸೈನ್ಯದವರು ಪೆಕಿಂಗ್ ಪಟ್ಟಣವನ್ನು ಮಾತ್ರವಲ್ಲ ಟೇಂಟ್ಸಿನ್ ಪಟ್ಟಣವನ್ನು ಕೈವಶ ಮಾಡಿಕೊಂಡಿರುವರು. ದಕ್ಷಿಣದ ರಾಷ್ಟ್ರೀಯ ಸೈನ್ಯದವರು ಉತ್ತರ ಸೈನ್ಯದವರ ಮೇಲೆ ನಡಿಸುತ್ತಿದ್ದ ಯುದ್ಧವು ರಾಷ್ಟ್ರೀಯ ಪಕ್ಷದವರಿಗೆ ಜಯಪ್ರದವಾಗಿ ಅಂತ್ಯವಾಗಿರುವದರಿಂದ ತನ್ನ ಸೇವೆಯು ಇನ್ನು ಅಗತ್ಯವಿಲ್ಲವೆಂದು ಕಾರಣ ತೋರಿಸಿ ದಕ್ಷಿಣ ಸೈನ್ಯದ ಮುಖ್ಯ ಸೇನಾಪತಿಯಾಗಿದ್ದ ಚ್ಯಾಂಗ್ ಕೈ ಶೇಕ್‌ರವರು ತಮ್ಮ ಪದವಿಗೆ ರಾಜಿನಾಮೆಯನ್ನು ಕಳುಹಿಸಿರುವರಂತೆ.

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಮೆ. ಕುಪ್ಪೇಟಿರ ಸುಬ್ಬಯ್ಯನವರು ಅವರ ಸ್ವಾಧೀನದಲ್ಲಿರುವ ಸ್ಥಿರ ಮತ್ತು ಚರ ಆಸ್ತಿಗಳನ್ನು ವಿಕ್ರಯಿಸುವದಾಗಿ ತಿಳಿದು ಬರುತ್ತದೆ. ಸದರಿ ಆಸ್ತಿಗಳಿಗೆ ನಾನು ಒಬ್ಬ ಹಕ್ಕುದಾರಳಾಗಿರುವದರಿಂದ ಮೆ. ಸುಬ್ಬಯ್ಯನವರಿಗೆ ಸದರಿ ಆಸ್ತಿಗಳನ್ನು ವಿಕ್ರಯ ಮಾಡಲು ಯಾ ಪರಾಧೀನ ಮಾಡಲು ಯಾವ ಸ್ವತಂತ್ರವೂ ಇರುವದಿಲ್ಲ. ಒಂದು ವೇಳೆ ಯಾರಾದರೂ ಸದರಿ ಆಸ್ತಿಗಳನ್ನು ಕ್ರಯಕ್ಕೆ ಪಡಕೊಂಡರೆ ಅದರಿಂದ ಉಂಟಾಗುವ ಎಲ್ಲಾ ನಷ್ಟಕ್ಕೂ, ಕಷ್ಟಕ್ಕೂ ಬಾಧ್ಯಸ್ಥರಾಗಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಸೋಣಾಗಿದೆ.

4—3   ಮಿಸೆಸ್ ಕುಪ್ಪೇಟಿರ ಕಾರ್ಯಪ್ಪ.

ನೋಟೀಸ್.

ಫ್ರೇಜರ್‌ಪೇಟೆ ಶರಾಪ್ ಮಂಜಯ್ಯಸೆಟ್ಟರ ಮಗ ಪೌತಿ ಸಂಜಪ್ಪಸೆಟ್ಟರ ಹೆಂಡತಿ ರಂಗಮ್ಮನು ಈ ಮೂಲಕ ತಿಳಿಯಪಡಿಸುವುದೇನೆಂದರೆ:—ನನ್ನ ಪೌತಿ ಗಂಡ ಸಂಜಪ್ಪಸೆಟ್ಟರಿಗೂ, ನನ್ನ ಮೈದುನ ನಾಗಪ್ಪಸೆಟ್ಟರಿಗೂ ಪಿತ್ರಾರ್ಜಿತವಾಗಿದ್ದು ಅವಿಭಕ್ತ ಕುಟುಂಬದಲ್ಲಿ ಅನುಭವಿಸಿ ಬರುತ್ತಿದ್ದ ಫ್ರೇಜರ್‌ಪೇಟೆಯಲ್ಲಿರುವ ಒಂದು ಮನೆಯೂ, [illegible] ಗ್ರಾಮದಲ್ಲಿರುವ ಭೂಮಿಯೂ, ಬೈಚನಹಳ್ಳಿ ಮುಂತಾದ ಗ್ರಾಮಗಳಲ್ಲಿರುವ ಹೊಲಗಳೂ ಸಹ ಹಾಲಿ ನನ್ನ [illegible] ಸೆಟ್ಟರ ಹೆಸರಿನಲ್ಲಿ ಜಮಾಬಂದಿ [illegible], ಅವರ [illegible]ಧವದಲ್ಲಿದೆ. ಆದರೆ ಈ ಸೊತ್ತುಗಳ [illegible]ದಿಂದ ನನ್ನ ಗಂಡ ಪೌತಾದಂದಿನಿಂದ ಈ ವರೆಗಿನ [illegible] ಸಾಂಶವು ಇನ್ನು ಮುಂದಿನ ಜೀವನಾಂಶವು ನನಗೆ ಸಲ್ಲಬೇಕಾಗಿದೆ. ಈ ಸೊತ್ತುಗಳನ್ನು ಯಾರಾದರೂ ಗಿರವಿ, ಭೋಗ್ಯ, ಕ್ರಯ ವಗೈರೆ ಯಾವ ವಿಧದಿಂದ ಪರಾಧೀನ ಮಾಡಿಕೊಂಡರೂ ನನಗೆ ಸಲ್ಲಬೇಕಾದ ಜೀವನಾಂಶವನ್ನು ಕೊಡಬೇಕಾಗುತ್ತದೆ.

2—1.   ರಂಗಮ್ಮ.

ಪಾಟ್ನಾದಲ್ಲಿ.

ಸೇವಾದಳದ ಶಿಕ್ಷಣ ಶಿಬಿರ

ಬಿಹಾರ ವಿದ್ಯಾಪೀಠದ ಅನುಮತಿಯ ಪ್ರಕಾರ ದಳದ ವತಿಯಿಂದ ಶಿಕ್ಷಣ ಶಿಬಿರವು ಪಾಟ್ನಾದಲ್ಲಿ [illegible] ನೇ ಇಸವಿ ಏಪ್ರಿಲ್ ೧೭ನೇ ತಾರೀಖಿನ ದಿವಸ ಗಂಗಾನದಿಯ ತೀರದಲ್ಲಿರುವ ಸದಾಕತಾಶ್ರಮದಲ್ಲಿ ಪ್ರಾರಂಭಿಸಲ್ಪಟ್ಟಿತು. ಈ ಶಿಬಿರಕ್ಕೆ ಆರೋಗ್ಯ ಶಿಬಿರವೆಂಬ ಹೆಸರು ಕೊಡಲ್ಪಟ್ಟಿತ್ತು. ಬಿಹಾರ್ ಪ್ರಾಂತ್ಯದಲ್ಲಿಯ ಸೇವಾದಳದ ಶಿಬಿರವೊಂದು ಇದೇ ಮೊದಲನೇಯದು. ಶಿಬಿರವನ್ನು ನಡೆಯಿಸಲು ಮತ್ತು ಶಿಕ್ಷಣ ಕೊಡಲು ದಳದ ಮುಖ್ಯ ಕಚೇರಿ(ಹುಬ್ಬಳ್ಳಿ) ಯಿಂದ ಶ್ರೀ. [illegible] ಕಾಂಬಳ ಅವರ್ಚ್ಯರವರೂ ಮತ್ತು ಸಂಯುಕ್ತ ಪ್ರಾಂತ್ಯದ [illegible] ದಳದ ಕಾರ್ಯದರ್ಶಿಗಳಾದ ಶ್ರೀ ನಂದಕುಮಾರ ದೇ[illegible]ವರೂ ಹೋಗಿದ್ದರು.

ಈ ಶಿಬಿರದಲ್ಲಿ ಬಿಹಾರ ವಿದ್ಯಾಪೀಠದ 30 ವಿದ್ಯಾರ್ಥಿಗಳೂ, ಇಬ್ಬರು ಅಧ್ಯಾಪಕರೂ ಶಿಕ್ಷಣ ಹೊಂದಿದರು. ಪ್ರತಿ ದಿವಸದ ಕಾರ್ಯಕ್ರಮವು ಸೇವಾದಳದ ಪದ್ಧತಿಯಂತೆ ಬೆಳಿಗ್ಗೆ ನಾಲ್ಕು ಘಂಟೆಯಿಂದ ರಾತ್ರಿ ೯ ಘಂಟೆಯವರೆಗೆ ನಡೆಯುತ್ತಿತ್ತು. ಮತ್ತು ರಾತ್ರಿಯಲ್ಲಿ ಕಾವಲಿನ (ಪಹರೆ) ಕಾರ್ಯವು ನಡೆಯುತ್ತಿತ್ತು. ಭಾರತೀಯರ ದುರ್ದೈವದಿಂದ ಈಗ ಸ್ವರ್ಗವಾಸಿಗಳಾದ ಮಗನಲಾಲ ಗಾಂಧಿಯವರು ಪಾಟ್ನಾದಲ್ಲಿ ಅಸ್ವಸ್ಥರಾಗಿದ್ದರು. ಆ ಕಾಲದಲ್ಲಿ ಅವರ ಶುಶ್ರೂಷೆಯನ್ನು ಆ ಶಿಬಿರದ ಸ್ವಯಂ ಸೇವಕರು ಮನಃಪೂರ್ವಕವಾಗಿ ಮಾಡಿದರು. ಶ್ರೀ. [illegible], ಶ್ರೀ. ಬ್ರಜಕಿಶೋರ ಪ್ರಸಾದ, ಶ್ರೀ. [illegible]ಶ್ವರ ಪ್ರಸಾದ ಸಿಂಹ ಯಂ. ಯಸ್. ಎ. ಮತ್ತು ಪ್ರೊ. ರುದ್ರದೇವಶಾಸ್ತ್ರಿ ಮೊದಲಾದವರು ಶಿಬಿರವನ್ನು ಸಂದರ್ಶಿಸಿ ವಿದ್ಯಾರ್ಥಿಗಳಿಗೆ ಉಪದೇಶ ಮಾಡಿ ಪ್ರೋತ್ಸಾಹಿಸಿದರು.

ಅಶೋಕ ಶಿಬಿರದ ಸಮಾಪ್ತಿ ಸಮಾರಂಭವು ಮೇ ೧೦ನೇ ತಾರೀಕಿನ ದಿವಸ ಸಾಮದಾರ್ ಅನುಗ್ರಹನಾರಾಯಣ ಸಿಂಹ (ಮೆಂಬರ್ ಕೌನ್ಸಿಲ್ ಆಫ್ ಸ್ಟೇಟ್) ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ದಿವಸ ಶ್ರೀ ಬ್ರಿಜಕಿಶೋರ್ ಪ್ರಸಾದ ಶ್ರೀ. ಸಿದ್ಧೇಶ್ವರ ಪ್ರಸಾದ ಗಯಂ ಯಂ. ಯಲ್. ಎ., ಶ್ರೀ. ಕೃಷ್ಣವಲ್ಲಭ ಸಹಾಯ ಯಂ. ಯಲ್. ಸಿ., ಜಗತ್‌ನಾರಾಯಣ ಲಾಲ್ ಯಂ ಯಲ್. ಸಿ. ಮೊದಲಾದವರು ಬಂದಿದ್ದರು. ಸಮಾರಂಭದಲ್ಲಿ ಶಿಬಿರದ ವರದಿ ಓದುವುದು, ಹುಡುಗರು ಕಲಿತ ಲಾಠಿ, ಭಾಲ, ಜಂಬಿಯಲಕ್ಡಿ, ಹಿಂದಿ ಕವಾಯಿತ್ ಮುಂತಾದುವುಗಳ ಪ್ರದರ್ಶನ ಮತ್ತು ಅಧ್ಯಕ್ಷರ ಭಾಷಣ ಇವೇ ಮೊದಲಾದ ಕಾರ್ಯಕ್ರಮ ನಡೆದವು.

ವಿದ್ಯಾಪೀಠದ ರಜಿಸ್ಟ್ರಾರಾದ ಶ್ರೀ ಬದ್ರಿನಾಥವರ್ಮರೂ ಪ್ರೊ. ಜ್ಞಾನಸಹಾ ಮತ್ತು ಶ್ರೀ ಬಲದೇವನಾರಾಯಣರೂ ದಲದ ಶಿಕ್ಷಣ ಪಡೆದರಲ್ಲದೆ ಶಿಬಿರವನ್ನು ನಡೆಯಿಸಲು ದಲದವರಿಗೆ ಪೂರ್ಣ ಸಹಾಯ ಮಾಡಿದ್ದಕ್ಕಾಗಿ ಅವರ ಆಭಾರವನ್ನು ಮನ್ನಿಸುವೆವು. ಬಿಹಾರದಲ್ಲಿ ಇನ್ನೂ ಎರಡು ಮೂರು ಶಿಬಿರಗಳನ್ನು ತೆರೆಯಲು ಸೇವಾದಳದವರಿಗೆ ಆಮಂತ್ರಣಗಳಿದ್ದವು. ಆದರೆ ಮಳೆಗಾಲದ ಮೂಲಕ ಈ ಕಾರ್ಯವು ಮುಂದಕ್ಕೆ ಹಾಕಬೇಕಾಯಿತು.

ಇದಲ್ಲದೆ ಬಿಹಾರದಲ್ಲಾದ ಉಳಿದ ಕಾರ್ಯಗಳೆಂದರೆ.—

೧. ಏಪ್ರಿಲ್ ೨೧ನೇ ದಿವಸ ಸದಾಕತಾಶ್ರಮದಲ್ಲಿ ಬಿಹಾರ ಪ್ರಾಂತೀಕ ಕಾಂಗ್ರೆಸ್ ಕಮಿಟಿಯು ಕೂಡಿ ಶ್ರೀ. ಮಥುರಾಪ್ರಸಾದ ಇವರನ್ನು ಬಿಹಾರದಲ್ಲಿ ಹಿಂದೂಸ್ಥಾನೀ ಸೇವಾದಲದ ಶಾಖೆಯನ್ನು ಸ್ಥಾಪಿಸಲು ಮತ್ತು ಹಣ ಕೂಡಿಸಲು ನೇಮಿಸಿತು.

೨. ಪಾಟ್ನಾದಲ್ಲಿ ಮೇ ೧೨ನೇ ತಾರೀಕಿನ ದಿವಸ ಶ್ರೀ. ಸುಭಾಸ್ ಚಂದ್ರ ಬೋಸ್‌ರವರ ಭಾಷಣವು ನಡೆದಾಗ್ಗೆ ಅಶೋಕ ಶಿಬಿರದ ಸ್ವಯಂ ಸೇವಕರು ಒಳ್ಳೆ ಶಿಸ್ತಿನಿಂದ ಕೆಲಸ ಮಾಡಿದರು. ಅದನ್ನು ಕಂಡು ಶ್ರೀ. ಬೋಸರು ಆನಂದಪಟ್ಟರು.

೩. ವಿದ್ಯಾಪೀಠದಲ್ಲಿ ಇನ್ನು ಮುಂದೆ ಪ್ರತಿದಿನವೂ ರಾಷ್ಟ್ರೀಯ ಧ್ವಜರೋಹಣ ಮತ್ತು ಅವರೋಹಣ ಸಮಾರಂಭವನ್ನು ದಲದ ಪದ್ಧತಿಯಂತೆ ಮಾಡಬೇಕೆಂದೂ, ಲಾಠಿ ಮೊದಲಾದ ದಲದ ಶಿಕ್ಷಣದ ವಿಷಯಗಳನ್ನು ತಮ್ಮ ವಿದ್ಯಾಪೀಠದ ಅಭ್ಯಾಸಕ್ರಮದಲ್ಲಿ ಸೇರಿಸಬೇಕೆಂದೂ ನಿಶ್ಚೈಸಿರುವದು.

೭—೬—೨೮. ನಾ. ಸೆ. ಕರಗುದರಿ,
ಹುಬ್ಬಳ್ಳಿ. ಹಿಂ. ಸೇ. ದಲ.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ದೊಡ್ಡ ಉದ್ಯೋಗಸ್ಥರ ಸರ್ವಿಸ್.

ದೊಡ್ಡ ಉದ್ಯೋಗಸ್ಥರು ತಮ್ಮ ಸರ್ವಿಸನ್ನು ಒಂದೆರಡು ವರ್ಷ ಮುಂದರಿಸುವುದು ನಮ್ಮ ದೇಶದಲ್ಲಿ ಒಂದು ದೊಡ್ಡ ಅಂಟು ಜಾಡ್ಯವಾಗಿದೆ. ಸರಕಾರಿ ಉದ್ಯೋಗವೆಂದರೆ ಅಷ್ಟು ಮಮತೆ. ಕೇವಲ ಸಂಬಳದ ಆಶೆಯಿಂದ ಕೆಲವು ಉದ್ಯೋಗಸ್ಥರು ತಮ್ಮ ಕೆಲಸದಿಂದ ನಿವೃತ್ತರಾಗಲು ಇಷ್ಟಪಡುವುದೇ ಇಲ್ಲ. ಒಂದೆರಡು ವರ್ಷ ತಮ್ಮ ಸರ್ವಿಸನ್ನು ಮುಂದರಿಸುವದು (Extend) ಇದಕ್ಕೆ ನಮ್ಮ ಸರಕಾರದವರೂ ಸಹ ಪ್ರೋತ್ಸಾಹ ಕೊಡುತ್ತಿದ್ದಾರೆ. ದೊಡ್ಡ ಉದ್ಯೋಗಸ್ಥನು ಎಕ್ಸ್‌ಟೆನ್‌ಶನ್ ಕೇಳಿದರೆ ಕೂಡಲೆ ಕೊಟ್ಟುಬಿಡುತ್ತಾರೆ. ಕೆಲವು ವರ್ಷಗಳ ಹಿಂದೆ ಒಬ್ಬ ದೊಡ್ಡ ಪೊಲೀಸ್ ಉದ್ಯೋಗಸ್ಥನಿಗೆ ಎರಡು ವರ್ಷ ಕೊಟ್ಟರು. ಈಗ ಒಬ್ಬ ರೆವಿನ್ಯು ಉದ್ಯೋಗಸ್ಥನಿಗೆ ಎರಡು ವರ್ಷ ಕೊಟ್ಟಿದ್ದಾರೆ. ಇನ್ನು ಒಬ್ಬ ದೊಡ್ಡ ಅಧಿಕಾರದ ಉದ್ಯೋಗಸ್ಥನಿಗೆ ಒಂದೋ, ಎರಡೋ ವರ್ಷ ಕೊಡಲಿಕ್ಕಿರುವರೆಂದು ವದಂತಿ ಇದೆ. ಇದು ಒಳ್ಳೆಯ ಪದ್ಧತಿ! ಇದಕ್ಕಿಂತಲೂ 25 ವರ್ಷ ಸರ್ವಿಸಿನಲ್ಲಿ ಪೆನ್‌ಶನ್ ತಗೆದುಕೊಳ್ಳಬಹುದಾದವರು 27 ಅಥವಾ 28 ವರ್ಷ ಕೆಲಸ ನೋಡಬಹುದೆಂತಲೂ, 30 ವರ್ಷದಲ್ಲಿ ಪೆನ್‌ಶನ್ ತೆಗೆದುಕೊಳ್ಳಬಹುದಾದವರು 32 ಅಥವಾ 35 ವರ್ಷ ಕೆಲಸ ನೋಡಬಹುದೆಂತಲೂ ಕಾನೂನು ಮಾಡುವುದೇ ಉತ್ತಮವೆಂದು ತೋರುತ್ತದೆ. "ಯಾರಾದರೂ ತಿರುಗಿಸಲಿ, ಹೇಗಾದರೂ ತಿರುಗಿಸಲಿ, ಚಕ್ರ ತಿರುಗಿದರೆ ಸಾಕು." ಇದೇ ನಮ್ಮ ಸರಕಾರದವರ ಧ್ಯೇಯವೆಂದು ತೋರುತ್ತದೆ. ಒಬ್ಬ ಉದ್ಯೋಗಸ್ಥನನ್ನು ಅದರಲ್ಲೂ ಒಬ್ಬ ದೊಡ್ಡ ಅಧಿಕಾರದ ಉದ್ಯೋಗಸ್ಥನನ್ನು ಒಂದೇ ಸ್ಥಳದಲ್ಲಿ ಒಂದೇ ಕೆಲಸದಲ್ಲಿ ಬಹಳ ಕಾಲದ ವರೆಗೆ ಇಟ್ಟರೆ ಯಾವ ತೀರಿಯಲ್ಲಿಯೂ ಅದು ದೇಶಕ್ಕೆ ಹಿತಕರವಲ್ಲವೆಂದು ಸರಕಾರದ ಮಾಹಿತಿಯನ್ನು ತಿಳಿದ ಪ್ರತಿ ಒಬ್ಬ ಬುದ್ಧಿವಂತನೂ ಅಭಿಪ್ರಾಯ ಪಡುವನು. ಆದರೆ ನಮ್ಮ ದೇಶದಲ್ಲಿ ಮಾತ್ರ ಅದನ್ನು ಗಣನೆಗೆ ತರುವುದೇ ಇಲ್ಲ. ಇದು ಬಹಳ ವ್ಯಸನಕರವಾದ ಸಂಗತಿಯಾಗಿದೆ. ಇದೇ ವಿಷಯವಾಗಿ ಈಗಾಗಲೇ ನಾಲ್ಕೈದು ಬಾತ್ಮಿಗಳು ಹೊರಬಿದ್ದವು. ಆದರೂ ಅವುಗಳನ್ನು ಯಾರೂ ಗಮನಿಸಿದಂತೆ ಕಾಣುವುದಿಲ್ಲ. ಇನ್ನಾದರೂ ಸರಕಾರದವರು ಈ ವಿಷಯವನ್ನು ಗಣನೆಗೆ ತಂದು ಯಾರಿಗೂ ಸರ್ವಿಸ್ ಮುಂದರಿಸುವುದಕ್ಕೆ (Extension) ಹುಕುಂ ಕೊಡಬಾರದೆಂದು ಕೋರುತ್ತೇನೆ. ನಮ್ಮ ದೇಶದ ಉದ್ಯೋಗಸ್ಥರೂ ಕೂಡ ಬರೇ ಸಂಬಳದ ಆಶೆಯಿಂದ ತಮ್ಮ ಆಯುಷ್ಯವನ್ನು ಕಡಮೆ ಮಾಡಿಕೊಳ್ಳದೆ ಪೆನ್‌ಶನ್ ಸಿಕ್ಕುವ ಸಮಯ ಬಂದ ಕೂಡಲೆ ತಮ್ಮ ಕೆಲಸದಿಂದ ನಿವೃತ್ತರಾಗಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

"ಹಿತೈಷಿ"

ಮಹನೀಯರೇ,

ನಮ್ಮ ದೇಶದಲ್ಲಿ ಪ್ರತಿ ಗ್ರಾಮದಲ್ಲಿರುವ ದೇವರಿಗೆ ಜೋಡಿ ಭೂಮಿ ಇರುವುದು ಸಕಲರಿಗೂ ತಿಳಿದ ಸಂಗತಿಯಾಗಿರುತ್ತೆ. ದೇವರಪೂಜೆ ವಗೈರೆ ನಡಿಸಲಿಕ್ಕೆ ಸರಕಾರದಿಂದ ಹಣ ಕೊಡುವುದರ ಬದಲಿಗೆ ಭೂಮಿಯನ್ನು ಕೊಟ್ಟದ್ದಾಗಿದೆ. ಮತ್ತು ಇಂಥ ಭೂಮಿಯ ಉತ್ಪತ್ತಿಯಿಂದಲೇ ದೇವರಪೂಜೆ ವಗೈರೆ ನಡಿಯಬೇಕಾದ್ದರಿಂದ ಸರಕಾರದವರು ಇಂಥ ಭೂಮಿಗಳಿಗೆ ಅರ್ಧ ಕಂದಾಯ ಮಾತ್ರ ವಿಧಿಸಿದ್ದಾಗಿರುತ್ತೆ. ಇಷ್ಟರ ವರೆಗೆ ಜೋಡಿ ಭೂಮಿಯನ್ನು ಗ್ರಾಮಸ್ಥರ ಅನುಮತಿ ಮೇರೆ ಗ್ರಾಮದವರ ಪೈಕಿ ಒಬ್ಬನಿಗೆ ಸಾಗುವಳಿಗೆ ಕೊಟ್ಟು ಸದರಿಯವನಿಂದ ಶಾಂತಿಗಾರನಿಗೆ ವರ್ಷಕ್ಕೆ ಇಂತಿಷ್ಟು ಭತ್ತ ಮತ್ತು ದೇವಸ್ಥಾನಕ್ಕೆ ಇರುವ ಹುಲ್ಲನ್ನು ಕೊಡಬೇಕೆಂಬದಾಗಿ ನಿರುಕು ಮಾಡಿಕೊಂಡು ಅದೇ ಪ್ರಕಾರ ಪೂರ್ವದಿಂದಲೂ ದೇವರ ಕಾರ್ಯ ನಡಿಸಿಕೊಂಡು ಬಂದಿರುವದಾಗಿದೆ. ತರತ್ತಿಗೆ ಸರಿಯಾಗಿ ಭತ್ತ ಮತ್ತು ಹುಲ್ಲನ್ನು ಕೊಡದಿದ್ದ ಪಕ್ಷದಲ್ಲಿ ಅಂಥವನಿಂದ ಭೂಮಿಯನ್ನು ಬಿಡಿಸಿ ಬೇರೆಯವರಿಗೆ ಕೊಟ್ಟು ದೇವರ ಕಾರ್ಯಕ್ಕೆ ಅಟಂಕ ಬಾರದ ರೀತಿಯಲ್ಲಿ ನಡಿಸಿಕೊಂಡು ಬರುತ್ತಿದ್ದರು. ಈಗಲಾದರೋ ಜೋಡಿ ಭೂಮಿಗಳನ್ನು ಒಬ್ಬೊಬ್ಬನ ಹಕ್ಕಾಗಿ ಮಾಡಿಬಿಟ್ಟಿರುವಂತೆ ಕಾಣುತ್ತೆ. ಹೀಗೆ ಮಾಡಿದ್ದರಿಂದಲೇ ಅನೇಕರು ಮಾಮೂಲ್ ರೀತಿ ಕೊಡುತ್ತಿದ್ದ ಭತ್ತ ಮತ್ತು ಹುಲ್ಲನ್ನು ಕೊಡದೆ ನಿಲ್ಲಿಸಿರುವುದರಿಂದ ಮುಖ್ಯವಾಗಿ ಸೋಮವಾರಪೇಟೆ ನಾಡಿನ ಮುಕ್ಕಾಲು ಪಾಲು ದೇವಸ್ಥಾನಗಳು ಪಾಳು ಬಿದ್ದಿರುವುದಾಗಿದೆ. ಪೂರ್ವದಲ್ಲಿ ಜೋಡಿ ಭೂಮಿಯ ಜಮಾಬಂದಿಯು ಟ್ರಸ್ಟಿಗಳ (ಗ್ರಾಮದ ಮುಖ್ಯಸ್ಥರ) ಹೆಸರಿನಲ್ಲಿ ನಡೆದು ಬರುತ್ತಿತ್ತು. ಈಗಲೂ ಕೆಲವು ಜೋಡಿ ಭೂಮಿಗಳ ಜಮಾಬಂದಿಯು ಅದೇ ರೀತಿಯಲ್ಲಿ ನಡೆದು ಬರುತ್ತಿರುವುದು ರೂಢಿಯಲ್ಲಿರುತ್ತೆ. ಆದರೆ ಈಗ ಅನೇಕ ಜೋಡಿ ಭೂಮಿಗಳ ಜಮಾಬಂದಿಯು ಒಬ್ಬೊಬ್ಬನ ಹೆಸರಿನಲ್ಲಿಯೇ ಇರುತ್ತೆ. ಇಂಥವರೇ ದೇವರಿಗೆ ಸಲ್ಲಬೇಕಾದ ಹುಲ್ಲು, ಭತ್ತವನ್ನು ಕೊಡದೆ ದೇವರ ಕಾರ್ಯಕ್ಕೆ ವಿಘ್ನವನ್ನು ತಂದಿರುವುದಾಗಿದೆ. ಯಾವ ಕಾರಣದಿಂದ ಟ್ರಸ್ಟಿಗಳ ಹೆಸರಿನಿಂದ ಜಮಾಬಂದಿ ತಪ್ಪಿತೆಂದು ಹೇಳುವುದು ಕಷ್ಟ. ಜೋಡಿ ಭೂಮಿಯ ಹಿಡುವಳಿದಾರರು ಜಮಾಬಂದಿಯು ತಮ್ಮ ಹೆಸರಿನಲ್ಲಿರುವುದರಿಂದ ಸರಕಾರ ಕಂದಾಯ ತೆರಲು ಬಾಧ್ಯಸ್ಥರಲ್ಲದೆ ಮಾಮೂಲಾದ ರೀತಿ ಕೊಡುತ್ತಿದ್ದ ಭತ್ತ ಮತ್ತು ಹುಲ್ಲನ್ನು ಕೊಡುವುದಿಲ್ಲವೆಂದು ಕೊಡದೆ ಇರುವದರಿಂದಲೇ ಅನೇಕ ದೇವಸ್ಥಾನಗಳಲ್ಲಿ ಪೂಜೆ ನಿಂತುಹೋಗಿರುವುದಾಗಿದೆ. ಜಮಾಬಂದಿಯು ಗ್ರಾಮದ ಮುಖ್ಯಸ್ಥರುಗಳ ಹೆಸರಿನಲ್ಲಿದ್ದರೆ ಇಂಥ ಅನಾಹುತವು ಸಂಭವಿಸುತ್ತಿರಲಿಲ್ಲ. ಮಾಮೂಲ್ ರೀತಿ ದೇವರಿಗೆ ಸಲ್ಲುತ್ತಿದ್ದ ಭತ್ತ ಮತ್ತು ಹುಲ್ಲನ್ನು ಕೊಡಿಸಿಕೊಡಬೇಕೆಂದು ಸರಕಾರದವರಿಗೆ ಅರ್ಜಿ ಬರಕೊಂಡರೆ ಅರ್ಧ ಕಂದಾಯ ಮಾತ್ರ ವಸೂಲ್ಮಾಡಿ ಕೊಡುವುದಲ್ಲದೆ ಭತ್ತ ಮತ್ತು ಹುಲ್ಲನ್ನು ವಸೂಲ್ಮಾಡಿ ಕೊಡಲಿಕ್ಕಾಗುವುದಿಲ್ಲವಾಗಿ ಹೇಳುವುದಾಗಿದೆ. ಅರ್ಧ ಕಂದಾಯದಿಂದ ಸಿಕ್ಕುವ 5—6 ರೂಪಾಯಿಗಳಿಂದ ದೇವರ ಕಾರ್ಯವೂ ಮತ್ತು ಶಾಂತಿಗಾರನ ಜೀವನವೂ ಕಳೆಯಲಾರವೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಹೀಗಿದ್ದರೂ ಸರಕಾರದವರು ಈ ತರಹದ ಹುಕುಂ ಮಾಡುವುದು ಎಂದಿಗೂ ನ್ಯಾಯವೆನಿಸದು. ಸರಕಾರದವರೇ ಈ ರೀತಿ ವರ್ತಿಸಿದರೆ ಮುಂದೆ ದೇವಸ್ಥಾನಗಳ ಗತಿಯೇನಾಗಬೇಕು? ಈ ಪ್ರಕಾರವಾದರೆ ಕಾಲಕ್ರಮೇಣ ಜೋಡಿ ಭೂಮಿಗಳು ಪರಾಧೀನವಾಗುವಲ್ಲಿ ಸಂಶಯ ಇರುವುದಿಲ್ಲ. ಪೂರ್ವದಲ್ಲಿ ದೇವಸ್ಥಾನಗಳಿಗೆ ಕೊಟ್ಟ ಭೂಮಿಗಳಿಗಾಗಿ ಗ್ರಾಮಸ್ಥರು ಕೈಯಿಂದ ದುಡ್ಡು ಬಿಚ್ಚಿ ವ್ಯಾಜ್ಯ ಮಾಡಬೇಕಾಗಿ ಬಂದಿರುವುದು ಆಶ್ಚರ್ಯವೇ ಸರಿ. ಇಂಥ ಅನ್ಯಾಯ ಮತ್ತು ತೊಂದರೆಯನ್ನು ಹೋಗಲಾಡಿಸಬೇಕೆಂದು ಜೋಡಿ ಭೂಮಿಯು ಯಾರ ಹಕ್ಕೆಂಬುದನ್ನು ತನಿಖೆ ಮಾಡಲಿಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಬೇಕೆಂಬ ಠರಾವು ಜಮೀನ್ದಾರರ ಸಂಘದ ಮಹಾಸಭೆಯಲ್ಲಿ ಪಾಸಾಗಿರುತ್ತೆ. ಇಂಥ ಪ್ರಾಮುಖ್ಯವಾದ ಠರಾವಿಗೆ ಸರಕಾರದವರು ಗಮನಕೊಟ್ಟು ಕೂಡಲೇ ಕಮಿಟಿಯನ್ನು ನೇಮಕಮಾಡಿ ಮೇಲ್ಕಂಡ ತೊಂದರೆಯನ್ನು ನಿವಾರಣೆ ಮಾಡುವುದು ಅವಶ್ಯವಾಗಿರುತ್ತೆ. ಒಂದುವೇಳೆ ಸರಕಾರದವರು ಕೂಡಲೆ ಕಮಿಟಿಯನ್ನು ನೇಮಕಮಾಡದಿದ್ದಲ್ಲಿ ಜಮೀನ್ದಾರರ ಸಂಘದವರಾದರೂ ಕಮಿಟಿಯನ್ನು ಏರ್ಪಡಿಸಿ ಜೋಡಿ ಭೂಮಿಗಳ ವಿಷಯದ ನ್ಯೂನತೆಗಳನ್ನು ಸರಕಾರದವರಿಗೆ ತಿಳಿಸಿ ಗ್ರಾಮಸ್ಥರ ಸ್ವಾಧೀನಕ್ಕೆ ಬಿಡಿಸಿಕೊಡಲು ತಕ್ಕ ಏರ್ಪಾಡು ಮಾಡಲು ಹಿಂಜರಿಯಬಾರದು. ಸರಕಾರದವರು ಮತ್ತು ದೇಶದವರು ಸಹ ಈ ವಿಷಯದಲ್ಲಿ ಶ್ರಮವಹಿಸದೆ ಇದ್ದಲ್ಲಿ ನಮ್ಮ ಪೂರ್ವೀಕರು ನಡಿಸಿಕೊಂಡು ಬರುತ್ತಿದ್ದ ದೇವಸ್ಥಾನಗಳ ಮೇಲೆ ಲಂತಾನವು ಸವಾರಿ ಮಾಡದೆ ಇರುವುದಿಲ್ಲ. ಮುಖ್ಯವಾಗಿ ದೇಶದವರು ಈ ವಿಷಯದಲ್ಲು ತಂಬಾ ತೊಂದರೆಯನ್ನು ವಹಿಸಬೇಕಾಗಿರುತ್ತೆ.

ಹೆಚ್. ಟಿ. ಮುತ್ತಣ್ಣ.

ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕೂ ಮತ್ತು ಪೊಳ್ಳಿಬೆಟ್ಟ ಕೋಆಪರೇಟಿವ್ ಕ್ರೆಡಿಟ್ ಸಂಘವೂ.

ಮಹನೀಯರೇ,

ಮೇಲಿನ ಹೆಡ್ಡಿಂಗಿನಿಂದ ತಾ. 1—6—28ರಲ್ಲು 'ಕೊಡಗು' ಪತ್ರಿಕೆಯಲ್ಲು ಪ್ರಕಟಿಸಿರುವ ಬಾತ್ಮಿಯು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳವರ ಮನ ನೋಯಿಸಿರುವದೆಂತಲೂ ಅದಕ್ಕಾಗಿ ಕ್ಷಮೆ ಕೇಳಿಕೊಳ್ಳಬೇಕೆಂತಲೂ ತಾ. 9—6—28ರಲ್ಲು ನಡೆದ ಡೈರೆಕ್ಟರುಗಳವರ ಮೀಟಿಂಗಿನಲ್ಲು ರಿಕಾರ್ಡು ಮಾಡಲ್ಪಟ್ಟಿದೆ ಎಂದು ಹಾಜರಿದ್ದ ನಮ್ಮ ಸಂಘದ ಮೆಂಬರರೊಬ್ಬರಿಗೆ ತಿಳುವಳಿಕೆ ಕೊಟ್ಟ ಕಾರಣ ಇದಕ್ಕೆ ಮರ್ಯಾದೆ ಕೊಟ್ಟು ಒಂದೆರಡು ಪಂಕ್ತಿಗಳನ್ನು ಈ ಕೆಳಗೆ ಬರೆಯುತ್ತೇನೆ.

ನಾನೆಂದೂ ಡೈರೆಕ್ಟರುಗಳವರ ಯಾ ಬ್ಯಾಂಕಿನ ಅಧಿಕಾರಿಗಳ ಮನ ನೋಯಿಸಲಿಕ್ಕಾಗಿ ಈ ಬಾತ್ಮಿಯನ್ನು ಬರೆದವನಲ್ಲ. ಪೊಳ್ಳಿಬೆಟ್ಟ ಸಂಘದ ಮೆಂಬರಾದ ನಾನು ಸಂಘದ ಕಾರ್ಯಕ್ರಮವನ್ನು ಬಿಚ್ಚಿ ಡೈರೆಕ್ಟರುಗಳವರಿಗೆ ತೋರಿಸಿ ಬಡ ಮೆಂಬರಾದವರ ಹಣದ ತೊಂದರೆಯನ್ನು ನಿವಾರಿಸಲಿಕ್ಕಾಗಿ ಮನ ಕರಗಿಸುವದಕ್ಕಾಗಿ ಬರೆದದ್ದೇ ಹೊರತು ನನ್ನ ಸ್ವಾರ್ಥತೆಗೆ ಅಲ್ಲ; ಬದಲು ಬ್ಯಾಂಕಿಗೂ ಗ್ರಾಮಗಳ ಸಂಘಕ್ಕೂ ಉತ್ತೇಜನ ಕೊಡಲಿಕ್ಕಾಗಿದೆ.

ಸಾರ್ವಜನಿಕ ಕೆಲಸಗಳಲ್ಲಿ ನಿಂತಿರುವ ಡೈರೆಕ್ಟರುಗಳವರ ಹಿತಚಿಂತನೆಯು ದೇಶದ ಮೇಲೆ ಹರಡಿದೆ. ಅವರ ಲವಲೇಶವನ್ನು ನಮಸ್ಕಾರಗಳಿಂದ ಪೊಳ್ಳಿಬೆಟ್ಟ ಸಂಘದ ಕಡೆಗೆ ತಿರುಗಿಸಲಿಕ್ಕಾಗಿದೆ ಹೊರತು ಮನ ನೋಯಿಸಲಿಕ್ಕೆ ಉದ್ಯೋಗಿಸಿರುವದಲ್ಲ.

ಸದರಿ ಲೇಖನವನ್ನು ಪತ್ರಿಕೆಗೆ ಕಳುಹಿಸಿ ಡೈರೆಕ್ಟರುಗಳ ಮನಸ್ಸು ನೋಯಲು ಕಾರಣ ಕೊಟ್ಟದ್ದಕ್ಕೆ ವಿಷಾದಿಸುತ್ತೇನೆ.

ಸಂಘದ ಮೆಂಬರ್.

ಮೊಹರಂ ಹಬ್ಬ.

ದೇಶದ ಪ್ರಿಯ ಸಹೋದರರೇ

ಕಳೆದ ವರ್ಷ ಮೊಹರಂ ಹಬ್ಬದ ವಿಷಯದ ನಿಜ ಸಂಗತಿ ತಮ್ಮ ಸನ್ನಿಧಾನಗಳಲ್ಲು ಅರಿಕೆಮಾಡಿಕೊಂಡಿದ್ದೇನೆ. ಅದರ ಸಾರಾಂಶವೇನೆಂದರೆ:-ನಮ್ಮ ಗುರುಗಳಾದ ಹಜರತ್ ಮೊಹಮ್ಮದ್ ಅಲೈ ಹಿಸ್ಸಲಾಂರವರ ಮೊಮ್ಮಕ್ಕಳಾದ ಹಜರತ್ ಇಮಾಮ್ ಹುಸೈನ್ ಅಲೈ ಹಿಸ್ಸಲಾಂರವರು ಆಗ್ಗೆ ಡಾಮಸ್ಕಸ್‌ನಲ್ಲು ದೊರೆಯಾಗಿದ್ದ ಇವರ ದಾಯಾದಿ ಯೆಜೀದ್ ಎಂಬವನು ಇಸ್ಲಾಂಮತಕ್ಕೆ ವಿರೋಧವಾಗಿ ಸಾರಾಯಿ ಕುಡುಕನಾಗಿದ್ದದರಿಂದಲೂ ಮತ್ತು ಇನ್ನು ಕೆಲವು ವಿಷಯಗಳಲ್ಲು ಮತಕ್ಕೆ ವಿರೋಧವಾಗಿ ನಡೆಯುತ್ತಿರುವದರಿಂದಲೂ ಆತನನ್ನು ದೊರೆಯಾಗಿ ಒಪ್ಪಿಕೊಳ್ಳದ ಕಾರಣ ಇವರು ಮೆಸೋಪೊಟೇಮಿಯದ ಕೂಫಾ ಪಟ್ಟಣದವರು ಮತದ ಬೋಧನೆ ಹೇಳಲಿಕ್ಕೆ ಕರೆಯ ಕಳುಹಿಸಿದ್ದರಿಂದ ಇವರು ತಮ್ಮ ವಾಸ ಮದೀನಾ ಪಟ್ಟಣದಿಂದ ತನ್ನ ಹೆಂಡತಿ ಮಕ್ಕಳು ಜುಮ್ಲ 72 ಜನರೊಡನೆ ಅಲ್ಲಿಗೆ ಹೋದಾಗ್ಯೆ ಕೂಫಾ ಪಟ್ಟಣದ ಬಳಿ ಇರುವ ಕರ್ಬಲಾ ಮೈದಾನದಲ್ಲು ಯೆಜೀದ್‌ದೊರೆ ಗವರ್ನರ್ ಆದ ಜೈಯಾದ್ ಎಂಬವನು ನಲ್ವತ್ತು ಸಾವಿರ ದಂಡಿನಿಂದ ಇವರನ್ನು ಮುತ್ತಿಗೆ ಹಾಕಿ ದೊರೆಯ ಹುಕುಂ ಸೆರೆಹಿಡಿಯಬೇಕೆಂದಿದ್ದರೂ ಇವನು ಬಾರಿ ಉದ್ಯೋಗ ಸಿಕ್ಕಬಹುದೆಂಬ ಆಶೆಯಿಂದ ಹೊಗನನು ಮತ್ತು ಒಂದು ಚಿಕ್ಕ ಮಗು ವಿನಹ ಬಾಕಿ ಎಲ್ಲರಿಗೂ ಶಹೀದ್ ಮಾಡಿಬಿಟ್ಟನು, ಅಂದರೆ ಕೊಂದು ಬಿಟ್ಟನು. ಹಜರತ್ ಇಮಾಮ್ ಹುಸೈನ್ ಅಲೈ ಹಿಸ್ಸಲಾಂರವರು ನ್ಯಾಯಕ್ಕಾಗಿ, ಸತ್ಯಕ್ಕಾಗಿ ಮತ್ತು ಇಸ್ಲಾಂಮತದ ನಿಜತ್ವದ ಗೌರವಕ್ಕಾಗಿ ಮೊಹರಂ ಹತ್ತು ದಿನಗಳವರೆಗೆ ಕಾದಾಡಿ ಹತ್ತನೇ ದಿನ ಶಹೀದರಾದರು.. ದೇವರು ಇವರೆಲ್ಲರ ಮೇಲೂ ತನ್ನ ಕರುಣೆಯ ಮಳೆಯನ್ನು ಸುರಿಸಲಿ.

ಈ ಮೊಹರಂ 10 ದಿನಗಳಲ್ಲು ನಾವು ಮುಸಲ್ಮಾನರು ಹೆಚ್ಚಾಗಿ ದೇವರ ಪ್ರಾರ್ಥನೆ ಮಾಡಲೇ ಬೇಕಾಗಿದೆ. ಖುರಾನ್ ಓದಬೇಕಾಗಿದೆ. ಗರೀಬರಿಗೆ ಅನ್ನ ಬಟ್ಟೆ ದಾನಮಾಡಬೇಕಾಗಿದೆ. ಅಜ್ಞಾನಿ ಜನರಿಗೆ ಮತದ ಬೋಧನೆ ಮಾಡಬೇಕಾಗಿದೆ. ಅಂತೂ ಎಲ್ಲಾ ಕಾರ್ಯಗಳು ಶುದ್ಧಿಯಿಂದಲೂ ಶುಚಿಯಿಂದಲೂ ಮೌನವಾಗಿ ದೇವರ ಪ್ರಾರ್ಥನೆ, ದಾನಧರ್ಮವಗೈರೆ ಪುಣ್ಯದ ಕಾರ್ಯಗಳೇ ಮಾಡಬೇಕಾಗಿದೆ.

ಇದನ್ನು ಬಿಟ್ಟು ವಿದ್ಯೆಯಿಲ್ಲದ, ಶಾಸ್ತ್ರತಿಳಿಯದ ಕೆಲವು ಅಜ್ಞಾನಿ ನಮ್ಮ ಸಹೋದರರು ಇಸ್ಲಾಂಮತಕ್ಕೆ ಸಂಪೂರ್ಣ ವಿರೋಧವಾದ, ನೀಚವಾದ ಗಲೀಜ್ ನಕಲಿಗಳನ್ನು ಮಾಡಿಕೊಂಡು, ಮೈ ಬೆತ್ತಲೆಯಾಗಿ ಹುಲಿ, ಕರಡಿ ಕತ್ತೆ, ಕುದುರೆ ವಗೈರೆ ಪಿಶಾಚಿ ವೇಷಗಳನ್ನು ಹಾಕಿಕೊಂಡು ಬೈಗಳ, ಕೆಟ್ಟ ಮತ್ತು ತುಚ್ಛಕರವಾದ ಮಾತುಗಳಿಂದ ಕೂಡಿದ ಪದಗಳನ್ನು ಹಾಡಿಕೊಂಡು ಇಲ್ಲದ ಚೇಷ್ಟೆ, ಇಲ್ಲದ ಜಗಳ ಕೆಣಕಿಕೊಂಡು ವರ್ಷಂಪ್ರತಿ ಪಿಶಾಚಿಗಳು ಸಹ ಒಪ್ಪದಂಥ ತಮಾಷೆಗಳನ್ನು ಮಾಡುತ್ತಾ ಇದ್ದಾರೆ. ಈಗ್ಯೆ ನಡೆಯುವಂಥ ಮೊಹರಂ ಹಬ್ಬವು ಇಸ್ಲಾಂ ಮತಕ್ಕೆ ಸಂಪೂರ್ಣ ವಿರೋಧ. ಇದು ಶೈತಾನನ ಮತವಾಗಿದೆ.

ಇದರ ನಿಜ ಸಂಗತಿ ಹೀಗಿರುವಾಗ್ಗೆ ಕೆಲವು ಹಿಂದು ಮತದವರು ಸಹ ವಿಷಯ ತಿಳಿಯದೆ ಇದರಲ್ಲಿ ಸೇರಿಕೊಂಡು ಗಮ್ಮತ್ತ್ ತಮಾಷ ಮಾಡುತ್ತಾರೆ. ಈ 10 ದಿನಗಳಲ್ಲಿ ಸಾರಾಯದ ಅಂಗಡಿಯವರಿಗೆ ಭಾರಿ ವ್ಯಾಪಾರ. **ಕೆಲವು ಜಾಗಗ**

ಅಲ್ಲಿ ಮುಸಲ್ಮಾನರು ಕಟ್ಟಿದ್ದರೂ ಈ ಸಾರಾಯಿ ಅಂಗಡಿಯವರು ಹಣಕೊಟ್ಟು ಕೊಂಡುಕೊಳ್ಳುವರು. ಒಟ್ಟಾರೆ ಈ ಮೋಹರದ ಹಬ್ಬವು ಇಸ್ಲಾಂ ಧರ್ಮಕ್ಕೆ, ನಾಗರೀಕತನಕ್ಕೂ, ಸ್ವಾಭಿಮಾನಕ್ಕೆ, ದರ್ಮಕ್ಕೂ ಮತ್ತು ಬುದ್ಧಿಗೂ ಸಂಪೂರ್ಣ ವಿರೋಧವಾಗಿದೆ.

ಆದ್ದರಿಂದ ನಮ್ಮ ಹಿಂದು ಸಹೋದರರಲ್ಲಿ ನನ್ನ ದುಃಖಕರವಾದ ಅಪೀಲ್ ಏನೆಂದರೆ—ತಾವೆಲ್ಲಾ ಪಿಟೀಲುಗಳನ್ನು ನುಡಿಸಿ ಈ ನೀಚ ಪಿಶಾಚಿ ಕಾರ್ಯಗಳನ್ನು ಮಾಡದಂತೆ ತಮ್ಮ ಮತಸ್ಥರನ್ನು ಸಂಪೂರ್ಣ ಪ್ರೇರಪಡಿಸಬೇಕಾಗಿಯೂ ಮತ್ತು ಇಂತಹ ಪಾಪದ ಪಿಶಾಚಿ ಕಾರ್ಯದಲ್ಲಿ ಒಂದು ಕಾಸಿನ ಸಹಾಯ ಮಾಡಬಾರದಾಗಿಯೂ ತಾವೆಲ್ಲರೂ ತೀರ್ಮಾನಿಸಬೇಕಾಗಿಯೂ ಅತ್ಯಂತ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ.

ಸರಕಾರಕ್ಕೆ ವಿನಯವಾದ ಮತ್ತು ನ್ಯಾಯವಾದ ಅಪೀಲ್ ಏನೆಂದರೆ—ಮುಸಲ್ಮಾನರ ವಿನಹ ಇತರ ಮತಸ್ಥರಿಗೆ ಅವರ ಮತವಲ್ಲದ ಅವರಿಗೆ ಸಂಬಂಧವಿಲ್ಲದ ಮತ್ತು ಅವಶ್ಯವಿಲ್ಲದ ಈ ಹಬ್ಬದಲ್ಲಿ ಯಾವ ತರಹದ ಲೈಸನ್ಸು ಕೂಡ ಕೊಡದಾಗಿ ಬಹು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಮುಸಲ್ಮಾನರಿಗೆ ವಿದ್ಯೆಯಿಲ್ಲದೆ ಈ ನೀಚ ಕೆಲಸಗಳನ್ನು ಮಾಡುವದಾಗಿದೆ. ಆದಕಾರಣ ಸರ್ಕಾರ ಮುಸಲ್ಮಾನರಿಗೆ 20 ಮಕ್ಕಳಿಗ ಮೇಲ್ಪಟ್ಟು ಇರುವ ಜಾಗಗಳಲ್ಲಿ ಒಂದೊಂದು ಶಾಲೆ ಸ್ಥಾಪಿಸಿ ಕೊಡುವಂತೆ ಅರಿಕೆ ಮಾಡುತ್ತೇನೆ. ಈ ಕೋರಿಕೆಯನ್ನು ತಾವು ಪದೇ ಪದೇ ಸರಕಾರದ ಮುಂದೆ ಇಟ್ಟಾಗ್ಯೂ ಕೇಳುವವರೇ ದಿಕ್ಕಿಲ್ಲ. ಇದು ವಿದ್ಯಾ ಇಲಾಖೆಯಲ್ಲಿ ಕಡೆ ಪಕ್ಷಕ್ಕೆ ನಮ್ಮ ಒಬ್ಬ ಸಬ್ ಇನ್‌ಸ್ಪೆಕ್ಟರ್ ಇಲ್ಲದ ಕಾರಣ ಸಬಬು ಆಗಿದೆ. ಮಾಜಿ ವಿಭಾಗಂ ಪತ್ಯೇಕ ಸಂಗೂಡೆ ದೇವರು ಬಿಟ್ಟಾರು ಸಬ್ ಇನ್‌ಸ್ಪೆಕ್ಟರ್ ಎಂಬ ಒಬ್ಬ ಪಸ್ಟ್ ಇಲ್ಲಿಯ ಮುಸಲ್ಮಾನರ ಹವಾಲಿಗೆ ಸರಿಯಾಗಿದೆ.

ಕಡೆಯಲ್ಲಿ ನಮ್ಮ ಪ್ರಿಯ ಸಹೋದರರಿಗೆ ಅತ್ಯಂತ ವಿನಯದಿಂದ ಅರಿಕೆಮಾಡಿಕೊಳ್ಳುವುದೇನೆಂದರೆ—ಈ ಮೋಹರಂ ಹಬ್ಬ ನಮ್ಮ ಹಬ್ಬವಲ್ಲ. ಇದು ಪಿಶಾಚಿಗಳ ಹಬ್ಬ. ಇದು ನಮ್ಮ ಮತಕ್ಕೆ ವಿರೋಧ. ಇದು ಹರಾಂ, ಶಿರಿಕ್, ಕುಫರ್ ಬಿದ್ಅತ್, ಹರಾಂ, ಫೆಸ್ಟ್ ಬಿಡಿ ನಿಮ್ಮ ಮಕ್ಕಳಿಗೆ ಮತ ವಿದ್ಯೆ ಕಲಿಸಿ. ನಮ್ಮಲ್ಲಿ ಶುಚಿ ಶುದ್ಧಿ ಮತ್ತು ದೇವರ ಪ್ರಾರ್ಥನೆ ಯಾವ ರೀತಿಯಲ್ಲಿ ಇದೆ ಎಂದು ತಿಳಿದು ನೋಡಿ. ಯೂರೋಪ್ ಮತ್ತು ಅಮೇರಿಕದವರು ನಿನಿಮಾದಲ್ಲಿ ನೀವು ಮಾಡುವಂಥ ಎಲ್ಲಾ ತಮಾಷೆಗಳನ್ನು ತೋರಿಸಿ ಹಾಸ್ಯ ಮಾಡುತ್ತಾರೆ. ಇದನ್ನು ದಯಮಾಡಿ ಬಿಟ್ಟುಬಿಡಿ. ಬಿಡದೆ ಮಾಡಬೇಡಿ. ಇದರಿಂದ ಫಲವಿಲ್ಲ. ನೀವು ಪರಿಶುದ್ಧವಾದ, ಉತ್ತಮವಾದ ಮತದವರು ಆಗಿಸಿಕೊಂಡು ಈ ನೀಚ ಕಾರ್ಯಗಳನ್ನು ಮಾತ್ರ ಮಾಡುತ್ತೀರಿ. ದಯವಿಟ್ಟು ಬಿಡಿ. ದೇವರು ತಮಗೆ ಒಳ್ಳೇ ಬುದ್ಧಿ ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ.

ತಮ್ಮ ವಿಧೇಯ,

ಅಬ್ದುಲ್ ಗಫೂರ್ ಖಾನ್ ಸ್ವಾಮಿ

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸಮಾನವಾಗಿರುವದು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ 6—8—0



ಬೆಸ್ಟ್ ಫೌಂಟನ್ ಪೆನ್.

ಈ ಪೆನ್ನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಬಂಗಾರದಂಥ ನಿಬ್ಬು ಹಾಕಿದೆ. ಈ ಪೆನ್ನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಂ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ—ಲೀಗಲ್ ವಾಚ್ ಕಂಪೆನಿ,

52—4 ಪೋ ಬಾಕ್ಸ್ ನಂ 243, ಮದರಾಸು

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L Rifles	Rs	120	to	Rs	2750
S B B L	.	35	to	„	950.
D B B L Guns	„	50	to		1350
S B B L. „	.	35	to		275
D B M L „	„	45	to		135
S B M L „	„	30	to	„	80
B L Revolvers	„	35	to	„	350
Automatic Pistols	„	30	to	„	150

Brilliant Search Light Lamp For Shooting Camping, Fishing, and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—11 **210 Abdul Rehman Street, BOMBAY.**



ಡಿ ಬಿ ಬಿ ಎಲ್ ಕೋವಿಗಳು ರೂ 75 ರಿಂದ ರೂ 450/.
ಯಸ್ ಬಿ ಬಿ ಯಲ್ ಕೋವಿಗಳು ರೂ 35 ರಿಂದ ರೂ 250/.
ಯಸ್. ಬಿ. ಯಮ್ ಯಲ್ ಕೋವಿಗಳು ರೂ 35 ರಿಂದ 60/.
ರಿವಾಲ್ವರ್‌ಗಳು ರೂ. 40/ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ಬ್ಯಾರಲ್ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೆ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ಕಡಿಮೆ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಒಂದು ಬಿರುದಿನಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಹೆಸರನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ತರಿಸಿಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಿರಿ.

ಯನ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ಕೋವಿ ಕಂಪೆನಿ.

2|—2 12. ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.

'ಓಲ್ ಒಪರ್' ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
ಶಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
ಮೋಸ್ಲೇಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
'ಮಹಾರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಟು ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು.

ಬ್ಲಾಕ್ ಬರ್ಡ್ ಫೌಂಟನ್ ಪೆನ್	1ಕ್ಕೆ 3—8—0 ಮತ್ತು 3—12—0
ವರಲ್ಡ್ಸ ವಂಡರ್ ಫೌಂಟನ್ ಪೆನ್	1ಕ್ಕೆ 3—0—0 ಮತ್ತು 3—8—0
ಕಾಂಪ್ಯಾಕ್ಟ್ ಸೆಫ್ಟಿ ಫೌಂಟನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌಂಟನ್ ಪೆನ್	1ಕ್ಕೆ 8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್	1ಕ್ಕೆ 12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ವೆಸ್ಟ್‌ಎಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	—6—0
ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ	6—12—0
ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕೆಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು

52—6

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15 510
ಜಮಾಬಂದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅದವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,
ಕೋದಂಡ ಅಪ್ಪಯ್ಯನವರು,
ರಾವ್ ಬಹದ್ದೂರ್.

ಟ್ರೆಜರರ್.
ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್

ತಾರೀಕು 1—7—1927

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮ ಪೇರಿಯಂಡ ಪೂವಯ್ಯನವರ ಒವಾಬ್ದಾರಿಕ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮ. ಪೇರಿಯಂಡ ಪೂವಯ್ಯನವರು
ಪೊನ್ನಂಪೇಟೆನಾಡು—ಮ ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮ ಅಜ್ಜಮಾಡ ಮಾದಪ್ಪನವರು
ಮರೆನಾಡು—ಮ ಕೇಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು

ನಾಪೋಕ್ಲು—ಮ ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮ. [illegible]ಅಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮ ಪಿ. ಜಿ ಮುದ್ದಮ್ಮಯ್ಯನವರು,
ಹುದಿಕೇರಿ & ತಿತಿಮತ್ತಿ—ಮ ಜಿ ಮಾದಮ್ಮಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಒವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY 3
Telegraphic Address - "SHOOTER" Bombay.

(52—10) 'Please write for our Catalogue 1928—1929.

ಕಟುಕಷಾಯ ಮಾತ್ರೆ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ.—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಿಗಳ ಉರಿ ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು ಮೂತ್ರ [illegible] ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳವು ಬಿಟ್ಟು ವ ರೋಗ ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1 3 6ಕ್ಕೆ ರೂ 1—4—0 3—8—0 6—12—0

ರೋಮನಾಶಿನಿ.—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ—ತಲೆನೋವು, ತಲೆತಿರುಗುವುದು, ತಲೆಯಿಂ ಕಣ್ಣಿಂ ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ರೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9. ಮಂಗಳೂರು

52—36

ರಕಾರಿಕೆ ನಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಬಜಮಾಯಿಸಿ ನೋಡಿರಿ.



ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನು ಥಳೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು.

ಕೇಶವಚಂದ್ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).
21 ಚೈನಾ ಬಜಾರ್ ರೋಡ್, ಮದರಾಸು.

12—3

EMPIRE OF INDIA LIFE ASSURANCE COMPANY, LIMITED.

(Established 1897.)

FOR THE YEAR ENDING 29th FEBRUARY 1928.

New Business Exceeds ...	Rs 1 16 00,000
Income Exceeds	Rs 54,95 000
Assets Exceed .	Rs 3,15,64,000

Wanted. Agents in Important Places in Coorg.

HEAD OFFICE
Empire of India Life Building,
BOMBAY

BRANCH OFFICE
152, Commercial Street,
BANGALORE

71—23

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	—	13345	—	ರೂ	2,95,42,000.
1926	—	17371	—	ರೂ.	3,91 39,000
1927	—	21418	—	ರೂ.	4,68,04,075.

— ಪ್ರೀಮಿಯಂ ಉತ್ಪತ್ತಿ —

1925	—	ರೂ	92 66,000.
1926	—	ರೂ	1,05,33,000.
1927	—	ರೂ.	1,21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಏರಿದೆ.

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಏರಿದೆ

ವಿಮೆ ಮಾಡಬೇಕೆಂದಿರುವವರು ತಾಮಸ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳುವುದು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಿ ಅಯ್ಯರ್,
ಬ್ರಾಂಚ್ ಸೆಕ್ರೆಟರಿ

52—1

Printed & published by P. I. Belliappa, at "Kodagu" Press, Mercara for "Kodagu" Ltd.

R. & No. M. 15[illegible]

If not delivered please return to "KODAGU" OFFICE, MERCARA.

ಕೊಡಗು.

[illegible] ||

ಸಂಪಾದಕ—ಪಂದ್ಯಂಡ ಐ ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ಸನ್ ೧೯೨೮ನೇ ಇಸವಿ ಜೂನ್ ತಾರೀಕು ೨೨ ನೇ ಶುಕ್ರವಾರ [ಸಂಚಿಕೆ ೪

ESTATE REQUISITES

5 lbs Yates' hammer headed mamooties	Rs 3 0 0 Each.		Weeding forks @	Rs 1 4 0 Each
4½ " " " "	" 2 14 0 "		Garden trowels "	Rs 1 4 0 "
4 " " " "	" 2 12 0 "		Pick axes "	Rs 1 8 0 "
Felling axes at Rs 3 0 0 &	" 3 4 0 "		Bill hooks "	Rs 3 14 0 "
Grubbing mattocks at	" 3 4 0 "		Digging forks "	Rs 4 0 0 "

MONSOON EQUIPPMENT.

Planter boots	Rs 16 8 0	Dales' dubbin per tin	Rs 0 8 0
Marrs' oil (water proof) per tin	Rs 2 0 0	Umbrellas	Rs 4 8 0

52—21 **SPENCER & CO. LTD.** General Merchants **MERCARA.**

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423, TRIPLICANE, MADRAS

Catalogue Free to Bonafide Enquirers

Rose Water Sprinkler.



Nose-screws. Claver. Drops. Thodu. Brooch

Chased Silver Mirror.



Manufacture of HIGH CLASS GEMSET JEWELS. a speciality.

The special features of my prod[illegible]
1 Best QUALITY
2 Latest novel designs
3 Promptest execution
4 Neat & artistic finish
5 Most moderate prices

GOLD & SILVERWARE of all descriptions neatly executed

52—41



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS. AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

24—17 *Bombay, 3.*

ರೋಗ

[illegible]

ನಾರಸಾ ಪರಿಲಾ.

[illegible]

ಕರ್ನಾಟಕ ಬ್ರದರ್ಸ್

12—12

[illegible]

ಕೊಡಗು.

ಸ್ ೧೯೨೮ನೇ ಇಸವಿ ಜೂನ್
ತಾ. ೨೨ ನೇ ಶುಕ್ರವಾರ.

ಬಾರ್ದೋಲಿ ಹೋರಾಟ.

ಬೊಂಬಾಯಿ ಅಧಿಪತ್ಯದ ಬಾರ್ದೋಲಿ ತಾಲೋಕಿನ ಕಂದಾಯ ಕೊಡದಿರುವ ಹೋರಾಟ ನಡಿಯುತ್ತಲೇ ಇದೆ. ಆ ವಿಷಯವಾಗಿ ಬೊಂಬಾಯಿ ಶಾಸನ ಮಂಡಲಿಯ ಸದಸ್ಯರೊಬ್ಬರಾದ ಮಿ. ಮುನ್ಷಿ ಎಂಬವರಿಗೂ, ಬೊಂಬಾಯಿ ಗವರ್ನರಿಗೂ ನಡೆದ ಪತ್ರವ್ಯವಹಾರವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಬಾರ್ದೋಲಿ ಹೋರಾಟದ ಸಂಬಂಧವಾಗಿ ಸರಕಾರದ ಅಭಿಪ್ರಾಯವು ಈ ಪತ್ರವ್ಯವಹಾರದಿಂದ ಹೊರಬಿದ್ದಿದೆ. ಇದನ್ನು ಸ್ವಲ್ಪಮಟ್ಟಿಗೆ ಅಜಮಾಯಿಸುವದು ಅವಶ್ಯವಾಗಿದೆ.

"ಆಡಳಿತ ನಡಿಸಲಿಕ್ಕಿರುವ ಸರಕಾರದ ಹಕ್ಕನ್ನು ಬಿಟ್ಟು ಖಾಸಗಿ ಮನುಷ್ಯರ ತೀರ್ಮಾನಕ್ಕೆ ಯಾಕೆ ಬಿಡಬೇಕು? ಸರಕಾರದ ಕರ್ತವ್ಯವನ್ನು ಖಾಸಗಿ ಮನುಷ್ಯರು ವಹಿಸಿಕೊಳ್ಳಲು ಯಾವ ಸರಕಾರವೂ ಬಿಡಲಾರದು" ಎಂತ ಗವರ್ನರು ಹೇಳಿರುತ್ತಾರೆ. ಈ ಮಾತುಗಳ ಜವಾಬ್ದಾರಿಯನ್ನು ಇಂಡಿಯಾ ಸರಕಾರವು ವಹಿಸಿಕೊಂಡೀತೆಂಬ ಧೈರ್ಯದಿಂದಲೇ ಬೊಂಬಾಯಿ ಗವರ್ನರು ಹೇಳಿರಬೇಕು. ಆದ್ದರಿಂದ ಈ ಮಾತುಗಳು ಒಲೇ ಬಾರ್ದೋಲಿ ಜನರಿಗೆ ಅಥವಾ ಬೊಂಬಾಯಿ ಅಧಿಪತ್ಯದವರಿಗೆ ಮಾತ್ರ ವ್ಯಾಪಿಸುತ್ತದೆಯೆಂತ ಹೇಳಲಾಗುವದಿಲ್ಲ. ಅಧೀನದಲ್ಲಿರುವ ಒಟ್ಟು ಹಿಂದುಸ್ಥಾನಕ್ಕೇ ವ್ಯಾಪಿಸುತ್ತದೆ. ಸರಕಾರದವರು ಮನಸೋ ಇಚ್ಛೆ ಆಡಳಿತ ನಡಿಸಿದರೂ ಆಡಳಿತದ ಕಾರ್ಯಗಳನ್ನು ಸ್ವತಂತ್ರ ಕಮಿಟಿಯವರು ವಿಮರ್ಶಿಸಲೇ ಬಾರದೆಂತಾಯಿತು. ಪ್ರಜಾಸತ್ತಾತ್ಮಕ ಸರಕಾರವಿರುವ ರಾಜ್ಯಗಳಲ್ಲಿ ಈ ಮಾತುಗಳನ್ನು ಆಡಿದ ಮಂತ್ರಿಯನ್ನು ಒಂದು ನಿಮಿಷವಾದರೂ ಅಧಿಕಾರದಲ್ಲಿ ಇರಲು ಪ್ರಜಾಪ್ರತಿನಿಧಿಗಳು ಬಿಡಲಾರರು. ಹಿಂದುಸ್ಥಾನದಲ್ಲಿ ಪ್ರಜಾಪ್ರತಿನಿಧಿಗಳಿಂದ ಕೂಡಿದ ಶಾಸನ ಮಂಡಲಿಗಳಿದ್ದರೂ ಗವರ್ನರು ಇಂಥಾ ಮಾತುಗಳನ್ನು ಆಡಿದರೂ ಅವನ ಮಾತುಗಳ ಮೇಲೆ ಆಕ್ಷೇಪಿಸಲು ಶಾಸನ ಮಂಡಳಿಗೆ ಹಕ್ಕಿರುವದಿಲ್ಲ. ಪ್ರಜಾಸತ್ತಾತ್ಮಕ ಸರಕಾರ ಪದ್ಧತಿಯು ಅಂದರೆ ಪ್ರಜಾ ಪ್ರತಿನಿಧಿಗಳಿಗೆ ಅಧೀನರಾಗಿರುವ ಆಡಳಿತದ ಅಧಿಕಾರಿಗಳು ಇರುವಲ್ಲಿ ಇಂಥಾ ತನಿಖೆಯ ಕಮಿಟಿಯೊಂದು ಬೇಡವಾಗಬಹುದು. ಆದರೆ ಪ್ರಜಾ ಪ್ರತಿನಿಧಿಗಳ ಅಭಿಪ್ರಾಯವನ್ನು ಕಾಡು ಕಸದಂತೆ ಕಾರಣ ಕೊಡದೆ ಮೂಲೆಗೆ ಒಗೆಯಲು ಅಧಿಕಾರವಿರುವ ಬ್ರಿಟಿಷ್ ಹಿಂದುಸ್ಥಾನದ ಪ್ರಾಂತ್ಯಗಳಲ್ಲಿ ಸರಕಾರ ಅಧಿಕಾರಿಗಳು ಮಾಡುವ ತೀರ್ಮಾನಗಳು ಜನರಿಗೆ ಸಂಪೂರ್ಣ ಅನ್ಯಾಯವಾಗಿರುವಾಗ ಸ್ವತಂತ್ರ ಕಮಿಟಿಯಿಂದ ತನಿಖೆಯಾದರೆ ಸರಕಾರಿ ಅಧಿಕಾರವನ್ನು ಖಾಸಗಿ ಜನರಿಗೆ ಕೊಟ್ಟಂತಾಯಿತೆಂತ ಗವರ್ನರು ಹೇಳಿದ್ದು ಬಹಳ ಆಶ್ಚರ್ಯಕರವಾಗಿದೆ.

ಕಂದಾಯ ಸೆಟಲ್‌ಮೆಂಟ್ ಮಾಡುವ ಅಧಿಕಾರವನ್ನು ಕಾನೂನಿಗೆ ಒಳಪಡುವಂತೆ ಮಾಡಬೇಕೆಂತ ಮೊಂಟ್‌ಫರ್ಡ್ ಸುಧಾರಣೆ ಮೇರೆ ಏರ್ಪಾಡಾದ ಬ್ರಿಟಿಷ್ ಪಾರ್ಲಿಮೆಂಟಿನ ಉಭಯ ಸಭೆಗಳಿಂದಲೂ ನೇಮಕವಾದ ಕಮಿಟಿಯವರು ಅಭಿಪ್ರಾಯ ಪಟ್ಟಿರುತ್ತಾರೆ. ಅವರ ಶಿಫಾರಸ್ಸನ್ನು ಬೊಂಬಾಯಿ ಅಧಿಕಾರಿಗಳು ತಿರಸ್ಕರಿಸಿಗರು. 1924ನೇ ಮಾರ್ಚಿಯಲ್ಲೇ ಬೊಂಬಾಯಿ ಶಾಸನ ಮಂಡಲಿಯವರು ಸೆಟಲ್‌ಮೆಂಟ್ ಕ್ರಮವನ್ನು ಕಾನೂನಿಗೆ ಒಳಪಡಿಸುವ ಮುಂಚೆ ಎಲ್ಲಿಯೂ ಸೆಟಲ್‌ಮೆಂಟ್ ಮಾಡಬಾರದೆಂತಲೂ, ಸೆಟಲ್‌ಮೆಂಟನ್ನು ಯಾವ ರೀತಿಯಲ್ಲಿ ಕ್ರಮಪಡಿಸುವದೆಂಬದನ್ನು ಶಿಫಾರಸು ಮಾಡಲಿಕ್ಕೆ ಒಂದು ಕಮಿಟಿಯನ್ನು ನೇಮಿಸಬೇಕೆಂತಲೂ ಒಂದು ರಠಾವನ್ನು ಪಾಸು ಮಾಡಿದರು. ಅಂಥಾ ಕಮಿಟಿಯು ನೇಮಕವಾಯಿತು. ಆದರೆ ಒಂದು ತಾಲೋಕು ಮೇಲೆ ಇನ್ನೊಂದು ತಾಲೋಕಿನಲ್ಲಿ ಸೆಟಲ್‌ಮೆಂಟ್ ಎಂಬ ಹೆಸರಿನಿಂದ ಸರಕಾರವು ಕಂದಾಯ ಹೆಚ್ಚಿಸುತ್ತಲೇ ಬಂತು. ಆ ಕಮಿಟಿಯ ವರದಿಯು 1927ನೇ ಮಾರ್ಚಿಯಲ್ಲಿ ಸರಕಾರಕ್ಕೆ ಕೊಡಲಾಯಿತು. ಕೂಡಲೇ ಬೊಂಬಾಯಿ ಶಾಸನ ಮಂಡಲಿಯು ಆ ವರದಿಯನ್ನು ಗಮನಕ್ಕೆ ತೆಗೆದುಕೊಂಡು 1924ನೇ ಇಸ್ವಿಯ ರಠಾವಿನಂತೆ ನಡಿಸಬೇಕೆಂತ ಕೇಳಿಕೊಂಡರು. ಸದರಿ ವರದಿಯು ಶಾಸನ ಮಂಡಲಿಯ ವಿಮರ್ಶೆಯಲ್ಲಿ ಇನ್ನೂ ಇದೆ. ಆದರೆ ಕಂದಾಯವನ್ನು ತಾಲೋಕುವಾರು ಹೆಚ್ಚಿಸುತ್ತಲೇ ಇದ್ದಾರೆ. ಈ ರೀತಿ ಸರಕಾರ ಸಂಸ್ಥೆಯಾದ ಶಾಸನ ಮಂಡಲಿಯ ತೀರ್ಮಾನಕ್ಕೆ ಗಮನ ಕೊಡದ ಹೆಚ್ಚಿಸಿದ ಕಂದಾಯಕ್ಕೆ ಬಾರ್ದೋಲಿಯ ತಾಲೋಕಿನವರು ವಿರೋಧಿಸಿ ಹೆಚ್ಚಿಸಲು ಅವಕಾಶ ಅಥವಾ ಕಾರಣವಿದೆಯೋ ಎಂತ ಅಜಮಾಯಿಸಬೇಕೆಂತ ಕೇಳಿದ್ದಕ್ಕೆ ಗವರ್ನರು ಕೊಟ್ಟ ಉತ್ತರವು ನ್ಯಾಯವಾದದ್ದೋ ಎಂತ ವಾಚಕರೇ ಊಹಿಸಬಹುದು.

ಬಾರ್ದೋಲಿ ತಾಲೋಕಿನಲ್ಲಿ ಕಂದಾಯ ಎಷ್ಟರ ಮಟ್ಟಿಗೆ ಹೆಚ್ಚಿಸಬೇಕೆಂಬದನ್ನು ಕಂಡು ಹಿಡಿಯಲು ಸರಕಾರದವರು ಒಬ್ಬ ಸೆಟ್ಲ್‌ಮೆಂಟ್ ಆಫೀಸರನ್ನು 1928ರಲ್ಲಿ ನೇಮಿಸಿದರು. ಅವರು ಶೇಕಡ 30ರಷ್ಟು ಹೆಚ್ಚಿಸಬಹುದೆಂತ ಶಿಫಾರಸ್ಸು ಮಾಡಿದರು. ಈ 'ತನಿಖೆ' ನಿಜವಾದ ತನಿಖೆಯಲ್ಲ, ರೈತರ ಹವಾಲುಗಳನ್ನು ಕೇಳಲೇ ಇಲ್ಲವೆಂತ ರೈತರು ಕೂಗಿಕೊಂಡರು. ಅವರ ಶಿಫಾರಸ್ಸು ನ್ಯಾಯವಾದದ್ದಲ್ಲ, ಅವರು ಕೊಟ್ಟ ಕಾರಣಗಳು ಸರಿಯಾದದ್ದಲ್ಲ, ಅವರು ಉಪಯೋಗಿಸಿಕೊಂಡ ಉತ್ಪತ್ತಿಯ ಅಂದಾಜಿಗೆ ಆಧಾರವಿಲ್ಲವೆಂತ ಸರಕಾರವೇ ಒಪ್ಪಿ ಅವರ ಶಿಫಾರಸ್ಸಿಗೆ ವಿರೋಧವಾಗಿ ಕಂದಾಯವನ್ನು ಶೇಕಡ 20ಕ್ಕೆ ಏರಿಸಲು ನಿಶ್ಚೈಸಿದರು. ಹೀಗಿರುವಾಗ ಕಂದಾಯ ಹೆಚ್ಚಿಸಲು ಅವಕಾಶವಿದೆಯೋ ಎಂತ ಅಜಮಾಯಿಸಲು ಸ್ವತಂತ್ರ ಕಮಿಟಿಯನ್ನು ನೇಮಿಸಬೇಕೆಂತ ಕೇಳಿದ್ದರಲ್ಲಿ ಸಂಪೂರ್ಣ ನ್ಯಾಯವಿದೆ.

ಈ ಹೋರಾಟದಿಂದ ಒಟ್ಟು ಬ್ರಿಟಿಷ್ ಹಿಂದುಸ್ಥಾನವೇ ಎಚ್ಚರಗೊಳ್ಳಲು ಕಾರಣವಿದೆ. ಈ ಸೆಟಲ್‌ಮೆಂಟಿನ ಬಾಧೆಯು ಎಲ್ಲೆಲ್ಲಿಯೂ ಇದ್ದೇ ಇದೆ. ಸೆಟಲ್‌ಮೆಂಟನ್ನು ಪಾರ್ಲಿಮೆಂಟಿನ ಉಭಯ ಕಮಿಟಿಯವರು ಸೂಚಿಸಿರುವಂತೆ ಕಾನೂನಿಗೆ ಒಳಪಡಿಸಲೇ ಬೇಕು. ಕಾನೂನಿಗೆ ಒಳಪಡಿಸುವದೆಂದರೆ ಕಂದಾಯ ಹೆಚ್ಚಿಸಬೇಕಾದರೆ ಯಾವ ತರದ ತನಿಖೆಯಾಗಬೇಕು, ಯಾವ ಆಧಾರದ ಮೇಲೆ ಹೆಚ್ಚಿಸಬಹುದು ಎಂಬ ಇತ್ಯಾದಿ ವಿಷಯಗಳನ್ನು ಕಾನೂನು ಮಾಡಿ ಇಡಬೇಕು. ಕಾನೂನಿಗೆ ವಿರೋಧವಾಗಿ ಯಾವ ಅಧಿಕಾರಿಯೂ ಹೋಗಕೂಡದು. ಆಗ ಅಂಥಾ ಕಾನೂನಿನಲ್ಲಿ ಇರುವ ಮೇರೆ ತನಿಖೆಯಾಗಲೇ ಬೇಕು. ಈಗಲಾದರೋ ಸ್ಥಳೀಯ ಸರಕಾರದವರು ಕಂದಾಯ ಹೆಚ್ಚಿಸಬೇಕೆಂತ ತೀರ್ಮಾನಿಸಿದರಾಯಿತು. ಸೆಟಲ್‌ಮೆಂಟಿನಲ್ಲಿ ಹೆಚ್ಚಿಯೇ ಹೆಚ್ಚುತ್ತದೆ. ಇಂಥಾ ನಿರಂಕುಶ ಪ್ರವರ್ತನೆಗೆ ಎಡೆಯಿಲ್ಲದಂತೆ ನೋಡಿಕೊಳ್ಳುವದು ಎಲ್ಲಾ ಪ್ರಜಾ ಜನರ ಕರ್ತವ್ಯವಾಗಿದೆ.

ಸೆಟಲ್‌ಮೆಂಟಿಗೆ ಮಾತ್ರವಲ್ಲದೆ ಆಡಳಿತದ ಯಾವ ಕಾರ್ಯವೇ ಆಗಲಿ ಪ್ರಜಾ ಜನರ ಬಹುಮತಕ್ಕೆ ವಿರೋಧವಾದಾಗ ಬಹುಮತದ ಅಭಿಪ್ರಾಯಕ್ಕೆ ಅನುಗುಣವಾಗಿ ಸರ್ಕಾರದ ವರ್ತನೆಯು ಮಾರ್ಪಡುವಂತೆ ಮಾಡುವ ಹಕ್ಕು ಪ್ರಜಾ ಜನರಿಗೆ ಇರಲೇ ಬೇಕು. ಈ ಹಕ್ಕಿನ ಸ್ಥಾಪನೆಗಾಗಿ ಬಾರ್ದೋಲಿಯು ಒಟ್ಟು ಹಿಂದುಸ್ಥಾನಕ್ಕೆ ಮಾದರಿಯಾಗಿ ಮೇಲ್ಪಂಕ್ತಿ ಹಾಕುತ್ತಲಿದೆ. ಇವರ ಹೋರಾಟಕ್ಕೆ ಜಯವಾಗಬೇಕೆಂತ ದೇವರಲ್ಲಿ ಬೇಡುವದೂ, ಆ ಹೋರಾಟ ನಡಿಸುವ ಧೈರ್ಯಶಾಲಿಗಳಾದ ತ್ಯಾಗವೀರ ಜನರಿಗೆ ಬೇಕಾದ ಸಹಾಯ ಕೊಡುವದೂ ಒಟ್ಟು ಹಿಂದುಸ್ಥಾನದ ಜನರು ಮಾತ್ರವಲ್ಲ ಒಟ್ಟು ಪ್ರಪಂಚದ ಜನರ ಕರ್ತವ್ಯವಾಗಿದೆ.

ಸತ್ಯಾಗ್ರಹಾಶ್ರಮ.

ಮಹಾತ್ಮ ಗಾಂಧಿಯವರು ಸಬರ್ಮತಿಯಲ್ಲಿ ಸ್ಥಾಪಿಸಿರುವ ಸತ್ಯಾಗ್ರಹಾಶ್ರಮದ ನಿಬಂಧನೆಗಳನ್ನು ಪುನರ್ವಿಮರ್ಶೆ ಬಗ್ಗೆ ಹಿತಚಿಂತಕರ ಸಲಹೆಗಳನ್ನು ಪಡೆಯಲು ಪ್ರಕಟಿಸಿದ್ದಾರೆ. ಅದರಲ್ಲಿ ಕೆಲವು ಮುಖ್ಯ ಅಂಶಗಳನ್ನು ಈ ಕೆಳಗೆ ಕೊಟ್ಟಿರುತ್ತೇವೆ.

ಪ್ರಪಂಚದ ಸುಖಕ್ಕೆ ವಿರೋಧವಿಲ್ಲದೆ ದೇಶದ ಸೇವೆ ನಡಸಲಿಕ್ಕೆ ಅರ್ಹತೆಯನ್ನು ಪಡೆಯಲು ಎಡೆಬಿಡದೆ ಆಶ್ರಮದ ಸದಸ್ಯರು ಪ್ರಯತ್ನಿಸುವದೇ ಆಶ್ರಮದ ಉದ್ದೇಶ.

ಈ ಉದ್ದೇಶವನ್ನು ನೆರವೇರಿಸಲಿಕ್ಕೆ ಈ ಕೆಳಗಿನ ನಿಯಮಗಳು ಅವಶ್ಯ ಇವೆ.

1. ಸತ್ಯ. ಇತರರೊಡನೆ ಸುಳ್ಳಾಡದೆಯೂ, ಸುಳ್ಳು ಆಚರಣೆ ನಡಿಸದೆಯೂ ಇದ್ದರೆ ಮಾತ್ರ ಸತ್ಯವನ್ನು ಸಾಧಿಸಿದಂತಾಗಲಿಲ್ಲ. ಸತ್ಯವೇ ದೇವರು. ಸತ್ಯವೇ ಅದ್ವೈತ ಶಾಶ್ವತ ವಸ್ತು. ಸತ್ಯವನ್ನು ಪೂಜಿಸುವವರು ತಮ್ಮ ದೇಶದ ಕಲ್ಯಾಣಕ್ಕೆಂತ ಭಾವಿಸುವ ಸಂದರ್ಭಗಳಲ್ಲೂ ಅಸತ್ಯಕ್ಕೆ ಹೋಗಬಾರದು. ಸತ್ಯದ ಪರಿಪಾಲನೆಗಾಗಿ ಪ್ರಹ್ಲಾದನಂತೆ ಪಿತೃಗಳ ಮತ್ತು ಹಿರಿಯರ ಆಜ್ಞೆಗಳಿಗೂ ವಿರೋಧವಾಗಿ ನಡಿಯಲು ತಯಾರಾಗಿರಬೇಕು.

2. ಅಹಿಂಸೆ ಅಥವಾ ದಯೆ. ಜೀವ ಹಿಂಸೆಮಾಡದೆ ಇದ್ದರೆ ಮಾತ್ರ ಆಗಲಿಲ್ಲ. ಅಹಿಂಸೆಯ ಕಾರ್ಯಭಾಗವೇ ದಯೆ. ಅತ್ಯಲ್ಪ ಪ್ರಾಣಿಯಿಂದ ಹಿಡಿದು ಅತಿ ದೊಡ್ಡ ಮನುಷ್ಯನ ಜೀವದ ಮೇಲೆಯೂ ದಯೆ ಇರಬೇಕು. ಅತ್ಯಂತ ನೀಚ ಕೇಡನ್ನು ಮಾಡಿದವ, ಮೇಲೂ ಸಿಟ್ಟಾಗಬಾರದು. ಅಂಥವನಿಗೆ ಒಳ್ಳೇದನ್ನು ಬಯಸಿ ಅವನ ಸೇವೆಮಾಡಬೇಕು. ಕೇಡು ಮಾಡುವವನನ್ನು ಪ್ರೀತಿಸಬೇಕಾದರೂ ಅವನ ಕೆಡಕುಗಳಿಗೆ ಒಳಗಾಗಬಾರದು. ಅದಕ್ಕೆ ಶಕ್ತಿ ಮೀರಿ ವಿರೋಧಿಸಬೇಕು. ಹಾಗೆ ವಿರೋಧಿಸುವಾಗ ಸಂಭವಿಸಿದ ಕಷ್ಟಗಳನ್ನೆಲ್ಲಾ ಸಿಟ್ಟಿಲ್ಲದೆ ಅನುಭವಿಸಬೇಕು.

3. ಬ್ರಹ್ಮಚರ್ಯ. ಬ್ರಹ್ಮಚರ್ಯವನ್ನು ಆಚರಿಸದೆ ಈ ಮೇಲಿನ ನಿಯಮಗಳನ್ನು ಸಾಧಿಸಲು ಸಾಧ್ಯವಿಲ್ಲ. ಇನ್ನೊಬ್ಬ ಗಂಡಸನ್ನೇ, ಹೆಂಗಸನ್ನೇ ಆಗಲಿ ಕಾಮ ದೃಷ್ಟಿಯಿಂದ ನೋಡದೆ ಇದ್ದರೆ ಮಾತ್ರ ಸಾಲದು. ಮನಸ್ಸಿನಲ್ಲಿ ಸಹ ಕಾಮದ ಭಾವನೆ ಹುಟ್ಟದಂತೆ ಇಂದ್ರಿಯ ನಿಗ್ರಹ ಮಾಡಬೇಕು. ಮದುವೆಯಾಗಿದ್ದರೆ ಹೆಂಡತಿಯನ್ನೇ ಆಗಲೀ, ಗಂಡನನ್ನೇ ಆಗಲೀ ಕಾಮತೃಪ್ತಿಯ ದೃಷ್ಟಿಯಿಂದ ನೋಡಬಾರದು. ಜೀವನದ ಸ್ನೇಹಿತನೆಂತ ಭಾವಿಸಿ ಸಂಪೂರ್ಣ ಪರಿಶುದ್ಧ ಸಂಬಂಧವನ್ನು ಸ್ಥಾಪಿಸಬೇಕು. ಪಾಪಕರವಾದ ಸ್ಪರ್ಶ, ಸಂಜ್ಞೆ, ಶಬ್ದವೂ ಸಹ ಈ ನಿಯಮಕ್ಕೆ ವಿರೋಧವಾಗಿದೆ.

4. ರಸನೇಂದ್ರಿಯ ನಿಗ್ರಹ. ನಾಲಿಗೆಯನ್ನು ಅಧೀನದಲ್ಲಿ ಇಟ್ಟುಕೊಳ್ಳದಿದ್ದರೆ ಬ್ರಹ್ಮಚರ್ಯ ಸಾಧನೆಯು ಅತಿ ಕಷ್ಟವೆಂತ ಅನುಭವದಿಂದ ಕಂಡುಬಂದಿದೆ. ದೇಹವನ್ನು ಸೇವೆಗೆ ಅರ್ಹವಾದ ಸಾಧನವಾಗಿ ಇಟ್ಟುಕೊಳ್ಳಲಿಕ್ಕೆ ಮಾತ್ರ ತಿನ್ನುವದಾಗಿದೆ. ಆದ್ದರಿಂದ ಸ್ವತೃಪ್ತಿಗಾಗಿ ತಿನ್ನಬಾರದು. ಆದ್ದರಿಂದ ಆಹಾರವನ್ನು ಔಷಧಿಯಂತೆಯೇ ಮಿತವಾಗಿ ಸೇವಿಸಬೇಕು. ಈ ತತ್ವವನ್ನನುಸರಿಸಿ ಮಸಾಲೆ ಪದಾರ್ಥಗಳನ್ನು ಉಪಯೋಗಿಸಬಾರದು. ಮಾಂಸ, ಸೇಂದಿ, ಸಾರಾಯಿ, ಹೊಗೆಸೊಪ್ಪು, ಭಂಗಿ ಮುಂತಾದ ವಸ್ತುಗಳನ್ನು ಆಶ್ರಮಕ್ಕೆ ತರಕೂಡದು. ಈ ತತ್ವವನ್ನನುಸರಿಸಿ ಸಂತೋಷಕ್ಕಾಗಿ ಊಟ ತಿಂಡಿಗಳನ್ನು ತೆಗೆದುಕೊಳ್ಳಕೂಡದು.

5. ಕದಿಯದಿರುವಿಕೆ. ಇನ್ನೊಬ್ಬನ ಸ್ವತ್ತನ್ನು ಅವನ ಅನುಮತಿ ಇಲ್ಲದೆ ತೆಗೆದುಕೊಳ್ಳಬಾರದು ಮಾತ್ರವಲ್ಲ, ಒಂದು ಉಪಯೋಗಕ್ಕಾಗಿ ಕೊಟ್ಟ ವಸ್ತುವನ್ನು ಬೇರೆ ವಿಧವಾಗಿ ಉಪಯೋಗಿಸುವದೂ ಮತ್ತು ಉಪಯೋಗಕ್ಕೆ ಕೊಟ್ಟ ಕಾಲಕ್ಕಿಂತ ಹೆಚ್ಚಿಗೆ ಉಪಯೋಗಿಸುವದು ಕಳುವಾಗಿದೆ. ನಿಜವಾಗಿಯೂ ಅವಶ್ಯವಿಲ್ಲದ ವಸ್ತುವನ್ನು ಇನ್ನೊಬ್ಬನಿಂದ ಪಡೆಕೊಳ್ಳುವದೂ ಕಳುವಾಗಿದೆ. ನಮಗೆ ನಿತ್ಯಕ್ಕೆ ಅವಶ್ಯವಿರುವಷ್ಟು ವಸ್ತುವನ್ನು ಮಾತ್ರ ಪ್ರಕೃತಿಯು ಒದಗಿಸಿ ಕೊಡುತ್ತದೆ ಎಂಬ ಸೊಗಸಾದ ಸತ್ಯದ ಪಾಯದ ಮೇಲೆ ಈ ತತ್ವವು ನಿಂತಿದೆ.

6 ಆಸ್ತಿ ಇಲ್ಲದಿರುವಿಕೆ ಅಥವ ಬಡತನ. ಇದು 5 ನೇ ತತ್ವದ ಭಾಗವಾಗಿದೆ. ಅವಶ್ಯವಿಲ್ಲದ್ದನ್ನು ತೆಗೆದುಕೊಳ್ಳಬಾರದೆಂಬಂತೆಯೇ ಅವಶ್ಯವಿಲ್ಲದ್ದನ್ನು ಒಬ್ಬನು ಇಟ್ಟುಕೊಳ್ಳಬಾರದು. ಅವಶ್ಯವಿಲ್ಲದ ಆಹಾರ, ದ್ರವ್ಯ, ಬಟ್ಟೆ, ಫರ್ನಿಚರ್‌ಗಳನ್ನು ಇಟ್ಟುಕೊಳ್ಳುವದು ಈ ತತ್ವಕ್ಕೆ ವಿರೋಧವಾಗಿದೆ. ಕುರ್ಚಿ ಇಲ್ಲದೆ ಕಳೆಯಬಹುದಾದರೆ ಅದನ್ನು ಇಟ್ಟುಕೊಳ್ಳಬಾರದೆಂಬದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈ ತತ್ವವನ್ನು ಅನುಸರಿಸಿದರೆ ಕ್ರಮೇಣ ಸುಲಭ ಜೀವನದ ಕ್ರಮಕ್ಕೆ ಇಳಿಯುತ್ತದೆ.

7. ಶ್ರಮಜೀವನ—ಕದಿಯದೆ ಇರಲಿಕ್ಕೂ, ಸೊತ್ತೇನೂ ಇಲ್ಲದೆ ಇರಲಿಕ್ಕೂ ಶ್ರಮದ ಕೆಲಸವು ಅವಶ್ಯವಾಗಿದೆ. ಸಮಾಜಕ್ಕೂ, ತನಗೂ ಕಡಕು ಮಾಡುವದನ್ನು ತಪ್ಪಿಸಬೇಕಾದರೆ ಶ್ರಮ ಕೆಲಸದಿಂದಲೇ ಹೊಟ್ಟೆ ಹೊರೆಯಬೇಕು. ಶಕ್ತಿ ಇರುವ ಪ್ರತಿಯೊಬ್ಬ ಪ್ರಾಯದ ಮನುಷ್ಯನೂ ತನ್ನ ಕೆಲಸಗಳನ್ನೆಲ್ಲಾ ತಾನೇ ಮಾಡಬೇಕು. ತಕ್ಕ ಕಾರಣವಿಲ್ಲದೆ ಬೇರೆಯವರಿಂದ ಸೇವೆಮಾಡಿಸಿಕೊಳ್ಳಬಾರದು. ಆದರೆ ಮಕ್ಕಳ ಮತ್ತು ಅಶಕ್ತರ ಸೇವೆಯು ಶಕ್ತಿ ಇರುವವರದೆಲ್ಲಾ ಕರ್ತವ್ಯವೆಂಬದನ್ನು ಮರೆಯಬಾರದು.

8. ಸ್ವದೇಶಿ. ಮನುಷ್ಯನು ಸರ್ವಶಕ್ತನಲ್ಲ. ಆದ್ದರಿಂದ ನೆರೆಯವನ ಸೇವೆಯಿಂದ ಪ್ರಪಂಚದ ಸೇವೆಯು ಚೆನ್ನಾಗಿ ನಡಿಯುತ್ತದೆ. ಇದೇ ಸ್ವದೇಶಿ. ಸಮೀಪದವರನ್ನು ಬಿಟ್ಟು ದೂರದವರ ಸೇವೆಮಾಡಿದರೆ ಈ ತತ್ವಕ್ಕೆ ವಿರೋಧವಾಗುತ್ತದೆ. ಸ್ವದೇಶಿಯನ್ನನುಸರಿಸಿದರೆ ಪ್ರಪಂಚವಲ್ಲ ಕ್ರಮವಿರುತ್ತದೆ. ಸ್ವದೇಶಿಯನ್ನು ಬಿಟ್ಟರೆ ಪ್ರಪಂಚದಲ್ಲಿ ಅಕ್ರಮಗಳು ನ

(4ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ ನೇ ಭಾಗದಲ್ಲಿ ೪೧ನೇ ಪ್ರಕರಣ

ನನಗೆ ವಿಲಾಯಿತಿಯಲ್ಲಿ ಎದೆ ನೋವು ಬಂದುದನ್ನು ನಾನು ಆಗಲೇ ತಿಳಿಸಿದ್ದೇನೆ. ಇದಾದ ಸ್ವಲ್ಪ ದಿವಸದಲ್ಲಿಯೇ ಗೋಖಲೆಯವರು ಇಂಗ್ಲೆಂಡಿಗೆ ಬಂದರು. ಕಾಲನ್‌ಬೇಕರೂ ಅವರ ಬಳಿಗೆ ತಪ್ಪದೆ ಹೋಗುತ್ತಿದ್ದರು. ನಮ್ಮ ಮಾತುಕಥೆಯು ಹೆಚ್ಚಾಗಿ ಯುದ್ಧಕ್ಕೆ ಸಂಬಂಧಪಟ್ಟುದಾಗಿರುತ್ತಿದ್ದಿತು. ಕಾಲನ್‌ಬೇಕರಿಗೆ ಜರ್ಮನಿ ದೇಶದ ಭೂಪಟವು ಬಹು ಚೆನ್ನಾಗಿ ತಿಳಿದಿದ್ದುದರಿಂದಲೂ ಮತ್ತು ಅವರು ಯೂರೋಪಿನಲ್ಲಿ ಹೆಚ್ಚಾಗಿ ಪ್ರಯಾಣ ಮಾಡಿದ್ದರಾದುದರಿಂದಲೂ ಅವರು ಯುದ್ಧಕ್ಕೆ ಸಂಬಂಧಪಟ್ಟ ಬೇರೆ ಬೇರೆ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸುತ್ತಿದ್ದರು. ನನಗೆ ಪಕ್ಕೆ ಶೂಲೆ ಬಂದಾಗ ಅದೂ ದಿನವಹಿಯ ಚರ್ಚಾಸಾಮಗ್ರಿಯಾಯಿತು. ಆಗಲೂ ನಾನು ಆಹಾರ ವಿಷಯಕವಾದ ಪ್ರಯೋಗಗಳನ್ನು ನಡೆಸುತ್ತಿದ್ದೆನು. ನೆಲಗಡಲೆಕಾಯಿ, ಬಾಳೆಕಾಯಿ, ಬಾಳೆ ಹಣ್ಣು, ನಿಂಬೆ ಹಣ್ಣು, ಆಲಿವ್ ಎಣ್ಣೆ, ಟಪ್ಪರ ಬದನೆ ಹಣ್ಣು ಇವೇ ಮುಂತಾದುವನ್ನು ನಾನು ತೆಗೆದುಕೊಳ್ಳುತ್ತಿದ್ದೆನು. ಹಾಲು, ಧಾನ್ಯ, ಬೇಳೆ ಮೊದಲಾದುವನ್ನು ನಾನು ಸಂಪೂರ್ಣವಾಗಿ ಬಿಟ್ಟಿದ್ದೆನು. ಡಾ|| ಜೀವರಾಜ್ ಮೆಹತಾರವರು ನನಗೆ ಔಷಧ ಕೊಡುತ್ತಿದ್ದರು. ನಾನು ಹಾಲನ್ನೂ, ಧಾನ್ಯವನ್ನೂ ತೆಗೆದುಕೊಳ್ಳಬೇಕೆಂದು ಅವರು ಬಲವಂತ ಮಾಡಿದರು. ಆದರೆ ನಾನು ಕದಲಲಿಲ್ಲ. ಈ ಮಾತು ಗೋಖಲೆಯವರ ಕಿವಿಗೆ ಬಿದ್ದಿತು. ಹಣ್ಣಿನ ಆಹಾರವು ಉತ್ತಮವಾದುದೆಂಬ ನನ್ನ ವಾದಕ್ಕೆ ಅವರು ಹೆಚ್ಚಾದ ಮನ್ನಣೆಯನ್ನೇನೂ ಕೊಡುತ್ತಿರಲಿಲ್ಲ. ವೈದ್ಯರು ನನ್ನ ಆರೋಗ್ಯದ ಸಲುವಾಗಿ ಹೇಳಿದುದನ್ನೆಲ್ಲಾ ತೆಗೆದುಕೊಳ್ಳಬೇಕೆಂದು ಅವರು ಇಷ್ಟಪಟ್ಟರು.

ಗೋಖಲೆಯವರ ಬಲಾತ್ಕಾರಕ್ಕೆ ಬಗ್ಗದಿರುವುದು ಬಹು ಕಠಿಣ ವಿಷಯವಾಗಿದ್ದಿತು. 'ಆಗುವುದಿಲ್ಲ ಎಂದು ನೀವು ಹೇಳಕೂಡದು' ಎಂದು ಅವರು ಆಗ್ರಹ ಮಾಡಲು ನಾನು ಈ ವಿಷಯವಾಗಿ ಯೋಚಿಸಲೋಸುಗ ೨೪ ಗಂಟೆಯ ಅವಕಾಶವನ್ನು ಬೇಡಿದೆನು. ಆ ದಿನ ಸಂಜೆ ಕಾಲನ್‌ಬೇಕರೂ, ನಾನೂ ಮನೆಗೆ ಹಿಂತಿರುಗುತ್ತಿರುವಾಗ ಈ ವಿಷಯದಲ್ಲಿ ನನ್ನ ಕರ್ತವ್ಯವೇನೆಂಬುದನ್ನು ಕುರಿತು ನಾವು ಚರ್ಚಿಸಿದೆವು. ಈ ಪ್ರಯೋಗದಲ್ಲಿ ಅವರು ನನ್ನೊಡನೆ ಇದ್ದರು. ಇದು ಅವರ ಒಪ್ಪಿಗೆಗೆ ಬಂದಿದ್ದಿತು. ಆದರೂ ನನ್ನ ಆರೋಗ್ಯದ ಸಲುವಾಗಿ ಅಗತ್ಯ ತೋರಿದರೆ ಈ ಪ್ರಯೋಗವನ್ನು ಬಿಟ್ಟುಬಿಡುವುದೇ ಸರಿಯೆಂದು ಅವರ ಅಭಿಮತವೆಂಬುದನ್ನು ನಾನು ಕಂಡೆನು. ಆದುದರಿಂದ ನಾನೊಬ್ಬನೇ ನನ್ನ ಅಂತರಾತ್ಮನ ಆಜ್ಞೆಯಂತೆ ಈ ವಿಷಯವನ್ನು ನಿರ್ಧರಿಸಬೇಕಾಯಿತು.

ಆ ರಾತ್ರಿಯೆಲ್ಲಾ ಈ ವಿಚಾರವಾಗಿ ಆಲೋಚಿಸುವುದರಲ್ಲಿ ಕಳೆದೆನು. ಪ್ರಯೋಗವನ್ನು ಬಿಡುವುದೆಂದರೆ ಆ ಕಡೆ ನನಗಿದ್ದ ಅಭಿಪ್ರಾಯಗಳಿಗೆಲ್ಲಾ ತಿಲತರ್ಪಣ ಕೊಡಬೇಕಾಗಿದ್ದಿತು. ಆದರೆ ಅವುಗಳಲ್ಲಿ ನನಗೆ ದೋಷವೇನೂ ಕಂಡುಬರಲಿಲ್ಲ.

ಗೋಖಲೆಯವರ ಬಲವಿನ ಒತ್ತಾಯಕ್ಕೆ ಎಷ್ಟು ದೂರ ವಶೀಭೂತನಾಗಬಹುದು, ಆರೋಗ್ಯದ ಸಲುವಾಗಿಯೆಂದು ಹೇಳುವ ಕಾರಣಗಳಿಗಾಗಿ ಈ ಪ್ರಯೋಗವನ್ನು ಎಷ್ಟರಮಟ್ಟಿಗೆ ಮಾರ್ಪಡಿಸಬಹುದು ಎಂಬುದೇ ಆಗಿನ ಪ್ರಶ್ನೆಯಾಗಿದ್ದಿತು. ಕಟ್ಟಕಡೆಗೆ ನಾನು ಪ್ರಯೋಗದ ಉದ್ದೇಶವು ಮುಖ್ಯವಾಗಿ ಧಾರ್ಮಿಕವಾಗಿರುವ ಮಟ್ಟಿಗೆ ಅದನ್ನು ನಡೆಸಬೇಕೆಂದೂ, ಹಾಗಿಲ್ಲದೆ ಮಿಶ್ರಭಾವನೆಯಿರುವ ವಿಷಯದಲ್ಲಿ ವೈದ್ಯರ ಸಲಹೆಗೆ ಒಪ್ಪಬೇಕೆಂದೂ ನಿಶ್ಚಯಿಸಿದೆನು. ಹಾಲಿನ ತ್ಯಾಗದಲ್ಲೇ ಧಾರ್ಮಿಕ ದೃಷ್ಟಿಯೇ ಪ್ರಧಾನವಾಗಿದ್ದಿತು. ಕಲ್ಕತ್ತೆಯ ಗೊಲ್ಲರ ಆಕಳು ಎಮ್ಮೆಗಳಿಂದ ಒಂದು ತೊಟ್ಟು ಹಾಲನ್ನೂ ಬಿಡದೆ ಎಲ್ಲವನ್ನೂ ಹಿಂಡಲು ನಡೆಸುತ್ತಿದ್ದ ದುಷ್ಟ ವಿಧಾನಗಳು ನನ್ನ ಕಣ್ಣಿಗೆ ಕಟ್ಟಿದ ಹಾಗೆ ನಿಂತಿದ್ದವು. ಇದೂ ಅಲ್ಲದೆ ಮಾಂಸವು ಮನುಷ್ಯನ ಆಹಾರವಲ್ಲದಿರುವಂತೆಯೇ ದನದ ಹಾಲೂ ಅಲ್ಲವೆಂದು ನನಗೆ ತೋರುತ್ತಿದ್ದಿತು. ಆದುದರಿಂದ ಹಾಲನ್ನು ತ್ಯಜಿಸುವ ಸಂಕಲ್ಪದಲ್ಲಿ ದೃಢನಾಗಿರಬೇಕೆಂಬ ನಿಶ್ಚಯದಿಂದಲೇ ಬೆಳಗ್ಗೆ ಹಾಸಿಗೆಬಿಟ್ಟೆದ್ದೆನು. ಇದರಿಂದ ನನ್ನ ಮನಸ್ಸು ಹಗುರವಾಯಿತು. ಗೋಖಲೆಯವರ ಬಳಿಗೆ ಹೋಗಲು ನನಗೆ ಹೆದರಿಕೆಯಾಗುತ್ತಿದ್ದಿತು. ಆದರೆ ಅವರು ನನ್ನ ಸಂಕಲ್ಪವನ್ನು ಮನ್ನಿಸುವರೆಂದು ನಾನು ನಂಬಿದ್ದೆನು.

ಸಂಜೆ ನಾನೂ, ಕಾಲನ್‌ಬೇಕರೂ ಗೋಖಲೆಯವರನ್ನು ನೋಡುವುದಕ್ಕಾಗಿ 'ನ್ಯಾಷನಲ್ ಲಿಬರಲ್ ಕ್ಲಬ್'ಗೆ ಹೋದೆವು. "ವೈದ್ಯರ ಸಲಹೆಯನ್ನು ಸ್ವೀಕರಿಸಬೇಕೆಂದು ನಿರ್ಧರಿಸಿರುವಿರೋ?" ಎಂಬುದೇ ಅವರ ಮೊದಲನೆಯ ಪ್ರಶ್ನೆಯಾಗಿದ್ದಿತು.

ನಾನು ನಮ್ರತೆಯಿಂದ ಆದರೂ ನಿಶ್ಚಯಪೂರ್ವಕವಾಗಿ, "ನಾನು ಒಂದು ವಿಚಾರ ಹೊರತು ಉಳಿದುದನ್ನೆಲ್ಲಾ ಒಪ್ಪಲು ಸಿದ್ಧನಾಗಿದ್ದೇನೆ. ಆ ವಿಷಯದಲ್ಲಿ ಮಾತ್ರ ನನ್ನನ್ನು ಬಲಾತ್ಕಾರ ಮಾಡಕೂಡದೆಂದು ಬೇಡುತ್ತೇನೆ. ಹಾಲು, ಮೊಸರು, ಬೆಣ್ಣೆ ಮುಂತಾದುವುಗಳನ್ನಾಗಲೀ, ಮಾಂಸವನ್ನಾಗಲೀ ನಾನು ಮುಟ್ಟುವುದಿಲ್ಲ. ಇವುಗಳನ್ನು ತೆಗೆದುಕೊಳ್ಳದಿರುವುದರಿಂದ ನನಗೆ ಮರಣವು ಸಂಭವಿಸುವುದಾದರೆ ಅದಕ್ಕೆ ಸಿದ್ಧನಾಗಿರುವುದೇ ಲೇಸೆಂದು ನನಗೆ ತೋರುತ್ತದೆ" ಎಂದು ಹೇಳಿದೆನು.

"ಇದು ನಿಮ್ಮ ಅಂತಿಮ ನಿರ್ಣಯವೋ?" ಎಂದು ಗೋಖಲೆಯವರು ಕೇಳಿದರು.

'ನನಗೆ ಬೇರೆ ನಿರ್ಣಯವು ಸಾಧ್ಯವೇ ಇಲ್ಲವೆಂದು ತೋರುತ್ತದೆ. ಇದರಿಂದ ನಿಮಗೆ ದುಃಖವುಂಟಾಗುವುದೆಂದು ನನಗೆ ಗೊತ್ತು. ಆದರೆ ಏನು ಮಾಡಲಿ! ನಾನು ನಿಮ್ಮ ಕ್ಷಮೆಯನ್ನು ಬೇಡುತ್ತೇನೆ."

ಕೊಂಚ ದುಃಖಪಟ್ಟು ಆದರೂ ಅತ್ಯಂತ ಪ್ರೇಮದಿಂದ ಗೋಖಲೆಯವರು "ನಿಮ್ಮ ನಿರ್ಧಾರವನ್ನು ನಾನು ಒಪ್ಪುವದಿಲ್ಲ" ಎಂದು ನನಗೆ ಹೇಳಿ ಡಾ. ಜೀವರಾಜ ಮೆಹತಾರವರ ಕಡೆಗೆ ತಿರುಗಿ "ಗಾಂಧಿಯವರನ್ನು ಇನ್ನು ತೊಂದರೆಪಡಿಸಬೇಡಿ. ಅವರು ನಿರ್ಧರಿಸಿರುವ ಮಿತಿಯೊಳಗೆ ನಿಮಗೆ ಬೇಕಾದ ಯಾವ ಔಷಧಿ ಪಥ್ಯವನ್ನಾದರೂ ವಿಧಿಸಿರಿ" ಎಂದರು.

ವೈದ್ಯರು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು. ಆದರೆ ಅವರು ನಿರುಪಾಯರಾಗಿದ್ದರು. ಹುರುಳಿಯ ಸಾರಿಗೆ ಸ್ವಲ್ಪ ಇಂಗನ್ನು ಹಾಕಿ ತೆಗೆದುಕೊಳ್ಳಬೇಕೆಂದು ಸಲಹೆ ಕೊಟ್ಟರು. ನಾನು ಇದಕ್ಕೆ ಒಪ್ಪಿ ಒಂದೆರಡು ದಿನ ತೆಗೆದುಕೊಂಡೆನು. ಆದರೆ ಇದರಿಂದ ನಾನು ಪುನಃ ಹಣ್ಣು ಹಂಪಲವನ್ನು ತೆಗೆದುಕೊಳ್ಳ ತೊಡಗಿದೆನು. ವೈದ್ಯರೇನೋ ಬಾಹ್ಯಚಿಕಿತ್ಸೆಯನ್ನು ನಡೆಸುತ್ತಾ ಹೋದರು. ಇದರಿಂದ ನನ್ನ ನೋವು ಸ್ವಲ್ಪ ಕಡಿಮೆಯಾಯಿತು. ಆದರೆ ನನ್ನ ನೇಮದಿಂದ ಅವರಿಗೆ ಕೈಕಟ್ಟಿದಂತಾಯಿತು. ಈ ಮಧ್ಯೆ ಗೋಖಲೆಯವರಿಗೆ ಅಕ್ಟೋಬರಿನಲ್ಲಿ ಲಂಡನ್ನಿನ ಚಳಿಯನ್ನು ತಡೆಯಲಾಗದುದರಿಂದ ಅವರು ಹಿಂದೂಸ್ಥಾನಕ್ಕೆ ಹಿಂತಿರುಗಿದರು.

ಕೊಡಗು ಗೌಡ ವಿದ್ಯಾಭಿವೃದ್ಧಿನಿ ಸಂಘ.

ಕೊಡಗು ಗೌಡ ವಿದ್ಯಾಭಿವೃದ್ಧಿನಿ ಸಂಘದ ವಾರ್ಷಿಕ ಜನರಲ್ ಮೀಟಿಂಗು ತಾ. 27—5—28ರಲ್ಲಿ ಬಿಳಿಗೇರಿ ಗ್ರಾಮದ ದಂಬೆಕೋಡಿ ಮನೆ ಬಳಿ ಮೈದಾನದಲ್ಲಿ ನಡೆಯಿತು. ಸ್ವಾಗತ ಅಧ್ಯಕ್ಷರಾದ ಮೆ. ಪೈಕೇರ ಜೋಯಪ್ಪನವರು ಮೀಟಿಂಗಿನ ಪ್ರಾರಂಭದಲ್ಲಿ ಮಾಡಿದ ಭಾಷಣವೇನಂದರೆ—

ಸಭಾಧ್ಯಕ್ಷರೇ, ಮಾನ್ಯರೇ,

ಕೊಡಗು ದೇಶದ ರಾಜಧಾನಿ ಪಟ್ಟಣವಾದ ಮಡಿಕೇರಿಗೆ ಸಮೀಪದಲ್ಲಿರುವ ಬಿಳಿಗೇರಿ ಗ್ರಾಮಸ್ಥರಾದ ನಾವು ಕೊಡಗು ಗೌಡ ವಿದ್ಯಾಭಿವೃದ್ಧಿನಿ ಸಂಘದ ಈ ಸಂವತ್ಸರದ ವಾರ್ಷಿಕ ಮಹಾಸಭೆಗೂ ಸದರಿ ಗ್ರಾಮಸ್ಥರ ಆಥಿತ್ಯಕ್ಕೂ ತಮಗಳೆಲ್ಲರನ್ನೂ ಬರಮಾಡಿಕೊಂಡಿರಲು ನಮಗೆ ತುಂಬಾ ಆನಂದವಾಗಿದೆ.

ಸಂಘವು ಪ್ರಾರಂಭಿಸಿ ಇಂದಿಗೆ ಸುಮಾರು 20 ವರ್ಷಗಳಾದರೂ ಇಷ್ಟು ಸಮಯದಲ್ಲಿ ಈ ಮೊದಲು ಒಂದೇ ಒಂದು ಸಾರಿಯಾದರೂ ನಮ್ಮ ಗ್ರಾಮದಲ್ಲಿ ಇಂಥಾ ಮಹಾಸಭೆಯು ನಡೆಯಲಿಲ್ಲವೆಂಬ ಆರೋಪಣೆ ಇರಬಹುದು! ಈ ಆರೋಪಣೆಯನ್ನು ಹೋಗಲಾಡಿಸಲು ಸಂಘದ ದೊಡ್ಡ ಮನುಷ್ಯರಾದ ನೀವುಗಳು ಈ ದಿನದ ಸುಸಮಯವನ್ನು ದೊರಕಿಸಿಕೊಟ್ಟದಕ್ಕೆ ನಾವು ನಿಮಗಳಿಗೆ ಎಷ್ಟು ವಂದಿಸಿದರೂ ಅದು ಬಹು ಸ್ವಲ್ಪವೇ.

ಮಹಾಶಯರೇ, ನಾವು ವಿದ್ಯದಲ್ಲಿ ಹಿಂದುಳಿದವರಾದುದರಿಂದ ನಮ್ಮ ಮತ್ತು ಪರದೇಶಗಳ ಅನೇಕಾನೇಕ ಸಮಾಚಾರಗಳು ನಮಗೆ ಅಗೋಚರವಾಗಿವೆ. ಮತ್ತು ಅದೇ ಕೊರತೆಯಿಂದ ನಾವು ನಮ್ಮ ವಿಷಯವನ್ನು ನಮ್ಮ ಘನ ಸರಕಾರದವರಲ್ಲಿಯಾಗಲೀ ಅಥವ ಇತರ ದೊಡ್ಡ ಮನುಷ್ಯರಲ್ಲಾಗಲೀ ಹೊರಪಡಿಸಿ ನಮ್ಮ ಅಭಿವೃದ್ಧಿಯನ್ನು ಪಡೆಯಲು ಆಗಲಾರದೆ ಹಿಂದೆ ಬಿದ್ದಿರುವೆವು. ಈ ನ್ಯೂನತೆಯನ್ನು ಹೋಗಲಾಡಿಸುವದೇ ವಿದ್ಯಾಭ್ಯಾಸದ ಮಹತ್ವವನ್ನು ನಮ್ಮಲ್ಲಿ ಆದಷ್ಟು ತುಂಬ ಜನರು ಸಂಪಾದಿಸಿ ಸರಕಾರಿ ಹುದ್ದೆಗಳಲ್ಲೂ, ಇನ್ನು ಅನೇಕಾನೇಕ ವಿಷಯಗಳಲ್ಲೂ ಪ್ರವರ್ತಿಸದ ವಿನಹ ನಮಗೆ ಮರ್ಯಾದೆಯೂ, ಸುಖವೂ ದೊರೆಯುವಂತಿಲ್ಲ. ನಮ್ಮ ಜನಾಂಗದಲ್ಲಿ ತುಂಬಾ ಜನರು ವಿದ್ಯಾವಂತರಾಗುವರೇ ಇರುವ ಅಡ್ಡಿಗಳಲ್ಲಿ ಬಡತನವೇ ಮುಖ್ಯವಾದದ್ದು. ಇದರ ದೆಸೆಯಿಂದ ಅದೃಷ್ಟವೂ, ದೇವರ ದಯವೂ ಇರುವ ನಮ್ಮ ಹಲ ಕೆಲವು ವಿದ್ಯಾರ್ಥಿಗಳು ಪ್ರೌಢವಿದ್ಯಾಭ್ಯಾಸವನ್ನು ತಮ್ಮ ತಮ್ಮ ತಂದೆ ತಾಯಿಗಳ ಸಹಾಯದಿಂದ ಹೊಂದಲಾಗದೆ ಹಿಂದೆ ನಿಲ್ಲುವರು. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಗೌಡ ಮಹನೀಯರೂ ತನ್ನ ಜನಾಂಗದ ಮೇಲ್ಮೆಯನ್ನು ಹಾರೈಸಿ ವಿದ್ಯಾ ಫಂಡಿನ ಸಂಗ್ರಹಿಕೆಯ ಸಾರ್ವಜನಿಕ ಕೆಲಸದಲ್ಲಿ ಒಗ್ಗಟ್ಟಿನ ಧ್ಯೇಯವನ್ನು ಕಲ್ಪಿಸದ ಹೊರತು ಬೇರೆ ಉಪಾಯವಿಲ್ಲ. ಆದುದರಿಂದ ಮಹಾನೀಯರಾದ ತಾವೆಲ್ಲರೂ ಉದಾರ ಭಾವದಿಂದ ಚಂದರೂಪವಾಗಿಯೂ, ಬಹುಮಾನ ರೂಪವಾಗಿಯೂ ಈ ವಿದ್ಯಾಫಂಡಿಗೆ ದ್ರವ್ಯ ಸಹಾಯ ಮಾಡುವವರಾಗಿ ಪ್ರಾರ್ಥಿಸುತ್ತೇನೆ.

ಈ ದಿನದ ನಮ್ಮ ಮಹಾಸಭೆಗೆ ಮೆ. ಮಡ್ತಿಲ ರಾಮಣ್ಣ ಪಟೇಲರು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕಾಗಿ ವಿಜ್ಞಾಪಿಸುತ್ತೇನೆ. ಇತರರು ನಮಗೋಸ್ಕರ ಅವರ ಅಮೂಲ್ಯ ಸಮಯವನ್ನು ನಮ್ಮ ಸಭೆಗೆ ವಿನಿಯೋಗಿಸುವುದಕ್ಕಾಗಿ ಸಭೆಯ ಪರವಾಗಿ ನಾನು ಇವರಿಗೆ ವಂದಿಸುತ್ತೇನೆ. ಇವರು ನಮ್ಮ ಜಿಲ್ಲೆಗಿಂತಲೂ ವಿಶಾಲವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ತಿಸಿ ಅಲ್ಲಿಯ ತಾಲೋಕು ಬೋರ್ಡು ಮತ್ತು ಡಿಸ್ಟ್ರಿಕ್ಟುಬೋರ್ಡು ಮೆಂಬರಾಗಿ ಈಗ ಆರು ವರ್ಷಗಳಿಂದ ಕೆಲಸ ಮಾಡುತ್ತಾರಾದುದರಿಂದ ಇವರ ಅಧ್ಯಕ್ಷತೆಯಲ್ಲಿ ನಮ್ಮ ಸಂಘದ ಈ ದಿನದ ಮಹಾಸಭೆಯು ಸಾರ್ಥಕವಾದ ಪ್ರಯೋಜನವನ್ನು ಹೊಂದಲೆಂದು ನನ್ನ ಕೋರಿಕೆಯಾಗಿದೆ.

ಸಭಾಧ್ಯಕ್ಷರು ಮೆ. ಮಡ್ತಿಲ ರಾಮಣ್ಣನವರ ಭಾಷಣ.

ಮಹನೀಯರೇ, ನನ್ನನ್ನು ಈ ದಿನದ ನಿಮ್ಮ ಸಭೆಗೆ ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕೆ ನಿಮಗೆ ವಂದಿಸುತ್ತೇನೆ. ಸ್ವಾಗತ ಅಧ್ಯಕ್ಷರ ಭಾಷಣದಲ್ಲಿ ಈ ಸಂಘವು ಸ್ಥಾಪನೆಯಾಗಿ 20 ವರ್ಷಗಳಾದುವು ಎಂದು ಸೂಚಿಸಿದ ಮೇರೆ ಆ ಆಗಾಯಿತು ಸಂಘದ ವಿಷಯವಾಗಿಯೂ, ವಿದ್ಯಾಭ್ಯಾಸದ ಪ್ರಯೋಜನದ ವಿಷಯವಾಗಿಯೂ ನನಗಿಂತ ಹಿಂದಣ ವರ್ಷಗಳಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಶ್ರೀಮಂತರು ಹಲವು ಉಪನ್ಯಾಸಗಳನ್ನು ಮಾಡಿರಬಹುದು. ನಾನೇನೋ ಹೆಚ್ಚು ವಿದ್ಯಾವಂತನಲ್ಲವಾದ್ದರಿಂದ ಅವೇ ವಿಷಯ ಪುನಹ ಹೆಚ್ಚು ನನಗೆ ಹೇಳುವುದಕ್ಕಿಲ್ಲವೆಂದು ನನ್ನ ಭಾವನೆಯಾಗಿದೆ. ಸಂಘ ಸ್ಥಾಪನೆಯ ಇಪ್ಪತ್ತು ವರ್ಷಗಳಲ್ಲಿ ಸಂಘದ ಸಹಾಯದಿಂದಲೇ ನಾಲ್ಕರು ಬಿ. ಎ. ಯವರನ್ನು ತಯಾರು ಮಾಡಿರುವುದು ಬಹಳ ಶ್ಲಾಘನೀಯವಾದುದು. ಯಾವ ಕೆಲಸಕ್ಕಾಗಲೀ ಒಂದು ಸಂಘವು ಬೇಕೇಬೇಕು. ಈ ಕೊಡಗು ದೇಶದಲ್ಲಿ ನಮ್ಮವರಲ್ಲಿ ಶ್ರೀಮಂತರು ವಿರಳವಾಗಿರುವುದರಿಂದ ನಮ್ಮ ಯುವಕರು ವಿದ್ಯಾವಂತರಾಗಬೇಕಾದರೆ ಈ ವಿದ್ಯಾಸಂಘವೇ ಮೂಲಾಧಾರವಾಗಿರಬೇಕು. ಅದರ ಏಳಿಗೆಯು ಮಹಾನೀಯರಾದ ನಿಮ್ಮೆಲ್ಲರ ಕೈಯಲ್ಲಿದೆ. ಆದುದರಿಂದ ತಾವುಗಳೆಲ್ಲರೂ ಒಮ್ಮನಸ್ಸಿನಿಂದಲೂ, ಉದಾರ ಭಾವದಿಂದಲೂ ಚಂದಾಕೊಟ್ಟು ಈ ವಿದ್ಯಾನಿಧಿಯನ್ನು ಅಭಿವೃದ್ಧಿಪಡಿಸಬೇಕಾಗಿ ತಮಗಳೆಲ್ಲರಿಗೂ ಇನ್ನೊಂದಾವೃತ್ತಿ ವಂದಿಸಿ ವಿಜ್ಞಾಪಿಸುತ್ತೇನೆ.

ಸಂಘದ ವರ್ಷಾವಧಿ ವರದಿ. —

1928ನೇ ಇಸವಿ ಮೇ ತಾರೀಕು 27ನೇ ಮಹಾಸಭೆ ವರೆಗೆ ಸಂಘದ ಒಟ್ಟು ಬಂಡವಾಳ ರೂ. 4931—14—10

1920ರಿಂದ 1928ರ ವರೆಗೆ ಸಂಘದ ಮೆಂಬರುಗಳಿಗೆ ಗಿರವಿ ನಸಿತ್ತುಗಳ ಮೇಲೆ ಸಾಲಕೊಟ್ಟಿರುವ ಮೊಬಲಗು ರೂ. 1429—8—10

1920ರಿಂದ 1928 ವರೆಗೆ ಕಾಲೇಜು ವಿದ್ಯಾರ್ಥಿಗಳಿಗೆ ಸಾಲಕೊಟ್ಟ ಮೊಬಲಗು ರೂ. 3238—8—0.

1927—28ರ ಮಹಾಸಭೆಯ ವರೆಗೆ ವಸೂಲಾದ ಚಂದ ಮತ್ತು ಸಾಲದ ಮೊಬಲಗು ರೂ. 54—8—6. ಸದರಿ ವರ್ಷದ ಖರ್ಚು ರೂ. 277—10—9.

ಪೋಸ್ಟು ಆಫೀಸಿನಲ್ಲಿ ಡಿಪಾಜಿಟ್ ಇರುವ ಮೊಬಲಗು ರೂ. 249—0—0

ನಗದ್ ಇರುವ ಮೊಬಲಗು ರೂ. 11—11—0.

ಸಭೆಯಲ್ಲಿ ಬಹುಮತದಿಂದ ಮಂಜೂರು ಮಾಡಲ್ಪಟ್ಟ ವಿಷಯಗಳು —

1. ಸಂಘದ ಚಂದಾವಸೂಲು ಮಾಡುವ ಏಜಂಟರಿಗೆ ಶೇಕಡ 20/ರೂ. ಗಳ ಮೇರೆ ಕಮಿಶನ್ ಕೊಡುವುದು.

2 ಗಿರವಿ ಸಾಲ ಮೆಂಬರುಗಳ ಮೇಲೆ ದಾವಹಾಕುವ ವಿಷಯ ಕಮಿಟಿ ಮೆಂಬರುಗಳು ಕರಾರು ಪತ್ರ ವಾಯಿದೆ ಮುಂತಾದುವುಗಳನ್ನು ನೋಡಿಕೊಂಡು ಯಾರ್‍ಯಾರ ಮೇಲೆ ದಾವ ಹಾಕಬೇಕೆಂದು ತೀರ್ಮಾನಿಸಿ ಕೂಡ್ಲೆ ದಾವೆ ದಾಖಲು ಮಾಡತಕ್ಕದ್ದು.

3. ಸೀನಿಯರ್ ಬಿ. ಎ. ವಿದ್ಯಾರ್ಥಿ ಪುದಿಯನೆರವನ ನಾಣಯ್ಯನವರಿಗೆ ಈ ವರ್ಷದ ಖರ್ಚಿಗೆ 300/ರೂಪಾಯಿಗಳ ಸಾಲಕೊಡುವಂತೆ ತೀರ್ಮಾನವಾಯಿತು.

4. ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಈ ವರ್ಷದ ಮಟ್ಟಿಗೆ ಸಂಘದಿಂದ ಸಹಾಯ ಮಾಡಲಾಗುವುದಿಲ್ಲವೆಂದು ನಿರ್ಣಯಿಸಲಾಯಿತು.

5. ವ. ತಿರಕಜೆ ರಾಮಪ್ಪನವರಿಗೆ, ಮೆ. ಯನ್. ಮುದ್ದಪ್ಪನವರಿಂದಲೂ, ಮೆ. ಟಿ ಯಸ್. ಪೂವಯ್ಯನವರಿಂದಲೂ ಕೊಡಲ್ಪಟ್ಟ ಒಂದು ನೂರು ರೂಪಾಯಿಗಳನ್ನು ಸದರಿ ರಾಮಪ್ಪನವರಿಂದ ಸಂಘದವರೇ ವಾಪತಿ ಹೊಂದಿಕೊಂಡು ಸಂಘದ ಜಮೆಗೆ ತೆಗೆದುಕೊಂಡು ಮೇಲ್ಕಂಡ ಮುದ್ದಪ್ಪನವರಿಗೂ, ಪೂವಯ್ಯನವರಿಗೂ ಕೊಡತಕ್ಕದ್ದು.

6. ಹಳೆ ಬೋರ್ಡಿಂಗ್ ಮನೆಯನ್ನು ಸಂಘದ ಪ್ರಸಿಡೆಂಟರು ಮತ್ತು ಕಮಿಟಿ ಮೆಂಬರುಗಳು ರಿಪೇರಿ ಮಾಡಿ ಅಲ್ಲಿ ವಾಸವಿರುವ ಮೆಂಬರುಗಳಿಂದ ತಿಂಗಳುವಾರು ಬಾಡಿಗೆ ವಸೂಲ್ ಮಾಡತಕ್ಕದ್ದು.

7. ಮೆ. ಚೆಕ್ಕೇರ ಚಿನ್ನಪ್ಪಯ್ಯನವರು ಸಂಘದ ಪ್ರಸಿಡೆಂಟರಾಗಿಯೂ, ಮೆ. ಪರಿಚನ ಪೂವಯ್ಯನವರು ವೈಸ್ ಪ್ರಸಿಡೆಂಟರಾಗಿಯೂ ಬಹುಮತದಿಂದ ಚುನಾಯಿಸಲ್ಪಟ್ಟರು. ಮತ್ತು ಮೆ. ಮಾಚೇರ ಪೊನ್ನಪ್ಪನವರು ಸಂಘದ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟರು.

8. ಕಮಿಟಿ ಮೆಂಬರುಗಳ ಚುನಾವಣೆ.

1 ಮೆ. ಗಾಳಿಪ ಯನ್. ಸಂಣ್ಣಯ್ಯ ಪಟೇಲರು, 2. ಕೋರನ ದೇವಯ್ಯನವರು, 3. ಬಡ್ಡನ ಮುತ್ತಣ್ಣನವರು, 4. ಪಾಂಡನ ದೇವಪ್ಪನವರು, 5 ಪೈಕೇರ ಜೋಯಪ್ಪನವರು, 6. ದೇಂಗೋಡಿ ಬೋಜಪ್ಪನವರು, 7. ಕೆದಂಬಾಡಿ ಯು. ತ

ಟ್ಟಿಯ್ಯನವರು, 8 ತೋಟಂಬೈಲು ಕಾಳಪ್ಪನವರು, 9. ಗುಡ್ಡೇರ ಗಣಪತಿಯವರು, 10 ಕೆಮ್ಮಾರನ ಸುಬ್ಬಯ್ಯನವರು, 11. ಬಾರಿಕೆ ಕುಂಞಪ್ಪನವರು 12. ಮೂಟೆರ ಮಂದಣ್ಣನವರು, 13 ಕತ್ರಿಕೊಲ್ಲಿ ಅಂಗ್ಯಯ್ಯನವರು, 14. ಕೆಕ್ಕಡ ಅಪ್ಪಯ್ಯನವರು, 15 ಪಟ್ಟಮಾಡ ತಿಮ್ಮಯ್ಯನವರು, 16. ಕುಂಬುಗೌಡನ ಅಪ್ಪಯ್ಯನವರು, 17. ಕುಂಜಿಲನ ಪೊನ್ನಪ್ಪನವರು, ಮತ್ತು 18 ಪಂದಿಕೋತಿ ಅಪ್ಪಚ್ಚನವರು.

೩. ಈ ಕೆಳಗಿನ ಮೆಂಬರರು ಸಂಘದ ಬೈಲಾ ತಯಾರು ಮಾಡುವ ಸಬ್ ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟರು.

ಮೆ ಗಳಾದ ಯನ್. ಮುದ್ದಪ್ಪನವರು, ಯನ್. ಸಂಣ್ಣೈಯ್ಯ ಪಟೇಲರು, ಬಲ್ಲಚಂಡ ಮುತ್ತಣ್ಣನವರು ಮತ್ತು ಪೈಕೇರ ಮೋಯಪ್ಪನವರು.

ಸಂಘದ ಬೈಲಾ ತಯಾರು ಮಾಡಿ ಆಕ್ಟೋಬರ್ ತಿಂಗಳ ಆಖೈರ್ ಒಳಗೆ ಒಂದು ಸ್ಪೆಸಿಯಲ್ ಮೀಟಿಂಗ್ ನಡೆಸಿ ಬೈಲಾವನ್ನು ಮಂಜೂರ್ ಮಾಡುವಂತೆ ತೀರ್ಮಾನವಾಯಿತು.

10 ಸಂಘದ ಲೆಕ್ಕವನ್ನು ಆಡಿಟ್ ಮಾಡುವುದಕ್ಕೆ ಮೆ. ಕೆಕ್ಕಡ ಪೂವೈಯ್ಯನವರನ್ನು ಆಡಿಟರಾಗಿ ಚುನಾಯಿಸಿದರು.

ಈ ದಿನದ ಮಹಾಸಭೆಯಲ್ಲಿ ರೂ. 352—10—0 ಚಂದಾ ಮತ್ತು ಸಾಲದ ಬಾಬ್ತು ಸಹ ವಸೂಲಾಯಿತು.

ಅನಂತರ ಸಂಘದ ಪ್ರೆಸಿಡೆಂಟರಾಗಿದ್ದ ಮೆ. ಯನ್. ಮುದ್ದಪ್ಪನವರು, ಸಂಘದ ಪರವಾಗಿ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯು ಬರಖಾಸ್ತಾಯಿತು.

ಯಂ. ಎ. ಪೊನ್ನಪ್ಪ,
ಸೆಕ್ರೆಟರಿ.

ಸ ತ್ಯಾ ಗ್ರ ಹಾ ಶ್ರ ಮ .

(೭ನೇ ಪುಟದಿಂದ ಮುಂದುವರಿದದ್ದು.)

ದಿಯತಕ್ಕವೆ. ಈ ಕರ್ತವ್ಯವನ್ನನುಸರಿಸಿ ಸ್ಥಳದಲ್ಲಿ ತಯಾರಾಗುವ ವಸ್ತುಗಳನ್ನೇ ಕೊಳ್ಳಬೇಕು. ಸ್ವದೇಶಿಯಲ್ಲಿ ಕುಟುಂಬವನ್ನು ಗ್ರಾಮಕ್ಕಾಗಿಯೂ, ಗ್ರಾಮವನ್ನು ದೇಶಕ್ಕಾಗಿಯೂ, ದೇಶವನ್ನು ಮಾನವ ಜಾತಿಗಾಗಿಯೂ ತ್ಯಾಗಮಾಡಬೇಕಾಗಿರುವದರಿಂದ ಇದರಲ್ಲಿ ಸ್ವಾರ್ಥತೆಯಿಲ್ಲ.

9. ಭಯವಿಲ್ಲದಿರುವಿಕೆ. ಸತ್ಯವನ್ನಾಗಲೀ, ದಯೆಯನ್ನಾಗಲೀ ಹೆದರಿಕೆಗೆ ಒಳಗಾದವರು ಪಾಲಿಸಲು ಸಾಧ್ಯವಿಲ್ಲ. ದೇಶದಲ್ಲಿ ಭಯವೇ ತುಂಬಿ ಹೋಗಿರುವದರಿಂದ ಭಯವಿಲ್ಲದಿರುವಿಕೆಯನ್ನು ಧ್ಯಾನಿಸುವದೂ, ಅಭ್ಯಾಸಿಸುವದೂ ವಿಶೇಷವಾಗಿ ಅವಶ್ಯವಿದೆ. ಸತ್ಯವನ್ನು ಅವಲಂಭಿಸುವವರು ತಂದೆ ತಾಯಿಗಳ, ಜಾತಿಯ, ಸರಕಾರದ ಕಳ್ಳರ ಮುಂತಾದವರ ಹೆದರಿಕೆಯನ್ನು ಬಿಡಬೇಕು. ಬಡತನಕ್ಕಾಗಲೀ, ಮರಣಕ್ಕಾಗಲೀ ಭೀತಿ ಪಡಬಾರದು.

10 ಹಿಂದೂ ಮತದಲ್ಲಿ ಬೇರೂರಿರುವ ಅಸ್ಪೃಶ್ಯತೆಯು ಅಧರ್ಮವಾಗಿದೆ. ಆಶ್ರಮದಲ್ಲಿ ಅಸ್ಪೃಶ್ಯರಿಗೂ ಬೇರೆಯವ ರಂತೆಯೇ ಎಡೆ ಇದೆ. ಆಶ್ರಮವು ಜಾತಿವ್ಯತ್ಯಾಸವನ್ನು ಒಪ್ಪುವದಿಲ್ಲ. ಜಾತಿಯು ಹಿಂದೂ ಧರ್ಮಕ್ಕೆ ಹಾನಿಯನ್ನುಂಟುಮಾಡಿದೆ. ಜಾತಿಯಿಂದ ಹುಟ್ಟುವ ಮೇಲು ಕೀಳು ಭಾವನೆಯೂ ಸ್ಪರ್ಶದಿಂದ ಅಶುದ್ಧಿಯಾಗುವಿಕೆಯೂ ದಯೆಗೆ ವಿರೋಧವಾಗಿವೆ. ವರ್ಣಾಶ್ರಮ ಧರ್ಮವನ್ನು ಆಶ್ರಮವು ಒಪ್ಪುತ್ತದೆ. ವರ್ಣವಿಭಾಗವು ಕಸಬನ್ನು ಹೊಂದಿದೆ. ಆದ್ದರಿಂದ ಮನುಷ್ಯನು ನೀತಿಗೆ ವಿರೋಧವಿಲ್ಲದ ತನ್ನ ಪಿತರಾರ್ಜಿತ ಧರ್ಮದಿಂದ ಜೀವಿಸಬೇಕು. ಹೆಚ್ಚಿನ ಸಮಯವನ್ನೂ, ಶಕ್ತಿಯನ್ನೂ ಜ್ಞಾನಸಂಪಾದನೆಗೆ ಉಪಯೋಗಿಸಬೇಕು. ಸ್ಮೃತಿಯಲ್ಲಿ ಹೇಳಿರುವ ಆಶ್ರಮಗಳು ಮಾನವ ಜಾತಿಯ ಕ್ಷೇಮವನ್ನು ಅಭಿವೃದ್ಧಿಗೊಳಿಸುವಂಥಾದ್ದಾಗಿದೆ. ಆದರೂ ಭಗವದ್ಗೀತೆಯಲ್ಲಿ ಹೇಳುವ ನಿಯಮಗಳನ್ನನುಸರಿಸಿದ ಸನ್ಯಾಸ ವರ್ಗವನ್ನು ಅನುಸರಿಸುವದರಿಂದ ಆಶ್ರಮದಲ್ಲಿ ವರ್ಣ ಭೇದಕ್ಕೆ ಎಡೆಇಲ್ಲ.

11. ಸಹನೆ. ಪ್ರಪಂಚದ ಎಲ್ಲಾ ಧರ್ಮಗಳೂ ಸತ್ಯದ ಬೋಧನೆಯೆಂತಲೂ, ಆದರೆ ಅವೆಲ್ಲಕ್ಕೂ ಸಂಪೂರ್ಣ ಜ್ಞಾನವಿಲ್ಲದ ಮನುಷ್ಯನು ಆಕಾರ ಕೊಟ್ಟದ್ದರಿಂದ ಅವೆಲ್ಲದರಲ್ಲೂ ಕೊರತೆಗಳು ಇವೆ, ಅಸತ್ಯದ ಬೆರಿಕೆ ಇದೆ. ತನ್ನ ಧರ್ಮದ ಮೇಲೆ ಇರುವ ಗೌರವವೇ ಎಲ್ಲಾ ಧರ್ಮಗಳ ಮೇಲೆಯೂ ಇರಬೇಕು. ಈ ರೀತಿ ಗೌರವವಿದ್ದರೆ ಜಾತಿಗಳೊಳಗೆ ಜಗಳವಿರಲಿಕ್ಕಿಲ್ಲ. ಜಾತಿಯಿಂದ ಜಾತಿಗೆ ಸೇರಿಸುವ ಪ್ರಯತ್ನವೂ ಇರಬಾರದು. ಎಲ್ಲಾ ಧರ್ಮಗಳಲ್ಲೂ ಇರುವ ಲೋಪಗಳು ಹೋಗಿ ಸಂಪೂರ್ಣತೆಗೆ ತಲಪಲಿ ಎಂತ ಪ್ರಾರ್ಥಿಸಬಹುದಷ್ಟೆ.

Notice.

A general Election of members for the Mercara Municipal Committee will be held on the 21st of July 1928, between 8—11 a. m. and from 1—6 p. m.

Intending candidates to be elected as members of the Mercara Municipal Committee will send their nomination papers to the President on or before 5 p. m. on the 25th of June 1928.

Municipal Office, Mercara, 20—6—28. } (Sd.) M. BHUJANGA RAO, President.

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನ ನೋಡಿದವರು ನಿಜವಾದ ವಜ್ರದ ಓಲೆಯಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಜಾಸ್ತಿಯಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0.
7 ಕಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0

ಸ್ಪಿರಿಟ್ ಸ್ಟೋವ್.

ಇವುಗಳನ್ನು ಹಿತ್ತಾಳೆಯಿಂದ ಮಾಡಿರುವದು. ಇದರಲ್ಲಿ ಒಬ್ಬರ ಸಹಾಯವಿಲ್ಲದೆಯೂ, ಯಾವ ತೊಂದರೆ ಇಲ್ಲದೆಯೂ ಎಷ್ಟು ಜನಗಳಿಗಾದರೂ ಪದಾರ್ಥಗಳನ್ನು ಬಹು ಬೇಗನೆ ಅಡಿಗೆಮಾಡಿಕೊಳ್ಳಬಹುದು.

ಕ್ರಯ 1ಕ್ಕೆ 2—8—0.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗಿಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರ ಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು ಬಿಡುವದು.

3 ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0.

ವಿಳಾಸ.—ಕೆ. ನಾಥಮುನಿ ಅಂಡ್ ಸನ್ಸ್,
52—5 168, ಚೈನಾ ಬಜಾರ್, ಮದರಾಸು.

ಕೊಡಗಿನ ಕೈಪಿಡಿ.

ಈ ಪುಸ್ತಕದ ಲೇಖಕರು—ಶ್ರೀ. ಪಾಂಡಂಡ ಮುತ್ತಣ್ಣನವರು ಬೆಲೆ ೧—೪—೦ ಆಣೆ. ಪ್ರಕಾಶಕರು—ಶ್ರೀ. ಪಾಂಡಂಡ ಚಂಗಪ್ಪನವರು.

ಈ ಪುಸ್ತಕವು ಅಂದವಾಗಿ ಮುದ್ರಿತವಾಗಿದೆ. ಭಾಷೆಯು, ಸರಳವೂ ಲಲಿತವೂ ಆದ ಕೊಡಗಿನ ಕನ್ನಡ ಭಾಷೆ. ಗ್ರಂಥದಲ್ಲಿ ಹಲವು ಪ್ರಾಮುಖ್ಯ ಸಂಗತಿಗಳು ಚರ್ಚಿಸಲ್ಪಟ್ಟಿವೆ. ಕೊಡಗರು ಉಗ್ರರಲ್ಲವೆಂದೂ, ಅವರು ಕ್ಷತ್ರಿಯರೆಂದೂ ಹಲವು ಪಾಶ್ಚಾತ್ಯ ವಿದ್ವಾಂಸರುಗಳ ಲೇಖನಾಧಾರಗಳಿಂದ ಸಿದ್ಧಪಡಿಸಿರುವರು. ರೆವರೆಂಡ್ ರಿಕ್ಟರ್ ಧೊರೆಗಳು ಬರೆದ ಪುಸ್ತಕದಿಂದ ಹೆಚ್ಚಾದ ಸಹಾಯವನ್ನು ಪಡಕೊಂಡಿದ್ದರೂ, ಅದರಲ್ಲಿರುವ ಅನೇಕ ವಿಷಯಗಳನ್ನು ಖಂಡಿಸಿರುವರು. ಕೊಡಗರಿಗೆ ಉಪನಯನ ವಿಧಿಯು ಇದೆ ಎಂದು ಉತ್ತರ ದೇಶದ ಇತರ ಕ್ಷತ್ರಿಯ ಕುಲದವರ ಆಚರಣೆಯ ತುಲನೆಯಿಂದ ಸಾಧಿಸಿರುವರು. ಕೊಡವರು ವೀರರನ್ನು ಆರಾಧಿಸುವವರು "ಗುರು ಭಕ್ತಿಯೇ ಇವರ ಮುಖ್ಯ ಧ್ಯೇಯ" ಕೊಡಗಿನಲ್ಲಿ ಕಾರಣೋರರನ್ನು (Heroes) ಪ್ರತಿಷ್ಠಿಸ್ಯೂ ದೇವ ಇಟ್ಟು ಪೂಜಿಸುವ ಪದ್ಧತಿಯು ಇಂದಿಗೂ ನಡೆದು ಬರುತ್ತಿದೆ. "ಇವರುಗಳಿಗೆ ಈಗಿನ ಬ್ರಾಹ್ಮಣರ ಪೂಜೆ ಪುನಸ್ಕಾರಾದಿಗಳಲ್ಲಿ ವಿಶ್ವಾಸವು ಕಮ್ಮಿಯಾಗುತ್ತದೆ. ಇವರು ಯಾವುದೊಂದು ಶುಭಾಶುಭ ಕಾರ್ಯಗಳಿಗೂ ಬ್ರಾಹ್ಮಣರನ್ನು ಸೇರಿಸುವುದಿಲ್ಲ. ಇವರ ಪೋಷಕಕರ್ಮಗಳನ್ನಲ್ಲಾ ಇವರೇ ಮಾಡಿಕೊಳ್ಳುತ್ತಾರೆ" ಎಂದು ಗ್ರಂಥಕಾರರು ಬರೆದಿರುತ್ತಾರೆ.

"ಕೊಡವರ ಪದ್ಧತಿ" ಎಂಬ ಪ್ರಕರಣವು ಕೊಡವರೆಲ್ಲರಿಂದಲೂ ಓದಲರ್ಹವಾಗಿದೆ. ಹೆಂಗಸರು ಕಿರ ಕಟ್ಟುವ ಪದ್ಧತಿಗೆ ಕ್ಷಾತ್ರ ಕೇಜಸ್ಸನ್ನು ತೂಡಿಸಿರುವರು. "ಕೊಡವರು ಅವುಲ್ಲಿ ಮದ್ಯಪಾನ ಸೇವಿಸುತ್ತಿರಲಿಲ್ಲ. ಮಲೆಯಲ್ಲಿ ಕಾಡು ಏಗರಾದ ಕುರುಬರಿಂದ ಸಿಕ್ಕುವ ಸೇಂದಿಯನ್ನು ನಿರ್ವಾಹವಿಲ್ಲದೆ ಬಾಯಾರಿಕೆಗೆ ಕುಡಿಯುತ್ತಿದ್ದರು. ಆದರೆ ಕುಂಪನಿ ಸರ್ಕಾರವು ಒಂದು ಫ್ರೇಜರ್‌ಪೇಟೆಯಲ್ಲಿ ಸಾರಾಯವನ್ನು ತಯಾರಿಸಿ ಕಂಟ್ರಾಕ್ಟು ಕೊಡಲು ಪ್ರಾರಂಭಿಸಿದಂದಿನಿಂದ ಸಾರಾಯಿ ಮಾಡುವ ವಿಧಾನವನ್ನು ಅರಿತುಕೊಂಡರು" ಎಂಬ ವಿಷಯವು ಪೂರಾ ನಿಜ.

"ವೀರ" ಎಂಬ ಹೆಸರು ಕೊಡಗು ರಾಜರಿಗೆ ಹೇಗೆ ಒಂದೆಂದು ಬಂದಿರುವ ವಿಷಯವು ಹೊಸತಾಗಿದೆ. ಬ್ರಹ್ಮನು ವಿಷ್ಣು ಸಂಪ್ರದಾಯ ಆಚೆ ಇರುವ 'ವೀರಾಜ' ನದಿಯಿಂದ ಕಂದವೀರನಿಂದ ತಲಕಾವೇರಿಯಲ್ಲಿರುವ ಸಲ್ಲಿ ಮರಕ್ಕೆ ಹೋಯಿರು ಮಹಾ ವಿಷ್ಣುವನ್ನು ಪೂಜಿಸಿದ್ದರಿಂದ ಆಗಿನ ಚಕ್ರವರ್ತಿಗೆ ವೀರರಾಜ—ವೀರಾವರಾಯ ಎಂಬ ಹೆಸರು ಬಂತೆಂದೂ, ಈ ಬಗೆ ಲಿಂಗಾಯತ ರಾಜರುಗಳು ತಮ್ಮ ಊರುಗಳಿಗೆ ವೀರ ಎಂಬ ನಾಮವನ್ನು ಇಟ್ಟರೆಂದೂ ಗ್ರಂಥಕಾರರು ಹೇಳುವರು.

ಠಾವ ಧಾರಿಗಳ (Title holders) ಹೆಸರುಗಳೂ, ಶಾಸನಗಳನ್ನೂ, ಅಪ್ಪಕ್ರೆಗಳನ್ನೂ ಕಟ್ಟಿಸಿದ ದಾನಶೀಲರ ಹೆಸರುಗಳೂ, ಪರದೇಶಗಳಿಗೆ ಹೋಗಿ ವಿದ್ಯಾ ವ್ಯಾಸಂಗ ಮಾಡಿದವರ ಹೆಸರುಗಳೂ ಸಹ ಈ ಪುಸ್ತಕದಲ್ಲಿ ಬಂದಿವೆ. ಅಲ್ಲದೆ ಹಿಂ

ದೂದೇಶದ ಸ್ಥಿತಿ, ಬ್ರಹ್ಮ ಸಮಾಜ, ಆರ್ಯ ಸಮಾಜ, ಬ್ರಹ್ಮಜ್ಞಾನ ಸಭೆ, ರಾಮಕೃಷ್ಣ ಮಿಷನ್, ಕಾಂಗ್ರೆಸ್ ಕ್ರೈಸ್ತಮತ, ಬೌದ್ಧಮತ, ಇಸ್ಲಾಮ ಧರ್ಮ, ಬಡ್ಡಿದರ, ಸಂಬಳದ ಪಟ್ಟಿ, ಶಿಲ್ಪಿ ಶಾಸ್ತ್ರ ಮತ್ತು ಸಾಮಾನುಗಳ ಪರೀಕ್ಷೆ ಈ ಕುರಿತ ವಿಷಯಗಳು ಯೋಗ್ಯರೀತಿಯಿಂದ ಬರೆಯಲ್ಪಟ್ಟಿವೆ. ಪುಸ್ತಕದಲ್ಲಿರುವ ಹಲವು ಸಂಗತಿಗಳ ಸಾರವನ್ನು ಇಂಗ್ಲಿಷಿನಲ್ಲಿ ಇಂಗ್ಲಿಷ್ ಕಲಿತವರಿಗಾಗಿ ಕೊಡಲಾಗಿದೆ.

ಈ ಪುಸ್ತಕವು ವಿವಿಧ ವಿಷಯಗಳಿಂದ ಕೂಡಿರುವುದರಿಂದ ಇದಕ್ಕೆ 'ಕೊಡಗಿನ ಕೈಪಿಡಿ' ಎಂಬ ಹೆಸರು ಸಲ್ಲುತ್ತದೆ. ಶ್ರೀ ಮುತ್ತಣ್ಣನವರು "ಈ ಮೊದಲು 'ಕುಲವೃದ್ಧಿ ಸ್ವರ್ಗದಾಗಮನ ಮತ್ತು ನಾಗರೀಕತೆಯ ಪರಿಣಾಮ" ಎಂಬ ಎರಡು ಪುಟ್ಟ ಪುಸ್ತಕಗಳನ್ನು ಬರೆದು ಕೊಡಗು ಮಹಾ ಜನಗಳಿಗೆ ಪರಿಚಿತರಾಗಿರುವರು. ಇವರ ಹಿಂದಿನ ಗ್ರಂಥಗಳಿಗೆ ದೊರೆತ ಉದಾರಾಶ್ರಯವು ಇದಕ್ಕೂ ದೊರೆಯಲೆಂದು ಹಾರೈಸುತ್ತೇವೆ.

" ವಿಮರ್ಶಕ."

ಮಾನವ ಮರ್ಮ ಶಾಸ್ತ್ರ.

ಈ ಪುಸ್ತಕವು ಮೊದಲು ಹಿಂದೂಸ್ಥಾನಿ, ಫ್ರೆಂಚ್ ಭಾಷೆಗಳಲ್ಲಿ ಇತ್ತು. ಇದನ್ನು ಈಗ ಕನ್ನಡಕ್ಕೆ ತರ್ಜುಮೆ ಮಾಡಿ ಚಿತ್ರಗಳ ಸಹಿತ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ವಿಷಯಗಳು, ಶಿಶು ಉತ್ಪತ್ತಿ, ಸ್ತ್ರೀ ಪುರುಷರು ಅನ್ಯೋನ್ಯವಾಗಿ ಇರುವಿಕೆ ಮುಂತಾದ ಎಲ್ಲಾ ವಿಷಯಗಳು ಇರುವವು.

ಕ್ರಯ 1ಕ್ಕೆ 1—0—0

ವಿಳಾಸ —ಕೆ. ಎಸ್. ರಾಧಕೃಷ್ಣ ಅಂಡ್ ಬ್ರದರ್ಸ್,
52—5 109, ಚೈನಾ ಬಜಾರ್ ರೋಡ್, ಮದರಾಸು.

ಶ್ರೀ ಸತ್ಯ ನಾರಾಯಣ ಮೋಟಾರ್ ಸರ್ವೀಸ್.

ಮಹಾಶಯರೇ,

ತಾರೀಕು 16—5—28ರ ಲಾಗಾಯತು ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಬಾಬತು ಒಂದು ಹೊಸ ಸರ್ವೀಸ್ ಬೆಳಿಗ್ಗೆ 7.30 ಗಂಟೆಗೆ ವೀರರಾಜಪೇಟೆಯಿಂದ ಹೊರಟು 10.30 ಗಂಟೆಗೆ ಕುಟ್ಟಕ್ಕೆ ತಲುಪಿ ಅಲ್ಲಿಂದ ಸಾಯಂಕಾಲ 3 ಗಂಟೆಗೆ ಹಿಂತಿರುಗಿ ವೀರರಾಜಪೇಟೆಗೆ 6 ಗಂಟೆಗೆ ತಲುಪುವಂತೆ ಏರ್ಪಾಡು ಮಾಡಿದ್ದೇವೆ. ಮಡಿಯಾಳ, ಮಡಿಕೇರಿ, ಮೈಸೂರು ಮೊದಲಾದ ಸ್ಥಳಗಳಿಗೆ ಜಾಗ್ರತೆಯಾಗಿ ಹೋಗಿ ಬರಲು ಈ ನಮ್ಮ ಸರ್ವೀಸು ತುಂಬಾ ಪ್ರಯೋಜನಕಾರಿಯಾದೀತೆಂದು ನಂಬುತ್ತೇವೆ

ಸಿ. ಟಿ. ರಾಮನಂಬಿಯಾರ್,
4—3. ಮೇನೇಜರ್.

ನೋ ಟೀ ಸ್.

ಫ್ರೇಜರ್‌ಪೇಟೆ ಕರಾನ್ ಮಂಜೈಯ್ಯಶೆಟ್ಟರ ಮಗ ಪಾತಿ ಸಂಜಪ್ಪಸೆಟ್ಟರ ಹೆಂಡತಿ ರಂಗಮ್ಮನು ಈ ಮೂಲಕ ತಿಳಿಯಪಡಿಸುವುದೇನಂದರೆ—ನನ್ನ ಪಾತಿ ಗಂಡ ಸಂಜಪ್ಪಸೆಟ್ಟರಿಗೂ, ನನ್ನ ಮೈದುನ ನಾಗಪ್ಪಸೆಟ್ಟರಿಗೂ ಪಿತ್ರಾರ್ಜಿತವಾಗಿದ್ದು ಅವಿಭಕ್ತ ಕುಟುಂಬದಲ್ಲಿ ಅನುಭವಿಸಿ ಬರುತ್ತಿದ್ದ ಫ್ರೇಜರ್‌ಪೇಟೆಯಲ್ಲಿರುವ ಒಂದು ಮನೆಯೂ, ಸಂಜರಾಜಪಟ್ಣ ಗ್ರಾಮದಲ್ಲಿರುವ ಭೂಮಿಯೂ, ಬೈಚನಳ್ಳಿ ಮುಳ್ಳುಸೋಗೆ ಗ್ರಾಮಗಳಲ್ಲಿರುವ ಹೊಲಗಳೂ ಸಹ ಹಾಲಿ ನನ್ನ ಮೈದುನ ನಾಗಪ್ಪಸೆಟ್ಟರ ಹೆಸರಿನಲ್ಲಿ ಜಮಾಬಂದಿ ನಡೆದು ಬರುತ್ತಾ, ಅವರ ಅನುಭವದಲ್ಲಿದೆ. ಆದರೆ ಈ ಸೊತ್ತುಗಳ ಜವಾಬ್ದಾರಿಯಿಂದ ನನ್ನ ಗಂಡ ಪಾತಿಹೋದಂದಿನಿಂದ ಈ ವರೆಗಿನ 6 ವರ್ಷಗಳ ಜೀವನಾಂಶವು ಇನ್ನು ಮುಂದಿನ ಜೀವನಾಂಶವು ಸಹ ಸಲ್ಲಬೇಕಾಗಿದೆ. ಈ ಸೊತ್ತುಗಳನ್ನು ಯಾರೂ ಗಿರ್ವಿ, ಭೋಗ್ಯ, ಕ್ರಯ ವಗೈರೆ ಯಾವ ವಿಧದಿಂದ ಪರಾಧೀನ ಮಾಡಿಕೊಂಡರೂ ನನಗೆ ಸಲ್ಲಬೇಕಾದ ಜೀವನಾಂಶವನ್ನು ಕೊಡಬೇಕಾಗುತ್ತದೆ.

2—2. ರಂಗಮ್ಮ.

ಪ್ರ ಸಿ ದ್ಧ ಪ ತ್ರಿ ಕೆ .

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಮೆ. ಕುಟ್ಟೇಟಿರ ಸುಬ್ಬೈಯ್ಯನವರು ಅವರ ಸ್ವಾಧೀನದಲ್ಲಿರುವ ಸ್ಥಿರ ಮತ್ತು ಚರ ಆಸ್ತಿಗಳನ್ನು ವಿಕ್ರಯಿಸುವದಾಗಿ ತಿಳಿಯ ಬರುತ್ತದೆ ಸದರಿ ಆಸ್ತಿಗಳಿಗೆ ನಾನು ಒಬ್ಬ ಹಕ್ಕುದಾರಳಾಗಿರುವದರಿಂದ ಮೆ. ಸುಬ್ಬೈಯ್ಯನವರಿಗೆ ಸದರಿ ಆಸ್ತಿಗಳನ್ನು ವಿಕ್ರಯ ಮಾಡಲು ಯಾ ಪರಾಧೀನ ಮಾಡಲು ಯಾವ ಸ್ವತಂತ್ರವೂ ಇರುವದಿಲ್ಲ. ಒಂದು ವೇಳೆ ಯಾರಾದರೂ ಸದರಿ ಆಸ್ತಿಗಳನ್ನು ಕ್ರಯಕ್ಕೆ ಪಡಕೊಂಡರೆ ಅದರಿಂದ ಉಂಟಾಗುವ ವಿಶಿಷ್ಟ ನಷ್ಟಕ್ಕೂ, ಕಷ್ಟಕ್ಕೂ ಭಾಧ್ಯಸ್ಥರೆಂದು ಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

4—4 ಮಿಸೆಸ್ ಕುಟ್ಟೇಟಿರ ಕಾವೇರಪ್ಪ.

ವರ್ತಮಾನ ಸಂಗ್ರಹ.

ಒಳಪೇಟೆ

ಈ ವಾರ ಮಳೆಯು ದೀಕದ್ದ ಬುಲ ಕಮ್ಮಿಯಾಗಿದೆ ದಕ್ಷಿಣ ಕೊಡಗಿನಲ್ಲಿ ಬೇಸಿಗೆಯಂತೆ ಬಿಸಿಲು ಕಾಯುತ್ತಲಿದೆ.

ತಾ 15ರಲ್ಲು ಮೆ ಮುಕ್ಕಾಟಿರ ಕಾಳಪ್ಪನವರು ಮೃತರಾದರೆಂದು ತಿಳಿಯಲು ವಿಷಾಧಿಸುತ್ತೇವೆ

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗ್ ಈ ತಾ. 23ನೇ ದಿನ ಕಂಪನಿಯ ಆಫೀಸಿನಲ್ಲಿ ನಡೆಯಲಿಕ್ಕಿದೆ

ಮಡಿಕೇರಿ ಸ್ಕೂಲ್‌ಫೈನಲ್ ಪರೀಕ್ಷೆಯ ಕಮಿಟಿಯ ಸೆಕ್ಷನಿನಲ್ಲಿ ಮೆ ಸಾಮುವೆಲ್ ಆಲ್‌ಬರ್ಟ್ ಎಂಬವರೂ ಸಹ ಪಾಸಾಗಿದ್ದಾರೆಂತ ಈಚೆಗೆ ತಿಳಿಯುತ್ತೇವೆ.

ಭಾಗಮಂಡ್ಲ ನಾಡು ಕಾನಗಂಡಿ ತೋಟದ ಮೆ ಫನ್ಲೆಸನ್‌ರವರು ದಬ್ಬಡ್ಕದಲ್ಲಿ ಒಂದು ಆನೆಯನ್ನು ಗುಂಡಿನಿಂದ ಹೊಡೆದು ಕೊಂದಿರುತ್ತಾರೆ

ಬಿಟ್ಟಂಗಾಲದ ಮೆ. ಬಿ ವೆಂಕಟರಮಣನ್ ಬಿ ಎ ಎಲ್. ಟಿ ಇವರಿಗೆ ದಕ್ಷಿಣಕನ್ನಡ ಜಿಲ್ಲೆಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ ಕೆಲಸವಾಗಿದೆ.

ದೇವರಕೊಲ್ಲಿ ರಬ್ಬರು ತೋಟದಲ್ಲಿ ಒಂದು ಹೆಬ್ಬಾವನ್ನು ಅಲ್ಲಿ ರೈಟರಾಗಿರುವ ಮೆ ಜಾಂಡ ಪಮ್ಮಯ್ಯನವರು ಗುಂಡಿನಿಂದ ಹೊಡೆದು ಕೊಂದಿರುತ್ತಾರೆ ಇದು 15 ಅಡಿ ಉದ್ದವಿತ್ತು

ಸಬಾರ್ಡಿನೇಟ್ ಜಡ್ಜಿಯವರು ತಾ 26—6—28 ರಿಂದ ಮೂರು ದಿನ ರಜ ತೆಗೆದುಕೊಳ್ಳುತ್ತಾರ ತಾ. 26 ರಿಂದ 28 ರ ವರೆಗೆ ಇರುವ ಮೊಕದ್ದಮೆಗಳೆಲ್ಲ ಅಡ್ಜರ್ನ್ ಆಗುತ್ತವೆ

ಕಾಟಕೇರಿ ಗ್ರಾಮದ ಮೋಡೇಟಿ (ನಾಡುಮಣಿಯನ) ತಂಗವ್ವ ನೆಂಬವಳು ಕಳದ ತಾ. 19 ನೇ ದಿನ ಸಾಯಂಕಾಲ 7 ಗಂಟೆ ಸಮಯದಲ್ಲು ತನ್ನ ಮನೆಯ ಒಳಗೆ ಗುಂಡಿನ ಪೆಟ್ಟಿನಿಂದ ಸತ್ತಿರುತ್ತಾಳೆ ಪೊಲೀಸು ತನಿಖೆ ನಡಿಯುತ್ತಲಿದೆ.

ಬೊಂಬಾಯಿಯಲ್ಲಿ ಮೊದಲನೆಯ ಯಲ್ ಯಲ್ ಬಿ. ಪರೀಕ್ಷೆಗೆ ಹೋದ ಕೊಡಗಿನ ಯುವಕರಾದ ಮ ಪಳಿಯಂಡ ಕ ಕುಶಾಲಪ್ಪನವರೂ, ಮೆ ಕೆ. ವೆಂಗ್ಟಗಿರಿಯವರೂ ಮತ್ತು ಮೆ ಕೆ. ಯಸ್ ಶಂಕರನಾರಣ್ಯೆಯ್ಯನವರೂ ಪಾಸಾಗಿರುತ್ತಾರೆ ಇವರಿಗೆ ನಮ್ಮ ಅಭಿನಂದನೆಗಳಿವೆ.

ಮೆ. ಪಾಂಡಂಡ ಮುತ್ತಣ್ಣನವರಿಂದ ಬರೆಯಲ್ಪಟ್ಟ "ಕೊಡಗಿನ ಕೈಪಿಡಿ ಎಂಬ ಪುಸ್ತಕವು ನಮ್ಮ ಆಫೀಸಿನಲ್ಲಿಯೂ ಮತ್ತು ಮಡಿಕೇರಿ ಸ್ಟೆನ್ಸರ್ ಕಂಪನಿಯ ಮೇನೇಜರು ಮೆ ಪಟ್ಟಮಾಡ ಚಿಣ್ಣಪ್ಪನವರಲ್ಲಿಯೂ ಮಾರಾಟಕ್ಕಿದೆ. ಓದಲು ಹರ್ಷದ ಮಹನೀಯರೆಲ್ಲರೂ ಹೊಂದಿಕೊಳ್ಳಬಹುದಾಗಿ ಅವರು ತಿಳಿಸಿರುತ್ತಾರೆ.

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗು, ಜುಲೈ ತಾ 1ರಲ್ಲು ನಡೆಯುತ್ತೆ ಎಂತಲೂ ಅದಕ್ಕೆ 'ಮೆಂಬರಾಗತಕ್ಕವರಲ್ಲರೂ' ಮೀಟಿಂಗಿಗೆ ಹಾಜರಾಗಬೇಕಾಗಿಯೂ ನಮ್ಮ ಕಳದ ವಾರದ (15—6—28ರ) ಪತ್ರಿಕೆಯಲ್ಲು ಕೈತಪ್ಪಿನಿಂದ ಪ್ರಕಟವಾಗಿದ್ದದ್ದನ್ನು ದಯವಿಟ್ಟು "ಮೆಂಬರಾಗತಕ್ಕವರೆಲ್ಲರೂ" ಎಂಬದಾಗಿ ಓದಿಕೊಳ್ಳುವದು.

ಚೆಂಬೆಬೇಳೂರು ಗ್ರಾಮದ ಮೆ ಮಾಚಮಂಡ ಉತ್ತಪ್ಪನವರ ಎಮ್ಮೆ ರಾಸುಗಳ ಜೊತೆಯಲ್ಲಿ ಈಗ ಹತ್ತು ದಿನಗಳ ಲಾಗಾಯತು ಗಿಡ್ಡ ತರಹದ, ಕಪ್ಪು ವರ್ಣದ, ಬಿಳಿದ ಕಣ್ಣು ಮೋಡ ಮುಚ್ಚಿಕೊಂಡಿರುವ ಅಂದಾಜು ಒಂದೂವರೆ ಅಡಿ ಉದ್ದದ ಒಂದು ಎಮ್ಮೆ ರಾಸು ಪರಾರಿಯಾಗಿ ಬಂದು ಸೇರಿಕೊಂಡಿರುವುದರಿಂದ ಅದರ ಮಾಲೀಕರು ಬಂದು ಅದನ್ನು ಹೊಡಕೊಂಡು ಹೋಗಬಹುದಾಗಿ ತಿಳಿಸಿರುತ್ತಾರೆ.

ನಮ್ಮ ಕಂಪನಿಯ ಚಂದಾವಸೂಲು ಮಾಡುವ ಏಜೆಂಟರು ಮ. ಕೇರಿಯಂಡ ಪೂವಯ್ಯನವರ ಒಪಾಬಸ್ತಿಕ ಮೇರೆ ಅವರು ವೀರಾಜಪೇಟೆಯಲ್ಲಿ ಚಂದಾ ಹಣ ವಸೂಲಾತಿ ಬಗ್ಗೆ ಪಿಟಿಶನ್ ರೈಟರು ಮೆ. ಕಾನತ್ತೀರ ಸಂಜಪ್ಪನವರನ್ನು ಸಬ್ ಏಜಂಟರಾಗಿ ನೇಮಿಸಿದ ಪ್ರಕಾರ ಅವರಿಗೆ ಚಂದಾ ಹಣ ಪಾವತಿ ಮಾಡಲು ಅನುಕೂಲವಿರುವ ನಮ್ಮ ಚಂದಾದಾರಲ್ಲರೂ ಹಣ ಪಾವತಿಯಿಂದ ರಶೀತಿ ಪಡೆದುಕೊಳ್ಳಬಹುದಾಗಿ ಕೋರುತ್ತೇವೆ

ಕೊಡಗಿನಲ್ಲಿರುವ ಶಾಲೆಗಳಲ್ಲಿ ವಿದ್ಯಾರ್ಥಿಗಳು ಒಂದು ತರಗತಿಯಲ್ಲಿ ಎರಡು ವರ್ಷ ಓದಿ ತೇರ್ಗಡೆ ಹೊಂದದಿದ್ದರೆ ಅವರನ್ನು ಶಾಲೆಯಿಂದ ಹೊರಪಡಿಸುವ ವಿಷಯ ಕಳದ ತಾ. 18ರಲ್ಲು ನಾಪೋಕ್ಲು ಶಾಲೆ ಒಳ ಮೆ. ನಾಳಿಯಂಡ ಸಂಜಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆದು ಸದರಿ ಹುಕುಂ ಮನ್ನು ರದ್ದು ಮಾಡಬೇಕಾಗಿಯೂ ಮತ್ತು ಹಿಂದಕ್ಕೆ ಕಳಿಸಿರುವ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಳ್ಳಬೇಕೆಂತ ಕೇಳಿಕೊಳ್ಳಬೇಕಾಗಿಯೂ ತೀರ್ಮಾನವಾಯಿತೆಂತ ವರ್ತಮಾನ.

ಕೊಡವ ಸಭೆಯವರು ಈ ವರ್ಷ ನಾಲ್ಕನೇ ಫಾರಂನಲ್ಲಿ ಓದುವ ಕೊಡವ ಸಭೆಯ ಮೆಂಬರುಗಳ ಮಕ್ಕಳ ಪೈಕಿ ಅರ್ಹರಾದ ಇಬ್ಬರಿಗೆ ವಿರಾಜಪೇಟೆ ಸ್ಕೂಲಿನಲ್ಲಿ ಮಾಸ ರೂ ೫ ರ ವೇತನವನ್ನೂ ಮತ್ತು ಮಡಿಕೇರಿ ಹೈಸ್ಕೂಲಿನಲ್ಲಿ ಅದೇ ಮೇರೆ ಇನ್ನೊಂದು ವೇತನವನ್ನೂ ಕೊಡಲು ತೀರ್ಮಾನಿಸಿರುವದಾಗಿಯೂ ಮತ್ತು ಸದರಿ ವೇತನಗಳನ್ನು ಪಡೆಯಲಪೇಕ್ಷಿಸುವ ವಿದ್ಯಾರ್ಥಿಗಳು ತಮಗೆ ಕಳೆದ ಮಿಡಲ್‌ಸ್ಕೂಲ್ ಪರೀಕ್ಷೆಯಲ್ಲಿ ಸಿಕ್ಕಿದ ಮಾರ್ಕುಗಳೊಂದಿಗೆ ತಮ್ಮ ಅಪ್ಲಿಕೇಶನುಗಳನ್ನು ಜುಲೈ ತಾ 15 ರೊಳಗೆ ಸದರಿ ಸಭೆಯ ಜನರಲ್ ಸೆಕ್ರಟರಿ ವೀರಾಜಪೇಟೆನಾಡು ಬೇಟೋಳಿ ಗ್ರಾಮದ ಮೆ. ನಡಿಕೇರಿಯಂಡ ಸೋಮಯ್ಯನವರಿಗೆ ಕಳುಹಿಸಬೇಕಾಗಿಯೂ ಸದರಿ ಸಕ್ರೆಟರಿಯವರು ತಿಳಿಸಿರುತ್ತಾರೆ

ನಾಪೋಕ್ಲು ಲೋವರ್ ಎಲಿಮೆಂಟರಿ ಶಾಲಾ ಬಾಲಕರಿಗೆ ಕಳದ ವರ್ಷದ ಆರು ತಿಂಗಳ ಫೀಜು ರೂ 224—1—0 ಮರುಪಾವತಿ ಮಾಡುವ ಸಮ್ಮಂಧ ಸದ್ರಿ ವಿದ್ಯಾರ್ಥಿಗಳ ತಂದೆ ಯಾ ಪೋಷಕರ ಒಂದು ಮೀಟಿಂಗ್ ಮೆ ನಾಳಿಯಂಡ ಸಂಜಪ್ಪನವರ ಅಧ್ಯಕ್ಷತೆಯಲ್ಲಿ ಅದೇ ಶಾಲೆಯಲ್ಲಿ ತಾ 18 ನೇ ದಿನ ನಡೆದು ದೀರ್ಘ ಚರ್ಚೆಯಾದನಂತರ ಸದರಿ ಮೊಬಲಗನ್ನು ಮರುಪಾವತಿ ಮಾಡುವುದರ ಬದಲು ಶಾಲೆಯ ಕಟ್ಟಡದಲ್ಲು ಒಂದು ಕಸೆ ಕೋಣೆ ಕಟ್ಟಬೇಕೆಂದು ತೀರ್ಮಾನಿಸಿ ಸದ್ರಿ ಕೆಲಸವನ್ನು ಜರಗಿಸಲು ಮೆ. ಗಣಪದ ನಾಳಿಯಂಡ ಸಂಜಪ್ಪ, ಬಿದ್ದಾಟಂಡ ಮಾದಪ್ಪ, ಅಲೆಯಡ ಮನ್ನು ನ್ನು ಅಪ್ಪಾಪಂಡ ಚಂಗಪ್ಪ ಮತ್ತು ಕುಂಚೆಟ್ಟಿರ ಸಂಜುಂಡ ಇವರುಗಳನ್ನು ಕಮಿಟಿ ಮೆಂಬರುಗಳಾಗಿ ಚುನಾಯಿಸಿದ್ದಲ್ಲದೆ ಆ ಕಟ್ಟಡವನ್ನು ಕೈಕೊಳ್ಳುವ ವರೆಗೆ ಪೋಲ್ಜಂಡ ಪಣಮಪ್ಪ, ನಾಪೋಕ್ಲು ಪರಸ್ಪರ ಸಹಾಯದೇವಿ ಸೊಸೈಟಿಯಲ್ಲಿ ಡಿಪಾಜಿಟ್ ಇಡಬೇಕೆಂತ ತೀರ್ಮಾನವಾಯಿತೆಂಬದಾಗಿ ಒಂದು ವಾರ್ತೆ

ಹೈಸ್ಕೂಲ್‌ಗಳಲ್ಲಿಯೂ ಅವಕ್ಕೆ ಸೇರಿದ ಮಿಡಲ್ ಸ್ಕೂಲ್‌ಗಳಲ್ಲಿಯೂ ಎರಡು ವರ್ಷ ಪ್ರಮೋಶನ್ ಪಡೆಯದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಾರದೆಂತ ಮಾಡಿದ್ದ ಹುಕುಮನ್ನು ರದ್ದು ಪಡಿಸುವಂತೆ ಕೇಳಿಕೊಳ್ಳಲು ತಾ 16ರಲ್ಲಿ ಕಮಿಶನರಲ್ಲಿ ರಾವ್‌ಬಹದ್ದೂರ್ ಕೆ ಅಪ್ಪಯ್ಯನವರ ಮುಂದಾಳ ಎಂಟು ಜನರು ಡೆಪ್ಯುಟೇಶನ್ ಹೋಗಿದ್ದರು ಈ ಹುಕುಂ ಕಷ್ಟಕರವಾದದ್ದೆಂತ ಒಪ್ಪಿ ಇದನ್ನು ಯಥೋಚಿತ ಜಾರಿ ಮಾಡುವ ಎಂಬ ಮುಂತಾಗಿ ವಿಚಾರಿಸುವದಾಗಿ ಉತ್ತರವನ್ನು ಒದಾಯಿ ಕೊಟ್ಟರಾಗಿ ತಿಳಿಯುತ್ತೇವೆ ಈಗ ಮೇಲ್ಕಂಡ ಶಾಲೆಗಳಲ್ಲಿ ಓದುತ್ತಿದ್ದು ಎರಡು ವರ್ಷಗಳು ಪರೀಕ್ಷೆಯಲ್ಲಿ ಸೋತ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಪಡಿಸಲು ಸರ್ಕಲ್ ಇನ್ಸ್‌ಪೆಕ್ಟರವರು ಕಳದ ಏಪ್ರೀಲ್ ತಿಂಗಳಲ್ಲಿ ಕೊಟ್ಟಿದ್ದ ಹುಕುಂನ್ನು ಬದಲಾಯಿಸಿ ಹಾಗೆ ಹೊರಪಡಿಸಿದ್ದ ವಿದ್ಯಾರ್ಥಿಗಳನ್ನು ಪುನಃ ಸೇರಿಸಿಕೊಂಡು ಇನ್ನೊಂದು ವರ್ಷ ಅಂಥ ಒಬ್ಬ ವಿದ್ಯಾರ್ಥಿಯು ಮೂರು ವರ್ಷಗಳ ತನಕ ಒಂದೇ ತರಗತಿಯಲ್ಲಿ ಓದಬಹುದೆಂದು ಹುಕುಂ ಕೊಟ್ಟಿದ್ದಾರೆಂತ ವರ್ತಮಾನ.

ಹಿಂದೂದೇಶ.

ಮೈಸೂರು ಪ್ರಾಯಿಡೆ ಮಂಡಲಿಯ ಬಡ್ಜೆಟ್ ಸೆಶನ್ (ಅಧಿವೇಶನ) ಮೇಲಿನ ಚರ್ಚೆಯು ತಾ 18 ರಿಂದ ಬೆಂಗಳೂರಲ್ಲಿ ಪ್ರಾರಂಭವಾಗಿದೆ.

'ಹಿಂದೂ' ಪತ್ರಿಕೆಯು ಸ್ಥಾಪನೆಯಾಗಿ 50 ವರ್ಷಗಳಾದ್ದರಿಂದ ಸ್ವರ್ಣೋತ್ಸವವನ್ನು ಬರುವ ಸೆಪ್ಟಂಬರ್ ತಿಂಗಳಿನಲ್ಲಿ ನಡಿಸಲು ಏರ್ಪಾಡಾಗುತ್ತಲಿದೆ. ಹೇಗೆ ನಡಿಸುವದೆಂಬದನ್ನು ಪ್ರಮುಖರು ಯೋಚಿಸುತ್ತಲಿದ್ದಾರೆ

ಚಂದ್ರರತ್ನ ದುಗ್ಗೀರಲ ಗೋಪಾಲಕೃಷ್ಣಯ್ಯನವರು ಕ್ಷಯರೋಗದಿಂದ ಮೃತರಾದರು ಅವರ ಕುಟುಂಬ ಪೋಷಣೆಗೂ, ಅವರ ಸ್ಮಾರಕವನ್ನು ಸ್ಥಾಪಿಸಲು ಹಣ ಜಮಾವಣೆಗೂ ಒಂದು ಕಮಿಟಿಯು ಗುಂಟೂರಲ್ಲಿ ನೇಮಿಸಲ್ಪಟ್ಟಿದೆ

ಜಿ ಐ ಪಿ ರೈಲ್ವೆಯ ಕೆಲಸಗಾರರಿಗೆ ಸಂಬಳ ಹೆಚ್ಚಿಸುವದೇ ಮುಂತಾದ ಬೇಡಿಕೆಗಳನ್ನು ನೆರವೇರಿಸಿ ಕೊಡದೆ ಹೋದರೆ ಬೊಂಬಾಯಿಯಿಂದ ಭೂಸಾವಳ್ಳಿ ವರೆಗೆ ತಾ. 25 ರಿಂದ ಸಂಪೂರ್ಣ ಮುಷ್ಕರ ನಡಿಸುವದಾಗಿ ಕಂಪೆನಿಗೆ ನೋಟೀಸ್ ಕೊಟ್ಟಿರುತ್ತಾರ

ಸಂಯುಕ್ತ ಪ್ರಾಂತ್ಯದ ಗವರ್ನರಾಗಿದ್ದ ಸರ್ ಅಲೆಕ್ಸಾಂಡರ್ ಮುಡ್ಡಿಮನ್ ಇವರು ಬಹು ಸ್ವಲ್ಪ ಕಾಯಿಲೆಯಿಂದ ಮೃತರಾದರು ಇವರು ಸಿವಿಲ್ ಸರ್ವಿಸಿಗೆ ಸೇರಿದವರಾಗಿದ್ದು ಮೂವತ್ತು ವರ್ಷ ಸುಮಾರು ದೊಡ್ಡ ದೊಡ್ಡ ಪದವಿಗಳಲ್ಲಿ ಕೆಲಸ ಮಾಡಿದವರಾಗಿದ್ದಾರೆ.

ಮದ್ರಾಸ್ ಯೂನಿವರ್ಸಿಟಿಯಿಂದ ನೇಮಕವಾದ ಕಮಿಟಿಗೆ ಒಬ್ಬ ಮಹಿಳೆಯನ್ನಾದರೂ ನೇಮಿಸಬೇಕೆಂತಲೂ, ಅನೇಕ ಸ್ತ್ರೀಯರ ಕಾಲೇಜುಗಳನ್ನು ಸಂದರ್ಶಿಸಲಿಕ್ಕೆ ಇರುವದರಿಂದ ಇದು ಅವಶ್ಯವೆಂತಲೂ ಅಖಿಲಭಾರತ ಸ್ತ್ರೀ ವಿದ್ಯಾ ಸಮಿತಿಯ ಪರವಾಗಿ ಮಿಸಸ್ ಕಮಲಾದೇವಿ ಚಟ್ಟೋಪಾಧ್ಯಾಯರು ಯೂನಿವರ್ಸಿಟಿಗೆ ಬರೆದುಕೊಂಡಿರುತ್ತಾಳೆ

ಮಧ್ಯಪ್ರಾಂತ್ಯದ ಕೆಲವು ಭಾಗಗಳಲ್ಲಿ ಕನ್ನಮಳೆ ಬೀಳದೇ ಇರುವದರಿಂದ ರೈತರಿಗೆ ತಿಂದಾರದ ಮೊಪ, ಬರಗಾಲ ಮುಂತಾದ ಸಹಾಯ ಕೊಡಬೇಕೆಂತ ಅಲ್ಲಿಯ ಬಿಡಿ ಸ್ಥಾನದ ಸಂಘದವರು ಸರ್ಕಾರವನ್ನು ಕೇಳಿಕೊಂಡರು. ಇಂಥಾ ಸಹಾಯ ಸಿಕ್ಕದಿದ್ದರೆ ಜಾರ್ಡೋಲಿಯಂತೆ ಮೇಲ್ಪಂಕ್ತಿಯನ್ನು ಅನುಸರಿಸಬೇಕೆಂತ ಆ ಸಭೆಯಲ್ಲಿ ಕೆಲವರು ಭಾಷಣ ಮಾಡಿದರು

ಬಾರ್ಡೋಲಿಯಲ್ಲಿ ಪಟೇಲ್ ಕೆಲಸವನ್ನು ಬಿಟ್ಟವರೆಲ್ಲರೂ ಒಂದರ ಒಳಗೆ ರಾಜಿನಾಮೆ ಹಿಂತೆಗೆದುಕೊಳ್ಳದಿದ್ದರೆ ಬಿಟ್ಟದ್ದೆಂತ ಸರಕಾರವು ಪ್ರಕಟಿಸಿದ್ದಕ್ಕೆ ರಾಜಿನಾಮೆ ಕೊಟ್ಟ ಪಟೇಲರು ಜವಾಬು ಕಳುಹಿಸುತ್ತಾರೆ ಸರಕಾರದ ದಬ್ಬಾಳಿಕೆಯನ್ನು ನೋಡಿ ಸಹಿಸಲಾರದೆ ಬಿಟ್ಟದ್ದೆಂತಲೂ, ಯಾರಿಗೂ ಹಿಂತೆಗೆದು ಕೆಲಸ ನಡಿಸಲಿಲ್ಲವೆಂತಲೂ ಕಲೆಕ್ಟರ ಮುಂದೆ ಹೇಳಿ ರಾಜಿನಾಮೆ ಕೊಟ್ಟ ಬಳಿಕ ಪಟೇಲರು ಕಲ್ಲಿ ಹಿಂದೆ ಬಂದಿದ್ದೆಂದು ಹಿಂತಿರುಗಿ ಹೋದರು ಪಟೇಲರು ಆಗ ಜನರಿಗೆ ಬರಕೊಂಡಿರುತ್ತಾರೆ

ಕಾಂಗ್ರೆಸ್ ಪ್ರೆಸಿಡೆಂಟ್ ಪದವಿಗೆ ಈ ವರ್ಷ ಶ್ರೀ ಮೋತಿಲಾಲ್ ನೆಹರೂರವರನ್ನು ಆರಿಸಬೇಕೆಂತ ಕಲ್ಕತ್ತಾದ "ಫಾರ್ವರ್ಡ್" ಪತ್ರಿಕೆಯು ಬರೆಯುತ್ತಲಿದೆ ಶ್ರೀ ಗಂಗಾಧರ ರಾವ್ ದೇಶಪಾಂಡೆಯವರು ಮಹಾತ್ಮಗಾಂಧಿಯವರನ್ನು ಕೇಳಿಕೊಳ್ಳಬೇಕೆಂತಲೂ, ಅವರು ಒಪ್ಪದಿದ್ದರೆ ಲಾಲಾ ಲಜಪತರಾಯರನ್ನು ಆರಿಸಬೇಕೆಂತಲೂ, ಅವರೂ ಒಪ್ಪದಿದ್ದರೆ ಶ್ರೀ. ಮೋತಿಲಾಲ್ ನೆಹರು ಮುಂತಾದ ಕೆಲವರ ಪೈಕಿ ಯಾರನ್ನಾದರೂ ಆರಿಸಬೇಕೆಂತಲೂ ಎಲ್ಲಾ ಕಾಂಗ್ರೆಸ್ ಸಂಸ್ಥೆಗಳಿಗೆ ವಿಜ್ಞಾಪನೆಯನ್ನು ಕಳುಹಿಸಿರುತ್ತಾರೆ.

ಪೂನಾ ಸ್ತ್ರೀ ವಿಶ್ವವಿದ್ಯಾಲಯದ ಕಾನ್ವೊಕೇಶನ್ ಕೂಟದಲ್ಲಿ ಆ ಬರೋಡಾ ಸಂಸ್ಥಾನದ ದಿವಾನರಾದ ನವಾಬ್ ಸೈಯದ ಆ ಅಕ್ಬರ್ ಹೈದರ್ ಇವರು ಹೇಳಿರುವದೇನಂದರೆ—ವಿದ್ಯಾಭ್ಯಾಸವು ದೇಶೀಯ ಭಾಷೆಯಲ್ಲೇ ಆಗಬೇಕು. ರಾಷ್ಟ್ರೀಯತ್ವವು ಬೆಳೆಯಬೇಕಾದರೂ, ಜನಾಂಗದ ಶಕ್ತಿ ಅಭಿವೃದ್ಧಿಯಾಗಬೇಕಾದರೂ ವಿದ್ಯೆಯು ದೇಶಭಾಷೆಯಲ್ಲೇ ದೊರೆಯಬೇಕು ಮುಸಲ್ಮಾನರ ಆಳ್ವಿಕೆಯು ಹಿಂದುಸ್ಥಾನದಲ್ಲಿ 600 ವರ್ಷಗಳ ಕಾಲ ನಡೆದರೂ ಪರ್ಶಿಯನ್ ಭಾಷೆಯು ಎಲ್ಲ ಕಚೇರಿ ಭಾಷೆಯಾಗಿತ್ತು ... ಮಕ್ಕಳಿಗೆ ... ಕೊಡುವ ರಾಜಿಯನ್ನು ... ಇಟ್ಟುಕೊಂಡು ಅನಂತರ ... ಕೊಡಬೇಕಾದಂತೆ ಇಂಗ್ಲಿಷ್ ಭಾಷೆಯನ್ನು ಈ ವರೆಗೆ ವಿದ್ಯಾಭ್ಯಾಸದ ಭಾಷೆಯಾಗಿ ಮಾಡಿ ... ಇನ್ನು ಮೇಲೆ ದೇಶೀಯ ಭಾಷೆ ... ಉಪಯೋಗಿಸುವದು ಅವಶ್ಯ. ಜಾತಿ ಮತ್ತರಗಳನ್ನು ... ಪಡಿಸಲಿಕ್ಕೆ ದೇಶಪತ್ರಿಯು, ಒಳ್ಳೆ ಮಗ ... ಮಾಡಬೇಕು. ಜಾತಿಬಂಗಗಳು ಇಲ್ಲದಂತೆ ಮಾಡುವದು ವಿದ್ಯಾವಂತರ ಕರ್ತವ್ಯವಾಗಿದೆ ಶ್ರೀ ಪಂಡಿತ ಮದನಮೋಹನ ಮಾಳವೀಯರೂ ದೇಶೀ ಭಾಷೆಯ ಮುಖಾಂತರ ವಿದ್ಯಾಭ್ಯಾಸ ಕೊಡಬೇಕಾದ ತತ್ವಕ್ಕೆ ಒಪ್ಪಿಕೊಂಡವರು ಈ ತ್ರಿಮೂರ್ತಿಗಳನ್ನು ... ಸಂದರ್ಭದಲ್ಲಿ ... ಸಿದರು.

ವಿದೇಶ

ಶ್ರೀ. ಯಸ್ ಶ್ರೀನಿವಾಸ ಅಯ್ಯಂಗಾರ ಇಂಗ್ಲೆಂಡಿನಲ್ಲಿ ಹಿಂದೂಸ್ಥಾನದ ಸ್ವರಾಜ್ಯ ... ಉಪನ್ಯಾಸಗಳನ್ನು ಕೊಡುತ್ತಲಿದ್ದಾರೆ ... ಸಭೆಯ ಶಾಖೆಯೊಂದನ್ನು ಸ್ಥಾ ... ದರು.

ಮಿಸ್ ಎಮಿಲಿಯಾ ... ಎಂಬವಳು ಅಮೇರಿಕಾದಿಂದ ಇಂಗ್ಲೆಂಡಿಗೆ ಬಂದು ಆಕಾಶ ವಿಮಾನವನ್ನು ತಂದಳು ಇದೇ ಮೊದಲನೇ ಸಾರಿ ... ಯಿಂದ ಆಕಾಶ ವಿಮಾನವು ಇಷ್ಟು ದೂರ ನಡಿಸಲ್ಪಟ್ಟದ್ದಾಗಿದೆ.

500 ಮಿಲಿಯನ್ ಘನಅಡಿ ಅನಿಲ ತುಂಬಿ, 100 ಜನರನ್ನು ಕೂರಿಸಿಕೊಳ್ಳಲು ಅನುಕೂಲವಿರುವ 1 ... ಅಡಿ ಉದ್ದದ ಹಡಗು ಬ್ರಿಟನಿನಲ್ಲಿ ತಯಾರಾಗಿದೆ. ... ಇದು ಅಮೇರಿಕಾಕ್ಕೂ ಇಂಗ್ಲೆಂಡಿಗೂ ಪ್ರಯಾಣ ... ಉಪಯೋಗಿಸುತ್ತಾರೆ.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ 1921 ರಿಂದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದ ಮೆ. ಜೆ ಎಚ್ ವ್ಹಿಟ್ಲೆ ಯವರು ಮರಣಹೊಂದಿದರು ಇವರನ್ನು ಪಾರ್ಲಿಮೆಂಟಿನ ಎಲ್ಲ ಪಾರ್ಟಿಯವರೂ ಶ್ಲಾಘಿಸಿದರು. ಇವರ ತಕ್ಕ ಬಹುಮಾನವನ್ನು ಕೊಡುವಂತೆ ರಾಜನಿಗೆ ತಿಳಿಸುವದಾಗಿ ಮಂತ್ರಿಯವರು ಹೇಳಿದರು.

ಬೇಕಾಗಿದೆ.

ಪೊನ್ನಂಪೇಟೆ ಕ್ಲೆಯರ್ ಎಲಿಮೆಂಟರಿ ಶಾಲೆಗೆ ಬಗತ್ಯಾಗಿರುವ ಪಾಠದಂಗಲ್ಲಿ ಕೆಲಸ ಮಾಡಲು ಒಬ್ಬ ಗಾರ್ಡನರ್ ಬೇಕಾಗಿದೆ.

ಇವರಿಗೆ ಬೋರ್ಡಿಂಗಿನಲ್ಲಿ ಊಟವೂ, ಮಾಸಿಯಾನ ಸದ್ಯಕ್ಕೆ ಐದು ರೂಪಾಯಿ ವೇತನವೂ ದೊರೆಯುವದು.

ಹದಿನೆಂಟು ವಯಸ್ಸಿಗೆ ಕಡಿಮೆ ಇಲ್ಲದ ಯುವಕರು ಕನಿಷ್ಠ ಪ್ರೈಮರಿ ಪರೀಕ್ಷೆಯೂ ಮತ್ತು ನಡತೆಯ ಸರ್ಟಿಫಿಕೇಟಿ ನೊಡನೆ ಈ ಜುಲಾಯಿ ತಾರೀಕು ಒಪ್ಪತ್ತರೊಳಗಾಗಿ ಸದರಿ ಶಾಲೆಯ ಹೆಡ್‌ಮಾಸ್ಟರವರನ್ನು ಕಾಣುವದು.

ಉಮೇದುವಾರನು ಕೃಷಿಯಲ್ಲಿಯೂ, ತೋಟಗಾರಿಕೆಯಲ್ಲಿಯೂ ವರಷ ಪೂರೈಸಿದ ಉಪಾಧ್ಯಾಯನ ಅಡಿಯಲ್ಲಿ ಕೆಲಸ ಮಾಡುತ್ತಾನಾದ್ದರಿಂದ ಮುಂದಿನ ಅಭ್ಯಾಸ್ತಿಗೂ, ಅನುಭವಕ್ಕೂ ಬೇಕಾದಷ್ಟು ಅವಕಾಶವಿದೆ.

ಪೊನ್ನಂಪೇಟೆ, ಯಸ್. ಸಿ ಚಿಣ್ಣಪ್ಪ
15—6—8 ಹೆಡ್‌ಮಾಸ್ಟರ.

ಹಲ್ಲು ಕೆಡುವುದಕ್ಕೆ ಸಕ್ಕರೆಯು ಒಂದು ಮುಖ್ಯ ಕಾರಣವಾಗಿದೆ.

ಬೆಲ್ಜಿಯಂ ದೇಶದ ಪ್ರಸಿದ್ಧ ಡಾಕ್ಟರಾದ ವಾಟ್ರೀ ಎಂಬವರು ತಮ್ಮ ಅನುಭವವನ್ನು ಕುರಿತು ಹೀಗೆ ಬರೆದಿರುವರು "ಸಕ್ಕರೆಯ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರೆಲ್ಲರೂ ಪ್ರಾಯಶವಾಗಿ ಆರು ವರ್ಷಗಳ ಕಾಲದ ಮೇಲೆ ಹಲ್ಲಿನ ಸಂಬಂಧವಾದ ವ್ರಣಗಳಿಂದ ಅಥವಾ ನೋವಿನಿಂದ ಬಾಧಪಡುತ್ತಿರುವರು. ಸಕ್ಕರೆಯ ಧೂಳು ಹಲ್ಲು ಸಂಧುಗಳಲ್ಲಿ ಸೇರಿ ಆ ವಸಡುಗಳಲ್ಲೆಲ್ಲಾ ಒಂದು ಬಗೆಯ ಉದ್ವೇಗವನ್ನು (ತಾಪವನ್ನು) ಹುಟ್ಟಿಸಿ, ಕೇವಲ ಯಂತ್ರದಂತೆ ನಡೆಯುವ ಅದರ ಕಾರ್ಯಸಾಮರ್ಥ್ಯವನ್ನು ತಗ್ಗಿಸಿ ಬಿಡುವುದರಿಂದ ಹೀಗಾಗುವುದು" ಎಂಬ ಅಭಿಪ್ರಾಯವನ್ನು ಕೊಟ್ಟಿರುವರು.

ಇದೇ ಅಭಿಪ್ರಾಯವನ್ನನುಸರಿಸಿ ಡಾಕ್ಟರ್ ಗಿಲ್ಮರ್ ಎಂಬವರು ಬ್ರಿಟಿಷ್ ದಂತಚಿಕಿತ್ಸಕ ಸಮಾಜದ ಅಗ್ರಾಸನವನ್ನು ವಹಿಸಿದ್ದಾಗ ಮಾಡಿದ ಭಾಷಣದಲ್ಲಿ "ಸಕ್ಕರೆಯ ಉತ್ಪತ್ತಿಯು ಹೆಚ್ಚಾದ ಹಾಗೆಲ್ಲ, ದೇಶದಲ್ಲಿ ಅದರ ಧಾರಾಳತೆಯ ಮೇರೆಗೆ ದಂತವ್ಯಾಧಿಗಳೂ ಜನರಲ್ಲಿ ಹೆಚ್ಚಾಗುತ್ತಿವೆ" ಎಂಬುದನ್ನು ನಿರೂಪಿಸಿರುವರು. ಸುಲಭವಾಗಿ ಕರಗತಕ್ಕ ಮತ್ತು ನೀರಿನಲ್ಲಿ ಕುದಿಸಿ ಪಕ್ವಮಾಡಿದ ಮಧುರ ಪದಾರ್ಥಗಳು ಕೆಲವುವೇಳೆ ಹಲ್ಲುಗಳಿಗೆ ಅಷ್ಟಾಗಿ ಕೆಡುಕನ್ನು ಮಾಡಲಾರವು. ಆದರೆ ಸಕ್ಕರೆ ಕಡ್ಡಿಯ ಹಾಗೆ ಜಿಗುಟಾದ ಸೀ ಪದಾರ್ಥಗಳು ಅದರಲ್ಲಿಯೂ "ಛಾಕೊಲೆಟ್ಸು"ಗಳು ಹಲ್ಲುಗಳಿಗೆ ಅಪಾಯವನ್ನು ತರುವುದು ನಿಶ್ಚಯವು.

ಹಲ್ಲುಗಳು ಬಹು ಕಾಲ ದೃಢವಾಗಿಯೂ, ಆರೋಗ್ಯವಾಗಿಯೂ ಇರಬೇಕಾದರೆ ಬಾಲ್ಯ ಪ್ರಾಯದಿಂದಲೇ ಮಕ್ಕಳಿಗೆ ತಕ್ಕ ಆಹಾರಗಳನ್ನು ಕೊಡುತ್ತಾ ಬರಬೇಕು. ಇದಕ್ಕಿಂತ ಉತ್ತಮವಾದ ಬೇರೆ ಉಪಾಯವಿಲ್ಲವೆಂದೂ ಅವರ ಅಭಿಪ್ರಾಯವು. ಅನುಕೂಲವಾದ ಆಹಾರವೆಂದರೆ ಯಾವುದು? ಈ ಪ್ರಶ್ನೆಗೆ ಉತ್ತರವಾಗಿ ಅವರು ಹೇಳುವುದೇನೆಂದರೆ—ಫಲಜಾತಿಗಳೂ ಮತ್ತು ಫಲಗಳಿಂದ ತಯಾರಿಸಿದ ಇತರ ಪದಾರ್ಥಗಳೂ ಈ ಭಾಗದಲ್ಲಿ ಬಹಳ ಮೇಲೆನಿಸಿವೆ. ಈಗಿನ ಆಹಾರ ಪದಾರ್ಥಗಳಲ್ಲಿ ಅವುಗಳನ್ನು ಎಷ್ಟರ ಮಟ್ಟಿಗೆ ಉಪಯೋಗಿಸಬೇಕೋ ಅಷ್ಟರ ಮಟ್ಟಿಗೆ ಉಪಯೋಗಿಸುವದಿಲ್ಲ. ಪ್ರಾಯಶವಾಗಿ ಫಲಜಾತಿಗಳು ಬೇರೆ ಎಲ್ಲಾ ಆಹಾರಗಳಿಗಿಂತಲೂ ಹೆಚ್ಚಾಗಿ ಬಾಯಲ್ಲಿ ಜೊಲ್ಲಿನ ರಸವನ್ನು ಹುಟ್ಟಿಸುವುದು. ಬಾಯನ್ನೂ, ಹಲ್ಲುಗಳನ್ನೂ ಶುದ್ಧಿಗೊಳಿಸತಕ್ಕ ಸಹಜವಾದ ಗುಣವು ಜೊಲ್ಲಿನ ರಸದಲ್ಲಿಯೇ ವಿಶೇಷವಾಗಿದೆಯೆಂದು ಅವರ ನಂಬಿಕೆ. ಈ ಜೊಲ್ಲಿನ ರಸವು ದ್ರವ ರೂಪದಿಂದ ಹಲ್ಲುಗಳನ್ನು ಶುದ್ಧಿಮಾಡುವುದು. ಇದರೊಡನೆ ನಾರಿನ ಸಂಬಂಧವಾದ ಆಹಾರಗಳನ್ನೂ ಹೆಚ್ಚಾಗಿ ಉಪಯೋಗಿಸುವುದರಿಂದ ಅಂಥಾ ಪದಾರ್ಥಗಳನ್ನು ಚೆನ್ನಾಗಿ ಅಗಿದು ಮೆಲ್ಲುವುದರಲ್ಲಿ ಅದರಿಂದ ಆ ಹಲ್ಲಿನ ಕೂಳೆಗಳೆಲ್ಲವೂ ನೀಗಿ ಶುದ್ಧವಾಗುವುದು. ಈ ಎರಡು ಬಗೆಯ ಆಹಾರ ಪದಾರ್ಥಗಳೂ ಸಹಜವಾಗಿ ಹಲ್ಲುಗಳನ್ನು ಶುದ್ಧಿಪಡಿಸತಕ್ಕವುಗಳಾದುದರಿಂದ ನಾವು ಪ್ರತ್ಯೇಕವಾಗಿ ಬೇರೆ ಉಪಕರಣಗಳಿಂದ ಹಲ್ಲನ್ನು ಶುದ್ಧಿ ಮಾಡಬೇಕಾದ ಅವಶ್ಯವು ಕೂಡ ತಪ್ಪುವುದು.

ಆ. ಚಂದ್ರಿಕೆ. ಗುಡ್ ಹೆಲ್ತ್.

ಹಿಂದುಸ್ಥಾನಿ ಸೇವಾದಲ.

ಚೀನಾದೇಶದ ರಾಷ್ಟ್ರೀಯ ಸೈನ್ಯದ ಅಭಿನಂದನೆಯು.

ಹಿಂದೂಸ್ಥಾನಿ ಸೇವಾದಲದ ಕಾರ್ಯದರ್ಶಿಗಳಾದ ಡಾ. ಹರ್ಡಿಕರವರು ಹುಬ್ಬಳ್ಳಿಯಿಂದ ಚೀನ ದೇಶದ ದಕ್ಷಿಣ ಸೈನ್ಯಾಧಿಪತಿಗಳಾದ ಜನರಲ್ ಸೇಂಗ್ ಇವರಿಗೆ ಪೆಕಿಂಗ್ ಪಟ್ಟಣದ ವಿಳಾಸಕ್ಕೆ ಈ ಕೆಳಗಿನ ತಂತಿಯನ್ನು ಕಳುಹಿಸಿದ್ದಾರೆ.

"ಹಿಂದೂಸ್ಥಾನದೊಳಗಿನ ಸ್ವಾತಂತ್ರ್ಯ ಪ್ರೇಮಿಗಳಾದ ತರುಣರು ನಿಮ್ಮ ವಿಜಯದ ವಾರ್ತೆಯನ್ನು ಕೇಳಿ ಸಂತೋಷಭರಿತರಾಗಿದ್ದಾರೆ.

ಹಿಂದುಸ್ಥಾನಿ ಸೇವಾದಲ"

ಚೀನಾದ ರಾಷ್ಟ್ರೀಯ ಸೈನ್ಯದ ಸಹಾಯಾರ್ಥವಾಗಿಯೇ ಹೋದ ವರ್ಷ ಸೇವಾದಲವು ಒಂದು ಶುಶ್ರೂಷಾ ಪಥಕವನ್ನು ಕಳುಹಿಸಲು ನಿಶ್ಚೈಸಿ ಅದರ ವಿಷಯವಾಗಿ ಎಲ್ಲ ಸಿದ್ಧತೆಗಳನ್ನು ಮಾಡಿತ್ತು. ಆದರೆ ಈ ಕಾರ್ಯವು ಯಾವ ರೀತಿಯಿಂದಲೂ ಆಕ್ಷೇಪಾರ್ಹವಾಗಿಲ್ಲದಿದ್ದರೂ ಸರ್ಕಾರವು ಅದನ್ನು ಮಾಡಗೊಡಲಿಲ್ಲ. ಸದ್ಯದ ತಂತಿಯನ್ನು ಕಳುಹಿಸುವುದರ ಉದ್ದೇಶವು ಚೀನದ ರಾಷ್ಟ್ರೀಯ ಸೈನ್ಯದ ಬಗ್ಗೆ ಸೇವಾದಲವು ಸಹಾನುಭೂತಿಯನ್ನು ವ್ಯಕ್ತಪಡಿಸುವುದೇ ಆಗಿರುತ್ತದೆ.

ಪಂಡಿತ ಜವಾಹಿರಲಾಲ ನೆಹರು ಇವರ ಕರ್ನಾಟಕದೊಳಗಿನ ಪ್ರವಾಸ.

ಹಿಂದುಸ್ಥಾನೀ ಸೇವಾದಲದ ಅಧ್ಯಕ್ಷರೂ, ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳೂ ಆದ ಪಂಡಿತ ಜವಾಹಿರಲಾಲ ನೆಹರು ಇವರಿಗೆ ಕರ್ನಾಟಕದಲ್ಲಿ ಒಮ್ಮೆ ಪ್ರವಾಸ ಮಾಡಲು ಕರ್ನಾಟಕದಲದ ಕಾರ್ಯದರ್ಶಿಗಳಾದ ಡಾ. ಹರ್ಡೀಕರರು ವಿನಂತಿ ಮಾಡಿಕೊಂಡಿದ್ದರು. ಪಂಡಿತ ಜವಾಹಿರರು ಕೇರಳಪ್ರಾಂತೀಕ ಪರಿಷತ್ತಿಗೆ ಅಧ್ಯಕ್ಷರಾಗಿ ಹೋಗಬೇಕಾದುದು ಇದ್ದುದರಿಂದ ಅದೇ ಕಾಲದಲ್ಲಿ ಎರಡು ಕೆಲಸಗಳನ್ನೂ ತೀರಿಸಬೇಕೆಂದು ನಿಶ್ಚಯಿಸಿಕೊಂಡು ಬಂದಿದ್ದರು. ಅವರು ಕರ್ನಾಟಕ ದಲದವರ ಸಹಾಯದಿಂದ ಕರ್ನಾಟಕ ಪ್ರಾಂತದಲ್ಲಿ ಅಡ್ಡಾಡಿ ಮಾಡಿದ ಕಾರ್ಯದ ವರದಿಯು ಮುಂದೆ ಬರದಂತೆ ಇರುತ್ತದೆ. ಡಾ. ಹರ್ಡೀಕರರು ಪ್ರತಿಯೊಂದು ಸ್ಥಳಕ್ಕೂ ಅವರೊಡನೆ ಹೋಗಿದ್ದರು.

ಪಂಡಿತ ಜವಾಹಿರಲಾಲರು ಕರ್ನಾಟಕದಲ್ಲಿಯ ಧಾರವಾಡ, ಬಿಜಾಪುರ, ಶಿವಮೊಗ್ಗೆ ಮತ್ತು ಮಂಗಳೂರು ಇವೇ ೪ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದರು. ಅವರು ಪ್ರವಾಸ ಮಾಡಿದ ಪ್ರತಿಯೊಂದು ಊರ ಹೆಸರನ್ನು ಹೇಳಬೇಕೆಂದರೆ—ಧಾರವಾಡ ಜಿಲ್ಲೆಯಲ್ಲಿ—ಧಾರವಾಡ, ಹುಬ್ಬಳ್ಳಿ, ಗದಗ, ಅಣ್ಣಿಗೇರಿ, ಬಿಜಾಪುರ ಜಿಲ್ಲೆಯಲ್ಲಿ—ಬಾಗಲಕೋಟೆ, ಬಿಜಾಪುರ, ಶಿವಮೊಗ್ಗೆ ಜಿಲ್ಲೆಯಲ್ಲಿ—ತೀರ್ಥಹಳ್ಳಿ, ನಾಲೂರು, ಆಗುಂಬೆ, ಶಿವಮೊಗ್ಗೆ, ಮಂಗಳೂರು ಜಿಲ್ಲೆಯಲ್ಲಿ—ಮಂಗಳೂರು, ಮೂಡಬಿದ್ರಿ, ಉಡುಪಿ ಇದಲ್ಲದೆ ಸೊಲ್ಲಾಪುರಕ್ಕೂ ಹೋಗಿದ್ದರು.

ಅವರ ಈ ಪ್ರವಾಸದಲ್ಲಿ ನಡೆದ ಕಾರ್ಯಗಳೊಳಗೆ ಮುಖ್ಯವಾದವುಗಳನ್ನು ಇಲ್ಲಿ ಕೊಡುತ್ತೇವೆ. ಪ್ರತಿಯೊಂದು ಕಡೆಗೂ ವ್ಯಾಖ್ಯಾನಗಳನ್ನು ಕೊಟ್ಟರು. ಪ್ರತಿಯೊಂದು ವ್ಯಾಖ್ಯಾನದಲ್ಲಿ ಹಿಂದುಸ್ಥಾನೀ ಸೇವಾದಲದ ಕಾರ್ಯದ ಮಹತ್ವವನ್ನು ವರ್ಣಿಸಿ ಹೇಳಿದರು. ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಸ್ವಾಮಿ ಶ್ರದ್ಧಾನಂದರ ಭಾವಪಟದ ಅನಾವರಣ ಸಮಾರಂಭವು ಅವರ ಕೈಯಿಂದಲೇ ನಡೆಯಿತು. ಹಿಂದುಸ್ಥಾನೀ ಸೇವಾದಲದ ಬಾಗಲಕೋಟೆಯ ವ್ಯಾಯಾಮ ಪೀಠದ ಕಟ್ಟಡದ ಸಹಾಯಾರ್ಥವಾಗಿ ಕೊಟ್ಟ ಶ್ರೀ ವೆಂಕೋಬರಾಯ ಶಿರಹಟ್ಟಿ ಇವರ ನಾಟಕಕ್ಕೆ ಅಧ್ಯಕ್ಷರಾಗಿದ್ದರು. ತೀರ್ಥಹಳ್ಳಿಯ ದಲದ ಶಿಬಿರದಲ್ಲಿ ಶಿಕ್ಷಣಹೊಂದಿದ ಸ್ವಯಂ ಸೇವಕರ ಲಾಠೀ ಮೊದಲಾದ ಆಟಗಳನ್ನು ನೋಡಿ ಆನಂದಪಟ್ಟರು. ಬಾಗಲಕೋಟೆಯಲ್ಲಿ ಅವರಿಗೆ ಒಳ್ಳೇ ಸತ್ಕಾರವಾಯಿತು. ಅಲ್ಲಿ ಕಟ್ಟಲ್ಪಡುತ್ತಿರುವ ದಲದ ಕಟ್ಟಡವನ್ನು ನೋಡಿ ಅದರ ಬಗ್ಗೆ ತಮ್ಮ ಸೂಚನೆಗಳನ್ನು ಹೇಳಿದರು. ಪಂಡಿತ ಜೀಯವರಿಗೆ ಬಾಗಲಕೋಟೆಯಲ್ಲಿ ನಾಗರೀಕ ಸಮಿತಿಯಿಂದ ಮಾನಪತ್ರವು ಸಮರ್ಪಿಸಲ್ಪಟ್ಟಿತು. ಬಿಜಾಪುರದಲ್ಲಿ ಅವರಿಗೆ ಇತಿಹಾಸಿಕ ಕಟ್ಟಡಗಳು ತೋರಿಸಲ್ಪಟ್ಟವು.

ಈ ರೀತಿಯಿಂದ ಕರ್ನಾಟಕ ದಲವು ಅಖಿಲ ಭಾರತೀಯ ತರುಣರ ಮುಂದಾಳುವಾದ ಕುಂ ಜವಾಹಿರಲಾಲ ನೆಹರು ಇವರನ್ನು ಕರ್ನಾಟಕದಲ್ಲಿ ತಿರುಗಾಡಿಸಿ ಕನ್ನಡಿಗರಲ್ಲಿ ಜಾಗ್ರತೆಯನ್ನುಂಟುಮಾಡುವ ಕಾರ್ಯವನ್ನು ಮಾಡಿದೆ. ಇದೇ ಪ್ರಕಾರ ಇನ್ನು ಮುಂದಾದರೂ ಬೇರೆ ಬೇರೆ ಅಖಿಲ ಭಾರತೀಯ ಮುಂದಾಳುಗಳನ್ನು ಕರ್ನಾಟಕಕ್ಕೆ ಕರೆದುಕೊಂಡು ಬರಬೇಕೆಂದು ನಿಶ್ಚಯವಾಗಿದೆ.

ಮೇಲೆ ಬರೆದ ಪ್ರವಾಸದಿಂದ ಪ. ಜವಾಹಿರಲಾಲರ ಮನಸ್ಸಿನ ಮೇಲೆ ಯಾವ ತರಹದ ಪರಿಣಾಮವಾಗಿದೆಂಬುದು ಅವರು ಹಿಂದುಸ್ಥಾನದೊಳಗಿನ ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಗಳಿಗೆ ಬರೆದ ಕೆಳಗಿನ ಪತ್ರದ ಮೇಲಿಂದ ತಿಳಿಯುವಂತಿದೆ.

"ಎಲ್ಲ ಪ್ರಾಂತಿಕ ಕಮಿಟಿಗಳ ಕಾರ್ಯದರ್ಶಿಗಳಿಗೆ,— ನನಗೆ ಮೊನ್ನೆ ಮೊನ್ನೆ ಕರ್ನಾಟಕ ಪ್ರಾಂತಕ್ಕೆ ಭೇಟಿ ಕೊಡುವ ಮತ್ತು ಹಿಂದುಸ್ಥಾನೀ ಸೇವಾದಲವೆಂಬ ಸಂಸ್ಥೆಯನ್ನು ನೋಡುವ ಸುಪ್ರಸಂಗ ಒದಗಿತು. ನಾನು ಸೇವಾದಲದ ಒಂದು ಶಿಕ್ಷಣ ಶಿಬಿರವನ್ನು ಮತ್ತು ಬಾಗಲಕೋಟೆಯಲ್ಲಿ ಕಟ್ಟಲ್ಪಡುತ್ತಿರುವ ವ್ಯಾಯಾಮ ವಿದ್ಯಾಪೀಠವನ್ನು ನೋಡಿದೆನು. ಇವೆಲ್ಲವುಗಳನ್ನೂ ನೋಡುವುದರಿಂದ ನನ್ನ ಮನಸಿನ ಮೇಲೆ ಒಳ್ಳೇ ಪರಿಣಾಮವಾಯಿತು. ಹಿಂದುಸ್ಥಾನೀ ಸೇವಾದಲದ ವತಿಯಿಂದ ಶಿಕ್ಷಣ ಹೊಂದಿದ ಅನುವಾದಷ್ಟು ಆದರ ಮೇಲ್ಪಟ್ಟ ಹುಡುಗರು ಶಿಸ್ತಿನ ಮೂರ್ತಿಗಳೇ ಆಗಿದ್ದಂತೆ ಕಂಡರು. ಮತ್ತು ಅವರು ಸೇವಾದಲಕ್ಕೆ ನಿಜವಾಗಿಯೂ ಕೀರ್ತಿಯನ್ನು ಕೊಡುವಂತವರಾಗಿದ್ದರು. ಇಂತಹ ಶಿಬಿರಗಳನ್ನು ಇನ್ನೂ ದೇಶದಲ್ಲೆಲ್ಲಾ ತೆರೆದರೆ ಶಿಸ್ತಿನ ಮತ್ತು ಸುಶಿಕ್ಷಿತ ತರುಣರನ್ನು ಲಕ್ಷೋಪಲಕ್ಷವಾಗಿ ಕಾಣಬಹುದೆಂಬ ನನ್ನ ವಿಚಾರವನ್ನು ವ್ಯಕ್ತಮಾಡದೆ ಇರಲು ನನ್ನಿಂದಾಗಲಿಲ್ಲ.

ಸೇವಾದಲವು ರಾಷ್ಟ್ರೀಯ ಸಭೆಯು (ಕಾಂಗ್ರೆಸ್) ಕಾರ್ಯದಲ್ಲಿ ವಿಶೇಷವಃ ಸಭಾಸದರನ್ನು ಕೂಡಿಸುವದರಲ್ಲಿ ಅತಿಶಯವಾಗಿ ಸಹಾಯ ಮಾಡಿದೆ. ಇಡೀ ಹಿಂದುಸ್ಥಾನದೊಳಗಿನ ತರುಣರಿಗೆ ಶಾರೀರಿಕ ಮತ್ತು ರಾಷ್ಟ್ರೀಯ ಶಿಕ್ಷಣವನ್ನು ಕೊಡಲು ಸೌಕರ್ಯವನ್ನುಂಟುಮಾಡಲಿಕ್ಕಾಗಿ ಸೇವಾದಲವು ಬಾಗಲಕೋಟೆಯಲ್ಲಿ ಒಂದು ವ್ಯಾಯಾಮ ವಿದ್ಯಾಪೀಠವನ್ನು ಸ್ಥಾಪಿಸುವದಿದೆ. ಈ ವಿದ್ಯಾಪೀಠದ ಪ್ರಾರಂಭೋತ್ಸವವು ೧೯೨೮ನೇ ಇಸವಿ ಆಗಸ್ಟ ೧ನೇ ತಾರೀಕಿನ ದಿವಸ ನಡೆಯುವದೆಂದೂ ಆ ಕಾಲಕ್ಕೆ ಎಲ್ಲಾ ಕಾಂಗ್ರೆಸ್ ಕಮಿಟಿಗಳ ಪ್ರತಿನಿಧಿಗಳು ಕರೆಯಲ್ಪಡುವರೆಂದೂ ಸೇವಾದಲದ ಕಾರ್ಯದರ್ಶಿಗಳು ನನಗೆ ಹೇಳಿದರು. ಈ ಉತ್ಸವದ ಕಾಲಕ್ಕೆ ಸೇವಾದಲದ ಶಿಕ್ಷಣವನ್ನು ಹೊಂದಿದ ತರುಣರ ಸಮ್ಮೇಳನವಾಗುವದೆಂದೂ ಹೇಳಿದರು.

ಸೇವಾದಲವು ದೇಶದ ಬೇರೆ ಬೇರೆ ಭಾಗಗಳಲ್ಲಿ ಶಿಕ್ಷಣದ ಕೇಂದ್ರಗಳನ್ನು ಸ್ಥಾಪಿಸಿದಲ್ಲಿ ಹಲಕೆಲವು ತರುಣರಿಗೆ ಶಿಕ್ಷಣ ಕೊಡಬಹುದು. ಮತ್ತು ಕೊಟ್ಟ ಅವರಿಂದಲೇ ಬೇರೆ ಪ್ರಾಂತಗಳಲ್ಲಿ ಶಿಕ್ಷಣದ ಕಾರ್ಯವನ್ನು ನಡೆಯಿಸಬೇಕಾಗುವದು. ಈ ಕಾರ್ಯವನ್ನು ಪ್ರಾಂತಿಕ ಸಭೆಗಳು ಕೈಯಲ್ಲಿ ತೆಗೆದುಕೊಂಡರೆ ಪ್ರಾಂತಿಕ ಸ್ವಯಂಸೇವಕ ಮಂಡಲದ್ವಾರಾ ಅಥವಾ ಸೇವಾದಲದ ಮುಖ್ಯ ಕಚೇರಿದ್ವಾರಾ ಬೇಕಾದಷ್ಟು ಜನರು ಶಿಕ್ಷಣ ಹೊಂದುವರು.

ಆದ್ದರಿಂದ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಸೇವಾದಲದ ಕಾರ್ಯದ ಲಾಭವನ್ನು ಪಡೆದು ಪ್ರತಿಯೊಂದು ಪ್ರಾಂತದಲ್ಲಿಯೂ 'ಶಿಸ್ತ ಕಮಿಟಿ ಮತ್ತು ಸುಶಿಕ್ಷಿತ ಸ್ವಯಂಸೇವಕರ ಗುಂಪುಗಳನ್ನು ಸಿದ್ಧಗೊಳಿಸುವರೆಂದು ನಾನು ನಂಬುತ್ತೇನೆ.

ಜವಾಹಿರಲಾಲ ನೆಹರು,
ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ,
ಕಾರ್ಯದರ್ಶಿ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ವಿದ್ಯಾಭಿವೃದ್ಧಿ ಸಂಘ.

ಮಹನೀಯರೇ,

ಈ ಸಂಘದ ತಾ. 1—6—28ರಲ್ಲು ನಡೆದ ಕಮಿಟಿ ಮೀಟಿಂಗಿನ ಪ್ರೊಸಿಡಿಂಗ್ಸಿಗೆ ಅನುಸಾರವಾಗಿ ತಾ. 3—6—28ರಲ್ಲು ಮಡಿಕೇರಿಯಲ್ಲಿ ತಮ್ಮ ಮಗಳು ಸೀತಮ್ಮನವರ ವಿವಾಹವನ್ನು ನಡೆಸಿದ ಮೆ. ಕೊಂಗಂಡ ಅಪ್ಪಯ್ಯನವರು ಈ ವಿವಾಹದ ಸಮ್ಮಂಧವಾಗಿ 10/ರೂಪಾಯಿಗಳನ್ನು ಈ ಸಂಘಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ. ಇದಕ್ಕಾಗಿ ಈ ಸಂಘದ ಪರವಾಗಿ ವಂದಿಸುತ್ತೇನೆ.

ಇವರಂತೆ ಇತರ ಮಹನೀಯರು ಮೇಲಣ ರೀತಿ ಈ ಸಂಘವನ್ನು ಪ್ರೋತ್ಸಾಹಿಸಿ ಅದನ್ನು ಉನ್ನತ ಸ್ಥಿತಿಗೆ ತರುವಂತೆ ಸಹಾನುಭೂತಿಗಳಾಗಬೇಕಾಗಿ ಕೇಳಿಕೊಳ್ಳುತ್ತೇನೆ.

ತಾ. 13—6—28. ಬಿ. ಡಿ. ಕುಟ್ಟಪ್ಪ,
ಗೌರವ ಕಾರ್ಯದರ್ಶಿ.

ವೀರಾಜಪೇಟೆ—ಕುಟ್ಟ ಬಸ್ಸ್ ಸರ್ವಿಸ್.

ಅಯ್ಯಾ,

ವೀರಾಜಪೇಟೆ—ಕುಟ್ಟಕ್ಕೆ ಇಟ್ಟಿರುವ ಬಸ್ಸ್ ಸರ್ವಿಸುಗಳ ಮೂಲಕ ರೈತರಾದ ನಾವು ಅನುಭವಿಸುತ್ತಿರುವ ಅನುಕೂಲಕ್ಕೆ ಸರ್ಕಾರಕ್ಕೂ, ಸರ್ವಿಸಿನವರಿಗೂ ಎಲ್ಲರ ವಂದನೆ ಇದೆ. ಆದರೆ ಘನ ಸರ್ಕಾರವು ತಮ್ಮ ಚಿತ್ತಕ್ಕೆ ತಂದು ಇವುಗಳಲ್ಲಿ ಸ್ವಲ್ಪ ಮಾರ್ಪಾಡು ಮಾಡಿದ್ದೇ ಆದರೆ ರೈತರಾದ ನಾವು ತುಂಬಾ ಕೃತಜ್ಞರಾಗುವೆವು.

(1) ವೀರಾಜಪೇಟೆಯಿಂದ 4 ಗಂಟೆಗೆ ಹೊರಟು ಪುದಿಕೇರಿಯಲ್ಲಿ ನಿಲ್ಲುವ ಶ್ರೀ. ಸತ್ಯನಾರಾಯಣ ಸರ್ವಿಸ್ ಬಾಪ್ತು ಬಸ್ಸನ್ನು ಸ್ವಲ್ಪ ಮುಂದರಿಸಿ ಶ್ರೀಮಂಗಲದಲ್ಲು ನಿಲ್ಲುವಂತೆಯೂ, ಅದು ತಿರುಗಿ ಮರಣೆ ದಿನ ಹೊತಾರೆ 6 ಗಂಟೆಗೆ ವಾಪಸು ಹೊರಟು ವೀರಾಜಪೇಟೆಗೆ 8½ ಗಂಟೆಗೆ ತಲಪುವಂತೆಯೂ ಮಾಡಿದರೆ ಕೋರ್ಟು ಕೆಲಸದವರಿಗೆ ತುಂಬಾ ಅನುಕೂಲವಾಗುವದು.

(2) ಕುಟ್ಟದಿಂದ ಹೊರಡುವ ಎರಡು ಬಸ್ಸುಗಳು ಬೆಳಿಗ್ಗೆ 6½ ಗಂಟೆ ಒಳಗೆ ಹೊರಡುವದು ತುಂಬಾ ಕಷ್ಟವಾಗಿದೆ. ಯಾಕಂದರೆ—ಕುಟ್ಟವು ಪಟ್ಟಣವಲ್ಲ, ಬಿಸಿ ನೀರು ಸಹ ಸಿಕ್ಕದ ಸ್ಥಳವಾಗಿದೆ. ಬಸ್ಸು ಹಿಡಿಯಲಿಕ್ಕೆ 10 ಮೈಲು ದೂರದಿಂದ ಸಹ ಜನರು ಹೊರಟು ಹೋಗಬೇಕಾಗಿದೆ. ಅನೇಕ ಸಲ ಬಸ್ಸು ಸಿಕ್ಕದೆ ಅನ್ನ ಆಹಾರವಿಲ್ಲದೆ ಸಾಯಂಕಾಲ ಹೊಂಡುವ 3 ಗಂಟೆಯ ಬಸ್ಸಿಗೆ ಹೊಟ್ಟೆಯನ್ನು ಕಟ್ಟಿಕೊಂಡು ಕಾಯಬೇಕಾಗುತ್ತೆ. ಸಮಯ ತಪ್ಪಿ ಕೆಲಸ ಹಾಳಾಗುತ್ತೆ. ವಾಪಸು ಬಂದು ಮನೆ ಸೇರಲಿಕ್ಕಾಗುವದಿಲ್ಲ. ಆದ್ದರಿಂದ ಸರ್ಕಾರವು ರೈತರ ಮೇಲೆ ಕರುಣವಿಟ್ಟು ಒಂದು ಬಸ್ಸನ್ನು ಎಂದಿನಂತೆಯೂ, ಎರಡನೇ ಹೊರಡುವ ಬಸ್ಸನ್ನು 7½ ಗಂಟೆಗೆ ಹೊರಡುವಂತೆಯೂ ಏರ್ಪಡಿಸಿದರೆ ಹತ್ತಿರ ಇರುವವರಿಗೆ ಒಂದನೇ ಬಸ್ಸೂ, ದೂರದವರಿಗೆ ಎರಡನೇ ಬಸ್ಸು ಅನುಕೂಲವಾಗಿ ಸಿಕ್ಕುತ್ತೆ. ಈ ಸ್ವಲ್ಪ ಕೊರತೆಯನ್ನು ಹಳೆ ಸತ್ಯ ನಾರಾಯಣ ಸರ್ವಿಸಿನವರು ಸಹಿಸಿಯಾರೆಂದು ನಂಬುತ್ತೇನೆ. ಈ ಉದ್ದಿಶ್ಯ ನೆರವೇರಿಸಿದರೆ ಸರ್ಕಾರಕ್ಕೆ ನಾವುಗಳೆಲ್ಲರೂ ಧನ್ಯರಾಗುತ್ತೇವೆ.

"ಎಷ್ಟೋ ಸೋತ ರೈತ"

ಸ್ತ್ರೀ ವಿದ್ಯಾಭ್ಯಾಸ.

ಮಹನೀಯರೇ,

ನನನೆ ಸಮೀಪದಲ್ಲಿರುವ ಬಾಲಕೀಯರ ಶಾಲೆಯಲ್ಲಿನ ಒಂದೆರಡು ಉಪಾಧ್ಯಾಯಿನಿಯರು ಅಲ್ಲಿಯ ಮಕ್ಕಳಿಗೆ ಕಲಿಸುವ ವಿದ್ಯೆಯನ್ನು ನಾನು ತಿಳಿದು ಬಂದಲ್ಲು ನನಗೆ ಬಹಳ ವ್ಯಸನವಾಗಿದೆ. ಯೋಚನೆ ಮಾಡಿದಲ್ಲು ಇದೆಲ್ಲ ನಮ್ಮ ಊರವರ ದುರಾದೃಷ್ಟವೆಂದೇ ನಂಬಬೇಕು. ಇತ್ತೀಚೆಗೆ ಕೆಲವು ಬಾಲಕರ ಶಾಲೆಯಲ್ಲಿಯೂ ಸಹ ನಾಶವು ನೆರೆಯಾಗಿ

ನಡೆಯುವುದಿಲ್ಲವೆಂದು ತಿಳಿಯ ಬಂದರೂ ಇಂಥ ಶೋಚನೀಯಕರವಾದ ಸಂಗತಿಯೊಂದೂ ಅಲ್ಲಿ ಕಂಡು ಬಂದಿರುವುದಿಲ್ಲ. ಆದರೆ ಈ ಸಂಗತಿಯು ಒಪಕಪದ್ದರೂ ಅದನ್ನು ಒರವ ಸಂಚಿಕೆಗೆ ಇಟ್ಟಿರುವೆನು. ಈಗ ನನಗೆ ತಿಳಿದು ಬಂದ ಬೇರೆರಡು ಸಂಗತಿಗಳನ್ನು ಇಲ್ಲಿ ಸೂಚಿಸ ಬೇಕೆಂದಿರುವೆನು.

ಸಂಗತಿ ಬೇರೆಯೇನೂ ಅಲ್ಲ. ಈ ಬಾಲಿಕೆಯರ ಶಾಲೆಯಲ್ಲಿನ ಒಬ್ಬೊಬ್ಬ ಉಪಾಧ್ಯಾಯಿನಿಯರು ಅಲ್ಲಿಯ ಬಾಲಿಕೆಯರಿಗೆ ದೊಡ್ಡ ಸ್ಥಿತಿಕೆಯನ್ನು ಕಲಿಸುತ್ತಿರುವರೆಂದು ವರ್ತಮಾನ. ಚಿಕ್ಕ ಮಕ್ಕಳ ಮನಸ್ಸಿಗೆ ಹೇಳಿದ್ದು ಬಹು ಬೇಗನೆ ಹೊಕ್ಕುತ್ತದೆಂಬ ಸಂಗತಿಯು ಎಲ್ಲರಿಗೂ ತಿಳಿದದ್ದಾಗಿರುವುದು. ಇಲ್ಲಿಯ ಉಪಾಧ್ಯಾಯಿನಿಯರು ಅವರಿಗೆ ಕಲಿಸುವ ಪಾಠದ ಕ್ರಮ ಯಾವುದೆಂದರೆ —"ಯಾವಾಗಲೂ ಮೈಯ್ಯನ್ನು ಸನ್‌ಲೈಟ್ ಸೋಪಿನಿಂದ ತೊಳೆಯಬೇಕು, ಊಟಮಾಡುವಾಗ ಕೈಯ್ಯನ್ನು ಸಾಬೂನಿನಿಂದ ತೊಳೆಯಬೇಕು, ಹಲ್ಲು ಯಾವಾಗಲೂ ಬ್ರಷಿನಿಂದ ಉಜ್ಜಬೇಕು, ಊಟಮಾಡಿದ ಒಟ್ಟಲನ್ನು ಸೋಪಿನಲ್ಲಿ ತೊಳೆಯಬೇಕು, ಸ್ವಲ್ಪ ಹರಿದುಹೋದ ಬಟ್ಟೆಯನ್ನು ಹಾಕಿಕೊಳ್ಳಬಾರದು." ಈ ರೀತಿ ಮಹಾಶಯರೇ! ಇದು ಯಾತರಗುಣ? ಈ ರೀತಿ ಪಾಠ ಬೋಧಿಸುವ ಉಪಾಧ್ಯಾಯಿನೀಯರು ಕಲಿತ ವಿದ್ಯೆಯ ಗುಣವಲ್ಲವೇ? ಇವರಾದರೋ ಶಾಲೆಯಲ್ಲಿರುವ ಉಪಾಧ್ಯಾಯಿನೀಯರಲ್ಲಿ ಯಾರಾದರೂ ಯಾವಾಗ ರಜ ತೆಗೆಯುವರೆಂದು ಕಾದಿದ್ದು ಅಧಿಕಾರಿಗಳಿಂದ ಒಂದು ಉದ್ಯೋಗವನ್ನು ಪಡೆದು ತಿಂಗಳು ಗಟ್ಲೆ ಹಣ ಸಂಪಾದಿಸಿ ಮೇಲೆ ಹೇಳಿದ ರೀತಿ ಗಸಯಲು ಅನುಕೂಲಸ್ಥರಾಗಿರುವರು. ಅವರಾದರೋ ಎರಡನೆ ತರಗತಿಯಲ್ಲಿ ವಿದ್ಯೆ ಕಲಿತು ನಾಲ್ಕನೇ ತರಗತಿಗೆ ಕಲಿಸುವರು. ಆದರೆ ಗರೀಬರ ಮಕ್ಕಳ ಪಾಡೇನು? ಪೂರ್ವಾತ್ಯರು ಚಿಕ್ಕ ಮಕ್ಕಳಿಗೆ ಸೊಕ್ಕು ವಾಗಿಯೂ, ಚೊಕ್ಕಟವಾಗಿಯೂ ಇರಲು ಕಲಿಸಿ ಅವರನ್ನು ಅವರವರ ಸ್ಥಿತಿಗೆ ಸರಿಯಾಗಿರುವಂತೆ ಕಲಿಸುವುದುಂಟೆ, ಅವರನ್ನು ಈಗಲೇ ಶೋಕಿ ಮಾಡುವಂತೆ ಮಾಡುವುದರಿಂದ ಮುಂದೆ ಮಾಡಿದರೆ ದೇಶದ ಅಭಿವೃದ್ಧಿಗೆ ಕುಂದುಂಟಾಗುವುದು. ಎರಡನೆ ತರಗತಿ ಓದಿ ಇವರು ಈ ತರಹದ ವಿದ್ಯೆಯನ್ನು ಕಲಿಸಿದರೆ ಮೂರನೆಯ ತರಗತಿಯಲ್ಲಿ ಓದಿದ್ದರೆ ಇವರು ಯಾವ ತರಹ ವಿದ್ಯೆಯನ್ನು ಕಲಿಸುತ್ತಿದ್ದರು? 'ಹಣ ಬದಲಾವಣೆಗೆ ಇಂಗ್ಲೆಂಡಿಗೆ ಹೋಗಬೇಕೆಂದು' ಇವರು ಕಲಿಸುತ್ತಿರಲಿಲ್ಲವೇ? ಉಪಾಧ್ಯಾಯಿನೀಯರೇ! ದಯವಿಟ್ಟು ಈ ವಿದ್ಯೆಯನ್ನು ಬಿಡಿ. ನಿಮ್ಮ ಮತ್ತು ನಿಮ್ಮ ದೇಶದ ಸ್ಥಿತಿಗೆ ಸರಿಯಾಗಿ ಮುಂದಿನ ಅಭಿವೃದ್ಧಿಯನ್ನು ಹೊಂದುವಂತೆ ನಿಮ್ಮ ಕರ್ತವ್ಯವನ್ನು ಮಾಡಿದಲ್ಲಿ ನಿಮ್ಮ ಕಲಸವು ಸಾರ್ಥಕವಾಗುವುದಲ್ಲದೆ. ಈಗಲೇ ತಿಳಿದರೆ, ತಿಳಿಯದಿದ್ದರೆ, ಇಂಗ್ಲಿಷಿನವರ ನಡತೆಯನ್ನು ಅಭಿನಯಿಸಿದರೆ 'ಎರಡು ಪೇಪರನ್ನು ನಂಬಿ ಕೂಡದ ದಾಸಿ ಕೆಟ್ಟ' ಎಂಬಂತಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಪಿ ಯಂ ?

Arms, Ammunition and Shooting Requisites !!!



19.8 Illustrated Catalogue Just Issued Free on Application.

D. B B. L Rifles	Rs	120	to	Rs	2750.
S B. B. L. "	"	35	to	"	950.
D. B B L Guns	"	50	to	"	1350
S B B L. "	"	35	to	"	275
D B M L "	"	45	to	"	135
S B M. L "	"	30	to	"	80.
B. L Revolvers	"	35	to	"	350
Antomatic Pistols	"	30	to	"	150

Brilliant Search Light Lamp For Shooting, Camping, Fishing and All such other Night Sports and work Rs 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—12 **210 Abdul Rehman Street, BOMBAY.**

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಬರಾಬರು ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರದ್ದೇ ಆಗಿರುವುದು ?



ವಾಚಿಗೆ ... ಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ. 6—8—0

ಬೆಸ್ಟ್ ಫೌಂಟನ್ ಪೆನ್.

... ಈ ಪೆನ್ನನ್ನು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ ಬಂಗಾರದಂಥ ನಿಬ್ಬು ಹಾಕಿದೆ. ಈ ಪೆನ್ನನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಂ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೆನ್ 1ಕ್ಕೆ 2 ...

ವಿಕ್ಟೋರಿಯಾ ... ವಾಚ್ ಕಂಪೆನಿ.

52—5 ಪೋ. ಬಾಕ್ಸ್ ನಂ 243, ಮದರಾಸು

ಡಿ. ಬಿ. ಬಿ. ಯಲ್. ಕೋವಿಗಳು ರೂ 75 ರಿಂದ ರೂ. 450/
ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ 250/.
ಯಸ್. ಬಿ. ಯಮ್. ಯಲ್. ಕೋವಿಗಳು ರೂ. 35 ರಿಂದ 65
ರಿವಾಲ್ವರ್‌ಗಳು. ರೂ. 40/ರಿಂದ ರೂ 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ಕೋವಿಗಳನ್ನು ಕೇಳ್ವ ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (...ವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ... ದರದಲ್ಲಿ ಒದಗಿಸಿ ಕೊಡಲಾಗುವುದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳ ... ವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಮೆಸರ್ಸ್. ವಿ. ರಾಮಸ್ವಾಮಿ ಶೆಟ್ಟಿ ... ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ... ಕಂಪೆನಿ.

24—3 12. ಬ್ರಾಡ್ವೇ ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಅವಶ್ಯವು.)

ಎಂ.ಎಸ್.ಶಿವಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.

'ದಿಲ್ ಬಹಾರ್' ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
ಶಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
ಮೋಹನ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
ಪ್ರೇಮ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
ಮಹಾರಾಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ ಬಂಗಾರದ ನಿಬ್ಬುಳ್ಳ ಫೌಂಟನ್ ಪೆನ್ನುಗಳು.

ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ	3—8—0 ಮತ್ತು 3—12—0
ಸರ್ವಿಸ್ ವಂಡರ್ ಫೌಂಟನ್ ಪೆನ್ 1ಕ್ಕೆ	3—0—0 ಮತ್ತು 3—8—0
ಕಾನ್ವಾಕ್ಲಿನ್ ... ಫೌಂಟನ್ ಪೆನ್ 1ಕ್ಕೆ	?—8—0
ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ	8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ	12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸುಗಳು

ಫ್ರೆಂಚ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	?—?—0
ವೆಸ್ಟ್‌ಕ್ಲಾಕ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ	8—?—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	?—?—?
ಬಿಗ್ ಬೆನ್ ನಮೂನೆ ಬಲ ಅಲಾರ್ಂ ಟೈಂಪೀಸ್ 1ಕ್ಕೆ	6—12—
ಅನ್ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	?— 0

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟ್ಯಾಂಪು ರವಾನಿಸಿ

52-7

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮೆಬಂದ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಕಡದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೇಕಿರ ಅಗ್ಗಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಕಸಂಡ ಮಾಗಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಬಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY, 3
Telegraphic Address:—"SHOOTER" Bombay.

(...) "Please write for our Catalogue 1928—1929.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೊತ್ತ, ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುತ್ತದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದ ಬಿಟ್ಟುವ ಸೋಂಕು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3 6ಕ್ಕೆ ರೂ 1—4—0 3—8—0; 6—12—0.

ರೋಮನಾಶಿನೀ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—6—0

ನಮ್ಮ ಕೆಟಲಾಗು ತರಿಸಿ ನೋಡಿರಿ.
ವಿಳಾಸ.—ಮನೋಲ್ಲಾಸಿನಿ ಕಂಪೆನಿ.
52—37 ೧. ಮಂಗಳೂರು.

ಕಳಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.

ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಛಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು.

ಕೇಶವಜಿ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).
12—4 21 ಚೈನಾ ಬಜಾರ್‌ರೋಡ್, ಮದರಾಸು.

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1928ನೇ ಇಸವಿ ಫೆಬ್ರುವರಿ 29ಕ್ಕೆ ಅಖೈರಾದ 5 ವರ್ಷಗಳಲ್ಲಿ ಕಂಪನಿಗೆ ಲಾಭದ ಉತ್ಪತ್ತಿ.

ಹೊಸ ಪಾಲಿಸಿಗಳು ಏರಿವೆ	ರೂ. 1,16,00,000.
ವರಮಾನ ಏರಿದೆ	ರೂ. 54,95,000.
ಕಂಪೆನಿ ಆಸ್ತಿ ಏರಿವೆ	ರೂ. 3,15,84,000.

ಬೇಕಾಗಿವೆ:—ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.

ಹೆಡ್ ಆಫೀಸು.
ಎಂಪಯರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು.
ಕಮರ್ಶಿಯಲ್ ಬೀದಿ ಬೆಂಗಳೂರು.

24—24

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಚ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	—	13545	—	ರೂ.	2,96,42 000.
1926	—	17371	—	ರೂ.	3,91,39,000.
1927	—	21418	—	ರೂ.	4,68,04,075.

— ಪ್ರೀಮಿಯಂ ಉತ್ಪತ್ತಿ —

1925	—	ರೂ.	92,66,000.
1926	—	ರೂ.	1,05,33,000.
1927	—	ರೂ.	1,21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಏರಿದೆ.

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಏರಿದೆ.

ಜೀವವಿಮೆ ಮಾಡಬೇಕೆಂದಿರುವವರು ತಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. 52—10

ಎಲ್. ಆರ್. ಕೃಷ್ಣಸ್ವಾಮಿಯ್ಯರ್, ಬ್ರಾಂಚ್ ಸಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 15.0.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧಾರ್ಯತೇ ವಿದ್ಯಾ ... || ... ||

ವಾರ್ಷಿಕ ಚಂದಾ ... [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ೧೯೨೭ನೇ ಇಸವಿ ಜೂನ್ ತಾರೀಕು ೨೮ ನೇ ಶುಕ್ರವಾರ [ಸಂ. ...]

ESTATE REQUISITES

5 lbs Yates hammer headed mamooties	Rs 3 0 0 Each	Weeding forks @	Rs 1 4 0 Each
4½ „ „ „ „	„ 2 14 0 „	Garden trowel „	Rs 1 [illegible] „
4 „ „ „ „	„ 2 12 0 „	Pick axes „	Rs [illegible] „
Felling axes at Rs 3 0 0 &	„ 3 4 0 „	Bill hooks „	Rs 0 14 0 „
Grubbing mattocks at	„ 3 4 0 „	Digging forks „	Rs 4 0 0 „

MONSOON EQUIPPMENT.

Planter boots	Rs 16 8 0	Dales' dubbin per tin	Rs 0 8 0
Marrs' oil (water proof) per tin	Rs 2 0 0	Umbrellas	Rs 4 8 0

52—22

SPENCER & CO. LTD. General Merchants **MERCARA.**

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES &

Post Box 423,
TRIPLICANE, MADRAS.

Catalogue Free
to Bona fide Enquirers

Rose Water Sprinkler.

Chased Silver Mirror

Manufacture of
HIGH CLASS
GEMSET JEWELS.
a speciality

The special features
of my productions are —
1 Best Quality
2 Latest modern designs
3 Promptest execution
4 Neat & artistic finish
5 Most moderate prices

GOLD
&
SILVER ...
of all description
neatly executed

52—52



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

24—18 ***Bombay, 3.***

[illegible]

[illegible]

[illegible]

12—1

[illegible]

ಕೊಡಗು.

ಸನ್ ೧೯೨೮ ನೇ ಇಸವಿ
ಜೂನ್ ತಾ. ೨೯ ನೇ ಶುಕ್ರವಾರ.

ಸೈಮನ್ ಕಮಿಶನಿನ ವರ್ತನೆಯು ಬದಲಾಗುತ್ತಿದೆಯೋ ?

"ಹಿಂದೀಯರು ಸಹಕರಿಸಲಿ ಅಥವಾ ಬಹಿಷ್ಕರಿಸಲಿ ನಾವು ನಮ್ಮ ಕೆಲಸವನ್ನು ಮಾಡಿಯೇ ಮಾಡುವೆವು" ಎಂದು ನಿರ್ಧಾರವಾಗಿ ಹೇಳಿದ್ದ ಸೈಮನ್ ಕಮಿಷನಿನವರು ಈಗ ತಮ್ಮ ಉಚ್ಚಸ್ಥಾನದಿಂದ ಒಂದು ಮೆಟ್ಟಲು ಕೆಳಗೆ ಇಳಿದಂತೆ ತೋರಿಸಿರುವರು. ಇದರಿಂದ ಅವರ ಅಭಿಪ್ರಾಯದಲ್ಲಿ ಏನಾದರೂ ಬದಲಾವಣೆಯು ಉಂಟಾಗಿದೆಯೋ ಎಂದು ನೋಡಬೇಕಾಗಿದೆಯಷ್ಟೆ. ಕಳೆದ ಮೇ ತಿಂಗಳ 23ರಲ್ಲಿ ಈ ಕಮಿಷನಿನವರು ಲಂಡನಿನಲ್ಲಿ ಸೇರಿ 'ಹಿಂದೀಯರ ಸಹಕಾರವನ್ನು ಸಂಪಾದಿಸುವಂತೆ ಈ ಮೊದಲೇ ಸೂಚಿಸಿರುವ ತಮ್ಮ ಕಾರ್ಯರೀತಿಯಲ್ಲಿ ಬದಲಾವಣೆಯನ್ನು ಮಾಡಲು ಆಗುವದಿಲ್ಲವೆಂಬದನ್ನು ಪ್ರಕಟಿಸುವದು ಉತ್ತಮವೆಂದು ತೀರ್ಮಾನಿಸಿದರು. ಇದಾಗಿ ಒಂದು ತಿಂಗಳಲ್ಲಿಯೇ ತಮ್ಮ ತೀರ್ಮಾನವನ್ನು ಬದಲಾಯಿಸಿರುವದು ಆಶ್ಚರ್ಯವೇ ಸರಿ.

ಹಿಂದೂಸ್ಥಾನದ ಉದ್ದಗಲಕ್ಕೂ ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕೆಂಬ ಚಳವಳವು ಬಲವಾಗಿ ನಡೆಯುತ್ತಿದ್ದು ಅಖಿಲಭಾರತ ನ್ಯಾಯವಿಧಾಯಕ ಸಭೆಯ ಎಸೆಂಬ್ಲಿ ಮತ್ತು ಮದ್ರಾಸು, ಬಂಗಾಳ, ಸಂಯುಕ್ತ ಪ್ರಾಂತ್ಯ, ಮಧ್ಯಪ್ರಾಂತ್ಯ ಮೊದಲಾದ ಹಲವು ಪ್ರಾಂತೀಕ ಕೌನ್ಸಿಲುಗಳೂ ಇವರೊಂದಿಗೆ ಸಹಕರಿಸುವದಿಲ್ಲವೆಂದು ತೀರ್ಮಾನಿಸಿದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ಹಿಂದೂ ಮುಸಲ್ಮಾನರಿಗೆ ಹೆಚ್ಚಿನ ವೈಮನಸ್ಸು ಇರುವ ಪಂಜಾಬಿನ ನ್ಯಾಯವಿಧಾಯಕ ಸಭೆಯಲ್ಲಿ ಬಹುಮತದಿಂದ ಈ ಕಮಿಷನಿನೊಂದಿಗೆ ಸಹಕರಿಸಲು ಒಪ್ಪಿ ಅದಕ್ಕಾಗಿ ಏಳು ಮೆಂಬರುಗಳ ಒಂದು ಕಮಿಟಿಯನ್ನು ಆರಿಸಿದರು. ಈ ಕಮಿಟಿಯವರೂ ಕೂಡ, 'ಜನರ ಅಭಿಪ್ರಾಯ ತೆಗೆದುಕೊಳ್ಳುವ ಮತ್ತು ದಸ್ತಾವೇಜುಗಳನ್ನು ನೋಡುವ ವಿಚಾರದಲ್ಲಿ ತಮಗೂ ರಾಯಲ್ ಕಮಿಷನಿನ ಮೆಂಬರುಗಳಿಗೂ ಸರಿಸಮಾನತ್ವವಿಲ್ಲದೆ ಹೋದರೆ ತಮ್ಮ ಕರ್ತವ್ಯವನ್ನು ಮಾಡಲು ತಮಗೆ ಕಷ್ಟ ಸಾಧ್ಯವಾಗುವದೆಂದು' ಸರ್ವಸಮ್ಮತದಿಂದ ಠರಾವು ಪಾಸುಮಾಡಿ ಅದನ್ನು ಸರ್ ಜಾನ್ ಸೈಮನ್‌ರವರಿಗೆ ಕಳುಹಿಸಿ ಕೊಟ್ಟರು. ಈ ಶರತ್ತುಗಳಿಗೆ ಸೈಮನ್‌ರವರು ಒಪ್ಪಿರುವರೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ವೈಸರಾಯರಿಗೆ ಕಳುಹಿಸಿರುವ ತಂತೀ ವಾರ್ತೆಯು ಪ್ರಕಟವಾಗಿದೆ.

ಈ ಕಮಿಷನನ್ನು ಯಾವ ಸಮಯದಲ್ಲೇ ಆಗಲಿ, ಯಾವ ಕರಾರಿನಲ್ಲೇ ಆಗಲಿ ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ಇಡೀ ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ಚಳವಳದ ಪ್ರಾಬಲ್ಯವೂ ಇತ್ತೀಚೆಗೆ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಸರ್ಕಾರದ ವರ್ತನೆಯ ಮೇಲೆ ಮಾಡುತ್ತಿರುವ ಖಂಡನೆಯೂ, ಎಲ್ಲಾ ದಿಕ್ಕಿಂದಲೂ ಹೆಚ್ಚಾಗಿ ಕಮಿಷನಿನೊಂದಿಗೆ ಸಂಪೂರ್ಣ ಸಹಕರಿಸುವೆವೆಂದು ಹೇಳಿದ್ದ ಪಂಜಾಬಿನ ಕಮಿಟಿಯವರ ಸರ್ವಾನುಮತದ ತೀರ್ಮಾನವು ಸೈಮನರನ್ನು ಗಾಭರಿಗೊಳಿಸಿರಬೇಕೆಂದೂ, ಇದಕ್ಕೆ ಒಪ್ಪದಿದ್ದರೆ ಸಹಕರಿಸುವವರ ಸಂಖ್ಯೆಯು ಬಹಳ ಕಡಿಮೆಯಾಗಬಹುದೆಂಬ ಭಾವನೆಯಿಂದ ಒಂದು ವಿಧದ ಸಮಾನತ್ವದ ಈ ಕರಾರುಗಳಿಗೆ ಅವರು ಒಪ್ಪಿಗೆಯನ್ನಿತ್ತಿರಬೇಕೆಂದೂ ಕೆಲವು ಮುಂದಾಳುಗಳ ಅಭಿಪ್ರಾಯವಾಗಿದೆ. ಈ ರಿಯಾಯಿತಿಯಿಂದ ಬೇರೆ ಎಲ್ಲಾ ನ್ಯಾಯವಿಧಾಯಕ ಸಭೆಗಳು ಕಮಿಷನಿನೊಂದಿಗೆ ಸಹಕರಿಸುವಂತೆ ಮಾಡಿ ಹಿಂದೂದೇಶದ ಬಹಿಷ್ಕಾರ ಚಳವಳದ ಬೆನ್ನೆಲುಬನ್ನು ಮುರಿದು ಹಾಕಲಿಕ್ಕಾಗಿ ತೋರಿಕೆಯ ಸರಿಸಮಾನತ್ವದ ಈ ಕರಾರಿಗೆ ಸೈಮನರು ಒಪ್ಪಿರುವರಾಗಿದೆಯೆಂದು ಇನ್ನು ಕೆಲವರು ಹೇಳುತ್ತಿರುವರು.

ಕಮಿಷನಿನ ಮುಂದೆ ಅಭಿಪ್ರಾಯ ಕೊಡುವಾಗ ಸಾಕ್ಷಿಗಳು ಅಪೇಕ್ಷಿಸಿದರೆ ಗುಟ್ಟಿನಲ್ಲಿ ಅಂದರೆ ಪತ್ರಿಕೆಯ ಪ್ರತಿನಿಧಿಗಳು ಇಲ್ಲದೆ ಅಭಿಪ್ರಾಯ ತೆಗೆದುಕೊಳ್ಳುವ ಸ್ವತಂತ್ರವು ಅಧ್ಯಕ್ಷರಿಗೆ ಇಟ್ಟುಕೊಂಡಿರುವರು. ದೇಶದ ರಾಜಕೀಯ ಸುಧಾರಣೆಯನ್ನು ಕುರಿತ ಇಂಥಾ ಪ್ರಾಮುಖ್ಯ ಸಂಗತಿಯಲ್ಲಿ ಗುಟ್ಟಿನಲ್ಲಿ ಅಭಿಪ್ರಾಯ ತೆಗೆದುಕೊಳ್ಳುವದು ನ್ಯಾಯವೂ ಅಲ್ಲ, ತೃಪ್ತಿಕರವೂ ಅಲ್ಲವೆಂಬುದಕ್ಕೆ ನಾವು ಒಪ್ಪುತ್ತೇವೆ. ಅಲ್ಲದೆ ಸೈಮನ್‌ರವರು ಕಳೆದ ಫೆಬ್ರವರಿಯಲ್ಲಿ ಪ್ರಕಟಿಸಿದ ತಮ್ಮ ಪತ್ರದಲ್ಲಿ, ರಾಯಲ್ ಕಮಿಷನಿನವರು ಅಭಿಪ್ರಾಯಗಳನ್ನು ತೆಗೆದುಕೊಂಡ ಮೇಲೆ ಪ್ರತ್ಯೇಕ ಸೇರಿ ಚರ್ಚಿಸಿ ತಮ್ಮ ವರದಿಯನ್ನು ತಮ್ಮನ್ನು ನೇಮಿಸಿದ ಬ್ರಿಟಿಷ್ ಪಾರ್ಲಿಮೆಂಟಿಗೆ ಕಳುಹಿಸುವೆವೆಂದೂ ಹಾಗೆಯೇ ಇಂಡಿಯನ್ ಕೌನ್ಸಿಲು ಕಮಿಟಿಗಳು ತಮ್ಮ ವರದಿಯನ್ನು ಪರಿಷ್ಕಾರಾಯಿದೆ ನುಂಡಳಿಗೆ ಕಳುಹಿಸಬಹುದೆಂತಲೂ ಸೂಚಿಸಿದ್ದರು. ಈ ವಿಷಯದಲ್ಲೇನೂ ಈಗ ಬದಲಾವಣೆ ಮಾಡಿರುವದಿಲ್ಲ. ವಿಷಯ ಸಂಗ್ರಹಕ್ಕೆ ಮಾತ್ರ ಇಂಡಿಯನ್ ಕಮಿಟಿಯ ಮೆಂಬರುಗಳಿಗೆ ಕಮಿಷನಿನ ಮೆಂಬರುಗಳೊಂದಿಗೆ ಸಮಾನತ್ವವು ಕೊಡಲಾಗಿದೆ. ಸಂಗ್ರಹಿಸಿದ ವಿಷಯಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರುವದರಲ್ಲಿ ಇಂಡಿಯನ್ ಕಮಿಟಿಗಳಿಗೆ ಏನೊಂದೂ ಭಾಗವಿಲ್ಲವೆಂದಾಯಿತು. ಹಾಗಾದರೆ ಈ ಕಮಿಟಿಗಳ ಅಭಿಪ್ರಾಯಕ್ಕೆ ಬೇರೆ ಸಂಸ್ಥೆಗಳ ಯಾ ವ್ಯಕ್ತಿಗಳ ಅಭಿಪ್ರಾಯದಷ್ಟೇ ಬೆಲೆ ಸಿಕ್ಕಿದಂತಾಯಿತು ಇದರಿಂದ ಸರಿಸಮಾನತ್ವವು ಹೇಗೆ ಉಂಟಾಗುವದೋ ಗೊತ್ತಾಗುವದಿಲ್ಲ.

'ಹಿಂದೂದೇಶದ ಆಡಳಿತ ರಚನೆಯನ್ನು ನಿರ್ಧರಿಸುವ ಹಕ್ಕು ಹಿಂದೀಯರಿಗೆ ಇರಬೇಕಲ್ಲದೆ ಪರದೇಶೀಯರಿಗಲ್ಲ, ಹಲವು ವರ್ಷಗಳಿಂದ ಹಿಂದೂದೇಶವನ್ನು ಆಳುತ್ತಾ ಬಂದಿರುವ ಬ್ರಿಟಿಷರಿಗೆ ಈಗ ತಮ್ಮ ಆಡಳಿತದಲ್ಲಿರುವ ಹಿಂದೀಯರಿಗೆ ಸಹಾಯಮಾಡಬೇಕೆಂದು ಇಚ್ಛೆ ಇದ್ದರೆ ಬ್ರಿಟಿಷರ ಪ್ರತಿನಿಧಿಗಳೂ, ಹಿಂದೀಯರ ಪ್ರತಿನಿಧಿಗಳೂ ಸರಿಸಮಾನತ್ವದಲ್ಲಿ 'ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ' ಸೇರಿ ಹಿಂದೂದೇಶದ ಮುಂದಿನ ರಾಜಕೀಯ ಸುಧಾರಣೆಯನ್ನು ತೀರ್ಮಾನಿಸಬೇಕು' ಎಂಬುದೇ ಕಾಂಗ್ರೆಸ್ ಪಕ್ಷದವರ ವಾದ. ಹಿಂದೀಯರಿಗಾಗಿ ಸರ್ಕಾರದ ರಚನೆಯನ್ನು ತಯಾರಿಸುವ ಕಮಿಷನಿನಲ್ಲಿ ಬ್ರಿಟಿಷರೊಂದಿಗೆ ಸಮಭಾಗಿಗಳಾಗಿ ಹಿಂದೀಯರನ್ನು ನೇಮಿಸಬೇಕೆಂಬುದೇ ಲಿಬರಲ್ ಮತ್ತು ನೇಶನಲಿಸ್ಟ್ ಪಂಗಡಗಳವರ ಹೇಳಿಕೆ. ಈ ಕಾರಣಗಳಿಂದಲೇ ಹಿಂದೂದೇಶದ ಹಲವು ಪಂಗಡಗಳು ಒಂದಾಗಿ ಸೇರಿ ಸೈಮನ್ ಕಮಿಷನಿಗೆ ಬಹಿಷ್ಕಾರ ಹಾಕಿರುವದಾಗಿದೆ. ಮೇಲಿನ ತತ್ವಗಳ ಮೇಲೆ ಕಮಿಷನನ್ನು ಬಹಿಷ್ಕರಿಸಿದವರಿಗೆ ಈಗ ಸಹಕರಿಸಲು ತಕ್ಕ ಕಾರಣ ಕಾಣುವದಿಲ್ಲ. ಈಗಿನ ರಿಯಾಯಿತಿಯು ಒರ್ರೇ ಕಾರ್ಯರೀತಿಯಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ಈ ತೋರಿಕೆಯ ರಿಯಾಯಿತಿಯಿಂದ ಹಿಂದೂದೇಶಕ್ಕೆ ಹೆಚ್ಚಿನ ಪ್ರಯೋಜನವೇನೂ ದೊರೆಯಲಾರದು ಆದುದರಿಂದ ಇಂಥಾ ಅಲ್ಪ ರಿಯಾಯಿತಿಗೆ ಜನರು ಮರುಳಾಗದೆ ತಮ್ಮ ಧ್ಯೇಯವನ್ನು ಸಾಧಿಸುವವರೆಗೆ ಬಹಿಷ್ಕಾರದ ಚಳವಳನನ್ನು ನಡಿಸಿ ಹಿಂದೂ ಮಾತೆಯ ಆತ್ಮ ಗೌರವವನ್ನು ಕಾಪಾಡುವರಾಗಿ ನಂಬುತ್ತೇವೆ

ಡಾಕ್ಟರ್ ಜೆ. ಟಿ. ಸಂಡರ್ ಲ್ಯಾಂಡ್ ಮಹೋದಯರು.

ಡಾಕ್ಟರ್ ಸಂಡರ್ ಲ್ಯಾಂಡರವರು ಅಮೇರಿಕನರು. ಇವರು ಪಾದರಿ ಕುಲೋತ್ಪನ್ನರು. ಹಿಂದುದೇಶದ ಸುಶಿಕ್ಷಿತರೆಲ್ಲರಿಗೂ ಇವರ ವಿಚಾರವು ತಿಳಿಯದಿರದು. ಹಿಂದೂ ದೇಶಕ್ಕಾಗಿ ಇವರು ನೂರು ನಾಲ್ವತ್ತೈದು ವರುಷಗಳಿಂದಲೂ ಪರಿಶ್ರಮಪಡುತ್ತಿರುವರು. ಭರತ ಖಂಡದಿಂದ ಅಮೇರಿಕಕ್ಕೆ ವಿದ್ಯಾರ್ಜನೆಗಾಗಿ ಹೋಗಿದ್ದ ಹಲವೊಂದು ವಿದ್ಯಾರ್ಥಿಯರಿಗೆ ಇವರು ಮಹದುಪಕಾರಿಗಳಾಗಿರುವರು.

ಈ ಮಹಾಪುರುಷರು ಹಿಂದೂದೇಶದ ಅನುಚಿತ ಆಳಿಕೆಯನ್ನು ಕುರಿತು ಅಮೇರಿಕ ದೇಶದ ಅನೇಕ ವೃತ್ತಪತ್ರಗಳಿಗೆ ಸ್ಫೂರ್ತಿದಾಯಕವಾದ ಲೇಖನಗಳನ್ನು ಬರೆದು ಅಮೇರಿಕನರು ಭಾರತೀಯರ ಮೇಲೆ ಅನುತಾಪವುಳ್ಳವರಾಗುವಂತೆ ಮಾಡಿರುವರು. ಇವರ ಲೇಖನಗಳು ಮೋಡರ್ನ್ ರಿವ್ಯೂ, ಇಂಡಿಯನ್ ರಿವ್ಯೂ ಎಂಬ ಮಾಸಪತ್ರಗಳಲ್ಲಿ ಆಗಾಗ್ಗೆ ಬರುತ್ತಿವೆ. ಲೇಖನ ಕಲೆಯಲ್ಲಿ ಇವರು ಬಹಳ ಹೆಸರುಪಡೆದವರು ರಾಜಕೀಯ, ಸಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಇವರಿಗೆ ಹೆಚ್ಚು ಅನುಭವವಿದೆ. ಬೈಬಲ್ಲಿನ ಕೂಲಂಕುಷ ವಿಚಾರವನ್ನು ಇವರು ಮಾಡಿರುವುದರಿಂದಲೇ, ಅದರ ಸಂಬಂಧವಾಗಿ ಹಲವು ಲೇಖನಗಳನ್ನು ಶಾಸ್ತ್ರೀಯ ರೀತಿಯಿಂದ ಬರೆದು, ಅದಕ್ಕೆ ಮಹತ್ವವನ್ನು ತಂದಿರುವರು. ಬೈಬಲ್ ಸಾಹಿತ್ಯದಲ್ಲಿ ಇವರಿಗಿರುವ ಅದ್ಭುತ ಜ್ಞಾನಕ್ಕಾಗಿಯೇ ಇವರಿಗೆ ಡಾಕ್ಟರ್ ಪದವಿಯು ದೊರಕಿತು. ಬೈಬಲ್‌ನಲ್ಲಿ ಬರೆದಿರುವ ಅಮಾನುಷಿಕ ಕೃತಿಗಳನ್ನು ಇವರು ನಂಬುವುದಿಲ್ಲ. ಇವುಗಳನ್ನು ಖಂಡಿಸಿ ಬರೆದ ಒಂದೆರಡು ಲೇಖನಗಳು ಮೋಡರ್ನ್ ರಿವ್ಯೂನಲ್ಲಿ ಬಂದಿವೆ.

ಮತಸಂಬಂಧವಾದ ಭಾಷಣಗಳನ್ನು ಕೊಡುವ ನಿಮಿತ್ತ ಹಿಂದೂದೇಶಕ್ಕೆ ಇವರು ಎರಡಾವರ್ತಿ ಬಂದಿದ್ದರು 1895 ನೆ ಇಸವಿಯಲ್ಲಿ ಇವರು ಮೊಟ್ಟಮೊದಲು ಬಂದದ್ದು. ಅನಂತರ ಎರಡನೇ ಸರ್ತಿ ಇವರು 1913ರಲ್ಲಿ ದಯಮಾಡಿಸಿದ್ದು ಹಿಂದೂದೇಶಕ್ಕೆ ಬಂದಾಗ್ಗೆ ಇಲ್ಲಿಯ ಜನರ ಸ್ಥಿತ್ಯಂತರಗಳನ್ನು ಮನನಮಾಡುವ ಉದ್ದೇಶ್ಯ ಇವರು ಅನೇಕಾನೇಕ ಪಟ್ಟಣಗಳಿಗೆ ಹೋಗಿದ್ದರು ಆದುದರಿಂದಲೇ ಇವರಿಗೆ ಹಿಂದೀಯರ ವಿಷಯವಾಗಿ ಅಷ್ಟೊಂದು ಸಂತಾಪ ಮೊಗಲು ಹಿಂದೂದೇಶಕ್ಕೆ ಬಂದಿದ್ದಾಗ, ಕೈ. ವಾ. ದಾದಾಭಾಯಿ ನವರೋಜಿ, ಸುರೇಂದ್ರನಾಥ ಬನರ್ಜಿ, ಡಾ. ಸುಬ್ರಮಣ್ಯ ಅಯ್ಯರ್ ಮೊದಲಾದವರ ಸಹವಾಸವನ್ನು ಬೆಳೆಸಿ, ಹಿಂದೂದೇಶದ ದುಸ್ಥಿತಿಯ ವಿಷಯವಾಗಿ ಹಲವು ಸಂಗತಿಗಳನ್ನು ತಿಳಕೊಂಡ ಮೇಲೆ ಇವರು ತನ್ನೂರಿಗೆ ಹೋಗಿ ಹಿಂದೂದೇಶದಲ್ಲಿನ ಇಂಗ್ಲಿಷರ ಪ್ರಭುತ್ವವನ್ನು ಆರೋಪಿಸಿ ಲೇಖನಗಳನ್ನು ಬರೆದರು ಆಗ್ಗೆ ವೈಸರಾಯಿಯಾಗಿದ್ದ ಲಾರ್ಡ್ ಕರ್ಜನರು ಬ್ರಿಟಿಷರ ಆಳಿಕೆಯ ಮೇಲೆ ದೋಷವನ್ನು ಹೇರುವ ಲೇಖನವನ್ನು ಬರೆಯುವುದು ಅನುಚಿತವೆಂದು ಪತ್ರ ಸಂಚಾಲಕರಿಗೆ ಕಾಗದ ಬರೆದರಂತೆ ಬುದ್ಧಿವಂತರಾದ ಆ ಪತ್ರ ಸಂಚಾಲಕರು ವೈಸರಾಯರ ಪತ್ರವನ್ನು ಮುದ್ದೆಮಾಡಿ ಕಸದ ಬುಟ್ಟಿಗೆ ಬಿಸಾಟರಂತೆ ಡಾ ಸಂಡರ್‌ಲ್ಯಾಂಡರವರು ಸತ್ಯಶೀಲರೂ, ಆತ್ಮಾವಲಂಬಿಗಳೂ, ಪ್ರೌಢ ವಿದ್ವಾಂಸರೂ ಆದುದರಿಂದಲೇ ಅರಸಾಳುಗಳ ಬೆದರಿಕೆಗೆ ಇವರು ಮಣ್ಣೆರಚುವರು.
ಹಿಂದೂದೇಶದ ಆಳರಸರ ವರ್ತನವು ಬಂದಿನ್ನೂ ಇವರಿಗೆ ಸೇರದು. ಇಲ್ಲಿಗೆ ಇವರು ಬಂದಿದ್ದಾಗ್ಗೆ ಒಬ್ಬ ಇಂಗ್ಲಿಷ್ ಆಫೀಸರನ ಮನೆಯಲ್ಲಿ ಉಳಕೊಂಡಿದ್ದರಂತೆ ಆ ಆಫೀಸರನೂ, ಅವನ ಹೆಂಡತಿಯೂ ಇಂಗ್ಲೆಂಡಿನಲ್ಲಿದ್ದಾಗ ಬಹು ಸ್ವತಂತ್ರ ಪ್ರಿಯರೂ ಸರಳ ಹೃದಯರೂ ಆಗಿದ್ದರಂತೆ. ಆದರೆ ಇವರು ಇಂಡಿಯಾಕ್ಕೆ ಕಾಲಿಟ್ಟಕೂಡಲೇ ಇವರ ಸ್ವಭಾವವೇ ಬದಲಾಯಿತಂತೆ. ಹಿಂದೀ ಆಳುಗಳನ್ನೂ, ಸರ್ಕಾರಿ ನೌಕರರನ್ನೂ ಕೂಲಿಗಳೆಂದು ಭಾವಿಸಿ, ಅವರನ್ನು ಸಾಧ್ಯವಾದಷ್ಟು ಹೆದರಿಕೆ ಬೆದರಿಕೆಯಲ್ಲಿಟ್ಟಿದ್ದರಂತೆ. ಈ ಅನುಭವವೂ ಪ್ರತಿಯೊಬ್ಬ ಹಿಂದೀಯನಿಗೂ ಇದ್ದೇ ಇದೆ ಡಾ ಸಂಡರ್ ಲ್ಯಾಂಡರು ಹಿಂದೀಯರ ಇಂಥ ಅನುಸವು ಶೋಚನೀಯ ಅವಸ್ಥೆಯನ್ನು ಹೊರಗಣ ಜನಾಂಗದವರಿಗೆ ತೋರಿಸಿಕೊಟ್ಟದ್ದಕ್ಕಾಗಿ ಭಾರತೀಯರು ಡಾಕ್ಟರರಿಗೆ ತುಂಬ ಋಣಿಗಳಾಗಿರುವರು ಇವರ ಅಭಿಪ್ರಾಯದಲ್ಲಿ ಹಿಂದೂದೇಶಕ್ಕೆ ಸ್ವತಂತ್ರವಾಗಿರಲು ಈಗಲೇ ಅಲ್ಲ, ಎಷ್ಟೋ ಕಾಲಕ್ಕೆ ಹಿಂದೆಯೇ ಅರ್ಹತೆ ಇತ್ತು. ಹಿಂದೀಯರು ಆರುಸಾವಿರ ವರುಷಗಳ ಹಿಂದೆ ಲೋಕವಿಖ್ಯಾತರಾಗಿದ್ದವರು ಈಗ ಪರರ ಸೆರೆಗೆ ಬಿದ್ದದ್ದಕ್ಕಾಗಿ ಅವರು ಬೇಸರಪಡುವರು. ನಮ್ಮ ದೇಶದ ಅಶಿಕ್ಷಿತ ಜನರನ್ನು ನೋಡಿ ಇವರ ದುಃಖವು ಮೇರೆ ಮೀರುವುದು. ಸೈನ್ಯಕ್ಕಾಗಿ ಹಿಂದೂದೇಶವು ತನ್ನ ಉತ್ಪನ್ನಿಯ ಅರ್ಧಭಾಗವನ್ನು ಖರ್ಚುಮಾಡುತ್ತಿರುವುದು, ಈ ರೀತಿಯಲ್ಲಿ ಯಾವ ದೇಶವೂ ಹಣ ವ್ಯಯಮಾಡುತ್ತಿಲ್ಲವೆಂದು ಸಾದೃಷ್ಯದಿಂದ ವ್ಯಕ್ತಪಡಿಸಿರುವರು. ಜಪಾನು ದೇಶವು ಅಲ್ಪ ಖರ್ಚಿನಿಂದ ತನ್ನ ರಕ್ಷಣೆ ಮಾಡಿಕೊಳ್ಳುವಾಗ ಹಿಂದೂದೇಶಕ್ಕೆ ಇದು ಸಾಧ್ಯವಿಲ್ಲವೇ ಎಂಬುದು ಡಾಕ್ಟರರ ಪ್ರಶ್ನೆಯಾಗಿದೆ. ಇಂಡಿಯದ ಮೇಲೆ ಹಿಂದೆ ಕೆಲವು ಸಣ್ಣ ಪುಸ್ತಕಗಳನ್ನು ಬರೆದಿದ್ದು, ಈಗ "ಸ್ವತಂತ್ರಕ್ಕಾಗಿ ಹಿಂದೂದೇಶದ ಹೋರಾಟ' ಎಂಬ ಗ್ರಂಥವನ್ನು ಬರೆಯುತ್ತಿರುವರು. ಈ ಪುಸ್ತಕದ ಕೆಲವು ಲೇಖನಗಳು ಮಾಡರ್ನ್ ರಿವ್ಯೂನಲ್ಲಿ ಬಂದವನ್ನು ಈ ಪತ್ರಿಕೆಯಲ್ಲಿಯೂ ಪ್ರಕಟಿಸಿರುವೆವು.

ಇವರು 85 ವರುಷ ಪ್ರಾಯದ ವೃದ್ಧರು. ಇಂಥ ಅಪರ ವಯಸ್ಸಿನಲ್ಲಿಯೂ ಇವರು ಶ್ರಮಪಡುತ್ತಿರುವುದು ಶ್ರೇಯಸ್ಕರ. ಇವರಂತ ಪರೋಪಕಾರಿಗಳು ಅಮೇರಿಕಾದಲ್ಲಿ ಸಿಗುವುದು ಅಪರೂಪ. ಲಾಲಾ ಲಜಪತರಾಯರು ದೇಶಭ್ರಷ್ಟರಾಗಿ ಅಮೇರಿಕಾಕ್ಕೆ ಹೋದಾಗ್ಗೆ, ಡಾ. ಸಂಡರ್ ಲ್ಯಾಂಡರು ಇವರಿಗೆ ಅಶನವನ್ನೂ, ವಸತಿಯನ್ನೂ ಕೊಟ್ಟು ಅವರನ್ನು ತಮ್ಮ ಪುತ್ರನಂತೆ ಸಾಕಿದರು. ಇವರ ಇಂಥ ಉಚ್ಚಸ್ವಭಾವವನ್ನು ನೋಡಿದರೆ, ಇವರು ಹಿಂದಿನ ಜನ್ಮದಲ್ಲಿ ಹಿಂದೂದೇಶದಲ್ಲಿ ಹುಟ್ಟಿದ್ದ ಒಬ್ಬ ದಿವ್ಯ ಪುರುಷರಿರಬೇಕೆಂದು ತೋರುತ್ತದೆ. ಇವರು ಇನ್ನೂ ಹೆಚ್ಚು ಪರೋಪಕಾರವನ್ನು ಹಿಂದೂದೇಶಕ್ಕೆ ಮಾಡಲುಸುವಾಗುವಂತೆ ಭಗವಂತನು ಇವರಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ನಾವೆಲ್ಲರೂ ಏಕಮನಸ್ಸಿನಿಂದ ಹಾರೈಸೋಣ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ ನೇ ಭಾಗದಲ್ಲಿ ೪೨ನೇ ಪ್ರಕರಣ.

ಪಕ್ಕೆಶೂಲೆಯ ಚಿಕಿತ್ಸೆ.

ಪಕ್ಕೆಶೂಲೆಯು ನಿಲ್ಲದುದರಿಂದ ನನಗೆ ಸ್ವಲ್ಪ ಯೋಚನೆಗೆ ಕಾರಣವಾಯಿತು. ಆದರೆ ಔಷಧಿಗೆ ಔಷಧ ತೆಗೆದುಕೊಳ್ಳುವುದರಿಂದ ಇದನ್ನು ವಾಸಿಮಾಡಲಾಗುವುದಿಲ್ಲ, ಪಥ್ಯ ಬಾಹ್ಯೋಪಚಾರಗಳೇ ಇದಕ್ಕೆ ಚಿಕಿತ್ಸೆ ಎಂಬುದು ನನಗೆ ಗೊತ್ತಿದ್ದಿತು. ನಾನು ಶಾಕಾಹಾರ ಸಂಬಂಧವಾಗಿ ಹೆಸರಾದ ಡಾ. ಆಲಿನ್‌ಸನರನ್ನು ಚಿಕಿತ್ಸೆಗೆ ಕರೆದೆನು. ಅವರು ಆಹಾರ ಸುಧಾರಣೆಯಿಂದ ಜಾಡ್ಯವನ್ನು ವಾಸಿಮಾಡುತ್ತಿದ್ದರು. ಅವರೊಡನೆ ನನಗೆ ಇಂಗ್ಲೆಂಡಲ್ಲಿ ಪರಿಚಯವಾಗಿದ್ದಿತು. ಅವರನ್ನು ನಾನು ನನಗೆ ಚಿಕಿತ್ಸೆ ಮಾಡಲು ಕರೆಸಿದೆನು. ಅವರು ನನ್ನ ಶರೀರವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರು. ಹಾಲು ತೆಗೆದುಕೊಳ್ಳುವುದಿಲ್ಲವೆಂದು ನಾನು ಪಡೆದಿದ್ದ ವ್ರತವನ್ನು ಅವರಿಗೆ ವಿವರಿಸಿದೆನು. ಅವರು ನನಗೆ ಧೈರ್ಯವಿತ್ತು "ನೀವು ಹಾಲನ್ನು ತೆಗೆದುಕೊಳ್ಳಬೇಕಾದುದಿಲ್ಲ. ನೀವು ಕೆಲವು ದಿನದ ವರೆಗೂ ಕೊಬ್ಬುಳ್ಳ ಯಾವ ಪದಾರ್ಥವನ್ನೂ ತೆಗೆದುಕೊಳ್ಳಕೂಡದೆಂದೇ ನನ್ನ ಅಭಿಪ್ರಾಯ' ಆ ಮೇಲೆ ಅವರು ನಾನು ಕಂದುನಾನ್‌ರೊಟ್ಟಿ, ಬೀಟ್‌ಬೇರು, ಮೂಲಂಗಿ ಈರುಳ್ಳಿ, ಮುಂತಾದ ಗೆಡ್ಡೆಗಳನ್ನೂ ಪತ್ರ ಹಸಿರ ಹಣ್ಣುಗಳನ್ನು ಮುಖ್ಯವಾಗಿ ಕಿತ್ತಲೆ ಹಣ್ಣುಗಳನ್ನು ಸ್ವೀಕರಿಸಬೇಕೆಂದು ಹೇಳಿದರು. ತರಕಾರಿಗಳನ್ನು ನನಗೆ ಅಗಿಯುವುದಕ್ಕೆ ಆಗದಿದ್ದರೆ ಅವುಗಳನ್ನು ಸಣ್ಣನಾಗಿ ಕೊಚ್ಚಬೇಕೆಂದೂ, ಬೇಯಿಸಕೂಡದೆಂದೂ ಹೇಳಿದರು. ಈ ಆಹಾರಗನ್ನು ನಾನು ಮೂರು ನಾಲ್ಕು ದಿವಸ ತೆಗೆದುಕೊಂಡೆನು. ಆದರೆ ಬೇಯಿಸದ ತರಕಾರಿಯು ನನಗೆ ಸಂಪೂರ್ಣವಾಗಿ ಸರಿಹೋಗಲಿಲ್ಲ. ಈ ಪ್ರಯೋಗವನ್ನು ಸಾಂಗವಾಗಿ ನಡೆಸಲು ನನ್ನ ಶರೀರವು ಯೋಗ್ಯವಾದ ಸ್ಥಿತಿಯಲ್ಲಿರಲಿಲ್ಲ. ಹಸಿಯ ತರಕಾರಿಯನ್ನು ತಿನ್ನಲು ನನಗೆ ಒಗ್ಗುತ್ತಿರಲಿಲ್ಲ.

ಹಗಲಿರುಳೂ ನನ್ನ ಕೋಣೆಯ ಕಿಟಕಿಗಳನ್ನೆಲ್ಲಾ ತೆರೆದಿಡಬೇಕೆಂದೂ, ತೋಟಿಬಿಸಿಯ ನೀರಿನಲ್ಲಿ ನಾನು ಸ್ನಾನಮಾಡಬೇಕೆಂದೂ, ನೋಯುತ್ತಿರುವ ಭಾಗಗಳನ್ನು ಎಣ್ಣೆಯಿಂದ ತೀಡಬೇಕೆಂದೂ, ಕಾಲು ಗಂಟೆಯಿಂದ ಅರ್ಧಗಂಟೆಯ ವರೆಗೆ ಬಯಲಿನಲ್ಲಿ ಓಡಾಡಬೇಕೆಂದೂ ಡಾ ಆಲಿನ್‌ಸನರು ಸಲಹೆ ಕೊಟ್ಟರು. ಈ ಸೂಚನೆಗಳೆಲ್ಲಾ ನನ್ನ ಒಪ್ಪಿಗೆಗೆ ಬಂದುವು. ನನ್ನ ಕೊಠಡಿಗೆ ಫ್ರೆಂಚ್ ಮಾದರಿಯ ಕಿಟಕಿ ಇದ್ದಿತು. (ಫ್ರೆಂಚ್ ಕಿಟಕಿಯೆಂದರೆ ಎತ್ತರವಾದ ಕಿಟಕಿ. ಇದರ ಬಾಗಿಲುಗಳನ್ನು ಮಡಿಸಬಹುದು ಹೊರಗೆ ಹೋಗುವುದಕ್ಕೂ, ಒಳಗೆ ಬರುವುದಕ್ಕೂ ಇದನ್ನು ಉಪಯೋಗಿಸುತ್ತಾರೆ.) ಅದನ್ನು ಪೂರ್ತಿ ತೆಗೆದಿದ್ದರೆ ಮಳೆಯು ಒಳಗೆ ಬೀಳುತ್ತಿದ್ದಿತು. ಮೇಲಿನ ಸಣ್ಣ ಕಿಟಕಿಯನ್ನು ತೆಗೆಯುವುದಕ್ಕಾಗುತ್ತಿರಲಿಲ್ಲ. ಆದುದರಿಂದ ನಾನು ಅದರ ಗಾಜನ್ನು ಒಡೆಸಿ ಗಾಳಿಯು ಬರುವಂತೆ ಮಾಡಿದೆನು. ಮತ್ತೆ ಮಳೆ ಹನಿಯು ಒಳಗೆ ಬೀಳದಂತೆ ಕಿಟಕಿಗಳನ್ನು ಅರ್ಧ ತೆರೆದೆನು.

ಇವೆಲ್ಲದರಿಂದಲೂ ನನ್ನ ಶರೀರ ಸ್ಥಿತಿಯು ಸ್ವಲ್ಪ ಉತ್ತಮಗೊಂಡರೂ ಶಾಯಿಲೆಯು ಪೂರ್ತಿಯಾಗಿ ಗುಣವಾಗಲಿಲ್ಲ. ಲೇಡಿ ಸೆಸಿಲಿಯಾ ರಾಬರ್ಟ್‌ನರು ಆಗಾಗ ನನ್ನನ್ನು ನೋಡಲು ಬರುತ್ತಿದ್ದರು. ನಮ್ಮಲ್ಲಿ ಮೈತ್ರಿಯು ಬೆಳೆಯಿತು. ನಾನು ಹಾಲು ತೆಗೆದುಕೊಳ್ಳುವಂತೆ ನನ್ನನ್ನು ಪ್ರೇರಿಸಬೇಕೆಂದು ಆಕೆಗೆ ಪ್ರಬಲವಾದ ಇಚ್ಛೆ ಇದ್ದಿತು. ನಾನು ಇದಕ್ಕೆ ಸ್ವಲ್ಪವೂ ಒಪ್ಪದಿದ್ದುದರಿಂದ ಹಾಲಿನ ಗುಣವುಳ್ಳ ಇತರ ಪದಾರ್ಥಗಳನ್ನು ಕಂಡುಹಿಡಿಯಲು ಆಕೆಯು ಪ್ರಯತ್ನ ಪಟ್ಟಳು. ಆಕೆಯ ಮಿತ್ರರೊಬ್ಬರು ಮಾಲ್ಟೆಡ್ ಮಿಲ್ಕ್ (ಹಾಲಿನ ಪುಡಿ) ಯನ್ನು ಸೂಚಿಸಿ ಅದರಲ್ಲಿ ಹಾಲಿನ ಅಂಶವೇ ಇಲ್ಲವೆಂದೂ, ಅದು ಹಾಲಿನ ಸಕಲ ಗುಣವುಳ್ಳ ರಾಸಾಯನಿಕ ಪದಾರ್ಥವೆಂದೂ ನಂಬಿಕೆ ಹೇಳಿದರು. ಆದರೆ ಅದರ ವಿಚಾರವೇನೂ ಅವರಿಗೆ ಗೊತ್ತಿರಲಿಲ್ಲ. ಲೇಡಿ ಸೆಸಿಲಿಯಾರಿಗೆ ಧಾರ್ಮಿಕ ನಿಯಮಗಳಲ್ಲಿ ಮನ್ನಣೆ ಇದ್ದಿತೆಂದು ನನಗೆ ಗೊತ್ತಿದ್ದಿತು. ಆದುದರಿಂದ ನಾನು ಆಕೆಯ ಮಾತಿನಲ್ಲಿ ಸಂಪೂರ್ಣವಾದ ಭರವಸ ಇಟ್ಟಿದ್ದೆನು. ಪುಡಿಯನ್ನು ನೀರಿನಲ್ಲಿ ಕರಗಿಸಿ ನಾನು ಬಾಯಿಗೆ ಹಾಕಿಕೊಂಡಲ್ಲ ಅದರ ರುಚಿಯು ಹಾಲಿನ ರುಚಿಯಂತೆಯೇ ಕಂಡಿತು. ಸೀಸೆಯ ಮೇಲಿದ್ದ ಚೀಟಿಯನ್ನು ಓದಲು ಇದು ಹಾಲಿನಿಂದ ಸಿದ್ಧಪಡಿಸಿದ ಪದಾರ್ಥವೆಂದು ಗೊತ್ತಾಯಿತು. ಬಾಟ್ಲಿ ನೀರು ಹಾಕಿದ ಮೇಲೆ ನೀಡುಕೊಟ್ಟವನ ಜಾತಿ ಕೇಳದುದಾಯಿತು. ನಾನು ಆ ಪುಡಿಯ ಉಪಯೋಗವನ್ನು ಬಿಟ್ಟುಬಿಟ್ಟೆನು.

ಈ ವಿಚಾರವನ್ನು ಲೇಡಿ ಸಸಿಲಿಯಾರಿಗೆ ತಿಳಿಸಿ ಇದಕ್ಕಾಗಿ ಚಿಂತಿಸಬೇಡಿರೆಂದು ಅವರಿಗೆ ಬರೆದೆನು. ಅವರು ಒಡನೆಯೇ ಓಡಿಬಂದು ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಆಕೆಯ ಮಿತ್ರರು ಸೀಸೆಯ ಮೇಲಿನ ಚೀಟಿಯನ್ನು ಓದಿಯೇ ಇರಲಿಲ್ಲ. ಇದರ ವಿಷಯವಾಗಿ ಯೋಚಿಸಕೂಡದೆಂದು ಕೇಳಿ ಆಕೆಯು ಇಷ್ಟು ಕಷ್ಟಪಟ್ಟುಕೊಂಡು ತಂದಿದ್ದ ಪದಾರ್ಥವನ್ನು ನಾನು ಉಪಯೋಗಿಸಲಾಗದಿರಲು ನನ್ನ ವಿಷಾದವನ್ನು ತಿಳಿಸಿದೆನು. ಮತ್ತು ಅರಿಯದೆ ಹಾಲನ್ನು ಕುಡಿದುದರಿಂದ ನಾನು ತಪ್ಪು ಮಾಡಿದಂತೆನೂ ನನಗೆ ತೋರಲಿಲ್ಲವೆಂದು ಆಕೆಗೆ ನಂಬಿಕೆ ಹೇಳಿದೆನು.

ಲೇಡಿ ಸೆಸಿಲಿಯಾರೊಡನೆ ನನಗಿದ್ದ ಪರಿಚಯದ ಇತರ ಮಧುರ ಸಂಸರಣಗಳನ್ನು ನಾನು ಬಿಟ್ಟುಬಿಡಬೇಕು. ಸಂಕಟಗಳ ಮತ್ತು ಆಶಾಭಂಗಗಳ ಮಧ್ಯೆ ನನ್ನನ್ನು ಸಂತೈಸಿದ ಮಿತ್ರರನೇಕರನ್ನು ನೆನಸಿಗೆ ತಂದುಕೊಳ್ಳಬಲ್ಲೆನು. ಶ್ರದ್ಧಾಳುಗಳು ಇವುಗಳಲ್ಲಿ ದೇವರು ದುಃಖವನ್ನೇ ಮಧುರವಾಗಿ ಮಾಡುವ ದಯಾಮಯ ಸಾಧನಗಳನ್ನು ಕಾಣುವರು.

ಡಾ. ಆಲಿನ್‌ಸನರು ಪುನಃ ಬಂದಾಗ ನಿಯಮಗಳನ್ನು ಸಡಿಲಿಸಿ ನನಗೆ ನೆಲಗಡಲೇಕಾಯಿಯ ಬೆಣ್ಣೆಯನ್ನಾಗಲಿ, ಆಲಿವ್ ಎಣ್ಣೆಯನ್ನಾಗಲಿ ತೆಗೆದುಕೊಳ್ಳುವುದಕ್ಕೂ, ಕಾಯಿ ಪಲ್ಯಗಳನ್ನು ನನಗೆ ಬೇಕಾದರೆ ಅನ್ನದೊಡನೆ ಬೇಯಿಸಿ ತಿನ್ನುವುದಕ್ಕೂ ಅಪ್ಪಣೆಕೊಟ್ಟರು. ಈ ಬದಲಾವಣೆಗಳಿಂದೇನೋ ನನಗೆ ಇದರಿಂದ ರೋಗವು ಸಂಪೂರ್ಣವಾಗಿ ಗುಣವಾಯಿತೆಂದು ಹೇಳುವ ಹಾಗಿಲ್ಲ. ಬಹು ಜಾಗರೂಕತೆಯ ಶುಶ್ರೂಷೆಯು ಇನ್ನೂ ಬೇಕಾಗಿದ್ದಿತು. ನಾನು ಹಾಸಿಗೆಯನ್ನು ಬಿಟ್ಟು ಬರಲಾಗುತ್ತಿರಲಿಲ್ಲ.

ಡಾ ಮೆಹತಾರವರು ನನ್ನನ್ನು ಆಗಾಗ ನೋಡಿಕೊಂಡು ಹೋಗಲು ಬರುತ್ತಿದ್ದರು. "ನಾನು ಹೇಳಿದಂತೆ ಕೇಳಿದರೆ ನಿಮ್ಮ ಕಾಯಿಲೆಯನ್ನು ನಾ[illegible]" ಎಂದು ಅವರು ಸದಾ ಹೇಳುತ್ತಿದ್ದರು.

ಹೀಗೆ ನಡೆಯುತ್ತಿರಲು ಒಂದು ದಿನ ಮಿ. ರಾಬರ್ಟ್ಸನರು ನನ್ನನ್ನು ನೋಡುವುದಕ್ಕಾಗಿ ಒಂದು ನಾನು ಸ್ವದೇಶಕ್ಕೆ ಹಿಂತಿರುಗಬೇಕೆಂದು ಆಗ್ರಹಪೂರ್ವಕವಾಗಿ ಹೇಳಿದರು. 'ನಿಮ್ಮ ಈಗಿನ ಸ್ಥಿತಿಯಲ್ಲಿ ನೀವಂತೂ ನೆಟ್ಲಿಗೆ (ರೋಗಿಗಳ ಶುಶ್ರೂಷಾ ಮನೆ) ಹೋಗಲಾರಿರಿ. ಚಳಿಯು ಇನ್ನು ಮೇಲೆ ಇನ್ನೂ ಹೆಚ್ಚಾಗುತ್ತದೆ. ನೀವು ಹಿಂದೂಸ್ಥಾನಕ್ಕೆ ಹೋಗಬೇಕೆಂದು ನಾನು ಒತ್ತಿ ಹೇಳುತ್ತೇನೆ. ಏಕೆಂದರೆ ಅಲ್ಲಿಯೇ ನೀವು ಸಂಪೂರ್ಣವಾಗಿ ಗುಣಹೊಂದುವುದು ಸಾಧ್ಯ. ನಿಮಗೆ ವಾಸಿಯಾದ ಮೇಲೆ ಯುದ್ಧವು ಇನ್ನೂ ನಡೆಯುತ್ತಿದ್ದರೆ ಸಹಾಯ ಮಾಡಲು ನಿಮಗೆ ಬೇಕಾದಷ್ಟು ಸಂದರ್ಭವು ಒದಗುತ್ತದೆ. ಇದು ವರೆಗೆ ನೀವು ಮಾಡಿರುವುದು ಕೂಡ ಅಗಣ್ಯ ವಾದುದೆಂದು ನಾನೆಂದಿಗೂ ಎಣಿಸುವುದಿಲ್ಲ."

ನಾನು ಅವರ ಸಲಹೆಗೆ ಒಪ್ಪಿ ಹಿಂದೂಸ್ಥಾನಕ್ಕೆ ಹೋಗಲು ಸಿದ್ಧಪಡಿಸಿಕೊಳ್ಳತೊಡಗಿದೆನು.

ಸಂಸಾರದಲ್ಲಿ ಸುಖ.

ಸಂಸಾರದಲ್ಲಿ ಸುಖವನ್ನು ಹೊಂದಬೇಕಾದರೆ ಮನುಷ್ಯನು ಅವಶ್ಯವಾಗಿ ಅನುಸರಿಸಬೇಕಾದ ನಿಯಮಗಳು ಮೂರಿರುವುವು. ಆತ್ಮಸಂಯಮ, ಹೃದಯದ ಶಕ್ತಿ ಮತ್ತು ಆತ್ಮತ್ಯಾಗ ಇವುಗಳೇ.

ಮೊದಲನೆಯದಾದ ಆತ್ಮ ಸಂಯಮವು ಯಾರಲ್ಲಿ ನೆಲಸಿರುವುದೋ ಅಂತವರಿಂದ ಮನೆಯಲ್ಲಿ ಜಗಳಗಳಾಗಲಿ, ಮನಸ್ತಾಪಗಳಾಗಲಿ ಉಂಟಾಗುವುದಿಲ್ಲ. ಆತ್ಮ ಸಂಯಮವಿಲ್ಲದೆ ಹೋದಾಗ ಅತ್ಯಲ್ಪವಾದ ವಿಷಯಗಳೂ ಕೂಡ ಕಾರಣವಾಗಿ ಮನೆಯ ಶಾಂತಿಯನ್ನೇ ಹಾಳುಮಾಡುವುವು. ವಾದ ವಿವಾದಕ್ಕೆ ಪ್ರಾರಂಭವಾಗುವುದೇ ತಡ, ಮನುಷ್ಯರಿಗೆ ತಾವೇನಾಡುತ್ತಿರುವೆವೆಂಬ ಅರಿವೂ ಇಲ್ಲವೆ ಪರಸ್ಪರರ ಮಾತುಗಳು ಅಚಿಂತಿತವಾಗಿ ಸಂಕಟಪಡುವಂತೆ ಬರುವುದಕ್ಕೆ ತೊಡಗುವುದು. ಕೊನೆಗೆ ಜಗಳವು ದೊಡ್ಡದಾಗಿ ಸಂಸಾರವೇ ನರಕವಾಗಿ ಬಿಡುವುದು.

ಊಟ ಮಾಡುವಾಗ ನಡೆಯುವ ಮಾತು ಕಥೆಗಳು ಪ್ರರುಷನ ಮೇಲೆ ತಮ್ಮ ಪ್ರಭಾವವನ್ನು ಹೆಚ್ಚಿಗೆ ಬೀರುವುವು. ಆ ಸಮಯದಲ್ಲಿ ಅವನಿಗೆ ಅಹಿತವಾದ ಮಾತುಗಳನ್ನಾಡಿದರೆ ಆದರಿಂದ ಅವನು ದಿನವೆಲ್ಲಾ ಮನಸ್ಸಿನಲ್ಲೇ ಕುದಿಯುವ ಸಂಭವವುಂಟು. ಸತಿಗೆ ಭೋಜನಮಾಡಿಸುವಾಗ ಆತನ ಮನಸ್ಸು ಕಡಿಸುವ ಮಾತುಗಳಾಡುವ ದುಶ್ಶಾಲಿಯಿಂದ ಎಷ್ಟೋ ಜನ ಮಹಿಳೆಯರು ತಮ್ಮ ಸಂಸಾರದ ಸುಖವನ್ನೇ ಹಾಳುಮಾಡಿಕೊಂಡಿರುವರು. ಹಸಿದ, ಒಂದ ಪತಿಯನ್ನು ಮೃದುವಾಕ್ಯಗಳಿಂದ ಉಪಚರಿಸದೆ ಊಟಕ್ಕೆ ಬಡಿಸಿ ಹೆಂಡತಿಯಾದವಳು ಸಂಸಾರದ ಸುಖಗಳ ನಿಂದಾತ್ಮಕ ವಿಮರ್ಶೆಗೆ ಪ್ರಾರಂಭಿಸಿದರೆ ಆತನೂ ಕೋಪದಿಂದ ನಾಲ್ಕು ಮಾತಾಡುವುದೇನೂ ಹೆಚ್ಚಲ್ಲ—ತಂಗಿಯರೇ, ನೀವು ಹೀಗೆ ನರ್ತಿಸಬೇಡಿರಿ. ಹಾಗ ನಿಂದಿಸುವ ಅವಶ್ಯವಿದ್ದರೆ ಭೋಜನ ಸಮಯವು ಅದಕ್ಕೆ ಸರಿಯಾದ ಕಾಲವಲ್ಲ.

ಜಿಂಜೆಗಳನ್ನು ಒಡೆಯಲು ಪೈರೀಥ್ರಂ ಎಂಬ ಕೀಟ ಮದ್ದನ್ನು ಉಪಯೋಗಿಸುವುದನ್ನು ನೀವು ನೋಡಿರಬಹುದು. ಇದನ್ನು ಹೊತ್ತಿಸಲು ಬೆಂಕಿಯ ಸಹಾಯವೇನೂ ಬೇಕಿಲ್ಲ, ಯಾವುದಾದರೊಂದು ಕಠಿಣವಾದ ವಸ್ತುವಿನ ಮೇಲೆ ಒತ್ತಿಂದರೆ ತನ್ನಷ್ಟಕ್ಕೆ ತಾನೇ ಹೊತ್ತಿಕೊಂಡು ಸಿಡಿಯುವುದು. ಕೋಪವೂ ಇಂತಹ ಸಿಡಿಮದ್ದಿನಂತೆ. ಪತಿಯ ದುಷ್ಟಪ್ರವೃತ್ತಿಗಳೆಂಬ ಜಿಂಜೆಗಳನ್ನೊಡೆಯಲು ಕೋಪವನ್ನು ಬೆಳಸ್ಸ ಬೇಕು ಸರ್ವದಾ ಕೈಲಿ ಹಿಡಿಯುವ ಅಟದ ವಸ್ತುವಲ್ಲ. ಎಂದಾದರೊಂದು ದಿನ ಹಿಡಿದು ಸಂಸಾರದ ತಲಹದಿಯನ್ನೇ ಒಡೆದು ಬಿಡುವ ಸಂಭವವುಂಟು. ಇದಲ್ಲದೆ ಜಗಳವಾಡುವುದು ಮರ್ಯಾದೆ ಇಲ್ಲದ ನೀಚ ಸ್ತ್ರೀಯಳ ಲಕ್ಷಣವು. ಅದವಳ ಸಂಕುಚಿತ ಬುದ್ಧಿಯನ್ನೂ, ಸ್ವಾರ್ಥವನ್ನೂ ತೋರಿಸುವುದಲ್ಲದೆ ನಾರೀಸುಲಭವಾದ ಕ್ಷಮಾ ಸ್ವಭಾವಗಳೂ ಇಲ್ಲದೆ ಅಹಂಕಾರಿಯೆಂದು ಜಗತ್ತಿನಲ್ಲಿ ಬೆಳಗುವರು. ನೀವು ಗೃಹಲಕ್ಷ್ಮಿಯರಾಗಬೇಕಾದರೆ ಇಂತಹ ಕೋಪದಿಂದ ದೂರರಾಗಿರಿ.

"ಮಾತು ಮನೆ ಕೆಡಿಸಿತು" ಎಂಬುದೊಂದು ಗಾದೆ. ಸಂಸಾರದ ಸುಸ್ಥಿತಿಯೂ, ಶಾಂತಿಯೂ ಐಶ್ವರ್ಯ ಸಂಪತ್ತುಗಳಿಗಿಂತಲೂ ಗೃಹಿಣಿಯ ಸ್ನೇಹ, ಮಧುರ ವಾಕ್ಯಗಳ ಮೇಲೆ ಹೆಚ್ಚಿಗೆ ಆಧಾರಪಟ್ಟವು. ಗೃಹಿಣಿಯು ಕೋಪಿಷ್ಠಳಾಗಿದ್ದಲ್ಲಿ, ಧನಿಕನಾದ ಪತಿಯೂ ಶಾಂತಿಯಿಲ್ಲದೆ ಎಷ್ಟೋ ಜನ [illegible] ಭಾಗ್ಯವಂತ ಗೃಹಸ್ಥರುಗಳೂ ಅಶಾಂತಿಯ ನಿವಾಸಗಳಾಗಿರುವುದನ್ನು ನೀವು ನೋಡಿಲ್ಲವೇ. ಮಧುರವಾದ ಮಾತಿನಿಂದ ಜನರು ಪ್ರೀತರಾಗುವರು ಮಾತ್ರವಲ್ಲ. ಅವರ ಕೋಪವು ಸರ್ವಥಾ ಶಮವಾಗುವುದು. ಪತಿಯು ಕೋಪದಿಂದ ಬೈದರೂ ಶಾಂತಿಯಿಂದ ಮೃದು ವಾಕ್ಯಗಳನ್ನಾಡುವುದು ಯಥಾರ್ಥವಾದ ಆತ್ಮತ್ಯಾಗ. ಇಂತ ತ್ಯಾಗವು ನಿಮ್ಮ ಸಹಜ ಗುಣವಾದಾಗ ನೀವು ಯಥಾರ್ಥವಾಗಿಯೂ ದೇವತೆಯರಾಗುವಿರಿ. ಗೃಹಶಾಂತಿಗಾಗಿ [illegible] ಆತ್ಮತ್ಯಾಗ [illegible] ನಡವಳಿಕೆಯಿಂದ ಎಂಥ [illegible] ಸ್ವಭಾವದವರಾ ತಮ್ಮ ದುರ್ಗುಣಗಳನ್ನು ತಾವೇ [illegible] ಸದ್ಗುಣವಂತರಾಗುವರು.

[illegible]

ಮೊದಲ ಪ್ರವೃತ್ತಿಯು ಸರ್ವದಾ ಸುಖವನ್ನು ಹುಡುಕುವುದು! ಸುಖ, ಸಂತೋಷ, ಶಾಂತಿ ಇವು ಎಲ್ಲರಿಗೂ ಅವಶ್ಯ ವಸ್ತುಗಳೇ. ಆದರೆ ಯಥಾರ್ಥವಾಗಿ [illegible] ಹೊಂದುವವರೆಷ್ಟು [illegible]

[illegible]

ಆದರೆ ಈ ಸುಖ ಧನ [illegible] ನೀವಾದರನ್ನು [illegible] ನಿಮ್ಮ ಗೃಹಾಂಗಣವು [illegible] ಕವಾಗುವುದು. ನಿಮ್ಮ ಮನೆಯೇ ಸ್ವರ್ಗವಾಗುವುದು.

[illegible] "ನಿಮ್ಮ ಜೀವನದ ರಹಸ್ಯವೇನು"? ಎಂದು

ಅದಕ್ಕವಳು ಈ ರೀತಿಯಾಗಿ ಉತ್ತರ ಕೊಟ್ಟಳು. ನಿಮಗಾವ ವಸ್ತುಗಳ ಅವಶ್ಯಕತೆಯಿರುವುದೋ ಅದನ್ನು ಹೊಂದುವ ಪ್ರಯತ್ನವನ್ನು ನೀವೇ ಮಾಡಬೇಕು. ಇದೇ ಸುಖದ ರಹಸ್ಯವು. ಸಾಧಾರಣವಾಗಿ ಮನುಷ್ಯರು ಜೀವನದಲ್ಲಿ ತನಗೆ ಬೇಕಾದುದೇನೆಂಬುದರ ವಿಚಾರವನ್ನೂ ಮಾಡುವುದಿಲ್ಲ. ಅವರು ಮಕ್ಕಳಂತೆ ಆಟದ ವಸ್ತುಗಳನ್ನು ಮಾರುವ ಅಂಗಡಿಗೆ ಹೋಗಿ ಯಾವುದೋ ಒಂದನ್ನು ತೆಗೆದುಕೊಳ್ಳುವರು, ಅದಕ್ಕಿಂತ ಸುಂದರವಾದ ಮತ್ತೊಂದು ವಸ್ತುವು ಕಣ್ಣಿಗೆ ಬಿದ್ದರೆ ಹಿಂದಿನದನ್ನು ಬಿಸುಟು ಹೊಸವನ್ನು ತೆಗೆದುಕೊಳ್ಳುವರು. ಹೀಗೆ ಒಂದಕ್ಕಿಂತ ಒಂದನ್ನಾರಿಸುತ್ತ ಮತ್ತೊಂದು ವಸ್ತುವನ್ನಪೇಕ್ಷಿಸುತ್ತಾ ಕೊನೆಗೆ ಯಾವುದನ್ನೂ ಹೊಂದದೆ ಬರಿಗೈಯಿಂದ ಅಂಗಡಿಯಿಂದ ಬಂದು ಬಿಡುವರು.

ಈ ತೆರನಾದ ಚಂಚಲ ಪ್ರವೃತ್ತಿಯುಳ್ಳವರಿಂದ ಯಾವ ಕೆಲಸವೂ ಸಾಧಿಸಲ್ಪಡುವುದಿಲ್ಲ. ಕಾರಣ ಯಾವ ಕೆಲಸದಲ್ಲಿ ಅವರಿಗೆ ತೃಪ್ತಿಯಿರುವುದಿಲ್ಲ. ಇಂಥವರಿಗೆ ಸುಖ ಸಂತೋಷಗಳುಂಟಾಗುವ ಬಗೆ ಹೇಗೆ? ತಾವು ಏನನ್ನಪೇಕ್ಷಿಸುವೆವೋ ಅದನ್ನು ಗೊತ್ತು ಹಚ್ಚುವ ಯೋಚನೆಯೂ ಅವರಿಗಿರುವುದಿಲ್ಲ; ಎಷ್ಟೋ ವೇಳೆ ಅವರ ವಾಂಛನೀಯ ವಸ್ತುವು ದಾರಿಯಲ್ಲೇ ಬಿದ್ದಿದ್ದರೂ ಅದನ್ನು ತೆಗೆದುಕೊಳ್ಳಲಾರದವರಾಗಿ ಹಾದು ಹೋಗುತ್ತಿರುವರು.

ಸುಖದ ರಹಸ್ಯವು ಜೀವನದಲ್ಲಿ [illegible] ಮುಟ್ಟಲು ನೀವೇ ಸಾಹಸ ಮಾಡಬೇಕು. [illegible] ಹಾದಿಯನ್ನು ಹಿಡಿದು ಇತರರ ಸಲಹೆಯಂತೆ ಎಲ್ಲಿ ಇದ್ದೀರಿ ಯುಂತೆ ನಡೆಯುವುದು [illegible] ನಿಮಗೆ ಅಭ್ಯಾಸವಾಗಿ [illegible] ವಲ್ಲಿ ನಿಮಗಾವ ಕಷ್ಟವೂ ತೋರುವುದಿಲ್ಲ. [illegible] ಭ್ಯಾಸವನ್ನು ಬಿಟ್ಟು [illegible] ದ ನಡೆಯುವುದರಲ್ಲೇ ಕಷ್ಟವು ಹೆಚ್ಚು. [illegible]

ಹಣಕ್ಕೋಸ್ಕರ ಜೂಜಾಡುವನು. ಒಂದು ಸಾರಿ ಅವನಿಗೆ ಹಣವು ಬಂದ ಮಾತ್ರಕ್ಕೆ ತೃಪ್ತಿಯಾಗ ವುದಿಲ್ಲ. ಮತ್ತಷ್ಟು ಹಣವನ್ನು ಗಳಿಸಬೇಕೆಂದು ಆಶೆಯಾಗುವುದು. ಹಾಗೆ ಸ್ವಲ್ಪ ಗಳಿಸ್ದೊಡನೆ ಅವನು ತನ್ನ ಸ್ವಭಾವವನ್ನು ಬಿಟ್ಟರೆ ಮುಂದೆ ಸುಖಿಯಾಗುವ ಸಂಭವವುಂಟು. ಆದರೆ ಹಣದ ಆಶೆಯು ಪುನಃ ಪುನಃ ಅವನನ್ನು ಜೂಜಿನ ಮನೆಯ ಕಡೆಗೆ ಕರೆದುಕೊಂಡು ಹೋಗುವುದರಿಂದ ಕೊನೆಗವನು ಕೈಯಲ್ಲಿದ್ದ ಹಣವನ್ನೆಲ್ಲಾ ಕಳೆದುಕೊಂಡು ನಿರ್ಗತಿಕನಾಗಿ ಹೋಗುವನು.

ಮೇಲೆ ಹೇಳಿದ ಆ ಆಂಗ್ಲೇಯ ನರ್ತಕಿಯು ತಿಳಿದಿದ್ದಳು, ತನಗೆ ಬೇಕಾದ ವಸ್ತುವೇನೆಂಬುದನ್ನು. ಅವಳಿಗೆ ಶಾಂತಿಯಿಂದ ಜೀವನ ನಿರ್ವಾಹ ಮಾಡುವುದೇ ಮುಖ್ಯವಾಗಿತ್ತು. ಅದುದರಿಂದ ಸಾಕಾದಷ್ಟು ಹಣವನ್ನು ಗಳಿಸುವವರೆಗೂ ರಂಗ ಮಂಚವನ್ನು ಆಶ್ರಯಿಸಿ, ಹಿಷ್ಟು ಲೋಭಕ್ಕೊಳಗಾಗದೆ ಸುಖ ಶಾಂತಿಗಳಿಂದ ಕೂಡಿ ಜೀವಿಸತೊಡಗಿದಳು.

ಸುಖದ ರಹಸ್ಯವೇನು ಎಂಬೀ ಪ್ರಶ್ನೆಗೆ ಉತ್ತರವಾಗಿ ಮತ್ತೊಬ್ಬ ಆಂಗ್ಲ ಮಹಿಳೆಯು ಈ ರೀತಿಯಾಗಿ ಹೇಳಿರುವಳು.

"ಎಂತಹ ಕಷ್ಟದ ಪ್ರಸಂಗ ಬಂದರೂ, ಎಂತಹ ದುಃಖವುಂಟಾದರೂ ಅದನ್ನೆಲ್ಲಾ ಪ್ರಾರಬ್ಧ ಕರ್ಮವೆಂದು ತಿಳಿದು ನಿರಾಶಳಾಗದೆ ಸದಾ ಶಾಂತಚಿತ್ತಳಾಗಿ ಪ್ರಸನ್ನಭಾವದಿಂದಿರುವೆನೆಂದು ನಾನು ಸಂಕಲ್ಪ ಮಾಡಿಕೊಂಡಿರುವೆನು. ನಾನು ಯಾವಾಗಲೂ ಅಳುವುದಿಲ್ಲ. ಯಾವಾಗಲೂ ಚಿತ್ತದಿಂದ ಚೇತರಿಗೆ ಹೋಗುವ ಪ್ರಯತ್ನ ಮಾಡುವೆನು. ಮನೆಯಲ್ಲಿ ಆಗಿಂದಾಗ್ಯೆ ಪತಿಯಿಂದ ಮಾತು ಕೇಳಬೇಕಾದ ಸಂಭವ ಬರುವುದು. ದಾರಿದ್ರ್ಯ, ರೋಗ, ಶೋಕ ಮುಂತೆ ಇವುಗಳಂತೂ ಮೇಲಿಂದ ಮೇಲೆ ಬರುತ್ತಿರುವುವು. ಆದರೂ ನಾನಾವಾಗಲೂ ದುಃಖ ಅಥವಾ ಕೋಪದಿಂದ ಅಪ್ರಸನ್ನಳಾಗಲಿಲ್ಲ. ಪ್ರಪಂಚದ ಎಲ್ಲ ವಿಷಯಗಳೂ ಅಷ್ಟೆ. ಅವುಗಳನ್ನು ಕುರಿತು ಅಳುವುದು ಅಥವಾ ನಗುವುದು ನಮ್ಮ ಕೈಯಲ್ಲಿರುವುದು. ನಾನು ಹಾಸ್ಯ ಮುಖಿಯಾಗಿ ಪ್ರಸನ್ನಭಾವದಿಂದ ಎಲ್ಲವನ್ನೂ ಎದುರುಗೊಳ್ಳುವೆನು" ಎಂದು.

ಮತ್ತೊಬ್ಬ ಮಹಿಳೆಯು ಅದೇ ಪ್ರಶ್ನೆಗೆ ಈ ಕೆಳಗ ಕಂಡಂತೆ ಉತ್ತರ ಕೊಟ್ಟಿರುವಳು.

'ಸ್ವಾರ್ಥತ್ಯಾಗವೇ ಸಂಸಾರಿಕ ಸುಖದ ಒಳಗುಟ್ಟು. ಯಾರು ಆತ್ಮ ಸುಖಕ್ಕಾಗಿ ಆಶಿಸುವುದಿಲ್ಲವೋ ಅವರೇ ಯಥಾರ್ಥವಾದ ಸುಖಿಯು' ಎಂದು.

ಈ ಮೂರರಲ್ಲಿ ಯಾವುದು ಉತ್ತಮ?

ಪ್ರಪಂಚದಲ್ಲಿ ತನ್ನ ಧ್ಯೇಯವನ್ನು ಅರಿದು ಅದನ್ನು ಹೊಂದಿ ತೃಪ್ತರಾಗುವುದೋ?

ಹೃದಯ ಶಕ್ತಿಯಿಂದ ಪ್ರಾಸಂಗಿಕ ಕಷ್ಟಸುಖಗಳನ್ನು ಗಣನೆಗೆ ತಾರದೆ ಸರ್ವದಾ ಪ್ರಸನ್ನ ಚಿತ್ತಳಾಗುವುದೋ?

ಸ್ವಾರ್ಥ ತ್ಯಾಗದಿಂದ ಸಂಕುಚಿತ ಹೃದಯವನ್ನು ತ್ಯಾಗದ ಬೀಡಾಗಿ, ಶಾಂತಿಯು ನಲಿವನೆಯಾಗಿ ಮಾಡುವುದೋ?

ತ್ರಾಯಿಯರೇ ತಂಗಿಯರೇ ಸಂಸಾರದಲ್ಲಿ ಸುಖವನ್ನು ಕಾಣಬೇಕಾದರೆ ಈ ಮೂರು ಒಟ್ಟುಗೂಡುವುದವಶ್ಯಕ. ಈ ಮೂರು ಗುಣಗಳು ಒಂದಕ್ಕಿಂತ ಮತ್ತೊಂದು ಹೆಚ್ಚು ಪ್ರಭಾವಶಾಲಿಯಾದುದರಿಂದ ಅವುಗಳ ಸಮ್ಮೇಳನವು ನಿಮ್ಮ ಜೀವನದಲ್ಲಿ ಯಾವ ಪ್ರಮಾಣದಿಂದಾಗಿರುವುದೋ ಅದೇ ಪ್ರಮಾಣದಲ್ಲಿ ನಿಮ್ಮ ಜೀವನವೂ ಸುಖಮಯವಾಗುವುದು.

'ಸರಸ್ವತಿ'

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 23—6—1928ರಲ್ಲು ಮಡಿಕೇರಿಯಲ್ಲಿ ನಡೆಯಿತು. ಹಾಜರಿದ್ದವರು—1 ರಾವ್ ಬಹದ್ದೂರು ಕೆ ಅಪ್ಪಯ್ಯನವರು, (ಪ್ರೆಸಿಡೆಂಟರು) 2. ರಾವ್ ಸಾಹೇಬ್ ಪಿ ದೇವಯ್ಯನವರು, 3. ಮೆ ಗಳಾದ ಪಿ ಐ ಬೆಳ್ಯಪ್ಪನವರು, 4 ಕೆ ಪಿ ಚಿಣ್ಣಪ್ಪನವರು 5 ಯಂ ಯಂ ಬೆಳ್ಯಪ್ಪನವರು, 6. ಯಂ ತಿಮ್ಮಿಂಗಪ್ಪನವರು, 7 ಯನ್ ವೆಂಕಪ್ಪಯ್ಯನವರು, (ಗೌರವ ಸೆಕ್ರೆಟರಿ) ಮತ್ತು ಕೋಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2 ಸಾಲಗಳ ಬಾಕಿ ಪಟ್ಟಿ ಓದಲಾಯಿತು.

3 ಮದಿನೈದು ಸಾವಿರ ರೂಪಾಯಿ ವರೆಗೆ ಹೊಸ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳಬಹುದಾಗಿ ತೀರ್ಮಾನಿಸಲಾಯಿತು.

4. ಕೈಲ ಗ್ರಾಮದ ಒಡಕ ಮುತ್ತಣ್ಣನವರ ಅರ್ಜಿ ಓದಲಾಯಿತು.

ಅವರ ಅರ್ಜಿ ಮೇರೆ ರೂ 3500 ಡಿಪಾಜಿಟ್ಟು ತೆಗೆದುಕೊಳ್ಳಬಹುದಾಗಿ ತೀರ್ಮಾನಿಸಲಾಯಿತು.

5 ಈ ಕೆಳಗಿನ ಮೇರೆ ಸೊಸೈಟಿಗಳಿಗೆ ಸಾಲ ಮಂಜೂರ ಮಾಡಲಾಯಿತು. 1 ಬಿದರೂರು ಸೊಸೈಟಿಗೆ ರೂ 400 2. ಗಜ್ಜೆ ಹಣಕೋಡು ಸಂಘಕ್ಕೆ ರೂ 500 3. ಹೇರಾವರಕ್ಕೆ ರೂ 1500 4 ಕುಂದಕ್ಕೆ ರೂ 1000. 5 ಕೈಕೇರಿಗೆ ರೂ. 500 6 ಕಾರ್ಮಾಡಿಗೆ ರೂ 1000 7. ಐಮಂಗಲಕ್ಕೆ ರೂ 500. ಕಂಗಾಣತ್ತುನಾಡು ಮತ್ತು ಬಿಳುಗುಂದ ಸೊಸೈಟಿಗಳಿಗೆ ಅವರ ಅರ್ಜಿಗಳು ಸಂಪೂರ್ಣವಾಗಿಲ್ಲದ್ದರಿಂದ ಈ ಮೀಟಿಂಗಿನಲ್ಲಿ ಸಾಲ ಮಂಜೂರು ಮಾಡಲಿಲ್ಲ.

6 ಮೆ ಪಿ ಪೂವಯ್ಯನವರು ಬ್ಯಾಂಕಿನ ಗುಮಾಸ್ತರಾಗಿ ಮುಂದಕ್ಕೂ ಕೆಲಸ ಮಾಡುವಂತೆಯೂ ಅವರಿಗೆ ಮಾಹೆಯಾನ 30 ರೂಪಾಯಿ ಸಂಬಳ ಕೊಡುವಂತೆಯೂ ತೀರ್ಮಾನವಾಯಿತು.

7 ಸೊಸೈಟಿಗಳ ಸಾಲದ ಅರ್ಜಿ ಮೇಲೆ ಯೂನಿಯನ್ನಿನವರು ಬರೆದು ಕಳುಹಿಸುವ ಶಿಫಾರಸ್ಸು ಇನ್ನು ಮುಂದೆ ಯೂನಿಯನ್ನಿನ ಕಮಿಟಿ ಮೀಟಿಂಗಿನಲ್ಲಿ ಪಾಸು ಮಾಡಿದ ಠರಾವಿನ ರೂಪದಲ್ಲಿರತಕ್ಕದೆಂದು ಯೂನಿಯನ್‌ಗಳಿಗೆ ತಿಳಿಸುವಂತೆ ತೀರ್ಮಾನವಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು)

ರೋಲ್ಡ್ ಗೋಲ್ಡ್ ಭಂಗಾರದ ಕೇಳಡ್ಡಿಗೆ ಪದಕ.

ಈ ಅಡ್ಡಿಗೆಗಳನ್ನು ರೋಲ್ಡ್ ಗೋಲ್ಡ್‌ನಿಂದ ತಯಾರಿಸಿ



ಸಾವರಿನ್ ಭಂಗಾರದ ಗಿಲೀಟು ಕೊಟ್ಟಿದ ಒಳ್ಳೆ ಕಡದು ಇದರ ಪದಕವು ಕೆಂಪು, ಬಿಳಿ ಮತ್ತು ಹಸರು ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿ ನೋಡಲು ಲಕ್ಷಣವಾಗಿರುವಂತೆ ಮುತ್ತುಗಳನ್ನು ಸಹ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಲಾಯಕಾದದ್ದು.

ಕ್ರಯ 1ಕ್ಕೆ ರೂ 3—8—0.

ಇಂಗ್ಲೀಷ್ ಹೇರ್ ಡಿಪ್ಲ್ಯಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿ ಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರ ಮಾಡಿಸಿಕೊಳ್ಳುವುದಕ್ಕಿಂತಲೂ ಚೆನ್ನಾಗಿ ಕೂದಲನ್ನು ಬುಡದಿಂದ ನಿಮಿಷದಲ್ಲಿ ತೆಗೆದು ಬಿಡುವದು.

1 ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0
ವಿಳಾಸ —ಕೆ ನಾರದಮುನಿ ಅಂಡ್ ಸನ್ಸ್,
52—6 168. ಜೈನಾ ಬಜಾರ್, ಮದರಾಸು

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹೊಸದಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಗೀಳೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸಮನಾಗಿರುವದು. ಇದರ ಒಳ್ಳೆ ಕೆಲಸದಂತೆ ಬಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು.

ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೋತೆ 1ಕ್ಕೆ 2—0—0
7 ಕೆಂಪು ಕಲ್ಲಿನ ಓಲೆ ಜೋತೆ 1ಕ್ಕೆ 2—8—0
ವಿಳಾಸ —ಕೆ. ನಾರದಮುನಿ ಅಂಡ್ ಸನ್ಸ್,
52—6 168 ಜೈನಾ ಬಜಾರ್, ಮದರಾಸು

ಶ್ರೀ ಸತ್ಯ ನಾರಾಯಣ ಮೋಟಾರ್ ಸರ್ವೀಸ್.

ಮಹನೀಯರೇ,

ತಾರೀ 16—5—28ರ ವರೆಗಾಯಿತು. ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಬಸ್ಸು ಒಂದು ಹೊಸ ಸರ್ವೀಸ್ ಬೆಳಿಗ್ಗೆ 7 30 ಗಂಟೆಗೆ ವೀರರಾಜಪೇಟೆಯಿಂದ ಹೊರಟು 10 30 ಗಂಟೆಗೆ ಕುಟ್ಟ ತಲುಪಿ ಅಲ್ಲಿಂದ ಸಾಯಂಕಾಲ 3 ಗಂಟೆಗೆ ಹಿಂತಿರುಗಿ ವೀರರಾಜಪೇಟೆಗೆ 6 ಗಂಟೆಗೆ ತಲುಪುವಂತೆ ಏರ್ಪಾಡು ಮಾಡಿದ್ದೇವೆ. ಮಲೆಯಾಳ, ಮಡಿಕೇರಿ ಮೈಸೂರು ಮೊದಲಾದ ಸ್ಥಳಗಳಿಗೆ ಜಾಗ್ರತೆಯಾಗಿ ಹೋಗಿ ಬರಲು ಈ ನಮ್ಮ ಸರ್ವೀಸು ತುಂಬಾ ಪ್ರಯೋಜನಕಾರಿಯಾದೀತೆಂದು ನಂಬುತ್ತೇವೆ.

ಸಿ ಟಿ. ರಾಮನಂಬಿಯಾರ್,
4—4 ಮೇನೇಜರ್

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಖರಾರು



ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸರಿಸಮನಾಗಿರುವದು. ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ಖರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ 6—8—0

ಬೆಸ್ಟ್ ಲೀವರ್ ಪಾಕೆಟ್ ವಾಚ್.

ಈ ಗಡಿಯಾರಗಳು ಹೊಸದಾಗಿ ತಯಾರಾದವು (ಸ್ವಿಸ್ ಮೇಡ್) ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇವೆ. ಬಹು ಬಲಿಷ್ಠವಾದ ಲೀವರ್ ಮೂವ್‌ಮೆಂಟ್ಸ್‌ಗಳಿಂದಲೂ, ದೃಢವಾದ ಸಾಮಾನುಗಳಿಂದಲೂ ತಯಾರಿಸಿ ಒಳಗಡೆ ಜಂತ್ರಗಳು ಟ್ಟಿರುವರು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಎಷ್ಟು ದೂರ ಓಡಿದಾಗ್ಯೂ ನಿಲ್ಲದೆ

ನಡೆಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಗಳಲ್ಲಿ ಸಿಕ್ಕಲಾರದು. ಈ ಗಡಿಯಾರವನ್ನು ತರಿಸಿಕೊಳ್ಳುವವರಿಗೆ ಇದರ ಜೊತೆಯಲ್ಲಿ ಕಾಣುವ ಇಂಗ್ಲಿಷ್ ಮೇಡ್ ಫೌಂಟನ್ ಪೆನ್ನನ್ನು ಇನಾಮಾಗಿ ಕೊಡುವೆವು. 3 ವರುಷ ಗ್ಯಾರಂಟಿ ಇದೆ.

ಕ್ರಯ ಗಡಿಯಾರ 1ಕ್ಕೆ ರೂ 3—8—0.
ವಿಳಾಸ —ಲೀಗಲ್ ವಾಚ್ ಕಂಪೆನಿ,
52—6 ಪೋ. ಬಾಕ್ಸ್ ನಂ 243, ಮದರಾಸು.

Please Call at

THE GENERAL TRADING CO., MERCARA.

Opposite Coronation Gardens.

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY! NEW PERFORMANCE!! NEW FEATURES AND FOUR WHEEL BRAKES!!!

QUALITY AT LOW COST.

THE COORG FOOTWEAR MART, MERCARA

The house for smart foot wear. Monsoon boot a speciality

Prompt attention. Prices very moderate.

12—1 Attended by very efficient workmen.

Notice

In modification of the notice dated the 20th of June 1928, issued from this office and in pursuance of rule 6 of the Election rules, intending candidates to be elected as members of the Mercara Municipality are hereby informed, that they may send in their nomination papers to the President on any day before 5 P. M of the 30th June 1928

Mercara, (Sd) M. BHUJANGA RAO,
Date 26—6—28 President.

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿ ಕಾನ್ಸ್ಟೇಬಲು ಪ್ರೈಮರಿ ಸ್ಕೂಲಿಗೆ ಆಗಸ್ಟು ಒಂದು ತಿಂಗಳ ಪೂರ್ತಿ ಮಳೆಗಾಲದ ರಜೆ ಬಿಡಲಾಗಿದೆ.

ವೈತಾಳಿ ಗ್ರಾಮದ ಮ ಚಾಳೆಕುಟ್ಟಿರ ಮಂದಣ್ಣನವರು ಗಂಟ್ಲು ಕಟ್ಟು ಕಾಯಿಲೆಯಿಂದ ಈ ತಾ 27 ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಈ ವಾರವೂ ದೇಶದಲ್ಲಿ ಮಳೆಯು ಬಹಳ ಕಡಿಮೆಯಾಗಿ ವ್ಯವಸಾಯಕ್ಕೆ ಅಡಚಣೆಯಾಗಿದೆ. ಮಡಿಕೇರಿಯಲ್ಲೂ ಕೂಡ ಬಿಸಿಲು ಕಾಯತೊಡಗಿದೆ.

ಡಾಕ್ಟರ್ ಕೊಂಗಂಡ ಅಕ್ಕಮ್ಮನವರನ್ನು ಮೈಸೂರು ವಾಣೀವಿಲಾಸ ಆಸ್ಪತ್ರೆಯಿಂದ ಬೆಂಗಳೂರು ಮೆಟರ್ನಿಟಿ ಆಸ್ಪತ್ರೆಗೆ ವರ್ಗಾಯಿಸಿದರೆಂದು ತಿಳಿಯಬರುತ್ತದೆ.

ಕೆಲವು ತಿಂಗಳುಗಳ ಹಿಂದೆ ಬೆಳ್ಳಾರಿಪೊಟ್ಟ ತೋಟದ ಮೆ. ವಾರ್ಬರ್ಟನ್‌ರವರ ಬಂಗಲೆ ಪೆಟ್ಟಿಗೆ, ರೂಪಾಯಿ, ನೆಕ್ಲೇಸ್ ವಗೈರೆ ಕಳವಾಯಿತೆಂದು ಪ್ರಕಟಿಸಿತ್ತಷ್ಟೆ. ಈಚೆಗೆ ಕಳ್ಳರನ್ನು ಹುಡುಕಲು ಪೊಲೀಸು ಸಬ್ ಇನ್‌ಸ್ಪೆಕ್ಟರು ಪತ್ತೆ ಮಾಡಿ ಆ ತೋಟದ ರೈಟರ್, ಬಟ್ಲರ್, ಮೇಸ್ತ್ರಿ ವಗೈರೆ ಜನರನ್ನು ದಸ್ತಗಿರಿ ಮಾಡಿರುವರೆಂದು ವರ್ತಮಾನ.

ಮೆ. ಕೊಡಂದೆರ ಸುಬ್ಬಯ್ಯನವರಿಗೆ ಪುನಃ 8 ತಿಂಗಳ ರಜೆ ಮಂಜೂರಾಗಿರುವುದರಿಂದ, ಮೆ. ಮಚಿಯಂಡ ತಿಮ್ಮಯ್ಯನವರನ್ನು ಸುಂಟಿಕೊಪ್ಪಲು ನಾಡುಪಾರುಪತ್ಯಗಾರರಾಗಿಯೂ ಮೆ. ಗುಡ್ಡಂಡ ಕಾರ್ಯಪ್ಪನವರನ್ನು ಪೊನ್ನಂಪೇಟೆ ಅಸಿಸ್ಟೆಂಟ್ ಪಾರುಪತ್ಯಗಾರರಾಗಿಯೂ ವರ್ಗಾಯಿಸಿರುವರೆಂದು ತಿಳಿಯುತ್ತೇವೆ.

ಪಿ. ಡಬ್ಲ್ಯು. ಇಲಾಖೆಯ ಉತ್ತರಕೊಡಗು ಸಬ್ ಡಿವಿಜನ್ ಆಫೀಸರಾಗಿದ್ದ ಮೆ. ರಾಜಗೋಪಾಲ ಅಯ್ಯಂಗಾರರು ಈ ತಾ 18 ರಿಂದ ನಾಲ್ಕು ತಿಂಗಳು ರಜೆಯಲ್ಲಿ ತಮ್ಮ ಊರಿಗೆ ಹೊರಟು ಹೋದರು. ಇವರ ಬದಲು ಇನ್ನೊಬ್ಬ ಆಫೀಸರು ಬರುವವರೆಗೆ ಎಗ್ಜಿಕ್ಯುಟಿವ್ ಇಂಜಿನೀಯರವರೇ ಈ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವರು.

ಬೆಂಗಳೂರುಸಿಟಿ ಮುನ್ಸಿಪಲ್ ಕಮಿಷನರಾದ ಮೆ. ಟಿ ಗೋವಿಂದರಾಯರು 2 ತಿಂಗಳ 26 ದಿವಸ ರಜೆಯಲ್ಲಿರುವದರಿಂದ ಸೆಂಟ್ರಲ್ ಜೈಲಿನ ಸುಪರಿಂಟೆಂಡೆಂಟರಾದ ಮೆ. ಕೋದಂಡ ಮಾಚಯ್ಯನವರು ಆಕ್ಟಿಂಗ್ ಮುನ್ಸಿಪಲ್ ಕಮಿಷನರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದು ಸಂತೋಷಿಸುತ್ತೇವೆ.

ಎಳೆಯ ಪ್ರಾಯದ, ಬೀಜ ಒಡೆದ ನಾಲ್ಕು ಕೋಣಗಳು ತಮ್ಮಲ್ಲಿ ಒಂದು ಸೇರಿ ಕಾಲವು ದಿವಸಗಳಾದವೆಂದೂ, ಅವುಗಳಲ್ಲಿ ಒಂದರ ಕೋಡುಗಳು ಉದ್ದವಾಗಿವೆಯೆಂದೂ, ಅವುಗಳ ಮಾಲೀಕರು ಒಂದು ತಕ್ಕ ಗುರುತಿನಿಂದ ಅವುಗಳನ್ನು ಹಿಡಕೊಂಡು ಹೋಗಬಹುದೆಂದೂ ಕೋತೂರು ಗ್ರಾಮದ ಲಕ್ಕಂಡ ಮೆ. ಕೊಡಂದೆರ ಮೇದಪ್ಪನವರು ತಿಳಿಸಿರುತ್ತಾರೆ.

ದಕ್ಷಿಣ ಕೊಡಗು ಸಬ್ ಡಿವಿಜನ್ ಆಫೀಸರಾದ ಮೆ. ನಲ್ಲಪೆರುಮಾಳು ಪಿಳ್ಳೆಯವರು ಕಾಯಿಲಸ್ಥರಾದ ಕಾರಣ ಮೂರು ತಿಂಗಳು ರಜೆಗೆ ಒಳೆದಿರುವವರಿಂದ ಅವರ ಬದಲು ಇನ್ನೊಬ್ಬರು ಬರುವ ವರೆಗೆ ಆ ಸಬ್ ಡಿವಿಜನಿನ (ಕರೆಂಟ್ ಡ್ಯೂಟಿ) ಜವಾಬ್ದಾರಿಯ ಕೆಲಸವನ್ನು ನೋಡಲು ಪ್ರೊಬೆಷನರ್ ಸೆಕ್ಷನ್ ಆಫೀಸರಾದ ಮೆ ಚೆಪ್ಪುಡಿರ ಜಿ. ಪೊನ್ನಪ್ಪನವರನ್ನು ನೇಮಿಸಿರುವರೆಂದು ತಿಳಿಯಬರುತ್ತದೆ. ಈ ಸಬ್ ಡಿವಿಜನ್ ಆಫೀಸರಾಗಿ ಕೊಯಮತ್ತೂರಿನ ಮೆ. ಕಾಳೇಶ್ವರ ಐಯ್ಯರವರು ಬರುವರೆಂದು ವರ್ತಮಾನವಿದೆ.

ಮಡಿಕೇರಿಯಲ್ಲಿ ಪೆಟ್ರೋಲಿಯಂ ಅಂಗಡಿ ಇಟ್ಟಿರುವ ಸಯ್ಯದ್‌ಗೌಸ್‌ರವರು ತಮ್ಮ ಮೋಟಾರು ಲಾರಿಯಲ್ಲಿ ತಾ. 21 ರಲ್ಲಿ ಮೈಸೂರಿನಿಂದ ಮಡಿಕೇರಿಗೆ ಪೆಟ್ರೋಲಿಯಂ ಎಣ್ಣೆಯ ಟಿನ್ನುಗಳನ್ನು ತುಂಬಿಕೊಂಡು ಬರುತ್ತಿದ್ದಾಗ ಹುಣಸೂರಿನಿಂದ 2 ಮೈಲು ಈಚೆಗೆ ದಾರಿಯಲ್ಲಿ ಒಂದು ಎಮ್ಮೆಯನ್ನು ಹಿಡಕೊಂಡು ಹೋಗುತ್ತಿದ್ದ ಒಬ್ಬ ಮನುಷ್ಯನು ಪಕ್ಕಕ್ಕಾಗಿ ಹೋಗಲು ಎಷ್ಟು ಪ್ರಯತ್ನಿಸಿದರೂ ಆ ಎಮ್ಮೆಯು ಬಗ್ಗದೆ ರಸ್ತೆಗೆ ಅಡ್ಡಲಾಗಿ ನುಗ್ಗುದುದರ ಮೇಲೆ ಆ ಮನುಷ್ಯನು ಲಾರಿಗೆ ಸಿಕ್ಕಿ ಕೂಡಲೆ ಮೃತಪಟ್ಟನೆಂದೂ, ಎಮ್ಮೆಯು ಓಡಿಹೋಯಿತೆಂದೂ, ಕೇಸು ಪೊಲೀಸು ವಿಚಾರದಲ್ಲಿದೆಯೆಂದೂ ತಿಳಿಯಬರುತ್ತದೆ.

ಬರುವ ತಿಂಗಳು 21 ರಲ್ಲಿ ನಡೆಯಲಿಕ್ಕಿರುವ ಮಡಿಕೇರಿ ಮುನ್ಸಿಪಲ್ ಕಮಿಟಿಯ ಚುನಾವಣೆಗೆ ಈ ವರೆಗೆ ಕೊಡವರ ಪರವಾಗಿ 3 ಸ್ಥಳಗಳಿಗೆ ರಾ. ಸಾ. ಪಟ್ಟಮಾಡ ದೇವಯ್ಯನವರು, ರಾ. ಸಾ. ಕೋಡಿಮಣಿಯಂಡ ಸುಬ್ಬಯ್ಯನವರು ಮತ್ತು ಮೆ. ಕೊಡಂದೆರ ಮಾದಪ್ಪನವರೂ, ಮಹಮ್ಮದೀಯರ ಪರವಾಗಿ 2 ಸ್ಥಳಗಳಿಗೆ ಮೆ. ಉಸ್ಮಾನ್‌ಖಾನ್‌ರವರು ಮತ್ತು ಹಾಜಿ ಅಬ್ದುಲ್ ಲತೀಫ್‌ರವರೂ, ಕ್ರೈಸ್ತರ ಪರವಾಗಿ ಒಂದು ಸ್ಥಳಕ್ಕೆ ರಾ. ವಾರುಣಿಯವರು ಮತ್ತು ಮೆ. ಎ. ಇ. ಲೋಬೊರವರೂ, ಹಿಂದುಗಳ ಪರವಾಗಿ 6 ಸ್ಥಳಗಳಿಗೆ ಮೆ. ಕೆ. ವೆಂಕಟಸುಬ್ಬಯ್ಯನವರು ಮತ್ತು ಪಿ. ಕೆ. ಕಪನೈಯವರು ಶೆಟ್ಟಿಯವರೂ ಉಮೇದುವಾರರಾಗಿ ಅಪ್ಲಿಕೇಶನ್ ಕೊಟ್ಟಿರುತ್ತಾರೆ. ಹಿಂದುಗಳ ಸ್ಥಳಗಳಿಗೆ ಸಾಕಷ್ಟು ಉಮೇದುವಾರರು ಮುಂದು ಬಾರದ್ದರಿಂದ ಅಪ್ಲಿಕೇಶನ್ ಕೊಡುವ ತಾರೀಕನ್ನು 25 ರಿಂದ 31 ಕ್ಕೆ ಮುಂದು ಹಾಕಿರುವರು.

ರಾ. ಬಾ. ಮನೆಯಪ್ಪಂಡ ಮುತ್ತಣ್ಣನವರ ಕೂಂಗಿಲವಳ್ಳಿ ತೋಟದಲ್ಲಿ ಗಾಡಿ ಕೆಲಸದ ಕಾಂಟ್ರಾಕ್ಟರನು ನೆಂಟ ಒಬ್ಬ ಮಲೆಯಾಳದವನು ಈ ತಾ. 23 ರಲ್ಲು ಸುಮಾರು 60 ಅಡಿ ಆಳದ ಅರ್ಧ ಕಲ್ಲಿನ ಒಂದು ಬಾವಿಯನ್ನು ಶುದ್ಧಮಾಡಲು ಇಳಿದ ಕೂಡಲೇ ಮೂರ್ಛೆ ತಪ್ಪಿ ಮೇಲಕ್ಕೆ ಏರಲಾರದೆ ಹೋದನು. ಒಬ್ಬ ಮಾಪಿಳ್ಳೆಯು ಅವನನ್ನು ಕುರಿ ಕಟ್ಟಿ ಇಳಿಸಲು ಪ್ರಯತ್ನಿಸಿದಾಗ ಅವನು ಅರ್ಧ ದಾರಿಯಲ್ಲಿ ಕಂಡುಹಿಡಿದು ಪ್ರಾಣ ಸ್ವಲ್ಪದರಲ್ಲಿ ಉಳಿಯಿತು. ಅವನನ್ನು ಮೇಲಕ್ಕೆ ಎಳೆದರು. ಮರುದಿನ ಪೊಲೀಸು ಸಬ್ ಇನ್‌ಸ್ಪೆಕ್ಟರ್, ಸಬ್ ಅಸಿಸ್ಟೆಂಟ್ ಸರ್ಜನ್ ಬಂದು ಬಾವಿಯೊಳಗೆ ಸತ್ತು ಬಿದ್ದವನನ್ನು ತೆಗೆಯುವ ಪ್ರಯತ್ನದಲ್ಲಿ ಮೊದಲು ಕುರ್ಚಿಯಲ್ಲಿ ಒಂದು ಕೋಳಿಯನ್ನು ಹಾಕಿ ಇಳಿಸಿ ಮೇಲೆ ತೆಗೆದಾಗ ಅದು ಸತ್ತು ಹೋಗಿದ್ದುದನ್ನೂ, ನಂತರ ಒಂದು ಲಾಂದ್ರವನ್ನು ಹೊತ್ತಿಸಿ ಇಳಿಸಲು ಅದು ಅರ್ಧದಾರಿಯಲ್ಲಿ ನಂದಿಹೋದುದನ್ನೂ ಕಂಡು, ಅದರೊಳಗೆ ಯಾರನ್ನೂ ಇಳಿಸಲು ಸಾಧ್ಯವಾಗಲಿಲ್ಲ. ನಂತರ ಪಾತಾಳಗರಡಿಯಿಂದ ತೆಗೆಯಲು ಯತ್ನಿಸಿ ಸಾಧ್ಯವಾಗದ್ದರಿಂದ ತಾ. 25 ರಲ್ಲಿ ಆ ಬಾವಿಯನ್ನೇ ಪೂರ್ತಿಯಾಗಿ ಮುಚ್ಚಿಸಿಬಿಟ್ಟಿರುವರೆಂದು ತಿಳಿಯುತ್ತೇವೆ.

ಹಿಂದೂದೇಶ.

ಬೊಂಬಾಯಿಯ ಯೂನಿವರ್ಸಿಟಿಗೆ ಸೇರಿದ ಕಾಲೇಜುಗಳಲ್ಲಿ ಮತಬೋಧನೆಯನ್ನಿಡಬೇಕೋ ಎಂಬುದರ ವಿಷಯ ವಿಚಾರಿಸಿ ಸಿಫಾರಸ್ಸು ಮಾಡಲು ಅಲ್ಲಿಯ ಸೆನೆಟಿನವರು ಒಂದು ಕಮಿಟಿಯನ್ನು ನೇಮಿಸಿರುವರು.

ಸಾಯಿಮನ್ ಬಹಿಷ್ಕಾರ ಲೀಗಿನ ಸಕ್ರೆಟರಿಯಾಗಿದ್ದ ಸರ್ ಯಾಕೂಬ್‌ರವರು ಆ ಲೀಗಿನವರು ಸೈಮನ್ ಕಮಿಷನಿಗೆ ಕಳುಹಿಸಿದ ಮೆಮೊರಾಂಡಮಿನಲ್ಲಿ ಪ್ರಾವಿನ್ಶಿಯಲ್ ಅಟಾನಮಿ ಕೇಳದ್ದರಿಂದ ತನ್ನ ಸೆಕ್ರೆಟರಿತನಕ್ಕೆ ರಾಜೀನಾಮೆ ಕೊಟ್ಟಿರುವರು.

ಮುನ್ಸೈಟಿಡ್ ಪ್ರಾಂತದ ಗವರ್ನರ್ ಪದವಿಗೆ ಸರ್ ಅಲೆಕ್ಸಾಂಡರ್ ಮುಡಿಮನ್‌ರವರನ್ನು ಸರಕಾರದವರು ಮನೆತು ಬಿಡಬಾರದೆಂದೂ, ಹಾಗೆ ಮಾಡಿದರೆ ಅದು ಜಾತಿದ್ವೇಷದಿಂದ ಮಾಡಿದ್ದು ಎಂದು ಜನರು ತಿಳಕೊಳ್ಳಬೇಕಾಗುವದೆಂದು ಲಂಡನಿನಲ್ಲಿರುವ ಟೈಮ್ಸಿನ ಅಭಿಪ್ರಾಯವಾಗಿದೆ.

ಪಾರ್ಲಿಮೆಂಟಿನ ಆರಿಂದು ಎಲ್ಲ ಕಡೆಗಳ ರಾಯಲ್ ಕಮಿಷನ್ ಬೊಂಬಾಯಿಗೆ ಬಂದಾಗ ಪ್ರಯೋಗದ ಚಿತ್ರವಾಗಿ ಕೆಂಪು ಬಿಸಿದ ಸುಮಾರು 20 ಸಾವಿರ ರೂಪಾಯಿಗಳನ್ನು ವ್ಯವಸಾಯದ ಅಭಿವೃದ್ಧಿಯ ಕೆಲಸಕ್ಕೆ ಉಪಯೋಗಿಸುವಂತೆ ಮಹಾರಾಜರು ಸರಕಾರದವರಿಗೆ ಉಚಿತವಾಗಿ ಕೊಟ್ಟಿರುವರು ಸ್ತೋತ್ರಾರ್ಹವು.

ಹಿಂದೂದೇಶದ ಸ್ವರಾಜ್ಯ ರಚನೆಯನ್ನು ನಿರೂಪಿಸಲು ಆಲ್ ಪಾರ್ಟಿ ಕಾನ್‌ಫರೆನ್ಸಿನವರು ನೇಮಿಸಿದ್ದ ಕಮಿಟಿಯವರು ಅಲಹಾಬಾದಿನಲ್ಲಿ ಈ ತಿಂಗಳು 5 ರಿಂದ 22 ರ ವರೆಗೆ ಪ್ರತಿ ದಿನವೂ ಸಭೆ ಮೀಟಿಂಗು ನಡಿಸಿದರೂ ಅವರ ಕೆಲಸವು ಮುಗಿದಿರುವದಿಲ್ಲ. ಈಗ ಮಧ್ಯೆ ಸ್ವಲ್ಪ ಬಿಡುವಿಟ್ಟು ಪುನಃ ಒಟ್ಟು ಪ್ರಾರಂಭದಲ್ಲಿ ಸೇರುವರಂತೆ.

ಕಲ್ಕತ್ತಾ ಮುನ್ಸಿಪಾಲಿಟಿಯು ತನ್ನ ಸಿಬ್ಬಂದಿ ಹೆಚ್ಚಿನ ಸಂಬಳ ಕೊಡಬೇಕೆಂದು ಕಳೆದ ತಿಂಗಳ ಹಿಂದಿನ ಸಮಯದಲ್ಲಿ ಅಲ್ಲಿಯ ಮಾಜಿ ಅಧ್ಯಕ್ಷರಾದ ಸೇ. ಸೇನಗುಪ್ತಾ ಸೆಟ್ಟಿ ಭಾಷಣಯನ್ನು ಆ ಮುನ್ಸಿಪಾಲಿಟಿಯವರು ನಿರಾಕರಿಸಿದ್ದರಿಂದ ತಲೆ ಬಾಗಿಲು ಪುನಃ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು. ಪಟ್ಟಣದ ಬೀದಿಗಳಲ್ಲಿ ಕಸ ತುಂಬುತ್ತ ಬರುತ್ತಿದೆಯಂತೆ.

ಬರುವ ಕಲ್ಕತ್ತಾ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಲಾಲಾ ಲಜಪತರಾಯರನ್ನು ಆರಿಸುವರು ಉತ್ತಮವೆಂದು ಕೆಲವು ಮುಂದಾಳುಗಳು ಸೂಚಿಸಿದ್ದಕ್ಕೆ ಲಜಪತರಾಯರು ಅವರನ್ನು ವಂದಿಸಿ ತನ್ನ ಆರೋಗ್ಯದ ದೆಸೆಯಿಂದ ತಾನು ಇನ್ನು ಆ ಪದವಿಯನ್ನು ಸ್ವೀಕರಿಸದೆ ಕ್ಷಮಿಸಿ ತಾವು ಸಾವಕಾಶ ಕೆಲಸಗಳಿಂದ ಹಿಂತೆಗೆಯಬೇಕಾಗಿದ್ದೇನೆಂದು ಹೇಳಿರುವರು.

ಬಾಬುಹಾಂ ... ಪ್ರಾಂತ್ಯದಲ್ಲಿ ಕ್ಷಾಮವು ಪ್ರಬಲವಾಗಿದೆ. ಅಲ್ಲಿಯ ಮುನ್ಸಿ ಸರಕಾರದವರು ತಕ್ಕಷ್ಟು ಸಹಾಯ ಕೂಡದ್ದರಿಂದ ಕ್ಷಾಮ ಪೀಡಿತರಾದವರಲ್ಲಿ ಕೆಲವರು ಅನ್ನ ಆಹಾರಗಳನ್ನು ತ್ಯಜಿಸಿ ಉಪವಾಸದ ವ್ರತವನ್ನು ಕೈಕೊಂಡು ಸತ್ಯಾಗ್ರಹವನ್ನು ಆಚರಿಸುತ್ತಿರುವರು. ಇದಾದರೂ ಅಧಿಕಾರಿಗಳ ಹೃದಯವನ್ನು ಕರಗಿಸುವದೋ ಎಂದು ನೋಡಬೇಕಾಗಿದೆ.

ಬಾರ್ಡೋಲಿಯ ಸತ್ಯಾಗ್ರಹಕ್ಕೆ ಕಾರಣವಾದ ಅಲ್ಲಿಯ ಕಂದಾಯ ಏರಿಕೆಯನ್ನು ವಿರೋಧಿಸಿ ರಾಜೀನಾಮೆಕೊಟ್ಟ ಕೆಲವು ಬೊಂಬಾಯಿ ಕೌನ್ಸಿಲು ಮೆಂಬರುಗಳ ಬದಲಿಗೆ ಪುನಃ ಚುನಾವಣೆ ಇಟ್ಟಲ್ಲಿ ಸೂರತ್ ಡಿಸ್ಟ್ರಿಕ್ಟ್, ಸೂರತ್ ಪಟ್ಟಣ ಮತ್ತು ಪಂಚಮಹಾಲ್‌ಗಳಲ್ಲಿ ರಾಜೀನಾಮೆಕೊಟ್ಟ ಮೆಂಬರುಗಳಲ್ಲದೆ ಬೇರೆ ಯಾರೂ ಚುನಾವಣೆಗೆ ನಿಲ್ಲದ್ದರಿಂದ ಅವರೇ ಪುನಃ ಚುನಾಯಿಸಲ್ಪಡುವರು.

ಯೂರೋಪು ಪ್ರವಾಸದಿಂದ ವಾಪಸು ಬಂದ ಇಂಡಿಯನ್ ಒಲಿಂಪಿಕ್ ಹಾಕಿ ಟೀಮಿನವರು ಆಲ್ ಬೊಂಬಾಯಿ ಟೀಮಿನವರನ್ನು 1 ಕ್ಕೆ 6 ಗೋಲುಗಳಿಂದ ಸೋಲಿಸಿದರು. ಯೂರೋಪಿಗೆ ಹೋಗುವ ಮೊದಲು ಬೊಂಬಾಯಿ ಟೀಮು ಒಲಿಂಪಿಕ್ ಟೀಮನ್ನು ಸೋಲಿಸಿತ್ತು. ಈಗ ಆಟವನ್ನು ನೋಡಲು ಸಾವಿರಗಟ್ಟಲೆ ಜನರು ನೆರೆದಿದ್ದರು. ಪ್ರೇಕ್ಷಕರ ಟಿಕೇಟುಗಳಿಂದ ಸುಮಾರು 6 ಸಾವಿರ ರೂಪಾಯಿ ಜಮೆಯಾಯಿತಂತೆ.

ಸುಧಾರಿಸಿದ ಎರಡನೇ ಕೌನ್ಸಿಲಿನ ಜೀವಮಾನ ಕಾಲದಲ್ಲಿ ಸರಕಾರದ ಆಡಳಿತೆಯ ವಿಷಯ ಪ್ರಾಂತೀಯ ಸರಕಾರಗಳ ಅಭಿಪ್ರಾಯಗಳನ್ನೊಳಕೊಂಡ ವರದಿಯನ್ನು ಇಂಡಿಯಾ ಸರಕಾರದವರು ಪ್ರಕಟಿಸುವರು. ಅದರಲ್ಲಿ ಪ್ರಜಾಪ್ರತಿನಿಧಿ ಸಂಸ್ಥೆಗಳ ಕೆಲಸದಲ್ಲಿ ಆಗುವಷ್ಟು ಕುಂದು ಕೊರತೆಗಳಿಗೆ ಪ್ರಾಮುಖ್ಯವೆಯನ್ನು ಕೊಟ್ಟು ಸರಕಾರ ಉದ್ಯೋಗಸ್ಥರ ಸಹನ ಕಾರ್ಯಗಳನ್ನೇ ತೋರಿಸುವದಾದರೂ ಹಿಂದೂದೇಶಕ್ಕೆ ಪಟ್ಟಿನ ಸುಧಾರಣೆ ಸಿಕ್ಕಕೂಡದು ಎಂಬುದಕ್ಕೆ ತಕ್ಕ ಕಾರಣ ಕಾಣಲು ಅವರಿಗೆ ಸಾಧ್ಯವಾದಂತೆ ಕಾಣುವದಿಲ್ಲ.

ಬಾರ್ಡೋಲಿ ಸತ್ಯಾಗ್ರಹದ ಕಾರಣಗಳನ್ನು ಕಂಡುಹಿಡಿಯಲು ಬಿನ್ನ ಉದ್ಯೋಗಸ್ಥರ ಒಂದು ಕಮಿಟಿ ನೇಮಿಸಬೇಕೆಂಬ ಮಿ. ... ಮುನ್ಷಿಯವರ ಸೂಚನೆಯನ್ನು ಮಹಾತ್ಮ ಗಾಂಧಿಯವರು ಹೊಗಳಿರುವರು. ಅಲ್ಲಿಯ ಕಂದಾಯ ವಸೂಲಾತಿಯ ವಿಷಯದಲ್ಲಿ ಉದ್ಯೋಗಸ್ಥರು ವಹಿಸಿದ ಸಾಧನಗಳನ್ನೂ ಅದರಿಂದ ಜನರಿಗೆ ಉಂಟಾದ ತೊಂದರೆಗಳನ್ನೂ ವಿಚಾರಿಸಲು ಬಿನ್ನ ಉದ್ಯೋಗಸ್ಥರ ಕಮಿಟಿಯೊಂದು ಆಗಾಗಲೇ ಪ್ರಾರಂಭವಾದೆ. ಈ ಮಧ್ಯೆ ಇಂಡಿಯನ್ ಮರ್ಚೆಂಟ್ಸ್ ಚೇಂಬರಿನ ಅಧ್ಯಕ್ಷರಾದ ಮೆ ಹೆಚ್. ಪಿ ಮೋದಿ ಮತ್ತು ಸರ್ ಪುರುಷೋತ್ತಮದಾಸ್ ಠಾಕೂರ್ ದಾಸ್‌ರವರು ಮಹಾತ್ಮ ಗಾಂಧಿ ಮತ್ತು ವಲ್ಲಭಭಾಯಿ ಪಟೇಲರವರನ್ನು ಕಂಡು, ಅಲ್ಲಿಯ ಗವರ್ನರ ಸಂಗಡ ಈ ವಿಷಯ ಸಂಭಾಷಣ ನಡಿಸಿದಲ್ಲಿ ಸತ್ಯಾಗ್ರಹಿಗಳಿಗೂ ಸರಕಾರಕ್ಕೂ ರಾಜಿ ಮಾಡುವ ಸಂಭವವಿದೆಯೆಂದು ಸೂಚಿಸಿರುವರು.

ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಪಂಜಾಬು ಕೌನ್ಸಿಲಿನವರು 'ಜನರ ಅಭಿಪ್ರಾಯ ತೆಗೆದುಕೊಳ್ಳುವಾಗ ... ತ್ತು ದಸ್ತಾವೇಜು ನೋಡುವಾಗ ಕಮಿಟಿ ಮೆಂಬರುಗಳಿಗೂ ಕಮಿಷನ್ ಮೆಂಬರುಗಳಿಗೂ ಸರಿಸಮಾನತ್ವ ಇಲ್ಲದಿದ್ದರೆ ತಮ್ಮ ಕರ್ತವ್ಯವನ್ನು ಮಾಡುವದು ಕಷ್ಟವೆಂದು' ತಾವು ಏಕ ಮತದಿಂದ ಠರಾವು ಮಾಡಿ ಸರ್ ಜಾನ್ ಸೈಮನರಿಗೆ ಕಳುಹಿಸಿದ್ದ ಠರಾವನ್ನು ಸೈಮನರು ಅಂಗೀಕರಿಸಿ, ಮೇಲಿನ ವಿಷಯದಲ್ಲಿ ಕಮಿಟಿಯ ಮತ್ತು ಕಮಿಷನಿನ ಮೆಂಬರುಗಳಿಗೆ ಸಮಾನತ್ವಕೊಡಲು ಒಪ್ಪಿರುವರಂತೆ. ಇಂತಹ ಸ್ವೀಕೃತಿಯನ್ನು ಮೈಸೂರಾಯಗಿ ತಂತಿ ಕಳುಹಿಸಿರುವರು. ಸರ್ ಶಿವಸ್ವಾಮಿ ಅಯ್ಯರ್, ಮು. ಜಿನ್ನಾ, ಶ್ರೀ ಎಸ್. ಶ್ರೀನಿವಾಸಯ್ಯಂಗಾರ್, ಮೆ. ಜಯಕರ್, ... ಸ್ಟುವರ್ಟ್ ಮೊದಲಾದ ಮುಂದಾಳುಗಳು ... ನಿಜವಾದ ಜಯಗಳಿಕೆಯಲ್ಲವೆಂದೂ, ಇದಕ್ಕೆ ಮರುಳಾಗಿ ಜನರು ಬಹಿಷ್ಕಾರ ಚಳವಳವನ್ನು ಬಿಡಬಾರದೆಂದೂ ಅಭಿಪ್ರಾಯಕೊಟ್ಟಿರುವರು. ಸರ್ ಮಹಮ್ಮದ್ ಶಾಫಿ, ಮೆ. ಎಂ. ರಾಮಸ್ವಾಮಿ ಮೊದಲಿಯಾರ್ ಮೊದಲಾದವರು ಇದು ಒಳ್ಳೆ ಬೆಳವಣಿಗೆಯೆಂದು ಹಿಗ್ಗುತ್ತಿರುವರು.

ವಿದೇಶ.

ಸಾಮ್ರಾಜ್ಯತನದ ವಿರೋಧಿಗಳು ... ದವರ ಕಾನ್ಫರೆನ್ಸಿಗೆ ಇಂಡಿಯನ್ ನೇಷನಲ್ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಬರಬೇಕೆಂದು ಶ್ರೀಯುತ ಎಸ್ ಶ್ರೀನಿವಾಸಯ್ಯಂಗಾರರವರಿಗೆ ಆಮಂತ್ರಣವು ಬಂದಿದೆಯೆಂದೂ, ಅದಕ್ಕೆ ಅವರು ಒಪ್ಪಿರುವರೆಂದೂ ವರ್ತಮಾನ.

ಬ್ರಿಟನ್ನಿನ ಕಾಮನ್ಸ್ ಪಾರ್ಲಿಮೆಂಟಿನ ಮಹಿಳಾ ಸ್ವೀಕೃತಿ " ಆದ ಮೆ ವ್ಹಿಟ್ಲಿಯವರು ರಾಜರು ತನಗೆ ಕೊಡಲು ಇಚ್ಛಿಸಿದ 'ಪ್ರಭು' ಪಂಚ ಬಿರುದನ್ನು ತಿರಸ್ಕರಿಸಿರುವರು. 120 ವರ್ಷಗಳಿಂದ ನಡೆದು ಬಂದ ಈ ಪದ್ಧತಿಯನ್ನು ಇವರೇ ಪ್ರಥಮವಾಗಿ ಮುರಿದು ಹಾಕಿದವರಾಗಿರುವರು.

ಫ್ರಾನ್ಸಿನಲ್ಲಿ ಅಧಿಕಾರಕ್ಕೆ ಬಂದಿದ್ದ ರಾಷ್ಟ್ರೀಯ ಪಕ್ಷದ ಮಂತ್ರಿ ಮಂಡಲಿಯಲ್ಲಿ ಕೆಲವು ಮಂತ್ರಿಗಳು ರಾಜೀನಾಮೆ ಕೊಟ್ಟುದರ ಮೇಲೆ (ಕೂಯಲಿಷನ್) ಒಕ್ಕೂಟವು ಒಡೆದುಹೋಯಿತು ಎಂಬ ಕಾರಣದಿಂದ ಅಲ್ಲಿಯ ಅರಸನು ಪಾಯಿಂಕರೆಯವರ ಮಂತ್ರಿ ಮಂಡಳಿಯನ್ನು ಡಿಸ್‌ಮಿಸ್ ಮಾಡಿರುವರು.

ಚೈನಾದ ಮಂಚೂರಿಯ ಮತ್ತು ಶಾಂಟುಂಗ್‌ದಲ್ಲಿ ಜಪಾನ್ ಸೈನ್ಯಗಳನ್ನು ಹಿಂತೆಗೆಯುವಂತೆಯೂ, ಆದರೆ ಈ ಹುಕುಂ ಸಕಿಂಗ್ ಮತ್ತು ಟೀಂಟ್ಸಿನ್ ವಸ್ತಿರುವ ಸೈನ್ಯಗಳಿಗೆ ಅನ್ವಯವಾಗುವದಿಲ್ಲವೆಂತಲೂ ಜಪಾನು ಸರಕಾರದವರು ... ಹಾಂಗ್‌ಕಾಂಗ್ ಎಂಬಲ್ಲಿರುವ ಬ್ರಿಟಿಷ ಚೇಂಬರ್ ಆಫ್ ಕಾಮರ್ಸ್‌ನವರು 100,000 ಡಾಲರ್ಸ್ ಕೊಡಬೇಕೆಂದೂ, ಇಲ್ಲವಾದರೆ ಲೂಟಿಮಾಡಲಾಗುವದೆಂದೂ ಚಾಂಗ್ ಟ್ಸಂಗ್ ಚಾಂಗರ ಸೈನ್ಯವು ಹೇಳಿರುವದರಿಂದ ಅಲ್ಲಿಯ ಬ್ರಿಟಿಷ್ ನಿವಾಸಿಗಳನ್ನು ಕಾಪಾಡಲು ಬ್ರಿಟಿಷ್ ಸೈನ್ಯವನ್ನು ಕಳುಹಿಸುವರಂತೆ.

WANTED

Candidates for Telegraph, Station Master and Electrical Classes Boarding arrangements. Particulars with Railway Fare Certificate on 2 anna stamps. Presidency Telegraph College Ryoapettah, Madras. 4—1

ಭೂಮಂಡಲದಲ್ಲಿ ದೊಡ್ಡ ಹೆಂಗಸು.

ಯೌವನವೇ ಆದರೂ ಮಿತಿ ಮೀರಿದರೆ ನೆಟ್ಟಗಲ್ಲ. ಅತಿಬಡಕಲಾಗುವದೂ ನೆಟ್ಟಗಲ್ಲ. ಹಾಗೆಯೇ ಅತಿ ಗಡುತರವಾಗುವದೂ ನೆಟ್ಟಗಲ್ಲ. ಈ ಸಮಯದಲ್ಲಿ ಮಿಸ್. ಮೇರಿ ಹಾಲ್ಡ ಎಂಬ ಹೆಂಗಸಿನ ಸರಕಸಿನ ರಾಣಿಯ ಉದಾಹರಣೆಯನ್ನು ಕೊಡಬಹುದು. ಇವಳು ಸ್ತ್ರೀ ಜಾತಿಯಲ್ಲಿ ಸ್ಥೂಲಕಾಯದ ಹಾಗೆ ಎತ್ತರ ಹೆಂಗಸು ಎಂದು ಹೆಸರಾಗಿದ್ದಾಳೆ. ಆಕೆಯ ದೈಹಿಕ ತೂಕವು ೪೭೬ ಪೌಂಡು (ಬಂಗಾಲಿ ೫ ಮಣ ೩೪ ಸೇರು.) ಇರುವದು. ಇವಳು ೭ ಅಡಿ ಎತ್ತರಳಾಗಿದ್ದಾಳೆ. ೩೨ ಇಂಚು ಅಗಲವಾಗಿದ್ದಾಳೆ. ಹುಟ್ಟಿದಾಗ ತೂಕವು ೧೨ ಪೌಂಡು ಇತ್ತು. ೮ ವರ್ಷದವಳಿದ್ದಾಗ್ಯೆ ೧೧೦ ಪೌಂಡು ಆಯಿತು. ಇವಳೊಮ್ಮೆ ದಾರಿಯ ಮೇಲೆ ನಿಂತುಕೊಂಡಾಗ ಹಿಂದಿನಿಂದ ಒಂದು ಮೋಟಾರವು ಬಂತು. ಇವಳಿಗೆ ತೀವ್ರವಾಗಿ ಅಲ್ಲಿಂದ ಸರಿಯುವದಕ್ಕಾಗಲಿಲ್ಲ. ಅಷ್ಟರಲ್ಲಿ ಮೋಟಾರವು ಒಂದು ಆನಳಿಗೆ ತಾಗಿತು. ಹಾಗು ಮುಂದೆಹೋಗದೆ ಅಲ್ಲಿಯೇ ನಿಂತು ಬಿಟ್ಟಿತು ಈ ಪ್ರಕಾರವಾಗಿ ಮಿಸ್. ಮೇರಿ ಹಾಲ್ಡಳಿಗೆ ಒಮ್ಮೆ ಅನುಭವವು ಬಂತು. ಮೋಟಾರಿನಲ್ಲಿದ್ದ ಸಾಹೇಬನು ಇವಳಿಗೆ ಏನಾಯಿತೆಂದು ಕೇಳಲು, ಇವಳು "ನನಗೇನೂ ಆಗಿಲ್ಲ ನನ್ನ ಧಕ್ಕೆಯಿಂದ ಮೋಟಾರದ ಭಾಗವು ಕೆಟ್ಟಿದ್ದೀತೆಂದು ಅನ್ನಿಸುತ್ತದೆ" ಎಂದು ಉತ್ತರ ಕೊಟ್ಟಳಂತೆ!

ಈ ಹೆಂಗಸು ಇಷ್ಟು ಗಡುತರಳಾಗಿದ್ದರೂ ಬಹಳ ಉದ್ಯೋಗಿಯಾಗಿದ್ದಾಳೆ. ತಾರುಣ್ಯದಲ್ಲಿದ್ದಾಗ ಇವಳು ಕುಣಿಯುತ್ತಿದ್ದಳು. ಈಗ ಇವಳು ನೀರಿನಲ್ಲಿ ಬಹಳ ಈಜುತ್ತಾಳೆ. ಒಮ್ಮೆ ಹವೆಯ (ವಿಮಾನ) ದಲ್ಲಿ ಕುಳಿತುಕೊಂಡು ತಿರುಗಾಡಬೇಕೆಂದು ಮಾಡಿದಳು. ಆದರೆ ಕಡಿಮೆ ಶಕ್ತಿಯ ಆ ಯಂತ್ರಕ್ಕೆ ಇವಳನ್ನು ಕೂರಿಸಿಕೊಂಡು ಹಾರುವದಕ್ಕಾಗಲಿಲ್ಲ. ಡ್ರೈವರನು ನಾಚಿಕೆಪಟ್ಟು ಇವಳಿಗೆ ಇಳಿಯ ಹೇಳಿದನು.

' ಸುಧಾರಕ '

ಹಿಂದೂ ಸ್ಥಾನೀ ಸೇವಾದಲವು.

ಬಾಗಲಕೋಟೆಯ ವ್ಯಾಯಾಮ ಮಂದಿರದ ಪ್ರಾರಂಭೋತ್ಸವವು.

ಸೇವಾದಲದ ಕರ್ನಾಟಕ ಶಾಖೆಯ ಪರವಾಗಿ ಬಾಗಲಕೋಟೆಯಲ್ಲಿ ಕಟ್ಟಲ್ಪಡುತ್ತಿರುವ ವ್ಯಾಯಾಮ ಮಂದಿರದ ಪ್ರಾರಂಭೋತ್ಸವವು ತಾ. 3—7—28 ನೇ ದಿವಸ ನಡೆಯುವದೆಂದು ಈ ಮೊದಲು ಪ್ರಸಿದ್ಧ ಮಾಡಿತಷ್ಟೆ? ಆದರೆ ಮಳೆಗಾಲದ ಮೂಲಕ ಕಟ್ಟಡವು ಆ ಅವಧಿಯೊಳಗೆ ಮುಗಿಯುವಂತೆ ತೋರದ್ದರಿಂದ ಅದರ ಪ್ರಾರಂಭೋತ್ಸವವನ್ನು ಆಗಸ್ಟ್ ೧ ನೇ ತಾರೀಕಿನ ದಿವಸ ನೆರವೇರಿಸಬೇಕೆಂದು ನಿಶ್ಚಿಸಲ್ಪಟ್ಟಿದೆ. ಹಿಂದೂಸ್ಥಾನದ ಸರ್ವ ಪಕ್ಷಿಯ ಪರಿಷತ್ತು ಆ ಸಮಯಕ್ಕೆ ಕೂಡಿದ್ದರಿಂದ ಪಂಡಿತ ಜವಹಿರಲಾಲ್ ನೆಹರು ಇವರು ಆ ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿಕೊಂಡಿದ್ದಾರೆ.

ಆ ಕಾಲಕ್ಕೆ ಈ ವರೆಗೆ ದಲದ ಶಿಕ್ಷಣವನ್ನು ಹೊಂದಿದ ಕರ್ನಾಟಕದೊಳಗಿನ ಸರ್ವ ತರುಣರೂ ಬರುವವರಿದ್ದಾರೆ ಇದಲ್ಲದೆ ಕೇವಲ ಸಮಾರಂಭದ ಸಲುವಾಗಿಯೇ ವಿಶಿಷ್ಟ ರೀತಿಯಿಂದ ಶಿಕ್ಷಣಕೊಟ್ಟ ಹೊಸತರಹದ ಶಾರೀರಿಕ ಆಟಗಳನ್ನು ತೋರಿಸುವ ವ್ಯವಸ್ಥೆಯು ಮಾಡಲ್ಪಡುವದು. ಸಮಾರಂಭದ ವೇಳೆಗೆ ಬೆಂಗಳೂರು ಪ್ರೊಫೆಸರ ಕೆ. ವಿ. ಅಯ್ಯರ್ ಅಮರಾವತಿ (ವರ್‍ಹಾಡ) ಯ ಡಾ. ಎಸ್. ಪಿ. ಪಟವರ್ಧನ್‌ರಂತಹ ಪ್ರಸಿದ್ಧ ಶಾರೀರಿಕ ಶಿಕ್ಷಣದ ಪುರಸ್ಕರ್ತರು ಬರುವರು. ಅದರಂತೆ ಹಿಂದುಸ್ಥಾನದ ಬೇರೆ ಬೇರೆ ಪ್ರಾಂತ್ಯಗಳ ಅನೇಕ ಪ್ರಸಿದ್ಧ ಮುಂದಾಳುಗಳಾದರೂ ಬರುವವರಿದ್ದಾರೆ.

ಶ್ರೀಯುತರಾದ ಶ್ರೀನಿವಾಸರಾವ್ ಕೌಜಲಗಿ, ವಾಮನರಾವ್ ನಾಯಕ, ಹೊಸಕೊಪ್ಪ ಕೃಷ್ಣರಾಯರು, ಕೆ. ರಂಗ ಅಯ್ಯಂಗಾರರು ಮತ್ತು ಡಾ. ಹರ್ಡೀಕರರು ಈ ಕಟ್ಟಡದ ಸಲುವಾಗಿ ಬೇಕಾಗುವ ಹಣವನ್ನು ಕೂಡಿಸಲು ಅವ್ಯಾಹತವಾಗಿ ಪ್ರಯತ್ನ ನಡಿಸಿದ್ದಾರೆ. ಅವರ ಕಾರ್ಯದಲ್ಲಿ ಎಲ್ಲರೂ ಉದಾರ ಹಸ್ತದಿಂದ ಸಹಾಯ ಮಾಡುವರೆಂದು ನಂಬಿದ್ದೇವೆ.

ವ್ಯಾಯಾಮ ಉಪಕರಣಗಳ ಪ್ರದರ್ಶನವು.

ವ್ಯಾಯಾಮ ವಿದ್ಯಾಪೀಠದ ಪ್ರಾರಂಭೋತ್ಸವವು ನಡೆಯುವ ಕಾಲಕ್ಕೆ ವ್ಯಾಯಾಮ ಉಪಕರಣಗಳ ಪ್ರದರ್ಶನವೂ ನಡೆಯುವದು ಆದುದರಿಂದ ಎಲ್ಲರಲ್ಲಿಯೂ ಬಿನ್ನವಿಸಿಕೊಳ್ಳುವದೇನೆಂದರೆ.—ಪ್ರದರ್ಶನದಲ್ಲಿಡಲು ಯೋಗ್ಯವಾದ ಧನುಷ್ಯ, ಬಾಣ, ಬತ್ತಳಿಕೆ, ಗದೆ, ಲೋಡು ಮೊದಲಾದ ಪ್ರಾಚೀನ ಅರ್ವಾಚೀನವಾದ ವ್ಯಾಯಾಮ ಉಪಕರಣಗಳು ಸಂಗ್ರಹದಲ್ಲಿದ್ದ ಪ್ರತಿಯೊಬ್ಬರೂ ತಮ್ಮ ಸಂಗ್ರಹದಿಂದ ಈ ಪ್ರದರ್ಶನಕ್ಕೆ ಅವಶ್ಯವಾಗಿ ಕಳುಹಿಸಬೇಕೆಂದೂ ಮತ್ತು ತಮಗೆ ಗೊತ್ತಿದ್ದ ಸ್ಥಳಗಳಿಂದ ಸಂಗ್ರಹಿಸಿ ಸಿಕ್ಕುವ ಉಪಕರಣಗಳನ್ನು ಕಳುಹಿಸಲು ಪ್ರಯತ್ನಿಸಬೇಕೆಂದೂ ಕೇಳಿಕೊಳ್ಳುತ್ತೇವೆ. ಎಲ್ಲರೂ ವ್ಯಾಯಾಮ ಉಪಕರಣಗಳನ್ನು ಕಳುಹಿಸಿ ಪ್ರದರ್ಶನದ ಯಶಸ್ಸಿನ ಭಾಗಿಗಳಾಗಬೇಕೆಂದು ಹಾರೈಸುತ್ತೇವೆ.

ಪ್ರದರ್ಶನಕ್ಕೆ ಬರುವ ಎಲ್ಲ ವಸ್ತುಗಳ ಬಗೆಗೆ ಅವುಗಳನ್ನು ತರುವದಕ್ಕೂ, ತಿರುಗಿ ಕಳುಹಿಸುವದಕ್ಕೂ ಹಿಡಿಯುವ ವೆಚ್ಚವನ್ನು ಸೇವಾದಲದ ಸೆಕ್ರೆಟರಿಗಳು ವಹಿಸಿಕೊಳ್ಳುತ್ತಾರೆ.

ವಸ್ತುಗಳನ್ನು ಕಳುಹಿಸಿ ಕೊಡುವವರು ತಮ್ಮ ತಮ್ಮ ವಸ್ತುಗಳ ಸಂಗಡ ತಮ್ಮ ಹೆಸರು ಮತ್ತು ಊರುಗಳನ್ನು ಬರೆದು ಕಳುಹಿಸಿಕೊಡಬೇಕು. ಮತ್ತು ಪ್ರಾಚೀನ ಉಪಕರಣಗಳಿದ್ದರೆ ಅವುಗಳ ವಿಷಯಕ್ಕೆ ತಮಗೆ ಗೊತ್ತಿದ್ದ ಎಲ್ಲ ಸಂಗತಿಗಳನ್ನು ಸುವಾಚ್ಯವಾಗಿ ಬರೆಯಬೇಕು

ವಸ್ತುಗಳನ್ನು ಜುಲೈ ತಿಂಗಳ ೨೦ ನೇ ತಾರೀಖಿನ ಒಳಗಾಗಿ ಪ್ರದರ್ಶನದ ಕಾರ್ಯದರ್ಶಿಗಳ ಕಡೆಗೆ ಕಳುಹಿಸಬೇಕು.

ಪ್ರದರ್ಶನ ಕಾರ್ಯದರ್ಶಿ,
ಶ್ರೀನಿವಾಸರಾವ ನೀರಲಕೇರಿ,
ಬಾಗಲಕೋಟೆ,
ಬಿಜಾಪುರ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಶನಿವಾರಸಂತೆ ಯೂನಿಯನ್.

ಅಯ್ಯ,

ಸಂಘವು ಹುಟ್ಟಿ ಬರೇ ಆರು ತಿಂಗಳಾದರೂ ಇದರಿಂದ ಇದಕ್ಕೆ ಸೇರಿದ ಮೆಂಬರುಗಳು ಅನೇಕ ಪ್ರಯೋಜನಗಳನ್ನು ಹೊಂದಿದರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅಷ್ಟರಲ್ಲಿಯೇ ಅದರ ಉದ್ಧಾರಕ್ಕೂ, ಏಳಿಗೆಗೂ ಕಾರಣಭೂತರಾದ ಮೆ. ಕೆ. ಟಿ. ಮುದ್ದಪ್ಪನವರು ಈಗಾಗಲೇ ಈ ಸ್ಥಳವನ್ನು ಬಿಟ್ಟು ಮುಂದಿನ ವ್ಯಾಸಂಗಕ್ಕೆ ಹೋಗಲು ನಿಶ್ಚೈಸಿರುವುದರಿಂದ ಅವರಿಗೆ ಅವರು ಮಾಡಿದ ಕೆಲಸಕ್ಕೆ ಕೃತಜ್ಞತೆಯನ್ನು ತೋರಿಸಲು ತಾರೀಕು 10—6—28 ನೇ ಭಾನುವಾರ ಸುಮಾರು ೩ ಗಂಟೆಗೆ ಸಂಘದ ಮೆಂಬರುಗಳೆಲ್ಲರೂ ಒಂದು ಟೀ ಪಾರ್ಟಿಯನ್ನೇರ್ಪಡಿಸಿದರು.

ಸಂಘದ ಪ್ರೆಸಿಡೆಂಟರಾದ ಮೆ. ಪಿ. ಬಿ. ಪೂಣಚ್ಚನವರು ಇವರ ಗುಣಕಥನವನ್ನು ಸಾಂಗವಾಗಿ ಹೊಗಳಿದರು. ಇವರು ಎಷ್ಟೋ ಶ್ರಮಪಟ್ಟು, ಈ ಸಂಘವನ್ನೇರ್ಪಡಿಸಿ, ಇದರ ಕಾರ್ಯದರ್ಶಿಯಾಗಿ ಕೆಲಸಮಾಡಿ ಇದನ್ನು ಈ ಸ್ಥಿತಿಗೆ ತಂದದ್ದು ಸ್ತೋತ್ರಾರ್ಹವೆಂದೂ, ಇವರು ಕಾರ್ಯದರ್ಶಿಯಾಗಿ ಇಂದಿನವರೆಗೆ ಕೆಲಸಮಾಡಿದ್ದು ಎಲ್ಲರಿಗೂ ಒಂದು ಆದರ್ಶರೂಪವಾಗಿರಬೇಕೆಂದೂ ಮುಂತಾಗಿ ಹೇಳಿದರು. ಮೆ. ಕೆ. ಟಿ. ಮುದ್ದಪ್ಪನವರು ಯುಕ್ತರೀತಿಯಲ್ಲಿ ಪ್ರತ್ಯುತ್ತರವಿತ್ತ ಮೇಲೆ ಬಡಿಸಿದ ತಿಂಡಿತೀರ್ಥಗಳನ್ನು ಸ್ವೀಕರಿಸಿ ಸುಮಾರು 9 ಗಂಟೆಗೆ ಅವರನ್ನು ಬೀಳ್ಕೊಂಡು ತಮ್ಮ ತಮ್ಮ ಮನೆಗಳನ್ನು ಸೇರಿದೆವು.

ಇವರು ಇನ್ನೂ ಹೆಚ್ಚಿಗೆ ವಿದ್ಯಾಭ್ಯಾಸಮಾಡಿ ಹೆಚ್ಚಿನ ದೇಶಸೇವೆಯನ್ನು ಮಾಡುವಂತೆ ಭಗವಂತನು ಅನುಗ್ರಹಿಸಲಿ.

" ಹಾಜರಿದ್ದವ "

ಸ್ಕೂಲ್ ಫೈನಲ್ ಪರೀಕ್ಷೆ.

ಅಯ್ಯ,

ಯಸ್. ಯಸ್. ಯಲ್. ಸಿ. ಪರೀಕ್ಷೆಗೆ ಹೋದ ಬಡ ವಿದ್ಯಾರ್ಥಿಗಳ ಗೋಳನ್ನು ಕೇಳುವವರಿಲ್ಲವೇ? ಕಳೆದ ಪರೀಕ್ಷೆಯಲ್ಲಿ ಹದಿನೇಳು ಸಾವಿರ ವಿದ್ಯಾರ್ಥಿಗಳ ಪೈಕಿ, ಬರೆ ಎಂಟು ಸಾವಿರ ಮಂದಿ ಪಾಸಾಗಿರುವರೆಂದು ಕೇಳಿದರೆ ಯಾರಿಗೆ ಕನಿಕರ ಉಂಟಾಗದು? ಪ್ರತಿ ವರ್ಷವೂ ವಿದ್ಯಾರ್ಥಿಗಳು ಈ ರೀತಿ ಸೋತುಹೋಗುತ್ತಿರುವಲ್ಲಿ ಅವರ ಕಷ್ಟಗಳನ್ನು ಯಾರಲ್ಲಿ ಹೇಳಬೇಕು? ಕೇವಲ ಐಶ್ವರ್ಯವಂತರಾದರೂ ವಿದ್ಯಾರ್ಥಿಗಳು ಪಾಸಾಗದಿದ್ದರೆ ಇಂಥಾ ಪರೀಕ್ಷೆ ಇದ್ದೇನು ಫಲ? ಯಸ್. ಯಸ್. ಯಲ್. ಸಿ. ವಿದ್ಯಾರ್ಥಿಗಳ ಮೇಲೆ ಸ್ವಲ್ಪವಾದರೂ ಕರುಣೆ ಬೇಡವೇ?

ಬೋರ್ಡಿನ ರೂಲುಗಳ ವಿಷಯವಂತೂ ಹೇಳುವುದೇ ಬೇಡ. ಒಂದು ವರ್ಷ ಒಂದು ರೂಲಾದರೆ, ಮತ್ತೊಂದು ವರ್ಷ ಬೇರೊಂದಾಗುವುದು! ಪರೀಕ್ಷಾ ಕರ್ತರಿಗಂತೂ ದಯೆಯೇ ಇಲ್ಲ. ಪಾಪ! ಅವರೇಕೆ ಹೆದರಬೇಕು? ಪೆನ್ನಲ್ಲಿ ಕೆಂಪುಶಾಯಿ ಕಡಿಮೆಯಾದರಲ್ಲವೇ? ದೇವರ ದಯೆಯಿಂದ ಅದಕ್ಕೆ ಅವರಿಗೆ ಕಡಿಮೆ ಇಲ್ಲ. ಅವರ ಮನಸ್ಸೇ ಮನಸ್ಸು! ಅವರು ಮಾಡಿದ್ದೇ ಕೆಲಸ! ಅವರು ಕೊಟ್ಟದ್ದೇ ಮಾರ್ಕು!!! ಅಂತು ಇಂತು ವಿದ್ಯಾರ್ಥಿಗಳು ಪಟ್ಟ ಪ್ರಯತ್ನವು ನೀರ ಮೇಲಣ ಹೋಮದಂತೆ.

ಇದೆಲ್ಲಾ ನೋಡಿದರೆ, ಇನ್ನು ಮುಂದೆ ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೇ ಕಷ್ಟ. ಒಂದು ಸಬ್ಜೆಕ್ಟಿನಲ್ಲಿ ಮಾತ್ರ ನಾಲ್ಕೈದು ಮಾರ್ಕು ಕಮ್ಮಿ ಸಿಕ್ಕಿ ತನ್ನ ಒಂದು ವರ್ಷವನ್ನು ಸಂಪೂರ್ಣವಾಗಿ ಹಾಳುಮಾಡಿಕೊಂಡ ವಿದ್ಯಾರ್ಥಿಯು ತನ್ನ ಸಂಕಷ್ಟಗಳನ್ನು ಹೇಗೆ ತಾನೇ ಸಹಿಸಿಕೊಳ್ಳಬೇಕು? ಸರಕಾರವಾದರೂ ಇವರ ಮೊರೆಯನ್ನು ಕೇಳಕೂಡದೇ? ಹೀಗಾದರೆ ಬಡ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಹೇಗೆ ವಿದ್ಯಾಭ್ಯಾಸ ಮಾಡಿಸುವದು?

ಮೊನ್ನೆ ಯಂ. ಯಲ್. ಸಿ. ಗಳಾದರೂ ಇವರ ಗೋಳನ್ನು ಕೇಳಲಾರರೇ? ಈ ಮಹಾತ್ಮರುಗಳು ಕರುಣೆ ಇಟ್ಟು ಕಳೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಒಂಬತ್ತು ಸಾವಿರ ವಿದ್ಯಾರ್ಥಿಗಳ ಪೈಕಿ, ಒಂದು ಸಾವಿರವನ್ನಾದರೂ ಪುನಃ ಪಾಸುಮಾಡುವಂತೆ ಬೋರ್ಡಿಗೆ ತಿಳಿಸುವರೆ ಸರಕಾರವನ್ನು ಕೇಳುತ್ತಿದ್ದರೆ ಬಹಳ ಉಪಕಾರವಿತ್ತು

ಮನ ನೊಂದವ.

ಮತಾಚಾರ.

ಮಹನೀಯರೆ,

ಹಿಂದೂ ಮತದವರಲ್ಲಿ ಲಕ್ಷ್ಯಗಟ್ಟಳೆ ಕರ್ಮವಾದ ಪದ್ಧತಿಯು ಇರುವುದರಿಂದ ನಾನಾ ಅನಾಹುತಗಳು ಇರುವುದೆಂದೂ, ಹಿಂದುಗಳಿಗೆ ಹಾಗೂ ದೇಶಕ್ಕೆ ಕ್ಷೇಮ ಉಂಟಾಗಬೇಕಾದರೆ ಎಲ್ಲರೂ ಒಂದೇ ಮತದವರಾಗಬೇಕೆಂದೂ ದೇಶದ ಎಷ್ಟೋ ಮುಂದಾಳುಗಳು ಕಂಠೋಕ್ತವಾಗಿ ಹೇಳುತ್ತಿರುವರು. ಹೀಗೆ ಎಲ್ಲಾ ಮತದವರೂ ಒಂದಾಗಬೇಕಾದರೆ ಆ (ideal) ಮಾದರಿ ಮತವು ಹ್ಯಾಗಿರಬೇಕು ಎಂಬ ಪ್ರಶ್ನೆಯು ಹುಟ್ಟುತ್ತದೆ. ಆ ನೂತನ ಮತದವರಲ್ಲಿ ಬಾಲ್ಯವಿವಾಹವು ಬಲವಂತದ್ದಾಗಿರಬಾರದು; ವಿಧವಾ ವಿವಾಹವು ಅಗತ್ಯವಾಗಿರಬೇಕು, ವೇಶ್ಯಾಸೇವನೆ ಇರಲೇಬಾರದು; ಮಾಂಸಾಹಾರವನ್ನು ತ್ಯಜಿಸಿರಬೇಕು, ಸದಾ ಸ್ನಾನ ಸಂಧ್ಯಾವಂದನೆ, ಜಪ, ತಪ, ಹೋಮ, ಹವನಗಳನ್ನು ತಿಳಿದದ್ದಾಗಿರಬೇಕು, ಮತ್ತು ಹೊಟ್ಟೆಗೆ ಅನ್ನ, ಮೈಗೆ ಬಟ್ಟೆಯನ್ನು ಯಾವ ವಿಧದಲ್ಲಿಯೇ ಆದರೂ ಹುಟ್ಟಿಸಿಕೊಳ್ಳುವುದಕ್ಕೆ ಅಡ್ಡಿ ಇರಬಾರದು. ಈ ವಿಧದ ಮತವೇ ಸರಿಯಾದ ಹಿಂದೂ ಅಥವಾ ನಿಜವಾಗಿ ಕರೆಯುವದಾದರೆ ವೇದಾಂತ ಮತವೆಂದೆನ್ನಬೇಕು. ಈ ಕಾಲದಲ್ಲಿ ಹಿಂದೂಗಳೆನ್ನಿಸಿಕೊಳ್ಳತಕ್ಕಂತವರೆಲ್ಲರೂ ಈ ಮೇಲಿನ ಕೆಲವು ಪದ್ಧತಿಗಳನ್ನು ಅನುಸರಿಸುವುದಾದರೆ ಹಿಂದೂಗಳ ಏಕೀಕರಣವು ಸುಲಭವಾಗಿಯೇ ಸಾಧಿಸಿ ಹೋಗುವುದು.

ಆದರೆ ಇದು ಸಾಧ್ಯವೇ ಎಂಬ ಪ್ರಶ್ನೆಯು ಕೂಡಲೇ ಹುಟ್ಟಬಹುದು. ಈ ಪದ್ಧತಿಗಳನ್ನೇ ಅನುಸರಿಸಿಕೊಂಡಿರುವ ಒಂದು ಜನಾಂಗವು ಭೂಲೋಕದಲ್ಲಿ ಈಗಲೂ ಇದೇ ಎಂಬುದೇ ಆಶ್ಚರ್ಯವು. ಆದರೆ ಈ ಜನಾಂಗವು ಭೂಲೋಕದಲ್ಲಿರುವ ಎಲ್ಲಾ ಜನಾಂಗಕ್ಕಿಂತ ಅತ್ಯಂತ ಸಣ್ಣದಾಗಿರುವುದು. ಇದರ ಜನ ಸಂಖ್ಯೆಯು ಹೆಚ್ಚು ಕಮ್ಮಿ 500—600 ಆಗಬಹುದು. ಇವರನ್ನು ಅಮ್ಮಕೊಡವರೆಂದು ವಾಡಿಕೆಯಾಗಿ ಈಗ ಕರೆಯುತ್ತಿರುವರು. ಇವರು ನಿಜವಾಗಿಯೂ ಮಲೆಯಾಳ ಸೀಮೆಯ ವರ್ಮಗಳೆಂದೂ ಕೆಲವರು ಹೇಳುವರು.

ಮೂರನೇ ಕರ್ನಾಟಕ ಸೇವಾದಲ ಪರಿಷತ್ತು
ಮತ್ತು
ವ್ಯಾಯಾಮ ವಿದ್ಯಾಪೀಠ ಅನಾವರಣ ಸಮಾರಂಭವು

ಇದೇ ಆಗಸ್ಟ ೧ ನೇ ತಾರೀಖಿಗೆ ಬಾಗಲಕೋಟೆಯಲ್ಲಿ ನಡೆಯುವುವು.

ಅದೇ ಸಮಯದಲ್ಲಿ ಅಲ್ಲಿ

ಈ ಕೆಳಗೆ ಬರೆದ ಪರಿಷತ್ತುಗಳೂ ಪ್ರದರ್ಶನಗಳೂ ನಡೆಯುವುವು.

೧. ಅಖಿಲಭಾರತ ಸ್ವಯಂಸೇವಕ ಮಂಡಳದ ಸಭೆಯು.	೧. ಖಾದೀ ಪ್ರದರ್ಶನ.
೨. ಅಖಿಲಕರ್ನಾಟಕ ಸ್ವಯಂಸೇವಕರ ಪರಿಷತ್ತು.	೨. ವ್ಯಾಯಾಮ ಉಪಕರಣಗಳ ಪ್ರದರ್ಶನ
೩. ಅಖಿಲ ಕರ್ನಾಟಕ ವ್ಯಾಪಾರಸ್ಥರ ಪರಿಷತ್ತು.	೩. ಅಖಿಲ ಕರ್ನಾಟಕ ಐತಿಹಾಸಿಕ ವಸ್ತುಗಳ ಪ್ರದರ್ಶನ.
೪. ಅಖಿಲ ಕರ್ನಾಟಕ ಗಾಯಕರ ಪರಿಷತ್ತು	೪. ಅಖಿಲ ಕರ್ನಾಟಕ ವೃತ್ತಪತ್ರಗಳ ಪ್ರದರ್ಶನ.

ಕರ್ನಾಟಕಾಭಿಮಾನಿಗಳಾದ ಸರ್ವರೂ ಈ ಕಾರ್ಯಗಳಲ್ಲಿ ಭಾಗ ತೆಗೆದುಕೊಂಡು ಅವುಗಳನ್ನು ಉತ್ತಮ ರೀತಿಯಿಂದ ಸಾರುಗಾಣಿಸಬೇಕಾಗಿ ವಿನಂತಿ ಇದೆ.

ನಾ. ಸು. ಹರ್ಡೀಕರ,
ಕಾರ್ಯದರ್ಶಿ, ಕರ್ನಾಟಕ ದಲ.

ಪೂರ್ವದಲ್ಲಿ ಇವರು ಸಾಧಾರಣವಾಗಿ ಒಂದು ಬೇರ್ಪಟ್ಟ ಜನಾಂಗದವರಾಗಿಯೇ ಇದ್ದರೆಂಬುದೂ, ಬ್ರಿಟಿಷ್ ಸರಕಾರದ ಆಳ್ವಿಕೆಯಲ್ಲಿಯೂ, ಅದರ ಈಚೆಗೂ ಅನೇಕರು ಜಾತಿ ಭ್ರಷ್ಟರಾದರೆಂದೂ, ಅವರಲ್ಲನೇಕರು ಈಗ ಕೊಡಗಿನಲ್ಲಿ ಸಿಕ್ಕೊಂಬರು ಎಂದೂ ಚರಿತ್ರೆಯನ್ನು ಪರಿಶೋಧಿಸಿದಂಥ ಕೆಲವರು ಹೇಳುವರು. ಆದರೆ ಅಮ್ಮ ಕೊಡಗರ ಚರಿತ್ರೆಯನ್ನು ಪರಿಶೋಧಿಸುವುದು ಈ ಬಾತ್ಮಿಯ ಕರ್ತವ್ಯವಲ್ಲ. ಅಮ್ಮ ಕೊಡಗರಲ್ಲಿ ರತಕ್ಕಂತ ಕೆಲವು ಒಳ್ಳೆಯ ಪದ್ಧತಿಗಳನ್ನು ತೋರಪಡಿಸುವುದೂ, ಅಮ್ಮ ಕೊಡಗರಲ್ಲಿ ಮತಾಭಿಮಾನವನ್ನು ಹುಟ್ಟಿಸುವುದೂ, ಅಮ್ಮ ಕೊಡಗರ ಹಾಗೆಯೇ ಮೇಲೆ ಹೇಳಿದ ಪದ್ಧತಿಗಳನ್ನು ಅನುಸರಿಸತಕ್ಕಂತ ಇತರರೊಡನೆ ಸಹ ಪಂಕ್ತಿಭೋಜನ, ವಿವಾಹ (Inter-dining & Intermarriage) ಇತ್ಯಾದಿಗಳನ್ನು ಬೆಳೆಸುವುದಕ್ಕೆ ಉತ್ಸಾಹಗೊಳಿಸುವುದೂ ಈ ಬಾತ್ಮಿಯ ಉದ್ದೇಶವಾಗಿದೆ.

ಅಮ್ಮಕೊಡವರು ಬಹಳ ಚಿಕ್ಕ ಜನಾಂಗದವರಾದರೂ, ಇವರೊಳಗೆ ದೊಡ್ಡ ವಿದ್ಯಾವಂತರೂ, ಐಶ್ವರ್ಯವಂತರೂ ಇಲ್ಲದಿದ್ದರೂ, ಪೂರಾ ವಿದ್ಯಾವಿಹೀನರೂ, ಅತ್ಯಂತ ದರಿದ್ರರೂ ಇರುವುದಿಲ್ಲವೆಂದೇ ಹೇಳಬಹುದು. ಇವರಲ್ಲಿ ಶಾಸ್ತ್ರೋಕ್ತವಾದ ನಿತ್ಯ ಸಂಧ್ಯಾವಂದನೆ, ಜಪ ತಪಗಳ ತಿಳುವಳಿಕೆಯು ಬೆಳೆದಿದೆ, ವೇದ ಉಪನಿಷತ್ತುಗಳನ್ನು ಪಠಿಸತಕ್ಕಂತವರೂ ಅಲ್ಲಲ್ಲಿದ್ದಾರೆ: ಬ್ರಾಹ್ಮಣರಲ್ಲಿರುವ ಹಾಗೆ ಬಾಲ್ಯ ವಿವಾಹವು ಬಲತ್ಕಾರವಾದುದಲ್ಲ. ವಿಧವಾ ವಿವಾಹಕ್ಕೆ ಅಡ್ಡಿ ಇಲ್ಲ; ಹೊಟ್ಟೆಪಾಡಿಗಾಗಿ ನೇಗಿಲನ್ನು ಹಿಡಿದು ಹೂಡುವುದು ಬಹಿಷ್ಕಾರವಾಗಿರುವುದಿಲ್ಲ; ಎಲ್ಲಾ ಮತಸ್ಥರೂ ನಿಷೇಧಿಸುವುದಕ್ಕೆ ಪ್ರಯತ್ನ ಪಡುತ್ತಿರುವ ನಿಶಾಸೇವನೆಯು ಸಂಪೂರ್ಣ ವರ್ಜಿಸಲ್ಪಟ್ಟಿದೆ. ಅನೇಕ ವೈದ್ಯರೂ ಮತ್ತು ವಿಜ್ಞಾನ ಶಾಸ್ತ್ರಜ್ಞರೂ ಬೋಧಿಸುವುದಕ್ಕನುಸಾರವಾಗಿ ಅಹಿಂಸಾಹಾರವು ಸ್ವೀಕರಿಸಲ್ಪಟ್ಟಿದೆ. ಈ ಪದ್ಧತಿಗಳಿಗಿಂತಲೂ ಉತ್ತಮವಾದ ಪದ್ಧತಿಯು ಮತ್ತಾವುದು? ಈ ಪದ್ಧತಿಗಳನ್ನು ಅನುಸರಿಸುವ ಜನಾಂಗಕ್ಕಿಂತಲೂ ಉತ್ತಮವಾದ ಜನಾಂಗವು ಮತ್ತಾವುದಿದ್ದರೆ ಅದನ್ನು ಇನ್ನು ಮೇಲೆ ತಿಳಿಯಬೇಕಾಗಿದೆ. ಸದ್ಯಕ್ಕೆ ಎಲ್ಲವರೂ ಅಮ್ಮ ಕೊಡವರಂತೆ! ಆಗ ಪ್ರಸು ಉತ್ತಮವೆಂದು ಭಾವಿಸಬೇಕು. ಪ್ರಯತ್ನಿಸಬೇಕು. ಅಮ್ಮಕೊಡವರು ತಮ್ಮ ಜನಾಂಗವು ಸಣ್ಣದಾಗಿರುವುದರ ದುಷ್ಪರಿಣಾಮವನ್ನು ಮನಸ್ಸಿಗೆ ತಿಳಿದುಕೊಂಡು ತಾವು ಅನುಸರಿಸುವ ಪದ್ಧತಿಗಳನ್ನೇ ಅನುಸರಿಸುವ ಇತರ ಜನಾಂಗದವರೊಡನೆ ಎಲ್ಲಾ ವಿಧದಲ್ಲಿಯೂ ಮಿಶ್ರವಾಗುವುದಕ್ಕೆ ಎಡೆಕೊಡಬೇಕು. ಅಂತೂ ಹಿಂದೂ ದೇಶದ ಹಾಗೂ ಕೊಡಗು ದೇಶದ ಸುಖಕ್ಕಾಗಿ ಮತಸಂಬಂಧವಾದ ಒಂದು ಪರಿವರ್ತನೆ (reform) ಆಗಲೇಬೇಕು.

ಈ ಪರಿವರ್ತನೆಗೆ ಸ್ವಲ್ಪವಾದರೂ ಶ್ರದ್ಧೆ ಇರುವವರು ತಮ್ಮ ಆಲೋಚನೆಗಳನ್ನು ಬಾತ್ಮಿ ಮೂಲಕವಾಗಿ ಮುಂದೆ ತರುವುದು ಅವಶ್ಯವಾಗಿದೆ. ಅಮ್ಮಕೊಡವರು ತಮ್ಮ ನಿದ್ರಾವಸ್ಥೆಯಿಂದ ಜಾಗ್ರತೆಯಾಗಿ ಎಚ್ಚರಗೊಳ್ಳುವುದು ಅವಶ್ಯವಾಗಿದೆ.

'ಹಿಂದು.'

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!!

ಆಲ್ ರಕಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.



ಈ ಇಮಿಟೇಷನ್ ರೇಷ್ಮೆ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವೂ ಇರುವವು. ಉಡಲು ಥಳಥಳಿಸುವಂಥವುಗಳಾಗಿಯೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಕೆಂಪು, ಕರಿ ಮತ್ತು ನೀಲದ ಬಣ್ಣಗಳಲ್ಲಿ ಇರುವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಚೆನ್ನಾಗಿರುವುದಲ್ಲದೆ, ಅಸಲ್ ರೇಷ್ಮೆಯಂತೆ ಕಾಣಿಸುವವು. ಸ್ತ್ರೀಯರಿಗೂ, ಗಣ್ಯರಿಗೂ ಉಡಲು ಲಾಯಖಾದವು. ಕ್ರಯ ರೂ. 4—12—0

ವಿಳಾಸ:—ಲೀಗಲ್ ಟ್ರೇಡಿಂಗ್ ಕಂಪೆನಿ,
52—6 ಪೋ. ಬಾಕ್ಸ್ ನಂ. 243, ಮದರಾಸು.

ಬೆಸ್ಟ್ ಫೌಂಟನ್ ಪೆನ್.



ಈ ಪೆನ್ನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಬಂಗಾರದಂಥ ನಿಬ್ಬು ಹಾಕಿದೆ. ಈ ಪೆನ್ನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಂ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ.—ಕೆ. ಎಸ್ ರಾಧಾಕೃಷ್ಣ ಅಂಡ್ ಬ್ರದರ್ಸ್,
52—6 109. ಚೈನಾ ಬಜಾರ್ ರೋಡ್, ಮದರಾಸ.

Arms, Ammunition and Shooting Requisites !!!



1928 Illustrated Catalogue Just Issued Free on Application !

D. B. B. L. Rifles	Rs.	120	to Rs	2750
S. B. B. L. "	"	35	to "	950.
D. B. B. L. Guns	"	50	to "	1350.
S. B. B. L. "	"	35	to "	275.
D. B. M. L. "	"	45	to "	135.
S. B. M. L. "	"	30	to "	80.
B. L. Revolvers	"	35	to "	350.
Automatic Pistols	"	30	to "	150

Brilliant Search Light Lamp For Shooting. Camping, Fishing and All such other Night Sports and work Rs. 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—13 210 Abdul Rehman Street, BOMBAY.



ಡಿ. ಬಿ. ಬಿ. ಯಲ್. ಕೋವಿಗಳು ರೂ. 75 ರಿಂದ ರೂ. 150/.
ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. 250 .
ಯಸ್. ಬಿ. ಯಮ್. ಯಲ್. ಕೋವಿಗಳು ರೂ. 35 ರಿಂದ 65/.
ರಿವಾಲ್ವರ್‌ಗಳು. ರೂ. 40/ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟೆ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.
ದ. ಹಿಂದೂಸ್ಥಾನದ ಬಹು ಹಳೇ ಕೋವಿ ಕಂಪೆನಿ.
24—4 12. ಬ್ರಾಡ್ವೇ, ಮದ್ರಾಸ್
(ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯುವದು ಉತ್ತಮ)

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.

'ದಿಲ್' ಬಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
ಶಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
'ಮೋಸ್ಟೀಂ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
'ಮಹರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಟು ಬಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್‌ಗಳು.

ಬ್ಲಾಕ್ ಬರ್ಡ್ ಫೌಂಟನ್ ಪೆನ್ 1ಕ್ಕೆ	3—8—0 ಮತ್ತು 3—12—0
ಪರ್ಲ್ಸ್ ವಂಡರ್ ಫೌಂಟನ್ ಪೆನ್ 1ಕ್ಕೆ	3—0—0 ಮತ್ತು 3—8—0
ಕಾಂಪ್ಯಾಕ್ಟ್ ಸೆಪ್ಟ್ಯೂನ್ ಫೌಂಟನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ	8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್ 1ಕ್ಕೆ	12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ವೆಸ್ಟಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9—6—0
ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ	6—12—0
ಅನ್ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
52—3 ಹಾರ್ಮೋನಿಯಂ ಮತ್ತು ...

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	15,510
ಜಮೂಬಂದ ಠೇವಣಾತಿ	—	1,02,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು,	**ಟ್ರೆಜರರ್.**
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	**ಕೊಂಗೆಟ್ಟಿರ ಅಪ್ಪಯ್ಯನವರು.**

ಸೆಕ್ರೆಟರಿ
ಸಿ. ಯೆಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೇಕಡ ಅಗ್ಗಯ್ಯನವರು.

ಸಬ್ ಏಜೆಂಟರುಗಳು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ■ಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಸಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.
(52—42) **'Please write for our Catalogue 1928—1929.**

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0; 6ಕ್ಕೆ ರೂ 7—8—0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಬಿಳಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದ ಬಿಚ್ಚುವ ನೋವು. ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1—1—0 3—8—0, 6—12—0.

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ:—ಮನೋಲ್ಲಾಸಿನಿ ಕಂಪೆನಿ.

52—38 9. ಮಂಗಳೂರು.

ಶಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಛಲೋ ರೀತಿಯಿಂದಲೂ, ತ್ವರಿತವಾಗಿಯೂ ಗ್ಯಾರೆಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಜಿಂಜ್ ದೇವಚಂದ್,
ಜ್ವಲ್ಲರ್, (ಕೆಟಲಾಗ್ ಮುಫತ್).
12—5 21 ಚೈನಾ ಬಜಾರ್ ರೋಡ್, ಮದರಾಸು.

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1928ನೇ ಇಸವಿ ಫೆಬ್ರವರಿ 29ಕ್ಕೆ ಆಖೈರಾದ 5 ವರ್ಷಗಳಲ್ಲಿ ಕಂಪನಿಗೆ ಲಾಭದ ಉತ್ಪತ್ತಿ.

ಹೊಸ ಪಾಲಿಸಿಗಳು ಮೀರಿವೆ	ರೂ.	1,16,00,000.
ವರಮಾನ ಮೀರಿದೆ	ರೂ.	54,95,000.
ಕಂಪೆನಿ ಆಸ್ತಿ ಮೀರಿದೆ	ರೂ.	3,15,64,000.

ಬೇಕಾಗಿದೆ:—ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು.

ಹೆಡ್ ಆಫೀಸು.		ಬ್ರಾಂಚ್ ಆಫೀಸು.
ಎಂಪಯರ್ ಆಫ್ ಇಂಡಿಯಾ		**ಕಮರ್ಶಿಯಲ್ ಬೀದಿ**
ಲೈಫ್ ಬಿಲ್ಡಿಂಗ್, ಬೊಂಬಾಯಿ.	24—1	**ಬೆಂಗಳೂರು.**

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	—	13545	—	ರೂ.	2,96,42,000.
1926	—	17371	—	ರೂ.	3,91,39,000.
1927	—	21418	—	ರೂ.	4,68,04,075.

— ಪ್ರೀಮಿಯಂ ಉತ್ಪತ್ತಿ —

1925	—	ರೂ.	92,66,000.
1926	—	ರೂ.	1,05,33,000.
1927	—	ರೂ.	1,21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.
ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ.
ಜೀವವಿಮೆ ಮಾಡಬೇಕೆಂದಿರುವವರು ತಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್,		ಎಲ್. ಆರ್. ಕೃಷ್ಣಸ್ವಾಮಯ್ಯರ್,
ಸೌತ್ ಪರೇಡ್, ಬೆಂಗಳೂರು.	52—11	ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

Reg No. M. 3.0.

If not delivered please return to "KODAGU" OFFICE MERCARA

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮]   ಮಡಿಕೇರಿ, ... ಶುಕ್ರವಾರ   [ಸಂಚಿಕೆ ೩

ESTATE REQUISITES

5 lbs Yates' hammer headed mamooties	Rs 3 0 0 Each	Weeding forks @	Rs 1 4 0 Each
4½ " " " " "	" 2 14 0 "	Garden trowels "	Rs 1 1 0 "
4 " " " " "	" 2 12 0 "	Pick axes "	Rs 1 8 0 "
Felling axes at Rs 3 0 0 &	" 3 4 0 "	Bill hooks "	Rs 3 11 0 "
Grubbing mattocks at	" 3 1 0 "	Digging forks "	Rs 4 0 0 "

MONSOON EQUIPPMENT.

Planter boots	Rs 16 8 0	Dales' dubbin per tin	Rs 0 8 0
Maris' oil (water proof) per tin	Rs 2 0 0	Umbrellas	Rs 4 8 0

22—38

SPENCER & CO. LTD. General Merchants **MERCARA.**



V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES

Post Box 423,
TRIPLICANE, MADRAS.

Catalogue Free
to Bonafide Enquirers



Manufacture of
HIGH CLASS
GEMSET JEWELS.
a speciality

52—43

The special features
of my products are:—
1 Best QUALITY
2 Latest designs
3 Prompt attention
4 Neat workmanship
5 Most moderate prices

GOLD
or
SILVERWARE
Full decorations
neatly executed.



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

24—19   *Bombay, 3.*

ರೋಗ

ಎ ಗನ್ನು ಮಿ ಕ್ ಶ್ಚರ್.

ಮಲೇರಿಯಾ, ಇನ್‌ಫ್ಲುಯೆಂಜಾ ಸಹಿತವಾದ ... ಜ್ವರ ... ಇದರಿಂದ ... ಚಳಿ ... ಬಾಟ್ಳಿಗೆ ...

ಟಪಾಲು ವೆಚ್ಚ ಬೇರೆ

ಕಾ ರ ನಾ ವ ಠಿ ಲಾ.

... ಇದು ... ಬಾಟ್ಳಿಗೆ ... ಟಪಾಲು ವೆಚ್ಚ ಬೇರೆ.

...

12—3   ...

... ಮುಂಬಾಯಿ.

ಕೊಡಗು.

ಸನ್ ೧೯೨೮ ನೇ ಇಸವಿ

ಜುಲೈ ತಾ. ೬ ನೇ ಶುಕ್ರವಾರ.

ವ್ಯವಸಾಯ ಕಮಿಷನ್.

ಹಿಂದೂದೇಶದ ಈಗಿನ ವೈಸರಾಯರಾದ ಲಾರ್ಡ್ ಅರ್ವಿನ್‌ರವರು ವ್ಯವಸಾಯ ಕಸಬಿನಲ್ಲಿ ತುಂಬಾ ಅಭಿರುಚಿ ಇರುವವರಾದ ಕಾರಣ ಇವರು ಹಿಂದೂ ದೇಶಕ್ಕೆ ಬಂದ ಕೂಡಲೆ ಏಕೇ ಕೃಷಿ ಕಸಬಿನ ದೇಶವಾದ ಈ ಭಾರತ ಭೂಮಿಯ ವ್ಯವಸಾಯಗಾರರ ಸ್ಥಿತಿಯನ್ನು ಅಭಿವೃದ್ಧಿಗೊಳಿಸಬೇಕೆಂಬ ಅಭಿಲಾಷೆಯು ಅವರಿಗೆ ಹುಟ್ಟಿತು. ಅದರ ಮೇಲೆ ಚಕ್ರವರ್ತಿಯವರು ಈ ವಿಷಯ ಸವಿಸ್ತಾರವಾಗಿ ವಿಚಾರಿಸಿ, ಅಭಿವೃದ್ಧಿಯ ದಾರಿಗಳನ್ನು ಸೂಚಿಸುವದಕ್ಕಾಗಿ ಒಂದು ರಾಯಲ್ ಕಮಿಷನನ್ನು ನೇಮಿಸಿದರು. ಐದು ಇಂಗ್ಲಿಷ್ ಮತ್ತು ಐದು ಹಿಂದೀಯ ಮೆಂಬರುಗಳ ಈ ಕಮಿಷನಿಗೆ ಲಾರ್ಡ್ ಲಿನ್ಲಿತ್ಗೋರವರು ಅಧ್ಯಕ್ಷರಾಗಿದ್ದರು. ಈ ಕಮಿಷನಿನ ಒಡನಾಟದಲ್ಲಿ ಗಂಗಾರಾಮ್‌ರೆಂಬ ಹಿಂದೀಯ ಮೆಂಬರೊಬ್ಬರು ಕೈಲಾಸವಾಸಿಗಳಾದರು. ಕಮಿಷನಿನ ಪ್ರವಾಸಕ್ಕಾಗಿ ವರದಿ ಪ್ರಕಟವಾಗುವಷ್ಟರ ವರೆಗೆ ಹಲವು ಲಕ್ಷ ರೂಪಾಯಿಗಳು ವೆಚ್ಚವಾಗಿ ಹೋದವು. ಅದಕ್ಕೆ ಸರಿಯಾಗಿ ಅವರು ಸುಮಾರು 700 ಪುಟಗಳುಳ್ಳ ಒಂದು ದೀರ್ಘ ವರದಿಯನ್ನು ಬರೆದಿರುವರು. ಅದು ಮೊನ್ನೆ ತಾನೇ ಪ್ರಕಟವಾಗಿದೆ.

ಈ ವರದಿಯಲ್ಲಿರುವ ಮುಖ್ಯ ಸಿಫಾರಸ್ಸುಗಳನ್ನು ಬಹು ಸಂಕ್ಷೇಪವಾಗಿ ಮಾತ್ರ ಇಲ್ಲಿ ಕೊಡಲು ಸಾಧ್ಯವಿದೆಯಷ್ಟೆ. 'ಕೃಷಿಯ ಅಭಿವೃದ್ಧಿಯು ಪರಿಶೋಧನೆಯಲ್ಲಿದೆ. ಇಡೀ ಹಿಂದೂಸ್ಥಾನಕ್ಕೆ ವ್ಯವಸಾಯ ಪರಿಶೋಧನೆಯ ಇಂಪೀರಿಯಲ್ ಕೌನ್ಸಿಲೊಂದು ಇರಬೇಕು. ಇದರೊಂದಿಗೆ ಸಹಕರಿಸಿ ಕೆಲಸಮಾಡಲು ಪ್ರಾಂತೀಕ ಕಮಿಟಿಗಳಿರಬೇಕು. ಈಗಿರುವ ಸ್ಥಿತಿಯ ಪ್ರಕಾರ ಹಿಂದೂದೇಶದ ಮಣ್ಣಿನ ಸಾರವು ಈಗಿನದಕ್ಕಿಂತ ಹೆಚ್ಚು ಹಾಳಾಗುವಂತಿಲ್ಲ. ಬೆಳೆಗಳಿಗೆ ರೋಗ, ಹುಳ ಮತ್ತು ಕಾಡು ಮೃಗಗಳಿಂದ ಉಂಟಾಗುವ ನಷ್ಟವನ್ನು ನಿವಾರಿಸಲು ಅದಕ್ಕೆ ಸಂಬಂಧಪಟ್ಟ ಇಲಾಖೆಗಳ ಸಿಬ್ಬಂದಿಗಳನ್ನು ಹೆಚ್ಚಿಸಬೇಕು. ಗ್ರಾಮಗಳಲ್ಲಿ ಪ್ರದರ್ಶನ ಮತ್ತು ಪ್ರಚಾರಕ ಕೆಲಸಗಳನ್ನು ನಡಿಸಬೇಕು. ವ್ಯವಸಾಯ ಸಂಘಗಳಿಗೆ ಸರ್ಕಾರದವರು ಗ್ರಾಂಟ್‌ಗಳನ್ನು ಕೊಡಬೇಕು. ಸಿಂಧು ಪ್ರಾಂತ್ಯ, ಪಂಜಾಬು ಮತ್ತು ಬಂಗಾಲ್ ಪ್ರದೇಶಗಳಲ್ಲಿ ಅಲ್ಲದೆ ಹಿಂದೂ ದೇಶದ ಬಾಕಿ ಎಲ್ಲಾ ಕಡೆಗಳಲ್ಲಿಯೂ ಜಾನುವಾರುಗಳು ಬಹಳ ಹೀನ ಸ್ಥಿತಿಯಲ್ಲಿರುವದು. ಕಾಡಿನ ಮೇಯ ಭೂಮಿ ಮತ್ತು ಪೈಸಾರಿಗಳಲ್ಲಿ ದನ ಮೇಯಿಸುವದು ಪಂಚಾಯತರ ಅಧಿಕಾರದಲ್ಲಿರತಕ್ಕದ್ದು. ಕೆಲವು ಯೋಗ್ಯ ಸ್ಥಳಗಳಲ್ಲಿ ಉತ್ತಮ ತಳಿ ಇಳಿಸುವ ಪ್ರಯತ್ನಗಳನ್ನು ನಡಿಸಬೇಕು. ಮುನ್ಸಿಪಾಲಿಟಿಯವರು ಜನರಿಗೆ ಹಾಲು ಒದಗಿಸಿ ಕೊಡಲು ಕರೋಟಿಗಳನ್ನು ಇಡಲು ಉತ್ತೇಜನ ಕೊಡಬೇಕು. ಫಾರೆಸ್ಟಿನಿಂದ ವ್ಯವಸಾಯಗಾರರಿಗೆ ಆಗುವಷ್ಟು ಸಹಾಯ ಒದಗಿಸಿ ಕೊಡುವದಕ್ಕೆ ಒಬ್ಬ ಪ್ರತ್ಯೇಕ ಉದ್ಯೋಗಸ್ಥನನ್ನು ಇಡುವದು ಉತ್ತಮ. ಜಾನುವಾರುಗಳಿಗೆ ಯಾವ ಕಾಯಿಲೆಯೇ ಆಗಲಿ ಡಾಕು ಹಾಕುವ ಚಾರ್ಜನ್ನು ಸರ್ಕಾರದವರು ಜನರಿಂದ ತೆಗೆದುಕೊಳ್ಳಬಾರದು. ವೆಟರಿನರಿ ಇಲಾಖೆಯನ್ನು ವಿಸ್ತರಿಸಬೇಕು. ಕೃಷಿ ಕೆಲಸಕ್ಕೆ ನೀರಿನ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಯತ್ನಿಸಬೇಕು. ದವಸ ಧಾನ್ಯಗಳಿಗೆ ಸರಿಯಾದ ಮಾರಾಟ ದೊರೆಯುವಂತೆ ಸಹಾಯ ಮಾಡಲು ಪ್ರತ್ಯೇಕ ಉದ್ಯೋಗಸ್ಥರಿರತಕ್ಕದ್ದು. ಸಹಕಾರಿ ಚಳವಳದ ಪ್ರಯೋಜನವು ಸಂಖ್ಯೆಗಳಿಂದ ಗೊತ್ತಾಗುವದಿಲ್ಲ, ಗುಣದಿಂದ ತಿಳಿಯಬೇಕಷ್ಟೆ. ದೀರ್ಘ ವಾಯಿದೆಯ ಸಾಲ ಕೊಡಲು ಗ್ರಾಮ ಸಂಘಗಳು ಯೋಗ್ಯವಾದ ಸಂಸ್ಥೆಗಳಲ್ಲ. ಭೂಮಿ ಗಿರ್ವಿಯ ಬ್ಯಾಂಕುಗಳನ್ನು ಸ್ಥಾಪಿಸುವದು ಉತ್ತಮ. ಗ್ರಾಮಗಳಲ್ಲಿ ವಿದ್ಯಾ ಪ್ರಚಾರವು ಸಾಕಷ್ಟು ಆಗಿರುವದಿಲ್ಲ. ಅದರಲ್ಲೂ ಸ್ತ್ರೀ ವಿದ್ಯಾಭ್ಯಾಸವು ಬಹಳ ಕಡಿಮೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ನಿಗ ಕೊಡಬೇಕು. ಕಡ್ಡಾಯವಾಗಿ ವಿದ್ಯೆ ಕಲಿಸುವದನ್ನು ಜಾರಿಗೆ ತರುವದು ಉತ್ತಮ. ವ್ಯವಸಾಯಾಭಿವೃದ್ಧಿಯು ರೈತರ ವಿದ್ಯಾಭ್ಯಾಸದ ಮೇಲೆ ತುಂಬಾ ಹೊಂದಿದೆ. ವ್ಯವಸಾಯದೊಂದಿಗೆ ಎರಡನೇ ಕಸಬನ್ನು ನಡಿಸುವದು ಅವಶ್ಯ. ಕೋಳಿ ಸಾಕುವ ಕಸಬು ಒಳ್ಳೇ ಉದಾಹರಣೆಯಾಗಿದೆ. ಹಣ್ಣು ಹಂಪಲುಗಳ ಬೆಳವಣಿಗೆಯನ್ನು ಕುರಿತು ಪರಿಶೋಧಿಸಬೇಕೆಂದೂ ಸೂಚಿಸಿರುವರು.

ವ್ಯವಸಾಯಗಾರರ ಅಭಿವೃದ್ಧಿಗೆ ಸಂಬಂಧಿಸುವ ಎರಡು ಮುಖ್ಯ ಸಂಗತಿಗಳು ಈ ವರದಿಯಲ್ಲಿ ಕಂಡುಬರುವದಿಲ್ಲ. ಇವು ಸರ್ಕಾರಕ್ಕೆ ಕೊಡುವ ಭೂಕಂದಾಯ ಮತ್ತು ಭೂಮಿ ಹಿಡುವಳಿಯ ಹಕ್ಕು. ಕಂದಾಯದ ಭಾರವನ್ನು ಹೊರಲಾರದೆ ಎಷ್ಟೋ ರೈತರು ಸಾಲಕ್ಕೆ ಒಗ್ಗಿ ಹೋಗಿರುವರು. ಇದರ ಹೊರೆಯನ್ನು ಕಡಿಮೆ ಮಾಡಲು ಕಮಿಷನಿನವರು ಒಂದೂ ಸಿಫಾರಸ್ಸು ಮಾಡದೆ ಇರುವಲ್ಲಿ ಕೃಷಿಕರ ಸ್ಥಿತಿಯು ಕೂಡಲೇ ಉತ್ತಮವಾಗುವ ಸಂಭವ ಬಹು ಸ್ವಲ್ಪವೆಂತೇ ತೋರುತ್ತದೆ. ಆದರೆ ಈ ಪ್ರಮುಖ್ಯ ಸಂಗತಿಗಳನ್ನು ಕುರಿತು ವಿಚಾರಿಸಲು ಕಮಿಷನವರಿಗೆ ಅಧಿಕಾರ ಕೊಡದಿಲ್ಲವಾದ ಕಾರಣ ಇವುಗಳ ವಿಷಯ ಬರೆಯದ್ದು ಅವರ ತಪ್ಪಲ್ಲ.

ಗ್ರಾಮನಿವಾಸಿಗಳ ವಿದ್ಯಾಭ್ಯಾಸ, ಗ್ರಾಮಾಂತರಗಳ ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರು ಒದಗಿಸುವಿಕೆ, ದವಸ ಧಾನ್ಯಗಳಿಗೆ ಸರಿಯಾದ ಮಾರಾಟ ದೊರಕಿಸಿಕೊಡುವಿಕೆ ಮೊದಲಾದ ವಿಷಯಗಳಲ್ಲಿ ಸರ್ಕಾರದವರು ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ಮಾಡಿರುವದಿಲ್ಲವೆಂದು ವರದಿಯಲ್ಲಿ ಕಂಡುಬರುವ ಸೂಚನೆಗಳು ನಿಜವಾದವೆಂದು ಯಾರು ತಾನೇ ಒಪ್ಪದಿರುವರು. ಇವುಗಳಿಗೆಲ್ಲಾ ಇಸ್ತಾದರೂ ಒಡನೆ ಗಮನಕೊಡಬೇಕೆಂದು ಕಮಿಷನವರು ಮಾಡಿರುವ ಸಿಫಾರಸ್ಸಿಗೆ ಸರ್ಕಾರದವರು ಎಷ್ಟರ ಮಟ್ಟಿಗೆ ಮನ್ನಣೆ ಕೊಡುತ್ತಾರೆಂದು ಇನ್ನು ನೋಡಬೇಕಷ್ಟೆ.

ಗ್ರಾಮಾಭಿವೃದ್ಧಿಯಾಗಬೇಕಾದರೆ ಗ್ರಾಮವಾಸಿಗಳಿಗೆ ಉತ್ತಮ ಜೀವನ ಕ್ರಮದ ಮೇಲೆ ಆಶೆ ಹುಟ್ಟಿಸಬೇಕು. ಅಂಥಾ ಆಶೆ ಹುಟ್ಟಿಸಲು ಗ್ರಾಮಗಳ ಸಾಮಾನ್ಯ ಸ್ಥಿತಿಯನ್ನು ಅಭಿವೃದ್ಧಿಗೊಳಿಸಬೇಕು. ಹೀಗೆ ಮಾಡುವದು ಸರ್ಕಾರದವರ ಕರ್ತವ್ಯವೆಂಬುದರಲ್ಲಿ ಸಂಶಯವಿಲ್ಲ. ಜನಗಳ ಜಡತ್ವವನ್ನು ಹೋಗಲಾಡಿಸಲು ಸರ್ಕಾರದವರು ಗ್ರಾಮಾಭಿವೃದ್ಧಿಯ ಕಡೆಗೆ ಸರ್ವಸಾಧನಗಳನ್ನೂ ಉಪಯೋಗಿಸಬೇಕು. ಗ್ರಾಮಜೀವನಕ್ಕೆ ಸಂಬಂಧಿಸುವಂಥ ಎಲ್ಲಾ ಇಲಾಖೆಗಳು ಇದಕ್ಕೆ ಎಡೆಬಿಡದೆ ಪ್ರಯತ್ನಿಸಬೇಕಾದದ್ದು ಅವಶ್ಯ' ಎಂದು ವರದಿಯಲ್ಲಿ ಬರೆಯಲ್ಪಟ್ಟಿದೆ. ತಮ್ಮ ಕೃಷಿಕ ಪ್ರಜೆಗಳ ಕಡೆಗೆ ಸರ್ಕಾರದವರ ಧರ್ಮವು ಯಾವದು ಎಂಬುದನ್ನು ಕಮಿಷನಿನವರು ಈ ಮಾತುಗಳಿಂದ ವಿಶದ ಪಡಿಸಿರುವದು ಸ್ತೋತ್ರಾರ್ಹವೆ. ಆದರೆ 'ಸರ್ಕಾರದವರು ಎಷ್ಟು ಪ್ರಯತ್ನಿಸಿದರೂ, ವಿಶಾಲವಾದ ಹಿಂದೂಸ್ಥಾನದ ದೊಡ್ಡ ಜನಸಂಖ್ಯೆಯ ಏಳಿಗೆಯನ್ನು ಸಾಧಿಸುವದು ಕಷ್ಟವು. ಆದುದರಿಂದ ಹಿಂದೀಯರಿಗೆ ಸ್ವಭಾವಿಕವಾಗಿದ್ದ ಮತ್ತು ಈಗಲೂ ಕೆಲವು ಕಡೆಗಳಲ್ಲಿ ಕಂಡುಬರುವ ಪರಸ್ಪರ ಪ್ರಯೋಜನಕ್ಕಾಗಿ ಸಾರ್ವಜನಿಕ ಕೆಲಸವು ಮುಂದು ವರಿಯುವಂತೆ ಮಾಡಬೇಕು. ಇದು ಸಾಧ್ಯವಿಲ್ಲದಿದ್ದರೆ ಗ್ರಾಮ ಜೀವನವನ್ನು ಉತ್ತಮಗೊಳಿಸುವ ಆಶೆಯನ್ನು ಬಿಟ್ಟು ಬಿಡಬೇಕೆಂದು ಹೇಳಿರುವರು. ಇದೂ ಸರ್ಕಾರದಿಂದ ನೇಮಿಸಲ್ಪಟ್ಟ ಕಮಿಷನಲ್ಲವೇ? ಆದುದರಿಂದ ಅವರು ಹೇಗೆ ತಾನೇ ಅಪ್ಪೇರು. ಜವಾಬ್ದಾರಿಯನ್ನು ಸರ್ಕಾರದ ಮೇಲೆ ಹೊರಿಸಿಯಾರು! ಜನರ ಮೇಲೆ ಜವಾಬ್ದಾರಿಯನ್ನು ಹೊರಿಸದೆ ಹೋದರೆ, ಸರ್ಕಾರದವರು ತಮ್ಮ ಶೈಯ್ಯಲ್ಲಾದ ಪ್ರಯತ್ನಗಳನ್ನೂ, ಸಹಾಯಗಳನ್ನೂ ಮಾಡಿದರು. ಆದರೆ ಜನರು ಸಹಕರಿಸಲಿಲ್ಲ ಮತ್ತು ಮುಂದು ಬರಲಿಲ್ಲ. ಅವುಗಳಿಂದ ಸರಿಯಾದ ಪ್ರಯೋಜನಗಳನ್ನು ಹೊಂದಿಕೊಳ್ಳಲಿಲ್ಲವಾದುದರಿಂದ ಗ್ರಾಮಜೀವನವು ಉತ್ತಮವಾಗುವದೆಂತು' ಎಂದು ಅಂತ್ಯದಲ್ಲಿ ನೆಪವನ್ನು ಹೇಳಲು ಅನುಕೂಲ ದೊರೆಯುವದೇ?

ಬಾರ್ಡೋಲಿ ಸತ್ಯಾಗ್ರಹ.

ಬಾರ್ಡೋಲಿಯಲ್ಲಿ ವೀರ ರೈತರು, ಸರ್ಕಾರದವರು ಅವರ ಮೇಲೆ ತಕ್ಕ ವಿಚಾರವಿಲ್ಲದೆ ಹೊರಿಸಿರುವ ಹೆಚ್ಚಿನ ಕಂದಾಯವನ್ನು ಕೊಡದೆ ನಡಿಸುತ್ತಿರುವ ಹೋರಾಟದ ವಿಷಯ ಎರಡು ವಾರಗಳ ಹಿಂದೆ ವಿಸ್ತಾರವಾಗಿ ಬರೆದಿದ್ದೆವು. ನಂತರ 'ಇಂಡಿಯನ್ ಮರ್ಚಂಟ್ಸ್ ಚೇಂಬರಿನವರು ಸರ್ಕಾರಕ್ಕೂ ಈ ಸತ್ಯಾಗ್ರಹಿಗಳಿಗೂ ರಾಜಿ ಸಂಧಾನಗಳನ್ನು ನಡಿಸಲು ಯತ್ನಿಸಿದರು. ಸದರಿ ಚೇಂಬರಿನ ಪ್ರತಿನಿಧಿಗಳು ಈ ಚಳವಳಕ್ಕೆ ಉತ್ತೇಜನವನ್ನು ಕೊಡುತ್ತಿರುವ ಮಹಾತ್ಮ ಗಾಂಧಿಯವರನ್ನೂ, ಇದನ್ನು ಮುಂದಾಳಾಗಿ ನಿಂತು ನಡೆಸುತ್ತಿರುವ ಶ್ರೀ ವಲ್ಲಭಾಯಿ ಪಟೇಲರವರನ್ನೂ ಮೊದಲು ಕಂಡು ಮಾತಾಡಿ, ನಂತರ ಬೊಂಬಾಯಿ ಗವರ್ನರೊಂದಿಗೆ ಸಂಭಾಷಣೆಯನ್ನು ನಡಿಸಿದರು. ಪ್ರಥಮದಲ್ಲಿ ಎಲ್ಲವೂ ಗುಟ್ಟಾಗಿದ್ದು ರಾಜಿಯಾಗುವ ಸಂಭವದೆಯೆಂದು ತೋರಿಬಂತು. ಸರ್ಕಾರದವರು ಜಪ್ತಿಯ ಕೆಲಸವನ್ನು ತತ್ಕಾಲ ನಿಲ್ಲಿಸಿದ್ದರು. ಆದರೆ ಇತ್ತೀಚಾಗಿ ಸರ್ಕಾರದವರು ರಾಜಿಗೆ ಒಪ್ಪುವದಿಲ್ಲವೆಂದು ತಿಳಿಯಬರಲಾಗಿ ಎರಡು ಪಕ್ಷದವರಿಗೂ ಮರ್ಯಾದೆಯಿಂದ ತೀರ್ಮಾನಿಸಿಕೊಳ್ಳಬೇಕೆಂದು ನಿರೀಕ್ಷಿಸುತ್ತಿದ್ದ ಹಲವು ಮಂದಿಗಳಿಗೆ ನಿರಾಶೆಯುಂಟಾಗಿದೆ. ಆದರೆ ರಣರಂಗಕ್ಕೆ ಇಳಿದಿರುವ ಸತ್ಯಾಗ್ರಹಿಗಳಿಗೆ ಧೈರ್ಯವೇನೂ ಕುಂದಿರುವದಿಲ್ಲ.

ನಮ್ಮ ಈ ಮೊದಲಿನ ಲೇಖನದಲ್ಲಿ ಬರೆದಿದ್ದಂತೆ ಮಿ. ಮುನ್ಶಿಯವರು ಸೂಚಿಸಿದ್ದ ಮೇರೆ ಬಿನ್ ಉದ್ಯೋಗಸ್ಥರ ಖಾಸ್ಗಿ ಕಮಿಟಿಯವರು ಬಾರ್ಡೋಲಿಯಲ್ಲಿ ವಿಚಾರದ ಕೆಲಸವನ್ನು ಪ್ರಾರಂಭಿಸಿರುವರು. ಸರ್ಕಾರಿ ಉದ್ಯೋಗಸ್ಥರು ಈ ಕಮಿಟಿಯ ಕೆಲಸಕ್ಕೆ ಸಹಾಯ ಕೊಡಬೇಕೆಂದು ಕಮಿಟಿಯ ಸೆಕ್ರೆಟರಿಯವರು ಬರೆದದಕ್ಕೆ ಸರ್ಕಾರದವರು ಸಹಾಯ ಕೊಡಲು ತಿರಸ್ಕರಿಸಿರುವರು. ಖಾಸ್ಗಿ ಕಮಿಟಿಯವರು ತಮ್ಮ ಕೆಲಸವನ್ನು ಮುಂದುವರಿಸುತ್ತಿರುವರು. ತಮ್ಮ ಆರ್ಥಿಕ ಸ್ಥಿತಿಯ ಸರಿಯಾದ ಲೆಕ್ಕ ಹಾಕದೆ ಕಂದಾಯವನ್ನು ಹೆಚ್ಚಿಸಿರುವದಾಗಿದೆಯೆಂದೂ, ಆದುದರಿಂದ ಅದನ್ನು ಪುನಹ ವಿಚಾರಿಸಬೇಕೆಂಬುದೇ ಅಲ್ಲಿಯ ರೈತರ ವಾದವಾಗಿದೆ. ಹಾಗೆ ವಿಚಾರಿಸಿ ನ್ಯಾಯವಾದ ಲೆಕ್ಕವನ್ನು ಕಂಡುಹಿಡಿಯಲು 'ನ್ಯಾಯ ಪ್ರಿಯರು' ರೆಂದೆಂದುಕೊಳ್ಳುವ ಸರ್ಕಾರದವರು ಯಾಕೆ ತಿರಸ್ಕರಿಸಬೇಕೆಂಬುದು ಗೊತ್ತಾಗುವದಿಲ್ಲ. ಇಲ್ಲಿ ಪುನಹ ತಮ್ಮ 'ಗೌರವ' ವನ್ನು ಕಾಪಾಡಲೋಸುಗ ನ್ಯಾಯಶೀಲತೆಯನ್ನೂ ಕೂಡ ಬಿಟ್ಟು ಹಾಕಲು ಸರ್ಕಾರದವರು ಹಿಂಜರಿಯದಂತೆ ತೋರುತ್ತದಲ್ಲವೇ?

ಹೇಗೂ ಬಾರ್ಡೋಲಿ ಸತ್ಯಾಗ್ರಹ ಚಳವಳವು ಉಗ್ರಸ್ಥಾನಕ್ಕೆ ಏರಿದೆ. ಅದರ ಸಿಪಾಯಿಗಳು (ವ್ಯವಸಾಯಗಾರರು) ದೃಢಮನಸ್ಸಿನಿಂದ ಹೋರಾಡುತ್ತಿರುವರು. ಸಂಪೂರ್ಣ ಅಹಿಂಸಾತತ್ವದಿಂದ ನಡಿಸಲ್ಪಡುತ್ತಿರುವ ಈ ಹೋರಾಟವು ಜಯಹೊಂದದೆ ಇರಲಿಕ್ಕಿಲ್ಲ. ಆದರೆ ಈ ಸ್ವಾತಂತ್ರ್ಯಯುದ್ಧದ ಜಯದಲ್ಲಿ ಬಾರ್ಡೋಲಿ ನಿವಾಸಿಗಳೇ ಮಾತ್ರವಲ್ಲ ಇಡೀ ಹಿಂದೂಸ್ಥಾನದವರೂ ಭಾಗಿಗಳಾಗುವಂತೆ ಭಾರತ ಭೂಮಿಯ ಎಲ್ಲಾ ಭಾಗಗಳಿಂದಲೂ ಈ ಚಳವಳಕ್ಕೆ ಸಹಾಯವು ಕಳುಹಿಸಲ್ಪಡುತ್ತಿದೆ. ನಮ್ಮ ಈ ಪ್ರಾಂತ್ಯದಿಂದಲೂ ಅಲ್ಲಲ್ಲಿ ಹಲ ಕೆಲವರು ಧನ ಸಹಾಯ ಕಳುಹಿಸಿರುವರೆಂದು ಕೇಳಿ ಸಂತೋಷಪಡುತ್ತೇವೆ. ಇದು ಬಹಳ ಸ್ವಲ್ಪವಾದ ಕಾರಣ, ತಮ್ಮ ದೇಶವನ್ನು ಪ್ರಜೆಗಳ ಅಭಿಪ್ರಾಯಕ್ಕನುಸಾರವಾಗಿ ನಡಿಸುವಂತ ಸ್ವತಂತ್ರ ಸರ್ಕಾರವು ದೊರೆಯಬೇಕೆಂದು ಇಚ್ಛಿಸುವ ಪ್ರತಿಯೊಬ್ಬನೂ ಬಾರ್ಡೋಲಿ ಸತ್ಯಾಗ್ರಹ ಫಂಡಿಗೆ ದ್ರವ್ಯ ಸಹಾಯವನ್ನು ಮಾಡಿ ಸ್ವಾತಂತ್ರ್ಯಕ್ಕಾಗಿ ಎಲ್ಲವನ್ನೂ ಕಳಕೊಳ್ಳಲು ತಯಾರಾಗಿರುವ ನಮ್ಮ ಬಾರ್ಡೋಲಿ ಸಹೋದರರಿಗೆ ಉತ್ತೇಜನ ಕೊಡಬೇಕಾಗಿ ಪುನಹ ಕೇಳಿಕೊಳ್ಳುತ್ತೇವೆ.

« ಕೊಡಗು » ಕಂಪೆನಿಯ ಮೀಟಿಂಗು.

" ಕೊಡಗು " ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ತಾ. 23—6—'28ರಲ್ಲಿ ಕಂಪನಿಯ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ೧. ಗೌಡರ ಸಿ. ಯನ್. ವೆಂಕಟಯ್ಯನವರು (ಚೇರ್‌ಮ್ಯಾನರು) 2. ಪಿ. ಟಿ ಕುಶಾಲಪ್ಪನವರು, 3 ಯಂ. ಯಂ. ಚೆಣ್ಣಪ್ಪನವರು, ೪ ಜಮ್ಮಡ ಮಾದಪ್ಪನವರು ಮತ್ತು ೫. ಕೆ. ಪಿ ಚೆಣ್ಣಪ್ಪನವರು

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಲಾಯಿತು.

2 ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳ ಲೆಕ್ಕವು ಓದಿ ಒಪ್ಪಲಾಯಿತು,

3 ಪತ್ರಿಕೆಯ ಮತ್ತು ಪ್ರೆಸ್ಸ್ ಸಿಬ್ಬಂದಿಯವರು ತಮ್ಮ ಸಂಬಳ ಹೆಚ್ಚಿಸಿಕೊಡಬೇಕೆಂದು ಬರಕೊಂಡ ಅರ್ಜಿಗಳು ಓದಲಾದವು. ಅವರವರ ಯೋಗ್ಯತಾನುಸಾರ ಸಂಬಳವು ಹೆಚ್ಚಿಸಲ್ಪಟ್ಟಿತು.

4. ತಾನು ಸೆಂಟ್ರಲ್ ಬ್ಯಾಂಕಿನ ಕೆಲಸಕ್ಕೆ ಹೆಚ್ಚಿನ ಸಮಯ ವಿನಿಯೋಗಿಸಬೇಕಾದ ಕಾರಣ " ಕೊಡಗು " ಪತ್ರಿಕೆಯ ಸಬ್ ಎಡಿಟರ್ ಮತ್ತು ಎಕೌಂಟೆಂಟ್ ಕೆಲಸಕ್ಕೆ ಮಿ. ಬಿ ಪೂವಯ್ಯನವರು ಕೊಟ್ಟ ರಾಜೀನಾಮೆಯು ಓದಲಾಯಿತು. ಅದು ಅಂಗೀಕರಿಸಲಾಯಿತು, ಮತ್ತು ಅವರು ಇಷ್ಟರವರೆಗೆ ಕಂಪನಿಯಲ್ಲಿ ಮಾಡಿದ ಒಳ್ಳೇ ಕೆಲಸಕ್ಕೆ ಡೈರೆಕ್ಟರುಗಳ ಮೆಚ್ಚಿಗೆಯನ್ನು ಬರೆದಿಡುವಂತೆ ತೀರ್ಮಾನಿಸಲಾಯಿತು.

5 ಸಬ್ ಎಡಿಟರ್ ಕೆಲಸಕ್ಕೆ ಮಿ. ಮಾಚಿಮಂಡ ಯಂ. ನಂಜುಂಡನವರ ಅಪ್ಲಿಕೇಶನ್ ಓದಲಾಯಿತು. ಅವರನ್ನು ಜುಲೈ 1 ರಿಂದ ಸಬ್ ಎಡಿಟರ್ ಮತ್ತು ಎಕೌಂಟೆಂಟರಾಗಿ ನೇಮಿಸಲಾಯಿತು, ಮತ್ತು ಜಮೀನ್ದಾರರ ಸಂಘದವರು ಅಪೇಕ್ಷಿಸಿದರೆ ಅವರು ಸಂಘದ ಲೈಬ್ರರಿ ಮತ್ತು ರೀಡಿಂಗ್ ರೂಮಿನ ಚಾರ್ಜಿನಲ್ಲಿರಬಹುದೆಂದು ಒಪ್ಪಲಾಯಿತು.

6. ಎಡಿಟರ್ ಮತ್ತು ಸಬ್ ಎಡಿಟರ್ ಹೊರತು ಬಾಕಿ ಸಿಬ್ಬಂದಿಯಲ್ಲಿ ಬದಲಾವಣೆ ಮಾಡುವ ಹಕ್ಕು ಚೇರ್‌ಮ್ಯಾನ್‌ರವರಿಗೆ ಕೊಡಲಾಯಿತು.

ಸಿ. ಯನ್. ವೆಂಕಟಯ್ಯ,

(ಚೇರ್‌ಮ್ಯಾನ್.

ಮಹಾತ್ಮಗಾಂಧಿಯವರ ಸ್ವಚರಿತ್ರೆ

೪ ನೇ ಭಾಗದಲ್ಲಿ ೪೭ನೇ ಪ್ರಕರಣ.

ಸ್ವದೇಶಕ್ಕೆ ತೆರಳುದುದು.

ಕಾಲನ್‌ಬೇಕರರು ಹಿಂದೂಸ್ಥಾನಕ್ಕೆ ಹೋಗಬೇಕೆಂಬ ಉದ್ದೇಶದಿಂದ ನನ್ನೊಡನೆ ಇಂಗ್ಲೆಂಡಿಗೆ ಬಂದಿದ್ದರು. ನಾವಿಬ್ಬರೂ ಒಂದೇ ಕಡೆ ಇಳಿದಿದ್ದೆವು. ಒಂದೇ ಜಹಜಿನಲ್ಲಿ ಕೂಡ ಹೊರಡಬೇಕೆಂದು ನಮಗೆ ಇಷ್ಟವಿದ್ದಿತು. ಆದರೆ ಸರಕಾರದವರು ಜರ್ಮನರನ್ನು ಕಣ್ಣಿಟ್ಟು ಬಹು ಎಚ್ಚರಿಕೆಯಿಂದ ನೋಡುತ್ತಿದ್ದುದರಿಂದ ಕಾಲನ್‌ಬೇಕರಿಗೆ ರಹದಾರಿಯು (ಪಾಸ್‌ಪೋರ್ಟ್ ಚೀಟಿ) ದೊರಕುವ ವಿಷಯದಲ್ಲಿ ನಮಗೆ ಸಂದೇಹವಿದ್ದಿತು. ಅದಕ್ಕಾಗಿ ನಾನು ನ್ಯಾಯವಿದ್ದಷ್ಟು ಪ್ರಯತ್ನಪಟ್ಟೆನು. ರಾಬರ್ಟ್‌ಸರಿಗೂ ಅವರಿಗೆ ರಹದಾರಿಯನ್ನು ಕೊಡಿಸಬೇಕೆಂಬ ಅಭಿಪ್ರಾಯವಿದ್ದುದರಿಂದ ಅವರು ಅದಕ್ಕಾಗಿ ವೈಸರಾಯಿಗೆ ತಂತಿ ಕೊಟ್ಟರು. ಆದರೆ ಒಡನೆಯೇ ಅದಕ್ಕೆ ಲಾರ್ಡ್ ಹಾರ್ಡಿಂಜರಿಂದ ಉತ್ತರ ಬಂದಿತು. "ಇಂತಹ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಹಿಂದೂಸ್ಥಾನದ ಸರಕಾರದವರು ಸಿದ್ಧರಾಗಿಲ್ಲವೆಂದು ವಿಷಾದಿಸುತ್ತೇನೆ" ಎಂದು. ಈ ಉತ್ತರದ ಮರ್ಮವನ್ನು ನಾವೆಲ್ಲರೂ ತಿಳಿದುಕೊಂಡೆವು.

ಕಾಲನ್‌ಬೇಕರರಿಂದ ಅಗಲುವುದು ನನಗೆ ಬಹು ದುಃಖಕರವಾಗಿದ್ದಿತು. ಆದರೆ ಅವರಿಗೆ ಇನ್ನೂ ಹೆಚ್ಚು ಸಂಕಟವಾಯಿತೆಂಬುದು ನನಗೆ ಕಾಣುತ್ತಿದ್ದಿತು. ಅವರು ಹಿಂದೂಸ್ಥಾನಕ್ಕೆ ಬರುವುದು ಸಾಧ್ಯವಾಗಿದ್ದಿದ್ದರೆ ಅವರು ಇಂದು ನಲ್ಲ ಉತ್ತಮ ಅರಿವೆ ನೆಯ್ದು ಸರಳ ಜೀವನವನ್ನು ನಡೆಸುತ್ತಾ ಇರುತ್ತಿದ್ದರು. ಈಗ ಅವರು ದಕ್ಷಿಣ ಆಫ್ರಿಕದಲ್ಲಿ ತಾವು ಮೊದಲು ನಡೆಸುತ್ತಿದ್ದ ರೀತಿಯಲ್ಲಿಯೇ ಜೀವನವನ್ನು ನಡೆಸುತ್ತಾ, ಶಿಲ್ಪಿಗಳಾಗಿ ಕೃತಕೃತ್ಯರಾಗಿ ಕೆಲಸಮಾಡುತ್ತಿದ್ದಾರೆ.

ನಾವು ಮೂರನೇ ದರ್ಜೆಯಲ್ಲಿ ಹೋಗಬೇಕೆಂದಿದ್ದೆವು. ಆದರೆ ಪಿ. ಎಂಡ್ ಓ ಕಂಪನಿಯ ಜಹಜುಗಳಲ್ಲಿ ಮೂರನೆಯ ತರಗತಿಯ ಟಿಕೆಟುಗಳು ದೊರಕುತ್ತಿರಲಿಲ್ಲವಾದುದರಿಂದ ನಾವು ಎರಡನೆಯ ವರ್ಗದಲ್ಲಿ ಹೋಗಬೇಕಾಯಿತು.

ಜಹಜಿನಲ್ಲಿ ಹೊಸ ಹಣ್ಣು ಸಿಕ್ಕುತ್ತಿದ್ದಿತಾದರೂ ಒಣಗಿಸಿದ ಹಣ್ಣು ದೊರಕುತ್ತಿರಲಿಲ್ಲವಾದುದರಿಂದ ನಾವು ದಕ್ಷಿಣ ಆಫ್ರಿಕದಿಂದ ತಂದಿದ್ದ ಹಣ್ಣನ್ನು ಜೊತೆಗೆ ತೆಗೆದುಕೊಂಡು ಹೋದೆವು.

ಡಾ. ಜೀವರಾಜ ಮೆಹತಾರವರು ನನ್ನ ಪಕ್ಕೆಗೆ "ಮೀಡ್ ಪ್ಲಾಸ್ಟರ್" ಎಂಬ ಪುಡಿಯ ಪಟ್ಟಿಯನ್ನು ಕಟ್ಟಿ ನಾನು ಕೆಂಪು ಸಮುದ್ರವನ್ನು ತಲಪುವ ವರೆಗೂ ಅದನ್ನು ಬಿಚ್ಚಕೂಡದೆಂದು ಹೇಳಿದ್ದರು. ನಾನು ಎರಡು ದಿವಸ ಇದರ ತೊಂದರೆಯನ್ನು ಸಹಿಸಿಕೊಂಡಿದ್ದೆನು. ಆದರೆ ಕಡೆಗೆ ನಾನು ಇದನ್ನು ತಡೆಯಲಾಗಲಿಲ್ಲ. ಪಟ್ಟಿಯನ್ನು ಬಿಚ್ಚಿ ಮೈ ಕೈ ಉಜ್ಜಿಕೊಂಡು ಚೊಕ್ಕಟವಾಗಿ ಸ್ನಾನಮಾಡುವ ಸ್ವಾತಂತ್ರ್ಯವನ್ನು ಸಂಪಾದಿಸಲು ನನಗೆ ಬಹು ಕಷ್ಟವಾಯಿತು.

ಹಣ್ಣು ಹಂಪಲೇ ಮುಖ್ಯವಾಗಿ ನನ್ನ ಆಹಾರವಾಗಿದ್ದಿತು. ದಿನ ದಿನವೂ ನನ್ನ ಶರೀರ ಸ್ಥಿತಿಯು ಉತ್ತಮ ಹೊಂದುತ್ತಿದ್ದುದು ನನಗೆ ತೋರಿಬಂದಿತು. ನಾನು ಸುಯೆಸ್ ಕಾಲುವೆಯನ್ನು ಸೇರುವ ಹೊತ್ತಿಗೆ ನನಗೆ ಬಹು ಮಟ್ಟಿಗೆ ಗುಣವಾಯಿತು. ನಿಶ್ಶಕ್ತಿಯೇನೋ ತೋರುತ್ತಿದ್ದಿತು. ಆದರೆ ಅಪಾಯವನ್ನು ಪೂರ್ತಿಯಾಗಿ ದಾಟಿದೆನೆಂದು ನನಗೆ ಧೈರ್ಯಬಂದಿತು. ವ್ಯಾಯಾಮವನ್ನು ಬರಬರುತ್ತಾ ಹೆಚ್ಚು ಮಾಡಿದೆನು. ಸಮಶೀತೋಷ್ಣವಲಯದ ನಿರ್ಮಲವಾದ ಗಾಳಿಯೇ ನನ್ನ ಆರೋಗ್ಯಾಭಿವೃದ್ಧಿಗೆ ಮುಖ್ಯವಾದ ಕಾರಣವೆಂದು ನಾನು ಎಣಿಸಿದೆನು.

ಈ ಜಹಜಿನಲ್ಲಿ ಆಂಗ್ಲೇಯರಿಗೂ, ಭಾರತೀಯರಿಗೂ ಮಧ್ಯೆ ನಾನು ಕಂಡ ಭೇದಭಾವವನ್ನು ದಕ್ಷಿಣ ಆಫ್ರಿಕದಿಂದ ನಾನು ಸೀಮೆಗೆ ಮಾಡಿದ ಯಾನದಲ್ಲಿ ಕೂಡ ಕಂಡಿರಲಿಲ್ಲ. ಇದಕ್ಕೆ ಕಾರಣವು ಹಿಂದಿನ ಅನುಭವವೋ ಅಥವಾ ಬೇರೆಯೋ ನಾನು ಕಾಣೆನು. ಕೆಲವು ಮಂದಿ ಆಂಗ್ಲರೊಡನೆ ನಾನು ಮಾತನಾಡಿದುದೇನೋ ನಿಜ. ಆದರೆ ಆ ಮಾತುಕಥೆಯು ಕೇವಲ 'ಸುಪ್ರಭಾತ', 'ಶರಣಾರ್ಥಿ' ಎಂಬುವುಗಳಲ್ಲಿಯೇ ಮುಗಿದು ಹೋಯಿತು. ದಕ್ಷಿಣ ಆಫ್ರಿಕದ ಜಹಜುಗಳಲ್ಲಿ ನಡೆಯುತ್ತಿದ್ದಂತೆ ಇಲ್ಲಿನ ಸಂಭಾಷಣೆಗಳು ಹಾರ್ದಿಕವಾಗಿದ್ದುದೇ ಅಪೂರ್ವ. ಸ್ಪಷ್ಟವಾಗಿ ಅಥವಾ ಅಸ್ಪಷ್ಟವಾಗಿ ಆಂಗ್ಲೇಯನ ಮನಸ್ಸಿನಲ್ಲಿದ್ದ ನಾನು ಆಳರಸನೆಂಬ ಭಾವನೆಯೂ ಅದೇ ರೀತಿಯಾಗಿ ಭಾರತೀಯನ ಮನಸ್ಸಿನಲ್ಲಿದ್ದ ನಾನು ಅನ್ಯರ ಆಳುವಿಕೆಯವನೆಂಬ ಭಾವನೆಯೂ ಇದಕ್ಕೆ ಕಾರಣವಾಗಿದ್ದುವೆಂದು ನನಗೆ ತೋರುತ್ತದೆ.

ಈ ವಾತಾವರಣದಿಂದ ಹೊರಬಿದ್ದು ಮನೆಸೇರಲು ನಾನು ಆತುರನಾಗಿದ್ದೆನು.

ಏಡನಿಗೆ ಬರುತ್ತಲೇ ನಮಗೆ ಸ್ವಲ್ಪ ಮಟ್ಟಿಗೆ ಮನೆಗೆ ಬಂದಂತೆ ತೋರತೊಡಗಿತು. ನಮಗೆ ಏಡನ್ ವಾಸಿಗಳ ಪರಿಚಯವು ಚೆನ್ನಾಗಿ ಗೊತ್ತಿದ್ದಿತು. ಏಕೆಂದರೆ—ನಾವು ಮಿ. ಕೈಕೋಬಾದ್ ಕಾವಸ್ಜಿ ದಿನ್‌ಷಾರವರನ್ನು ಡರ್ಬಾನಿನಲ್ಲಿಯೇ ನೋಡಿದ್ದೆವು. ಅಲ್ಲಿ ಅವರೊಡನೆಯೂ ಅವರ ಪತ್ನಿಯೊಡನೆಯೂ ಗಾಢಪರಿಚಯವಾಗಿದ್ದಿತು.

ಕೆಲವು ದಿನಗಳಲ್ಲಿ ನಾವು ಮುಂಬಯಿಯನ್ನು ಸೇರಿದೆವು. **ಹತ್ತು ವರ್ಷದ ಪ್ರವಾಸದ ಮೇಲೆ ಸ್ವದೇಶಕ್ಕೆ ಹಿಂತಿರುಗುವ ನನ್ನ ಆನಂದವನ್ನು ಹೇಳುವುದು ಹೇಗೆ?**

ಗೋಖಲೆಯವರು ನನ್ನ ಸ್ವಾಗತಕ್ಕೆ ಏರ್ಪಾಡು ಮಾಡಿದ್ದರು. ಅವರ ದೇಹಸ್ಥಿತಿಯು ಸೂಕ್ಷ್ಮವಾಗಿದ್ದರೂ ಅವರು ಇದಕ್ಕಾಗಿ ಮುಂಬಯಿಗೆ ಬಂದಿದ್ದರು. ಅವರನ್ನು ಬೆರೆತುಕೊಂಡು ಅವರಲ್ಲಿ ಐಕ್ಯಹೊಂದಿ ನನ್ನ ಹೊರೆಯನ್ನು ಕಳೆಯಬೇಕೆಂಬ ಉತ್ಸಾಹದಿಂದ ನಾನು ಹಿಂದೂಸ್ಥಾನದಲ್ಲಿ ಕಾಲಿಟ್ಟೆನು. ಆದರೆ ದೈವೇಚ್ಛೆಯು ಬೇರೆಯಾಗಿದ್ದಿತು.

ಸಿಡುಬು ಚುಚ್ಚುವುದೇಕೆ?

ಸಿಡುಬುರೋಗವೆಂಬುದು ಬಹಳ ಭಯಂಕರವಾದ ವ್ಯಾಧಿ. ಅದರ ಸೋಂಕು ಬಹು ಶೀಘ್ರವಾಗಿ ಹರಡುವುದು. ಈ ರೋಗದ ಸೋಂಕು ಬರೀ ಗಾಳಿಯ ಮೂಲಕವಾಗಿ ಬಹುದೂರದವರಿಗೆ ವ್ಯಾಪಿಸುವುದು. ಪ್ರಪಂಚಕ್ಕೆಲ್ಲ ಈ ವ್ಯಾಧಿಯಿಂದ ಬಹಳ ಅನಾಹುತಗಳು ಸಂಭವಿಸಿವೆ. ಇದರಿಂದ ಎಷ್ಟೋ ಕುಟುಂಬಗಳೇ ನಿರ್ನಾಮವಾಗಿವೆ. ಎಷ್ಟೋ ಜನರಿಗೆ ಅಷ್ಟಮಿತ್ರವಿಯೋಗವಾಗಿವೆ. ಎಷ್ಟೋ ಮಂದಿ ಇದರಿಂದ ಕುರುಡರೂ, ಅಂಗಹೀನರೂ ಆಗಿರುವರು. ಈ ರೋಗನಿವಾರಣೆಗೆ ಸಿಡುಬು ಚುಚ್ಚಿಸಿಕೊಳ್ಳುವುದೆಂದು ಹೊರತು ಬೇರೆ ಉತ್ತಮವಾದ ಉಪಾಯವಿಲ್ಲವೆಂದು ತಿಳಿದು ಬಂದಿದೆ. ಒಂದಾನೊಂದು ಕಾಲದಲ್ಲಿ ಇದು ಪ್ರಪಂಚ ಭಾಗವನ್ನೆಲ್ಲ ವ್ಯಾಪಿಸಿ ಅನಾಹುತಗಳನ್ನು ಮಾಡುತ್ತಿತ್ತು. ಸಿಡುಬು ಚುಚ್ಚುವ ವಿಧಾನವನ್ನು ಕಂಡುಹಿಡಿದ ಮೇಲೆಯೇ ಅದರ ಹರಡುವಿಕೆಯು ಬಹಳ ಮಟ್ಟಿಗೆ ತಗ್ಗಿದೆ. ಅಲ್ಲದೆ ಸಿಡುಬು ಚುಚ್ಚುವುದರ ಫಲವಾಗಿ ಕೆಲಕೆಲವು ಪ್ರಾಂತ್ಯಗಳಲ್ಲಿ ಬಹುಮಟ್ಟಿಗೆ ಈ ರೋಗದ ಹೆಸರೇ ಮರೆತು ಹೋಗುವಂತೆಯೂ ಆಗಿದೆ. ಆದರೆ ಮದರಾಸಾಧಿಪತ್ಯದಲ್ಲಿ ಮಾತ್ರ ಈ ರೋಗದ ಪ್ರಾಬಲ್ಯವು ಇನ್ನೂ ತಗ್ಗಿಲ್ಲ. ವರ್ಷಕ್ಕೆ ಸರಾಸರಿ 25,000 ಮಂದಿ ಈ ವ್ಯಾಧಿಯಿಂದಲೇ ಸಾಯುತ್ತಿರುವರು. ಮರಣದಿಂದ ತಪ್ಪಿಸಿಕೊಂಡವರಲ್ಲಿಯೂ ಎಷ್ಟೋ ಮಂದಿ ಇದರಿಂದ ಕುರುಡರೂ, ಕಿವುಡರೂ, ಅಂಗಹೀನರೂ ಆಗಿರುವರು. ಒಂದುವೇಳೆ ರೋಗವು ತಗಲಿದರೆ, ರೋಗತಗುಲಿದ ಮನುಷ್ಯನನ್ನು ಒಡನೆಯೇ ಜನಸಂಪರ್ಕವಿಲ್ಲದ ಪ್ರತ್ಯೇಕಸ್ಥಳದಲ್ಲಿರಿಸಬೇಕು. ರೋಗಿಯು ಮಲಗತಕ್ಕ ಕೋಣೆಯು ಧಾರಾಳವಾದ ಗಾಳಿ ಬೆಳಕುಗಳಿಗೆ ಅವಕಾಶವಿರತಕ್ಕದಾಗಿ, ತೇವವಿಲ್ಲದೆಯೂ ಇರಬೇಕು. ಆ ಕೋಣೆಯ ಬಾಗಿಲನ್ನೂ, ಕಿಟಿಕಿಗಳನ್ನೂ ಚೆನ್ನಾಗಿ ತೆರೆದಿಟ್ಟು, ಬಾಗಿಲಿಗೆ ಕಂಪುತೆರೆಗಳನ್ನು ತೂಗುಬಿಡಬೇಕು. ಆ ಕೋಣೆಯಲ್ಲಿ ಪರದೆ, ರಗ್ಗುಗಳು, ಸಾಮಾನುಗಳು ಮೊದಲಾದ ವಸ್ತುಗಳನ್ನು ತೆಗೆದಿಡಬೇಕು. ಎಲ್ಲವನ್ನೂ ನಿರ್ಮಲವಾಗಿಡಬೇಕು. [illegible] ಬೆನ್ನಿನ ತುರಿಕೆಯುಂಟಾದರೂ ಮಕ್ಕಳಿಗೆ ಕೈ ಹಾಕದ ಹಾಗೆ ನೋಡಿಕೊಳ್ಳಬೇಕು. ರೋಗಿಗೆ ಜ್ವರ ಬಿಟ್ಟ ಮೇಲೆ ಗುಣವಾದೊಡನೆ ಅವನು ಮಲಗಿದ್ದ ಕೋಣೆಯನ್ನು, ಅದರ ಮಂಚ, ಹಾಸಿಗೆ, ಮೊದಲಾದವುಗಳನ್ನು ಮೊದಲಾದ ಯಾವ ಸ್ಥಳವನ್ನೂ ಬಿಡದೆ, ಎಲ್ಲ ಕಡೆಗೂ ಸೋಂಕು ನಿವಾರಣೆಯ ಔಷಧ ದ್ರಾವಕಗಳನ್ನು ("ಫಿನೈಲ್") ಮುಂತಾದವನ್ನು ಚೆಲ್ಲಿ, ಆ ಮೇಲೆ ಸುಣ್ಣವನ್ನು ಬಳಿಸಬೇಕು. ರೋಗಿಗೆ ಸ್ನಾನವಾದಮೇಲೆ ಕೂಡ, ಮೈಯಲ್ಲಿರುವ ಹುಣ್ಣಿನ ಹೊಟ್ಟುಗಳೆಲ್ಲವೂ ಚೆನ್ನಾಗಿ ಉದುರಿ ಹೋಗುವವರೆಗೆ ಅವನ ಸಂಪರ್ಕವನ್ನು ಮಾಡಬಾರದು. ಈ ಸಿಡುಬುರೋಗಿಯ ಸಮೀಪದಲ್ಲಿದ್ದು ಉಪಚಾರ ಮಾಡತಕ್ಕವರು, ಸಿಡುಬು ಚುಚ್ಚಿಸಿಕೊಳ್ಳುವುದು ಮುಂತಾದ ಆತ್ಮಸಂರಕ್ಷಣೋಪಾಯಗಳನ್ನು ನಡೆಸಿಕೊಂಡಿರಬೇಕು. ಇಲ್ಲದಿದ್ದರೆ ಎಂಥವರಿಗಾದರೂ ಈ ರೋಗವು ತಗುಲದೆ ಇರಲಾರದು. ಊರಿನಲ್ಲಿ ರೋಗದ ಸೋಂಕು ಕಾಣಿಸಿದ ಸಂಭವದಲ್ಲೆಲ್ಲಾ ತಪ್ಪದೆ ತಿರುಗಿ ಸಿಡುಬು ಹಾಕಿಸಿಕೊಳ್ಳುವುದವಶ್ಯ. ಆದರೆ ಒಂದಾವರ್ತಿ ಮೈಯಲ್ಲಿ ಸಿಡುಬೆದ್ದವರಿಗೆ ಪ್ರಾಯಶಃ ತಿರುಗಿ ಆ ರೋಗವು ತಗುಲುವ ಭಯವಿಲ್ಲ. ಊರಿನಲ್ಲಿ ಈ ವ್ಯಾಧಿಯ ಸೂಚನೆಯು ಕಂಡೊಡನೆ, ಪ್ರತಿ ಕುಟುಂಬದವರೂ ತಮ್ಮ ತಮ್ಮ ಪುತ್ರ ಪೌತ್ರ ಮಿತ್ರ ಕಳತ್ರಾದಿಗಳೊಡನೆ ಸಿಡುಬು ಚುಚ್ಚಿಸಿಕೊಳ್ಳುವುದೊಂದೇ ಆತ್ಮರಕ್ಷಣೆಗೆ ತಕ್ಕ ಉಪಾಯವು.

ಇದರ ಗುಣಾಂಶವನ್ನು ಕಂಡೇ ಈಗ ಅನೇಕ ಮುನ್ಸಿಪಾಲಿಟಿಗಳಲ್ಲಿ ಮಕ್ಕಳಿಗೆ ಆರು ತಿಂಗಳೊಳಗಾಗಿ ಸಿಡುಬು ಚುಚ್ಚಿಸಬೇಕೆಂಬ ಸರಕಾರದ ನಿರ್ಬಂಧವಿದೆ. ಇದು ಆ ಶಿಶುಗಳ ತಂದೆ ತಾಯಿಯರ ಅಥವಾ ಪೋಷಕರ ಅವಶ್ಯಕರ್ತವ್ಯವಾಗಿ ವಿಧಿಸಲ್ಪಟ್ಟಿದೆ. ಮುನಿಸಿಪಾಲಿಟಿಗಳಲ್ಲಿ ಇದರಿಂದ ಬಹಳ ಮಟ್ಟಿಗೆ ಅನುಕೂಲವು ಉಂಟಾಗಿದೆ. ಈ ಮೇಲಿನ ವಿಧಿಗೆ ತಪ್ಪಿದರೆ ಮುನಿಸಿಪಲ್ ಕಾನೂನಿನ ಮೇರೆಗೆ ಪೋಷಕರು ಬುಲ್ಹಾನೆ ಮುಂತಾದ ಶಿಕ್ಷೆಗೆ ಗುರಿಯಾಗಬೇಕಾದ ಸಂಭವವುಂಟು. ಸಿಡುಬು ಹಾಕಿಸದಿದ್ದ ಮಗುವಿಗೆ ಪ್ರತಿಕ್ಷಣವೂ ಅಪಾಯಕರವೆಂದೇ ಎಣಿಸಬೇಕು. ಈ ವಿಚಾರದಲ್ಲಿ ಕಾಲವಿಳಂಬವೂ ಕೂಡ ಅಪಾಯ ಕಾರಣವು.

ಒಂದುವೇಳೆ ಮಗುವು ಸಿಡುಬು ಚುಚ್ಚಿಸುವುದಕ್ಕೆ ತಕ್ಕಷ್ಟು ಆರೋಗ್ಯದಲ್ಲಿ ಇಲ್ಲವೆಂದು ತೋರಿದರೆ, ನಿಮ್ಮ ಸ್ವಂತ ಡಾಕ್ಟರುಗಳ ಮೂಲಕವಾಗಲಿ, ಸಿಡುಬು ಹಾಕುವುದಕ್ಕಾಗಿ ಸರಕಾರದಿಂದ ನಿಯಮಿಸಲ್ಪಟ್ಟಿರುವ ಡಾಕ್ಟರುಗಳಿಂದಾಗಲಿ, ಮುಂದೆ ಸ್ವಲ್ಪ ಕಾಲಾವಧಿಯನ್ನು ಪಡೆಯಬಹುದು. ಇದರಿಂದ ದೇಹಬಲವಿಲ್ಲದ ಮಕ್ಕಳಿಗೆ ಆ ಸ್ಥಿತಿಯಲ್ಲಿಯೂ ನೀವು ಸಿಡುಬು ಚುಚ್ಚಿಸಬೇಕೆಂಬ ನಿರ್ಬಂಧವಿಲ್ಲ. ಸಿಡುಬು ಚುಚ್ಚಿದ ಮಕ್ಕಳನ್ನು ನಾಲ್ಕೈದು ದಿನಗಳಮೇಲೆ ತಿರುಗಿ ಆ ದೇಶೀ ವೈದ್ಯರ ಬಳಿಗೆ ಕರೆದುಕೊಂಡುಹೋಗಿ ತೋರಿಸಬೇಕು. ಏಕೆಂದರೆ—ಕೆಲವುವೇಳೆ ಸಿಡುಬುಚುಚ್ಚಿದ ಸ್ಥಳದಲ್ಲಿ ಹುಣ್ಣುಗಳು ಸರಿಯಾಗಿ ಹೊಮ್ಮದೆ, ಆ ಚಿಕಿತ್ಸೆಯು ವಿಫಲವಾಗುವುದುಂಟು. ಅಂತಹ ಮಕ್ಕಳಿಗೆ ಕೆಲವು ದಿನಗಳಮೇಲೆ ಮತ್ತೊಮ್ಮೆ ಸಿಡುಬು ಚುಚ್ಚಿಸಬೇಕಾಗುವುದು. ಹಾಗಲ್ಲದೆ ಮೊದಲನೆಯಸಲ ಮಾಡಿದ ಪ್ರಯೋಗವೇ ತೃಪ್ತಿಕರವಾಗಿದ್ದ ಪಕ್ಷದಲ್ಲಿ, ಆ ಡಾಕ್ಟರು ಒಂದು ಸರ್ಟಿಫಿಕೇಟನ್ನು ಕೊಡುವರು. ಈ ಸರ್ಟಿಫಿಕೇಟಿನಿಂದ ಮುಖ್ಯವಾಗಿ ಗಂಡುಮಕ್ಕಳಿಗೆ ಅವರ ವಿದ್ಯಾಭ್ಯಾಸಕಾಲದಲ್ಲಿಯೂ, ಮುಂದೆ ಉದ್ಯೋಗಕ್ಕೆ ಪ್ರಯತ್ನಪಡುವ ಕಾಲಗಳಲ್ಲಿಯೂ ಬಹಳ ಉಪಯೋಗವುಂಟು. ಕೆಲವು ಮಕ್ಕಳಿಗೆ ಎರಡುಮೂರು ಸಲ ಸಿಡುಬುಚುಚ್ಚಿದರೂ ನಿಷ್ಪ್ರಯೋಜನವಾಗಿ, ಚುಚ್ಚಿದ ಕಡೆಗಳಲ್ಲಿ ಹುಣ್ಣುಗಳೇ ಹೊಮ್ಮದೆ ಹೋಗುವುದುಂಟು. ಆದರೆ ಅಂತಹ ಸಂದರ್ಭಗಳು ಬಹಳ ಅಪೂರ್ವವು. ಹೀಗೆ ಎರಡು ಮೂರಾವರ್ತಿ ಸಿಡುಬು ಚುಚ್ಚಿಯೂ ವ್ಯರ್ಥವಾದ ಸಂದರ್ಭದಲ್ಲಿ ಆಗ ಡಾಕ್ಟರು ಸಿಡುಬಿನ ಭಯವಿಲ್ಲವೆಂದು ಸರ್ಟಿಫಿಕೇಟನ್ನು ಕೊಡುವರು.

ಒಂದಾವರ್ತಿ ಸಿಡುಬು ಚುಚ್ಚಿದರೆ ಅದರ ವೇಗವು ದೇಹದಲ್ಲಿ ಏಳು ವರ್ಷಗಳ ಕಾಲಕ್ಕೆ ಮೇಲೆ ನಿಲ್ಲಲಾರದು. ಅದಕ್ಕಾಗಿ ಆರೇಳು ವರ್ಷಗಳಿಗೊಮ್ಮೆ ತಿರುಗಿ ತಿರುಗಿ ಸಿಡುಬು ಚುಚ್ಚಿಸಿಕೊಳ್ಳುವುದು ಶ್ರೇಯಸ್ಕರವು. ಹೀಗೆ ಆಗಾಗ ಸಿಡುಬು ಚುಚ್ಚಿಸಿಕೊಳ್ಳುವುದರಿಂದ ಗುಣಭಾಗವು ಕಂಡುಬರುವುದರಿಂದಲೇ ಉದ್ಯೋಗಗಳಿಗಾಗಲಿ, ಕಾರ್ಖಾನೆಗಳಲ್ಲಿ ಕೆಲಸಕ್ಕಾಗಲಿ ಪ್ರಥಮ ಪ್ರವೇಶಮಾಡುವುದಕ್ಕೆ ಮೊದಲು, ಸಿಡುಬು ಹಾಕಿಸಿಕೊಳ್ಳಬೇಕೆಂದು ನಿರ್ಬಂಧವಿದೆ. ವಿಶೇಷವಾಗಿ ಬಾಲ್ಯವಯಸ್ಸಿನಲ್ಲಿ ಈ ಸ್ಫೋಟಕ ರೋಗವು ಮೈಗೆ ಅಂಟುವುದು ಹೆಚ್ಚಾದುದರಿಂದ 12 ವಯಸ್ಸಿನ ಮಕ್ಕಳಿಗೆ ಎರಡನೆಯ ಸಾರಿ ಸಿಡುಬು ಹಾಕಿಸುವ ಅವಶ್ಯವಿದೆ. ಶಾಲೆಗಳಲ್ಲಿ ಮಕ್ಕಳೂ, ಕಾರ್ಖಾನೆಗಳಲ್ಲಿ ಕೂಲಿಜನರೂ ವಿಶೇಷವಾಗಿ ಗುಂಪಿನಲ್ಲಿ ಕಲೆಯಬೇಕಾದುದರಿಂದ ಊರಿನಲ್ಲಿ ರೋಗಸೂಚನೆ ಇದ್ದಾಗಲೆಲ್ಲಾ ತಿರುಗಿ ತಿರುಗಿ ಈ ಮೇಲ್ಕಂಡ ನಿವಾರಣೋಪಾಯವನ್ನು ನಡೆಸಿಕೊಳ್ಳಬೇಕಾದುದು ಬಹಳ ಆವಶ್ಯವು. ರೋಗವು ಬಂದಮೇಲೆ ಗುಣಪಡಿಸುವ ಪ್ರಯತ್ನಕ್ಕಿಂತ ರೋಗಗಳು ಬಾರದಂತೆ ಮಾಡುವುದೇ ಮೇಲು ಎಂಬೀ ನಾಣ್ಣುಡಿಯನ್ನು ಪ್ರತಿಯೊಬ್ಬರೂ ಚೆನ್ನಾಗಿ ಮನಸ್ಸಿನಲ್ಲಿಡಬೇಕು.

ಕೆಲವರು ಸಿಡುಬು ಚುಚ್ಚಿಸುವದೆಂದರೆ ಹೊಸ ರೋಗಾದಿಗಳನ್ನು ತಪ್ಪಿಸಿಕೊಳ್ಳುವ ಪ್ರಯತ್ನವನ್ನೇ ಮಾಡುವರು. ಅದರಿಂದ ಆರೋಗ್ಯಕ್ಕೆ ಹಾನಿಯುಂಟು, ಸಿಡುಬು ಚುಚ್ಚಿಸಿಕೊಳ್ಳುವುದರಿಂದ ಆ ವ್ಯಾಧಿಯನ್ನು ತಾವಾಗಿ ಬರಮಾಡಿಕೊಂಡು ಹಾಗಾಗುವುದೆಂದೂ ತಿಳಿದಿರುವರು. ಇದು ತಪ್ಪು ತಿಳುವಳಿಕೆ. ಹಿಂದಕ್ಕೆ ಶಾಸ್ತ್ರೀಯವಾದ ಅನೇಕ ಪ್ರಮಾಣಗಳನ್ನು ತೋರಿಸಬಹುದು. ಈ ಬಗೆಯ ಜನಸಮುದಾಯದ ಕ್ಷೇಮಕ್ಕಾಗಿ ಶಾಸ್ತ್ರೀಯವಾದ ಎಷ್ಟೋ ಶೋಧನೆಗಳು ಕಂಡುಹಿಡಿಯಲ್ಪಟ್ಟಿವೆ. ಅವುಗಳಲ್ಲಿ ಬಹು ಮುಖ್ಯವಾದುದು ಇದೂ ಒಂದೆಂಬುವುದರಲ್ಲಿ ಸಂದೇಹವಿಲ್ಲ. ಪಾಮರಜನರಲ್ಲಿ ಸಿಡುಬೆಂಬುದು ಒಂದು ಮಹಾಮಾರಿ ದೇವತೆ, ಅದು ಆಗಾಗ ಬಂದೇ ತೀರುವುದೆಂದೂ ನಂಬಿಕೆ ಇರುವುದರಿಂದ, ಆ ದೇವತೆಗೆ ಬಲಿಪೂಜಾದಿಗಳನ್ನು ಮಾಡುವುದರಲ್ಲಿ ಅವರು ಶ್ರದ್ಧೆಯನ್ನು ತೋರಿಸುವರೇ ಹೊರತು ಇತರ ಚಿಕಿತ್ಸೆಗಳಲ್ಲಿ ಅವರಿಗೆ ಅಷ್ಟಾಗಿ ವಿಶ್ವಾಸವಿಲ್ಲ.

ಸಿಡುಬು ಚುಚ್ಚುವುದೆಂಬ ಪ್ರಯೋಗವು ಕೂಡ ಶಾಸ್ತ್ರೀಯವಾದ ಪರಿಶೋಧನೆಗಳಿಂದ ಕಂಡುಹಿಡಿಯಲ್ಪಟ್ಟು, ಆ ವ್ಯಾಧಿಯ ನಿವಾರಣೆಗೆ ಇದೊಂದೇ ಮಾರ್ಗವು ಹೊರತು ಬೇರೆ ಉಪಾಯವಿಲ್ಲವೆಂದೂ ನಿರ್ಣಯಿಸಲ್ಪಟ್ಟಿದೆ. ಸಿಡುಬು ಚುಚ್ಚಿಸಿಕೊಳ್ಳುವುದರಿಂದ ವ್ಯಾಧಿಯು ಬಾರದಂತಾಗುವುದು. ಅಥವಾ ಆ ವ್ಯಾಧಿಯಿಂದ ಹೆಚ್ಚು ಅಪಾಯವಿಲ್ಲದಂತೆ ಅದರ ವೇಗವನ್ನು ತಗ್ಗಿಸುವುದು. ಸಿಡುಬು ಚುಚ್ಚಿಸಿಕೊಂಡು ಅದು ವ್ಯರ್ಥವಾಗಬೇಕಾದರೆ ಅದರ ಹಾಲು ನಿಸ್ಸಾರವಾಗಿರಬೇಕು. ಇಲ್ಲವೇ ಸಿಡುಬು ಚುಚ್ಚಿಸಿದೊಡನೆ ಬಿಸಿಲಿಗೆ ಮೈಯೊಡ್ಡಿ ಅದರ ರಸವು ಮೈಯೊಳಗೆ ವ್ಯಾಪಿಸದಂತೆ ಒಣಗಿ ಹೋಗಿರಬೇಕು.

ಸಿಡುಬು ಚುಚ್ಚುವುದೆಂದರೇನು? ಸಿಡುಬು ಹುಣ್ಣಿನ ಹಾಲನ್ನು (ವೈಸೂರಿ ಹಾಲನ್ನು) ಮನುಷ್ಯದೇಹಕ್ಕೆ ಚರ್ಮದ್ವಾರದಿಂದ ಸೇರಿಸುವುದು. ಆದರೆ ಹಿಂದಿನಕಾಲದಲ್ಲಿ ಈ ಪದ್ಧತಿಯು ಬೇರೆ ವಿಧವಾಗಿತ್ತು. ಸಿಡುಬೆದ್ದಿದ್ದ ಮನುಷ್ಯನ ಮೈನಿಂದ ಕೀವನ್ನು ತಂದು, ಮತ್ತೊಬ್ಬರ ಮೈಗೆ ಚುಚ್ಚುವ ಪದ್ಧತಿಯಿತ್ತು. ಹೀಗೆ ಮಾಡುವುದರಿಂದ ಹೊಸ ಮನುಷ್ಯನ ಮೈಯಲ್ಲಿ ರೋಗವು ಅಷ್ಟು ತೀವ್ರವಾಗಿರುವುದಿಲ್ಲವೆಂಬ ನಂಬಿಕೆಯಿತ್ತು. ಆದರೆ 1870 ನೆಯ ವರ್ಷದಲ್ಲಿ ಈ ಪದ್ಧತಿಯು ಅಪಾಯಕರವೆಂದು ತೋರಿ ನಿಲ್ಲಿಸಲ್ಪಟ್ಟಿತು. ಏಕೆಂದರೆ—ಕೆಲವುವೇಳೆ ರೋಗವು ಬಹಳವೇಗವಾಗಿ ಬಂದು, ಇದೇ ನಿಮಿತ್ತವಾಗಿ ಮನುಷ್ಯನು ಸಾಯುತ್ತಿದ್ದುದಲ್ಲದೆ, ಆ ಸಿಡುಬು ಚುಚ್ಚಿಸಿಕೊಂಡ ಮನುಷ್ಯನ ಸಂಪರ್ಕದಿಂದ ಬೇರೆ ಅನೇಕರಿಗೆ ಆ ಸೋಂಕು ತಗಲುವ ಹಾಗೆ ತೋರಿಬಂದಿತು. ಇದಕ್ಕಾಗಿ ಈ ಪದ್ಧತಿಯನ್ನು ತಪ್ಪಿಸಬೇಕಾಯಿತು. ಆ ಮೇಲೆ ಜೆನ್ನರ್ ಎಂಬ ಪರಿಶೋಧಕನಿಂದ ಕಂಡುಹಿಡಿಯಲ್ಪಟ್ಟ ಹೊಸ ಪದ್ಧತಿಯೊಂದು ಆಚರಣೆಗೆ ಬಂದಿದೆ.

ಮೊದಲು ಒಂದು ಕರುವಿನ ಮೈಗೆ ಹುಣ್ಣಿನ ರಸವನ್ನು ಸೇರಿಸಿ, ಆ ಮೂಲಕ ಅದರ ಮೈಯೊಳಗೆಲ್ಲ ಬೊಕ್ಕೆಗಳನ್ನೆಬ್ಬಿಸಿ, ಆ ಬೊಕ್ಕೆಗಳಿಂದ ಹಾಲನ್ನು ಸಂಗ್ರಹಿಸಿಕೊಳ್ಳುವರು. ಮದರಾಸಿನ ಸಮೀಪದಲ್ಲಿ ಗಿಂಡಿಯೆಂಬ ಸ್ಥಳದಲ್ಲಿರುವ "ಕಿಂಗ್ ಇನ್‌ಸ್ಟಿಟ್ಯೂಟ್" ಎಂಬ ಶಾಲೆಯಲ್ಲಿ ಈ ಹಾಲನ್ನು ತಯಾರಿಸುವರು. ಇದು ಬಹಳ ಶಾಸ್ತ್ರೀಯವಾಗಿಯೂ, ಶುದ್ಧವಾಗಿಯೂ ತಯಾರಿಸಲ್ಪಡುವುದರಿಂದ ಅದು ನಿಶ್ಶಲ್ಯವಾಗಿಯೂ, ಅಪಾಯರಹಿತವಾಗಿಯೂ ಇದೆ. ತಯಾರಿಸಿದ ಹಾಲನ್ನು ಹೆಚ್ಚು ಕಾಲವಾದರೂ ಕೆಡದಂತೆ ಮಂಜುಗಡ್ಡೆಯಲ್ಲಿ ಕಾಪಾಡಲ್ಪಟ್ಟಿರುವರು. ಮದರಾಸ್ ಮುನಿಸಿಪಾಲಿಟಿಯವರು ಆಗಾಗ ಇಲ್ಲಿಂದಲೇ ಸಿಡುಬು ಚುಚ್ಚುವ ಶಸ್ತ್ರೈಗಳಿಗೆಲ್ಲ ಹಾಲನ್ನು ಸರಬರಾಜು ಮಾಡುವರು. ಆದುದರಿಂದ ಇಲ್ಲಿನ ಹಾಲು ಬಹಳ ಹಳೆಯದೆಂದಾಗಲಿ, ಅಶುದ್ಧವೆಂದಾಗಲಿ ನೆನೆಸಲು ಅವಕಾಶವಿಲ್ಲ. ಸಿಡುಬು ಚುಚ್ಚುವ ವಿಷಯದಲ್ಲಿ ನೀವು ಸರಕಾರಕ್ಕೆ ಸಹಕರಿಸಿದಷ್ಟೂ, ನಿಮ್ಮ ಮತ್ತು ನಿಮ್ಮ ಕುಟುಂಬದ ಕ್ಷೇಮಕ್ಕೂ, ನಿಮ್ಮ ದೇಶದ ಕ್ಷೇಮಕ್ಕೂ ನೀವು ಕಾರಣಭೂತರಾಗಿ ಆ ರೋಗದಿಂದಾಗುವ ಅಪಾಯಗಳನ್ನು ತಪ್ಪಿಸಿದ ಪುಣ್ಯಕ್ಕೆ ಪಾಗಿಗಳಾಗುವಿರಿ!

"ಆರೋಗ್ಯ ಪಂಪ್ರಿಕೆ."

ಕರ್ನಾಟಕ ಏಕೀಕರಣ: ಆಧಾರಭೂತ ಸಂಗತಿಗಳು.

ಸರ್ವಪಕ್ಷಿಯ ಪರಿಷತ್ತಿನವರು ನೇಮಿಸಿದ ಉಪಮಂಡಳದವರು ಈಗ ಅಲಹಾಬಾದಿನಲ್ಲಿ ಹಿಂದೂಸ್ಥಾನದ ರಾಜ್ಯಘಟನೆಯನ್ನು ಕುರಿತು ವಿಚಾರ ಮಾಡುತ್ತಿರುವರಷ್ಟೇ. ಕರ್ನಾಟಕದ ಏಕೀಕರಣವಾಗಿ ಈ ರಾಜ್ಯಘಟನೆಯಲ್ಲಿ ಕರ್ನಾಟಕ ಒಂದು ಭಾಷಾನ್ವಯವಾಗಿ ಸ್ವತಂತ್ರ ಪ್ರಾಂತವಾಗುವದು ಅವಶ್ಯವಾಗಿದೆ. ಆ ಕುರಿತು ಕರ್ನಾಟಕ ಏಕೀಕರಣ ಸಂಘ ಹಾಗೂ ಕ. ಪ್ರಾಂ ಕಾ ಕಮಿಟಿಗಳ ಅಧ್ಯಕ್ಷರು ಮೇಲ್ಕಂಡ ಸರ್ವಪಕ್ಷಿಯ ಪರಿಷತ್ತಿನ ಉಪಮಂಡಲದವರ ಕಡೆಗೆ ಕರ್ನಾಟಕವು ಸ್ವಾವಲಂಬಿಯಾದ ಒಂದು ಪ್ರಾಂತ್ಯವು ಹೇಗೆ ಆಗುವದೆಂಬುದನ್ನು ಕುರಿತು ಒಂದು ಪತ್ರಿಕೆಯನ್ನು ಬರೆದು ಕಳುಹಿಸಿದ್ದಾರೆ. ಅದರಲ್ಲಿಯ ಮುಖ್ಯಾಂಶಗಳನ್ನು ನಮ್ಮ ವಾಚಕರಿಗಾಗಿ ಕೆಳಗೆ ಕೊಟ್ಟಿದೆ.

ಸಂಸ್ಥಾನಗಳನ್ನು ಬಿಟ್ಟು ಬ್ರಿಟಿಷ ಕರ್ನಾಟಕವೆಲ್ಲವನ್ನೂ ಒಂದುಗೂಡಿಸಬೇಕೆಂದು ಕರ್ನಾಟಕದ ಸದ್ಯದ ಬೇಡಿಕೆಯಾಗಿದೆ. ಬೇರೆಡೆಯಲ್ಲಿ ಪ್ರಕಟಿಸಿದ ಪತ್ರಿಕೆಯಲ್ಲಿ ತೋರಿಸಿದಂತೆ ಜನಸಂಖ್ಯೆ ಉತ್ಪನ್ನ ಮೊದಲಾದ ದೃಷ್ಟಿಯಿಂದ ಈ ಪ್ರಾಂತ್ಯವು ಸ್ವಾವಲಂಬಿಯಾಗುವದೆಂಬುದು ಯಾರಿಗಾದರೂ ಸ್ಪಷ್ಟವಾಗಬಹುದು. ಬೆಳಗಾಂವಿ, ಧಾರವಾಡ, ಬಿಜಾಪುರ, ಬಳ್ಳಾರಿ, ಕಾರವಾರ, ಮಂಗಳೂರು, ನೀಲಗಿರಿ ಹಾಗೂ ಕೊಡಗು ಎಂಬ ೮ ಕನ್ನಡ ಜಿಲ್ಲೆಗಳ (ಇವುಗಳಲ್ಲಿ ಮಡಕಸಿರಾ, ಹೊಸೂರು, ಕೃಷ್ಣಗಿರಿ, ಕೊಳ್ಳೇಗಾಲ ಹಾಗೂ ಸೊಲ್ಲಾಪುರ ಎಂಬ ೫ ತಾಲೂಕುಗಳೂ ಸೇರಿವೆ) ಕ್ಷೇತ್ರ ಫಲವು ೩೫೪೦೮ ಚೌ. ಮೈಲುಗಳಾಗಬಹುದು. ೧೯೨೧ರ ಜನಗಣತಿಯಂತೆ ಈ ಜಿಲ್ಲೆಗಳ ಜನ ಸಂಖ್ಯೆಯು ೬೩೮೭೭೬೩ ಆಗುವದು. ಈ ಜಿಲ್ಲೆಗಳ ಒಟ್ಟು ಉತ್ಪನ್ನವು ೩೫೬೭೯೬೮೯ ರೂ. ಹಾಗೂ ವೆಚ್ಚವು ೨೯೭೧೯೮೬೭ ರೂ. ಇರುವುದು. ಇದರಿಂದ ಪ್ರತಿ ವರ್ಷ ೫೯೬೦೧೭೬ ರೂ ಉಳಿತಾಯವಾಗಬಹುದು. ಇದರಲ್ಲಿ ಪ್ರಾಂತಿಕ ಸರಕಾರವನ್ನು ನಡಿಸಲು ಯಾವ ತೊಂದರೆಯೂ ಉಂಟಾಗದು. ಈ ಎಲ್ಲ ವೆಚ್ಚವನ್ನು ತೆಗೆದ ಮೇಲೆ ಇನ್ನು ಉಳಿಯಬಹುದಾದ ಸ್ವಲ್ಪ ಹಣದಲ್ಲಿ ಬೇರೆ ಸುಧಾರಣೆಗಳನ್ನಾದರೂ ಮಾಡಿಕೊಳ್ಳಬಹುದು.

ಕರ್ನಾಟಕದ ಆರ್ಥಿಕ ಸ್ಥಿತಿಯನ್ನು ಇನ್ನೂ ಬಹುವಾಗಿ ಬೆಳೆಸಬಹುದು (೧) ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಭೀಮಾ, ಮಲಪ್ರಭಾ, ವರದಾ ಮುಂತಾದ ನದಿಗಳಿಂದ ಕಾಲುವೆಗಳನ್ನು ಮಾಡಿದರೆ ಭೂಮಿಯ ಉತ್ಪನ್ನವು ಇಮ್ಮಡಿಯಾಗಬಹುದು. (೨) ಸಮುದ್ರದ ದಂಡೆಗುಂಟ ಉಗಿಬಂಡಿಯ ದಾರಿಯನ್ನು ಮಾಡಿದರೆ ವ್ಯಾಪಾರವು ಹೆಚ್ಚುವದು (೩) ಘಟಗಳ ಒಂದರವನ್ನು ಮಾಡಿದರೆ ಮೊದಲಿನಂತೆ ಕರ್ನಾಟಕವು ವ್ಯಾಪಾರದ ಮುಖ್ಯ ಸ್ಥಳವಾಗುವುದು. ಇಲ್ಲಿ ಸಾಗವಾನ ಅಡವಿಗಳಿದ್ದದರಿಂದ ಹಡಗುಗಳನ್ನಾದರೂ ಕಟ್ಟಬಹುದು. (೪) ಕಬ್ಬಿಣಗಿಣಿಯಲ್ಲಿಯ ಹಾಗೂ, ಕೋಲಾರದಲ್ಲಿಯ ಬಂಗಾರದ ಕಣಿಗಳು, ಲೋಹಮಂಡೂರ (ಮ್ಯಾಂಗಾನೀಜ) ಕಣಿಗಳು ಮುಂತಾದುವುಗಳಿಂದ ಕರ್ನಾಟಕದಲ್ಲಿ ಭೂಗತ ದ್ರವ್ಯವು ಹೇರಳವಾಗಿಯೆಂದು ಹೇಳಬಹುದು. ಇದರ ಉಪಯೋಗವಾಗುವದು ಅವಶ್ಯವು. (೫) ಹತ್ತಿ, ಹತ್ತೀಕಾಳು, ಶೇಂಗಾ, ಕೊಬ್ಬರಿ, ಅಳ್ಳೀಕಾಯಿ ಮುಂತಾದ ಹೇರಳವಾಗಿ ದೊರೆಯುತ್ತಿರುವ ಕಚ್ಚಾ ಮಾಲಿನಿಂದ ಬಟ್ಟೆ, ಎಣ್ಣೆ ಮುಂತಾದವುಗಳನ್ನು ಸಿದ್ಧಪಡಿಸಬಹುದು (೬) ಸಹ್ಯಾದ್ರಿ, ಬೆಟ್ಟಗಳ ಮೇಲಿಂದ ಅನೇಕ ಪ್ರವಾಹಗಳು ಹರಿಯುತ್ತಿರುವುದರಿಂದ ಇಲ್ಲಿ ವಿದ್ಯುಚ್ಛಕ್ತಿಯನ್ನೂ ಹೇರಳವಾಗಿ ಹುಟ್ಟಿಸಬಹುದು. ಮೇಲಿನ ಎಲ್ಲಾ ಸಾಂಪತ್ತಿಕ ಸ್ಥಿತಿಯ ಮೇಲಿಂದ ಸದ್ಯಕ್ಕೆ ಮದ್ರಾಸಿನ ಹಾಗೂ ಮುಂಬಾಯಿ ಸರಕಾರಗಳಿಂದ ಕರ್ನಾಟಕವು ದುರ್ಲಕ್ಷಿಸಲ್ಪಡುವದು ನಿಂತರೆ ಈ ಪ್ರಾಂತ್ಯವು ಎಷ್ಟು ಘನತೆಗೇರಬಹುದೆಂಬುದನ್ನು ಸಹಜವಾಗಿ ಊಹಿಸಬಹುದು. ಆದ್ದರಿಂದ ಸರ್ವಪಕ್ಷೀಯ ಪರಿಷತ್ತಿನವರು ಸಿದ್ಧಪಡಿಸುತ್ತಿರುವ ರಾಜ್ಯಘಟನೆಯಲ್ಲಿ ಕರ್ನಾಟಕವನ್ನು ಸ್ವತಂತ್ರ ಪ್ರಾಂತವನ್ನಾಗಿ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ.

(ಇಲ್ಲಿ ಕೊಡಲ್ಪಟ್ಟ ಅಂಕಗಳೆಲ್ಲವೂ ಸರಕಾರಿ ಪತ್ರಿಕೆಗಳಿಂದ ತೆಗೆದುಕೊಳ್ಳಲ್ಪಟ್ಟಿವೆ)

ಭಾವೀ ಕರ್ನಾಟಕದ ಕ್ಷೇತ್ರ ಹಾಗೂ ಜನಸಂಖ್ಯೆ.

(೧೯೨೧ ರ ಜನಗಣತಿಯಂತೆ.)

ಜಿಲ್ಲೆ	ಚೌ ಮೈ ಕ್ಷೇತ್ರ	ಪಟ್ಟಣಗಳ ಸಂಖ್ಯೆ	ಹಳ್ಳಿಗಳ ಸಂಖ್ಯೆ	ಜನ ಸಂಖ್ಯೆ
ಬೆಳಗಾಂವಿ	೪೬೧೧	೬	೧೦೬೩	೯೫೩೯೯೬
ವಿಜಾಪುರ	೫೭೦೭	೮	೧೧೩೦	೭೯೬೪೭೬
ಧಾರವಾಡ	೪೬೦೬	೧೭	೧೨೬೦	೧೦೨೬೯೨೪
ಉತ್ತರ ಕನ್ನಡ	೩೯೪೬	೭	೧೨೫೭	೪೦೧೭೨೭
ದ ಕನ್ನಡ	೪೦೨೧	೭	೭೯೮	೧೨೪೭೩೬೮
ಬಳ್ಳಾರಿ	೫೭೧೩	೧೦	೯೧೧	೮೬೨೩೭೦
ಕೊಡಗು	೧೫೮೨	೨	೩೭೬	೧೬೩೮೩೮
ನೀಲಗಿರಿ	೯೮೨	೩	೫೪	೧೨೬೫೯೯
	೩೧೧೬೮	೬೧	೬೮೩೯	೫೫೮೮೬೧೮

ತಾಲೂಕು	ಚೌ ಮೈ ಕ್ಷೇತ್ರ	ಪಟ್ಟಣಗಳ ಸಂಖ್ಯೆ	ಹಳ್ಳಿಗಳ ಸಂಖ್ಯೆ	ಜನ ಸಂಖ್ಯೆ
ಮಡಕಸಿರಾ (ಜಿ ಅನಂತಪುರ)	೪೪೩	೧	೫೭	೮೫೯೯೫
ಹೊಸೂರ (ಜಿ ಸೇಲಂ)	೧೨೧೬	೧	೪೩೭	೧೮೬೪೩೦
ಕೃಷ್ಣಗಿರಿ (ಜಿ ಸೇಲಂ)	೯೫೬	೨	೧೮೩	೧೬೭೩೦೨
ಕೊಳ್ಳೇಗಾಲ (ಜಿ ಕೊಯಿಮತ್ತೂರು)	೧೦೭೬	೧	೮೪	೯೫೪೯೬
ಸೊಲ್ಲಾಪುರ (ಜಿ ಸೊಲ್ಲಾಪುರ)	೮೪೮	೧	೯೧೧	೨೬೪೪೮೬೧
	೪೨೪೦	೬	೯೧೧	೭೯೯೧೪೪
ಒಟ್ಟು	೩೫೪೦೮	೬೭	೭೭೫೦	೬೩೮೭೭೬೩

ಕರ್ನಾಟಕದ ೮ ಜಿಲ್ಲೆಗಳ ಆದಾಯ ವೆಚ್ಚ.

ಜಿಲ್ಲೆ.	ಮಧ್ಯವರ್ತೀ ಬಾಬುಗಳಿಂದ ಉತ್ಪನ್ನ	ಪ್ರಾಂತೀಕ ಬಾಬುಗಳಿಂದ ಉತ್ಪನ್ನ	ಒಟ್ಟು ಉತ್ಪನ್ನ	ಮಧ್ಯವರ್ತಿ ಬಾಬುಗಳ ಮೇಲೆ ವೆಚ್ಚ	ಪ್ರಾಂ. ಬಾಬುಗಳ ಮೇಲೆ ವೆಚ್ಚ	ಅಂತೂ ವೆಚ್ಚ.
ಬೆಳಗಾಂವಿ.	೧೪೦೦೦೦	೩೯೧೦೦೦೦	೪೦೫೦೦೦೦	ತಿಳಿದಿಲ್ಲ.	ತಿಳಿದಿಲ್ಲ.	೩೬೦೦೦೦೦
ಬಿಜಾಪುರ.	೧೫೦೦೦೦	೨೭೦೦೦೦೦	೨೮೫೦೦೦೦	"	"	೨೦೯೦೦೦೦
ಧಾರವಾಡ.	೨೭೦೦೦೦	೪೯೮೦೦೦೦	೫೨೦೦೦೦೦	"	"	೪೬೭೦೦೦೦
ಉ. ಕನ್ನಡ	೪೦೦೦೦	೧೭೪೦೦೦೦	೧೭೮೦೦೦೦	"	"	೧೮೧೦೦೦೦
ದ ಕನ್ನಡ.	೧೫೯೮೨೭	೪೯೯೦೩೪೧	೫೧೫೦೧೬೮	೭೪೧೨೫	೭೯೩೯೩೫೧	೩೦೧೩೪೭೭
ಬಳ್ಳಾರಿ.	೧೯೭೧೨೬	೩೮೪೮೭೯೩	೪೦೪೫೮೧೯	೯೧೫೦೦	೩೧೭೯೫೩೮	೩೨೭೧೦೩೮
ಕೊಡಗು.	ತಿಳಿದಿಲ್ಲ.	ತಿಳಿದಿಲ್ಲ.	೧೩೦೦೦೦೦	ತಿಳಿದಿಲ್ಲ.	ತಿಳಿದಿಲ್ಲ.	೧೩೦೦೦೦೦
ನೀಲಗಿರಿ	೭೮೫೮೪೯	೧೧೩೭೫೦೭	೧೪೨೩೩೫೬	೨೩೬೭೧೮	೧೬೪೮೬೩೫	೧೮೮೫೮೫೩
			೩೫೬೭೯೬೮೯			೨೯೭೧೯೮೬೭

Please Call at

THE GENERAL TRADING CO., MERCARA,

Opposite Coronation Gardens.

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY! NEW PERFORMANCE!! NEW FEATURES AND FOUR WHEEL BRAKES!!!

QUALITY AT LOW COST.

THE COORG FOOTWEAR MART, MERCARA.

The house for smart foot wear. Monsoon boot a speciality

Prompt attention. Prices very moderate.

12-2 Attended by very efficient workmen.

ಇಮಿಟೇಷನ್ ವಜ್ರದ ಬೆಂಡೋಲೆಗಳು.



ಈ ಬೆಂಡೋಲೆಗಳನ್ನು ಹೊಸದಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ನೇಮಿಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ನಿಜವಾದ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೋತೆ 1ಕ್ಕೆ 2—0—0.

7 ಕೆಂಪು ಕಲ್ಲಿನ ಓಲೆ ಜೋತೆ 1ಕ್ಕೆ 2—8—0.

ವಿಳಾಸ.—ಕೆ. ನಾಥಮುನಿ ಅಂಡ್ ಸನ್ಸ್,

52—7 168 ಚೈನಾ ಬಜಾರ್, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸರಿಸಮನಾಗಿರುವದು.



ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ. 6—8—0.

ಕ್ರಯ ಕಡಿಯಾರ 1ಕ್ಕೆ ರೂ. 3—8—0

ವಿಳಾಸ —ಲೀಗಲ್ ವಾಚ್ ಕಂಪೆನಿ,

ಪೋ. ಬಾಕ್ಸ್ ನಂ 243, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ಕೀಳಡ್ಡಿಗೆ ಪದಕ.

ಈ ಅಡ್ಡಿಗೆಗಳನ್ನು ರೋಲ್ಡ್ ಗೋಲ್ಡ್‌ನಿಂದ ತಯಾರಿಸಿ ಸಾವರೀನ್ ಭಂಗಾರದ ಗಿಲೀಟು ಕೊಟ್ಟಿದೆ ಒಣ್ಣ ಕೆಡದು. ಇದರ ಪದಕವು ಕೆಂಪು, ಬಿಳಿ ಮತ್ತು ಹಸಿರು ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿ ನೋಡಲು ಲಕ್ಷಣವಾಗಿರು

ಎಂತೆ ಮುತ್ತುಗಳನ್ನು ಸಹ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು.

ಕ್ರಯ 1ಕ್ಕೆ ರೂ. 3—8—0.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗಿಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತರಿಯಿಂದ ಕ್ಷೌರ ಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು ಬಿಡುವದು.

3 ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0.

ವಿಳಾಸ.—ಕೆ. ನಾಥಮುನಿ ಅಂಡ್ ಸನ್ಸ್,

52—7 168. ಚೈನಾ ಬಜಾರ್, ಮದರಾಸು.

ವರ್ತಮಾನ ಸಂಗ್ರಹ.

ಒಳವೇಶ

ಒಂದು ವಾರ ರಜೆಯಲ್ಲಿ ಕೊಡಗನಲ್ಲಿಗೆ ಹೋಗಿದ್ದ ಕ ಮಿಷನರವರು ನಾಳೆ ದಿನ ವಾಪಸು ಬರಲಿಕ್ಕಿರುವರು.

ಒದುವ ವರ್ಷದ ಕಾಫಿಯು ಹಂಡ್ರೆಡ್ವೆಯಿಟಿಗೆ 60 ರೂ. ಯಲ್ಲಿ ಈ ವಾರ ಮಡಿಕೇರಿಯಲ್ಲಿ ವ್ಯಾಪಾರ ಮಾಡ ಲಾಗಿದೆ.

ಈ ತಾರೀಕು 14 ರಲ್ಲಿ ಮಧ್ಯಾಹ್ನ 1½ ಗಂಟೆಗೆ ಜವಿ ನ್ಯಾರರ ಸಂಘದ ಕಾರ್ಯಕಾರಿ ಮಂಡಲಿಯು ವಿರಾಜಪೇಟೆ ಸಂಘದ ಹಾಲಿನಲ್ಲಿ ನಡೆಯುವದು.

ಗಣೇಶ ಬಸ್ಸ್ ಸರ್ವಿಸಿನ ಒಂದು ಬಸ್ಸು ತಾ 22-6-28 ರಲ್ಲಿ ಕುಟ್ಟದ ಸಮೀಪ ಪುಳೆಯರ 40 ಅಡಿ ಗುಂಡಿಗೆ ಮಗು ಚಿಬಿದ್ದರೂ ಆದರಲ್ಲಿದ್ದ ಪ್ರಯಾಣಿಕರಿಗೆ ಹೆಚ್ಚಿನ ಅಪಾಯ ವೇನೂ ಸಂಭವಿಸಲ್ಲಿಲ್ಲವೆಂದು ವರ್ತಮಾನ.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ವಿಶೇಷ ಜನರಲ್ ಮೀಟಿಂಗೊಂದು ಈ ತಾ 1 ರಲ್ಲಿ ಮಡಿಕೇರಿ ಓಂಕಾರೇಶ್ವ ರ ದೇವಸ್ಥಾನದ ಹಾಲ್‌ನಲ್ಲಿ ರಾ. ಬಾ ಕೋಡಂಡ ಅಪ್ಪಯ್ಯ ನವರ ಅಧ್ಯಕ್ಷತೆಯಲ್ಲಿ ನಡೆದು ಫಂಡಿನ ಕೆಲವು ನಿಬಂಧನೆಗಳು ತಿದ್ದುಪಡಿ ಮಾಡಲಾದವು.

ಕಳೆದ ಶುಕ್ರವಾರ ಮೋಹರಂ ಹಬ್ಬವು ಆಚರಿಸಲ್ಪಟ್ಟಿ ತು. ಮಡಿಕೇರಿಯಲ್ಲಿ ಇಷ್ಟು ವರ್ಷಗಳು ಇದ್ದಂತೆ ತೇರು ವಗೈರೆ ಇಲ್ಲದೆಯೂ, ವೇಷಧಾರಿಗಳು ಬಹಳ ಕಡಿಮೆಯಾಗಿ ಯೂ ಮೆರವಣಿಗೆಗೆ ಜೀವಕಳೆಯೇ ಇಲ್ಲದಂತೆ ಇತ್ತು. ಪ್ರೇಕ್ಷಕರೂ ಬಹು ಸ್ವಲ್ಪ ಮಂದಿ ಇದ್ದರು.

ಕೊಡಗು ಒಬ್ಸ್ಟೇಶನ್ ಟೆಸ್ಟ್ ಪರೀಕ್ಷೆಯು ಆಗೋ ಸ್ಟು ತಾ 20ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದೂ, ಆ ಪ ರೀಕ್ಷೆಗೆ ಹೋಗಲು ಇಚ್ಛೆಯುಳ್ಳವರು ಜುಲೈ 31 ರೊಳಗೆ ರಿ ಜಿಸ್ಟ್ರೇಶನ್ ಇನ್ಸ್‌ಪೆಕ್ಟರ್ ಜನರಲ್ ರವರಿಗೆ ಅಪ್ಲಿಕೇಶನ್ ಕ ಳುಹಿಸಬೇಕೆಂತಲೂ ಪ್ರಕಟವಾಗಿದೆ.

ಭಾಗಮಂಡಲ ನಾಡು ಕೊರಂಗುಂಡದ ದೊಡ್ಡಿಯು ಜೂ ನ್ ತಾ. 15ರಿಂದಲೂ, ಶನಿವಾರಸಂತೆ ಹೋಬಳಿ ಕಾಗೋ ಡು ದೊಡ್ಡಿಯು ಈ ತಾ. 10ರಿಂದಲೂ ಮಂಜೂರಾಗಿದೆಯೆಂ ದೂ, ಜೂನ್ 1ರಿಂದ ಪೆರಾಜೆಯಲ್ಲಿ ಒಂದು ವರ್ಷದ ವರೆಗ ಒಂದು ದೊಡ್ಡಿಯು ಇಡಲಾಗಿದೆಯೆಂದೂ ತಿಳಿಯಬರುತ್ತದೆ.

ಈ ವರ್ಷದ ಮಳೆಗಾಲವು ಬಹು ಆಶ್ಚರ್ಯಕರವಾಗಿದೆ. ಆರಿದ್ರೆ (ಅದ್ರೆ) ಮಳೆ ಪ್ರಾರಂಭದಲ್ಲಿ ವಾಡಿಕೆಯಾಗಿ ಬೀಳಬೇ ಕಾಗಿದ್ದದ್ದು, ಈಗ ಸದರಿ ತಿಂಗಳು ಇಪ್ಪತ್ತಾದರೂ ಮಳೆ ಇಲ್ಲದಕಾರಣ ಹಲವರು ಇನ್ನೂ ಬೀಜಹಾಕಿರುವದಿಲ್ಲ. ಹಾ ಕಿದ ಬೀಜಕ್ಕೆ ನೀರುಸಾಲದೆ ಜನ್ಮಗಿರುವದಿಲ್ಲ. ಗ್ರಾಮ ವಾಸಿಗಳಲ್ಲಿ ಹಾಹಾಕಾರವು ಹುಟ್ಟಿದೆ.

ಕಂಡಂಗಾಲ ಗ್ರಾಮದಲ್ಲಿ ಕಳೆದ ಒಂದೆರಡುವಾರದಿಂ ದ ಮೂರು ಎಮ್ಮೆ ಕೋಣಗಳು ಬಿಡದಿಯಾಗಿ ಮೇಯುತ್ತಾ ಇ ವೆಯೆಂದೂ, ಇವುಗಳಲ್ಲಿ ಒಂದು ಕರಿ ಎಮ್ಮೆ ಕೋಣವು ಮೂ ದಕ್ಕೆ ಇದೆ ಇನ್ನೊಂದು ಸಾಧಾರಣ ಬಿಳಿ ಎಮ್ಮೆ ಕೋಣ ಇರುವ, ಇನ್ನೊಂದು ಎಮ್ಮೆ ಬೇಡಿ ಕರವೆಂದೂ, ಕಲ್ಲೋ ಡು ಸ್ಕೂಲಿನ ಹೆ ಮಾಸ್ತರ ಚೆಪ್ಪುಡಿರ ಚಿ. ಬಿದ್ದಪ್ಪಯ್ಯನವರು ತಿಳಿ ಸಿರುತ್ತಾರೆ.

ಮಡಿಕೇರಿ ಮುನ್ಸಿಪಲ್ ಚುನಾವಣೆಗೆ ಕಳೆದ ವಾರ ಹೆ ಸರು ಪ್ರಕಟಿಸಿದವರಲ್ಲದೆ, ಕೊಹಿನೂರು ಪರವಾಗಿ ಮೆ. ಕೊಂ ಗೆಟ್ಟಿನ ಅಪ್ಪಯ್ಯನವರೂ, ಹಿಂದೂಗಳ ಪರವಾಗಿ ಮೆ ಗಳಾ ದವಿ ಯನ್. ಕಣ್ಣಯ್ಯಶೆಟ್ಟಿಯವರು, ಪೇಟೆ ತಿರುಮಲಾಚಾ ರವರು, ಯನ್. ಯಸ್. ರಾಮೈಯ್ಯನವರು, ಎ. ಆರ್. ಅರ ಮೂಲಂ ನಾಯುಡುರವರು ಮತ್ತು ಕೂನಸೆಟ್ಟಿ ತಿಮ್ಮಯ್ಯನ ವರೂ ಉಮೇದುವಾರರಾಗಿ ನಿಂತಿರುವರು. ರಾ. ಸಾ. ಕೋಡಿಮಣಿಯಂಡ ಸುಬ್ಬಯ್ಯನವರು ತಮ್ಮ ಅಪ್ಲಿಕೇಶನ ನ್ನು ವಾಪಸು ತೆಗೆದುಕೊಂಡಿರುವರೆಂದು ವರ್ತಮಾನ

ಮಡಿಕೇರಿಯಲ್ಲಿ ತಾ. 3—7—28ರಲ್ಲಿ ನಡೆದ ಕೊಡ ಗು ವಿದ್ಯಾಭಿವೃದ್ಧಿ ಫಂಡಿನ ಕಮಿಟಿ ಮೀಟಿಂಗಿನಲ್ಲಿ ಈ ಕೆಳಗಿ ನ ವಿದ್ಯಾರ್ಥಿಗಳಿಗೆ ವೇತನಗಳು ಮತ್ತು ಸಾಲವು ಮಂಜೂ ರಾಯಿತೆಂದು ತಿಳಿಯುತ್ತೇವೆ ತಿಂಗಳಿಗೆ 10 ರೂಪಾಯಿಯ ವೇತನಗಳು—ಬಿ. ಎ. ಕ್ಲಾಸಿನಲ್ಲಿ ಓದುವ 1 ಚೀಕಂಡ ಕಾ ರ್ಯಪ್ಪನವರು, 2 ನಲ್ಲಮಕ್ಕಡ ಸಿ. ದೇವೈಯ್ಯನವರು, ಇಂ ಟರ್ ಮೀಡಿಯೇಟ್ ಕ್ಲಾಸಿನಲ್ಲಿ ಓದುವ 3. ಮಂಡೇಪಂಡ ಯಂ. ಸುಬ್ಬೈಯ್ಯನವರು, 4 ಬಟ್ಟಿಯಂಡ ಸಿ. ಸುಬ್ಬೈಯ್ಯನವ ರು, 5. ಮನೆಯಪಂಡ ಪಿ. ಬೆಳ್ಯಪ್ಪನವರು, 6. ಮಂಡೇಪಂಡ ಎ. ಬಿಯ್ಯಪ್ಪನವರು, 100 ರೂಪಾಯಿ ಸಾಲಗಳು—1. ಕೀತಿ ರ ಮೇದಪ್ಪನವರು, 2. ಚೀಯಕಪೂವಂಡ ಥಿಮ್ಮೈಯ್ಯನವ ರು, 3. ಕೇಳಪಂಡ ಯಂ. ಐಯ್ಯಣ್ಣನವರು, 4 ಮಂಡೇಪಂ ಡ ಯಂ. ಬೋಪಣ್ಣನವರು, 5. ಕರ್ತಮಾಡ ಗಂಗಮ್ಮನವರು, 6. ಚೆನ್ನಿರ ಗಂಗಮ್ಮನವರು ಮತ್ತು 7. ಕುಲ್ಲಚಂಡ ಅಕ್ಕಮ್ಮ ನವರು.

ತಿದ್ದುಪಡಿ.

" ಮಡಿಕೇರಿ ಕಾನ್ವೆಂಟು ಹೈಸ್ಕೂಲಿಗೆ ಮಳೆಗಾಲದ ರ ಜೆ ಆಗೋಸ್ತು ತಿಂಗಳು ಪೂರ್ತಿ ಬಿಡಲಾಗಿದೆ " ಎಂದು ಕಳೆದ ವಾರ ಪ್ರಕಟವಾದದನ್ನು ಜುಲೈ ತಿಂಗಳು ಪೂರ್ತಿ ಎಂದು ಓ ದಿಕೊಳ್ಳುವದು.

ಹಿಂದೂದೇಶ.

ಬೊಂಬಾಯಿ ಗಿರಣಿಗಳ ಮುಂದೆ ಸ್ವಯಂ ಸೇವಕಿ ಯರು ಪಿಕೆಟ್ ಮಾಡುತ್ತಿರುವರು. ಆದುದರಿಂದ ಅಲ್ಲಿ ಕಲಸಕ್ಕೆ ಹೋಗುತ್ತಿದ್ದ ಅಲ್ಪಸ್ವಲ್ಪ ಜನರೂ ಈಗ ಹಿಂದೆಗೆದಿರುವರು ಸರ್ವೆಂಟ ಆಫ್ ಇಂಡಿಯಾ ಸೊಸೈಟಿಯು ಪ್ರೆಸೈಡೆ ರನು ಬಾರ್ಡೋಲಿ ಪ್ರಾಂತ್ಯವನ್ನು ಸುತ್ತಿ ನೋಡಿ ಕಂದಾಯ ಹೆಚ್ಚಿಸುವಿಕೆಯ ವಿಷಯ ಪುನರ ವಿಚಾರ ನಡಸಬೇಕೆಂಬ ಅ ಭಿಪ್ರಾಯಕ್ಕೆ ಒತ್ತಾಸೆ ಕೊಟ್ಟಿರುವರು.

ಸ್ವದೇಶ ಕಮಿಷನಿಗೆ ಮುಸ್ಲಿಮರಲಿಬಿಯವರು ಮೊದಲ್ ರಾಂಡು ಕಾಯಬೇಕೆಂದು ಬೆಂಬಲಾಯಿ ಸರ್ಕಾರದವರು ಮಾಡಿರುವ ಸೂಚನೆಯನ್ನು ಮಹಾಸಭೆ, ಶಾನಾ ಮುಸ್ಲಿಮ ನಾಯಕ ಯವರು ಅಂಥಾ ಮುಸ್ಲಿಮರೊಂದನ್ನು ಕಳುಹಿಸುವದಿಲ್ಲವೆಂ ದು ತೀರ್ಮಾನಿಸಿರುವರು.

ಕಳೆದ ಶನಿವಾರ ಬೆಂಗಳೂರಿಗೆ ಸಮೀಪ ಮಾದಾವಕ್ಕೆ ಬಂದಿದ್ದ ಒಬ್ಬ ಪೂರ್ಣ ಗರ್ಭಿಣಿಯಾಗಿದ್ದ ಹೆಂಗಸು ಹಾದಿ ಹೋಗುತ್ತಿರವಾಗಲೇ ಮಗುವನ್ನು ಹೆತ್ತುಬಿಟ್ಟಳು. ಪೋಲೀ ಸಿನವರು ಆಕೆಯನ್ನು ಆಸ್ಪತ್ರೆಗೆ ಸಾಗಿಸಿದರು. ಈಗ ಮಗು, ತಾಯಿ ಜಾಣಂತಿಯೂ ಸುಖವಾಗಿರುವರಂತೆ.

ಸೈಮನ್ ಕಮಿಷನಿನ ಭಯೋತ್ಪಾತಿಯು ಬಿಹಾರ ಉತ್ತರ ಯಿತಿ ಎಂದೂ ಅದರಿಂದ ಯಾರೂ ಮಹಾತ್ಮಗಾಂಧಿ ಬಹಿಷ್ಕಾರ ದ ಚಳವಳಿಯನ್ನು ಬಲಪಡಿಸಬೇಕೆಂದೂ ಇಂಡಿಯನ್ ನ್ಯಾಷನ ಲ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ. ಅನ್ಸಾರಿಯವರೂ ಲಿಬ ರಲ್ ಪಾರ್ಟಿಯ ಮುಂದಾಳಾದ ಸರ್ ತೇಜ್ ಬಹದ್ದೂರ್ ಸಾಪ್ರು ರವರೂ ಜನರಲ್ಲಿ ಅಪೀಲು ಮಾಡಿರುವರು.

ಮೇಜರ್ ಸಿನ್‌ಕ್ಲೇರ್ ಮತ್ತು ಕ್ಯಾಪ್ಟನ್ ಸೋರ್ ಮ್ಯಾನ್ ಎಂಬವರು ಬೊಂಬಾಯಿ ಪಟ್ಟಣದಿಂದ ವಿಮಾನದಲ್ಲಿ ಕರಾಚಿಯಲ್ಲಿ ಪ್ರಸ್ತುತ ತಿಂಗಳಲ್ಲಿ ಹೊರಟು ಇಂಗ್ಲೆಂಡಿಗೆ ಲಂಡ ನ್ ಪಟ್ಟಣವನ್ನು ತಲಪಿರುವರು. ಇವರು ವಾಯುಮಾರ್ಗವಾಗಿ 7,000 ಮೈಲುಗಳ ಮೋಟಾರ್ ಪ್ರಯಾಣವನ್ನು ನಡೆಸಿ ದಾದರು ಇವರ ಮೋಟಾರಿಗೆ ಯಾವ ತರಹದ ಕುಂದಕವೂ ಉಂಟಾಗಲಿಲ್ಲವಂತೆ.

ಬಾರ್ಡೋಲಿಯ ಸತ್ಯಾಗ್ರಹಿಗಳ ಸರ್ಕಾರದಲ್ಲಿ ರಾ ಜಿ ಸಂಧಾನಗಳನ್ನು ನಡೆಸುತ್ತಿದ್ದ ಇಂಡಿಯನ್ ಮರ್ಚೆಂಟ್ಸ ಚೇಂಬರಿನವರ ಪ್ರಯತ್ನವು ಅಪಜಯವಾಗಿದೆ ಗವರ್ನರವ ರ ಎಗ್ಸಿಕ್ಯುಟಿವ್ ಕೌನ್ಸಿಲ ಮೆಂಬರುಗಳು, ಚೇಂಬರಿನ ಪ್ರ ತಿನಿಧಿಗಳು ಮತ್ತು ಮಹಾತ್ಮಾ ಗಾಂಧಿಯವರು ಮತ್ತು ಶ್ರೀ ವ ಲ್ಲಭಭಾಯಿ ಪಟೇಲರವರು, ಸೇರಿ ಒಂದು ರೌಂಡ್ ಟೇಬಲ್ ಕಾನ್‌ಫರೆನ್ಸ ನಡಿಸಬೇಕೆಂದು ಚೇಂಬರಿನ ಪ್ರತಿನಿಧಿಗಳು ಕೇ ಳಿಕೊಂಡದಕ್ಕೆ ಗವರ್ನರವರು ಒಪ್ಪದ್ದರಿಂದ ರಾಜಿಯು ಮುರಿ ದು ಹೋಯಿತು. ಇದರ ಪರಿಣಾಮವಾಗಿ ಸದರಿ ಚೇಂಬರಿನ ಪ್ರತಿನಿಧಿಯಾದ ಮಿ. ಲಾಲ್ಜಿ ನಾರಾಣಜಿ ಯವರು ಬೊಂಬಾಯಿ ಕೌನ್ಸಿಲಿನ ಮೆಂಬರುತನಕ್ಕೆ ರಾಜೀನಾಮೆ ಕಳುಹಿಸಿರುವರು

ವಿದೇಶ.

ಅಫ್ಘಾನಿಸ್ಥಾನದ ಅಮೀರರು ಯುರೋಪಿನ ಪ್ರವಾಸ ವನ್ನು ಮುಗಿಸಿಕೊಂಡು, ತನ್ನ ಪತ್ನಿ ಸೌರೈಯ ಮಹಾರಾಣಿ ಯವರೊಡನೆ ತಮ್ಮ ಸ್ವದೇಶಕ್ಕೆ ವಾಪಸು ಬಂದು ತಲಪಿದ ವರು.

ಪಾರ್ಲಿಮೆಂಟುಗಳಲ್ಲಿ ಸಾರ್ವಭೌಮ ಬ್ರಿಟನ್ನಿನಲ್ಲಿ ಸ್ತ್ರೀ ಯರಿಗೆ ಓಟುಕೊಡುವ ಹಕ್ಕಿನ ಚಿಕ್ಕಿಗೆ ರಾಜರ ಮಂಜೂರಾ ತಿ ದೊರೆತಿದೆ.

ಜ. ರಲ್ ಒಬ್ರೆಗನ್‌ರವರು ಮೆಕ್ಸಿಕೊ ಸರ್ಕಾರದ ಪ್ರೆಸಿ ಡೆಂಟರಾಗಿ ನೇಮಿಸಲ್ಪಟ್ಟಿರುವರು. ಇವರು ಹಾಲಿ ಪ್ರೆಸಿಡೆಂ ಟರಾದ ಕಾಲೆಸ್‌ರವರ ಸ್ಥಾನವನ್ನು ಹೊಂದುವರಂತೆ.

ಐಕ್ಯಮತ ಸೋವೈಟ ಸರ್ಕಾರದ ವಿದ್ಯಾ ಇಲಾಖೆಯ ಮಂತ್ರಿಯವರು ಶ್ರೀಯುತ ಯಸ್. ಶ್ರೀನಿವಾಸಯ್ಯಂಗಾ ರ್‌ರವರನ್ನು ಸರ್ಕಾರದ ಅತಿಥಿಯಾಗಿ ರಷ್ಯಾಕ್ಕೆ ಬರಬೇಕೆಂ ದು ಅವರಿಗೆ ಆಮಂತ್ರಣವನ್ನು ಕಳುಹಿಸಿರುವರೆಂದು ವರ್ತ ಮಾನ

ಸರ್ ಜಗದೀಶ್ ಚಂದ್ರಬೋಸ್‌ರವರು ವಿಯನ್ನಾ ಯೂ ನಿವರ್ಸಿಟಿಯಲ್ಲಿ ಕೆಲವು ಉಪನ್ಯಾಸ ಗಳು ಮಾಡಿ ಆ ಜನರ ಮ ತಾ ಮೆಚ್ಚಿಗೆಯನ್ನು ಸಂಪಾದಿಸಿರುವರೆಂದೂ, ಪ್ರಪಂಚದ ವ ಸ್ತುವಿಜ್ಞಾನ ಶಾಸ್ತ್ರಾಭಿವೃದ್ಧಿಗೆ ಈ ಇಂಡಿಯನ್ ಶಾಸ್ತ್ರಜ್ಞ ರು ಮಾಡಿರುವ ದೊಡ್ಡ ಸಹಾಯಕ್ಕಾಗಿ ವೈಸ್‌ರಾಯರನ್ನು ಅಭಿನಂದಿಸಿ ವಿಯನ್ನಾ ಯೂನಿವರ್ಸಿಟಿಯ ರೆಕ್ಟರರವರು ವೈಸ್‌ರಾ ಯರಿಗೆ ತಂತಿ ಕಳುಹಿಸಿರುವರು.

ಪರದೇಶಗಳ ಸೈನ್ಯಗಳು ಬಹಳ ಅಭಿವೃದ್ಧಿ ಹೊಂದಿವೆ ಯೆಂದೂ, ಆ ತರಗತಿಗೆ ಇಂಡಿಯಾ ಸೈನ್ಯವನ್ನು ತರಲು ಈ ಗ ವಾಡಿಕೆಯಾಗಿ ಮಾಡುವ ಖರ್ಚಲ್ಲದೆ ಇನ್ನು 6 ಕೋಟಿ ರೂಪಾಯಿ ಹೆಚ್ಚಾಗಿ ಪ್ರಯೋಜನ ಮಾಡಬೇಕಾಗುವದೆಂದೂ, ಇ ನ್ನು ಮುಂದೆ ವಿಮಾನ ಇಲಾಖೆಯ ಖರ್ಚನ್ನು ಹೆಚ್ಚಿಸುವ ಹಾಗೆ ಸರ್ಕಾರದವರು ಬ್ಬಯರುವರೆಂದೂ ಮುಂತಾಗಿ ಜನ ರಲ್ ಸ್ಟಾಫಿನ ಮುಖ್ಯಾಧಿಕಾರಿಯಾದ ಸರ್ ಆಂಡ್ರ್ಯು ಸ್ಕೀನ್

ರವರು ಮೊನ್ನೆ ಬಹಿರಂಗ ಪ್ರಕಟಿಸಿರುವರಂತೆ ಇದನ್ನು ಬ ಹಿರಂಗ ಹುನವನ್ನೇ! ಖರ್ಚು ಮಾಡುವವರಿಗೇನು ಬೇಸರ!

ನೋಟೀಸು.

ಒಂದು ತಿಂಗಳ ಹಿಂದೆ ಗೋಣಿಕೊಪ್ಪಲಿಂದ ಕ್ರಯಕ್ಕೆ ಕೊಂಡುಕೊಂಡ ನನ್ನ ಒಂದು ಜೊತೆ ಕೋಣಗಳು ಕಳೆದ ತಾರೀಕು 30—6—28ರಲ್ಲಿ ಸರಾಸರಿಯಾಗಿ ಹೋಗಿವೆ.

ವಿವರ.

ಕರೀಬಣ್ಣದ ಮೂಡೆ ಕೋಂಬಿನ, ಚಾಮಿ ಕೊಡಲಿಕಕ್ಕ ದ ಒಂದು ಕೋಣ ಇದರ ಜತೆಗೆ ಸ್ವಲ್ಪ ಬಿಳಿ ವರ್ಣದ ಹಿಂಗೋಡಿನ ಚಾಮಿ ಕುಸಿದ ಒಂದು ಕೋಣ. ಎರಡೂ ಸುಮಾರು 3½ ಅಡಿ ಎತ್ತರವಿವೆ.

ಸದರಿ ಕೋಣಗಳು ಇರುವ ಸ್ಥಳವನ್ನು ಕೆಳಗಿನ ಅಡ್ರೆ ಸ್ಸಿಗೆ ತಿಳಿಸಿಕೊಟ್ಟ ಮಹಾಶಯರಿಗೆ 5 ರೂಪಾಯಿ ಬಹುಮಾ ನ ಕೊಡುತ್ತೇನೆ.

ಎಸ್. ಬಿ. ಸುಬ್ಬಯ್ಯ,
ಹೆಡ್ ಮಾಸ್ತರ್,
ಬಾಲಿಕಾ ಪಾಠಶಾಲೆ, ಬೆಳ್ಳಕೇರಿ.

ನನ್ನ ಪಾಡು.

ನಾನು ಪುಟ್ಟಿದ ಕೊಡಗು ದೇಶದಿ।
ನಾನ್ ಬೆಳೆದೆನು ಜನರ ಪ್ರೀತಿ,
ನಾನು ಅರಿತೆನು ಜನರ ತಾವದು ಜರಿದುಬಿಕ್ಕಿದ್ದುದನೂ ||
ಅನ್ನವಿಲ್ಲದೆ ಬಳಲುತಿದ್ದರು,
ಸಾಲ ಸಾಲವು ಹೆಚ್ಚುತಿದ್ದವು।
ಮನದಿ ಕೊರಗುತ ಬಿಡುಕುತಿದ್ದರು ನಮ್ಮ ಬಾಂಧವರೂ||೧||
ಬುಟ್ಟಿಕಾಣರು ವಸರ ಉಡುವನು,
ಇಟ್ಟುಕೊಂಡರು ಪರರ ನಡತೆಯ
ಇಷ್ಟ ನನ್ನದು ಜನರಿಂದಲಿ ನಷ್ಟವಾಗಿದ್ದಿಂದ ||
ಇಟ್ಟ ಗ್ರಾಸವ ಬಿಟ್ಟವಾಗುತ
[illegible] ನದ ಸಮಯದ
ಬಿಟ್ಟು ಜಡಿತನ ಹರಿಯ ಚಿತ್ತದೆ ಬಂದ ಮಧ್ಯದಲಿ ||೨||
ನಾನೆ ಬೆಳೆದ ಬೊಗಳಿನ
ನನ್ನ ಕುಲದವು ಯೋಗ್ಯವಲ್ಲವು
ನನ್ನ ಒಡೆಯರು ನನ್ನ ಮಿತ್ರರು ಪರರ ಲೋಭಿಯೆಂದೂ ||
ಮುನ್ನ ಜೀವನ ಪಿಡಿಯಲಾರೆನು।
ಮುನ್ನ ನೌಕರಿ ಸಿಕ್ಕಲಾರದು,
ನನ್ನ ಹಂತರ ಸಾಕಲಾರೆನು ಹರಿ ಹರಿ ಎಂದಾ ||೩||
ಹಂದೆ ಗಳಿಸಿದ ದ್ರವ್ಯವೆಲ್ಲಾ,
ತಂದ ಕೂಡಿಟ್ಟ ಧಾನ್ಯವೆಲ್ಲಾ,
ಮುಂದೆ ನನ್ನದು ಎನ್ನಲಿಲ್ಲದೆ ಪೆಟ್ಟಿಗೆ ಜಿ ೬ ಬಿಗಲೇ ||
ನೊಂದೆ ಮಂದೆಯ ಗೋಳ್ಗಳಲ್ಲಿ।
ಕಂದು ಬಣ್ಣದ ಕರುಗಳೆಲ್ಲಾ
ಬಂದುದರಿಂದಲಿ ನೊಗಲಿಗ ಜೋಡವು ಸೊರಗ ಹಸುಗಳಲೀ ||೪||
ಅಲ್ಲಿ ತಿರುಗಿದೆ ಇಲ್ಲಿ ತಿರುಗಿದೆ
ಅಲ್ಲಿ ಕಳೆಯುತ ನನ್ನ ಸಮಯ।
ಕಲ್ಲಣವ ಗೆಯಲ್ಲು ಕಡೆಯೊಳು ನಿತ್ಯ ಅಹಾರವಿಲ್ಲ ದೆಲೆ ||
ಒಲಿಯಲೇ ಶ್ರೀ ಲಕ್ಷ್ಮಿ ಮನೆಗೆ,
ಒಲಿದ. ಕಾಯಲೇ ನನ್ನ ನಿಂದ।
ಒಲ್ಲಿದೊಡಯನೇ ರಕ್ಷಿಸಾ ಎಂದ ಬೇಡಿದೆನು ||೫||
ಮುನ್ನ ಇಂತು ಬಾಳಿದಾರೆನು।
ಮುನಿದು ಇಂತು ಬೇಡಿದಾರೆನು
ಮನ್ನ ನಾಶವ ಕೊಳ್ಳಲಾರೆನು ಗಟ್ಟಿ ಮಾಡಿದೆ ನನ್ನರಿ ||
ನನ್ನ ಹೊಲವ ಸುತ್ತು ಬಿತ್ತಿದೆ,
ಮನದಿ ನೋಯುತ ನನ್ನ ನಾಡಿಗೆ
ನನ್ನ ಆಳಕ ಕಾಯುತ್ತಿದ್ದೆನು ಆಗ ಚಿಂತೆಗೆಡಲಾರನು ||೬||

B. (T. M. I. A)

ಜೆಸ್ಸ್ ಲೀವರ್ ಪಾಕೆಟ್ ವಾಚ್.

ಈ ಗಡಿಯಾರಗಳು ಹೊಸದಾಗಿ ತಯಾರಾದವು (ಸ್ವಿಸ್ ಮೇಡ್) ನೋಟಕ್ಕೆ ಗಂಭೀರ ವಾಗಿಯೂ, ಸುಂದರವಾಗಿಯೂ ಇವೆ. ಬಹು ಬಲಿಷ್ಟವಾದ ಲೀ ವರ್ ಮೂವ್‌ಮೆಂಟುಗಳಿಂದಲೂ, ಶ್ರೇಷ್ಠವಾದ ಸಾಮಾನುಗಳಿಂದ ಲೂ ತಯಾರಿಸಿ ಒಳಗಡೆ ಕೆಂಪು ಗಳು ಇಟ್ಟಿರುವರು ಇವನ್ನು ಜೇಬಿನಲ್ಲಿ ಹಾಕಿಕೊಂಡು ಎ ಷ್ಟು ದೂರ ಓಡಿದಾಗ್ಯೂ ಸ್ಥಿಲಿನೆ



ನಡೆಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂ ಪೆನಿಗಳಲ್ಲಿ ಸಿಕ್ಕಲಾರದು ಈ ಗಡಿಯಾರವನ್ನು ಕೊಂಡುಕೊಳ್ಳು ವವರಿಗೆ ಇದರ ಜೊತೆಯಲ್ಲಿ ಕಾಣಿಸಿರುವ ಇಂಗ್ಲಿಷ್ ಪೇ ಟ್ ಫೌಂಟನ್ ಪೆನ್ನನ್ನು ಇನಾಮಾಗಿ ಕೊಡಲಾಗುವದು. 3 ವರುಷ ಗ್ಯಾರಂಟಿ ಇದೆ.

ಕ್ರಯ ಒಂದಕ್ಕೆ 1 ರೂ. 3—0.
ವಿಳಾಸ —ಫೀಗೋ ವಾಚ್ ಕಂಪೆನಿ,
ಪೋ. ಬಾಕ್ಸ್ ನಂ. 2[illegible], ಮದರಾಸು.

52—7

ಗೌಡ ವಿದ್ಯಾಭಿವೃದ್ಧಿನಿ ಸಂಘ.

1928ನೇ ಇಸವಿ ಜುಲೈ ತಾ. 1ರಲ್ಲು ಗೌಡ ವಿದ್ಯಾಭಿವೃದ್ಧಿನಿ ಸಂಘದಲ್ಲು ನಡಸಿದ ಕಮಿಟಿ ಮೀಟಿಂಗಿನ ಪ್ರೊಸಿಡಿಂಗ್ಸ್ :—

ಹಾಜರಿದ್ದವರು . — 1. ಮೆ. ಕೆಕ್ಕಡ ಆನಂದೈಯ್ಯನವರು, (ಪ್ರೆಸಿಡೆಂಟರು) ಕಮಿಟಿ ಮೆಂಬರು—2. ಮೆ ಗಳಾದ ಕೆಕ್ಕಡ ಅಪ್ಪೈಯ್ಯನವರು, 3. ಪೈಕೆರ ಜೋಯಪ್ಪನವರು, 4. ಚೆಟ್ಟಿಮಾಡ ತಿಂಮೈಯ್ಯನವರು, 5. ದಂಬೆಕೋಡಿ ಅಪ್ಪಚ್ಚನವರು, 6 ಪಾಂಡನ ದೇವಪ್ಪನವರು, 7 ಕೋರನ ದೇವೈಯ್ಯನವರು.

ಕಳೆದ ಜನರಲ್ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಲಾಯಿತು.

ಈ ಕೆಳಗಿನ ಠರಾವುಗಳು ಮಂಜೂರಾದವು.

1. ಪೊನ್ನೈಯನ ದೇವೈಯ್ಯನವರು, ತೆಕ್ಕಡ ಕುಶಾಲಪ್ಪನವರು, ಉಳುವಾರಂ ಬೆಳ್ಳಪ್ಪನವರು ಮತ್ತು ಪೊಕ್ಕಂಡ ಸುಬ್ಬೈಯ್ಯನವರು ಸಹ ಇವರುಗಳ ಸಾಲ ಸಲ್ಕೆ ಮಜಬಾತ ಮೊಬಲಗುಗಳಿಗೆ ಆಧಾರ ಮಾಡಿಸುವದು

2. ದಂಬೆಕೋಡಿ ಜೋಯೈಯ್ಯನವರನ್ನು ಇನ್ನೊಂದು ಮೀಟಿಂಗಿಗೆ ಬರಮಾಡಿಸಿಕೊಂಡು ಅವರ ಲೆಕ್ಕಗಳನ್ನು ನೋಡಿ ಅವರಿಂದ ಸಂಘಕ್ಕೆ ಬಾಕಿ ಬರಬೇಕಾದುದಕ್ಕೆ ಆಧಾರ ಮಾಡಿಸಿಕೊಳ್ಳುವದು.

3. ಐಯ್ಯಟ್ಟಿ ನಂಜಪ್ಪನವರು, ಕೋಟೆಂಬೈಲು ಮುದ್ದಪ್ಪನವರು ಚಿಲ್ಯಮನೆ ಕುಶಾಲಪ್ಪನವರು ಮತ್ತು ಕದಂಬಾಡಿ ಸಂಜಪ್ಪನವರು ಸಹ ಇನ್ನೊಂದು ಮೀಟಿಂಗಿಗೆ ಹಾಜರಾಗಿ ಅವರವರ ಸಾಲದ ಬಾಕಿ ಮೊಬಲಗುಗಳನ್ನು ಪಾವತಿಮಾಡುವಂತೆ ಅವರುಗಳಿಗೆ ಕಾಗದ ಬರೆಯುವದು.

ಮಿ.ಸೆಸ್ ಕದಂಬಾಡಿ ಸುಬ್ಬಾಯನವರಿಗೆ ಅವರ ಸಾಲದ ಮೊಬಲಗು 100/—ರೂಪಾಯಿಗಳನ್ನು ಪಾವತಿಮಾಡುವಂತೆ ಕಾಗದ ಬರೆಯುವದು.

4 ಪೂಜಾರಿರ ಸಂಣೈಯ್ಯನವರ ಮೇಲೆ ದಾವೆ ದಾಕಲ್ಲು ಮಾಡುವದು.

5. ಒಕ್ಕಡ್ಡ ಮುದ್ದೈಯ್ಯನವರಿಗೆ ರಿಜಿಸ್ಟರ್ ನೋಟೀಸು ಕೊಡುವದು.

6. 1927ನೇ ಇಸವಿ ಜನವರಿ ಮಾಹೆಯಿಂದ 1928ನೇ ಜೂನ್ ಆಕ್ಟೋಬರ್ ವರೆಗೆ ಹಳೇ ಬೋರ್ಡಿಂಗ್ ಮನೆಯ ಬಾಡಿಗೆ 90/ ರೂಪಾಯಿಗಳನ್ನು ಅಲ್ಲಿ ಆ ಕಾಲಾವಧಿಯ ವಾಸಸ್ಥರಾಗಿದ್ದ ಕುಂಬುಗೌಡನ ಮುಗ್ಗಪ್ಪನವರೂ ಮತ್ತು ಕೈಬಲಿ ಐಯ್ಯಪ್ಪನವರೂ ಸಹ ಕೂಡಲೇ ಪಾವತಿ ಮಾಡುವಂತೆ ಅವರಿಗೆ ಕಾಗದ ಬರೆಯುವದು. ಅಲ್ಲದೆ ಇನ್ನು ಮುಂದೆ ಬಾಡಿಗೆ ತಿಂಗಳು ತಿಂಗಳು ವೆಲ್ಲಿಂಡವರು ಸಂಘದ ಪ್ರೆಸಿಡೆಂಟರಿಗೆ ಪಾವತಿ ಮಾಡುವಂತೆಯೂ, ಪ್ರೆಸಿಡೆಂಟರು ಮುದ್ದು ತಿಂಗಳು ತಿಂಗಳು ಬಾಡಿಗೆ ವಸೂಲು ಮಾಡುವಂತೆಯೂ ತೀರ್ಮಾನ ಮಾಡಿದೆ.

7 ವಿದ್ಯಾರ್ಥಿ ಬೋರ್ಡಿಂಗ್ ಮತ್ತು ವಿದ್ಯಾ ಫಂಡಿನ ಲೆಕ್ಕಗಳು ವಸೂಲಿಗೆ ಬಾಕಿ ಇರುವದಕ್ಕೆ ಇನ್ನೊಂದು ಮೀಟಿಂಗಿಗೆ ಮುಕ್ಕಾಟಿ ಕರುಂಬೈಯ್ಯನವರೂ, ಯೊಲದಾಳು ಚಂಗಪ್ಪನವರೂ ಸಹ ಹಾಜರಾಗಿ ಸಮುದಾಯಿಕೆ ಲೆಕ್ಕ ಒಪ್ಪಿಸಬೇಕಾಗಿ ಅವರಿಗೆ ಕಾಗದ ಬರೆಯುವದು.

8. ಮೆ. ಯನ್ ಮುದ್ದಪ್ಪನವರು ಸಂಘದ ಖಜಾಂಚಿಯಾಗಿ ನೇಮಿಸಲ್ಪಟ್ಟರು.

9. ಕಳೆದ ಜನರಲ್ ಮೀಟಿಂಗಿನಲ್ಲಿ ಜಮಕ್ಕೆ ಬಂದ ಮೊಬಲಗು ರೂ. 352—10—0 ಪೈಕಿ ಪುದಿನರವನ ಪೂದೈಯ್ಯನವರಿಗೆ ಕೊಟ್ಟ ರೂ. 150—0—0, ಕೊಡಗು ಆಫೀಸಿಗೆ ಪ್ರಿಂಟಿಂಗ್ ಖರ್ಚು ಕೊಟ್ಟ ರೂ 33—8—0, ಯನ್. ಮುದ್ದಪ್ಪನವರಿಗೆ ಕೊಡಬೇಕಾಗಿದ್ದ ರೂ. 55—0—0 ಸಲಿಕ ವಜಾ ಬಾಕಿ ರೂ. 114—2—0 ಯನ್ನು ಪೋಸ್ಟಾಫೀಸಿನಲ್ಲಿ ಡಿಪಾಜಿಟ್ ಮಾಡುವಂತೆ ತೀರ್ಮಾನವಾಯಿತು.

10. ಇನ್ನು ಮುಂದೆ ಕಮಿಟಿ ಮೀಟಿಂಗುಗಳ ಪ್ರೊಸಿಡಿಂಗ್ಸುಗಳನ್ನು 'ಕೊಡಗು' ಪತ್ರಿಕೆಯಲ್ಲಿ ಪ್ರಕಟಪಡಿಸುವಂತೆ ನಿರ್ಣೈಸಲಾಯಿತು.

11. ಬೈಲಾ ತಯಾರಿಸುವ ಸಬ್ ಕಮಿಟಿ ಮೀಟಿಂಗ್ ತಾ. 29—9—28ರ ಸಾಯಂಕಾಲವೂ, ಇನ್ನೊಂದು ಕಮಿಟಿ ಮೀಟಿಂಗ್ ತಾ. 30—9—28ರ ಬೆಳಿಗ್ಯೆ 11 ಗಂಟೆಗೂ ನಡಿಸುವಂತೆ ತೀರ್ಮಾನವಾಯಿತು.

ಯಂ. ಎ. ಪೊನ್ನಪ್ಪ.
ಸೆಕ್ರೆಟರಿ.

ಹಿಂದೂಸ್ಥಾನಿ ಸೇವಾದಲದ
ವ್ಯಾಯಾಮ ವಿದ್ಯಾಪೀಠದ ಸಮಾರಂಭವು.

ಸ್ವಯಂ ಸೇವಕರು ಬೇಕು

ಬಾಗಲಕೋಟೆಯಲ್ಲಿ ಜರಗುವ ವ್ಯಾಯಾಮ ಮಂದಿರದ ಉದ್ಘಾಟನ ಸಮಾರಂಭದ ಕಾಲಕ್ಕೆ ಸಹಾಯಕ್ಕಾಗಿ ಸ್ವಯಂಸೇವಕರೂ ಮತ್ತು ಸ್ವಯಂಸೇವಕಿಯರೂ ಬೇಕಾಗುವದಷ್ಟೇ ? ಅವರು ಹಿಂದುಸ್ಥಾನಿ ಸೇವಾದಲದ ಶಿಕ್ಷಣ ಶಿಬಿರದಲ್ಲಿ ಶಿಕ್ಷಣ ಪಡೆದ ಸ್ವಯಂಸೇವಕರು ಬೇಕು. ಈ ಉತ್ಸವದಲ್ಲಿ ಭಾಗವಹಿಸಿಕೊಳ್ಳಲು ಬಯಸುವ ಸ್ವಯಂಸೇವಕರು ಜುಲೈ ತಿಂಗಳಿನ ೧೫ ನೇ ತಾರೀಖಿನ ಒಳಗಾಗಿ ತಮ್ಮ ಅರ್ಜಿಗಳನ್ನು ಕಳುಹಿಸಬೇಕು.

ಉತ್ಸವಕ್ಕೆ ಬರುವ ಸ್ವಯಂ ಸೇವಕರು ಬರುವ ಮುಂದೆ ಕೆಳಗೆ ಬರೆದ ಸಾಮಾನುಗಳನ್ನು ತೆಗೆದುಕೊಂಡು ಬರಬೇಕಾಗುವದು.

ಸಾಮಾನುಗಳ ವಿವರ.

ಖಾದೀ	ಖಾಕೀ	ಬಣ್ಣದ ಚಡ್ಡಿ	೨;
,,	,,	ಸ್ವೆಟರು	೨,
,,	,,	ಟೋಪಿ	೨;
,,	,,	ಚಡ್ಡಿ	೨,
,,	,,	ಕಾಲುಪಟ್ಟಿ	೨,
,,	ಬಿಳಿಯದು	ಧೋತರ	೨,
,,	,,	ಪಂಚೆ	೧.

ಇವುಗಳಲ್ಲದೆ ಹೊದ್ದುಕೊಳ್ಳಲಿಕ್ಕೂ, ಹಾಸಿಕೊಳ್ಳಲಿಕ್ಕೂ ಕಂಬಳಿ, ಚಾದರ ಈ ಪ್ರಕಾರ ಸಾಮಾನು ತೆಗೆದುಕೊಂಡು ಬರಬೇಕು.

ಪರಸ್ಥಳದವರು ಇಲ್ಲಿಗೆ ಬಂದು ತಿರುಗಿ ಹೋಗುವ ವೆಚ್ಚವನ್ನು ತಾವೇ ವಹಿಸಿಕೊಳ್ಳಬೇಕು. ಇರಲಿಕ್ಕೆ ಸ್ಥಳದ ಅನುಕೂಲತೆ, ಊಟದ ವ್ಯವಸ್ಥೆ ಸೇವಾದಲದಿಂದ ಮಾಡುವೆವು.

ಮೇಲಿನ ತಾರೀಖಿನ ಒಳಗಾಗಿ ಬಂದ ಅರ್ಜಿಗಳು ಸ್ವೀಕರಿಸಲ್ಪಡುವವು. ಬರುವ ಸ್ವಯಂಸೇವಕರು ಜುಲಾಯಿ ೨೫ನೇ ತಾರೀಖಿನಿಂದ ಬರಬಹುದು.

ಶ್ರೀನಿವಾಸ ಪಾಂಡುರಂಗ ಕುಲಕರ್ಣಿ,
ಹಿಂದುಸ್ಥಾನೀ ಸೇವಾದಲದ ಸಂಘ,
ತಾ. ೧—೭—೨೮. ಬಾಗಲಕೋಟೆ.

ಕೆನರಾ ಹೈ ಸ್ಕೂಲ್ ಸೋಡ್ತಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲಿನ ಮತ್ತು ಕೆನರಾ ಬಾಲಕಿಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟು ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಅತೀ ಮಹತ್ವದ ಒಂದು ಸೋಡ್ತಿಯನ್ನು ತೆಗಯಲು ನಿಶ್ಚೈಸಿಯದೆ. ಇದರ ಆಡಳಿತೆಯನ್ನು ಜವಾಬ್ದಾರಿಯುಳ್ಳ ಪ್ರಮುಖ ಗೃಹಸ್ಥರು ನಡಿಸುವರು.

ಜುಮ್ಲಾ ಟಿಕೇಟಿನ ಮೌಲ್ಯ ಒಂದುಲಕ್ಷ ರೂಪಾಯಿ. ಈ ಪೈಕಿ ರೂಪಾಯಿ 15,000 ಖರ್ಚಿನ ಬಗ್ಯೆ ವಜಾ ಮಾಡೋಣಾಗುವದು. ರೂಪಾಯಿ 40,000 ಶಾಲೆಗಳ ಉಪಯೋಗದ ಬಗ್ಯೆ ವಿನಿಯೋಗಿಸಲ್ಪಡುವದು ಮತ್ತು 45,000 ರೂಪಾಯಿಗಳನ್ನು 3013 ಸೋಡ್ತಿ ಬಹುಮಾನಗಳಾಗಿ ಹಂಚಲಾಗುವದು. ಈ ಬಹುಮಾನಗಳ ತಪಸೀಲು ಕೆಳಗೆ ಕಾಣಿಸಿಯದೆ.

1ನೇ ಬಹುಮಾನ ರೂಪಾಯಿ 12500. 2ನೇ ಬಹುಮಾನ ರೂಪಾಯಿ 5000. ರೂಪಾಯಿ 1000ದರದ 2 ಬಹುಮಾನಗಳು. ರೂಪಾಯಿ 500 ದರದ 3 ಬಹುಮಾನಗಳು. ರೂಪಾಯಿ 250 ದರದ 6 ಬಹುಮಾನಗಳು. ರೂಪಾಯಿ 100 ದರದ 10 ಬಹುಮಾನಗಳು. ರೂಪಾಯಿ 50 ದರದ 20 ಬಹುಮಾನಗಳು ರೂಪಾಯಿ 20 ದರದ 100 ಬಹುಮಾನಗಳು. ರೂಪಾಯಿ 10 ದರದ 800 ಬಹುಮಾನಗಳು. ರೂಪಾಯಿ 5 ದರದ 2100 ಬಹುಮಾನಗಳು.

ಟಿಕೇಟು ಮಾರಾಟವು ತಾ. 4—1—29ಕ್ಕೆ ಮುಗಿಯುವದು ಮತ್ತು ಸೋಡ್ತಿಯು ತಾ. 26—1—29ರಲ್ಲಿ ತೆಗೆಯೋಣಾಗುವದು.

ಪ್ರತಿ ಒಂದು ಟಿಕೇಟಿನ ಬೆಲೆಯು ಬರೆ ಒಂದು ರೂಪಾಯಿ ಆಗಿರುತ್ತದೆ. 21 ಟಿಕೇಟುಗಳು ಮಾರಿದವರಿಗೆ ಪ್ರತಿಫಲವಾಗಿ ಒಂದು ಟಿಕೇಟು ಜಾಸ್ತಿ ಸಿಕ್ಕುವದಲ್ಲದೆ ಹೆಚ್ಚು ಟಿಕೇಟುಗಳು ಮಾರಿದವರಿಗೆ ವಿಶೇಷ ಬಹುಮಾನಗಳು ದೊರೆಯುವವು. ಈ ಶಿವಾಯಿ ಯೋಗ್ಯವಾದ ಎರಡು ಸಂಸ್ಥೆಗಳಿಗೆ ಮುಖ್ಯವಾಗಿ ಕೆನರಾ ಹೈಸ್ಕೂಲಿನ ಸಂಬಂಧವಾಗಿ ಈಗ ತೆರಿಯೋಣಗಬೇಕಾಗಿ ನಿಶ್ಚೈಸಿದ ಕೈಗಾರಿಕೆ ಶಾಲೆಗೆ ಕೂಡ ಅವರು ಸಹಾಯ ಮಾಡಿದಾಗಗುವದು. ಅಪೇಕ್ಷೆಯುಳ್ಳ ಏಜೆಂಟರು ಸೋಡ್ತಿ ಕಮಿಟಿಯ ಹಾನರರಿ ಸಕ್ರೆಟರಿಯವರಿಗೆ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಬಹುದು. ಏಜೆಂಟರು ಎಲ್ಲಾ ಕಡೆಗಳಲ್ಲಿಯೂ ಕಮಿಟಿಯವರಿಗೆ ಬೇಕಾಗಿರುವರು.

ಬಿ. ಮಂಜುನಾಥ ಬಾಳಿಗ,
ತಾ. 16—5—28. ಹಾನರರಿ ಸಕ್ರೆಟರಿ
ಕೆನರಾ ಹೈಸ್ಕೂಲ್ ಸೋಡ್ತಿ ಕಮಿಟಿ
ಬ್ರಿಟೋ ಗಲ್ಲಿ, ಫಲನೀರ,
6—4 ಮಂಗಳೂರು

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಹೋಟೇಲುಗಳು.

ಅಯ್ಯಾ,

ಹೋಟೇಲಿನ ತಿಂಡಿಯ ವಿಚಾರವಾಗಿ ಈ ಪತ್ರದಲ್ಲಿ ಹಿಂದೆಷ್ಟೋ ಲೇಖನಗಳು ಬಂದಿವೆ. ವೃತ್ತ ಪತ್ರಗಳ ಮುಖ್ಯ ಉದ್ದೇಶವು ದೇಶೋನ್ನತಿಯಾಗಿರುತ್ತ ಪ್ರಜೆಗಳು ಆರೋಗ್ಯದಂತ ಅತ್ಯಮುಖ್ಯ ಸಂಗತಿಗೆ ನಿಗಕೊಡುವಂತೆ ಮಾಡಬೇಕಾದರೆ ಸಮಾಜದಲ್ಲಿರುವ ನ್ಯೂನತೆಗಳನ್ನು ಖಂಡಿಸಿ ಬರೆಯುವುದು ವಿದ್ಯಾವಂತರ ಕರ್ತವ್ಯವಾಗಿದೆ. ಈಗಿನ ಕಾಲದಲ್ಲಿ **ಹೋಟೇಲುಗಳಿಂದುಂಟಾಗುವ ಅನಾಹುತವು ವರ್ಣನಾತೀತ** ವಾದದ್ದು. ಹಳ್ಳಿ ಜನರ ಆರೋಗ್ಯವು ಪಟ್ಟಣದವರ ಆರೋಗ್ಯಕ್ಕಿಂತ ಉತ್ತಮವಾಗಿರಲಿಕ್ಕೆ ಹಳ್ಳಿ ಪ್ರಾಂತದಲ್ಲಿ ಹೋಟೇಲುಗಳು ಇಲ್ಲದಿರುವುದೇ ಮುಖ್ಯ ಕಾರಣವಾಗಿದೆ.

ಹಲವು ತರದ ರೋಗಗಳಿಂದ ಪೀಡಿತರಾದ ರೋಗಿಗಳು ನಿರೋಗಿಗಳಂತೆ ಹೋಟೇಲುಗಳಿಗೆ ಹೋಗುತ್ತಾರೆ. ರೋಗಿಗಳಿಗೊಂದು ಬಟ್ಟಲು ಬೇರೆ ಇಲ್ಲ. ಎಲ್ಲರೂ ಒಂದೇ ಕಪ್ಪನ್ನು ಉಪಯೋಗಿಸುತ್ತಾರೆ. ಕುಷ್ಠರೋಗಿಗಳೆಷ್ಟೋ ಮಂದಿ ಹೋಟೇಲಿಗೆ ಹೋಗಿ ಕೂರುವುದರಿಂದ ಕುಷ್ಠರೋಗವು ಇತರರಿಗೆ ಹರಡಲವಕಾಶವಿದೆ. ಕ್ಷಯರೋಗಿಗಳು ಉಪಯೋಗಿಸತಕ್ಕ ಪಾತ್ರಗಳನ್ನೇ ನಿರೋಗಿಗಳು ಉಪಯೋಗಿಸುವರು. ಈ ಜಾಡ್ಯವು ಅವರಿಗೂ ಅಂಟುವುದು. ಮೇಹರೋಗವು ಸಿಡುಬಿನಂತೆ ಅಂಟುರೋಗವು. ಹೋಟೇಲುಗಳಿಗೆ ಅನೇಕ ಈ ರೋಗವಿರತಕ್ಕವರು ಬರುವುದರಿಂದ, ಅದು ನಿರೋಗಿಗಳಿಗೆ ತಗಲುವುದು. ಇದನ್ನೆಲ್ಲಾ ನೋಡುವುದರಿಂದ ಹೋಟೇಲುಗಳು ಎಷ್ಟು ಅನಾಹುತಕಾರಿಗಳೆಂಬುದು ತೋರುವುದು.

ಆದರೆ ಹೋಟೇಲುಗಳಿರಬಾರದೋ ಎಂಬದಾಗಿ ಕೆಲವರು ಕೇಳಬಹುದು. ವ್ಯಾಪಾರವು ಹೆಚ್ಚಿದಂತೆ ಹೋಟೇಲುಗಳು ಪಟ್ಟಣಗಳಲ್ಲಿರಬೇಕಾಗುತ್ತದೆ. ಹೋಟೇಲುಗಳಿಲ್ಲದಿದ್ದರೆ ಬಹಳ ಪ್ರಯೋಜನವಿಲ್ಲದಿದ್ದರೂ, ಹೊರಗಿನಿಂದ ಬಂದ ಜನರಿಗೆ ಅವುಗಳ ಅವಶ್ಯಕತೆ ಇದೆ. ಆದರೆ ಹೋಟೇಲುಗಳಿಂದುಂಟಾಗುವ ಅನಾಹುತವನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಲು ಜನರು ಪ್ರಯತ್ನಿಸಬೇಕು ಹೋಟೇಲಿನ ಯಜಮಾನರು ಆರೋಗ್ಯಶಾಸ್ತ್ರವನ್ನು ಕೊಂಚ ಮಟ್ಟಿಗಾದರೂ ತಿಳಿದಿರಬೇಕು. ಅಂಟುಜಾಡ್ಯಗಳ ವಿಷಯವಾಗಿಯೂ, ತಿಂಡಿಪದಾರ್ಥಗಳು ಹುಳಿಯಾಗುವ ವಿಚಾರವಾಗಿಯೂ, ಹುಳಿ ಹಿಡಿದ ಹಿಟ್ಟನ್ನು ತಿಂಡಿಗೆ ಉಪಯೋಗಿಸುವುದರಿಂದ ಅಂಥ ತಿಂಡಿಯನ್ನು ತಿನ್ನತಕ್ಕವರಿಗುಂಟಾಗುವ ರೋಗಗಳ ವಿಚಾರವಾಗಿಯೂ, ಕಿಲುಬು ಹಿಡಿದ ಪಾತ್ರೆಗಳಲ್ಲಿಯೂ, ಹಳೆಕಟ್ಟು ಎಣ್ಣೆಯಲ್ಲಿ ಪದಾರ್ಥಗಳನ್ನು ಬೇಯಿಸುವುದರಿಂದುಂಟಾಗುವ ಕೆಡಕನ್ನೂ ಕುರಿತು ಅಂಗಡಿಯವರಿಗೆ ಸ್ಯಾನಿಟರಿ ಇನ್ಸ್‌ಪೆಕ್ಟರಿಂದ ಬೋಧನೆ ಕೊಡಿಸುವಂತೆ ಮುನಿಸಿಪಾಲಿಟಿಯವರು ಏರ್ಪಾಡು ಮಾಡುವುದು ಒಳ್ಳೆಯದು.

ಒಂದೊಂದು ವೇಳೆ ಸ್ಯಾನಿಟರಿ ಇನ್ಸ್‌ಪೆಕ್ಟರು ಮಿಠಾಯಿ ಅಂಗಡಿಗಳನ್ನೂ, ಹೋಟೆಲುಗಳನ್ನೂ ಸಂದರ್ಶಿಸುವ ಮಾಮೂಲ್ ಇರಬಹುದು. ಇಷ್ಟೇ ಸಾಲದು. ಇವರು ಅನಾರೋಗ್ಯಕರವಾದ ಪದಾರ್ಥಗಳನ್ನು ಕಂಡರೆ ಅವುಗಳನ್ನು ಬಿಸಾಡಿಸುವುದಲ್ಲದೆ ಅಂಥ ಪದಾರ್ಥವನ್ನು ಮಾರಾಟ ಮಾಡುವವರನ್ನು ಶಿಕ್ಷೆಗೆ ಗುರಿಮಾಡಬೇಕು. ಅಂಟು ರೋಗಿಗಳನ್ನು ಹೋಟೇಲಿನವರು ಸೇರಿಸಬಾರದು. ಪಾತ್ರೆಗಳನ್ನು ಶುಚಿಮಾಡಿಟ್ಟುಕೊಳ್ಳಬೇಕು ಹುಳಿಹಿಡಿದ ತಿಂಡಿಯನ್ನು ಬಿಸಾಡಬೇಕು. ಮೊಹರಮ್ಮಿನ ಸಮಯದಲ್ಲಿ ತಯಾರಿಸಿದ ತಿಂಡಿಯು ಹುಳಿಹಿಡಿದಿದ್ದರೂ ಅದನ್ನೇ ಅಂಗಡಿಯವರು ಮಾರುತ್ತಿದ್ದರು. ನಾನು ಮತ್ತು ನನ್ನ ಸ್ನೇಹಿತರು ಕಳೆದ ಶನಿವಾರ ತರಿಸಿದ ತಿಂಡಿಯು ಹುಳಿಯಾಗಿತ್ತು. ಹುಳಿ ಪದಾರ್ಥವನ್ನು ಜನರು ತಿಂದು ರೋಗಿಗಳಾಗುವರು. ಹೀಗಾಗದಂತೆ ಮುನಿಸಿಪಾಲಿಟಿಯವರು ಎಚ್ಚರ ತೆಗೆದುಕೊಳ್ಳಬೇಕಾಗಿ ನನ್ನ ಪ್ರಾರ್ಥನೆ.

'ಪ್ರಜೆ'

ಮಡಿಕೇರಿ ಮುನಿಸಿಪಾಲಿಟಿ ಮೆಂಬರುಗಳ ಚುನಾವಣೆ.

ಅಯ್ಯಾ,

ಈ ವರುಷದ ಮೆಂಬರುಗಳ ಚುನಾವಣೆಯು ಈ ತಿಂಗಳ ಸುಮಾರು ಮೂರನೇ ವಾರದಲ್ಲಿ ನಡಿಯುವುದೆಂದು ವದಂತಿ. ಕಳೆದ ಚುನಾವಣೆಯಲ್ಲಿ ಪೋಟಾಪೋಟಿ ಇತ್ತು. ಆದರೆ ಈ ಸರ್ತಿ ಪೋಟಾ ಪೋಟಿಯೇ ಕಾಣುವುದಿಲ್ಲ. ಉಮೇದುವಾರರು ಕಳೆದ 25ನೇ ದಿನ ತಮ್ಮ ಅರ್ಜಿಗಳನ್ನು ದಾಕಲು ಮಾಡಬೇಕೆಂದು ಜಾಹೀರಾಗಿತ್ತು. ಆದರೆ ಹಿಂದುಗಳಿರತಕ್ಕ ಆರು ಸ್ಥಾನಗಳಿಗೆ ಇಬ್ಬರೇ ಅರ್ಜಿ ದಾಖಲುಮಾಡಿದ್ದರಿಂದ ಕಳೆದ ತಿಂಗಳ 30ನೇ ತಾರೀಖಿನ ವರೆಗೂ ಅರ್ಜಿಗಳನ್ನು ಸ್ವೀಕರಿಸಲಾಗುವುದೆಂದು ಮುನಿಸಿಪಾಲಿಟಿಯವರು ಪುನಹ ಇಸ್ತಿಹಾರು ಮಾಡಬೇಕಾಗಿ ಬಂತು. ಹಳೆ ಮೆಂಬರುಗಳ ಪೈಕಿ ಉಮೇದುವಾರರಾಗಿರುವವರು ಮೆ. ಕೆ. ಎನ್. ಕರಿಮೈಯ್ಯಶೆಟ್ಟರು ಮಾತ್ರ. ಬೇರೆ ಹಳೆ ಹಿಂದು ಮೆಂಬರುಗಳೆಲ್ಲರೂ ತಟಸ್ಥರಾಗಿರುವರು.

ಹೊಸಬರು ತಮ್ಮ ಪದವಿಗೆ ಬರಲೆಂದು ದೊಡ್ಡ ಮನಸ್ಸಿನಿಂದ ಹಳೆ ಮೆಂಬರುಗಳು ಹಿಂತೆಗೆದಿದ್ದರೆ ಅದೊಂದು ಉದಾರ ಕಾರ್ಯವೆಂದೇ ಹೇಳಬೇಕು. ಮುಸಲ್ಮಾನ ಮತ್ತು ಕೊಡವ ಉಮೇದ್ವಾರರೊಳಗೆ ಮೇಲಾಟವಿಲ್ಲ. ಕ್ರೈಸ್ತರೊಳಗೆ ಮಾತ್ರ ಮೇಲಾಟವಿರುವಂತೆ ತೋರುತ್ತದೆ. ಕ್ರಮೇಣ ಈ ಸ್ಪರ್ಧೆಯೂ ಸಹ ನಿಂತುಹೋಗುವುದೋ ಎಂದು ಅನುಮಾನ. ಹಿಂದುಗಳೊಳಗೆ ಈಚಿಗೆ ಐದು ಉಮೇದುವಾರರು ಅರ್ಜಿ ಹಾಕಿರುವುದರಿಂದ ಮೇಲಾಟಕ್ಕೆ ಅವಕಾಶವಿರುವಂತೆ ತೋರುತ್ತದೆ. ಹೇಗೂ ಮುನಿಸಿಪಾಲಿಟಿಯು ತನ್ನ ಜೀವ ಕಳೆಯನ್ನು ಸಮ್ಪಾದಿಸಿಕೊಂಡಂತೆ ಕಾಣುತ್ತದೆ. ಮುನಿಸಿಪಾಲಿಟಿಯಲ್ಲಿ ಹಣವೆಲ್ಲ ಸಮ್ಮ ಪಾತೇನು ನಡಿಯುವುದಿಲ್ಲ ಎಂಬ ಅಭಿಪ್ರಾಯದಿಂದ ಉಮೇದುವಾರರು ಹಿಂಜರಿಯುವುದು ಏಹಿತವಲ್ಲ. ಮುಂದೆ ಏನಾಗಲಿಕ್ಕಿದೆಂದು ಎದುರು ನೋಡುವ,

" ನಗರವಾಸಿ. '

ಆಧುನಿಕ ಹಿಂದೂ ಯುವಕ

ಜಗದ್ವಿಖ್ಯಾತನ ಕೃಷಿಯ ೧೯ನೆ ಶತಮಾನದ ಗುರು ಪತ್ರಿಕೆಯಲ್ಲಿ ' ಆಧುನಿಕ ಹಿಂದೂ ಯುವಕ ' ಎಂಬ ಒಂದು ಅದ್ಭುತವಾದ ಜಂತು ವಿಶೇಷವು ಜಗತ್ತಿನಲ್ಲಿ ಕಂಡುಬಂದಿದೆ. ಈ ಜಂತು ಬಾಹ್ಯತಃ ಮನುಷ್ಯನ ಆಕಾರವುಳ್ಳದ್ದು ಹಸ್ತಪಾದಗಳಲ್ಲಿ ಐದೈದು ಬೆರಳುಗಳು ಇದಕ್ಕೆ ಬಾಲವಿಲ್ಲ ಎಲುಬು ಮೂಳೆಗಳ ಮತ್ತು ಕೀಲುಗಳ ರಚನೆಯು ಸಾಧಾರಣವಾಗಿ ಮನುಷ್ಯನಿಗೆ ಇರುವ ಹಾಗೆಯೇ ಇದೆ ಎಂದು ಹೇಳುತ್ತಾರೆ. ಉಷ್ಣ ಪ್ರದೇಶವಾದ ಹಿಂದೂದೇಶದಲ್ಲಿ ಇದು ಜನಿಸಿರುವುದಾದರೂ ದಪ್ಪವಾದ ಹೊದಿಕೆಗಳನ್ನು ಒಂದರ ಮೇಲೊಂದು ಹಾಕಿಕೊಳ್ಳುವ ಅಭ್ಯಾಸವಿದೆ. ಈ ಹೊದಿಕೆಗಳು ಪರದೇಶದ ಪರಜಾತಿಯವರಿಂದಲೇ ಉತ್ಪನ್ನವಾದದ್ದಾಗಬೇಕು, ಸ್ವದೇಶದಲ್ಲಿ ಸ್ವಜನರಿಂದ ಉತ್ಪನ್ನವಾದುದ್ದಾದರೆ ಅದಕ್ಕೆ ವೈಯೆಲ್ಲಾ ತುರಿಸುತ್ತದಂತೆ. ಈ ಜಂತುವನ್ನು ಇತರ ಜಂತುಗಳಿಂದ ಪ್ರತ್ಯೇಕಿಸುವುದಕ್ಕೆ ಅನೇಕ ಲಕ್ಷಣಗಳಿವೆ. ಇದು ಸೂರ್ಯೋದಯವಿನಹ ಏಳುವುದಿಲ್ಲ. ಎದ್ದಹಾಗೆಯೇ ದೂಮಪಾನವಾಗಬೇಕು. ಕಾಲು ಕೈಗಳಿಗೆ ನೀರು ತಟ್ಟಿದಹಾಗೆ ಒಂದು ಕೈಯ ಬೆರಳುಗಳನ್ನೋ ಕಣ್ಣನ್ನು ಒರಸಿಬಿಡುತ್ತದೆ. ಹಲ್ಲು ಕಂಪುಗಾಗಿದ್ದರೆ ಯಾವುದೋ ಒಂದು ತರಹದ ಸೋರೆಯಿಂದ ಸ್ವಲ್ಪ ತಿಕ್ಕಿ ತೊಳೆದುಕೊಳ್ಳುವದಿದೆ. ಅನಂತರ ತನ್ನ ತಲೆಯ ಕೂದಲಾಗಿ ಮೋರೆಯನ್ನು ಸವರಿ, ಹದಮಾಡಿ, ಕನ್ನಡಿಗೆ ತಾನೇ ಒಂದು ಹಗ್ಗ ವನ್ನು ಕಟ್ಟಿಕೊಂಡು ಯಜಮಾನನು ಕರೆಯುವುದಕ್ಕೆ ಮೊದಲೇ ಕೆಲಸಕ್ಕೆ ಓಡಿಹೋಗುತ್ತದೆ. ಚಾಕರಿ ಎಂಬ ನೇಗಿಲನ್ನು ಹೆಗಲಿನ ಮೇಲೆ ಇಟ್ಟುಕೊಂಡು ಜೀವನ ಕ್ಷೇತ್ರವನ್ನು ಉಳುವುದು ಹಾಗೂ ಇಂಗ್ಲಿಷ್ ಸ್ವೈರ ಘಾಸವು ಮಾಡುತ್ತದೆ. ವಿದ್ಯೆಯೊಂಬ ಹುಂಬದ ಗಣೇಶ್‍ಕಂಟ್ಲಿ ಬೀಲವನ್ನು ಬಿಸ್ಕಿಸಮೇಲೆ ಕೆಂಪುಕೊಂಡು ಕಾಲೇಜಿನಿಂದ ಪ್ರಿಂಟಿಂಗ್ ಆಫೀಸಿಗೆ ತಂದು ಹಾಕುತ್ತದೆ. ನವೀನ ಸಂಸ್ಕಾರವೆಂಬ ಗಾಯಮೇಲೆ ವಿಶಾಲವಾದ ರಾಜ್ಯಗಳಲ್ಲಿ ಹಾರಿ ಹೋಯಿತು. ಅಮದಾನ್ ಮಾಡತ್ತದೆ. ದೇಶಭಕ್ತಿ ಎಂಬ ಗಾಣದಲ್ಲಿ ಸ್ವಾರ್ಥವೆಂಬ ಎಳ್ಳನ್ನು ಹಾಕಿ, ಆ ಶಕ್ತಿಯ ತೈಲವನ್ನು ತೆಗೆಯುತ್ತದೆ. ಇಷ್ಟು ಗುಣಗಳು ಇತರ ಯಾವ ಜಂತುವಿಗೂ ಇರಲಾರದು. ಆದರೆ ಈ ಜಂತುವು ಈ ಜನ್ಮದಲ್ಲಿಯೇ ಸ್ವಲ್ಪ ಪರಿವರ್ತನೆಯನ್ನು ಹೊಂದದ ವಿನಹ ಮೋಕ್ಷವಿಲ್ಲವೆಂದು ಅನ್ನುತ್ತಾರೆ.

ಕೆಲವು ಪಂಡಿತರು ವರ್ಷಗಳಿಂದಲೂ ತಲೆಯ ಮೇಲೆ ಹೊತ್ತುಕೊಂಡಿರುವ ಪರದೇಶಿಯರ ಜೋಡನ್ನು ಕಿತ್ತಿಸುವ ಪ್ರಯತ್ನವನ್ನು ಸ್ವಪ್ರವಾಗಿಯಾದರೂ ಕೈಕೊಂಡ ವಿನಹ ಈ ಜಂತುವಿಗೆ ಮೋಕ್ಷವಿಲ್ಲ. ಇದು ತನ್ನ ಮೇಲಿನ ಹೊದಿಕೆಗಳನ್ನು ಬದಲಾಯಿಸಬೇಕು. ಸ್ವದೇಶಾಭಿಮಾನ ಮತ್ತು ಸ್ವಾಭಿಮಾನವೆಂಬ ಕೈಗಳಿಂದ ಎರಡು ಎಂಬ ಬಿಡುವನ್ನು ಎತ್ತಿ ಮುಂದೆ ನಡೆಯಬೇಕು. ಒಪ್ಪಿಂದ ಮಾತ್ರ ಸ್ವರಾಜ್ಯವನ್ನು ಪಡೆದಂತಾಗುವುದು. ಹಾಗೆಯೇ ಮೋಕ್ಷ ದೊರೆಯುವುದು.

ಹಿಂದು

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L Rifles	Rs	120	to Rs	2750
S B B L		35	to	950
D B B L Guns	,	50	to	1300
S B B L	,,	35	to	275
D B M L	,, ,,	45	to	135
S B M L	,, ,,	30	to	80
B L Revolvers	,,	35	to ,	350
Automatic Pistols	,,	30	to ,,	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps Gunpowder and Shooting Requisites at the most competitive rates

GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

24—14   210 Abdul Rehman Street, BOMBAY

Imitation Silk Sarees.

ಒಂದನ್ನು ತರಿಸಿ ನೋಡಿರಿ!   ಒಂದನ್ನು ತರಿಸಿ ನೋಡಿರಿ!

ಆಲ್ ರಕಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.

ಈ ಇಮಿಟೇಷನ್ ರೇಶ್ಮೆ ಸೀರೆಗಳು 18 ಮೊಳ ಉದ್ದವು, 71 ಮೊಳ ಅಗಲವೂ ಇರುವವು. ಉತ್ತಮ ಪಕಳಿಕೆಯಾಗಿಯೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಒಂಪು ಕೆಂಪು ಮತ್ತು ನಸ್ಯದ ಬಣ್ಣಗಳಲ್ಲಿ ದೊರೆವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಬಳಸಬಹುದಾದದ್ದು. ಅಸಲ್ ರೇಶ್ಮೆಯಂತೆ ಕಾಣಿಸುವವು. ಶ್ರೀಮಂತರಿಗೂ, ಗರೀಬರಿಗೂ ಉಡಲು ಲಾಯಕಾದದ್ದು.

ಕ್ರಯ ರೂ 4-12-0

ವಿಳಾಸ —ಶೀಲ್ ಟ್ರೇಡಿಂಗ್ ಕಂಪನಿ,

21—7   ಪೋ ಬಾಕ್ಸ್ ನಂ 243, ಮದರಾಸು

ಪಿಸ್ಟ ಫೌಂಟೆನ್ ಪೆನ್



ಈ ಪೆನ್ನು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಬಂಗಾರದ ನಿಬ್ಬು ಹಾಕಿದೆ. ಈ ಪೆನ್ನನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೈಂಪೀಸ್ ಇನಾಮ ಆಗಿ ಕೊಡುವವು

ಇನಾಮ ಟೈಂಪೀಸ್ ಸಹಿತ ಪೆನ್ನು 1ಕ್ಕೆ 2—8—0

ಸಿ ಕೆ —ಕ ಎಸ್ ರಾಮಸ್ವಾಮಿ ಅಂಡ್ ಬ್ರದರ್ಸ್

12—7   109 ಚೈನಾ ಬಜಾರ್ ರೋಡ್, ಮದರಾಸು

ತುಪಾಕಿಗಳು ರೂ 5 ರಿಂದ ರೂ 450/
ಏರ್ ರೈಫಲ್ ಕೋವಿಗಳು ರೂ 35 ರಿಂದ ರೂ 250/
ಏರ್ ಪಿಸ್ತೂಲ್ ಕೋವಿಗಳು ರೂ 35 ರಿಂದ 65/.
ರಿವಾಲ್ವರುಗಳು ರೂ 10 ರಿಂದ ರೂ 125/ರ ವರೆಗೆ

ತುಪಾಕಿ ಮತ್ತು ಸಿಂಗಲ್ ಬ್ಯಾರೆಲ್ ಮತ್ತು ಡಬಲ್ ಕೋವಿ ಸಮಸ್ತ ವಿಧಗಳ ಸಾಮಾನು (ಸರ್ಕಾರ ಲೈಸೆನ್ಸ್ ದಾರರಿಗೂ) ಅನುಕೂಲವಾಗುವಂತೆ ಕಡಿಮೆ ದರದಲ್ಲಿ ಒದಗಿಸಿ ಕೊಡಲಾಗುವುದು

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನು ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ತಿಳಿಯಿರಿ.

ಯುಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ಕೋವಿ ಶೆಟ್ಟಿಯ ಕಂಪೆನಿ.

24—5   12. ಬ್ರಾಡ್ವೇ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್‍ರೀಡ್ಸ್ ಹಾರ್ಮೋನಿಯಂಗಳು.

'ದಿಲ್ ಬಹಾರ್' ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
ಶಕುಂತಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
ಮೋಸ್ಲೇಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
'ಮಹಂಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಟ್ ಬಂಗಾರದ ನಿಬ್ಬು, ಹಾಕಿದ ಫೌಂಟೆನ್ ಪೆನ್‍ಗಳು.

ಬ್ಲಾಕ್ ಬರ್ಡ್ ಫೌಂಟೆನ್ ಪೆನ್	1ಕ್ಕೆ 3—8—0 ಮತ್ತು 3—12—0
ಕರಲ್ಲೋ ವಂಡರ್ ಫೌಂಟೆನ್ ಪೆನ್	1ಕ್ಕೆ 3—0—0 ಮತ್ತು 3—8—0
ಕಾಂಪ್ಯಾಕ್ಟ್ ಸೆಲ್ಫ್ಯನ್ ಫೌಂಟೆನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌಂಟೆನ್ ಪೆನ್	1ಕ್ಕೆ 8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌಂಟೆನ್ ಪೆನ್	1ಕ್ಕೆ 12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‍ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—5—0
ವೆಸ್ಟಂಡ್ ರೇಡಿಯಂ ಅಲಾರಂ ಟೈಂಪೀಸ್ 1ಕ್ಕೆ	9—1—0
ಬಿಗ್ ಬನ್ ಅಲಾರಂ ಟೈಂಪೀಸ್ 1ಕ್ಕೆ	9—5—0
ಬಿಗ್ ಬೆನ್ ರೇಡಿಯಂ ಅಲಾರಂ ಟೈಂಪೀಸ್ 1ಕ್ಕೆ	6—12—0
ಅನಾಸ ರೇಡಿಯಂ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕ್ಯಾಟಲಾಗ್ ಒಬ್ಬರಿಗೆ ಒಂದು ಸ್ಟ್ಯಾಂಪು ರವಾನಿಸಿ

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

52—9

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ನ ಆಡಿಟೆಡ್ ಬ್ಯಾಲೆನ್ಸ್ ಶೀಟ್ ಪ್ರಕಾರ ತಿಳಿಸಲಾಗಿದೆ.

		ರೂ
ಷೇರ್ ಬಂಡವಾಳ	—	51,300
ವಸೂಲಾದ ಷೇರ್ ಹಣಗಳು	—	15,510
ಒಟ್ಟು ಠೇವಣಾತಿ	—	1,62,014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡಲ್ಪಟ್ಟಿದ್ದು

ಒಂದು ವರ್ಷ ಖಾಯಿದೆ ಒಳಪಟ್ಟ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0 0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ಖಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು ರಾವ್ ಬಹದ್ದೂರ್ — ಟ್ರೆಜರರ್ ಕೊಂಗೆಟ್ಟಿರ ಅಪ್ಪಯ್ಯನವರು

ಸೆಕ್ರೆಟರಿ ಸಿ ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್

ತಾರೀಕು 1—7—1927

ನೋಟೀಸು.

ಈ ಕೆಳಗಿನ ಮಹನೀಯರು ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸಪ್ಪ್ರ ರಶೀತಿ ಪುಸ್ತಕಗಳು ಕೊಡಲಾಗಿದೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ವಿ ಪೇರಿಯಂಡ ಪೂವಯ್ಯನವರ ಜವಾಬ್ದಾರಿಕ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ವಿ. ಪೇರಿಯಂಡ ಪೂವಯ್ಯನವರು

ಪೊನ್ನಂಪೇಟೆನಾಡು—ಮ ಕಾಳೇಂಗಡ ಚಿಣ್ಣಪ್ಪನವರು

ಶ್ರೀಮಂಗಲನಾಡು—ಮ ಅಜ್ಜಮಾಡ ಮಾದಪ್ಪನವರು

ಮರನಾಡು—ಮ ಕೀಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ನಾಪೋಕ್ಲು—ಮ ಅಲೆಯಡ ಸಿ ವೈಯ್ಯನವರು,

ಗೋಣಿಕೊಪ್ಪಲು—ಮ ಒಮ್ಮಡ ಮಾದಪ್ಪನವರು

ಅಮ್ಮತ್ತಿ—ಸಿದ್ದಾಪುರ—ವೆ ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಬಿ ಮುದ್ದಯ್ಯನವರು,

ಹುದಿಕೇರಿ & ತಿತಿಮತ್ತಿ—ವೆ. ಬಿ ಮಾದಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮ ಚಂಗಂಡ ಕುಟ್ಟಪ್ಪನವರು,

ವೀರರಾಜಪೇಟೆ—ಮ ಕಾನಡೀರ ನಂಜುಂಡನವರು,

ಮೇನೇಜರ್, "ಕೊಡಗು ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಕ್ರಿಯೆಕೊಟ್ಟು ಮಂಜೂರಿನಲ್ಲಿಯೂ ಇರಬೇಕಾದ ಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಒಪ್ಪರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್, ಕೊಡಗು ಮಡಿಕೇರಿ

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY 3

Telegraphic Address—"SHOOTER" Bombay.

(52—13) 'Please write for our Catalogue 1928—1929.

ಕಟುಕಷಾಯ ಮಾತ್ರೆ ರಕ್ಷೆ—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನವೂ ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರದಿಂದ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿಯಾದ ಗುಣಮಾಡುತ್ತದೆ ಸೀಸೆ ಒಂದಕ್ಕೆ ರೂ 1—5—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 11

ಚಂದನಾಸವ—ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದಲ್ಲಿ ಉರಿ, ಮೂತ್ರ ಹಿಂದೆಗಳ ಉರಿ ಮೂತ್ರನಾಳದ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ ಮೂತ್ರನಾಳದ ಚುರುಚುರು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲು 1 3 6ಕ್ಕೆ ರೂ 1—14—0 3—8—0 6—12—0

ರೋಮನಾಶಿನಿ—ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ—ತಲೆನೋವು ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಶಬ್ದ ಕೇಳುವುದು ತಿಪ್ಪಡುತನ ಕಣ್ಣು ನೋವು ಅಪಸ್ಮಾರ ನಿದ್ರೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಖಂಡಿತ ಗುಣವಾಗುತ್ತದೆ, ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ — ವಿಳಾಸ—ಮನೋಲ್ಲಾಸಿನಿ ಕಂಪೆನಿ, ೧. ಮಂಗಳೂರು

52—39

ರಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಆಜಮಾಯಿಸಿ ನೋಡಿರಿ.

ಇನಾಮಿನ ಬಟ್ಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ

ಎಲ್ಲಾ ಆರ್ಡರುಗಳನ್ನು ಭಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರೆಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಚಂದ್ ದೇವಚಂದ್, ಜ್ಯುಲ್ಲರ್, (ಕೆಟಲಾಗ್ ಮುಫತ್). 21 ಚೈನಾ ಬಜಾರ್ ರೋಡ್, ಮದರಾಸು.

12—6

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1928ನೇ ಇಸವಿ ಫೆಬ್ರವರಿ 21ಕ್ಕೆ ಅಖೈರಾದ 5 ವರ್ಷಗಳಲ್ಲಿ ಕಂಪನಿಗೆ ಆದ ಉತ್ಪತ್ತಿ

ಹೊಸ ಪಾಲಿಸಿಗಳ ವಿವರ	ರೂ	1,16 00,000
ವರಮಾನ ವಿವರ	ರೂ	54 95 000
ಕಂಪೆನಿ ಆಸ್ತಿ ವಿವರ	ರೂ	3 15,01,000

ಬೇಕಾಗಿದೆ — ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು

ಹೆಡ್ ಆಫೀಸು, ಎಂಪಯರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು, ಕಮರ್ಶಿಯಲ್ ಬೀದಿ ಬೆಂಗಳೂರು.

24—2

ಸ್ಥಾಪನೆ—1874. ಹೆಡ್ ಆಫೀಸು-ಬೊಂಬಾಯಿ,

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಚ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	—	13541	— ರೂ	2 95,12 000
1926	—	17371	— ರೂ	3,91 39 000
1927	—	21418	— ರೂ	4,68 74 075

—ಪ್ರೀಮಿಯಂ ಉತ್ಪತ್ತಿ—

1925	— ರೂ	92,66,000
1926	— ರೂ	1,05 33,000
1927	— ರೂ	1 21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು. — ಎಲ್. ಆರ್. ಕೃಷ್ಣಸ್ವಾಮಿಯ್ಯರ್, ಬ್ರಾಂಚ್ ಸೆಕ್ರೆಟರಿ.

52—12

Printed & published by P. I. Belliappa, at 'Kodagu' Press, Mercara for "Kodagu" Ltd.

Reg. No. M. 1550.
If not d livered please return to "KODAGU" OFFICE MERCARA.

ಕೊಡಗು.

ಸತ್ಯೇನ ಧೂಕಹಯುಮ ವಿದ್ಯಾ ಹಿಃ ಪ್ರಯುಕ್ತರಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ಭಾಗ್ಯ ಸಂಪದಾ |

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ಸ್ವ ೧೯೨೮ನೇ ಇಸವಿ ಜುಲೈ ...ತಾರೀಕು ೦೬ ನೇ ಶುಕ್ರವಾರ [ಸಂಚಿಕೆ ೭

ESTATE REQUISITES

5 lbs Yates' hammer headed mamooties	Rs 3 0 0 Each	Weeding forks @	Rs 1 4 0 Each
4½ „ „ „ „	„ 2 14 0 „	Garden trowels „	Rs 1 4 0 „
4 „ „ „ „	„ 2 12 0 „	Pick axes „	Rs 1 8 0 „
Felling axes at Rs 3 0 0 &	„ 3 4 0 „	Bill hooks „	Rs 3 14 0 „
Grubbing mattocks at	„ 3 4 0 „	Digging forks „	Rs 4 0 0 „

MONSOON EQUIPMENT.

Planter boots	Rs 16 8 0	Dales' dubbin per tin	Rs 0 8 0
Marrs' oil (water proof) per tin	Rs 2 0 0	Umbrellas	Rs 4 8 0

52—24 **SPENCER & CO. LTD.** General Merchants **MERCARA.**

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES

Post Box 423
TRIPLICANE, MADRAS

Catalogue Free
to Bonafide Enquirers

Rose Water Sprinkler.


Nose-screws. Claver Drops Jhodu. Brooch

Chased Silver Mirror.

Manufacture of HIGH CLASS GEMSET JEWELS a speciality

The special features of my ...
1 B ... U ...
2 I ...
3 Pr... t...
4 N... a... ...
5 Most moderate prices

GOLD or ... LR... ...sc... ...ve exe...

52—41

Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS AMMUNITION, & Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

24—20

ಕರ್ಪೂರ

ವ ಗ್ಯ ಮಿ ಶ್ ಶ್ರ ೦,

ಮಲೇರಿಯಾ ಇನ್‌ಪ್ಲುಯೆಂಜಾ ... ಕಜ್ವರ ... ಇವನ್ನು ... ಇದರಿಂದ ... ಬಂದ ... ಬಿಟ್ಟು ... ಬೆಲೆ ...

ಸಾ ರ ಸಾ ಪ ರಿ ಲ್ಲಾ.

ಕೆಟ್ಟ ಕೊಳೆದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖ್ಯಾತಿಯಾದ ಔಷಧ. ಬೆಲೆ ... ಬಾಟ್ಲಿಗೆ ೧—೦—೦ ... ಬೇರೆ

ಕರ್ನಾಟಕ ಬ್ರದರ್ಸ್
12—3 ದುಬಾಸ ಲೇನ್.
ಗಿರಗಾಂವ, ಮುಂಬಯಿ.

ಕೊಡಗು.

ಸನ ೧೯೩೪ ನೇ ಇಸವಿ
ಜುಲೈ ತಾ. ೧೩ ನೇ ಶುಕ್ರವಾರ.

ಕೊಡಗಿನ ದೊಡ್ಡ ಉದ್ಯೋಗಸ್ಥರು.

ಕೊಡಗಿನಲ್ಲಿ ಸರ್ಕಾರಿ ಉದ್ಯೋಗಸ್ಥರಿಗೆ, ಅವರ ಸರ್ವಿಸು ಪೂರ್ತಿ ಆದ ಮೇಲೂ ಅದನ್ನು ಮುಂದುವರಿಸುವಂತೆ ಅನುಕೂಲಗೊಳಿಸುವದನ್ನು ನಿಷೇಧಿಸಿ ಮೂರು ನಾಲ್ಕು ವಾರ್ತೆಗಳು ಈ ಪತ್ರಿಕೆಯಲ್ಲಿ ಪ್ರಕಟವಾದದನ್ನು ವಾಚಕ ಮಹಾಶಯರು ಓದಿರಬಹುದು. ಆದರೆ ಈ ವರೆಗೆ ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಸೂಚಿಸಿರಲಿಲ್ಲ. ಈಗಲಾದರೂ ಇದನ್ನು ಕುರಿತು ಒಂದೆರಡು ಮಾತುಗಳನ್ನು ಬರೆಯುವದು ಅವಶ್ಯವೆಂದು ತೋರುತ್ತದೆ.

ದೊಡ್ಡ ಅಧಿಕಾರವುಳ್ಳ ಅಂದರೆ ಗಜೆಟೆಡ್ ಉದ್ಯೋಗಸ್ಥರನ್ನು ಐದು ವರ್ಷಗಳಿಗೊಮ್ಮೆ ವರ್ಗಾಯಿಸುವ ಪ್ರಿನ್ಸಿಪಲ್ ಸರ್ಕಾರದ ಬೇರೆ ಕಡೆಗಳಲ್ಲಿರುವ ಹಾಗೆ, ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತರಬೇಕೆಂದು ನೇರೂ ಮೊದಲಾದ ಕಡೆಗಳಲ್ಲಿ ನಡೆದ ಪಬ್ಲಿಕ್ ಮೀಟಿಂಗುಗಳಲ್ಲಿ, ಜಮಾಬಂದಿ ಸಂಘದ ವಾರ್ಷಿಕ ಸಮ್ಮೇಳನಗಳಲ್ಲಿಯೂ ಠರಾವು ಪಾಸುಮಾಡಲಾಗಿದ್ದವು. ಈ ವಿಷಯ ನ್ಯಾಯವಿಧಾಯಕ ಸಭೆಯಲ್ಲಿಯೂ ಚರ್ಚಿಸಲ್ಪಟ್ಟು, ಹಾಗೆ ವರ್ಗಾಯಿಸದೆ ಇರುವದರಿಂದ ಜನಸಮುದಾಯಕ್ಕೆ ಉಂಟಾಗುವ ತೊಂದರೆಗಳೆಲ್ಲ ಚೆನ್ನಾಗಿ ವಿವರಿಸಲ್ಪಟ್ಟಿರುವವು. ವರ್ಗಾಯಿಸುವ ತತ್ವವು ಉತ್ತಮವಾದದ್ದಾದರೂ ಅದನ್ನು ಕೊಡಗಿನಲ್ಲಿ ಜಾರಿಗೆ ತರಲು ಕಷ್ಟಸಾಧ್ಯವೆಂತಲೂ, ಸಾಧ್ಯವಾದಷ್ಟು ಮಟ್ಟಿಗೆ ಬೇಗನೆ ರಿಟಯರ್ ಆಗಲಿಕ್ಕಿರುವ ಯೋಗ್ಯರಾದ ಉದ್ಯೋಗಸ್ಥರನ್ನೇ ಗಜೆಟೆಡ್ ಪದವಿಗೆ ನೇಮಿಸಲಾಗುವದೆಂತಲೂ ಮುಂಚಾಗಿ ಸರ್ಕಾರದವರು ಜವಾಬು ಕೊಟ್ಟದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ಇತ್ತಲಾಗಿ ಸರ್ಕಾರದವರ ವರ್ತನೆಯು ಅವರ ಮಾತಿಗೆ ವ್ಯತಿರಿಕ್ತವಾಗಿ ಕಂಡುಬರುತ್ತದೆ. ಬೇಗನೆ ರಿಟಯರ್ ಆಗಲಿಕ್ಕಿರುವವರನ್ನೇ ದೊಡ್ಡ ಉದ್ಯೋಗಕ್ಕೆ ನೇಮಿಸಿ ಅವರಿಗೆ ಬೇಗನೆ ಪೆನ್ಶನ್ ಕೊಟ್ಟು ಉದ್ಯೋಗದಿಂದ ನಿವೃತ್ತಿಗೊಳಿಸುವದರ ಬದಲು ಈಗೀಗ ಉದ್ಯೋಗಸ್ಥರಿಗೆ ಪೆನ್ಶನ್ ಹೊಂದುವ ಕಾಲಬಂದರೂ ಅವರ ಕೆಲಸವನ್ನು ಮುಂದರಿಸಲು ಎಡೆಕೊಟ್ಟು ಅವರ ಸರ್ವಿಸನ್ನು ದೀರ್ಘಗೊಳಿಸುವಂತೆ ಕಾಣುತ್ತದೆ. ಒಂದು ವೇಳೆ ಕೆಲವು ಉದ್ಯೋಗಸ್ಥರು ತಮ್ಮ ಕೆಲಸದಲ್ಲಿ ಬಹು ನಿಪುಣರಾಗಿರುವದರಿಂದಲೂ, ಬೇರೆ ಯಾವ ಕಾರಣದಿಂದಲಾದರೂ, ಅವರನ್ನು ಸರ್ವಿಸಿನಲ್ಲಿ ಹೆಚ್ಚಿನ ಕಾಲ ಇಟ್ಟುಕೊಳ್ಳುವ ಅವಶ್ಯಕತೆ ಕಂಡುಬರಬಹುದು. ಆದರೆ ಈ ಪದ್ಧತಿಯು ಎಂದೂ ಒಳ್ಳೇಯದಲ್ಲ. ಇದರಿಂದ ಸರ್ಕಾರದವರು, ಇಷ್ಟನೇ ಇಷ್ಟೇ ವರ್ಷ ಮಾತ್ರ ಸರ್ಕಾರಿ ಕೆಲಸ ಮಾಡಲು ಯೋಗ್ಯನೆಂದು ಮಾಡಿರುವ ಮತ್ತು ಬೇರೆ ಎಲ್ಲಾ ಪ್ರಾಂತ್ಯಗಳಲ್ಲೂ ಜಾರಿಯಲ್ಲಿರುವ ಸರ್ಕಾರದ ಸಾಧಾರಣ ಕ್ರಮವನ್ನು ಬದಲಾಯಿಸಿದಂತಾಗುವದು, ವರ್ಗಾವರ್ಗಿಗೆ ಇರುವ ಸ್ವಲ್ಪ ಅವಕಾಶವನ್ನೂ ತಪ್ಪಿಸಿಕೊಂಡಂತಾಗುವುದು ಮತ್ತು ಬೇರೆ ಯೋಗ್ಯರಿಗೆ ಅಂಥಾ ಉದ್ಯೋಗಕ್ಕೆ ಬರಲು ಅವಕಾಶ ಕೊಡದಂತಾಗುವದು, ಮಾತ್ರವಲ್ಲ, ನಮ್ಮ ಚಿಕ್ಕ ದೇಶದಲ್ಲಿ ಉದ್ಯೋಗಸ್ಥರು ಒಂದೇ ಉದ್ಯೋಗದಲ್ಲಿ ಅನೇಕ ವರ್ಷಗಳು ಇರುವ ಅತೃಪ್ತಿಕರವಾದ ಪದ್ಧತಿಗೆ ಇನ್ನೂ ಉತ್ತೇಜನ ಕೊಟ್ಟಂತಾಗುತ್ತದೆ.

ನಮ್ಮ ದೇಶದಲ್ಲಿ ಕೆಲವು ಉದ್ಯೋಗಸ್ಥರು ಒಂದೇ ಉದ್ಯೋಗದಲ್ಲಿ 15—20 ವರ್ಷಗಳು ಇದ್ದದ್ದೂ ಇದೆ. ಅಂಥಾ ಸಂದರ್ಭಗಳಲ್ಲಿ ಉದ್ಯೋಗಸ್ಥರು ಎಷ್ಟೇ ಒಳ್ಳೇಯವರಾದಾಗ್ಯೂ ಜನರಿಗೆ ಬೇಸರಿಕೆ ಹುಟ್ಟುವದರಲ್ಲಿ ಸಂದೇಹವಿಲ್ಲ. ಅಲ್ಲದೆ ಅಂಥಾ ಉದ್ಯೋಗಸ್ಥರಿಗೂ ಸಹ ಜಿಗುಪ್ಸೆ ಹುಟ್ಟಬಹುದು. ನಮ್ಮ ಅಭಿಪ್ರಾಯವು ಈಗ ಕೆಲಸದಲ್ಲಿದ್ದು ತಮ್ಮ ಕೆಲಸದ ಅವಧಿಯನ್ನು ಮುಂದರಿಸಿಕೊಳ್ಳಲು ಇಚ್ಛಿಸುವ ಮಹನೀಯರಿಗೆ ರುಚಿಸದೆ ಇರಬಹುದು. ಆದರೆ ಒಂದಾವರ್ತಿ ಕೆಲಸದಿಂದ ನಿವೃತ್ತರಾದರೆ, ಅಂಥಾ ಉದ್ಯೋಗಸ್ಥರೂ ಸಹ ನಮ್ಮ ಅಭಿಪ್ರಾಯಕ್ಕೆ ಉತ್ತೇಜನಕೊಡುವದರಲ್ಲಿ ಸಂಶಯವಿಲ್ಲ. ಯಾಕಂದರೆ ಎಲ್ಲಾ ಸರ್ಕಾರಗಳಲ್ಲಿಯೂ ನ್ಯಾಯವಿಧಾಯಕ ಸಭೆಗಳು ಮಾಡಿದ ಕಾನೂನುಗಳಲ್ಲದೆ ಪ್ರತ್ಯೇಕ ಕೆಲವು ಪದ್ಧತಿಗಳು ಸಹ ಉಂಟಾಗಿವೆ. ಆದರೆ ಅಂಥಾ ರಿವಾಜ್‌ಗಳು ಪ್ರಜೆಗಳ ಹಿತವನ್ನು, ಸರ್ಕಾರ ಪದ್ಧತಿಯನ್ನು ಉತ್ತಮಗೊಳಿಸಲೂ ಆಗಿರತಕ್ಕದ್ದು. ಬದಲು ಮುಂದಿನ ಆಡಳಿತಕ್ಕೆ ಕುಂದಕ ಬರುಹುದಾದ ಇಂತಹ ರಿವಾಜ್‌ಗಳನ್ನು ಏರ್ಪಡಿಸುವದು ಎಂದೂ ನ್ಯಾಯವಲ್ಲವೆಂದು ನಾವು ಹೇಳದೆ ಇರಲಾರೆವು. ಆದುದರಿಂದ ಸ್ಥಳೀಯ ಸರ್ಕಾರವು ಈ ವಿಷಯಕ್ಕೆ ತಕ್ಕ ಗಮನ ಕೊಡುವರೆಂದು ನಂಬುತ್ತೇವೆ.

ಚೈನಾದಲ್ಲಿ ರಾಷ್ಟ್ರೀಯ ಸರ್ಕಾರ.

ಚೈನಾದೇಶದ ಒಳ ಕಲಹಗಳು ಕಡೆಗೆ ಅಂತ್ಯಗೊಂಡಿವೆ. ಜಯಶೀಲವಾದ ರಾಷ್ಟ್ರೀಯ ಪಕ್ಷದವರು ತಮ್ಮ ಸರ್ಕಾರವನ್ನು ಬಲಪಡಿಸಿ ಇಡೀ ಚೈನಾವನ್ನು ತಮ್ಮ ಆಡಳಿತಕ್ಕೆ ಒಳಪಡಿಸಲು ಯತ್ನಿಸುತ್ತಿರುವರು. ಇನ್ನಾದರೂ ಈ ಪ್ರಾಚೀನ ಮತ್ತು ದೊಡ್ಡ ದೇಶದಲ್ಲಿ ಶಾಂತತೆಯು ನೆಲೆಗೊಳ್ಳಲಿ ಎಂದು ಎಲ್ಲರೂ ಹಾರೈಸುವ. ಶಾಂತಿಯನ್ನು ತರುವ ಇಂಥಾ ಪ್ರಯತ್ನಕ್ಕೆ ಎಲ್ಲಾ ಪರಕೀಯ ಜನಾಂಗವು ಅವರಿಗೆ ಬೆಂಬಲವನ್ನು ಕೊಡಬೇಕಾದದ್ದು ಅವಶ್ಯ. ಇದರ ಬದಲು ಈಗಾಗಲೇ ಕೆಲವು ಸಾಮ್ರಾಜ್ಯವಾದಿ ಸರ್ಕಾರಗಳು ರಾಷ್ಟ್ರೀಯ ಸರ್ಕಾರದ ಪ್ರಯತ್ನಗಳಿಗೆ ಕಂಟಕರಾಗಿ ಬಂದಿರುವವೆಂದು ವರ್ತಮಾನವಿದೆ. ಚೈನಾದಲ್ಲಿರುವ ಪರದೇಶದ ಜನರ ಸಂರಕ್ಷಣೆಗೆ ತಾವು ಜವಾಬ್ದಾರರೆಂದು ಅಲ್ಲಿಯ ರಾಷ್ಟ್ರೀಯ ಸರ್ಕಾರದವರು ಭರವಸೆ ಕೊಟ್ಟಿದ್ದರೂ ಅದನ್ನು ಗಣ್ಯಸದೆ ಜಪಾನಿನ ಸರ್ಕಾರವು ತಮ್ಮ ಸೈನ್ಯವನ್ನು ಷಾಂಟಂಗಿಗೆ ಕಳುಹಿಸಿ ಟ್ಸಿನಾನ್ ಮುಂತಾದ ಹಲವು ಫಲವತ್ತಾದ ಪ್ರದೇಶಗಳನ್ನು ಸ್ವಾಧೀನಮಾಡಿಕೊಂಡಿರುವದಲ್ಲದೆ ಚೈನಾ ರಾಷ್ಟ್ರೀಯ ಸೈನ್ಯದವರನ್ನು ಅನಾವಶ್ಯಕವಾಗಿ ಕೆಣಕಿರುವರೆಂದು ಸುದ್ದಿ. ಇಂಥಾ ವರ್ತನೆಗಳು ಪಾಶ್ಚಿಮಾತ್ಯರದೇ ಆಗಲಿ, ಪೌರ್ವಾತ್ಯರದೇ ಆಗಲಿ ಅವುಗಳನ್ನು ಪ್ರತಿಯೊಬ್ಬ ಸ್ವತಂತ್ರ ಪ್ರಿಯನೂ ಖಂಡಿಸಬೇಕಾಗಿದೆ. ಇದರಿಂದ ಚೈನಾದಲ್ಲಿ ಒಳ ಜಗಳಗಳು ದುರ್ಭರ ಕಾಲವನ್ನು ದೀರ್ಘಮಾಡಿ ಅಲ್ಲಿಯ ನಿವಾಸಿಗಳ ಕಷ್ಟವನ್ನು ಹೆಚ್ಚಿಸಿದಂತಾಗುತ್ತದೆ. ಚೈನಾದಲ್ಲಿ ಒಳ ಜಗಳಗಳು ನಡೆಯುತ್ತಿದ್ದರೆ ಅಲ್ಲಿ ತಮ್ಮ ಲಾಭಗಳನ್ನು ಸಾಧಿಸಿಕೊಳ್ಳಲು ಅನುಕೂಲವಾಗುವದೆಂಬ ಕಾರಣದಿಂದ ಸಾಮ್ರಾಜ್ಯವಾದಿ ಜನಾಂಗಗಳು ಅಲ್ಲಿ ಶಾಂತಿಯ ಸರ್ಕಾರವನ್ನು ಸ್ಥಾಪಿಸಲು ಸಹಾಯಕರಾಗಲಿಕ್ಕಿಲ್ಲವೆಂಬ ಭಯವಿದೆ. ಆದರೆ ಸ್ವಾತಂತ್ರ್ಯವನ್ನು ಪ್ರೀತಿಸುವ ಸರ್ಕಾರಗಳು ಚೈನಾದವರ ಪ್ರಯತ್ನಗಳಿಗೆ ಸಹಾನುಭೂತಿಯನ್ನು ತೋರಿ, ಅವರಿಗೆ ಸಹಾಯಕರಾಗಬೇಕಾದದ್ದು ಅವಶ್ಯ.

ಇಡೀ ಚೈನಾದಲ್ಲಿ ಈಗ ರಾಷ್ಟ್ರೀಯ ಸರ್ಕಾರವು ಸ್ಥಾಪಿಸಲ್ಪಟ್ಟು ಹೆಚ್ಚಿನ ವರ್ಷಗಳೂ ಅಲ್ಲ, ತಿಂಗಳುಗಳೂ ಸಹ ಆಗಿರುವದಿಲ್ಲ. ಇಷ್ಟರಲ್ಲಿ ಅವರು ದೇಶದಲ್ಲಿ 20 ವರ್ಷ ಪ್ರಾಯದೊಳಗಿನ ಹುಡುಗರು ಯಾ ಹುಡುಗಿಯರಿಗೆ ಮದ್ಯಪಾನ ಮತ್ತು ಧೂಮಪಾನದ ಯಾವ ವಸ್ತುವನ್ನಾದರೂ ಮಾರಕೂಡದೆಂತಲೂ, ಹಾಗೆ ಮಾರಿದವರಿಗೂ, ಕೊಂಡುಕೊಂಡ ಮಕ್ಕಳ ತಂದೆ ತಾಯಿಗಳಿಗೂ ಜುಲುಮಾನೆಯ ಶಿಕ್ಷೆ ವಿಧಿಸಲ್ಪಡುವದೆಂತಲೂ ಕಾನೂನು ಮಾಡಿರುವರಂತೆ. ಇದಲ್ಲವೇ ರಾಷ್ಟ್ರೀಯ ಸರ್ಕಾರದ ಮಹತ್ವ. ಭೂಲೋಕದಲ್ಲಿ ಉತ್ತಮ ಸರ್ಕಾರವೆಂದೆನ್ನಿಸಿಕೊಳ್ಳುವ ಬ್ರಿಟಿಷ್ ಸರ್ಕಾರವು ಇಂಡಿಯಾದಲ್ಲಿ ಸ್ಥಾಪಿಸಲ್ಪಟ್ಟು ಒಂದೂವರೆ ಶತಮಾನಗಳಾದರೂ ಇಲ್ಲಿ ಅಂತಹ ಕಾನೂನು ಮಾಡಲು ಅವರಿಗೆ ಇನ್ನೂ ಸಮಯವೂ ಸಿಗದೆ ಬಂದಿರುವದಿಲ್ಲ. ಇದು "ಒಳ್ಳೇ ಸರ್ಕಾರವು ಸ್ವರಾಜ್ಯಕ್ಕಿಂತ ಉತ್ತಮವಾದುದಲ್ಲ"ವೆಂಬ ನಾಣ್ನುಡಿಯನ್ನು ದೃಢೀಕರಿಸುತ್ತದೆ. ಆದುದರಿಂದ ಎಲ್ಲರೂ ಸ್ವರಾಜ್ಯ ಸಂಪಾದನೆಗಾಗಿ ಹೋರಾಡಲು ಸೊಂಟಕಟ್ಟಬೇಕಾದದ್ದು ಅತ್ಯವಶ್ಯವಲ್ಲವೇ.

ಆನೆಗಳನ್ನು ಕಟ್ಟಿ ಊಳುವುದು.

ಜಗತ್ತಿನಲ್ಲಿ ವ್ಯವಸಾಯ ಮಾಡುವವರು ಪ್ರಾಣಿಗಳನ್ನು ನೇಗಿಲಿಗೆ ಕಟ್ಟಿ ಭೂಮಿಯನ್ನು ಊಳುವುದು, ಅಥವಾ ಯಂತ್ರೋಪಕರಣಗಳ ಸಹಾಯದಿಂದ ಭೂಮಿಯನ್ನು ವ್ಯವಸಾಯ ಮಾಡುವುದು ಕೇವಲ ಸಾಮಾನ್ಯವಾದ ಸಂಗತಿಯಾಗಿದೆ. ಆದರೆ ಆನೆಗಳನ್ನು ಕಟ್ಟಿ ಊಳುತ್ತದು ಅನೇಕರಿಗೆ ಆಶ್ಚರ್ಯವನ್ನುಂಟುಮಾಡುವುದು. ಆಫ್ರಿಕ ಖಂಡದಲ್ಲಿ ಸೌಡಾನ್ ಎಂಬ ಸ್ಥಳವು ಬಹಳ ಸಾರವತ್ತಾಗಿ ಇರುವುದಾದರೂ, ಕೆಲವು ತರದ ಕ್ರೂರ ಕ್ರಿಮಿಕೀಟಗಳ ಕಾಟದಿಂದ ಭೂವ್ಯವಸಾಯಕ್ಕೆ ಉಪಯೋಗಕರವಾದ ಎತ್ತು ಮತ್ತು ಕುದುರೆಗಳು ಬಹಳ ಕಾಲ ಬದುಕುವುದೇ ಅಪೂರ್ವ. ಆದರೂ ಅಲ್ಲಿಯ ಜನರಿಗೆ ನೇಗಿಲಿನಿಂದ ಊಳುವ ಸಂದರ್ಭವು ಅತಿಯಾಗಿರುವುದು.

ಇದೇ ಕಾರಣದಿಂದ ಕಳೆದ 25 ವರ್ಷಗಳಿಂದ ಮಾಡಿದ ಪರಿಶೋಧನೆಯ ಪರಿಣಾಮದಿಂದ, ಜನರು ಅಲ್ಲಿಯ ಕಾಡಾನೆಗಳನ್ನು ಪಳಗಿಸಿ, ಈಗ ಆನೆಗಳನ್ನು ಕಟ್ಟಿ ಊಳುವುದೇ ಲಾಭಕರವೆಂದೂ ಮತ್ತು ಕಮ್ಮಿ ಖರ್ಚಿನದೆಂದೂ ಕಂಡುಹಿಡಿದಿದ್ದಾರೆ.

ಪರೀಕ್ಷಿಸಿದಲ್ಲಿ, ಒಂದು ಆನೆಯು ಪ್ರಾತಃಕಾಲ 5 ಗಂಟೆಯಿಂದ 11 ಗಂಟೆಯ ವರೆಗೆ ಕೆಲಸಮಾಡಿದರೆ ಎರಡು ದಿವಸದಲ್ಲಿ 2½ ಎಕ್ರೆ ಭೂಮಿಯನ್ನು ಊಳಬಹುದು. ಅಲ್ಲದೆ ಇತರ ಕಷ್ಟ ತರದ ಕೆಲಸಗಳಿಗೂ ಕೂಡ ಆನೆಯನ್ನು ಉಪಯೋಗಿಸಬಹುದಾದುದರಿಂದ ಯಂತ್ರವನ್ನು ಉಪಯೋಗಿಸುವುದಕ್ಕೆ ಬೇಕಾಗುವ ಖರ್ಚಿನ 11 ಪಾಲು ಕಡಿಮೆ ಖರ್ಚಿನಿಂದ ಆನೆಗಳನ್ನು ಉಪಯೋಗಿಸಬಹುದೆಂದು ಗೊತ್ತಾಗಿದೆ.

ಸಾಕಲಿಕ್ಕೂ ಆನೆಯು ಬಹಳವಾಗಿ ಮರದ ಎಲೆಗಳನ್ನೂ, ಗೆಡ್ಡೆಗೆಣಸುಗಳನ್ನೂ ತಿಂದು ಜೀವಿಸುವುದರಿಂದ, ಇದರ ಪೋಷಕರ ಸಂಬಳವನ್ನೂ, ಔಷಧ ಖರ್ಚನ್ನೂ, ಸರಪಳಿ ಮೊದಲಾದ ಮುಟ್ಟುಗಳ ಖರ್ಚನ್ನೂ ಸೇರಿಸಿದರೆ, ಒಂದು ಆನೆಗೆ ದಿವಸಕ್ಕೆ ಸುಮಾರು 1 ಶಿಲಿಂಗ್ ಖರ್ಚು ಧಾರಾಳವಾಗಿ ಸಾಕಾಗುತ್ತದೆಂದು ವಿದಿತವಾಗಿದೆ.

ಆದುದರಿಂದಲೇ ಸೌಡಾನಿನಲ್ಲಿ ಪರೀಕ್ಷಾರ್ಥವಾಗಿ ದೊಡ್ಡ ಫಾರಂಗಳನ್ನು ಇಟ್ಟು, ಆನೆಯನ್ನು ಸುಲಭ ರೀತಿಯ ವ್ಯವಸಾಯಕ್ಕೆ ಉಪಯೋಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆನೆಗಳು ಸಿಕ್ಕುವ ನಮ್ಮ ದೇಶದವರು ಈ ವಿಷಯವನ್ನು ಗಣನೆಗೆ ತರಬೇಕಾಗಿದೆ.

ಗ್ರಾಮಗಳ ಪುನರ್ವ್ಯವಸ್ಥೆ.

(ಬರೆದು ಬಂದದ್ದು)

ಪಟ್ಟಣಗಳಲ್ಲಿ ತಂತಮ್ಮ ಸಂಪಾದನೆಗಳನ್ನು ಮಾಡುವ ಮಾರ್ಗವು ಬಹಳ ಕಷ್ಟವಾಗಿರುವುದರಿಂದ, ಈಗೀಗ ರಾಜತಂತ್ರಜ್ಞರಿಂದ ಸಾಮಾನ್ಯ ಮಾನವನಿಗೂ, ಪಟ್ಟದ ಬಾಳು ಯಾವಾಗಲೂ ಗೋಳು ಎಂದು ತಿಳಿದು ಪುನಃ ಗ್ರಾಮಗಳನ್ನು ಸೇರುವುದೇ ಒಳ್ಳೆಯದೆಂಬ ಅಭಿಪ್ರಾಯವು ಹುಟ್ಟಿದೆ.

ನಿರುದ್ಯೋಗ ನಿವಾರಣೆ ಮೊದಲೂ ಕೂಡ ಸರಕಾರದವರು ಹಳ್ಳಿಗಳ ಉದ್ಧಾರ ದೇಶದ ಆಧಾರವೆಂದು ಗ್ರಾಮಗಳಲ್ಲಿ ಹೋಗಿ ಭೂಮಾತೆಯು ಮಾನವನ ಕಷ್ಟಕ್ಕೆ ಯಾವುದೆಲ್ಲವನ್ನೀಯುತ್ತದೆಂಬುವುದನ್ನು ನೋಡುವುದೇಲೇಸೆಂದು ಅಭಿಪ್ರಾಯಪಡುತ್ತಿರುವರು.

ಹಾಗಾದರೆ ಯಾವ ರೀತಿಯಲ್ಲಿ ಗ್ರಾಮಗಳನ್ನು ಪುನರುದ್ಧಾರಮಾಡಬೇಕಾಗಿದ್ದೆಂದು ಆಲೋಚಿಸೋಣ. ಸಹಕಾರಿ ಸಂಘಗಳು ಅನೇಕ ಮಟ್ಟಿಗೆ ಗ್ರಾಮಗಳಲ್ಲಿಯ ರೈತರಿಗೆ ಸಹಾಯ ಮಾಡುತ್ತವೆಂದೂ ರೈತನ ವ್ಯವಸಾಯಕ್ಕೆ ಬೇಕಾದ ಎತ್ತುಗಳನ್ನೂ, ಮುಟ್ಟುಗಳನ್ನೂ ತೆಗೆದುಕೊಳ್ಳಲು ಸಹಾಯ ಮಾಡುವುದರಿಂದ ಸಹಕಾರಿ ಸಂಘಗಳು ರೈತರ ಸರಳ ಜೀವನಕ್ಕೆ ಮೂಲಾಧಾರವೆಂದು ತಿಳಿಯುತ್ತೇವೆ. ಆದರೆ ಪರಿಶೀಲಿಸಿ ನೋಡಿದರೆ ಗ್ರಾಮದ ರೈತನು ಸಹಕಾರಿ ಸಂಘಗಳನ್ನು ಅವಲಂಬಿಸಿ ಬಡತನದಿಂದ ಕಷ್ಟಪಡಲು ಮನಸ್ಸಿಲ್ಲದೆ, ಸಹಕಾರಿ ಸಂಘದ ಸಹಾಯವು ಒದಗುವ ಸಂದರ್ಭವನ್ನು ಕಾಯುತ್ತಾ, ದುಂದು ವೆಚ್ಚಮಾಡಿ ಹೆಚ್ಚಾಗಿ ಸಾಲ ಮಾಡುವ ಕಾಂಕ್ಷೆಯಿಂದಲೇ ಕೂಡಿರುತ್ತಾನೆ. ಅಲ್ಲದೆ ಸಹಕಾರಿ ಸಂಘಗಳ ಈಗಿನ ಧ್ಯೇಯವು ರೈತರಿಗೆ ಹಣ ಸಾಲ ಕೊಡುವುದೇ ಆಗಿರುವುದರಿಂದ, ಇದನ್ನುಳಿದು ಇತರ ಕೆಲಸಗಳನ್ನು ಉದ್ದೇಶಿಸಿದರೂ ಈ ಸಹಕಾರಿ ಸಂಘಗಳು ಕಾರ್ಯತಃ ಅವುಗಳನ್ನು ಮಾಡಿರುವುದಿಲ್ಲ. ಆದುದರಿಂದ ಸಹಕಾರಿ ಸಂಘಗಳು ನಿಜವಾದ ಗ್ರಾಮ ಪುನರ್ವ್ಯವಸ್ಥೆಯ ಕಡೆಗೆ ಮನ ಕೊಟ್ಟಿರುವುದಿಲ್ಲವೆಂದೇ ಹೇಳಬಹುದು.

ಹಾಗಾದರೆ ಗ್ರಾಮಗಳ ಪುನರ್ವ್ಯವಸ್ಥೆಯಾಗಬೇಕಾದರೆ, ಗ್ರಾಮ ಜನರ ಮನೋಭಾವನೆಯೇ ಬದಲಾಗಬೇಕು. ಈ ಮನೋಭಾವನೆಯು ಯಾವ ಪಥವನ್ನು ಅನುಸರಿಸಿ ನಡೆಯುತ್ತದೆಯೋ ಅದೇ ಮಾರ್ಗವನ್ನು ಅನುಸರಿಸಿ ಗ್ರಾಮಗಳ ಸ್ಥಿತಿಯು ಬದಲಾಗುವುದು. ಆದಕಾರಣ ಗ್ರಾಮಗಳ ಜನರ ಸ್ಥಿತಿಯ ಕಡೆಗೆ ಗೋಚರವನ್ನಿಟ್ಟು ಅವರ ಈಗಿನ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತುಕೊಂಡು ಸುಧಾರಣೆಗಳನ್ನು ಮಾಡಲು ಪ್ರಾರಂಭಿಸಬೇಕು.

ಈ ರೀತಿ ಸಾಮಾಜಿಕ ಕೆಲಸಗಳನ್ನು ಯಾರು ಮಾಡಬೇಕೆಂದೂ, ಅಥವ ಅವರ ಬುದ್ಧಿ ಕೌಶಲ್ಯಗಳು ಹೇಗಿರಬೇಕೆಂದೂ ಅವರ ವರ್ತನೆಯು ಜನ ಸಮೂಹದಲ್ಲಿ ಹೇಗಿರಬೇಕೆಂದೂ ವಿಚಾರಿಸಬೇಕಾದದ್ದು ಗ್ರಾಮಗಳ ಪುನರ್ವ್ಯವಸ್ಥೆಯಲ್ಲಿ ಮನವು ತಲ್ಲೀನವಾಗಿರುವ ಮಹನೀಯರ ಕರ್ತವ್ಯವಾಗಿದೆ.

ಈ ಕೆಲಸಕ್ಕೆ ಬಹಳ ದ್ರವ್ಯವೇನು ಅವಶ್ಯವಿಲ್ಲ. ಆದರೆ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ಅಲ್ಲಲ್ಲಿ ಮಹಾತ್ಕಾರ್ಯದಿಂದ ಬರೇ ಮೋಹಗಳನ್ನಾಡುವ ಮಾನವಕ್ರೋಷ್ಠರೆಂದೆನ್ನಿಸಿಕೊಳ್ಳುವ ಜನರು ಮಾತ್ರ ತಮ್ಮ ಅಭಿಪ್ರಾಯಗಳನ್ನು ಕಾರ್ಯತಃ ನಡೆಸಲು ಸಿದ್ಧರಾಗಬೇಕಾಗಿರುವುದು ಮಾತ್ರ ಅವಶ್ಯವಾದ ಅಂಶವು. ಇನ್ನು ಬೇಕಾದ ಸಾಧನಗಳನ್ನು ಮುಂದಿನ ವಾರ ತಿಳಿಸುವೆವು.

(ಮುಂದುವರಿಯುವುದು)

ಮಹಾತ್ಮಗಾಂಧಿಯವರ ಸ್ವಚರಿತ್ರೆ

೩ ನೇ ಭಾಗದಲ್ಲಿ ೧೫ನೇ ಪ್ರಕರಣ.

ಮಹಾಸಭೆಯಲ್ಲಿ.

ಕಟ್ಟಕಡೆಗೆ ಮಹಾಸಭೆಯು ಕೂಡಿತು. ಸುಂದರವಾಗಿ ಸಜ್ಜುಗೊಳಿಸಿದ ಭಾರೀ ಮಂಟಪವನ್ನು ವೈಭವದಿಂದ ವ್ಯೂಹಗಟ್ಟಿದ ಸ್ವಯಂಸೇವಕರನ್ನೂ ವೇದಿಕೆಯ ಮೇಲೆ ಕುಳಿತಿದ್ದ ಹಿರಿಯರನ್ನೂ ನೋಡಿ ನಾನು ಆಶ್ಚರ್ಯಚಕಿತನಾದೆನು. "ಈ ದೊಡ್ಡ ಕೂಟದಲ್ಲಿ ನಾನೆಲ್ಲಿ!" ಎಂಬ ವಿಸ್ಮಯವು ನನ್ನ ಮನಸ್ಸಿನಲ್ಲಿ ಹುಟ್ಟಿತು.

ಅಧ್ಯಕ್ಷರ ಭಾಷಣವಂತೂ ಅದೇ ಒಂದು ಪುಸ್ತಕವಾಗಿದ್ದಿತು. ಅದನ್ನು ಸಂಪೂರ್ಣವಾಗಿ ಆ ಸಂದರ್ಭದಲ್ಲಿ ಓದುವಹಾಗಿರಲಿಲ್ಲ. ಅದ್ದರಿಂದ ಅದರಲ್ಲಿ ಅಲ್ಲಿ ಸ್ವಲ್ಪ, ಇಲ್ಲಿ ಸ್ವಲ್ಪವನ್ನು ಓದಿದರು.

ಇದಾದ ಮೇಲೆ ವಿಷಯ ಸಮಿತಿಯ ಸದಸ್ಯರ ಚುನಾವಣೆಯಾಯಿತು. ಗೋಖಲೆಯವರು ನನ್ನನ್ನು ಸಮಿತಿಯ ಕೂಟಗಳಿಗೆ ಕರೆದುಕೊಂಡು ಹೋದರು.

ಸರ್ ಫಿರೋಜ್‌ಷಹರೇ ನನ್ನ ಪ್ರಸ್ತಾವವನ್ನು ಸ್ವೀಕರಿಸುವುದಕ್ಕೆ ಒಪ್ಪಿಕೊಂಡಿದ್ದರು. ಆದರೆ ನಾನು, ನನ್ನ ಪ್ರಸ್ತಾವವನ್ನು ವಿಷಯ ಸಮಿತಿಯ ಮುಂದೆ ತರುವವರಾರು? ಎಂದು ತರುತ್ತಾರೆ? ಎಂಬ ವಿಚಾರವನ್ನು ಯೋಚನೆ ಮಾಡುತ್ತಾ ಕುಳಿತಿದ್ದೆನು. ಒಂದೊಂದು ಪ್ರಸ್ತಾವದ ಮೇಲೂ ಉದ್ದವಾದ ಭಾಷಣವಾಗುತ್ತಿದ್ದಿತು-ಸಾಲದುದಕ್ಕೆ ಇಂಗ್ಲೀಷಿನಲ್ಲಿ ಪ್ರತಿಯೊಂದು ಠರಾವಿನ ಹಿಂದೂ ಯಾರಾದರೊಬ್ಬ ಹೆಸರುವಾಸಿಯಾದ ಮನುಷ್ಯರು ನಿಂತಿದ್ದರು. ಈ ಭೇರಿಗಳ ನಿರ್ಘೋಷದ ಮಧ್ಯೆ ನನ್ನ ಸಿಳ್ಳನ್ನು ಯಾರು ಕೇಳುತ್ತಾರೆ? ರಾತ್ರಿ ಕಳೆಯುತ್ತಾ ಬಂದ ಹಾಗೆಲ್ಲಾ ನನ್ನ ಎದೆಯು ದಢ ದಢ ಎಂದು ವೇಗವಾಗಿ ಹೊಡೆಯುತ್ತಾ ಬಂದಿತು. ನನಗೆ ನೆನಪಿರುವ ಮಟ್ಟಿಗೆ ಕಡೆಗೆ ಬಂದ ಪ್ರಸ್ತಾವಗಳನ್ನಂತು ಇಂದಿನ ಆಕಾಶ ವಿಮಾನಗಳ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಓಡಿಸುತ್ತಿದ್ದರು. ಪ್ರತಿಯೊಬ್ಬರೂ ಅಲ್ಲಿಂದ ಹೊರಟು ಹೋಗುವುದಕ್ಕೆ ಸಿದ್ಧರಾಗುತ್ತಿದ್ದರು. ರಾತ್ರಿ ೧೧ ಗಂಟೆಯಾಯಿತು. ನನಗೆ ಮಾತನಾಡುವುದಕ್ಕೆ ಧೈರ್ಯವಿರಲಿಲ್ಲ. ನಾನು ಗೋಖಲೆಯವರನ್ನು ಆಗಲೇ ಕಂಡಿದ್ದೆನು. ಅವರು ನನ್ನ ಪ್ರಸ್ತಾವವನ್ನು ಓದಿದ್ದರು.

ನಾನು ಅವರ ಕುರ್ಚಿಯ ಬಳಿಗೆ ಹೋಗಿ ಮೆಲ್ಲಗೆ 'ನೀವು ನನಗೆ ಹೇಗಾದರೂ ಸಹಾಯ ಮಾಡಬೇಕು' ಎಂದು ಹೇಳಿದೆನು.

ಅವರು "ನಿನ್ನ ಪ್ರಸ್ತಾವವನ್ನು ನೆನಪಿನಲ್ಲೇ ಇಟ್ಟುಕೊಂಡಿದ್ದೇನೆ. ಇಲ್ಲಿಯ ಅವಸರವನ್ನಂತೂ ನೀನು ನೋಡುತ್ತಲೇ ಇದ್ದೀಯೆ. ಆದರೆ ನಾನು ಅವರು ಈ ಪ್ರಸ್ತಾವವನ್ನು ಮರೆಯುವುದಕ್ಕೆ ಬಿಡುವುದಿಲ್ಲ," ಎಂದು ಹೇಳಿದರು.

ಸರ್ ಫಿರೋಜ್‌ಷಹರು "ಹಾಗಾದರೆ ಈ ಹೊತ್ತಿನ ಕೆಲಸವು ಮುಗಿಯಿತು ತಾನೆ?" ಎಂದರು.

"ದಕ್ಷಿಣ ಆಫ್ರಿಕದ ಪ್ರಸ್ತಾವವು ಇನ್ನೂ ಇದೆಯಲ್ಲ! ಮಿ. ಗಾಂಧಿಯವರು ಎಷ್ಟು ಹೊತ್ತಿನಿಂದ ಕಾದಿದ್ದಾರೆ!" ಎಂದು ಗೋಖಲೆಯವರು ಕೂಗಿದರು.

"ನೀನು ಆ ಪ್ರಸ್ತಾವವನ್ನು ನೋಡಿದ್ದೀಯೋ?" ಎಂದು ಸರ್ ಫಿರೋಜ್‌ಷಹರು ಗೋಖಲೆಯವರನ್ನು ಕೇಳಿದರು.

'ಅಹುದು, ಇಲ್ಲದೆ'

"ನಿನಗೆ ಅದು ಸರಿಯಾಗಿ ಕಂಡಿತೋ?"

"ಅದು ಸರಿಯಾಗಿದೆ"

ಹಾಗಾದರೆ ಅದನ್ನು ಓದು ನೀನು ಗಾಂಧಿ"

ನಾನು ಕಂಪಿಸುತ್ತಾ ಅದನ್ನು ಓದಿದೆನು.

"ಸರ್ವಸಮ್ಮತಿಯಿಂದ ಸ್ವೀಕರವಾಯಿತು" ಎಂದು ಎಲ್ಲರೂ ಕೂಗಿದರು.

"ಗಾಂಧಿ ನಿನಗೆ ಇದರ ಮೇಲೆ (ಮಹಾಸಭೆಯಲ್ಲಿ) ಮಾತನಾಡುವುದಕ್ಕೆ ಐದು ನಿಮಿಷ ಉಂಟು" ಎಂದು ವಾಚಾರವರು ಹೇಳಿದರು.

ಈ ದೃಶ್ಯವನ್ನು ನೋಡಿ ನನಗೆ ಸಂತೋಷವಾಗಲಿಲ್ಲ. ಯಾರೂ ಪ್ರಸ್ತಾವವನ್ನು ಅರ್ಥಮಾಡಿಕೊಳ್ಳುವುದಕ್ಕೆ ಕಷ್ಟ ವಹಿಸಿರಲಿಲ್ಲ. ಎಲ್ಲರೂ ಹೊರಟು ಹೋಗುವ ಅವಸರದಲ್ಲಿದ್ದರು. ಗೋಖಲೆಯವರು ಪ್ರಸ್ತಾವವನ್ನು ನೋಡಿದ್ದುದರಿಂದ ಇತರರಾರೂ ಅದನ್ನು ಓದಿ ತಿಳಿದುಕೊಳ್ಳುವುದಕ್ಕೆ ಅವಶ್ಯಕವಿಲ್ಲವೆಂದು ಅವರಿಗೆ ತೋರಿತು!

ಬೆಳಗಾಯಿತು.

ನಾನು ನನ್ನ ಅಂದಿನ ಭಾಷಣದ ವಿಚಾರವಾಗಿ ಯೋಚಿಸತೊಡಗಿದೆನು. ಐದು ನಿಮಿಷದಲ್ಲಿ ನಾನು ಹೇಳುವದೇನು? ನಾನು ಚೆನ್ನಾಗಿ ಸಿದ್ಧಪಡಿಸಿಕೊಂಡಿದ್ದೆನಾದರೂ ತಕ್ಕ ಶಬ್ದಗಳು ಒದಗುತ್ತಿರಲಿಲ್ಲ. ಬರೆದಿರುವ ಭಾಷಣವನ್ನು ಓದಕೂಡದು, ಅಲ್ಲಿಯೇ ನಿಂತು ಮಾತನಾಡಬೇಕು, ಎಂದು ನಿಶ್ಚಯ ಮಾಡಿಕೊಂಡಿದ್ದೆನು. ಆದರೆ ಸರಾಗವಾಗಿ ಮಾತನಾಡುವದಕ್ಕೆ ನನಗೆ ದಕ್ಷಿಣ ಆಫ್ರಿಕದಲ್ಲಿ ಆಗಿದ್ದ ಅಭ್ಯಾಸವು ಇಲ್ಲಿ ಮಾಯವಾಗಿರುವಂತೆ ತೋರಿತು.

ನನ್ನ ಪ್ರಸ್ತಾವದ ಸಮಯವು ಬಂದೊಡನೆಯೇ ಸರ್ ದಿನ್ಶಾರವರು ನನ್ನ ಹೆಸರನ್ನು ಕೂಗಿದರು. ನಾನು ಎದ್ದು ನಿಂತುಕೊಂಡೆನು, ನನ್ನ ತಲೆಯು ತಿರುಗುತ್ತಿದ್ದಿತು. ಯಾರೋ ಒಬ್ಬ ಕವಿಯು ತನ್ನ ಕವಿತೆಯನ್ನು ಅಚ್ಚುಹಾಕಿಸಿ ಎಲ್ಲಾ ಪ್ರತಿನಿಧಿಗಳಿಗೂ ಹಂಚಿದ್ದನು. ಆ ಕವಿತೆಯು ವಿದೇಶಕ್ಕೆ ಹೋಗುವದನ್ನು ಮತ್ತು ಸಮುದ್ರವನ್ನು ದಾಟುವುದನ್ನು ಸ್ತುತಿಸಿ ಬರೆದುದಾಗಿದ್ದಿತು. ನಾನು ಈ ಪದ್ಯವನ್ನು ಓದಿ ದಕ್ಷಿಣ ಆಫ್ರಿಕದಲ್ಲಿ ನಮ್ಮವರ ಸಂಕಟಗಳ ವಿಚಾರವಾಗಿ ಒಂದೆರಡು ಮಾತನಾಡಿದೆನು. ಅಷ್ಟರಲ್ಲಿಯೇ ಸರ್ ದಿನ್ಶಾರವರು ಗಂಟೆಯನ್ನು ಬಾರಿಸಿದರು. ನಾನು ಇನ್ನೂ ಐದು ನಿಮಿಷ ಮಾತನಾಡಿರಲಿಲ್ಲವೆಂದು ನನಗೆ ಭರವಸೆ ಇದ್ದಿತು. ನನಗೆ ಎಚ್ಚರಿಕೆ ಕೊಡುವುದಕ್ಕಾಗಿ ಎರಡು ನಿಮಿಷ ಮುಂಚೆಯೇ ಗಂಟೆಯನ್ನು ಬಾರಿಸಿದರೆಂದು ನನಗೆ ತಿಳಿದಿರಲಿಲ್ಲ. ಇತರರನೇಕರು ಅರ್ಧ ತಾಸು ಮುಕ್ಕಾಲು ತಾಸು ಮಾತನಾಡಿದರೂ ಅವರಿಗೆ ಗಂಟೆ ಬಾರಿಸದೆ ಇದ್ದುದನ್ನು ನಾನು ನೋಡಿದ್ದೆನು. ನನಗೆ ದುಃಖವುಂಟಾಯಿತು. ಗಂಟೆ ಬಾರಿಸಿದೊಡನೆಯೇ ನಾನು ಕುಳಿತುಬಿಟ್ಟೆನು. ಆದರೂ ಆಗ ನನ್ನ ಎಳೆಯ ಬುದ್ಧಿಯು ಆ ಪದ್ಯವೇ ಸರ್ ಫಿರೋಜ್‌ಷಹರಿಗೂ ಉತ್ತರವಾಗಿದ್ದಿತೆಂದು ತಿಳಿದುಕೊಂಡಿತು.

ಪ್ರಸ್ತಾವವನ್ನು ಮಹಾಸಭೆಯು ಸ್ವೀಕರಿಸುವ ವಿಷಯದಲ್ಲಂತು ಕೇಳಬೇಕಾದ್ದೇನು? ಆಗಿನ ಕಾಲದಲ್ಲಿ ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಬಹಳ ವ್ಯತ್ಯಾಸವಿರಲಿಲ್ಲ. ಪ್ರಸ್ತಾವಗಳನ್ನು ಯಾರೂ ವಿರೋಧಿಸುತ್ತಲೇ ಇರಲಿಲ್ಲ. ಎಲ್ಲರೂ ಕೈಯೆತ್ತಿ ಬಿಡುತ್ತಿದ್ದರು. ಎಲ್ಲಾ ಪ್ರಸ್ತಾವಗಳೂ ಏಕಮತದಿಂದ ಸ್ವೀಕರಿಸಲ್ಪಡುತ್ತಿದ್ದವು. ನನ್ನ ಪ್ರಸ್ತಾವಕ್ಕೂ ಇದೇ ಗತಿಯಾಯಿತು. ಆದ್ದರಿಂದ ನನ್ನ ದೃಷ್ಟಿಯಲ್ಲಿ ನನ್ನ ಪ್ರಸ್ತಾವದ ಮಹತ್ವವೆಲ್ಲವೂ ಮಾಯವಾಯಿತು. ಆದರೂ ಮಹಾಸಭೆಯು ಅದನ್ನು ಸ್ವೀಕರಿಸಿತೆನ್ನುವದಷ್ಟೇ ನನಗೆ ಆನಂದವನ್ನುಂಟುಮಾಡುವುದಕ್ಕೆ ಸಾಕಾಗಿದ್ದಿತು. ಮಹಾಸಭೆಯು ಸ್ವೀಕರಿಸಿದ ಹೆಗ್ಗುರುತೆಂದರೆ ಸಕಲ ಭಾರತ ವರ್ಷದ ಸ್ವೀಕಾರದ ಹೆಗ್ಗುರುತೆನ್ನುವ ಜ್ಞಾನವು ಯಾರನ್ನು ಆನಂದಪಡಿಸುವುದಕ್ಕೆ ತಾನೆ ಸಾಲದು?

ನಿರ್ಭಾಗ್ಯ ಭಾರತ.

(Unhappy India.)

ಅಮೇರಿಕಾದೇಶದ ಮೇಯೋದೇವಿಯು ಸುಸಮಯವನ್ನು ನೋಡಿಕೊಂಡು ಸಾಮ್ರಾಜ್ಯವಾದಿಗಳ ಬೆಂಬಲದಿಂದ ಕ್ರಾಂತಿಕಾರಕ ಪುಸ್ತಕವನ್ನು ಬರೆದು ಭಾರತೀಯರನ್ನು ಅವರ ಗಾಢ ನಿದ್ರೆಯಿಂದ ಎಚ್ಚರಿಸಿದಳಷ್ಟೆ. ಈ ಪುಣ್ಯಾತ್ಮಳು ಅವಿವಾಹಿತಳಾದ ಮುದಿ ಕನ್ನಿಕೆ. ಇವಳಿನ್ನೂ ಗರ್ಭಿಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹೆಣ್ಣಾಳಿನಂತೆ ಇರುವಳು. ಇವಳಿಗೆ ಚಿಕ್ಕಂದಿನಲ್ಲಿ ಕೂಲಿ ಜನರೊಂದಿಗೆ ದೊರೆತ ವಿದ್ಯೆಯೇ ವಿದ್ಯೆ. ಗಣನೆಗೆ ಬರುವ ವಿದ್ಯೆ ಇವಳು ಅಭ್ಯಾಸಮಾಡಿರುವುದಿಲ್ಲ. ಇವಳ ಪುಸ್ತಕದಲ್ಲಿನ ಬರವಣಿಗೆಯ ಶೈಲಿಯಿಂದಲೂ, ಅವರೊಳಗಿನ ವಿಷಯ ಸಮಾಲೋಚನೆಯಿಂದಲೂ ಇವಳ ಜೀವನ ಚರಿತ್ರೆಯ ಮಹತ್ವವು ಹೊರಬೀಳುವುದು. ಮನುಷ್ಯನು ಹೆಸರುವಾಸಿಯಾಗಬೇಕಾದರೆ ಪ್ರಪಂಚದಲ್ಲಿ ಎಷ್ಟೋ ವಿಧಾನಗಳು. ಒಂದನೆಯದು ಕೊಲೆ, ಧರೋಡೆ, ಕಳವು, ವಂಚನೆ ಇವೇ ಮೊದಲಾದ ದುಷ್ಕರ್ಮಗಳನ್ನು ಕೈಗೊಂಡ ಹಿಂಸಾಮಾರ್ಗ. ಮತ್ತೊಂದು ಈ ಮಾರ್ಗಕ್ಕೆ ವಿರೋಧವಾದದ್ದು. ಹಾಗಂದರೆ ಪರೋಪಕಾರ, ಸತ್ಯ, ಅಸ್ತೇಯ, ಧರ್ಮ ಇವುಗಳ ಬೆಂಬಲವಿರತಕ್ಕ ಅಹಿಂಸಾಮಾರ್ಗ. ಆದರೆ ಯಾವದೇ ಒಂದು ಜನಾಂಗದವರು ಪೂರ್ಣ ಹಿಂಸಕರಾಗಿಯಾಗಲಿ ಪೂರ್ಣ ಅಹಿಂಸಕರಾಗಿಯಾಗಲಿ ಇರುವುದು ಕೇವಲ ಅಸಾಧ್ಯ. ರಾಮರಾಜ್ಯದಲ್ಲಿ ಕೈಕೇಯಿಯಂತ ದುರ್ಜನರಿದ್ದರು. ಆದರೆ ಭೂಲೋಕದಲ್ಲಿ ಕೆಡಕು ಒಳಿತುಗಳು ಕೂಡಿಕೊಂಡೇ ಇರುವುವು. ಒಂದು ಕಾಲದಲ್ಲಿ ಒಳಿತು ಹೆಚ್ಚಿರಬಹುದು. ಮತ್ತೊಂದು ಕಾಲಕ್ಕೆ ಕೆಡಕೇ ಪ್ರಧಾನವಾಗಿರಬಹುದು. ಯೂರೋಪಿನ ಬಿಳಿ ಜನರು ಕೇವಲ ಶ್ರೇಷ್ಠ ಮನುಷ್ಯರೆಂದು ಹೇಳಿಕೊಳ್ಳುವ ಕಾಲವು ಈಗ ಅನಂಗೊಂಡಿದೆ. ಅವರೆಷ್ಟೇ ಬೆಳ್ಳಗಿದ್ದು ನಾಗರಿಕತೆಯಲ್ಲಿ ಶಿಖಾಗ್ರ ಶ್ರೇಷ್ಠತೆಯನ್ನು ಪಡೆದಿದ್ದರೂ ಅವರ ಸ್ವಭಾವವು ಮೋಸಕರವಾದ್ದು. ಅವರ ಹೃದಯವು ಕಗ್ಗಲ್ಲಿನಂತಹುದು. ಹೀಗಾದರೂ ಆ ಜನರೊಳಗೆ ಅಲ್ಪಸ್ವಲ್ಪ ಮಂದಿಯರ ಹೃದಯವು ಬೆಣ್ಣೆಯಂತಹುದು. ಹಿಂದೀಯರಲ್ಲಿಯೂ ಒಳ್ಳೆಯವರೂ ಕೆಟ್ಟವರೂ ಇದ್ದಾರೆ. ಆದರೆ ಇವರೊಳಗೆ ಭಯಭಕ್ತಿಯಿರುವವರೇ ಹೆಚ್ಚು. ದೇವರಲ್ಲಿ ಭಯವಿರತಕ್ಕ ಮನುಷ್ಯರು ಸ್ವಾಭಾವಿಕವಾಗಿ ಸಾಧುಗಳು. ಒಂದು ಭಾಗದಲ್ಲಿ ಇವರನ್ನು ಸೋಮಾರಿಗಳೆಂದರೂ ಎನ್ನಬಹುದು. ಈ ಸೋಮಾರಿಗಳು ಇನ್ನೊಬ್ಬರ ರಾಜ್ಯವನ್ನು ಕಸಿಕೊಳ್ಳುವವರಲ್ಲ. ವಿಜ್ಞಾನದ ಬಲದಿಂದ ಅತುಲ್ಯವಾದ ಹಿಂಸಾಕಾರ್ಯಗಳಿಗೆ ಕೈಹಚ್ಚುವವರಲ್ಲ. ಸಮಸ್ತ ಬಲವಾದ ವಿಪತ್ತುಗಳನ್ನು ಸಂಕಟಗಳನ್ನು ಸಹಿಸುವ ಸಾಹಸಿಗರು. ಕೆಂಜನರಿಗೆ ಇಂತ ಸಹನ ಗುಣವಿದ್ದರೆ ಅಶಿಕ್ಷಿತ ಜನರನ್ನು ಸುಧಾರಿಸುವುದಕ್ಕೆ ಅವರು ಹೊರಡುತ್ತಿರಲಿಲ್ಲ. ಒಂದುವೇಳೆ ಹೊರಟಿದ್ದರೂ ನಿಸ್ವಾರ್ಥಭಾವದಿಂದ ಅಂತ ಸೇವಾರಣೆ ಕೃತಿಗೆ ಕೈ ಹಾಕುತ್ತಿದ್ದರು. ಮೇಯೋದೇವಿಯಳನ್ನು ನಿಮಿತ್ತಮಾತ್ರಕ್ಕೆ ಮುಂದಿಟ್ಟು ಸಾಮ್ರಾಜ್ಯವಾದಿಗಳೂ ಪ್ರಕಾಶಪಡಿಸಿರುವ "ಮದರ್ ಇಂಡಿಯಾ" ಎಂಬ ಪುಸ್ತಕಕ್ಕೆ ಹಿಂದೂ ಮಾತೆಯ ಸುಪುತ್ರರೂ ಲೋಕವಿಖ್ಯಾತರೂ ಆದ ಲಾಲಾ ಲಜಪತರಾಯಿಯವರು ಸಮಂಜಸವಾದ ಉತ್ತರವನ್ನು ಪುಸ್ತಕರೂಪದಲ್ಲಿ ಬರೆದು ಮೊನ್ನೆ ಮೊನ್ನೆ ಪ್ರಕಟಿಸಿರುವರು. ಮೇಯೋದೇವಿಗೆ ಉತ್ತರಕೊಡುವ ಮಾರ್ಗವನ್ನು ಅವರು ಅವಲಂಬಿಸಿದೆ, ಇಡೀ ಬಿಳಿ ಜನಾಂಗದವರಿಗೆ ಅನ್ವಯಿಸುವ ಪುಸ್ತಕವನ್ನು ಬರೆದು ಅದಕ್ಕೆ "ಅನ್ ಹ್ಯಾಪಿ ಇಂಡಿಯಾ" ಎಂದು ಅದಕ್ಕೆ ನಾಮಕರಣ ಮಾಡಿರುವರು.

ಆ ಪುಸ್ತಕದ ಸಮರ್ಪಣೆಯಲ್ಲಿ ಈ ದಿವ್ಯ ವಾಣಿಗಳಿವೆ. "ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುತ್ತಿರುವ ಕುಲ, ಜಾತಿ ಮತ್ತು ವರ್ಣಭೇದವನ್ನರಿಯದ ಪ್ರೇಮ, ಜಗತ್ಸೇವೆ, ಮತ್ತು ನ್ಯಾಯ, ಇವೇ ತನ್ನ ಧರ್ಮವೆಂದು ಸಾರಿ ಹೇಳುವ ಅಮೇರಿಕೆಯ ಅಸಂಖ್ಯಾಕ ನರನಾರಿಯರಿಗೆ ಈ ಗ್ರಂಥವು ಸಮರ್ಪಣವಾಗಿದೆ. ಎಷ್ಟದ ದುಃಖ ಭಾಜನರಾದ ಜನರೆಲ್ಲರೂ ತಮ್ಮ ಸ್ವತಂತ್ರ ಸ್ಥಾಪನೆಯ ಕಾರ್ಯದಲ್ಲಿ ನೆರವಾಗಬೇಕೆಂದು ಅಮೇರಿಕೆಯವರನ್ನೇ ಬಿಡುಗಣ್ಣಿಂದ ನೋಡುತ್ತಿರುವರು. ವಿಶ್ವಶಾಂತಿಯ ಆಶಯವು ಈ ಅಮೇರಿಕೆಯ ಜನರನ್ನೇ ಆದರಿಸಿಕೊಂಡಿದೆ."

ಮೇಲಣ ಮಾತುಗಳಿಂದ ಮೇಯೋಳಿಗೂ ಇವಳ ಸ್ವಭಾವದ ಬಿಳೀ ಜನರಿಗೂ ಯಾವ ಅಭಿಪ್ರಾಯವುಂಟಾಗುವುದೋ ನಮಗೆ ತಿಳಿಯದು. ನಮ್ಮ ಭಾರತೀಯರಿಗಂತು ಈ ವಚನಗಳು ಸುವರ್ಣಾಕ್ಷರಗಳಲ್ಲಿ ಕೆತ್ತಲ್ಪಡಬೇಕೆಂದು ಅನ್ನಿಸುತ್ತದೆ. ಲಜಪತರಾಯರಿಗೆ ಇಂತ ಪುಸ್ತಕವನ್ನು ಬರೆಯಬೇಕೆಂಬ ಹಂಬಲವೇ ಇರಲಿಲ್ಲ. ತನ್ನ ಜನರೂ, ಇನ್ನೆಷ್ಟೋ ಇತರರೂ ಕಡು ಕಷ್ಟದಲ್ಲಿ ಸಿಲುಕಿರುವಾಗ ಇವರನ್ನು ಇದೇ ಸ್ಥಿತಿಯಲ್ಲಿಟ್ಟಿರಬೇಕೆಂಬ ಚಳವಳವನ್ನು ಬಿಳಿ ಜನರು ನಡೆಸುತ್ತಿರುವುದರಿಂದ, ಈ ವಿಷಯವನ್ನು ವಿಶ್ವದ ರಾಜತಂತ್ರಜ್ಞರಿಗೂ, ದಯಾಳು ಸ್ವಭಾವದವರಿಗೂ ಪರಿಚಯ ಮಾಡಿಸಿ, ಸ್ವಾರ್ಥಪರರಾದ ಬಿಳಿ ಜನರ ಮನದಲ್ಲಿ ಮನೆ ಮಾಡಿಕೊಂಡಿರುವ ಮೇಲಣ ದುರಭಿಪ್ರಾಯವನ್ನು ದೂರ ಮಾಡಿಸಿ ಪೌರ್ವಾತ್ಯ—ಪಾಶ್ಚಾತ್ಯ ಜನರಿಬ್ಬರು ಸೌಹಾರ್ದತೆಯಿಂದ ನಡೆಯಲಿ ಎಂಬ ಉಪಧ್ಯೇಯದಿಂದ ತಮ್ಮ ಪುಸ್ತಕವನ್ನು ಲಾಲಾಜಿಯವರು ಬರೆದಿರುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ನಡೆಯುತ್ತಿರುವ ಅಕೃತ್ಯಗಳನ್ನು, ಒಳ್ಳೆ ಉದ್ದೇಶದಿಂದ ಒಪ್ಪಿಸಿರುವರು. ಪಾಶ್ಚಾತ್ಯರಲ್ಲಿರುವ ಕಾರ್ಯಪ್ರಿಯತೆ, ಸಾಹಸ, ದುರಂಧರತೆ, ಸಂಘಟನೆ, ಕಾಲಕ್ಕೆ ತಕ್ಕ ಸಮಾಜಪರಿವರ್ತನೆ ಈ ಲಕ್ಷಣಗಳನ್ನು ಹೊಗಳಿ, ಅವರಲ್ಲಿರುವ ವಿಷಯವಾಸನೆ ಸಾಮ್ರಾಜ್ಯ ಲೋಲುಪತೆ, ಉಪಜೀವನಾಶ ಮೋಸ, ವಂಚನೆ, ಇವುಗಳನ್ನು ತೂರಿ ಅವರು ತಮ್ಮ ಚಾಲುಚಲನೆಯನ್ನು ತಿದ್ದಿಕೊಳ್ಳುವಂತೆ ಬರೆದಿರುವರು. ಲಜಪತರಾಯರು ಹಿಂದೂದೇಶವು ಅಧೋಗತಿಯನ್ನೈದಲು ಪರಕೀಯ ರಾಜ್ಯಭಾರವೇ ಕಾರಣ ಎಂಬುವದನ್ನು ಅನೇಕ ಆಂಗ್ಲ ಅಧಿಕಾರಿಗಳ ಬರವಣಿಗೆಗಳಿಂದಲೇ ಸಾಧಿಸಿರುವರು. ಪರಕೀಯ ಆಳಿಕೆಯಿಂದ ಐಶ್ವರ್ಯ ನಾಶವಾಗುವುದು. ರಿಕ್ತತೆಯನ್ನು ಅಜ್ಞಾನ, ಅನಾರೋಗ್ಯ, ಮುಂದಿನ ಭಾವಿ ಮುಂತಾದ ವ್ಯಾಧಿಗಳು ಹಿಂಬಾಲಿಸುವವು. ಈ ವಿಚಾರವು ಲಾಲಾಜಿಯವರಿಂದ ಚೆನ್ನಾಗಿ ವರ್ಣಿಸಲ್ಪಟ್ಟಿದೆ.

ಮೇಯೋ ದೇವಿಯು ಇಂಡಿಯಾದಲ್ಲಿ ಸಾವಿರಾರು ತಿಂಗಳು ಸಂಚಾರ ಮಾಡಿ ತನಗೆ ಬೇಕಾದ ಸಂಗತಿಗಳನ್ನು ಮಾತ್ರ ಸಂಗ್ರಹಿಸಿದಳು. ಇಂಡಿಯಕ್ಕೆ ಬರುವುದಕ್ಕೆ ಮೊದಲು, ಇವಳು ಇಂಗ್ಲೆಂಡಿನಲ್ಲಿರುವ ಇಂಡಿಯಾ ಆಫೀಸಿಗೆ ಹೋಗಿ ಹಿಂದೂದೇಶಕ್ಕೆ ಹೋದಾಗ್ಗೆ ಅಲ್ಲಿ ನಡೆಯಬೇಕಾದ ವಿಚಾರವಾಗಿ ಅಲ್ಲಿನ ಅಧಿಕಾರಿಗಳಿಂದ ಸೂಚನೆಗಳನ್ನು ಪಡೆದುಕೊಂಡಿದ್ದಳಷ್ಟೆ, ಜಾರಿಯಲ್ಲಿ ಸರಿ ಮಾತುಗಳನ್ನು ನುಡಿದು ಕಾರ್ಯತಃ ಅಡಚಣೆಮಾಡುವ ಲಾರ್ಡ್ ಕರ್ಜನ್ ದೊರೆಯ ಸಹಾಯದಿಂದ ತನ್ನ ಗ್ರಂಥಕ್ಕೆ ಬೇಕಾದ ಅನುಕ್ರಮಣಿಕೆಯನ್ನು ತಯಾರಿಸಿದ್ದಳು. ಟೋರಿ ಸಂಸ್ಥಾನವು ತನ್ನ ಪದವಿಯನ್ನು ಕಳೆಕೊಂಡು ಲೇಬರ್ ಪಾರ್ಟಿಯವರು ಪದವಿಗೆ ಬಂದರೆ, ಹಿಂದೂ ಜನರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಅವರು ಕೊಟ್ಟುಬಿಡುವರೆಂಬ ಭಯವು ಸಾಮ್ರಾಜ್ಯವಾದಿಗಳನ್ನು ಕಾಡುತ್ತಿದ್ದ ಕಾಲಕ್ಕೆ ಸರಿಯಾಗಿ ಮೇಯೋ ದೇವಿಯು ಸಾಮ್ರಾಜ್ಯವಾದಿಗಳ ಕೈಗೆ ಸಿಕ್ಕಳು. 'ಫಿಲಿಪ್ಪಿನೋದ್ವೀಪಗಳ ಮೇಲೆ' ಎಂದು ಪುಸ್ತಕವನ್ನು 'ಐಲ್ಯಾಂಡ್ಸ್ ಆಫ್ ಫಿಯರ್' ಎಂಬ ಹೆಸರಿನಿಂದ ಪ್ರಕಟಿಸಿದಳು. ಈ ಪುಸ್ತಕವು ಫಿಲಿಪ್ಪಿನೋ ಜನರಿಗೆ ಸ್ವಾತಂತ್ರ್ಯವನ್ನು ಕೊಡಬಾರದೆಂದೇ ಹೇಳುವುದು. ಇದೇ ಇವಳಿಗಿದ್ದ ಮುಖ್ಯ ಯೋಗ್ಯತೆ. ಒಬ್ಬ ಸಿರಿವಂತ ದುಷ್ಟ ಅಮೇರಿಕೆಯಳ ಪರಿಚಾರಿಕೆಯಲ್ಲಿದ್ದ ಮೇಯೋಳು ಹಿಂದೂದೇಶಕ್ಕೆ ಬಂದು ಹುಚ್ಚು ಹುಚ್ಚಾಗಿ ಬರೆದಳು. ಒಬ್ಬೊಬ್ಬರ ಸ್ವಭಾವವು ಇನ್ನೊಬ್ಬರಲ್ಲಿ ಬೀಳುವುದು ವಿಜ್ಞಾನ ಸಮ್ಮತವಾದ ಮಾತು. ಹಾಗಾದ ಮೇಲೆ ಮೇಯೋಳು ಹುಚ್ಚಳೇ ಹಾದಿಗೆ ಬರುವವಳಲ್ಲವೇ?

ಆಂಗ್ಲ ರಾಜ್ಯಭಾರವು ಹಿಂದೂ ದೇಶಕ್ಕೆ ಮಾಡಿರುವ ಉಪಕಾರವನ್ನು ಸ್ಮರಿಸತಕ್ಕದು ಮುಖ್ಯವೆಂದು, ಮೇಯೋವಿನ ಹೇಳಿಕೆ. ಇಲ್ಲಿಯ ನ್ಯಾಯವು ಹೆಚ್ಚಿತು; ಜನರ ಸಾಂಪತ್ತಿಕ ಸ್ಥಿತಿಯು ಉತ್ತಮವಾಯಿತು. ವಿದ್ಯೆಯು ಹೆಚ್ಚಿತು. ಇತ್ಯಾದಿ ಇತ್ಯಾದಿಯಾಗಿ ಇವಳು ಹೇಳುವಳು. ಹಿಂದೀಯರ ಹಿತಕ್ಕಾಗಿ ಆಂಗ್ಲೇಯರು ರಾಜ್ಯಭಾರ ಮಾಡುತ್ತಿಲ್ಲವೆಂಬುದನ್ನು ಸರ್ ಜಾನ್ ಷೋರ್, ಜಾನ್ ಬ್ರೈಟ್, ಜಾರ್ಜ್ ವಿಂಗೇಟ್, ಜಾನ್ ಸಲ್ಲಿವಾನ್, ಜಾನ್ ಮಾಲ್ಕಮ್, ಹಿಂಡ್ ಮ್ಯಾನ್, ಡಿಗ್ಬಿ, ವಾರೆನ್ ಹೇಸ್ಟಿಂಗ್ಸ್ ಮೊದಲಾದ ಶ್ರೇಷ್ಠ ಮನುಷ್ಯರ ವಚನಗಳಿಂದ ವ್ಯಕ್ತಪಡಿಸಿರುವರು. ಹಿಂದೂ ದೇಶವು ಮುಸಲ್ಮಾನರ ಆಳಿಕೆಗೆ ಒಳಪಟ್ಟರೂ, ಅವರ ಆಳಿಕೆಯ ಕಾಲದಲ್ಲೂ ಸುಖಸಂಪತ್ತಿಯಿಂದ ಕೂಡಿತ್ತು ಎಂಬ ಮಾತನ್ನು ಹ್ಯೂಮನ್ ಸಾಂಗ್, ನಿಕೊಲೊ ಕೊಂಟಿ, ಪೀಟ್ರೋ ಡೆಲ್ಲಾವಲ್ಲೆ, ಎಲ್ಫಿನ್‌ಸ್ಟನ್, ಮೂರ್ ಮುಂತಾದ

ವರ ಬರವಣಿಗೆಗಳಿಂದ ತೋರಿಸುವರು. ಹಿಂದೂ ದೇಶವು ಕ್ಷೀಣವಾಗಲು ಪ್ರಾರಂಭವಾದದ್ದು 1757ರಿಂದ. ಈ ಆಗಾಗಾಯಿತು ಮೂವತ್ತು ವರ್ಷಗಳ ವರ್ತ್ ಈಸ್ಟ್ ಇಂಡಿಯಾ ಕಂಪೆನಿಯು ಬಂಗಾಳವನ್ನು ಸುಲಿದು ಬಿಟ್ಟಿತು ಎಂಬ ಮಾತಿಗೆ ಮಕಾಲೆ ಮತ್ತು ವರ್ನೇಶರತ್ತ ಇವರೇ ಸಾಕ್ಷಿ. ಹಿಂದೂ ದೇಶದಿಂದ ಇಂಗ್ಲಾಂಡಿಗೆ ವರ್ಷ ಒಂದಕ್ಕೆ ವ್ಯಾಪಾರ, ಕೃಷಿ, ಪಿಂಚಿನು, ಬಡ್ಡಿ, ಲಾಭ ಇತ್ಯಾದಿಯಾಗಿ 220 ಕೋಟಿ ರೂ ಹರಿದು ಹೋಗುತ್ತಿವೆ. ಒಂದೂ ದೇಶಕ್ಕೆ ದೊಡ್ಡ ರಾಜ್ಯವು ಸಾಲವಿದೆ ... ಜಯಿಸಲಿಕ್ಕಾಗಿಯೂ ಗಡಿ ಪ್ರಾಂತಗಳನ್ನು ಗೆಲ್ಲಲಿಕ್ಕಾಗಿಯೂ, ನೀರಾವರಿ ಮತ್ತು ರೈಲ್ವೆ ... ಮಾಡಿದ ಸಾಲ!! ಈಸ್ಟ್ ಇಂಡಿಯಾ ಕಂಪೆನಿಯ 1858ರಲ್ಲಿ ಸಾಕಾಗುವಾಗ ಇಂಡಿಯದ ಸಾಲವು ... ಕೋಟಿ ರೂಪಾಯಿ ಇತ್ತು. 1913—14ರಲ್ಲಿ ಅದು ... ಕೋಟಿ ಆಗಿದೆ. ಈ ಸಾಲವನ್ನು ಬಾರತೀಯರು ತೀರಿಸುವುದೆಂತು? ಲಾಲಾಜಿಯವರು ಹಿಂದೂ ದೇಶದ ಆರ್ಥಿಕ ಚರಿತ್ರೆ ಮತ್ತು ಪರ್ತಾಪ್ತಿ ಇಂಗ್ಲಾಂಡಿಗೆ ... ಇವುಗಳ ವಿಷಯವಾಗಿ ಆಧಾರಪೂರ್ವಕವಾಗಿ ಬರೆದಿರುವ ವಿಚಾರವು ಹೃದಯಭೇದಕವಾಗಿರುವುದು. ನಿಜ ... ಬುದ್ಧಿ ಕಣ್ಣುಗಳು ಕಣ್ತೆರಸಿ ಬೀಳುವುದು.

ಇಲ್ಲಿಯ ಒಬ್ಬರು ಹೊಲಸು ಒಸರೆಂದರೂ, ಕಾಮುಕರೆಂದೂ ಮೇಯೋಳು ಬರದುದಕ್ಕೆ ಉತ್ತರವಾಗಿ ಲಾಲಾಜಿಯವರು ಪಾಶ್ಚಾತ್ಯರ ದುರ್ವ್ಯಾಪಾರಗಳನ್ನು ಬಹು ದುಃಖದಿಂದ ವರ್ಣಿಸಿರುವರು. ಅಲ್ಲಿ ವಿಶ್ವವಿದ್ಯಾಶಾಲೆಗೆ ಹೋಗುವ ಹುಡುಗ ಹುಡುಗಿಯರಲ್ಲಿ ಶೇಕಡ 75 ಮಂದಿಯು ... ಸಾಮಾನ್ಯವಾಗಿ ಮಕ್ಕಳನ್ನು ಹೆತ್ತ ಮೇಲೆ ಮದುವೆಯಾಗುವವರೇ ಹೆಚ್ಚಾಗಿ ... ತಂಗಿಯು, ತಂದೆಯು ಮಗಳ ಸಹವಾಸ ... ಜಾಡ್ಯದಿಂದ ನರಳುವವರು ... 5—6 ವರ್ಷದ ... ಹುಡುಗಿಯ ಸಹವಾಸ ಮಾಡುತ್ತಾರಂತೆ ... ಇನ್ನು ನೀಗ್ರೋ ಜನರಿಗೆ ... ಹಿಂಸೆಯು ವಿಪರೀತ.

ಹಿಂದೂಮುಸಲ್ಮಾನರ ... ಮತ್ತು ಮೊಂಟಿಫರ್ಡ್ ... ಕಾರಣವು ಮೊದಲು ಆಂಗ್ಲರಿಗೆ ಮುಸಲ್ಮಾನರ ಮೇಲೆ ಎಗರಲಿತ್ತು. ಈಗ ಹಿಂದುಗಳು ಜಾಗ್ರತರಾಗಿ ಒಬ್ಬನ್ನು ... ಇವರ ಮೇಲೆ ಸಗ ... 1857ರ ದಂಗೆಗೆ ಮುಸಲ್ಮಾನರೇ ಕಾರಣರಾಗಿದ್ದರೆಂದೂ ... ಹಿಂದಿನಂತೆ ರಾಜ್ಯಭಾರವ ... ಲಂಡನ್ ಟೈಂಸ್ ... ಇಂಡಿಯವು ಸ್ವರಾಜ್ಯ ... ಮುಸಲ್ಮಾನರ ಸೊಲ್ಲೇ ಇರುವುದಿಲ್ಲವೆಂದು ಮೇಯೋಳೆಂದು ... ಹೇಳುವರು. ಆದಕಾರಣ ... ಹಿಂದೂಮುಸಲ್ಮಾನರೂ ಒಟ್ಟಿಗೆ ಕೊಲೆ ಮಾಡಲ್ಪಟ್ಟರು. ಹಿಂದುಗಳೂ, ಮುಸಲ್ಮಾನರೂ ನೂರಾರು ವರ್ಷಗಳಿಂದ ಸ್ನೇಹದಲ್ಲಿಯೇ ಇರುವರು.

ದೇವದಾಸ್ಯ, ಅಸ್ಪೃಶ್ಯ, ಜಾತಿಭೇದ, ಹಿಂದೂ ಮುಸಲ್ಮಾನರ ಜಗಳ ಇವುಗಳು ಹೋಗಬೇಕಾದರೆ ಸರಕಾರವು ದೇಶೀಯವಾಗಬೇಕು ಎಂದು ಲಾಲಾಜಿಯವರು ಹೇಳುವುದು ಯುಕ್ತವೇ ಸರಿ. ಹಿಂದೀಯರು ಅವಿದ್ಯಾವಂತರಾಗಿರುವಾಗ ಈ ಎಲ್ಲಾ ಸುಧಾರಣೆಗಳು ನಡೆಯಲಿಕ್ಕೆ ಸಮಯಬೇಕು. ಜನರನ್ನು ವಿದ್ಯಾವಂತರನ್ನಾಗಿ ಮಾಡುವುದು ಸರಕಾರದ ಕೆಲಸ. ಸರಕಾರವು ಮಾಡದೆ ಇರುವ ಕಾರ್ಯವನ್ನು ಇತರ ... ಸಂಸ್ಥೆಗಳು ಮಾಡುತ್ತಿವೆ. ದೇಶದ ದಾನಿಗಳು ... ಕ್ರೈಸ್ತರಾಗಲ್ಲ ... ಮೇಯೋಳು ಹೇಳುವ ಮಾತು ನಿಜವಲ್ಲ. ಡಾ ರಾಸ್ ಬಿಹಾರಿಘೋಷ್, ಡಾ ಸರ್ ... ಇವರೇ ಮೊದಲಾದ ದಾನಶೂರರು ಎಷ್ಟೋ ಲಕ್ಷ ... ದ್ರವ್ಯಸಹಾಯ ... ಕೊಟ್ಟಿಲ್ಲವೇ? ... ದ್ವಿತೀಯ ... ಹೆಚ್ಚಿನ ... ಕೈಗಾರಿಕೆ ... ಎಲ್ಲರೂ ಒಂದಾಗಿ ... ಈ ಕಾರಣದಿಂದ ... ಸುಬೇಧವು ... ದೇಶಸೇವೆಗೆ ನಿಂತಿರುತ್ತಾರೆ. ... ಸರಕಾರವು ... ಪ್ರಜಾಪ್ರಮುಖರಿಂದ ... ಲಾರ್ಡ್ ಕರ್ಜನ್ ಮುಂತಾದ ದೊರೆಗಳು ... ಹಿಂದೂ ದೇಶದಲ್ಲಿ ಭೂಗರ್ಭ ಸಂಪತ್ತು ... ಶಾಸ್ತ್ರೀಯ ... ವ್ಯವಸಾಯ ... ಹೊಸ ಜೊತೆಯ ... ವ್ಯವಸಾಯ ಸಂಬಂಧವಾದ ... ಕಮಿಷನ್ ... ಅದರ ವರದಿಯಲ್ಲಿ ಅನೇಕ ಒಳ್ಳೆ ಸಲಹೆಗಳಿವೆಯೆಂದು ತಿಳಿಯಬರುತ್ತದೆ. ವ್ಯವಸಾಯ ... ಗನ ವ್ಯವಸಾಯರು ಈ ವಿಷಯಕ್ಕೆ ಕುಂಬಾ ...

ರೆಂದು ಊಹಿಸಲಾಗಿದೆ. ಹಳೆ ನೊಟ್ಟ ನೇಗಿಲು ಹಿಡಿದು ಹಿಂದುಗಳು ವ್ಯವಸಾಯಮಾಡುವರೆಂದು, ಅವರಿಗೆ ಶಾಸ್ತ್ರೀಯ ರೀತಿಯು ನೇರದೆಂದು ಮೇಯೋಳು ಹೇಳುವ ಮಾತು ನಿಜವಲ್ಲ. ಜನರೊಳಗೆ ಶೇಕಡ 8ರಷ್ಟು ಮಾತ್ರ ವಿದ್ಯೆ ಪಡೆದಿರುವಾಗ ಅವರು ಹೊಸ ಮಾರ್ಗವನ್ನವಲಂಬಿಸುವದೆಂತು? ಅದರ ಮೇಲೆ ರೈತರಲ್ಲಿ ಬಹುಮಂದಿ ಜೀವ್ಯ ... ಸಹಕಾರ ಸಂಘಗಳಿಂದ ಇವರಿಗೆ ಸ್ಥಿತಿಯು ... ಬರುತ್ತಿದೆ. ರಾಸುಗಳಿಗೆ ಮೇವಿಲ್ಲವೆಂಬುದು ಮೇಯೋಳ ಇನ್ನೊಂದು ಆಕ್ಷೇಪ. ಇದು ಹೌದು. ಆದರೆ ಚರಾಯಿ ಜಾಗವೆಲ್ಲಾ ... ಬಗೆ ಆಯಿತು ... ರಾಸುಗಳು ವೃದ್ಧಿಯಾಗುವುದು ಹೇಗೆ? ... ಹಸುಗಳ ... ಕಡಿಯುವ ... ಸಿಗದಿರುವಾಗ ... ತಾಯಿಗೆ ತಿನ್ನಲಿಕ್ಕೆ ಒಳ್ಳೇ ಆಹಾರವೂ, ಮಗುವಿಗೆ ಕುಡಿಯಲಿಕ್ಕೆ ಒಳ್ಳೆ ಹಾಲೂ ಸಿಕ್ಕದಿರುವಾಗ ಭಾರತೀಯರಲ್ಲಿ ಶಿಶು ಮತ್ತು ಬಾಣಂತಿಯರ ಸಾವು ಹೆಚ್ಚಿರಲು ಮೇಹದ ... ಮೇಯೋಳು ಹೇಳುವ ಮಾತನ್ನು ... ನಮ್ಮಲ್ಲಿ ಪ್ರಸೂತಿ ಕೆಲಸವು ... ನಿಜ. ಆದರೆ ಇದಕ್ಕೂ ಗರೀಬತನವೂ ಅಜ್ಞಾನವೂ ಕಾರಣಗಳು. ... ಹಿಂದೆ ... ತಿಳಿಯುತ್ತದೆ.

ವೈಸಿಕ ವಿದ್ಯೆಯಲ್ಲಿ ಭಾರತೀಯರು ಹಿಂದುಳಿದಿರುವುದು ಸ್ವರಾಜ್ಯ ... ಇನ್ನೊಂದ ಕಾರಣ. ... ಸರಕಾರದವರು ... ಸೈಮನ್ ಕಮಿಟಿಯು ಭಾರತೀಯರಿಗೆ ಸೈನಿಕ ವಿದ್ಯೆಯನ್ನು ಕಲಿಸಬೇಕೆಂದು ಕೇಳಿದ ಸಣ್ಣ ಸಲಹೆಗಳು ಸಹ ... ಭಾರತಕ್ಕೆ ... ಮಿಲಿಟರಿ ... ಗೆ 55 ಕೋಟಿ ರೂಪಾಯಿ ಖರ್ಚಾಗಿ ... ಭಾರತೀಯರು ... ಇಂಡಿಯಾಕ್ಕೆ ... ಇಷ್ಟು ದೊಡ್ಡ ಖರ್ಚು ... ಅನಾವಶ್ಯ. ಹಿಂದಿಯರಿಗೆ ಶತ್ರುಗಳ್ಯಾರೂ ... ಇಂಡಿಯಾಕ್ಕೆ ... ಸ್ವರಾಜ್ಯ ... ಕಿದಾಗ ... ಈ ಮೇಲೆ ... ಇಂಗ್ಲಂಡಿಗೆ ಕೊಡುವ 10 ಕೋಟಿ ರೂಪಾಯಿಯೂ ನಮಗೆ ಉಳಿಯುವುದು. ದೇಶವು ಅಭಿವೃದ್ಧಿಯಾಗುವುದು.

ಸೈಮನ್ ಕಮಿಷನ್ ಬರುವ ಮುಂಚೆ ಮೇಯೋಳ ಪುಸ್ತಕ ಬಂತು. ಆ ಮೇಲೆ ... ಬಂತು. ಅದಕ್ಕೆ ಪ್ರತಿ ... ಆಯಿತು. ರಮ್ಸೇದವರು ಕಡಕರು ... ಮತ್ತು ... ಕರ್ಬೀಶಾಗಬೇಕು. ... ಕೊಡುತ್ತೇವೆ ಎಂದು ಇಂಗ್ಲೀಯರು ಹೇಳುವರು. ... ಸರಕಾರ ... ಕೆ ನಮಗೆ ಸಾಕು. ಡೊಮಿನಿಯನ್ ಸ್ಟೇಟಸ್ ... ಭಾರತೀಯರು ಬೇಡುವರು. ಆಂಗ್ಲೇಯರಿಗೆ ಇಂಡಿಯ ಒಳ್ಳೆ ಮಾರ್ಕೆಟು. ಇಟಾಲಿಯರಿಗೂ, ರಷ್ಯಾರಿಗೂ, ಅಮೇರಿಕನ್ನರಿಗೂ ಮಾರ್ಕೆಟು ಬೇಕು. ಈ ಸಂದರ್ಭದಲ್ಲಿ ಇಂಡಿಯಾಕ್ಕೆ ಸ್ವಾತಂತ್ರ ಕೊಡದೆ ... ಎಂದು ಲಾಲಾಜಿಯವರು ... ಹೇಳುವರು. ಆದರೆ ಜಾನ್‌ಸನ್ ಹಿಕ್ಸ್ ಇವರು "ಹಿಂದೂದೇಶವನ್ನು ಬಾಹು ಬಲದಿಂದ ಗೆದ್ದಿದ್ದೇವೆ. ನಮ್ಮ ಸರಕುಗಳಿಗಾಗಿ ಈ ದೇಶ ಬೇಕು. ಅದನ್ನು ಬಿಟ್ಟುಕೊಡಲಾರೆವು" ಎಂದು ಹೇಳುವರು. ಹೀಗಾದರೆ ಮಹಾತ್ಮರ ಸುದರ್ಶನ ಚಕ್ರವೇ ನಮ್ಮ ಬೆಂಬಲವಲ್ಲದೆ ಮತ್ತೇನು?

ಈ ಲೇಖನದಲ್ಲಿ ಲಾಲಜಿಯವರ ಪುಸ್ತಕದ ಮುಖ್ಯ ಸಾರಾಂಶ ಮಾತ್ರ ಬರೆದಿದೆ. ಇಂಗ್ಲಿಷು ತಿಳಿದ ಜನರು ಇದನ್ನೋದಬೇಕು. ಬೆಲೆ ರೂ. ... ಕಲ್ಕತ್ತದ ... ಪಬ್ಲಿಷಿಂಗ್ ಕಂಪೆನಿಯಲ್ಲಿ ದೊರೆಯುವುದು.

'ಭಾರತಿ'

ಮಾರಾಟಕ್ಕಿದೆ.

ಶಾಸ್ತ್ರೀಯ ರೀತಿಯಲ್ಲಿ ವ್ಯವಸಾಯ ಮಾಡಿ ಬೆಳೆದ 2 ವರ್ಷದ 6,000 ಕಿತ್ತಳೆ ಗಿಡಗಳು ಮಾರಾಟಕ್ಕೆ ತಯಾರಾಗಿವೆ. ಕ್ರಯ ನೂರಕ್ಕೆ 12/—ರೂಪಾಯಿಗಳಿಂದ 15/—ರೂಪಾಯಿಗಳವರೆಗೆ ಇದೆ. ಹೆಚ್ಚಿನ ವಿಷಯಕ್ಕೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳತಕ್ಕದ್ದು.

ಪಿ. ಯಂ. ಚಂಗಪ್ಪ,
ಕೋ ಆಪರೇಟಿವ್ ಇನ್ಸ್‌ಪೆಕ್ಟರು,
ದಕ್ಷಿಣ ಕೊಡಗು,
ವೀರರಾಜಪೇಟೆ.

ನೋಟೀಸು.

ಹಾಸನದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರ ಆಫೀಸಿನಿಂದ.

ಹಾಸನ ಡಿಸ್ಟ್ರಿಕ್ಟು ಅರ್ಕಲಗೋಡು ತಾಲೋಕು ರಾಮನಾಥಪುರ ಫ್ರೇಜರ್‌ಪೇಟೆ ರಸ್ತೆಯಲ್ಲಿ ಉಳ್ಳಿನ ಪಳ್ಳಿ ಬಳಿ ಮೈಸೂರು ಸರಕಾರದ ಜಿ ಒ ನಂಬರು ಯಲ್. 9073 74 ಯಲ್ ... —27—21ನೇ ನಂಬರು ಆರ್ಡರನ್ನನುಸರಿಸಿ ತಾ 20—7—28ನೇ ಶುಕ್ರವಾರದ ಆಗಾಗಾಯಿತು ಒಂದು ಡಿಪುಡು ಟೋಲುಗೇಟನ್ನು ಸ್ಥಾಪಿಸುತ್ತಾಗಿ 1928—29ನೇ ಸಾಲಿನಲ್ಲಿ ಈಟೋಲಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಅರ್ಕಲಗೋಡು ತಾಲೋಕು ಕಚೇರಿನಲ್ಲಿ ಸಂಕೆಯಲ್ಲಿ ತಾ 10—7—28ನೆ ಗುರುವಾರ ಮಧ್ಯಾಹ್ನ 12 ಗಂಟೆ ಆಗಾಗಾಯಿತು ಹರಾಜು ಮಾಡಿಸುತ್ತಾಗಿ ಹರಾಜನ್ನು ಕೂಗಲು ಇಷ್ಟವುಳ್ಳವರು ರೂ 100 —ಡಿಪಾಜಿಟ್ಟು ಸಮೇತ ಅಲ್ಲಿ ಹಾಜರಾಗಿ ಕೂಗಬಹುದಾಗಿ ಈ ಮೂಲಕ ತಿಳಿಸಿದೆ. ಬಾಕಿ ಷರತ್ತುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಲಾಗುತ್ತೆ.

ಯನ್ ಯಸ್ ಸಂಜುಂಡಯ್ಯ,
ಪ್ರೆಸಿಡೆಂಟರು,
ಡಿ ಬೋರ್ಡು
ಹಾಸನ

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರದ ಸಮನಾದ ಸೀಮೆಯ ಭಂಗಾರದಿಂದ ಕಟ್ಟಿಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಒಪ್ಪವು ಕಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜವಿಖಾನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0.
7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0.
ವಿಳಾಸ —ಕೆ. ನಾಧಮುನಿ ಅಂಡ್ ಸನ್ಸ್,
52—8 168 ಚೈನಾ ಬಜಾರ್, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಬೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದ ಬಿಡಾರು ಗಂಟೆಯನ್ನು ತೋರಿಸುವವು. ಇದು ಕೇಸು ಭಂಗಾರದ ಸಮನಾಗಿರುವದು. ಇವಕ್ಕೆ ಖಾತ್ರಿಯಾಗಿ 5 ವರ್ಷ ಗ್ಯಾರಂಟಿ ಕೊಡುವವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ಕರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ 6—8—0.



ಕೈಯ ಕಡಿಯಾರ 1ಕ್ಕೆ ರೂ 3—8—0
ವಿಳಾಸ —ಲೀಗಲ್ ವಾಚ್ ಕಂಪೆನಿ,
ಪೋ. ಬಾಕ್ಸ್ ನಂ. 243, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ಕೀಲಡ್ಡಿಗೆ ಪದಕ.

ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್‌ನಿಂದ ತಯಾರಿಸಿ ಸೂವರ್ಣ ಭಂಗಾರದ ಗಿಲೀಟು ಕೊಟ್ಟಿದೆ. ಒಣ್ಣ ಕೆಡದು. ಇದರ ಪದಕವು ಕೆಂಪು, ಬಿಳಿ ಮತ್ತು ಹಸರು ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿ ನೋಡಲು ಅಕ್ಷ್ಮಣವಾಗಿರುವಂತೆ ಮುತ್ತುಗಳನ್ನು ಸಹ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಅಗತ್ಯಕರವಾದದ್ದು.



ಕ್ರಯ 1ಕ್ಕೆ ರೂ 3—8—0.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರ ಮಾಡಿಸಿಕೊಳ್ಳುವದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು ಬಿಡುವದು.

3 ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0.
ವಿಳಾಸ —ಕೆ ನಾಧಮುನಿ ಅಂಡ್ ಸನ್ಸ್,
52—8 168 ಚೈನಾ ಬಜಾರ್, ಮದರಾಸು.

ವರ್ತಮಾನ ಸಂಗ್ರಹ.

ಒಳದೇಶ

ಕಳೆದ ಸೋಮವಾರದಿಂದ ಮಳೆಯು ಜಾಸ್ತಿಯಾಗಿ ಹೊಡೆಯಲಾರಂಭಿಸಿತು. ಆದರೆ ನಿನ್ನೆ ದಿನದಿಂದ ಸ್ವಲ್ಪ ಕಡಿಮೆಯಾದಂತೆ ಕಾಣುತ್ತದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಮತ್ತು ಮೋಡಲ್ ಸ್ಕೂಲುಗಳಿಗೆ ನಾಳೆಯಿಂದ ಈ ತಾ. 30ರ ವರೆಗೆ ಮಳೆಗಾಲದ ರಜೆಯು ಬಿಡಲಾಗಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹೆಡ್ಮಾಸ್ಟರಾಗಿರುವ ಮೆ. ಪಿ ಮಂಗೇಶರಾಯರು ಉದ್ಯೋಗದಿಂದ ರಿಟಯರ್ ಆಗುವ ಮೊದಲು ಮೆಡಿಕಲ್ ಸರ್ಟಿಫಿಕೇಟ್ ಮೇರೆ ಆಗೋಸ್ಟು ತಾ. 1ರಿಂದ ಆರು ತಿಂಗಳು ರಜೆಯಲ್ಲಿ ಹೋಗುತ್ತಾರೆಂದು ತಿಳಿಯಬರುತ್ತದೆ.

ಬೆಂಗಳೂರಿನಲ್ಲಿರುವ ಇಲೆಕ್ಟ್ರಿಕ್ ಇಂಜನೀಯರಿಂಗ್ ಶಾಲೆಯಲ್ಲಿ ಓದುತ್ತಿದ್ದ ಮೆ. ಯಂ. ಸಿ. ಚಿಣ್ಣಪ್ಪನವರು ಜುಯರ್ ಗ್ರೇಡಿನಲ್ಲಿ ಪರೀಕ್ಷೆಗೆ ಹೋದವರ ಪೈಕಿ ಒಂದನೇಯವರಾಗಿ ತೇರ್ಗಡೆಹೊಂದಿರುವರೆಂದು ಕೇಳಿ ಸಂತೋಷಪಡುತ್ತೇವೆ.

ಬ್ರೀಚ್ ಆಫ್ ಕಂಟ್ರಾಕ್ಟು ಕರಾರುಗಳನ್ನು ಎಟೆಸ್ಟ ಮಾಡುವ ಅಧಿಕಾರವು ಸಿದ್ದಾಪುರ ಗಟ್ಟದಳ್ಳ ತೋಟದ ಮೆ. ಜೆ. ಬಿ. ಗಿಲ್ಲನ್‌ರವರಿಗೂ, ಪೊಳ್ಳಿಬೆಟ್ಟ ಬೀಚ್ ಲ್ಯಾಂಡ್ ತೋಟದ ಮೆ. ಜೆ. ಹೆಚ್. ಜೆಫ್ರಿಯವರಿಗೂ ಕೊಡಲಾಗಿದೆ. ಮೆ. ವಿ. ಪೆಟ್ಟಿಂಗಿಲ್ಲ್‌ರವರಿಗೆ ಕೊಡಲಾಗಿದ್ದ ಈ ಅಧಿಕಾರವು ವಜಾ ಮಾಡಲಾಗಿದೆ.

ಕಳೆದ ಡಿಸೆಂಬರಿನಲ್ಲಿ ಮದ್ರಾಸಿನಲ್ಲಿ ನಡೆದ ಅಖಿಲ ಭಾರತ ಸಂಗೀತ ಕಾನ್‌ಫರೆನ್ಸಿನಲ್ಲಿ ಭಂಗಾರದ ಪದಕವನ್ನು ಪಡೆದಿರುವ ಆನಂದೋರಿನ ಪ್ರೊಫೆಸರ್ ಟಿ. ಆರ್. ಸಿಂಹ್‌ರವರು ಈಗ ಮಡಿಕೇರಿಯಲ್ಲಿರುವರು ಅವರು ನಾಳೆಯ ಸಾಯಂಕಾಲ 6 ಗಂಟೆಗೆ ಜವಹರ್ಲಾಲರ ಸ್ಮರಣ ಹಾಲ್‌ನಲ್ಲಿ ಸಂಗೀತ ಕಛೇರಿಯನ್ನು ನಡೆಸಲಿಕ್ಕಿರುವರು.

ಹಿಂದೂದೇಶ.

ಪೋಲೀಸಿನವರು ಕಲ್ಕತ್ತೆಗೆ ಸಿಕಂದರಾಬಾದಿನಿಂದ ಬಂದ ಬರಾಣಿ ಚೀಲಗಳನ್ನು ಪರೀಕ್ಷೆ ಮಾಡಿದಲ್ಲಿ ಸುಮಾರು 40,000 ರೂಪಾಯಿ ಬೆಲೆ ಬಾಳುವ ಅಫೀಮನ್ನು ಕೈವಶ ಮಾಡಿಕೊಂಡರೆಂದು ತಿಳಿದು ಬರುತ್ತದೆ.

ಈಗೀಗ ಇತರ ಮತಸ್ಥರು ಹಿಂದೂ ಮತವನ್ನು ಅವಲಂಭಿಸುವುದು ಸಾಧಾರಣವಾಗಿ ಕೇಳಬರುತ್ತದೆ. ಕೆಲವು ಸಮಯದ ಹಿಂದೆ ಫರೀದ್ ಪುರದಲ್ಲಿ 7 ಮಂದಿ ಕ್ರೈಸ್ತರೂ, ಒಬ್ಬ ಮುಸಲ್ಮಾನನೂ ಹಿಂದೂಗಳಾಗಿರುವರು.

ಇದೇ ತಿಂಗಳ 7 ನೇ ತಾರೀಖಿನಲ್ಲಿ ಕಲ್ಕತ್ತಾ, ಬೊಂಬಾಯಿ, ಹೈದರಾಬಾದು ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಅಖಿಲ ರಾಷ್ಟ್ರೀಯ ಸಹಕಾರಿಗಳ ದಿನವು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತೆಂದು ತಿಳಿಯುತ್ತೆ.

ಪಾಟ್ನಾ ಹೈ ಕೋರ್ಟಿನ ಮುಖ್ಯ ಜಡ್ಜರಾಗಿರುವ ಮೆಟ್ರಿಲ್ ಎಂಬವರು ಸರ್ಪ ಕಡಿತವನ್ನು ಚಿಕಿತ್ಸೆ ಮಾಡುವುದರಲ್ಲಿ ಅತಿ ಪ್ರವೀಣರಂತೆ. ಅವರು ಕೆಲವು ದಿವಸಗಳ ಹಿಂದೆ ಸರ್ಪದಿಂದ ಕಡಿಯಲ್ಪಟ್ಟ ಒಬ್ಬ ಕೂಲಿಯವನನ್ನು ತಾವೇ ಉಪಚರಿಸಿ ಗುಣಪಡಿಸಿದರೆಂದು ತಿಳಿಯುತ್ತೆ.

ಕೊಲಂಬೋ ಪಟ್ಟಣದಲ್ಲಿ ಪ್ರವಾಹದಿಂದ ಆನೇಕ ಮನೆಮಾರುಗಳೆಲ್ಲವೂ ಮುಚ್ಚಿ ಹೋಗಿ ಜನರಿಗೆ ಬಹಳ ನಷ್ಟವಾಗಿದೆ. ಸಿಗಾಂಪೋ ಎಂಬಲ್ಲಿ 5 ಜನರು ಮರಣ ಹೊಂದಿರುತ್ತಾರೆಂದೂ, ಪುತ್ತಳಂ ಎಂಬಲ್ಲಿ 4 ಲಕ್ಷ ರೂಪಾಯಿ ಬೆಲೆ ಬಾಳುವ ಉಪ್ಪು ಕೊಚ್ಚಿ ಹೋಗಿದೆಯೆಂದೂ ತಿಳಿಯುತ್ತೆ.

ಇಂಡಿಯಾದ ಸ್ವರಾಜ್ಯದ ಠರಾವನ್ನು ಕಾಮನ್ ವೆಲ್ತ್ ಲೇಬರ್ ಕಾನ್‌ಫರೆನ್ಸಿನಲ್ಲಿ ಚರ್ಚಿಸಲು ಬಿಡದ ಕಾರಣ ಇಂಡಿಯಾದ ಪ್ರತಿನಿಧಿಗಳಾದ ದಿವಾನ್ ಚಮ್ಮನ್‌ಲಾಲ್ ವಗೈರೆಯವರು ಆ ಸಭೆಯಿಂದ ಎದ್ದು ಬಂದು ಬಿಟ್ಟದ್ದಕ್ಕಾಗಿ ಪಂಡಿತ ಮೋತಿಲಾಲ್ ನೆಹರುರವರು ಅವರಿಗೆ ಅಭಿನಂದನೆಗಳನ್ನು ಕಳುಹಿಸಿರುವರು.

ಪಂಜಾಬಿನಲ್ಲೆಲ್ಲಿಯೂ ಇದೇ ತಿಂಗಳ 10 ನೇ ತಾರೀಖಿನಲ್ಲಿ ನಾಭಾ ಮಹಾರಾಜರ ಸ್ಮರಣೀಯವಾಗಿ ಆ ದಿವಸವನ್ನು ಆಚರಿಸಿದರು. ಆ ದಿವಸ ಎಲ್ಲಾ ಸ್ಥಳಗಳಲ್ಲಿಯೂ ಸಿಕ್ ಮತ್ತು ಅಕಾಳಿಗಳು ಸಭೆ ಸೇರಿ, ನಾಭಾ ಮಹಾರಾಜರನ್ನು ಪುನಃ ರಾಜಾಸ್ಥಾನಕ್ಕೇರಿಸಬೇಕೆಂಬ ಠರಾವನ್ನು ಸರ್ಕಾರಕ್ಕೆ ಕಳುಹಿಸಿದರೆಂದು ತಿಳಿದು ಬರುತ್ತೆ.

ಮೌಲಾನ ಮಹಮ್ಮದಾಲಿಯವರು ಬಹು ಸೂಕ್ಷ್ಮ ರೋಗ ಪೀಡಿತರಾಗಿ ಚಿಕಿತ್ಸೆಗೋಸ್ಕರ ಇಂಗ್ಲೆಂಡಿಗೆ ಕೆಲವು ದಿವಸಗಳ ಹಿಂದೆ ತೆರಳಿರುವರು. ಅಲ್ಲಿನ ಅಧಿಕಾರಿಗಳು ಮಾತ್ರ ಇವರ ರೋಗವು ರಾಜಕೀಯ ಸಂಬಂಧಪಟ್ಟದ್ದೆಂದು ಭಾವಿಸಿ, ಅವರ ಹಡಗು ಬಂದರಿಗೆ ತಲಪುತ್ತಲೇ ಅವರ ಸಮಸ್ತ ಸಾಮಾನುಗಳನ್ನೂ ಹುಡುಕಿದರಂತೆ!

ಕಲ್ಕತ್ತಾ ಕಾಂಗ್ರೆಸ್ಸಿನ ಅಧ್ಯಕ್ಷರನ್ನು ಚುನಾಯಿಸಲು ಅಲ್ಲಿಯ ಸ್ವಾಗತ ಕಮಿಟಿಯವರು ಈ ತಾ. 14ರಲ್ಲಿ ಸೇರಲಿಕ್ಕಿರುವರು. ತಮಿಳುನಾಡು ಕಾಂಗ್ರೆಸ್ ಕಮಿಟಿಯವರು ಪಂಡಿತ ಮೋತಿಲಾಲ್ ನೆಹರುರವರ ಹೆಸರನ್ನು ಸಿಫಾರಸ್ಸು ಮಾಡಿರುವರು. ಹೆಚ್ಚಿನ ಕಾಂಗ್ರೆಸ್ ಕಮಿಟಿಗಳು ಇವರ ಹೆಸರನ್ನೇ ಸೂಚಿಸಿರುವರೆಂದು ತೋರುತ್ತದೆ.

ವಿದೇಶ.

ಉತ್ತರ ಧ್ರುವದ ಕಡೆ ಹೋಗಿ ಪತ್ತೆ ಇಲ್ಲದಾಗಿದ್ದ "ಇಟಲಿಯಾ" ವಿಮಾನವನ್ನು ಹುಡುಕಲು ಹೋದ ಕ್ಯಾಪ್ಟನ್ ಅಮುಂಡ್ ಸೇನ ಎಂಬವನ ಸಮಾಚಾರವೂ ತಿಳಿದಿರುವುದಿಲ್ಲ.

ಮೆಕ್ಸಿಕೋ ಎಂಬಲ್ಲಿ ಗುಪ್ತ ಪೋಲೀಸಿನವರು 50 ರೋಮನ್ ಕ್ಯಾಥೋಲಿಕ್ ಜನರನ್ನು ಅವರ ಗುರುಪದ್ಧತಿ ಮತಾಚಾರಣೆಯು ಕಾನೂನಿಗೆ ವಿರುದ್ಧವಾಗಿ ನಡೆದುದಕ್ಕೋಸ್ಕರ ದಸ್ತಗಿರಿ ಮಾಡಿರುವರು.

ಇಂಡಿಯಾ ಸರ್ಕಾರದವರಿಂದ ಕಾರಣಾಂತರಗಳಿಂದ ಶಿಕ್ಷಿಸಲ್ಪಟ್ಟು ಅಮೇರಿಕದಲ್ಲಿ ಬಹಳ ವರ್ಷಗಳಿಂದ ಇದ್ದು, ವ್ಯವಸಾಯ ಶಿಕ್ಷಣ ಶಾಲೇಜಿನಲ್ಲಿ ಪ್ರೊಫೆಸರಾಗಿರುವ ಮೆ. ಖಾನ್‌ಕೋಜೆ ಎಂಬವರನ್ನು, ಈಗ ಅಲ್ಲಿಯ ವ್ಯವಸಾಯ ಖಾತೆಯ ಮಂತ್ರಿಯರನ್ನಾಗಿ ನೇಮಿಸಿದ್ದಾರೆ

ಈ ತಾ. 6ರಲ್ಲಿ ಲಂಡನಿನಲಿ ಮೆ. ಚಮ್ಮನ್‌ಲಾಲ್‌ರವರ ಅಧ್ಯಕ್ಷತೆಯಲ್ಲಿ ಹಿಂದೀಯರ ಒಂದು ಮೀಟಿಂಗು ನಡೆದು ಬ್ರಿಟನ್ನಿನಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಒಂದು ಶಾಖೆಯನ್ನು ಸ್ಥಾಪಿಸುವಂತೆ ತೀರ್ಮಾನಿಸಲಾಯಿತು. ಕೂಡಲೆ ಅದಕ್ಕೆ ಸುಮಾರು 50 ಮೆಂಬರುಗಳು ಸೇರಿದರು. ಬಾರ್ಡೋಲಿ ಸತ್ಯಾಗ್ರಹ ಫಂಡಿಗೂ ಹಣ ಸಂಗ್ರಹಿಸಲಾಯಿತು.

ಧ್ಯೆಸಾದೇಶದಲ್ಲಿ 20 ವರ್ಷ ವಯಸ್ಸಿನ ಒಳಗಿನವರು ಯಾರೇ ಆಗಲಿ ಧೂಮಸೇವನೆಯನ್ನಾಗಲಿ, ಮದ್ಯಪಾನವನ್ನಾಗಲಿ ಮಾಡಬಾರದೆಂಬ ನಿಯಮಿತಿಯು ನಿರ್ಬಂಧವಾಗಿದೆ 13 ವರ್ಷ ಮೀರಿರುವ ಇಂತಹ ತಪ್ಪಿತಸ್ಥರಿಗೆ 5 ಡಾಲರು ಜುಲ್ಮಾನೆ ಮಾಡಲ್ಪಡುವುದು, ಅಲ್ಲದೆ ಇಂತಹವರ ತಂದೆ ತಾಯಿಗಳಿಗೂ, ಇಂತಹವರಿಗೆ ಈ ಪದಾರ್ಥಗಳನ್ನು ಮಾರುವವರಿಗೂ ಕಠಿಣ ಶಿಕ್ಷೆಯು ವಿಧಿಸಲ್ಪಡುತ್ತದೆಂದೂ ತಿಳಿಯುತ್ತೆ. ಸ್ವಾತಂತ್ರ್ಯವೊಂದಿದ್ದರೆ, ಬದಲಾವಣೆಗಳನ್ನು ಅಪೇಕ್ಷಿಸಿದಂತೆ ಮಾಡಬಹುದಲ್ಲವೆ!

ಮಾರಾಟಕ್ಕಿದೆ.

ಲೇಟ್ ಸಾಹುಕಾರ್ ಬಿ ಚೆನ್ನಬಸಪ್ಪಶೆಟ್ಟರ ಮಕ್ಕಳ ಬಾಬ್ತು ಮಡಿಕೇರಿಯಲ್ಲಿರುವ ಒಂದು ದೊಡ್ಡ ಬಂಗ್ಲೆ, ಗ್ಯಾರೇಜ್, ಆಳುಗಳ ಮನೆ, ಕುದುರೆ ಲಾಯ, ದನದ ಕೊಟ್ಟಿಗೆ, ಪತ್ತಾಯ ಮತ್ತು ಸೊಗಸಾದ ಕಾಂಪೌಂಡ್ ಮಾರಾಟಕ್ಕಿದೆ. ವಿಷಯ ತಿಳಿಯಪೇಕ್ಷಿಸುವವರು ಮೆ ಸಿ. ಯನ್. ವೆಂಕಪ್ಪಯ್ಯ ಬಿ ಎ ಬಿ. ಎಲ್., ವಕೀಲ್, ಮಡಿಕೇರಿ ಇವರಿಗೆ ಬರೆದುಕೊಳ್ಳಬೇಕು.

Notice.

In pursuance of G O No L 9073—7x/L. B 35—27 21 Dated 25th June 1928 a District Fund toll gate will be newly opened at Ullenhalli on the Periyapet Ramanathpur from 20—7—28 and a sale of the right of collecting tolls at the said toll gate during 1928—29 will be held in the shandy grounds at Konanur in the Arkalgud Taluk on Thursday the 19th July 1928 commencing from 12 noon. Details of the sale notification will be published in the Mysore Gazette shortly,

Intending bidders are requested to be present at the time and place mentioned above together with a deposit of Rs. 100

T. B. Mahadevappa,
For President,
District Board,
Hassan.

ಪರಾರಿಯಾಗಿದೆ.

ಒಂದು ಕರಿಯುವ ಸಾಧಾರಣ ನಾಯಿ ಇಂಚು ಉದ್ದ ಮುಂಗೋಟಿನ ಬಿಳೀ ವರ್ಣದ ಹಣೆಯೂ ಮತ್ತು ಕಪ್ಪು ಕೆಂಪು ಮಿಶ್ರಯಿರುವ ಆದರ ಹೆಣ್ಣು ಕರವೂ ಪರಾರಿಯಾಗಿದೆ. ಯಾರಾದರೂ ಪತ್ತೆ ಮಾಡಿ ತಿಳಿಸಿದರೆ ಐದು ರೂಪಾಯಿ ಬಹುಮಾನ ಕೊಡಲ್ಪಡುತ್ತೆ.

ವಿಳಾಸ,
ಎ. ಯನ್. ಮುತ್ತಪ್ಪ,
c/o. ಕುಂಜಾನ್ ಕುಟ್ಟಿ,
ಶಾಪ್ ಕೀಪರ್,
ವೀರರಾಜಪೇಟೆ.

ನೋಟೀಸು.

ಶಾಂತಳ್ಳಿ ಗ್ರಾಮದ ವಕ್ಕಲಿಗರ ಕೆ. ರಾಮೈಯ್ಯನು ಈ ಮೂಲಕ ಪ್ರಕಟಿಸುವುದೇನಂದರೆ—ಶಾಂತಳ್ಳಿ ಗ್ರಾಮದ ವಕ್ಕಲಿಗರ ಪಿವೃತಿ ತಮ್ಮಣ್ಣನ ತಂಗಿ ಕಾಳಮ್ಮನು ಪೂರಾಟಕ್ಕೆ 5 ಯೇಕರೆ ಅಂದರೆ 100 ಬಟ್ಟಿ ಭೂಮಿ 3 ಯೇಕರೆ ಬಾಣೆ, ಹಿತ್ಲು, ಮನೆ (ಹಂಚು, ಹುಲ್ಲು ಹಾಕಿದ್ದು) ಇದೆಯಾಗಿ ಪ್ರಕಟಣೆಮಾಡಿರುವ ಸೊತ್ತುಗಳು ಮತ್ತು ಬೇರೆ ಸೊತ್ತುಗಳು ಸಹ ನನಗೆ 1931ನೆ ಇಸವಿ ಮಾರ್ಚ ವರೆಗೆ ಪಸಲು ಭೋಗ್ಯಕ್ಕೆ 2000/ರೂಪಾಯಿಗೆ ನದರುಪವಳ ಅಣ್ಣ ಪಿವೃತಿ ತಮ್ಮಣ್ಣನು ಕೊಟ್ಟಿರುವುದಾಗಿಯೂ, ವಾಯಿದೆ ತೀರಿದ ವರ್ಷ ಅಸಲು ಮೊಬಲಗು ವಾಪಸು ಮಾಡದೆ ತಪ್ಪಿದ್ದಾದರೆ ಮುಂದಕ್ಕೆ ಅಸಲು ಮೊಬಲಗು ವಾಪಸಿಯಾಗುವ ವರೆಗೆ ಸದರಿ ಮೇರೆ ನಡಕೊಂಡು ಬರಬೇಕಾಗಿ ವಗೈರೆ ಬರೆಸಿ ಭೋಗ್ಯ ಕರಾರು ಬರಕೊಟ್ಟಿರುವುದರಿಂದ ಈ ತಾರೀಖಿಗೆ ವಿರೋಧವಾಗಿ ಯಾರೂ ಮೇಲ್ಕಂಡ ಸೊತ್ತುಗಳ ಮೇಲೆ ಕ್ರಯ ಗ್ಯೆರೆ ಯಾವ ತರದ ಪಾಲುದಗೂ ಮಾಡಿಸಿಕೊಳ್ಳಬಾರದಾಗಿಯೂ, ಹೀಗೆ ಮಾಡಿಸಿಕೊಂಡವರಾದರೆ ನನಗೆ ಇದರಿಂದುಂಟಾಗುವ ಎಲ್ಲಾ ನಷ್ಟಕ್ಕೆ ಸದರಿಯವರು ಗುಂಪುಗತಕ್ಕದ್ದು. ಅಲ್ಲದೆ ಹಾಗೆ ಮಾಡಿಸಿಕೊಂಡ ಪತ್ರಗಳು ನನ್ನ ಭೋಗ್ಯ ಕರಾರಿನ ಶರತ್ತು ತೀರುವ ವರೆಗೆ ಅಸಿಂಧುವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ವಕ್ಕಲಿಗರ ಕೆ. ರಾಮೈಯ್ಯ,
ಶಾಂತಳ್ಳಿ ಗ್ರಾಮ,
ಮೂನರ್ಾಡು.

For Sale

6000 Orange Plants two year old, cultivated on scientific agricultural principles Prices range between 12 to 15 rupees per hundred. For further particulars apply to the undersigned.

P M Chengappa.
Inspector of Co-operative Societies,
South Coorg Virajpet.

ಬೆಸ್ಟ ಲೀವರ್ ಪಾಕೆಟ್ ವಾಚ್.

ಈ ಗಡಿಯಾರಗಳು ಹೊಸದಾಗಿ ತಯಾರಾದವು (ಸ್ವಿಸ್ ಮೇಡ್) ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ

ಇದೆ. ಬಹು ಬಲಿಷ್ಟವಾದ ಲೀವರ್ ಮೂವ್‌ಮೆಂಟ್ಸುಗಳಿರುವ, ... ನಿಕ್ಕಲ ... ಇದನ್ನು ... ಸರಿಯಾದ ಸಮಯಗಳನ್ನು ನಡೆಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಗಳಲ್ಲಿ ಸಿಕ್ಕಲಾರದು.. ಈ ಗಡಿಯಾರವನ್ನು ತರಿಸಿಕೊಳ್ಳುವವರಿಗೆ ಇದರ ಜೊತೆಯಲ್ಲಿ ಕಾಣಿಸಿರುವ ಇಂಗ್ಲಿಷ್ ಮೇಡ್ ಫೌಂಟನ್ ಪೇನಾವನ್ನು ಇನಾಮಾಗಿ ಕೊಡುವೆವು. 3 ವರುಷ ಗ್ಯಾರಂಟಿ ಇದೆ

ಕ್ರಯ ಗಡಿಯಾರ 1ಕ್ಕೆ ರೂ. 3—8—0.
ವಿಳಾಸ.—ಲೀವರ್ ವಾಚ್ ಕಂಪೆನಿ,
52—8 ಪೊ. ಬಾಕ್ಸ ನಂ 243, ಮದರಾಸು

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗ.

ರಾ. ಬಾ. ಕೆ. ಅಪ್ಪೈಯ್ಯನವರ ಅಧ್ಯಕ್ಷತೆಯಲ್ಲಿ 1928 ನೇ ಇಸವಿ ಜುಲೈ ತಿಂಗಳು 1ನೇ ತಾರೀಖಿನಲ್ಲಿ ನಡೆದ ಕೊಡಗು ವಿದ್ಯಾಭಿವೃದ್ಧಿ ಸಂಘದ ವಿಶೇಷ ಜನರಲ್ ಮೀಟಿಂಗಿನ ವಿವರ:—

ವಿಷಯಗಳು:—1. ಕೆಲವು ನಿಬಂಧನೆಗಳ ತಿದ್ದುಪಡಿಗಳು. 2. ಆಡಿಟರುಗಳನ್ನು ನೇಮಿಸುವಿಕೆ.

ಸಾಕಷ್ಟು ಚರ್ಚೆ ನಡೆದನಂತರ ಈ ಕೆಳಗಿನ ತಿದ್ದುಪಡಿಗಳು ಮಾಡಲಾದವು.

4ನೇ ರೂಲಿಗೆ ಈ ಕೆಳಗಿನವುಗಳನ್ನು ಬಿ. ಮತ್ತು ಡಿ. ಕಲಮ್‌ಗಳಾಗಿ ಸೇರಿಸುವದು.

(ಬಿ) ಸೆಂಟ್ರಲ್ ಕಮಿಟಿಯು ಚುನಾಯಿತ ಮೆಂಬರುಗಳ ಜೊತೆಗೆ ವರ್ಷಕ್ಕೆ 30 ರೂ. ಯೂ ಹೆಚ್ಚು ಚಂದಾ ಕೊಡುವ ಮೆಂಬರುಗಳೆಲ್ಲರೂ (ಅಂಥವರು ಜನರಲ್ ಮೀಟಿಂಗಿನಲ್ಲಿ ಚುನಾಯಿಸಲ್ಪಡಲಿ ಯಾ ಚುನಾಯಿಸಲ್ಪಡದಿರಲಿ) ಸೆಂಟ್ರಲ್ ಕಮಿಟಿಯ ಮೆಂಬರುಗಳಾಗತಕ್ಕದ್ದು. ಮೇಲೆ ಸೂಚಿಸಿದಷ್ಟು ಚಂದಾವನ್ನು ಕೊಡುವ ಯಾವ ಕುಟುಂಬ ಅಥವಾ ಸಂಘಕ್ಕೆ ಆಗಲಿ ಸೆಂಟ್ರಲ್ ಕಮಿಟಿಯ ಮೀಟಿಂಗಿನಲ್ಲಿ ಭಾಗಿಗಳಾಗಲು ಅಂಥಾ ಕುಟುಂಬ ಯಾ ಸಂಘದಿಂದ ಒಬ್ಬ ಪ್ರತಿನಿಧಿಯನ್ನು ಕಳುಹಿಸುವ ಸ್ವತಂತ್ರವಿದೆ

(ಡಿ) ಫಂಡಿನ ಸಾಧಾರಣ ಮೆಂಬರಾಗಲು ವರ್ಷಕ್ಕೆ ಕಮ್ಮಿ ಪಕ್ಷ ಒಂದು ರೂಪಾಯಿ ಚಂದಾವನ್ನಾದರೂ ಕೊಡತಕ್ಕದ್ದು.

5 (ಎ) ರೂಲಿನ ಒದಲಿಗೆ ಕೆಳಗಿನದನ್ನು ಸೇರಿಸುವದು.

ಯಾವ ವರ್ಷದಲ್ಲೇ ಆಗಲಿ ವಾರ್ಷಿಕ ಚಂದಾಕೊಡದ ಮೆಂಬರನು ತನ್ನ ಮೆಂಬರುತನವನ್ನು ಕಳಕೊಳ್ಳುವನು. ವಾರ್ಷಿಕ ಜನರಲ್ ಮೀಟಿಂಗಿನ ಮುಂಚೆ ಆ ವರ್ಷದ ಚಂದಾಹಣವನ್ನು ಪಾವತಿಮಾಡದವರು ಆ ಮೀಟಿಂಗಿನಲ್ಲಿ ಭಾಗಿಗಳಾಗಕೂಡದು.

6 ನೇ ರೂಲಿನ (ಸಿ) ಕಲಮಿಗೆ ಕೆಳಗಿನದನ್ನು ಸೇರಿಸುವದು.

ಕೋರಂ ಇಲ್ಲದೆ ಮುಂದರಿಸಲ್ಪಟ್ಟ ಮೀಟಿಂಗಿನಲ್ಲಿ ಕೋರಮಿನ ಆವಶ್ಯವಿಲ್ಲ. ವಾರ್ಷಿಕ ಜನರಲ್ ಮೀಟಿಂಗಿನ ಸ್ಥಳವನ್ನು ಸೆಂಟ್ರಲ್ ಕಮಿಟಿಯವರು ನಿಶ್ಚೈಸತಕ್ಕದ್ದು.

(ಡಿ) 2 ನೇ ಪಂಕ್ತಿಯಲ್ಲಿ 'ಚಂದಾದಾರರು ಎಂಬದರ ಒದಲು ಸಾಧಾರಣ ಮೆಂಬರುಗಳು' ಎಂದು ತಿದ್ದಬೇಕು.

7 ನೇ ರೂಲಿಗೆ ಕೆಳಗಿನದನ್ನು (ಐ) ಕಲಂ ಆಗಿ ಸೇರಿಸುವದು

(ಐ) ಅವಸ ಪಸ್ತ 10 ರೂಪಾಯಿಯ ಖಾಯಂ ಅಡ್ವಾನ್ಸು ಇರತಕ್ಕದ್ದು. ಅದರ ಲೆಕ್ಕವನ್ನು ಪ್ರತಿವರ್ಷವೂ ಅವರು ಕೊಡತಕ್ಕದ್ದು.

1926—27 ಮತ್ತು 1927—28 ನೇ ವರ್ಷಗಳ ಲೆಕ್ಕವನ್ನು ಪರಿಶೋಧಿಸಿ ನೋಡಲು ಮೆ. ಮುಕ್ಕಾಟ್ಟೀರ ಮೇದೈಯ್ಯನವರು ಮತ್ತು ಮೆ ನೆರವಂಡ ಸಂಜಪ್ಪನವರು ಆಡಿಟರುಗಳಾಗಿ ನೇಮಿಸಲ್ಪಟ್ಟರು.

(Sd) ಕೆ. ಅಪ್ಪೈಯ್ಯ,
(ಅಧ್ಯಕ್ಷರು.)

ಕೊಡಗು ವಿದ್ಯಾಭಿವೃದ್ಧಿ ಸಂಘದ ಕಮಿಟಿ.

ಕೊಡಗು ವಿದ್ಯಾಭಿವೃದ್ಧಿ ಸಂಘದ ಒಂದು ಸೆಂಟ್ರಲ್ ಕಮಿಟಿ ಮೀಟಿಂಗು ತಾರೀಕು 3—7—28ರಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಮಹಡಿಯಲ್ಲಿ ಪ್ರೆಸಿಡೆಂಟರವರ ಅಧ್ಯಕ್ಷತೆಯಲ್ಲಿ ಜರಗಿತು.

ಹಾಜರಿದ್ದವರು.

ರಾ|| ಬಾ|| ಕೆ. ಅಪ್ಪೈಯ್ಯನವರು, ರಾ|| ಸಾ|| ಪಿ. ದೇವೈಯ್ಯನವರು, ಮೆ; ಗೌಡ ಎ. ಬಿ. ಕಾರ್ಯಪ್ಪನವರು, ಯನ್. ಐ. ಕಾಳಪ್ಪನವರು, ಪಿ. ಬಿ. ಮೇದಪ್ಪನವರು, ಸಿ. ಯಂ. ಕುಶಾಲಪ್ಪನವರು, ಪಿ. ಸಿ. ಉತ್ತಯ್ಯನವರು, ಬಿ. ಯಸ್. ಕುಶಾಲಪ್ಪನವರು, ಕೆ. ಸಿ. ದೇವೈಯ್ಯನವರು, ಬಿ. ಐ. ಕುಟ್ಟಪ್ಪನವರು, ಕೆ. ಚೆಕ್ಕಪ್ಪನವರು ಮತ್ತು ಪಿ. ಎ. ನಂಜಪ್ಪನವರು.

ವಿಷಯ:—ಹಳೇ ವೇತನಗಳನ್ನು ಮುಂದುವರಿಸುವದು ಮತ್ತು ಹೊಸ ವೇತನ ಮತ್ತು ಸಾಲಗಳನ್ನು ಕೊಡುವದು.

ಒಟ್ಟು 28 ಅರ್ಜಿಗಳಿದ್ದುವು.

1 ನೆಲ್ಲಮಕ್ಕಳ ದೇವೈಯ್ಯನವರಿಗೆ ಮತ್ತು ಬೊಳಕರಂಡ ಕಾರ್ಯಪ್ಪನವರಿಗೆ ತಿಂಗಳು ಒಂದರ 10 ರೂಪಾಯಿ ಪ್ರಕಾರ 10 ತಿಂಗಳು ವೇತನವನ್ನು ಮುಂದರಿಸಿ ಕೊಡುವಂತೆ ತೀರ್ಮಾನವಾಯಿತು.

2. ಕುಲ್ಲಚಂಡ ಅಕ್ಕಮ್ಮ ಮತ್ತು ಚನ್ನಿರ ಗಂಗಮ್ಮನವರಿಗೆ 100 ರೂಪಾಯಿ ಪ್ರಕಾರ ಸಾಲ ಕೊಡುವಂತೆ ತೀರ್ಮಾನವಾಯಿತು. ಮತ್ತು ಈ ಕೆಳಗಿನವರಿಗೆ ತಿಂಗಳು ಒಂದರ 10 ರೂಪಾಯಿ ಮೇರೆ 10 ತಿಂಗಳು ವೇತನ ಕೊಡುವಂತೆ ತೀರ್ಮಾನವಾಯಿತು.

(1) ಮೆ. ಮಂಡೇಪಂಡ ಅಪ್ಪಚ್ಚನವರ ಮಗ ಐಯ್ಯಪ್ಪನವರಿಗೆ.
(2) ,, ಬಿಟ್ಟಿಯಂಡ ಕಾಳಪ್ಪನವರ ಮಗ ಸುಬ್ಬೈಯ್ಯನವರಿಗೆ.
(3) ,, ಮಂಡೇಪಂಡ ಮುದ್ದಪ್ಪನವರ ಮಗ ಸುಬ್ಬೈಯ್ಯನವರಿಗೆ.
(4) ,, ಮನೆಯಪಂಡ ಪೊನ್ನಪ್ಪನವರ ಮಗ ಚೆಕ್ಕಪ್ಪನವರಿಗೆ.

3. ಒಬ್ಬೊಬ್ಬರಿಗೆ 100 ರೂಪಾಯಿ ಮೇರೆ ತೀತಿರ ಮೇದಪ್ಪ, ಚೇಯಕಪೂವಂಡ ಭೀಮೈಯ್ಯ, ಕೇಳಪಂಡ ಐಯ್ಯಣ್ಣ, ಮಂಡೇಪಂಡ ದೋಮೈಯ್ಯ ಮತ್ತು ಕರ್ತಮಾಡ ಗಂಗಮ್ಮ ಇವರಿಗೆ ಸಾಲಕೊಡುವಂತೆ ನಿಶ್ಚೈಸಲ್ಪಟ್ಟಿತು.

4. ಈ ವರ್ಷ ವೇತನವನ್ನು ಹೊಂದಿಕೊಂಡವರಿಗೆ ಒರುವ ವರ್ಷ ಅವರ ವೇತನಗಳನ್ನು ಮುಂದುವರಿಸಬೇಕಾದಾಗ, ಬೇರೆ ವಿಷಯಗಳಲ್ಲದೆ ಅವರ ಕುಟುಂಬವು ಫಂಡಿನ ಉಕ್ಕೇಜನಕ್ಕೋಸ್ಕರ ತೋರಿಸಿದ ವಿಷಯಗಳನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳುವದೆಂದು ತಿಳಿಸುವಂತೆ ತೀರ್ಮಾನವಾಯಿತು.

5. ಅರಮೇರಿ ಗ್ರಾಮದ ಉದಿಯಂಡ ಮುದ್ದಪ್ಪನವರು ಅವರ ಮಗಳು ಸೀತಮ್ಮನನ್ನು ದಾದಿ (Nurse) ಕೆಲಸವನ್ನು ಕಲಿಯಲಿಕ್ಕೆ ಕಳುಹಿಸಲೋಸುಗ ತಿಂಗಳು ಒಂದರ 25 ರೂಪಾಯಿ ಪ್ರಕಾರ ವೇತನ ಕೊಡಬೇಕೆಂಬದಾಗಿ ಬರಕೊಂಡ ಅರ್ಜಿಯನ್ನು ಓದಲಾಯಿತು.

ಸಾಕಷ್ಟು ಹಣವು ಈ ಫಂಡಿನಲ್ಲಿ ಇಲ್ಲದೆ ಇರೋಣ ಈ ಅರ್ಜಿಯನ್ನು ಕೊಡಗು ಕಮಿಷನರ್ ಸಾಹೇಬರವರ ಹುಕುಂ ಬಗ್ಗೆ ವಿಮರ್ಶಿಸಲಾಯಿತು.

ಕೆ. ಚಂಗಪ್ಪ,
ಪ್ರೆಸಿಡೆಂಟರು.

ಸೂಚನೆ—ವೇತನ ಮತ್ತು ಸಾಲ ಹೊಂದಿಕೊಳ್ಳತಕ್ಕ ವಿದ್ಯಾರ್ಥಿಗಳು ತಮ್ಮ ಹೆಸರು ವಿಳಾಸವನ್ನು ಮತ್ತು ಸಾಲ ಹೊಂದಿಕೊಳ್ಳತಕ್ಕ ವಿದ್ಯಾರ್ಥಿಗಳು ತಮ್ಮ ಜಾಮೀನ್‌ದಾರರ ಹೆಸರು ವಿಳಾಸವನ್ನು ಸೆಕ್ರೆಟರಿಯವರಿಗೆ ವಡನೆ ತಿಳಿಸತಕ್ಕದ್ದು. ಇದರ ನಂತರ ಬಾಂಡುಗಳನ್ನು ತಯಾರಿಸಿ ಕಳುಹಿಸಲಾಗುತ್ತೆ.

ತಾ. 6—7—28. ಬಿ. ಐ. ಕುಟ್ಟಪ್ಪ.
ಗೌರವ ಕಾರ್ಯದರ್ಶಿ.

ಪತ್ರವ್ಯವಹಾರ

[ವರ್ತಮಾನಪತ್ರ — ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ತೂಚಮಕೇರಿ ಭಾವಿ.

ಅಯ್ಯಾ,

ತಮ್ಮ ತಾರೀಕು 8—6—28ರ ಪತ್ರಿಕೆಯಲ್ಲಿ ತೂಚಮಕೇರಿ ಭಾವಿಯ ವಿಷಯ ಪ್ರಕಟವಾದ ಬಾತ್ಮಿಯನ್ನು ನಾನು ಓದಿದೆನು. ಈ ಭಾವಿಗೆ ಸರ್ಕಾರದಿಂದಲೂ, ಸಹಕಾರಿ ಸಂಘದಿಂದಲೂ ಮತ್ತು ಗ್ರಾಮಸ್ಥರಿಂದಲೂ ದ್ರವ್ಯ ಸಹಾಯ ದೊರೆತದ್ದೇನೋ ನಿಜವೆ. ಆದರೆ ಇವರ ಕೆಲಸವು ಮುಕ್ಕಾಲು ಪಾಲಷ್ಟು ಪೂರೈಸಿರುತ್ತೆ. ಇನ್ನು ಕೆಲವು ಹಣ ಸಾಲದಕ್ಕೆ ಕಳೆದ ವರ್ಷ ಈ ಶಾಲೆ ವಿದ್ಯಾರ್ಥಿಯರಿಂದ ವಸೂಲಾದ ಸ್ಕೂಲ್ ಫೀಜು 40 ರೂ. ಸರ್ಕಾರದವರಲ್ಲಿ ಇದ್ದದನ್ನು ವಾಪಾಸು ಬಂದಾಗ್ಯೆ ಹೆ. ಮಾ. ಸೇದು ಭಾವಿ ಕೆಲಸಕ್ಕ ಕೊಡುವದಾಗಿ ಹೇಳಿದರು. ಅದಕ್ಕೆ ಗ್ರಾಮಸ್ಥರು ಈ ಹಣವು ಬಾಲಕರ ಹಣವಾದ್ದರಿಂದ ಇದನ್ನು ವಿದ್ಯಾರ್ಥಿಯರಿಗೆ ವಾಪ್ಸು ಕೊಡಲು ಕಬೂಲಾಗಿ ಹೇಳಿದರು. ಸ್ಕೂಲು ಮಾಸ್ತರುಗಳು ಸಹ ಕೆಲವು ಹಣ ಸಹಾಯಮಾಡುವಂತ ಹೇಳಿದ್ದನ್ನು ಸಹ ಅಂಗೀಕರಿಸಿರುವುದಿಲ್ಲ. ಈ ಮೇಲ್ಕಂಡ ಭಾವಿ ಕೆಲಸದಲ್ಲಿ ಉಳಿಕೆಯಿರುವದನ್ನು ಇದರ ಕಂಟ್ರಾಕ್ಟುದಾರರು ಬರುವ ವರ್ಷ ಮಾಡುವಂತೆ ಇಟ್ಟಿರುತ್ತಾರೆ. ಈ ಬಾತ್ಮಿ ಬರೆದವರು ಭಾವಿಯ ಕೆಲಸವನ್ನು ಕಣ್ಣಾರೆ ನೋಡಿದವರಂತೆಯೂ ಮತ್ತು ದ್ರವ್ಯ ಸಹಾಯ ಮಾಡಿದವರಂತೆಯೂ ಸಹ ಕಾಣುವದಿಲ್ಲ. ಆದ್ದರಿಂದ ಇವರು ನ್ಯಾಯ ತಪ್ಪಿ ಗ್ರಾಮಸ್ಥರಿಗೂ, ಕಂಟ್ರಾಕ್ಟುದಾರರಿಗೂ ಮತ್ತು ಮುತುವರ್ಜಿಯಿಟ್ಟು ಕೆಲಸ ಮಾಡಿದ ಮಹನೀಯರಿಗೂ ಆಕ್ಷೇಪಿಸಿ ಹೆಸರು ಪ್ರಕಟಿಸದೆ ಬರೆದದಕ್ಕೆ ವ್ಯಸನಪಡುತ್ತೇನೆ. ಆ ಬಾತ್ಮಿಯು ನಿಜವಾದದೆಂದು ಯಾರೂ ನಂಬಲಾರರು ಎಂದೇ ನನ್ನ ಭಾವನೆ.

ಎ. ಮುತ್ತುಸಾಮಿಪಿಳ್ಳೆ.

ಕೊಡಗಿನ ಗೆಜೆಟೆಡ್ ಉದ್ಯೋಗಸ್ಥರು.

ಅಯ್ಯಾ,

ಕೊಡಗಿನಲ್ಲಿ ಗೆಜೆಟೆಡ್ ಉದ್ಯೋಗಸ್ಥರನ್ನು 5 ವರ್ಷಕ್ಕೊಂದಾವರ್ತಿ ಬೇರೆ ಕಡೆಗೆ ವರ್ಗಾಯಿಸಬೇಕೆಂದೂ ಒಂದೇ ಕಡೆ ಗೆಜೆಟೆಡ್ ಉದ್ಯೋಗಸ್ಥರು ಬಹಳ ಕಾಲ ವಿರುವದು ದೇಶದ ರೈತರಿಗೆ ಅಸಮಾಧಾನವೆಂದೂ ಕೊಡಗು ಜಮೀನ್ದಾರರ ಸಂಘವು ಅನೇಕಸಾರಿ ರಜಾವುಗಳನ್ನು ಮಂಜೂರು ಮಾಡಿರುವರು. ಸರಕಾರದವರು ಇದನ್ನು ಜಾರಿಗೆ ತರಲು ಇದುವರೆಗೂ ತಕ್ಕ ಏರ್ಪಾಡು ಮಾಡಲಿಲ್ಲ.

ಅದಂತಿರಲಿ ಇತ್ತೀಚೆಗೆ ಕೊಡಗಿನಲ್ಲಿ ಇನ್ನೊಂದು ಪದ್ಧತಿಯು ತಲೆದೋರುತ್ತಿದೆ. ಸರಕಾರದವರು ವರ್ಗಾ ವರ್ಗಿಯ ಪದ್ಧತಿಯನ್ನು ಅನುಸರಿಸುವ ಬದಲು, ದೊಡ್ಡ ಉದ್ಯೋಗಸ್ಥರಿಗೆ ಕೆಲಸದಿಂದ ನಿವೃತ್ತಿಯಾಗುವ ಕಾಲ ಬಂದರೂ ಸಹ ಅವರ ಸರ್ವೀಸನ್ನು ದೀರ್ಘ ಪಡಿಸುವಂತೆ ಅವರಿಗೆ ಉತ್ತೇಜನ ಕೊಡುವದು (Extension). ಇದು ಬಹಳ ವ್ಯಸನಕರವಾದ ವಿಷಯ. ಹೀಗೆ ಮಾಡುವದರಿಂದ ಸರಕಾರವು ಜನರ ಅಭಿಪ್ರಾಯಕ್ಕೆ ಬೆಲೆ ಕೊಡುವುದಿಲ್ಲವೆಂದು ಮಾತ್ರ ವಿಶದವಾಗುವದಲ್ಲದೆ ಜನರ ಅಭಿಪ್ರಾಯಕ್ಕೆ ಶುದ್ಧ ವಿರುದ್ಧವಾದ ಕ್ರಮವನ್ನು ಕೈಕೊಳ್ಳುವಂತೆ ಕಾಣುತ್ತದೆ. ಹೀಗಾದುದರಿಂದಲೇ ದಿನೇ ದಿನೇ ಸರಕಾರದಲ್ಲಿ ಕೇವಲ ಭಕ್ತಿಯುಳ್ಳ ಜನರೂ ಸಹ ಸರಕಾರದಲ್ಲಿ ಅವರಿಗಿರುವ ಭರವಸೆಯನ್ನು ಹಿಂದೆಗೆಯುತ್ತಿರುವರು.

ಇನ್ನಾದರೂ ಸರಕಾರದವರು, ಜನರ ಅಭಿಪ್ರಾಯವನ್ನು ಅಲ್ಲಗಳೆಯುವೆವೆಂದು ಬಹಿರಂಗ ಪಡಿಸುವ ಪದ್ಧತಿಯನ್ನು ಬಿಟ್ಟು, ಉದ್ಯೋಗಸ್ಥರಿಗೆ ಕೆಲಸದಿಂದ ನಿವೃತ್ತಿ ಯಾಗುವ ಕಾಲ ಬಂದಕೂಡಲೆ ದಾಕ್ಷಿಣ್ಯವಿಲ್ಲದೆ ಅವರನ್ನು ಬಿಡುಗಡೆ ಮಾಡಬೇಕಾಗಿ ನನ್ನ ಕೋರಿಕೆ.

" ನ್ಯಾಯಾಪೇಕ್ಷಿ "

ಕೊಡಗು ವೀರಶೈವ ವಿದ್ಯಾನಿಧಿ ಸಂಘದ ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳಲ್ಲಿ ವಿನಯಂತಿ: —

ಮಹಾಶಯರೇ,

ಹಾಲಿ ಸಂವತ್ಸರದಲ್ಲಿ ಶನಿವಾರ ಸಂತೆಯಲ್ಲು ನಡೆದ ವೀರಶೈವ ವಿದ್ಯಾನಿಧಿ ಸಂಘದ ಮಹಾಸಭೆಯಲ್ಲಿ ಸಂಘದ ಮೂಲಧನವನ್ನು ಸರಕಾರದಲ್ಲಿ ರಿಜಿಸ್ಟರಾದ ಸೊಸೈಟಿಯಲ್ಲಿ ಇಡಬೇಕೆಂಬದಾಗಿ ಜನರಲ್ ಬಾಡಿಯವರು ತೀರ್ಮಾನಿಸಿರುವದು ತಮಗಳಿಗೆಲ್ಲಾ ತಿಳಿದ ಸಂಗತಿಯಾಗಿದೆ. ಜನರಲ್ ಬಾಡಿಯವರ ತೀರ್ಮಾನವನ್ನು ವಿನಾಯಿಸಿ ಒಬ್ಬರ ಅಧೀನದಲ್ಲು ಸ್ಥಿರಸ್ವತ್ತು ಆಧಾರವೂ ಕೂಡಾ ಇಲ್ಲದೆ ಹಾಗೆ ಮೂಲಧನವನ್ನಿಡುವದು ಜನರಿಗೆ ಅಸಮಾಧಾನದ ಸಂಗತಿಯಾಗಿದೆ. ಮತ್ತು ಸಂಘದ ಧನಾಭಿವೃದ್ಧಿಯೂ ಕೂಡಾ ಕಡಮೆಯಾಗಿ ಹೋಗುವಲ್ಲಿ ಏನೂ ಸಂಶಯವಿಲ್ಲ. ಆದುದರಿಂದ ಸೊಸೈಟಿಯಲ್ಲಿಯಾಗಲೀ ಇಲ್ಲವೇ ಸೆಂಟ್ರಲ್ ಬ್ಯಾಂಕಿನಲ್ಲಾಗಲೀ ಹಣವನ್ನಿಟ್ಟರೆ ಯಾವ ಸಂಶಯವೂ ಇರಲಿಕ್ಕಿಲ್ಲ. ಹೀಗೆ ಬ್ಯಾಂಕಿನಲ್ಲಿ ಹಣ ಇದ್ದುದರ ದೆಸೆಯಿಂದ ಕೊಡ್ಲಿಪೇಟೆಯ—ಸೋಮವಾರಪೇಟೆಯ ಮತ್ತು ಇತರ ಕಡೆಗಳ ಮಹನೀಯರಿಂದ ಹೆಚ್ಚಿನ ಧನಸಹಾಯವು ಸಂಘಕ್ಕೆ ದೊರಕಂತಿರುವದಿಲ್ಲ. ಮೂಲಧನವನ್ನು ಬ್ಯಾಂಕಿನಲ್ಲಿ ಹಣ ಇರುವದೇ ಧನಾಭಿವೃದ್ಧಿಗೆ ಅಡಚಣೆಯಾಗಿರುವುದಕ್ಕೆ ಮುಖ್ಯ ಕಾರಣವಾಗಿದೆ. ಚಿತ್ರದುರ್ಗದ ಶ್ರೀ ಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಕಳೆದ ಮಹಾಸಭೆಗೆ ಅಧ್ಯಕ್ಷರಾಗಿ ದಯಮಾಡಿಸಿದ್ದಾಗ್ಯೆ ಧನ ಸಹಾಯಮಾಡುವದಾಗಿ ಅಪ್ಪಣೆ ಕೊಡಿಸಿದ ಮೇರೆ, ಯಾವ ಕಾರಣದಿಂದ ಈ ಫಂಡಿಗೆ ಸಹಾಯ ಮಾಡಲಿಲ್ಲವೆಂಬದು ಗೊತ್ತಾಗುವದಿಲ್ಲ. ಇವರು ಭರತಖಂಡದಲ್ಲಿ ಕೆಲವೆಡೆಗಳಲ್ಲಿ ಅಂದರೆ ಮುಖ್ಯ ಪಟ್ಟಣಗಳಲ್ಲಿ ಹೆಚ್ಚಾಗಿ ವೀರಶೈವ ತರುಣರಿಗೆ ವಿದ್ಯೆ ಕಲಿಯಲಿಕ್ಕೆ ಧಾರಾಳವಾದ ಸಹಾಯಮಾಡಿರುವಂಥಾ ಸಂಗತಿಗಳನ್ನು ತಾವುಗಳು ಪತ್ರಿಕೆಗಳಲ್ಲಿ ಓದಿರಬಹುದು. ನಮ್ಮ ಕೊಡಗು ದೇಶದ ತರುಣರಿಗೆ ಅಂದರೆ ವೀರಶೈವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಂಗಕ್ಕೆ ಧನ ಸಹಾಯಮಾಡದೆ ಇರುವದು ಬಹಳ ವ್ಯಸನಕರ. ಫಂಡನ್ನು ಬ್ಯಾಂಕಿನಲ್ಲಾಗಲೀ ಸೊಸೈಟಿಯಲ್ಲಾಗಲೀ ಇಟ್ಟು ಆ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಿಸಿದಲ್ಲಿ ಸರ್ವ ಮಹನೀಯರು ಈ ಫಂಡಿಗೆ ಧಾರಾಳವಾದ ಸಹಾಯಮಾಡಿಯಾರೆಂದು ನಂಬುತ್ತೇನೆ. ಅಲ್ಲದೆ ಈ ಫಂಡನ್ನು ಬ್ಯಾಂಕಿನಲ್ಲಿಟ್ಟ ಪಕ್ಷದಲ್ಲಿ ಇನ್ನು ಮುಂದೆಯೂ ಕೂಡಾ ನಾನೂ ಸಹ ಈ ಫಂಡಿನ ಸ್ಥಿತಿ ಮಹಾಸಭೆಯಲ್ಲಿಯೂ ಐದು ರೂಪಾಯಿಗಳ ಮೇರೆ ಇನಾಮೋಬಲಗನ್ನು ಕೊಡಲು ಸಿದ್ಧನಾಗಿದ್ದೇನೆ. ಇದೇ ರೀತಿಯಾಗಿ ಈ ಹಿಂದೆ ವಾಗ್ದಾನಮಾಡಿರತಕ್ಕಂಥಾ ಅನೇಕ ಮಹನೀಯರು ಈ ಫಂಡನ್ನು ಬ್ಯಾಂಕಿನಲ್ಲಿಡದೆ ಹೋದ ಕಾರಣದಿಂದ ವಾಗ್ದಾನದ ಮೊಬಲಗನ್ನು ಕೊಡದೆ ಬಾಕಿ ಮಾಡಿರುತ್ತಾರೆ. ಮತ್ತು ಫಂಡಿಗೆ ಧನ ಸಹಾಯಮಾಡಬೇಕೆಂದು ಕಳೆದ ಮತ್ತು ಈ ಸಾರಿಯ ಮಹಾಸಭೆಗಳ ಕಾಲದಲ್ಲಿ ಹಣ ತಂದಿದ್ದ ಕೆಲವು ಮಹನೀಯರು ಮೇಲ್ಕಂಡ ಕಾರಣಗಳಿಂದ ಮನಸ್ಸನ್ನು ಹಿಂದಕ್ಕೆ ಎಳೆದುಕೊಂಡು ಹಣ ಕೊಡದೆ ವಾಪಸು ತೆಗೆದುಕೊಂಡು ಹೋಗಿದ್ದಾರೆ. ಆದುದರಿಂದ ಈ ಫಂಡನ್ನು ರಿಜಿಸ್ಟರಾದ ಬ್ಯಾಂಕಿನಲ್ಲಾಗಲೀ, ಸೊಸೈಟಿಯಲ್ಲಾಗಲೀ ಇಡಬೇಕೆಂಬುದೇ ನನ್ನ ಪ್ರಾರ್ಥನೆ.

ಓರ್ವ ವೀರಶೈವ

Please Call at

THE GENERAL TRADING CO., MERCARA,

Opposite Coronation Gardens.

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY ! NEW PERFORMANCE !! NEW FEATURES AND FOUR WHEEL BRAKES !!!

QUALITY AT LOW COST.

THE COORG FOOTWEAR MART, MERCARA.

The house for smart foot wear. Monsoon boot a speciality.
Prompt attention. Prices very moderate.
12—3 Attended by very efficient workmen.

ಸೊಳ್ಳೆಗಳು.

ಸೊಳ್ಳೆಗಳು ಒಂದು ವರ್ಗ ಎಂದು ಪ್ರತಿ ಒಬ್ಬನಿಗೆ ಗೊತ್ತಿದ್ದ ವಿಷಯವು. ಅವುಗಳು ನಿದ್ರೆ ಕೆಡಿಸುತ್ತವೆ ಎಂದು ಒಬ್ಬನ ಅನುಭವದಲ್ಲಿ ಉಂಟು. ಆದರೆ ಅವುಗಳು ಮನುಷ್ಯನ ಅತಿ ಅಪಾಯಕರವಾದ ಶತ್ರುಗಳೆಂದು ಬಹಳ ಕಡಿಮೆ ಜನರಿಗೆ ಮಾತ್ರ ಬಹುಶಃ ಗೊತ್ತುಂಟು ಈ ಕ್ರಿಮಿಕೀಟಗಳು ಭಯಂಕರವಾದ ಮಲೇರಿಯಾ ಜ್ವರವನ್ನೂ, ರೂಪಗೆಡಿಸುವ ಆನೆಕಾಲುರೋಗವನ್ನೂ ಇತರ ರೋಗಗಳನ್ನೂ ನಮಗೆ ವ್ಯಾಪ್ತವಾಗುವ ಹಾಗೆ ಮಾಡುತ್ತವೆ.

ಅವುಗಳು ಇಲ್ಲವಾದ ಪಕ್ಷದಲ್ಲಿ ಮಲೇರಿಯಾ ಜ್ವರವೂ, ಆನೇಕಾಲು ರೋಗವೂ, ಡೆಂಗ್ಯೂ ಜ್ವರವೂ ಇರಲಿಕ್ಕಿಲ್ಲ. ಹಾಗಾದರೆ ಅವುಗಳನ್ನು ಪೂರ್ಣವಾಗಿ ಯಾಕೆ ನಿವಾರಿಸ ಬಾರದು? ಅಳಿಗೆ ಬರೆದದ್ದನ್ನು ಶೀಘ್ರ ಬಗ್ಗಾ ಪಕದಲ್ಲಿಟ್ಟರೆ ಅದು ಅಷ್ಟವಲ್ಲ.

ಸೊಳ್ಳೆಯ ಮನೆಯು ಕುಂಟೆ ಮತ್ತು ಕೊಳ ಆಗಿರುತ್ತದೆ. ಅದು ತನ್ನ ಮೊಟ್ಟೆಗಳನ್ನು ನೀರಿನಲ್ಲಿ ಮಾತ್ರ ಇಡುತ್ತದೆ. ಒಡೆದ ಮಣ್ಣಿನ ಮಡಕೆಗಳಲ್ಲಿ ಮತ್ತು ಚಟ್ಟಿಗಳಲ್ಲಿರುವ ಸಣ್ಣ ಜಲಾಶಯಗಳು ಕೂಡ ಸಾಕು. ಒಂದು ಅರ್ಧಕಟ್ಟಿದ ಕೋಡು ಮತ್ತು ಸರಿಯಾಗಿ ಜಾಗ್ರತೆಯಿಂದ ಇಡದ ಒಂದು ಒಚ್ಚಲು ಗುಂಡಿಯು ಸಹಸ್ರಗಟ್ಟಲೆಯಿಂದ ಸೊಳ್ಳೆಗಳು ಬೆಳೆಯುವ ಸ್ಥಳಗಳಾಗಬಹುದು. ಹರಿಯದೆ ನಿಂತಿರುವ ನೀರಿನಲ್ಲಿ ಅಲ್ಲದೆ ಸೊಳ್ಳೆಯು ವೃದ್ಧಿ ಹೊಂದುವುದಿಲ್ಲ. ಆದುದರಿಂದ ಸೊಳ್ಳೆಗಳಿಂದ ನಿವಾರಣೆ ಹೊಂದಬೇಕಾದರೆ ಮನುಷ್ಯರು ವಾಸಿಸುವ ಮನೆಗಳ ಹತ್ತಿರ ಎಲ್ಲಿಯೂ ನೀರು ಹರಿಯದೆ ನಿಲ್ಲದ ಹಾಗೆ ನೋಡುವುದು ಮುಖ್ಯ ಕಲಸವಾಗಿರುತ್ತದೆ. ಎಲ್ಲಾ ಕುಂಟೆಗಳನ್ನೂ ಕೊಳಗಳನ್ನೂ ಮುಚ್ಚಬೇಕು. ಎಲ್ಲಾ ಕೋಡುಗಳನ್ನೂ ಒಚ್ಚಲು ಗುಂಡಿಗಳನ್ನೂ ಆವುಗಳಲ್ಲಿ ನೀರು ಸರಿಯಾಗಿ ಹರಿಯುವ ಹಾಗೆ ಒಳ್ಳೇ ಸ್ಥಿತಿಯಲ್ಲಿಡಬೇಕು. ಆದರೂ ಕೆಲವು ಕೆರೆಗಳು ಮತ್ತು ಕೊಳಗಳು ಉಪಯೋಗಕ್ಕೆ ಬೇಕಾಗುತ್ತವೆ. ಆದುದರಿಂದ ಅವುಗಳನ್ನು ಮುಚ್ಚಲಿಕ್ಕೆ ಸಾಧ್ಯವಿಲ್ಲ. ಸೊಳ್ಳೆಯು ನೀರಿನಲ್ಲಿಡುವ ಮೊಟ್ಟೆಗಳು ಸಣ್ಣ ಮರಿಗಳಾಗುತ್ತವೆ ಮತ್ತು ಈ ಮರಿಗಳು ಪ್ರಾಯಸ್ಥರಾದ ಸೊಳ್ಳೆಗಳಾಗುವ ಮುಂಚೆ ಒಂದು ಹಪ್ತೆಯವರೆಗೆ ನೀರಿನಲ್ಲಿ ಜೀವಿಸುತ್ತವೆ. ಅಂಥಾ ಕೆರೆಗಳಲ್ಲಿರುವ ನೀರಿನ ಮೇಲ್ಭಾಗದಲ್ಲಿ ಸ್ವಲ್ಪ ಹಸಿ ಎಣ್ಣೆ ಅಥವಾ ಸೀಮೆಯೆಣ್ಣೆ ಸುರಿದರೆ ಸೊಳ್ಳೆ ಮರಿಗಳೆಲ್ಲಾ ನಾಶವಾಗುತ್ತವೆ. ಕೆರೆಯ ಮೇಲೆ ಎಣ್ಣೆ ಸುರಿಯುವ ಮುಂಚೆ ಕೆರೆಯ ಬದಿಗಳಲ್ಲಿರುವ ಎಲ್ಲಾ ಹುಲ್ಲನ್ನು ಪಾಚಿಯು ಗಿಡಗಳನ್ನು ತೆಗೆದು ಹಾಕಿಬಿಡಬೇಕು. ಇಲ್ಲವಾದರೆ ಸೊಳ್ಳೆಯ ಮರಿಗಳು ಅಲ್ಲಿ ಹೋಗಿ ಅವಿತುಕೊಂಡು ತಪ್ಪಿಸಿಕೊಳ್ಳಬಹುದು. ಪ್ರಾಯಸ್ಥರಾದ ಸೊಳ್ಳೆಯು ಮನೆಯ ಕತ್ತಲೆಯ ಮೂಲೆಗಳಲ್ಲಿ ಅವಿತುಕೊಳ್ಳ ಇಷ್ಟಪಡುತ್ತದೆ. ಮನೆಯಲ್ಲಿ ಚೆನ್ನಾಗಿ ಗಾಳಿಯೂ ಬೆಳಕೂ ಬರುವ ಹಾಗೆ ಮಾಡಿರಿ. ಯಾವಾಗಲೂ ಸೊಳ್ಳೆ ಪರದೆಯ ಒಳಗೆ ಮಲಗಿರಿ. ಹಾಗೆ ಮಾಡಿದರೆ ಸೊಳ್ಳೆಯ ಕಡಿತದಿಂದ ತಪ್ಪಿಸಿಕೊಳ್ಳಬಹುದು ಮತ್ತು ಈ ಕ್ರಿಮಿಕೀಟದಿಂದ ಹರಡುವ ಮಲೇರಿಯಾ ಜ್ವರ ಅನೇಕಾಲು ಮುಂತಾದ ರೋಗಗಳು ಬಾರದ ಹಾಗೆ ಮಾಡಬಹುದು.

"ರೆಡ್ ಕ್ರಾಸ್"

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!!

ಆಲ್ ರಹಿಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.



ಈ ಇಮಿಟೇಷನ್ ರೇಷ್ಮೆ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವೂ ಇರುವವು. ಉಟ್ಟಲು ವಿಚಿತ್ರವಾಗಿಯೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಕೆಂಪು, ಹಸಿರು ಮತ್ತು ನಾನಾ ಬಣ್ಣಗಳಲ್ಲಿ ಇರುವವು ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಬಹುದು. ಚೆನ್ನಾಗಿರುವುದಲ್ಲದೆ, ಅಸಲ್ ರೇಷ್ಮೆಯಂತೆ ಕಾಣುವುವು, ಶ್ರೀಮಂತರಿಗೂ, ಗರೀಬರಿಗೂ ಉಡಲು ಅನುಕೂಲವಾದದ್ದು. ಕ್ರಯ ರೂ 1—12—0.

ವಿಳಾಸ —ಶೀಲಗಂಗಾ ಟ್ರೇಡಿಂಗ್ ಕಂಪೆನಿ.

52—8 ಪೋ. ಬಾಕ್ಸ್ ನಂ 243, ಮದರಾಸು ಬೆಸ್ಟ ಫೌಂಟೆನ್ ಪೆನ್.

ಈ ಪೆನ್ನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಭಂಗಾರದಂಥ ನಿಬ್ಬು ಹಾಕಿದೆ. ಈ ಪೆನ್ನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಮ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ — ವಿ. ಎಸ್. ರಾಧಾಕೃಷ್ಣ ಅಂಡ್ ಬ್ರದರ್ಸ್,

52—8 309 ಚೈನಾ ಬಜಾರ್ ರೋಡ್, ಮದರಾಸು.

ಡಿ ಬಿ ಎ ಬಾರ್ ಕೋವಿಗಳು ರೂ 75 ರಿಂದ ರೂ. 450/. ಯಸ್ ಬಿ ಬಿ ಬಾರ್ ಕೋವಿಗಳು ರೂ 35 ರಿಂದ ರೂ. 250/. ಮಸ್ ಬಿ ಮಜಲ ಲೋ. ಕೋವಿಗಳು ರೂ 35 ರಿಂದ 65/. ರಿವಾಲ್ವರ್‌ಗಳು ರೂ. 40/ರಿಂದ ರೂ 125/ರ ವರೆಗೆ.

ಪಟ್ಟಿಲ ಮತ್ತು ಸಿಂಗರ ಕೋವೆರ ಮತ್ತು ಕೇವು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಶ್ರೀಮಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ನೋಡಿರಿ.

ಯಸ್. ವಿ. ರಾಮಸ್ವಾಮಿ ಚೆಟ್ಟಿ

& ಸನ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೆಯ ಕೋವಿಯ ಕಂಪೆನಿ.

24—6 12, ಬ್ರಾಡ್ವೇ, ಮದ್ರಾಸು

(ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡುವುದು ಉತ್ತಮ)

Arms, Ammunition and Shooting Requisites !!!



1928 Illustrated Catalogue Just Issued Free on Application !

D. B. B. L. Rifles	Rs. 120	to	Rs	2750
S. B. B. L. "	" 35	to	"	950.
D. B. B. L. Guns	" 50	to	"	1350.
S. B. B. L. "	" 35	to	"	275.
D. B. M. L. "	" 45	to		135.
S. B. M. L. "	" 30	to	"	80
B. L. Revolvers	" 35	to	"	350
Antomatic Pistols	" 30	to	"	15[illegible]

Brilliant Search Light Lamp For Shooting Camping Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder & Shooting Requisites at the most competitive rates.

GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India,

24—15 210 Abdul Rehman Street, BOMBAY.

ಎಂ. ಎಸ್. ಶಿಪ್ಪಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಗತಿಯ ಸಿಂಗಲ್ ರೀಡ್ಸ್ ಹಾರ್ಮೋನಿಯಂಗಳು.		ಉತ್ತಮ ತರವಾದ 14 ಕ್ಯಾರೆಟ್ಟು ಬಂಗಾರದ ನಿಬ್ಬುಳ್ಳ ಸೇಫ್ಟಿ ಫೌಂಟೆನ್ ಪೆನ್‌ಗಳು.		ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು	
'ದಿಲ್ ಬಹಾರ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0	ಬ್ಲಾಕ್ ಬರ್ಡ ಫೌಂಟನ್ ಪೆನ್ 1ಕ್ಕೆ	3—6—0 ಮತ್ತು 3—12—0	ಪ್ರೆಸ್ಟ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ತಿಲೋತ್ತಮಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0	ಪರ್ಲ್ಸ್ ವಂಡರ್ ಫೌಂಟನ್ ಪೆನ್ 1ಕ್ಕೆ	3—0—0 ಮತ್ತು 3—8—0	ವೆಸ್ಟ್‌ಎಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0	ಕಾನ್‌ವ್ಯಾಕ್ಟ್ ಸೇಫ್ಟಿ ಫೌಂಟನ್ ಪೆನ್ 1ಕ್ಕೆ	4—8—0	ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9—8—0
'ಮೋಸ್ಲೀಂ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0	ವಾಟರ್ ಮನ್ ಫೌಂಟನ್ ಪೆನ್ 1ಕ್ಕೆ	8—0—0 ಮತ್ತು 8—8—0	ಬಿಗ್ ಬೆನ್ ನಮೂನೆ ಇಟಾಲಿಯನ ಟೈಂಪೀಸ್ 1ಕ್ಕೆ	6—12—0
'ಮಹಾರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0	ವಾಟರ್ ಮನ್ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ 1ಕ್ಕೆ	12—0—0 ಮತ್ತು 15—0—0	ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್. ಶಿಪ್ಪಪ್ಪ ಅಂಡ್ ಬ್ರದರ್ಸ್,

32 10 ಹಾರ್ಮೋನಿಯಂ ಮತ್ತು ಜರ್ಕ್ಲೇಲ್ ಸಾಮಾನುಗಳ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	20,000
ವಸೂಲಾದ ಶೇರ್ ಮೊಬಲಗು	—	15 510
ಸಾಮೂಹಿಕ ಠೇವಣಾತಿ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರವಷ್ಟು ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಮಿಸ್ಟರ್ ಕೃಷ್ಣಮಾಚಾರ್ಲು ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರಜರರ್. ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಪೇರಿಯಂಡ ಪೂವಯ್ಯನವರು.
ಪೊನ್ನಂಪೇಟೆನಾಡು—ಮೆ ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು
ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾನಜೇರಿರ ನಂಜುಂಡನವರು,
ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಅನಂತ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಬಿ ಮಾದಪ್ಪಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಂದಲೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಪಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದಪ್ಪ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ.

ARMS & AMMUNITION MART.
Mahomedally-Noorbhoy.

321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.
(52—11) 'Please write for our Catalogue 1928—1929.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಂಪ್ರತಿ ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೆಚ್ಚಾಗಿ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಅಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬರುವ ರೋಗ ಇವುಗಳಿಗೆ ಮಹಾ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—1—0 3—8—0 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು, ದೇಹದ ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—40 9. ಮಂಗಳೂರು

ಕಳಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಅಜಮಾಯಿಸಿ ನೋಡಿರಿ.



ಇನಾಮಿನ ಬಟ್ಟಿಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಛಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರೆಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಜೀಂದ್ ದೇವಜೀಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).
12—7 21 ಚೈನಾ ಬಜಾರ್‌ರೋಡ್, ಮದರಾಸು.

EMPIRE OF INDIA
LIFE ASSURANCE COMPANY, LIMITED.

(Established 1897.)

FOR THE YEAR ENDING 29th FEBRUARY 1928.

New Business Exceeds	Rs 1,16,00,000.
Income Exceeds	Rs. 54,95,000.
Assets Exceed	Rs 3,15,64 000.

Wanted Agents in Important Places in Coorg.

HEAD OFFICE
Empire of India Life Building,
BOMBAY.

7—3

BRANCH OFFICE.
152, Commercial Street,
BANGALORE.

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925 —	13545 —	ರೂ. 2,96,42 000.
1926 —	17371 —	ರೂ 3,91,39,000
1927 —	21418 —	ರೂ. 4,68,04,075.

— ಪ್ರೀಮಿಯಂ ಉತ್ಪತ್ತಿ —

1925 —	ರೂ 92,66,000.
1926 —	ರೂ 1,05,33,000.
1927 —	ರೂ. 1,21,53 000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮಿಂಚಿದೆ.

ಕಂಪನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮೀರಿದೆ.

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

52—13

ಎಲ್. ಆರ್. ಕೃಷ್ಣಸ್ವಾಮಯ್ಯರ್,
ಬ್ರ್ಯಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

Regd. No. M 1550.
If not delivered please return to
"KODAGU" OFFICE, MERCARA.

ಕೊಡಗು.

ಸಂಪಾದಕ—[illegible]

ಪ್ರತಿ ಬುಧವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮] ಮಡಿಕೇರಿ, ಸ್ತ ೧೯೨೮ನೇ ಇಸವಿ ಜುಲೈ ತಾರೀಖು ೨೦ ನೇ ಶುಕ್ರವಾರ [ಸಂಚಿಕೆ ೮

ESTATE REQUISITES

5 lbs Yates' hammer headed mammoties	Rs 3 0 0 Each	Weeding forks @	Rs 1 4 0 Each
4½ " " "	" 2 14 0 "	Garden trowels "	Rs 1 4 0 "
4 " " "	" 2 12 0 "	Pick axes "	Rs 1 8 0 "
Felling axes at Rs 3 0 0 x	" 3 4 0 "	Bill hooks "	Rs 3 14 0 "
Grubbing mattocks at	" 3 4 0 "	Digging forks "	Rs 4 0 0 "

MONSOON EQUIPMENT.

Planter boots	Rs 16 8 0	Dales' dubbin per tin	Rs 0 8 0
Marrs' oil (water proof) per tin	Rs 2 0 0	Umbrellas	Rs 4 8 0

52—25 **SPENCER & CO. LTD.** General Merchants **MERCARA.**

V. SUBRAMANIA IYER

Manufacturing,

JEWELLER

GOLDSMITH, SILVERSMITH & DEALER IN ALL PRECIOUS STONES.

Post Box 423,
TRIPLICANE, MADRAS

Catalogue Free
to Bonafide Enquirers

Rose Water Sprinkler.


Nose-screws. Claver. Drops. Thodu. Brooch

Chased Silver Mirror.

Manufacture of
HIGH CLASS
GEMSET JEWELS.
a speciality

The special features
of my productions are —
1. Best QUALITY.
2. Latest novel designs.
3. Promptest execution
4. Neat & artistic finish.
5. [illegible] moderate prices

GOLD
or
SILVERWARE
of all descriptions
neatly executed

52—17



Before buying any
Arms & Ammunition,
please refer our Reduced
NETT PRICED current Catalogue of
GUNS, RIFLES,
REVOLVERS, AUTOMATIC PISTOLS,
AMMUNITION, &
Shooting Requisites, just out.

CATALOGUE of 1927-28 on application.

The Bombay Armoury.

331, Abdul Rehman Street,

Bombay, 3.

34—21

[illegible]

ಮಲೇರಿಯಾ, ಇನ್ಫ್ಲುಯೆಂಜಾ, ಸಮುಶೀತ ಜ್ವರ ... ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ [illegible] ಬಾಟ್ಲಿಗೆ [illegible]

ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ [illegible] ಬಾಟ್ಲಿಗೆ [illegible]

12—4 [illegible]

ಕೊಡಗು.

ಸ. ೧೯೨೮ ನೇ ಇಸವಿ
ಜುಲೈ ತಾ. ೨೦ ನೇ ಶುಕ್ರವಾರ.

ಮೈಸೂರಿನಲ್ಲಿ ವ್ಯವಸಾಯ.

ಇದೇ ತಿಂಗಳು ೫ನೇ ತಾರೀಕಿನಲ್ಲಿ ಬೆಂಗಳೂರು ಜಿಲ್ಲೆಯ ಕೃಷಿ ಪರಿಷತ್ತಿನಲ್ಲಿ ಮೈಸೂರು ಕೃಷಿ ಇಲಾಖೆಯ ಡೈರೆಕ್ಟರಾದ ಡಾಕ್ಟರ್ ಕೋಲ್‌ಮ್ಯಾನ್‌ರು ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ, ಕಳೆದ ೨೦ ವರ್ಷಗಳಿಂದ ಮೈಸೂರು ದೇಶದಲ್ಲಿ ಕೃಷಿ ಕ್ರಮವು ಅಭಿವೃದ್ಧಿಯಾಗಿದೆಯೆಂತ ಆಧಾರಪೂರ್ವಕ ವಿವರಿಸಿದ್ದಾರೆ. ಸುಧಾರಿಸಿದ ನಮೂನೆಯ ವ್ಯವಸಾಯದ ಮುಟ್ಟುಗಳು ಮುಖ್ಯವಾಗಿ ನೇಗಿಲುಗಳು ಹೆಚ್ಚಾಗಿ ಉಪಯೋಗಿಸಲ್ಪಡುತ್ತಿರುವದರಿಂದಲೂ, ವೈಜ್ಞಾನಿಕ ಗೊಬ್ಬರಗಳ ಉಪಯೋಗವು ಹೆಚ್ಚುತ್ತಿರುವದರಿಂದಲೂ ಮತ್ತು ಕೃಷಿಯನ್ನು ಉತ್ತಮಗೊಳಿಸುವದರಲ್ಲಿ ಜನರು ಹೆಚ್ಚು ಅಭಿರುಚಿ ತೆಗೆದುಕೊಳ್ಳಲು ಪ್ರಾರಂಭಿಸಿರುವದರಿಂದಲೂ ಕೃಷಿ ಕ್ರಮವು ಅಭಿವೃದ್ಧಿಯಾಗುತ್ತಿದೆಯೆಂತ ಇವರು ಹೇಳುವವರಾಗಿದೆ. ಕೃಷಿ ಕಸಬು ತಟಸ್ಥವಾಗಿಲ್ಲ, ಕೃಷಿಕರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂಬದಕ್ಕೆ ಡಾಕ್ಟರರು ಹೇಳುವ ಸೂಚನೆಗಳು ಮುಖ್ಯವಾದವಾಗಿವೆ.

ಕೃಷಿ ಇಲಾಖೆಯೇ ಇಲ್ಲದ ನಮ್ಮ ದೇಶದಲ್ಲಿ ನಿಜವಾಗಿಯೂ ವ್ಯವಸಾಯ ಕ್ರಮವನ್ನು ಉತ್ತಮಗೊಳಿಸಲು ಮನಸ್ಸಿರುವ ಕೃಷಿ ಇಲಾಖೆಯೊಂದು ಇದ್ದರೆ ರೈತರ ಬಾಳನ್ನು ಅಭಿವೃದ್ಧಿಗೊಳಿಸಬಹುದೆಂತ ಡಾಕ್ಟರವರ ಭಾಷಣದಿಂದ ತಿಳಿದುಕೊಳ್ಳಬಹುದು. ವಿಜ್ಞಾನ ಶಾಸ್ತ್ರದ ಬೆಳವಣಿಗೆಯು ಮನುಷ್ಯ ಜೀವನದ ಎಲ್ಲಾ ಭಾಗದಲ್ಲೂ ವ್ಯಾಪಿಸಿರುವ ಈ ಕಾಲದಲ್ಲಿ ನಮ್ಮ ದೇಶದಲ್ಲಿ ಕೃಷಿ ಇಲಾಖೆಯೊಂದು ಇಲ್ಲದಿರುವದು ನಾಚಿಕೆಗೇಡಾಗಿದೆ. ಸರಕಾರದ ಬೊಕ್ಕಸದ ದೊಡ್ಡ ಭಾಗವನ್ನು ತುಂಬುವ ಕೃಷಿ ಕಸಬಿನವರಿಗೆ ಸರಕಾರವು ಸಹಾಯ ಮಾಡದೆ ಇರುವದರಿಂದ ಸರಕಾರವು ತನ್ನ ಮುಖ್ಯ ಕರ್ತವ್ಯಗಳಲ್ಲಿ ಒಂದನ್ನು ಮರೆತಂತೆಯೇ ಆಯಿತು. ವ್ಯವಸಾಯ ಕಮಿಶನಿನ ವರದಿಯ ಕಾರಣದಿಂದಲಾದರೂ ಈ ದೇಶಕ್ಕೆ ಪ್ರಯೋಜನವಾಗುವ ಕೃಷಿ ಇಲಾಖೆಯೊಂದು ಸ್ಥಾಪಿತವಾದೀತೆಂತ ಆಶಿಸುತ್ತೇವೆ. ಈ ಮೊದಲು ಇದ್ದಂಥ ಕೃಷಿ ಇಲಾಖೆಯಿಂದ ಏನೂ ಪ್ರಯೋಜನವಾಗಲಾರದು. ಈಗಲೂ ಒಬ್ಬ ಯುವಕನನ್ನು ನಮ್ಮ ಸರಕಾರವು ಕೃಷಿ ವಿದ್ಯೆಯ ತರಬೇತಿಗೆ ಕಳುಹಿಸಿರುವರು. ಇವನನ್ನು ಯಾವ ರೀತಿಯಲ್ಲಿ ಉಪಯೋಗಿಸಲು ಸರಕಾರವು ನಿಶ್ಚೈಸಿದೆಯೆಂಬದು ತಿಳಿಯುವ ವರೆಗೆ ಇಂಥಾ ತರಬೇತಾದ ಒಬ್ಬನಿಂದ ಪ್ರಯೋಜನವು ಎಷ್ಟರ ಮಟ್ಟಿಗೆ ಆದೀತೆಂದು ನಾವು ಹೇಳಲಾರೆವು. ಕೃಷಿವಿದ್ಯೆ ಕಲಿತ ಇಬ್ಬರು ಈಗಾಗಲೇ ನಮ್ಮ ಸರಕಾರದ ನೌಕರರಾಗಿ ಇದ್ದರೂ ಅವರನ್ನು ಉಪಯೋಗಿಸದೆ ಇನ್ನೊಬ್ಬನನ್ನು ತರಬೇತುಮಾಡುವ ಮರ್ಮ ಯಾಕೆ ಮಾಡುತ್ತಾರೆಂಬುದೂ ನಮಗೆ ತಿಳಿಯುವುದಿಲ್ಲ.

ಮೈಸೂರು ದೇಶದ ಕೃಷಿ ಇಲಾಖೆಗೆ ಡಿಸ್ಟ್ರಿಕ್ಟ್ ಬೋರ್ಡಿನವರೂ ಹಣಸಹಾಯ ಕೊಡಲು ಪ್ರಾರಂಭಿಸಿದ್ದಾರೆಂತಲೂ, ಇದರಿಂದ ಜನಸಮುದಾಯಕ್ಕೆ ಕೃಷಿ ಇಲಾಖೆಯಿಂದ ಪ್ರಯೋಜನವಾಗುತ್ತದೆಯೆಂಬ ಭರವಸೆ ಹುಟ್ಟಿದೆ ಎಂತಲೂ ಡಾಕ್ಟರ್ ಕೋಲ್‌ಮ್ಯಾನರು ತಿಳಿಸಿರುತ್ತಾರೆ. ವ್ಯವಸಾಯಗಾರರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿರುವ ಡಿಸ್ಟ್ರಿಕ್ಟ್ ಬೋರ್ಡಿನವರು ಕೃಷಿ ಇಲಾಖೆಗೆ ಧನಸಹಾಯ ಮಾಡಿದ್ದರಿಂದ ಡಾಕ್ಟರವರ ವಾದವು ನ್ಯಾಯವಾಗಿದೆ. ಕೃಷಿಕರು ತಮ್ಮ ಕಸಬಿನ ಅಭಿವೃದ್ಧಿಗೆ ಹೆಚ್ಚಿಗೆ ಮನಸ್ಸು ಕೊಡಲು ಪ್ರಾರಂಭಿಸಿದ್ದಾರೆಂಬದಕ್ಕೆ ಇನ್ನೊಂದು ನಿದರ್ಶನವಾಗಿ, ಸಹಕಾರ ಸಂಘಗಳೂ ಗ್ರಾಮ ಪಂಚಾಯತಿಗಳೂ ಸುಧಾರಿಸಿದ ವ್ಯವಸಾಯ ಮುಟ್ಟುಗಳ ಮಾರಾಟದಲ್ಲಿ ಅಭಿರುಚಿ ತೆಗೆದುಕೊಳ್ಳುತ್ತಾರೆಂಬದು ಕಂಡುಬಂದಿದೆ. ಸಹಕಾರ ಸಂಘಗಳಲ್ಲೂ, ಗ್ರಾಮ ಪಂಚಾಯತಿಗಳಲ್ಲೂ ಗ್ರಾಮ ಜೀವನದ ಪ್ರತಿಬಿಂಬ ಸಿಕ್ಕುತ್ತದೆಂಬದು ಸುಳ್ಳಲ್ಲ. ಗ್ರಾಮವಾಸಿಗಳಿಗೆ ಅವಶ್ಯವಿದ್ದ ಮುಟ್ಟುಗಳನ್ನು ಸಹಕಾರಿ ಸಂಘಗಳಾಗಲಿ ಗ್ರಾಮ ಪಂಚಾಯತಿಗಳಾಗಲಿ ಮಾರಬಹುದು. ಸುಧಾರಿಸಿದ ಮುಟ್ಟುಗಳನ್ನು ಉಪಯೋಗಿಸಲು ಗ್ರಾಮವಾಸಿಗಳು ಪ್ರಾರಂಭಿಸಬೇಕಾದರೆ ಈ ಸುಧಾರಿಸಿದ ನೇಗಿಲು ಮುಂತಾದವುಗಳ ಉಪಯೋಗದಿಂದ ದೊರೆಯುವ ಪ್ರಯೋಜನವು ಗ್ರಾಮವಾಸಿಗಳಿಗೆ ಪ್ರತ್ಯಕ್ಷವಾಗಿಬೇಕೇ ಬೇಕು. ಗ್ರಾಮವಾಸಿ ಕೃಷಿಕರಿಗೆ ತನ್ನ ಮುಂದೆ ವ್ಯವಸಾಯ ಅಭಿವೃದ್ಧಿಯ ರೀತಿಗಳನ್ನು ತೋರಿಸಿ ಕೊಡಬೇಕಾದದ್ದೇ ಕೃಷಿ ಇಲಾಖೆಯ ಕೆಲಸವೆಂತ ನಾವು ಅನೇಕ ಸಾರಿ ಬರೆದಿದ್ದೇವೆ.

ಬೆಂಗಳೂರು ಒಂದು ಜಿಲ್ಲೆಯಲ್ಲೇ ಒಂದು ವರ್ಷದಲ್ಲಿ 600 ಸುಧಾರಿಸಿದ ನೇಗಿಲುಗಳು ರೈತರಿಂದ ಕೊಂಡುಕೊಳ್ಳಲ್ಪಟ್ಟವೆಂದೂ, ಒಟ್ಟು ಮೈಸೂರು ದೇಶದಲ್ಲಿ ಒಂದು ವರ್ಷದಲ್ಲಿ 3000 ನೇಗಿಲುಗಳು ರೈತರ ಉಪಯೋಗಕ್ಕೆ ಒಂದಿವೆಯೆಂತಲೂ, ಇದೇ ರೀತಿ ವೈಜ್ಞಾನಿಕ ಅಂದರೆ ಹಿಂಡಿ ಮುಂತಾದ ಗೊಬ್ಬರಗಳ ಉಪಯೋಗವೂ ಹೆಚ್ಚಾಗಿದೆಯೆಂತಲೂ ತಿಳಿಸಿರುತ್ತಾರೆ. ಹಿಂದೂಸ್ಥಾನದ ಬೇರೆ ಎಲ್ಲಾ ಭಾಗಗಳಿಗಿಂತಲೂ ಮೈಸೂರಿನಲ್ಲಿ ವ್ಯವಸಾಯ ಕ್ರಮವು ಹೆಚ್ಚು ಮುಂದುವರಿದಿದೆಯೆಂತ ಡಾಕ್ಟರವರು ಹೇಳಿರುತ್ತಾರೆ. ಕೃಷಿಕರು ಹೊಸ ಕ್ರಮವನ್ನು ಅನುಸರಿಸಲು ಬಹಳ ಹಿಂಜರಿಯುತ್ತಾರೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹೊಸ ಕ್ರಮದ ನೇಗಿಲುಗಳಿಗೂ, ಹೊಸ ನಮೂನೆಯ ಗೊಬ್ಬರಗಳಿಗೂ ನಗದಾಗಿ ಹಣ ಹಾಕಲು ರೈತರು ಮುಂದೆ ಬಂದಿದ್ದಾರೆಂದರೆ ಕೃಷಿ ಇಲಾಖೆಯ ಕೆಲಸವು ತೃಪ್ತಿಕರವಾಗಿ ಆಗುತ್ತಲಿದೆಯೆಂತ ನಾವೂ ಒಪ್ಪಬಹುದು. ಮೈಸೂರಿನಂಥ ದೊಡ್ಡ ಪ್ರಾಂತ್ಯಕ್ಕೆ 3000 ಹೊಸ ನೇಗಿಲುಗಳು ಎಲ್ಲಿಗೂ ಸಾಲದೆಂತಲೂ, ಕೊಡಗಿಗೆ ಸಮೀಪವಿರುವ ಮೈಸೂರು ಗ್ರಾಮಗಳಲ್ಲಿ ವ್ಯವಸಾಯದ ಕ್ರಮವೇನೂ ಸುಧಾರಿಸಿದಂತೆ ಕಂಡುಬರುವದಿಲ್ಲವೆಂತಲೂ ಶಂಕಿಸುವವರು ಇರಬಹುದು. ಡಾಕ್ಟರ್ ಕೋಲ್‌ಮ್ಯಾನರೂ ಸಹ ಆಗಬೇಕಾದ ಅಭಿವೃದ್ಧಿಯೆಲ್ಲಾ ಆಗಿದೆಯೆಂತ ಹೇಳಿರುವದಿಲ್ಲ. ವ್ಯವಸಾಯಗಾರರು ಈ ಇಲಾಖೆಯ ಕೆಲಸದ ಪ್ರಯೋಜನ ಹೊಂದಲು ಪ್ರಾರಂಭಿಸಿದರೆ ಇಲಾಖೆಯವರಿಗೆ ಕೆಲಸ ಮಾಡಲು ಉತ್ತೇಜನ ಸಿಕ್ಕುತ್ತದೆ. ಇಲಾಖೆಯವರಿಗೂ ರೈತರಿಗೂ ಅನ್ಯೋನ್ಯತೆಯು ಹೆಚ್ಚಿದರೆ ಇಲಾಖೆಯ ಕೆಲಸವು ಅತಿ ಶೀಘ್ರದಿಂದ ಬೆಳೆಯಲು ಸಹಾಯವಾಗುತ್ತದೆ.

ನಮ್ಮ ದೇಶಕ್ಕೂ ಮೈಸೂರು ಕೃಷಿ ಇಲಾಖೆಗೂ ಸ್ವಲ್ಪ ಮಟ್ಟಿಗೆ ಸಂಬಂಧವು ಈ ಮೊದಲೇ ಇದೆ. ನಮ್ಮ ದೇಶದ ಕಿತ್ತಳೆ ಬೋರರ್ ಹುಳದ ಕಾಟವನ್ನು ಅಜಮಾಯಿಸುವದಕ್ಕೆ ಮೈಸೂರು ಇಲಾಖೆಯ ಡಾಕ್ಟರ್ ಕೋಲ್‌ಮ್ಯಾನರ ಸಹಾಯ ತೆಗೆದುಕೊಳ್ಳಲಾಗಿತ್ತು. ಮೈಸೂರು ಕೃಷಿ ಇಲಾಖೆಯ ವೈಜ್ಞಾನಿಕ ಭಾಗದ ಆಫೀಸರೊಬ್ಬರು ನಮ್ಮ ದೇಶದ ಕೆಲವು ಕಾಫಿ ಪ್ಲಾಂಟರುಗಳಿಗೆ ತಮ್ಮ ಶಾಸ್ತ್ರಜ್ಞಾನದ ಉಪಯೋಗವನ್ನು ಕೊಡುತ್ತಿದ್ದಾರೆ. ಮೈಸೂರು ದೇಶದ ಮಲನಾಡು ಪ್ರಾಂತ್ಯದ ಸ್ಥಿತಿಯು ನಮ್ಮ ದೇಶದ ಸ್ಥಿತಿಯನ್ನು ಹೋಲುತ್ತದೆ. ಈ ಸಂಬಂಧ ನಮ್ಮ ದೇಶದಲ್ಲಿ ಪ್ರಯೋಜನಕರವಾದ ಇಲಾಖೆಯು ಸ್ಥಾಪನೆಯಾಗುವವರೆಗೆ ಮೈಸೂರು ಇಲಾಖೆಯ ಸಹಾಯವನ್ನು ಸರಕಾರವು ಹೆಚ್ಚುಹೆಚ್ಚಾಗಿ ಪಡಕೊಂಡರೆ ದೇಶದ ಮುಖ್ಯ ವೃತ್ತಿಯ ಅಭಿವೃದ್ಧಿಗೆ ಕೆಲವುಮಟ್ಟಿಗಾದರೂ ಸಹಾಯ ಮಾಡಲು ಸಾಧ್ಯವಾಗಬಹುದೆಂದು ತೋರುತ್ತದೆ.

ಸೈಮನ್ ಕಮಿಷನಿನ ಮೆಂಬರರೊಬ್ಬರು ಕ್ಷಮೆ ಬೇಡಿದರೆ!

ಸೈಮನ್ ಕಮಿಷನು ಕಳೆದ ಸಾರಿ ಇಂಡಿಯಾಕ್ಕೆ ಬಂದಿದ್ದಾಗ್ಯೆ ಅದರ ಮೆಂಬರುಗಳಲ್ಲಿ ಕೆಲವರು ಇಂಡಿಯಾದ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ನೋಡಿಕೊಂಡು ಹೋದರು. ಹೀಗೆ ನೋಡಿದವರ ಪೈಕಿ ಲೇಬರ್ ಪಾರ್ಟಿಯ ಒಬ್ಬ ಮೆಂಬರಾದ ಮಿ. ವರ್ನನ್ ಹಾರ್ಟ್‌ಶಾರ್ನ್‌ರವರು ಇಂಗ್ಲೆಂಡಿಗೆ ಹಿಂತಿರುಗಿದ ಮೇಲೆ ಒಂದೆರಡು ಭಾಷಣಗಳಲ್ಲಿ ಟಾಟಾ ಕಂಪೆನಿಯವರು ಅಲ್ಲಿಯ ಕೆಲಸಗಾರರನ್ನು ಹೀನ ರೀತಿಯಲ್ಲಿ ಇಟ್ಟುಕೊಂಡಿದ್ದಾರೆಂದು ಮುಂತಾಗಿ ಆ ಕಂಪೆನಿಯ ಧನಿಗಳ ಮೇಲೆ ಆಕ್ಷೇಪಕರವಾದ ಮಾತುಗಳನ್ನು ಆಡಿದ್ದರು. ಆ ಭಾಷಣಗಳು ಇಂಡಿಯಾದ ಪತ್ರಿಕೆಗಳಲ್ಲಿ ಪ್ರಕಟವಾದ ಕೂಡಲೇ ಆ ಆರೋಪಣೆಗಳು ನಿಜವಲ್ಲವೆಂತ ಹಲವರು ಖಂಡಿಸತೊಡಗಿದರು.

ರಾಯಲ್ ಕಮಿಷನಿನ ಮೆಂಬರೊಬ್ಬರು ಇಂಥಾ ನಿಜವಲ್ಲದ ಆರೋಪಣೆಗಳನ್ನು ಇಂಡಿಯಾದ ಒಂದು ಪ್ರಾಮುಖ್ಯ ಕಂಪೆನಿಯ ಮೇಲೆ ಹೊರಿಸಿದ್ದರಿಂದ ದೇಶದವರೆಲ್ಲರು ಅತೃಪ್ತಿಯನ್ನು ಸೂಚಿಸಿದರು. ಕಮಿಷನಿನ ಮರ್ಯಾದೆಯನ್ನು ಕಾಪಾಡಲಿಕ್ಕಾಗಿ ಆ ಮಾತುಗಳನ್ನು ಹಿಂತೆಗೆಯಬೇಕೆಂದು ಇಂಗ್ಲೆಂಡಿನ ಕೆಲವು ಮುಂದಾಳುಗಳು ಮಿ. ಹಾರ್ಟ್‌ಶಾರ್ನ್‌ರವರನ್ನು ಕೇಳಿಕೊಂಡರು. ಇದಲ್ಲದೆ ಅವರು ಅದಕ್ಕೆ ಈಗ ಒಪ್ಪದೆ ಇದ್ದಲ್ಲಿ ಅವರು ಕಮಿಷನಿನ ಮೆಂಬರುತನಕ್ಕೆ ರಾಜಿನಾಮೆ ಕೊಡಬೇಕೆಂದು ಸೂಚಿಸಿದರಂತೆ.

ಟಾಟಾ ಕಂಪೆನಿಯವರು ತಮಗುಂಟಾದ ಆಕ್ಷೇಪಣೆಯನ್ನು ಹೋಗಲಾಡಿಸಿಕೊಳ್ಳಬೇಕೆಂದು ಮಿ. ಹಾರ್ಟ್‌ಶಾರ್ನ್‌ರವರ ಮೇಲೆ ಮಾನನಷ್ಟದ ಮೊಕದ್ದಮೆಯನ್ನು ಹೂಡಿದರು. ಇವರಿಗೆ ಇಂಡಿಯಾದ ಜನಸಮುದಾಯದ ಬೆಂಬಲವು ಚೆನ್ನಾಗಿತ್ತು. ಕೋರ್ಟಿನಲ್ಲಿ ಮೇಲಿನ ಆರೋಪಣೆಗಳು ಆಧಾರವಿಲ್ಲದವೆಂದು ರುಜುವಾತಾದರೆ ರಾಯಲ್ ಕಮಿಷನಿಗೆ ಅಪಕೀರ್ತಿಯುಂಟಾಗುವದೆಂಬ ಭಯದಿಂದ ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕನ್ ಹೆಡ್ಡ್, ಲೇಬರ್ ಪಾರ್ಟಿಯ ಮುಖಂಡರಾದ ಮಿ. ರಾಮ್ಸೆ ಮೆಕ್ಡನಾಲ್ಡ್ ಮತ್ತು ರಾಯಲ್ ಕಮಿಷನಿನ ಅಧ್ಯಕ್ಷರಾದ ಸರ್ ಜಾನ್ ಸೈಮನ್, ಇವರೇ ಮೊದಲಾದವರು ತನ್ನ ಆರೋಪಣೆಯ ಮಾತುಗಳನ್ನು ವಾಪಾಸು ತೆಗೆಯುವಂತೆ ಮಿಸ್ಟರ್ ಹಾರ್ಟ್‌ಶಾರ್ನ್‌ರವರನ್ನು ಒತ್ತಾಯಪಡಿಸಿದರೆಂದು ವರ್ತಮಾನ ಸಿಗುತ್ತದೆ. ಹಾರ್ಟ್‌ಶಾರ್ನ್‌ರವರು ಈ ತಾ. 13ರಲ್ಲಿ ಲಂಡನಿನ ಒಂದು ಪಬ್ಲಿಕ್ ಮೀಟಿಂಗಿನಲ್ಲಿ 'ತಾನು ಚೆನ್ನಾಗಿ ವಿಚಾರಿಸಿದಲ್ಲಿ ಟಾಟಾ ಕಂಪೆನಿಯವರ ಮೇಲೆ ತಾನು ಹೊರಿಸಿದ ಆರೋಪಣೆಗಳು ಆಧಾರವಿಲ್ಲದವೆಂದು ಇತ್ತಲಾಗಿ ತಿಳಿಯಬಂದ ಕಾರಣ ಆ ಮಾತುಗಳನ್ನು ಆಡಿದಕ್ಕಾಗಿ ತಾನು ಮನಃಪೂರ್ವಕ ವ್ಯಸನಪಡುತ್ತೇನೆಂದೂ, ಅವುಗಳನ್ನು ವಾಪಾಸು ತೆಗೆದುಕೊಳ್ಳುತ್ತೇನೆಂದೂ' ಹೇಳಿದರೆಂದು ತಿಳಿಯಬರುತ್ತದೆ. ಆದರೆ ಟಾಟಾ ಕಂಪೆನಿಯವರು ಇನ್ನೂ ಮೊಕದ್ದಮೆಯನ್ನು ವಾಪಾಸು ತೆಗೆದುಕೊಂಡ ವರ್ತಮಾನವಿಲ್ಲ.

ರಾಯಲ್ ಕಮಿಷನಿನ ಮೆಂಬರಾದಂಥ ಪ್ರಾಮುಖ್ಯ ಮಹನೀಯರೊಬ್ಬರು ಆಧಾರವಿಲ್ಲದ ಆರೋಪಣೆಗಳನ್ನು ಹೊರಿಸುವರೆಂದು ಯಾರಾದರೂ ನಂಬುತ್ತಿದ್ದರೇ? ಆದರೆ ಟಾಟಾ ಕಂಪೆನಿಯವರು ಶೀಘ್ರದಲ್ಲೇ ಕೋರ್ಟಿಗೆ ಹೋದದ್ದೂ, ಅದಕ್ಕೆ ಇಂಡಿಯಾದ ಜನಸಮುದಾಯವು ಬೆಂಬಲವನ್ನು ಕೊಟ್ಟದ್ದೂ ಬ್ರಿಟಿಷ್ ಪಾರ್ಲಿಮೆಂಟ್ ಮೆಂಬರರ ಕಣ್ಣನ್ನು ತೆರೆಯಿಸಿತು. ಅವರು ತನ್ನ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಳ್ಳಲೇ ಬೇಕಾಯಿತು. ಮಿ. ಹಾರ್ಟ್‌ಶಾರ್ನ್‌ರವರು ತನ್ನ ತಪ್ಪನ್ನು ಒಪ್ಪಿಕೊಳ್ಳಲು ಇಷ್ಟು ತಡಮಾಡಿದ್ದು ಯೋಗ್ಯವಲ್ಲವೆಂತಲೂ, ಅವರು ಇನ್ನಾದರೂ ಸೈಮನ್ ಕಮಿಷನಿನ ಮೆಂಬರುತನಕ್ಕೆ ರಾಜಿನಾಮೆ ಕೊಡುವದು ಉಚಿತವೆಂತಲೂ ಇಂಡಿಯಾದ ಕೆಲವು ಇಂಗ್ಲಿಷ್ ಪತ್ರಿಕೆಗಳು ಸೂಚಿಸಿವೆ. ಈ ಸೂಚನೆಯು ಎಲ್ಲರಿಗೂ ಒಪ್ಪುವಂಥಾದೆಂಬದು ಒತ್ತಟ್ಟಿಗಿರಲಿ. ವಿಷಯಗಳನ್ನು ಚೆನ್ನಾಗಿ ತಿಳಿದುಕೊಳ್ಳದೆ ತಮ್ಮ ಮನಸ್ಸಿನ ಇಷ್ಟ ಬಹಿರಂಗವಾಗಿ ಪ್ರಸಿದ್ಧ ಕಂಪೆನಿಯ ಮೇಲೆ ಆಧಾರವಿಲ್ಲದ ಆರೋಪಣೆಗಳನ್ನು ಹೊರಿಸಲು ಹಿಂಜರಿಯದ ಮಹನೀಯರ ಕೈಗೆ ಹಿಂದೂದೇಶದ ಮುಂದಿನ ರಾಜಕೀಯ ಸುಧಾರಣೆಯ ತೀರ್ಮಾನವು ಬಿಟ್ಟಾಗಿದೆಯೆಂಬದು ಎಷ್ಟು ಶೋಚನೀಯವಾಗಿದೆ. ಇಂಥಾ ಮಹನೀಯರು ಯಾವ ತರದ ಶಿಫಾರಸ್ಸನ್ನು ಮಾಡುವರೆಂದು ಜನರು ಊಹಿಸಿಕೊಳ್ಳಬಹುದಲ್ಲವೇ? ಆದುದರಿಂದ ಇನ್ನಾದರೂ ಹಿಂದೀಯರೆಲ್ಲರೂ ಒಗ್ಗಟ್ಟಾಗಿ ಸೈಮನ್ ಕಮಿಷನನ್ನು ಸಂಪೂರ್ಣ ಬಹಿಷ್ಕರಿಸಿ ತಮ್ಮ ಸ್ವಾಭಿಮಾನವನ್ನು ಉಳಿಸಿಕೊಳ್ಳುವರಾಗಿ ನಂಬುತ್ತೇವೆ.

ಗ್ರಾಮಗಳ ಪುನರುದ್ಧಾರ.

(ಬರೆದು ಬಂದದ್ದು)

(ಈ ಲೇಖನದ ಸರ್ವ ಹಕ್ಕು ಲೇಖಕರದ್ದಾಗಿದೆ)

ಜನ ಭರಿತವಾದ ಹಿಂದೂಸ್ಥಾನದಲ್ಲಿ ಶೇಕಡ 90 ಜನರು ಗ್ರಾಮ ನಿವಾಸಿಗಳಾಗಿ ಕೃಷಿಯನ್ನೇ ಅವಲಂಬಿಸಿರುವ ರೈತರಾಗಿದ್ದಾರೆ. ಗ್ರಾಮಗಳಿಂದ ನಿಬಿಡವಾಗಿ ರೈತರಿಂದಲೇ ತಿಕ್ಕಿರಿದು ಹೋಗಿದ್ದರೂ, ಹಿಂದೂಸ್ಥಾನದಲ್ಲಿ ಇಂದು ಗ್ರಾಮದ ಸ್ಥಿತಿಗತಿಗಳನ್ನು ಕೇವಲ ಭೂತದಯೆದೃಷ್ಟಿಯಿಂದಲೇ ಸ್ವಲ್ಪ ಮಟ್ಟಿಗೆ ಪರಿಶೀಲಿಸಿದರೂ ಆತ ರೈತರ ಹಿತಚಿಂತಕನಾದ ಮಾನವನ ಮನವು ಕರಗದೆ ಇರದು. ನಮ್ಮ ಗ್ರಾಮಗಳ ಅವಸ್ಥೆಯು ಬಹಳ ದುರ್ದೆಶೆಯಲ್ಲಿದೆ. ಇತರ ಪ್ರಾಂತ್ಯಗಳಲ್ಲಿ ವ್ಯವಸಾಯ ಶಿಕ್ಷಿತರಾದ ದೇಶದ ಹಿತೈಷಿಗಳು ಗ್ರಾಮಾವಸ್ಥೆಯನ್ನೂ ಪರಿಶೋಧಿಸಿ ಪ್ರಕಟಿಸಿರುವ ಸಿದ್ಧಾಂತಗಳು ಶೋಚನೀಯವಾಗಿವೆ.

ವ್ಯವಸಾಯಗರ್ಭಿತವಾಗಿ ಕೈಗಾರಿಕೆಗಳಿಗೆ ಆಧಾರವಾದ ಈ ಗ್ರಾಮಗಳಲ್ಲಿ ಕಾಲಕ್ಷೇಪ ಮಾಡುವ ಗ್ರಾಮವಾಸಿಗಳು ಯಾವ ಕಾರಣದಿಂದ ಇಂಥಾ ದುಃಸ್ಥಿತಿಯಲ್ಲಿ ಬಿದ್ದಿರುವರೆಂದೂ ಇಂಥಾ ದರಿದ್ರಾವಸ್ಥೆಯಿಂದ ಗ್ರಾಮಗಳನ್ನು ಪುನರುದ್ಧಾರಮಾಡಿ, ಹಿಂದೂಸ್ಥಾನದ ಗತವೈಭವವು ಕಳೆಯೇರುವಂತೆ ಮಾಡಲು ಸಾಧ್ಯವೋ? ಎಂಬ ವಿಷಯಗಳನ್ನು ವಿಮರ್ಶಿಸುವುದೇ ಈ ಲೇಖನದ ಮುಖ್ಯೋದ್ದೇಶವಾಗಿದೆ.

ಹಿಂದಿನ ಶತಮಾನಗಳ ಗ್ರಾಮ ಸ್ಥಿತಿಯನ್ನು ಪರಿಶೀಲಿಸಿದರೆ ಅಂದು ಗ್ರಾಮದ ರೈತರು ಇಷ್ಟು ಹೀನ ಸ್ಥಿತಿಯಲ್ಲಿ ಇರಲಿಲ್ಲವೆಂದು ವ್ಯಕ್ತವಾಗುವುದು. ರೈತರು ಚಿಕ್ಕ ಪುಟ್ಟ ಕೈಗಾರಿಕೆಗಳನ್ನು ಕೈಗೊಂಡು ಸಾಧಕ ಸಾಮಗ್ರಿಗಳನ್ನು ತಾವೇ ಉಪಯೋಗಿಸಿಕೊಂಡು, ಗ್ರಾಮವನ್ನು ಸಿದ್ಧ ಪದಾರ್ಥಗಳ ಉಗ್ರಾಣವಾಗಿಯೇ ಮಾಡಿ ಸರಳ ಜೀವನ ಮಾಡುತ್ತಿದ್ದರು. ಚೆನ್ನಾಗಿ ಉಂಡು ತಿಂದು ದೃಢಕಾಯರಾಗಿ ಬೆಳೆದು, ಗಟ್ಟಿಮುಟ್ಟಾದ ಹೋರಿಗಳನ್ನು ಬಲವಾದ ನೇಗಿಲಿಗೆ ಕಟ್ಟಿ ಆಳವಾಗಿ ಉತ್ತು, ಹುಲುಸಾದ ಪೈರನ್ನು ಬೆಳೆಯಿಸಿ, ಧಾನ್ಯವನ್ನು ಲಾಭದಿಂದ ವಿಕ್ರಯಿಸಿ, ಸಾಲ ಕಡವಿಲ್ಲದೆ ಜೀವಿಸುತ್ತಿದ್ದರು. ಕೇವಲ ಬಾಂಧವ್ಯವಾತ್ಸಲ್ಯದಿಂದ ನೆರೆಯವರೊಂದಿಗೂ, ಊರಿನವರೊಂದಿಗೂ ಸಹಾನುಭೂತಿಯಿಂದ ನಡೆದು ಸಂತೋಷದಿಂದಿರುತ್ತಿದ್ದರು.

ಪೂರ್ವಿಕರ ಸ್ಥಿತಿಯಿಂದ ನಮ್ಮ ಸ್ಥಿತಿಗೆ ದೃಷ್ಟಿಯನ್ನು ತಿರುಗಿಸಿದರೆ ಈಗ ಎಲ್ಲಿ ನೋಡಿದರೂ ಗ್ರಾಮವಾಸಿಗಳು ಹೊಟ್ಟೆಗೂ ಬಟ್ಟೆಗೂ ಇಲ್ಲದ ಮಲೇರಿಯಾ ಜ್ವರ ಪೀಡಿತರಾಗಿ ನರಳುವುದು ಕಾಣಬರುವುದು. ಅಲ್ಲದೆ ಅರ್ಜಿಸಿ ತೀರದು ಸಾಧಿಸಿದ ಸಂಬಳವನ್ನು ಸಾಲಗಾರನಿಗೆ ತೆತ್ತು ನೆರೆಯುವನಿಗೆ ತನ್ನ ಭೂಮಿಯನ್ನು ಸಾಲಕ್ಕಾಗಿ 'ಗಿರವಿ' ಅಥವ 'ಭೋಗ್ಯ' ಪತ್ರಗಳ ಬರೆದು ಕೊಟ್ಟು, ನಿರಂತರವು ದುಃಖ ಸಾಗರದಲ್ಲಿ ಮಗ್ನರಾಗಿರುವರು. ದರಿದ್ರ ರಾಕ್ಷಸನಿಂದ ಬಾಧಿಸಲ್ಪಟ್ಟವರಾಗಿ ಹಿಂದಿನ ವರ್ಷಗಳಲ್ಲಿ ಉತ್ತು ಸವೆದು ಹೋದ ಹಳೆಯ ನೇಗಿಲುಗಳಿಗೆ ಬಡಕಲು ಎತ್ತುಗಳನ್ನು ಕಟ್ಟಿ ಮೇಲೆ ತಪ್ಪಿ ಭೂಮಿಯನ್ನು ಆಳವಾಗಿ ಉಳದೆ ಹೆಸರಿಗೆ ಮಾತ್ರ ಭೂಮಿಯನ್ನು ಉತ್ತು ಬಿತ್ತಿ ವ್ಯವಸಾಯ ಮಾಡುವರು. ಹೀಗೆ ಅಸಡ್ಡೆಯಿಂದ ವ್ಯವಸಾಯ ಮಾಡಿ 10 ಮುಡಿ ಬೆಳೆಯುವಲ್ಲಿ 2 ಮುಡಿ ಧಾನ್ಯವನ್ನು ಬೆಳೆದು ಸಾಲಗಾರನಿಗೆ ತಲೆತಪ್ಪಿಸಿಕೊಂಡು ಅಲೆದಾಡುತ್ತಿರುವರು. ಈ ಅಧೋಗತಿಯಿಂದ ಗ್ರಾಮ ನಿವಾಸಿಗಳು ಯಾವಾಗ ಚೇತರಿಸಿಕೊಂಡು ಉಚ್ಛಸ್ಥಿತಿಗೆ ಬಂದು ಪೂರ್ವಿಕರಂತೆ ಸುಖಜೀವಿಗಳಾಗುವರೋ ಅದು ಹಿಂದೂಸ್ಥಾನದ ಕಷ್ಟವು ನಿವಾರಣೆಯಾಗುವುದು.

(ಸಶೇಷ)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ ನೇ ಭಾಗದಲ್ಲಿ ೮೫ನೇ ಪ್ರಕರಣ.

ಮೋಸ ?

ನನ್ನ ಸಲಹೆಯ ವಿಷಯದಲ್ಲಿಯೇನೋ ನನಗೆ ಸ್ವಲ್ಪವೂ ಸಂಶಯವಿರಲಿಲ್ಲ. ಆದರೆ ಮೊಕದ್ದಮೆಯನ್ನು ಸರಿಯಾಗಿ ನಡೆಸುವುದಕ್ಕೆ ನನಗಿರುವ ಯೋಗ್ಯತೆಯ ವಿಷಯದಲ್ಲಿ ನಾನು ಬಹು ಸಂದೇಹಪಟ್ಟೆನು. ಇಂತಹ ಕಷ್ಟವಾದ ಮೊಕದ್ದಮೆಯನ್ನು ಶ್ರೇಷ್ಠನ್ಯಾಯಸ್ಥಾನದ ಮುಂದೆ ವಾದಿಸುವುದು ಅತಿ ಸಾಹಸದ ವಿಷಯವೆಂದು ನನಗೆ ತೋರುತ್ತಿದ್ದಿತು. ನಾನು ಅಧೈರ್ಯದಿಂದ ಕಂಪಿಸುತ್ತಾ ನ್ಯಾಯಾಧೀಶರ ಮುಂದೆ ನಿಂತೆನು.

ಲೆಕ್ಕ ಪತ್ರದಲ್ಲಿದ್ದ ತಪ್ಪಿನ ವಿಚಾರವನ್ನು ಹೇಳುತ್ತಲೇ ಒಬ್ಬರು ನ್ಯಾಯಾಧೀಶರು (ಶ್ರೇಷ್ಠನ್ಯಾಯಸ್ಥಾನದಲ್ಲಿ ಕೆಳಗಿನ ನ್ಯಾಯಸ್ಥಾನದ ತೀರ್ಪಿನ ಮೇಲೆ ಹೋಗಿರುವ ಮೊಕದ್ದಮೆಗಳನ್ನು ಇತ್ಯರ್ಥಮಾಡಲು ಸಾಮಾನ್ಯವಾಗಿ ಇಬ್ಬರು ನ್ಯಾಯಾಧೀಶರು ಕೂಡುತ್ತಾರೆ) "ಗಾಂಧಿಯವರೇ ಇದು ಮೋಸವಲ್ಲವೇ?" ಎಂದು ಕೇಳಿದರು.

ಈ ಅಪವಾದನೆಯನ್ನು ಕೇಳಿ ನಾನು ಒಳಗೇ ರೋಷದಿಂದ ಕುದಿದೆನು. ಏನೇನೂ ಆಧಾರವಿಲ್ಲದಿರುವಾಗ ಮೋಸದ ಆರೋಪಣೆಯನ್ನು ಹೊರುವುದು ಸಹನಾತೀತವಾಗಿದ್ದಿತು.

'ಮೊಟ್ಟಮೊದಲಿನಿಂದ ಈ ರೀತಿಯಾಗಿ ಮನಸ್ಸು ಕೆಟ್ಟಿರುವ ನ್ಯಾಯಾಧೀಶರ ಮುಂದೆ ಈ ಕಷ್ಟವಾದ ಮೊಕದ್ದಮೆಯನ್ನು ನಾನು ವಾದಿಸಿ ಗೆಲ್ಲುವ ಸಂಭವವೆಲ್ಲಿ?' ಎಂದು ನನ್ನಲ್ಲಿ ನಾನೇ ಹೇಳಿಕೊಂಡೆನು. ಆದರೆ ಹೀಗೆ ಅಶಾಂತವಾದ ಮನಸ್ಸನ್ನು ಸಮಾಧಾನಕ್ಕೆ ತಂದು "ನಾನು ಹೇಳುವುದನ್ನು ಸಂಪೂರ್ಣವಾಗಿ ಕೇಳುವ ತಾವು ಮೋಸವನ್ನು ಶಂಕಿಸುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ !" ಎಂದು ಉತ್ತರಕೊಟ್ಟೆನು.

"ನಾನೇನನ್ನೂ ಆರೋಪಿಸಲಿಲ್ಲ ನಾನು ಹೇಳಿದುದು ಕೇವಲ ಸೂಚನೆ." ಎಂದರು ನ್ಯಾಯಾಧೀಶರು.

"ತಮ್ಮ ಸೂಚನೆಯು ಈ ಸಂದರ್ಭದಲ್ಲಿ ಆರೋಪಣೆಯಾಗಿದೆಯೆಂದು ನನಗೆ ತೋರುತ್ತದೆ. ತಾವು ನಾನು ಹೇಳುವುದನ್ನು ಸಂಪೂರ್ಣವಾಗಿ ಕೇಳಿ ಆ ಮೇಲೆ ಕಾರಣ ತೋರದಿದರೆ ನನ್ನಮೇಲೆ ತಪ್ಪು ಹೊರಿಸಬಹುದೆಂದು ಕೋರುತ್ತೇನೆ.'

"ನೀವು ಮಾತಾಡುತ್ತಿದ್ದಾಗ ಅಡ್ಡ ಬಂದುದಕ್ಕೆ ನಾನು ವಿಷಾದಿಸುತ್ತೇನೆ ಲೆಕ್ಕ ಪತ್ರದಲ್ಲಿ ತಪ್ಪು ಹೇಗೆ ಬಿದ್ದಿತೆಂಬುದನ್ನು ನೀವು ವಿವರಿಸುತ್ತಿದ್ದಿಲ್ಲ, ಅದನ್ನು ದಯೆಯಿಟ್ಟು ಮುಂದುವರಿಸಿ' ಎಂದು ನ್ಯಾಯಾಧೀಶರು ಹೇಳಿದರು.

ಲೆಕ್ಕ ಪತ್ರದಲ್ಲಿ ತಪ್ಪುಬಿದ್ದುದಕ್ಕೆ ಸಮಾಧಾನ ಹೇಳಲು ನನ್ನಲ್ಲಿ ಸಾಕಾದಷ್ಟು ಸಾಮಗ್ರಿಯಿದ್ದಿತು. ನ್ಯಾಯಾಧೀಶರು ಈ ಪ್ರಶ್ನೆಯನ್ನು ಎತ್ತಿದುದರಿಂದ ಮೊಟ್ಟಮೊದಲಿನಿಂದ ನ್ಯಾಯಸ್ಥಾನವು ನನ್ನ ವಾದವನ್ನು ಗಮನಿಸಿ ಕೇಳುವಂತೆ ಮಾಡಲು ನನಗೆ ಸಾಧ್ಯವಾಯಿತು. ಇದರಿಂದ ನನಗೆ ಧೈರ್ಯ ಬಂದು ಸಮಾಧಾನವನ್ನು ವಿವರವಾಗಿ ಹೇಳಲು ಈ ಅವಕಾಶವನ್ನು ಉಪಯೋಗಿಸಿದೆನು. ನ್ಯಾಯಾಧೀಶರು ನಾನು ಹೇಳಿದ್ದನ್ನು ತಾಳ್ಮೆಯಿಂದ ಕೇಳಿದರು. ಲೆಕ್ಕದಲ್ಲಿ ಕಂಡು ಬಂದ ಹೆಚ್ಚು ಕಡಿಮೆಯು ಕೇವಲ ಅಜಾಗರೂಕತೆಯ ಫಲವೆಂದು ನ್ಯಾಯಾಧೀಶರು ಮನಗಾಣುವಂತೆ ಮಾಡಲು ನನಗೆ ಶಕ್ಯವಾಯಿತು. ಪಂಚಾಯಿತರು ಬಹು ಶ್ರಮಪಟ್ಟು ಸಿದ್ಧಪಡಿಸಿದ್ದ ನಿರ್ಣಯವನ್ನು ಸಂಪೂರ್ಣವಾಗಿ ಹೊಡೆದುಹಾಕುವುದು ಅವರ ಮನಸ್ಸಿಗೆ ಒಪ್ಪಲಿಲ್ಲ.

ಇದಿರು ಪಕ್ಷದ ವಕೀಲರು ನಾವು ಲೆಕ್ಕ ಪತ್ರದಲ್ಲಿ ತಪ್ಪನ್ನು ಒಪ್ಪಿಕೊಂಡ ಮೇಲೆ ತಾವು ಹೆಚ್ಚಾಗಿ ವಾದಿಸಬೇಕಾದುದಿಲ್ಲವೆಂಬ ನಂಬಿಕೆಯ ಆಶ್ರಯದಲ್ಲಿ ಸ್ವಸ್ಥಚಿತ್ತರಾಗಿದ್ದಂತೆ ಕಂಡಿತು. ಆದರೆ ನ್ಯಾಯಾಧೀಶರಿಗೆ ಆ ತಪ್ಪು ಕೇವಲ ಕ್ಷುಲ್ಲಕವೆಂದೂ ಅದನ್ನು ಸುಲಭವಾಗಿ ತಿದ್ದಬಹುದೆಂದೂ ಮನವರಿಕೆಯಾಗಿದ್ದುದರಿಂದ ಅವರು ಆ ವಕೀಲರ ವಾದವನ್ನು ಬಗ್ಗಾಗ ಸಿಲ್ಲಿಸುತ್ತಿದ್ದರು. ವಕೀಲರು ಪಂಚಾಯಿತರ ತೀರ್ಪಿನಲ್ಲಿ ಹುಳುಕು ಕಂಡು ಹಿಡಿಯಲು ಬಹು ಪ್ರಯತ್ನಪಟ್ಟರು. ಆದರೆ ಮೊಟ್ಟಮೊದಲು ನನ್ನ ಮೇಲೆ ಸಂಶಯಪಟ್ಟಿದ್ದ ನ್ಯಾಯಾಧೀಶರೇ ಈಗ ಸಂಪೂರ್ಣವಾಗಿ ನನ್ನ ಕಡೆಗೆ ತಿರುಗಿದರು.

"ಗಾಂಧಿಯವರು ಲೆಕ್ಕದ ತಪ್ಪನ್ನು ಒಪ್ಪಿಕೊಂಡಿಲ್ಲದಿದ್ದರೆ ಆಗ ನೀವು ಏನು ಮಾಡುತ್ತಿದ್ದಿರಿ?" ಎಂದು ಅವರು ಕೇಳಿದರು.

"ನಾವು ನಿಯಮಿಸಿದ ಗೃಹಸ್ಥರಿಗಿಂತಲು ಹೆಚ್ಚು ಯೋಗ್ಯವಾದ ಹೆಚ್ಚು ಪ್ರಾಮಾಣಿಕರಾದ ಆಯವ್ಯಯ ಶಾಸ್ತ್ರನಿಪುಣರನ್ನು ಪಡೆಯಲು ನಮಗೆ ಸಾಧ್ಯವಿರಲಿಲ್ಲ."

"ನಿಮ್ಮ ಪಕ್ಷವು ಎಲ್ಲರಿಗಿಂತ ಚೆನ್ನಾಗಿ ನಿಮಗೇ ಗೊತ್ತಿರುವುದೆಂದು ನ್ಯಾಯಸ್ಥಾನವು ಎಣಿಸಬೇಕು. ಯಾವ ಪ್ರವೀಣನಾಗಲಿ ಮಾಡಬಹುದಾದ ತಪ್ಪನ್ನು ಹೊರತು ಇನ್ನೇನನ್ನೂ ನೀವು ತೋರಿಸಲಾರಿರಾದರೆ ಸ್ಪಷ್ಟವಾಗಿ ಅಜಾಗರೂಕತೆಯಿಂದ ಉಂಟಾದ ಈ ತಪ್ಪಿಗಾಗಿ ಪುನಃ ಜಗಳವನ್ನು ಪ್ರಾರಂಭಿಸುವುದಕ್ಕೂ, ವೆಚ್ಚ ಮಾಡುವುದಕ್ಕೂ ಪಕ್ಷಗಾರರನ್ನು ಬಲಾತ್ಕಾರ ಪಡಿಸಲು ನ್ಯಾಯಸ್ಥಾನವು ಹಿಂತೆಗೆಯುವುದು. ಅಂತಹ ತಪ್ಪನ್ನು ಸುಲಭವಾಗಿ ತಿದ್ದಲು ಸಾಧ್ಯವಿರುವಾಗ ವ್ಯವಹಾರವನ್ನು ಪುನಃ ನೋಡಲು ಹೊಸದಾಗಿ ಕೊಡಬೇಕೆಂದು ನಾವು ಆಜ್ಞೆ ಮಾಡಲಾರೆವು." ಎಂದು ನ್ಯಾಯಾಧೀಶರು ಹೇಳಿದರು.

ಹೀಗೆ ಇದಿರು ಪಕ್ಷದ ವಕೀಲರ ಅಭ್ಯಂತರವನ್ನು ಒಪ್ಪಲಿಲ್ಲ. ಆ ತಪ್ಪನ್ನು ತಿದ್ದಿ ನ್ಯಾಯಸ್ಥಾನವು ಪಂಚಾಯಿತರ ನಿರ್ಣಯವನ್ನು ಸ್ಥಿರಪಡಿಸಿತು. ಅಥವಾ ಆ ತಪ್ಪನ್ನು ತಿದ್ದಬೇಕೆಂದು ಪಂಚಾಯಿತರಿಗೆ ಅಪ್ಪಣೆಮಾಡಿತು. ಇವೆರಡರಲ್ಲಿ ಯಾವುದು ನಡೆಯಿತೆಂಬುದು ನನಗೆ ಮರೆತು ಹೋಗಿದೆ.

ನನ್ನ ಹರ್ಷಕ್ಕೆ ಪಾರವೇ ಇರಲಿಲ್ಲ. ನನ್ನ ಕಕ್ಷಿಗಾರರಿಗೂ ಹಿರಿಯ ವಕೀಲರಿಗೂ ಅಷ್ಟೇ ಸಂತೋಷವಾಯಿತು. ಸತ್ಯಕ್ಕೆ ಭಂಗತರದೆ ವಕೀಲ ಉದ್ಯೋಗವನ್ನು ನಡೆಸುವುದು ಅಸಾಧ್ಯವಲ್ಲವೆಂಬ ನನ್ನ ನಂಬಿಕೆಯು ದೃಢಪಟ್ಟಿತು.

ಆದರೆ ಆ ಉದ್ಯೋಗದ ಮೂಲದಲ್ಲಿಯೇ ಇದ್ದ ಅನ್ಯಾಯ ಕಡಿಸುವ ದೋಷವು ಮೊಕದ್ದಮೆಗಳನ್ನು ನಡೆಸುವುದರಲ್ಲಿ ಸತ್ಯವನ್ನು ಪಾಲಿಸುವುದರಿಂದ ಕೂಡ ನಿವಾರಣೆಯಾಗುವುದಿಲ್ಲವೆಂಬುದನ್ನು ವಾಚಕರು ನೆನಪಿನಲ್ಲಿಡಲಿ.

ಭರತಖಂಡದ ವ್ಯಕ್ತಿತ್ವ.

ಈ ತಿಂಗಳು 7 ನೇ ತಾರೀಕಿನಲ್ಲಿ ಬೆಂಗಳೂರು ವಿದ್ಯಾರ್ಥಿ ಸೊಸೈಟಿಯ ವಾರ್ಷಿಕ ಸಮಾರಂಭದಲ್ಲಿ ಅಧ್ಯಕ್ಷರಾಗಿದ್ದ ಬ್ರಿಟಿಷ್ ರೆಸಿಡೆಂಟ್ ಮತ್ತು ಕೊಡಗಿನ ಚೀಫ್ ಕಮಿಷನರಾದ ಮಿ|| ಕ್ರಂಪ್‌ರವರು ಭರತಖಂಡದ ವ್ಯಕ್ತಿತ್ವದ ವಿಚಾರದಲ್ಲಿ ಅರ್ಥಗರ್ಭಿತವಾದ ಕೆಲವು ಅಂಶಗಳನ್ನು ಇಂಗ್ಲೀಷಿನಲ್ಲಿ ಹೇಳಿದರು. ನಮ್ಮ ಕನ್ನಡ ವಾಚಕ ಮಹಾಶಯರ ಸಲುವಾಗಿ, ಆ ಸ್ವಾರಸ್ಯವಾದ ಭಾಷಣದ ಸಾರಾಂಶವನ್ನು ಇಲ್ಲಿ ಕೊಟ್ಟಿದ್ದೇವೆ. ಈಗ ತಾನೇ ಬಂದ ನಮ್ಮ ಹಂಗಾಮಿ ಚೀಫ್ ಕಮಿಷನರು ಬೆಂಗಳೂರಿನಲ್ಲಿ ಹೇಳಿದ ಈ ಕೆಳಗಿನ ವಿಷಯಗಳನ್ನು ಎಲ್ಲರೂ ಹುಸನಮಾಡಿಕೊಳ್ಳುವರೆಂದೇ ನಮ್ಮ ಭಾವನೆ.

"ಮೂರು ನಾಲ್ಕು ವರ್ಷಗಳ ಹಿಂದೆ ಭರತ ಖಂಡದ ವಿಷಯದಲ್ಲಿ ಮಾತನಾಡುತ್ತ ನಾನು ಭರತ ಖಂಡವು ತನ್ನ ಕಾಲುಗಳ ಮೇಲೆ ನಿಲ್ಲಲಾರದ ದೇಶ"ವೆಂದು ಹೇಳಿದ್ದೆನು. ಹಾಗೆಂದರೆ, ನಾನು ಸದ್ಯದ ರಾಜಕೀಯ ಚಳವಳನ್ನಾಗಲಿ, ರಾಜಕೀಯ ವಿಷಯವನ್ನಾಗಲಿ ಪ್ರಸ್ತಾಪಿಸಲಿಚ್ಛಿಸುವುದಿಲ್ಲ. ಆದರೂ ಹಿಂದೂಸ್ಥಾನವು ತನ್ನ ಕಾಲುಗಳ ಆಧಾರದ ಮೇಲೆ ನಿಲ್ಲುವ ಸಂದರ್ಭವು ಬಂದರೆ ಅದು ಬ್ರಿಟಿಷ್ ಸಾಮ್ರಾಜ್ಯದ ಆಳಿಕೆಯ ಫಲವೆಂದ ಹೇಳುತ್ತೇನೆ.

ನಿಮ್ಮ ಈ ಸಮಾಜವು ಭರತ ಖಂಡದ ಕುಶಲ ಕಲೆಗಳೆಂದರೆ ಶಿಲ್ಪ, ಸಾಹಿತ್ಯ, ಮತವೇ ಮೊದಲಾದ ವಿಚಾರಗಳಿಗೆ ಹೆಚ್ಚು ಸಂಬಂಧಪಟ್ಟದಾಗಿರುವುದರಿಂದ ಸದ್ಯಕ್ಕೆ ಆ ವಿಷಯಗಳನ್ನೇ ಕುರಿತು ಪ್ರಸ್ತಾಪಿಸುತ್ತೇನೆ. ಇಂಥಾ ವಿಷಯಗಳಲ್ಲಿ ಹಿಂದೂಸ್ಥಾನವು ಪೂರ್ವದಿಂದಲೂ ಸ್ವಾವಲಂಬಿಯಾಗಿಯೇ ಇದೆ. ಅಲ್ಲದೆ ಪ್ರಪಂಚದಲ್ಲೆಲ್ಲಾ ಪುರಾತನವಾದ ಮತವನ್ನು ಸ್ಥಾಪಿಸಲ್ಪಟ್ಟದ್ದು ಹಿಂದೂಸ್ಥಾನದಲ್ಲಿ ಅಲ್ಲದೆ ಬೇರೆಯಲ್ಲ. ಅದರ ಆಧಾರದಿಂದ ಶ್ರೇಷ್ಠವಾದ ಬೌದ್ಧ ಮತವು ಸ್ಥಾಪಿಸಲ್ಪಟ್ಟಿತು. ಹಿಂದೂಸ್ಥಾನದಲ್ಲಿ ಈಗ ಹೆಚ್ಚಾಗಿ ಆಚರಣೆಯಲ್ಲಿಲ್ಲದಿದ್ದರೂ ಜೈನಾ, ಟಿಬೆಟ್, ಸಿಲೋನ್, ಬರ್ಮಾ ಮುಂತಾದ ದೇಶಗಳಲ್ಲಿ ಈ ಮತವು ಆಚರಣೆಯಲ್ಲಿರುವುದರಿಂದ ಹಿಂದೂಸ್ಥಾನದ ಗುರುಭಾವತ್ವ ಕಂಡುಬರುತ್ತಿದೆ.

ಮಹಾಭಾರತ ರಾಮಾಯಣ ಮುಂತಾದ ಪುರಾತನವಾದ ಪುರಾಣಗಳೂ, ಕಾಳಿದಾಸನ ಶಾಕುಂತಲ ಮುಂತಾದ ನಾಟಕಗಳೂ ಹಿಂದೂಸ್ಥಾನದಲ್ಲಿಯೇ ಉತ್ಪನ್ನವಾದುವು. ತಿಳಿದಿರುವಲ್ಲೆಲ್ಲಾ ಹಿಂದೂಸ್ಥಾನದ ಉತ್ತಮ ಶಿಲ್ಪಕಲೆಯು ದೃಷ್ಟಿಗೆ ಹಿಂದೂಸ್ಥಾನದ ವ್ಯಕ್ತಿತ್ವವನ್ನು ಸ್ಥಾಪಿಸಿದೆ. ಈ ಸಂಬಂಧದಲ್ಲಿ ನಿರ್ಮಿತವಾದ ದೇವಾಲಯಗಳನ್ನು ನೋಡಿದ್ದರೂ ಜಾನಕೀಯ ಪತ್ತೆಯನ್ನು ಹೊರಗೆಡಿಸುವಂತಿದೆ. ಚಿತ್ರಕಲೆಯು ಚೀನಾದಲ್ಲಂತೆ ಉನ್ನತವಾಗಿಯಾಗಿ ಅನೇಕ ವರ್ಷಗಳಿಂದ ನಿಂತಿರುವ ಅಜಂತ ಎಲ್ಲೋರದ ಗುಹೆಗಳೇ ಸಾಕ್ಷಿಯಾಗಿವೆ. ಮೊಗಲರ ಆಳಿಕೆಯಿಂದಲೇ ಚಿತ್ರಕಲೆಯು ಅನೇಕ ಮಾರ್ಪಾಡುಗಳನ್ನು ಹೊಂದಿದ್ದರೂ ಕಾರ್ಯತಃ ಹಿಂದೂಸ್ಥಾನದ ವ್ಯಕ್ತಿತ್ವವು ಪೂರ್ಣ ನಾಶ ಹೊಂದಿರುವುದಿಲ್ಲ.

ಯಾವ ಮೂಲವನ್ನೇ ಆಗಲಿ ಆದರ ವ್ಯಾಪ್ತಿಯೇ ಆಗಲಿ ತನ್ನ ಕಾಲುಗಳ ಆಧಾರದ ಮೇಲೆ ನಿಲ್ಲುವುದು ... ಕಲೆಯು ಉಳಿದಿರುವುದು ... ಹಿಂದೂಸ್ಥಾನದ ವಿಶಿಷ್ಟ ಸಂಪ್ರದಾಯಗಳು ... ಹಿಂದೂಸ್ಥಾನದ ವಿಶಿಷ್ಟ ಕಲೆಗಳು ಸಂಬಂಧವಾಗಿ ಪಡೆ ... ಪಾಶ್ಚಾತ್ಯ ಜನರೀಯರಿಗೆ ಪ್ರತಿಕ್ರಿಯೆಯಲ್ಲಿ ಅಭಿನಂದನೆ ಕಲೆಯೆಂದೇ ನನ್ನ ಮನಸ್ಸಿಗೆ ಹೊಳೆಯುತ್ತದೆ. ಇದರಿಂದ ಭಾರತೀಯರು ಸ್ವಶಕ್ತಿಯನ್ನು ಹೊರಗೆಡಹುವಾಗ ಒಂದು ವಿಧವಾದ ಅಭ್ಯಾಸವನ್ನು ತೋರಿಸುತ್ತಿರುವರೆಂದೇ ಹೇಳಬಹುದು.

ಬರೆದಿರುವ ಚರಿತ್ರೆಯು ಇಲ್ಲದಿರುವ ಕಾಲದಲ್ಲೂ ಅಜಂತ, ಎಲ್ಲೋರ ಮುಂತಾದ ಚಿತ್ರಗಳಿಂದ ಏಷ್ಯಾ ಖಂಡದ ನಾನಾಭಾಗಗಳಿಂದ ಕುಶಲ ಕಲಾಪ್ರವೀಣರು ಹಿಂದೂರಾಜರ ಆಸ್ಥಾನಗಳಿಗೆ ಬರುತ್ತಿದ್ದರೆಂದೂ ಗೊತ್ತಾಗುವುದು. ಸಾಂಚಿ, ಅಮರಾವತಿ ಮುಂತಾದ ರಾಜಧಾನಿಗಳಲ್ಲಿರುವ ಕಂಬಗಳಿಂದ ಸಿರಿಯನ್ ಮುಂತಾದ ಕಥೆಗಳ ಕುಶಲ ಕಲಾಪ್ರವೀಣರ ಸಂಪರ್ಕದ ಪರಿಣಾಮವು ಹಿಂದೂಸ್ಥಾನದ ಶಿಲ್ಪಕಲೆಯಲ್ಲಿ ವ್ಯಕ್ತವಾಗುವುದು. ಈ ರೀತಿ ಇನ್ನೂ ಅನೇಕ ಸಂಗತಿಗಳನ್ನು ಗುರುತಿಸಿ ಹೆಚ್ಚಾಗಿ ವಿವರಿಸಬಹುದು. ಆದರೆ ನಾನು ಮುಖ್ಯವಾಗಿ ಹೇಳಬೇಕಾಗಿರುವುದೇನೆಂದರೆ, ಹಿಂದೂಸ್ಥಾನದ ಕಲೆಗಳು ಪರದೇಶೀಯರ ಸಂಪರ್ಕದಿಂದ ಮಾರ್ಪಾಟು ಹೊಂದಿದರೂ ನನ್ನುತನ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳಲಿಲ್ಲ. ಕವಿಗಳಲ್ಲಿಯೂ, ಇತರ ಕವಿಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ತನ್ನವುಗಳನ್ನಾಗಿ ಮಾಡಿಕೊಂಡ ಕವಿಗಳಲ್ಲೆಲ್ಲಾ ಇಂಗ್ಲೆಂಡಿನ ಪ್ರಖ್ಯಾತ ಕವಿಯಾದ ಷೇಕ್ಸ್‌ಪಿಯರನೇ ಶ್ರೇಷ್ಠನೆಂದು ಹೇಳಬಹುದು. ಅವನು ಎಲ್ಲ ಕಥೆಗಳನ್ನು ತನ್ನ ಸ್ವಂತವನ್ನಾಗಿ ಮಾಡಿಕೊಂಡು, ಶಾಶ್ವತವಾದ ಸ್ವಾರಸ್ಯವಾದ ನಾಟಕಗಳನ್ನು ಬರೆದನು. ಇದೇ ರೀತಿ ಹಿಂದೂಸ್ಥಾನವೂ ಕೂಡ ಶಿಲ್ಪ, ಸಾಹಿತ್ಯ, ಮತ ಮುಂತಾದವುಗಳಲ್ಲಿ ತನಗೆ ಉಪಯುಕ್ತವಾದ ಅಂಶಗಳನ್ನು ಪರದೇಶೀಯರಿಂದ ತಿಳಿದುಕೊಂಡು, ಅವುಗಳನ್ನು ಸ್ವಂತವನ್ನಾಗಿ ಮಾಡಿ ಸೌಂದರ್ಯವನ್ನು ಕೊಟ್ಟು ತನ್ನ ವ್ಯಕ್ತಿತ್ವದ ಮುದ್ರೆಯನ್ನು ಅದರ ಮೇಲೆ ಒತ್ತಿದೆ. ಈ ದೃಷ್ಟಿಯಿಂದ ನೋಡಿದರೆ ಹಿಂದೂದೇಶವು ತನ್ನ ಕಾಲುಗಳ ಆಧಾರದ ಮೇಲೆ ನಿಲ್ಲುವುದೇ ಅಲ್ಲ, ನಡೆಯಲು ಓಡಾಡಲೂ ಕೂಡ ಶಕ್ತಿಯುಳ್ಳದ್ದಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಆದರೆ ಹೊರಗಿನವರ ಸಹಾಯದಿಂದಲಾಗಲಿ, ಸಂಪರ್ಕದಿಂದಲಾಗಲಿ, ಹಿಂದೂಸ್ಥಾನದ ಕಲೆಗಳು ಮಾರ್ಪಟ್ಟಿವೆಯೆಂದು ಇತರರು ಹೇಳಿದರೆ, ಅದಕ್ಕಾಗಿ ಕೋಪಿಸಿಕೊಳ್ಳುವುದಾಗಲೀ, ಅಂತಾ ಮಾರ್ಪಾಟುಗಳು ಆಗಿಲ್ಲವೆಂದಾಗಲೀ ಅಲ್ಲಗಳೆಯುವುದು ಭಾರತೀಯರಿಗೆ ಸಹಜವಾದುದಲ್ಲ. ಒಂದು ದೇಶಕ್ಕೆ ಇತರ ದೇಶಗಳ ಸಂಬಂಧವು ದಿನೇ ದಿನೇ ಹೆಚ್ಚುತ್ತಿರುವಾಗ ಯಾವ ಪರಿಣಾಮವೂ ಆಗಲಿಲ್ಲವೆಂದು ಹೇಳುವುದು ಸರಿಯಾದುದಲ್ಲ. ಇತರರನ್ನು ಎಷ್ಟೇ ಹಿಂಬಾಲಿಸಿದರೂ ಕೂಡ ಹಿಂದೂಸ್ಥಾನವು ತನ್ನ ಸಾಹಿತ್ಯ, ಕಲೆ ಮುಂತಾದವುಗಳಲ್ಲಿ ಉಂಟಾದ ಮಾರ್ಪಾಟುಗಳನ್ನು ಜೀರ್ಣಿಸಿಕೊಂಡು, ಪ್ರತಿಯೊಂದರಲ್ಲೂ ತನ್ನ ವ್ಯಕ್ತಿತ್ವವನ್ನಿರಿಸಿಕೊಂಡಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಹಿಂದೂಸ್ಥಾನಕ್ಕೆ ತನ್ನ ಸ್ವಶಕ್ತಿಯಲ್ಲಿ ಅಭಿಮಾನವಿರಬೇಕಾಗಿರುವುದೇ ಅಗತ್ಯವಾಗಿರುವ ಅಂಶವು. ಬದಲಾವಣೆಗಳು ರಾಜಕೀಯ ವಿಚಾರಗಳಲ್ಲಿ ಕಾಲಕಾಲಕ್ಕನುಸಾರವಾಗಿ ನಡೆಯೆ ನಡೆಯುವುವು. ಆದರೆ ನಿಮಗೆ ಒಂದು ಎಚ್ಚರಿಕೆಯ ಮಾತನ್ನು ಹೇಳಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ. ನಿಜವಾದ ಶಕ್ತಿಯು ಒಗ್ಗಟ್ಟಿನಲ್ಲಿದೆ—ಒಗ್ಗಟ್ಟುಂಟಾಗಬೇಕಾದರೆ ಪರಸ್ಪರ ತಾಳ್ಮೆಯು ಅವಶ್ಯ—ತಾಳ್ಮೆಯಿಲ್ಲದ ಒಗ್ಗಟ್ಟು ಎಂದಿಗೂ ಆಗಲಾರದು.

Notice.

In prsuance of G. O. No. L. 90''-74/L. B 35—27—21 Dated 25th June 1928 a District Fund toll gate will be newly opened at Udahalli on the Frazerpet Ram ... from 20—7—28 and a sale of the right of collecting tolls at the said toll gate during 1928—29 will be held in the shandy grounds at Konanur in the Arkalgud Taluk on Thursday the 19th ... commencing ... Dues ... the notification ... shortly.

Intending bidders are ... to be present at the time and ... above to, ... with a d... of Rs. ...

For President,

5—2 District Board,

Hassan.

ನೋಟೀಸು.

ಹಾಸನದ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರ ಆಫೀಸಿನಿಂದ.

ಹಾಸನ ಡಿಸ್ಟ್ರಿಕ್ಟು ಅರಕಲಗೂಡು ತಾಲ್ಲೋಕು ರಾಮನಾಥಪುರ ಫ್ರೇಜರ್‌ಪೇಟೆ ರಸ್ತೆಯಲ್ಲಿ ಉದ್ದನಹಳ್ಳಿ ಬಳಿ ಮೈಸೂರು ಸರಕಾರದ ಜಿ. ಓ. ನಂಬರು ಎಲ್. 9073—74 ಎಲ್. ಬಿ. 35—27—21ನೇ ನಂಬರು ಆರ್ಡರನ್ನನುಸರಿಸಿ ತಾ. 20—7—28ನೇ ತಾರೀಖಿನಿಂದ ಹೊಸದಾಗಿ ಟೋಲು ಗೇಟು ಏರ್ಪಡಿಸಲ್ಪಡುವುದು. ಟೋಲುಗೇಟನ್ನು ಗುತ್ತಿಗೆಗಾಗಿ 1928—29ನೇ ಸಾಲಿನಲ್ಲಿ ಹರಾಜಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಅರಕಲಗೂಡು ತಾಲ್ಲೋಕು ಕೊಣನೂರು ಸಂತೆಯಲ್ಲಿ ತಾ. 19—7—28ನೆ ಗುರುವಾರ ಮಧ್ಯಾಹ್ನ 12 ಗಂಟೆ ರಾಗಾಯಿತು ಹರಾಜು ಮಾಡಿಸತಕ್ಕಾಗಿ ಹರಾಜನ್ನು ಕೂಗಲು ಇಷ್ಟವುಳ್ಳವರು ರೂ. 100/—ಡಿಪಾಜಿಟ್ಟು ಸಮೇತ ಅಲ್ಲಿ ಹಾಜರಾಗಿ ಕೂಗಬಹುದಾಗಿ ಈ ಮೂಲಕ ತಿಳಿಸಿದೆ. ಬಾಕಿ ಶರತ್ತುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗುತ್ತದೆ.

ಯನ್. ಯನ್. ಸಂಜುಂಡಯ್ಯ,
ಪ್ರೆಸಿಡೆಂಟರು,
ಡಿ. ಬೋರ್ಡು
ಹಾಸನ.

ನೋಟೀಸು.

[illegible]

12—2 [illegible]

ಮಾರಾಟಕ್ಕಿದೆ.

[illegible]

For Sale

[illegible]

ಬೇಕಾಗಿದೆ.

[illegible]

ಕೆ. ಯಂ. ಚಂಗಪ್ಪ

COORG FOREST DEPARTMENT
SOUTH DIVISION

NOTICE.

Mercara the 14th July 1928

——:0:——

Tenders are invited for the transport of [illegible] c. ft of timber from Thithimat Kolli [illegible] Nagerhole in the South Coorg Eastern Forests to Hunsur during the season 15th September 1928 to 15th February 1929 Tenders will be received up to midday on 15-8-1928

For further particulars apply to—
THE DIVISIONAL FOREST OFFICER
SOUTH COORG
MERCARA

ಹೊಸ ಅಂಗಡಿ ಸೂಚನೆ ಕ್ರಮ

ಬೇಕಾಗುವರೇ ಇತ್ತ ನೋಡಿರಿ!

[illegible]

ಬಿ. ಎ. ಉತ್ತಪ್ಪ,
ಪೇಟೆ, ಮಡಿಕೇರಿ

6—1

ಜೇಬು ರೇಲ್ವೇ ವಾಚ್.



[illegible]

3 ವರುಷ ಗ್ಯಾರಂಟಿ ಇದೆ

ಕ್ರಯ ಕಡಿಮೆ 1ಕ್ಕೆ ರೂ 3—8—0

52—2 [illegible] 13, ಮದರಾಸು

ಇಮಿಟೇಷನ್ ವಜ್ರದ ಬೆಂಡೋಲೆಗಳು

[illegible] ಉಪಯೋಗಿಸುತ್ತಿರುವರು.

7 ಕಲ್ಲಿನ ಜತೆ 1ಕ್ಕೆ 2—0—0

7 ಕೆಂಪು ಕಲ್ಲಿನ ಜತೆ 1ಕ್ಕೆ 2—8—0

[illegible]

52—3 168 [illegible] ಬಜಾರ್, ಮದರಾಸು

ಟೇಬಲ್ ಟೈಂಪೀಸ್ ಇನಾಂ.



[illegible]

ರೋಲ್ಡ್ ಗೋಲ್ಡ್ ಬಂಗಾರದ ಕೊರಳಿಗೆ ಪದಕ

[illegible]

ಕ್ರಯ 1ಕ್ಕೆ ರೂ 3—8—0.

ಇಂಗ್ಲೀಷ್ ಹೇರ್ ರಿಸ್ಟೋರರ್ ಸೋಪ್.

[illegible]

52—1 [illegible] ಮದರಾಸು.

ಬಾರ್ಡೋಲಿ ಸತ್ಯಾಗ್ರಹ.

ಬಾರ್ಡೋಲಿ ಸತ್ಯಾಗ್ರಹವು ಹಾವಳಿಯನ್ನು ಕುರಿತು ಸರ್ ಮೈಕಲ್ ಒಡ್ವಯರ್ ಹೇಳುವುದೇನೆಂದರೆ ಮಿ ಗಾಂಧಿಯವರು 1920—22ರಲ್ಲಿ ಅಸಹಕಾರದ ಹಾವಳಿಯನ್ನು ಎಬ್ಬಿಸಿದಂತೆ [illegible] 30 ವರ್ಷಗಳಲ್ಲಿ [illegible] [illegible] ಗಾಂಧಿಯವರ ಅಸಹಕಾರವನ್ನು [illegible] 6 ವರ್ಷ [illegible] ಇಂಡಿಯಾ [illegible]

ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಇಷ್ಟು ವರುಷಗಳಿಂದಲೂ ಪ್ರಸಿದ್ಧಿ ಪಡೆದಿರುವ

ನಾಲಂಮಿಸ್ರಿ ಮುರಬ್ಬ



[illegible] ಶಕ್ತಿ ಕುಂದಿಹೋಗಿ [illegible]

ಡಿ. ಪೊನ್ನಾಲಾಲ್,

12—1 [illegible] ಮುರಬ್ಬ ಫ್ಯಾಕ್ಟರಿ, ಬೆಂಗಳೂರು ಸಿಟಿ

ವರ್ತಮಾನ ಸಂಗ್ರಹ.

ಒಳದೇಶ

ಇನ್ನು ಮುಂದೆ ಪೋಸ್ಟಾಫೀಸಿನಲ್ಲಿ ಸ್ಟಾಂಪು ಕವರುಗಳು ಮಾರಾಟಮಾಡಲ್ಪಡುವುದಿಲ್ಲವೆಂದು ತಿಳಿಯಬರುತ್ತದೆ

ಅಮ್ಮತ್ತಿನಾಡು ಕಾರ್ಮಾಡು ಗ್ರಾಮದ ಕುಟ್ಟಂಡ ಐಯ್ಯಪ್ಪನವರು ತಮ್ಮ 83ನೇ ವಯಸ್ಸಿನಲ್ಲಿ ಈ ತಾ 13ರಲ್ಲಿ ಶಿವಾಧೀನರಾದರು.

ಮಳೆಯು ನಿನ್ನೆಯಿಂದ ಜೋರಾಗಿ ಪ್ರಾರಂಭಿಸಿದಂತೆ ಕಾಣುತ್ತದೆ. ಮಡಿಕೇರಿಯಲ್ಲಿ ಕಳೆದ ಎರಡು ದಿವಸಗಳಲ್ಲಿ 6.79 ಇಂಚು ಮಳೆಯಾಗಿದೆ ಜೂನ್ 1ರಿಂದ ಇಂದಿನ ವರೆಗೆ 38.98 ಇಂಚು ಮಳೆ ಬಿದ್ದಿದೆ.

ಪಿ. ಡಬ್ಲ್ಯು. ಇಲಾಖೆಯ ದಕ್ಷಿಣ ಕೊಡಗು ಸಬ್ ಡಿವಿಜನಿನ ಹೊಸ ಆಫೀಸರಾದ ಮ. ಕಾಳೇಶ್ವರ ಐಯ್ಯರವರು ತಾ. 11ರಲ್ಲಿ ಚಾರ್ಜು ತೆಗೆದುಕೊಂಡಿರುವರು.

ಸಿದ್ಧಾಪುರದ ಹುಂಗಾಮಿ ಹೆಲ್ತ್ ಆಫೀಸರಾಗಿ ನೇಮಿಸಲ್ಪಟ್ಟಿದ್ದ ಮೇಜರ್ ಕೋದಂಡ ಗಣಪತಿಯವರನ್ನು ಆ ಉದ್ಯೋಗದಲ್ಲಿಯೇ ಖಾಯಂ ಮಾಡಿರುವರೆಂದು ತಿಳಿದು ಹರ್ಷಿತರಾಗಿದ್ದೇವೆ.

ಮದ್ರಾಸಿನಲ್ಲಿದ್ದ ಡಾಕ್ಟರ್ ನಡಿಕೇರಿಯಂಡ ಅಪ್ಪಯ್ಯನವರು ಚಿಟ್ಟಿನಾಡಿನ ಪಲ್ಲತ್ತೂರು ಆಸ್ಪತ್ರೆಯಲ್ಲಿ ಗೌರವ ಮೆಡಿಕಲ್ ಆಫೀಸರಾಗಿ ನೇಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಪಡುತ್ತೇವೆ

ಶಾಲಾ ಇನ್‌ಸ್ಪೆಕ್ಟರಾದ ಮ. ಜೆ. ಎ. ಯೇಟ್ಸ್‌ರವರು ಬರುವ ಡಿಸೆಂಬರು ತಿಂಗಳಲ್ಲಿ ಕೆಲಸದಿಂದ ನಿವೃತ್ತರಾಗುವರೆಂದೂ ಅವರ ಬದಲಿಗೆ ಬರುವವರ ಹೆಸರು ಇನ್ನೂ ಗೊತ್ತಾಗಿರುವದಿಲ್ಲವೆಂದೂ "ಹಿಂದೂ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬೆಂಗಳೂರಿನಲ್ಲಿ ಕಳೆದ ಯಲ್ ಯಂ ಪಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವ ಶ್ರೀಮತಿ ಐಚೆಟ್ಟಿರ ಕೆ ಮುದ್ದಮ್ಮನವರು ಮೈಸೂರು ವಾಣೀವಿಲಾಸ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟಂಟ್ ಸರ್ಜನರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ

ಕಳೆದ ಐದು ವರ್ಷಗಳಿಂದ ಕಲ್ಕತ್ತಾ ಆಯುರ್ವೇದ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮ. ಮುಂಡೇಟ್ಟಿರ ಎ ಚಂಗಪ್ಪನವರು ಮತ್ತು ಮ. ಕೊಂಗಂಡ ಎ. ಚಿಟ್ಟಿಯಪ್ಪನವರು ತಮ್ಮ ಐಚ್ಛಿಕ ಪರೀಕ್ಷೆಯಲ್ಲಿ ಪಾಸಾಗಿರುವರು ಇವರನ್ನು ಅಭಿನಂದಿಸುತ್ತೇವೆ.

ಚಿಕ್ಕಮಗಳೂರು ಬಳಿ ಇರುವ ಲಿಂಗಯ್ಯನ ಹಳ್ಳಿಯವರ ದನಕರಗಳನ್ನು ಕೊಂದು ತುಂಬಾ ನಷ್ಟಮಾಡುತ್ತಿದ್ದ ಒಂದು ದೊಡ್ಡ ಹೆಬ್ಬುಲಿಯನ್ನು ಅಲ್ಲಿಯ ಪೋಲೀಸು ಇನ್ಸ್‌ಪೆಕ್ಟರಾದ ಮ. ಮುಕ್ಕಾಟಿರ ಅಣ್ಣಯ್ಯನವರು ಈ ತಾ 16ರಲ್ಲಿ ಗುಂಡುಹೊಡೆದು ಕೊಂದರೆಂದು ತಿಳಿಯುತ್ತೇವೆ

ಪೊನ್ನಂಪೇಟೆ ಬೋರ್ಡಿಂಗ್ ಮನೆಯ ಮತ್ತು ಅದರ ಫಾರ್ಮಿನ ಅಭಿವೃದ್ಧಿಗಾಗಿ ತಕ್ಕ ಏರ್ಪಾಡಿನ ಆಲೋಚನೆ ಬಗ್ಗೆ ಈ ತಾರೀಖು 30ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ಒಂದು ಪಬ್ಲಿಕ್ ಮೀಟಿಂಗು ಪೊನ್ನಂಪೇಟೆಯಲ್ಲಿ ನಡೆಯುವುದೆಂದು ಮ ಪಿ. ಟಿ. ಕುಶಾಲಪ್ಪನವರು ತಿಳಿಸುತ್ತಾರೆ.

ಹಿಂದೂದೇಶದ ಮುಖ್ಯ ಸೇನಾಧಿಪತಿಯಾದ ಸರ್ ವಿಲ್ಲಿಯಮ್ ಬರ್ಡ್‌ವುಡ್‌ರವರು ಈ ತಾ. 23ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ಮೈಸೂರಿನಿಂದ ಮಡಿಕೇರಿಗೆ ಬರುವರೆಂದೂ, ಅಗ್ಗೆ ಚಾವಡಿಕಾರರು ಗಾರ್ಡ್ ಆಫ್ ಆನರ್ ನೀಡುವರೆಂದೂ, ನಂತರ ಅವರು ಟೆರಿಟೋರಿಯಲ್ ಆಫೀಸರುಗಳ ಸಂಗಡ ಮಾತಾಡಿ ಸಾಯಂಕಾಲ 3 ಗಂಟೆಗೆ ಮೈಸೂರಿಗೆ ಹಿಂತಿರುಗಿ ಹೋಗುವರೆಂದೂ ತಿಳಿಯಬರುತ್ತದೆ. ಮಳೆಯು ಜೋರಾಗಿಲ್ಲದೆ ಹೋದರೆ ಓಂಕಾರೇಶ್ವರ ದೇವಸ್ಥಾನವನ್ನೂ ಗದ್ದಿಗೆಯನ್ನೂ ಸಂದರ್ಶಿಸಬೇಕೆಂದಿರುವರಂತೆ

ಹಿಂದೂದೇಶ.

ಸೆಂಟ್ರಲ್ ಪ್ರಾವಿನ್ಸಿನ ಈಗಿನ ಮಂತ್ರಿಗಳನ್ನು ಡಿಸ್ಮಿಸ್ ಮಾಡಬೇಕೆಂದು ಮ. ಉಮೇಶದತ್ತ ಭಟಕರವರು ಅಲ್ಲಿಯ ಕೌನ್ಸಿಲಿಗೆ ಕಳುಹಿಸಿದ ಠರಾವು ಚರ್ಚೆಗೆ ಬಿದ್ದಿರಾಗಲಿಲ್ಲ.

ಮ್ಯುನಿಸಿಪಲ್ ಅಧಿಕಾರಿಗಳು ತಿರಸ್ಕರಣೆಗಳಾಗಿ ವರ್ತಿಸಿದರೆಂಬ ಕಾರಣದಿಂದ ಅಮೃತಸರದ ಸುಮಾರು 1000 ಜಾಡಮಾಲಿಗಳು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು

ಸ್ಲೇಟ್ ಡ್ರಾಯಿಂಗ್ ಬೋರ್ಡನ್ನು ಉಪಯೋಗಿಸಕೂಡದೆಂದು ಶಾಲಾಧಿಕಾರಿಗಳು ಹುಕುಂ ಮಾಡಿದ್ದರಿಂದ ಕಲ್ಕತ್ತಾ ಸರಕಾರಿ ಆರ್ಟ್ಸ್ ಶಾಲೆಯ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮುಷ್ಕರ ಹಿಡಿದಿರುವರು.

ಬಾರ್ಡೋಲಿ ಸತ್ಯಾಗ್ರಹದ ಸಂಬಂಧ ಬೊಂಬಾಯಿ ಕೌನ್ಸಿಲ್ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿದ್ದ ಮ. ಲಾಲ್ಜಿ ನಾರಾಣ್ಜಿಯವರು ಪುನಃ ಮರ್ಚಂಟ್ಸ್ ಚೇಂಬರಿನ ಪ್ರತಿನಿಧಿಯಾಗಿ ಕೌನ್ಸಿಲಿಗೆ ಚುನಾಯಿಸಲ್ಪಟ್ಟಿರುವರು.

ಕೊಚ್ಚಿನ್ ಸಂಸ್ಥಾನದ ದಿವಾನರಾದ ರಾವ್ ಬಹದ್ದೂರ್ ಟಿ. ಯಸ್. ನಾರಾಯಣ ಅಯ್ಯರ್‌ರವರು ಅನಾರೋಗ್ಯದ ದೆಸೆಯಿಂದ ರಜೆಯಲ್ಲಿರುವುದರಿಂದ ಅವರ ಬದಲು ಮ. ದಾಮೋದರ್ ಮೇನನ್‌ರವರನ್ನು ಆಕ್ಟಿಂಗ್ ದಿವಾನರಾಗಿ ನೇಮಿಸಿರುವರು

ಸಿಲೋನಿನ ಸುಧಾರಣೆ ಕಮಿಷನಿನ ವರದಿಯು ಪ್ರಕಟವಾಗಿದೆ ಅದರಲ್ಲಿ ತುಂಬಾ ಬದಲಾವಣೆಗಳಿವೆ. ಪ್ರಾಯ ಬಂದ ಗಂಡಸು ಮತ್ತು ಹೆಂಗಸರಿಗೆಲ್ಲಾ ಓಟಿನ ಹಕ್ಕಿರಬೇಕೆಂತಲೂ, ಕೋಮುವಾರು ಚುನಾವಣೆ ಇರಬಾರದೆಂತಲೂ ಶಿಫಾರಸ್ಸು ಮಾಡಿರುವರು

ಆಂಧ್ರ ದೇಶದ ಜಮೀನುದಾರರಾದ ಅರವಪಲ್ಲಿ ನರಸಿಂಹಗುಪ್ತರೆಂಬವರು ತಮಗೆ ಇರುವ 30,000 ಎಕ್ರೆ ಜಮೀನಿನ 2000 ಎಕ್ರೆಗಳನ್ನು ಬಾರ್ಡೋಲಿಯ ಸತ್ಯಾಗ್ರಹವನ್ನು ಕೈಕೊಂಡಿರುವ ರೈತರಿಗಾಗಿ ಅಲಾಯಿದ ಇಟ್ಟಿರುವರೆಂದು ಬೆಜವಾಡದಲ್ಲಿ 6ನೇ ತಾರೀಕಿನಲ್ಲಿ ನಡೆದ ಮೀಟಿಂಗಿನಲ್ಲಿ ಹೇಳಿರುತ್ತಾರೆ

ತಾ 16ರಲ್ಲಿ ಹೌರಾದ ಸಮೀಪವಿರುವ ಚಾರ್ಡ್ಸ್ ಹತ್ತಿ ಗಿರಣಿಯಲ್ಲಿ ಧನಿಗಳಿಗೂ ಕೆಲಸಗಾರರಿಗೂ ತಕರಾರು ಉಂಟಾಗಿ ಗಲಭೆಯಾದ ಕಾರಣ ಪೋಲೀಸಿನವರು ಒಂದು ಗುಂಡು ಹಾರಿಸಿದಲ್ಲಿ 28 ಕೆಲಸಗಾರರಿಗೆ ಗಾಯಗಳಾಗಿವೆಯೆಂದೂ 13 ಪೋಲೀಸಿನವರಿಗೆ ಕಲ್ಲು ಎಸೆದ ಗಾಯಗಳಾಗಿವೆಯೆಂದೂ ವರ್ತಮಾನ. 20,000 ಜನರು ಮುಷ್ಕರ ಹಿಡಿದಿರುವರು.

ಬಾರ್ಡೋಲಿ ಸತ್ಯಾಗ್ರಹ ಚಳವಳವನ್ನು ಕುರಿತು ಹೇಗೆ ವರ್ತಿಸಬೇಕೆಂಬದನ್ನು ನಿರ್ಧರಿಸಲು ಬೊಂಬಾಯಿಯ ಗವರ್ನರವರು ಮೈಸರಾಯರವರನ್ನಿಗೆ ಸಿಮ್ಲಾಕ್ಕೆ ಹೋಗಿ ತಾ 18ರಲ್ಲಿ ಸೂರತ್ತಿಗೆ ಬಂದಿರುವರು ಅಲ್ಲಿ ಶ್ರೀ. ವಲ್ಲಭಾಯಿ. ಪಟೇಲರೇ ಮೊದಲಾದವರು ಗವರ್ನರಲ್ಲಿಗೆ ಡೆಪ್ಯುಟೇಶನ್ ಹೋಗುವರು. ಆಗ ರಾಜಿ ತೀರ್ಮಾನದ ಶರತ್ತುಗಳು ಚರ್ಚಿಸಲ್ಪಡಲಿಕ್ಕಿರುವವು

ಸರ್ ಪಿ. ಸಿ. ರೇಯವರು ಸೇಲಮಿನ ಸಮೀಪ ಖಾದಿ ತಯಾರಾಗುವ ಗ್ರಾಮಗಳಲ್ಲಿ ಕೈನೂಲು ಮಾಡುವದನ್ನು ಸಂದರ್ಶಿಸಿ ತಿರುಚಂಗೋಡಿನಲ್ಲಿ ಒಂದು ಹೊಸ ವಸ್ತ್ರ್ಯವನ್ನು ತೆರೆಯುವ ಸಮಾರಂಭವನ್ನು ನಡಿಸಿದರು. ಆ ಸಂದರ್ಭದಲ್ಲಿ ಅವರು ಹೇಳಿದ್ದೇನೆಂದರೆ—ಅನುಕೂಲಸ್ಥರಿಗೂ ಬಡವರಿಗೂ ಸಂಬಂಧವನ್ನು ಹೆಚ್ಚಿಸಬೇಕು, ಗ್ರಾಮಾಭಿವೃದ್ಧಿಯ ಕೆಲಸವನ್ನು ಮಾಡಬೇಕು, ಸ್ವಾತಂತ್ರ್ಯಕ್ಕೂ ರಾಷ್ಟ್ರದ ಅಭಿವೃದ್ಧಿಗೂ ಸ್ವದೇಶಿಯೊಂದೇ ನಿಜವಾದ ದಾರಿ.

ಸೈಮನ್ ಕಮಿಷನಿನೊಂದಿಗೆ ಸಹಕರಿಸುವಂತೆ ಪಂಜಾಬಿನ ಜಮೀನ್ದಾರರನ್ನು ಪುಸಲಾಯಿಸಲು ಏರ್ಪಾಡು ನಡಿಯುತ್ತಿದೆ. ಒಂದು ತೋಟದ ಮಾಲೀಕರಾದ ಮೇಜರ್ ವೆನ್ರನಸ್ ಎಂಬವರು, 'ಡಿಸ್ಟ್ರಿಕ್ಟ್ ಬೋರ್ಡಿನಲ್ಲಿರುವ ಜಮೀನ್ದಾರ ಮೆಂಬರುಗಳು ಡಿಸ್ಟ್ರಿಕ್ಟ್ ಜಮೀನ್ದಾರಿ ಸಂಘವನ್ನು ಸ್ಥಾಪಿಸಲು ತೀರ್ಮಾನಿಸಬೇಕೆಂದೂ, ಈ ಸಂಘಗಳ ಪ್ರತಿನಿಧಿಗಳು ಸೇರಿ ಪ್ರಾಂತೀಕ ಸಂಘವಾಗಿ ಅಲ್ಲಿಂದ ಜಮೀನ್ದಾರರ ಹಿತವನ್ನು ಕಾಯುವಂತೆ ಮೆಮೊರಾಂಡಂ ತಯಾರಿಸಿ ಸೈಮನ್ ಕಮಿಷನಿಗೆ ಕೊಡತಕ್ಕದೆಂದು' ಮುಂತಾಗಿ ಅಲ್ಲಿಯ ಎಲ್ಲಾ ಡಿಸ್ಟ್ರಿಕ್ಟ್‌ಬೋರ್ಡುಗಳಿಗೆ ಸರ್ಕ್ಯುಲರ್ ಕಳುಹಿಸಿರುವರಂತೆ. ಬಹಿಷ್ಕಾರ ಚಳವಳವನ್ನು ಮುರಿಯಲು ಇನ್ನೂ ಯಾವ ಪ್ರಯತ್ನಗಳೆಲ್ಲಾ ನಡೆಯುವವೆಂದು ನೋಡಬೇಕಾಗಿದೆ!

ಶಾಸ್ತ್ರೀಯ ವ್ಯವಸಾಯ ಕ್ರಮವನ್ನು ರೈತರಲ್ಲಿ ಪ್ರೋತ್ಸಾಹಿಸುವುದಕ್ಕೋಸ್ಕರ ಮೈಸೂರು ಸರಕಾರದವರು ಹಿಂಡಿ ಮತ್ತು ಅಮೋನಿಯಾ ಸಲ್ಫೇಟ್ ಮುಂತಾದ ಗೊಬ್ಬರಗಳನ್ನು ಮೈಸೂರು ರೈಲ್ವೆಗಳ ಮೇಲೆ ಸಾಗಿಸಿಕೊಂಡು ಹೋಗುವ ಚಾರ್ಜನ್ನು ಮೈಲಿ 1ಕ್ಕೆ 1 ಮಣಕ್ಕೆ ಒಂದಾಣೆಯಿಂದ ಹತ್ತು ಕಾಸು ದರಕ್ಕೆ ಇಳಿಸಿರುತ್ತಾರೆ. 75 ಮೈಲಿಗಿಂತ ಹೆಚ್ಚು ದೂರಕ್ಕೆ ಸಾಮಾನು ಕಳುಹಿಸುವಾಗ ಮಾತ್ರ ರೂಢಿಯಲ್ಲಿರುವ ಹೆಚ್ಚು ದರವು ಸೇರಿಸಲ್ಪಡುತ್ತೆ ಈ ಹೊಸ ದರಗಳು ಜುಲೈ ತಾರೀಕು 1ರಿಂದ ಜಾರಿಗೆ ಬಂದಿವೆ. ಇದೇ ಮೇರೆಗೆ ಯಂ ಯಸ್. ಯಂ. ರೈಲ್ವೆಯವರು ಸಹ ತಮ್ಮ ಲೈನಿನಲ್ಲಿ ರಿಯಾಯಿತಿಯನ್ನು ತೋರಿಸುತ್ತಾರೆಂದು ಸರಕಾರದ ಪಬ್ಲಿಸಿಟಿ ಆಫೀಸರು ಪ್ರಕಟಿಸಿರುತ್ತಾರೆ.

ಇತರ ಪಟ್ಟಣಗಳಲ್ಲಿ ಸಿನಿಮ ಶಾಲೆಗಳಲ್ಲಿ, ಚಿತ್ರ ಪಟಗಳನ್ನು ಜನರ ಮನಸ್ಸಂತೋಷ ಪಡಿಸಲು ತೋರಿಸುವುದು ವಾಡಿಕೆ. ಆದರೆ ಇಂಥಾ ಚಿತ್ರಪಟಗಳು ಅನೇಕವೇಳೆ ಅಸಭ್ಯವಾಗಿಯೂ, ಮನೋವೇದನೆಯುಂಟುಮಾಡುವುದಾಗಿಯೂ ಇರುತ್ತವೆ ಅದಕಾರಣ ಯಾವ ಚಿತ್ರಪಟಗಳು ಜನರಮುಂದೆ ಹಕ್ಕಿ ಒಳ್ಳೆಯದೆಂದು ಚುನಾಯಿಸಲು, ಪ್ರಾಂತ್ಯದ ದೊಡ್ಡ ಪಟ್ಟಣಗಳಲ್ಲಿ ಒಂದೊಂದು ಕಮಿಟಿಯು ಸರಕಾರದಿಂದಲೇ ಏರ್ಪಡಿಸಲ್ಪಟ್ಟಿರುತ್ತದೆ. ಇಂಥಾ ಕಮಿಟಿಯು ಬಂಗಾಳದಲ್ಲಿಯೂ ಒಂದಿದೆ ಈಗ ತಾನೇ ಆ ಕಮಿಟಿಯು ಚಾರ್ಲಿ ಚಾಪ್ಲಿನ್ ಎಂಬವನು ಮಾಡಿದ 'ಶೋಲ್ಡರ್ ಆರ್ಮ್ಸ್' ಎಂಬ ಚಿತ್ರವನ್ನು ಬಂಗಾಳದಲ್ಲಿ ಯಾವ ಸಿನಿಮಾದಲ್ಲಿಯೂ ತೋರಿಸಕೂಡದೆಂದು ತೀರ್ಮಾನಿಸಿದ್ದಾರೆ. ಬೊಂಬಾಯಿಯಲ್ಲಿ ಇದನ್ನು ತೋರಿಸಲು ಬಿಟ್ಟಿದ್ದರೂ, ಬಂಗಾಳದಲ್ಲಿ ಅಡ್ಡಿಮಾಡಿರುವರು ಇತರ ಜನಾಂಗದವರ ಮನಸ್ಸಿಗೆ ನೋವನ್ನುಂಟುಮಾಡುವ ಚಿತ್ರವೆಂದೆಂಬುದೇ ಈ ತಿರಸ್ಕಾರಕ್ಕೆ ಮುಖ್ಯ ಕಾರಣವೆಂದು ತಿಳಿಯುತ್ತೆ.

ವಿದೇಶ.

ಸೆಂಟ್ರಲ್ ಪ್ರಾವಿನ್ಸಿನ ಮಾಜಿ ಗವರ್ನರಾದ ಸರ್ ಫ್ರಾಂಕ್ ಸ್ಲೈಯವರು ಈ ತಾ. 16 ರಲ್ಲಿ ಲಂಡನಿನಲ್ಲಿ ಶಿವಾಧೀನರಾದರು

ಪಾಶ್ಚಾತ್ಯ ದೇಶ ಪರ್ಯಟನದಿಂದ ಹಿಂದಿರುಗಿ ಬಂದ ಮೇಲೆ, ಅಫಘಾನಿಸ್ಥಾನದ ಅಮೀರರು, ತಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದ್ದ ಘೋಷಾ ಪದ್ಧತಿಯನ್ನು ನಿಲ್ಲಿಸಿಬಿಟ್ಟಿರುತ್ತಾರೆ.

ಒರಿಸ್ಸಾ ದೇಶದ ಭುವನೇಶ್ವರಿ ಎಂಬ ಸ್ಥಳದಲ್ಲಿ ಅಶೋಕ ಚಕ್ರವರ್ತಿಯ ಒಂದು ಶಿಲಾಶಾಸನವು ದೊರೆತಿದೆ. ಆ ಶಾಸನದಲ್ಲಿ ಇದು 'ಬುದ್ಧದೇವನ ಜನ್ಮಸ್ಥಾನ' ಎಂದು ಬರೆಯಲ್ಪಟ್ಟಿದೆ.

ಸೈಮನ್ ಸಮಿತಿಯವರು ಸೆಪ್ಟಂಬರ್ ತಿಂಗಳಲ್ಲಿ ಪುನಃ ಇಂಡಿಯಾದೇಶಕ್ಕೆ ಬರುವ ಮೊದಲೇ ಸಮಿತಿಯ ಅಧ್ಯಕ್ಷರಾದ ಸರ್ ಜಾನ್ ಸೈಮನರು ಲಂಡನಿನ ಹಲವು ಕಡೆಗಳಲ್ಲಿ ಸುಮಾರು 15 ರಾಜಕೀಯ ಭಾಷಣಗಳನ್ನು ಮಾಡುವರೆಂದು ತಿಳಿಯಬರುತ್ತದೆ

ಈಗ ತಾನೇ ಮೆಕ್ಸಿಕೊ ದೇಶದ ಸರ್ಕಾರದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಜನರಲ್ ಒಬ್ರೆಗನ್‌ರವರು ತಾ 17ರಲ್ಲಿ ಮಧ್ಯಾಹ್ನ 2 ಗಂಟೆಗೆ ಔತಣಕ್ಕೆ ಕುಳಿತಿದ್ದಾಗ ಯಾರೋ ಅವರಿಗೆ ಐದು ಗುಂಡುಗಳನ್ನು ಹಾರಿಸಿ ಅವರನ್ನು ಕೊಂದರು ಕೊಲೆಪಾತಕನು ಸ್ವಲ್ಪ ಸಮಯದನಂತರ ಸೆರೆ ಹಿಡಿಯಲ್ಪಟ್ಟಿರುವನು ಈ ಕೊಲೆಯಿಂದ ದೇಶದಲ್ಲಿ ತುಂಬಾ ಗಲಿಬಿಲಿ ಹುಟ್ಟಿದೆ

ಜನರು ಬಹಳ ಹಣವನ್ನು ಸಂಪಾದಿಸಿ, ಸಾಯುವ ಕಾಲದಲ್ಲಿ, ತಮ್ಮ ಮಕ್ಕಳಿಗೆ ಉಯಿಲು ಬರೆದಿಡುವುದು ಎಲ್ಲರಿಗೂ ತಿಳಿದ ಸಂಗತಿ. ಹೀಗೆ ಬಂದ ಹಣದಿಂದ ವಿವಿಧ ಪರಿಣಾಮಗಳುಂಟಾಗುವುವು. ಇದೇ ರೀತಿ ಕಾನ್ಸ್ಟಂಟಿನೋಪಲಿನಲ್ಲಿ ಮಹಮ್ಮದ್ ಫರೂಕ್ ಎಫೆಂಡಿ ಎಂಬಾತನು ಮರಣ ಶಾಸನದಲ್ಲಿ 10,000 ಪೌಂಡುಗಳನ್ನು ತನ್ನಿಬ್ಬರು ಹೆಣ್ಣು ಮಕ್ಕಳಿಗೆ ಇಟ್ಟಿದ್ದನು. ತಂದೆಯು ಮರಣಾನಂತರ ಈ ಅಕ್ಕ ತಂಗಿಯರು [illegible] ವರ್ಷಗಳ ವರೆಗೂ [illegible] ಇದ್ದರು ಅನಂತರ [illegible] ಶಕ್ತಿ ತೆಗೆದುಕೊಂಡು ಒಗಳವಾಡಿ [illegible] ಮೃತಪಟ್ಟರಂತೆ!

ಸೈಮನ್ ಸಮಿತಿಗೆ ಸೇರಿದ ವರ್ನನ್ ಹಾರ್ಟ್ಶಾರ್ನ್ ಎಂಬಾತರು ಇಂಡಿಯಾಕ್ಕೆ ಬಂದು ಮರಳಿ ಹೋದ ನಂತರ 'ಇಂಡಿಯಾದೇಶದ ಟಾಟಾಕಂಪೆನಿಯವರು ಬಹಳ ನಿಷ್ಠುರಗಳಾದ ಧನಿಗಳೆಂದು ದೋಷಾರೋಪಣೆಯ ಭಾಷಣ ಮಾಡಿದ್ದಕ್ಕೆ ಟಾಟಾ ಕಂಪೆನಿಯವರು ಕಾನೂನು ಮೇರೆ ಮೊಖದ್ದಮೆ ನಡಿಸಬೇಕೆಂದು ಪ್ರಯತ್ನಿಸುತ್ತಿರ ವಿಷಯ ತಿಳಿದು ಹಾರ್ಟ್ಶಾರ್ನ್ ಎಂಬವರ, ತಾನು ಮಾಡಿದ ದೋಷಾರೋಪಣೆಗಳು, ವಿಷಯ ಗೊತ್ತಿಲ್ಲದೆ ಮಾಡಿದ್ದೆಂದ ಅವು ಈಗ ನಿಜವಲ್ಲವೆಂದೂ ಹೇಳಿ ತಾನಾಡಿದ ಮನೋವ್ಯಥೆಯಾಗುವ ಮಾತುಗಳನ್ನು ಬಹಿರಂಗವಾಗಿ [illegible] ಟಾಟಾ ಕಂಪನಿಯವರು [illegible] ಇನ್ನು ವಾಪಸು ತೆಗೆದುಕೊಂಡಿರುವದಿಲ್ಲ.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳವರ ಪರಾಂಬರಿಕೆ ಬಗ್ಗೆ.

ಅಯ್ಯಾ ಮಹನೀಯರೇ.

ನಾವು ನಮ್ಮ ಚೆಂಬು ಗ್ರಾಮದ ಬಡ ವಿದ್ಯಾರ್ಥಿಗಳ ಗೋಳನ್ನು ಸೈರಿಸಲಾರದೆ ಈ ಮೊದಲು ಅಂದರೆ ತಾರೀಕು 2—12—26ರಲ್ಲು ಸಂಪಾಜೆಯಲ್ಲು ಜಮಾಬಂದಿ ನಡಿಸುವ ಕಾಲದಲ್ಲು ನಮ್ಮ ಬಡ ವಿದ್ಯಾರ್ಥಿಗಳ ಕುರಿತು ಒಂದು ಬೋರ್ಡು ಸ್ಕೂಲು ಮಂಜೂರು ಮಾಡಿಸಿಕೊಡಬೇಕೆಂದು ಕಮಿಷನರ್ ಸಾಹೇಬರವರಿಗೂ ಮತ್ತು ಜಮಾಬಂದಿ ಆಫೀಸರವರಿಗೂ ಕೂಡ ಒಂದು ಅರ್ಜಿ ಕೊಟ್ಟ ಮೇರೆ ಕಮಿಷನರ್ ಸಾಹೇಬರವರು ನಮ್ಮ ಗ್ರಾಮಕ್ಕೆ ಸಂದರ್ಶಿಸದ ಹೊರತ್ತು ನಮ್ಮ ಅರ್ಜಿಗೆ ಯಾವ ಹುಕುಂ ಇಲ್ಲದೆ ಇರುವದರ ಕುರಿತು ನಾವುಗಳು ಬಹಳ ವ್ಯಸನಪಡುತ್ತೇವೆ

ಅಲ್ಲದೆ ತಾ. 29—1—28ರಲ್ಲು ಕೂಡ ಕೊಡಗು ಕಮಿಷನರ್ ಸಾಹೇಬರವರ ಜನಾಭಿಗೆ ನಮ್ಮ ವಿದ್ಯಾರ್ಥಿಗಳ ಕುರಿತು ಒಂದು ಅರ್ಜಿ ಕೊಟ್ಟ ಮೇರೆ ತಾ 24—3—28ರಲ್ಲು ನಮ್ಮ ಗ್ರಾಮಕ್ಕೆ ಸರ್ಕಲ್ ಶ್ಯಾನುಭೋಗರವರು ಬಂದು ನಮ್ಮ ಖಾಸಗಿ ಶಾಲೆಯ ಹುಡ್ರ ಮತ್ತು ಅದರ ಅದಾಯವನ್ನು ತಿಳಿದನ್ನಲ್ಲದೆ ಶಾಲೆಗೆ ಬೇಕಾಗುವ ಮರದ ಸಾಮಾನು ವಗೈರೆ ಬೇಕಾದವನ್ನು ತನಿಖೆ ಮಾಡಿದ್ದಲ್ಲದೆ, ಕ್ಲಾಸ್ ಪ್ರೋಗ್ರೆಸ್ ಹುಡುಗ, ಹುಡುಗಿಯರನ್ನು ಎಣಿಕೆ ಮಾಡಿದ್ದೇ ಹೊರತು ಅದಕ್ಕೆ ಕೂಡ ಇನ್ನು ವರೆಗೆ ಯಾವ ಹುಕುಂ ಇಲ್ಲದೆ ಇರುವ ವಿಷಯ ನಾವು ಮತ್ತು ನಮ್ಮ ಬಡ ವಿದ್ಯಾರ್ಥಿಗಳೆಲ್ಲ ಸುಮಾರು ಆರುವತ್ತು ಮಂದಿಯವರು ಕೂಡ ವ್ಯಸನಪಡುತ್ತಾ ಶಾಲೆಯು ಮಂಜೂರು ಆದೀತು ಎಂಬದಾಗಿ ಎದುರು ನೋಡುತ್ತಾ ಇದ್ದೇವೆ.

ಅಲ್ಲದೆ ಇದನ್ನು ಕುರಿತು ನಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರು ಚುನಾವಣಾ ಕಾಲದಲ್ಲಿ ದರ್ಬಾರು ಹಾಕಿದ್ದೇ ಹೊರತು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗುಗಳಿಗೆ ಹೋಗಿ ನಮ್ಮ ಪರವಾಗಿ ಯಾವ ವಿಷಯಗಳನ್ನು ಚರ್ಚಿಸಿ ಪಾಸು ಮಾಡ್ಸಿದ ವಿಷಯ, ಪಾಸು ಮಾಡದ ವಿಷಯ ಕೊಡಗು ಪತ್ರಿಕೆ ಮೂಲಕವಾಗಲಿ, ಬರಹ ಮೂಲಕವಾಗಲಿ ನಮ್ಮ ಗ್ರಾಮಕ್ಕೆ ತಿಳಿಸದ ಸಂಗತಿ ಕುರಿತು ನಾವು ಮತ್ತು ನಮ್ಮ ವಿದ್ಯಾರ್ಥಿಗಳು ಕೂಡ ಬಹಳ ವ್ಯಸನಪಡುತ್ತೇವೆ. ಆದ್ದರಿಂದ ಹೊಸ್ತಾ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರವರು ಮುಂದಿನ ಚುನಾವಣೆಯನ್ನು ನೆನಪಿಗೆ ತಂದುಕೊಂಡು, ಆದಷ್ಟು ತುರ್ತದಿಂದ ಮೇಲ್ಕಂಡ ಸಂಗತಿಯನ್ನು ಪಾಸು ಮಾಡಿಸಿ ಬಾಲಕ ಬಾಲಕೀಯರಿಗೆ ವಿದ್ಯಾಭಿವೃದ್ಧಿಗೊಳಿಸುವವರಾಗಿಯೂ ಅಥವಾ ಕೊಡಗು ಪತ್ರಿಕೆ ಮೂಲಕ ಜವಾಬು ಬರೆಯುವವರಾಗಿಯೂ ಎದುರು ನೋಡುತ್ತಾ ಇರುತ್ತೇವೆ.

ಹೊಸೂರು ಲಿಂಗಪ್ಪ.

ಮಲೇರಿಯಾ ಜ್ವರ.

ಕಾಲಕಾಲಕ್ಕೆ ಬರುವ ಜ್ವರ, ಜ್ವರದ ಗೆಡ್ಡೆ, ರಕ್ತಹೀನತೆ ಮುಂತಾದ ಚಿಹ್ನೆಗಳಿರುವ ಮಲೇರಿಯಾ ಜ್ವರದ ವಿಷಯ ಎಲ್ಲರಿಗೂ ಗೊತ್ತಿದ್ದ ಸಮಾಚಾರವೇ ಆಗಿರುತ್ತದೆ. ಆದರೆ ಅದು ಹ್ಯಾಗೆ ಹಬ್ಬುತ್ತದೆ ಎಂಬುವದು ಸರಿಯಾಗಿ ಬಹಳ ಸ್ವಲ್ಪ ಜನರಿಗೆ ಮಾತ್ರ ಗೊತ್ತುಂಟು

ಮಲೇರಿಯಾ ಜ್ವರವು ಸೊಳ್ಳೆಗಳ ಕಡಿತದಿಂದ ಮಾತ್ರ ಉಂಟಾಗುತ್ತದೆ. ಬೇರೆ ಯಾವ ವಿಧದಿಂದಲೂ ಮಲೇರಿಯಾ ಜ್ವರವು ಪ್ರಾಪ್ತವಾಗುವದಕ್ಕೆ ಸಾಕ್ಷ್ಯವಿಲ್ಲ. ಈ ಜ್ವರದಿಂದ ಪೀಡಿತನಾದ ರೋಗಿಯ ರಕ್ತದಲ್ಲಿ ಸಹಸ್ರ ಗಟ್ಟಲೆಯಿಂದ ಕ್ರಿಮಿಗಳು ಜೀವಿಸುತ್ತವೆ. ಅವನನ್ನು ಕಚ್ಚುವ ಸೊಳ್ಳೆಯು ಅವನ ರಕ್ತದೊಂದಿಗೆ ಈ ಕ್ರಿಮಿಗಳನ್ನು ನುಂಗುತ್ತದೆ. ಅನಂತರ ಅದು ಒಬ್ಬ ಆರೋಗ್ಯದಿಂದಿರುವ ಮನುಷ್ಯನನ್ನು ಕಚ್ಚುವಾಗ ಮಲೇರಿಯಾ ಕ್ರಿಮಿಗಳನ್ನು ಅವನ ರಕ್ತದಲ್ಲಿ ಸೇರಿಸುತ್ತದೆ.

ಆದುದರಿಂದ ಮಲೇರಿಯಾ ಜ್ವರವು ಬರಬೇಕಾದರೆ ಬೇಕಾದದ್ದು ಯಾವುದೆಂದರೆ.—

ಮೊದಲನೇದು—ಮಲೇರಿಯಾ ಕ್ರಿಮಿಯು ತನ್ನ ರಕ್ತದಲ್ಲಿರುವ ಒಬ್ಬ ಮನುಷ್ಯನು.

ಎರಡನೇದು:—ಒಬ್ಬ ಮನುಷ್ಯನಿಂದ ಇನ್ನೊಬ್ಬ ಮನುಷ್ಯನಿಗೆ ಕ್ರಿಮಿಗಳನ್ನು ಒಯ್ಯುವ ಎಲ್ಲಿಲ್ಲಿಯೂ ಇರುವ ಸೊಳ್ಳೆಯು.

ಮೂರನೇದು —ಸೊಳ್ಳೆಯ ಕಡಿತಕ್ಕೆ ಬೇಕಾಗಿರುವ ಅನುಕೂಲತೆಗಳು.

ಮಲೇರಿಯಾ ಜ್ವರದ ವಿಷಯ ಇಷ್ಟು ತಿಳುವಳಿಕೆ ಇದ್ದ ನಂತರ, ಈ ಭಯಂಕರವಾದ ರೋಗದಿಂದ ತಪ್ಪಿಸಿಕೊಳ್ಳುವದು ಬಹಳ ಸುಲಭವಾದ ಸಂಗತಿ ಅಲ್ಲವೇ? ಈ ಮೂರು ಸಂಗತಿಗಳ ವಿಷಯ ಕೆಲವು ಮುಂಜಾಗ್ರತೆಗಳನ್ನು ತೆಗೆದುಕೊಳ್ಳುವುದು ಮಾತ್ರ ನಮ್ಮ ಕೆಲಸವಾಗಿರುತ್ತದೆ.

ಮೊದಲನೇದು —ಕ್ವಿನೀನು ಎಲ್ಲಾ ಮಲೇರಿಯಾ ಕ್ರಿಮಿಗಳನ್ನು ನಾಶಪಡಿಸುವ ಒಂದು ಒಳ್ಳೇದ ಔಷಧವಾಗಿರುತ್ತದೆ. ಮಲೇರಿಯಾ ಜ್ವರದಿಂದ ಪೀಡಿತರಾದವರು ಒಬ್ಬ ಡಾಕ್ಟರರ ಹತ್ತಿರ ಆಲೋಚಿಸಿ ತಮ್ಮ ರಕ್ತದಲ್ಲಿರುವ ಎಲ್ಲಾ ಕ್ರಿಮಿಗಳನ್ನು ನಾಶಪಡಿಸಲಿಕ್ಕೆ ಬೇಕಾದಷ್ಟು ಕ್ವಿನೀನನ್ನು ತೆಗೆದುಕೊಳ್ಳಬೇಕು. ಹೀಗೆ ಮಾಡುವದರಿಂದ ಅವರು ರೋಗದಿಂದ ಗುಣಹೊಂದುವದು ಮಾತ್ರವಲ್ಲ ಸುತ್ತಲೂ ಕಡಿಯುವ ಸೊಳ್ಳೆಗಳು ಇದ್ದ ಪಕ್ಷದಲ್ಲಿಯೂ ಅವರಿಂದ ಬೇರೆಯವರಿಗೆ ರೋಗದ ಸೋಂಕು ಹರಡಲಿಕ್ಕೆ ಅವಕಾಶವಿಲ್ಲ.

ಎರಡನೇದು.—ನೀರು ಹರಿಯದೆ ನಿಲ್ಲುವ ಸ್ಥಳಗಳಲ್ಲಿ ಮಾತ್ರ ಹೆಮ್ಮರಿಯಾದ ಸೊಳ್ಳೆಯು ವೃದ್ಧಿ ಹೊಂದುತ್ತದೆ

ನಾವು ಎಲ್ಲಾ ಸಣ್ಣ ಕೊಳಗಳನ್ನೂ ಗುಂಡಿಗಳನ್ನೂ ಮುಚ್ಚಿಸಿ, ನಮ್ಮ ತೋಡುಗಳನ್ನೂ, ಹೊಂಡಗಳನ್ನೂ, ಬಚ್ಚಲು ಗುಂಡಿಗಳನ್ನೂ ಒಳ್ಳೆ ಸ್ಥಿತಿಯಲ್ಲಿರಿಸಿ, ಆಗಾಗ್ಗೆ ಇತರ ಜಲಾಶಯಗಳ ಮೇಲೆ ಸೀಮೆ ಎಣ್ಣೆ ಸುರಿದರೆ, ನಾವು ಪೂರ್ತಿಯಾಗಿ ಈ ಪೀಡೆಯಿಂದ ನಿವಾರಣೆ ಹೊಂದಬಹುದು ಮತ್ತು ನಿಶ್ಚಯವಾಗಿ, ಸೊಳ್ಳೆ ಇಲ್ಲವಾದರೆ, ಮಲೇರಿಯಾ ಜ್ವರ ಬರುವದಿಲ್ಲ.

ಮಲೇರಿಯಾ ಜ್ವರವು ಇಲ್ಲವಾದರೂ, ಸೊಳ್ಳೆಯ ಕಡಿತಗಳು ಬಹಳ ತೊಂದರೆಕೊಡುತ್ತವೆ. ಪ್ರತಿ ರಾತ್ರೆ, ನೀವು ಒಂದು ಸೊಳ್ಳೆ ಬಲೆಯ ಒಳಗೆ ಮಲಗಿದರೆ, ಈ ಪೀಡೆಯಿಂದ ತಪ್ಪಿಸಿಕೊಳ್ಳುವದು ಬಹಳ ಕಷ್ಟವಲ್ಲ.

ಕ್ವಿನೀನು, ನೀರಿನ ಶುಚಿತ್ವ ಮತ್ತು ಸೊಳ್ಳೆ ಬಲೆಗಳು; ಇವುಗಳು ಮಲೇರಿಯಾ ಜ್ವರದಿಂದ ತಪ್ಪಿಸಿಕೊಳ್ಳಲು ನಿಮಗೆ ಗೊತ್ತಿರಬೇಕಾದ ಮೂರು ಸಾಧನಗಳಾಗಿರುತ್ತವೆ.

ರೆಡ್ ಕ್ರಾಸ್.

ಚೇರಳ ಶ್ರೀಮಂಗಲ ಗ್ರಾಮದ ಬಡ ರೈತರ ಗೋಳು ಯಾರೂ ಕೇಳುವರೇ ಇಲ್ಲವೇ?

ಈಗಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳೂ, ಮತ್ತು ಕೌನ್ಸಿಲ್ ಮೆಂಬರುಗಳೂ, ಪ್ಲಾಂಟ್ ಫಾರಂನಲ್ಲಿ ಮಾತಾಡುವುದರಲ್ಲಿಯೂ, ಮತ್ತು ಸರ್ಕಾರದವರೊಡನೆ ಕೆಲಸಕ್ಕೆ ಬಾರದ ಸಂಗತಿಯಲ್ಲು ಹೋರಾಡುವುದರಲ್ಲಿಯೂ ನಿಪುಣರು.

ಸರ್ಕಾರದವರಿಂದ ಬಡ ರೈತರಿಗೆ ಪ್ರಯೋಜನಕಾರಿಯಾದ ಕೆಲಸವನ್ನು ಮಾಡಿಸುವುದರಲ್ಲಿ ಎಳ್ಳಷ್ಟು ತೊಂದರೆ ತೆಗೆದುಕೊಳ್ಳುವುದಿಲ್ಲ. ತಿಳುವಳಿಕೆ ಇದ್ದೂ, ಇಲ್ಲದಂತೆ ವರ್ತಿಸುವುದರಲ್ಲಿ ಶ್ರೇಷ್ಠರು.

ಆದರೆ ಇಂಥಾವರಲ್ಲಿ ಕೆಲವು ಮಹನೀಯರು, ನಮ್ಮ ಗೋಳಿಗೆ ಕಿವಿ ಕೊಡುತ್ತಾರೆ ಇಷ್ಟರವರೆಗೆ ನಮ್ಮ ಪಾಡೇ ಕೇಳುವವರಿರಲಿಲ್ಲ. ಮೆ. ಕೊಂಗೆಟ್ಟಿರ ಸಿ ಅಪ್ಪಯ್ಯನವರು ಗರೀಬ ರೈತರ ಪಾಡು ಕೇಳಿ ಸಹಾಯ ಮಾಡುವವರಲ್ಲಿ ಒಬ್ಬರಾಗಿರುತ್ತಾರೆ. ಮಹನೀಯರು ಗರೀಬ. ಐಶ್ವರ್ಯವಂತ ಎಂಬ ಭಿನ್ನ ಭೇದವಿಡದೆ ನಮ್ಮೆಲ್ಲರಿಗೂ ತಿಳಿದ ಹಾಗೆ ನಮ್ಮ ಮುಂದಿನ ಅಭಿವೃದ್ಧಿಗೆ ಈ ಕೆಳಗಿನ ಸಂಗತಿಯಲ್ಲು ತುಂಬಾ ಕುಶಾಯ ಮಾಡಿದರು.

1921ನೇ ಇಸವಿಯಲ್ಲು ನಮ್ಮ ಚೇರಳ ಶ್ರೀಮಂಗಲ ಗ್ರಾಮದ ಬಡ ರೈತರ ಮಕ್ಕಳಿಗೆ ವಿದ್ಯೆ ಕಲಿಯಲು, ಒಂದು ಹುಲ್ಲಿನ ಕಟ್ಟಡವನ್ನು ಹಣಕೊಟ್ಟು ವಹಿಸಿಕೊಂಡು ಕೈಸಂಬಳ ಶಾಲೆಯನ್ನು ಏರ್ಪಡಿಸಿದರು. ಇದು ಅಭಿವೃದ್ಧಿಗೆ ಬರುವುದನ್ನು ಕಂಡು ಇವರ ತಂದೆಯವರ, ಒಂದು ಶಾಲೆಯನ್ನು ಹೊಸದಾಗಿ ಕಟ್ಟಿಸಲು ಪ್ರಾರಂಭಿಸಿದರು. ಈ ಕಟ್ಟಡವು ಮುಗಿಯುವುದರಲ್ಲಿಯೇ ಇವರು ಪರಲೋಕವನ್ನೈದಿದರು. ಆದರೆ ಅಪ್ಪಯ್ಯನವರು, ಸದ್ರಿ ಶಾಲೆಯನ್ನು ಕಟ್ಟಿ ಪೂರೈಸಿ, ಶಾಲೆಯನ್ನು ಸರ್ಕಾರ ಡಿ ಬೊ. ಶಾಲೆಗೆ ಸೇರಿಸಿ, ಇವರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು, ಆಗಿದ್ದರಿಂದ ಸದರಿ ಶಾಲೆಗೆ ಒಬ್ಬ ಉಪಾಧ್ಯಾಯರು ಸಹ ಬೇಕೆಂದು ಹೋರಾಡಿ, ಇದನ್ನು ತೃಪ್ತಿಪಡಿಸಿ ಸ್ಕೂಲು ಫೀಸ್ ಸಹ ಮಾಫಿಗಾಗಿ ಬಡರೈತರಾದ ನಮಗೆ ಬಹಳ ಸಹಾಯಮಾಡಿದರು. ಆಗಲೂ ಈಗಲೂ ನಮ್ಮ ಮಕ್ಕಳ ಕಷ್ಟ ಸುಖಗಳನ್ನು ವಿಚಾರಿಸುತ್ತಾ ಹೋಗುತ್ತಾರೆ ಶ್ರೀಭಗವಂತನು ಇವರನ್ನು ದೀರ್ಘಾಯುಗಳಾಗಿ ಮಾಡಲೆಂದು ನಮ್ಮ ಪ್ರಾರ್ಥನೆ.

ನಾವು ತಿಳಿದ ಹಾಗೆ ಮೆ. ಅಪ್ಪಯ್ಯನವರು, ಭಿನ್ನಭೇದವಿಲ್ಲದೆ ಎಲ್ಲಾ ಇಂಡಿಯನ್ ಮತ್ತು ಯೂರೋಪಿಯನ್ ಪ್ಲಾಂಟರ್‌ಗಳಿಗೆ ಆಮಂತ್ರಣ ಕಳುಹಿಸಿ ಸದರಿ ಶಾಲೆಯಲ್ಲಿ ಎಲ್ಲರೂ ಸೇರಿ ಸದರಿ ರಸ್ತೆಯ ದುರಸ್ತು ಬಗ್ಗೆ ಎಲ್ಲರನ್ನು ಆಳು ಸಹಾಯ ಮಾಡಿ ಡಿಸ್ಟ್ರಿಕ್ಟ್ ಬೋರ್ಡಿನಿಂದ ಬಂದ ಹಣವನ್ನು ರಸ್ತೆಗೆ ಚೆನ್ನಾಗಿ ವ್ಯಯ ಮಾಡಿ ರಸ್ತೆಯನ್ನು ದುರಸ್ತು ಮಾಡಬೇಕೆಂದು ಕೇಳಿಕೊಂಡ ಮೇರೆ ಎಲ್ಲರೂ ಸಹಾಯ ಮಾಡಿ ಸದರಿ ರಸ್ತೆಯು ಈಗ ಒಂದು ನಮೂನೆಗೆ ಬರುವ ರೀತಿಯಲ್ಲಿದೆ. ಸದರಿ ರಸ್ತೆಯಲ್ಲು ದಿನವಹಿ ಗಾಡಿಗಳು ತಿರುಗುತ್ತಾ ಇವೆ. ಇಂಥಾ ರಸ್ತೆಯನ್ನು ದುರಸ್ತುಮಾಡಲು ಮೆ. ಅಪ್ಪಯ್ಯನವರು, ತಮ್ಮ ಆಳುಗಳನ್ನು ಬಿಟ್ಟು ಕೊಟ್ಟು ಸಹಾಯ ಮಾಡಿದಕ್ಕೆ ತುಂಬಾ ವಂದಿಸುವೆವು ಹತ್ತನೇ ಮೈಲಿಂದ ಇವರ ತೋಟದ ವರೆಗೆ ಮಾಡಿಸಿದ ಕೆಲಸ ಈ ಮಳೆಗಾಲದಲ್ಲೂ ಸಹ ಚೆನ್ನಾಗಿದೆ. ಇವರು ಮಾಡಿದಂತೆ ಬಾಕಿ ಇರುವ ಪ್ಲಾಂಟರುಗಳೂ ಮಾಡಲಿ, ಎಂದು ಹಾರೈಸುತ್ತೇವೆ. ಈ ವರ್ಷವೂ ಇದೇ ರೀತಿ ತೊಂದರೆ ತೆಗೆದುಕೊಂಡು ಸದರಿ ರಸ್ತೆಯನ್ನು ದುರಸ್ತು ಮಾಡಿದರೆ, ಬಡ ವ್ಯಾಪಾರಿಗಳಿಗೂ ಬಡ ರೈತರಾದ ನಮಗೂ ಬಹು ಅನುಕೂಲವಾಗುತ್ತಿತ್ತು.

ಸರ್ಕಾರದವರು ಸದರಿ ರಸ್ತೆಗೆ ಬೇಗನೆ ಕಲ್ಲು ಹಾಕಿಸುವ ಏರ್ಪಾಡು ಮಾಡಿದ್ದರೆ ನಮಗೆ ಬಹಳ ಉಪಕಾರವಾಗುತ್ತಿತ್ತು. ಈ ರಸ್ತೆಯ ಆಜು ಬಾಜು ಜನರು ತುಂಬಾ ಕಂದಾಯ ಕೊಡುವವರಾಗಿದ್ದಾರೆ. ಜಂಬೂರು, ತೋಟ ಮತ್ತು ಇನ್ನೂ ಇತರ ಅನೇಕ ತೋಟಗಳಿಂದ, ತಲಚೇರಿಗೆ ಕಾಫಿ ಸಾಗಿಸುವುದು ಇದೇ ರಸ್ತೆಯಲ್ಲು ಸಾಗುತ್ತೆ. ಗಾಡಿ ಸಂಚಾರ ಕಮ್ಮಿ ಇರುವ ದೊಡ್ಡ ಮನುಷ್ಯರ ವಿನೋದಕ್ಕಾಗಿ, ಸರ್ಕಾರವು ತುಂಬಾ ಹಣ ವ್ಯಯಮಾಡುವ, ವದಂತಿ ಇದೆ. ಇದರ ಬದಲು ಈ ರಸ್ತೆಗೆ ವ್ಯಯಮಾಡಿ ಗರೀಬ ರೈತರ ಗೋಳು ಹೋಗಲಾಡಿಸುವರಾಗಿ ನಂಬಿದ್ದೇನೆ.

ಈಗ ಖಾಸೇ ನಮ್ಮ ಗ್ರಾಮದಲ್ಲು ಮಡಿಕೇರಿ—ಸಿದ್ದಾಪುರ ಹತ್ತನೆ ಮೈಲಲ್ಲು ಒಂದು ಟಪಾಲ್ ಆಫೀಸು ಸಹ ತೆರೆಯಲ್ಪಟ್ಟಿದೆ. ಇದಕ್ಕೂ, ಮೂಲಕಾರಣರಾದ ಮೆ. ಕೆ. ಪಿ. ಅಪ್ಪಯ್ಯನವರನ್ನು ಎಷ್ಟು ವಂದಿಸಿದರೂ ಸ್ವಲ್ಪವೇ. ಕಟ್ಟಡವು ಪೋಸ್ಟಾಫೀಸಿಗೆ ಯೋಗ್ಯವಾಗಿಯೇ ಕಟ್ಟಲ್ಪಟ್ಟಿದೆ. ಈ ಸ್ಥಳವು ಮಡಿಕೇರಿ—ಸಿದ್ದಾಪುರಕ್ಕೆ ಮತ್ತು ಸುಂಟಿಕೊಪ್ಪಲಿಗೆ ಎಲ್ಲಾ ಒಂದೇ ದೂರವಾಗಿದ್ದು ಮಧ್ಯದಲ್ಲಿದೆ. ಹೀಗಿರುವುದರಿಂದ ಎಲ್ಲಾ ರೈತರಿಗೂ ಮತ್ತು ಪ್ಲಾಂಟರುಗಳಿಗೂ ಅನುಕೂಲವಾಗಿದ್ದೆ. ಮೊದಲು ಸದರಿ ಟಪ್ಪಾಲು ಆಫೀಸು ಸಿದ್ದಾಪುರಕ್ಕೆ 5½ ಮೈಲಲ್ಲು ಇದ್ದು, ರೈತರಿಗೆ ಬಹಳ ದೂರವಾಗಿ ಅನಾನುಕೂಲವಿತ್ತು. ಈಗ ಇಲ್ಲಿಗೆ ವರ್ಗಾಯಿಸಲು ಕಾಫಿ ಪ್ಲಾಂಟರುಗಳು ಪ್ರೋತ್ಸಾಹಮಾಡಿದ್ದು ನೋಡುವಾಗ್ಯೆ ಯುರೋಪಿಯನ್ ಪ್ಲಾಂಟರುಗಳು ಕೂಡ ಬಡರೈತರಿಗೆ ತಮ್ಮ ಸಹಾಯವನ್ನು ವ್ಯಕ್ತ ಪಡಿಸುವುದು ಗೊತ್ತಾಗುತ್ತೆ.

ಕೊಂಡಂಗೇರಿಯಿಂದ ಹತ್ತನೆ ಮೈಲಿಗೆ ಒಂದು ರಸ್ತೆಯನ್ನು ತರುವ ಅಭಿಲಾಷೆಯು ಮೆ. ಅಪ್ಪಯ್ಯನವರಿಗೆ ಇದೆ. ಈ ರಸ್ತೆಯಿಂದ ಬಡರೈತರಿಗೆ ಇನ್ನೂ ಅನುಕೂಲವಿದೆ. ಕೊಂಡಂಗೇರಿ ಹೊಳೆಯಿಂದ ಸುಲಭದಲ್ಲಿ ಹತ್ತನೆಮೈಲಿಗೆ ರಸ್ತೆ ಮಾಡಬಹುದಾಗಿದೆ. ಹಾಗಾದ ಪಕ್ಷ ಮೂನರ್ಾಡಿನಿಂದ ನೆಟ್ಟಗೆ ಸುಂಟಿಕೊಪ್ಪಲು, ಕುಶಾಲನಗರ, ಮಡಿಕೇರಿ, ಮತ್ತು ಸಿದ್ದಾಪುರ ಕಡೆಗಳಿಗೆಲ್ಲಾ ಒಳ್ಳೆಯ ಅನುಕೂಲವಿತ್ತು.

ಈಗ ಮೂನರ್ಾಡಿನಿಂದ ಗಾಡಿ ಹೊರಟುಬರಬೇಕಾದರೆ ಮಡಿಕೇರಿಗೆ ಬಂದು ಬರಬೇಕಾಗಿದೆ. ಇದಲ್ಲದೆ ರೈತರ ಹುಲ್ಲು, ಭತ್ತ, ಕಿತ್ತಳೆ ವಸೂಲಿಗೆ ಗಾಡಿಸಂಚಾರವಿಲ್ಲದಿದ್ದರೆ, ಪಸಲಿನ ಕ್ರಯ ಅರ್ಧ ಮಾತ್ರ ರೈತರಿಗೆ ಸಿಕ್ಕುತ್ತೆ. ಬಾಕಿ ಅರ್ಧ ಹೊರೆ ಹೊರುವ ಕಷ್ಟಕ್ಕೆ ತೆರಬೇಕಾಯಿತು. ಆದುದರಿಂದ ಘನ ಸರ್ಕಾರದವರು ಸದ್ರಿ ರಸ್ತೆಯ ಏರ್ಪಾಡಿಗೆ ಗಮನ ಕೊಡಬೇಕಾಗಿ ಬೇಡುತ್ತೇನೆ.

ಮಧ್ಯಸ್ಥಳವಾದ ಈ ಹತ್ತನೆ ಮೈಲಲ್ಲು ಏಪ್ರಿಲ್ ತಿಂಗಳು ಪ್ರಾರಂಭದಿಂದಲೇ ಕುಡಿಯಲು ನೀರಿಲ್ಲದೆ, 2 ಮೈಲು ದೂರದಿಂದ ಸಾಗಿಸುವರು. ದನಕರುಗಳಿಗೂ ಸಹ ಕುಡಿಯಲು ನೀರಿಲ್ಲ. ಭಾವಿಯು ಇಲ್ಲಿಯ ಆಜು ಬಾಜು ಎಲ್ಲಿಯೂ ಇಲ್ಲ. ಇಷ್ಟು ಮಳೆ ಹೊಡೆದು ಇನ್ನೂ ನೀರು ಇಲ್ಲ. ಪೋಸ್ಟಾಫೀಸಿಗೆ ದೃಷ್ಟಿ ಇಟ್ಟಂತೆ ಕುಡಿಯುವ ನೀರಿನ ಭಾವಿಗೆ ದೃಷ್ಟಿ ಇಟ್ಟು, ಸರ್ಕಾರದವರನ್ನು ಕೇಳಿಕೊಂಡು ಒಂದು ಭಾವಿಯನ್ನು ತೆಗಿಸಿ ಕೊಡುವರೆಂದು ನಂಬಿದ್ದೇವೆ ನೀರಿಲ್ಲದೆ, ಶಾಲಾ ಬಾಲಕ ಬಾಲಕೀಯರಿಗೂ ಬಸವಹಿ ಸಂಚರಿಸುವ ಪ್ರಯಾಣಸ್ಥರಿಗೂ, ಗಾಡಿಯವರಿಗೂ ಮತ್ತು ಅಂಗಡಿಯವರಿಗೂ ತುಂಬಾ ಗೋಳಾಟವಾಗಿದೆ. ಪಿ. ಡಬ್ಲ್ಯು. ಡಿ. (P W. D.) ಆಳುಗಳಿಗೂ ಸಹ ನೀರಿಲ್ಲದೆ ಸಾಯಂಕಾಲ ಕೆಲಸ ಬಿಟ್ಟು 2 ಮೈಲು ನೀರಿಗೆ ಸೊಂಟಕಟ್ಟಬೇಕು. ಈ ನಮ್ಮ ಕಷ್ಟಗಳನ್ನೆಲ್ಲಾ ನಮ್ಮ ಕಮಿಶನರ್ ಸಾಹೇಬರೇ ಬಂದು ಕಣ್ಣು ನೋಡಿ ನಮ್ಮ ಕಷ್ಟ ಸುಖಕ್ಕ ಆದಷ್ಟು ಸಹಾಯಕೊಟ್ಟು ಗರೀಬ ರೈತರಿಗೂ, ನಮ್ಮ ಬಡ ಮಕ್ಕಳಿಗೂ ಪ್ರೋತ್ಸಾಹಿಸುವರಾಗಿ ನಂಬಿದ್ದೇನೆ.

"ಊರವ"

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ। ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

	ಸಾದಾ ಬೈಂಡು	ದಪ್ಪ ರಟ್ಟಿನ ಬೈಂಡು	ಕೆತ್ತಾನಾರು ಬೈಂಡು
ಸಾಮಾನ್ಯ ಪ್ರತಿ	೧—೮—೦	೧—೧೨—೦	೨—೪—೦
ಉತ್ತಮ ಪ್ರತಿ	೨—೪—೦	೨—೮—೦	೩—೨—೦

ಅಂಚೇಹಾಸಲು ಪ್ರತ್ಯೇಕ.

ವಿಳಾಸ— ಸುಬೋಧ ಪ್ರಕಟನಾಲಯ,

12—1

ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

Please Call at

THE GENERAL TRADING CO., MERCARA.

Opposite Coronation Gardens.

SOLE AGENTS FOR VAUXHALL, OAKLAND, PONTIAC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY! NEW PERFORMANCE!! NEW FEATURES AND FOUR WHEEL BRAKES!!!

QUALITY AT LOW COST

THE COORG FOOTWEAR MART, MERCARA.

The house for smart foot wear. Monsoon boot a speciality

Prompt attention. Prices very moderate.

12—4 Attended by very efficient workmen

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!!

ಆಲ್ ರಯಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.

ಈ ಇಮಿಟೇಷನ್ ಸಿಲ್ಕ್ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವೂ ಇರುವದು. ಉಡಲು ಘನತೆಯುಳ್ಳವುಗಳೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಕೆಂಪು, ಕರಿ ಮತ್ತು ಹಸುರು ಬಣ್ಣಗಳ್ಳ ಇರುವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಯೋಗ್ಯವಾಗಿರುವವು. ಅಸಲ್ ಸಿಲ್ಕಿನಂತೆ ಕಾಣುವವು. ಶ್ರೀಮಂತರಿಗೂ ಗರೀಬರಿಗೂ ಉಡಲು ಲಾಯಕಾದದ್ದು. ಕ್ರಯ ರೂ 4—12—0.

ವಿಳಾಸ —ಲೀಗಲ್ ಟ್ರೇಡಿಂಗ್ ಕಂಪೆನಿ,

52—9 ಪೋ ಬಾಕ್ಸ್ ನಂ 243, ಮದರಾಸು.

ಬೆಸ್ಟ್ ಫೌನ್‌ಟೇನ್ ಪೆನ್.

ಈ ಪೇನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಬಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಮ ಆಗಿ ಕೊಡುವೆವು.

ಇನಾಮ ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ —ಕೆ ಎನ್ ರಾಮಕೃಷ್ಣ ಅಂಡ ಬ್ರದರ್ಸ್,

52—9 109 ಬ್ರೈಸನ ಬಜಾರ ರೋಡ, ಮದರಾಸು.

Arms, Ammunition and Shooting Requisites!!!



1928 Illustrated Catalogue Just Issued Free on Application!

D B B L	Rifles	Rs	120	to Rs	2750
S B B L	"	"	35	to "	950
D B B L	Guns	"	50	to "	1350
S. B B L.	"	"	35	to	275
D B M L	"	"	45	to "	135
S B M L	"	"	30	to "	80
B L	Revolvers	"	35	to "	350
Automatic	Pistols	"	30	to "	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—16 210 Abdul Rehman Street, BOMBAY.



ಡಿ ಬಿ ಬಿ. ಯಲ್. ಕೋವಿಗಳು ರೂ 75 ರಿಂದ ರೂ 450/.
ಯಸ್. ಬಿ ಬಿ. ಯಲ್. ಕೋವಿಗಳು ರೂ 35 ರಿಂದ ರೂ. 250/.
ಯಸ್. ಬಿ. ಯಮ್ ಯಲ್ ಕೋವಿಗಳು ರೂ 35 ರಿಂದ 65/.
ರಿವಾಲ್ವರ್‌ಗಳು. ರೂ. 40/ರಿಂದ ರೂ 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟಗ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನಂಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಹಳೇ ಬಿಲಿಯ ಕಂಪೆನಿ.

24—7 12. ಬ್ರಾಡ್ವೇ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು

ಬಹಾರ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಮು 1ಕ್ಕೆ	0—5—0
ಕಲಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
ಹುಸ್ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37
ಸ್ಟೀಂ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0
ರಾಜಾ ಫ್ಲೂಟ್ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌನ್‌ಟೇನ್ ಪೆನ್‌ಗಳು.

ಬ್ಲಾಕ್ ಬರ್ಡ ಫೌನ್‌ಟೇನ್ ಪೆನ್ 1ಕ್ಕೆ	3—8—0 ಮತ್ತು 3—12—0
ವರಲ್ಡ್ ಬಂಡರ್ ಫೌನ್‌ಟೇನ್ ಪೆನ್ 1ಕ್ಕೆ	3—0—0 ಮತ್ತು 3—8—0
ಕಾಂಪ್ಯಾಕ್ಟ್ ಸೆಲ್ಫ್‌ಫಿಲ್ಲಿಂಗ್ ಫೌನ್‌ಟೇನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌನ್‌ಟೇನ್ ಪೆನ್ 1ಕ್ಕೆ	8—0—0 ಮತ್ತು 8—6—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್‌ಟೇನ್ ಪೆನ್ 1ಕ್ಕೆ	12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	4—6—0
ವೆಸ್ಟಂಡ್ ಜರ್ಮನಿಯ ಅಲಾರಂ ಟೈಂಪೀಸ್ 1ಕ್ಕೆ	8—0—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9—5—0
ಬಿಗ್ ಬೆನ್ ರೇಡಿಯಂ ಡಯಲ್ ಟೈಂಪೀಸ್ 1ಕ್ಕೆ	6—12—0
ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈಸ್ಟಾಂಪು ರವಾನಿಸಿ.

ಎಂ ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ವಾಚ್ ಕ್ಲಾಕ್ ಗಳ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಸೆಂಟ್ರಲ್ ಸಹಕಾರಿ ಬ್ಯಾಂಕ್,
ಕೊ ಅಪರೇಟಿವ್ ಸೊಸೈಟೀಸ್
ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50 000
ಸೇರಿಲಾದ ಶೇರ ಮೆಂಬರುಗಳು	—	510
ಒಟ್ಟು ದುಡಿಯುವ ಬಂಡವಾಳ	—	1,02 014

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಮುಖ್ಯವಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಪಾಯಿದೆ ಅಥವ ಹೆಚ್ಚಿನ ಪಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಪಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 1ರ ಬಡ್ಡಿ ದೊರೆಯುತ್ತೆ.

ವಿವರಕ್ಕೋಸ್ಕರ ರಿಜಿಸ್ಟರ್ ಕೊಡ ಜನರಲ್ ಮೆನೇಜರ್ ಅವರಿಗೆ ಬರೆದುಕೊಳ್ಳತಕ್ಕದ್ದು.

ಪ್ರೆಸಿಡೆಂಟರು, ಟ್ರೆಜರರ್.
ಕೋದಂಡ ಅಪ್ಪಯ್ಯನವರು, ಸಂಗೆಟ್ಟಿರ ಚಿನ್ನಯ್ಯ
ರಾವ್ ಬಹದ್ದೂರ್ ನವರು.

ಸೆಕ್ರೆಟರಿ
ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1927

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಪೇರಿಯಂಡ ಪೂವಯ್ಯನವರು
ಪೊನ್ನಂಪೇಟೆನಾಡು—ಮೆ ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ ಕೀಕಿರ ಅಗ್ಗಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಣತೇಲಿರ ನಂಜುಂಡನವರು,
ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ●ಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ ಜೆ ಮುದ್ದವೆಯ್ಯಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ ಜೆ ಮಾದವೆಯ್ಯಯ್ಯನವರು,
ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು,

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನೂ ಇಂಡೀಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಒಂದ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆದುಕೊಟ್ಟಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲುಗಳನುಸಾರವಾಗಿ ತಯಾರಿಸಲ್ಪಟ್ಟ ದಾಖಲೆ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ... ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,
'ಕೊಡಗು' ಮಡಿಕೇರಿ.

ARMS & AMMUNITION MART.
Mahomedally-Noorbhoy.



321 Abdul Rehman Street, near
Crawford Market, BOMBAY 3
Telegraphic Address—"SHOOTER"
Bombay.

(21-45) 'Please write for our
Catalogue 1928—1929.

ಕಟಿಂಕಷಾಯ ಮಲೇರಿಯ ರಕ್ಷೆ.—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇರಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಚಿಕ್ಕ ಬಾಟ್ಲಿ 1 3 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ.—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣು ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—41 ೧. ಮಂಗಳೂರು.

ರಕಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!
ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ

ಅಜಮಾಯಿಸಿ ನೋಡಿರಿ.



ಇನಾಮಿನ ಬಟ್ಟುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಛಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು

ಕೀಶವಚಂದ್ ದೇವಚಂದ್,
ಜ್ಯುಲ್ಲರ್, (ಕೆಟಲಾಗ್ ಮುಫತ್).
12—8 21 ಚೈನಾ ಬಜಾರ್‌ರೋಡ್, ಮದರಾಸು.

EMPIRE OF INDIA
LIFE ASSURANCE COMPANY, LIMITED.

(Established 1897.)

FOR THE YEAR ENDING 29th FEBRUARY 1928.

New Business Exceeds	Rs 1,16,00,000
Income Exceeds	Rs. 54,95 000
Assets Exceed	Rs 3,15,64,000.

Wanted Agents in Important Places in Coorg

HEAD OFFICE
Empire of India Life Building,
BOMBAY

24—4

BRANCH OFFICE.
152, Commercial Street,
BANGALORE.

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ
ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	13545	ರೂ. 2,96,42,000.
1926	17371	ರೂ. 3,91,39,000.
1927	21418	ರೂ 4,68,04,075.

—ಪ್ರೀಮಿಯಂ ಉತ್ಪತ್ತಿ—

1925	ರೂ 92,66,000.
1926	ರೂ. 1,05,33,000.
1927	ರೂ 1,21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮೀರಿದೆ.
ಲೈಫ್ ಫಂಡು ... ಕೋಟಿ ರೂಪಾ ...ಗೆ ಮೀರಿದೆ
ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ಸ... ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್
ಸೌತ್ ಪರೇಡ್, ಬೆಂಗಳೂರು. 52—14

ಪ್ರೋ. ಆರ್. ಕೃಷ್ಣಸ್ವಾಮಯ್ಯರ್,
ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd,

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ ೨-೮-೦

ಸರ್ವೇಷು ಕೋಶದಯಯಾ ವಿದ್ಯಾ ಸೀತಿ ಪ್ರಯುಕ್ತಕಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂಜ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಮಡಿಕೇರಿ, ಸ್ವ ೧೯೨೮ನೇ ಇಸವಿ ಜುಲೈ ತಾರೀಕು ೨೭ ನೇ ಶುಕ್ರವಾರ [ಸಂಚಿಕೆ ೯

ESTATE REQUISITES

5 lbs Yates hammer headed mamooties	Rs 3 0 0 Each		Weeding forks @	Rs 1 4 0 Each
4½ „ „ „ „ „	„ 2 14 0 „		Garden trowels „	Rs 1 4 0 „
4 „ „ „ „ „	„ 2 12 0 „		Pick axes „	Rs 1 6 0 „
Felling axes at Rs 3 0 0	„ 3 4 0 „		Bill hooks „	Rs 3 14 0 „
Grubbing mattocks at	„ 3 4 0 „		Digging forks „	Rs 4 0 0 „

MONSOON EQUIPMENT.

Planter boots	Rs 16 8 0	Dales' dubbin per tin	Rs 0 8 0
Marrs' oil (water proof) per tin	Rs 2 0 0	Umbrellas	Rs 4 8 0

52—26

SPENCER & CO. LTD. General Merchants **MERCARA.**

V. SUBRAMANIA IYER

Manufacturing

JEWELLER

GOLDSMITH, SILVERSMITH & DEALER IN ALL PRECIOUS STONES

Post Box 423,
TRIPLICANE, MADRAS.

Catalogue Free
to Bonafide Enquirers

Rose Water Sprinkler.



Chased Silver Mirror.

Manufacture of
HIGH CLASS
GEMSET JEWELS.
a speciality

The special features
of my productions are —
1 Best QUALITY
2 Latest novel designs
3 Prompt execution
4 Neat & artistic finish
5 Most moderate prices

GOLD
or
SILVERWARE
of all descriptions
neatly executed



52—46



Before buying any Arms & Ammunition, please refer our Reduced NETT PRICED current Catalogue of GUNS, RIFLES, REVOLVERS, AUTOMATIC PISTOLS, AMMUNITION, & Shooting Requisites, just out

CATALOGUE of 1927-28 on application.

The Bombay Armoury,

331, Abdul Rehman Street,

Bombay, 3.

24—22

ಕರ್ಣಿಕ

ಎ ಗ್ಯೆ ಮಿ ಕ್ ಶ್ಚ ರ್

ಮಲೇರಿಯಾ ಇನ್ಫ್ಲುಯೆಂಝಾ, ನಡುಕಜ್ವರ, ಅಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ

ಸಾ ರ ಸಾ ಪ ರಿ ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಿ ಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್
ದುಬಾಷ್ ಲೇನ್,
ಗಿರಗಾಂವ, ಮುಂಬಾಯಿ.

12—5

ಕೊಡಗು.

ಸನ್ ೧೯೨೮ ನೇ ಇಸವಿ

ಜುಲೈ ತಾ. ೨೭ ನೇ ಶುಕ್ರವಾರ.

ಸಿಲೋನಿನ ಸುಧಾರಣೆಗಳು.

ಹಿಂದೂ ದೇಶದಂತೆಯೇ ಬ್ರಿಟಿಷ್ ಸರಕಾರದಿಂದ ಆಳಲ್ಪಡುತ್ತಿರುವ ಸಿಂಹಳ ದ್ವೀಪದ ಜನರು ತಮ್ಮ ದೇಶದ ಆಡಳಿತೆಯನ್ನು ತಾವೇ ನಡಿಸಬೇಕೆಂದು ಹೋರಾಡುತ್ತಿರುವದು ಯಾರಿಗೂ ತಿಳಿಯದ ಸಂಗತಿಯಲ್ಲ. ಹಿಂದೂ ದೇಶದವರ ಸ್ವರಾಜ್ಯ ಸಂಪಾದನೆಯ ಚಳವಳದ ಬಲವನ್ನು ತಗ್ಗಿಸಲಿಕ್ಕಾಗಿ ಬ್ರಿಟಿಷರು ಹೇಗೆ ಆಗಾಗ್ಯೆ ರಾಯಲ್ ಕಮಿಷನುಗಳನ್ನೂ, ಸುಧಾರಣೆ ಕಮಿಟಿಗಳನ್ನೂ ನೇಮಿಸುತ್ತಿರುವರೋ, ಹಾಗೆಯೇ ಸಿಲೋನಿನಲ್ಲಿಯೂ ಮಾಡುತ್ತಿರುವರು. ಅಲ್ಲಿ 1923ರಲ್ಲಿ ಸುಧಾರಣೆಯ ಒಂದು ಹಂಗವನ್ನು ತೆರೆದಿದ್ದರು. ಆದರಿಂದ ಅಲ್ಲಿಯವರು ತೃಪ್ತರಾಗದೆ ಸಂಪೂರ್ಣ ಜವಾಬ್ದಾರಿಯ ಸರಕಾರವನ್ನು ಪಡೆಯುವ ಚಳವಳವನ್ನೆಬ್ಬಿಸಿದರು. ಇದನ್ನು ಶಮನ ಮಾಡಲಿಕ್ಕಾಗಿ ಅರ್ಲ್ ಡೊನೂಮೋರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಷನು ನೇಮಿಸಲಾಯಿತು. ಈ ಕಮಿಷನಿನ ವರದಿಯು ಈಗ ತಾನೇ ಹೊರಬಿದ್ದಿದೆ

ಈ ವರದಿಯಲ್ಲಿ ಜನರು ನಿರೀಕ್ಷಿಸದ ಕೆಲವು ವಿಶೇಷ ಸಂಗತಿಗಳು ಸಿಫಾರಸ್ಸು ಮಾಡಲ್ಪಟ್ಟಿವೆ. ಪಾರ್ಲಿಮೆಂಟರಿ ಸರಕಾರವು ಹಲವು ವರ್ಷಗಳಿಂದ ಜಾರಿಯಲ್ಲಿರುವ ಪಾಶ್ಚಾತ್ಯ ದೇಶಗಳಲ್ಲಿಯೇ ಜಯಪ್ರದವಾಗಿರುವುದಿಲ್ಲವೆಂತಲೂ, ಅಂಥಾ ಸರಕಾರವು ಸಿಲೋನಿಗೆ ಯೋಗ್ಯವಾದದ್ದಲ್ಲವೆಂತಲೂ ಹೇಳಿ, ಹೊಸ ನಮೂನೆಯ ಸರ್ಕಾರ ಕ್ರಮವನ್ನು ಸೂಚಿಸಿರುವರು. ಜನರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಸಭೆ ಒಂದು ಇರತಕ್ಕದ್ದು. ಈ ಸಭೆಯು ಬರೇ ಕಾನೂನು ಕಾಯಿದೆಗಳನ್ನು ಮಾಡುವದಲ್ಲದೆ ಕಾರ್ಯನಿರ್ವಾಹಕ ಕೆಲಸವನ್ನೂ ಕೈಕೊಳ್ಳಬೇಕು. ಅದರ ಮೆಂಬರುಗಳು ಏಳು ಕಮಿಟಿಗಳಾಗಿ ಆರಿಸಲ್ಪಡುವರು. ಒಂದೊಂದು ಕಮಿಟಿಯು ಒಂದೊಂದು ಇಲಾಖೆಯ ಚಾರ್ಜಿನಲ್ಲಿರುವದು. ಪ್ರತಿಯೊಂದು ಕಮಿಟಿಗೂ ಒಬ್ಬ ಚುನಾಯಿತ ಅಧ್ಯಕ್ಷನಿರುವನು. ಇಂಥಾ ಅಧ್ಯಕ್ಷನು ಆಯಾಯ ಇಲಾಖೆಯ ಮಂತ್ರಿಯಾಗುವನು. ಏಳು ಮಂತ್ರಿಗಳೂ, ಮೂರು ಖಾಯಂ ಸ್ಟೇಟ್ ಆಫೀಸರುಗಳೂ ಸೇರಿ ಮಂತ್ರಿಮಂಡಲಿಯಾಗುವದು. ಈ ಮೂರು ಆಫೀಸರುಗಳು, ಕಾನೂನು, ಬೊಕ್ಕಸ ಮತ್ತು ಪರದೇಶಗಳ ಸಂಬಂಧದ ಇಲಾಖೆಗಳ ಚಾರ್ಜಿನಲ್ಲಿರುವರು. ಇವರಿಗೆ ಕೌನ್ಸಿಲಿನಲ್ಲಿ ಓಟು ಮಾಡುವ ಹಕ್ಕಿಲ್ಲ. ಈ ಮಂತ್ರಿ ಮಂಡಲಿಯವರು ವಾರ್ಷಿಕ ಬಜೆಟನ್ನು ತಯಾರಿಸಿ ಕೌನ್ಸಿಲಿನ ಮುಂದಿಡತಕ್ಕದ್ದು. ಸದರಿ ಬಜೆಟನ್ನು ಕೌನ್ಸಿಲಿನವರು ಮಂಜೂರು ಮಾಡದೆ ಹೋದರೆ ಮಂತ್ರಿಗಳೆಲ್ಲರೂ ಒಟ್ಟಾಗಿ ರಾಜಿನಾಮೆ ಕೊಡತಕ್ಕದ್ದು.

ಮೇಲಿನ ಕ್ರಮದಿಂದ ಚುನಾಯಿತ ಪ್ರತಿನಿಧಿಗಳ ಸಭೆಗೆ ತುಂಬಾ ಅಧಿಕಾರವಿದೆಯೆಂದು ತೋರಬಹುದು. ಆದರೆ ಗವರ್ನರವರಿಗೆ 1923ನೇ ಸುಧಾರಣೆಯ 13ನೇ ನಿಬಂಧನೆಯ ಹತ್ತು ಕಲಂಗಳ ಮೇರೆ ಬಹಳ ಅಧಿಕಾರಗಳು (ರಿಸರ್ವ್) ಕಾದಿಡಲ್ಪಟ್ಟಿದ್ದವು. ಆದರೊಂದಿಗೆ ಈಗ ಪುನಹ ಆರು ಕಲಂಗಳನ್ನು ಸೇರಿಸಿರುವರು ಅಂದರೆ ಹೆಚ್ಚು ಕಡಿಮೆ ಮುಖ್ಯ ವಿಷಯಗಳನ್ನು ನಡಿಸುವ ಅಧಿಕಾರವೆಲ್ಲವೂ ಗವರ್ನರವರಿಗೇ ಸೇರಿದೆ. ಅಂದ ಮೇಲೆ ಪ್ರತಿನಿಧಿ ಸಭೆಗೆ ಜವಾಬ್ದಾರಿಯೂ, ಅಧಿಕಾರವೂ ಎಲ್ಲಿಂದ ಬರುವದು? ಪ್ರತ್ಯೇಕ ಕಮಿಟಿಗಳಿಂದ ಆರಿಸಲ್ಪಟ್ಟ ಮಂತ್ರಿಗಳು ಮೂರು ಖಾಯಂ ಉದ್ಯೋಗಸ್ಥರೊಂದಿಗೆ ಸೇರಿ ಒಗ್ಗಟ್ಟಿನ ಬಜೆಟನ್ನು ತಯಾರಿಸುವದು ಕಷ್ಟ ಸಾಧ್ಯವೇ ಸರಿ. ಕಮಿಷನಿನ ಸಿಫಾರಸ್ಸುಗಳನ್ನು ಒಟ್ಟಾರೆ ತೆಗೆದುಕೊಂಡರೆ ಇಂಗ್ಲಿಂಡಿನಲ್ಲಿ ಪೂರ್ಣ ಅಪಜಯ ಹೊಂದಿರುವ ದ್ವಿಮುಖ ಸರ್ಕಾರದ ತತ್ವವನ್ನು ಇನ್ನೊಂದು ರೂಪದಲ್ಲಿ ಸಿಲೋನಿನಲ್ಲಿ ಜಾರಿಗೆ ತರಲು ಪ್ರಯತ್ನಿಸುವಂತೆ ಕಾಣುತ್ತದೆ ಈ ತರಹದ ಸುಧಾರಣೆಯು ಅಲ್ಲಿ ಎಷ್ಟರ ಮಟ್ಟಿಗೆ ಜಯಪ್ರದವಾಗಿ ನಡಿಸಲ್ಪಡುವದೆಂದು ನಾವು ಈಗ ಹೇಳಲಾರೆವು ದೇಶಕ್ಕೆ ಪ್ರಯೋಜನಕಾರಿಯಾಗಿ ನಡಿಸಲು ಕಷ್ಟಸಾಧ್ಯವಾದ ಇಂಥಾ ಹೊಸ ಕ್ರಮಗಳನ್ನು ಜಾರಿಗೆ ತಂದು ಅವು ಅಪಜಯವಾದರೆ ಅಲ್ಲಿಯ ಜನರು ಜವಾಬ್ದಾರಿ ಸರ್ಕಾರವನ್ನು ನಡಿಸಲು ಇನ್ನೂ ಯೋಗ್ಯರಾಗಿಲ್ಲವೆಂದು ಹೇಳುವ ಒಂದು ಬ್ರಿಟಿಷರ ವಾಡಿಕೆಯ ಉಪಾಯವಾಗಿದೆ. ಯಾವ ದೇಶದಲ್ಲೇ ಆಗಲಿ ಸರ್ಕಾರವು ಅಲ್ಲಿಯ ಜನರಿಗೆ ತೃಪ್ತಿಕರವಾಗಿ ದೇಶಕ್ಕೆ ಪ್ರಯೋಜನವಾಗುವಂತೆ ನಡಸಲ್ಪಡಬೇಕಾದರೆ, ಆ ಸರ್ಕಾರ ಕ್ರಮವು ಅಲ್ಲಿಯವರಿಂದಲೇ ತಯಾರಿಸಲ್ಪಟ್ಟು, ಅವರಿಂದಲೇ ನಡಿಸಲ್ಪಡಬೇಕು. ಬೇರೆಯವರಿಂದ ತಯಾರಿಸಲ್ಪಟ್ಟ ಆಡಳಿತ ರಚನೆಯು ಎಷ್ಟು ಉತ್ತಮವಾಗಿದ್ದರೂ ಸ್ವರಾಜ್ಯಕ್ಕೆ ಸಮಾನವಾಗಲಿಕ್ಕಿಲ್ಲ.

ಈ ವರದಿಯಲ್ಲಿ ಒಂದೆರಡು ಉತ್ತಮ ಸಿಫಾರಸ್ಸುಗಳು ಕಂಡು ಬರುತ್ತವೆ. ಕೋಮುವಾರು ಪ್ರತಿನಿಧಿತ್ವದಿಂದ ದೇಶದ ಒಗ್ಗಟ್ಟಿಗೆ ಕುಂದಕ ಉಂಟಾಗಿ, ಜನರ ಅಭಿವೃದ್ಧಿಗೆ ತುಂಬಾ ಕೇಡುಂಟಾಗುವದಲ್ಲದೆ ಅದರಿಂದ ಪ್ರಯೋಜನವೇನೂ ಆಗಲಾರದೆಂದು ಹೇಳಿ, ಆ ಕ್ರಮವನ್ನು ಸಂಪೂರ್ಣ ಖಂಡಿಸಿರುವರು. ಈ ಪದ್ಧತಿಯನ್ನು ಪೂರಾ ಹೋಗಲಾಡಿಬೇಕೆಂದು ಬರೆದಿರುವರು. ಓಟು ಕೊಡುವ ಹಕ್ಕು ಆ ದೇಶದ ಖಾಯಂ ವಾಸಸ್ಥರಾದ ಅಂದರೆ ಅಲ್ಲಿ ಕಳೆದ 5 ವರ್ಷಗಳಿಂದ ವಾಸಿಸುತ್ತಿರುವ ಪ್ರಾಯಕ್ಕೆ ಬಂದ ಪ್ರತಿಯೊಬ್ಬರಿಗೂ ಇರುವದು ನ್ಯಾಯವೆಂದು ಹೇಳಿರುವರು. ಆದರೆ ತತ್ಕಾಲ ಅಂಥಾ ಪ್ರಾಯಕ್ಕೆ ಬಂದ ಎಲ್ಲಾ ಗಂಡಸರಿಗೂ, 30 ವರ್ಷ ಪ್ರಾಯ ಮೀರಿದ ಎಲ್ಲಾ ಸ್ತ್ರೀಯರಿಗೂ ಓಟಿನ ಹಕ್ಕಿರಬೇಕೆಂದು ಸಿಫಾರಸ್ಸು ಮಾಡಿರುವರು. ಕೋಮುವಾರು ಚುನಾವಣೆ ಮತ್ತು ಓಟಿನ ಹಕ್ಕುಗಳನ್ನು ಕುರಿತು ಮಾಡಿರುವ ಸಿಫಾರಸ್ಸುಗಳು ನ್ಯಾಯವಾದವು ಎಂಬದಕ್ಕೆ ಎಲ್ಲರೂ ಒಪ್ಪಬೇಕಾಗಿದೆ. ಹಿಂದೂ ದೇಶದ ಆಡಳಿತ ರಚನಕಾರರೂ ಈ ತತ್ವಗಳನ್ನು ಅನುಸರಿಸಿಯಾರೆಂದು ಅಪೇಕ್ಷಿಸುತ್ತೇವೆ

ಮಡಿಕೇರಿ ಮುನ್ಸಿಪಾಲಿಟಿ.

ಮಡಿಕೇರಿ ಮುನ್ಸಿಪಾಲಿಟಿಯ ಹೊಸ ಚುನಾವಣೆಯು ಈ ತಾ. 21 ರಲ್ಲು ಸ್ಪರ್ಧೆ ಯೇನೂ ಇಲ್ಲದೆ ನಡೆಯಿತು. ಉಮೇದುವಾರರಾಗಿ ನಿಂತವರೆಲ್ಲರೂ ಚುನಾಯಿಸಲ್ಪಟ್ಟರು. ಎದುರಾಳಿಗಳಿಲ್ಲದ್ದರಿಂದ ಹೆಚ್ಚಿನ ಓಟರುಗಳಿಗೆ ಚುನಾವಣೆ ನಡೆದದ್ದೇ ಗೊತ್ತಾಗಲಿಲ್ಲ. ಹೀಗೆ ಚುನಾವಣೆಯಲ್ಲಿ ಜೀವಕಳೆ ಇಲ್ಲದೆ ಇದ್ದದ್ದು ವ್ಯಸನಕರ

ಅಧ್ಯಕ್ಷರ ಚುನಾವಣೆಯೂ ತಾ. 24 ರಲ್ಲಿ ನಡೆಯಿತು. ರಾ|| ಸಾ|| ಪಟ್ಟಮಾಡ ದೇವಯ್ಯನವರು ಅಧ್ಯಕ್ಷರಾಗಿ ಎದುರಾಳಿಗಳಿಲ್ಲದೆ ಆರಿಸಲ್ಪಟ್ಟರು. ಈ ತಿಂಗಳ ಅಖೈರಿನಲ್ಲಿ ಅಧ್ಯಕ್ಷ ಪದವಿಯನ್ನು ಬಿಡಲಿಕ್ಕಿರುವ ಮೆ. ಯಂ. ಭುಜಂಗರಾವ್ ಬಿ. ಎ., ಬಿ. ಯಲ್. ರವರು ಕಳೆದ ಎರಡು ವರ್ಷಗಳಲ್ಲಿ ಜನರು ನಿರೀಕ್ಷಿಸಿದ್ದಂತೆ ತೃಪ್ತಿಕರವಾಗಿ ತಮ್ಮ ಕೆಲಸವನ್ನು ಮಾಡಿರುವರೆಂಬದರಲ್ಲಿ ಸಂಶಯವಿಲ್ಲ. ಹಲವು ವರ್ಷ ಉದ್ಯೋಗಮಾಡಿ ತುಂಬಾ ಅನುಭವ ಪಡೆದಿರುವ ಹೊಸ ಪ್ರೆಸಿಡೆಂಟರು ತಮ್ಮ ಜವಾಬ್ದಾರಿಯ ಕೆಲಸವನ್ನು ಉತ್ಸಾಹದಿಂದ ನಡೆಸುವರಾಗಿ ಆಶಿಸುತ್ತೇವೆ.

ಸಂಪಾಜೆ ಆಸ್ಪತ್ರೆ.

ಕೊಡಗು ದೇಶದ ಯಾವ ಭಾಗಕ್ಕಿಂತಲೂ ಹೆಚ್ಚಾಗಿ ಮಲೇರಿಯ ಜ್ವರದಿಂದ ಪೀಡಿತವಾಗಿರುವದು ಸಂಪಾಜೆ ಪ್ರಾಂತ್ಯವಾಗಿದೆ. ಆಸ್ಪತ್ರೆಗಳು ಇಲ್ಲದ ಕಡೆಗಳ ಪೈಕಿ ಸಂಪಾಜೆಗೇನೇ ಮೊದಲು ಆಸ್ಪತ್ರೆಯನ್ನಿಡಿಸಿ ಕೊಡಬೇಕೆಂದು ಮಲೇರಿಯಾ ಕಮಿಟಿಯವರು ಸಿಫಾರಸ್ಸು ಮಾಡಿದ್ದರು. ಅನೇಕ ವರ್ಷಗಳಿಂದ ಹೊರಾಡುತ್ತಿದ್ದ ಈ ಪ್ರಾಂತ್ಯದವರಿಗೆ ಈಗಲಾದರೂ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರು ಮತ್ತು ಪುತ್ತೂರು ತಾಲೋಕು ಬೋರ್ಡಿನವರು ಸೇರಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಲು ನಿಶ್ಚೈಸಿದ್ದು ತೃಪ್ತಿಕರವಾಗಿದೆ. ಸದರಿ ಆಸ್ಪತ್ರೆಯು ಬರುವ ಆಗೋಸ್ತು ತಿಂಗಳು 1 ರಲ್ಲಿ ತೆರೆಯಲ್ಪಡುವದೆಂದು ಕೇಳಿ ಸಂತೋಷಪಡುತ್ತೇವೆ. ಇನ್ನಾದರೂ ಆ ಕಡೆಯ ಜನರ ಅನಾರೋಗ್ಯಸ್ಥಿತಿಯ ಕಷ್ಟವು ಸ್ವಲ್ಪ ನಿವಾರಣೆಯಾದೀತೆಂದು ನಂಬುತ್ತೇವೆ.

ದೇಶೀಯರಲ್ಲಿ ವಿನಂತಿ.

ಬಾರ್ದೋಲಿ ಸತ್ಯಾಗ್ರಹ ಫಂಡು.

ಬೊಂಬಾಯಿ ಪ್ರಾಂತ್ಯದ ಬಾರ್ಡೋಲಿ ಡಿಸ್ಟ್ರಿಕ್ಟಿನ ಭೂಮಿ ಹಿಡುವಳಿದಾರರು, ಸರ್ಕಾರದವರು ತಕ್ಕ ಕಾರಣಗಳಿಲ್ಲದೆ ಕಂದಾಯವನ್ನು ಶೇಕಡ 22 ರಷ್ಟು ಹೆಚ್ಚಿಸಿರುವದರಿಂದ, ಆ ಹೆಚ್ಚಿನ ಕಂದಾಯವನ್ನು ಕೊಡಲು ತಿರಸ್ಕರಿಸಿ ಸತ್ಯಾಗ್ರಹವನ್ನು ಆಚರಿಸುತ್ತಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಹೆಚ್ಚಿನ ದರವು ರೈತರ ಆರ್ಥಿಕ ಸ್ಥಿತಿಯನ್ನು ಮೀರಿದ್ದಾಗಿದೆಯೆಂದೂ, ಈ ವಿಷಯವನ್ನು ಸರ್ಕಾರದವರು ಮತ್ತು ರೈತರ ಪ್ರತಿನಿಧಿಗಳು ಒಪ್ಪುವಂಥ ಒಂದು ಸ್ವತಂತ್ರ ಕಮಿಟಿಯವರ ವಿಚಾರಣೆಗೆ ಬಿಡಬೇಕೆಂದೂ ಅಲ್ಲಿಯ ಭೂಮಾಲೀಕರ ಕೋರಿಕೆಯಾಗಿದೆ. ಸರ್ಕಾರದವರು ಇದಕ್ಕೆ ಒಪ್ಪದೆ ಕಂದಾಯ ಕೊಡದವರ ಆಸ್ತಿಗಳನ್ನು ಜಪ್ತಿಮಾಡಿ ಹರಾಜು ಮಾಡಲಾರಂಭಿಸಿದರು. ಜನರು ಶ್ರೀಯುತ ವಲ್ಲಭಾಯಿ ಪಟೇಲರವರ ಮುಂದಾಳುತನದಲ್ಲಿ ಸಂಪೂರ್ಣ ಅಹಿಂಸಾತತ್ವವನ್ನವಲಂಬಿಸಿ ವರ್ತಿಸಿದರು. ಈ ಮಧ್ಯೆ ಸತ್ಯಾಗ್ರಹಿಗಳಿಗೂ ಸರ್ಕಾರದವರಿಗೂ ರಾಜಿಯ ತೀರ್ಮಾನವನ್ನು ಮಾಡಲು ಪ್ರಯತ್ನಗಳು ನಡೆದವು ಬೊಂಬಾಯಿಯ ಗವರ್ನರವರು ವೈಸರಾಯರಲ್ಲಿಗೆ ಹೋಗಿ ಬಂದು ಸೂರತ್ತಿನಲ್ಲಿ ಸತ್ಯಾಗ್ರಹಿಗಳ ಪ್ರತಿನಿಧಿಗಳನ್ನು ಭೇಟಿಮಾಡಿ ಮಾತಾಡಿದರು. ಹೆಚ್ಚಿನ ಕಂದಾಯವನ್ನು ಕಟ್ಟಿ, ರೈತರು ಸತ್ಯಾಗ್ರಹವನ್ನು ಸಂಪೂರ್ಣ ಬಿಟ್ಟರೆ ಸರ್ಕಾರದವರು ಹೊಸ ವಿಚಾರಣೆಯ ಕಮಿಟಿಯನ್ನು ನೇಮಿಸಲು ಒಪ್ಪುವರೆಂಬುದೇ ಗವರ್ನರವರು ಮುಂದಿಟ್ಟ ಶರತ್ತುಗಳು ಸ್ವಾತಂತ್ರ ಕಮಿಟಿಯು ವಿಚಾರಿಸಿ ತೀರ್ಮಾನಿಸಿದಲ್ಲದೆ ತಾವು ಹೆಚ್ಚಿನ ಕಂದಾಯ ಕೊಡುವದಿಲ್ಲವೆಂಬುದೇ ಸತ್ಯಾಗ್ರಹಿಗಳ ವಾದ ಆದುದರಿಂದ ರಾಜಿಯ ಪ್ರಯತ್ನಗಳು ತತ್ಕಾಲಕ್ಕೆ ವಿಫಲವಾದಂತೆ ಕಾಣುತ್ತದೆ.

ಬಾರ್ದೋಲಿಯ ನ್ಯಾಯವಾದ ಈ ಚಳವಳಕ್ಕೆ ಇಡೀ ಹಿಂದೂ ದೇಶದ ಬೆಂಬಲವೇ ಇದೆ. ಅನೇಕ ಮುಂದಾಳುಗಳು ಪಂಗಡಭೇದಗಳನ್ನೆಣಿಸದೆ ಈ ಸತ್ಯಾಗ್ರಹ ಚಳವಳಕ್ಕೆ ಉತ್ತೇಜನ ಕೊಡುತ್ತಿದ್ದಾರೆ. ಭಾರತ ಭೂಮಿಯ ಹಲವು ಕಡೆಗಳಲ್ಲಿ ಸಾರ್ವಜನಿಕ ಮೀಟಿಂಗುಗಳು ನಡೆದು ಈ ಸತ್ಯಾಗ್ರಹ ಫಂಡಿಗೆ ಹಣ ಸಂಗ್ರಹವಾಗುತ್ತಿದೆ. ಹೀಗಿರುವಲ್ಲಿ ನಮ್ಮ ದೇಶೀಯರು ಸುಮ್ಮನಿರುವದು ನ್ಯಾಯವೇ? ಈ ಚಳವಳವು ತತ್ಕಾಲ ಬಾರ್ದೋಲಿಗೆ ಮಾತ್ರ ಅನ್ವಯಿಸುವದಾದರೂ, ಕ್ರಮೇಣ ಅದು ಇಡೀ ಹಿಂದೂದೇಶದ ರೈತರಿಗೆ ಸಂಬಂಧಿಸುವದು. ಇದನ್ನರಿತು ಕೊಡಗು ಜಮೀನ್ದಾರರ ಸಂಘದ ಕಮಿಟಿಯವರು ತಮ್ಮ ತಾ 14--7—28 ರ ಮೀಟಿಂಗಿನಲ್ಲಿ ಬಾರ್ದೋಲಿಯ ಚಳವಳದಲ್ಲಿ ತಮ್ಮ ಸಹಾನುಭೂತಿಯನ್ನು ಸೂಚಿಸಿದ್ದಲ್ಲದೆ, ಅದರ ಫಂಡಿಗೆ ಚಂದಾ ವಸೂಲಿಮಾಡಲು ತೀರ್ಮಾನಿಸಿರುವರು. ಆದುದರಿಂದ ದೇಶೀಯ ಮಹನೀಯರೆಲ್ಲರೂ ತಮ್ಮ ಶಕ್ತ್ಯಾನುಸಾರ ಚಂದಾ ಹಣವನ್ನು ಕೊಟ್ಟು ಬಾರ್ದೋಲಿಯ ರೈತ ಸಹೋದರರು ಮಾಡುತ್ತಿರುವ ಸ್ವಾರ್ಥತ್ಯಾಗದ ಪ್ರಯತ್ನಕ್ಕೆ ಉತ್ತೇಜನ ಕೊಡಬೇಕಾಗಿ ಕೋರುತ್ತೇನೆ.

ಚಂದಾ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ವಂದನಾಪೂರ್ವಕ ಸ್ವೀಕರಿಸಲ್ಪಡುವದು.

ಜಮೀನ್ದಾರರ ಸಂಘ, ಪಿ. ಐ. ಬೆಳ್ಯಪ್ಪ,
ಮಡಿಕೇರಿ 21--7--28 (ಜನರಲ್ ಸೆಕ್ರೆಟರಿ.)

ಗ್ರಾಮಗಳ ಪುನರುದ್ಧಾರ.

(ಕಳೆದ ವಾರದಿಂದ ಮುಂದುವರಿದದ್ದು.)

ಹಾಗಾದರೆ ಈ ಹೀನ ಸ್ಥಿತಿಗೆ ಕಾರಣವೇನೆಂಬುದನ್ನು ಮೊದಲು ಆಲೋಚಿಸೋಣ. ಬ್ರಿಟಿಷರ ಆಡಳಿತವು ಪ್ರಾರಂಭವಾದ ತರುವಾಯ ಹಿಂದೂಸ್ಥಾನದಲ್ಲಿ ಶಾಂತಿಯು ನೆಲೆಗೊಂಡಿತು. ಯಾವಾಗ ಒಂದು ದೇಶದಲ್ಲಿ ಶಾಂತಿಯು ನೆಲೆಗೊಂಡು ಕ್ಷಾಮವಿಲ್ಲದೆ ಎಲ್ಲಾ ಜನರು ಸುಭಿಕ್ಷದಿಂದ ಜೀವಿಸುತ್ತಿರುವರೋ ಆ ಸಮಯದಲ್ಲಿ ಮಾನವವರ್ಗದ ಸಂಖ್ಯೆಯು ಹೆಚ್ಚಾಗುವುದು. ಅದೇ ಪ್ರಕಾರ ಹಿಂದೂಸ್ಥಾನದ ಗ್ರಾಮನಿವಾಸಿಗಳು ಹೆಚ್ಚಿದರು. ಬ್ರಿಟಿಷರ ರಾಜ್ಯಭಾರವು ಪ್ರಾರಂಭವಾದ ತರುವಾಯ ವ್ಯಾಪಾರ ಪ್ರೇಮಿಗಳಾದ ಆಂಗ್ಲೇಯರು ಹಿಂದೂಸ್ಥಾನದ ಸಾಧಕಪದಾರ್ಥಗಳನ್ನು ಪರದೇಶಕ್ಕೆ ಹೇರಳವಾಗಿ ಒಯ್ಯುತ್ತಿದ್ದರು. ಅದರ ಬದಲಿಗೆ ಪರದೇಶಗಳಲ್ಲಿ ತಯಾರಾದ ನವೀನ ಬಟ್ಟೆಗಳನ್ನೂ, ಸಾಮಾನುಗಳನ್ನೂ ಹಿಂದೂ ದೇಶಕ್ಕೆ ತರುತ್ತಿದ್ದ ಕಾರಣ ಗ್ರಾಮ ನಿವಾಸಿಗಳ ಮನಸ್ಸು ಅತ್ತಕಡೆ ಸೆಳೆಯಲ್ಪಡಲು ತಮ್ಮ ಹಸ್ತಕೌಶಲದಿಂದ ರಚಿಸುತ್ತಿದ್ದ ಸಾಮಾಗ್ರಿಗಳನ್ನು ಮರೆತರು. ಕಾಲಕ್ರಮೇಣ ಕೈಗಾರಿಕೆಗಳಿಂದಲೂ, ಉಪ ಕಸಬುಗಳಿಂದಲೂ ಕಾಲಕ್ಷೇಪ ಮಾಡುತ್ತಿದ್ದವರು ತಮ್ಮ ಕಸಬುಗಳನ್ನು ತೊರೆದು ವ್ಯವಸಾಯವೊಂದನ್ನೇ ಅವಲಂಭಿಸಿದರು. ಮೇಲೆ ಹೇಳಿದಂತೆ ಶಾಂತಿಯು ನೆಲೆಗೊಂಡ ಕಾರಣ ಸೈನಿಕರಾಗಿದ್ದವರೆಲ್ಲರೂ ಗತ್ಯಂತರವಿಲ್ಲದೆ ಗ್ರಾಮವನ್ನಾಶ್ರಯಿಸಿ ವ್ಯವಸಾಯಗಾರರಾಗಲುದ್ಯುಕ್ತರಾದರು ಇಂಥಾ ಕಾರಣಗಳಿಂದ ಗ್ರಾಮ ನಿವಾಸಿಗಳ ಜನ ಸಂಖ್ಯೆಯು ಹೆಚ್ಚಿ ಗ್ರಾಮದಲ್ಲಿ ಜಮೀನು ಹಿಡುವಳಿಗಳು ಕಿರಿದಾದವು. ಹೇಳುವುದಾದರೆ ಭರತಖಂಡದ ಭೂವೃತ್ತಿಯು ಸರಾಸರಿ ನಾಲ್ಕು ಎಕರೆಗಳಷ್ಟು ಕಿರಿದಾಗಿ ಹೋಯಿತು.

ಭೂವೃತ್ತಿಯು ಕಡಿಮೆಯಾಗುತ್ತಾ ಬಂದಾಗ ಬೆಳೆಸು ಕುಟುಂಬದ ಜೀವನಕ್ಕೆ ಸಾಲದೆ ಹೋಗಿ ಜೀವನಾಕ್ರಮದಲ್ಲಿ ಲೋಪಗಳೇ ಹೆಚ್ಚಾಗಿ, ಪರಿಣಮಿಸಿದವು. ಬಡತನವು ತಲೆದೋರಿತು. ಸಾಲದುದಕ್ಕೆ ಅತಿವೃಷ್ಟಿ, ಅನಾವೃಷ್ಟಿಗಳು ಪದೇ ಪದೇ ಬಂದು ಹೊಟ್ಟೆಗೆ ಸಾಕಷ್ಟು ಆಹಾರವು ದೊರಕದವರ ಸಂಖ್ಯೆಯು ಹೆಚ್ಚಿತು, ಉಪವಾಸದಿಂದ ನರಳಿ ಅನೇಕ ಜನರು ರೋಗರುಜನೆಗಳಿಗೆ ಸಿಕ್ಕಿ ಮೃತರಾದರು. ಉಳಿದವರು ದೌರ್ಬಲ್ಯದಿಂದಲೂ, ಕೃಶರಾಗಿಯೂ ಜೀವಚ್ಛವಗಳಂತೆ ಅನುದಿನವು ಭಿಕ್ಷಾಟನೆಯಲ್ಲಿಯೇ ನಿರತರಾಗಿರುವುದು ಇಂದೂ ಪ್ರತ್ಯಕ್ಷವಾಗುತ್ತಿದೆ ಹಿಂದೂಸ್ಥಾನದ ಮುಕ್ಕಾಲು ಪಾಲು ಜನರಿಗೆ ದಿವಸಕ್ಕೆ ಎರಡು ಊಟಗಳೆಂದರೇ ಏನೆಂಬುವೇ ಗೊತ್ತಿಲ್ಲವಾಗಿದೆ. ಅನೇಕರಿಗೆ ಹೊಟ್ಟೆತುಂಬ ಊಟ ಸಿಕ್ಕಿದ ದಿವಸವೇ ಹಬ್ಬವಾಗಿದೆ. ದೇಹಪೋಷಣೆಗೆ ಸಾಕಾದಷ್ಟು ಆಹಾರವು ಒದಗದೆ ಹೋದರೆ ದೌರ್ಬಲ್ಯವು ಉಂಟಾಗುವುದು ಸಾಮಾನ್ಯವು. ಆದರೆ ಹೊಟ್ಟೆಗಿಲ್ಲದಿದ್ದಾಗ ನಿರಾಹಾರಿಗಳಾಗಿರಲು ಎಷ್ಟರ ಮಟ್ಟಿಗೆ ಸಾಧ್ಯವೆಂದು ವಾಚಕರೇ ಊಹಿಸಲಿ. ಬಡತನಕ್ಕೊಳಗಾದ ಮಾನವರು ಆರೋಗ್ಯವನ್ನು ಗಣಿಸುವರೇ? ಅಂಥಾ ಕಷ್ಟಸಮಯದಲ್ಲಿ ತಿನ್ನಲಯೋಗ್ಯವಾದ, ಕೇವಲ ರುಚಿಸುವ ಕನ್ನಾಗೆ ಕಂಡ ಪದಾರ್ಥಗಳನ್ನು ಭುಂಜಿಸಿ ತತ್ಕಾಲಕ್ಕೆ ಹಸಿವನ್ನು ಅಡಗಿಸುವರು. ಈ ರೀತಿ ಅಯೋಗ್ಯವಾದ ತಿಂಡಿಗಳನ್ನು ತಿಂದಾಗ ದೇಹವು ತಾನೇ ಹೇಗೆ ಕೊರಗದೆ ಇರುವುದು.

ಸಶೇಷ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೪ ನೇ ಭಾಗದಲ್ಲಿ ೪೬ನೇ ಪ್ರಕರಣ.

ಕಕ್ಷಿಗಾರರು ಸಂಗಡಿಗರಾದುದು.

ವಕೀಲಿ ಉದ್ಯೋಗದಲ್ಲಿ ನೇಟಾಲಿಗೂ ಟ್ರಾನ್ಸ್‌ವಾಲಿಗೂ ಇದ್ದ ವ್ಯತ್ಯಾಸವೇನೆಂದರೆ—ನೇಟಾಲಿನಲ್ಲಿ ಅಡ್ವೊಕೇಟರೂ ಅಟಾರ್ನಿಗಳೂ ಅಲ್ಲಿನ ಎಲ್ಲಾ ನ್ಯಾಯಸ್ಥಾನಗಳಲ್ಲಿಯೂ ಪ್ರವೇಶಿಸಬಹುದಾಗಿದ್ದಿತು. ಆದರೆ ಟ್ರಾನ್ಸ್‌ವಾಲಿನಲ್ಲಿ ಮುಂಬಯಿಯಂತೆಯೇ ಅಡ್ವೊಕೇಟರ ಮತ್ತು ಅಟಾರ್ನಿಗಳ ಕಾರ್ಯಕ್ಷೇತ್ರಗಳು ಬೇರೆಯಾಗಿದ್ದುವು. ಬ್ಯಾರಿಷ್ಟರಾಗಿ ಬಂದವರು ಅಡ್ವೊಕೇಟರಾಗಿ ಕೆಲಸ ನಡೆಸುವರೋ ಅಥವಾ ಅಟಾರ್ನಿಯಾಗಿ ಉದ್ಯೋಗ ಮಾಡುವರೋ ಎಂದು ನಿರ್ಧರಿಸಲು ಅವರಿಗೆ ಅಧಿಕಾರವಿದ್ದಿತು. ಆದುದರಿಂದ ನಾನು ನೇಟಾಲಿನಲ್ಲಿ ಅಡ್ವೊಕೇಟನಾಗಿಯೂ, ಟ್ರಾನ್ಸ್‌ವಾಲಿನಲ್ಲಿ ಅಟಾರ್ನಿಯಾಗಿಯೂ ಸೇರಿದೆನು. ಏಕೆಂದರೆ ನಾನು ಕೇವಲ ಅಡ್ವೊಕೇಟನಾಗಿದ್ದರೆ, ಭಾರತೀಯರೊಡನೆ ನಿಕಟ ಸಂಬಂಧವನ್ನು ಬೆಳಸಲು ನನಗೆ ಅವಕಾಶವಾಗುತ್ತಿರಲಿಲ್ಲ. ಅಲ್ಲದೆ ದಕ್ಷಿಣ ಆಫ್ರಿಕದ ಬಿಳಿಯ ಅಟಾರ್ನಿಗಳು ನನಗೆ ಮೊಕದ್ದಮೆಗಳನ್ನು ತಂದು ಕೊಡುತ್ತಿರಲಿಲ್ಲ.

ಆದರೆ ಟ್ರಾನ್ಸ್‌ವಾಲಿನಲ್ಲಿ ಕೂಡ ಅಟಾರ್ನಿಗಳಿಗೆ ಮ್ಯಾಜಿಸ್ಟ್ರೇಟರ ಮುಂದೆ ಮೊಕದ್ದಮೆ ನಡೆಸಲು ಅವಕಾಶವಿದ್ದಿತು. ಒಂದು ಸಲ ನಾನು ಜೊಹಾನ್ಸ್‌ಬರ್ಗಿನಲ್ಲಿ ಒಬ್ಬ ಮ್ಯಾಜಿಸ್ಟ್ರೇಟರ ಮುಂದೆ ಒಂದು ಮೊಕದ್ದಮೆಯನ್ನು ನಡೆಸುತ್ತಿರುವಾಗ ನನ್ನ ಕಕ್ಷಿಗಾರನು ನನ್ನನ್ನು ಮೋಸಗೊಳಿಸಿರುವನೆಂಬುದು ನನಗೆ ಗೊತ್ತಾಯಿತು. ಸಾಕ್ಷ್ಯವನ್ನು ಹೇಳುತ್ತಿರುವಾಗ ಅವನು ಸಂಪೂರ್ಣವಾಗಿ ತಲೆ ಕೆಳಗಾದುದನ್ನು ನಾನು ಕಂಡೆನು. ಆದುದರಿಂದ ವಾದಿಸದೆಯೇ ನಾನು ಮೊಕದ್ದಮೆಯನ್ನು ವಜಾ ಮಾಡಬೇಕೆಂದು ಮ್ಯಾಜಿಸ್ಟ್ರೇಟರಿಗೆ ಹೇಳಿದೆನು. ಇದಿರು ಪಕ್ಷದ ವಕೀಲರು ಆಶ್ಚರ್ಯ ಚಕಿತರಾದರು. ಮ್ಯಾಜಿಸ್ಟ್ರೇಟರು ಸಂತೋಷಗೊಂಡರು. ಸುಳ್ಳು ಮೊಕದ್ದಮೆಯನ್ನು ನನ್ನ ಬಳಿಗೆ ತಂದುದಕ್ಕಾಗಿ ನಾನು ನನ್ನ ಕಕ್ಷಿಗಾರರನ್ನು ಬೈದೆನು. ಸುಳ್ಳು ದಾವೆಗಳನ್ನು ನಾನು ಎಂದೂ ತೆಗೆದುಕೊಳ್ಳುವದಿಲ್ಲವೆಂದು ಅವನಿಗೆ ಗೊತ್ತಿದ್ದಿತು. ಅವನು ಮನಗಾಣುವಂತೆ ಈ ವಿಷಯವನ್ನು ನಾನು ಅವನಿಗೆ ಹೇಳಲು ಅವನು ತನ್ನ ತಪ್ಪನ್ನು ಒಪ್ಪಿಕೊಂಡನು. ಅವನ ವಿರೋಧವಾಗಿ ಮೊಕದ್ದಮೆಯನ್ನು ನಿರ್ಧರಿಸಬೇಕೆಂದು ನಾನು ಮೇಜಿಸ್ಟ್ರೇಟರಿಗೆ ಹೇಳಿದುದಕ್ಕಾಗಿ ಅವನು ನನ್ನ ಮೇಲೆ ಸಿಟ್ಟಾಗಲಿಲ್ಲವೆಂದು ನನಗೆ ಸ್ವಲ್ಪ ನೆನಪಿದೆ. ಅದು ಹೇಗೆ ಇರಲಿ. ಈ ಮೊಕದ್ದಮೆಯಲ್ಲಿ ನನ್ನ ನಡತೆಯಿಂದ ನನ್ನ ವಕೀಲಿ ಉದ್ಯೋಗಕ್ಕೇನೂ ಬಾಧಕವುಂಟಾಗಲಿಲ್ಲ. ಅಷ್ಟೇಕೆ, ಇದರಿಂದ ನನ್ನ ಕೆಲಸವು ಇನ್ನೂ ಸುಲಭಗೊಂಡಿತು. ನನ್ನ ಸತ್ಯಪರಾಯಣತೆಯಿಂದ ವಕೀಲರಲ್ಲಿ ನನ್ನ ಯಶಸ್ಸು ಹೆಚ್ಚತಲ್ಲದೆ ನಾನು ಕಪ್ಪುವರ್ಣದವನಾಗಿದ್ದರೂ ಅವರಲ್ಲಿ ಕೆಲವರ ಪ್ರೀತಿ ವಿಶ್ವಾಸವನ್ನು ಸಂಪಾದಿಸುವದು ಕೂಡ ಸಾಧ್ಯವಾಯಿತೆಂಬುದನ್ನು ನಾನು ಕಂಡೆನು.

ನಾನು ವಕೀಲ ಕೆಲಸಮಾಡುತ್ತಿದ್ದಾಗ ನನಗೆ ತಿಳುವಳಿಕೆಯಿಲ್ಲದ ವಿಚಾರವನ್ನು ನನ್ನ ಕಕ್ಷಿಗಾರರಿಂದಾಗಲಿ, ಜೊತೆಯವರಿಂದಾಗಲಿ ಎಂದಿಗೂ ಮುಚ್ಚಿಡದೆ ಇರುವುದು ನನ್ನ ಅಭ್ಯಾಸವಾಗಿದ್ದಿತು. ನನಗೆ ಯಾವ ವಿಷಯವಾದರೂ ತಿಳಿಯದೆ ಹೋದಲ್ಲಿ ಬೇರೆ ವಕೀಲರಿಂದ ಸಹಾಯ ಪಡೆಯಬೇಕೆಂದು ನಾನು ನನ್ನ ಕಕ್ಷಿಗಾರನಿಗೆ ಹೇಳುತ್ತಿದ್ದೆನು. ಒಂದುವೇಳೆ ಅವನು ನನ್ನ ಬಳಿಯೇ ಇರಲು ಇಷ್ಟಪಟ್ಟರೆ ಹಿರಿಯ ವಕೀಲರ ಅಭಿಪ್ರಾಯವನ್ನು ಪಡೆಯಲು ನನಗೆ ಅವಕಾಶ ಕೊಡಬೇಕೆಂದು ನಾನು ಅವನನ್ನು ಕೇಳುತ್ತಿದ್ದೆನು. ಈ ಸರಳ ವೃತ್ತಿಯು ನನಗೆ ನನ್ನ ಕಕ್ಷಿಗಾರರ ಅಮಿತವಾದ ಪ್ರೀತಿಯನ್ನೂ, ನಂಬಿಕೆಯನ್ನೂ ಸಂಪಾದಿಸಿ ಕೊಟ್ಟಿತು. ಹಿರಿಯ ವಕೀಲರ ಸಲಹೆಯನ್ನು ತೆಗೆದುಕೊಳ್ಳಬೇಕಾಗಿ ಬಂದಾಗ ಅವರು ರುಸುಮನ್ನು ಕೊಡಲು ಯಾವಾಗಲೂ ಸಿದ್ಧರಾಗಿರುತ್ತಿದ್ದರು. ಈ ಪ್ರೇಮ ವಿಶ್ವಾಸಗಳು ನನ್ನ ಸಾರ್ವಜನಿಕ ಕಾರ್ಯಗಳಲ್ಲಿ ನನಗೆ ಬೆಂಬಲವಾಗಿ ನಿಂತವು.

ದಕ್ಷಿಣ ಆಫ್ರಿಕದಲ್ಲಿ ವಕೀಲ ಉದ್ಯೋಗ ನನ್ನ ಕೈಗೊಳ್ಳಲು ಸಮಾಜ ಸೇವೆಯೇ ಉದ್ದೇಶವೆಂದು ನಾನು ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿದ್ದೇನೆ. ಈ ಉದ್ದೇಶ ಸಾಧನೆಗೆ ಕೂಡ ಜನರ ಭರವಸೆಯನ್ನು ಸಂಪಾದಿಸುವುದು ಅಗತ್ಯವಾಗಿದ್ದಿತು. ಉದಾರ ಮನಸ್ಕರಾದ ಭಾರತೀಯರು ನಾನು ಹಣ ತೆಗೆದುಕೊಂಡು ಮಾಡಿದ ಈ ಉದ್ಯೋಗಿಕ ಕಾರ್ಯವನ್ನು ಲೋಕಸೇವೆಯೆಂದು ಎಣಿಸಿದರು. ತಮ್ಮ ಅಧಿಕಾರಗಳಿಗೋಸ್ಕರವಾಗಿ ಅವರು ಕಾರಾಗೃಹದ ಸಂಕಟವನ್ನು ಅನುಭವಿಸಬೇಕೆಂದು ನಾನು ಅವರಿಗೆ ಸಲಹೆಕೊಟ್ಟಾಗ ಅವರಲ್ಲಿ ಅನೇಕರು ಅದನ್ನು ಸಂತೋಷದಿಂದ ಸ್ವೀಕರಿಸಿದರು. ಹೀಗೆ ಮಾಡುದಕ್ಕೆ ಅವರು ಈ ಮಾರ್ಗವು ಸರಿಯಾದುದೆಂದು ಜ್ಞಾನಪೂರ್ವಕವಾಗಿ ನಿರ್ಧರಿಸಿದುದಕ್ಕಿಂತಲೂ ಹೆಚ್ಚಾಗಿ ಅವರು ನನ್ನಲ್ಲಿ ಇಟ್ಟಿದ್ದ ಪ್ರೇಮವಿಶ್ವಾಸಗಳೇ ಕಾರಣ.

ನಾನು ಇದನ್ನು ಬರೆಯುತ್ತಿರುವಂತೆಯೇ ಅನೇಕ ಮಧುರ ಸಂಸ್ಮರಣೆಗಳು ನನ್ನ ಮನಸ್ಸಿಗೆ ಬರುತ್ತಿವೆ. ನೂರಾರು ಮಂದಿ ಕಕ್ಷಿಗಾರರು ನನ್ನ ಮಿತ್ರರಾಗಿ ಲೋಕಸೇವೆಯಲ್ಲಿ ನಿಜವಿಂದ ಸಂಗಡಿಗರಾದರು. ತೊಡಕುಗಳಿಂದಲೂ ಅಪಾಯಗಳಿಂದಲೂ ತುಂಬಿದ್ದ ಜೀವವನ್ನು ಅವರ ಸಂಗವು ಮಧುರಗೊಳಿಸಿತು.

ಕೊಡಗು ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಈ ಸಂಘದ ಕಮಿಟಿ ಮೀಟಿಂಗು ಈ ತಾರೀಖು 14ರಲ್ಲು ಮಡಿಕೇರಿಯಲ್ಲಿ ಸಂಘದ ಹಾಲ್‌ನಲ್ಲಿ ನಡೆಯಿತು. ಹಾಜರಿದ್ದ ಮೆಂಬರುಗಳು:—ಮೆ. ಗಳಾದ 1. ಸಿ. ಟಿ. ಕುಶಾಲಪ್ಪನವರು, (ಪ್ರೆಸಿಡೆಂಟರು) 2. ಸಿ. ಯನ್. ವೆಂಕಪ್ಪಯ್ಯನವರು, (ವೈಸ್ ಪ್ರೆಸಿಡೆಂಟರು) 3. ಐ. ಸಿ. ಸುಬ್ಬಯ್ಯನವರು 4. ಯಂ. ಯಂ. ಚಂಗಪ್ಪನವರು (ಟ್ರೆಜರರ್) 5. ಸಿಂಗೂರು ಪೂವಪ್ಪನವರು, 6. ಕೆ. ಪಿ. ಚಿಣ್ಣಪ್ಪನವರು, 7. ಯಂ. ಯಂ. ಬೆಳ್ಯಪ್ಪನವರು, ಮತ್ತು 8. ಪಿ. ಐ. ಬೆಳ್ಯಪ್ಪನವರು (ಜನರಲ್ ಸೆಕ್ರೆಟರಿ.)

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಮಾರ್ಚಿ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳ ಜಮ ಮತ್ತು ಖರ್ಚಿನ ಲೆಕ್ಕವನ್ನು ಓದಿ ಮಂಜೂರ್ಮಾಡಲಾಯಿತು.

3 ಸಂಘದ ಬಾಬ್ತು ಪೋಸ್ಟಾಫೀಸಿನಲ್ಲಿರುವ ಹಣದ ಪೈಕಿ ರೂ. 500 ನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಒಂದು ವರ್ಷದ ನಿರಖು ಠೇವಣಾತಿಯಾಗಿ ಇಡಲು ತೀರ್ಮಾನವಾಯಿತು.

4. ಮೈಸೂರು ಬ್ಯಾಂಕಿನಲ್ಲಿರುವ ರೂ. 1000 ಮತ್ತು ಅದರ ಬಡ್ಡಿಯಲ್ಲಿ ಅದರ ಅವಧಿ ತೀರಿದ ಕೂಡಲೇ ಬರುವ ಮಾರ್ಚಿ ತಿಂಗಳ ವರೆಗೆ ಸಂಘದ ಖರ್ಚಿಗೆ ಬೇಕಾಗುವ ಹಣವನ್ನು ತೆಗೆದುಕೊಂಡು ಬಾಕಿ ಇರುವುದನ್ನು ಒಂದು ವರ್ಷದ ನಿರಖು ಠೇವಣಾತಿಯಲ್ಲಿ ಅಲ್ಲಿಯೇ ಇಡುವಂತೆ ತೀರ್ಮಾನವಾಯಿತು.

5. ಜಮೀನ್ದಾರರ ಸಂಘದ ಗುಮಾಸ್ತರಿಗೆ ಜುಲಾಯಿ ತಾರೀಖು 1ರಿಂದ 5 ರೂಪಾಯಿ ಸಂಬಳ ಹೆಚ್ಚು ಕೊಡಲು ಮಂಜೂರಾಯಿತು.

6. ಹೊಸ ಬೈಲಾಗಳನ್ನು 2500 ಪ್ರತಿ ಪ್ರಿಂಟುಮಾಡಿಸುವಂತೆ ತೀರ್ಮಾನಮಾಡಿ ಎಲ್ಲಾ ಮೆಂಬರುಗಳಿಗೆ ಬರುವ ಜನರಲ್ ಮೀಟಿಂಗಿನ ಸಮಯದಲ್ಲಿ ಒಂದೊಂದು ಪ್ರತಿಯನ್ನು ನೋಟೀಸಿನ ಜೊತೆಯಲ್ಲಿ ಕಳುಹಿಸುವಂತೆ ನಿಶ್ಚಯಿಸಲಾಯಿತು.

7. ಸಂಘದ ಕಳೆದ ವಾರ್ಷಿಕ ಸಭೆಯಲ್ಲಿ ಮಂಜೂರಾದ ರಾಜಕೀಯ ರಚನೆಯ 1100 ಪ್ರತಿಗಳನ್ನು ಪ್ರಿಂಟುಮಾಡಿಸಿ ಅವುಗಳನ್ನು 'ಕೊಡಗು' ಪತ್ರಿಕೆಯಲ್ಲಿ ಪುರವಣಿಯಾಗಿ ಹಂಚುವಂತೆ ತೀರ್ಮಾನವಾಯಿತು.

8. ಸಂಘದ 1926 ಮತ್ತು 1927ನೇ ಸಂವತ್ಸರಗಳ ಲೆಕ್ಕಗಳನ್ನು ಆಡಿಟ್ ಮಾಡಿದ ಆಡಿಟರು ಮೆ. ಬಿ ತಿಮ್ಮಣ್ಣನವರಿಗೆ ವರ್ಷಕ್ಕೆ 25 ರೂಪಾಯಿ ಮೇರೆ ಎರಡು ವರ್ಷಗಳ ಆಡಿಟ್ ಫೀಜು 50 ರೂಪಾಯಿ ಕೊಡಲು ಮಂಜೂರ್ಮಾಡಲಾಯಿತು.

9. ಕಳೆದ ಕಾನ್ಫರೆನ್ಸಿನ ಪ್ರೊಸೀಡಿಂಗ್ಸನ್ನು ಹಿಂದೂ ಪತ್ರಿಕೆಗೆ ತಂತಿಮೂಲಕ ಕಳುಹಿಸಿದ್ದರ ಚಾರ್ಜು 4—6—0 ಮಂಜೂರ್ಮಾಡಲಾಯಿತು.

10. ಕಟ್ಟಡದ ಫಂಡಿಗೆ ವಸೂಲಿಗೆ ಹೋದ ಬಾಬ್ತು, ಕಾರುಬಾರಿಗೆ ರೂ. 45—8—0 ಯನ್ನು ಕಟ್ಟಡದ ಫಂಡಿನಿಂದ ಕೊಡಲು ತೀರ್ಮಾನವಾಯಿತು.

11 ಸಂಘದ ಕಟ್ಟಡಕ್ಕೆ ನೆಲಹಾಸು ಹಾಕುವ ಕೆಲಸವನ್ನು ಮೇಲ್ವಿಚಾರ ಮಾಡಿದ ಓವರ್ಸಿಯರವರಿಗೆ ಹತ್ತು ರೂಪಾಯಿ ಫೀಸು ಕೊಡಲು ತೀರ್ಮಾನವಾಯಿತು.

12. ಬಾರ್ಡೋಲಿ ಸತ್ಯಾಗ್ರಹದ ಚಳವಳದಲ್ಲಿ ಈ ಸಂಘವು ಸಂಪೂರ್ಣ ಸಹಾನುಭೂತಿಯನ್ನು ತೋರಿಸುತ್ತದೆ. ಮತ್ತು ಆ ಚಳವಳದ ಫಂಡಿಗೆ ಹಣ ವಸೂಲಾತಿ ಬಗ್ಗೆ ದೇಶದವರಲ್ಲಿ ಅರಿಕೆ ಮಾಡಲು ಜನರಲ್ ಸೆಕ್ರೆಟರಿಯವರಿಗೆ ಅಧಿಕಾರ ಕೊಡಲಾಯಿತು.

ಸಿ. ಟಿ. ಕುಶಾಲಪ್ಪ,
ಪ್ರೆಸಿಡೆಂಟರು.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 22ರಲ್ಲು ಮಡಿಕೇರಿಯಲ್ಲಿ ನಡೆಯಿತು. ಹಾಜರಿದ್ದ ಮೆಂಬರುಗಳು. 1. ರಾವ್ ಬಹದ್ದೂರ್ ಕೆ. ಅಪ್ಪಯ್ಯನವರು (ಪ್ರೆಸಿಡೆಂಟರು.) 2 ಖಾನ್ ಸಾಹೇಬ್ ಪಟ್ಟಮಾಡ ದೇವಯ್ಯನವರು ಮೆ. ಗಳಾದ 3 ಎ. ಕೆ. ಕೃಷ್ಣಯ್ಯನವರು. 4. ಎನ್. ಮುದ್ದಪ್ಪನವರ. 5. ಪಿ. ಐ ಬೆಳ್ಯಪ್ಪನವರು, 6. ಯಂ. ಯಂ. ಬೆಳ್ಯಪ್ಪನವರು, 7 ಪಿ. ಎ ತಂಗಪ್ಪನವರು, ಮತ್ತು ಕೆ. ಪಿ. ಅಪ್ಪಯ್ಯನವರು (ಟ್ರೆಜರರ್) ಸಿ. ಯನ್. ವೆಂಕಪ್ಪಯ್ಯನವರು (ಗೌರವ ಸೆಕ್ರೆಟರಿ.)

1. ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಒಪ್ಪಲಾಯಿತು.

2. ವಸೂಲಾತಿಗೆ ಬಾಕಿ ಇರುವ ಸಾಲದಪಟ್ಟಿ ಓದಲಾಯಿತು.

3. ಜೂನ್ ತಿಂಗಳ ಜಮ ಮತ್ತು ಖರ್ಚಿನ ಲೆಕ್ಕ ಓದಲಾಯಿತು.

4. ಈ ಕೆಳಗಿನ ಸೊಸೈಟಿಗಳಿಗೆ ಸಾಲಕೊಡಲು ಮಂಜೂರಾಯಿತು. 1. ಬೈರಂಬಡ ಸೊಸೈಟಿಗೆ ರೂ. 1000. 2. ಹೊದ್ದೂರಿಗೆ ರೂ. 620, 3. ನೂರಂಬಡಕ್ಕೆ ರೂ. 800, 4. ಕುಂಡಾಡು ನಾಡಿಗೆ ರೂ. 500, 5. ದೊಡ್ಡಭಂಡಾರಕ್ಕೆ ರೂ. 400.

5. ಕೋಕೇರಿ ಮತ್ತು ಕುಕ್ಲೂರು ಸೊಸೈಟಿಗಳಿಗೆ ಅವುಗಳ ಮೆಂಬರುಗಳಿಂದ ಬರತಕ್ಕ ಸಾಲ ವಸೂಲಾತಿಯು ಮತ್ತು ಕೆಲಸವು ತೃಪ್ತಿಕರವಾಗಿಲ್ಲದ್ದರಿಂದ ಅವರ ಅರ್ಜಿ ಮೇರೆ ಸಾಲ ಮಂಜೂರ್ಮಾಡಲಿಲ್ಲ.

6. ವೈಪರ್ ಕೊಂಗೆರ ಅಪ್ಪಣ್ಣನ ಬಾಬ್ತು, ಸೆಂಟ್ರಲ್ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಹಣವನ್ನು ವಾಪಸ ಕೊಡುವ ವಿಷಯ ಕೊಡಗು ಸಬಾರ್ಡಿನೇಟ್ ಜಡ್ಜಿಯವರಿಂದ ಬಂದ ನಂಬ್ರು $\frac{184}{5\text{-}7\text{-}28}$ ರ ಪತ್ರವು ಓದಲಾಯಿತು.

ಈ ಹಣವು ಉತ್ತರಕೊಡಗು ತಾಲೋಕು ಸುಭೇದಾರರ ಮೂಲಕ ಬಂದದ್ದರಿಂದ ಅವರ ಕೋರಿಕೆ ವಿನಹ ವಾಪಸು ಕೊಡಲಾಗುವುದಿಲ್ಲವೆಂತ ನೈಸಲಾಯಿತು.

7. ಕುಯ್ಯಮುಡಿ ಧನಸ ಭಂಡಾರದ ಸೊಸೈಟಿಯು ಸೆಂಟ್ರಲ್ ಬ್ಯಾಂಕಿಗೆ ವಾಪತಿಮಾಡಲು ಬಾಕಿ ಇರುವ ಸಾಲದ ಮೊಬಲಗನ್ನು ಈಗ ಸಲ್ಲಿ ಮಾಡಲು ಅನಾನುಕೂಲವಾದ್ದರಿಂದ ಬರುವ ನವಂಬರ್ ಅಖೈರು ವರೆಗೆ ವಾಯಿದೆಕೊಡಬೇಕಾಗಿ ಬರಕೊಂಡ ಅರ್ಜಿ ಮೇರೆ ವಾಯಿದೆ ಕೊಡಬಹುದೆಂತ ತೀರ್ಮಾನವಾಯಿತು.

8. ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟಿರುವ 10,000 ರೂಪಾಯಿಗಳನ್ನು ಸಾಧ್ಯವಾದರೆ 9 ತಿಂಗಳು ಇಲ್ಲವೇ ೬ ತಿಂಗಳಿಗೆ, ಇಲ್ಲವಾದರೆ 1 ವರ್ಷಕ್ಕೆ ಅಲ್ಲಿಯೇ ಡಿಪಾಜಿಟ್ಟು ಮಾಡಬೇಕಾಗಿಯೂ ಈ ವರೆಗಿನ ಬಡ್ಡಿಯನ್ನು ವಾಪ್ಸಾತಿಗೆ ದುಕೊಳ್ಳುವಂತೆಯೂ ತೀರ್ಮಾನವಾಯಿತು.

9. ಮದ್ರಾಸು ಅರ್ಬನ್ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಹಣವನ್ನು ಅದರ ಬಡ್ಡಿ ಸೇರಿಸಿ ಪುನಹ ಒಂದು ವರ್ಷಕ್ಕೆ ಡಿಪಾಜಿಟ್ಟು ಮಾಡಬೇಕಂತ ನೈಸಲಾಯಿತು.

ಕೆ. ಅಪ್ಪಯ್ಯ.
(ಅಧ್ಯಕ್ಷರು)

ನೋಟೀಸು.

ಕಾಂತೂರು ಗ್ರಾಮದ ಒಕ್ಕಲಿಗರ ಕೆ ರಾಮಯ್ಯನು ಈ ಮೂಲಕ ಪ್ರಕಟಿಸುವುದೇನೆಂದರ:—ಕಾಂತೂರು ಗ್ರಾಮದ ಒಕ್ಕಲಿಗರ ಪವ್ರತಿ ತಮ್ಮಣ್ಣನ ತಂಗಿ ಕಾಳಮ್ಮನು ಮೊಕಾಟಕ್ಕೆ 3 ಯೇಕರೆ ಅಂದರೆ 109 ಬಟ್ಟಿ ಭೂಮಿ 3 ಯೇಕರೆ ಬಾಣೆ, ಹಿತ್ಲು, ಮನೆ (ಹಂಚು ಹುಲ್ಲು ಹಾಕಿದ್ದು) ಇದೆಯೂ ಗಿ ಪ್ರಕಟಣೆಮಾಡಿರುವ ಸೊತ್ತುಗಳು ಮತ್ತು ಬೇರೆ ಸೊತ್ತುಗಳು ಸಹ ನನಗೆ 1931ನೆ ಇಸವಿ ಮಾರ್ಚಿ ವರೆಗೆ ಅಸಲು ಭೋಗ್ಯಕ್ಕೆ 2000/ರೂಪಾಯಿಗೆ ಸವರಿಯವಳ ಅಣ್ಣ ಪವ್ರತಿ ತಮ್ಮಣ್ಣನು ಕೊಟ್ಟಿರುವುದಾಗಿಯೂ, ವಾಯಿದೆ ತೀರಿದ ಮೇಲೆ ಅಸಲು ಮೊಬಲಗು ವಾಪತಿ ಮಾಡದೆ ತಪ್ಪಿದ್ದಾದರೆ ಮುಂದಕ್ಕೆ ಅಸಲು ಮೊಬಲಗು ವಾಪತಿಯಾಗುವ ವರೆಗೆ ಸದರಿ ಮೇರೆ ನಡಕೊಂಡು ಬರಬೇಕಾಗಿ ಪೈರೆ ರಿಜಿಸ್ಟರ್ ಭೋಗ್ಯ ಕರಾರು ಬರಕೊಟ್ಟಿರುವದರಿಂದ ಈ ಕರಾರಿಗೆ ವಿರೋಧವಾಗಿ ಯಾರೂ ಮೇಲ್ಕಂಡ ಸೊತ್ತುಗಳ ಮೇಲೆ ಕ್ರಯಮಗ್ರೆ ಯಾವ ತರದ ಆಧಾರಗಳೂ ಮಾಡಿಸಿಕೊಳ್ಳಬಾರದಾಗಿಯೂ, ಹೀಗೆ ಮಾಡಿಸಿಕೊಂಡದ್ದಾದರೆ ನನಗೆ ಇದರಿಂದುಂಟಾಗುವ ಎಲ್ಲಾ ನಷ್ಟಕ್ಕೆ ಸದರಿಯವರು ಗುರಿಯಾಗತಕ್ಕದ್ದು. ಅಲ್ಲದೆ ಹಾಗೆ ಮಾಡಿಸಿಕೊಂಡ ಪತ್ರಗಳು ನನ್ನ ಭೋಗ್ಯ ಕರಾರಿನ ಕರತ್ತು ತೀರುವ ವರೆಗೆ ಅಸಿಂಧ ವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಒಕ್ಕಲಿಗರ ಕೆ. ರಾಮಯ್ಯ,
ಕಾಂತೂರು ಗ್ರಾಮ,
12—3 ಮೂರ್ನಾಡು.

For Sale

6000 Orange Plants, two year old, cultivated on scientific agricultural principles Prices range between 12 to 15 rupees per hundred. For further particulars apply to the undersigned.

P M Chengappa.
Inspector of Co-operative Societies,
4—3 South Coorg. Virajpet.

ಮಾರಾಟಕ್ಕಿದೆ.

ಶಾಸ್ತ್ರೀಯ ರೀತಿಯಲ್ಲಿ ವ್ಯವಸಾಯ ಮಾಡಿ ಬೆಳೆದ 2 ವರ್ಷದ 6,000 ಕಿತ್ತಳೆ ಗಿಡಗಳು ಮಾರಾಟಕ್ಕೆ ತಯಾರಾಗಿವೆ. ಕ್ರಯ ನೂರಕ್ಕೆ 12/—ರೂಪಾಯಿಗಳಿಂದ 15/—ರೂಪಾಯಿಗಳವರೆಗೆ ಇದೆ. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳತಕ್ಕದ್ದು.

ಪಿ. ಯಂ. ಚೆಂಗಪ್ಪ,
ಕೋ ಆಪರೇಟಿವ್ ಇನ್ಸ್‌ಪೆಕ್ಟರು
ದಕ್ಷಿಣ ಕೊಡಗು
ವೀರರಾಜಪೇಟೆ.

ಉಪಾಧ್ಯಾಯರುಗಳ ಮೀಟಿಂಗು.

ತಾರೀಕು 21—7—28ರಲ್ಲು ಪೊನ್ನಂಪೇಟೆ ಸೆಂಟರಿನ ಉಪಾಧ್ಯಾಯರುಗಳ ಪ್ರತಿನಿಧಿಗಳ ಮೀಟಿಂಗು ಪೊನ್ನಂಪೇಟೆ ಶಾಲೆಯಲ್ಲಿ ದಕ್ಷಿಣ ಕೊಡಗು ಸುಪರ್‌ವೈಜರಾಗಿರುವ ಮಿ ಕಾಳಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಸಂಗತಿಗಳು ದೀರ್ಘಚರ್ಚೆಯಿಂದ ತೀರ್ಮಾನವಾದವು.

(1) ಇಡೀ ಕೊಡಗಿನ ಉಪಾಧ್ಯಾಯರುಗಳ ಸಮ್ಮೇಳನ ಒಂದನ್ನು ಈ ವರ್ಷ ನಡಿಸಬೇಕೆಂದು ಸರ್ವಸಮ್ಮತದಿಂದ ತೀರ್ಮಾನವಾಯಿತು

(2) ಇದರ ಕಾರ್ಯಕ್ರಮವನ್ನೂ, ತಾರೀಕು ಸ್ಥಳವನ್ನೂ ಮತ್ತು ಅಧ್ಯಕ್ಷರ ಚುನಾವಣೆಯನ್ನೂ ನಿಶ್ಚಯಿಸಿಕೊಡಬೇಕಾಗಿ ಕೊಡಗಿನ ಶಾಲಾ ಸ. ಅ. ಇನ್ಸ್‌ಪೆಕ್ಟರವರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನವಾಯಿತು.

(3) ಇದರ ಖರ್ಚು ವೆಚ್ಚಗಳಿಗಾಗಿ ಮುಹೆಯೂನ ಸಂಬಳದ ರೂಪಾಯಿಗೆ ಒಂದಾಣೆ ದರದಲ್ಲಿ ಪ್ರತಿಯೊಬ್ಬ ಉಪಾಧ್ಯಾಯನು ಒಂದಕೊಡುವಂತೆ ತೀರ್ಮಾನವಾಯಿತು.

(4) ವರ್ಷಾವಧಿಯಲ್ಲಿ ನಡೆಯಬೇಕಾದ ಉಪಾಧ್ಯಾಯರುಗಳ ಪರಸ್ಪರ ಸಹಕಾರಿ ಸಂಘದ ಮತ್ತು ಸ್ಟೋರಿನ ಜನರಲ್ ಮೀಟಿಂಗುಗಳನ್ನು ಅದೇ ಕಾಲ ಮತ್ತು ಸ್ಥಳದಲ್ಲಿ ನಡಿಸುವಂತೆ ಆಯಾಯ ಸೆಕ್ರೆಟರಿಗಳನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

(5) ಪೊನ್ನಂಪೇಟೆ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಮೆ. ಚೇಂದಿರ ಬಿದ್ದಯ್ಯನವರ ಅಕಾಲಮರಣವು ಈ ಸಂಘದ ಪ್ರತಿಯೊಬ್ಬ ಮೆಂಬರನ ಅನುತಾಪಕ್ಕೆ ಕಾರಣವಾಯಿತೆಂತಲೂ ಈ ತಮ್ಮ ದುಃಖವನ್ನು ಅವರ ಪತ್ನಿ ಮತ್ತು ಪುತ್ರರಿಗೆ ಸೆಕ್ರೆಟರಿಯವರು ಪತ್ರ ಮೂಲಕ ತಿಳಿಸಬೇಕಾಗಿಯೂ ತೀರ್ಮಾನವಾಯಿತು.

(6) ಈ ತೀರ್ಮಾನಗಳನ್ನು ದೇಶೀಯ ವೃತ್ತ ಪತ್ರಗಳಿಗೂ ಇತರ ಸೆಂಟರುಗಳ ಸೆಕ್ರೆಟರಿಯವರುಗಳಿಗೂ ಕಳುಹಿಸಿಕೊಡಬೇಕಾಗಿ ಈ ಸಂಘದ ಸೆಕ್ರೆಟರಿಯವರನ್ನು ಕೇಳಿಕೊಳ್ಳಲಾಯಿತು.

ಅಧ್ಯಕ್ಷರಿಗೆ ವಂದಿಸಿ ಸಭೆಯನ್ನು ವಿಸರ್ಜಿಸಲಾಯಿತು.

ಎ ಕಾಳಮ್ಮ
(ಅಧ್ಯಕ್ಷ.)

ಚೆಸ್ಟ್ ಲೀವರ್ ಪಾಕೆಟ್ ವಾಚ್.

ಈ ಗಡಿಯಾರಗಳು ಹೊಸದಾಗಿ ತಯಾರಾದವು (ಸ್ವಿಸ್ ಮೇಡ್) ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇದೆ

ಬಹು ಬಲಿಷ್ಟವಾದ ಲೀವರ್ ಮೂವ್‌ಮೆಂಟ್‌ಗಳಿಂದಲೂ, ದೃಢವಾದ ಸಾಮಾನುಗಳಿಂದಲೂ ತಯಾರಿಸಿ ಒಳಗಡ ಕಂಪುಗಳು ಇಟ್ಟಿರುವರು ಇದನ್ನು ಜೇಬಿನಲ್ಲಿ ಹಾಕಿಕೊಂಡು ಎಷ್ಟು ದೂರ ಓಡಿದಾಗ್ಯೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕ ಇತರ ಕಂಪೆನಿಗಳಲ್ಲಿ ಸಿಕ್ಕಲಾರದು ಈ ಗಡಿಯಾರವನ್ನು ತರಿಸಿಕೊಳ್ಳುವವರಿಗೆ ಇದರ ಜೊತೆಯಲ್ಲಿ ಕಾಣಿಸಿರುವ ಇಂಗ್ಲಿಷ್ ಮೇಡ್ ಫೌನ್‌ಟನ್ ಪೆನ್ನಾವನ್ನು ಇನಾಮಾಗಿ ಕೊಡುವೆವು ೩ ವರುಷ ಗ್ಯಾರಂಟಿ ಇದೆ

ಕ್ರಯ ಗಡಿಯಾರ 1ಕ್ಕೆ ರೂ 3—8—0.
ವಿಳಾಸ. —ಲೀಗಲ್ ವಾಚ್ ಕಂಪೆನಿ,
52—9 ಪೋ ಬಾಕ್ಸ್ ನಂ 243, ಮದರಾಸು

Notice.

In prsuance of G O No. L 9073–74/L B 35–27 21 Dated 25th June 1928 a District Fund toll gate will be newly opened at Ullenhalli on the Frazerpe Ramanathpur from 20–7–28 and a sale of the right of collecting tolls at the said toll gate during 1928–29 will be held in the shandy grounds at Konanur in the Arkalgud Taluk on Thursday the 19th July 1928 commencing from 12. noon. Details of the sale notification will be published in the Mysore Gazette shortly.

Intending bidders are requested to be present at the time and place mentioned above together with a deposit of Rs 100

Kem Mahadevappa,
for President,
3—3 District Board.
Hassan.

ನೋಟೀಸು.

ಹಾಸನದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಆಫೀಸಿನಿಂದ.

ಹಾಸನ ಡಿಸ್ಟ್ರಿಕ್ಟ್ ಅರ್ಕಲಗೋಡು ತಾಲೋಕು ರಾಮನಾಥಪುರ ಪ್ರೇಜರ್‌ಪೇಟೆ ರಸ್ತೆಯಲ್ಲಿ ಉಳ್ಳೆನಹಳ್ಳಿ ಬಳಿ ಮೈಸೂರು ಸರಕಾರದ ಜಿ ಒ ನಂಬರು ಯಲ್. 9073 74 ಯಲ್ ಬಿ. 35—27—21ನೇ ನಂಬರು ಆರ್ಡರನ್ನನುಸರಿಸಿ ತಾ 20—7—28ನೇ ಶುಕ್ರವಾರದ ಲಾಗಾಯಿತು ಒಂದು ಡಿ ಫಂಡು ಟೋಲುಗೇಟನ್ನು ಸ್ಥಾಪಿಸುತ್ತಾಗಿ 1928—29ನೇ ಸಾಲಿನಲ್ಲಿ ಈಟೋಲಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಅರ್ಕಲಗೋಡು ತಾಲೋಕು ಕೊಣನೂರು ಸಂತೆಯಲ್ಲಿ ತಾ. 10—7—28ನೆ ಗುರುವಾರ ಮಧ್ಯಾನಃ 12 ಗಂಟೆ ಲಾಗಾಯಿತು ಹರಾಜು ಮಾಡಿಸುತ್ತಾಗಿ ಹರಾಜನ್ನು ಕೂಗಲು ಇಷ್ಟವುಳ್ಳವರು ರೂ 100/—ಡಿಪಾಜಿಟ್ಟು ಸಮೇತ ಅಲ್ಲಿ ಹಾಜರಾಗಿ ಕೂಗಬಹುದಾಗಿ ಈ ಮೂಲಕ ತಿಳಿಸಿದೆ. ಬಾಕಿ ಶರತ್ತುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಸ್ ಮಾಡಲಾಗುತ್ತೆ

ಯಸ್. ಯಸ್. ನಂಜುಂಡಯ್ಯ,
ಪ್ರೆಸಿಡೆಂಟರು,
ಡಿ. ಬೋರ್ಡ್
ಹಾಸನ

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮನಾದ ಸೀಮೆಯ ಬಂಗಾರದಿಂದ ಕಟ್ಟಡ ಕಟ್ಟಿರುವದು ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಒಜ್ಜನ್ನು ಕಡದಂತೆ

ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು.

7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ 2—0—0.
7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ 2—8—0.

ವಿಳಾಸ —ಕೆ. ನಾಥಮುನಿ ಅಂಡ್ ಸನ್ಸ್,
52—10 168 ಚೈನಾ ಬಜಾರ್, ಮದರಾಸು.

ನಾನು ಯಾರು?

(ರೆಡ್‌ಕ್ರಾಸ್ ಸಂಘದಿಂದ)

ನಾನು ಎಲ್ಲಾ ಕ್ರಿಮಿಕೀಟಗಳ ಪೈಕಿ ಅತಿ ಅಪಾಯಕರವಾದದ್ದಾಗಿರುತ್ತೇನೆ ನಾನು ಹೊಲಸಿನಲ್ಲೇ ಹುಟ್ಟಿ, ಹೊಲಸಿನಲ್ಲೇ ಜೀವಿಸಿ, ಹೊಲಸನ್ನೇ ತಿಂದು ನನ್ನ ಜೊತೆಯಲ್ಲಿ ಹೊಲಸನ್ನು ತಕ್ಕೊಂಡು ಹೋಗುತ್ತೇನೆ. ನಾನು ಪಾಯಖಾನೆಗಳಲ್ಲಿಯೂ, ಗೊಬ್ಬರದಲ್ಲಿಯೂ, ಕಸದ ರಾಶಿಗಳಲ್ಲಿಯೂ ವೃದ್ಧಿಹೊಂದುತ್ತೇನೆ

ನಾನು ಈ ಸ್ಥಳಗಳಿಂದ ನಿಮ್ಮ ಆಹಾರದ ಮೇಲೆ ಕೂತುಕೊಳ್ಳುತ್ತೇನೆ, ಮತ್ತು ಅಲ್ಲಿ ಹೊಲಸನ್ನು ಬಿಡುತ್ತೇನೆ

ನೀವು ಇಂಥಾ ಆಹಾರವನ್ನು ತಿಂದರೆ ನಿಮಗೆ ಅಸ್ವಸ್ಥವೂ ಮರಣವೂ ಪ್ರಾಪ್ತಿಯಾಗುವಂತೆ ಮಾಡುತ್ತೇನೆ

ನಾನು ಈ ರೀತಿಯಿಂದ ವರ್ಷಂಪ್ರತಿ ವಾಂತಿಭೇದಿ ಮತ್ತು ಇತರ ಕರುಳು ಸಂಬಂಧ ರೋಗಗಳಿಂದ ಸಾವಿರ ಗಟ್ಟಲೆಯಿಂದ ಜನರನ್ನು ಕೊಲ್ಲುತ್ತೇನೆ

ನಾನು ಐಶ್ವರ್ಯವಂತರಲ್ಲಿಯೂ ಬಡವರಲ್ಲಿಯೂ ಯೌವನಸ್ಥರಲ್ಲಿಯೂ ಮುದುಕರಲ್ಲಿಯೂ ಏಕಪ್ರಕಾರವಾಗಿ ಬಲಿ ತಕ್ಕೊಳ್ಳುತ್ತೇನೆ

ನಾನು ನೊಣ.

ನನ್ನ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ.

ನಿಮ್ಮ ಆಹಾರ ಪಾನಗಳನ್ನು ಮುಚ್ಚಿಡಿರಿ.

ನೊಣಗಳು ಕೂತುಕೊಂಡ ಆಹಾರವನ್ನು ತಿನ್ನಬೇಡಿರಿ.

ನಿಮ್ಮ ಕಣ್ಣಿಗೆ ಬೀಳುವ ಪ್ರತಿ ಒಂದು ನೊಣವನ್ನು ಕೊಲ್ಲಿರಿ

ಅದಕ್ಕಿಂತ ಒಳ್ಳೇದೇನೆಂದರೆ, ನೊಣಗಳು ವೃದ್ಧಿಯಾಗಲಿಕ್ಕೆ ಬಿಡಬೇಡಿರಿ.

ನನ್ನ ಜನ್ಮಸ್ಥಾನವು ತಿಪ್ಪೆಯೂ, ಗೊಬ್ಬರದ ರಾಶಿಯೂ ಆಗಿರುತ್ತದೆ.

ಮತ್ತು ನಾನು ಪಾಯಖಾನೆಯ ಹೊಲಸಿನಲ್ಲಿ ವೃದ್ಧಿ ಹೊಂದುತ್ತೇನೆ

ಮನೆಯ ಹತ್ತರ ಕಸವನ್ನೂ, ಸಗಣಿಯನ್ನೂ ಮಲವನ್ನೂ, ಗೊಬ್ಬರವನ್ನೂ ದಾಸ್ತಾನು ಮಾಡಬೇಡಿರಿ.

ಕಸವನ್ನು ಸುಡಿರಿ!
ಗೊಬ್ಬರವನ್ನು ಹೂಳಿಡಿರಿ!
ಪಾಯಖಾನೆಯನ್ನು ಶುಚಿಯಾಗಿಡಿರಿ!

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ.

ಬರಾರು ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸಮಸಮನಾಗಿರುವದು ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗಡಿಯಾರಕ್ಕೂ ಒಂದೊಂದು ಟೇಬಲ್ ಟೈಂಪೀಸನ್ನು ಇನಾಮಾಗಿ ಕೊಡುವೆವು ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ ರೂ. 6—8—0

ಕ್ರಯ ಗಡಿಯಾರ 1ಕ್ಕೆ ರೂ. 3—8—0
ವಿಳಾಸ —ಲೀಗಲ್ ವಾಚ್ ಕಂಪನಿ,
ಪೋ. ಬಾಕ್ಸ್ ನಂ. 243, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ಕೀಳದ್ದಿಗೆ ಪದಕ.

ಈ ಅಡ್ಡಿಗೆಗಳನ್ನು ರೋಲ್ಡ್ ಗೋಲ್ಡ್‌ನಿಂದ ತಯಾರಿಸಿ



ಸಾವರಿನ್ ಭಂಗಾರದ ಗಿಲೀಟು ಕೊಟ್ಟಿದೆ. ಒಣ್ಣ ಕೆಡದು ಇದರ ಪದಕವು ಕಂಪು, ಬಿಳಿ ಮತ್ತು ಹಸರು ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿ ನೋಡಲು ಲಕ್ಷಣವಾಗಿರುವಂತೆ ಮುತ್ತುಗಳನ್ನು ಸಹ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು

ಕ್ರಯ 1ಕ್ಕೆ ರೂ 3—8—0.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.



ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗಿಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರ ಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು ಬಿಡುವದು.

೩ ಸೋಪುಗಳು ಇರುವ ಪೆಟ್ಟಿಗೆ 1ಕ್ಕೆ 1—0—0.
ವಿಳಾಸ —ಕೆ ನಾಥಮುನಿ ಅಂಡ್ ಸನ್ಸ್,
52—10 168. ಚೈನಾ ಬಜಾರ್, ಮದರಾಸು

ನೀವು ನಿರ್ಬಲಸ್ಥರಾಗಿ ಯಾಕೆ ನರಳುವಿರಿ?

ಅವತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

ಸಾಲಂಮಿಶ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಜನ್ಮವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯಕ್ಷಿಣಿಯಂತೆ ವಾಸಿಯುಮಾಡಿಸಕಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಬರುವುದು ೨೧ ಡಬ್ಬಿಗಳ ಸೇವನೆಯಿಂದ ಒನ್ನಾಂತ್ರದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಆವಶ್ಯಕವಿರುತ್ತೆ

ಕ್ರಯ ಡಬ್ಬಿ ೧ಕ್ಕೆ ೨—೦—೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳವರೆಗೆ ೦—೮—೦.

ಡಿ. ಮನ್ನಾಲಾಲ್,

12—2 ಡೆಲ್ಲಿ ನೇಟೀವ್ ಡಾಕ್ಟರು, ಸಾಲಂಮಿಶ್ರಿ ಮುರಬ್ಬ ಫಾರ್ಮಸಿ, ಬೆಂಗಳೂರು ಸಿಟಿ.

ವರ್ತಮಾನ ಸಂಗ್ರಹ.

ಒಳದೇಶ

ತಾ. 20ರಿಂದ ಇಂದಿನ ವರೆಗೆ ಮಡಿಕೇರಿಗೆ 6.62 ಇಂಚು ಮಳೆಯಾಗಿದೆ. ಕಳೆದ ಶನಿವಾರದಿಂದ ಮೊನ್ನೆಯ ವರೆಗೆ ಮಳೆಯು ಬಹಳ ಕಡಿಮೆಯಾಗಿತ್ತು, ನಿನ್ನೆ ಜೋರಾಗಿ ಹೊಡೆದು 3.31 ಇಂಚು ಬಿದ್ದಿದೆ. ಈದಿನ ಪುನಹ ಕಡಿಮೆಯಾಗಿದೆ

ಕಳೆದವಾರ ಪ್ರಕಟವಾದಂತೆ ಇನ್ನು ಮುಂದೆ ಪೋಸ್ಟಾಫೀಸುಗಳಲ್ಲಿ ಸ್ಟಾಂಪು ಕವರುಗಳ ಅಂದರೆ ಸ್ಟಾಂಪು ಸಮೇತ ಇರುವ ಕವರುಗಳ ಮಾರಾಟವು ಪೂರ್ತಿ ನಿಲ್ಲಿಸಲ್ಪಡುವದಿಲ್ಲವೆಂತಲೂ, ಆದರೆ ಸ್ವಲ್ಪ ಮಾತ್ರ ಮಾರಲ್ಪಡುವದೆಂತಲೂ ಇತ್ತೀಚೆಗೆ ತಿಳಿಯಬರುತ್ತದೆ.

ಕೊಡಗು ಜಮೀನ್ದಾರರ ಸಂಘದ ಜನರಲ್ ಸೆಕ್ರೆಟರಿಯವರು ಕಳುಹಿಸಿಕೊಟ್ಟಿರುವ 'ಕೊಡಗಿನ ಏಲಕ್ಕಿ ರಫ್ತಿ'ಯ ಹಸ್ತಪತ್ರಿಕೆಗಳನ್ನು ಈ ಸಂಚಿಕೆಯ ಪುರವಣಿಯಾಗಿ ಹಂಚಿರುತ್ತೇವೆ. ಅದಕ್ಕೆ ವಾಚಕ ಮಹಾಶಯರು ತಕ್ಕಷ್ಟು ಗಮನವನ್ನೀಯುವರಾಗಿ ನಂಬುತ್ತೇವೆ

ಮೆ. ಕೋದಂಡ ಮಾಚೈಯ್ಯನವರನ್ನು ಬೆಂಗಳೂರು ಸಿಟಿ ಮುನ್ಸಿಪಲ್ ಕಮಿಷನರ್ ಪದವಿಗೆ ನೇಮಿಸಿದ ಸಂತೋಷಕ್ಕಾಗಿ ಬೆಂಗಳೂರಿನ ಕೊಡಗು ಸಂಘದವರು ಈ ತಾ. 19 ರಲ್ಲಿ ಆರ್. ಬಿ. ಎ. ಯಸ್. ಯಮ್. ರವರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನಲ್ಲಿ ಅವರಿಗೆ ಒಂದು ಟೀ ಪಾರ್ಟಿಯನ್ನು ಕೊಡುವರು.

ಮದ್ರಾಸು ಪ್ರಾಂತ್ಯದ ಇಂಡಿಯನ್ ಪೊಲೀಸು ಸರ್ವಿಸಿಗೆ ಒಬ್ಬ (ಹಿಂದೂವಲ್ಲದ) ಇಂಡಿಯನನ್ನು ನೇಮಿಸಲಾಗುವದೆಂದೂ ಕೊಡಗಿನಿಂದ ಇದಕ್ಕೆ ಸೇರಲು ಇಚ್ಛೈಸುವವರು ತಮ್ಮ ಅಪ್ಲಿಕೇಶನನ್ನು ಕಮಿಶನರ ಮೂಲಕ ಚೀಫ್ ಕಮಿಷನರ ಆಫೀಸಿಗೆ ಕಳುಹಿಸತಕ್ಕದೆಂದೂ ಕಮಿಶನರು ಪ್ರಕಟಿಸಿರುವರು.

ಈ ತಾ. 24 ರಲ್ಲಿ ನಡೆದ ಮಡಿಕೇರಿ ಹೊಸ ಮುನ್ಸಿಪಲ್ ಕಮಿಟಿ ಮೀಟಿಂಗಿನಲ್ಲಿ ರಾವ್ ಸಾಹೇಬ್ ಪಟ್ಟಮಾಡ ದೇವೈಯ್ಯನವರು ಮುನ್ಸಿಪಾಲಿಟಿಯ ಅಧ್ಯಕ್ಷರಾಗಿಯೂ, ಮೆ. ಯಂ. ಉಸ್ಮಾನ್ ಖಾನ್‌ರವರು ಉಪಾಧ್ಯಕ್ಷರಾಗಿಯೂ ಎದುರಾಳುಗಳಿಲ್ಲದೆ ಆರಿಸಲ್ಪಟ್ಟರು. ಇವರನ್ನು ಅಭಿನಂದಿಸುತ್ತೇವೆ. ಹಾಲಿ ಪ್ರೆಸಿಡೆಂಟರಾದ ಮೆ. ಯಂ. ಭುಜಂಗರಾಯರು ಆಗೊಸ್ಟ್ ತಾ. 1 ರಲ್ಲಿ ಹೊಸ ಪ್ರೆಸಿಡೆಂಟರಿಗೆ ಚಾರ್ಜು ವಹಿಸಿಕೊಡುವರು.

ಈ ಮೊದಲೇ ಸೂಚಿಸಿದ್ದಂತೆ ಹಿಂದೂದೇಶದ ಮುಖ್ಯ ಸೇನಾಪತಿಯವರು ಚೀಫ್ ಕಮಿಷನರ ಸಮೇತ ಈ ತಾ. 23ರಲ್ಲಿ ಮಡಿಕೇರಿಗೆ ಬಂದು ಗದ್ದಿಗೆಯನ್ನು ಸಂದರ್ಶಿಸಿ, ಕೋಟೆಗೆ ಒಂದು ಚಾವಡಿಕಾರರ 'ಗಾರ್ಡ್ ಆಫ್ ಆನರ್'ನ್ನು ಪರೀಕ್ಷಿಸಿ, ಇಲ್ಲಿಯ ಟೆರಿಟೋರಿಯಲ್ ಪಟಾಲಮಿನ ವಿಷಯ ಅದರ ಆಫೀಸರುಗಳ ಸಂಗಡ ಸಂಭಾಷಣೆ ಮಾಡಿದ ನಂತರ ಕೋಟೆಯ ಕಟ್ಟಡವನ್ನು ನೋಡಿಕೊಂಡು, ಮಧ್ಯಾಹ್ನದ ಮೇಲೆ ರಾಜಾಸೀಟಿಗೆ ಹೋಗಿ 5 ಗಂಟೆಗೆ ಮೈಸೂರಿಗೆ ವಾಪಸು ಹೋದರು.

ಇದೇ ತಾ. 21 ರಲ್ಲಿ ನಡೆದ ಚುನಾವಣೆಯಲ್ಲಿ ಸ್ಪರ್ಧೆ ಇಲ್ಲದೆ ಈ ಕೆಳಗಿನ ಮಹನೀಯರು ಮಡಿಕೇರಿ ಮುನ್ಸಿಪಲ್ ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟಿರುವರು. ಹಿಂದೂಗಳ ಪರವಾಗಿ ಮೆ. ಗಳಾದ 1. ಕೆ. ಯಸ್. ಕಪನೈಯ್ಯನವರು, 2. ಕೆ. ವೆಂಕಟಸುಬ್ಬೈಯ್ಯನವರು, 3. ವಿ. ಯನ್. ಶೇಷು ಶೆಟ್ಟಿಯವರು, 4. ಕೂಸ್ ಶೆಟ್ರ ಸಣ್ಣೈಯ್ಯನವರು, 5 ಹೆಚ್. ತಿರುಮಲಾಚಾರ್ಯರು, 6. ಯಸ್. ಯಸ್. ರಾಮೈಯ್ಯನವರು, ಕೊಡವರ ಪರವಾಗಿ ಮೆ. ಗಳಾದ 1. ಆರ್. ಯಸ್. ಪಟ್ಟಮಾಡ ದೇವೈಯ್ಯನವರು, 2. ಕೊಡಂದೆರ ಮಾದಪ್ಪನವರು, 3. ಕೊಂಗಟ್ಟೀರ ಅಪ್ಪೈಯ್ಯನವರು. ಮಹ್ಮದೀಯರ ಪರವಾಗಿ ಮೆ. ಗಳಾದ 1. ಯಂ. ಉಸ್ಮಾನ್ ಖಾನ್‌ರವರು, 2. ಖಾಜಿ ಅಬ್ದುಲ್ ಲತೀಫ್‌ರವರು ಕ್ರೈಸ್ತರ ಪರವಾಗಿ ಮಿ. ಎ. ಎ. ವಾಕ್ರುಣ್ಣಿಯವರು.

ಹಿಂದೂದೇಶ.

ಲಾರ್ಡ್ ಸಿನ್ಹಾರವರ ಮರಣದಿಂದ, ಪ್ರೀವಿ ಕೌನ್ಸಿಲಿನ ಜುಡಿಶಿಯಲ್ ಕಮಿಟಿಯಲ್ಲಿ ಖಾಲಿಯಾಗಿರುವ ಸ್ಥಳಕ್ಕೆ ಸರ್ ಸುಲೈಮಾನ್ [illegible] ರವರನ್ನು ನೇಮಿಸುವರಾಗಿ ಸುದ್ದಿ ಇದೆ.

ಡೆಲ್ಲಿಯಲ್ಲಿ ಬರುವ ತಿಂಗಳಲ್ಲಿ, ಇಂಡಿಯನ್ ಫಾರೆಸ್ಟ್ ಸರ್ವಿಸಿಗೆ ಆರಿಸುವಿಕೆಯ ಪರೀಕ್ಷೆಯನ್ನು ಮಾಡಿ, ಅದರಲ್ಲಿ ತೇರ್ಗಡೆ ಹೊಂದಿದ ಮೂವರನ್ನು ಕೆಲಸಕ್ಕೆ ಚುನಾಯಿಸುವರೆಂದು ತಿಳಿಯುತ್ತೆ.

ಮಹಾತ್ಮಾ ಗಾಂಧಿಯವರು ತಾನು ಕಲ್ಕತ್ತಾ ಕಾಂಗ್ರೆಸ್ಸಿಗೆ ಪಂಡಿತ ಮೋತಿಲಾಲ್ ನೇಹರೂರವರನ್ನು ಚುನಾಯಿಸ[illegible] ಪ್ರತಿಯೊಂದು ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳಿಗೆ ಸಿ[illegible]ರಸ್ಸು ಮಾಡುತ್ತೇನೆಂದು ಮೆ. ಜಿ. ಯಂ. ಸೇನ್‌ಗುಪ್ತರವರಿಗೆ ತಂತಿವರ್ತಮಾನ ಕೊಟ್ಟಿದ್ದಾರೆಂದು ತಿಳಿಯುತ್ತದೆ.

ಮದ್ರಾಸಿನ ಇಂಜಿನೀಯರಾಗಿದ್ದ ಮೆ. ರಾಜಗೋಪಾಲಯ್ಯಂಗಾರರ ಮಗಳಾದ ಜಾನಕಿಬಾಯಿ ಎಂಬ ಹಿಂದು ಯುವತಿಯನ್ನು ಗುಂಟೂರು ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರಾಗಿರುವ ಮೆ. ಅಬ್ದುಲ್ ಕಾಸೀಮ್ ಎಂಬ ಮಹ್ಮದೀಯ ಮಹನೀಯನು ಮದುವೆ ಮಾಡಿಕೊಂಡಿರುವನೆಂದು ವರ್ತಮಾನ.

ಕಲ್ಕತ್ತಾದ ಉದ್ಯಮ ಮತ್ತು ವ್ಯಾಪಾರಿಕ ಸಮಾಜದ ವಾರ್ಷಿಕ ಸಭೆಯ ಸಮಾರಂಭದಲ್ಲಿ ವಿದ್ಯಾಮಂತ್ರಿಯಾದ ನವಾಬ್ ಮುಜಾಫರ್ ಹಸ್ಲೇನಿಂ [illegible] ಅಧ್ಯಕ್ಷರಾಗಿ ಸ್ವರಾಜ್ಯವನ್ನು ಪಡೆಯಬೇಕಾದರೆ, ಪ್ರಥಮದಲ್ಲಿ ಕೈಗಾರಿಕೆ ವ್ಯಾಪಾರ ಮೊದಲಾದವುಗಳನ್ನು ತಮ್ಮ ಸ್ವಂತವನ್ನಾಗಿ ಮಾಡಿಕೊಂಡು ನಮ್ಮ ನಿತ್ಯ [illegible] ಸಾಮಾನುಗಳಿಗೆ ಇತರ ದೇಶಗಳ ಸಹಾಯವನ್ನು ಕೇಳದೆ, ತಮ್ಮ ಆವಶ್ಯಕ ಪದಾರ್ಥಗಳನ್ನು ತಾವೇ ಉತ್ಪನ್ನ ಮಾಡಿಕೊಳ್ಳುವ ಶಕ್ತಿಯನ್ನು ಸ್ಥಾಪಿಸಿದರೆ, ಸ್ವರಾಜ್ಯವು ಸುಲಭಸಾಧ್ಯ, ಇದಲ್ಲದ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸಿ, ಸಾಮಾನುಗಳಿಗೆ ಇತರರ ಸಹಾಯವನ್ನು ಅಪೇಕ್ಷಿಸುವದು ನಿಜವಾಗಿಯೂ ಪರವಶ್ಯವೇ ಸರಿ ಎಂದು ಹೇಳಿದರು.

ಇಂಡಿಯ ಸರಕಾರದ ರಿಪೋರ್ಟಿನಿಂದ ಇಡೀ ಹಿಂದೂಸ್ಥಾನದಲ್ಲಿ ಕಾಡುಪ್ರಾಣಿಗಳಿಂದ ಕೊಲ್ಲಲ್ಪಟ್ಟವರ ಸಂಖ್ಯೆಯು 1927 ರಲ್ಲಿ 2285 ಎಂದು ತಿಳಿಯುತ್ತೆ. ಇವರಲ್ಲಿ ಹುಲಿಗಳಿಂದ 1033 ಮರಣಗಳೂ, ಚಿರತೆಗಳಿಂದ 218 ಮರಣಗಳೂ, ತೋಳಗಳಿಂದ 4[illegible] ಮರಣಗಳೂ, ಕರಡಿಗಳಿಂದ 78 ಮರಣಗಳೂ, ಆನೆಗಳಿಂದ 55 ಮರಣಗಳೂ, ಕತ್ತೆ ಕಿರುಬಗಳಿಂದ 12 ಮರಣಗಳೂ ಸಂಭವಿಸಿತೆಂದೂ ಗೊತ್ತಾಗಿದೆ. ಅದೇ 1 ವರ್ಷದಲ್ಲಿ 25,612 ಕಾಡು ಮೃಗಗಳು ನಾಶ ಮಾಡಲ್ಪಟ್ಟವು, ಅವುಗಳಲ್ಲಿ 1308, ಹುಲಿಗಳೂ, 4,390 ಚಿರತೆಗಳೂ, 2730, ಕರಡಿಗಳೂ ಮತ್ತು 2,439, ತೋಳಗಳೂ ಆಗಿವೆ. ಈ ಮೃಗಗಳನ್ನು ಕೊಂದ ಶಿಕಾರಿಗಳಿಗೆ, ಸರಕಾರವು 1,39,453 ಒಟ್ಟು ರೂಪಾಯಿಗಳ ಬಹುಮಾನವನ್ನು ಕೊಟ್ಟಿದೆಯಾಗಿಯೂ ಪ್ರಕಟವಾಗಿದೆ.

ಅಮೃತಸರದ್ ಪಟ್ಟದಲ್ಲಿ ಮಹೇಶ್ ರತನ್ ಚಾಂದ್ ಎಂಬಾತನನ್ನು "ಮರ್ಕೆಂಟೈಲ್ ಬ್ಯಾ" ಕ್ಕೆ ಸಂಬಂಧಿಸಿದ ಬ್ಯಾಂಕಿನ ಮೊಕದ್ದಮೆಯಲ್ಲಿ, ತಪಿತಸ್ಥನಾಗಿ ಕಂಡು ಬಂದದ್ದರಲ್ಲಿ ಜೀವಾಂತರ ಕಾರಾಗೃಹವಾಸ ದಂಡನೆಯನ್ನು ವಿಧಿಸಿ ಅಂಡಮಾನ್ ದ್ವೀಪಕ್ಕೆ ಕಳುಹಿಸಿಬಿಟ್ಟಿದ್ದರು. ಕೆಲವು ದಿವಸಗಳ ಹಿಂದೆ ಈತನನ್ನು ಅಲ್ಲಿಂದ ಮಾಂಟಗೋಮರಿ ಜೈಲಿಗೆ ಸಾಗಿಸಲು ಲಾಹೋರಿಗೆ ತಂದರು. ಆತನು ಲಾಹೋರಿನಲ್ಲಿ ರೈಲುಗಾಡಿ ಹತ್ತುವಾಗ [illegible] ಕೈ ಬಿಡಿಸಿಕೊಂಡು ಓಡಿದ್ದ [illegible] ಈ ತಪ್ಪಿಸಿದ ಹಕೀಕತ್ತಿನ ಬಗ್ಗೆ ತನಿಖೆ ನಡೆಯುತ್ತಿದೆ. [illegible] ಉದಾಹರಣೆ ಎಂದು [illegible] ಹೇಳಿದ್ದಾರೆ. [illegible] ಅನೇಕರ ಕಣ್ಣಿಗೆ ಸುಳಿಸಿದರೆಂದು ತಿಳಿಯುತ್ತೆ. ಈ ರೀತಿಯ ಭಾಗ್ಯ [illegible] ಸನ್ಮಾನ್ಯರಿಗೆ ನಮ್ಮ ಅನೇಕರು ಜೈಲಿನಲ್ಲಿ ಸುಖವಾಗಿಯೇ ಸರಕಾರದ ಅಕ್ಕರೆಯನ್ನು ಕಾಣುತ್ತಾರೆಂದು ನನ್ನ ವಾಚಕರ ಮನಸ್ಸಿಗೆ ತಂದುಕೊಳ್ಳಬೇಕಾಗಿದೆ

[illegible] ಇಂಡಿಯನ್ [illegible] ದರೋಡೆ [illegible] ರೈಲು [illegible] ಕಾರಣದಿಂದ [illegible] ದರಲ್ಲಿ [illegible] ಕೆಲಸಗಾರರ [illegible] ನಾಯಕರು ತಾ. 19 ರ ಮಧ್ಯ ರಾತ್ರಿಯಿಂದ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು. 'ಮೀಟರ್ ಗೇಜ್' ಲೈನಿನಲ್ಲಿ ಪ್ರಾರಂಭವಾದ ಈ ಮುಷ್ಕರವು 'ಬ್ರಾಡ್ ಗೇಜ್' ಲೈನಿಗೂ ಹರಡಿದೆ. ಹಲವು ಕಡೆಗಳಲ್ಲಿ ಮುಷ್ಕರಗಾರರು ರೈಲ್ವೆ ಲೈನಿನ ಅಡ್ಡ ಮಲಗಿ ರೈಲ್ವೆ ಗಾಡಿಗಳು ಅಡ್ಡಮಾಡುತ್ತಿರುವರು. ಅವರನ್ನು ಪೊಲೀಸಿನವರು ಕೆಲವು ಸಲ ಗುಂಡು ಹಾರಿಸಿಯೂ ಚದುರಿಸಿರುವರು. ಕಾಟಿಪಾಕಂ ಮತ್ತು ಊಡೆಕೆನಾರೆ ಎಂಬ ಸ್ಥಳಗಳ ಬಳಿ ಮುಷ್ಕರಗಾರರು ರೈಲ್ವೆ ಕಂಬಿಗಳನ್ನು ತೆಗೆದು ಬಿಸಾಡಿದರಿಂದ ಟ್ರೈನುಗಳು ಪಾಗ ಬಿದ್ದು ಹಲವು ಪ್ರಯಾಣಸ್ಥರಿಗೆ ಘಾಯಗಳಾಗಿವೆ. ಮುಷ್ಕರಗಾರರು ಲೈನಿನ ಉದ್ದಕ್ಕೂ ಅಲ್ಲಲ್ಲಿ ಗುಂಪು ಸೇರಿ ತಂಟೆಮಾಡುತ್ತಿರುವರು. ಲೈನು ಉದ್ದಕ್ಕೂ ಪೊಲೀಸು ಬಂದೋಬಸ್ತು ಮಾಡಲಾಗಿದೆ. ಟ್ರೈನುಗಳು ಎಂದಿಗಿಂತ ಬಹಳ ಕಡಿಮೆಯಾಗಿ ನಡೆಸಲ್ಪಡುತ್ತಿರುವದರಿಂದ ಜನರ ಪ್ರಯಾಣಕ್ಕೂ ವ್ಯಾಪಾರಕ್ಕೂ ತುಂಬಾ ತೊಂದರೆಯುಂಟಾಗಿದೆ. ಸ್ವಲ್ಪ ತಡವಾದರೂ ಟಪ್ಪಾಲನ್ನು ಒಪ್ಪವೆ ನಡೆಸುವ ಏರ್ಪಾಡುಗಳನ್ನು ಮಾಡಿರುವರು.

ಬಾರ್ಡೋಲಿ ಸತ್ಯಾಗ್ರಹದ ಸಂಬಂಧ ಬೊಂಬಾಯಿ ಗವರ್ನರರು ಸಿಮ್ಲಾಕ್ಕೆ ಹೋಗಿ ವೈಸರಾಯರ ಸಂಗಡ ಆಲೋಚನೆ ಮಾಡಿ ಬಂದು ತಾ 18ರಲ್ಲಿ ಸೂರತ್ತಿನಲ್ಲಿ ಬಾರ್ಡೋಲಿ ರೈತರ ಪ್ರತಿನಿಧಿಗಳಾದ ವಲ್ಲಭಾಯಿ ಪಟೇಲ ಮೊದಲಾದವರ ಡೆಪ್ಯುಟೇಶನನ್ನು ಭೇಟಿ ಮಾಡಿದರು. ರೈತರು ಹೆಚ್ಚಿನ ಕಂದಾಯವನ್ನು ಕಟ್ಟಿ ಸತ್ಯಾಗ್ರಹ ಚಳವಳವನ್ನು ಸಂಪೂರ್ಣ ನಿಲ್ಲಿಸಿದರೆ, ಜುಡಿಶ್ಯಲ್ ಆಫೀಸರೊಬ್ಬರ ಸಹಾಯ ತೆಗೆದುಕೊಂಡು ರೆವಿನ್ಯು ಆಫೀಸರು ಪುನಹ ವಿಚಾರ ಮಾಡುವದಕ್ಕೆ ಸರ್ಕಾರದವರು ಒಪ್ಪುತ್ತಾರೆಂದು ಗವರ್ನರು ಹೇಳಿದರು. ಸತ್ಯಾಗ್ರಹದ ಚಳವಳದಲ್ಲಿ ಸಿಕ್ಕಿಬಿದ್ದು ಜೈಲಿನಲ್ಲಿರುವವರನ್ನೆಲ್ಲಾ ಬಿಡುಗಡೆ ಮಾಡಿ, ರಾಜಿನಾಮೆ ಕೊಟ್ಟ ಉದ್ಯೋಗಸ್ಥರಿಗೆ ಪುನಹ ಉದ್ಯೋಗ ಕೊಟ್ಟು, ಜಪ್ತಿ ಮತ್ತು ಹರಾಜು ಮಾಡಿದ ಆಸ್ತಿಗಳನ್ನು ವಾಪಸ್ ಮಾಡಿ, ರೆವೆನ್ಯು ಆಫೀಸರ ಸಹಾಯ ಪಡೆಕೊಂಡು ಜುಡಿಶ್ಯಲ್ ಆಫೀಸರು ಪುನಹ ವಿಚಾರ ಮಾಡಿ ತೀರ್ಮಾನಿಸಿದ ವಿನಹ ಹೆಚ್ಚಿನ ಕಂದಾಯ ಕೊಡಲಿಕ್ಕಾಗುವದಿಲ್ಲವೆಂದು ಸತ್ಯಾಗ್ರಹಿಗಳ ಪ್ರತಿನಿಧಿಗಳು ವಾದಮಾಡಿದರು. ಆದುದರಿಂದ ಯಾವ ಒಪ್ಪಂದಕ್ಕೂ ಬರಲಿಲ್ಲ. ಗವರ್ನರವರು ತಾ 23ರಲ್ಲಿ ಬೊಂಬಾಯಿ ಕೌನ್ಸಿಲಿನಲ್ಲಿ ಈ ಸಂಬಂಧ ಭಾಷಣ ಮಾಡಿದಾಗ, ಸರ್ಕಾರದವರು ಚೆನ್ನಾಗಿ ಆಲೋಚಿಸಿ ತೀರ್ಮಾನಿಸಿದ ಶರತ್ತುಗಳನ್ನೇ ತಾನು ಸತ್ಯಾಗ್ರಹಿಗಳ ಡೆಪ್ಯುಟೇಶನಿನ ಮುಂದಿಟ್ಟದ್ದಾಗಿಯೆ; ಅವು ಬರೀ ರಾಜಿಯ ಮಾತುಗಳಲ್ಲ. ಅವುಗಳಿಗೆ ಸತ್ಯಾಗ್ರಹಿಗಳು ಒಪ್ಪದೆ ಹೋದರೆ ಸರ್ಕಾರದ ಅಧಿಕಾರವನ್ನು ಕಾಪಾಡಲು ಮತ್ತು ಕಾನೂನು ಪ್ರಕಾರ ನಡೆಯಲು ಸರ್ಕಾರದವರು ಅವಶ್ಯಕೋರುವ ರೀತಿ ವರ್ತಿಸಲಿಕ್ಕಾಗಿ ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸುವರೆಂದು ಬೆದರಿಕೆಯ ಮಾತುಗಳನ್ನಾಡಿರುವರು. ಈ ಮಾತುಗಳಂತೆ ದಬ್ಬಾಳಿಕೆಯನ್ನು ಪ್ರಾರಂಭಿಸುವರೋ ಎಂದು ನೋಡಬೇಕಾಗಿ. ಅವಶ್ಯವಿದ್ದರೆ ಬಾರ್ಡೋಲಿ ಸತ್ಯಾಗ್ರಹವನ್ನು ನಡಿಸಲು ಮಹಾತ್ಮ ಗಾಂಧಿಯವರು, ಪಂಡಿತ ಮದನ ಮೋಹನ ಮಾಳವೀಯರು ಮತ್ತು ಲಾಲಾ ಲಜಪತರಾಯರು ಅಲ್ಲಿಗೆ ಬರಲು ಸಿದ್ಧರಾಗಿರುವರು.

ವಿದೇಶ.

ಬೊಂಬಾಯಿ ಗವರ್ನರವರು ಬೊಂಬಾಯಿ ಕೌನ್ಸಿಲಿನಲ್ಲಿ ಹೇಳಿದ ಶರತ್ತುಗಳಿಗೆ ಬಾರ್ಡೋಲಿ ಸತ್ಯಾಗ್ರಹಿಗಳು ಒಪ್ಪಿಕೊಳ್ಳದೆ ಹೋದರೆ, ಬೊಂಬಾಯಿ ಸರಕಾರಕ್ಕೆ ಇಂಡಿಯಾ ಸರಕಾರವು ಸಕಲ ಉತ್ತೇಜನವನ್ನು ಕೊಟ್ಟು ಈ ಶರತ್ತುಗಳಿಗೆ ಒಪ್ಪುವಂತೆ ಮಾಡುತ್ತದೆಂದೂ ಮತ್ತು ಈ ಚಳವಳವನ್ನು ಬೇರು ಸಹಿತ ನಾಶಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವದೆಂದೂ ಇಂಡಿಯಾ ಅಂಡರ್ ಸೆಕ್ರೆಟರಿಯಾದ ಅರ್ಲ್ ವಿಂಟರ್‌ಟನ್‌ರವರು ಹೌಸ್ ಆಫ್ ಕಾಮನ್ಸಿನಲ್ಲಿ ಹೇಳಿರುವರು.

ಮೆಕ್ಸಿಕೋದ ಹೊಸ ಪ್ರೆಸಿಡೆಂಟರಾದ ಜನರಲ್ ಓಬ್ರೆಗನ್‌ರವರನ್ನು ಕೊಂದ ಯುವಕನು ಒಬ್ಬ ಆಫೀಸರನಂತೆ. ಅವನು ಆ ಔತಣದಲ್ಲಿ ಕೈಯಿಂದ ಚಿತ್ರ ಬಿಡಿಸುವವನಂತೆ ತೋರಿಸಿಕೊಂಡು, ಓಬ್ರೆಗನ್‌ರವರ ಚಿತ್ರ ಬಿಡಿಸುತ್ತೇನೆಂದು [illegible] [illegible] ಅವರು ಅವನ ಕಡೆಗೆ ನಗುತ್ತಾ [illegible] ಅವನು ತನ್ನ ಜೇಬಿನಿಂದ ಪಿಸ್ತೋಲನ್ನು ತೆಗೆದು [illegible] ಗುಂಡುಗಳನ್ನು ಹಾರಿಸಿ ಅವರನ್ನು ಕೊಂದನಂತೆ. [illegible] ಸೆರೆಹಿಡಿಯಲ್ಪಟ್ಟಿರುವನು. ಹಾಲಿ ಪ್ರೆಸಿಡೆಂಟ್ ಕಾಲ್ಸ್‌ರವರು ಪೊಲೀಸು ಮುಖ್ಯ ಅಧಿಕಾರಿಯನ್ನು ಸಸ್ಪೆಂಡ್ ಮಾಡಿರುವರು.

ಪತ್ರವ್ಯವಹಾರ

[ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕಾವೇರಮ್ಮ ಮಹಾತಾಯಿಯು ಹುಟ್ಟಿದ ಊರಿಗೆ
ಇನ್ನೂ ಹನ್ನೆರಡನೆಯ ಶತಮಾನವೇ ?

ಮಹನೀಯರೇ,

ಈ ಕಲಿಕಾಲದಲ್ಲಿ ಎಲ್ಲಾ ಮಾರ್ಪಾಟಿನ ಗಳಿಗೆ, ಯಾವ ರೀತಿಯಲ್ಲಿ, ಯಾವ ದೇಶದಲ್ಲಿ, ಎಲ್ಲಿ ನೋಡಿದರೂ ಏನೇನೋ ನವೀನ ವಿದ್ಯೆಯ ಚಾತುರ್ಯವೇ ಕಾಣುವುದು.

ಕಾರು ಬಸ್ಸುಗಳ ಓಡಾಟವಂತೂ ಹೇಳಲೇ ತೀರದು. ಯಾವ ಕಡೆ ಎಲ್ಲಿ ನೋಡಿದರೂ ಕಾರುಗಳೇ. ಆದರೆ ನಮ್ಮ ಮಹಾತಾಯಿಯಾದ ಕಾವೇರಿಯಮ್ಮನ ಊರಿಗೆ ಮಾತ್ರ ಯಾವತರದ ಅನುಕೂಲವೂ ಇಲ್ಲ. ಆ ಊರಂತೂ, ಜಾತ್ರೆಯಲ್ಲದೆ ಬೇರೆ ಸಮಯದಲ್ಲಿ ಹೋದರೆ, ಹನ್ನೆರಡನೆ ಶತಮಾನದ ಊರಿನ ಹಾಗೆಯೇ ಇದೆ ಎಂದು ಹೇಳಬಹುದು. ಒಂದು ಊರು ಮುಂದಕ್ಕೆ ಬರಬೇಕಾದರೆ ವ್ಯಾಪಾರವೇ ಮುಖ್ಯ. ವ್ಯಾಪಾರ ಅಭಿವೃದ್ಧಿಗೆ ಅಲ್ಲಿ ಹೋಗಲಿಕ್ಕೂ ಬರಲಿಕ್ಕೂ ಒಳ್ಳೆ ಅನುಕೂಲವಿರಬೇಕು. ಹಾಗೆ ಅನುಕೂಲವಿದ್ದರೆ ತಾನೇ ಊರು ಮುಂದಕ್ಕೆ ಒಳ್ಳೆಯ ಸ್ಥಿತಿಗೆ ಬರುವುದು.

ಆದರೆ ನಮ್ಮ ಭಾಗಮಂಡಲ ಮಡಿಕೇರಿಯ ರಸ್ತೆಯು ಬಹಳ ಕೆಟ್ಟ ಸ್ಥಿತಿಯಲ್ಲಿದೆ. ಅದನ್ನಾದರೂ ನಮ್ಮ ಸರಕಾರದವರು ಸರಿಮಾಡಿಸಿಕೊಡುವರಾಗಿ ನಂಬುತ್ತೇನೆ. ಇಲ್ಲಿಗೆ ಯಾರಾದರೂ ಬಸ್ಸು ಸರ್ವಿಸ್ ಇಟ್ಟಿದ್ದರೆ ನಮಗೆ ಬಹಳ ಉಪಯೋಗವಾಗುತ್ತಿತ್ತು. ಇದರ ವಿಷಯ ಕೆಲವು ಬಸ್ಸು ಕಂಪೆನಿಗಳ ಯಜಮಾನರುಗಳನ್ನು ನೆರೆಕರೆಯ ಗ್ರಾಮಸ್ಥರು ಕೇಳಿದ್ದಾಯಿತು. ಆದರೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಸಾಹೇಬರು ಆ ರಸ್ತೆಗೆ ಲೈಸೆನ್ಸು ಕೊಡುವದಾಗಿ ಹೇಳಿರುವರೆಂದು ಅವರು ತಿಳಿಸಿದರು. ಆದರೆ ಇಷ್ಟರ ವರೆಗೆ ಲೈಸೆನ್ಸು ಕೊಡದೆ ಇರುವದರಿಂದ ನಮಗೆ ಯಾತಕ್ಕೋ ಸಂದೇಹ ತೋರುತ್ತದೆ. ಈ ಲೈನಿಗೆ ಲೈಸೆನ್ಸು ಕೊಡುವುದರಿಂದ ಆ ಬಾಜಿನ ಜನರಿಗೆ ಬಹಳ ಉಪಕಾರ ಮಾಡಿದ ಹಾಗೆ ಆಗುವುದಲ್ಲದೆ ಕಾವೇರಿಯಮ್ಮನವರಿಗೆ ಭಕ್ತಿತೋರಿಸಿದಂತಾಗುವದು. ಯಾತಕ್ಕೆಂದರೆ ಇಲ್ಲಿಗೆ ಜಾತ್ರೆಗೆ ಬಹಳ ಜನರು ದೂರ ದೂರ ದೇಶದಿಂದ ಬರುತ್ತಾರೆ. ಅಂಥವರಿಗೆ ಬಸ್ಸು ಸರ್ವಿಸು ಇರುವುದರಿಂದ ಬಹಳ ಅನುಕೂಲವಾಗುತ್ತದೆ. ಸರ್ಕಾರಕ್ಕೆ ಲಾಭ ಸಿಕ್ಕುತ್ತದೆ. ಇಂಥ ಪರೋಪಕಾರವನ್ನು ನಮ್ಮ ಡಿ. ಮೇಜಿಸ್ಟ್ರೇಟ್ ಸಾಹೇಬರು ಮಾಡಲು ಹಿಂಜರಿಯುವರೇ ?

ಅಥವಾ ಹಾಗೆ ಏನಾದರೂ ಹಿಂಜರಿದರೆ ಅವರಲ್ಲಿ ಇನ್ನೊಂದು ವಿನಂತಿ ಏನೆಂದರೆ—ಯಾರಿಗಾದರೂ ಎಂಟು ಸೀಟಿನ

ಬಸ್ಸಿಗಾದರೂ ಲೈಸನ್ಸು ಕೊಟ್ಟು ಆ ರಸ್ತೆಯ ಪ್ರಯಾಣಕ್ಕೆ ಅನುಕೂಲಪಡಿಸಿಕೊಡಬೇಕಾಗಿ ಕೋರಿಕೆ. ಈ ನಮ್ಮ ಕೋರಿಕೆಯನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟು ಸಾಹೇಬರು ನಿರಾಕರಿಸಲಾರರೆಂದು ನಂಬುತ್ತೇನೆ.

"ದಾರಿಗ"

ಎಲ್ಲಾ ಕೊಡವರೂ ಇದ್'ನ ಓದಂಡು.

ಅಣ್ಣಂಗಳೇ, ಅಕ್ಕಂಗಳೇ,

ಈ ಪ್ರಪಂಚತ್ ಪ್ರತಿ ಓರ್ ಮನುಷ್ಯಂಗೂ ಸ್ವಜಾತಿ ಸ್ನೇಹಂದ್ ಎಣ್ಣುವದ್ ಒಲ್ಲಿಯದ್. ಆ ಸ್ವಜಾತಿ ಸ್ನೇಹ ಧಾರಾಳ ನಾಡ ಹೃದಯತ್ ಉಳ್ಳಾನಗುಂಡ್ ಇದ್ ಎಳ್ದ್'ವಕ್ ಕಾರಣ.

ಪಂದಿ ಎರ್ಚೆ ಹಿಂದುಪಡ ಪೈಕಿ ಯರವ, ಪೊಲೆಯಕ್ಕೂ, ಕ್ರಿಸ್ತಾನಿಯಕ್ಕೂ ಎಣ್ಣನದ್ ಹೊರತು ಉತ್ತಮ ಜಾತಿಯಕ್ಕ್ ಎಣ್ಣನದಲ್ಲ. ಇದ್'ನಗುಂಡ್ ಶರೀರಕ್ಕೂ, ಬುದ್ಧಿ ಶಕ್ತಿಕ್ಕೂ ಪತ್ತ್ ಕೇಡ್ ಉಂಡ್'ಂದ್ ಎಣ್ಣಿತ್ ಆಜಿ. ಆ ವಿಷಯ ಒಟ್ಟಿತ್ ಬೋರಿ ಕೆಲವು ವಿಷಯ ನಾನ್ ಇಲ್ಲಿ ಎಣ್ಣುವಿ.

ಕೊಡಗು ದೇಶತ್'ರ ಪದ್'ದ್ ಒಟ್ಟಿತ್, ಒಬ್ಬ ಪೊರಮೆ ದೇಶಕ್ ಪೋಯಿತ್ ತಾನ್ ಪಂದಿ ತಿಂಬಂದ್ ಎಣ್ಣ್'ಚ್ಚೆಂಗಿ ಆವನ ಇತರ ದೇಶಕಾರ ಅಯಿಂಡ ಮನೆಕ್ ಕೂಡುವಕ್ ಬುಡುವದಿಲ್ಲೆ; ಕುಡಿಪ ನೀರ್ ತೊಡ್'ಪಕ್ ಬುಡುವದಿಲ್ಲೆ, ಕುಳಿಪ ನೀರ್ ತೊಡ್'ಪಕ್ ಬುಡುವದಿಲ್ಲೆ, ಹೆಚ್ಚಗೆ ಎನ್ನಂಗ್ ಎಣ್ಣುವ. ಪೊಲೆಯಕ್ಕಂಜಿ ಕಡೆಕಟ್ಟಿತ್ ಕಾಂಬ. ನಂಗ ಕೊಡವ ಈ ನೀಚ ಪದ್ಧತಿ ಬೆಚ್ಚಂಡಾನಗುಂಡ್ ನಂಗಳ ನಂಗಕ್ಕಿಂಜಿ ಕಡೆಕಟ್ಟ ಜಾತಿಕಾರ ಕೂಡಿ ಹೀಯಾಳಿಚ್ಚಿರುವ. ನಂಗ ಈ ನೀಚ ಪದ್ಧತಿನ ಬೆಚ್ಚಂಡ್ ನಂಗ ಕ್ಷತ್ರಿಯಂಗಂಡೆಣ್ಣುವದ್ ನಂಗಕ್ಕೇ ಇಣಕೇಡ್. ಪಂದಿ ಅಮೇಧ್ಯ ತಿಂದಿತ್ "ನಾನ್ ಕಸ್ತೂರಿ ಮೃಗ"ಂದ್ ಎಣ್ಣ್'ಜೆಂಗಿ ಆರಂಗಿ ಒಕ್ಕುವಾ! ನಂಗಕ್ಕಂಜಿ ಕೀಳ್ ಜಾತಿಕಾರ ಆಯಿತುಳ್ಳ ಕೋಮಟಿ, ದೇವಂಕಾರ, ಮೂಸಳಿ, ತುರ್ಕ ಕೂಡಿ ನಂಗಳ ಹೀಯಾಳಿಚ್ಚಿರುವ. ಕಾರ್ಯ ಒರಣೆಕ್ "ದೇವಕ..." ಪಿಂತ "ಪಂದಿ ತಿಂಬ ಕೊಡವ"ಂದೂ ನಂಗಳ ಹೀಯಾಳಿಚ್ಚಿರುವ. ನಾಡ ಅಭಿಪ್ರಾಯತ್ ಮನುಷ್ಯಂಗ್ ಮೂಸಕ್ಕಂಜಿ ಬಲ್ಯದ್ ಕೆಲ ಇಲ್ಲ. ಅನಲ್ಲಿಕ್ಕೂ ಕೊಡವಕ್ ಹೆಚ್ಚಗೆ ಮೂಸೇ ಬಲ್ಯದ್.

ಕೊಡವನಡ ಇಂಜಾ ಓರ್ ಕೆಟ್ಟ ನಡವ್'ರ ವಿಷಯ ದಂಡ್ ತಕ್ ಇಲ್ಲಿ ಎಣ್ಣಾತೆ ಕಯ್ಯ. ಕೆಲವು ಕೊಡವ ಬಾಲ್ ಬೆಚ್ಚ ಕೊಂಬ್ ವಯಿತ್'ರ ಕಟ್ಟಿತ್ ತೋಕ್ ನಿಪ್ಪ್'ಲ್ ಬೆಚ್ಚ್'ಂಡ್ ಮಲೆಯೊಳಕ್ ಪೋಯಿತ್ ಓರ್ ನೀಚ ಕೃತ್ಯ ಕೂಡೀ ಮಾಡುವದ್'ನ ಎಣ್ಣುವಕ್ಕೇ ನಾಕ್ ಅಂಬಿಕೆ ಅಪ. ಏನಾಯಿತು ಎಣ್ಣಕೆಕಯ್ಯ. ಅದ್ ಮುಳ್ಳಂಡ ಕುಂದಿಕ್ ಕುಂಬ್ ತೋಕ್'ಲ್ ಕಾಚುವದ್. ಇದ್'ನ ದೊಡಿ ಬೆಚ್ಚಿತ್ ತೋಲ್ ಪೊಳಿಚಿತ್ ತಿಂಬಾಂಗಿಂಜಿ ಮನುಷ್ಯಂಡ ತೋಲ್ ಪೊಳಿಚಿತ್ ತಿಂಬದ್ ನಲ್ಲದ್. ಮಲೆಯೊಳಕಾರ ಇದ್'ನ ಕಂಡಿಕ್ ಎದೆಕ್ ಬಡಿಚ್ಚವ. "ಹನುಮಂತಂಡ ಜಾತಿಕಾರಳ ತಿಂಬ್ ಇವು ಏದ್ ರಾಕ್ಷಸಂಗ ಅಪ್ಪ"ಂದ್ ಎಣ್ಣುವ. ಮುಳ್ಳಂಡ ಕಳಿ, ತಮೂಕಿ ಕಂಡ ಓರಾ ಮನುಷ್ಯಂಗೂ ಆ ಜಾತಿಕ್ ಕಲ್ಲ್ ಕೂಡಿ ಕನಿಪಕ್ ತೋಂದುವಕ್ಕಿಲ್ಲೆ. ಇನ್ನನೆ ಕೊಡವ ಪಂದೇಶಕ್ ಪೋಯಿತ್ ತಾಂಡ ಜಾತಿನ ಕಳಂದನದ್ ಚಾಯಿ ಇಲ್ಲೆ.

ತಂಗ್ ನೆನು ಜಾತಿ ಆಯಿತುಳ್ಳ ಬಂಟನೂ ಕೂಡಿ ಕೊಡವಕ್ ಮಂಗ'ಲ ಕುಂಜಿಕ್ ಪೊಲೆಯಕ್ಕ್ ಕೂಳ್ ಕೊಡ್'ಪನೆಕ್ಕೆ ಪೊರಮೆ ಕೂಳ್ ಕೊಡ್'ಪ. ಮೂನಕ್ ಕೊಡಿಪ ತಿಳುವಳಿಕೆಯುಳ್ಳ ಕೊಡವ ತಂಗಡ ಜಾತಿ ಪದ್ಧತಿಲುಳ್ಳ ಕುಂದ್ ಲೋದಕನ ಎನ್ನಂಗ್ ಅರಿಯತ್. ಕೊಡವ ಈ ವಿಷಯತ್ ಕಣ್ಣ್ ತೋರಕತ್ತ್ ಇಪ್ಪದ್ ಚಾಯಿಲ್ಲ. ಪೊರಮೆ ದೇಶತ್ ಸಂಚಾರ ಮಾಡ್'ನ್ ಎಲ್ಲಾರು ಈ ವಿಶಯ ಅರಿಯತದಲ್ಲ. ಪೊರಮೆ ದೇಶಕ್ ಪೋಯಿತ್ ಟ್ರಾವಲರ್ಸ್ ಬಂಗ್ಲೆಲ್ ಸರದಾರಡ ಕೂಡ ಟಫಿನ್ ತಿಂಬಯಿಂಗ ಆ ದೇಶತ್'ರ ಉತ್ತಮ ಹಿಂದುಪಡ ಜಾತಿ ಪದ್ಧತಿ ಗೊತ್ತಾಪಕ್ಕಿಲ್ಲೆ. ಅಚೆಂಗಿ ಪಿನ್ನನೆಕ್ಕೆ ಆಯಿಂಡ ಕೂಡ ಕೂಡಿತ್, ಆಯಿಂಡ ಪದ್ಧತಿ ಅರಿಂಜವಂಗ ಕೊಡವಡ ನಡವ್ ನೀಚಾಯಿತ್ ಕಾಂಬ್'ಲೆ.

ಎಲ್ಲಾ ಉತ್ತಮ ಹಿಂದುಪಳನ್ನೆಕ್ಕೆ ನಂಗಳೂ ಮುಂದೆ ನೇತಿತ್, ನಡಕಂಡು. ಚೆನ್ನಂಗ್ ಪಣೋ ಕಾಫಿಯೋ ಪಿದ್'ಪದು, ತಾನ್ ಸರದಾರನಾಂಡು, ಮೋಟಾರ್'ಲ್ ತಿರಗಂಡು, ಯುರೋಪಿಯನ್ಸ್'ಡ ಕೂಡ ಮಿಂಗಳ್ (Mingle) ಮಾಡಂಡುಂಡೇಣ್ಣುವ ದುರ್ನಡ್'ವ್'ನ ನಂಗ ಕೊಡವ ಒಡಂಡು. ಈ ಆನೆ ಪಣತ್'ರ ಬೇರ್'ಕ್ ಕತ್ತಿ ಬೆಚ್ಚಿತ್ ನಂಗಳ ಚಟ್ಟಿಯೂಯಿತ್ ಮಡಡ.ನ. ನಂಗ ಉತ್ತಮ ಕುಲತ್ ಪುಟ್ಟ್'ನ್ ಹಿಂದುವ, ನಂಗ ಹಿಂದುಪಳಾಯಿಕೇ ಇಕ್ಕಂಡು. ಅನಗುಂಡ್ ನಂಗ ಕೊಡವ ಎಲ್ಲಾರು ಪಂದಿ ತಿಂಬದ್ ಬುಡಂಡು. ಮುಳ್ಳನ ತಿಂಬದ್ ಬುಡಂಡು. ಕಳ್'ಳ್ ಕುಡಿಪದೂ ಬುಡಂಡು.

ಕಾಡಿ ನೆರತವು (ಪಯಸ್ಸಾನವು) "ನಂಗಡ ಅಜ್ಜಗುಜ್ಜಂಡ ಕಾಲತ್ತಂಜೇ ನಂಗ ತಿಂದ್'ಂಡ್ ಕುಡಿಚ್ಚಂಡ್ ಉಳ್ಳಾನ ಇಕ್ಕ ಬೋಂಡ"ಂದ್, ಎಣ್ಣುವ್ ಇವಂಗ್ ಸಿರಾಂದ್ ಎಣ್ಣಕ್ಕ. ಚಾಲಂಗಿ ಸ್ವಾರ್ಥ ಯಾವ್ವನನ್ನ ಕೊಡವ ಈ ವಿಷಯತ್'ನ ನಲ್ಲೋಣ ಆಲೋಚನೆ ಮಾಡಿತ್ ಮನಸ್'ಕ್ ಎಡ್'ತಿತ್, ನಂಗಡ ದೇಶತ್'ರ ತೂನತ್'ನ ಕಾಪಾಡುಂಡೂಂದ್ ನಾನ್ ಅಡ್ಡ ಬುದ್ದ್ ಬೋಡುವಿ. ನಂಗ ಕೊಡವ ಯಾವ್ವನಕ್ಕಂಗ ನಂಗಡ ಮಾನತ್'ನ ಕಾಪಾಡುವಕ್ಕಾಯಿತ್ ಈ ಶರೀರತ್'ನ ಕೊಡ್'ಪಕ್ಕೂ ಕೂಡಿ ಅಂಜುವಕ್ಕಾಗ. ನಾಡ ಈ ಪ್ರಾರ್ಥನೆ ನಿಷ್ಫಲ ಆತನೆಕ್ಕೆ ಶ್ರೀ ಕೃಷ್ಣಂಗ್ ವಂದನೆ ಮಾಡಿತ್ ನಾನ್ ಇದ್'ನ ಪೂರ್ತಿ ಮಾಡುವಿ.

ಮುತ್ತಣ್ಣ.

ಮದ್ರಾಸು ಕೊಡಗರ ಕೂಟ.

ಅಯ್ಯಾ,

ತಾರೀಕು 12—7—28 ರಲ್ಲಿ ಮಿ. ಬಿದ್ದಂಡ ಪಿ. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ "ಮೈಸೂರು ಮೋಡರ್ನ್ ಹಿಂದೂ ಹೋಟೆಲಿ" ನಲ್ಲಿ ಮದ್ರಾಸು ಕೊಡಗರ ಒಂದು ಸಭೆ ಸೇರಿತು. ಹೊಸಬರಿಗೆ ಸ್ವಾಗತವನ್ನೀಯಲಿಕ್ಕೂ, ಡಾಕ್ಟರ್ ನಡಿಕೇರಿಯಂಡ ಅಪ್ಪಯ್ಯನವರನ್ನೂ ಮತ್ತು ಅವರ ಪತ್ನಿಯವರನ್ನೂ ಬೀಳ್ಕೊಡಲಿಕ್ಕೂ ಈ ಸಭೆ ಸೇರಿದ್ದಾಯಿತು.

ಸಾಯಂಕಾಲ ಸುಮಾರು 5—30 ಗಂಟೆಗೆ ಮಹನೀಯರು ಮತ್ತು ಮಹಿಳೆಯರೆಲ್ಲರು ಭವನದಲ್ಲಿ ನೆರೆದರು. ಸ್ವಲ್ಪ ಸಮಯದನಂತರ ಫಲಾಹಾರಕ್ಕೆ ಕುಳಿತರು. ತನ್ಮಧ್ಯೆ ಮಿ. ಕೇಳಪಂಡ ಐಯ್ಯಣ್ಣನವರೂ, ಮಂಡೇಯಡ ದೇವೈಯ್ಯನವರೂ, ಮತ್ತು ನೇಂದ್ರಿಮಾಡ ಐಯ್ಯಣ್ಣನವರು ಬಹಳ ಸ್ವಾರಸ್ಯವಾಗಿ ಗಾನಮಾಡಿದರು. ಆ ಮೇಲೆ ಅಧ್ಯಕ್ಷರು ಹೊಸಬರಿಗೆ ಸಭೆಯುಪರವಾಗಿ ಸ್ವಾಗತವನ್ನಿತ್ತದ್ದಲ್ಲದೆ ಡಾಕ್ಟರ್ ಅಪ್ಪೈಯ್ಯನವರು ಪಲ್ಲಕ್ಕೂರಿನಲ್ಲಿಯ ಚೆಟ್ಟಿನಾಡಿನ ಆಸ್ಪತ್ರೆಯ ಮುಖ್ಯ ಅಧಿಕಾರಿಗಳಾಗಿ ಹೋಗುತ್ತಾರೆಂದು ಹೊಸ ವಾರ್ತೆಯನ್ನು ಹೇಳಿ ಎಲ್ಲರ ಮನಸ್ಸನ್ನು ಆನಂದಗೊಳಿಸಿದರು. ಆದರೆ ಅವರು ಮತ್ತು ಅವರ ಪತ್ನಿಯವರು ಮದ್ರಾಸಿನ ಕೊಡಗರೊಡನೆ ಅನ್ಯೋನ್ಯ ಭಾವದಿಂದ ನಡೆಯುತಿದ್ದ ರೀತಿಯನ್ನು ಎತ್ತಿಹೇಳಿ, ಅವರಿಬ್ಬರನ್ನು ನಮ್ಮ ಮಧ್ಯದಿಂದ ಕಳೆದುಕೊಳ್ಳುವುದು ವಿಷಾದಕರವಾದದ್ದು; ದಂಪತಿಗಳಿಬ್ಬರಿಗೂ ಶ್ರೀ ಕಾವೇರ್ಯಮ್ಮನು, ಈಶ್ವರ ಇಗ್ಗುತಪ್ಪನು ಶ್ರೇಯಸ್ಸನ್ನು ಕೊಡಲಿ ಎಂದು ಹೇಳಿ, ಸಭೆಯುಪರ ಪರವಾಗಿ ಇನ್ನು ಸ್ವಲ್ಪ ಮಾತಾಡುವಂತೆ ಮಿ. ಕೊಂಗಂಡ ಅಚ್ಚೈಯ್ಯನವರನ್ನು ಕೇಳಿಕೊಂಡರು.

ಮಿ. ಅಚ್ಚೈಯ್ಯನವರೂ, ಡಾ. ಅಪ್ಪೈಯ್ಯನವರು ಮತ್ತು ಅವರ ಪತ್ನಿಯವರ ಒಳ್ಳೇ ಗುಣವನ್ನು ವರ್ಣನೆಮಾಡಿ ದೇವರು ಅವರಿಬ್ಬರಿಗೂ ದೀರ್ಘಾಯುಸ್ಸು, ಸಂಪತ್ತು ಸಮೃದ್ಧಿಯನ್ನು ಕೊಡಲೆಂದು ಬೇಡಿದರು.

ಆ ಮೇಲೆ ಡಾ. ಅಪ್ಪೈಯ್ಯನವರು ಕೊಡಗು ಭಾಷೆಯಲ್ಲಿ ಜವಾಬುಕೊಟ್ಟರು. ತಾನು ಎರಡು ವರ್ಷಗಳಿಂದ ಈ ನಗರದಲ್ಲಿ ತನ್ನ ಖರ್ಚಿಗೆ ಬೇಕಾದಷ್ಟು ಸಹಾ ಸಂಪಾದಿಸಲಿಕ್ಕಾಗಲಿಲ್ಲ. ಈ ನಗರದ ಪೋಟಾಪೋಟಿಯಲ್ಲಿ ತಲೆ ಎತ್ತುವುದು ಬಹಳ ಕಷ್ಟವೆಂದು ಯುವಕರಿಗೆ ಹೇಳಿದರು. ತಾನು ಕೊಡಗನೆಂದು ಹೇಳಿಕೊಳ್ಳಲು ಹೆಮ್ಮೆಯೆಂತಲೂ, ನನ್ನ ದೇಶಿಯರನ್ನು ಕಂಡರೆ ಅವರೊಡನೆ ಮಾತಾಡಲು ತನಗೆ ತುಂಬಾ ಕುತೂಹಲವೆಂತಲೂ, ತಮ್ಮವರು ಒಳ್ಳೆಯದಾಗಿ ಬಂದರೆ ತನಗೆ ದೊಡ್ಡ ಸಂತೋಷವೆಂತಲೂ ಹೇಳಿ ಈಗ ಕೊಡಗಿನಲ್ಲಿ ತೇರ್ಗಡೆ ಹೊಂದಿದ ಯಲ್. ಯಂ. ಪಿ. ಯಾರಾದರೂ ಇದ್ದಿದ್ದರೆ ತನ್ನ ಕೈಕೆಳಗೆ ಕೆಲಸ ಕೊಡಿಸಿ ಕೊಡುತ್ತಿದ್ದೆನೆಂದೂ ಹೇಳಿದರು. ಅಲ್ಲದೆ ಸಮೀಪದಲ್ಲಿಯೇ ಕೂತಿದ್ದ ಮಿ. ಕೊಂಗಂಡ ಅಚ್ಚೈಯ್ಯನವರನ್ನು ಕುರಿತು, ದೊಡ್ಡ ಹುದ್ದೆಯಲ್ಲಿರುವ ನಮ್ಮವರೆಲ್ಲರೂ ಯೋಗ್ಯರಾದ ಯುವಕರಿಗೆ ಸಹಾಯಮಾಡಿದರೆ ಯುವಕರಿಗೆ ಜೀವನೋಪಾಯವು ನಡೆಯುವುದಲ್ಲದೆ ಮಹನೀಯರ ಶ್ರೇಯಸ್ಸೂ ಹೆಚ್ಚುವುದೆಂದರು. ಅವರು ಸುಮಾರು ½ ಗಂಟೆ ಮಾತಾಡಿದರೂ "ಮೆಂಬರು" ಎಂಬ ಒಂದು ಶಬ್ದವಲ್ಲದೆ ಬೇರೆ ಎಲ್ಲಾ ಶಬ್ದಗಳನ್ನೂ ಕೊಡಗು ಭಾಷೆಯಲ್ಲಿಯೇ ಹೇಳಿದರು. ಅವರ ಪತ್ನಿಯವರು ಎರಡು ನಿಮಿಷ ಬಹಳ ರಸಪೂರಿತವಾಗಿ ಮಾತಾಡಿದರು.

ಕಾರ್ಯದರ್ಶಿಯಾಗಿದ್ದ ಮಿ. ಕುಪ್ಪಂಡ ಗಣಪತಿಯವರು ಅವರ ವಿದ್ಯಾರ್ಜನೆಗೆ ಪರಸ್ಥಳಕ್ಕೆ ಹೋದದ್ದರಿಂದ ಬೇರೆಯವರನ್ನು ಚುನಾಯಿಸಬೇಕಾಯಿತು. ಆ ಮೇಲೆ ಗೌರವ ಕಾರ್ಯದರ್ಶಿಯರಾಗಿ ನಡಿಕೇರಿಯಂಡ ಸುಬ್ಬೈಯ್ಯನವರನ್ನು ಚುನಾಯಿಸಲಾಯಿತು.

ನ. ಬಿ. ಸುಬ್ಬೈಯ್ಯ,
ಗೌ. ಕಾರ್ಯದರ್ಶಿ.

ಕೊಡಮಕೇರಿ ಸೇದು ಬಾವಿ.

ಮಹನೀಯರೇ,

ತಾರೀಕು 8—6—28ರ ಪತ್ರಿಕೆಯಲ್ಲು ಪ್ರಕಟಿಸಿದ ಕೊಡಮಕೇರಿ ಸೇದು ಬಾವಿಯ ವಿಷಯ ಕುರಿತು 13—7—28 ರಲ್ಲು ಪ್ರಕಟಿಸಿದ ಮುತ್ತುಸಾಮಿ ಪಿಳ್ಳೆಯವರ ಬಾತ್ಮಿಯನ್ನು ನೋಡಿಕೊಂಡೆನು. ಆದರೆ ಅದರಲ್ಲು ನಮೂದಿಸಿದ ಕೆಲವು ವಿಷಯಗಳು ನಿಜವಲ್ಲವೆಂದು ಧೃಢವಾಗಿ ಹೇಳಬಲ್ಲೆನು. ಈ ಬಾವಿಯ ಕೆಲಸವು ¾ ಪಾಲು ಪೂರೈಸಿದೆ ಎಂದು ಬರೆಯುವುದರ ಬದಲು ¼ ಕೆಲಸವಾಗಿದೆ ಎಂದರೆ ಉತ್ತಮವಾಗಿತ್ತು. ಘನ ಸರಕಾರದಿಂದಲೂ, ಸಹಕಾರ ಸಂಘದಿಂದಲೂ ಮತ್ತು ಗ್ರಾಮಸ್ಥರಿಂದ ತಲ ಒಂದರ 1 ರೂಪಾಯಿಯಂತೆ ಚಂದಾದ ಣ ವಸೂಲುಮಾಡಿದ ಮೊಬಲಗು ಎಲ್ಲಾ ಸೇರುವಾಗ್ಯೆ ಈ ಕೆಲಸವು ಖಂಡಿತವಾಗಿಯ ಪೂರ್ತಿಯಾಗಬಹುದಿತ್ತು. ......
....

ವಿದ್ಯಾರ್ಥಿಯರ ಸ್ಕೂಲ್ ಫೀಜನ್ನು ಸರಕಾರವು ಹಿಂದಕ್ಕೆ ಕಳುಹಿಸಿದ್ದೇನೋ ನಿಜ. ಇದು ಸದರಿ ಶಾಲಾ ಹೆ. ಮಾಸ್ಟರಿಗೆ ಸಿಕ್ಕಿದ ಕೂಡಲೆ ಗ್ರಾಮಸ್ಥರಿಗೆ ತಿಳುವಳಿಕೆ ಕೊಡಲು ಗ್ರಾಮಸ್ಥರೂ, ಮುತ್ತುಸಾಮಿಯವರೂ ಶಾಲೆಗೆ ಬಂದು ಹೆ. ಮಾಸ್ಟರವರ ಸಂಗಡ ಸ್ವಲ್ಪ ಮಾತಾಡಿದಾಗ ಹೆ. ಮಾಸ್ಟರವರು ಈ ಹಣಕ್ಕೆ ನಾನು ಜವಾಬುದಾರನಲ್ಲ, ಮಕ್ಕಳ ಹಣ, ಮಕ್ಕಳ ಪೋಷಕರು ಕಬೂಲ್‌ಕೊಟ್ಟರೆ ತನ್ನ ಅಡ್ಡಿ ಇಲ್ಲ ಎಂಬದಾಗಿ ಹೇಳಿದರೆಂದು ತಿಳಿದಿರುತ್ತೇನೆ. ಅದನ್ನು ಮುತ್ತುಸಾಮಿಯವರು ಹೇಗೆ ಮರೆತರೋ ತಿಳಿಯಲಾಗುವುದಿಲ್ಲ. ಅಂತೂ ಅವರು ಮಕ್ಕಳ ಪೋಷಕರು ಹೆ. ಮಾಸ್ಟರವರಿಂದ ಹೊಂದಿಕೊಂಡ ಸ್ಕೂಲ್‌ಫೀಜನ್ನು ಹೊರಗೆ ಶಾಲಾ ಮೈದಾನಕ್ಕೆ ಬರಲು ಅವರಿಂದ ಮೊದಲು ಕೊಟ್ಟದರ ಜೊತೆಗೆ ಎರಡನೆ ಸ್ಕೂಲ್‌ಫೀಜಿನ ಮೊಬಲಗಿನ ಒಂದು ಭಾಗವನ್ನೂ ವಸೂಲುಮಾಡಿದರೆಂದು ವರ್ತಮಾನ. ಆದರೆ ಪತ್ರಿಕೆಯಲ್ಲು ಮಾತ್ರ ವಿದ್ಯಾರ್ಥಿಯರಿಗೆ ವಾಪಾಸು ಕೊಡಲು ಕಬೂಲಾಗಿದೆಯೆಂದು ಬರೆದದ್ದನ್ನು ನೋಡಿದರೆ ವ್ಯಸನಪಡಬೇಕಾಗಿದೆ. ಹಾಗಾದರೆ ಈ ಹಣವು ಏನಾಯಿತು? ....
....

ಇವರ ಮೇಲೂ ಈಗಿನ ಹೊಸ ಸೇದು ಬಾವಿಗೆ ಘನ ಸರಕಾರದವರು ಕೊಟ್ಟ ದ್ರವ್ಯ ಸಹಾಯದಂತೆಯೇ ಮೊದಲಿನ (ಅಂದರೆ ಹಳೆ ಶಾಲೆ ಇದ್ದ ಸ್ಥಳದಲ್ಲು ತೆಗೆಸಿದ) ಸೇದುಬಾವಿಗೂ ಸಹ ಸಹಾಯಕೊಟ್ಟಿರುತ್ತಾರೆ. ಮತ್ತು ಗ್ರಾಮಸ್ಥರೂ ಸಹ ಸಹಾಯಕೊಟ್ಟಿರುವುದಾಗಿ ತಿಳಿಯಬರುತ್ತದೆ. ಅಂಥಾ ಬಾವಿಯು ಇವರ ಸ್ವಂತ ಉಪಯೋಗಕ್ಕೆ ಸಿಕ್ಕಿರುವಾಗ್ಯೆ ಇವರು ಈಗ ತೆಗೆಯುವ ಬಾವಿಗೆ ಎಷ್ಟರ ಮಟ್ಟಿಗೆ ಮುತುವರ್ಜಿ ಇಟ್ಟು ಸಹಾಯಮಾಡಿರುತ್ತಾರೆಂಬದನ್ನು ದಯವಿಟ್ಟು ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ.

ಹಿತಚಿಂತಕ.

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇವರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು.

	ಸಾದಾ ಬೈಂಡು	ದಪ್ಪ ರಟ್ಟಿನ ಬೈಂಡು	ಕಿತ್ತಾನಾರು ಬೈಂಡು
ಸಾಮಾನ್ಯ ಪ್ರತಿ	೧—೮—೦	೧—೧೨—೦	೨—೪—೦
ಉತ್ತಮ ಪ್ರತಿ	೨—೪—೦	೨—೮—೦	೩—೦—೦

ಅಂಚೇಹಾಸಲು ಪ್ರತ್ಯೇಕ.

ವಿಳಾಸ— ಸುಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

ತ್ರಿ 12—2

Please Call at

THE GENERAL TRADING CO., MERCARA,

Opposite Coronation Gardens.

SOLE AGENTS FOR VAUXHALL, OAKLAND, PONTAIC & CHEVROLET CARS & TRUCKS FOR COORG.

THE 1928 NEW CHEVROLET

NEW BEAUTY! NEW PERFORMANCE!! NEW FEATURES AND FOUR WHEEL BRAKES!!!

QUALITY AT LOW COST.

THE COORG FOOTWEAR MART, MERCARA.

The house for smart foot wear. Monsoon boot a speciality. Prompt attention. Prices very moderate. Attended by very efficient workmen.

12–5

Arms, Ammunition and Shooting Requisites !!!



1928 Illustrated Catalogue Just Issued Free on **Application!**

D. B. B. L. Rifles	Rs.	120	to	Rs.	2750.
S. B. B. L.	,,	35	to	,,	950.
D. B. B. L. Guns	,,	50	to	,,	1350.
S. B. B. L.	,,	35	to	,,	275.
D. B. M. L.	,,	45	to	,,	135.
S. B. M. L.	,,	30	to	,,	80.
B. L. Revolvers	,,	35	to	,,	350.
Antomatic Pistols	,,	30	to	,,	150.

Brilliant Search Light Lamp For Shooting, Camping, Fishing and All such other Night Sports and work Rs 30 Free delivery.

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,

Largest Importers of Firearms and Ammunition Cheapest priced firm in India,

24–17 **210 Abdul Rehman Street, BOMBAY.**

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!!

ಆಲ್ ರಮಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.



ಈ ಇಮಿಟೇಷನ್ ರೇಷ್ಮೆ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವೂ ಇರುವವು. ಉಡಲು ಧಡೂತಿಯಾಗಿಯೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಕೆಂಪು, ಕರಿ ಮತ್ತು ನಸ್ಯದ ಬಣ್ಣಗಳಲ್ಲಿ ಇರುವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಚೆನ್ನಾಗಿರುವುದಲ್ಲದೆ, ಅಸಲ್ ರೇಷ್ಮೆಯಂತೆ ಕಾಣಿಸುವವು. ಶ್ರೀಮಂತರಿಗೂ, ಗರೀಬರಿಗೂ ಉಡಲು ಲಾಯಕ್ಕಾದದ್ದು. ಕ್ರಯ ರೂ. 4–12–0.

ವಿಳಾಸ:—ಲೀಗಲ್ ಟ್ರೇಡಿಂಗ್ ಕಂಪನಿ,

52—10 ಪೋ. ಬಾಕ್ಸ್ ನಂ. 243, ಮದರಾಸು.

ಬೆಸ್ಟ್ ಫೌನ್‌ಟನ್ ಪೆನ್.



ಈ ಪೇನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಭಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಂ ಆಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ.—ಕೆ. ಎನ್. ರಾಧಾಕೃಷ್ಣ ಅಂಡ್ ಬ್ರದರ್ಸ್,

52–10 109. ಜೈನಾ ಬಜಾರ್ ರೋಡ್, ಮದರಾಸು.



ಡಿ. ಬಿ. ಬಿ ಯಲ್. ಕೋವಿಗಳು ರೂ. 75 ರಿಂದ ರೂ. 450/.
ಯಸ್. ಬಿ. ಬಿ. ಯಲ್. ಕೋವಿಗಳು ರೂ. 35 ರಿಂದ ರೂ. 250/.
ಯಸ್. ಬಿ. ಯಮ್ ಯಲ್. ಕೋವಿಗಳು ರೂ. 35 ರಿಂದ 65/.
ರಿವಾಲ್ವರ್‌ಗಳು. ರೂ. 40/ರಿಂದ ರೂ. 125/ರ ವರೆಗೆ.

ಡಬ್ಬಲ್ ಮತ್ತು ಸಿಂಗಲ್ ತೋಟದ ಮತ್ತು ಕೇಪು ಕೋವಿಗಳು ಎಲ್ಲಾ ದರ್ಜೆಯ ಜನರಿಗೂ (ಐಶ್ವರ್ಯವಂತರಿಗೂ ಬಡವರಿಗೂ) ಅನುಕೂಲವಾಗುವಂತೆ ವಿಧ ವಿಧದ ಕ್ರಯದಲ್ಲಿ ಒದಗಿಸಿ ಕೊಡಲಾಗುವದು.

60 ವರ್ಷಗಳಿಂದ ನಮಗೆ ಬಂದ ಅನುಭವದಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಅವಶ್ಯವಿರುವ ಕೋವಿಗಳನ್ನೇ ಇಟ್ಟಿರುತ್ತೇವೆ. ಆದ್ದರಿಂದ ಬೇರೆ ಕಡೆಗಳಲ್ಲಿ ಕೊಂಡುಕೊಳ್ಳುವ ಮುಂಚೆ ದಯವಿಟ್ಟು ನಮ್ಮನ್ನು ಕೇಳಿ ವಿಚಾರಿಸಿ.

ಯಸ್. ವಿ. ರಾಮಾನುಜಂ ಚೆಟ್ಟಿ ಅಂಡ್ ಕಂಪೆನಿ.

ದ. ಹಿಂದೂಸ್ಥಾನದ ಬಹು ಕಡಿಮೆ ಬೆಲೆಯ ಕಂಪೆನಿ.

24—8 12, ಬ್ರಾಡ್ವೆ, ಮದ್ರಾಸ್

(ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುವದು ಉತ್ತಮ.)

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹದ ಸಿಂಗಲ್‌ರೀಡ್ಸ್ ಹಾರ್ಮೋನಿಯಂಗಳು.

'ದಿಲ್ ಬಹಾರ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	50—8—0
ಶಕುಂತಲಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	40—0—0
'ಮೋಹನ್ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	37—8—0
'ಮೋಸ್ಟೀಲ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	35—0—0
'ಮಹರಾಜಾ ಫ್ಲೂಟ್' ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ	32—8—0

ಉತ್ತಮ ತರಹದ 14 ಕ್ಯಾರೆಟ್ಸ್ ಬಂಗಾರದ ನಿಬ್ಬು ಹಾಕಿದ ಫೌನ್‌ಟನ್ ಪೆನ್‌ಗಳು.

ಬ್ಲಾಕ್ ಬರ್ಡ್ ಫೌನ್‌ಟನ್ ಪೆನ್ 1ಕ್ಕೆ	3—8—0 ಮತ್ತು 3—12—0
ಪರಲ್ಸ್ ವಂಡರ್ ಫೌನ್‌ಟನ್ ಪೆನ್ 1ಕ್ಕೆ	3—0—0 ಮತ್ತು 3—8—0
ಕಾಂವ್ಯಾಕ್ಸ್ ಸೆಲ್ಫ್ ಸ್ಟ್ರೈಕ್ಸ್ ಫೌನ್‌ಟನ್ ಪೆನ್ 1ಕ್ಕೆ	4—8—0
ವಾಟರ್ ಮನ್ ಫೌನ್‌ಟನ್ ಪೆನ್ 1ಕ್ಕೆ	8—0—0 ಮತ್ತು 8—8—0
ವಾಟರ್ ಮನ್ ಸೆಲ್ಫ್ ಫಿಲಿಂಗ್ ಫೌನ್‌ಟನ್ ಪೆನ್ 1ಕ್ಕೆ	12—0—0 ಮತ್ತು 15—0—0

ಖಾತ್ರಿಯಾದ ಅಲಾರಂ ಟೈಂಪೀಸ್‌ಗಳು

ಫ್ರೆಂಚ್ ಮೇಕ್ ಅಲಾರಂ ಟೈಂಪೀಸ್ 1ಕ್ಕೆ	೪—೮—0
ವೆಸ್ಟ್‌ಎಂಡ್ ಕಂಪೆನಿಯ ಅಲಾರಂ ಟೈಂಪೀಸ್ 1ಕ್ಕೆ	೯—೮—0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	೯—೯—3
ಬಿಗ್ ಬೆನ್ ನಮೂನೆ ಇಟಾಲಿಯನ್ ಟೈಂಪೀಸ್ 1ಕ್ಕೆ	೯—12—7
ಅನ್‌ಸೋನಿಯಾ ಅಲಾರಂ ಟೈಂಪೀಸ್ 1ಕ್ಕೆ	6—0—0

ಸಚಿತ್ರ ಕ್ಯಾಟಲಾಗ್ ಬಗ್ಗೆ 6 ಪೈ ಸ್ಟಾಂಪು ರವಾನಿಸಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

52 12

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	17,190
ಜಮೆಯಿಂದ ರೇವಣಾತಿ	—	1,62,320

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ರೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ರೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1–7–1927.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವೈಯ್ಯನವರು.

ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ಮರೆನಾಡು—ಮೆ. ಕೇಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾನಡೇರಿರ ನಂಜುಂಡನವರು,

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು,

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು,

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ದಾವೆಯು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದಂಡ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮ್ಯಾನೇಜರ್, "ಕೊಡಗು" ಮಡಿಕೇರಿ.

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY. 3
Telegraphic Address:—"SHOOTER" Bombay.

(52–46) 'Please write for our Catalogue 1928–1929.

ಕಟು ಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0; 3ಕ್ಕೆ ರೂ 4–0–0, 6ಕ್ಕೆ ರೂ 7–8–0; 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹಾಕುವಾಗ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1–1–0 3–8–0, 6–12–0.

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3–8–0.

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಯುರಿ, ಕಣ್ಣುರಿ ಶಿರದಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ಬದ್ಧ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನೂ ಕೊಟ್ಟು ಆಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2–10–0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5–8–0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.

52–42 9. ಮಂಗಳೂರು.

ತಕರಾರಿಕೆ ಮಾಲುಗಳಿಗೆ ಮೋಸ ಹೋಗಬೇಡಿರಿ!

ನಮ್ಮ ಒಡವೆಗಳಿಗೆ ಕೊಡುವ ಕ್ರಯಕ್ಕೆ ಸರಿಯಾದ ಪ್ರತಿಫಲವಿದೆ.

ಆಜಮಾಯಿಸಿ ನೋಡಿರಿ.

ಇನಾಮಿನ ಬಟ್ಟಲುಗಳು ನಮ್ಮಲ್ಲಿ ವಿಶೇಷ ದೊರೆಯುತ್ತವೆ.

ಎಲ್ಲಾ ಆರ್ಡರುಗಳನ್ನೂ ಭಲೋ ರೀತಿಯಿಂದಲೂ, ಶೀಘ್ರವಾಗಿಯೂ ಗ್ಯಾರಂಟಿಯೊಡನೆ ಜಾರಿ ಮಾಡಲಾಗುವದು

ಕೇಶವಜೀ ದೇವಚಂದ್,

ಜ್ಯುವೆಲ್ಲರ್, (ಕೆಟಲಾಗ್ ಮುಫತ್).

12—9 21 ಚೈನಾ ಬಜಾರ್‌ರೋಡ್, ಮದರಾಸು.

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು 1897.

1928ನೇ ಇಸವಿ ಫೆಬ್ರವರಿ 29ಕ್ಕೆ ಆಖೈರಾದ 5 ವರ್ಷಗಳಲ್ಲಿ ಕಂಪನಿಗೆ ಲಾಭದ ಉತ್ಪತ್ತಿ.

ಹೊಸ ಪಾಲಿಸಿಗಳು ವಿಮೆ	ರೂ.	1,16,00,000.
ವರಮಾನ ವಿಮೆ	ರೂ.	54,95,000.
ಕಂಪೆನಿ ಆಸ್ತಿ ವಿಮೆ	ರೂ.	3,15,64,000.

ಬೇಕಾಗಿದೆ:— ಕೊಡಗು ದೇಶದ ಮುಖ್ಯ ಸ್ಥಳಗಳಲ್ಲಿ ಏಜಂಟರುಗಳು,

ಹೆಡ್ ಆಫೀಸು.		ಬ್ರಾಂಚ್ ಆಫೀಸು.
ಎಂಪಯರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.	24–5	ಕಮರ್ಶಿಯಲ್ ಬೀದಿ ಬೆಂಗಳೂರು.

ಸ್ಥಾಪನೆ–1874. ಹೆಡ್ ಆಫೀಸು–ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927

ಅತ್ಯುಚ್ಛ್ರಾಯ ಸ್ಥಿತಿಯನ್ನು ತೋರಿಸುವ ಮತ್ತೊಂದು ವರ್ಷ

ಓರಿಯಂಟಲ್ ಕಂಪೆನಿಯು ಜನಾನುರಾಗವನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿರುವುದನ್ನು ಈ ವಿಷಯಗಳಿಂದ ತಿಳಿಯಬಹುದು.

—ಪಾಲಿಸಿಗಳು—

1925	13545	ರೂ.	2,95,47,000.
1926	17371	ರೂ.	3,91,39,000.
1927	21118	ರೂ.	4,68,04,075.

— ಪ್ರೀಮಿಯಂ ಉತ್ಪತ್ತಿ —

1925	ರೂ.	92,66,000.
1926	ರೂ.	1,05,33,000.
1927	ರೂ.	1,21,53,000.

ಇದುವರೆಗೆ ವಿಮೆದಾರರಿಗೆ ಪಾವತಿ ಮಾಡಿರುವ ಹಣವು 10½ ಕೋಟಿ ರೂಪಾಯಿಗಳಿಗೆ ಮಿಂಚಿದೆ.

ಕಂಪೆನಿಯ ಫಂಡು ೮ ಕೋಟಿ ರೂಪಾಯಿಗಳಿಗೆ ಮಿಂಚಿದೆ.

ಜೀವವಿಮೆ ಮಾಡಬೇಕೆಂದಿರುವವರು ಸಾವಕಾಶ ಮಾಡದೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.	52–15	ಎಲ್. ಆರ್. ಕೃಷ್ಣಸ್ವಾಮೈಯ್ಯರ್, ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.